KARNATAKA STATE ARCHIVES

KARNATAKA
STATE
ARCHIVES

KARNATAKA STATE ARCHIVES

Roll No: 141

Roll No: 141

Roll No: 141

ARS 34 APP 82

NAVAYUGA KANNADA WEEKLY

Roll No

From 4:9:1947 Contd from. 140

ARS 34 APP 82

NAVAYUGA KANNADA WEEKLY

Roll No

From 4:9:1947 Contd from. 140

ARS 34 APP 82

NAVAYUGA KANNADA
WEEKLY

Roll No
From 4:9:1947 Contd from. 140

Regd. No. M. 3618. | 4—9—1947 | Estd. 1921 ಸ್ಥಾಪನೆ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4—8—0
6 ತಿಂಗಳಿಗೆ ರೂ. 2—8—0
ಬಿಡಿ ಪ್ರತಿ ರೂ. 0—1—6
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ, ಜಾಹೀರಾತು ದರಕ್ಕೆ ಬರೆಯಿರಿ.
ಮೆನೇಜರ್,
ನವಯುಗ ಉಡುಪಿ.
ದ. ಕ.

"ಸಾಧ್ಯವಾದಷ್ಟು
ಅಕ್ಕಿಯನ್ನುಳಿಸಿರಿ
ಭೀಕರ ಬರಗಾಲವನ್ನು
ತಪ್ಪಿಸಿರಿ. ಇದೇ
ಒಂದು ಮಹಾಯಜ್ಞ."

NAVAYUGA WEEKLY, UDIPI.

FOUNDER: Hon'ble Mr. A. B. SHETTY,
Health Minister, Govt. of Madras.

ವರ್ಷ ೨೭
ವಾರ ೧

Vol. 27
No. 1

The Canara Mutual Assurance Company, Limited.

Estd. 1935
H. O. UDIPI, S. INDIA

WELCOME

A hearty and sincere welcome awaits every agent who visits our office and our officers are all available for consultation. Our agents appreciate this cordial reception. They say that this considerate treatment of their problems is the keystone to their Success.

T. R. A. Pai,
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **60 Lakhs**

Our experience of 37 years available to you for arranging Insurance investment. It therefore pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building,
Central Office, Udipi.

Branches at:
Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ... ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರ 8 ಬೊಟ್ಟು, ಸಣ್ಣ ಮಕ್ಕಳಿಗೆ 10ರ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ... ಡಾ। ಆರ್. ಎಸ್. ಶೆಟ್ಟಿ, ರಥಬೀದಿ; ಡಾ। ಪಿ. ಜಿ. ಆಚಾರ್ಯ, ಫಾರ್ಮಸಿ; ಡಾ। ... ಗಿಂ ಶೆಟ್ಟಿ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

—ಮಕ್ಕಳನ್ನು ಹಡೆಯುವುದು ಸಾಕು—

ಆರಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ 1 ಗುಳಿಗೆ ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ನಿರಾಳ.

ಮಾಲಕರು:—ಬಾಳಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ, ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ... ಕೆಮಿಸ್ಟ, ಹಾವೇರಿ ಬ್ಯಾಡ್ಗಿ.

Ayurveda Oushadalaya, GADAG CITY.

ANNOUNCEMENT

Season Deposits

in sums of Rs. 1000/- and over in multiples of Rs. 500/- are now accepted at all the Offices of the Bank, at the following rates.

For 3 months at 2½% p. a.
For 6 months at 3% p. a.

The above deposits will not be allowed to run beyond 30—9—1947.

The Vijaya Bank Limited

H. O. MANGALORE.

ಮನೆಮದ್ದು-Home Remedies

ಬೆಲೆ ರೂ. **2-0-0**

ಬರೆದವರು:—ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Valuable Service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ., ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಮದ್ದುಗಳನ್ನು ತಯಾರಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಯಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದ

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

★ ಇವರು ತಮ್ಮ ಪಾಲಿನ ಆಟ ಆಡಿದ್ದಾರೆ ★

ಸ್ವಾತಂತ್ರ್ಯ ಹೋರಾಟದಲ್ಲಿ ನೆಹರೂ ಕುಟುಂಬ ವಹಿಸಿದ ಭಾಗ

(ಪಂಡಿತ ಜವಾಹಿರಲಾಲರ ತಂಗಿ ಶ್ರೀಮತಿ ಕೃಷ್ಣಹಠಿಸಿಂಗರ ಲೇಖನ)

ಸ್ವಾತಂತ್ರ್ಯಕ್ಕಾಗಿ ತಂದೆ, ತಾಯಿ, ಪತ್ನಿ, ಭಾವ ನೆಂಟನನ್ನು ಬಲಿಕೊಟ್ಟಿರುವ ಸ್ವತಂತ್ರ ಭಾರತದ ಪ್ರಧಾನಿ—

ಅಣ್ಣ ಜವಾಹಿರ

ತ್ರನ್ನ ಮಗ ತನ್ನ ಸಂಗಡಿಗರೊಂದಿಗೆ ಆಡುತ್ತಿರುವುದನ್ನು ಆ ತಾಯಿ ನೋಡುತ್ತಾ ನಿಂತಿದ್ದಳು; ನೋಡುತ್ತಿದ್ದಂತೆ ಹೆಗ್ಗಳಿಕೆ ಮತ್ತು ಹೆದರಿಕೆ, ಎರಡೂ ಆಕೆಯ ಮನದಲ್ಲಿ ಮೂಡಿದವು. ತನ್ನ ಮಗ ಮಿಕ್ಕೆಲ್ಲಾ ಹುಡುಗರಿಗಿಂತ ಸಣ್ಣವ; ಆದರೆ ಆತನೇ ಪ್ರತಿಯೊಂದರಲ್ಲೂ ಆವರೆಲ್ಲರ ಯಜಮಾನಿಕೆ ವಹಿಸುತ್ತಿರುವುದು ಕಂಡು ಬಂತು. ಆತ ಉದ್ರೇಕಗೊಳ್ಳುತ್ತಿದ್ದ, ಮತ್ತು ಎಲ್ಲಾ ಹುಡುಗರ ಮೇಲೂ ತನ್ನ ಅಧಿಕಾರ ಚಾಲುಮಾಡುತಿದ್ದ. ಆದರೂ ಕೂಡಾ ಆದೆಷ್ಟು ಸುಲಭದಿಂದ ಜತೆಯಾಟಗಾರರೆಲ್ಲರ ಗೌರವ ಮತ್ತು ನಮ್ರತೆಗೆ ಆತ ಪಾತ್ರನಾಗಿ ಮೆರೆದಾಡುತಿದ್ದಾನೆ! ಈತ ಮುಂದಕ್ಕೆ ಅತ್ಯುನ್ನತ ಪದವಿಗೇರಲಿದ್ದಾನೆ ಎಂಬ ಭವಿಷ್ಯವನ್ನು ಗ್ರಹಗತಿ ತೋರಿಸುತಿತ್ತು. ಆದರೆ ಆ ತಾಯಿಗೆ ಹಾಗಾದೀತೆಂಬ ಭರವಸೆಯಿರಲಿಲ್ಲ. ಅವಳು 'ಮಗು ಹಾಳಾಯಿತು' ಎಂಬಂತಹ ವ್ಯಸನದಿಂದ ತಲೆಯಲ್ಲಾಡಿಸಿದಳು. ಹುಡುಗ ಅತ್ಯಹಂಕಾರಿಯಾಗಿದ್ದ; ದುರ್ದಮ್ಯವಾದ ಹಾಗೂ ಪ್ರತಿಭಟನೆಗಿಂಬು ಇದ್ದ ಬಿಂಕವು ಅವನಲ್ಲಿ ಕಂಡುಬರುತಿತ್ತು. ಇಂಥವನು ಮುಂದೆ ಜೀವನ ನಿರ್ವಹಿಸುವುದಾದರೂ ಹೇಗೆ, ಎಂದಾ ತಾಯಿ ದಿಗಿಲುಗೊಂಡಳು. ನಿಟ್ಟುಸಿರಿಡುತ್ತಾ ಆಕೆ ದೇವರನ್ನು ಪ್ರಾರ್ಥಿಸಿಕೊಂಡಳು-'ನನ್ನೀ ದುಷ್ಪುತ್ರನನ್ನು ಸಜ್ಜನನ್ನಾಗಿ ಮಾರ್ಪಡಿಸು. ಆತ ದೊಡ್ಡ ಮನುಷ್ಯನಾಗದೆ ಹೋದರೂ ಒಳ್ಳೆಯವನಾದರೂ ಆಗಲಿ'!

ಬರಬರುತ್ತಾ

ವರುಷಗಳು ಸಂದವು. ಆ ತುಂಟ ಹುಡುಗ ಆಶ್ಚರ್ಯಕರ ರೀತಿಯಿಂದ ಬಿಡುವಿಲ್ಲದೆ ದುಡಿಯುವ ಯುವಕನಾಗಿ ಮಾರ್ಪಟ್ಟ. ಈಗಲೂ ಆತ ಅತಿಗರ್ವಿ; ಅಧಿಕಾರ ದರ್ಪದವನೇ ಆಗಿದ್ದ. ಆದರೆ, ಆದೇ ಕಾಲದಲ್ಲಿ ತನ್ನ ತಲೆಯ ಮೇಲೆ ಬಂದಿದ್ದ ದೊಡ್ಡ ಕುಟುಂಬವೊಂದರ ರಕ್ಷಣಾ ಹೊಣೆಗಾರಿಕೆಯನ್ನರಿತವನಾಗಿದ್ದ. ಬೇರಾವುದೇ ಖಾಸಗೀ ಅಥವಾ ಸಾರ್ವಜನಿಕ ಕೆಲಸಗಳಲ್ಲಿ ಕೈ ಹಾಕಲಿಕ್ಕೆ, ಸಮಯ ಮತ್ತು ಮನಸ್ಸೇ ಇವನಿಗಿಲ್ಲವೇನೋ ಎಂಬಂತೆ ತೋರುತಿತ್ತು; ಬಹಳ ಸಣ್ಣ ವಯಸ್ಸಿನಲ್ಲೇ ವಿಜಯಶ್ರೀ ಅವನನ್ನು ವರಿಸಿದಳು. ಅವನ ವಕೀಲೀ ಪ್ರತಿಭೆಯ ಕೀರ್ತಿ ಇಡೀ ರಾಷ್ಟ್ರದಲ್ಲಿ ವ್ಯಾಪಿಸಹತ್ತಿತು. ಆ ಕಾಲದಲ್ಲೇ ಕಾಂಗ್ರೆಸ್ ಸಂಸ್ಥೆಯು ಎಲ್ಲರನ್ನು ಆಕರ್ಷಿಸಲಾರಂಭಿಸಿದ್ದಿತು. ಆದರೆ ಈ ಮನುಷ್ಯನಿಗೆ— ಮೋತೀಲಾಲನಿಗೆ— ಅದಕ್ಕೆ ಬಿಡುವೇ ಇರಲಿಲ್ಲ. ತೋರುವಿಕೆಗೆ ಬಾಲ್ಯದ ಅವರ ಬಿಂಕವೀಗ ದಮನಿಸಲ್ಪಟ್ಟಂತೆ ಇದ್ದರೂ ಅದೊಂದು ಹೊಸ ಆಕಾರ ತೊಟ್ಟು ಅಲ್ಲೇ ಇತ್ತು; ಮುಖ್ಯತ: ತನ್ನ ವಕೀಲೀ ಉದ್ಯಮದಲ್ಲಿ ತನಗಿದಿರಾಗುವ ಎಲ್ಲಾ ಕಂಟಕಗಳನ್ನೂ ಗೆದ್ದೇ ತೀರಬೇಕೆಂಬ ಹಠಸಂಕಲ್ಪ ಆಗ ಅವರದಾಗಿತ್ತು. ಹೋರಾಟವೆಂದರೆ ಅವರಿಗೆ ಉತ್ಸಾಹ; ಅತಿ ಹೆಚ್ಚಿನ ಪ್ರತಿಕೂಲ ಸನ್ನಿವೇಶಗಳೊಡನೆ ಸೆಣಸಾಡುವದರಲ್ಲೇ ಅವರಿಗೆ ಇಷ್ಟ. ಹೀಗಾಗಿ ಯಾರೊಬ್ಬರ ಅನುಭವ ಅಥವಾ ಆಶ್ರಯವಿಲ್ಲದೆ, ಕೇವಲ ತನ್ನ ಚಾತುರ್ಯ, ದೃಢಸಂಕಲ್ಪ, ಮತ್ತು ಕಾರ್ಯನಿಷ್ಠೆಯ ಬಲದಿಂದಲೇ ಮೋತಿಲಾಲರು ವಿಜಯದ ಮೇಲೆ ವಿಜಯಗಳಿಸುತ್ತಾ ಹೋದರು.

ಆನಂದದ ಅರಮನೆ

ವರುಷಗಳು ಸಂದವು. ಪ್ರತಿ ಸಾಯಂಕಾಲ ಮೋತೀಲಾಲರ ಮಿತ್ರರು, ಗುಣಾರಾಧಕರು,—ಎಲ್ಲಾ ಜಾತಿ, ಮತ, ರಾಷ್ಟ್ರಗಳವರು—ಇವರ ಅರಮನೆಯಂತಹ ಆನಂದಭವನದಲ್ಲಿ ನೆರೆಯುವರು; ತನ್ನ ಸುಂದರ ಉದ್ಯಾನದೊಂದು ಮೂಲೆಯಲ್ಲಿ ಮೋತಿಲಾಲರು ಕುಳಿತುಕೊಂಡರೆ, ಇವರ ಅಮೋಘ ಸಂಭಾಷಣಾ ಸುಖಕ್ಕಾಗಿ, ಇವರು ಚೆಲ್ಲುವ ವಿನೋದಪೂರ್ಣ ಸಂಗತಿಗಳ ಆನಂದಕ್ಕಾಗಿ ಅವರೆಲ್ಲರೂ ಸುತ್ತುಗಟ್ಟುವದಿತ್ತು. ಆಗಿನ ಮೋತೀಲಾಲರ ಗಹಗಹ ನಗುವು ಆ ಉದ್ಯಾನ ಮತ್ತು ಮನೆಯಲ್ಲಿ ಮಾರ್ದನಿಗೊಡುತಿತ್ತು; ಈ ನಗೆಯ ಪ್ರಸಿದ್ಧಿಯು ಪ್ರಥಮತ: ತನ್ನೂರಾದ ಅಲಹಾಬಾದಿನಲ್ಲೂ ಆ ಮೇಲೆ ಇಡಿ ರಾಷ್ಟ್ರದಲ್ಲೂ ವ್ಯಾಪಿಸಿತು. ಅವರಾ ನಿವಾಸದ ಎಲ್ಲೆಲ್ಲೂ ಮಹಾ ಸಂಪತ್ತಿನ ಚಿಹ್ನೆಗಳು ಕಂಡಿದ್ದುವು. ವೈಭವಪೂರ್ಣ ಜೀವನದ, ಕಲಾಪೂರ್ಣ ಅಭಿರುಚಿಯ ಹಾಗೂ ಜೀವನದುತ್ತಮ ಸಂಗತಿಗಳ ಸಾಕಾರತೆಯ ನಿದರ್ಶನಗಳಾಗಿದ್ದುವು ಅಲ್ಲಿದ್ದ ಎಲ್ಲವೂ. ಮೋತೀಲಾಲರ ಅನನ್ಯ ವ್ಯಕ್ತಿತ್ವ, ನಂಬಲಸಾಧ್ಯವಾದಷ್ಟಿದ್ದ ಅವರ ಅಪಾರ ಸಂಪತ್ತು, ಅವರ ಅತ್ಯುದಾರತೆ, ಅವರಲ್ಲಿದ್ದ ವೈಭವ ಪೂರ್ಣ ಸುಖಜೀವನ ಲಾಲಸೆ, ದುರ್ದಮ್ಯವಾದ ಅವರ ಛಲ, ಉದ್ರೇಕ ಸ್ವಭಾವ, ಇತ್ಯಾದಿಗಳು ಅಲ್ಪಾವಧಿಯೊಳಗೆ ದಂತಕಥೆಗಳಾಗಿ ಹೋದವು.

ಮಹಾತ್ಮಾ ಗಾಂಧೀ ಪ್ರವೇಶ

ಮಹಾತ್ಮಾ ಗಾಂಧಿಯವರು ತೋರಿಬಂದು 'ಸತ್ಯಾಗ್ರಹ ಸಭಾ' ಪ್ರಾರಂಭಿಸಿದುದು 1919ರಲ್ಲಿ. ಮೋತಿಲಾಲರ ಏಕಮಾತ್ರ ಪುತ್ರ ತರುಣ ಜವಾಹಿರರು ಯುವಕ ಸಹಜ ಹುರುಪುಹುಮ್ಮಸಿನಿಂದ, ಕೂಡಲೇ ಅದರಲ್ಲಿ ಸೇರಿಕೊಳ್ಳಲು ಮುಂದಾದರು. ಆದರೆ ಅವರ ನಿಶ್ಚಲಬುದ್ಧಿಯ ತಂದೆಯು ಅದಕ್ಕೆ ಬದ್ಧ ವಿರೋಧವಿದ್ದರು ಗಡಿಬಿಡಿಯಿಂದ ಧುಮುಕಕೂಡದೆಂದು ಅವರು ಜವಾಹಿರರನ್ನು ತಡೆಗಟ್ಟಿದರು. ಕೈಬೆರಳೆಣಿಕೆಯ ಕೆಲವೇ ಮಂದಿ ದಸ್ತಗಿರಿಮಾಡಿಸಿಕೊಳ್ಳುವದು ತಿಳಿಗೇಡಿತನವೇದಲ್ಲದೆ ಬೇರಾವ ಸ್ವಾರಸ್ಯವನ್ನು ಮೋತಿಲಾಲರು ಅದರಲ್ಲಿ ಕಾಣಲಿಲ್ಲ; ಅದೇ ರೀತಿ ಗಾಂಧಿಜೀಯ ಕಾರ್ಯಕ್ರಮದ ಬೇರೆ ಯಾವುದೇ ಭಾಗವನ್ನೂ ಅವರು ಮೆಚ್ಚುತ್ತಿರಲಿಲ್ಲ. ಸರಿ; ಆನಂದ ಭವನದ ವಾತಾವರಣ ಕದಡಿ ಹೋಯಿತು. ತಾಯಿ, ಪತ್ನಿ ಮತ್ತು ಸಹೋದರಿಯರೊಂದು ಮೂಲೆಯಲ್ಲಿ ನಿಂತುಕೊಂಡು, ಈ ವಾದಗಳ ಪರಿಣಾಮವನ್ನೂಹಿಸಿ ಭಯಕಂಪಿತರಾಗಿ ಕಣ್ಣೀರಿಳಿಸುತ್ತಿದ್ದರು—ಮಗ ಮತ್ತು ತಂದೆ ದೀರ್ಘಹೊತ್ತು ಕಠೋರ ಗ್ವಾದವಾದದಲ್ಲಿ ತೊಡಗಿದ್ದರು. ತನ್ನ ಸಮಜಾಯಿಸುವಿಕೆ ಮತ್ತು ವಾದಾಗ್ರಹವೆರಡೂ ನಿಷ್ಫಲವಾದಾಗ ಮೋತಿಲಾಲರ ಸಹನೆ ತಪ್ಪಿತು. 'ಹೋಗು; ಮಡುವಿಗೆ ಬೇಕಾದರೂ ಧುಮುಕು' ಎಂದು ಮುಖ ತಿರುಗಿಸಿಬಿಟ್ಟರು. ತಂದೆಗೆ ತನ್ನ ಮೇಲಿರುವ ಅಗಾಧ ಪ್ರೇಮದ ಸಂಪೂರ್ಣ ಅರಿವು ಜವಾಹಿರರಿಗಿತ್ತು [illegible] ಆ ಬಾರಿ ಅವರು ದುಡುಕಲಿಲ್ಲ; ಸಮಯನಿರೀಕ್ಷೆ ಮಾಡು

(೧೧ನೇ ಪುಟ ನೋಡಿರಿ.)

ಸ್ವಾತಂತ್ರ್ಯ ಹೋರಾಟದಲ್ಲಿ ತಂದೆ, ತಾಯಿ, ಸಾದಿಸಿ, ಮತ್ತು ಗಂಡನನ್ನು ಕಳಕೊಂಡು, ಸ್ವತಂತ್ರ ಭಾರತದ ರಶ್ಯನ್ ರಾಯಭಾರಿಯಾಗಿರುವ—

ತಂಗಿ ವಿಜಯಲಕ್ಷ್ಮಿ

ಸ್ಥಾಪಿತ]

Canara Bank Limited

ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಬ್ರಿಟಿಷ್ ಇಂಡಿಯಾದಲ್ಲಿ ಸಾಂಘೀಕರಿಸಿದ್ದು.

ಹೆಡ್ ಆಫೀಸು: ಬಾವಟೆಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು: 75, ಎಪೊಲೊ ಸ್ಟ್ರೀಟ್, ಫೋರ್ಟ್ ಮುಂಬೈ.

ಶಾಖೆಗಳು

ಮದರಾಸು ಪ್ರಾಂತ್ಯ

ಮಂಗಳೂರು – ಸಿಟಿ
ಮಂಗಳೂರು – ಬಂದರ
ಮೂಲ್ಕಿ
ಗಂಗೊಳ್ಳಿ
ಕುಂದಾಪುರ
ಉಡಿಪಿ
ಕಾರ್ಕಳ
ಬಂಟ್ವಾಳ
ಪುತ್ತೂರು
ಕಾಸರಗೋಡು
ಮಧುರಾ
ಮದರಾಸು
ಪಯ್ಯನ್ನೂರು
ಕಲ್ಲಿಕೋಟೆ
ಕಣ್ಣಾನ್ನೂರು
ಕೊಯಿಮುತ್ತೂರು
ತಿರುಚಿನಾಪಳ್ಳಿ
ತೂತುಕುಡಿ
ಸೇಲಂ
ಇರೋಡು

ಹೈದರಾಬಾದು ಸಂಸ್ಥಾನ

ಸಿಕಂದರಾಬಾದು

ತಿರುವಾಂಕೂರು ಸಂಸ್ಥಾನ

ಅಲ್ಲೆಪ್ಪಿ
ಕ್ವಿಲೋನ

ಮಧ್ಯಪ್ರಾಂತ್ಯ

ನಾಗಪುರ
ಅಕೋಲಾ
ಅಮರಾವತಿ

ಮುಂಬೈ ಪ್ರಾಂತ್ಯ

ಬೆಳಗಾಂವಿ
ಧಾರವಾಡ
ಹುಬ್ಬಳ್ಳಿ
ಕೊಲ್ಹಾಪುರ
ಪೂಣೆ
ಮುಂಬೈ—ಫೋರ್ಟ್
ಮುಂಬೈ—ಕಾಳಬಾದೇವಿ
ಮುಂಬೈ—ಮಾಂಡ್ವಿ
ಮುಂಬೈ—ಗಿರಗಾಂವ್
ಮುಂಬೈ—ಕಲ್ಯಾಣ

ಮೈಸೂರು ಸಂಸ್ಥಾನ

ಮೈಸೂರು
ಶಿವಮೊಗ್ಗ
ಚಿಕ್ಕಮಗಳೂರು
ಬೆಂಗಳೂರು ಸಿಟಿ
ಅರಸಿಕೆರೆ
ದಾವಣಗೆರೆ

ಸಿಂಧ್ ಪ್ರಾಂತ್ಯ

ಕರಾಚಿ

ಕೊಚ್ಚಿ ಸಂಸ್ಥಾನ

ಕೊಚ್ಚಿ
ಎರ್ನಾಕುಳಂ

ಪಂಜಾಬು ನರಮೇಧ-
ಯಾರು ಹೊಣೆ? ಏನು ಪರಿಹಾರ?

ಪಂಜಾಬಿನ ಎರಡೂ ಕಡೆಗಳಲ್ಲಿಯೂ ಆಗೋಸ್ತು 15 ರಿಂದ ಕೂಡಲೇ ಸಾವಿರಾರು ಮಂದಿಯ ಕೊಲೆ, ಲಕ್ಷಾವಧಿ ಮಂದಿಯ ಪಲಾಯನ, ಕೋಟಿಗಟ್ಲೆ ರೂಪಾಯಿಗಳ ಸೊತ್ತು ಹಾನಿಯಾಗುವಷ್ಟು ದೊಡ್ಡ ಪರಿಮಾಣದಲ್ಲಿ ಜಾತೀಯ ದಂಗೆಗಳಾಗಬೇಕಾದರೆ ಅದಕ್ಕೆ ದೀರ್ಘಾವಧಿಯ ಸಾಮೂಹಿಕ ಸಂಘಟನೆ ನಡೆದಿರಲಿಲ್ಲವೆ? ಅದನ್ನು ಆಕಾಲದ ಯುರೋಪಿಯನ್ ಗವರ್ನರ್ ಆಳ್ವಿಕೆಯು ಯಾಕೆ ತಡೆಗಟ್ಟಿರಲಿಲ್ಲ?

ಈ ಬಾರಿ ಪ್ರಥಮತಃ ದಂಗೆಯೆಬ್ಬಿಸಿದವರು ಯಾರು? ಪಾಕಿಸ್ಥಾನ್ ವ್ಯವಸ್ಥಾನಂತರ ಪಂಜಾಬಿನಲ್ಲಿ ವಿಶೇಷ ಅತೃಪ್ತಿ, ಮತ್ತು ಉದ್ರೇಕ ಪ್ರದರ್ಶಿಸುತ್ತಿದ್ದ ಸಿಖ್ಖರೇ ಆಗಿರಬಹುದೆ? ಈ ಹಿಂದಿನ ಪಂಜಾಬ್ ಗಲಭೆಯಲ್ಲಿ ಸುಸಂಘಟಿತ ಸಶಸ್ತ್ರ 'ಮುಸ್ಲಿಂ ನೇಶನಲ್ ಗಾರ್ಡ್ಸ್'ನ್ನು ರಚಿಸಿಕೊಂಡು ಎಲ್ಲೆಲ್ಲೂ ಸಾಮೂಹಿಕ ರೀತಿಯ ಪೂರ್ವಸಿದ್ಧತೆ ನಡಿಸಿ ಸಿಖ್ ಸಮಾಜವನ್ನೇ ನಿರ್ಮೂಲಿಸಬೇಕೆಂಬಷ್ಟು ವೈರದಿಂದ ಭಯಂಕರ ಅತ್ಯಾಚಾರಗಳನ್ನು ನಡೆಸಿದ್ದ ಮುಸ್ಲಿಮರ ಮೇಲೆ ಛಲವಾದೀ ಸಿಖ್ಖರು ಈ ಬಾರಿ ಪ್ರತೀಕಾರ ಕೈಕೊಂಡರೆಂದೂ ಹಿಸಬಹುದೆ?

ಮುಸ್ಲಿಮರವಾದ ಪಶ್ಚಿಮ ಪಂಜಾಬಿನಲ್ಲಿ ಅಲ್ಲಿಯ ಸರಕಾರವು ದಂಗೇಗಾರರಿಗೆ ಆಯುಧಗಳನ್ನು ಒದಗಿಸುತ್ತಿದೆಯೆಂದೂ, ಆದರೆ ಹಿಂದೂ ಸಿಖ್ಖರ ಪಾಲಿನ ಪೂರ್ವ ಪಂಜಾಬಿನಲ್ಲಿ ಅಲ್ಲಿಯ ಸರಕಾರವು ಶಕ್ತಪ್ರಯತ್ನದಿಂದ ಜನರನ್ನು ನಿಶ್ಶಸ್ತ್ರಗೊಳಿಸುತ್ತಿದೆಯೆಂದೂ ಸುದ್ದಿಯಿದೆ. ಇದು ನಿಜವಿರಬಹುದೆ?

“ಮೊನ್ನೆ ತಾನೇ ಜನಿಸಿರುವ ಪಾಕಿಸ್ಥಾನ್ ಶಿಶುವಿಗೆ ಜಾತೀಯಗಲಭೆಯೆಂಬ ಬಾಲ ಗ್ರಹಪೀಡೆ ತಾಗಿಸಿ, ಅದರ ಆರ್ಥಿಕ ಸ್ಥಿತಿ ಮತ್ತು ಒಳ ವ್ಯವಸ್ಥೆಗಳನ್ನು ಅಡಿಮೇಲು ಮಾಡುವ ಭ್ರೂಣಹತ್ಯಾದ್ರೋಹವನ್ನು ಪಾಕಿಸ್ಥಾನ್ ವಿರೋಧಿಗಳು ಬಗೆದಿದ್ದಾರೆ. ಅವರ ದುರಿಚ್ಛೆಯನ್ನು ನೆರವೇರಿಸಿ ಕೊಡಬೇಡಿ; ಪ್ರತೀಕಾರಕ್ಕೆ ಹೋಗಬೇಡಿ; ಶಾಂತರಾಗಿರಿ” ಎಂದು ತನ್ನ ಪಶ್ಚಿಮ ಪಂಜಾಬಿನ ಮುಸ್ಲಿಮರನ್ನು ಮಿ. ಜಿನ್ನರು ಆಗ್ರಹಪೂರ್ವಕ ಕೇಳಿಕೊಂಡಿದ್ದರು. ಆದರೆ ಪೂರ್ವ ಪಂಜಾಬು ಈಗ ಹಿಕೋಟೆಗೆ ಬಂದಿರುವಾಗಲೂ ಪಶ್ಚಿಮ ಪಂಜಾಬಿನಲ್ಲಿ ಅತಿದೊಡ್ಡ ಪರಿಮಾಣದಲ್ಲಿ ಅಮಾನುಷ ರೀತಿಯ ಕೊಲೆ, ಕೊಳ್ಳೆ,ಸುಲಿಗೆ, ಜುಲುಮೆಯ ಮತಾಂತರ, ಮಾನಭಂಗ ನಡೆದಿರುವುದಕ್ಕೆ ಹೊಣೆಯಾರು?

ಪಾಕಿಸ್ತಾನವಾದ ಮೇಲೆ ಮಿ. ಜಿನ್ನರಿಗೆ ಜಾತೀಯ ಗಲಭೆಯಾಗುವುದು ಬೇಕಾಗಿಲ್ಲವೆಂಬುದು ಖಂಡಿತ. ಆದರೂ ಪಶ್ಚಿಮ ಪಂಜಾಬು, ಗಡಿನಾಡು, ಸಿಂಧದ ಕ್ವೆಟ್ಟಾ, ಪೂರ್ವ ಬಂಗಾಳಕ್ಕೆ ಹೊಸತಾಗಿ ಸೇರಿದ ಸಿಲ್ಹೆಟ್ ಮೊದಲಾದ ಪಾಕಿಸ್ಥಾನದ ಅದ್ಯಂತವೂ 'ತಮ್ಮ ರಾಜ್ಯದಲ್ಲಿ ತಮ್ಮ ಕೈ ಮತ್ತೊಮ್ಮೆ ತೋರಿಸಿ ಬಿಡುವೆವು' ಎಂಬಂತೆ ಮುಸ್ಲಿಮರು ವರ್ತಿಸುತ್ತಿರುವುದು ಕಂಡುಬರುತ್ತಿದೆ ಈ ಸಂಗತಿಯ ಮೇಲಿಂದ ಮುಸ್ಲಿಂ ಜನತೆಯ ಮೇಲೆ ಮಿ. ಜಿನ್ನರ ಹಿಕೋಟೆಯಿಲ್ಲವೆಂದೋ, ಅಥವಾ ತನ್ನ ಅಭಿಮತದಂತೆ ಆಡಳಿತೆ ನಡೆಸುವದು ಮಿ.ಜಿನ್ನರಿಗೆ ಅಸಾಧ್ಯವಾಗಿದೆಯೆಂದೋ ಸ್ಪಷ್ಟವಾಗುವದಿಲ್ಲವೆ?

“ಎಲ್ಲಾ ಅಲ್ಪಸಂಖ್ಯಾಕರ ಜೀವ, ಸೊತ್ತು,ಧರ್ಮ, ಸಂಸ್ಕೃತಿ,ಪದ್ಧತಿಗಳಿಗೆ ಸಂಪೂರ್ಣ ರಕ್ಷಣೆಯಿದೆ.ಅಲ್ಪಸಂಖ್ಯಾಕರನ್ನು ಸಮಾನತೆಯಿಂದಷ್ಟೇ ಅಲ್ಲ, ಉದಾರತೆಯಿಂದ ನಡೆಸಿಕೊಳ್ಳುವೆವು. ನಾನಿರುವವರೆಗೆ, ಮತ್ತು ನನಗೇನಾದರೂ ಅಧಿಕಾರವಿರುವ ವರೆಗೆ,ಪಾಕಿಸ್ತಾನದಲ್ಲಿರುವ ಅಲ್ಪಸಂಖ್ಯಾಕರು ಹೆದರ ಬೇಕಾಗಿಲ್ಲ” ಎಂದು ಕಾಯಿದೇ ಆಝಾಮ್ ಜಿನ್ನರು ಕೊಟ್ಟಿದ್ದ ಆಶ್ವಾಸನೆ ಎಲ್ಲಿ ಹೋಯಿತು? ಮಿಸ್ಕಾವುದು ಹೇಗಿದ್ದರೂ ಮಿ. ಜಿನ್ನರು “ಅಡಿದಂತೆ ಮಾಡುವವರು,ನಂಬಿಗಸ್ಥ” ಎಂಬ ಮಟ್ಟಿಗೆ ಭಿನ್ನಾಭಿಪ್ರಾಯವೇ ಇರಲಿಲ್ಲ. ಆದರೆ ಈಗ?

'ಅನ್ಯ ಸಮಾಜಗಳವರು, ಅರ್ಥಾತ್ ಹಿಂದೂ ಸಿಖ್ಖರು, ಗಲಭೆಗೆ ಕಾರಣ ಹೊರತು ಮುಸ್ಲಿಮರಲ್ಲ. ಆದ್ದರಿಂದ ಈ ದಂಗೆಯ ದೋಷ ಕಾಯಿದೇ ಆಝಾಮರಿಗೆ ತಟ್ಟುವಂತಿಲ್ಲ' ಎನ್ನಬಹುದೇ ಹಿಂದೂ ಸಿಖ್ಖರು ಅತಿರೇಕಕ್ಕೆ ಮುಂದಾಗಿ ಇಳಿದುದು ಹೌದಾದರೆ ಅದು, ಅವರ ಬಹುಮತವುಳ್ಳ ಪೂರ್ವ ಪಂಜಾಬಿನಲ್ಲೇ ಆಗಿರಬೇಕು ಹೊರತು,ಜಿನ್ನರ ಅಧಿಕಾರವುಳ್ಳ ಪಶ್ಚಿಮ ಪಂಜಾಬಿನಲ್ಲಲ್ಲ; ಆದರೆ ಮಿ. ಜಿನ್ನರು ಆಶ್ವಾಸನೆ ಕೊಟ್ಟಿದ್ದುದು ತನ್ನಾಡಳಿತೆಯ ಕ್ಷೇತ್ರಗಳ ಮಟ್ಟಿಗೆ. ಇತರ ಕಡೆಯ ವಿದ್ಯಮಾನಗಳಿಗೂ ಜಿನ್ನರ ಅಭಯಕ್ಕೂ ಸಂಬಂಧವೇ ಇಲ್ಲ. 'ಹಿಂದುಸ್ಥಾನದ ಮುಸ್ಲಿಮರ ಕೂದಲು ಕೊಂಕಿದಿದ್ದಲ್ಲಿ ಪಾಕಿಸ್ಥಾನದ ಅಲ್ಪ ಸಂಖ್ಯಾಕರ ಜೀವಕ್ಕೆ ಹಾನಿಯಿಲ್ಲ' ಎಂದೇನೂ ಕಾಯಿದೇ ಆಝಾಮರು ಹೇಳಿದ್ದಿಲ್ಲವಷ್ಟೆ? ಹಾಗಾದರೆ ಪಶ್ಚಿಮ ಪಂಜಾಬಿನ ನರಹತ್ಯಾಕಾಂಡದ ಕುರಿತು ಮಿ. ಜಿನ್ನರು ಈಗ ಅನ್ನುವದೇನು?

ಶುದ್ಧ ತಪ್ಪು ಮತ್ತು ಅಪಾಯಕರ,ದಾಗೂ ಅನ್ಯಾಯೀ ವರ್ತನೆಯಾಗಿದ್ದರೂ ಸಿಖ್ಖರು ಮತ್ತು ಹಿಂದುಗಳು ಉರಿದು ಬಿದ್ದುದಕ್ಕೆ ಕಾರಣವಿದೆ. ಆದರೆ ಪೂರ್ವ ಪಂಜಾಬಿನ ಅಥವಾ ಹಿಂದೀ ಕೇಂದ್ರದ ಸರಕಾರಗಳು ತಮ್ಮ ಕರ್ತವ್ಯವನ್ನು ಮಾಡಿಲ್ಲವೆನ್ನಲು ಆಗುವ ಒಂದೇ ಒಂದು ನಿದರ್ಶನವಿಲ್ಲ. ಇದೇ ರೀತಿ ಪಶ್ಚಿಮ ಪಂಜಾಬು ಮತ್ತು ಪಾಕಿಸ್ಥಾನ್ ಕೇಂದ್ರ ಸರಕಾರಗಳೂ ನಿರ್ದೋಷಿಗಳೆನ್ನಲು ಸಾಧ್ಯವೆ?

ಸರ್. ತ್ರಿವೇದಿಗಳು ಗವರ್ನರ್, ಆಗಿ ಶ್ರೀ.ಭಾರ್ಗವರ ಮಂತ್ರಿ ಮಂಡಲ ಪೂರ್ವ ಪಂಜಾಬಿನಲ್ಲಿ ಸ್ಥಾಪನೆಯಾಗುವಾಗಲೇ ಅಲ್ಲಿ ಸಾಮೂಹಿಕ ರೀತಿಯಲ್ಲಿ ದಂಗೆ ಹಬ್ಬಿಕೊಂಡಿತು. ಹಿಂದಿನ ಮುಸ್ಲಿಂ ಮಂತ್ರಿಮಂಡಲಗಳು ಮಾಡಿಟ್ಟಂತೆ ಗತ ಅವಿಭಜಿತ ಪಂಜಾಬು ಪ್ರಾಂತ್ಯದ ಪೋಲಿಸು ಪಡೆಗಳಲ್ಲಿ ಸೇ. 75ರಷ್ಟು ಮುಸ್ಲಿಮರೇ ಇದ್ದರು. ವಿಭಜನೆಯಾದೊಡನೆಯೇ ಅವರೆಲ್ಲರೂ ಮುಸ್ಲಿಂ ಪಂಜಾಬ್ ಸರಕಾರಕ್ಕೆ ಸೇರಿ ಹೋದರು, ಹೀಗಾಗಿ ಪೂರ್ವ ಪಂಜಾಬಿನ ದುರ್ಬಲ ಪೋಲಿಸ್ ಪಡೆಯು ದಂಗೆ ನಿಲ್ಲಿಸಲಸಮರ್ಥವಾಯಿತು. ಮುಸ್ಲಿಂ ಪಂಜಾಬಿಗೆ ಸೇರಿದ ಲಾಹೋರಿನ ಮಾರ್ಗವಾಗಿಯೇ ಡಿಲ್ಲಿಗೆ ಪೂರ್ವ ಪಂಜಾಬಿನೊಡನೆ ತಂತಿ, ಟೆಲಿಫೋನ್ ಇತ್ಯಾದಿ ಸರ್ವ ಜೋಡಣೆಗಳಿದ್ದುದರಿಂದಲೂ ರೈಲ್ವೇ ಮೊದಲಾದ ಸಂಚಾರ ಸಂಬಂಧಗಳು ಕೂಡಾ ಕಡಿದುಹೋದುದರಿಂದಲೂ ಪೂರ್ವಪಂಜಾಬು ಸರಕಾರದ ಕಣ್ಣೆದುರು ಪೂರ್ಣಕತ್ತಲೆಯೇ ಕವಿದಿತ್ತು.ಅಲ್ಲಿ ಗಲಭೆ ನಡೆದುದು ಇಂತಹ ನಿಸ್ಸಹಾಯಕ ಸ್ಥಿತಿಯಿರುವಾಗಲೇ. ಕೂಡಲೇ ಹಿಂದೀ ಕೇಂದ್ರ ಸರಕಾರ ಮತ್ತು ಪೂರ್ವ ಪಂಜಾಬು ಸರಕಾರವು ಜತೆಯಲ್ಲಿ ಇವೆಲ್ಲಾ ಅಭಾವಗಳನ್ನೂ ನಿವಾರಿಸಿಕೊಂಡ ಆಶ್ಚರ್ಯಕರ ರೀತಿಯನ್ನೂ, ಬಿನ್ನಲ್ಲೇ ದಂಗೆಯನ್ನು ನಿರ್ಮೂಲಿಸಿ ಶಾಂತಿ ಸ್ಥಾಪನೆ ಮಾಡಿದ ಸಾಹಸವನ್ನೂ ಎಂಥವರಾದರೂ ಶ್ಲಾಘಿಸಬೇಕು. ಅಂಥ ಮೇಲೆ ಈ ಕಡೆಯವರನ್ನು ಆರೋಪಿಸುವಂತಿದೆಯೆ?

ಆದರೆ ಪಶ್ಚಿಮ ಪಂಜಾಬಿನ ಲೀಗ್ ಸರಕಾರದ ಸ್ಥಿತಿ ಹಿಂದಿನ ಪಂಜಾಬಿನ ರಾಜಧಾನಿ ಅಲ್ಲಿಯ ಲೀಗ್ ಸರಕಾರದ ಕೈಯಲ್ಲಿತ್ತು; ಇಡೀ ಪ್ರಾಂತ್ಯದ ಪಾಲಿನ ಪೋಲಿಸರ ಪೈಕಿ ಸೇ. 75 ರಷ್ಟು ಮಂದಿ, ತಾನು ಹೆಚ್ಚಿನ ಅರಿವಾಸಿ ಪಂಜಾಬಿಗಾಗಿ ಈಸರಕಾರದ ಅಧೀನದಲ್ಲಿದ್ದರು. ಆದರೆ ಅದು ಮಾಡಿದುದೇನು? ಅಲ್ಪಸಂಖ್ಯಾಕರ ಜೀವ ರಕ್ಷಣೆಯ ಅಭಯ ಕೊಟ್ಟಿದ್ದ ಕಾಯಿದೇ ಆಝಾಮ್ ಜಿನ್ನರು ಕೂಡಾ, ಕೇವಲ ಮುಸ್ಲಿಮರೇ ಧ್ವಂಸವಾಗುತ್ತಿದ್ದಾರೆಂಬ ಅಭಿಪ್ರಾಯ ಮೂಡುವಂತಹ ಉದ್ರೇಕ ಪ್ರೇರಕ ಹೇಳಿಕೆ ಹೊರಡಿಸಿದ್ದರು 'ಪ್ರತೀಕಾರ ಮಾಡಬೇಡಿ' ಎಂದು ಹೇಳುವಾಗಲೇ, 'ಪ್ರತೀಕಾರಕ್ಕಾಗಿ ಏನೇ ಮಾಡಿದರೂ ತಪ್ಪಲ್ಲ' ಎಂಬ ಭಾವನೆಯು ಅಜ್ಞ ಮುಸ್ಲಿಂ ಜನತೆಯಲ್ಲಿ ಮೂಡುವಂತೆ ಮಾತಾಡಿದ್ದರು. ತತ್ಪರಿಣಾಮವಾಗಿ ಪಾಕಿಸ್ಥಾನ್ ತುಂಬಾ ಅತ್ಯಾಚಾರ ನಡೆಯಿತು. ಅಲ್ಪಸಂಖ್ಯಾಕರನ್ನು ರಕ್ಷಿಸುವುದೆಂದರೆ ಹೀಗೆಯೇ? ಸರ್ವ ಸಮಾನತೆಯಿಂದ ಆಡಳಿತೆ ನಡೆಸುವುದೆಂದರೆ ಇದೇ ಏನು?

ಪಶ್ಚಿಮ ಪಂಜಾಬಿನ ದಂಗೆಪೀಡಿತ ಮತ್ತು ಭಯ ಪೀಡಿತ ಅಲ್ಪಸಂಖ್ಯಾಕರನ್ನು ಸುರಕ್ಷಿತ ನೆಲೆಗೆ ಸಾಗಿಸುವ ವಿಮಾನ, ರೈಲು, ವಾಹನ ವ್ಯವಸ್ಥೆಗಳನ್ನೆಲ್ಲಾ ಭಾರತ ಸರಕಾರವು ಮಾಡಿಟ್ಟು ಮೇಲೂ ಪಶ್ಚಿಮ ಪಂಜಾಬ್ ಸರಕಾರದ ಅನುಮತಿಗಾಗಿ ಈ ಸಂದರ್ಭದಲ್ಲಿ ಕಾಯುತ್ತಾ ನಿಲ್ಲಬೇಕಾಗಿ ಬಂದುದರ ಗುಟ್ಟೇನು?

ಇನ್ನು ಪಾಕಿಸ್ಥಾನದಲ್ಲಿ ಅಲ್ಪ ಸಂಖ್ಯಾಕರಾಗಿರುವ ಮುಸ್ಲಿಮೇತರರ, ಅಂತೆಯೇ ಹಿಂದುಸ್ಥಾನದಲ್ಲಿ ಅಲ್ಪ ಸಂಖ್ಯಾಕರಾಗಿರುವ ಮುಸ್ಲಿಮರ ಜೀವ ಸೊತ್ತುಗಳ ಭದ್ರತೆ ವಸೆಯೇನು? ಆದ್ದರಿಂದ ಕೂಡಲೇ ಇತ್ತಂಡದವರೂ ಜನ ಬದಲಾವಣೆ ಮಾಡಿಕೊಳ್ಳಬಾರದೇಕೆ?

'ಬ್ರಿಟಿಶರಿದ್ದುದರಿಂದಲೇ ಇಲ್ಲಿ ಜಾತೀಯ ಜಗಳ' ಎಂಬ ನಮ್ಮ ಮಾತು ಸುಳ್ಳಾಗಿ ತೋರುವಿಕೆಯು ಮಟ್ಟಿಗಾದರೂ 'ಬ್ರಿಟಿಶರು ಕಾಲ್ತೆಗೆದೊಡನೆಯೇ ಹಿಂದುಸ್ಥಾನದಲ್ಲಿ ಅರಾಜಕತೆ, ಅಂತರ್ಯುದ್ಧ ವ್ಯಾಪಿಸುವದು' ಎಂಬ ನಮ್ಮ ವಿರೋಧಿಗಳ ಮಾತೇ ಸತ್ಯವಾಯಿತು. ಎರಡೂ ರಾಷ್ಟ್ರಗಳು ಇನ್ನಾದರೂ ಜನಬದಲಾವಣೆ ಮಾಡಿಕೊಳ್ಳಬಾರದೇಕೆ?

ಪಾಕಿಸ್ತಾನ್ ಸಾಧನೆಗಾಗಿ ಎದ್ದಿದ್ದ ಗಲಭೆಗಳು ಪಾಕಿಸ್ಥಾನವಾದ ಮೇಲೂ ನಡೆಯಲಾರದವೆಂದೂ, ಆ ಮೇಲಾದ ಕಡೆಯ ಅಲ್ಪ ಸಂಖ್ಯಾಕರಿಗೂ ಭಯವಿಲ್ಲವೆಂದೂ ಕಟ್ಟಿಕೊಂಡಿದ್ದ ಆಸೆ ಬಯಲಾಯಿತು. ಇನ್ನಾದರೂ ಜನ ಬದಲಾವಣೆಯೂ ಆಗಬಾರದೇಕೆ?

1948ನೆ ವರ್ಷದ E. S. L. C. ಪರೀಕ್ಷೆಯ ಕನ್ನಡ ಪಾಠ ಪುಸ್ತಕದ ಟಿಪ್ಪಣಿಯು ಮಾರಾಟಕ್ಕೆ ಸಿದ್ಧವಾಗಿದೆ. ಬೆಲೆ 0-8-0. ಗ್ರಾಹಕರ ಇಚ್ಛೆಯಂತೆ ಕಳುಹಿಸಲಾಗುವುದು. ಇಂದೇ ಬರೆಯಿರಿ!

ಡಿ. ವಿ. ಹೊಳ್ಳ
ಕುಂದಾಪುರ (ದ. ಕ)

WARDEN

Reaches New Heights in 1946.

Business Received ... ... Rs. 2,04,00,000
Business Completed ... ... Rs. 1,72,00,000

THIS represent the latest and greatest achievement in WARDEN'S progressive career.

For this fine performance the Company extends its heartiest thanks and congratulations to its representatives and policy-holders all over the country and abroad.

Managing Director — *Shivaprasad Thaker,*
Agency Manager — *M. Sunderam Shetty.*

Branch Office At Mangalore

B. Sachidananda Hegde, Branch Secretary
K. P. Bhavanishanker Shetty, Asst. Branch Secretary

★ ಘಟನಾ ವ್ಯವಸ್ಥೆ

ಆಗೋಸ್ತು ತಾ. 25ರಿಂದಾರಂಭಿಸಿ, ಸಂಯುಕ್ತ ಕೇಂದ್ರ ಸರಕಾರದ ಅಧಿಕಾರ ಕ್ಷೇತ್ರ ನಿರ್ಣಯ ಮತ್ತು ಪ್ರತ್ಯೇಕ ಮತದಾನ ಪದ್ಧತಿಯ ರದ್ದತಿ ಮಾಡಿಕೊಂಡ ಘಟನಾ ಸಮಿತಿ ಸಭೆಯೇ ಕಳೆದ ವಾರದ ವಿಧಾಯಕ ರಂಗದಲ್ಲಿ ಮುಖ್ಯವಾದುದು– ಪಂಜಾಬಿನಲ್ಲಿ ನಡೆದಿರುವ ಸಾಮೂಹಿಕ ದಂಗೆಯು ಕಳೆದ ವಾರದ ವಿನಾಶಕ ಮಹಾಘಟನೆ. ಸಂಸ್ಥಾನಗಳ ಮಟ್ಟಿಗೆ ಈಗ ಗಣ್ಯ ಸಮಸ್ಯೆಯಾಗಿರುವುದು ಹೈದರಾಬಾದು ಒಂದೇ. ನಿಜಾಮ ಸರಕಾರವು ಹಿಂದೀ ಕೇಂದ್ರದೊಡನೆ ಪ್ರಚಲಿತ ಒಪ್ಪಂದಗಳನ್ನು ಊರ್ಜಿತದಲ್ಲಿಡಲು ಸಿದ್ಧವಾದರೂ, ಅದರೊಡನೆ ಜೋಡಣೆಗೊಳ್ಳುವ ಒಪ್ಪಂದಕ್ಕೆ ಬಂದಿಲ್ಲ. ಹೈದರಾಬಾದಿನ ಪ್ರತಿನಿಧಿಗಳು ಡಿಲ್ಲಿಗೆ ಬಂದು ಮಾತುಕತೆಗಳನ್ನು ನಡೆಸಿದ್ದಾರೆ. ಆದರೆ ಹಿಂದೀ ಕೇಂದ್ರದೊಡನೆ ಸೇರಿಕೊಳ್ಳದೆ ಕೇವಲ ಪ್ರಚಲಿತ ಒಡಂಬಡಿಕೆಯನ್ನಿಟ್ಟುಕೊಳ್ಳುವುದಸಾಧ್ಯವೆಂದೂ ಇವೆರಡು ಒಪ್ಪಂದಗಳೂ ಪರಸ್ಪರ ಮಿಲನಗೊಂಡಿರುವುದರಿಂದ ಅವುಗಳನ್ನು ಪ್ರತ್ಯೇಕಿಸಲಾಗುವುದಿಲ್ಲವೆಂದೂ, ಈ ಮೊದಲೇ ಮುಂದಿಟ್ಟಿರುವ ಶರ್ತಗಳಿಗಿಂತ ಹೆಚ್ಚಿನ ರಿಯಾಯತಿಯನ್ನು ಇನ್ನು ತೋರಿಸುವಂತಿಲ್ಲವೆಂದೂ ಹಿಂದೀ ಕೇಂದ್ರದ ಪರವಾಗಿ ಸ್ಪಷ್ಟಪಡಿಸಲಾಗಿದೆ. ಹೈದರಾಬಾದು ತನ್ನ ಪ್ರಜೆಗಳ ಮತ ಸಂಗ್ರಹಿಸಿ ಧೋರಣೆ ನಿರ್ಧರಿಸಲು ತಯಾರಾಗಿದೆಯೆಂಬ ವಾರ್ತೆಯಿದೆ. ಆ ಸಂಸ್ಥಾನದೊಳಗೆ ಕಾಂಗ್ರೆಸಿಗರ ಚಳವಳಿ ರಭಸದಿಂದ ಸಾಗಿದೆ. ಇತ್ತ ತಮ್ಮ ಒಂದು ವಸಾಹತೆಂದು ಹೈದರಾಬಾದನ್ನು ಗಣಿಸಲು ಬ್ರಿಟಿಷ್ ಸರಕಾರವೂ ಒಪ್ಪಿಗೆ ನಿರಾಕರಿಸಿದಂತಿದೆ. ಹೀಗಾಗಿ ಮುಂದಿನ ಪಥತೋರದ ನಿಜಾಮ್ ಸರಕಾರವು, ತಾನು ಸೋತು ಶರಣಾದೆನೆಂಬ ಅಪವಾದ ತಟ್ಟದಂತೆ ನೋಡಿಕೊಂಡು ಹಿಂದೀ ಕೇಂದ್ರದೊಡನೆ ಸೇರಿಕೊಳ್ಳುವ ಸಮಯ ನಿರೀಕ್ಷೆಯಲ್ಲಿದೆ ಎಂದೂ ಹೇಳಬಹುದು.

ಘಟನಾ ಸಮಿತಿ

ಬೇರೆ ಬೇರೆ ಉಪಸಮಿತಿಗಳ ವರದಿ ಪರ್ಯಾಲೋಚನೆಗಾಗಿ ಘಟನಾ ಸಮಿತಿಯು ಆಗೋಸು 25 ರಲ್ಲಿ ಸೇರಿತು. ಸಭೆಯು ಕೊನೆಯ ಅಧ್ಯಾಯವೇ ಇದೆನ್ನಬಹುದು. ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ತಾ. 31ರೊಳಗೆ ಎಲ್ಲಾ ಕಾರ್ಯಗಳನ್ನೂ ಮುಗಿಸಿಕೊಳ್ಳಬೇಕೆಂಬ ಆಶೆ ವ್ಯಕ್ತಪಡಿಸಿದರು, ಸಂಯುಕ್ತ ಕೇಂದ್ರಕ್ಕಿರುವ ಅಧಿಕಾರ ಮತ್ತು ಶಾಖೆಗಳ ಸಂಬಂಧದ ಸವಿವರ ಚರ್ಚೆ ನಡೆದು ಗಣ್ಯ ಬದಲಾವಣೆಯಿಲ್ಲದೆ ಉಪಸಮಿತಿ ಸೂಚನೆಗಳು ಮಂಜೂರಾದುವು.

ಕನ್ನಡ ಭಾಷಣ

ಕೇಂದ್ರಾಧಿಕಾರದ ಚರ್ಚೆಯ ವೇಳೆ ವಿನೋದವೆಬ್ಬಿಸಿದ ವಿಷಯವೆಂದರೆ ಒಂದು ಕನ್ನಡ ಭಾಷಣ. ಘಟನಾ ಸಮಿತಿಯ ಹಿಂದಿನ ಸಭೆಗಳಲ್ಲಿ ಹಲವು ಸದಸ್ಯರು ತಂತಮ್ಮ ಮಾತೃಭಾಷೆಗಳಲ್ಲಿ ಮಾತಾಡಿದ್ದರು. ಅಧ್ಯಕ್ಷರದಕ್ಕೊಪ್ಪಿಗೆ ಕೊಟ್ಟಿದ್ದರು. ಅದೇ ರೀತಿ ಆಗೋಸ್ತು ತಾ. 25ರ ಸಭೆಯಲ್ಲಿ ಮೈಸೂರಿನ ಪ್ರತಿನಿಧಿ ಶ್ರೀ. ಟಿ. ಚೆನ್ನಯ್ಯರು ಕನ್ನಡದಲ್ಲಿ ಭಾಷಣಮಾಡಲಾರಂಭಿಸಿದ್ದೇ ತಡ-ಸದಸ್ಯರಲ್ಲಿ ಒಬ್ಬೊಬ್ಬರೊಂದೊಂದು ಸವಾಲಿನಂತೆ ಭಡಾಯಿಸತ್ತೊಡಗಿದರು. "ಇವರು ಸಭೆಯ ಮುಂದಿರುವ ವಿಷಯವನ್ನು ಸಮರ್ಥಿಸುತ್ತಿರುವರೋ ವಿರೋಧಿಸುತ್ತಿರುವರೋ?" ಎಂದೊಬ್ಬ ಕೇಳಿದ. "ಈ ಸದಸ್ಯರೀಗ ಹೇಳುತ್ತಿರುವುದು ಸಭಾ ವಿಷಯಕ್ಕೆ ಸಂಬಂಧಿಸಿದೆಯೋ?" ಎಂದು ಮತ್ತೊಬ್ಬ ಪ್ರಶ್ನಿಸಿದ. ಮೂರನೆಯವನ ಪ್ರಶ್ನೆಯೇ ಬೇರೆ. "ಈ ಸದಸ್ಯರು ಮಾತಾಡುತ್ತಿರುವ ಭಾಷೆ ಯಾವುದು?" ಅಧ್ಯಕ್ಷ ಡಾ| ಪ್ರಸಾದರು "ಅವರು ಮಾತಾಡುತ್ತಿರುವುದು ಕನ್ನಡವೆಂಬುದನ್ನು ನಾನು ಕೇಳಿ ತಿಳಿದೆ" ಎಂದಾಗ ಸಭೆಯಲ್ಲಿ ನಗೆಯೆದ್ದಿತು. ತನ್ನ ಮಾತೃಭಾಷೆಯಲ್ಲಿ ಮಾತಾಡದಂತೆ ಯಾರನ್ನೂ ತಾನು ತಡೆಯಲಾರೆನೆಂದೂ, ಈ ಮೊದಲೂ ಇತರ ಸದಸ್ಯರನ್ನು ಅವರ ಸ್ವಂತ ಭಾಷೆಯಲ್ಲೇ ಮಾತಾಡಲು ಬಿಟ್ಟಿದ್ದೆನೆಂದೂ ಅಧ್ಯಕ್ಷರು ಹೇಳಿ, "ನನಗಾ ಆ ಭಾಷೆ ಬರುವುದಿಲ್ಲವಾದ್ದರಿಂದ ಅವರ ಮಾತು ಕ್ರಮಬದ್ಧವೋ ಅಲ್ಲವೋ ಎಂಬುದನ್ನು ಹೇಳಲಾರೆ"ನೆಂದು ಮತ್ತೊಮ್ಮೆ ನಗೆ ಎಬ್ಬಿಸಿದರು. ದಿವಾನ್ ಚಮನ್‌ಲಾಲರು ವಿಧಿಬಿಂದುವನ್ನೆತ್ತಿ ಹಿಂದೀ, ಉರ್ದು, ಹಿಂದುಸ್ತಾನಿ ಮತ್ತು ಇಂಗ್ಲಿಷಿನಲ್ಲಿ ಮಾತ್ರ ಭಾಷಣ ಕೊಡಬೇಕೆಂದು ಸಭಾ ನಿಯಮವಿದೆ. ಇವುಗಳಲ್ಲಾವ ಭಾಷೆಯೂ ಬಾರದ ಸದಸ್ಯನು ಮಾತ್ರ ತನ್ನ ಮಾತೃಭಾಷೆಯಲ್ಲಿ ಮಾತಾಡುವರೆ ಅಧ್ಯಕ್ಷರು ಅನುಮತಿ ಕೊಡಬಹುದು. ಶ್ರೀ ಚೆನ್ನಯ್ಯರು ಇದೇ ಸಭೆಯಲ್ಲಿ ಈ ಮೊದಲು ಇಂಗ್ಲಿಷಿನಲ್ಲಿ ಮಾತಾಡಿದುದಿದೆ' ಎಂದರು. "ಚೆನ್ನಯ್ಯರಿಗೆ ಇಂಗ್ಲಿಷ್ ಗೊತ್ತಿದ್ದರೂ ಮಾತೃಭಾಷೆಯಲ್ಲಿ ಮಾತಾಡುವ ತನ್ನ ಸ್ವಾತಂತ್ರ್ಯವನ್ನು ಬಿಡಲವರಿಗಿಷ್ಟವಿಲ್ಲದಿರಬಹುದು. ಸದಸ್ಯರನ್ನು ಮಾತೃಭಾಷೆಯಲ್ಲೂ ಮಾತಾಡಲು ಬಿಡುವುದು ಈ ಸಭೆಯ ಸಂಪ್ರದಾಯ" ಎಂದು ಅಧ್ಯಕ್ಷರುತ್ತರಿಸಿದರು.

ಮಿಶ್ರ ಮತದಾನ ಪದ್ಧತಿ

ಪಾಕಿಸ್ತಾನಕ್ಕೆ ಮೂಲಹೇತುವಾದ ಪ್ರತ್ಯೇಕ ಮತದಾನ ಪದ್ಧತಿಯನ್ನು ರದ್ದುಪಡಿಸಿ, ಮಿಶ್ರಮತದಾನ ಕ್ರಮವನ್ನು ಜ್ಯಾರಿಗೆ ತಂದುದೇ ಘಟನಾ ಸಮಿತಿಯಿಂದ ಈ ಬಾರಿ ಆದ ಕ್ರಾಂತಿಕರ ಹಾಗೂ ಪ್ರಗತಿಶೀಲ ನಿರ್ಧಾರ. ಅದೇ ಕಾಲದಲ್ಲಿ ಅಲ್ಪಸಂಖ್ಯಾಕ ಸಮಾಜಗಳವರ ಕೃತಜ್ಞತೆಯನ್ನು ಗಳಿಸಿದ ಅತ್ಯುದಾರ ರಿಯಾಯತಿಗಳನ್ನೂ ಅಲ್ಪಸಂಖ್ಯಾಕರಿಗೆ ಈಯಲಾಗಿದೆ. ಮುಸ್ಲಿಮರಿಗೆ ಪ್ರತ್ಯೇಕ ಮತದ ಹಕ್ಕಿತ್ತ ಮೂಲಕವೇ ಆ ಸಮಾಜಗಳವರಲ್ಲಿ ಬೆಳೆಯುತ್ತಾ ಬಂದಿದ್ದ ಪ್ರತ್ಯೇಕತಾ ಭಾವವು ಪಾಕಿಸ್ತಾನದ ಫಲಬಿಟ್ಟಿತೆಂಬುದು ಎಲ್ಲರಿಗೂ ಮಂದಟ್ಟಾಗಿರುವ ವಿಷಯ. ಈ ಕಲ್ಮಷವನ್ನು ಉಜ್ಜುವಾಗ ರಕ್ತ ಹೊಂಡುವಷ್ಟು ಘಾಯವಾಗದಂತೆ–ಪ್ರತ್ಯೇಕ ಮತದಾನದ ಅನ್ಯಾಯ ನಿವಾರಿಸುವಾಗ ಅಲ್ಪಸಂಖ್ಯಾಕರ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬೀಳದಂತೆ–ಸರ್ದಾರ್ ಪಟೇಲರ ಅಧ್ಯಕ್ಷತೆಯ ಸಮಿತಿ ಮಾಡಿರುವ ಶಿಫಾರಸುಗಳಿಗೆ ನ್ಯಾಯವಾದಿ ಅಲ್ಪಸಂಖ್ಯಾಕ ಪ್ರತಿನಿಧಿಗಳ ಹೃತ್ಪೂರ್ವಕ ಶ್ಲಾಘನೆ ದೊರೆಯಿತು. ಪ್ರತ್ಯೇಕ ಮತದಾನದ ಬದಲಿಗೆ ಮಿಶ್ರಮತದಾನವು ಜ್ಯಾರಿಗೆ ಬರತಕ್ಕದ್ದು– ಮಂಜೂರಾತಿ ಪಡೆದಿರುವ ವಿವಿಧ ಅಲ್ಪಸಂಖ್ಯಾಕ ಸಮಾಜಗಳಿಗೆ ಅವುಗಳ ಸಂಖ್ಯಾಮಾನವನ್ನು ಆಧರಿಸಿ ಮುಂದಿನ ಹತ್ತು ವರುಷಗಳ ವರೆಗೆ ಆಯಾಯಾ ನ್ಯಾಯವಿಧಾಯಕ ಸಭೆಗಳಲ್ಲಿ ಸ್ಥಾನಗಳನ್ನು ಕಾದಿಡಲಾಗುವದು–ಆಂಗ್ಲೋ ಇಂಡಿಯನ್ ಸಮಾಜಗಳವರಿಗೆ ಕೆಲವು ಶಾಖೆಗಳ ನೌಕರಿಗಳಲ್ಲಿ ಮುಂದಿನ ಹತ್ತು ವರುಷಗಳ ವರೆಗೆ ಸ್ಥಾನಗಳನ್ನು ಕಾದಿಡುವ ರಕ್ಷಣೆಯಿದೆ–ಅಲ್ಪಸಂಖ್ಯಾಕರ ಕೆಲವು ಮೂಲಭೂತ ಹಕ್ಕುಗಳಿಗೆ ರಕ್ಷಣಾ ವ್ಯವಸ್ಥೆಯಿದೆ. ಎಂಬೀ ಸಂಬಂಧದ ಮೂರು ವರದಿಗಳನ್ನು ಘಟನಾ ಸಮಿತಿಯ ಮುಂದಿಡುತ್ತಾ ಸರ್ದಾರ್ ಪಟೇಲರು ಮನನೀಯ ಭಾಷಣವಿತ್ತರು.

ಅಲ್ಪಸಂಖ್ಯಾಕರ ಸಂತೋಷ!

ಡಾ| ದೇಶಮುಖ್, ಹರಿಜನ ಪ್ರತಿನಿಧಿ ಶ್ರೀ ಮುನಿಸಾಮಿ ಪಿಳ್ಳೆ, ಆಂಗ್ಲೋ ಇಂಡಿಯನ್ ಪ್ರತಿನಿಧಿ ಫ್ರೇಂಕ್ ಅಂತೋನಿ, ರೋಹಿಣಿ ಕುಮಾರಿ ಚೌಧರಿ, ಯಸ್. ನಾಗಪ್ಪ, ಡಾ| ಯಚ್. ಸಿ. ಮುಕರ್ಜಿ, ಪಾರ್ಸಿ ಪ್ರತಿನಿಧಿ ಆರ್. ಕೆ. ಸಿಧ್ವ, ಆದಿವಾಸಿ ಪ್ರತಿನಿಧಿ ಜೈಪಾಲಸಿಂಗ್, ಮಹಾವೀರ ತ್ಯಾಗಿ, ಟಿ. ಪ್ರಕಾಶಮ್, ಗೋವಿಂದ ವಲ್ಲಭಪಂತ್, ಮುನ್ಶಿ, ಡಿ'ಸೋಜ ಮುಂತಾದವರು ಈ ಸೂಚನೆಗಳನ್ನು ಸಮರ್ಥಿಸಿದರು. ಮುಖ್ಯವಾಗಿ ಸೂಚನೆ ತಯಾರಿ ಸಮಿತಿಯ ಅಧ್ಯಕ್ಷ ಸರ್ದಾರ್ ಪಟೇಲರ ಕಾರ್ಯಚಾತುರ್ಯ, ದೂರ ದೃಷ್ಟಿ, ಅಲ್ಪ ಸಂಖ್ಯಾಕರ ಮೇಲಿನ ಔದಾರ್ಯಗಳು ಮುಕ್ತಕಂಠದ ಶ್ಲಾಘನೆಪಡೆದುವು. ಅತ್ಯಸ್ಥಿಯೇ ಆಯುಧವೆಂಬ ವಿಶ್ವಾಸವಿಟ್ಟುಕೊಂಡಿದ್ದ ಅಲ್ಪ ಸಂಖ್ಯಾಕ ಸಮಾಜಗಳವರು ಇಷ್ಟೊಂದು ಸಮಾಧಾನ ಪ್ರದರ್ಶಿಸಿದ ಬೇರೊಂದು ಯೋಜನೆ ಹಿಂದೀ ಚರಿತ್ರೆಯಲ್ಲೇ ಅಪೂರ್ವವೆನ್ನಬಹುದು. "ಉದಾರತೆಯಿಂದ ವರ್ತಿಸುವ ಮೂಲಕ ಬಹುಸಂಖ್ಯಾಕ ಸಮಾಜದವರು, ರಾಷ್ಟ್ರವನ್ನಿ ಪಡಿಸಿರುವ ದೇಶ ರಚನಾ ಕಾರ್ಯಕ್ಕೆ ಅಲ್ಪಸಂಖ್ಯಾಕರ ಅಂತಃಕರಣಪೂರ್ಣ ಸಹಭಾಗಿತ್ವವನ್ನು ನಿಜಶ್ಕಾ ಗಳಿಸಿಕೊಂಡರು" ಎಂದರು ಫ್ರೇಂಕ್ ಅಂತೋನಿ. "ಕೆಲವು ಅಲ್ಪಸಂಖ್ಯಾಕ ಸಮಾಜಗಳು ಇಂತಹ ಔದಾರ್ಯಕ್ಕರ್ಹವಾಗಿಲ್ಲವಾದರೂ ಇಷ್ಟೊಂದು ಉದಾರತೆಯಿಂದ ವರ್ತಿಸಿದ್ದನ್ನು" ಆರ್. ಕೆ. ಸಿಧ್ವರು ಕೊಂಡಾಡಿದರು, ಮುಸ್ಲಿಂ ಲೀಗೊಂದನ್ನು ಬಿಟ್ಟು ಉಳಿದೆಲ್ಲಾ ಅಲ್ಪಸಂಖ್ಯಾಕ ಸಮಾಜಗಳವರೂ ಅಗತ್ಯವುಳ್ಳ ಸಮ್ಮತಿಯನ್ನಷ್ಟೇ ಅಲ್ಲ; ಅನಿರೀಕ್ಷಿತ ಲಾಭದ ಸಂತೋಷವನ್ನೂ, ಕೃತಜ್ಞತಾ ಪೂರ್ಣ ಶ್ಲಾಘನೆಯನ್ನೂ ಸಲ್ಲಿಸಿದರು.

ಲೀಗ್ ಸದಸ್ಯರ ತಿದ್ದುಪಡಿ

ಕೇಂದ್ರ ಮತ್ತು ಪ್ರಾಂತ್ಯಗಳ ಎಲ್ಲಾ ಚುನಾವಣೆಗಳಲ್ಲೂ ಮುಸ್ಲಿಮರಿಗೆ ಪ್ರತ್ಯೇಕ ಮತದಾನದ ಹಕ್ಕಿರಬೇಕೆಂಬ ತಿದ್ದುಪಡಿ ಸೂಚನೆಯನ್ನು ಮಿ. ಪೋಕರ್ ಸಾಹೇಬರು ತಂದರು. ಮುಸ್ಲಿಮರೀಗ ಸುಸಂಘಟಿತರಾಗಿ ಸಶಕ್ತರಿದ್ದಾರೆ. ಅವರನ್ನು ನಿರ್ಲಕ್ಷಿಸಬೇಡಿ. ಈಗ ಕಾಂಗ್ರೆಸ್ ಮತ್ತು ಲೀಗಿನ ಗೌ[illegible]ಕವಾಗಿ ಒಂದಾಗಿದೆ. ಮುಸ್ಲಿಮರಿಗೆ ಪ್ರತ್ಯೇಕ ಮತದಾನದ ಹಕ್ಕನ್ನಿತ್ತು ಅವರ ಯಥಾರ್ಥ ಅಭಿಪ್ರಾಯಗಳು ಸರ್ವಶಾಸನ ಸಭೆಗಳಲ್ಲೂ ಮುಂದೆ ಬರುವಂತೆ ಮಾಡಬೇಕು" ಎಂದೇ ಈ ಸಾಹೇಬರ ಆಗ್ರಹ. ಮಿ. ಖಲಿಕುಝಮಾನರು ಇದನ್ನು ಅನುಮೋದಿಸಿ, ಆಶ್ರಯ ಯಾಚಕನಂತೆ ಅತಿ ವಿನಯದ ಭಾಷಣವಿತ್ತರು. "ಮುಸ್ಲಿಮರು ನ್ಯಾಯಕ್ಕಾಗಿ ಪ್ರಾರ್ಥಿಸಿಕೊಳ್ಳುವ ಮೂರನೇ ಪಕ್ಷವೊಂದು ಇನ್ನಿಲ್ಲ ಏನಾದರೂ ಅಗಬಾರದ್ದಾಗಿ ಹೋದರೆ ಮುಸ್ಲಿಮರಿನ್ನು ಹೋಗಬೇಕು ಸರದಾರ್ ಪಟೇಲರಿದ್ದಲ್ಲಿಗೆನೆ. ಅಲ್ಪ ಸಂಖ್ಯಾಕರ ಅದೃಷ್ಟ ತೀರ್ಮಾನಿಸುವ ಕೊನೆಯ ನ್ಯಾಯಾಧೀಶರೇ ಈಗ ನೀವಾಗಿರುವಿರಿ. ತಮ್ಮ ನಿಜ ಪ್ರಾತಿನಿಧ್ಯಕ್ಕೆ ಪ್ರತ್ಯೇಕ ಮತಪದ್ಧತಿಯೇ ಯುಕ್ತವೆಂದು ಮುಸ್ಲಿಮರು ಭಾವಿಸಿದಲ್ಲಿ ಅದನ್ನು ಕೊಟ್ಟರೆ ನೀವುಗಳಿಗಾಗುವ ನಷ್ಟವೇನು? ಹೇಗಿದ್ದರೂ ಅವರು ಪ್ರಾರ್ಥಿಸಿಕೊಳ್ಳುವುದು ನಿಮ್ಮನ್ನೇ; ಮತ್ತೊಬ್ಬರೊಡನಲ್ಲ; ಪಾಕಿಸ್ತಾನದೊಡನೆ ಕೂಡಾ ಅಲ್ಲ. ಅದ್ದರಿಂದ ಈ ಹೊಸ ವಿಧ್ಯಮಾನವನ್ನು ಲಕ್ಷ್ಯದಲ್ಲಿಟ್ಟುಕೊಂಡೇ

ಹಾಲಿನ ಚೊಕಲೇಟುಗಳು!

ಮಧುರವಾಗಿವೆ—ರುಚಿಕರವಾಗಿವೆ.

ಸರ್ವ ಸುಲಭವೆನಿಸುವಂತೆ ಎಲ್ಲ ಕಡೆಗಳಲ್ಲಿ, ನೂರರ ಪೆಕೇಟುಗಳಲ್ಲಿ ಅಥವಾ ಚಿಲ್ಲರೆಯಾಗಿ ದೊರೆವುವು.

ಸ್ಟಾಕಿಸ್ಟರಾಗಲಿಚ್ಛಿಸುವವರು ಅಥವಾ ಏಜನ್ಸಿ ಪಡೆಯಲಿಚ್ಛಿಸುವವರು ಕೂಡಲೇ ಬರೆದುಕೊಳ್ಳಿ:

ಶ್ರೀ ಕೃಷ್ಣಾ ಟೋಫಿ ವರ್ಕ್ಸ್,

ರಥಬೀದಿ; ಮಂಗಳೂರು.

ಪಂಜಾಬ್ ಗಲಭೆ ★

ಈ ಪ್ರಯತ್ನವನ್ನು ಪರ್ಯಾಲೋಚಿಸಿ ರೆಂದು ನಾನು ಬೇಡಿಕೊಳ್ಳುತ್ತೇನೆ." ಎಂದರು ಮಿ. ಖಲಿಕುಝ್ಝಮಾನ್.

ಸರ್ದಾರರ ಸ್ಪಷ್ಟ ಮಾತು

ಸರ್ದಾರ್ ಪಟೇಲರ ಉತ್ತರವು ವಿಚಾರ ಪ್ರಚೋದಕವಿದ್ದಿತು. "ಮಾರ್ಪಟ್ಟ ಸ್ಥಿತಿಗೆ ಒಮ್ಮೆಗೇ ಹಟ್ಟು ಬೀಳಲಾರದೆ ಲೀಗ್ ಸದಸ್ಯರೀ ಮಿಶ್ರ ಮತದಾನವನ್ನು ಆಕ್ಷೇಪಿಸುವರೆಂಬುದು ಪೂರ್ವ ಸಿದ್ಧಾಂತವೇ. ಪ್ರತ್ಯೇಕ ಮತದಾನ ಪ್ರಶ್ನೆ ಪ್ರಥಮತಃ ತಲೆಯೆತ್ತಿದಾಗ, ಪ್ರಮುಖ ಮುಸ್ಲಿಮರು ಅದನ್ನು ವಿರೋಧಿಸಿದ್ದ ಆಕಾಲದ ನೆನಪು ನನಗಿದೆ. ಈ ದಿನ ರಾಷ್ಟ್ರ ತುಂಡಾದುದು ಈ ಪ್ರತ್ಯೇಕ ಮತದಾನದಿಂದಲೇ ಎಂಬುದನ್ನು ಹಲವು ಇಂಗ್ಲಿಷರವರೂ ಒಪ್ಪುತ್ತಾರೆ. ಪಾಕಿಸ್ತಾನವಾದ ಮೇಲೆ ಉಳಿದ ಭಾಗವು ಏಕರೂಪಿಯಾಗಿರುವುದು; ಅಲ್ಲಿಯೂ ದ್ವಿರಾಷ್ಟ್ರ ನಿರ್ಮಾಣದ ಒತ್ತಾಯವೇಳದು ಎಂದು ನಿರೀಕ್ಷಿಸಲಾಗಿತ್ತು. 'ನಮಗೆ ಪ್ರತ್ಯೇಕ ಚುನಾವಣಾಧಿಕಾರಕೊಡಿ; ನಾವು ನಿಮ್ಮ ತೀರ್ಮಾನದಂತೆಯೆ ಇರುತ್ತೇವೆ' ಎನ್ನುವುದರಿಂದ ಪ್ರಯೋಜನವಿಲ್ಲ. ಈ ಸೊಲ್ಲುಗಳ ಅನುಭವ ಹಲವು ವರುಷಗಳಿಂದ ನಮಗಿದೆ. ಹೀಗೆಂದವರೇ ಆ ಹಾದಿಯಲ್ಲಿ ಮುಂದೊತ್ತಿ "ನಮ್ಮ ರಕ್ಷಣೆಗೆ ಪ್ರತ್ಯೇಕ ಮತದಾನವೂ ಸಾಲದು; ಮತ್ತೇನೇ ಬಂದರೂ ಸಾಕಾಗದು; ಪ್ರತ್ಯೇಕ ರಾಷ್ಟ್ರವೇ ಬೇಕು" ಎಂಬಲ್ಲಿಗೆ ಬಂದರು. "ಆಗಲಿ; ಅದನ್ನು ತೆಗೆದುಕೊಳ್ಳಿ. ಆದರೆ ಉಳಿದ ನೇ ೮೦ರಷ್ಟಿರುವ ಭಾರತವು ಏಕರಾಷ್ಟ್ರವೆಂಬುದನ್ನು ಒಪ್ಪುವಿರಿ ತಾನೆ?" ಎಂದು ನಾವೆಂದೆವು. ಇಲ್ಲಿಯೂ ಎರಡು ರಾಷ್ಟ್ರಗಳಾಗಬೇಕೆಂದೇ ಇನ್ನೂ ನಿಮ್ಮ ಇಚ್ಛೆಯೆ? ಧರ್ಮವನ್ನಾಧರಿಸಿ ನಿಂತಿರುವ ಒಂದೇ ಒಂದು ಸ್ವತಂತ್ರ ರಾಷ್ಟ್ರವನ್ನು ನೀವು ತೋರಿಸಿಕೊಡುವಿರಾ? ಈ ದುರ್ದೈವೀ ರಾಷ್ಟ್ರವು ಪಾಲಾದಮೇಲೂ ಮತ್ತೊಮ್ಮೆ ಅದೇ ದುರ್ಗತಿಗೀಡಾಗುವುದಾದರೆ ಅದಕ್ಕೆ ನರಕವೇ ಗತಿ; ಅಲ್ಲಿ ಮತ್ತೆ ಬಾಳುವುದು ಅಸಹ್ಯ. ಪಾಕಿಸ್ತಾನಕ್ಕೆ ಮಂಗಳವಾಗಲಿ, ಎನ್ನುತ್ತೇನೆ. ಅವರು ತಮ್ಮ ಹಾದಿ ಹಿಡಿದು ತಾವು ಹೋಗಲಿ. ನಾವು ಅಭಿವೃದ್ಧಿಪಥದಲ್ಲಿ ಅವರನ್ನು ಸ್ಪರ್ಧಿಸಲಿಳಿಯೋಣ ಆದರೆ ಈಗ ಪಾಕಿಸ್ತಾನ್ ರಾಷ್ಟ್ರದಲ್ಲಿ ನಡೆಯುವ ಮಾದರಿಯ ಪ್ರತಿಸ್ಪರ್ಧೆಗೆ ಮಾತ್ರ ನಾವಿಳಿಯುವದು ಬೇಡ. ಮುಸ್ಲಿಮರು ಬಲವಾಗಿ ಸಂಘಟನೆಗೊಂಡಿರುವ ಸಶಕ್ತ ಸಮಾಜವಾಗಿದ್ದಾರೆಂದು ತಿದ್ದುಪಡಿ ಸೂಚಿಸಿದವರೆಂದಿದ್ದಾರೆ. ಅದನ್ನು ಕೇಳಿ ನಾನು ಆನಂದಗೊಂಡೆ. ಅಂದ ಮೇಲೆ ಇನ್ನು ರಕ್ಷಣೆಯನ್ನು ಯಾಚಿಸುವದು ನಿಮ್ಮ ಕೆಲಸವಲ್ಲ (ಉತ್ಸಾಹದ ಧ್ವನಿ). ಇಷ್ಟೊಂದು ಸಂಘಟನೆಯಾಗದ ಇತರ ಅಲ್ಪಸಂಖ್ಯಾಕ ಸಮಾಜಗಳವರಿದ್ದಾರೆ ಎಂಬುದಕ್ಕಾಗಿ ಮಾತ್ರ-ಅವರು ಕೆಲವು ರಕ್ಷಣೆ ಮತ್ತು ವಿಶೇಷ ರಿಯಾಯತಿಗಳಿಗರ್ಹರೆಂದೇ—ಅಂಥವರ ಕಡೆಗೆ ನಾವು ಔದಾರ್ಯ ತೋರಿಸಲು ಬಗೆದಿದ್ದೇವೆ ನೀವಿದನ್ನು ದೀರ್ಘಾವಧಿಯಿಂದ ಅನುಭವಿಸಿದ್ದೀರಿ. ಬ್ರಿಟಿಷರು ಹೋದರು; ನಾವಿನ್ನು ಗತಕಾಲವನ್ನು ಮರೆಯೋಣವೆನ್ನುತ್ತಾರೆ ಖಲಿಕುಝ್ಝಮಾನರು. ಬ್ರಿಟಿಷರಿಗೆ ಅಷ್ಟು ಬೇಗ ಹೋಗುವ ಮನಸ್ಸಿರಲಿಲ್ಲ. ಅವರು ತಮ್ಮ ಹಿಂದೆ ಹಲವು ತಂಟೆಗಳನ್ನು ಮಾಡಿಟ್ಟೇ ಹೋಗಿದ್ದಾರೆ. ಆ ತಂಟೆಗಳನ್ನು ಉರ್ಜಿತಗೊಳಿಸುವ ಮನಸ್ಸು ನಮಗಿಲ್ಲ. ತಮ್ಮಾಡಳಿತೆಯನ್ನು ಸುಗಮಗೊಳಿಸಿಕೊಳ್ಳಲು ಬ್ರಿಟಿಷರು ಜಾತೀಯ ಮತದಾನ ಪದ್ಧತಿ ತಂದಿದ್ದರು. ಅವರಿಲ್ಲಿ ಮಾಡಿಟ್ಟು ಹೋದ ಕೊಳಕನ್ನು ನಾವು ಝಾಡಿಸಿಕೊಳ್ಳಬೇಕು. ಮುಸ್ಲಿಂ ಲೀಗಿನವರನ್ನು ಬಿಟ್ಟರೆ ಈ ಕಾಲದಲ್ಲೂ ಪ್ರತ್ಯೇಕ ಮತದಾನ ಯಾಚಿಸುವವರಿದ್ದಾರೆಂದು ನೀವು ನೆನಸುವಿರಾ? ನಿಮಗೆ ಶಾಂತಿ ಬೇಕಾಗಿದೆ—ಶಾಂತಿ ವಿನಹಾ ಇಲ್ಲಿ ಅಥವಾ ಪಾಕಿಸ್ತಾನದಲ್ಲಿ ನೀವೇನನ್ನೂ ಮಾಡಲಾರಿರೆಂಬುದು ತಿಳಿದಿರಲಿ-ಕೊನೆಯ ಪಕ್ಷ ನಾವೆಲ್ಲವನ್ನೂ ಮರೆತುಬಿಟ್ಟೆವೆಂಬುದನ್ನಾದರೂ ಈಗ ಪ್ರದರ್ಶಿಸಿರಿ"-ಮಿ. ಪೋಕರರ ತಿದ್ದುಪಡಿಯು ನಿರಾಕರಿಸಲ್ಪಟ್ಟಿತು; ಪೋಕರರೊಬ್ಬರೇ ಅದಕ್ಕೆ ಮತಕೊಟ್ಟವರು.

ಆ ಮೇಲೆ ಹಿಂದೀ ರಾಜ್ಯಾಂಗ ಶಾಸನದ ಕರಡು ಪ್ರತಿಯನ್ನು ಅಮೂಲಾಗ್ರವಾಗಿ ಪರಿಶೋಧಿಸಿ ಘಟನಾ ಸಮಿತಿಯ ಮುಂದಿನ ಅಧಿವೇಶನದ ಮುಂದಿಡುವಂತೆ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಎನ್. ಗೋಪಾಲಸ್ವಾಮಿ ಅಯ್ಯಂಗಾರ್, ಡಾ! ಅಂಬೇಡ್ಕರ್, ಕೆ. ಎಮ್. ಮುನ್ಷಿ, ಸಯ್ಯದ್ ಮಹಮ್ಮದ್ ಸಾದುಲ್ಲಾ, ಬಿ. ಯಲ್. ಮಿತ್ತರ್, ಡಿ. ಪಿ. ಖೈತಾನರುಳ್ಳ ಒಂದು ಸಮಿತಿಯನ್ನು ರಚಿಸಲಾಯಿತು.

ಆರ್ಥಿಕ, ಸಾಮಾಜಿಕ ನ್ಯಾಯ ಮತ್ತು ರಕ್ಷಣೆಯು ಸರ್ವರಿಗೂ ದೊರೆಯುವ ವಿಧಾನಗಳನ್ನು ಸೂಚಿಸುವರೆ ನೇಮಕವಾಗಿದ್ದ ಸಮಿತಿಯು ತನ್ನ ವರದಿಯನ್ನು ಘಟನಾ ಸಮಿತಿಯ ಮುಂದಿಟ್ಟಿತು. ಈ ಮೂಲಭೂತ ಹಕ್ಕುಗಳ ಕುರಿತು ಸವಿವರ ಚರ್ಚೆನಡೆದು ಸಮಿತೀ ಸೂಚನೆಗಳು ಅಂಗೀಕಾರಗೊಂಡವು.

ಪಂಜಾಬು ಗಲಭೆ

ಪೂರ್ವ ಮತ್ತು ಪಶ್ಚಿಮ ಪಂಜಾಬುಗಳಲ್ಲಿ ಅತಿ ವಿಪುಲ ಭಾಗಗಳಲ್ಲಿ ಅತಿದೊಡ್ಡ ಪರಿಮಾಣದಲ್ಲಿ ಅಮಾನುಷ ಭೀಕರತೆಯಿಂದ ವ್ಯಾಪಿಸಿರುವ ಜಾತೀಯ ದಂಗೆಗಳ ನಿರ್ನಾಮ ಕಾರ್ಯದಲ್ಲೇ ಈಗ ಪಾಕಿಸ್ತಾನ್ ಹಿಂದುಸ್ಥಾನ್ ಇವೆರಡು ಸರಕಾರಗಳೂ ತಮ್ಮ ಸರ್ವ ಲಕ್ಷ್ಯವನ್ನು ಹರಿಸಿವೆ. ಪಾಕಿಸ್ತಾನ್ ಗವರ್ನರ್ ಜನರಲ್ ಕಾಯಿದೇ ಆಝಮ್ ಜಿನ್ನರು, ಪ್ರಧಾನ ಮಂತ್ರಿ ಮಿ. ಲಿಯಾಖತ್ ಅಲೀಖಾನರೊಂದಿಗೂ, ಹಿಂದುಸ್ಥಾನ್ ಗವರ್ನರ್ ಜನರಲ್ ಲೋರ್ಡ್ ಮೌಂಟ್‌ಬೇಟನ್—ಪ್ರಧಾನಮಂತ್ರಿ ಪಂಡಿತ ಜವಾಹಿರಲಾಲರೊಂದಿಗೂ ಲಾಹೋರಿಗೆ ಧಾವಿಸಿದರು. ಪಂಜಾಬು ಗಲಭೆಯಾರಂಭದ ನಂತರ ಪಂಡಿತ ನೆಹರುಗಳು ಕೈಕೊಂಡ ಮೂರನೇ ಪಂಜಾಬ್ ಪ್ರವಾಸವಿದು. ಲಾಹೋರಿನಲ್ಲಿ ಭಾರತ—ಪಾಕಿಸ್ತಾನ್ ಜತೆರಕ್ಷಣಾ ಕೌನ್ಸಿಲ್ ಸಭೆಯು ಅದರ ಅಧ್ಯಕ್ಷ ಲೋರ್ಡ್ ಮೌಂಟ್‌ಬೇಟನರ ಅಧ್ಯಕ್ಷತೆಯಲ್ಲಿ ಜರಗಿತು. ಪಾಕಿಸ್ತಾನ್ ಗವರ್ನರ್ ಜನರಲ್ ಜಿನ್ನಾ, ಪಾಕಿಸ್ತಾನ್ ಪ್ರಧಾನಿ ಮತ್ತು ರಕ್ಷಣಾ ಮಂತ್ರಿ ಲಿಯಾಖತ್ ಅಲೀಖಾನ್, ಪಾಕಿಸ್ತಾನ್ ಸಂಚಾರ ಖಾತೆಯ ಮಂತ್ರಿ ಅಬ್ದುಲ್‌ರಾಬ್‌ನಿಸ್ತಾರ್, ಪಶ್ಚಿಮ ಪಂಜಾಬಿನ ಗವರ್ನರ್ ಸರ್. ಫ್ರಾನ್ಸಿಸ್‌ಮುಡಿ, ಪಾಕಿಸ್ತಾನ್ ಕಮಾಂಡರ್-ಇನ್-ಚೀಫ್ ಜನರಲ್ ಸರ್. ಫ್ರೇಂಕ್ ಮೆಸರ್ವಿ, ಹಿಂದುಸ್ಥಾನ್ ಪ್ರಧಾನಿ ನೆಹರು, ಹಿಂದುಸ್ಥಾನ್ ರಕ್ಷಣಾ ಮಂತ್ರಿ ಸರ್ದಾರ್ ಬಲದೇವಸಿಂಗ್, ಹಿಂದುಸ್ಥಾನ್ ಕಮಾಂಡರ್-ಇನ್-ಚೀಫ್ ಜನರಲ್ ಸರ್ ರೋಬರ್ಟ್ ಲೋಕಾರ್ಟ್ ಮತ್ತು ಪಂಜಾಬು ಗಡಿಸೇನಾದಳಗಳ ಕಮಾಂಡರ್ ಮೇಜರ್ ಜನರಲ್ ರೀಸರೂ ಎರಡೂ ಸ್ಥಾನಗಳ ಮುಖ್ಯ ಸೇನಾನಿ ಸರ್. ಕ್ಲಾಡಿ ಆಚಿನ್‌ಲೆಖರೂ ಹಾಜರಿದ್ದರು. ಗಾಢ ಪರ್ಯಾಲೋಚನೆ ನಡೆದು ಗಲಭೆ ನಿರ್ನಾಮಕ್ಕಾಗಿ ಮೇ. ಜ. ರೀಸರ ನಾಯಕತ್ವದಲ್ಲಿ ಇರಿಸಿದ್ದ ಪಂಜಾಬ್ ಗಡಿಸೇನೆಗಳನ್ನು ಅಲ್ಲಿಂದ ಬರ್ಖಾಸ್ತು ಪಡಿಸುವ ನಿರ್ಧಾರವಾಯಿತು. ಆ ದಳಗಳ ಅಧೀನದಲ್ಲಿರುವದಾಗಿದ್ದ ಪ್ರದೇಶಗಳನ್ನು ಆಯಾಯಾ ಭಾಗದ ಎರಡು ಪರಿಣಾಮ ಸರಕಾರಗಳ ಪ್ರತ್ಯಕ್ಷ್ಯಾಡಳಿತೆಗೊಳಪಡಿಸುವ ನಿರ್ಧಾರವಾಗಿದೆ. ಇದರಿಂದ ಪಾಕಿಸ್ತಾನ್ ಪಂಜಾಬಿನ ದಂಗೆ ನಿರ್ಮೂಲಿಸುವ ಕೆಲಸವು ಸಂಪೂರ್ಣವಾಗಿ ಪಾಕಿಸ್ತಾನ್ ಸರಕಾರದ ತಲೆಯಮೇಲೂ ಹಿಂದುಸ್ಥಾನ್ ಪಂಜಾಬಿನಲ್ಲಿ ಶಾಂತಿಸ್ಥಾಪಿಸುವಹೊಣೆಯು ಸಂಪೂರ್ಣವಾಗಿ ಹಿಂದುಸ್ಥಾನ್ ಸರಕಾರದ ತಲೆಯಮೇಲೂ ಬಿದ್ದಿದೆ. ಎರಡೂ ಸರಕಾರಗಳು ತಮ್ಮಲ್ಲಿ ಪಲಾಯನಮಾಡಿದವರ ಆಸ್ತಿ ಜತನಕ್ಕಾಗಿ ರಕ್ಷಕರನ್ನು ನೇಮಿಸತಕ್ಕದ್ದೆಂಬ ನಿರ್ಧಾರವಾಯಿತು. ಕೂಡಲೇ ಸರ್ವಶಕ್ತಿಯಿಂದ ಗಲಭೆ ನಿಕ್ಷೇಪಿಸುವ ನಿರ್ಣಯವಾಗಿದೆ. ಎರಡೂ ರಾಷ್ಟ್ರಗಳ ಪ್ರಧಾನಿಗಳಾದ ನೆಹರು, ಲಿಯಾಖತರು ಪೂರ್ವ ಪಶ್ಚಿಮ ಪಂಜಾಬುಗಳ ದಂಗೇಪೀಡಿತ ಕ್ಷೇತ್ರಗಳಿಗೆ ಸಂಚಾರಕ್ಕೆ ಹೊರಟಿದ್ದಾರೆ. ಪೂರ್ವ ಪಂಜಾಬು ಈಗ ಬಹಳ ಮಟ್ಟಿಗೆ ಶಾಂತವಾಗಿದೆ. ಆದರೆ ಪಶ್ಚಿಮ ಪಂಜಾಬಿನಿಂದ ಮಾತ್ರ ಇನ್ನೂ ಹೃದ್ಭೇದಕ ದುರ್ವಾರ್ತೆಗಳು ಬರುತ್ತಿವೆ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. ೬/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)
Tollygung e CALCUTTA
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಉಡುಪಿಯ ನಾಗರಿಕರಲ್ಲೊಂದು ವಿನಂತಿ

ಈ ಸಲದ ನಗರಸಭೆಯ ಚುನಾವಣೆಯಲ್ಲಿ ನಾವಿಬ್ಬರು ಕಾಡುಬೆಟ್ಟು ಮತ್ತು ಸೆಂಟ್ರಲ್ ವಾರ್ಡುಗಳಿಂದ ಅವಿರೋಧವಾಗಿ ಆರಿಸಲ್ಪಟ್ಟದಕ್ಕಾಗಿ ಈ ಎರಡೂ ವಾರ್ಡುಗಳ ಮತದಾರರಿಗೂ ಮತ್ತು ನಮ್ಮ ಪರವಾಗಿ ಉಮೇದ್ವಾರಿಕೆಯನ್ನು ಹಿಂತೆಗೆದ ಮಹನೀಯರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ನಮ್ಮಲ್ಲಿ ಮತದಾರರಿಟ್ಟ ವಿಶ್ವಾಸಕ್ಕೆ ಅರ್ಹರಾಗಲು ನಾವು ಸಾಧ್ಯವಿರುವಷ್ಟು ಪ್ರಯತ್ನಿಸುತ್ತೇವೆ. ಈ ಅರ್ಹತೆಯನ್ನು ಹೊಂದುವ ಮುಖ್ಯ ಮಾರ್ಗವೆಂದರೆ, ಚುನಾವಣೆಯು ಮುಗಿದೊಡನೆ ನಮ್ಮ ಸದಸ್ಯತನದ ಜವಾಬ್ದಾರಿಯನ್ನು ಮರೆಯದಿರುವುದು; ಸಿರಿವಂತ ಬಡವನೆನ್ನದೆ, ಜಾತಿಮತ ಭೇದವಿಲ್ಲದೆ ನಗರದ ಪ್ರತಿಯೊಬ್ಬರ ಹಿತಚಿಂತನೆಯಿಂದ ಕಾರ್ಯನಿರ್ವಹಿಸುವುದು ಈ ಹೆದ್ದಾರಿಯನ್ನು ಹಿಡಿದು ಮುನ್ನಡೆಯಲು ನಾವು ಸದಾ ಸಿದ್ಧರಿರುವೆವು.

ಆದರೆ ಸಾವಿರಾರು ಜನರಿರುವ ಈ ನಗರದಲ್ಲಿ, ಪ್ರತಿಯೊಬ್ಬ ನಾಗರಿಕರಲ್ಲಿಗೆ ಹೋಗಿ ಅವರನ್ನು ಸ್ವತಃ ನೋಡಿ ಮಾತನಾಡುವುದು ನಮ್ಮ ಆಸೆಯಾದರೂ, ಅದು ಅಸಾಧ್ಯವೇ ಸರಿ.

ಆದುದರಿಂದ, ನಮ್ಮಿಂದ ಯಾವುದೇ ಜನೋಪಕಾರೀ ಕಾರ್ಯವಾಗಬೇಕೆಂದಿದ್ದಾಗ್ಯೆ, ನಗರದ ಪ್ರತಿಯೊಬ್ಬ, ಆ ವಾರ್ಡು, ಈ ವಾರ್ಡೆಂಬ ಭೇದವಿಲ್ಲದೆ, ನಮ್ಮ ಸೇವೆಯನ್ನು ಅಗತ್ಯ ಪಡೆಯಲಿ. ಕಾಲ, ಅಕಾಲವೆನ್ನದೆ ಯಾವ ಹೊತ್ತಿಗೂ ಎಂತಹ ಸಂದರ್ಭದಲ್ಲೂ ನಾಗರಿಕರು ನಮ್ಮಲ್ಲಿಗೆ ನಿರಾತಂಕವಾಗಿ ಬಂದು ತಮ್ಮ ಸಲಹೆಗಳನ್ನು ಕೊಡಬಹುದು. ತಮ್ಮ ಇಷ್ಟವನ್ನು ವ್ಯಕ್ತಪಡಿಸಬಹುದು, ಕಷ್ಟಗಳನ್ನು ಮನವರಿಕೆ ಮಾಡಿಸಬಹುದು. ಅವುಗಳನ್ನು ಯೋಗ್ಯರೀತಿಯಲ್ಲಿ ವಿಮರ್ಶಿಸಿ, ಮನವರಿಕೆ ಮಾಡಿಕೊಂಡು ನಗರದ ಹಿತದೃಷ್ಟಿಯಿಂದ ಪೂರೈಸಲು ನಮ್ಮ ಶಕ್ತಿಮೀರಿ ಪ್ರಯತ್ನಿಸಿ ನಾಗರಿಕರಿಗೆ ನಮ್ಮ ಸೇವೆಯನ್ನು ಸಲ್ಲಿಸುವೆವು ಎಂದು ಈ ಮೂಲಕ ಆಶ್ವಾಸನೆ ಕೊಡಲು ಇಷ್ಟಪಡುತ್ತೇವೆ.

ಟಿ. ರಮೇಶ ಪೈ, ಕಾಡಬೆಟ್ಟು ವಾರ್ಡು.

ಕೆ. ಕೆ. ಪೈ, ಸೆಂಟ್ರಲ್ ವಾರ್ಡು.

H A

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

The Canara Banking Corporation Limited.

(Incorporated in British India, with limited Liability.)

Estd: 1906.

Head Office: UDIPI, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

OTHER OFFICES

Bangalore City	Coondapoor	Sagar
Bhadravati	Dharwar	Saklaspur
Bombay	Hassan	Salem Town
Bunder-Mangalore	Haveri	Shevapet-Salem
Byadgi	Hubli	Shimoga
Car Street, Mangalore	Madras	Shirva
Calicut	Malpe	Tellicherry
Cannanore	Mercara	Thirthahalli
Cochin	Mettupalayam	Udipi
Coimbatore	Mysore	Vellore
		Virajpet.

BANKING BUSINESS OF EVERY DESCRIPTION TRANSACTED.

ನವಯುಗ

ಗುರುವಾರ, ಉಡುಪಿ, ೪-೯-'೪೭

ನಮ್ಮ ಆಹಾರ ಸಮಸ್ಯೆ

ಈ ವರುಷ ಮದ್ರಾಸ್ ಪ್ರಾಂತ್ಯದಲ್ಲಿ ಅನಿರೀಕ್ಷಿತ ಆಹಾರಾಭಾವವೇಳಲು ಕಾರಣವೇನು? ಸಂಗ್ರಹವಾಗಬಹುದೆಂದು ಸರಕಾರವು ಹಾಕಿದ್ದ ಅಂದಾಜು ಲೆಕ್ಕವು ದೊಡ್ಡ ಪರಿಮಾಣದಲ್ಲಿ ತಪ್ಪಿಹೋದುದು ಹೇಗೆ? ಎಂಬುದೊಂದು ಸಮಸ್ಯೆಯೇ ಆಗಿತ್ತು. 'ಈ ವರುಷ ಹೀಗೇಕಾಯಿತು' ಎಂದು ಹಸಿವಿನ ಯಾತನೆಯೊಂದಿಗೆ ಜಿಗುಪ್ಸೆಯನ್ನೂ ಪ್ರದರ್ಶಿಸಿ ಪ್ರಶ್ನಿಸುತ್ತಿರುವವರು ಎಲ್ಲೆಲ್ಲೂ ಕಂಡುಬರುತ್ತಿದ್ದಾರೆ. ಕಾರಣವು ಈಗ ತಾನೇ ಸ್ಪಷ್ಟವಾಗಿ ತಿಳಿದುಬಂದಿದೆ.

ಆಂಧ್ರ ಪ್ರಾಂತ್ಯದ ಸರ್ಕಾರ್ಸ್ ಜಿಲ್ಲೆಗಳಲ್ಲಿ ಸಂಚರಿಸಿಬಂದ ಮದ್ರಾಸಿನ ಆಹಾರ ಮಂತ್ರಿ ಡಾ। ರಾಜನ್‌ರು ಜಿಲ್ಲೆಯ ಕೃಷ್ಣಾ, ಗೋದಾವರಿ ಮೊದಲಾದ ಜಿಲ್ಲೆಗಳಲ್ಲಿ ಅಕ್ಕಿಯನ್ನೆಲ್ಲಾ ಅಡಗಿಸಿಟ್ಟಿದ್ದಾರೆಂದೂ, ಕಡಿಮೆಯೆಂದರೆ 3 ಲಕ್ಷ ಟನ್ ಅಕ್ಕಿಯನ್ನು ಆ ಭಾಗಗಳಿಂದ ಸಂಗ್ರಹಿಸಲಿಕ್ಕಿದೆಯೆಂದೂ ಜಾಹೀರುಮಾಡಿದ್ದಾರೆ. ದಕ್ಷಿಣ ಕನ್ನಡದ ಸಾಗುವಳಿದಾರರು ಎಂತಹ ನಿರ್ಲಿಪ್ತ ಮನಸ್ಸಿನವರಿದ್ದರೂ, ಆಂಧ್ರದ ತಮ್ಮ ಸಹೋದ್ಯೋಗಿಗಳ ಈ ಸೌಭಾಗ್ಯಕ್ಕಾಗಿ ಮತ್ಸರಿಸದಿರಲಾರರು! ದ. ಕ. ಜಿಲ್ಲೆಯ (ಆಂಧ್ರ ಜಿಲ್ಲೆಗಳನ್ನು ಬಿಟ್ಟರೆ ಮದ್ರಾಸ್ ಪ್ರಾಂತ್ಯದ ಮಿಕ್ಕ ಕಡೆಗಳಲ್ಲೂ ಹೀಗೆಯೇ ಆಗಿರಬಹುದು) ಸಾಗುವಳೀದಾರ ಹಳ್ಳಿಗರಿಗೆ ಈ ಬಾರಿಯ ಅಕ್ಕಿ ಸಂಗ್ರಹ ಧಾಳಿಯು ಎಂತಹ ಪೀಡೆಯಾಗಿದೆ ಎಂಬುದನ್ನು ವರ್ಣಿಸಬೇಕೆಂದಿಲ್ಲ. ರೈತರ ಹಕ್ಕಿನ ಹಸುಗೇ ಲೆಕ್ಕದ ದಾಸ್ತಾನುಗಳನ್ನು ಕೂಡಾ ಬಿಡದೆ 'ಊಟಕ್ಕೆ ಬೇಕಾದರೆ ಕಾರ್ಡು ಮಾಡಿಸಿಕೊಳ್ಳಿ' ಎಂದೆಲ್ಲವನ್ನೂ ಸಂಗ್ರಹಾಧಿಕಾರಿಗಳು ಕಸಗೊಳ್ಳುತ್ತಿರುವ ವಾರ್ತೆಗಳು ಎಲ್ಲಾ ಕಡೆಗಳಿಂದಲೂ ಬರುತ್ತಿವೆ. 'ಕಳ್ಳ ದಾಸ್ತಾನಿನ ಕುರಿತು ಕಾಠಿಣ್ಯತೆ ಪ್ರದರ್ಶಿಸಿರಿ' ಎಂದೊತ್ತಿ ಹೇಳುವಾಗಲೇ 'ಉತ್ಪಾದಕರನ್ನು ಉಪವಾಸ ಮಾತ್ರ ಹಾಕಬೇಡಿ' ಎಂಬ ಖಂಡತುಂಡ ಎಚ್ಚರಿಕೆಯನ್ನೂ ಸರಕಾರವು ಕೊಡಬೇಕಿದ್ದಿತು. ಬೇಸಾಯಗಾರನ ಧಾನ್ಯಕ್ಕಿಟ್ಟ ಮೌಲ್ಯ, ಸ್ಟೋರುಗಳು ರೈತರ ಅಕ್ಕಿ ಪಡಕೊಳ್ಳುವ ವಿಧಾನ, ರೈತರ ಸ್ವಂತೋಪಯೋಗಕ್ಕಾಗಿ ಅವರಲ್ಲಿ ಅಕ್ಕಿಯಿರಗೊಡಿಸದ ರೀತಿ-ಇವೆಲ್ಲಾ ವಿಷಯಗಳಲ್ಲೂ ಬಡ ರೈತ ಜನಾಂಗವನ್ನು ಸರಕಾರವು ಸಂಪೂರ್ಣವಾಗಿ ಕಡೆಗಣಿಸಿದೆ ಎಂದೀ ಸಂದರ್ಭದಲ್ಲಿ ಹೇಳದಿರಲಾರೆವು. ಆಹಾರಾಭಾವದ ಈ ಕಾಲದಲ್ಲಿ ಸರಕಾರವು ಧಾನ್ಯೋತ್ಪಾದಕರಿಗೆ ವಿಶೇಷ ಸೌಕರ್ಯಗಳನ್ನೊದಗಿಸುವ ಮೂಲಕ 'ರೈತ ಪಕ್ಷಪಾತಿ'ಯನ್ನಿಸುವುದೇ ಸಹಜವಿದ್ದಿತು; ಆ ಪಕ್ಷಪಾತ ಬುದ್ಧಿ ಸರಕಾರಕ್ಕಿಲ್ಲವಾದರೆ, ಸರ್ವಸಮಾನ ವ್ಯವಹಾರ ನೀತಿಗಾದರೂ ರೈತರು ಬಾಹಿರರಾಗಬಾರದಿತ್ತು. ಆ ನ್ಯಾಯ ಕೂಡಾ ದೊರೆಯದೆ ಸಿಡಗನ್ನು ಹಳ್ಳೀ ರೈತರೀಗ ಕಡೆಗಣಿಸಲ್ಪಟ್ಟಿದ್ದಾರೆ. ಶ್ರಮಬಿದ್ದ ... ಜ್ಯಾರಿಯಲ್ಲಿರುವ ... ಗಳವರ ಮುಂದಿನ ವಾರಗಳಿಗಾಗಿ ಸಂಗ್ರಹಿಸಿಡಲು ಗ್ರಾಮಸ್ಥರು ಮರುದಿನದಿಂದಲೇ ಉಪವಾಸವಿರುವಂತೆ ಮಾಡಿ ಎಲ್ಲವನ್ನೂ ಬಾಚಿಕೊಂಡು ಬಂದ ನಿದರ್ಶನಗಳು ಸರ್ವಸಾಮಾನ್ಯವಾಗಿವೆ. ರೈತ ಪಕ್ಷಪಾತತೆ, ಮಾನುಷತ್ವ-ಎಂಬೀ ಪ್ರಥಮ, ದ್ವಿತೀಯ ನೀತಿಸೂತ್ರಗಳ ಮಾತು ಹಾಗಿರಲಿ. ಮುಂದಿನ ನಾಲ್ಕೈದು ವರುಷಗಳ ವರೆಗೂ ಇದೇ ರೀತಿಯ ಆಹಾರಾಭಾವವಿರಬಹುದೆಂಬುದು ಖಚಿತವಾಗಿರುವಾಗ ಧಾನ್ಯೋತ್ಪಾದಕರನ್ನು ಇಂತಹ ಅನಾನುಕೂಲತೆಗಳಿಂದಲೇ ಸೋಲಿಸಿ, ಆಹಾರ ಬೆಳೆಸುವ ಹುರುಪು, ಶಕ್ತಿ ಯಾವುದೂ ಅವರಲ್ಲಿ ಉಳಿಯದಂತೆ ಮಾಡುವುದು ಆಹಾರ ಸರಬರಾಯಿಯ ಹೊಣೆಹೊತ್ತ ಸರಕಾರದ ಸ್ವಕಾರ್ಯ ದೃಷ್ಟಿಯಿಂದಾದರೂ ಹಿತಕರವೆ? ಇಲ್ಲಿಯ ಬೇಸಾಯಗಾರರ ಅವಸ್ಥೆ ಹೀಗಿರುವಾಗ, ಆಂಧ್ರದ ಕೆಲವು ಜಿಲ್ಲೆಗಳ ಧಾನ್ಯೋತ್ಪಾದಕರಿಗೆ ಮೂರು ಲಕ್ಷ ಟನ್ನಿನಷ್ಟು ಅಕ್ಕಿಯನ್ನು ಅಡಗಿಸಿಟ್ಟುಕೊಳ್ಳುವ ಅನುಕೂಲತೆ ದೊರೆತಿರುವುದು ಆಶ್ಚರ್ಯಕರವಾದ ಸಂಗತಿ. ಮದ್ರಾಸ್ ಪ್ರಾಂತ್ಯದ ಈ ಬಾರಿಯ ವಿಶೇಷ ರೀತಿಯ ಅಭಾವಕ್ಕೆ ಕಾರಣವೇ ಇದು-ಆಂಧ್ರದ ಪಶ್ಚಿಮ ಗೋದಾವರಿ, ಪೂರ್ವ ಗೋದಾವರಿ, ಕಿಷ್ಣಾ, ನೆಲ್ಲೂರು ಮೊದಲಾದ ಜಿಲ್ಲೆಗಳು ಇಟ್ಟುಕೊಂಡ ಕಳ್ಳ ದಾಸ್ತಾನು. ಮೇಲ್ಗಡೆ ಹೆಸರು ಕೊಟ್ಟಿರುವ ನಾಲ್ಕೇ ಜಿಲ್ಲೆಗಳಿಂದ ಕಡಿಮೆಯೆಂದರೂ ಒಟ್ಟು 676000 ಟನ್ ಅಕ್ಕಿಯನ್ನು ಸಂಗ್ರಹಿಸುವ ಗುರಿಯನ್ನು ಸರಕಾರವಿಟ್ಟುಕೊಂಡಿತ್ತು; ಆದರೆ ಆಗೋಸ್ತು 21ರ ವರೆಗೆ ಆ ಭಾಗಗಳಿಂದ ಜಮೆಯಾದುದು 452000 ಟನ್ನು ಮಾತ್ರ. 224000 ಟನ್ ಅಕ್ಕಿಯು ಈ ಭಾಗಗಳಲ್ಲೇ ಅಡಗಿಸಿಡಲ್ಪಟ್ಟಿದೆ. ಅಂತೂ ಕಡಿಮೆಯೆಂದರೆ 3 ಲಕ್ಷ ಟನ್ ಅಕ್ಕಿಯು ಸರ್ಕಾರ್ಸ್ ಜಿಲ್ಲೆಗಳಿಂದ ಸಂಗ್ರಹವಾಗಲು ಉಳಿದಿದೆ. ಈ ವರುಷದ ಅನಿರೀಕ್ಷಿತ ಆಪತ್ತಿನ ಮುಖ್ಯ ಕಾರಣವಿದು; ಇಡೀ ಪ್ರಾಂತ್ಯವೇ ಒಣಗುವಂತೆ ನೀರನ್ನೆಳಕೊಂಡ ತೂತೆಂದರೆ ಇದೇ. ಕಳೆದ ವರುಷದ ಆಗೋಸ್ತು 14ರಲ್ಲಿ ನಮ್ಮ ಪ್ರಾಂತ್ಯದಲ್ಲಿ 3,30,000 ಟನ್ನುಗಳಷ್ಟು ಅಕ್ಕಿ ದಾಸ್ತಾನಿದ್ದಿತು. ಆದರೆ ಈ ವರುಷ ಆಗೋಸ್ತು 14ರಲ್ಲಿದ್ದ ಸಂಗ್ರಹ ಕೇವಲ 1,80,116 ಟನ್ನುಗಳಷ್ಟೆ. ಇದರ ಕಮ್ಮಿಡಿಯಷ್ಟು-300,000 ಟನ್ನು-ಆಂಧ್ರದ ಕೆಲವು ಖಾಸಗೀ ಉಗ್ರಾಣಗಳಲ್ಲಿದೆ! ಅದು ದೊರಕುತಿದ್ದರೆ ಈ ವರುಷದ ಸ್ಥಿತಿಯು ಕಳೆದ ವರುಷಕ್ಕಿಂತ ಉತ್ತಮವಾಗುತ್ತಿತ್ತು. ನಾಗರಿಕ ಸರಬರಾಯಿ ಕಮಿಶನರರ ಪ್ರಯತ್ನದಿಂದಾಗಿ ಆ ಭಾಗದ ಸಂಗ್ರಹ ಕಾರ್ಯವು ಈಗ ಭರದಿಂದ ಸಾಗುತ್ತಿದೆ. "ಅಂಜಿಕೆ, ಅನುಗ್ರಹವಾವುದನ್ನೂ ತೋರಿಸದೆ ಅಧಿಕಾರಿಗಳು ಈ ಧಾನ್ಯಗಳನ್ನೆಲ್ಲಾ ಸಂಗ್ರಹಿಸಲೇಬೇಕು" ಎಂದು ಆಹಾರ ಮಂತ್ರಿಗಳ ಕಟ್ಟಾಜ್ಞೆಯಿದೆ. ಅದ್ದರಿಂದ ಆಶೆಗವಕಾಶವಿದೆ.

ಪ್ರಕಾಶಂ ಪಕ್ಷಪಾತೀ ಆಂಧ್ರ ಜನತೆಗೆ ಸದ್ಯದ ಮದ್ರಾಸ್ ಮಂತ್ರಿಮಂಡಲದ ಮೇಲೆ ಸಮಾಧಾನವಿಲ್ಲವೆಂಬುದು ಎಲ್ಲರಿಗೂ ಗೊತ್ತಿದ್ದ ಸಂಗತಿ. ದೊಡ್ಡ ಪರಿಮಾಣದ ಈ ಕಳ್ಳ ದಾಸ್ತಾನಿನ-'ಆಹಾರ ದಿಗ್ಬಂಧನ' ಅಥವಾ 'ಧಾನ್ಯ ಸತ್ಯಾಗ್ರಹ'ದ-ಉದ್ದೇಶದ ಕುರಿತು ನಾನಾ ವಾರ್ತೆಗಳಿವೆ. ಆದರೆ ಶ್ರೀ. ಟಿ. ಪ್ರಕಾಶಮಾಗಲೀ ಆಂಧ್ರ ಜನತೆಯಾಗಲೀ, ಕಿರೀಟವನ್ನು ಉದುರಿಸಬೇಕೆಂಬುದಕ್ಕಾಗಿ ಕಂಠವನ್ನೇ ಕತ್ತರಿಸುವಂತಹ ಕ್ರೂರಿಗಳೆಂದು ನಾವು ನಂಬುವುದಿಲ್ಲ. ಇಂದಿನ ಧಾನ್ಯಾಭಾವವು ಮದ್ರಾಸ್ ಜನತೆಯನ್ನು ಉಪವಾಸ ಹಾಕಿದೆ- ಮಂತ್ರಿಮಂಡಲವನ್ನು ಉರುಳಿಸಲಾರದು. ಹೇಗಿದ್ದರೂ ಈ ಸಂದರ್ಭದಲ್ಲಿ ಶ್ರೀ. ಟಿ ಪ್ರಕಾಶಂ, ಶ್ರೀ. ಎನ್. ಜಿ. ರಂಗ ಮೊದಲಾದ ಆಂಧ್ರ ಪ್ರಮುಖರ ಜವಾಬ್ದಾರಿಯು ದೊಡ್ಡದಿದೆ; ತಮ್ಮತ್ತ ಕಡೆಯ ಧಾನ್ಯ ದಾಸ್ತಾನುಗಳನ್ನು ಕೂಡಲೇ ಸರಕಾರಕ್ಕೊಪ್ಪಿಸುವಂತೆ ಮಾಡುವದು ಅವರ ಕರ್ತವ್ಯ. ಸರಕಾರದ ದೃಷ್ಟಿಯೂ ತುಸು ವಿಶಾಲವಾಗಬೇಕಾದುದು ಅಗತ್ಯ. ಹೊಟ್ಟೆಯಲ್ಲಿ ಹುಣ್ಣಾದರೆ ತಲೆಗೆ ಬರೆಯೆಳೆಯುವ ಅನ್ಯಾಯವನ್ನದು ಮಾಡಬಾರದು. ಉಳಿತಾಯದ ಅಕ್ಕಿ ಒಂದೆಡೆ ರಾಶಿ ಬಿದ್ದಿರುವಾಗ, ಇನ್ನೊಂದೆಡೆಯ ಉತ್ಪಾದಕರ ಊಟದ ಅಕ್ಕಿಯನ್ನೂ ಅಪಹರಿಸುವುದಲ್ಲ. ಮಾತ್ರವಲ್ಲ; ಇಂತಹ ಕಾಲದಲ್ಲಾದರೂ ಆಹಾರಧಾನ್ಯಗಳನ್ನು ಉತ್ಪಾದಿಸುವ ಅನ್ನದಾತ ರೈತನಿಗೆ ಕೊಡಲೇಬೇಕಾದಷ್ಟು ಪ್ರಾಮುಖ್ಯತೆ, ಸೌಕರ್ಯಗಳನ್ನು ತಾವು ಕೊಡುತ್ತಿರುವೆವೇ ಎಂಬುದನ್ನು ಸರಕಾರವು ಯೋಚಿಸಬೇಕಾದುದು-ಆ ಭಾಗದಲ್ಲಿ ಕೂಡಲೇ ಕಾರ್ಯಕೈಕೊಳ್ಳಬೇಕಾದುದು ಅತ್ಯಗತ್ಯ.

ಚಂದಾದಾರರಲ್ಲಿ ಮತ್ತೊಮ್ಮೆ ವಿನಂತಿ

ಈ ಸಂಚಿಕೆಯೊಂದಿಗೆ ನವಯುಗದ 27ನೇ ಸಂಪುಟಾರಂಭವಾಗುತ್ತದೆ. ಚಂದಾಹಣ ಬಾಕಿಗಾಗಿ ನಾವು ಮಾಡಿರುವ ವಿ. ಪಿ.ಗಳು ಹಲವರಿಂದ ಸ್ವೀಕೃತವಾಗಿವೆ. ಅಂಥವರನ್ನು ಅಭಿವಂದಿಸುತ್ತೇವೆ. ಇನ್ನು ಕೆಲವರು ವಿ. ಪಿ. ಯನ್ನು ಅಂಗೀಕರಿಸಲಿಲ್ಲವೆನ್ನಲು ವಿಷಾದಿಸುತ್ತೇವೆ. ಇಂತಹ ನಿರಾಕರಣೆಯು ಪತ್ರಿಕೆಗೆ ಮಾಡುವ ಪ್ರತ್ಯಕ್ಷ ಅನ್ಯಾಯವೆಂಬುದನ್ನು ನಾವು ಹಲವುಬಾರಿ ತಿಳಿಸಿಯಾಗಿದೆ. ಸಾಕಷ್ಟು ಬಾರಿ ವಿಜ್ಞಾಪಿಸಿಕೊಂಡಮೇಲೆ ಕೊನೆಯ ಒತ್ತಾಯದ ಬೇಡಿಕೆಯಾಗಿ ಹೋದ ವಿ. ಪಿ.ಗಳಿಗೂ ದಿಕ್ಕಾರವೆಂದರೆ ಸಾಕು— ಆ ಕುರಿತು ಬೇರೆವಿವರಣೆಯು ಅಗತ್ಯವಿಲ್ಲ! ಆದರೂ ಅವರ ಬಾಂಧವ್ಯವನ್ನು ಕಡಿದುಕೊಳ್ಳಲು ನಮಗಿಷ್ಟವಿಲ್ಲ. ಇನ್ನೊಮ್ಮೆ ವಿನಂತಿಸುತ್ತೇವೆ. ವಿ. ಪಿ. ಮರಳಿ ಬಿಟ್ಟವರು ದಯಮಾಡಿ ತಮ್ಮ ಚಂದಾಹಣವನ್ನು ಟಪ್ಪಾಲು ದ್ವಾರಾ ರವಾನಿಸಬೇಕು. ಪತ್ರಿಕೆಯ ಹೊಸ ವರುಷಾರಂಭದ ಈ ಸುಮುಹೂರ್ತದಲ್ಲಿ ಎಲ್ಲರೂ ಮುಂಗಡವಾಗಿ ಚಂದಾಹಣ ತೆತ್ತು (ಹಿಂದಿನ ಬಾಕಿ ಇದ್ದರೆ ಅದನ್ನು ಕೂಡ) ಪ್ರೋತ್ಸಾಹಿಸಬೇಕು. ನಮ್ಮೀ ವಿನಂತಿಯಾವ ಭಾಗದಲ್ಲೂ ನಿಷ್ಫಲವಾಗಲಾರದೆಂದು ನಂಬುತ್ತೇವೆ.

ಕುಂದಾಪುರ ಡಿ. ಮು ಕೋರ್ಟಿನಲ್ಲಿ.

O. S. 120/46. R. E. P. 7/47.

ಅರ್ಜಿದಾರ—ವೈ. ಕೃಷ್ಣಪ್ಪ ಸೆಟ್ಟಿ. ಪವರ್ ಆಫ್ ಎಟರ್ನಿದಾರ-ವೈ. ಸೂರ್ಯಣ್ಣ ಸೆಟ್ಟಿ.

ಎದ್ರಿರು—ಗಣೇಶರಾವ್. ಕೂಡಾ.

1ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ,

1ನೇ ಎದ್ರಿ ಗಣೇಶರಾವ್, ಬಿಜೂರು ... ಡುರಂಗ ರಾಯರ ಮಗ. ಕುಂದಾಪುರ ತಾಲ್ಲೂಕು ಬಿಜೂರುಗ್ರಾಮ

ಸದ್ರಿ ಅಮ್ಲುಜಾರಿಯಲ್ಲಿ ... ಶರ್ತ ನಿರ್ಣಯವು ಮಾಡುವ ಬಗ್ಗೆ ಸದ್ರಿ ಅಮ್ಲುಜಾರಿ ... ತಾ 15-9-47ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪ ಇದ್ದರೆ ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ತಿಳಿಸತಕ್ಕದ್ದು.

Y. Manjaya Shetty
Advocate for Peter.

ತಾರೀಕು 2-9-47 ಮೊಕ್ಕಾಂ ಕುಂದಾಪುರ.

ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದರಿಯುವ ಸಂಭವ. ನಗರಸಭೆಗಳಿಗೆ ಆರುತಿಂಗಳಲ್ಲಿ ಪುನಹ ಚುನಾವಣೆ?— ಘಟನಾ ಸಮಿತಿಯಲ್ಲಿ ಆದ ತೀರ್ಮಾನದಂತೆ ಈಗ ತಾನೆ ಚುನಾವಣೆ ಹೊಂದಿದ ಮುನಿಸಿಪಲ್ ಕೌನ್ಸಿಲುಗಳಿಗೆ ಇನ್ನು ಆರುತಿಂಗಳಲ್ಲಿ ಪುನಹ ಚುನಾವಣೆ ನಡೆಯಲಿರುವುದೆಂದೂ, ಇದೇ ದಶಂಬರ ತಿಂಗಳಲ್ಲಿ ನಡೆಯಬೇಕೆಂದಿದ್ದ ಜಿಲ್ಲಾ ಬೋರ್ಡುಗಳ ಚುನಾವಣೆಯನ್ನು ಸಹ ಮುಂದರಿಸಲಾಗಿದೆಯೆಂದೂ ತಿಳಿದುಬರುತ್ತದೆ.

ಪಂಜಾಬಿನ ಹೃದ್ರಾವಕ ಘಟನೆಗಳು

ಲಾಹೋರಿನಲ್ಲಿದ್ದು ಪಂಜಾಬಿನ ಮುಸ್ಲಿಂ ಅತ್ಯಾಚಾರಗಳಿಂದ ಮನನೊಂದ ಕಾಯಿದೇ ಅಝುಮ್ ಜಿನ್ನರು, ಇದೀಗ ತನ್ನ ಇತ್ತೀಚಿಗಿನ ಆಯುಷ್ಯದಲ್ಲೇ ಪ್ರಥಮ ಬಾರಿ ಶಾಂತಿಸ್ಥಾಪನೆಗಾಗಿ ಆಗ್ರಹದ ವಿನಂತಿ ಮಾಡಿಕೊಂಡಿದ್ದಾರೆ. ಈ ಮೊದಲಿನ ಮುಸ್ಲಿಂದಂಗೆಗಳ ವಾರ್ತೆಗಳನ್ನೆಲ್ಲಾ ಅತಿಶಯೋಕ್ತಿಗಳೆಂದು ಅಲ್ಲಗಳೆದಿದ್ದ ಮಿ. ಜಿನ್ನರೇ ಈ ಬಾರಿಯ ವಾರ್ತೆಗಳ ಕುರಿತು "ದುರ್ದೈವವಶಾತ್ ನನಗೆಬಂದ ಸುದ್ದಿಗಳಲ್ಲಿ ಬಹ್ವಂಶ ಸತ್ಯವಿದೆ" ಎಂದೊಪ್ಪಬೇಕಾದರೆ ಪಂಜಾಬಿನಲ್ಲೆಂತಹ ಅತ್ಯಾಚಾರ ನಡೆದಿರಬೇಕೆಂದೂಹಿಸಬಹುದು. "ನಾನು ಅತ್ಯಂತ ಯಾತನೆ ಮತ್ತು ಭಾರವಾದ ಹೃದಯದಿಂದ ಮಾತಾಡುತಿದ್ದೇನೆ. ನಾವು ನಿಜಕ್ಕೂ ರಕ್ತಮಯೀ ಯುದ್ಧವಿಲ್ಲದೆ, ವ್ಯವಹಾರ್ಯ ರೀತಿಯಿಂದ ಶಾಂತಮಯ ಚಾತುರ್ಯಬಲದಿಂದ, ಮತ್ತು ಖಡ್ಗಕ್ಕಿಂತ ಹರಿತವಾದ ಲೇಖನಿಯ ಬಲದಿಂದ ಪಾಕಿಸ್ಥಾನ ಗಳಿಸಿಕೊಂಡೆವು. ನಮ್ಮ ರಾಜ್ಯವು ಜಗತ್ತಿನ ಮುಸ್ಲಿಂ ರಾಷ್ಟ್ರಗಳಲ್ಲೆಲ್ಲಾ ದೊಡ್ಡದು; ಜಗತ್ತಿನ ದೊಡ್ಡ ಸ್ವತಂತ್ರ ರಾಷ್ಟ್ರಗಳಲ್ಲಿ ಐದನೆಯದು. ನಾವೀ ಚರಿತ್ರಾಪೂರ್ವ ಮಹತ್ಸಾಧನೆಯನ್ನು ಅತ್ಯಾಚಾರ, ಕೊಲೆಗಡುಕತನಗಳಿಂದ ಕೆಡಿಸಿಕೊಳ್ಳಬೇಕೆ? ಈ ಹಾದಿ ಹಿಡಿದರೆ ಮುಟ್ಟುವ ಗುರಿ ಯಾವುದು? ಈ ಲಜ್ಜಾವಹ ವರ್ತನೆ ಹಾಗೂ ಕಾರ್ಯಗಳ ವಿರುದ್ಧವಾಗಿ ಮಾನವತ್ವವೇ ಬೊಬ್ಬಿಡುತ್ತಿದೆ. ನಾಗರಿಕ ಜಗತ್ತು ಈ ಪಾಶವೀ ಕೃತ್ಯಗಳನ್ನು ಭಯಭೀತವಾಗಿ ನೋಡುತ್ತಿದೆ" ಎನ್ನುತ್ತ ಅಲ್ಪಸಂಖ್ಯಾಕ ಸಮಾಜಗಳ ರಕ್ಷಣೆ ಮತ್ತು ಶಾಂತಿ ಪಾಲನೆ ಮಾಡಬೇಕೆಂದು ಕೇಳಿಕೊಂಡಿದ್ದಾರೆ.

ಮಂತ್ರಿದ್ವಯರ ಸಂಚಾರ

ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲರೂ ಪಾಕಿಸ್ಥಾನ್ ಪ್ರಧಾನಮಂತ್ರಿ ಮಿ. ಲಿಯಾಖತ್ ಅಲೀಖಾನರೂ ತಮ್ಮ ಅನುಯಾಯಿಗಳೊಂದಿಗೆ ಇಕ್ಕಡೆಯ ದಂಗೆಪೀಡಿತ ಸ್ಥಳಗಳಲ್ಲಿ ಪ್ರವಾಸ ಕೈಕೊಂಡಿದ್ದಾರೆ. ಅವರೊಂದಿಗಿದ್ದ ಪತ್ರಿಕಾ ಪ್ರತಿನಿಧಿಗಳು "ಪಂಜಾಬು ಗಲಭೆಯು ಅಂತರ್ಯುದ್ಧಕ್ಕಿಂತಲೂ ಭೀಕರವಾದುದು; ಕಳವಳಕಾರಿಯಾದುದು. ಪಶ್ಚಿಮ ಪಂಜಾಬಿನಲ್ಲಿ ಸರಕಾರೀ ಆಡಳಿತೆಯೇ ಬರ್ಖಾಸ್ತಾಗಿ ಆ ಸ್ಥಾನವನ್ನು ದಂಗೆಕೋರರ ಅಧಿಕಾರವು ವ್ಯಾಪಿಸಿಕೊಂಡಿದೆ. ಹಿಂಸೆಯ ಪ್ರಳಯ ತೆರೆಯೊಳಗೇನೇ ಸರ್ವವೂ ಸಮಾವೇಶಗೊಂಡಿದೆ". ಎಂಬಲ್ಲಿಯ ಚಿತ್ರವನ್ನು ಮನೋವೇದಕವಾಗಿ ಚಿತ್ರಿಸಿದ್ದಾರೆ. ಲಾಹೋರು ಮರುಭೂಮಿಯಾಗಿರುವ-ಶಯ್ಖುಪುರ ಮತ್ತು ಲ್ಯಾಲಪುರಗಳು ಊರೇ ಸಂಪೂರ್ಣ ಸ್ಮಶಾನವಾಗಿರುವ—ದುರಂತಗಳನ್ನವರು ರೋಮಾಂಚನವಾಗುವಂತೆ ವರ್ಣಿಸಿದ್ದಾರೆ. ಪಂಜಾಬಿನಲ್ಲಿ ಶಾಂತಿಸ್ಥಾಪನೆಯಾಗುವ ವರೆಗೂ ತನ್ನ ಹೆಚ್ಚಿನ ಸಮಯವನ್ನು ಅಲ್ಲಿಯೇ ಕಳೆಯುವೆನೆಂದು ಪಂಡಿತ ನೆಹರುಗಳು ಶಪಥತೊಟ್ಟಿದ್ದಾರೆ. 'ಶಾಂತಿಯಿಲ್ಲದಿದ್ದರೆ ಪಾಕಿಸ್ಥಾನ್ ದುರ್ಬಲವಾಗುವದು. ಸದ್ಯದ ಸ್ಥಿತಿಯು ಪಾಕಿಸ್ಥಾನದ ಅಸ್ತಿತ್ವಕ್ಕೇನೇ ಅಪಾಯವಿದೆ. ನಿರಪರಾಧಿ ಜನರನ್ನು ಕೊಲ್ಲುವದು ಇಸ್ಲಾಮ್ ಮತ್ತು ಮನುಷ್ಯಧರ್ಮಕ್ಕೇ ವಿರುದ್ಧ' ಎಂದು ಮಿ. ಲಿಯಾಖತರೆಂದಿದ್ದಾರೆ. ಜಲ್ಲಂಧರಿಗೆ ಧಾವಿಸಿ ಸರ್ದಾರ್ ವಲ್ಲಭಾಯಿಗಳು ಕೇಂದ್ರದ ಸರ್ವಸಹಾಯವನ್ನೂ ಸಲ್ಲಿಸುವ ಆಶ್ವಾಸನೆಕೊಟ್ಟಿದ್ದಾರೆ

ಹೃದ್ರಾವಕ ಘಟನೆಗಳು

ಲೈಲಾಪುರಕ್ಕೆ ಹೋದಲ್ಲಿ ಪಂಡಿತ ನೆಹರುಗಳನ್ನು ಸುಮಾರು ಅರ್ಧ ಮಿಲಿಯ ಹಿಂದೂ ಸಿಖ್ಖರು ಸುತ್ತುಗಟ್ಟಿ ತಮ್ಮೆಲ್ಲರನ್ನೂ ಇಲ್ಲಿಂದ ಸಾಗಿಸಬೇಕೆಂದೂ ಇಲ್ಲವಾದರೆ ತಮ್ಮ ಪ್ರಾಣಕ್ಕಪಾಯವಿದೆಯೆಂದೂ ಬೇಡಿಕೊಂಡರು. ಲೈಲಾಪುರದಲ್ಲಿ ಮುಸ್ಲಿಂ ಸ್ವಯಂಸೇವಕರೂ ಅವರಾಜ್ಞೆಯಂತೆ ವರ್ತಿಸುವ ಪೋಲೀಸರೂ ಅಲ್ಪಸಂಖ್ಯಾಕ ಸಮಾಜಗಳ ಸಾಮೂಹಿಕ ಮರ್ದನಕ್ಕೆ ಪ್ರೇರಿಪಿಸುತ್ತಿದ್ದಾರೆಂದು ತಿಳಿದು ಬಂತು. ಆ ದಿನ ರಕ್ಷಾಬಂಧನಾ ದಿನ. ತಮ್ಮ ಸರ್ವರನ್ನೂ ಸರ್ವಸ್ವವನ್ನೂ ಕಳಕೊಂಡಿದ್ದ ಸುಮಾರು 12 ಮಂದಿ ಮಹಿಳೆಯರು ಕಣ್ಣಲ್ಲಿ ನೀರು ತುಂಬಿ ಪಂಡಿತನೆಹರುಗಳ ಕೈಗೆ "ರಕ್ಷಾ" ಕಟ್ಟಿದಾಗ ಪಂಡಿತಜೀಯ ಕಣ್ಣು ತುಂಬಿ ಬಂತು. ಅಲ್ಲಿ ಪೂರ್ವ ಪಂಜಾಬಿಗೆ ವರ್ಗವಾಗಿದ್ದ ಹಿಂದೂ ಅಧಿಕಾರೀ ನೌಕರರು ಮತ್ತವರ ಕುಟುಂಬಗಳು ಒಟ್ಟಿಗೆ 2000 ಮಂದಿ ಹೋಗಲಾರದೆ ಸಿಕ್ಕಿಬಿದ್ದಿದ್ದರು. ಪಂಡಿತ ನೆಹರುಗಳು ಅವರಿಗೆ ಭರವಸೆಕೊಟ್ಟರು.

ಝಂಗ್ ಮತ್ತು ಚಿನಿಯಟ್ ಎಂಬೆರಡು ನಗರಗಳು ಗಲಭೆಯಿಂದ ಅಡಿಮೇಲಾಗಿವೆ. ಅಲ್ಲಿ ನಿರ್ಗತಿಕರಾಗಿ ಸೇರಿರುವ 55000 ಜನರಿಗೆ ಲೈಲಾಪುರದ ನಾಗರಿಕರೇ ಆಹಾರ ಸರಬರಾಯಿ ಮಾಡುತ್ತಿದ್ದಾರೆ. ಅಲ್ಲಿಯವರ ಆಗ್ರಹದ ಬೇಡಿಕೆಯಂತೆ ನೆಹರು, ಲಿಯಾಖತರು ಅತಿ ತಗ್ಗಿನಲ್ಲೇ ವಿಮಾನದಿಂದ ಹಾರದಾಗ ನಿರ್ಗತಿಕರು ಸಾವಿರ ಸಂಖ್ಯೆಯಲ್ಲಿ ಶಾಲೆ, ಕಾರ್ಖಾನೆಗಳ ಕಂಪೌಂಡುಗಳಲ್ಲಿ ನಿಂತು ನೋಡಿ ಅಷ್ಟರಿಂದಲೇ ತೃಪ್ತಿಪಟ್ಟರು.

ಶೇಕ್‌ಪುರದ ಸಾಮೂಹಿಕ ಕೊಲೆ

ಶೇಕ್‌ಪುರದಲ್ಲಿದ್ದ 15000 ಮಂದಿ ಹಿಂದು ಮತ್ತು ಸಿಖ್ಖರ ಪೈಕಿ 10000 ಕ್ಕೂ ಮಿಕ್ಕಿದವರನ್ನು ಕಡಿದು ಕೊಂದು ಹಾಕಿ ಅವರ ಮನೆ, ಸೊತ್ತುಗಳನ್ನೆಲ್ಲಾ ಸುಟ್ಟು ಬೂದಿಮಾಡಿದ್ದರು. ಈ ಕೆಲಸವು ಸೇನೆ ಮತ್ತು ಪೋಲೀಸರಿಂದಲೇ ನಡೆಯಿತೆಂದೂ, ಕೊಲೆಗೆ ಮೆಶಿನ್‌ಗನ್ನುಗಳನ್ನೂ, ಸುಡಲು ಕೆರೋಸಿನ್ ಎಣ್ಣೆಯನ್ನೂ ಉಪಯೋಗಿಸಲಾಗಿತ್ತೆಂದೂ ತಿಳಿದುಬರುತ್ತದೆ. ಹೆಣಗಳನ್ನೆಲ್ಲಾ ಸಾಧ್ಯವಿದ್ದಷ್ಟು ಸುಟ್ಟಿದ್ದರು. ಉಳಿದವುಗಳನ್ನು ದೂರದ ಎರಡು ಬಾವಿಗಳಲ್ಲಿ ಹಾಕಿದ್ದರು. ಅಲ್ಲಿಹೋಗಿ ಅಲ್ಲಿಯ ಡೆಪ್ಯುಟಿ ಕಮಿಶನರರಾಗಿದ್ದ ಆಂಗ್ಲೋ ಇಂಡಿಯನ್ ಡಿಸ್ನೀ ಎಂಬವನನ್ನು ಪಂಡಿತ ನಹರುಗಳು ಪ್ರಶ್ನಿಸಿದಾಗ, ಆತ "ಆ ಜಿಲ್ಲೆಯ ಒಳಭಾಗದಲ್ಲೇನು ನಡೆಯುತ್ತಿದೆ ಎಂಬುದೇ ನನಗೆ ಗೊತ್ತಿಲ್ಲ. ಒಂದು ಲಕ್ಷ ನಿರ್ಗತಿಕರಿದ್ದಾರೆಂದು ಬಲ್ಲೆ. ಅವರಿಗೆ ಆಹಾರ ಯಾರು ಕೊಡುತಿದ್ದಾರೆಂದು ಗೊತ್ತಿಲ್ಲ. ಸೈನಿಕರು ಅಥವಾ ಪೋಲಿಸರಾರೂ ಸತ್ತದ್ದಾಗಲೀ ಗಾಯಗೊಂಡದ್ದಾಗಲೀ ಇಲ್ಲ" ಎಂಬರ್ಥದ ಅಸಡ್ಡೆಯ ಉತ್ತರಗಳನ್ನಿತ್ತಿದ್ದಾನೆ. "ಶೇಕ್‌ಪುರ ಹೋಗಿ ಆಯಿತು. ಆದರೆ ಒಳಗಡೆ ಸಿಕ್ಕಿಬಿದ್ದಿರುವ ಸಾವಿರಾರು ಮಂದಿಯನ್ನು ಹೇಗೆ ಉಳಿಸಲಿ!" ಎಂದು ನಿಟ್ಟುಸಿರು ಬಿಡುತ್ತಾ ನೆಹರುಗಳು ಅಲ್ಲಿಂದ ಮರಳಿದರು.

ಇದೂ ಒಂದು ಸಂಗತಿ

ಪಂಡಿತ ನೆಹರು ಶೇಕ್‌ಪುರದಿಂದ ಮರಳುವಾಗ ಮುಸ್ಲಿಮರ ಒಂದು ಗುಂಪು ರಸ್ತೆಯಲ್ಲಿ ಕಾದು ನಿಂತಿತ್ತು. ಅವರು ನೆಹರುಗಳ ಕಾರನ್ನು ತಡೆದು ನಿಲ್ಲಿಸಿ "ಈ ಯುದ್ಧವನ್ನು ನಿಲ್ಲಿಸಿರಿ. ನಾವು ಬೇಡಿಕೊಳ್ಳುತ್ತೇವೆ, ಇದನ್ನು ನಿಲ್ಲಿಸಿರಿ" ಎಂದು ಬೊಬ್ಬಿಟ್ಟರು. ಇದೇ ದಿನ ಕಂಡ ದೃಶ್ಯಗಳಿಂದ ರಕ್ತ ಹೆಪ್ಪುಗಟ್ಟಿ ಥಂಡಾಗೊಂಡಿದ್ದ ಪಂಡಿತಜೀ, ಹತ್ಯಾಕಾಂಡ ನಡೆಸಿದವರ ಬಾಯಿಂದಲೇ ಈ ಮಾತನ್ನು ಕೇಳಿ ಒಮ್ಮೆಗೇ ಉರಿದುಬಿದ್ದರು. ಅವರು ಘರ್ಜಿಸಿ ಕೇಳಿದರು: "ನಿಮಗೆ ನಾಚಿಕೆಯಾಗುವದಿಲ್ಲವೇ ನಿಮ್ಮಲ್ಲಿ ಮನಸ್ಸಾಕ್ಷಿಯೆಂಬುದು ಇದೆಯೋ ಇಲ್ಲವೋ? ಈ ಮನೆಗಳು ಮತ್ತು ಈ ಹೆಣಗಳು ಯಾರನ್ನು ತೋರಿಸುತ್ತಿವೆ? ಯಾರು ಈಗ ಯುದ್ಧ ಹೂಡಿರುವವರು?". ಶೇಕ್‌ಪುರದ ನಿರ್ಗತಿಕ ನಿಲಯದಲ್ಲಿ ಪಂಡಿತ ನೆಹರುಗಳ ಪರಿಚಯಸ್ಥರಾದ ಶ್ರೀಮಂತರೊಬ್ಬರಿದ್ದರು. ಈಗ ಅವರಲ್ಲುಳಿದಿರುವುದು ಒಂದು ಶರ್ಟು ಮಾತ್ರ!

ಹೊಟೇಲುಗಳನ್ನು ಏಲಂಮಾಡಬೇಕು:

—ಪ್ರತಿಯೊಂದು ಗ್ರಾಮದಲ್ಲಿಯೂ ಎಲ್ಲಿ ನೋಡಿದರೆ ಅಲ್ಲಿ ಕಾಫಿ ಹೋಟೇಲು ಕಂಡುಬರುತ್ತದೆ. ಆದರೆ ಈ ಹೋಟೇಲುಗಳ ಬೆಸೆಯಿಂದ ಊರಿನಲ್ಲಿ ತೆಂಗಿನಕಾಯಿ, ಬಾಳೆಗೊನೆ, ಹಲಸಿನ ಕಾಯಿ ಕೂಡಾ ಹಲವುವಸ್ತುಗಳು, ಇದ ಹಾಗೆ ಕಾಣೆಯಾಗುತ್ತವೆ. ಇದರಿಂದ ಸರಕಾರಕ್ಕೆ ಅಬ್ಕಾರಿ ಇಲಾಖೆಯಿಂದ ಆಗುವ ಆದಾಯ ನಷ್ಟ ಭರ್ತಿಗೂ, ಗ್ರಾಮೋದ್ಧಾರ ಯೋಜನೆಗೂ ಅನುಕೂಲವಾಗುವಂತೆ ಪ್ರತಿಯೊಂದು ಗ್ರಾಮದ ಸಂಖ್ಯೆಯ ಮೇರೆಗೆ ಸಾವಿರ ಜನರಿಗೆ ಒಂದು ಕಾಫಿ ಹೋಟೇಲು ಎಂಬಂತೆ ನಿರ್ಣಯಿಸಿ ಅವಶ್ಯ ಬೇಕಾದ ರೇಶನ್ ಸಾಮಾನುಗಳನ್ನು ಕೊಟ್ಟು ಏಲಂ ಮಾಡುವಂತೆ ಗ್ರಾಮ ಸಮಿತಿಗಳಿಗೂ ಮುನಿಸಿಪಾಲಿಟಿಗಳಿಗೂ ಅಧಿಕಾರವನ್ನು ಕೊಟ್ಟರೆ ಈಗಿನ ಕಾಲದಲ್ಲಿ ಅಬ್ಕಾರಿ ಗುತ್ತಿಗೆಗಳಿಂದ ಆಗುವ ಉತ್ಪತ್ತಿಯಷ್ಟೇ ಹಣ ಸಂಗ್ರಹವಾಗಬಹುದು.

ಎಚ್. ಎಸ್. ಪೊಳಲಿ

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. E. P. 402/47- S. C. 92 40.

ರತ್ನ ಮಾಲೆ ಅಮ್ಮ - ಅರ್ಜಿದಾರಳು

ತಿಮರಾಮು ಶೆಟ್ಟಿ ಎದ್ರಿ

ತಿಮರಾಮು ಶೆಟ್ಟಿ ಮುತ್ತಕ್ಕ ಪೆತ್ರಿ ಮಗ, ಜಾಲಿ ತೆಕ್ಕಟ್ಟೆಯೋರ್ದ ಎಲಿಮೆಂಟರಿ ಶಾಲಾ ಮಾಸ್ತರ್, ತೆಕ್ಕಟ್ಟೆ.

ಅರ್ಜಿದಾರಳು ಈ ಮೌಲ್ಯ ತಿಳಿಸುವುದೇನೆಂದ್ರೆ.

ಮೇಲಿನ S. C. 92 40ನೇ ಡಿಕ್ರಿ ಸಮಾಧಾನಾರ್ಥವಾಗಿ ನಡ್ಸಿದ ಅಮ್ಮಲ್‌ಜಾರಿ ಮತ್ತು ಜಪ್ತಿಲ್ಲಿ ವಾರಂಟು ಯಾಕೆ ಕೊಡಿಸ ಕೂಡದು ಎಂಬ ಸಬಬು ತೋರಿಸಲಿಕ್ಕೆ ತಾ. 19-9-47ಕ್ಕೆ ತಮ್ಮಗೆ ಬುಟ್ಟಿದ. ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ರೆ ನಿಮ್ಮ ದಿನ್ನ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಅರ್ಜಿದಾರಳ ಕಡೆಯಿಂದ ಈ ಮೌಲ್ಯ ತಿಳಿಯಪಡ್ಸಿಯದೆ.

G. Sanjiva Rao,
Pleader for Peter'

Kundapur 1-9-47.



Approved firm by the Govt. of Mysore
Certified by the Agent of the Govt. of Cylone & Indian.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ನಡಿಯುವ ಚಿತ್ರ

ಅಲೆಕ್ಸಾಂಡರ್ ಕೊರ್ಡಾರವರ

ಎಲಿಫೆಂಟ್ ಬೋಯ್

"ಮೈಸೂರ್ ಸಾಬು"

ತಾರೀಖು 5—9—47ರಿಂದ

"ಪೈಗಾಮ್"

ಸುರೇಂದ್ರ, ಸಾಧನಬೋಸ್.

ದಕ್ಷಿಣ ಕನ್ನಡ

ಮುಟಪಾಡಿ–ಸ್ವತಂತ್ರ ಭಾರತದಲ್ಲಿ ವ್ಯಾಪಾರ ನಡಿವಾಟಿಗೆ ಮಾರ್ಗಗಳು ಅತ್ಯಗತ್ಯ ಕಿೀಗಿರುವಲ್ಲಿ ಇಲ್ಲಿಯ ಪಂಚಾಯ್ತು ಬೋರ್ಡಿನವರು, 1944ರಲ್ಲಿ ಕುಂಜಾಲಿನಿಂದ ಬಾರಕೂರು ಕಡವಿಗೆ ಹೋಗುವ ಸಾಧಾರಣ 3ಮೈಲು ದಾರಿಯನ್ನು 2½ಮೈಲು ರಸ್ತೆಯಾಗಿ ಮಾರ್ಪಡಿಸಿ, ಉಳಿದುದನ್ನು ಇನ್ನೂ ಹಾಗೆಯೇ ಬಿಟ್ಟುದು ವಿಷಾದಕರ. ಸರಿಪಡಿಸಿದ್ದನ್ನು ಕೂಡ ಆಗಾಗ ದುರಸ್ತಿಪಡಿಸದಿದ್ದುದರಿಂದ ಈಗ ನಾದುರಸ್ತಿಯಾಗಿದೆ. ಬ್ರಹ್ಮಾವರದಿಂದ ಕೊಕ್ಕರಣೆಗೆ ಹೋಗುವಲ್ಲಿ ಬಳ್ಳಿ ಎಂಬಲ್ಲಿ ಈ ಬೋರ್ಡಿಗೆ ಸಂಬಂಧಿಸಿದ 2ತೋಡುಗಳಿಗೆ ಸಂಕವಿಲ್ಲದ ಪ್ರಯಾಣಿಕರಿಗೆ ದಾಟಲಿಕ್ಕೂ, ಸಾಮಾನು ಒಯ್ಯಲಿಕ್ಕೂ ತೊಂದರೆಯಾಗಿದೆ ಈ ವಿಷಯದಲ್ಲಿ ಗ್ರಾಮಸ್ಥರು ಮನವಿ ಮಾಡಿಕೊಂಡರೂ, ಬೋರ್ಡಿನವರು ಈ ವರೆಗೂ ಸುಮ್ಮನಿರುವುದು ಚಿಂತಾಜನಕವು. ಕೆಲವು ವರ್ಷಗಳಿಂದ ಬೋರ್ಡಿನ ಉತ್ಪತ್ತಿ ವೃದ್ಧಿ ಹೊಂದುತ್ತಿರುವುದರಿಂದ ಬೋರ್ಡಿನವರು ಇನ್ನಾದರೂ ಈ ಕುರಿತು ಗಮನಿಸಬೇಕಾಗಿ ಗ್ರಾಮಸ್ಥರೊಬ್ಬರು ಬರೆಯುತ್ತಾರೆ.

ಸಾಲಿಗ್ರಾಮ–ತಾ. 23-8-47ರಿಂದ ಏಳುದಿನಗಳ ತನಕ, ಹನುಮಂತ ಕಟ್ಟೆಯಲ್ಲಿ, ಶ್ರೀ। ಮು। ಶ। ಸಾಮಗ ಹರಿದಾಸರ ಹರಿಕೀರ್ತನೆ ನಡೆಯಿತು.

ಗುರುಕಂಬಳ–ಆಸ್ರಾರುದ್ದೀನ್ ವಲಿಯವರ ಉರುಸು ಎಂಬ ಕಾರ್ಯವು ತಾ 9-9 1947ರಿಂದ 3ದಿನಗಳವರೆಗೆ ನಡಿಯುವದಾಗಿ ಸದ್ರಿ ದರ್ಗಾ ಮುಕ್ತೇಸರ್ ಜನಾಬ್ ಸಯ್ಯದ್ ಆದಂ ಸಾಹೇಬರು ತಿಳಿಸುತ್ತಾರೆ.

ಕಾರ್ಕಳ- ಮುಹತೋಭಾರ ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಭಜಕ ವೃಂದವು ಸದ್ರಿ ದೇವಸ್ಥಾನದಲ್ಲಿ ತಾ. 26-8-1947ರಲ್ಲಿ ಮಹಾ ಸಭೆ ಸೇರಿ "ಇನ್ನು ಮುಂದೆ ಹಿಂದೂ ಮತಕ್ಕೆ ಸೇರಿದ ಹರಿಜನರು ಕೂಡಾ ಎಲ್ಲಾ ಪಂಗಡದವರಿಗೂ ಪ್ರವೇಶ ಕೊಡಬಹುದೆಂದು ಸರ್ವಾನುಮತದಿಂದ ನಿರ್ಣಯಿಸಿರುವುದರಿಂದ" ಸದ್ರಿ ದೇವಸ್ಥಾನದಲ್ಲಿ ಇನ್ನು ಮುಂದೆ ಹಿಂದೂ ಮತಕ್ಕೆ ಸೇರಿದ ಎಲ್ಲಾ ಜಾತಿಯವರಿಗೂ ಪ್ರವೇಶವಿರುತ್ತದೆ ಎಂದು ದೇವಸ್ಥಾನದ ಆಡಳಿತೆದಾರ ಶ್ರೀ. ಇಡ್ಯ ಕೃಷ್ಣಮೂರ್ತಿಯವರು ತಿಳಿಸುತ್ತಾರೆ.

ಮುಂಡ್ಕೂರು—ಇಲ್ಲಿ ತಾ 27-8-47ರಲ್ಲಿಮೂಲ್ಕಿ ಗ್ರಾಮಾಭಿವೃದ್ಧಿ ಕಮಿಟಿಯ ನೇತೃತ್ವದಲ್ಲಿ ಊರವರ ಸಭೆ ಸೇರಿ ಮುಂಡ್ಕೂರು, ಮುಲ್ಲಡ್ಕ, ಇನ್ನ, ಎಳಿನಾಡಿ ಮತ್ತು ಬಳ್ಕುಂಜೆ ಗ್ರಾಮಗಳಿಂದ ಕೂಡಿದ ಸಂಟರಿನಲ್ಲಿ 1948ನೇ ಫೆಬ್ರವರಿ ತಾ 27, 28, 29, ಈ ದಿನಗಳಲ್ಲಿ 3ನೇ ಪ್ರದರ್ಶನವನ್ನು ಸ್ಥಳೀಯ ಪೈಯುರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿಸ ಬೇಕಾಗಿ ನಿಶ್ಚಯಿಸಲಾಯಿತು. ಕೃಷಿ ಸುಧಾರಣೆಯು ಮುಖ್ಯವಾದುದರಿಂದ ನವೀನ ರೀತಿಯ ಕೃಷಿ, ತರಕಾರಿ ವಗೈರೆ ಬೆಳಸಿ ಪ್ರದರ್ಶಿಸುವಂತೆ ಮುಂಡ್ಕೂರು ಕಟ್ಟದ ಬಳಿ ಸರಕಾರದ 6,8 ಎಕ್ರೆ ಸ್ಥಳ ನಿರ್ಮಿಸಿ ಕೃಷಿ ಇಲಾಖೆಯ ಪೂರ್ಣ ಸಹಕಾರ ಕೇಳಿಕೊಳ್ಳಬೇಕಾಗಿಯೂ, ಗುಡಿ ಕೈಗಾರಿಕೆಗಳಿಗೆ ಉತ್ತೇಜನಕೊಡುವುದು ಅಗತ್ಯವಾದುದರಿಂದ ಇಂಡಸ್ ಡಿಪಾರ್ಟುಮೆಂಟು ಮತ್ತು ಪಶು. ಫಿಶರೀಸ್ಸ್, ಆರೋಗ್ಯ ಖಾತೆ, ಜಿಲ್ಲಾ ಅಭಿವೃದ್ಧಿ ಸಂಘದ ಮತ್ತು ಇನ್ನಿತರ ಸರಕಾರ ಪಡೆದು ಪ್ರದರ್ಶನ ಯಶಸ್ವಿಯಾಗುವಂತೆ ಯತ್ನಿಸಬೇಕಾಗಿಯೂ ನಿಶ್ಚಯಿಸಲಾಯಿತು. ಮೂಲ್ಕಿ ಸೆಂಟರು ಶಾಲೆಗಳೊಳಗೆ ಸ್ಪರ್ಧೆ ಪರ್ಸಿಸಿ ರೋಲಿಂಗ್ ಕಪ್ಪುಗಳೂ, 38 ಗ್ರಾಮದ ಗ್ರಾಮಸ್ಥರೊಳಗೆ ಕೃಷಿ, ಕೈಗಾರಿಕೆ, ಪಶು, ಪ್ರದರ್ಶನದಲ್ಲಿ ರೂ 5/-ರಿಂದ ರೂ50/- ವರೆಗಿನ ಬಹುಮಾನಗಳೂ, ಬೇರೆ ಬೇರೆ ಕಡೆಗಳಿಂದ ಬರುವ ಸಾಮಾನುಗಳಿಗೆ ಸರ್ಟಿಫಿಕೇಟು ಮೆಡಲ್‌ಗಳೂ, ಅತೀ ಉತ್ತಮ ತರದ್ದೆಂದು ಇರುವ ಪ್ರತಿ ವಸ್ತುವಿಗೆ ರೂ 5/- ವರೆಗಿನ ಇನಾಂಗಳೂ ಕೊಡುವ ಏರ್ಪಾಟಿಡಬೇಕಾಗಿಯೂ ಪ್ರದರ್ಶನದಲ್ಲಿ ಸ್ಟೋರುಗಳಿಗೆ ಫೀಸು ಏತ್ತ ಬಾರದಾಗಿಯೂ ನಿರ್ಣಯಿಸಲಾಯಿತು. ಜಿಲ್ಲಾ ಕೃಷಿ ಆಫೀಸರರೂ, ಮಂಗಳೂರು ಕೃಷಿ ಡೆಮೊನ್ಸ್ಟ್ರೇಟರರೂ ಹಾಜರಿದ್ದರು ಎಂದು ಮೂಲ್ಕಿ ಗ್ರಾಮಾಭಿವೃದ್ಧಿ ಕಮಿಟಿ ಸೆಕ್ರೆಟರಿಗಳು ತಿಳಿಸುತ್ತಾರೆ.

ಸ್ವಾತಂತ್ರ್ಯೋತ್ಸವವು–ಕಳೆದ ತಾ. 14-15ರಲ್ಲು ಶಂಕರ ನಾರಾಯಣ, ಶಿರೂರು, ಹಾಲಾಡಿ ಮೊದಲಾದ ಸ್ಥಳಗಳಲ್ಲಿ ಧ್ವಜವಂದನೆ, ಪ್ರಭಾತಫೇರಿ, ಶಾಲಾ ಮಕ್ಕಳಿಗೆ ತಿಂಡಿ ಹಂಚೋಣ, ಸಾರ್ವಜನಿಕ ಮೆರವಣಿಗೆ, ಸಭೆ ಮೊದಲಾದ ಕಾರ್ಯಕ್ರಮಗಳಿಂದ ಯಥಾರೀತಿ ಸಾಂಗವಾಗಿ ಆಚರಿಸಲಾಯಿತು.

ಬೊಂಬಾಯಿ–ಮೊಗವೀರ ವ್ಯವಸ್ಥಾಪಕ ಮಂಡಳಿಯವರು ಕಳೆದ ತಾ. 26ರಲ್ಲು ಮುಂಬಯಿ ಸರಕಾರದ ಕೃಷಿ ಮತ್ತು ಅರಣ್ಯ ಖಾತೆಗಳ ಮಂತ್ರಿಗಳಾದ ಮಾನ್ಯ ಶ್ರೀ. ಎಮ್. ಪಿ. ಪಾಟೀಲರನ್ನು ಆಹ್ವಾನಿಸಿ ಮಂಡಳಿಯ ಕಡೆಯಿಂದ ನಡೆಯುತ್ತಿರುವ ವಿವಿಧ ಕಾರ್ಯಕಲಾಪಗಳ ಸೂಕ್ಷ್ಮ ಪರಿಚಯವನ್ನು ಮಾಡಿಕೊಟ್ಟರು. ಈ ಸಂದರ್ಭದಲ್ಲೇ ಮಾನ್ಯ ಮಂತ್ರಿಗಳಿಗೆ ಮಾನಪತ್ರವೊಂದು ಅರ್ಪಿಸಲಾಯಿತು. ಮಂಡಳಿಯ ಕಡೆಯಿಂದ ನಡೆಯುತ್ತಿರುವ ರಾತ್ರಿ ಶಾಲೆಯು ಇಡೀ ಹಿಂದೂಸ್ಥಾನದಲ್ಲಿಯೇ ಮಾದರಿಯಾಗಿದೆ ಎನ್ನಲು ಸಂದೇಹವಿಲ್ಲವೆಂದು ಮಾನ್ಯ ಮಂತ್ರಿಗಳು ಉತ್ತರವಿತ್ತು ಕರ್ನಾಟಕ ಪ್ರಾಂತ ನಿರ್ಮಾಣ ಕಾರ್ಯದಲ್ಲಿ ಎಲ್ಲರೂ ಸಹಭಾಗಿಗಳಾಗಬೇಕೆಂದು ಕೇಳಿಕೊಂಡರು.

ಸೋಮಾರಿಯ ಸಪ್ತರ

"ಹೆಸರಲ್ಲೂ ಇದೆ"

ಚಕ್ರವರ್ತಿ ರಾಜಗೋಪಾಲಾಚಾರ್ಯರು ಸೇಲಂನಲ್ಲಿ ಒಬ್ಬ ವಕೀಲರಾಗಿದ್ದರು. ಮದ್ರಾಸಿನ ಮುಖ್ಯ ಮಂತ್ರಿಗಳಾದರು. ಕೇಂದ್ರ ಸರಕಾರದ ಸದಸ್ಯರಾದರು. ಪಶ್ಚಿಮ ಬಂಗಾಳದ ಗವರ್ನರಾದರು, ಇನ್ನು ಭಾರತದ ಗವರ್ನರ್ ಜನರಲ್ ಆಗುವುದೊಂದು ಉಳಿದಿದೆ.

೦೦ ೦೦

ಮೌಂಟಬೇಟನರು ಬರುವ ಎಪ್ರಿಲ್ ತಿಂಗಳೊಳಗೆ ತನ್ನನ್ನು ಬಿಡುಗಡೆಮಾಡಿರೆಂದು ಕೇಳಿಕೊಂಡಿರುವರು. ಅಷ್ಟರೊಳಗೆ ನಮ್ಮ ಘಟನೆ ಸಿದ್ಧವಾಗದೆ ಹೋದರೆ ನಮ್ಮಗೊಬ್ಬರು ಗವರ್ನರ್ ಜನರಲ್ ಬೇಕು. ಆ ಸ್ಥಾನ ಚಕ್ರವರ್ತಿ ರಾಜಗೋಪಾಲಾಚಾರ್ಯರ ಪಾಲಿಗೆ ಹೋಗುವುದು ಎಂಬುದರಲ್ಲಿ ಸಂದೇಹವಿಲ್ಲ.

೦೦ ೦೦

ಭಾರತದ ಘಟನಾ ಸಮಿತಿಗೆ ಅಧ್ಯಕ್ಷರಾಗಿರುವ ರಾಜೇಂದ್ರ ಪ್ರಸಾದರು ರಾಜಗೋಪಾಲಾಚಾರ್ಯರಂತೆಯೇ ಗಾಂಧಿಯವರ ಅನುಂಡ ಭಕ್ತರು. ಕೇಂದ್ರ ಸರಕಾರದ ಆಹಾರ ಖಾತೆಯ ಸದಸ್ಯರು. ಘಟನಾ ಸಮಿತಿಯು ತಾತ್ಕಾಲಿಕ ಶಾಸನ ಸಭೆಯಾಗಿ ಮಾರ್ಪಾಟವಾದ ನಂತರ ರಾಜೇಂದ್ರರು ಸಹಜವಾಗಿಯೂ ರಾಜೇಂದ್ರರೇ ಸರಿ.

೦೦ ೦೦

ನಮ್ಮ ಪ್ರಾಂತ್ಯದ ಆಹಾರ ಖಾತೆಯ ಮಂತ್ರಿವರ್ಯರು ಡಾಕ್ಟರ್ ರಾಜನ್‌ನವರು. ರಾಜಗೋಪಾಲಾಚಾರ್ಯರು, ರಾಜೇಂದ್ರ ಪ್ರಸಾದರು ಡಾಕ್ಟರ್ ಎಂಬ ಪದವಿಯನ್ನು ಮಾತ್ರ ಪಡದಿರುವರು. ರಾಜನ್‌ರವರು ನಿಜವಾಗಿಯೂ ಡಾಕ್ಟರರಾಗಿದ್ದರೆ. ಈಗಿನ ಆಹಾರ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಒಬ್ಬ ಡಾಕ್ಟರರೇ ಬೇಕು. ಮದ್ರಾಸಿನ ಈಗಿನ ಮಂತ್ರಿಮಂಡಲದಲ್ಲಿ ಡಾಕ್ಟರ್ ರಾಜನರು ರಾಜನಂತಿದ್ದಾರೆ.

೦೦ ೦೦

ಓ. ರಾಮಸ್ವಾಮಿ ರೆಡ್ಡಿಯರು ನಮ್ಮ ಮುಖ್ಯ ಮಂತ್ರಿಗಳು ಅವರು ದೇವರ ಹಾಗೆ ಇರುವವರು. ಆದುದರಿಂದಲೇ ಮತಸಂಬಂಧದ ಖಾತೆ ಅವರ ಕೈಯಲ್ಲಿದೆ. ಉಪವಾಸ, ಮೌನ, ಧ್ಯಾನ ಇವುಗಳಲ್ಲಿ ನಿರತರಾಗಿದ್ದಾರೆ.

೦೦ ೦೦

ಇನ್ನೊಬ್ಬ ರಾಮಸ್ವಾಮಿಯವರು ನಮ್ಮ ಮೈಸೂರಿನ ದಿವಾನರು, ಮೈಸೂರು ರಾಮರಾಜ್ಯವೆಂದು ಮೊದಲೇ ಪ್ರಸಿದ್ಧಿ ಪಡೆದಿತ್ತು. ರಾಮಸ್ವಾಮಿ ಮೊದಲಿಯರು ಅಲ್ಲಿ ದಿವಾನರಾಗಿರುವುದು ಮತ್ತಷ್ಟು ಚಲೋದಾಯಿತು.

೦೦ ೦೦

ರಾಮಸ್ವಾಮಿ ಅಯ್ಯರರೂ ಮೊದಲಿಯಾರರಂತೆಯೇ ಪ್ರಸಿದ್ಧ ಸಚಿವೋತ್ತಮರು. ಹತ್ತು ವರ್ಷ ತಾನು ಸ್ವತಂತ್ರವಾಗಿ ಆಳಿದ ತಿರುವಾಂಕೂರನ್ನು ಸ್ವತಂತ್ರ ಮಾಡಿಬಿಡಬೇಕೆಂದು ಅಯ್ಯರರು ಮಾಡಿದ ಪ್ರಯತ್ನವನ್ನು ಹೊಗಳುವವರು ಇಲ್ಲದೆ ರಾಜಿನಾಮೆ ಕೊಡುವ ವೇಳೆ ತನ್ನ ಸಾಹಸ ಕಾರ್ಯಗಳನ್ನು ತಾನೇ ಹೇಳಿಕೊಳ್ಳಬೇಕಾಯಿತು. ತಾನು ಇನ್ನು ವೇದಾಂತದಲ್ಲಿ ಮಗ್ನನಾಗುವೆನೆಂದು ಹೇಳಿ ಬಿಟ್ಟಿಕ್ಕೆ ಹಾರಿದರು.

೦೦ ೦೦

ಭಾರತವು ಇಬ್ಭಾಗವಾಯಿತು. ಮುಸ್ಲಿಂಲೀಗಿನ ನಾಯಕ ಜಿನ್ನಾ, ಕೋಂಗ್ರೆಸಿನ ನಾಯಕ ಜವಹರ್ ಇವರಿಬ್ಬರೂ ಅಧಿಪತಿಗಳಾದರು. ಜಿನ್ನಾರ ರಾಜ್ಯದಲ್ಲಿ ಜೋಗೇಂದ್ರನಾಥ ಮಂಡಲರು. ಜವಹರರ ಮಂತ್ರಿಮಂಡಲದಲ್ಲಿ ಜಗಜೀವನ ರಾಮ್‌ರು. ಇವರು ಹಿಂದುಳಿದ ವರ್ಗದ ಧುರೀಣರು. ಇವರೆಲ್ಲರಿಗೂ ಅಧಿಕಾರ ದೊರೆಯಿತು. ಸಮತಾವಾದಿಗಳ ಧುರೀಣರಾದ ಜೈಪ್ರಕಾಶ ನಾರಾಯಣರು ಯಾವಾಗ ಅಧಿಕಾರ ವಹಿಸಿಕೊಳ್ಳುವರೋ ನೋಡಬೇಕು.

೦೦ ೦೦

ಶ್ರೀ. ಪ್ರಕಾಶರು ಪಾಕಿಸ್ತಾನದಲ್ಲಿ ನಮ್ಮ ರಾಯಭಾರಿಗಳಾದರು. ಟಿ. ಪ್ರಕಾಶರು ಮದ್ರಾಸಿನ ಮಂತ್ರಿಪದವಿಯನ್ನು ತ್ಯಜಿಸಿದರು. ಆದರೆ ಆಂಧ್ರ ಪ್ರಾಂತ್ಯದ ಗವರ್ನರ್ ಪದವಿ ಅವರನ್ನು ಕಾಯುತ್ತಿದೆ.

—ಸೋಮಾರಿ.

ಭಾರತಕ್ಕೆ ತ್ರಿವರ್ಣ ಪತಾಕೆಯಂತೆಯೇ ಕನ್ನಡ ಸಾಹಿತ್ಯಕ್ಕೆ 'ಮಧುವನ'ಪತಾಕೆ.
ತ್ರಿವರ್ಣ ಪತಾಕೆಯು ಎಲ್ಲೆಲ್ಲಿಯೂ ಹಾರುವಂತೆ ... ಪುಸ್ತಕವು ಪ್ರತಿ
ಮನೆಯನ್ನೂ ಸೇರಿ ಮನಬೆಳಗಲಿ!

ಮಧುವಿಗಿಂತಲೂ ಮಧುರವಾದ 25 ಕತೆಗಳಿಂದ ರಂಜಿಸುತ್ತಿದೆ-

ಮಧುವನ

(ಕತೆಗಾರ ಮತ್ತು ಕತೆಗಾರ್ತಿಯರ ಪಡಿಯಚ್ಚು ಮತ್ತು ಪರಿಚಯದೊಂದಿಗೆ)

ಬೆಲೆ ರೂ. 3 0 0

OPINION OF THE 'HINDU' MADRAS, ABOUT 'MADHUVANA'

The Kinyara Prapancha has been doing its best to encourage young men of letters in Karnataka and has to its credit a number of useful publications The present volume is a worthy edition to them. The Book is a collection of about twentyfive short stories written by different persons some of whom have already made their mark in the literary world. The stories are of absorbing interest. The printing and get up of the book is good.

ಇಂತಹ ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಗ್ರಹವು ಇನ್ನೊಂದಿಲ್ಲವೆಂದು
— ಕೊಂಡಾಡಲ್ಪಟ್ಟ ಪುಸ್ತಕ —

ಉಡುಪಿಯ ಕಿರಿಯರ ಪ್ರಪಂಚದ ಪ್ರಕಟಣೆ.
ಪ್ರತಿಗಳು ಎಲ್ಲೆಲ್ಲಿಯೂ ಸಿಗುತ್ತವೆ.

ಭಾರದ್ವಾಜರ
ಇಂಗ್ಲೀಷ್–ಇಂಗ್ಲೀಷ್–ಕನ್ನಡ
ಡಿಕ್ಸನೆರಿ

ಉತ್ತಮ ಪ್ರತಿ ರೂ. 6—0—0
ಸಾಧಾರಣ ಪ್ರತಿ ರೂ. 4—8—0
ಅಂಚೆವೆಚ್ಚ ಪ್ರತ್ಯೇಕ.

ನವಭಾರತ ಬುಕ್ ಡಿಪೊ,
: ಉಡುಪಿ :

(೨ನೇ ಪುಟದಿಂದ.)

ತ್ತಾ ಹಿಂದುಳಿದರು. ಜಾಲಿಯಾನ್ ವಾಲಾಬಾಗದ ಜನಹತ್ಯಾಕಾಂಡ ನಡೆದುದು ಆಗಲೇ; ಇದರಿಂದ ಮೋತಿಲಾಲರ ಮನಸ್ಸಿನ ಮೇಲೆ ಅಗಾಧ ಪರಿಣಾಮವಾಗಿ ಅವರ ಮನೋವೃತ್ತಿಯೇ ಬದಲಾಯಿಸಿತು. ಲಕ್ಷ್ಯ ಪೂರ್ವಕವಾಗಿ ಯೋಚಿಸಿಕೊಂಡು, ತರ್ಕಿಸಿ ನೋಡಿ, ಸ್ವಲ್ಪ ಸ್ವಲ್ಪವಾಗಿ ಮುಂದೊತ್ತುತ್ತಾ ಅವರು ಗಾಂಧಿಯವರ ಅಹಿಂಸಾತ್ಮಕ ಸೇನೆಯನ್ನು ಸೇರಿಕೊಂಡರು. ಆ ಮೇಲೆ ಕೊನೆಯ ವರೆಗೂ ನಿಷ್ಠೆಯಿಂದ ತ್ರಿಕರಣಪೂರ್ವಕವಾಗಿ ಅಲ್ಲೇ ಇದ್ದರು.

ಸ್ಥಿತಿ ಮಾರ್ಪಾಟ

ಆನಂದ ಭವನದಲ್ಲಿ ಅತ್ಯುಗ್ರಮಾರ್ಪಾಟುಗಳಾದುವು. ತನ್ನ ಇಡೀ ಸಮಯವನ್ನು ರಾಜಕೀಯಕ್ಕೇನೆ ಮೀಸಲಿಡುವುದಕ್ಕಾಗಿ ಮೋತಿಲಾಲರು ತನ್ನ ಅಪಾರ ವಕಾಲತ್ ಕಾರ್ಯವನ್ನೇ ಬಿಟ್ಟು ಬಿಟ್ಟರು. ಅವರೇನೋ ಮಿಲಿಯಗಟ್ಲೆ ಸಂಪಾದಿಸಿದ್ದರು.ಅವರೆ ಹೆಚ್ಚಿನದನ್ನು ದಾನವಾಗಿ ಕೊಟ್ಟು ಬಿಟ್ಟಿದ್ದರು. ಅಂತೂ ಅಗತ್ಯ ಬಿದ್ದ ಕಾಲದಲ್ಲಿ ಎಷ್ಟು ಬೇಕಾದರೂ ಸಂಪಾದಿಸಿಕೊಳ್ಳಬಲ್ಲೆನೆಂಬ ಧೈರ್ಯ ಅವರಲ್ಲಿದ್ದುದರಿಂದ, ಬಹುತೇಕವಾಗಿ ಸಂಪಾದಿಸಿದ್ದೆಲ್ಲವನ್ನೂ ವ್ಯಯಿಸಿದ್ದರು. ಆ ಮೇಲೆ ಕ್ರಮಾಗತ ಉತ್ಪನ್ನವೇನೂ ಇಲ್ಲದ್ದರಿಂದ, ಖರ್ಚಿನ ಬಾಬು ಎಲ್ಲವನ್ನೂ ಕಡಿಮೆಮಾಡಿಕೊಳ್ಳಬೇಕಾಯಿತು. ರಾಜವೈಭವಾಡಂಬರದ ಸ್ಥಾನವನ್ನು ಸರಳ ಜೀವನ ವ್ಯಾಪಿಸಿತು.ನಾಜೂಕಿನ ಸಿಲ್ಕು ಮತ್ತು ಮಸ್ಲಿನುಗಳು ಹೋಗಿ ದಪ್ಪ ಕೈನೂಲಿನ ಖಾದಿಗಳು ಬಂದುವು. ತಂದೆ ಮತ್ತು ಮಗ ಇಬ್ಬರೂ ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚಾಗಿ ರಾಜಕೀಯ ಕಾರ್ಯದಲ್ಲೇ ನಿರತರಾಗಹತ್ತಿದರು. ಆ ಮೇಲೆ ಜೈಲುಯಾತ್ರೆಗೆ ಪ್ರಾರಂಭ. ದಸ್ತಗಿರಿ, ಶಿಕ್ಷೆಗಳ ತಾಂಡವವೇ ಸರ್ವತ್ರ ವ್ಯಾಪಿಸಿಕೊಂಡಿತು. ಸಾವಿರಾರು ಮಂದಿ ಬಂಧನಕ್ಕೊಳಗಾದರು.ಅವರ ಪ್ರಥಮ ದಳದಲ್ಲೇ ಮೋತೀಲಾಲ್ ಮತ್ತು ಜವಾಹಿರರಿದ್ದರು. ಎರಡನೆಯವರೇನೋ ಯುವಕ; ಆದರೆ ಮೋತೀಲಾಲರು ಆಗಲೇ ಐವತ್ತರ ಗಡಿದಾಟಿದ್ದರು. ಅಸಾಧಾರಣ ದೃಢ ಪ್ರಕೃತಿಯವರಾಗಿದ್ದರೂ ಜೈಲು ಜೀವನದ ಸಂಕಷ್ಟಗಳು ಮೋತಿಲಾಲರಿಗೆ ಅಭ್ಯಾಸವಿಲ್ಲದವುಗಳಿದ್ದುವು. ಆದರೂ ದಸ್ತಗಿರಿಗೊಳಗಾಗುವ ನಿರ್ಧಾರದ ಕುರಿತು ಅವರು ಒಂದೇ ಒಂದು ಕ್ಷಣಕಾಲ ಶಂಕಿಸಿದುದಿಲ್ಲ. ತನ್ನ ಬಾಲ್ಯದಿಂದಲೂ ಹಾಗೆಯೇ-ಯಾವುದಾದರೊಂದು ಕಾರ್ಯವನ್ನು ಒಮ್ಮೆ ಕೈಕೊಂಡ ಮೇಲೆ ಅದನ್ನು ಸಂಪೂರ್ಣವಾಗಿ ಮತ್ತು ಹೃತ್ಪೂರ್ವಕವಾಗಿ ಸಾಧಿಸುವದೇ ಮೋತೀಲಾಲರ ಸ್ವಭಾವ. ಅವರೆಂದಿಗೂ ತನ್ನ ಗತವೈಭವದ ಕಡೆಗೆ ನೋಟ ಬೀರಲಿಲ್ಲ; ಪಶ್ಚಾತ್ತಾಪ ಪಡಲಿಲ್ಲ. ತನ್ನ ಹೃದಯದಾಳಕ್ಕಂಟಿದ ಅತಿ ಪ್ರೀತಿಯ ಒಂದು ತತ್ವಕ್ಕಾಗಿ ಸ್ವಸಂತೋಷದಿಂದ ಮಾಡಿದ ಆ ತ್ಯಾಗಗಳ ಯಶಸ್ಸು ಯುವಕನಾದ ಮತ್ತೊರ್ವನಿಗಿಂತ ಹೆಚ್ಚಾಗಿ ಮೋತಿಲಾಲರಿಗೆನೆ ಸಲ್ಲಬೇಕು.

ವೀರೋಚಿತ ಮರಣ

ಶಿವಾಸಿಗಳಲ್ಲಿ ಇಬ್ಬರು ಮಾತ್ರ ಮೇಲಿಂದ ಮೇಲೆ ಜೈಲಿಗೆ ಹೋಗುತ್ತಿದ್ದರೂ ಕೂಡಾ ಆನಂದ ಭವನವು ಖಾಲಿಬಿತ್ತು; ಮರುಭೂಮಿಯಂತೆ ತೋರ ಹತ್ತಿತು. ತಮ್ಮ ರಾಷ್ಟ್ರವು ಜೀವನ್ಮರಣದ ಕತ್ತರಿಯಲ್ಲಿ ಸಿಕ್ಕಿರುವಾಗ ಮನೆಯಲ್ಲೇ ಮುದುಡಿಕೊಂಡು ಕುಳಿತಿರಲಾರದೆ ಜವಾಹಿರರ ತರುಣ ಪತ್ನಿ ಮತ್ತವರ ಸಹೋದರಿಯರು ಕೂಡಾ ಚಳವಳದಲ್ಲಿ ಧುಮುಕಿದರು. ಮಿಕ್ಕ ಸಾವಿರಾರು ಮಂದಿಯಂತೆ ಇವರೂ ಬಂಧನಕ್ಕೊಳಗಾದರು; ದೀರ್ಘಾವಧಿ ಕಾರಾಗೃಹದಲ್ಲಿ ಕೊಳೆತರು. ಮನೆಯಲ್ಲಿ ಉಳಿದುದೆಂದರೆ ಬೇಸರದ ದಿನದೂಡಲು ಅರುವತ್ತು ವರ್ಷ ಪ್ರಾಯದ ಆ ಮುದಿ ಹೆಣ್ಣು ಜೀವ ಮಾತ್ರ. ಜಜ್ಜರಿಯಾಗುತ್ತಾ ಬಂದಿದ್ದ ತನ್ನ ಆರೋಗ್ಯವನ್ನು ಲಕ್ಷಿಸದೆ ಅವರು ರಾತ್ರಿಹಗಲು ಶ್ರಮಿಸುತ್ತಾ ತನ್ನ ಪಾಲಿನ ಅಲ್ಪ ಕಾರ್ಯವನ್ನು ಸಾಹಸಪಟ್ಟು ನಿರ್ವಹಿಸುತ್ತಿದ್ದರು. ಆದರೇನು? ಕಾರ್ಯದ ಕರೆಯು ಇತರ ನೂರಾರು ಮಂದಿಯಂತೆ ಅವರನ್ನೂ ಅಲ್ಲಿಂದೆಬ್ಬಿಸಿತ. ಹಾಗೆ ಮಾಡದಂತೆ ತನ್ನನ್ನು ತಡೆಯಲು ಬಂದವರನ್ನು ಗಣಿಸದೆ ಆಕೆಯೂ ಬಂಧನಾಕಾಂಕ್ಷಿಯಾಗಿ ಮುಂದೆ ಬಂದರು; ಅಲ್ಪಾವಧಿಯೊಳಗೇನೇ ಜೈಲು ಸರಳುಗಳ ಒಳಗಡೆಯಾದರು. ತಾವು ಮಾಡಿದ ಈ ಕೆಲಸಕ್ಕಾಗಿ ತೀರಾ ಲಜ್ಜೆಗೊಂಡು, ತನ್ನ ಮುಖ ನೋಡುವುದಕ್ಕೆ ಅಳುಕುತಿದ್ದ ಜೈಲರರಿದಿರು ಆಕೆ ಹೆಗ್ಗಳಿಕೆ ಹಾಗೂ ಉತ್ಸಾಹದಿಂದ ನಿಂತರು. ಜೈಲು ತನ್ನ ಪಾಲನ್ನು ಆಹುತಿಗೊಳ್ಳದೆಂದಿಗೂ ಬಿಡುವದಿಲ್ಲ. ಮುದಿ ಮೋತಿಲಾರ ಕಬ್ಬಿಣದಂತಹ ಕಾಯಕ್ಕೂ ಜೈಲು ಕಾಠಿಣ್ಯವನ್ನು ಸಹಿಸಿಕೊಳ್ಳುವುದು ಅಸಾಧ್ಯವಾಯಿತು. ಆದರೂ ದೂರಿನ ಒಂದೇ ಒಂದಕ್ಷರವಾದರೂ ಅವರ ತುಟಿಗಳಹೊರಗೆ ಬಂದುದಿಲ್ಲ. ತೀರಾ ತಡವಾಗುವವರೆಗೂ ಇವರು ಕಾಹಿಲೇ ಮನುಷ್ಯ ಎಂಬ ಗುಟ್ಟು ಮೋತಿಲಾಲರ ಸಮೀಪದಲ್ಲಿದ್ದವರ ಶೋಧನೆಗೂ ಬಾರದಂತಾಯಿತು. ಕೊನೆಗೆ ಅಧಿಕಾರಿಗಳು ಅವರನ್ನು ಬಿಡುಗಡೆಮಾಡಿದರು. ಆದರೆ ಆಗಲೇ ಶಕ್ತಿಗುಂದಿಹೋಗಿದ್ದ ಅವರು ದಿನದಿಂದ ದಿನಕ್ಕೆ ಕ್ಷಯಿಸುತ್ತಾ ಬಂದರು; ಮೃತ್ಯುವನ್ನು ಕೂಡಾ ಪ್ರತಿಭಟಿಸಿ ತನ್ನ ಪದ್ಧತಿಯ ಧೀರ ಹೋರಾಟವನ್ನವರು ಕೊಟ್ಟರೂ, ಅವರು ಸೋತ ಏಕ ಮಾತ್ರ ಹೋರಾಟವೆಂದರೆ ಅದೇ.

ಆ ಮೇಲೆ ಕಮಲ.

ತನ್ನ ಒಡೆಯನನ್ನು ಕಳಕೊಂಡ ಆನಂದ ಭವನವು ದುಃಖದ ಬೀಡಾಯಿತು; ಆರೈಕೆಯಿಲ್ಲದ ವಿಶಾಲ ಉದ್ಯಾವನದ ನಡುವೆ ಅದು ಹಡಿಲುಬಿತ್ತು. ಮನೆ ತುಂಬಾ ಜನರು ಧುಮುಧುಮಿಸುತಿದ್ದು,ಎಲ್ಲೆಲ್ಲೂ ಚಟುವಟಿಕೆ, ಉಲ್ಲಾಸಗಳು ಹರಡಿದ್ದ ಆ ಸುಖದ ದಿನಗಳು ಸಂದವು. ದುಃಖ ಮತ್ತು ಕಷ್ಟದ ಪರಿಚಯವೇ ಇಲ್ಲದ, ಮನೆ ತುಂಬಾ ಒಂದು ನಗೆ ಪ್ರತಿಧ್ವನಿ ಕೊಡುತಿದ್ದ ಆ ಕಾಲ ಕಳೆಯಿತು. ಈಗ ಎಲ್ಲವೂ ಮೌನ. ತನ್ನನ್ನೂ ತನ್ನ ಕುಟುಂಬವನ್ನೂ ಮಾತೃಭೂಮಿಯ ಸೇವೆಗರ್ಪಿಸಿಕೊಂಡಿದ್ದ ಆ ಮನುಷ್ಯನೇ ಸ್ವಾತಂತ್ರ್ಯಕ್ಕೆ ಪ್ರತಿಯಾಗಿ ಪ್ರಥಮತಃ ತನ್ನ ಪ್ರಾಣವನ್ನು ಕೊಡಬೇಕಾಯಿತು.

ಕಾಲಚಕ್ರವುರುಳುತ್ತಾ ಹೋಯಿತು. ಸ್ವಾತಂತ್ರ್ಯ ಹೋರಾಟವು ಸಾಗುತ್ತಲೇ ಇತ್ತು. ರಾಷ್ಟ್ರವು ತನ್ನ ಪೂರ್ಣ ಶಕ್ತಿಯಿಂದ ಇನ್ನೂ ಅಧಿಕಾಧಿಕವನ್ನು ಬೇಡಿತು. ಜವಾಹಿರರ ಪತ್ನಿ ಕಮಲಾ-ಸದಾ ಚಟುವಟಿಕೆ ಮತ್ತು ಮುಂಭಾಗದಲ್ಲಿದ್ದಾಕೆ-ಸ್ವಾತಂತ್ರ್ಯ ಮತ್ತು ಅಹಿಂಸಾ ಸಂದೇಶಗಳನ್ನು ಬೀರುತ್ತಾ ಹಳ್ಳಿ ಹಳ್ಳಿ ಸಂಚಾರ ಕೈಗೊಂಡಳು; ತನ್ನ ಸರಳ ಸಾದಾತನ ಮತ್ತು ವಿಶ್ವಾಸಬಲದಿಂದ ಜನಮನವನ್ನೊಲಿಸಿದಳು. ಆಕೆಯನ್ನೊಂದು ಭಯಂಕರ ಕಾಹಿಲೆ ಆವರಿಸಿಕೊಂಡಿರುವುದೂ, ದೇಶ ಸಂಚಾರ ಕೈಕೊಳ್ಳುವ ಬದಲಿಗೆ ಅವಳು ಆರೈಕೆ ಮತ್ತು ಚಿಕಿತ್ಸೆಯಲ್ಲಿರಬೇಕಾಗಿತ್ತೆಂಬುದೂ ಕೆಲವರಿಗೆ ಮಾತ್ರ ಗೊತ್ತಿತ್ತು. ಆದರೆ ಕಮಲಳಿಗೆ ಸ್ವತಃ ತನ್ನ ಕುರಿತು ಯೋಚಿಸುವುದಕ್ಕೂ ಸಮಯವಿರಲಿಲ್ಲ; ಆಕೆ ತನ್ನ ಕಾರ್ಯದಲ್ಲಿ ಅಷ್ಟು ತಲ್ಲೀನಳಾಗಿದ್ದಳು. ಈ ಬಡಕಲು ಹುಡುಗಿ ತನ್ನ ಜನತೆಯ ಮೇಲೆ ಬೀರಿದ ವರ್ಚಸ್ಸಿಗೆ ಒಂದು ಸಶಕ್ತ ಸರಕಾರವು ಹೆದರಿ, ಬಂಧನದಲ್ಲಿಡುವವರೆಗೂ ಆಕೆ ಅವಿಶ್ರಾಂತವಾಗಿ ದುಡಿದಳು. ಅಲ್ಪಾವಧಿಯ ಜೈಲು ಅವಳ ಜೀವನ ಸೂತ್ರವನ್ನು ಬಹುಭಾಗದಲ್ಲೇ ಕಡಿಯಿತು; ವಿಶೇಷ ಯಾತನೆಯನ್ನನುಭವಿಸಿದ ಮೇಲೆ, ತನ್ನ ತಾರುಣ್ಯದ ಮುಖ್ಯ ಭಾಗದಲ್ಲೇ, ಲೋಕವು ತನ್ನ ಕಾಲಬಳಿ ಪ್ರಣಾಮ ಮಾಡಿದ್ದಲ್ಲೇ, ಆಕೆ ಹೊರಟು ಹೋದಳು. ಕುಟುಂಬವು ಮಾತೃಭೂಮಿಗರ್ಪಿಸಿದ ಎರಡನೇ ಜೀವ ಇದು.

ಆ ಮೇಲೆ ಜೈಲಿಗೆಹೋಗುವ ಸರದಿ ಇಬ್ಬರು ಸಹೋದರಿಯರದು; ಅವರು ಸಂತೋಷ ಪೂರ್ವಕ ಹೋದರು. ಒಬ್ಬಳ ಗಂಡನೂ ಜೈಲಿನಲ್ಲಿದ್ದ; ಆಕೆ ತನ್ನ ಮಕ್ಕಳನ್ನು ಬಿಟ್ಟು ಹೋಗಬೇಕಾಗಿತ್ತು. ಇನ್ನೊಬ್ಬಳು ಬಿಟ್ಟು ಹೋಗಬೇಕಾಗಿದ್ದುದು, ಹಡಿಲು ಬಿದ್ದ ಆ ದೊಡ್ಡಮನೆಯಲ್ಲಿ ತನ್ನ ಮುದಿ ತಾಯಿಯೊಬ್ಬಳನ್ನೇ. ಒಂದು ಇಡೀ ವರುಷವನ್ನವರು ಜೈಲಿನಲ್ಲಿ ಕಳೆದರು; ಆ ಮೇಲೆ ಪುನಃ ಹೋರಾಟ ಮುಂದೊತ್ತಲು ಮರಳಿಬಂದರು.

ಸ್ವರೂಪರಾಣಿ; ರಣಜಿತ್

ಆನಂದಭವನದಲ್ಲಿ ಇವರ ತಾಯಿಯೊಬ್ಬಳೇ ಇರುವಾಗ ಆಕೆ ಸುಮ್ಮಗೆ ಕುಳಿತಿರಲಿಲ್ಲ, 60 ವರುಷಗಳನ್ನು ಕಳೆದವಳಾಗಿದ್ದರೂ ಗ್ರಾಮಾಂತರಗಳ ಪ್ರವಾಸ ಕೈಕೊಂಡಳು; ಆಗ ತಾನೇ ಎದೆಗುಂದುತ್ತಿದ್ದ ಜನತೆಯಲ್ಲಿ ಧೈರ್ಯ ಮತ್ತು ವಿಶ್ವಾಸವನ್ನು ತುಂಬಿಸಹತ್ತಿದಳು. ಆದರೆ ಅವಳ ದೇಹವು ಕ್ಷಿಪ್ರಗತಿಯಿಂದ ಕ್ಷೀಣಿಸುತಿತ್ತು. ಹೇಗೂ ಕೆಲವು ವರುಷಗಳನ್ನಾಕೆ ದೂಡಿದಳು. ಒಂದು ಅಪರಾಹ್ಣ ತನ್ನ ಮಕ್ಕಳು ತನ್ನನ್ನು ಸುತ್ತುಗಟ್ಟಿದ್ದಲ್ಲಿಯೇ ಆಕೆ ಶಾಂತವಾಗಿ ಸಾವನ್ನಾಹ್ವಾನಿಸಿದಳು. ಅವಳ ತಾರುಣ್ಯವು ತನ್ನ ಮಕ್ಕಳಿಗಾಗಿ ಮೀಸಲಿದ್ದಿತು; ತನ್ನ ಮುದಿ ಪ್ರಾಯವನ್ನು ಅವಳು ಭಾರತಕ್ಕೆ ಅರ್ಪಿಸಿದಳು.

ವರುಷಗಳು ಒಂದೊಂದಾಗಿ ಉರುಳಿದುವು. ಸ್ವಾತಂತ್ರ್ಯ ಹೋರಾಟವು ಬಲಗೊಳ್ಳುತ್ತಾ ಸಾಗುತ್ತಲೇ ಇತ್ತು. ಜವಾಹಿರರಂತೂ ಅಧಿಕಾಧಿಕವಾಗಿ ಕಾರ್ಯ ತತ್ಪರರಾದರು; [illegible] ಅವಧಿಗಳನ್ನು ಜೈಲಿನಲ್ಲೇ ಕಳೆಯುತ್ತಿದ್ದರು. ಇವೆಲ್ಲಾ ವರುಷಗಳಲ್ಲಿ ಅವರ ಸ್ನೇಹಿತ ಹಾಗೂ ಬಂಧುವಾಗಿದ್ದವರು, ಅವರ ಭಾವನೆಂಟ ರಣಜಿತ್. ಸೃಷ್ಟಿ ಜೀವಿ ಮತ್ತು ವಿದ್ವಾಂಸನಾಗಿದ್ದ ರಣಜಿತರು ರಾಜಕೀಯಕ್ಕೆ ಹೇಳಿಸಿದವರಾಗಿರಲಿಲ್ಲ. ಆದರೆ ತನ್ನ ರಾಷ್ಟ್ರದ ಪ್ರೇಮವು ಮಿಕ್ಕವರಂತೆಯೇ ಇವರನ್ನೂ ಆಕ್ರಮಿಸಿಕೊಂಡಿತು; ತನ್ನ ಸರ್ವಸ್ವದೊಂದಿಗೆ ಇವರು ಜವಾಹಿರರನ್ನು ಕೂಡಿಕೊಂಡರು. ಆ ಮೇಲೆ ಸ್ವಾತಂತ್ರ್ಯಕ್ಕೆ ತೆತ್ತ ಬೆಲೆಯೆಂದರೆ ಇವರ ಪ್ರಾಣವೇ. ಅವರು ಪ್ರಕೃತಿಯ ಆರಾಧಕರು; ಯಾವುದೇ ಬಿಕ್ಕಟ್ಟಿನ ಕ್ಷೇತ್ರವೊಗ್ಗದ ಸ್ವಭಾವಿ. ಆದರವರು ದಸ್ತಗಿರಿಯಾಗಬೇಕಾಯಿತು. ಪುನಃ ಪುನಃ ದಿಗ್ಬಂಧನಕ್ಕೊಳಗಾಗಿ ಕತ್ತಲೆಯ ಕಳತೆಯ ಕೋಣೆಯಲ್ಲಿ ಕೊಳೆಯಬೇಕಾಯಿತು. ಇದರಿಂದವರ ಸ್ಫೂರ್ತಿಯು ಮೊನೆ ಮುರಿಯಲಿಲ್ಲ; ಆದರೆ ಅದು ಅವರ ಆರೋಗ್ಯವನ್ನು ಪೂರ್ತಿ ಹಾಳುಮಾಡಿತು. ಅದೃಷ್ಟವು ಅಂಕೆಗೊಳಗಾಗುವಂತಹದಲ್ಲ; ಮುಂದಿನ ಸರದಿ ಇವರದಾಯಿತು. ರಂಜಿತ್‌ಪಂಡಿತರು ತನ್ನ ಜೀವಮಾನದ ಮುಖ್ಯ ಭಾಗದಲ್ಲೇ ಅದೃಷ್ಟಕ್ಕೆ ಬಲಿಯಾದರು.

ಹೀಗಾಗಿ ಈದಿನ—

ಒಂದು ಕಾಲದಲ್ಲಿ ಮೋದಾನಂದಗಳನ್ನು ಮಾತ್ರ ತಿಳಿದಿದ್ದ ಮನೆಯೀಗ ಮರುಭೂಮಿಯಂತಾಗಿದೆ. ಏಕಾಂತತೆಯ ರೌರವವು ಅದರ ಸಂತೋಷ ಮತ್ತು ನಗೆಯನ್ನೀಗ ಕಸಗೊಂಡಿದೆ. ಇಷ್ಟಿದ್ದವರೆಲ್ಲರೂ ಒಬ್ಬೊಬ್ಬರಾಗಿ ಹೊರಟು ಹೋದರು. ಕೆಲವರಷ್ಟೇ ಜವಾಹಿರರೊಂದಿಗುಳಿದಿದ್ದಾರೆ. ಆದರೆ ಜವಾಹಿರರಾದರೋ, ತನ್ನ ಅತ್ಯಂತ ಪ್ರೀತಿಯವರನ್ನು ಕಳಕೊಂಡು ಬೇಸರದ ಏಕಾಂತ ಜೀವನದಲ್ಲಿದ್ದಾರೆ. ದುಃಖದ ಶಮನ ಸೌಕರ್ಯಗಳಾಗಲೀ ವಿರಾಮವಾಗಲೀ ಅವರಿಗಿಲ್ಲ; ಹೀಗಾಗಿ ಅವರ ಜೀವನವು ಹೆಚ್ಚು ಹೆಚ್ಚಾಗಿ ಕಷ್ಟದಾಯಿಯಾಗುತ್ತಾ ಬರುತ್ತಿದೆ. ವರುಷಗಳು ಅವರಿಂದ ಬಹಳವನ್ನು ಎತ್ತಿಕೊಂಡಾಗಿದೆ; ಏಕಾಂತದ ಮಹತ್ತ್ವದ ಬೇಸರವನ್ನೀಗ ದುಃಖಛಾಯೆ ಮತ್ತು ಆಯಾಸ ಕವಿದ ಆವರ ಕಣ್ಣುಗಳಲ್ಲೇ ಕಾಣಬಹುದು. ಅವರು ಇತರ ಸಹಸ್ರಾರು ಮಂದಿಯೊಂದಿಗೆ ಯಾವದಿನವನ್ನು ಕಾಣಬೇಕೆಂದು ದುಡಿದಿದ್ದರೋ ಆ ದಿನವು ಈಗ ತಾನೇ ಉದಯಿಸಿತು—ಸ್ವಾತಂತ್ರ್ಯದಿನ. ಇದಕ್ಕಾಗಿ ಅವರ ಹೃದಯದಲ್ಲಿ ಸಂತೋಷವಿದ್ದಿದೆ; ಹೆಗ್ಗಳಿಕೆ ಮಾಡಿದೆ. ಆದರೆ, ಈ ಮಹಾದಿನದ ಸಂತೋಷವನ್ನನುಭವಿಸಲು ತನ್ನೊಂದಿಗಿರದೆ ಹೋದರಲ್ಲಾ ಎಂದು ತನ್ನನ್ನು ದೀರ್ಘಾವಧಿಯ ಮೊದಲು ಬಿಟ್ಟು ಹೋಗಿದ್ದವರಿಗಾಗಿ ಇವರ ಒಂಟಿ ಜೀವನದ ಯಾತನೆಯೀಗ ಬಹುಶಃ ಮೊದಲಿಗಿಂತಲೂ ಅಧಿಕವಾಗಿರಬೇಕು.

CHAMPAE'S
Snow & Castrex
Sole Distributers for India
Prop: K. G. NAYAK,
Santhekatte, UDIPI, S. K.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ-ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ? ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು? ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.

ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟು ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ನವಭಾರತ ಬುಕ್ ಡಿಪೊ, ಉಡುಪಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರವ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇಟಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ. ಹಸೀಖಾರ, ಸಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ. ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ.

ರೇವಣಸಿದ್ದಪ್ಪ, ಹಾಲಪ್ಪ, ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

Ayurveda Oushadhalaya GADAG

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ- ವಿದ್ಯುದ್ದೀಪ, ರೇಡಿಯೋ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ.

Indra Bhavan Coffee Hotel,

Balmatta Road, Mangalore.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೨ ಟಿನ್ನಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ವಿವರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ; ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ತಲ 1ರ 10-0-0, ½ ರಾತ್ತಲ 5-4-0, ¼ ರಾತ್ತಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಲೆ ಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕ ಬಾದ ಔಷ [illegible] ಸಲಹಾ. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ [illegible] ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ

ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!

ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು-ಶ್ರೀಮತಿ ಇಂದಿರಾಬಾಯಿ

ಮೈಸೂರು, ಸಂಸ್ಥಾನ.

ಬೆಲೆ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. ನವಯುಗ ಆಫೀಸು, ಉಡುಪಿ. ಮಹಂತೇಶ ಬುಕ್ ಡಿಪೋ, ಬಾಗಲಕೋಟೆ.

Edited, Printed & Published by K. H. Shetty at the Navayuga Press Udipi, S. India.

Regd. No. M. 3618.

11-9-1947

Estd. 1921 ಸ್ಥಾಪನೆ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-6
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ, ಜಾಹೀರಾತು ದರಕ್ಕೆ ಬರೆಯಿರಿ.
ಮೆನೇಜರ್,
ನವಯುಗ ಉಡುಪಿ.
ದ. ಕ.

ನವಯುಗ

"ಸಾಧ್ಯವಾದಷ್ಟು
ಆಕ್ಷಿಯನ್ನೊಪ್ಪಿಸಿರಿ
ಭೀಕರ ಬರಗಾಲವನ್ನು
ತಪ್ಪಿಸಿರಿ. ಇದೇ
ಒಂದು ಮಹಾಯಜ್ಞ"

ವರ್ಷ ೨೭
ವಾರ ೨

NAVAYUGA WEEKLY, UDIPI.

FOUNDER: **Hon'ble Mr. A. B SHETTY,**
Health Minister, Govt. of Madras.

Vol. 27
No. 2

The Canara Mutual Assurance Company, Limited.

Estd. 1935

H. O. UDIPI, S. INDIA

WELCOME

A hearty and sincere welcome awaits every agent who visits our office and our officers are all available for consultation. Our agents appreciate this cordial reception They say that this considerate treatment of their problems is the keystone to their Success.

T. R. A Pai.
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging insurance investment. It therefore pays you to consult us to insure or to represent.

MESSRS. KOCHIKAR BROTHERS, LIMITED,

Chief Agents for South India
Bombay Life Building,
Central Office Udipi.

Branches at:

Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕಸ್ತೂರ್ಬಾ ರೂರಲ್ ಎಂಡ್ ಫಾರ್ಮೆಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ ಫಾರ್ಮೆಸಿ; ಡಾ। ಕೆ। ಶ್ರೀಶ ಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ಬೇರೆ.

ಮಾಲಕರು:—ಕಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಛಾಮರಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ, ದಾವಣಗೇರಿ:—ದಾವಣಗೇರಿ ಸ್ಟೋರ್ಸ ಆರ್ ಎಲ್ ಕಮಲದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡ್ಗಿ.

Ayurveda Oushadalaya, GADAG CITY.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ
ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE.

ಮನೆಮದ್ದು—*Home Remedies*

ಬೆಲೆ ರೂ. **2-0-0**

ಬರೆದವರು:—ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್. ಉಡುಪಿ.

'Ably Written—Quite up-to-date—Valuable Service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ., ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ರೋಗಿ ಪಥ್ಯ ಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಯಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದ
ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಗಾಂಧಿಜೀ ಉಪವಾಸ ಕುಳಿತೆದ್ದರು!

ಆರಂಭ: ತಾ. 1-9-47ನೇ ರಾತ್ರಿ 8–15ಕ್ಕೆ.

ಅಂತ್ಯ: ತಾ. 4-9-47ನೇ ರಾತ್ರಿ 9–15ಕ್ಕೆ

ಗಾಂಧಿಜೀಯವರು ಕಲ್ಕತ್ತದಲ್ಲಿ ತಾ 1-9-1947ನೇ ಸೋಮವಾರ ರಾತ್ರಿ 8-15 ಘಂಟೆಗೆ ಅನಿಶ್ಚಿತಾವಧಿಯ ಉಪವಾಸ ಕೈಕೊಂಡರು. ಅವರು ಕಲ್ಕತ್ತೆಗೆ ಬಾರಿ ಹೋದಂದಿನಿಂದ ಮೊನ್ನೆಯವರೆಗೂ ಅಲ್ಲಿ ಸಂಪೂರ್ಣ ಶಾಂತಿ ನೆಲೆಗೊಂಡಿತ್ತು; ಮಿ. ಸುಹ್ರವರ್ದಿಗಳು ಅವರೊಂದಿಗೇನೇ ಇದ್ದರು; ಹಿಂದೂ ಮುಸ್ಲಿಮರೆಂಬ ಭೇದವಿಲ್ಲದೆ ಎಲ್ಲರೂ ಗಾಂಧಿಜೀಯ ಪ್ರಾರ್ಥನಾ ಸಭೆಗಳಲ್ಲಿ ಭಾಗವಹಿಸುತಿದ್ದರು; ವೇದಪಠಿಸುವವುಗಳು ಮತ್ತು ಕುರಾನ್ ಪಠಿಸುವವುಗಳು ಎಂಬ ವ್ಯತ್ಯಾಸವೇ ಅರಿಯದ ರೀತಿಯಲ್ಲಿ ಎಲ್ಲಾ ಕಂಠಗಳಿಂದಲೂ 'ಹಿಂದೂ ಮುಸ್ಲಿಂ ಏಕ್ ಹೋ' 'ಮಹಾತ್ಮಾ ಗಾಂಧಿಕೀ ಜೈ' ಜಯಘೋಷಗಳೇಳುತಿದ್ದುವು. "ನಲ್ವತ್ತು ವರುಷಗಳ ಮೊದಲು ಇಡೀ ರಾಷ್ಟ್ರಕ್ಕೆ ತನ್ನ ವಿಭಜನಾನೋವಿನಿಂದ ಜ್ವಲಿಸಿದ ರಾಷ್ಟ್ರೀಯ ಸ್ಫೂರ್ತಿಯನ್ನು ಕಲಿಸಿದ್ದು ಬಂಗಾಳವೇ, ಅದರ ಪರಿಣಾಮವಾದ ಸ್ವರಾಜ್ಯ ದೊರೆತಾಗ ಹೇಗೆ ವರ್ತಿಸಬೇಕೆಂಬುದನ್ನೂ ಕಲಿಸಿದೆ; ಶಾಂತಿಯಿಂದ ಒಗ್ಗಟ್ಟಿನಿಂದ ಸ್ವಾತಂತ್ರ್ಯವನ್ನು ಭೋಗಿಸುವ ರೀತಿಯನ್ನದು ಇಡೀ ದೇಶಕ್ಕೆ, ಮುಖ್ಯವಾಗಿ ಪಂಜಾಬಿಗೆ, ಮೇಲ್ಪಂಕ್ತಿ ಹಾಕಿಕೊಟ್ಟಿದೆ. ಮಾಯೆಯಿಂದೆಂಬಂತೆ ಹಿಂದೂ ಮುಸ್ಲಿಮರು ಥಕ್ಕನೆ ಸಹೋದರರಾಗಿ ಮಾರ್ಪಟ್ಟಿದ್ದಾರೆ; ಆ ಮಾಯಗಾರ ಇಲ್ಲಿರುವುದೇ ಇದಕ್ಕೆ ಕಾರಣ"ಎಂದು ಪಶ್ಚಿಮ ಬಂಗಾಳದ ಗವರ್ನರ್ ಶ್ರೀ ಸಿ. ರಾಜಗೋಪಾಲಾಚಾರ್ಯರು ಶ್ಲಾಘಿಸಿದ್ದರು. 'ಇದು ದೇವರ ಅನುಗ್ರಹದಿಂದಾಯಿತು ಹೊರತು ಮನುಷ್ಯ ಪ್ರಯತ್ನದಿಂದಾಗುವಂತಹುದಲ್ಲ' ಎಂದು ಗಾಂಧಿಜೀ ಕಲ್ಕತ್ತದ ಶಾಂತತೆಗೆ ಶಹಭಾಸ್ ಸಲ್ಲಿಸಿದ್ದರು.

ಆದರೆ ಆ ಮಾಯದ ಬಲೆ ಹರಿಯಿತು. ಮಾಯಗಾರನ ಮನಸ್ಸು ಕದಡಿತು. ಮೇಲ್ಪಂಕ್ತಿ ಮಾಸಿತು; ಹೊಗಳಿದ ರಾಜಾಜಿ ಶಾಂತಿಗಾಗಿ ಬೇಡುವಂತಾಯಿತು; ದೇವರ ಅನುಗ್ರಹದಿಂದಾದುದೂ ಆಡಿ ಮೇಲಾಯಿತು; ಕಲ್ಕತ್ತೆಯಲ್ಲಿ ಜಾತೀಯ ಗೊಂದಲ ಪುನಃ ಸ್ಫೋಟಗೊಂಡಿತು. ಗಾಂಧಿಜೀ ಉಪವಾಸ ಕುಳಿತರು.

ಉಪವಾಸ ಬೋಧ

ಇದು ಅನಿಶ್ಚಿತಾವಧಿಯ ಅನಶನ. 'ಕಲ್ಕತ್ತೆಯು ಸ್ವಾಸ್ಥ್ಯಕ್ಕೆ ಬಂದರೆ ಮತ್ತು ಬಂದಾಗ ಮಾತ್ರವೇ ಉಪವಾಸದ ಮುಕ್ತಾಯ' ಎಂದು ಮಹಾತ್ಮರಂದಿದ್ದರು. ಹಿಂದಿನ ಉಪವಾಸಗಳ ವೇಳೆ ಮಾಡಿದಂತೆಯೇ ಈ ಬಾರಿಯೂ ಮಹಾತ್ಮರು ಉಪ್ಪು ಮತ್ತು ಸೋಡಾ ಹುಡಿ ಬೆರೆತ ನೀರನ್ನು ಮಾತ್ರ ಸೇವಿಸುತಿದ್ದರು.

'ಉದ್ದೇಶ ಸಾಧಿಸುವ ವರೆಗೆ ಅಥವಾ ಮರಣದ ವರೆಗೆ' ಎಂಬ ಗುರಿಯಿಟ್ಟುಕೊಂಡು ಮಹಾತ್ಮರಾರಂಭಿಸಿದ್ದ ಉಪವಾಸಗಳಲ್ಲಿ ಇದು ಮೂರನೆಯದು. ಹರಿಜನರಿಗೆ ಪ್ರತ್ಯೇಕ ಮತದಾನದ ಹಕ್ಕನ್ನಿತ್ತ 'ಮೆಕ್ಡೊನಾಲ್ಡ್ ತೀರ್ಪಿ'ನ ವಿರುದ್ಧವಾಗಿ ಗಾಂಧಿಜೀ ಮೊದಲನೇ ಆಮರಣಾಂತ ಉಪವಾಸ ಕೈಕೊಂಡಿದ್ದರು. ಅದರ ಪರಿಣಾಮವಾಗಿಯೇ ಆ ತೀರ್ಪು ರದ್ದಾಗಿ ಹರಿಜನರಿಗೆ ಮಿಕ್ಕ ಹಿಂದುಗಳೊಂದಿಗೆ ಮಿಶ್ರಮತದಾನ ವ್ಯವಸ್ಥೆ ಬಂತು. ಆ ಮೇಲೆ ರಾಜಕೋಟೆ ಸಂಸ್ಥಾನದಲ್ಲಿದ್ದ ಪ್ರಜಾ ಬೇಡಿಕೆಗಳಿಗೆ ಮಾನ್ಯತೆ ಗಳಿಸುವುದಕ್ಕಾಗಿ ರಾಜಕೋಟದಲ್ಲಿ ಆಮರಣಾಂತ ಅನಶನ ಕುಳಿತರು; ತತ್ಪರಿಣಾಮವಾಗಿ ರಾಜಕೋಟೆಯ ದಿವಾನರ ಅಭೇದ್ಯ ಬಿಂಕವೂ ಬಿರಿಯಿತು; ಗಾಂಧಿಜೀ ಮುಂದಿಟ್ಟ ಶರ್ತಗಳು ಅಂಗೀಕಾರ ಪಡೆದುವು. ಈ ಬಾರಿಯದು ಹಿಂದೂ ಮುಸ್ಲಿಂ ಐಕ್ಯತೆಗಾಗಿ ಅನಿಶ್ಚಿತಾವಧಿಯ ಉಪವಾಸ. ಎರಡರಲ್ಲಿ ಗೆದ್ದವರು ಮೂರನೆಯದರಲ್ಲಿ ಸೋಲುವರೇನ? ಇಲ್ಲ; ವಿಜಯ ಖಂಡಿತ. ಗಾಂಧಿಜೀ ಉಪವಾಸ ನಿಲ್ಲಿಸುವಂತಾಯಿತು.

ಒಂದು– ಎರಡು– ಮೂರು– ಐದು – ಹನ್ನೊಂದು– ಇಪ್ಪತ್ತೊಂದು ದಿನಗಳ ಉಪವಾಸ ವ್ರತಗಳನ್ನು ಗಾಂಧಿಜೀ ಹಲವು ಬಾರಿ ಮಾಡಿದ್ದರು. ಅವರಲ್ಲಿ ಅನಶನಾಭ್ಯಾಸವು ರಾಜಕೀಯ ಪ್ರವೇಶದೊಂದಿಗೇನೇ ಇದೆ; ದಕ್ಷಿಣಾಫ್ರಿಕದ ಚಳವಳದಲ್ಲೂ ತನ್ನೀ ಆತ್ಮದಮನ ಆಯುಧವನ್ನು ಅವರು ಪ್ರಯೋಗಿಸಿದ್ದರು; ಆಶ್ಚರ್ಯಕರ ರೀತಿಯಿಂದ ವಿಜಯ ಗಳಿಸಿದ್ದರು. ತನ್ನ ಆಶ್ರಮದಲ್ಲಾದ ತಪ್ಪುಗಳಿಗಾಗಿ ಪ್ರಾಯಶ್ಚಿತ್ತರೂಪದಿಂದಾರಂಭಿಸಿ, ಹಿಂದೀ ರಾಜಕೀಯವನ್ನು ಶುದ್ಧೀಕರಿಸುವ ವರೆಗಿನ ಸಣ್ಣ-ದೊಡ್ಡ ಘಟನೆಗಳಿಗಾಗಿ, ಅಲ್ಪಾವಧಿ-ದೀರ್ಘಾವಧಿಗಳ ಉಪವಾಸಗಳು 15ನ್ನು ಗಾಂಧಿಜೀ ಮಾಡಿದ್ದರು.

ಹೆಚ್ಚೇನು? ಮಹಾತ್ಮರ ಅಂತಃಶುದ್ಧಿಯನ್ನು ಅನುಸರಿಸಲು ಸಾಧ್ಯವಿರುತಿದ್ದರೆ ಭಾರತ ಭೂಮಿ ಸತ್ಯಲೋಕವಾಗುತಿತ್ತು; ಮಹಾತ್ಮರ ಸತ್ಯಾಹಿಂಸೆಗಳನ್ನನುಸರಿಸಲು ಕಲಿಯುತಿದ್ದರೆ ಭಾರತದ ನೆಲ ರಕ್ತಕಲೆಯಿಲ್ಲದೆ ನಿರ್ಮಲವಿರುತಿತ್ತು; ಮಹಾತ್ಮರ ಉಡುಗೆಯನ್ನು ಅನುಕರಿಸಲು ಸಾಧ್ಯವಿರುತ್ತಿದ್ದರೆ ಭಾರತದಲ್ಲಿ ಇಂದಿನ ವಸನಾಭಾವವೇಳತ್ತಿರಲಿಲ್ಲ; ಮಹಾತ್ಮರ ಉಪವಾಸಗಳನ್ನನುಕರಿಸಲಾಗುತಿದ್ದರೆ ಭಾರತದಲ್ಲಿಂದಿನ ಆಹಾರಾಭಾವವು ಏಳುತ್ತಿರಲಿಲ್ಲ!

ಭಾರತೀಯರ ಎಲ್ಲಾ ಅಭಾವಗಳ ನಿವಾರಣೆಯ ದ್ಯೋತಕವಾಗಿದೆ ಆ ಮೂರ್ತಿ. ಎಲ್ಲಾ ಸಂಕಷ್ಟಗಳ ನಿವಾರಣೆಯೂ ಅವರಲ್ಲಿ–ಅವರ ನಾಲಿಗೆ ಅಥವಾ ಲೇಖನಿಯಲ್ಲಲ್ಲ, ಅವರಲ್ಲೇ—ಇದೆ.

ಆದರೆ ಅವರು ಮಹಾತ್ಮರು; ನಾವು ಮನುಷ್ಯರು! ಅವರ ದಾರಿ ಅವರಿಗೆ; ನಮ್ಮದೇ ನಮಗೆ.

ಈ ಬಾರಿಯ ಉಪವಾಸ ಕೈಕೊಂಡ ದಿನ ಸೆಪ್ಟೆಂಬರ್ ತಾ. 1ರಲ್ಲಿ, ಹಿಂದಿನ ರಾತ್ರಿ ಕಲ್ಕತ್ತದ ತನ್ನ ಬಿಡಾರದಲ್ಲಿ ನಡೆದ ಗಲಭೆಯನ್ನೂ, ಉಪವಾಸದ ಕಾರಣವನ್ನೂ ವಿವರಿಸಿ ಪತ್ರಿಕೆಗಳಿಗೆ ಗಾಂಧಿಜೀಯೊಂದು ಹೇಳಿಕೆ ಕೊಟ್ಟಿದ್ದಾರೆ. ಅದನ್ನು ಇಲ್ಲಿ ಕೊಡಲಾಗಿದೆ:—

○○ ○○ ○○

ಮನೆಗೆ ನುಗ್ಗಿ ಗಲಭೆ

"ನಿಮಗಿದನ್ನು ವರದಿ ಮಾಡಬೇಕಾಗಿ ಬಂದುದಕ್ಕಾಗಿ ನಾನು ವ್ಯಸನ ಪಡುತ್ತೇನೆ. ಹಿಂದಿನ ರಾತ್ರಿ 'ಬ್ಯಾಂಡೇಜ್' ಮಾಡಿದ್ದ ಒಬ್ಬನನ್ನು ಕೆಲವು ತರುಣರು ನನ್ನ ಕಂಪೌಂಡಿನೊಳಗೆ ತಂದಿದ್ದರು. ಕೆಲವು ಮುಸ್ಲಿಮರು ಅವನಿಗೆ ಹೊಡೆದರೆಂದೇ ಅವರ ಹೇಳಿಕೆ. ಮುಖ್ಯ ಮಂತ್ರಿಗಳು ಆ ಮನುಷ್ಯನ ದೇಹಪರೀಕ್ಷೆ ಮಾಡಿಸಿದರು. ತಂದವರ ಹೇಳಿಕೆಯಿದ್ದಂತೆ, ತಿವಿತದ ಚಿಹ್ನೆಗಳು ಅವನ ದೇಹದಲ್ಲೆಲ್ಲಿಯೂ ಇಲ್ಲವೆಂದು ಆ ಮೂಲಕ ತಿಳಿದುಬಂತು. ಆದರಿಲ್ಲಿಯ ಮುಖ್ಯ ಪ್ರಶ್ನೆ, ಆ ಮನುಷ್ಯನ ಘಾಯದ ಪರಿಮಾಣವೆಂತಹದೆಂಬುದೇನೂ ಅಲ್ಲ. ಈ ತರುಣರು 'ಕೇಸ್' ನಡೆಸುವವರೂ ಜಡ್ಜರೂ ತಾವೇ ಎಂಬಂತೆ ವರ್ತಿಸಿದರು. ನಾನಿಲ್ಲಿ ಸ್ಪಷ್ಟಪಡಿಸಲಿಚ್ಛಿಸುವುದಿಷ್ಟನ್ನೇ. ಇದು ನಡೆದುದು ಸಾಧಾರಣ ರಾತ್ರಿ 10 ಘಂಟೆ ಸಮಯದಲ್ಲಿ. ಈ ಮನುಷ್ಯರು ತಮ್ಮಿಂದ ಸಾಧ್ಯವಿದ್ದಷ್ಟು ಕೂಗಲಾರಂಭಿಸಿದರು. ನನ್ನ ನಿದ್ರೆ ಹಾಳಾಯಿತು. ಆದರೆ ನಡೆದುದೇನು ಎಂಬುದಾವುದೂ ಗೊತ್ತಿಲ್ಲದೆ, ನಾನು ಸ್ವಸ್ಥ ಮಲಗಿಕೊಳ್ಳಲು ಪ್ರಯತ್ನಿಸಿದೆ. ಕಿಟಕಿಯ ಕನ್ನಡಿಗಳೊಡೆಯುವ ಶಬ್ದ ಕೇಳಿಬರುತಿತ್ತು. ನನ್ನ ಎರಡೂ ಪಕ್ಕಗಳಲ್ಲಿ ಅತಿ ಧೈರ್ಯಶಾಲಿಗಳಾದ ಇಬ್ಬರು ಹುಡುಗಿಯರು ಮಲಗಿದ್ದರು. ಅವರು ನಿದ್ರೆಯಲ್ಲಿರಲಿಲ್ಲ. ನಾನಾಗ ಕಣ್ಣು ಮುಚ್ಚಿಕೊಂಡಿದ್ದುದರಿಂದ ನನಗೆ ಗೊತ್ತಿಲ್ಲದ ಹಾಗೆಯೇ ಅವರೆದ್ದು ಆ ಸಣ್ಣ ಗುಂಪಿದ್ದಲ್ಲಿಗೆ ಹೋಗಿ ಅವರನ್ನು ಸಮಾಧಾನ ಪಡಿಸಲೆತ್ನಿಸಿದರು. ಆ ಜನರು ಇವರಿಗಾವ ಹಾನಿಯನ್ನೂ ಮಾಡಲಿಲ್ಲ; ಅದಕ್ಕಾಗಿ ದೇವರಿಗೆ ಧನ್ಯವಾದಗಳು. 'ಬೀ ಅಮ್ಮಾ'ಎಂದು [illegible] ಪ್ರೀತಿಪೂರ್ವಕ ಕರೆಯಲ್ಪಡುತ್ತಿರುವ ಮನೆಯ ಮುಸ್ಲಿಮ ಮುದುಕಿ ಮತ್ತು ಒಬ್ಬ ತರುಣ ಮುಸ್ಲಿಂ

(೯ನೇ ಪುಟ ನೋಡಿರಿ.)

ಸ್ಥಾಪಿತ]

Canara Bank Limited

ಹೊಣೆಗಾರಿಕೆ ಪರಿಮಿತಿಸಲ್ಪಟ್ಟು, ಬ್ರಿಟಿಷ್ ಇಂಡಿಯಾದಲ್ಲಿ ಸಾಂಘೀಕರಿಸಿದ್ದು.

ಹೆಡ್ ಆಫೀಸು: ಬಾವಟೆಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು: 75, ಅಪೊಲೊ ಸ್ಟ್ರೀಟ್, ಫೋರ್ಟ್ ಮುಂಬೈ.

ಶಾಖೆಗಳು

ಮದರಾಸು ಪ್ರಾಂತ್ಯ
ಮಂಗಳೂರು – ಸಿಟಿ
ಮಂಗಳೂರು – ಬಂದರ
ಮೂಲ್ಕಿ
ಗಂಗೊಳ್ಳಿ
ಕುಂದಾಪುರ
ಉಡಿಪಿ
ಕಾರ್ಕಳ
ಬಂಟ್ವಾಳ
ಪುತ್ತೂರು
ಕಾಸರಗೋಡು
ಮಧುರಾ
ಮದರಾಸು
ಪಯ್ಯನ್ನೂರು
ಕಲ್ಲಿಕೋಟೆ
ಕಣ್ಣಾನ್ನೂರು
ಕೊಯಮುತ್ತೂರು
ತಿರುಚಿನಾಪಳ್ಳಿ
ತೂತುಕುಡಿ
ಸೇಲಂ
ಇರೋಡು

ಹೈದರಾಬಾದು ಸಂಸ್ಥಾನ
ಸಿಕಂದರಾಬಾದು

ತಿರುವಾಂಕೂರು ಸಂಸ್ಥಾನ
ಅಲ್ಲೆಪ್ಪಿ
ಕ್ವಿಲೋನ

ಮಧ್ಯಪ್ರಾಂತ್ಯ
ನಾಗಪುರ
ಅಕೋಲಾ
ಅಮರಾವತಿ

ಮುಂಬೈ ಪ್ರಾಂತ್ಯ
ಬೆಳಗಾಂವಿ
ಧಾರವಾಡ
ಹುಬ್ಬಳ್ಳಿ
ಕೊಲ್ಹಾಪುರ
ಪೂನಾ
ಮುಂಬೈ – ಫೋರ್ಟ್
ಮುಂಬೈ — ಕಾಳಬಾದೇವಿ
ಮುಂಬೈ — ಮಾಂಡ್ವಿ
ಮುಂಬೈ — ಗಿರಗಾಂವ್
ಮುಂಬೈ — ಕಲ್ಯಾಣ

ಮೈಸೂರು ಸಂಸ್ಥಾನ
ಮೈಸೂರು
ಶಿವಮೊಗ್ಗ
ಚಿಕ್ಕಮಗಳೂರು
ಬೆಂಗಳೂರು ಸಿಟಿ
ಅರಸಿಕೆರೆ
ದಾವಣಗೆರೆ

ಸಿಂಧ್ ಪ್ರಾಂತ್ಯ
ಕರಾಚಿ

ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಳಂ

ದ. ಕ. ಜಿಲ್ಲೆಯ ಆಹಾರಾಭಾವಕ್ಕೆ ಕಾರಣವೇನು?

ಉಡುಪಿ ತಾಲೂಕಿನ ಸ್ಥಿತಿಗತಿ

ಈಗ ನಮ್ಮ ಜಿಲ್ಲೆಯ ಆಹಾರ ಪರಿಸ್ಥಿತಿಯು ಅತ್ಯಂತ ನಿಕೃಷ್ಟಾವಸ್ಥೆಗೆ ಬಂದಿರುವುದರಿಂದ ಕೆಲವೊಂದು ವ್ಯಕ್ತಿಗತ ತ್ಯಾಗಗಳನ್ನು ಮಾಡಿಯಾದರೂ, ಈ ದುಸ್ಥಿತಿ ನಿವಾರಣೆಗಾಗಿ ಪ್ರಯತ್ನಿಸುವುದು ನಮ್ಮಲ್ಲಿ ಪ್ರತಿಯೊಬ್ಬನ ಆದ್ಯ ಕರ್ತವ್ಯವಿದೆ.

ಆದರೆ ಪ್ರತಿ ವರುಷವೂ ಯಾತಕ್ಕಾಗಿ ಈ ಬೊಬ್ಬೆಯೇಳುತ್ತಿದೆ? ನಾವಿದರ ಕಾರಣವನ್ನು ಕಂಡುಹಿಡಿದು ಅದಕ್ಕೊಂದು ಶಮನವನ್ನು ಹುಡುಕಬೇಕಾಗಿದೆ. ಸಾರ್ವಜನಿಕರನ್ನು ವಿನಂತಿಸಿಕೊಳ್ಳುವುದಕ್ಕೆಂದು ನಿನ್ನೆ ದಿನ ಉಡುಪಿಗೆ ಅವಸರದ ಸಂದರ್ಶನವಿತ್ತಿದ್ದ ಮಾನ್ಯ ಮಂತ್ರಿಗಳು, ಇಲ್ಲಿಯ ನಿಜಸ್ಥಿತಿಯನ್ನು ತಿಳಿಯಲು ಕೆಲವೇ ಮಿನಿಟುಗಳಿಗಿಂತ ಹೆಚ್ಚಿಗೆ ವ್ಯಯಿಸಲು ಅಸಮರ್ಥರಾದುದು ಅಸಹ್ಯಕರ ಸಂಗತಿ.

ಯುದ್ಧಕ್ಕೆ ಮೊದಲು ನಮಗೆ ಮೈಸೂರಿನಿಂದಲೂ ಇತರ ಕಡೆಗಳಿಂದಲೂ ದೊಡ್ಡ ಪರಿಮಾಣದಲ್ಲಿ ಅಕ್ಕಿಯು ಆಮದಾಗುತಿತ್ತು. ಹೀಗಾಗಿ, ನಮ್ಮ ಜಿಲ್ಲೆಯು ಸ್ವಯಂಪೋಷಣೆಯನ್ನು ಉತ್ಪತ್ತಿಯುಳ್ಳದ್ದೋ ಅಲ್ಲವೋ ಎಂಬ ಕಡೆಗೆ ಆಗ ಯಾರೂ ಲಕ್ಷ್ಯಕೊಟ್ಟದ್ದಿಲ್ಲ ಆದರೆ ಯುದ್ಧದ ದೆಸೆಯಿಂದಾಗಿ ಹೊರಗಿನ ಆಮದುಗಳು ನಿಂತು, ಹಸುಗೇ ಪದ್ಧತಿ ಜ್ಯಾರಿಗೆ ಬಂದ ಮೇಲೆ ನಮ್ಮ ಕಣ್ಣುಗಳು ತೆರೆದವು ಆದರೂ ಈಗ ಕೂಡಾ, ಉಡುಪಿ ತಾಲೂಕೆಂದರೆ ಧಾನ್ಯಾಭಾವವಿರುವ ಇತರ ತಾಲೂಕುಗಳಿಗಾಗಿ ಅಕ್ಕಿಯನ್ನು ತೆಗೆಯಲಾಗುವ ಕಣಜವೆಂದೇ ಅಧಿಕಾರಿಗಳು ಭಾವಿಸಿಕೊಂಡಿದ್ದಾರೆ. 1945–46ರಲ್ಲಿ ಉಡುಪಿ ತಾಲೂಕಿನಲ್ಲಿ ಸಂಗ್ರಹವಾಗಿದ್ದ ಅಕ್ಕಿಯ ಮೊತ್ತವನ್ನೇ ಆಧರಿಸಿಕೊಂಡು, ಜನರಲ್ಲೀಗಲೂ 1800ಟನ್ (46800 ಮುಡಿಗಳು) ಅಕ್ಕಿಯುಳಿದಿರುವುದೆಂದೂ ಅವುಗಳನ್ನು ಒಪ್ಪಿಸಬೇಕೆಂದೂ ಅವರನ್ನುತ್ತಿದ್ದಾರೆ. 1945–46ರಲ್ಲಿ ಸಮೃದ್ಧ ಬೆಳೆಯಾಗಿತ್ತೆಂಬುದನ್ನೂ, ಆದರೆ 1946–47ರಲ್ಲಿ ಉತ್ಪತ್ತಿಯು ಸುಮಾರು ಮೂರನೇ ಒಂದಂಶದಷ್ಟು ಕಡಿಮೆಯೆಂಬುದನ್ನೂ ಅಧಿಕಾರಿಗಳು ಕೂಡಾ ಒಪ್ಪುತ್ತಾರೆ. ಹೀಗಿದ್ದ ಮೇಲೆ 1945–46ರ ಮಟ್ಟವನ್ನೇ ಆಧರಿಸಿ 1800ಟನ್ ಅಕ್ಕಿಯನ್ನು ಒಪ್ಪಿಸಿಕೊಡತಕ್ಕದೆಂದು ಒತ್ತಾಯಿಸುವುದರಲ್ಲಿ ನ್ಯಾಯವಿಲ್ಲ.

ಉಡುಪಿ ತಾಲೂಕಿನ ನಿಜಸ್ಥಿತಿ

ಉಡುಪಿ ತಾಲೂಕು ನಿಜಕ್ಕೂ ಉಳಿತಾಯವುಳ್ಳ ತಾಲೂಕೇ? ಅಲ್ಲ–ಎಂಬುದನ್ನು ಈ ಕೆಳಗಿನ ಯಥಾರ್ಥ ಸ್ಥಿತಿ ಮತ್ತು ಅಂಕೆ ಸಂಖ್ಯೆಗಳೇ ತೋರಿಸುತ್ತಿವೆ:-

1904ರ ಸೆಟ್ಲ್‌ಮೆಂಟಿನ ಕಾಲದಲ್ಲಿ ಉಡುಪಿ ತಾಲೂಕಿನ ಸಾಗುವಳಿ ಕ್ಷೇತ್ರವೆಂದರೆ 92600ಎಕ್ರೆಗಳು; ಮತ್ತವರ ಜನ ಸಂಖ್ಯೆಯು 1¼ಲಕ್ಷದಿಂದ 1½ಲಕ್ಷದ ಒಳಗಿದ್ದಿತು. ದವಸಧಾನ್ಯಗಳ ಬೆಲೆಯು ಪ್ರೋತ್ಸಾಹಕರವಿಲ್ಲದ್ದರಿಂದಾಗಿ ರೈತರು ಭತ್ತ ಬೆಳೆಯಿಸಲಾಗುವ ಭೂಮಿಗಳಲ್ಲೆಲ್ಲಾ ಭತ್ತವನ್ನೂ, ಭತ್ತವು ಬೆಳೆಯಲಾರದ ಸ್ಥಳಗಳಲ್ಲಿ ಮಾತ್ರ ಇತರ ಬೆಳೆಗಳನ್ನು ಬೆಳೆಯಿಸುತಿದ್ದರು. ಆದರೆ ಭತ್ತ ಸಾಗುವಳಿಯ ಆದಾಯವು ಅತ್ಯಲ್ಪವಾದುದನ್ನು ಕಂಡು ರೈತರು ಇತರ ಬೆಳೆಗಳಿಂದ ಆದಾಯ ಹೊಂದಲಪೇಕ್ಷಿಸಿ ಪ್ರಥಮತಃ ತೆಂಗು ಮತ್ತಂತಹ ಇತರ ತೋಟಗಾರಿಕೆಗಳನ್ನೇ ಪ್ರಾರಂಭಿಸ ಹತ್ತಿದರು. ಹೀಗಾಗಿ 1935ರ ರೀ–ಸೆಟ್ಲ್‌ಮೆಂಟಿನ ಕಾಲದಲ್ಲಿ ಸಾಗುವಳಿ ಭೂಮಿಗಳ ಒಟ್ಟು ವಿಸ್ತೀರ್ಣವು ಕಡಿಮೆಯಾಗಿ ಕೆಳಗಡೆ ನಮೂದಿಸಿರುವ ತರಗತಿಗಳಾಗಿ 73,775ಎಕ್ರೆಗಳಾಗಳಾಯಿತು:—

I ತರಗತಿಯ ಸಾಗುವಳಿ ಭೂಮಿ:- 18,971 ಎಕ್ರೆಗಳು. ಇವು ಮೂರು ಭತ್ತದ ಬೆಳೆಗಳು ಅಥವಾ ಎರಡು ಭತ್ತ, ಒಂದು ಇತರ ಧಾನ್ಯದ ಬೆಳೆಗಳಾಗುವಂಥವುಗಳು.

II ತರಗತಿ:-1945 ಎಕ್ರೆಗಳು. ಎರಡು ಭತ್ತದ ಬೆಳೆಗಳು. ಅಥವಾ ಒಂದು ಭತ್ತದ ಬೆಳೆ ಮತ್ತು ಒಂದು ಇತರ ಧಾನ್ಯ ಬೆಳೆಸಲ್ಪಡುವಂಥವುಗಳು.

II ತರಗತಿ:-21570 ಎಕ್ರೆಗಳು. ಒಂದು ಭತ್ತದ ಬೆಳೆ. ಮತ್ತು ಕೆಲವುಗಳಲ್ಲಿ ಒಂದು ಭತ್ತದ ಬೆಳೆ ಮತ್ತು ಒಂದು ಇತರ ದವಸಧಾನ್ಯಗಳು ಬೆಳೆಯುವಂಥವುಗಳು.

III ತರಗತಿ:-28,289 ಎಕ್ರೆಗಳು. ಕೇವಲ ಒಂದೇ ಬೆಳೆಯಾಗುವಂಥವುಗಳು. ಈ ಕಾಲದಲ್ಲಿ ತಾಲೂಕಿನ ಜನ ಸಂಖ್ಯೆಯು ಹೆಚ್ಚಿ 2¼ಲಕ್ಷಕ್ಕೂ ಮಿಕ್ಕಿದ್ದಿತು. ಹೀಗಾಗಿ, ಒಂದೊವೇಳೆ ಎಲ್ಲಾ ವ್ಯವಸಾಯ ಭೂಮಿಗಳಲ್ಲೂ ಭತ್ತವನ್ನೇ ಬೆಳೆಸಿದರೂ ಕೂಡಾ, ತಾಲೂಕಿನ ಎಲ್ಲಾ ಜನರಿಗೂ ಸರಿಯಾದ ಆಹಾರವೊದಗಿಸಲು ಅವು ಸಾಕಾಗುವದು ಅಸಾಧ್ಯ.

ಸದ್ಯಕ್ಕಂತೂ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಾಗಿದೆ. 1946–47ರಲ್ಲಿ ಭತ್ತ ಸಾಗುವಳಿಯಾದ ಕ್ಷೇತ್ರಗಳ ವಿಸ್ತೀರ್ಣ ಈ ಕೆಳಗಿನಂತಿದೆ:–

Iನೇ ಬೆಳೆ: 65,338 ಎಕ್ರೆಗಳು-ಮೂರು ತರಗತಿಗಳ ಎಲ್ಲಾ ಸಾಗುವಳಿ ಭೂಮಿಗಳಲ್ಲೂ ಒಟ್ಟಿಗೆ.

IIನೇ ಬೆಳೆ: 22,197 ಎಕ್ರೆಗಳು.

IIIನೇ ಬೆಳೆ: 2000 ಎಕ್ರೆಗಳಿಗಿಂತ ಹೆಚ್ಚಿಲ್ಲ.

ಮೂರನೇ ಬೆಳೆಯ ಉತ್ಪತ್ತಿಯು ಅತ್ಯಲ್ಪ ಮಾತ್ರವಲ್ಲ; ಪ್ರಥಮ ಬೆಳೆಯಾಗುವ ಒಟ್ಟು 65,338 ಎಕ್ರೆಗಳ ಪೈಕಿ ಸುಮಾರು 2/5ನೇ ಅಂಶದಷ್ಟು ಮೂರನೇ ತರಗತಿಯ, ಅರ್ಥಾತ್ ಬೆಟ್ಟು ಭೂಮಿ. ಇವೆಲ್ಲಾ ಬೆಳೆಗಳ ಒಟ್ಟು ಉತ್ಪನ್ನವು 7ಲಕ್ಷಗಳಿಗಿಂತ ಮಿಕ್ಕಲಾರದೆಂದು ಅಂದಾಜು ಇದೆ. ಪ್ರಾಯಸ್ಥರಿಗೆ 16 ಔನ್ಸ್, ಮಕ್ಕಳಿಗೆ 8ಔನ್ಸಿನಂತೆ ಇಲ್ಲಿಯ ಜನತೆಗೆ ಸಾಮಾನ್ಯವಾಗಿ 8ರಿಂದ 9ಲಕ್ಷಗಳ ವರೆಗೆ ಬೇಕಾಗುತ್ತದೆ. ಸದ್ಯದ ಹಸುಗೇ ಕಡಿತ ಪ್ರಕಾರವೇ ಲೆಕ್ಕ ಹಾಕಿದರೂ 7.½ಲಕ್ಷಕ್ಕಿಂತ ಕಡಿಮೆ ಅಕ್ಕಿ ಸಾಕಾಗುವಂತಿಲ್ಲ. ಇಂತಹ ಪರಿಸ್ಥಿತಿಯಿರುವಾಗಲೂ ಉಡುಪಿ ತಾಲೂಕನ್ನು ಉಳಿತಾಯದ ತಾಲೂಕೆಂದು ಗಣಿಸಲು ಸಾಧ್ಯವೆ?

1946–47ರ ಅಂಕೆ ಸಂಖ್ಯೆಗಳಿಂದ ಖಚಿತವಾಗುವಂತೆ 73,775 ಎಕ್ರೆ ಸಾಗುವಳಿ ಭೂಮಿಯ ಪೈಕಿ 65,338 ಎಕ್ರೆಗಳಲ್ಲಿ ಮಾತ್ರ ಮೊದಲನೇ ಬೆಳೆಯ ಭತ್ತ ಸಾಗುವಳಿಯಾಗಿದೆ. ಸುಮಾರು 8437 ಎಕ್ರೆಗಳಲ್ಲಿ ಭತ್ತ ಸಾಗುವಳಿಯಾಗಿಲ್ಲವೆಂಬುದೇ ಇದರ ಅರ್ಥ. ಅಂತೆಯೇ ಎರಡನೇ ಬೆಳೆಯಾಗಬಲ್ಲ ಪ್ರಥಮ ವರ್ಗದ 18,971 ಎಕ್ರೆ ಮತ್ತು ದ್ವಿತೀಯ ವರ್ಗದ 4945 ಎಕ್ರೆ ಭೂಮಿಗಳ ಪೈಕಿ ಭತ್ತದ ಎರಡನೇ ಬೆಳೆಯಾದುದೆಂದರೆ 22197 ಎಕ್ರೆಗಳಲ್ಲಿ ಮಾತ್ರ. ಅರ್ಥಾತ್ ಸುಮಾರು 1719 ಎಕ್ರೆ ಜಮೀನುಗಳಲ್ಲಿ ಎರಡನೇ ಭತ್ತದ ಬೆಳೆಯನ್ನು ಮಾಡಲೇ ಇಲ್ಲ ಬದಲಿಗೆ ಈ ಭೂಮಿಗಳನ್ನೆಲ್ಲಾ ಉದ್ದು, ಕಡಲೆ. ಹುರುಳಿ, ಹೆಸರು, ಎಳ್ಳು, ಮೆಣಸು, ಕಬ್ಬು, ಗೆಣಸು, ತೆಂಗು ಇತ್ಯಾದಿ ಬೇರೆ ಬೆಳೆಗಳಿಗಾಗಿ ಉಪಯೋಗಿಸಿರಬೇಕೆಂಬುದು ಸ್ಪಷ್ಟವಿದೆ,

ಇದಕ್ಕೇನು ಕಾರಣ?

ಮುಖ್ಯವಾಗಿ ಅಕ್ಕಿಯ 'ಕಂಟ್ರೋಲ್' ಮತ್ತು 'ರಿಕ್ವಿಸಿಶನ್' ಬಂದುದರಿಂದಾಗಿಯೇ ರೈತರಲ್ಲಿ ಸಾಗುವಳಿ ಭೂಮಿಗಳನ್ನು ಹೆಚ್ಚು ಹೆಚ್ಚಾಗಿ ಇತರ ಬೆಳೆಗಳಿಗೆ ಉಪಯೋಗಿಸುವ ಪ್ರೇರಣೆ ಹುಟ್ಟಿದೆ. ರೈತರ ಪಾಲಿಗೆ ಭತ್ತದ ಸಾಗುವಳಿಯೆಂಬುದು ಪ್ರತಿಯೊಂದು ಸಂದರ್ಭದಲ್ಲೂ ಉಪದ್ರವಕಾರಿಯಾಗಿರುವುದು ಮಾತ್ರವಲ್ಲ; ನಿಯಂತ್ರಣ ಬೀಳದ ಕಡಿಮೆ ಶ್ರಮ ಮತ್ತು ಕಡಿಮೇ ವೆಚ್ಚದ ಇತರ ಧಾನ್ಯಗಳಿಗೆ ಮುಮ್ಮಡಿ, ನಾಲ್ಮಡಿ ಅಧಿಕ ಬೆಲೆ ದೊರೆಯುತ್ತಿರುವಾಗ ಅವುಗಳೊಡನೆ ತುಲನೆ ಮಾಡಿದರೆ ಭತ್ತ ಸಾಗುವಳಿ ಲಾಭದಾಯಕವೂ ಅಲ್ಲ.

ಈ ರೀತಿ ಕಡಿಮೆಯಾಗಿರುವ ಭತ್ತ ಸಾಗುವಳಿ ಕ್ಷೇತ್ರಗಳ ಉತ್ಪತ್ತಿಯು ಕೂಡಾ ಸಂಪೂರ್ಣ ಅಕ್ಕಿಯಾಗಿಯೇ ದೊರೆಯುತ್ತಾ ಇಲ್ಲ. ಪೇಟೆ ಮತ್ತು ಇತರ ಹಳ್ಳಿಗಳಲ್ಲಿ ಭತ್ತದ ದೊಡ್ಡ ಪರಿಮಾಣವನ್ನು ದಿನಂಪ್ರತಿ ಅವಲಕ್ಕಿ ಮಾಡುತಿದ್ದಾರೆ. ಅದೊಂದು ವ್ಯವಸ್ಥಿತ ವ್ಯಾಪಾರ ಅಥವಾ ಉದ್ಯೋಗವಾಗಿ ಇತರ ಕಡೆಗಳಿಗೆ ಸಾಗಲ್ಪಡುತ್ತಿದೆ. ಹಸುಗೇ ಪದ್ಧತಿ ಬರುವ ಮೊದಲು ಹೀಗೆ ಅವಲಕ್ಕಿಯಾಗುವ ಪರಿಮಾಣವು ಇಷ್ಟಷ್ಟು ಹೆಚ್ಚಿಗಿದ್ದರೂ ಈಗಲೂ ಉತ್ಪತ್ತಿಯ ಶೇಕಡಾ 5 ಅಂಶಕ್ಕೆ ಕಡಿಮೆಯಿಲ್ಲದಷ್ಟು ಭತ್ತವು ಅವಲಕ್ಕಿಯಾಗುತ್ತಿದೆ ಎಂದು ನಾನು ಕೇಳಿದ್ದೇನೆ. ಇದನ್ನು ದಂಡನೆಗೊಳಪಡಿಸಿಲ್ಲವಾದ್ದರಿಂದ ರೈತರು ಮತ್ತು ಅವಲಕ್ಕಿ ಉತ್ಪಾದಕರು ತಮ್ಮ ಉದ್ಯೋಗವನ್ನು ಹೇಗಾದರೂ ಸಾಗಿಸುತ್ತಲೇ ಇದ್ದಾರೆ.

ನಾನು ಭಾವಿಸಿರುವಂತೆ ಇತರ ತಾಲೂಕುಗಳ ಸ್ಥಿತಿಯೂ ಇದೇ ಆಗಿರುವಾಗ್ಯ, ಮೇಲ್ಗಡೆ ನಮೂದಿಸಿರುವ ಸ್ಥಿತಿಗತಿಗಳು ಇನ್ನೂ ಮುಂದುವರಿಯುತ್ತ ಹೋದಲ್ಲಿ, ಸರಕಾರವೀ ಪ್ರಶ್ನೆಯ ಕಡೆಗೆ ಕೂಡಲೇ ಸರಿಯಾಗಿ ಲಕ್ಷ್ಯಕೊಟ್ಟು ಭತ್ತದ ಉತ್ಪನ್ನವು ಹೆಚ್ಚುವಂತೆ ಮತ್ತು ಎಲ್ಲಾ ಸಂಗ್ರಹವೂ ಸುರಕ್ಷಿತವಾಗುವಂತೆ ಮಾಡದಿದ್ದರೆ, ನಾವಿನ್ನೂ ಹೆಚ್ಚಿನ ಸಂಕಷ್ಟಗಳನ್ನು ಇದಿರಿಸಬೇಕಾಗುವುದು. ಉತ್ಪನ್ನವನ್ನು ಹೆಚ್ಚಿಸುವ ವಿಧಾನವೆಂದರೆ:- ಬೇಕಾಗುವ ನಿಧಿಯನ್ನು ತೆಗೆದಿಟ್ಟು, 5 ಅಥವಾ 10 ವರುಷಗಳೊಳಗೆ ಒಂದರ ಬಳಿಕೊಂದರಂತೆ ಎಲ್ಲಾ ಹಳೇ ಮದಗಗಳನ್ನು, ಕೆರೆಗಳನ್ನು ಮತ್ತು ನೀರ ಕಾಲುವೆಗಳನ್ನು ದುರಸ್ತಿ ಪಡಿಸಬೇಕು. ಜಿಲ್ಲೆಯ ಕಲೆಕ್ಟರರ ಕೈಕೆಳಗೆ ಬೇಸಾಯ ಖಾತೆಯಿರುವಂತೆ ಮಾಡಿ, ಅದರ ಮೂಲಕ ಸುಧಾರಿತ ರೀತಿಯ ವ್ಯವಸಾಯ ಕ್ರಮಗಳನ್ನು ಜ್ಯಾರಿಗೆ ತಂದು ಗೊಬ್ಬರ ಇತ್ಯಾದಿಗಳ ವಿಶೇಷಾನುಕೂಲತೆಗಳನ್ನು ಒದಗಿಸಿಕೊಟ್ಟು ಭತ್ತದ ಬೆಳೆಯು ವಿಶೇಷವಾಗುವಂತೆ ಸಾಧಿಸಬೇಕು. ಮತ್ತು ಕಲೆಕ್ಟರರು ಅಕ್ಕಿಯ ಬೆಲೆಯನ್ನು ಗಮನದಲ್ಲಿಟ್ಟುಕೊಂಡೇ ದವಸಧಾನ್ಯಗಳ ಮತ್ತಿತರ ಉತ್ಪತ್ತಿಗಳ ಬೆಲೆಯನ್ನು ನಿರ್ಣಯಿಸಿ ಅವುಗಳನ್ನೂ 'ರಿಕ್ವಿಸಿಶನ್' ಮಾಡಬೇಕು. ಅನುಗ್ರಹ ಅಥವಾ ಅಂಜಿಕೆಗೆ ಬಲಿಬೀಳದೆ ಕಳ್ಳಸಂತೆ ವ್ಯಾಪಾರವನ್ನು ಕಠಿಣ ಹಸ್ತದಿಂದ ನಿರ್ಮೂಲಿಸಬೇಕು. ಸರಕಾರವಿದನ್ನು ಕೈಕೊಳ್ಳುವುದೆ?

ತಾ. 8–9–47 ಉಡುಪಿ, } ಕೆ. ಜಿ. ಬಲ್ಲಾಳ್, ವಕೀಲ್, ಉಡುಪಿ.

WARDEN

Reaches New Heights in 1946.

Business Received	Rs. 2,04,00,000
Business Completed	Rs. 1,72,00,000

THIS repi_sent the latest and greatest achievement in WARDEN'S progressive career.

For this fine performance the Company extends its heartiest thanks and congratulations to its representatives and policy-holders all over the country and abroad.

Shivaprasad Thaker, *M. Sunderam Shetty.*

tA Mangalore

B. Sachidananda Hegde, Branch Secretary

K. P. Bhavanishanker Shetty, Asst. Branch Secretary

★ ಇನ್ನೂ 'ಹಿಂದೂ ಮುಸ್ಲಿಂ ಏಕ್ ಹೋ'??? ★

ಮುಖ್ಯವಾಗಿ ಮುಸ್ಲಿಂ ಪಂಜಾಬಿನಲ್ಲಿ-ಸಾಮಾನ್ಯವಾಗಿ ಪಾಕಿಸ್ತಾನದ ಎಲ್ಲಾ ಪ್ರಾಂತ್ಯಗಳಲ್ಲಿ—ನಡೆದಿರುವ ಸಾಮೂಹಿಕ ಕೊಲೆಗಳು ಮತ್ತು ಶೇಷಾಂಶ ಮುಸ್ಲಿಮೇತರ ಜನತೆಯು ಜೀವ ಮಾತ್ರ ಹಿಡಿದುಕೊಂಡು ಓಡಿಬರುತ್ತಿರುವ ಅಸಹ್ಯ ದೃಶ್ಯಗಳು ಸೂಚಿಸುವುದಿಲ್ಲವೇ—ಇನ್ನಾದರೂ ಹಿಂದುಸ್ಥಾನ್, ಪಾಕಿಸ್ತಾನಗಳು ತಮ್ಮಲ್ಲಿರುವ ಮುಸ್ಲಿಂ, ಮುಸ್ಲಿಮೇತರ ಜನತೆಯನ್ನು ಪರಸ್ಪರ ಬದಲಾಯಿಸಿಕೊಳ್ಳಲೇಬೇಕೆಂಬುದನ್ನು?

ಇಡೀ ಪಾಕಿಸ್ತಾನದಲ್ಲಿರುವ ಸುಮಾರು ೩ ಕೋಟಿ ಮುಸ್ಲಿಮೇತರರನ್ನೂ ಇಡೀ ಹಿಂದುಸ್ಥಾನದಲ್ಲಿರುವ ಸುಮಾರು ೫ ಕೋಟಿ ಮುಸ್ಲಿಮರನ್ನೂ ಪರಸ್ಪರ ಬದಲಾಯಿಸಿಕೊಳ್ಳುವುದೂ, ಅವರಿಗೆ ಅಲ್ಲಲ್ಲಿ ಜೀವನ ವ್ಯವಸ್ಥೆ ಮಾಡಿಕೊಡುವದೂ ಅತ್ಯಂತ ಪ್ರಯಾಸದ ಹಾಗೂ ಅಪಾರ ವೆಚ್ಚದ ವಿಷಯವೇನೋ ನಿಜ. ಆದರೆ ಈ ವ್ಯಯ ಮತ್ತು ವೆಚ್ಚಕ್ಕಿಂತ ಪ್ರಾಣ ಮತ್ತು ಭವಿಷ್ಯವು ಹೆಚ್ಚಿನದಾದ್ದರಿಂದ ಜನ ಬದಲಾವಣೆ ಅನಿವಾರ್ಯವಲ್ಲವೆ?

ಮುಸ್ಲಿಮರ ಪಶ್ಚಿಮ ಪಂಜಾಬು, ಗಡಿನಾಡು ಪ್ರಾಂತ್ಯ, ಬಲೂಚಿಸ್ಥಾನಗಳಿಂದ ಜೀವಭಯದಿಂದ ಓಡಿಬಂದು ದಿಲ್ಲಿಯಲ್ಲಿ ಜಮೆಯಾಗಿರುವ ಹಿಂದೂ ಸಿಖ್ಖರ ಸಂಖ್ಯೆಯೇ 2 ಲಕ್ಷವಿದೆ ಎಂದು ಅಲ್ಲಿಯ ರೇಶನ್ ಖಾತೆಯವರು ಸ್ಪಷ್ಟ ಲೆಕ್ಕ ಕೊಟ್ಟಿದ್ದಾರೆ. ಇನ್ನು ಪೂರ್ವ ಪಂಜಾಬು ಮತ್ತು ಪಶ್ಚಿಮ ಪಂಜಾಬುಗಳೊಳಗೆ 10 ಲಕ್ಷಕ್ಕೂ ಮಿಕ್ಕಿದ ಜನರನ್ನು ಪರಸ್ಪರ ಬದಲಾಯಿಸಿಕೊಳ್ಳುವ ಕಾರ್ಯವೇಗ ಭರದಿಂದ ನಡೆಯುತ್ತಿದೆ. ನೆಹರು ಮತ್ತು ಲಿಯಾಖತ್ ಅಲಿಗಳು ಮೊಂಟಗೋಮರಿಯ ನಗರದಲ್ಲಿದ್ದಾಗ 60 ಮೈಲುದ್ದದ ಹಿಂದೂ ಸಿಖ್ಖರ ಪರಿಸೆಯು ಪೂರ್ವ ಪಂಜಾಬಿಗೆ ಹೊರಟಿದ್ದುದನ್ನು ಕಂಡಿದ್ದರು. ಸಿಂಧಿನಿಂದ 7000 ಸಿಖ್ಖರು ಬೊಂಬಾಯಿಗೋಡಿ ಬಂದಿದ್ದಾರೆ. ಕರಾಚಿ—ಬೊಂಬಾಯಿ ನಡು ಪಥದ ಎಲ್ಲಾ ಹಡಗಗಳನ್ನೂ ಕರಾಚಿಯಿಂದ ಮುಸ್ಲಿಮೇತರರನ್ನು ತರುವರೆ ಉಪಯೋಗಿಸುವ ವ್ಯವಸ್ಥೆ ನಡೆದಿದೆ. ಅರ್ಥಾತ್ ಪಾಕಿಸ್ತಾನದ ಎಲ್ಲಾ ಭಾಗಗಳಿಂದಲೂ ಮುಸ್ಲಿಮೇತರರೋಡಿ ಬರುತ್ತಿರುವಾಗ ಹಿಂದುಸ್ಥಾನಕ್ಕೆ ಅವುದು ಪಡಿಸಿಕೊಳ್ಳುವುದೊಂದೇ ಗತಿ ಹೊರತು ಇಷ್ಟು ಮಾಡಲಿಕ್ಕಿಲ್ಲವೆ?

ಗಲಭೆಯ ಸ್ಥಳಗಳಿಂದೋಡಿ ಬಂದವರೇ ಈಗ ಸಾಧಾರಣ ಒಂದು ರಾಷ್ಟ್ರದ ಜನತೆಯಾಗುವಷ್ಟಿದ್ದಾರೆ. ಭಾರತ ಸರಕಾರವು ಇಂಥವರ ರಕ್ಷಣೆ ಮತ್ತು ಜೀವನ ವ್ಯವಸ್ಥೆಗಳನ್ನು ಮಾಡುವುದಕ್ಕಾಗಿ ಶ್ರೀ. ಕೆ. ಸಿ. ನಿಯೋಗಿಗಳನ್ನು ಮಂತ್ರಿಯಾಗಿ ಮಾಡಿ ಹೊಸತೊಂದು ಖಾತೆಯನ್ನೇ ತೆರೆದಿದೆ. ನೆರೆಯೋರದ ಮಹಾಪ್ರವಾಹವನ್ನೇ ಒಂದೆಡೆಯಿಂದ ಇನ್ನೊಂದೆಡೆಗೊಯ್ಯುವಂತಹ ಶ್ರಮ ಮತ್ತು ವ್ಯಯದ ಕೆಲಸವಿದು. ನಿರ್ವಾಹವಿಲ್ಲದೆ ಅದನ್ನೀಗ ಕೈಕೊಳ್ಳಲೇ ಬೇಕಾಗಿ ಬಂದ ಮೇಲೆ ಇನ್ನದೆ ಕೆಲಸವನ್ನು ಪೂರ್ತಿಯಾಗಿ ಕೈಕೊಂಡು ಪಾಕಿಸ್ತಾನದಲ್ಲಿರುವ ಎಲ್ಲಾ ಮುಸ್ಲಿಮೇತರರನ್ನೂ ಇತ್ತ ಹಿಡಿದು ಈ ಕಡೆಗೆ ಸಾಗಿಸಬಾರದೇಕೆ? ಇನ್ನೊಮ್ಮೆ ಅವರೇ ಹೊಡೆದಟ್ಟುವವರೆಗೆ ಕಾಯಬೇಕೆ?

ಹಿಂದುಸ್ಥಾನದ ಸರ್ವ ಪ್ರಾಂತ್ಯಗಳ ರಾಜಧಾನಿಗಳಷ್ಟೇ ಅಲ್ಲ; ಮೂಲೆ ಮೂಲೆಯ ಜಿಲ್ಲೆಗಳೂ ಪಂಜಾಬು ನಿರಾಶ್ರಿತರಿಗೆ ಆಶ್ರಯ ಕೊಡಲೇ ಬೇಕಾದ ಕಾಲ ಬಂದಿದೆ- ಆ ವ್ಯವಸ್ಥೆಗಳೀಗ ನಡೆದಿವೆ. ಸುಮಾರು ಅರ್ಧ ಕೋಟಿ ಜನರು ಪ್ರತ್ಯಕ್ಷವಾಗಿ-40 ಕೋಟಿ ಜನರೂ ಹೃದಯತಃ—ಈ ಸಂಕ್ರಾಂದೋಲನದಲ್ಲಿ ಭಾಗಿಗಳಾಗಿದ್ದಾರೆ. ಜಾತೀವಾರು ಬದಲಾವಣೆ ಸಾಮೂಹಿಕ ರೀತಿಯಿಂದಲೇ ಆರಂಭಿಸಿದೆ. ಏನೇ ಆಗಲಿ, ಎಷ್ಟೇ ಕಷ್ಟನಷ್ಟಗಳಿರಲಿ, ಈ ಕೆಲಸವನ್ನಿನ್ನು ಪೂರ್ತಿಗೊಳಿಸಿಕೊಳ್ಳಬಾರದೇಕೆ?

ಪಶ್ಚಿಮ ಪಂಜಾಬಿನಲ್ಲಿ ಲೀಗ್ ಸ್ವಯಂಸೇವಕರ ಆಜ್ಞೆಯಂತೆ ಪೋಲೀಸರು ಮತ್ತು ಸೈನಿಕರೇ ಗುಂಡು ಹಾರಿಸಿ ಹಿಂದೂ ಸಿಖ್ಖರ ಸಾಮೂಹಿಕ ಕೊಲೆ ಮಾಡಿದುದು—ನಿರಾಶ್ರಿತರಿಗೆ ರಕ್ಷಣೆಯೀಯುವ, ಆಹಾರ ವ್ಯವಸ್ಥೆ ಮಾಡುವ ತಮ್ಮ ಕರ್ತವ್ಯಗಳನ್ನು ಮಾಡದೆ ಅಧಿಕಾರಿಗಳು ನೆವಗಳನ್ನು ಮುಂದೊಡ್ಡಿದುದು—ಇವೆಲ್ಲವೂ ಬೆಳಕಿಗೆ ಬಂದಿವೆ. ಮುಸ್ಲಿಂ ಸೈನಿಕರು ಅಥವ ಪೋಲೀಸರ ಪೈಗಾವಲಲ್ಲಿ ಹೊರಟ ಮುಸ್ಲಿಮೇತರ ನಿರಾಶ್ರಿತರ ಪ್ರಾಣಕ್ಕೆ ಭರವಸೆಯಿಲ್ಲ. ಒಂದೆಡೆ ಇಂತಹ ನಿರಾಶ್ರಿತ ಯಾತ್ರಿಕ ತಂಡದ ಮೇಲೆ ಮುಸ್ಲಿಂ ಪುಂಡರು ಬಿದ್ದಾಗ ಕಾವಲಿಗಿದ್ದ ಮುಸ್ಲಿಂಯೋಧರು ಆಕಾಶಕ್ಕೊಂದೆರಡು ಬಾರಿ ಗುಂಡು ಹಾರಿಸಿದರೇ ಹೊರತು ತಮ್ಮ ಧರ್ಮ ಬಂಧುಗಳ ಕಡೆಗೆ ಗುರಿ ಹಿಡಿಯಲಿಲ್ಲ. ಮತ್ತೊಂದು ಸಂದರ್ಭದಲ್ಲಿ ಕೆಲವು ಪುಂಡರನ್ನು ಪಹರೇ ಸೈನಿಕರು ಕೊಂದರೂ, ಆ ಪುಂಡರು ಯಾತ್ರಿಕರನ್ನು ಕೊಲೆ ಮಾಡಿ ಅವರಕ್ಷಿಪ್ತ ಹೆಂಗಸರನ್ನು ಎತ್ತಿಕೊಂಡು ಹೋಗಲು ಸಮರ್ಥರಾದರು. ಮುಸ್ಲಿಂ ಯಾತ್ರಿಕರ ಕಾವಲಿಗೆ ಮುಸ್ಲಿಮೇತರ ಸೈನಿಕರನ್ನಿಟ್ಟರೂ ಇದೇ ಅವಸ್ಥೆ. ಜಾತೀ ವೈಷಮ್ಯವೀ ರೀತಿ ತುತ್ತತುದಿಗೆ ಮುಟ್ಟಿದ ಮೇಲೂ ಇನ್ನೂ ವಿಶ್ವಾಸವಿಡುವುದೆಂದರೆ ಹೇಗೆ?

ಎರಡು ಸರಕಾರಗಳ ಪಾಲಿನ ಇಕ್ಕಡೆಯ ಪಂಜಾಬುಗಳ ಮಧ್ಯ ಗಡಿಯಲ್ಲಿ ಹಿಂದುಸ್ಥಾನದ ಪಾಲಿಗೆ ಹೋಗಿದ್ದ 150 ಗ್ರಾಮಗಳನ್ನು, ಅಲ್ಲಿದ್ದ ಹಿಂದೂ ಸಿಖ್ಖರನ್ನು ಹೊಡೆದೋಡಿಸಿ ಮುಸ್ಲಿಮರಾಕ್ರಮಿಸಿಕೊಂಡಿದ್ದಾರೆಂದು ಈ ಮೊದಲು ಪ್ರಕಟವಾಗಿದ್ದ ವಾರ್ತೆ ನಿರಾಧಾರದ್ದೆಂದು ಹಿಂದೀ ಸರಕಾರವು ಪ್ರಕಟಿಸಿರುವುದು ಸಮಾಧಾನಕರ. ಆದರೆ ಗಡಿಯ ಒಂದೆರಡು ಹಳ್ಳಿಗಳ ಆಕ್ರಮಣವು ಇಕ್ಕಡೆಯವರಿಂದಲೂ ನಡೆದುದಿದೆಯೆಂದೂ ಅವುಗಳ ಪುನರಾಧೀನತಾ ವ್ಯವಸ್ಥೆಯಾಗಲಿಕ್ಕಿದೆಯೆಂದೂ ಹಿಂದೀ ಸರಕಾರವೇ ಒಪ್ಪಿದೆ. ಪಾಕಿಸ್ತಾನ್ ಪಂಜಾಬಿನ ಸೋಲ್ಜರ್ ಪೋಷಾಕಿನವರು ಗಡಿಗ್ರಾಮಗಳ ಮೇಲೆ ಬಿದ್ದು ಗುಂಡು ಹಾರಿಸಿ ನೂರಾರು ಮಂದಿಯನ್ನು ಕೊಂದು ಮಹಿಳೆಯರನ್ನು ಎತ್ತಿಕೊಂಡೊಯ್ದ ವಾರ್ತೆ ನಿರಾಕರಿಸಲ್ಪಟ್ಟಿಲ್ಲ. ಅಂಜ ವೇಲೆ ಕೆಲವು ಘಟಿಂಗ ವ್ಯಕ್ತಿಯುವರಲ್ಲಿ ಅತ್ಯಾಚಾರದ ಹುರುಪಿದ್ದಂತೆಯೇ ಪಾಕಿಸ್ತಾನದಲ್ಲಿ ಆಕ್ರಮಣಹುರುಪೂ ಇದೆಯೆಂದೂಹಿಸಬಹುದೆ?

ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಇಷ್ಟೊಂದು ಕ್ರೂರವಾಗಿ ಹಿಂಸಿಸಿದ ನಿದರ್ಶನವು ಇಡೀ ಲೋಕದ ಮಾನವ ಚರಿತ್ರೆಯಲ್ಲಿಂತೂ ಇಲ್ಲ; ಕಾಡು ಪ್ರಾಣಿಗಳಲ್ಲಿ ಕೂಡಾ ಹೀಗೆ ಮಾಡುವ ಸ್ವಭಾವ ಮತ್ತು ಅನುಕೂಲತೆಯಿರುವುದು ಅಸಂಭವ. ಈಗ ಪಂಜಾಬಿನಲ್ಲಿ ನಡೆದಿರುವ ಮಿಲಿಯ ಮಂದಿಯ ಬದಲಾವಣೆಯಂತಹ ಕಾರ್ಯವು ಲೋಕದ ಯಾವ ದೇಶದಲ್ಲೂ ಯಾವ ಜಾತಿಗಳೊಳಗೂ ನಡೆದುದಿಲ್ಲ. 'ಹುಲಿ—ಗೋವು' ಉಪಮಾನಾದೆಯನ್ನೇ ಇಂದಿನ 'ಮುಸ್ಲಿಂ—ಹಿಂದೂ' ಗಾದೆ ಹಿಂದೆಹಾಕಿರುವಾಗ ಇನ್ನೂ ಈ ದೇಶದ ಯಾವ ಮೂಲೆಯಲ್ಲಾದರೂ ಅವರು ಒಟ್ಟಿಗಿರುವುದು ಯಾವ ಸೈತಾನನ ಪ್ರೀತ್ಯರ್ಥವಾಗಿ?

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

ಒ. ಎ. ನಂಬ್ರ 592 1946

S. L. A. 83/47

ವಾದಿ-ಅಪ್ಪಣ್ಣಯ್ಯ-ಸಣ್ಣಯ್ಯನವರ ಮಗ, ಕುಂದಾಪುರ ತಾಲ್ಲೂಕು ನಾಗೋಡಿ ಗ್ರಾಮದಲ್ಲಿರುವವ.

ಯವರಿಂದ ತಾರೀಕು 18-7-1947ರಲ್ಲಿ ಟ್ರಾನ್ಸ್‌ಫರ್ ಹೊಂದಿದ ಅರ್ಜಿದಾರ ಮಾಸಿ ಸುಬ್ರಾಯ್ ಮಾಸಿ ಕೃಷ್ಣಯ್ಯನವರ ಮಗ, ಕುಂದಾಪುರ ತಾಲ್ಲೂಕು ನಾಗೋಡಿ ಗ್ರಾಮದಲ್ಲಿರುವವ, ಪೋಸ್ಟ್ ಕೊಲ್ಲೂರು.

1ನೇ ಪ್ರತಿವಾದಿ-ವಿಶ್ವೇಶ್ವರ ಭಟ್ಟ, ಗಣಪ ಭಟ್ಟನ ಮಗ, ಮೈಸೂರು ಪ್ರೊವಿನ್ಸ್, ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಾಗರ ಮುನ್ಸಿಫ್ ಕೋರ್ಟ್ ಚಾರ್ಬಂದಿ ನಗರ ತಾಲ್ಲೂಕು ನಗರ ಹೋಬ್ಳಿ ಹೆಬ್ಬೈಲ್ ಗ್ರಾಮದ ಮೋಕಾರಲ್ಲಿರುವವ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ-

ಸದ್ರಿ ಡಿಕ್ರಿ ಹಕ್ಕು ಸದ್ರಿ ವಾದಿಯಿಂದ ಸದ್ರಿ ಅರ್ಜಿದಾರನು ಟ್ರಾನ್ಸ್‌ಫರ್ ಪಡೆದು ಸದ್ರಿ ಟ್ರಾನ್ಸ್‌ಫರ್ ರುಜುಪಡಿಸಿಕೊಂಡು ಸದ್ರಿ ಡಿಕ್ರಿಯ ಅಮಲ್ ಜ್ಯಾರಿಯನ್ನು ಕ್ರಮಸ್ಯಾಡಿನಲ್ಲಿ ನಡಿಸುವ ಹಾಗೆ ಕ್ರಮಸ್ಯಾಡಿಗೆ ಟ್ರಾನ್ಸ್‌ಫರ್ ಮಾಡಬೇಕಾಗಿ ಮೇಲಿನ ಅರ್ಜಿ ದಾಖಲು ಮಾಡಿದ್ದಾನೆ. ಸದ್ರಿ ಅರ್ಜಿಯು ತಾರೀಕು 26-9-47ಕ್ಕೆ ತನಿಖೆಗೆ ಇಡೋಣಾಗಿರುತ್ತದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪಣೆಯಿದ್ದರೆ ಸದ್ರಿ ದಿನ್ನ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಎಕ್ಸ್‌ಪಾರ್ಟೆ ಮಾಡಿ ನಿಮ್ಮ ಗೈರುಹಾಜ್ರಿಯಲ್ಲಿ ಸದ್ರಿ ಅನುಲ್ಹಾರಿಯನ್ನು ತೀರ್ಮಾನಿಸೋಣಾದೀತೆಂತ ಯೀ ಮೂಲ್ಕ ತಿಳಿಸೋಣಾಗುತ್ತದೆ.

Sd. M. Mahabala Hebbar,
Advocate for Petitioner.

ಮೊಕ್ಕಾಂ: ಕುಂದಾಪುರ.
ತಾರೀಕು 6-9-1947

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 446/42, S. E. P. 310/47

ಅರ್ಜಿದಾರ ವೈ. ಕೃಷ್ಣಪ್ಪ ಸೆಟ್ಟಿ.

ಎದ್ರಿರು—ತಿಮ್ಮಪ್ಪ ಶೇರೆಗಾರ ಸಹಾ.

ಈ ಕೋರ್ಟಿನ O. S. 538/42ನೇ ಎದ್ರಿಗೆ ತಿಳಿಸುವ್ದು. 2ನೇ ಎದ್ರಿಯು. ರಂಗು ಹಂಗ್ಸು ನಾರಾಯಣನ ವಿಧವೆ, ಕುಂದಾಪುರ ತಾಲ್ಲೂಕು ಬೈಂದೂರು ಗ್ರಾಮದ ಮೈಯ್ಯಾಡಿ.

ಮೇಲಿನ O. S. 538/42ನೇ ದಾವೆಯ ಕ್ರೆಡಿಟಿನಲ್ಲಿರುವ ಡ್ಯುವೇಜನ್ನು ಜಪ್ತು ಮಾಡ್ಸಿ ಮೇಲಿನ ಡಿಕ್ರಿಯಿಂದ ಸಮಾಧಾನಕ್ಕೆ ಕೂಡಿಸಬೇಕೆಂತ ಅರ್ಜಿದಾರನು ದಾಖಲು ಮಾಡಿದ ಸದ್ರಿ ಅರ್ಜಿ ತಾ. 22-9-47ಕ್ಕೆ ಯಿಟ್ಟಿನ, ಆ ಕುರಿತು ನಿಮ್ಮ ಆಕ್ಷೇಪ ಯಿದ್ರೆ, ಸದ್ರಿ ದಿವ್ಸ ಬೆಳಿಗ್ಗೆ 11 ಗಂಟೆಗೆ ಮೇಲ್ಕಾಣ್ಸಿದ ಕೋರ್ಟಿನ ಮುಂದೆ ಹಾಜ್ರಾಗಿ ತಿಳಿಸತಕ್ಕದ್ದು.

Y. Manjaya Shetty,
Advocate for Peter.

ತಾರೀಕು 2-9-47
ಮೊಕ್ಕಾಂ:-ಕುಂದಾಪುರ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 66/45

R. I. A. 905/47

ಅರ್ಜಿದಾರ— ರಾಮಣ್ಣ ಶೆಟ್ಟಿ.

ಎದ್ರಿರು ಕಾವೇರಮ್ಮ ಕೂಡಾ

1ನೇ ಎದ್ರಿ ಉಡುಪಿ ತಾಲ್ಲೂಕು ಹಿರೂರು ಮಂಜುನಾಥ ಉಡ್ಪರ ವಿಧವೆ ಕಾವೇರಮ್ಮನು ಹಾಲಿ ಉಡುಪಿ ತಾಲ್ಲೂಕು ಬಡಾನಿಡಿಯೂರು ಗ್ರಾಮದ ಪದ್ಮನಾಭ ಕೆಕುಡರ ಮನೆಯಲ್ಲಿಯೂ, 2ನೇ ಎದ್ರಿ. ಹಲ್ಲೂರು ಸಂಕಪ್ಪ ಶೆಟ್ಟಿರ ಅಳಿಯ ಶೀನಪ್ಪ ಸೇರ್ವೆಗಾರರು ಉಡುಪಿ ತಾಲ್ಲೂಕು ಹೆಗ್ಗುಂಜೆ ಗ್ರಾಮದ ಹೆಬ್ಬಾಡಿಯಲ್ಲಿಯೂ ಇರುತ್ತಾರೆ. ಸದ್ರಿ ಎದ್ರಿರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ

ಅರ್ಜಿದಾರನು ಡಿಕ್ರಿಯಿಂದ ಕಾಣುವ ಆಸ್ತಿ ಮಾರಾಟದ ಬಗ್ಗೆ ದಾಖಲು ಮಾಡಿದ ಫೈನಲ್ ಡಿಕ್ರಿ ಅರ್ಜಿ ತಾ. 12-9-47ಕ್ಕೆ ತನಿಖೆಗೆ ಇದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಕೋರ್ಟಿನ ಮುಂದೆ ಜಾಹೀರು ಮಾಡಿಕೊಳ್ಳತಕ್ಕದೆಂಬ ಸಂಗತಿ ನಿಮಗೆ ಈ ಮೂಲ್ಕ ತಿಳಿಸೋಣಾಗಿದೆ.

A. N. Rao,
Advocate for Petitioner.
Coondapoor, 2-9-47.

ಭಾರದ್ವಾಜರ

ಇಂಗ್ಲಿಷ್-ಇಂಗ್ಲಿಷ್-ಕನ್ನಡ

ಡಿಕ್ಷ್‌ನರಿ

ಉತ್ತಮ ಪ್ರತಿ ರೂ. 6—0—0
ಸಾಧಾರಣ ಪ್ರತಿ ರೂ. 4—8—0

ಅಂಚೆವೆಚ್ಚ ಪ್ರತ್ಯೇಕ.

ನವಭಾರತ ಬುಕ್ ಡಿಪ್ಪೊ,
: ಉಡುಪಿ :

The Canara Banking Corporation Limited.

(Incorporated in British India, with limited Liability.)

Estd: 1906.

Head Office: UDIPI, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉ ಡು ಪಿ

OTHER OFFICES

Bangalore City	Coondapoor	Sagar
Bhadravathi	Dharwar	Saklaspur
Bombay	Hassan	Salem Town
Bunder-Mangalore	Haveri	Shevapet-Salem
Byadgi	Hubli	Shimoga
Car Street, Mangalore	Madras	Shirva
Calicut	Malpe	Tellicherry
Cannanore	Mercara	Thirthahalli
Cochin	Mettupalayam	Udipi
Coimbatore	Mysore	Vellore
		Virajpet.

BANKING BUSINESS OF EVERY DESCRIPTION TRANSACTED.

ಗುರುವಾರ, ಉಡುಪಿ, ೧೧-೯-'೪೭

ಮೈಸೂರು

ಮೈಸೂರು ಮಹಾರಾಜರು, ತನ್ನ ಸಂಸ್ಥಾನದಲ್ಲಿ ಪ್ರಜಾಜವಾಬ್ದಾರಿ ಸರಕಾರ ಸ್ಥಾಪನೆಯೇ ತನ್ನ ಇಚ್ಛೆಯೆಂಬ ಸಂದೇಶವೊಂದನ್ನು ಇದೇ ತಾ. ೬ರಲ್ಲಿ ಹೊರಡಿಸಿದ್ದಾರೆ. ಇದಕ್ಕಾಗಿ ಮಹಾರಾಜರಿಗೆ, ಧನ್ಯವಾದವಸಲ್ಲಬೇಕು. ಕಾಲೋಚಿತ ದೂರದೃಷ್ಟಿ, ಸಂದರ್ಭಾನುಗುಣ ಸೌಜನ್ಯ, ಪ್ರಜಾವಾತ್ಸಲ್ಯ, ಶಾಂತಿಪ್ರೇಮ, ಇವು ಮಹಾರಾಜರ ಈ ಧೋರಣೆಯಲ್ಲೊಡೆದು ಕಾಣುತ್ತಿವೆ. ಇದರ ಸತ್ಪರಿಣಾಮಗಳು ಕಂಡುಬರಲಿರುವ ಭವಿಷತ್ಕಾಲವಂತೂ ಈ ಭಾಗದ ಜನತೆಯ ಬಾಳುವೆಯನ್ನೇ ಬೆಳಗುವಂತಹದು. ಆ ಕಾಲಬಂದಾಗಲೇ ಸುಮಾರು ಮುಕ್ಕಾಲು ಕೋಟಿ ಮೈಸೂರು ಜನತೆಯ ಜೀವನದ ಗತಿ-ಅಂತೆಯೇ ಇಡೀ ಕನ್ನಡ ನಾಡಿನ ಸ್ಥಿತಿ- ಪ್ರಗತಿಪರ ಬದಲಾವಣೆಗೊಳ್ಳಲಿಕ್ಕಿದೆ.

"ಹೊಸ ರಾಜ್ಯಾಂಗ ಶಾಸನದಿಂ, ನನ್ನ ಸಂಸ್ಥಾನದಲ್ಲಿ ಜವಾಬ್ದಾರೀ ಸರಕಾರವನ್ನು ಸ್ಥಾಪಿಸುವಂತಹದಿರಬೇಕೆಂಬುದೇ ನನ್ನ ಇಚ್ಛೆ. ಸುಧಾರಣಾ ಯೋಜನೆಯು ನನ್ನ ಪ್ರೀತಿಯ ಪ್ರಜೆಗಳಿಗೆ ಸೌಖ್ಯ, ಸಂತೃಪ್ತಿ, ಭದ್ರತೆ ಮತ್ತು ಸರ್ವಸಮಾನ ಸೌಕರ್ಯ ಸಲಕರಣೆಗಳನ್ನು ಒದಗಿಸುವಂತಹದಿರಬೇಕು' ಎಂದು ಮಹಾರಾಜರು ಸೊಗಸಾಗಿ ನುಡಿದಿದ್ದಾರೆ. ಆದರೆ ಒಂದು ಸ್ಪಷ್ಟ ಕಾರ್ಯಕ್ರಮವೇಕೆ ಅವರ ಸಂದೇಶದಲ್ಲಿಲ್ಲ? 1930ರ ಬ್ರಿಟಿಷ್ ರಾಜಕಾರಣಿಗಳನ್ನನುಕರಿಸುವ ಬದಲಿಗೆ ಕೊಚ್ಚಿ, ತಿರುವಾಂಕೂರು ಮಹಾರಾಜರುಗಳ ಇತ್ತೀಚಿನ ಶೈಲಿಯಲ್ಲಿಯೇ ಮೈಸೂರು ಮಹಾರಾಜರು ಮಾತಾಡುತ್ತಿದ್ದರೆ ಸಂಸ್ಥಾನದಲ್ಲಿದ್ದಿರುವ ಇಂದಿನ ಅಗ್ನಿ ಆರುತ್ತಿರಲಿಲ್ಲವೆ?

ಮೈಸೂರು ಪ್ರಜೆಗಳ ಕಳೆದೊಂದು ವಾರದ ಸ್ವಾತಂತ್ರ್ಯ ಹೋರಾಟವನ್ನೂ, ಆ ಸಮರದ ಸಾರಥಿ ಮೈಸೂರು ಕಾಂಗ್ರೆಸನ್ನೂ ಮರೆಯಲಾಗುವದಿಲ್ಲ. 'ಮಾಡೋಣ. ಇಲ್ಲವೇ ಮಡಿಯೋಣ' ಶಪಥಧಾರಿಗಳಾಗಿ ಲಾಠಿ, ಗುಂಡುಗಳಿಗೆ ತಲೆಯೊಡ್ಡಿದ, . ಜೈಲುವಾಸಕ್ಕೆ ನಾನಾ ವಿಧದ ಸಂಕಷ್ಟಗಳಿಗೂ ಈಡಾದ ಮೈಸೂರಿನ ಸ್ವಾತಂತ್ರ್ಯ ಯೋಧ ಮಂಡಳಿಯೇ ಮೈಸೂರು ಸ್ವಾತಂತ್ರ್ಯದ ಸ್ವಾಗತ ಮಂಡಲಿ. ಕಳೆದೊಂದು ವಾರದ ಮೈಸೂರಿನ ಸರ್ವವ್ಯಾಪೀ ಚಳವಳದ ಮೇಲಾದ ದಬ್ಬಾಳಿಕೆಗಳಲ್ಲಿದ್ದ ಕೆಲವು ಕಠೋರಾಂಶಗಳನ್ನು ಈ ಸಂದರ್ಭದಲ್ಲಿ ಸ್ಮರಿಸುವ ಇಚ್ಛೆ ನಮಗಿಲ್ಲ. ಸುಸ್ಥಿತಿಗೆಯು ಹೊರಾಟದ ಸುಖವನ್ನು ನಿರೀಕ್ಷಿಸಿಕೊಂಡು ಯಾರೂ ಸ್ವಾತಂತ್ರ್ಯ ಹೋರಾಟಕ್ಕಿಳಿಯುವುದಿಲ್ಲ; ಅಂತೆಯೇ ತನ್ನ ಆಡಳಿತಯಂತ್ರಕ್ಕೆ ಧಕ್ಕೆ ಬೀಳುವುದನ್ನು ಯಾವ ಸರಕಾರವೂ ಸಹಿಸುವದಿಲ್ಲ. 'ಸರಕಾರ-ಪ್ರಜೆಗಳೊಳಗೆ ಹೋರಾಟ'ವೆಂದರೆ ಸಾಕು; ಆಮೇಲೆ ಇವರ ಚಳವಳದಲ್ಲಿ 'ದರೋಡೆ'ಯ ಅಂಶ-ಅವರ ಕಾನೂನು ರಕ್ಷಣೆಯಲ್ಲಿ 'ದಬ್ಬಾಳಿಕೆ'ಯ ಭೀಕರತೆಯುಂಟೆಂದು ಪರಸ್ಪರ ದೂರುವುದರಿಂದ ಫಲವಿಲ್ಲ. ಇಲ್ಲಿ ಗುರಿಯೊಂದೇ ಮುಖ್ಯ. ತಾನು ಸೇರಬೇಕಾದ ನೆಲೆಯಾವುದು ಎಂಬುದನ್ನಲ್ಲದೆ, ಅದಕ್ಕಾಗಿ ತಾನು ತೆರಬೇಕಾದ ಬೆಲೆಯೆಷ್ಟೆಂಬುದನ್ನು ಸ್ವಾತಂತ್ರ್ಯ ಯೋಧನು ಗಣಿಸಲಾರ. ಮೈಸೂರು ಸತ್ಯಾಗ್ರಹದ ಉದ್ದೇಶವಿಂದು ಫಲಿಸಿತ್ತು; ಮೈಸೂರು ಕಾಂಗ್ರೆಸು ಕೊಡುತ್ತಿರುವ ಅಗ್ನಿ ಪರೀಕ್ಷೆಯು ವಿಜಯ ಕಾಲದಲ್ಲಿ ಹೆಗ್ಗಳಿಕೆಯಿಂದ ಸ್ಮರಿಸುವಂತಹದಾಗುವುದೇ ಹೊರತು ಯಾವ ಕಡೆಗೂ ಜಿಗುಪ್ಸೆ ಪ್ರದರ್ಶಿಸುವಂತಹದಾಗದು ಮೈಸೂರು ಕಾಂಗ್ರೆಸು ಪ್ರಜಾಜವಾಬ್ದಾರಿ ಸರಕಾರವನ್ನು ಪಡೆಯಲು ಮುಂದೊತ್ತಿದಂತೆಯೇ ಮೈಸೂರು ಸರಕಾರವೂ ಅದನ್ನು ಕೊಡಲು ಮುಂದೊತ್ತಿ ಬರುವ ಅಗತ್ಯವೀಗಲೇ ಇದೆ. ಎರಡೂ ಕಡೆಗಳವರ ಗುರಿಯೂ ಅದೇ. ಕಾಂಗ್ರೆಸು ಈ ಕುರಿತು ಅವಸರಗೊಂಡಿದೆ; ಸರಕಾರವು ಬೇಕೆಂದೇ ನಿಧಾನಿಸುತ್ತಿದೆ. ಇಕ್ಕಡೆಯವರೊಳಗಿರುವ ವ್ಯತ್ಯಾಸವಿಷ್ಟೆ. ಇದು ಸಂದುಗೂಡಿಸಲಾಗದಂತಹ ಭಿನ್ನತೆಯೇನೂ ಅಲ್ಲ.

ತಿರುವಾಂಕೂರು ಮಹಾರಾಜರು ಇದೇ ತಾ. ೪ರಲ್ಲೇ, 'ಜನತೆಯ ಜವಾಬ್ದಾರೀ ಸರಕಾರ' ಸ್ಥಾಪಿಸುವ ಜಾಹೀರನಾಮೆ ಹೊರಡಿಸಿದ್ದಾರೆ. ನಿಯಮಾವಳಿ ರಚನೆ ಹಾಗೂ ಪ್ರಜಾಪ್ರತಿನಿಧಿ ಸಂಸ್ಥೆಯ ಚುನಾವಣಾ ವಿಧಾನಗಳ ನಿರೂಪಣೆಗಾಗಿ ವಿವಿಧ ಪಕ್ಷಗಳ ಪ್ರಾತಿನಿಧ್ಯವುಳ್ಳ ಸಣ್ಣ ಸಮಿತಿಯೊಂದನ್ನು ರಚಿಸಿದ್ದಾರೆ. ಪ್ರಜಾ ಪ್ರಭುತ್ವಕ್ಕೆ ಮಹಾರಾಜರ ನಿಶ್ಶರ್ತ ಒಪ್ಪಿಗೆ ದೊರೆತಿದೆ; ಅದನ್ನು ರೂಪಿಸುವ ಕೆಲಸ ಮಾತ್ರ ಬಾಕಿಯಿದೆ.

ಕೊಚ್ಚಿ ಮಹಾರಾಜರಂತೂ ಆದಿಭಾಗದಲ್ಲೇ ಅಖಿಲ ಭಾರತದ ಸಂಸ್ಥಾನಗಳಿಗೆ ಮೇಲ್ಪಂಕ್ತಿ ಹಾಕಿದವರು. ಸಂಪೂರ್ಣ ಪ್ರಜಾಧಿಕಾರವನ್ನು ಘೋಷಿಸಿ ತನ್ನ ಸ್ಥಾನಮಾನಗಳನ್ನೂ ಪ್ರಜೆಗಳ ಅಭಿಮತಾಧೀನಪಡಿಸಿದವರು.

ದಕ್ಷಿಣ ಭಾರತದ ಈ ಮೂರು ಮುಖ್ಯ ಸಂಸ್ಥಾನಗಳ ಪೈಕಿ ಮೈಸೂರಿನ ಅಧಿಪತಿಗಳೂ ಕಾಲೋಚಿತ ಪ್ರಗತಿಪರ ಧೋರಣೆ ವಹಿಸುತ್ತಿದ್ದರೆ ಈ ಭಾಗದ ಎಲ್ಲಾ ಜನತೆಯೂ ಹೆಗ್ಗಳಿಕೆ ಪಡಬಹುದಿದ್ದಿತು. ಈ ಸಂಸ್ಥಾನಗಳ ನೆರೆಪ್ರಾಂತ್ಯಗಳ ಜನತೆಯ ಪಾಲಿಗೂ ಇದು ಕೇವಲ ಅಭಿಮಾನದ ಸಂಗತಿಯಷ್ಟೇ ಅಲ್ಲ-ಅನುಕೂಲ ಮಾರ್ಗವೂ ಆಗುತಿತ್ತು. ಕೊಚ್ಚಿ, ತಿರುವಾಂಕೂರುಗಳಲ್ಲಿ ಪ್ರಜಾಪ್ರಭುತ್ವಸ್ಥಾಪನೆಯಾದರೆ ಕೇರಳದ ಏಕೀಕರಣವು ಸುಗಮವಾಗುವದು. ಅಷ್ಟೇ ಯಾಕೆ? ಇವೆರಡು ಸಂಸ್ಥಾನಗಳ ಸಂಬಂಧ ದೊರೆಯದೆ ಹೋದಲ್ಲಿ ಉಳಿದ ಏಕ ಮಾತ್ರ ಗಣ್ಯಭಾಗವಾದ ಮಲಬಾರು ಜಿಲ್ಲೆಗೆನೇ 'ಕೇರಳ ಪ್ರಾಂತ್ಯ'ವೆಂಬ ಕೃತಕಬಿರುದು ದಾನಮಾಡಬೇಕಾದೀತು. ಪ್ರಜಾಪ್ರಭುತ್ವ ಬಂದಾಗ, ಈ ಸಂಸ್ಥಾನಗಳು ತಮ್ಮ ನೆರೆಯ ಭಾಷಾಬಂಧುಗಳೊಡನೆ ಯಾವ ರೀತಿಯಿಂದಾದರೂ ಜೋಡಣೆಗೊಳ್ಳುವದು ಸಹಜವೇ ಇದೆ. ಮೈಸೂರಿನಲ್ಲಿ ಪ್ರಜಾ ಪ್ರಭುತ್ವ ಬಂದಾಗಲೇ ಏಕೀಕೃತ ಕರ್ನಾಟಕಕ್ಕೆ ಜೀವ ಬಂದಂತೆ. ಭಾಷೆ, ಸಂಸ್ಕೃತಿ, ಒಂದೇ ಇದ್ದರೂ ಆಡಳಿತ ಪದ್ಧತಿಯ ಭಿನ್ನತೆಯಿಂದಾಗಿ ಕರ್ನಾಟಕ ಏಕೀಕರಣದ ಪ್ರಶ್ನೆ ಮುಂದೆ ಬಂದಾಗಲೆಲ್ಲಾ ಅದರ ಮುಖ್ಯ ಭಾಗವಾದ ಮೈಸೂರೊಂದು ಸಮಸ್ಯೆಯಾಗಿಯೇ ಉಳಿದಿದೆ. ಅರಿವಾಸಿಸ್ಥಳ ದಿಣ್ಣೆಯಾಗಿರುವಾಗ, ಗಡಿಗೆರೆಯೆಳೆಯುವುದು ಹೇಗೆಂಬ ಪ್ರಶ್ನೆಯೇಳುತ್ತಿದೆ. ಇನ್ನದೂ ಸಮಮಟ್ಟಕ್ಕೆ ಬರಲಿದೆ. ಆದರೆ ಯಾವ ದಿನ? ಕೆಲಸವಾಗಿಲ್ಲ. ಪ್ರಾರಂಭಿಸಿದ ರೀತಿ ಕೂಡಾ ಸರಿಯಲ್ಲ. ಆದರೂ ಆಗಲಿರುವುದು ಖಂಡಿತ. ಮೈಸೂರು ಮಹಾರಾಜರು ಹೇಳಬೇಕಾದ್ದನ್ನು ಹೇಳದೆ ಹೋದರಲ್ಲಾ; ತಾನೊಪ್ಪಿಗೆ ಕೊಟ್ಟಿದ್ದ ಗುರಿಯನ್ನೇ ಸಾಧಿಸಲು ಹೋರಟವರನ್ನು ಕಠಿಣ ಹಸ್ತದಿಂದ ಶಿಕ್ಷಿಸುವ ಹೊರತು, ಸಮೀಪದಲ್ಲೇ ಇರುವ ಸಂಧಾನಪಥ ಹಿಡಿಯುವ ಬುದ್ಧಿ ಮೈಸೂರು ಸರಕಾರಕ್ಕಿನ್ನೂ ಬರಲಿಲ್ಲವಲ್ಲಾ ಎಂದು ಈಗ ಪಶ್ಚಾತ್ತಾಪವಾಗುತ್ತಿದೆ.

CHAMPAE'S

Snow & Castrex

Sole Distributers for India

Prop: K. G. NAYAK,

Santhekatte, UDIPI. S. K.

. ಸ್ಟೋರುಗಳ ಮತ್ತು ಜನತೆಯ ಸಂಬಂಧವು ಹೀಗೇಕೆ?:—

ಉಡುಪಿ ಸಂತೆಕಟ್ಟೆ ರೇಶನ್ ಆಫೀಸಿನ್ನೀರಿನ ಅಳತೆಯವರು ಸಸುಗೇಕಾರ್ಡಿನಲ್ಲಿ ನಮೂದಿಸಿದ ಅಳತೆಗಿಂತ ಕಡಿಮೆ ಕೊಟ್ಟು, ಆ ಕುರಿತು ಅಕ್ಕಿ ತರಲು ಹೋಗಿದ್ದ ಹೆಂಗಸು ಎಚ್ಚರಿಸಿದಾಗ ಗದರಿಸಿ ಕಳುಹಿಸಿ ಆ ಮೇಲೆ ಗಂಡಸರು ಹೋದಾಗ ಕೊಟ್ಟರೆಂಬ ದೂರೊಂದು ಬಂದಿದೆ. ಈ ಸಂಗತಿ ಹೇಗಿದ್ದರೂ ಅಕ್ಕಿ ಸಂಗ್ರಹ ಮಾಡುವಾಗ ಸ್ಟೋರುಗಳಿಂದ ಧಾನ್ಯ ಪೂರೈಸುವ ರೈತರಿಗೆ-ಅಕ್ಕಿ ವಿತರಣೆ ಮಾಡುವಾಗ ಸ್ಟೋರುಗಳಿಂದ ಅಕ್ಕಿ ಪಡಕೊಳ್ಳುವ ಕಾರ್ಡುದಾರರಿಗೆ-ಆಗುತ್ತಿರುವ ಅನ್ಯಾಯಗಳ ದೂರುಗಳು ಹೆಚ್ಚಿನ ಕಡೆಗಳಿಂದ ಕೇಳಿಬರುತ್ತಿರುವುದು ಅತ್ಯಂತ ಶೋಚನೀಯ. ಈ ಕುರಿತು ಜನ ಸಾಮಾನ್ಯರಲ್ಲಿ ನಾನಾ ವಿಧದ ಸಂತಾಪ, ಕ್ರೋಧಗಳಿದ್ದು, ಹಲವು ವಿಧದ ಆರೋಪ, ಊಹಾಪೋಹಗಳು ಕೇಳಿ ಬರುತ್ತಿವೆ. ಆಹಾರಾಭಾವದ ಈ ಕಾಲದಲ್ಲಿ ಹಸುಗೇ ಪದ್ಧತಿಯೇ ಜನತೆಯನ್ನು ಉಳಿಸಿತು, ಎಂದೊಪ್ಪಿಕೊಳ್ಳುವಾಗಲೇ, ಆ ಸಂಬಂಧದ ಸ್ಟೋರುಗಳ ನೌಕರರ ವರ್ತನೆಯು ಮಾತ್ರ ಜನತೆಯಲ್ಲಿ ತೀವ್ರ ಜಿಗುಪ್ಸೆಯನ್ನು ನಿರ್ಮಿಸಿದೆ ಎಂದು ಸೂಚಿಸದೆ ನಿರ್ವಾಹವಿಲ್ಲ. ಇಂತಹ ವಾತಾವರಣವಿರುವುದು ಯಾವ ದೃಷ್ಟಿಯಿಂದಲೂ ಹಿತಕರವಲ್ಲ. ಎಷ್ಟೇ ಸಂಘಟನ ರಹಿತರು ಮತ್ತು ನಿಸ್ಸಹಾಯಕರಿದ್ದರೂ 'ನಾವು ಅನ್ಯಥಾ ಗತಿಯಿಲ್ಲದೆ ಸುಲಿಗೆಗೊಳಗಾಗುತ್ತಿದ್ದೇವೆ' 'ನಾವು ವಂಚಿಸಲ್ಪಡುತ್ತಿದ್ದೇವೆ'-ಎಂಬಂತಹ ಜಿಗುಪ್ಸೆ ಮತ್ತು ಜಾಗ್ರತಿಯು ಜನರಲ್ಲಿ ನೆಲೆಸಿದರೆ ಅದರ ಪರಿಣಾಮ ಒಂದಲ್ಲೊಂದು ವಿಧದಿಂದ ತೋರಿಬಾರದಿರದು. ಆದ್ದರಿಂದ ಸ್ಟೋರುಗಳ ಅಕ್ಕಿ ಪಡೆಕೊಳ್ಳುವ ಹಾಗೂ ಅಕ್ಕಿ ವಿತರಣೆ ಮಾಡುವ ಅಳತೆ ಮತ್ತು ಜನತೆಗೆ ಸಂಬಂಧಿಸಿದ ಇತರ ವಿಷಯಗಳ ಕುರಿತು ಕೂಲಂಕಷ ವಿಚಾರಣೆ ನಡೆಸಿ ಫಲಿತಾಂಶಗಳನ್ನು ಸಾರ್ವಜನಿಕರ ತಿಳುವಳಿಕೆ ಬಗ್ಗೆ ಪ್ರಕಟಿಸಿ, ಜನತಾ ವಿಶ್ವಾಸ ಗಳಿಸಲಾಗುವಂತೆ, ತಮಗಾದ ಸಂಬಂಧಪಟ್ಟ ಇಲಾಖೆ, ಜನತೆಯ ವಿಶ್ವಾಸಕ್ಕೆ ಪಾತ್ರವಾದ ಸಾರ್ವಜನಿಕ ಪ್ರತಿನಿಧಿ ಗೃಹಸ್ಥರ 'ವಿಚಾರಣಾ ಸಮಿತಿ'ಗಳನ್ನು ಸ್ಟೋರುಗಳ ಮೇಲಧಿಕಾರಿಗಳೇಕೆ ನೇಮಿಸಬಾರದು? ಸರಕಾರವಾದರೂ ಈ ಕುರಿತು ಕಾರ್ಯವನ್ನೇಕೆ ಕೈಕೊಳ್ಳ ಕೂಡದು?

ಪ್ರಕಟಣೆ

ಉಡುಪಿ ತಾಲೂಕು ಬೊಮ್ಮಾರಬೆಟ್ಟು ಗ್ರಾಮದ ಹಿರಿಯಡ್ಕದಲ್ಲಿರುವ ಚಂದ್ರೈಯ ಹೆಗ್ಗಡೆಯು ಸರ್ವ ಜನರಿಗೂ ಈ ಮೂಲಕ ತಿಳಿಯಪಡಿಸುವದೇನಂದ್ರೆ—

ನನ್ನ ಹೊಸ್ಮಾಗ, ವ. ರುದ್ರಪ್ಪ ಹೆಗ್ಗಡೆಯ ಮಗ ರತ್ನಾಕರ ಹೆಗ್ಗಡೆಯು ತಾರೀಕು 4-9-47ರಲ್ಲಿ ನನ್ನನ್ನು ವಂಚಿಸಿ ಮೋಸ ಕೃತ್ಯಗಳಿಂದ ರೆವಿನ್ಯೂ ಚೀಟುಗಳು ಅಂಟಿಸಿರುವ ಕಾಗದಕ್ಕೆ ನನ್ನಿಂದ ಪಡೆದ ಎಡಹೆಬ್ಬೆಟ್ಟಿನ ಮೊಹರು, ವ, ದಸ್ತತಿನ ಆಧಾರದಿಂದ ಅತ ಮಾಡಬಹುದಾದ ಯಾವತ್ತೂ ಲಿಖಿತದ ಸಿಂಧಾಗತಕ್ಕದ್ದಲ್ಲ. ಇನ್ನು ಮುಂದೆ ನನ್ನಿಂದ ಪಡಿಯುವ ರಶೀದಿಗಳು ಮತ್ತು ಬರೆಸಿಕೊಳ್ಳುವ ಸಕಲ ವಿಧದ ಸಮಸ್ತ ರಿಕಾರ್ಡುಗಳು ಮುಂತಾದ್ದು ನನ್ನ ಮಗ ನೆಟ್ಟೇಲಿ ಸುಬ್ಬಯ್ಯ ಹೆಗ್ಗಡೆ ಸಮಕ್ಷಮ ಆಗಿ ಅಂತಾದಕ್ಕೆ ನನ್ನ ದಸ್ತತು, ವ, ಎಡಹೆಬ್ಬೆಟ್ಟಿನ ಮೊಹರು ಇದ್ದು, ಸದ್ರಿ ಸುಬ್ಬಯ್ಯ ಹೆಗ್ಗಡೆಯು ಸಾಕ್ಷಿ ಕೂಡಾ ಇರತಕ್ಕದ್ದು. ನನ್ನ ಮಗ ಸದ್ರಿ ಸುಬ್ಬಯ್ಯ ಹೆಗ್ಗಡೆಯ ಸಾಕ್ಷಿಯಿಲ್ಲದ ಯಾವತ್ತು ರಿಕಾರ್ಡು ನನ್ನ ಮೇಲೆ ಬದ್ಧ ಕರಿಸತಕ್ಕದ್ದಲ್ಲ.

● ಚಂದ್ರೈಯ್ಯ ಕುಳೇರ್ ಹೆಗ್ಗಡೆ ರುಜು.

ಹಾಲಿ ಹಿರಿಯಡ್ಕದಲ್ಲಿರುವ ದಿವಾನ್ ಬಹಾದ್ದೂರು ವಿ. ಸುಬ್ಬಯ್ಯ ಹೆಗ್ಗಡೆ ಅಳಿಯ ಪಟೇಲ್ ಸುಬ್ಬಯ್ಯ ಹೆಗಡೆ ಸಾಕ್ಷಿ.

ಢಿಲ್ಲಿಯಲ್ಲೂ ಗಲಭೆ

ಗಾಂಧಿಜೀ—

“ಇನ್ನೊಮ್ಮೆ ಕಲ್ಕತ್ತೆಯ ಶಾಂತಿ ಭಂಗ ವಾದಲ್ಲಿ, ಮತ್ತೆ ನಿರ್ಜಲದ ಉಪವಾಸ ಕೈಕೊಳ್ಳುವೆ”ನೆಂದು ಎಚ್ಚರಿಸಿ, ಶಾಂತಿ ಪಾಲಿಸುವಂತೆ ಆಗ್ರಹದಿಂದ ವಿಜ್ಞಾಪಿಸಿಕೊಂಡು ಇದೇ ತಾ 7ನೇ ರಾತ್ರಿ ಢಿಲ್ಲಿಗೆ ಹೋಗಿದ್ದಾರೆ. ಅಲ್ಲಿಂದವರು ದಂಗೇ ಪೀಡಿತ ಪಂಜಾಬಿಗೆ ಪ್ರಯಾಣ ಬೆಳೆಸುವರು.

ಢಿಲ್ಲಿಯಲ್ಲಿ ಗಲಭೆ

ಪಂಜಾಬು ನಿರಾಶ್ರಿತರಿಂದ ತುಂಬಿದ್ದು, ಕೆಲವು ದಿನಗಳಿಂದ ಸ್ಫೋಟ ಪೂರ್ವ ಜ್ವಾಲಾಮುಖಿಯಂತಿದ್ದ ನವಢಿಲ್ಲಿಯಲ್ಲಿ ಅಧಿಕಾರಿಗಳು ಅತ್ಯಂತ ಮುಂಜಾಗ್ರತೆ ವಹಿಸಿದ್ದರೂ ಜಾತೀಯ ಗಲಭೆಯು ಬೆಂಕಿ ಹತ್ತಿಕೊಂಡಿತು. ತಿವಿತ, ಇರಿತ, ಮನೆ ಸುಲಿಗೆ, ರೈಲಿನ ಮೇಲೆ ಧಾಳಿ, ಬೋಂಬೊಗಳ ಇತ್ಯಾದಿಗಳಿಂದ ಥಿಸಿವೆ ಕಾರ್ಖಾನೆ ಜ್ಯಾಗ್ಲೆ ಒಂದೆಡೆ ಸ್ಫೋಟನ ಇತ್ಯಾದಿ ಸಿತ್ಸದ ಆಯುಧಗಳಿಗೂ ಒಟ್ಟುಸೇರಿ ಬಿದ್ದಿದೆ. ಎಲ್ಲೆಯೀಗ ಅತ್ಯುದ್ವೇಗ, ಕ್ರೋಧ ಭಯಗಳ ಬೀಡಾಗಿದೆ.

ನೆಹರುಗಳ ಎದೆಗಾರಿಕೆ

ಪಂಡಿತ ನೆಹರೂಗಳು ಸರ್ದಾರ್ ಬಲದೇವಸಿಂಗರೊಂದಿಗೆ ಢಿಲ್ಲಿಯ ದಂಗೇ ಪೀಡಿತ ಸ್ಥಳಗಳನ್ನು ಸಂದರ್ಶಿಸಿದ್ದಾರೆ. ಅವರು ಸ್ವತಃ ದಂಗೆಗಾರರ ಮೇಲೇರಿ ಹೋಗಿ ಹಲವರನ್ನು ಚದುರಿಸಿ ಬಿಟ್ಟರು. ಹಾದಿ ಹೋಕನ ಮೇಲೆ ಬೀಳುತ್ತಿದ್ದ ಒಬ್ಬ ಪುಂಡನ ಕೈಯ್ಯ ಕತ್ತಿಯನ್ನು ನೆಹರುಗಳು ಸ್ವತಃ ಕಿತ್ತುಕೊಂಡು ಗರ್ಜಿಸಿದೊಡನೆ ಆತನೂ ಅಲ್ಲಿದ್ದ ಅವನ ಅನುಯಾಯೀ ಪುಂಡರೂ ಪಲಾಯನ ಮಾಡಿದರು. ಒಂದು ಬಜಾರನ್ನೊಂದು ಪುಂಡರ ಸಂಗದ ಲೂಟಿ ಮಾಡುತಿತ್ತು. ಪಂಡಿತ ನೆಹರುಗಳು ಧಾವಿಸಿ ಒಂದು ಬೆದರಿಸಿದೊಡನೆ ಅವರೆಲ್ಲಾ ಚದರಿ ಬಿಟ್ಟರು. ಆದರೂ ನೆಹರುಗಳು ತಾನೇ ಕೆಲವರನ್ನು ಹಿಡಿದು ಪೋಲಿಸರ ಕೈಗೆ ಕೊಟ್ಟರು. ಅವರು ಹೋದಲ್ಲೆಲ್ಲಾ ಗಲಭೆ ಮಾಯವಾಗುತ್ತಿದೆ. ಪಕ್ಷಪಾತವಿಲ್ಲದೆ, ಕಠೋರ ಹಸ್ತದಿಂದ ದಂಗೆಯನ್ನಡಗಿಸಬೇಕೆಂದು, ಸರ್ದಾರ್ ಪಟೇಲರು ನೌಕರರನ್ನೂ ಸಾರ್ವಜನಿಕರನ್ನೂ ಆಗ್ರಹಪೂರ್ವಕ ಕೇಳಿಕೊಂಡಿದ್ದಾರೆ.

ಅಮೃತಾಂಜನ. ತಲೆನೋವನ್ನ, ಶಿರೋವೇದನೆ, ಉಳುಕು, ಶೀತ್ರಿಗೆ, ಭುಜು ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾಕು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಬೆಸ್ತವಾಗಿ ನೋಡಿರಿ. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ. ಔಷಧ, ಷಾಪುಗಳಲ್ಲಿ ಮುದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಕಠಿಣ ಶಿಕ್ಷೆ

ಹಿಂದೀ ಕೇಂದ್ರ ಮಂತ್ರಿಮಂಡಲವು ಜಾತೀಯ ಗಲಭೆಗಳಿಂದೆದ್ದ ವಿಶೇಷ ವಿದ್ಯಮಾನಗಳ ಸಂಬಂಧದ ಕಾರ್ಯಗಳಿಗಾಗಿ ತನ್ನ ಮಂಡಲದ ಒಂದು ‘ಎಮೆರ್ಜೆನ್ಸಿ ಕಮಿಟಿ’ಯನ್ನು ರಚಿಸಿಕೊಂಡಿದೆ. ಈ ಕಮಿಟಿಯೀಗ ಸದಾ ಕಾರ್ಯ ಪ್ರವೃತ್ತವಾಗಿದೆ ಢಿಲ್ಲೀ ಗಲಭೆಯ ಕುರಿತು ಪರಿಶೀಲಿಸಿ, ಕೊಲೆಯ ಪ್ರಯತ್ನ, ಮನುಷ್ಯಾಪಹಾರ, ಬಲಾತ್ಕಾರ, ಜುಲುಮೆಯ ಮಾನಭಂಗ, ದರೋಡೆ ಮೊದಲಾದ ಕಠಿಣ ತಪ್ಪುಗಳಿಗೆ ಜೀವಾಂತ್ಯ ಶಿಕ್ಷೆ ವಿಧಿಸುವ ನಿರ್ಧಾರವಾಗಿದೆ ರಾಜಧಾನಿ ಢಿಲ್ಲಿಯಲ್ಲೇ ಎದ್ದಿರುವ ಗೊಂದಲವನ್ನು ಕೂಡಲೇ ನಿಲ್ಲಿಸಿಬಿಡುವ ಭೀಷ್ಮಪ್ರತಿಜ್ಞೆ ತೊಟ್ಟಿದ್ದಾರೆ ಮಂತ್ರಿಗಳು.

ಪಾಕಿಸ್ತಾನದ ಸರ್ವೇಶಗಳಿಂದ-

ಹಿಂದೂ ಸಿಖ್ಖರೀಗ ಪಲಾಯನ ಮಾಡುತಿದ್ದಾರೆ. ಸಿಂಧ್ ಪ್ರಾಂತ್ಯದಿಂದ ದಿನಂಪ್ರತಿ ಸುಮಾರು 1000ದಂತೆ ಹಿಂದೂ ಸಿಖ್ಖರು ರೈಲು ಹತ್ತಿ ಮಾರ್ವಾರ್ ಮುತ್ತಿತರ ಸಂಸ್ಥಾನಗಳಿಗೆ ಹೋಗುತಿದ್ದಾರೆ. ಕರಾಚಿಯಿಂದ ಸರಾಸರಿ ದಿನಕ್ಕೆ 2000ದಂತೆ ಹಿಂದೂ ಸಿಖ್ಖರು ರೈಲು, ವಿಮಾನ, ಹಡಗಗಳ ಮೂಲಕ ಹೊರಗೆ ಹಾರುತಿದ್ದಾರೆ. ಬಲೂಚಿಸ್ಥಾನದಿಂದ 17000 ಹಿಂದೂ ಸಿಖ್ಖರು ಈ ಮೊದಲೇ ಓಡಿ ಬಂದಿದ್ದರು. ಅಲ್ಲಿಯ ಸರಕಾರೀ ನೌಕರರಾಗಿರುವ ಸುಮಾರು 300 ಮಂದಿ ಹಿಂದೂ ಸಿಖ್ಖರು ತಮ್ಮನ್ನು ಹಿಂದುಸ್ಥಾನಕ್ಕೆ ಕಳುಹಿಸಬೇಕೆಂದು ಕೇಳಿಕೊಂಡಿದ್ದಾರೆ. ಪಂಜಾಬಿನ ಎರಡು ಕಡೆಗಳೂ ಈಗ ಬಹುಮಟ್ಟಿಗೆ ಹತೋಟಿಗೆ [illegible] ಲಕ್ಷ ಜನರು ಇಕ್ಕಡೆಗಳೊಳಗೆ ಇನ್ನುರಲ್ಲೇ ಅದಲು ಬದಲಾಗಿರುವುದಲ್ಲದೆ ಸುಮಾರು 6 ಲಕ್ಷ ಹಿಂದೂ ಸಿಖ್ಖರು ಪಾಕಿಸ್ತಾನ್ ಪಂಜಾಬಿನಿಂದ ಈ ಕಡೆಗೀಗ ಹೊರಟಿದ್ದಾರೆ.

ಉಡುಪಿ

ವಾರ್ಷಿಕೋತ್ಸವ—ಎಜೆಪಮಿ ಒಫ್ ಜನರಲ್ ಎಡ್ಯುಕೇಶನ್ ಮಣಿಪಾಲ ಈ ಸಂಸ್ಥೆಯ ವಾರ್ಷಿಕೋತ್ಸವವು ಇದೇ ತಾ 19 ರಿಂದ 21ರ ತನಕ ಕ್ರಿಶ್ಚಿಯನ್ ಹೈಸ್ಕೂಲ್ ಹಾಲಿನಲ್ಲಿ ಜರಗಲಿರುವುದೆಂದೂ ಸರ್ವರಿಗೂ ಸ್ವಾಗತವಿರುವುದೆಂದೂ ರಿಜಿಸ್ಟ್ರಾರರು ಬರೆಯುತ್ತಾರೆ. ಶ್ರೀಗಳಾದ ಕೆ. ರಾಮಕೃಷ್ಣ ಸೆಟ್ಟಿ, ಎಸ್. ಮುಕುಂದ ರಾವ್, ರಾ। ಬಾ। ಡಾ। ಎಮ್. ಕೇಶವ ಪೈ, ಸ್ವಾಮಿ ಶಿವಮಲಾನಂದಜಿ, ವಿ. ಎಸ್. ಕುಡ್ವ ಮೊದಲಾದವರು ಈ ಸಮಾರಂಭದಲ್ಲಿ ಭಾಗವಹಿಸಲಿರುವರು.

ಮದ್ರಾಸ್ ಮಂತ್ರಿಗಳಿಬ್ಬರ ಆಗಮನ—ಕೃಷಿಇಲಾಖೆಯ ಮಂತ್ರಿಗಳಾದ ಶ್ರೀ ಕೆ. ಮಾಧವ ಮೆನನ್ ಮತ್ತು ಆರೋಗ್ಯಖಾತೆಯ ಮಂತ್ರಿಗಳಾದ ಶ್ರೀ ಎ. ಬಿ. ಸೆಟ್ಟರು ಇದೇ ತಾ 7ರಲ್ಲು ಬೆಳಿಗ್ಗೆ ಒಂಭತ್ತು ತಾಸಿಗೆ ಉಡುಪಿಗೆ ಆಗಮಿಸಿ ತಾಲೂಕು ಕಚೇರಿಯಲ್ಲಿ ಕೂಡಿದ ವರ್ತಕರ, ಆಹಾರ ಸಮಿತಿ ಸದಸ್ಯರೇ ಮೊದಲಾದವರ ಸಭೆಯಲ್ಲಿ ಸಾರ್ವಜನಿಕ ಆಹಾರ ಪರಿಸ್ಥಿತಿಯ ಕುರಿತು ಭಾಷಣವಿತ್ತು, ಇನ್ನೆರಡು ತಿಂಗಳ ಕಠಿನ ಸಮಯವನ್ನು ಕಳೆಯಲು ಸಾಕಷ್ಟು ಅಕ್ಕಿ ಜಿಲ್ಲೆಯಲ್ಲಿ ಇಲ್ಲದಿರುವುದರಿಂದ ಸರ್ವರೂ ಅವರವರಲ್ಲಿರುವ ಜಾಸ್ತಿ ಅಕ್ಕಿಯನ್ನು ಒಪ್ಪಿಸಬೇಕೆಂದು ವಿನಂತಿಸಿದರು. ಹೊರಗಿನಿಂದ ಈ ಜಿಲ್ಲೆಗೆ ಅಕ್ಕಿ ಬರುವಂತಿಲ್ಲವೆಂಬುದನ್ನು ಸೂಚಿಸಿ ಹೇಗಾದರೂ ಇನ್ನುಳಿದ ಕಟಾವಿನವರೆಗಿನ ಕಠಿನ ಸಮಯವನ್ನು ಸುಧಾರಿಸಬೇಕೆಂದು ಶ್ರೀ ಎಮ್. ಶಿವರಾಯರು ಕೈಜೋಡಿಸಿ ಪ್ರಾರ್ಥಿಸಿದರು. ಶ್ರೀಗಳಾದ ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್ ಮತ್ತು ಮಂಜುನಾಥ ನಾಯಕರು ಅಕ್ಕಿ ಸಂಗ್ರಹ ಕಾರ್ಯದಲ್ಲಿರುವ ಲೋಪದೋಷಗಳನ್ನೆತ್ತಿ ಮಾತನಾಡಿದರು. ಶ್ರೀ ಮೆನನ್‌ರವರು ಅದಕ್ಕೆ ಉತ್ತರವಿತ್ತು ಚರ್ಚೆಗೆ ಸಮಯವಿಲ್ಲವೆಂದು ಸೂಚಿಸಿ ಮುಂದಿನ ಪ್ರಯಾಣ ಬೆಳೆಸಿದರು. ಹೀಗಾಗಿ ಹಲವರಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ದೊರೆಯಲಿಲ್ಲ. ಮಂತ್ರಿಗಳ ಇಂತಹ ಅತ್ಯವಸರದ ಆಗಮನ ನಿರ್ಗಮನಗಳಿಂದ ಪರಿಣಾಮವೇನೋ ತಿಳಿಯದಾಗಿದೆ.

ಕುಂದಾಪುರದಲ್ಲಿ ಮಂತ್ರಿಗಳು—ಉಡುಪಿಯಿಂದ ಹೊರಟ ಮಂತ್ರಿಗಳು ಮಧ್ಯಾಹ್ನ ಒಂದು ಗಂಟೆಯ ಸಮಯಕ್ಕೆ ಕುಂದಾಪುರಕ್ಕೆ ತಲ್ಪಿದರು. ತಾ [illegible] ಕಚೇರಿಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಮೆನನ್ [illegible] ಮಾತನಾಡುತ್ತ ಆಹಾರದ ಕೊರತೆಯನ್ನು ನೀಗುವರೆ ಹೆಚ್ಚಿನ ಅಕ್ಕಿಯನ್ನು ಒದಗಿಸಿಕೊಡಬೇಕಾಗಿ ವಿನಂತಿಸಿದರು ಕುಂದಾಪುರ ತಾಲೂಕು ತನ್ನ ಪಾಲನ್ನು ಈ ಮೊದಲೇಕೊಟ್ಟಿರುತ್ತಾ ಇನ್ನು ಮುಂದೆ ಏನೂ ಕೊಡಲು ಸಾಧ್ಯವಿಲ್ಲವೆಂದೂ ಈ ತಾಲೂಕಿಗೆ ನೀರಾವರಿ ಮೊದಲಾದ ಯಾವುದೇ ಸೌಕರ್ಯಗಳು ದೊರೆಯಲಿಲ್ಲವೆಂದೂ ಶ್ರೀ ಜಿ. ಸುಬ್ಬಣ್ಣ ಸೆಟ್ಟರು ವಿವರಿಸಿದರು. ಶ್ರೀ ಬಿ. ನಾರಾಯಣ ಸೆಟ್ಟರು ಅಕ್ಕಿ ಜಮೆಯಾದ ಅಂಕೆ ಸಂಖ್ಯೆಗಳಿಂದ ಏನೂ ಪ್ರಯೋಜನವಿಲ್ಲವೆಂದೂ ಯುದ್ಧ ಪೂರ್ವ, ಯುದ್ಧಾವಧಿ, ಯುದ್ಧದನಂತರ ಭತ್ತ ಪೈರು ಬೆಳೆಸುವ ವಿಸ್ತೀರ್ಣವೆಷ್ಟೆಂಬುದನ್ನು ಪರಿಶೀಲಿಸಿದರೆ, ಈಗ ಸಾವಿರಾರು ಎಕ್ರೆ ಜಮೀನು ಬಂಜರು ಬಿದ್ದಿರುವುದನ್ನೂ ಯಾ ಲಾಭದಾಯಕ ಪೈರುಗಳಿಗೆ ಉಪಯೋಗಿಸಲಾಗುವವೆಂಬುವನ್ನೂ ವಿವರಿಸಿ ಕಂಟ್ರೋಲಿನ ದೆಸೆಯಿಂದ ಬಂಜರು ಬಿದ್ದಿರುವ ನೂರಲ ನಂಜ ಭೂಮಿಗಳನ್ನು ಸರಕಾರದವರೇ ಸಾಗುವಳಿ ಮಾಡಿಸುವ ವ್ಯವಸ್ಥೆ ಮಾಡಬೇಕೆಂದು ಹೇಳಿದರು. ಮಂತ್ರಿಗಳು ಈಗ ಭತ್ತ ಬೆಳೆಸುವ ವಿಸ್ತೀರ್ಣವು ಕಡಮೆಯಾಗುತ್ತಿರುವುದೆಂಬುದನ್ನು ಒಪ್ಪಿ ಈಗ ಸನ್ನಿಹಿತವಾಗಿರುವ ಆಹಾರ ಕ್ಷಾಮವನ್ನು ಬಗೆ ಹರಿಸಬೇಕೆಂದು ಹೇಳಿ ಕಾರ್ಕಳಕ್ಕೆ ಪ್ರಯಾಣ ಬೆಳೆಸಿದರು.

ಉಪನ್ಯಾಸ—ಕಳೆದ ಶ್ರೀ ಕೃಷ್ಣ ಜಯಂತಿಯಂದು ಶ್ರೀ ಅದಮಾರು ಮಠದ ಮುಂಭಾಗದಲ್ಲಿ ಶ್ರೀ ಭಂಡಾರಿಕೇರಿ ಮಠದ ಶ್ರೀಗಳವರ ಅಧ್ಯಕ್ಷತೆಯಲ್ಲಿ ಧಾರ್ಮಿಕೋಪನ್ಯಾಸ ಸಭೆಯು ಜರಗಿತು. ಅಧ್ಯಕ್ಷರೂ ಶ್ರೀ ಅದಮಾರು ಮಠದ, ಶ್ರೀ ಪೇಜಾವಾರ ಮಠದ ಮತ್ತು ಶ್ರೀ ಪುತ್ತಿಗೆ ಮಠದ ಶ್ರೀಗಳವರೂ, ಶ್ರೀ ಕೊರಟ್ಟಲ್ ಶ್ರೀನಿವಾಸರಾಯರು ಶ್ರೀ. ಸುಬ್ರಾಯ ಪುರಾಣಿಕರು, ಶ್ರೀ ಅದಮಾರು ವಿಠಲಾಚಾರ್ಯರು ಮತ್ತು ಶ್ರೀ. ಸೀತಾರಾಮ ಉಡುಪರೂ ಶ್ರೀ ಕೃಷ್ಣನು ತನ್ನ ಜೀವನದಿಂದ ಹಾಗೂ ಗೀತೋಪದೇಶದಿಂದ ಜನ ಸಾಮಾನ್ಯರು ಇಂದಿನ ಪರಿಸ್ಥಿತಿಯಲ್ಲಿಯೂ ತಮ್ಮ ಜೀವನವನ್ನು ಸುಗಮಗೊಳಿಸುವ ದಾರಿಯಲ್ಲಿ ಹೇಗೆ ಬೆಳಕು ಹರಿಯಿಸಿರುವನೆಂಬುದನ್ನು ಬಗೆಮುಟ್ಟುವಂತೆ ವಿವರಿಸಿ ಉಪನ್ಯಾಸಗಳನ್ನಿತ್ತರು. ಆಗಾಗ ಈ ಮಾದರಿಯ ಧಾರ್ಮಿಕ ಲಘು ಉಪನ್ಯಾಸಗಳ ಏರ್ಪಾಟನ್ನು ಮಾಡಬೇಕೆಂದು ಆರಂಭಿಸಿರುವ ಶ್ರೀ. ಅದಮಾರು ಮಠದ ಶ್ರೀಗಳವರ ಧರ್ಮಪ್ರಚಾರಾಸಕ್ತಿಯು ಸ್ತುತ್ಯವೂ ಅಭಿನಂದನೀಯವೂ ಇದೆ.

ಸಾರ್ವಜನಿಕ ಸಭೆ:— ಉಡುಪಿಯ ಮುಜೂರ ವರ್ಗದ ಮೆರವಣಿಗೆ ಮತ್ತು ಸಭೆಯೊಂದು ತಾ 5ನೇ ಅಪರಾಹ್ನ ರಥಬೀದಿಯಲ್ಲಿ ಶ್ರೀ ಕೆ. ರಾಘವನರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಬಿ. ವಿ. ಕಕ್ಕಿಲ್ಲಾಯರು ಭಾಷಣವಿತ್ತರು. ಬೀಡಿ ಕೆಲಸಗಾರರ ಮಜೂರಿ ಬೋನಸ್ಸು ಸಂಬಂಧದ ರಾಜೀ ತೀರ್ಮಾನವನ್ನು ಜ್ಯಾರಿಗೆ ತರಬೇಕೆನ್ನುವ, ಮೈಸೂರು ಸತ್ಯಾಗ್ರಹಕ್ಕೆ ಬೆಂಬಲ ಕೊಡುವ ನಿರ್ಧಾರಗಳಾದುವು.

ಮಣಿಪಾಲ—ಹಿಂದೂ ಅನಾಥಾಲಯದ ಆಶ್ರಯದಲ್ಲಿರುವ ಮಣಿಪಾಲ ಎಲಿಮೆಂಟರಿ ಶಾಲೆಯ ಅನಾಥರಿಗೂ ಬಡಮಕ್ಕಳಿಗೆ, ಸ್ಲೇಟು, ಪುಸ್ತಕ, ಉಡಿಗೆತೊಡಿಗೆಗಳನ್ನು ಅನಾಥಾಲಯದ ಪರವಾಗಿ ಅದರ ಅಧ್ಯಕ್ಷರ ಹಸ್ತದಿಂದ ವಿತರಣೆಮಾಡಿಸುವ ಸಮಾರಂಭವು ಇದೇ ತಾ9ರಲ್ಲಿ ನಡೆಯಿತು.

ವಿಟ್ಲಪಿಂಡಿ—ಶ್ರೀ ಕೃಷ್ಣ ಮಠದಲ್ಲಿ ಪರ್ಯಾಯ ಶೀರೂರುಮಠದ ಶ್ರೀ ಲಕ್ಷ್ಮೀಂದ್ರತೀರ್ಥ ಶ್ರೀ ಪಾದಂಗಳವರ ನೇತೃತ್ವದಲ್ಲಿ ಧಾರ್ಮಿಕ ಶುಭ ಸಂಪ್ರದಾಯಗಳಿಗನುಸಾರವಾಗಿ ವಿಜೃಂಭಣೆಯಿಂದ ಜರಗಿತು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ನಡಿಯುವ ಚಿತ್ರ

ಮನುಷ್ಯನಿಗೆ ಕಥೆಬೇಕು, ಕನಸಬೇಕು ಕತೆಬೇಕು, ಕಾವ್ಯಬೇಕು, ಆದರೆ ಇವೆಲ್ಲಾ ಸರ್ವಾನುಕೂಲವಿದ್ದ ಸನಿಗನಸು ಕಾಣುವ ಸಲವರಿಗೆ ಮಾತ್ರ ಜಗತ್ತಿನ ಬಹುಮಂದಿಗೆ ನೊಂದ ಹೃದಯಕ್ಕೆ ಆನಂದನೀಯಲು ಅರ್ಧಗಂಟೆಯಾದರೂ ಅದ್ಭುತಹಾಸ್ಯ ಬೇಕು ಪಕ್ಕೆಲುಬು ಕುಕ್ಕುವ ನಗೆಬೇಕು. ಎಲ್ಲವನ್ನು ಮರೆಯಿಸಿನ್ನುಮರೆಯಿಸುವ ಮನಮೋಹಕ ಇಂದ್ರಜಾಲವಿರಬೇಕು. ಇವರಿಂದಲೇ ಇಷ್ಟಾರ್ಥಸಿದ್ಧಿ. ಇದಕ್ಕೆ ಜಾದುವೆನ್ನುವರು. ಇದರಿಂದ ತೂಗುತ್ತಿರುವ ನಿಮ್ಮ ತುದಿ ಮೊದಲಿಲ್ಲದ ಆಸೆಯ ತೊಟ್ಟಿಲೇ ಝೂಲಾ.

ಇದೇ

ಜಾದೂ-ಯಿ-ಝೂಲ

ಮೋಹನ ಚಿತ್ರ.

ನಿಮ್ಮ ಪರಿಚಿತ ನಟಶ್ರೇಷ್ಠರು ನೂತನವಾಗಿ ಅಭಿನಯಿಸಿದ ಜಾದು ಸಾಹಸ-ಹಾಸ್ಯ-ಸಂಗೀತ-ಕ್ರೀಡು-ಮೊದಲಾದ ಮುಖ್ಯ ವಿಚಾರಗಳನ್ನೊಳಗೊಂಡ ಕಥೆಯನ್ನು ನೋಡಿಯೇತೀರಬೇಕು.

ಬರುವ ಚಿತ್ರ ಬಾಬುರಾವ್ ಪೆಂಡರ್‌ಕರರ

ನೆಗದ್ ನಾರಾಯಣ.

ಲೇಖಕರಿಗೆ ಸೂಚನೆ

ಸ್ಥಳಾಭಾವದಿಂದ ಈ ಬಾರಿ ಕೆಲವು ಜಿಲ್ಲಾ ಸಮಾಚಾರಗಳನ್ನೂ ಪಡುಗೆ ಮತ್ತು ಅಕ್ಕಿ ಸಂಗ್ರಹದ ಕುರಿತು ಬಂದ ಲೇಖನಗಳನ್ನೂ ಪ್ರಕಟಿಸಲಾಗಲಿಲ್ಲ. ನಮಗೆ ಬರುವ ಲೇಖನಗಳು ಅತಿ ಚುಟುಕಾಗಿದ್ದು ಸ್ಪಷ್ಟಾಕ್ಷರಗಳಿಂದ ಕಾಗದದ ಒಂದೇ ಮಗ್ಗುಲಲ್ಲಿ ಬರೆಯಲ್ಪಟ್ಟಿರಬೇಕು. (ಸಂ, ನ.)

ದಕ್ಷಿಣ ಕನ್ನಡ

ಮಂಗಳೂರು.

ಆರೋಗ್ಯ ಮಂತ್ರಿಗಳ ಆಗಮನ ಆರೋಗ್ಯ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟರು ೩ನೆಯ ತಾರೀಕಿಗೆ ಮಂಗಳೂರಿಗೆ ಬಂದರು. ಆಹಾರ ಪರಿಸ್ಥಿತಿಯನ್ನು ಸುಧಾರಿಸುವುದರ ಕುರಿತು ಏನೆಲ್ಲ ಕಾರ್ಯವ್ಯವಸ್ಥೆಗಳನ್ನು ಮಾಡಬಹುದೆಂದು ವಿಚಾರಿಸುವುದೇ ಅವರ ಸದ್ಯದ ಆಗಮನದ ಮುಖ್ಯೋದ್ದೇಶ. ಮರುದಿನ ೧೧ಗಂಟೆಯ ಕಾಲಕ್ಕೆ ಡಿ. ಬೋರ್ಡಿನ ಸಭಾ ಭವನದಲ್ಲಿ ನಗರದ ಅಧ್ಯಕ್ಷರ ಮತ್ತು ಅಧಿಕಾರಿಗಳ ಚಿಕ್ಕದೊಂದು ಸಭೆ ಜರಗಿತು. ಮಂತ್ರಿಗಳು ಆಹಾರಪರಿಸ್ಥಿತಿಯ ಕಠಿನತೆಯನ್ನು ವಿವರಿಸಿ ಹೇಳಿದರು, ಇಲ್ಲಿಗೆ ಇನ್ನು ಅಕ್ಕಿ ಬರುವಹಾಗಿಲ್ಲ. ಜಿಲ್ಲೆಯು ಸ್ವಾವಲಂಬನವನ್ನು ಕಲಿಯಬೇಕು ಎಂಬುವೇ ಸರಕಾರದ ಅಭಿಪ್ರಾಯವಾಗಿದೆ. ಅಕ್ಕಿ ಸಂಗ್ರಹಣವನ್ನು ಇನ್ನಷ್ಟು ಚೆನ್ನಾಗಿ ಸಾಗಿಸುವುದರಲ್ಲಿ ಮಹಾ ಜನರು ಸಹಕರಿಸಬೇಕು-ಎಂದರು. ಆನಂತರ ಕೆಲವರು ಸೂಚನೆಗಳನ್ನು ಕೊಟ್ಟರು. ಹಳ್ಳಿಗಳಿಗೆ ಆದ ಅನ್ಯಾಯವನ್ನು ಕೆಲವರು ಎತ್ತಿ ತೋರಿಸಿದರು. ಕೊನೆಗೆ ಅಧಿಕಾರಿಗಳೂ ಪ್ರತಿಷ್ಠಿತ ಗೃಹಸ್ಥರೂ ಮಂತ್ರಿಗಳೂ ಒಂದಾಗಿ ಮುಖ್ಯ ಕೇಂದ್ರಗಳಲ್ಲಿ ಸಂಚರಿಸಬೇಕು. ಕೃಷಿಕರಿಗೆ-ವರ್ಗದಾರರಿಗೆ ಎಂದು ಬಿಟ್ಟ ಈ ವರ್ಷದ ಅಕ್ಕಿಯಲ್ಲಿ, ಹೊಸ ಬೆಳೆಯಾಗುವ ವರೆಗೆ ಬೇಕಾದುದಕ್ಕಿಂತ ಹೆಚ್ಚಿಗೆ ಉಳಿಯುವ ಅಂಶವನ್ನು ಅವರು ಸದ್ಯಕ್ಕೆ ಬಿಟ್ಟುಕೊಡಬೇಕೆಂದು ಪ್ರಾರ್ಥನೆ ಮಾಡಿಸಬೇಕು. ಹೀಗೆ ದೊರೆಯುವುದನ್ನು ಸಂಗ್ರಹಿಸಬೇಕು-ಎಂದು ತೀರ್ಮಾನಿಸಲಾಯಿತು. ಅದೇ ದಿನ ಸಂಜೆಗೆ ಸಿ. ಪಿ. ಸಿ. ಕಂಪೆನಿಯ ಕಚೇರಿಯಲ್ಲಿ ಪತ್ರಿಕಾ ಸಂಪಾದಕರೊಡನೆ ಮಂತ್ರಿಗಳು ವಿಚಾರ ವಿನಿಮಯ ಮಾಡಿದರು.

ನಮ್ಮ ಜಿಲ್ಲೆಯಲ್ಲಿ ಅಕ್ಕಿ ದಾಸ್ತಾನು— ಸದ್ಯ ನಮ್ಮ ಜಿಲ್ಲೆಯಲ್ಲಿರುವ ಅಕ್ಕಿ ದಾಸ್ತಾನು ೬೩೩೬ ಟನ್ನು ಮಾತ್ರ. ಜಿಲ್ಲೆಗೆ ಹೊರಗಿನಿಂದ ಬರಬೇಕಾದುದು ೧೧೩೩೦ ಟನ್ನು; ಇದರಲ್ಲಿ ೩೩೮೦ ಟನ್ನು ಈ ಮುಂಚೆ ಬಂದಿದೆ; ಉಳಿದುದು ಬರುವುದೆಂದು ನಿರೀಕ್ಷಿಸಲಾಗಿದೆ. ಸದ್ಯಕ್ಕೆ ಪ್ರತಿ ವಾರಕ್ಕೆ ೧೫೦೦ಟನ್ನು ಅಕ್ಕಿ ವಿನಿಯೋಗ ಹೊಂದುತ್ತದೆ. ಬರಬೇಕಾದ ಅಕ್ಕಿ ಬಂದರೆ ಈ ತಿಂಗಳ ಅಂತ್ಯದವರೆಗೆ ಕಾಲಕ್ಷೇಪಮಾಡಬಹುದು. ಬರುವ ಬೆಳೆ ನವಂಬರ ಅದಿಯೊಳಗೆ ದೊರೆಯುವ ಹಾಗಿಲ್ಲ. ಆದುದರಿಂದ ೩೦೦೦ ಅಧಿಕ ಟನ್ನು ಅಕ್ಕಿಯಿಲ್ಲದೆ ನಿರ್ವಾಹವಿಲ್ಲ. ಬರಬೇಕಾದ ಅಕ್ಕಿಯಲ್ಲಿ ವಿಳಂಬವಾದರೆ ಕೂಡಲೆ ಪರಿಸ್ಥಿತಿಯು ಮುಂದು ಹೋಗುವುದು. ಆದುದರಿಂದ ಸದ್ಯದ ವಿಪತ್ತನ್ನು ನಿವಾರಿಸುವುದು ದೊಡ್ಡ ಸಮಸ್ಯೆಯಾಗಿದೆ, ಎಂಬುದನ್ನು ಮಂತ್ರಿಗಳು ವಿದಿತಪಡಿಸಿದರು.

೧೯೪೬-೪೭ನೆಯ ವರ್ಷದಲ್ಲಿ ಅಕ್ಕಿಯ ಉತ್ಪತ್ತಿ ಸುಮಾರು ೨೫೫೦೦೦ ಟನ್ನುಗಳು (ಒಂದು ಟನ್ನಿಗೆ ಸುಮಾರು ೨೮ ಮುಡಿ) ಇಲ್ಲಿಯ ಖರ್ಚಿಗೆ ಬೇಕಾದುದು ೧೮೦೦೦೦ ಟನ್ನುಗಳು ಎಂದರೆ ನಮ್ಮ ಜಿಲ್ಲೆಯು ಉಳಿಕೆಯ ಜಿಲ್ಲೆಯೆಂದಾಯಿತು. ಈ ವರ್ಷವಾದರೂ ಸಾಮಾನ್ಯ ವಾರ್ಷಿಕೋತ್ಪತ್ತಿಯ ಸೇಕಡ ೯೫ಭಾಗವು ದೊರೆಯಬಹುದೆಂದು ಊಹಿಸಲಾಗಿದೆ.

ಪಾನನಿರೋಧದ— ಕುರಿತು ಇಬ್ಬರು ಪ್ರಚಾರ ಗಾಯನಕಾರರನ್ನು ನೇಮಿಸುವುದದೆಯಂತೆ. ಲಾವಣಿ ಹಾಡಬಲ್ಲ ಉತ್ಸಾಹಿ ತರುಣರಿಂದ ಜಿಲ್ಲಾ ಕಲೆಕ್ಟರರು ಅರ್ಜಿಗಳನ್ನು ಅಪೇಕ್ಷಿಸಿದ್ದಾರೆ.

ಮೂಲ್ಕಿ:— ತಾ. 31-8-1947ರಲ್ಲಿ ಸ್ಥಳೀಯ ಬಿಲ್ಲವರ ಸಮಾಜದ ಕಟ್ಟೋಣದಲ್ಲಿ ಶ್ರೀ. ಸಿಡ್ಮೋಡಿ ಗುರುರಾಜ ಭಟ್ಟ ಅಧ್ಯಕ್ಷತೆಯಲ್ಲಿ "ಮೂಲ್ಕಿಗ್ರಾಮ ಸುಧಾರಣಾ ಸಂಘ"ವೆಂಬ ನಾಮಾಂಕಿತದಿಂದ ಒಂದು ಸಂಸ್ಥೆಯು ಸ್ಥಾಪಿಸಲ್ಪಟ್ಟಿತು. ಪ್ರಕೃತ ಬಡ ಹಳ್ಳಿಗರು ಪಡುತ್ತಿರುವ ಸಂಕಷ್ಟಗಳ ಮತ್ತು ಮುಂದಿನ ಹಳ್ಳಿಯ ಕುರಿತು ಸಂಘಟನಾ ರೂಪದಿಂದ ಕೈಕೊಳ್ಳಬೇಕಾದ ಉದ್ದೇಶಗಳ ವಿಷಯ ಶ್ರೀಗಳಾದ ಯನ್. ಟಿ, ಸುವರ್ಣ, ಜನಾಬ್ ಮೊಯಿದಬ್ಬ ಸಾಹೇಬ, ಯಂ. ಗೋವಿಂದರಾವು ಮೊದಲಾದವರು ನೆರೆದ ಸಭಿಕರಿಗೆ ಮನದಟ್ಟಾಗುವಂತೆ ವಿವರಿಸಿದರು. ಬಳಿಕ ಕಾರ್ಯಕಾರಿ ಮಂಡಳಿಯು ರಚಿತವಾಗಿ ಸಭಾಧ್ಯಕ್ಷರ ಸುದೀರ್ಘ ಭಾಷಣದೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು. ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ಶ್ರೀ ನಾರಾಯಣ ಗುರು ಸ್ವಾಮಿಯ ಜನ್ಮದಿನಾಚರಣೆಯು ತಾ. 31-8-47ರಲ್ಲಿ ಶ್ರೀ ಜಿ. ಬಾಲಕೃಷ್ಣನವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಹಿರಿಯಡ್ಕ:— ತಾ. 8-9-47ರಲ್ಲಿ ಆರ್ಯಸಮಾಜ ಮಂದಿರದಲ್ಲಿ ಶ್ರೀ ಬಿ. ಲಕ್ಷ್ಮೀನಾರಾಯಣ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀಗಳಾದ ಎಚ್. ಸಂಜೀವ ಹೆಗ್ಡೆ, ಎಮ್. ಸಿದ್ದಯ ಸೆಟ್ಟಿ, ಎಮ್. ಗೋವಿಂದ ಸೆಟ್ಟಿ, ಹೆ. ಕೆ. ಅನಂತಯ್ಯ ಪಿ. ವಿಶ್ವನಾಥ ಶರ್ಮ-ಮೊದಲಾದವರು ಶ್ರೀ ಕೃಷ್ಣ ಜಯಂತಿಯ ಮಹತ್ವ, ಶ್ರೀಕೃಷ್ಣನ ಆದರ್ಶ, ಶ್ರೀ ಕೃಷ್ಣನ ಅಮರ ಸಂದೇಶ-ಗೀತೆಯ ಕುರಿತು ಭಾಷಣವಿತ್ತರು.

ದೇವಾಂಗ ಸಮಾಜ ಸಂಘ ಮಂಗಲಪಾಡಿ,ದ ಕ.— ಇದರ ವಾರ್ಷಿಕೋತ್ಸವವು ತಾ. 30-8-47ಕ್ಕೆ ಕಾಸರಗೋಡು ತಾಲೂಕು ಶ್ರೀ ಭಗವತೀ ಕ್ಷೇತ್ರದ ಗೋಪುರದಲ್ಲಿ ಶ್ರೀ ರಾಮರಿಟಾಯರ್ಡ್ ಪೋಲಿಸ್ ಸರ್ಕಲ್ ಇನ್ಸ್ಪೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಯವರಿಂದ ವರದಿ ವಾಚನದ ಬಳಿಕ ಅಧ್ಯಕ್ಷರು ಜಾತಿಯ ಮೇಲ್ಮೆಗೆ ಪ್ರತಿಯೊಬ್ಬನೂ ಪ್ರಯತ್ನಿಸಬೇಕೆಂದು ವಿವರಿಸಿದರು, ತರುವಾಯ ಹೊಸ ವರ್ಷಕ್ಕೆ ಆಡಳಿತ ಕಮಿಟಿಯು ಚುನಾವಣೆಯಾಗಿ, ಶ್ರೀಯುತ, ಅನುಪನವರಿಂದ ಧನ್ಯವಾದ ಉಪಾಹಾರದೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಗೋಳಿತಟ್ಟು:— ಕೊಕ್ಕಡಕ್ಕೆ ಸಮೀಪದ ಮುಳಿಂಗಾರು ಎಂಬಲ್ಲಿ ಕೆಲವು ದಿವಸಗಳ ಹಿಂದೆ, ಜಜಸ್ಥಳಿಯಾಗಿದ್ದ ಹೆಂಗುಸೊಬ್ಬಳು ರಾತ್ರಿ ಕೊಟ್ಟಿಗೆಯಲ್ಲಿ ಮಲಗಿದ್ದಳಂತೆ ಅಲ್ಲಿಗೆ ಅಂಜಿಕೆಯಾಗದಂತೆ ಸಮೀಪದಲ್ಲಿ ಮಗುವನ್ನೊಬ್ಬನು ಮಲಗಿದ್ದನು. ರಾತ್ರಿ ಕೊಟ್ಟಿಗೆ ಕಟ್ಟಿದ್ದ ಗೋಡೆಯು ವಿಪರೀತ ಮಳೆಯಿಂದಾಗಿ ಕುಸಿದು ಬಿದ್ದು ಇಬ್ಬರೂ ಮರಣ ಪಟ್ಟಿರುವರೆಂದೂ ತಿಳಿದು ಬರುತ್ತದೆ.

ಕಟೀಲು:— ರೇಶನ್ ಅಂಗಡಿಯಲ್ಲಿ ಕಳೆದವಾರ ಅಕ್ಕಿಯಿಲ್ಲದೆ ಜನರು ಉಪವಾಸ ಬಿದ್ದು ಗೋಳಿಡುವುದನ್ನು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಆಡಳಿತೆಯವರು ಕಂಡು ಎಲ್ಲಾ ಕಾರ್ಡುದಾರರಿಗೆ ಒಂದು ದಿವಸದ ಅಕ್ಕಿಯನ್ನು ಹಿಂದೂ ಮುಸಲ್ಮಾನ್ ಕ್ರೈಸ್ತ ಎಂಬ ಭೇದಭಾವವಿಲ್ಲದೆ ದೇವಸ್ಥಾನದ ವಿನಿಯೋಗ ಫಂಡಿನಿಂದ ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ.ಅವರ ಉಪಕಾರ ಅಭಿನಂದನೀಯ.

ಕುಂದಾಪುರ:—ಇದೇ ಬರುವ ನಾಡಹಬ್ಬದ ಸಮಯದಲ್ಲಿ ಸ್ಥಳೀಕ ಯುವಜನ ಸಾಹಿತ್ಯಾಲಯದವರು ವಿದ್ಯಾರ್ಥಿಗಳ ಕಥಾ ಸಂಕಲನ ವೊಂದನ್ನು ಪ್ರಕಟಿಸಲಿರುವರೆಂದೂ ವಿದ್ಯಾರ್ಥಿಗಳು ಇದೇ ತಾ 25ರೊಳಗೆ ಕತೆಗಳನ್ನು ಕಳುಹಿಸಿ ಪ್ರೋತ್ಸಾಹಿಸಬೇಕೆಂದೂ ಉತ್ತಮವಾದ ಮೂರು ಕತೆಗಳಿಗೆ ಬಹುಮಾನವಿರುವುದೆಂದೂ ಶ್ರೀ. ಜಗನ್ನಾಥ ಮಾಡ್ಲಕಟ್ಟೆ, ಯುವಜನ ಸಾಹಿತ್ಯಾಲಯ, ಕುಂದಾಪುರ ಇವರು ಅಪೇಕ್ಷಿಸುತ್ತಾರೆ.

ಕಾಪು:— ಸ್ಥಳೀಕ ಬೋರ್ಡು ಎಲಿಮೆಂಟರಿ ಶಾಲೆಯ ಹೊಸಕಟ್ಟೋಣದ ಶಂಕುಸ್ಥಾಪನೆಯು ತಾ. 11-9-47ರಲ್ಲಿ ಉಡುಪಿ ರೇಂಜಿನ ಡೆಪ್ಯುಟಿ ಇನ್ಸ್ಪೆಕ್ಟರವಾದ ಶ್ರೀ ವೈ. ಗೋಪಾಲ್ ಬಿ. ಎ. ಎಲ್. ಟಿ ಇವರ ಅಧ್ಯಕ್ಷತೆಯಲ್ಲಿ ಶ್ರೀ ಕಾಪು ಬೀಡು ಚಂದ್ರರಾಜ ಸಾವಂತ ಮದ್ದೆ ಹೆಗ್ಗಡೆಯವರ ದಿವ್ಯ ಹಸ್ತದಿಂದ ಜರಗುವುದು

ಮೂಡುಬಿದ್ರಿ:— ಕಳೆದ ಸಂಚಿಕೆಯಲ್ಲಿ ಶ್ರೀ ಕೆ. ಕರಿಯಣ್ಣ ಶೆಟ್ಟರಿಂದ ಧ್ವಜಾರೋಹಣ ಎಂತ ಪ್ರಕಟವಾದುದನ್ನು ಶ್ರೀ ಕೆ. ರಂಗನವರಿಂದ ಎಂತ ತಿದ್ದಿ ಕೊಳ್ಳಬೇಕಾಗಿದೆ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

ಸ್ಮಾಲ್ ಕಾಜ ನಂಬ್ರ 469-47.

ವಾದಿ-ಬೆನಗಲ ರಾಘವೇಂದ್ರ ನಾಯ್ಕ ಇವರಿಂದ ಜನರಲ್ ಪವರ್ ಒಫ್ ಎಟರ್ನಿ ಪಡೆದ ಬೆನಗಲ ಶ್ರೀನಿವಾಸ ನಾಯ್ಕ.

ಪ್ರತಿವಾದಿ ಶೇಶಯ್ಯ ಯಾನೆ ಅಕ್ಕಿ ಅಂಗಡಿ ಶೇಶಪ್ಪ-ಅಪ್ಪಯ್ಯನ ಬಗ್ಗೆ ಕೆರೆಗಾರನ ಮಗ, ಕುಂದಾಪುರ ತಾಲೂಕು ೧೨ನೆ ಕೂಡುವಳಿ ಗ್ರಾಮದ ವಾಸಸ್ಥ, ಇವರಿಗೆ·

ನಿಮ್ಮ ಮೇಲೆ ವಾದಿಯು ೧೯೯೯ ಬಾಕಿ ರೂ. 239-8-11 ವಸೂಲುಮಾಡಿಕೊಳ್ಳುವ ಬಗ್ಗೆ ಮಾಡಿದ ಮೇಲಿನ ದಾವೆಯನ್ನು ಕೋರ್ಟಿನವರು ಇದೇ ಸಪ್ಟೆಂಬರ್ ತಾರೀಕು 24ನೆ ಬುಧವಾರ ದಿವಸಕ್ಕೆ ಅಪ್ಪೀಲ ವಿಚಾರ ಬಗ್ಗೆ ಇಟ್ಟಿರುತ್ತಾರೆ. ಆ ದಿವಸ ಪೂರ್ವಾಹ್ನ 11 ಗಂಟೆಗೆ ನೀವು ಕೋರ್ಟಿನ ಮುಂದೆ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಪ್ರತಿವಾದಿ ನಡೆ ಹೋದರೆ ನಿಮ್ಮನ್ನು ಎಕ್ಸ್ಪಾರ್ಟೆ ಮಾಡಿ ತೀರ್ಮಾನಿಸಲಾಗುತ್ತದೆಂಬ ಸಂಗ್ತಿ ಈ ಮೂಲಕ ನಿಮಗೆ ತಿಳಿಸಲಾಗುತ್ತದೆ.

ಟಿ. ಗಣೇಶರಾವ್,

ವಾದಿ ವಕೀಲ.

ಕುಂದಾಪುರ 5-9-47

ಸಾದರ ಸ್ವೀಕಾರ ಮತ್ತು ವಿಮರ್ಶೆ

೨ 'ಜಯಹಿಂದ'— ಸಂಪುಟ ೯, ಸಂಚಿಕೆ ೩೦-೩೧ ಡಾ॥ ನಾ. ಸು. ಹರ್ಡೀಕರರ ಸಂಚಾಲಕತ್ವದಲ್ಲಿ ರಾ. ವೆ. ಕರಗುದರಿ, ಎಸ್. ಎಸ್. ಕಾರಂತ್, ಶಂ. ಬಾ. ಮುನಗೋಳಿಯಂತಹರ ಸಮರ್ಥ ಸಂಪಾದಕತ್ವದಲ್ಲಿ ಹುಬ್ಬಳ್ಳಿಯಿಂದ ಹೊರಡುವ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.ಕ್ರಾ‌ಉನ್ ⅛ ಆಕಾರದ ೩೦ ಪುಟಗಳ ಈ ಸ್ವಾತಂತ್ರ್ಯೋತ್ಸವ ಸಂಚಿಕೆಯು ಹಲವು ವಿಚಾರಪೂರ್ಣವಾದ ಉತ್ಕೃಷ್ಟ ಲೇಖನಗಳಿಂದ, ಸುಂದರ ತ್ರಿವರ್ಣ ಧ್ವಜಮುದ್ರೆಗಳಿಂದ, ನೇತಾಜಿ ಮುಂತಾದ ಮುಂದಾಳುಗಳ ರೂಪಚಿತ್ರಗಳಿಂದ ಅಂತರಂಗ ಬಹಿರಂಗ ಸುಂದರವಾಗಿ ಪ್ರಕಟವಾಗಿರುವುದು ಅಭಿನಂದನೀಯ. ಬಿಡಿ ಪ್ರತಿ ಬೆಲೆ ೧ ಆ. ೬ ಪೈ.

'ತವರಾಷ್ಟ್ರ':—ಆರನೆಯ ವಾರ್ಷಿಕ ಸಂಚಿಕೆ. ವಿಶೇಷತಃ ಕನ್ನಡ ಸಿನೆಮಾ ಮತ್ತು ನಾಟಕಗಳ ಬೆಳವಣಿಗೆಗೆ ಮೀಸಲಾಗಿರುವ ಈ ಮಾಸಿಕ ಪತ್ರಿಕೆಯ ವಾರ್ಷಿಕ ವಿಶೇಷ ಸಂಚಿಕೆಯು ಕನ್ನಡ ಸಿನೆಮಾ ಮತ್ತು ನಾಟಕ ಕ್ಷೇತ್ರಗಳಲ್ಲಿ ಪ್ರಸಿದ್ಧರಾದ ಹಲವು ನಟನಟಿಯರ ರೂಪಚಿತ್ರ ಮತ್ತು ಪರಿಚಯಗಳನ್ನೊಳಗೊಂಡಿರುವುದಲ್ಲದೆ ಹಲವು ಕತೆ ಕವನ ಹರಟೆ ಮುಂತಾದ ವಾಚನೀಯ ಲೇಖನ ವಿಶೇಷಗಳಿಂದಲೂ ಅಂತರಂಗ ಬಹಿರಂಗ ಸುಂದರವಾಗಿರುವುದನ್ನು ಪರಿಶೀಲಿಸಿದರೆ ಇಡಲ್ಪಟ್ಟಿರುವ ಬೆಲೆ ೧ರೂ. ಕಡಿಮೆ ಯೆಂದೇ ಹೇಳಬೇಕು.

— ಕೆ. ಶ್ರೀ. ರಾ.

ಬಾಲಂರು ಆರೋಗ್ಯಶಾಲಿಗಳಾಗಲು (ಪ್ರಭೂಸ್, ಬಾಲಾಮೃತ ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನೆಟ್ಟಗಾಗಲು ತಾಯಿ ತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ. ,ಮಾತ್ರ, ಮೆಚ್ಚು ಕಳೆದರೆ ಮತ್ತೆ ಬಾರದು.

'ಪ್ರಭೂಸ್'

ಬಾಲಾಮೃತ

ಪ್ರಭೂಸ್ ಬಾಲಾಮೃತದ ಖ್ಯಾತಿಗೆ ದಾಖಲೆ ಬೇಕೆ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,

(ರಿಜಿಸ್ಟರ್ಡ್)

ಕುಂಜಾಲು, ಪೋ. ಬ್ರಹ್ಮಾವರ. ದ.ಕ.

ಸ್ಟಾಕಿಸ್ಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ.

L. N. Sharma, Mangalore.



Approved firm by the Govt. of Mysore Certified by the Agent of the Govt. of Ceylon & India.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya

ಸೋಮಾರಿಯ ಡೈರಿಯಿಂದ

• ಹೆಸರಲ್ಲೂ ಇದೆ •

ವಿಲಾಯತಿಯ ಜೋರ್ಜ್ ಮಹಾರಾಜರು ಆಗೋಸ್ತು 15ನೇ ತಾರೀಕಿನಿಂದ ಇಂಡಿಯದ ಚಕ್ರವರ್ತಿತನಕ್ಕೆ ರಾಜಿ ಕೊಟ್ಟಿರುವರು. ರಾಜಾಜಿಯವರು ಇಂಡಿಯದ ಗವರ್ನರ್ ಜನರಲ್ ಆದೊಡನೆ ತನ್ನ ಚಕ್ರವರ್ತಿತನವನ್ನು ಬಿಟ್ಟು ಬಿಡುವರಂತೆ.

○○ ○○

ವಿಲಾಯತಿಯ ಮುಖ್ಯ ಮಂತ್ರಿ ಪದವಿಯು ಸದ್ಯದಲ್ಲಿ ಖಾಲಿ ಬೀಳುವಂತಿದೆ. ಅದು ನಮ್ಮ ಲಾರ್ಡ್ ಮೌಂಟ್‌ಬೇಟನರಿಗೆ ಸಿಗುವ ಸಂಭವವಿದೆ. ಅವರು ವಿಲಾಯತಿಗೆ ಹೋಗುವಾಗ ತನ್ನ ಲಾರ್ಡ್ ಪದವಿಯನ್ನು ಪಾಕಿಸ್ತಾನದ ಗವರ್ನರ್ ಜನರಲಿಗೆ ಕೊಟ್ಟು ಹೋಗುವರಂತೆ.

○○ ○○

200 ವರ್ಷ ಒಂದು ರಾಜ್ಯವನ್ನು ಆಳಿ ಹೊರಟುಹೋಗುವಾಗ ಅದನ್ನು ಇಬ್ಭಾಗಿಸಿ ಅಲ್ಲಿ ಶಾಶ್ವತವಾದ ಅಶಾಂತತೆಯು ನೆಲೆಗೊಳ್ಳುವಂತೆ ಮಾಡುವದೆ ತಾನು ಕಾರಣನಾಗಲಾರೆನೆಂದು ಹೇಳಿ ಲೋರ್ಡ್ ವೇವೆಲರು ವೈಸರಾಯತ್ವವನ್ನು ತ್ಯಜಿಸಿದಾಗ ಅದನ್ನು ವಹಿಸಿಕೊಂಡು ಸರ್ವಸಮ್ಮತದಿಂದ ದೇಶವನ್ನು ಇಬ್ಭಾಗಿಸಿ ಎಲ್ಲೆಡೆಯಲ್ಲೂ ಸುಖಶಾಂತಿಯನ್ನು ಸ್ಥಾಪಿಸಿದ ಮೌಂಟ್‌ಬೇಟನರೇ ಪ್ರಕೃತ ಅಶಾಂತತೆಯಲ್ಲಿರುವ ವಿಲಾಯತಿಗೆ ಮುಖ್ಯ ಮಂತ್ರಿಗಳಾಗಬೇಕೆಂದು ಅಲ್ಲಿಯವರ ಆಸೆಯಿದೆಯಂತೆ.

○○ ○○

ರಾಜೇಂದ್ರರೆಲ್ಲರೂ ತಮ್ಮತಮ್ಮ ಸರ್ವಾಧಿಕಾರವನ್ನು ಬಿಟ್ಟು ಬಿಡುವ ಈ ಕಾಲದಲ್ಲಿ ರಾಜೇಂದ್ರಪ್ರಸಾದರು ಘಟನಾ ಸಮಿತಿಯ ಅಧ್ಯಕ್ಷರಾಗಿರುವುದು ಕೆಲವರಿಗೆ ಸಮ್ಮತವಿಲ್ಲವಂತೆ. ಇನ್ನೆರಡು ತಿಂಗಳೊಳಗೆ ಘಟನಾ ಸಮಿತಿಯು ಕೇಂದ್ರ ಸಭೆಯಾಗಿ ಮಾರ್ಪಡುವಾಗ ರಾಜೇಂದ್ರ ಪ್ರಸಾದರು ಅಧ್ಯಕ್ಷಪದವಿಯನ್ನು ಬಿಟ್ಟು ಬರೇ ಬಾಬು ಪ್ರಸಾದರಾಗುವರಂತೆ. ಮುಂಬೈ ಅಸೆಂಬ್ಲಿಯ ಅಧ್ಯಕ್ಷರಾಗಿದ್ದ ಮಾವಳಂಕರರು ಸರ್ವಾನುಮತದಿಂದ ಈ ಸಭೆಯ ಅಧ್ಯಕ್ಷರಾಗಿ ಆರಿಸಲ್ಪಡುವರಂತೆ.

○○ ○○

ಮೌಂಟ್‌ಬೇಟನರು ತನ್ನ ಲೋರ್ಡ್ ಪದವಿಯನ್ನು ಕ್ವಾದೆ ಅಜಾಮರಿಗೆ ಬಿಟ್ಟುಕೊಟ್ಟನಂತರ ಬ್ಯಾ. ಜಿನ್ನರು ತನ್ನ ಕ್ವಾದೆ ಅಜಾಮತ್ವವನ್ನು ಬಿಟ್ಟುಬಿಟ್ಟು ಬರೇ ಲೋರ್ಡ್ ಜಿನ್ನರಾಗುವರಂತೆ. ಆದರೆ ಹಿಂದೂಸ್ಥಾನಕ್ಕೆ ಲೋರ್ಡ್ ಪದವಿಯಿಲ್ಲದವರ್ಯಾರೂ ಗವರ್ನರ್ ಜನರಲ್ ಆಗಬಾರದೆಂದು ಅವರ ಹಟ ಸಾಧನೆಯಿದೆಯಂತೆ. ಇಲ್ಲಿಯಾರೂ ಲೋರ್ಡ್ ಪದವಿಯನ್ನು ಸ್ವೀಕರಿಸಿ ಗವರ್ನರ್ ಜನರಲಾಗುವವರು ಇರುವುದಿಲ್ಲವಾದುದರಿಂದ ಮೊದಲೇ ಲೋರ್ಡ್ ಆಗಿ ವಿಲಾಯತಿಯಲ್ಲಿರುವ ಲೋರ್ಡ್ ಸಿನ್ಹರು ಹಿಂದೂಸ್ಥಾನದ ಗವರ್ನರ್ ಜನರಲ್ ಆಗಿ ಆರಿಸಲ್ಪಡಬೇಕೆಂದು ಜಿನ್ನರ ಇಚ್ಛೆಯಿದೆಯಂತೆ.

○○ ○○

ಜಿನ್ನರು ಕ್ವಾದೆ ಅಜಾಂ ಪದವಿಯನ್ನು ಬಿಟ್ಟನಂತರವೂ ಗಾಂಧಿಯವರನ್ನು ಜನರು ಮಹಾತ್ಮರೆಂದು ಕರೆಯುವಷ್ಟು ಕಾಲ ಅವರನ್ನೂ ಕ್ವಾದೆ ಅಜಾಂ (ಅಂದರೆ ಮಹಾ ಧುರೀಣ) ಎಂದು ಸಂಭೋಧಿಸುವುದರಲ್ಲಿ ಅವರಿಗೆ ಒಪ್ಪಿಗೆಯಿದೆಯಂತೆ.

○○ ○○

ಜಿನ್ನರು ತನ್ನ ಪಾಕಿಸ್ತಾನದಲ್ಲಿ ಬೇಕಾದ ಕಾರಭಾರ ಮಾಡಿಕೊಂಡಿರಬಹುದಷ್ಟೆ! ಪಾಕಿಸ್ತಾನವನ್ನು ಹಿಂದುಸ್ಥಾನವೆಂದೇ ಕರೆಯಬೇಕೆಂದು ಅವರು ಹಟಹಿಡಿಯುವುದು ಏಕೆಂದು ಅನೇಕರಿಗೆ ಅರ್ಥವಾಗಲಿಲ್ಲ. ತನ್ನದು ದೇವಸ್ಥಾನ ಉಳಿದವರದು ಭೂತಸ್ಥಾನವೆನ್ನುವಂತೆ ತನ್ನದು ಪಾಕಿಸ್ತಾನ ಉಳಿದದ್ದು ಹಿಂದೂಸ್ಥಾನವೆಂದು ಸಾಧಿಸುವುದರಲ್ಲಿ ಜಿನ್ನರಿಗೂ ಒಂದು ಉದ್ದೇಶವಿದೆ.

○○ ○○

'ತುರುಕರು ಇಲ್ಲದನಾಡು ನರಳಿಕೆಸಮಾನ'ವೆಂದು ಪುರಂಧರ ದಾಸರು ಒಮ್ಮೆ ಹಾಡಿದ್ದರಂತೆ. ಅದನ್ನೇ ಈಗ ಜಿನ್ನರು ಹಾಡುತ್ತಿದ್ದಾರೆ. ಮುಸಲ್ಮಾನರು ಬಹು ಸಂಖ್ಯಾಕರಾಗಿರುವ ರಾಜ್ಯವು ಪಾಕಿಸ್ತಾನ (ಅಂದರೆ ಪವಿತ್ರಸ್ಥಾನ) ಇತರರು ಬಹು ಸಂಖ್ಯಾಕರಾಗಿರುವ ರಾಜ್ಯ ಅಪವಿತ್ರಸ್ಥಾನ (ಅಂದರೆ ಹಿಂದೂಸ್ಥಾನ) ವೆಂದು ಅವರ ಗೂಢಾರ್ಥವಿದೆ.

○○ ○○

ನಮ್ಮ ದೇಶಕ್ಕೆ ಮೊದಲು ಆರ್ಯವರ್ತ, ಭಾರತವರ್ಷ ಇತ್ಯಾದಿ ಹೆಸರಿತ್ತು. ಉತ್ತರ ಪ್ರದೇಶದಿಂದ ಇಲ್ಲಿಗೆ ಬಂದ ಮುಸಲ್ಮಾನರು ನಮ್ಮ ಜನರನ್ನು ಸಿಂಧೂ ನದಿಯ ಸಮೀಪವಿರುವ ಜನರು ಎಂಬ ಅರ್ಥದಿಂದ ಹಿಂದುಗಳೆಂದು ಕರೆದರು. ಕ್ರಮೇಣ ಇಡೀ ದೇಶವನ್ನು ಹಿಂದೂಸ್ಥಾನವೆಂದು ಕರೆದರು. ಇಲ್ಲಿಯ ಜನರಿಗೆ ಹಿಂದುಗಳೆಂಬ ಹೆಸರಾಯಿತು. ಮತ್ತು ಅವರು ಆಚರಿಸುವ ವೇದಮತವನ್ನು ಹಿಂದೂ ಮತವೆಂದು ಕರೆದರು. ಕ್ರಮೇಣ ಹಿಂದುಗಳೆಂದರೆ ಖುರಾನ್ ಮತವನ್ನು ನಂಬದವರು, ಮೂರ್ತಿ ಆರಾಧಕರು ಅಂದರೆ ನಾಸ್ತಿಕರು (ಕಾಫರರು) ಎಂಬ ಗೂಢಾರ್ಥವಾಯಿತು. ಈಗ ಜಿನ್ನರಾದರೂ ನಮ್ಮನ್ನು ಇದೇ ಅರ್ಥದಿಂದ ಹಿಂದೂಗಳೆಂದು ಕರೆಯುತ್ತಿರಬೇಕು.

○○ ○○

ಕಾಫರರು ಬಹುಸಂಖ್ಯಾಕರಾಗಿರುವ ರಾಜ್ಯವು ಅಪವಿತ್ರವಾದ ರಾಜ್ಯ. ಮುಸ್ಲಮಾನರು ಬಹು ಸಂಖ್ಯಾಕರಾಗಿರುವ ರಾಜ್ಯ ಪವಿತ್ರವಾದ ರಾಜ್ಯ. ಈ ಗೂಢಾರ್ಥದಿಂದ ತನ್ನ ರಾಜ್ಯಕ್ಕೆ ಪಾಕಿಸ್ತಾನವೆಂದೂ ಮಿಕ್ಕ ಭಾಗಕ್ಕೆ ಹಿಂದೂಸ್ಥಾನವೆಂದೂ ಕರೆಯಬೇಕೆಂದು ಜಿನ್ನರ ಹಟವೆಂಬುದು ಸ್ಪಷ್ಟವಿದೆ.

○○ ○○

ಜಿನ್ನರ ಈ ಸದುದ್ದೇಶವು ನಮ್ಮವರಿಗೆ ಈಗ ಅರ್ಥವಾಗಿದೆ. ಒಂದು ಮತವನ್ನು ಸೂಚಿಸುವ ಹೆಸರು ನಮ್ಮ ದೇಶಕ್ಕೆ ಬೇಡ. ನಮ್ಮ ದೇಶದಲ್ಲಿ ಹಿಂದೂ ಮತದವರು ಮಾತ್ರ ಇರುವುದಲ್ಲ ಎಲ್ಲಾ ಮತದವರಿಗೂ ಇಲ್ಲಿ ಸರಿಸಮಾನ ಅಧಿಕಾರವಿದೆ. ಆದುದರಿಂದ ತನ್ನ ರಾಜ್ಯಕ್ಕೆ ಜಿನ್ನರು ಪಾಕಿಸ್ತಾನವೆಂದಲ್ಲ, ಸ್ವರ್ಗವೆಂದು ಬೇಕಾದರೂ ಹೆಸರಿಟ್ಟುಕೊಳ್ಳಲಿ. ನಮ್ಮ ದೇಶಕ್ಕೆ ನಾಮಕರಣಮಾಡುವ ಅಧಿಕಪ್ರಸಂಗ ಅವರಿಗೆ ಬೇಡವೆಂದು ನಮ್ಮ ಧುರೀಣರು ಅನ್ನುತ್ತಿದ್ದಾರೆ.

○○ ○○

ಆದರೆ ನಮ್ಮಲ್ಲಿ ಕೂಡ ಜಿನ್ನರ ತರ್ಕವೇ ಸರಿಯೆನ್ನುವವರೂ ಕೆಲವರಿದ್ದಾರೆ. ತಾವು ಹಿಂದುಗಳೆನ್ನುವುದು ತಮಗೆ ಭೂಷಣವೆಂದು ಎಣಿಸಿ ನಮ್ಮ ದೇಶವನ್ನು ಹಿಂದೂಸ್ಥಾನವೆಂದೇ ಕರೆಯಬೇಕೆನ್ನುತ್ತಿದ್ದಾರೆ. ಈ ದೇಶವು ಹಿಂದೂ [illegible]ದವರಿಗಾಗಿ ಮಾತ್ರ ಇರಬೇಕು. ಇತರ ಮತದವರಿಗೆ ಇಲ್ಲಿ ಅಧಿಕಾರವಿರಬಾರದು ಎಂದು ಅವರು ಹಿಂದುಮುಂದು ಅರಿಯದೆ ಏನೆಲ್ಲಾ ಅನ್ನುತ್ತಿದ್ದಾರೆ. ಇವರನ್ನು ಜಿನ್ನರ ಅನುಯಾಯಿಗಳು ಎನ್ನಬೇಡವೇ?

○○ ○○

ಪಾಕಿಸ್ತಾನವಾದರೂ ಕೇವಲ ಮುಸಲ್ಮಾನರ ರಾಜ್ಯವಲ್ಲ; ಅಲ್ಲಿ ಅನೇಕ ಮತದವರಿರುವರು. ಎಲ್ಲಾ ಅಲ್ಪ ಸಂಖ್ಯಾಕರಿಗೂ ಅಲ್ಲಿ ಸರಿಸಮಾನ ಅಧಿಕಾರವಿದೆಎಂದು ಜಿನ್ನರು ಪದೇಪದೇ ಅನ್ನುತ್ತಿದ್ದಾರಷ್ಟೆ. ಹಾಗಿದ್ದರೆ ಆ ರಾಜ್ಯಕ್ಕೆ ಮತವನ್ನು ಸೂಚಿಸುವ ಪಾಕಿಸ್ತಾನವೆಂಬ ಹೆಸರೇ ಏಕಿರಬೇಕು?

○○ ○○

'ಪಾಕಿಸ್ತಾನಕ್ಕೆ ಪ್ರತ್ಯೇಕ ಘಟನೆ ಏಕೆ! ಖುರಾನಿನಲ್ಲಿ ಎಲ್ಲವೂ ಇದೆ' ಎಂದು ಲೀಗ್ ಧುರೀಣ ನೂನ್ ಸಾಹೇಬರು ಒಮ್ಮೆ ಅಂದಿದ್ದಾರೆ. ಅಲ್ಪ ಸಂಖ್ಯಾಕರಿಗೆ ಇಲ್ಲಿ ಎಷ್ಟರಮಟ್ಟಿನ ನ್ಯಾಯ ದೊರಕೀತೆಂದು ಇದರಿಂದಲೇ ನಾವು ತಿಳಿಯಬಹುದು.

— ಸೋಮಾರಿ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 305 1947

ವಾದಿ– ಮುತ್ತಕ್ಕ ಸೆಟ್ಟಿ

ಪ್ರತಿವಾದಿರು– ಮಹಾಲಿಂಗ ಸೆಟ್ಟಿ ಕೂಡಾ 2 ನಾಗಮ್ಮ ಸೆಟ್ಟಿ, 3 ಶೀನಪ್ಪ ಶೆಟ್ಟಿ, 4 ಪುಟ್ಟಮ್ಮ ಸೆಟ್ಟಿ, 5 ವಿಟ್ಠಲ ಸೆಟ್ಟಿ,-ಲಕ್ಷ್ಮಿ ಸೆಟ್ಟಿ ಮಕ್ಕಳು, ಕುಂದಾಪುರ ತಾಲೂಕು ಬಳ್ಕೂರು ಗ್ರಾಮದ ಕುಂಜ್ಞಾಡಿ ಮನೆಯಲ್ಲಿರುವವರು. ಇವರಿಗೆ–

ವಾದಿಳು ವ 1 ರಿಂದ 5ನೇ ಪ್ರತಿವಾದಿರ ಕೂಡಾ ಜೊಯಿಂಟ ಪಕ್ಷದ ಸ್ಥಳಗಳಿಗೆ ವಾದಿಳ ಒಬ್ಬಳ ಹೆಸರಿಗೆ ಪಟ್ಟೆ ಬಂದು ಆ ಬಾಬ್ತು ಪ್ರತಿವಾದಿರ ಪಕ್ಕಿನ ಅಸ್ತಿಯ ತೀರ್ವೆ ವಾದಿಳು ತೆತ್ತ ಸಮ್ಮಂಧ ಆ ರೀತಿ ತೆತ್ತ 1934ರ ಲಾಗ್ಯಾತು 1947ನೇ ಇಸವಿ ವರೆಗಿನ ತೀರ್ವೆ ಹಣಗಳನ್ನು ಬಡ್ಡಿಸಹಿತ ಬರಮಾಡಿಕೊಳ್ಳುವರೆ ವಾದಿಳು ಸದ್ರಿ ದಾವಾ ಮಾಡಿರುವದ್ರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪ ಇದ್ದಲ್ಲಿ ತಾ. 22-9-1947ನೇ ದಿವ್ಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಈ ಮೂಲ್ಕ ತಿಳಿಸೋಣಾಗುತ್ತದೆ.

K. Raghunath Shenai,
Pleader for Plaintiff.
Coondapoor, 4-9-1947

1947ನೆ ಆಗೋಸ್ತು ತಾ30-9-47

ನೆನಪಿರಲಿ ಕೈಲಾಸ ಬೆಟ್ಟದ ಗಿಡ ಮೂಲಿಕೆಯ (ರಜಿಸ್ಟರ್ಡ್) ಒಂದು ಡೋಸ್ ಔಷಧವನ್ನು ತಾ 30-9-47ನೆ ಶನಿವಾರ ಹುಣ್ಣಿಮೆ ದಿನ ಸೇವಿಸಿದರೆ ಎಂತಹ ಅಸ್ತಮಾ-ಗೂರುಬ್ಬಸವು ಕಡಿಮೆಯಾಗುವುದು,

ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ

Bramhachari G Das
Shri Sidh Bramhacharya
Sewa Ashram
Po. Chitrakot (U. P.)

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹೆಚತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಪನ್ನೆರಡಾಣೆ ಪ್ರತ್ಯೇಕ.]

Mrs. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಿಹಾಕಂಪೆನಿ, ಮಂಗಳೂರು

ನೋಟೀಸು

ಮಂಗಳೂರು ಡಿ. ಮು. ಕೋರ್ಟಿನಲ್ಲಿ

R E P 132/1947

O. S. 134/1942

Dr. P. ವೆಂಕಟ್ರಾವ್– ಅರ್ಜಿದಾರ.

1 ಅನಂತ ದಾಸುಭಾಗ, 2 ಶ್ರೀನಿವಾಸ ದಾಸುಭಾಗ, 3 T. ವಾಸದೇವ ರಾವ್, 4 K. ಪಿ. ನರ್ಸಿಂಗ ರಾವ್, 5 S. N. ಆಚಾರ್,
–ರೆಸ್ಪೋಂಡೆಂಟರು.

ನೋಟೀಸು

ಮೇಲಿನ ಅಮಲ್ದಾರಿಯಲ್ಲಿ ಅರ್ಜಿದಾರನು ಸ್ಥಿರಾಸ್ತಿಯ ವಿಕ್ರಯದ ಬಗ್ಗೆ ಅರ್ಜಿ ಮಾಡಿರುತ್ತಾರೆ. ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ಮತ್ತು ಹಲಂಗೆ ನಿಲ್ಲುವರೆ ಪರ್ಮಿಶನ್ ಬಗ್ಗೆ ಕೊಟ್ಟ ಅರ್ಜಿಯು ತನ್ನ ಬಗ್ಗೆ ತಾ. 12-9-1947ಕ್ಕೆ ಇಟ್ಟಿದೆ. ಎದ್ರಿಗೆ ಏನಾದರೂ ಆಕ್ಷೇಪವಿದ್ದರೆ ಸದ್ರಿ ತಾರೀಕಿನಲ್ಲು ಹಾಜರಾಗಿ ತಿಳ್ಸಿಕೊಳ್ಳತಕ್ಕದ್ದು.

S. Venkat Rao,
Vakil for Petitioner
Mangalore 5-9-1947

(೨ನೇ ಪುಟದಿಂದ)

ನನ್ನ ಕಾಪೆಯ ಬಳಿಯಲ್ಲೇ ನಿಂತುಕೊಂಡಿದ್ದರು–ಬಹುಶಃ ನನಗೇನೂ ಹಾನಿಯಾಗದಂತೆ ನೋಡುವದಕ್ಕಾಗಿ. ಗದ್ದಲ ಬಲವಾಗುತ್ತಾ ಬಂತು. ಕೆಲವರು ಒಳಭವನದೊಳಗೆ ನುಗ್ಗಿ ಬಂದರು. ತೆರೆಯುವುದಕ್ಕಾಗಿ ಹಲವು ಬಾಗಿಲುಗಳನ್ನು ಬಡಿಯಹತ್ತಿದರು. ನಾನೆದ್ದು ಹೋಗಿ ಈ ಕ್ರೋಧೋದ್ವೇಗಿ ಜನರ ಮುಂದೆ ನಿಲ್ಲಬೇಕೆಂದು ಬಗೆದು ಒಂದು ಬಾಗಿಲ ಬಳಿಗೆ ಹೋದೆ, ಸ್ನೇಹಪೂರಿತ ವದನಗಳು ಸುತ್ತುಗಟ್ಟಿ ನಿಂತು ನನ್ನನ್ನು ಮುಂದೆ ಹೆಜ್ಜೆಯಿಡಲು ಬಿಡಲಿಲ್ಲ. ಇಂತಹ ಸಂದರ್ಭಗಳಲ್ಲಿ ಮೌನ ವ್ರತವನ್ನು ಬಿಡಬಾರದೆಂಬ ನಿಯಮವನ್ನು ನಾನಿಟ್ಟುಕೊಂಡಿಲ್ಲ. ಮೌನವನ್ನು ಮುರಿದುಕೊಂಡೆ. ಶಾಂತರಾಗುವಂತೆ ಆ ಕ್ರೋಧೋನ್ಮತ್ತ ತರುಣರನ್ನು ವಿಜ್ಞಾಪಿಸಿಕೊಳ್ಳಹತ್ತಿದೆ. ನನ್ನ ಕೆಲವು ಮಾತುಗಳನ್ನು ಬಂಗಾಳಿಗೆ ಭಾಷಾಂತರಿಸಿ ಹೇಳುವಂತೆ, ಬಂಗಾಳದವಳಾದ ನನ್ನ ಸೊಸೆಮೊಮ್ಮಗಳನ್ನು ಕೇಳಿಕೊಂಡೆ. ಆದರೆ ಏನ್ನೇ ಹೇಳಿದರೂ ಫಲಬರಲಿಲ್ಲ. ಸಕಾರಣ ವಾದಗಳ ಕಡೆಗೆ ಅವರ ಕಿವಿಗಳು ಕಿವುಡಾಗಿದ್ದುವು.

ನಾನು ಹಿಂದೂಪೂಜೆಯಂತೆ ಕೈ ಜೋಡಿಸಿ ನಿಂತುಕೊಂಡೆ; ಏನನ್ನೂ ಮಾಡಲಿಲ್ಲ. ಮತ್ತಷ್ಟು ಹೆಚ್ಚು ಕಿಟಿಕೀ ಕನ್ನಡಿಗಳೊಡೆಯಹತ್ತಿದುವು. ಗುಂಪಿನಲ್ಲೇ ಇದ್ದ ಕೆಲವು ಮಿತ್ರರು, ಗುಂಪನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದರು. ಅಲ್ಲಿ ಪೋಲಿಸ್ ಅಧಿಕಾರಿಗಳಿದ್ದರು; ಆ ಸಂದರ್ಭದಲ್ಲಿ ತಮ್ಮ ಅಧಿಕಾರ ಚಾಲೂಮಾಡದಿರುವುದಕ್ಕಾಗಿ ಅವರನ್ನು ಹೊಗಳಬೇಕು. ಅವರು ಕೂಡಾ ವಿಜ್ಞಾಪನೆಗಾಗಿ ಕೈಮುಗಿದು ನಿಂತುಕೊಂಡರು. ಲಾಠಿಯ ಒಂದು ಹೊಡೆತವು, ನನಗೂ ನನ್ನ ಸುತ್ತಣವರಿಗೂ ಹೇಗೋ ತಪ್ಪಿಹೋಯಿತು. ನನಗೆಂದು ಗುರಿಯಿಟ್ಟ ಒಂದು ಇಟ್ಟಿಗೆಯು ನನ್ನ ಪಕ್ಕದಲ್ಲಿ ನಿಂತಿದ್ದ ಓರ್ವ ಮುಸ್ಲಿಂ ಸ್ನೇಹಿತನ ಮೇಲೆ ಬಿದ್ದು ಘಾಯಮಾಡಿತು. ಆ ಇಬ್ಬರು ಹುಡುಗಿಯರು ನನ್ನನ್ನು ಬಿಡದೆ ಕೊನೆಯವರೆಗೂ ಹಿಡಿದುಕೊಂಡು ನಿಂತರು. ಅಷ್ಟರಲ್ಲಿ ಪೋಲಿಸ್ ಸುಪರಿಂಟೆಂಡೆಂಟರೂ ಅವರ ಅನುಯಾಯಿ ಅಧಿಕಾರಿಗಳೂ ಒಳಗೆ ಬಂದರು. ಅವರು ಕೂಡಾ ಬಲಪ್ರಯೋಗ ಮಾಡಲಿಲ್ಲ. ನಾನಲ್ಲಿಂದ ಹೊರಟು ಹೋಗಬೇಕೆಂದು ನನ್ನನ್ನವರು ವಿಜ್ಞಾಪಿಸಿಕೊಂಡರು. ಆ ಹೊತ್ತಿಗೇನೇ ಅವರಿಗೆ ಆ ತರುಣರನ್ನು ಸುಮ್ಮಗಿರಿಸುವ ಸಂದರ್ಭ ಒದಗಿದುದು. ಸ್ವಲ್ಪ ಹೊತ್ತಿನಲ್ಲಿ ಗುಂಪು ಚದರಿತು.

ನವಖಾಲಿಗೆ ಹೋಗಲಾರೆ

ಕಂಪೌಂಡು ಗೇಟಿನ ಹೊರಗಡೆಯಲ್ಲಿ ಜನತಂಡವನ್ನು ಚದರಿಸಲು ಪೋಲೀಸರು ಕಣ್ಣೀರ ಹೊಗೆಯನ್ನು ಪ್ರಯೋಗಿಸಬೇಕಾಯಿತೆಂಬುದೊಂದಲ್ಲದೆ, ಅಲ್ಲಿ ಬೇರೇನೆಲ್ಲಾ ನಡೆಯಿತೋ ನಾನರಿಯೆ. ಅಷ್ಟರಲ್ಲಿ ಡಾ। ಪಿ. ಸಿ. ಘೋಷ್, ಅನಂದ ಬಾಬು ಮತ್ತು ಡಾ। ನೃಪನರು ಒಳಗೆ ಬಂದು ಸ್ವಲ್ಪ ಹೊತ್ತು ಮಾತಾಡಿದ ನಂತರ ಹೊರಟು ಹೋದರು. ನಾಳೆ ಹೊರಡತಕ್ಕದ್ದೆಂದು ನಿಶ್ಚಯಿಸಿದ್ದ ನವಖಾಲೀ ಸಂಚಾರದ ಸಿದ್ಧತೆಮಾಡುವುದಕ್ಕಾಗಿ ಸುಯೋಗವಶಾತ್ ಶಾಹೀದ್ ಸಾಹೇಬರು (ಸುಹ್ರವರ್ದಿ) ತನ್ನ ಮನೆಗೆ ಹೋಗಿದ್ದರು. ಮೇಲ್ಗಡೆ ನಮೂದಿಸಿದ ಆ ಘಟನೆಯ ಮೇಲಿಂದ, ಅದರ ಗಮನವಾವ ಕಡೆಗೆಂಬುದನ್ನು ಹೇಳಲು ಯಾರಿಗೂ ಸಾಧ್ಯವಿಲ್ಲವಾದ್ದರಿಂದ, ನಾನು ಕಲ್ಕತ್ತೆಯನ್ನು ಬಿಟ್ಟು ನವಖಾಲಿಗೆ ಹೋಗುವ ಯೋಚನೆ ಮಾಡಲಾರೆ.

ಈ ಸಂಗತಿಯಿಂದ ಕಲಿಯತಕ್ಕ ಪಾಠವೇನು? ಭಾರತವು ಗೆದ್ದುಕೊಂಡ ತನ್ನ ಅಪರೂಪದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕಾದರೆ ಎಲ್ಲಾ ಸ್ತ್ರೀ ಪುರುಷರೂ ಮರ್ದನ ಕಾನೂನನ್ನು ಸಂಪೂರ್ಣವಾಗಿ ಮರೆತುಬಿಡುವ್ವದಗತ್ಯವೆಂಬುದು ನನಗೆ ಸ್ಪಷ್ಟವಾಗಿದೆ. ನಿನ್ನೆಯ ಪ್ರಯತ್ನವು ಅದರದೊಂದು ಅಗಣ್ಯ ಅನುಕರಣೆ ಮಾತ್ರ. ಮುಸಲ್ಮಾನರು ದುರ್ವರ್ತನೆಗಿಳಿದ್ದರೆ, ಇವರು ತಮ್ಮ ದೂರನ್ನು ಮಂತ್ರಿಗಳ ಬಳಿಗೊಯ್ಯಲಾರರಾದರೆ, ನಿಜಕ್ಕೂ ನನಗದನ್ನು ಹೇಳಬಹುದಿತ್ತು; ಅಥವಾ ನನ್ನ ಮಿತ್ರ ಶಾಹಿದ್ ಸಾಹೇಬರಿಗೆ ತಿಳಿಸಬಹುದಿತ್ತು. ಇದೇ ನೀತಿಯು ಫಿರ್ಯಾದಿಗಾರ ಮುಸ್ಲಿಮರಿಗೂ ಅನ್ವಯಿಸುತ್ತದೆ. ನಾಗರಿಕ ಸಮಾಜದ ಪ್ರಥಮ ನಿಯಮಗಳನ್ನು ಅಂಗೀಕರಿಸಿಕೊಳ್ಳದಿದ್ದರೆ ಕಲ್ಕತ್ತದಲ್ಲಾಗಲೀ ಬೇರೆ ಕಡೆಯಲ್ಲಾಗಲೀ ಶಾಂತಿಯನ್ನು ಉಳಿಸುವ ಹಾದಿ ಮತ್ತೊಂದಿಲ್ಲ. ಪಂಜಾಬಿನ ಅಥವಾ ಹೊರಭಾರತದ ಘೋರತೆಗಳನ್ನು ಇವರು ತಲೆಗೆ ಹಚ್ಚಿಕೊಳ್ಳದಿರಲಿ. ಕಾನೂನು ತನ್ನ ಕೈಯೊಳಗಿದೆ ಎಂದು ಭಾವಿಸಿ ವರ್ತಿಸುವ ಹಕ್ಕು ಯಾರೊಬ್ಬನಿಗೂ ಇಲ್ಲವೆಂಬ ಸುವರ್ಣನಿಯಮವು ಎಲ್ಲಾ ಸಂದರ್ಭಗಳಲ್ಲೂ ಮಾನ್ಯವಾಗಿರಬೇಕು.

ಪಾಟ್ನಾದಿಂದ ನನ್ನ ಕಾರ್ಯದರ್ಶಿ ದೇವ್ ಪ್ರಕಾಶರು ತಂತಿಬಿಟ್ಟಿದ್ದಾರೆ.— "ಪಂಜಾಬು ಘಟನೆಗಳಿಂದ ಸಾರ್ವಜನಿಕರು ಉದ್ರೇಕಗೊಂಡಿದ್ದಾರೆ. ಸಾರ್ವಜನಿಕರ ಮತ್ತು ಪತ್ರಿಕೆಗಳ ಕರ್ತವ್ಯವನ್ನು ಮನಗಾಣಿಸುವ ಹೇಳಿಕೆ ಕೊಡುವುದಗತ್ಯವೆಂದು ತೋರುತ್ತದೆ". ಶ್ರೀ. ದೇವ ಪ್ರಕಾಶರು ಅನಗತ್ಯವಾಗಿ ಗೊಂದಲಕ್ಕೀಡಾಗತಕ್ಕ ಮನುಷ್ಯನಲ್ಲ. ಪತ್ರಿಕೆಗಳಲ್ಲಿ ಅಜಾಗ್ರತೆಯ ಕೆಲವು ಪಂಗ್ತಿಗಳು ಬಂದಿರಬೇಕು. ಸಂಗತಿ ಹಾಗಿದ್ದರೆ, ನಾವು ಸಿವಿಲ್ ಯುದ್ಧ ಸಂಗ್ರಹದ ಮೇಲೆ ಕುಳಿತಂತಿರುವ ಈ ಕಾಲದಲ್ಲಿ, ನಮ್ಮ [illegible] (ಪತ್ರಿಕೆ)ಗಳು ತುಸು ಹೆಚ್ಚಿನ ಜಾಣ್ಮೆ ಮತ್ತು ಜಾಗರೂಕತೆ ವಹಿಸಬೇಕಾಗಿದೆ. ಅತಿರೇಕದಿಂದಾಗುವುದು ಕೇರಿದ ಬೆಂಕಿ ಕಡ್ಡಿಯ ಕಾರ್ಯವೇ. ಪ್ರತಿಯೊಬ್ಬ ಸಂಪಾದಕನೂ ವಾರ್ತಾ ವರದಿಗಾರನೂ ತನ್ನ ಕರ್ತವ್ಯವೇನೆಂಬುದನ್ನು ಸಂಪೂರ್ಣವಾಗಿ ದೃಷ್ಟಿಪಥದಲ್ಲಿಟ್ಟುಕೊಂಡೇ ವರ್ತಿಸುವರೆಂದು ನಾನಾಶಿಸುತ್ತೇನೆ.

ಒಂದು ಸಂಗತಿಯನ್ನು ನಾನಿಲ್ಲಿ ಹೇಳಬೇಕಾಗಿದೆ. ಕೂಡಲೇ ಪಂಜಾಬಿಗೆ ಬರಬೇಕೆಂಬ ಅವಸರದ ಆಹ್ವಾನವು ನನಗೆ ಬಂದಿದೆ. ಕಲ್ಕತ್ತದಲ್ಲಿಯೇ ಗಲಭೆಯ ಪುನರವತಾರದ ಸರ್ವವಿಧದಸುದ್ದಿಗಳೇ ನನ್ನ ಕಿವಿಗೆ ಬೀಳುತ್ತಿವೆ. ಅವು ಪೂರ್ತಿ ನಿರಾಧಾರ ವಾರ್ತೆಗಳಲ್ಲ ಸದೆ ಹೋದರೂ ಅವುಗಳಲ್ಲಿ ಅತಿಶಯೋಕ್ತಿಯಿದೆಯೆಂದು ನಾನಾಶಿಸುತ್ತೇನೆ. ಕಲ್ಕತ್ತದಲ್ಲಾವ ಪ್ರಮಾದವೂ ನಡೆದಿಲ್ಲವೆಂದೂ, ಒಮ್ಮೆ ಸ್ಥಾಪನೆಗೊಂಡ ಶಾಂತಿಗೆ ಮತ್ತೆಂದಿಗೂ ಭಂಗಬರಲಾರದೆಂದೂ ಕಲ್ಕತ್ತದ ನಾಗರಿಕರು ನನಗೆ ಪುನರಾಶ್ವಾಸನೆ ಕೊಡಬೇಕಾಗಿದೆ.

ಶಾಂತಿಯ ಪ್ರಥಮದಿನದಿಂದ ಅಂದರೆ ಕಳೆದ ಆಗೋಸ್ತು 14 ರಿಂದಲೂ, ಈ ಶಾಂತಿಯೆಂಬುದು ತಾತ್ಕಾಲಿಕ ವಿರಾಮ ಮಾತ್ರವಾಗಿರಬಹುದೆಂದು ನಾನು ಹೇಳುತ್ತಾ ಬಂದಿದ್ದೇನೆ. ಅದ್ಭುತವೇನೂ ನಡೆಯಲಿಲ್ಲ. ನಾನೆಂದ ಭವಿಷ್ಯವೇ ಸತ್ಯವಾಗುವದೆ? ಕಲ್ಕತ್ತವು ಮತ್ತೊಮ್ಮೆ ಅರಣ್ಯಕ್ರಮ ಕೈಕೊಳ್ಳುವ ಅಧೋಗತಿಗಿಳಿಯುವದೆ? ಹಾಗಾಗದೆಂದು ನಾವು ಆಶಿಸೋಣ. ನಮ್ಮ ಹೃದಯಗಳನ್ನು ಸ್ಪರ್ಶಿಸಿ, ಹುಚ್ಚೇಳದಂತೆ ನೋಡುವ ರಕ್ಷಣೆ ಮಾಡುವಂತೆ ಸರ್ವಶಕ್ತನನ್ನು ಪ್ರಾರ್ಥಿಸೋಣ.

ಉಪವಾಸ ನಿರ್ಧಾರ

ಮೇಲಿನದನ್ನು ಬರೆದಾದ ಮೇಲೆ— ಅರ್ಥಾತ್ ಮೌನದಿನದ ಘಂಟೆ 4ರ ಸುಮಾರಿಗೆ—ನಗರದ ಬೇರೆ ಬೇರೆ ಭಾಗಗಳಲ್ಲಿ ನಡೆದ ಸಂಗತಿಗಳೆಲ್ಲವೂ [illegible] ಸ್ಪಷ್ಟವಾಗಿ ನನ್ನ ತಿಳುವಳಿಕೆಗೆ ಬಂದುವು. ನಿನ್ನೆಯ ವರೆಗೂ ಸುರಕ್ಷಿತವಾಗಿದ್ದ ಕೆಲವು ಸ್ಥಳಗಳು ಅಕಸ್ಮಾತ್ ಅಪಾಯ ಕ್ಷೇತ್ರಗಳಾಗಿ ಮಾರ್ಪಟ್ಟಿವೆ. ಹಲವು ಮರಣಗಳಾದುವು. ಅತ್ಯಂತ ಬಡವರಾದ ಇಬ್ಬರು ಮುಸ್ಲಿಮರ ಶವಗಳನ್ನು ನಾನು ಕಂಡೆ. ಅಸಹಜ ಮುಖಮುದ್ರೆಯ ಕೆಲವು ಮುಸಲ್ಮಾನರು ಸುರಕ್ಷಿತ ನೆಲೆಗಾಗಿ ಗಾಡಿಯಲ್ಲಿ ಸಾಗುತ್ತಿದ್ದುದನ್ನೂ ನೋಡಿದೆ. ನಾನು ಮೇಲ್ಗಡೆ ಸವಿವರವಾಗಿ ನಮೂದಿಸಿರುವ ನಿನ್ನೆ ರಾತ್ರಿಯ ಘಟನೆಗಳು ಈ ಜ್ವಾಲೆಯಿದಿರಲ್ಲಿ ಕಿರು ಅಗಣ್ಯವೆಂಬುದೀಗ ನನ್ನದೃಷ್ಟಿಯಿದಿರು ಸ್ಪಷ್ಟವಿದೆ. ಇಂತಹ ಸನ್ನಿವೇಶದಲ್ಲಿ ನಾನು ಹೊರಗೆ ಹೋಗಿ ಏನೇ ಮಾಡಿದರೂ ಅದನ್ನು ನಿಲ್ಲಿಸಲಾಗುವದು ಕಷ್ಟ.

ಅಪರಾಹ್ನ ನನ್ನನ್ನು ನೋಡಲು ಬಂದಿದ್ದ ಮಿತ್ರರಿಗೆಲ್ಲಾ ಅವರ ಕರ್ತವ್ಯವೇನೆಂಬುದನ್ನು ನಾನು ಹೇಳಿದ್ದೇನೆ. ಇನ್ನಿದನ್ನು ನಿಲ್ಲಿಸುವದಕ್ಕಾಗಿ ನಾನು [illegible] ಬೇಕಾಗಿರುವ ಕೆಲಸವೇನು? ಈ ಕೆಲವು ದಿನಗಳಲ್ಲಿ ಪೂರ್ವ ಪಂಜಾಬು ಮಾಡಿದ್ದ ಕೃತ್ಯಗಳನ್ನು ಸಿಖ್ಖರು ಮತ್ತು ಹಿಂದುಗಳು ಮರೆಯಕೂಡದು. ಈಗ ಪಶ್ಚಿಮ ಪಂಜಾಬಿನ ಮುಸ್ಲಿಮರು ಹುಚ್ಚು ವರ್ತನೆಗಾರಂಭಿಸಿದ್ದಾರೆ. ಪಂಜಾಬಿನ ಘಟನೆಗಳು ಸಿಖ್ಖರನ್ನೂ ಹಿಂದುಗಳನ್ನೂ ಉದ್ರೇಕಿಸಿವೆ ಎಂದು ತಿಳಿದುಬರುತ್ತದೆ.

ಪಂಜಾಬಿಗೆ ಬರಬೇಕೆಂದು ನನಗೆ ಬಂದಿದ್ದ ಅವಸರದ ಕರೆಯನ್ನು ನಾನು ಮೇಲ್ಗಡೆ ಪ್ರಸ್ತಾಪಿಸಿದ್ದೇನೆ. ಆದರೆ ಕಲ್ಕತ್ತನ ಕುದಿಗುಳ್ಳೆಯು ಒಡೆಯುವಂತೆ ಕಾಣುತ್ತಿರುವ ಈ ದಿನ, ನಾನಾವ ಮುಖವನ್ನು ಹಿಡಿದುಕೊಂಡು ಪಂಜಾಬಿಗೆ ಹೋಗಲಿ? ನನ್ನ ಪೆಟ್ಟಿಗೆ ಈ ತನಕ ಅಜೇಯವೆಂದು ಖ್ಯಾತಿಯಿದ್ದ ಆಯುಧವೆಂದರೆ ಅನಶನ ವ್ರತ. ಕೂಗೆಬ್ಬಿಸುವ ಗುಂಪಿನ ಮುಂದೆ ಸ್ವತಃ ಹಾಜರಾಗುವುದು ಎಲ್ಲಾ ಸಮಯಗಳಲ್ಲೂ ಸಫಲವಾಗುವಂತಿಲ್ಲ. ಕಳೆದ ರಾತ್ರಿಯಲ್ಲಂತೂ ಆದ. ನಿಜಕ್ಕೂ ನಿರರ್ಥಕವಾಯಿತು. ಪ್ರತ್ಯಕ್ಷ ನನ್ನ ಮಾತುಗಳಿಂದ ಆಗಲಾರದುದು ನನ್ನ ಉಪವಾಸದಿಂದ ಆಗಬಹುದು. ಅದು ಕಲ್ಕತ್ತೆಗೆ ತಾಗಬಲ್ಲುದಾದರೆ, ಪಂಜಾಬಿನ ಹೋರಾಟಗಾರರೆಲ್ಲರ ಹೃದಯಗಳನ್ನು ಕೂಡಾ ಸ್ಪರ್ಶಿಸಬಲ್ಲುದು. ಅದ್ದರಿಂದ ನಾನು ಈ ದಿನ ರಾತ್ರಿ ಘಂಟೆ 8–15ರಿಂದ ಉಪವಾಸಾರಂಭಿಸಿದ್ದೇನೆ. ಇನ್ನಿದನ್ನು ನಿಲ್ಲಿಸುವುದು ಕಲ್ಕತ್ತಕ್ಕೆ ಶಾಂತಿ, ಸ್ವಾಸ್ಥ್ಯ ಮರಳಿ ಬಂದರೆ ಮತ್ತು ಬಂದಾಗ ಮಾತ್ರ. ಉಪವಾಸ ಕಾಲದಲ್ಲಿ ಹಿಂದಿನಂತೆಯೇ ಅಗತ್ಯ ತೋರಿದಾಗ ಉಪ್ಪು ಮತ್ತು ಸೋಡಾಹುಡಿ ಮಿಶ್ರಿತ ನೀರನ್ನು ತೆಗೆದುಕೊಳ್ಳಲಿದ್ದೇನೆ.

ನಾನು ಪಂಜಾಬಿಗೆ ಹೋಗಬೇಕು. ಮತ್ತಲ್ಲಿಯ ಜನರಿಗೆ ಸಹಾಯ ಸಲ್ಲಿಸಬೇಕು,ಎಂಬ ಬಯಕೆ ಕಲ್ಕತ್ತದ ಜನತೆಯಲ್ಲಿದ್ದರೆ, ಅದನ್ನು ಬೇಗನೇ ಉಪವಾಸ ನಿಲ್ಲಿಸುವ ಅನುಕೂಲತೆಯನ್ನು ಅವರು ನನಗೊದಗಿಸಬೇಕು."

○○ ○○ ○○

ಗಾಂಧಿಜೀಯ ಉಪವಾಸ ಸಾಗಿತು. ರಾಷ್ಟ್ರ–ಲೋಕ–ಬ್ರಿಟಿಷ್ ರಾಜರ ಸಮೇತ ಎಲ್ಲಾ ಜನ ಆತುರಕ್ಕೀಡಾದರು. ಕಲ್ಕತ್ತವು ಆ ತಪಃಪ್ರಭಾವದ ಅಮೃತ ವರ್ಷದಿಂದ ಥಕ್ಕನೆ ತಣಿಯಿತು. ಕೊನೆಯ 24 ಘಂಟೆಗಳಲ್ಲಿ ಕಲ್ಕತ್ತದಲ್ಲೆಲ್ಲಿಯೂ ಗಲಭೆಯಿರಲಿಲ್ಲ. 73 ಘಂಟೆಗಳ ಉಪವಾಸಾನಂತರ ಕಲ್ಕತ್ತದ ಹಿಂದೂ–ಮುಸ್ಲಿಂ–ಸಿಖ್ ನಾಯಕರಿಂದ 'ಶಾಂತಿ ಪಾಲನೆಗಾಗಿ ಪ್ರಾಣಾರ್ಪಣೆ ಮಾಡುವೆ'ವೆಂಬ ಬರಹಸಹಿತ ಪ್ರತಿಜ್ಞಾಪತ್ರ ಪಡೆದು ಗಾಂಧಿಜೀ ತಾ. 4ನೇ ರಾತ್ರಿ 9–15ಕ್ಕೆ ಉಪವಾಸ ನಿಲ್ಲಿಸಿದರು.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ
ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಈಗಿನ ಕಾಲಕ್ಕೆ ಅತಿ ಅಗ್ಗವಾದ ಪುಸ್ತಕಗಳು.

೧ ಚಿಗುರು
೧೨ ಸಣ್ಣ ಕತೆಗಳ ಸಂಕಲನ

೨ ಲೋಪಾಮುದ್ರೆ
ಕಾದಂಬರಿಯಂತೆ ಬರೆಯಲ್ಪಟ್ಟ ಕಾವೇರಿ ಮಹಾತ್ಮೆ

೩ ಪ್ರತೀಕಾರ
ಅರ್ಜುನನಿಂದ ತಿರಸ್ಕರಿಸಲ್ಪಟ್ಟ ಬಭ್ರುವಾಹನನ 'ಪ್ರತೀಕಾರ'ವನ್ನು ಚಿತ್ರಿಸುವ ನಾಟಕ.

೪ ಪಂಚಾರತಿ
ಐದು ಏಕಾಂಕ ನಾಟಕಗಳ ಸಂಗ್ರಹ.

75 ಪುಟಗಳಿಗೆ ಮಿಕ್ಕಿದ ಪ್ರತಿಯೊಂದು ಪುಸ್ತಕದ ಬೆಲೆ ಬರೇ
0 6 0
ಸ್ಕೂಲ್ ಬುಕ್ ಕಂಪೆನಿ ಮಂಗಳೂರು.
ನವಭಾರತ ಬುಕ್ ಡಿಪೊ, ಉಡುಪಿ.

ಮಾನವಂತನ ಸೋಗಿನಿಂದ ನಡೆದ ಅನಾಚಾರ-ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—
ಇವನ್ನು ಹೃದಯಂಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ? ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು?
ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.

ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟು ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ. ರೂ. 1—0—0 ಅಂಚೆ ಮೂಲಕ ರೂ. 1—4—0

ನವಭಾರತ ಬುಕ್ ಡಿಪ್ೋ, ಉಡುಪಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿನಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಜಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ.....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ. ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ, ಖಾರ, ಕುಂಬಳಕಾಯಿ, ಎಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ. ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.
Ayurveda Oushadhalaya GADAG

ಹಾಲಿನ
ಚೊಕಲೇಟುಗಳು!

ಮಧುರವಾಗಿವೆ--ರುಚಿಕರವಾಗಿವೆ.
ಸರ್ವ ಸುಲಭವೆನಿಸುವಂತೆ ಎಲ್ಲ ಕಡೆ ಗಲ್ಲಿ, ನೂರಾರು ಪೇಟೆಗಳಲ್ಲಿ ಅಥವಾ ಚಿಲ್ಲರೆಯಾಗಿ ದೊರೆವುವು.

ಸ್ಟಾಕಿಸ್ಟರಾಗಲಿಚ್ಛಿಸುವವರು ಅಥವಾ ಏಜನ್ಸಿ ಪಡೆಯಲಿಚ್ಛಿಸುವವರು ಕೂಡಲೇ ಬರೆದುಕೊಳ್ಳಿ:

ಶ್ರೀ ಕೃಷ್ಣಾ ಟೊಫಿ ವರ್ಕ್ಸ್,
ರಥಬೀದಿ: ಮಂಗಳೂರು.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೨ ಔನ್ಸಿನ ೨ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.
ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿ ವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರ... ...ಉಡುಪಿ ಏಜಂಟರು:— ನವಭಾರತ ಬುಕ್ ಡಿಪ್ೋ, (2)ಬೊಂಬಾಯಿ ಏಜಂಟರು:— ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ ಶೋಪ್ ಎದುರುಗಡೆ, ಪರೇಲ್,(3)ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ
ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!
ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!

ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.

ಕನ್ನಡಿಸಿದವರು-ಶ್ರೀಮತಿ ಇಂದಿರಾಬಾಯಿ
ಮೈಸೂರು, ಸಂಸ್ಥಾನ.

ಬೆಲೆ ಬರೇ ರೂ. 1—4—0

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. ನವಯುಗ ಆಫೀಸು,ಉಡುಪಿ. ಮಹಂತೇಶ ಬುಕ್ ಡಿಪೋ, ಬಾಗಲಕೋಟೆ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. 18-9-1947 Estd. 1921 ಸ್ಥಾಪನೆ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-6
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ, ಜಾಹೀ
ರಾತು ದರಕ್ಕೆ ಬರೆಯಿರಿ.
ಮೆನೇಜರ್,
ನವಯುಗ ಉಡುಪಿ,
ದ. ಕ.

"ದ್ವೈತರೇ, ಸ್ನೇಹ
ಇಂದಿನ ಪರಿಸ್ಥಿತಿಯ
ನ್ನು ಸರಿಯಾದ ದೃಷ್ಟಿ
ಯಿಂದ ನೋಡಿ ತಿಳಿದು
ಸಹಾಯಕ್ಕೆ ಮುಂದಾ
ಗಿರಿ, ನಿಮ್ಮ ಉಣ್ಣುವ
ಯ ಧಾನ್ಯವನ್ನು ತಮ್ಮ
ರೇಶನ್ ಆಹಾರಕ್ಕಾಗಿ
ನೋಡುತ್ತಿರುವ ಹಸಿದ
ಜನತೆಯೊಡನೆ ಹಂಚಿ
ಉಣ್ಣಿರಿ".

ವರ್ಷ ೨೭
ವಾರ ೩

NAVAYUGA WEEKLY, UDIPI.

FOUNDER: Hon'ble Mr. A. B SHETTY,
Health Minister, Govt. of Madras.

Vol 27
No. 3

The Canara Mutual Assurance Company, Limited.

Estd.] [1935

H. O. UDIPI, S. INDIA

WELCOME

A hearty and sincere welcome awaits every agent who visits our office and our officers are all available for consultation. Our agents appreciate this cordial reception They say that this considerate treatment of their problems is the keystone to their Success

T. R. A. Pai,
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building,
Central Office. Udipi:-

Branches at:

Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

"BHUVANENDRA" CHANDRAMAS

Also a soveieign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಬಿ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಶೆಟ್ಟಿ L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವಿನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರ್ಮಿಕ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಿಕ್ಕೋಡಿಯಲ್ಲಿ:—ಕುಂಬಾರಮಠ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ ಆರ್ ಎಲ್ ಕಮಲದಾಸಿ, ಕೆಮಿಸ್ಟ, ಹಾವೇರಿ ಬ್ಯಾಡಗಿ.

Ayurveda Oushadalaya, GADAG CITY.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ
ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE.

ಮನೆಮದ್ದು-Home Remedies

ಬೆಲೆ ರೂ. **2-0-0**

ಬರೆದವರು:—ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Valuable Service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ., ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಹೆರಿಗೆ ನಡಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ

ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಈ ಮನುಷ್ಯನಿಗೆ ಅಪಾ-ಯವೂ ಅಂಜುತ್ತಿದೆ!



ನಮ್ಮ ಧುರೀಣರ ಪೈಕಿ, ರಾಜಾಜಿ ಚಾತುರ್ಯಬಲದಿಂದಲೇ ಸರ್ವವನ್ನೂ ಸಾಧಿಸಬಹುದೆಂಬ ವಿಶ್ವಾಸವುಳ್ಳ ಮನುಷ್ಯ. ಸರ್ದಾರ್ ಪಟೇಲ್ ಸಾಧಿಸಿ ಗೆಲ್ಲುವ ಶಕ್ತ್ಯಾರಾಧಕ; ರಾಷ್ಟ್ರಪತಿ ಕೃಪಲಾನಿ ಯುಕ್ತಿ ಯುಕ್ತ ವ್ಯವಹಾರದ ಮೇಲೆ ನಂಬಿಕೆಯುಳ್ಳ ಜನ.

ಆದರೆ ಮಹಾತ್ಮಜೀ ಮೇಲಿನ ಎಲ್ಲಾ ಗುಣಗಳೂ ಇದ್ದವರು. ಇವೆಲ್ಲವೂ ನಿರರ್ಥಕವಾದ ಮೇಲೂ ಸೋಲದವರೆಂದರೆ ಇವರೇ; ಮತ್ತೊಂದಸ್ತ್ರ—ಅಜೇಯ ಶಸ್ತ್ರ—ಅವರಲ್ಲಿದೆ. ಅದೆಂದರೆ ಅವರ ಪ್ರಾಣ; ಅದನ್ನೇ ಪಣವಾಗಿಟ್ಟು ಗಾಂಧಿಜೀ ಏನನ್ನೇ ಆದರೂ ಸಾಧಿಸದೆ ಬಿಡುವುದಿಲ್ಲ.

ಇದೇ ರೀತಿ ತನ್ನ ಪ್ರಾಣವನ್ನೇ ಪಣಕ್ಕೊಡ್ಡುವ ಇನ್ನೊಬ್ಬ ಧುರೀಣನೆಂದರೆ ಪಂಡಿತ ಜವಾಹಿರಲಾಲ ನೆಹರು. ಗಾಂಧಿಜೀಗೆ ತನ್ನ ಪ್ರಾಣದ ಬೆಲೆ ಗೊತ್ತಿದೆ; ಅದನ್ನು ಮುಂದಿಡುವಾಗ ಅಜಾಗರೂಕತೆಯನ್ನವರು ಪ್ರದರ್ಶಿಸುವುದಿಲ್ಲ; ಅವಸರಮಾಡುವುದಿಲ್ಲ. ಯೋಗ್ಯ ಬೆಲೆ ಬಾರದೆ ಅವರದನ್ನು ತೆರಲು ತಯಾರಿಲ್ಲ. ಆದರೆ ಪಂಡಿತಜೀ ಹಾಗಲ್ಲ. ತನ್ನ ಪ್ರಾಣವೆಷ್ಟು ಅಮೂಲ್ಯವಾದುದೆಂಬುದನ್ನು ಅವರರಿಯರು. ನೆಹರುಗಳ ಕೈಯಲ್ಲಿ ನೆಹರೂ ಜೀವವೆಂಬುದು ಜುಗಾರಿಕೋರನ ಕಿಸೆಯ ಹಣದಂತೆ. ಹಿಂದು ಮುಂದು ಯೋಚಿಸದೆ ಅವರದನ್ನು ಪಣಕ್ಕೊಡ್ಡುವದಿದೆ, ರಾಷ್ಟ್ರದ ಪಾಲಿನ ಒಂದು ಅಪಾಯಪರೀಕ್ಷೆ ಇಲ್ಲಿದೆ.

ಗಾಂಧೀ ನೆಹರುಗಳಂಥವರ ಪ್ರಾಣಗಳು "ಖಾಸಗಿ"ಯೇನೂ ಅಲ್ಲ; ಅವು ರಾಷ್ಟ್ರೀಯ ಸೊತ್ತುಗಳು; ಭಾರತದಲ್ಲಿ ರಾಷ್ಟ್ರೀಕರಣ ಹೊಂದಿರುವ ಮುಖ್ಯ ಸಂಪತ್ತುಗಳು. ಗಾಂಧಿಜೀಯು ಕೈಯಲ್ಲಿರುವುದು ಅನಾವಶ್ಯಕವಾಗಿ ಹಾಳಾಗಲಾರದೆಂಬ ವಿಶ್ವಾಸವಿದೆ; ಆದರೆ ನೆಹರುಗಳ ಮಟ್ಟಿಗೆ ಆ ನಂಬಿಕೆಯಿಲ್ಲ. ಅವರು ಅವಸರದಿಂದದನ್ನು ಅಪಾಯಕ್ಕೀಡು ಮಾಡಬಲ್ಲರು. ಅದ್ದರಿಂದ ರಾಷ್ಟ್ರವೀ ಕುರಿತು ಆತುರ ಪಡದೆ ನಿರ್ವಾಹವಿಲ್ಲ.

ಆದರೂ ಇದುವರೆಗಿನ ಅನುಭವವೇ ಭಾರತೀಯರ ಪಾಲಿಗೊಂದು ಭರವಸೆಯಾಗಿದೆ. ನೆಹರೂ ಎಂದೊಡನೆ ಅಪಾಯವೂ ಅಂಜುತ್ತಿದೆ ಎಂಬ ಗುಟ್ಟು ಈಗ ಸರ್ವಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ. ಅನ್ಯಾಯವು ನೆಹರುಗಳ ಹತ್ತಿರಬಾರದು; ದೈನ್ಯಾತಿರೇಕ, ಪರಾವಲಂಬನೆ, ನಿಸ್ಸಹಾಯಕತೆ, ನಿರಭಿಮಾನಗಳು ಅವರ ಕಣ್ಣೆದಿರು ನಿಲ್ಲಲಾರವು; ಅದೇ ರೀತಿ ಅಪಾಯವೂ ಅವರ ಬಳಿ ಸಾರಲು ಅಂಜುತ್ತಿದೆ.

'ಧೈರ್ಯಶಾಲಿಯು ಎಂದೂ ಸಾಯಲಾರ; ಹೇಡಿಯು ಹಲವು ಬಾರಿ ಸಾಯುತ್ತಾನೆ" ಎಂಬುದೇ ನೆಹರುಗಳ ಜೀವನ ತತ್ವ. ಎದೆಗಾರಿಕೆಯಿದ್ದಲ್ಲಿ ಎಲ್ಲವೂ ಇದೆ; ಪಂಡಿತ ನೆಹರುಗಳಲ್ಲಿ ಎದೆಗಾರಿಕೆಯಿದೆ.

ಭಾರತದಂತಹ ಉಪಖಂಡವೊಂದರ ಅದೃಷ್ಟ ನಿರ್ಮಾಪನದಂತಹ ಅತಿ ದೊಡ್ಡ ಕರ್ತವ್ಯವು ಪಂಡಿತ ನೆಹರುಗಳ ಪಾಲಿಗೆ ಬಾರದಿರುತಿದ್ದರೆ, ಅವರು ಲೋಕಪ್ರಸಿದ್ಧ ಲೇಖಕರಲ್ಲೊಬ್ಬರಾಗುತಿದ್ದರು; ಅದೂ ಬೇಡವೆಂದು ತೋರಿದ್ದರೆ ಗಣ್ಯ ವಿಜ್ಞಾನಿಯಾಗುತಿದ್ದರು. ಇವಾವ ರಂಗಕ್ಕೂ ಸೇರದೆ 'ಸಾಮಾನ್ಯಸೈನಿಕ'ನಾಗಿ ಸೇರುವ ಸಂದರ್ಭವಾದಗೊದಗುತಿದ್ದರೆ ಅಲ್ಪಾವಧಿಯೊಳಗೇನೇ 'ಮಿಂಚುಧಾಳೀ ತಜ್ಞ ಸೇನಾನಿ'ಯಾಗಿ ಹೋಗುತಿದ್ದರು. ಅವರ ಸ್ವಭಾವವಂತಹದು. ಅವರ ಬುದ್ಧಿಯಲ್ಲಿ ಹಿಂದುಮುಂದಿನ ಆಲೋಚನೆಯಿಲ್ಲದೆ ಘುಮುಕುವದು-ಅನ್ಯಾಯವನ್ನು ಕಂಡಾಗ ಟೋರ್ಪೆಡೋದಂತೆ ಅದಕ್ಕೆ ಬಡಿಯುವುದು—ಕಗ್ಗತ್ತಲೆಯಲ್ಲಿ ಕೋಲ್ಮಿಂಚಿನಂತೆ ಬೆಳಗುವದು, ನೆಹರೂ ವೈಶಿಷ್ಟ್ಯ.

ಅಪಾಯವು ಪಂಡಿತಜೀಯನ್ನು ಅಂಜಿಸುವ ಬದಲಿಗೆ ಆಕರ್ಷಿಸುತ್ತದೆ.

ಂಂ ಂಂ ಂಂ

ಅಂದು ದಿನ, ತನ್ನ ಮಿತ್ರ ಶೇಕ್ ಅಬ್ದುಲ್ಲಾನನ್ನು ಕಾಶ್ಮೀರ ಸರಕಾರವು ಬಂಧಿಸಿತು, ಎಂಬ ವಾರ್ತೆ ಕೇಳಿ, ದಿಲ್ಲಿಯಲ್ಲಿ ತನಗಿದ್ದ ರಾಷ್ಟ್ರಾವಶ್ಯ ಮುಖ್ಯಕಾರ್ಯಗಳನ್ನು ಬದಿಗಿಟ್ಟು ನೆಹರು ಕಾಶ್ಮೀರಕ್ಕೆ ಹೊರಟರು. ಕಾಶ್ಮೀರವು ನೆಹರೂ ಪ್ರವೇಶಕ್ಕೆ ಬಹಿಷ್ಕಾರ ಹಾಕಿತು. ಆದರೆ ಇದು ಬೇಲಿಯನ್ನು ಗಣಿಸದ ಮದ್ದಾನೆ, ಇವರು ಗಡಿಯ ಸೇತುವೆ ನುಗ್ಗಿದರು; ಸೇತುವೆ ಬುಡದಲ್ಲೇ ಕಾಶ್ಮೀರೀ ಸೋಲ್ಜರರು ಥಳಥಳಿಸುವ ಭರ್ಚಿಗಳನ್ನು ಮುಂಚಾಚಿ ಸಾಲುಕಟ್ಟಿ ನಿಂತಿದ್ದರು. ಹಾದಿ ಯುದ್ದಕ್ಕೂ 'ಬೆಯನೆಟ್' ಬೇಲಿ. ಈ ಮಹಾ ನಾಯಕನ ಮಾತು ಹಾಗಿರಲಿ, ಮನುಷ್ಯಮಾನನೆಯನ್ನೇ ಅರಿಯದ ಲೋಹದ ಆ ಹರಿತಾಯುಧಗಳೇ ಪಂಡಿತಜೀಯನ್ನು ಇದಿರಿಸಿದುದು; ಕಾಶ್ಮೀರ ಸರಕಾರದ ಮೇಲೆ ನೆಹರುಗಳಿಗೆ ಸಿಟ್ಟಿರಬಹುದು. ಭರ್ಚಿಗಳ ಮೇಲೂ ಸಿಟ್ಟುಮಾಡಲಿಕ್ಕಿದೆಯೆ? ಬೆಯನೆಟ್‌ಧಾರೀ ಯೋಧರನ್ನು ದೂಡಬಹುದು—ಬೆಯನೆಟನ್ನೇ ದೂಡಿದರಾದೀತೆ? ಆದರೆ ಆ ಸಂದರ್ಭದಲ್ಲಿ ನೆಹರೂ ಕಣ್ಣಿಗೆ ಕಾಶ್ಮೀರದ 'ಅನ್ಯಾಯ'ವೊಂದಲ್ಲದೆ ಬೇರಾವುದೂ ತೋರಲಿಲ್ಲ. ಅವರು ಚೂಪಾದ ಬೆಯನೆಟ್ ತುದಿಗಳನ್ನೇ ದೂಡಿಕೊಂಡು ಮುಂದೊತ್ತಿದರು. ಕಾಶ್ಮೀರೀ ಯೋಧರಿಗೆ ದೊರೆತಿದ್ದ ಬೆಯನೆಟ್ ಶಿಕ್ಷಣವು ಉಚ್ಚತರಗತಿಯದಿರಬೇಕು. ಘನ್ನನೇ ತಮ್ಮಾಯುಧಗಳನ್ನು ಹಿಂದೆಳೆದುಕೊಳ್ಳುವ ಕೌಶಲ್ಯವು ಅವರಲ್ಲಿದ್ದುದರಿಂದ ಪಾರಾಯಿತು. ಇಲ್ಲವಾದರೆ ಜವಾಹಿರಲಾಲರಕ್ತ ಎಂತವೋ ಕೆನ್ನೆಯೋ ಹರಿದು ಹೋಗುತಿತ್ತು!

ಂಂ ಂಂ ಂಂ

ವೈಸರಾಯರಿಂದಾರಂಭಿಸಿ, ಇವರ ಹಿತೈಷಿಗಳೆಲ್ಲರೂ ಈ ಕಾಲದಲ್ಲಿ ಗಡಿನಾಡಿಗೆ ಹೋಗುವುದಪಾಯಕರವೆಂದು ಎಚ್ಚರಿಸಿದ್ದರು. ಹೋಗಬಾರದೆಂದು ಒತ್ತಾಯಿಸಿದ್ದರು. ಆದರೂ ಕೇಳದೆ ಪಂಡಿತ ನೆಹರು ಗಡಿನಾಡು ಪ್ರಾಂತ್ಯದ ಸರಹದ್ದು ಗುಡ್ಡಗಾಡು ವಲಯಗಳ ಸಂಚಾರಕ್ಕೆ ಹೋದರು. ಅಲ್ಲಿಯ ಕಾಡುಜನರು ಪ್ರಪಂಚವನ್ನೇ ಅರಿಯದವರು. ಸಾಲದುದಕ್ಕೆ ಆ ಕಾಲದಲ್ಲಿ ಮುಸ್ಲಿಂಲೀಗಿನವರು ನಾನಾ ವಿಧದ ಅಪಪ್ರಚಾರಗಳ ಮೂಲಕ ಅಲ್ಲಿಯವರ ತಲೆ ಕೆಡಿಸಿದ್ದರು. ಆ ಕಾಡು ಹುಲಿಗಳಿಗೆ ಹುಚ್ಚು ಹಿಡಿಸಿ ಬಿಟ್ಟಿದ್ದರು. ಜೀವದಾಸೆಯಿದ್ದವರು ಸಂಚರಿಸುವ ಸ್ಥಳವೇ ಅದು. ಹತ್ತಿರದ ರಸ್ತೆಗಳಲ್ಲಿ ಸಾಗುವವರನ್ನು ಹೊಂಚುಹಾಕಿ ಎತ್ತಿಕೊಂಡೊಯ್ಯುತ್ತಿದ್ದ ಆ ಸರಹದ್ದಿನ ರಣಹದ್ದುಗಳ ನಡುವೆ ನೆಹರು ನುಗ್ಗಿ ಹೋದರು. ಅದೂ ಜಾಗರೂಕತೆಯಿಂದ ಸಂಚರಿಸಿದುವೆ? ಸೈಗಾವಲ ಸೈನಿಕ ಲೋರಿಯನ್ನು ಮೈಲು ದೂರ ಹಿಂದೆ ಹಾಕಿ ತನ್ನ ಕಾರನ್ನು ಮುಂದಕ್ಕೋಡಿಸಿದರು. ಒಂದು ಕಣಿವೇ ದ್ವಾರದಲ್ಲಿ ಕಾಡು ಜನರು ಈ ಕಾರನ್ನಡ್ಡಗಟ್ಟಿ ಖಂಡೀ ತೂಕದ ಕಲ್ಲುಗಳನ್ನು ಎತ್ತಿಹೊಡೆದಾಗ ನೆಹರು ನಜ್ಜುಗುಜ್ಜಾಗದೆ ಹೋದುದು ಭಾರತದ ಭಾಗ್ಯವೇ ಸರಿ. ನೆಹರುಗಳಂತಹ ಎರಡು ಕಾಯಗಳನ್ನು ಮುಚ್ಚುವಷ್ಟು ದೊಡ್ಡ ಗಾತ್ರದ ಬಾದಶಹಾ ಖಾನರು ತಮ್ಮ ದೇಹವನ್ನೇ ಪಂಡಿತಜೀಗೆ ಗುರಾಣಿಯಾಗಿ ಮುಚ್ಚಿ ಬಿಡದಿರುತಿದ್ದರೆ ಈ ಮನುಷ್ಯ ಅಂದೇ ಕೀರ್ತಿಶಾಲಿಯನಾಗಬೇಕಾಗುತಿತ್ತು; ಖಾನ್ ಸಾಹೇಬರು ಬ್ರಿಟಿಷ್ ಅಧಿಕಾರಿಯ ಕೈಯಿಂದ ಪಿಸ್ತೂಲನ್ನೆಳೆದುಕೊಂಡು ಆ ಪುಂಡರ ಕಡೆ [illegible]ಸುವ ಪ್ರಸಂಗಾವಧಾನತೆ ಪ್ರದರ್ಶಿಸದಿರುತಿದ್ದರೆ—ಕೈಯಲ್ಲಿ ಕಲ್ಲು, ಕತ್ತಿ

(೧೧ನೇ ಪುಟ ನೋಡಿರಿ.)

ಸ್ಥಾಪಿತ}

Canara Bank Limited

ಜೊಣೆಗಾರಿಕೆ ಪರಿಮಿತಿಸಲ್ಪಟ್ಟು ಬ್ರಿಟಿಷ್ ಇಂಡಿಯಾದಲ್ಲಿ ಸಾಂಘೀಕರಿಸಿದ್ದು.

ಹೆಡ್ ಆಫೀಸು: ಬಾವುಟಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು: ೧೬, ಎಸ್ಪೆಲೆನೊ ಸ್ಟ್ರೀಟ್, ಫೋರ್ಟ್ ಮುಂಬೈ.

ಶಾಖೆಗಳು

ಮದರಾಸು ಪ್ರಾಂತ್ಯ

ಮಂಗಳೂರು – ಸಿಟಿ
ಮಂಗಳೂರು – ಬಂದರ
ಮೂಲ್ಕಿ
ಗಂಗೊಳ್ಳಿ
ಕುಂದಾಪುರ
ಉಡಿಪಿ
ಕಾರ್ಕಳ
ಬಂಟ್ವಾಳ
ಪುತ್ತೂರು
ಕಾಸರಗೋಡು
ಮಧುರೆ
ಮದರಾಸು
ಪಯ್ಯನ್ನೂರು
ಕಲ್ಲಿಕೋಟೆ
ಕಣ್ಣಾನ್ನೂರು
ಕೊಯಮುತ್ತೂರು
ತಿರುಚಿನಾಪಳ್ಳಿ
ತೂತುಕುಡಿ
ಸೇಲಂ
ಇರೋಡು

ಹೈದರಾಬಾದು ಸಂಸ್ಥಾನ

ಸಿಕಂದರಾಬಾದು

ತಿರುವಾಂಕೂರು ಸಂಸ್ಥಾನ

ಅಲ್ಲೆಪ್ಪಿ
ಕ್ವಿಲೋನ

ಮಧ್ಯಪ್ರಾಂತ್ಯ

ನಾಗಪುರ
ಅಕೋಲಾ
ಅಮರಾವತಿ

ಮುಂಬೈ ಪ್ರಾಂತ್ಯ

ಬೆಳಗಾಂವಿ
ಧಾರವಾಡ
ಹುಬ್ಬಳ್ಳಿ
ಕೊಲ್ಹಾಪುರ
ಪೂಣೆ
ಮುಂಬೈ—ಫೋರ್ಟ್
ಮುಂಬೈ—ಕಾಳಬಾದೇವಿ
ಮುಂಬೈ—ಮಾಂಟ್ಗ
ಮುಂಬೈ—ಗಿರಗಾಂವ್
ಮುಂಬೈ—ಕಲ್ಯಾಣ

ಮೈಸೂರು ಸಂಸ್ಥಾನ

ಮೈಸೂರು
ಶಿವಮೊಗ್ಗ
ಚಿಕ್ಕಮಗಳೂರು
ಬೆಂಗಳೂರು ಸಿಟಿ
ಅರಸಿಕೆರೆ
ದಾವಣಗೆರೆ

ಸಿಂಧ್ ಪ್ರಾಂತ್ಯ

ಕರಾಚಿ

ಕೊಚ್ಚಿ ಸಂಸ್ಥಾನ

ಕೊಚ್ಚಿ
ಎರ್ನಾಕುಳಂ

★ ಮೈಸೂರಿನ ಸ್ವಾತಂತ್ರ್ಯ ಚಳವಳಿ ★

—— 'ಪರ್ಯಾಲೋಚನಾ ಸಮಿತಿ'ಯ ಸೂಚನೆಗಳು ——

ಮೈಸೂರು ಸಂಸ್ಥಾನವಿಂದು ಹೋರಾಟ ರಂಗವಾಗಿಮಾರ್ಪಟ್ಟಿದೆ. 'ರಾಮ ರಾಜ್ಯ' 'ಮಾದರೀ ಸಂಸ್ಥಾನ' ಇತ್ಯಾದಿ ಬಿರುದುಗಳಿಂದ ಕರೆಯಲ್ಪಡುತಿದ್ದ ಮೈಸೂರು ಇಂದು ಅದೃಶ್ಯವಾಗಿದೆ. "ಚಿನ್ನದ ನಾಡಿದು ಮೈಸೂರು" "ರಾಮರಾಜ್ಯವಿದು ಮೈಸೂರು" ಎಂಬ ಕೂಗಾಟ ನಿಂತು "ಲಾಠಿಯ ನಾಡಿದು ಮೈಸೂರು" "ಗುಂಡಿನ ಬೀಡಿದು ಮೈಸೂರು" ಎಂಬ ಕೂಗಾಟ ಕೇಳಿ ಬರುತ್ತಿದೆ! ಇದೇ ತಾ. 10ರಿಂದ ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಸತ್ಯಾಗ್ರಹ ಸಂಗ್ರಾಮವು ಸಂಸ್ಥಾನದ ಆ ಮೂಲೆಯಿಂದೀ ಮೂಲೆಯವರೆಗೂ ವ್ಯಾಪಿಸಿದೆ. ಕಾಂಗ್ರೆಸ್ ಅಧ್ಯಕ್ಷರು ಹಾಗೂ ಪ್ರಮುಖರಿಂದಾರಂಭಿಸಿ, ಎಲ್ಲಾ ಕಾರ್ಯಕರ್ತರ ದಸ್ತಗಿರಿ ನಡೆದಿದೆ; ನಡೆಯುತ್ತಾ ಇದೆ. ಒಂದೆರಡುಕಡೆ 'ಕರ್ಫ್ಯೂ' ಆಜ್ಞೆ ಜಾರಿಗೆ ಬಂತು; ಕೆಲವೆಡೆ ಗುಂಡು ಹಾರಾಟ ನಡೆಯಿತು; ಲಾಠೀ ಪ್ರಹಾರ ಸರ್ವ ಸಾಮಾನ್ಯ; ಸೆರೆಮನೆಗಳಂತೂ ಸರ್ವತ್ರ! ಹೆಂಡದ ಮರಗಳನ್ನು ಕಡಿಯುವದು - ರಸ್ತೆಗಳಲ್ಲಾ ತಂಕವೊಡ್ಡುವುದು-ಅರಮನೇ ಸತ್ಯಾಗ್ರಹಕ್ಕಾಗಿ ಧಾಳೀ ದಳ ಹೊರಡುವುದು-ಇತ್ಯಾದಿ ಬಹು ಮುಖದ ಕಾಯಿದೇ ಭಂಗ ಕಾರ್ಯಕ್ರಮಗಳನ್ನು ಸತ್ಯಾಗ್ರಹಿಗಳು ಹೂಡಿದ್ದಾರೆ. ಹೊರಗಿನ ಸಮಾಜವಾದಿಗಳು, ಕಮ್ಯೂನಿಸ್ಟರು, ಮತ್ತು ನೆರೆ ಪ್ರಾಂತ್ಯಗಳ ಕಾಂಗ್ರೆಸ್ ಕಮಿಟಿಗಳು ಹಾಗೂ ಸರ್ವ ಪ್ರಮುಖರು ಮೈಸೂರ ಸತ್ಯಾಗ್ರಹಕ್ಕೆ ಸಹಾನುಭೂತಿ ಸೂಚಿಸಿದ್ದಾರೆ; ಸಹಾಯ ಕೊಡಲು ನಡು ಬಿಗಿದಿದ್ದಾರೆ. ಹೊರಗಿನ ಯೋಧರು ಒಳ ನುಗ್ಗದಂತೆ ಮೈಸೂರು ಸರಕಾರವು ಸಂದುಕಟ್ಟಿನ ಸ್ಥಳಗಳಲ್ಲಿ ಸೈನಿಕ ಪಹರೆಯಿಟ್ಟಿದೆ. ಇದೇ ಕಾಲದಲ್ಲಿ ಸಂಸ್ಥಾನ ರೈಲ್ವೇ ಕೆಲಸಗಾರರ ಮುಷ್ಕರವೂ ಆರಂಭಿಸಿ ಅದೂ ಸತ್ಯಾಗ್ರಹ ಭಾಗವಾಗಿ ಸೇರಿ ಕೊಂಡಿದೆ. "ಮಾಡುವ ಇಲ್ಲವೇ ಮಡಿಯುವ" "ಚಲೋ ಮೈಸೂರು" "ಗಾಂಧಿಜೀಯ ತತ್ವ ಮತ್ತು ಕಾಯಿದೇ ಭಂಗ ಕಾರ್ಯಕ್ರಮಗಳೇ ನಮ್ಮ ಹೋರಾಟ ವಿಧಾನಗಳು"-ಇತ್ಯಾದಿಯಾಗಿ ಮೈಸೂರು ಸತ್ಯಾಗ್ರಹಿಗಳು ಈ ಮೊದಲ ಬ್ರಿಟಿಷ್ ಭಾರತದ ಸತ್ಯಾಗ್ರಹಿಗಳನ್ನೇ ಅನುಕರಿಸಿದ್ದರೆ, ಮೈಸೂರು ಸರಕಾರವೂ ಹಿಂದಿನ ಬ್ರಿಟಿಷ್ ಸರಕಾರದ ಮಾದರಿಯನ್ನೇ ಅನುಕರಿಸಿದೆ. 1947ನೇ ಸಪ್ಟೆಂಬರ್ ತಿಂಗಳ ಮೈಸೂರು 1942ನೇ ಸಪ್ಟೆಂಬರ್ ತಿಂಗಳ ಬ್ರಿಟಿಷ್ ಭಾರತವೇ ಆಗಿದೆ!

ಇದರ ಹಿನ್ನೆಲೆ

ಮೈಸೂರಿನಲ್ಲಿ ಪೂರ್ಣ ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕೆಂಬ ಬೇಡಿಕೆಯು ಇಂದು ನಿನ್ನೆಯದಲ್ಲ. ಕಾದು, ಬೇಡಿ ನಿರಾಶೆಗೊಂಡ ಮೈಸೂರು ಕಾಂಗ್ರೆಸು ಕಳೆದ ವರುಷವೇ ಸತ್ಯಾಗ್ರಹ ಹೂಡುವ ನಿರ್ಧಾರವನ್ನೊಮ್ಮೆ ಮಾಡಿದ್ದಿತು. ಮೈಸೂರು ಸರಕಾರದ ದೃಷ್ಟಿ ಈ ಕಡೆಗೆ ತಿರುಗಿದ ಲಕ್ಷಣಗಳನ್ನು ಕಂಡು ಆ ಹೋರಾಟವನ್ನು ಹಿಂದೆ ಹಾಕಿದ್ದಿತು. ಕೊನೆಗೆ ಇಂದಿಗೆಂಟೊಂಬತ್ತು ತಿಂಗಳ ಮೊದಲು 'ಸುಧಾರಣಾ ಸಂಬಂಧದ ಸೂಚನೆಗಳನ್ನು ತಯಾರಿಸಿ ತನಗೊಪ್ಪಿಸಬೇಕು.' ಎಂದು ಮೈಸೂರು ಮಹಾರಾಜರು ತನ್ನ ದಿವಾನರನ್ನು ಕೇಳಿಕೊಂಡರು. ಈ ಸಂಬಂಧವಾಗಿ ಮಹಾರಾಜರು ಕಳೆದ ಜನವರಿ ತಾ 8ರಲ್ಲೊಂದು ಸಂದೇಶವನ್ನಿತ್ತಿದ್ದರು. "ನನ್ನ ಸಂಸ್ಥಾನದ ಆಡಳಿತೆಯಲ್ಲಿ ನನ್ನ ಪ್ರಜೆಗಳ ಪೂರ್ಣ ಸಹಭಾಗಿತ್ವ ನಡೆಯಲಾಗುವಂತೆಯೂ, ರಾಜ್ಯಾಂಗಯಂತ್ರದ ಅಭಿವೃದ್ಧಿಗಾಗಿ ಮುಂದಿನ ಹೆಜ್ಜೆಗಳನ್ನು ಗೊತ್ತು ಹಚ್ಚುವಂತೆಯೂ, ವಿಧಾನಗಳನ್ನು ತಿಳಿಸತಕ್ಕದ್ದು" ಎಂದದರಲ್ಲಿ ಸೂಚಿಸಿದ್ದರು. ಆ ವಿಧಾನಗಳನ್ನು ತಿಳಿಸುವ ಅಧಿಕಾರವು ದಿವಾನರದ್ದೇ. ಮಾತ್ರವಲ್ಲ,'ಸಂಪೂರ್ಣ ಪ್ರಜಾಜವಾಬ್ದಾರೀ ಸಂಕಾರ' ಯಾಚಿಸುತ್ತಿರುವ ಕಾಂಗ್ರೆಸಿಗರಿಗೆ ಮಹಾರಾಜರು ನಿರೂಪಿಸಿದ ಮೇಲಿನ ಉದ್ದೇಶವೇನೇನೂ ಸಮಾಧಾನಕರವಾಗಿ ತೋರಲಿಲ್ಲ. ಈ ಅತೃಪ್ತಿ ಕಿಡಿಗೆ ದಿವಾನ್ ಸರ್. ಎ. ರಾಮಸ್ವಾಮಿ ಮುದಲಿಯಾರರ ಆ ಮೇಲಿನ ವರ್ತನೆಗಳು ಗಾಳಿಯಾದುವು. ಸುಧಾರಣಾ ಸೂಚನೆಗಳನ್ನು ರಚಿಸುವ ಕುರಿತು ತನಗೆ ಸಲಹೆ ಕೊಡುವುದಕ್ಕಾಗಿ ಪ್ರಜೆಗಳ ವಿವಿಧ ಪಕ್ಷಗಳ ಪ್ರತಿನಿಧಿಗಳುಳ್ಳ 'ಪರ್ಯಾಲೋಚನಾ ಸಮಿತಿ'ಯೊಂದನ್ನು ದಿವಾನರು ರಚಿಸಿಕೊಂಡರು. ಈ ಸಮಿತಿಯಲ್ಲಿ ಮೈಸೂರು ಕಾಂಗ್ರೆಸಿಗೆ ಅಲ್ಪ ಸ್ಥಾನಗಳನ್ನು ಕೊಡಲಾಯಿತು. ಹೀಗೆ ಮೈಸೂರು ಸರಕಾರವು ಇಟ್ಟುಕೊಂಡ ಗುರಿಯೂ, ತನಗಾ ಸಂಬಂಧವಾಗಿ ಕೊಟ್ಟ ಸ್ಥಾನವೂ ಸರಿಯಲ್ಲವೆಂಬುದರಿಂದ ಮೈಸೂರು ಕಾಂಗ್ರೆಸು ಈ 'ಪರ್ಯಾಲೋಚನಾ ಸಮಿತಿ'ಯನ್ನು ಬಹಿಷ್ಕರಿಸಿತು. ಇತ್ತ ಮೈಸೂರು ಸಂಸ್ಥಾನವು ಹಿಂದೀ ಕೇಂದ್ರದೊಡನೆ ಜೋಡಣೆಗೊಂಡ ಸಂಬಂಧದ ಕಾರ್ಯಬಾಹುಳ್ಯದ ನೆವಹೇಳುತ್ತಾ ದಿವಾನರು, ತಾನು ಹಿಡಿದ ಈ ಕೆಲಸವನ್ನು ಕೂಡಾ ಕಳೆದೆಂಟು ತಿಂಗಳಲ್ಲೂ ಹಿಂದೆಹಾಕುತ್ತಾ ಬಂದರು. ಈ ಸಂಬಂಧವಾಗಿ ಮೈಸೂರು ಕಾಂಗ್ರೆಸು ನಡೆಸಿದ ಪತ್ರವ್ಯವಹಾರ, ಮಾತುಕತೆಗಳೆಲ್ಲಾ ನಿರರ್ಥಕವಾದುವು. ಕೊನೆಗೆ ನಿರ್ವಾಹವಿಲ್ಲದೆ ಪೂರ್ವ ನಿರ್ಧಾರದಂತೆ ಇದೇ ತಿಂಗಳ ತಾ. 1ರಿಂದ ಮೈಸೂರು ಕಾಂಗ್ರೆಸು ಸತ್ಯಾಗ್ರಹ ಚಳವಳವನ್ನೇ ಹೂಡಿತು. ಮೈಸೂರಿನ ಭವಿಷ್ಯ ರಚನೆಯ ಕುರಿತು ಸಂಸ್ಥಾನ ಕಾಂಗ್ರೆಸು ಮುಂದಿಟ್ಟಿರುವ ವಿಧಾನಗಳಿವು.

ಕಾಂಗ್ರೆಸಿನ ಬೇಡಿಕೆ

ಪ್ರಜಾ ಜವಾಬ್ದಾರೀ ಸರಕಾರ ಸ್ಥಾಪನೆಯೇ ಗುರಿಯಾಗಿರತಕ್ಕದ್ದು.

ಈ ಗುರಿಯು ರೂಪರೇಖೆ ನಿರ್ಧರಿಸುವ ಮೊದಲು, ನ್ಯಾಯವಿಧಾಯಕ ಸಭೆಯ ಬಹುಸಂಖ್ಯಾತ ಪಕ್ಷದ ನಾಯಕನ ಅಭಿಪ್ರಾಯ ಪಡೆದು 'ಮಧ್ಯಾವಧಿ ಮಂತ್ರಿಮಂಡಲ'ವೊಂದನ್ನು ಸ್ಥಾಪಿಸಬೇಕು.

ಹೊಣೆಗಾರ ಸರಕಾರದ ರಾಜ್ಯಾಂಗಗಳ ರಚನೆಗಾಗಿ ಪ್ರತಿನಿಧಿ ಸಭೆಯೊಂದನ್ನು ರಚಿಸುವಂತೆ ಈ ನಡುಗಾಲ ಸರಕಾರವನ್ನೇ ಕೇಳಿಕೊಳ್ಳಬೇಕು.

ಪ್ರಜಾಪ್ರಭುತ್ವ ಸ್ಥಾಪನೆಗಿರುವ ಸರಿಯಾದ ಮಾರ್ಗವೆಂದರೆ ಇದೇ ಎಂಬುದು ಸ್ವತಃ ಸಿದ್ಧ ವಿಷಯ. ಬ್ರಿಟಿಷ್ ಭಾರತದಲ್ಲಿ ಸ್ವಾಧಿಕಾರ ಸ್ಥಾಪನೆಯಾದ ಈ ಮಾದರಿಯ ಕಡೆಗೇನೇ ಮೈಸೂರು ಕಾಂಗ್ರೆಸಿಗರು ಕೈ ತೋರಿಸಿದ್ದಾರಲ್ಲದೆ ಅವ್ಯವಹಾರ್ಯವಾದ ನವಶೋಧನೆ ಯಾವುದನ್ನೂ ಮಾಡಿಲ್ಲ. ಅದೂ ಮೈಸೂರಸರು ಈ ನ್ಯಾಯವನ್ನು ಸಂಪೂರ್ಣವಾಗಿ ಕಡೆಗಣಿಸಿ, ಇದೇ ಸೆಪ್ಟಂಬರ್ ತಾ. ೧ರಲ್ಲಿ ತಮ್ಮ ಹಳೇ ಧೋರಣೆಯನ್ನೇ ಪುನರುಚ್ಚರಿಸಿ ಪ್ರಜೆಗಳಲ್ಲೆಲ್ಲಾ ಮತ್ತಷ್ಟು ನಿರಾಶೆಯನ್ನುಂಟುಮಾಡಿದ್ದಾರೆ.

ಸುಧಾರಣಾ ಸೂಚನೆಗಳು

ಅಷ್ಟರಲ್ಲಿ—ಮರುದಿನ, ಸೆಪ್ಟೆಂಬರ್ ತಾ. ೨ರಲ್ಲೇ-ದಿವಾನ್ ನಿರ್ಮಿತ 'ಪರ್ಯಾಲೋಚನಾ ಸಮಿತಿ'ಯು ಮೈಸೂರಿನ ಭಾವೀ ಸುಧಾರಣೆಗಳ ಕುರಿತು ಈ ಕೆಳಗಿನ ನಿರ್ಧಾರಗಳನ್ನು ಮಾಡಿದೆ:-

ನ್ಯಾಯವಿಧಾಯಕ ಸಭೆಗಳು ಎರಡಿರಬೇಕು--ಒಂದು ಕೆಳ ಮನೆ ಮತ್ತೊಂದು ಮೇಲ್ಮನೆ-ಕೆಳಮನೆಯೇ ಪ್ರಾತಿನಿಧಿಕ ಎಸೆಂಬ್ಲಿ. ಇದರ ಎಲ್ಲಾ ಸದಸ್ಯರೂ ಜನರಿಂದಾರಿಸಲ್ಪಟ್ಟವರಿರಬೇಕು; ಇಲ್ಲಿ ನಾಮಕರಣ ಹೊಂದಿದ ಸದಸ್ಯರಿಲ್ಲ. ಹಣ ಕಾಸಿನ ವಿಷಯಗಳಲ್ಲಿ ಈ ಸಭೆಗೆ ಪೂರ್ಣಾಧಿಕಾರವಿದೆ. ಮೇಲ್ಮನೆಗೆ ಅರ್ಧಾಂಶ ಚುನಾಯಿತ ಮತ್ತುಳಿದವರು ನಾಮಕರಣ ಹೊಂದಿದ ಸದಸ್ಯರಿರಬೇಕು. ಚುನಾಯಿತ ಮತ್ತು ನೇಮಿತ ಸ್ಥಾನಗಳೆರಡರಲ್ಲೂ ಪೂರ್ವ ನಿಶ್ಚಿತ ಹಕ್ಕು ಬಾಧ್ಯತೆಗಳಿಗೆ ಪ್ರಾತಿನಿಧ್ಯವೀಯಲಾಗುವದು. ಒಂದು ಶಾಸನವು ಮೇಲಿನ ಎರಡೂ ಸಭೆಗಳಲ್ಲಿ ಮಂಜೂರಾದ ಮೇಲೆ ರಾಜಸಮ್ಮತಿ ಪಡೆಯಬೇಕು.

ಮಂತ್ರಿಗಳಿಗೆ ಸಮ್ಮಿಶ್ರ ಜವಾಬ್ದಾರಿಯೂ ಜತೆಕಾರ್ಯ ನಿರ್ವಹಣ ವಿಧಾನವೂ ಇರತಕ್ಕದ್ದು. ಇವರು ನ್ಯಾಯವಿಧಾಯಕ ಸಭೆಗೆ ಜವಾಬ್ದಾರರಿದ್ದು, ಅಲ್ಲಿ ಅವಿಶ್ವಾಸ ಸೂಚನೆ ಮಂಜೂರಾದರೆ ರಾಜೀನಾಮೆ ಕೊಡುತ್ತಾರೆ. ಮಂತ್ರಿಗಳನ್ನು ಆರಿಸುವಾಗ ವಿವಿಧ ಜಾತಿಗಳ-ಮುಖ್ಯತಃ ದಳಿತವರ್ಗದ-ಪ್ರಾತಿನಿಧ್ಯದ ಕಡೆಗೆ ಸರಿಯಾದ ಲಕ್ಷ್ಯ ಕೊಡತಕ್ಕದ್ದು. ಈ ಸಂಬಂಧದಲ್ಲಾವ ಸೂತ್ರಗಳನ್ನೂ ನಿರೂಪಿಸದೆ ಅದನ್ನು ಮಹಾರಾಜರ ಸದಿಚ್ಛೆಗೆ ಬಿಡಲಾಗಿದೆ.

ಹೈಕೋರ್ಟು ಜಡ್ಜರು, ಆಡಿಟರ್ ಜನರಲ್, ಪಬ್ಲಿಕ್ ಸರ್ವಿಸಸ್ ಕಮಿಶನುಗಳ ಅಧ್ಯಕ್ಷರು ಹಾಗೂ ಸದಸ್ಯರು, ಇವರ ನೇಮಕಗಳ ಅಧಿಕಾರ ಮಹಾರಾಜರದ್ದೇ. ಸೇನೆಯು ಮಹಾರಾಜರ ಕೈ ಕೆಳಗಿರತಕ್ಕದ್ದು. ನ್ಯಾಯ ವಿಧಾಯಕ ಸಭೆಗಳನ್ನು ಕರೆಯುವುದು, ಮುಂದರ್ಪಡಿಸುವುದು, ಮತ್ತು ಬರ್ಖಾಸ್ತು ಪಡಿಸುವುದು ಮಹಾರಾಜರ ಅಧಿಕಾರ. ಅಂತೆಯೇ ಬಿಕ್ಕಟ್ಟುಂಟಾದಾಗಿನ ಎಲ್ಲಾ ವಿಶೇಷಾಧಿಕಾರಗಳೂ, ಶೇಷಾಧಿಕಾರಗಳೂ ಮಹಾರಾಜರಿಗೇನೇ.

ಅರಮನೆ ಮತ್ತು ರಾಜನಿಧಿಗಳ ಸಂಬಂಧದ ಯಾವ ಮತಾಧಿಕಾರವೂ ನ್ಯಾಯ ವಿಧಾಯಕ ಸಭೆಗಿಲ್ಲ. ಹಿಂದೀ ಕೇಂದ್ರ ಮತ್ತು ಸಂಸ್ಥಾನದೊಳಗಿನ ಸಂಬಂಧಾಧಿಕಾರಗಳು-ಮಹಾರಾಜರಿಂದೊಪ್ಪಿಸಲ್ಪಟ್ಟು ಕೇಂದ್ರ ಮತ್ತು ಸಂಸ್ಥಾನ ಸಂಬಂಧದ ಬೇರೆ ಖಾತೆಗಳ ಹಸ್ತಕ್ಕೆ ಸೇರದುಳಿಯುವ ಎಲ್ಲವೂ-ಮಹಾರಾಜರ ಕೈಯಲ್ಲೇ ಇರತಕ್ಕದ್ದು. ಅಲ್ಪ ಸಂಖ್ಯಾಕರ ನ್ಯಾಯಬದ್ಧ ಹಕ್ಕು ಬಾಧ್ಯತೆಗಳ ರಕ್ಷಣಾಧಿಕಾರವೂ ಮಹಾರಾಜರಿಗೇನೇ. ಇವುಗಳ ಕುರಿತು ತನಗೆ ಸಲಹೆ ಕೊಡಲು ಮಹಾರಾಜರು ಅಗತ್ಯವುಳ್ಳ ಖಾತೆಗಳನ್ನು ನೇಮಿಸಿಕೊಳ್ಳಬಹುದು.

ಎಸೆಂಬ್ಲಿಯ ಪೋಟಿನ ಹಕ್ಕು ಈಗಿರುವುದಕ್ಕಿಂತ ವಿಶೇಷಾಂಶ ಹೆಚ್ಚಬೇಕೆಂದು ಸಮಿತಿಯ ಅಭಿಪ್ರಾಯವಿದ್ದರೂ, ಪ್ರಾಯಸ್ಥರಿಗೆಲ್ಲಾ ಮತದಾನದ ಹಕ್ಕು ಕೊಡಲು ಸಮ್ಮತಿಸಿದಂತೆ ತೋರುವುದಿಲ್ಲ. ಸಾಮಾನ್ಯ ಮತದಾರಿಕೆಗೂ, ಸದಸ್ಯತನದ ಉಮೇದ್ವಾರಿಕೆಗೂ ವ್ಯತ್ಯಾಸವಿರಬೇಕೆಂದು ಸಮಿತಿ ಬಯಸಿದಂತಿದೆ. ಮುಸ್ಲಿಂ, ಆಂಗ್ಲೋ ಇಂಡಿಯನ್, ಕ್ರಿಶ್ಚಿಯನ್, ಮತ್ತು ದಳಿತ ವರ್ಗವೇ ಮೊದಲಾದ ಅಲ್ಪ ಸಂಖ್ಯಾಕರಿಗೆ ಪ್ರತ್ಯೇಕ ಮತದಾನವಿರಬೇಕೋ, ಸಮ್ಮಿಶ್ರ ಮತದಾನ ಪದ್ಧತಿಯಿದ್ದು ಈ ಅಲ್ಪ ಸಂಖ್ಯಾಕ ಸಮಾಜಗಳಿಗೆ ಸ್ಥಾನಗಳನ್ನು ಕಾದಿಡಬೇಕೋ ಎಂಬ ಕುರಿತು ತೀವ್ರ ಚರ್ಚೆ ನಡೆದು ಕೊನೆಯ ನಿರ್ಧಾರ ಬಾಕಿಯಿದೆ. ಎಲ್ಲಾ ಅಲ್ಪ ಸಂಖ್ಯಾಕ ಸಮಾಜಗಳ ಪ್ರತಿನಿಧಿಗಳೂ ಪ್ರತ್ಯೇಕ ಮತದಾನವನ್ನೇ ಯಾಚಿಸಿದ್ದಾರೆ. ಹರಿಜನರಂತೂ, ತಮಗೆ ಸಂಖ್ಯಾಮಾನಕ್ಕೆ ಮಿಕ್ಕಿ ಹೆಚ್ಚು ಸ್ಥಾನಗಳ 'ವೈಟೇಜ್' ಕೊಡಬೇಕೆಂದು ಕೇಳಿದ್ದಾರೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಪೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

FOR SALE

Surgical Instruments, appliances, furniture etc., complete to equip four bed cottage Hospital.

Cost Rs. 6000/- or near offer.

Apply

CAPT. U. ANANTHAYA, M. B. & C. M.,
Ajjarkad, UDIPI.

ಧುರೀಣರ ಆರ್ತನಾದ

"ಪಶ್ಚಿಮ ಪಾಕಿಸ್ತಾನದ ಕತೆಗಳನ್ನು ಕೇಳುವಾಗ ಮತ್ತು ಓದುವಾಗ ಎದೆಯೊಡೆಯುತ್ತಿದೆ. ಅದು ಪೋಕರಿಗಳ ವರ್ತನೆಯೆಂದು ತಮ್ಮ ನಿಸ್ಸಹಾಯಕತೆಯನ್ನು ಪ್ರದರ್ಶಿಸುವುದು ಇಕ್ಕಡೆಯವರಿಗೂ ಹೇಳಿಸಿದ್ದಲ್ಲ. ತಂತಮ್ಮ ವಸಾಹತುಗಳಲ್ಲಿ ವಾಸಿಸುವ ಎಲ್ಲರ ವರ್ತನೆಗಳ ಪೂರ್ಣ ಜವಾಬು ಇಕ್ಕಡೆಯ ವಸಾಹತು ಸರಕಾರಗಳ ಮೇಲೆಯೇ ಇದೆ. ಈಗ ಅವುಗಳ ಕೆಲಸ ವಾದಿಸುವುದಲ್ಲ--ಸಾಧಿಸುವುದು ಅಥವಾ ಸಾಯುವುದೇ. ಅವರೇನೂ ಈಗ ಸಾಮ್ರಾಜ್ಯಶಾಹಿಯ ಭಾರದಡಿಯಲ್ಲಿ ಜಗ್ಗುತ್ತ ನುಗ್ಗುತ್ತ ಕಾರ್ಯಮಾಡಬೇಕೆಂದಿಲ್ಲ. ಜನತೆಯ ಈ ಹುಚ್ಚಾಟದಿದಿರಲ್ಲಿ ಮಂತ್ರಿಗಳು ಬಗ್ಗುವ ಬದಲಿಗೆ, ಅದರ ನಿವಾರಣಾ ಪ್ರಯತ್ನದಲ್ಲಿ ನಾಶವಾಗುವುದೇ ವಾಸಿಯೆನ್ನುತ್ತೇನೆ"—ತಾ 10ರಲ್ಲಿ ಡಿಲ್ಲಿಯ ಪ್ರಾರ್ಥನಾ ಸಭೆಯಲ್ಲಿ ಗಾಂಧಿಜೀ.

"ಸ್ವಾತಂತ್ರ್ಯದ ಸವಿಫಲವನ್ನು ಜೀರ್ಣಿಸಿಕೊಳ್ಳಲಾರದ ದೆಸೆಯಿಂದ ನೀವದನ್ನು ಬಿಸಾಡಿಬಿಟ್ಟರೆಂದು ಭಾವೀ ಜನಾಂಗವು ನಿಮ್ಮನ್ನು ದೂರದಂತೆ ವರ್ತಿಸಿರಿ. ನೀವೀ ಹುಚ್ಚಾಟವನ್ನು ನಿಲ್ಲಿಸದಿದ್ದರೆ ಲೋಕದ ಕಣ್ಮುಂದೆ ಭಾರತದ ಹೆಸರೆಂಬುದು ಕೆಸರಾಗಿ ತೋರಲಿದೆ ಎಂಬುದು ನೆನಪಿರಲಿ. ಒಬ್ಬಮನುಷ್ಯ ಅಥವಾ ಮನುಷ್ಯರ ಒಂದು ಗುಂಪಿಗೆ ಹುಚ್ಚು ತಾಗಿದರೆ ಅದಕ್ಕೆ ಪ್ರತೀಕಾರವೆಂದು ಎಲ್ಲರೂ ಆ ಹುಚ್ಚನ್ನೇ ತಾಗಿಸಿಕೊಳ್ಳಬೇಕೆ? ನಾನು ಅಂಗಲಾಚಿ ಬೇಡುತ್ತೇನೆ-ಗತಕಾಲವನ್ನು ಮರೆತು ಬಿಡಿರಿ; ಶಾಂತಿಯಿಂದ ಒಟ್ಟಿಗೆ ಬಾಳುವ ದೃಢನಿರ್ಧಾರ ಮಾಡಿರಿ. ನಿಮ್ಮ ಪ್ರಧಾನಿ ಮತ್ತು ಉಪಪ್ರಧಾನಿಗಳು (ನೆಹರು, ಪಟೇಲ್) ಮತ್ತೊಮ್ಮೆ ತಲೆಯೆತ್ತುವಂತೆ ಮಾಡಿರಿ. ಈಗ ದುಃಖ ಮತ್ತು ಲಜ್ಜೆಯಿಂದ ಅವರ ತಲೆ ತಗ್ಗಿದೆ"-ತಾ 12ರ ಪ್ರಾರ್ಥನಾ ಸಭೆಯಲ್ಲಿ ಗಾಂಧೀಜೀ.

"ನನ್ನ ಸಂಸ್ಥೆಯ ಕೈಗಳೂ ರಕ್ತದಿಂದ ತೊಯ್ದುಹೋಗಿವೆ, ಎಂಬ ಹೇಳಿಕೆಯು ಅಸತ್ಯವೆಂದು ನಾನು ಆಶ್ವಾಸನೆ ಕೊಡುತ್ತೇನೆ. ನನ್ನ ಸಂಸ್ಥೆಯು ಯಾವನೊಬ್ಬನ ವೈರಿಯೂ ಅಲ್ಲ. ಅದು ಮುಸ್ಲಿಮರ ಕೊಲೆಮಾಡಲಿಕ್ಕಿರುವುದಲ್ಲ. ತನ್ನ ಶಕ್ತ್ಯನುಸಾರ ಹಿಂದೂತ್ವವನ್ನು ರಕ್ಷಿಸಬೇಕೆಂಬುದೊಂದೇ ಅದರ ಉದ್ದೇಶ. ಶಾಂತಿಪಾಲನೆಯು ಅದರ ಧ್ಯೇಯ. ನೀವಿದನ್ನು ಜಾಹೀರುಮಾಡಬಹುದು"—ಗಾಂಧಿಜೀಗೆ ರಾಷ್ಟ್ರೀಯ ಸೇವಕ ಸಂಘ (R. S. S.)ದ ಚಾಲಕ ಶ್ರೀ ಮಾಧವ ಸದಾಶಿವ ಗೋಳ್ವಲ್ಕರರ ಆಶ್ವಾಸನೆ.

"ವರ್ಣನಾತೀತ ಕಷ್ಟನಷ್ಟಗಳು, ಅವಾಚ್ಯ ಪಾಶವಿಕ ಕ್ರೂರತ್ವಗಳು ನಡೆದು ಹೋದುವು. ಒಬ್ಬನ ಮೇಲೆ, ನಿರಪರಾಧಿಗಳ ನಿರ್ನಾಮವೇ ಆಯಿತು. ಇಂತಹ ಬರ್ಬರತೆಗೆ ಸಮಾನವಾದುದು ಮಧ್ಯಕಾಲೀನ ಚರಿತ್ರೆಯಲ್ಲಿ ಹೊರತು ಬೇರೆ ದೊರೆಯದು. ಆ ಕಡೆಗಳಲ್ಲಿ ಸಿಕ್ಕಿಬಿದ್ದಿರುವ ನಮ್ಮ ಸಹೋದರ ಸಹೋದರಿಯರೆಂತಹ ಗಂಡಾಂತರದಲ್ಲಿದ್ದಾರೆಂಬುದು ನೆನಪಿರಲಿ. ಅವರು ನಮ್ಮ ಕಡೆಗೆ ಕತ್ತು ನೀಡಿದ್ದಾರೆ. ಅವರ ರಕ್ಷಣೆಯ ಈ ಮಹತ್ಕಾರ್ಯಕ್ಕೀಗ ಬೇಕು ನಮ್ಮ ಶಕ್ತಿ, ಸಾಹಸದ ಪ್ರತಿಯೊಂದು ಔನ್ಸು ಮತ್ತು ನಮ್ಮ ಭಂಡಾರದ ಪ್ರತಿಯೊಂದಂಶ. ನಮ್ಮೀ ಹಾದಿಗೆ ಅತಂಕವೊಡ್ಡಿದರೆ ಮಿಲಿಯಾವಧಿ ಪ್ರಾಣಗಳೊಡನೆ ಆಟವಾಡಿದ ದ್ರೋಹವಿದೆ. ನಮ್ಮಾಶ್ರಯ ಪಡೆದಿರುವ ನಿರಾಶ್ರಿತರಲ್ಲೀಗ ತುಂಬಿರುವ ಕ್ರೋಧ, ಕಠೋರತೆಗಳನ್ನು ನಾನರಿಯಬಲ್ಲೆ. ಆದರೆ ಅವಸರದ ಸಿಟ್ಟಿನಿಂದ ಕೆಲಸವಾಗುವದಿಲ್ಲ. ಈ ದುರಂತಕ್ಕಾಗಿ ಉದಾಹರಣೆ ಕೊಡಬೇಕಾದವರೊಡನೆ, ಯೋಗ್ಯ ಕಾಲದಲ್ಲಿ ಸರಿಯಾದ ರೀತಿಯಿಂದಲೇ ನಾವೆಲ್ಲವನ್ನೂ ಚುಕ್ತಾ ಪಡಿಸಲಿದ್ದೇವೆ. ಈಗೊಮ್ಮೆ ಶಾಂತಿ ಸ್ಥಾಪನೆಯಾಗಲಿ"—ತಾ. 12ರಲ್ಲಿ ಸರ್ದಾರ್ ಪಟೇಲರ ಆಕಾಶವಾಣಿ ಸಂದೇಶ.

"ನನ್ನ ಮೆದುಳೆಲ್ಲಾ ಕೊಲೆ ಸುಲಿಗೆಗಳ ದರ್ಶನ, ಭೀಕರ ಸಂಗತಿಗಳ ಶ್ರವಣಗಳಿಂದ ಕದಡಿ ಹೋಗಿದೆ. ನಾವು ದೀರ್ಘಾವಧಿಯಿಂದ ಕನವರಿಸಿದ ಭಾರತವೆಂದರೆ ಇದೇ ಏನು?"—ಪಂಡಿತ ನೆಹರು ತಾ 9ರಲ್ಲಿ.

"ನಮ್ಮ ಸಹೋದರರಿಗೆ ಭಾರತ ವಸಾಹತಿನ ಭಾಗಗಳಲ್ಲೊದಗಿದ ಕಷ್ಟನಷ್ಟಗಳಿಗೆ ಸರಿಗಟ್ಟುವಂತಹದು ಅತ್ಯಪರೂಪ. ಇವುಗಳಿಂದಾಗಿ ಪಾಕಿಸ್ತಾನವು ತನ್ನ ಜನನ ಕಾಲದಲ್ಲೇ ಅಗಾಧ ಸಮಸ್ಯೆಗಳನ್ನಿದಿರಿಸಬೇಕಾಗಿ ಬಂದಿದೆ. ಪ್ರತಿಯೊಬ್ಬ ಸ್ತ್ರೀ ಪುರುಷನೂ ಈ ದಿನದಿಂದಲೇ ತನ್ನ ಆಹಾರ, ಉಡುಗೆ, ಮತ್ತಿತರ ಜೀವನೋಪಕರಣಗಳ ಮಟ್ಟಿಗೆ ಕಠಿಣ ಸಂಯಮದ ಕೈಕೊಳ್ಳುವ ನಿರ್ಧಾರ ಮಾಡಲಿ. ಆ ಮೂಲಕ ಉಳಿಸಿದ ಆಹಾರ, ವಸ್ತ್ರ, ಮತ್ತು ಹಣಗಳನ್ನು ನಿರ್ಗತಿಕರಿಗೆ ಸಹಾಯ ಸಲ್ಲಿಸುವದಕ್ಕಾಗಿ ನಿರ್ಮಿಸಿರುವ 'ಕಾಯಿದೇ ಆಝಮ್ ರಕ್ಷಣಾ ನಿಧಿ'ಗೆ ಕಳುಹಿಕೊಡಲಿ"—ತಾ. 12ರಲ್ಲಿ ಕಾಯಿದೇ ಆಝಮ್ ಜಿನ್ನರ ವಿನಂತಿ.

★ ಪಂಜಾಬಿನ

ಬೆಂಕಿ ಕೊಡುವುದು ಸುಲಭ!
ಅದನ್ನು ನಂದಿಸುವದೇ ಕಷ್ಟ.

ಪಾಪಾವೇಶ

"ಮುಸ್ಲಿಂ ಭಾರತಕ್ಕೊದಗಿದ ಗಂಡಾಂತರದಲ್ಲಿ ಮುಸ್ಲಿಂ ಅರಬ್ ಪ್ರಪಂಚವೇ ಸಂತಾಪ ಭಾಗಿಯಾಗಿದೆ. ನಮ್ಮ ಹೃದಯಗಳು ಭಾರತ ಮತ್ತು ಪಾಕಿಸ್ತಾನದ ನಮ್ಮ ಮುಸ್ಲಿಂ ಸಹೋದರರೊಡನಿವೆ. ಭಾರತದಲ್ಲಿರುವ ಮುಸಲ್ಮಾನರನ್ನು ಗಂಡಾಂತರಗಳಿಂದ ಪಾರು ಮಾಡುವಂತೆ ನಾವು ಅಲ್ಲಾನನ್ನು ಪ್ರಾರ್ಥಿಸುತ್ತಿದ್ದೇವೆ"—ಜೆರುಸಲೇಮಿನ ಗ್ರೇಂಡ್ ಮುಫ್ತಿಯವರು ಜಿನ್ನರಿಗೆ ಬಿಟ್ಟ ತಂತಿ.

ಸಾಮಾನ್ಯರ ಕರುಣ ಮೊರೆ

"ಗಾಂಧಿಜೀ, ಹಿಂದುಗಳ ಕುರಿತು ಕಠೋರತೆ ವಹಿಸಿದ್ದೀರಿ. ನೀವು ನಮ್ಮಂತೆ ಕಷ್ಟಕ್ಕೊಳಗಾಗಿಲ್ಲ. ನೀವು ನಮ್ಮಂತೆ ಹತ್ತಿರದ ಬಂಧು ಸಂಬಂಧಿಕರನ್ನು ಕಳಕೊಂಡಿಲ್ಲ. ನೀವು ನಮ್ಮಂತೆ, ಮನೆ ಮಾರು ಕಳಕೊಂಡು, ಚಿಕ್ಕಾಸಿಲ್ಲದೆ ಭಿಕನಾಸಿಗಳಾಗಿಲ್ಲ"—ನವದಿಲ್ಲಿಯ ದಿವಾನ್ ಹಾಲಿನ ಹಿಂದೂ ಸಿಕ್ ನಿರಾಶ್ರಿತ ನಿಲಯಕ್ಕೆ ಗಾಂಧಿಜೀ ಭೇಟಿಕೊಟ್ಟಾಗ ಅಲ್ಲಿಯ ಕ್ರೋಧೋದ್ವೇಗೀ ಮುಖಗಳಿಂದ.

"ಡಿಲ್ಲಿಯ ಗಲಭೆ [illegible] ಬಿನಲ್ಲಿ ಸಿಕ್ಕಿಬಿದ್ದಿರುವ ನಮ್ಮ ಲಕ್ಷಾವಧಿ ಸಹೋದರ ಸಹೋದರಿಯರು ಹಾಗೂ ಮಕ್ಕಳನ್ನು ಅಲ್ಲಿಂದ ತರುವ ಕಾರ್ಯವಾಗದಂತೆ ತಡೆಯೊಡ್ಡಿದೆ. ಅಲ್ಲಿ ನಡೆದ ಕೃತ್ಯಗಳು ನಮ್ಮನ್ನು ಕೆರಳಿಸಿದುದು, ಮಾತ್ರವಲ್ಲ, ಹುಚ್ಚರನ್ನಾಗಿ ಮಾಡಿರುವುದು ನಿಜ. ಆದರೆ ಇವುಗಳಿಂದಾಗಿ ಅಲ್ಲಿರುವ ನಮ್ಮ ಸಹೋದರರು ಅಪಾಂತರಕ್ಕೀಡಾಗುವದು ಖಂಡಿತ. ಆದ್ದರಿಂದ ಧುರೀಣರ ವಿಜ್ಞಾಪನೆಯನ್ನು ಮನ್ನಿಸಿರಿ; ಡಿಲ್ಲಿ ಶಾಂತವಾಗಲಿ"-ಡಿಲ್ಲಿಯ ಸಿಖ್ ಪ್ರತಿನಿಧಿಗಳ ಪ್ರಾರ್ಥನೆ.

"ನಮ್ಮನ್ನು ಯಾರು ಆಳಿದರೆ ನಮಗೇನು? ಪಾಕಿಸ್ತಾನವಾದರೇನು, ಹಿಂದುಸ್ಥಾನವಾದರೇನು? ನಾವು ಬೇಸಾಯಗಾರರು. ಯಾರೇ ಆಳಿದರೂ ಅವರಿಗೆ ತೀರ್ವೆ ತೆರುತ್ತೇವೆ; ಬಾಳುತ್ತೇವೆ. ಅಂದ ಮೇಲೆ ನಮ್ಮನ್ನಿಂತಹ ನರಕಕ್ಕೀಡುಮಾಡುವದು ಸರಿಯೆ?" ಪೂರ್ವ ಪಂಜಾಬಿನ ತನ್ನ ಹಳ್ಳಿಯಿಂದ ಅಮೃತಸರಕ್ಕೋಡಿಬಂದಿದ್ದ ಮುದುಕ ಮುಸ್ಲಿಂ ರೈತನೊಬ್ಬನು ಮಿ. ಲಿಯಾಖತರೊಡನೆ ಕಣ್ಣೀರು ತುಂಬಿ ಹೇಳಿದ ಮಾತು.

"ದೇಶವನ್ನು ವಿಭಾಗಿಸದೆ ನಿರ್ವಾಹವೇ ಇಲ್ಲವೆಂದು ನಿಮಗೆ ತೋರಿದಾಗ ಹೀಗೇಕೆ ಮಾಡಿಟ್ಟಿರಿ? ಎರಡೂ ಕಡೆಯ ಜನರನ್ನೂ ಅದಕ್ಕಿಂತ ಮೊದಲೇ ಬದಲಾಯಿಸಿಕೊಳ್ಳುವ ವ್ಯವಸ್ಥೆಯನ್ನೇಕೆ ನೀವು ಮಾಡದೆ ಹೋದಿರಿ? ಹಾಗೆ ಮಾಡಿಕೊಳ್ಳುತ್ತಿದ್ದರೆ ನಮಗೀ ಘೋರ ವಪ್ಪುದಗುತ್ತಿದ್ದಿತೆ?"—ಪಂಜಾಬಿನ ನಿರಾಶ್ರಿತ ನಿಲಯವೊಂದರಲ್ಲಿದ್ದ ಹಿಂದೂ ಮುದುಕಿಯೊಬ್ಬಳು ಪಂಡಿತ ನೆಹರುಗಳಿದಿರು ಹಾಕಿದ ಬೊಬ್ಬೆ.

"ನಾವಿಂತಹ ಅರಾಜಕತೆಯನ್ನು, ಅತ್ಯಾಚಾರಗಳನ್ನು, ನಿರ್ದೋಷೀ ಜನಸಾಮಾನ್ಯರ ಜೀವವನ್ನು ಪುಂಡರ ಕೈಗೊಪ್ಪಿ ಆಡಳಿತ ಯಂತ್ರವು ಸಂಪೂರ್ಣ ಅದೃಶ್ಯವಾದುದನ್ನು ಬೇರೆಲ್ಲಿಯೂ ಕಂಡುದೂ ಕೇಳಿದುದೂ ಇಲ್ಲ"—ನೆಹರುಗಳೊಂದಿಗೆ ಪಶ್ಚಿಮ ಪಂಜಾಬಿನಲ್ಲಿ ಸಂಚರಿಸಿದಂತ ಪತ್ರಿಕಾ ಪ್ರತಿನಿಧಿಗಳ ಅಂಬೋಣ.

"ನಮ್ಮ ಕುಟುಂಬ, ನಮ್ಮ ಹೆಂಡತಿ ಮಕ್ಕಳು ಹಿಂದುಸ್ಥಾನ್ ಭಾಗಗಳಲ್ಲಿ ಸಿಕ್ಕಿ ಬಿದ್ದಿದ್ದಾರೆ. ಕೆಲವರು ಕೊಲೆಯಾದ ವಾರ್ತೆಯೂ ಇದೆ. ಅವರನ್ನು ರಕ್ಷಿಸಿ ಕೊಡಿ; ರಕ್ಷಿಸಿರಿ"—ಕರಾಚಿಯಲ್ಲಿ ಗವರ್ನ

ನೋಟೀಸು

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ
ಕ್ರಮ ಸಂಖ್ಯೆ 238/1947.

ಕೃಷ್ಣ ಭಟ್ಟ—ವಾದಿ
ಮತ್ತು
ಶೀನಪ್ಪ ಶೆಟ್ಟಿ—ಪ್ರತಿವಾದಿ.
ಯವರೊಳಗೆ

ಸದ್ರಿ ವಾದಿಯು ಪ್ರತಿವಾದಿಯಿಂದ ಬರತಕ್ಕ ದಿವಾಣದು ನೋಟಿನ ಅನ್ವಯಕ್ಕೆ ದಾವಾ ಮಾಡಿ ಸದ್ರಿ ದಾವೆಯಲ್ಲಿ ಪ್ರತಿವಾದಿಗೆ ಆಗತಕ್ಕ ನ್ಯಾಯದ ನೋಟೀಸು ಬಗ್ಗೆ ತಾ. 30-9-47ಕ್ಕೆ ಇಟ್ಟಿರುವದರಿಂದ ಆ ದಿವಸ ಪ್ರತಿವಾದಿ ಸ್ವತಹಾ ಯಾ ವಕೀಲರ ಮುಖಾಂತ್ರ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜವಾಬು ಹೇಳು ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ಸದ್ರಿ ಪ್ರತಿವಾದಿ ಗೈರುಹಾಜರಿಯಿಂದ ಸದ್ರಿ ಸಂಬಂಧ ತೀರ್ಮಾನಿಸಲಾದೀತು.

P. Padamanabha Rao.
Vakil for plaintiff.
Udipi Dated 9-9-47.

ವಾರ್ಡನ್

1946ರಲ್ಲಿ ಹೊಸ ದಾಖಲೆಯ ಶಿಖರಕ್ಕೇರಿದೆ.

ಸ್ವೀಕರಿಸಲ್ಪಟ್ಟ ವ್ಯವಹಾರ	ರೂ. 2,04,00,000
ಪೂರ್ಣಗೊಳಿಸಲ್ಪಟ್ಟ ವ್ಯವಹಾರ	ರೂ. 1,72,00,000

ವಾರ್ಡನಿನ ಪ್ರಗತಿಪರ ಜೀವನದಲ್ಲಿ ಇದೊಂದು ಮರೆಯಲಾಗದ ಉಜ್ವಲ ಸಾಹಸ.

ಇಂತಹ ದಾಖಲೆಗೆ ನೆರವಾದ ಸ್ವಪರ ರಾಷ್ಟ್ರಗಳ ಪೋಲಿಸಿದಾರರಿಗೂ ಏಜಂಟರಿಗೂ ಕಂಪೆನಿಯು ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತದೆ.

ಶಿವಪ್ರಸಾದ ಠಾಕರ್, ಮೆನೇಜಿಂಗ್ ಡೈರೆಕ್ಟರ್.
ಎಮ್. ಸುಂದರರಾಮ ಶೆಟ್ಟಿ, ಏಜನ್ಸಿ ಮೇನೇಜರ್.

ಮಂಗಳೂರು ಶಾಖೆ.

ಬಿ. ಸಚ್ಚಿದಾನಂದ ಹೆಗ್ಡೆ, ಬ್ರಾಂಚ್ ಸೆಕ್ರೆಟರಿ.
ಕೆ. ಪಿ. ಭವಾನಿಶಂಕರ ಶೆಟ್ಟಿ, ಅಸಿಸ್ಟಾಂಟ್ ಬ್ರಾಂಚ್ ಸೆಕ್ರೆಟರಿ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.:
Moolky, S. K.

ಹಾಹಾಕಾರ ★

ಜಾತ್ಯಂಧರೆಲ್ಲಾ ತಿಳಿದಿರಲಿ! ಅಶಾಂತಿಯನ್ನು ಹಬ್ಬಿಸದಿರಲಿ.

ಸರ್ವನಾಶ!

ರ್ ಜನರಲ್ ಜಿನ್ನರ ಬಂಗಲೆಯ ಸೇನಾ ಕಾವಲನ್ನು ಭೇದಿಸಿಕೊಂಡು ಹೋಗಿ ನೂರಾರು ಪಾಕಿಸ್ತಾನ್ ಸರಕಾರೀ ನೌಕರರು ಹಾಕಿದ ಬೊಬ್ಬೆ.

"ನನ್ನ ಮತ್ತು ನನ್ನ ಪತ್ನಿಯ ಪ್ರಾಣಗಳು ಅಪಾಯದಲ್ಲಿವೆ. ನಾವಿಲ್ಲಿ ಸಿಕ್ಕಿಬಿದ್ದಿದ್ದೇವೆ. ಕೂಡಲೇ ರಕ್ಷಿಸಿರಿ" ಗಡಿನಾಡಿನಿಂದ ಅಲ್ಲಿಯ ಮಾಜೀ ಮಂತ್ರಿ ಗಿರ್ಧರಿಲಾಲ್ ಪುರಿಯವರು ಡಿಲ್ಲಿಗೆ ಬಿಟ್ಟ ತಂತಿ.

ಹೃದ್ರಾವಕ ಘಟನೆಗಳು

ಕರಾಚಿಯ ರೈಲ್ವೇ ಸ್ಟೇಶನೊಂದರ 'ಪ್ಲೇಟ್‌ಫೋರ್ಮ್'ಗೇನೇ ಪುಂಡರು ನುಗ್ಗಿ ಅಲ್ಲಿದ್ದ ಪ್ರಯಾಣಿಕರನ್ನೆಲ್ಲಾ ತಿವಿದು ಹಾಕಿದರು.

ಸಿಂಧ್ ಪ್ರಾಂತ್ಯದ ಹಲವು ಕಡೆಗಳಲ್ಲಿ ರೈಲಿನೊಳಗೆ ನುಗ್ಗಿ, ಅಥವಾ ಮೊದಲೇ ಪ್ರವೇಶಿಸಿ ಕುಳಿತು ಮಧ್ಯ ಹಾದಿಯಲ್ಲೇ 'ಕಂಪಾರ್ಟ್‌ಮೆಂಟು'ಗಳೊಳಗೆ ತಿವಿದು ಕೊಲ್ಲುವ— ಗಾಡಿಯಿಂದೆತ್ತಿ ಕೆಳಗೆಸೆದು ನಜ್ಜುಗುಜ್ಜು ಮಾಡುವ— ರಾಕ್ಷಸೀ ಕೃತ್ಯಗಳು ನಡೆದಿವೆ.

ಸೆಪ್ಟಂಬರ್ 7ರಲ್ಲಿ ಡಿಲ್ಲಿಯಿಂದ ಹೊರಟ ಫ್ರೆಂಡ್ ಟ್ರೇನ್ ಎಕ್ಸ್‌ಪ್ರೆಸ್ ತಾ. 10ರಲ್ಲಿ ಮದ್ರಾಸಿಗೆ ಮುಟ್ಟಿದಾಗ ಅದರಲ್ಲಿದ್ದ ಪ್ರಯಾಣಿಕರಿಗೆ ಹೆದರಿಕೆಯಿಂದ ನಾಲಿಗೆಯೇ ಮಗುಚುತ್ತಿರಲಿಲ್ಲ. ಈ ರೈಲು ಡಿಲ್ಲಿ ಬಿಟ್ಟು ಎರಡು ಮೈಲು ಬಂದೊಡನೆಯೇ ಪುಂಡರು ಗಾಡಿಯನ್ನು ನಿಲ್ಲಿಸಿ ಭೀಕರ ರೀತಿಯ ಕೊಲೆಗಳನ್ನು ನಡಿಸಿದರು. ಅದನ್ನು ಕಣ್ಣಾರೆ ಕಂಡಿದ್ದ ಪ್ರಯಾಣಿಕರಿಗೆ ಕಣ್ಣು ಕತ್ತಲೆ ಬಂದಂತಾಗಿ ನಾಲ್ಕುದಿನಗಳ ನಂತರ ಮದ್ರಾಸಿಗೆ ಮುಟ್ಟಿದಾಗಲೂ ಅವರ ಬುದ್ಧಿಭ್ರಮೆ ಹೋಗಿರಲಿಲ್ಲ.

ಆ ರೈಲು ಕೊಲೆಯ ಕೆಲವು ಸಂಗತಿಗಳು:—ಘೋರ ದೊಡ್ಡ ತಂಡವು ಸರ್ವಾಯುಧಗಳೊಂದಿಗೆ ರೈಲಿನೊಳಗೇನೇ ತುಂಬಿದ್ದಿತು. ಡಿಲ್ಲಿಯಿಂದೆರಡು ಮೈಲು ಮುಂದೆ ಬಂದೊಡನೆ ಅವರು ಸರಪಣಿಯೆಳೆದು ರೈಲು ನಿಲ್ಲಿಸಿದರು. ಪ್ರತಿಯೊಂದು ಕಂಪಾರ್ಟ್‌ಮೆಂಟಿಗೆ ನುಗ್ಗಿ ವಿಜಾತೀಯರನ್ನು ಸ್ತ್ರೀಯರು ಮಕ್ಕಳು ಮುದುಕರೆನ್ನದೆ ಎಲ್ಲರನ್ನೂ ಕೊಲೆಮಾಡಿ ಬಿಟ್ಟರು. ರೈಲು ಡ್ರೈವರ್ ಇಂಜನನ್ನು ತಪ್ಪಿಸಿಟ್ಟು, ಪ್ರಯಾಣಿಕರ ಕಂಪಾರ್ಟ್‌ಮೆಂಟುಗಳನ್ನು ಹಾಗೆಯೇ ಬಿಟ್ಟು ಹತ್ತಿರದ ನಾಜಿಮುದ್ದೀನ್ ಸ್ಟೇಶನಿಗೆ ಹೋಗಿಬಿಟ್ಟ. ಆ ಮೇಲೆ ಸೈನಿಕರು, ಪೋಲಿಸರು ಬರುವವರೆಗೆ 2ಘಂಟೆಗಳ ಕಾಲ ಈ ನರಭಕ್ಷಕತನ ನಿರಾತಂಕವಾಗಿ ನಡೆಯಿತು. ರಜೆಯಲ್ಲಿ ಹೊರಟು ಆ ಗಾಡಿಯಲ್ಲಿ ಕುಳಿತಿದ್ದ ಮಿಲಿಟರಿ ಅಧಿಕಾರಿಯೊಬ್ಬನಿಗೆ ತನ್ನ ಜತೆ ಪ್ರಯಾಣಿಕ ಗೃಹಸ್ಥನೊಬ್ಬನ ಜಾತಿ ತಿಳಿದಿತ್ತು. ಪುಂಡರು ಬಂದು ಆ ಗೃಹಸ್ಥನನ್ನು ಹಿಡಿದುಕೊಂಡಾಗ ಈ ಅಧಿಕಾರಿಯು "ಆತ ನಿಮ್ಮ ಜಾತಿಯವನೇ" ಎಂದು ಸತ್ಯ ಸಂಗತಿಯನ್ನು ತಿಳಿಸಿದ. ಕೊಲೆಗಡುಕರು ಅದನ್ನು ನಂಬದೆ ಕೆಳಗೆ ದೂಡಿ ಕೊಲ್ಲಲು ಅವನನ್ನೆತ್ತಿದರು. ಹೇಗೆ ಸತ್ತರೂ ಸ್ವರ್ಗ ಸೇರಬೇಕೆಂದು ಆ ಬಡಪಾಯಿಯು ಪುಂಡರ ಕೈಯಲ್ಲಿದ್ದಂತೆಯೇ ಅಂತಿಮಕಾಲದ ಪ್ರಾರ್ಥನೆ ಪಠಿಸಿದ. ಆ ಸೊಲ್ಲು ತಮ್ಮ ಧರ್ಮ ಗ್ರಂಥದ್ದಾದ್ದರಿಂದ 'ಹೋ! ತಪ್ಪಾಯಿತು' ಎನ್ನುತ್ತಾ ಕೊಲೆಗಡುಕರು ಅವನನ್ನು ಬಿಟ್ಟುಹೋದರು. "ಪ್ರಾರ್ಥನೆಯ ಮಹತ್ವವೆಷ್ಟೆಂಬುದನ್ನು ಈ ರೀತಿಯಿಂದಾದರೂ ಆಗೊಮ್ಮೆ ಕಂಡೆ" ಎಂದಾ ಪ್ರೇಕ್ಷಕ ಅಧಿಕಾರಿಯೆಂದಿದ್ದಾನೆ. ಒಬ್ಬ ಹೆಂಗಸಿಗೆ ಚೂರಿ ಚಾಚಿ ಪುಂಡನೊಬ್ಬನು ಜಾತಿ ಕೇಳಿದಾಗ್ಯತಾನು ಕ್ರಿಶ್ಚಿಯನ್ ಎಂದಾಕೆ ಹೇಳಿದ್ದರಿಂದ ಬಿಟ್ಟಿದ್ದರು. ಕೆಲವು ಪ್ರಯಾಣಿಕರಿಗೆ ರಕ್ಷಣೆಕೊಟ್ಟ ರೈಲ್ವೇ ಗಾರ್ಡನನ್ನು ಕೂಡಲೇ ಕೊಂದು ಹಾಕಿದರು; ಅವರು ಕೊಂದ ರೀತಿಗಳನ್ನು ಕಂಡಿದ್ದ ಪ್ರಯಾಣಿಕರೆಲ್ಲಾ ದಿಗಿಲುಬಡಿದು ಅರೆಜೀವವಾಗಿದ್ದರು.

ಜುಲುಮೆಯ ಮತಾಂತರಗಳು ಬಹಳ ನಡೆದಿವೆ. ಪೋಲಿಸರು ಮತ್ತು ಸೈನಿಕರೇ ವಿಜಾತೀ ನಿರಾಶ್ರಿತರ ಮೇಲೆ ಗುಂಡು ಹಾಕಿ ಕೊಂದ ದೃಷ್ಟಾಂತಗಳು ಬಹಳವಿವೆ. ಶಸ್ತ್ರಾಸ್ತ್ರಗಳನ್ನು ಕಸಗೊಂಡು, ಅನಿವಾರ್ಯವಾಗಿ ಅರ್ಧಾಹಾರ ಕೊಟ್ಟು, ಸಹಸ್ರ ಸಂಖ್ಯೆಯ ಜನರನ್ನು ಕೂಡಿಸಿಟ್ಟ ನಿರ್ಗತಿಕ ನಿಲಯಗಳ ಮೇಲೆ ಪುಂಡರು ಧಾಳಿ ನಡಿಸಿ, ಕೊಲೆ ಮಾಡಿದ ನಿದರ್ಶನಗಳು— ಪಾಪದ ಜನರನ್ನು ಒಂದೆಡೆ ಸೇರಿಸಿ ಗುಂಪುಗುಂಪನ್ನೇ ಕಟುಕರ ಕತ್ತಿಗಾಹುತಿ ಕೊಟ್ಟಂತಾದ ದುರದೃಷ್ಟಗಳು—ಬಹಳವಿವೆ.

ಡಿಲ್ಲಿಯ ಮುಸ್ಲಿಂ ನಿರಾಶ್ರಿತ ನಿಲಯದಲ್ಲಿ ತಂದೆ ತಾಯಿಯಿಬ್ಬರೂ ಕೊಲೆಯಾಗಿದ್ದ ಹಸುಕೂಸೊಂದನ್ನು ಗಾಂಧಿಜೀಯ ಕೈಗಿಟ್ಟಿದ್ದರು.

ಇಡೀ ಭಾರತದ ಸುಮಾರು ಕಾಲಂಶ ಪಶ್ಚಿಮೋತ್ತರ ಭಾಗದಲ್ಲಿರುವ ಹಿಂದೂ-ಸಿಖ್-ಮುಸ್ಲಿಮರಲ್ಲಿ ಪ್ರತಿಯೊಬ್ಬರಿಗೂ ನಿಂತಲ್ಲಿ, ಕುಳಿತಲ್ಲಿ, ರೈಲು ಹತ್ತಿದಾಗ, ಬೆಳಕು ಕಾಣುವಾಗ ಮೃತ್ಯು ಭೀತಿಯಿದ್ದೇ ಇದೆ. ಯಾರೊಬ್ಬನಲ್ಲೂ ಈಗ 'ಮನುಷ್ಯ ಹೃದಯ'ವೆಂಬುದಿರದಂತಾಗಿದೆ.

ಮಹಾ ಸಮಸ್ಯೆಗಳು

ಪಶ್ಚಿಮ ಮತ್ತು ಪೂರ್ವ ಪಂಜಾಬುಗಳಲ್ಲಿ ಈ ಬಾರಿಯ ಜಾತೀಯ ಗಲಭೆಯಿಂದ ಸತ್ತವರ ಸಂಖ್ಯೆ 15000ವೆಂದು ಅಧಿಕಾರೀ ಲೆಕ್ಕವೆಂದು ಪಂಡಿತ ಜವಾಹರಲಾಲರೆಂದಿದ್ದರೂ, ಅದಕ್ಕಿಂತ ಇಮ್ಮಡಿ, ಮುಮ್ಮಡಿ ಅಧಿಕವಿರುವುದು ಸಂಭವನೀಯವೆಂದಿದ್ದಾರೆ. ಡಿಲ್ಲಿಯಲ್ಲಿ ಸತ್ತವರ ಸಂಖ್ಯೆ1000ಎಂದು ನೆಹರೂರುಗಳ ಲೆಕ್ಕ. ಆದರೆ ಅದೂ ಬಹಳ ಹೆಚ್ಚೆಂಬೇಕು. ಸುಮಾರು ಒಂದೂವರೆ ಲಕ್ಷ ಜನರು ಪಂಜಾಬಿನಲ್ಲೇ ಸತ್ತಿರಬಹುದೆಂದು ಪಾಕಿಸ್ತಾನದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀ ಶ್ರೀಪ್ರಕಾಶರೇ ಹೇಳಿದ್ದಾರೆ. ಇನ್ನು ಒತ್ತಿನ ಕೆಲವು ಸಂಸ್ಥಾನಗಳಲ್ಲಿ, ಗಡಿನಾಡು ಸಿಂಧ್ ಪ್ರಾಂತ್ಯಗಳಲ್ಲಿ, ಆದ ಕೊಲೆಗಳು ಬೇರೆಯಿವೆ. ಎಲ್ಲವನ್ನೂ ಕೂಡಿಸಿ 'ಸ್ವರಾಜ್ಯ ದೊರೆತ ಮೇಲೆ ಸ್ವರ್ಗಕ್ಕೇರಿದವರು ಹಲಕ್ಷ' ಎಂದಾಗದೆ?

ಭಾರತ ಮತ್ತು ಪಾಕಿಸ್ತಾನಗಳು 20-20 ಲಕ್ಷ ಜನರನ್ನು ಪರಸ್ಪರ ಬದಲಾಯಿಸಿಕೊಳ್ಳುವ ಕಾರ್ಯವೀಗ ಸಾಗುತ್ತಿದೆ. ಸುಮಾರು 13–15ಲಕ್ಷಮಂದಿ ಈಗಲೇ ಅದಲು ಬದಲಾಗಿದ್ದಾರೆ. ಉಳಿದವರು ಆಗುತ್ತಾ ಇದ್ದಾರೆ.

ಒಂದು ರಾಜ್ಯ ಬಿಟ್ಟು ಮತ್ತೊಂದು ರಾಜ್ಯಕ್ಕೆ ಹೋಗುವವರಿಗೆ ತಮ್ಮ ಆಸ್ತಿ ಮನೆ, ಸೊತ್ತುಗಳ ಆಸೆಯೇ ಇಲ್ಲ. ಇಕ್ಕಡೆಯ ಹಲವರು ಎಲ್ಲಕ್ಕೂ ಬೆಂಕಿ ಕೊಟ್ಟೇ ಹೋಗಿದ್ದಾರೆ.

ಹಿಂದುಸ್ಥಾನದ ಪಾಲಿನ ಕಾಲ್ಬಲ, ವೈಮಾನಿಕರು ಮತ್ತಿತರ ಸೇನಾಂಗಗಳ ಗಣ್ಯಭಾಗವು ಈ ಮೊದಲೇ ಗಡಿನಾಡು ಮೊದಲಾದ ಪಾಕಿಸ್ತಾನ್ ಕ್ಷೇತ್ರದಲ್ಲಿ ನಿಲ್ಲಿಸಲ್ಪಟ್ಟಿದ್ದುದರಿಂದ ಅವುಗಳನ್ನು ತರಿಸಿಕೊಳ್ಳುವ ಮೊದಲೇ ಜಾತೀಯ ಗಲಭೆಯೆದ್ದು ಸೈನಿಕರನ್ನು ತುಂಬಿಸುವ ರೈಲುಗಳ ಮೇಲೆ ಪುಂಡರು ಹಠಹಿಡಿದು ಧಾಳಿ ನಡಿಸುತ್ತಿದ್ದಾರೆ. ಹೀಗಾಗಿ ಭಾರತದ ಗಣ್ಯ ಸೇನಾ ಭಾಗ ಪ್ರಕೃತ ಪಾಕಿಸ್ತಾನಕ್ಕೆ ಸೆರೆಸಿಕ್ಕಿದಂತಾಗಿ ಅಲ್ಲೇ ಉಳಿದಿದೆ.

ಇತ್ತ ನವೋದಿತ ಪಾಕಿಸ್ತಾನಕ್ಕೆ ನಿರಾಶ್ರಿತ ಮುಸ್ಲಿಮರನ್ನು ರಕ್ಷಿಸುವ ಹೊಣೆಯು ಅತಿ ದೊಡ್ಡ ಹೊರೆಯಾಗಿ ಹೋಗಿದೆ. ಎಲ್ಲಾ ಪ್ರಜೆಗಳಿಂದಲೂ ಸಹಾಯ ಕೇಳುವ ನಿಧಿಯೊಂದನ್ನು ಗವರ್ನರ್ ಜನರಲ್ ಜಿನ್ನರು ತೆರೆಯಬೇಕಾಗಿ ಬಂದಿದೆ.

ಪಾಕಿಸ್ತಾನದ ವ್ಯಾಪಾರ ವಹಿವಾಟುಗಳಲ್ಲಿ ಮುಖ್ಯ ಭಾಗವಹಿಸುತಿದ್ದ ಹಿಂದೂ ಸಿಖ್ಖರೀಗ ಅಲ್ಲಿಂದೋಡಿಬರುತ್ತಿರುವುದರಿಂದ ಜಿನ್ನರ ರಾಜ್ಯದಲ್ಲಿಂದು ಆರ್ಥಿಕ 'ಅಡಿಮೇಲು' ನಡೆದಿದೆ. ಅದನ್ನೆಲ್ಲಾ ಕಂಡು ಬೇಂಕುಗಳ ಸಂಪತ್ತನ್ನು ಹೊರಗೊಯ್ಯಕೂಡದೆಂದು ಪಾಕಿಸ್ತಾನ್ ಸರಕಾರವು ಹೊರಡಿಸಿದ ವಿಶೇಷ ಶಾಸನಕ್ಕೆ, ಹಿಂದುಸ್ಥಾನ್ ಸರಕಾರದ ಪ್ರತಿಭಟನೆ ಹೋದ್ದರಿಂದ, ಅದು ಕೂಡಲೇ ತನ್ನೀ ಕಾನೂನನ್ನು ಹಿಂದೆಗೆದುಕೊಂಡಿತು.

ಇತ್ತ ಹಿಂದುಸ್ಥಾನದ ಸರ್ವ ಪ್ರಾಂತ್ಯಗಳ ಮೂಲೆಮೂಲೆಗಳಿಗೂ ಪಾಕಿಸ್ತಾನದಿಂದೋಡಿಬಂದ ಹಿಂದೂ ಸಿಖ್ಖರು ಸಹಸ್ರ ಸಂಖ್ಯೆಯಲ್ಲಿ ಹಂಚಲ್ಪಡುತಿದ್ದಾರೆ. ಅವರ ಮಿಲನದಿಂದ ಆಯಾಯಾ ಪ್ರಾಂತ್ಯಗಳ ನಿತ್ಯ ಜೀವನ, ಆರ್ಥಿಕಸ್ಥಿತಿ ಮತ್ತು ಮನೋಗತಿ ಕೂಡಾ ಕದಡಿ ಹೋಗುವ ಸಂಭವವಿದೆ.

ಪಾಕಿಸ್ತಾನ್–ಹಿಂದುಸ್ಥಾನ್ ಇವೆರಡು ಸರಕಾರಗಳೂ ಈ ಗೊಂದಲ ಸಂಬಂಧವಾಗಿಯೇ ಪ್ರತ್ಯೇಕ ಮಂತ್ರಿ ಮತ್ತು ಖಾತೆಗಳನ್ನೂ, 'ಎಮರ್ಜೆನ್ಸಿ ಕೌನ್ಸಿಲು'ಗಳನ್ನೂ ಸ್ಥಾಪಿಸಿಕೊಂಡಿವೆ. ವಿಮಾನ, ರೈಲು, ಮೋಟಾರು ಮತ್ತಿತರ ಎಲ್ಲಾ ವಾಹನೋಪಕರಣಗಳೂ, ಸೈನಿಕರು, ಪೋಲೀಸರು ಮತ್ತು ಸ್ವಯಂ ಸೇವಕರೆಲ್ಲರೂ ಇದೊಂದೇ ಕೆಲಸದಲ್ಲಿದ್ದಾರೆ. ಎರಡೂ ಸರಕಾರಗಳ ಖಜಾನೆ, ಧನಸಂಚಯ ಶಕ್ತಿ, ಕಾರ್ಯ ನಿರ್ವಹಣಾಚೇತನ, ಹಾಗೂ ಸಂಪತ್ತು, ಮತ್ತು ಶಕ್ತಿಯ ಪ್ರತಿಯೊಂದಂಶವೂ ಇದೊಂದೇ ಸಮಸ್ಯೆಯ ನಿವಾರಣೆಗಾಗಿ ವಿನಿಯೋಗಿಸಲ್ಪಡುತ್ತಿದ್ದು ಮಿಕ್ಕ ... ಕಾರ್ಯಗಳೂ ಹಿಂದೆ ಬಿದ್ದಿವೆ.

(೬ನೇ ಪುಟ ನೋಡಿರಿ.)

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ಧ್ಯೇಯವಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ—

ದಿ ವಿಜಯಾ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಸಿಟಿ-ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಂಞಂಗಾಡು, ಮಡಿಕೇರಿ ಮತ್ತು ಮುಂಬಾಯಿ.

THE VIJAYA BANK, LIMITED.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 289/47

ವಾದಿರು. ನಾಗಯ್ಯ ಸೆಟ್ಟಿ ಕೂಡಾ.

ಪ್ರತಿವಾದಿರು. 1. ತಿಮ್ಮಪ್ಪಸೆಟ್ಟಿ, ಕೊಳ್ಳೈಲು ನಂದ್ಯಪ್ಪ ಹೆಗ್ಡೇರ ಅಳಿಯ, ಕುಂದಾಪುರ ಕಸಬಾ.

2. ವಿಟ್ಟಲ ಸೆಟ್ಟಿ, ಅಜ್ರಿ ದೊಡ್ಡಮನೆ ಮಹಾಲಿಂಗ ಸೆಟ್ಟಿ ಮೊಮ್ಮಗ, ಅಜ್ರಿಗ್ರಾಮ. ಹಾಲಿ, ಈಗ, Ravi Raj & Co. General, Merchant, 30 Thambu Chetty Street, G. T. Madras.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ,

ವಾದಿಗೆ ಪ್ರತಿವಾದಿರು ತಾ. 8-6-44ಲ್ಲಿ ಬರಕೊಟ್ಟ ಡಿಮಾಂಡು ನೋಟಿನ ಪ್ರಕಾರ ರೂಪಾಯಿ 1000/-ನ್ನು ವಸೂಲಿಮಾಡಿಕೊಳ್ಳುವದೇ ವಾದಿ ದಾಖಲು ಮಾಡಿದ ಮೇಲಿನ ದಾವೆ ತಾ. 24-9-47ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಉಜ್ರು ಇದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನಿಂದ ಹಾಜರಾಗಿ ತಿಳಿಸತಕ್ಕದ್ದು.

Y. Manjaya Shetty,
Advocate for Pltfs,

ಮೊಕ್ಕಾಂ, ಕುಂದಾಪುರ 8-9-47

The Canara Banking Corporation Limited.
(Incorporated in British India, with limited Liability.)
Estd: 1906.
Head Office: UDIPI, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಹೆಡ್ ಆಫೀಸು: ಉಡುಪಿ

OTHER OFFICES

Bangalore City	Coondapoor	Sagar
Bhadravathi	Dharwar	Saklaspur
Bombay	Hassan	Salem Town
Bunder-Mangalore	Haveri	Shevapet-Salem
Byadgi	Hubli	Shimoga
Car Street, Mangalore	Madras	Shirva
Calicut	Malpe	Tellicherry
Cannanore	Mercara	Thirthahalli
Cochin	Mettupalayam	Udipi
Coimbatore	Mysore	Vellore
		Virajpet.

BANKING BUSINESS OF EVERY DESCRIPTION TRANSACTED.

ನವಯುಗ

ಗುರುವಾರ, ಉಡುಪಿ, ೧೮-೯-'೪೭

ಬರುವ ತಾ. 1ರಿಂದ-

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಾನನಿಷೇಧವು ಜ್ಯಾರಿಗೆ ಬರಲಿದೆ. ಎಲ್ಲಾ ಕಳ್ಳು ಶರಾಬು ಅಂಗಡಿಗಳು ಮುಚ್ಚಲ್ಪಡುವವು; ಕಳ್ಳು ನಿರ್ಮಾಣ ಮತ್ತು ಶರಾಬು ಸರಬರಾಯಿ ನಿಲ್ಲಿಸಲ್ಪಡುವುದು. ಕಳ್ಳು ನಿರ್ಮಾಣ ಮತ್ತು ಪಾನಗಳಾಗದಂತೆ ಕಠಿಣ 'ಬಂದೋಬಸ್ತು' ಬೀಳುವುದು; ಮದ್ಯ ಸೇವನೆಯೂ ಆ ಸಂಬಂಧದ ವ್ಯಾಪಾರ ವಹಿವಾಟುಗಳೂ ತಕ್ಸೀರಾಗಿ ಗಣಿಸಲ್ಪಟ್ಟು ಶಿಕ್ಷಿಸಲ್ಪಡುವವು.

ಇಡೀ ಪ್ರಾಂತ್ಯವನ್ನು ಮೂರುವರುಷಗಳೊಳಗೆ ಒಣಗಿಸಿ ಶುದ್ಧೀಕರಿಸಬೇಕೆಂಬ ಮದ್ರಾಸಿನ ಕಾಂಗ್ರೆಸ್ ಸರಕಾರದ ಯೋಜನೆಯ ದ್ವಿತೀಯಾಂಶವಿದು. ಕಳೆದ ವರುಷ ಎಂಟು ಜಿಲ್ಲೆಗಳಲ್ಲಿ ಪಾನನಿಷೇಧ ಜ್ಯಾರಿಯಾಯಿತು. ಈ ವರುಷ ಮತ್ತೆಂಟು ಜಿಲ್ಲೆಗಳಲ್ಲಿ—ಗುಂಟೂರು, ನೆಲ್ಲೂರು, ತಂಜಾವೂರು, ಮಧುರಾ, ತಿರುಚಿನಾಪಳ್ಳಿ, ನೀಲಗಿರಿ, ಮಲಬಾರು ಮತ್ತು ದಕ್ಷಿಣ ಕನ್ನಡ- ಪಾನ ನಿಷೇಧವಾಗುವದು. ಉಳಿದೆಂಟು ಜಿಲ್ಲೆಗಳೂ ಬರುವ ವರುಷದಲ್ಲೊಣಗಿ ಕಾರ್ಯಪೂರ್ಣಗೊಳ್ಳಲಿದೆ. ಈ ವರುಷ ಆಯ್ದುಕೊಂಡ ಜಿಲ್ಲೆಗಳ ಪೈಕಿ ಗುಂಟೂರು ಮತ್ತು ನೆಲ್ಲೂರು ಜಿಲ್ಲೆಗಳಲ್ಲಿ ಬೇಕಾದ ಪೋಲೀಸುದಳ ಸಾಕಷ್ಟಿಲ್ಲವೆಂಬ ಕಾರಣದಿಂದ ಪಾನ ನಿಷೇಧವನ್ನು ಅಸ್ತಿತ್ವಕ್ಕೆ ತರುವ ಕಾರ್ಯಭಾರವನ್ನು ಅಬ್ಕಾರಿ ಖಾತೆಗೂ ಉಳಿದ ಆರು ಜಿಲ್ಲೆಗಳಲ್ಲಿ ಆ ಕೆಲಸವನ್ನು ಪೋಲೀಸ್ ಖಾತೆಗೂ ಒಪ್ಪಿಸಲು ಸರಕಾರವು ನಿರ್ಧರಿಸಿದೆ. ಈ ಸಂಬಂಧದ ಎಲ್ಲಾ ವ್ಯವಸ್ಥೆಗಳೂ ಭರದಿಂದ ನಡೆದಿವೆ. ಇದೇ ತಾ. 13ರಲ್ಲಿ ಮದ್ರಾಸಿನಲ್ಲಿ ಪಾನನಿಷೇಧ ಮಂತ್ರಿ ಮಿ. ಡೇನಿಯೆಲ್ ಥೋಮಸರ ಅಧ್ಯಕ್ಷತೆಯಲ್ಲಿ, ಕಳೆದ ವರುಷ ಒಣಗಿದ ಮತ್ತು ಒಕ್ಟೋಬರ್ ಆದಿಯಲ್ಲಿ ಒಣಗಲಿರುವ 16 ಜಿಲ್ಲೆಗಳ ಕಲೆಕ್ಟರರ, ಹಾಗೂ ನೆರೆಯ ಮೈಸೂರು, ಕೊಚ್ಚಿ, ಪುದುಕೋಟೆ, ಬಂಗನಪಳ್ಳಿ, ಸಂಡೂರು ಸಂಸ್ಥಾನಗಳ ಮತ್ತು ಫ್ರೆಂಚ್ ಭಾರತದ ಪ್ರತಿನಿಧಿಗಳ ಸಮ್ಮೇಲನ ನೆರೆದು ಪರ್ಯಾಲೋಚನೆ ನಡೆಯಿತು. ಗಡಿಯ ಸಂಸ್ಥಾನಗಳ ದೆಸೆಯಿಂದಾಗಿ ಪಾನ ನಿಷೇಧಗೊಂಡ ಜಿಲ್ಲೆಗಳ ಪಾವಿತ್ರ್ಯಭಂಗವಾಗದಂತೆ ನೋಡುವ ಪೂರ್ವ ವ್ಯವಸ್ಥೆ ಅಲ್ಲಿ ನಡೆಯಿತು.

ಅಂತೂ ಇದೇ ತಾ.1-10-1947ನೇ ಬುಧವಾರ ದಿನ ಪದ್ಧತಿ ಪ್ರಕಾರ ಹೆಂಡ ಸರಾಯಿ ಅಂಗಡಿಗಳಿಗೆ ಬಂದವರು ಧರ್ಮಾರ್ಥ ಕಾಫಿ ಕುಡಿದು (ಅದೊಂದು ದಿನದ ಮಟ್ಟಿಗೆ ಸರಕಾರೀ ಲೆಕ್ಕಕ್ಕೆ) ಹೋದರಾಯಿತು! ಆಗ ತಮ್ಮ ತಲೆ ತಮ್ಮೊಡನೆಯೇ ಮಾತನಾಡಹತ್ತಿದರೆ ಸರಕಾರೀ ಶಾಸನದ ನೆನಪು ಕೊಟ್ಟು ಅದನ್ನು ಸುಮ್ಮಗಿರಿಸಿದರಾಯಿತು!

ಹಲವು ತಲೆಮಾರುಗಳಿಂದ ನಮ್ಮಲ್ಲಿ ಬಳಕೆಯಲ್ಲಿದ್ದ ಲಕ್ಷಾವಧಿ ಮಂದಿಯ ನಿತ್ಯಾಭ್ಯಾಸವಾಗಿ ಹೋಗಿದ್ದ ದುಶ್ಚಟವೊಂದು ಒಕ್ಟೋಬರ್ ತಾ. 1ನೇ ಬುಧವಾರದಿಂದ ನಿಂತು ಹೋಗಲಿದೆ; ಸಾವಿರಾರು ಮಂದಿಗೆ ವ್ಯಾಪಾರ ಉದ್ಯೋಗಗಳನ್ನೊದಗಿಸಿ, ಸಂಪಾದನೆ ಮತ್ತು ಜೀವನ ನಿರ್ವಹಣದ ಹಾದಿಯಾಗಿ ಶತಮಾನಗಳಿಂದ ಇದ್ದ ಒಂದು ಉದ್ದಿಮೆ ವಿಭಾಗವು ಇಂದಿಗೆ ಹನ್ನೆರಡನೇ ದಿನದಲ್ಲಿ ಬರ್ಖಾಸ್ತು ಹೊಂದಲಿದೆ; ಜನಸಾಮಾನ್ಯರ ಆಯವ್ಯಯಗಳ ಗತಿ ತಬ್ದೀಲಾಗಬಹುದು- ವಾತಾವರಣ ಬದಲಾಗಬಹುದು- ಸಾಮೂಹಿಕ ಜೀವನ, ಕೌಟುಂಬಿಕ ಜೀವನಗಳ ರೀತಿ ನೀತಿ ಬೇರಾಗಬಹುದು- ಹಲವರ ಮನೋವೃತ್ತಿ ವರ್ತನೆಗಳಲ್ಲೂ ಹೊಸತನ ಮೂಡಬಹುದು. ಆ ಬದಲಾವಣೆ ಬರಬೇಕೆಂದೇ ಈ ನಿಷೇಧ! ನಮ್ಮಲ್ಲಿ ಸರ್ವಸಾಮಾನ್ಯವಾಗಿರುವ ಹಲವು ಗಾದೆಗಳನ್ನೂ ಉಪಮೆಗಳನ್ನೂ ನಿರ್ಮಿಸಿದ್ದ ಸರ್ವವ್ಯಾಪೀ ದುರಾಭ್ಯಾಸವು, ನಂಬ್ರ 1ನೇ ಕೇಡು, ಇನ್ನೊಮ್ಮೆ 1ನೇ ತಾರೀಕು ಬರವಾಗಲೇ ಅದೃಶ್ಯವಾಗಲಿದೆ.

ತಾ. 1-10-47ನೇ ಬುಧವಾರದಿಂದ- ಇಂದಿಗೆ 13ನೇ ದಿನದಿಂದ-ದಕ್ಷಿಣ ಕನ್ನಡವಲ್ಲಿ "ಕುಡುಕತನ" ನಿಲ್ಲುವುದು. ಅಂದಿಗೆ ಆ ದುರಭ್ಯಾಸ ಬಿಡುವ ಮದ್ರಾಸಿನ 16 ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡವೂ ಒಂದಾಗುವುದು. ಇಲ್ಲಿಯ ಸಹಸ್ರಾವಧಿ ಕುಡುಕರು ಅಂದಿನಿಂದ ಹೊಸ ಜೀವನವನ್ನಾರಂಭಿಸಬೇಕಾಗುವುದು!

ಚಟಾಭ್ಯಾಸವೊಂದನ್ನು ಒತ್ತಾಯದಿಂದ ಬಿಡಬೇಕಾದಾಗಿನ ಸಂಕಟ ವೇನೋ ದೊಡ್ಡದು. ಕೊನೆಗೆ ಸತ್ಪರಿಣಾಮದಾಯಿಯಾದರೂ, ಜುಲುಮೆಯ ಚಿಕಿತ್ಸೆಯೇ ಸದ್ಯದ ರೋಗ! ಮೇಲಾಗಿ ಆಹಾರಾಭಾವದ ಈ ಕಾಲದಲ್ಲಿ, ಪಾನ ಸೌಕರ್ಯ ತಪ್ಪುವುದರಿಂದ ಪಾನಾಭ್ಯಾಸೀ ಕೆಳವರ್ಗದ ಜನರ ತಲೆ, ಹೊಟ್ಟೆ, ಎರಡರಿಂದಲೂ ಕೂಗು ಹೊರಟೀತು! ಗಣ್ಯ ಸಂಖ್ಯೆಯ ಮುತ್ತೇದಾರ ಜನತೆಯು ಮತ್ತು ಗುತ್ತೇದಾರರ ನಿರುದ್ಯೋಗ ಸಮಸ್ಯೆ ಪ್ರತ್ಯೇಕ[illegible]ಳಲಿವೆ. ಮೇಲಾಗಿ ಪಾನನಿಷೇಧದಿಂದಾಗಿ [illegible] ಜ್ಯಾರಿಗೆ ತರುವ ಸರಕಾರದ ಖಜಾನೆಗೇನೇ ದೊಡ್ಡ ತೂತು ಬೀಳಲಿದೆ. ಅಂತೂ ತಾತ್ಕಾಲಿಕ ಲಾಭ ಮತ್ತು ಶಮನದ ದೃಷ್ಟಿಯಿಂದ ಎಲ್ಲರಿಗೂ ವಿರೋಧವೇ ಆಗುವ ಶುದ್ಧೀಕಾರ್ಯವಿದು. ಆದರೂ ಒಂದು ಪಾಪದ ಪರಿಹಾರ-ಸಾವಿರಾರು ಜನರ ಮೆದುಳು ದೇಹಗಳಿಗೆ ಮಾಡುವ ಚಿಕಿತ್ಸೆ- ಸಹಸ್ರಾರು ಕುಟುಂಬಗಳ ಉದ್ಧಾರ-ವಾತಾವರಣವನ್ನೂ ಜನಜೀವನವನ್ನೂ ಸುಧಾರಿಸುವ ಸತ್ಕಾರ್ಯ-ಎಂಬುದರಿಂದಲೇ ಇದು ಜ್ಯಾರಿಗೆ ಬರುತ್ತಿದೆ. ದರೋಡೆ, ಕಳ್ಳತನ, ವಂಚನೆಗಳಂತಹ ದುರ್ವ್ಯಾಪಾರಗಳಂತೆಯೇ ಪಾನವಹಿವಾಟೂ ಲಾಭದಾಯಕವಿರಬಹುದು; ಆದರೆ ಅವುಗಳಂತೆಯೇ ಇದೂ ತ್ಯಾಜ್ಯವೆಂದೇ ಕಾಂಗ್ರೆಸ್ ಸರಕಾರವು ಬಹಿಷ್ಕಾರಕ್ಕೆ ಮುಂದಾಗಿದೆ. ಈ ಧೋರಣೆಯನ್ನೇ ಸಂಬಂಧಪಟ್ಟ ಎಲ್ಲರೂ-ವಿಶೇಷತಃ ಪಾನಾಭ್ಯಾಸಿಗಳು-ಸದ್ಭಾವದಿಂದ ಅಂಗೀಕರಿಸಿಕೊಳ್ಳಲಿ; ಆತ್ಮ ಸಂಯಮನವನ್ನು ಅಭ್ಯಸಿಸಲಿ. ಪಾನನಿಷೇಧವು ನಮ್ಮಲ್ಲಿ ನೂರಕ್ಕೆ ನೂರರಷ್ಟು ಜಯಶೀಲವಾಗಲಿ!

(೫ನೇ ಪುಟದಿಂದ.)

ಡಿಲ್ಲಿಯಲ್ಲಿರುವ ಮುಸ್ಲಿಮರಿಗೆ ಸ್ಟೇನ್ ಗನ್ನು ಮತ್ತು ಇತರ ಯುದ್ಧೋಪಕರಣಗಳೂ ಬೇಕಾದಷ್ಟು ಸಿಡಿಮದ್ದುಗಳೂ ಸರಬರಾಯಿಯಾಗಿರುವುದೊಂದು ದೊಡ್ಡ ಪ್ರಶ್ನೆ. ಅಂತೆಯೇ ಪಶ್ಚಿಮ ಪಂಜಾಬಿನ ಮುಸ್ಲಿಮರಿಗೆ ಸರಕಾರದಿಂದಲೇ ಶಸ್ತ್ರಾಸ್ತ್ರಗಳು ಕೊಡಲ್ಪಡುತ್ತಿದ್ದುವೆಂದು ತಿಳಿದು ಬಂದಿದೆ. ಪಂಜಾಬಿನಲ್ಲಿ ಇಕ್ಕಡೆಯವರೂ ಆಕ್ರಮಿಸಿಕೊಂಡ ಇಡೀ ಗ್ರಾಮಗಳ ಪ್ರಶ್ನೆ ತೀರ್ಮಾನ ಹೊಂದಲು ಉಳಿದಿದೆ.

ಕಾರಣ—ಪರಿಣಾಮ

ಪಶ್ಚಿಮ ಪಂಜಾಬಿನ ಮುಸ್ಲಿಂ ಸರಕಾರವೇ ಈ ಮಹಾ ಪ್ರಳಯವನ್ನು ನಿರ್ಮಿಸಿತೆಂದು ಮಾಸ್ಟರ್ ತಾರಾಸಿಂಗರು ಆರೋಪಿಸಿದ್ದಾರೆ. ಸಿಕ್ಖರೇ ಈ ಗಲಭೆಗೆ ಕಾರಣವೆಂದೂ ಅವರಿಗೆ ಶಸ್ತ್ರಾಸ್ತ್ರಗಳು ಸರಬರಾಯಿಯಾಗುತಿದ್ದುವೆಂದೂ ಅಮೇರಿಕದಲ್ಲಿ ಪಾಕಿಸ್ತಾನ್ ರಾಯಭಾರಿಯಾಗಿರುವ ಮಿ. ಇಸ್ಪಹಾನಿ ಆರೋಪಿಸಿದ್ದಾರೆ.

ಸಿಖ್ಖರನ್ನು ಹೊಣೆಮಾಡುವುದು ತಪ್ಪೆಂದೂ, ಕಳೆದ ವರುಷದ ಆಗೋಸ್ತಿನಲ್ಲಿ ಕಲ್ಕತ್ತದಲ್ಲಿ ಬಿದ್ದ ವಿಷಬೀಜವೇ ಅನುಕ್ರಮವಾಗಿ ಬೆಳೆದು ಪಂಜಾಬು ದುರಂತದ ಸಹಸ್ರ ಕೊಂಬೆಗಳನ್ನು ಬಿಟ್ಟಿತೆಂದೂ ನೆಹರುಗಳೆಂದಿದ್ದಾರೆ. 'ಪಂಜಾಬಿನ ಗಂಡಾಂತರವು ಇಷ್ಟು ದೊಡ್ಡ ಪ್ರಮಾಣಕ್ಕೇರಬಹುದೆಂಬ ಅಂದಾಜು ನಮಗೆ ಸಿಗಲಿಲ್ಲ. ಪರಿಸ್ಥಿತಿಯ ದಶಮಾಂಶವನ್ನಷ್ಟೇ ಊಹಿಸಿ ಅಂದಾಜು ತಪ್ಪಿದ ಅಪರಾಧಿಗಳು ನಾವೆಂಬುದು ನಿಜ. ಆದರೀಗ ಅಲ್ಲಿ, ಇಲ್ಲಿ ಎಂದಲ್ಲ; ಇಡೀ ಭಾರತದಲ್ಲೇ ಎಲ್ಲಿಯೂ ಹೀಗಾಗದಂತೆ ನೋಡುವ ಪ್ರಬಲ ನಿಯಂತ್ರಣ ಯಂತ್ರ ರಚಿಸಿದ್ದೇವೆ. ಅದೀಗ ಕೆಲವು ದಿನಗಳಿಂದ ಪರಿಣಾಮಕಾರಿಯಾಗಿ ಚಾಲನೆಯಲ್ಲಿದೆ" ಎಂದು ನೆಹರುಗಳೊಪ್ಪಿದ್ದಾರೆ.

ಪರದೇಶಗಳಲ್ಲಿ ಇಲ್ಲಿಯ ಗಲಭೆಗಳ ಕುರಿತು ಅತ್ಯುಕ್ತಿಯ ಪ್ರಚಾರಗಳು ನಡೆದಿವೆ ಬ್ರಿಟಿಷ್ ಟೋರಿಗಳು ಆತ್ಮತೃಪ್ತಿ ಪಟ್ಟಂತೆ ಕಾಣುತ್ತಿದೆ. ಡಿಲ್ಲಿಯಲ್ಲೇ ಅರ್ಧ ಮಿಲಿಯ ಜನರು ಕೊಲೆಯಾದರೆಂಬ ವಾರ್ತೆಯೊಂದು ವಾಷಿಂಗ್ಟನಿಗೆ ವರದಿಯಾಗಿರುವುದೆಂದು ನೆಹರುಗಳಿಗಲ್ಲಿಂದ ಸೂಚನೆಯೊಂದು ಬಂತು. ಆದರೆ ವಿಚಾರಿಸುವಾಗ ಇಲ್ಲಿಂದಾರೂ ಅಂತಹ ಸುಳ್ಳುವಾರ್ತೆ ಕಳುಹಿಸಿದ್ದಿಲ್ಲವೆಂದು ತಿಳಿದು ಬಂದಿದೆ. 'ಈ ಕೆಲಸದಲ್ಲಿ ಹಿಂದುಸ್ಥಾನ್ ಮತ್ತು ಪಾಕಿಸ್ತಾನ್ ಸರಕಾರಗಳಿಗೆ ನೆರವಾಗಲು ಬ್ರಿಟಿಷ್ ಸರಕಾರ ಸಿದ್ಧವಿದೆ' ಎನ್ನುತ್ತಾ 'ಮೆಂಚೆಸ್ಟರ್ ಗಾರ್ಡಿಯನ್'ನಂತಹ ಪತ್ರಿಕೆಗಳು ಪುನಃ ಮೋಸೆ ಹೊಗಿಸಲು ಪ್ರಯತ್ನಿಸುತ್ತಿವೆ.

ಕುಂದಾಪುರ— ಜಿಲ್ಲಾ ಕಾಂಗ್ರೆಸ್ಸು ಕಮಿಟಿಯಿಂದ ಕುಂದಾಪುರದ ಸರ್ಕಲು ಕಾಂಗ್ರೆಸ್ಸು ಕಮಿಟಿಯನ್ನು ನೇಮಕ ಪಡಿಸುವರೆ ಅಧಿಕಾರ ಹೊಂದಿಬಂದ ಶ್ರೀ ರಾಮಪ್ಪಯ್ಯನವರು ಈ ಕೆಳಗಿನ ಸದಸ್ಯರನ್ನು ಕುಂದಾಪುರ ಸರ್ಕಲು ಕಾಂಗ್ರೆಸ್ಸು ಕಮಿಟಿಗೆ ತಾ. 10-9-47ರಲ್ಲು ನೇಮಕ ಮಾಡಿದ್ದಾರೆ: 1 ಎ. ವಿ. ಎಸ್. ಹೆಬ್ಬಾರ (ಪ್ರೆಸಿಡೆಂಟ್) 2 ಎಚ್. ಭಾಸ್ಕರ ಕಮ್ತಿ (ವೈಸ್ ಪ್ರೆಸಿಡೆಂಟ್) 3 ಕಟೀಲ ಬಾಬುರಾಯ ಪೈ (ಕೋಶಾಧಿಕಾರಿ) 4 ಎಮ್. ಮುತ್ತಯ್ಯ ಹೆಗ್ಡೆ 5 ಬೇಳೂರು ಜನಾರ್ಧನ ಶೆಟ್ಟಿ, (ಕಾರ್ಯದರ್ಶಿಗಳು) 6 ಕೆ. ಮಹಾಬಲ ಸೆಟ್ಟಿ 7 ಬಿ. ಸೂರಪ್ಪ ಸೆಟ್ಟಿ 8 ಜಿ. ವೇಣುಗೋಪಾಲ ನಾಯಕ, 9 ಎಸ್. ಎಸ್. ಪರಮೇಶ್ವರಯ್ಯ. 10 ಕೆ. ವಿ. ಐತಾಳ 11 ಗಾಂಧಿ ರಾಮಣ್ಣ ಸೆಟ್ಟಿ. 12 ಕಾಪು ಸಂಜೀವ ಸೆಟ್ಟಿ. 13 ಬೈಂದೂರು ಮಹಮ್ಮದ ಸಾಹೇಬ್.

ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಶ್ರೀ ಎ. ವಿ. ಎಸ್. ಹೆಬ್ಬಾರರ ಅಧ್ಯಕ್ಷತೆಯಲ್ಲಿ ಶ್ರೀ. ಎಸ್. ಎಸ್. ಕಿಲ್ಲೆಯವರು 'ಭಾರತ ಸ್ವಾತಂತ್ರ್ಯ'ದ ವಿಷಯದಲ್ಲಿ ತಾ 14-9-47ರಲ್ಲಿ R. S. D. ಹೈಸ್ಕೂಲಿನಲ್ಲಿ ಬೋಧಪ್ರದ ಭಾಷಣ ಮಾಡಿದರು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
R. E. P. 119/1947 O. S. 221/44
ಮಂಜುನಾಥ ಐತಾಳ—ಅರ್ಜಿದಾರ
ರಾಮಯ್ಯ ಶೆಟ್ಟಿ ಕೂಡಾ—ಎದ್ರಿರು.

ಬೇಳೂರು ಗ್ರಾಮದಲ್ಲಿರುವ 1ನೇ ಪ್ರತಿವಾದಿ ಮಕ್ಕಳು ನರಸಿಂಹ ಶೆಟ್ಟಿ 1 ನಾರಾಯಣ ಶೆಟ್ಟಿ 1 ಸಹಾ 2 ಜನರಿಗೆ ಕೊಡ್ವ ನೋಟ್ಸು ಮೇಲಿನ ಅಮಲ್‌ಜಾರಿಯಲ್ಲಿ ಎದ್ರಿರ ಬಾಬ್ತು ಸ್ಥಿರಆಸ್ತಿಗಳಂನು ಜಪ್ತಿಮಾಡಿಯದೆ. ಅಪ್ರ ತನಖಿಗೆ ತಾ 30-9-47ನೇ ದಿನ ಹಗಲು 11 ಗಂಟೆಗೆ ಈ ಕೋರ್ಟುಮುಂಬೆ ಶನಖಿಗೆ ಯಿಟ್ಟಿದೆ.

Sd/. **K. Ramappaiya**
Advocate for peter.
Kundapur 14-9-47

ಮದ್ರಾಸ್ ಎಸೆಂಬ್ಲಿಯಲ್ಲಿ

ಮದ್ರಾಸ್ ಸರಕಾರದ ಸರ್ವಸಾಮಾನ್ಯ ಎಲ್ಲಾ ಮಂತ್ರಿಗಳೂ ಕಳೆದ ಹಲವು ದಿನಗಳಲ್ಲಿ ಪ್ರಾಂತ್ಯದ ಬೇರೆ ಬೇರೆ ಭಾಗಗಳಲ್ಲಿ ಆಹಾರ ಧಾನ್ಯ ಸಂಗ್ರಹಕ್ಕಾಗಿ ಪ್ರತ್ಯೆ ಪ್ರತ್ಯೇಕವಾಗಿ ಸಂಚರಿಸಿ ಈಗ ಮದ್ರಾಸಿಗೆ ಮರಳಿದ್ದಾರೆ. ಇದೇ ತಾ. 15ರಲ್ಲಿ ಮದ್ರಾಸ್ ಎಸ್ಸೆಂಬ್ಲಿ ಸಭೆ ಆರಂಭಿಸಿದೆ. ಅದರ ಮುಂದೆ ಬರತಕ್ಕ 'ಜಮೀನ್ದಾರೀ ರದ್ದತಿ' ಮತ್ತು 'ಹಿಂದೂ ಎಂಡೋಮೆಂಟುಗಳ ಹತೋಟಿ' ಸಂಬಂಧದ ಪ್ರಾಮುಖ್ಯ ಮಸೂದೆಗಳು ಕಾಂಗ್ರೆಸ್ ಸದಸ್ಯರ ಪಕ್ಷದ ಸಭೆಯಲ್ಲಿ ಚರ್ಚಿಸಲ್ಪಟ್ಟವು.

ಜಮೀನ್ದಾರೀ ಪದ್ಧತಿ ನಿರ್ನಾಮ

ಜಮೀನ್ದಾರೀ ಪದ್ಧತಿಯನ್ನೇ ಬರ್ಖಾಸ್ತು ಪಡಿಸುವ, ಮತ್ತು ವಲಯಗಳ ಗೇಣಿಯನ್ನು ತಗ್ಗಿಸುವ, ಹಾಗೂ ಆ ಕ್ಷೇತ್ರಗಳೊಳಗಿನ ಸಾಮಾಜಿಕ ಖಾಸಗಿ, ಹಾಗೂ ಅರಣ್ಯ ಭೂಮಿಗಳನ್ನು ಪರಾಧೀನಗೊಳಿಸದಂತೆ ಆತಂಕಿಸುವ ಸಂಬಂಧದ ಮೂರು ಮಸೂದೆಗಳನ್ನು ಮದ್ರಾಸ್ ಸರಕಾರವು ಈ ಬಾರಿಯ ಎಸೆಂಬ್ಲಿ ಸಭೆಯಲ್ಲೇ ತರಲಿದೆ. ಆಪ್ರಕಾರ ಜಮೀನ್ದಾರೀ ಆಸ್ತಿಗಳನ್ನೆಲ್ಲಾ ಸರಕಾರವು ಸ್ವಾಧೀನಪಡಿಸಿಕೊಳ್ಳುವುದು; ಆ ಮೇಲದನ್ನು ರೈತ್ವಾರಿಕ್ಷೇತ್ರವಾಗಿ ಮಾರ್ಪಡಿಸುವದು; ಗೇಣಿಯನ್ನೂ ಆದಕ್ಕನುಗುಣವಾಗಿ ತಗ್ಗಿಸುವದು. ಈ ಮಾರ್ಪಾಟದ ಮಧ್ಯಾವಧಿಯಲ್ಲಿ ಸರಕಾರವೇ ಅಂತಹ ಆಸ್ತಿಗಳಿಗೆ ಮೆನೇಜರರನ್ನು ನೇಮಿಸುವದು. ಬದಲಾವಣೆಯು ಕೆಲವೇ ತಿಂಗಳುಗಳೊಳಗೆ ಜ್ಯಾರಿಗೆ ಬರಬೇಕೆಂದು ಸರಕಾರದ ಇಚ್ಛೆಯಿದೆ. ಹೀಗೆ ಹಕ್ಕು ಕಳಗೊಂಡ ಜಮೀನ್ದಾರರಿಗೆ ಪರಿಹಾರವಾಗಿ ರೂ. 10ಕೋಟಿಯೊಳಗಿನ ಮೊತ್ತವನ್ನು ಸರಕಾರವು ಕೊಡಬೇಕಾಗುವುದೆಂದು ಅಂದಾಜಿದೆ, 1ಕೋಟಿ ರೂಪಾಯಿ ಈ ಬದಲಾವಣೆ ನಡೆವಾಗಲೇ ಸರಕಾರಕ್ಕೆ ದೊರೆಯುವುದು.

ಹಿಂದೂ ದೇವಾಲಯಗಳ ಪ್ರತ್ಯಕ್ಷ ಹತೋಟಿ

ಹಿಂದೂ ಮತ ಸಂಬಂಧದ ದೇವಾಲಯಗಳು ಹಾಗೂ ದಾನರೂಪೀ ಸಂಸ್ಥೆಗಳು, ಹಾಗೂ ಅವುಗಳ ಉಂಬಳೀ ಸಂಬಂಧದ ತಿದ್ದುಪಡಿ ಮಸೂದೆಯೊಂದನ್ನು ಈ ಸಲದ ಎಸೆಂಬ್ಲಿಯಲ್ಲೇ ಮುಖ್ಯ ಮಂತ್ರಿಗಳು ಮುಂತರಲಿದ್ದಾರೆ. ಈ ಮಸೂದೆಯನ್ವಯ ಹಿಂದೂ ಮತ ದೇವಾಲಯಗಳ [ಅಧಿಕಾರ ಹೊಂದಿರುವ ಇಂದಿನ 'ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಬೋರ್ಡು' ರದ್ದಾಗುವುದು. ಎಲ್ಲಾ ಅಧಿಕಾರಿಗಳನ್ನೂ ಪ್ರತ್ಯಕ್ಷವಾಗಿ ಸರಕಾರವೇ ವಹಿಸುವದು; ಇಡೀ ಪ್ರಾಂತ್ಯದ ಎಲ್ಲಾ ಹಿಂದೂ ಸಾರ್ವಜನಿಕ ಧಾರ್ಮಿಕ ಉಂಬಳಿಗಳ ಹತೋಟಿ ಹಾಗೂ ಮೇಲ್ವಿಚಾರಣೆಗಾಗಿ ಓರ್ವ ಕಮಿಶನರ್, ಮತ್ತು ಡಿಪ್ಯುಟಿ ಕಮಿಶನರುಗಳು, ಅಸಿಸ್ಟಾಂಟ್ ಕಮಿಶನರುಗಳು ಅಂತೆಯೇ ಅಗತ್ಯವುಳ್ಳ ನೌಕರರು (ಹಿಂದುಗಳೇ) ಸರಕಾರದಿಂದ ನೇಮಿಸಲ್ಪಡುವರು, ಧಾರ್ಮಿಕ ಸಂಸ್ಥೆ, ದೇವಾಲಯಗಳ ಉತ್ಪತ್ತಿಯ ವಿನಿಯೋಗ, ಅವುಗಳ ಉದ್ದೇಶಾನುಸಾರವಾದ ಕ್ರಮಬದ್ಧ ಉತ್ಸವಾಚರಣೆಗಳು ಮತ್ತು ನಿತ್ಯ ವಿಧಿ ನಿಯಮಗಳು, ಆಡಳಿತೆ, ವ್ಯವಸ್ಥೆ, ವರ್ತನೆ–ಇವೆಲ್ಲವುಗಳ ಮೇಲ್ತನಿಖೆ ನೋಡುವ, ಅಗತ್ಯವುಳ್ಳ ಆಜ್ಞೆಗಳನ್ನು ಕೊಡುವ ಸರ್ವಾಧಿಕಾರವೂ ಕಮಿಶನರಿಗಿದೆ. ಕಮಿಶನರರಿಂದಾಜ್ಞಾಪಿಸಲ್ಪಟ್ಟಂತೆ ಅವನ ಕೈಕೆಳಗಿನ ನೌಕರರಿಗೆ ಕಾರ್ಯಸಂಬಂಧವಾಗಿ ಈ ಧಾರ್ಮಿಕ ನೆಲೆಗಳ ಎಲ್ಲಾ ಕಡೆಗೂ ಹೋಗುವ, ಕೆಲಸ ಜ್ಯಾರಿಮಾಡುವ ಅಧಿಕಾರವಿವೆ. ದೇವಸ್ಥಾನದ ಟ್ರಸ್ಟಿಗಳು ಕಮಿಶನರನ ಹಾಗೂ ಅವನ ಕೆಳಗಿನ ಅಧಿಕಾರಿಗಳ ಆಜ್ಞಾಧೀನರಾಗಿರತಕ್ಕದ್ದು, ತಂತಮ್ಮ ಸಂಸ್ಥೆಯ ಸರ್ವ ವಿಷಯಗಳಿಗೆ ಸಂಬಂಧಿಸಿದ ಲೆಕ್ಕ ಪತ್ರ, ಸೊತ್ತು, ಶೃಂಗಾರ, ಮೂರ್ತಿ, ಸಂಪತ್ತು, ಆಚರಣೆಗಳ ಸರಿಯಾದ ವಿವರಗಳುಳ್ಳ ರಜಿಸ್ತ್ರಿಯನ್ನು ಪ್ರತಿಯೊಂದು ಸಂಸ್ಥೆಯೂ ತಯಾರಿಸಿ ನಿಶ್ಚಿತಾವಧಿಯೊಳಗೆ ಕಮಿಶನರಿಗೊಪ್ಪಿಸಬೇಕು. ಈ ಸಂಬಂಧದ ವೆಚ್ಚ ಪೂರೈಕೆಗಾಗಿ ಆಯಾಯಾ ಸಂಸ್ಥೆ ದೇವಾಲಯಗಳು ತಮ್ಮ ವಾರ್ಷಿಕಾದಾಯದಿಂದ ಸರಕಾರಕ್ಕೊಪ್ಪಿಸಬೇಕಾದ ಅಂಶದ ತಪಶೀಲೂ ಈ ಮಸೂದೆಯಲ್ಲಿದೆ.

ಮದ್ರಾಸ್ ಎಸೆಂಬ್ಲಿಯು

ತಾ. 15ಕ್ಕೆ, ಸ್ವರಾಜ್ಯ ದೊರತ ಮೇಲೆ ಪ್ರಥಮ ಬಾರಿ ಸೇರಿ ಮಹಾತ್ಮ ಗಾಂಧಿಯವರಿಗೆ ಧನ್ಯವಾದ ರವಾನಿಸಿತಲ್ಲದೆ, ಸ್ವಾತಂತ್ರ್ಯ ಸಮರದ ತ್ಯಾಗೀ ಯೋಧರೆಲ್ಲರನ್ನೂ ಅಭಿನಂದಿಸಿದೆ. ಪ್ರಾಂತ್ಯದ ಆಹಾರ ಸ್ಥಿತಿಯನ್ನು ಆಹಾರ ಮಂತ್ರಿ ಡಾ। ರಾಜನರು ಸರಿಯಾದ ಅಂಕೆ ಸಂಖ್ಯೆಗಳನ್ನು ಕೊಟ್ಟು ಸುದೀರ್ಘವಾಗಿ ವಿವರಿಸಿದರು. 'ಸದ್ಯಕ್ಕೆ ಸುಮಾರು 5 ವಾರಗಳ ಅಕ್ಕಿಯುಳಿದಿದೆ. ಆದರೆ ಅವುಗಳ ವಿತರಣೆ ಅತ್ಯಂತ ಅಸ್ತವ್ಯಸ್ತವಾಗಿದೆ, ಕೊರತೆಯುಳ್ಳ ಜಿಲ್ಲೆಗಳಿಗೆ ಕೂಡಲೇ ಸರಬರಾಯಿಯಾಗದಿದ್ದರೆ ಹಸುಗೇ ವ್ಯವಸ್ಥೆಯೇ ಕುಸಿದು ಬೀಳುವ ಅಪಾಯವಿದೆ. ಕೊನೆಯ ಪಕ್ಷ ಇನ್ನು 268,000 ಟನ್ ಅಕ್ಕಿಯನ್ನಾದರೂ ಈ ಪ್ರಾಂತ್ಯದಲ್ಲೇ ಸಂಗ್ರಹಿಸಿಕೊಳ್ಳುವ ಹೊರತು ಬೇರೆ ಹಾದಿಯೇ ಇಲ್ಲ, ಎಂದು ಡಾ. ರಾಜನರಂದಿದ್ದಾರೆ.

'ಸರಿಪಡಿಸುವೆ— ಯಾ— ಸಾಯುವೆ!'

ಗಾಂಧಿಜೀಯೀಗ ನವದಿಲ್ಲಿಯಲ್ಲಿದ್ದು, ದಂಗೇಪೀಡಿತ ಸ್ಥಳಗಳನ್ನೂ, ನಿರಾಶ್ರಿತ ನಿಲಯಗಳನ್ನೂ ಸಂದರ್ಶಿಸುತಿದ್ದಾರೆ. ಸಹಸ್ರ ಸಂಖ್ಯೆಯಿಂದ ತುಂಬಿದ್ದ ಒಂದೆರಡು ಮುಸ್ಲಿಂ ನಿರಾಶ್ರಿತಾಲಯಗಳನ್ನು ಸಂದರ್ಶಿಸಿದಾಗ ಪಡೆದ ಅನುಭವವು ಅವರ ಹೃದಯಕ್ಕೆ ಬಡಿದಿದೆ. ತೀರಾ ಬಡವರೇ ಇದ್ದ ಆ ಭವನಗಳು ಅನಾರೋಗ್ಯ ಮತ್ತು ಅನಾನುಕೂಲತೆಗಳಿಂದ ತುಂಬಿದ್ದವು. ಕೆಲವರು ಗಾಂಧಿಜೀಯನ್ನು ಕಂಡಾಗ 'ಗೋಳೋ' ಎಂದು ಅತ್ತರು. ಕೆಲವರು ಉರಿಕಾರಿದರು, ಇನ್ನು ಕೆಲವರು ಕೈಜೋಡಿಸಿಕೊಂಡು ಬಂದು ಕಣ್ಣೀರು ತುಂಬಿ, ಆಹಾರ ವಸ್ತ್ರ ಕೊಡಿ....ರೆಂದು ಭಿಕ್ಷಾಯಾಚನೆ ಮಾಡಿದರು. ದಿಲ್ಲಿಯ 'ಪುರಾಣ ಕಿಲಾ'ದಲ್ಲಿದ್ದ ಮುಸ್ಲಿಂ ನಿರ್ಗತಿಕರ ಕರುಣಾಜನಕ ಕಥೆ ಕೇಳಿ ಗಾಂಧಿಜೀಯೆಂದರು:– "ಸಂಗತಿಗಳನ್ನು ಒಂದೋ ಸರಿಪಡಿಸುತ್ತೇನೆ. ಇಲ್ಲವೇ ಆ ಪ್ರಯತ್ನದಲ್ಲಿ ಸಾಯುತ್ತೇನೆ ನಿಮಗಾಗಿ ನನ್ನೆದೆ ಬಡಿಯುತ್ತಿದೆ. ನಿಮಗೂ ನನಗೂ ಇರುವ ದೇವರೊಬ್ಬನೇ."

ಶ್ರೀ ಮುದವೀಡು ಕೃಷ್ಣರಾಯರ ನಿಧನ

ಕರ್ನಾಟಕದ ಹಿರಿಯ ಮುಖಂಡರೂ ಅಗ್ರಗಣ್ಯ ಪತ್ರಿಕೋದ್ಯಮಿಗಳೂ ತ್ಯಾಗಿಯೂ ಸುಪ್ರಸಿದ್ಧ ವಕ್ತಾರರೂ ಭಾಷಾಂತರಗಾರರೂ ಆದ ಶ್ರೀ ಮುದವೀಡು ಕೃಷ್ಣರಾಯರು ತಾ. 2-9-47ನೆ ರಾತ್ರಿ 10-15ಗಂಟೆಗೆ ಸ್ವರ್ಗಸ್ಥರಾದರು.

ಶ್ರೀ ಮುದವೀಡು ಕೃಷ್ಣರಾಯರು ಅಭಿಮಾನಿ ರಾಷ್ಟ್ರಭಕ್ತರು. ಕನ್ನಡ ಪ್ರಾಂತವು ಸ್ವತಂತ್ರ ವಾಗುವುದನ್ನು ನೋಡಲು ಹಂಬಲಿಸಿದವರು. ಶಕ್ತವಿದ್ದಷ್ಟು ಎಲ್ಲಾ ರೀತಿಯಿಂದ ತ್ಯಾಗಮಾಡಿ ರಾಷ್ಟ್ರಕ್ಕಾಗಿ ದುಡಿದವರು. ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ.

ಹಿಂತೆಗೆದರು— ಗುಂಡಿಬೈಲು ವಾರ್ಡಿಗೆ ಮುನ್ಸಿಪಲ್ ಚುನಾವಣೆಗೆ ಉಮೇದ್ವಾರರಾಗಿದ್ದ ಶ್ರೀ. ಆರ್ ಆರ್. ಕುಂಜೂರರೂ ಅಪ್ಪರ್ ಕಾಡು ವಾರ್ಡಿನ ಉಮೇದ್ವಾರ ಶ್ರೀ N V. ಕಾಮತರೂ ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದಿರುವರು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. E. P. 387/1947 S. E. 77/44.

ಗೋಪಾಲ ಕೃಷ್ಣ ರಾವ್. ಅರ್ಜಿದಾರ

ಚಂದು ಹೆಂಗ್ಸು ಕೂಡಾ ಎದ್ರುರು

2ನೇ ಎದ್ರಿಗೆ ಕೊಡುವ ನೋಟ್ಸು

ಮೇಲಿನ ಡಿಕ್ರಿಯ ಅಮಲ್‌ಜಾರಿ ಬಗ್ಗೆ ಅರ್ಜಿದಾರನು ಮನವಿಮಾಡಿದ್ದಾನೆ. ಅದು ತಾ.19-9-47ಕ್ಕೆ ತನಿಖೆಗೆ ಇಟ್ಟಿದೆ.

Sd G. S. Rao.
pleader for pter.
Kundapur 12 9-47

ಅಮೃತಾಂಜನ.

ತಲೆವೇದನೆ, ಶಿರೋವೇದನೆ, ಉಳುಕ, ಕತ್ತಿಗೆ, ಘುದು ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವದು, ಚೇಳು ಜಿಪ ಮುಂತಾದ ಚೇಪಿ ಕಚ್ಚುವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಸುಗಳಲ್ಲಿ ಮದ್ದು ಜತೆ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ನಿಮಗೆ ಖಾನ್‌ದಾನ್ ಮತ್ತು ದೋಸ್ತ್ ಚಿತ್ರವಿತ್ತ

ಶೌಕತ್ ಹುಸೇನರ ಅಸಾಧಾರಣ ಕೃತಿ.

"ಝೀನತ್"

ನೂರ್‌ಜಹಾನ್, ಯಾಕುಬ್, ಶಾಂತಾರಿನ್, ನಾಸಿರ್, ಜ್ಯೂನಿಯರ್ ಹಿಮಾಲಯವಾಲಾ, ದೀಕ್ಷಿತ್, ಆಗಾ ಮತ್ತು ಶಾನವಾಜ್ ಮೊದಲಾದ ಪ್ರಸಿದ್ಧ ನಟನಟಿಯರು.

ತಾ. **20—9—47**ರಿಂದ

ಬರುವ ಚಿತ್ರ "ಅಮಾನತ್"

ಮುಂದಿನ ಚಿತ್ರ: ಪಾಂಚೋಲಿಯವರ, "ಕೈಸೇ ಕಹೂಂ"

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂ. 76/1932 ಕ್ರಮ ಅಮ್ಲುಜ್ಯಾರಿ ನಂ. 387/1947

ವಾದಿ—ನರಹರಿ ಭಟ್ಟ ಪೂತಿ, ಈಗಿನ ಕುಟುಂಬದ ಎಜಮಾನ ವ ಆಡಳಿತೆವಾಳ. ಹಿರೇಮಗ ಜನಾರ್ದನ ಭಟ್ಟ.

ಪ್ರತಿವಾದೀರು. 1 ನಾರಾಯಣ ಕಂಪ್ತಿ 2. ರಾಮದಾಸ ಕಂಪ್ತಿ 3. ವ್ಯಾಸರ ರಘುನಾಥ.

1ನೇ ಪ್ರತಿವಾದಿ ನಾರಾಯಣ ಕಂಪ್ತಿ ರಘುನಾಥ ಕಂಪ್ತಿರ ಮಗ, ಉಡುಪಿ ತಾಲ್ಲೂಕು ಹೊಸಾಳ ಗ್ರಾಮದಲ್ಲಿರುವ ಯವರಿಗೆ ಅರ್ಜಿದಾರನು, ಮೇಲ್ಕಂಡ ಡಿಕ್ರಿಯ ಬಗ್ಗೆ ಕ್ರಮ ನಂ 387/1947ನೇಗೆ ಅಮ್ಲುಜ್ಯಾರಿ ಮಾಡಿದ ಬಾಬಿನಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 30-9-1947ನೇ ದಿವಸ ತಪ್ಪಿಗೆ ನಿಶ್ಚಯಿಸಿರುವದರಿಂದ ಆ ಬಾಬಿನಲ್ಲಿ ನಿಮ್ಮ ಆಕ್ಷೇಪ ಇದ್ದಲ್ಲಿ ತಪ್ಪದೆ ದಿವಸ 11 ಘಂಟೆಗೆ ಕೋರ್ಟಿನವರು ದರವಾಗ್ಗೆ ಹಾಜರಾಗಿ, ಜ್ಯಾಹೀರ್ಮಾಡಿಕೊಳ್ಳಬೇಕಾಗಿ ಈ ಮೂಲಕ ತಿಳಿಸುವದಾಗುತ್ತದೆ.

ಕೋರ್ಟು ಹುಕುಂ ಪ್ರಕಾರ

K Narayana Kamath
ಅರ್ಜಿದಾರನ ಕಡೆ, ಎಡ್ವಾಕೇಟ
ಕುಂದಾಪುರ ತಾ 15-9-1947

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 120/1947

1 ಸತ್ಯವತಿ, 2 ಜಯಲಕ್ಷ್ಮಿ, 3 ಜಯರಾಮ, 4 ಶಿವರಾಜ. ಮ್ಯಾನರ್ರು, ಕ್ಷೇಮಚಿಂತಕಳು ತಾಯಿ ಯಾನೆ ಮಹಾದೇವಿ.

–ವಾದಿಳು.

ಮತ್ತು

1 ಸುಲೇಮಾನ ಬ್ಯಾರಿ, 2 ಮರಿಯಂಮ.

–ಪ್ರತಿವಾದಿರು

2ನೇ ಪ್ರತಿವಾದಿಳು ಮರಿಯಂಮ–1ನೇ ಪ್ರತಿವಾದಿ ಸುಲೇಮಾನ ಬ್ಯಾರಿ ಹೆಂಡ್ತಿ–ಪುತ್ತೂರು ತಾಲ್ಲೂಕು ವಿಟ್ಲ ಕಸಬಾ ಗ್ರಾಮದ ಉಕ್ಕುಡ ಎಂಬಲ್ಲಿ–ಇವಳಿಗೆ

ನಿಮ್ಮ ಮೇಲೆ ಕೂಡಾ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ಇದೇ ಸಪ್ಟೆಂಬರ ತಾ. 29ಕ್ಕೆ ತನಿಕೆಗಿಟ್ಟಿರುವ ಪ್ರಯುಕ್ತ ನೀವು ಆ ದಿವಸ ಬೆಳಗ್ಗೆ ಘಂಟೆ 10ಕ್ಕೆ ಕೋರ್ಟು ಮುಂದೆ ಖುದ್ದಾಗಲೀ ವಕೀಲ್ ಮುಖಾಂತ್ರವಾಗಲಿ ಹಾಜರಾಗಿ ಆಕ್ಷೇಪಗಳಿದ್ರೆ ಜ್ಯಾಹೀರು ಮಾಡುವದು ತಪ್ಪಿದಲ್ಲಿ ಎಕ್ಸ್‌ಪಾರ್ಟಿಯಾಗಿ ತೀರ್ಮಾನಿಸಲ್ಪಡುವದು ಎಂಬುದಾಗಿ ಈ ಮೂಲಕ ತಿಳಿಸಿಯದೆ.

B Chidananda Rao,
ವಾದಿಯ ಕಡೆ ವಕೀಲ್.
ಪುತ್ತೂರು, 12-9-1947

ಕರ್ನಾಟಕ ಸಂಘ, ಉಡುಪಿ.
(ರಿಜಿಸ್ಟರ್ಡ್)

ಪಂಡಿತ ವೆಂಕಟರಮಣಾಚಾರ್ಯ ಸ್ಮಾರಕ ಕನ್ನಡ ಭಾಷಣ ಸ್ಪರ್ಧೆ

ದ. ಕ. ಜಿಲ್ಲೆಯ ಹೈಸ್ಕೂಲುಗಳ, ಹಾಯರ್ ಎಲಿಮೆಂಟರಿ ಶಾಲೆಗಳ ಮತ್ತು ಸಂಸ್ಕೃತ ಶಾಲಾ ಎಂಟ್ರೆನ್ಸ್ ತರಗತಿಗಳ ವಿದ್ಯಾರ್ಥಿಗಳಲ್ಲಿ ಆಯಾ ಶಾಲೆಯು ಆಯ್ದು ಮೂರು ವಿದ್ಯಾರ್ಥಿಗಳಂತೆ ಕಳುಹುವ ಶಾಲಾ ಮೇಳ (School teams)ಗಳನ್ನು ಕೆಳಗಿನ ಆರು ವಿಷಯಗಳಲ್ಲಿ ಸ್ಪರ್ಧೆಯ ದಿನ ಬಹುಮಾನ ತೀರ್ಮಾನಕ ಮಂಡಳಿಯು ಆಯ್ದು ಕೊಡುವ ಒಂದು ವಿಷಯದ ಮೇಲೆ ಭಾಷಣ ಸ್ಪರ್ಧೆಗೆ ಬಿಟ್ಟು, ಸ್ಪರ್ಧೆಯಲ್ಲಿ ಪ್ರಥಮ ದ್ವಿತೀಯ ಸ್ಥಾನವನ್ನು ಹೊಂದುವ ಮೇಳಗಳ ಶಾಲೆಗಳಿಗೆ. ಕ್ರಿಕೆಟ್ ಮುಂತಾದ ಆಟಗಳ ಸ್ಪರ್ಧೆಗಳಲ್ಲಿ ಗೆದ್ದ ಶಾಲೆಗಳಿಗೆ ಪಾರಿತೋಷಿಕ ಕೊಡುವಂತಹ ರೀತಿನೀತಿಯಲ್ಲಿ-ಸುಮಾರು ರೂ ೮೦ ಮತ್ತು ರೂ ೫೦ ಮೌಲ್ಯದ ಬೆಳ್ಳಿಯ ರೋಲಿಂಗ್ ಕಪ್‌ಗಳನ್ನು ಪಾರಿತೋಷಿಕವಾಗಿ ಕೊಡುವ, ಮತ್ತು ಇಂತಹ ಮೇಳಗಳಲ್ಲಿ ಹಾಗೂ ಸ್ಪರ್ಧೆಗೆ ನಿಲ್ಲಬಹುದಾದ ಇತರ ವಿದ್ಯಾರ್ಥಿಗಳಲ್ಲಿ ವೈಯಕ್ತಿಕವಾಗಿ ಸರ್ವ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಹೊಂದುವ ವಿದ್ಯಾರ್ಥಿಗಳಿಗೆ ಬೆಳ್ಳಿಯ ಪದಕಗಳನ್ನು ಕೊಡುವ ಏರ್ಪಾಡು ಮಹನೀಯರೊಬ್ಬರ ಉದಾರದಾನ ಸಹಾಯದಿಂದ ಮಾಡಲಾಗಿದೆ. ಮುಂಬರುವ ದಸರಾ ಆರಂಭದಲ್ಲಿ ಜರಗುವ ಈ ಸ್ಪರ್ಧೆಯು ಯಶಸ್ವಿಯಾಗುವಂತೆ ಶಾಲೆಗಳು ಸಹಭಾಗಿಗಳಾಗಿ ಸಹಕರಿಸಬೇಕಾಗಿ ವಿನಂತಿ. ವಿಷಯಗಳು ೧ ಕನ್ನಡ ನಾಡ ಮತ್ತು ನುಡಿಯ ಏಳಿಗೆಯ ಬಗೆಗೆ ಕಿರಿಯರು ಮಾಡಲಾಪ ಪ್ರಯತ್ನಗಳು. ೨ ಈಗ ಇರುವ ಅಥವಾ ಗತಿಸಿದ ಭಾರತ ರಾಷ್ಟ್ರೀಯ ಮುಂದಾಳುಗಳಲ್ಲಿ, ನಿಮ್ಮ ಮೆಚ್ಚಿನ ವ್ಯಕ್ತಿ ಯಾರು ಮತ್ತು ಏಕೆ? ೩ ಕರ್ನಾಟಕ ಏಕೀಕರಣವಾಗದಿರುವುದರಿಂದ ನಾಡಿಗುಂಟಾಗಿರುವ ತೊಡರು ತೊಂದರೆಗಳು ಮತ್ತು ಏಕೀಕರಣವಾಗುವುದರಿಂದ ಉಂಟಾಗುವ ಪ್ರಯೋಜನಗಳು. ೪ ಸ್ವತಂತ್ರ ಅಥವಾ ಅನುವಾದಿತ ಕನ್ನಡ ಕಾದಂಬರಿ (ನಾವೆಲ್)ಗಳಲ್ಲಿ ನಿಮ್ಮ ಮೆಚ್ಚಿನದು ಯಾವುದು ಮತ್ತು ಏಕೆ? ೫ ನಿಮ್ಮಿಂದ ಕಲ್ಪಿತವಾದ ಸಣ್ಣ ಕತೆಯೊಂದನ್ನು ಹೇಳುವುದು. ೬ ಜನಹಿತ ಸಾಧನೆಗಾಗಿ ಉಪಯೋಗಿಸಿರೆಂದು ನಿಮ್ಮ ಕೈಯಲ್ಲೊಂದು ಮಿಲಿಯ ರೂಪಾಯಿ ಕೊಟ್ಟರೆ ಅದನ್ನು ಹೇಗೆ ವಿನಿಯೋಗಿಸುವಿರಿ?— ಸ್ಪರ್ಧೆಯ ಕೂಲಂಕಷವಾದ ನಿಯಮಾವಳಿಯ ಪ್ರತಿಗಾಗಿ ಸಂಘದ ಕಾರ್ಯದರ್ಶಿಯರಿಗೆ ಬರೆದರೆ ಉಚಿತವಾಗಿ ಕಳುಹಿಸಿಕೊಡಲಾಗುವುದು.

ರಾಷ್ಟ್ರ ಧ್ವಜವನ್ನು ಉಪಯೋಗಿಸುವುದು ಹೇಗೆ?— ಕಳೆದ ಆಗೋಸ್ತು ಹದಿನಾಲ್ಕು ಹದಿನೈದನೆ ದಿವಸಗಳಲ್ಲಿ ಹಚ್ಚಿದ ಕೆಲವು ರಾಷ್ಟ್ರಧ್ವಜಗಳು ಈಗಲೂ ತಲೆಕೆಳಗಾಗಿ ಜೋತಾಡುತ್ತವೆ. ಕೆಲವು ಗಾಳಿಯ ಹೊಡೆತಕ್ಕೆ ಹರಿದು ನಾನಾಕಡೆ ಹಾರಾಡುತ್ತವೆ. ಇನ್ನು ಕೆಲವು ಮಳೆಯ ನೀರಿನಿಂದ ತೊಳೆಯಲ್ಪಟ್ಟು ಬಿಳಿ ಅರಿವೆಗಳ ತುಂಡಾಗಿ ಹೋಯ್ತಾಡುತ್ತಿವೆ. ಇದು ತುಂಬಾ ವ್ಯಸನಕರ. ಆದುದರಿಂದ ರಾಷ್ಟ್ರ ಧ್ವಜವು ಅಧಿಕಾರದ ಸರಕಾರೀ ಸ್ಥಳಗಳಲ್ಲಿ ವಿಶೇಷ ಪ್ರಸಂಗಗಳಲ್ಲಿ ಮಾತ್ರ ಉಪಯೋಗಿಸಲ್ಪಡಬೇಕಲ್ಲದೆ ವ್ಯಕ್ತಿಗಳಿಂದ ಅಲಂಕಾರಕ್ಕಾಗಿ ಮತ್ತು ಸ್ಯಾಕಲ್, ಮೋಟಾರ್ ವಾಹನಗಳ ಮೇಲೆ ಅದನ್ನು ಉಪಯೋಗಿಸ ಬಾರದು. ರಾಷ್ಟ್ರ ಧ್ವಜವನ್ನು ಪವಿತ್ರವಾದ ಯೋಗ್ಯ ಸ್ಥಳದಲ್ಲಿ ಜೋಪಾನದಲ್ಲಿಡಬೇಕು. ಹರಿದುಹೋದ ಧ್ವಜಗಳನ್ನು ಸಿಕ್ಕಸಿಕ್ಕ ಕೆಲಸಕ್ಕೆ ಉಪಯೋಗಿಸಬಾರದು. ಧ್ವಜವನ್ನು ಹಾರಿಸುವಾಗಲೂ ಕೆಲವು ನಿಯಮಗಳನ್ನು ಪಾಲಿಸಬೇಕು. ಅದು ಬಣ್ಣಗಳ ದೃಷ್ಟಿಯಿಂದ ಪದ್ಧತಿಯ ಮೇರೆಗೆ ಹಚ್ಚಲ್ಪಟ್ಟಿರಬೇಕು. ಧ್ವಜಸ್ತಂಭದ ತುದಿಯವರೆಗೆ ಅದನ್ನು ಏರಿಸಬೇಕು. ಅರ್ಧಸ್ತಂಭದ ತನಕ ಏರಿಸಿದರೆ ಅದು ದುಃಖ ಸೂಚಕವೆಂದು ತಿಳಿಯಬೇಕು. ರಾಷ್ಟ್ರ ಧ್ವಜದ ಮಹತ್ವವನ್ನು ಪ್ರತಿಯೊಬ್ಬನೂ ತಿಳಿದುಕೊಂಡು ಅದರ ಸದುಪಯೋಗದ ಜ್ಞಾನವನ್ನು ಪಡೆಯ ಬೇಕು.

ಉದ್ಯಾವರ—ಸ್ಥಳೀಯ ಶ್ರೀ ದತ್ತಾತ್ರೇಯ ಭಜನಾಮಂದಿರದಲ್ಲಿ ವರ್ಷಂಪ್ರತಿಯೂ ಜರಗತಕ್ಕ "ಪುಷ್ಪ ಸಮಾರಾಧನೆ"ಯು ತಾ. 11-9-47ರಲ್ಲಿ ನೆರವೇರಿತು. ಪೂಜಾರಂಭದ ಮುನ್ನ ಮಹಾತ್ಮ ಗಾಂಧೀಜಿಯವರ ದಿವ್ಯೋಕ್ತಿಯನ್ನು ಓದಿ ಹೇಳಿದ ಬಳಿಕ ಸ್ವಾತಂತ್ರ್ಯದಿನದ ಸ್ಮಾರಕಾರ್ಥವಾಗಿ ಅವರ ಭಾವ ಚಿತ್ರವನ್ನು ಅನಾವರಣ ಮಾಡಲಾಯಿತು.

ಮಿಂಜಾರು—ಕೆಂಕ ಮತ್ತು ಬಡಗು ಮಿಂಜಾರು ಗ್ರಾಮಗಳಿಗೆ ಮಿಂಜಾರು ಕೋಓಪರೇಟಿವ್ ಸ್ಟೋರಿನಿಂದ ಈ ವರೆಗೆ ಸಕ್ಕರೆವಿತರಣೆಯಾಗುತ್ತಾ ಇದ್ದು ಇತ್ತೀಚೆಗೆ ಕೆಂಕು ಮಿಂಜಾರು ಗ್ರಾಮದ ಮೂಲೆಯ ಅಂಗಡಿಯಾದ ಮಂಟಿಮಾರು ಎಂಬಲ್ಲಿಂದ ಬಟವಾಡೆಯಾಗುವದೆಂದು ವರ್ತಮಾನವಿದೆ, ಅದರೆ ಇದು ಗ್ರಾಮಸ್ಥರಿಗೆ ತೀರ ಅನ್ಯಾಯವಾದಂತಾಗುತ್ತದೆ. ಆದ್ದರಿಂದ ಕೆರ್ಸಿನೆಂಣೆ ವಿತರಣೆಯಾಗುವಂತೆ ಗ್ರಾಮಗಳ ಎರಡು ಭಾಗದಲ್ಲಿ ಸಕ್ಕರೆಯನ್ನೂ ಹಂಚಿ ವಿತರಣೆ ಮಾಡಿದರೆ ಗ್ರಾಮದ ಬಡಜನರಿಗೆ ತುಂಬಾ ಅನುಕೂಲವಾಗುತ್ತದೆ. ಈ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸ್ವತಹಾ ತನಿಕೆಯಿಂದ ಗ್ರಾಮ ಸಮಿತಿಯವರ ಸಲಹೆ ಪಡದು ಸಕ್ರೆ ವಿತರಣೆ ಮಾಡಿಸಬೇಕಾಗಿ ಗ್ರಾಮಸ್ಥರೊಬ್ಬರು ಬರೆಯುತ್ತಾರೆ.

ಬೈಂದೂರಿಗೊಂದು ಹೈಸ್ಕೂಲು ಈ ತಲೆಬರಹದ ಲೇಖನವೊಂದು ಪ್ರಕಟಣೆಗಾಗಿ ಶ್ರೀ ಬಿ. ಆರ್. ನಾಯಕರಿಂದ ಬಂದಿದೆ. ಬೈಂದೂರು ಫಿರ್ಕಾದ ಮಕ್ಕಳ ಸಂಖ್ಯೆ, ಸರಕಾರಕ್ಕೆ ಆ ಕೇಂದ್ರದಿಂದ ಸಿಗುವ ಉತ್ಪತ್ತಿ ಇತ್ಯಾದಿ ವಿಷಯಗಳು ಲೇಖನದಲ್ಲಿ ಸೂಚಿಸಲ್ಪಟ್ಟಿವೆ. ಅಂಥ ಸಂಖ್ಯೆಗಳ ದೃಷ್ಟಿಯಿಂದ ಬೈಂದೂರಿಗೆ ಹೈಸ್ಕೂಲು ಅತ್ಯಗತ್ಯವೆಂಬುದು ನಿರ್ವಿವಾದ. ಸಂಬಂಧಪಟ್ಟವರು ತಕ್ಕ ನಿಗಾ ಕೊಡಬೇಕಾದುದು ಸಂದರ್ಭೋಚಿತ.

ಬಂಟರ ಯಾನೆ ನಾಡವರ ಸಂಘ, ಬೊಂಬಾಯಿ— ಈ ವರ್ಷದ ಪ್ರಾರಂಭಿಕ ಭಾಷಣವು ಸಂಘದ ಅಧ್ಯಕ್ಷ ಶ್ರೀ ತೋನ್ಸೆ ಸಂಜೀವ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಆಗೋಸ್ತು 31ರಲ್ಲಿ ಕೋಟೆಯಲ್ಲಿರುವ ಕಾಮಾ ಹಾಲಿನಲ್ಲಿ ಜರಗಿತು. ಮುಂಬಯಿಯ ಪ್ರಮುಖ ಬ್ಯಾರಿಸ್ಟರರಾದ ಎ. ವಿ. ಶೇರ್ ಭಾಯಿಯವರು ದಿನದ ಮಾನ್ಯ ಅತಿಥಿಗಳಾಗಿದ್ದರು. "ರಾಷ್ಟ್ರೀಯ ಸ್ವಾತಂತ್ರ್ಯದಿಂದ ಜನತಾ ಸ್ವಾತಂತ್ರ್ಯಕ್ಕೆ" ಎಂಬುವೇ ಭಾಷಣದ ವಿಷಯ. ಸಂಘದ ಸದಸ್ಯರು ಮಾತ್ರವಲ್ಲದೆ ದಕ್ಷಿಣ ಕನ್ನಡದ ಇತರ ಸಮಾಜದವರೂ ಸಭೆಗೆ ಬಂದಿದ್ದರು.

ಜಿಲ್ಲಾ ಆಹಾರ ಸಮಿತಿ ಸಭೆಯು

ತಾ. ೧ನೇ ಸೋಮವಾರ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. "ಅಕ್ಕಿ ಸಂಪೂರ್ಣ ಹೊರಗಡೆಯಿಂದ ಬಂದಿಲ್ಲ; ಕೆಲವು 'ಅಲಾಟ್‌ಮೆಂಟ್' ರದ್ದಾಗಿದೆ. ಬರುವ ಕೊಯ್ಲಿನ ವರೆಗೆ ಅಕ್ಕಿ ಸಾಲದು" ಎಂದು ಅಧ್ಯಕ್ಷರು ತಿಳಿಸಿದರು. ಶ್ರೀ ಕೆ. ಆರ್. ಕಾರಂತರು, ಶ್ರೀ ಜೆ. ಬಿ. ಜಿನರಾಜ ಹೆಗ್ಗಡೆ, ಶ್ರೀ ಸುಬ್ಬಣ್ಣ ಶೆಟ್ಟಿ ಮತ್ತು ಶ್ರೀ. ಎಸ್. ಎಸ್ ಕೊಳ್ಳೆಬೈಲ್ ಅವರು ಅಶಾಸ್ತ್ರೀಯವಾದ ರೇಶನ್ ಭಾಗಗಳಲ್ಲಿ ಅಕ್ಕಿ ಇಲ್ಲದೆ ತೊಂದರೆಯಾದ ವಿಚಾರವನ್ನು ವಿವರಿಸಲಾಗಿ ಅಧ್ಯಕ್ಷರು ಆ ಕಷ್ಟ ನಿವಾರಣೆಗಾಗಿ ಎಲ್ಲಪ್ರಯತ್ನಗಳನ್ನೂ ಮಾಡಲಾಗುತ್ತಿದೆ ಎಂದರು.

ಬೇಸಾಯಗಾರನ ವರ್ಷದ ಆವಶ್ಯಕತೆಗಳನ್ನು ಲಕ್ಷಿಸದೆ ವಸೂಲಾಗುತ್ತಿರುವ ಗೇಣಿ ಸಂಬಂಧದ ಈಗಿನ ಪ್ರೊಕ್ಯೂರ್‌ಮೆಂಟ್ ಕ್ರಮಗಳಿಂದ ಉಂಟಾಗುವ ಕಷ್ಟಗಳ ವಿಚಾರದಲ್ಲಿ ಮುಂಡಾಜೆಯಂಥ ಗ್ರಾಮಗಳ ನಿದರ್ಶನವನ್ನು ಶ್ರೀ. ಕೆ. ಆರ್. ಕಾರಂತರು ವಿವರಿಸಿ, ಬೇಸಾಯಗಾರನಿಗೆ ಬೇಸಾಯದಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆ ಎಂದರು; ಶ್ರೀ. ಜಿನರಾಜ ಹೆಗ್ಗಡೆಯವರು ಈಗಿನ 'ಪ್ರೊಕ್ಯೂರ್ ಮೆಂಟ್' ಪದ್ಧತಿಯ ಕುಂದುಕೊರತೆಗಳನ್ನು ಸೂಚಿಸಿದ ಮೇಲೆ, ಈಗಿನ 'ಪ್ರೊಕ್ಯೂರ್ ಮೆಂಟ್ ಪದ್ಧತಿ ಹೇಗೆ ಕೆಲಸಮಾಡುತ್ತಿದೆ?' 'ಅದನ್ನು ಹೇಗೆ ಸುಧಾರಿಸಬಹುದು?', ಎಂಬ ವಿಚಾರದಲ್ಲಾಲೋಚಿಸಲು ಒಂದು ಉಪಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿ ಇದೇ ತಾ. ೧೦ರಲ್ಲಿ ಕೂಡಿ, ಜಿಲ್ಲೆಯಲ್ಲಿ ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಸುವ ವಿಧಾನಗಳ ಕುರಿತೂ, ಅಕ್ಕಿ ಬತ್ತಗಳ ಬೆಲೆ ನಿರ್ಧರಿಸುವ ಕುರಿತೂ ಆಲೋಚಿಸಿತು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. No. 159/1947

N. S. ನಾರಾಯಣ ರಾವ್- ವಾದಿ,

ಸೇಸ ಮೂಲ್ಯ - ಪ್ರತಿವಾದಿ

ಪ್ರತಿವಾದಿ-ಸೇಸ ಮೂಲ್ಯ, ಚಾರು ಮೂಲ್ಯನ ಮಗ, ಪುತ್ತೂರು ತಾಲ್ಲೂಕು ಮೇಲಂತಬೆಟ್ಟು ಗ್ರಾಮದಲ್ಲಿ. ಪೋಸ್ಟು ಬೆಳ್ತಂಗಡಿ-ಇವರಿಗೆ

ಸದ್ರಿ ಕೋರ್ಟು ಕ್ರಮ ನಂಬ್ರ 8-1947 ನೇ ವ್ಯಾಜ್ಯದಲ್ಲಿ ನೇಮಕಪಟ್ಟ ರಿಸೀವರ ವಾದಿಯು, ನೀವು ತಾ. 10-8-45ರಲ್ಲು ಶ್ರೀನಿವಾಸ ಎಳಚಿತ್ತಾಯರಿಗೆ ಚಾಲಗೇಣಿಚೀಟು ಬರಕೊಟ್ಟು ಚಾಲಗೇಣಿ ಪಕ್ಕಾಸಿಂದ ಅನುಭವಿಸಿದ ಆಸ್ತಿಯ ಬಾಬ್ತು ಕಳೆದ ಕ್ಷಯ ಸಂವತ್ಸರದ ಗೇಣಿ ಬಾಕಿ ಬಗ್ಗೆ, ನಿಮ್ಮ ಮೇಲೆ ಮೇಲ್ಕಂಡ ದಾವಾ ಮಾಡಿರುತ್ತಾರೆ. ಸದ್ರಿ ದಾವೆಯು ತಾ. 24-9-1947ಕ್ಕೆ ನ್ಯಾಯವಾಗುವುದರಿಂದ ನೀವು ಆ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನಲ್ಲಿ ಹಾಜ್ರಾಗಿ ಉಪಾಹರಿಸಿಕೊಳ್ಳತಕ್ಕದ್ದೆಂದೂ, ತಪ್ಪಿದ್ರೆ ನಿಮ್ಮನ್ನು ಏಕಪಕ್ಷ ಮಾಡಿ ಸದ್ರಿ ನಂಬ್ರವು ತೀರ್ಮಾನಿಸಲಾಗುವುದೆಂತಲೂ, ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗಿದೆ.

Sd. **N. V. Kolathaya,**
Vakil for Plff.
Puttur, 12-9-47.

ಪ್ರಕಟಣೆ

ಉಡ್ಪಿ ತಾಲೂಕು ಬೊಮ್ಮರಬೆಟ್ಟು ಗ್ರಾಮದ ಹಿರಿಯಡ್ಕದಲ್ಲಿರುವ ಚಂದ್ಯೆಕುರ್ಳೆ ಹೆಗ್ಗಡೆಯು ಸರ್ವ ಜನರಿಗೂ ಈ ಮೂಲಕ ತಿಳಿಯಪಡಿಸುವದೇನಂದ್ರೆ—

ನನ್ನ ನೊಮ್ಮಗ, ವ. ರುದ್ರಮ್ಮಹೆಗ್ಗಡ್ತಿ ಮಗ ರತ್ನಾಕರ ಹೆಗ್ಗಡೆಯು ತಾರೀಕು 4-9-47ರಲ್ಲಿ ನನ್ನನ್ನು ವಂಚಿಸಿ ಮೋಸಕೃತ್ಯಗಳಿಂದ ರವಿನ್ಯೂ ಚೀಟುಗಳು ಅಂಟಿಸಿರುವ ಕಾಗದಕ್ಕೆ ನನ್ನಿಂದ ಪಡೆದ ಎಡಹೆಬ್ಬೆಟ್ಟಿನ ಮೊಹರು, ವ, ದಸ್ಕತಿನ ಆಧಾರದಿಂದ ಆತ ಮಾಡಬಹುದಾದ ಯಾವತ್ತೂ ರಿಕಾರ್ಡು ಸಿಂಧ್ವಾಗತಕ್ಕದ್ದಲ್ಲ. ಇನ್ನು ಮುಂದೆ ನನ್ನಿಂದ ನಡೆಯುವ ರಶೀದಿಗಳು ಮತ್ತು ಬರಸಿಕೊಳ್ಳುವ ಸಕಲ ವಿಧದ ಸಮಸ್ತ ರಿಕಾರ್ಡುಗಳು ಮುಂತಾದ್ದು ನನ್ನ ಮಗ ಹೆಬ್ಬೇಲಿ ಸುಬ್ಬಯ್ಯ ಹೆಗ್ಡೆ ಸಮಕ್ಷಮ ಆಗಿ ಅಂತಾದಕ್ಕೆ ನನ್ನ ದಸ್ಕತು, ವ, ಎಡ ಹೆಬ್ಬೆಟ್ಟಿನ ಮೊಹರು ಇದ್ದು. ಸದ್ರಿ ಸುಬ್ಬಯ್ಯ ಹೆಗ್ಗಡೆಯು ಸಾಕ್ಷಿಕೂಡಾ ಇರತಕ್ಕದ್ದು. ನನ್ನ ಮಗ ಸದ್ರಿ ಸುಬ್ಬಯ್ಯ ಹೆಗ್ಗಡೆಯ ಸಾಕ್ಷಿಯಿಲ್ಲದ ಯಾವತ್ತು ರಿಕಾರ್ಡು ನನ್ನ ಮೇಲೆ ಬದ್ಧೀಕರಿಸತಕ್ಕದ್ದಲ್ಲ.

● ಚಂದ್ಯೆಯ್ಯಕುರ್ಳೇ ಹೆಗ್ಡೆ ರುಜು.

ಹಾಲಿಹಿರಿಯಡ್ಕದಲ್ಲಿರುವ ದಿವಾನ್ ಬಹಾದ್ದೂರು ಪಿ. ಮಹಾಬಲ ಹೆಗ್ಡೆರ ಅಳಿಯ ಪಟೇಲ್ ಸುಬ್ಬಯ್ಯ ಹೆಗ್ಗಡೆ ಸಾಕ್ಷಿ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 311/1947

ವಾದಿ— ಖಾದರ್ ಖಾನ್ ಪುಮ್ಮರ ಖಾನ್.

ಪ್ರತಿವಾದಿ— ಮಾಣಿಬೈಲ ಕೃಷ್ಣಪ್ಪ ಸೆಟ್ಟಿ, ಮಾಣಿಬೈಲ ಅಂತಯ್ಯ ಸೆಟ್ರ ಅಳಿಯ, ಕುಂದಾಪುರ ತಾಲೂಕು ಕರ್ಕುಂಜಿ ಗ್ರಾಮ-ಇವರಿಗೆ

ವಾದಿಯು ನಿಮ್ಮ ಮೇಲೆ ತಾ. 25-9-1944ರ ನೋಟ ಕಾಗ್ದದ ಪ್ರಕಾರ ಬಹಾ ಎಡ್ವಾನ್ಸ ಹಣ ವ ನಷ್ಟದ ಹಣಗಳನ್ನು ಬಂಮಾಡಿ ಕೊಳ್ಳುವುದ ಸದ್ರಿ ದಾವಾ ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಉದಾಹರಣೆ ಇದ್ದಲ್ಲಿ ತಾ. 22-9-1947ನೇ ದಿವ್ಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು. ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗುತ್ತದೆ.

K. Raghunath Shenai,
Pleader for Plaintiff.
Coondapoor 15-9-1947

ಪ್ರಕಟಣೆ

ಉಡ್ಪಿ ತಾಲೂಕು ಮೂಲೂರು ಗ್ರಾಮದ ಮಾಗಂಡದಿ ದೂಜ ಶೆಟ್ರ ಸೊಸೆ ಅಕ್ಕು ಶೆಡ್ತಿ ಈ ಮೂಲಕ ಸರ್ವ ಜನರಿಗೂ ತಿಳಿಸುವುದೇನಂದ್ರೆ— ಮೂಲೂರು ಗ್ರಾಮದ ಕೆಲವು ಸ್ಥಳವನ್ನು ದರಖಾಸ್ತಿಗೆ ಅಪೇಕ್ಷಿಸಿ ಉಡ್ಪಿ ತಾಲೂಕು ತಹಶಿಲ್ದಾರರವರಿಗೆ ನಾನು ಮಾಡಿದ ಅರ್ಜಿ ಮೂಲೂರು ತರ್ಫು ಖ್ಯಾನುಭಾಗರಾದ ಸದಾಶಿವ ಹೆಗ್ಡೆರಿಗೆ ತಸ್ಕಿಗೆ ಬಂದಲ್ಲಿ ನನ್ನ ವಾಗ್ಮೂಲನನ್ನು ಪಡದು, ಜೀರ ಮೂರು ಖಾಲಿ ಕಾಗ್ದಗಳಿಗೆ ನನ್ನ ಹೆಬ್ಬೆಟ್ಟನ್ನು ಪಡದು, ಮನೆಯಲ್ಲಿ ರಿಕಾರ್ಡು ತ[illegible]ಸಂತ್ರೇನೆಂದೂ, ರಸ್ತೆ ಬದಿಯಲ್ಲಿರುವ ಸ್ವಲ್ಪ ಸ್ಥಳವನ್ನು ತನಗೆ ಕ್ರಯಕ್ಕೆ ಕೊಡಬೇಕೆಂಬವಾಗಿಯೂ ಕೇಳಿದರು. ಆಗ್ಯೆ ನಾನು ಸದ್ರಿ ಸ್ಥಳವನ್ನು ಕ್ರಯಕ್ಕೆ ಕೊಡುವರೆ ಆಗುವದಲ್ಲವೆಂದು ಹೇಳಿದ್ದಕ್ಕೆ ನಿನ್ನ ಜುಟ್ಟು ನನ್ನ ಕೈಯಲ್ಲಿದೆ ಎಂದು ಹೇಳಿ ಹೊಂಟುಹೋದರು. ಖ್ಯಾನಭಾಗರ ಈ ಮಾತುಗಳಿಂದ ನನಗೆ ಸಂಶಯವಾದ್ದರಿಂದ, ಬರಹವಿಲ್ಲದ ಹೆಣ್ಣು ಹೆಂಗಸಾದ ನನ್ನಿಂದ ಖಾಲಿ ಕಾಗ್ದಕ್ಕೆ ಪಡಕೊಂಡ ಹೆಬ್ಬೆಟ್ಟಿನಿಂದಾಗಿ ನನಗೆ ವಿರೋಧವಾಗಿ ನೋಟು ಚೀಟು ವಗೈರೆ ಯಾವ ರಿಕಾರ್ಡು ಮಾಡಿದ್ದಲ್ಲಿ ಅದು ನನಗೆ ಬಾಧಿಸತಕ್ಕದ್ದಲ್ಲ. ನಾನು ಮೂಲೂರು ಅಪಾಂ ಸಾಹೇಬರಿಗೆ 8-3-55ರಲ್ಲು ರೂಪಾಯಿ 100ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನಲ್ಲಿ 50 ರೂಪಾಯಿ ಮಾತ್ರ ಬಾಕಿಯಲ್ಲದೆ ಬೇರೆ ಯಾರಿಗೂ ನನ್ನಿಂದ ಎಷ್ಟನ್ನಾದರೂ ಸಲುವದಿಲ್ಲ. ನನ್ನಿಂದ ಎಷ್ಟನ್ನಾದರೂ ಸಲುವದಿದೆ ಎಂಬ ಬಗ್ಗೆ ಏನಾದರೂ ವಾಕ್ಲೆಯನ್ನು ತಂದಲ್ಲಿ ಅದು ಕೇವಲ ಮೋಸದ್ದು. ನನಗೆ ಬಾಧಿಸತಕ್ಕದ್ದಲ್ಲ.

॥ ಎಡ ಹೆಬ್ಬೆಟ್ಟಿನ ಗುರ್ತು ಅಕ್ಕು ಶೆಡ್ತಿ ರುಜು.



Approved firm by the Govt. of Mysore
[illegible]rtified by the Agent of the Govt. of Ceylon & Indian.

CHAMPAE'S
Snow & Castrex
Sole Distributers for India
Prop: K. G. NAYAK,
Santhekatte, UDIPI, S K.

ದಕ್ಷಿಣ ಕನ್ನಡ ವರ್ಗದಾರರಲ್ಲಿ ವಿನಂತಿ

ನೀವೆಲ್ಲರೂ ತಿಳಿದಿರುವಂತೆ, ಸಮಗ್ರ ದೇಶದಲ್ಲಿನ ಮತ್ತು ವಿಶೇಷತಃ ನಮ್ಮ ಪ್ರಾಂತ ಹಾಗೂ ಜಿಲ್ಲೆಯೊಳಗಿನ ಆಹಾರ ಪರಿಸ್ಥಿತಿಯು ಅತ್ಯಂತ ಸಂದಿಗ್ಧಾವಸ್ಥೆಗೆ ತಲಪಿದೆ. ಈ ಜಿಲ್ಲೆಗೆ ಸಂಬಂಧಿಸಿದ ಅಂದಾಜು ಆಹಾರೋತ್ಪತ್ತಿ, ಜನರ ಪೂರೈಕೆಗೆ ಸಾಕಾಗುವಷ್ಟು ಆಹಾರ ಮತ್ತು ಈ ವರೆಗೆ ಸಂಗ್ರಹವಾದ ಅಕ್ಕಿ-ಬತ್ತಗಳ ಅಂಕೆ ಸಂಖ್ಯೆಗಳು ಕಳೆದ ವರ್ಷ ಸಂಗ್ರಹವಾದುವುಗಳೊಡನೆ ತುಲನಾತ್ಮಕವಾಗಿ, ಪ್ರತ್ಯೇಕ ಕೊಡಲ್ಪಟ್ಟಿವೆ. ಮುಂದಿನ ಕೊಯಿಲು ಒದಗುವ ತನಕ, ಜನರಿಗೆಲ್ಲರಿಗೆ ಆಹಾರ ಪೂರೈಕೆಯಾಗುವ ಸಲುವಾಗಿ, ಉಳಿಕೆಯ ಅಕ್ಕಿಯಿದ್ದವರೆಲ್ಲರೂ ಅದನ್ನು ಸ್ಟೋರುಗಳಿಗೊಪ್ಪಿಸಬೇಕೆಂದು ಮದರಾಸು ಸರಕಾರವು ಇಚ್ಛಿಸುತ್ತದೆ. ಆಹಾರ ಪೂರೈಕೆಯ ಮಟ್ಟಿಗೆ ನಾವು ನಮ್ಮ ಉತ್ಪತ್ತಿಯ ಮೇಲೇ ಹೊಂದಿಕೊಂಡಿರಬೇಕಾಗಿದೆ; ಹೊರಗಿನ ಸಹಾಯವು ಸಾಧ್ಯವಿಲ್ಲ. ಪುರುಷ-ಸ್ತ್ರೀ-ಬಾಲಕ-ಯಾರೂ ಉಪವಾಸ ಬೀಳುವಂತಾಗಗೊಡಕೂಡದು. ಬರುವ ನವಂಬರ ತನಕ ಉಪಯೋಗಿಸಲು ಅಕ್ಕಿಯ ಸಂಗ್ರಹವಿಟ್ಟುಕೊಂಡವರು, ಮುಂದಿನ ಬೆಳಸು ಒದಗುವ ತನಕ ಮಾತ್ರ ಎಷ್ಟು ಅವಶ್ಯವಿದೆಯೋ ಅಷ್ಟನ್ನು ಇಟ್ಟುಕೊಳ್ಳತಕ್ಕದ್ದು. ಶಕ್ಯವಿದ್ದಷ್ಟು ನಾವು ಸಂಯಮನವನ್ನಾಚರಿಸಬೇಕು.

ನಮ್ಮ ಜಿಲ್ಲೆಯು ವಿದ್ಯಾಬುದ್ಧಿಗಳಿಗೂ, ಸಾರ್ವಜನಿಕ ಸೇವೆಗೂ, ಸ್ವರಾಜ್ಯ ಸಂಪಾದನೆಯ ಹೋರಾಟದಲ್ಲೂ ಗೌರವ ಹೊಂದಿದ ಜಿಲ್ಲೆಯಾಗಿದೆ. ಈಗ ದೇಶವು ಸ್ವಾತಂತ್ರ್ಯ ಹೊಂದಿದೆ. ಜನರು ಈ ಸಂದಿಗ್ಧ ಸಮಯದಲ್ಲಿ ಒಬ್ಬರಿಗೊಬ್ಬರು ಸರ್ವವಿಧದಲ್ಲೂ ನೆರವಾಗಬೇಕಾಗಿದೆ. ನಮ್ಮ ಜಿಲ್ಲೆಯ ಈಗಿನ ಬೇಡಿಕೆಗೊದಗುವಂತೆ, ಅಕ್ಕಿಯ ಸಂಗ್ರಹವಿದ್ದವರೆಲ್ಲರೂ ತಮ್ಮಿಂದ ಸಾಧ್ಯವಿದ್ದಷ್ಟನ್ನು ತಂದೊಪ್ಪಿಸಬೇಕೆಂದು ನಾವು ಅವರ ಸದ್ಭಾವಕ್ಕೆ ವಿನಂತಿಸುತ್ತೇವೆ. ಬರುವ ಒಂದು ವಾರದಲ್ಲಿ ಸರಕಾರೀ ಆಫೀಸರರೂ ಇತರರೂ ಜತೆಯಾಗಿ ಸಹಕಾರದಿಂದ ಶ್ರಮಿಸಿ, ಉಳಿಕೆಯ ಅಕ್ಕಿಯೆಷ್ಟನ್ನು ಸಂಗ್ರಹಿಸಬಹುದೋ ಅಷ್ಟನ್ನು ಮಾಡಬೇಕು. ಉಳಿಕೆಯ ಅಕ್ಕಿ ಕೊಡಬಲ್ಲಂಥ ಸಮರ್ಥರು ಈ ವಿನಂತಿಗೆ ಕಿವಿಗೊಟ್ಟು ಸಹಕರಿಸದಿದ್ದರೆ ನಾವು ಶೋಚನೀಯ ಪರಿಸ್ಥಿತಿಯನ್ನು ಎದುರಿಸಬೇಕಾಗುವುದು. ಕಾಂಗ್ರೆಸ್ ಹಾಗೂ ಇತರ ಸ್ವಯಂಸೇವಕರು ಪ್ರತಿಯೊಂದು ಗ್ರಾಮವನ್ನೂ ಸಂದರ್ಶಿಸಿ, ತಮ್ಮ ಉಳಿಕೆಯ ಅಕ್ಕಿ ಬತ್ತಗಳನ್ನೊಪ್ಪಿಸುವಂತೆ ಜನರಲ್ಲಿ ಸ್ವತಃ ವಿನಂತಿಸಬೇಕು. ಪ್ರತಿಯೊಬ್ಬ ಗ್ರಾಮಾಧಿಕಾರಿಯು ಉಳಿಕೆಯ ಅಕ್ಕಿ ಬತ್ತಗಳನ್ನು ಈ ಸಾರ ಸಂಗ್ರಹಿಸುವ ಈ ಕಾರ್ಯವನ್ನು ತನ್ನ ಪವಿತ್ರ ಕರ್ತವ್ಯವೆಂದು ತಿಳಿಯಬೇಕು. ಪ್ರತಿಯೊಂದು ಶಾಲೆಯಲ್ಲಿನ ಶಾಲಾಧ್ಯಾಪಕರೂ, ವಿದ್ಯಾರ್ಥಿಗಳೂ ಈ ವಿನಂತಿಯನ್ನು ಸಾರ್ವತ್ರಿಕವಾಗಿ ಪ್ರಚುರಿಸಬೇಕು. ಶ್ರೀಮಂತ ವರ್ಗದಾರರು ತಮ್ಮಿಂದಾಗುವಷ್ಟನ್ನು ಕೊಟ್ಟು, ಜಿಲ್ಲೆಯ ಜನತೆಯ ಕೃ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ತಡತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣತೋಂಪುದು, ಯಾವ ನಾಶವೂ ಇಲ್ಲ. ನಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. ೬/- [ವಿ. ಪಿ. ಹಣ್ಣೆರಡಾಣೆ ಪ್ರತ್ಯೇಕ.]

Mrs. D. DEVEE, F. DS (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ದಕ್ಷಿಣ ಕನ್ನಡ

ಮಂಗಳೂರು.

ಅಕ್ಕಿ ಒಪ್ಪಿಸುವ ಅವಧಿ—ದ. ಕನ್ನಡ ಜಿಲ್ಲೆಯ ಕಲೆಕ್ಟರರು ೧೩೫೭ನೇ ಫಸಲಿಯ ಬೆಳೆಯ ಭತ್ತ ವ ಅಕ್ಕಿಯನ್ನು ಕೆಳಗೆ ಕಾಣಿಸಿದ ತಾರೀಕುಗಳೊಳಗೆ ಒಪ್ಪಿಸಬೇಕೆಂದು ನಿರ್ದೇಶಿಸಿರುವರು. ೧ನೇ ಬೆಳೆ ಹೊಸ ದುರ್ಗ ವಿಭಾಗವನ್ನುಳಿದು ಜಿಲ್ಲೆಯ ಇತರ ಕಡೆಗಳಲ್ಲಿ-ಭತ್ತವಾದರೆ ಅರ್ಧ ಭಾಗವನ್ನು ೫-೧೧-೪೭, ಉಳಿದ ಅರ್ಧ ಭಾಗವನ್ನು ೨೦-೧೧-೪೭. ಅಕ್ಕಿಯಾದರೆ—ಕಾಲು ಭಾಗವನ್ನು ೫-೧೧-೪೭ ಉಳಿದ ಕಾಲು ಭಾಗಗಳಂತೆ ತಾರೀಕು ೩೦-೧೧-೪೭, ೧೫-೧೨-೪೭ ಮತ್ತು ೩೧-೧೨-೪೭ಕ್ಕೆ.

ಎರಡನೆ ಬೆಳೆ. ಇಡೀ ಜಿಲ್ಲೆಯಲ್ಲಿ ಭತ್ತವಾದರೆ—೧೫-೩-೪೮ ಅಕ್ಕಿಯಾದರೆ—೩೧-೩-೪೮ ಪಟ್ಟ ಕಾರ್ಕಳ ತಾಲೂಕು ಭತ್ತ ಅಥವಾ ಅಕ್ಕಿ—೩೧-೫-೪೮

ಎರಡನೆ ಬೆಳೆ—ಕುಂದಾಪುರ ತಾಲೂಕಿನ ಹೆಬ್ರಿಗೆ, ನಾಗೋಡಿ ಮತ್ತು ಕೋಟೆ ಶಿರೂರು ಗ್ರಾಮಗಳ ಭತ್ತ ಅಥವಾ ಅಕ್ಕಿ ೩೦-೫-೪೮.

ಮೂರನೇ ಬೆಳೆ. ಇಡೀ ಜಿಲ್ಲೆ—ಭತ್ತ ಅಥವಾ ಅಕ್ಕಿ ೧೫-೫-೪೮.

ತಜ್ಞತೆಗೆ ಪಾತ್ರರಾಗಿ, ಇಂದಿನ ಈ ಆಹಾರಾಭಾವದ ದುಸ್ಥಿತಿಯಿಂದ ಪಾರಾಗುವಂತೆ ಪ್ರಾಂತದ ಇತರರಿಗೂ ಮೇಲ್ಪಂಕ್ತಿಯಾಗಬೇಕು. ಎಲ್ಲಾ ಪತ್ರಿಕಾಕರ್ತರೂ ವಿಶೇಷ ಪುರವಣಿಯಲ್ಲಿ ಈ ಅಕ್ಕಿ ಬತ್ತ ಸಂಗ್ರಹದ ವಿಷಯ ಲೇಖನಗಳನ್ನೂ, ಸಂಪಾದಕೀಯಗಳನ್ನೂ ಬರೆಯುವ ಮೂಲಕ ಪೂರ್ಣ ಸಹಕಾರ ಕೊಡಬೇಕು. ಹೀಗೆ ಸಂಗ್ರಹವಾದ ಅಕ್ಕಿಯು ಜಿಲ್ಲೆಯ ಹೊರಗೆ ರಫ್ತು ಮಾಡಲ್ಪಡುವಂಥದಲ್ಲ. ಕೆಲವರು ತಮ್ಮ ಅಕ್ಕಿಯನ್ನು ಪಕ್ಕದ ಭಾಗಗಳಲ್ಲಿ ಅಡಗಿಸಿಟ್ಟು, ಕಾಳಸಂತೆಯಲ್ಲಿ ವಿಕ್ರಯಿಸುತ್ತಿರುವರಾಗಿ ನಾವು ಕೇಳುತ್ತೇವೆ, ಇದು ಸಮಾಜದಲ್ಲಿ, ಅಕ್ಷಮ್ಯವಾದ ಅಪರಾಧವಾಗಿದೆ. ನಮ್ಮ ಜಿಲ್ಲೆಯಲ್ಲಿ ವಿದ್ಯಮಾನಗಳು ಇಷ್ಟು ಕೆಟ್ಟವೆಯೆಂದು ನಾವು ಎಣಿಸುವದಿಲ್ಲ. ಈ ಮೇಲಿನ ಅಪಾದನೆಯು ಸಾಧಾರವಾದರೆ ನಮ್ಮ ಜಿಲ್ಲೆಯ ಹಾಗು ಉದಾರಶೀಲ ಜನರ ಹೆಸರಿಗೆ ಇದು ಕಲಂಕವೆನ್ನುವೆವು. ರೈತರೇ, ನೀವು ಇಂದಿನ ಪರಿಸ್ಥಿತಿಯನ್ನು ಸರಿಯಾದ ದೃಷ್ಟಿಯಿಂದ ನೋಡಿ ತಿಳಿದು, ಸಹಾಯಕ್ಕೆ ಮುಂದಾಗಿ, ನಿಮ್ಮ ಉಳಿಕೆಯ ಧಾನ್ಯಗಳನ್ನು ತಮ್ಮ ರೇಶನ್ ಆಹಾರಕ್ಕಾಗಿ ನೋಡುತ್ತಿರುವ ಹಸಿದ ಜನತೆಯೊಡನೆ ಹಂಚಿ ಉಣ್ಣಿರಿ. ಅವರು ನಿಮ್ಮನ್ನೂ ನಿಮ್ಮ ಮಕ್ಕಳು ಮರಿಗಳನ್ನೂ ಕೃತಜ್ಞತಾಪೂರ್ವಕವಾಗಿ ಹರಸುವರು. ಅಕ್ಕಿ ಭತ್ತಗಳನ್ನು ಸಾಕಷ್ಟು ತಂದೊಪ್ಪಿಸಿದ ಜನರ ಹೆಸರುಗಳು ಕೃತಜ್ಞತೆಯ ಸ್ಮರಣೆಯಲ್ಲಿ ಪ್ರಕಟನೀಯವಾಗುವುವು. ಯಾರು ಈ ವಿನಂತಿಯನ್ನು ಲಕ್ಷಿಸಿ ಸಹಾಯಕ್ಕೆ ಮುಂದಾಗುವುದಿಲ್ಲವೋ ಅವರ ಹೆಸರುಗಳು ಲಕ್ಷಿಸಲ್ಪಟ್ಟು, ಸಾರ್ವಜನಿಕ ತಿರಸ್ಕಾರಕ್ಕೆ ಪಾತ್ರವಾಗುವುವು.

1. ಶ್ರೀ ಎ. ಬಿ. ಶೆಟ್ಟಿ, ಆರೋಗ್ಯ ಇಲಾಖಾ ಮಂತ್ರಿಗಳು. 2. ಜೆ ಎಫ್, ಸೌಂಡರ್ಸ್, ಎಸ್ಕ್ವಾಯರ್, ದ. ಕ. ಜಿಲ್ಲಾ ಕಲೆಕ್ಟರರು. 3. ಶ್ರೀ ಎಮ್. ಶಿವರಾವ್, ಪ್ರೆಸಿಡೆಂಟ್, ಎಸ್. ಕೆ. ಸಿ. ಸಿ. ಸ್ಟೋರ್ಸ್. 4. ಶ್ರೀ ಎಲ್. ಸಿ. ಪಾಯ್ಸ್, ಎಮ್. ಎಲ್. ಎ. 5. ಡಾ। ಯು. ಪಿ. ಮಲ್ಯ, ಎಮ್. ಎಲ್. ಎ. 6. ಶ್ರೀ ಕೆ. ಬಿ. ಜಿನರಾಜ ಹೆಗ್ಡೆ 7. ಶ್ರೀ ಬಿ. ಎಸ್. ಕುಡ್ವ 8. ಶ್ರೀ ಕೆ. ಟಿ. ಆಳ್ವ 9. ಶ್ರೀ ಎಂ. ವೆಂಕಟೇಶ ಪೈ 10. ಶ್ರೀ ಎಸ್. ನಾಗರಾಜಯ್ಯ 11. ಶ್ರೀಮತಿ ಲೂಸಿ ಕ್ರೇಸ್ಟ 12. ಶ್ರೀ. ಶ್ರೀ ಎಫ್. ಎಸ್. ಬೆಪ್ಟಿಸ್ಟ್ 13. ಶ್ರೀ ಕೆ. ಸದಾನಂದ ಹೆಗ್ಡೆ 14. ಮಿ। ಅಬ್ದುಲ್ ಹುಸ್ಸೇನ್ 15. ಮಿ। ಕುಂಜಾಲಿಕುಟ್ಟಿ ಸಾಹೇಬ್ 16. ಶ್ರೀ ಕೆ. ರಂಗನಾಥ ಪ್ರಭು 17. ಶ್ರೀ ಕೆ. ಈಶ್ವರ, ಎಮ್. ಎಲ್. ಎ. ಮತ್ತು ಇತರರು.

ದ. ಕನ್ನಡ ಜಿಲ್ಲಾ ಕಲೆಕ್ಟರರು ಹೊಸದುರ್ಗ ವಿಭಾಗದ ಫಸಲಿ ೧೩೫೭ರ ಬೆಳೆಯನ್ನು ಕೆಳಗೆ ಕಾಣಿಸಿದ ತಾರೀಕುಗಳೊಳಗೆ ಯಸ್. ಕೆ. ಸಿ. ಸಿ. ಸ್ಟೋರಿಗಾಗಲೀ, ಅದರ ಶಾಖೆಗಳಿಗಾಗಲಿ ಒಪ್ಪಿಸಬೇಕೆಂದು ನಿರ್ದೇಶಿಸಿದ್ದಾರೆ.

ಭತ್ತದ ಜಾತಿ	—	ತಾರೀಕು.
ತಾನೂರ	—	೨೭-೯-೪೭.
ತಪ್ಪ	—	೩೦-೯-೪೭.
ಚೆನ್ನಾಲ್	—	೨೨-೧೦-೪೭.

ಮಂತ್ರಿಗಳಿಗೆ ಗೌರವ ಕೂಟ. ಮಂಗಳೂರು ಕೆನರಾ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ಸದಸ್ಯರು ತಮ್ಮ ಅಧ್ಯಕ್ಷರಾಗಿ ಈಗ ಆರೋಗ್ಯ ಮಂತ್ರಿಗಳಾಗಿರುವ ಶ್ರೀ ಎ. ಬಿ. ಶೆಟ್ಟರನ್ನು ಈ ದಿನ ಸಂಜೆ ಕರೆಸಿ ಗೌರವಿಸಿದರು. ಸಭಾರಂಭದಲ್ಲಿ ಶ್ರೀ ಕೆ. ಕೃಷ್ಣ ಶೆಟ್ಟರು ಮಂತ್ರಿಗಳನ್ನು ಸ್ವಾಗತಿಸುತ್ತಾ "ಇಂದಿನ ಸಮಾರಂಭದಲ್ಲಿ ಫಲಾಹಾರವಿರುವುದಾದರೆ ತಾನು ಖಂಡಿತವಾಗಿಯೂ ಬರಲಾರೆನೆಂದು ನಿಷ್ಠುರವಾಗಿ ಹೇಳಿದ್ದರಿಂದ ನಾವು ಕಿಂಚಿತ್ ಫಲಾಹಾರವೀಯುವುದನ್ನೂ ಬಿಡಬೇಕಾಯಿತು" ಎಂದು ತಿಳಿಸಿದ್ದಲ್ಲದೆ ಮಂತ್ರಿಗಳ ಈ ವರ್ತನೆಯನ್ನು ಶ್ಲಾಘಿಸಿದರು. ಆ ಬಳಿಕ ಮಾತನಾಡಿದ ಶ್ರೀಯುತರು ಎಂ. ಎನ್. ಕಿಣಿ ಮತ್ತು ಎಂ. ವೆಂಕಟ್ರಾಯ ಬಾಳಿಗರು ಮಂತ್ರಿಗಳ ಕಾರ್ಯದಕ್ಷತೆಯ ಕುರಿತು ಮಾತನಾಡಿ ಅವರಿಗೆ ಯಶವನ್ನು ಕೋರಿದರು. ಮಂತ್ರಿಗಳು ತಮ್ಮ ಮಾತಿನಲ್ಲಿ ಸರಕಾರದ ಮುಂದಿರುವ ಪ್ರಶ್ನೆಗಳನ್ನೂ, ತಮ್ಮ ಅನುಭವವನ್ನೂ ವಿವರಿಸುತ್ತಾ "ಎಲ್ಲರೂ ಮಂತ್ರಿಗಳಿಂದ ಹೆಚ್ಚು ಸಂಗತಿಗಳನ್ನೇ ಅಪೇಕ್ಷಿಸುತ್ತಾರೆ. ಆದರೆ ಮಂತ್ರಿಗಳಾದವರು ಏನನ್ನು ಮಾಡಲೂ ಅಶಕ್ತರಾಗಿರುತ್ತಾರೆ" ಎಂದು ಹೇಳಿದರು. ಅಧ್ಯಕ್ಷರ ಭಾಷಣ, ವಂದನೆಗಳೊಡನೆ ಈ ಗೌರವ ಕೂಟವು ಕೊನೆಗೊಂಡಿತು.

ಮಜೂರ ಸಭೆ—ಇಂದು ಸಂಜೆ ಇಲ್ಲಿನ ಕೇಂದ್ರ ಮೈದಾನಿನಲ್ಲಿ ಕಮ್ಯೂನಿಸ್ಟರ ಆಶ್ರಯದಲ್ಲಿರುವ ಬೀಡಿ ಮಜೂರರ, ಸೋಸಿಯಲಿಸ್ಟರ ಆಶ್ರಯದಲ್ಲಿರುವ ಬೀಡಿ ಮಜೂರರ ಮತ್ತು ಮುಸ್ಲಿಂ ಬೀಡಿ ಮಜೂರರ ಸಂಯುಕ್ತ ಸಭೆಯೊಂದು ಬಿ. ಕಾಸಿಮ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಇಲ್ಲಿನ ಬೀಡಿ ಮಜೂರರ ಮುಷ್ಕರದಿಂದಾಗಿ ಸರಕಾರವು ಕೊಟ್ಟಿರುವ ಎಡ್ಜುಡಿಕೇಶನಿನ ತೀರ್ಮಾನಂತೆ ಮಾಲಿಕರು ನಡೆಸಬೇಕೆಂದೂ, ಸರಕಾರವು ಅವರು ಹಾಗೆ ನಡೆಸುವಂತೆ ಮಾಡಬೇಕೆಂದೂ ಶ್ರೀಗಳಾದ ಬಿ. ವಿ. ಕಕ್ಕಿಲ್ಲಾಯ ಮತ್ತು ಕೆ. ಎಸ್. ಕಾರಂತರು ಮಾತನಾಡಿದರು. ಅಧ್ಯಕ್ಷರ ಭಾಷಣದ ಬಳಿಕ ಶ್ರೀ। ಕೇಶವ ಕಾಮತರು ವಂದನೆಯನ್ನರ್ಪಿಸಿದರು. ಇಂದಿನ ಸಭೆಯು ಕಾಂಗ್ರೆಸ್ ಕಮ್ಯೂನಿಸ್ಟ್ ಮತ್ತು ಮುಸ್ಲಿಂ ಲೀಗುಗಳ ಧ್ವಜಗಳಡಿಯಲ್ಲಿ ಜರಗಿತು.

ಗುರುಪುರ—ತುಳುವ ಮಹಾಸಭೆಯ ಕಾರ್ಯನಿರ್ವಾಹಕ ಸಮಿತಿಯ ಸಭೆ ಶ್ರೀ। ಬಿ. ಟಿ. ಭೈರರ ಅಧ್ಯಕ್ಷತೆಯಲ್ಲಿ ಜರಗಿತು. ಕೆಳಗಿನ ನಿರ್ಣಯಗಳು ಸಭೆಯಲ್ಲಿ ಮಂಜೂರಾದುವು. ನವಂಬರ ಕೊನೆಯ ವಾರದಲ್ಲಿ ತುಳುವ ಮಹಾಸಭೆಯನ್ನು ಕರೆಯುವುದು. ಕೇರಳಕ್ಕೆ ತುಳುನಾಡನ್ನು ಸೇರಿಸಬೇಕೆಂಬ ಶ್ರೀ। ಕೇಳಪ್ಪನವರ ವಾದದ ಖಂಡನೆ. ಭದ್ರಗಿರಿ ಹೊಳೆಯಿಂದ ಚಂದ್ರಗಿರಿ ಹೊಳೆ ವರೆಗಿನ ಪ್ರದೇಶವನ್ನು ತುಳುನಾಡು ಜಿಲ್ಲೆಯೆಂದು ಕರೆಯಬೇಕು. ಈ ಜಿಲ್ಲೆಯು ಕರ್ನಾಟಕ ಏಕೀಕರಣಕ್ಕೆ ಸೇರುವುದು. ಕನ್ನಡ ಭಾಷೆಯ ಪ್ರಾಬಲ್ಯವಿರುವ ಕುಂದಾಪುರ ತಾಲೂಕನ್ನು ಉತ್ತರ ಕನ್ನಡ ಜಿಲ್ಲೆಗೆ ಸೇರಿಸುವುದು.

ಅಕ್ಕಿ ಬಂದದ್ದು—ಹೊರಗಿನ ಜಿಲ್ಲೆಗಳಿಂದ ಮಂಗಳೂರಿಗೆ ಕಳೆದ ಸಪ್ಟೆಂಬರ್ ತಾ. ೫ರಿಂದ ತಾ. ೯ರ ವರೆಗೆ ಒಟ್ಟು ೨೧೦ ವಾಗೀನು ಅಕ್ಕಿ (ಎಂದರೆ ಸುಮಾರು ೬೦,೦೦೦ ಮುಡಿ) ಬಂದಿರುತ್ತದೆ. ಜಿಲ್ಲೆಯಲ್ಲಿ ದಿನ ಒಂದಕ್ಕೆ ಖರ್ಚಾಗುವ ಸರಾಸರಿ ೬೦೦೦ ಮುಡಿ. ಆಗೋಸ್ತು ೩೧ರವರೆಗೆ ವಾಗ್ದಾನ ಅಕ್ಕಿಯಲ್ಲಿ ಉಳಿದ ಅಂಶ ಸುಮಾರು ೩೦೦೦ ಟನ್ ಅಕ್ಕಿ ಇನ್ನು ಬಂದರೆ ಆಹಾರದ ತುಟ್ಟಿ ಕೆಲವು ಟ್ಟಿಗೆ ನಿವಾರಣೆಯಾದೀತು. ಸಪ್ಟೆಂಬರ್ ತಾ. ೪ರವರೆಗೆ ಸ್ಟಾಕಿನಲ್ಲಿದ್ದ ಅಕ್ಕಿ ೧೪೮೫ ಟನ್; ಬ್ಯಾಲೋ ೧೦೫೭ ಟನ್.

ಪರ್ಸನಲ್ ಅಸಿಸ್ಟೆಂಟರಾದರು—ನಮ್ಮ ಜಿಲ್ಲಾಬೋರ್ಡು ಕಾರ್ಯದರ್ಶಿಸ್ಥಾನದಲ್ಲಿದ್ದ ಶ್ರೀ ಯಂ. ಸುಂದರರಾವ್ ಅವರು ಜಿಲ್ಲಾ ಬೋರ್ಡಿನ ಸ್ಪೆಶಲ್ ಆಫೀಸರ್ (ಜಿಲ್ಲಾ ಕಲೆಕ್ಟರರು)ರಿಗೆ ಪರ್ಸನಲ್ ಅಸಿಸ್ಟೆಂಟರಾಗಿ ನೇಮಕವಾಗಿದ್ದಾರೆ. ಕಾರ್ಯದರ್ಶಿ ಸ್ಥಾನಕ್ಕೆ ಇನ್ನೊಬ್ಬರ ನೇಮಕವಾಗಲಿದೆ.

ಹೊಸ ಜಿಲ್ಲಾ ಜಡ್ಜರು—ಈ ಮೊದಲು ನೆಲ್ಲೂರಲ್ಲಿ ಸಬ್ ಜಡ್ಜರಾಗಿದ್ದ ಮಿ। ಎ. ಎಂ. ಆರ್. ದೇವಿಡರ್ ಎಂ. ಎ., ಬಿ. ಎಲ್. ಅವರು ನಮ್ಮ ಜಿಲ್ಲಾ ಮತ್ತು ಸೆಶ್ಶನ್ಸ್ ಜಡ್ಜರಾಗಿ ಇತ್ತರಲ್ಲೇ ಚಾರ್ಜ್ ವಹಿಸಿಕೊಂಡಿರುವರು.

ಮೊಕದ್ದಮೆಗಳ ತೀರ್ಮಾನ—ತೆಂಗಿನ ಎಣ್ಣೆಯನ್ನು ಕಂಟ್ರೋಲ್ ಮೀರಿ ಮಾರಿದುದಕ್ಕೆ ಗೋಳಿಕಟ್ಟೆ ಬಜಾರಿನ ಓರ್ವ ವ್ಯಾಪಾರಿಗಳಿಗೆ, ಸ। ಡಿ। ಮೆಜಿಸ್ಟ್ರೇಟರು ವಿಚಾರಣೆ ನಡೆಸಿ, ರೂ. ೧೨೦ ಜುಲ್ಮಾನೆ ವಿಧಿಸಿರುವರು. (ಅ) ತೆಂಗಿನ ಹಿಂಡಿಯನ್ನು ಕಂಟ್ರೋಲ್ ದರ ಮೀರಿ ವಿಕ್ರಯಿಸಿದ ಬಗೆ ಮಾರ್ಕೇಟ್ ರಸ್ತೆಯ ಓರ್ವ ವ್ಯಾಪಾರಿಗಳಿಗೆ ರೂ. ೨೦೦ ಜುಲ್ಮಾನೆಯಾಯಿತು.

ಮಂಗಳೂರು ಫಸ್ಟ್ ಕ್ಲಾಸ್ ಬೆಂಚ್ ಕೋರ್ಟಿನಲ್ಲಿ ಜುಗಾರಾಟದ ೩ ಮೊಕದ್ದಮೆಗಳು ತೀರ್ಮಾನವಾಗಿ ೪೬ ಮಂದಿ ಆರೋಪಿಗಳಿಗೆ ರೂ. ೧೦ರಿಂದ ರೂ. ೧೫ರ ತನಕ ಜುಲ್ಮಾನೆ ವಿಧಿಸಲಾಯಿತು.

ಸಟ್ಟಾ—ನ್ಯೂಯೋರ್ಕ ಅರಳೆಯ ಅಂಕೆಗಳ ಮೇಲೆ ಸಟ್ಟಾ ಆಡುವುದನ್ನು ಪ್ರತಿಬಂಧಿಸಲು ಮದರಾಸು ಸರಕಾರವು ಶಾಸನ ತಯಾರಿಸುವುದಾಗಿ ನಿರ್ಧರಿಸಿದೆ.

ಶ್ರೀ। ಆನಂದ ತಲ್ವಾರರ ನಿಧನ—ಮಂಗಳೂರಿನ ಪ್ರಸಿದ್ಧ ವಕೀಲರಲ್ಲೊಬ್ಬರೂ ಮಂಗಳೂರಿನ ಬಿಲ್ಲವ ಸಮಾಜದ ಪ್ರಸಿದ್ಧ ಮುಂದಾಳುಗಳಲ್ಲೊಬ್ಬರೂ ಆಗಿದ್ದ ಶ್ರೀ। ಆನಂದ ತಲ್ವಾರರು, ಕಳೆದೆರಡು ವರ್ಷಗಳಿಂದ ಅಸ್ವಸ್ಥರಾಗಿದ್ದು, ಇದೇ ತಾ. ೧೨ನೇ ಶುಕ್ರವಾರ ರಾತ್ರಿ ೮-೩೦ಕ್ಕೆ, ಮಂಗಳೂರಿನ ತಮ್ಮ ಮನೆಯಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುವೆವು. ಚಿಕಿತ್ಸೆಗಾಗಿ ಅವರು ಮಿರಜೆಗೆ ಹೋಗಿ, ಒಂದು ವರ್ಷ ನಿಂತು ಫಲಕಾರಿಯಾಗದೆ ಊರಿಗೆ ಮರಳಿದರು. ಶ್ರೀ। ತಲ್ವಾರರು ಕೆಲಕಾಲ ಮುನಿಸಿಪಲ್ ಕೌನ್ಸಿಲರರೂ, ಅನಂತರ ಅಸಿಸ್ಟೆಂಟ್ ಪಬ್ಲಿಕ್ ಪ್ರೊಸಿಕ್ಯೂಟರರೂ ಆಗಿದ್ದರು. ಒಳ್ಳೇ ಕ್ರಿಕೆಟ್ ಮತ್ತು ಟೆನ್ನಿಸ್ ಆಟಗಾರರಿದ್ದರು. "ರೋಯಲ್ ಏಸ್ಯಾಟಿಕ್ ಸೊಸೈಟಿ ಒಫ್ ಅಮೇರಿಕ" ಇದರ ಸ್ಥಳೀಯ ಸದಸ್ಯರಾಗಿದ್ದರು. ಸ್ವಸಮಾಜದ ಚಟುವಟಿಕೆಗಳಲ್ಲಿ ಪ್ರಾಮುಖ್ಯ ಪಾತ್ರ ವಹಿಸುತಿದ್ದರು. ಮೃತರ ಆತ್ಮಕ್ಕೆ ಶಾಂತಿಯನ್ನೂ ಕುಟುಂಬಕ್ಕೆ ಸಮಾಧಾನವನ್ನೂ ಭಗವಂತನು ದಯಪಾಲಿಸಲಿ.

NOTICE

Notice having been given of the loss of Policy No 21778 issued by this Company on the life of Mr. Kadekar Sadashiva Hegde of Kadekar (Udipi, S. K.) a duplicate Policy will be issued unless any objection is lodged with us within one month from the date hereof.

S. H. Thaker,
Managing Director.
The Warden Insurance Co Ltd.,
Sir Phirozshah Mehta Road,
Fort, BOMBAY.

ಜಿಲ್ಲೆಯ ಇಂದಿನ ಭೀಕರ ಬರಗಾಲ, ಅದರ ಮುಂದಿನ ನಿವಾರಣೆಯ ಉಪಾಯ

ಪ್ರಕೃತ ದಕ್ಷಿಣಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯೂ ಆಹಾರದ ಅಭಾವವು ತೋರಿದಿದೆ. ಚಿಕ್ಕವರಿಗೆ 8 ಔನ್ಸು, ದೊಡ್ಡವರಿಗೆ 16 ಔನ್ಸಿನ ಮೇರೆಗೆ ಇದ್ದ ರೇಶನ್ ಅಕ್ಕಿಯು ಕಡಿಮೆಯಾಗುತ್ತಾ ಬಂದು, 4 ಔನ್ಸು 8 ಔನ್ಸು ಪ್ರಮಾಣಕ್ಕೆ ಇಳಿದಿದೆ. ಈ ಅತ್ಯಲ್ಪ ಪ್ರಮಾಣದ ಪಡಿಯಕ್ಕಿಯಲ್ಲಿ ಜೀವಿಸುತ್ತಿರುವ ಜನಸಾಮಾನ್ಯವು ಸದಾ ಹಸಿವೆಯಿಂದ ಬಳಲುತ್ತಾ ಇದೆ. ಸಾಲದ್ದಕ್ಕೆ ಸುಮಾರು 1 ತಿಂಗಳ ಈಚೆಗಾಯ್ತು, ಈ ಅಲ್ಪಾಳತೆ ರೇಶನ್ ಪಡಿಯೂ ಪಾರಗಟ್ಟಲೆ ದೊರೆಯದೆ ಜನಸ್ತೋಮವು ಉಪವಾಸದಿಂದ ನರಳುತ್ತಿದ್ದು, ಜಿಲ್ಲೆಯ ಎಲ್ಲೆಡೆಗಳಲ್ಲಿಯೂ ಆರ್ತನಾದವೆದ್ದಿದೆ. ಯಾವ ತರದ ಆಹಾರವೂ ದೊರೆಯದ ಈ ಮಳೆಗಾಲದಲ್ಲಿ ಜನರು, ಸಿಕ್ಕಿದ ಹುಲ್ಲು ಸೊಪ್ಪುಗಳನ್ನು ತಿಂದು ಕೊಲೇರ ವಗೈರೆ ಸಾಂಕ್ರಾಮಿಕ ರೋಗಗಳಿಗೆ ಜಿಲ್ಲೆಯು ಬಲಿಯಾಗುವುದೋ ಎಂಬ ದಿಗಿಲನ್ನುಂಟುಮಾಡುತ್ತಿದೆ. ಸರ್ವಸಾಧಾರಣ ಹಳ್ಳಿಯ ಎಲ್ಲಾ ಬೇಸಾಯಗಾರರೂ ರೇಶನ್ ಕಾರ್ಡನ್ನು ಪಡೆದಿರುವುದರಿಂದ, ಜಿಲ್ಲೆಯಲ್ಲಿ ಅಕ್ಕಿ ಸಂಗ್ರಹಣ ಕಾರ್ಯವು ಎಷ್ಟು ಬಲವತ್ತರವಾಗಿ ನಡೆದಿದೆ ಎಂಬುದು ಪ್ರತ್ಯೇಕ ಹೇಳಬೇಕಾಗಿಲ್ಲ. ಇನ್ನು ಒಂದು ತಿಂಗಳ ವರೇಗೆ ಹೊರಗಿನ ಜಿಲ್ಲೆಗಳಿಂದ ಆಹಾರದ ಸರಬರಾಯಿಯು ಸರಿಯಾಗಿ ದೊರೆಯದಿದ್ದರೆ ನಮ್ಮ ಜಿಲ್ಲೆಯು ಬಂಗಾಳದ ಬರಗಾಲವನ್ನು ಹೋಲುವುದರಲ್ಲಿ ಸಂದೇಹವಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯು ಕೃಷಿಪ್ರಾಧಾನ್ಯವಾದ ಫಲವತ್ತಾದ[illegible]. ಹೀಗಿರಲು ಅನೇಕ ಶತಮಾನ ಸಹಸ್ರಮಾನಗಳಿಂದಲೂ, ಕಂಡು ಕೇಳದ ಈ ಭೀಕರಕ್ಷಾಮವು ನಮ್ಮ ಜಿಲ್ಲೆಯನ್ನು ಹೇಗೆ ಆವರಿಸಿತು! ಇಂಥಾ ದುಸ್ಥಿತಿಯನ್ನು ಮುಂದಕ್ಕೆ ಹೇಗೆ ತಪ್ಪಿಸಬಹುದು? ಎಂಬುದನ್ನು ತುಸು ಯೋಚಿಸಿದರೆ ಹಲವು ಆಲೋಚನೆಗಳು ನಮ್ಮ ಮುಂದೆ ತೋರುವವು. ಸರಕಾರವು ಇಂದಿನ ಅನುಭವ ಮೇಲಿಂದಾದರೂ, ಮುಂದಿನ ವರುಷದ ಮುಂಜಾಗ್ರತೆಯ ಯೋಜನೆಯನ್ನು ಜ್ಯಾರಿಗೆ ತರುವ ಬಗ್ಗೆ ಈ ಕೆಳಗಿನ ಸೂಚನೆಗಳನ್ನು ಬರೆಕೊಂಡಿದ್ದೇನೆ.

1 ಜಿಲ್ಲೆಯ ಅಕ್ಕಿ,ಬತ್ತದ ಸಂಗ್ರಹಣ ವಿತರಣ ಕಾರ್ಯವನ್ನು ದಕ್ಷಿಣ ಕನ್ನಡ ಜಿಲ್ಲಾ ಸೆಂಟ್ರಲ್ ಸ್ಟೋರಿಗೆ ಒಪ್ಪಿಸಿ ಕೊಟ್ಟದ್ದು ಸ್ತುತ್ಯವಾಗಿರಬಹುದು. ಆದರೆ ಸೆಂಟ್ರಲ್ ಸ್ಟೋರಿನವರು ಆರೇಳು ಗ್ರಾಮಗಳಿಗೊಂದು ತಮ್ಮ ಬ್ರೇಂಚು ಡಿಪೋವನ್ನು ತೆರೆದಿರುವುದರಿಂದಲೂ, ಸದ್ರಿ ಗ್ರಾಮಗಳಿಂದ ಸಹಸ್ರಗಟ್ಲೆ ಮುಡಿ ಅಕ್ಕಿಯಾ ಬತ್ತವು ಬೋನಸ್ಸಿನ ಯಾ ಕಂತಿನ ಅವಧಿಗಳಿಗೆ ಒಮ್ಮೆಯೇ ಬರುವುದರಿಂದಲೂ, 3-4ದಿವ್ಸಗಳವರೇಗೆ ತಮ್ಮ ಮಾಲನ್ನು ಡಿಪೊ ಏಜಂಟರಿಗೆ ಅಳತೆ ಮಾಡಿಸಿ ಕೊಡುವರೇ ಬಿಡುವಿಲ್ಲದೆ ಬೇಸಾಯಗಾರರು ಪಡುವ ಕಷ್ಟನಷ್ಟಗಳು ಕರುಣಾಜನಕವಾಗಿದೆ, ಈ ಸಂಗ್ಗಾಟದಲ್ಲಿ ಹಲವು ತರದ ವಂಚನೆ ಅನ್ಯಾಯಗಳೂ, ಲಂಚಗುಳಿತನವೂ ಉಂಟಾಗುವುದು ಸ್ವಾಭಾವಿಕವಾಗಿದೆ ಈ ರೀತಿ ಸಾವಿರಾರು ಮುಡಿ ಹಸಿ ಬತ್ತವನ್ನು ಸಂಗ್ರಹಿಸಿದಲಿಕ್ಕೆ, ಒಂದೇ ಕಡೆಯಲ್ಲಿ, ಯೇಕಕಾಲದಲ್ಲಿ, ಸಾಕಷ್ಟು ವಿಶಾಲವಾದ ಗೋಡೌನುಗಳು ದೊರೆಯುವುದು ದುರ್ಲಭವಾದ್ದರಿಂದ ಸಿಕ್ಕಾಬಟ್ಟೆ ರಾಶಿ ಹಾಕಬೇಕಾಗಿ ಬಂದು, ಇಲಿ ಹೆಗ್ಗಣ ಮತ್ತು ಜನರ ಕಳ್ಳಾಟಿಕೆಗಳಿಗೆ ಆಸ್ಪದವಾಗುವುದಲ್ಲದೆ, ಹೀಗೆ ಸಂಗ್ರಹಿಸಲ್ಪಟ್ಟ ಹಸಿಬತ್ತ, ವ. ಅಕ್ಕಿಯು ಕೆಲವು ಅಂಶ ಸ್ವಲ್ಪ ದಿನಗಳಲ್ಲೇ ಒಂಡಿಯಂತೆ ಕೊಳೆತು ಹೋಗಿ ನಷ್ಟವು ಸೇಕಡ 25ರಷ್ಟಾಗಲೂ ಬಹುದು. ಅದ್ದರಿಂದ ಹೊಸ ಅಕ್ಕಿ ಸಂಗ್ರಹಿಸುವ ಮೊದಲು, ಅನುಕೂಲವಿದ್ದ ಸ್ಥಳಗಳಲ್ಲಿ ಗ್ರಾಮಕ್ಕೊಂದರಂತೆ ಬ್ರಾಂಚು ಡಿಪೋವನ್ನು ತೆರೆಯುವ ಏರ್ಪಾಡುಮಾಡಿ, ಈ ತರದ ಅಂಧ ಕಾರ್ಬಾರಿನ ಅಪಾರ ನಷ್ಟವನ್ನು ಮುಂದಕ್ಕಾದರೂ ತಪ್ಪಿಸಬೇಕು.

2 ಬತ್ತವನ್ನು ಅಕ್ಕಿಮಾಡಿಸುವರೇ ದೂರದ ಮಿಲ್ಲುಗಳಿಗೆ ಸಾಗಿಸುವುದರಿಂದ ಸಾಗಣೆ ಮಜೂರಿಯೂ ಹಲವು ವಿಧದಲ್ಲಿ ಬತ್ತದ ನಷ್ಟವೂ ಹೆಚ್ಚುವುದಲ್ಲದೆ ಹಳ್ಳಿಯವರ ಬತ್ತಕುಟ್ಟುವ ಕೈಗಾರಿಕೆಯು ಜೀವನೋಪಾಯವನ್ನೂ ಜಾನುವಾರುಗಳಿಗೆ ಅಗತ್ಯವುಳ್ಳ ತೌಡು ಹೊಟ್ಟು, ವಗೈರೆಯನ್ನೂ ತಪ್ಪಿಸಿದಂತಾಗಿಯದೆ. ಅದಕಾರಣ ಬೇಸಾಯಗಾರರಿಂದ ಹಸಿ ಬತ್ತವನ್ನು ಶೇಖರಿಸುವ ಬದಲಿಗೆ ತಕ್ಕ ವ್ಯಾಪ್ತಿಯೊಳಗೆ ಅಗತ್ಯವುಳ್ಳಷ್ಟು ಅಕ್ಕಿಯ ರೂಪದಲ್ಲಿಯೇ ಸಂಗ್ರಹಣದ ಏರ್ಪಾಡು ಮಾಡಬೇಕು.

3 ಅಕ್ಕಿಯು ಸಂಗ್ರಹನನ್ನು ಒಂದು ಡಿಪೋವಿಂದ ಮತ್ತೊಂದು ಡಿಪೋವಿಗೂ, ಒಂದು ತಾಲೂಕಿನಿಂದ ಮತ್ತೊಂದು ತಾಲೂಕಿಗೂ, ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೂ, ಸಿಕ್ಕಾಬಟ್ಟೆ ಆಮದುರಫ್ತು ಮಾಡಲ್ಪಡುತ್ತಿದ್ದು ಅಕ್ಕಿ ಮುಡಿಗಳು ಹಲವು ಕೈಗಳಿಂದ ಕೈಗಳಿಗೆ ಸಂಚರಿಸುತ್ತಾ ಕೊನೆಗೆ ರೇಶನ್ ಅಂಗಡಿಗಳನ್ನು ಸೇರುವಾಗ್ಯೆ ಅಕ್ಕಿ ಸೇರಿನ ಬೆಲೆಯು ಕಂಡಾಬಟ್ಟೆ ಏರುವುದಲ್ಲದೆ, ಪ್ರತಿ ಮುಡಿಯಲ್ಲಿಯೂ ಹಲವು ಸೇರು ಅಕ್ಕಿ ಕಡಿಮೆಬರುವುದು ತಪ್ಪಲ್ಲ. ಈ ತರದ ಅನಾವಶ್ಯಕ ನಷ್ಟವನ್ನುಂಟುಮಾಡುವ ಏರ್ಪಾಡನ್ನು ತಪ್ಪಿಸುವುದಕ್ಕಾಗಿ ಹಳ್ಳಿ ಡಿಪೋಗಳಲ್ಲಿ ಸಂಗ್ರಹಿಸಲ್ಪಟ್ಟ ಅಕ್ಕಿಯಲ್ಲಿ ಆ ಹಳ್ಳಿಗ ಬೇಕಾದ ರೇಶನ್ ಅಕ್ಕಿಯನ್ನು ಸಾಧ್ಯವಾದ ಮಟ್ಟಿಗೆ ಅಲ್ಲೇ ಇರಗೊಳಿಸಲ್ಪಟ್ಟು ಮಿಗಿತೆ ಅಕ್ಕಿಯನ್ನು ಮಾತ್ರ ಅಗತ್ಯವುಳ್ಳ ಡಿಪೋಗಳಿಗೆ ಒಯ್ಯುವ ಏರ್ಪಾಡು ಮಾಡಬೇಕು.

4 ಅಕ್ಕಿಯ ಬೆಲೆಯು ಯುದ್ಧಪೂರ್ವದಷ್ಟೇ, ಯಾ ಸ್ವಲ್ಪಾಂತರ ಮಾತ್ರ ಏರಿರುವಾಗ್ಯೆ ಬೆಲ್ಲ, ಗೆಣಸು, ಮತ್ತು ಹುರುಳಿ, ಉದ್ದು, ಹೆಸರು ವಗೈರೆ ಧಾನ್ಯಗಳಿಗೆ ಒಂದಿನ ಬೆಲೆಯ 5ರಿಂದ 10 ಪಾಲಿನ ವರೇಗೆ ಏರಿರುತ್ತದೆ. ಈ ದೆಸೆಯಿಂದ ಬತ್ತ ಸಾಗುವಳಿಯ ಗದ್ದೆಗಳಲ್ಲಿ ಶುಲಭದಲ್ಲಿ ಹೆಚ್ಚು ಉತ್ಪತ್ತಿ ದೊರೆಯುವ ಕಬ್ಬು, ಗೆಣಸು ಮತ್ತು ಹುರುಳಿ, ಉದ್ದು, ಹೆಸರು ವಗೈರೆ ಧಾನ್ಯಗಳು ಬೆಳೆಸಲ್ಪಡುತ್ತಿದ್ದು ಬತ್ತದ ಸಾಗುವಳಿಯು ವರುಷದಿಂದ ವರುಷಕ್ಕೆ ಕಡಿಮೆಯಾಗುತ್ತಾ ಬರುತ್ತದೆ. ಇದನ್ನು ಕೂಡಲೇ ಪ್ರತಿಬಂಧಿಸದಿದ್ದರೆ ಇನ್ನು ಕೆಲವೇ ವರುಷದಲ್ಲಿ ನಮ್ಮ ಜಿಲ್ಲೆಯ ಬತ್ತದ ಸಾಗುವಳಿಯು ನಾಮಾವಶೇಷವಾಗುವುದು. ಅದಪ್ರಯುಕ್ತ ಅಕ್ಕಿಯ ಬೆಲೆಯನ್ನು ಸ್ವಲ್ಪಮಟ್ಟಿಗೆ ಏರಿಸುವುದಲ್ಲದೆ ಮೇಲ್ಕಂಡ ಧಾನ್ಯಗಳ ಬೆಲೆಯನ್ನು ಅಕ್ಕಿಯ ಬೆಲೆಗಿಂತ ಸ್ವಲ್ಪಾಂತರ ತಗ್ಗಿಸಿ, ಸದ್ರಿ ಧಾನ್ಯಗಳನ್ನು ಕೂಡಾ ಅಕ್ಕಿಯಂತೆ ರಿಕ್ವಿಜಿಶನ್ ಮಾಡಿ ಸಂಗ್ರಹಿಸಬೇಕು.

5 ಅಧಿಕಾರಿಗಳ ಅಲಕ್ಷ್ಯದಿಂದ ಕಳೆದ ಬೇಸಿಗೆಯಲ್ಲಿ, ಮದುವೆ, ಸಮಾರಾಧನೆ ವಗೈರೆ ಸಾವಿರಾರು ಜನರ ಭೂರಿ ಭೋಜನಗಳನ್ನು ಜನರು ನಿಶ್ಚಿಂತರಾಗಿ ಜರಗಿಸಿದಕಾರಣ ನಮ್ಮ ಜಿಲ್ಲೆಯಲ್ಲಿ ತುಂಬಾ ಅಕ್ಕಿಯ ಅಪವ್ಯಯವಾಯಿತು. ಜಿಲ್ಲೆಯು ಆಹಾರದ ಮಟ್ಟಿಗೆ ಸ್ವಾವಲಂಬಿಯಾಗುವವರೇಗೆ ಅನಾವಶ್ಯಕವಾದ ಇಂಥಾಭೂರಿಭೋಜನದ ದುಂದುಗಾರಿಕೆಯನ್ನು ತಡೆಗಟ್ಟಬೇಕು.

6 ಬೇಸಾಯಕ್ಕೆ ಬೇಕಾದ ಗೊಬ್ಬರದ ಉಪ್ಪು, ಹಿಂಡಿ ಸಕಾಲಕ್ಕೆ ಸಾಕಷ್ಟು ಸಿಕ್ಕದಿರುವುದರಿಂದಲೂ ವ್ಯವಸಾಯ ಇಲಾಖಾ ಆಫೀಸು ಬಹಳ ದೂರವಿದ್ದ ಗ್ರಾಮಸ್ಥರಿಗೆ ಸದ್ರಿ ಗೊಬ್ಬರವನ್ನು ವಿಶೇಷ ಖರ್ಚುವೆಚ್ಚಗಳಿಂದ ಸಾಗಿಸುವರೇ ಸಾಧ್ಯವಿಲ್ಲದ್ದರಿಂದಲೂ ಬೇಸಾಯಕ್ಕೆ ಸಂಬಂಧಪಟ್ಟ ಉಪಕರಣ ಮತ್ತು ಗೊಬ್ಬರವು ಹಳ್ಳಿ ಸ್ಟೋರುಗಳ ಮುಖಾಂತರ ರಹಿತರಿಗೆ ಧಾರಾಳವಾಗಿ ದೊರೆಯುವಂತೆ ಮಾಡಿಸಿ, ಬತ್ತದ ಉತ್ಪತ್ತಿಯನ್ನು ವೃದ್ಧಿಸುವ ಏರ್ಪಾಡು ಕೈಕೊಳ್ಳಬೇಕು.

7 ಮದ್ರಾಸು ಸರಕಾರವು ಮೂಲೆಯಲ್ಲಿ ಬಿದ್ದಿರುವ ದಕ್ಷಿಣಕನ್ನಡ ಜಿಲ್ಲೆಗೆ ನೀರಾವರಿ ಸಂಬಂಧವಾಗಿ ಈ ವರೆಗೆ ಹೆಚ್ಚಿನ ಲಕ್ಷ್ಯಕೊಡದ್ದರಿಂದ, ಸ್ವರಾಜ್ಯ ಸರಕಾರವು ಬರಗಾಲ ಪೀಡಿತವಾದ ಈ ಜಿಲ್ಲೆಯಲ್ಲಿ ಮುಂದಕ್ಕಾದರೂ ಹೇರಳ ಬತ್ತ ಬೆಳೆಯುವಂತೆ ಕೆರೆ, ಕಾಲುವೆ ವಗೈರೆ ನೀರಾವರಿ ಕೆಲಸಗಳಿಗೆ ಧಾರಾಳ ಸಹಾಯ ಕೊಟ್ಟು, ಈ ಜಿಲ್ಲೆಯನ್ನು ಆಹಾರದ ಮಟ್ಟಿಗೆ ಉಳಿತಾಯದ ಜಿಲ್ಲೆಯಾಗಿ ಮಾರ್ಪಡಿಸಬೇಕು.

8 ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬತ್ತ [illegible]ತ್ಪಾದಕರೆಂದರೆ ಮುಖ್ಯವಾಗಿ ಚಾಲಗೇಣಿ [illegible]ಕ್ಕಲುಗಳು, ಇವರಿಗೆ ತಮ್ಮ ಹೆಚ್ಚಿನ ಕಾಯಕಷ್ಟದಿಂದಲೂ, ವಿಶೇಷ ಖರ್ಚಿನಿಂದಲೂ ಸಾಗುವಳಿ ಮಾಡಿ ಉತ್ಪತ್ತಿಯು ಹೆಚ್ಚಾದ[illegible] ಧನಿಗಳು ಗೇಣಿ ಏರಿಸುತ್ತಾರೆಂತಲೂ, ಇಲ್ಲ[illegible] ಆಸ್ತಿಯನ್ನು ತಮ್ಮಿಂದ ತಪ್ಪಿಸುತ್ತಾರೆಂತಲೂ, ಸದಾ ಭೀತಿಯಿರುವುದರಿಂದ ಸಾಗುವಳಿಯು ವರುಷ ಹೋದಂತೆ ಕೆಳಮೊಗವಾಗುತ್ತದೆಯೇ ವಿನಹಾ ಸುಧಾರಿಸಲ್ಪಡುವುದಿಲ್ಲ ಆದ್ದರಿಂದ ಆಹಾರ ಉತ್ಪಾದಕರಾದ ಈ ಶ್ರಮಜೀವಿಗಳಿಗೆ, ತಮ್ಮ ವಿಶೇಷ ಖರ್ಚಿನ ಮತ್ತು ಕಾಯಕಷ್ಟದ ಉತ್ಪತ್ತಿಯು ತಮಗೇ ದೊರೆಯುವುದೆಂಬ ನಂಬಿಗೆಯನ್ನೂ, ಸಾಗುವಳಿ ಭೂಮಿಯ ಸ್ಥಿರತ್ವವನ್ನೂ ಉಂಟುಮಾಡುವ-ವಕ್ಕಲು ಹಿತ ಮಸೂದೆಯನ್ನು-ಜ್ಯಾರಿ ಮಾಡಿದರೆ ಸ್ವಲ್ಪಾವಧಿಯಲ್ಲಿಯೇ ದಕ್ಷಿಣ ಕನ್ನಡ ಜಿಲ್ಲೆಯು ಆಹಾರ ಮಟ್ಟಿಗೆ ಅಕ್ಷಯಪಾತ್ರವಾಗುವುದು.

—ಕುರುಕಾಲು ಗಣಪಯ್ಯ ಶೆಟ್ಟಿ.
ಮೆಂಬರ್, ಉಡುಪಿ ತಾಲೂಕು ಕಮಿ[illegible]

ಬಾಲರು ಆರೋಗ್ಯಕಾಯರಾಗಲು
(ಪ್ರಭೂಸ್) ಬಾಲಾಮೃತ
ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನೆಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನೆಟ್ಟಗಾಗಲು ತಾಯಿ ತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ. ಮಾತ್ರ, ಹೊತ್ತು ಕಳೆದರೆ ಮತ್ತೆ ಬಾರದು.

'ಪ್ರಭೂಸ್'
ಬಾಲಾಮೃತ

ಪ್ರಭೂಸ್ ಬಾಲಾಮೃತದ ಖಾತ್ರಿಗೆ ಸಾಕ್ಷಿ ಬೇಕೆ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಜಾಲು, ಪೊ. ಬ್ರಹ್ಮಾವರ, ದ.ಕ.
ಸ್ಟಾಕಿಸ್ಟರು:—
ನವಭಾರತ ಪುಸ್ತಕ ಭಂಡಾರ, ಉಡುಪಿ.
L. N. Sharma, Mangalore.

Notice.

ಉಡುಪಿ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನ
ಕ್ರಮ ನಂಬ್ರ 137/4[illegible]

ತೋನ್ಸೆ ದೇವಣ ಶ್ಯಾನುಭಾಗ-ಮಂಗ[illegible]ರ ಶ್ಯಾನುಭಾಗರ ಮಗ-ವ್ಯಾಪಾರಸ್ಥ-ಉಡುಪಿ ಕಸ್ಬಾ—ವಾದಿ.

ಮತ್ತು

ಯಡ್ತಾಡಿ ಸಂಜೀವ ಹೋರ್ವ-ಬೆಮ್ಮ ಹೋರ್ವರ ಅಳಿಯ-ಉಡುಪಿ ತಾಲ[illegible] ಹೊಸಾಳ ಗ್ರಾಮದ ಬಾರಕೂರಲ್ಲಿರುವವರು—ಪ್ರತಿವಾದಿ.

ಸದ್ರಿ ಪ್ರತಿವಾದಿಗೆ—

ನೀವು ವಾದಿರ ಬಾಬ್ತು ಉಡುಪಿ ಕಸಬೆಯ[illegible]ರುತಿದ್ದ ಅಂಗಡಿಯಲ್ಲಿ ತಾ. 16-4-44ರಿಂ[illegible] 6-7-44ರ ವರೇಗೆ ಸದ್ರಿಯವರ ಕ್ರಮವಾಗಿಟ್ಟ ಲೆಖ್ಖದ ಬೂಕುಗಳಲ್ಲಿ ತೋರುವಂ[illegible] ನಡ್ಸಿದ [illegible] ಬಾಬ್ತು ತಾ. 6-7-44ರಲ್ಲು ನಿಮ್ಮ [illegible] ನಂತ ಅಸಲು ರೂ 423-3-10 ನ ತದನಂತರದ ಸಾ. ಸೆ. 6¼ರ ಬಡ್ಡಿ ವ ವಕೀಲ ನೋಟ್ಸು ಖರ್ಚ ಕೂಡ ರೂ 497-4-0 ವ ಕೋರ್ಟ ಖರ್ಚ ಬರಮಾಡಿಕೊಳ್ಳುವರೆ ವಾದಿಯು ನಿಮ್ಮ ಮೇಲೆ ದಾಕ್ಲು ಮಾಡಿದ ಮೇಲ್ಕಂಡ ದಾವೆಯು ಸದ್ರಿ ಕೋರ್ಟಿನಲ್ಲಿ ತಾ. 29-9-47ಕ್ಕೆ ಅಖೈರು ತನ್ಕಿಗೆ ಇಟ್ಟಿರುತ್ತದೆಯಾದ್ದರಿಂದ ನೀವು ಸದ್ರಿ ದಿವ್ಸ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಬೇಕಾಗಿಯೂ, ತಪ್ಪಿದ[illegible] ನಿಮ್ಮನ್ನು ಶಿಸ್ತು ಮಾಡಿ ತೀರ್ಮಾನ ಮಾಡಲಾದೀತು ಎಂತ ಈ ಮೂಲಕ ತಿಳಿಸಲಾಗುತ್ತದೆ.

K. Vittal Nayak
Pleader for Plaintiff
Udipi 9-9-47.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

(೨ನೇ ಪುಟದಿಂದ.)

ಹೊರತು, ತಲೆಯಲ್ಲಿ ಆ ಪಿಸ್ತೂಲೆಲ್ಲಿ ವರೆಗೆ ಹಾರೀತೆಂಬುದನ್ನು ತಿಳಿಯುವಷ್ಟಾದರೂ ಮೆದುಳು ಆ ಪುಂಡರಿಗಿರುತಿದ್ದರೆ-ಖಾನ್ ಸಹೋದರರೊಂದಿಗೇನೇ ಇವರ ಸಮಾಧಿಯು ಆ ಗಡಿಯಲ್ಲಾಗುತಿತ್ತು. ನೆಹರುಗಳು ಅಪಾಯದೊಡನಾಡುವದೆಂದರೆ ಅಷ್ಟು!

೦೦ ೦೦ ೦೦

ಬಿಹಾರಿನಲ್ಲಿ ಭಯಂಕರ ರೀತಿಯ ಜಾತೀಯ ಗಲಭೆ ನಡೆಯುತಿತ್ತು. ದಾವಾಗ್ನಿ ಹಬ್ಬಿಕೊಂಡಂತಾಗಿತ್ತು. ಅದನ್ನು ನಂದಿಸುವ ಅಗ್ನಿಶಾಮಕ ದಳ ತಯಾರಿಗಾಗಿ ಪಂಡಿತ ನೆಹರು ಮಿಕ್ಕವರಂತೆ ದೂರ ನಿಲ್ಲಲಿಲ್ಲ. ನಡುವೇ ನುಗ್ಗಿಹೋದರು. ಕೊಳ್ಳಿ, ಕೊಡಲಿ ಹಿಡಿದುಕೊಂಡು ಮುಂದೊತ್ತುವ ಮೃತ್ಯುಸೇನೆಗೆದೆಕೊಟ್ಟು ನಿಂತು 'ನನ್ನ ಹೆಣವನ್ನು ತುಳಿದುಕೊಂಡು ನೀವು ಮುಂದೆ ಹೋಗಬೇಕು' ಎಂಬರು. ನೆತ್ತರನ್ನು ಕಂಡು ಹಿಗ್ಗುವ ಆ ರುದ್ರಗಣಗಳು ಕೂಡಾ ನೆಹರುವನ್ನು ಕಂಡೊಡನೆ ತಗ್ಗಿದವು. ಗುಂಡು, ಫಿರಂಗಿ, ಬೋಂಬುಗಳ ಘರ್ಜನೆಗೂ ಅಳುಕದಷ್ಟು ಆ ಸಂದರ್ಭದಲ್ಲಿ ಕಠೋರಗೊಂಡಿದ್ದ ಹೃದಯಗಳೂ ಈ ಮನುಷ್ಯನ ಬಾಯಿ ಘರ್ಜನೆಯಿಂದ ಕಂಪಿಸಿ, ಕರಗಿ ಕೂಡಲೇ ಮೊದಲಿನ ಆಕಾರಕ್ಕೆ ಬಂದುವು. ಹೀಗೆ ದಂಡಿಸಿ ಕಲಿಸಬಲ್ಲ ಗುರು ಇವರೊಬ್ಬರೇ—ನೆಹರು.

೦೦ ೦೦ ೦೦

ಮೊನ್ನೆ ಪಶ್ಚಿಮ ಪಂಜಾಬಿನಲ್ಲಿ—'ಪಂಚನದಿಗಳನಾಡು' ಆಗಿದ್ದುದೀಗ 'ಪಂಚಾಂಪಾಡು' ಆಗಿರುವ ಅಲ್ಲಿ-ಒಂದೂವರೆ ಲಕ್ಷದಷ್ಟು ಮಂದಿ ಸತ್ತು, ಹದಿನೈದು ಲಕ್ಷ ಜನರೋಡಿಬಂದಿರುವ ಆ ನರಕದಲ್ಲಿ-ತಿರುಗಾಡುವಾಗಲಾದರೂ, ತಾನೂ 'ಹಿಂದುವಾಗಿ ಹುಟ್ಟಿರುವ ಓರ್ವ ಮನುಷ್ಯ' ಎಂಬುದನ್ನವರು ನೆನಸಿದುದಿದೆಯೆ? ತನ್ನ ಕಣ್ಣೆದಿರಲ್ಲೇ ಮನೆಗಳು ಸುಡುತ್ತಿವೆ; ಹೆಣಗಳು ಬಿದ್ದಿವೆ; ಮನುಷ್ಯನೇ ಮನುಷ್ಯನನ್ನು ಹರಿದು ತಿನ್ನುವುದನ್ನು ಕಾಣುತ್ತಿದ್ದಾರೆ. ಆ ನರಭಕ್ಷಕರೇ ಬಂದು ತನ್ನ ಕಾರನ್ನು ತಡೆದು ನಿಲ್ಲಿಸಿದಾಗಲೊಮ್ಮೆ ಎಂಥವನ ಹೃದಯವಾದರೂ ಪಾತಾಳಕ್ಕೆ ಜಗ್ಗದೇ? ಆದರೆ ಆ ತನಕವೂ ದಂಗುಬಡೆದಂತಿದ್ದ ನೆಹರುಗಳ ಹೃದಯವು ಕುದಿದುಕ್ಕಿದುದು ಈ ಸಂದರ್ಭದಲ್ಲೇ. "ಏನು,ಯನ ನಿಲ್ಲಿಸಿರೆಂದು ನನ್ನನ್ನು ಕೇಳಕೊಳ್ಳುವಿರಾ? ನಿಮ್ಮಲ್ಲಿ ಮನಸ್ಸಾಕ್ಷಿಯೆಂಬುದಿದೆಯೆ? ಯಾರು ಯುದ್ಧ ಹೂಡಿದವರು? ಈ ಹೆಣಗಳು ಮತ್ತೀ ಸುಟ್ಟಮನೆಗಳು ಯಾರನ್ನು ತೋರಿಸುತ್ತಿವೆ?" ಎಂದು ಆ ಮುಸ್ಲಿಂಪುಂಡರಿದಿರಲ್ಲಿ ಘರ್ಜಿಸಬೇಕಾದರೆ, ನೆಹರುವಿಗೆ ಮರುಕ್ಷಣದ ಯೋಚನೆ ಇದೆ ಎನ್ನಬಹುದೇ?

೦೦ ೦೦ ೦೦

ದಿಲ್ಲಿಯ ಈ ಬಾರಿಯ ಗಲಭೆಯಲ್ಲಂತೂ ಇವರು ಪ್ರಧಾನ ಮಂತ್ರಿ ನೆಹರುವಾಗಿ ಇರಲೇ ಇಲ್ಲ; ಕೊಲೆಗಡುಕರ ಪಾಲಿನ ಯಮನಾಗಿ ಸುಳಿದಾಡಿದರು. ಪುಂಡರ ಮೈಮೇಲೆ ಕೈಹಾಕಿ ಕತ್ತಿ ಕಸಕೊಳ್ಳುವದು—ದೂಡುವುದು—ಹಿಡಿಯುವುದು—ಓಡಿಸುವುದು, ಎಲ್ಲವೂ ಸ್ವತಃ ಇವರೇ. ಇಡೀ ಪಂಜಾಬು ಮತ್ತು ಧಿಲ್ಲಿಯಲ್ಲಿ ಹಿಂದೂ ಮುಸ್ಲಿಮರೊಳಗೀಗ ಪರಸ್ಪರ ದ್ವೇಷವೆಷ್ಟಿದೆಯೆಂದರೆ ತಿವಿಯುವದಕ್ಕಲ್ಲದೆ ಬೇರಾವ ಸಂದರ್ಭದಲ್ಲೂ ಒಬ್ಬರ ಮುಖವನ್ನೊಬ್ಬರು ನೋಡುವದಕ್ಕೂ ಹೇಸುತ್ತಾರೆ. ಇಂತಹ ದ್ವೇಷ ತೀರಿಸಿಕೊಳ್ಳುವದಕ್ಕಾಗಿ ಎತ್ತಿದ ಖಡ್ಗಕ್ಕೂ ನೆಹರು ಅಡ್ಡಬರುವುದೆಂದರೆ ಅಪಾಯವನ್ನು ಆಮಂತ್ರಿಸುವುದಲ್ಲವೆ? ಆದರೆ ಅಪಾಯ ಬರಬೇಕಲ್ಲ! ಈ ಮನುಷ್ಯನಿದ್ದ ಕಡೆಗೆ ಸುಳಿಯಲು ಅದು ಕೂಡಾ ಹೆದರುತ್ತದೆಂದ ಮೇಲೆ ಪುಂಡರು ನಿಂತಾರೆ? ನೆಹರು ಹೋದಲ್ಲೆಲ್ಲಾ ಪುಂಡರು ಪಲಾಯನ!ಗಲಭೆ ಅಂತರ್ಧಾನ! ಧಿಲ್ಲಿಯಲ್ಲಿ ಹಲವು ಪ್ರಾಣಗಳು, ಒಂದು ಬಜಾರು, ಇಬ್ಬರು ಎಳೆ ಯುವತಿಯರು ನೆಹರುಗಳಿಂದ-ನೆಹರೂ ಮಂತ್ರಿತ್ವದಿಂದಲ್ಲ, ನೆಹರೂ ಮಾನುಷತ್ವದಿಂದಲೇ-ರಕ್ಷಿಸಲ್ಪಟ್ಟುವು.

೦೦ ೦೦ ೦೦

ಎಲ್ಲಿ ಅಪಾಯವೋ, ಎಲ್ಲಿ ಅನ್ಯಾಯವೋ, ಎಲ್ಲಿ ಅಸಡ್ಡೆಯೋ, ಅಲ್ಲೆಲ್ಲಾ ಕಾಲ, ಸಂದರ್ಭ, ಸ್ಥಾನ, ಮಾನವಾವುದನ್ನೂ ಗಣಿಸದೆ ಪಂಡಿತ ಜವಾಹಿರಲಾಲ್ ಹಾಜರು! ಕತ್ತಿಯ ಅಡಿಗೂ ಹೋಗಬಲ್ಲರು; ಕಾಳಿನ ಅಂಗಡಿಗೂ ನುಗ್ಗಬಲ್ಲರು. ಈಗ ನೆಹರುಗಳ ಪಾಲಿಗೆ ರಾತ್ರಿ ಹಗಲು ಒಂದೇ; ಸರಕಾರೀ ಭವನ, ಮಂತ್ರಿ ಮಂಡಲದ ಸಭೆಗಳು ಹೇಗೋ, ಕೊಳಕು ಬೀದಿ, ಪುಂಡರ ಗುಂಪುಗಳೂ ಹಾಗೆಯೇ. ಬಿಡುವಿಲ್ಲದ ದೆಸೆಯಿಂದ ಆಹಾರ ಬಿಟ್ಟುದಿದೆ; ಆಹಾರ ಧಾನ್ಯ ಬೇಕಾದಾಗ ದೊರೆಯದೆ ಊಟ ಹಿಂದು ಮುಂದಾದುದೂ ಇದೆ. ಇದೇ ತಾ. ೪ರಲ್ಲೊಮ್ಮೆ ಹೀಗಾಯಿತು. ದಂಗೇ ಪೀಡಿತ ನವದಿಲ್ಲಿಯಲ್ಲೀಗ ಯಾರಿಗೂ ಸರಿಯಾಗಿ ರೇಶನ್ ಧಾನ್ಯ ದೊರೆಯುತ್ತಿಲ್ಲ. ಭಾರತದ ಪ್ರಧಾನಮಂತ್ರಿ ನೆಹರುಗಳು ಕೂಡಾ ಇದಕ್ಕಪವಾದವಲ್ಲ. ಪಂಡಿತ ನೆಹರುಗಳ ಹೆಸರಿಗೇ ಕಾರ್ಡು ಧಿಲ್ಲಿಯ ಹೇಸ್ಟಿಂಗ್ಸ್ ರಸ್ತೆಯ ಒಂದು ರೇಷನ್ ಅಂಗಡಿಗಿದೆ. ಇದೇ ತಾ. ೪ರಲ್ಲಿ ಅವರ ಸೇವಕ ಕಾರ್ಡು ಹಿಡಿದುಕೊಂಡು ಧಾನ್ಯತರಲು ಹೋಗಿದ್ದ; ಆತನೂ ಮಿಕ್ಕವರೊಂದಿಗೆ 'ಕ್ಯೂ'(ಅನುಕ್ರಮವಾಗಿ ಒಬ್ಬನಹಿಂದೊಬ್ಬ ನಿಲ್ಲುವ ಸಾಲು) ವಿನಲ್ಲಿ ನಿಂತುಕೊಂಡ. ಅಂಗಡಿಯವ ಮುಂದಿನವರಿಗೆಲ್ಲಾ ಕ್ರಮ ಪ್ರಕಾರ ಕೊಟ್ಟು ನೆಹರೂ ಕಾರ್ಡು ಬರುವ ಮೊದಲೇ ಧಾನ್ಯ ಕೊಡುವುದನ್ನು ನಿಲ್ಲಿಸಿದ; ಇನ್ನು ಸಂಗ್ರಹ ಮುಗಿಯಿತೆಂಬುದೇ ಅಂಗಡಿಯವನ ಮಾವ. ನೆಹರೂ ದೂತ ಬರಿಕೈಯಿಂದ ಮನೆಗೆ ಮರಳ ಬೇಕಾಯಿತು. ಆದರೆ ಕೂಡಲೇ ಆತ ಪ್ರಧಾನ ಮಂತ್ರಿಯನ್ನು ಕರೆದುಕೊಂಡು ಅಲ್ಲಿಗೆ ಮರಳಿ ಬಂದ. ಪಂಡಿತ ನೆಹರುಗಳು ಅಂಗಡಿಯವನನ್ನು ಗದರಿಸಿ,ಅವನಲ್ಲಿ ಸಂಗ್ರಹವೆಷ್ಟಿದೆಯೋ ಅವೆಲ್ಲವನ್ನೂ 'ಕ್ಯೂ'ವಿನಲ್ಲಿ ನಿಂತ ಕಾರ್ಡುದಾರರೆಲ್ಲರಿಗೂ ಕೊಡಲೇ ಬೇಕೆಂದರು. ಒಮ್ಮೆ ಮುಗಿಯಿತೆಂದು ಹೇಳಿದ್ದ ಅಂಗಡಿಯೊಳಗಿಂದ, ಆ ಮೇಲೆ ಅಲ್ಲಿ ಸಾಲುಹಿಡಿದಿದ್ದ ಎಲ್ಲಾ ಕಾರ್ಡುದಾರರಿಗೂ ಹಂಚುವಷ್ಟು ಧಾನ್ಯ ಹೊರಗೆ ಬಂತು. ಧಿಲ್ಲಿಯಲ್ಲೀಗ ವಂಚನೆ ಮಾಡುವವರಿಗೆ 'ದೇವರು ನೋಡಿಯಾನು.' ಎಂಬ ಹೆದರಿಕೆಗಿಂತ ಹೆಚ್ಚಾಗಿ 'ನೆಹರು ನೋಡಿಯಾನು' ಎಂಬ ಭೀತಿಯೇ ಇದೆ!

೦೦ ೦೦ ೦೦

ಅಂತೂ ಮೊದಲೇ ಹಿಡಿತದ ಚಂಡಿ ನಂತಿದ್ದ ಪಂಡಿತ ಜವಾಹಿರಲಾಲರ ಸ್ವಭಾವವು ಇಂದಿನ ಜಾತೀಯ ಗಲಭೆಗಳ ದೆಸೆಯಿಂದ ಪ್ರತ್ಯಕ್ಷ 'ಸಿಡಿಲ ಮರಿ'ಯೇ ಆಗಿದೆ. ಪ್ರಪಂಚದ ಯಾವುದಾದರೊಂದು ಮೂಲೆಯಲ್ಲಿ ಅತ್ಯಾಚಾರ ನಡೆದರೆ, ಅದಕ್ಕಾಗಿ ಪಂಡಿತನೆಹರುಗಳಷ್ಟು ಕುದಿಯುವ ಮನುಷ್ಯ ಇಡೀ ಲೋಕದಲ್ಲೇ ಬೇರಿಲ್ಲವೆನ್ನಬಹುದು. ಅಂತಹ ಪಂಡಿತಜೀಯ ಕಾಲ ಬುಡದಲ್ಲೇ, ಕಣ್ಣೆದಿರಲ್ಲೇ ಲೋಕದಲ್ಲಿ ಬೇರೆಲ್ಲಿಯೂ ನಡೆಯದಂತಹ ಅತ್ಯಾಚಾರ ನಡೆದಿರುವಾಗ ಜವಾಹಿರಲಾಲರು ಇಂದು ಹೇಗಿದ್ದಾರೆಂಬುದನ್ನು ಊಹಿಸಬಹುದು. ಆಹಾರ ಧಾನ್ಯಕ್ಕಾಗಿ ಸ್ವತಃ ರೇಶನ್ ಅಂಗಡಿ ನೋಡಬೇಕಾಗಿ ಬಂದ ತಾ. ೪ನೇ ರಾತ್ರಿಯಲ್ಲೇ ಅವರು ರಾಷ್ಟ್ರಕ್ಕೆಲ್ಲ ಆಕಾಶವಾಣಿ ಸಂದೇಶದಲ್ಲಿ—ಬರೆದು ತರಲು ಸಮಯವಿಲ್ಲದ ದೆಸೆಯಿಂದ ನಿಂತಲ್ಲೇ ಹೃದಯ ಬಿಚ್ಚಿ ಆಡಿದ ಮಾತುಗಳಲ್ಲಿ—ಪಂಡಿತಜೀ ಹೇಳಿದ್ದಾರೆ:-"ಪಂಜಾಬು ಮತ್ತು ಧಿಲ್ಲಿಯಲ್ಲಿದ್ದು ನಾನು ಕಣ್ಣಾರೆ ಕಂಡ ಮತ್ತು ಕಿವಿಯಾರೆ ಕೇಳಿದ್ದ ಸಂಗತಿಗಳಿಂದಾಗಿ ಕೆಲವು ದಿನಗಳಿಂದ ನನ್ನ ಮೆದುಳು ಭೀಕರತೆಗಳಿಂದಲೇ ತುಂಬಿಹೋಗಿದೆ. ನಾನು ಅಪಮಾನ್ಯ ಸಂಗತಿಗಳನ್ನು ಕೇಡು. ನಾನು ಸಾಕಷ್ಟು ಕ್ರೌರ್ಯಾದ್ಭುತ ನಿಶಯಗಳನ್ನು ನೋಡಿದೆ.ಎಷ್ಟೋ ಜನರು ಸಾಯುವುದನ್ನು ಕಣ್ಣಾರೆ ಕಂಡೆ. ಜನರು ಒಂದಲ್ಲೊಂದುದಿನ ಸಾಯ ಬೇಕೆಂಬುದೇನೋ ನಿಜ. ನಾವು ಕಟ್ಟಿದ ; ನಾವು ಯಾತನಾಮಯ; ಹೀಗಿದ್ದರೂ ಒಬ್ಬನು ಸಾಯದಿರಲಾಗುವದಿಲ್ಲ; ಆದರೆ ಈಗ ನಡೆದಿರುವ ಸಂಗತಿಗಳು ಇದಕ್ಕಿಂತ ಎಷ್ಟೋ ಕಳತೆಯವು. ನನ್ನ ಜನರಿಂದಾದ ಈ ಕೃತ್ಯಗಳಿಗಾಗಿ ನಾನು ಲಜ್ಜಿಸುತ್ತೇನೆ. ಇದರ ಅಪಕೀರ್ತಿ ಮತ್ತೀ ದುಷ್ಕೃತ್ಯಗಳ ಪರಿಣಾಮವು ದೀರ್ಘ ಕಾಲ ನಮ್ಮ ಬೆನ್ನು ಬಿಡಲಾರದೆಂಬ ಹೆದರಿಕೆ ನನಗಿದೆ. ಪಾಪದಿಂದ ಪಾಪವನ್ನು ತೊಳೆಯಲಾಗುವದಿಲ್ಲ; ಕೊಲೆ ಮಾಡಿಯೇ ಕೊಲೆಯನ್ನು ನಿಲ್ಲಿಸಲಾರರಿ. ಆದರೂ ನಮ್ಮಲ್ಲಿ ಹಲವರಿಗೀ ಹುಚ್ಚು ತಾಗಿದೆ; ಹುಚ್ಚರು ಮಾತ್ರ ವರ್ತಿಸುವ ರೀತಿಯಲ್ಲೇ ಅವರು ವರ್ತಿಸಿದ್ದಾರೆ. ಇದೊಂದು ಭೀಕರ ಬಿಕ್ಕಟ್ಟು. ಈಗ ವ್ಯಾಪಿಸಿರುವ ಗೊಂದಲದ ದೃಷ್ಟಿಯಿಂದ ಮಾತ್ರವಲ್ಲ; ಅದಕ್ಕಿಂತ ಹೆಚ್ಚಿನದಾದ ಭಾರತದ ಆತ್ಮ ಮತ್ತು ಸ್ಫೂರ್ತಿಯಲ್ಲೇ ಎದ್ದಿರುವ ಬಿಕ್ಕಟ್ಟಿದು. ದೀರ್ಘಾವಧಿಯಿಂದ ನಾವು ಕನಸು ಕಾಣುತ್ತಾ ಬಂದ ಆ ಸ್ವತಂತ್ರ ಭಾರತವೆಂದರೆ ಇದೇ ಏನು? ನಮ್ಮೀ ಜನರು ತೀರಾ ತಪ್ಪಿ ಬಿದ್ದಿದ್ದಾರೆ. ಅತೀವ ಸಂಕುಚಿತ ದೃಷ್ಟಿಯಿಂದ ನೋಡಿದರೂ ಇವರು ತಪ್ಪಿ ಬಿದ್ದಿದ್ದಾರೆ. ಪ್ರತೀಕಾರದ ದೃಷ್ಟಿಯಿಂದಲೂ ಇವರು ತಪ್ಪಿಬಿದ್ದಿದ್ದಾರೆ. ಪ್ರತೀಕಾರವೇನೋ ಕೆಟ್ಟದು; ಆದರಿದು ಪ್ರತೀಕಾರ ಕೂಡಾ ಅಲ್ಲ. ಆ ಕಡೆಯಲ್ಲಿ ಸಿಕ್ಕಿ ಬಿದ್ದಿರುವ ನಮ್ಮ ಸ್ವಂತ ಜನರಿಗೇ ನಾವು ಸಲ್ಲಿಸಲಿಕ್ಕಿರುವ ಸಹಾಯವನ್ನು ಆತಂಕಿಸುವ ಕೃತ್ಯವಿದು. ಈ ಕಳಂಕವು ಪ್ರಪಂಚಕ್ಕೆನೇ ತೋರುವಂತೆ ನಮ್ಮ ಮುಖಕ್ಕೆ ಮಾತ್ರ ತಾಗಿರುವುದಲ್ಲ-ನಮ್ಮ ಹೃದಯಕ್ಕೇನೇ ಬಳೆದಿದೆ. ಇನ್ನಿದನ್ನು ತೊಳೆದುಕೊಳ್ಳಬೇಕಾದರೆ ಬಹಳ ಕಾಲಬೇಕು. ನಾನು ಹಳ್ಳೀಕಡೆಗಳಿಗೆ ಹೋದಾಗ ದೊಣ್ಣೆ ಮತ್ತು ಇತರ ಸಂಹಾರೋಪಕರಣಗಳನ್ನು ಹಿಡಿದುಕೊಂಡ ಜನರು ನನ್ನನ್ನು ಕಂಡೊಡನೆ"ಮಹಾತ್ಮಾ ಗಾಂಧಿ ಕೀ ಜೈ" "ಜವಾಹಿರಲಾಲಕೀ ಜೈ" ಇತ್ಯಾದಿ ಘೋಷಗಳನ್ನೆಬ್ಬಿಸುತ್ತಾರೆ. ಕೊಲೆ, ಸುಲಿಗೆ,ದರೋಡೆ ಮಾಡಿರಬಹುದಾದ ಈ ಜನರು ಗಾಂಧಿಯವರ ಹೆಸರಿನಿಂದ ಇಂತಹ ಬೊಬ್ಬೆಗಳನ್ನೆಬ್ಬಿಸುವುದನ್ನು ಕೇಳುವಾಗ ನನಗೆ ನಾಚಿಕೆಯಾಗುತ್ತಿದೆ. ಇನ್ನೀ ಹುಚ್ಚಾಟವನ್ನು ನಿಲ್ಲಿಸೋಣ, ರಾಷ್ಟ್ರದಲ್ಲಿ ಆದ ಅನ್ಯಾಯಗಳ ಭಾರ ಬಹಳ ಹೆಚ್ಚಾಯಿತು. ಇನ್ನಾದರೂ ಕೂಡಲೇ ಅದನ್ನು ನಿಲ್ಲಿಸಿ ಮಹಾತ್ಮನು ನಮಗೆ ಕಲಿಸಿದ ಮಾದರಿಗಳನ್ನು ಅನುಕರಿಸಲು ಪ್ರಯತ್ನಿಸೋಣ. ಇದು ಅಖಿಲ ಭಾರತದ ಸಮಸ್ಯೆ. ಈಗ ನಮ್ಮ ಗುರಿಯಲ್ಲಿರುವ ಭಾರತದ ಆಕಾರವಾದರೂ ಯಾವುದು? ನಾವದನ್ನೀಗ ಕಟ್ಟುತ್ತಿರುವೆವೇ, ಅಥವಾ ಅದು ಕುಸಿದು ಬೀಳುವಂತೆ ಮಾಡುತ್ತಿರುವೆವೇ ತಿಳಿದಿರಲಿ; ನಾವು ಪಶ್ಚಿಮ ಪಂಜಾಬಿನ ನಮ್ಮ ಜನರನ್ನು ಉಳಿಸಿಕೊಳ್ಳಲಿಕ್ಕಿದೆ. ಇಲ್ಲಿ ನಾವು ಮಾಡುವ ಅತ್ಯಾಚಾರಗಳು ಅಲ್ಲಿ ಜನರ ಪ್ರಾಣಕ್ಕಪಾಯತರುತ್ತಿವೆ. ಎಲ್ಲಾ ಸಂಗತಿಗಳನ್ನೂ ಎಲ್ಲರೂ ಆಳವಾಗಿಯೋಚಿಸಿ ಕೊಳ್ಳಿರೆನ್ನುತ್ತೇನೆ. ಈಗಿನ ಪರಿಸ್ಥಿತಿಯೇ ಮುಂದುವರಿದರೆ ನಾವು ನಮ್ಮ ಮಕ್ಕಳ ಪಾಲಿಗೆಂತಹ ಭಾರತವನ್ನು ಮಾಡಿಡುತ್ತಿದ್ದೇವೆಂಬುದನ್ನು ಯೋಚಿಸಿ ನೋಡಿ. ಈ ಹುಚ್ಚು ಕೃತ್ಯವು ನಿಲ್ಲಲೇ ಬೇಕಾಗಿರುವಾಗ ಅದನ್ನು ನಿಲ್ಲಿಸಲು ನಮ್ಮಿಂದ ಸಾಧ್ಯವುಳ್ಳ ಎಲ್ಲಾ ಕಠಿಣತೆಗಳನ್ನೂ ಉಪಯೋಗಿಸುವುದೇ ಸರಿ. ಈ ವಿಷಯದಲ್ಲಿ ಮೃದುತ್ವವೂ ಇಲ್ಲ; ದುಷ್ಕೃತ್ಯಗಳೊಂದಿಗೆ ಸಂಭಾವಿತನ ಪ್ರದರ್ಶಿಸಲಾರೆವು. ಸಂದರ್ಭಾನುಗುಣವಾದ ಕ್ರೂರತ್ವವೂ ದೂರದ ಪರಿಣಾಮ-ದೃಷ್ಟಿಯಿಂದ ನಾಗರಿಕ ವರ್ತನೆಯನ್ನಿಸುವದಿದೆ. ನಾವಿಂದು ಯುದ್ಧಸದೃಶ ಪರಿಸ್ಥಿತಿಗೆ ಸಿಲುಕಿದ್ದೇವೆ. ಯುದ್ಧವೆಂದಿಟ್ಟುಕೊಂಡೇ ಅಕ್ಷರಶಃ ಯುದ್ಧ ವಿಧಾನಗಳನ್ನು ಅಂಗೀಕರಿಸಲಿದ್ದೇವೆ: ಇನ್ನು ಮುಂದೆ ಈ ಕುರಿತು ಎಳ್ಳಷ್ಟೂ ಸಡಿಲು ಬಿಡುವಂತಿಲ್ಲ."

೦೦ ೦೦ ೦೦

ಇದು ಈಗಿನ ನೆಹರೂ ಹೃದಯಾಂದೋಲನದ ಒಂದು ಚಿತ್ರ. ಪುಂಡುಗಾರರ ಕೈಯ್ಯಲ್ಲಿ ಸಿಕ್ಕಿಬಿದ್ದ ಪಂಜಾಬಿನ ನಿಸ್ಸಹಾಯಕನೊಬ್ಬನ ಪ್ರಾಣಕ್ಕೆಷ್ಟು ಅಪಾಯವಿದೆಯೋ ಅಷ್ಟೇ ಅಪಾಯ ನೆಹರೂ ಜೀವಕ್ಕೂ ಇಂದಿನ ವಿದ್ಯಮಾನದಲ್ಲಿದೆ. ಗಾಂಧೀ ಜೀವವನ್ನು ಉಳಿಸುವ ಅವಕಾಶ ಮತ್ತು ಅನುಕೂಲತೆಗಳು ನಮಗೆ ದೊರೆಯಬಲ್ಲವು. ಆದರೆ ನೆಹರೂ ಜೀವ ಹಾಗಲ್ಲ—ಅದು ಆಕಸ್ಮಿಕ ಅಪಾಯವನ್ನಾಮಂತ್ರಿಸುವಂತಹದು; ಕಣ್ಮುಚ್ಚಿ ತೆರೆಯುವುದರೊಳಗೆ ಅವಘಡಕ್ಕೀಡಾಗುವಂತಹದು; ಆದ್ದರಿಂದ ಮಿಕ್ಕ ವಿಷಯಗಳೊಂದಿಗೆ-ಭಾರತೀಯರೇ-ಇದೂ ನೆನಪಿರಲಿ.

ಪಂಡಿತ ನೆಹರು ಚಿರಾಯುವಾಗಲಿ!

ಮಾನವಂತತನದ ಸೋಗಿನಿಂದ ನಡೆವ ಅನಾಚಾರ-ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನವೀನ ನಾಟಕ.

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ?
ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು?
ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.

ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟು ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ನವಭಾರತ ಬುಕ್ ಡಿಪೊ, ಉಡುಪಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ.

ಏಜೆಂಟರು:—ಗದಗ:- ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ. ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.
Ayurveda Oushadhalaya. GADAG

ಹಾಲಿನ
ಚೊಕಲೇಟುಗಳು!

ಮಧುರವಾಗಿವೆ—ರುಚಿಕರವಾಗಿವೆ.
ಸರ್ವ ಸುಲಭವೆನಿಸುವಂತೆ ಎಲ್ಲ ಕಡೆಗಳಲ್ಲಿ, ನೂರರ ಪೆಕೇಟುಗಳಲ್ಲಿ ಅಥವಾ ಚಿಲ್ಲರೆಯಾಗಿ ದೊರೆವುವು.

ಸ್ಟಾಕಿಸ್ಟರಾಗಲಿಚ್ಛಿಸುವವರು ಅಥವಾ ಏಜನ್ಸಿ ಪಡೆಯಲಿಚ್ಛಿಸುವವರು ಕೂಡಲೇ ಬರೆದುಕೊಳ್ಳಿ:
ಶ್ರೀ ಕೃಷ್ಣಾ ಟೋಫಿ ವರ್ಕ್ಸ್,
ರಥಬೀದಿ; ಮಂಗಳೂರು.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಔನ್ಸಿನ ೨ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ವಿವರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.
ಸ್ಟಾಕಿಸ್ಟರು– ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಿಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.
— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲಿಕಟ್ಟಿಗೆ ಬರದಿದ್ದರೆ ರೋಗಿಗಳಿಗೆ ತಕ್ಕುದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜೆಂಟರು.—ನವಭಾರತ ಬುಕ್ ಡಿಪ್ಪೊ, (2) ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ
ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!
ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!
ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ ಹಿಂದೀ ಗ್ರಂಥದ ಕನ್ನಡ ಅನುವಾದ.
ಕನ್ನಡಿಸಿದವರು- ಶ್ರೀಮತಿ ಇಂದಿರಾಬಾಯಿ
ಮೈಸೂರು, ಸಂಸ್ಥಾನ.
ಬೆಲೆ ಬರೇ ರೂ. 1—4—0
ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—
1. ಸ್ಟೂಡೆಂಟ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. ನವಯುಗ ಆಫೀಸು, ಉಡುಪಿ. ಮಹಂತೇಶ ಬುಕ್ ಡಿಪೋ, ಬಾಗಲಕೋಟೆ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618. 25-9-1947 Estd. 1921 ಸ್ಥಾಪನೆ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-6
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮಾದರಿ ಸಂಚಿಕೆಗೆ, ಜಾಹೀರಾತು ದರಕ್ಕೆ ಬರೆಯಿರಿ.
ಮೆನೇಜರ್,
ನವಯುಗ ಉಡುಪಿ,
ದ. ಕ.

ನವಯುಗ

"ರೈತರೇ, ನೀವು ಇಂದಿನ ಪರಿಸ್ಥಿತಿಯನ್ನು ಸರಿಯಾದ ದೃಷ್ಟಿಯಿಂದ ನೋಡಿ ತಿಳಿದು ಸಹಾಯಕ್ಕೆ ಮುಂದಾಗಿರಿ, ನಿಮ್ಮ ಉಳಿಕೆಯ ಧಾನ್ಯವನ್ನು ತಮ್ಮ ರೇಶನ್ ಆಹಾರಕ್ಕಾಗಿ ನೋಡುತ್ತಿರುವ ಹಸಿದ ಜನತೆಯೊಡನೆ ಹಂಚಿ ಉಣ್ಣಿರಿ".

ವರ್ಷ ೨೭ }
ವಾರ ೪ }

NAVAYUGA WEEKLY, UDIPI.

FOUNDER: Hon'ble Mr. A. B SHETTY,
Health Minister, Govt. of Madras.

{ Vol. 27
{ No. 4

The Canara Mutual Assurance Company, Limited.

Estd: 1935

H. O. UDIPI, S. INDIA

WELCOME

A hearty and sincere welcome awaits every agent who visits our office and our officers are all available for consultation. Our agents appreciate this cordial reception They say that this considerate treatment of their problems is the keystone to their Success.

T. R. A. Pai.
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— 3.28 Crores
Our Chief Agency New business in 1946 about 54 Lakhs

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building,
Central Office, Udipi.-

Branches at:

Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ರೀತಿ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಬಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಶೆಟ್ಟಿ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ
ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE.

—ಮಕ್ಕಳನ್ನು ಪಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ

ಬರ್ಥ ಕಂಟ್ರೋಲ

ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹುಳಿಯಲ್ಲ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜು ನಿರಾಳ.

ಮಾಲಕರು:—ಹಾಲಪ್ಪ ಫಕೀರಪ್ಪ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ ವಿಜಾಪುರ—ಬಾಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ್, ದಾವಣಗೆರೆ:—ದಾವಣಗೆರೆ ಪ್ರೆಸ್ ಆರ್ ಎಲ್ ಕತುಲವಾನಿ, ಕೆಮಿಸ್ಟ, ಹಾವೇರಿ, ಬ್ಯಾಡಿಗಿ.

Ayurveda Oushadalaya, GADAG CITY.

ಮನೆಮದ್ದು—*Home Remedies*

ಬೆಲೆ ರೂ. 2-0-0

ಬರೆದವರು:—ಡಾ। ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Vluable Service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ, ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಹೇಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಯಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ

ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಹಿಂದೂ ಮುಸ್ಲಿಂ ಐಕ್ಯತೆ ಇನ್ನೊಮ್ಮೆ ಮೂಡುವುದು ಸಾಧ್ಯವೆ?

ಈಗ ಹಿಂದೂಮುಸ್ಲಿಂ ಜಾತಿದ್ವೇಷವೆಂಬುದು ಮುಟ್ಟಿರುವ ತುದಿಯು ಯಾವ ಶತ್ಮದ ಕೋಲಿಗೂ ನಿಲುಕದಂತಹದು. ಜಾತಿ-ಜಾತಿಗಳೊಳಗೆ, ಮನುಷ್ಯ-ಮನುಷ್ಯರೊಳಗೆ ಇಂತಹ ಕಠೋರ ಭಾವನೆಯಿರುವ ಒಂದು ನಿದರ್ಶನವು ಇಷ್ಟೀ ಲೋಕದ ಚರಿತ್ರೆಯಲ್ಲೇ ಬೇರಿಲ್ಲ. ಈಗ 'ಹಿಂದೂ ಮುಸ್ಲಿಂ ಏಕ್ ಹೋ' ಎನ್ನಲು ನಾಚದವರು ಯಾರಿದ್ದಾರೆ? 'ಹಿಂದೂ ಮುಸಲ್ಮಾನರು ಒಟ್ಟಿಗೆ ಬಾಳತಕ್ಕವರು' ಎಂದಿನ್ನೂ ಹೇಳುವ ಎದೆಗಾರಿಕೆ ಯಾರಿಗಿದೆ? ಇದೆ; ಗಾಂಧಿಜೀಯೊಬ್ಬನಲ್ಲಿ ಮಾತ್ರ ಅದಿನ್ನೂ ಇರುವಂತಿದೆ; ಆದರೆ ಎರಡನೆಯ ಒಬ್ಬನಲ್ಲೂ ಅಂತಹ ವಿಶ್ವಾಸವನ್ನು ನಿರ್ಮಿಸಲು ಸ್ವತಃ ಗಾಂಧಿಜೀಯಿಂದಾದರೂ ಸಾಧ್ಯವಾಗಿದೆಯೆ? ಆದ್ದರಿಂದ 'ಹಿಂದೂ ಮುಸ್ಲಿಮರು ಅಣ್ಣತಮ್ಮಂದಿರು; ಒಂದೇ ತಾಯಿಮಕ್ಕಳು'-ಇತ್ಯಾದಿ ಇತ್ಯಾದಿ ಸೊಲ್ಲುಗಳ ಯುಗವೀಗ ಮುಗಿದಂತೆಯೇ. ನವಯುಗವಾಗಿ ಅದೇ ಕಾಲ ಮತ್ತೊಮ್ಮೆ ಬರಬಹುದೆಂಬ ನಂಬಿಕೆಯನ್ನು ಕೆಲವರು ಕಟ್ಟಿಕೊಂಡಿರಬಹುದು. ಆದರೆ ಅದೇ ಬರಬೇಕೆಂದೇನು? ಹಿಂದೊಮ್ಮೆ ಬಂದಿದ್ದು, ಬಂದಂತೆಯೇ ಹೋಗುವ ಸ್ವಭಾವವುಳ್ಳ ಆ ಕಾಲವೇ ಮತ್ತೊಮ್ಮೆ ಯಾಕಾಗಿ? 'ಹಿಂದೂ ಮುಸ್ಲಿಮರು ಒಂದೇ' ಎನ್ನುವ ಯುಗವೇ ಪುನರವತರಿಸುವ ಬದಲಿಗೆ, ಈ ಜಾತಿ ಪರಿಚಯದ ಅಗತ್ಯಬೀಳದ ಕೇವಲ 'ನೀತಿ ಯುಗ'ವೇ ಬಂದರಾಗದೆ? ವೇದ-ಖುರಾನ್‌ಗಳ ಜತೆ ಜತೆನೆ ನಡೆಯುವ ಮಂತ್ರಯುಗದ ಬದಲಿಗೆ ಅದಾವುದೂ ಇರದೆ ಸರ್ವಸಾಮಾನ್ಯ ಆಧುನಿಕ ನೀತಿ ಸೂತ್ರಗಳನ್ನೇ ಆಧರಿಸುವ ಪ್ರತಿಜ್ಞೆ ವಹಿಸುವ ಮನುಷ್ಯ ಯುಗವೇ ಬರಬಾರದೇಕೆ? ಬರುವುದೂ ಅದೇ. ನಾಳೆಯ ಅಮದುರಸ್ತುಗಳ ಈ ಮಾತು ಹೇಗೂ ಇರಲಿ. ಈ ದಿನ ಒಂದು ಸಹಜವಾದ ಆಸೆಯು ಬಯಲಾಸೆಯಾಗಿರುವುದು ನಿಜ; ಹಿಂದೂ ಮುಸ್ಲಿಂ ಏಕಭಾವವೆಂಬುದು ಶಾಶ್ವತ ಕಾಲಕ್ಕೂ ನಿರ್ನಾಮವಾಗಿರುವುದು ಖಂಡಿತ. 'ಎಲ್ಲವನ್ನೂ ಮರೆಯೋಣ; ಒಂದಾಗೋಣ' ಎನ್ನಬಹುದು, ಇದಕ್ಕರ್ಥವಿಲ್ಲ. 'ನೆನಪು' ಸಾಮಾನ್ಯ ಮನುಷ್ಯನ ಅಂಕೆಯೊಳಗಿರುವಂತಹದಲ್ಲ. ಶಾಂತಿಸ್ಥಾಪನೆಯ ವಿಧಾನವು ಇದೇ ಎಂದಾದರೆ- ಹಿಂದೂ ಮುಸ್ಲಿಂ ಐಕ್ಯತೆಗಾಗಿ ಎಲ್ಲರೂ ನೆನಪನ್ನು ಬಿಟ್ಟರಾಯಿತು; ಸಮಾನತಾ ಸ್ಥಾಪನೆಗಾಗಿ ಶ್ರೀಮಂತರು ಆಶೆಯನ್ನು ಬಿಟ್ಟರಾಯಿತು; ಆಹಾರಾಭಾವ ನಿವಾರಣೆಗಾಗಿ ಹಸಿವಿನ ಪ್ರಜ್ಞೆಯನ್ನೇ ಬಿಟ್ಟರಾಯಿತು! ಸಾಧ್ಯವಾಗುತ್ತಿದ್ದರೆ ಇವೆಲ್ಲವೂ ಉತ್ತಮೋತ್ತಮ ಸಾಧನಗಳೇ. ಆದರೆ ಸಾಧ್ಯವೆ? ಗಾಂಧಿಜೀಯೊಬ್ಬರಿಗೆ ಸಾಧ್ಯವೆಂದು ತೋರುತ್ತಿರಬಹುದು!

ಗಾಂಧಿಜೀಯ ಸಾಧ್ಯತೆಗೆ ಕೂಡಾ ಮಿತಿಯಿದೆ. 'ನನ್ನ ಮಟ್ಟಿಗೆ ಹಿಂದೂಮುಸ್ಲಿಂ, ಇಬ್ಬರೂ ಸಮಾನ' ಎಂದು ಗಾಂಧಿಜೀಯನ್ನಬಹುದು. ಆದರೆ ಗಾಂಧಿಜೀ ಮಾತ್ರ ಹಿಂದೂಮುಸ್ಲಿಮರಿಬ್ಬರಿಗೂ ಹಾಗೆ-'ಸಮಾನ'ರಾಗಿ-ತೋರುತ್ತಿಲ್ಲ. ಅಷ್ಟೇ ಯಾಕೆ? ನಿಜಕ್ಕೂ ಗಾಂಧಿಜೀಗಾದರೂ ಹಿಂದೂಮುಸ್ಲಿಮರು ಸಮಾನರಾಗಿಯೇ ತೋರುತ್ತಿರುವರೆ? ಅವರ ಹೃದಯವನ್ನೇ ನೋಡೋಣ. ಅಲ್ಲಿ ಗಾಂಧಿಜೀಯ ಸ್ವಂತ ಅಂತರ್ಯ ಮತ್ತು ಪರಿಸ್ಥಿತಿಯು ಅದಕ್ಕೆ ಜೋಡಿಸಿರುವ 'ಉಪಾಂತರ್ಯ' ಇವೆರಡೂ ಒಂದೇ ಆಗಿರುವವೇ? ಅವುಗಳಲ್ಲೇ ಒಂದು 'ಹಿಂದೂ', ಮತ್ತೊಂದು 'ಮುಸ್ಲಿಂ' ಆಗಿಲ್ಲವೆ? ಸೂಕ್ಷ್ಮದೃಷ್ಟಿಯಿಂದ ನೋಡೋಣ. ಕಳೆದಬಾರಿ ನವಾಖಾಲೀ ಅತ್ಯಾಚಾರ ನಡೆದಾದ ಮೇಲೆ ಮಹಾತ್ಮರು ಅತ್ತ ಹೋದರು. ಆನಾಹುತಾವಶೇಷಗಳನ್ನೆಲ್ಲಾ ಕಣ್ಣಾರೆ ಕಂಡರು. ಅವರು ಅಲ್ಲಿರುವಾಗಲೇ ಅವರ ಪ್ರಾರ್ಥನಾ ಸಭೆಗಳಿಗೆ ಬಂದು ಹೋಗುತ್ತಿದ್ದ ಹಿಂದುಗಳ ಕೊಲೆ ಸುಲಿಗೆ ನಡೆಯುತ್ತಿದ್ದ ಬಿಸಿಬಿಸಿ ವಾರ್ತೆಗಳು ಅವರ ಕಿವಿಗಳಿಗೆ ಬೀಳುತಿದ್ದುವು. ಆದರೂ ಗಾಂಧಿಜೀ "ಈ ಹುಚ್ಚಾಟ ನಿಂತು ಶಾಂತಿ ಸ್ಥಾಪನೆಯಾಗುವ ವರೆಗೆ ಉಪವಾಸವೆಂದು" ದಿದೆಯೆ? ಬದಲಿಗೆ ಅವರು ನವಾಖಾಲಿಯಲ್ಲಿದ್ದರೂ, ನವಖಾಲೀ ಮುಸ್ಲಿಮರ ಅತ್ಯಾಚಾರಕ್ಕಾಗಿ ಉಪವಾಸ ಕೈಕೊಳ್ಳುವ ಬದಲಿಗೆ, ದೂರದ ಬಿಹಾರಿನ ಹಿಂದುಗಳ ದುಷ್ಕೃತ್ಯಗಳಿಗಾಗಿ ಉಪವಾಸ ಕೈಕೊಳ್ಳುವೆನೆಂದು ಜ್ಯಾಹೀರುಮಾಡಿದರು. ಅಂದ ಮೇಲೆ ನಿಜವೇ—'ನನಗೆ ಹಿಂದೂ ಮುಸ್ಲಿಮರಿಬ್ಬರೂ ಸಮಾನರು' ಎಂಬ ಮಾತು ಅಕ್ಷರಶಃ ನಿಜವೆ? ಕಲ್ಕತ್ತದಲ್ಲಿ ಈ ಬಾರಿ ಗಾಂಧಿಜೀ ಉಪವಾಸ ಕೈಕೊಂಡುದು ಹಿಂದೂ ಸಿಖ್ಖರು ಮುಸ್ಲಿಮರಿಗೆ ಹೊಡೆಯುಹತ್ತಿದೊಡನೆಯೇ. ಮುಸ್ಲಿಮರು ಹಿಂದುಗಳ ಮೇಲೆ ಅತ್ಯಾಚಾರಕ್ಕಿಳಿದ ಯಾವ ಸಂದರ್ಭದಲ್ಲೂ ಗಾಂಧಿಜೀ ಅನಶನ ಕೈಕೊಂಡುದಿಲ್ಲ. 'ಹಿಂದೂ ಮುಸ್ಲಿಂ ಒಂದೇ' ಎಂದಮೇಲೆ ಆ ಪೈಕಿ ಯಾರೇ ಪಾಪಾಚರಣೆಗಿಳಿದರೂ ಪ್ರಾಯಶ್ಚಿತ್ತ ಕೈಕೊಳ್ಳುವದು ಗಾಂಧಿಜೀಯ ಕರ್ತವ್ಯವಾಗಿತ್ತು. ಅವರಿಬ್ಬರೂ ತನ್ನ ಮಟ್ಟಿಗಾದರೂ ಒಂದೇ ಆಗಿಲ್ಲ, ಎಂಬುದನ್ನು ತಿಳಿದಿದ್ದುದರಿಂದಲೇ ಮಹಾತ್ಮರು ಒಬ್ಬರ ಪಾಪಕ್ಕಾಗಿ ಪ್ರಾಯಶ್ಚಿತ್ತ ಕೈಕೊಳ್ಳುವಾಗ ಮತ್ತೊಬ್ಬರ ಪಾಪಕ್ಕಾಗಿ ಪಶ್ಚಾತ್ತಾಪವನ್ನು ಮಾತ್ರ ಪ್ರದರ್ಶಿಸುತ್ತಾರೆ! 'ಒಂದೇ' ಎನ್ನುತ್ತಾ ಮುಸ್ಲಿಮರ ಅತ್ಯಾಚಾರನಿಲ್ಲದೆ ಆಹಾರ ಸ್ವೀಕರಿಸಲಾರೆನೆಂದು ಗಾಂಧಿಜೀ ಉದರ ಸತ್ಯಾಗ್ರಹ ಕೈಕೊಳ್ಳುತಿದ್ದರೆ ನಿಜಕ್ಕೂ ಅವರಾಯುಷ್ಯ ಮುಗಿಯುತಿತ್ತು! ಹಾಗಾದರೆ 'ಹಿಂದೂ ಮುಸ್ಲಿಮರು ಸಮಾನ' ಎನ್ನುವದೇಕೆ?

ಗಾಂಧಿಜೀ ಈ ರೀತಿ ತಾರತಮ್ಯವರಿತು ವರ್ತಿಸಿದ್ದರಿಂದ 'ಮಹಾತ್ಮಾಜೀ ಚಿರಾಯುವಾಗಲಿ" ಘೋಷವೆಬ್ಬಿಸುವ ಭಾಗ್ಯವಿನ್ನೂ ನಮಗುಳಿದಿದೆ. ಆದರೆ ಅವರ ತತ್ವವನ್ನಾಧರಿಸಿ, ಈ ಸಮಾನತೆಯನ್ನು ನಂಬಿ, ಶಾಂತಿ ಸ್ಥಾಪನೆಗಿಳಿದ ಕಾಂಗ್ರೆಸಿನ ಸಚ್ಚಾರಿತ್ರವಂತ ಕೆಲಸಗಾರರನೇಕರು —ಮಾದರೀ ಸತ್ಯಾಗ್ರಹಿಗಳು—ಗೊಂದಲ ಕ್ಷೇತ್ರಗಳಲ್ಲಿ ಕಟುಕರ ಕೈಯಲ್ಲಿ ತಮ್ಮ ಪ್ರಾಣ ಕೊಡಬೇಕಾಯಿತು. ಸಮಾನತೆ ಬೋಧಿಸಿದವರನ್ನು ಶಾಂತಿ ಸ್ವಾಗತಿಸುವ ಬದಲಿಗೆ ಸಾವು ಕರೆದುಕೊಂಡಿತು. ಬೇರೆಲ್ಲಿ ದೊರೆಯುತ್ತಿದೆಯೋ ಈ ಸಮಾನತೆಯ ಚಿಹ್ನೆ!

೦೦ ೦೦ ೦೦

ಈ ಹಿಂದೂ ಮುಸ್ಲಿಂ ಐಕ್ಯವು ಮುಸ್ಲಿಮರಿಗೆ ಅಥವಾ ಲೀಗಿಗೆ ಬೇಕಾಗಿರಲಿಲ್ಲ; ಆದರೆ ಹಿಂದುಗಳಿಗೆ ಅಥವಾ ಕಾಂಗ್ರೆಸಿಗೆ ಬೇಕಾಗಿತ್ತು, ಎಂಬ ಕುರಿತು ಎರಡಭಿಪ್ರಾಯವಿಲ್ಲ. 'ಹಿಂದೂ ಮುಸ್ಲಿಂ ಒಗ್ಗಟ್ಟು' ಎನ್ನುತ್ತಾ ಮುಸ್ಲಿಮರ ಮೇಲೆ ಹಿಂದೂ ಪಾಶವಿಕ ಬಹುಮತವು ಅಧಿಕಾರ ಸ್ಥಾಪಿಸಲು ನೋಡುತ್ತಿದೆ'ಎಂದೇ ಮುಸ್ಲಿಂ ಲೀಗಿನ ವಾದ ಹೊರತು, ಆ ಒಗ್ಗಟ್ಟು ಬೇಕೆಂಬ ಬಯಕೆಯೇ ಹಿಂದುಗಳಿಗಿಲ್ಲವೆಂದು ಅದು ಕೂಡಾ ಹೇಳಿದ್ದಿಲ್ಲ. ಮುಸ್ಲಿಮರಿಗೆ ಅಂತಹ ಒಗ್ಗಟ್ಟು ಎಷ್ಟಕ್ಕೂ ಬೇಡವಾಗಿದೆ ಎಂಬುದನ್ನು ಲೀಗೇ ಒಪ್ಪಿದೆ. ಆದ್ದರಿಂದ ಏಕರಾಷ್ಟ್ರೀಯತೆಯ ವಿರೋಧಿಗಳು-ಹಿಂದೂಮುಸ್ಲಿಂ ಐಕ್ಯತಾ ಆಕ್ಷೇಪಗಾರರು-ಮುಸ್ಲಿಮರೆಂಬ ಕುರಿತು ಎರಡಭಿಪ್ರಾಯವಿಲ್ಲ. ಇದಕ್ಕೂ ಅಪವಾದವಾಗಿದ್ದವರೆಂದರೆ ರಾಷ್ಟ್ರೀಯ ಮುಸ್ಲಿಮರು. ಕಾಂಗ್ರೆಸಿನ ವಾದ ಸರಣಿಯೇ ಇವರ ವಾದಸರಣಿಯೂ ಆಗಿತ್ತು. ಏಕರಾಷ್ಟ್ರೀಯತೆ-ಹಿಂದೂ ಮುಸ್ಲಿಂ ಐಕ್ಯತೆ-ಬುದ್ಧಿಯುಳ್ಳ ಎಲ್ಲಾ ಜಾತಿಯವರಿಗೂ ಬೇಕಾಗಿದೆ, ಎನ್ನಲಾಗುವಂತೆ ಮುಸ್ಲಿಮರಲ್ಲಿದ್ದುದೆಂದರೆ ಈ ರಾಷ್ಟ್ರೀಯರೇ. ಖಿಲಾಫತ್ ಕಾಲ ಕಳೆದ ಮೇಲೆ ಈ ರಾಷ್ಟ್ರೀಯ ಮುಸ್ಲಿಮರು, ಆ ಸಮಾಜದಲ್ಲಿ ಅಲ್ಪಸಂಖ್ಯೆಯಲ್ಲಿದ್ದರೆಂಬುದೂ, ಕೊನೆ ಕೊನೆಗಂತೂ ಅವರ ಸಂಖ್ಯೆಯು ಕೈ ಬೆರಳೆಣಿಕೆಗಿಳಿದಿತ್ತೆಂಬುದೂ ನಿರ್ವಿವಾದ. ಒಂದು ನೆಪವಾಗಿ, ನಾಮಮಾತ್ರವಾಗಿ, ಆದರೂ ಆಗ ಅವರಿದ್ದರು! ಅವರಲ್ಲಿ ಮೌಲಾನಾ ಆಜಾದರಂತಹ ವಿಚಾರೀ ಘನವಂತರೂ ಇದ್ದುದರಿಂದಾಗಿ, ಈ ವರ್ಗದವರ ಸಂಖ್ಯೆಗೂ ಮಿಕ್ಕಿ ಅವರ ಅಭಿಪ್ರಾಯಗಳಿಗೆ ಬೆಲೆ ಸಂದಿತ್ತು. ಆದರೆ ಆ ಕಾಲ ಕೂಡಾ ಈಗ ಕಳೆದಿದೆ, 'ರಾಷ್ಟ್ರೀಯ ಮುಸ್ಲಿಮರು' ಎಂಬ ಆ ಉಚ್ಚವರ್ಗವೇ ಈಗ ಅಂತರ್ಧಾನವಾದಂತಿದೆ; ಅವರೇನೂ ಅಭಿಪ್ರಾಯಾಂತರಗೊಂಡಿಲ್ಲ. ಆದರೆ ಪರಿಸ್ಥಿತಿಯು ಅವರನ್ನು ಬಹಿಷ್ಕಾರಗೊಳಿಸಿದೆ. ಅವರಿಗೀಗ ಸ್ಥಾನವಿಲ್ಲ; ಸತ್ಯಕ್ಕೂ ಭ... ಪಕ್ಷ... ಡಗಳ ಪೈಕಿ, ಅಚ್ಯುಚ್ಚ ಮಾದರಿಯ ಪಕ್ಷವಾಗಿದ್ದುದೆಂದರೆ ಈ ರಾಷ್ಟ್ರೀಯ ಮು

(೧೧ನೇ ಪುಟ ನೋಡಿರಿ.)

ಸ್ಥಾಪಿತ]

Canara Bank Limited

ಯೋಣಗಾರಿಕೆ ಪರಿಮಿತಿಸಲ್ಪಟ್ಟು ಬ್ರಿಟಿಷ್ ಇಂಡಿಯಾದಲ್ಲಿ ಸಾಂಘೀಕರಿಸಿದ್ದು.

ಹೆಡ್ ಆಫೀಸು: ಬಾವಟೆಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು: 75, ಎಪೊಲೊ ಸ್ಟ್ರೀಟ್. ಫೋರ್ಟ್ ಮುಂಬೈ.

ಶಾಖೆಗಳು

ಮದರಾಸು ಪ್ರಾಂತ್ಯ
ಮಂಗಳೂರು - ಸಿಟಿ
ಮಂಗಳೂರು - ಬಂದರ
ಮೂಲ್ಕಿ
ಗಂಗೊಳ್ಳಿ
ಕುಂದಾಪುರ
ಉಡಿಪಿ
ಕಾರ್ಕಳ
ಬಟ್ಕಳ
ಪುತ್ತೂರು
ಕಾಸರಗೋಡ
ಮಧುರಾ
ಮದರಾಸು
ಪಯ್ಯನ್ನೂರು
ಕಲ್ಲಿಕೋಟೆ
ಕಣ್ಣನ್ನೂರು
ಕೊಯಮುತ್ತೂರು
ತಿರುಚಿನಾಪಳ್ಳಿ
ತೂತುಕುಡಿ
ಸೇಲಂ
ಇರೋಡು

ಹೈದರಾಬಾದು ಸಂಸ್ಥಾನ
ಸಿಕಂದರಾಬಾದು

ತಿರುವಾಂಕೂರು ಸಂಸ್ಥಾನ
ಆಲ್ಲಪ್ಪಿ
ಕ್ವಿಲೋನ

ಮಧ್ಯಪ್ರಾಂತ್ಯ
ನಾಗಪುರ
ಅಕೋಲಾ
ಅಮರಾವತಿ

ಮುಂಬೈ ಪ್ರಾಂತ್ಯ
ಬೆಳಗಾಂವಿ
ಧಾರವಾಡ
ಹುಬ್ಬಳ್ಳಿ
ಶೋಲಾಪುರ
ಪೂನಾ
ಮುಂಬೈ—ಫೋರ್ಟ್
ಮುಂಬೈ—ಕಾಳಬಾದೇವಿ
ಮುಂಬೈ—ಮಾಂಡ್ವಿ
ಮುಂಬೈ—ಗಿರಗಾಂವ್
ಮುಂಬೈ—ಕಲ್ಯಾಣ

ಮೈಸೂರು ಸಂಸ್ಥಾನ
ಮೈಸೂರು
ಶಿವಮೊಗ್ಗ
ಚಿಕ್ಕಮಗಳೂರು
ಬೆಂಗಳೂರು ಸಿಟಿ
ಅರಸಿಕೆರೆ
ದಾವಣಗೆರೆ

ಸಿಂಧ್ ಪ್ರಾಂತ್ಯ
ಕರಾಚಿ

ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಳಂ

ಹಿಂದುಸ್ಥಾನ್-ಪಾಕಿಸ್ತಾನಗಳೊಳಗೆ ವಾಗ್ಯುದ್ಧ!

ಮಂತ್ರಿ–ಮಂತ್ರಿಗಳೊಳಗೆ

"ಪಾಕಿಸ್ತಾನದ ಪ್ರಧಾನ ಮಂತ್ರಿ ಮಿ. ಲಿಯಾಖತ್ ಆಲೀಖಾನರು ಪಂಜಾಬ್ ಮುಸ್ಲಿಂ ಲೀಗ್ ಕೌನ್ಸಿಲಿನಲ್ಲಿತ್ತ ಭಾಷಣದ ಕಡೆಗೆ ನನ್ನ ಲಕ್ಷ್ಯವೆಳೆಯಲ್ಪಟ್ಟಿದೆ. "ಈ ದಿನ ಪಾಕಿಸ್ತಾನವು ಅದನ್ನು ಧ್ವಂಸಮಾಡಲೆದ್ದಿರುವ ಬಲಗಳಿಂದ ಎಲ್ಲ ದಿಕ್ಕುಗಳಿಂದಲೂ ಮುತ್ತಿಗೆಗೊಳಗಾಗಿದೆ. ತಮ್ಮ ಸದಾ ಕಾಲದ ಸ್ವಪ್ನವಾಗಿದ್ದ,'ಇಡೀ ಭಾರತ ಭೂಖಂಡವನ್ನು ಆಳಬೇಕೆಂಬ ಗುರಿಯು, ಪಾಕಿಸ್ತಾನದ 'ಇರುವಿಕೆಯಿಂದಾಗಿ ನಿಷ್ಫಲವಾಯಿತೆಂದು ಇಂಥವರೀಗ ಭಗ್ನ ಮನೋರಥರಾಗಿದ್ದಾರೆ. ಪೂರ್ವ ಪಂಜಾಬಿನ ಮುಸ್ಲಿಮರು ಕೇವಲ ಕಾನೂನು ವ್ಯವಸ್ಥಾ ಪಾಲನಾ ದಳಗಳ ಗುಂಡು ಬಯೊನೆಟುಗಳಿಂದಲೇ ಸಮೂಲವಾಗಿ ಕಿತ್ತೆಸೆಯಲ್ಪಟ್ಟರು. ಕೆಲವು ದಿನಗಳಿಗೆ ಹಿಂದೆ ಲಾಹೋರಿನಲ್ಲಿ ಎರಡು ಸರಕಾರಗಳು ಜತೆಯಾಗಿ ಕೈಕೊಂಡ ನಿರ್ಧಾರಗಳನ್ನು ಹಿಂದುಸ್ಥಾನ್ ಮತ್ತು ಪೂರ್ವ ಪಂಜಾಬು ಸರಕಾರಗಳು ಗೌರವಿಸಲಿಲ್ಲ, ಜ್ಯಾರಿಗೆ ತರಲಿಲ್ಲ"- ಇತ್ಯಾದಿ ಮಿ. ಲಿಯಾಖತರೆಂದರೆಂದು ವರದಿಯಾಗಿದೆ. ಇದನ್ನು ಕೇಳಿ ನನಗೆ ಸರ್ವೇದಾಶ್ಚರ್ಯವಾಯಿತು. ವಿಭಜನೆಯಾಗುವ ಮೊದಲು ಅದನ್ನು ನಿಲ್ಲಿಸಬೇಕೆಂದು ನಾವು ಹಲವರು ಪ್ರಯತ್ನಿಸಿದ್ದುದು ಜನಜನಿತವಿದೆ. ಆದರೆ ವಿಭಜನಾ ನಿರ್ಣಯವಾದ ನಂತರ ಆ ನಿರ್ಧಾರಾನ್ವಯದ ತನ್ನೆಲ್ಲಾ ಕರ್ತವ್ಯಗಳನ್ನೂ ವಿಶ್ವಾಸಪೂರ್ವಕ ನಿರ್ವಹಿಸಬೇಕೆಂಬುದೊಂದೇ ಭಾರತ ಸರಕಾರದ ಉತ್ಕಟೇಚ್ಛೆಯಿದೆ. ಸದ್ಯದ ದುಃಖದಾಯೀ ಘಟನೆಗಳು, ಆವೇಶಾವೇಗಗಳು ನಿಂತು ಎರಡು ಸಮಾಜಗಳೊಳಗೆ ಸೌಹಾರ್ದ ವೊಳೆತಾಗ ಇಕ್ಕಡೆಯ ಜನತೆಯು ಸ್ವತಂತ್ರೇಚ್ಛೆಯಿಂದಲೇ ಇವೆರಡು ರಾಷ್ಟ್ರಗಳೊಂದುಗೂಡುವವೆಂಬ ಆಶೆಯನ್ನೇನೋ ನಾವು ಕೆಲವರನ್ನೂ ಕಟ್ಟಿಕೊಂಡಿದ್ದೇವೆ. ಆದರೆ ಪಾಕಿಸ್ತಾನವನ್ನು ವೈರಿಯೆಂದು ಭಾವಿಸಿರುವವರು ನಮ್ಮಲ್ಲಾರೂ ಇಲ್ಲ. ಭಾರತದ ಸರಕಾರದ ಮೇಲೆ ಇಂತಹ ಉದ್ದೇಶಾರೋಪಣೆ ಮಾಡಲ್ಪಟ್ಟದ್ದು ವುದೊಂದು ದುರ್ದೈವವೇ ಸರಿ. ಕಾನೂನು ವ್ಯವಸ್ಥಾ ಪಾಲನೆಯ ದಳಗಳು ಪಕ್ಷಪಾತ ವಹಿಸಿ, ಕರ್ತವ್ಯಬಾಹಿರದ ನಿದರ್ಶನಗಳು ಇಕ್ಕಡೆಗಳಲ್ಲೂ ಇವೆ. ನಾನೂ ನನ್ನ ಅನುಯಾಯಿಗಳೂ ಅಂತಹದನ್ನು ಕಂಠೋಕ್ತವಾಗಿ ಖಂಡಿಸಿ ಕರ್ತವ್ಯ ಜಾಗ್ರತಿಯನ್ನೀಗ ಸ್ಥಾಪಿಸಿದ್ದೇವೆ. ಭಾರತದ ಕಾನೂನು ವ್ಯವಸ್ಥಾ ಪಾಲನಾ ಬಲಗಳ ಮಟ್ಟಿಗೆ ನಿಷ್ಪಕ್ಷಪಾತತೆಯೇ ನಿತ್ಯಾಭ್ಯಾಸವಾಗಿದೆ. ಜತೆ ನಿರ್ಧಾರಗಳನ್ನು ನಾವು ಪಾಲಿಸದಿದ್ದುದೆಲ್ಲಿ ಎಂಬುದೇ ನನಗೆ ತೋರುವುದಿಲ್ಲ.ಆ ಕಡೆಯವರಾರೂ ಜತೆ ಸಭೆಗಳಲ್ಲದನ್ನು ತಿಳಿಸಿದುದಿಲ್ಲ. ಪಾಕಿಸ್ತಾನ್ ಸರಕಾರವು.ತನ್ನ ಹೊಣೆಗಾರಿಕೆ ನಿರ್ವಹಿಸದೆ ಬಿಟ್ಟ ನಿದರ್ಶನಗಳಿವೆ.ಇನ್ನೊಬ್ಬ ಪಾಕಿಸ್ತಾನ ಮಂತ್ರಿ ಮಿ. ಗಜ್ನಾಫರ್ ಆಲೀಖಾನರು ಪೂರ್ವ ಪಂಜಾಬಿನಲ್ಲಿ100000ಕ್ಕೂ ಮಿಕ್ಕಿ ಸತ್ತಿರುವರೆಂದೂ, ಪಶ್ಚಿಮ ಪಂಜಾಬಿನಲ್ಲಿ 10000 ಮಾತ್ರ ಸತ್ತಿರುವರೆಂದೂ, ಪೂರ್ವ ಪಂಜಾಬಿನಿಂದ ಪಶ್ಚಿಮ ಪಂಜಾಬಿಗೆ ಬಂದ ನಿರಾಶ್ರಿತರು 1,100 000 ಎಂದೂ, ಪಶ್ಚಿಮ ಪಂಜಾಬಿನಿಂದ ಪೂರ್ವ ಪಂಜಾಬಿಗೆ ಹೋದವರು ಮಾತ್ರ 2 ಲಕ್ಷದಿಂದ 300000 ಒಳಗೆಂದೂ ಹೇಳಿದ್ದಾರೆ. ಈ ಲೆಕ್ಕದ ಆಧಾರವಾವುದೋ ನಾನರಿಯೆ. ಈ ಕಾಲದಲ್ಲಿ ಸತ್ತವರ ಸರಿಯಾದ ಲೆಕ್ಕ ಹಿಡಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಪೂರ್ವ ಪಂಜಾಬಿಗಿಂತ, ಪಶ್ಚಿಮ ಪಂಜಾಬಿನಲ್ಲಿ ಸತ್ತವರ ಸಂಖ್ಯೆ ಬಹಳ ಹೆಚ್ಚೆಂದು ನಂಬಲು ನಮಗೆ ಕೆಲವು ಕಾರಣಗಳು ದೊರೆತಿವೆ. ಜನಬಲದಲಾವಣೆಯು ಇಕ್ಕಡೆಗಳಲ್ಲಿಯೂ ಸಮಾನ. ಈ ತನಕ, ಒಂದೂ ಕಾಲು ಮಿಲಿಯ ಮಂದಿಯಂತೆ ಎರಡು ಕಡೆಗಳಿಗೂ ವರ್ಗಾಯಿಸಲ್ಪಟ್ಟಿದ್ದಾರೆ. ನಮಗೀಗ ಹಿಂದುಸ್ಥಾನ್ ಪಾಕಿಸ್ತಾನಗಳೊಳಗೆ ಶೀಘ್ರವಾದ ಶಾಶ್ವತ ಮೈತ್ರಿ ಮತ್ತು ಶಾಂತಿಯ ಅಸ್ತಿವಾರ ಪೊಂದೇ ಬೇಕಾಗಿದೆ ಹೊರತು ಬೇರೇನೂ ಬೇಕಾಗಿಲ್ಲ. ನಾನಿಲ್ಲಿ ವಿಮರ್ಶಿಸಿದ ಮೇಲಿನ ಹೇಳಿಕೆಗಳಂತಹವು ಶಾಂತಿ ಅಥವಾ ಸಖ್ಯಸ್ಥಾಪನೆಗೆ ನೆರವಾಗಲಾರವೆಂದು ಅತ್ಯಂತವಿಷಾದ ಪೂರ್ವಕ ಹೇಳುತ್ತೇನೆ"- ಪಂಡಿತ ನೆಹರು.

ಧುರೀಣ-ಧುರೀಣರೊಳಗೆ

"ಪಶ್ಚಿಮ ಪಂಜಾಬಿನ ನಿರಾಶ್ರಿತ ನಿಲಯಗಳಲ್ಲಿದ್ದ ಮತ್ತು ಈ ಕಡೆ ಬರುವ ಹಾದಿ ಗುಂಪುಗಳ ಸಿಖ್ಖರೂ ಹಿಂದುಗಳೂ ಸಾವಿರ ಸಂಖ್ಯೆಯಲ್ಲಿ ಕೊಲೆಮಾಡಲ್ಪಟ್ಟಿದ್ದಾರೆ. ಸೈನಿಕ ಮೈಗಾವಲಿಲ್ಲದುದು, ಅಥವಾ ಅದು ಸಾಕಷ್ಟಿಲ್ಲದಿದ್ದುದೊಂದೇ ಈ ಅನಾಹುತಕ್ಕೆ ಕಾರಣ. ಆಲ್ಲಿಂದಿಲ್ಲಿಗೆ ಬರಲು ಹಿಂದೂ ಸಿಖ್ಖರಿಗಾಗಿ ನಿರ್ಧರಿಸಿರುವ ಹಾದಿಯು ಸಾಮಾನ್ಯ ಹಾದಿಗಿಂತ ಎರಡು ಪಾಲಷ್ಟು ಹೆಚ್ಚು ದೂರದ ಹಾದಿ. ಮುಸ್ಲಿಂ ಸೇನೆಗಳು ಹಿಂದುಸ್ಥಾನಕ್ಕೆ ಬರಬಹುದು— ಆದರೆ ಸಿಖ್ ಸೇನೆಗಳು ಪಾಕಿಸ್ತಾನಕ್ಕೆ ಹೋಗಕೂಡದೆಂಬುದಕ್ಕೆ ನನ್ನ ಸರಕಾರವು ಒಪ್ಪಿದೆ ಎಂದು ನಾನು ಕೇಳುತ್ತೇನೆ. ಈ ಕ್ರೂರ ಪಕ್ಷಪಾತತೆಯನ್ನು ನಾನು ಖಂಡಿಸುತ್ತೇನೆ. ಜನಸಾಗೋಣ ವ್ಯವಸ್ಥೆಯೇನೂ ಸರಿಯಾಗಿಲ್ಲ. ಹೇಗೆಯೇ ಅದಲ್ಲಿ ಲಕ್ಷಾವಧಿ ನಿರಾಶ್ರಿತರ ಕೊಲೆಯಾದೀತು; ಇಲ್ಲವೇ ಅವರು ಹಾದಿಯಲ್ಲೇ ಸಾಯಬೇಕಾದೀತು. ನೀವು ರಾಜೀನಾಮೆ ಕೊಡಬೇಕೆಂದೇ ನನ್ನ ಸಲಹೆ. ಸೇನಾಧಿಕಾರಿಗಳ ಈ ಕ್ರೂರ ಹಾಗೂ ಸಹಾನುಭೂತಿರಹಿತ ಧೋರಣೆಯನ್ನು ಬಗ್ಗಿಸಲು ನಿಮ್ಮಿಂದಾಗದಿದ್ದರೆ, ನೀವೂ ಈ ಕಪಟ ಸ್ವಾತಂತ್ರ್ಯದ ಮಹತ್ವಾದ ವಂಚನೆಯು ಒಂದು ಉಪಕರಣವಾಗದೆ ಕೂಡಲೇ ರಾಜೀನಾಮೆ ಕೊಡಬೇಕೆನ್ನುತ್ತೇನೆ"— ರಕ್ಷಣಾ ಮಂತ್ರಿ ಸರ್ದಾರ್ ಬಲದೇವಸಿಂಗರಿಗೆ ಸಿಖ್ ನಾಯಕ ಮಾಸ್ಟರ್ ತಾರಾಸಿಂಗರ ತಂತಿ.

"ಹಿಂದೀ ಕೇಂದ್ರ ಮಂಡಲದ ತನ್ನ ಸ್ಥಾನಕ್ಕೆ ಸರ್ದಾರ್ ಬಲದೇವಸಿಂಗರು ರಾಜೀನಾಮೆ ಕೊಡಲಿ, ಬಿಡಲಿ; ನನಗದರಲ್ಲಾವ ಸಂಬಂಧವೂ ಇಲ್ಲ. ಆದರೆ ಪಶ್ಚಿಮ ಪಂಜಾಬಿನ ನಿರಾಶ್ರಿತ ನಿಲಯ ಮತ್ತು ಹಾದಿಗಳಲ್ಲಿ ಹಿಂದೂ ಸಿಖ್ಖರು ಸಹಸ್ರ ಸಂಖ್ಯೆಯಲ್ಲಿ ಕೊಲೆಮಾಡಲ್ಪಟ್ಟಿದ್ದಾರೆಂಬ ಅವರ ಆರೋಪದಲ್ಲಿ ಸತ್ಯದ ಛಾಯೆ ಕೂಡಾ ಇಲ್ಲ.ಮಾಸ್ಟರ್ ತಾರಾಸಿಂಗರಿಗೆ ನನ್ನ ಪಂಥಾಹ್ವಾನವಿದೆ. ಪೂರ್ವ ಪಶ್ಚಿಮ ಪಂಜಾಬುಗಳ ನಿರಾಶ್ರಿತನಿಲಯಗಳನ್ನೂ ಪಥಗಾಮೀ ತಂಗಡಗಳನ್ನೂ ಪ್ರತ್ಯಕ್ಷ ಪರೀಕ್ಷೆ ನಡೆಸಲು, ಒಂದು ಸ್ವತಂತ್ರ ವಿಚಾರಣಾ ಸಮಿತಿಯನ್ನು ಕೂಡಲೇ ನೇಮಿಸಲು ತಾರಾಸಿಂಗರೊಪ್ಪಲಿ. ಆ ಮೂಲಕ ಸತ್ಯ ಸಂಗತಿಯೇನೆಂಬುದಪ್ಪ ಲೋಕವೇ ತಿಳಿಯುವಂತಾಗಲಿ. ನಾನು ಕೊಟ್ಟ ಸತ್ತವರ ಹಾಗೂ ಸವಾರಿ ಹೋದವರ ಸಂಖ್ಯೆಗಳನ್ನು ನೆಹರು ಪ್ರತಿಭಟಿಸಿದ್ದಾರೆ. ನಾನವುಗಳನ್ನು ಬೇರೆ ಬೇರೆ ಮಾತ್ರ ಜನರಿಂದಲೇ ತಿಳಿದು ಸಂಗ್ರಹಿಸಿದುದು. 'ಈ ಸಮಯದಲ್ಲಿ ಸರಿಯಾದ ಲೆಕ್ಕ ಕಂಡು ಹಿಡಿಯಲು ಯಾರಿಂದಲೂ ಸಾಧ್ಯವಿಲ್ಲ' ಎಂದ ನೆಹರೂರವರೇ 'ಪಶ್ಚಿಮ ಪಂಜಾಬಿನ ಕೊಲೆಗಳ ಸಂಖ್ಯೆ ಪೂರ್ವ ಪಂಜಾಬಿಗಿಂತ ಹೆಚ್ಚೆಂದು ನಂಬಲು ಕಾರಣಗಳಿವೆ' ಎನ್ನುತ್ತಾರೆ. ಅದು ಹೇಗೆ ಎಂಬುದು ಅವರಿಗೇನೇ ಗೊತ್ತು'—ಮಿ. ಗಜ್ನಾಫರ್ ಆಲೀಖಾನರ ಪ್ರತ್ಯುತ್ತರ.

ಸೇನಾ-ಸೇನಾನಿಗಳೊಳಗೆ

"ತಾ.17ರಲ್ಲಿ ಪಶ್ಚಿಮ ಪಂಜಾಬಿನಿಂದ ಪೂರ್ವ ಪಂಜಾಬಿನೊಳಗಿನ ಬಲ್ಲೋಕಿ ಶಿರದ ಗಡಿಗೆ ಮುಸ್ಲಿಮೇತರ ನಿರಾಶ್ರಿತರ ದಳ ಬಂದಿತ್ತು. ಅದರಲ್ಲಿದ್ದ ಸಂಖ್ಯೆ ಹೀಗಿವೆ, ಕಾಲ್ನಡೆಯಿಂದ 35720, ಗಾಡಿಗಳಿಂದ 10,455 ದನಕರುಗಳು 3073, ಸೈಕಲುಗಳು 675, ಟೋಂಗಾಗಳು 85. ಈ ಪಥಿಕ ತಂಗಡವು ಈ ವಾರದಾದಿಯಲ್ಲಿ ಪಶ್ಚಿಮ ಪಂಜಾಬಿನಲ್ಲಿ ಎರಡು ಬಾರಿ ಪುಂಡರ ಧಾಳಿಗೊಳಗಾಯಿತು. ಒಂದು ಬಾರಿಯ ಧಾಳಿಯಿಂದ 123 ನಿರಾಶ್ರಿತರು ಮಡಿದು 200 ಮಂದಿ ಜಖಂಗೊಂಡಿದ್ದರು. ಮೈಗಾವಲಿಗಿದ್ದ ಹಿಂದುಸ್ಥಾನ್ ಸರಕಾರದ ಘೂರ್ಖಾದಳವು 15 ಮಿನಿಟುಗಳ ನಂತರ ಬಂದು ಧಾಳಿಗಾರ ತಂಗಡದಲ್ಲಿ 47 ಮಂದಿಯನ್ನು ಕೊಂದು ಓಡಿಸಿತು. ನಿರಾಶ್ರಿತ ಪಥಿಕ ದಳಗಳ ಮುಂಭಾಗದಲ್ಲಿ ವಿಮಾನಗಳು ಹಾರಾಡಿ ಹಾದಿಯಲ್ಲಿ ಧಾಳೀ ಪುಂಡರು ಸೇರಿದ್ದರೆ ಎಚ್ಚರಿಕೆ ಕೊಡುವ ವ್ಯವಸ್ಥೆಯೇನೋ ಇದೆ. ಆದರೆ ಒಮ್ಮೊಮ್ಮೆ ರಸ್ತೇ ಪಕ್ಕದಲ್ಲಿ ಗುಂಪುಕೂಡಿದವರನ್ನು ತಮ್ಮವರ ದಳವನ್ನು ಸೇರಿಕೊಳ್ಳಬೇಕೆಂದು ಕಾಯುತ್ತಿರುವ ನಿರಾಶ್ರಿತರೆಂದೇ ಭಾವಿಸುವ ಪ್ರಮಾದಗಳಾಗುವದಿದೆ. ಇಂತಹ ಧಾಳಿಗಳು ಪಶ್ಚಿಮ ಪಂಜಾಬಿನಲ್ಲಿ ಹಲವು ನಡೆದಿರಬೇಕು. ಆದರೆ ಪೂರ್ವ ಪಂಜಾಬಿನಿಂದ ಹೋಗುವ ಎಲ್ಲಾ ದಳಗಳೂ ಸುರಕ್ಷಿತವಾಗಿ ಮುಟ್ಟಿವೆ. ದಿಲ್ಲಿಯಲ್ಲಿ ಸುಮಾರು 121,000 ಮಂದಿ ಮುಸ್ಲಿಂ ನಿರಾಶ್ರಿತರಿದ್ದೂ ಅವರನ್ನು ಪಾಕಿಸ್ತಾನಕ್ಕೆ ಸಾಗಿಸಲು ಸೈನ್ಯ ಕಾವಲುಗಳನ್ನು ಪಾಕಿಸ್ತಾನ್ ಸರಕಾರ ಕಳುಹಿಸಿಲ್ಲ. ಹೋಶಿಯಾರ್‌ಪುರ ಮತ್ತು ಜಲ್ಲಂಧರುಗಳಲ್ಲಿ ಹಿಂದೀ ಸರಕಾರದ ಸೇನೆಗಳ ಮೇಲೂ ಪುಂಡರು ಗುಂಡುಹಾರಿಸಿದ್ದರು"—ದಿಲ್ಲಿಯಿಂದ ಹಿಂದುಸ್ಥಾನ್ ಸರಕಾರದ ಸೇನಾ ವಕ್ತಾರನೊಬ್ಬನ ಪ್ರಕಟಣೆ.

"ಪಾಕಿಸ್ತಾನದಲ್ಲಿರುವ ಮುಸ್ಲಿಮೇತರರ ಮೇಲೆ ಪಾಕಿಸ್ತಾನ್ ಸೇನೆಗಳು ಬಿದ್ದು ಕೊಲೆ ಸುಲಿಗೆ ನಡೆಸಿರುವೆಂಬ ನಿರಾಧಾರ ಸುದ್ದಿಯನ್ನು ಪ್ರಕಟಿಸುವುದು ಯೋಗ್ಯವೆಂದು ದಿಲ್ಲಿಯ ಓರ್ವ ಸೇನಾ ವಕ್ತಾರನು ಗಣ್ಣಿಸಿದುದನ್ನು ಕಂಡು ನನಗೆ ಅತ್ಯಂತ ಖೇದವಾಗುತ್ತದೆ. ಈ ಆರೋಪಗಳ ಕುರಿತು ಸರಿಯಾದ ತನಖೀಕ್ರಮ ಜರಗಿಸಿದಾಗ ಅವೆಲ್ಲಾ ಸಂಪೂರ್ಣ ನಿರಾಧಾರದ್ದೆಂದು ತಿಳಿದು ಬಂದಿದೆ. ಪಾಕಿಸ್ತಾನ್ ಸೇನೆಗಳು ಅಲ್ಪ ಸಂಖ್ಯಾಕರ ರಕ್ಷಣೆಯಲ್ಲಿ ಸರ್ವಸಾಹಸ ಪಟ್ಟಿವೆ. ಅತ್ಯಂತ ಕಷ್ಟದ ಸನ್ನಿವೇಶಗಳಲ್ಲಿ ಗಣ್ಯ ನಿಷ್ಪಕ್ಷಪಾತತೆಯನ್ನು ತೋರಿಸಿವೆ. ದಿಲ್ಲಿಯ ಸೇನಾ ವಕ್ತಾರನ ನುಡಿಗಳಂತಹವು ಗಲಭೆಯನ್ನು ಹೆಚ್ಚಿಸಬಹುದೆಂದೂ ಹಿಂದುಸ್ಥಾನ್ ಪಾಕಿಸ್ತಾನಗಳಲ್ಲಿ ಶಾಂತಿ ಸ್ಥಾಪಿಸಬೇಕೆಂದು ಒದ್ದಾಡುತ್ತಿರುವವರ ಕಾರ್ಯಗಳನ್ನು ಅತ್ಯಂತ ಕಠಿಣಗೊಳಿಸಬಹುದೆಂದೂ ಪ್ರತ್ಯೇಕ ಹೇಳಬೇಕೆಂದಿಲ್ಲ"—ಪಾಕಿಸ್ತಾನದ ಸೇನಾನಿ ಜನರಲ್ ಸರ್. ಫ್ರೇಂಕ್ ಡಬ್ಲ್ಯು ಮೆಸ್ಸರ್ವೆಯವರ ಹೇಳಿಕೆ.

WARDEN

Reaches New Heights in 1946.

Business Received ... ... Rs. 2,04,00,000
Business Completed ... Rs. 1,72,00,000

THIS represent the latest and greatest achievement in WARDEN'S progressive career.

For this fine performance the Company extends its heartiest thanks and congratulations to its representatives and policy-holders all over the country and abroad

Shivaprasad Thaker, *M. Sunderam Shetty.*

At Mangalore

B. Sachidananda Hegde, *K. P. Bhavanishanker Shetty,*

ಪಾನ ನಿಷೇಧದ. ಜಿಲ್ಲೆಗಳಲ್ಲಿ.

ಪಾನನಿಷೇಧದ ಸಂಕಟ

ಇದೇ ತಾ 1-10-47 ನೇ ಬುಧವಾರ ದಿಂದ ಮದ್ರಾಸ್ ಪ್ರಾಂತ್ಯದ ತಂಜಾವೂರು, ತಿರುಚಿನಾಪಳ್ಳಿ, ಮಧುರಾ, ಗುಂಟೂರು, ನೆಲ್ಲೂರು, ಮಲಬಾರು, ನೀಲಗಿರಿ ಮತ್ತು ದಕ್ಷಿಣಕನ್ನಡಾಜಿಲ್ಲೆಗಳಲ್ಲಿ ಪಾನನಿಷೇಧವು ಜ್ಯಾರಿಗೆ ಬರುವುದು.

ಆ ದಿನ, ಸಭೆ, ಮೆರವಣಿಗೆ, ಸಿನೆಮಾ ಡೇಮಾವೆ, ನಾಟಕ ವಿನೋದಗಳು-ಇತ್ಯಾದಿ ವಿವಿಧ ಸಂಭ್ರಮಗಳೊಡನೆ ಅಮಲು ನಿಷೇಧ ಉದ್ಘಾಟನೋತ್ಸವವು ಮೇಲಿನ ಎಂಟು ಜಿಲ್ಲೆಗಳಲ್ಲೂ ಜರಗಲಿದೆ. ಅದೊಂದು ದಿವಸದ ಮಟ್ಟಿಗೆ ಹಿಂದಿನ ಶರಾಬು ಅಂಗಡಿಗಳಲ್ಲಿ, ಅಥವಾ ಅವುಗಳ ಸಮೀಪದಲ್ಲಿ ಧರ್ಮಾರ್ಥ ಚಹಾ ಹಂಚುವ ವ್ಯವಸ್ಥೆಯನ್ನು ಸರಕಾರವೇ ಮಾಡಿದೆ. ಅದಕ್ಕಾಗಿ ಪ್ರತಿಯೊಂದು ಅಂಗಡಿಗೆ ರೂ. 50ರಂತೆ ಸರಕಾರವು ಹಣ ಮಂಜೂರು ಮಾಡಿದೆ. ಈ ಧರ್ಮಾರ್ಥ ಚಹಾ ದಾನವನ್ನು ಮತ್ತೂ ಕೆಲಕಾಲ ಜಾರಿಯಲ್ಲಿಡಲಾಗುವಂತೆ ಸಾರ್ವಜನಿಕರು ಹಣ ಸಹಾಯ ಮಾಡಬೇಕೆಂದು ಪಾನನಿಷೇಧ ಮಂತ್ರಿ ಮಿ. ಡೇನಿಯಲ್ ಥೋಮಸರು ವಿಜ್ಞಾಪಿಸಿಕೊಂಡಿದ್ದಾರೆ. ಆದ್ದರಿಂದ 'ಧರ್ಮಾರ್ಥ ಚಹಾ' ವ್ಯವಸ್ಥೆ ಮತ್ತೂ ಕೆಲವು ದಿನವಿರಬಹುದು. ಆದರೆ ಅಲ್ಲಿ ಚಹಾ ಕುಡಿಯಲು ಬಂದವರ ಹೆಸರು ಪಡಕೊಳ್ಳುವ ಕ್ರಮವಿರಬಹುದು; ಹೀಗಾಗಿ ಈ ಚಹಾಪಾನಿಗಳೆಲ್ಲರೂ ಹಿಂದಿನ ಸುರಾಪಾನಿಗಳ ದಾಖಲೆಗೆ ಸೇರಬೇಕಾಗುವದೇನೊ!

ಒಕ್ಟೋಬರ್ 1ರ ಪಾನನಿಷೇಧದ ಉದ್ಘಾಟನೆಗಾಗಿ ಆ ಎಂಟು ಜಿಲ್ಲೆಗಳಲ್ಲಿ ಮದ್ರಾಸ್ ಮಂತ್ರಿಗಳು ಒಕ್ಟೋಬರ್ ತಾ 1ರಿಂದ 4ರ ವರೆಗೆ ಸಂಚರಿಸಲು ಈ ಕೆಳಗಿನಂತೆ ನಿಶ್ಚಯಿಸಿದ್ದಾರೆ: ಡಾ. ಸುಬ್ಬರಾಯನ್-ತಂಜಾವೂರು. ಡಾ| ರಾಜನ್ ಮತ್ತು ಶ್ರೀ. ಎಮ್. ಭಕ್ತವತ್ಸಲಮ್-ತಿರುಚನಾಪಳ್ಳಿ. ಪ್ರಧಾನಿ ಶ್ರೀ ಓಮಂದರು ಮತ್ತು ಶ್ರೀ ಮಾಧವ ಮೆನನ್-ಮಲಬಾರು. ಶ್ರೀ ಸೀತಾರಾಮರೆಡ್ಡಿ ಮತ್ತು ಶ್ರೀ. ಎ. ಬಿ. ಶೆಟ್ಟಿ-ದಕ್ಷಿಣಕನ್ನಡ. ಶ್ರೀ. ಟಿ. ಯಸ್. ಅವಿನಾಶಲಿಂಗಂ ಚೆಟ್ಟಿಯಾರ್-ನೀಲಗಿರಿ. ಶ್ರೀಗಳಾದ ಕಾಳ ವೆಂಕಟರಾವ್, ಗೋಪಾಲರೆಡ್ಡಿ, ಕೆ. ಚಂದ್ರಮೌಳಿ-ಗುಂಟೂರು ಮತ್ತು ನೆಲ್ಲೂರು. ಮಿ. ಡಾನಿಯಲ್ ಥೋಮಸ್-ಮಧುರಾ.

ದಕ್ಷಿಣ ಕನ್ನಡ್ಜಜಿಲ್ಲೆಯೊಂದರಿಂದಲೇ ಈ ಪಾನ ನಿಷೇಧದಿಂದಾಗಿ ಮದ್ರಾಸ್ ಸರಕಾರಕ್ಕಾಗುವ ವಾರ್ಷಿಕ ನಷ್ಟ 50 ಲಕ್ಷ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ.

ದ. ಕ. ಜಿಲ್ಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸಾರ್ವಜನಿಕರ ಸಹಾಯ ಪಡೆದು ಈ ನಿಷೇಧೋತ್ಸವದ ಸರ್ವಸಿದ್ಧತೆಗಳನ್ನು ಜರಗಿಸುತಿದ್ದಾರೆ. ಒಕ್ಟೋಬರ್ 1ನೇ ತಾರೀಕು ದಕ್ಷಿಣ ಕನ್ನಡಾ ಜಿಲ್ಲೆಯ ಚರಿತ್ರೆಯಲ್ಲಿ ಉಲ್ಲೇಖಿಸಲ್ಪಡುವಂತಹದಾಗಲಿದೆ.

ಋತುಸ್ರಾವ ನಿಂತಿತು

'ಚುಮಾರ' ದಿಲ್ಲೆಗಳನ್ನು ಉಪಯೋಗಿಸಿದರೆ ಪಡೆತಪ್ಪಿ ಋತುಸ್ರಾವವಾಗುವುದು ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಕಷ್ಟವಿಯಿಲ್ಲ. ಶಾನಿಕಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಪನ್ನೆರಡಾಣೆ ಪ್ರತ್ಯೇಕ.]

MRS. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಸಾಮಾನ್ಯರ ಸವಾಲುಗಳು

ಬರುವ ಒಂದನೇ ತಾರೀಕಿನಿಂದ 'ಕುಡಿಯಲಿಕ್ಕಿಲ್ಲ' ಎಂಬುದೀಗ ದ. ಕ. ಜಿಲ್ಲೆಯ ಸರ್ವರಿಗೂ ತಿಳಿದಿದೆ. ಕುಡಿಕ ಜನಸಾಮಾನ್ಯರ ಇಂದಿನ ಮನೋಗತಿಯನ್ನು ಕಂಡಲ್ಲಿ—ಅಪರಿಹಾರ್ಯವಾದ ಹೊಸ ವಿಪತ್ತೊಂದು ತಮಗೊದಗಿತು-ಎಂಬ ತೀರ್ಮಾನಕ್ಕೆ ಬಹುಮತವು ಬಂದಂತೆ ಕಾಣುತ್ತಿದೆ.

ಕುಡಿಕರಲ್ಲದವರಿಗೆ, ನಿಯೋಜಿತ ಬಹಿಷ್ಕಾರಕ್ಕಾಗಿ ಕುಡುಕರನ್ನು ಹಂಗಿಸೋಣವೆಂದು ಎದ್ದಿರುವ ಉತ್ಸಾಹವಷ್ಟೇ ನಿರುತ್ಸಾಹವು ಕುಡಿಕರಾದವರಲ್ಲೀಗ ನಿಜಕ್ಕೂ ಕಂಡುಬರುತ್ತಿಲ್ಲ. ಆ ದಿನಕ್ಕಿನ್ನೂ ಕೆಲವು ದಿನಗಳಿವೆ, ಎಂಬುದೊಂದು ಸಮಾಧಾನವಾದರೆ, 'ಹೋಗಲಿ! ಹೋಗುವುದೊಳ್ಳೆಯದೇ' ಎಂಬ ಅಭಿಪ್ರಾಯಗಳಿಗೂ ಅಭಾವವಿಲ್ಲ. ಆದರೆ ನಿಷೇಧಕ್ಕೆ ದೊರೆಯುವ ಈ ವರ್ಗದ ಸಮರ್ಥನೆಯು ಮನಃಪೂರ್ವಕದ್ದಲ್ಲವೆಂಬುದು ನಿರ್ವಿವಾದ- ತಾವೀ ದುರಾಭ್ಯಾಸಕ್ಕೆ ಬಲಿಬಿದ್ದವರಿರುವುದಕ್ಕಾಗಿ ಸದ್ಯಃಹಸ್ತರಿದಿರು ನಾಚದವರು ನಮ್ಮಲ್ಲಿ ಅಪರೂಪ. ದುಶ್ಚಟವೊಂದು ತೊಲಗುವುದೆಂದು ಎಲ್ಲರೂ ಹಿಗ್ಗುವಾಗ, ಅದಕ್ಕಾಗಿ ತಾವು ಮಾತ್ರ ತಗ್ಗಿ ಅಸಹಾಸ್ಯಕ್ಕೀಡಬಾರದೆಂಬ ಆತ್ಮವಂಚನೆಯೇ ಈ 'ಹೋಗಲಿ' ಉದ್ಗಾರದಲ್ಲಿದೆ. ಇದು ಹೆದರಿ ಹೆದರಿ ಕುಡಿಯುವ ವರ್ಗದ ಮನೋವೃತ್ತಿ.

'ಕುಡಿಕ'ರೆಂಬ ಕಾರಣದಿಂದ ಸ್ಥಾನಮಾನ ತಪ್ಪದ 'ಮಿತಃಖಡಿ ಕುಡಿಕ'ರಲ್ಲಿ ಈ ಕುರಿತು ಸಕಾರಣ ಆಕ್ಷೇಪಗಳು ಕಂಡು ಬರುತ್ತಿವೆ. ಅವುಗಳಲ್ಲಿ ಮುಖ್ಯವಾದುವು.—

1. ಕಳ್ಳು ಶರಬುಗಳಿಂದ ದೇಹಕ್ಕೆ, ಆರೋಗ್ಯಕ್ಕೆ ಹಾನಿಯಿದೆಯೆಂಬ ಅನುಭವವೇ ನಮಗೀತನಕ ಆಗಿಲ್ಲ. ಬದಲಿಗೆ ಸಂಜೆಗೊಂದು ಬಾಟ್ಲಿಯಾದರೂ ಬೀಳದಿದ್ದರೆ ದಿನವಿಡೀ ದುಡಿದ ನಮ್ಮ ಸೈನೋವು ಹೋಗುವುದಿಲ್ಲ. ತಲೆ ಹಾಳಾಗುತ್ತದೆ ಎಂಬ ಮಾತು ನಮ್ಮ ಮಟ್ಟಿಗೆ 'ಕುಡಿಯದಿದ್ದರೇನೇ" ಹೊರತು ಕುಡಿಯುವುದರಿಂದಲ್ಲ. ಕುಡಿದವರಲ್ಲಿ ಹೆಚ್ಚಿನವರು ಉದ್ದೇಶಪೂರ್ವಕವಾಗಿ, ಪ್ರಭಾವ ಪ್ರದರ್ಶನಾಕಾಂಕ್ಷಿಗಳಾಗಿ, ವಿಕಾರ ವರ್ತನೆ, ಹುಚ್ಚು ಮಾತುಗಳಿಗಿಳಿಯುತ್ತಾರೆ ಹೊರತು ಅಮಲು ಹಾಗೆಲ್ಲಾ ಮಾಡಿಸುವುದಿಲ್ಲ. ವಿನೀತ ಶ್ರಮಜೀವಿಗಳು ಕುಡಿದು ಗಲಭೆ ಮಾಡಿದ ನಿದರ್ಶನಗಳು ಅತ್ಯಂತ ವಿರಳವಿರುವಾಗ ನಿಕ್ಕವರು ಮಾತ್ರ ಆ ಹುಚ್ಚಾಟ ಪ್ರದರ್ಶಿಸುತ್ತಾರೆ.

2 ಕಾಫಿ, ಟೀಗಳಾಗಲೀ ಹೊಗೆಬತ್ತಿ ಸೇವನೆಯಾಗಲೀ ಆರೋಗ್ಯದಾಯಿಗಳೆಂದು ಯಾರೂ ಹೇಳುವದಿಲ್ಲ. ಆದರೆ ಅವುಗಳನ್ನು ನಿಷೇಧಿಸುವವರೂ ಇಲ್ಲ. ದುಡ್ಡಿನ ದೃಷ್ಟಿಯಿಂದ ನೋಡಿದರೂ ಒಬ್ಬ ಚಾ ಅಭ್ಯಾಸಿಯು ತನ್ನ ಉತ್ಪತ್ತಿಯನ್ನು ಆ ಚಟಕ್ಕಾಗಿ ವ್ಯಯಿಸುವಷ್ಟು ಹೆಂಡಕುಡಿಕ ವ್ಯಯಿಸುವದಿಲ್ಲ. ಅದೂ ತಾತ್ಕಾಲಿಕ ಸ್ಫೂರ್ತಿ ಕೊಡುವಂತಹದು; ಇದೂ ಹಾಗೆಯೇ. ಮಿತಿಮೀರಿ ಹೋದಲ್ಲಿ ದೇಹ-ಬುದ್ಧಿಗಳ ಪಾಲಿಗೂ ಇವೆರಡೂ ಒಂದೇ. ಕಳ್ಳಂಗಡಿ ಮುಚ್ಚಿದಂತೆ ಹೊಟೆಲುಗಳನ್ನೂ ಮುಚ್ಚಿಸಬಾರದೇಕೆ?

3. ಆಹಾರಾಭಾವದ ಈ ಕಾಲದಲ್ಲಿ ನಮ್ಮ ಒಪ್ಪೊತ್ತಿನ ಊಟವೇ ಇದಾಗಿತ್ತು; ಕಷ್ಟ ನಿವಾರಕರು ಬೇರಾರೂ ಇಲ್ಲದ ನಮ್ಮ ದುಃಖವನ್ನು ಮರೆಯಿಸಿ, ಹಲೆಯಲ್ಲಿ ಗೆಲವನ್ನು ತುಂಬಿಸುವ ಉಪಕಾರಿಯೇ ಇದಾಗಿತ್ತು. ಇದನ್ನು ನಿಲ್ಲಿಸಿ ನಮಗನ್ಯಾಯ ಮಾಡಿದರು.

ಉಳಿದವರ ಅಂತರ್ಯದಲ್ಲಿ—

ತಾವು ಶಿಕ್ಷಿತರು, ನಾಗರಿಕರು, ಉತ್ತಮ ವರ್ಗದವರು ಎಂದು ಭಾವಿಸಿರುವವರಿಗೆ ಈ ಪಾನ ನಿಷೇಧವನ್ನು ವಿರೋಧಿಸುವ ನಾಲಿಗೆಯಿಲ್ಲವಾದರೂ ಹೃದಯವಿದೆ! ಅವರ ಆಕ್ಷೇಪಗಳು ಕೇಳಬರುತ್ತಿಲ್ಲ. ಆದರೆ ನಿಜಕ್ಕೂ ಅಂತರಂಗದಲ್ಲೀಗ ಕೇಳಿಯಾಡುತ್ತಿವೆ! ಮುಖ್ಯವಾಗಿ:—

1. ಸರಕಾರವು ಈ ಅಮಲು ನಿಷೇಧದಿಂದಾಗಿ ತನಗೆ ಬೀಳುವ ಹೇರಳ ನಷ್ಟವನ್ನು ತುಂಬಿಕೊಳ್ಳಲು ವಿಶೇಷ ರೀತಿಯ ಕರಕಂದಾಯಗಳನ್ನು ಹೇರುವುದಿಲ್ಲವೆ? ಅವೆಲ್ಲಾ ನಮ್ಮ ಮೇಲೆಯೇ ಬೀಳಲಾರವೆ? ಕುಡಿಯುವವರ ದುಡ್ಡನ್ನು ಉಳಿಸಿಕೊಟ್ಟ ಅಂಶವನ್ನು ಕೂಡಿಸಿಡುವವರ ಮೇಲೆ ತೆರಿಗೆ ಹಾಕಿ ವಸೂಲು ಮಾಡುವ ಕ್ರಮವು ಗಾಂಧೀ ತತ್ವವೋ? ಕಮ್ಯೂನಿಸ್ಟರದ್ದೋ?

2. ಈಗ ಕುಡಿಯದವರಾರಿದ್ದಾರೆ? ಕುಡಿಕತನ ನಿಲ್ಲಿಸುವ ಜವಾಬ್ದಾರಿ ಬದ್ದಿರುವ ಪೋಲಿಸು ಖಾತೆಯು ಸಾಮಾನ್ಯ ಪೋಲಿಸನಿಂದಾರಂಭಿಸಿ, ತುತ್ತ ತುದಿಯ ಅಧಿಕಾರಿಯ ವರೆಗಿನ ಎಲ್ಲರೂ ಕುಡಿಕರೇ. ಸರಕಾರದ ಸರ್ವ ಖಾತೆಗಳ ಎಲ್ಲಾ ದೊಡ್ಡ ದೊಡ್ಡ ಅಧಿಕಾರಿಗಳಿಗೂ, ಕುಡಿಯದೆ ಬಂದು ಕುಳಿತರೆ ಲೇಖನಿಯೋಡುವಂತಿಲ್ಲ! ಅಂದಮೇಲೆ ಬುಡದಿಂದ ತುದಿಯವರೆಗಿನ ಎಲ್ಲಾ ಕಾರ್ಯೋತ್ಸಾಹಗಳಿಗೂ ಸರಕಾರವು 'ಬ್ರೇಕ' ಹಾಕಿದಂತಾಗುವದಿಲ್ಲವೆ?

3. ಈಗಲೇ ಕಾಫಿ ಹೊಟೆಲುಗಳ ತಿಂಡಿ ಪಾನಗಳ ಅವಸ್ಥೆ ಹೇಳ ತೀರದು. ಗುಕ್ಕಿಗೆ ನುಂಗುತಿದ್ದವರೆಲ್ಲಾ ಇನ್ನು ಮುಪೆ ಹೊಟೆಲು ನುಗ್ಗುವಾಗ ಗಿರಾಕಿಗಳ ಪಾಡು?

4. ದೂರದ ಹಳ್ಳಿ ಮೂಲೆಗಳಲ್ಲಿ ಈಗಲೂ ಹುಳಿ, ಕಬ್ಬು, ಬೆಲ್ಲ, ಬತ್ತ, ಗೇರುಹಣ್ಣು ಇತ್ಯಾದಿಗಳ ಶರಾಬು ತಯಾರಾಗುವದಿದೆ. ಇನ್ನು ಕಳ್ಳ ವ್ಯಾಪಾರ ಹೆಚ್ಚಲಾರದೆ? ಹಿಡಿಯಲು ಹೋಗುವ ಅಧಿಕಾರಿಗಳೂ ಅವುಗಳ ಭಕ್ತರೇ ಆದ್ದರಿಂದ, ಅವರು ಪತ್ತೆ ಮಾಡಲು ಹೋದಂತಾಗುವ ಬದಲಿಗೆ ಫಲಹಾರಕ್ಕೇನೇ ಹೋದಂತಾಗದೆ?

5. ಮೊದಲೇ ನಮ್ಮೂರಿನಲ್ಲಿ ಜನ ನಿಲ್ಲಲು ಕೇಳುವದಿಲ್ಲ. ಇನ್ನಂತೂ ಎಲ್ಲರೂ ಮೈಸೂರು, ಬೊಂಬಾಯಿ ಆ ಕಡೆಗೆ ಹೊರಡಲಿದ್ದಾರೆ!

6. ಇಷ್ಟರ ವರೆಗೆ 'ಕುಡಿದು ಮಾಡುತ್ತಾನೆ' ಎಂದು ಕ್ಷಮಿಸಲಾಗುತ್ತಿತ್ತು; ಮನಬಂದಂತೆ, ಅನುಕೂಲ ತೋರಿದಂತೆ ಅವರಿಂದ ಬೇಕಾದ ಕೆಲಸ ಮಾಡಿಸಿಕೊಳ್ಳಲಾಗುತ್ತಿತ್ತು; 'ಅವರು ಕುಡಿಕರು-ನಾವು ಅಂಥವರಲ್ಲ' ಎಂಬ ತಾರತಮ್ಯವಿತ್ತು; ಇನ್ನು ಈ ಅನುಕೂಲತೆ, ಮೇಲು-ಕೀಳು ದರ್ಜೆ ಯಾವುದೂ ಇಲ್ಲ!

While Insuring
your Life, Property, Motor Vehicles, etc ,

Consult

INTERNATIONAL COMMERCIAL CORPORATION LTD.,
Head Office: UDIPI, S. K.
Branches: Bailur & Bellary.

Principal Agents for

UNITED KARNATAKA INSURANCE CO. LTD.,
DHARWAR.

Our Investment Department at your Service

•ಜಾತಿ ಜಗಳದ •ಕ್ಷೇತ್ರಗಳಲ್ಲಿ

ಜಾತಿ ದಂಗೆಯ ಪಾಠಗಳು

ಪಂಜಾಬು, ಡಿಲ್ಲಿ, ಸಿಂಧ್, ಗಡಿನಾಡು, ಸಂಯುಕ್ತಪ್ರಾಂತ್ಯ, ಇತ್ಯಾದಿ ಉತ್ತರ ಭಾರತ ಕ್ಷೇತ್ರಗಳಲ್ಲಿ ನಡೆದಿರುವ ಜಾತೀಯ ಹುಚ್ಚಿನ ಅಭೂತಪೂರ್ವ ಅತ್ಯಾಚಾರಗಳು ಸರ್ವ ಭಾರತೀಯರನ್ನೂ 'ನಾವು ಸ್ವತಂತ್ರರಾದೆವು' ಎಂದು ಹೆಗ್ಗಳಿಕೆಯಿಂದ ತಲೆಯೆತ್ತುವ ಕಾಲದಲ್ಲೇ 'ನಾವು ಪ್ರಾಣಿಗಳಂತಾದೆವು" ಎಂದು ಲಜ್ಜೆಯಿಂದ ತಲೆತಗ್ಗಿಸುವಂತೆ ಮಾಡಿವೆ. ಆದರೆ ಈ ಅಧೋಗತಿಯಲ್ಲೂ ನಾವು ಅರಿತುಕೊಳ್ಳಬೇಕಾದ ಕೆಲವು ಅಂಶಗಳಿವೆ.

ಪಂಜಾಬು ಆಂದೋಲನದಿಂದ ಭಾರತ ಸರಕಾರಕ್ಕಿಂತಲೂ ಪಾಕಿಸ್ತಾನ್ ಸರಕಾರಕ್ಕೊದಗಿರುವ ಅಡಚಣೆಗಳು ಹೆಚ್ಚಿನವು. ಅದು ಹೊಸತಾಗಿ ಸ್ಥಾಪನೆಗೊಂಡ ಸರಕಾರ. ಈ ಗೊಂದಲಗಳು ಅದರ ಪಾಲಿಗೆ ಹುಟ್ಟಿದ ಮಗುವಿಗೆ ಕಬ್ಬಿಣದ ಕಡಲೆ ಜಗಿಯಲು ಕೊಟ್ಟಂತಾಗಿದೆ.

ಸದ್ಯದ ಗಲಭೆಗಳು ಹಿಂದುಸ್ಥಾನದ ಕೆಲವು ಭಾಗಕ್ಕೆ ಮಾತ್ರ ಸೋಂಕಿವೆ; ಉಳಿದ ಭಾಗಗಳು ಶಾಂತವಿದ್ದು ಯಥಾಪ್ರಕಾರ ತಮ್ಮ ಕಾರ್ಯಭಾರ ಸಾಗಿಸುತ್ತಿವೆ. ಆದರೆ ಪಾಕಿಸ್ತಾನವಿಡೀ -ಅಥವಾ ಕಡಿಮೆಯೆಂದರೆ ಮುಕ್ಕಾಲಂಶದಲ್ಲಿ ಈ ಗಲಭೆ ವ್ಯಾಪಿಸಿ, ಅಲ್ಲಿಯ ಸರಕಾರಕ್ಕದು ಮೂಗಿನ ವರೆಗೇರಿದ ಪ್ರವಾಹವೇ ಆಗಿದೆ.

ಪಾಕಿಸ್ತಾನ್ ಘಟನಾ ಸಮಿತಿಯ ಉದ್ಘಟನೆ ಮಾತ್ರ ನಡೆಯಿತು; ಉದ್ಯೋಗವೇನೂ ನಡೆಯದಂತೆ ಈ ಗೊಂದಲವದಕ್ಕೆ ತಡೆಯಾಯಿತು. ಆರಂಭದ ಮಿಕ್ಕೆಲ್ಲಾ ಕಾರ್ಯಕಲಾಪಗಳೂ ಬಾಕಿ ಬಿದ್ದಿವೆ. ವ್ಯಾಪಾರ ವ್ಯವಹಾರ ಕುಶಲರಾದ ಅಲ್ಲಿಯ ಹಿಂದೂ ವರ್ತಕ ಸಮಾಜಗಳೂ ಶ್ರೀಮಂತರೂ ತಮ್ಮ ಸಂಪತ್ತು, ಸಲಕರಣೆಗಳೊಡನೆ ಅಲ್ಲಿಂದ ಕಾಲು ಕೀಳ ಹತ್ತಿದುದರಿಂದ ಪಾಕಿಸ್ತಾನ್ ಬಸವಾಗಿದೆ.

ತಾವು ಹೊಡೆಯತಕ್ಕವರು— ಮಿಕ್ಕವರನ್ನು ಪಡೆಯತಕ್ಕವರು, ಎಂದಿದ್ದ ಲೀಗ್ ಮುಸ್ಲಿಮರ ಭಾವನೆಯನ್ನು ಪಂಜಾಬು ಗೊಂದಲ ಅಡಿಮೇಲು ಮಾಡಿದೆ. ಆ ಗಲಭೆಯಲ್ಲಿ ಹೆಚ್ಚಿನ ಹಾನಿಗೊಳಗಾದವರು ಹಿಂದೂ ಸಿಖ್ಖರಿದ್ದರೂ ಬ್ರಿಟಿಷರಿರುವಾಗ ತಮ್ಮ ತಾಂಡವ ನೃತ್ಯಕ್ಕೆ ದೊರೆತಿದ್ದ ರಂಗಕ್ಕೂ, ಸ್ವತಂತ್ರ ರಾಷ್ಟ್ರದ ಇಂದಿನ ರಂಗಕ್ಕೂ ವ್ಯತ್ಯಾಸವಿದೆ, ಎಂಬ ಕಟು ಅನುಭವವೀಗ ಮುಸ್ಲಿಮರಿಗಾಗಿದೆ.

ಪಾಕಿಸ್ತಾನವಿಂದು ಅಸ್ತಿತ್ವಕ್ಕೆ ಬಂದಿದೆ ಹೊರತು ಅದರ ಜೀವನವೊಂದು ಆಕಾರಕ್ಕೆ ಬಂದಿಲ್ಲ. ಗಲಭೆ ವ್ಯಾಪಿಸಿಕೊಂಡರೆ ಅದು ಪಾಕಿಸ್ತಾನದ ರೂಪರೇಖೆಯಲ್ಲೇ ಸೇರಿ ನಿಲ್ಲುವ ಅಪಾಯವಿದೆ. ಆದ್ದರಿಂದ ಕೂಡಲೇ ಈ ಗೊಂದಲ ನಿಲ್ಲಲಿ,ಎಂದು ಕೇವಲ ಹೆದರಿಸುವದಕ್ಕಾಗಿ ಜಾಗತಿಕ ಸಂಘದ ಪಾಕಿಸ್ತಾನ್ ಪ್ರತಿನಿಧಿ ಸರ್. ಜಫರುಲ್ಲಾಖಾನರು 'ದೂರು ಕೊಟ್ಟು ನೋಡುವೆವು-ಆ ಮೇಲೆ ಒಂದು ಕೈ ನೋಡಿಯೇ ಬಿಡುವೆವು' ಎಂದು ಡಂಗುರ ಬಾರಿಸಿದುದು! ತನ್ನ ಸರಕಾರವು ತನಗಾ ಸೂಚನೆ ಕೊಟ್ಟಿಲ್ಲವೆಂದು ಅವರೇ ಒಪ್ಪುತ್ತಾರೆ.

ಪಾಕಿಸ್ತಾನ್ ಹುಟ್ಟುವ ಮೊದಲು ಅದರ ಮೇಲಿದ್ದ ಮಮತೆ ಈಗ ಯಾವನೊಬ್ಬ ಮುಸಲ್ಮಾನನಿಗೂ ಇಲ್ಲವೆಂಬುದು ಖಂಡಿತ.

ಅರ್ಥಗರ್ಭಿತ ಘಟನೆಗಳು

ಹಿಂದಿನ ಬಾರಿ ನವಾಖಾಲಿಗೆ ಹೋಗಿದ್ದಾಗ ಗಾಂಧೀಜೀಗೆ ಮುಸಲ್ಮಾನರಿಂದ ದೊರೆಯದಿದ್ದ ಬೆಲೆಯು ಈ ಬಾರಿ ಅವರು ಕಲ್ಕತ್ತೆಗೆ ಹೋದೊಡನೆಯೇ ದೊರೆಯಿತು. ಹೆಚ್ಚೇನು, ಅಲ್ಲಿಯ ಹಿಂದುಗಳಿಗಿಂತ ವಿಶೇಷವಾಗಿ ಮುಸಲ್ಮಾನರು ಗಾಂಧೀ ಭಕ್ತರಾಗಿರುವುದು ಕಂಡುಬಂತು. ಇದಕ್ಕೆ ಕಾರಣ, ಬಂಗಾಳವು ತುಂಡಾಗಿ ತಮಗಿಲ್ಲಿ ದೊರೆತ ಪಾಲಿಗೆ ಇತರ ಪಾಕಿಸ್ತಾನ್ ಪ್ರಾಂತ್ಯಗಳ ಪ್ರತ್ಯಕ್ಷ ಕೈಗಟುಕದಷ್ಟು ದೂರವಿರುವುದೇ. ಪಾಕಿಸ್ತಾನ್ ಬಂಗಾಳವೀಗ ನಿಸ್ಸಹಾಯಕ ಸ್ಥಿತಿಗೀಡಾಗಿವೆ. ಇನ್ನು ಸಮೀಪದ ಹಿಂದುಗಳ ಸಹಾಯವೇ ತಮ್ಮಾಶ್ರಯವೆಂದು ಅಲ್ಲಿಯ ಮುಸ್ಲಿಮರು ಗಾಂಧೀ ಕೃಪ ಛತ್ರದಡಿಗೆ ಸೇರಿದ್ದಾರೆ.

ಡಿಲ್ಲಿಯಲ್ಲಾದರೂ ಸರಿಯೇ. ಗಾಂಧಿಜೀಯನ್ನು ಅಲ್ಲಿಯ ಮುಸ್ಲಿಮರು ತಮ್ಮ ಆಶ್ರಯದಾತನೆಂದು ಭಾವಿಸಿದ್ದಾರೆ. ಅಲ್ಲಿಯ ಮುಸ್ಲಿಮರಿಗೆ ಕಳ್ಳ ರೀತಿಯಿಂದ ಮೆಶಿನ್‌ಗನ್ನು ಹಾಗೂ ಇತರ ಗನ್ನುಗಳ ಸರಬರಾಯಿಯಾಗಿತ್ತು; ಅವೆಲ್ಲವನ್ನೂ ತಂದೊಪ್ಪಿಸಬೇಕೆಂದು ಗಾಂಧಿಜೀ ಒತ್ತಿಒತ್ತಿ ಹೇಳಿದಂತೆ ಈಗ ಡಿಲ್ಲಿಯ ಮುಸ್ಲಿಮರು ತಮ್ಮ ಲೈಸೆನ್ಸ್‌ರಹಿತ ಸರ್ವಾಯುಧಗಳನ್ನೂ ತಂದೊಪ್ಪಿಸಿ, ತಾವು ಹಿಂದೀ ಸರಕಾರದ ನಮ್ರ ಪ್ರಜೆಗಳೆಂದು ಹೇಳಿಕೊಂಡಿದ್ದಾರೆ. ಇಂತಹ ಆಯುಧಗಳನ್ನು ಪಡಕೊಳ್ಳುವ ಅಧಿಕಾರವನ್ನು ಸರಕಾರವು ಮೌಲಾನಾ ಅಹಮ್ಮದ್ ಸಯೀದ್, ಹಾಫಿಝುರ್ ಹಸಾನ್ ಬಾಕ್ವಿಯು, ಮೌ. ಹಾಫ್ಝುರ್ ರಹಿಮಾನ್, ಹಾಫಿಝುರ್ ಮಹಮ್ಮದ್ ಯನ್. ಬಟನ್‌ವಾಲಾ, ಖಾನ್ ಬಹದೂರ್ ಅಬಿಬುರ್ ರಹಿಮಾನ್, ಡಾ। ರಾಮ ಮನೋಹರ ಲೋಹಿಯಾ, ಶ್ರೀ ಡಿ. ಯಮ್. ಮಾಲಿಕ್ ಇವರಿಗೆ ಕೊಟ್ಟಿದೆ.

ಡಿಲ್ಲಿಯ ಕೆಲವು ಸನ್ಮಾನ್ಯ ಹಾಗೂ ಗಣ್ಯ ಭಾಗವಾಗಿರುವ ಮುಸ್ಲಿಮರ ನಿರ್ಧಾರವಂತೂ ಪಾಕಿಸ್ತಾನದ ವರ್ಚಸ್ಸಿಗೇನೇ ಕುತ್ತಾರಪ್ರಾಯವಾಗಿದೆ. ಮಿ. ಹಾಫಿದ್ ಸಯ್ಯದ್ ಅಖ್ತರ್ ಹಸನ್ ಬಕಾಯಿ, ಅಫ್ತಾಬ್ ಅಹಮ್ಮದ್‌ಖಾನ್, ಝಿಯಾವುಲ್‌ಹಕ್ಕರಂತಹ ಪ್ರಸಿದ್ಧ ಮುಸ್ಲಿಂ ಧುರೀಣರೂ ಇತರರೂ ಸಹಿಹಾಕಿ 'ಪಾಕಿಸ್ತಾನದಲ್ಲಿ ಬದುಕುವುದಕ್ಕಿಂತ ಭಾರತದಲ್ಲಿ ಸಾಯುವುದು' ವಾಸಿ ಎಂಬ ಕಂಠೋಕ್ತ ನಿರ್ಧಾರದ ಗೋಡೆ ಪತ್ರಗಳನ್ನು ಡಿಲ್ಲಿಯ ಮುಸ್ಲಿಂ ಮೊಹಲ್ಲಾಗಳಲ್ಲೆಲ್ಲಾ ಅಂಟಿಸಿದ್ದಾರೆ. 'ಪಾಕಿಸ್ತಾನವೇ ಸ್ವರ್ಗ, ಜಿನ್ನಾರೇ ದೇವರು' ಎಂದಿದ್ದವರಿಗೆ ಆ ಪತ್ರವು ಪ್ರಶ್ನಿಸುತ್ತಿದೆ: "ಪಾಕಿಸ್ತಾನದಲ್ಲಿರುವ ಮುಸಲ್ಮಾನರಿಗಿಂತಲೂ ಅಧಿಕ ಸಂಖ್ಯೆಯಲ್ಲಿ ಹಿಂದುಸ್ಥಾನದಲ್ಲಿರುವ ನಿರಪರಾಧಿ ಮುಸಲ್ಮಾನರಿಗಾಗಿ ಅವರೇನು ಮಾಡಿದರು?" ತಾವು ವಂಚನೆ ಮತ್ತು ಮೋಸಕ್ಕೊಳಗಾಗಿ ಪಾಕಿಸ್ತಾನಕ್ಕೆ ಮತ ಕೊಟ್ಟೆವು; ಈಗ ಅದಕ್ಕಾಗಿ ಪಶ್ಚಾತ್ತಾಪ ಪಡುತ್ತೇವೆಂದು ಸಾರಿ ಭಾರತ ಕೇಂದ್ರಕ್ಕೆಂದೂ ಯಾವ ದ್ರೋಹವನ್ನೂ ಮಾಡದೆ ಶಾಂತಿಯಿಂದ ಬಾಳುವೆವೆಂದು ಭಾರತದ ಮುಸಲ್ಮಾನರೀಗ ಜಾಹೀರು ಪ್ರತಿಜ್ಞೆ ತೊಡಬೇಕೆಂದು ಆ ಗೋಡೆ ಪತ್ರಗಳಲ್ಲಿ ಕೇಳಿಕೊಳ್ಳಲಾಗಿದೆ.

ಹಿಂದೂ ಸಿಖ್ಖರೊಳಗೆ—

ಪಂಜಾಬಿನಲ್ಲಿ ಹಿಂದೂ ಸಿಖ್ಖರು ಒಮ್ಮತದಿಂದಿರದೆ ಹೋಗುತಿದ್ದರೆ, ಈ ಬಾರಿ ಅವರ ಸರ್ವನಾಶವಾಗುತಿದ್ದುದು ಮಾತ್ರವಲ್ಲ; ಭಾರತದ ಪಾಲಿನ ಪಂಜಾಬೇ ಕೈ ಬಿಟ್ಟು ಹೋಗುತಿತ್ತು. ಇವೆರಡು ಸಮಾಜಗಳೊಳಗೆ ಜಗಳ ತಾಗಿಸಿ ಹಾಕಲು ಲೀಗ್ ಮುಖಂಡರು ಮೊದಲಿನಿಂದಲೂ ಪ್ರಯತ್ನಿಸಿದ್ದರು. ಜೂನ್ ೩ರ ಘೋಷಣೆಯ ಕಾಲದಲ್ಲಿ ಸಿಖ್ ಸಮಾಜವನ್ನು ತಮ್ಮೆಡೆಗೆಳೆದುಕೊಳ್ಳಲು ವಿಶೇಷ ರಿಯಾಯತಿ ತೋರಿಸಿ ಹಿಂದುಗಳನ್ನು ದೂರಿದ್ದರು. ಈ ಬಾರಿಯ ಗೊಂದಲದ ನಂತರ ಸಿಖ್ಖರನ್ನು ದೂರಿ ಹಿಂದುಗಳನ್ನು ಹೊಗಳ ಹತ್ತಿದ್ದಾರೆ.

'ಪಂಜಾಬು ಗಲಭೆಗೆ ಸಿಖ್ಖರೇ ಕಾರಣ' ಎಂದು ಅಮೇರಿಕದಲ್ಲಿರುವ ಪಾಕಿಸ್ತಾನ್ ರಾಯಭಾರಿ ಹೇಳಿದ್ದ. "ಹಿಂದೂ ಮುಸ್ಲಿಮರು ಭಾರತದ ಮತ್ತು ಪಾಕಿಸ್ತಾನದ ಆದ್ಯಂತವೂ ಅಣ್ಣ ತಮ್ಮಂದಿರಂತೆ ವಾಸಿಸುತಿದ್ದಾರೆ" ಎನ್ನುತ್ತಾ, ಸಿಖ್ಖರು ಮಾತ್ರ ಬೇರೆ ಎಂಬಂತೆ ಫಿರೋಜ್ ಖಾನ್ ನೂನ್ ಭಯಂಕರ ವಾರ್ತೆ ಕೊಟ್ಟಿದ್ದರು. ಮೊದಲು ಪಂಜಾಬು ಸಿಕ್ಖರಿಗೆ ರಿಯಾಯತೀ ಲಂಚ ತೋರಿಸಿ, ತಮ್ಮ ಕಡೆಗೆ ಕರೆದಿದ್ದವರು ಈ ನೂನರೇ. ಈ ಬಾರಿ ಪ್ರಥಮತಃ ಮುಸ್ಲಿಮರು ಅತಿ ಕ್ರೂರವಾಗಿ ಹಿಂಸಿಸಿದ್ದುದು ಸಿಖ್ಖರನ್ನೇ. ಸಿಖ್ಖರು ತಮ್ಮ ಸ್ವಂತ ರಾಜ್ಯ ಸ್ಥಾಪಿಸಿಕೊಳ್ಳಲು ಪ್ರಯತ್ನಿಸುತಿದ್ದಾರೆ ಎಂದೂ ಮುಸ್ಲಿಂ ಮುಖಂಡರ ಪ್ರಬಲ ಪ್ರಚಾರ ನಡೆದಿದೆ. ಹಿಂದೂ ಸಿಖ್ ವೈಷಮ್ಯ ನಿರ್ಮಿಸಲು ಸರ್ವ ಪ್ರಯತ್ನಗಳು ನಡೆಯುತ್ತಿವೆ.

ಆದರೆ ಸಿಖ್ ನಾಯಕರಾದ ಮಾಸ್ಟರ್ ತಾರಾಸಿಂಗ, ಸರ್ದಾರ್ ಹರ್ನಾಮ್‌ಸಿಂಗ, ಸರ್ದಾರ್ ಪ್ರತಾಪಸಿಂಗ ಮೊದಲಾದವರು ಈ ಕುಯುಕ್ತಿಯನ್ನು ಮರ್ಮ ನೋಡಿ ಭೇದಿಸಿದ್ದಾರೆ 'ಹಿಂದೂ ಸಿಖ್ಖರು ಏಳುವದಾದರೂ ಬೀಳುವದಾದರೂ ಒಟ್ಟಿಗೇನೇ. ಸಿಖ್ ಅಳಿದು ಹಿಂದು ಬಾಳಲಾರ; ಹಿಂದು ಸತ್ತು ಸಿಖ್ ಉಳಿಯಲಾರ' ಎಂದು ತಾರಾಸಿಂಗರಂದಿದ್ದಾರೆ. ಸಿಖ್ಖರು ಹಿಂದೂ ಸಮಾಜದಿಂದ ವಿಭೇದಿಸಿದವರೆಂದೂ ಅವರೊಳಗೆ ವಿವಾಹ ಕೂಡಾ ನಡೆಯುವದೆಂದೂ ಇಬ್ಬರ ಮನೋವೃತ್ತಿಯಲ್ಲೂ ಅಭೇದ್ಯ ಏಕರೂಪವಿದೆಯೆಂದೂ ಪ್ರತಾಪಸಿಂಗರಂದಿದ್ದಾರೆ. ಹಿಂದೂ ಸಿಖ್ಖರನ್ನು ಬೇರ್ಪಡಿಸುವ, ಆದರೆ ಇಬ್ಬರನ್ನೂ ಸಮಾನವಾಗಿ ಸಂಹಾರಮಾಡುವ ಮುಸ್ಲಿಂ ಕೃತ್ಯಗಳನ್ನೆಲ್ಲಾ ಹರ್ನಾಮ್ ಸಿಂಗರು ಬಯಲಿಗೆಳೆದಿದ್ದಾರೆ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ಹೆಗ್ಗುರಿಯಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ—

ದಿ ವಿಜಯಾ ಬೇಂಕ್,
ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಸಿಟಿ ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಞಂಗಾಡು, ಮಡಿಕೇರಿ ಮತ್ತು ಮುಂಬಾಯಿ.

THE VIJAYA BANK, LIMITED.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 370/47.

ವಾದಿಯು— ಅನಗಳ್ಳಿ ತಿಮ್ಮಪ್ಪ ಹೆಬ್ಬಾರ ಕೂಡಾ.

ಪ್ರತಿವಾದಿಯು— ಗಣಪಯ್ಯ ಹೆಬ್ಬಾರ ಸಹಾ.

ಕುಂದಾಪುರ ತಾಲ್ಲೂಕು ಅನಗಳ್ಳಿ ಗ್ರಾಮದಲ್ಲಿರುವ ಸುಬ್ರಾಯ ಹೆಬ್ಬಾರರ ಮಗ 1ನೇ ಪ್ರತಿವಾದಿ ಗಣಪಯ್ಯ ಹೆಬ್ಬಾರರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ.

ಮೇಲಿನ ದಾವೆಯಲ್ಲಿ ದಾವಾಸ್ಥಳ ಸ್ವಾಧೀನತೆ ಬಗ್ಗೆ ನಿವೃತ್ತಿ ಕೇಳಿ ವಾದಿಯು ದಾಖಲು ಮಾಡಿದ ಮೇಲಿನ ದಾವೆ ತಾ. 7-10-1947 ನೇ ದಿನ ಬೆಳಿಗ್ಗೆ 11 ಗಂಟೆಗೆ ನೋಡಲ್ಪಡುವ ಕೋರ್ಟಿನಲ್ಲಿ ತನಿಖೆಗೆ ಇಟ್ಟಿದೆ ಎಂಬ ಸಂಗತಿ ಈ ಮೂಲಕ ತಿಳಿಸಲಾಗಿದೆ.

B. S. Shetty B. A., B. L.
Vakil for Plaintiffs.
Coondapoor 19-9-47.

The Canara Banking Corporation Limited.

(Incorporated in British India, with limited Liability.)

Estd: 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

OTHER OFFICES

Bangalore City	Coondapoor	Sagar
Bhadravathi	Dharwar	Saklaspur
Bombay	Hassan	Salem Town
Bender-Mangalore	Haveri	Shevapet-Salem
Byadgi	Hubli	Shimoga
Car Street, Mangalore	Madras	Shirva
Calicut	Malpe	Tellicherry
Cannanore	Mercara	Thirthahalli
Cochin	Mettupalayam	Udipi
Coimbatore	Mysore	Vellore
		Virajpet.

BANKING BUSINESS OF EVERY DESCRIPTION TRANSACTED.

ಗುರುವಾರ, ಉಡುಪಿ, ೨೫-೯-'೪೭

ನಾಳೆ ಹೇಗೆ?

ಅಖಿಲ ಭಾರತದ ಪಶ್ಚಿಮೋತ್ತರ ಕಡೆಯ ವಿಶಾಲ ಭಾಗಗಳನ್ನು ಪ್ರತ್ಯಕ್ಷ ನರಕ ಕುಂಡವಾಗಿ ಮಾರ್ಪಡಿಸಿದ ಈ ಬಾರಿಯ ಜಾತೀಯ ಗಲಭೆಯನ್ನು ಪ್ರಸ್ತಾಪಿಸುವ ಪ್ರಲೋಭೆ ನಮ್ಮಲಿಲ್ಲ. ಈ ಮೊದಲಿನ ಗೊಂದಲಗಳು, ಶತಮಾನಗಳಿಂದ ಭಾರತೀಯರಿಗಿದ್ದ ಸ್ಥಾನಮಾನಗಳನ್ನು ತಪ್ಪಿಸಿದ್ದರೆ,ಈ ಬಾರಿಯ ಪಂಜಾಬಿನ ರೌರವವು ನಾಗರಿಕರ ದೃಷ್ಟಿಯಲ್ಲಿ ಭಾರತೀಯರು ಬಂದ ಜನ್ಮವನ್ನೇ ಹೇಸಿಗೊಳಿಸಿದೆ! ಅದಕ್ಕಾಗಿ ಪ್ರತಿಯೊಬ್ಬನೂ ತಲೆತಗ್ಗಿಸದೆ ನಿರ್ವಾಹವಿಲ್ಲ. ನರಕವೇ ಆದರೂ ಆಗಿ ಹೋದ ಮೇಲೆ, ಮತ್ತದರಿಂದ ದೊರೆತ ಪಾಠವೊಂದನ್ನು ಹೊರತು ಬೇರಾವುದನ್ನೂ ಜ್ಞಾಪಿಸಿ ಫಲವಿಲ್ಲ. ಸದ್ಯಕ್ಕೊಮ್ಮೆ ಸಂಹಾರ ಕೃತ್ಯಗಳು ಬಹುಮಟ್ಟಿಗೆ ನಿಂತಿವೆ. ಭಾರತ ಮತ್ತು ಪಾಕಿಸ್ಥಾನಗಳು ಜನ ಬದಲಾವಣೆ ಮಾಡಿಕೊಳ್ಳುವ ಮಹಾ ಗದ್ದಲವೇ ಈಗ ಕೇಳಿಬರುತ್ತಿದೆ. ಈ ಆಮದು ರಫ್ತುಗಳ ಕುರಿತು ಹಲವು ಪ್ರಶ್ನೆಗಳೇಳುತ್ತಿವೆ. ಈ ಜನ ಬದಲಾವಣೆಯ ಆಧಾರವಾವುದು? ಆಯಾಯಾ ಸರಕಾರಗಳಿಗೆ ಸೇರಿದ ಭಾಗಗಳಲ್ಲಿರುವ ಎಲ್ಲಾ ಸಮಾಜಗಳವರೂ ಆ ಸರಕಾರಗಳ ಪ್ರಜೆಗಳೇ ಎಂದಾದರೆ ಈ ಜಾತೀವಾರು ಬದಲಾವಣೆಯೇಕೆ? ಅಥವಾ ಎರಡೂ ಕಡೆಗಳ ಎಲ್ಲಾ ಮುಸಲ್ಮಾನರೂ ಪಾಕಿಸ್ಥಾನ್ ಪ್ರಜೆಗಳು-ಎಲ್ಲಾ ಮುಸ್ಲಿಮೇತರರೂ ಹಿಂದುಸ್ಥಾನ್ ಪ್ರಜೆಗಳು ಎಂದಾದರೆ ಎಲ್ಲರನ್ನೂ ಬದಲಾಯಿಸಿಕೊಳ್ಳುವುದೇ ವಿಹಿತವಲ್ಲವೆ? ಒಮ್ಮೆಗೇ ಆ ರೀತಿ ಬದಲಾಯಿಸಿಕೊಳ್ಳುವುದರಲ್ಲಿರುವ ಕಷ್ಟ, ಅನಾನುಕೂಲತೆಗಳ ದೆಸೆಯಿಂದಾಗಿಯೇ ಮುಸ್ಲಿಮರು ಇಲ್ಲಿಯೂ, ಮುಸ್ಲಿಮೇತರರು ಅಲ್ಲಿಯೂ ಉಳಿಯಬೇಕೆಂದಾದರೆ, ಇಲ್ಲಿಯ ಮುಸ್ಲಿಮರನ್ನು ಪಾಕಿಸ್ಥಾನದ ಪ್ರಜೆಗಳೆಂದೂ, ಅಲ್ಲಿಯ ಮುಸ್ಲಿಮೇತರರನ್ನು ಹಿಂದೂಸ್ಥಾನದ ಪ್ರಜೆಗಳೆಂದೂ ಘೋಷಿಸಬೇಕೆ?...ಇತ್ಯಾದಿ ಪ್ರಶ್ನೆಯ ಸರಪಣಿ ಗೊಣಸುಗೂಡುತ್ತಾ ಉದ್ದಕ್ಕೆ ಬೆಳೆಯುವಂತಿದೆ.

ಸದ್ಯ ಪಾಕಿಸ್ತಾನ್-ಹಿಂದುಸ್ಥಾನ್ ಸರಕಾರಗಳು ಮುಸ್ಲಿಂ-ಮುಸ್ಲಿಮೇತರರೆಲ್ಲರನ್ನೂ ಕಡ್ಡಾಯವಾಗಿ ಕೈಬದಲಾಯಿಸಿಕೊಳ್ಳಲು ಹೊರಟಿಲ್ಲ. ಇವೆರಡು ಸರಕಾರಗಳೂ ಅಂತಹ ಬದಲಾವಣೆಗೆ ವಿರುದ್ಧವಿವೆ. ಪಂಜಾಬಿನಲ್ಲಿ ಈಗ ಲಕ್ಷ ಸಂಖ್ಯೆಯ ವಹಿವಾಟಿಗಿಳಿದುದು ಎರಡೂ ಕಡೆಯ ಸಮಾಜಗಳವರ ಸ್ವಂತೇಚ್ಛೆಯ ನ್ನಾಧರಿಸಿಯೇ. ಮುಸ್ಲಿಮನೆಂಬ ಕಾರಣದಿಂದ ಯಾರನ್ನೂ ಭಾರತ ಸರಕಾರವು ಇಲ್ಲಿಂದ ಕಳುಹಿದುದಾಗಲೀ ಪಾಕಿಸ್ತಾನ್ ಸರಕಾರವು ಅಲ್ಲಿಂದ ಕರೆದುದಾಗಲೀ ಇಲ್ಲ; ಪಾಕಿಸ್ತಾನದಲ್ಲಿರುವ ಮುಸ್ಲಿಮೇತರರ ಮಟ್ಟಿಗೂ ಇದೇ ನೀತಿ. ಜೀವದಾಸೆಯಿಂದ ಓಡಹತ್ತಿದವರನ್ನು ಮಾತ್ರವೇ ಕಳುಹಿಕೊಡುವ ಮತ್ತು ಸ್ವಾಗತಿಸಿಕೊಳ್ಳುವ ವ್ಯವಸ್ಥೆಗಳು ಇಕ್ಕಡೆಗಳಲ್ಲೂ ನಡೆದಿವೆ. ಆದರೆ ಈ ಸ್ವೇಚ್ಛಾ ಆಗಮನ ನಿರ್ಗಮನಗಳು ಮುಂದಕ್ಕೆಂತಹ ಪರಿಸ್ಥಿತಿಯನ್ನು ನಿರ್ಮಿಸಬಹುದು, ಎಂಬುದನ್ನು ಊಹಿಸುವುದು ಅಗತ್ಯ.

ಪಂಜಾಬು ಗಲಭೆಯಾರಂಭವಾಗುವ ಮೊದಲು ಪಶ್ಚಿಮ ಪಂಜಾಬು ಮತ್ತು ಗಡಿನಾಡುಗಳಲ್ಲಿ ಸುಮಾರು 38 ಲಕ್ಷ ಹಿಂದೂ—ಸಿಖ್ಖರಿದ್ದರೆಂದು ತಿಳಿದುಬರುತ್ತದೆ. ಆ ಪೈಕಿ ಸುಮಾರು 20—23 ಲಕ್ಷದಷ್ಟು ಹಿಂದೂ ಸಿಖ್ಖರು ಈಗ ಅಲ್ಲಿಂದ ಭಾರತಕ್ಕೆ ಬಂದಿದ್ದಾರೆ. ಇನ್ನುಳಿದಿರುವುದು ಸುಮಾರು 15 ಲಕ್ಷ ಮಾತ್ರ. ಇದೇ ಕಾಲದಲ್ಲಿ ಪೂರ್ವ ಪಂಜಾಬು ಮತ್ತು ಒತ್ತಿಗಿರುವ ಸಿಖ್ ಸಂಸ್ಥಾನಗಳಾದ ಪಾಟಿಯಾಲಾ, ಕಪುರ್ಥಲ, ನಾಭಾಗಳಲ್ಲಿದ್ದ ಸುಮಾರು 50 ಲಕ್ಷ ಮುಸ್ಲಿಮರ ಪೈಕಿ 22 ಲಕ್ಷ ಮಂದಿ ಇಷ್ಟರಲ್ಲೇ ಪಾಕಿಸ್ತಾನ ಸೇರಿ 28 ಲಕ್ಷ ಜನ ಇನ್ನೂ ಉಳಿದಿದ್ದಾರೆ. ಇನ್ನೂ ಅಲ್ಲಿರುವ 15 ಲಕ್ಷ ಮುಸ್ಲೀಮೇತರರಲ್ಲಿ—ಇಲ್ಲಿರುವ 28 ಲಕ್ಷ ಮುಸ್ಲಿಮರಲ್ಲಿ ಒಬ್ಬನನ್ನೂ ಬಾಕಿ ಬಿಡದೆ ಬದಲಾಯಿಸಿಕೊಳ್ಳಬೇಕೆಂದೇ ಇಕ್ಕಡೆಯ ಸರಕಾರಗಳು ನಿರ್ಧರಿಸಿವೆ. ತತ್ಪರಿಣಾಮವಾಗಿ ಪಶ್ಚಿಮ ಪಂಜಾಬು ಮತ್ತು ಗಡಿನಾಡು ಪ್ರಾಂತ್ಯಗಳಲ್ಲಿ ಅಲ್ಪ ಸಂಖ್ಯಾಕ ಮುಸ್ಲಿಮೇತರರೇ ಇಲ್ಲದಂತಾಗುವದು. ಉಳಿದ ಸಿಂಧ ಪ್ರಾಂತ್ಯದಿಂದಲೂ ಸಹಸ್ರ ಸಂಖ್ಯೆಯಲ್ಲಿ ಮುಸ್ಲಿಮೇತರರೀಗಲೇ ಹೊರಟು ಬರುತಿದ್ದಾರೆ; ಸಿಂಧದಲ್ಲಿ ಮುಸ್ಲಿಮೇತರರಿಲ್ಲವೆನ್ನುವ ವರೆಗೂ ಈ ಜನಪ್ರವಾಹವು ಅಲ್ಲಿಂದೀ ಕಡೆಗೆ ಹರಿದೀತೆಂದು ಊಹಿಸಿದರೆ ತಪ್ಪಾಗದು. ಆಗ ಪಶ್ಚಿಮ ಪಾಕಿಸ್ತಾನವು ಕೇವಲ ಮುಸ್ಲಿಂ ಪ್ರಜೆಗಳೇ ಇರುವ ರಾಷ್ಟ್ರವಾಗಲಿದೆ. ಉಳಿದ ದೂರದ ಪೂರ್ವ ಬಂಗಾಳವು ಹೇಗಿದ್ದರೂ ಗಣ್ಯವಲ್ಲ. ಇದಕ್ಕೆ ಪ್ರತಿಯಾಗಿ ಹಿಂದುಸ್ಥಾನದಲ್ಲಿ ಮಾತ್ರ ಮತ್ತೂ ಸುಮಾರು ನಾಲ್ಕು ಕೋಟಿ ಮುಸಲ್ಮಾನರುಳಿಯುತ್ತಾರೆ. ಮುಸಲ್ಮಾನರು ಖಾಲಿಯಾಗುವುದೆಂದರೆ ಪೂರ್ವ ಪಂಜಾಬು ಮತ್ತು ಒಂದೆರಡು ಸಣ್ಣ ಸಂಸ್ಥಾನಗಳಲ್ಲಿ ಮಾತ್ರ. ಪಂಜಾಬೇತರ ಪ್ರಾಂತ್ಯಗಳ ಮುಸಲ್ಮಾನರನ್ನು ಕರೆಯಬಾರದೆಂದು ಪಾಕಿಸ್ಥಾನ್ ಪ್ರಮುಖರ ಆತುರವಿದೆಯಂತೆ. ಆದರೆ ಭಾರತದ ರಾಜಧಾನಿಯಾದ ಡಿಲ್ಲಿಯಿಂದಾದರೂ ಮುಸಲ್ಮಾನರನ್ನು ಖಾಲಿ ಮಾಡಬೇಕೆಂಬ ನಿರ್ಧಾರಕ್ಕೆ ಭಾರತ ಸರಕಾರ ಬಂದಿಲ್ಲ.

ಹೀಗಾಗುವದು ಭಾವೀ ಕಲ್ಯಾಣದ ದೃಷ್ಟಿಯಿಂದ ಸರಿಯೆ? ಮದ್ರಾಸ್ ಪ್ರಾಂತ್ಯದಂತಹ ಕೆಲವು ಭಾಗಗಳಲ್ಲಿ 'ಮುಸ್ಲಿಂ-ಹಿಂದು' ಭೇದವಿರುವ ಬದಲಿಗೆ ಈಗ ನಾಡಾ 'ಮುಸ್ಲಿಂ-ಬಂಧು' ಭಾವವೇ ಇರುವುದೇನೋ ನಿಜ. ಇಲ್ಲಿಯ ಅಲ್ಪಸಂಖ್ಯಾಕರಾದ ಮುಸ್ಲಿಮರನ್ನು ಬೀಳ್ಕೊಳ್ಳುವುದೆಂದರೆ ಹೊರಡುವವರಷ್ಟೇ ಹೊರಡಿಸುವವರಿಗೂ ಸಂತಾಪವಾದೀತು. ಆದರೆ ಆಧುನಿಕ ರಾಜಕೀಯದ ಗಾಳಿ ಸೋಂಕಿರುವ ಮುಸ್ಲಿಮರಲ್ಲಿ, ಪಾಕಿಸ್ತಾನ್ ಸಹಾನುಭೂತಿ ಅಥವಾ ಲೀಗ್ ಭಾವನೆಯಿಲ್ಲದಿರುವವರು ಅತ್ಯಪೂರ್ವ. ಈಗ ನಿಜಕ್ಕೂ 'ಪರಿಶುದ್ಧ'ರಿರುವ ಭಾರತದ ಮುಸ್ಲಿಮರು, ಒಂದು [illegible] ಭಾರತ-ಪಾಕಿಸ್ತಾನ್ ಘರ್ಷಣೆಯೆದ್ದಲ್ಲಿ (ಅಂತಹ ಕಾಲ ಬಾರದಿರಲಿ!) ಪಾಕಿಸ್ತಾನದ 'ಪಂಚಮದಳ'ವಾಗಲಾರರೆನ್ನುವುದು ಅಸಾಧ್ಯ. ಗಾಂಧಿಜೀಯೇ ಒಪ್ಪಿರುವಂತೆ ಅಂತಹ ಸಂದರ್ಭಗಳಲ್ಲಿ 'ರಾಷ್ಟ್ರದ್ರೋಹಿಗಳನ್ನು ಗುಂಡಿಡುವ' ಶಾಸನವೇನೋ ಸರಕಾರದ ಕೈಯಲ್ಲಿರಬಹುದು, ಆದರಿಲ್ಲಿ ಸಂಖ್ಯೆಯನ್ನು ಗಮನಿಸದಿರಲಾಗುವದಿಲ್ಲ. ಮೇಲಾಗಿ, ಚಿಕಿತ್ಸೆಯಿದೆಯೆಂಬುದರಿಂದ ಆರೋಗ್ಯವನ್ನು ಅಲಕ್ಷಿಸುವದಕ್ಕಿಂತ, ರೋಗವೇ ಹುಟ್ಟದಂತೆ ಸಕಾಲದಲ್ಲಿ ಸಾಧಿಸುವುದು ಉತ್ತಮವಲ್ಲವೆ? ಆದ್ದರಿಂದ ಇಲ್ಲಿಯ ಎಲ್ಲಾ ಮುಸ್ಲಿಮರೂ 'ಶುದ್ಧ ಭಾರತೀಯ'ರಾಗುವಂತೆ ಸಾಧಿಸುವದು ಎಳ್ಳಷ್ಟಾದರೂ ಸಂದೇಹಕ್ಕೆಡೆಗೊಡುವಂಥವರನ್ನು ನಿಸ್ಸಂಕೋಚವಾಗಿ ಪಾಕಿಸ್ತಾನಕ್ಕೆ ರವಾನಿಸುವದು ಭಾರತ ಸರಕಾರದ ಆದ್ಯ ಕರ್ತವ್ಯವೆನ್ನುತ್ತೇವೆ.

ಶ್ರೀ ಹುಕ್ಕೇರಿಕರ ರಾಮರಾಯರ ಷಷ್ಟಬ್ದಿ ಪೂರ್ತಿ ಸಮಾರಂಭವು 22-10-47ಕ್ಕೆ ಧಾರವಾಡದಲ್ಲಿ ಜರಗಲಿದೆ. ಈ ಬಗ್ಗೆ ಒಂದು ಸತ್ಕಾರ ಸಮಿತಿಯ ರಚನೆಯಾಗಿದೆ.

ಮಂಗಳೂರು.

ಕೈಮಗ್ಗದ ವಸ್ತ್ರದ ಮೇಲೆ ಕ್ರಯದ ಲೇಬಲ್—ಇದೇ ಕಳೆದ ಮಾರ್ಚಿ ತಿಂಗಳ ಆಗಸ್ಟ್ ತಿಂಗಳ ಜ್ಯಾರಿಗೆ ಇರುವ ೧೯೪೭ನೇ ಇಸವಿಯ ಮದ್ರಾಸ್ ಕೈಮಗ್ಗದ ವಸ್ತ್ರದ ಕುರಿತು ಕಂಟ್ರೋಲ್ ಆರ್ಡರ್ ನಿಬಂಧನೆಗಳ ಮೇರೆಗೆ ವಸ್ತ್ರದ ವ್ಯಾಪಾರಿಗಳು ಸದ್ರಿ ಆರ್ಡರಿನ ೨೬ನೇ ನಿಬಂಧನೆ ಪ್ರಕಾರ ಕ್ರಮಪಾದ ಲೆಖ್ಖಗಳನ್ನು ಇಡುವದಲ್ಲದೆ ೪ನೇ ನಿಬಂಧನೆ ಪ್ರಕಾರ ಪ್ರತಿ ವಸ್ತ್ರದ ಮೇಲೆ ಮದ್ರಾಸು ಪ್ರೊವಿನ್ಸಿಯಲ್ ಟೆಕ್ಸ್‌ಟೈಲ್ ಕಮಿಶನರವರ R. C. No. 104995/ H /22-9-46ನೇ ಲೇಖನದಲ್ಲಿ ನಮೂದಿಸಿದ ವಿವರ ಪ್ರಕಾರ ಕ್ರಯಗಳನ್ನು ಸ್ಪಷ್ಟವಾಗಿ ಕಾಣಿಸಿ ಒಂದು ಲೇಬಲ್ ಯಾನೆ ಚೀಟನ್ನು ಅಂಟಿಸತಕ್ಕದ್ದು. ಹಾಗೆ ಅಂಟಿಸಿದ ಅಂಥಾ ಚೀಟುಗಳು ವಸ್ತ್ರದಿಂದ ಪ್ರತ್ಯೇಕಿಸುವ ಸಂಭವ ಇರಬಹುದಾದ್ದರಿಂದ ಹಾಗೆ ಅದು ಆಗದಹಾಗೆ ಪ್ರತಿ ವಸ್ತ್ರದಲ್ಲಿ ಸದ್ರಿ ಚೀಟುಗಳು ಗಟ್ಟಿಯಾಗಿ ಅಂಟಿಸಿರುವ ರೀತಿ ನೋಡಿಕೊಳ್ಳತಕ್ಕದ್ದು. ಈ ರೀತಿ ಕ್ರಯದ ಲೇಬಲ್ ಯಾನೆ ಚೀಟು ಇಲ್ಲದೆ ವ್ಯಾಪಾರಸ್ಥರು ವಸ್ತ್ರಗಳನ್ನು ಇಟ್ಟುಕೊಳ್ಳುವದು ಸದರಿ ಕಂಟ್ರೋಲು ಆರ್ಡರು ಮೇರೆಗೆ ತಕ್ಷೀರು ಆಗುವದರಿಂದ ಮತ್ತು ಅಂಥಾ ಲೇಬಲ್‌ಗಳು ಪ್ರತೀ ವಸ್ತ್ರದ ಮೇಲೆ ಇಲ್ಲದಿದ್ದರೆ ಆ ಕುರಿತು ವ್ಯಾಪಾರಸ್ಥರ ಮೇಲೆ ನಿಬಂಧನೆಗಳನ್ನು ಉಲ್ಲಂಘಿಸಿದ ಕುರಿತು ಕಠಿಣವಾಗಿ ಆಲೋಚಿಸುವದಾಗಿ ಪ್ರೊವಿನ್ಸಿಯಲ್ ಟೆಕ್ಸ್‌ಟೈಲ್ ಕಮಿಶನರವರ ಅನುಜ್ಞೆಗಳು ಇರುತ್ತವೆ.

ಬಟ್ಟೆ ರೇಶನ್ ಕಾರ್ಡುಗಳ ಕುರಿತು ಮಾಹಿತಿ—೧೯೪೭ನೇ ಮದ್ರಾಸು ಕ್ಲೋತ್ ಡೀಲರ್ಸ್ ಕಂಟ್ರೋಲ್ ಆರ್ಡರು ಅನುಗುಣವಾಗಿ ಮಿಲ್ ಬಟ್ಟೆ ವ್ಯಾಪಾರಸ್ಥರು ಮಿಲ್ ಬಟ್ಟೆಗಳನ್ನು ಬಟ್ಟೆ ರೇಶನ್ ಕಾರ್ಡುಗಳ ಮೇಲೆ ಸದರಿ ಕಾರ್ಡು ಹೋಲ್ಡರಿಗೆ ಕೊಡುವ ಕೇಶ್ ಯಾ ಕ್ರೆಡಿಟ್ ಮೆಮೋದಲ್ಲಿ ಸದ್ರಿ ಬಟ್ಟೆ ರೇಶನ್ ಕಾರ್ಡು ನಂಬ್ರನ್ನು ಬರೆಯುವದಲ್ಲದೆ ಕಾರ್ಡು ಹೋಲ್ಡರನ ಸರಿಯಾದ ವಿಳಾಸ, ಪ್ರಾಯಸ್ಥರ ಮತ್ತು ಮಕ್ಕಳ ಸಂಖ್ಯೆ ವಿವರಗಳನ್ನು ಅಗತ್ಯವಾಗಿ ನಮೂದಿಸಬೇಕಾಗಿ ಜಿಲ್ಲಾ ಕಲೆಕ್ಟರ ಧೊರೆಗಳವರ ಪ್ರಕಟಣೆ ಹೊರಡಿಸಿರುವ ಸಂಗ್ತಿ ಎಲ್ಲ ಬಟ್ಟೆ ವ್ಯಾಪಾರಸ್ಥರ ಮಾಹಿತಿಗಾಗಿ ದಕ್ಷಿಣ ಕನ್ನಡ ಜಿಲ್ಲಾ ಜವುಳಿ ವ್ಯಾಪಾರಸ್ಥರ ಸಂಘದ ಗೌರವ ಕಾರ್ಯದರ್ಶಿ ಶ್ರೀ [illegible] ದಾಮೋದರ ಗಿರಿಧರಲಾಲ್ ಶೇಟರು ತಿಳಿಸುತ್ತಾರೆ. ಹೆಚ್ಚಿನ ಮಾಹಿತಿ ಅಗತ್ಯವುಳ್ಳವರು ಹಂಪನಕಟ್ಟೆ ಫೆರ್ನಾಂಡಿಸ್ ಬಿಲ್ಡಿಂಗ್ಸನಲ್ಲಿರುವ ಸಂಘದ ಆಫೀಸಿನಲ್ಲಿ ತಿಳಕೊಳ್ಳಬಹುದು.

ನೇಮಕಗಳು—ರಿಟಾಯರ್ಡ್ ಪೋಲೀಸ್ ಇನಸ್ಪೆಕ್ಟರ ಮಿ. ಎಮ್. ಲೋಬೋ ಬಿ. ಎ. ರವರು ಇಲ್ಲಿಯ ಹೊನರರಿ ಬೆಂಚ ಮೆಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು. ಮಿ. ಆರ್. ಎಲ್. ಶ್ರೀಷ್ಮರವರು ಇಲ್ಲಿಯ ಫೇಕ್ಟರೀಸ್ ಇನ್ಸಪೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ.

ಗಾಂಧಿ ಜಯಂತಿ.

(೨-೧೦-೪೭)

ಧಾಟಿ:-(ಬ್ರೂಹಿ ಮುಕುಂದೇತಿ)

ಗಾಂಧಿ-ಮಹಾತ್ಮಾಜಿ। ಜಯತು ॥ ಪ ॥
ಭಾಸುರ ಭಾರತ। ಸಂತ-ಗಾಂಧೀಜಿ।
ಭೂಸ್ವಾತಂತ್ರ್ಯಪಿತಾ। ಬಾಪೂಜಿ ॥ ೧ ॥
ಪ್ರಿಯ ಕಸ್ತೂರೀ। ಹಿತ-ಗಾಂಧೀಜಿ।
ಜಯ ನೆಹರೂ ವಿನುತಾ। ಬಾಪೂಜಿ ॥ ೨ ॥
'ಸತ್ಯಾಗ್ರಹಿ'ಮೋ। ಹನ-ಗಾಂಧೀಜಿ।
ಸತ್ಯಾಹಿಂಸಧನಾ। ಬಾಪೂಜಿ ॥ ೩ ॥
ಶತ ಸಂವತ್ಸರ। ಪರ-ಗಾಂಧೀಜಿ।
ಕ್ಷಿತಿಯಲಿ ರಾಜಿಸಲಿ। ಬಾಪೂಜಿ ॥ ೪ ॥
ದೇಶೋದ್ಧಾರಕ। ಶ್ರೀ ಗಾಂಧೀಜಿ।
ಶ್ರೀಶನು ರಕ್ಷಿಸಲಿ। ಬಾಪೂಜಿ ॥ ೫ ॥

—ಕುಂದಾಪುರ ಲಕ್ಷ್ಮೀನಾರಾಯಣ ಪುಣಿಂಚತ್ತಾಯ.

★ ಮದ್ರಾಸ್ ಶಾಸನ ಸಭೆಗಳಲ್ಲಿ ★

ಮದ್ರಾಸಿನ ಎಸೆಂಬ್ಲಿ ಮತ್ತು ಕೌನ್ಸಿಲ್ ಸಭೆಗಳಲ್ಲಿ ಪ್ರಾಂತ್ಯದ ಆಹಾರ ಪರಿಸ್ಥಿತಿಯ ಸುದೀರ್ಘ ಚರ್ಚೆ ನಡೆಯಿತು. ಧಾನ್ಯ ಸಂಗ್ರಹ ಮತ್ತು ವಿತರಣಾ ವ್ಯವಸ್ಥೆ, ಅಕ್ಕಿಯತ್ರ್ರು–ಇತ್ಯಾದಿಗಳ ಕುರಿತು ಸರಕಾರೀ ಧೋರಣೆಯನ್ನು ಹಲವು ಸದಸ್ಯರು ಟೀಕಿಸಿದರು. ಆಹಾರ ಮಂತ್ರಿ ಡಾ| ಯಸ್. ಯಸ್. ರಾಜನ್, ಶ್ರೀ. ಮಾಧವ ಮೆನನ್, ಪ್ರಧಾನ ಮಂತ್ರಿ ಓಮಂದೂರು ಮೊದಲಾದವರು ಎಲ್ಲವನ್ನೂ ವಿವರಿಸಿ 'ಧಾನ್ಯ ಸಂಗ್ರಹದ ಮಟ್ಟಿಗೆ ಯಾವ ಭಾಗದ ಕಡೆಗೂ ಪಕ್ಷಪಾತ ತೋರಿಸಿದ್ದಿಲ್ಲ. ಈ ವರೆಗೆ ಉತ್ಪಾದಕರಿಂದ ಕೇವಲ ಶೇಕಡಾ 23·5ರಷ್ಟೇ ಸಂಗ್ರಹವಾಗಿದ್ದು ಶೇ. 77ರಷ್ಟು ಅವರಲ್ಲೇ ಉಳಿದಿದೆ. ಅಕ್ಕೀ ಬೆಲೆಯೇರಿಸಲು ಕೇಂದ್ರ ಸರಕಾರ ವಿರುದ್ಧ ವಿದೆ'ಯೆಂದು ತಿಳಿಸಿದರು.

ಈ ಬಾರಿಯ ಮುಖ್ಯ ಮಸೂದೆಗಳು 'ಜಮೀನ್ದಾರೀ ಬಹಿಷ್ಕಾರ' ಮತ್ತು 'ಹಿಂದೂ ಧಾರ್ಮಿಕ ಉಂಬಳಿಗಳ ಪ್ರತ್ಯಕ್ಷ ಹತೋಟಿ' ಚರ್ಚೆಗೆ ಬರುವುದರಲ್ಲಿವೆ. 'ಜಮೀನ್ದಾರೀ ಕ್ಷೇತ್ರಗಳ ಗೇಣಿ ಹೆಚ್ಚಾದರೆ ರೈತ್ವಾರಿಕ್ಷೇತ್ರಗಳ ಮಟ್ಟಕ್ಕೆ ತಗ್ಗಿಸಿ ಈ ಪದ್ಧತಿಯನ್ನು ಉಳಿಸಿರಿ ಜಮೀನ್ದಾರರಿಗೆ ಕೊಡುವರೆ ಸೂಚಿಸಿರುವ ಪರಿಹಾರದ ಅಂಕ ಅತೀ ಕಡಿಮೆಯಿದೆ'–ಇತ್ಯಾದಿ ಜಮೀನ್ದಾರರ ಕಡೆಯಿಂದ ಪ್ರಬಲ ವಿರೋಧ ಬಂದಿದೆ. ಸರ್. ಅಲ್ಲಾಡಿಗಳಂತಹ ಎಲ್ಲಾ ಶ್ರೀಮಂತ ಪಕ್ಷಪಾತಿಗಳೂ ಈ ಸುಧಾರಣೆಯನ್ನು ವಿರೋಧಿಸಿದ್ದಾರೆ, ಶಿಷ್ಟಮಂಡಲಿಯೊಂದು ಮಂತ್ರಿಗಳನ್ನು ಕಾಣಲಿದೆ. ಜಮೀನ್ದಾರರಿಗೆ ಯಾವ ಪರಿಹಾರವನ್ನೂ ಕೊಡಬೇಕೆಂದಿಲ್ಲವೆಂದು ಶ್ರೀ. ಟಿ. ಪ್ರಕಾಶಮರೇ ಮೊದಲಾದವರ ಪ್ರತಿಭಟನೆಯಿದೆ.

ಸರಕಾರವು ನೇಮಿಸಿದ್ದ 'ಉದ್ದಿಮೆ ಪುನರ್ಯೋಜನಾ ಸಮಿತಿ"ಯು ತನ್ನ ಸೂಚನೆಗಳ ವರದಿಯನ್ನೊಪ್ಪಿಸಿದೆ. ಮದ್ರಾಸ್ ಸಿಟಿಯ ಮೋಟಾರು ವಾಹನಗಳ ಆಡಳಿತಾಧಿಕಾರವನ್ನು ಬರುವ ತಾ 1ರಿಂದಲೇ ಸರಕಾರವು ವಹಿಸಿಕೊಳ್ಳುವದೆಂದೂ, ಬರುವ ವರುಷದಿಂದಾರಂಭಿಸಿ 5 ವರುಷಗಳೊಳಗೆ ಇಡೀ ಪ್ರಾಂತ್ಯದ ಬಸ್ ಕಂಪೆನಿಗಳ ರಾಷ್ಟ್ರೀಕರಣವಾಗುವದೆಂದೂ ಪ್ರಶ್ನೋತ್ತರಗಳಿಂದ ತಿಳಿದುಬಂದಿದೆ. ಕುದುರೆ ಜೂಜಿನ ಮೇಲೆ ಹಣ ಕಟ್ಟುವುದನ್ನು ನಿಲ್ಲಿಸುವ ಪೂರ್ವ ಸೂಚನೆಯೊಂದು ಕೌನ್ಸಿಲಿನಲ್ಲಿ ಬಂದಾಗ ಪ್ರಸಿದ್ಧ ಕುದುರೆ ಪಂದ್ಯಗಾರರಾದ ಡಾ| ಸುಬ್ಬರಾಯನರು ಸರಕಾರಕಾರಕ್ಕಾಗುವ ನಷ್ಟ ಮತ್ತು ಇತರ ಕಾರಣಗಳನ್ನು ಕೊಟ್ಟು ವಿರೋಧಿಸಿದ್ದರಿಂದ ಅದು ಬಿದ್ದು ಹೋಯಿತು. ಹೆಸರಿನ ಮುಂದಿರುವ ಜಾತಿ ಸೂಚಕ (ಸೆಟ್ಟಿ, ಶೆಟ್ಟಿ ಇತ್ಯಾದಿ) ಉಪ ಭಾಗಗಳನ್ನು ಮನ್ನಾಪಡಿಸತಕ್ಕದ್ದೆಂದು ಸದಸ್ಯರೊಬ್ಬರಿಂದ ಬಂದಿದ್ದ ಸೂಚನೆಯು ಅವ್ಯವಹಾರ್ಯವೆಂದು ಕಾಂಗ್ರೆಸ್ ಪಕ್ಷೀಯ ಸಭೆಯಲ್ಲೇ ನಾಮಂಜೂರಾಯಿತು.

ಸೇಲ್ಸ್ ಟೇಕ್ಸ್ ಕಾನೂನಿನಲ್ಲಿ ತಿದ್ದುಪಡಿ ಮಾಡಿ 'ಟರ್ನ್ ಓವರ್' ಮೇಲೆ ಇದುವರೆಗಿದ್ದ ರೂಪಾಯಿಗೆ ಎರಡು ಪೈಯನ್ನು ಮೂರು ಪೈಗೆ ಹೆಚ್ಚಿಸುವ ನಿರ್ಧಾರವನ್ನು ಮದ್ರಾಸ್ ಮಂತ್ರಿ ಮಂಡಲ ಮಾಡಿದೆ. ಇದರಿಂದಾಗಿ ಸರಕಾರಕ್ಕೆ ರೂ. ೨½ ಕೋಟಿ ಹೆಚ್ಚಿನ ವಾರ್ಷಿಕಾದಾಯವಾಗುವುದು. ಸೇಲ್ಸ್ ಟೇಕ್ಸ್ ನಿಯಮಗಳನ್ನು ಇನ್ನಷ್ಟು ಬಿಗುಗೊಳಿಸುವ ತಿದ್ದುಪಡಿಗಳಾಗಲಿವೆ.

ಮೈಸೂರು ಚಳವಳಿ

ರಭಸದಿಂದ ಸಾಗಿದೆ. ಹಳ್ಳಿ ಹಳ್ಳಿಗಳಲ್ಲೂ ಆಂದೋಲನ ಹಬ್ಬಿದೆ. ಬೆಂಗಳೂರಿನಲ್ಲಿ ಪುನಃ ಗೋಳೀಬಾರಾಗಿದೆ. ದಸ್ತಗಿರಿ, ಲಾಠೀ ಚಾರ್ಜು, ವಿವಿಧರೀತಿಯ ಬಹಿಷ್ಕಾರಗಳ ವಿಶೇಷ ವಾರ್ತೆಗಳು ಬರುತ್ತಿವೆ. ಹಿರಿಯರಾಣಿಯು ದಬ್ಬಾಳಿಕೆಗಾಗಿ ಮನನೊಂದು ಅನ್ನ ಸತ್ಯಾಗ್ರಹ ಸೂಚನೆ ಕೊಟ್ಟರೆಂಬಂತಹ ನಿರಾಧಾರ ವಾರ್ತೆಗಳು ಹಬ್ಬಿವೆ. ದಿವಾನರು 'ಪರ್ಯಾಲೋಚನಾ ಸಮಿತಿ'ಯ ಸೂಚನೆಗಳನ್ನಾಧರಿಸಿ, ನವರಾಜ್ಯಘಟನೆಯ ಯೋಜನೆ ತಯಾರಿಸಿದ್ದು, ಮಹಾರಾಜರು ಆ ಕುರಿತೊಂದು ಜಾಹೀರುನಾಮೆ ಹೊರಡಿಸಲಿದ್ದಾರೆ. ಬೆನ್ನಲ್ಲೇ ನಡುಗಾಲ ಸರಕಾರ ಸ್ಥಾಪನೆಯಾಗುವದು ಖಂಡಿತವೆಂದು ತಿಳಿದುಬರುತ್ತಿದೆ. ಕಾಂಗ್ರೆಸಿಗರು ಬಿಡುಗಡೆ ಹೊಂದುವುದೂ ಸಂಭವನೀಯ.

ಹೈದರಾಬಾದು ಸತ್ಯಾಗ್ರಹಿಗಳ ಮೇಲಿನ ದಬ್ಬಾಳಿಕೆಯು ಅತ್ಯಂತ ಕ್ರೂರ ರೀತಿಯಿಂದ ಸಾಗಿದೆ.

ಜಾಗತಿಕ ಸಂಘರ್ಷ—

ಈಗ ನಡೆದಿರುವ ಸಭೆಯಲ್ಲಿ ರಶ್ಯಾ-ಅಮೇರಿಕಗಳ ಭಿನ್ನಾಭಿಪ್ರಾಯವು ತೋರಿಬಂದ ಕಠೋರತೆಯನ್ನು ಕಂಡು, "ಹೀಗೆಯೇ ನಡೆದರೆ ಮೂರನೇ ಜಾಗತಿಕ ಯುದ್ಧ ನಿಶ್ಚಯ" ಎಂದು ಫ್ರೆಂಚ್ ಅಧ್ಯಕ್ಷರೂ ಪ್ರಧಾನಿಗಳೂ ಭಯ ಪ್ರದರ್ಶಿಸಿದಾರೆ.

ನೇಮಕ—ಶ್ರೀ. ಜೆ. ಆರ್. ಬೇರಾರವರು ದಕ್ಷಿಣ ಕನ್ನಡ ಜಿಲ್ಲೆಯ ಎಕ್ಸ್ಟ್ರಾ ಆಸಿಸ್ಟಂಟ್ ಕಮಿಶನರ್ ಮತ್ತು ಜಿಲ್ಲಾ ಮದ್ಯಪಾನ ನಿರೋಧ ಆಫೀಸರರಾಗಿ ನೇಮಿಸಲ್ಪಟ್ಟಿದಾರೆ.

ತಾರಾನಾಥ ಆಯುರ್ವೇದ ವಿದ್ಯಾ—ಪೀಠ, ಬಳ್ಳಾರಿ–ಇದರ ವತಿಯಿಂದ ತಾರಾನಾಥ ಮೆಡಿಕಲ್ ಇನ್ಸ್ಟಿಟ್ಯೂಟಿನ ಉದ್ಘಾಟನಾ ಸಮಾರಂಭವು ತಾ 18-9-47ರಲ್ಲಿ ಜರಗಿತ್ತು.

WANTED

A clerk to be in charge of

THE HINDUSTAN PAPER & STATIONERY MART UDIPI

Minimum educational qualification necessary is S. S. L. C. Persons with experience of handling Paper and Printing will be preferred. For details interview

Managing Director,

THE GENERAL INVESTMENT & COMMERCIAL CORPORATION LTD,

Mukund Nivas,

UDIPI

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾ 25—9—47ರಿಂದ

ಹರೀಶ್ ಮತ್ತು ಹಸನ್ ಭಾನು

ಅಮಾನಾತ್

ಅನಂತರ:

ಕೈಸೆಕಹೂಂ

ಬರುತ್ತದೆ–

ಪುಂಪಮ್ಯಾ, ಗೋಲ್ಡನ್ ಗೇಂಗ್, ಭಕ್ತ ಪೋತನ, ದೇವತಾ, ಅಮ್ಮನಾಳ್, ಇತ್ಯಾದಿ.

ಅಮೃತಾಂಜನ, ತಲೆವೇದನೆ, ಶಿರೋವೇದನೆ, ಉಳುಕ, ಕತ್ತಿಗೆ, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವದು, ಹೇಳು ವಿಷ ಮುಂತಾದ ಬೇನೆ ಪಶ್ಚಾತ್ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತಾ.

ಪ್ರಕಟಣೆ

ಉಡುಪಿ ತಾಲೂಕು ಅಂಜಾರು ಗ್ರಾಮದ ಪೋತಬೆಟ್ಟು ಚಂದಯ್ಯ ಕುರ್ಲ ಹೆಗ್ಡೇರ ಮೊಮ್ಮಗ ರತ್ನಾಕರ ಹೆಗ್ಡೆಯು, ಸರ್ವ ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ನನ್ನ ಅಜ್ಜ ಚಂದಯ್ಯ ಕುರ್ಲ ಹೆಗ್ಡೇರ ಹೆಸರಲ್ಲಿ ನನಗೆ ತಾ. 8-9-47ರಲ್ಲು ಬಂದ ಒಂದು ಟಪ್ಪಾಲ್ ರಿ. ನೋಟೀಸಿನ ಮೇರೆಗೆ—

ನವಯುಗದ ಸಂಚಿಕೆಯಲ್ಲಿ ಅವರ ಹೆಸರಲ್ಲಿ ಪ್ರಕಟಿಸಿದ ಜ್ಞಾಹೀರಾತಿನ ಕುರಿತು ಕೂಡಾ—

ನನ್ನ ಅಜ್ಜ ಚಂದಯ್ಯ ಕುರ್ಲ ಹೆಗ್ಡೇರಿಗೆ ನಾನು ಸದ್ರಿ ನೋಟೀಸಿನ ವ ಪ್ರಕಟಣೆಯ ಕಾಲ್ಪನಿಕ ವ ಸುಳ್ಳು ಸಂಗತಿಗಳನ್ನು ಬಂಧಿಸಿ ಜವಾಬು ಕೊಟ್ಟಲ್ಲಿ———ಸದ್ರಿ ಚಂದಯ್ಯ ಕುರ್ಲ ಹೆಗ್ಡೇರು ಮೇಲ್ಕಂಡ ಅವರ ಹೆಸ್ರಿನ, ರಜಿಸ್ಟ್ರಿ ನೋಟೀಸಾಗ್ಲೀ ಪ್ರಕಟಣೆಯಾಗ್ಲೀ ಅವರ ತಿಳುವಳಿಕೆಯಿದ್ದಲ್ಲವಾಗಿಯೂ, ಅವರ ಮಗ ಡಿಪೇಲ್ ಸುಬ್ಬಯ್ಯ ಹೆಗ್ಡೇಯು ಅವರಿಂದ ಪತ್ರಗಳಿಗೆ ರಿ. ನೋಟೀಸು ಕೊಡುವರೆ ಎಂತ ಪಂಚಿಸಿ ದಸ್ತತು ಮೊಹರು ಪಡೆದ ಕಾಗ್ದಗಳಿಂದ ಸದ್ರಿ ಪ್ರಕಟಣೆ ವ ರಿ. ನೋಟೀಸು ಕೊಟ್ಟಿರಬಹುದಾಗಿಯೂ, ಸದ್ರಿ ರಿ. ನೋಟೀಸು ವ ಅವರ ಹೆಸ್ರಿನ ಪ್ರಕಟಣೆಯಲ್ಲಿ ಬರದ ಯಾವುದೊಂದು ಅಕ್ರತ್ಯಗಳು ವ ಮೋಸಗಳು ನಡದಿದ್ದಿಲ್ಲವಾಗಿಯೂ ಅವರ ಹೆಸ್ರಿನ ಅಂಥಾ ಪ್ರಕಟಣೆಯು ವ ಪ. ರಿ. ನೋಟೀಸು ಸಿರಿಧಂನಾಗತಕ್ಕದ್ದಲ್ಲವೆಂಬ ದಾಗಿ ನನಗೆ ತಾ 16-9-47ರ ಪ. ರಿ. ನೋಟೀಸು ಮೂಲಕ ತಿಳ್ಸಿರುತ್ತಾರೆ.

V. Rathnakara Hegde.

ಬಾಲಕರು ಆರೋಗ್ಯಕಾಯರಾಗಲು (ಪ್ರಭೂಸ್) ಬಾಲಾಮೃತ ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನೆಟ್ಟಗಾಗಲು ತಾಯಿ ತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ. ಮಾತ್ರ, ಹೊತ್ತು ಕಳೆದರೆ ಮತ್ತೆ ಬಾರದು.

'ಪ್ರಭೂಸ್'

ಬಾಲಾಮೃತ

ಪ್ರಭೂಸ್ ಬಾಲಾಮೃತದ ಖಾತ್ರಿಗೆ ದಾಖಲೆ ಬೇಕೆ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳಿರಿ.

ಸ್ವದೇಶೀ ಔಷಧ ಭಂಡಾರ,

(ರಜಿಸ್ಟರ್ಡ್)

ಕುಂಜಾಲು, ಪೊ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು—

ನವಭಾರತ ಪುಸ್ತಕ ಭಂಡಾರ, ಉಡುಪಿ,

L. N. Sharma, Mangalore,

CHAMPAE'S

Snow & Castrex

Sole Distributers for India

Prop: K. G. NAYAK,

Santhekatte, UDIPI, S K.

ಉಡುಪಿ

ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆ:—ಇದೇ ತಾ. ೧೬ರಲ್ಲಿ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿ ಗಾಂಧಿಜಯಂತಿಯನ್ನು ತಾ. ೨೫ರಿಂದ ಆಕ್ಟೋಬರ್ ೨ನೆ ತಾರೀಕಿನ ವರೆಗೆ ವಿಜೃಂಭಣೆಯಿಂದ ಆಚರಿಸಬೇಕಾಗಿ ನಿರ್ಣಯಿಸಲಾಯಿತು. ಕರ್ನಾಟಕದ ಹಿರಿಯ ಮುಖಂಡರಾದ ಶ್ರೀ ಮುದವೀಡು ಕೃಷ್ಣರಾಯರ ನಿಧನಕ್ಕಾಗಿ ವಿಷಾದ ಸೂಚಿಸಲಾಯಿತು. ಹೈದರಾಬಾದು ಮತ್ತು ಮೈಸೂರಿನಲ್ಲಿ ನಡೆಯುವ ಶಾಂತ ಚಳವಳಿಕ್ಕೆ ಬೆಂಬಲವನ್ನು ವ್ಯಕ್ತಪಡಿಸಿ ಆ ಸರಕಾರಗಳ ದಬ್ಬಾಳಿಕೆಯನ್ನು ಖಂಡಿಸಲಾಯಿತು. ಸ್ಥಳೀಯ ಸರಕಾರೀ ಆಸ್ಪತ್ರೆಯ ಸುಧಾರಣಾ ಕಮಿಟಿಯ ಕಾರ್ಯಕ್ಕೆ ಮದ್ರಾಸು ಸರಕಾರದ ಆರೋಗ್ಯ ಮಂತ್ರಿಗಳು ನೆರವಾಗಬೇಕಾಗಿ ವಿನಂತಿಸಲಾಯಿತು. ಅಕ್ಕಿಯ ಬೆಲೆಯ ದೃಷ್ಟಿಯಿಂದ ಇತರ ಸಾಮಾನುಗಳ ಬೆಲೆಯೂ ರೂಪಾಂತರ ಹೊಂದಬೇಕಾಗಿ ಸರಕಾರಕ್ಕೆ ಸೂಚಿಸಲಾಯಿತು. ಬೇಸಾಯುಗಾರರಿಗೆ ಊಟಕ್ಕೂ ವ್ಯವಸಾಯ ಖರ್ಚಿಗೂ ಬಿಟ್ಟು ಉಳಿದಂಶವನ್ನೇ ಸಂಗ್ರಹ ಮಾಡಬೇಕೆಂಬ ಸರಕಾರದ ನಿಯಮವಿದ್ದಾಗ್ಲೂ ಸರಕಾರಿ ನೌಕರರು ಪ್ರಾಣಗೇಣಿ |ಅಕ್ಕಿಯನ್ನೇ ಉಳಿತಾಯವೆಂದೆಣಿಸಿ ಸಂಗ್ರಹಿಸುವುದು ವ್ಯಸನಕರವೆಂದು ಸರಕಾರದ ಅವಗಾಹನೆಗೆ ತರಲಾಯಿತು. ಸರಕಾರಿ ನೌಕರರಲ್ಲಿ ಲಂಚಕೋರತನ, ದರ್ಪವಿನ್ನೂ ಕಡಿಮೆಯಾಗದೆ ಹೆಚ್ಚಾಗುತ್ತಲಿರುವುದರಿಂದ ಸರಕಾರವು ಈ ಕುರಿತು ಕಠಿನ ಧೋರಣೆವಹಿಸುವಂತೆ ಸರಕಾರಕ್ಕೆ ತಿಳಿಸಲಾಯಿತು.

ವಾರ್ಷಿಕೋತ್ಸವ— -ಮಣಿಪಾಳದ ಎಕಾಡೆಮಿ ಒಫ್ ಜನರಲ್ ಎಡ್ಯುಕೇಶನಿನ ವಾರ್ಷಿಕೋತ್ಸವವು ಇದೇ ತಾ ೧೯ರಿಂದ ೨೧ರ ತನಕ ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲಲ್ಲಿ ಜರಗಿತು. ಪ್ರಾರಂಭ ದಿನದ ಸಭೆಯಲ್ಲಿ ಮೂಡಬಿದಿರೆ ಬೇಸಿಕ್ ಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ ಕೆ. ರಾಮಕೃಷ್ಣ ಸೆಟ್ಟರು 'ಬೇಸಿಕ್ ಎಡ್ಯುಕೇಶನ'ನ ವಿಷಯದಲ್ಲಿ ತಯಾರಿಸಿದ ಪತ್ರವನ್ನೋದಿದರು. ಶ್ರೀ ಎಸ್. ಮುಕುಂದ ರಾಯರು ಅಂದಿನ ಅಧ್ಯಕ್ಷತೆ ವಹಿಸಿದ್ದರು. ಎರಡನೆ ದಿವಸದಲ್ಲಿ ಜರಗಿದ ಸಭೆಯ ಅಧ್ಯಕ್ಷತೆಯನ್ನು ಮಂಗಳೂರು ಶ್ರೀ ರಾಮಕೃಷ್ಣ ಮಿಶನಿನ ಸ್ವಾಮಿ ವಿಮಲಾನಂದರು ವಹಿಸಿದ್ದರು. ರಾ| ಬ| ಡಾ| ಎಮ್. ಕೇಶವ ಪೈಗಳವರು ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣದ ಆವಶ್ಯಕತೆಯ ಕುರಿತು ಬರೆದ ಪತ್ರವನ್ನೋದಿದರು. ಕೊನೆಯ ದಿನ ಎಕಾಡೆಮಿಯ ಪದವೀದಾನ ಸಮಾರಂಭವು ವಕೀಲ್ ಶ್ರೀ ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಐ ಎಸ್. ಕುಡುವರು ಸಮಾರಂಭಕ್ಕುಚಿತವಾದ ವಿದ್ಯಾಪ್ರಚಾರದ ರೂಪರೇಖೆಗಳನ್ನು ಚಿತ್ರಿಸಿದ ಭಾಷಣವನ್ನೋದಿದರು. ರಿಜಿಸ್ಟ್ರಾರ್ ಡಾ| ಟಿ. ಮಾಧವ ಪೈಗಳು ಧನ್ಯವಾದವನ್ನರ್ಪಿಸಿದರು. ಅಂದೇ ಎಕಾಡೆಮಿಯ ಸುಪ್ರೀಮ್ ಗವರ್ನಿಂಗ್ ಬೋಡಿ ಸಭೆ ಜರಗಿತು.

ಪ್ರಾಂತಿಕ ಸಮ್ಮೇಲನ:—ಹಿಂದುಸ್ತಾನ್ ಸ್ಕೌಟ್ ಎಸೋಸಿಯೇಶನಿನ ಕಮಿಶನರರ ಪ್ರಾಂತಿಕ ಸಮ್ಮೇಲನವು ಬರುವ ಅಕ್ಟೋಬರ ತಿಂಗಳ 22 ಮತ್ತು 23ಕ್ಕೆ ಮಣಿಪಾಲದಲ್ಲಿ ಜರಗಲಿದೆ.

ಮದ್ಯಪಾನ ನಿಷೇಧ ಸಮಿತಿ:—ಯೊಂದು ಇತ್ತೀಚೆಗೆ ತಾಲೂಕು ಕಚೇರಿಯಲ್ಲಿ ಸಭೆಸೇರಿ ರಚನೆಯಾಗಿದೆ. ತಾ 1-10-47ಕ್ಕೆ ಮೆರವಣಿಗೆ, ಪ್ರಚಾರ, ಸಭಾದಿಗಳ ಕಾರ್ಯಕ್ರಮಗಳಿವೆ. ಪಾನ ನಿಷೇಧವು ಯಶಸ್ವಿಯಾಗುವಂತೆ ಎಲ್ಲರೂ ಸಹಕರಿಸಬೇಕೆಂದು ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ. ಬಾಳ್ಕಟ್ಟ ಕೃಷ್ಣಯ್ಯ ಹೆಗ್ಡೇರು ವಿನಂತಿಸುತ್ತಾರೆ.

ಹಿಂದೀ ಸ್ವಾತಂತ್ರ್ಯ ದಿನಾಚರಣೆ ಸಮಿತಿಗೆ— ಸೆಪ್ಟಂಬರ 10ರ ತನಕ ರೂ 6910-9-4 ಜಮಾ; ಶೃಂಗಾರ, ಬಡವರಿಗೆ ಊಟ, ಮಕ್ಕಳಿಗೆ ತಿಂಡಿ ವಗೈರೆಗಳಿಗೆ ಒಟ್ಟು ಖರ್ಚು ರೂ. 553-14-12 ಉಳಿತಾಯ ರೂ 6356-10-5. ಇದರಲ್ಲಿ ಗಾಂಧೀ ಮೈದಾನಿನಲ್ಲಿ ಒಂದು ಶಾಶ್ವತ ಧ್ವಜಸ್ತಂಭ ನಿರ್ಮಿಸಲು ರೂ 1500; ಎರಡು ವಿದ್ಯಾರ್ಥಿವೇತನಗಳಿಗೆ ರೂ 2000; ಮತ್ತುಳಿದ ರೂ 3856-10-8ನ್ನು ಸರಕಾರಿ ಆಸ್ಪತ್ರೆಯ ಪ್ರಸೂತಿ ಗೃಹಕ್ಕಾಗಿ ವ್ಯಯಿಸಲಾಗುವುದೆಂದು ಸಂಬಂಧ ಪಟ್ಟವರು ತಿಳಿಸುತ್ತಾರೆ.

ಸ್ಥಳೀಯ ಸರಕಾರಿ ಆಸ್ಪತ್ರೆಯ ಸುಧಾರಣೆ—ಮತ್ತ ಹೆರಿಗೆ ಶಾಖೆಯ ಸುವ್ಯವಸ್ಥೆಯ ಸಲುವಾಗಿ ಜನತಾಳಿದ ಮೆಟರ್ನಿಟಿ ವಾರ್ಡ್ ಮತ್ತು ಹಾಸ್ಪಿಟಲ್ ಇಂಪ್ರೂವ್ ಮೆಂಟ್ ಕಮಿಟಿಯ ಸಭೆಯು ಇದೇ ತಾ 13ರಲ್ಲು ಶ್ರೀ ಎ. ಎಲ್. ಎನ್ ರಾಯರ ಅಧ್ಯಕ್ಷತೆಯಲ್ಲಿ ಜರಗಿ ರೂ. 25000/- ಸಂಗ್ರಹಿಸುವ ಯೋಜನೆಯನ್ನು ಮಾಡಲಾಯಿತು. ಕಮಿಟಿಯನ್ನು ಬಲವಂತವಾಗಿರಿಸುವರೆ ಇನ್ನೂ ಕೆಲವರನ್ನು ಕಮಿಟಿಗೆ ಸೇರಿಸಲಾಯಿತು.

ಪ್ರೊವಿನ್ಸಿಯಲ್ ಫಿಶರ್ ಡೆವಲಪ್ ಮೆಂಟ್ ಕಮಿಟಿ—ಹಳ್ಳಿಗಳ ಅಭಿವೃದ್ಧಿ ಯೋಜನೆಗಾಗಿ ಸ್ಥಾಪಿಸಲ್ಪಟ್ಟ ಈ ಕಮಿಟಿಗೆ ಓರ್ವ ಮೆಂಬರರಾಗಿ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರು ಆರಿಸಲ್ಪಟ್ಟಿದ್ದಾರೆ. ಶ್ರೀಯುತರು ಡೈರೆಕ್ಟರರಾಗಿರುವ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸು ಕಂಪೆನಿಯ ತಾ 21-9-47ರಲ್ಲಿ ಜರಗಿದ ಡೈರೆಕ್ಟರರ ಸಭೆಯಲ್ಲಿ ಈ ಬಗ್ಗೆ ಶ್ರೀ ನಾಯ್ಕರನ್ನು ಅಭಿನಂದಿಸಲಾಯಿತು.

ಕರ್ನಾಟಕ ಸಂಘ—ದಿನಾಂಕ ೨೪ರಲ್ಲಿ ಜರಗಿದ ಕಾರ್ಯವಾಹೀ ಅಧಿವೇಶನದಲ್ಲಿ ಕನ್ನಡದ ಕಡುಗಲಿ ಮುದವೀಡು ಕೃಷ್ಣರಾಯರ ನಿಧನಕ್ಕಾಗಿ ಸಂತಾಪ ಸೂಚಕ ನಿರ್ಣಯವಾಗಿ ಇತರ ಆಲೋಚ್ಯ ವಿಷಯಗಳನ್ನು ತಾ ೨೮ರ ಸಭೆಗೆ ಮುಂದುವರಿಸಲಾಯಿತು.

ಗಾಂಧೀ ಜಯಂತಿಯು—ಉಡುಪಿಯ ನಾಟ್ಯಕೂಟದ ಪರವಾಗಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ತಾ 2-10-47ನೇ ಪೂರ್ವಾಹ್ನ 10 ಘಂಟೆಗೆ ಆಚರಿಸಲ್ಪಡುವುದೆಂದೂ ಸರ್ವರಿಗೂ ಸ್ವಾಗತವಿದೆಯೆಂದೂ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಪಿಂಜೂರು:—'ಶ್ರೀ ವಿವೇಕಾನಂದ ಸೇವಾ ಸಂಘ'ದ 12ನೇ ವಾರ್ಷಿಕ ಮಹಾ ಸಭೆಯು ಶ್ರೀ. ಎನ್. ಎಸ್. ಶೆಟ್ಟರ ಅಧ್ಯಕ್ಷತೆಯಲ್ಲಿ ತಾ. 18-9-47ನೇ ಅಪರಾಹ್ನ ಎಡ್ಮೇರು ಶಾಲೆಯಲ್ಲಿ ಜರಗಿತು. ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಶ್ರೀ ಎನ್. ಸಂಜೀವ ಸೆಟ್ಟರು ಮುಂದಿಟ್ಟರು. ಭಾವೀ ಕಾರ್ಯ ವಿಧಾನಗಳು ಚರ್ಚಿಸಲ್ಪಟ್ಟು ಸಂಘದ ಕಟ್ಟಡ ನಿರ್ಮಾಣದ ಬಗ್ಗೆ ಶ್ರೀ ಎನ್.ರಾಜು ಸೆಟ್ಟರ ಯೋಜನೆ ಸ್ವೀಕರಿಸಲ್ಪಟ್ಟಿತು. ಹೊಸ ವರುಷದ ಕಾರ್ಯಕಾರೀ ಸಮಿತಿಯಾಗಿ ಶ್ರೀಗಳಾದ ಯನ್. ರಾಜು ಸೆಟ್ಟಿ (ಅಧ್ಯಕ್ಷ), ಪಿ. ಬಿ. ಅಚ್ಚಣ್ಣ ಸೆಟ್ಟಿ, ಯನ್. ಜೋಗಪ್ಪ ಸೆಟ್ಟಿ (ಉಪಾಧ್ಯಕ್ಷರುಗಳು) ಎನ್. ರಘುನಾಥ ಹೆಗ್ಡೆ, ಎನ್. ತಿಮ್ಮಪ್ಪ ಸೆಟ್ಟಿ, (ಜತೆಕಾರ್ಯದರ್ಶಿಗಳು) ಯನ್. ಜಗನ್ನಾಥ ಸೆಟ್ಟಿ (ಖಜಾಂಚಿ) ಮತ್ತಿತರ ಆರು ಮಂದಿ ಸದಸ್ಯರು ಆರಿಸಲ್ಪಟ್ಟರು. 'ಸ್ವತಂತ್ರ ಭಾರತದಲ್ಲಿ ರೈತನ ಸ್ಥಾನ' ಎಂಬ ಕುರಿತು ಶ್ರೀ ಎಂ. ವಿ. ಹೆಗ್ಡೆ ಮತ್ತು ಡಾ| ಸಂಜೀವನಾಥರ ಭಾಷಣಗಳಾದುವು. ಶ್ರೀ ಮರ್ಣೆ ಗೋವಿಂದ ಸೆಟ್ಟರು ಸ್ವಗ್ರಾಮ ಸ್ಥಿತಿಯನ್ನು ವಿವರಿಸಿದ ಬಳಿಕ ಅಧ್ಯಕ್ಷರ ಭಾಷಣ-ಧನ್ಯವಾದಗಳಾಗಿ ಸಭೆ ಮುಗಿಯಿತು.

ಪಡುಬಿದ್ರಿ:—ರಾಷ್ಟ್ರ ಸೇವಾದಳದ ಆಫೀಸಿನಲ್ಲಿ ತಾ 18-9-47ರಲ್ಲಿ ಶ್ರೀ ಪಿ. ರಾಮರಾಯರ ಅಧ್ಯಕ್ಷತೆಯಲ್ಲಿ ಸಭೆಸೇರಿ ಮೈಸೂರು, ಹೈದರಾಬಾದುಗಳಲ್ಲಿ ನಡೆಯುತ್ತಿರುವ ದಬ್ಬಾಳಿಕೆಯನ್ನು ನಿಷೇಧಿಸಲಾಯಿತು.

ಕಳಿತ ಮಾರಿದೇರ-ಗಾ!

(ಪಾನ ಪ್ರತಿಬಂಧಕಾಜ್ಞೆಯ ಆರಂಭದ ದಿನದಲ್ಲಿ ಕೂಡುವ ಸಭೆ ಕೂಟ ಮೆರವಣಿಗೆ ಗ್ರಾಮ ಸಂಚಾರಗಳಲ್ಲಿ ಕೂಟವಾಗಿ ಹಾಡಲು, ಹಾಡಿಕುಣಿಯಲು, ಉಪಯುಕ್ತವಾಗುವ ತುಳುಪದ. ಹಾಡುವ ಯಾ ಹಾಡಿ ಕುಣಿಯುವ ನಾಲ್ಕಾರು ಮಂದಿ ಇದರ ಪಲ್ಲವಿ ಅನುಪಲ್ಲವಿಗಳನ್ನು ಒಟ್ಟಾಗಿ ಹೇಳಬೇಕು. ಮತ್ತಿನ ನಾಲ್ಕು ನೊಲ್ಲುಗಳ ಒಂದೊಂದು ಪಾದವನ್ನು ಒಬ್ಬೊಬ್ಬನು ಅಧಿಕಾಧಿಕ ಸೂಕ್ತಿವತ್ತಾಗಿ ಹೇಳುತ್ತ ಪಲ್ಲವಿ ಬಂದಾಗ ತಿರುಗಿ ಎಲ್ಲರೂ ಒಂದಾಗಿ ಹಾಡುವದು. ತಾಳಕ್ಕೆ ಸರಿಯಾಗಿ ದೋಲು ಉಪಯೋಗಿಸಿ ಕುಣಿಯುತ್ತ ಹಾಡಿದರೆ ಬಹಳ ಸ್ಫೂರ್ತಿವತ್ತಾಗುತ್ತದೆ).

ಮಾರಿ ದೇರು-ಗಾ!
ಕಿನ್ನಿ ಮಲ್ಲೆ ಕೂಡ್ದು ಬಲ್ಲೆ!
ಮಾರಿದೇರು-ಗಾ ॥ ಪಲ್ಲವಿ ॥

ಮಾತ ಮಾರಿಡ್ದ್ ಮುಳ್ಳೆ ಮಾರಿ
ಕಳಿತ ಮಾರಿನ್ ಊರುಡ್ದ್ ದೇರು-ಗಾ!
ಜಿಲ್ಲೆಡ್ದ್ ಪಿದಾಯಿ ದೇಸೊಡ್ದ್ ಪಿದಾಯಿ
ಕಡಲ್ದ್ ಅಪಿಲ್ ದೂರ ದೇರು-ಗಾ!
ಕಿನ್ನಿ ಮಲ್ಲೆ ಕೂಡ್ದು ಬಲ್ಲೆ
ಮಾರಿದೇರು-ಗಾ! ॥ ಅನು ಪಲ್ಲವಿ ॥

ಕೈತ ಕಾಸು ದಿಂಗುವಿ ಮಾರಿನ್
ವಿಚಾರ ಸಚಾರ ದೆಪ್ಪುವಿ ಮಾರಿನ್
ಕಳವು ಹಾದರ ಮಲ್ಪಾವಿ ಮಾರಿನ್
ದೊಂಬಿ ಜಗಾಲ್ಗ್ ಒಯ್ಪುವಿ ಮಾರಿನ್
ನಾಡ್ದ್ ಪಿದಾಯಿ ದೇರು-ಗಾ!
ಕಿನ್ನಿ ಮಲ್ಲೆ ಮಾತ ಬಲ್ಲೆ
ಮಾರಿದೇರು-ಗಾ! ॥ ೧ ॥ ಅನುಪಲ್ಲವಿ

ಕಳಿತ ಕುಪ್ಪಿ ಮುಟ್ಟಿ ಕಂದೆಲ್
ಗಂಗಸಂತ ದರಿಮ ಬಾಟ್ಲಿ
ಇತ್ತಿ ಊರುಡ್ ಉಂತಂದ್ ತೂಲೆ
ನೀತಿ ಶಾಂತಿ ಸಿರಿ ಸಂತೋಸ್
ಮಾರಿದೇರು-ಗಾ!
ಕಿನ್ನಿ ಮಲ್ಲೆ ನಾಡ್ದ್ ಬಲ್ಲೆ!
ಮಾರಿದೇರುಗಾ ॥ ೨ ॥ ಅನುಪಲ್ಲವಿ

ತಾದಿ ಬೀದಿಡ್ ಲೆಂಕಾವಿ ಮಾರಿನ್
ಮಾನ ಮರ್ಯಾದಿ ದೆಪ್ಪುವಿ ಮಾರಿನ್
ದಿಕ್ಕಲ್ದ್ ತೂಸಿ ತೆಕ್ಕಾವಿ ಮಾರಿನ್
ಬುಡೆದಿ ಬಾಲೆನ ಬುಳ್ಪಾವಿ ಮಾರಿನ್
ಗ್ರಾಮೊಡ್ದ್ ಪಿದಾಯಿ ದೇರು-ಗಾ!
ಕಿನ್ನಿ ಮಲ್ಲೆ ಸೇರ್ದ್ ಬಲ್ಲೆ!
ಮಾರಿದೇರು-ಗಾ! ॥ ೩ ॥ ಅನುಪಲ್ಲವಿ

ಬೇರಿ ಮಾರಿ ಪಿರಾ ಬರಂದ್!
ವಾದಿ ಪಿತ್ಲ್ ಆಟ್ಟದ ಮಿತ್ತ್
ಕಳ್ಪ ಲೆಕ್ಕ ಬೆಂಗ್ದ್ ಕುಳ್ಯಂದೆ!
ದಿನಾ ದಿನಾ ಸೋಪು ತೂದು
ಮಾರಿದೇರು-ಗಾ!
ಕಿನ್ನಿ ಮಲ್ಲೆ ಬುಡಂದೆ ಬಲ್ಲೆ!
ಮಾರಿದೇರು-ಗಾ! ॥ ೪ ॥ ಅನುಪಲ್ಲವಿ

'ಕೊರಡ್ಕಲ್'

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 378/47.

ವಾದಿ—ಗೋವಿಂದ ಸೆಟ್ಟಿ.
ಪ್ರ. ವಾ.—ಕನಕ ಸೆಡ್ತಿ, ಸಹಾ.

ಉಡುಪಿ ತಾಲ್ಲೂಕು ಹೊಸಾಳ ಗ್ರಾಮದಲ್ಲಿರುವ ಬಾಜಿಲ್ ಲೋಬರ ಮಗ 9ನೇ ಪ್ರತಿವಾದಿ ಸಾವೇರ್ ಲೋಬರೀಗೆ, ಈ ಮೂಲಕ ತಿಳಿಯಪಡಿಸುವುದೇನಂದರೆ.

ದಾವಾ ಸ್ಥಳಗಳನ್ನು ಸರಸ್ ನಿರಸ್|ಸಮದರ್ಶಿ ಪಾಲುಮಾಡಿ ವಾದಿಯ ಅಂಶಕ್ಕೆ ಬರುವ ಸ್ಥಳಗಳನ್ನು ಪ್ರತ್ಯೇಕ ವಿಂಗಡಿಸಿ ಮುಂದಿನ ಹುಟ್ಟುವಳಿ ಸಮೇತ ವಾದಿಯ ಅಂಶಕ್ಕೆ ಬರುವ ಸ್ಥಳಗಳನ್ನು ವಾದಿಯ ಸುಪರ್ದಿಗೆ ಕೊಡಿಸಬೇಕೆಂತ ವಗೈರೆ ಕಾಣ್ಸಿ ವಾದಿಯು ದಾಖಲು ಮಾಡಿದ ಮೇಲಿನ ದಾವೆ ತಾ. 10-10-47ನೇ ಬೆಳಿಗ್ಗೆ 11 ಗಂಟೆಗೆ ಮೇಲ್ಕಾಣುವ ಕೋರ್ಟಿನಲ್ಲಿ ತನಿಖೆಗೆ ಇಟ್ಟಿದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿದೆ.

B. S. Shetty B. A. B. L.
Vakil for Plaintiff.
Coondapoor 19-9-47.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂ ಬೋಧಿನಿ

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ಬೆಲೆ: ರೂ. **1-8-0** ಮಾತ್ರ.

1—12—0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಬುಕ್ ಡಿಪೊ, ಉಡುಪಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ದಕ್ಷಿಣ ಕನ್ನಡ

ಪುತ್ತೂರು—ದಿನಂಪ್ರತಿ ಬಿಡದೆ ಮಳೆ ಬರುತ್ತಿರುವುದರಿಂದ ಕೊಯಿಲು ಕೆಲಸಕ್ಕೆ ಅಡ್ಡಿಯಾಗಿದೆ. ಕೆಲವು ಕಡೆಗಳಲ್ಲಿ ಒಳ್ಳೆ ಬೆಳೆ ಬಂದಿದ್ದರೂ ಮಳೆ ನೆಸೆಯಿಂದಾಗಿ ಪೈರುಗಳು ಅಡ್ಡ ಬಿದ್ದು ನೀರಿನಲ್ಲಿ ಮುಳುಗಿವೆ. ಇದರಿಂದಾಗಿ ಕೈಗೆ ಬಂದ ತುತ್ತು ಬಾಯಿಗೆ ಬರಲಾರದೋ ಎಂದು ಜನರು ಚಿಂತೆಗೆ ಗುರಿಯಾಗಿರುವರು.

ಕಾರಣಾಂತರದಿಂದ ಇಲ್ಲಿಯ ಕೆನರಾ ಬ್ಯಾಂಕಿನ ಶಾಖೆಯು ತಾ 12-10-47ರಂದ ಮುಚ್ಚಲ್ಪಡುವುದೆಂದೂ, ಇಲ್ಲಿಯ ವ್ಯವಹಾರವು ಮಂಗಳೂರು ಸಿಟಿ ಶಾಖೆಯಲ್ಲಿ ನಡೆಸಲ್ಪಡುವುದೆಂದೂ ಗೊತ್ತಾಗಿದೆ.

ಸರಕಾರಕ್ಕೆ ಸುಮಾರು 20 ವರ್ಷಗಳಿಗೂ ಮಿಕ್ಕಿ ಸೇವೆಗೈದ, ಇಲ್ಲಿಯ ಡೆಪ್ಯುಟಿ ಕಲೆಕ್ಟರರ ಹೆಡ್ ಕ್ಲಾರ್ಕರಾಗಿದ್ದ ಶ್ರೀ ಬಿ. ಎಲ್. ರಾವ್ ಅವರ ಮೇಲೆ 1944ನೇ ವರ್ಷ ಆಗಿನ ಜಿಲ್ಲಾ ಕಲೆಕ್ಟರರಾಗಿದ್ದ ಶ್ರೀ ಪಿ. ರಾಮದಾಸ್ ಬಿ. ಎ. ಅವರ ಆಡಳಿತದ ಸಮಯದಲ್ಲಿ ಸರಕಾರಿ ಹಣ ದುರುಪಯೋಗ ಪಡಿಸಿದರೆಂಬ ಆರೋಪದ ಮೇಲೆ ಮೊಕದ್ದಮೆ ಹೂಡಲ್ಪಟ್ಟು, ಶಿಕ್ಷೆ ವಿಧಿಸಲ್ಪಟ್ಟಿತ್ತು. ಜಿಲ್ಲಾ ಸೆಶ್ಯನ್ ಕೋರ್ಟಿನಲ್ಲಿಯೂ (ಅಪ್ಪೀಲಿನಲ್ಲಿ) ಶಿಕ್ಷೆ ಕಾಯಂ ಆಗಿತ್ತು. ನಂತರ ಮದ್ರಾಸ್ ಹೈಕೋರ್ಟಿಗೆ ಅಪ್ಪೀಲು ಆಗಿ ಅಲ್ಲಿ ವ್ಯವಹರಿಸಿದ ನಂತರ ಕಳೆದ ತಾ 17-9-47ರಲ್ಲು ಹೈಕೋರ್ಟು ಜಡ್ಜರು ಶ್ರೀ. ಬಿ. ಎಲ್. ರಾವ್. ಅವರನ್ನು ಆರೋಪದಿಂದ ಬಿಡುಗಡೆ ಮಾಡಿರುವರೆಂದು ತಿಳಿದು ಬರುತ್ತಿದೆ. ಕಳೆದ 3 ವರ್ಷಗಳಿಂದ ಶ್ರೀಯುತರೂ, ಅವರ ದೊಡ್ಡ ಸಂಸಾರವೂ ಬಹಳ ಕಷ್ಟತೊಂದರೆಗಳನ್ನು ಹೊಂದಿದ್ದರು.

ಕಾರ್ಕಳ:—ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಭೆಯು ತಾ.14-9-47ರಲ್ಲಿ ಶ್ರೀ ಕೆ. ವೆಂಕಟೇಶ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿ ಕೆಳಗಿನ ಠರಾವುಗಳಾದುವು. ಈ ಸರ್ಕಲಿನಲ್ಲಿ ಬ್ಲೇಕ್ ಮಾರ್ಕೆಟ್ ಮಾಡುವವರ ಮತ್ತು ಲಂಚಗುಳಿತನದಲ್ಲಿ ಮಗ್ನರಾಗಿರುವವರ ಹೆಸರು ಮತ್ತು ಆ ಕುರಿತು ತಕ್ಕ ರುಜುವಾತು ಸಹಾ ಈ ಸಮಿತಿಗೆ ಸಿಕ್ಕಿದ್ದಲ್ಲಿ ಆ ವಿಷಯ ಸರಕಾರದವರ ಗಮನಕ್ಕೆ ತಂದು ಮುಂದಿನ ಕಾರ್ಯವನ್ನು ಈ ಸಮಿತಿಯು ಕೈಕೊಳ್ಳಬೇಕಾಗಿಯೂ ಮತ್ತು ಈ ವಿಷಯದಲ್ಲಿ ಎಲ್ಲಾ ಮೆಂಬರರು ಮುತವರ್ಜಿಯಿಂದ ಸಹಾಯ ಮಾಡಬೇಕಾಗಿಯೂ ನಿರ್ಣಯಿಸಲಾಯಿತು. ಹೈದರಾಬಾದು ಮತ್ತು ಮೈಸೂರು ಸಂಸ್ಥಾನಗಳಲ್ಲಿ ಅಲ್ಲಿಯ ಪ್ರಜೆಗಳು ತಮ್ಮ ಸ್ವಾತಂತ್ರ್ಯಕ್ಕಾಗಿ ಹೂಡಿರುವ ನ್ಯಾಯ ಮತ್ತು ಶಾಂತಮಯ ಹೋರಾಟಕ್ಕೆ ಈ ಸರ್ಕಲ್ ಕಾಂಗ್ರೆಸ್ ಕಮಿಟಿಯು ತನ್ನ ಸಂಪೂರ್ಣ ಸಹಾನುಭೂತಿಯನ್ನು ಸೂಚಿಸುತ್ತದೆ. ಮತ್ತು ಮೇಲಿನ ಸಂಸ್ಥಾನಗಳ ಸರಕಾರಗಳು ಪ್ರಜೆಗಳ ಮೇಲೆ ನಡೆಸುತ್ತಿರುವ ಅನ್ಯಾಯದ ದಬ್ಬಾಳಿಕೆಯನ್ನು ತೀವ್ರವಾಗಿ ಖಂಡಿಸುತ್ತದೆ.

ಹಾಡೂರು—ಇಲ್ಲಿಯ ಬಿ. ಇ. ಯಮ್ ಶಾಲೆಯ ಹೆತ್ತವರ ಸಂಘವು ತಾ 17-9-47 ರಲ್ಲಿ ಕಾರ್ಕಳ ವಕೀಲ್ ಶ್ರೀ ವೆಂಕಟೇಶ ಭಟ್ಟರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಮಕ್ಕಳ ವಿವಿಧ ಚಟುವಟಿಕೆಗಳು ಮುಗಿದ ಬಳಿಕ ವಕೀಲ್ ಶ್ರೀ. ಸಿ. ವಾಸುದೇವ ಉಪಾಧ್ಯಾಯರು ಶಾಲಾ ಏಳಿಗೆಯ ವಿಷಯ ಮಾತನಾಡಿದರು. ಶ್ರೀ ವಾಸು ಶೆಟ್ಟರು ಧನ್ಯವಾದ ಅರ್ಪಿಸಿದರು.

ಪೆರಡಾಲ—ಮೈಸೂರು ಮತ್ತು ಹೈದರಾಬಾದು ಸರಕಾರಗಳು ಅಲ್ಲಿನ ಜನತೆಯ ಹಾಗೂ ವಿದ್ಯಾರ್ಥಿಗಳ ಮೇಲೆ ನಡೆಸುತ್ತಿರುವ ದಬ್ಬಾಳಿಕೆಯನ್ನು ನಿಷೇಧಿಸುವ ಸಲುವಾಗಿ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ತಾ 15-9-47ರಂದು ಸ್ಥಳೀಯ ಮೈದಾನದಲ್ಲಿ ಶ್ರೀ ಕಲ್ಯಾಣಪುರ ಕೃಷ್ಣರಾವ್. ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಕೆಳಗಿನ ಗೊತ್ತುವಳಿಯನ್ನು ಮಂಜೂರು ಮಾಡಿದರು. "ಮೈಸೂರು ಹಾಗೂ ಹೈದರಾಬಾದು ಸರಕಾರಗಳು ಅಲ್ಲಿ ಜನತೆಯ ಮೇಲೆ ನಡೆಸುವ ದಬ್ಬಾಳಿಕೆಯನ್ನು ಈ ಮಹಾಸಭೆಯು ಸಂಪೂರ್ಣವಾಗಿ ನಿಷೇಧಿಸಿ ನ್ಯಾಯವಾದ ಹಕ್ಕುಗಳಿಗಾಗಿ ಹೋರಾಡುವ ಜನತೆಗೆ ತನ್ನ ಸಂಪೂರ್ಣ ಸಹಾನುಭೂತಿ ಈಯುತ್ತದೆ." ಎಂಬ ಠರಾವನ್ನು ಅಧ್ಯಕ್ಷರು ಸಭೆಯ ಮುಂದಿಟ್ಟರು. ಅದನ್ನು ಶ್ರೀಯುತರಾದ, ಯಸ್. ಈಶ್ವರ ಭಟ್ಟ, ಪಿ. ಅಂಬಾಜಿ, ಕೆ. ನಾರಾಯಣ ಭಟ್ಟ, ಕೆ. ವೆಂಕಟಾಚಲಯ್ಯ, ಬಿ. ಶಂಕರ ಭಟ್ಟ, ಕೆ. ಕೆ. ರೈ ಕೆ. ಟಿ. ಶಂಕರ, ಇವರು ಸಮರ್ಥಿಸಿದರು. ಅನಂತರ ಶ್ರೀ. ಬಿ. ಶಂಕರ ಭಟ್ಟರು ಧನ್ಯವಾದ ಸಮರ್ಪಿಸಿದರು.

ಬೈಲೂರು—ರಾಷ್ಟ್ರ ಸೇವಾದಳದ ಸಭೆಯು ತಾ. 14-9-1947ರಲ್ಲಿ ಮೂಲ್ಕಿ ಶ್ರೀ. ವಿಠಲ ರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಿ ಕರ್ನಾಟಕದ ಧುರೀಣರೂ ಶ್ರೇಷ್ಠ ಸಾಹಿತಿಗಳೂ ಆದ ಮುದವೀಡು ಕೃಷ್ಣರಾಯರ ನಿಧನದ ಕುರಿತು ದುಃಖ ಸೂಚನೆ ಮಾಡಲಾಯಿತು. ಇತರ ಕೆಲವು ವಿಷಯಗಳನ್ನು ಚರ್ಚಿಸಿದ ತರುವಾಯ ಅಧ್ಯಕ್ಷರ ಭಾಷಣದೊಂದಿಗೆ ಸಭಾಂತ್ಯವಾಯಿತು.

ಹಿರಿಯಡ್ಕ—ಸ್ಥಳೀಯ ಹಯರ್ ಎಲಿಮೆಂಟ್ರಿ ಶಾಲೆಯಲ್ಲಿ ಕಳೆದ 30 ವರ್ಷಗಳಿಂದ ಕೆಲಸಮಾಡಿಕೊಂಡು ಬಂದ ಶ್ರೀ. ಶ್ರೀನಿವಾಸ ಭಟ್ಟರು ತಾ 10-9-47ರಲ್ಲಿ ತಮ್ಮ ಕೆಲಸದಿಂದ ನಿವೃತ್ತಿಹೊಂದಲು ಶಾಲೆಯ ಹಳೆ ವಿದ್ಯಾರ್ಥಿಗಳು ಶ್ರೀಯುತರಿಗೆ ತಾ 14-9-47ರಂದು ಶ್ರೀ ಮಂಜಯ್ಯ ಸೆಟ್ರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದರು.

ಪೆಡೂರು—ಬಿ. ಇ. ಯಮ್, ಮಿಶನ್ ಹಾಯರ್ ಎಲಿಮೆಂಟರಿ ಶಾಲಾ ಹೆತ್ತವರ ಕೂಟವು ತಾ ೧೬-೯-47ರಲ್ಲಿ ಜರಗಿತು. ದಿವಂಗತ ಮುದವೀಡು ಕೃಷ್ಣರಾಯರ ಸ್ಮರಣಕ್ಕಾಗಿ ಸಂತಾಪವನ್ನು ವ್ಯಕ್ತಪಡಿಸಲಾಯಿತು. ಆ ಬಳಿಕ ಮಕ್ಕಳ ವಿವಿಧ ವಿನೋದಾವಳಿಗಳಾದ ಮೇಲೆ ಶ್ರೀ ಎ. ಕೆ. ಹೆಗ್ಡೆಯವರು ಹೆತ್ತವರ ಕರ್ತವ್ಯದ ಕುರಿತು ಮಾತಾಡಿದರು ಆ ಮೇಲೆ ಅಧ್ಯಕ್ಷರಾದ ಶ್ರೀ ಸುಂದರರಾಯರು ಸ್ವಾತಂತ್ರ್ಯ ರಕ್ಷಣೆಯಲ್ಲಿ ವಿದ್ಯ…

ಹಳ್ಳಿಯ ರೈತ

ಮೂರು ವರ್ಷ ಕಳೆದುವಾದರೂ 'ಪ್ರೊಕ್ಯೂರುಮೆಂಟ'ನ ಅರ್ಥ ಹಳ್ಳೀರೈತನಿಗೆ ತಿಳಿಯದು, ಬೆಳೆ ಕಟಾವಿನ ಸಮಯ ಸಮೀಪಿಸುತ್ತಿರುವುದರಿಂದ ಒಂದೆರಡು ಮಾತು ಬರೆಯಬಹುದಾಗಿದೆ. ನೆರೆ ಅಕಸ್ಮಾತ್ ಬಂದಾಗ ನಿರಾಶ್ರಿತರಾದವರಿಗೆ ನೆರೆಕರೆಯವರು ಆಶ್ರಯ ಕೊಡುವುದು ಅಗತ್ಯ. ನೆರೆ ಆಗಾಗ ಬರುತ್ತದಾದರೆ ಭದ್ರವಾದ ಕಟ್ಟೆ ಹುಣೆ ಹಾಕುವುದಲ್ಲದೆ ಅಗತ್ಯವಾದರೆ ಮನೆಗಳನ್ನು ಮೇಲಕ್ಕೆ ಕಟ್ಟಬೇಕು. ಮನೆಮಾರು ಇದ್ದವರು ಕಟ್ಟುವುದಲ್ಲ. ಅಗತ್ಯವುಳ್ಳ ಸಹಾಯಪಡೆದು ನಿರಾಶ್ರಿತರು ಇದನ್ನು ಮಾಡಬೇಕು. ಪಂಜಾಬಿನ 'ರೆಫ್ಯುಜಿ'ಯರಿಗೆ (Refugee) ಸಹಾಯವನ್ನು ಕೊಡುವುದು ಅಗತ್ಯ. ಎಷ್ಟರ ತನಕ? ಅವರು ಬೇಗನೆ ನೆಲೆಸಿ ಕಾರ್ಯ ಕರ್ತರಾಗುವ ತನಕ. ಆದರೆ ನಮ್ಮಲ್ಲಿದ್ದ ಬರಗಾಲ ನಿವೃತ್ತಿಗೆ ಯಾರನ್ನು ಕೇಳುವುದು? ಈಗಿನ ಧೋರಣೆಯಿಂದ ಬರಗಾಲ ಕಡಿಮೆ ಯಾಗುವಂತಿಲ್ಲ.

ಬೆಳೆಸಿದವರಿಗೆ ಅಕ್ಕಿಯಿಲ್ಲ. ಪೇಟೆ ಪಟ್ಟಣಗರಿಗೆ ಅಕ್ಕಿಯನ್ನು ಪ್ರಥಮ ಒದಗಿಸಿ ಕೊಡುವ ಜವಾಬ್ದಾರಿ ಸರಕಾರ ವಹಿಸಿ ಕೊಂಡದೆ. ನೆರೆಹಾಳಿಯೂ ಅಲ್ಲಿ ಪಂಜಾಬಿನ ರೆಫ್ಯುಜಿಯ ಮಾಸಕ್ತ ಮತ್ತು ಹೆತ್ತವರ ಜವಾಬ್ದಾರಿ ಏನೆಂಬುದನ್ನು ಮನಮುಟ್ಟ ವಿವರಿಸಿದರು.

ಹುಣ್ಸೆಮಕ್ಕಿ—ಇಲ್ಲಿ ತಾ 22-8-47 ರಲ್ಲಿ ಒಂದು ಪರೀಕ್ಷಾರ್ಥ ಟಪ್ಪಾಲ ಕಚ್ಚೆರಿಯನ್ನು ತೆರೆಯಲಾಗಿದೆ.

ದ. ಕ. ಜಿಲ್ಲಾ ಆಹಾರ ಸಮಿತಿಯವರಿಗೆ ಒಂದು ಸಲಹೆ—ನಮ್ಮ ಜಿಲ್ಲೆಯಲ್ಲಿ ಇದೇ ಸಪ್ಟಂಬರ ತಿಂಗಳಲ್ಲಿ ಬೆಳೆ ಕಟಾವು ಆಗಲಿಕ್ಕೆ ಆರಂಭವಾಗುತ್ತದೆ. ಈ ಜಿಲ್ಲೆಯ ಹೆಚ್ಚಿನ ಗ್ರಾಮಗಳಲ್ಲಿ ಅವಲಕ್ಕಿ ತಯಾರಿಸುವ ರಾಟೆಗಳು ಸಾವಿರಕಟ್ಲೆ ಇರುವುದರಿಂದ ಬೆಳೆ ಕಟಾವು ಆದ ಕೂಡಲೇ ಕೆಲವಂಶ ಭತ್ತವು ಮಾಯವಾಗಿ ಇದೇ ವರ್ಷದ ರಾತ್ರಿಯಲ್ಲಿ ಅವಲಕ್ಕಿ ರೂಪದಿಂದ ಹಳ್ಳಿಗಳಲ್ಲಿ ಸಂಚರಿಸುತ್ತದೆ. ಅದ್ದರಿಂದ ಪ್ರತಿಯೊಂದು ಫಿರ್ಕಕ್ಕೆ ಅದೇ ವೃತ್ತಿಯಿಂದ ಜೀವನ ಮಾಡಿಕೊಂಡು ಬಂದು ಸಾಸ್ವಳ್ಳಿ ಮಗ್ಗೆರೆ ಇಲ್ಲದ ಜನರಲ್ಲಿ ಒಬ್ಬನಿಗೆ ಮಾತ್ರ ಲೈಸನ್ಸು ಕೊಟ್ಟು ಬಾಕಿ ಎಲ್ಲಾ ಅವಲಕ್ಕಿ ರಾಟೆಗಳನ್ನು ಸ್ವಾಧೀನ ಮಾಡಿಕೊಂಡು ವಿವರವಾಗಿ ಕೂಡಲೇ ರಿಪೋರ್ಟು ಬರೆಕೊಳ್ಳುವಂತೆ ಗ್ರಾಮ ಉದ್ಯೋಗಸ್ಥರಿಗಾಗಲೀ, ಗ್ರಾಮ ಸಮಿತಿಯವರಿಗಾಗಲೀ, ಹುಕುಂ ಕೊಟ್ಟರೆ ಆಹಾರ ಧಾನ್ಯವಾದ ಭತ್ತವು ಜಮೆಗೆ ಸಿಕ್ಕಬಹುದು. ಇಲ್ಲದೆ ಎಲ್ಲ ರಾಟೆಯವರಿಗೂ ಸ್ಟೋರಿನಿಂದಲೇ ಬತ್ತ ಕೊಡಿಸಿ, ಅವಲಕ್ಕಿ ಕುಟ್ಟಿಸಿ ರೇಶನಿನ ಅಂಶವಾಗಿ ಕೊಡುವ ವ್ಯವಸ್ಥೆ ಮಾಡಬಹುದು.

—ಯಸ್. ಯಚ್. ಪೊಳಲಿ.

ಜಿಯರ ಕಷ್ಟವೂ ಇಲ್ಲ. ಹೀಗೆನ್ನುವಾಗ ಪೇಟೆ ಪಟ್ಟಣಗಳನ್ನು ಸೇರಿಕೊಂಡರಾಯಿತು. ಹಳ್ಳಿಯ ರೈತನು ಇವರಿಗೆಲ್ಲಾ ಆಹಾರ ಬೆಳ್ಳೆಗೆ ಬೆಳೆಸ ಬೇಕೆಂಬ ಪ್ರಚಾರ, ಅಕ್ಕಿ ಬೇಕಾದವರನ್ನು ಈ ಕೆಲಸಕ್ಕೆ ಏಕೆ ಹಚ್ಚಬಾರದು? ಶ್ರೀ ರಾಜಾಜಿಯವರು ಮದ್ರಾಸಿನ ಮುಖ್ಯ ಮಂತ್ರಿಯರಾಗಿದ್ದಾಗ ಗಿರಣಿ ಬಂದರಲ್ಲಿ ಮುಷ್ಕರವಾಗಿ ಮೆನೇಜುಮೆಂಟಿನವರು ಸಹಾಯ ಕೇಳಿದಾಗ ಅವರೇ ಅದರ ವಿಲೆವಾರು ಮಾಡಬೇಕೆಂದು ಶಿಸ್ತು ಜ್ಯಾರಿ ಮಾಡುತ್ತಾ ಮುಷ್ಕರ ಸುಲಭವಾಗಿ ವಿಲೆವಾರು ಆಯಿತು. ಬಂಜರು ಸ್ಥಳ ತುಂಬಾ ಇದೆ. ಅಕ್ಕಿ ಬೇಕಾದವರು ಅವರೇ ಬೆಳೆಸಬೇಕು. ಹೀಗಾದ್ದರಲ್ಲವೇ ಬರಗಾಲ ಸುಲಭವಾಗಿ ನಿವೃತ್ತಿಯಾಗುವುದು? ಇಲ್ಲವಾದರೆ ಪೇಟೆಯಲ್ಲಿ ದೊರಕುವ ಅನುಕೂಲಕ್ಕಾಗಿ 'ಹಳ್ಳಿ ಸೇರಿರಿ' ಎಂದು ಹೇಳುವ ಈ ಸಮಯದಲ್ಲಿಯೂ ಜನರೆಲ್ಲಾ ಪೇಟೆ ಸೇರುವರು. ಬರಗಾಲ ತನ್ನಂತೆ ಇನ್ನಷ್ಟು ಏರುವುದು.

ಮದ್ರಾಸು ಕೌನ್ಸಿಲಿನಲ್ಲಿ ಶ್ರೀ ಮುನ್ಸಿಸ್ವಾಮಿ ಪಿಳ್ಳೆಯವರು ಅಕ್ಕಿಯನ್ನಲ್ಲದೆ ಇತರ ಯಾವ ಧಾನ್ಯವನ್ನೂ ಮಾಡದಂತೆ ಕಾನೂನು ಮಾಡಬೇಕಾಗಿ ಸೂಚಿಸಿರುತ್ತಾರೆ. ಪಟ್ಟಣವಾಸಿಯು ತನ್ನಲ್ಲಿದ್ದ ಯಾವ ಸಾಮಾನನ್ನೂ ರೈತನಿಗೆ ಬೇಕಾಗುವಾಗ ಕಡಿಮೆ ದರದಲ್ಲಿ ಕೊಡುವುದಿಲ್ಲ. ರೈತನು ಮಾತ್ರ ಬೆಲೆ ಸಿಕ್ಕುವ ಧಾನ್ಯವನ್ನು ಏಕೆ ಮಾಡಬಾರದು? ಏನೂ ತಿಳಿಯದ ಪೆದ್ದನಾಗಿ ಅತ ಬೆಳೆಯಬೇಕೇ? ಮಹಾತ್ಮಾಜಿಯವರು ಪ್ರತಿಯೊಬ್ಬನು ನೂತು ಬೇಕಾದ ವಸ್ತ್ರ ಮಾಡಬೇಕೆಂದು ಬೋಧಿಸುತ್ತಾ ಬಂದಿರುವರು. ತೊಡಿಗೆಗಿಂತಲೂ ಆಹಾರವು ಅವಶ್ಯ. ಎಲ್ಲವರೂ ಅದನ್ನು ಬೆಳೆಸಲು ಯತ್ನಿಸಬೇಕೆಂದು ಕಾನೂನನ್ನೇ ಏಕೆ ಮಾಡಬಾರದು? ಆಗ ಬರಗಾಲ ನಿವೃತ್ತಿ ತನ್ನಷ್ಟಕ್ಕೆ ಆಗುವುದು.

ಶ್ರೀ ಪಿಳ್ಳೆಯವರು ನೀಲಗಿರಿಯ ಬಡವರು ಬೆಳೆಸಿದ ಬಟಾಟೆಗೆ ಕ್ರಯ ಸಿಕ್ಕುವಂತೆ ಪರ ಊರುಗಳಿಗೆ ಕಳುಹಿಸುವ ವಿಲೆವಾರು ಮಾಡಬೇಕೆನ್ನುವರು. ಭತ್ತಬೆಳೆಸುವ ರೈತರೆಲ್ಲರೂ ಅನ್ಕೂಲವಸ್ಥರಲ್ಲ. ಅವರಲ್ಲಿಯೂ ಬಡವರು ಅನೇಕರಿರುವರು. ಹೊಸ ಬೆಳೆ ಕಟಾವಿನತನಕ ರೇಶನಿಗೆ ಅಕ್ಕಿ ಸಿಗುವುದೆಂದಿದೆ. ಆದರೆ ಇದ್ದುದನ್ನು ಕೊಡಿರಿ, ಕಾರ್ಡು ಕೊಡಲಾಗುವುದೆಂದು ಹೇಳಿ ಹಸೆನ ದೃಷ್ಟಾಂತ ಅನೇಕವಿವೆ. ರೈತನ ಅಕ್ಕಿಗೆ ಕೊಡುವಾಗ ರೂ 10-.. ಪಡೆಯುವಾಗ ರೂ15/- ಹೀಗೆಂದರೆ ರೈತನ ಅಕ್ಕಿಗೆ ಬರೇ ರೂ5/- ರೈತಗೆ ಆತನ ಕಷ್ಟಗಳಿಗಾಗಿ ಸಿಕ್ಕುವ ಕೂಲಿಗೂ ಪಟ್ಟಣದಲ್ಲಿ ವಾಸಿಸಲು ಬಂದು ಪಡೆಯುವ ಸಂಬಳದ ಕೂಲಿಗೂ ಅಜಗಜಾಂತರ ವ್ಯತ್ಯಾಸವಿರುವುದು. ಉಣ್ಣಲು ಇಲ್ಲದಾಗ ಇದ್ದ ಬೀಜ ಉಂಡು ಹೋಗುವುದು. ಮುಂದಿನ ಕೃಷಿಯ ಅನ್ಕೂಲ ತಪ್ಪುವುದು. ಬರಗಾಲ ಹೆಚ್ಚುವುದು. ಇದನ್ನು ಎಲ್ಲವರೂ ತಿಳಿಯ ತಕ್ಕದ್ದು. ರೈತಗೆ ಬೇಕಾದ ಅಕ್ಕಿ ಅವನಲ್ಲಿ ಇರಗೊಡಿಸಿ, ಹೆಚ್ಚಿಗೆ ಇದ್ದುದನ್ನು ಮಾತ್ರ ನ್ಯಾಯವೆಂದು ಕಾಣಿಸುವುದಾದರೆ ಪಡೆದು, ಬೇಕಿದ್ದವರಲ್ಲಿ ಹಂಚಿ, ಇನ್ನೂ ಹೆಚ್ಚಿಗೆ ಬೇಕಾದರೆ ಅವರೇ ಅಕ್ಕಿ ಬೆಳೆಸಿ ಅಥವಾ ತರಿಸಿ ಸಾಧಿಸಿಕೊಳ್ಳಬೇಕಾಗಿ ಸರಕಾರವು ಮುಂದಾಗಿ ಎಲ್ಲರಿಗೆ ತಿಳಿಸುವುದು ತಪ್ಪಾಗುವದೇ? ಯುದ್ಧದ ಸಮಯವಲ್ಲ. ತನ್ನನ್ನು ತಾನು ಅರಿತು ಸ್ವತಂತ್ರನಾಗಿ ಬೆಳೆಯಲು ಯತ್ನಿಸತಕ್ಕ ಸಮಯ. ಇದು ರೈತನ ಅರ್ಥ. ಇದನ್ನೆಲ್ಲವರೂ ತಿಳಿಯದೆ ಹೋದಾದರೆ ಬಹುಸಂಖ್ಯಾಕರಾದ ರೈತರು ಎಚ್ಚರಿತು ಕಾರ್ಯತತ್ಪರರಾದರೆ ಎಲ್ಲವರಿಗೂ ಕಷ್ಟವಾಗಲಾರದೇ?

ಎಂ. ಆರ್. ಪೂಂಜ.
ಮೂಲ್ಕಿ ಗ್ರಾಮಾಭಿವೃದ್ಧಿ ಕಮಿಟಿ
ಕಾರ್ಯದರ್ಶಿ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಪಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಮಂಗಳೂರು ಮುನ್ಸಿಪಲ್ ಕೌನ್ಸಿಲ್

ಚುನಾವಣೆ

ನಂಬ್ರ 25ನೇ ಜಪ್ಪು ವಾರ್ಡಿನ ಮತದಾರರಲ್ಲಿ ವಿನಂತಿ.

ನಿಮ್ಮ ಅಮೂಲ್ಯ ಓಟುಗಳನ್ನು ದಯಮಾಡಿ

ಶ್ರೀ. ಎಸ್. ಎಸ್. ಕಿಲ್ಲೆ

ಇವರಿಗೆ ಕೊಡಿರಿ

ಚುನಾವಣೆ ತಾ. 29-9-47ನೇ ಸೋಮವಾರ.

ಆಂಧ್ರರ ಅನ್ಯಾಯ

●

ಈ ತಿಂಗಳ ೫ನೇ ತಾರೀಖಿನಂದು ಮದರಾಸಿನಲ್ಲಿ ಸೇರಿದ್ದ ಆಂಧ್ರ ಪ್ರಾಂತೀಯ ಕಾಂಗ್ರೆಸ್ ಸಂಸ್ಥೆಯ ೧೯ನೇಯ ರಾಜಕೀಯ ಸಮ್ಮೇಳನದಲ್ಲಿ ವಿಶಾಖಪಟ್ಟಣ, ಪೂರ್ವ ಪಶ್ಚಿಮ ಗೋದಾವರಿ ಜಿಲ್ಲೆಗಳು, ಕೃಷ್ಣಾ ಜಿಲ್ಲೆ, ಗುಂಟೂರು, ನೆಲ್ಲೂರು, ಮದರಾಸು, ಚಿತ್ತೂರು, ಕಡಪ, ಕರ್ನೂಲು, ಅನಂತಪುರ ಮತ್ತು ಬಳ್ಳಾರಿ ಜಿಲ್ಲೆಯ ಆದವಾನಿ, ಆಲೂರು ಮತ್ತು ರಾಯದುರ್ಗ ತಾಲ್ಲೂಕುಗಳನ್ನೊಳಗೊಂಡ ಪ್ರತ್ಯೇಕ ಆಂಧ್ರ ಪ್ರಾಂತವನ್ನು ಈ ಕೂಡಲೇ ಏರ್ಪಡಿಸಿಕೊಡಬೇಕೆಂಬ ನಿರ್ಣಯವನ್ನು ಮಾಡಿದೆ.

ಆಂಧ್ರರ ಆಕಾಂಕ್ಷೆಗಳು ನ್ಯಾಯಬದ್ಧವಾದುವಾದರೆ ಅದಕ್ಕೆ ಕನ್ನಡಿಗರಾದ ನಮ್ಮೆಲ್ಲರ ಸಹಾನುಭೂತಿ ಇರುತ್ತದೆ. ನಮಗೆ ಆಂಧ್ರರೂ, ತಮಿಳರೂ ಕೇವಲ ಸಮ ಸಮೀಪದ ಸೋದರರು. ಇವರಲ್ಲಿ ಆಂಧ್ರರಂತೂ ಒಮ್ಮೆಯೂ ಇಂದೂ ತೀರ ನಮ್ಮಲ್ಲಿಯೇ ಸೇರಿ ಬಾಳುತ್ತಿರುವವರು. ವಿಜಯನಗರ ಸಾಮ್ರಾಜ್ಯ ಕಾಲದಿಂದಲೂ ಆಂಧ್ರರೂ ಕನ್ನಡಿಗರೂ ಯಾವ ಅವಾಂತರ ಭೇದ ಭಾವಗಳೂ ಇಲ್ಲದೆ ದಿಟವಾಗಿಯೂ ಸೌಭ್ರಾತೃದಿಂದ ಬಾಳಿಬಂದವರು. ಇಂಥ ನಮ್ಮ ನೆರೆಯ ಆಂಧ್ರ ಮಹಾನುಭಾವರು ಇದೀಗ ಪ್ರಾಂತೀಕರಣ ಅನಿವಾರ್ಯವಾಗಿ ಆಗುತ್ತದೆಂಬ ಆಶೆಯನ್ನು ಮುಂದುಮಾಡಿಕೊಂಡು ಕನ್ನಡಕ್ಕೆ ಸೇರಬೇಕಾದ ಕಡಪ, ಕರ್ನೂಲು ಭಾಗಗಳು, ಅನಂತಪುರ, ಬಳ್ಳಾರಿ ಜಿಲ್ಲೆಯ ಆದವಾನಿ, ಆಲೂರು ಮತ್ತು ರಾಯದುರ್ಗಗಳು ತಮಗೆ ಸೇರಬೇಕೆಂಬ ವಕ್ರೋಕ್ತಿಯನ್ನು ಪ್ರಾಂತೀಕರಣದ ಕೂಗಿನಲ್ಲಿ ಸೇರಿಸಿ ಗಗನ ಗರ್ಜನೆ ಮಾಡುತ್ತಿರುವುದು ನಮಗೆ ಮಿತಿಮೀರಿದ ವಿಸ್ಮಯವನ್ನುಟು ಮಾಡಿದೆ.

ಇದು ಅನ್ಯಾಯಕ್ಕೂ ಮೀರಿದ ಅನ್ಯಾಯ. ಪಿತ್ರಾರ್ಜಿತವನ್ನು ಪಾಲುಮಾಡಿಕೊಳ್ಳುವ ಅಣ್ಣತಮ್ಮಂದಿರು ಜ್ಯೇಷ್ಠಾಂಶಕ್ಕೆ ಕಾದಾಡಿದಂತಿದೆ ಆಂಧ್ರರ ಈ ಅತ್ಯಾಶೆ. ಪ್ರಾಂತೀಕರಣದ ಸೊಲ್ಲು ಮೊದಲಾದ ಈ ಇಪ್ಪತ್ತು ಇಪ್ಪತ್ತೈದು ವರ್ಷಗಳಿಂದಲೂ ಆಂಧ್ರರು ಈ ಪ್ರದೇಶಗಳಲ್ಲಿ ಪ್ರಚಾರಕ್ಕೆ ಮೊದಲಿಟ್ಟು ಅಲ್ಲಿಯ ಕನ್ನಡಿಗರ ಮೇಲೆ ಆಂಧ್ರ ಮುದ್ರೆಯನ್ನು ಒತ್ತಿ 'ಭ್ರಮರ ಕೀಟ' ವಿಲಾಸವನ್ನು ಮೊರಟುತನದಿಂದ ಮೆರೆಯತೊಡಗಿದ್ದನ್ನು ಕನ್ನಡಿಗರಾರೂ ಮರೆತಿಲ್ಲ. ಅಲ್ಲಿಯ ಕನ್ನಡಿಗರಿಂದ ನಮಗೆ ಆಗಿಂದಾಗ್ಗೆ ಈ ಬಗ್ಗೆ ಪತ್ರಗಳೂ ಬಂದಿವೆ. ಅಲ್ಲಿಯ ಜನ ಆಂಧ್ರ ಪ್ರಾಂತಕ್ಕೆ ತಮ್ಮ ನೆಲೆಯನ್ನು ಸೂರೆಗೊಡಲು ಸಿದ್ಧವಾಗಿಲ್ಲ. ಕನ್ನಡದ ಗಡಿಗಳನ್ನು ಕಾಯ್ದುಕೊಳ್ಳಲು ಕನ್ನಡಿಗರು ಎಚ್ಚರವಾಗಿಯೇ ಇದ್ದಾರೆ, ಇರುತ್ತಾರೆ. ಇನ್ನಾದರೂ ಆಂಧ್ರ ಪ್ರಾಂತ ನಿರ್ಮಾಣ ಸಮಿತಿಯವರು ತಮ್ಮ ಈ ಕೇಳಿಕೆಯನ್ನು ನ್ಯಾಯ ದೃಷ್ಟಿಯಿಂದ ಪರಿಶೀಲಿಸಿ ನೋಡಲಿ. ಅನ್ಯಾಯಕ್ಕೆ ಬಿದ್ದು ತಮ್ಮದಲ್ಲದ್ದನ್ನು ತಮ್ಮದಾಗಿಸಿಕೊಳ್ಳುವ ಒರಟು ಚಟ ಒಳ್ಳಿತಲ್ಲ.

ಕನ್ನಡ ಪ್ರಾಂತೀಕರಣಸಮಿತಿಗೆ ಆಂಧ್ರರ ಈ ಅನ್ಯಾಯದ ಬೆಟ್ಟಯಿಕೆ ತಿಳಿದೇ ಇದೆಯೆಂದು ನಮ್ಮ ಎಣಿಕೆ. ಅವರಾದರೂ ಇನ್ನೂ ಕನ್ನಡ ಪ್ರಾಂತದ ರೂಪರೇಷೆಗಳ ವಿಚಾರವಾಗಿ ಯಾವ ಖಚಿತಾಭಿಪ್ರಾಯವನ್ನೂ ಹೊರಗೆಡಹದಿರುವುದು ಕನ್ನಡಿಗರಲ್ಲಿ ಸಂಶಯಪಾತಕವನ್ನು ಹುಟ್ಟುಹಾಕಿದೆ. ಒಂದು ಕಡೆ ಆಂಧ್ರರು, ಒಂದು ಕಡೆ ಕೇರಳರು, ಇನ್ನೊಂದು ಕಡೆ ಮಹಾರಾಷ್ಟ್ರರು ನಮ್ಮ ಕನ್ನಡ ನಾಡಿನ ಅಂಚುಗಳನ್ನು ಎಳೆದಾಡುತ್ತಿದ್ದರೂ ಕನ್ನಡ ಪ್ರಾಂತ ನಿರ್ಮಾಣ ಸಮಿತಿಯವರು ಪ್ರತಿಭಟಿಸಿರುವ ಪರಿ ಏನೆಂಬ ಬಗ್ಗೆ ಸಾಕಷ್ಟು ಪ್ರಕಟಣೆಗಳನ್ನು ಕನ್ನಡಿಗರಿಗೆ ಈಗಲಾದರೂ ಹಂಚಿ ತಮ್ಮ ತಾಯ್ನಾಡನ್ನು ಕಾಯ್ದುಕೊಳ್ಳುವ ಕಾರ್ಯದಲ್ಲಿ ಅವರನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಯುವಂತೆ ಮಾಡಬೇಡವೆ?

ಈಗ ಪ್ರಾಂತೀಕರಣದ ಸಮಯ ಸಮೀಪಿಸಿದೆ. ಕರ್ನಾಟಕ ಪ್ರಾಂತದ ಉದಯವೂ ಆಗಿಯೇ ಆಗುವುದು. ಇಂಥ ಸಮಯದಲ್ಲಿ ನೆರೆಯ ಭಾಷಾ ಸೋದರರು ಆಡತೊಡಗಿರುವ ಅನ್ಯಾಯದ ದುರಾಕ್ರಮಣ ಲೀಲೆಯನ್ನು ಕಂಡು ಕನ್ನಡಿಗರು ಇನ್ನೂ ಕಣ್ಣುಮುಚ್ಚಿಯೇ ಕುಳಿತಿದ್ದರೆ ಗತಿಯೇನು? ನಮ್ಮ ಕನ್ನಡದ ಜನ ಕನ್ನಡದ ಗಡಿಗಳನ್ನು ಕಾಯ್ದುಕೊಳ್ಳುವ ಕದುಗಲಿಗಳಾಗುವ ಕಾಲ ಇದೀಗ ಸನ್ನಿಹಿತವಾಗಿದೆಯೆಂದು ನಾವು ಹೇಳಬೇಕಾಗಿಲ್ಲ.

ಕೇಂದ್ರ ಸರ್ಕಾರದವರು ಈ ಭಾಷಾವಾರು ಪ್ರಾಂತ ಪ್ರಶ್ನೆಯನ್ನು ಕೇವಲ ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಿ, ಭಾಷಾ ಸೋದರರ ಮಧುರ ಬಾಂಧವ್ಯಕ್ಕೆ ಎಷ್ಟು ಮಾತ್ರವೂ ಧಕ್ಕೆತಗಲದ ರೀತಿಯಲ್ಲಿ ಇತ್ಯರ್ಥ ಮಾಡುತ್ತಾರೆಂಬ ನಂಬಿಕೆ ನಮಗಿದೆ. ಆದರೂ ಎಡ್ಡೆ ಬರುವಾಗ ಕಣ್ಣು ಮುಚ್ಚಿಕೊಳ್ಳಬಾರದೆಂಬ ಲೋಕೋಕ್ತಿಯನ್ನು ಕನ್ನಡಿಗರು ಮರೆಯದಿರಬೇಕು.

— ಕನ್ನಡ ನುಡಿ: ಸಂಪಾದಕೀಯ

(ತಾ|| ೧೨-೯-೧೯೪೭)

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 234/47.

ವಾದಿ—ರಾಮಯ್ಯ ಹೆಬ್ಬಾರ.

ಪ್ರತಿವಾದಿರು-ಮಂಜಯ್ಯ ಸೆಟ್ಟಿ ಕೂಡಾ.

ಕುಂದಾಪುರ ತಾಲ್ಲೂಕು ಹಕ್ಲಾಡಿ ಗ್ರಾಮದಲ್ಲಿರುವ ಯಳೂರು ಲಿಂಗಯ್ಯ ಸೆಟ್ರ ಮಗ ವ ಮಹಾಲಿಂಗ ಸೆಟ್ರ ಅಳಿಯ ಮಂಜಯ್ಯ ಸೆಟ್ಟರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

1ನೇ ಪ್ರತಿವಾದಿಯು ವಾದಿಯ ಅಣ್ಣ ವೆಂಕಟ್ರಮಣ ಹೆಬ್ಬಾರರಿಗೆ ತಾ. 4-6-1925ರಲ್ಲಿ ರಿ ಸಿಕಿ ಬರಕೊಟ್ಟ ಮೂಲಗೇಣಿ ಚೀಟಿ ಕರಾರು ಪ್ರಕಾರದ ಕಳೆದ ಪಾರ್ಥಿವ, ವ್ಯಯ ಸಂವತ್ಸರದ ಗೇಣಿ ವ ಬಡ್ಡಿ ಕೂಡಾ ರೂ. 33-7-9ನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾರೀಕು 11-10-1947ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwariah
Advocate for Plff.
Coondapoor, Date 21-9-47

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 309/1947.

ವಾದಿ—ಶ್ರೀನಿವಾಸಹೊಳ್ಳ

ಪ್ರತಿವಾದಿ—ಇಸ್ಮಾಯಿಲ್

ಮಂಗಳೂರು ತಾಲ್ಲೂಕು ಮುಲ್ಲೂರು ಗ್ರಾಮದಲ್ಲಿರುವ ಅಮ್ಮುಕುಟ್ಟಿ ಬ್ಯಾರಿಗಳ ಮಗ ಇಸ್ಮಾಯಿಲ್ ಇವರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ.

ಪ್ರತಿವಾದಿಯು ವಾದಿಯಿಂದ ಪಡೆದ ರೂ. 450-0-0ಕ್ಕೆ ತಾ. 28-12-46ರಲ್ಲೂ ಮತ್ತು ರೂ. 280-0-0ಕ್ಕೆ ತಾ. 16-1-47ರಲ್ಲೂ ಕೂಡಾ ಬರಕೊಟ್ಟ 2 ಡಿಮಾಂಡು ನೋಟುಗಳ ಹಣ ಬಡ್ಡಿಯನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 6-10-47ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಹಗಲು 11 ಗಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು, ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwariah
Advocate for Plff.
Coondapoor. Date 17-9-47

ನಮ್ಮಲ್ಲಿ ದೊರೆಯುವ ಕೆಲವು ಪುಸ್ತಕಗಳು

	ರೂ.	ಆ.
ಸುಲಭದಲ್ಲಿ ಇಂಗ್ಲಿಷ್	1	8
ಮನೆಮದ್ದು	2	0
ಸ್ವತಂತ್ರ ಜೀವನೋಪಾಯ	0	3
ಸಂಶಯ ಪಿಶಾಚಿ	0	8
ನಾಡ ಕತೆಗಳು	0	3
ಕಾವ್ಯ ಸಾಮ್ರಾಜ್ಯ	1	4
ಕುಶಲವ	0	6
ಮಧುವನ	3	0
ವ್ಯಭಿಚಾರಿಣಿ ಯಾರು	1	0
ಹೆಂಡ್ತಿ ಗಂಡನಾದರೆ	0	4
ಪುರುಷವಧು	0	4
ಸನ್ಯಾಸಿಯು ಸೋಗಿನಲ್ಲಿ	0	8
ನಂದಾದೀಪ	0	14
ದೇಶಭಕ್ತ	1	4
ಪ್ರೇಮವಿಜಯ	1	0
ರಂಗಭೂಮಿ	0	8
ಸೇವಾಪಥ	0	8
ನಾರೀ ಹೃದಯ	0	14
ಭಾರತೀಯ ಕತೆಗಳು	0	14
ಪ್ರಕಾಶ	2	4
ಮೂರು ಪ್ರಹಸನಗಳು	0	14
ನಗೆ ನೋಟಗಳು	0	14
ಅನ್ನದೇವರು ಮತ್ತು ಇತರ ಕತೆಗಳು	1	0
ಭಾರತದಲ್ಲಿ ಜಾತಿಭೇದ	1	0
ವಿಷ್ಣುವಿನ ದಶಾವತಾರಗಳು	0	12
ಆಕಾಶಗಂಗೆ	1	12
ಸ್ವಾತಂತ್ರ್ಯವೀರ ಸಾವರ್ಕರ್	1	4
ಜೀವನ ಸಂಗ್ರಾಮ	1	8
ಕದಂಬ	1	4
ಬಾಲವಾಙ್ಮಯ	0	3
ಆರೋಗ್ಯ ಪ್ರತಾಪ	0	12
ಧರ್ಮಸಂಕಟ	0	4
ಕಂಡೂ ಕಾಣದ ನೋಟಗಳು	0	8
ಆಹುತಿ ಇತ್ಯಾದಿ ಕತೆಗಳು	0	12
ಶ್ರೀಮುಖ	1	0
ವಿರಾಗಿಣಿ	0	4
ಪಂಚಾರತಿ	0	6
ಚಿಗುರು	0	6
ಲೋಪಾಮುದ್ರೆ	0	6
ಪ್ರತೀಕಾರ	0	6
ಪ್ರೇಮಪ್ರವಾಹ	0	8
ಅಂತರಂಗದ ಕತೆಗಳು	0	12
ಶಂಭೂಕ ವಧೆ	0	2
ಮುಗುಳು	0	4
ವೀರಭೂಮಿ	0	2
ಸರಸ್ವತಿ	0	12
ಮೀರಾಬಾಯಿ	0	10
ಆಯುರ್ವೇದ ಸಂಚಿಕೆ	0	8
ಪರ್ಯಾಯ ಸಂಚಿಕೆ	0	8
ಚಲಚ್ಚಿತ್ರ ಪದ್ಯಾವಳಿ	0	3
ಪಾಪಪೂರಿತ ಪಟ್ಟಣಗಳು	2	0
ಕಾಂಗ್ರೆಸಿನ 60 ವರ್ಷಗಳು	0	8
ಜ್ಯೋತಿಷ ಕಲ್ಪದ್ರುಮ I, II ಭಾಗಗಳು	6	8
ಪಂಚವರ್ಣ	0	6
ಸುಶೀಲೆ	1	0
ಲಾವಣ್ಯವತಿ	0	12
ಎಚ್ಚೆತ್ತ ಆಗ್ನೇಯ ಏಶಿಯ	1	8
ನಿಶ್ಚಯ ಜ್ಞಾನ	0	8
ದ್ವೈತಮತ ಖಂಡನೆ	0	6
ಪಂಚಂಗ	0	10
ವಿದ್ಯಾರಣ್ಯ ಕಾವ್ಯ	1	4
ಶ್ರೀರಾಮ ಪರೀಕ್ಷಣಂ	1	4
ಕಾಶ್ಮೀರ ಪ್ರವಾಸ	0	10
ಪ್ರಬಂಧ ಪುಷ್ಪಾಂಜಲಿ	1	4
ಅಮೃತವಾಹಿನಿ	0	4
ಕನ್ನಡ ಯಾತ್ರೆ	1	8
ಜೇನಿನ ವ್ಯವಸಾಯ	1	0
ಭಾರದ್ವಾಜ ಡಿಕ್ಷನರಿ	6	0
,, ,,	4	8
ಅಂತರಂಗ ಸಂಪುಟ ಚೈಂದುಪ್ರತಿ ಪ್ರತಿ ವರ್ಷದ್ದಕ್ಕೆ	5	0
ಬಾಲಚಂದ್ರ ಸಂಪುಟ ಬೈಂಡುಪ್ರತಿ ಪ್ರತಿ ವರ್ಷದ್ದಕ್ಕೆ	2	0
ದೂರ ಹೋದಳು	0	8
ಕಿಚ್ಚು	0	12
ಚಿತ್ರ	0	12
ಮುದ್ದಿನ ಕಣಿ	0	12
ಪರಿವರ್ತನೆ	0	10
ದೀಪಾವಳಿ ಮತ್ತು ಇತರ ಕತೆಗಳು	1	6
ಬೆಳ್ಳಿಯ ಹಬ್ಬ	0	12
ಹೆಣ್ಣಿನ ತೊಡಕು	0	4
ಭಕ್ತಿವಾತ್ಸಲ್ಯ	1	8
ಪ್ರೇಮ ನಾಟಕಾವಳಿ	1	2
ರಾಜವಲ್ಲಭ	0	12
ನಮ್ಮೂರ ನಡತೆ	0	6
ಧರ್ಮಸಾಮ್ರಾಜ್ಯ	1	4
ಒಳಸಂಚು	1	8
ಮ್ಯಾಕ್‌ಬೆತ್	1	2
ಗೀತಾನಾಟಕಗಳು	2	4
ನವೀನ ನಾಟಕಗಳು	1	8
ಸಾಹಿತ್ಯ ರತ್ನ	4	0
ಬಾ	0	4
ಬಾಪೂಜಿ	0	8
ಚಂದ್ರಗುಪ್ತ	1	8

0—2—0 ಸ್ಟಾಂಪು ಕಳಿಸಿದರೆ ಲಿಸ್ಟು ಕಳಿಸಲಾಗುವುದು

ನವಭಾರತ ಪುಸಕ ಭಂಡಾರ, ಉಡುಪಿ.

(೬ನೇ ಪುಟದಿಂದ)

ಸ್ಲಿಂ! ಈ ದಿನ ಎಲ್ಲರಿಗಿಂತ ಹೆಚ್ಚಿನ ಕನಿಕರಾರ್ಹ ದುಃಸ್ಥಿತಿಗೀಡಾಗಿರುವವರೂ—ಜಾತಿ, ಸ್ಥಿತಿಗತಿ ಯೆಂಬುವೆಲ್ಲವೂ ತಪ್ಪಿಹೋದವರು, ಯಾವ ಸ್ಥಾನ ಮಾನವೂ ಇಲ್ಲದಂತಾದವರು—ಈ ರಾಷ್ಟ್ರೀಯ ಮುಸ್ಲಿಮರೇ! ಭಾರತ ರಾಷ್ಟ್ರೀಯತೆಯ ಈ ಭಾಗವು ಬಲಪಾರ್ಶ್ವವಾತ ಪೀಡಿತನ ಬಲಗೈಯಾಗಿ ಈಗ ನೇತಾಡುತ್ತಿದೆ—ನಿರ್ಜೀವ ಕೊರಡಿನಂತೆ! ಆ ನೋಟ ನಮಗೆಲ್ಲರಿಗೂ ಸಂಕಟದಾಯಿಯಾಗಿದೆ ಹಿಂದೂ ಮುಸ್ಲಿಂ ಐಕ್ಯತೆಯೆಂಬುದು ಸದಾ ಕಾಲಕ್ಕೂ ನಿರ್ನಾಮವಾಯಿತೆಂಬುದಕ್ಕೆ ಇದೊಂದು ನಿದರ್ಶನ; ಪಾಕಿಸ್ತಾನಕ್ಕಿಂತಲೂ ದೊಡ್ಡದಾದ ದೃಷ್ಟಾಂತವೆಂದರೆ ಇದು. ಹಿಂದೂ ಮುಸ್ಲಿಂ ಜೋಡಣೆಯ ಆ ಭಾಗದ ಗೊಣಸುತುದಿಯೇ ಇದು. ಅದಿಂದು ಸಂಪೂರ್ಣ ಮುರಿದುಹೋಗಿರುವಾಗ—ಆ ಜೋಡಣೆಯನ್ನು ತಾಗಿಸುವ ಪ್ರಯತ್ನದಲ್ಲೇ ಒಡೆದುಹೋಯಿತೆಂದ ಮೇಲೆ—ಇನ್ನು ಒಟ್ಟು ಜೋಡಿಸುವುದೆಂದರೆ ಹೇಗೆ? ಯಾವುದರಿಂದ? ಆದ್ದರಿಂದ ಆ ಆಕೆಕಳೆದಂತೆಯೇ. ಐಕ್ಯತೆಯ ಪ್ರತಿಮೂರ್ತಿಗಳಾದ ಈ ರಾಷ್ಟ್ರೀಯ ಮುಸ್ಲಿಮರಿಗೆ ಇಂದು ಒದಗಿರುವ ಅದೃಷ್ಟವೆಂತಹದೆಂಬುದನ್ನೊಮ್ಮೆ ಜ್ಞಾಪಿಸೋಣ.

೦೦ ೦೦ ೦೦

ಗಡಿನಾಡು ಪ್ರಾಂತ್ಯವನ್ನು, ಭಾರತದ ಜಾಗ್ರತಿಯ ಕಾಲದಿಂದಲೂ, ಕಾಂಗ್ರೆಸ್ ಪ್ರಾಂತ್ಯವಾಗಿಯೇ ಮಾಡಿಟ್ಟ ಖಾನ್ ಸಹೋದರರಿಂದು ಅಜ್ಞಾತವಾಸಿಗಳಾಗಬೇಕಾಗಿ ಬಂದಿದೆ. ಗಡಿನಾಡು ಪಾಕಿಸ್ತಾನ್ ಪ್ರಾಂತ್ಯವಾಯಿತು; ಖಾನ್ ಸಹೋದರರ ಹಿಂದಿದ್ದ ಪಠಾಣ್ ಜನತೆಯ ಬಹುಸಂಖ್ಯಾಕರು ಲೀಗ್ ಅನುಯಾಯಿಗಳಾದರು; ಆಸನದಲ್ಲಿ ಕುಳಿತ ಧೂಳನ್ನು ಝಾಡಿಸಿಕೊಳ್ಳುವಷ್ಟೇ ಸುಲಭದಲ್ಲಿ ಮೊನ್ನೆ ಲೀಗಿನವರು ಖಾನ್ ಮಂತ್ರಿ ಮಂಡಲವನ್ನು ಕೆಳಗೆ ತಳ್ಳಿದರು. ಎಸೆಂಬ್ಲಿಯು ಅದೇ; ಸದಸ್ಯರೂ ಅವರೇ; ಆಗ ಖಾನ್ ಮಂಡಲದ ಬದಲಿಗೆ ಕ್ವಯ್ಯೂಮ್ ಮಂಡಲಿ! ಖಾನ್ ಅಬ್ದುಲ್ ಗಫರ್ ಖಾನರು ಸಿಕ್ಕ ಧುರೀಣರಂತೆ ಕಾಂಗ್ರೆಸಿನ ಮಾತ್ರವಲ್ಲ—ಅದರ ಉದ್ಧೀಕೃತ ಅಲ್ಪಭಾಗವಾಗಿ ಕಿಸುರಸ್ತಾನದಲ್ಲಿರುವ ಗಾಂಧಿತ್ವದಲ್ಲೇ ಅಗ್ರಗಣ್ಯರು; ಅವರು ಎರಡನೇ ಗಾಂಧಿ; 'ಗಡಿನಾಡು ಗಾಂಧಿ'. ಅಂತೆಯೇ ಆ ಭಾಗದಲ್ಲಿ ಅವರಿಗಿದ್ದ ವರ್ಚಸ್ಸಿನ ಬಲದಿಂದ 'ಬಾದಶಹಾ ಖಾನ್'. ಎರಡೂ ಕೈಗಳನ್ನು ಜೋಡಿಸುವ ಕ್ರಮವು ಮುಸ್ಲಿಂಸಂಪ್ರದಾಯಕ್ಕೆ ವಿರೋಧ. ಆದರೆ ಬಾದಶಹಾ ಖಾನರನ್ನು ನಾವು ಕಾಣುವಂತಾಗಿದೆ ಕೈಗಳನ್ನು ಜೋಡಿಸಿ, ಹಸನ್ಮುಖಿಯಾಗಿ ನಿಂತ ಭಾವಚಿತ್ರಗಳಲ್ಲಿ! ಇಂತಹ ಗಫರ್ ಖಾನರನ್ನು ಸ್ವರಾಜ್ಯ ಕೇಳಲಿಲ್ಲ; ಸ್ವಾತಂತ್ರ್ಯ ಶಾಸನವು ಗಣಿಸಲಿಲ್ಲ; ಅ. ಭಾ. ಕಾಂಗ್ರೆಸಿಗೂ ಆಧರಿಸಲಾಗಲಿಲ್ಲ. ಬಾದಶಹಾ ಖಾನರೀಗ ಮರೆಸೇರಿದ್ದಾರೆ; ಅವರ ಸಹೋದರ ಡಾ| ಖಾನರು ಮುಖ್ಯ ಮಂತ್ರಿ ಸ್ಥಾನದಿಂದ ಮೂಲೆಗೆ ವರ್ಗಯಿಸಲ್ಪಟ್ಟಿದ್ದಾರೆ; ಆ ಮಂತ್ರಿ ಮಂಡಲದಲ್ಲಿ ಅರ್ಥ ಸಚಿವನಾಗಿದ್ದ ಮಿ. ಖನ್ನಾ, ಇವರನ್ನು ಗುಂಡಿಟ್ಟು ಕೊಂದರೆಂದು ಒಂದು ವಾರ್ತೆ; ಅಷ್ಟೊಂದು ದುಃಖ ಪಡಲಾಗದಂತೆ, "ಇಲ್ಲ, ಅವರು ಸತ್ತಿಲ್ಲ; ಜೀವ ಹಿಡಿದುಕೊಂಡು ಸುರಕ್ಷಿತ ಸ್ಥಳಕ್ಕೋಡಿ ಬಂದಿದ್ದಾರೆ" ಎಂದು ಮತ್ತೊಂದು ಸುದ್ದಿ! ಗಡಿನಾಡ ಮಾಜೀ ಹಿಂದೂ ಮಂತ್ರಿ ಶ್ರೀ ಗಿರಿಧರಲಾಲ ಪುರಿಯಂಥವರು ಅಲ್ಲಿಂದಲೇ "ನಮ್ಮ ಜೀವಕ್ಕೆ ಅಪಾಯವಿದೆ. ನನ್ನ ಮತ್ತು ನನ್ನ ಹೆಂಡತಿಯ ಜೀವವುಳಿಸಿರಿ" ಎಂದು ಡಿಲ್ಲಿಗೆ ತಂತಿ ಬಿಡಬೇಕಾಗಿಬಂದಂತಹ ದುರ್ಘಟನೆಗಳಂತೂ ನೂರಾರು, ಸಾವಿರಾರು!

ಈಗ ಮೌಲಾನಾ ಆಜಾದರಿರುವ ಸ್ಥಾನದಲ್ಲಿ ಕೆಲವು ವರುಷಗಳ ಮೊದಲಿದ್ದವರು ಡಾ| ಅನ್ಸಾರಿ. ರಾಷ್ಟ್ರೀಯತೆಯ ಉದಯ ಕಾಲದಿಂದಲೂ ಡಿಲ್ಲಿಯ ನಾಯಕತ್ವವಿದ್ದುದು ಮುಸ್ಲಿಂ ಪುಢಾರಿಗಳ ಕೈಯಲ್ಲೇ. ಹಕೀಮ್ ಅಜಮಲ್ ಖಾನ್ ಮತ್ತು ಆ ಬಳಿಕ ಡಾ| ಅನ್ಸಾರಿಗಳ ಕೈಯಲ್ಲಿ ಡಿಲ್ಲಿಯೆಂಬುದು ಅಗ್ಗೆ ಸೆಲ್ಲಿಯಾಗಿತ್ತು. ಆ ಭಾಗದಲ್ಲಿ ಮುಸ್ಲಿಂ ಪುಂಡರು ಕೊಂದ ಹಿಂದುಗಳಿಗಿಂತ ಎಷ್ಟೋ ಪಾಲು ಅಧಿಕ ಸಂಖ್ಯೆಯ ಬಡಹಿಂದುಗಳ ಪ್ರಾಣಗಳನ್ನು ಈ ಇಬ್ಬರು ವೈದ್ಯರು ಧರ್ಮಾರ್ಥ ಚಿಕಿತ್ಸೆ ಮಾಡಿ ರಕ್ಷಿಸಿದ್ದರು. ಡಾ| ಅನ್ಸಾರಿಗಳಿರುವ ವರೆಗೆ, ಡಿಲ್ಲಿ ರಾಜಕೀಯದಲ್ಲಿ ಅವರ ಅಭಿಪ್ರಾಯ ಕೇಳದೆ ಯಾವ ನಿರ್ಧಾರವನ್ನೂ ಗಾಂಧಿಜೀ ಮಾಡುತ್ತಿರಲಿಲ್ಲ. ಹರಿಜನರಿಗೆ ಪ್ರತ್ಯೇಕ ಮತದಾನದ ಹಕ್ಕನ್ನಿತ್ತ 'ಮೆಕ್ಡೊನಾಲ್ಡ್ ಎವಾರ್ಡ್' ಮುರಿಯಲು ಮರಣ ತನಕವೂ ಉಪವಾಸ ಕುಳಿತ ಮಹಾತ್ಮಾಜೀ ಕೊನೆಗೆ ಪ್ರಾಣಗಂಡಿ ಮಲಗಬೇಕಾಯಿತು. "ನನಗೆ ಡಾ| ಅನ್ಸಾರಿಗಳ ತೊಡೆಯಲ್ಲಿ ಪ್ರಾಣ ಬಿಡಬೇಕೆಂದು ಮನಸ್ಸಿದೆ" ಎಂಬುದೇ ಆಗ ಗಾಂಧಿಜೀ ಪ್ರಕಟಿಸಿದ ಇಚ್ಛೆ. "ಇಲ್ಲ; ನಾನವರನ್ನು ಸಾಯಲು ಬಿಡುವದಿಲ್ಲ; ನಾನಿರುವಾಗ ಅವರು ಸಾಯುವದೆಂದರೇನು?" ಎಂದವರು ಡಾ| ಅನ್ಸಾರಿ. ಡಾ| ಅನ್ಸಾರಿಗಳ ಶಪಥವೇ ನೆರವೇರಿತು; ಗಾಂಧಿಜೀಯ ಬಯಕೆ ಫಲಿಸಲಿಲ್ಲ. ಅಂತಹ ಅನ್ಸಾರಿಗಳ ಮಗಳು ಝೋಹ್ರಾ, ಮತ್ತು ಆಕೆಯ ಗಂಡ ಡಾ| ಶೌಕತುಲ್ಲಾ ಖಾನರೀಗ ಹಿಂದೂ ಸಿಖ್ಖರ ಹೆದರಿಕೆಯಿಂದ ಡಿಲ್ಲಿಯ ತಮ್ಮ ಮನೆ ಬಿಟ್ಟು ಒಂದು ಹೊಟೆಲಿಗೆ ಹೋಗಿ ವಾಸಿಸುತಿದ್ದಾರಂತೆ. ಈ ಬಾರಿ ಡಿಲ್ಲಿಗೆ ಹೋದಾಗ ಈ ಸಂಗತಿ ತಿಳಿದೊಡನೆಯೇ ಗಾಂಧಿಜೀ ಕುಗ್ಗಿಹೋದರು. "ಇದು ಲಜ್ಜೆಯಿಂದ ನಾವು ತಲೆ ತಗ್ಗಿಸಬೇಕಾದ ವಿಷಯ" ಎಂದರು. ಇಂತಹ ಹೆದರಿಕೆಯಿರುವುದನ್ನು ಕಂಡೇ, ಗಾಂಧಿಜೀ ಅಲ್ಲಿಯ ಬಿರ್ಲಾ ಬಂಗಲೆಯಿಂದ ಆಸಫ್‌ಅಲಿಗಳ ಮನೆಗೆ ಹೋಗಿ ನಿಲ್ಲಬೇಕೆಂದು ನಿರ್ಧರಿಸಿದ್ದಾರಂತೆ. ಆಸಫ್‌ಅಲಿ ಮನೆಯು ನವಡಿಲ್ಲಿಯ ಮುಸ್ಲಿಂ ಕೋಟೆಯಂತಿರುವ ದರ್ಯಾಗಂಜಿನಲ್ಲಿದೆ; ಲೀಗಿನ ಮುಖಪತ್ರ 'ಡಾನ್' ಪತ್ರಿಕಾ ಕಚೇರಿಯು ಹಿಂಭಾಗದಲ್ಲೇ ಇದೆ. ಮುಸ್ಲಿಮರಲ್ಲಿ ಧೈರ್ಯ ಹುಟ್ಟಿಸುವುದಕ್ಕೋ, ಅಥವಾ ಡಾ| ಅನ್ಸಾರಿ ಪುತ್ರಿಯನ್ನು ಹಿಂದೂ ಸಿಖ್ಖರು ಹೆದರಿಸಿದ್ದಕ್ಕೆ ಪ್ರತಿಯಾಗಿ ತಾನೇ ಮುಸ್ಲಿಮರ ಹೆದರಿಸುವಿಕೆಗೀಡಾಗಿ ತನ್ನ ಗತಿಸಿದ ಮಿತ್ರನ ಕೃತಜ್ಞತೆಗೆ ಪಾತ್ರನಾಗಬೇಕೆಂದೋ, ಮಹಾತ್ಮರ ಈ ಯೋಚನೆ.

ಮಿ. ಆಸಫ್ ಆಲಿಗಳು ಡಿಲ್ಲಿಯವರು. ಹಕೀಮ್ ಅಜ್ಮಲ್ ಖಾನ್, ಡಾ| ಅನ್ಸಾರಿಗಳ ನಂತರವೂ ಡಿಲ್ಲಿಗೊಬ್ಬರಿದ್ದಾರೆ, ಎನ್ನುವದಾದರೆ ಇವರನ್ನೇ. ಕೇಂದ್ರ ಎಸೆಂಬ್ಲಿಗೆ ಅಲ್ಲಿದ್ದ ಸಮ್ಮಿಶ್ರಸ್ಥಾನವೊಂದಕ್ಕೆ ನಿಂತು ಹಿಂದೂ ಮುಸ್ಲಿಮರಿಬ್ಬರ ಬೆಂಬಲದಿಂದ ಆರಿಸಲ್ಪಟ್ಟವರಿವರು. ಕ್ಷುದ್ರ ಜಾತೀಯ ಭಾವನೆಯ ಗಾಳಿ ಕೂಡಾ ಸೋಂಕದ ಜನ ಮಿ. ಆಸಫ್ ಅಲಿ. ಇವರೀಗ ಅಮೇರಿಕದಲ್ಲಿ ಹಿಂದುಸ್ಥಾನ್ ಸರಕಾರದ ರಾಯಭಾರಿಯಾಗಿ ಇದ್ದಾರೆ. ಪರ್ಯಾಲೋಚನೆಗಾಗಿ ಹಿಂದೀ ಸರಕಾರವು ಅವರನ್ನು ಅಮೇರಿಕದಿಂದ ಡಿಲ್ಲಿಗೆ ಕರೆದಿದ್ದಿತು; ಅವರು ಅಷ್ಟಕ್ಕಾಗಿಯೇ ಬಂದಿದ್ದರು; ಡಿಲ್ಲಿ ಕದಡಿರುವಾಗಲೇ ಅವರಲ್ಲಿ ಕಾಲೂರಬೇಕಾಯಿತು. ಈ ಕುರಿತು ಹಬ್ಬಿರುವ ಸುದ್ದಿಯೆಂದರೆ ಮಿ. ಆಸಫ್ ಆಲಿ ಮುಸ್ಲಿಮರಿರುವದರಿಂದ ಹಿಂದೀ ಸರಕಾರವವರನ್ನೀಗ ರದ್ದು ಪಡಿಸಿಕೊಂಡಿದೆ, ಎಂಬುದೇ. ಯಾರೊಬ್ಬನ ರೀತಿ ನೀತಿಯನ್ನೂ ನೋಡದೆ, ಜಾತಿಯೊಂದನ್ನೇ ನೋಡಿ ದ್ವೇಷಿಸುವ, ಪ್ರೇಮಿಸುವ, ಊಹಿಸುವವರೆಗೂ ಬಂದಿದೆ—ಹಿಂದೂ ಮುಸ್ಲಿಂ ಸಂಬಂಧ!

ಡಾ| ಝಕೀರ್ ಹುಸ್ಸೇನರು ಮುಸ್ಲಿಮ್ ತಜ್ಞರಲ್ಲಿ ಅತ್ಯಂತ ಗಣನೀಯರು ಅಸಾಧಾರಣ ಪ್ರತಿಭಾವಂತರಿವರು. ಗಾಂಧಿತತ್ವಾಧರಿತ 'ನಯೀ ತಾಲೀಮ್' (ವಾರ್ಧಾ ಶಿಕ್ಷಣ ಯೋಜನೆ) ತಯಾರಿಸಿದವರು ಡಾ| ಝಕೀರ್ ಹುಸ್ಸೇನರೇ. ಇವರು ಡಿಲ್ಲಿಯಲ್ಲೊಂದು ವಿದ್ಯಾ ಕೇಂದ್ರವನ್ನು ಸ್ಥಾಪಿಸಿ ನಡೆಸಿಕೊಂಡು ಬರುತಿದ್ದಾರೆ. ಅದರ ಸ್ಥಾಪನೆಗೆ ಗಾಂಧಿಜೀಯೇ ಆದಿಯಾಗಿ ಸರ್ವ ಕಾಂಗ್ರೆಸ್ ಪ್ರಮುಖರೂ ನೆರವಿತ್ತಿದ್ದರು. ಯಾವ ಜಾತಿಭೇದವೂ ಇಲ್ಲದೆ ಅಮೂಲ್ಯತೆಯೊಂದನ್ನೇ ಆಧರಿಸಿ ಶಿಕ್ಷಣ ಕೊಡುತ್ತಿರುವ ಕೇಂದ್ರವದು. ಸಾವಿರಾರು ಹಿಂದೂ ವಿದ್ಯಾರ್ಥಿಗಳು ಅಲ್ಲಿ ಕಲಿತಿದ್ದರು. ಈ ಝಕೀರ್ ಸಾಹೇಬರು ಇತ್ತೀಚೆಗೆ ಲಾಹೋರಿಗೆ ಹೋಗಬೇಕಾಗಿ ಬಂದಿತ್ತು. ಇವರು ಮುಸ್ಲಿಮರೆಂಬ ಒಂದೇ ಕಾರಣದಿಂದ ಹಿಂದೂ ಸಿಖ್ಖರು ಅವರನ್ನು ರೈಲಿನಲ್ಲಿಯೇ ಕೊಲೆ ಮಾಡಲಿಕ್ಕಿದ್ದರು. ಅಲ್ಲಿದ್ದ ಓರ್ವ ಸಿಖ್ ಕೇಪ್ಟನ್ ಮತ್ತು ಡ್ರೈವರನ ಸಮಜಾಯಿಸುವಿಕೆಯಿಲ್ಲದಿರುತಿದ್ದರೆ ಡಾ| ಹುಸೇನರು ನಿಜಕ್ಕೂ ಕೊಲೆಯಾಗುತಿದ್ದರು. ಈ ಪ್ರತಿಭಾವಂತನನ್ನು, ಮಾನವಜನಾಂಗ ಪ್ರೇಮಿಯನ್ನು, ಕೊಂದುಹಾಕಿ ಒಬ್ಬ ಮುಸ್ಲಿಮನನ್ನು ಕೊಂದೆವೆಂದು ಹಿಂದೂ ಸಿಖ್ ಪುಂಡರು ಹಿಗ್ಗುತಿದ್ದರು!

ಬೇರಲ್ಲಿಂದ ಕಾಣಿಸುತ್ತಿದೆ ಒಗ್ಗಟ್ಟಿನ ಪುನರಾವತಾರವಾದೀತೆಂಬ ಲಕ್ಷಣ? ಜನರು ಮಾತ್ರ ಹೋರಾಡಿ ಕೊಳ್ಳುತಿದ್ದಾರಲ್ಲದೆ, ಇಕ್ಕಡೆಯ ಸರಕಾರಗಳು ಹಾಗೆ ಮಾಡುವಂತಿಲ್ಲವೆನ್ನಬಹುದೆ? ಅಂದರೆ, ಈಗ ನಮ್ಮಲ್ಲಿರುವುದು ಜನ ಪ್ರತಿನಿಧಿ ಸರಕಾರಗಳಲ್ಲವೆಂದು ಇದರ ಅರ್ಥವೆ? ಜನಪ್ರತಿನಿಧಿ ಸರಕಾರವು ಜನರ ದೌರ್ಬಲ್ಯ, ದುರ್ಭಾವನೆಗಳನ್ನೂ ಪ್ರತಿನಿಧಿಸಬಾರದೆಂಬುದೇನೋ ನಿಜ. ಆದರೆ ಪಾಕಿಸ್ತಾನ ಸರಕಾರವು ಎಲ್ಲಾ ಮಟ್ಟಿಗೂ ಆ ಭಾಗದ ಮುಸ್ಲಿಂ ಜನತೆಯ ಪ್ರತಿಬಿಂಬವೇ ಆಗಿದೆ. "ಇಡೀ ಭಾರತವನ್ನೇ ಆಳಬೇಕೆಂದು ಕನಸು ಕಾಣುತ್ತಿದ್ದವರಿಗೆ ಪಾಕಿಸ್ತಾನೋದ್ಭವದಿಂದ ನಿರಾಶೆಯಾಗಿ ಈ ನಮ್ಮ ವೈರಿಗಳು ನಮ್ಮ ಪಾಕಿಸ್ತಾನವನ್ನು ಧ್ವಂಸ ಮಾಡಲು ನಾಲ್ಕೂ ಕಡೆಗಳಲ್ಲಿ ಮುತ್ತಿಗೆ ಹಾಕಿದ್ದಾರೆ. ಕಾನೂನು ವ್ಯವಸ್ಥಾ ಪಾಲನೆಯ ದಳಗಳ ಗುಂಡು, ಬೆಯನೆಟ್ ಪ್ರಯೋಗವಾಗದಿರುತಿದ್ದರೆ ಪೂರ್ವ ಪಂಜಾಬಿನ ಮುಸ್ಲಿಮರು ಅಲ್ಲಿಂದೋಡಿಬರುತ್ತಿರಲಿಲ್ಲ. ನಾವು ಒಟ್ಟಿಗೆ ಮಾಡಿದ್ದ ನಿರ್ಧಾರಗಳನ್ನು ಹಿಂದುಸ್ಥಾನ್ ಸರಕಾರಗಳು ಪಾಲಿಸಿ ಕೊಡಲಿಲ್ಲ" ಇತ್ಯಾದಿ ಅಸತ್ಯಾರೋಪಗಳು ಪಾಕಿಸ್ತಾನದ ಪ್ರಧಾನ ಮಂತ್ರಿ ಮಿ. ಲಿಯಾಖತ್ ಆಲಿಗಳ ಬಾಯಿಯಿಂದಲೇ ಬಂದಿದೆ. "ಮುಸ್ಲಿಮರ ಸಂಹಾರ ಕೃತ್ಯಗಳನ್ನು ಹಿಂದುಸ್ಥಾನ್ ಸರಕಾರ ನಿಲ್ಲಿಸದಿದ್ದರೆ ನಾವು ಜಾಗತಿಕ ಸಂಘದ ಮುಂದೆ ಆ ದೂರನ್ನಿಡುವೆವು. ಅಲ್ಲಿ ಸಮಾಧಾನಕರ ವ್ಯವಸ್ಥೆಯಾಗದೆ ಹೋದರೆ ಪಾಕಿಸ್ತಾನ್ ಸರಕಾರವು ಪ್ರತ್ಯಕ್ಷ ಕಾರ್ಯಾಚರಣೆಗಿಳಿಯಬೇಕಾಗಿ ಬಂದೀತು" ಎಂದು ಪಾಕಿಸ್ತಾನ್ ಪ್ರತಿನಿಧಿ ಮಂಡಲದ ನಾಯಕನಾಗಿ ಜಾಗತಿಕ ಸಂಘದ ಸಭೆಗೆ ಹೋಗಿದ್ದ ಸರ್ ಝಫರುಲ್ಲಾ ಖಾನರು ನ್ಯೂಯೋರ್ಕಿನಿಂದಲೇ ಧಮಕಿ ಹಾಕಿ ಹೋಗಿದ್ದಾರೆ. ಪಾಕಿಸ್ತಾನದ ಎಲ್ಲರಿಗೂ ಕಡ್ಡಾಯ ಸೈನಿಕ ಶಿಕ್ಷಣ ಕೊಡುವ ಆಲೋಚನೆ ನಡೆದಿದೆ. "ಪಾಕಿಸ್ತಾನವು ಹೆಠಹಿಡಿದು ಮುಂದಕ್ಕೂ ತಪ್ಪು ಮಾಡುತ್ತಾ ಹೋದಲ್ಲಿ ಹಿಂದುಸ್ಥಾನ್ ಮತ್ತು ಪಾಕಿಸ್ತಾನಗಳೊಳಗೆ ಯುದ್ಧವು ಕಟ್ಟಿಟ್ಟದ್ದೇ" ಎಂದು ಮೊನ್ನೆ ಗಾಂಧಿಜೀ ಕೂಡಾ ಹೇಳಿದ್ದಾರೆ. ಅಂತಹ ವೇಳೆ ನಾವೀಗ ನಿರೀಕ್ಷಿಸಬೇಕಾದುದು—ಸಿದ್ಧರಿದ್ದು ಸ್ವಾಗತಿಸಬೇಕಾದುದು—ನಾಳೆಯ ಹಿಂದುಸ್ಥಾನ್ ಪಾಕಿಸ್ತಾನ್ ಕಾಳಗವನ್ನೇ! ಪ್ರತಿಕೂಲರೂಪೀ ಹಿಂದೂ—ಮುಸ್ಲಿಂ 'ಕೈಕ್ಯ' 'ಕ್ಯೈಮ್ಯ' ಮಿಲನವನ್ನೇ!



Approved firm by the Govt. of Mysore Certified by the Agent of the Govt. of Cylone & Indian.

FOR SALE

Surgical Instruments, appliances, furniture etc., complete to equip four bed cottage Hospital.

Cost Rs. 6000/- or near offer.

Apply:

CAPT. U. ANANTHAYA, M. B. & C. M.,

Ajjarkad, UDIPI.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ-ತಾರುಣ್ಯದುಬ್ಬಿ
ನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—
ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾ
ದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು
ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ,
ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ?
ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು?
ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.

ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟು
ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ನವಭಾರತ ಬುಕ್ ಡಿಪ್ಪೊ, ಉಡುಪಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂಜೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.
Ayurveda Oushadhalaya. GADAG

ಹಾಲಿನ

ಚೊಕಲೇಟುಗಳು!

ಮಧುರವಾಗಿವೆ—ರುಚಿಕರವಾಗಿವೆ,
ಸರ್ವ ಸುಲಭವೆನಿಸುವಂತೆ ಎಲ್ಲ ಕಡೆ
ಗಳಲ್ಲಿ, ನೂರರ ಪೆಕೇಟುಗಳಲ್ಲಿ ಅಥವಾ
ಚಿಲ್ಲರೆಯಾಗಿ ದೊರೆವುವು.

ಸ್ಟಾಕಿಸ್ಟರಾಗಲಿಚ್ಛಿಸುವವರು ಅಥವಾ ಏಜನ್ಸಿ
ಪಡೆಯಲಿಚ್ಛಿಸುವವರು ಕೂಡಲೇ ಬರೆದುಕೊಳ್ಳಿ:
ಶ್ರೀ ಕೃಷ್ಣಾ ಟೋಫಿ ವರ್ಕ್ಸ್,
ರಥಬೀದಿ; ಮಂಗಳೂರು.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತವ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ಅರದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.
ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ಕ್ಕೆ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉನದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪತಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ವ್ಯಾಧಿ ಕಂಡ್ರ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ಪೊ, (2) ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವ
ತ್ಯಾಗ ಮಾಡಿದ ವೀರ ಸಾವರಕರರ ಉಜ್ವಲಜೀವನ ಚರಿತ್ರೆ
ಮೈಜುಮ್ಮೆನ್ನಿಸುವ ಹಲವು ಸನ್ನಿವೇಶಗಳು!
ವಿಚಾರ ಕ್ರಾಂತಿಯನ್ನುಂಟುಮಾಡುವ ಘಟನೆಗಳು!
ಪ್ರಸಿದ್ಧ ಹಿಂದೀ ಲೇಖಕ ಪಂಡಿತ ಚಂದ್ರಗುಪ್ತ ವೇದಾಲಂಕಾರ ಇವರ
ಹಿಂದೀ ಗ್ರಂಥದ ಕನ್ನಡ ಅನುವಾದ.
ಕನ್ನಡಿಸಿದವರು-ಶ್ರೀಮತಿ ಇಂದಿರಾಬಾಯಿ
ಮೈಸೂರು, ಸಂಸ್ಥಾನ.

ಬೆಲೆ ಬರೀ ರೂ. **1—4—0**

ರೂ. 1—8—0 ಕಳಿಸಿದರೆ 1 ಪ್ರತಿಯನ್ನು ರಿಜಿಸ್ಟರ್ ಮಾಡಿ ಕಳಿಸಲಾಗುವುದು.

ಪ್ರತಿಗಳು ಸಿಗುವ ಸ್ಥಳಗಳು:—

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು. 3. ನವಭಾರತ ಪುಸ್ತಕ ಭಂಡಾರ, ಉಡುಪಿ. 4. ಪಾವಂಜೆ ಗುರುರಾವ್, ಉಡುಪಿ. ನವಯುಗ ಆಫೀಸು ಉಡುಪಿ. ಮಹಂತೇಶ ಬುಕ್ ಡಿಪೋ, ಬಾಗಲಕೋಟೆ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI. S. INDIA.

Regd. No. M. 3618

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-6
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ,

ತಾ 2-10-1947

"ರೈತರೇ, ನೀವು ಇಂದಿನ ಪರಿಸ್ಥಿತಿಯನ್ನು ಸರಿಯಾದ ದೃಷ್ಟಿಯಿಂದ ನೋಡಿ ತಿಳಿದು ಸಹಾಯಕ್ಕೆ ಮುಂದಾಗಿರಿ, ನಿಮ್ಮ ಉಳಿಕೆಯ ಧಾನ್ಯವನ್ನು ತಮ್ಮ ರೇಶನ್ ಆಹಾರಕ್ಕಾಗಿ ನೋಡುತ್ತಿರುವ ಹಸಿದ ಜನತೆಯೊಡನೆ ಹಂಚಿ ಉಣ್ಣಿರಿ".

ವರ್ಷ ೨೭
ವಾರ ೫

NAVAYUGA WEEKLY, UDIPI.

FOUNDER: **Hon'ble Mr. A. B SHETTY**, Health Minister, Govt. of Madras.

Vol. 27
No. 5

The Canara Mutual Assurance Company, Limited.

Estd.: 1935

H. O. UDIPI, S. INDIA

WELCOME

A hearty and sincere welcome awaits every agent who visits our office and our officers are all available for consultation. Our agents appreciate this cordial reception. They say that this considerate treatment of their problems is the keystone to their Success.

T. R. A. Pai.
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building,
Central Office, Udipi:-

Branches at:

Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಹೊಂದಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರದಲ್ಲಿ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್. ಎಸ್. ಶೆಣೈ, ರಥಬೀದಿ; ಡಾ। ಓ. ಶಿ. ಆಚಾರ್ಯ, ಫಾರ್ಮಸಿ; ಡಾ। ಕೆ. ಶೇಷಗಿರಿ ಶೆಣೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೬—0—0. ಪೋಸ್ಟ ಚಾರ್ಜ ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಬಾಪಟ್ಟ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ:—ಬಾಪೂಜಿ ಪ್ರೆಸ್ ಅಂಡ್ ಏಜನ್ಸಿ ಕಮಲಾಪುರ, ಶಿವಮೊಗ್ಗ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ. ಮೈಜುಮ್ಮೆನಿಸುವ ಹಲವು ಸನ್ನಿವೇಶಗಳು!

ಬೆಲೆ ಬರೀ ರೂ. **1—4—0**

ಪ್ರತಿಗಳು ಸಿಗುವ ಸ್ಥಳಗಳು:—
ನವಭಾರತ ಪುಸ್ತಕ ಭಂಡಾರ, ಉಡುಪಿ. ನವಯುಗ ಆಫೀಸು, ಉಡುಪಿ.

Nambiar's

ARYA VAIDYA SALA

UDIPI

Ideal House for Ayurvedic Treatment.

C. N. Kelu Nambiar,
Vaidya

Insure with or represent

UNITED KARNATAK INSURANCE CO., LTD.

Head Office: DHARWAR.

೭೮ರ ಮುದುಕ ಗಾಂಧಿಜೀಯ ★ ★ ಅಮರ ವಾಣಿಗಳು



‘ಸೈನಿಕ ಭಾಷೆಯಲ್ಲೇ ಮಾತಾಡುವ ದಾದರೆ ನಾವೆಲ್ಲರೂ ದೇವನ ಸೈನಿಕರು. ‘ತಪ್ಪಿನ’ ವಿರುದ್ಧವಾಗಿ ‘ಸರಿ’ಯನ್ನು ಎತ್ತಿಕಟ್ಟಿ ಹೋರಾಡತಕ್ಕವರು. ನಮ್ಮೀ ಯುದ್ಧವೆಂಬುದು ಸಂಪೂರ್ಣ ಅಹಿಂಸಾತ್ಮಕ ಮತ್ತು ಸತ್ಯಾತ್ಮಕವಾದುದು. ನಾವು ಸೇನಾನೀ ದೇವನ ಯೋಧರೆಂದಾದ ಮೇಲೆ, ಕಾರಣ ಕೇಳುವ ಅಧಿಕಾರ ನಮಗಿಲ್ಲ—ನಮಗಿರುವದು ಸಾಧಿಸುವ ಅಥವಾ ಸಾಯುವ ಹಕ್ಕು ಮಾತ್ರ.

❖

ಗತಕಾಲಗಳಲ್ಲಿ ಪರಸ್ಪರ ವೈರಿಗಳಾಗಿದ್ದವರೆಲ್ಲಾ ಈಗ ಮಿತ್ರರಾಗುತ್ತಿರುವದನ್ನು ಇಡೀ ಲೋಕದಲ್ಲೇ ನಾವು ಕಾಣುತ್ತಿದ್ದೇವೆ. ನಿದರ್ಶನಕ್ಕಾಗಿ ಹಿಂದೆ ಕಠೋರವಾಗಿ ಕಾದಾಡಿದ್ದ ಬ್ರಿಟಿಷರೂ ಬೋಯರರೂ ಈಗ ಮಿತ್ರರಾಗುತಿದ್ದಾರೆ. ಹಿಂದುಗಳೂ ಮುಸ್ಲಿಮರೂ ಮಿತ್ರರಾಗಿರಬೇಕಾದ ಕಾರಣಗಳು ಅದಕ್ಕಿಂತ ಎಷ್ಟೋ ಹೆಚ್ಚಿಗಿವೆ. ಆದರೆ ನಾವು ನಮ್ಮ ಹುಸಿ ಭಾವನೆಗಳೆಲ್ಲವನ್ನೂ ಬಿಟ್ಟ ವಿನಹ ಅದನ್ನು ಸಾಧಿಸಲಾರೆವು.

❖

ಒಮ್ಮೆ ಯೋಧನಾಗಿದ್ದವನು ಸದಾಕಾಲ ಯೋಧನೇ ಆಗಿರಬೇಕೆಂಬ ತತ್ವವು ಸ್ವತಂತ್ರ ಭಾರತದಲ್ಲಿ ಅಪಾಯಕರ. ನಾನು 20 ವರುಷ ದಕ್ಷಿಣಾಫ್ರಿಕದಲ್ಲಿದ್ದೆ. ಅಲ್ಲಿಯ ಪ್ರತಿಯೊಬ್ಬ ಬೋಯರನೂ ಪ್ರಥಮ ದರ್ಜೆಯ ಸೋಲ್ಜರನೇ ಆಗಿದ್ದ; ಅವನೇ ಮಿಕ್ಕ ಕಾಲಗಳಲ್ಲಿ ಆಶ್ಚರ್ಯಕರ ಸಾಗುವಳಿದಾರನೂ ಆಗಿದ್ದ. ಜನರಲ್ ಬೋಥರೂ ಹಾಗೆಯೇ; ಫೀಲ್ಡ್ ಮಾರ್ಶಲ್ ಸ್ಮಟ್ಸರೂ ಹಾಗೆಯೇ. ಸ್ಮಟ್ಸರು ದೊಡ್ಡ ವಕೀಲ; ಅಂತೆಯೇ ಅತ್ಯುತ್ತಮವಾದ ಒಂದು ಬೇಸಾಯ ಭೂಮಿಯ ಒಡೆತನವುಳ್ಳ ದೊಡ್ಡ ಸಾಗುವಳಿದಾರ. ಅಂಥಾ ಮನುಷ್ಯ ಸುಪ್ರಸಿದ್ಧ ಯೋಧನೆಂಬುವುದು ಎಲ್ಲರಿಗೂ ತಿಳಿದದ್ದೇ. ಸ್ವತಃ ನೇತಾಜಿಯೇ ಹಿಂದೆ ಏನಾಗಿದ್ದರು? ಅವರೇನು ಫೀಲ್ಡ್ ಮಾರ್ಶಲ್ ಸ್ಮಟ್ಸರಿಗಿಂತ ಕಡಿಮೆಯವರೇ? ಯೋಧತನವು ಎಂದೂ ಅವರ ಉದ್ಯೋಗವಾಗಿರಲಿಲ್ಲ.

❖

ಹಿಂದುಗಳು ಗೋರಕ್ಷಕರಾಗುವ ಬದಲಿಗೆ ಗೋಭಕ್ಷಕರಾಗಿದ್ದಾರೆ. ಇವರ ನಿವಾರಣೆಯೆಂಬುದು ವಿದೇಶೀ ಆಡಳಿತೆಯ ನಿವಾರಣೆಗಿಂತಲೂ ಪ್ರಯಾಸಕರವಿದೆ. ದನವೊಂದು ದಿನವೊಂದಕ್ಕೆ ಕೊಡುವ ಸರಾಸರಿ ಹಾಲು ಭಾರತದಲ್ಲಿ 2ರಾತ್ತಲ್. ಆದರೆ ಈ ಸರಾಸರಿಯೆಂಬುದು ನ್ಯೂಜಿಲೆಂಡಿನಲ್ಲಿ 14ರಾತ್ತಲ್, ಇಂಗ್ಲೆಂಡಿನಲ್ಲಿ 15ರಾತ್ತಲ್, ಹೊಲ್ಲೆಂಡಿನಲ್ಲಿ 20ರಾತ್ತಲುಗಳಾಗಿವೆ. ದನವು ಹೆಚ್ಚು ಪುಷ್ಟಿಯಿದ್ದಂತೆ ಅದೀವ ಹಾಲು ಹೆಚ್ಚುತ್ತದೆ.

❖

ನಿರಾಶ್ರಿತರ ಸಮಸ್ಯೆಯೆಂಬುದೊಂದು ಇರುವದೇ, ಒಂದು ರಾಷ್ಟ್ರವಾದ ನಮ್ಮ ಪಾಲಿಗೆ ಲಜ್ಜೆಯ ವಿಷಯವಲ್ಲವೆ? ನೆಹರು, ಸರ್ದಾರರಂತೆಯೇ ಜಿನ್ನಾ, ಲಿಯಾಖತರೂ, ತಂತಮ್ಮ ಪ್ರಾಣಹತುಗಳಲ್ಲಿ ಅಲ್ಪಸಂಖ್ಯಾಕರನ್ನು ಬಹುಸಂಖ್ಯಾಕರಂತೆಯೇ ನೋಡಿಕೊಳ್ಳಲಾಗುವದು ಎಂದು ಘಂಟಾಘೋಷವಾಗಿ ಸಾರಿದ್ದರು. ಸಿರಿ ಮಾತುಗಳನ್ನಾಡಿ ಲೋಕದ ಕಣ್ಣಿಗೆ ಮಣ್ಣೆರಚುವ ಉದ್ದೇಶದಿಂದ ಆಡಲ್ಪಟ್ಟ ಮಾತುಗಳೇನವು? ಅಥವಾ ಈ ಮಾತನ್ನು ಈಡೇರಿಸಿಕೊಡುವ ಕಾರ್ಯದಲ್ಲಿ ಪ್ರಾಣವನ್ನಾದರೂ ಕೊಡುವೆವೆಂಬ ಅರ್ಥವಿಟ್ಟುಕೊಂಡು ಆಡಿದ್ದ ಮಾತುಗಳೇ! ಹಾಗಿದ್ದಲ್ಲಿ ಈಗ ನಡೆಯುತ್ತಿರುವದೇನಿದು?

❖

ನಾನು ಹಿಂದುಗಳ ಕುರಿತು ಕಠೋರನಾಗಿದ್ದೇನೆ ಎಂಬ ಆಪವಾದವಿದೆ. ಅವರ ಸಿಟ್ಟಿನ ಕಾರಣ ನನಗೆ ಗೊತ್ತು. ನಾನೇನೂ ಮಾಡಲಿ? ಸತ್ತವರನ್ನು ನಾನು ಹಿಂದೆ ತರಲಾರೆ. ಸಾವೆಂಬದು ಸೃಷ್ಟಿಕರ್ತನ ಅಶೀರ್ವಾದ. ವ್ಯತ್ಯಾಸವಿರುವುದು ಅದು ಸಂಭವಿಸುವ ಕಾಲ ಮತ್ತು ರೀತಿಗಳಲ್ಲಿ ಮಾತ್ರ. ಸರಿಯಾದ ವರ್ತನೆಯೊಂದೇ ಜೀವನವನ್ನು ಸಹ್ಯಗೊಳಿಸುವುದು, ಅಷ್ಟೇ ಅಲ್ಲ, ಮಧುರಗೊಳಿಸಬಲ್ಲದು.

❖

‘ಮನುಷ್ಯ ನಿರೂಪಿಸುತ್ತಾನೆ, ದೇವರು ನಿರ್ಧರಿಸುತ್ತಾನೆ’ ಎಂಬ ನಾಣ್ಣುಡಿಯು ನನ್ನ ಜೀವಮಾನದಲ್ಲೆ ಹಲವು ಬಾರಿ ಸತ್ಯವನ್ನಿಸಿದೆ, ಬೇರೆ ಹಲವರಿಗೂ ಹಾಗಾಗಿರಬೇಕು. ಈ ದಿನ ಬಿಸಿಯೇರಿರುವ ವಾತಾವರಣವನ್ನು ತಣಿಸಲು ನಾನು ನನ್ನ ಅಲ್ಪಸೇವೆಯನ್ನು ಸಲ್ಲಿಸಲೇಬೇಕಾಗಿದೆ. ‘ಮಾಡೋಣ, ಇಲ್ಲವೇ ಮಡಿಯೋಣ’ ಎಂಬ ಹಳೇ ತತ್ವವನ್ನೇ ನಾನೀಗ ಭಾರತದ ರಾಜಧಾನಿಗೆನೇ ಲಗ್ತೀಕರಿಸಬೇಕಾಗಿದೆ. ಪಶ್ಚಿಮ ಪಂಜಾಬಿನಿಂದ ಓಡಿ ಬರುವ ಅದೃಷ್ಟಹೀನರಾದ ನಿರಾಶ್ರಿತರ ಸಿಟ್ಟು ನನಗರ್ಥವಾಗುತ್ತದೆ. ಆದರೆ ಸಿಟ್ಟೆಂಬುದು ಹುಚ್ಚಿನ ಮರಿ. ಅದು ಪ್ರತಿಯೊಂದು ವಿಧಾನದಲ್ಲೂ ಸಂಗತಿಯನ್ನು ಇನ್ನಷ್ಟು ಹಾಳುಮಾಡುವುದೇ ಸರಿ. ಪ್ರತೀಕಾರವು ಚಿಕಿತ್ಸೆಯಾಗದು. ಮೂಲ ರೋಗವನ್ನು ಅದು ಮತ್ತಷ್ಟು ಕೆರಳಿಸುತ್ತದೆ. ಅದ್ದರಿಂದ ಕೊಲೆ, ಸುಲಿಗೆ, ದರೋಡೆಗಳಿಗಿಳಿದಿರುವ ಎಲ್ಲರನ್ನೂ ನಾನು ಕರೆದು ಹೇಳುತ್ತೇನೆ- ನಿಮ್ಮ ಕೈಗಳನ್ನು ಹಿಂಡೆಳೆಯಿರಿ.

❖

ಒಂದೋ ನಾನೀ ಸಂಗತಿಗಳನ್ನು ಸರಿಪಡಿಸುವೆ; ಇಲ್ಲವೇ ಆ ಪ್ರಯತ್ನದಲ್ಲೇ ಪ್ರಾಣ ಬಿಡುವೆ. ನಿಮ್ಮೆಲ್ಲರಿಗೂ ನನಗೂ ಇರುವ ದೇವನೊಬ್ಬನೇ. ನನ್ನ ಮಟ್ಟಿಗೆ ಹಿಂದೂ, ಮುಸ್ಲಿಂ, ಸಿಖ್, ಪಾರ್ಶಿ, ಕ್ರೈಸ್ತರೆಂಬ ಭೇದವಿಲ್ಲ. ಎಲ್ಲರೂ ಒಂದೇ.

❖

ನಮ್ಮ ಕೊನೆಯ ನಿರಾಶ್ರಿತನೆಂದರೆ ನಮ್ಮೆಲ್ಲರ ಅದೃಷ್ಟ ನಿರ್ಮಾಪಕನಾದ ದೇವರೇ. ಇಂತಹ ಸ್ಥಿತಿಯಿರುವಾಗ ನನಗೀಗ ವಿಶ್ರಾಂತಿ ಬೇಕಾಗಿಲ್ಲ. ನಾನು ಕೆಲಸ ನಿಲ್ಲಿಸಲಾರೆ. ನಾನು ಉಪವಾಸ ಕೈಕೊಳ್ಳುವಂತೆ ಮಾಡಿದ, ನಾನು ಬದುಕುವಂತಾದ, ಕೆಲಸಕ್ಕೆ ನಾನು ವಿರಾಮಕೊಡಲಾರೆ. ಅದರಲ್ಲೇ ನನ್ನ ಪ್ರಾಣ ಹೊರಟು ಹೋಗುತ್ತದಾದರೆ ನಾನು ಸಂತೋಷಪಡುವೆ.

❖

ಹಿಂದುಗಳು ಮತ್ತು ಮುಸಲ್ಮಾನರು ಒಂದು ವರುಷ ಹೋರಾಡಿಕೊಂಡರು; ಆ ಮೇಲೆಯೇ ರಾಷ್ಟ್ರವನ್ನು ವಿಭಾಗಿಸಿ ಕೊಳ್ಳಲೊಪ್ಪಿದರು. ಈಗ ಸಾಮಾನ್ಯ ನಾಗರಿಕತೆಯನ್ನು ಸ್ಥಾಪಿಸುವುದು, ಸ್ವಾತಂತ್ರ್ಯದ ಸವಿಫಲವನ್ನು ಸವಿಯಲಾಗುವಂತೆ ರಾಷ್ಟ್ರವನ್ನು ಪುನರ್ರಚಿಸುವುದು, ಪ್ರತಿಯೊಂದು ಕಡೆಯವರ ಕರ್ತವ್ಯ.

❖

ಕಲ್ಕತ್ತದ ಶಾಂತಿ ಮತ್ತೊಮ್ಮೆ ಭಂಗವಾದರೆ ಬೇರೇನೂ ಅಲ್ಲ—ಅಪರಿಹಾರ್ಯವಾದ ಮರಣಾಂತ ಉಪವಾಸ ಕೈಕೊಳ್ಳುವುದೇ ಸರಿ. ಕಲ್ಕತ್ತದಲ್ಲಿ ಜಾತೀಯ ಶಾಂತಿ ಮೆರವಣಿಗೆ ಕೊಂಡುಹೋದ ಶ್ರೀ ಸಚಿನ್ ಮಿತ್ರ ಮತ್ತು ಶ್ರೀ ಯಸ್. ಬೆನರ್ಜಿಯವರು ಹೊಡೆತಕ್ಕಾಹುತಿಯಾಗಿ ಸತ್ತರು. ನಾನದಕ್ಕಾಗಿ ದುಃಖಿಸಲಾರೆ. ಜಾತಿಗಳನ್ನು ಒಂದುಗೂಡಿಸುವ [illegible] ಹ ನಿರಪರಾಧಿಗಳ ಮರಣವು ಅಗತ್ಯ. ಹಿಂದುಗಳ ರಕ್ಷಣೆಗಾಗಿ ಮುಸ್ಲಿಮರು ಪ್ರಾಣ ಕೊಟ್ಟ ಹಲವು ನಿದರ್ಶನಗಳನ್ನು ನಾನು ಉದಾಹರಿಸಬಲ್ಲೆ. ನನಗಂತಹ ವ್ಯಕ್ತಿಗತ ಅನುಭವವೂ ಇದೆ. ಎಲ್ಲಾ ಸಮಾಜಗಳವರಲ್ಲಿಯೂ, ಎಲ್ಲವುಗಳ ಮಟ್ಟಿಗೂ ಒಳ್ಳೆಯದು ಮತ್ತು ಕೆಟ್ಟದು ಎರಡೂ ಇರುತ್ತವೆ.

❖

ಜಾತೀಯ ಐಕ್ಯ ಸಾಧನೆಯ ನನ್ನ ಸಹಾಯಯಾಯಿಯಾಗಿ ಮಿ. ಸುಹ್ರವರ್ದಿ

(೧೧ನೇ ಪುಟ ನೋಡಿರಿ.)

> ಇದೇ ತಾ. ೨-೧೦-೪೭ಕ್ಕೆ ಗಾಂಧಿಜೀ ೭೯ನೇ ಪ್ರಾಯಕ್ಕೆ ಕಾಲಿಡುತ್ತಾರೆ. ‘ಸ್ವರಾಜ್ಯ ಕಾಣದೆ ಸಾಯಲಾರೆ’ ‘ನೂರಿಪ್ಪತ್ತೈದು ತುಂಬುವವರೆಗೆ ಬಾಳಬೇಕೆಂದಿದ್ದೇನೆ’ ಎಂದು ಗಾಂಧಿಜೀ ತನ್ನ ಜಯಕೆ ಪ್ರದರ್ಶಿಸಿದ್ದಿದೆ. ಆದರೆ ಈ ದಿನಗಳಲ್ಲಿ ದೇಶವನ್ನೆಲ್ಲಾ ವ್ಯಾಪಿಸಿರುವ ಜಾತಿದ್ವೇಷ ದಾವಾನಲವನ್ನು ಕಂಡು “ಒಂದೋ ನಾನೀ ಬೆಂಕಿಯನ್ನು ನಂದಿಸಬೇಕು; ಇಲ್ಲವೇ ಆ ಕೆಲಸದಲ್ಲಿ ಪ್ರಾಣಕೊಡಬೇಕು” ಎನ್ನುತ್ತಿದ್ದಾರೆ. ಅಂದ ಮೇಲೆ ಈ ಜೀವವೀಗ ಭಾರತೀಯರ ಕೈಯಲ್ಲಿದೆ. ಅವರ ಹುಟ್ಟು ಹಬ್ಬಕ್ಕಾಗಿ ‘ಗಾಂಧಿಜೀ ಚಿರಾಯುವಾಗಲಿ’ ಎಂದು ಜೈಕಾರವನ್ನೂ, ದ್ವೇಶಾಗ್ನಿಗೆ ಗಾಳಿಯನ್ನೂ ಒಟ್ಟೊಟ್ಟಿಗೆ ಹಾಕಿದಲ್ಲಿ ಗಾಂಧಿಜೀಯನ್ನು ಕೊಂದಂತೆಯೆ! ಗಾಂಧಿಜೀ ಬಾಳ ಬೇಕೆ?—ಅವರು ಈ ಬಾರಿ ಕಲ್ಕತ್ತಾ, ಮತ್ತು ದಿಲ್ಲಿಗಳಲ್ಲಿ ಪ್ರತಿದಿನವೆಂಬಂತೆ ಒತ್ತಿ ಆಡಿದ ಮಾತುಗಳನ್ನು; ಬಿಚ್ಚಿ ಬಿಚ್ಚಿ ತೋರಿಸಿದ ತನ್ನ ಹೃದಯದುದ್ವೇಗಗಳನ್ನು ಆಯ್ದು ಇಲ್ಲಿ ಕೊಡಲಾಗಿದೆ—ಇವುಗಳನ್ನು ಸರ್ವರೂ ಶಿರಸಾವಹಿಸಬೇಕು!

ವಾರ್ಡನ್

1946ರಲ್ಲು ಹೊಸ ದಾಖಲೆಯ ಶಿಖರಕ್ಕೇರಿದೆ.

ಸ್ವೀಕರಿಸಲ್ಪಟ್ಟ ವ್ಯವಹಾರ ... ... ರೂ. 2,04,00,000

ಪೂರ್ಣಗೊಳಿಸಲ್ಪಟ್ಟ ವ್ಯವಹಾರ ... ... ರೂ. 1,72,00,000

ವಾರ್ಡನಿನ ಪ್ರಗತಿಪರ-ಜೀವನದಲ್ಲಿ ಇದೊಂದು ಮರೆಯಲಾಗದ ಉಚ್ಚ ಸಾಹಸ.

ಇಂತಹ ದಾಖಲೆಗೆ ನೆರವಾದ ಸ್ವಪರ ರಾಷ್ಟ್ರಗಳ ಪೋಲಿಸಿದಾರರಿಗೂ ಏಜಂಟರಿಗೂ ಕಂಪೆನಿಯು ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತದೆ.

ಶಿವಪ್ರಸಾದ ತಾಕರ್ — ಮೆನೇಜಿಂಗ್ ಡೈರೆಕ್ಟರ್.

ಎಮ್. ಸುಂದರರಾಮ ಶೆಟ್ಟಿ — ಏಜನ್ಸಿ ಮೇನೇಜರ್.

ಮಂಗಳೂರು ಶಾಖೆ.

ಪಿ. ಸಚ್ಚಿದಾನಂದ ಹೆಗ್ಡೆ — ಬ್ರಾಂಚ್ ಸೆಕ್ರೆಟರಿ.

ಕೆ. ಪಿ. ಭವಾನಿಶಂಕರ ಶೆಟ್ಟಿ — ಅಸಿಸ್ಟಾಂಟ್ ಬ್ರಾಂಚ್ ಸೆಕ್ರೆಟರಿ.

ಋತುಸ್ರಾವ ನಿಂತಿತು

‘ಕುಮಾರಿ’ ಬಿಲ್ಲೆಗಳನ್ನು ಉಪಯೋಗಿಸಿದರೆ ಪಡೆತಪ್ಪಿ ಋತುಸ್ರಾವವಾಗುವುದು ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಗಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5/; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಖರ್ಚು ಪ್ರತ್ಯೇಕ.]

Mrs. P. DEVEE, F DS (N. J.)
Tollygunge CALCUTTA

ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಜಾತಿ ದಂಗೆಯ ಅಪೂರ್ವ ಅನುಭವಗಳು

ಈ ಬಾರಿ ಪಂಜಾಬು ಮತ್ತಿತರ ಕಡೆಗಳಲ್ಲಿ ನಡೆದಿರುವ ಜಾತೀಯ ಗಲಭೆಗಳಿಂದ ಕಲಿಯತಕ್ಕ ಪಾಠಗಳು ಹೇರಳವಿವೆ. ಧನಬಲ, ಸಂಪತ್ಸಾಮರ್ಥ್ಯ–ಅಧಿಕಾರ––––ಜನಬಲ ಇವುಗಳೆಲ್ಲವೂ ಶಾಶ್ವತವಲ್ಲವೆಂಬುದನ್ನು ಅದು ಮನದಟ್ಟು ಮಾಡಿದೆ. ಅಷ್ಟು ಮಾತ್ರವೇ ತಾವು ಮಾಡಿದ್ದ ಉಪಕಾರಗಳ ಮೇಲಾದರೂ ಜನರು ನಂಬಿಕೆಯಿಡದಂತೆ ಮಾಡಿದೆ. ಒಟ್ಟಿನ ಮೇಲೆ ಮನುಷ್ಯರ ಪಾಲಿಗೆ ಮರಣ, ಅಪಾಯ, ಮತ್ತು ಕಷ್ಟ ನಷ್ಟಗಳು ಖಂಡಿತವಿದ್ದಷ್ಟು ಸುಖ, ವಿಶ್ವಾಸ, ಶಾಂತಿ, ಸಖ್ಯ, ಸಂಬಂಧಗಳ ಭರವಸೆಯಿಲ್ಲವೆಂಬುದನ್ನು ಜಾತೀಯ ಗಲಭೆಗಳು ಕಲಿಸಿವೆ. ಇವು ಎಲ್ಲರ ಕಣ್ಣುಗಳನ್ನೂ ತೆರೆಯಿಸುವ ಪಾಠಗಳು. ಅಂತಹ ಕೆಲವು ಘಟನೆಗಳು ಈ ಮೊದಲೇ ಪ್ರಕಟನೆಗೊಂಡಿವೆ. ಇತ್ತೀಚೆಗೆ ಸಂಭವಿಸಿದ್ದ ಇನ್ನು ಕೆಲವನ್ನು ಇಲ್ಲಿ ಕೊಡಲಾಗಿದೆ:–

ಕಂಸಾವತಾರಿಗಳು!

ಈ ಕಾಲದ 'ಜೀವನ ಯಾತ್ರಿಕರ' ಪೈಕಿ ರೈಲು ಪ್ರಯಾಣಿಕರಿಗಿರುವ ಅಪಾಯವು, ಎಲ್ಲರಿಗಿಂತ ಹೆಚ್ಚಿನದೆನ್ನಬಹುದು. ರೈಲು ನುಗ್ಗಿ ಕೊಳ್ಳೆ, ದರೋಡೆ ನಡೆಸುವ ಕೃತ್ಯಗಳು ಮೊದಲಿನಿಂದಲೂ ಇದ್ದವುಗಳೇ. ಈ ಬಾರಿಯ ಜಾತೀಯ ಗಲಭೆಯಂತೂ ರೈಲನ್ನೇ ತನ್ನ ಮುಖ್ಯ ವಾಹನವಾಗಿ ಉಪಯೋಗಿಸಿಕೊಂಡಂತಿದೆ. ನಿರಾಶ್ರಿತರನ್ನೊಯ್ಯುತ್ತಿರುವ ರೈಲುಗಳನ್ನು ಮುತ್ತಿ ಸಹಸ್ರ ಸಂಖ್ಯೆಯ ಜನರಿಗಲ್ಲಿಯೇ ಸಮಾಧಿ ಕೊಟ್ಟು, ಮೈ ಜುಮ್ಮೆನ್ನುವ ವಾರ್ತೆಗಳನ್ನು ನಾವು ಕೇಳುತ್ತಿದ್ದೇವೆ. ಅನ್ಯ ಸಮಾಜಗಳವರನ್ನು ರೈಲು ಪ್ರಯಾಣದಲ್ಲೇ ಕೊಲೆಮಾಡುವದಕ್ಕಿರುವ ಅನುಕೂಲತೆ ಹೆಚ್ಚು. ಅದ್ದರಿಂದಲೇ ಪಂಜಾಬು, ಸಿಂಧ್, ಗಡಿನಾಡು ಪ್ರಾಂತ್ಯಗಳಿಂದ 'ರೈಲು ಸಂಹಾರ'ದ ಹಲವು ಭೀಕರ ಕಥೆಗಳು ಕೇಳಬರುತ್ತಿವೆ. ಇದು ಅಂಟುರೋಗವಾಗಿ ಮಿಕ್ಕ ಪ್ರಾಂತ್ಯಗಳಿಗೂ ಹಬ್ಬುತ್ತಿದೆ. ಸೆಪ್ಟೆಂಬರ್ ತಾ. 25ನೇ ರಾತ್ರಿ ಕಾನ್ಪುರದಿಂದ ಎಕ್ಸ್‌ಪ್ರೆಸ್ ಟ್ರೈನು ಡಿಲ್ಲಿಗೆ ಹೊರಟಿದ್ದಿತು. ಅದು ಕಾನ್ಪುರಕ್ಕೆ 5 ಮೈಲಿರುವ ಗನ್ ಫ್ಯಾಕ್ಟರಿಯ ಸಮೀಪಕ್ಕೆ ಬಂದಾಗ ಜನದಳವೊಂದು ಗಾಡಿಯ ಮೂರನೇ ತರಗತಿಯೊಳಗೆ ನುಗ್ಗಿತು. ನುಗ್ಗಿದವರೇ ಒಳಗಿದ್ದ ಪ್ರಯಾಣಿಕರನ್ನು ಓಡುತ್ತಿದ್ದ ಗಾಡಿಯಿಂದ ಎತ್ತಿ ಎತ್ತಿ ಹೊರಗೆ ಬಿಸಾಡಹತ್ತಿದರು. ಹೀಗೆ ನೆಲಕ್ಕಪ್ಪಳಿಸಲ್ಪಟ್ಟವರ ಪೈಕಿ ಹೆಂಡತಿ ಮಕ್ಕಳ ಪುಣ್ಯದಿಂದ ಜಖಂ ಮಾತ್ರ ಆಗಿ ಬದುಕಿ ಉಳಿದ ಇಬ್ಬರು ಮರಳಿ ಕಾನ್ಪುರಕ್ಕೆ ನಡೆದು ಹೋಗಿ ಸಂಗತಿಯನ್ನು ವರದಿ ಮಾಡಿದರು. ಸ್ಥಳೀಯ ಅಧಿಕಾರಿಗಳು ದೊಡ್ಡ ಪೋಲೀಸುಪಡೆಯೊಂದಿಗೆ ಈ ಕಂಸ ಕೃತ್ಯ ನಡೆದ ಸ್ಥಳಕ್ಕೆ ಹೋಗಿ, ರೈಲು ಕಂಬೀ ಪಕ್ಕದಲ್ಲಿ ಹುಡುಕಿದಾಗ ಅಲ್ಲಿ ಐದು ದೇಹಗಳು ಬಿದ್ದುಕೊಂಡಿದ್ದುವು. ಇಬ್ಬರು ಸತ್ತೇಹೋಗಿದ್ದರು; ಮತ್ತೊಬ್ಬ ಸಾವಿಗೆ ಸಮೀಪವಾಗುವಷ್ಟು ಜಖಂಗೊಂಡಿದ್ದ. ಝಾನ್ಸಿಗೆ 10 ಮೈಲು ದೂರದ ಬಾಬಿನರ ಮತ್ತು ಬಸಾಯಿ ಎಂಬ ಸ್ಥಳಗಳ ಮಧ್ಯದಲ್ಲೂ ತಾ. 25ರಲ್ಲಿ ಹೀಗೆಯೇ ನಡೆಯಿತು. ಓಡುವ ರೈಲಿನಿಂದ 11 ಜನರನ್ನು ಎತ್ತಿ ಒಗೆದಿದ್ದರು. ಆದರೆ ಅವರು ಬಿದ್ದ ಸ್ಥಳದ ಮಹಾತ್ಮೆ ದೊಡ್ಡದಿರಬೇಕು; ಎಲ್ಲರೂ ಜಖಂ ಗೊಂಡರೇ ಹೊರತು ಯಾರೊಬ್ಬನೂ ಸಾಯಲಿಲ್ಲ. ಹೇಗೂ ಝಾನ್ಸಿಗೆ ಹೋಗಿ ಅಲ್ಲಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ. ಈ ರೈಲು ಅಲ್ಲಿಂದ 40 ಮೈಲು ದೂರದ ಲಲಿತಪುರ ಎಂಬಲ್ಲಿಗೆ ಹೋದಾಗ, ನಿರಪರಾಧಿಗಳನ್ನು ಎತ್ತಿ ಅಪ್ಪಳಿಸಿದ ಆ ಕೆಲವು ಕಂಸಾವತಾರಿಗಳ ದಸ್ತಗಿರಿಯಾಗಿದೆ.

ವೈದ್ಯರಿಗೂ ಈ ರೋಗ!

ಲಾಹೋರಿನಲ್ಲಿ ಪಂಡಿತ ಠಾಕೂರ್ ದತ್ತರೆಂಬವರು ಪ್ರಸಿದ್ಧ ವೈದ್ಯರು; ಅವರಲ್ಲಿಗೆ ಅಧಿಕ ಸಂಖ್ಯೆಯಲ್ಲಿ ಬರುತ್ತಿದ್ದುದು ಮುಸ್ಲಿಂ ರೋಗಿಗಳೇ. ಬಡ ಮುಸ್ಲಿಮರಿಗೆ ಧರ್ಮಾರ್ಥ ಚಿಕಿತ್ಸೆ ಮಾಡಿ ಠಾಕೂರ್ ದತ್ತರು ವಿಶೇಷ ಸಂಖ್ಯೆಯಲ್ಲಿ ಮುಸ್ಲಿಂ ಸ್ನೇಹಿತರನ್ನೂ ಗಿರಾಕಿಗಳನ್ನೂ ಕಟ್ಟಿಕೊಂಡಿದ್ದರು. ಸ್ವತಃ ಗಾಂಧಿಜಿಯೇ ತೆರೆದಿದ್ದ ಟಿಬ್ಬಿಯಾ ಕಾಲೇಜನ್ನವರು ಸ್ಥಾಪಿಸಿದ್ದರು. ಡಿಲ್ಲಿಯ ಹಿಂದುಗಳಿಗೆ ಹಕೀಮ್ ಅಜ್ಮಲ್‌ಖಾನರು ಹೇಗಿದ್ದರೋ ಲಾಹೋರಿನ ಹಿಂದುಗಳಿಗೆ ಪಂಡಿತ ಠಾಕೂರ ದತ್ತರು ಹಾಗಿದ್ದರು. ಈ ದತ್ತರೂ ಮೊನ್ನೆ ಜೀವದಾಸೆಯಿಂದ ಡಿಲ್ಲಿಗೋಡಿ ಬಂದಿದ್ದಾರೆ. ಅಲ್ಲಿ ಗಾಂಧಿಜಿಯೊಡನೆ ತನ್ನ ಕರುಳು ಕತ್ತರಿಸುವ ಕಥೆಗಳನ್ನೆಲ್ಲಾ ಹೇಳಿ ಗಳಗಳನೆ ಅತ್ತರಂತೆ. 'ಗಾಂಧಿಜೀ; ಹೊರಗೆ ದಬ್ಬಲ್ಪಡುವ ಬದಲಿಗೆ ಪಾಕಿಸ್ತಾನದಲ್ಲೇ ಗಟ್ಟನಿಂತು ಸಾಯುವದೇ ವಾಸಿಯೆಂಬ ನಿಮ್ಮ ಮಾತಿನಲ್ಲಿ ನನಗೆ ನಂಬಿಕೆಯಿತ್ತು. ಆದರೇ ಸುಬೋಧೆಯನ್ನು ಪಾಲಿಸುವ ಶಕ್ತಿ ನನ್ನಲ್ಲಿಲ್ಲದೆ ಹೋಯಿತು! ಈಗಲಾದರೂ ಸರಿಯೇ; ನೀವು ಹೇಳುವದಾದರೆ ಪುನಃ ಲಾಹೋರಿಗೆ ಹೋಗಿ ಸಾವನ್ನಿದಿರಿಸಲು ಸಿದ್ಧನಿದ್ದೇನೆ" ಎಂದು ಗಾಂಧಿಜೀಯೊಡನೆ ದತ್ತರು ಮೊರೆಯಿಟ್ಟಾಗ, ಆವರು ಪುನಃ ಲಾಹೋರಿಗೆ ಹೋಗಲು ಗಾಂಧಿಜೀ ಒಪ್ಪಿಗೆ ಕೊಡಲಿಲ್ಲ. ಇದು ಮಿಕ್ಕವರಂತೆಯೇ ಸ್ವತಃ ಗಾಂಧಿಜೀಗೂ ದೊರೆತ ಒಂದು ಪಾಠ.

ಹರಕಂಗೀ ಧಣವಂತ!

ಪಶ್ಚಿಮ ಪಂಜಾಬಿನ ಮುಲ್ತಾನಿನಲ್ಲಿ ಈಗಲೂ 100,000 ಮುಸ್ಲಿಮೇತರರು ಮನೆಮಾರು ಕಳಕೊಂಡು, ನಿರಾಶ್ರಿತ ನಿಲಯ ಕೂಡಾ ಇಲ್ಲದೆ, ನಗರತುಂಬಾ ಹರಡಿ ಬಿದ್ದಿದ್ದಾರಂತೆ. ಕರೆಯುವವರಿಲ್ಲ, ಕೇಳುವವರಿಲ್ಲ! ಭಾರತದ ಉಳಿದ ಭಾಗದೊಡನೆ ಅವರಿಗಾವ ವಿಧದ ಸಂಬಂಧವೂ ಉಳಿದಿಲ್ಲ. ಸಂಖ್ಯೆಯನ್ನು ಇನ್ನಷ್ಟು ಭರ್ತಿಮಾಡಬೇಕೆಂಬ ಆಸೆಯು ಮುಸ್ಲಿಂ ಪುಂಡರಿಗೆಲ್ಲಿಯಾದರೂ ಹುಟ್ಟಿ, ಈ ಲಕ್ಷ ಮಂದಿಯತ್ತ ಅವರ ಕಣ್ಣು ಬಿತ್ತೆಂದರೆ ಆಗ ಇವರೆಲ್ಲರ ಕಷ್ಟವೂ ಒಂದೇ ಧಾಳಿಗೆ ಪರಿಹಾರ! ಅವರಲ್ಲೊಬ್ಬ ತಾ. 24ರಲ್ಲಿ ವಿಮಾನ ಹತ್ತಿ ಡಿಲ್ಲಿಗೋಡಿ ಬಂದು ಎಲ್ಲಾ ಚರಿತ್ರೆಯನ್ನೂ ಬಿಚ್ಚಿದ್ದಾನೆ. ಈ ಮನುಷ್ಯನೇನೂ ಸಾಮಾನ್ಯನಲ್ಲ. ಮುಲ್ತಾನ್ ಜಿಲ್ಲೆಯ ಅತಿ ದೊಡ್ಡ ವರ್ಗದಾರರಲ್ಲೊಬ್ಬ. ವರುಷಕ್ಕೆ 25000 ರೂಪಾಯಿ ಕೀರ್ವೆ ಕೊಡುವ ಆಸ್ತಿಯಿದ್ದವನ. ಇಂತಹ ಶ್ರೀಮಂತನು ತನ್ನ ಜೀವಕ್ಕೆಂತಹ ಮೌಲ್ಯ ಕಟ್ಟಿದ್ದಾನೋ–ಎಲ್ಲವನ್ನೂ ಬಿಟ್ಟು ಜೀವವೊಂದು ಉಳಿಯಲಿ, ಎಂದು ಆಕಾಶಮಾರ್ಗವಾಗಿ ಡಿಲ್ಲಿಗೆ ಬಂದು ಬಿದ್ದಿದ್ದಾನೆ. ಡಿಲ್ಲಿಗಿಳಿಯುವಾಗ ಅವನಲ್ಲಿದ್ದುದೆಂದರೆ ಒಂದು ಚಲ್ಲಣ ಮತ್ತು ಒಂದು ಹರಿದ ಶರ್ಟು ಮಾತ್ರ!

ಬೇಲಿ ಹೊಲ ಮೇವ ವಿಧಾನ

ಪಶ್ಚಿಮ ಪಂಜಾಬಿನಿಂದ ಹಿಂದೂ ಸಿಖ್ಖರನ್ನೂ, ಪೂರ್ವ ಪಂಜಾಬಿನಿಂದ ಮುಸ್ಲಿಮರನ್ನೂ ಸಾಗಿಸುವ ಮಹತ್ವಾದ ಕಾರ್ಯಭಾರವೀಗ ನಡೆದಿದೆಯಷ್ಟೆ. ಈ ಯಾತ್ರಿಕರ ಗುಂಪೆಂದರೆ ಕುಂಭಮೇಳದ್ದೇ! ಕಾಲ್ನಡಿಗೆಯವರ ಒಂದೊಂದು ದಳವು 50-60 ಮೈಲುದ್ದವಿರುವದೂ ಇದೆ. ರೈಲು, ವಿಮಾನ, ಮತ್ತು ವಾಹನಗಳಲ್ಲಿ ಸಾಗುವವರು ಬೇರಿದ್ದಾರೆ. ಇಂತಹ ಪಂಗಡಗಳು ಪುಂಡುಗಾರರ ಕೈಗೆ ಸಿಕ್ಕಿದರೆ–ಕಾಳು ಹೆಕ್ಕುವವರಿಗೆ ಕಣಜವೇ ಸಿಕ್ಕಿದ ಹಾಗೆ! ಮನೆಮನೆ ನುಗ್ಗಿ ಹೆಕ್ಕಿ ಕೊಲ್ಲುವ ಪ್ರಯಾಸ ತಪ್ಪಿ ಸಹಸ್ರಾರು ಜನರ ಗುಂಪನ್ನು ಒಂದೊಂದೇ ಹೊಡೆತಕ್ಕೆ ನಾಶಮಾಡುವ ಸುಯೋಗವವರದಾಗುತ್ತದೆ! ಇಂತಹ ದೊಡ್ಡ ಧಾಳಿಗಳು ಎರಡು ಕಡೆಗಳಲ್ಲೂ ಇಷ್ಟರಲ್ಲೇ ಏಳೆಂಟು ನಡೆದಿವೆ; ಸಾವಿರಾರು ಜನರು ಸತ್ತಿದ್ದಾರೆ. ಇನ್ನು ಹಲವರನ್ನು-ಮಹಿಳೆಯರ ಸಮೇತ- ಎತ್ತಿಕೊಂಡೊಯ್ದಿದ್ದಾರೆ. ಹೀಗೆ ಹೊರಡುವ ನಿರಾಶ್ರಿತ ಪಂಗಡಗಳ ಮೈಗಾವಲಿಗೆ ಸೈನಿಕರನ್ನಿಟ್ಟೇ ಕಳುಹಿಸುವ ಸಂಪ್ರದಾಯ. ಹಿಂದೂ ಸಿಖ್ ನಿರಾಶ್ರಿತ ಗುಂಪಿಗೆ ಮುಸ್ಲಿಂ ಸೈನಿಕರು ಪಹರೆಗಿದ್ದರೆ, ಮುಸ್ಲಿಂ ಪುಂಡರ ಸೇನೆ ಬಂದುಬಿದ್ದರೆ ಸರಿ; ಈ ಸೈನಿಕರು ನಿದಾಕ್ಷಿಣ್ಯವಾಗಿ 'ಧಂ ಧಂ ಧಂ' ಎಂದು ಆಕಾಶಕ್ಕೆತ್ತರಕ್ಕೆ ಗುಂಡು ಹಾರಿಸಿಬಿಡುತ್ತಾರೆ--ನಕ್ಷತ್ರಗಳು ಉದುರಬೇಕು ಹೊರತು ಪುಂಡರಲ್ಲ! ಪುಂಡರು ತಮ್ಮ ಕೆಲಸ ಜಾರಿ ಮಾಡುತ್ತಾರೆ. ಮುಸ್ಲಿಂ ನಿರಾಶ್ರಿತರ ಗುಂಪಿಗೆ ಮುಸ್ಲಿಮೇತರ ಸೈನಿಕರು ಪಹರೆಗಿದ್ದರೂ ಇದೇ ಗತಿ! ಸೆಪ್ಟಂಬರ್ ತಾ. 20ರಲ್ಲಿ ಅಮೃತಸರಕ್ಕೆ ಹೊರಟಿದ್ದ ಹಿಂದೂ ಸಿಖ್ ನಿರಾಶ್ರಿತರಿದ್ದ ರೈಲಿನ ಮೇಲೆ ಮುಸ್ಲಿಂ ಪುಂಡರು ಬಿದ್ದು 1500ಮಂದಿಯನ್ನು ಕೊಂದು 150 ಹುಡುಗಿಯರನ್ನು ಎತ್ತಿಕೊಂಡು ಹೋಗಿದ್ದರು. ಇದಕ್ಕೆ ಪ್ರತಿಯಾಗಿ ತಾ. 22ರಲ್ಲಿ ಪಶ್ಚಿಮ ಪಂಜಾಬಿಗೆ ಹೊರಟಿದ್ದ ಮುಸ್ಲಿಂ ನಿರಾಶ್ರಿತರ ರೈಲಿನ ಮೇಲೆಧಾಳಿ ನಡೆಯಿತು. 3000ಮಂದಿಗೆ ಮಿಕ್ಕಿ ಸತ್ತು 1,000 ಮಂದಿ ಜಖಂಗೊಂಡರೆಂದು ಪಾಕಿಸ್ತಾನ್ ಸರಕಾರದ ಲೆಕ್ಕ. ಈ ನಿರಾಶ್ರಿತ ರೈಲಿನ ಕಾವಲಿಗೆ 13ಹಿಂದು, 5ಮುಸ್ಲಿಮ್ ಸೋಲ್ಜರಿದ್ದ ಸಶಸ್ತ್ರದಳವಿತ್ತಂತೆ. ಇವರಿಗೆ ನಾಯಕನಾಗಿ ಬ್ರಿಟಿಷ್ ಅಧಿಕಾರಿಯಿದ್ದ. ಪುಂಡರು ಮುತ್ತಿಗೆ ಹಾಕಿದೊಡನೆಯೇ ಈ ಬ್ರಿಟಿಷ್ ಅಧಿಕಾರಿ ಗುಂಡು ಹಾರಿಸಿ ಅವರನ್ನು ಕೊಲ್ಲಹತ್ತಿದ. ಆದರೆ ಅವನಿಗೇನೆ: ಒಂದು ಗುಂಡು ಬಿದ್ದು (ಅವನ ಸೋಲ್ಜರರೇ ಎಂದೂಹೆ) ಸತ್ತ. ಹಿಂದೂ ಸೋಲ್ಜರರು ಶಸ್ತ್ರತಗ್ಗಿಸಿ ಪುಂಡರ ಕಡೆ ಸೇರಿಕೊಂಡರು. ಮುಸ್ಲಿಂ ಸೈನಿಕರು ಸತ್ತು ಬಿದ್ದರು! ಇಂತಹ ಘಟನೆಗಳು ಪಂಜಾಬಿನ ಆಧುನಿಕ ಚರಿತ್ರೆಯಲ್ಲಿ ಅಪೂರ್ವವೇನೂ ಅಲ್ಲ!

Canara Bank Limited

ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಬ್ರಿಟಿಷ್ ಇಂಡಿಯಾದಲ್ಲಿ ಸಾಂಘೀಕರಿಸಿದ್ದು.
(ಸ್ಥಾಪಿತ. ೧೯೦೬)

ಹೆಡ್ ಆಫೀಸು: ಬಾವಟೆಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು: 75, ಎಪ್ಲೊಲೊ ಸ್ಟ್ರೀಟ್, ಫೋರ್ಟ್ ಮುಂಬೈ.

ಶಾಖೆಗಳು

ಮದರಾಸು ಪ್ರಾಂತ್ಯ
ಮಂಗಳೂರು - ಸಿಟಿ
ಮಂಗಳೂರು - ಬಂದರ
ಗಂಗೊಳ್ಳಿ
ಕುಂದಾಪುರ
ಉಡುಪಿ
ಮುಲ್ಕಿ
ಕಾರ್ಕಳ
ಬಂಟ್ವಾಳ
ಕಾಸರಗೋಡು
ಪುತ್ತೂರು
ಮಧುರಾ
ಮದರಾಸು
ಪಯ್ಯನ್ನೂರು
ಕಲ್ಲಿಕೋಟೆ
ಕಣ್ಣಾನ್ನೂರು
ಕೊಯಮುತ್ತೂರು
ತೂತುಕುಡಿ
ಸೇಲಂ
ಇರೋಡು

ಹೈದರಾಬಾದು ಸಂಸ್ಥಾನ
ಸಿಕಂದರಾಬಾದು

ತಿರುವಾಂಕೂರು ಸಂಸ್ಥಾನ
ಅಲ್ಲೆಪ್ಪಿ
ಕ್ವಿಲೋನ್

ಮಧ್ಯಪ್ರಾಂತ್ಯ
ನಾಗಪುರ

ಮುಂಬೈ ಪ್ರಾಂತ್ಯ
ಬೆಳಗಾಂವಿ
ಧಾರವಾಡ
ಹುಬ್ಬಳ್ಳಿ
ಕೋಲಾಪುರ
ಮುಂಬೈ—ಫೋರ್ಟ್
ಮುಂಬೈ—ಕಾಳಬಾದೇವಿ
ಮುಂಬೈ—ಮಾಂಡ್ವಿ
ಮುಂಬೈ—ಗಿರಗಾಂವ್
ಮುಂಬೈ—ಕಲ್ಯಾಣ

ಮೈಸೂರು ಸಂಸ್ಥಾನ
ಮೈಸೂರು
ಶಿವಮೊಗ್ಗ
ಚಿಕ್ಕಮಗಳೂರು
ಬೆಂಗಳೂರು ಸಿಟಿ
ಅರಸೀಕೆರೆ
ದಾವಣಗೆರೆ

ಸಿಂಧ್ ಪ್ರಾಂತ್ಯ
ಕರಾಚಿ

ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಳಂ

CHAMPAE'S
Snow & Castrex
Sole Distributers for India
Prop: K. G. NAYAK,
Santhekatte, UDIPI, S. K.

ಭಾರತ ಪಾಕಿಸ್ತಾನ್ ಯುದ್ಧವೇ ಗತಿಯೆ?

ಇಷ್ಟರವರೆಗೆ ಹಿಂದೂ—ಮುಸ್ಲಿಮರೊಳಗಿರುವ ಹೊಡೆದಾಟಗಳು ಇನ್ನು ಮುಂದೆ ಭಾರತ—ಪಾಕಿಸ್ತಾನಗಳೊಳಗಾಗುವವೆ? ಸಮಾಜವಾರಾಗಿದ್ದ ದ್ವೇಷವು ರಾಷ್ಟ್ರವಾರಾಗಿ ಬೆಳೆಯುವದೆ? ದೇಶ ವಿಭಜನೆಯೇ ಗುರಿಯಾಗಿದ್ದ ಗೊಂದಲವು ಆ ವಿಭಜನಾನಂತರವೂ ಬೆಳೆದು, ಮುಸ್ಲಿಂ ಅಥವಾ ಹಿಂದೂ ಆಡಳಿತೆಯ ಏಕರೂಪಿ ರಾಷ್ಟ್ರದ ಪ್ರವರ್ತನವಾಗುವದನ್ನೆ ತನ್ನ ಗುರಿಯಾಗಿ ಮಾಡಿಕೊಳ್ಳುವುದೆ? ಗೊಂದಲ, ಜನ ಓಡಲಾವಣೆ, ಸಂಬಂಧ ವಣ ನಾಟಗಳ ಮೂಲಕ ಇತ್ತೀಚೆಗೆ ಇವೆರಡು ರಾಷ್ಟ್ರಗಳೊಳಗೆ ಬೆಳೆಯುತ್ತಾ ಬಂದ ಭಿನ್ನಾಭಿಪ್ರಾಯವು ಈಗ ಹಠವಾಗಿ ಮಾರ್ಪಟ್ಟಿದೆ; ಮುಂದಕ್ಕದು ದ್ವೇಷವಾಗಿ ಕೊನೆಗೆ ವೈರವಾಗಿ ಮಾರ್ಪಾಟುಗೊಳ್ಳುವ ಲಕ್ಷಣಗಳೇ ಕಾಣುತ್ತಿವೆ. ಈದಿನ ಪಂಜಾಬಿನ ಸಿಖ್ಖರಂದೂ ಮತ್ತು ಮುಸ್ಲಿಮರಿರುವಂತೆ ನಾಳೆ ಪಾಕಿಸ್ತಾನ್ ಮತ್ತು ಭಾರತಗಳಿರುವಂತಾಗುವುದೋ ಎಂಬ ಹೆದರಿಕೆಗಾಸ್ಪದವೀಯುತ್ತಿದೆ. ಇದರ ಮುಖ್ಯ ಚಿಹ್ನೆಗಳು: 1. ಜುನಾಗಡ್ ಸಂಸ್ಥಾನದ ಸಮಸ್ಯೆ. 2. ಒಂದು ರಾಷ್ಟ್ರಕ್ಕೆ ಸಂಬಂಧಿಸಿದ ನಿರಾಶ್ರಿತ ಜನ ತಂಡಗಳ ಮೇಲೆ ಮತ್ತೊಂದು ರಾಷ್ಟ್ರದ ಗಡಿಯೊಳಗೆ ಆ ರಾಷ್ಟ್ರದ ಮಂದಿ ನಡೆಸುತ್ತಿರುವ ಧಾಳಿ. 3. ಸರಕಾರಗಳ ಜವಾಬ್ದಾರೀ ಅಧಿಕಾರಸ್ಥಾನದಲ್ಲಿರುವ ಪ್ರಮುಖರೇ ಬೇಜವಾಬ್ದಾರಿಯಿಂದ ಉದ್ರೇಕಕಾರೀ ಮಾತುಗಳನ್ನಾಡಹತ್ತಿರುವುದು. 4. ಶಾಂತಿ ಸ್ಥಾಪನೆಗಾಗಿ ತನ್ನ ಪ್ರಾಣವನ್ನು ಪಣವಿಟ್ಟಿರುವ ಗಾಂಧೀಜೀಯೇ ಭಾರತ-ಪಾಕಿಸ್ತಾನಗಳೊಳಗಿನ ಸೌಹಾರ್ದವು ಇನ್ನು ಅಸಾಧ್ಯವೆಂದು ತೋರಹತ್ತಿ ಅವರೇ ಈಗ ಸ್ಪಷ್ಟವಾಣಿಯಲ್ಲಿ ಯುದ್ಧದ ಎಚ್ಚರಿಕೆ ಕೊಡಹತ್ತಿರುವುದು.

ಪಾಕಿಸ್ತಾನ್ ಸ್ಥಾಪನೆಯ ನಂತರವೂ ಪರಿಸ್ಥಿತಿ ಹೀಗಾಗಲು ಕಾರಣವೇನು?

ಮುಖ್ಯ ಕಾರಣಗಳು

ಭಾರತದ ಸೂತ್ರಧಾರಿಗಳಾಗಿರುವ ಕಾಂಗ್ರೆಸಿಗರು, ತಮಗಿಷ್ಟವೊಂದು ಇಷ್ಟವಿಲ್ಲದಿದ್ದರೂ ಶಾಂತಿ ಸ್ಥಾಪನೋದ್ದೇಶದಿಂದ ಪಾಕಿಸ್ತಾನಕ್ಕೊಪ್ಪಿಗೆಕೊಟ್ಟು ಮಹತ್ತಾದ ತ್ಯಾಗ ಮಾಡಿರುವರೆಂಬುದಕ್ಕೆ ಪಾಕಿಸ್ತಾನ್ ಗಳಿಸಿಕೊಂಡ ಆದರ ಸೂತ್ರಧಾರೀ ಮುಸ್ಲಿಂ ಲೀಗ್ ಪ್ರಮುಖರು ಏನೊಂದೂ ಬೆಲೆ ಕೊಡಲಿಲ್ಲ.

ಬದಲಿಗೆ ಲೀಗ್ ನಾಯಕರು ತಮ್ಮ 'ಪ್ರತ್ಯಕ್ಷ ಹೋರಾಟ'ದ ವೇಳೆ ಯಾವ ಮನೋವೃತ್ತಿ ಪ್ರದರ್ಶಿಸಿದ್ದರೋ, ಅದೇ ಮನೋವೃತ್ತಿಯನ್ನು ಪಾಕಿಸ್ತಾನ್ ನಾಯಕಸ್ಥಾನದಲ್ಲಿರುವ ಈ ಕಾಲದಲ್ಲೂ ಇಟ್ಟುಕೊಂಡಿದ್ದಾರೆ. ಇದಕ್ಕೆ ಮಿ. ಜಿನ್ನರೇ ಆದಿಯಾಗಿ ಸರ್ವ ಲೀಗ್ ನಾಯಕರೂ ಹೋರಾಟ ಪ್ರೇಮಿಗಳಿದ್ದಂತೆ ಹೊಣೆಗಾರಿಕೆಯ ಪರಿಜ್ಞಾನಿಗಳಾಗಿಲ್ಲದಿರುವುದು ಮೊದಲನೇ ಕಾರಣ. ಶಾಂತಿ ಪ್ರೇಮಿಗಳಾದ ಕಾಂಗ್ರೆಸಿಗರಿಗೆ ಶಾಂತಿ ಭಂಗದ ಬೆದರಿಕೆ ಬೀರಿಯೇ ತಮ್ಮ ಕಾರ್ಯ ಸಾಧಿಸಿಕೊಳ್ಳಬಹುದೆಂಬ ವಿಶ್ವಾಸವು ಲೀಗ್ ನಾಯಕರಲ್ಲೀಗಲೂ ಇರುವುದು ಎರಡನೇ ಕಾರಣ.

ಅಲ್ಪಸಂಖ್ಯಾತ ಸಮಾಜಗಳಿಗೆ ಬಹುಸಂಖ್ಯಾತ ಸಮಾಜಗಳು ರಿಯಾಯತಿ ತೋರಿಸುವುದು ಹೇಡಿತನದ ಲಕ್ಷಣವೇನೂ ಅಲ್ಲ; ಅದೇ ನ್ಯಾಯವಾದ ಮಾರ್ಗ. ಆದ್ದರಿಂದಲೇ ಮುಸ್ಲಿಮರ ಅತಿರೇಕಗಳನ್ನು ಕಾಂಗ್ರೆಸು ಸಹಿಸಿಕೊಂಡು ಅಪವಾದಗಳನ್ನು ಕೇಳಿದ್ದಿತು. ಮುಸ್ಲಿಂ ಬೇಡಿಕೆಗಳ ಕಡೆಗೆ ಕಾಂಗ್ರೆಸು ಸದಾಕಾಲ ಕಿವಿಯರಳಿಸಿಕೊಂಡಿದ್ದಿತು. ಆದರೆ ತಮಗಿಂತ ಬಹುಸಂಖ್ಯಾತರು, ತಮ್ಮ ಮೇಲೆ ತೋರಿಸಿದಂತಹ ಔದಾರ್ಯವನ್ನು ಮುಸ್ಲಿಮರು ತಮಗಿಂತ ಅಲ್ಪಸಂಖ್ಯಾತರಾಗಿರುವ ಸಿಖ್ಖರ ಕಡೆಗೆ ತೋರಿಸಲು ತಯಾರಾಗಲಿಲ್ಲ; ಬದಲಿಗೆ ಅವರನ್ನು ಅತ್ಯುಗ್ರವಾಗಿ ದ್ವೇಷಿಸುತ್ತಾ ಬಂದರು.

ಎರಡನೇ ಅಲ್ಪಸಂಖ್ಯಾತರೆಂಬುದರಿಂದ ಮುಸ್ಲಿಮರಿಗೆ ಪಾಕಿಸ್ತಾನ ಕೊಡಲ್ಪಟ್ಟಂತೆ, ಅವರಿಗಿಂತ ಅಲ್ಪಸಂಖ್ಯಾತರಾದ ಸಿಖ್ಖರಿಗೆ ನ್ಯಾಯದಾನವಾಗಲಿಲ್ಲ. ಪಂಜಾಬು ವಿಭಜನೆಯಿಂದ ಸಿಖ್ ಸಮಾಜವು ಇಬ್ಭಾಗಿಸಲ್ಪಟ್ಟಿತು. ಹೀಗೆ ನಿಸ್ಸಹಾಯಕ ಸ್ಥಿತಿಯಲ್ಲಿರುವಾಗಲೇ, ಮುಸ್ಲಿಮರು ತಮ್ಮನ್ನು ಕಾಣುತ್ತಿರುವ ಕಠೋರ ರೀತಿಯು ಸಿಖ್ಖರನ್ನು ಸಹಜವಾಗಿ ಕೆರಳಿಸಿತು. ಪಂಜಾಬಿನ ಮಹಾ ದುರಂತಕ್ಕೆ ಮುಸ್ಲಿಮರ ಕ್ರೂರತ್ವವೂ ಸಿಖ್ಖರ ಸ್ವಾಭಿಮಾನವೂ ಕಾರಣ.

ಈಗಂತೂ ಎರಡು ಸ್ವತಂತ್ರ ರಾಷ್ಟ್ರಗಳಾಗಿರುವಾಗ, ತಂತಮ್ಮ ಪ್ರಜೆಗಳನ್ನು ಮತ್ತು ರಾಷ್ಟ್ರೀಯ ಹಕ್ಕುಬಾಧ್ಯತೆ, ಗೌರವಗಳನ್ನು ರಕ್ಷಿಸಿಕೊಳ್ಳುವದು ಪ್ರತಿಯೊಂದು ಸರಕಾರದ ಕರ್ತವ್ಯ. ಆದರೆ ಈ ಮೊದಲು ಮುಸ್ಲಿಂ ಲೀಗು ಕಾಂಗ್ರೆಸಿನಿಂದ ಪಡೆಯುತ್ತಿದ್ದಂತಹ ಮಿತಿಮೀರಿದ ರಿಯಾಯತಿಗಳನ್ನೇ ತಾನು ಹಿಂದುಸ್ಥಾನ್ ಸರಕಾರದಿಂದ ಪಡೆಯುವ ಬಾಧ್ಯಸ್ಥನೆಂಬಂತೆ ಪಾಕಿಸ್ತಾನ್ ಸರಕಾರವು ಭಾವಿಸಿಕೊಂಡಿದೆ. ಹಿಂದುಸ್ಥಾನ್ ಸರಕಾರವಾಗಿರುವ ಕಾಂಗ್ರೆಸಿಗರ ಸಹನೆಯ ಅಂತಿಮ ಗಡಿ ಪಾಕಿಸ್ತಾನ್ ಸ್ಥಾಪನೆಯೇ! ಆದ್ದರಿಂದ ಇನ್ನು ನ್ಯಾಯಕ್ಕೆ ಮೀರಿ ಯಾವ ರಿಯಾಯತಿಯನ್ನೂ ಭಾರತ ಸರಕಾರ ಕೊಡುವಂತಿಲ್ಲ; ಕೊಟ್ಟರದು ರಾಷ್ಟ್ರೀಯ ಆತ್ಮಹತ್ಯೆಯಾಗುವುದು.

ಪಾಕಿಸ್ತಾನದಲ್ಲೂ ಅದಕ್ಕೊತ್ತಿನ ಹಿಂದುಸ್ಥಾನದ ಪ್ರಾಂತ್ಯಗಳಲ್ಲೂ ಹಿಂದೂ ಸಿಖ್ಖರು ಮತ್ತು ಮುಸ್ಲಿಮರೊಳಗೆ ಯಾರೊಬ್ಬನನ್ನೂ ಬಿಡದೆ ಕಟ್ಟುಗ್ರ ಜಾತಿದ್ವೇಷ ವ್ಯಾಪಿಸಿಕೊಂಡಿದೆ. ಜನತಾ ವ್ಯಾಪಿಯಾಗಿರುವ ಆ ವೈರವನ್ನು ನಿರ್ಮೂಲಿಸುವ—ಮತ್ತಾ ಸಂಬಂಧದಲ್ಲೇಳುವ ದೊಡ್ಡ ಪ್ರಮಾಣದ ಸರ್ವವ್ಯಾಪೀ ದಂಗೆಗಳನ್ನು ನಿಲ್ಲಿಸುವ—ಶಕ್ತಿಯೀಗ ಇವೆರಡು ಸರಕಾರಗಳಿಗೂ ಇಲ್ಲ. ಬದಲಿಗೆ ಇಕ್ಕಡೆಯ ಜನತಾ ಸರಕಾರಗಳಲ್ಲೂ, ಈ ಜನತಾ ಭಾವನೆಯೇ ಸಹಜವಾಗಿ ಆವರಿಸಿದೆ. ಒಂದು ಕಡೆಯವರು ಜವಾಬ್ದಾರಿಯರಿತು ಸುಸಂಸ್ಕೃತರಂತೆ ವರ್ತಿಸುತ್ತಿದ್ದಾರೆ; ಇನ್ನೊಂದು ಕಡೆಯವರು ಹಿಂದಿನ ಧಿಟ್ಟತನ, ಮತ್ತು ಛಲವನ್ನೇ ನಂಬಿರುವಂತಿದೆ.

ಹೀಗಾಗಿ ಎರಡೂ ರಾಷ್ಟ್ರಗಳ ಘರ್ಷಣೆ ಬಲವಾಗುತ್ತಾ ಹೋಗುತ್ತಿದೆ.

ಇದರ ಅಂತ್ಯವೆಲ್ಲಿ?

ಸಂಗತಿ ಹೀಗೆಯೇ ಮುಂದುವರಿದರೆ ಭಾರತ—ಪಾಕಿಸ್ತಾನಗಳು ಯುದ್ಧರಂಗದಲ್ಲೇ ಒಂದನ್ನೊಂದು ಇದಿರಿಸುವ ಸಂದರ್ಭ ಬರಬಹುದು. ಎರಡು ರಾಷ್ಟ್ರಗಳೂ ಈಗಿನಂತೆ 'ವಸಾಹತು'ಗಳಾಗಿರುವಾಗಲೇ ಆ ಘರ್ಷಣೆ ಸಂಭವಿಸಿದರೆ, ಸಂಬಂಧವಿಟ್ಟುಕೊಂಡಿರುವ ಬ್ರಿಟನು ಈ ಜಗಳದಲ್ಲಿ ಕೈಹಾಕಬೇಕಾಗಿ ಬರಬಹುದು. ಅಥವಾ ಇವೆರಡರಲ್ಲೊಂದು ವಸಾಹತು ಬ್ರಿಟನಿನ ಸಹಾಯ ಯಾಚಿಸಲೂ ಬಹುದು.

ಆದರೆ ತಾನು ದುರ್ಬಲವಾಗಿರುವದೆಸೆಯಿಂದಲೇ ಭಾರತಕ್ಕೆ ಸ್ವಾತಂತ್ರ್ಯ ದಾನಮಾಡಿದ್ದ ಬ್ರಿಟನು ಈ ಕಷ್ಟದಾಯೀ ಕಾರ್ಯಕ್ಕೆ ಪುನಃ ಕಾಲಿಡುವುದಸಂಭವ. ಇಕ್ಕಡೆಯವರ ಸಮ್ಮತಿಯಿಂದಲೇ ಪುನಃ ಬ್ರಿಟನು ಪ್ರವೇಶಿಸುವಂತಾದರೆ, ಆ ಮೇಲೆ ಭಾರತದಲ್ಲಿ ಬ್ರಿಟಪಾಳ್ವಿಕೆಯು ಮತ್ತೊಂದು ಶತಮಾನದ ವರೆಗೆ ನಿರಾತಂಕವಾಗಿ, ಮಾತ್ರವಲ್ಲ, ನಿಷ್ಕಳಂಕನಾಗಿ ಸಾಗಲು ಅನುಕೂಲಮಾಡಿಕೊಟ್ಟಂತಾಗುವದು.

ಆದರೆ ಏನೇ ಸಂಭವಿಸಿದರೂ, ಭಾರತ ಸರಕಾರವು ಇನ್ನೊಮ್ಮೆ ಬ್ರಿಟಿಷ್ ಸ್ಪರ್ಶವಾಗಲೆಂದಿಗೂ ಬಿಡಲಾಗದೆಂಬುದು ಖಂಡಿತ. ಪಾಕಿಸ್ತಾನದ ಮಟ್ಟಿಗೆ ಎಲ್ಲವೂ ವಿದ್ಯಮಾನಗಳನ್ನವಲಂಬಿಸಿವೆ.

ಇಕ್ಕಡೆಯವರ ರಕ್ಷಣಾ ಬಲಗಳೂ ಅತ್ಯಂತ ನಿಕೃಷ್ಟಾವಸ್ಥೆಯಲ್ಲಿರುವಾಗಲೇ ಹಿಂದುಸ್ಥಾನ್ ಪಾಕಿಸ್ತಾನಗಳು ಹೋರಾಟಕ್ಕಿಳಿದರೆ, ಅದರಲ್ಲಿ ಬ್ರಿಟನಿನ ಪಾಲುಗಾರಿಕೆ ಯಾವುದೇ ಇದ್ದರೂ ಇಲ್ಲಿಯ ಪರಿಸ್ಥಿತಿಯು ಮೂರನೇ ಮಹಾ ರಾಷ್ಟ್ರವೊಂದಕ್ಕೆ ಆಹ್ವಾನವಾಗದೆ ಹೋಗದು. ಹಾಗಾದರೆ ಇಕ್ಕಡೆಯ ಭಾರತೀಯರ ಭವಿಷ್ಯಕ್ಕೂ ರಾಹು ನೋಂಕಿದಂತೆಯೇ.

ಮೇಲಿನ ಎಲ್ಲಾ ಭವಿಷ್ಯವೂ ಕಲ್ಪನಾಕೃತಿಯನ್ನು ಓಡಿಸಿನೋಡುತ್ತ ಹುಟ್ಟಿದವುಗಳೇ; ಹೊರತು ಖಂಡಿತವಲ್ಲ. ತನ್ನೊಳಗಿನ ಘರ್ಷಣೆಯು ಇಕ್ಕಡೆಗಳವರಿಗೂ ಅಪಾಯಕರವೆಂಬುದು ಭಾರತ-ಪಾಕಿಸ್ತಾನಗಳ ನಾಯಕರಿಗೆ ಗೊತ್ತಿರುವುದರಿಂದ ಅವರದರ ನಿವಾರಣೆಗೆ ಸರ್ವಶಕ್ತಿಯಿಂದ ಪ್ರಯತ್ನಿಸದಿರಲಾರರು.

NOTICE

ನಮ್ಮ ದ. ಕ. ಜಿಲ್ಲಾ ಶಿರ್ವ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ, (ರಿಜಿಸ್ಟರ್ಡ್) ಶಿರ್ವ, ಇವರ 30-6-47ಕ್ಕೆ ಅಂತ್ಯವಾಗುವ ವರುಷದ ಮಹಾಸಭೆಯು ಇದೇ ಬರುವ ತಾ. 12-10-47ನೇ ಆದಿತ್ಯವಾರ ಸಾಯಂಕಾಲ ಗಂಟೆ 3-30ಕ್ಕೆ ಶಿರ್ವ ಹಿಂದೂ ಪ್ರೈಮೆರಿ ಶಾಲೆಯಲ್ಲಿ Capt Y. R. Shetty, M.B.B.S., ಇವರ ಅಧ್ಯಕ್ಷತೆಯಲ್ಲಿ ಕೂಡಲಿರುವುದರಿಂದ, ಎಲ್ಲಾ ಮೆಂಬರರೂ ದಯವಿಟ್ಟು ಬರಬೇಕಾಗಿ ವಿನಂತಿ.

Shirwa 21-9-47 — **N. S. Kuthyar.** Secretary.

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ಹೆಗ್ಗುರಿಯಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ—

ದಿ ವಿಜಯಾ ಬೇಂಕ್, ಲಿಮಿಟೆಡ್.

ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಸಿಟಿ—ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಂಞಂಗಾಡು, ಮಡಿಕೇರಿ ಮತ್ತು ಮುಂಬಾಯಿ.

THE VIJAYA BANK, LIMITED.

notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 500/47

ವಾದಿ. ಅನಂತ ಭಟ್ಟ,

ಪ್ರತಿವಾದಿ. ದೇವಡಿಗ ಚಿಕ್ಕ.

ಕುಂದಾಪುರ ತಾಲ್ಲೂಕು ಹೆರಂಜಾಲು ಗ್ರಾಮದಲ್ಲಿರುವ ದೇವಿ ಹೊಸ್ಸಿನ ನಾಗ ದೇವಡಿಗ ಚಿಕ್ಕನಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿಯು ವಾದಿಯಿಂದ ಪಡೆದ ರೂ. ೨೪೫-೦-೦ಕ್ಕೆ ತಾರೀಕು ೨೪-೫-೪೭ರಲ್ಲಿ ಬರಕೊಟ್ಟ ದಿನಾಂದು ನೋಟಿನ ಹಣ ಬಡ್ಡಿ ಕೂಡಾ ರೂ. ೩೬೦-೧೨-೦ನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. ೧೫-೧೦-೪೭ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿಗೆ ಮುಂದೆ ಹಗಲು ೧೧ ಗಂಟೆಗೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಲ್ಪಟ್ಟಿರುತ್ತದೆ.

N. S. Parameshwariah
Advocate for Plff.
Date 21-9-47 Coondapoor

ಈ ತಪ್ಪು ಯಾರದು? ಇದರ ಚಿಹ್ನೆಗಳೇನು?

ಭಾರತ-ಪಾಕಿಸ್ತಾನಗಳೊಳಗೆ ಒಡಂಬಡಿಕೆಯಾಗದೆ ಹೋದರೆ ಜಾಗತಿಕ ಸಂಘದಂತಹ ಮೂರನೆಯವರ ತೀರ್ಮಾನಕ್ಕಾದರೂ ತಮ್ಮ ಜಗಳಗಳನ್ನು ಒಪ್ಪಿಸಿ ತಮ್ಮ ಅಮೂಲ್ಯ ಹಾಗೂ ಹೊಸತಾದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳದಿರಲಾರರು.

ಎಲ್ಲಾ ಸಂಧಾನ ಪಥಗಳೂ ನಿರರ್ಥಕವಾಗಿ ಹೋದಲ್ಲಿ, ಸರ್ವೋಪಕರಣಗಳ ಸಂಗ್ರಹ, ಉದ್ದಾಯ ಸೇನಾ ಸಂಗ್ರಹ ಇತ್ಯಾದಿ ಸಿದ್ಧತೆಗಳಾಗಬೇಕಾದೀತು. ಪಾಕಿಸ್ತಾನಕ್ಕೊತ್ತಿನ ಮುಸ್ಲಿಂ ರಾಷ್ಟ್ರಗಳ ಚಲನವಲನಗಳ ಕಡೆಗೂ ಭಾರತ ಸರಕಾರವು ಲಕ್ಷ್ಯ ಕೊಡಬೇಕಾಗಿ ಬಂದೀತು.

ಈ ಊಹೆಗಳನ್ನೆಲ್ಲಾ ಒತ್ತಟ್ಟಿಗಿಟ್ಟು ಸದ್ಯಕ್ಕೆಂತಹ ಘರ್ಷಣೆ ನಡೆದಿದೆ ಎಂಬುದನ್ನಷ್ಟೇ ನೋಡೋಣ:-

ಜುನಗಾಡ್ ಸಂಸ್ಥಾನ

ಸದ್ಯಕ್ಕೆ ಪಾಕಿಸ್ತಾನ್ ಮತ್ತು ಭಾರತ ಸರಕಾರಗಳ ನಡುವೆ ಪರಿಣಾಮ ಮತ್ತು ಪರಿಮಾಣ, ಇವೆರಡರ ಮಟ್ಟಿಗೂ ಧುರವೀಳ್ಯದ ಹರಿವಾಣವಾಗಿದುವುದೆಂದರೆ ಜುನಗಾಡ್ ಸಂಸ್ಥಾನ. ಪಾಕಿಸ್ತಾನ್ ಕೇಂದ್ರಕ್ಕೆ ಸೇರಿಬಿಟ್ಟ ಪ್ರಥಮ ಆಶ್ರಿತರಾಜ್ಯವಿದು. ಜುನಗಾಡು ಕಾಥಿಯವಾಡದ ಸಂಸ್ಥಾನಗಳಲ್ಲೊಂದು. ಒಟ್ಟಿಗೆ 6,71,000 ಪ್ರಜೆಗಳಿರುವ ಆಶ್ರಿತ ರಾಜ್ಯವಿದು. ಈ ಪೈಕಿ 5,43,000 ಹಿಂದುಗಳೇ. ಅರ್ಥಾತ್ ಜನಸಂಖ್ಯೆಯ ಶೇಕಡಾ ೮೧ರಷ್ಟು ಹಿಂದುಗಳಿದ್ದಾರೆ. ಆದರೆ ಜುನಗಾಡ ಆಳುವವರು ಮುಸ್ಲಿಂ ನವಾಬರು. ಈ ಸಣ್ಣ ಸಂಸ್ಥಾನವು ನವಾನಗರ್, ಬಾವ್‌ನಗರ್, ಗೋಂಡಾಲ್, ಬರೋಡಾ, ಇತ್ಯಾದಿ ಇತರ ಹಲವು ಸಂಸ್ಥಾನಗಳ ನಟ್ಟನಡುವೆ ಇದೆ. ಈ ಗುಂಪಿನ ಆಶ್ರಿತ ರಾಜ್ಯಗಳ ಪೈಕಿ ಜುನಾಗಡ್ ಒಂದನ್ನು ಬಿಟ್ಟು ಮಿಕ್ಕೆಲ್ಲಾ ಸಂಸ್ಥಾನಗಳೂ ಹಿಂದುಸ್ಥಾನ ಕೇಂದ್ರಕ್ಕೆ ಜೋಡಣೆಗೊಂಡಿವೆ. ಹಿಂದುಸ್ಥಾನಕ್ಕೆ ಸೇರಿರುವ ಇತರ ಸಂಸ್ಥಾನಗಳ ಕ್ಷೇತ್ರಗಳೂ ಪಾಕಿಸ್ತಾನಕ್ಕೆ ಸೇರಿದ ಈ ಜುನಾಗಡ್ ಸಂಸ್ಥಾನದ ಸ್ಥಳಗಳೂ ಬಹಳ ಕಡೆಗಳಲ್ಲಿ ಪರಸ್ಪರ ಮಿಲನಗೊಂಡಿವೆ. ಮಾತ್ರವಲ್ಲ, ಜುನಗಾಡಿನ, ರೈಲು, ಟಪ್ಪಾಲು ಇತ್ಯಾದಿ ಎಲ್ಲಾ ಸಹಿವಾಟು ಪಥಗಳೂ ಭಾರತದ ಖಾತೆಯೊಳಗಂತರ್ಗತವಾಗಿವೆ. ಹೀಗೆ ಎಲ್ಲಾ ವಿಧಾನಗಳಿಂದಲೂ ಭಾರತಕ್ಕೇನೇ ಸೇರಲು ಬದ್ಧವಿದ್ದ ಜುನಾಗಾಡು ಅದರ ಮುಸ್ಲಿಂ ನವಾಬರ ಅಭಿಲಾಷೆಯೊಂದರ ದೆಸೆಯಿಂದಾಗಿ ಪಾಕಿಸ್ತಾನಕ್ಕೆ ಸೇರಿದೆ. ಸಮುದ್ರ ಪಥವೊಂದರ ವಿನಹಾ ಬೇರಾವ ರೀತಿಯಲ್ಲೂ ಜುನಗಾಡಿಗೂ ಪಾಕಿಸ್ತಾನಕ್ಕೂ ಸಂಬಂಧವಿಲ್ಲ. ತನ್ನ ಸಮೀಪದ ಮಂಗೋಲ್ ಮತ್ತು ಬಾಬರಿಯಾವಾಡ್ ನಂತಹ ಪುಟ್ಟ ಸಂಸ್ಥಾನಗಳ ಮೇಲೆ ತನ್ನ ಮೇಲಧಿಕಾರವಿದೆಯೆಂದು ಜುನಗಾಡಿನ ವಾದ. ಆದರೆ ಅವೆರಡೂ ಭಾರತ ಕೇಂದ್ರದೊಂದಿಗೆ ಜೋಡಣೆಗೊಂಡಿವೆ. ಇತ್ತ ಬರೋಡದ ಗಾಯಕವಾಡರು ಸ್ವತಃ ಜುನಗಾಡನ್ನೇ ತನ್ನ ಸಂಸ್ಥಾನದೊಂದು ಭಾಗವೆಂದು ದೀರ್ಘ ಕಾಲದಿಂದ ವಾದಿಸುತ್ತಾ ಬಂದಿದ್ದಾರೆ. ಈ ರೀತಿ ಎಲ್ಲಾ ಕಡೆಗಳ ಮುತ್ತಿಗೆ-ಬಹುಮುಖೀ ಸಮಸ್ಯೆಗಳ ಬಲೆಯೊಳಗಿದ್ದರೂ ಜುನಾಗಾಡ್ ನವಾಬರು ಪಾಕಿಸ್ತಾನಕ್ಕೆ ನೆಗೆದಿದ್ದಾರೆ. ಇದು ಅಸಾಮಾನ್ಯ ಅಂತರ್ಲಾಗವೇ ಸರಿ! ಮಾತ್ರವಲ್ಲ; ಭಾರತದೊಂದಿಗೆ ಜೋಡಣೆಗೊಂಡಿರುವ ಬಾಬರಿಯಾವಾಡ್ ಸಂಸ್ಥಾನದ ಮೇಲಿನ ಅಧಿಕಾರ ತನ್ನದೆನ್ನುತ್ತಾ ಅದರೊಳಗೆ ಶಸ್ತ್ರ ದಳಗಳನ್ನು ಹೊಗಿಸಿ ಭಾರತ ಸರಕಾರವನ್ನು ಇಷ್ಟರಲ್ಲೇ ಕೆಣಕಿದ್ದಾರೆ; ಅಂತೆಯೇ ಮಾಂಗ್ರೋಲಿನೊಳಗೂ ನುಗ್ಗುವ ಹವಣಿಕೆಯಲ್ಲಿದ್ದಾರೆ. ಈ ಕುರಿತು ಮಾತುಕತೆ ನಡಿಸಲು ಮುಂದೆಬಂದ ಒತ್ತಿನ ಸಂಸ್ಥಾನ ನವಾನಗರದ ಜಾಮ್ ಸಾಹೇಬರಿಗೂ ಭಾರತ ಸರಕಾರದ ಪ್ರತಿನಿಧಿಗಳಿಗೂ ಜುನಾಗಡ್ ನವಾಬರು ಭೇಟಿಯನ್ನೇ ಕೊಡದೆ ತಪ್ಪಿಸಿಕೊಂಡರಂತೆ.

ತೀವ್ರ ವಾಗ್ಯುದ್ಧ

ಜುನಗಾಡ್ ನವಾಬರ ಜಾತ್ಯಂಧತಾ ಧೋರಣೆಯ ಕುರಿತು ಒತ್ತಿನ ಕಾಥಿಯಾವಾರ್ ಸಂಸ್ಥಾನಗಳೆಲ್ಲಾ ಉರಿದುಬಿದ್ದಿವೆ. ಪಾಕಿಸ್ತಾನ್ ಪ್ರಾಂತ್ಯಗಳಂತೆಯೇ ಜುನಾಗಾಡಿನ ಹಿಂದುಗಳೂ ಜೀವಭಾಸೆಯಿಂದ ನೆರೆಸಂಸ್ಥಾನಗಳಿಗೋಡಿ ಬರಹತ್ತಿದ್ದಾರೆ. ಅಧಿಕ ಸಂಖ್ಯಾಕ ಪ್ರಜೆಗಳ "ಪ್ರತಿ ಸರಕಾರ"ವು ಸ್ಥಾಪಿಸಲ್ಪಟ್ಟು 'ಪವಿತ್ರ ಯುದ್ಧ'ವನ್ನದು ಜುನಾಗಾಡ್ ಸರಕಾರದ ಮೇಲೆ ಸಾರಿದೆ. ಪ್ರತಿ ಸರಕಾರಕ್ಕೆ ಶ್ರೀ ಸಾಮಲ್ದಾಸ್ ಗಾಂಧಿಯವರು ಅಧ್ಯಕ್ಷರು ಮತ್ತಿತರ ಐದು ಮಂದಿಯ ಮಂತ್ರಿ ಮಂಡಲ. ನವಾನಗರದ ಜಾಮ್‌ಸಾಹೇಬರು ಖಂಡತುಂಡವಾಣಿಯಲ್ಲಿ ಜುನಗಾಡಿನ ಅನ್ಯಾಯ, ಒಳಸಂಚು, ಅತಿರೇಕಗಳನ್ನು ಬಯಲಿಗೆಳೆದಿದ್ದಾರೆ. "ಅದು ಪಾಕಿಸ್ತಾನಕ್ಕೆ ಸೇರಿದುದರಿಂದ ಹಿಂದುಸ್ತಾನದ ಶಾಂತಿಗೆ ಅಪಾಯ ತಟ್ಟಿದೆ. ಇಂತಹ ಮುಖ್ಯ ವಿಷಯದಲ್ಲಿ ಜುನಗಾಡು ನವಾಬರು ತನ್ನ ಪ್ರಜೆಗಳ ತೀರ್ಮಾನದಂತೆ ವರ್ತಿಸಬೇಕು. ಹೆಚ್ಚೆಂದರೆ 15ದಿನಗಳೊಳಗೆ ಜನ ಮತ ಸಂಗ್ರಹಿಸಿ ಅದನ್ನು ತಿಳಿಯಬೇಕು. ಜುನಗಾಡು ಭಾರತದ ಗಡಿಯೊಳಗೆ ಇಷ್ಟರಲ್ಲೇ ಆಕ್ರಮಣ ನಡೆಸಿದೆ. ಭಾರತ ಸರಕಾರವು ಇಂತಹದನ್ನು ಇನ್ನೂ ನಡೆಯಬಿಟ್ಟರೆ ಇದರ ಅಂತ್ಯವೆಲ್ಲಿಯೋ ಹೇಳಲಾಗದು. ಈ ಕಾಲದಲ್ಲಿ ಯುದ್ಧವನ್ನು ಊಹಿಸುವುದೂ ಕಷ್ಟ. ಆದರೆ ಅದನ್ನು ಭಾರತದ ಮೇಲೆ ಹೇರಲು ಜಿನ್ನರಿಚ್ಛೆಯಿದ್ದಂತಿದೆ. ಏನೇ ಬಂದರೂ ಭಾರತದ ಸಂಯುಕ್ತತೆಯನ್ನು ಕಾಪಾಡಿಕೊಳ್ಳಲೇ ಬೇಕು"—ಎಂದು ಜಾಮ್ ಸಾಹೇಬರು ಸ್ಪಷ್ಟವಾಗಿ ಎಚ್ಚರಿಕೆ ಕೊಟ್ಟಿದ್ದಾರೆ. ಪಾಕಿಸ್ಥಾನ್ ಸರಕಾರದ 400ಸೈನಿಕರು ಜುನಗಾಡಿಗೆ ಗುಪ್ತವಾಗಿ ಬಂದಿಳಿದಿದ್ದಾರೆಂದು ವಾರ್ತೆ ಇದೆ. ಜುನಗಾಡ್ ದಿವಾನರೂ, ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತ್ ಆಲೀ ಖಾನರೂ ಜಾಮ್ ಸಾಹೇಬರ ಹೇಳಿಕೆಯನ್ನು ಕಟುವಾಣಿಯಲ್ಲಿ ಖಂಡಿಸಿದ್ದಾರೆ. ಭಾರತ ಸರಕಾರವು ಈ ಕುರಿತು ತನ್ನ ಧೋರಣೆಯನ್ನು ಸ್ಪಷ್ಟಪಡಿಸಿದೆ. "ಈ ಸಮಸ್ಯೆಗೊಂದು ತೀರ್ಮಾನ ಜೊಂದಲೇ ಬೇಕೆಂದು ಭಾರತ ಸರಕಾರದ ದೃಢ ನಿರ್ಧಾರವಿದೆ. ತನ್ನ ಸಂಸ್ಥಾನದ ಜನ ಮತ ಸಂಗ್ರಹಿಸಿ ಜುನಗಾಡ್ ನವಾಬರು ಅದರಂತೆ ವರ್ತಿಸಲಿ. ಜುನಗಾಡ್ ಸಂಸ್ಥಾನ ಅಥವಾ ಪಾಕಿಸ್ತಾನ್ ಸರಕಾರದೊಡನೆ ಈ ಕುರಿತು ಸಂಧಾನಕ್ಕಿಳಿಯಲು ನಾವು ಸಿದ್ಧರೇ. ಅದರೆ ತಮ್ಮೊಂದಿಗೆ ಸೇರಿದ ಇತರ ಸಂಸ್ಥಾನಗಳ ಕಡೆಗಿನ ತನ್ನ ಕರ್ತವ್ಯವನ್ನು ಭಾರತ ಸರಕಾರವು ಸಂಪೂರ್ಣವಾಗಿ ಮತ್ತು ವಿಶ್ವಾಸ ಪೂರ್ವಕವಾಗಿ ಜ್ಯಾರಿ ಮಾಡಲೇ ಬೇಕಾಗುವದು" ಎಂದಿದೆ. ಗುಜರಾತ್ ಮತ್ತು ಮಧ್ಯ ಭಾರತದ ಸಂಸ್ಥಾನಗಳ ಜತೆಕೂಟದ ಸಭೆ ಸೇರಿ 'ಜುನಗಾಡ್ ಪಾಕಿಸ್ತಾನಕ್ಕೆ ಸೇರಿದ್ದರಿಂದ ಹಿಂದುಸ್ಥಾನಕ್ಕೊದಗಿರುವ ಕಂಟಕವನ್ನು ಭಾರತ ಸರಕಾರವು ನಿವಾರಿಸಲೇ ಬೇಕು' ಎಂದು ಕೇಳಿಕೊಂಡಿದೆ. ನವಾನಗರದ ಜಾಮ್ ಸಾಹೇಬರ ಹೇಳಿಕೆಯನ್ನದು ಸುಸ್ವಾಗತಿಸಿದೆ; ಇಡೀ ಕಾಥಿಯಾವಾರಿನಲ್ಲಿ ಪ್ರಬಲಾಂದೋಲನ ನಡೆದಿದೆ.

ದ್ವೇಷ ಪ್ರಾಬಲ್ಯ

ಪ್ರತೀಕಾರಕ್ಕಾಗಿ ಪೂರ್ವ ಪಂಜಾಬಿನಲ್ಲಿ ಅಮೃತಸರದ ನಿರಾಶ್ರಿತ ಮುಸ್ಲಿಂ ರೈಲು ಮೇಲೆ ಧಾಳಿ ನಡೆದೊಡನೆಯೇ ಪಶ್ಚಿಮ ಪಂಜಾಬಿನ ಸಿಖ್ ನಿರಾಶ್ರಿತರ ರೈಲು ಹೋಗದಂತೆ ಅಲ್ಲಿಯ ಗವರ್ನರರು ತಡೆಯಾಜ್ಞೆಯಿತ್ತು ನಿಲ್ಲಿಸಿ ಬಿಟ್ಟಿದ್ದರು. ಮಿ. ಜಿನ್ನಾರ ಆಜ್ಞೆಕೊಟ್ಟ ಕೂಡಲೇ ಹಿಂದುಸ್ಥಾನ್ ಸರಕಾರಕ್ಕೆ ತಂತಿ ಬಿಟ್ಟಿದ್ದರು. ಇದರಿಂದಾಗಿ ಪರಿಸ್ಥಿತಿ ಮತ್ತಷ್ಟು ಕ್ಷುಬ್ಧವಾಗಿದೆ. ಪಶ್ಚಿಮ ಪಂಜಾಬಿನಲ್ಲಾಗುತ್ತಿರುವ ಧಾಳಿಗಳ ಪ್ರಸ್ತಾಪಕ್ಕೇನೇ ಹೋಗದೆ, ಮಿ. ಜಿನ್ನಾರ ರೀತಿ ಭಾರತದ ತಪ್ಪುಗಳನ್ನೇ ಭೂತ ಕನ್ನಡಿಯಲ್ಲಿಟ್ಟು ತೋರಿಸುತ್ತಾ ಪ್ರತೀಕಾರದ ಹೆಜ್ಜೆಯಿಡಹತ್ತಿದುದು ಹಿಂದೀ ಸರಕಾರದ ಸ್ವಾಭಿಮಾನವನ್ನು ಕೆರಳಿಸಿದೆ. ಆದರೆ ಮುಖ್ಯತಃ ಸಿಖ್ಖರಿದ್ದ ಒಂದು ನಿರಾಶ್ರಿತ ಪಂಗಡವನ್ನು ಪಾಕಿಸ್ತಾನ್ ಸರಕಾರ ತಡೆದಿಟ್ಟರೂ ಅಲ್ಲಿಂದ ನಿರಾಶ್ರಿತರ ಯಾತ್ರಾದಳಗಳೀಗ ಬರುತ್ತಲೇ ಇವೆ; ಅಂಥವುಗಳ ಮೇಲೆ ಧಾಳಿಗಳೂ ನಡೆದಿವೆ. ಆರೋಪ-ಪ್ರತ್ಯಾರೋಪಗಳು ತಾರಾಸಿಂಗ್-ಗಜ್ನಾಫರ್ ಅಲಿಗಳಂಥವರೊಳಗೆ ಬಿರುಸಾಗಿ ನಡೆದಿವೆ. "ನಮಗೆ ಯುದ್ಧ ಬೇಕಾಗಿಲ್ಲ; ಆದರದನ್ನು ನಮ್ಮ ಮೇಲೆ ಒತ್ತಾಯದಿಂದ ಹೇರುತ್ತಾರಾದರೆ ನಾವೊಂದು ಕೈ ನೋಡಿಯೇ ಬಿಡುವೆವು!" ಎಂದು ಮಿ. ಗಜ್ನಾಫರ್ ಅಲಿಯ ಘರ್ಜನೆ.

ಮಹಾತ್ಮಾಗಾಂಧಿಯವರು—

ಈಗೀಗ ಪಾಕಿಸ್ತಾನಕ್ಕೆ ಸ್ಪಷ್ಟ ಎಚ್ಚರಿಕೆ ಕೊಡಹತ್ತಿರುವುದು ಗಮನಿಸತಕ್ಕ ಸಂಗತಿ. "ಹನ್ಸ್‌ಕೆ ಲಿಯಾ ಪಾಕಿಸ್ತಾನ್; ಲಡ್‌ಕೇಲೇಂಗೆ ಹಿಂದುಸ್ಥಾನ್" (ಪಾಕಿಸ್ತಾನವನ್ನು ನಗುನಗುತ್ತಾ ಪಡಕೊಂಡೆವು; ಹಿಂದುಸ್ಥಾನವನ್ನು ಹೋರಾಡಿ ಕಸಗೊಳ್ಳುವೆವು) ಎಂದು ಮುಸ್ಲಿಮರು ಘೋಷಿಸಹತ್ತಿದ್ದಾರೆಂದು ಕೇಳುತ್ತೇನೆ. ನನ್ನ ಇಚ್ಛೆಯಂತಾಗುವದಾದರೆ, ಶಸ್ತ್ರದಿಂದದನ್ನು ಪಡಕೊಳ್ಳಲು ನಾನವರನ್ನೆಂದಿಗೂ ಬಿಡಲಾರೆ. ಕೆಲವರು ಇಡೀ ಭಾರತವನ್ನೇ ಇಸ್ಲಾಮಿಗೆ ಮತಾಂತರಿಸುವ ಕನಸು ಕಾಣುತಿದ್ದಾರೆ. ಯುದ್ಧಮೂಲಕ ಅದೆಂದಿಗೂ ನಡೆಯದು. ಹಿಂದೂತ್ವವನ್ನು ನಾಶಮಾಡಲು ಪಾಕಿಸ್ತಾನದಿಂದ ಎಷ್ಟಕ್ಕೂ ಆಗದು. ಹಿಂದುಗಳು ಮತ್ತವರ ಧರ್ಮವು ಹಿಂದುಗಳಿಂದಲೇ ನಾಶವಾಗಬೇಕಲ್ಲದೆ ಅನ್ಯರಿಂದಲ್ಲ. ಅಂತೆಯೇ ಇಸ್ಲಾಂ ಪಾಕಿಸ್ತಾನದಲ್ಲಿರುವ ಮುಸ್ಲಿಮರಿಂದಲೇ ನಾಶವಾಗಬೇಕು ಹೊರತು ಹಿಂದುಸ್ಥಾನದಲ್ಲಿರುವ ಹಿಂದುಗಳಿಂದಲ್ಲ. ನಾನು ಎಲ್ಲಾ ಯುದ್ಧಗಳಿಗೂ ವಿರೋಧಿ. ಪಾಕಿಸ್ತಾನವು ತನ್ನ ಸ್ವತಃ ಸಿದ್ಧ ತಪ್ಪುಗಳ ಕಡೆಗೆ ಕಣ್ಣು ಬಿಡದೆ, ಹಠಹಿಡಿದು ಅದನ್ನು ಮರೆಮುಚ್ಚುತ್ತಾ ಹೋಗುವದಾದರೆ, ಪಾಕಿಸ್ತಾನದಿಂದ ನ್ಯಾಯ ಹೊಂದಲು ಬೇರ ಮಾರ್ಗವೇ ಇಲ್ಲವಾದಲ್ಲಿ, ಭಾರತ ಕೇಂದ್ರ ಸರಕಾರವು ಅದರ ಮೇಲೆ ಯುದ್ಧಕ್ಕೇನೇ ಹೋಗಬೇಕಾಗುವದು. ಅನ್ಯಾಯವನ್ನು ಸಹಿಸಿಕೊಂಡಿರಬೇಕೆಂದು ನಾನೆಂದಿಗೂ ಹೇಳುವವನಲ್ಲ. ಒಂದು ನ್ಯಾಯಕ್ಕಾಗಿ ಎಲ್ಲಾ ಹಿಂದುಗಳೂ ನಿರ್ನಾಮವಾದರೂ ನಾನದನ್ನು ಗಣಿಸಲಾರೆ. ಯುದ್ಧವಾದಲ್ಲಿ ಪಾಕಿಸ್ತಾನದಲ್ಲಿರುವ ಹಿಂದುಗಳು ಅಲ್ಲಿ ಪಂಚಮ ದಳದವರಾಗಕೂಡದು. ಅದನ್ನಾರೂ ಸಹಿಸರು. ಅವರಿಗೆ ಪಾಕಿಸ್ತಾನದ ಮೇಲೆ ಭಕ್ತಿಯಿಲ್ಲವಾದರೆ ಅವರಲ್ಲಿಂದ ಹೊರಟು ಬರಬೇಕು." ಎಂದು ಗಾಂಧಿಜೀ ಹೃದಯ ಬಿಚ್ಚಿ ಖಂಡತುಂಡವಾಗಿ ನುಡಿದಿದ್ದಾರೆ. ಈ ಮಾತಿಗಾಗಿ 'ಯುದ್ಧ ವಿರೋಧಿಗಳಾದ ನೀವೇ ಯುದ್ಧ ಬೋಧೆ ಕೊಡುವಿರಾ?' ಎಂದು ಗಾಂಧಿಯವರನ್ನು ಕೆಣಕಿ ವಿಚಾರಿಸುವ ಪ್ರಶ್ನೆಗಳು ಬಂದುವು. "ನಾನು ಅಹಿಂಸೆಗೆ ಕಟ್ಟು ಬಿದ್ದವ. ನನ್ನಾಡಳಿತೆಯ ರಾಜ್ಯದಲ್ಲಿ

(೬ನೇ ಪುಟ ನೋಡಿ.)

FOR SALE

Surgical Instruments, appliances, furniture etc., complete to equip four bed cottage Hospital.

Cost Rs. 6000/- or near offer.

Apply:

CAPT. U. ANANTHAYA, M. B. & C. M.,
Ajjarkad, UDIPI.

The Canara Banking Corporation Limited.

(Incorporated in British India, with limited Liability.)

Estd: 1906.

Head Office: **UDIPI**, S. India.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ

OTHER OFFICES

Bangalore City	Coondapoor	Sagar
Bhadravathi	Dharwar	Saklaspur
Bombay	Hassan	Salem Town
Bunder-Mangalore	Haveri	Shevapet-Salem
Byadgi	Hubli	Shimoga
Car Street, Mangalore	Madras	Shirva
Calicut	Malpe	Tellicherry
Cannanore	Mercara	Thirthahalli
Cochin	Mettupalayam	Udipi
Coimbatore	Mysore	Vellore
		Virajpet.

BANKING BUSINESS OF EVERY DESCRIPTION TRANSACTED.

ಗುರುವಾರ, ಉಡುಪಿ, ೨-೧೦-'೪೭

ಒಕ್ಟೋಬರ್ ೧

ತಾ. 1-10-47ನೇ ಬುಧವಾರವು ದಕ್ಷಿಣ ಕನ್ನಡವೇ ಮೊದಲಾದ 8 ಜಿಲ್ಲೆಗಳ ಪಾಲಿನ ಚಾರಿತ್ರ್ಯಾರ್ಹ ದಿನ; ಒಂದು ನವ ಯುಗಾದಿ; ಪಾನ ಪದ್ಧತಿಯು ಹಿಂದಿನ ರಾತ್ರಿಯಲ್ಲೇ ಮುಕ್ತಾಯಗೊಂಡು ನವಯುಗದ ಪ್ರಥಮ ಸೂರ್ಯನು ಉದಯಿಸಿದ ದಿನ—ಈ ಬುಧವಾರ. ಇವೆಂಟು ಜಿಲ್ಲೆಗಳಲ್ಲೂ ಈ ಮಹಾ ಶುದ್ಧೀಕರಣದ ಉದ್ಘಾಟನಾ ಸಮಾರಂಭವು ಪರಿಣಾಮಕಾರಿಯಾಗಿ ನಡೆದಿದೆ. ಒಂದು ಘನ ಕಾಯಿಲೆಯನ್ನು-ಅಂಟುರೋಗವನ್ನು-ಒತ್ತಾಯದ ಚಿಕಿತ್ಸೆಯಿಂದ ಗುಣಪಡಿಸುವಾಗ ಸಂಬಂಧಿಸಿದ ರೋಗಿಗಳಿಗೆ ತಾವು ಕೊಡುವ ಕಟುಕಷಾಯದ ಕಹಿಯೇ ಅನುಭವಕ್ಕೆ ಬಾರದಂತಾಗಬೇಕೆಂದು ಹಲವು ವಿಧದ ಉಪಚಾರಗಳು, ವಿವಿಧ ವಿನೋದಾವಳಿಗಳು ನಡೆದಿವೆ. ತಲಾಂತರಗಳನ್ನು ದಾಟಿದ್ದ 'ಕಲಿಕಾಲ'ವೊಂದು ಕಳೆದು, ಹೊಸಯುಗವುದಯಿಸಿದ ಸುಮಹೂರ್ತವಿದು; ನವೋದಿತ ತಿಳಿ ವಾತಾವರಣದಲ್ಲಿ ಇಂದು ನಾವಿದ್ದೇವೆ; ಅದೇ ಕಾಲದಲ್ಲಿ ಪರಂಪರಾಗತ ಚಟವೊಂದು ಒಮ್ಮೆಗೇ ನಿಂತುದರಿಂದಾಗಿ, ತಮ್ಮೊಂದು ಸಂದುಕೀಲೇ ತಪ್ಪಿದ ಆಕಸ್ಮಿಕ ಅವಘಡಕ್ಕೊಳಗಾದವರಂತಿರುವ ಸಹಸ್ರಾರು ಮಂದಿಯ ದುಃಸ್ಥಿತಿಯನ್ನು ಊಹಿಸುವದು ಕಷ್ಟವಲ್ಲ. ಅಭ್ಯಾಸ ಬಲಕ್ಕೆ-ಒಂದಲ್ಲೊಂದು ನಿಷಿದ್ಧ ದುಶ್ಚಟಕ್ಕೆ-ಬಲಿಬೀಳದಿರುವವರು ಅಪರೂಪ. ಇಂತಹ ಹವ್ಯಾಸಗಳನ್ನು ಜನರು ಅಕಾರಣವಾಗಿ ಕಟ್ಟಿಕೊಂಡಿರುವುದಲ್ಲ-ಆ ಹವ್ಯಾಸಗಳೇ ಜನರನ್ನು ಹಿಡಿದುಕೊಂಡಿವೆ, ಎನ್ನುವದು ಹೆಚ್ಚಿನವರ ಅನುಭವಸಿದ್ಧ ವಿಷಯ. ಚಟ, ಲಾಲಸೆಗಳ ನಿಯಂತ್ರಣವು-ಆತ್ಮಸಂಯಮನ-ಆಚರಣೆಗೆ ಸುಲಭವಾದುದೇನೂ ಅಲ್ಲ. ಆದ್ದರಿಂದಲೇ ಪಾನನಿಷೇಧದ ಶಾಸನವೇ ಬಂದಿದೆ. ಆಶೆಯಿದ್ದವರಿಂದ, ಅದನ್ನು ಈಡೇರಿಸಿಕೊಳ್ಳುವ ಅನುಕೂಲತೆಯನ್ನೇ ತಪ್ಪಿಸಲಾಗಿದೆ. ಭವಿಷ್ಯಕ್ಕೆ ಹಾನಿಯಿದೆ ಎಂಬುದಕ್ಕಾಗಿ ಹೃದಯ ಸಂಬಂಧಿಗಳ ಆಶೆಯನ್ನಗಲಿಸಿದಷ್ಟೇ ಪಾಪ ಅಥವಾ ಪುಣ್ಯವು ಈ ಪಾನನಿಷೇಧದಲ್ಲಿದೆ ಎನ್ನಬಹುದು! ಹೇಗಿದ್ದರೂ ಅಮಲಿನ ಅಭ್ಯಾಸವಿದ್ದವರ ಮೇಲೆ– ಆ ಸಂಬಂಧದ ಉದ್ಯೋಗಗಳನ್ನು ಮಾಡುತ್ತಿದ್ದವರ ಮೇಲೆ–ಈ ಸಂದರ್ಭದಲ್ಲಿ ಕನಿಕರ ಪಡದಿರಲಾಗುವದಿಲ್ಲ.

ನಾವು ಹಿಂದೊಮ್ಮೆ ಹೇಳಿರುವಂತೆ ಸದ್ಯ ಯಾರಿಗೂ ಲಾಭದಾಯಕವಾಗಿರದ ಶುದ್ಧೀಕರಣವಿದು; ಒಂದು ಪಾಪದ ನಿವಾರಣೆ–ಭವಿಷ್ಯದ ಹಿತಸಾಧನೆ. ಪುಣ್ಯಕಾರ್ಯ, ಸತ್ಕಾರ್ಯ ಎಂಬುದಕ್ಕಾಗಿಯೇ ಬಂದಿರುವ ಸುಧಾರಣೆಯಿದು. ಪಾನಚಟವು ಅಜೇಯವೆಂದು ಹೇಳುವವರಿರಬಹುದು; ಅದರದು ಅಮೂಲ್ಯ, ಅನಪಾಯಕಾರಿಯೆಂದು ಯಾರೂ ಹೇಳಲಾರರು. ಅಂಥ ಮೇಲೆ ತಮ್ಮಿಂದ ಗೆಲ್ಲಲಾರದ ಒಂದು ಪಾಪವನ್ನು ನಿರ್ಮೂಲಿಸಿ, ತಮಗುಪಕಾರ ಮಾಡಿದ ಕಾಂಗ್ರೆಸ್ ಸರಕಾರವನ್ನು ಸರ್ವರೂ ಅಭಿನಂದಿಸಬೇಕು. ಕಾಲವೇ ಹಾಗಿದೆ! ಅಪ್ರಿಯವಾದ, ಅಪರಿಚಿತ ಸತ್ಕಾರ್ಯಗಳನ್ನೇ ಅದೀಗ ಎಲ್ಲರಿಂದಲೂ ಮಾಡಿಸುತ್ತಿದೆ. ತಮ್ಮನ್ನು ಅದು ಬಿಡಲಿಲ್ಲವೆಂದಷ್ಟರಿಂದಲೇ ಪಾನಾಭ್ಯಾಸಿಗಳು ಸಮಾಧಾನ ಪಡಬೇಕು. ಇದೊಂದು ಅನಿವಾರ್ಯ ಅವಶ್ಯವೆಂದು ಭಾವಿಸಿದರೂ, ಇನ್ನು ಕಾಲೋಚಿತವಾಗಿ ವರ್ತಿಸಬೇಕು. ಇನ್ನೀ ನಿಷೇಧದ ಕುರಿತು ಯಾವ ವಿಧದ ವಂಚನೆಗೂ ಅವಕಾಶ ಕೊಡಕೂಡದು; ಕಳ್ಳ ಶರಾಬು, ಮತ್ತಿತರ ಅಮಲು ಪಾನೀಯಗಳು ಹಾಗೂ ಸಾಮಗ್ರಿಗಳು, ಅವುಗಳ ಹಕ್ಕಿನ ಸ್ಥಳಗಳಿಂದ ಮಾಯವಾದಂತೆಯೇ, ಅಸಂಬಂಧದ ವಾಸನೆಯು ಎಲ್ಲಾ ಹೃದಯಗಳಿಂದಲೂ ಮಾಯವಾಗಬೇಕು. ಈಗ ನಾವು ದಾಟಿಬಂದ ಆ ಅಮಲು ಯುಗದ ಕಡೆಗೆ ಇನ್ನು ಯಾರೂ ಯಾವ ರೀತಿಯಿಂದಲೂ ಹಿಂದೆ ನೋಡಕೂಡದು. ಈ ಕುರಿತು ಎಲ್ಲರೂ ದೃಢ ಶಪಥ ತೊಡಲಿ; ಈಗ ಆರಂಭಿಸಿರುವ ನಿರ್ಮಲ ಯುಗವು ಪೂರ್ಣ ನಿಷ್ಕಲಂಕವಾಗಿರಲಿ!

ಒಕ್ಟೋಬರ್ ೨

ತಾ. 2-10-47 ಗಾಂಧಿಜೀಯ 79ನೇ ಹುಟ್ಟು ಹಬ್ಬ. ಹಿಂದೀಯರು ಎಲ್ಲಕ್ಕಿಂತ ಹೆಚ್ಚಾಗಿ ಹೆಗ್ಗಳಿಕೆ ಪಡಬಹುದಾದ, ಅವರ ಪಾಲಿನ 'ಅಮೂಲ್ಯ ವಸ್ತು'ವಿಗೆ ಸಂಬಂಧಿಸಿದ ದೊಡ್ಡದಿನ. ಗಾಂಧಿಜೀಯ ಕ್ಷೇತ್ರವಿಂದು ಬೆಳೆದಿದೆ; ಜಗತ್ತೇ ಅವರದಾಗಿದೆ. ಆದರೆ ಈ ಮಹಾ ಪುರುಷನ ಇಳಿಯಾವಧಿ ದೇಶಬಂಧುಗಳ ರಂಗಮಾತ್ರ ಕಿರಿದುಗೊಂಡು ಜಾತೀಯತೆಯ ಗಡಿಯೊಳಗಿದೆ. ಗಾಂಧಿಜೀ ಎತ್ತರಕ್ಕೇರಿದ್ದಾರೆ; ಅಪರ ರಾಷ್ಟ್ರ ಅಧೋಗತಿಗಿಳಿದಿದೆ. ಈ ವರುಷದ ಶಾಂತಿ ಪಾಲಕರ ಪಾಲಿನ ನೋಬೆಲ್ ಬಹುಮಾನಕ್ಕೆ ಗಾಂಧಿಜೀಯ ಹೆಸರು ಸೂಚಿಸಲ್ಪಟ್ಟಿದೆ. ಆದರೆ ನೋಬೆಲ್ ಮಹಾಶಯನಿಗೂ ಸ್ಪರ್ಧೆಯಿದ್ದು ವರುಷದ ಅಶಾಂತಿಗೊಂದು ಉಡುಗೊರೆಯನ್ನು ಇಡುವವರಿರುತ್ತಿದ್ದರೆ, ಅದೀ ಭಾರಿ ನಿಜಕ್ಕೂ ಭಾರತಕ್ಕೆ ದೊರೆಯುತಿತ್ತು! ನಮ್ಮ 'ರಾಷ್ಟ್ರಜನಕ' ಮತ್ತು ರಾಷ್ಟ್ರದೊಳಗೆ ಇಂದು ಅಂತಹ ಅಂತರವಿದೆ. ಇದಕ್ಕಾಗಿ ಭಾರತ ರಾಷ್ಟ್ರವಿಂದು ಪಶ್ಚಾತ್ತಾಪಪಡದೆ ನಿರ್ವಾಹವಿಲ್ಲ. ಆ ಪಶ್ಚಾತ್ತಾಪ ಪಡುವದಕ್ಕಾದರೂ—ಲಜ್ಜೆಯನ್ನು ಪ್ರದರ್ಶಿಸುವದಕ್ಕಾದರೂ—ಒಂದು ದಿನ ಬೇಕು. ಆ ದಿನ ಇದೇ ಒಕ್ಟೋಬರ್ 2ನೇ ತಾರೀಕು. ಗಾಂಧಿಜೀಯ ಕನಸಾಗಿದ್ದುದು ಸ್ವರಾಜ್ಯ; ಆದರೆ ಇಂದು ಇಲ್ಲಿರುವಂತಹ 'ಸ್ವರಾಜ್ಯ'ವಲ್ಲ; ತನ್ನ ಇಚ್ಛೆ ಕೈಗೂಡಿತೆಂಬುದನ್ನು ಗಾಂಧಿಜೀಯೊಪ್ಪುವದಿಲ್ಲ. ಅವರ ಸ್ವರಾಜ್ಯ ಯಾನೆ ರಾಮರಾಜ್ಯದಲ್ಲಿ ಬಹಳವಿರಬಹುದು; ಅಲೌಕಿಕಗಳೂ ಸೇರಿರಬಹುದು. ಆದರೆ ಗಾಂಧಿಜೀ ತನ್ನನ್ನೂ ರಾಷ್ಟ್ರವನ್ನೂ ಅಳೆದು ನೋಡಿಕೊಳ್ಳಲು ತಿಳಿಯದ ಮನುಷ್ಯನೇನೂ ಅಲ್ಲ ವ್ಯವಹಾರ್ಯವಾವುದು, ಅವ್ಯವಹಾರ್ಯವಾವುದೆಂಬುದನ್ನು ಅವರು ಬಲ್ಲರು. ರಾಷ್ಟ್ರಕ್ಕೂ ಈ ತಾರತಮ್ಯ ಗೊತ್ತಿದೆ. ಗಾಂಧಿತ್ವ—ರಾಷ್ಟ್ರೀಯತೆ, ಇವೆರಡರೊಳಗೆ ಭಿನ್ನತೆಯಿಲ್ಲದ, ಮತ್ತು ಇಂದು ಅತ್ಯಗತ್ಯವಾಗಿರುವ ಮುಖ್ಯ ವಿಷಯವೆಂದರೆ ಶಾಂತಿಸ್ಥಾಪನೆ; ಜನಜೀವನದ ಅಭಿವೃದ್ಧಿಸಾಧನೆ. 'ರಾಷ್ಟ್ರಜನಕ'ನ ಈ ಹುಟ್ಟುಹಬ್ಬದಲ್ಲಿ ಸರ್ವಥಾ ಲಕ್ಷ್ಯಕೊಡಬೇಕಾದುದು ಈ ಕಡೆಗೇನೇ. ಗಾಂಧಿಜೀ—79ರ ಹಳಬ–ಕಳೆದ ಅರ್ಧ ಶತಮಾನದಿಂದ ತನ್ನ ಆಯುಷ್ಯದ ಪ್ರತಿಯೊಂದು ಕ್ಷಣ ಮತ್ತು ತನ್ನ ಶಕ್ತಿಯ ಪ್ರತಿಯೊಂದು ಕಣವನ್ನೂ ಜನತಾ ಸೇವೆಗೆ ವ್ಯಯಿಸಿರುವ ಮಹಾತ್ಮ–ಇಂದು ತನ್ನ ಜೀವನ್ಮರಣದ ಪ್ರಶ್ನೆಯಾಗಿ ಮಾಡಿರುವುದೂ ಶಾಂತಿ ಸ್ಥಾಪನೆಯೊಂದನ್ನೇ. ಎಲ್ಲರೂ ಇದನ್ನು ಲಕ್ಷ್ಯದಲ್ಲಿಡಲಿ; ಗಾಂಧೀ ಜಯಂತಿ ಅದಕ್ಕನುಗುಣವಾಗಿ ಆಚರಿಸಲ್ಪಡಲಿ.

(೫ನೇ ಪುಟದಿಂದ)

ಪೋಲೀಸ್, ಸೇನೆ, ಯಾವುದೂ ಇರಲಾರದು. ಆದರೆ ಭಾರತ ಸರಕಾರವನ್ನೀಗ ನಾನು ನಡೆಯಿಸುವದಲ್ಲ. ಸಂಭವನೀಯ ಸಂಗತಿಗಳನ್ನಷ್ಟೇ ನಾನು ತೋರಿಸಿಕೊಟ್ಟಿದ್ದೇನೆ" ಎಂದು ಗಾಂಧಿಜೀಯ ಉತ್ತರ.

ಸಹಾಯಕ್ಕಾಗಿ ಬ್ರಿಟನಿಗೆ ಪಾಕಿಸ್ತಾನದ ಮೊರೆ

ಈ ಸಂದರ್ಭದಲ್ಲಿ ಪಾಕಿಸ್ತಾನವು ತನ್ನ ಮುಖದ ಬಣ್ಣ ತನಗೇನೇ ಕಾಣಲಾಗುವಂತಹ ಕೈಗನ್ನಡಿಯೊಂದನ್ನು ಹಿಡಿದ ನಿದರ್ಶನವೊಂದು ಬೆಳಕಿಗೆ ಬಿದ್ದಿದೆ ತನಗೊದಗಿರುವ ಜಾತೀಯ ಸಮಸ್ಯೆಗಳ ಕುರಿತು ತನ್ನೆಲ್ಲಾ ಅಭಿಪ್ರಾಯಗಳನ್ನು ನಿವೇದಿಸಿಕೊಂಡು, ಅವರ ನಿವಾರಣೆಯ ಉಪಾಯಗಳನ್ನು ಸೂಚಿಸಿ ಸಹಾಯಕೊಡಬೇಕೆಂದೂ, ಈ ಬಿನ್ನಹವನ್ನು ಭಾರತ ಸಮೇತ ವಸಾಹತುಗಳಿಗೆ ಮುಟ್ಟಿಸಬೇಕೆಂದೂ ಪಾಕಿಸ್ತಾನ್ ಸರಕಾರವು ಬ್ರಿಟಿಷ್ ಸರಕಾರವನ್ನು ಅಧಿಕೃತವಾಗಿ ಕೇಳಿಕೊಂಡಿದೆ. ಅಂತೆಯೇ ಲಂಡನ್ ಸರಕಾರವು ಕೆನಡಾ, ಆಸ್ಟ್ರೇಲಿಯಾ, ನ್ಯೂಜೀಲೆಂಡ್, ದಕ್ಷಿಣಾಫ್ರಿಕ, ಮತ್ತು ಭಾರತ ಸರಕಾರಗಳಿಗದನ್ನು ರವಾನಿಸಿದೆ. ಭಾರತ ಸರಕಾರವು ಇದಕ್ಕುತ್ತರವಾಗಿ ತನ್ನ ಸುಯೋಚಿತ ಅಭಿಪ್ರಾಯಗಳನ್ನು ಲಂಡನ್ ಸರಕಾರಕ್ಕೆ ಕಳುಹಿಸಿಯದೆ. ಅದನ್ನೂ ಬ್ರಿಟಿಷ್ ಸರಕಾರವು ಮೇಲಿನ ಎಲ್ಲಾ ವಸಾಹತುಗಳಂತೆಯೇ ಪಾಕಿಸ್ತಾನ್ ಸರಕಾರಕ್ಕೂ ಕಳುಹಿಸಿದೆ. ಈ ರೀತಿ ಭಾರತ– ಪಾಕಿಸ್ತಾನಗಳೆರಡರ ವಾದಸರಣಿಯೂ ಎಲ್ಲಾ ವಸಾಹತುಗಳಿಗೂ ಸ್ಪಷ್ಟವಾಗಿ ತಿಳಿದು ಬಂದು ಈಗ ಅವುಗಳೊಳಗೆ ಪರಸ್ಪರ ಪರ್ಯಾಲೋಚನೆಗಳು ನಡೆದಿವೆ. ಪಾಕಿಸ್ತಾನ್ ಸರಕಾರವು ತನ್ನ ನೆರೆಯ ಧರ್ಮಬಂಧು ರಾಷ್ಟ್ರಗಳಿಂದ ಸೇನಾ ಸಹಾಯ ಕೇಳಿದೆ ಎಂಬ ಸುದ್ದಿ ಹರಡಿದೆಯಾದರೂ ಅದು ದೃಢಪಟ್ಟಿಲ್ಲ.

NOTICE

Notice having been given of Share Certificate Nos. 225 and 394 relating to share Nos. 535-539 and 2017-2036 respectively, issued by this Company in the name of Mrs. N. Meenakshi Heggadthi, wife of Mr. M. Ramanna Shetty, Sharada Bhavan, Court Road, Udipi (S. K.) duplicate share certificates will be issued unless any objection is lodged with us within one month from the date thereof.

K. H. Shetty,
Managing Director.
Navayuga Enterprise Ltd,
Udipi, 30-9-1947

ಪ್ರಕಟಣೆ

ಶಿರ್ವ ಪಂಚಾಯತ ಕೋರ್ಟಿನಲ್ಲಿ

ಸಿ. ವ್ಯಾ. ನಂ 11/1947

ಕೈತಾನ ದೇಸ, ಅಲೇಸ ದೇಸರ ಮಗ ಉಡುಪಿತಾಲ್ಲೂಕು ಬೆಳ್ಳೆ ಗ್ರಾಮದಲ್ಲಿರುವವ– ವಾದಿ.

ಗುಸ್ತಿನ ಮೆಂಡೋಸ, ಫ್ರಾನ್ಸಿಸ್ ಮೆಂಡೋಸರ ಮಗ, ಉಡುಪಿತಾಲ್ಲೂಕು ಬೆಳ್ಳೆ ಗ್ರಾಮದಲ್ಲಿರುವವ– ಪ್ರತಿವಾದಿ

ಈ ಮೂಲಕ ತಿಳಿಯಪಡಿಸುವದೇನಂದ್ರೆ ಮೇಲ್ಕಂಡ ವ್ಯಾಜ್ಯದ ಪ್ರತಿವಾದಿಗೆ ಬುದ್ಧಿಸ್ವಸ್ಥತೆ ಇಲ್ಲದ್ದರಿಂದ ಪ್ರತಿವಾದಿಯ ಮಗಳ ಗಂಡ ಇನಾಸ ಕೋಡ್ಡ ಯೆಂಬವನು ಪ್ರತಿವಾದಿಸ್ಥಾನಕ್ಕೆ ಗಾರ್ಡಿಯಾನೆ ಆಗಿ ಹಾಜರಾಗಿರುತ್ತಾನೆ. ಆಬಾಬ್ತು ಪ್ರತಿವಾದಿಯ ಸಂಬಂಧಿಕರ ಪೈಕಿ ಯಾರಾದರೂ ಆಕ್ಷೇಪಣೆಕೊಡುವವರಿದ್ದರೆ ಈ ವ್ಯಾಜ್ಯವು ತನಿಖೆಗಿಟ್ಟ ತಾ 25-10-47ನೇ ಪೂರ್ವಾಹ್ನಕ್ಕೆ ಈ ಕೋರ್ಟಿನಮುಂದೆ ಹಾಜರಾಗತಕ್ಕದ್ದು. ತಪ್ಪಿದ್ರೆ ನಿಮ್ಮ ಉಜೂರು ಶಿವಾ ಗಾರ್ಡಿಯನ್ ಹೇಳ್ಕೆಯಂತೆ ತೀರ್ಮಾನಿಸಲಾದೀತು.

ಕೆ. ಕುಮಾರ ಹೆಗ್ಡೆ,
ವೈಸ್-ಪ್ರೆಸಿಡೆಂಟ್,

ತಾ 27-9-1947

ಚರ್ಚಿಲ್ಲರಿಗೆ ಗಾಂಧಿಜೀಯ ಉತ್ತರ

ಮೈಸೂರು ಮಹಾರಾಜರ ಜಾಹೀರು ನಾಮೆ

ಮೈಸೂರು ಮಹಾರಾಜರು ಭಾವೀ ಸುಧಾರಣೆಗಳ ಸಂಬಂಧದ ಒಂದು ಜಾಹೀರು ನಾಮೆಯನ್ನು ಸೆಪ್ಟೆಂಬರ್ ತಾ. 24ರಲ್ಲಿ ಹೊರಡಿಸಿದ್ದಾರೆ. ಸುಧಾರಣಾ ಸೂಚನೆಗಳು ದಿವಾನರು ನೇಮಿಸಿದ್ದ 'ಪರ್ಯಾಲೋಚನಾ ಸಮಿತಿ' ಕೊಟ್ಟಿದ್ದ ಸಲಹೆಗಳಂತೆಯೇ ಇವೆ. ಸಂಸ್ಥಾನದ ಅಧಿಕಾರ ಖಾತೆಗಳನ್ನು ಎರಡು ತಪ್ತೆಗಳನ್ನಾಗಿ ವಿಂಗಡಿಸಲಾಗಿದೆ. ಒಂದನೇ ತಪ್ತೆಯ ಅಧಿಕಾರಗಳೆಲ್ಲವೂ ಜನ ಪ್ರತಿನಿಧಿ ಮಂತ್ರಿಗಳ ವಶಕ್ಕೊಪ್ಪಿಸುವಂತಹದು; ಎರಡನೆಯ ತಪ್ತೆಯ ಎಲ್ಲಾ ಅಧಿಕಾರಗಳೂ ಸ್ವತಃ ಮಹಾರಾಜರ ಹಕ್ಕಿನವು. Iನೇ ತಪ್ತೆಯಲ್ಲಿ:—ಎರಡು ನ್ಯಾಯವಿಧಾಯಕ ಸಭೆಗಳು:-ಕೆಳಮನೆ ಮತ್ತು ಮೇಲ್ಮನೆ. ಕೆಳಮನೆಯ ಪ್ರತಿನಿಧಿಗಳೆಲ್ಲರೂ ಪ್ರಾಯಸ್ಥರೆಲ್ಲರ ಮತದಾನದಿಂದ ಆರಿಸಲ್ಪಟ್ಟವರೇ. ಮೇಲ್ಮನೆಗೆ ಕೆಲವಂತ ಚುನಾವಣೆ; ಕೆಲವಂತ ನೇಮಕ. ನ್ಯಾಯವಿಧಾಯಕ ಸಭೆಗಳಲ್ಲಿ ಹರಿಜನರಿಗೂ ಅಲ್ಪ ಸಂಖ್ಯಾಕ ಸಮಾಜಗಳಿಗೂ ಕಾದಿಟ್ಟ ಸ್ಥಾನಗಳಿವೆ. ಮಂತ್ರಿ ಸಮಿತಿಯನ್ನು ಜನ ಪ್ರತಿನಿಧಿಗಳಿಂದಲೇ ಆರಿಸಲಾಗುವದು. ಈ ಸಮಿತಿಯು ಮಂತ್ರಿಗಳು ಸಂಯುಕ್ತವಾಗಿ ಜತೆ ಜವಾಬ್ದಾರಿಯಿಂದ ಕಾರ್ಯಭಾರ ನಿರ್ವಹಿಸಬೇಕು. ಮಂತ್ರಿ ಮಂಡಲಿಯಲ್ಲೂ ಅಲ್ಪಸಂಖ್ಯಾಕರಿಗೆ ಸಾಧ್ಯವಿದ್ದಷ್ಟು ಸ್ಥಾನಗಳನ್ನು ಕೊಡಲಾಗುವದು. ಮಂತ್ರಿ ಸಮಿತಿಯು ಜನ ಪ್ರತಿನಿಧಿ ಸಭೆಗೆ ಜವಾಬ್ದಾರಿಯಾಗಿರಬೇಕು. ಅಲ್ಲಿ ಅವಿಶ್ವಾಸ ಮಂಜೂರಾದರೆ ರದ್ದಾಗಬೇಕು. IIನೇ ತಪ್ತೆಯಲ್ಲಿಲ್ಲದ ಅಧಿಕಾರಗಳೆಲ್ಲವೂ ಈ ಮಂತ್ರಿಗಳಿಗಿವೆ. IIನೇ ತಪ್ತೆ:—ಪೂರ್ಣವಾಗಿ ಮಹಾರಾಜರ ಹಕ್ಕಿನದಾಗುವ ಈ ವಿಭಾಗದಲ್ಲಿ ರಾಜ ಮನೆತನದವರ ವಿಶಿಷ್ಟ ಸ್ಥಾನಮಾನಗಳು, ರಾಜ ಕುಟುಂಬ, ಸಿಂಹಾಸನದ ವಾರಿಸ್ದಾರಿಕೆ, ಅರಮನೆ, ರಾಜಭಂಡಾರ, ಹಿಂದೀ ಕೇಂದ್ರದೊಡನೆ ಸಂಸ್ಥಾನಕ್ಕಿರುವ ನಿರ್ಧರಿತ ಹಾಗೂ ನಿರ್ಧಾರಕ್ಕೊಳಗಾಗದ ಎಲ್ಲಾ ಸಂಬಂಧಗಳು, ಹ್ಯಾಕೋರ್ಟು ಮತ್ತು ಜಜ್ಜರ ನೇಮಕಗಳು, ಪಬ್ಲಿಕ್ ಸರ್ವಿಸ್ ಕಮಿಶನಿನ ಸದಸ್ಯರ ಹಾಗೂ ಅಧ್ಯಕ್ಷರ ನೇಮಕಗಳು, ಆಡಿಟರ್ ಜನರಲರ ನೇಮಕ, ಸೇನೆ, ಅಲ್ಪ ಸಂಖ್ಯಾಕರ ಹಕ್ಕು ಬಾಧ್ಯತೆಗಳ ರಕ್ಷಣೆ, ನ್ಯಾಯ ವಿಧಾಯಕ ಸಭೆಗಳನ್ನು ಕರೆಯುವುದು ಮತ್ತು ಬರ್ಖಾಸ್ತುಗೊಳಿಸುವದು, ಚುನಾವಣೆಗಳ ಮೇಲ್ತನಿಖೆ, ಜಕೋಟಿ ಮತ್ತು ನಿರ್ದೇಶಕತ್ವ, ರಾಜ್ಯ ಶಾಸನ ನಿಂತಾಗಿನ ಎಲ್ಲಾ ವಿಶೇಷಾಧಿಕಾರಗಳು ಮತ್ತು ಶೇಷಾಧಿಕಾರಗಳು-ಇತ್ಯಾದಿಗಳೆಲ್ಲಾ ಸೇರಿವೆ.

ಚರ್ಚಿಲ್ಲರ ಟೀಕೆ

ಮಿ. ಚರ್ಚಿಲ್ಲರು "ಭಾರತದಲ್ಲೀಗ ನಡೆದಿರುವ ಅತಿ ಭೀಕರ ಸಾಮೂಹಿಕ ಧ್ವಂಸಕೃತ್ಯವು ನನ್ನಲ್ಲಾವ ಆಶ್ಚರ್ಯವನ್ನೂ ನಿರ್ಮಿಸಿಲ್ಲ. ಬ್ರಿಟಿಷರ ಆಳ್ವಿಕೆಯಡಿಯಲ್ಲಿ ಕಳೆದ 60–70 ವರುಷದಿಂದ ಆಸ್ಯಾದ ಅತ್ಯಂತ ಶಾಂತ ಭಾಗವಾಗಿದ್ದ ಆ ಭೂಖಂಡವು ಭವಿಷ್ಯದಲ್ಲಿ ಇನ್ನಷ್ಟು ಜನಹಾನಿ ಹೊಂದಲಿದೆ ಎಂಬ ಕುರಿತು ನನಗನುಮಾನವಿಲ್ಲ. ನಾವೀಗ ಈ ಭೀಕರ ಸಂಹಾರ ಕೃತ್ಯಗಳ ಆರಂಭವನ್ನಷ್ಟೇ ಕಾಣುತ್ತಿದ್ದೇವೆ" ಎನ್ನುತ್ತಾ ಬ್ರಿಟಿಷ್ ಆಡಳಿತೆಯ ಬರ್ಖಾಸ್ತಾದುದು-ಮತ್ತದನ್ನು ಮಾಡಿದ್ದ ಬ್ರಿಟನಿನ ಲೇಬರ್ ಸರಕಾರ-ಈ ಮಹಾ ಪ್ರಮಾದಕ್ಕೆ ಹೊಣೆಯೆಂಬಂತೆ ಹಂಗಿಸಿ ಮಾತಾಡಿದ್ದರು.

ಗಾಂಧಿಜೀಯ ಉತ್ತರ

ಗಾಂಧಿಜೀ ಇದೇ ತಾ 28ರಲ್ಲಿ ಚರ್ಚಿಲ್ಲರಿಗುತ್ತರವಿತ್ತಿದ್ದಾರೆ. ಗಾಂಧಿಜೀಯ ಮಾತು: "ಬ್ರಿಟನು ಪ್ರಸಂಗಾವಧಾನತೆಯನ್ನು ಪ್ರದರ್ಶಿಸಿತು; ಸ್ವಯಂ ಪ್ರೇರಣೆಯಿಂದ ಸಾಮ್ರಾಜ್ಯವನ್ನು ಬರ್ಖಾಸ್ತು ಪಡಿಸಿಕೊಂಡಿತು; ಆದರೆ ಅದರ ಸ್ಥಾನದಲ್ಲಿ ಅಪ್ರತ್ಯಕ್ಷವಾದ ಮತ್ತು ವಿಶೇಷ ಕೀರ್ತಿದಾಯಕವಾದ ಹೃದಯ ಸಾಮ್ರಾಜ್ಯ ನನ್ನೀಗ ನಿಲ್ಲಿಸಿದೆ. ಈ ಘನ ಹೆಜ್ಜೆಯನ್ನಿಟ್ಟುದು ಎಲ್ಲಾ ಪಕ್ಷಗಳನ್ನೊಳಗೊಂಡ ಬ್ರಿಟಿಷ್ ರಾಜ್ಯವೇ. ಮಿ. ಚರ್ಚಿಲ್ ಮತವರ ಪಕ್ಷವೂ ಇದರಲ್ಲಿ ಸಹಭಾಗಿಗಳೇ. ಭಾವೀ ಪರಿಣಾಮವೇನಾಗಬಹುದೆಂಬುದು ಇಲ್ಲಿಯ ವಿಷಯಕ್ಕೆ ಸಂಬಂಧಿಸಿದುದಲ್ಲ. ಆದರೀ ಅಧಿಕಾರ ಬದಲಾವಣೆಯ ಪಾಲು ವಹಿಸಿದ್ದ ಚರ್ಚಿಲ್ಲರೇ ಅದರ ಗುಣಭಂಗ ಮಾಡುವ ಮಾತುಕೃತಿಗಳನ್ನು ಪ್ರದರ್ಶಿಸುವದು ಅನಿರೀಕ್ಷಿತ. ತಾನು ಯಾವ ರಾಷ್ಟ್ರದ ಮಹಾ ಸೇವಕನೋ ಆ ರಾಷ್ಟ್ರಕ್ಕೇನೇ ಈ ಮೂಲಕ ಚರ್ಚಿಲ್ಲರು ದ್ರೋಹ ಮಾಡಿದಂತಾಗಿದೆ. ಬ್ರಿಟಿಷ್ ನೊಗ ಜಾರಿ ಭಾರತವು ಸ್ವತಂತ್ರವಾದ ಕೂಡಲೇ ಭಾರತಕ್ಕೊದಗುವ ಅದೃಷ್ಟವಿಂತಹದೆಂಬುದು ಚರ್ಚಿಲ್ಲರಿಗೆ ತಿಳಿದಿದ್ದರೆ ಇದರ ಹೊಣೆಯು, ಅವರ ಅಭಿಪ್ರಾಯದ ಈ "ಉಚ್ಚ ಸಂಸ್ಕಾರದ ತಿರುಳಿದ್ದ" ಜನತೆಯದಾಗಿರದೆ, ಸ್ವತಃ ಆ ಸಾಮ್ರಾಜ್ಯ ಸ್ಥಾಪಕರದೇ ಎಂಬುದನ್ನೂ ಅವರೊಂದು ಕ್ಷಣವಾದರೂ ಯೋಚಿಸಿದ್ದಿದೆಯೆ? ಚರ್ಚಿಲ್ಲರು ಅತ್ಯವಸರವಾಗಿ ಗಲಭೆಗೆ ಸಾಮೂಹಿಕ ಸರ್ವವ್ಯಾಪೀ ರೂಪ ತೊಟ್ಟಿದ್ದಾರೆ. ಮಿಲಿಯಾಂತರ ಜನತೆಯಿಂದ ತುಂಬಿರುವ ಭಾರತದಲ್ಲಿ ಕೆಲವೇ ಲಕ್ಷ ಮಂದಿ ದಂಗೆಗೆದ್ದುದು ಅಗಣ್ಯ ವಿಷಯ. ಮಿ. ಚರ್ಚಿಲ್ಲರು ಭಾರತಕ್ಕೆ ಬರಲಿ; ಪಕ್ಷಪಾತ ದೃಷ್ಟಿಯಿಂದಲ್ಲ, ನಿಷ್ಪಕ್ಷಪಾತಿ, ಗೌರವದಾಯೀ ಬ್ರಿಟಿಷರವನಾಗಿ ಪರಿಸ್ಥಿತಿಯನ್ನು ಅಭ್ಯಾಸಿಸಲಿ. ಬ್ರಿಟಿಷ ಅಸಾಧಾರಣ ಕೃತ್ಯಗಳ ಮೇಲು ಕೀಳನ್ನರಿಯಬೇಕು ಪರಿಣಾಮದ ಮೇಲಿಂದಲೇ. ಭಾರತವನ್ನು ವಿಭಾಗಿಸಿ ಹಾಕಿದುದರಿಂದ ಅದುಇಕ್ಕಡೆಯವರಲ್ಲೂ ಪ್ರತ್ಯೇಕತೆ ಹೋರಾಟ ಸ್ಫೂರ್ತಿಯನ್ನು ಹುಟ್ಟಿಸಿತು. ಎರಡು ಭಾಗಗಳನ್ನು ಸಹೋದರ ವಸಾಹತುಗಳೆಂದಿಟ್ಟು ಸ್ವಾತಂತ್ರ ಕೊಟ್ಟುದೇ ಆ ದಾನಕ್ಕೊಂದು ಕಳಂಕವಾದಂತಾಗಿದೆ. ಆದರೆ ನಮ್ಮ ಜನರೇ ಚರ್ಚಿಲ್ಲರ ಕೈಗೀ ಹಿಡಿಯನ್ನು ಕೊಟ್ಟರು. ಅವರು ಇನ್ನಾದರೂ ತಮ್ಮ ನಡತೆಗಳನ್ನು ತಿದ್ದಿಕೊಂಡು ಚರ್ಚಿಲ್ಲರಾಡಿದ ಭವಿಷ್ಯವನ್ನು ಹುಸಿಗೊಳಿಸಬೇಕು".

ಪ್ರಕಟಣೆ

ಶಿರ್ವ ಪಂಚಾಯ್ತ ಕೋರ್ಟಿನಲ್ಲಿ

ಶಿ. ವ್ಯಾ, ನಂ. 18/1947

ಅಂಣಯ್ಯ ಸೆಟ್ಟಿ, ಹಿಂದೂ ಹ್ಯಾಸ್ಕೂಲು, ಮಾಸ್ತರ್, ಶಿರ್ವ.

ಮೂಜೆ ರೇಸ, ಗುಂಪ್ರಿನ ಶೇಸರ ಮಗ, ಶಿರ್ವ ಗ್ರಾಮದ ಪಡ್ಡುಕಟ್ಟು ಎಂಬಲ್ಲಿಯವನು-ಪ್ರತಿವಾದಿ.

ಸದ್ರಿ ಪ್ರತಿವಾದಿ ಮೂಜೆ ರೇಸನಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ ವಾದಿ … ಗಿ ಬರಕೊಟ್ಟ ಡಿ-ನೋಟಿನ ಸಾಲದ ಬಾಬ್ತು ವಾದಿಯು ಈ ಕೋರ್ಟಿನಲ್ಲಿ ವ್ಯಾಜ್ಯ ದಾಖಲುಮಾಡಿರುತ್ತಾನೆ. ಪ್ರತಿವಾದಿಯು ಪರಊರಿಗೆ ಹೋಗಿದ್ದಾನಾಗಿ ತಳಿಯೂ ತಿರ್ಕೈಟಸಿನಲ್ಲಿ ಕಂಡುಬರುವದ್ರಿಂದ ವಾದಿಯು ಗಜೆಟು ನ್ಯಾಸು ಮಾಡಬೇಕಾಗಿ ಅರ್ಜಿ ಬರಕೊಂಡ ಮೇರೆಗೆ ಸದ್ರಿ ವ್ಯಾಜ್ಯದ ತನಿಖೆ 25-10-47ನೇ ಪೂರ್ವಾಹ್ನಕ್ಕೆ ಇಟ್ಟಿರುತ್ತಾರೆ. ನಿನ್ನ ಆಕ್ಷೇಪಗಳೇನೂ ಇದ್ದರೆ ಸದ್ರಿ ತಾರೀಕಿಗೆ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದ್ರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು.

ಕೆ. ಕುಮಾರ ಹೆಗ್ಡೆ

ವೈಸ್ ಪ್ರೆಸಿಡೆಂಟ್.

ತಾ. 27-9-1947



Approved firm by the Govt. of Mysore
Certified by the Agent of the Govt. of Ceylon & India.

ಉಡುಪಿ.

ಪಾನ ನಿಷೇಧ ದಿನಾಚರಣೆ— ಪಾನನಿರೋಧ ಸಮಾರಂಭದ ಸಭೆಯು ಇದೇ ತಾ. 1ರಲ್ಲು ಸ್ಥಳೀಯ ಬೋರ್ಡ್ ಹ್ಯಾಸ್ಕೂಲ್ ಹೀಪಲ್ಸ್ ಹಾಲಿನಲ್ಲಿ ಶ್ರೀ. ಸದಾನಂದ ಪೈ, ತಹಶಿಲ್ದಾರ್ ಅವರ ಅಧ್ಯಕ್ಷತೆಯಲ್ಲಿ ಬೆಳಗ್ಗೆ ಜರಗಿತು. ಮಿ. ಆರ್. ಫೆರ್ನಾಂಡಿಸ್, ಶ್ರೀಮತಿ ಪಾರ್ವತಿ ಬಾಯಿ, ಶ್ರೀಗಳಾದ ಕೆ. ಸಿ. ಶೆಣೈ, ಎಸ್. ಆರ್. ಕೊರಡ್ಕಲ್ ಮತ್ತು ಜನಾಬ್ ಎಮ್. ಡಿ. ಉಸ್ಮಾನ್ ಸಾಹೇಬರು ಭಾಷಣ ಮಾಡಿದರು. ರಾಷ್ಟ್ರ ಸೇವಾ ದಳದವರು ಸುಶ್ರಾವ್ಯವಾಗಿ ತುಳು ಲಾವಣಿ ಹಾಡಿದರು. ಸಭಾರಂಭದ ಮುನ್ನ ಸರ್ವ ಶಾಲಾಮಕ್ಕಳು ಮುತ್ತಿತರರು ಕೂಡಿಕೊಂಡು ಪ್ರಚಂಡ ಮೆರವಣಿಗೆಯಿತ್ತು. ಮಕ್ಕಳಿಗೆ ಲಾಡು ಹಂಚಲಾಯಿತು.

ಹೊಸ ಮಾಸಪತ್ರಿಕೆ— ಶ್ರೀ. ಅ. ವ್ಯಾಸರಾಯರ ಪ್ರಧಾನ ಸಂಪಾದಕತ್ವದಲ್ಲಿ 'ಪ್ರಕಾಶ'ವೆಂಬ ಮಾಸಪತ್ರಿಕೆಯು ಪ್ರಾರಂಭವಾಗಿದೆ. ಇದರ ಚಿತ್ತಾಕರ್ಷಕವಾದ ಪ್ರಥಮ ಸಂಚಿಕೆಯು ನಿನ್ನೆ ಪ್ರಕಟವಾಗಿದೆ.

ಮುನಿಸಿಪಲ್ ಚುನಾವಣೆ— ಸ್ಪರ್ಧೆ ಇದ್ದ ಎರಡು ವಾರ್ಡುಗಳ ಚುನಾವಣೆಯು ತಾ 29-9-47ರಲ್ಲು ನಡೆಯಿತು, ತಾ 30ರಲ್ಲು ಮತಗಣನೆಯಾಯಿತು. ಮೂಡನಿಡಂಬೂರು ವಾರ್ಡಿನಲ್ಲಿ ಶ್ರೀಗಳಾದ ಎಚ್. ಎನ್. ನಾಯಕ್ ಮತ್ತು ಡಾ। ಕೆ. ಎನ್. ಸುವರ್ಣರಲ್ಲಿ ಮೊದಲನೆಯವರೂ ಗುಂಡಿಬೈಲು ವಾರ್ಡಿನಲ್ಲಿ ಶ್ರೀಗಳಾದ ಯು. ಕೇಶವ ಕಾಮತ್ ಮತ್ತು ಬಿ. ಲಕ್ಷ್ಮೀನಾರಾಯಣಾಚಾರ್ಯರಲ್ಲಿ ಮೊದಲನೆಯವರೂ ಪ್ರಬಲ ಬಹುಮತದಿಂದ ಆರಿಸಿಬಂದಿರುವರು. ಇನ್ನು ನಡೆಯಲಿರುವ ಅಧ್ಯಕ್ಷರ ಚುನಾವಣೆಗೆ ಶ್ರೀ ಹಾಂಗಾಳ ಉಪೇಂದ್ರ ನಾಯ್ಕರು ಉಮೇದ್ವಾರರೆಂದು ತಿಳಿದುಬರುತ್ತದೆ.

ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಮೈಸೂರ ದಬ್ಬಾಳಿಕೆಯನ್ನು ನಿಷೇಧಿಸುವರೆ ತಾ ೩೦ರಲ್ಲು ಸಂಜೆ ರಥಬೀದಿಯಲ್ಲಿ ಶ್ರೀ ರಾಘವನ್ ರವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು, ಮೈಸೂರು, ಮಂಗಳೂರವರ ಭಾಷಣಗಳಾದುವು. ಮಜೂರರ 'ಜಾತಾ' ವೊಂದನ್ನು ಮೈಸೂರಿಗೆ ಕಳುಹಿಸಬೇಕಾಗಿಯೂ ಧನ ಸಂಗ್ರಹಿಸಿ ಕಳುಹಿಸಬೇಕಾಗಿಯೂ ನಿರ್ಣಯಗಳಾದುವು.

ಆಭಾರ ಮನ್ನಣೆ

ಗುಂಡಿಬೈಲು ವೋಟರರಲ್ಲಿ

ಈ ವಾರ್ಡಿನ ಹಲವು ಮತದಾರರ ಸೂಚನೆಯನ್ನು ಮನ್ನಿಸಿ ಗುಂಡಿಬೈಲು ವಾರ್ಡಿನಿಂದ ಓರ್ವ ಉಮೇದ್ವಾರನಾಗಿ ನಿಂತಿದ್ದು ಕಳೆದ ತಾ ೨೯ರಲ್ಲಿ ನಡೆದ ಮುನ್ಸಿಪಲ್ ಚುನಾವಣೆಯಲ್ಲಿ ಶ್ರೀ ಗುರುದೇವತಾನುಗ್ರಹದಿಂದಲೂ ಮತದಾರರ ಹಾಗೂ ಇತರ ಮಹನೀಯರ ಸತ್ಸಹಕಾರದಿಂದಲೂ ಎಂಭತ್ತು ವೋಟುಗಳ ಪ್ರಚಂಡ ಬಹುಮತದಿಂದ ಆರಿಸಿ ಬಂದಿರುವ ನಾನು ಈ ಸಂದರ್ಭದಲ್ಲಿ ಸರ್ವರ ಉಪಕಾರವನ್ನು ಸ್ಮರಿಸಿ ಈ ಮೂಲಕ ಧನ್ಯವಾದಗಳನ್ನರ್ಪಿಸುತ್ತೇನೆ. ನಗರ ಸಭೆಯಲ್ಲಿ ಶಕ್ತಿಮೀರಿ ಜನತಾ ಜನಾರ್ದನನ ಸೇವೆ ಮಾಡಲು ಸಿದ್ಧನಿರುವೆನೆಂದು ನನ್ನನ್ನು ಪ್ರೋತ್ಸಾಹಿಸಿದ ಮತದಾರರೆಲ್ಲರಿಗೂ ಆಶ್ವಾಸನೆಕೊಡಲು ಸಂತೋಷ ಪಡುತ್ತೇನೆ.

ಕೇಶವಕಾಮತ್, ಉದ್ಯಾವರ.

ಗುಂಡಿಬೈಲು,
ಕಲ್ಸಂಕ, ತಾ. 1-10-47

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ತಾ. 28—9—47ರಿಂದ

ಪಾಂಚೋಲಿಯವರ

"ಕೈಸೇ ಕಹೂಂ"

ರಾಗಿಣಿ, ನಜಮ್ಮಾ, ಜಹಗೀರ್‌ದಾರ್,

ಮುಂದಿನ ಚಿತ್ರ

ವಾಡಿಯವರ

ಫೂಲವರಿ

ಜೀವರಜ್, ಕೃಷ್ಣನ್, ಮಧುರಮ್ಮಾ.

ಉಡುಪಿ.

ಕರ್ನಾಟಕ ಸಂಘ—ಇದೇ ಅಕ್ಟೋಬರ ದಿನಾಂಕ ೨೧ರಿಂದ ೨೪ರ ವರೆಗೆ ಸಂಘದ ವತಿಯಿಂದ ಬೋರ್ಡು ಹೈಸ್ಕೂಲು ಪೀಪಲ್ಸ್ ಹಾಲ್‌ನಲ್ಲಿ ನಡೆಯುವ ಸಾಹಿತ್ಯೋತ್ಸವ ಸಂದರ್ಭದಲ್ಲಿ ತಾ ೨೦ ಬೆಳಿಗ್ಗೆ ೯ ಗಂಟೆಗೆ ಕನ್ನಡ ಲೇಖನ ಸ್ಪರ್ಧೆ, ತಾ ೨೧ ಬೆಳಿಗ್ಗೆ 'ಅದೇ ಸಮಯಕ್ಕೆ ಪಂಡಿತ ವೆಂಕಟರಮಣಾಚಾರ್ಯ ಸ್ಮಾರಕ ಕನ್ನಡ ಭಾಷಣ ಸ್ಪರ್ಧೆ, ತಾ. ೨೨ರಂದು ಅದೇ ಹೊತ್ತಿಗೆ ಹಿಂದಿನ ಮತ್ತು ಇಂದಿನ ಕಾವ್ಯವಾಚನ ಸ್ಪರ್ಧೆ, ತಾ ೨೪ರಂದು ಹಾಗೆಯೇ ಪುರಂದರದಾಸಾದಿ ದಾಸ ಸಾಹಿತ್ಯದ ಹಾಡುಗಾರಿಕೆಯ ಸ್ಪರ್ಧೆ ಜರಗುವವು. ಕೊನೆಯದು ಶಾಲಾ ವಿದ್ಯಾರ್ಥಿನಿಯರಿಗೆ ಮಾತ್ರ. ಲೇಖನ ಸ್ಪರ್ಧೆ, ಕಾವ್ಯವಾಚನ ಸ್ಪರ್ಧೆಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಗಳು ಭಾಗವಹಿಸಬಹುದು. ಇವು ಯಾವುದಕ್ಕೂ ಯಾವ ತರದ ಪ್ರವೇಶ ಕಾಣಿಕೆ ತೆರಬೇಕಾಗಿಲ್ಲ. ಭಾಷಣ ಸ್ಪರ್ಧೆ ಅವರ ನಿಯಮಾವಳಿಯಾನುಸಾರ. ಎಲ್ಲ ಶಾಲೆಗಳವರು ಸಹಭಾಗಿಗಳಾಗಿ ಪ್ರೋತ್ಸಾಹಿಸಿರೆಂದು ಕಾರ್ಯನಿರ್ವಾಹಕ ಸಮಿತಿಯು ಆದರದ ಕರೆಯಿತ್ತಿದೆ. ಪ್ರತಿಯೊಂದು ಸ್ಪರ್ಧೆಯಲ್ಲಿ ಪ್ರಥಮ ದ್ವಿತೀಯ ಸ್ಥಾನಪಡೆದವರಿಗೆ ಸಂಭಾವನೆ ಇದೆ.

ಸ್ಪರ್ಧಿಗಳು ತಾ. ೧೫ರೊಳಗೆ ತಮ್ಮ ಅಪೇಕ್ಷಾ ಪತ್ರವನ್ನು ಸಂಘದ ಕಾರ್ಯದರ್ಶಿಗಳಿಗೆ ಮುಟ್ಟುವಂತೆ ಕಳುಹತಕ್ಕದ್ದು.

ಮಂಗಳೂರು.

ಮೈಸೂರು ಜೈಲಿನಿಂದ ಬಂದಿರುವ ಸತ್ಯಾಗ್ರಹಿಗಳು ತಾ. ೨೧ರಂದು ಸಂಜೆ ಕೇಂದ್ರ ಮೈದಾನಿನಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಶ್ರೀ ಬಿ. ವಿ. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಮಾತನಾಡುತ್ತ ಅಲ್ಲಿನ ಪರಿಸ್ಥಿತಿಯನ್ನು ವಿವರಿಸಿದರು. ಸತ್ಯಾಗ್ರಹಿಗಳಾದ ಪರಿವಾಸ್ ಮತ್ತು ರಂಗನಾಥನ್ ಅವರು 'ಈ ಹೋರಾಟವು ಮೈಸೂರು ಹೋರಾಟ ಮಾತ್ರವಲ್ಲ. ಅ. ಕರ್ನಾಟಕದ ಹೋರಾಟವೆಂದೂ ಮಂಗಳೂರವರು ನೆರವಾಗಬೇಕೆಂದೂ ವಿವರಿಸಿದರು. ಶ್ರೀ ಎಸ್. ಎನ್. ಹೊಳ್ಳರು ಮಾತನಾಡುತ್ತಾ ಮೈಸೂರಿನ ಹೋರಗಿನವರು ಎಂತಹ ಸಹಾಯ ನೀಡಬೇಕೆಂಬುದನ್ನು ತಿಳಿಸಿ, ಮಂಗಳೂರಿನಿಂದ ಹೊರಡಲಿರುವ 'ಜಾತಾ'ಗಳಿಗಾಗಿ ಜನಧನ ಸಹಾಯಗಳಾಗಬೇಕೆಂದು ಕೇಳಿದರು. ಬಳಿಕ ಅಕರ್ನಾಟಕರ ದಬ್ಬಾಳಿಕೆಯ ಖಂಡನೆ, ಅಲ್ಲಿನ ಸಿ. ಐ. ಡಿ.ಗಳಿಗೆ ಮದ್ರಾಸು ಸರಕಾರವು ಪ್ರವೇಶ ಕೊಡಬಾರದೆಂಬ ಸೂಚನೆ, ಶ್ರೀ ಎನ್. ಎಲ್. ಉಪಾಧ್ಯಾಯರ ಬಂಧನಕ್ಕಾಗಿ ಮೈಸೂರು ಸರಕಾರದ ಖಂಡನೆಯ ಠರಾವುಗಳಾದುವು. ಸಭೆಯಲ್ಲಿ ಮಂತಿಗೆ ಎತ್ತಲು ಸುಮಾರು ೪೧ರೂ. ಜಮೆಯಾಗಿದೆ.

ಮೈಸೂರಿನಲ್ಲಿ "ರಾವಣ ರಾಜ್ಯ." ತಾ. ೨೨ರಂದು ಸಂಜೆ ಮಂಗಳೂರಿನ ಥಿಯಾಸಾಫಿಕಲ್ ಲಾಜಿನಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಸೇರಿದ ಸಭೆಯಲ್ಲಿ ಹಾಸನದ ವಕೀಲರಾದ ಶ್ರೀ ಎಚ್. ರಾಮರಾಯರು ತಮ್ಮ ಭಾಷಣದಲ್ಲಿ 'ಯಾವ ಮೈಸೂರನ್ನು ಗಾಂಧೀಜಿ ರಾಮರಾಜ್ಯವೆಂದು ಕರೆದರೋ ಆ ಮೈಸೂರು ಇಂದು ರಾವಣನ ರಾಜ್ಯವಾಗಿ ಅಧಿಕಾರಿಗಳ ದಬ್ಬಾಳಿಕೆಯ ನರಕವಾಗಿದೆ'ಯೆಂದು ತಿಳಿಸಿ ಅಲ್ಲಿನ ಚಳವಳದ ಮುಂದಿನ ಭಾರವನ್ನು ಕರ್ನಾಟಕವು ಹೊರಬೇಕಾಗಿದೆಯೆಂದರು; ಹಾಸನ ಜೈಲಿನಿಂದ ಬಂದಿರುವ ಶ್ರೀ ಬಿ. ಎ. ಎಸ್. ಶರ್ಮರವರೂ ತಮ್ಮ ಭಾಷಣದಲ್ಲಿ ಮೈಸೂರಿನಲ್ಲಿ ಅಧಿಕಾರಿಗಳು ಮಾಡುವ ಅನ್ಯಾಯವನ್ನೂ, ಮಂಗಳೂರವರು ಮಾಡಬೇಕಾದ ಸಹಕಾರವನ್ನೂ ತಿಳಿಸಿದರು. ಬಳಿಕ ಶ್ರೀ ಕೆ. ಕೆ. ಶೆಟ್ಟರು ವಂದನೋಕ್ತಿಗಳನ್ನು ಅರ್ಪಿಸುತ್ತಾ ಸಂಯುಕ್ತ ಕರ್ನಾಟಕದ, ಪ್ರಜಾರಾಜ್ಯ ಕರ್ನಾಟಕದ ರಚನೆಯ ಕಾಲವೇ ಬಂದಿದೆಯೆಂದರು.

ಮೈಸೂರಿಗೆ ದ. ಕನ್ನಡದ ಬೆಂಬಲ ಸೂಚಿಸುವ ನಿರ್ಣಯಗಳನ್ನು ತಾ. ೨೧ರಂದು ಸೇರಿದ ಜಿ. ಕಾ. ಸಮಿತಿಯು ಸ್ವೀಕರಿಸಿರುವುದು. ಅಲ್ಲದೆ ಆ ನಿರ್ಣಯಗಳನ್ನು ಎಲ್ಲಾ ಸರ್ಕಲ್ ಕಮಿಟಿಗಳು ಪಾಲಿಸಬೇಕೆಂದೂ ತಾ ೨೮ನೇ ಆದಿತ್ಯವಾರವನ್ನು ಹೈದರಾಬಾದು ಮತ್ತು ಮೈಸೂರು ದಿನವಾಗಿ ಆಚರಿಸಿ, ನಿಧಿ ಸಂಗ್ರಹಿಸಿ ಜಿಲ್ಲಾ ಸಮಿತಿಗೆ ಕಳುಹಿಸಿ ಕೊಡಬೇಕೆಂದೂ ನಿರ್ಣಯವಾಗಿದೆ.

ವಿದ್ಯಾರ್ಥಿ ಫೆಡರೇಶನಿನ ಆಶ್ರಯದಲ್ಲಿ ತಾ. ೨೪ರಂದು ಒಂದು ಸಾರ್ವಜನಿಕ ಸಭೆಯು ಮೈಸೂರು ಸತ್ಯಾಗ್ರಹದ ಕುರಿತಾಗಿ ಜರಗಿತು. ಸಭೆಯಲ್ಲಿ ಬೆಂಗಳೂರಿನಿಂದ ಬಂದಿರುವ ಶ್ರೀಗಳಾದ ಕೃಷ್ಣಮೂರ್ತಿ ಮತ್ತು ವಿಶ್ವನಾಥನ್ ಅವರೂ ಕೆಲವು ಮಂಗಳೂರಿನ ವಿದ್ಯಾರ್ಥಿಗಳೂ ಮಾತನಾಡಿದರು.

ಚುನಾವಣೆ ಸಭೆ ಸೂಟರ್ ಪೇಟೆಯಲ್ಲಿ ತಾ. ೨೧ನೇ ಆದಿತ್ಯವಾರ ಬೆಳಿಗ್ಗೆ ಒಂದು ಚುನಾವಣೆಯ ಪ್ರಚಾರ ಸಭೆಯು ಶ್ರೀ ಎಚ್. ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಶ್ರೀ ಗೋಪಾಲ ಸಾಲಿನ್ಸರು ಮತದಾನದ ಮಹತ್ವದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಬಳಿಕ ಜಪ್ಪು ವಾರ್ಡಿನಲ್ಲಿ ಪ್ರತಿಸ್ಪರ್ಧಿಗಳಾಗಿರುವ ಶ್ರೀ ನಾರಾಯಣ ಕಿಲ್ಲೆ ಮತ್ತು ಶ್ರೀ ಬಿ. ವಿ. ಕಕ್ಕಿಲ್ಲಾಯರು ತಮಗೇಕೆ ಮತವೀಯಬೇಕೆಂದೂ, ನಗರ ಸಭೆಯಲ್ಲಿ ಅವರು ಮಾಡುವ ಹೋರಾಟದ ಕುರಿತೂ ಮಾತನಾಡಿದರು. ಅಧ್ಯಕ್ಷರ ಭಾಷಣವಾಗಿ ವಂದನೆಗಳಿಂದ ಸಭೆಯು ಮುಕ್ತಾಯವಾಯಿತು. ಮಂಗಳೂರಿನ ಚುನಾವಣೆಯ ಪ್ರಚಾರದಲ್ಲಿ ಇದೊಂದು ಅತಿ ಮಹತ್ವದ ಸಭೆ.

ಇಂಡೋನೇಶ್ಯದ ದಿನಾಚರಣೆ—ಮಂಗಳೂರಿನ ಸೋಶಿಯಲಿಸ್ಟ್ ಪಕ್ಷದವರ ಆಶ್ರಯದಲ್ಲಿ, ಈಚೆಗೆ ಡಾ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ದಿನಾಚರಣೆ ಜರುಗಿ ಆ ಸಾರ್ವಜನಿಕ ಸಭೆಯಲ್ಲಿ ಶ್ರೀಗಳಾದ ಸಂಕಪ್ಪ ರೈ ಎಚ್. ಸುರೇಶ್ ಇವರು ಮಾತಾಡಿದರು. ಶ್ರೀ. ಕೆ. ಎಸ್. ಕಾರಂತರು ವಂದಿಸಿದರು. ಅಂದು ಇಲ್ಲಿ ಸಂಗ್ರಹವಾದ ನಿಧಿ ರೂ. ೧೫೭-೧೪-೧೧; ಈ ಪಕ್ಷದವರು ರೂ. ೫೦ ಸಾವಿರ ಕೂಡಿಸಲು ನಿರ್ಧರಿಸಿದ್ದಾರೆ.

ಕಟಪಾಡಿ—ಎಸ್. ವಿ. ಎಸ್. ಶಾಲಾ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕ ಮಹಾಸಭೆಯು ಇದೇ ಒಕ್ಟೋಬರ್ ತಾ. 19ನೇ ಆದಿತ್ಯವಾರ ಸಂಜೆ 5 ಘಂಟೆಗೆ ಎಸ್. ವಿ. ಎಸ್. ಹೈಸ್ಕೂಲಿನವಠಾರದಲ್ಲಿ ಜರಗುವುದು. ಸಂಘದ ಸದಸ್ಯರೆಲ್ಲರೂ ಹಾಜರಾಗಬೇಕಾಗಿ ಸಂಘದ ಅಧ್ಯಕ್ಷ ಡಾ| ಕೆ. ಜೆ. ಶಣೈಯರು ತಿಳಿಸುತ್ತಾರೆ.

ಫಲಿಮಾರು—ಈ ಕೇಂದ್ರದ ರಾಷ್ಟ್ರೀಯ ಸೇವಾದಳದ ಉದ್ಘಾಟನಾ ಸಮಾರಂಭವು ತಾ 28-9-47ರಲ್ಲಿ ಸ್ಥಳೀಕ ಗಾಂಧಿ ಮೈದಾನಿನಲ್ಲಿ ಶ್ರೀ ಎಮ್. ಡಿ. ಅಧಿಕಾರಿಗಳ ನೇತೃತ್ವದಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಪಡುಬಿದ್ರೆಯಿಂದ ಇಲ್ಲಿಗೆ ಚಿತ್ತೈಸಿದ್ದ ಸೇವಾದಳದವರಿಗೂ ಇತರ ಅತಿಥಿ ಅಭ್ಯಾಗತರಿಗೂ ಸ್ಥಳೀಕ ಕೊಂಗ್ರೆಸ್ ಕಮಿಟಿಯವರು ಕಾಫಿ, ತಿಂಡಿ, ಗಂಜಊಟ ಇತ್ಯಾದಿಗಳಿಂದ ಸತ್ಕರಿಸಿ ಅಂದಿನ ಕಾರ್ಯಕ್ರಮವು ಕೊನೆಗೊಂಡಿತು.

ಬೆಳ್ಳೆ, ಕಟ್ಟಿಂಗೆರೆ—ಗ್ರಾಮಗಳಲ್ಲಿ ಕಳೆದವಾರ ಫಿರ್ಕಾ ಸಪ್ಲೈ ಆಫೀಸರರು ಊರವರ ಮನವೊಲಿಸಿಯೇ ನಲ್ವತ್ತು ಮುಡಿ ಅಕ್ಕಿಗಳನ್ನು ಸಂಗ್ರಹಿಸಿ ಸ್ಟೋರಿಗೊಪ್ಪಿಸಿದರು. ಸ್ಟೋರುಗಳಲ್ಲಿ ಅಕ್ಕಿಯೇ ಸಿಕ್ಕದೆ ಊರವರು ತೀರಾ ಪೇಚಾಟಕ್ಕೀಡಾಗಿದ್ದಾಗ ಹೀಗೆ ಸಂಗ್ರಹಿಸಿದವರೂ ದಾನವಿತ್ತವರೂ ಶ್ಲಾಘನೀಯರೆಂದು ಊರವರು ತಿಳಿಸುತ್ತಾರೆ.

ಕರ್ನಾಟಕ ಮಿತ್ರಮಂಡಳಿ (ಮದರಾಸು); ೨೧ನೇ ಸಪ್ಟಂಬರ ತಿಂಗಳ ೨೦ನೇ ತಾರೀಕು ಶನಿವಾರ ಸಾಯಂಕಾಲ ಘಂಟೆ ಸಕ್ತೆ ಲೇಡಿ ವೆಲಿಂಗ್ಟನ್ ಟ್ರೈನಿಂಗ್ ಹೈಸ್ಕೂಲಿನ ಸಭಾಂಗಣದಲ್ಲಿ ಕರ್ನಾಟಕ ಮಿತ್ರ ಮಂಡಳಿಯ ಪ್ರಚಂಡ ಸಭೆಯೊಂದು ಕೂಡಿತ್ತು. ಡಾ| ಎಚ್. ಎಂ. ರಾಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಶ್ರೀ ಎಂ. ಎಂ. ಭಟ್ಟರು ಕನ್ನಡಿಗರ ವೈಭವ, ಮತ್ತು ಇಂದು ಕನ್ನಡಕ್ಕಾಗುತ್ತಿರುವ ಅನ್ಯಾಯ ಇವುಗಳನ್ನು ಕುರಿತು ಭಾಷಣವಿತ್ತರು.

ಮದ್ರಾಸು ನಗರದ ಕಾಲೇಜುಗಳಲ್ಲಿ ಕನ್ನಡಕ್ಕೆ ಸ್ಥಾನವನ್ನು ಒದಗಿಸಿಕೊಡಬೇಕೆಂದೂ ಮದ್ರಾಸಿನ ಆಕಾಶವಾಣಿಯಲ್ಲಿ ಕನ್ನಡಕ್ಕೆ ಕಾರ್ಯಕ್ರಮದಲ್ಲಿ ಹೆಚ್ಚಿನ ಅವಕಾಶವನ್ನು ಒದಗಿಸಿಕೊಡಬೇಕೆಂದೂ, ಇತ್ತೀಚೆಗೆ ಮದ್ರಾಸು ಸರಕಾರದವರು ಪ್ರಾವೇಶಿಕ ಭಾಷೆಗಳ ಪ್ರಾಧ್ಯಾಪಕರಿಗೆ ಒಂಭತ್ತು ಗಜೆಟೆಡ್ ಸ್ಥಾನಗಳನ್ನು ಕೊಟ್ಟಲ್ಲಿ ಕನ್ನಡಕ್ಕೆ ಮಾತ್ರ ಕೊಡದೆ ಇರುವುದು ಅನ್ಯಾಯವೆಂದೂ ಇದನ್ನು ಬೇಗನೆ ಸರಿಯಾಗಿಸಬೇಕೆಂಬದಾಗಿ ಸರಕಾರವನ್ನು ಕೇಳಿಕೊಳ್ಳುವ ಗೊತ್ತುವಳಿಗಳು ಮಂಜೂರಾದುವು.

ದಿವಂಗತ ಮುಸನೀಪು ಕೃಷ್ಣರಾಯರ ನಿಧನದ ಕುರಿತು ಸಂತಾಪ ಸೂಚಕ ಠರಾವನ್ನು ಸ್ವೀಕರಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಈಯಲೆಂದು ದೇವರನ್ನು ಪ್ರಾರ್ಥಿಸಲಾಯಿತು. ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಸಂಘ ಶಕ್ತಿಯ ಮಹಿಮೆಯ ಕುರಿತು ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟರು. ಕಾರ್ಯದರ್ಶಿಗಳ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

ಜಯಂತಿ ಗೀತೆ

(೨-೧೦-೪೭)

ಧಾಟಿ (ಭಾಗ್ಯದ ಲಕ್ಷ್ಮೀ ಬಾರಮ್ಮ)

ರಾಗ (ಮಧ್ಯಮಾವತಿ, ಆದಿತಾಳ.)

ಗಾಂಧಿ ದೀರ್ಘಾಯುವಾಗಿರಲಿ। ಪ್ರಪಂಚ ಪೂಜ್ಯ ॥ಪ॥

ಮಾನ್ಯ ದಿವಾನ ಕರಮಚಂದನಾ।
ಪುಣ್ಯ ಸತೀಮಣಿ ಲಕ್ಷ್ಮೀಸುತನ॥
ಧನ್ಯ ಮಹಾತ್ಮಾ ಮೋಹನದಾಸನ।
ಪುಣ್ಯ ಧರಣಿಯಲಿ ಪೊರೆಯಲಿ ಶರಣ! ॥೧॥
ಶ್ರೀ ಕಸ್ತೂರಿ ಸುಮಂಗಲನಾಗಿ।
ಲೋಕಮಾನ್ಯ ನೆಹರು ಪ್ರಿಯನಾಗಿ॥
ಶ್ರೀಕರ ಭಾರತ ಧಾರಿಣಿಗಾಗಿ।
ಲೋಕದಿ ಬೆಳಗುವ ಕರ್ಮಯೋಗಿ ॥೨॥
ಸತ್ಯಾಶ್ರಯ ಬುದ್ಧನ ಮೇಲ್ ನಡೆದು।
ನಿತ್ಯಾಹಿಂಸಾವ್ರತ ಪಥ ಹಿಡಿದು॥
ಸ್ತುತ್ಯ ಶಾಂತಿ ಸಂದೇಶವನೊರೆದು।
ನಿತ್ಯಾತ್ಮನ 'ಕಲೆ' ಗೊಪ್ಪುವ ಸಾಧು ॥೩॥
ಧರೆಯ ಸೇವೆಯಲಿ ತನುವನು ಸವೆಸಿ।
ಹರಿಜನ ದೀನಾರ್ತರನುದ್ಧರಿಸಿ॥
ಭರತ ಭುವಿಗೆ ಸ್ವಾತಂತ್ರ್ಯವ ಕೊಡಿಸಿ।
ಮೆರೆವ ರಾಷ್ಟ್ರಜನಕಾ ರಾಜರ್ಷಿ ॥೪॥
ಸರ್ವರ ಸಮತಾಭಾವದೆ ಕೂಡಿ।
ಸರ್ವಜಗದ ಕಲ್ಯಾಣವ ನೋಡಿ॥
ಉರ್ವಿಯೊಳವತರಿಸಿದ ಸತ್ಪುರುಷನ।
ಸರ್ವೇಶನು ಸಲಹಲಿ ಶ್ರೀರಮಣ! ॥೫॥

ಮುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ.

ಜೈಹಿಂದ್ ಕರ್ನಾಟಕ ನಾಟಕ ಸಭಾ ಕೊಯಮುತ್ತೂರು.

ನಟನಟಿಯರು [illegible]

ಕನ್ನಡ ನಾಟಕಗಳಲ್ಲಿ ಹಾಗೂ ಚಲಚ್ಚಿತ್ರಗಳಲ್ಲಿ ಅಭಿನಯಿಸಲು ಚೆನ್ನಾಗಿ ಕನ್ನಡ ಗೊತ್ತಿರುವ, ಸಂಗೀತ, ಅಭಿನಯಾದಿಗಳಲ್ಲಿ ಸಾಕಷ್ಟು ಪರಿಶ್ರಮವುಳ್ಳ ರೂಪವಂತ ಯೋಗ್ಯ ನಟನಟಿಯರು ಬೇಕಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಪ್ರಥಮ ಪ್ರಾಶಸ್ತ್ಯ ಕೊಡಲಾಗುವುದು.

ಇಷ್ಟವುಳ್ಳವರು ಈಗ ಸಂಚಾರದಲ್ಲಿರುವ ನಮ್ಮ ಪ್ರತಿನಿಧಿಗಳೊಡನೆ ಅಕ್ಟೋಬರ ತಾ. 4 ಮತ್ತು 5ರಲ್ಲಿ ಉಡುಪಿಯಲ್ಲಿ ನವಯುಗ ಆಫೀಸಿನಲ್ಲಿಯೂ ತಾ 7 ಮತ್ತು 8ರಲ್ಲಿ ಮಂಗಳೂರಲ್ಲಿ ಸೆಂಟ್ರಲ್ ಸ್ಟುಡಿಯೋದಲ್ಲಿಯೂ ಸ್ವತಃ ಬಂದು ಮಾತನಾಡಬಹುದು. ಪತ್ರವ್ಯವಹಾರ ಅಗತ್ಯವಿಲ್ಲ.

ಸಮಯ–ಬೆಳ್ಳಿಗ್ಗೆ 10 ಗಂಟೆಯಿಂದ 12½ ಮಧ್ಯಾಹ್ನ 3ರಿಂದ 5.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. L. No. 514/1947.

ವಾದಿ–ಆನಂದ ಶೆಟ್ಟಿ–ವಡ್ಡರ್ಸೆ ಮನೆ ನಂಜಪ್ಪ ಶೆಟ್ರ ಅಳಿಯ–ಹಿಲಿಯಾಣ ಗ್ರಾಮ.

ಪ್ರ. ವಾದಿರು–1. ಬಚ್ಚ ಯಾನೆ ರುಕ್ಕ 2. ರಾಮ–ಹ್ಯಾತಾಡಿ ಸಮಗಾರ ನೋನನ ಮಕ್ಕಳು.

1. ನೆಯವನು ಮುಚ್ಚಟ್ಟು ಗ್ರಾಮದಲ್ಲಿಯೂ 2ನೆಯವನು ಉಳ್ಳೂರು ಗ್ರಾಮದ ಚಿಟ್ಟೆಯಲ್ಲಿಯೂ ಇರುವವರು.

ಸದ್ರಿ ಪ್ರತಿವಾದೀರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ,

ನೀವು ವಾದಿಗೆ ತಾ 31-7-1944ರಲ್ಲು ದೂಪ್ಯ 128-0-0ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ರೂ 157-0-0ನ್ನು ಬರಮಾಡಿ ಕೊಳ್ಳುವರೇ ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 15-10-1947ಕ್ಕೆ ತನಖಿಗೆ ಇಡೋಣಾಗಿಯದೆ, ಈ ಬಾಬಿನಲ್ಲಿ ನಿಮ್ಮ ಉಜ್ಜಾವರಣೆ ಇರುವ ಪಕ್ಷಕ್ಕೆ ತನ್ನ ದಿವ್ಸ ಪೂರ್ವಾಹ್ನ 11ಘಂಟೆಗೆ ಈ ಕೋರ್ಟಿ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಮೇಲೆ ಏಕ್ಸ್ ಪಾರ್ಟೆ ಡಿಕ್ರಿ ಕೊಡೋಣಾಗುವುದು ಎಂಬ ಸಂಗ್ತಿ ಕೋರ್ಟಿನ ಹುಕುಂ ಪ್ರಕಾರ ತಿಳಿಸೋಣಾಗುತ್ತದೆ.

V. Srinivasa Shetty.

Advocate for Plaintiff

ಕುಂದಾಪುರ ತಾ. 23-9-1947.

ಮನೆಮದ್ದು-Home Remedies ಬೆಲೆ ರೂ. **2-0-0**

ಬರೆದವರು:—ಡಾ| ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Vluable Service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್,

ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ., ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ.ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಪೆರಿಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200. ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ

ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

WANTED:— ಮೂರು ಪೆಟ್ರೋಲು ಲೋರಿಗಳು ಕುಂದಾಪುರ ತಾಲೂಕಿನಲ್ಲಿ ಕಟ್ಟಿಗೆ ಸಾಗಿಸಲಿಕ್ಕೆ ಕೂಡಲೇ ಬಾಡಿಗೆಗೆ ಬೇಕಾಗಿವೆ. ಬರುವ ಮೇ ಅಖೈರವರೆಗೆ ಕೆಲಸವಿರುತ್ತದೆ. ಮೈಲೇಜು ರೇಟು ಇತ್ಯಾದಿ ವಿವರಗಳಿಗೆ ಕೂಡಲೆ ಬರೆಯಿರಿ:–

ವಿ. ಸೀತಾರಾಮ ಶೆಟ್ಟಿ,

ಫೋರೆಸ್ಟ್ ಕಂಟ್ರಾಕ್ಟರ್,

ಪೋಸ್ಟ್, ವಂಡ್ಸೆ, ದ. ಕ.

ದಕ್ಷಿಣ ಕನ್ನಡ

ತಾಲೂಕು ಆಹಾರ ಸಮಿತಿ ಮತ್ತು ಗ್ರಾಮ ಸಮಿತಿ ಸದಸ್ಯತ್ವಗಳಿಗೆ ರಾಜಿನಾಮೆ–ಬಟ್ಟೆ, ಚಿಮ್ಣಿಎಣ್ಣೆ, ಸಕ್ಕರೆ, ಕೃಷಿಯ ಉಪಕರಣ ಇವುಗಳ ವಿತರಣೆಗಳಲ್ಲಿ ಹಾಗೂ ಸಂಗ್ರಹ ವಿತರಣೆಯ ಕಾರ್ಯಗಳಲ್ಲಿ, ಸರಕಾರೀ ಅಧಿಕಾರಿಗಳಿಂದ ಆಗುತ್ತಿರುವ ಅನ್ಯಾಯವನ್ನು ನಿಷೇಧಿಸಿ ಮತ್ತು ಗ್ರಾಮ ಸಮಿತಿಗಳ ಮನವಿಯನ್ನು ಅಲಕ್ಷಿಸಿದ ಸರಕಾರದ ವರ್ತನೆಯನ್ನು ನಿಷೇಧಿಸಿ, ಕಾಸರಗೋಡು ತಾಲೂಕು ಆಹಾರ ಸಮಿತಿಯ ಸದಸ್ಯರಾದ ಶ್ರೀ. ಕುಳಂತೋಡಿ ಕೃಷ್ಣ ಭಟ್ಟರು ಮತ್ತು ಶ್ರೀ. ಬಿ. ದೇವಪ್ಪಾಳ್ವರು ತಮ್ಮ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿದ್ದಾರೆ. ಈಗಾಗಲೇ ಪೆರಡಾಲ ಮತ್ತು ಬೇಳ ಗ್ರಾಮ ಸಮಿತಿಗಳು ಮೇಲೆ ಕಾಣಿಸಿದ ಆರೋಪ ಪ್ರಕಾರ, ಸಂಪೂರ್ಣ ರಾಜಿನಾಮೆ ಕೊಟ್ಟಿರುತ್ತವೆ. 20-6-'47ರಂದು ಆದ ಕುಂಬ್ಳಾ ಫಿರ್ಕಾ ಗ್ರಾಮ ಸಮಿತಿಗಳ ಯೂನಿಯನಿನ ನಿರ್ಣಯದಂತೆ ಈ ಫಿರ್ಕದ ಇನ್ನುಳಿದ ಗ್ರಾಮ ಸಮಿತಿಗಳೂ ಸಂಪೂರ್ಣವಾಗಿ ರಾಜಿನಾಮೆ ಕಳುಹಿಸಲು ನಿಶ್ಚಯಿಸಿರುತ್ತವೆ.

ನೇರಳ ಕಟ್ಟೆ–ತಾ 22-9-47ರಲ್ಲಿ ಈ ಪ್ರಾಂತ್ಯದ ಗ್ರಾಮಸ್ಥರ ಮುಖಂಡರಾದ ಶ್ರೀ. ಕಲ್ಲಾಜೆ ಸಂಜೀವ ಭಂಡಾರಿಗಳವರ ಅಧ್ಯಕ್ಷತೆಯಲ್ಲಿ ರೈತ ಮಹಾಜನರ ಸಭೆಯೊಂದು ಸೇರಿತು. ಶ್ರೀಗಳಾದ ಪುತ್ತೂರು ಜತ್ತಪ್ಪ ರೈ, ಎ. ಜಿ. ತಿರುಮಲೇಶ್ವರ ಭಟ್ ಮತ್ತು ನಿಡಬುಡಾಸ ಶೆಟ್ಟಿ ಮೊದಲಾದವರು ಪ್ರಕೃತದ ಆಹಾರ ಪರಿಸ್ಥಿತಿಯ ವಿಚಾರ ಮತ್ತು ಮುಂದಿನ ವರುಷದ ರೇಷನ್ ಪದ್ಧತಿಯಲ್ಲಿ ಆಗಬೇಕಾದ ಬದಲಾವಣೆಗಳನ್ನು ವಿವರಿಸಿ ಭಾಷಣವಿತ್ತರು. ಊದವರಾದ ಶ್ರೀ ಬಳ್ಳಮಜಲು ತಿಮ್ಮಣ್ಣ ಭಟ್ಟರು ಮತ್ತು ಶ್ರೀ. ಪಾಂಡುರಂಗ ಕಮ್ತಿಯವರು ಈ ಕೇಂದ್ರದಲ್ಲೊಂದು ಕಾಂಗ್ರೆಸು ಕಮಿಟಿ ಆಗುವ ಆವಶ್ಯಕತೆಯನ್ನು ವಿವರಿಸಿದರು. ಅಧ್ಯಕ್ಷರ ಭಾಷಣ, ಧನ್ಯವಾದಗಳೊಂದಿಗೆ ಸಭೆಯು ಕೊನೆಗೊಂಡಿತು.

ನೋಟೀಸು

ದ. ಕ. ಮಂಗಳೂರು ಡಿ. ಮು.
ಕೋರ್ಟಿನಲ್ಲಿ.
R. E. P. 132/1947
O. S. 134/1942

Dr. ಪಿ. ವೆಂಕಟ್ರಾವ್–ಅರ್ಜಿದಾರ
ಮತ್ತು
ನಾರಾಯಣ ರಂಭಟ್ಟ ಕೂಡಾ –
ಪ್ರತಿವಾದಿಗಳು

2ನೇ ಪ್ರ–ಅನಂತ ರಂಭಟ್ಟ, ವಾಸುದೇವ ರಂಭಟ್ಟರ ಮಗ, ತ್ರಿಚ್ನಾಪ್ಳಿ ಜಿಲ್ಲಾ ಅಗಡಿಯೂರಲ್ಲಿ. 5ನೇ ಪ್ರ–ಶ್ರೀನಿವಾಸ ರಂಭಟ್ಟ, ವಾಸುದೇವ ರಂಭಟ್ಟರ ಮಗ, ಸದ್ರಿ ಅಗಡಿಯೂರು ಗ್ರಾಮದಲ್ಲಿ. 7ನೇ ಪ್ರ-K. ಪಿ. ನರ್ಸಿಂಗರಾವ್, K. ಪಿ. ಅನಂತಯ್ಯನವರ ಮಗ, ಮಂಗಳೂರು ತಾಲ್ಲೂಕು ಪಡುಕೋಡಿ ಗ್ರಾಮದ ಉಳ್ಳಾಯದಲ್ಲಿ.

ಮೇಲಿನ ಅರ್ಜಿದಾರನು ಪ್ರತಿವಾದಿ ಪ್ರತಿವಾದಿಗಳ ಬಾಬ್ತು ಸ್ಥಿರಾಸ್ತಿಯನ್ನು ಏಲಂಗೆ ಇಡಬೇಕೆಂತ ಮೇಲಿನ ಅರ್ಜಿಯನ್ನು ದಾಖಲ್ಲು ಮಾಡಿರುತ್ತಾನೆ. ಮತ್ತು ಸದ್ರಿ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ ತಾ. ೧೧-೧೦-೧೯೪೭ಕ್ಕೆ ಇಟ್ಟಿದೆ, ಏಲಂಕಾಲದಲ್ಲಿ ಏಲಂಗೆ ನಿಲ್ಲುವರೆ ಪರ್ಮಿಶನ್ ಕೊಡಬೇಕೆಂತ ಕೊಟ್ಟ ಅರ್ಜಿ R. E. A. ೨೦೬/೧೯೪೭ಕೂಡಾ ಸದ್ರಿ ತಾರೀಕಿಗೆ ಇಟ್ಟಿದೆ. ಮೇಲ್ಕಾಣ್ಸಿದ ಸದ್ರಿಗೆ ಏನಾದರೂ ಆಕ್ಷೇಪವಿದ್ದರೆ ಸದ್ರಿ ತಾರೀಕಿನಲ್ಲಿ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ತಿಳಿಸಿಕೊಳ್ಳತಕ್ಕದ್ದು

S. Venkat Rao
Vakil for Petitioner
ಮಂಗಳೂರು ತಾ. 24-9-947

ಸ್ವೀಕಾರ ವಿಮರ್ಶೆ

'ಪುಸ್ತಕ ಪ್ರಪಂಚ'— ಸಂಪುಟ ೨, ಸಂಚಿಕೆ ೧– ಕ್ರೌನ್ ⅛ ಆಕಾರದ ೬೪ ಪುಟಗಳ ಮಾಸಪತ್ರಿಕೆ– ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯು ೧೦ ಮಂದಿ ಸಮರ್ಥ ಸಾಹಿತಿಗಳ ಸಂಪಾದಕ ಮಂಡಳಿಯಿಂದ ಪ್ರಕಟವಾಗುತ್ತಿರುವ, ಇಂಗ್ಲಿಷದ 'Readers' Digest' ಎಂಬುದರ ಮಾದರಿಯ, ಕನ್ನಡದ ಈ ಪತ್ರಿಕೆಯು ಚೆನ್ನಾಗಿಯೇ ಸಂಪಾದಿತವಾಗುತ್ತಿದೆಯೆನ್ನಲು ತುಂಬ ಸಂತೋಷ. ಸುಲಭ ಶೈಲಿಯ ಚೊಕ್ಕ ಸುದಿಗಳ ಉತ್ತಮ ವರ್ಗದ ಲೇಖನಗಳನ್ನೂ ಆಯಾ ತಿಂಗಳ ವರೆಗೆ ಪ್ರಕಟವಾದ ಹೊಸ ಹೊಸ ಪುಸ್ತಕಗಳ ಪರಿಚಯಗಳನ್ನೂ ಒಳಗೊಂಡ ಈ ಪತ್ರಿಕೆಯನ್ನು ವಿಶೇಷತಃ ಕನ್ನಡಪ್ರೇಮಿಗಳೂ ಬರೆಹಗಾರರೂ ಪ್ರೋತ್ಸಾಹಿಸತಕ್ಕದು. ಗ್ರಂಥಕರ್ತರು ತಮ್ಮ ಗ್ರಂಥ ಪ್ರಕಟವಾದಂತೆ ಒಂದೊಂದು ಪ್ರತಿಯನ್ನು ಕಳುಹಿಸಿಕೊಟ್ಟು ಪುಸ್ತಕ ಪರಿಚಯಕ್ಕೆ ಮೀಸಲಾಗಿರುವ ಅದರ ವಿಭಾಗದ ಪ್ರಯೋಜನವನ್ನು ಹೊಂದತಕ್ಕದು. ವಾರ್ಷಿಕ ಚಂದಾ ರೂ ೪.

'ಶರಣ ಸಾಹಿತ್ಯ'— ಸಂಪುಟ ೧೦ ಸಂಚಿಕೆ ೫. ಡೆಮಿ ⅛ ಆಕಾರ ೬೦ ಪುಟ, ಸಂಪಾದಕರು–ಆಸ್ಥಾನವಿದ್ವಾನ್ ಕೀರ್ತನ ಕೇಸರಿ ಬಿ. ಶಿವಮೂರ್ತಿ ಶಾಸ್ತ್ರೀ. ಬೆಂಗಳೂರಿಂದ ಹೊರಡುವ ಈ ಮಾಸ ಪತ್ರಿಕೆಯು ಶರಣಸಾಹಿತ್ಯ ವೈಶಿಷ್ಟ್ಯವಾದ ಶಿವಪಂಥದವರೊಳು ಹೇಳುವ ತಿಳಿಗನ್ನಡದ ಚೆಲುವನ್ನು ತೋರಿಸುವ ಪದ್ಯ ಗದ್ಯ ಗಾದೆ ಸಾಹಿತ್ಯಕ ಲೇಖನಗಳಿಂದ ಚೆಂದವಾಗಿದೆ. ಪ್ರಸ್ತುತ ಸಂಚಿಕೆಯಲ್ಲಿ ಕರ್ನಾಟಕದ ಸುಪ್ರಸಿದ್ಧ ಇತಿಹಾಸ ಸಂಶೋಧಕರಾದ ಶ್ರೀ ಮಂಜೇಶ್ವರ ಗೋವಿಂದ ಪೈಗಳವರ 'ಪೊಟ್ಟಳ ಕೆರೆಯ ಶಾಸನ ವಿಮರ್ಶೆ' ಎಂಬ ಮಹತ್ವದ ಲೇಖನವಿದೆ.

ಮೂಲ್ಕಿ:— ಮೂಲ್ಕಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ವತಿಯಿಂದ ಗಾಂಧಿ ಜಯಂತಿಯು ತಾ 2-10-47ರಿಂದ ತಾ 9ರ ವರೆಗೆ ಪ್ರತಿ ದಿನ ಬೆಳಿಗ್ಗೆ ಗಂಟೆ 6ರಿಂದ 7ರ ತನಕ ಪ್ರಭಾತ ಫೇರಿ, ಮಧ್ಯಾಹ್ನ 3ರಿಂದ 4ರ ವರೆಗೆ ನೂಲುವುದು, ಸಾಯಂಕಾಲ 7ರಿಂದ 8ರ ತನಕ ಭಜನೆ ಮೊದಲಾದ ಕಾರ್ಯಕ್ರಮಗಳಿಂದ ಜರಗಲಿದೆ.

ಡಾ। ಮುರಿಗೆಪ್ಪ ಚೆನ್ನವೀರಪ್ಪ ಮೋದಿಯವರಿಗೆ– ತಾ. 19-9-47ರಲ್ಲಿ ಗೋಕಾಕ ನಗರವಾಸಿಗಳು ಒಂದು ಸನ್ಮಾನ ಪತ್ರಿಕೆಯನ್ನೊಪ್ಪಿಸಿ ಗೌರವಿಸಿದರು. ಡಾ। ಮುರಿಗೆಪ್ಪನವರು ಪ್ರಸಿದ್ಧ ನೇತ್ರ ಚಿಕಿತ್ಸಕರು. ಭಾರತದ ಅನೇಕ ಹಿಮಾಚಲದ ವರೆಗೆ ಸಂಚರಿಸಿ ಒಳ್ಳೇ ಅನುಭವ ಪಡೆದವರು.

ಮೂಡಬಿದ್ರಿ— ಈ ಸೆಂಟರಿನ ರೂರಲ್ ರಿಕನ್‌ಸ್ಟ್ರಕ್ಷನ್ ವಿಭಾಗ ಕೂಟವು ಜೈನ್ ಹೈಸ್ಕೂಲಿನ ಸಭಾಂಗಣದಲ್ಲಿ ಜರುಗಿತು. ವಿವಿಧ ವಿನೋದಾವಳಿಗಳು ನಡೆದ ತರುವಾಯ ರೂರಲ್ ರಿಕನ್‌ಸ್ಟ್ರಕ್ಷನ್ ಆಫೀಸರ್ ಶ್ರೀ. ಯಂ. ಶಾಂತಪ್ಪನವರು, ಸರಕಾರದ ಈ ಯೋಜನೆಯ ಉದ್ದೇಶ ಮತ್ತು ಆವಶ್ಯಕತೆಯ ಕುರಿತು ಮಾತನಾಡಿದರು.

'ವಾಗ್ಭೂಷಣ'— ಸಂಪುಟ ೪. ಸಂಚಿಕೆ ೧೦, ಧಾರವಾಡ ದ. ಕರ್ನಾಟಕ ವಿದ್ಯಾವರ್ಧಕ ಸಂಘದವತಿಯಿಂದ ಪ್ರಕಟವಾಗುವ ಡೆಮಿ ⅛ ಆಕಾರದ ೨೦ ಪುಟಗಳ ಈ ತ್ರೈಮಾಸಿಕ ಸಂಚಿಕೆಯು ತನ್ನ ಘನ ಗಾಂಭೀರ್ಯದ ಹೆಸರಿಗಾಗಲೀ ತನ್ನನ್ನು ಪ್ರಕಟಿಸುವ ಸುಪ್ರಸಿದ್ಧ ಸಂಸ್ಥೆಗಾಗಲೀ ಭೂಷಣಪ್ರಾಯವಾಗಿಲ್ಲವೆನ್ನಲು ವಿಷಾದವಾಗುತ್ತೆ.

'ಭಾರತೀಯ ಘಟನಾ ಸಮಿತಿ'– ಲೇಖಕರು–ಶ್ರೀ ನಾರಾಯಣ ಶರ್ಮ–ಪ್ರಕಾಶಕರು–ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಬೆಲೆ ರೂ ೧. ಕ್ರೌನ್ ಅಷ್ಟಪತ್ರದ ೮೪ ಪುಟಗಳು. ಇತ್ತೀಚೆಗೆ ರಭಸದಿಂದ ಸಾಗಿದ ಭಾರತದ ರಾಜಕೀಯ ಮುನ್ನಡೆಯನ್ನು, ವಿಶೇಷತಃ ಕ್ರಿಪ್ಸರ ರಾಯಭಾರದಾರಭ್ಯ ಜೂನ್ ೩ರ ಘೋಷಣೆಯ ವರೆಗಿನ ಘಟಣಾವಳಿಗಳನ್ನು ಕ್ರಮಬದ್ಧವಾಗಿ ವಿಮರ್ಶನಾತ್ಮಕವಾಗಿ ಹಾಗೂ ಸ್ಥೂಲವಾಗಿ ತಿಳಿಯ ಬೇಕೆನ್ನುವವರಿಗೆ ಇದು ಉಪಯುಕ್ತವಾದ ಪುಸ್ತಕ.

'ಸಾಮ್ಯವಾದವು ಏಕೆ?'— ಶ್ರೀ. ಜಯ ಪ್ರಕಾಶ ನಾರಾಯಣರ 'Why Socialism?' ಎಂಬ ಇಂಗ್ಲಿಷ್ ಪುಸ್ತಕದ ಕನ್ನಡ ಅನುವಾದ. ಮಾಡಿದವರು ಶ್ರೀ ಮಳೆಯ ಗೋವರ್ಧನ ರಾಯರು. ಪ್ರಕಾಶಕರು, ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಕ್ರೌನ್ ಅಷ್ಟ ಪತ್ರ ೧೬೦ ಪುಟಗಳು. ಎರಡನೆಯ ಮುದ್ರಣ. ಬೆಲೆ ೧೦ ಆಣೆ ಎರಡನೆಯ ಮುದ್ರಣವಾಗುವುದರಿಂದಲೆ ಇದು ಜನತೆಗೆ ಬೇಕಾದ ಪುಸ್ತಕವಾಗಿದೆಯೆಂಬುದು ಸುಸ್ಪಷ್ಟವಿರುವುದರಿಂದ ಹೆಚ್ಚಿನ ವಿಮರ್ಶೆ ಬೇಕಾಗಿಲ್ಲ. ರಾಜಕೀಯದಲ್ಲಿ ಅಂಧಾನುಕರಣೆಯ ಅನುಯಾಯಿಗಳಾಗುವ ಕಾಲ ಹೋಯಿತು, ಈಗ ವಿಚಾರಿಗಳಾಗಿ ವರ್ತಿಸುವ ಕಾಲಬಂದಿದೆ. ಈ ಬಗೆಗೆ ಪ್ರಸ್ತುತ ಪುಸ್ತಕವು ವಿಶೇಷ ಸಹಕಾರಿಯಾಗಿದೆ.

'ಪತೌಂಟ್‌ಬೇಟನ್ ಮಹಾತಂತ್ರ'— ಕ್ರೌನ್ ಅಷ್ಟಪತ್ರದ ೨೪ಪುಟಗಳು. ಬೆಲೆ ಮೂರಾಣೆ. 'ಜನಸಾಹಿತ್ಯ' ಹುಬ್ಬಳ್ಳಿ ಇವರ ಪ್ರಕಟಣೆ. ಮೌಂಟಬ್ಯಾಟನವರ ತೀರ್ಪಿನ ತಳಹದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯು ಅಪ್ರತ್ಯಕ್ಷವಾಗಿ ಉಳಿಯ ಬಹುದಾದ ಹಂಚಿಕೆಯಿದೆಯೆಂದೂ ಅದನ್ನು ನಿರ್ಮೂಲಗೊಳಿಸಲು ಇಂಡಿಯನ್ ಯೂನಿಯನ್ ಮತ್ತು ಪಾಕಿಸ್ತಾನಗಳಲ್ಲಿ ಯಾವ ಕಾರ್ಯಕ್ರಮ ಕೈಗೊಳ್ಳ ಬೇಕೆಂಬುದನ್ನೂ ವಿವರಿಸುವ ಹಿಂದೀ ಕಮ್ಯುನಿಸ್ಟ್ ಪಾರ್ಟಿಯ ಗೊತ್ತುವಳಿಗಳು ಇದರಲ್ಲಿ ಸಕಾರಣವಾಗಿ ಕೊಡಲಾಗಿವೆ.

'ಏಚ್ಚತ್ತ ಹಿಂದೂಸ್ಥಾನ'— ಲೇಖಕರು ಶ್ರೀ ಗಂಗಾಧರ ಅಧಿಕಾರಿ. ಪ್ರಕಾಶಕರು, ಜನತಾ ಸಾಹಿತ್ಯ, ಹುಬ್ಬಳ್ಳಿ. ಕ್ರೌನ್ ಅಷ್ಟ ಪತ್ರ ೩೨ಪುಟಗಳು, ಬೆಲೆ ನಾಲ್ಕಾಣೆ, ೧೯೪೬ರ ಕ್ರಾಂತಿಕಾರಕ ಘಟನೆಗಳ ಸಿಂಹಾವಲೋಕನ ಇದರಲ್ಲಿದೆ.

—ಕೊರಡ್ಕಲ್.

ಗಂಗಸರೊ ಗಂಗಸರೊ ಪರಡೆ ಕಲಿ ಗಂಗಸರೊ

ಗಂಗಸರೊ! ಗಂಗಸರೊ!
ಪರಡೆ ಕಲಿ! ಗಂಗಸರೊ: ॥ ಪಲ್ಲ ॥
ಕೆಬಿತ್ತ ಮುರುದೆತ್ತ್‌ದ್ ಪೋಂಡು।
ಪರ್‌ದ್ ಕಲಿ ಗಂಗಸರೊ!
ಕಿದೆತ್ತ ಎರು ಕೊರುದು ಪೋಂಡು,
ಪರ್‌ದ್ ಕಲಿ ಗಂಗಸರೊ!
ಅಟ್ಟಿದ ಬಿತ್ತ್ ದೆತ್ತ್‌ದ್ ಪೋಂಡು!
ಪರ್‌ದ್ ಕಲಿ ಗಂಗಸರೊ!
ಇಲ್ಲ್ ಬಲ್ಲ್ ಮಾರ್‌ದ್ ಪೋಂಡು।
ಪರ್‌ದ್ ಕಲಿ ಗಂಗಸರೊ!
ತಿಪ್ಪಿ ಕೋಲು ಬತ್ತ್‌ದ್ ಪೋಂಡು।
ಪರ್‌ದ್ ಕಲಿ ಗಂಗಸರೋ!
ತರೆತ್ ಟೊಪ್ಪಿ ಬೂರ್‌ದ್ ಪೋಂಡು।
ಪರ್‌ದ್ ಕಲಿ ಗಂಗಸರೊ!
ಅಪ್ಪೆಸ ಪೋಂಡು। ಬಪ್ಪೆಸ ಪೋಂಡು।
ಪರ್‌ದ್ ಕಲಿ ಗಂಗಸರೊ!
ಸದ್ಗುಣೇರ ಸಂಘ ಪೋಂಡು।
ಪರ್‌ದ್ ಕಲಿ ಗಂಗಸರೊ!
ಅಪ್ಪೆ ಅಮ್ಮನ ಪ್ರೀತಿ ಇಜ್ಜ।
ಪರ್‌ದ್ ಕಲಿ ಗಂಗಸರೊ!
ದೈವ ದೇವೆರೆ ಭಕ್ತಿ ಪೋಂಡು।
ಪರ್‌ದ್ ಕಲಿ ಗಂಗಸರೊ!
ಪಿದ್ರೆ ಕಣ್ಣ್ ನೆತ್ರೆಲ್ ಕಣ್ಣ್।
ಪರ್‌ಂದ ಕಲಿ ಗಂಗಸರೊ!
ತರೆನ್ ಕಂತಾವು ಮೋನೆ ದೆಂಗಾವು
ಪರ್‌ಂದ ಕಲಿ ಗಂಗಸರೊ!
ಕೋಪ ಬರು। ಕ್ರೋಧ ಬರು।
ಪರ್‌ಂದ ಕಲಿ ಗಂಗಸರೊ!
ಕಾನೂನ್ ಆಂಡ್ ಶೀಕ್ಷೆ ಉಪ್ಪು!
ಪರಡೆ ಕಲಿ ಗಂಗಸರೊ!

(ಸಂಗ್ರಾಹಕರು ಎಂ. ಆರ್. ಪೂಂಜ)

ಪ್ರಕಟಣೆ

ಉಡ್ಪಿತಾಲ್ಲೂಕು ನಂಬ್ರ 101 ನೇ ಮೂಳೂರು ತರ್ಫೆ ಶ್ಯಾನುಭಾಗ H. ಸದಾಶಿವ ಹೆಗ್ಡೆಯು ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವದೇನೆಂದ್ರೆ ಕಳೆದ ತಾ. 18-9-47ರ ಗುರುವಾರದ ಸಂಚಿಕೆಯ 8 ನೇ ಪುಟದಲ್ಲಿ ಉಡ್ಪಿ ತಾಲ್ಲೂಕು ನಂಬ್ರ 101 ನೇ ಮೂಳೂರು ಗ್ರಾಮದ ಮಾಗಣ್ಣಡಿ ದೂಜ ಶೆಟ್ರ ಹೊಸ ಅಕ್ಕು ಸದ್ರಿಯು ಪ್ರಕಟಿಸಿದ ದರ್ಖಾಸ್ತು ಅರ್ಜಿಯ ವಿಷಯಗಳೆಲ್ಲವೂ ತೀರಾ ಸುಳ್ಳು. ಮತ್ತು ನನ್ನ ದ್ವೇಷಿಕರ ಹಾಗೂ, ಸದ್ರಿ ಅಕ್ಕು ಸದ್ರಿಯ ಸ್ವೇಚ್ಛಾಚಾರಕ್ಕೆ ಕಟ್ಟು ಬಿದ್ದವರ ಪಿತೂರಿ, ಮತ್ತು ದುರ್ಬೋಧನೆಗೆ ಒಳಪಟ್ಟದ್ದು.

ನಾನು ಸದ್ರಿ ಹೆಂಗಸಿನಿಂದ ಯಾವ ಕಾಲಿ ಕಾಗದಕ್ಕೂ, ದಸ್ಕತು ವ ಕೈ ಮೊಹರು ಪಡೆದದ್ದು ಇಲ್ಲ. ಅಂತೂ ಇದು ನನ್ನ ಹೆಸರಿಗೆ ವ ಕೀರ್ತಿಗೆ ಕಳಂಕ ತರುವರೆ ಮಾಡಿದ ದ್ವೇಷ ಸೂಚಿತ ಪ್ರಕಟಣೆ ಆದುದರಿಂದ ಯಾರೂ ಅದನ್ನು ನಂಬಿ ನನ್ನ ಮೇಲೆ ದುರಾಭಿಪ್ರಾಯ ಪಡೆಯ ಬಾರದಾಗಿ ಸಹ ಈ ಮೂಲಕ ತಿಳಿಸುತ್ತೇನೆ.

H Sadashiva Hegde.
Village Karnum of muluru and Belapu Villages 25-9-1947.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು–
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ,
ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವ್ಯವಹಾರಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಮದ್ಯಪಾನದ ನಿಷೇಧವನ್ನು ಪ್ರೋತ್ಸಾಹಿಸೋಣ

ಲೇಖಕ:—ಎಸ್. ಬಿ. ಸಿ. ರೆಬೆಲ್ಲೊ.

ಹಿಂದು ಮತ್ತು ಮುಸಲ್ಮಾನರಿಗೆ ಅನು ಲಾಗದಷ್ಟು ಮದ್ಯ ಕುಡಿದರೂ ಕೂಡ ಪಾಪವಾಗುತ್ತದೆ. ಒಂದೇ ಒಂದು ಬೊಟ್ಟು ಕುಡಿದರೆ ಕೂಡ, ಅವರ ನೀತಿಗೆ ವಿರೋಧವಾಗುತ್ತದೆ. ಆದರೆ ಸಂಗಡಿಗರನ್ನು ಪ್ರಸನ್ನಗೊಳಿಸುವುದಕ್ಕಾಗಲೀ, ಈಗಿನ ಪದ್ಧತಿ ಪ್ರಕಾರ ತಾವು 'ಅಪ್-ಟು-ಡೇಟ್' ಎಂಬುವನ್ನು ತೋರಿಸುವುದಕ್ಕಾಗಲಿ, ಗಾಳಿಗಮ್ಮತಿಗೆ ವಿರಾಹಾರ್ಥನಾಗಿ ಹೋಗಿರುವಾಗಲಾಗಲಿ, ಇವರು ಕೂಡ ಮದ್ಯಪಾನದ ರುಚಿ ಹಿಡಿದುಕೊಂಡಿದ್ದರು. "ಸ್ವಲ್ಪ ಕುಡಿದರೆ ಏನೂ ಕೇಡಿಲ್ಲ", ಎಂಬ ಧೈರ್ಯದಿಂದ ನಮ್ಮನ್ನು ಕ್ರಮೇಣ ಆಳದ ಹೊಂಡಕ್ಕಿಳಿಸುವಂತಹ ಹೆಂಡ, ವೈನು, ಶರಾಬು ಇವನ್ನು ನಾವು ಕುಡಿಯಲಾರಂಭಿಸುತ್ತಿದ್ದೆವು. ಪ್ರಥಮವಾಗಿ ಖಾಲಿಯಾಗುತ್ತಿರುವ ಗ್ಲಾಸನ್ನು ತುಟಿಗಳಿಗೆ ಅಲ್ಪ ಸ್ವಲ್ಪ ತೋರಿಸಿ ತಾಗಿಸಿ, ಅನಂತರ ಕ್ರಮ ಕ್ರಮೇಣ ಥಳಥಳಿಸುವ, ಜಗಜಗಿಸುವ ಬಿಸಿ ಬಿಸಿ ಬೆಂಕಿ-ದ್ರಾವಕವನ್ನು ಸೇವಿಸುತ್ತಿದ್ದೆವು. ನಿದಾನವಾಗಿ, ಆದರೆ ಖಂಡಿತವಾಗಿ, ನಮಗೆ ಅವುಗಳ ಅಭ್ಯಾಸವಾಗುತಿತ್ತು. ನಮ್ಮ ಹಣವು ಬಿಕ್ಕಟ್ಟಾಗುತಿತ್ತು. ನಮ್ಮ ಕುಟುಂಬವು ನಾಶವಾಗುತಿತ್ತು. ನಮ್ಮ ಮನೆಯ ಮತ್ತು ಜಾತಿಯ ಶಾಂತಿಯನ್ನು ಕಳೆದುಕೊಳ್ಳುತ್ತಿದ್ದೆವು. ಪ್ರೀತಿಯ ಕರುಳನ್ನು ಕರಗಿಸುತ್ತಿದ್ದೆವು. ಕುಸುಮ ಕೋಮಲವಾದ ಎಳೆಗಣ್ಣುಗಳಿಂದ ಕಣ್ಣೀರು ತರಿಸುತ್ತಿದ್ದೆವು. ಸುಖದಿಂದ ನಲಿಯುವ ನಮ್ಮ ವಾಸಸ್ಥಾನಕ್ಕೆ ನಾವೇ ಕೊಡಲಿ ಹಾಕುತ್ತಿದ್ದೆವು. ನಮ್ಮ ಪಿತ್ರಾರ್ಜಿತ ಆಸ್ತಿಗಳನ್ನು ಮಾರುತ್ತಿದ್ದೆವು.

ಹೆಂಡ-ಶರಾಬಿನ ಮೊತ್ತ ಮೊದಲಿನ ಗ್ಲಾಸು ಒಂದು ದಿವಸ ಇಡೀ ಬಾಟ್ಲಿಯನ್ನು ಆಡ್ಡ ಹಾಕುವುದೆಂದು ನಮ್ಮ ಬಾಟ್ಲಿ ಗೆಳೆಯನಿಗೆ ಮೊದಲೇ ಗೊತ್ತಿದ್ದರೆ, ಅವನು ಆರಂಭದಲ್ಲಿ ಈ ಕೆಟ್ಟ ಪೇಯಗಳ ರುಚಿಯನ್ನೇ ನೋಡುತ್ತಿರಲಿಲ್ಲ. ಅವನು ತನ್ನ ಮನೋಬಲವನ್ನು ಹೆಚ್ಚು ನಂಬಿಕೊಂಡು, ಇಂದು ಅವನು ಹೊಂಡದಲ್ಲಿ ಬಿದ್ದನು. ಶುರುವಿಗೇನೇ, ಮದ್ಯಪಾನದ ರುಚಿಯೇನೆಂದು ನೋಡದಿರುತ್ತಿದ್ದರೆ, ಇವತ್ತು ಅವನು ಹೆಂಡ-ಶರಾಬೆಂಬ ಪಿಶಾಚಿಯ ಬಾಯಲ್ಲಿ ಸಿಕ್ಕಿಬೀಳಲಿಕ್ಕಿಲ್ಲವಿತ್ತು. ಕಾರಣ, ನಮ್ಮ ವೈರಿಗಳು ಕೂಡ ಭೂತದ್ರಾವಕಗಳ ರುಚಿ ಸಹ ನೋಡದಂತೆ ಸರಕಾರವು ಮದ್ಯಪಾನ ನಿಷೇಧ ಮಾಡಿದಲ್ಲಿ, ಅದು ಎಲ್ಲರಿಗೂ ಒಂದು ವರದಾನವಾಗುವುದರಲ್ಲಿ ಸಂದೇಹವಿಲ್ಲ.

ಈಗ ಅಕ್ಕಿ ಕಡಿಮೆಯಿರುವುದರಿಂದ ಬಡವರಿಗೆ ಹೆಂಡವನ್ನಾದರೂ ಕುಡಿಯಲಿಕ್ಕೆ ಬಿಡಬೇಕೆಂದು ಕೆಲವರು ಎನ್ನುತ್ತಾರೆ. ಪರೀಕ್ಷಿಸಿ ನೋಡಿದರೆ, ಇವರು ಬಡವರ ಮೇಲಿನ ಪ್ರೀತಿಯಿಂದ ಹೀಗೆ ಹೇಳುವುದಲ್ಲ. ಮದ್ಯಪಾನ ನಿಷೇಧವನ್ನು ಆದಷ್ಟು ಮುಂದೂಡಲಿಕ್ಕೆ ಇದೊಂದು ಉಪಾಯ, ಒಂದು ಕುಂಟುನೆವ. ಅಕ್ಕಿ ಮತ್ತು ಬಟ್ಟೆಗಳ ಮೇಲೆ ಹಾಕುವಂತಹ ಹಣವನ್ನು, ಈಗ ಇವುಗಳ ಕೊರತೆಯಿರುವ ಸಮಯದಲ್ಲಿ, ಬಡವರು ಹೆಂಡ ಶರಾಬಿನ ಮೇಲೆ ವಿಶೇಷವಾಗಿ ಹಾಕುತ್ತಿದ್ದರು. ಮದ್ಯಪಾನ ನಿಷೇಧವನ್ನು ಇದೇ ಸಮಯದಲ್ಲಿ ಜಾರಿಗೆ ತಂದುದರಿಂದ ಹೀಗೆ ಹಾಳಾಗುವ ಹಣವನ್ನು ಹಾಲು, ಹಣ್ಣು, ಮೊಟ್ಟೆ, ಮೀನು, ಮಾಂಸ, ಕಾಯಿಪಲ್ಯಗಳಿಗಾಗಿ ವೆಚ್ಚ ಮಾಡಿ ಬಡವರು ದಷ್ಟ ಪುಷ್ಟರಾಗಬಹುದು. ಐಶ್ವರ್ಯವಂತರು ಕಳ್ಳು, ವೈನು, ಶರಾಬು, ವಿಸ್ಕಿ, ಬ್ರಾಂಡಿ ಇವನ್ನು ಬಿಟ್ಟೇ ಬಿಟ್ಟು ತಮ್ಮ ಅಪರಿಮಿತ ಸಂಪತ್ತನ್ನು ಲೋಕೋಪಕಾರದ ಕಾರ್ಯಗಳಲ್ಲಿ ಖರ್ಚು ಮಾಡಬಹುದು. ಹೆಂಡ, ವೈನು, ಶರಾಬುಗಳಿಗೆ ಏನೂ ಆಹಾರ ಶಕ್ತಿಯಿಲ್ಲವೆಂಬ ಸತ್ಯವನ್ನು ಅನೇಕ ಪ್ರಸಿದ್ಧ ಡಾಕ್ಟರರು ತಿಳಿಸಿರುತ್ತಾರೆ. ಬಳಿಕ ಹೀಗ ಮದ್ಯವು ನಮ್ಮ ಕೈ ಹಿಡಿಯುವ ಬಡಲು ತುಳಿಯಲಿಕ್ಕೇ ಹವಣಿಸುತ್ತದೆ. ತಮ್ಮ ಶರೀರದ ನೋವನ್ನು ಹೋಗಲಾಡಿಸಲಿಕ್ಕೆ ಒಂದು ಬಾಟ್ಲಿ ಹೆಂಡ ಮತ್ತು ಅದರೊಂದಿಗೆ ಒಂದು ಡೋಸ್ ಶರಾಬು ಕುಡಿಯಬೇಕಾಗುತ್ತದೆಂದು ಬಳಲಿದ ಮಜೂರರು ಹೇಳುವುದುಂಟು. ಕೆಲವರಿಗೆ ಒಂದೇ ಒಂದು ಗ್ಲಾಸು ಹೆಂಡ ಕುಡಿದರೂ ತಲೆಗೇರುತ್ತದೆ. ಕೆಲವರಿಗೆ ಒಂದು ಗ್ಲಾಸು ಕುಡಿದರೆ ಗಂಟಲು ಕೂಡಾ ಒದ್ದೆಯಾಗುವುದಿಲ್ಲ. ಅಮಲಾಗದಷ್ಟು ಹೆಂಡ ಶರಾಬು ಕುಡಿಯುವುದರ ಬದಲಿಗೆ ಚಾ ಅಥವಾ ಕಾಫಿ ಕುಡಿಯುವುದು ಲೇಸೆಂದು ತಿಳಿಯುವರು. ಆದರೆ ಒಂದು ಗ್ಲಾಸು ಮುಗಿದ ನಂತರ, ಈ ಉರಿಯುವ ಬೆಂಕಿ-ನೀರನ್ನು ಪದೇ ಪದೇ ತುಂಬಿಸಿ, ಖಾಲಿ ಮಾಡಿ, ಪುನಃ ತುಂಬಿಸಿ, ಖಾಲಿ ಮಾಡುತ್ತ ಹೋಗುತ್ತಿದ್ದರು. ಒಣಗಿದ ತುಟಿಯ ದಾರಿಯಾಗಿ, ಹಸಿವೆಯಿಂದ ಉರಿಯುವ ಹೊಟ್ಟೆಗೆ ಹೋಗುವ ಈ ಅಗ್ನಿ-ದ್ರಾವಕದಿಂದ ಗಂಟಲು ಸುಟ್ಟು ಹೋಗುವುದು, ಮುಖ ಮತ್ತು ಕಣ್ಣುಗಳಿಗೆ ರಕ್ತವೇರಿ ಅವು ಕೆಂಪುಕೆಂಪಾಗುವುವು; ತಲೆ ಸುತ್ತು ಸುತ್ತ ತಿರುಗುವುದು; ಒಳಗಿರುವ ಕೆಟ್ಟ ಮಾತುಗಳೂ, ಬೈಗಳೂ ಹೇರಳವಾಗಿಯೂ ಧಾರಾಳವಾಗಿಯೂ ಹೊರ ಸುರಿಯುವುವು; ಅವನು ಒಂದು ಮೃಗಕ್ಕಿಂತಲೂ ನಿಕೃಷ್ಟವಾಗಿ ಹೊರಳುವನು; ನರಳುವನು; ಜೋಲುವನು.

ಮೃಗವು ಕೂಡ ಮದ್ಯಪಾನ ಮಾಡಲು ಒಲ್ಲೆನೆನ್ನುತ್ತದೆ. ಆದರೆ ಆಹಾ! ಅಕಟಕಟಾ!! ದೇವರ ಸೃಷ್ಟಿಯಲ್ಲಿ ಉತ್ತಮರಾದ ನಾವು ಹೆಂಡ ಶರಾಬು ಕುಡಿದು ಕುಡುಕರಾಗುವುದೇ ಅಲ್ಲ; ನಾವು ಬೇರೆಯವರ ತಲೆಗಳನ್ನು ಕೆಡಿಸುವುದಕ್ಕೆ ಮದ್ಯವನ್ನು ಗುಟ್ಟಿನಲ್ಲಿ ತಯಾರು ಮಾಡಿ ಕೊಡುತ್ತೇವೆ. ಆದುದರಿಂದ ನಾವು ಈ ತರದ ಕಳ್ಳತನದ ಮದ್ಯ ತಯಾರಿಕೆಯನ್ನು ನಿಲ್ಲಿಸೋಣ. ನಾವು ನಮ್ಮ ಬಡ ಮತ್ತು ಅಶಿಕ್ಷಿತ ಮಜೂರರ ಮತ್ತು ರೈತರ ದುರ್ಬಲತೆ ಮತ್ತು ದೋಷಗಳಿಂದ, ಗುಟ್ಟಿನಲ್ಲಿ ಮದ್ಯ ವ್ಯಾಪಾರ ಮಾಡಿ ಹಣಗಳಿಸುವುದನ್ನೂ, ಬಡವರ ಅಲ್ಪ ಸಂಪಾದನೆಯಿಂದ ಅವರನ್ನು ವಂಚನೆಗೊಳಿಸುವುದನ್ನೂ ನಿಲ್ಲಿಸೋಣ.

ಈ ಸೈತಾನ ಶರಾಬನ್ನು ತಯಾರು ಮಾಡುವ ಮತ್ತು ಅವನ್ನು ಕುಡಿಯುವ ಅಕ್ರಮವನ್ನು ನಾವು ಇಂದಿನಿಂದಲೇ ನಿಲ್ಲಿಸುವ. ಒಂದೇ ಒಂದು ಬೊಟ್ಟು ಶರಾಬನ್ನು ತಯಾರು ಮಾಡಲಿಕ್ಕಿಲ್ಲವೆಂದು ನಾವು ನಿಶ್ಚಯ ಮಾಡುವ. ನಮ್ಮ ಜನತಾ ಸರಕಾರವು ನಮ್ಮೆಲ್ಲರ ಒಳಿತಕ್ಕಾಗಿ, ಅಪರಿಮಿತ ಅಬಕಾರಿ ಉತ್ಪತ್ತಿಯನ್ನು ಕಳಕೊಂಡು, ಬಹು ಬಡವರಾದ ಕೆಲಸಗಾರರ ಮತ್ತು ರೈತರ ಹಿತಕ್ಕಾಗಿ ಜಾರಿಗೆ ತಂದ ಮದ್ಯಪಾನ ನಿಷೇಧದ ಕಾನೂನನ್ನು ನಾವು ಎರಡೂ ಕೈಗಳಿಂದ ಮತ್ತು ಅತಿ ಹೆಚ್ಚು ಉಲ್ಲಾಸದಿಂದ ಸ್ವಾಗತೀಕರಿಸುವ. ಈ ಕಾನೂನಿಗೆ ಯಾವುದೊಂದೂ ಅಡ್ಡಿಯಾಗದಂತೆ ಮತ್ತು ಸರಕಾರದ ಈ ಪ್ರಯತ್ನಗಳು ವಿಫಲವಾಗದಂತೆ ನಮ್ಮ ಸಹಾಯ ಸಹಕಾರಗಳನ್ನು ನೀಡುವ. ನಮ್ಮ ಏಕಮನಸ್ಸಿನ ಬೆಂಬಲವನ್ನು ಕೊಡೋಣ. ಅದಕ್ಕಾಗಿ ಜಯಘೋಷ ಮಾಡುವ.

॥ ಜಯ್ ಹಿಂದ್ ॥

ವಿವಿಧ ಪಾತ್ರೆಗಳು



ಯಾವತರ್ಹ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ನಮ್ಮಲ್ಲಿ ದೊರೆಯುವ ಕೆಲವು ಪುಸ್ತಕಗಳು

	ರೂ.	ಆ.
ಸುಲಭದಲ್ಲಿ ಇಂಗ್ಲಿಷ್	1	8
ಮನೆಮದ್ದು	2	0
ಸ್ವತಂತ್ರ ಜೀವನೋಪಾಯ	0	3
ಸಂಶಯ ಪಿಶಾಚಿ	0	8
ನಾಡ ಕತೆಗಳು	0	3
ಕಾವ್ಯ ಸಾಮ್ರಾಜ್ಯ	1	4
ಕುಶಲವ	0	6
ಮಧುವನ	3	0
ವ್ಯಭಿಚಾರಿಣಿ ಯಾರು	1	0
ಹೆಂಡ್ತಿ ಗಂಡನಾದರೆ	0	4
ಪುರುಷವಧ,	0	4
ಸನ್ಯಾಸಿಯು ಸೋಗಿನಲ್ಲಿ	0	8
ನಂದಾದೀಪ	0	14
ದೇಶಭಕ್ತ	1	4
ಪ್ರೇಮವಿಜಯ	1	0
ರಂಗಭೂಮಿ	0	8
ಸೇವಾಪಥ	0	8
ನಾರೀ ಹೃದಯ	0	14
ಭಾರತೀಯ ಕತೆಗಳು	0	14
ಪ್ರಕಾಶ	2	4
ಮೂರು ಪ್ರಹಸನಗಳು	0	14
ನಗೆ ನೋಟಗಳು	0	14
ಅನ್ನದೇವರು ಮತ್ತು ಇತರ ಕತೆಗಳು	1	0
ಭಾರತದಲ್ಲಿ ಜಾತಿಭೇದ	1	0
ವಿಷ್ಣುವಿನ ದಶಾವತಾರಗಳು	0	12
ಆಕಾಶಗಂಗೆ	1	12
ಸ್ವಾತಂತ್ರ್ಯವೀರ ಸಾವರ್ಕರ್	1	4
ಜೀವನ ಸಂಗ್ರಾಮ	1	8
ಕದಂಬ	1	4
ಬಾಲವಾಙ್ಮಯ	0	8
ಆರೋಗ್ಯ ಪ್ರಕಾಶ	0	12

ಧರ್ಮಸಂಕಟ	0	4
ಕಂಡೂ ಕಾಣದ ನೋಟಗಳು	0	8
ಆಹುತಿ ಇತ್ಯಾದಿ ಕತೆಗಳು	0	12
ಶ್ರೀಮುಖ	1	0
ವಿರಾಗಿಣಿ	0	4
ಪಂಚಾರತಿ	0	6
ಚಿಗುರು	0	6
ಲೋಪಾಮುದ್ರೆ	0	6
ಪ್ರತೀಕಾರ	0	6
ಪ್ರೇಮಪ್ರವಾಹ	0	8
ಅಂತರಂಗದ ಕತೆಗಳು	0	12
ಶಂಭುಕ ವಧೆ	0	2
ಮುಗುಳು	0	4
ವೀರಭೂಮಿ	0	2
ಸರಸ್ವತಿ	0	12
ವಿಶಾಲಾಬಾಯಿ	0	10
ಆಯುರ್ವೇದ ಸಂಚಿಕೆ	0	8
ಪರ್ಯಾಯ ಸಂಚಿಕೆ	0	8
ಚಲಚ್ಚಿತ್ರ ಪದ್ಯಾವಳಿ	0	3
ಪಾಪಪೂರಿತ ಪಟ್ಟಣಗಳು	2	0
ಕಾಂಗ್ರೆಸಿನ 60 ವರ್ಷಗಳು	0	8
ಜ್ಯೋತಿಷ ಕಲ್ಪದ್ರುಮ I, II ಭಾಗಗಳು	6	8
ಪಂಚವರ್ಣ	0	6
ಸುಶೀಲೆ	1	0
ಲಾವಣ್ಯವತಿ	0	12
ಎಳ್ಚೆತ್ತ ಆಗ್ನೇಯ ಏಶಿಯ	1	8
ನಿಶ್ಚಯ/ಜ್ಞಾನ	0	8
ದ್ವೈತಮತ ಖಂಡನೆ	0	6
ಪರಾಗ	0	10
ವಿದ್ಯಾರಣ್ಯ ಕಾವ್ಯ	1	4
ಶ್ರೀರಾಮ ಪರೀಕ್ಷಣಂ	1	4
ಕಾಶ್ಮೀರ ಪ್ರವಾಸ	0	10

ಪ್ರಬಂಧ ಪುಷ್ಪಾಂಜಲಿ	1	4
ಅಮೃತವಾಹಿನಿ	0	4
ಕನ್ನಡ ಯಾತ್ರೆ	1	8
ಜೇನಿನ ವ್ಯವಸಾಯ	1	0
ಭಾರದ್ವಾಜ ಡಿಕ್ಷನರಿ	6	0
,, ,,	4	8
ಅಂತರಂಗ ಸಂಪುಟ ಬೈಂಡು ಪ್ರತಿ ಪ್ರತಿ ವರ್ಷದ್ದಕ್ಕೆ	5	0
ಬಾಲಚಂದ್ರ ಸಂಪುಟ ಬೈಂಡು ಪ್ರತಿ ಪ್ರತಿ ವರ್ಷದ್ದಕ್ಕೆ	2	0
ದೂರ ಹೋದಳು	0	8
ಕಿಚ್ಚು	0	12
ಚಿತ್ರ	0	12
ಮುದ್ದಿನ ಕಣಿ	0	12
ಪರಿವರ್ತನೆ	0	10
ದೀಪಾವಳಿ ಮತ್ತು ಇತರ ಕತೆಗಳು	1	6
ಬೆಳ್ಳಿಯ ಹಬ್ಬ	0	12
ಹೆಣ್ಣಿನ ತೊಡಕು	0	4
ಭಕ್ತವಾತ್ಸಲ್ಯ	1	8
ಪ್ರೇಮ ನಾಟಕಾವಳಿ	1	2
ರಾಜವಲ್ಲಭ	0	12
ಸಮ್ಮೂರ ನಡತೆ	0	6
ಧರ್ಮಸಾಮ್ರಾಜ್ಯ	1	4
ಒಳಸಂಚು	1	8
ಮ್ಯಾಕ್‌ಬೆತ್	1	2
ಗೀತಾನಾಟಕಗಳು	2	4
ಷಷ್ಠೀ ನಾಟಕಗಳು	1	8
ಸಾಹಿತ್ಯ ರಕ್ಷೆ	4	0
ಬಾ	0	4
ಬಾಪೂಜಿ	0	8
ಚಂದ್ರಗುಪ್ತ	1	8

0—2—0 ಸ್ಟಾಂಪು ಕಳಿಸಿದರೆ ಕೆಟಲಾಗು ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

(೨ನೇ ಪುಟದಿಂದ)

ಗಳನ್ನು ಕಟ್ಟಿಕೊಂಡಿರುವ ನಾನು ಜೀವಿಸೀರೆಯೆಂದು ಎಚ್ಚರಿಸುವ ಪತ್ರಗಳು ನನಗೆ ಬಂದಿವೆ; ಹಲವು ಹಿಂದುಗಳೂ ಹಾಗೆ ಹೇಳಿ ಹೋಗಿದ್ದಾರೆ. ನಾನು ತಿಳಿಗೇಡಿಯಲ್ಲ. ನಾನೇನು ಮಾಡುತ್ತಿದ್ದೇನೆಂಬುದು ನನಗೆ ಗೊತ್ತಿದೆ. ಶಾಹೀದ್ ಸಾಹೇಬರು (ಸುಹ್ರವರ್ದಿ) ಹಿಂದೆ ಮಾಡಿದುದಕ್ಕೂ ನನಗೂ ಸಂಬಂಧವಿಲ್ಲ. ಆದರೀಗ ಶಾಹೀದ್ ಸಾಹೇಬರು ಸರ್ವಾಂತಃಕರಣ ಪೂರ್ವಕ ತನ್ನನ್ನು ಸಮರ್ಪಿಸಿ ಕೊಂಡಿರುವ ಕೆಲಸದ ಹಿಂದೆಯೂ ಏನಾದರೂ ದುರುದ್ದೇಶವಿರಬೇಕೆಂದು ಸಂದೇಹ ಪಡುವುದೆಂದರೆ ತಿಳುವಳಿಕೆಯನ್ನು ಅಪಮಾನಿಸಿದಂತೆಯೇ ಸರಿ. ಇವರಿಗೆ ಅರಮನೆಯಂತಹ ಮನೆಯಿದೆ. ಬುದ್ಧಿವಂತಿಕೆಯಲ್ಲಿ ತನ್ನನ್ನು ಮೀರಿದವನೆಂದು ಇವರು ಭಾವಿಸಿರುವ ಓರ್ವ ಸಹೋದರನಿದ್ದಾನೆ. ಢಕ್ಕಾ ಯೂನಿವರ್ಸಿಟಿಯ ವೈಸ್ ಛಾನ್ಸೆಲರ್ ಆಗಿದ್ದ ಇವರ ಮತ್ತೊಬ್ಬ ಸಹೋದರನ ಪರಿಚಯವು ದುಂಡುಮೇಜು ಸಮ್ಮೇಲನಕ್ಕಾಗಿ ಲಂಡನಿಗೆ ಹೋಗಿದ್ದಾಗ ಅಲ್ಲಿ ನನಗಾಗಿತ್ತು. ಸರ್. ಅಬ್ದುಲ್ಲಾ ಇವರ ಮಾವ. ಮಾತೃ ಕಡೆಯ ಇವರ ಮಾವ ಪೈಗಂಬರ್ ಉಪದೇಶಗಳ ಗ್ರಂಥಕರ್ತರಿದ್ದರು. ಇಂಥವರ ಉದ್ದೇಶದ ಕುರಿತು ಅಪನಂಬಿಕೆ ಪಡುವುದು ತಪ್ಪು. ಒಬ್ಬ ಮನುಷ್ಯನ ಉದ್ದೇಶವನ್ನು ಪ್ರಶ್ನಿಸುವ ಹಕ್ಕು ಯಾರೊಬ್ಬನಿಗೂ ಇಲ್ಲ. ನನ್ನ ಕೃತ್ಯಗಳಿಗೆ ವಿರುದ್ಧವಾಗಿ ನನ್ನ ಉದ್ದೇಶವಿರಬಹುದೆಂದು ಯಾರಾದರೂ ತೀರ್ಮಾನಿಸುವದು ನನಗೊಪ್ಪಿಗೆಯಾಗದು. ನನ್ನ ವಿರೋಧವಿದ್ದರೂ ಗಣಿಸದೆ ನಾನು ಇಸ್ಲಾಮಿನ ನಂಬ್ರ 1ನೇ ವೈರಿಯೆಂದು ಕರೆಯಲ್ಪಡುತ್ತಿದ್ದುದು ನಿಮಗೆಲ್ಲಾ ಗೊತ್ತಿದೆ. ಅಂದಮೇಲೆ ಮುಸ್ಲಿಮರಿಂದಾದರೂ ನನ್ನ ವರ್ತನೆಯನ್ನು ಇದ್ದಕ್ಕಿದ್ದಂತೆ ತಿಳಿದುಕೊಳ್ಳಲಪೇಕ್ಷಿಸುವದು ನಿಮಗೆ ಬೇಕಾಗಿಲ್ಲವೆ?

❋

ಡಿಲ್ಲಿಯಲ್ಲಿದ್ದ ಮುಸ್ಲಿಂ ನಿರಾಶ್ರಿತ ನಿಲಯವೊಂದನ್ನು ನೋಡಿದೆ. ಅಲ್ಲಿ ಚರ್ಮ ಮತ್ತು ಎಲುಬು ಮಾತ್ರವಿದ್ದ ಅತ್ಯಂತ ಮುದುಕನೊಬ್ಬನಿದ್ದ; ಅವನ ಎಲ್ಲಾ ಸಂದುಗೊಂದುಗಳೂ ತೋರುತ್ತಿದ್ದುವು. ಅವನ ಮೈಯ್ಯಲ್ಲಿ ಹಲವೆಡೆ ಚೂರಿ ತಿವಿತಗಳಿದ್ದುವು. ಅವನ ಪಕ್ಕದಲ್ಲಿ ಅಷ್ಟು ಮುದುಕಿಯಲ್ಲವಾದರೂ ಹಾಗೆಯೇ ಜಖಂಗೊಳಿಸಲ್ಪಟ್ಟ ಹೆಂಗಸೊಬ್ಬಳಿದ್ದಳು. ಅವರನ್ನು ನೋಡಿದಾಗ ನಾಚಿಕೆಯಿಂದ ತಲೆತಗ್ಗಿಸಿಬಿಟ್ಟೆ.

❋

ನಿರಾಶ್ರಿತ ನಿಲಯಗಳ ಕೊಳಕು ಸ್ಥಿತಿಯು ಅವರ್ಣನೀಯ. ನಾನೊಬ್ಬ ಕೇಂಪ್ ಕಮಾಂಡರನಾಗಿದ್ದರೆ, ಮತ್ತು ನನ್ನ ಕೈಕೆಳಗೆ ಪೋಲೀಸು ಮತ್ತು ಸೇನೆಗಳಿದ್ದರೆ, ನಾನು ಸ್ವತಃ ಹಾರೆ ಕುಕ್ಕೆಗಳನ್ನು ಹೆಗಲಿಗೇರಿಸಿಕೊಳ್ಳುತ್ತಿದ್ದೆ; ಸೈನಿಕರು ಮತ್ತು ಪೋಲೀಸರನ್ನೂ ಹಾಗೆಯೇ ಮಾಡುವಂತೆ ಆಜ್ಞಾಪಿಸುತ್ತಿದ್ದೆ. ಆ ಮೇಲೆ ಶಿಬಿರದ ನಿರಾಶ್ರಿತರೂ ನಮ್ಮನ್ನನುಸರಿಸುವಂತೆ ಹೇಳಿ ಎಲ್ಲವನ್ನೂ ಸ್ವಚ್ಛಗೊಳಿಸುತ್ತಿದ್ದೆ.

❋

ಮಿಲಿಯಗಟ್ಟಲೆ ಹಿಂದುಗಳ, ಸಿಖ್ಖರ, ಮುಸ್ಲಿಮರ ಬದಲಾವಣೆಯೆಂಬುದು ಯೋಚನಾತೀತ ಸಂಗತಿ. ಹಿಂದುಗಳೂ ಸಿಖ್ಖರೂ ಸರೀ ಹೆಜ್ಜೆಯಿಡಲಿ; ಓಡಿಸಲ್ಪಟ್ಟ ಮುಸ್ಲಿಮರನ್ನೆಲ್ಲಾ ಮರಳಿ ಕರೆಯಲಿ; ಪಾಕಿಸ್ತಾನವು ಮಾಡಿದ ಅಪರಾಧವನ್ನು ನಾವು ಸರಿಗೊಳಿಸಬೇಕು—ನಮ್ಮಲ್ಲಿಯ ಜನರನ್ನು ವರ್ಗಾಯಿಸಲಾರೆವೆಂಬ ದೃಢ ನಿರ್ಧಾರದಿಂದಲೇ ಅದನ್ನು ಸರಿಗೊಳಿಸಬೇಕು.

❋

ಅಲ್ಪಸಂಖ್ಯಾಕರು ಒಂದೋ ದೇವರ ಮೇಲೆ ಮತ್ತಾತನ ನಿರ್ಮಾಣವಾದ ಮನುಷ್ಯನ ಮೇಲೆ ಭರವಸೆಯಿಡಬೇಕು. ಇಲ್ಲವೇ ತಮಗೆ ನಂಬಿಕೆಯಿಲ್ಲದವರ ಇದಿರಲ್ಲಿ ತಮ್ಮನ್ನು ರಕ್ಷಿಸಿಕೊಳ್ಳಲು ಕೇವಲ ತಮ್ಮ ಆಯುಧೋಪಕರಣಗಳನ್ನೇ ನಂಬಿಬೇಕು. ತಪ್ಪಿತಸ್ಥರಿಂದ ನಿಮ್ಮನ್ನು ಉಳಿಸಿಕೊಡುವರೆಂಬ ವಿಶ್ವಾಸವೂ, ನಿಮಗಾದ ಹಾನಿಗೆ ಪರಿಹಾರ ಸಂದಾಯಿಸುವರೆಂಬ ವಿಶ್ವಾಸವೂ ನಿಮಗಿರಬೇಕು ನಿಮ್ಮ ಸರಕಾರದ ಮೇಲೆಯೇ. ಸರಕಾರದಿಂದ ಮಾಡಲಾಗದ ಕಾರ್ಯವೆಂದರೆ ಸತ್ತವರನ್ನು ಮರಳಿತರಲಾಗದುದೊಂದೇ.

❋

ರಾತ್ರಿ ಮಲಗಿದ್ದಲ್ಲಿ, ಜೀವ ಬರಿಸುವಂತಹ ದರಬರ ಮಳೇ ಸದ್ದು ನನಗೆ ಕೇಳಿಸುತ್ತಿತ್ತು. ಆಗ ನನಗೆ ಬಹಿರಂಗ ಶಿಬಿರಗಳಲ್ಲಿದ್ದ ಸಹಸ್ರಾರು ನಿರಾಶ್ರಿತರ ನೆನಪಾಯಿತು. ನಾನೇನೋ ಎಲ್ಲಾ ಕಡೆಗಳಿಂದಲೂ ನನ್ನನ್ನು ಸುರಕ್ಷಿತವಾಗಿ ಬೆಚ್ಚಗಿರಿಸಿದ ವರಾಂಡದಲ್ಲಿ ಮಲಗಿದ್ದೆ. ಆದರೆ ಮನುಷ್ಯನೇ ತನ್ನ ಸಹೋದರನ ಮೇಲೆ ತೋರಿಸಿದ ಕ್ರೂರ ಕೈಯ್ಯದೆಸೆಯಿಂದ ಈ ಸಹಸ್ರಾವಧಿ ನಿರ್ಗತಿಕರು ಆಶ್ರಯ ರಹಿತರು ಮತ್ತು ಆಹಾರ ರಹಿತರಾಗಿ ಅಲ್ಲಿ ಬಿದ್ದಿದ್ದರು.

❋

ನಾನು ಮುಸ್ಲಿಮರ ಮಿತ್ರನೆಂದೂ ಹಿಂದೂ ಸಿಖ್ಖರ ವೈರಿಯೆಂದೂ ಹಲವರಿಂದ ಗಣಿಸಲ್ಪಟ್ಟಿದ್ದೇನೆ. ನಾನು ಪಾರ್ಸಿಗಳ ಮತ್ತಿತರರ ಮಿತ್ರನಿರುವಂತೆಯೇ ಮುಸ್ಲಿಮರ ಮಿತ್ರನೆಂಬುದೇನೋ ನಿಜ. ಈ ಮಟ್ಟಿಗೆ ನಾನು ನನ್ನ 12ನೇ ವರುಷ ಪ್ರಾಯದಿಂದಲೂ ಹಾಗೆಯೇ ಇದ್ದೇನೆ. ಆದರೆ ನನ್ನನ್ನು ಹಿಂದೂ ಸಿಖ್ಖರ ವೈರಿಯೆಂದು ಕರೆಯುವವರಿಗೆ ನಾನಾರೆಂಬುದು ಗೊತ್ತೇ ಇಲ್ಲ. ನಾನಾರ ವೈರಿಯೂ ಅಲ್ಲ; ಆದರಲ್ಲಾ ಹಿಂದೂ ಸಿಖ್ಖರ ವೈರಿಯೆಂದಿಗೂ ಆಗಲಾರೆ

❋

ಪಾಕಿಸ್ತಾನವು ತಪ್ಪುಗಳನ್ನು ಮಾಡುತ್ತಾ ಹೋದಲ್ಲಿ ಭಾರತ ಮತ್ತು ಪಾಕಿಸ್ತಾನಗಳೊಳಗೆ ಯುದ್ಧವಂತೂ ಖಂಡಿತ. ನನ್ನಿಚ್ಛೆಯಂತಾಗುತ್ತಿದ್ದರೆ ಪೋಲೀಸರೂ ಬೇಡ, ಸೈನಿಕರೂ ಬೇಡ. ಆದರೀ ಮಾತು ಸದ್ಯ ಒಂದು ಬಡಾಯಿಯೇ ಸರಿ. ನಾನೇನೂ ಸರಕಾರದವಲ್ಲ.

❋

ನಾನೊಬ್ಬ 'ಸನಾತನಿ ಹಿಂದು' ಎನ್ನುತ್ತೇನೆ. ಸನಾತನ ಶಬ್ದದ ಮೂಲದ ಅರ್ಥವನ್ನೇ ನಾನು ಕಟ್ಟಿಕೊಂಡಿದ್ದೇನೆ. ಹಿಂದುತ್ವವು ಪ್ರಪಂಚದ ಎಲ್ಲಾ ಧರ್ಮಗಳ ಸಾರಸಂಗ್ರಹವಾಗಿದೆ. ಅದೇನೂ ಒಂದು ವಿಶಿಷ್ಟ ಧರ್ಮವಲ್ಲ. ಆದ್ದರಿಂದ ದುರ್ದೈವ ವಶಾತ್ ಈ ದಿನ ತೋರಿಬರುತ್ತಿರುವಂತೆ ಇಸ್ಲಾಮಿನೊಡನೆ ಅಥವಾ ಅದರ ಅನುಯಾಯಿಗಳೊಡನೆ ಅದಕ್ಕೆ ಜಗಳವಿರಕೂಡದು.

❋

ಪಾಕಿಸ್ತಾನದಲ್ಲಿ ಅಲ್ಪ ಸಂಖ್ಯಾಕರಾದ ಹಿಂದೂ ಸಿಖ್ಖರು ಅನ್ಯಾಯಕ್ಕೊಳಗಾಗಿರುವುದೆಷ್ಟು ಸತ್ಯವೋ ಪೂರ್ವ ಪಂಜಾಬಿನಲ್ಲಿ ಅಲ್ಪ ಸಂಖ್ಯಾಕ ಮುಸ್ಲಿಮರು ಅನ್ಯಾಯಕ್ಕೊಳಗಾಗಿರುವುದೂ ಅಷ್ಟೇ ಸತ್ಯ. ತಪ್ಪನ್ನು ಸುವರ್ಣ ತಕ್ಕಡಿಯಿಂದ ತೂಗುವಂತಿಲ್ಲ. ಇಕ್ಕಡೆಯವರ ಅಪರಾಧಗಳನ್ನು ತೂಕಕ್ಕಿಡುವ ಕಲ್ಲು ನನ್ನಲ್ಲಿಲ್ಲ. ಇಕ್ಕಡೆಯವರೂ ಅಪರಾಧಿಗಳೆಂಬುದೊಂದೇ ನನ್ನ ಮಟ್ಟಿಗೆ ಸಾಕು. ಎರಡೂ ಸರಕಾರಗಳು ಸಂಪೂರ್ಣವಾಗಿ ಹಾಗೂ ಬಿಚ್ಚುಮನಸ್ಸಿನಿಂದ ತಂತಮ್ಮ ತಪ್ಪುಗಳನ್ನೊಪ್ಪಿಕೊಂಡು, ಸಂಧಾನಕ್ಕೆ ಬರಬೇಕು; ಅಸಾಧ್ಯವಾದರೆ ಪಂಚಾಯತರ ತೀರ್ಮಾನಕ್ಕೆ ಬಿಡಬೇಕು. ಆ ವಿನಹ ಬೇರೊಂದಿರುವ ಕಠೋರ ಹಾದಿಯೆಂದರೆ ಯುದ್ಧ. ಈ ಯೋಚನೆಯು ನನ್ನನ್ನು ಹಿಮ್ಮೆಟ್ಟಿಸುತ್ತಿದೆ. ಆದರೆ ಒಪ್ಪಂದ ಅಥವಾ ರಾಜೀ ತೀರ್ಮಾನವಾಗದಿದ್ದಲ್ಲಿ ಅದು ಅನಿವಾರ್ಯ.

❋

ಪ್ರತಿಯೊಬ್ಬ ಹಿಂದು ಸಿಖ್ಖನನ್ನು ಪಾಕಿಸ್ತಾನದಿಂದಲೂ ಪ್ರತಿಯೊಬ್ಬ ಮುಸ್ಲಿಮನನ್ನು ಹಿಂದುಸ್ಥಾನದಿಂದಲೂ ಓಡಿಸುವುದೆಂದರೆ ಅದರ ಅರ್ಥ ಯುದ್ಧ ಮತ್ತು ಇಡೀ ರಾಷ್ಟ್ರದ ಸರ್ವನಾಶ! ಅದು ಭಾರತ ಮತ್ತು ಪಾಕಿಸ್ತಾನವೆರಡರಲ್ಲಿಯೂ ಹಿಂದೂತ್ವ ಮತ್ತು ಇಸ್ಲಾಂ, ಎರಡನ್ನೂ ಧ್ವಂಸಗೊಳಿಸುವುದೇ ಸರಿ. ಯಾರು ಸಹೋದರರಂತೆ ಬಾಳಿಕೊಂಡು ಬಂದಿದ್ದರೋ ಯಾರ ರಕ್ತವು ಜಾಲಿಯಾನ್ ವಾಲಾಬಾಗಿನಲ್ಲಿ ಒಟ್ಟೊಟ್ಟಿಗೆ ಹರಿಯಿತೋ, ಅವರೇ ಈ ದಿನ ಪರಸ್ಪರ ವೈರಿಗಳಾದರೇಕೆಂಬುದನ್ನು ತಿಳಿಯದೆ ದಿಗಿಲುಗೊಂಡಿದ್ದೇನೆ. ಹೀಗಿರುವುದು ಸರಿಯಲ್ಲವೆಂದು ನನ್ನಲ್ಲಿ ವಿಶ್ವಾಸವಿರುವವರಿಗೂ ಹೇಳಲಿದ್ದೇನೆ. ಶಾಂತಿದಾನ ಮಾಡೆಂದು ಪ್ರತಿದಿನವೂ, ಪ್ರತಿ ಘಂಟೆಗೂ ಬೆಂದ ಹೃದಯದಿಂದ ದೇವರಲ್ಲಿ ಮೊರೆಯಿಡುತ್ತಿದ್ದೇನೆ. ಆ ಶಾಂತಿಬಾರದೆ ಹೋದರೆ ನನ್ನನ್ನು ಕರೆಯಿಸಿಕೋ ಎಂಬುದೇ ದೇವರೊಡನೆ ನನ್ನ ಪ್ರಾರ್ಥನೆ.

❋

ಭಾರತದಲ್ಲಿರುವ ಪ್ರತಿಯೊಬ್ಬ ಮುಸ್ಲಿಮನೂ ಪಾಕಿಸ್ತಾನಕ್ಕೆ ವಿಧೇಯನಾಗಿದ್ದಾನೆ ಹೊರತು ಹಿಂದುಸ್ತಾನಕ್ಕಲ್ಲ, ಎಂಬುದನ್ನು ಕೆಲವರು ನನಗೆ ತಿಳಿಸಿದ್ದಾರೆ. ನಾನೀ ಆರೋಪವನ್ನು ಅಲ್ಲಗಳೆಯುತ್ತೇನೆ. ಮುಸ್ಲಿಮರು ಒಬ್ಬನ ಬಳಿಕೊಬ್ಬನಂತೆ ನನ್ನೆಡೆಗೆ ಬಂದು ತದ್ವಿರುದ್ಧಾಭಿಪ್ರಾಯ ಕೊಟ್ಟಿದ್ದಾರೆ. ಹೇಗಿದ್ದರೂ ಬಹು ಸಂಖ್ಯಾಕರು ಅಲ್ಪ ಸಂಖ್ಯಾಕರಿಗೆ ಹೆದರಬೇಕಾಗಿಲ್ಲ. ಸುಮಾರು ನಾಲ್ಕುವರೆ ಕೋಟಿ ಮುಸ್ಲಿಮರು ಭಾರತದಾದ್ಯಂತ ಹರಡಿದ್ದಾರೆ. ಹಳ್ಳೀ ಮುಸ್ಲಿಂ, ಸೇನಾಗ್ರಾಮದವರಂತೆ ಅನಪಾಯಕಾರಿ ಮತ್ತು ಬಡವರಿದ್ದಾರೆ. ಪಾಕಿಸ್ತಾನದ ಸಂಬಂಧವನ್ನೇ ಅವರರಿಯರು. ಅವರನ್ನು ಯಾಕಾಗಿ ಓಡಿಸಬೇಕು? ದ್ರೋಹಿಗಳಿದ್ದಲ್ಲಿ ಅಂಥವರನ್ನು ದಂಡಿಸುವ ಶಾಸನವೂ ಇದೆ. ನನ್ನ ಕಾನೂನು ಇದಲ್ಲ; ಅವರೂ ಅಮೀರ ಪುತ್ರಗಾದಂತೆಯೇ ದೇಶದ್ರೋಹಿಗಳು ಗುಂಡಿಗಾಹುತಿಯಾಗುತ್ತಾರೆ

❋

ಭಾರತದ ಮುಸ್ಲಿಮರು ಪಾಕಿಸ್ತಾನ್ ಭಕ್ತರಾಗಿರುವಂತೆ ಮಾಡುವುದಕ್ಕಾಗಿಯೇ ಕೆಲವು ಮುಸ್ಲಿಂ ಅಧಿಕಾರಿಗಳನ್ನು ಇಲ್ಲಿಟ್ಟಿದ್ದಾರೆಂಬುದನ್ನೂ ಕೇಳಿದೆ. ಎಲ್ಲಾ ಹಿಂದುಗಳನ್ನೂ ಮುಸ್ಲಿಮರು 'ಕಾಫಿರ'ರೆಂದೇ ಭಾವಿಸುತ್ತಾರೆಂದು ಇನ್ನು ಕೆಲವರಂದರು. ಆದರಿದು ಸಂಪೂರ್ಣ ತಪ್ಪೆಂದು ನುರಿತ ಮುಸ್ಲಿಮರು ನನಗೆಂದಿದ್ದಾರೆ. ಮುಸ್ಲಿಂ, ಕ್ರೈಸ್ತ, ಯಹೂದಿಗಳಂತೆಯೇ ಹಿಂದುಗಳೂ ಸ್ಫೂರ್ತಿದಾಯಿ ಧರ್ಮಗ್ರಂಥಗಳ ಭಕ್ತರೇ ಇದ್ದಾರೆ. ಹೇಗಿದ್ದರೂ ಹಿಂದೂ ಸಿಖ್ಖರು ಮುಸ್ಲಿಮರ ಮೇಲಿನ ಭೀತಿ, ಅಪನಂಬಿಕೆ ಬಿಡಬೇಕು. ಮರಳಿ ಬಂದು ತಮ್ಮೊಂದಿಗೆ ವಾಸಿಸುವಂತೆ ಅವರನ್ನು ಆಮಂತ್ರಿಸಬೇಕು.

❋

ಒಕ್ಕಟ್ಟಿನ ಬಲ ಹಾಗೂ ಬಿಕ್ಕಟ್ಟಿನ ದೌರ್ಬಲ್ಯಗಳನ್ನು ಮನಗಾಣಿಸಬೇಕೆಂದೇ ನನ್ನ ಪ್ರಾಣಾವಧಿ ಪ್ರಯತ್ನ. ಫಲ ಬಾರದ ಮರವನ್ನು ಕಡಿಯುವಂತೆ, ಈ ಪ್ರಯತ್ನವು ಫಲಿಸದಿದ್ದರೆ ನನ್ನೀ ದೇಹ ನಿರರ್ಥಕವಾಗುವದು. ಫಲದಾಸೆಯಿಲ್ಲದೆ ದುಡಿಯಬೇಕೆಂಬ ಮಾತೂ ಇಷ್ಟೇ ಸತ್ಯ. ಆಸಕ್ತಿಗಿಂತ ಅನಾಸಕ್ತಿಯೇ ವಿಶೇಷ ಫಲದಾಯಿ. ನಿರರ್ಥಕವೆನ್ನಿಸಿದ ದೇಹವು ನಾರಗೊಂಡು ಹೊಸತೊಂದಕ್ಕೆ ತನ್ನ ಸ್ಥಾನವನ್ನು ಬಿಟ್ಟುಕೊಡುವುದು.

❋

ಸೇವಾಕಾಂಕ್ಷೆಯಿದ್ದವರಲ್ಲಿ ಅಂತ್ಯರಹಿತ ತಾಳ್ಮೆಬೇಕು. ತನ್ನ ಅಭಿಪ್ರಾಯವನ್ನು ಇನ್ನೊಬ್ಬನ ಮೇಲೆ ಹೇರಲು ಯಾರೂ ನೋಡಕೂಡದು.

❋

ಭಾರತವು ಅಪಜಯಗೊಂಡಿತೋ ಏಷ್ಯಾವು ಅವಸಾನಗೊಂಡಿತು! ನಮ್ಮ ಸಹನಾಶಕ್ತಿ ಮತ್ತು ನಮ್ಮ ಸಂಯುಕ್ತ ಸಂಸ್ಕೃತಿಯು ಗೈರುಹಾಜರಾಗುವುದು, ಮೂಕ ಮಿಲಿಯ ಮಂದಿಯು ಭಾರತಪ್ರೇಮಿಯಾದ ನನ್ನ ಹೆಗ್ಗಳಿಕೆಗೆ ಮಹತ್ತಾದ ಆಘಾತ. ಘನ ಘಟನೆಯನ್ನೂ ಕಳಕೊಳ್ಳುವ ಮೂಲಕ ನಿಮ್ಮ ರಾಜಕೀಯ ಸ್ವಾತಂತ್ರ್ಯವನ್ನು ದುರ್ವಿನಿಯೋಗಪಡಿಸಿ, ಹಿಂದೀಯರು ಸ್ವಾತಂತ್ರ್ಯಕ್ಕರ್ಹರಲ್ಲವೆಂದು ವಿಮರ್ಶಕರಿಂದ ಹೇಳಿಸಿ ಕೊಳ್ಳಬೇಡಿ'.

ಬಾಲಕರ ಆರೋಗ್ಯಕಾರಕಗಳು
(ಪ್ರಭೂಸ್) ಬಾಲಾಮೃತ
ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನಷ್ಟವಾಗಲು ತಾಯಿತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ. ಮಾತ್ರ, ಹೊತ್ತು ಕಳೆದರೆ ಮತ್ತೆ ಬಾರದು.

'ಪ್ರಭೂಸ್'
ಬಾಲಾಮೃತ

ಪ್ರಭೂಸ್ ಬಾಲಾಮೃತದ ಖ್ಯಾತಿಗೆ ದಾವುದೇಕೆ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ಮುನ್ನಿನ ವೇದನೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಜಾಲು, ಪೊ. ಬ್ರಹ್ಮಾವರ, ದ.ಕ.
ಸ್ಟಾಕಿಸ್ಟರು:-
ನವಭಾರತ ಪುಸ್ತಕ ಭಂಡಾರ, ಉಡುಪಿ.
L. N. Sharma, Mangalore.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ-ತಾರುಣ್ಯದುಬ್ಬಿ
ನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—
ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾ
ದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು
ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ,
ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ?
ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು?
ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.

ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟು
ಕಿರಿಯೂರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ನವಭಾರತ ಬುಕ್ ಡಿಪೋ, ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಈ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ಎಲ್ಲಾ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ನೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ, ಕ್ಯಾಟಲಾಗ್ ಬರದಕ್ಕೆ ರೋಗಿಗಳಿಗೆ ತಕ್ಕ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:— ನವಭಾರತ ಬುಕ್ ಡಿಪೋ. (2) ಬೊಂಬಾಯಿ ಏಜಂಟರು:— ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ಸ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಸೂಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ.

ಏಜಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Ayurveda Oushadhalaya GADAG

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇ
ಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬರೆದವರು:-

ಶ್ರೀ. ಪಿ. ಶೀನ ಶೆಟ್ಟರು

ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ನವಭಾರತ ಬುಕ್ ಡಿಪೋ, ಉಡುಪಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ ಪುಸ್ತಕ.

ಸುಲಭದಲ್ಲಿ ಇಂಗ್ಲೀಷ್

(ENGLISH MADE EASY)

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂ ಬೋಧಿನಿ

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ಬೆಲೆ: ರೂ. 1—8—0 ಮಾತ್ರ.

1—12—0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತ್ತೆ.

ನವಭಾರತ ಬುಕ್ ಡಿಪೋ, ಉಡುಪಿ.

EDITED, PRINTED & PUBLISHED BY K. H. S[illegible]

ನವಯುಗ
ಚಂದಾ ವಿವರ
(ಮುಂಗಡ)
ವರ್ಷಕ್ಕೆ ರೂ 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-6
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ಮ್ಯಾನೇಜರ್,
ನವಯುಗ ಉಡುಪಿ.

9-10-1947

ವರ್ಷ ೨೭ } ವಾರ ೬

NAVAYUGA WEEKLY, UDIPI.

FOUNDER: **Hon'ble Mr. A. B. SHETTY**, Health Minister, Govt. of Madras.

Vol. 27 } No. 6

“ಕೃಷಿಕರೇ, ನೀವು ಇಂದಿನ ಪರಿಸ್ಥಿತಿಯನ್ನು ಸರಿಯಾದ ದೃಷ್ಟಿಯಿಂದ ನೋಡಿ ತಿಳಿದು ಸಹಾಯಕ್ಕೆ ಮುಂದಾಗಿರಿ, ನಿಮ್ಮ ಉಳಿಕೆಯ ಧಾನ್ಯವನ್ನು ತಮ್ಮ ರೇಶನ್ ಆಹಾರಕ್ಕಾಗಿ ನೋಡುತ್ತಿರುವ ಹಸಿದ ಜನತೆಯೊಡನೆ ಹಂಚಿ ಉಣ್ಣಿರಿ”.

THE CANARA MUTUAL Assurance Company, Limited.

Estd: 1935

H. O. **UDIPI**, S. Kanara

BONUS DECLARED FOR 8 YEARS

We are glad to announce that we have declared a Bonus for 8 years from 1939 to 1946 both years inclusive as also an interim bonus for the next valuation period.

T. R. A. Pai,
Managing Director

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building,
Central Office, Udipi.-

Branches at:

Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

“BHUVANENDRA” CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

‘ಭುವನೇಂದ್ರ’ ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಇಡತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 10ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರದಲ್ಲಿ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

—ಮಕ್ಕಳನ್ನು ಹಡೆಯುವುದು ಸಾಕು—

ಅತಿಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಸಲ್ಲೆ ಬಿಡಬೇಕು. ೭ ದಿನದ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೦ ಆಣೆ.

ಮಾಲಕರು:—ಪಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ ವಿಜಾಪೂರ— ಪಾನಪ್ಪ ಸಿದ್ಧಲಿಂಗಪ್ಪ, ಧಾರವಾಡಕರ ವಿಜಾಪೂರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ, ದಾವಣಗೇರಿ:—ದಾವಣಗೇರಿ ಸ್ಟೋರ್ಸ್ ಆರ್ ಎಲ್ ಕಮಲದಾಸಿ, ಕೆಮಿಸ್ಟ್, ದಾವೇರಿ ಬ್ರಾಂಚ್.

Ayurveda Oushadalaya, GADAG CITY.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ. ಮೈಜುಮ್ಮೆನಿಸುವ ಹಲವು ಸನ್ನಿವೇಶಗಳು!

ಬೆಲೆ ಬರೀ ರೂ. **1—4—0**

ಪ್ರತಿಗಳು ಸಿಗುವ ಸ್ಥಳಗಳು:—

ನವಭಾರತ ಪುಸ್ತಕ ಭಂಡಾರ, ಉಡುಪಿ. ನವಯುಗ ಆಫೀಸು, ಉಡುಪಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

Insure with or represent

THE UNITED KARNATAK INSURANCE Co., LTD.

Head Office: DHARWAR.

ಜನತಾಯುಗ

ಲೇಖಕರು: ಡಾ। ಜಿ. ಡಿ. ಬೋರ್ಡ್ಸ್.

"ಈಗ ನಾವು ಪ್ರವೇಶಿಸುತ್ತಿರುವ ಯುಗವನ್ನು ಜನತಾಯುಗವೆಂಬ ಚೊಕ್ಕ ವಾಣಿಯಿಂದ ಕರೆಯುವದು ವಾಸಿ" ಎಂದು ಸಾಮಾಜಿಕ ಮನಶ್ಶಾಸ್ತ್ರಜ್ಞರೊಬ್ಬರು ಹೇಳಿದ್ದರು. ಈ ಹೇಳಿಕೆಯು ಶಕ್ಯವಿದೆ. ವರ್ತಮಾನ ಪತ್ರಿಕೆಗಳು, ಪ್ರತಿದಿನವೂ ಜನತಂಡದ ಗೊಂದಲಗಳ, ಕೆಲಸಗಾರರ ಮುಷ್ಕರಗಳ, ಜನತಾ ಗುಂಪು ಗುಂಪುಗಳೇ ಪರಸ್ಪರ ಕೊಲೆ ಮಾಡಿಕೊಳ್ಳುತ್ತಿರುವ ಜಾತೀಯ ದಂಗೆಗಳ, ಹಾಗೂ ಸರ್ವಸಾಮಾನ್ಯವಾಗಿ ಹೋಗಿರುವ ಗಲಭೆಗಾರರ ಅಂಕೆಯಾಡಳಿತೆಗಳ ಹೊಸಹೊಸ ವಾರ್ತೆಗಳನ್ನು ತರುತ್ತಿವೆ. ಕೆಲವು ಮುಷ್ಕರಗಳು ಸುಯೋಜಿತರಬಹುದು; ನಿಶ್ಚಿತ ಗುರಿಯ ಕಡೆಗೆ ಸಾಗುವ ನಿರಪಾಯಕಾರೀ ಕಾರ್ಯಕ್ರಮಗಳನ್ನವು ಹಾಕಿಕೊಂಡಿರಬಹುದು. ಆದರೆ ಅಜ್ಞ ಜನಸಮೂಹದ ಪ್ರಚಂಡ ಮೆರವಣಿಗೆಗಳು, ಜನರ ಮೇಲೂ ಆಫೀಸುಗಳ ಮೇಲೂ ಕಲ್ಲೆಸೆದು, ಮನೆ ಮತ್ತಿತರ ಕಟ್ಟಡಗಳಿಗೆ ಬೆಂಕಿಕೊಟ್ಟು ಅಂತ್ಯಗೊಳ್ಳುವ ಸಂದರ್ಭಗಳೇ ಬಹಳ. ಜನತಂಡದ ಈ ಹುಚ್ಚು ಗೊಂದಲದ ಮನೋವೃತ್ತಿಯನ್ನು ಸಮೂಲವಾಗಿ ನಾಶಮಾಡಬೇಕೆಂದು ನಮ್ಮೆಲ್ಲರಲ್ಲೂ ಆಕಾಂಕ್ಷೆ, ಆಸೆಗಳಿವೆ. ಆದ್ದರಿಂದ ಜನತಂಡದ ಮನೋವೃತ್ತಿ, ಅದರ ನಮೂನೆ, ಮತ್ತದಕ್ಕೆ ಪ್ರೇರಣೆಯಾಗುವ ಶಕ್ತಿ ಪ್ರಭಾವಗಳ ಪರಿಚಯ ಮಾಡಿಕೊಳ್ಳುವದಗತ್ಯ. ಜನತಾ ಚಳವಳವು ನಾವೀಗ ಕಾಣುವಂತಹ ರೂಪಕ್ಕೆ ಬರಲು ಈ ಕಾಲಕ್ಕುಚಿತವಾದ ನವಸಾಮಾಜಿಕ ವಿಶೇಷ ವೈಶಿಷ್ಟ್ಯವೇ ಹೇತು. ಸಾರ್ವಜನಿಕರು ಸಹಜವಾಗಿ ಮೂಕರು; ಸ್ತಬ್ಧರು, ಆಲಸಿಗರು. ಯಾವ ವಿಧದ ಭಾವಚೇತನವೇ ಆದರೂ ಅವರಲ್ಲೇಳುವದು ಅತಿ ನಿಧಾನವಾಗಿ. ಆದರೀ ದಿನ? ಅವರು ಅತ್ಯಂತ ಚುರುಕಾಗಿದ್ದಾರೆ; ಭೂಕಂಪವಾದಂತೆ ಹುಚ್ಚು ಗಲಭೆಗಳನ್ನು ಆಕಸ್ಮಾತ್ ಎಬ್ಬಿಸ ಹತ್ತಿದ್ದಾರೆ. ಇಡೀ ಜಗತ್ತಿನ ಜನತೆಯನ್ನೇ ಕಣಕಿಬಿಟ್ಟ ಇತ್ತೀಚಿನ ಯುದ್ಧಗಳು ಚರಿತ್ರೆಗೀಭಾಗ ಸೇರಲು ಬಹುಶ: ಒಂದು ಕಾರಣವಾಗಿರಬೇಕು. ಯುದ್ಧಗಳು ಮತ್ತು ಕ್ರಾಂತಿಗಳು ಯಾವಾಗಲೂ ಮಾನವಜನಾಂಗವನ್ನು ಜನತಂಡ, ಸಂಗಡ, ಪಾಳಯಗಳ ದರ್ಜೆಗಿಳಿಸುವ, ಮಾನಸಿಕ ರೋಗಗಳನ್ನು ನಿರ್ಮಿಸುವವೆಂಬುದು ಸ್ವತ: ಸಿದ್ಧ ವಿಷಯ. ನಮ್ಮೀ ರಾಷ್ಟ್ರದಲ್ಲಂತೂ, ಇತ್ತೀಚಿನ ವರೆಗೂ ನಡೆದಿದ್ದ ರಾಜಕೀಯ ಹೋರಾಟವು ಇಂತಹ ಸಾಮಾಜಿಕ ರೋಗಗಳ ನಿರ್ಮಾಣಕ್ಕೆ ವಿಶೇಷ ಸಹಕಾರಿಯಾಯಿತು. ಅದಕ್ಕನುಕೂಲ ಪರಿಸ್ಥಿತಿಗಳನ್ನು ನಿರ್ಮಿಸಿಕೊಟ್ಟಿತು. ಇಂತಹ ಸಾರ್ವಜನಿಕ ಚಳವಳಿಯು ಎಲ್ಲಿಯಾದರೂ ಸ್ಥಾಪನೆಗೊಂಡಲ್ಲಿ, ಒಂದೋ ಸರ್ವಾಧಿಕಾರಿ ಸರಕಾರದಡಿಯಲ್ಲಿ, ಇಲ್ಲವೇ ಅತಿರೇಕ ಸುಯೋಜಿತ ಆರ್ಥಿಕಾಡಳಿತೆಯಡಿಯಲ್ಲಿ, ವ್ಯಕ್ತಿಗತ ವೈಶಿಷ್ಟ್ಯವು ನಿರ್ನಾಮಗೊಳ್ಳುವದೆಂಬುದು ಸ್ವಯಂಸಿದ್ಧವಿದೆ. ಸಹಕಾರವಾದ ಪ್ರಜಾ ಪ್ರಭುತ್ವವು ಇವೆರಡು ಅಪಾಯಗಳನ್ನೂ ದೂರಮಾಡಿಯೇ ಮುಂದೊತ್ತಬೇಕು. ಸ್ವಾತಂತ್ರ್ಯವೆಂದೊಡನೆ ಜನತೆಯನ್ನು ಪುಂಡರ ತಂಡ, ಅಥವಾ ಗೊಂದಲದ ಗುಂಪುಗಳ ವರ್ಜೆಗಿಳಿಸುವ ಸ್ವಾತಂತ್ರ್ಯವೂ ಎಂಬ ತಪ್ಪುಭಾವನೆ ಸಲ್ಲದು.

ತುಂಟ ಗುಂಪಿನ ಲಕ್ಷಣಗಳು

ತುಂಟ ಸಂದೋಹದಲ್ಲಿರುವ ಅತಿ ಸುಲಭದಲ್ಲಿ ಗೊತ್ತು ಹಚ್ಚಲಾಗುವ ಲಕ್ಷಣಗಳಲ್ಲೊಂದೆಂದರೆ ಚಪಲ ಬುದ್ಧಿ ಮತ್ತು ಅಸ್ಥಿರತೆ. ಒಂದು ಸಂದೋಹದ ಮುಖವನ್ನು ಯಾವ ದಿಕ್ಕಿಗಾದರೂ ಬಹು ಸುಲಭದಲ್ಲಿ ತಿರುಗಿಸಿ ಬಿಡಬಹುದು; ಅಂತೆಯೇ ಯಾವುದೇ ಕೆಲಸಕ್ಕಾಗಿ ಸ್ಫೋಟಗೊಳ್ಳುವಂತದನ್ನು ಅನಾಯಾಸವಾಗಿ ಉಬ್ಬಿಸಬಹುದು. ಮಾನವ ಮನಶ್ಶಾಸ್ತ್ರದ ಅಧ್ಯಾಪಕ-ಅಭ್ಯಾಸಿಯಾಗಿದ್ದ ಶೇಕ್ಸ್‌ಪೀಯರನು ತನ್ನ 'ಜೂಲಿಯಸ್ ಕೈಸರ್' ನಾಟಕದಲ್ಲಿ ಜನ ಸಂದೋಹದ ಈ ಗುಣವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾನೆ. ಕೈಸರನನ್ನು ಕೊಂದುದಕ್ಕಾಗಿ ಬ್ರೂಟಸನ ಜೈಕಾರಗಳನ್ನೆಬ್ಬಿಸಿ ಅವನ ತಲೆಗೆ ಕಿರೀಟವಿಡಲು ಹವಣಿಸಿದ್ದ ಜನ ಸಂದೋಹವೇ, ಮಾರ್ಕ್ ಅಂತೋನಿಯಿಂದಾಗಿ ಅತಿ ಸುಲಭದಲ್ಲಿ ಬುದ್ಧಿ ಬದಲಾವಣೆಗೊಂಡು, ಬ್ರೂಟಸ್ ಮತ್ತವನ ಸಂಗಡಿಗರ ಮೇಲೆ ಸಿಟ್ಟಿನ ಸುರಿಮಳೆಗರೆಯುತ್ತಾ, ಅವರನ್ನು ನಿರ್ನಾಮ ಮಾಡಲು ಹುಚ್ಚುಗಟ್ಟಿ ನುಗ್ಗಿದ್ದಿತು. ಅಂತೋನಿಯ ಆ ಪ್ರಸಿದ್ಧ ವಾಗ್ಜಾಲವೆಂಬುದು ಮಾನವ ಮನೋಗತಿಗೆ ಹೊಂದಿಕೊಳ್ಳುವ ಮಟ್ಟಿಗೆ ಸರ್ವಶ್ರೇಷ್ಠತಮವಾದುದು. ಸೂಚನೆ, ಸಮಜಾಯಿಸುವಿಕೆ, ಉಬ್ಬಿಸುವಿಕೆಗಳಿಂದಲೇ ಆ ಕೆರಳಿದ ಜನತಂಡದ ಎಲ್ಲಾ ಉದ್ವೇಗಾಯುಧಗಳನ್ನೂ ಅದು ಉದುರಿಸಿದ್ದಿತು.

'ಗುಂಪಿನೊಡನೆ ಗೋವಿಂದ!'

ಒಂದು ಗುಂಪನ್ನು ಸೇರಿಸುವುದರಲ್ಲಿ—ಪ್ರೇಕ್ಷಕರೂ ಹುರುಪುಗೊಂಡು ಸೇರಿ ಅದರ ಸಂಖ್ಯೆಯನ್ನು ಹೆಚ್ಚಿಸುವುದರಲ್ಲಿ-ಮತ್ತದು ಬೇಕಾದತ್ತ ಕೊಂಡುಹೋಗಲಾಗುವ ಸಮ್ಮತಿಗೆ ಬರುವಂತೆ ಮಾಡುವುದರಲ್ಲಿ—ಮುಖ್ಯತ: ಕಾರ್ಯಕರ್ತೃವಾಗಿರುವದೆಂದರೆ ಸೂಚನಾವಿಧಾನ. ತನ್ನ 'ಸಾಮಾಜಿಕ ಮನಶ್ಶಾಸ್ತ್ರ' ಎಂಬ ಗ್ರಂಥದಲ್ಲಿ ಇ. ಎ. ರೋಸ್ ಈ ಕೆಳಗಿನ ಒಂದು ವಾರ್ತೆ ಕೊಟ್ಟಿದ್ದಾನೆ: "ರಸಾಯನ ಶಾಸ್ತ್ರದೊಬ್ಬ ಪ್ರೊಫೆಸರನು ಒಂದು ದಿನ ಸಭೆಯ ಮುಂಭಾಗದಲ್ಲಿ ನಿಂತುಕೊಂಡು ಹೇಳಿದ: "ಮಿತ್ರರೇ, ನಾನೀಗ ಹಿಡಿದಿರುವ ಈ ಬಾಟ್ಲಿಯುಂಟಲ್ಲಾ-ಇದರಲ್ಲಿ ಕಠೋರವಾದ ಹಾಗೂ ಅತಿ ವಿಲಕ್ಷಣವಾಸನೆಯುಳ್ಳ ರಸಾಯನವಿದೆ. ಈ ವಾಸನೆಯು ಗಾಳಿಯಲ್ಲೆಷ್ಟು ಬೇಗ ಹಬ್ಬುತ್ತಾ ಹೋಗುತ್ತದೆಂಬುದನ್ನೀಗ ನನಗೆ ಕಂಡು ಹಿಡಿಯಬೇಕಾಗಿದೆ. ಆದ್ದರಿಂದ ನಿಮ್ಮೆಲ್ಲ ರೊಡನೆ ನಾನು ಕೇಳಿಕೊಳ್ಳುವದೇನೆಂದರೆ, ಇದರ ವಾಸನೆ ಮುಟ್ಟಿದ ಕೂಡಲೇ ನೀವು ದಯೆಯಿಟ್ಟು ಕೈಯೆತ್ತಬೇಕು" ಹೀಗೆಂದವನೇ ಪ್ರೊಫೆಸರ್ ಬಾಟ್ಲಿಯ ಬಾಯಿ ತೆಗೆದು ಹತ್ತಿಯ ಮೇಲೆ ಒಳಗಿದ್ದ ದ್ರಾವಕವನ್ನು ಚಿಮುಕಿಸಿದ. ಹದಿನೈದೇ ಸೆಕುಂದಗಳೊಳಗೆ ಇದಿರು ಸಾಲಲ್ಲಿ ಕುಳಿತಿದ್ದ ಹೆಚ್ಚಿನವರು ಕೈಯೆತ್ತಿದರು. ಒಂದು ಮಿನಿಟಾಗುವಾಗ ಸಭೆಯಲ್ಲಿದ್ದವರ ಪೈಕಿ ಮುಕ್ಕಾಲು ಪಾಲು ಜನ ತಮಗೆ ವಾಸನೆ ಮುಟ್ಟಿತೆಂಬ ಸೂಚನೆ ಕೊಟ್ಟಾಯಿತು! ಗುಟ್ಟೆಂದರೆ ಪ್ರೊಫೆಸರನು ಬಾಟ್ಲಿಯಿಂದ ಚಿಮುಕಿಸಿದುದು ಕೇವಲ ಶುದ್ಧ ನೀರನ್ನೇ! ಅವನಾಗ ಅಳೆಯಲು ಹೊರಟಿದ್ದುದು ಜನರ ಸೂಚನಾಶಕ್ತಿಯನ್ನೇ ಹೊರತು ವಾಸನಾಶಕ್ತಿಯನ್ನಲ್ಲ. ಈ ಘಟನೆಯು ಸೂಚನೆಯ ಮೂಲ ವಿಧಾನಕ್ಕೊಂದು ಉತ್ತಮ ನಿದರ್ಶನ. ಸೂಚನಾ ಶಕ್ತಿಯ ಮಟ್ಟಿಗೆ ಎಲ್ಲಾ ಜನರೂ ಒಂದೇ ಆಗಿಲ್ಲ. ಆದರೇ ಪುಟ್ಟಿಗೆ ಕೆಲವೊಂದು ಅಂತರದವರೆಗೆ ಸರ್ವರೂ ಸಮಾನರೇ. ನಮ್ಮ ನಿತ್ಯ ಜೀವನದಲ್ಲಿ ನಾವೆಲ್ಲರೂ, ಸೂಚನೆಯ ಮೂಲಕವೇ ಕೆಲವು ವಿಷಯಗಳನ್ನು ಹಾಗೂ ಅಭಿಪ್ರಾಯಗಳನ್ನು ಕಟ್ಟಿಕೊಳ್ಳುತ್ತೇವೆ. ತುಲನಾತ್ಮಕವಾಗಿ ಮುಂದಟ್ಟು ಮಾಡಿಕೊಳ್ಳದೆ, ಅದರ ಸತ್ಯಾಸತ್ಯತೆಯ ಗೊಡವೆಯಿಲ್ಲದೆ, ಒಂದು ಅಭಿಪ್ರಾಯವನ್ನು ಸ್ವೀಕರಿಸಿ ಕೊಳ್ಳುವದಕ್ಕೇನೇ ಸೂಚನೆಯೆಂದು ಹೆಸರು. ಸೂಚನೆ ಪ್ರತ್ಯಕ್ಷವಿರಬಹುದು; ಅಪ್ರತ್ಯಕ್ಷವಾಗಿರಬಹುದು; ಒಥೆಲ್ಲೋನ ತಲೆಯೊಳಗೆ ಸಂದೇಹಗಳನ್ನು ತುಂಬಿಸಿದ ಇಯಾಗೋನ ಮಾತುಗಳಂತೆ ಮಾರ್ಮಿಕವಾಗಿರಲೂ ಬಹುದು. ಒಂದು ಸೂಚನೆಯನ್ನು ಸಾಧ್ಯ ಮತ್ತು ಸಶಕ್ತಗೊಳಿಸುವ ಬಗೆ ಹೇಗೆಂಬುದಕ್ಕೆ ಇಲ್ಲಿ ಪ್ರಥಮತ: ಉಲ್ಲೇಖಿಸಿದ ಆ ಪ್ರೊಫೆಸರನ ಶೋಧನೆಯಲ್ಲಿ ದ್ವಿವಿಧ ಕಾರಣಗಳು ದೊರೆಯುತ್ತವೆ. ಮೊದಲನೆಯದಾಗಿ ಸೂಚನೆ ಬಂದುದು ಅಂತಹ ಸಂದರ್ಭದಲ್ಲಿ ಅಗತ್ಯವಿರುವ ವರ್ಚಸ್ಸುಳ್ಳ ಓರ್ವ ಪ್ರೊಫೆಸರನಿಂದಲೇ. ಆ ಮೇಲೆ ಒಬ್ಬೊಬ್ಬನೇ ಕೈಯೆತ್ತುತ್ತಾ ಹೋದಂತೆ, ಮನುಷ್ಯ ಸಹಜವಾದ ಅನುಕರಣಾಂತಃಕರಣವು ಚಿಮ್ಮುತ್ತಾ ಹೋಗಿ ಸಂಖ್ಯಾ ಪ್ರಭಾವವು ಸೇರಿ ಸಂಖ್ಯಾವಮಾನ ಸಹಜವಾಗಿ ವ್ಯಾಪಿಸಿ ಬಿಟ್ಟಿತು. ಈ ಅಂತಃಸ್ಫುರಣೆಯು ಕೆಲವು ವಿದ್ಯಾಮಾನಗಳಲ್ಲಂತೂ ಸುಲಭವಾಗಿ ನಿರ್ಮಾಣಗೊಳ್ಳುತ್ತದೆ. ಒಂದೇ ವಿಷಯಕ್ಕಾಗಿ ಸಂಪೂರ್ಣ ಬಲಿಬಿದ್ದು ಉಬ್ಬಿರುವ ಗುಂಪಿನ ನಡುವೆ ಒಬ್ಬನು ಸಿಕ್ಕಿಬಿದ್ದು ತನ್ನ ಸ್ಥಾನ ಅಥವಾ ಚಲನವಲನಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲಾರದೆ ಹೋಗುವಲ್ಲಿಯೇ ಈ ಅಧಿಕ ಸಂಖ್ಯಾನುಯಾಯೀ ಸೂಚನೆಯ ಪ್ರಭಾವದ ಪರಮಾವಧಿ. ಅಲ್ಲಿ ಅವನ ಮತ್ತು ಮಿಕ್ಕವರ ಸಂಬಂಧವು ಮುಖಾಮುಖಿಯಾಗಿರುವದಿಲ್ಲ-ಹೆಗಲಿಗೆ ಹೆಗಲು ಕೊಡುವಂತಹದಾಗುತ್ತದೆ ಮತ್ತು ಸಮೂಹದ ಸಬಲಾಕರ್ಷಣೆಯಿಂದ ಪ್ರಥವನ ಸ್ವಯಂಬುದ್ಧಿಯು ಆಗ ಅಂತರ್ಧಾನಗೊಳ್ಳುತ್ತದೆ.

ಪ್ರೇರಣೆ--ವಿಚಾರ

ಮೇಲ್ಮಟ್ಟದ ಪ್ರೇರಣೆಯೂ, ಗಾಢ ವಿಮರ್ಶನಾ ವಿಚಾರದ ಅಭಾವವೂ ಜತೆಗೂಡಿರಬೇಕಾದುದು ಸಹಜಾವಶ್ಯ. ಇಂತಹ ಸಂದರ್ಭಗಳಲ್ಲಿ ಅತ್ಯಂತ ಮತ್ತೊಂದು ಸಂಗತಿಯೆಂದರೆ, ಸಂಬಂಧಪಟ್ಟ ಮನುಷ್ಯರಲ್ಲಿರುವ 'ಕುದಿತೋದ್ರೇಕವು ಗಾಢಯೋಚನೆಯನ್ನು ಒತ್ತಿಇಡುತ್ತದೆ. ಆದ್ದರಿಂದ, ಜನತೆಯನ್ನು ಪ್ರೇರೇಪಿಸುವ ಆಟದೊಂದು ಭಾಗವೆಂದರೆ ಅವರ ಭಾವನೆಯನ್ನು ಉದ್ರೇಕಿಸುವದು. ನಾವು ಯಾವುದೇ ಒಂದು ಜನತಂಡದ ಭಾವಾಂದೋಲನಗಳನ್ನು ಅವಲೋಕಿಸಿದಲ್ಲಿ, ಅವರ ಪೈಕಿ ಹೆಚ್ಚಿನವರಲ್ಲಿ ಪ್ರಾಥಮಿಕ ಕ್ರೋಧ, ಭಯ, ಪ್ರೇಮ, ದು:ಖ ಇತ್ಯಾದಿಗಳು ಆಳವಾಗಿ ಬೇರೂರಿಕೊಂಡಿವೆ ಎಂಬುದನ್ನರಿಯಬಹುದು. ಇಂಥವುಗಳಲ್ಲಾವುದನ್ನೇ ಆದರೂ ಬಡಿದೆಬ್ಬಿಸಿ ಬಿಟ್ಟರಾಯಿತು—ಆ ಗುಂಪು

(೧೧ನೇ ಪುಟ ನೋಡಿರಿ)

Canara Bank Limited.

ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಬ್ರಿಟಿಷ್ ಇಂಡಿಯಾನಲ್ಲಿ ಸಾಂಘೀಕರಿಸಿದ್ದು.
(ಸ್ಥಾಪಿತ. ೧೯೦೬)

ಹೆಡ್ ಆಫೀಸು:
ಬಾವಟೆಗುಡ್ಡೆ, ಮಂಗಳೂರು.

ಜನರಲ್ ಮೆನೇಜರರ ಆಫೀಸು:
75, ಎಪೊಲೊ ಸ್ಟ್ರೀಟ್,
ಫೋರ್ಟ್ ಮುಂಬೈ.

ಶಾಖೆಗಳು

ಮದರಾಸು ಪ್ರಾಂತ್ಯ
ಮಂಗಳೂರು - ಸಿಟಿ
ಮಂಗಳೂರು - ಬಂದರ
ಗಂಗೊಳ್ಳಿ
ಕುಂದಾಪುರ
ಉಡುಪಿ
ಮುಲ್ಕಿ
ಕಾರ್ಕಳ
ಬಂಟ್ವಾಳ
ಕಾಸರಗೋಡು
ಪುತ್ತೂರು
ಮಧುರಾ
ಮದರಾಸು
ಪಯ್ಯನ್ನೂರು
ಕಲ್ಲಿಕೋಟೆ
ಕಣ್ಣಾನ್ನೂರು
ಕೊಯಮುತ್ತೂರು
ತೂತುಕುಡಿ
ಸೇಲಂ
ಇರೋಡು

ಹೈದರಾಬಾದು ಸಂಸ್ಥಾನ
ಸಿಕಂದರಾಬಾದು

ತಿರುವಾಂಕೂರು ಸಂಸ್ಥಾನ
ಆಲೆಪ್ಪಿ
ತ್ರಿವೇಂಡ್ರಮ್

ಮಧ್ಯಪ್ರಾಂತ್ಯ
ನಾಗಪುರ

ಮುಂಬೈ ಪ್ರಾಂತ್ಯ
ಬೆಳಗಾಂವಿ
ಧಾರವಾಡ
ಹುಬ್ಬಳ್ಳಿ
ಕೊಲ್ಹಾಪುರ
ಮುಂಬೈ—ಫೋರ್ಟ್
ಮುಂಬೈ—ಕಾಳಬಾದೇವಿ
ಮುಂಬೈ—ಮಾಂಡ್ವಿ
ಮುಂಬೈ—ಗಿರಗಾಂವ್
ಮುಂಬೈ—ಕಲ್ಯಾಣ

ಮೈಸೂರು ಸಂಸ್ಥಾನ
ಮೈಸೂರು
ಶಿವಮೊಗ್ಗ
ಚಿಕ್ಕಮಗಳೂರು
ಬೆಂಗಳೂರು ಸಿಟಿ
ಅರಸಿಕೆರೆ
ದಾವಣಗೆರೆ

ಸಿಂಧ್ ಪ್ರಾಂತ್ಯ
ಕರಾಚಿ

ಕೊಚ್ಚಿ ಸಂಸ್ಥಾನ
ಕೊಚ್ಚಿ
ಎರ್ನಾಕುಳಂ

ಪಾನ ನಿರೋಧದ ನಂತರ— ವಾತಾವರಣ ಹೇಗಿದೆ?

ಒಕ್ಟೋಬರ್ 1ರಿಂದ ಪಾನ ನಿಷೇಧ ಜ್ಯಾರಿಗೆ ಬಂದ ಮದ್ರಾಸ್ ಪ್ರಾಂತ್ಯದ ಎಂಟು ಜಿಲ್ಲೆಗಳ ಪೈಕಿ ದಕ್ಷಿಣ ಕನ್ನಡವೂ ಒಂದು ತಾನೆ? ಇಲ್ಲಿಯ ವಾತಾವರಣವನ್ನೂ, ಪಾನಾಭ್ಯಾಸೀ ಜನಸಾಮಾನ್ಯರ ಮಾನಸಿಕಾಂದೋಲನವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ಕೆಳಗಿನ ನ ಕಾಶೆ ಗೆರೆಗಳನ್ನೆಳೆಯಬಹುದು. ಇವು ಕೆಲವೇ ದಿನಗಳ-ನಿಷೇಧ ಜ್ಯಾರಿಯ ಆದಿ ಭಾಗದ ಪ್ರಥಮಾಂಗದ-ಅನುಭವಗಳೆಂಬುದನ್ನು ಮರೆಯಬಾರದು:-

ಕೆಲವು ಸುಚಿಹ್ನೆಗಳು

ಹಣದ ಅನುಕೂಲತೆ ಹಾಗೂ ಮಾರಾಟಗಾರರ ಅನುಗ್ರಹವಿದ್ದ ಹಲವರು ಶರಾಬು ಮತ್ತು ಅದರ ಮೇಲ್ಮಟ್ಟದ ಅಮಲು ಪಾನಗಳ ಸಂಗ್ರಹಮಾಡಿಟ್ಟುಕೊಂಡಿರಬಹುದು; ಅಂಥವರ ಪಾಲಿಗಿನ್ನೂ ಕೆಲವು ದಿನಗಳು ಸೆಪ್ಟೆಂಬರ್ 30ರ ಮೊದಲಿನ ದಿನಗಳಂತೆಯೇ (ಊರ ರಸ್ತೆಗಳನ್ನೂ ಮೊದಲಿನಂತೆಯೇ ಉಪಯೋಗಿಸಿಕೊಳ್ಳಲಾರರು!) ಇರಬಹುದು. ಆದರೆ ಇಂಥವರ ಸಂಖ್ಯೆ ಬಹಳವಿರಲಾರದು. ಕಳ್ಳು ಸೇವಕರಾದ ಬಡವರಲ್ಲಿ ಈ ಅಪೂರ್ವ ಭಾಗ್ಯವಂತರು ಕೂಡಾ ಇಲ್ಲ.

ಮುಂಜಾನೆಯಿಂದ ಸಂಜೆಯ ವರೆಗೆ ಕುಡಿಯುತಿದ್ದವರಲ್ಲಿ ಕೂಡಾ ನಿರೀಕ್ಷಿಸಿದ್ದಷ್ಟು ಗಾಬರಿ ಅಥವಾ ನಿರಾಶೆ ಕಂಡುಬಾರದಿರುವುದು ನಿಜಕ್ಕೂ ವಿಶೇಷ. ಅಪರಾಹ್ನದ ಹೊತ್ತಿನಲ್ಲಿ ನಿತ್ಯವೂ ಅಲ್ಲಲ್ಲಿ ಕಾಣಸಿಗುತಿದ್ದವರು ಈಗ ಅದೃಶ್ಯರಾಗಿದ್ದಾರೆ. ಪ್ರಾಯಶಃ ಮನೆಯಲ್ಲೇ ಕುಳಿತು ತಪಸ್ಸು ಮಾಡುತ್ತಿರಬಹುದು. ಆ ತಪಸ್ಸಿದ್ಧಿಯಾಗಿ ಮನಸ್ಸು ಸ್ಥಿರತೆಗೆ ಬಂದ ಮೇಲೆ ಕಾಣಿಸಿಕೊಳ್ಳಬಹುದು. ಆಗ ಊರ ಜೀವನ ನಾಟಕದಲ್ಲಿ 'ದುಷ್ಟ ಪಾತ್ರ'ಗಳೇ ಇಲ್ಲದ ಒಂದು ಅಭಾವವು ತೋರಿಬರುವುದು ಸಂಭವನೀಯ.

'ಗಾಂಧೀ ತತ್ವ' ದುರ್ಬೀನಿನಿಂದ ನೋಡುವಾಗ ಅಲ್ಪ-ಪ್ರತ್ಯಕ್ಷವಾಗಿ, ಕಣ್ಣಿಗೆ ಕಟ್ಟಿಟ್ಟ ಮುಖಗಳನ್ನೇ ನೋಡಿದರೂ ಹಿಂದೆ ಕುಡುಕರಾಗಿದ್ದ ಎಲ್ಲರಲ್ಲೂ ಒಂದು ನವಚೇತನ ಕಂಡು ಬರುತ್ತಿದೆ. ಆ ಚೇತನದ ಸುಖಾನುಭವವು ಸ್ವತಃ ಆ ಜನರಿಗಾಗುತ್ತಿದೆ ಎಂದು ಹೇಳುವದು ಕಷ್ಟ. ಆದರೆ ಆ ಪ್ರಫುಲ್ಲತೆ ನಿಜಕ್ಕೂ ಅಲ್ಲಿದೆ.

ಪಾನಾಭ್ಯಾಸೀ ಜನಸಾಮಾನ್ಯರು ಇಂದಿನ ಅಭಾವಕ್ಕಾಗಿ ದುಃಖಿಸುವ, ಸಿಟ್ಟೇಳುವ, ವಿರೋಧಿಸುವ ಹೆಸ್ಸಾದರೂ ತಮ್ಮದೆಂಬುದನ್ನು ಮರೆತಿದ್ದಾರೆ. ತಮ್ಮನ್ನು ತಾವೇ ಸಂತೈಸಿಕೊಳ್ಳುವದು, ಹಾಗೂ ಸಂತೋಷದಿಂದಿರುವುದೇ ತಮ್ಮ ಕರ್ತವ್ಯವೆಂದವರು ಭಾವಿಸಿದ್ದಾರೆ. ಗಾಂಧೀ ಭಕ್ತರಿದನ್ನು ತೋರಿಸಬಹುದು—'ಗಾಂಧೀ ಮಹಾತ್ಮೆ'ಯ ನಿದರ್ಶನವಾಗಿ.

ಮಂಡಿಗೆಯೆತ್ತಿ ಬಾಳುತಿದ್ದ ನಿರುದ್ಯೋಗೀ ಕುಡುಕರು ಹಲವರಿದ್ದರು. ಅಂಥವರ ಕಿಸೆ, ಅಥವಾ ಸೊಂಟದಲ್ಲಿ ನಾಣ್ಯಗಳ ಸದ್ದಾದುದನ್ನು ಈ ಮೊದಲು ಕೇಳಿದವರಿಲ್ಲ. ಈಗ ಅಲ್ಲಲ್ಲಿ ಆ ಶಬ್ದ ಬರುತ್ತಿದೆ.

ಸಿನೆಮಾ ನಾಟಕಗಳಲ್ಲಿ ಕಾಲು ಭಾಗ ಪ್ರದರ್ಶನವಾದ ಮೇಲೆ ಕಡೇ ತರಗತಿಯಲ್ಲಿ ಬಂದು ಕುಳಿತುಕೊಳ್ಳುತಿದ್ದ ಹಲವರು ಈಗ ಘಂಟೆಯಾಗುವ ಮೊದಲೇ ಮೇಲಿನ ತರಗತಿಗಳಲ್ಲಿ ಮುಂಡಿಸಿರುವುದು ಕಂಡು ಬಂದಿದೆ. ಅಭ್ಯಾಸವಿಲ್ಲದವನೊಡನೆ ಅಪರಾಹ್ನ ಹೊತ್ತಿನಲ್ಲಿ ಪೇಟೆ ನೋಡಿ ಮಾತಾಡದ ಮುಂಜಾಗ್ರತೆಯವರಿದ್ದರು; ಅಂಥವರೀಗ ಮುಖಾಮುಖಿ ನಿಂತು ಹಿರಿಯರ ಕಾಲಾರಭ್ಯದ ಯೋಗಕ್ಷೇಮಗಳನ್ನು ವಿಚಾರಿಸಲು ತೊಡಗಿದ್ದಾರೆ.

ಅವರು ಹೇಗಿದ್ದಾರೆ?

ತಮ್ಮ ಪಾಲಿಗೆ ಬಂದದ್ದನ್ನೆಲ್ಲಾ ಅನುಭವಿಸುವುದೊಂದೇ ತಮ್ಮ ಕರ್ತವ್ಯವೆಂಬ ಭಾವನೆ ಜನಸಾಮಾನ್ಯರಲ್ಲೆಷ್ಟು ಆಳಕ್ಕೆ ಬೇರೂರಿದೆ, ಎಂಬುದಕ್ಕೆ ಈ ನಿಷೇಧದ ಸಹನೆಯೊಂದು ಉಜ್ವಲ ನಿದರ್ಶನ. ಈ ಕ್ರಾಂತಿಕರ ಸುಧಾರಣೆಗೆ ವಿರೋಧದ ಮಾತಿರಲಿ; ಪ್ರತಿಲಾಕ್ಷೇಪ ಕೂಡಾ ಕೇಳಿ ಬರುತ್ತಿಲ್ಲ.

ಕುಡಿಕರು, ಗುತ್ತೇದಾರರು, ಮಸರ್ತೆದಾರರು, ಮತ್ತಾ ಪಾನ ಪದ್ಧತಿಯ ಅಪ್ರತ್ಯಕ್ಷ ಪಾಲುಗಾರರಾದ ಇತರ ಜನರು, ಇವರೆಲ್ಲರನ್ನು ಕೂಡಿಸಿದಲ್ಲಿ ಈ ವರ್ಗವೇ ಜನತೆಯಲ್ಲಿ ಬಹುಸಂಖ್ಯಾಕ ಭಾಗವಾಗೀತು. ನಮ್ಮಲ್ಲೊಂದು 'ಕಳ್ಳುನಿಷ್ಠ ಪಕ್ಷ' ವಿರುತಿದ್ದು, ಅದು ಕಾಂಗ್ರೆಸ್ ಸರಕಾರಕ್ಕೆ ಸಿಕಲಾಟವೊಡ್ಡುವ ಅಥವಾ ಜನತಾಂದೋಲನವೆಬ್ಬಿಸುವ ಹುರುಪಿನಿಂದ ಈ ವರ್ಗದ ಮುಂದಾಳುತ್ವ ವಹಿಸಿ 'ಅಮಲು ನಿವಾರಣ—ಪಾನ' ಸತ್ಯಾಗ್ರಹವೊಂದನ್ನು ಹೂಡುತಿದ್ದರೆ ಸರಕಾರವು ನಿಜಕ್ಕೂ ಅವಸ್ಥೆಗೀಡಾಗುತ್ತಿತ್ತು. ಆ ಚಳವಳಿವಂತೂ ತ್ರಿಕರಣಪೂರ್ವಕವಾಗಿ ಸಾಗುತಿತ್ತು! ಅಂಥವರಿಲ್ಲವೆಂಬುದರಿಂದಲೇ ನಾವು ನೀತಿವಂತ ಜನರೆಂದು ಹೆಗ್ಗಳಿಕೆಪಡಬೇಕು.

ಜನರೀ ದುರಭ್ಯಾಸವನ್ನು ಹಿಡಿದು ಕೊಂಡಿರಲಿಲ್ಲ—ಈ ಅಭ್ಯಾಸವೇ ಅವರನ್ನು ಹಿಡಿದುಕೊಂಡಿದ್ದಿತು, ಎಂಬುದರ ದೃಢ ನಿದರ್ಶನವಾಗಿ ಎಲ್ಲಾ ಅಭ್ಯಾಸಿಗಳೂ ಬಿಡುಗಡೆಗೊಂಡವರಂತೆ ಶಾಂತಚಿತ್ತರಿಂದಿದ್ದಾರೆ. "ಠರಾಬು ಕಳ್ಳು ಅಂಗಡಿಗಳಿದ್ದುದರಿಂದಾಗಿಯೇ ನಾವು ಕುಡಿಯುತಿದ್ದೆವು; ಅದರ ಸಂಗ ಬಿಡಲಾರದವರಾಗಿದ್ದೆವು. ಆದರೆ ಈಗ ಅದು ಸತ್ತಿತೆಂದು ಅದರೊಂದಿಗೆ ನಾವೂ ಸಾಯುವೆವೇ?" ಎಂಬಂತಿದ್ದಾರೆ ಹೆಚ್ಚಿನವರು.

ಕೆಲವರ ತಲೆಯನ್ನೂ ತಿರುಗುತ್ತಿರಬಹುದು; ಕೆಲವರಿಗೆ ತಲೆಯಲ್ಲ, ಲೋಕವೇ ತಿರುಗುತ್ತಿರುವಂತಾಗಿರಬಹುದು. ಇನ್ನು ಕೆಲವರಿಗೆ ರಾತ್ರಿ ಹಗಲಿನ ವ್ಯತ್ಯಾಸ, ತಿಂಡಿ ಆಹಾರಗಳ ರುಚಿ, ವೈರಿ ಸ್ನೇಹಿತರ ತಾರತಮ್ಯ—ಎಲ್ಲವೂ ಮರನೆಯಾದಂತಿರಬಹುದು. ಈ ಸ್ತಬ್ಧತೆ ಶಾಶ್ವತವಲ್ಲ—ಇದು ಬುದ್ಧಿಯ ಏರು ತಗ್ಗು ಸಮಮಟ್ಟಕ್ಕೆ ಬಂದ 'ಮಾನಸಿಕ ಸಮತಾವಾದ.'

ಈ ಮೊದಲು ಪಾನನಿಷೇಧವಾಗಿದ್ದ ಕೆಲವೆ ಕಡೆಗಳಿಂದ ಆತ್ಮಹತ್ಯೆಗಳಾದ ಸುದ್ದಿ ಕೇಳಿದ್ದೆವು. ನಮ್ಮಲ್ಲಂತಹ ಅಪಾಯವನ್ನು ಊಹಿಸಲಿಕ್ಕೂ ಕೂಡದು. ಕುಡಿದು ತಲೆ ಕದಡಿ ಬೈಯ್ಯುವವರಿಗಿಂತಲೂ ಕುಡಿಯದ ದೆಸೆಯಿಂದ ತಲೆಗೆಟ್ಟು ಬೈಯ್ಯುವವರ ಸಂಖ್ಯೆ ಹೆಚ್ಚಬಾರದೇ ಎಂಬ ಭೀತಿ ಮೊದಲಿತ್ತು; ಆದರೆ ಈಗ ಎಲ್ಲರೂ ತಾ. 30ರ ಮೊದಲಿನ ತಮ್ಮನ್ನೇ ಬೈದು ಹಂಗಿಸುತ್ತಿದ್ದಾರೆ! ಡಾಕ್ಟರುಗಳು ಏನಾದರೂ ಆಕೆಕಟ್ಟಿಕೊಂಡುದಿದ್ದರೆ ಬಿಡಬಹುದು; ಈ ದೆಸೆಯಿಂದ ಯಾವ ತಲೆಯೂ ಯಾವ ನಾಡಿಯೂ ಹಾಳಾಗುವ ಲಕ್ಷಣ ಕಾಣುವದಿಲ್ಲ. ಪಾನ ಸೌಕರ್ಯವುಳ್ಳವುಳ್ಳ ಪರಊರುಗಳಿಗೆ ಹೋಗುವವರು ಹೆಚ್ಚಬಹುದೇ? ಆ ಪ್ರಯಾಣ ವೆಚ್ಚದ ಅನುಕೂಲತೆ ಹೆಚ್ಚಬಹುದು-ಆದರೆ ಆ ಆತೆ ಹೆಚ್ಚುವುದು ಅಸಾಧ್ಯ.

ರೇಶನ್ ಅಕ್ಕೀ ಸ್ಟೋರುಗಳು ದಿನಗಟ್ಟ ಬಾಗಿಲು ಹಾಕಿದ್ದುದನ್ನು ಸಹಿಸಿಕೊಂಡ ಜನರಿವರು; ಕಳ್ಳಂಗಡಿಗಳಿಗೆ ಬೀಗ ಬಿದ್ದರೆ ಮುನಿದಾರೆ? "ಮತ್ತೆ ಇದೊಂದು ಅಧಿಕವೇಕೆ? ಮಕ್ಕಳಿಗೂ ಕಾಫಿ ಕುಡಿಯುವ ಹೊಸ ದುರಭ್ಯಾಸ ಹುಟ್ಟಿಸುತಿದ್ದಾರೆ, ನೋಡಿ"—ಎಂದು ತಾ. 1ರ ಮಾಜೀ ಕಳ್ಳಂಗಡೀ ಕಾಫೀ ಹೋಟೆಲುಗಳತ್ತ ಕೈತೋರಿಸಿ ದೂರಿದವರೆಷ್ಟೋ ಇದ್ದಾರೆ.

ಕಳ್ಳಂಗಡಿಗಳಿಗೆ ಹೋಗುತ್ತಿದ್ದ ಎಲ್ಲಾ ಹಣವೂ ಇನ್ನು ಕಾಫೀ ಹೋಟೇಲುಗಳಿಗೆ ಹೋಗುತ್ತದೆಯೆಂಬುದು ಸುಳ್ಳು. ಇವರೆಲ್ಲಾ ಗುತ್ತಿಗೆ ಗಿರಾಕಿಗಳಾಗಿದ್ದ ಆ ಕಾಲದಲ್ಲೂ ಹೋಟೇಲು ಗಿರಾಕಿಗಳೂ ಆಗಿದ್ದರು. ಈಗ ಅದರ ಪಾಲಿನ ಕೆಲವಂಶ ಹಣ ಇದಕ್ಕೆ ಬೀಳಬಹುದು ಹೊರತು ಎಲ್ಲವೂ ಬೀಳಲಾರದು.

ಈ ಸುಧಾರಣೆಯನ್ನೂ, ಪಾನಾಭ್ಯಾಸೀ ಜನರ ಇಂದಿನ ಸಹನೆಯನ್ನೂ ನಿಸ್ಸಂದೇಹವಾಗಿ ಶ್ಲಾಘಿಸಬೇಕು.

ಇವರಲ್ಲವೇ ಗಾಂಧೀಭಕ್ತರು?

ಈ ಪಾನತ್ಯಾಗಿಗಳಂತಹ ಗಾಂಧೀ ಭಕ್ತರು—ದೇಶ ಸೇವಕರು-ಬರಿಶುದ್ಧಾಂತಃಕರಣರು ನಮ್ಮಲ್ಲಿ ಬೇರಾರಿದ್ದಾರೆ?

ನಮ್ಮ ಕಾಂಗ್ರೆಸ್ ಮಂತ್ರಿಗಳ ವರ್ತನೆ ಮತ್ತು ವೇತನ ಗಾಂಧೀ ತತ್ವಕ್ಕನುಸಾರವಾಗಿ ಇವೆಯೆ?

ಮಹಾತ್ಮರ ನಿಕಟಾನುಯಾಯಿಗಳ ಜೀವನ 'ಡಿಕ್ಷನರಿ'ಯಲ್ಲಿ ಕೂಡಾ 'ಅಹಿಂಸಾ' ಪದವು 'ಅ-(ನ್ಯ)-ಹಿಂಸೆ'ಯ ಅರ್ಥಕೊಡುತ್ತಿಲ್ಲವೆ?

ಗಾಂಧೀ ನಿಯಮವಾದ, ಕೊನೆಯ ಪಕ್ಷ ದಿನಕ್ಕೊಂದು ಘಂಟೆಯಾದರೂ ನೂಲಬೇಕೆಂಬುದನ್ನಾಚರಣೆಯಲ್ಲಿಟ್ಟಿರುವವರು ಇಡೀ ರಾಷ್ಟ್ರದಲ್ಲೆಷ್ಟು ಮಂದಿ?

ಅಸ್ಪರ್ಶತಾ ನಿವಾರಣೆ, ಮತ್ತು ಖಾದೀ ಪ್ರಚಾರವನ್ನು ಗಾಂಧಿಜೀ, ಹೇಳಿರುವಂತೆ ಮಾಡಿರುವವರಿದ್ದಾರೆಯೆ-ಕಾಂಗ್ರೆಸ್ ಸರಕಾರಗಳಾದರೂ?

ಗಾಂಧೀಜೀ ಹೇಳಿದಂತಾದರೆ ಇಂದಿನ ಕೋರ್ಟು ಕಚೇರಿಗಳು, ಮತ್ತೀ ವಕೀಲರು ಇರಬಹುದೆ? ಪೋಲಿಸ್, ಸೇನೆ ಬೇಕೇ?

ಈ ಜಾತೀಯ ಗಲಭೆಗಳ ವೇಳೆ ನೆಹರು ವಲ್ಲಭಭಾಯಿಗಳು ಮಾಡತಕ್ಕದ್ದೆಂದು ಗಾಂಧಿಜೀ ಹೇಳಿರುವಂತೆ, ನೆಹರೂ ವಲ್ಲಭಾಯಿಗಳಿಗೆ ಮನಸಿದ್ದರೂ ಮಾಡಲಿಕ್ಕಾಗಿದೆಯೆ?

ಗಾಂಧಿಜೀಯ ಬೇರಾವ ಕಾರ್ಯಕ್ರಮವನ್ನೂ ಬೇರಾರೂ, ಈ ರೀತಿ ಪಾಲಿಸಿದ್ದಿಲ್ಲ. ಮದ್ಯಪಾನ ನಿಷೇಧವಾಗಬೇಕೆಂಬ ಗಾಂಧಿಜೀಯ ತತ್ವವನ್ನು ಮಾತ್ರ ನಮ್ಮೀ ಜಿಲ್ಲೆಯ ಜನತೆ ಅಕ್ಷರಶಃ ಕೈಕೊಂಡಿದೆ. ಇವರಲ್ಲವೇ ಮಹಾತ್ಮರ ನಿಜ ಶಿಷ್ಯರು!

ಇದು ಶ್ಲಾಘನೀಯ ಸಂಯಮವು! ಹೀಗೆ ಬುದ್ಧಿಯನ್ನು ಹತೋಟಿಯಲ್ಲಿಟ್ಟುಕೊಂಡ ಇವರೇ ಆಧುನಿಕ ಋಷಿಗಳು! ಈ ಮಾರ್ಪಾಟವನ್ನು ಸಹಿಸಿಕೊಂಡ, ಸಾಧಿಸಿಕೊಂಡ ಈ ಜನರು ಎಂತಹದನ್ನೂ ಸಾಧಿಸಿಯಾರೆಂಬ ಭರವಸೆಯಿಡಬಹುದು, ಈ ತ್ಯಾಗಬಲದಿಂದ ಅವರಿನ್ನು ಉತ್ತಮರು, ಅಭಿನಂದನೀಯರು! ಇನ್ನು ಅವರು 'ಬೆಳೆಯುವರು' ಆಗುತ್ತಾರೆ; ಅವರು ಹಾಗೆ ಆಗಬೇಕು. ಅವರ ಪಾಲಿನ ಎಲ್ಲವೂ—ಸರಕಾರ, ಸಾಮಾಜಿಕ ವ್ಯವಸ್ಥೆ' ಮುಂದಿನ ಕಾಲ-ಅವರದಾಗಬೇಕು!

WARDEN

Reaches New Heights in 1946.

Business Received	Rs. 2,04,00,000
Business Completed	Rs. 1,72,00,000

THIS represent the latest and greatest achievement in WARDEN'S progressive career.

For this fine performance the Company extends its heartiest thanks and congratulations to its representatives and policy-holders all over the country and abroad.

Managing Director — *Shivaprasad Thaker,*

Agency Manager — *M. Sunderam Shetty.*

Branch Office At Mangalore

B. Sachidananda Hegde, Branch Secretary

K. P. Bhavanishanker Shetty, Asst. Branch Secretary

ಸ್ವಾತಂತ್ರ್ಯ ಪ್ರಿಯರಿಗಾಗಿ
ನವೀನ ಪುಸ್ತಕ
ಸ್ವಾತಂತ್ರ್ಯವೀರ ಸಾವರ್ಕರ
(ವಿಚಾರಕ್ರಾಂತಿಯನ್ನುಂಟುಮಾಡುವ ಜೀವನ ಚರಿತ್ರೆ)

ಭಾರತ ಪಾಕಿಸ್ತಾನ್

ಕಳೆದ ವಾರದಲ್ಲಿಯೂ ಪಂಜಾಬಿನಲ್ಲಿ ನಿರಾಶ್ರಿತರ ಪಾಳಯಗಳ ಮೇಲೂ ಪಥದಲ್ಲೂ ಕ್ರೂರ ಅಮಾನುಷ ಧಾಳಿ ನಡೆದ ವಾರ್ತೆಗಳಿವೆ. ಆದರೆ, ಭಾರತ-ಪಾಕಿಸ್ತಾನಗಳೊಳಗಿನ ಈ ಕಿಕ್ಕಾಟವು ಅಂತರ್ರಾಷ್ಟ್ರೀಯ ರಂಗಕ್ಕೆ ಸೋಂಕಿದುದೇ ಕಳೆದ ದಿನಗಳ ಪ್ರಾಮುಖ್ಯ ಘಟನೆ. ಎರಡನೆಯದಾಗಿ ಭಾರತದ ಪ್ರಧಾನ ಮಂತ್ರಿ ನೆಹರುಗಳು ದಿಲ್ಲಿಯಲ್ಲಿತ್ತ ಕೆಲವು ಭಾಷಣಗಳಲ್ಲಿ ರಾಷ್ಟ್ರದ ಭವಿಷ್ಯಕ್ಕೆ ಸಂಬಂಧಿಸಿದ ಮುಖ್ಯ ವಿಷಯಗಳು ಬಂದಿದ್ದು ಅವು ಪಾಕಿಸ್ತಾನದ ಮತ್ತು ಲೋಕದ ಅಂತರ್ಯದಲ್ಲೂ ತಮ್ಮ ಮೊಹರನ್ನೊತ್ತುವಂತಿವೆ. ಮೂರನೆಯದು ಸ್ವರಾಜ್ಯಯುಗದ ಹಿಂದಿನಿಂದಲೂ ಇದ್ದ ಕೆಲವು ಸಂಸ್ಥಾನಗಳ ಸಂಬಂಧದ ಆ ಸಮಸ್ಯೆ.

ಪಾಕಿಸ್ತಾನದ ಧೋರಣೆ

ತಾವು ರಕ್ತಪ್ರವಾಹ ಹರಿಯಿಸಿ, ಮಿತ್ರವರನ್ನು ಹಂಗಿಸಿ ಭಂಗಿಸಿ ಪಡಕೊಂಡ ಪಾಕಿಸ್ತಾನಕ್ಕೆ ಪೂರ್ತಿ ಎರಡು ತಿಂಗಳುಗಳ ಆಯುಷ್ಯವಾಗುವ ಮೊದಲೇ ತಮ್ಮ ಮನೆಯಾಡಳಿತೆಯ ಸಹಾಯಕ್ಕಾಗಿ ಅನ್ಯರಾಷ್ಟ್ರಗಳಿಗೆ ಮೊರೆಯಿಡಲು ಸ್ವಾಭಿಮಾನಾಗ್ರಗಣ್ಯ ಮಿ. ಜಿನ್ನರಿಗೆ ನಾಚಿಕೆಯಾಗದಿದ್ದುದು ನಿಜಕ್ಕೂ ಒಂದು ಸೋಜಿಗ, ತನ್ನನ್ನು ಭೀತಾಳ ರೂಪದಿಂದಿರಿಸಿರುವ ಮತೀಯ ಪ್ರಶ್ನೆಯನ್ನು ಇತ್ಯರ್ಥಿಸುವ ಬಗೆ ಹೇಗೆಂಬ ಕುರಿತು ಸಲಹೆ, ಸಹಕಾರ ಕೊಡಬೇಕೆಂದು ಪಾಕಿಸ್ತಾನ ಸರಕಾರವು ಬ್ರಿಟಿಷ್ ಸರಕಾರದ ಮೂಲಕ ಎಲ್ಲಾ ವಸಾಹತುಗಳನ್ನೂ (ಭಾರತ ಕೂಡಿ) ಯಾಚಿಸಿದ್ದಿತು. ಭಾರತ ಸರಕಾರವು ಬ್ರಿಟಿಷ್ ಸರಕಾರವನ್ನೇ ಮಾಧ್ಯಮವಾಗಿ ಮಾಡಿ ತನ್ನ ಉತ್ತರವನ್ನು ಎಲ್ಲಾ ವಸಾಹತು ರಾಷ್ಟ್ರಗಳಿಗೂ ಮುಟ್ಟಿಸಿದ್ದಿತು. ಪಾಕಿಸ್ತಾನದ ಬೇಡಿಕೆಯಲ್ಲಿ ಅತ್ಯುಕ್ತಿ, ಅಸತ್ಯಾರೋಪಗಳೇ ತುಂಬಿದ್ದುವೆಂದು ತಿಳಿದು ಬರುತ್ತದೆ. ಬ್ರಿಟಿಷ್ ಸೇನೆಗಳನ್ನು ಹಿಂದೆಗೆಯಕೂಡದು; ಮಾತ್ರವಲ್ಲ, ತನ್ನ ಗಡಿಗಳಲ್ಲಿಡಲು ವಿಶೇಷ ಸೇನಾಸಹಾಯ ಕೊಡಬೇಕು, ಎಂದು ಮುಂತಾಗಿ ಪಾಕಿಸ್ತಾನವು ಇಂಗ್ಲಾಂಡನ್ನು ಯಾಚಿಸಿದ್ದಿತೆಂದು ವಾರ್ತೆ ಇದೆ. ಇದು ಕೇವಲ ಕೆಸರೆರಚುವ ಆಟವೆಂಬುದೀಗ ಜನಜನಿತವಾಗಿದೆ. ಪಂಜಾಬಿನ ಗಲಭೆಯಾರಂಭದಿಂದಲೂ ಪಾಕಿಸ್ತಾನ್-ಹಿಂದುಸ್ಥಾನಗಳೊಳಗೆ ಆರೋಪ-ಪ್ರತ್ಯುತ್ತರಗಳ ವಹಿವಾಟು ನಡೆದೇ ಇದ್ದಿತು. ಮಿ. ಜಿನ್ನರು ತನ್ನ ಸ್ವಭಾವಕ್ಕನುಸಾರವಾಗಿ ಗಡಿನಾಡು, ಬಲೂಚಿಸ್ಥಾನ್, ಸಿಂಧ್, ಮತ್ತು ಪಶ್ಚಿಮ ಪಂಜಾಬಿನಲ್ಲಿ ಮುಸ್ಲಿಮೇತರರ ಮೇಲಾಗಿದ್ದ ಅತಿ ದೊಡ್ಡ ಪರಿಮಾಣದ ಅತ್ಯಾಚಾರಗಳ ಗೊಡವೆಗೆನೇ ಹೋಗದೆ, ಪೂರ್ವ ಪಂಜಾಬಿನಲ್ಲಿ ಮುಸ್ಲಿಮರಿಗಾದ ಅನ್ಯಾಯಗಳನ್ನು ಮಾತ್ರ ಅತ್ಯುಕ್ತಿಯಿಂದ ವರ್ಣಿಸಿ, ತಂತೀ ಪತ್ರಗಳ ಪ್ರವಾಹಗಳನ್ನೇ ಹರಿಯಿಸಿದ್ದರು. ಈ ಆರೋಪ ಪ್ರವಾಹಗಳು ಉದ್ದೇಶ ಪೂರ್ವಕ ಬ್ರಿಟಿಷ್ ಪ್ರತಿನಿಧಿಗಳ ಕಡೆಗೂ ಹರಿದಿದ್ದುವಂತೆ. ಇದಕ್ಕೆ ಭಾರತಸರಕಾರವು ಕೊಟ್ಟ ಉತ್ತರಗಳಲ್ಲಿ ಪಾಕಿಸ್ತಾನದ ಮತ್ತು ತಮ್ಮ ತಪ್ಪುಗಳೆರಡರ ನಮೂದನೆಗಳೂ ಇದ್ದು ಸತ್ಯಸ್ಥಿತಿಯೇ ವರ್ಣಿಸಲ್ಪಟ್ಟಿದ್ದಿತು. ಹೀಗಾಗಿ ಪಾಕಿಸ್ತಾನ್ ವಾದಿಗೆ ಹಿಂದುಸ್ಥಾನ್ ಪ್ರತಿವಾದಿಯಾಗಿ ವ್ಯವಹರಿಸುವ ಬದಲು ನ್ಯಾಯಕರ್ತನಂತೆ ಸತ್ಯಶೋಧನೆ ಮಾಡಿ ಹೇಳಿದ್ದರೂ ಭಾರತವನ್ನು ಸಹಜವಾಗಿ ಪ್ರತಿವಾದಿಯೆಂದು ಗಣಿಸತಕ್ಕ ವಿದೇಶಗಳು ಹಿಂದುಸ್ಥಾನದ ಮೇಲೆ ಪಾಕಿಸ್ತಾನದ ದೂರಿದ್ದಷ್ಟು ಪಾಕಿಸ್ತಾನದ ಮೇಲೆ ಹಿಂದುಸ್ಥಾನದ ದೂರಿಲ್ಲವೆಂದು ತಪ್ಪಭಿಪ್ರಾಯಕಟ್ಟಿಕೊಳ್ಳುವಂತಾಗಿದೆ. ಇತ್ತ ಭಾರತದ ಸೇನಾ ವಕ್ತಾರನು ದಿಲ್ಲಿಯಲ್ಲಿ ಕುಳಿತುಕೊಂಡು ಭಾರತದಲ್ಲಾದ ಎಲ್ಲಾ ಅತ್ಯಾಚಾರಗಳನ್ನೂ ವರದಿ ಮಾಡುತಿದ್ದಾನೆ. ಆದರೆ ಪಾಕಿಸ್ತಾನವು ತನ್ನಲ್ಲಾದ ಅತ್ಯಾಚಾರಗಳನ್ನು ಬಹಿರಂಗಪಡಿಸುತ್ತಿಲ್ಲ. ದಿಲ್ಲಿಯ ಸೇನಾ ವಕ್ತಾರನ ಅವಗಾಹನೆಗೆ ಬಂದಷ್ಟೇ ಹೊರತು ಪಾಕಿಸ್ತಾನದೊಳಗಿನ ಇನ್ನಾವ ಅತ್ಯಾಚಾರ ವಾರ್ತೆಗಳೂ ಬೆಳಕಿಗೆ ಬೀಳುತ್ತಿಲ್ಲ.

ಬ್ರಿಟನು ಕೈಹಾಕದು!

ಪಾಕಿಸ್ತಾನದ ವಿಜ್ಞಾಪನೆಯ ಕುರಿತು ಇಂಗ್ಲಾಂಡು, ಆಸ್ಟ್ರೇಲಿಯಾ, ಕೆನಡಾ, ನ್ಯೂಜಿಲೇಂಡು, ದಕ್ಷಿಣಾಫ್ರಿಕ, ಭಾರತ ಪಾಕಿಸ್ತಾನಗಳೊಳಗೆ ವಿಚಾರ ವಿನಿಮಯಗಳು ನಡೆದಿವೆ. ಎಲ್ಲವೂ ಸ್ಪಷ್ಟವಾಗುವಾಗ ಇನ್ನೂ ಕೆಲವು ದಿನಗಳುರುಳಬಹುದು. ಆದರೆ ಬ್ರಿಟಿಷ್ ಮಂತ್ರಿ ಮಂಡಲವು ಇನ್ನೊಮ್ಮೆ ಹಿಂದೀ ಸಮಸ್ಯೆಯೊಳಗೆ ಯಾವ ರೀತಿಯಿಂದಲೂ ಕೈಹಾಕಲು ಸಿದ್ಧವಿಲ್ಲವೆಂಬುದೀಗ ಸ್ಪಷ್ಟವಾಗಿದೆ. ಭಾರತ ಮತ್ತು ಪಾಕಿಸ್ತಾನ ಸರಕಾರಗಳು ತಮ್ಮೊಳಗೇನೇ ಚರ್ಚಿಸಿ ತೀರ್ಮಾನಿಸಿಕೊಳ್ಳಬೇಕಾದ ವಿಷಯವಿದು. ಒಮ್ಮೆ ಅಲ್ಲಿಯ ದ್ವಾರ ದಾಟಿ ಬಂದ ತಾವು ಇನ್ನು ಯಾರು ಯಾವ ಕೆಲಸಕ್ಕೆ ಕರೆದರೂ ಒಳಗೆ ಹೋಗುವಂತಿಲ್ಲ, ಎಂಬುದೇ ಬ್ರಿಟಿಷ್ ಸರಕಾರದ ದೃಢ ನಿರ್ಧಾರ. ಕೂಲಿಗಾರ ಸರಕಾರಕ್ಕೆ ಭಾರತ-ಪಾಕಿಸ್ತಾನ್ ಸರಕಾರಗಳು ಇಂದು ಈಡಾಗಿರುವ ಆಪತ್ತಿನ ಕುರಿತು ಗಾಢ ಸಹಾನುಭೂತಿಯಿದೆ. ಹಂಗಿಸುವ ಚರ್ಚಿಲ್ ಮನೋವೃತ್ತಿಯಿಲ್ಲ. ಮೂರನೇ ರಾಷ್ಟ್ರವಾಗಿ ಇಕ್ಕಡೆಗೂ ತನ್ನಿಂದಾಗುವ ಸಹಾಯ ಸಲ್ಲಿಸಲು ಅದು ಸಿದ್ಧವಿದೆ. ಆದರೆ ಆ ಮನೇಜಗಳದಲ್ಲಿ ಪಾಲುಗಾರನಾಗಲು ಇನ್ನದು ತಯಾರಿಲ್ಲ. ಅಂತೂ ಮಿ. ಜಿನ್ನರಿಗೊಂದು ಉತ್ತಮ ಪಾಠವು ಪ್ರಥಮ ಬಾರಿಗೇ ದೊರೆತಂತಾಗಿದೆ. ಎರಡು ರಾಷ್ಟ್ರಗಳೂ ಜತೆಯಲ್ಲಿ ಸಹಾಯಕ್ಕಾಗಿ ಜಾಗತಿಕ ಸಂಘವನ್ನಾಗಲೀ ಬ್ರಿಟನನ್ನಾಗಲೀ ಪ್ರಾರ್ಥಿಸಿ ಕೊಳ್ಳೋಣವೆಂದು ಮಿ. ಜಿನ್ನರು ನೆಹರುಗಳನ್ನು ಒತ್ತಾಯಿಸಿದ್ದರಂತೆ. ಆದರೆ ಅಂತಹ ಅಭಿಮಾನ ಶೂನ್ಯತೆಯ ಸ್ಥಿತಿಗಿಳಿಯಲು ನೆಹರುಗಳೊಪ್ಪದೆ ನಿರಾಕರಿಸಿದ್ದರೆಂದು ತಿಳಿದು ಬರುತ್ತದೆ.

ಜಾಗತಿಕ ಸಂಘದಲ್ಲಿ

ನ್ಯೂಯೋರ್ಕಿನಲ್ಲಿ ಸೇರಿರುವ ಸಂಯುಕ್ತ ರಾಷ್ಟ್ರಗಳ ಸಂಘದ ಮಹಾ ಸಭೆಯು ಪಾಕಿಸ್ತಾನವನ್ನೀ ಜಾಗತಿಕ ಸಂಘದ ಸದಸ್ಯ ರಾಷ್ಟ್ರವಾಗಿ ಅಂಗೀಕರಿಸಿಕೊಂಡಿದೆ. ಹಾಜರಿದ್ದ ೫೪ ರಾಷ್ಟ್ರಗಳ ಪೈಕಿ ಅಫ್ಘಾನಿಸ್ಥಾನವೊಂದನ್ನು ಬಿಟ್ಟು ಮಿಕ್ಕೆಲ್ಲ ರಾಷ್ಟ್ರಗಳೂ ಪಾಕಿಸ್ತಾನ್ ಪ್ರವೇಶಕ್ಕೆ ಒಪ್ಪಿಗೆ ಕೊಟ್ಟಿದ್ದವು: ಗಡಿನಾಡು ಪ್ರಾಂತ್ಯದ ಜನತೆಯು ಸ್ವತಂತ್ರ ಮತ ಪಡೆಯದಿದ್ದುದರ ನಿಷೇಧಾರ್ಥವಾಗಿ ಅಫ್ಘಾನ್ ಪ್ರತಿನಿಧಿಯು ಮಾತ್ರ ಅದಕ್ಕೆ ವಿರುದ್ಧ ಮತ ಕೊಟ್ಟಿದ್ದರು. ಭಾರತದ ಪ್ರತಿನಿಧಿ ಶ್ರೀಮತಿ ವಿಜಯ ಲಕ್ಷ್ಮೀ ಪಂಡಿತರು ತಂಗೀ ರಾಷ್ಟ್ರ ಪಾಕಿಸ್ತಾನಕ್ಕೆ ಹೃತ್ಪೂರ್ವಕ ಸುಸ್ವಾಗತವಿತ್ತಿದ್ದರು. ಆದರೂ, ಮಾನವ ಪಂಗಡವೊಂದನ್ನು ಉದ್ದೇಶ ಪೂರ್ವಕ ನಾಶನಮಾಡದಂತಹ ನಿಯಮಗಳ ರಚನೆಗಾಗಿ ಜಾಗತಿಕ ಸಂಘವು ರಚಿಸಿದ್ದ ಸಮಿತೀ ಸಭೆಯಲ್ಲಿ ಪಾಕಿಸ್ತಾನ್ ಪ್ರತಿನಿಧಿ ಅಬ್ದುಸ್ ಸತಾರ್ ಫಿರ್ಯೂರ್‌ಹಾರವರು ಭಾರತದ ಮೇಲೆ ಭಯಂಕರಾರೋಪಮಾಡಿದ್ದರು: "ಭಾರತದಲ್ಲಿ ಸೇನೆ ಮತ್ತು ಪೋಲೀಸು ಅಧಿಕಾರಿಗಳ ಆಶ್ರಯಬಲದಿಂದಲೇ ಒಂದು ಜಾತಿಯವರು ಲಕ್ಷಾವಧಿ ಮಂದಿಯನ್ನು ಸಂಹಾರಮಾಡುತಿದ್ದಾರೆ. ಹೀಗೆ ಬಲಿ ಬಿದ್ದ ಆ ದುರ್ದೈವಿಗಳ ಅಪರಾಧವೆಂದರೆ ಅವರು "ಒಂದು ಪ್ರತ್ಯೇಕ ಧರ್ಮದವರಾಗಿರುವುದೊಂದೇ. ಈ ಹತ್ಯೆಯ ನಿವಾರಣೆಗಾಗಿ ಜಾಗತಿಕ ಸಂಘವು ಪರಿಣಾಮಕಾರೀ ಕಾರ್ಯ ಕೈಕೊಳ್ಳುವದೆಂದು ತಿಳಿದು ಬಂದರೆ ಆ ದುಷ್ಪ್ರವೃತ್ತಿ ಕಡಿಮೆಯಾದೀತೆಂದು ಆಶಿಸಬಹುದು"— ಪಾಕಿಸ್ತಾನದ ಪರವಾಗಿ ಈ ಅನಿರೀಕ್ಷಿತ ಕಟು ವಾಣಿ ಕೇಳಿ ಬಂದೊಡನೆ ಅಂತರ್ರಾಷ್ಟ್ರೀಯ ನ್ಯಾಯಾಧೀಶರೇ ಇದ್ದ ಆ ಕಾನೂನು ಸಮಿತಿಯೊಮ್ಮೆ ಗಲಿಬಿಲಿಗೊಂಡಿತು. ಕೂಡಲೇ ಭಾರತದ ಕಾಯಿದೇ ತಜ್ಞ ಪ್ರತಿನಿಧಿ ಶ್ರೀ ಮಾರ್ಕ್ಸ್ ಲಾಲರೆದ್ದು ಉತ್ತರಕೊಟ್ಟರು: "ಪಾಕಿಸ್ತಾನ ಪ್ರತಿನಿಧಿ ಮಾಡಿದ ಆರೋಪಗಳು ಪೂರ್ಣ ನಿರಾಧಾರವಾದುವುಗಳು ಮತ್ತು ಅಸತ್ಯಗಳು. ಹಿಂದೂಸ್ಥಾನ್ ಸರಕಾರವು ಯಾವ ಧರ್ಮವನ್ನೂ ಆಧರಿಸಿ ಕಟ್ಟಲ್ಪಟ್ಟಿಲ್ಲ. ಆ ಸರಕಾರದಲ್ಲಿ ಮುಸ್ಲಿಮರು, ಕ್ರೈಸ್ತರು, ಪಾರ್ಶಿಗಳು ಇದ್ದಾರೆ. ಅತ್ಯಾಚಾರಗಳಿಗೊಳಗಾಗಿ ಪಾಕಿಸ್ತಾನದಿಂದ ಹೊಡೆದಟ್ಟಲ್ಪಟ್ಟ ಲಕ್ಷಾವಧಿ ನಿರಾಶ್ರಿತರ ಆಮದಿನಿಂದಾಗಿ ನಿರ್ಮಾಣಗೊಂಡಿರುವ ಈ ದುರ್ದೈವೀ ಘಟನೆಗಳನ್ನು ನಿವಾರಿಸಲು ನಾವೀಗ ಸರ್ವ ಪ್ರಯತ್ನಗಳನ್ನೂ ಮಾಡುತಿದ್ದೇವೆ. ಮತ್ತೀ ಕಾರ್ಯದಲ್ಲಿ ಜಯಶಾಲಿಗಳಾಗುತಿದ್ದೇವೆ. ಪಾಕಿಸ್ತಾನದ ಎರಡು ಪ್ರಾಂತ್ಯಗಳಲ್ಲಿ ಲಕ್ಷ ಲಕ್ಷಗಳ ಸಂಖ್ಯೆಯ ಜನರು ಕಿತ್ತೊಗೆಯಲ್ಪಡುತ್ತಿರುವುದನ್ನು ನಿಲ್ಲಿಸಲಾರದ ಪಾಕಿಸ್ತಾನದಂತಹ ನಿಸ್ಸಹಾಯಕ ಸ್ಥಿತಿಯಲ್ಲಿ ನಾವಿಲ್ಲ. ಇಂತಹ ಆರೋಪವು ಭಾರತ ಸರಕಾರದ ಮೇಲೆಬಂದುದು ದುರ್ದೈವವೇ ಸರಿ. ಪಾಕಿಸ್ತಾನವನ್ನು ಉದ್ರೇಕಿಸುವ ಯಾವ ಮಾತನ್ನೂ ಆಡಕೂಡದೆಂದು ನನಗೆ ನಮ್ಮ ಸರಕಾರದ ಕಟ್ಟಪ್ಪಣೆಯಿದೆ. ಆದರೆ ದುರ್ಘಟನೆಗಳ ನಿವಾರಣೆಗಾಗಿ ತನ್ನ ಶಕ್ತಿಯ ಪ್ರತಿಯೊಂದು ಅಣುವನ್ನೂ ವ್ಯಯಿಸಿ ಶ್ರಮಿಸುತ್ತಿರುವ ನನ್ನ ಸರಕಾರಕ್ಕೆ ಯೋಗ್ಯವೆನ್ನಿಸುವಂತೆ ಈ ಹೇಳಿಕೆಯನ್ನು ನಾನು

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಚಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ನೆಗ್ಗುರಿಯಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ—

ದಿ ವಿಜಯಾ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಸಿಟಿ-ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಂಞಂಗಾಡು, ಮಡಿಕೇರಿ ಮತ್ತು ಮುಂಬಾಯಿ.

THE VIJAYA BANK, LIMITED.

ಪ್ರಕಟಣೆ

ಸರ್ವ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನಂದರೆ..

ಉಡ್ಪಿ ಕಸಬಾ ತೆಂಕಪೇಟೆಯಲ್ಲಿರುವ ವೆಂಕಟಸುಬ್ರಾಯ ಆಚಾರ್ಯ ಯಾನೆ ಭತ್ತಾಳದ ಮಗ ಶಾಲಾ ಮಾಸ್ತರ್ ಯು. ಗೋಪಾಲಕೃಷ್ಣಾಚಾರ್ಯರು ಉಡ್ಪಿ ಕಸಬಾ ಅಂಬಲಪಾಡಿ ವಾರ್ಡು ಕಪ್ಪೆಟ್ಟನಲ್ಲಿರುವ ಮಧ್ವಾಚಾರ್ಯರ ವಿಧವೆ ಕಮಲಾಕ್ಷಿ ಅಮ್ಮನಾದ ನನಗೆ ತಾರೀಕು 15-4-1946ಲ್ಲಿ ರೂಪಾಯಿ 400,-ಕ್ಕೆ ಬರಕೊಟ್ಟ ಡಿಮಾಂಡು ನೋಟು ನನ್ನ ಕೈಯಿಂದ ಗೈರ್‌ವಿಲೆ ಆಗಿಯದೆ. ಸದ್ರಿ ನೋಟು ಯಾರ ಕೈಗೆ ಸಿಕ್ಕಿದರೂ ಅದನ್ನು ನನಗೆ ತಂದುಕೊಡತಕ್ಕದ್ದು; ವಿನಹಾ ಅದನ್ನು ಯಾರಾದರೂ ಇಟ್ಟುಕೊಂಡರೆ ಅವರಿಗೇನೂ ಅದರಿಂದ ಪ್ರಯೋಜನ ಸಿಗಲಾರದು. ನನಗಲ್ಲದೆ ಸದ್ರಿ ಡಿ. ನೋಟಿನ ಹಣವನ್ನು ವಸೂಲಿ ಪಡೆಯಲಿಕ್ಕೆ ಬೇರೆ ಯಾರಿಗೂ ಹಕ್ಕಿರುವುದಿಲ್ಲ ಎಂಬ ಸಂಗತಿ ತಿಳಿಸಿರುತ್ತದೆ.

ಕಮಲಾಕ್ಷಿ ಅಮ್ಮನ ರುಜು,
ತಾ. 2-10-1947.

ಸಂಬಂಧ ಸಮಸ್ಯೆ

ಕೊಡತಲೇ ಬೇಕಾಯಿತು. ಭಾರತದ ಇತರ ಎಲ್ಲಾ ಭಾಗಗಳಲ್ಲಿ ಮುಸಲ್ಮಾನರು ನಿರಾತಂಕವಾಗಿ ಶಾಂತಿ ಜೀವನ ನಡಿಸುತಿದ್ದಾರೆಂದು ಸಾಕ್ಷಿಲ್ಲಿ ಸುಸ್ಪಷ್ಟಪಡಿಸುತ್ತೇನೆ. ನಮ್ಮದು ಕ್ರಿಮಿನಲ್ ಸರಕಾರವಲ್ಲ" ಮೇಲಿನ ಆರೋಪ ಪ್ರತ್ಯಾರೋಪಗಳನ್ನು ಕೇಳಿ, ಸಮಿತಿಯ ಅಧ್ಯಕ್ಷರಾದ ಸಿರಿಯಾದ ಫೇರಿಸ್ ಅಲ್ ಖ್ಯೋರಿಯವರು ಆ ವಿಷಯವನ್ನೇ ಮರೆತುಬಿಡಬೇಕೆಂದು ಹಾರೈಸಿದರು. ಈ ಖಂಡನೀಯ ವಿಷಯವನ್ನು ನಿಲ್ಲಿಸುವಂತೆ ತಂತವನ್ನು ಜನತೆಯನ್ನು ವಿನಂತಿಸಿಕೊಳ್ಳುವಂತೆ ಇಕ್ಕಡೆಯ ಪ್ರತಿನಿಧಿಗಳನ್ನು ಕೇಳಿಕೊಂಡರು.

ಸ್ವತಂತ್ರ ಭಾರತದ ಸ್ಥಾನ ಮಹತ್ವದ ಬೆಳಕು ಇಡೀ ಲೋಕದ ಕಣ್ಣಿಗೊಮ್ಮೆ ಬೀಳುವಂತಹ ಘಟನೆಯು ಈ ಬಾರಿಯ ಸಂಯುಕ್ತ ರಾಷ್ಟ್ರ ಸಂಘದ ಮಹಾಸಭೆಯಲ್ಲಿ ಒಂದಿತ್ತು, ಸಂಯುಕ್ತ ರಾಷ್ಟ್ರ ಸಭೆಯ ಜೀವಾಳವಾದ ಭದ್ರತಾ ಮಂಡಲದ ಖಾಲಿಬಿದ್ದ ಸ್ಥಾನವೊಂದಕ್ಕೆ ಚುನಾವಣೆಯಲ್ಲಿ ರಶ್ಯದ ಉಕ್ರೈನಿನೊಂದಿಗೆ ಭಾರತವು ಸ್ಪರ್ಧಿಸಿತು. ಈ ಸ್ಥಾನಕ್ಕೆ ಚುನಾವಣೆ ಹೊಂದಬೇಕಾದರೆ ಮಹಾಸಭೆಯ ⅔ನೇ ಬಹುಮತ ದೊರೆಯಬೇಕು; ಈ ನಿಯಮಾನುಸಾರ 38 ಮತಗಳು ದೊರೆಯದೆ ಭದ್ರತಾ ಕೌನ್ಸಿಲಿಗಾರಿಸಲ್ಪಡಲಾಗುವುದಿಲ್ಲ. ಸಂಘದ ಮಹಾಸಭೆಯಲ್ಲಿ ಒಂಭತ್ತು ಬಾರಿ ಮತ ತೆಗೆದರೂ ಭಾರತ ಮತ್ತು ಉಕ್ರೈನ್ ಇವರ ಹೆಚ್ಚಿಲ್ಲಾ ವೃಚನಕ್ಕೂ 3ರರ ಗಡಿಮುಟ್ಟಲಾಗದೆ, ಆ ಚುನಾವಣೆಯನ್ನೇ ಈಗ ಬಾಕಿಯಿಡಲಾಗಿದೆ. ಭಾರತಕ್ಕೆ 23ರಿಂದ 29ರ ವರೆಗೆ ಮತಗಳು ದೊರೆತಿದ್ದುವು. ಉಕ್ರೈನು 34 ಮತಗಳ ವರೆಗೆ ಸಂಪಾದಿಸಿದ್ದರೂ ಗುರಿ ಮುಟ್ಟಲಿಲ್ಲ. ಆಸ್ಟ್ರೇಲಿಯವು ವಿನಾಯತಿ ಹೊಂದಿದ ಮೇಲೆ ಇಡೀ [illegible] ನಲಯದ ಪ್ರಾತಿನಿಧ್ಯವೇ ಭದ್ರತಾ ಕೌನ್ಸಿಲಿನಲ್ಲಿಲ್ಲವಾದ್ದರಿಂದ ಭಾರತಕ್ಕೆ ಪ್ರಾತಿನಿಧ್ಯ ದೊರೆಯುವದು ನ್ಯಾಯವೆಂದು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ವಾದ. ಹೊಸ ಸದಸ್ಯ ಭಾರತಕ್ಕೆ ಉಕ್ರೈನಿನ ಪಾಲಿನ ಸ್ಥಾನವನ್ನು ಕಸಗೊಳ್ಳುವ ಹಕ್ಕಿಲ್ಲನೆಂದು ರಶ್ಯದ ಎಮ್. ವಿಶಿನ್‌ಸ್ಕಿಯವರ ವಾದ. ಈ ವಾದಾಗ್ರಹ ಪ್ರಬಲವಿದ್ದರೂ ರಶ್ಯಾ-ಭಾರತ ಸ್ನೇಹಕ್ಕದು ಹಾನಿ ತರುವಂತಹದಲ್ಲ. ಇಲ್ಲಿಯೂ ಪಾಕಿಸ್ಥಾನವು ಭಾರತದ ವಿರುದ್ಧ ಮತಕೊಟ್ಟಿತೆಂದು ತಿಳಿದುಬರುತ್ತದೆ.

ನೆಹರುಗಳ ಬಿಚ್ಚುಮಾತು

ಜಾತೀಯ ಗಲಭೆಯ ಕಾರಿರುಳು ಕವಿದಿರುವ ಭಾರತದ ಬಾಳಿನ ನವಜ್ಯೋತಿ ಪಂಡಿತ ನೆಹರುಗಳು ನವದಿಲ್ಲಿಯಲ್ಲಿ 'ಶಾಂತಿ ಸ್ಥಾಪನಾ ಸಭೆ'ಗಳನ್ನು ಜರಗಿಸಿ ಪ್ರತಿದಿನವೂ ಸರ್ವರ ಜ್ಞಾನಚಕ್ಷು ಮತ್ತು ಹೃದಯ ಕವಾಟಗಳನ್ನು ತೆರೆಯಿಸುವ ಭಾಷಣಗಳನ್ನೀಯುತಿದ್ದಾರೆ. ಭಾರತದ ಪ್ರಧಾನ ಮಂತ್ರಿ ನೆಹರುಗಳು ಈ ಸಂದರ್ಭದಲ್ಲಿ ಹೊರಗೆಡಹಿದ ಕೆಲವು ಅಭಿಪ್ರಾಯಗಳು ಅದ್ಭುತ ರೀತಿಗಳಂತಿರುವುದರಿಂದ ಅಂತಹ ಮುಖ್ಯಾಂಶಗಳನ್ನು ಆರಿಸಿ ಇಲ್ಲಿ ಕೊಡಲಾಗಿದೆ:-

"ಹಿಂದೂ ಇರಲಿ; ಮುಸ್ಲಿಮನಿರಲಿ, ಈ ರಾಷ್ಟ್ರಕ್ಕೆ ವಿಧೇಯನಾಗಿರುವವನಿಗೆ ಇಲ್ಲಿ ಬಾಳುವ ಹಕ್ಕಿದ್ದೇ ಇದೆ. ಅವನನ್ನು ಮತ್ತು ಅವನ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವ ಹೊಣೆಗಾರಿಕೆಯೂ ಸರಕಾರದ್ದಿದೆ. ಆದರೆ ಯಾರೇ ರಾಷ್ಟ್ರಕ್ಕೆ ಅವಿಧೇಯರೋ ಅಂಥವರಿಗಿಲ್ಲಿ ಸ್ಥಾನವಿಲ್ಲ. ;ತಮ್ಮ ಮೆಚ್ಚುಗೆಯ ರಾಷ್ಟ್ರಕ್ಕವರು ಹೋಗಬಹುದು; ಹಾಗೆ ಸ್ಥಾನಾಂತರಗೊಳ್ಳಲು ಸರ್ವ ಸೌಕರ್ಯವನ್ನು ಸರಕಾರವೊದಗಿಸಿಕೊಡುವದು."

"ಭಾರತವು ಎಂದಿಗೂ ಹಿಂದೂ ರಾಜ್ಯವಾಗದು. ನಾನು ಸಂಗತಿ ಸಂಚಾಲಕ ಸ್ಥಾನದಲ್ಲಿರುವ ವರೆಗೆ ಭಾರತವನ್ನು ಹಿಂದೂ ರಾಜ್ಯವಾಗಲು ಬಿಡಲಾರೆ. ಭಾರತದಲ್ಲಿ ಸಮಾಜವಾದೀ ಪ್ರಜಾಪ್ರಭುತ್ವ ಸ್ಥಾಪಿಸುವುದೇ ನನ್ನ ಧ್ಯೇಯ. ಭಾರತವನ್ನು ಪ್ರಗತಿಶೀಲ ಮತ್ತು ಅಭಿವೃದ್ಧಿಪರ ರಾಷ್ಟ್ರವಾಗಿ ಮಾಡುವ ನನ್ನ ಎಲ್ಲಾ ಯೋಜನೆಗಳೂ ಈಗ ಮೂಲೆಪಾಲಾಗಿವೆ. ಅಧಿಕಾರಾಂಕ್ಕೇರಿದಂದಿನಿಂದ ಇದು ವರೆಗಿನ ನನ್ನ ಎಲ್ಲಾ ಸಮಯವನ್ನೂ, ಒಬ್ಬರಿನ್ನೊಬ್ಬರ ಕೊಲೆ ಮಾಡುವದನ್ನು ತಡೆಯುವುದರಲ್ಲೂ ನಿರಾಶ್ರಿತ ನಿಲಯ, ಆಸ್ಪತ್ರೆಗಳ ಸಂದರ್ಶನದಲ್ಲೂ ಕಳೆಯಬೇಕಾಯಿತು. ನಾನು ಜನಪ್ರತಿನಿಧಿ; ಜನರಪೇಕ್ಷಿಸಿದೊಡನೆ ರಾಜೀ ಕೊಡಲು ಬದ್ಧನಿದ್ದೇನೆ. ಅಂತೆಯೇ ನನ್ನ ನಾಯಕತ್ವದಲ್ಲಿ ಜನರಿಗೆ ವಿಶ್ವಾಸವಿಲ್ಲವೆಂದು ತೋರಿದಾಗಲೂ ರಾಜಿಕೊಡುವ ಸ್ವಾತಂತ್ರ್ಯವೂ ನನಗಿದೆ"

"ದಂಗೆ ಶಮನಿಸುವ ಮತ್ತು ಆಸ್ಪತ್ರೆ ಕಾವಲುನಡಿಸುವ ಕಾರ್ಯದಲ್ಲಿ ನಮ್ಮ ಸೈನಿಕರಿರುವದಕ್ಕಿಂತ, ಅವರು ನಿಸ್ಸಹಾಯಕರ ರಕ್ಷಣೆಗಾಗಿ ಪಾಕಿಸ್ಥಾನದೊಳಗೆ ನುಗ್ಗುವುದನ್ನು ನೋಡುವುದೇ ನನಗೆ ಬೇಕಾಗಿತ್ತು. ಅಲ್ಪ ಸಂಖ್ಯಾಕರನ್ನು ರಕ್ಷಿಸದೆಬಿಟ್ಟ ಅಪರಾಧಕ್ಕಾಗಿ ಪಾಕಿಸ್ಥಾನದ ಮೇಲೆ ಪರಿಣಾಮಕಾರೀ ಕಾರ್ಯ ಕೈಕೊಳ್ಳಲು ನಾನು ಹವಣಿಸಿದ್ದೆ. ಆದರೆ ಅಂತಹ ಕೃತ್ಯಗಳೇ ನನ್ನ ಸ್ವಂತ ರಾಷ್ಟ್ರದಲ್ಲಿ ನಡೆದುದರಿಂದ ನನ್ನ ಕೈಕಟ್ಟಿತು. ನಾನೀಗ ಯಾವಮುಖದಿಂದ ಪಾಕಿಸ್ಥಾನದ ಮೇಲೆ ಪ್ರತೀಕಾರಕ್ಕೇಳಲಿ? ಗಲಭೆಯ ದೆಸೆಯಿಂದ ಭಾರತದ ಮರ್ಯಾದೆ ತಗ್ಗಿದೆ; ಕೆಸರು ಹಾಳಾಗಿದೆ. ನಾನು ವಿದೇಶಗಳಲ್ಲಿ ಸಂಚರಿಸಿ ಅಲ್ಲಿಯ ಜನತೆಯ ಸಂಪರ್ಕ ಬೆಳೆಸುತಿದ್ದ ಮನುಷ್ಯ. ಆದರೀಗ ಭಾರತದ ಹೆಸರೇ ಕೆಸರಾಗಿರುವುದರಿಂದ ಇನ್ನಲ್ಲಿ ಹೋಗದಂತಾಗಿದೆ. ಆಗಾಗ ಬರುವ ವಿದೇಶೀ ಪ್ರತಿನಿಧಿಗಳೊಡನೆ ಸಂಭಾಷಣೆಗೆ ಕುಳಿತಾಗ ಕೂಡಾ ನಾನು ಶಂಕಿಸುವದಿದೆ. ನನ್ನ ಕಣ್ಣೆದಿರಲ್ಲೇ ಗಲಭೆ ನಡೆದಿರುವಾಗ ನಾನು ಅವರೆದಿರಲ್ಲಿ ತಲೆಯೆತ್ತುವದಾದರೂ ಹೇಗೆ?"

"ಪ್ರಕೃತ ಭಾರತ ಜನತೆಯ ಕೆಲವು ಭಾಗಗಳಲ್ಲಿ ಫೇಸಿಸ್ಟ್ ಭಾವನೆ ಕಂಡು ಬರುತ್ತಿದೆ. ಹಲವು ವರುಷಗಳಿಂದಲೂ ಮುಸ್ಲಿಂ ಲೀಗು ತನ್ನ ಅನುಯಾಯಿಗಳಿಗೆ ಕಲಿಸುತ್ತಾ ಬಂದ ಮುಸ್ಲಿಮೇತರರ ಮೇಲಿನ ದ್ವೇಷದ ಪ್ರತ್ಯಕ್ಷ ಪರಿಣಾಮವೇ ಈ ಫೇಸಿಸ್ಟ್ ಮನೋವೃತ್ತಿ. ಜರ್ಮನಿಯ ನಾಜಿಗಳಿಂದಲೇ ಲೀಗು ಈ ಫೇಸಿಸ್ಟ್ ತತ್ವವನ್ನು ಸ್ವೀಕರಿಸಿದ್ದಿತು. ಈಗ ಹಿಂದುಗಳಲ್ಲೂ ಅದು ಹಬ್ಬಹತ್ತಿದೆ. ಹಿಂದೂ ರಾಜ್ಯದ ಸ್ಥಾಪನಾತುರವು ಅದರ ಜೀವಂತ ನಿದರ್ಶನ. ಇಲ್ಲಿಯ ಮುಸ್ಲಿಮರು ದ್ರೋಹಿಗಳೆಂದು ಸಿದ್ಧವಾದಾಗ ಅವರನ್ನು ಶಿಕ್ಷಿಸುವ ಪೂರ್ಣಾಧಿಕಾರ ಭಾರತಕ್ಕಿದೆ. ಆದರೆ ಬೇರೆ ದೇಶಕ್ಕೆ ಹೋಗಬೇಕೆಂದು ಅವರನ್ನು ಒತ್ತಾಯಿಸಲು ಸಾಧ್ಯವಿಲ್ಲ. ಭಾರತಕ್ಕೆ ದ್ರೋಹ ಬಗೆದ ಹಿಂದುಗಳು ಕೂಡಾ ನಮ್ಮಲ್ಲಿದ್ದಾರೆ. ಅಂಥವರನ್ನಾವ ದೇಶಕ್ಕೆ ಹೋಗುವಂತೆ ಹೇಳಲಿ? ಸದ್ಯದ ಅರಾಜಕತೆ ಮತ್ತು ಭಾರತದ ಎಲ್ಲಾ ಮುಸ್ಲಿಮರನ್ನೂ ಹೊರಗಟ್ಟಬೇಕೆಂಬ ಬೇಡಿಕೆಯು, ಜನತೆಯ ಸಾಮಾಜಿಕ, ರಾಜಕೀಯ ಜೀವನದೊಳಗೆ ಕ್ರಮಶಃ ಬೇರೂರುತ್ತಿರುವ ಲೋಕಕಂಟಕರಿಗೇನೇ ವಿಶೇಷ ಸಹಾಯಕಾರಿಯಾಗುತ್ತಿದೆ".

"ಈ ದಿನ ಕಾಂಗ್ರೆಸಿಗರು ಅಲ್ಪಾಭಿಲಾಷೆಗಳಲ್ಲೇ ತಮ್ಮ ಶಕ್ತಿ ಸಂಚಯಗಳನ್ನು ವ್ಯಯಿಸಹತ್ತಿದ್ದಾರೆ. ಅವರು ಯಥಾರ್ಥತೆಯಿಂದ ವಿಧಾಯಕ ಕಾರ್ಯಗಳನ್ನು ಮಾಡುತ್ತಿಲ್ಲ. ಕಾಂಗ್ರೆಸ್ ಜನತೆಯಲ್ಲಿ ಸ್ಥಾನ ಮಾನಗಳಿಸಿಕೊಂಡುದು ಹಿಂದಿನ ತ್ಯಾಗಗಳ ದೆಸೆಯಿಂದಲೇ. ಈಗ ಕಾಂಗ್ರೆಸಿಗರು ಸರಿಯಾಗಿ ಕಾರ್ಯ ಮಾಡುತ್ತಿಲ್ಲವಾದ್ದರಿಂದ ಆ ವರ್ಚಸ್ಸು ಕಳೆದು ಹೋಗುತ್ತಿದೆ. ಜನತೆಗೆ ಜ್ಞಾಪಕಶಕ್ತಿ ಕಡಿಮೆ. ರಿಜರ್ವ್ ಇರುವ ಆ ಜನಪ್ರಿಯತೆಯನ್ನೇ ನೀವು ವ್ಯಯಿಸುವಿರಾದರೆ ಅದು ಬಹುಕಾಲ ಬರಲಾರದು ಎಂದು ನಾನು ಕಾಂಗ್ರೆಸಿಗರನ್ನು ಎಚ್ಚರಿಸುತ್ತೇನೆ"

"ಪಾಕಿಸ್ತಾನವನ್ನು ಕಠಿಣವಾಗಿ ಟೀಕಿಸುತ್ತಾ ತಮ್ಮ ಕೃತ್ಯಗಳ ಮೂಲಕ ಅದರ ಬಲವನ್ನೇ ಹೆಚ್ಚಿಸುವಜನರು ಭಾರತದಲ್ಲಿದ್ದಾರೆ. ಪಾಕಿಸ್ಥಾನದಮೇಲೆ ಬಲವಾದ ಪ್ರತೀಕಾರ ಕೈಕೊಳ್ಳದುದಕ್ಕಾಗಿ ಭಾರತ ಸರಕಾರವನ್ನು ದೂರುವವರಿದ್ದಾರೆ ಆದರೆ ತನ್ನೆಲ್ಲಾ ಶಕ್ತಿಯನ್ನು ಒಳಗಿನ ಶಾಂತಿ ವ್ಯವಸ್ಥೆಗೆ ವ್ಯಯಿಸಬೇಕಾಗಿರುವ ಒಂದು ಸರಕಾರಕ್ಕೆ ಅನ್ಯ ರಾಷ್ಟ್ರದ ಮೇಲೇನನ್ನು ಮಾಡುವದಕ್ಕೂ ಅಸಾಧ್ಯವಾಗುವದು. ತಮ್ಮ ಸರಕಾರವೇನು ಮಾಡತಕ್ಕದ್ದೆಂದು ಈ ಜನರು ಬಗೆಯುತ್ತಾರೋ, ಆ ಜನರೇ ಖಾಸಗೀ ಪ್ರತೀಕಾರಕ್ಕಿಳಿದು ಸರಕಾರದಿಂದಾ ಕಾರ್ಯ ಆಗದಂತೆ ಮಾಡುತ್ತಾರೆ. ಪಾಕಿಸ್ತಾನದಿಂದ ಭಾರತಕ್ಕೆ ಅಪಾಯವಿದೆ ಎಂಬಭಾವನೆ ಕೆಲವರಲ್ಲಿದೆ. ಹೊಸ ರಾಷ್ಟ್ರ ಪಾಕಿಸ್ತಾನಕ್ಕೆ ಯಾವ ಯುದ್ಧ ಹೂಡುವ ಶಕ್ತಿಯೂ ಇಲ್ಲವೆಂಬುದು ಸರ್ವಸಾಮಾನ್ಯವಾಗಿ ಮರೆತುಹೋಗಿದೆ. ಒಂದೊಮ್ಮೆಗೆ ಯುದ್ಧ ಬಂದು ಬಿದ್ದರೂ ಅದನ್ನಿದಿರಿಸುವ ಶಕ್ತಿ ಭಾರತಕ್ಕಿದೆ. ಪಾಕಿಸ್ತಾನ್ ಮತ್ತು ಭಾರತಗಳೊಳಗೆ ಯುದ್ಧವಾದಲ್ಲಿ ಪಾಕಿಸ್ತಾನ್ ನಿರ್ನಾಮವಾಗುವದು; ಭಾರತವು ದುರ್ಬಲವಾಗುವುದು. ಆ ಯುದ್ಧದಿಂದ ಭಾರತದ ಸದ್ಯದ ಒಕ್ಕಟ್ಟಿಗೂ ಭಂಗಬರಬಹುದು. ಜನತೆಯ ಏಕಮಾತ್ರ ಕರ್ತವ್ಯವೆಂದರೆ ರಾಷ್ಟ್ರವನ್ನು ಬಲಪಡಿಸುವದೊಂದೇ. ಕಾಂಗ್ರೆಸಿನ ಆ ಸ್ವಾತಂತ್ರ್ಯ ಹೋರಾಟದ ತತ್ವಗಳನ್ನೇ ನನ್ನೀ ಸ್ವತಂತ್ರ ಭಾರತದ ಪ್ರಧಾನಿ ಕಾರ್ಯ ನಿರ್ವಹಣದಲ್ಲಿಯೂ ಮೇಲ್ಪಂಕ್ತಿಯಾಗಿ ಇಟ್ಟುಕೊಂಡಿದ್ದೇನೆ. ನೀವಿದನ್ನು ಒಪ್ಪಲಾರಿರಾದರೆ ಇನ್ನೊಬ್ಬನನ್ನು ಈ ಸ್ಥಾನಕ್ಕಾರಿಸಿಕೊಳ್ಳಲು ಪೂರ್ಣ ಸ್ವತಂತ್ರರಿರುವಿರಿ."

ಗಾಂಧಿಜೀಯ ಜನ್ಮದಿನದ ಸಂದೇಶ

ತನ್ನ ಹುಟ್ಟು ದಿನ ಒಕ್ಟೋಬರ್ 2ರಲ್ಲಿ ಗಾಂಧಿಜೀ ನವದಿಲ್ಲಿಯ ಪ್ರಾರ್ಥನಾ ಸಭೆಯಲ್ಲಾಡಿದ ಮಾತುಗಳಿವು: "ಈ ದಿನ ವಿದೇಶೀ ರಾಯಭಾರಿಗಳು, ಲೇಡಿ ಮೌಂಟ್ ಬೇಟನರೇ ಆದಿಯಾಗಿ ಸಂದರ್ಶಕರ ಸಾಲು ಸಾಲೇ ಬಂದು ಹೋಯಿತು. ದೇಶ ವಿದೇಶಗಳಿಂದ ನನಗೆ ಬಂದಿರುವ ಅಭಿವಂದನಾ ತಂತಿಗಳು ಅಗಣಿತ. ಆದರೆ ಈ ಅಭಿವಂದನೆಗಳೇಕಾಗಿ? ಅವುಗಳನ್ನು ದುಃಖಸೂಚನೆಗಳೆಂದು ಹೇಳುವುದೇ ಯೋಗ್ಯವಲ್ಲವೆ? ನಾನೇನೇ ಹೇಳಿದರೂ ಜನತೆಯದನ್ನನುಸರಿಸುವ ಕಾಲವೊಂದಿತ್ತು. ಆದರೀ ದಿನ ನನ್ನದು ಒಂಟೀ ಕಂಠದ ಸ್ವರ. ಕೆಲವರು ನಾನು 125 ವರುಷ ಬದುಕಬೇಕೆಂದು ಆಶೆ ಸೂಚಿಸಿದ್ದಾರೆ. ಆ 125ರ ಮಾತಂತಿರಲಿ; ಇನ್ನು ಬದುಕಬೇಕೆಂಬ ಆಶೆಯನ್ನೇ ನಾನು ಕಳಕೊಂಡಿದ್ದೇನೆ. ದ್ವೇಷ, ಕೊಲೆಗಳ ವಾತಾವರಣದಲ್ಲಿ ನಾನು ಜೀವಿಸಲಾರೆ ನನಗೆ ಬಂದ ಅಭಿವಂದನೆಗಳಿಗೀಗ ನಾನು ತೀರಾ ಅಯೋಗ್ಯನಿದ್ದೇನೆ. ದಯವಿಟ್ಟು ಈಗಿನ ಈ ಗಲಭೆ ಹುಚ್ಚಾಟವನ್ನು ನಿಲ್ಲಿಸಿರಿ."

ವಂದನಾರ್ಪಣೆ

ಮಂಗಳೂರು ನಗರಸಭೆಗೆ ನಂಬ್ರ 26ನೇ ಜಪ್ಪು ವಾರ್ಡಿನಿಂದ ಉಮೇದ್ವಾರನಾಗಿ ನಿಂತಿದ್ದ ನಾನು ಪ್ರಬಲ ಬಹುಮತದಿಂದ ಆರಿಸಿ ಬರುವಂತೆ ಸಹಾಯಮಾಡಿದ ಎಲ್ಲಾ ಕಾರ್ಯಕರ್ತರಿಗೂ ಮತದಾರರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುವೆನು.

ಮಂಗಳೂರು
ತಾ. 6—10—47 } ಯನ್. ಯಸ್. ಕಿಲ್ಲೆ.

WANTED:- ಮೂರು ಪೆಟ್ರೋಲು ಲೋರಿಗಳು ಕುಂದಾಪುರ ತಾಲೂಕಿನಲ್ಲಿ ಕಟ್ಟಿಗೆ ಸಾಗಿಸಲಿಕ್ಕೆ ಕೂಡಲೇ ಬಾಡಿಗೆಗೆ ಬೇಕಾಗಿವೆ. ಬರುವ ಮೇ ಅಖೈರಿ ವರೆಗೆ ಕೆಲಸವಿರುತ್ತದೆ. ಮೈಲೇಜು ರೇಟು ಇತ್ಯಾದಿ ವಿವರಗಳಿಗೆ ಕೂಡಲೆ ಬರೆಯಿರಿ:-

ವಿ. ಸೀತಾರಾಮ ಶೆಟ್ಟಿ,
ಫಾರೆಸ್ಟ್ ಕಂಟ್ರಾಕ್ಟರ್,
ಪೋಸ್ಟ್, ವಂಡ್ಸೆ, ದ. ಕ.

The Canara Banking Corporation Limited.

(Incorporated in British India).

Estd: 1906.

Head Office: **UDIPI**, S. India.

ANNOUNCEMENT.

A branch of the BANK will be shortly opened at High Road, **TRICHUR.** (Cochin State)

ಗುರುವಾರ, ಉಡುಪಿ, ೯-೧೦-'೪೭

ದಿಗ್ದರ್ಶನ

ಭಾರತದ ಪ್ರಧಾನಿ ಪಂಡಿತ ನೆಹರೂಗಳ ಮತ್ತು ಮಹಾತ್ಮಾ ಗಾಂಧಿಯವರ ಇತ್ತೀಚಿನ ಡಿಲ್ಲೀ ಭಾಷಣಗಳಲ್ಲಿ ಮೂಡಿ ತೋರಿರುವ ಕೆಲವಂಶಗಳನ್ನು ಹಿಂದೀಯರು ಅಗತ್ಯ ಗಮನಿಸಬೇಕು. ಅವುಗಳು ಕಡೆಗಣಿಸಲಾಗದಂತಹ ವಿಷಯಗಳು; ಅವುಗಳನ್ನೂ ಮರೆಯುವದೆಂದರೆ ಆತ್ಮದ್ರೋಹ ಮಾಡಿಕೊಂಡಂತೆ, ಎಂದೀ ಸಂದರ್ಭದಲ್ಲಿ ಒತ್ತಿಹೇಳಬೇಕಾಗಿದೆ. ಇಂದು ನಾವು ಪಡೆದಿರುವ ಸ್ಥಾನ, ನಮ್ಮ ಮುಂದಿನ ಭವಿಷ್ಯ ಇವೆರಡಕ್ಕೂ ನಿಕಟ ಹೊಂದಿಕೆಯಾಗುವ ಸೂಚನೆಗಳು ಇಲ್ಲಿವೆ. ಈ ಮೊದಲಾದರೂ ಗಾಂಧೀ ನೆಹರುಗಳ ಮಾತಿಗೆ ಬೆಲೆಕೊಡಬೇಕೆಂಬುದನ್ನು ಹಿಂದೀಯರಿಗೆ ಕಲಿಸುವ ಅಗತ್ಯವಿರಲಿಲ್ಲ. ಆದರೆ ಬೆಲೆಕೊಡದವರಿಗಾವ ಹೊಸ ಶಿಕ್ಷೆಯೂ ಈ ಮೊದಲಿರಲಿಲ್ಲ. ರಾಷ್ಟ್ರದ ಚಿರಕಾಲದ ದಾಸ್ಯ ಹಾಗೂ ದುಸ್ಥಿತಿಯ ನಿವಾರಣೋಪಾಯಗಳನ್ನೇ ಈ ಮೊದಲಿವರು ಸೂಚಿಸುತ್ತಿದ್ದರು. ಆಗ ಆ ಸೂಚನೆಗಳು ಕಡೆಗಣಿಸಲ್ಪಡುವುದರಿಂದ, ಅಭ್ಯುದಯ ಹೊಂದುವ ಹೊಸ ಲಾಭ ತಪ್ಪುತಿತ್ತು ಹೊರತು ಹೊಸ ನಷ್ಟವಾವುದೂ ಆಗುತ್ತಿರಲಿಲ್ಲ. ಆದರೆ ಇಂದು ಹಾಗಲ್ಲ. ನಾವು ಸ್ವತಂತ್ರರು. ನಮ್ಮ ಭವಿಷ್ಯವು ನಮ್ಮ ಕೈಗೇನೇ ಬಂದಿದೆ. ನಾವು ಇರಬೇಕಾದ ಮಾದರಿಯಲ್ಲಿರದಿದ್ದಲ್ಲಿ—ಮಾಡಲೇ ಬೇಕಾದುದನ್ನು ಮಾಡದೆ ಹೋದಲ್ಲಿ—ಹೊಸ ಹೊಸ ಅಪಾಯಗಳೇ ಕಾದಿವೆ. ಇಂದು ಗಾಂಧೀ ನೆಹರುಗಳ ಸೂಚನೆಗಳು ಅಂತಹ ಅಪಾಯಗಳನ್ನು ನಿರೀಕ್ಷಿಸಿ, ಅವುಗಳ ನಿವಾರಣೆಗಾಗಿಯೇ ಮುಂದೆ ಬಂದಿವೆ. ಇಲ್ಲಿ ಹಿಂದಿನ ಮತ್ತು ಇಂದಿನ ಈ ಸ್ಥಿತಿ ವ್ಯತ್ಯಾಸವನ್ನು ಯಾರೂ ಮರೆಯಬಾರದು. ಅಂದು ರಾಷ್ಟ್ರೀಯ ಕಾರ್ಯವು ಐಚ್ಛಿಕವಾಗಿತ್ತು; ಇಂದದು ಕಡ್ಡಾಯವಾಗಿದೆ. ಅಂದು ಅವರವರ ಅಭಿರುಚಿ, ಹಸಿವೆಗನುಸಾರವಾಗಿ ಜಗಿಯಲಾಗುವಂತಿತ್ತು; ಇಂದದು ಒಂದು ಚಿಕಿತ್ಸೆಯೇ. ಅದ್ದರಿಂದಲೇ ನಮ್ಮ ಜನನಾಯಕರು ಎತ್ತಿ ತೋರಿಸಿರುವ ಈ ಕೆಳಗಿನ ಕೆಲವಂಶಗಳನ್ನು ಯಾರೂ ಮರೆಯಕೂಡದೆನ್ನುತ್ತೇವೆ:—

ಭಾರತವನ್ನು ಸಮತಾವಾದಿ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಮಾರ್ಪಡಿಸುವದೇ ಗುರಿಯಾಗಿದೆ ಹೊರತು ಅದೆಂದೂ 'ಹಿಂದೂ ರಾಜ್ಯ"ವಾಗದು. ಈ ಗುರಿಯ ಕಡೆಗಾವ ಹೆಜ್ಜೆಯನ್ನೂ ಇಡಲಾಗದಂತೆ ಜಾತೀಯ ಗಲಭೆಯು ದೊಡ್ಡ ಕಂಟಕವಾಯಿತು; ಗಲಭೆ ನಿವಾರಣೆಯ ಪ್ರಯತ್ನ ಹೊರತು ಬೇರಾವ ರಾಷ್ಟ್ರೀಯ ಕಾರ್ಯಗಳ ಕಡೆಗೂ ಸ್ವತಂತ್ರ ಸರಕಾರವು ಲಕ್ಷ್ಯ ಕೊಡದಂತಾಗಿದೆ. ಹೀಗಾಗಿ ಸಮಾಜದ್ರೋಹೀ ಸ್ವಾರ್ಥಿಗಳಿಗೆ, ಧನಮತ್ತರಿಗೆ, ದುರ್ವ್ಯಾಪಾರ ಲಾಲಸೆಯವರಿಗೆ, ಈ ವಾತಾವರಣವು ರಕ್ಷಾ ಕೋಟೆಯಂತಿದೆ. ಮುಸ್ಲಿಮರಿರಲಿ, ಇನ್ನಾರೇ ಇರಲಿ, ಇಲ್ಲಿದ್ದು ರಾಷ್ಟ್ರದ್ರೋಹ ಬಗೆಯುವವರನ್ನು ಶಿಕ್ಷಿಸಬಹುದು. ಆದರೆ ಅವರು ಹೊರಟುಹೋಗಬೇಕೆಂದು ಒತ್ತಾಯಿಸುವದು ನ್ಯಾಯವಲ್ಲ. ತಮ್ಮ ಭೂಮಿಗೆ ವಿಧೇಯರಾಗಲಿಲ್ಲವಿಲ್ಲವವರು ಇಲ್ಲಿರುವುದರಲ್ಲಿ ನ್ಯಾಯವೆಂತೂ ಇಲ್ಲ; ಇರಲು ಸಾಧ್ಯವಾಗುವಂತೆಯೂ ಇಲ್ಲ. ತಮ್ಮ ಸರಕಾರವನ್ನು ತಾವು ಬಲಪಡಿಸಿ ಆ ಮೂಲಕ ಕಾರ್ಯ ಸಾಧಿಸಬೇಕು ಹೊರತು ಸರಕಾರದ ಹಕ್ಕಿನ ಕಾರ್ಯವನ್ನು ಖಾಸಗೀ ಜನತೆ ಮಾಡಕೂಡದು.

ಸದ್ಯಸ್ಥಿತಿಯಲ್ಲಿ ಮೇಲಿನ ನೀತಿಸೂತ್ರಗಳನ್ನು ವಿವರಿಸುವ ಆವಶ್ಯಕತೆಯಿಲ್ಲ. ತಾತ್ಕಾಲಿಕ ಉದ್ರೇಕ ಮತ್ತು ತಪ್ಪು ಭಾವನೆಗಳ ಪರದೆಯೊಳಗೆ ಎಲ್ಲರಲ್ಲೂ ಹುದುಗಿರುವ ಮನಸ್ಸಾಕ್ಷಿಗಳಿವು. ಕಾಂಗ್ರೆಸಿನ ಹಾಗೂ ಹಲವು ಕ್ರಾಂತಿಕಾರ ಹುತಾತ್ಮರ ದೆಸೆಯಿಂದ ಭಾರತವು ಅನುಕ್ರಮವಾಗಿ 'ಸ್ವರಾಜ್ಯ' 'ಪೂರ್ಣ ಸ್ವಾತಂತ್ರ್ಯ' 'ಪ್ರಜಾಸತ್ತಾ ಸಮತಾವಾದಿ ಜನತಾ ರಾಜ್ಯ'ವನ್ನು ಗುರಿಯಾಗಿಟ್ಟುಕೊಂಡು ಮುಂದುವರಿದಿದ್ದಿತೇ ಹೊರತು, ಒಂದು ಧರ್ಮದ ಅಸ್ತಿವಾರದಲ್ಲೊಂದು ರಾಜ್ಯವೇರಿಸುವ ಹುಚ್ಚು ಮುಸ್ಲಿಂ ಲೀಗಿನಿಂವಲ್ಲದೆ ಬೇರಾರಿಂದಲೂ ಇಲ್ಲಿ ತಾಗಿದ್ದಿಲ್ಲ. ಲೀಗಿಗೆ ಪಾಕಿಸ್ತಾನ ದೊರಕಿತು. ದ್ವೇಷ ಮಾತ್ರದಿಂದಲೇ ಒಂದು ದೇಶ ಸಂಪಾದಿಸಿಕೊಳ್ಳಬಹುದೆಂಬ ಹೊಸ ಪುಟವೊಂದು ಲೋಕದ ಚರಿತ್ರೆಗೆ ಸೇರಿತು. ಆದರೆ ದ್ವೇಷದಿಂದ ಬಿತ್ತಿದುದೂ ಮೊಳೆಯಬಲ್ಲುದೇ? ಏಳು ವಾರಗಳಷ್ಟೇ ಕಳೆದಿವೆ. ಒಂದು ಹೃದಯ ಮಾಪಕ ಯಂತ್ರದಿಂದ ಕಾಯಿದೇ ಅಝಾಮ್ ಜಿನ್ನರ ಅಂತರ್ಮನವನ್ನು ಈಗಲೇ ಅಳೆದರೂ ಮೇಲಿನ ಪ್ರಶ್ನೆಗುತ್ತರವು ಅಲ್ಲಿ ದೊರಕದಿರದು! ಅದು ಹೇಗೂ ಇರಲಿ; ತಾನಾಗಿ ಪ್ರತ್ಯೇಕ ಕ್ಷೇತ್ರವನ್ನಾರಿಸಿಕೊಂಡ ಆ ಹೃದಯದೊಳಗೆ ನೋಟ ಬೀರಿ ಅಲ್ಲಿಂದ ಭಾರತವೇನನ್ನಾದರು ಹೆಕ್ಕಿಕೊಳ್ಳುವಷ್ಟು ಕಾಲವೀಗ ಪಕ್ವವಾಗಿಲ್ಲ. ಆದರೆ ಭಾರತೀಯರು ತಮ್ಮನ್ನು ತಾವು ನೋಡಿಕೊಂಡು ಮನೋಗತಿಯನ್ನು ಸುಧಾರಿಸಿಕೊಳ್ಳಬೇಕಾದ ಕಾಲಬಂದಿದೆ. ಇಂದಿನ ದ್ವೇಷ ಕಾವಿನಡಿಯಲ್ಲಿ ಸ್ವರಾಜ್ಯ ತರು ಫಲ ಬಿಡದಂತಾಗಿದೆ; ಜನತಾ ರಾಜ್ಯದ ಗುರಿ ಮುಟ್ಟದಂತಾಗಿದೆ. ಬದಲಿಗೆ ಮಿ. ಚರ್ಚಿಲ್ಲರಂಥವರಿಂದ ನಿರೀಕ್ಷಿಸಿದ್ದ ಉಡುಗೊರೆಯೂ ದೊರೆಯಿತು! "ಭಾರತವನ್ನು ನಾವು ಪಕ್ಕನೇ ಬಿಟ್ಟುಬಂದಲ್ಲಿ, ಬ್ರಿಟಿಷ್ ಆಳ್ವಿಕೆಯು ನಿರ್ಮಿಸಿದ್ದ ಭಾರತದ ಒಕ್ಕಟ್ಟುಕೂಡಲೇ ನಿರ್ನಾಮವಾಗುವದೆಂದೂ, ಅಲ್ಲಿಯ ಪಾಪದ ನಿಸ್ಸಹಾಯಕ ದೊಡ್ಡ ಜನ ಸಮೂಹವು ಎಂತಹ ಸಂಕಷ್ಟ ಮತ್ತು ರಕ್ತಪಾತಕ್ಕೀಡಾಗುವುದೆಂಬುದನ್ನಾಗಲೀ ಎಂತಹ ಹೊಸ ಹಾಳತೆಗೆ ಅವರ ಭವಿಷ್ಯ ಮತ್ತು ಅದೃಷ್ಟ ಬಲಿಬೀಳಬೇಕಾಗುವದೆಂಬುದನ್ನಾಗಲೀ ಹೇಳುವುದಸಾಧ್ಯವೆಂದೂ ನಾನು ಒಂದು ವರುಷಕ್ಕೆ ಮೊದಲೇ ಎಚ್ಚರಿಸಿದ್ದೆ. ನನ್ನಾ ಭವಿಷ್ಯ ಇಂದು ಸತ್ಯವಾದುದನ್ನು ನೀವು ಕಾಣುತಿದ್ದೀರಿ. ಈ ಘಟನೆಯು ಚರಿತ್ರೆಯಲ್ಲೇ ಚಿರಸ್ಥಾಯಿಯಾಗಲಿದೆ. ಬರ್ಮಾವೂ ಸದ್ಯದಲ್ಲೇ ಇದೇ ಅದೃಷ್ಟಕ್ಕೊಳಗಾಗಬಹುದು. ನನ್ನೀ ಮಾತು ಸುಳ್ಳೋ ಸತ್ಯವೋ ಎಂಬುದನ್ನು ನಿಮ್ಮಲ್ಲಿ ಹೆಚ್ಚಿನವರು ಸತ್ಯಕ್ಕೂ ಕಾಣಲಿರುವಿರಿ! ಎಂದು ಬ್ರಿಟಿಷ್ ಅಪ್ರಗತಿಕರ ಪಕ್ಷ ಸಮ್ಮೇಲನದಲ್ಲಿ ಒಕ್ಟೋಬರ್ ೩ರಲ್ಲಿ ಮಿ. ಚರ್ಚಿಲ್ಲರು ಪುನಃ ಹಂಗಿಸಿದ್ದಾರೆ. ಇಂತಹ ಟೀಕೆಗಳಲ್ಲಿ ಯಾವ ಹುರುಳಿಲ್ಲದಿದ್ದರೂ ಸ್ವತಂತ್ರ ಭಾರತೀಯರ ಮುಖಕ್ಕದು ಮಂಗಳಾರತಿಯಾಗಬಲ್ಲುದು! ಮಿ. ಚರ್ಚಿಲ್ಲರು ಭಾರತದ 'ಅಪದ್ಬಾಂಧವ'! ಹಿಂದಿನ ಸ್ವಾತಂತ್ರ್ಯ ಹೋರಾಟಗಳ ವೇಳೆ ಹಿಂದೀಯರ ಅಭಿಮಾನವನ್ನು ಕೆರಳಿಸುವ ಉಪಕಾರವಾಗುತ್ತಿದ್ದುದು ಚರ್ಚಿಲ್ಲರಂತಹ ವೈರಿಗಳಿಂದಲೇ! ಇಂದಾದರೂ ಹಾಗೆಯೇ; ಗಾಂಧಿಜೀಯ ಅಮೃತವಾಣಿಯಂತೆಯೇ ಚರ್ಚಿಲ್ಲರ ಅಣಕವಾಡೂ ಹಿಂದೀಯರ ಕಣ್ಣನ್ನು ತೆರೆಯಿಸಬಲ್ಲುದು. ಇವೆರಡೂ ಮನುಷ್ಯ ಹೃದಯಗಳನ್ನು ಇಬ್ಬದಿಗಳಿಂದ ಸ್ಪರ್ಶಿಸುವಂತಹವು. ನಾವು ಮನುಷ್ಯರು! ಮೃಗಗಳಂತೆ ದೀರ್ಘಾವಧಿ ಕಚ್ಚಾಡಿಕೊಂಡಾಯಿತು. ವಿಧರ್ಮೀಯರ ಮೇಲೆ ದ್ವೇಷಾಸೂಯೆಗಳನ್ನು—ಸ್ವಧರ್ಮೀಯರ ಮೇಲಿನ ಕೃತಕ ಅಭಿಮಾನವನ್ನು—ಇದಿರೊಡ್ಡಿದವರು, ಇದಿರಿಸಿದವರೆಂಬ ಭೇದವಿಲ್ಲದೆ ಸರ್ವರೂ ಅವುಗಳ ವಿಷಫಲಗಳನ್ನು ಉಂಡುದಾಯಿತು. ಇನ್ನಾದರೂ ಕಣ್ಣು ತೆರೆಯೋಣ. ಆ ವಿಷವೃಕ್ಷವು ಬೇರು ಸಮೇತ ಕಿತ್ತೊಗೆಯಲು ಬಾರದಷ್ಟು ಬೆಳೆದಿರಬಹುದು. ಅದನ್ನು ಒಣಗಿಸಿಯಾದರೂ ಸಾಯಿಸೋಣ! ಅದಕ್ಕಾರು ನೀರೆರೆಯುವರೋ ಅವರನ್ನೇ ನಮ್ಮ ವೈರಿಗಳೆಂದು ಭಾವಿಸಿ ನಿರ್ಮೂಲಿಸೋಣ. ವಾತಾವರಣವನ್ನು ತಿಳಿಗೊಳಿಸಿ, ಅದು 'ಸಮಾಜವಾದಿ ಜನತಾ ರಾಜ್ಯ" ರಚನೆಯ ಅಸ್ತಿವಾರವಾಗುವಂತೆ ಸಾಧಿಸೋಣ.

ಉಡುಪಿ

ಗಾಂಧಿ ಜಯಂತಿ—ಮತ್ತು ಪಾನತ್ಯಾಗಕ್ಕಾಗಿ ತಾ 1-10-47ನೇ ರಾತ್ರಿ ಶ್ರೀ ರಾಮಕೃಷ್ಣ ಥಿಯೇಟರಿನವರು ಸುಮಾರು 300ಮಂದಿ ಕೊರಗರಿಗೆ ಧರ್ಮಾರ್ಥ ಸಿನೆಮಾ ತೋರಿಸಿದರು. ಶ್ರೀ. ಆರ್. ಆರ್. ಕುಂಜೂರರು, ಪಾನನಿಷೇಧ, ಗಾಂಧಿಜೀಯಿಂದಾದ ಉಪಕಾರ ಇತ್ಯಾದಿಗಳನ್ನು ವಿವರಿಸಿ ಭಾಷಣವಿತ್ತರು. ತಾ. 2ನೇ ಮುಂಜಾನೆ ನಾಟ್ಯಕೂಟದ ಪರವಾಗಿ ಗಾಂಧೀ ಜಯಂತಿಯು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಎಡ್ವಕೇಟ್ ಶ್ರೀ. ಎಸ್. ವಿ. ಕಾಮತರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀ. ಪಿ. ವೆಂಕಟೇಶ ನಾಯ್ಕರು ಧ್ವಜಾರೋಹಣ ಮಾಡಿದರು. ಶ್ರೀಗಳಾದ ಎ. ಜಿ. ಆಳ್ವ, ಪಿ. ಸೀನ ಶೆಟ್ಟಿ, ಆರ್. ಆರ್. ಕುಂಜೂರರ ಭಾಷಣಗಳಾಗಿ ತಾಂಬೂಲಪುಷ್ಪವಿತರಣೆ ನಡೆಯಿತು.

ವಿದಾಯ ಸತ್ಕಾರ—ನಾಟ್ಯಕೂಟದವರು, ಬೊಂಬಾಯಿಗೆ ತೆರಳಲಿರುವ ತಮ್ಮೋರ್ವ ನಟ ಶ್ರೀ. ಯಚ್. ವಿಠಲರಾಯರಿಗೆ ತಾ. 3-10-47ರಲ್ಲಿ ಒಂದು ಸತ್ಕಾರಕೂಟವಿತ್ತರು. ಎಡ್ವೊಕೇಟ್ ಶ್ರೀ. ಯು. ಬಿ. ಕೃಷ್ಣರಾಯರು ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಸ್ಕೌಟ್ ಕಮಿಶನರರ ಪರಿಷತ್ತು—ಇದೇ ತಾ 12ರಲ್ಲು ಮುಕುಂದ ನಿವಾಸದಲ್ಲಿ ಜರಗುವುದು, ಮದ್ರಾಸ ಪ್ರಾಂತಿಕ ಸ್ಕೌಟ್ ದಳದ ವ್ಯವಸ್ಥಾಪಕರಾದ ಶ್ರೀ ರಾಜಗೋಪಾಲನ್ ಬರಲಿರುವರು. ಪ್ರಾಂತಿಕ ಸ್ಕೌಟ್ ಕಮಿಶನರರ ಪರಿಷತ್ತು ಇದೇ ತಾ 22 ಮತ್ತು 23ರಲ್ಲು ಮಣಿಪಾಲದಲ್ಲಿ ಡಾ| ಸವೂರ್ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಮದ್ರಾಸ್ ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಪ್ರಾಂತದ ಎಲ್ಲಾ ಸ್ಥಳಗಳಿಂದ ಡೆಲಿಗೇಟರು ಬರಲಿರುವರು. ತಾ 22ರಲ್ಲು ಸಂಜೆ 5-30ಕ್ಕೆ ಅಜ್ಜರಕಾಡು ಗಾಂಧಿ ಮೈದಾನದಲ್ಲಿ ಜಿಲ್ಲಾ ಸ್ಕೌಟ್ ರ್‍ಯಾಲಿ ಜರಗಲಿರುವುದು.

ಹಿಂದೂ ಸೇವಾಸಮಿತಿ—ಯೊಂದು ಕೆಲವು ತರುಣರಿಂದ ಉಡುಪಿಯಲ್ಲಿ ಸ್ಥಾಪಿಸಲ್ಪಟ್ಟಿದೆ. ಹಿಂದೂ ಅನಾಥ ಶವಗಳ ದಹನ ವ್ಯವಸ್ಥೆ, ಹಿಂದೂ ತರುಣರಿಗೆ ಕವಾಯಿತು ಶಿಕ್ಷಣ, ಹಿಂದೂ ನಿರ್ಗತಿಕ ನಾರಿಯರ ಮಾನರಕ್ಷಣೆ, ಅಸ್ಪೃಶ್ಯತಾ ನಿವಾರಣೆ—ಇತ್ಯಾದಿ ಧ್ಯೇಯಗಳನ್ನದು ಇಟ್ಟುಕೊಂಡಿದೆ. ಸಮಿತಿಯ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ತಾ. 5ನೇ ಅಪರಾಹ್ನ ರಥಬೀದಿಯಲ್ಲಿ ನಡೆದು ಸಮಿತಿಯ ಉದ್ದೇಶ ಮತ್ತು ಆವಶ್ಯಕ ಕಾರ್ಯಕ್ರಮಗಳನ್ನು ವರ್ಣಿಸಿ ಭಾಷಣಗಳಾದುವು.

ಕಟಪಾಡಿ—ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ತಾ. 15ರಿಂದ 9 ದಿನಗಳವರೆಗೆ ನಡೆಯಲಿರುವ ನವರಾತ್ರಿ ಸಮಾರಂಭದಲ್ಲಿ ಭಾಗವಹಿಸಿ ಸೇವೆಸಲ್ಲಿಸಬೇಕೆಂದಿರುವ ಕಲಾ ಪ್ರೇಮಿಗಳು ಡಾ. ಕೆ. ಜಿ. ಶೆಣೆಯವರಿಗೆ ತಿಳಿಸಬೇಕಾಗಿ ಅಪೇಕ್ಷಿಸಲಾಗಿದೆ.

NOTICE.

The Bombay Life Assurance Company Ltd., Bombay.

Notice having been given of the loss of Policy No. 78907 on the life of Mr. Manjayya Anthappa Shetty a duplicate policy will be issued unless objection is lodged with us within one month from this date.

K. Balasubrahmanyam

Manager & Actuary

Dated: Bombay

ಜುನಗಾಡ್ ಸಮರ ನಿರ್ಮಿಸೀತೆ?

ಮೈಸೂರು ಸ್ವಾತಂತ್ರ್ಯ ಸಮರ

ಮೈಸೂರಿನ ಸತ್ಯಾಗ್ರಹವು ಇದುವರೆಗೆ ರಭಸದಿಂದ ನಡೆದಿದೆ. ರೈಲ್ವೇ ಸಂಪುಗಾರರ ಕೆಲವು ನಾಯಕರು ಒಮ್ಮೆ ಬಿಡುಗಡೆ ಮಾಡಲ್ಪಟ್ಟು, ಮುಖ್ಯ ನಾಯಕನು ಸರಕಾರದ ಕೆಲವು ಶರ್ತಗಳಿಗೊಪ್ಪಿ ಮುಷ್ಕರ ತ್ಯಾಗದ ಸೂಚನೆ ಕೊಟ್ಟಿದ್ದರೂ, ಮಿಕ್ಕ ನಾಯಕರೂ ಕೆಲಸಗಾರ ಸಭೆಯೂ ಅದಕ್ಕೊಪ್ಪದ್ದರಿಂದ ಮುಷ್ಕರ ಯಥಾಪ್ರಕಾರ ಸಾಗಿದೆ. ಬಿಡುಗಡೆಗೊಂಡ ಮುಷ್ಕರ ನಾಯಕರೆಲ್ಲಾ ಅಂದೇ ಪುನಃ ದಸ್ತಗಿರಿಯಾಗಿದ್ದಾರೆ. ಸತ್ಯಾಗ್ರಹ ಚಳಗಾರರ ದಸ್ತಗಿರಿಗಳೂ, ಚಳವಳಿಯೂ ಎಂದಿನಂತೆ ನಡೆದಿವೆ. ಗಾಂಧೀಜಯಂತಿಯನ್ನು ಮೈಸೂರು ಸರಕಾರವು ರಜಾ ದಿನಮಾಡಿತಲ್ಲದೆ ಭಾರತ ಮತ್ತು ಮೈಸೂರು ಧ್ವಜಗಳೆರಡೂ ಸರಕಾರೀ ಭವನಗಳಲ್ಲಿ ಆ ದಿನವೇರಿದ್ದುವು. ಎಲ್ಲಾ ಸ್ತ್ರೀ ಕೈದಿಗಳ ಸಮೇತ ಹಲವು ರಾಜಕೀಯ ಕೈದಿಗಳು ಆ ದಿನವೊಮ್ಮೆ ಬಿಡುಗಡೆಹೊಂದಿದ್ದರು. ಈಗ ಮೈಸೂರು ಕಾಂಗ್ರೆಸ್ ಪ್ರಮುಖರೆಲ್ಲರನ್ನೂ ಸರಕಾರವು ಬಿಡುಗಡೆ ಮಾಡಲು ನಿರ್ಧರಿಸಿದೆ. ಸರಕಾರ ಮತ್ತು ಕಾಂಗ್ರೆಸಿನೊಳಗೆ ಸಂಧಾನ ಸಾಫಲ್ಯ ಹೊಂದುವ ಆಶೆ ಮೂಡಿದೆ. ನಡುಗಾಲ ಸರಕಾರ ರಚನೆಗೆ ಮೈಸೂರು ಸರಕಾರವು ಸಿದ್ಧವಿರುವದೆಂದು ನಂಬಲಾಗಿದೆ.

ಹೈದರಾಬಾದು ಸತ್ಯಾಗ್ರಹ

ಹೈದರಾಬಾದಿನಲ್ಲಿ ಜನತಾಚಳವಳವೂ ಕ್ರೂರ ರೀತಿಯ ದಬ್ಬಾಳಿಕೆಯೂ ಸಾಗಿದೆ. ಯಾವ ಸಂಧಾನಾಶೆಯೂ ಮೊಳೆಯುವದಿಲ್ಲ. ಕೇಂದ್ರಕ್ಕದು ಜೋಡಣೆಗೊಳ್ಳುವ ಸಂಬಂಧದ ಮಾತುಕತೆಗಳು ನಡೆದು ನಿಜಾಮರ ಇತ್ತೀಚೆಗಿನ ಸೂಚನೆ[illegible]ಲೋಚನೆಗಾಗಿ ಹಿಂದೀ ಸರಕಾರವು ತನ್ನ ಪ್ರತಿನಿಧಿ ಮಂಡಲಿಯೊಂದನ್ನು ಹೈದರಾಬಾದಿಗೆ ಬೀಳ್ಕೊಟ್ಟಿದೆ. ನಿಜಾಮ್ ಸರಕಾರದ ಕೃಪಾಶ್ರಯ ಪಡೆಯಲ್ಲಿ ಒಂದು ರಾಜಕೀಯ ಪಕ್ಷವು ಹೈದರಾಬಾದಿನ ಸರ್ವ ಹಿಂದುಗಳನ್ನು ಧ್ವಂಸಮಾಡುವ ಹಂಚಿಕೆ ತಯಾರಿಸಿದೆಯೆಂಬ ವಾರ್ತೆಯಿಂದ ಹಿಂದೂ ಸಮಾಜವು ಅಲ್ಲೋಲ ಕಲ್ಲೋಲವಾಗಿದೆ. ಹೈದರಾಬಾದ್, ಸಿಕಂದರಾಬಾದಿನ ಹಿಂದುಗಳು ಅಲ್ಲಿಂದ ಪಲಾಯನ ಮಾಡಹತ್ತಿದ್ದಾರೆ. ಮೇಲಿನ ವಾರ್ತೆಯು ಪೂರ್ಣ ನಿರಾಧಾರವಾದುದು; ಗೊಂದಲ ಪ್ರೇರಣೆಯ ದುರ್ಬುದ್ಧಿಯದು ಎಂದು ನಿಜಾಮ್ ಸರಕಾರದ ಹೇಳಿಕೆಯಿದೆ.

ಜುನಾಗಾಡ್ ಸಮಸ್ಯೆ ಸಮರ ನಿರ್ಮಿಸುವದೇ?

ಸುತ್ತಲಿನ ಮತ್ತು ತನ್ನೊಳ ಸಂಬಂಧವುಳ್ಳ ಕಾಥಿಯಾವಾರದ ಮಿಕ್ಕೆಲ್ಲಾ ಸಂಸ್ಥಾನಗಳೂ ಭಾರತಕೇಂದ್ರಕ್ಕೆ ಸೇರಿರುವಾಗ, ತನ್ನ ಅತ್ಯಧಿಕ ಬಹುಸಂಖ್ಯೆಯ ಪ್ರಜೆಗಳು ಹಿಂದುಗಳೇ ಇರುವಾಗ ಜುನಾಗಡದ ನವಾಬರು ಪಾಕಿಸ್ತಾನಕ್ಕೆ ಸೇರಿರುವುದು ಮಾತ್ರವಲ್ಲ; ಹಿಂದುಸ್ಥಾನಕ್ಕೆ ಜೋಡಣೆಗೊಂಡಿರುವ ಎರಡು ಸಂಸ್ಥಾನಗಳಾದ ಬಾಬರಿಯಾವಾಡ್ ಮತ್ತು ಮಂಗ್ರೋಲಿನೊಳಗೆ ತನ್ನ ಸೇನೆಯನ್ನು ಆಕ್ರಮ ಪ್ರವೇಶಮಾಡಿಸಿ ನಿಲ್ಲಿಸಿರುವ ಘಟನೆಯಿಂದ ಹಿಂದುಸ್ಥಾನ್-ಪಾಕಿಸ್ತಾನಗಳೊಳಗೆ ಖಾಡಾಖಾಡಿ ಘರ್ಷಣೆಯೇಳುವ ಸಂಭವವೆದ್ದಿದೆ. ಕಾಥಿಯಾವಾರಿನ ಮಿಕ್ಕ ಸಂಸ್ಥಾನಗಳ ಬೇಡಿಕೆಗನುಸಾರವಾಗಿ ಭಾರತ ಸರಕಾರವು ತನ್ನ ಸೇನೆಗಳನ್ನು ಕಾಥಿಯಾವಾರಿಗೆ ಕಳುಹಿಸಿ ಪೋರ್ ಬಂದರದಲ್ಲಿ ನಿಲ್ದಾಣ ಹೂಡಿಸಿದೆ. ಬಾಬರಿಯಾವಾಡ್ ಮತ್ತು ಮಂಗ್ರೋಲಿನಿಂದ ಕೂಡಲೇ ಸೇನೆ ಹಿಂದೆಗೆಯಬೇಕೆಂದು ಜುನಾಗಾಡನ್ನೆಚ್ಚರಿಸಿದೆ. ತನ್ನ ಸಂಧಾನಾತುರತೆಯನ್ನು ವ್ಯಕ್ತಪಡಿಸಿ ಜುನಾಗಾಡ್ ಪ್ರಜೆಗಳ ಬಹುಮತದಂತೆ ಈ ಪ್ರಶ್ನೆಯನ್ನು ತೀರ್ಮಾನಿಸಬೇಕೆಂದು ಸೂಚಿಸಿ, ಭಾರತ ಸರಕಾರವು ಈ ಕುರಿತು ಪಾಕಿಸ್ತಾನ್ ಸರಕಾರದ ಸಲಹೆ ಕೇಳಿದೆ. ಮುಂದೇನಾಗುವದೆಂಬದನ್ನು ರಾಷ್ಟ್ರವು ಆತುರದಿಂದ ನಿರೀಕ್ಷಿಸತಕ್ಕದ್ದು.

ಮುಸ್ಲಿಂ ನಾಯಕರ ಸದ್ಬುದ್ಧಿ

ಹಲವು ಮುಸ್ಲಿಂ ನಾಯಕರಲ್ಲಿ ಪಾಕಿಸ್ತಾನೊಂದು ಪ್ರಮಾದವೆಂಬ ಕುರಿತು ಇಷ್ಟರಲ್ಲೇ ತೀವ್ರಗತಿಯಿಂದ ಜ್ಞಾನೋದಯವಾಗ ಹತ್ತಿರುವುದು ಶುಭಶಕುನವೆನ್ನಬೇಕು. ಅ. ಭಾ. ಮಜ್ಲಿಸ್ ಪರಿಷತ್ತಿನ ಅಧ್ಯಕ್ಷರೂ ಬಿಹಾರಿನ ಮಂತ್ರಿಗಳಲ್ಲೊಬ್ಬರೂ ಆಗಿರುವ ಮಿ. ಅಬ್ದುಲ್ ಕ್ವಯುಮ್ ಅನ್ಸಾರಿಯವರು ಪಾಕಿಸ್ತಾನವು ಭಾರತದೊಂದಿಗೆ ಪುನಃ ಮಿಲನಗೊಳ್ಳಬೇಕೆಂದೂ, ಅದಕ್ಕೆ ಪಾಕಿಸ್ತಾನವೇ ಮುಂದೆ ಬರಬೇಕೆಂದೂ ಕೇಳಿಕೊಂಡಿದ್ದಾರೆ. ದ್ವಿರಾಷ್ಟ್ರತತ್ವವನ್ನೇ ಮರೆತು ಭಾರತದ ಮುಸ್ಲಿಮರು ಭಾರತ ಕೇಂದ್ರಕ್ಕೆ ತ್ರಿಕರಣಪೂರ್ವಕ ವಿಧೇಯರಾಗಿರಬೇಕೆಂದು ಮಧ್ಯಪ್ರಾಂತ್ಯದ ಮಾಜೀ ಮಂತ್ರಿ ಡಾ| ಹಸ್ನೈನರ ಕರೆ. ಭಾರತದ ನಾಲ್ಕೂವರೆ ಕೋಟಿ ಮುಸಲ್ಮಾನರನ್ನು ನಡುನೀರಿನಲ್ಲಿ ಕೈಬಿಟ್ಟ ಈ ಅಪ್ರಬುದ್ಧ ಲೀಗ್ ನಾಯಕತ್ವವನ್ನು ಸಂಪೂರ್ಣ ಕಡೆಗಣಿಸಿರೆಂದು ಸಂಯುಕ್ತ ಪ್ರಾಂತ್ಯದ ಮಿ. ಎಹಿಸಾನ್ ಮಹಮ್ಮದ್ ಆಲಿ, ಎಂ. ಎಲ್. ಎ ಯ ಆಹ್ವಾನ. ಭಾರತದ ಬೇರೆ ಹಲವು ಲೀಗ್ ನಾಯಕರು ಕೂಡಾ ಒಬ್ಬೊಬ್ಬರಾಗಿ ಇಂತಹ ಅಭಿಪ್ರಾಯಗಳನ್ನೇ ಹೊರಗೆಡಹ ಹತ್ತಿದ್ದಾರೆ.

ಮಾನ್ಯಮಂತ್ರಿ ರೆಡ್ಡಿಗಳ ಆಗಮನ— ಮದ್ರಾಸು ಸರಕಾರದ ಕೈಗಾರಿಕೆ ಶಾಖೆಯ ಮಂತ್ರಿಗಳಾದ ಶ್ರೀ ಎಚ್. ಸೀತಾರಾಮ ರೆಡ್ಡಿಗಳವರು ಇದೇ ತಾ 2ರಲ್ಲು ಬೆಳಿಗ್ಗೆ ಉಡುಪಿಗೆ ಚಿತ್ತೈಸಿದರು. ಮುಖಕ್ಷೌರ, ಸ್ನಾನಾದಿಗಳನ್ನು ತೀರಿಸಿಕೊಂಡು ನಿಶ್ಚಿತ ಸಮಯಕ್ಕಿಂತ ಸ್ವಲ್ಪ ವಿಳಂಬವಾಗಿ ಮುಕುಂದನಿವಾಸಕ್ಕೆ ಬಂದವಾಗ ಡಾ। ಟಿ. ಮಾಧವ ಪೈ ಮೊದಲಾದವರು ಅವರನ್ನು ಸ್ವಾಗತೀಕರಿಸಿದರು. ಮಲ್ಪೆ ಬಂದರದ ಉದ್ಧಾರ, ಉಡುಪಿಗೆ ರೈಲು, ವಿದ್ಯುಚ್ಛಕ್ತಿ ಪೂರೈಕೆ, ಮಲ್ಪೆಯ ಹುರಿಹಗ್ಗದ ಹಾಗೂ ನೂಲಿನ ಯೋಜನೆಗಳಿಗೆ ಪ್ರೋತ್ಸಾಹ ಇತ್ಯಾದಿ ಹಲವಾರು ಜನೋಪಯೋಗೀ ವಿಷಯಗಳನ್ನು ಮಂತ್ರಿಗಳ ಗಮನಕ್ಕೆ ತರಲಾಯಿತು. ತನ್ನ ಇಲಾಖೆಗೆ ಸಂಬಂಧಪಟ್ಟ ವಿಷಯಗಳಿಗೆ ತಾನು ನಿಗಾ ಕೊಡುವೆನೆಂದರು. ಅನಂತರ ಬೋರ್ಡ್ ಹೈಸ್ಕೂಲ್ ವಠಾರದಲ್ಲಿ ಶ್ರೀ ರೆಡ್ಡಿಯವರು ತ್ರಿವರ್ಣ ಧ್ವಜವನ್ನು ಅರಳಿಸಿದರು. ಬಳಿಕ ಶ್ರೀ ಉಪೇಂದ್ರ ಅನಂತ ಪೈಗಳವರ ಅಧ್ಯಕ್ಷತೆಯಲ್ಲಿ ಅದೇ ಶಾಲೆಯ ಸೆಂಟಿನರಿ ಹಾಲಿನಲ್ಲಿ ಜರಗಿದ ಗಾಂಧಿ ಜಯಂತ್ಯುತ್ಸವದಲ್ಲಿ ಭಾಗವಹಿಸಲು ಬಂದಾಗ ಆ ಶಾಲೆಯ ಮುಖ್ಯೋಪಾಧ್ಯಾಯರಾದ ಮಿ| ಆರ್. ಫೆರ್ನಾಂಡೀಸರು ಮಾನ್ಯಮಂತ್ರಿಗಳನ್ನು ಸ್ವಾಗತೀಕರಿಸಿ ಪುಷ್ಪಮಾಲಿಕೆಗಳನ್ನು ಕೊರಳಿಗೆ ಹಾಕಿ ಗೌರವಿಸಿದರು. ಕಾಂಗ್ರೆಸ್ ಕಮಿಟಿಯ ಪರವಾಗಿ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೇರು ಮಾನ ಪತ್ರವನ್ನರ್ಪಿಸಿದರು. ಮದ್ರಾಸು ಮಂತ್ರಿಗಳ ಅವಸರದ ಸರ್ಕೀಟ್ ಕಾರ್ಯಕ್ರಮಗಳಿಂದ ಜನತೆಗೆ ಸಂಕಷ್ಟಗಳನ್ನು ನಿವೇದಿಸಿಕೊಳ್ಳುವರೆ ಅವಕಾಶ ದೊರೆಯುವುದಿಲ್ಲ, ಗ್ರಾಮ ಗ್ರಾಮಗಳಲ್ಲಿ ಅಕ್ಕಿ ಭತ್ತ ಒಪ್ಪಿಸುವ ನಿರ್ಬಂಧಗಳ ಅವಶ್ಯಕತೆ, ರೈತರು ಖುಸಿಬಂದ ದಿವಸಗಳಿಗೆ ಅಕ್ಕಿ ಭತ್ತ ಒಪ್ಪಿಸುವ ರಿಯಾಯತಿ, ಮಲ್ಪೆ ಬಂದರು, ರೈಲು, ವಿದ್ಯುತ್ತುಗಳ ಅನುಕೂಲತೆ, ಇತ್ಯಾದಿ ಕೇಳಿಕೆಗಳು ಮಾನಪತ್ರದಲ್ಲಿ ಸೂಚಿಸಲಾಗಿದ್ದುವು. ಮಾನ್ಯಮಂತ್ರಿಗಳು ಗಾಂಧಿ ಜಯಂತಿಯ ಮಹತ್ವವನ್ನು ವಿವರಿಸಿ ಮದ್ಯಪಾನ ನಿರೋಧಕ್ಕೆ ಸರ್ವರೂ ಬೆಂಬಲವೀಯಬೇಕಾಗಿ ಪ್ರಾರ್ಥಿಸಿದರು. ಶ್ರೀಮತಿ ಇಂದಿರಾಬಾಯಿ ಸಂಜೀವರಾಯರು ಮತ್ತು ಶ್ರೀ ಎಸ್. ಎಸ್. ಶಿಲ್ಲೆಯವರು ಸ್ಫೂರ್ತಿದಾಯಕ ಹಾಗೂ ಕಾಲೋಚಿತ ಮಾತುಗಳನ್ನಾಡಿದರು.

ಅಲ್ಲಿಂದ ಶ್ರೀ ಕೃಷ್ಣ ಮಠಕ್ಕೆ ತೆರಳಿ ಮಹಾ ಸ್ವಾಮಿಯ ಮಹಾ ಪೂಜಾ ಸೇವೆಯನ್ನು ನೋಡಿ ಪುತ್ತಿಗೆ ಮಠದ ಸ್ವಾಮಿಗಳವರಿಂದ ಆಶೀರ್ವಾದ ಪಡೆದು ತಾಲೂಕು ಕಚೇರಿಗೆ ಹೋದರು. ಮದ್ಯಪಾನ ನಿಷೇಧ ಪ್ರಚಾರ ಸಭೆಯಲ್ಲಿ ಭಾಷಣವಿತ್ತರು. ಜಿಲ್ಲಾ ಕಲೆಕ್ಟರ್ ಮಿ। ಜೆ. ಎಫ್. ಸೊಂಡರ್ಸ್‌ರವರೂ ಶ್ರೀ ಎಸ್. ಎಸ್. ಶಿಲ್ಲೆಯವರೂ ಭಾಷಣ ಮಾಡಿದರು. ಮದ್ಯಪಾನ ನಿರೋಧ ತುಳು ಲಾವಣಿಗಳನ್ನು ಕಾಂಗ್ರೆಸ್ ಸ್ವಯಂಸೇವಕ ದಳದವರು ಚಿತ್ತಾಕರ್ಷವಾಗಿ ಹಾಡಿದರು. ಮಧ್ಯಾಹ್ನ ಭೋಜನವನ್ನು ಶ್ರೀ ಫಲಿಮಾರು ಮಠದಲ್ಲಿ ತೀರಿಸಿಕೊಂಡು ಕೆಲವು ಸಂಸ್ಥೆಗಳನ್ನು ಸಂದರ್ಶಿಸಿ ಕಾರ್ಕಳಕ್ಕೆ ಪ್ರಯಾಣ ಬೆಳೆಸಿದರು.

ಏಕೀಕರಣ ಸಭೆ- ಸ್ಥಳೀಯ ಪತ್ರಿಕೋದ್ಯೋಗೀ ಸಂಘ, ಕಿರಿಯರ ಪ್ರಪಂಚ, ಕರ್ನಾಟಕ ಸಂಘ, ಕಲಾವೃಂದದ ಪತಿಯಿಂದ ಇದೇ ತಾ. 4ರಲ್ಲು ಸಂಜೆ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಟಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿ ಕರ್ನಾಟಕ ಏಕೀಕರಣ ಮತ್ತು ಪ್ರಾಂತರಚನೆಗೆ ಬೆಂಬಲವೀಯುವ ನಿರ್ಣಯವಾಯಿತು. ಶ್ರೀಗಳಾದ ಕೊರಡ್ಕಲ್ ಶ್ರೀನಿವಾಸ ರಾವ್, ಆರ್. ಎ. ಬಸ್ನಂಜೆ, ಪಿ. ಯು. ಕೊಡತ್ತೂರರು ಸಮಯೋಚಿತ ಭಾಷಣ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ಕೊಳ್ಕೆಬೈಲು ನಾರಾಯಣ ಸೆಟ್ಟರ ವಿನೋದಾಭಿನಯಗಳಿದ್ದುವು.

ಮುದ್ರಾಡಿ- ತಾ 2ರಲ್ಲಿ ಇಲ್ಲಿಯ ರೈತರ ಮಹಾ ಸಭೆಯೊಂದು ಶ್ರೀ. ಮಾದಿರಾಜ ಕಲ್ಯಾರರ ಅಧ್ಯಕ್ಷತೆಯಲ್ಲಿ ಜರಗಿ, ರೈತರ ಉದ್ಧಾರಕ್ಕಾಗಿ ಆಸುಪಾಸಿನ ಗ್ರಾಮಗಳ ರೈತರ ಸಂಘವೊಂದು ಸ್ಥಾಪನೆಯಾಯಿತು. ಗಾಂಧಿ ಜಯಂತಿಯೂ ಶ್ರೀ ಕಲ್ಯಾರರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ. ವೆಂಕಟಪ್ಪಯ್ಯ ಮೊದಲಾದವರ ಭಾಷಣಗಳಾದುವು.

ಮಂಗಳೂರು

ವಂದನಾರ್ಪಣ ಸಭೆ—ಬಹು ವಾರ್ದಿನಿಂದ ಪ್ರಬಲ ಮತಗಳಿಂದ ಆರಿಸಿಬಂದ ಶ್ರೀ ಎಸ್. ಎಸ್. ಶಿಲ್ಲೆಯವರು ಶ್ರೀ ಪಿ. ಹರಿಶ್ಚಂದ್ರರಾಯರ ಅಧ್ಯಕ್ಷತೆಯಲ್ಲಿ ತಾ 3ರಲ್ಲು ಬಪ್ಪು ಕಸಬಾ ಇಗರ್ಜಿ ಎದುರಿನಲ್ಲಿಯೂ ಶ್ರೀ ಕೆ. ಆರ್. ಕಾರಂತ, ಎಮ್. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ವೆಲೆನ್ಸಿಯಾ ಇಗರ್ಜಿ ಬಳಿಯಲ್ಲಿಯೂ ಎರಡು ಸಭೆಗಳನ್ನು ಜರಗಿಸಿದರು. ಮೊದಲ ಸಭೆಯಲ್ಲಿ ಶ್ರೀ ಕಸಾರಿ ಪಂಡಿತರೂ ಅನಂತರದ ಸಭೆಯಲ್ಲಿ ಶ್ರೀಗಳಾದ ದಾಮೋದರ ಬಾಳಿಗ, ಕೆ. ಕೆ. ಸೆಟ್ಟಿ, ಬಿ. ಆರ್ ಕರ್ಕೇರ, ರೆಬೆಲ್ಲೋ, ಎಮ್. ಎಸ್. ಪ್ರಭು, ಎನ್. ಎಸ್. ಲೋಬರೂ ಭಾಷಣವಿತ್ತರು. ಶ್ರೀ ಶಿಲ್ಲೆಯವರು ಮತದಾರರಿಗೂ, ಸಹಕರಿಸಿದ ಕಾರ್ಯಕರ್ತರಿಗೂ ವಂದನೆಯನ್ನರ್ಪಿಸಿ ಭಾಷಣವಿತ್ತರು.

ಉಡುಪಿ ಮೈಸೂರು ದಿನಾಚರಣೆ

ರಥಬೀದಿಯಲ್ಲಿ ಕಳೆದ ತಾ. 28ರಲ್ಲು ಸಂಜೆ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಮ್. ವಿ. ಹೆಗ್ಡೆ, ಯು. ನಾಗಪ್ಪ ಕಾಮತರು ಭಾಷಣ ಮಾಡಿದರು. ಮೈಸೂರು ಸತ್ಯಾಗ್ರಹಕ್ಕೆ ಬೆಂಬಲ ಹಾಗೂ ಧನ ಸಹಾಯವೀಯುವರೆ ಒಂದು ಸಬ್ ಕಮಿಟಿ ನೇಮಕವಾಯಿತು. ಮೈಸೂರು ದಬ್ಬಾಳಿಕೆಯ ಖಂಡನಾ ನಿರ್ಣಯವೊಂದನ ಸಭಾಂಗೀಕೃತವಾಯಿತು.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs P. DEVEE, F DS (N. J.)
Tollygunge CALCUTTA
ಸ್ಟಾಕಿಸ್ಟರು: ಬಿಹಾರಕಂಪೆನಿ, ಮಂಗಳೂರು

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ತಾರೀಕು 10—10—47ರಿಂದ

ನಿಮ್ಮ ನಿರೀಕ್ಷಣೆಯ ಅನುಪಮ ಚಿತ್ರ

ಅಬ್ರೂ

ಅನಂತರ:

ತಾರೀಕು 11-10-47ರಿಂದ
ವಾಹಿನಿಯವರ

ದೇವತ ಮತ್ತು ಭಕ್ತ ಪೋತನಾ.

ಮಂಗಳೂರು

ಮಂಗಳೂರು ನಗರ ಸಭೆಗೆ:— ಕಳೆದ ತಾ. ೨೯ರಂದು ನಡೆದ ಚುನಾವಣೆಯಲ್ಲಿ ಆರಿಸಿ ಬಂದವರು.

ಪಿ. ಪಿ. ಡಿ'ಸೋಜ, (ನೇರಿ ಬೈಲು ವಾರ್ಡು); ಡಾ. ನೇಮಿರಾಜ ಆಳ್ವ, (ಕೊಡಿಯಾಲ ಬೈಲು); ಮಿಜಾರು ಗೋವಿಂದ ಪೈ, (ಮಣ್ಣಗುಡ್ಡೆ); ಡಾ. ಬಿ. ಆರ್. ಹೆಗ್ಡೆ (ಕುದ್ರೋಳಿ); ಹುಂಡಿ ಗಣಪತಿ ಕಾಮತ್, (ಬಂದರು); ಡಾ. ನಾಗಪ್ಪ ಆಳ್ವ, (ಸೆಂಟ್ರಲ್); ಜಿ. ಎಸ್. ನಗರ್ಕರ್ (ಡೊಂಗರಕೇರಿ); ರಾಘವೇಂದ್ರ ಪೈ, (ಮಾರ್ಕೆಟ್ ವಾರ್ಡ್) ಜೆ. ಜಿ. ಡಿ'ಸೋಜ, ಮತ್ತು ಎಸ್. ನರಸಪ್ಪಯ್ಯ, (ಬೆಂದೂರು) ಕೊರಗಪ್ಪ ರೈ, (ಬೋಳಾರ); ಬಿ. ಗಂಗಾಧರ ದಾಸ, (ಮಂಗಳಾದೇವಿ ವಾರ್ಡ್); ಎಸ್. ಎಸ್. ಕಿಲ್ಲೆ, (ಜೆಪ್ಪು)

ಬೆಸೆಂಟ್ ಶತಾಬ್ಧಿ ಉತ್ಸವವು — ತಾ ೧೮ರಂದು ಸಂಜೆ ಸ್ಥಳೀಯ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಶ್ರೀ ಬೆನೆಗಲ್ ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಕೇಶವ ಪೈಗಳ ಸ್ವಾಗತ ಭಾಷಣವಾದೊಡನೆ ಬೆಸೆಂಟ್ ಅಮ್ಮನ ತೈಲಚಿತ್ರಕ್ಕೆ ಪುಷ್ಪಹಾರಗಳನ್ನು ವಿವಿಧ ಸಂಸ್ಥೆಗಳ ಪ್ರತಿನಿಧಿಗಳು ಅರ್ಪಿಸಿದರು. ಆ ಬಳಿಕ ಶ್ರೀಗಳಾದ ವಿಮಲಾನಂದ ಸ್ವಾಮಿ, ಎಂ. ಎಸ್. ಮಾಧವ ರಾವ್, ಕೆ. ಎಸ್. ಕಾರಂತ ಅವರು ಬೆಸೆಂಟರವರ ಜೀವನ ಉಪದೇಶಗಳನ್ನು ತಿಳಿಸಿ ತಮ್ಮ ಅಭಿವಂದನೆಗಳನ್ನು ಅರ್ಪಿಸಿದರು, ಬೆಸೆಂಟ್ ಶಾಲೆಯ ಮುಖ್ಯೋಪಧ್ಯಾಯಿನಿಯರು ಶಾಲೆಯ ವರದಿ ಓದಿದ ಮೇಲೆ ಬಹುಮಾನ ವಿತರಣೆಯಾಯಿತು; ಆ ಮೇಲೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬೆಸೆಂಟ್ ಅವರೊಡನೆ ಅವರು ಇದ್ದಾಗ ಆದ ಮಾತುಕತೆಗಳು, ಅವರ ಜಾಡ್ಯ, ವ್ಯಕ್ತಿತ್ವ ಇತ್ಯಾದಿಗಳನ್ನೂ ದೇಶದ ಶಿಕ್ಷಣಕ್ಕಾಗಿ ಅವರು ಸಲ್ಲಿಸಿದ ಸೇವೆಯನ್ನೂ ವಿವರಿಸುತ್ತ—"ಮಾನವತೆಯ ಸೇವಕರಲ್ಲಿ ಇವರು ಅಗ್ರಗಣ್ಯರು" ಎಂದು ಹೇಳಿದರು.

ಆ ಮೇಲೆ ವಿನೋದಾವಳಿಯೊಡನೆ ಸಮಾರಂಭವು ಕೊನೆಗೊಂಡಿತು. ಈ ಸಮಾರಂಭಕ್ಕಾಗಿಯೇ ಬರೆದ ದರ್ಶನವೆಂಬ ಬೆಸೆಂಟ್ ಮಾತೆಯ ಜೀವನದ ೬ ಘಟನೆಗಳನ್ನು ಚಿತ್ರಿಸುವ ಗೀತಾರೂಪಕವು ಅತ್ಯಂತ ಯಶಸ್ವಿಯಾಗಿ ಎಲ್ಲರ ಮೆಚ್ಚುಗೆಯನ್ನು ಪಡೆಯಿತು.

ಡಿಸ್ಟ್ರಿಕ್ಟ್ ವೆಲ್‌ಫೇರ್ ಎಸೋಸಿಯೇಶನ್—ಎಂಬ ಜಿಲ್ಲೆಯ ಸಾರ್ವಜನಿಕ ಹಿತಸಾಧನೆಯ ಧ್ಯೇಯವುಳ್ಳ ಸಂಸ್ಥೆಯೊಂದು ಸ್ಥಾಪಿಸಲ್ಪಟ್ಟಿದೆ. ಡಾ! ಕೇಶವ ಪೈಗಳು ಅಧ್ಯಕ್ಷರಾಗಿಯೂ; ಜಿಲ್ಲಾ ಕಲೆಕ್ಟರರು ಉಪಾಧ್ಯಕ್ಷರಾಗಿಯೂ ಇದ್ದಾರೆ. ಇದರ ಅಂಗವಾಗಿ ಡಾ। ಯು ಸಿ ಮಲ್ಯರ ಅಧ್ಯಕ್ಷತೆಯಲ್ಲಿ ನಗರ ಉಪಸಮಿತಿಯೊಂದು ಸ್ಥಾಪಿತವಾಗಿದೆ; ಆಧುನಿಕ ಧರ್ಮಾರ್ಥ ಆಸ್ಪತ್ರೆಯೊಂದನ್ನು ದೊರಕಿಸುವುದೇ ಈ ಸಂಸ್ಥೆಯ ಉದ್ದೇಶ. ಇದೇ ತಾ. ೬ರಿಂದ ೯ರ ತನಕ ಸಂಸ್ಥೆಯ ಉದ್ದೇಶ ಪೂರೈಕೆಗೆ ಹಣ ಸಂಗ್ರಹಿಸುವುದಕ್ಕಾಗಿ ಸೆಂಟ್ರಲ್ ಟಾಕೀಸಿನಲ್ಲಿ ಸಿನೆಮಾ ಪ್ರದರ್ಶನ ಒಂದು ನಡೆಯಲಿದೆ;

ಅಮೃತಾಂಜನ. ತಲೆನೋವು, ತಿರೋ ನೋವು, ಉಳುಕು, ಸಂಧಿಗೆ, ಚುಳುಕು ಹುಳು ನೋವುಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ನೋವು ತಕ್ಕ ಮುಂದಾದ ಪೀಡೆ ಕೆಮ್ಮು ನೆಗಡಿ ಮುಂತಾದ ಎಲ್ಲಾ ರೋಗಗಳಿಗೂ ಸಿದ್ಧ್.
ಸರ್ವ ಮುಖ್ಯ ಮತ್ತು ಸಣ್ಣ ಅಂಗಡಿಗಳಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

ಮದ್ಯಪಾನ ನಿರೋಧ ಶಾಸನವು—ತಾ. ೧ರಂದು ಮಂಗಳೂರಲ್ಲಿ ಜಾರಿಗೆ ಬಂತು. ಆ ವರೆಗೆ ಮದ್ಯದ ಅಂಗಡಿಯಾಗಿದ್ದುದು ಅಂದಿನಿಂದ ಚಾ—ಕಾಫಿ ತಿಂಡಿಗಳ ಅಂಗಡಿಯಾಗಿ ಬದಲಾಯಿತು. ಕೆಲವು ಕಡೆಗಳಲ್ಲಿ ಶಾಖಾಹಾರ ಮತ್ತು ಮಾಂಸಾಹಾರ ತಿಂಡಿಗಳೂ ಸಿಗುತ್ತಿವೆ. ನಗರದಲ್ಲಿ ಒಂದು ರೀತಿಯ ಉತ್ಸಾಹ ಉಂಟಾಗಿದೆ.

ಪಾನ ನಿರೋಧ ಕಾರ್ಯದ ಉದ್ಘಾಟನೆಯು ತಾ. ೧ರಂದು ಜರಗಿದ ಸಾರ್ವಜನಿಕ ಸಭೆಯಲ್ಲಿ ಕೈಗಾರಿಕೆ ಮತ್ತು ಸುದ್ದಿ ಖಾತೆಯ ಮಾನ್ಯ ಮಂತ್ರಿಗಳಾದ ಶ್ರೀ. ಎಚ್. ಸೀತಾರಾಮರೆಡ್ಡಿಯವರಿಂದ ಜರಗಿತು. ಅಂದಿನ ಸಭೆಗೆ ಶ್ರೀ ಎಚ್ ನಾರಾಯಣರಾಯರು ಅಧ್ಯಕ್ಷರಾಗಿದ್ದರು. ಶ್ರೀ ಕೆ ಕೆ ಶೆಟ್ಟರು ಆರೋಗ್ಯ ಮಂತ್ರಿಗಳಾದ ಶ್ರೀ ಎ ಬಿ ಶೆಟ್ಟರು ಕಳುಹಿಸಿದ ಸಂದೇಶವನ್ನು ಓದಿದ ತರುವಾಯ ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಸುರಾಪಾನದಿಂದ ಆಗುತ್ತಿದ್ದ ಅನ್ಯಾಯಗಳನ್ನು ವಿವರಿಸಿ ಈ ಮಸೂದೆಯನ್ನು ಮದ್ರಾಸು ಸರಕಾರದ ಎಲ್ಲಾ ಪಕ್ಷಗಳೂ ಒಮ್ಮತದಿಂದ ತಂದಿರುವುದರಿಂದ ಜನತೆಯು ಪೂರ್ಣ ಬೆಂಬಲವೀಯಬೇಕೆಂದರು. 'ಈ. ಜಿಲ್ಲೆಯಿಂದ ಸರಕಾರಕ್ಕೆ ಸು. ೫೨ ಲಕ್ಷ ರೂಪಾಯಿಗಳಷ್ಟು ಅಬ್ಕಾರಿಯಿಂದ ಸಿಗುತಿತ್ತು. ಇದರ ೪ ಪಾಲಷ್ಟು ಆ ಮದ್ಯ ವ್ಯಾಪಾರದಲ್ಲಿ ಜಮೆಯಾಗುತ್ತದೆ. ಈ ಪೈಕಿ ಅರ್ಧದಷ್ಟು ಹಣವು ಬಡವರಿಂದಲೇ ಸುಲಿಗೆಯಾಗುತ್ತದೆ. ಆದ್ದರಿಂದ ಪಾನನಿರೋಧ ಶಾಸನವು ಬಡವರಿಗೆ ಸು. ೨॥ ಕೋಟಿಯಷ್ಟು ಅಧಿಕ ಸಹಾಯವನ್ನು ಮಾಡುತ್ತದೆ.' ಎಂದು ತಿಳಿಸುತ್ತಾ ಎಲ್ಲರೂ—ಮುಖ್ಯವಾಗಿ ಸ್ತ್ರೀಯರೂ ಈ ಕಾರ್ಯಕ್ರಮದಲ್ಲಿ ಸಹಭಾಗಿಗಳಾಗಬೇಕಾಗಿ ಕೇಳಿಕೊಂಡರು.

ಆ ಮೇಲೆ ನಾರಾಯಣ ಎಸ್ ಕಿಲ್ಲೆ; ಎಫ್ ಎಚ್. ಒಡೆಯರ್, ಎಲ್. ಸಿ. ಪಾಯಸ್; ಎಸ್. ಜಿ. ವಿ. ರೆಬೆಲ್ಲೊ ಮೊದಲಾದವರ ಭಾಷಣಗಳಾಗಿ ಮದ್ಯ ರಾಕ್ಷಸನನ್ನು ಸುಟ್ಟ ಬಳಿಕ ರಾತ್ರಿ ೮ ಗಂಟೆಗೆ ಸಮಾರಂಭವು ಕೊನೆಗೊಂಡಿತು.

ಮಂತ್ರಿಗಳು ತಮ್ಮ ಭಾಷಣವಾದೊಡನೆ ನಗರದ ಮದ್ಯದಂಗಡಿಗಳಾಗಿದ್ದು ಈಗ ತಾನೇ ಚಾ—ಕಾಫಿ ಹೋಟೆಲುಗಳಾಗಿರುವ ವಿಶ್ರಾಂತಿ ಗೃಹಗಳನ್ನು ಸಂದರ್ಶಿಸಿಕೊಂಡು ಮೂಲ್ಕಿಗೆ ಹೊರಟು ಹೋದರು.

ಮಂಗಳೂರಿನ ಕಾಂಗ್ರೆಸ್ ಕೆಲಸಗಾರರನ್ನು—ಮಾನ್ಯ ಮಂತ್ರಿಗಳು ತಾ. ೧ರಂದು ಮಧ್ಯಾಹ್ನ ೨॥ ಗಂಟೆಗೆ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಕಂಡು ಅವರೊಡನೆ ವಿಚಾರವಿನಿಮಯ ಮಾಡುತ್ತಾ, ಕಾಂಗ್ರೆಸ್ ಕೆಲಸಗಾರರು ಪಾನನಿರೋಧವು ಯಶಸ್ವಿಯಾಗುವಂತೆ ದುಡಿಯಬೇಕೆಂದು ಕೇಳಿಕೊಂಡರು.

ವಣಿಜ ಸಂಘದಲ್ಲಿ—ಅಲ್ಲಿಂದ ಮಂತ್ರಿಗಳು ವಣಿಜಸಂಘದ ಆಫೀಸಿಗೆ ಹೋದರು. ದ. ಕ. ಜಿಲ್ಲಾ ವಣಿಜಸಂಘದ ಅಧ್ಯಕ್ಷ ಶ್ರೀ ವಿ; ಎಸ್; ಕುಡ್ವರು ಮಂತ್ರಿಗಳಿಗೆ ಹಾರಹಾಕಿ ಸ್ವಾಗತಿಸಿದರು; ಕಾರ್ಯದರ್ಶಿಗಳಾದ ಶ್ರೀ. ದೇವಿದಾಸ ಗಿಂಧರಲಾಲರು ಸಂಘದ ಮಾನಪತ್ರವನ್ನು ಓದಿಕೊಟ್ಟರು; ಪತ್ರದಲ್ಲಿ ಜಿಲ್ಲೆಗೆ ಕಬ್ಬಿಣ, ಸಿಮೆಂಟು ಇತ್ಯಾದಿಗಳ ಪೂರೈಕೆ ಕಡಿಮೆಯೆಂದೂ, ಹೊರಗಿನಿಂದ ವಿದ್ಯುತ್ ತರುವ ಬದಲು ಇಲ್ಲಿಯೇ ಸಿದ್ಧಗೊಳಿಸುವ ಯೋಜನೆಯನ್ನು ಸರಕಾರವಾಗಲೀ, ಖಾಸಗಿ ಸಂಸ್ಥೆಯಾಗಲೀ ಕೈಕೊಳ್ಳಬೇಕೆಂದೂ, ಸೂಚಿಸಿದ್ದಲ್ಲದೆ ಸರಕಾರಕ್ಕೆ ಸಹಕಾರವೀಯಲು ಸಂಘವು ಸಿದ್ಧವಾಗಿದೆಯೆಂದೂ ಸೂಚಿಸಲಾಗಿತ್ತು; ಮಂತ್ರಿಗಳು ತನ್ನ ಅಧಿಕಾರಕ್ಕೊಳಪಟ್ಟ ವಿಚಾರಗಳನ್ನು ಎತ್ತಿಕೊಂಡು ಉತ್ತರವೀಯುತ್ತ ಕಬ್ಬಿಣದ ವಿತರಣೆಯ ಕಷ್ಟವನ್ನು ವಿವರಿಸಿದರಲ್ಲದೆ ಜಿಲ್ಲೆಗೆ ಸರಕಾರವು ತನ್ನಿಂದಾದಷ್ಟು ಸಹಾಯಮಾಡುವುದೆಂದರು. ಅಧ್ಯಕ್ಷರು ವಂದಿಸಿದ ಬಳಿಕ ಸಭೆಯು ಕೊನೆಗೊಂಡಿತು; ಅಲ್ಲಿಂದ ಅಧ್ಯಕ್ಷರು ಸಾರ್ವಜನಿಕ ಸಭೆಗೆ ತೆರಳಿದರು ಮಂಗಳೂರಿನ ಕ್ರೈಸ್ತ ಸೇವಕ ಸಂಘವು ಕೂಡಾ ಮಂತ್ರಿಗಳಿಗೊಂದು ಬಿನ್ನವತ್ತಳೆಯನ್ನು ಅರ್ಪಿಸಿ ಪಾನನಿರೋಧದ ಕುರಿತು ಕೆಲವು ಧಾರ್ಮಿಕ ಕೋರಿಕೆಗಳನ್ನು ಕೇಳಿದ್ದರು. ಮಂತ್ರಿಗಳು ಆ ಕುರಿತು ಆಲೋಚಿಸುವುದಾಗಿ ಭರವಸೆಯಿತ್ತರಲ್ಲದೆ ಧರ್ಮದ ವಿಚಾರದಲ್ಲಿ ತಾವು ಕೈಹಾಕುವುದಿಲ್ಲವೆಂದರು.

ಮೈಸೂರು ಮತ್ತು ಹೈದರಾಬಾದು ದಬ್ಬಾಳಿಕೆಯ ನಿಷೇಧ ದಿನವು ತಾ ೨೮ನೇ ಆದಿತ್ಯವಾರ ಸಂಜೆ ಮಾಜಿ ಮಂತ್ರಿಗಳಾದ, ಶ್ರೀ ಕೆ ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀ. ಎಚ್. ಎಫ್. ಒಡೆಯರ್, ಶ್ರೀ ದಾಮೋದರ ಬಾಳಿಗ, ಕೆ. ಕೆ. ಸೆಟ್ಟಿ, ಶ್ರೀ ರಾಘವೇಂದ್ರರಾಯರು ಮಾತನಾಡಿದರು ಶ್ರೀ ಕಾರಂತರು ತಮ್ಮ ಭಾಷಣದಲ್ಲಿ ಬ್ರಿಟಿಷರು ಇಲ್ಲಿಂದ ತೊಲಗಿಹೋಗುವಾಗ ತಮ್ಮ ಚೋಂಳು ಬುದ್ಧಿಯಂತೆ, ದೇಶದಲ್ಲಿ ಕಲಹ ನೆಬ್ಬಿಸಿ ಹೋಗಿರುವರೆಂದು ತಿಳಿಸಿದರಲ್ಲದೆ, ಮೈಸೂರಿನ ದಿವಾನರಾಗಿ, ಇಂಡಿಯದ ಪ್ರಜೆಯಾಗಿ ಶ್ರೀ ಆರ್ಕಾಟ ರಾಮಸ್ವಾಮಿಯವರು ಇಂಡಿಯದ ಧ್ವಜಕ್ಕೆ ಮಾಡಿದ ಅಪರಾಧಕ್ಕೋಸ್ಕರ ಅವರನ್ನು ವಿಚಾರಣೆಗೊಳಪಡಿಸಬಹುದೆಂದೂ. ಅವರು, ಇಂದು ಇಂಡಿಯಾ ಸರಕಾರದ ಮಂತ್ರಿಗಳಿಗೆ ದಕ್ಷಿಣಕ್ಕೆ ತಲೆ ಎತ್ತಿ ನೋಡುವಷ್ಟು ಬಿಡುವಿಲ್ಲವೆಂಬುದನ್ನೂ ತಿಳಿಸಿದರು. ಮುಂದುವರಿಸುತ್ತಾ ಇನ್ನು ೧೦ ವರ್ಷಗಳೊಳಗಾದರೂ ನಮ್ಮಲ್ಲಿರುವ ಈ ರಾಜ ಮಹಾರಾಜರನ್ನು ಇಲ್ಲಿಂದ ಬೇರೆಡೆಗೆ ಕಳುಹಿಸದೆ ನಿರ್ವಾಹವಿಲ್ಲೆಂಬುದನ್ನೂ ತಿಳಿಸಿದರು. ಮೈಸೂರು ದಬ್ಬಾಳಿಕೆಯ ನಿಷೇಧ ಘೋಷದೊಡನೆ ಸಭೆಯು ಕೊನೆಗೊಂಡಿತು.

ಮಂಗಳೂರಿನ ಪತ್ರಿಕೋದ್ಯೋಗಿಗಳ ಅವಸರದ ಸಭೆ—ಯೊಂದು ತಾ ೧ರಂದು ಕಂಠೀರವ ಪತ್ರಿಕೆಯ ಕಚೇರಿಯಲ್ಲಿ ಶ್ರೀ. ಹುರುಳಿ ಭೀಮರಾಯರ ಅಧ್ಯಕ್ಷತೆಯಲ್ಲಿ ಜರಗಿ, ಹೈದರಾಬಾದು ಸರಕಾರವು ಹಿಂದುಸ್ಥಾನ್ ಟೈಮ್ಸ್ ಪತ್ರಿಕೆಯ ಮತ್ತು ಅ. ಪ್ರ. ಸುದ್ದಿಗಾರರ ಮೇಲೆ ಕೈಮಾಡಿದ್ದನ್ನೂ ಸಂಸ್ಥಾನದ ಪುರೋಗಾಮಿ ಪತ್ರಿಕೆಗಳ ಮೇಲೆ ನಿರ್ಬಂಧ ಹಾಕಿದ್ದನ್ನೂ ನಿಷೇಧಿಸಲಾಯಿತು.

ದ. ಕ. ಜಿಲ್ಲಾ ಎಡ್ವಾನ್ಸ್‌ಮೆಂಟ್ ಸೊಸೈಟಿಯು—ಚಟುವಟಿಕೆಗಳನ್ನು ವಿಸ್ತರಿಸುವ ಬಗ್ಗೆ ತಾ ೩೦ರಂದು ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಒಂದು ಸಭೆಯು ಸೇರಿತು. ಸಭಾರಂಭದಲ್ಲಿ ಜೆ. ಎಫ್. ಸೊಂಡರ್ಸ್‌ರವರು ಹೊಸ ಕಾರ್ಯಕ್ಷೇತ್ರಗಳ ವಿಚಾರವಾಗಿ ಮಾತನಾಡಿದರು ಹಲವು ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದರು. ಬಂದರದ ಪ್ರಶ್ನೆ ಬಂದಾಗ ಮಲ್ಪೆಯೇ ಆಗಬೇಕೆಂದು—ಡಾ। ಮಾಧವ ಪೈಗಳು ವಾದಿಸಿದರು. ಚರ್ಚೆಯಾದ ಮೇಲೆ ಸಭೆಯು ತೀರ್ಮಾನದಂತೆ ೧ ಜಿಲ್ಲಾ ವೈದ್ಯಕೀಯ ಸಹಾಯಕ್ಕಾಗಿ ೨ ಮಂಗಳೂರಿಗೆ ಶುದ್ಧನೀರು ಮತ್ತು ಚರಂಡಿಗಳ ವ್ಯವಸ್ಥೆಗಾಗಿ ೩ ಜಿಲ್ಲೆಯ ವಿದ್ಯುಚ್ಛಕ್ತಿ ಸರಬರಾಯಿಗಾಗಿ ೪ ಜಿಲ್ಲೆಯ ಪೂರ್ವಭಾಗದ ಬಂಜರನ್ನು ಸಾಗುಗೊಳಿಸುವ ಸಲುವಾಗಿ ೫ ಜಿಲ್ಲೆಯ ಪ್ರಬುದ್ಧ ಬಂದರದ ವ್ಯವಸ್ಥೆಗಾಗಿ ೬ ಮಂಗಳೂರು ಪದವಿನ ಕಟ್ಟಡಗಳ ಯೋಜನೆಗಾಗಿ ೭ ಜಿಲ್ಲೆಯ ರಸ್ತೆ, ರೈಲು, ಕಾಲುವೆ ವಿಮಾನ ನಿಲ್ದಾಣಗಳ ವ್ಯವಸ್ಥೆಗಾಗಿ ಹೀಗೆ ಏಳು ಸಮಿತಿಗಳು ರಚಿಸಲ್ಪಟ್ಟವು.

ಕಾಂಗ್ರೆಸ್ ಸದಸ್ಯತನದ ಅವಧಿ—ಕಾಂಗ್ರೆಸ್ ಸದಸ್ಯರನ್ನು ಮಾಡುವ ಅವಧಿಯು ಕಳೆದ ತಿಂಗಳ ಅಂತ್ಯಕ್ಕೆ ಇದ್ದುದನ್ನು ಈ ತಿಂಗಳ ಅಂತ್ಯದವರೆಗೆ ಮುಂದುವರಿಸಲಾಗಿದೆ. ಆದುದರಿಂದ ಜಿಲ್ಲೆಯ ಎಲ್ಲಾ ಸರ್ಕಲ್ ಕಾಂಗ್ರೆಸ್ ಕಮಿಟಿಗಳು ಈ ತಿಂಗಳೊಳಗೆ ಆದಷ್ಟು ಹೆಚ್ಚು ಸದಸ್ಯರನ್ನು ಮಾಡಬಹುದಾಗಿದೆ.

ಪೆರ್ಡೂರಿ—ಪಾನನಿರೋಧ ದಿನಾಚರಣೆಯ ಸಲುವಾಗಿ ಹೆರ್ಗ ಮತ್ತು ನೆರೆಕರೆಯ ಗ್ರಾಮಗಳವರು ತಾ 1ರಲ್ಲು ಬೆಳಗ್ಗೆ ಪಾನನಿರೋಧ ಲಾವಣಿಗಳನ್ನು ಹಾಡುತ್ತ ಮೆರವಣಿಗೆ ಮಾಡಿದರು ತದನಂತರ ಶಾಲಾ ಮಕ್ಕಳಿಗೂ ನೆರೆದ ಸಭಿಕರಿಗೂ ಚಹಾಸತ್ಕಾರವಾಯಿತು. ಸಂಜೆ ಸಾರ್ವಜನಿಕ ಸಭೆಯು ಶ್ರೀ ಲಕ್ಷ್ಮಣ ಸೆಟ್ರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ರಾಮಕೃಷ್ಣ ಐತಾಳ, ಬಿ. ಸದಾಶಿವ ಹೆಗ್ಡೆ, ಕೆ. ಆನಂದ ಹೆಗ್ಡೆ, ವೈದ್ಯ ಎಸ್. ಭವಾನಿಶಂಕರ ಹೆಗ್ಡೆ ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು.

ತಾ 2ರಲ್ಲು ಗಾಂಧಿ ಜಯಂತಿ ಸಂಬಂಧ ಶ್ರೀ ಎಸ್. ಶ್ಯಾಮ ನಾಯಕರ ಅಧ್ಯಕ್ಷತೆಯಲ್ಲಿ ಧ್ವಜವಂದನೆ, ಮಹಾಜನ ಸಭೆ, ರಾತ್ರಿ 'ಸ್ವರಾಜ್ಯ ವಿಜಯ' ಯಕ್ಷಗಾನ ಮೊದಲಾದ ಕಾರ್ಯಕ್ರಮಗಳಾದುವು.

The General Investment & Commercial Corporation
LIMITED.

WANTED

An active and able overseer to be in charge of building and construction works at Manipal. A person with practical experience of house building will be preferred. Apply to or call on the undersigned at the Head Office, Mukund Nivas, Udipi.

T. R. U. PAI.
Managing Director.

NOTICE

ನಮ್ಮ ದ. ಕ. ಜಿಲ್ಲಾ ಶಿರ್ವ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ, (ರಿಜಿಸ್ಟರ್ಡ್) ಶಿರ್ವ, ಇದರ 30-6-47ಕ್ಕೆ ಅಂತ್ಯವಾಗುವ ವರುಷದ ಮಹಾಸಭೆಯು ಇದೇ ಬರುವ ತಾ. 12-10-47ನೇ ಆದಿತ್ಯವಾರ ಸಾಯಂಕಾಲ ಗಂಟೆ 3-30ಕ್ಕೆ ಶಿರ್ವ ಹಿಂದೂ ಹೈಸ್ಕೂಲಿನಲ್ಲಿ Capt Y. R. Shetty, M. B., B. S., ಇವರ ಅಧ್ಯಕ್ಷತೆಯಲ್ಲಿ ಕೂಡಲಿರುವುದರಿಂದ, ಎಲ್ಲಾ ಮೆಂಬರರೂ ದಯವಿಟ್ಟು ಬರಬೇಕಾಗಿ ವಿನಂತಿ.

Shirwa
21-9-47

N. S. Kathyar.
Secretary.

ದಕ್ಷಿಣ ಕನ್ನಡ

ಕುಂದಾಪುರ—ಮಹಾತ್ಮ ಗಾಂಧೀಜಿಯವರ ಹುಟ್ಟು ಹಬ್ಬವು ವಿಶೇಷ ರೀತಿಯಲ್ಲಿ ಆಚರಿಸಲ್ಪಟ್ಟಿತು. ಕೋಟೇಶ್ವರ, ಹಳನಾಡು, ಅಂಪಾರು, ಕೌಕೂರು ಮುಂತಾದ ನೆರೆ ಗ್ರಾಮಗಳ ಮಹಾಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಬೇಂಡ್, ವಾದ್ಯ ಜಯಘೋಷಗಳೊಂದಿಗೆ ಹೊರಟ ಮಹಾ ಮೆರವಣಿಗೆಯು ಮಸೀದಿಯ ಬಳಿಗೆ ಬರುತ್ತಲೇ ಮುಂದಾಗಿ ಅಲ್ಲಿ ನೆರೆದಿದ್ದ ಮುಸಲ್ಮಾನ ಬಂಧುಗಳು ತಮ್ಮ ಶಾಸ್ತ್ರಘೋಷಗಳನ್ನೆತ್ತಿ ಮಾಡಿ ಮಹಾತ್ಮರ ಪ್ರತಿಮೆಗೆ ಹೂ ಮಾಲೆಗಳನ್ನಿಕ್ಕಿ ಮೆರವಣಿಗೆಯ ಮೇಲೆ ಪುಷ್ಪವೃಷ್ಟಿಗರೆದು ಸ್ವಾಗತವನ್ನಿತ್ತು ಕೂಡಿಕೊಂಡರು. ಗಾಂಧಿ ಮೈದಾನದಲ್ಲಿ ಮಾನ್ಯ ಶ್ರೀ. ಕೌಕೂರು ಅಂತಣ್ಣ ಶೆಟ್ರ ಅಧ್ಯಕ್ಷತೆಯಲ್ಲಿ ಸೇರಿದ 2000ಕ್ಕೆ ಮಿಕ್ಕಿದ ಪ್ರಚಂಡ ಸಭೆಯಲ್ಲಿ ಅನೇಕ ಮಹನೀಯರ ಭಾಷಣಗಳಾದ ಬಳಿಕ. ಅಧ್ಯಕ್ಷರು "ಹಿಂದೂ ಮುಸಲ್ಮಾನರು ಒಂದಾಗಿ ಬಂಧುಗಳಂತೆ ವರ್ತಿಸಿ ಈ ಮಹಾ ಕಾರ್ಯ ನೆರವೇರಿಸಿ ಕೊಟ್ಟದ್ದಕ್ಕಾಗಿ ಆಭಾರ ಸೂಚಿಸಿ ಭಾಷಣ ಮಾಡಿದರು.

ತೆಕ್ಕಟ್ಟೆ—ತಾ. 2-10-47ನೇ ದಿನ ಗಾಂಧಿ ಜಯಂತಿಯು ಕೇಂದ್ರ ಕಾಂಗ್ರೆಸ್ ಕಮಿಟಿಯವರಿಂದ ಆಚರಿಸಲ್ಪಟ್ಟಿತು. ಮುಂಜಾನೆ ಪ್ರಭಾತ ಫೇರಿ, ಧ್ವಜವಂದನೆಯಾದ ಮೇಲೆ ಸತತ ಸೂತ್ರಯಜ್ಞವು ನಡೆಯಿತು. ಸಾಯಂಕಾಲ ಶಾಲಾ ಮೈದಾನದಲ್ಲಿ ಶ್ರೀ. ಕೆ. ವಿ. ಕೋರಗ್ ವೈದ್ಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆದು ಶ್ರೀ. ದೇವಪ್ಪ ಸೆಟ್ರು ಶ್ರೀ. ಎ. ಶಿವರಾಮ ಸೆಟ್ಟರ ಭಾಷಣಗಳಾದವು.

ಆನಗಳ್ಳಿ—ಈ ಗ್ರಾಮದ ಹೇರಿಕುದ್ರುವಿನಲ್ಲಿರುವ ಶೇಂದಿ ಗುತ್ತಿಗೆಯಲ್ಲಿ ತಾ. 1-10-47ರಂದು ಮದ್ಯಪಾನ ನಿಷೇಧವನ್ನು ಸಂಭ್ರಮದಿಂದ ಆಚರಿಸಲಾಯಿತು. ರಾತ್ರಿ ಯಕ್ಷಗಾನ ತಾಳಮದ್ದಳೆ ಆಚರಿಸಲ್ಪಟ್ಟಿತು.

ಬ್ರಹ್ಮಾವರ—ತಾ 2-10-47ಲ್ಲಿ ಬಾರ್ಕೂರು ಸರ್ಕಲ್ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಮಹಾತ್ಮಾ ಗಾಂಧಿಯವರ ಜನ್ಮದಿನಾಚರಣೆಯು ವೈಭವದಿಂದ ಆಚರಿಸಲಾಯಿತು. ಬೆಳಿಗ್ಗೆ ಪ್ರಭಾತಫೇರಿ ಶ್ರೀ ಎ. ವ್ಹಿ. ರಾಮನ್ ಗುರಿಕ್ಕಾರರಿಂದ ಧ್ವಜಾರೋಹಣ, ಸಂಜೆ ಸಬ್ ರಿಜಿಸ್ಟ್ರಾರ್ ಶ್ರೀ. ಕೆ. ದೇಜಪ್ಪ ಶೆಟ್ರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಹಾವಳಿ, ಎಮ್. ಶ್ರೀನಿವಾಸಾಚಾರ್, ಎನ್. ಶಿವರಾಮ ಶೆಟ್ಟಿ, ಬಿ. ವಿಟ್ಠಲ ಶೆಟ್ಟಿ, ವಾಮನ ಪಡಿಯಾರ್, ಶೇಕ್ ಬುಡನ್ ಸಾಹೇಬ್ ಯವರುಗಳು ಭಾಷಣ ಮಾಡಿದರು. ಅಧ್ಯಕ್ಷರ ಭಾಷಣ ಧನ್ಯವಾದದೊಡನೆ ಸಭಾಂತ್ಯವಾಯಿತು. ಇಂದಿನಿಂದ 7 ದಿನಗಳ ವರೆಗೆ ನೂಲುವ ಸಪ್ತಾಹವನ್ನು ನಡೆಸಲು ಏರ್ಪಡಿಸಲಾಗಿತ್ತು.

ಬಸ್ರೂರು—ತಾ 2-10-47ರಲ್ಲಿ ಶ್ರೀ. ಪರಮ ಹಂಸ ಪ್ರೌಢ ಪ್ರಾಥಮಿಕ ಶಾಲಾ ಅಧ್ಯಾಪಕರೂ ಮಕ್ಕಳೂ ಸೇರಿ ಮಹಾತ್ಮ ಗಾಂಧಿಯವರ ಜನ್ಮ ದಿನಾಚರಣೆಯನ್ನು ಬಹು ವಿಜೃಂಭಣೆಯಿಂದ ಜರುಗಿಸಿದರು. ಸಂಜೆ ಶಾಲೆಯಲ್ಲಿ ಸೇರಿದ ಸಭೆಯಲ್ಲಿ ಗಾಂಧೀಜಿಯವರ ಜೀವನ ಚರಿತ್ರೆ ಅವರ ಅಮೂಲ್ಯವಾದ ತತ್ವಗಳು, ಅವುಗಳ ಹಿರಿಮೆಗಳ ಕುರಿತು ಶ್ರೀ. ಸುಬ್ಬಣ್ಣ ಹೆಗ್ಗಡೆಯವರು ಭಾಷಣ ಮಾಡಿದರು.

ಮೂಡಬಿದ್ರೆ—ಮದ್ಯಪಾನ ನಿರೋಧದ ಕುರಿತಾಗಿ ಜನಜಾಗ್ರತಿಯನ್ನುಂಟುಮಾಡುವರೆ ಕಳೆದ ತಾ. 12ರಲ್ಲಿ ಇಲ್ಲಿಯ ಸರಕಾರಿ ಬುನಾದಿ ಶಿಕ್ಷಣ ತರಬೇತಿ ವಿದ್ಯಾಲಯದ ಮುಖ್ಯೋಪಾಧ್ಯಾಯರಾದ ಶ್ರೀ ರಾಮಕೃಷ್ಣ ಸೆಟ್ಟರೂ ಇತರರೂ ಭಾಷಣ ಮಾಡಿದುದಲ್ಲದೆ ಆ ದಿನ ರಾತ್ರಿ 'ಕೃಷ್ಣ ಸಂಧಾನ' ಯಕ್ಷಗಾನವೂ ನಡೆಯಿತು. ತಾ. 26ರಲ್ಲು ನಹಜಂಚಾಯತ ಬೋರ್ಡು ಪಠಾರದಲ್ಲಿ ಪ್ರಚಾರ ಸಭೆಯು ಶ್ರೀ. ಶಿವರಾಮ ಗೌಡರ ಅಧ್ಯಕ್ಷತೆಯಲ್ಲಿ ಜರಗಿತು ತಾ. 30ರಲ್ಲು ಕಲ್ಲಬೆಟ್ಟು ಗ್ರಾಮದಲ್ಲಿ ಆ ಗ್ರಾಮದ ಪಟೇಲರ ಅಧ್ಯಕ್ಷತೆಯಲ್ಲಿ ತರಬೇತೀ ಶಾಲಾ ವಿದ್ಯಾರ್ಥಿಗಳು ಪ್ರಚಾರ ಸಭೆ ಜರಗಿಸಿ ಮದ್ಯಪಾನದಿಂದಾಗುವ ಹಾನಿಯನ್ನು ವಿವರಿಸಿ ಭಾಷಣ ಮಾಡಿದರು. ಇನ್ನು ಇದೇ ರೀತಿಯಲ್ಲಿ ಪ್ರಚಾರ ಭಾಷಣ ಸಭೆಗಳು ಜರಗಲಿರುವವು.

ಬಾರಕೂರು—ತಾ 1ರಲ್ಲು ಮದ್ಯಪಾನ ನಿರೋಧ ಸಮಾರಂಭದ ಸಭೆಯು ಶ್ರೀ ಯು. ಎಲ್. ಎಸ್. ಕುಕ್ಕಿಲಾಯರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದುವು.

ತಾ 2ರಲ್ಲು ಮಹಾತ್ಮ ಗಾಂಧಿಯವರ ಜನ್ಮದಿನೋತ್ಸವವು ಪ್ರಭಾತಫೇರಿ ಧ್ವಜವಂದನೆ, ಡಾ। ಕೃಷ್ಣ ಬಾಯರಿರ ನೇತೃತ್ವದಲ್ಲಿ ಸಭೆ, ಭಾಷಣಾದಿಗಳಿಂದ ಆಚರಿಸಲ್ಪಟ್ಟಿತು.

ಕಲ್ಯಾಣಪುರ—ಗಾಂಧಿಜಯಂತಿ ಮಹೋತ್ಸವವು ತಾ 2ರಲ್ಲು ಬೋರ್ಡು ಹುಡುಗಿಯರ ಶಾಲೆಯಲ್ಲಿ ಶ್ರೀ. ಸೀತಾರಾಮ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಹಲವರ ಭಾಷಣಾದಿ ಕಾರ್ಯಕ್ರಮಗಳಿಂದ ಆಚರಿಸಲಾಯಿತು.

ಕಾರ್ಕಳ-ಮೂರೂರು:—ತಾರೀಕು 29-9-47ಕ್ಕೆ ಮೂರೂರು ಬಿ. ಇ. ಎಮ್. ಶಾಲೆಯಲ್ಲಿ. ಪಟೇಲ್ ಶೀನಪ್ಪ ಕಡಂಬರ ಅಧ್ಯಕ್ಷತೆಯಲ್ಲಿ ಹೆತ್ತವರ ಕೂಟ ದಿನಾಚರಣೆಯು ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಬೈಲೂರು—ಪಾನ ನಿಷೇಧ ದಿನಾಚರಣೆಯು ತಾ 1ರಲ್ಲು ರಾಷ್ಟ್ರ ಸೇವಾದಳದ ಆಶ್ರಯದಲ್ಲಿ ಮೆರವಣಿಗೆ, ಶ್ರೀ ಜೆ. ನಾಗಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣ, ಸುರಾರಾಕ್ಷಸನ ಗೊಂಬೆಯ ದಹನ ಮೊದಲಾದ ಕಾರ್ಯಕ್ರಮಗಳಿಂದ ಜರಗಿತು.

ಮಹಾತ್ಮಾಜೀಯವರ ಜನ್ಮದಿನಾಚರಣೆಯು ತಾ 2ರಲ್ಲು ಪ್ರಭಾತಫೇರಿ ಸೇವಾದಳದವರ ಸೈಕಲ್ ಸವಾರಿ ಮೆರವಣಿಗೆ, ಸೂತ್ರಯಜ್ಞ ಡಾ। ಎ ಕೆ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಮಹಾಜನ ಸಭೆ, ಉಪನ್ಯಾಸಗಳಿಂದ ಜರಗಿತು.

ತೆಂಕಮಿಜಾರು:—ಈ ಗ್ರಾಮದ ಸೇಂದಿಯಂಗಡಿಯು ಎಡುರುಗಡೆ ಕಳೆದ ತಾ 30ರಲ್ಲು ತೆಂಕಮಿಜಾರು ಗ್ರಾಮದ ಪಟೇಲರ ವ್ಯವಸ್ಥೆಯಲ್ಲಿ ಕೂಡಿದ ಸಭೆಯಲ್ಲಿ ಜನಾಬ್. ಕೆ. ಎ ರಹಿಮಾನ್ ಸಾಹೇಬ್ ಮೊದಲಾದವರು ತುಳು ಭಾಷೆಯಲ್ಲಿ ಮದ್ಯಪಾನದಿಂದುಂಟಾಗುವ ಕಷ್ಟ ನಷ್ಟಗಳನ್ನೆತ್ತಿ ಭಾಷಣಮಾಡಿದರು. ಶ್ರೀ ತೋಡಾರು ಅನಂತಯ್ಯನವರು ಅಧ್ಯಕ್ಷತೆ ವಹಿಸಿದ್ದು ಮದ್ಯಪಾನ ನಿಷೇಧಕ್ಕೆ ಸರ್ವರ ಸಹಕಾರವನ್ನೂ ಕೋರಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಮ್. ನಾರಾಯಣರವರು ಧನ್ಯವಾದಗಳನ್ನರ್ಪಿಸಿದರು.

ಅಲೆವೂರು:—ಕಳೆದ ತಾ 28ರಿಂದ ಅಲೆವೂರು ಗ್ರಾಮದ 'ಎ' ತರಗತಿಯ ರೇಶನ್ ಕಾರ್ಡು ದಾರರಿಗೆ ಅಕ್ಕಿ ಸಿಕ್ಕಲೇ ಇಲ್ಲ. ಬರೇ ಒಂದೊಂದು ಪಾವು [illegible] ವಿತರಣೆಯಾಗಿದೆ. ಗ್ರಾಮ ಕಮಿಟಿಯ ಕಡೆಯಿಂದ ಜಿಲ್ಲಾ ಕಲೆಕ್ಟರರಿಗೂ ಸೆಂಟ್ರಲ್ ಸ್ಟೋರಿನ 'ಫುಡ್' ಆಫೀಸಿಗೂ ತಂತಿ ನೋಟೀಸು ತಂತಿ ಕೊಡಲಾಗಿತ್ತು. ಪರಿಣಾಮ ಮಾತ್ರ ಸಿಕ್ಕಿಲ್ಲ. ಸಂಬಂಧ ಪಟ್ಟ ಅಧಿಕಾರಿಗಳು ಇಂತಹ ವಿಷಮ ಪರಿಸ್ಥಿತಿಗೆ ಕಾರಣವೇನೆಂದು ಜನತೆಯ ಮುಂದಿಡುವುದು ಅತ್ಯಾವಶ್ಯಕ.

ಕಟಪಾಡಿ—ಕಳೆದ ತಾ 30ರಲ್ಲು ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಶ್ರೀ ಪುದುವಾಳರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಮೈಸೂರು, ಹೈದರಾಬಾದು ಸತ್ಯಾಗ್ರಹಕ್ಕೆ ನಾವೇಕೆ ಸಹಾಯ ಮಾಡಬೇಕೆಂದು ಶ್ರೀಗಳಾದ ಪಿ. ಲಕ್ಷ್ಮೀನಾರಾಯಣ ನಾಯಕ್, ಮತ್ತು ಮೈಸೂರಿನ ಶ್ರೀ ಶರ್ಮರು ಭಾಷಣ ಮಾಡಿದರು.

ತಾ 1ರಲ್ಲು ಮದ್ಯಪಾನ ನಿರೋಧ ಸಭೆಯು ಜರಗಿ ಶ್ರೀಗಳಾದ ಮಟ್ಟಿ ಸುಬ್ಬರಾವ್ ಡಾ। ಕೆ. ಜಿ. ಶೆಣೈಯವರು ತುಳು ಮತ್ತು ಕನ್ನಡ ಭಾಷೆಗಳಲ್ಲಿ ಅನುಕ್ರಮವಾಗಿ ಸನ್ನಿವೇಶೋಚಿತ ಭಾಷಣ ಮಾಡಿದರು ಶ್ರೀ ಪಿ. ಲಕ್ಷ್ಮೀನಾರಾಯಣ ನಾಯ್ಕರು ಅಧ್ಯಕ್ಷತೆ ವಹಿಸಿದ್ದರು.

ತಾ 2ರಲ್ಲು ಗಾಂಧೀಜೀಯವರ ಜನ್ಮದಿನೋತ್ಸವವು ಪ್ರಭಾತಫೇರಿ, ಮೆರವಣಿಗೆ, ಸಂಜೆ ಶ್ರೀ ಪಿ. ಲಕ್ಷ್ಮೀನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಶ್ರೀಗಳಾದ ಪಿ. ಬಾಲಕೃಷ್ಣ ನಾಯಕ್, ಪಿ. ಶಂಕರ ನಾಯಕ್, ಜಗನ್ನಾಥ ಹೆಗ್ಡೆ, ಶಿವಣ್ಣ, ದಾಮೋದರ ನಾಯಕ್ ಮತ್ತು ಶ್ರೀಮತಿ ಮುಕ್ತಾಬಾಯಿ ಮೊದಲಾದವರ ಭಾಷಣಾದಿ ಕಾರ್ಯಕ್ರಮಗಳಿಂದ ಆಚರಿಸಲಾಯಿತು.

ಕಲ್ಮಂಜೆ:—ಇಲ್ಲಿಯ ಸುಪ್ರಸಿದ್ಧ ಮನೆತನದ ಶ್ರೀ ವೆಂಕಟಕೃಷ್ಣಾಚಾರ್ಯರ ವಿಧವೆ ರಾಧಮ್ಮನವರು ಇದೇ ತಾ 2ರಲ್ಲು ತನ್ನ 85ನೇ ವರ್ಷದಲ್ಲಿ ಪರಲೋಕವಾಸಿಗಳಾದರು. ಇವರಿಗೆ ಶ್ರೀ ಕಲ್ಮಂಜೆ ವ್ಯಾಸಾಚಾರ್ಯರೇ ಮೊದಲಾದ ಮೂವರು ಗಂಡು ಮಕ್ಕಳು ಮತ್ತು ಮೂವರು ಹೆಣ್ಣು ಮಕ್ಕಳು ಇರುವರು.

ಪಡುಬಿದ್ರೆ—ಕಳೆದ ತಾ 30ರಲ್ಲು ಮೈಸೂರು ಸತ್ಯಾಗ್ರಹಿ ಶ್ರೀ ಶರ್ಮರ ನೇತೃತ್ವದಲ್ಲಿ ಸಾರ್ವಜನಿಕ ಸಭೆ ಜರಗಿ ಮೈಸೂರು ಹೈದರಾಬಾದು ಸತ್ಯಾಗ್ರಹಕ್ಕೆ ಬೆಂಬಲವೀಯಬೇಕೆಂದಾಯಿತು.

ತಾ 2ರಲ್ಲು ಗಾಂಧಿ ಜಯಂತಿಯುತ್ಸವವು ಜರಗಿತು. ಬೆಳಿಗ್ಗೆ ಪ್ರಭಾತಫೇರಿ, ಆ ಬಳಿಕ ಮಾನ್ಯ ಮಂತ್ರಿ ಶ್ರೀ ಸೀತಾರಾಮ ರೆಡ್ಡಿಯವರಿಂದ ಧ್ವಜಾರೋಹಣ, ಸೇವಾದಳದವರ ಗಾರ್ಡ್ ಆಫ್ ಓನರ್ ಮಧ್ಯಾಹ್ನ ಸೂತ್ರಯಜ್ಞ. ಶ್ರೀ ಕರಿಯಣ್ಣ ಸೆಟ್ರಿಂದ ಖಾದಿ ಕೇಂದ್ರದ ಕಾರ್ಯ ಕಲಾಪಗಳ ವರದಿ ವಾಚನವಾಗಿ ಶ್ರೀಗಳಾದ ಬಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಎಚ್. ನಾರಾಯಣ ರಾವ್, ಎಮ್. ದಿ. ಅಧಿಕಾರಿ, ಎಮ್. ಆರ್. ಪೂಂಜ, ಎಮ್. ರಂಗನಾಥ ಪ್ರಭು ಮೊದಲಾದವರ ಭಾಷಣಗಳಾಗಿ ಧನ್ಯವಾದಾರ್ಪಣೆಯಾಯಿತು.

ಶ್ರೀ ಕರಿಯಣ್ಣ ಶೆಟ್ರ ಖಾದಿ ಕೇಂದ್ರವನ್ನು ಅಖಿಲಭಾರತ ಚರಕಾ ಸಂಘದ ನಿಯಮಾನುಸಾರ ಮಂಗಳೂರು ಜಿಲ್ಲಾ ಗ್ರಾಮ ಕೈಗಾರಿಕಾ ಸಂಘಕ್ಕೆ ಸೇರಿಸಲಾಯಿತು.

ಪೊಳಲಿ—ತಾ ೧-೧೦-೪೭ರಲ್ಲಿ ಪಾನ ನಿಷೇಧ ದಿನಾಚರಣೆಯು ವಿವಿಧ ಬಿರುದಾವಳಿಗಳ ಮೆರವಣಿಗೆ ಸೇಂದಿ ಅಂಗಡಿಯ ಬಾಗಿಲಲ್ಲಿ ಶ್ರೀ ಎಸ್. ಎ. ಶೀನಪ್ಪ ಹೆಗ್ಡೆರಿಂದ ಧ್ವಜವಂದನೆ ಶ್ರೀ ಕರಿಯಂಗಳ ಪಟೇಲ್ ಶ್ರೀ ಎ. ಜಿ ಸಿದ್ದಣ್ಣ ಶೆಟ್ರ ಅಧ್ಯಕ್ಷತೆಯಲ್ಲಿ ಸಭೆಸೇರಿ ಹಲವರ ಸಂದರ್ಭೋಚಿತ ಭಾಷಣಗಳಾದುವು. ಶ್ರೀ ಕೆ. ಎ. ಪೂಂಜರಿಂದ ಸೇಂದಿ ಅಂಗಡಿಯನ್ನು "ಮದ್ಯಪಾನ ನಿಷೇಧಕರ ಸತ್ಕಾರ ಭವನ" ಎಂಬ ಹೆಸರಿನಿಂದ ಹೋಟೆಲು ತೆರೆದು ಅಲ್ಲಿ ಕೂಡಿದ ಸುಮಾರು 40 ಹರಿಜನ ಗಂಡಸರಿಗೆ ಒಂದೊಂದು ವಸ್ತ್ರದಂತೆ ಕೊಟ್ಟು, ಆ ನಂತರ ಶಾಲಾ ಮಕ್ಕಳಿಗೆ ಸ್ಲೇಟು, ಪುಸ್ತಕ, ತಿಂಡಿ ಹಂಚಲಾಯಿತು. ಅಲ್ಲಿ ಕೂಡಿದ ಕುಡಿಕರಾಗಿದ್ದವರಿಗೆಲ್ಲಾ ಚಾ ಕಾಫಿ ಕೊಡಲಾಯಿತು.

NOTICE

ಕುಂದಾಪುರ ಡಿ ಮು. ಕೋರ್ಟಿನಲ್ಲಿ.

R. E. P. 323/1947.
O. S. 294/1937.

ಸದಾಶಿವಯ್ಯ. ಹಲಸನಾಡು ರಾಮಪ್ಪಯ್ಯನವರ ಮಗ. ಕುಂದಾಪುರ ತಾಲೂಕು ಹಕ್ಲಾಡಿ ಗ್ರಾಮವಾಸಿ —ಅರ್ಜಿದಾರ

ಬಿಜೂರು ಗಣೇಶ ರಾವ್ ಕೂಡಾ—ಎದ್ರಿರು

1ನೆ ಎದ್ರಿ ಬಿಜೂರು ಗಣೇಶ್ ರಾವ್, ಪಾಂಡುರಂಗ ರಾಯರ ಮಗ. 4ನೆ ಎದ್ರಿ ಗೋವಿಂದ, ವೆಂಕಟನಅಳಿಯ, 20ನೆ ಎದ್ರಿ ಬಿಜೂರು ರಾಮದಾಸ ರಾವ್, ರಾಮಕೃಷ್ಣ ರಾಯರ ಮಗ—ಕುಂದಾಪುರ ತಾಲೂಕು ಬಿಜೂರು ಗ್ರಾಮದಲ್ಲಿರುವವರು,

ಸದ್ರಿ 1, 4, 20ನೆ ಎದ್ರಿರಿಗೆ ತಿಳುಹಿಸುವದೇನಂದರೆ.

ಮೇಲ್ಕಂಡ ಡಿಕ್ರಿ ಮೇಲೆ ನಡಿಸಿದ ಕಡಿಅಮಲ್‌ಜಾರಿಯಲ್ಲಿ ಡಿಕ್ರಿಯಿಂದ ಕಾಣುವ ಆಸ್ತಿಯ ಹಾರಾಟದ ಬಗ್ಗೆ ಅರ್ಜಿದಾರನು ಇಸ್ತಿಹಾರು ಹಾಜರು ಪಡಿಸಿರುವದರಿಂದ ಆ ಪೆರ ಶರ್ತಗಳನ್ನು ನಿರ್ಣಯಿಸಲಿಕ್ಕೆ ತಾ. 17-10-1947ಕ್ಕೆ ಇಟ್ಟಿರುವುದರಿಂದ ಆ ಸಂಬಂಧವಾ [illegible] ಇದ್ದರೆ ನೀವು ಸ್ವತಹಾ ಯಾ ನಿಮ್ಮ ವಕೀಲರ ಮೂಲಕವಾಗಿ ತಕ್ಕ ಸಮಯದಲ್ಲಿ ಕೋರ್ಟಿಗೆ ಜಾಹೀರು ಮಾಡ ಬೇಕಾಗಿ ಈ ಮೂಲಕ ತಿಳುಹಿಸಿರುತ್ತದೆ.

(Sd) **M. M. Ural**
Advocate for Petitioner
Coondapoor, 29-9-1947.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ
ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE.

ನೋಟೀಸು

ದಕ್ಷಿಣ ಕನ್ನಡ ಸಬೋರ್ಡಿನೇಟ್ ಕೋರ್ಟಿನಲ್ಲಿ.

R. E. P. 124/1947
O. S. 34/1946

ಅಂತಕ್ಕೆ ಕೂಡಾ—ಅರ್ಜಿದಾರರು,
ತ್ಯಾಂಪಣ್ಣ ಸೆಟ್ಟಿ ಕೂಡಾ—ರೆಸ್ಪಾಂಡೇಟರು
1, 3ನೇ ರೆಸ್ಪಾಂಡೆಂಟರು.

(1) ತ್ಯಾಂಪಣ್ಣ ಸೆಟ್ಟಿ-(3) ಮುಮ್ಮೈ.

ಮಣ್ಣಕ್ಕೆ ಮಕ್ಕಳು. 1ನೇಯವರು ನಂಗಾನ ಗ್ರಾಮಸ್ಥರು, 3ನೇಯವರು ನಡೀಪಮೂಡ ಗ್ರಾಮಸ್ಥರು ಮಂಗಳೂರು ತಾಲ್ಲೂಕು.

ಮೇಲಿನ ಅರ್ಜಿದಾರರು ಮೇಲ್ಕಂಡ ಕ್ರಮ ನಂಬ್ರ 34/1946ರಲ್ಲಿ ಆದ ಏಕಪಕ್ಷ ಡಿಕ್ರಿ ಪ್ರಕಾರ ಅವರ ಪಾಲಿಗೆ ಬಿದ್ದ ಸ್ಥಿರಾಸ್ತಿಯನ್ನು ಸ್ವಾಧೀನ ಪಡಿಸಿ ಕೊಳ್ಳುವರೆ ಪತ್ರಿಕೆ ದಾಖಲು ಮಾಡಿದ ಮೇಲಿನ ಅಮಲ್ದಾರಿಯು ತಾ. 28-10-1947 ಪೂರ್ವಾಹ್ನ ಗಂಟೆ 11ಕ್ಕೆ ತನಿಖೆಗೆ ಇಟ್ಟಿದೆ. ಆ ದಿವಸ ನೀವು ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪಿಸಲು ತಪ್ಪಿದರೆ ಏಕ ಪಕ್ಷವಾಗಿ ತೀರ್ಮಾನವಾದೀತು.

G. Narayana Rao.
ಅರ್ಜಿದಾರರ ಕಡೆ ವಕೀಲ
ಮಂಗಳೂರು 29-9-1947

ರೈತ ವಾಣಿ

ನುಡಿಕೊಟ್ಟವ:— ನಾ. ನಾ. ರಾ.

●

ತ್ತನು ಬಿತ್ತವಲ್ಲನ ಹಸುಗೆಯು ಕ್ರಮದಿಂದ ವಿಧಿಬದ್ಧನಾಗಿಯೋ ಎಂಬಂತೆ ನಮ್ಮ ಜಿಲ್ಲೆಯ ಜನರು ಹಸಿಯ ಬೇಕಾಯಿತು. ಹಸಿದ ಜನರಿಗೆ ಆಹಾರವನ್ನು ನೀಡಿರಿ; ಇದೊಂದು ಸನಾತನ ಯಜ್ಞವೆಂದು ಸರಕಾರವು ಹೇಳಿಯೂ ಆಯಿತು. ಇಂತಹದೊಂದು ಚಾರಿತ್ರಿಕವಾದ ಉಪವಾಸ ಕ್ರಮವು ಈ ನಾಡಿನ ಲೇಖನ ನಡೆದಿರಲಾರದೆಂದು ವಿಷಾದದಿಂದ ನುಡಿಯಲೇ ಬೇಕಾಗಿಯದೆ. ನುಡಿದ ಮಕ್ಕಳ ಕೊಂಡಿನ ಹಸಿವು ಪ್ರಕಸ್ತನಾಗಿ, ಇದ್ದುದನ್ನೆಲ್ಲ ಸರಕಾರಕ್ಕೆ ನೀಡಿ, ಮಹತ್ತರವಾದ ಯಜ್ಞಾದೀಕ್ಷಾಬದ್ಧರಾಗಿರುವ ರೈತರು ಜಿಲ್ಲೆಯ ಹಳ್ಳಿಯಲ್ಲೆಲ್ಲ ವ್ಯಾಪಿಸಿದ್ದಾರೆ. ಇದು ಉದ್ಯೋಗ ಪದಾಸೀನರಾದ ನಮ್ಮ ಮಂತ್ರಿವರ್ಯರಿಗೆ ಸಾಕಷ್ಟು ಗೊತ್ತಿಲ್ಲವೆಂದು ಬಗೆದರೋ, ಹಸಿದ ಜನರ ಕೂಗು ಬಹಳ ಪ್ರಬಲವಿದೆಯೆಂಬುದು ಸರ್ವಸ್ವತಃ ಸ್ವಯಂವೇದ್ಯ ಅಧಿಕಾರಿಗಳೂ ಇದಕ್ಕೆ ಬಲ್ಲರು. ಜನರು ಆಹಾರ ದುರ್ನಿಧಿಯ ಪರಿಹಾರಕ್ಕಾಗಿ ಇಂತಹ ಅಭೂತ ಪೂರ್ವ ಯಜ್ಞರತರಿರಬೇಕೆಂದು ಅರ್ಥವಾಗುವುದಿಲ್ಲ. ಹಸುಗೆಯ ಪದ್ಧತಿಯಿಂದ ರೆ ಹಸಿವೆಯನ್ನು ಪಂಚುವ, ಒಂದು ನೂತನ (a scientific innovation) ವೈಜ್ಞಾನಿಕ ವ್ಯವಸ್ಥೆಯೋ ಎಂದು ನಿರ್ವಾಹವಿಲ್ಲದೆ ಜನರು ಕೇಳಲೇ ಬೇಕಾಗುತ್ತದೆ. ಇದರೊಂದಿಗೆ "ಆಹಾರ ಹೆಚ್ಚಿಗೆ ಬೆಳೆಸಿರಿ" ಎಂದು ಪ್ರಚಾರ ಮಾಡುತ್ತಲೂ, ಹೆಚ್ಚಿನ ಬೆಳವಣಿಗೆಯ ಅಂಕೆ ಸಂಕೆಗಳ ನಿರ್ದೇಶನ ಮಾಡುತ್ತಲೂ ಹೊಟ್ಟೆಗೆ ಕತ್ತರಿಯನ್ನಿಡುವಂತೆ ಆದೇಶಗಳನ್ನು ಕೊಡುವುದು ಆದಾವ ಪಾಂಡಿತ್ಯ ನಿದರ್ಶನವು?

ನಮ್ಮ ಜಿಲ್ಲೆಯ ಆಹಾರ ಧೋರಣವು ಸರಿಯಾಗಿಲ್ಲ. ಸಂಗ್ರಹಣ ಕಾರ್ಯಕ್ಕೊಂದು ಅರ್ಥವಿಲ್ಲ. ಆಹಾರದ ಕೊರತೆ ಬೀಳುವಿಕೆಯೋ ಸಂಗ್ರಹದ ತಳಹದಿ. ಒಂದೊಮ್ಮೆಗೆ ಆಹಾರದ ಕೊರತೆ ಕಂಡು ಬಂದಲ್ಲಿ ಗ್ರಾಮವಾಸಿಗಳಿಗೆ ದೊಡ್ಡದೊಂದು ಗಂಡಾಂತರ ಒದಗಿತೆಂದೇ ತಿಳಿಯಬೇಕು. ರಿಜಿಷ್ಟರನ್ನು ಹಾಕಿದವರಿಂದಲೂ, ಆಹಾರದ ಕೊರತೆಯಿರುವವರಿಂದಲೂ ಎಲ್ಲರಿಂದಲೂ ಆಹಾರ ಸಂಗ್ರಹಣ ಕಾರ್ಯವು ನಡೆಯುವುದು. ಇದ್ದುದನ್ನೆಲ್ಲಾ ದೋಚಿಕೊಂಡು ಹೋಗಿ ಆ ಮೇಲೆ ಅವನಿಗೆ ಕಾರ್ಡು ಕೊಡದಿದ್ದರೆ ಸರಕಾರವು ತನ್ನ ಮೇಲೆ ಯಾವ ಹೊಣೆಯನ್ನೂ ಹಾಕಿ ಕೊಳ್ಳುವುದಿಲ್ಲ! ಅದರೆ ರಿಜಿಷ್ಟರನ್ನು ಮಾಡಿದ ಅಕ್ಕಿಯನ್ನು ಹಾಕದಿದ್ದಲ್ಲಿ ಪ್ರೊಸಿಕ್ಯೂಷನ್ನು ಮಾಡಲಾಗುವುದು; ಅವನಿಗೆ ಊಟಕ್ಕೆ ಆಹಾರವು ಕೊರತೆ ಬೀಳುವುದಾದರೂ 'ಬಿ' ರಿಜಿಸ್ಟ್ರಿಯಲ್ಲಿ ಅವನಿಗೆ ಊಟಕ್ಕೆ ಇರುವುದಾದಲ್ಲಿ ಆ ಮೇಲೆ ಅವನಿಗೆ ಕಾರ್ಡೂ ಸಿಗುವುದಿಲ್ಲ. ಇದನ್ನು ಪರ್ಯಾಲೋಚಿಸಿದರೆ ಹಳ್ಳಿಯ ವಾಸಿ ಉತ್ಪಾದಕರ ಹೊಟ್ಟೆಯನ್ನು ಹೊರೆಯುವುದು 'ಬಿ' ರಿಜಿಷ್ಟ್ರಿಯೇ ಎಂದರ್ಥವಾಗುವುದು. ಅದು ಅಲ್ಲದೆ ನಮ್ಮ ಕಾನುಭಾಗರು 'ಮಿತ್ರ'ರ ದಿವ್ಯ ದೃಷ್ಟಿಯುಳ್ಳವರು; ಕುಳಿತಲ್ಲಿಂದಲೇ ರೈತರ ಬೆಳೆಯನ್ನು ಕಂಡುಕೊಳ್ಳಲು ಸಮರ್ಥರಿರುತ್ತಾರೆಂದು ಒಂದೊಮ್ಮೆ ಪತ್ರಿಕೆಯಲ್ಲೊಬ್ಬರು ಬರೆದಿರುವುದನ್ನು ಮರೆಯುತಕ್ಕದ್ದಲ್ಲ. ಇಂತಹ ಹೊಲಸುಗೆಟ್ಟ ಸಂಗ್ರಹಣ ವಿತರಣ ಕಾರ್ಯವನ್ನು ಸುಧಾರಿಸುವ ಮಾರ್ಗವೇನೂ ಇರಲಾರದೆ? ಇದೇ ಕಳ್ಳಸಂತೆಗೆ ಇಂಬು ಗೊಟ್ಟಿದೆ ಎಂಬುದು ಸೂಕ್ತವಿದೆ.

ಬಸ್ ಸ್ಟೇಶನಿನಲ್ಲಿ ಬಲದಂತ—

ನಮ್ಮ ಜಿಲ್ಲೆಯ ಬಸ್ ಸಿಬಂದಿಯವರು ಇತ್ತೀಚೆಗೆ ವಾರ್ತಾಪತ್ರಿಕೆಗಳನ್ನು ಜನರಿಗೆ ಹಂಚುತಿದ್ದಾರೆ. ಬಸ್‌ಗಳು ಓಡುವ ಹಳ್ಳಿಯ ಜನರಿಗೆ ಇದರಿಂದಾಗಿ ಅಯಾಸವಿನೇ ಪತ್ರಿಕೆಗಳನ್ನು ಪಡಕೊಳ್ಳುವ ಸೌಕರ್ಯ ದೊರೆಯುವುದು ಅಭಿನಂದನೀಯವೇ. ಆದರೆ ಇತ್ತೀಚೆಗೆ ಕೆಲವು ಬಸ್ ಸ್ಟೇಶನ್‌ಗಳಲ್ಲಿ ಉದಾ: ಪುತ್ತೂರು ಸ್ಟೇಶನಿನಲ್ಲಿ ಟಿಕೇಟು ಕೊಡುವ ಅಧಿಕಾರಿಗಳು ತಮ್ಮ ಬಳಿ ವಿವಿಧ ಪತ್ರಿಕೆಗಳ ಅಟ್ಟೆಯನ್ನಿಟ್ಟು ಟಿಕೇಟಿನ ಜೊತೆಗೆ ಒಂದೊಂದು ಪತ್ರಿಕೆಗಳನ್ನು ಕೊಡುತ್ತಾರೆ. ಬಹು ಪ್ರಯಾಸದಿಂದ ಟಿಕೇಟು ದೊರಕುವ ಸಂಕಟದಲ್ಲಿ ಇದನ್ನು ಹಲವರು ಲೆಕ್ಕಿಸುವುದಿಲ್ಲ. ಆದರೆ ಹೀಗೆ ಪತ್ರಿಕೆಗಳನ್ನು ಪಡೆಯುವವರಲ್ಲಿ ಹಲವರು ತೀರಾ ಓದುಬರಹ ತಿಳಿಯದವರಿರುತ್ತಾರೆ. ಇಂತಹ ಹಲವು ಸನ್ನಿವೇಶಗಳನ್ನು ನಾನು ಕಣ್ಣಾರೆ ಕಂಡುದುಂಟು. ಮೊನ್ನೆ ಮೊನ್ನೆ ದ. ಕನ್ನಡದಿಂದ ಮಡಿಕೇರಿಯ ತೋಟಕ್ಕೆ ದುಡಿಯಹೋಗುವ ಕೂಲಿಯೊಬ್ಬನೊಡನೆ ನಾನು ಮಾತಾಡುತಿದ್ದಂತೆ ಆತ ತನ್ನ ಕೈಯಲ್ಲಿದ್ದ ವಾರ್ತಾ ಪತ್ರಿಕೆಯನ್ನು ಉದ್ದೇಶಿಸಿ "ನನಗೆ ಓದು ಬರುವುದಿಲ್ಲ, ಟಿಕೇಟು ಕೊಡುವಾಗ ಪತ್ರಿಕೆಯನ್ನು ಜೊತೆಗಿತ್ತು ಉಳಿದ ಹಣ ತೆತ್ತರು, ಏನನ್ನಾಯ ನೋಡಿ" ಎಂದು ಗೊಣಗುಟ್ಟಿದನು!

ಬಸ್ ಸಿಬಂದಿಯವರೊಡನೆ ಒಂದು ಮಾತು. ಈ ತೆರನಾದ ಅಕ್ಷರ ಪ್ರಚಾರವೋ ಇನ್ನೇನು ಪ್ರಚಾರವೋ ಇದರಿಂದಾಗಿ ಲೋಕ ಕಲ್ಯಾಣವಾಗದು. ಟಿಕೇಟು ಆಫೀಸುಗಳಲ್ಲಿ ವಾರ್ತಾಪತ್ರಿಕೆಗಳ ಅಂಗಡಿಗಳು ಬೇಡ ಬಸ್ ಮಾಲಿಕರು ದಯವಿಟ್ಟು ಈ ಕಡೆ ಗಮನ ನೀಡಬೇಕು.

—ಮಹಾಬಲ ಭಂಡಾರಿ

ಕಾರ್ಕಳ:—ಮದ್ಯಪಾನ ನಿಷೇಧ ದಿನಾಚರಣೆ.—ಪುರ ಮೆರವಣಿಗೆ, ರಾಷ್ಟ್ರೀಯ ಧ್ವಜ ವಂದನೆ ಶ್ರೀ. ಬಿ. ನಾರಾಯಣ ಹೆಗ್ಡೆ ಬಿ. ಎ. ತಹಸಿಲ್ದಾರರವರಿಂದ ಸಾಯಂಕಾಲ ಪುರ ಮೆರವಣಿಗೆ, S. V. T. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜನಾಬ್ ಎಚ್. ಎಸ್. ಹುಸ್ಸೇನ ಸಾಹೇಬ. ಎಮ್. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ, ಶ್ರೀಗಳಾದ ಕಟಪಾಡಿ ಶ್ರೀನಿವಾಸ ಶೆಣೈ, ಕೆ.ವೆಂಕಟೇಶ ಪ್ರಭು, M. D. ಅಧಿಕಾರಿ, ರಾಮರಾಯ ಶೆಟ್ಟಿ ಮೊದಲಾದವರ ಭಾಷಣಾದಿ ಕಾರ್ಯ ಕ್ರಮಗಳು ಜರಗಿತು.

ಮಾನ್ಯ ಮದ್ರಾಸ್ ಮಂತ್ರಿವರ್ಯ ಶ್ರೀ H. ಸೀತಾರಾಮರೆಡ್ಡಿಯವರು ತಾ. 2ರಲ್ಲಿ ಬಂದಿದ್ದು, S. V. T. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸಾರ್ವಜನಿಕ ಸಭೆ ಜರಗಿ ಮದ್ಯಪಾನ ನಿಷೇಧದಿಂದಾಗುವ ಪ್ರಯೋಜನ,ಸಾರ್ವಜನಿಕರ ಸಹಾಯ ಸಹಕಾರಗಳ ಆವಶ್ಯಕತೆಯ ಕುರಿತು ಮಂತ್ರಿಗಳ ಭೋದಪ್ರದ ಭಾಷಣವಾದ ಬಳಿಕ ಶ್ರೀ ಕೆ. ವೆಂಕಟೇಶಪ್ರಭು, ಜನಾಬ್ ಎಚ್. ಎಸ್. ಹುಸ್ಸೇನ ಸಾಹೇಬ, ಎಮ್. ಎಲ್. ಎ. ಮೊದಲಾದವರ ಭಾಷಣಗಳಾದುವು.

ಬೇಳೂರು—ಇಲ್ಲಿ ತಾ. 1-10-47ನೇ ದಿನ "ಮದ್ಯಪಾನ ನಿಷೇಧ" ದಿನಾಚರಣೆಯು ಶ್ರೀ. ಎಸ್. ಎಸ್. ಬೇಳೂರ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮಕ್ಕಳ ಮೆರವಣಿಗೆ ಪನ್ನೀರ ವಿಶೇಷ ವಿಜೃಂಭಣೆಗಳಿದ್ದುವು. ಸೇಂದಿ ಅಂಗಡಿ ಪಕಾರದಲ್ಲಿ ಅಧ್ಯಕ್ಷರು ಮದ್ಯಪಾನದ ಹಾನಿ ಕುರಿತು ಸುಂದರವಾದ ಭಾಷಣ ವಿತ್ತುದಲ್ಲದೆ ಶಾಲಾ ಬಾಲಕರಿಗೆ ತಿಂಡಿ ಹಂಚಿ ಈ ದಿನದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಕಾಂತಾವರ—ತಾ 1ರಂದು ಇಲ್ಲಿಯ ಹಿರಿ ಯೈಡೆಡ್ ಶಾಲೆಯ ಆಶ್ರಯದಲ್ಲಿ ಗ್ರಾಮಸ್ಥರ ಕೂಡುವಿಕೆಯಿಂದ ಸುರಾಕ್ಷಸನನ್ನು ಮೆರವಣಿಗೆ ಮಾಡಿ ಸುಟ್ಟು ತದ್ವಿಷಯ ಭಾಷಣಗಳಾದುವು. ತಾ 2ನೇ ದಿನ ಗಾಂಧಿ ಜಯಂತಿಯನ್ನು ನವ ಸದ್ವಿ ಶಾಲೆಯ ಆಶ್ರಯದಲ್ಲಿ ನಡಿಸಲಾಯಿತು. ಇಲ್ಲಿಯ ಪಕಾರದಲ್ಲಿರುವ ಶ್ರೀ ಕಾಂತೇಶ್ವರ ದೇವಸ್ಥಾನಕ್ಕೆ ಬಿಲ್ಲವರ ಪ್ರವೇಶವು ತಾ 2ರಲ್ಲು ನಡೆದುದು ಸಂತೋಷಕರ.

ಇನ್ನಂಜೆ—ಇಲ್ಲಿ ತಾ 2ರಂದು ಗಾಂಧಿ ಜಯಂತಿ ಅತಿ ವಿಜೃಂಭಣೆಯಿಂದ ಜರಗಿತು. ಬೆಳಿಗ್ಗೆ ಪ್ರಭಾತಫೇರಿಯೊಂದಿಗೆ ಧ್ವಜಾರೋಹಣವಾಯ್ತು. ಸಂಜೆ ಶ್ರೀ ನಾರಾಯಣ ಮೂರ್ತಿಗಳ ಅಧ್ಯಕ್ಷತೆಯಲ್ಲಿ ಗಾಂಧಿ ವ್ಯಿದಾನಿನ ಲ್ಲಿಸಭೆಸೇರಿ ಭಾಷಣ ಮೆರವಣಿಗೆ ವಿನೋದಾವಳಿಯೊಂದಿಗೆ ಸಭೆ ಅಂತ್ಯವಾಯ್ತು.

ಸುರತ್ಕಲ್—ವಿದ್ಯಾರ್ಥಿ ಸಂಘವು ೨-೧೦-೪೭ರಂದು ಮಹಾತ್ಮಾ ಗಾಂಧೀಜಿಯವರ ಜನ್ಮದಿನಾಚರಣೆಯನ್ನು ಆಚರಿಸಿತು. ಅಂದು ಮಧ್ಯಾಹ್ನ ರಚನಾತ್ಮಕ ಕಾರ್ಯಕ್ರಮಗಳಾದ ಗ್ರಾಮ ನೈರ್ಮಲ್ಯಕ್ಕೆ ಸಂಬಂಧಪಟ್ಟ ಅಭ್ಯಾಸಗಳನ್ನು ಮಾಡಲು ಗುಂಪುಗಳನ್ನು ರಚಿಸಿ ಕಳುಹಿಸಲಾಯಿತು. ಅಲ್ಲದೆ, ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮಕ್ಕೆ ಸಂಬಂಧ ಪಟ್ಟ ಪ್ರಚಾರವನ್ನೂ ಮಾಡಲಾಯಿತು.

ರಾತ್ರೆ ಸ್ಥಳೀಯ ಹೈಸ್ಕೂಲಿನ ನ್ಯಾಟು ಸಂಸ್ಥೆಯವರು ಏರ್ಪಡಿಸಿದ ಶಿಬಿರಾಗ್ನಿ ಕಾರ್ಯಕ್ರಮದೊಂದಿಗೆ ಭಾಷಣಗಳನ್ನೂ ಮಾಡಲಾಯಿತು.

ಪ್ರಕಟಣೆ.

ಉಡುಪಿ ತಾಲೂಕು ಅಂಜಾರು ಗ್ರಾಮದ ಪೋಂತಿಬೆಟ್ಟು ಚಂದಯ್ಯ ಕುರ್ಲ ಹೆಗ್ಡೇರ ಮೊಮ್ಮಗ ರತ್ನಾಕರ ಹೆಗ್ಡೆಯು, ಸರ್ವ ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ನನ್ನ ಅಜ್ಜ ಚಂದಯ್ಯ ಕುರ್ಲ ಹೆಗ್ಡೇರ ಹೆಸರಲ್ಲಿ ನನಗೆ ತಾ. 8-9-47ರಲ್ಲು ಬಂದ ಒಂದು ಟಿಸ್ಪಲ್ ರಿ. ನೋಟ್ಸಿನ ಮೇರೆಗೆ..

ನವಯುಗದ ಸಂಚಿಕೆಯಲ್ಲಿ ಅವರ ಹೆಸ್ರಿನಲ್ಲಿ ಪ್ರಕಟಿಸಿದ ಜ್ಯಾಹೀರಾತಿನ ಕುರಿತು ಕೂಡಾ—

ನನ್ನ ಅಜ್ಜ ಚಂದಯ್ಯ ಕುರ್ಲ ಹೆಗ್ಡೇರಿಗೆ ನಾನು ಸದ್ರಿ ನೋಟ್ಸಿನ ವ ಪ್ರಕಟಣೆಯ ಕಾಪ್ಪಿನಿಂದ ವ ಸುಳ್ಳು ಸಂಗ್ತಿಗಳನ್ನು ಖಂಡಿಸಿ ಜವಾಬು ಕೊಟ್ಟಲ್ಲಿ———ಸದ್ರಿ ಚಂದಯ್ಯ ಕುರ್ಲ ಹೆಗ್ಡೇರು ಮೇಲ್ಕಂಡ ಅವರ ಹೆಸ್ರಿನ, ರಿಜಿಸ್ಟ್ರಿ ನೋಟೀಸಾಗ್ಲೀ ಪ್ರಕಟನೆಯಾಗ್ಲೀ ಅವರ ತಿಳುವಳಿಕೆಯಲ್ಲಿಲ್ಲವಾಗಿಯೂ,ಅವರ ಮಗ ಡಿವೇಲ್ ಸುಬ್ಬಯ್ಯ ಹೆಗ್ಡೇಯು——ನನ್ನ ಪಕ್ಷದವರಿಗೆ ರಿ. ನೋಟೀಸು ಕೊಡುವರೆ ಎಂತ ವಂಚಿಸಿ ದಸ್ಕತು ಮೊಹರು ಪಡೆದ ಕಾಗ್ದಗಳಿಂದ ಸದ್ರಿ ಪ್ರಕಟಣೆ ವ ರಿ. ನೋಟೀಸು ಕೊಟ್ಟಿರಬಹುದಾಗಿಯೂ, ಸದ್ರಿ ರಿ. ನೋಟೀಸು ವ ಅವರ ಹೆಸ್ರಿನ ಪ್ರಕಟಣೆಯಲ್ಲಿ ಬರೆದ ಯಾವುದೊಂದು ಅಕ್ಷತ್ಯಗಳು ವ ಮೋಸಗಳು ನಡೆದದ್ದಿಲ್ಲವಾಗಿಯೂ ಅವರ ಹೆಸ್ರಿನ ಅಂಥಾ ಪ್ರಕಟಣೆಯು ವ ಟಿ. ರಿ. ನೋಟೀಸು ಸಿಂಧುವಾಗತಕ್ಕದ್ದಲ್ಲವೆಂಬುದಾಗಿ ನನಗೆ ತಾ. 16-9-47ರ ಟಿ. ರಿ. ನೋಟೀಸು ಮೂಲಕ ತಿಳ್ಸಿರುತ್ತಾರೆ.

V. Rathnakara Hegde.

ಬಾಲಕರು ಆರೋಗ್ಯಕಾಯರಾಗಲು

(ಪ್ರಭೂಸ್) ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನಷ್ಟಗಾಗಲು ತಾಯಿ ತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ. ಮಾತ್ರ, ಹೊತ್ತು ಕಳೆದರೆ ಮತ್ತೆ ಬಾರದು.

' ಪ್ರ ಭೂ ಸ್ '

ಬಾ ಲಾ ಮೃ ತ

ಪ್ರಭೂಸ್ ಬಾಲಾಮೃತದ ಖಾತ್ರಿಗೆ ಪಾಡಿದೆ ಬೇಕೆ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ಪಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳಿರಿ.

ಸ್ವದೇಶೀ ಔಷಧ ಭಂಡಾರ,

(ರಿಜಿಸ್ಟರ್ಡ್)

ಕುಂಜಾಲು, ಪೊ. ಬ್ರಹ್ಮಾವರ, ದ.ಕ.

ಏಜಂಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ,

L. N. Sharma, Mangalore.



Approved firm by the Govt. of Mysore Certified by the Agent of the Govt. of Cylone & Indias.

ಮನೆಮದ್ದು-Home Remedies ಬೆಲೆ ರೂ. 2-0-0

ಬರೆದವರು:—ಡಾ॥ ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Valuble Service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ., ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ರೋಗ ಪಡೆಯುವ ವಿಧಾನ ವಿಸ್ತಾರವಾಗಿ ಹೇಳಿದೆ.

200. ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ

ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

(೨ನೇ ಪುಟದಿಂದ)

ಯಾವುದಾದರೊಂದನ್ನು, ಅಥವಾ ಯಾವನಾದರೊಬ್ಬನನ್ನು ಪ್ರತಿಭಟಿಸಲು ಒಮ್ಮೆಗೇ ಎದ್ದು ಬಿಡುವದು. ಒಂದು ಸಮೂಹವು ಸದಾ ಅಪಾಯಕಾರಿ ಎಂಬುದು ಇದಕ್ಕಾಗಿಯೇ. ಮಾನುಷತ್ವದ ಸಲ್ಲಕ್ಷಣವೆಂದರೆ, ತನ್ನ ಪ್ರಾಥಮಿಕ ಭಾವೋದ್ರೇಕಗಳನ್ನು ಹತೋಟಿಯಲ್ಲಿಟ್ಟುಕೊಂಡು, ತನ್ನ ವರ್ತನೆಗಳಲ್ಲಿ ವ್ಯವಹಾರ್ಯತೆಯನ್ನು ಪಡಿಮೂಡಿಸುವ ಶಕ್ತಿಯೇ. ಒಂದು ಜನ ತಂಡದಲ್ಲಿರುವ ಅಭಾವವೆಂದರೆ ಇಂತಹ ಶಕ್ತಿಯುದು.

ಜನನಾಯಕತ್ವ

ತಂಡಕ್ಕೊಬ್ಬ ನಾಯಕನಾಗಿ ಮೇಲೆದ್ದು ತೋರುವ ಮನುಷ್ಯನಿದ್ದಾನೆ ತಾನೆ ಲಕ್ಷ್ಯ ಕೊಟ್ಟು ಪರಿಶೀಲಿಸಬೇಕಾದ ಒಂದು ಲಕ್ಷಣವೆಂದರೆ ಅವನೇ. ಯಾವ ವರ್ಗದ ಜನ ಸಂಗಡವೇ ಇರಲಿ; ಅದೊಂದು ಗುಂಪು ಕೂಡಬೇಕಾದರೆ ಎಲ್ಲರ ಲಕ್ಷ್ಯವನ್ನೂ ಸಮಾನವಾಗಿ ಆಕರ್ಷಿಸಬಲ್ಲ ಒಂದು ಗುರಿಯು ಬೇಕೇಬೇಕು. ಪರಿಸ್ಥಿತಿಯು ತಾನಾಗಿಯೇ ಅಂತಹ ಕೇಂದ್ರವನ್ನು ನಿರ್ಮಿಸಬಹುದು. ಅಥವಾ ನಾಯಕನು ತಾನೇ ಆ ಲಕ್ಷ್ಯವನ್ನು ಜ್ವಲನಗೊಳಿಸಿ ಆಕರ್ಷಿಸಿಕೊಳ್ಳಲೂ ಬಹುದು. ಇಂತಹ ಸಂದರ್ಭಗಳಲ್ಲಿ ಆಗುವಂತಹದೆಲ್ಲವೂ, ಒಂದು ಪಕ್ಷದ ಅಥವಾ ಗುಂಪು ನಾಯಕನಾಗುವ ಯೋಗ್ಯತೆಗಳುಳ್ಳ ಒಬ್ಬ ಮನುಷ್ಯನ ಸುಯೋಜಿತ ಕಾರ್ಯಕ್ರಮಗಳ ರೂಪದಿಂದಲೇ ನಡೆಯ ಬಹುದು. ಒಂದು ಸಂದೋಹದಕ್ಕೊಬ್ಬನು ನಾಯಕನಾಗಿ ಅಕಸ್ಮಾತ್ ಆವಿರ್ಭವಿಸಬೇಕಾದರೆ ಕೆಲವು ಕಾರಣಗಳಿರಬೇಕು. ಭಾಷಣವೇದಿಕೆಗೆ ಎಲ್ಲರಿಗಿಂತ ಮುಂದಾಗಿ ನೆಗೆಯುವವನು—ಅಥವಾ ಅತಿ ಹೆಚ್ಚಿನ ಕಂಠ ಬಲವುಳ್ಳವನು—ಇಲ್ಲವೇ ಜನರ ಮೆದುಳೊಳಗೆ ಮೊದಲೇ ಸುತ್ತಿ ಸುಳಿಯುತ್ತಿರುವ ಬಿಸಿ ಭಾವನೆಗಳಿಗೆ ನಿಕಟಹೊಂದಿಕೆಯಾಗುವ ರಮ್ಯವಾಗ್ಜಾಲಗಳನ್ನು ಬೀರ ಬಲ್ಲವನು—ನಾಯಕನಾಗುವದೇ ಹೆಚ್ಚಿಗೆ. ನಾಯಕನಾದವನು ಸರ್ವರಿಗೂ ಸಮಾನವಾಗಿ ಉತ್ತೇಜನದಾಯಿಯಾಗಬಲ್ಲವುಗಳ ಕಡೆಗೇನೇ ಜನತೆಯ ಲಕ್ಷ್ಯವನ್ನೆಳೆಯುತ್ತಾನೆ; ಅದನ್ನೇ ದೃಢಪಡಿಸುತ್ತಾನೆ; ಮತ್ತು ಸಂದರ್ಭಕ್ಕೆ ಸರಿಯಾಗಿ ಅದಕ್ಕೆ ಅರ್ಥ ಅಥವಾ ಅನರ್ಥವನ್ನು ಕಟ್ಟುತ್ತಾನೆ. ಆವೇಶದ ಭಾಷಣ, ಭಾವೋದ್ರೇಕೀ ಘೋಷ, ಮತ್ತು ರೂಢಿಯ ಗಾದೆಗಳ ಮೂಲಕವೇ ಅವನಿದನ್ನು ಸಾಧಿಸುತ್ತಾನೆ. ಇಷ್ಟಕ್ಕಾಗಿ ಆತ ವಿಷಯದಿಂದ ವಿಷಯಕ್ಕೆ ನೆಗೆಯುತ್ತಾ ಹೋದರೂ ಹೋದನೇ! ಇವೆಲ್ಲಾ ಯಾತಕ್ಕಾಗಿ? ಜನರು ಸ್ವತಃ ಯೋಚಿಸಿ ನೋಡಿಕೊಳ್ಳದಂತೆ ಮಾಡುವದಕ್ಕಾಗಿ. ಜನರು ತುಲನಾತ್ಮಕ ವಿಚಾರ ಮತ್ತು ವಿಚಾರಣೆಯ ಕಡೆಗೆ ಲಕ್ಷ್ಯಕೊಡುವ ಬದಲಿಗೆ ಈ ಕೂಗುವ ಕೆಲಸ ಮಾಡಲೆಂಬುದಕ್ಕಾಗಿಯೇ ಘೋಷವಾಣಿಗಳ ನಿರ್ಮಾಣವಾಗಿದೆಯೆಂಬುದನ್ನು ಅರಿತವರು—ವಿದ್ಯಾರ್ಥಿಗಳಲ್ಲಿ ಕೂಡಾ—ಬಹಳ ಕಡಿಮೆ ಜನ. ಕೆಳಮಟ್ಟದ ಸಮಾಜ ವರ್ಗಗಳಿಂದಲೇ ಗುಂಪು ನಾಯಕರ ಅವತಾರವಾಗುವದು ಹೆಚ್ಚಾಗಿ. ಆದರೆ ಅವನೊಬ್ಬ ನಾಯಕನಾಗಿ ಹೊರ ಬೀಳುವನೇ ತಡ; ಅವನ ವರ್ಚಸ್ಸು ಬೆಳೆಯುತ್ತದೆ. ಕೇವಲ ಪರಿಚಯ ಮಾತ್ರದಿಂದ ಮರುಳುಗೊಂಡ ಜನತಂಡವು ತಮ್ಮ ವ್ಯಕ್ತಿಗತ ಆಲೋಚನೆಗಳನ್ನು ಅವನ ಸ್ವಾಧೀನಕ್ಕೊಪ್ಪಿಸಿಕೊಡಹತ್ತಿದ ಮೇಲಂತೂ ಅವನ ಪ್ರಭಾವ ಪ್ರಬಲಿಸುತ್ತದೆ. ಆತನು ಈ ಸ್ಥಿತಿಗೆ ಬಂದ ಮೇಲೆ, ಕೇವಲ ಅವನ ಇಂತಹ ವರ್ಚಸ್ಸಿನ ಬಲ, ಮತ್ತು ಅಂಟುರೋಗದಂತಹ ಅದರ ವ್ಯಾಪಕತೆಯ ದೆಸೆಯಿಂದಾಗಿ ಅವನು ಕೊಡುವಂತಹ ಯಾವ ಸೂಚನೆಯೇ ಆದರೂ ದಾವಾಗ್ನಿಯಂತೆ ಹಬ್ಬಿಕೊಳ್ಳಬಲ್ಲದು. ಸರಿ; ಈ ರೀತಿ ಅದು ಅಧಿಕಾಧಿಕವಾಗಿ ವ್ಯಾಪಿಸುತ್ತಾ ಹೋದಂತೆ ಅಧಿಕಾಧಿಕ ಶಕ್ತಿಯನ್ನು ಗಳಿಸುತ್ತಲೇ, ನಮಗಿಷ್ಟರಲ್ಲೇ ಕಂಡು ಅನುಭವವಾಗಿರುವಂತಹ ಲಕ್ಷಣಗಳನ್ನು ನಿರ್ಮಿಸುತ್ತಲೇ ಹೋಗುತ್ತದೆ. ಸಾಮೂಹಿಕ ಕಾರ್ಯಾಚರಣೆಯ ಅನಿವಾರ್ಯವನ್ನಿಸುವದು, ಹಾಗೂ ಆದರ ಸಾಧ್ಯತೆಯು ಮೂಡುವುದು ಇಂತಹ ಕಾಲದಲ್ಲೇ.

ವ್ಯಕ್ತಿ ವೈಶಿಷ್ಟ್ಯ

ಒಂದು ಗುಂಪು ಯಾವುದೇ ಇರಲಿ; ಅದರೊಳಗಿರುವವರಾರಲ್ಲೇ ಆದರೂ ಜಾಗೃತ ವ್ಯಕ್ತಿತ್ವವಿದೆ, ಎನ್ನುವಂತಿಲ್ಲ. ಒಳ್ಳೇ ಬುದ್ಧಿಶಾಲಿಗಳು ಹಾಗೂ ಸುಸಂಸ್ಕೃತರೆಂದು ಸ್ಥಾನಮಾನ ಗಳಿಸಿದ್ದವರು ಕೂಡಾ, ಒಂದು ಗುಂಪಿನೊಂದಿಗೆ ಸೇರಿಹೋದರಾಯಿತು—ಆ ಮೇಲೆ ಅವರೂ ಎಲ್ಲರಂತಾಗುತ್ತಾರೆ; ಯಾವ ವೈವಿಧ್ಯವೂ ಇರದ ಸಾಮೂಹಿಕ ಜನಸಂದಣಿಯ ಅಪಕ್ವಾವಸ್ಥೆಗೇನೇ ಜಾರಿಬೀಳುತ್ತಾರೆ. "ಜನರು ಒಂದು ಸಂದಣಿಯಲ್ಲಿ ಸೇರಿದಾಗಲೂ ತಾವು ಇತರ ಸಮಯಗಳಲ್ಲಿ ಹೇಗೆ ವರ್ತಿಸುವವರೋ ಹಾಗೆಯೇ ವರ್ತಿಸುತ್ತಾರೆ; ಇಲ್ಲಿ ಅದನ್ನೇ ಹೆಚ್ಚಿಸುತ್ತಾರೆ, ಅಷ್ಟೆ" ಎಂದೊಬ್ಬ ಮನಶ್ಶಾಸ್ತ್ರಜ್ಞ ಹೇಳಿದ್ದ. ಈ ಅಭಿಪ್ರಾಯವನ್ನು ಪ್ರಥಮ ನೋಟದಲ್ಲೇ ಒಪ್ಪಿಕೊಳ್ಳುವದು ಕಷ್ಟವಾಗುತ್ತದೆ. ಆದರೆ ಸಮಾಜದಲ್ಲಿ ಸದ್ವರ್ತನೆಗಳನ್ನು ನಿರ್ಮಿಸಬಲ್ಲ ಕೆಲವು ಗುಣಗಳ ಪ್ರಭಾವಗಳನ್ನಾತ ವಿವರಿಸಿ ತಿಳಿಸಿದಾಗ ಆತನ ಮಾತು ಸ್ಪಷ್ಟಾರ್ಥ ಕೊಡುತ್ತದೆ. ಮೇಲಿನ ಹೇಳಿಕೆಯಂತೆ, ಜಾತೀಯ ಗಲಭೆಗಳ ಕೊಲೆಗಾರರು ಮತ್ತು ದೊಂಬಿಗಾರರು ಇತರ ಕಾಲಗಳಲ್ಲೂ ಕೊಲೆಮಾಡುವವರೇ ಆಗಿರಬೇಕು, ಸುಲಿಗೆಗಾರರೇ ಇರಬೇಕು. ಸಮಾಜದಲ್ಲಿ ಸಹಜವಾದ ನಿತ್ಯವರ್ತನೆಯಂತೆ, ಸ್ವಜ್ಞಾನ ಹಾಗೂ ವಿಶಿಷ್ಟ ವ್ಯಕ್ತಿತ್ವವುಳ್ಳ ಜನ ತನ್ನ ಘನತೆ ಮತ್ತು ಜವಾಬ್ದಾರಿಯರಿತು ವ್ಯವಹರಿಸಿ ನಿಲ್ಲುತ್ತಾನೆ; ತನ್ನನ್ನೇ ತಾನು ವಿಮರ್ಶಿಸಿಕೊಳ್ಳುವದರೊಂದಿಗೆ ಎಲ್ಲವನ್ನೂ ಆಳವಾಗಿ ಯೋಚಿಸಿ ನೋಡಿ ಕೊಳ್ಳುತ್ತಾನೆ; ಬೇರೆಯವರ ಕುರಿತು ಪರ್ಯಾಲೋಚಿಸಿ ಕೊಳ್ಳುತ್ತಾನೆ; ನೀತಿಯ ಮಟ್ಟ, ನಾಜೂಕು, ಶುದ್ಧತೆ, ಇತ್ಯಾದಿಗಳೆಲ್ಲವನ್ನೂ ತೂಗಿಕೊಳ್ಳುತ್ತಾನೆ. ಹೆಚ್ಚಿನ ಪ್ರಾಥಮಿಕ ಶಿಕ್ಷಣಗಳನ್ನು ಹೊಂದಿದ—ತಪ್ಪು, ಸರಿಗಳೊಳಗಿನ ತಾರತಮ್ಯವನ್ನರಿಯುವಷ್ಟು ಶಕ್ತಿಯಿದ್ದ—ಒಬ್ಬ ಮನುಷ್ಯ ಸಭ್ಯನಾಗಿರಲು ಹೆಚ್ಚಿನ ಕಷ್ಟವೆನ್ನಿಸದು. ಆದು ಅವನ ಬುದ್ಧಿಯ ಸ್ವಪರಿಜ್ಞಾನ ಭಾಗ ಮಾತ್ರವಿದ್ದು ಅದು ಅವನ ಹತೋಟಿಯಲ್ಲೇ ಇದ್ದಾಗ ಮಾತ್ರ. ಆದರೆ ದುರ್ದೈವವಶಾತ್ ಮನುಷ್ಯನ ಮೆದುಳಲ್ಲಿ ದುರ್ದೈವ್ಯ ಹಿಂಭಾಗವೊಂದು ಇದ್ದೇ ಇದೆ. ಆದೆಂದರೆ, ಚರಿತ್ರೆಯ ಪ್ರಾರಂಭಕಾಲದಿಂದಲೂ ಮೂಲ ರೂಪದಲ್ಲಿದ್ದ ಪ್ರತಿ ಕ್ರಿಯಾತ್ಮಕ ಭಾವಗಳು ಮತ್ತು ತನ್ನ ಹಿಂದಿನ ಅನುಭವಗಳ ಪರಿಣಾಮಗಳು ಬೆರೆತು ಮೂಲತಃ ಸ್ಫೋಟಕದಂತಿದ್ದು ಸಿಡಿತಕ್ಕೆ ಹವಣಿಸುತ್ತಿರುವ ಅಪ್ರಜ್ಞೆ. ಬುದ್ಧಿಯ ಈ ಹಿಂಭಾಗವು ಆದಿಭಾಗದಲ್ಲಿ ತಾನು ಹೊಂದಿದ ಅಭಿವೃದ್ಧಿಯ ಚಿಹ್ನೆಗಳೆಲ್ಲಾ ಉಳಿದಿರುತ್ತವೆ; ಮತ್ತಲ್ಲಿ, ಈ ಮನುಷ್ಯ ಈಗ ತಾನು ಬಂದಿರುವ ಸ್ಥಾನಕ್ಕಿಂತ ಸಂಪೂರ್ಣ ಭಿನ್ನವಾದ, ಒಂದು ಪ್ರತ್ಯೇಕ ಪರಿಸ್ಥಿತಿಗೇನೇ ಹೊಂದಿಕೆಯಾಗುವಂತಹ ವರ್ತನಾಯಂತ್ರದ ಛಾಯೆಯೇ ಮೂಡಿರುತ್ತದೆ. ನಮ್ಮೀ ಮಾತಿನ ಸಾರಾಂಶವಿಷ್ಟೆ: ಒಬ್ಬ ಸಭ್ಯನಾಗರಿಕ; ಆದರೆ ಅವನಲ್ಲೂ 'ರಕ್ತ ಮಿಶ್ರಿತ ಹಲ್ಲು ಉಗುರು'ಗಳ ಆ ಕಾಲದ ಮಾನಸಿಕಾಂದೋಲನಕ್ಕೆ ಹೇಳಿಸಿದ ಕೆಲವು ಸ್ವತಃ ಸಿದ್ಧ ಲಕ್ಷಣಗಳಿದ್ದೇ ಇವೆ. ಹೀಗೆ ಅವಶೇಷವಾಗಿ ಉಳಿದುನಿಂತಿರುವ ಪ್ರಾಚೀನ ಯುಗದ ಪ್ರೇರಣಾಶಕ್ತಿಗಳಲ್ಲಿ ಸ್ವಯಂ ಘನಸ್ಥಿತಿ, ಸ್ವಮಹತ್ವ, ಮತ್ತು ಲೈಂಗಿಕತೆಗಳು ಪ್ರಬಲವಾದವುಗಳು. ಬಿಕ್ಕಟ್ಟು ಅಥವಾ ಯುದ್ಧಗಳ ಒತ್ತಡದ ಭರದಲ್ಲಿ ಈ ಮಾದರಿಯ ಹಳೇ ಗತಿಗಳು ಸಿಡಿದು ಹೊರಚಿಮ್ಮುತ್ತವೆ; ಬಹಿರಂಗವಾಗಿ ಬಾಯಿ ಬಿಡತೊಡಗುತ್ತವೆ. ಚರಿತ್ರಾವಿರ್ಭಾವದಿಂದಾಗಲೀ, ನಾಗರಿಕತೆಯ ಅಭಿವೃದ್ಧಿಯಿಂದಾಗಲೀ ಇವುಗಳ ಸಮೂಲ ನಾಶವಾಗದಿದ್ದುದೇ ಹೀಗಾಗಲು ಕಾರಣ. ಈ ಪ್ರಾಚೀನಾಮದು ದುಸ್ಫುರಣೆಗಳ ಗಣ್ಯಭಾಗದ ಮುಖವನ್ನು ಬೇರೆ ಗುರಿಗಳ ಕಡೆಗೆ ತಿರುಗಿಸುವದೊಂದೇ ಇದ್ದುದರಲ್ಲಿ ವಾಸಿ.

ಆದಿಯುಗದ ಸ್ಫುರಣೆಗಳು ಸಡಿಲುಗೊಂಡು, ನಿರೋಧವಿಲ್ಲದ ಮೂಡಿ ತೋರುವ ಹಲವು ಸನ್ನಿವೇಶಗಳಲ್ಲೊಂದು ಸಾಮೂಹಿಕ ಚಳವಳಿ. ಇಲ್ಲಿ ಒಬ್ಬ, ತನ್ನ ಸುತ್ತಣ ಸಂದಣಿಯ ನಡುವೆ ಸುಭದ್ರವಾಗಿ, ಸುರಕ್ಷಿತನಾಗಿ 'ಎಲ್ಲರೂ ತಾನು, ತಾನೇ ಎಲ್ಲರೂ' ಎಂಬಂತಹ ಭಾವನೆಯಲ್ಲಿರುತ್ತಾನೆ. ಆಗ ಅವನ ವ್ಯಕ್ತಿಗತ ಹೊಣೆಗಾರಿಕೆಯು ಅಂದ ಬಹುಮಟ್ಟಿಗೆ ಮಾಯವಾಗಿರುತ್ತದೆ. ಅಲ್ಲಿ ಅವ ಹೊರಡಾಕು ವಂತಹದಾವುದೂ ಇಲ್ಲ; ಆದರೆ ತಾವಾಗಿ ಹೊರಸಿಡಿಯುವ ಹುರುಪು ಹುಮ್ಮಸ್ಸುಗಳು ಅಲ್ಲಿದ್ದೇ ಇವೆ. "ಅಕಸ್ಮಾತ್ ಅರ್ಧ ಸಂಚಲನೆಗೊಂಡು, ಎಲ್ಲಾ ನಿರೋಧಗಳನ್ನೂ ಛೇದಿಸಿ ಭಯಂಕರ ಜ್ವಾಲೆಯಿಂದ ಒಳ ಭಾಗವನ್ನು ಪ್ರಜ್ವಲಿಸಿ ಬಿಡುವ ವಿದ್ಯುಚ್ಛಕ್ತಿ ತಾಡನೆಯಂಥವುಗಳಿವು". ಗೊಂದಲ ಅಥವಾ ಆವೇಶಕ್ಕೊಳಗಾದ ಆ ಜನ ಸಂದಣಿಯು ಇದರ ಮೂಲ ಕಾರಣದ ಅಥವಾ ಉತ್ತೇಜನ ಹೇತುವಾದವುಗಳ ಪರಿಮಾಣಕ್ಕೆಷ್ಟೋ ಮೀರಿದ ಕೃತ್ಯಗಳನ್ನು ಮಾಡಿಬಿಡಬಹುದು. ಆದರೂ ತಾವು ಪ್ರತ್ಯೇಕವಾದಾಗ ತಮ್ಮ ಕೃತ್ಯಕ್ಕಾಗಿ ಬಹಳೇ ನಾಚುವಂತಹ ಜನರು ಆ ಗುಂಪಿನಲ್ಲಿದ್ದಿರಬಹುದು. ಗುಂಪಿನ ನಡುವೆ ಅವರೂ ತಾದಾತ್ಮ್ಯಗೊಳ್ಳುವರು; ಅವರಾಗ ತಾವು ತಾವೇ ಆಗಿರುವುದಿಲ್ಲ. ಅಪ್ರಜ್ಞೆಯು ವಿಶೇಷವಾಗಿ ಅನೈತಿಕವಿರುವುದರಿಂದ ನೈತಿಕಾಲೋಚನೆ ಆಗ ಮೂಡುವಂತಿಲ್ಲ.

ಶಮನವೇನು?

ಒಂದು ಗುಂಪು ಸರ್ವಸಾಮಾನ್ಯವಾಗಿ ಒಂದು ಗುರಿಯಿಟ್ಟುಕೊಂಡ ಸೋಗಿನಲ್ಲೇ ಇರುತ್ತದೆ. ಇಲ್ಲಿ ಹೆಚ್ಚಿನಂಶ ತಪ್ಪು ಭಾವನೆ ಆವರಿಸಿಕೊಂಡಿರುತ್ತದೆ. ಸಂದಣಿಯು ಪೂರ್ಣಾವೇಶದಲ್ಲಿದ್ದು, ಸಂಧಾನಾತೀತ ದರ್ಪಶಿಖರಕ್ಕೇರಿರುವದೇ, ಒಂದು ರೋಗಚಿಹ್ನೆ; ಇಂತಹ ಸ್ಥಿತಿಗದು ಮುಟ್ಟಿದಾಗ ವಿಶೇಷ ಅಪಾಯಕಾರಿ. ನಿಜಕ್ಕೂ ಆಗ ಮುಂದೊಡ್ಡಬೇಕಾದುದು—ಆ ಸಂದಣಿಯಲ್ಲಿ ತುಸು ಮೇಲಿನ ನೈತಿಕ ಮಟ್ಟಕ್ಕೇರಿರುವ, ಆದೂ ತಾತ್ಕಾಲಿಕವಾಗಿ ಹಿಂದೂಡಲ್ಪಟ್ಟಿರುವ, ನೀತಿ ಪರಿಚಿತ ಜನರನ್ನಾದರೂ ಸಂತೃಪ್ತಿಸಲಾಗುವಂತಹ ಕೆಲವು ಆದರ್ಶಗಳನ್ನೇ. ಒಂದು ಆದರ್ಶದ ಗಾಢಾವಶ್ಯಕತೆ, ಹೀಗಿರುವುದರಿಂದ ಜನರ ಅಪ್ರಜ್ಞೆಯನ್ನು ಸದುದ್ದೇಶದ ಕಡೆಗೂ ಸಾಮೂಹಿಕವಾಗಿ ಸಂಗ್ರಹಿಸುವುದು ಸಾಧ್ಯ ಮತ್ತು ಸುಲಭವೂ ಇದೆ. ತಮಗೆ ಸಂಬಂಧಿಸಿದ ಜನತೆಯ ಬೋಧೆಯ ಗಾಢಪರಿಚಯ ಮಾಡಿಕೊಳ್ಳುವದು ಪ್ರತಿಯೊಂದು ಸರಕಾರದ ಪ್ರಚಾರ ಹಾಗೂ ಸುದ್ದಿಖಾತೆಯ ಕರ್ತವ್ಯ.

ಮಿತಿಮೀರಿದ ಸೂಚನಾ ಸ್ಫುರಣೆಗಳನ್ನೊಂದು ಮಟ್ಟಕ್ಕೆ ತಗ್ಗಿಸಬೇಕು ಶಿಕ್ಷಣ ಮತ್ತು ಸಾಮಾನ್ಯ ತಿಳುವಳಿಕೆಯನ್ನು ಕೊಡುವ ಮೂಲಕವೇ. ಸತ್ಯ ಸ್ಥಿತಿಯನ್ನು ತಿಳಿಸಿದರೇನೇ ಗೊಂದಲವೂ ನಿಂತೀತು. ಸಾರ್ವಜನಿಕರಿಗೆ 'ಶೆನ್ನತನ'ದ ಅರಿವಾಗ ಹತ್ತಿರುವುದೊಂದು ಸಲ್ಲಕ್ಷಣ. ಆದರೆ ತಮ್ಮ ಅಜ್ಞಾನ ಮತ್ತು ಅಪಕ್ವ ಬುದ್ಧಿಮತ್ತೆಯ ದೆಸೆಯಿಂದಾಗಿ, ಅವರು ಅತಿ ಸುಲಭದಲ್ಲೇ ದುರ್ಮಾರ್ಗಕ್ಕೆಳೆಯುವ ಹಿಂದು ಪ್ರೇರೇಪಕರಿಗೆ ಬಲಿಬೀಳುತ್ತಾರೆ. ಈ ಅಪಾಯವು ತಪ್ಪಬೇಕೆ? ಸಾರ್ವಜನಿಕರ ಲಕ್ಷ್ಯವನ್ನು ಭಿನ್ನ ದಿಕ್ಕಿಗೆಳೆಯುವ ಕಾರ್ಯಕ್ರಮಗಳನ್ನು ಮುಂದಿಟ್ಟು ಸಾರ್ವಜನಿಕರಿಗೆ ಸರಿಯಾದ ಶಿಕ್ಷಣ ಕೊಡಲು ಸಮಾಜವೂ ಸರಕಾರವೂ ತಮಗೆ ಸಾಧ್ಯವಿದ್ದುದನ್ನೆಲ್ಲಾ ಮಾಡಬೇಕು. ನಮ್ಮ ಗಣನೀಯ ಲಕ್ಷ್ಯವೀಗ ಈ ವರ್ಗದ ಜನತೆಯ ಕಡೆಗೆ ಬಿದ್ದಿರುವ ಸಲ್ಲಕ್ಷಣ ಕಾಣುತ್ತಿದೆ. ಆದರೆ ಅವರಿಗೆ ಶಿಕ್ಷಣ ಮತ್ತು ಸುದ್ದಿ ಕೊಡಬೇಕಾದುದು ಎಲ್ಲಕ್ಕಿಂತ ಹೆಚ್ಚು ಮುಖ್ಯ, ಮತ್ತಗತ್ಯ. ಈ ರಂಗದಲ್ಲಿ ಗಾಂಧಿಜೀ ಗಳಿಸಿರುವ ವಿಜಯವು ಕೇವಲ ಅವರ ವ್ಯಕ್ತಿಗತ ಮಹಾತ್ಮೆಯದೇ ಅಲ್ಲ. ತನ್ನ ಪ್ರಾರ್ಥನಾ ಸಭೆಗಳಲ್ಲಿ, ಮನೆಮನೆ ಸಂದರ್ಶನಗಳಲ್ಲಿ, ಸಂಬಂಧಪಟ್ಟ ಜನರೊಡನೆ ಸಂಭಾಷಣೆಗೆ ಕುಳಿತಲ್ಲಿ ಅವರು ಕೊಡುವ ಉಪದೇಶ ವಿಧಾನಗಳು ಮತ್ತು ಸ್ಪಷ್ಟ ಸುದ್ದಿಗಳೂ ಅದಕ್ಕೆ ಕಾರಣ. ಗಾಂಧಿಜೀ ಇವುಗಳ ಮೂಲಕವೇ ಜನತಂಡದ 'ಭುಜಕ್ಕೆ ಭುಜ' ಕೊಡುವ ಸಂಬಂಧವನ್ನು ತಪ್ಪಿಸಿ ತನ್ನೊಡನೆ 'ಮುಖಾಮುಖಿ' ಸಂಬಂಧವನ್ನು ನಿರ್ಮಿಸುತ್ತಾರೆ.

(ಅನುವಾದ).

CHAMPAE'S
Snow & Castrex
Sole Distributers for India
Prop: K. G. NAYAK,
Santhekatte, UDIPI, S. K.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ- ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇ ಮ ವಿ ಜ ಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ? ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು? ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.

ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟು ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ನವಭಾರತ ಬುಕ್ ಡಿಪ್ರೊ, ಉಡುಪಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇಳು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಸಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ್ ಖರ್ಚ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ. ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಅಯುರ್ವೇದ ಔಷಧಾಲಯ ಗದಗ.

Ayurveda Oushadhalaya. GADAG

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬರೆದವರು:-

ಶ್ರೀ. ಪಿ. ಶೀನ ಶೆಟ್ಟರು

ಅಭಿನಯಿಸಲೂ ಓದಲೂ ಶಕ್ಯವಾದ ಚೊಕ್ಕ ನಾಟಕ.

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ನವಭಾರತ ಬುಕ್ ಡಿಪ್ರೊ, ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೮ ಔನ್ಸಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ ಸಂಗ್ರಿ ಬರದಕ್ಕೆ ರೋಗಕ್ಕೆ ... ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ರೊ, (2) ಬೊಂಬಾಯಿ ಏಜಂಟರು:—ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಬಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ಪರ್ಲ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂ ಬೋಧಿನಿ

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ಬೆಲೆ: ರೂ. **1—8—0** ಮಾತ್ರ

1—12—0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಬುಕ್ ಡಿಪ್ರೊ, ಉಡುಪಿ.

Regd. No. M. 3618

16-10-1947

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-6
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

"...ಗ್ರೈಕರೇ... ನೀವು ಇಂದಿನ ಪರಿಸ್ಥಿತಿಯನ್ನು ಸರಿಯಾದ ದೃಷ್ಟಿಯಿಂದ ನೋಡಿ ತಿಳಿದು ಸಹಾಯಕ್ಕೆ ಮುಂದಾಗಿರಿ, ನಿಮ್ಮ ಉಳಿಕೆಯ ಧಾನ್ಯವನ್ನು ತಮ್ಮ ರೇಶನ್ ಆಹಾರಕ್ಕಾಗಿ ನೋಡುತ್ತಿರುವ ಹಸಿದ ಜನತೆಯೊಡನೆ ಹಂಚಿ ಉಣ್ಣಿರಿ".

ವರ್ಷ ೨೭ | ವಾರ ೭

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister, Govt. of Madras.

Vol. 27 | No. 7

THE CANARA MUTUAL Assurance Company, Limited.

Estd: 1935

H. O. UDIPI, S. Kanara.

BONUS DECLARED FOR 8 YEARS

We are glad to announce that we have declared a Bonus for 8 years from 1939 to 1946 both years inclusive as also an interim bonus for the next valuation period.

T. R. A. Pai,
Managing Director

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— 3.28 Crores
Our Chief Agency New business in 1946 about 54 Lakhs

Our experience of 37 years available to you for arranging Insurance Investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building,
Central Office Udipi.

Branches at.

Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ್ಸ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ ಬರ್ಥ್ ಕಂಟ್ರೋಲ್ ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧೦ ಆಣೆ.

ಮಾಲಕರು: ಶಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ್, ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲದಾಸಿ, ಕೆಮಿಸ್ಟ್ಸ್, ಹಾವೇರಿ ಬ್ಯಾಡ್ಗಿ.

Ayurveda Oushadalaya, GADAG CITY.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವಸ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ. ಮೈಜುಮ್ಮೆನಿಸುವ ಹಲವು ಸನ್ನಿವೇಶಗಳು!

ಬೆಲೆ ಬರೇ ರೂ. 1—4—0

ಪ್ರತಿಗಳು ಸಿಗುವ ಸ್ಥಳಗಳು:—

ನವಭಾರತ ಪುಸ್ತಕ ಭಂಡಾರ, ಉಡುಪಿ. ನವಯುಗ ಆಫೀಸು, ಉಡುಪಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. R. Kelu Nambiar,
Vaidya

Insure with or represent

THE UNITED KARNATAK INSURANCE CO., LTD.

Head Office: DHARWAR.

✤ ಬುದ್ಧಿ ಬಂದವರು ✤

ಮುಸ್ಲಿಂ ನಾಯಕರ ಎದೆಕವಾಟ ತೆರೆಯಿತು!

ಕಾಲಪುರುಷನಿಗೆ ಧನ್ಯವಾದಗಳು! ಆಡಿತೋರಿಸಿದರೆ, ಬಲಿಂಗಿಕ ಸಮಜಾಯಿಸಿದರೆ ಗೊತ್ತಾಗದುದು ಅನುಭವದಿಂದಲೇ ಗೊತ್ತಾಗಬೇಕು. ಭಾರತದಲ್ಲಿರುವ ಮುಸ್ಲಿಮ್ ನಾಯಕರಿಗೆ ಇಷ್ಟರಲ್ಲೇ ಬುದ್ಧಿ ಬರಹತ್ತಿದೆ. ಸತ್ಯಸ್ಥಿತಿಗೆ ಸಾವಿಲ್ಲ; ನ್ಯಾಯ ಮುಳುಗುವದಿಲ್ಲ. ಒಮ್ಮೊಮ್ಮೆ ಬಾಹುಗ್ರಾಸವಾದೀತು—ಆದರದು ಬಿಡುವಹೊತ್ತಿದೆ. ಆಗ ನ್ಯಾಯ ಮತ್ತೊಮ್ಮೆ ಪ್ರಕಾಶಿಸಲೇಬೇಕು. ಭಾರತದ ಲೀಗ್ ಘಟಾನುಗಳ ಭ್ರಮೆ ನಿರಸನವಾಗುವ ಕಾಲಾರಂಭಿಸಿದೆ. ಕೆಲವು ನಿದರ್ಶನಗಳು ಇಲ್ಲಿವೆ:—

ಬಿಹಾರಿನ ಲೀಗ್ ಎಂ. ಎಲ್. ಎ. ಗಳ ಸಮೇತ 39 ಮುಸ್ಲಿಂ ನಾಯಕರ ಪ್ರಕಟಣೆ.

'ಕಳೆದ ಇತ್ತೀಚಿಗಿನ ಕಾಲದಲ್ಲಿ ಹಿಂದುಗಳು ಮತ್ತು ಮುಸ್ಲಿಮರೊಳಗೆ ಎಂತಹ ರಾಜಕೀಯ ಭಿನ್ನತೆಗಳೇ ಇದ್ದಿರಲಿ; ರಾಷ್ಟ್ರದ ಇಂದಿನ ಹೊಸರಚನೆಯಲ್ಲಿ ಆ ಭಿನ್ನತೆಗಳಿಗಾವ ಸ್ಥಾನವೂ ಇಲ್ಲ. ನಾವೆಲ್ಲರೂ ಕೇಂದ್ರದ ನಾಗರಿಕ ಪ್ರಜೆಗಳಿದ್ದೇವೆ. ಭಾರತ ಕೇಂದ್ರದ ರಾಜಕೀಯವೇ ನಮ್ಮ ರಾಜಕೀಯ. ನಮ್ಮ ಪ್ರಾಂತ್ಯದ ಮತ್ತು ರಾಷ್ಟ್ರದ ಶಾಂತಿ ಸ್ಥಾಪನೆ ಹಾಗೂ ಅಭಿವೃದ್ಧಿ ಸಾಧನೆಯ ಕಾರ್ಯಗಳಿಗೆ ಹೆಗಲೊಡ್ಡುವದು ನಮ್ಮ ಆದ್ಯ ಕರ್ತವ್ಯ ಹಾಗೂ ಹೊಣೆಯಾಗಿದೆ. ಆದ್ದರಿಂದ ಗತಕಾಲದಲ್ಲಿ ಪ್ರತೀಕಾರೋದ್ರೇಕ ಮತ್ತು ದ್ವೇಷವನ್ನು ನಿರ್ಮಿಸಿದ್ದ ಹೇತುಗಳನ್ನೆಲ್ಲಾ ಕಿತ್ತೊಗೆದು ಜಾತೀಯ ಸೌಹಾರ್ದತೆಯನ್ನು ನಿರ್ಮಿಸುವ ದೃಢ ಶಪಥವನ್ನು ನಾವು ತೊಡಬೇಕು. ಇತ್ತೀಚಿಗಿನ ಜಾತೀಯ ಗೊಂದಲಗಳ ಕಹಿಸ್ಮರಣೆ ಮಾಸಿ ಆ ವಿಷ ಬಾಣವು ಅಂತ್ಯರಹಿತ ಸುತ್ತಿನಲ್ಲೇ ತಿರುಗುವಂತೆ ಮಾಡಲು ನಮಗಿಚ್ಛೆಯಿಲ್ಲ.'

ಬೊಂಬಾಯಿಯ ೪ ಮುಸ್ಲಿಂ ನಾಯಕರ ವಿನಂತಿ

'ರಾಜ್ಯದಲ್ಲಿ ಶಾಂತಿಯನ್ನೂ ಅಭಿವೃದ್ಧಿಯನ್ನೂ ಸಾಧಿಸಲು ಮಹಾತ್ಮಾಗಾಂಧಿಯವರಿಗೂ ಪಂಡಿತ ಜವಾಹಿರಲಾಲ ನೆಹರುಗಳ ಸರಕಾರಕ್ಕೂ ಮಾತು ಮತ್ತು ಕಾರ್ಯಗಳ ಮೂಲಕ ಸಾಧ್ಯವಿದ್ದ ಎಲ್ಲಾ ಸಹಾಯಗಳನ್ನೂ ಸಲ್ಲಿಸಿರಿ. ಮುಸಲ್ಮಾನರು ಅಧಿಕಾಧಿಕ ಸಂಖ್ಯೆಯಲ್ಲಿ ಕಾಂಗ್ರೆಸಿಗೆ ಸೇರುವ ಮೂಲಕವೇ ಈ ಕಾರ್ಯವನ್ನು ಸುಗಮವಾಗಿ ಸಾಧಿಸಬಹುದೆಂದು ನಮ್ಮ ಅಭಿಪ್ರಾಯ. ಯಾಕೆಂದರೆ, ದೃಢವಾದ ಹಾಗೂ ನಿಜಕ್ಕೂ ಪ್ರಜಾಸತ್ತಾತ್ಮಕವಾದ ಸರಕಾರವನ್ನು ಸ್ಥಾಪಿಸಬಲ್ಲ, ಮತ್ತು ಜಾತಿಮತ ಭೇದವೇನೂ ಇಲ್ಲದೆ ಎಲ್ಲಾ ನಾಗರಿಕರ ಅಭಿವೃದ್ಧಿ ಹಾಗೂ ಅಭ್ಯುದಯ ಸಾಧಿಸಬಲ್ಲ ರಾಜಕೀಯ ಪಕ್ಷವಾಗಿದ್ದುದು ಮತ್ತು ಆಗಿರುವುದೆಂದರೆ ಅದೊಂದೇ. ಕಾಂಗ್ರೆಸಿನೊಂದಿಗೆ ಸೇರಲಿಚ್ಛೆಯಿಲ್ಲದವರು ತಮ್ಮ ಅಭಿರುಚಿ ಮತ್ತು ಹಿತಸಂಬಂಧಗಳಿಗೆ ತಕ್ಕಂತೆ ಜಾತೀಯವಲ್ಲದ ಇತರ ರಾಜಕೀಯ ಪಕ್ಷಗಳಿಗೆ ಸೇರಬಹುದು. ಮುಸ್ಲಿಂ ಕೆಲಸಗಾರರು, ರೈತರು, ಭೂಮಾಲಕರು, ವ್ಯಾಪಾರಿಗಳು, ಉದ್ಯೋಗಸ್ಥರೆಲ್ಲರೂ ಈ ಮಾದರಿಯನ್ನೇ ಅನುಕರಿಸಬೇಕು. ಆದರೊಂದು ಮಾತು, ಅವರಾವ ರಾಜಕೀಯ ಸಂಸ್ಥೆಗೆ ಸೇರುವಾಗಲಾದರೂ ಯಾವುದನ್ನೂ ಗುಟ್ಟಿನಲ್ಲಿಡದೆ ನಿರ್ವಂಚನೆಯಿಂದ ಸೇರಬೇಕು. ಒಂದು ರಾಷ್ಟ್ರದ ವಿಜಯ ಹಾಗೂ ಅಭಿವೃದ್ಧಿಯು ಅದರ ಪ್ರಜೆಗಳ ಸಂಯುಕ್ತ ಪ್ರಯತ್ನವನ್ನೇ ಅವಲಂಬಿಸಿದೆ. ಈ ಉಚ್ಚ ಗುರಿ ಸೇರಲು ನಾವು ನಮ್ಮ ಸರ್ವಶಕ್ತಿಯನ್ನೂ ವಿನಿಯೋಗಿಸೋಣ. ಈ ಕೆಳಗಿನ ತತ್ವಗಳಿಗೆ ದೃಢವಾಗಿ ಮತ್ತು ತ್ರಿಕರಣಪೂರ್ವಕವಾಗಿ ಕಟ್ಟುಬೀಳಿರಿ: ಭಾರತ ರಾಷ್ಟ್ರವು ಪ್ರಾಪಂಚಿಕ ತತ್ವಾಧರಿತವಿರಬೇಕು. ಆರ್ಥಿಕ ಪ್ರಜಾಪ್ರಭುತ್ವ ವಿನಹ ನಿಜವಾದ ಪ್ರಜಾಪ್ರಭುತ್ವವಾಗಲಾರದು. ಒಂದು ಧರ್ಮವನ್ನು ಧರಿಸಿ ರಾಜಕೀಯ ಪಕ್ಷವಿರಲಾರದು. ರಾಷ್ಟ್ರದ ಎಲ್ಲಾ ನಾಗರಿಕರಿಗೂ ಸಮಾನ ಹಕ್ಕುಬಾಧ್ಯತೆ ಮತ್ತು ಸಮಾನ ಕರ್ತವ್ಯ ಹೊಣೆಗಳಿವೆ. ದ್ವಿರಾಷ್ಟ್ರ ತತ್ವವನ್ನು ನಂಬುವ ಮುಸಲ್ಮಾನರು ಇನ್ನೂ ಭಾರತ ಕೇಂದ್ರದಲ್ಲಿದ್ದಾರಾದರೆ, ಅವರ ಮುಂದಿರುವ ಯೋಗ್ಯ ಹಾದಿಯೆಂದರೆ ಒಂದೇ: ಅವರು ಪಾಕಿಸ್ತಾನಕ್ಕೆ ಹೋಗಬೇಕು. ಇಲ್ಲವೇ ತಾವು ಪಾಕಿಸ್ತಾನಿಗಳೆಂದು ಬಹಿರಂಗವಾಗಿ ಸಾರಿ, ಬ್ರಿಟಿಷರು ಮತ್ತು ಇತರ ವಿದೇಶೀಯರಿರುವಂತೆಯೇ ಭಾರತದಲ್ಲಿರಬೇಕು. ಈ ವಿನಹಾ ಮೂರನೇ ವಿಧಾನವಿಲ್ಲ."

ಅನುಯಾಯಿಗಳಿಗೆ ಆಗಾಖಾನರ ಸಂದೇಶ.

'ಎಲ್ಲೆಲ್ಲೂ ಅನುದಿನವೂ ನಿಮ್ಮ ಸರಕಾರಕ್ಕೆ ನಿರ್ವಂಚನೆಯ ಸಂಪೂರ್ಣವಿಧೇಯತೆ, ಭಕ್ತಿ ವಿಶ್ವಾಸ, ಪ್ರಾರ್ಥನೆಗಳನ್ನು ಸಲ್ಲಿಸಿರಿ. ಕಲ್ಕತ್ತದಲ್ಲಿ ಮಾಡಿದಂತೆಯೇ ಕಾಂಗ್ರೆಸ್ ಗವರ್ನರುಗಳನ್ನು ಸಂಧಿಸಿ ವಿಧೇಯತೆಯ ಭರವಸೆ ಕೊಡಿರಿ.'

ಜಿನ್ನರಿಗೆ ಮಿ. ಕಾಝ್ಮಿಯ ವಿನಂತಿ

'ಮಿ. ಎಸ್. ಎಚ್. ಗಝ್ನ್ವಾರರ ಹೇಳಿಕೆಯು, ಲೀಗ್ ನಾಯಕರ ಪದ್ಧತಿಯಾಗಿ ಹೋಗಿರುವ ಬೇಜವಾಬ್ದಾರೀ ಮಾತುಗಳನ್ನಾಡುವ ಚಟ ಇನ್ನೂ ಮುಗಿದಿಲ್ಲವೆಂಬುದನ್ನು ತೋರಿಸುತ್ತದೆ. ಪಾಕಿಸ್ತಾನವಾದ ಮೇಲಾದರೂ ಲೀಗ್ ನಾಯಕರು ತಮ್ಮ ಹೊಣೆಗಾರಿಕೆಯನ್ನರಿತು ಸದ್ವರ್ತನೆಯುಳ್ಳವರಾಗುವರೆಂಬ ನಿರೀಕ್ಷೆಯಿದ್ದಿತು. ಆದರೆ ದುರದೃಷ್ಟವಶಾತ್ ಕೆಲವು ಲೀಗ್ ನಾಯಕರು—ಮುಖ್ಯವಾಗಿ ಪಾಕಿಸ್ತಾನದಲ್ಲಿರುವವರು—ಇನ್ನೂ ಆ ಹಳೇ ಹುಚ್ಚನ್ನು ಬಿಟ್ಟಿಲ್ಲ. ಪ್ರಾಯಶಃ ಇದು ನಮ್ಮ ದುರ್ದೈವದಿಂದಿರಬೇಕು— ಈ ಲೀಗ್ ನಾಯಕರಿಗೆ ಅವರ ಭಾವನೆಯು ಆ ಮೇಲ್ಪಂಗ್ತಿಗೇರಲು ಆಗಿಲ್ಲವೆಂಬುದರಿಂದ ಆದಷ್ಟು ಬೇಗನೇ ಅಲ್ಲಿಗೇರುವ ಆಶೆಯಿರುವಂತಿದೆ. ಅವರ ಹೇಳಿಕೆಗಳು ಈ ಬಯಕೆಯ ಪರಿಣಾಮವೆಂಬಂತೆ ತೋರುತ್ತಿವೆ. ಹಳೆಯಾಡಳಿತೆಯ ಆ ಮಧ್ಯಯುಗದ "ಸ್ಟೈಟ್" ಈಗಿನ ಮಿಸ್ಟರ್ ಫಿರೋಝ್‌ಖಾನ್‌ನೂನರಿಂದ ಕೆಲವು ಕಾಲಕ್ಕೆ ಮೊದಲು ನಾವಂತಹ ಹೇಳಿಕೆಯೊಂದನ್ನು ಪಡೆದೆವು. ಈ ಈ ದಿನ ಮಿ. ಗಝ್ನ್ವಾರರೂ ಅವರೊಂದಿಗೆ ಆದೇ ದಿಕ್ಕು ಹಿಡಿದಿದ್ದಾರೆ. ಆ ದಿನ ಢಿಲ್ಲಿಯ ಅ. ಭಾ. ಮುಸ್ಲಿಂ ಲೀಗ್ ಕೌನ್ಸಿಲಿನ ತನ್ನ ಆ ಪ್ರಸಿದ್ಧ ಭಾಷಣದಲ್ಲಿ ಮಿ. ಫಿರೋಝ್‌ಖಾನ್ ನೂನರೇ ಪ್ರಥಮತಃ ಹಲಾಕುಖಾನ್ ಮತ್ತು ಚೆಂಗೆಶ್‌ಖಾನರ ಸ್ಮರಣೆಯನ್ನು ಪುನರುದ್ದೀಪನಗೊಳಿಸಿದ್ದರು. ಈ ದಾವಾಗ್ನಿಗಾಳೀ ಭಾಷಣಗಳ ದೆಸೆಯಿಂದಲೇ ಬರ್ಬರ ಅತ್ಯಾಚಾರಗಳು ನಡೆದು ನಮ್ಮಂಥವರ ಪಾಲಿಗೆ ದುರದೃಷ್ಟಗಳು ಸಂಭವಿಸಿದುವು; ಆದರೆ ಆ ಮಧ್ಯಯುಗೀನ 'ಸ್ಟೈಟ್' ತನ್ನ ಮನೆಯಲ್ಲಿ ಸುರಕ್ಷಿತನಾಗಿದ್ದಾರೆ. ಅಂತೆಯೇ ತನ್ನ ಮನೆಯೊಳಗೆ ಸುಕ್ಷೇಮಿಯಾಗಿರುವ ಮಿ. ಗಝ್ನ್ವಾರರೂ 'ಮುಝಾಹಿದ್'ಗಳ ಮಾತಾಡುತ್ತಿದ್ದಾರೆ. [illegible] ದಾಯೀ ಕಾಡುಘರ್ಜನೆಗಳು ಇಂದಿನ ಅಸಾಮಾನ್ಯ ಕಾಲದಲ್ಲಾವ ರೀತಿ ಪ್ರತಿಧ್ವನಿಸುವವೆಂಬುದು ಅವರಿಗೆ ಗೊತ್ತೇ ಇಲ್ಲ. ಶಾಂತಿ ಮತ್ತು ವ್ಯವಸ್ಥಾ ಪಾಲನೆಯ ಅತಿ ದೊಡ್ಡಭಾರಬಿದ್ದಿರುವ ಕಾಯಿದೇ ಆಝಮ್ ಜಿನ್ನರು ಇಂತಹ ಹೇಳಿಕೆಗಳನ್ನೊಪ್ಪಲಾರರೆಂಬ ಕುರಿತು ನಮಗೆ ಖಾತ್ರಿ ಭರವಸೆಯಿದೆ. ಅವರೆ ಖಾಸಗಿಯಿಂದ ಅಸಮ್ಮತಿ ಸೂಚಿಸಿದರೆ ಸಾಲದು. ಆದ್ದರಿಂದ ಬಹಿರಂಗವಾಗಿ ಇಂತಹ ಹೇಳಿಕೆಗಳನ್ನು ಖಂಡಿಸಬೇಕೆಂದು ನಾವು ಕಾಯಿದೇ ಆಝಮರನ್ನು ವಿಜ್ಞಾಪಿಸಿಕೊಳ್ಳುತ್ತೇವೆ.'

ಅ. ಭಾ. ಮೋಮಿನ್ ಸಮ್ಮೇಲನಾಧ್ಯಕ್ಷ ಬಿಹಾರ್ ಮಂತ್ರಿ ಮಿ. ಅನ್ಸಾರಿಗಳು

'ಭಾರತವನ್ನು ಇಬ್ಭಾಗ ಮಾಡಿಸಿ ಮುಸ್ಲಿಮರು ಒಂದು ಪಾಪಮಾಡಿದ್ದಾರೆ. ಈ ಪಾಪವನ್ನು ಇನ್ನಾದರೂ ತೊಳೆದುಕೊಳ್ಳಬೇಕೋ? ವಿಚ್ಛೇದಿತ ಭಾರತವನ್ನು ಪುನಃ ಒಂದುಗೂಡಿಸಲು ಮುಸ್ಲಿಮರೇ ಪ್ರಯತ್ನಿಸಬೇಕು ಹಾಗೂ ತ್ಯಾಗ ಮಾಡಬೇಕು. ಎರಡು ಭಾಗಗಳೂ ಪ್ರತ್ಯೇಕವಾಗಿಯೇ ಉಳಿದಲ್ಲಿ ಭಾರತದಲ್ಲಿರುವ ಮುಸ್ಲಿಮರ ಸ್ಥಿತಿಯು ನಿಜಕ್ಕೂ ಕಳತೆಯಾಗಲಿದೆ. ಹಾಗಾಗದಂತೆ ಮಾಡಿಕೊಳ್ಳುವದು ಅವರ ಕರ್ತವ್ಯ. ರಾಷ್ಟ್ರದ ವಿಭಜನೆಯನ್ನು ಸಮರ್ಥಿಸಿ ತಾವು ಪ್ರಮಾದ ಮಾಡಿಬಿಟ್ಟೆವೆಂಬುದು ಈಗ ಮುಸ್ಲಿಮರಿಗೆ ಪೂರ್ಣ ಮನವಟ್ಟಾಗಿದೆ.'

ಮಧ್ಯಪ್ರಾಂತ್ಯದ ಮಾಜೀ ಮಂತ್ರಿ ಡಾ. ಯಸ್. ಯಮ್. ಹಸನ್.

'ಭಾರತ ಮತ್ತು ಪಾಕಿಸ್ತಾನಗಳ ಹಿಂದು ಮತ್ತು ಮುಸಲ್ಮಾನರ ಸ್ಥಾನಮಾನಗಳ ಕುರಿತು ಪಂಡಿತ ನೆಹರುಗಳು ಆ ದಿನ ಕೊಟ್ಟ ಧೀರ ಹೇಳಿಕೆಗೆ ನನ್ನ ಹೃತ್ಪೂರ್ವಕ ಸ್ವಾಗತವಿದೆ. ಪಾಕಿಸ್ತಾನ್ ತತ್ವವನ್ನು ಸಮರ್ಥಿಸಿ ತಾವು ದೊಡ್ಡ ತಪ್ಪನ್ನು ಮಾಡಿದೆವೆಂಬುದೀಗ ಭಾರತದ ಮುಸಲ್ಮಾನರಿಗೆ ಮನವರಿಕೆಯಾಗುತ್ತಿದೆ. ಇದೀಗ ಸುಕಾಲ! ಮಿ. ಜಿನ್ನರ ದ್ವಿರಾಷ್ಟ್ರ ತತ್ವವನ್ನು ಮುಸಲ್ಮಾನರೀಗ ಮರೆತುಬಿಡಬೇಕು. ಭಾರತ ಕೇಂದ್ರ ಮತ್ತು ಪಾಕಿಸ್ತಾನ, ಇವೆರಡಕ್ಕೂ ಏಕಕಾಲದಲ್ಲಿ ತಮ್ಮ ವಿಧೇಯತೆಯನ್ನು ಮುಸ್ಲಿಮರು ಹಂಚಿಹಾಕುವುದಸಾಧ್ಯ. ಅವರು ಭಾರತ ಸರಕಾರದ ಕಡೆಗೆ ಅವಿಚ್ಛಿನ್ನವಾದ ಹಾಗೂ ಅತ್ಯಾಳದ ವಿಶ್ವಾಸ ಮತ್ತು ವಿಧೇಯತೆ ಪ್ರದರ್ಶಿಸಬೇಕು. ವಸಾಹತು ಭಾರತದೊಳಗಿನ ಮುಸ್ಲಿಂ ಲೀಗು ಸಂಸ್ಥೆಗಳನ್ನು ಬರ್ಖಾಸ್ತುಪಡಿಸಿ ಸಮುದಾಯವಾಗಿ ಮುಸ್ಲಿಮರೆಲ್ಲಾ ಕಾಂಗ್ರೆಸಿಗೆ ಸೇರುವದೇ ಸಂಗತಿಗೆ ಸಮಂಜಸವಿದೆ. ನೇತಾಜೀ ಬೋಸರ ಭಾರತ ರಾಷ್ಟ್ರ ಸೇನೆಯಲ್ಲಿದ್ದಂತೆ ಮುಸ್ಲಿಮರು ತಮ್ಮ ಹಿಂದೂ ಬಂಧುಗಳೊಡನೆಯೂ ಇತರ ಅಲ್ಪಸಂಖ್ಯಾಕರೊಡನೆಯೂ ಸರ್ವಸಮಾನತತ್ವ ಸಾಧನೆಗಾಗಿ ಬೆರೆತು ದುಡಿಯಬೇಕು. ಕೇಂದ್ರ ಭಾರತಕ್ಕೆ ನಿಷ್ಕಳಂಕ ವಿಧೇಯ ಪ್ರದರ್ಶಿಸಲಾರದ ಮುಸ್ಲಿಮರು ಪಾಕಿಸ್ತಾನಕ್ಕೆ ಹೊರಟು ಹೋಗಬೇಕು.'

ಮಿ. ಎಹ್ತಿಶಾಮ್ ಮುಹಮ್ಮದಾಲಿ ಎಂ. ಎಲ್. ಎ (ಸಂ: ಪ್ರಾಂ.)

'ಕೇಂದ್ರ ಭಾರತದೊಳಗಿರುವ 4½ ಕೋಟಿ ಮುಸಲ್ಮಾನರು ತಮ್ಮ ದುಸ್ಥಿತಿಯ ಕುರಿತು ಗಾಢಯೋಚನೆಮಾಡಿಕೊಳ್ಳಬೇಕೆಂದೂ, ಅಜ್ಞ ಮುಸ್ಲಿಂ ಜನತೆಯ ಬುದ್ಧಿ ಕೆಡಿಸುವ ತಮ್ಮ ದುಷ್ಕೃತ್ಯವನ್ನೇ ಮುಂದುವರಿಸುತ್ತಾ ಅವರ ಪ್ರಾಣವಿತ್ತ

(೧೧ನೇ ಪುಟ ನೋಡಿ.)

ಮಾರ್ಡನ್

1946ರಲ್ಲಿ ಹೊಸ ದಾಖಲೆಯು ಶಿಖರಕ್ಕೇರಿದೆ.

ಸ್ವೀಕರಿಸಲ್ಪಟ್ಟ ವ್ಯವಹಾರ	ರೂ. 2,04,00,000
ಪೂರ್ಣಗೊಳಿಸಲ್ಪಟ್ಟ ವ್ಯವಹಾರ	ರೂ. 1,72,00,000

ಮಾರ್ಡನಿನ ಪ್ರಗತಿಪರ ಜೀವನದಲ್ಲಿ ಇದೊಂದು ಮರೆಯಲಾಗದ ಉಚ್ಚ ಸಾಹಸ.

ಇಂತಹ ದಾಖಲೆಗೆ ನೆರವಾದ ಸ್ವಪರ ರಾಷ್ಟ್ರಗಳ ಪೋಲಿಸಿದಾರರಿಗೂ ಏಜಂಟರಿಗೂ ಕಂಪೆನಿಯು ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತದೆ

ಶಿವಪ್ರಸಾದ ಠಾಕರ್ — ಮನ್ನೇಜಿಂಗ್ ಡೈರೆಕ್ಟರ್.

ಎಮ್. ಸುಂದರರಾಮ ಶೆಟ್ಟಿ — ಏಜನ್ಸಿ ಮೇನೇಜರ್.

ಮಂಗಳೂರು ಶಾಖೆ.

ಬಿ. ಸಚ್ಚಿದಾನಂದ ಹೆಗ್ಡೆ — ಬ್ರಾಂಚ್ ಸೆಕ್ರೆಟರಿ.

ಕೆ. ಪಿ. ಭವನಿಶಂಕರ ಶೆಟ್ಟಿ — ಆಸಿಸ್ಟೆಂಟ್ ಬ್ರಾಂಚ್ ಸೆಕ್ರೆಟರಿ.

ಪಾಕಿಸ್ತಾನದ ವರದಿ

ಲೇಖಕ— ಏಂಡ್ರ್ಯೂರೋಸ್, ಅಮೇರಿಕನ್ ವರದಿಗಾರ.

'ಮುಸ್ಲಿಂ ರಾಷ್ಟ್ರಗಳ ಪೈಕಿ ಅತಿ ದೊಡ್ಡದು ಮತ್ತು ಲೋಕದ ಅತಿ ದೊಡ್ಡ ಸ್ವತಂತ್ರ ರಾಷ್ಟ್ರಗಳ ಸಾಲಿನಲ್ಲಿ ಐದನೆಯದು' ಎಂದು ಮಿ. ಜಿನ್ನರು ತನ್ನ ಪಾಕಿಸ್ಥಾನವನ್ನು ವರ್ಣಿಸಿದ್ದರು. ಈ ವರ್ಣನೆಯ ಉತ್ತರಾರ್ಧದ ಕುರಿತು ಯಾರಾದರೂ ತರ್ಕಕ್ಕೆಳೆಯಲು ಸಾಧ್ಯವಿದೆ. ಆದರೆ ಪಾಕಿಸ್ತಾನದ ಪ್ರಾಮುಖ್ಯತೆಯ ಹೆಚ್ಚಳದ ಕುರಿತು ಸಂದೇಹಕ್ಕೆಡೆಯಿಲ್ಲ. ಮಧ್ಯ ಪೂರ್ವ ರಂಗದಲ್ಲಿ ಆಂಗ್ಲೋ ಅಮೇರಿಕಾ ಮತ್ತು ರಶ್ಯದ ಮಾರ್ಮಿಕ ಅದೃಷ್ಟ ಪಥದ ಗಡಿಯಲ್ಲೇ ಪಾಕಿಸ್ತಾನವಿರುವುದರಿಂದಂತೂ ಇದು ಇನ್ನಷ್ಟು ಮುಖ್ಯವಿದೆ

ದ್ವಿತೀಯ ಇರಾಕ್

ಪಾಕಿಸ್ತಾನದ ಭವಿಷ್ಯದ ಕುರಿತು ಪ್ರಬಂಧ ಬರೆಯುವುದೇನೂ ಸುಲಭವಲ್ಲ. ಯಾಕಂದರೆ, ಇಷ್ಟೊಂದು ವಿರುದ್ಧ ಗತಿಗಳ ಮಂಥನದಿಂದ, ಇಷ್ಟೊಂದು ಬೃಹದ್ರೂಪೀ ಸಮಸ್ಯೆಗಳ ನಡುವೆ, ಒಂದು ರಾಷ್ಟ್ರಕ್ಕೀ ರೀತಿ ಹೊಸ ಜನ್ಮ ಬಂದುದು ಅತ್ಯಪರೂಪ. ಸದ್ಯಕ್ಕೆ ಈ ಪಾಕಿಸ್ತಾನವು ಬಹುಮಟ್ಟಿಗೆ ಇರಾಕನ್ನೇ ಹೋಲುತ್ತಿದೆ. ಎಲ್ಲಾ ಹತೋಟಿಯೂ ಕೆಲವೇ ಮಂದಿ ಶಿಖರ ಮುಖಂಡರ ಕೈಯಲ್ಲಿರುವ ಏಕಜಾತೀಯ ರಾಷ್ಟ್ರ; ಬೆಂಬಲಕ್ಕೆ ಸಶಕ್ತ ನೌಕರಶಾಹಿ; ರಕ್ಷಣೆ, ಆರ್ಥಿಕ ಸ್ಥಿತಿಗತಿ ಮತ್ತು ಮುಖ್ಯ ವಿದೇಶ ಸಂಬಂಧ ವ್ಯವಹಾರಗಳಲ್ಲಿ ಬ್ರಿಟನಿನ ಮೇಲೆಯೇ ಅವಲಂಬನೆ. ಅಲ್ಲಿ ಹೊಸತಾಗಿ ಸ್ಥಾಪನೆಗೊಂಡಿರುವ ಸರಕಾರವಾದರೋ ಇನಾಮುಧಾರೀ ಭೂಮಿಗಳದೇ ಮರ್ಜಿಯ ರಾಷ್ಟ್ರಗಳಲ್ಲಿರುವ ವಾರಿಸುಬದ್ಧ ಲಂಚಖೋರ ಹಾಗೂ ಸ್ವಪಕ್ಷಪಾತಿಗಳ ನಡುವಿನಿಂದಲೇ ಸಿಡಿದುಬಂದದ್ದು; ಅದರ ಸಾಮಾಜಿಕ ಜೀವನವು, ಮಹಿಳೆಯರ ಮರಿಯಸ್ಥಾನ ಸಮೇತ ಇಸ್ಲಾಮ್ ತತ್ವಗಳನ್ನಾಧರಿಸಿರುವಂತಹದು. ಆದರೀ ರೂಪರೇಖೆಗಳು ಸ್ಪಷ್ಟವಾಗಿ ಪಡಿಮೂಡಲು ಅವಕಾಶ ದೊರೆತಿಲ್ಲ. ಒಳಗಡೆಯ ಪ್ರಬಲ ಒತ್ತಡವು ಪಾಕಿಸ್ತಾನಕ್ಕೊಂದು ಪ್ರತ್ಯೇಕ ರೂಪ ಕೊಡುವ ಅಪಾಯವೇ ಇದೆ.

ಸಮೃದ್ಧ ಭೂಮಿಯೋ, ಬಡ ಕ್ಷೇತ್ರವೋ?

ಮಿ. ಜಿನ್ನರೇನೋ ಅತಿ ವರ್ಣನೆಮಾಡಿದ್ದಾರೆ. ತನ್ನ ಪಾಕಿಸ್ತಾನವು 'ಅಗಾಧ ಅನುಕೂಲತೆ, ಸಂಪತ್ಸಮೃದ್ಧತೆ ಮತ್ತು ತಿರುಳುಳ್ಳ ಭಾಗ್ಯಶಾಲಿ"ಎಂದಿದ್ದಾರೆ. ಆದರೂ ಆರ್ಥಿಕ ದೃಷ್ಟಿಯಿಂದ ಪಾಕಿಸ್ತಾನವು "ಕಾರ್ಯಕಾರಿ" ಎಂಬುದು ನಿಸ್ಸಂದೇಹ. ಸದ್ಯದ ಕೆಳಮಟ್ಟದ ಜೀವನ ವಿಧಾನಗಳಿಂದಾಗಿ ಇದು ವಿಶೇಷತಃ ಸತ್ಯ. ಅಲ್ಲಿ ಸಾಹಸಿಗಳಾದ 70,000,000 ಜನರು (1933ರ ಮೊದಲಿನ ಜರ್ಮನಿಯಲ್ಲಿದ್ದಂತೆ) ಇದ್ದಾರೆ. ಅದು 2,30,000 ಚದರ ಮೈಲು (1933ರ ಜರ್ಮನಿಗಿಂತಲೂ ಕಾಲಂಶ ಹೆಚ್ಚಿಗೆ) ವಿಸ್ತೀರ್ಣವಿದೆ. ಅದು ಬೇಸಾಯೋತ್ಪತ್ತಿಯ ಉಳಿತಾಯ ರಾಷ್ಟ್ರ.ತನ್ನ ಜನರನ್ನು ಉಣ್ಣಿಸಿಯೂ ಅಕ್ಕಿ ಮತ್ತು ಗೋದಿಯನ್ನೂ, ತನ್ನ ಉತ್ಪತ್ತಿಯ ಹೆಚ್ಚಿನಂಶ ಅಮೂಲ್ಯ ನಾರನ್ನೂ ಹೊರಗೆ ರಫ್ತು ಮಾಡಬಲ್ಲುದು. ಕೆಲವು ಎಣ್ಣೆ ಬಣ್ಣಗಳ ಭಂಡಾರವದು, ಉಪಯೋಗಕ್ಕೆ ವಿನಿಯೋಗಿಸಿಕೊಳ್ಳಲಾಗುವ ಮೂಲ ನೀರಬಲ ಸಾಕಷ್ಟಿದೆ. ಆದರೆ ಕೆಲವು ತರುಣ ಲೀಗ್‌ವಾಲರು ಅದನ್ನು ಸಂತಾಪಪೂರ್ವಕ "ಖಾಕಿಸ್ತಾನ್" (ಮರುಭೂಮಿ)ಎಂದು ಕರೆಯಹತ್ತಿದ್ದಾರೆ ಔದ್ಯೋಗಿಕವಾಗಿ ಅದಷ್ಟು ಹಿಂದೆಬಿದ್ದಿದೆಯೆಂದೇ ಈ ಬಿರುದುದಾನ. ಆ ಇಡೀ ಉಪಖಂಡವೇ ಅಪರಿಪಕ್ವ ಔದ್ಯೋಗಿಕ ರಾಷ್ಟ್ರ; ಅದರಲ್ಲೂ ಈ ಮಟ್ಟಿಗೆ ಅತ್ಯಂತ ಹಿಂದೆ ಬಿದ್ದಿರುವ ಕ್ಷೇತ್ರಗಳಿರುವುದು ಪಾಕಿಸ್ತಾನದಲ್ಲೇ. ಅಲ್ಲಿ ವುಲ್ಲನ್, ಸಿಮೆಂಟ್, ಸಕ್ಕರೆ, ಹತ್ತಿ ಗಿರಣಿಗಳು ಮತ್ತಿತರ ಸಾಮಾಗ್ರಿ ತಯಾರಿಕೆಗಳು ಅಲ್ಲಲ್ಲಿ ಅಲ್ಪ ಸ್ವಲ್ಪವೆಂಬಂತಿವೆ. ಆ ಉಪಖಂಡದ ಸೇ. 85ರಷ್ಟು ಹಸಿನಾರು ದೊರೆಯಬೇಕು ಪಾಕಿಸ್ತಾನದಿಂದಲೇ; ಆದರೆ ನಾರ ಗಿರಣಿಗಳಿರುವುದು ಕಲ್ಕತ್ತದಲ್ಲೇ. ಆಧುನಿಕ ಬಂದರು ಪಾಕಿಸ್ತಾನಕ್ಕಿದೆಯಾದರೆ, ಅದು ಕರಾಚಿಯೊಂದೇ. ಸಂಚಾರ ಸರಬರಾಯಿ ಮತ್ತು ಸಂಬಂಧ ಮಾಧ್ಯಮ ಪಥಗಳ ಸೌಕರ್ಯವು ಭಾರತಕ್ಕಿದ್ದಷ್ಟು ಪಾಕಿಸ್ತಾನಕ್ಕಿಲ್ಲ.ಆ ಭಾಗದಲ್ಲಿಇದ್ದಲು ಅಥವಾ ಕಬ್ಬಿಣವು ಗುರುತ ಹತ್ತುವಷ್ಟಿಲ್ಲ. ಜನತೆ ಬಹಳ ಹಿಂದುಳಿದಿದೆ. ನೂರರಲ್ಲಿ ಕೇವಲ 4 ಮಂದಿ ಮಾತ್ರ (ಭಾರತದಲ್ಲಿ ಶೇಕಡಾ 12) ಓದಬಲ್ಲರು. ಇರುವ ಸುಶಿಕ್ಷಿತ ವರ್ಗದಲ್ಲಾದರೂ ಪಾಕಿಸ್ತಾನದಲ್ಲೂ ಹಿಂದುಸ್ತಾನದ ರೋಗವೇ ಇದೆ:- ಅತಿರೇಕ ಸಂಖ್ಯೆಯಲ್ಲಿ ವಕೀಲರು, ಅತ್ಯಲ್ಪ ಸಂಖ್ಯೆಯಲ್ಲಿ ಇಂಜಿನೀಯರರು. ಆದರ ಕಚ್ಚಾ ಸಾಮಾಗ್ರಿಗಳ ಅನುಕೂಲತೆಯೆಲ್ಲವೂ ಸದ್ಯಕ್ಕೆ ಸುಖಭೋದ್ಯಮಗಳಿಗೇನೇ ಮೀಸಲಿಡಲ್ಪಟ್ಟಿದೆ.

ಗಡಿ ನಿರ್ಣಯಗಳ ಬೆನ್ನಲ್ಲೇ ಎದ್ದ ರಕ್ತಮಯೀ ಗೊಂದಲಗಳು, ನವೋದಿತ ಪಾಕಿಸ್ತಾನದ ಆರ್ಥಿಕ ದುರವಸ್ಥೆಗಳನ್ನು ಅಮಿತ ಪರಿಮಾಣದಲ್ಲಿ ಹೆಚ್ಚಿಸಿವೆ. ನಿಜ; ಎರಡು ಕಡೆಗಳವರೂ ನಿರಾಶ್ರಿತರ ಪ್ರವಾಹದ ಸೆಳೆತಗಳಲ್ಲಿ ಕಾಲು ಜಾರುವಂತಿದ್ದಾರೆ. ಆದರೆ ಹೆಚ್ಚಾಗಿ ಮುಗ್ಗರಿಸಿದವರೆಂದರೆ ಪಶ್ಚಿಮ ಪಾಕಿಸ್ತಾನದ ಅಧಿಕಾರಿಗಳೇ. ಈ ನಿರಾಶ್ರಿತರಿಗಾಶ್ರಯವೀಯಲು ಇವರಿಗಿರುವ ಸ್ಥಳ ಮತ್ತು ಶಕ್ತಿ ಸಂಚಯ ಕಡಿಮೆ. ಮೇಲಾಗಿ ಅಧಿಕಾರಕ್ಕೆ ಬಂದ ಪ್ರಥಮ ದಿನದಿಂದಲೇ ಅವರೀ ಅದ್ಭುತ ಸಮಸ್ಯೆಯನ್ನು ಬಿಡಿಸಲು ಕುಳಿತುಕೊಳ್ಳಬೇಕಾಯಿತು.

ನಾಯಕತ್ವದ ಅಭಾವ.

ಈ ರೀತಿ ಪಾಕಿಸ್ತಾನದ ಸಮಸ್ಯೆಗಳೇನೋ ಅಗಾಧವಿರುವಾಗ, ಅವುಗಳನ್ನು ಬಿಡಿಸಬಲ್ಲ ನಾಯಕರು ಅದಕ್ಕಿರುವುದೆಂದರೆ ತೀರಾ ಸಾಮಾನ್ಯರ ಒಂದು ಕೂಟ. ನಿಜ; ಪ್ರತಿಭಾವಂತ ಮಿ. ಜಿನ್ನರೊಬ್ಬರು ಇದಕ್ಕಪವಾದವೇನೋ ಸರಿ. ಪಾಕಿಸ್ತಾನದಲ್ಲಿ ಮಿ. ಜಿನ್ನರೊಬ್ಬರು ಬಹಳ ಮುಂದೆ ಅತಿ ದೂರಕ್ಕೆ ಹೋಗಿರುವ ಮನುಷ್ಯನಾಗಿರುವುದು ಹೌದಾದರೂ ಅವರು ದೀರ್ಘಕಾಲ ಬಾಳುವುದು ಅಸಂಭವ. ಅವರೀಗ 70ರ ಗಡಿ ದಾಟಿದ್ದಾರೆ. ಎರಡು ವರುಷಗಳಿಗೆ ಮೊದಲು ಭಯಂಕರ ವಾತರೋಗಕ್ಕೀಡಾಗಿದ್ದರು.ಅನಂತರ ಅವರ ಆರೋಗ್ಯವು ಬಹುಮಟ್ಟಿಗೆ ಹಾಳಾಗಿದೆ. ಈಗ ಅವರ ಮಾತುಗಳು ಕೇವಲ ಹತ್ತಡಿದೂರಕ್ಕೆ ಮಾತ್ರ ಕೇಳಿಸುತ್ತವೆ. ಪ್ರಧಾನ ಮಂತ್ರಿಯಾಗುವ ಬದಲಿಗೆ ಗವರ್ನರ್ ಜನರಲ್ ಸ್ಥಾನವನ್ನು ಅವರು ಅಂಗೀಕರಿಸಿದ ಒಂದು ಕಾರಣವೆಂದರೆ ಇದೇ—ಆಡಳಿತೆಯ ಆಯಾಸಗಳನ್ನು ಹೊರವಷ್ಟು ದೇಹತ್ರಾಣವಿಲ್ಲದುದೇ. ಅವರು ತನ್ನ ಅನುಯಾಯಿಗಳಿಗೆ ಒತ್ತಿ ಒತ್ತಿ ಹೇಳಿದ್ದರು. "ನಾನು ನನ್ನ ಪಾಲಿನ ಕೆಲಸ ಮಾಡಿದೆ; ನಾನು ನಿಮಗೆ ಪಾಕಿಸ್ತಾನ್ ಸಂಪಾದಿಸಿ ಕೊಟ್ಟೆ. ಇನ್ನದನ್ನು ಕಟ್ಟಿಕೊಳ್ಳುವ ಕೆಲಸ ನಿಮ್ಮದೇ."

ಈ ರೀತಿ ಕಾಯಿದೇ ಆಝಾಮರು ಸದ್ಯಕ್ಕೆ ಸಲಹೆಕೊಡುವ ಮನುಷ್ಯನಾಗಿ ಉಳಿದಿರುವರಾದರೂ, ಮುಖ್ಯ ಕಾರ್ಯಕರ್ತನಾಗಿರುವವನೆಂದರೆ ಪ್ರಧಾನ ಮಂತ್ರಿ ಲಿಯಾಖತ್ ಅಲೀಖಾನರು; ಮಿ. ಲಿಯಾಖತರು ಸಮರ್ಥ ಆಡಳಿತೆಗಾರ; ಮಧ್ಯಯುಗೀನ ಜಮೀನ್ದಾರನ ಕಟ್ಟುಗ್ರ ಮಂದಗಾಮೀ ಸಾಮಾಜಿಕ ದೃಷ್ಟಿಯಿರುವ ಮನುಷ್ಯ; ಬ್ರಿಟನಿನೊಡನೆ ರಾಜಕೀಯ ಹಾಗೂ ಆರ್ಥಿಕ ಸಂಬಂಧವಿರಬೇಕೆಂಬ ಕುರಿತು ದೃಢವಿಶ್ವಾಸವುಳ್ಳವರಿವರು. ಕಾರ್ಯವಶ್ಯಮಾರ್ಮಿಕ ಚತುರತೆಯೇನೊ ಇರುವ, ಆದರೆ ನಿಜಕ್ಕೂ ರಾಜಕೀಯ ತಜ್ಞನಲ್ಲವಾದ್ದರಿಂದ ಭಯಸೂಚಕನಾಗಿರದ, ಈ ಆರ್ಥಿಕ ಮಂತ್ರಿಯೊಬ್ಬನನ್ನು ಬಿಟ್ಟರೆ ಪ್ರಧಾನ ಮಂತ್ರಿ ಆರಿಸಿಕೊಂಡ ಮಂತ್ರಿಮಂಡಲದಲ್ಲಿರುವವರೆಲ್ಲರೂ ಮಧ್ಯಯುಗೀನ ಜಡ ಬಂಟುಗಳೇ. ಆಹಾರ ಮಂತ್ರಿ ಗಝ್ನಾಫರ್ ಅಲೀಖಾನರು ಅಲ್ಪಾವಧಿಯಲ್ಲಿ ಸೇರಿಕೊಂಡ ರಾಜಕಾರಣಿ; ಬೇಸಾಯರಂಗದ ಹಣಕಾಸಿನ ಗೂಢ ಸಮಸ್ಯೆಗಳ ಹಿಡಿತ ಲವಲೇಶವೂ ಅವರಲ್ಲಿಲ್ಲ. ಸರ್ವ ಪ್ರಾಣನಾದ ಸಂಬಂಧ ವಹಿವಾಟು ಖಾತೆಯ ಅಬ್ದುರ್‌ರಾಬ್ ನಿಸ್ತಾರರ ಹೆಸರು ಕಳ್ಳ ಸಂತೇ ವ್ಯಾಪಾರದಿಂದೆಷ್ಟು ಹಾಳಾಗಿತ್ತೆಂದರೆ, ಅವರು ತನ್ನ ಸ್ವಂತ ಊರು ಪೇಶಾವರದಲ್ಲೇ ಚುನಾವಣೆಯಲ್ಲಿ ಸೋತವರು. ಘಟನಾ ಸಮಿತಿಗವರು ಪಂಜಾಬಿನಿಂದ ಆರಿಸಲ್ಪಡಬೇಕಾಯಿತು. ಕಲ್ಕತ್ತದ ಚರ್ಮ ವ್ಯಾಪಾರಿ ಫಜ್ಲುರ್ ರಹಿಮಾನರು ಒಳಭಾಗ ಮತ್ತು ವಿದ್ಯಾಮಂತ್ರಿ ಸ್ಥಾನಕ್ಕೇರಿರುವುದು ಎಷ್ಟೊಂದು ಹಾಸ್ಯಾಸ್ಪದವೆಂಬುದನ್ನು ಕೆಳಗೆ ನಮೂದಿಸಿರುವ ಒಂದು ಘಟನೆಯಿಂದ ಅರಿಯಬಹುದು. 'ಸ್ವಾತಂತ್ರ್ಯ ದಿನ'ದ ಸಮಾರಂಭದಲ್ಲಿ ಪ್ರಥಮ ಪಂಗ್ತಿಯ ಆಸನವೊಂದರಲ್ಲಿ ಕುಳಿತಿದ್ದ ಅವರನ್ನು ಕಂಡು ಓರ್ವ ಹಳೇ ಸ್ನೇಹಿತ ಎಚ್ಚರಿಸಿದ್ದ: "ನೀವು ಸ್ಥಾನತಪ್ಪಿ ಕುಳಿತಿದ್ದೀರಿ; ಅದು ಮಂತ್ರಿಮಂಡಲಕ್ಕಾಗಿ ಇಟ್ಟುದು!"

ಅಪ್ರಾಗತಿಕ ಶ್ರೀಮಂತ ಗೊಂಬೆಗಳು

ಪಾಕಿಸ್ತಾನದ ಅಗ್ರಗಣ್ಯ ನಾಯಕರಲ್ಲಿ ಅತಿ ಹೆಚ್ಚಿನವರು ಹಳೇ ಕಾಲದ ಭೂಮ್ಯಾಲಕರೇ; ಈ ಗುಂಪಿನಲ್ಲಿ ಅಲ್ಲಿಇಲ್ಲಿ ಎಂಬಂತೆ ಅಲ್ಪಸಂಖ್ಯೆಯ ವಕೀಲರು ಮತ್ತು ಸಾಹುಕಾರರು ಕೆಲವರು. ಒಬ್ಬರಿದ್ದರು ಆಧುನಿಕ ಮನೋವೃತ್ತಿಯ ಉದ್ಯಮಿ—ಹಸನ್ ಇಸ್ಪಹಾನಿ. ಅವರನ್ನು ಅಮೇರಿಕದ ರಾಯಭಾರಿಯಾಗಿ ಕಳುಹಿಸಿ ತಮಗಾತಂಕವಾಗದಂತೆ ನೋಡಿಕೊಂಡಿದ್ದಾರೆ. ಪ್ರಾಂತಿಕ ನಾಯಕತ್ವದ ನಮೂನೆಯೂ ಇದೇ. ಪಂಜಾಬಿನ ಪ್ರಧಾನ ಮಂತ್ರಿ ಮಾಮ್ದೋತ್ ಖಾನರು (ಇವರಿಗೆ 'ಜಡಜಟ್ಟಿ' ಎಂಬ ಅಡ್ಡ ಹೆಸರಿದೆ!) ಅತಿ ದೊಡ್ಡ ಭೂಮ್ಯಾಲಕರು.

ಈ ನಾಯಕತ್ವವಿನ್ನೂ ಸಂಘಟನೆಗೊಳ್ಳುವದು ಬಾಕಿಯಿದೆ; ಆದರೆ ಇಷ್ಟರಲ್ಲೇ ಗಣ್ಯ ಪರಿಮಾಣದಲ್ಲಿ ಇದಕ್ಕೆ ವಿರೋಧವು ರೂಪುಗೊಳ್ಳಹತ್ತಿದೆ. ಈ ತನಕ ಹಿಂದೂ ಸಿಖ್ಖರ ಕಡೆಗೆ ಮುಖತಿರುಗಿಸಿ ಬಿಟ್ಟಿದ್ದ ಮುಸ್ಲಿಂ ಜನತೆಯ ಆರ್ಥಿಕ ಅತೃಪ್ತಿಯು ಈಗ ಶ್ರೀಮಂತ ಲೀಗ್ ನಾಯಕರ ಕಡೆಗೆ ಮುಖ ಮಾಡಹತ್ತಿದೆ. ಪಶ್ಚಿಮ ಪಂಜಾಬ್ ಮಂತ್ರಿಮಂಡಲದ ಮೆದುಳಿನಂತಿರುವ ಮುಮ್ತಾಝ್ ದೌಲತಾನಾರು ತನ್ನ ಮುಲ್ತಾನಾ ಆಸ್ತೀಕ್ಷೇತ್ರಕ್ಕೆ ಹೋಗಿದ್ದಾಗ ಅಲ್ಲಿ ಅವರ ಒಕ್ಕಲುಗಳಿಂದ ಅಷ್ಟೊಂದು ಹಾರ್ದಿಕ ಸ್ವಾಗತ ದೊರೆಯಲಿಲ್ಲವಂತೆ. ಪಾಕಿಸ್ತಾನ್ ವಿಜಯದ ಔತಣಕ್ಕೆ ವರ್ಗದಾರರೂ ಒಕ್ಕಲುಗಳೂ ಒಟ್ಟಿಗೆ ಕುಳಿತಿದ್ದಲ್ಲಿ ದೌಲತಾನಾರ ಓರ್ವ ಒಕ್ಕಲು,'ಆಸ್ತಿಯನ್ನು ನಮಗೆ ಯಾವಾಗ ಕೊಡುವಿರಿ?' ಎಂದು ಪ್ರಶ್ನಿಸಿದಾಗ ದೌಲತಾನರು ಗೊಂದಲಗಲ್ಲಿ ಬಿದ್ದರೆಂದೂ ಆದರೆ, ಅತ್ಯಂತ ಬಡವರೂ, ಮತ್ತಂತಹ ಭರವಸೆಯನ್ನು ಈ ಮೊದಲು ಲೀಗ್ ನಾಯಕರಿಂದ ಪಡೆದಿದ್ದವರೂ ಆದ ಮುಸ್ಲಿಂ ಒಕ್ಕಲುಗಳು [illegible] ಮೇಲೆ ಆ ಪ್ರಶ್ನೆ ಕೇಳಿ ಪೀಡಿಸಿದರೆಂದೂ ತಿಳಿದುಬರುತ್ತದೆ.

ANNOUNCEMENT.

Midland Tea Company,
DINDIGUL.

We have pleasure to announce the appointment of M/S Durga Agencies Mulki as our sole distributors for South Kanara District. All enquiries for our tea may kindly be addressed to them.

For Stockistship apply to:—

Durga Agencies,
MULKI, S. K.

★ ಹೈದರಾಬಾದು ಜುನಗಾಡ್ ಪಿಕಲಾಟಿ

ಕಳೆದ ವಾರದ ಪ್ರಮುಖ ಘಟನೆಯೆಂದರೆ ಮೈಸೂರು ಸರಕಾರ ಮತ್ತು ಕಾಂಗ್ರೆಸಿನೊಳಗೆ ರಾಜಿಯಾದುದು. ಹೈದರಾಬಾದು ಹಿಂದೀ ಕೇಂದ್ರಕ್ಕೆ ಸೇರುವ ಪ್ರಶ್ನೆ ಹಾಗೆಯೇ ಇದೆ; ಜುನಾಗಾಡ್ ಸಂಸ್ಥಾನದ ಕುರಿತಿದ್ದಿರುವ ಸಮಸ್ಯೆಯೂ ಇದ್ದಂತಿದೆ. ಇತ್ತೀಚೆಗೆ ರಾಜಕೀಯ ರಂಗದ ಮುಂಭಾಗದಲ್ಲಿ ನಲಿದಾಡುತ್ತಿದ್ದುದೆಂದರೆ ಈ ಮೂರು ಸಂಸ್ಥಾನಗಳೇ. ಆ ಪೈಕಿ ಮೈಸೂರಿನ ಕಲಹ ಮನೆಜಗಳ. ಅದು ಹಿಂದೀ ಕೇಂದ್ರಕ್ಕೆ ಸೇರಿದ್ದಿತು. ತನ್ನ ಮೇಲಿನವರ ಸಂಬಂಧವನ್ನು ಮೊದಲೇ ಸರಿಪಡಿಸಿದ್ದಿತಾದರೂ, ತನ್ನೊಳಗಿನವರ ಸಂಬಂಧವನ್ನು ಕೆಡಿಸಿಕೊಂಡಿದ್ದಿತು. ಈಗ ಅದನ್ನೂ ಸರಿಪಡಿಸಿ ಶಾಂತ ವಾತಾವರಣವನ್ನು ನಿರ್ಮಿಸಿದೆ ಇದು ಸಂತೋಷದ ವಿಷಯ; ಶ್ಲಾಘನೀಯ ಸಂಗತಿ. ಹೈದರಾಬಾದಿನ ಸ್ಥಿತಿಗತಿ ಬೇರೆಯೇ. ಅದು ಹಿಂದೀ ಕೇಂದ್ರಕ್ಕೆ ಸೇರಿಲ್ಲ (ಪಾಕಿಸ್ತಾನಕ್ಕೂ ಇಲ್ಲ). ನಿಜಾಮರು ತನಗೆ ತಾನೇ ಸಾರ್ವಭೌಮಾಧಿಕಾರದ ಪಟ್ಟಕಟ್ಟಿಕೊಂಡು ಕುಳಿತಿದ್ದಾರೆ. ಆದರೂ ಹಿಂದೀ ಕೇಂದ್ರದೊಡನೆ ಸಂಬಂಧವೇ ಬೇಡವೆಂದು ಕಂಠೋಕ್ತವಾಗಿ ಇದುವರೆಗೆ ಹೇಳದೆ ಭರದಿಂದ ಮಾತುಕತೆ ನಡೆಸಿದ್ದಾರೆ. ಇತ್ತ, ಒಳಗಡೆಯಲ್ಲಾ ಪ್ರಜೆಗಳ ಮೇಲೆ ನಿರಂಕುಶಾಧಿಕಾರ ನಡೆಸುವ ಹಠ ತೊಟ್ಟಿದ್ದಾರೆ. ಅಲ್ಲಿ ಕ್ರೂರ ದಬ್ಬಾಳಿಕೆ ನಡೆದಿದೆ. ಈ ರೀತಿ ಹೊರಗಿನ ಮತ್ತು ಒಳಗಿನ ಎರಡು ಸಂಬಂಧಗಳನ್ನೂ ಕೆಡಿಸಿಕೊಂಡು ತನ್ನನ್ನೇ ತಾನು ನಂಬಿಕೊಂಡಿರುವವರೆಂದರೆ ಹೈದರಾಬಾದು ನಿಜಾಮರು. ಮೈಸೂರು ತುದಿ ಮುಟ್ಟಿರುವಾಗ ಹೈದರಾಬಾದು ಮಧ್ಯದಲ್ಲೇ ಅಡ್ಡ ಹಾದಿಯತ್ತ ಮುಖಮಾಡಿ ನಿಂತಿದೆ; ವಿರುದ್ಧ ಪಥ ಹಿಡಿದ ಮೂರನೇ ಸಂಸ್ಥಾನವೆಂದರೆ ಜುನಗಾಡ್. ಅದು ಪ್ರಜೆಗಳನ್ನೂ ಕಡೆಗಣಿಸಿದೆ; ಹೊರ ಸಂಬಂಧವನ್ನೂ ಕಡೆಗಣಿಸಿದೆ; ಪಾಕಿಸ್ತಾನಕ್ಕೇನೇ ಸೇರಿದೆ. ಪ್ರಶ್ನೆಯನ್ನು ಯೋಚನಾರಂಗದಿಂದೀಗ ಯೋಧರಂಗಕ್ಕೆಳೆಸಿ ಕುಳಿತಿದೆ. ಮೈಸೂರು ಪಾಸಾಯಿತು; ಹೈದರಾಬಾದು ಪರೀಕ್ಷೆ ಕೊಡುತ್ತಿದೆ; ಜುನಗಾಡ್ ನಾಪಾಸಾಗಿದೆ!

ಪೂರ್ವ ಪಂಜಾಬಿನ ಮುಸ್ಲಿಂ ನಿರಾಶ್ರಿತರಿಗಲ್ಲದೆ, ಭಾರತದ ಬೇರಾವ ಭಾಗದ ಮುಸ್ಲಿಮರಿಗೂ ಪಾಕಿಸ್ತಾನದೊಳಗೆ ಪ್ರವೇಶ ಕೊಡುವಂತಿಲ್ಲವೆಂದು ಪಾಕಿಸ್ತಾನ್ ಸರಕಾರವು ತನ್ನ ಬಾಗಿಲು ಮುಚ್ಚಿಕೊಂಡುದರಿಂದ ವಾತಾವರಣದ ಮೇಲೊಂದು ಹೊಸ ಬೆಳಕು ಬಿದ್ದಿದೆ. ಪಂಡಿತ ನೆಹರುಗಳು ಪ್ರಧಾನಿ ಸ್ಥಾನಕ್ಕೆ ರಾಜಿಕೊಟ್ಟು ಜನತಾ ಸಂಘರ್ಷಕ್ಕಾಗಿ ಪ್ರತ್ಯಕ್ಷ ರಂಗಕ್ಕಿಳಿಯಲು ಮುಂದಾಗಿದ್ದರೆಂಬ ಊಹೆ ಮತ್ತು ಸುದ್ದಿಯಿಂದಾಗಿ ವಾತಾವರಣದ ಮೇಲೆ ಬೇರೊಂದೆಡೆಯಿಂದಲೂ ನವಪ್ರಕಾಶ ಹರಡಿದೆ. ಮೇಲಿನ ಎರಡು ಘಟನೆಗಳೂ ವಿವಿಧ ಮನೋರೋಗಗಳನ್ನು ನಿರ್ಮೂಲಿಸಿದವೆಂಬುದು ಸಂತೋಷದ ಸಂಗತಿ.

ಮದ್ರಾಸಿನಲ್ಲಿ ಜಮೀನ್ದಾರ್ ಮತ್ತು ಇನಾಮ್‌ದಾರ್ ಪದ್ಧತಿಗಳನ್ನು ಬರ್ಖಾಸ್ತು ಪಡಿಸುವ ಮಸೂದೆಯ ಕುರಿತು ಕಾಂಗ್ರೆಸ್ ನ್ಯಾಯ ವಿಧಾಯಕ ಸಭಾ ಸದಸ್ಯರ ಪಕ್ಷದೊಳಗಾದ ಆಂದೋಲನ ಮತ್ತು ಕೆಲವು ಅಸ್ವಸ್ಥತೆಗಳು ಕಾಂಗ್ರೆಸ್ ಅಧಿನಾಯಕರು ತಲೆ ಹಾಕಬೇಕಾದ ಪರಿಸ್ಥಿತಿಯನ್ನು ನಿರ್ಮಿಸಿವೆ.

ಹೈದರಾಬಾದು

ಭಾರತ ಕೇಂದ್ರವು ಬಿಡಿಸಿಕೊಳ್ಳಲೇಬೇಕಾಗಿ ಬಂದಿರುವ ಸಂಸ್ಥಾನೀ ಸಮಸ್ಯೆಗಳ ಪೈಕಿ ಹೈದರಾಬಾದಿನ ಸ್ಥಾನನಿರ್ಣಯವು ದೊಡ್ಡದು ಮತ್ತು ತುಸು ಘನವಾದುದು. ನಿಜಾಮರಿಗೆ ಬ್ರಿಟಿಷ್ ಆಡಳಿತೆಯಲ್ಲಿಯೂ ಮಿಕ್ಕ ಮಹಾರಾಜರಿಗಿಂತ ತುಸು ಹೆಚ್ಚಿನ ಗೌರವಗಳಿದ್ದುವು. ತಾನು ಪೂರ್ಣ ನಿಷ್ಪಕ್ಷಪಾತೀ ರಾಜ, ಮಾತ್ರವಲ್ಲ, ಪವಿತ್ರ ಪೈಗಂಬರರ ಸಮಾನತಾ ತತ್ವ ಪ್ರವಾದಿ–ಆಧುನಿಕ 'ರಾಜರ್ಷಿ'–ಎಂದು ತೋರಿಸಿಕೊಳ್ಳುತ್ತಾ, ತನ್ನ ಪ್ರಜೆಗಳಲ್ಲಿ ಅತ್ಯಧಿಕ ಬಹುಸಂಖ್ಯಾಕರಾದ ಹಿಂದುಗಳನ್ನು ಕಡೆಗಣಿಸಿ, ರಕ್ಷಣೆ ಮತ್ತು ವ್ಯವಸ್ಥಾ ವಿಭಾಗಗಳಲ್ಲೆಲ್ಲಾ ಮುಸ್ಲಿಮರನ್ನೇ ತುಂಬಿಸಿ ಸ್ವಭದ್ರತಾ ಸೂತ್ರಗಳನ್ನೇ ಜ್ಯಾರಿಯಲ್ಲಿಟ್ಟಿರುವ ವೈಶಿಷ್ಟ್ಯ ನಿಜಾಮರದು. ಹೀಗಾಗಿ ಈಗ ಹೈದರಾಬಾದ್ ಎಬ್ಬಿಸಿರುವ ಕಂಟಕಗಳೆರಡು. ಮೊದಲನೆಯದು ಭಾರತ ಕೇಂದ್ರಕ್ಕೆ ಸೇರದುದು; ಎರಡನೆಯದು ತನ್ನ ಪ್ರಜೆಗಳ ಬೇಡಿಕೆಯನ್ನು ಪೂರ್ತಿ ಕಡೆಗಣಿಸಿ, ಅಲ್ಲಿ ಕಾರ್ಯತಃ ಸ್ವಜಾತೀ ಪಕ್ಷಪಾತತೆಯನ್ನೇ ತೋರಿಸಿ, ಕಠೋರ ದಬ್ಬಾಳಿಕೆಯನ್ನು ಸಾಗಿಸಿರುವದು. ಈ ಪೈಕಿ ಕ್ರಮಬದ್ಧವಾಗಿ ಹಿಂದುಸ್ಥಾನ್ ಸರಕಾರಕ್ಕೆ ಎತ್ತಿಕೊಳ್ಳಲಾಗುವ ಪ್ರಶ್ನೆಯು ಮೊದಲಿನದೇ. ಸಂಸ್ಥಾನಗಳು ಹಿಂದೀ ಕೇಂದ್ರಕ್ಕೆ ಸೇರುವ ಕುರಿತು ಸ್ವಾತಂತ್ರ್ಯ ದಿನ ಆಗೋಸ್ತು 15ರ ಮೊದಲೇ ತಿಳಿಸತಕ್ಕದ್ದೆಂದು ಹಿಂದೀ ಸರಕಾರವು ಸಕಾಲದಲ್ಲಿ ಕೇಳಿಕೊಂಡಿದ್ದರೂ ನಿಜಾಮರು ತನಗೆರಡು ತಿಂಗಳ ಅವಧಿ ಕೇಳಿದ್ದರು. ಅದೂ ಇದೇ ತಿಂಗಳ 15ಕ್ಕೆ ಮುಗಿಯಲಿದೆ.

ನಿಜಾಮರು ಆಡಿಸುತ್ತಿರುವರೆ?

18ಸಾವಿರ ಚದರ ಮೈಲು ವಿಸ್ತೀರ್ಣವಿದ್ದು ಸುಮಾರು 2ಕೋಟಿ ಪ್ರಜೆಗಳುಳ್ಳ (ಸೇ. 80ಕ್ಕೆ ಮಿಕ್ಕಿ ಹಿಂದುಗಳು) ಹೈದರಾಬಾದು ಸಂಸ್ಥಾನವು ತನ್ನೊಬ್ಬನ ವಾರೀಸಾಸ್ತಿಯೆಂದೇ ನಿಜಾಮರ ಅಂತರ್ವಾಣಿ ಹೇಳುತ್ತಿದೆ! ಆದರೆ ಭಾರತ ಸರಕಾರವು 'ತಾನಿದ್ದೇನೆ' ಎಂಬುದನ್ನು ಮಿಕ್ಕ ಸಂಸ್ಥಾನಗಳಿಗೆ ತೋರಿಸಿದಷ್ಟೇ ಸ್ಪಷ್ಟವಾಗಿ ಹೈದರಾಬಾದಿಗೂ ಆದಿಯಿಂದಲೂ ತೋರ್ಪಡಿಸುತ್ತಾ ಬಂದಿರುವುದರಿಂದ ನಿಜಾಮರು 'ತಾನಾಯಿತು—ತನ್ನ ಸ್ವಯಮನ್ಯತೆಯಾಯಿತು!' ಎಂದು ತನ್ನ ಕಿರೀಟ ಪ್ರಭೆಯ ಬೆಳಕಿನಲ್ಲೇ ಇರಲಾರದೆ ಸೂರ್ಯ ಪ್ರಕಾಶದತ್ತ ನೋಡಬೇಕಾಗಿ ಬಂತು. ಆಗೋಸ್ತು 15ರ ಮೊದಲು ಮಿಕ್ಕ ಆತ್ರಿತರೊಡನೆ ವ್ಯವಹರಿಸುವುದರಲ್ಲಿ ಮೊದಲಿಗರಾಗಿದ್ದ ಗವರ್ನರ್ ಜನರಲ್ ಮೌಂಟ್ ಬೇಟನರೇ ಹೈದರಾಬಾದಿನೊಡನೆಯೂ ವ್ಯವಹರಿಸಿಕೊಳ್ಳುವಿದ್ದರು. ಅವರೊಳಗೆ ನಡೆದಿದ್ದ ಪತ್ರವ್ಯವಹಾರಗಳಿಂದ ಖಚಿತವಾದುದಿಷ್ಟು: ತನಗೆ ಹಿಂದುಸ್ಥಾನದೊಡನೆ ಸಂಬಂಧವಿರುವಷ್ಟೇ ಪಾಕಿಸ್ತಾನದೊಡನೊಡನೆಯೂ ಇದೆ ಎಂದು ನಿಜಾಮರ ಅಭಿಮತ. ತನ್ನ ಸಂಸ್ಥಾನದ ಜನಸಂಖ್ಯೆ, ವಿಸ್ತಾರ, ಉನ್ನತಿ, ತನಗಿರುವ ಮೇಲಾಧಿಕಾರ ಮತ್ತು ಸ್ಥಾನಮಾನಗಳ ವಿಶೇಷತೆಯಿಂದಾಗಿ ತಾನು ಮಿಕ್ಕವರಂತೆ 'ಜೋಡಣೋಪಕರಣ'ಕ್ಕೊಳಗಾಗಿ ಹಿಂದೀ ಕೇಂದ್ರಕ್ಕೆ ಸೇರಲಾರೆ. ಆದರೂ ಸಂಚಾರ ವಹಿವಾಟು, ರಕ್ಷಣೆ, ವಿದೇಶ ಸಂಬಂಧಗಳೆಂಬ ಮೂರು ವಿಷಯದಲ್ಲಿ ಭಾರತಕ್ಕೆ ನಿಕಟ ಸಹಕಾರವೀಯಲು ಸಿದ್ಧನಿದ್ದೇನೆ. ಅಂತಹ ಮೈತ್ರೀ ಕರಾರು ಮಾಡಿಕೊಳ್ಳಬಹುದು. ಆದರೆ ಈ ಮೂರು ವಿಷಯಗಳ ಮೇಲೂ ತನ್ನ ಹತೋಟಿಯ ಅಧಿಕಾರವೇ ಇರಬೇಕು. ಅವುಗಳ ಕುರಿತು ಅಗತ್ಯವುಳ್ಳ ಶಾಸನ ಮಾಡುವದಕ್ಕೂ ವಿದೇಶಗಳಲ್ಲಿ ತನ್ನ ರಾಯಭಾರಿಗಳನ್ನು ನೇಮಿಸಿಕೊಳ್ಳುವದಕ್ಕೂ ತನಗೆ ಅಧಿಕಾರವಿರಬೇಕು, ಎಂದು ನಿಜಾಮರ ಅಭಿಮತ. 'ಜೋಡಣೋಪಕರಣ'ದ ಬದಲಿಗೆ 'ಮೈತ್ರಿ ಕರಾರು' ಆಗುವದಕ್ಕಡ್ಡಿಯಿಲ್ಲ. ಆದರೆ ರಕ್ಷಣೆ, ವಿದೇಶ ಸಂಬಂಧ ಮತ್ತು ಸಂಚಾರ ವಹಿವಾಟುಗಳ ಕುರಿತು ಪೂರ್ಣಾಧಿಕಾರವು ಭಾರತ ಕೇಂದ್ರದ್ದೇ ಆಗಬೇಕು. ಈ ಕುರಿತು ಮಿಕ್ಕ ಸಂಸ್ಥಾನಗಳಿಗೂ ಹೈದರಾಬಾದಿಗೂ ತಾರತಮ್ಯಮಾಡಲಾಗುವದಿಲ್ಲ, ಎಂದು ಹಿಂದೀ ಸರಕಾರದ ಕಂಠೋಕ್ತ ಅಭಿಪ್ರಾಯ.

ಸಂಧಾನ ಮಾತುಕತೆ

ನಿಜಾಮರಿಗೆ ದೊರೆತಿರುವ ಅವಧಿಯು ಗಡಿ ಒಕ್ಟೋಬರ್ 15. ಅದ್ದರಿಂದ ಇಷ್ಟರಲ್ಲೇ ಐಕ್ಯವೋ ಅನೈಕ್ಯವೋ ಎಂಬುದು ತೀರ್ಮಾನವಾಗಿರಬೇಕು. ಕೊನೆಯ ಭಾಗದಲ್ಲಿ ಹೈದರಾಬಾದಿನ ಪ್ರಧಾನೀ ಚತ್ತಾರೀ ನವಾಬರ ನಾಯಕತ್ವದಲ್ಲಿ ಹೈದರಾಬಾದಿನ ಕಾಯಿದೇ ಸಲಹೆಗಾರ ಸರ್. ವಾಲ್ಟರ್ ಮೋಂಕ್‌ಟನ್, ಸರ್. ಸುಲ್ತಾನ್ ಅಹಮ್ಮದ್ ಮತ್ತು ಆಲೀ ನವಾಝ್ ಝಂಗರಿದ್ದ ಪ್ರತಿನಿಧಿ ಮಂಡಲಿಯು ಢಿಲ್ಲಿಗೆ ಬಂದು ಸಂಧಾನ ಮಾತುಕತೆ ನಡೆಸಿದ್ದಿತು. ಆ ಮೊದಲು ಹಿಂದೀ ಸರಕಾರದ ಪ್ರತಿನಿಧಿಗ[illegible]ಹೈದರಾಬಾದಿಗೆ ಹೋಗುವ ನಿರ್ಧಾರವಾಗಿದ್ದರೂ ನಿಜಾಮತ್ ಸರಕಾರವು ಅದನ್ನು ರದ್ದುಪಡಿಸಿದ್ದಿತೆಂಮ ತಿಳಿದುಬರುತ್ತದೆ. ಈ ರದ್ದತಿಗೆ ಎರಡು ಕಾರಣಗಳಿವೆಯಂತೆ. ಮೊದಲನೆಯದು ಹೈದರಾಬಾದ್ ಸಂಬಂಧದ ಮಾತುಕತೆಗಳ ವೇಳೆ ಲೋರ್ಡ್ ಮೌಂಟ್ ಬೇಟನರು ಹಾಜರಿದ್ದು ಅವರೇ ಮುಖ್ಯ ಪಾತ್ರ ವಹಿಸದಿದ್ದರೆ ನಿಜಾಮತ್ ಸರಕಾರದ ಮನಸ್ಸಿಗೇನೋ ತುಕ್ಕು ಹಿಡಿದಂತಾಗುವ ಸಂಪ್ರದಾಯ! ಎರಡನೆಯದಾಗಿ, ನಿಜಾಮರ ಕೀರ್ತಿ ಮತ್ತು ಗೌ[illegible]ವ ರಕ್ಷಣೆ

WANTED:–ಮೂರು ಪೆಟ್ರೋಲು ಲೋರಿಗಳು ಕುಂದಾಪುರ ತಾಲೂಕಿನಲ್ಲಿ ಕಟ್ಟಿಗೆ ಸಾಗಿಸಲಿಕ್ಕೆ ಕೂಡಲೇ ಬಾಡಿಗೆಗೆ ಬೇಕಾಗಿವೆ. ಬರುವ ಮೇ ಅಖೈರಿವರೆಗೆ ಕೆಲಸವಿರುತ್ತದೆ. ಮೈಲೇಜು ರೇಟು ಇತ್ಯಾದಿ ವಿವರಗಳಿಗೆ ಕೂಡಲೆ ಬರೆಯಿರಿ:–

ವಿ. ಸೀತಾರಾಮ ಶೆಣೈ,
ಫೋರೆಸ್ಟ್ ಕಂಟ್ರಾಕ್ಟರ್.
ಪೋಸ್ಟ್ ವಂಡ್ಸೆ, ದ. ಕ.

ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

ದೇಶೋನ್ನತಿಯನ್ನು ಬಯಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಭೋದಿಸಿ ಉಳಿತಾಯಕ್ಕನ್ನು ಕಲ್ಪಿಸುವುದು. ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು. ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿಕೊಡುವುದು, ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಪೊತ್ತಮೊದಲಿನವುಗಳು.

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸರ್ವಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಪಣದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯಗಳನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906.

CANARA BANK LIMITED.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ತಪ್ಪಿದ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣವುಂಟಾಗುವುದು, ಯಾವ ಬಾಧಕವೂ [illegible]. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mis. P. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಮುಸ್ಲಿಮರಿಗೆ ಪಾಕಿಸ್ತಾನದ ಬಹಿಷ್ಕಾರ ★

ಗೆಂದೇ ಸ್ಥಾಪನೆಗೊಂಡಿರುವ 'ಇತ್ತೆ-ಹಾದ್-ಉಲ್-ಮುಸ್ಲಿಮೀನ್' ಸಂಸ್ಥೆಯವರು ವಿರುದ್ಧ ಪ್ರದರ್ಶನಗಳನ್ನು ನಡೆಸಿ ವಾತಾವರಣವನ್ನು ಕೆಡಿಸಿ ಬಿಡಬಹುದೆಂದು ನಿಜಾಮ್ ಸರಕಾರವು ಹೆದರಿತಂತೆ! ಮುಸ್ಲಿಂ ಅತಿರೇಕಿಗಳು ಹೈದರಾಬಾದಿನಲ್ಲಿ ಎಷ್ಟೊಂದು ಪ್ರಭಾವಶಾಲಿಗಳಾಗಿದ್ದಾರೆಂಬುದನ್ನು ತಿಳಿಸುವ ಈ ನಿದರ್ಶನದಿಂದ ಡಿಲ್ಲಿಯಲ್ಲಿರುವವರ ಕಣ್ಣು ತೆರೆದಿದೆ. ಡಿಲ್ಲಿ ಮಾತುಕತೆಗಳಲ್ಲಿ ಮೊಂಕ್ಟನ್ ಬೇಟನರೇ ಮುಖ್ಯ ಭಾಗವಹಿಸಿದ್ದರು. ಛತ್ತಾರಿ ಮತ್ತಿತರ ಪ್ರತಿನಿಧಿ ಸದಸ್ಯರು ಸರ್ದಾರ್ ಪಟೇಲರೊಡನೆ ಪ್ರತ್ಯೇಕವಾಗಿ ಗಾಢ ವಿಚಾರ ವಿಮರ್ಶೆ ನಡೆಸಿ ನೋಡಿದ್ದರು. ಹೈದರಾಬಾದು ಭಾರತ ಕೇಂದ್ರದೊಡನೆ ಜೋಡಣೆಗೊಳ್ಳದಿದ್ದರೆ ಬ್ರಿಟಿಷ್ ಕಾಮನ್‌ವೆಲ್ತು ಅದಕ್ಕೆ ಸ್ಥಾನ ಕೊಡಲಾರದು. ನಿಜಾಮ್ ಸರಕಾರವು ಪರದೇಶಗಳೊಡನೆ ಪ್ರತ್ಯಕ್ಷ ಸಂಬಂಧವಿಟ್ಟುಕೊಳ್ಳುವ ಪ್ರಯತ್ನಗಳನ್ನೂ ಒಳಗಿಂದೊಳಗೆ ಮಾಡಿ ಸಫಲಗೊಂಡಿಲ್ಲವೆಂದು ತಿಳಿದು ಬರುತ್ತದೆ. ಅಮೇರಿಕದ ಸಲಹೇ ಖಾತೆಯ ಅಧಿಕಾರಿಯೊಬ್ಬನು ಮದ್ರಾಸಿನಲ್ಲಿದ್ದು, ಹೈದರಾಬಾದಿಗೆ ಅಮೇರಿಕದ ಸಂಬಂಧ ನಿರ್ಮಿಸುವ ಆಶೆಹುಟ್ಟಿಸಿದ್ದನೆಂಬ ಸುದ್ದಿಯಿತ್ತು. ಆದರೆ ವಿಚಾರಣಾನಂತರ ಅಮೇರಿಕವು ಅಂತಹ ಉದ್ದೇಶದಲ್ಲಿಲ್ಲವೆಂಬುದು ಖಚಿತವಾಯಿತು. ಡಿಲ್ಲಿ ಮಾತುಕತೆಗಳ ಪರಿಣಾಮವು ತಿಳಿದು ಬರುವ ಆತುರದ ಮುಹೂರ್ತವಿದು!

ಜುನಗಾಡ್

ಕಾಥಿಯಾವಾಡದ ಎಲ್ಲಾ ಸಂಸ್ಥಾನಗಳೂ ಹಿಂದೀ ಕೇಂದ್ರಕ್ಕೆ ಸೇರಿರುವಾಗ ಅವುಗಳ ನಟ್ಟನಡುವಿರುವ ಪುಟ್ಟ ಸಂಸ್ಥಾನ ಜುನಗಾಡವು ಪಾಕಿಸ್ತಾನಕ್ಕೆ ಸೇರಿದ್ದಲ್ಲದೆ, ತನ್ನ ಅಧಿಕಾರವನ್ನುತ್ತಾ ಬಾಬರಿಯಾವಾಡಿಗೆ ಸೇನೆ ಕಳುಹಿಸಿ, ಮಂಗ್ರೋಲಿಗೂ ಸೇನಾ ದಳವನ್ನು ರವಾನಿಸಲಿದ್ದಾಗ ಕಾಥಿಯಾವಾಡ ಸಂಸ್ಥಾನಗಳ ಬೇಡಿಕೆಯಂತೆ ಹಿಂದುಸ್ಥಾನ್ ಸರಕಾರವು ತನ್ನ ಸೇನೆಯನ್ನು ಪೋರ್‌ಬಂದರಕ್ಕೆ ಕಳುಹಿಸಿ, ಜುನಗಾಡ್ ತನ್ನಾಕ್ರಮಣ ಸೇನೆಯನ್ನು ಹಿಂದೆಗೆದುಕೊಳ್ಳಬೇಕೆಂದೂ ತನ್ನ ಪ್ರಜೆಗಳ ಮತ ಪಡೆದೇ ತಾನಾವ ಕಡೆಗೆಂಬುದನ್ನು ನಿರ್ಧರಿಸತಕ್ಕದ್ದೆಂದೂ ಎಚ್ಚರಿಸಿದ್ದಿತಷ್ಟೆ. ಅದಕ್ಕೆ ಪಾಕಿಸ್ತಾನ ಸರಕಾರದ ಉತ್ತರ ಬಂದಿದೆ. 'ಬ್ರಿಟಿಷ್ ಅಧಿಕಾರದ ಬರ್ಖಾಸ್ತಿನೊಡನೆ ಪ್ರತಿಯೊಂದು ಸಂಸ್ಥಾನಕ್ಕೂ ತನಗಿಷ್ಟ ಬಂದ ಕಡೆಗೆ ಸೇರುವ ಪೂರ್ಣಾಧಿಕಾರವಿದೆ. ಜುನಾಗಾಡಿನ ದೆಸೆಯಿಂದ ಕಾಥಿಯಾವಾಡದ ಮಿಕ್ಕ ಸಂಸ್ಥಾನಗಳಿಗೆ ಅಪಾಯವೆಂಬುದು ಸುಳ್ಳು. ಕಳೆದ ಒಂದು ತಿಂಗಳಿಂದ ಜುನಗಾಡಿನ ಎಲ್ಲಾ ವಿಧದ ವ್ಯಾಪಾರ ವಹಿವಾಟುಗಳಿಗೂ ಬಹಿಷ್ಕಾರ ಹಾಕಿ ದಿಗ್ಬಂಧಿತವಾಗಿದೆಯಲ್ಲದೆ ಒಳಗಿನಿಂದಲೇ ಗಲಭೆಗಳನ್ನು ನಿರ್ಮಿಸಹತ್ತಿದ್ದಾರೆ. ಮಾಂಗ್ರೋಲ್ ಮತ್ತು ಬಾಬರಿಯಾವಾಡಿನ ಮೇಲಧಿಕಾರವು ಜುನಾಗಡಿಗಿರುವಾಗ ಭಾರತದೊಡನೆ ಸೇರಕೊಳ್ಳುವ ಹಕ್ಕು ಅವುಗಳಿಗಿಲ್ಲ. ಈ ಪ್ರಶ್ನೆಯನ್ನು ಕಾನೂನು ವಿಚಾರಣೆಗೊಪ್ಪಿಸಲು ನಾವು ಸಿದ್ಧರು. ನಾವೀ ಕುರಿತು ಸಂಧಾನಕ್ಕೆ ಕುಳಿತುಕೊಳ್ಳಲು ತಯಾರು. ಆದರೆ ಮುಂದಾಗಿ ಭಾರತ ಸರಕಾರವು ಆ ಭಾಗಗಳಲ್ಲಿ ನಿಲ್ಲಿಸಿರುವ ಸೇನೆಯನ್ನು ಹಿಂದೆಗೆಯಬೇಕು. ಜುನಗಾಡೂ ಬಾಬರಿಯಾವಾಡಿನಿಂದ ಅದೇ ಕಾಲದಲ್ಲಿ ಸೇನೆ ಹಿಂತೆಗೆದುಕೊಳ್ಳುವದು. ಯಾವುದೇ ಸಂಸ್ಥಾನ ಅಥವಾ ಸಂಸ್ಥಾನಗಳಲ್ಲಿ ಜನ ಮತ ಸಂಗ್ರಹಿಸಿ ತೀರ್ಮಾನಿಸುವ ಸಂಬಂಧದ ಶರ್ತ ಹಾಗೂ ಸ್ಥಿತಿಗತಿಗಳ ಕುರಿತು ಭಾರತ ಸರಕಾರದೊಡನೆ ಪರ್ಯಾಲೋಚಿಸಲು ನಾವು ಸಿದ್ಧರಿದ್ದೇವೆ'- ಎಂದು ಪಾಕಿಸ್ತಾನ್ ಸರಕಾರದ ಖಾಗ್ದದ ಸಾರ.

ಭಾರತದ ದೃಢಧೋರಣೆ

ಭಾರತ ಸರಕಾರವು ಈ ಕುರಿತು ಸ್ಪಷ್ಟ ಮರುತ್ತರಕೊಟ್ಟಿದೆ: 'ಜನಮತ ಸಂಗ್ರಹದ ಶರ್ತ, ಸ್ಥಿತಿಗತಿಗಳ ಪರ್ಯಾಲೋಚನೆಯು ಮೊದಲು ಜನಮತ ಸಂಗ್ರಹಿಸಿ ಅದರಂತೆ ವರ್ತಿಸುವ ತತ್ವಕ್ಕೆ ಪ್ರಥಮತಃ ಪಾಕಿಸ್ತಾನವೊಪ್ಪಬೇಕು. ಮಂಗ್ರೋಲ್ ಬಾಬರಿಯಾವಾಡುಗಳ ಮೇಲೆ ಜುನಗಾಡಿನ ಮೇಲಧಿಕಾರವಿದ್ದಂತೆಯೇ ಚಿತ್ರಾಲ್ ಸಂಸ್ಥಾನದ ಮೇಲೆ ದಶಮಾನಗಳಿಂದ ಕಾಶ್ಮೀರದ ಮೇಲಧಿಕಾರವಿದ್ದಿತು. ಆದರೂ ಚಿತ್ರಾಲಿನ ಪ್ರವೇಶವನ್ನು ಪಾಕಿಸ್ತಾನವು ಅಂಗೀಕರಿಸಿಕೊಂಡಿದೆ. ಕಾಶ್ಮೀರದ ಕೆಲವು ಉಪಸಂಸ್ಥಾನಗಳು ಕಾಶ್ಮೀರ ಮಹಾರಾಜರು ಪಾಕಿಸ್ತಾನಕ್ಕೆ ಸೇರದಿದ್ದಲ್ಲಿ ಅನಾಹುತವಾದೀತೆಂದು ಬೆದರಿಸಹತ್ತಿವೆ. ಭಾರತಕ್ಕೆ ಸೇರಿರುವ ಕಾಥಿಯಾವಾಡ ಸಂಸ್ಥಾನಗಳ ರಕ್ಷಣೆಗಾಗಿ ಜುನಗಾಡ್ ಗಡಿಯಲ್ಲಿ ನಿಲ್ಲಿಸಿರುವ ಸೈನ್ಯವನ್ನು ಅಲ್ಲಿಂದ ಹಿಂದೆಗೆಯುವ ಪ್ರಶ್ನೆಯೇ ಇಲ್ಲ. ನೇರಾ ಜುನಗಾಡಿನೊಳಗೆ ಸೇನೆ ಹೊಗಿಸುತಿದ್ದರೂ ತಪ್ಪಾಗುತ್ತಿರಲಿಲ್ಲ. ಆದರೆ ಭಾರತ ಸರಕಾರವು ವಿಶೇಷ ತಾಳ್ಮೆ ವಹಿಸಿ, ಸದ್ಯಕ್ಕೆ ಜುನಗಾಡ್ ತನ್ನ ಸೇನೆಯನ್ನು ಹಿಂದೆಗೆದುಕೊಳ್ಳಬೇಕೆಂದು ಮಾತ್ರ ಕೇಳಿದೆ" —ಎಂದೇ ಹಿಂದೀ ಸರಕಾರದ ಖಂಡತುಂಡ ಮಾತು.

ಲಂಡನಿನಲ್ಲಿ ಹೈದರಾಬಾದಿನ ಏಜೆಂಟ್ ಜನರಲ್ ಆಗಿರುವ ಸರ್. ನವಾಬ್ ಜಂಗರು ಜುನಾಗಾಡ್ ಗಡಿಗೆ ಹಿಂದುಸ್ಥಾನ್ ಸರಕಾರವು ಸೇನೆ ಕಳುಹಿದುದನ್ನು ಎತ್ತಿಹೇಳುತ್ತಾ 'ನಿಜಾಮರು ಸ್ವತಂತ್ರನಾಗಿರಲು ದೃಢ ನಿರ್ಧಾರಮಾಡಿದರೆ ಇಂತಹ "ದಿಗಿಲು ಚಾತುರ್ಯ"ಗಳನ್ನು ಹೈದರಾಬಾದಿನ ಮೇಲೂ ಪ್ರಯೋಗಿಸಬಹುದೆಂಬ ನಿರೀಕ್ಷೆಯಿದೆ. ಆದರೆ ಯಾವುದೇ ಜುಲುಮೆಯನ್ನಾದರೂ ನಿಜಾಮರು ಹೈದರಾಬಾದಿನ ಸಶಕ್ತ ಹಾಗೂ ಸಶಸ್ತ್ರಸಜ್ಜಿತ ಸೇನೆಗಳಿಂದ, ಯುದ್ಧರಂಗದಲ್ಲಿ ಎದುರಿಸುವರೆಂಬುದು ಖಂಡಿತ" ಎಂದು ಘರ್ಜಿಸಿದ್ದರು. ಇದಕ್ಕೆ ಸರ್ದಾರ್ ಪಟೇಲರು ಸೂಕ್ತ ಉತ್ತರ ಕೊಟ್ಟಿದ್ದಾರೆ: ಘರ್ಜನಾ ಪರೀಕ್ಷೆಯು ಹೈದರಾಬಾದಿನ ಸಂಕಲ್ಪದಲ್ಲಿರುವದೆಂಬುದು ಊಹಾತೀತ ವಿಷಯ. ಇಂತಹ ಘರ್ಜನೆಯು ದುರುದ್ದೇಶಪೂರಿತ ಭೀತಿ ಮತ್ತು ನಿರಾಧಾರ ಬೆದರಿಕೆಗಳನ್ನು ಬಹಿರಂಗಪಡಿಸಿ ಹೈದರಾಬಾದಿನ ಏಜೆಂಟ್ ಜನರಲ್ ತನ್ನ ಸರಕಾರಕ್ಕೇನೇ ಗಣ್ಯದ್ರೋಹ ಮಾಡಿದ್ದಾರೆ." ಎಂದು ಸರ್ದಾರರ ಮಾತು.

ಭಾರತ—ಪಾಕಿಸ್ತಾನ್

ಡಿಲ್ಲಿಯ ಗೊಂದಲಿಗಳಲ್ಲಿ ಪ್ರತೀಕಾರೋನ್ಮತ್ತ ಹಿಂದೂ ಸಿಖ್ಖರ ವರ್ತನೆಯೂ ಕಾಂಗ್ರೆಸಿನ ಕೆಲವು ನಾಯಕರ ಮನೋವೃತ್ತಿಯೂ ಅಸಹ್ಯವಾಗಿ ಪಂಡಿತ ಜವಾಹಿರಲಾಲರು ತನ್ನ ಪ್ರಧಾನಿ ಹುದ್ದೆಗೆ ಮತ್ತು ಕಾಂಗ್ರೆಸಿಗೆ ಸಹ ರಾಜೀನಾಮೆ ಕೊಟ್ಟು ಸಮತಾವಾದ ಸ್ಥಾಪನಾ ನಾಯಕತ್ವ ವಹಿಸಿ ಪ್ರತ್ಯಕ್ಷ ರಂಗಕ್ಕಿಳಿಯಲು ಸಡು ಬಿಗಿದಿದ್ದರೆಂದೂ, ಡಿಲ್ಲಿಯಲ್ಲಿದ್ದ ಗಾಂಧಿಜೀಯು ಎಲ್ಲಾ ಪ್ರಮುಖರೊಡನೆಯೂ ಮಾತಾಡಿ ನೆಹರುಗಳನ್ನು ಸಮಜಾಯಿಸಿದ್ದರೆಂದೂ ದಟ್ಟ ವದಂತಿಯೊಂದು ಅಂತರ್ಜಲನೆಯಲ್ಲಿದೆ. ಇದರಿಂದಾಗಿ ಕಟ್ಟುಗ್ರ ಮುಸ್ಲಿಂ ಲೀಗ್ ನಾಯಕರು ಕೂಡಾ ದಿಗಿಲುಗೊಂಡು 'ಭಾರತ ಸರಕಾರದ ಅನನ್ಯ ಭಕ್ತರಾಗಿರಿ' ಎಂದು ಹಿಂದೀ ಮುಸ್ಲಿಮರಿಗೆ ಘೋಷಿಸ ಹತ್ತಿರುವುದು ಒತ್ತಿ ಹೇಳತಕ್ಕ ಸಂಗತಿ. ಅಂತೆಯೇ ಕಮ್ಯೂನಿಸ್ಟರೂ ನೆಹರೂ ಸರಕಾರಕ್ಕೆ ಪೂರ್ಣ ಬೆಂಬಲಕೊಡಲು ಮುಂದೆ ಬಂದಿದ್ದಾರೆ. ನೆಹರು ಸರಕಾರದ ಬದಲಿಗೆ ಕಟ್ಟುಗ್ರ ಹಿಂದೂ ವಾದಿಗಳು ಬಂದಲ್ಲಿ ತಮ್ಮ ಭವಿಷ್ಯ ಹೇಗಾದೀತೆಂಬವನ್ನು ಊಹಿಸುವಷ್ಟಾದರೂ ಆತಂಕಕಾರಣ ಲೀಗಿನವರಿಗಿದೆಯೆಂಬುದು ಸಂತೋಷಕರ!

ಹಿಂದೀ ಮುಸ್ಲಿಮರಿಗೆ ಪಾಕಿಸ್ತಾನ್ ಬಾಗಿಲು ಹಾಕಿತು!

ಪೂರ್ವ ಪಂಜಾಬಿನವರಿಗೆ ಹೊರತು ಭಾರತದ ಬೇರಾವ ಭಾಗದ ಮುಸಲ್ಮಾನರಿಗೂ ಪಾಕಿಸ್ತಾನದೊಳಗೆ ಪ್ರವೇಶ ಕೊಡುವಂತಿಲ್ಲವೆಂದು ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಕತ್ ಆಲೀಖಾನರು ಹಿಂದೀ ಸರಕಾರಕ್ಕೆ ಸ್ಪಷ್ಟವಾಗಿ ತಿಳಿಸಿದ್ದಾರೆ. ಹಾಗೆ ಪ್ರವೇಶಿಸಲು ಪ್ರಯತ್ನಿಸುವ ಮುಸಲ್ಮಾನರನ್ನು ಪ್ರತಿಭಟಿಸಿ ಹಿಂದಿರುಗಿಸುವುದೇ ಸರಿಯೆಂದೂ ಅವರು ಹೇಳಿರುವರೆಂದು ತಿಳಿದು ಬರುತ್ತದಲ್ಲದೆ, ಬೊಂಬಾಯಿಯಿಂದ ಕರಾಚಿಗೆ ಹೋಗಿದ್ದ ಕೆಲವು ಮುಸ್ಲಿಮರು ಹಿಂತಿರುಗಬೇಕಾಯಿತೆಂದೂ ಸುದ್ದಿ ಬಂದಿದೆ. ಪಾಕಿಸ್ತಾನವು ಹೆಚ್ಚಿನಂಶ ತಮ್ಮ ಜನ್ಮದಾತರಾಗಿರುವ ಭಾರತದ ಮುಸ್ಲಿಮರನ್ನು ಹೊರಗಟ್ಟಿ ಕದಮುಚ್ಚಿಕೊಂಡು, ಹಿಂದೀ ಮುಸ್ಲಿಮರ ದೃಷ್ಟಿಯಲ್ಲಿ ತಂದೆಯನ್ನು ಹೊರಗಟ್ಟಿದ ಮಗನಂತಾಗಿದೆ! ಇದಕ್ಕೆ ಕಾರಣಗಳು ಹಲವು: ಪಾಕಿಸ್ತಾನದ ಪಂಜಾಬೀ ಮುಸ್ಲಿಮರೂ ಪಠಾಣರೂ ಹೊರಗಿನವರೆಂದೊಡನೆ ತಮ್ಮ ಇಸ್ಲಾಂ ಬಂಧುಗಳನ್ನಾದರೂ ಬಹಳವಾಗಿ ದ್ವೇಷಿಸುತ್ತಾರೆ. ಭಾರತದ ಮುಸ್ಲಿಮರೆಲ್ಲರೂ ಪಾಕಿಸ್ತಾನಕ್ಕೋಡಿ ಬಂದರೆ ಅವರಿಗೆ ಆಶ್ರಯ ಮತ್ತು ರಕ್ಷಣೆಯೀಯುವ ಮಾತಂತಿರಲಿ—ವ್ಯವಸ್ಥೆಯಿಂದ ಕೂಡ ಹಾಕಿಡುವುದು ಕೂಡಾ ಕಷ್ಟ. ಆದರೇ ಕುರಿತು ಭಾರತದಲ್ಲಿ ಪ್ರಬಲ ಸಂದೇಹವೂ ಎದ್ದಿದೆ. ಪಾಕಿಸ್ತಾನದೊಳಗಿರುವ ಹಿಂದೂ ಸಿಖ್ಖರು ಎಲ್ಲಾ ಕಡೆಗಳಿಂದಲೂ ಭಾರತಕ್ಕೋಡಿ ಬರುತಿದ್ದಾರೆ; ಭಾರತವೂ ಅವರಿಗೆ ಸದಾಕಾಲ ಬಾಗಿಲು ತೆರೆದಿಟ್ಟಿದೆ. ಇದಕ್ಕೆ ಪ್ರತಿಯಾಗಿ ಭಾರತದ ಮುಸ್ಲಿಮರು ಪಾಕಿಸ್ತಾನಕ್ಕೆ ಹೋಗದಂತಾಗಿದೆ. ಪಾಕಿಸ್ತಾನದಲ್ಲಿ ಹಿಂದುವೆಂಬವರೇ ಉಳಿಯಲಾರರು-ಹಿಂದುಸ್ಥಾನದಲ್ಲಿ ಸುಮಾರು 4½ ಕೋಟಿ ಮುಸಲ್ಮಾನರುಳಿಯುವರು. ಈಗ ಬಹಳವಾಗಿ ವಾಸನೆ ಬರುತ್ತಿರುವ ಭಾರತ-ಪಾಕಿಸ್ತಾನ್ ಘರ್ಷಣೆಯ ವೇಳೆ ಹಿಂದುಸ್ಥಾನದೊಳಗಿರುವ ಮುಸಲ್ಮಾನರನ್ನು - ಅವರಲ್ಲಿ ಕೆಲವು ಭಾಗವನ್ನಾದರೂ- ಒಳಗಿನಿಂದಲೇ ಭಾರತದೊಡನೆ ಹೋರಾಡುವಂತೆ ಎತ್ತಿ ಕಟ್ಟಲಾಗುತ್ತದಲ್ಲಾ? 4½ ಕೋಟಿಯನ್ನು ಅಪರಾಧಿಗಳೆಂದು ಗಣಿಸಿ ಯಾವ ಸರಕಾರವಾದರೂ ಶಿಕ್ಷಿಸುವದೆಂದರೆ ಸಾಮಾನ್ಯವೆ? ಅಂತೂ ಪಾಕಿಸ್ತಾನದ ನಿಸ್ಸಹಾಯಕ ಸ್ಥಿತಿಯಿಂದಾಗಿಯೋ ದೂರದೃಷ್ಟಿಯ ದುರ್ಬುದ್ಧಿಯಿಂದಾಗಿಯೋ ಇದೊಂದು ಹೊಸ ಪಂಕ್ತಿ ನಿರ್ಮಾಣಗೊಂಡಿದೆ. 'ಪಾಕಿಸ್ತಾನ್ ಝಿಂದಾಬಾದ್' ಎಂದು ಎಲ್ಲರಿಗಿಂತ ಹೆಚ್ಚಾಗಿ ಕಂಠಶೋಷಣೆ ಮಾಡಿದ್ದ ಭಾರತದ ಮುಸ್ಲಿಮರು ಕಣ್ಣು ತೆರೆಯುವ ಕಾಲಬಂದಿದೆ!

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ಹೆಗ್ಗುರಿಯಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ-

ದಿ ವಿಜಯಾ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಸಿಟಿ ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಞಂಗಾಡು, ಮಡಿಕೇರಿ ಮತ್ತು ಮುಂಬಾಯಿ.

THE VIJAYA BANK, LIMITED.

The Canara Banking Corporation Limited.
(Incorporated in British India).
Estd: 1906.
Head Office: UDIPI, S. India.
ANNOUNCEMENT.
A branch of the BANK will be shortly opened at High Road, **TRICHUR.** (Cochin State)

ಗುರುವಾರ, ಉಡುಪಿ, ೧೬-೧೦-'೪೭

ಮೈಸೂರು ವಿಜಯ

ಮೈಸೂರು ಸರಕಾರ ಮತ್ತು ಮೈಸೂರು ಕಾಂಗ್ರೆಸಿನ ನಡುವೆ ಒಪ್ಪಂದವಾಯಿತು. ಹೊಸ ಮಂತ್ರಿ ಮಂಡಲವೊಂದರ ಸ್ಥಾಪನೆಯಾಗುವದು; (ಅದು ಪ್ರಾಯಶಃ ವಿಜಯ ದಶಮಿ ದಿನವೇ ಪ್ರತಿಷ್ಠಿಸಲ್ಪಡುವದು.) ಮೈಸೂರು ಸಂಸ್ಥಾನದ ಭಾವೀ ರಾಜ್ಯಾಂಗ ಶಾಸನಗಳನ್ನು ತಯಾರಿಸುವ ಪೂರ್ಣ ಜವಾಬ್ದಾರಿಯುಳ್ಳ ಘಟನಾಸಮಿತಿ ರಚಿಸುವ ಹೊಣೆಗಾರಿಕೆಯು ಈ ಹೊಸ ಮಂತ್ರಿ ಮಂಡಲದ್ದೇ. ಇದೇ ತಾ. 11ನೇ ರಾತ್ರಿ ಮೈಸೂರಿನ ಸರಕಾರ ಮತ್ತು ಕಾಂಗ್ರೆಸ್ ಪಕ್ಷಗಳು ಮೇಲಿನ ತೀರ್ಮಾನಕ್ಕೆ ಬಂದುವು; ತಾ 12ರಲ್ಲಿ ಮೈಸೂರು ಮಹಾರಾಜರ ಜಾಹೀರುನಾಮೆ ಹೊರಟಿತು. ಮೈಸೂರು ಕಾಂಗ್ರೆಸ್ ಹೂಡಿದ್ದ 41 ದಿನಗಳ ಸತ್ಯಾಗ್ರಹ ಸಮರವು ಅದೇ ದಿನ ಹಿಂತೆಗೆಯಲ್ಪಟ್ಟಿತು. ಸಂಸ್ಥಾನದ ವಾತಾವರಣವೀಗ ಆನಂದೋತ್ಸಾಹಗಳಿಂದ ತಬಡಿದೆ. ಹೋರಾಟದ ಕಚ್ಚಿನ ಸ್ಥಾನವನ್ನು ವಿಜಯಹೆಗ್ಗಳಿಕೆ ಮತ್ತು ಭವಿಷ್ಯದ ಭವ್ಯ ದೃಶ್ಯಾನಂದವು ಒಮ್ಮೆಗೇ ಆವರಿಸಿದೆ. ಇದೀಗ ಮೈಸೂರಿನ ಮತ್ತಿತರ ಸ್ವಾತಂತ್ರ್ಯ ಪ್ರೇಮೀ ಜನತೆಯೂ ಇಂದಿನ ಕಾಲವೂ ಬಯಸಿದ್ದ ಬದಲಾವಣೆ; ಆನಂದ ದಾಯಕ, ಅಭಿಮಾನದ್ಯೋತಕ, ಸ್ಥಿತಿ ಮಾರ್ಪಾಟು. ಮೈಸೂರು ಜನತೆಯ ಸ್ವಾತಂತ್ರ್ಯ ಹೋರಾಟವು ಈ ರೀತಿ ವಿಜಯ ಮುಕ್ತಾಯಗೊಂಡುದಕ್ಕಾಗಿ ಹೆಗ್ಗಳಿಕೆ ಪಡಬೇಕು; ಸಮಯ ಸಮಯದ ಧೋರಣೆ, ಔದಾರ್ಯ, ವಿಶಾಲ ಮನೋವೃತ್ತಿ ಪ್ರದರ್ಶಿಸಿದ ಮೈಸೂರು ಸರಕಾರವನ್ನು—ಮುಖ್ಯವಾಗಿ ಮಹಾರಾಜರು ಮತ್ತು ದಿವಾನ್ ಸರ್. ಆರ್ಕಾಟರನ್ನು—ಅಭಿನಂದಿಸಬೇಕು! ಕಳೆದ ನಲ್ವತ್ತೊಂದು ದಿನಗಳ ಸ್ವಾತಂತ್ರ್ಯ ಯಜ್ಞಕ್ಕಾಹುತಿಯಾದವರ ಪುಣ್ಯ ಸ್ಮರಣೆಬರುತ್ತಿದೆ. ಲಾಠಿ, ಗುಂಡುಗಳಿಗೆದೆಕೊಟ್ಟವರ—ಜೈಲುವಾಸ, ಮತ್ತಿತರ ಕಷ್ಟನಷ್ಟಗಳನ್ನನುಭವಿಸಿದವರ—ಮೇಲೆ ಗೌರವ ಹಾಗೂ ಕೃತಜ್ಞತೆ ಮೂಡುತ್ತಿದೆ.

ಮೈಸೂರು ಜನತೆಯೊಡನಾದ ಸಂಧಾನವೆನ್ನುವದಕ್ಕಿಂತಲೂ ಮೈಸೂರು ಜನತೆಗಾದ ಹೋರಾಟ ವಿಜಯವೆನ್ನಲಾಗುವಷ್ಟು ಈ ಒಪ್ಪಂದ ಶರ್ತಗಳು ಜನತಾ ಬೇಡಿಕೆಗಳನ್ನು ಬಹುಮಟ್ಟಿಗೆ ಸಲ್ಲಿಸಿವೆ. ಹೊಸ ಮಂತ್ರಿ ಮಂಡಲದ ಶಾಸನಬದ್ಧ ಶಿರಸ್ಸಾಗಿ ದಿವಾನರಿದ್ದಾರೆಂಬ ಒಂದೇ ಅಂಶಕ್ಕಾಗಿ ಇದೊಂದು "ರಾಜೀ ವ್ಯವಸ್ಥೆ"ಯೆನ್ನಬೇಕು. ರಾಜ್ಯಾಂಗ ರಚನಾ ಸಭೆಯನ್ನು ರಚಿಸುವ ಪೂರ್ಣ ಹೊಣೆಗಾರಿಕೆಯು ಈ ಮಂತ್ರಿಮಂಡಲಕ್ಕೆ ದೊರೆತಿರುವುದರಿಂದ, ಮಹಾರಾಜರ ಈ ಮೊದಲಿನ ಜಾಹೀರುನಾಮೆಯು ವಸ್ತುತಃ ರದ್ದಾಗಿದೆ. ಅಥವಾ ಅದನ್ನೇ ಅಸ್ತಿವಾರವಾಗಿ ಇಟ್ಟುಕೊಂಡರೂ ಅದನ್ನು ಬೇಕಾದಂತೆ ತುಂಬಿಸಿ ಪೂರ್ಣ ಪ್ರಜಾಪ್ರಭುತ್ವದ ರೂಪಕೊಡಲು ಸಾಧ್ಯವಿದೆ. ಮೈಸೂರಿನ ಭವಿಷ್ಯ ರೂಪಿಸತಕ್ಕ ಹೊಸ ಸರಕಾರದ ಪ್ರಧಾನಿಯಾಗಿ ಉಳಿಯುವ ದಿವಾನರ ಹಿಡಿತವು ಇನ್ನೆಲ್ಲವುಗಳ ಮೇಲೂ ಬೀಳುವ ಅಪಾಯವಿಲ್ಲವೇ ಎಂಬ ಸಂದೇಹಬರಬಹುದು. ಆದರೆ ಅಲ್ಲಿ ದಿವಾನರು ಸರ್ವಾಧಿಕಾರಿಯಲ್ಲ; ಮಂತ್ರಿಮಂಡಲದ ಶಾಸನಬದ್ಧ ಶಿರಸ್ಸಾಗಿದ್ದಾರೆ. ಘಟನಾ ಸಮಿತಿಯ ರಚನಾ ವಿಧಾನಗಳಲ್ಲಲ್ಲದೆ, ಆ ಮೇಲದು ರಚಿಸುವ ಶಾಸನಗಳ ಮಟ್ಟಿಗೂ ದಿವಾನರ ಕೈ ಚಾಲೂಗುವದು ಅಸಾಧ್ಯ. ಮೇಲಾಗಿ ಶಾಂತಿ ಸ್ಥಾಪನೆ ಮತ್ತು ಸಂಸ್ಥಾನದ ಅಭಿವೃದ್ಧಿಯ ದೃಷ್ಟಿಯಿಂದ ಈ ಒಪ್ಪಂದಕ್ಕೆ ಬಂದ ದಿವಾನರಿಂದ ಇನ್ನೀ ಉದ್ದೇಶಭಂಗವಾಗುವ ಆತಂಕಗಳೊದಗಬಹುದೆಂದು ನಿರೀಕ್ಷಿಸುವದೇ ತಪ್ಪು. ಎಲ್ಲವನ್ನೂ ತುಲನಾತ್ಮಕವಾಗಿ ವಿಚಾರಿಸಿದರೆ ಮೈಸೂರು ಜನತೆಯು ಸರ್ವಪಕ್ಷ ಪಂಗಡಗಳಿಗೂ ಸಮಾಧಾನವಾಗಬೇಕಾದರೆ ದಿವಾನರಿಗಾಸ್ಥಾನ ಕೊಟ್ಟದ್ದು ಯೋಗ್ಯವಿದೆ. ಸ್ವಾತಂತ್ರ್ಯದರ್ಶನದೊಂದಿಗೆ ಕೆಲವರ ಅತೃಪ್ತಿಪ್ರದರ್ಶನವು ಮುಂದೆ ಬಾರದಂತಿದು ತಡೆಯಬಹುದೇ ಹೊರತು ಸ್ವಾತಂತ್ರ್ಯ ನಿರ್ಮಾಣಕ್ಕೆ ತಡೆಯಾಗದು. ಅದ್ದರಿಂದ ಮೈಸೂರು ಒಪ್ಪಂದವು ಪೂರ್ಣ ಸಮಾಧಾನಕರವೆನ್ನುತ್ತೇವೆ.

ಕಳೆದು ಹೋದ ಕಾಲದ ಕೆಲವು ಕಹಿ ಅನುಭವಗಳನ್ನಿನ್ನು ಎಲ್ಲರೂ ಮರೆತು ಬಿಡಬೇಕು. ಸ್ವಾತಂತ್ರ್ಯ ಹೋರಾಟಕ್ಕೆ ಪ್ರಜೆಗಳ ಕೈಯಲ್ಲಿಯೂ 'ರಾಜಭಕ್ತಿ'ಯೇ ಆಯುಧವಾಗಿರಬೇಕಿತ್ತೆಂದು ಯಾವ ಸರಕಾರವೂ ಹೇಳಲಾರದು. ಒಂದು ಹೋರಾಟವನ್ನಿದಿರಿಸುವ ಸರಕಾರವು ತಮ್ಮ ಮೇಲೆ ಪುಷ್ಪವೃಷ್ಟಿಯನ್ನೇ ಗರೆದೀತೆಂದು ಯಾವ ಸ್ವಾತಂತ್ರ್ಯಯೋಧರೂ ನಿರೀಕ್ಷಿಸಿರಲಾರರು. ಹೋರಾಟ—ಕಠೋರತೆ, ಕಲಿತನಗಳೇ ಇರಬೇಕಾದ ಹೋರಾಟವೇ! ಕಷ್ಟ, ನಷ್ಟ, ಬಲಿದಾನಗಳ ಹೊಣೆಯು ಅದರ ತಲೆಯ ಮೇಲೆಯೇ! ಇನ್ನು ಸೌಹಾರ್ದ ಪೂರ್ವಕ, ನೀತಿಗೆ ಭಂಗ ಬಾರದಂತೆ ತೀರ್ಮಾನಿಸಿಕೊಂಡ ಇಕ್ಕಡೆಯವರೂ ಇನ್ನು ಶ್ಲಾಘನೀಯರು! ಮೈಸೂರಿನ ಪ್ರಜಾಪ್ರಮುಖರಿನ್ನು ಮುಂಜಾಗ್ರತೆ, ನ್ಯಾಯನಿಷ್ಠುರತೆ, ದೂರದೃಷ್ಟಿ, ಸೂಕ್ಷ್ಮ ಬುದ್ಧಿಯಿಂದ ಮೈಸೂರನ್ನು ಪ್ರಗತಿ ಪಥದಲ್ಲಿ ಕೊಂಡೊಯ್ಯಲಿ. ಸುದೃಢವಾದ ಹಾಗೂ ಸಮಾನತಾ ಸ್ಥಾಪನೆಯ ಪ್ರಥಮಾಂತಸ್ತಾಗಬಲ್ಲ ಪ್ರಜಾಪ್ರಭುತ್ವವನ್ನು ಸ್ಥಾಪಿಸಿಕೊಳ್ಳಲಿ. ಮೈಸೂರೀಗ ಕರ್ನಾಟಕದ ಉಳಿದ ಭಾಗಗಳ ಅಂತಸ್ತಿಗೇರಿದಂತಾಗಿದೆ; ಕರ್ನಾಟಕದ ಏಕೀಕರಣಕ್ಕಿದ್ದ ಮುಖ್ಯ ಕಂಟಕವೊಂದು ಈ ಮೂಲಕ ನಿವಾರಣೆಗೊಂಡಿದೆ. ಉಳಿದ ಪ್ರಜಾರಾಜ್ಯ ಕನ್ನಡ ಭಾಗಗಳೊಂದಿಗೆ ಪ್ರಜಾರಾಜ್ಯ ಮೈಸೂರೂ ಜೋಡಣೆಗೊಳ್ಳುವ ಅನುಕೂಲತೆಯೊದಗಿದೆ. ಕೊಚ್ಚಿ, ತಿರುವಾಂಕೂರುಗಳ ಸುಧಾರಣೆಯಿಂದ 'ಐಕ್ಯ ಕೇರಳ'ಕ್ಕೆ ಜೀವ ಬಂದಂತೆಯೇ ಮೈಸೂರಿನ ಇಂದಿನ ಪ್ರಗತಿ ಪಥದಿಂದ 'ಏಕೀಕೃತ ಕರ್ನಾಟಕ'ವು ಎಳಹತ್ತಿತು. ಮುಂದಿನ ಕಾರ್ಯವು ದೂರದೃಷ್ಟಿ, ಜಾಣ್ಮೆ, ಸೌಹಾರ್ದತೆ ಮತ್ತು ಹುರುಪಿನಿಂದ ಸಾಗಲಿ.

ಉಡುಪಿ.

ಮುನ್ಸಿಪಲ್ ಹಿಂದುಸ್ಥಾನೀ ಶಾಲೆಯೊಳಗೆ ಓರ್ವ ಮುಸಲ್ಮಾನನು ನುಗ್ಗಿ ಹೋಗಿ, ಅಲ್ಲಿಯ ಮುಸ್ಲಿಂ ಅಧ್ಯಾಪಕರೊಬ್ಬರ ಮೇಲೆ ಬಲಪ್ರಯೋಗಿಸಿದನೆಂದು ಮುನ್ಸಿಪಾಲಿಟಿಗೆ ದೂರುಬಂದಂತೆ ಪೋಲೀಸರಿಗೆ ವರದಿಯಾಗಿ ಈಗ ತನಿಖೆನಡೆಯುತ್ತಿದೆಯೆಂದು ತಿಳಿದುಬರುತ್ತದೆ. ಶಾಲೆಯೊಳಗೆ ಶಾಲಾ ಹೊತ್ತಿನಲ್ಲೇ, ವಿದ್ಯಾರ್ಥಿಗಳ ಸಮಕ್ಷಮದಲ್ಲಿ ಅಧ್ಯಾಪಕರ ಮೇಲೆ ಬಲಪ್ರಯೋಗವೆಂಬುದು ಶಿಕ್ಷಣ ರಂಗಕ್ಕೇನೇ ಒಂದು ಕಳಂಕವಾದ್ದರಿಂದ ಇದರ ವಿಚಾರಣೆಯ ಫಲಿತಾಂಶವನ್ನು ಜನರು ನಿರೀಕ್ಷಿಸುತಿದ್ದಾರೆ.

ಇದು ಅಸ್ಪೃಶ್ಯತಾ ನಿವಾರಣೆಯೆ?

ಉಡುಪಿ ನಗರದೊತ್ತಿನ ಪುತ್ತೂರಿನ ಮಾಜೀ ಕಳ್ಳಂಗಡೀ ಕಾಫೀ ಹೊಟೆಲಿನೊಳಗೆ, ಅದರ ಪ್ರಾರಂಭದ ದಿನಗಳಲ್ಲಿ ಹರಿಜನರ ಪೈಕಿ ಮೇಲ್ವರ್ಗದ ಮಾದಿಗರು ಬಂದು ತಮಗೆ ಮೇಲ್ಜಾತಿಯವರ ಸ್ಥಾನಮಾನ ಕೊಟ್ಟೇ ಕಾಫಿಕೊಡಬೇಕೆಂದು ಹಠಹಿಡಿದಂತೆ ಹಾಗೆಯೇ ಮಾಡಲಾಯಿತು. ಆದರೆ ಕಾಫಿ ತಿಂಡಿ ಸರಬರಾಯಿಗೆ ಸಮಗಾರ ಜಾತಿಯವನಿದ್ದುದನ್ನು ಕಂಡೊಡನೆಯೆ ಈ ಮಾದಿಗರಲ್ಲಿ ಹೆಚ್ಚಿನವರು ಕಾಫಿ ಕುಡಿಯದೆ ಜಾರಿದ್ದರು. ಹಿಂದು ದಾಕ್ಷಿಣ್ಯಗಳಿಗೆ ಬಲಿಬಿದ್ದು ಕಾಫಿ ಕುಡಿದ ಕೆಲವು ಮಾದಿಗರು ಪ್ರಾಯಶ್ಚಿತ್ತ ಮಾಡಿಸಿಕೊಳ್ಳಬೇಕೆಂದು ಅವರ ಜಾತಿಯ ಮುಖಂಡರು ಸಾಧಿಸುತಿದ್ದಾರಂತೆ. ಆ ಹೊಟೆಲಿಗೆ ಕೊರಗರು ಕಾಫಿಕುಡಿಯಲು ಬರಹತ್ತಿದ ಮೇಲೆ, ಈಗೀಗ ಮಾದಿಗ ಜಾತಿಯವರಾರೂ ಕಾಫಿ ಕುಡಿಯಲು ಬರುತ್ತಿಲ್ಲ. ಅಸ್ಪೃಶ್ಯತೆಯ ಮಹಾಪಾಪವನ್ನು ನಿರ್ಮಿಸಿದವರೆಂಬ ಅಪವಾದವಿರುವ ಸವರ್ಣ ಹಿಂದುಗಳು ಕೂಡಾ ಈ ಕೊರಗ ಮತ್ತು ಸಮಗಾರ ಜಾತಿಯವರೊಡನೆ ಸಹಪಂಕ್ತಿ ಫಲಹಾರ ಮಾಡುವಾಗ ಈ ಮಾದಿಗರಲ್ಲಿ ಇಂತಹ ಕ್ಷುದ್ರಬುದ್ಧಿಯಿರುವುದು ನ್ಯಾಯವೇ? ಅಸ್ಪೃಶ್ಯತಾನಿವಾರಣೆ, ದೇವಸ್ಥಾನ ಹೊಟೆಲು ಪ್ರವೇಶವೆಂದರೆ ಹರಿಜನರ ಪೈಕಿ ಈ ಮಾದಿಗ ಜಾತಿಯವರ ಮಟ್ಟಿಗೆ ಮಾತ್ರವೆ? ಬ್ರಾಹ್ಮಣರಿಂದಾರಂಭಿಸಿ ಮಾದಿಗರವರೆಗೆ ಎಲ್ಲರೂ ಸರಿಸಮಾನರಾಗಬೇಕು- ಅವರಿಗಿಂತ ಕೆಳಗಿನ ಕೊರಗರೇ ಮೊದಲಾದ ತೀರಾ ನಿಕೃಷ್ಟವರ್ಗದವರು ಮಾತ್ರ ಮೊದಲಿನಂತೆಯೇ ಇರಬೇಕೆಂದಾದರೆ ಇದು ಅಸ್ಪೃಶ್ಯತಾ ನಿವಾರಣೆಯೆಂದಾಗುವದೆ? ಹರಿಜನೋದ್ಧಾರಕರೂ, ಶ್ರೀ. ಕೆ. ಈಶ್ವರ ಎಂ. ಎಲ್. ಎ., ಇವರೂ ಈ ಕಡೆಗೆ ಅಗತ್ಯ ಲಕ್ಷ್ಯಕೊಡಬೇಕು. ತಾವು 'ಮಾದಿಗ ಪುರೋಹಿತ'ರೆಂಬ ಒಣ ಠೇಂಕಾರ ಕಟ್ಟಿಕೊಂಡು ಇಬ್ಬಾಯಿಯ ಆಟವಾಡುತ್ತಿರುವ ಈ ಕಡೆಯ ಮಾದಿಗ ಮುಖಂಡರ ಕಣ್ಣಿಗೆ ಇನ್ನಾದರೂ ಅಂಜನ ಹಚ್ಚಬೇಕು, ಎಂದು ವಿಚಾರಿಗಳು ಅಗ್ರಹಗೊಂಡಿದ್ದಾರೆ.

ಮಂಗಳೂರು.

ಆಗಮನ:—ಸ್ಥಳೀಕ ಸಂಸ್ಥೆಗಳ ಮಂತ್ರಿ ಶ್ರೀ ಕೆ. ಚಂದ್ರಮೌಳಿಯವರೂ ಮದ್ಯನಿಬಂಧ ಮಂತ್ರಿ ಡಿ. ಡಾನಿಯೇಲ್ ತೋಮಸರೂ ಮದ್ರಾಸ್ ಗವರ್ನರರೂ ಈ ತಿಂಗಳ ನಾಲ್ಕನೇವಾರದಲ್ಲಿ ದ. ಕ. ಜಿಲ್ಲೆಗೆ ಬರಲಿರುವರೆಂದು ತಿಳಿದುಬರುತ್ತದೆ.

ಕೌನ್ಸಿಲರುಗಳಿಗೆ ಸನ್ಮಾನ:—ಇದೇ ತಾ. 12ರಲ್ಲು ಜಪ್ಪು ಸೈಂಟ್ ಜಾನ್ಸ ಶಾಲಾ ಹಳೇ ವಿದ್ಯಾರ್ಥಿ ಸಂಘದವರು ಮುನಿಸಿಪಲ್ ಕೌನ್ಸಿಲರುಗಳಾಗಿ ಆರಿಸಿಬಂದ ಶ್ರೀಗಳಾದ ಬಿ. ಗಂಗಾಧರ ದಾಸ್, ಜೂಡೆಪ್ಪ, ಗೋಪಾಲ ಸಾಲೆನ್ಸ್, ಎಸ್. ಎಸ್. ಕಿಲ್ಲೆಯವರಿಗೆ ಮಾನಪತ್ರವನ್ನೊಪ್ಪಿಸಿದರು. ಡಾ। ವಾಮನ ರಾವ್ ಮತ್ತು ಶ್ರೀ ಕನಾರಿ ಪಂಡಿತರು ಮಾತನಾಡಿದರು. ಅದೇ ದಿನ ಸಂಜೆ ಜಪ್ಪಿನ ಶ್ರೀ ಶಿವಾಜಿ ವ್ಯಾಯಾಮಶಾಲೆಯ ಆಶ್ರಯದಲ್ಲಿ ವಾರ್ಷಿಕ ಹತ್ತು ಸಮಸ್ತರು ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಮುನಿಸಿಪಲ್ ಚುನಾವಣೆಯಲ್ಲಿ ಗೆದ್ದ ಶ್ರೀ ಎಸ್. ಎಸ್. ಕಿಲ್ಲೆಯವರಿಗೆ ಮಾನ ಪತ್ರವನ್ನರ್ಪಿಸಿದರು. ಡಾ। ವಾಮನ ರಾವ್, ಶ್ರೀಗಳಾದ ಬೋಳಗದ್ದೆ ಅಪ್ಪಯ್ಯ, ಕೆ. ಕೆ. ಶೆಟ್ಟಿ ಮತ್ತು ಎಚ್. ಭೀಮರಾಯರ ಭಾಷಣಗಳಾದುವು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ,
ಕ್ರಮ ನಂಬ್ರ 403/47.
ವಾದಿ—ಸಾಲ್ವಿಸ್ತರ್ ದಾಲ್ಮೆಡ.
ಮತ್ತು
ಪ್ರತಿವಾದಿರು—1. ಬೆಜ್ಯವಲಿವೇರಾ, 2. ಅಂತ್ಯೆ ಹೆಗಡೆ.

ಪ್ರತಿವಾದಿರು 1. ಬೆಜ್ಯವಲಿವೇರಾ, ಫ್ರಾನ್ಸಿಸ್ಸ ವಲಿವೇರರ ಮಗ, ಉಡ್ಪಿ ತಾಲೋಕು ಪಾಂಡೇಶ್ವರ ಗ್ರಾಮದ ಸೂಲಿಕುದ್ರು ವಾಸ್ತವ್ಯ.

2. ಅಂತ್ಯ ಹೆಗಡೆ, ದೊಡ್ಡಹಾಡಿಮನೆ ದೇವಮ್ಮ ಹೆಗ್ಗಡ್ತಿರ ಮಗ, ಉ. ತಾ ಕುಮ್ರಗೋಡ ವಾಸಸ್ಥ.

ಸದ್ರಿಪ್ರತಿವಾದಿರಿಗೆ—

ಸದ್ರಿವಾದಿಯು ಡಿಕ್ಲೆರೇಷನ ಮತ್ತು ಶಾಶ್ವತ ಇಂಜಕ್ಷನ ಬಗ್ಗೆ ನಿಂಮ ಮೇಲೆ ಮಾಡಿದ ಮೇಲಣ ದಾವೆಯನ್ನು ಕೋರ್ಟನವರು ತಾ. 30-10-47ನೆ ಗುರುವಾರ ಪೂರ್ವಾಹ್ನ ಘಂಟೆ 11ಕ್ಕೆ ಪ್ರಥಮ ತನಿಖೆಗೆ ಇಟ್ಟಿರುತ್ತಾರೆ. ಆದ್ದರಿಂದ ಅದಿನ್ನ ನೀವು ಸ್ವತಹಾ ಯಾ ವಕೀಲರ ಮುಖಾಂತರ ಕೋರ್ಟಿಗೆ ಹಾಜರಾಗಿ ಉದಾಹರಣೆ ಕೊಡಲು ತಪ್ಪಿದ್ದಾದ್ರೆ ನಿಂಮನ್ನು ಏಕ್ಸಪಾರ್ಟೆಮಾಡಿ ತೀರ್ಮಾನಿಸಲಾದೀತೆಂತ ಈಮೂಲಕ ತಿಳಿಸಲಾಗಿದೆ.

ಟಿ. ಗಣೇಶ ರಾವ್.
ವಾದಿ ವಕೀಲ.
ಕುಂದಾಪುರ 13-10-47.

ಪ್ರಾಣಭೀತ ಅಲ್ಪ ಸಂಖ್ಯಾಕರಿಗೆ ಬಾಯಿ ಭರವಸೆ ಸಾಕೆ?

ಹಿಂದೀ ಮುಸ್ಲಿಮರಿಗೆ ಕಾಯಿದೇ ಅಝಮರ ಉಪದೇಶ

ಪಾಕಿಸ್ತಾನದ ನಾಗರಿಕ, ಸೇನೆ, ನೌಕೆ, ವಿಮಾನದಳಗಳ ಸುಮಾರು ಸಾವಿರ ಮಂದಿ ಅಧಿಕಾರಿಗಳಿಗೆ ಭಾಷಣವೀಯುತ್ತಾ ಪಾಕಿಸ್ತಾನದ ಗವರ್ನರ್ ಜನರಲ್ ಕಾಯಿದೇ ಆಝಮ್ ಜಿನ್ನರಂದಿದ್ದರು: “ಒಂದು ಹೊಸ ರಾಷ್ಟ್ರವನ್ನು ಕಡಿಯುವ ಶಿಲ್ಪಿಗಳಾಗಿ ನಮ್ಮ ಯೋಗ್ಯತೆಯನ್ನು ಪ್ರದರ್ಶಿಸುವ ಮಹತ್ತಾದ ಸಂದರ್ಭವನ್ನು ದೇವರು ನಮಗೊದಗಿಸಿದ್ದಾನೆ. ಈ ಕರ್ತವ್ಯವನ್ನು ನಾವು ಸರಿಯಾಗಿ ನಿರ್ವಹಿಸಲಿಲ್ಲವೆಂಬ ಅಪವಾದ ನಮಗೆ ತಟ್ಟದಂತಾಗಲಿ. ಅಲ್ಪ ಸಂಖ್ಯಾಕರಿಗೆ ರಕ್ಷಣೆಯಿದೆಯೆಂದು ನಾನು ಬಹಿರಂಗವಾಗಿಯೂ ಖಾಸಗಿಯಾಗಿಯೂ ಒತ್ತಿಹೇಳಿದ್ದೇನೆ. ನಮ್ಮೀ ಯಥಾರ್ಥತೆಯನ್ನು ಪ್ರದರ್ಶಿಸುವ ಸಂದರ್ಭವನ್ನೇ ಅಲ್ಪಸಂಖ್ಯಾಕರು ನಮಗೊದಗಿಸಿಕೊಡಲಿಲ್ಲವೆನ್ನಲು ವಿಷಾದಿಸುತ್ತೇನೆ. ನಾವು ಆಕಸ್ಮಾತ್ ಬಿಕ್ಕಟ್ಟಿನಲ್ಲಿ ಬಿದ್ದಾಗ ಪಾಕಿಸ್ತಾನ್ ಪ್ರಜೆಗಳಾದ ಈ ಅಲ್ಪ ಸಂಖ್ಯಾಕರು ನಮಗೆ ಹೃತ್ಪೂರ್ವಕ ಬೆಂಬಲ ಕೊಡಲಿಲ್ಲ. ಸಿಂಧಿನಲ್ಲಿ ಅಲ್ಲಲ್ಲಿ ಕಿವಿತಗಳಾಗಿದ್ದರೂ ಅದು ಶಾಂತವಿದೆ. ಕೆಲವರು ವೃಥಾಭಯಗೊಂಡು, ಇನ್ನು ಕೆಲವರು ಪಾಕಿಸ್ತಾನಕ್ಕೆ ಆರ್ಥಿಕ ಹಾಗೂ ಸಾಮಾಜಿಕ ಧಕ್ಕೆ ಬೀಳಲೆಂಬುದಕ್ಕಾಗಿ ಪಾಕಿಸ್ತಾನವನ್ನು ಬಿಡುತಿದ್ದಾರೆ. ಗಡಿನಾಡು ಪ್ರಾಂತ್ಯ ಮತ್ತು ಬಲೂಚಿಸ್ತಾನಗಳಲ್ಲಿ ಕೆಲವು ಗೊಂದಲಗಳಾಗಿರುವುದು ನಿಜ. ಆದರಿದು ಪೂರ್ವ ಸಜ್ಜಿತ ಹಂಚಿಕೆಯಿಂದ ನಡೆದುದೇನೂ ಅಲ್ಲ. ನಮ್ಮ ಘೋಷಣೆ ಮತ್ತು ಸ್ಪಷ್ಟ ಸೂಚನೆಗಳಿಗೆ ವಿರೋಧವಾಗಿ, ಕೆಲವು ಉದ್ರೇಕೀ ಜನರು ಪೂರ್ವ ಪಂಜಾಬಿನಲ್ಲಾದ ಅನ್ಯಾಯಗಳಿಗೆ ಪ್ರತೀಕಾರವಾಗಿ ಕೈಕೊಂಡ ಕೃತ್ಯವಿದು. ಹಾಗಿದ್ದರೂ ಅದು ನ್ಯಾಯವೆನ್ನಿಸದು. ಪಶ್ಚಿಮ ಪಂಜಾಬು, ಅತ್ಯಾಚಾರ ರಂಗಕ್ಕೆ ತಾಗಿದ್ದುದರಿಂದ ಅಲ್ಲಿ ಶೋಚನೀಯ ದುರ್ಘಟನೆಗಳಾಗಿರುವುದು ನಿಜ.

ಭಾರತದಲ್ಲಿ

ಸಹೋದರೀ ಪ್ರಸಾಹತು ಭಾರತದ ಕಡೆಗೆ ನಾನು ಕಣ್ಣು ಹೊರಳಿಸುವಾಗ, ಅಲ್ಲಿ ಅಲ್ಪಸಂಖ್ಯಾಕ ಮುಸ್ಲಿಮರಿಗೆ ಮಹಾಪರಾಧಗಳಾಗಿರುವುದು ಕಂಡುಬರುತ್ತಿದೆ. ಭಾರತದ ಕೆಲವು ಸಂಗಡಗಳು ಪೂರ್ವ ಪಂಜಾಬಿನ ಮುಸ್ಲಿಮರನ್ನು ಸಮೂಲ ನಾಶಮಾಡಿದುದರಿಂದ ಸಮಾಧಾನಹೊಂದದೆ, ಮುಸ್ಲಿಮರ ಜೀವನವನ್ನು ಅಸಹ್ಯಗೊಳಿಸುವ ಮೂಲಕ ಇಡೀ ಭಾರತದಿಂದಲ್ಲಾ ಮುಸ್ಲಿಮರನ್ನು ಓಡಿಸಿಬಿಡಬೇಕೆಂದು ಶಪಥತೊಟ್ಟಂತಿದೆ. ಈ ಸುಸಂಘಟಿತ ಯತ್ನಕ್ಕೆ ಗುರಿಯಾಗಿರುವ ನಿಸ್ಸಹಾಯಕರು, ನಾವೂ ಅವರ ಕೈ ಬಿಟ್ಟೆವೆಂದೀಗ ಭಾವಿಸಿಕೊಳ್ಳುವಂತಾಗಿದೆ. ಪರಿಸ್ಥಿತಿಯು ಇಲ್ಲಿ ವರೆಗೂ ಬಂದುದು ಸಹಸ್ರಾವಧಿ ಕನಿಕರಾರ್ಹ ವಿಷಯ. ಎರಡೂ ಪ್ರಸಾಹತುಗಳ ಅಲ್ಪಸಂಖ್ಯಾಕರನ್ನು ರಕ್ಷಿಸಬೇಕೆಂಬ ಕಂಠೋಕ್ತ ಹಾಗೂ ಪವಿತ್ರ ಶರ್ತವನ್ನು ಧ್ವಂಸಿಯೇ ರಾಷ್ಟ್ರವಿಭಜನೆಯು ಒಪ್ಪಂದವಾಗಿತ್ತು. ರಾಷ್ಟ್ರಕ್ಕೆ ವಿಧೇಯರಾಗಿರುವ ಅಲ್ಪಸಂಖ್ಯಾಕರಿಗೆ ಯಾವ ವಿಧದಿಂದಲೂ ಭೀತಿಗವಕಾಶವಿರಕೂಡದೆಂದು ನಿರ್ಣಯವಾಗಿತ್ತು. ಭಾರತ ಸರಕಾರದ ಧೋರಣೆಯು ಈಗಲೂ ಅದೇ ಆಗಿದ್ದರೆ--ಹಾಗಿದೆಯೆಂದು ನನಗೆ ನಂಬಿಕೆಯಿದೆ-ಮುಸ್ಲಿಮರನ್ನು ದ್ರೋಹಿಗಳಂತೆ ಕಾಣುವ ಈ ಹವ್ಯಾಸಕ್ಕದು ತಡೆಹಾಕಬೇಕು. ಇಲ್ಲದಿದ್ದರೆ ಎರಡು ರಾಷ್ಟ್ರಗಳಿಗೂ ಅನಾಹುತ ಒದಗೀತು. ಭಾರತದಲ್ಲಿರುವ ನನ್ನ ಮುಸ್ಲಿಂ ಬಂಧುಗಳಿಗೆ ನನ್ನ ಉಪದೇಶವಿಷ್ಟೆ: ಅವರು ತಾವಿರಬೇಕಾಗಿರುವ ರಾಷ್ಟ್ರಕ್ಕೆ ತ್ರಿಕರಣ ಪೂರ್ವಕ ವಿಧೇಯತೆ ಪ್ರದರ್ಶಿಸಬೇಕು. ಅದೇ ಕಾಲದಲ್ಲಿ ಅವರು ತಮ್ಮನ್ನು ತಾವು ಸಂಘಟಿಸಿಕೊಂಡು, ಈ ಸಂದಿಗ್ಧ ಸಮಯದಲ್ಲಿ ಸರಿಯಾದ ಹಾದಿ ತೋರಿಸಬಲ್ಲ ಧುರೀಣತ್ವವನ್ನು ನಿರ್ಮಿಸಿಕೊಳ್ಳಲಿ. ಕ್ರೂರ ಅಮಾನುಷ ರೀತಿಯಿಂದ ಭಾರತದ ಮುಸ್ಲಿಮರನ್ನು ನಿರ್ನಾಮ ಮಾಡಲು ಅಥವಾ ಅಟ್ಟಿಬಿಡಲು ನಡು ಬಿಗಿದಿರುವ ದುರ್ವರ್ತನೆಯವರಿಂದ ತನ್ನ ಕೀರ್ತಿಗೆ ಕಳಂಕ ಬಾರದಂತೆ ಭಾರತ ಸರಕಾರ ವರ್ತಿಸುವದೆಂದು ನಾನು ಮತ್ತೊಮ್ಮೆ ಆಶಿಸುತ್ತೇನೆ. ಎಲ್ಲರನ್ನೂ ಪರಸ್ಪರ ಬದಲಾಯಿಸಿಕೊಳ್ಳುವ ಮೂಲಕವೇ ಅಲ್ಪಸಂಖ್ಯಾಕ ಪ್ರಶ್ನೆಯು ತೀರ್ಮಾನಗೊಳ್ಳಬೇಕೆಂದಾದಲ್ಲಿ ಆ ಕಾರ್ಯವು ಸರಕಾರೀ ಯೋಜನೆಯ ಮೂಲಕವೇ ನಡೆಯಲಿ; ವಿಂಗಡಿಸಿಹಾಕುವ ಕೆಲಸವನ್ನು ರಕ್ತಪಿಪಾಸಿ ಜನರ ಕೈಗೆಕೊಡುವದು ಬೇಡ. ಪಾಕಿಸ್ತಾನ್ ಸರಕಾರದ ಮಟ್ಟಿಗೆ, ನಾನು ಮತ್ತೊಮ್ಮೆ ನನ್ನ ಸರ್ವಾಂತಃಕರಣಪೂರ್ವಕವಾಗಿ ಹೇಳುತ್ತಿದ್ದೇನೆ-ಈ ಸಂಬಂಧದ ನಮ್ಮ ಪೂರ್ವ ನಿಶ್ಚಿತ ಧೋರಣೆಯನ್ನೇ ಮುಂದೊತ್ತುತ್ತೇವೆ; ನಾವು ಅಲ್ಪಸಂಖ್ಯಾಕ ಸಮಾಜಗಳವರ ಪ್ರಾಣವಿತ್ತಗಳಿಗೆ ಪೂರ್ಣ ರಕ್ಷಣೆಯನ್ನೀಯುತ್ತೇವೆ; ಅವರನ್ನು ಯೋಗ್ಯ ರೀತಿಯಿಂದ ನಡೆಯಿಸಿಕೊಳ್ಳುತ್ತೇವೆ. ಅವರು ರಾಷ್ಟ್ರದ ನಂಬಿಗಸ್ಥರಾಗಿ ಮತ್ತು ವಿಧೇಯರಾಗಿ ಇರುವ ವರೆಗೆ, ಮಿಕ್ಕ ನಾಗರಿಕರಿಗೆ ದೊರೆಯುವ ಎಲ್ಲಾ ಸೌಕರ್ಯಗಳಿಗೆ ಅವರೂ ಬಾಧ್ಯಸ್ಥರಿದ್ದಾರೆ. ಒಕ್ಕಟ್ಟಾಗಿರಿ; ನಿಸ್ಸ್ವಾರ್ಥಿಗಳಾಗಿರಿ; ನಿಮ್ಮ ದೃಷ್ಟಿಯಲ್ಲೆಲ್ಲಕ್ಕಿಂತ ಮುಂದೆ ರಾಷ್ಟ್ರದ ಸಾಮೂಹಿಕ ಹಿತವೇ ನಿಂತಿರಲಿ. ನಾನು ಆಗಾಗ ಉದ್ಗರಿಸುತ್ತಾ ಬಂದಿರುವ ಈ ಮುದ್ದೆಗಳು ನೆನಪಿರಲಿ-ಒಕ್ಕಟ್ಟು, ಶಿಸ್ತು, ವಿಶ್ವಾಸ”.

ಸರ್ದಾರ್ ಪಟೇಲರ ಖಂಡತುಂಡ ಮಾತು

ಸರ್ದಾರ್ ಪಟೇಲರು ಅಮೃತಸರದ ತನ್ನ ಭಾಷಣದ ಒಂದೆಡೆಯಲ್ಲಿ ಹೀಗಂದಿದ್ದರು: ‘ಗಡಿ ಹೊರಗಿನ ತನ್ನೆಲ್ಲಾ ಜನರನ್ನೂ ಭಾರತಕ್ಕಾಮದುಪಡಿಸಿಕೊಂಡು ಪೂರ್ವ ಪಂಜಾಬಿನ ಎಲ್ಲಾ ಮುಸ್ಲಿಮರನ್ನೂ ಹೊರಗೆ ಕಳುಹುವುದರಿಂದಲೇ ಭಾರತದ ಹಿತಸಾಧನೆಯಾಗಬಲ್ಲುದೆಂದು ನನ್ನ ದೃಢ ನಂಬಿಕೆ”. ಇದಕ್ಕೆ ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಕತರು ಭಾರತದಿಂದ ಮುಸ್ಲಿಮರನ್ನೆಲ್ಲಾ ಹೊರಗಟ್ಟುವ ದುರುದ್ದೇಶದ ಆರೋಪಮಾಡಿದ್ದರು. ಸರ್ದಾರ ಪಟೇಲರೀ ಕುರಿತು ಖಂಡತುಂಡ ಉತ್ತರಕೊಡುತ್ತಾ ‘ಪೂರ್ವಪಂಜಾಬಿನ ಎಲ್ಲಾ ಮುಸ್ಲಿಮರನ್ನೂ ಪಶ್ಚಿಮಪಂಜಾಬಿನ ಎಲ್ಲಾ ಮುಸ್ಲಿಮೇತರರನ್ನೂ ಪರಸ್ಪರ ಬದಲಾಯಿಸಿಕೊಳ್ಳುವ ಧೋರಣೆಯು ಯಾವುದಾದರೊಂದು ಸರಕಾರದ್ದಾಗಿರದೆ ಎರಡೂ ಸರಕಾರಗಳ ಒಪ್ಪಂದಾನುಸಾರವಾಗಿ ಇಕ್ಕಡೆಯವರೂ ಕೈಕೊಂಡ ನಿರ್ಧಾರ’ವೆಂಬುದನ್ನು ಜ್ಞಾಪಕ ಕೊಟ್ಟಿದ್ದಾರೆ. “ಚರ್ವಿತ ಚರ್ವಣವಾಗಿರುವ ಪಾಕಿಸ್ತಾನದ ಅಲ್ಪ ಸಂಖ್ಯಾಕರ ರಕ್ಷಣೆಯ ಭರವಸೆಯ ಮಾತುಗಳನ್ನು ಪುನಃ ಮಿ. ಲಿಯಾಕತರ ಬಾಯಿಯಿಂದ ಕೇಳಿದೆವು. ಸಹಸ್ರಗಟ್ಟಲೆಯ ಕೊಲೆ, ಜುಲುಮೆಯ ಮತಾಂತರ, ಬಲಾತ್ಕಾರದ ಮದುವೆ, ಸುಟ್ಟ ಮನೆಗಳು, ಮತ್ತು ಅತಿ ಘೋರವಾಗಿ ಅಮಾನುಷ ರೀತಿಯಲ್ಲಿ ಮುಸ್ಲಿಮೇತರರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳೇ ಈ ಭರವಸೆಗಳ ಬೆಲೆ ಪಟ್ಟಿಗಳು. ‘ಅಲ್ಪ ಸಂಖ್ಯಾಕರ ಕಲ್ಯಾಣ ಸಾಧನೆ’ಯ ಕುರಿತು ಇಷ್ಟೊಂದು ಕಳಕಳಿ ಪ್ರದರ್ಶಿಸುತ್ತಿರುವವರು ಪಾಕಿಸ್ತಾನದಿಂದೋಡಿ ಬರುವ ನಿರಾಶ್ರಿತರನ್ನು ಪಾಕಿಸ್ತಾನದ ಹೆಸರಿನಿಂದ ಸಾಮೂಹಿಕವಾಗಿ ಅಪಹರಿಸದಂತೆ ಈ ದಯೆಯ ಅಂಶ ಅಥವಾ ಸಭ್ಯತೆಯ ಲವಾಂಶವಾದರೂ ಇವರನ್ನು ತಿದ್ದಿದುದಿಲ್ಲ. ಹರಕು ಚಿಂದಿ ಉಡುಗೆಗಳು ಮಾತ್ರವಿರುವ ಸ್ತ್ರೀಪುರುಷರೇ ಬಂದು ಹಿಂದುಸ್ಥಾನದೊಳಗೆ ಆಶ್ರಯಪಡೆದಿದ್ದಾರೆ. ಅವರ ಲೌಕಿಕೋಪಕರಣಗಳೆಲ್ಲವನ್ನೂ ಕಸಗೊಳ್ಳಲಾಗಿದೆ. ಮಕ್ಕಳ ಪಾಲಿಗುಳಿದಿದ್ದ ತಿಂಡಿಗಳ ಕೊನೆಯ ಬಾಟ್ಲಿಯನ್ನು ಕೂಡಾ ಕಿತ್ತುಕೊಂಡಿದ್ದರು. ಹೆಂಗಸರ ಮೈಮೇಲಿನ ಎಲ್ಲಾ ಆಭರಣಗಳನ್ನೂ ಕಿತ್ತುಕೊಂಡು ಕೇವಲ ವಸ್ತ್ರಮಾತ್ರ ಬಿಟ್ಟಿದ್ದರು. ಇವೆಲ್ಲಾ ಕೃತ್ಯಗಳೂ ತಮ್ಮ ಕಡೆಯ ವ್ಯಾಪಾರ ಸಾಮಗ್ರಿಗಳು ಜೊತೆಗೆ ಹೋಗಬಾರದೆಂಬ ಉದ್ದೇಶದಿಂದಿರಬೇಕು. ಯೋಗ್ಯ ರೀತಿಯಿಂದ ಕಾಣುವೆವೆಂದು ಪಾಕಿಸ್ತಾನದಲ್ಲಿರುವ ಮುಸ್ಲಿಮೇತರರಿಗೆ ದೊರೆಯುತ್ತಿರುವ ‘ಭರವಸೆ’ ನಾಮಾಂಕಿತ ಮಾತುಗಳ ನಿಜಾರ್ಥವೆಲ್ಲವೂ ಇದೇ. ಹಿಂದುಳಿದವರು ತಮ್ಮ ನಿತ್ಯಜೀವನವನ್ನು ಅತ್ಯಪಾಯಕರ ಸ್ಥಿತಿಯಲ್ಲಿ, ಭಯಭರಿತ ಮತಿಯಲ್ಲಿ ಕಳೆಯುತಿದ್ದಾರೆ. ನಾಳೆ ತಮ್ಮ ಗತಿಯೇನೆಂಬುದನ್ನೇ ಅವರರಿಯರು. ಇದಕ್ಕೆ ಪ್ರತಿಯಾಗಿ ಭಾರತದ ಮುಕ್ಕಾಲಂಶಕ್ಕೂ ಮಿಕ್ಕಿದ ಭಾಗಗಳಲ್ಲಿ ಮುಸಲ್ಮಾನರು ತಮ್ಮ ಪರಂಪರಾಗತ ಮನೆಗಳಲ್ಲಿ ತಮ್ಮ ಸರಕಾರದ ರಕ್ಷಣೆಯಡಿಯಲ್ಲಿ ಪೂರ್ಣ ಶಾಂತಿ ಸೌಖ್ಯದಿಂದ ಜೀವಿಸುತಿದ್ದಾರೆ. ಆದ್ದರಿಂದ ಪಾಕಿಸ್ತಾನದಿಂದ ಗೂಳೆ ಕೀಳುತ್ತಿರುವ ಮುಸ್ಲಿಮೇತರರನ್ನು ತಮ್ಮೀ ಕಾಗದಾಶ್ವಾಸನೆಗಳು ನಿಲ್ಲಿಸಬಹುದೆಂಬ ಭ್ರಮೆಯನ್ನು ಇನ್ನಾದರೂ ಪಾಕಿಸ್ತಾನ್ ನಾಯಕರು ಕಟ್ಟಿಕೊಳ್ಳದಿರಲಿ. ಮೇಲಿಂದಮೇಲೆ ಪ್ರತ್ಯಕ್ಷ ರೌರವದ ಅನುಭವವಾಗುತ್ತಿರುವಾಗ ಕಾಗದಗಳಲ್ಲಿ ಅಥವಾ ಗಾಳಿಗಳ ಮೂಲಕ ತೇಲಿಬರುವ ಈ ‘ಆಶ್ವಾಸನಾ’ ಅಕ್ಷರಗಳು ಅಂಥವರನ್ನು ಸಮಜಾಯಿಸಬಲ್ಲವೇ?” --ಎಂದಿದ್ದಾರೆ ಭಾರತದ ಉಪಪ್ರಧಾನಿ.

ಹೈದರಾಬಾದು ತಾನು ಹಿಂದೀ ಕೇಂದ್ರಕ್ಕೆ ಸೇರುವ ನಿರ್ಧಾರ ಮಾಡುವ ಕುರಿತು ಪುನಃ 10 ದಿನಗಳ ಅವಧಿ ಕೇಳಿತೆಂದೂ ಹಿಂದೀ ಸರಕಾರವು ಅದನ್ನು ಕೊಟ್ಟಿತೆಂದೂ ತಿಳಿದು ಬರುತ್ತದೆ.

ಕುಂಜಾಲು— ಗ್ರಾಮದ ರೈತರ ಸೌಕರ್ಯಕ್ಕಾಗಿ ದ. ಕ. ಸೆಂಟ್ರಲ್ ಸ್ಟೋರ್ಸಿನ ಹೊಸ ವಿಭಾಗವೊಂದು ಇದೇ ತಾ 11ನೆ ಶನಿವಾರ ಕುಂಜಾರು ಕೇಂದ್ರದಲ್ಲಿ ತೆರೆಯಲ್ಪಟ್ಟಿರುವುದಾಗಿಯೂ ಒಮ್ಮೆ ಮುಚ್ಚಲ್ಪಡಬೇಕಾಗಿ ನಿಶ್ಚಯಿಸಲ್ಪಟ್ಟ ಜಿಲ್ಲೆ ಡಿಪೋವನ್ನು ಊರ್ಜಿತದಲ್ಲಿ ಇರಗೊಡಿಸುವುದಾಗಿಯೂ ಸದ್ರಿ ಸ್ಟೋರ್ಸಿನ ಉಡುಪಿ ಫುಡ್ ಇನ್ಸ್‌ಪೆಕ್ಟರ್ ಶ್ರೀ ಕೆ. ಆರ್. ಶೆಣೈಯವರು ತಿಳಿಸುತ್ತಾರೆ.

ಕಟಪಾಡಿ:—ಇಲ್ಲಿಯ ಬ್ರಹ್ಮ ಶ್ರೀ ಗುರುಸ್ವಾಮಿ ಸೇವಾ ಸಮಿತಿಯ 13ನೇ ವಾರ್ಷಿಕ ಮಹಾಸಭೆಯು ತಾ. 26-10-'47ನೇ ರವಿವಾರ ಅಪರಾಹ್ನ ಗಂಟೆ 2ಕ್ಕೆ ಸರಿಯಾಗಿ ಸಮಿತಿಯ ಭವನದಲ್ಲಿ ಜರಗಲಿಕ್ಕಿರುವುದರಿಂದ ಸದಸ್ಯರೆಲ್ಲರೂ ಸಕಾಲದಲ್ಲಿ ಸಭೆಗೆ ಚಿತ್ತೈಸಬೇಕಾಗಿ ಸಮಿತಿಯ ಕಾರ್ಯದರ್ಶಿಯವರು ವಿನಂತಿಸುತ್ತಾರೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ
ತಾರೀಕು 14—10—47 ರಿಂದ
ತನ್ನವರನ್ನು ಪದೇ ಪದೇ ಕಷ್ಟಕೊಟ್ಟು ಪರೀಕ್ಷಿಸುವುದೇ
ಪರಮಾತ್ಮನಿಗೆ ಪ್ರೀತಿ. ಆತನ ಭಕ್ತರಿಗೆ ಯಾವಾ
ಗಲೂ ಸುಖವಿಲ್ಲ. ಆದುದರಿಂದಲೇ ಶ್ರೀಮಂತ
ರು ದೇವರಿಂದ ದೂರವಾದವರಿಂದರೂ
ತಪ್ಪಾಗದು. ಇದು ಈ ಚಿತ್ರದ ನೀತಿ.
ವಾಹಿನಿಯವರ
ಭಕ್ತ ಪೋತನ (ತೆಲುಗು)
ನಾಗಯ್ಯ, ಮಾಲತಿ, ಹೇಮಲತಾ ಮೊದಲಾದವರು
ಬರುವ ಚಿತ್ರ— ವಾಹಿನಿಯವರ
“ದೇವತಾ”
ನಾಗಯ್ಯ, ಮುತ್ತು, ಸೂರ್ಯಕುಮಾರಿ.

ಉಡುಪಿ

ಉಡುಪಿ ತಾಲೂಕು ಸಹಕಾರಿಗಳ ಪರಿಷತ್ತಿನ ನಿರ್ಣಯಗಳು

ಉಡುಪಿಯಲ್ಲಿ ಕಳೆದ ತಾ. ೧೧ರಂದು ತಾಲೂಕು ಕೊ. ಯೂನಿಯನ್ ಅಧ್ಯಕ್ಷ ಮತ್ತು ದ. ಕ. ಕೋ. ಸೊಸೈಟಿ ಹೋಲ್‌ಸೇಲ್ ಸ್ಟೋರ್ಸ್ ಡೈರೆಕ್ಟರ್ ವಕೀಲ್ ಶ್ರೀ. ಕೆ. ಜೆ. ಬಲ್ಲಾಳ್, ಬಿ. ಎ., ಎಲ್. ಎಲ್. ಬಿ., ಇವರ ಅಧ್ಯಕ್ಷತೆಯಲ್ಲಿ ನೆರೆದ ಪರಿಷತ್ತು ಪ್ರಚಲಿತ ಆಹಾರ ಪರಿಸ್ಥಿತಿಯ ಸುಧಾರಣೆ ಮತ್ತು ಅಕ್ಕಿ ಭತ್ತ ಸಂಗ್ರಹ ಹಾಗೂ ಹಂಚುಗೆಯ ರೀತಿನೀತಿಗಳ ಕುರಿತು ವಿಚಾರ ವಿನಿಮಯವಾಗಿ ಕೆಳಗಿನ ತಾತ್ಪರ್ಯದ ನಿರ್ಣಯಗಳು ಸರ್ವಾನುಮತದಿಂದ ಮಂಜೂರಾದುವು:—

1. ಉಡುಪಿ ತಾಲೂಕಿನಲ್ಲಿ 1904ರಿಂದ 1946ರ ಅವಧಿಯೊಳಗೆ ಜನ ಸಂಖ್ಯೆಯು ಒಂದೂ ಮುಕ್ಕಾಲು ಲಕ್ಷದಿಂದ ಸಮೀಪ ಮೂರು ಲಕ್ಷಕ್ಕೆ ಏರಿಯೂ ಭತ್ತ ಸಾಗುವಳಿಯ ಕ್ಷೇತ್ರವು ಮಾತ್ರ 92600 ಎಕ್ರೆಯಿಂದ 65338ಕ್ಕೆ ಇಳಿದಿದೆ. ಹೀಗೆಯೇ ಇತರ ಕಡೆಗಳಲ್ಲಿಯೂ ಬತ್ತ ವ್ಯವಸಾಯದ ಕ್ಷೇತ್ರವು ಕಡಿಮೆಯಾಗುತ್ತ ಬರುವುದಕ್ಕೆ ಮುಖ್ಯ ಕಾರಣವು ಅಕ್ಕಿ ಭತ್ತಗಳ ಬೆಲೆ ಸಂಗ್ರಹ ಹಂಚುಗೆಯ ವಿಷಯಗಳಲ್ಲಿ ಕಟ್ಟುನಿಟ್ಟಾದ ಕಠಿಣ ನಿಯಂತ್ರಣದ ರೀತಿನೀತಿಗಳಿದ್ದು ಧಾನ್ಯಗಳು ಗೇಣಸು ಮೆಣಸು ಕಬ್ಬು ತೆಂಗು ಇವುಗಳ ವಿಷಯದಲ್ಲಿ ಹಾಗಿಲ್ಲದಿರುವುದರಿಂದ ಅವುಗಳ ಬೆಲೆಯು ನಾಲ್ಕಾರುಪಟ್ಟು ಏರಿರುವುದರಿಂದ ಭತ್ತ ಬೆಳೆಯಿಸಲಾಗುವ ಜಾಗಗಳಲ್ಲಿ ಅಲ್ಪ ಶ್ರಮ ಮತ್ತು ವೆಚ್ಚದಲ್ಲಾಗುವ ಹಾಗೂ ವಿಶೇಷ ಲಾಭದಾಯಕವಾದ ಈ ಬೆಳೆಗಳನ್ನೇ ಹೆಚ್ಚು ಹೆಚ್ಚಾಗಿ ಬೆಳೆಯಿಸುತ್ತಾ ಬರುತ್ತಾರೆಂಬುದು ನಿಸ್ಸಂದೇಹ. ಕೆದುತ್ತ ಬರುತ್ತಿರುವ ಈ ಪರಿಸ್ಥಿತಿಯನ್ನು ತಡೆಗಟ್ಟಿ ಭತ್ತದ ಬೆಳೆಗೆ ಪ್ರಾಧಾನ್ಯವುಂಟಾಗುವಂತೆ ಮಾಡಲಿಕ್ಕೆ ಕೆಳಗಿನ ಸೂಚನೆಗಳು ಆಚರಣೆಯಲ್ಲಿ ತರಲ್ಪಟ್ಟಲ್ಲಿ ಶೀಘ್ರವಾಗಿಯೂ ಪರಿಣಾಮಕಾರಿಯಾಗುವವೆಂದು ಪರಿಷತ್ತು ಅಭಿಪ್ರಾಯಪಟ್ಟಿದೆ:—

೧. ಅಕ್ಕಿಯ ಬೆಲೆಯು ಮಾಸದಿಂದ ಮೇಲ್ಪಂಕ್ತಿಸಿದ ಇತರ ಎಲ್ಲ ದವಸ ಧಾನ್ಯಗಳ ಬೆಲೆಯನ್ನು ಕಠಿಣವಾಗಿ ನಿಯಂತ್ರಿಸಿ ಅಕ್ಕಿಯಂತೆಯೇ ರೇಶನಿಂಗ್ ಮಾಡಿ ಹಂಚುಗೆಯಿಂದ ಜನತೆಗೆ ಪೂರೈಕೆ ಮಾಡಬೇಕು.

೨. ಐದು ಯಾ ಹತ್ತು ವರುಷಗಳ ಅವಧಿಯೊಳಗೆ ಎಲ್ಲ ಹಳೆಯ ಮದಗ ಕೆರೆ ತೋಡು ಮುಂತಾದ ನೀರಾವರಿ ವೃದ್ಧಿಯಾಗುವ ಆಶ್ರಯಗಳನ್ನು ದುರಸ್ತಿಪಡಿಸಿ ಮುಗಿಸಲಾಗುವಂತೆ ಸರಕಾರವು ತಕ್ಕಷ್ಟು ಹಣವನ್ನು ಮೀಸಲಾಗಿ ತೆಗೆದಿಟ್ಟು, ಹಾಗೆ ತೆಗೆದಿಟ್ಟ ಹಣವು ಆಯಾ ವರ್ಷದಲ್ಲಿ ಸದ್ವಿನಿಯೋಗವಾಗುವಂತೆ ನೋಡಿಕೊಳ್ಳಬೇಕು.

೩. ಸರಕಾರದ, ದೇವಸ್ಥಾನಗಳ, ಸಂಘ ಸಂಸ್ಥೆಗಳ ಮತ್ತು ವರ್ಗದಾರರ ವರ್ಗದಲ್ಲಿ ಬೇಸಾಯವಾಗದೆ ಹಡಿಲು ಬಿದ್ದಿರುವ ಅಥವಾ ಸಾಗುವಳಿ ಮಾಡಲಿಕ್ಕಾಗುವ ಜಾಗಗಳಿದ್ದರೆ ಅವನ್ನು ಅವರು ಸಾಗುವಳಿ ಮಾಡುವ ಜೋಡಿಗಾರಿಕೆಯನ್ನು ವಹಿಸುವದಿಲ್ಲವಾದರೆ ಬೇಸಾಯ ಮಾಡಲಪೇಕ್ಷಿಸುವವರಿಗೆ ತಾತ್ಕಾಲಿಕವಾಗಿಯೂ ಸಂದರ್ಭಾನುಸಾರ ಐದು ವರುಷಗಳ ಅವಧಿಗೆ ಗೇಣಿವಿರಹಿತವಾಗಿಯೂ ಅತ್ಯಲ್ಪಗೇಣಿಗೆ ಸರಕಾರವು ಕೊಡಿಸತಕ್ಕದು.

2. ಮಿಗುತೆ ಅಕ್ಕಿ ಭತ್ತ ಸಂಗ್ರಹ ಮತ್ತು ವಿತರಣೆಯ ವಿಷಯದಲ್ಲಿ ಜಿಲ್ಲಾ ಕೊ. ಸೊ. ಹೋಲ್‌ಸೇಲ್ ಸ್ಟೋರ್ಸ್ ಮತ್ತು ಅವುಗಳ ಅಧ್ಯಕ್ಷರು ಗುರುತರವಾದ ಕಾರ್ಯಭಾರವನ್ನು ದಕ್ಷತೆಯಿಂದ ನಿರ್ವಹಿಸುತ್ತಿರುವುದನ್ನು ಅಲ್ಲಗಳೆಯದೆ ರೈತರ ಕೆಲವು ತೊಂದರೆಗಳನ್ನೂ ಅವುಗಳ ನಿವಾರಣೆಯ ಸೂಚನೆಗಳನ್ನೂ ಅವರ ಮುಂದಿಡುತ್ತದೆ:

೧. ಉಡುಪಿ ಸ್ಟೇಚುಟರಿ ಹಂಚುಗೆಯ ಕ್ಷೇತ್ರಕ್ಕೆ ಬೇಕಾಗುವ ಅಕ್ಕಿಯ ಪೂರ್ತಿಯು ಆ ತಾಲೂಕಿನ ಮತ್ತು ಕುಂದಾಪುರ ತಾಲೂಕಿನ ಮಿಗುತೆಯಿಂದ ಸಾಧಾರಣ ಪೂರ್ತಿಯಾದೀತೆಂದೂ ಅಂತೆಯೇ ಮಂಗಳೂರು ಕ್ಷೇತ್ರಕ್ಕೆ ಆ ತಾಲೂಕಿನ ಮತ್ತು ಕಾರ್ಕಳ ಪುತ್ತೂರು ತಾಲೂಕುಗಳ ಮಿಗುತೆಯಿಂದ ಆಗುವುದೆಂದೂ ಲೆಕ್ಕ ಹಾಕಬಹುದಾದುದರಿಂದ ಅವನ್ನು ಆಯಾ ಕ್ಷೇತ್ರಕ್ಕಾಗಿ ಮೀಸಲಾಗಿ ಸಂಗ್ರಹಿಸಿಟ್ಟು ಕಾಸರಗೋಡಿನ ಕ್ಷೇತ್ರಕ್ಕೆ ಆ ತಾಲೂಕಿನ ಮಿಗುತೆ ಸಾಕಾಗದೆ ಜಿಲ್ಲೆಯ ಹೊರಗಿನಿಂದ ಆಮದು ಮಾಡಬೇಕಾಗಿ ಬರುವ ಸುಮಾರು ಇಪ್ಪತ್ತೆರಡು ಸಾವಿರ ಟನ್ನುಗಳನ್ನು ಆಯಾಯಾ ತಿಂಗಳಿಗೆ ಸರಿಯಾಗಿ ತರಿಸಿಕೊಂಡು ವಿತರಣೆ ಮಾಡಿದರೆ ಜಿಲ್ಲೆಯ ಒಂದು ತುದಿಯಿಂದ ಮತ್ತೊಂದು ತುದಿಯವರೆಗೂ ಸದಾಕಾಲದಲ್ಲಿಯೂ ಅತ್ತಿಂದಿತ್ತ ಅನವಶ್ಯಕವಾಗಿ ಅಕ್ಕಿ ಭತ್ತ ಸಂಚಾಲನೆಗಾಗಿ ಉಂಟಾಗುವ ನಷ್ಟ, ಶ್ರಮ, ಸಮಯ, ಸಾರಿಗೆಯ ಪೆಟ್ರೋಲ್, ವೆಚ್ಚ ಮುಂತಾದುವು ಉಳಿಯುವುದಲ್ಲದೆ ಅಕ್ಕಿಯನ್ನೊಪ್ಪಿಸಿದ ರೈತರೇ ಮರಳಿ ಹಂಚುಗೆಯ ಕಾರ್ಡು ಪಡೆಯುವ ಅಸಂತೃಪ್ತಿಯ ಪರಿಸ್ಥಿತಿಯೂ ನಿವಾರಣೆಯಾದೀತು.

೨. ಈಗ ಕೆಲವು ಗ್ರಾಮಕೂಟಗಳಿಗೆ ಒಬ್ಬೊಬ್ಬನಂತೆ ಹೋಲ್‌ಸೇಲ್ ಡಿಪೋ ಏಜಂಟನಿದ್ದು ಆ ಗ್ರಾಮಕೂಟದೊಳಗಿನವರು ಆ ಏಕಮಾತ್ರ ಏಜಂಟನಿಗೆ ತಮ್ಮ ಮಿಗುತೆ ಅಕ್ಕಿ ಭತ್ತಗಳನ್ನೊಪ್ಪಿಸಬೇಕಾಗಿರುವುದರಿಂದ ಆತನು ನಿರಂಕುಶಧೋರಣೆಯನ್ನು ವಹಿಸಿ ಅದರಿಂದ ರೈತರಿಗಾಗುವ ಕಷ್ಟನಷ್ಟಗಳುಂಟಾಗಲು ಅವಕಾಶವಾಗುವ ಕಾರಣ ಪ್ರತಿಯೊಂದು ಗ್ರಾಮಕೂಟಕ್ಕೆ ಕನಿಷ್ಠಪಕ್ಷ ಎರಡು ಏಜಂಟರುಗಳನ್ನು ನೇಮಿಸಿ, ಅವರಲ್ಲಿ ರೈತರು ತಮ್ಮ ಇಷ್ಟಬಂದವರಿಗೆ ತಮ್ಮ ಮಿಗುತೆಯನ್ನೊಪ್ಪಿಸುವಂತಾದರೆ ಏಜಂಟರಿಗೆ ತಮ್ಮ ರೀತಿನೀತಿಗಳನ್ನು ಜನಪ್ರಿಯವಾಗಿ ಸುಧಾರಿಸಿಕೊಳ್ಳಲು ಪರಿಸ್ಥಿತಿಯು ಒತ್ತಾಯಿಸುವಂತಾಗುವುದು.

ಕರ್ನಾಟಕ ಸಂಘದ ನೇತೃತ್ವದಲ್ಲಿ—ಈ ಬಾರಿಯ ದಸರಾ ಸಾಹಿತ್ಯೋತ್ಸವವು ಉಡುಪಿಯ ಬೋರ್ಡು ಹೈಸ್ಕೂಲಿನ 'ಪೀಪಲ್ಸ ಹಾಲಿ'ನಲ್ಲಿ ಇದೇ ತಿಂಗಳ ದಿನಾಂಕ 21ರಿಂದ 24ರ ತನಕ ವಿವಿಧ ಕಾರ್ಯಕ್ರಮಗಳಿಂದ ಜರಗಲಿರುವುದು. ಶ್ರೀಗಳಾದ ಕೋ. ಶಿ. ಕಾರಂತ, ಎಸ್. ಎಸ್. ಶಿಲ್ಲೆ, ಪಿ. ಎಸ್. ಕಕ್ಕಿಲ್ಲಾಯ, ಎಚ್. ಟಿನ್ನ ಕೇಶವ ಅಯ್ಯಂಗಾರ್, ಕೆ. ರಂಗನಾಥ, ಎಮ್. ಶೇಷಾದ್ರಿ, ಎಮ್. ಮರಿಯಪ್ಪ ಭಟ್, ಜಿ. ಎಸ್. ಕೇಶವಾಚಾರ್ಯ ಮೊದಲಾದ ಸಾಹಿತಿಗಳು ವಿವಿಧ ವಿಷಯಗಳನ್ನೆತ್ತಿ ಭಾಷಣಮಾಡಲಿರುವರು. ಈ ಸಮಾರಂಭಕ್ಕೆ ಆಬಾಲವೃದ್ಧರೆಲ್ಲರಿಗೂ ಕರ್ನಾಟಕ ಸಂಘದ ಕಾರ್ಯನಿರ್ವಾಹಕ ಸಮಿತಿಯು ಆಕ್ಕರೆಯ ಕರೆಯಿತ್ತಿದೆ.

ಜಿಲ್ಲಾ ಸ್ಕೌಟ್ ಕಮಿಶನರರ ಪರಿಷತ್ತು—ಜಿಲ್ಲಾ ಹಿಂದೂಸ್ಥಾನ್ ಸ್ಕೌಟ್ ಕಮಿಶನರರ ಪರಿಷತ್ತು ಇದೇ ತಾ. 12ರಲ್ಲಿ ಮುಕುಂದ ನಿವಾಸದಲ್ಲಿ ಮದ್ರಾಸ್ ಪ್ರಾಂತಿಕ ಆರ್ಗನೈಜರ್ ಶ್ರೀ ಎಮ್. ರಾಜಗೋಪಾಲನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಟಿ. ಮಾಧವ ಪೈಗಳವರು ಪರಿಷತ್ತನ್ನು ತೆರೆದರು.

ಹಾಲಾಡಿ—ಇಲ್ಲಿಯ ರಾಷ್ಟ್ರೀಯ ಸೇವಾದಳದ ಮುಂದಾಳುತನದಲ್ಲಿ ಗಾಂಧಿ ಜಯಂತಿಯುತ್ಸವವು ಇದೇ ತಾ. 2 ಮತ್ತು 9ರಲ್ಲು ಪ್ರಭಾತಫೇರಿ, ಧ್ವಜವಂದನೆ, ಮೆರವಣಿಗೆ ಶ್ರೀ. ಮಹಾಬಲ ಸೆಟ್ರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣ, ಶ್ರೀ ವೆಂಕಟಗಿರಿ ನಾಯ್ಕರಿಂದ ತಿಂಡಿ ಹಂಚೋಣ ಮೊದಲಾದ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಕುಂದಾಪುರ- ತಾ. 1-10-47ರಂದು ಪಾನ ನಿರೋಧ ದಿನಾಚರಣೆಯು ಅತೀ ವಿಜೃಂಭಣೆಯಿಂದ, ಪಾನ ನಿರೋಧ ಸಮಿತಿಯ ನೇತೃತ್ವದಲ್ಲಿ, ಸರ್ಕಲು ಕಾಂಗ್ರೆಸ್ಸು ಕಮಿಟಿ, ರಾಷ್ಟ್ರ ಸೇವಾದಳ ಮತ್ತು ಪುರಜನರ ಸಹಕಾರದಿಂದ ವಿಜೃಂಭಣೆಯಿಂದ ಜರಗಿತು.

ಸ್ಥಳೀಯ ಸರ್ಕಲು [illegible] ಕಮಿಟಿ ಮತ್ತು ರಾಷ್ಟ್ರ ಸೇವಾದಳದವರು ತಾ. 2ರಿಂದ 9ರ ವರೆಗೆ ಗಾಂಧೀಜೀಯ ಹುಟ್ಟು ಹಬ್ಬ ಸಪ್ತಾಹವನ್ನು ಆದರ್ಶ ರೀತಿಯಿಂದ ಆಚರಿಸಿದ್ದಾರೆ. ಈ ಸಂದರ್ಭದಲ್ಲಿ ಪ್ರತಿದಿನ ಬೆಳಿಗ್ಗೆ ಪ್ರಭಾತ ಫೇರಿ ಮತ್ತು ಧ್ವಜಾರೋಹಣ ಕಾರ್ಯಕ್ರಮಗಳು ಇದ್ದಿದ್ದವು. ಪ್ರತಿದಿನ ಸಾಯಂಕಾಲ ಸಾರ್ವಜನಿಕ ಸಭೆಯನ್ನು ಏರ್ಪಡಿಸಿ ವಿಧಾಯಕ ಕಾರ್ಯಕ್ರಮಗಳಲ್ಲಿ ಕೆಲವು ವಿಷಯಗಳನ್ನು ಆರಿಸಿ ಭಾಷಣಗಳಿದ್ದವು. ಕೊನೆಯದಾದ ತಾ. 9ರಂದು ಬೆಳಗ್ಗೆ ಘಂಟೆ 9ಕ್ಕೆ ಹರಿಜನರಿಗೆ ಬಹಿರಂಗವಾಗಿ ಶ್ರೀ. ಕುಂದೇಶ್ವರ, ಶ್ರೀ ವೆಂಕಟ ರಮಣ, ಶ್ರೀ ಲಕ್ಷ್ಮೀ ನಾರಾಯಣ, ಶ್ರೀ ಸಿಕಲ ಮತ್ತು ಶ್ರೀ ದತ್ತಾತ್ರೇಯ ದೇವಸ್ಥಾನಗಳಿಗೆ ಪ್ರವೇಶ ಕೊಡಲಾಯಿತು. ಈ ಸಂಧರ್ಭದಲ್ಲಿ ರಾಷ್ಟ್ರ ಸೇವಾದಳದವರು ವಹಿಸಿದ ಪಾತ್ರವು ಸ್ತುತ್ಯಾರ್ಹವಾದುದು. ಶ್ರೀಗಳಾದ ಎಸ್. ಪಿ. ಸರ್ವೋತ್ತಮರಯ್ಯ, ಎಮ್. ಎಮ್. ಹೆಗ್ಡೆ ಮತ್ತು ಶ್ರೀ. ಕೆ. ಎ. ಕಾರಂತ ಇವರು ಈ ಸಂದರ್ಭದಲ್ಲಿ ಸಹಕರಿಸಿದ್ದರು. ಸಾಯಂಕಾಲ ಶ್ರೀ ಎಮ್. ಡಿ. ಅಧಿಕಾರಿಗಳ ಭಾಷಣವಿದ್ದಿತ್ತು.

ಪ್ರಕಟಣೆ

ಕಟಪಾಡಿ ಶ್ರೀ ವೆಂಕಟರಮಣ ದೇವರ ಸನ್ನಿಧಿಯಲ್ಲಿ—ಇದೇ ಆಶ್ವೀಜ ಶುದ್ಧ ದಶಮಿ ಶುಕ್ರವಾರ ಆರಂಭವಾಗಿ ಆಶ್ವೀಜ ಬಹುಳ ೧ನೇ ಶುಕ್ರವಾರ (ತಾ. 24-10-47ರಿಂದ 31-10-47) ತನಕ ಏಳು ದಿನಗಳ ಅಹೋರಾತ್ರಿ ಭಜನಾ ಸಪ್ತಾಹವು ಶ್ರೀದೇವತಾನುಗ್ರಹದಿಂದಲೂ, ಇದರ ಕ್ಕೆ ಸಾಧನವಾದ ಈ ಮಹತ್ಕಾರ್ಯಕ್ಕೆ ತಾವು ಭಕ್ತಿಪೂರ್ವಕವಾಗಿ ಉದಾರಹಸ್ತದಿಂದ ಮಾಡಿದ ದ್ರವ್ಯ ಸಹಾಯದಿಂದಲೂ ಎಂದಿನಂತೆ ಸರ್ವವಿನಿಯೋಗಗಳೊಂದಿಗೆ ಸಾಂಗವಾಗಿ ನೆರವೇರುವುದು. ಈ ಮಹೋತ್ಸವಕ್ಕೆ ತಾವು ಆಗತ್ಯವಾಗಿ ಬಂದು ಶ್ರೀ ದೇವರ ಪ್ರಸಾದವನ್ನು ಸ್ವೀಕರಿಸಿ, ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ. ಶ್ರೀ ಭಜನೆ ಸಪ್ತಾಹ ಸಮಾರಂಭದಲ್ಲಿ ಶ್ರೀ ದೇವರ ಸನ್ನಿಧಿಯಲ್ಲಿ ನಡೆಸಬಹುದಾದ ಸದ್ವಿನಿಯೋಗಗಳ ವಿವರ:—ರಾತ್ರಿಕಾಲದ ಹೂವಿನ ಪೂಜೆಗೆ ರೂಪಾಯಿ 10/- ಹೂವಿನ ಪೂಜೆಗೆ ರೂ. 5/-; ದೀಪಾರಾಧನೆ ರೂ. 2/-; ಪಟ್ಲ ಪಂಚಿ ರೂ. 0-8-0; ಕರ್ಪೂರಾರತಿ ರೂ. 0-2-3; ತುಳಸೀ ಹಾರ ರೂ. 0-1-3; ಅಹೋರಾತ್ರಿಯ ಪೂರ್ಣವಿನಿಯೋಗಕ್ಕೆ ರೂ. 25/-.

ಪಿ. ಅಣ್ಣಪ್ಪ ನಾಯ್ಕ.
ಪ್ರಕೃತ ಪ್ರೆಸಿಡೆಂಟ್,

ಕಟಪಾಡಿ ತಾ. 14-10-47.

ಪ್ರಕಟಣೆ

ತಾ. 8-10-47ಕ್ಕೆ ಹೊನ್ನಾವರಕ್ಕೆ ಹೋದ The Rt. Rev. ಮಾರ್ ಗ್ರಿಗೋರಿಯಸ್ ಮೆಟ್ರೊ ಪೊಲಿಟನವರು ತಾ. 12-10-47ರಲ್ಲು ಹೊನ್ನಾವರ ಜಾಕೊಬೈಟ ಸೀರಿಯನ್ ಇಗರ್ಜಿಯಲ್ಲಿ, ಗೋವೆಯ Rev. Dn. ಜೋಸೆಫ್ ಅಲ್ವಾರಿಸ್ಸರಿಗೆ ಗುರುಪಟ್ಟ ಕಟ್ಟಿ, ತಾ. 13-10-47ನೇ 11 ಗಂಟೆ ಸಮಯ ಬ್ರಹ್ಮಾವರಕ್ಕೆ ಚಿತ್ತೈಸಿದರು. ಬ್ರಹ್ಮಾವರ ಜಾಕೊಬೈಟ್ ಸೀರಿಯನ್ ಇಗರ್ಜಿಯ ಪೇರಿಷನರು ಬೇಂಡುವಾದ್ಯ ಮೂಲಕ ಬಹಳ ವಿಜೃಂಭಣೆಯಿಂದ ಎದುರ್ಗೊಂಡರು. ತಾ. 14-10-47ರಲ್ಲು ಪೂಜೆ, Holy ಕ್ರಿಸ್ಮ ಮುಗಿದ ಬಳಿಕ ಡಿಸೂಜರು ಮತ್ತು ಪಾರ್ಟಿಯು 3 ಗಂಟೆಗೆ ಬ್ರಹ್ಮನಕ್ಕೂರಿಗೆ ಪ್ರಯಾಣ ಬೆಳೆಸಿದರು ಎಂಬದಾಗಿ ಬ್ರಹ್ಮಾವರ ಮಿಲಾಗ್ರಿಸ್ ಜಾಕೊಬೈಟ್ ಸೀರಿಯನ್ ಇಗರ್ಜಿಯ ವಿಕಾರಿ Rev. ಫಾದರ್ S. C. ಲೂವಿಸರು ತಿಳಿಸುತ್ತಾರೆ.

ಪ್ರಕಟಣೆ

ಇತ್ತಲಾಗಿ ಜೆರುಸಲೇಮಿನಲ್ಲಿ ಅಂತಿಯೋಕ ಸಿಂಹಾಸನದ ನಿವಾಂತ ಮಾನ್ಯನನ್ನ ದಿವ್ಯ ಶ್ರೀ. ಇಗ್ನೆಸಿಯಸ್ ಅಫ್ರೇಮ್ ಪೇಟ್ರಿಯೋರ್ಕ್‌ರಿಂದ ಅಭಿಷೇಕಿಸಲ್ಪಟ್ಟ ಜಕೊಬೈಟ್ ಸಿರಿಯನ್ ಇಗರ್ಜಿಯ ವನ್ನ ದಿವ್ಯ ಶ್ರೀ ಗ್ರಿಗೋರಿಯಸ್ ಮೆಟ್ರೊ ಪೊಲಿಟನರು ಹೊನ್ನಾವರ ಸಂದರ್ಶನದ ಅವಸರದಲ್ಲಿ 7-10-47ರಲ್ಲು ಉದಿಯಾವರ ಮಿಲಾಗ್ರಿಸ್ ಸಿರಿಯನ್ ಇಗರ್ಜಿಗೆ ಸಂದರ್ಶನವಿತ್ತು ಮರುದಿವಸ ತಾ. 8-10-47ರಲ್ಲು ಪ್ರಯಾಣ ಬೆಳೆಸಿದರು.

ಚಂದಾದಾರರಲ್ಲಿ

ನವಯುಗದ ಚಂದಾಹಣ ಬಾಕಿ ಇರುವ ಚಂದಾದಾರರೆಲ್ಲರೂ ತಮ್ಮ ಬಾಕಿಯನ್ನೂ ಚಾಲ್ತಿ ವರ್ಷದ ಚಂದಾಹಣವನ್ನೂ ದಯವಿಟ್ಟು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಅಪೇಕ್ಷಿಸುತ್ತೇವೆ. ಸಕಾಲದಲ್ಲಿ ಹಣ ಅಥವಾ ಯಾವ ತರದ ಉತ್ತರವೂ ಬಾರದಿದ್ದರೆ ಮುಂದಿನ ಸಂಚಿಕೆಯನ್ನ ವಿ. ಪಿ. ಮಾಡುತ್ತೇವೆ. ಅದನ್ನು ಪ್ರತಿಯೊಬ್ಬರೂ ಸ್ವೀಕರಿಸಬೇಕಾಗಿ ವಿನಂತಿ.

— ಮೆನೇಜರ್.



ಕರ್ನಾಟಕ ಸೇವಾ ಸಂಘ, ಮದ್ರಾಸು—ಕಾರ್ಯಕಾರಿ ಸಮಿತಿಯ ಸಭೆಯು ತಾ. ೨೧ರಂದು ವೈ. ಎಂ. ಸಿ. ಎ. ಮೈಲಾಪುರದಲ್ಲಿ, ಶ್ರೀ ಎಂ. ವಿ. ಪೈಯವರ ಅಧ್ಯಕ್ಷತೆಯಲ್ಲಿ ನಡೆಯಿತು. ದಿವಂಗತ ಶ್ರೀ ಮುದವೀಡು ಕೃಷ್ಣರಾಯರ ನಿಧನದ ಸಲುವಾಗಿ ಸಂತಾಪಸೂಚಕ ಠರಾವು ಮಂಜೂರಾಯಿತು. ಮೈಸೂರು ಜನತೆ ಜವಾಬ್ದಾರಿ ಸರಕಾರಕ್ಕಾಗಿ ಹೋರಾಟ ನಡೆಸುತ್ತಿರುವುದಕ್ಕೆ ಸಂಪೂರ್ಣ ಬೆಂಬಲ ಕೊಡುವುದಲ್ಲದೆ ದೇಶದ ಅದ್ಯಂತ ನಡೆಸುವ ಪೋಲೀಸ್ ಮತ್ತು ಮಿಲಿಟರಿ ದಬ್ಬಾಳಿಕೆಯನ್ನು ತೀವ್ರವಾಗಿ ಖಂಡಿಸುತ್ತದೆ ಎಂಬ ಠರಾವೂ ಮಂಜೂರಾಯಿತು. "ಕನ್ನಡಿಗರ ಕೂಟ"ವನ್ನು ನಡೆಸುವ ಬಗ್ಗೆ ಮದ್ರಾಸಿನ ಇತರ ಸಂಘಗಳಿಗೆ ಆಹ್ವಾನವಿತ್ತು ಪ್ರತ್ಯೇಕ ಸಮಿತಿಯನ್ನು ರಚಿಸುವುದೆಂದು ನಿಶ್ಚಯವಾಯಿತು.

ತಾ. ೮-೧೦-೪೭ರ ಸಂಜೆ ರಾನಡೇ ಹಾಲ್‌ನಲ್ಲಿ ಗಮಕಿ, ಶ್ರೀ. ಕು. ರಾ. ಸೀತಾರಾಮ ಶಾಸ್ತ್ರಿ ಇವರು "ಕವಿಗಳು" ಎಂಬ ವಿಷಯದಲ್ಲಿ ಭಾಷಣವಿತ್ತರು. ಬಳಿಕ ಕವನಗಳನ್ನು ಭಾವಪೂರ್ಣವಾಗಿ ಹಾಡಿದರು. ಮದ್ರಾಸ್ ಸರಕಾರದ ನ್ಯಾಯವಿಧಾಯಕ ಸಭೆಯ ಜತೆ ಕಾರ್ಯದರ್ಶಿಗಳಾದ, ಶ್ರೀ. ಟಿ. ಹನುಮಂತಪ್ಪ ಇವರು ಅಧ್ಯಕ್ಷತೆ ವಹಿಸಿದ್ದರು.

ಮಂಗಳೂರು

ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ಪುಸ್ತಕಾಲಯದ ಉದ್ಘಾಟನೋತ್ಸವವು ತಾ. 5ನೇ ಸಂಜೆ ಕೆನರಾ ಹೈಸ್ಕೂಲಿನಲ್ಲಿ ಶ್ರೀ. ಬಿ. ಗಂಗಾಧರದಾಸ್, ಬಿ. ಎ. ಬಿ. ಎಲ್. ಕೌನ್ಸಿಲರ್ ಇವರ ಅಧ್ಯಕ್ಷತೆಯಲ್ಲಿ ನೇರವೇರಿತು. ಶ್ರೀ. ಕೆ. ಆರ್. ನಂಜುಂಡನ್, ಬಿ. ಒ. ಎಲ್. ಇವರು ಸಭಿಕರನ್ನು ಸ್ವಾಗತಿಸಿದ ತರುವಾಯ ಶ್ರೀ. ದಾಮೋದರ ಬಾಳಿಗ, ಶ್ರೀ. ಕೆ. ಕೆ. ಶೆಟ್ಟಿ, ಶ್ರೀ ವಿ. ಆರ್. ನಾಯಕರ ಭಾಷಣಗಳಾದುವು. ಶ್ರೀ ಕೆ. ವೆಂಕಟೇಶ ಪ್ರಭುಗಳು ಧನ್ಯವಾದ ಹೇಳಿದರು. ಶ್ರೀಮತಿ ವತ್ಸಲಾ ಮಂಗಳೂರರ ಗಾಯನದೊಂದಿಗೆ ಸಭಾಂತ್ಯವಾಯಿತು.

ಮಂಗಳೂರು ತಾಲೂಕಿನ ಮೂರ್ತೆಯವರ ಶಿಷ್ಟಮಂಡಲವೊಂದು ತಾ. ೬ರಂದು ನಮ್ಮ ಜಿಲ್ಲಾ ಕಲೆಕ್ಟರ್ ಸೌಂಡರ್ಸ್ ಸಾಹೇಬರನ್ನು ಕಂಡು, ಪಾನನಿರೋಧದಿಂದಾಗಿ ಉದ್ಯೋಗವಿಲ್ಲದಿರುವ ಮೂರ್ತೆಯವರಿಗೆ ಈಗ ಕನಿಷ್ಟಪಕ್ಷ ಒಬ್ಬೊಬ್ಬರಿಗೆ ೨೦ ರೂ ಪ್ರಕಾರ ಕೊಡಬೇಕಾಗಿ ಮನವಿ ಮಾಡಲಾಗಿದೆ. ಈ ಶಿಷ್ಟಮಂಡಳಿಗೆ ಶ್ರೀಗಳಾದ ಗಂಗಾಧರ ದಾಸ್, ಮತ್ತು ಶ್ರೀ ಎಸ್. ಎಸ್. ಕೊಳ್ಳರು ನಾಯಕರಾಗಿದ್ದರು. ಕಾಸರಗೋಡು ತಾಲೂಕಿನಿಂದ ಬಂದಿದ್ದ ಸುಮಾರು ೧೦೦ಕ್ಕೂ ಮೇಲ್ಪಟ್ಟ ಮೂರ್ತೆಯವರು ಶ್ರೀ ಸಿ. ಮಂಗೇಶರಾವ್ ಮತ್ತು ಶ್ರೀ ಕೆ. ವಿ. ನಾರಾಯಣನ್‌ರವರ ನಾಯಕತ್ವದಲ್ಲಿ ಇನ್ನೊಂದು ಮನವಿಯನ್ನು ಕಲೆಕ್ಟರಿಗೆ ಅರ್ಪಿಸಿ ತಮಗೆ ಕೆಲಸವೊದಗಿಸಿಕೊಡುವವರೆಗೆ ಕನಿಷ್ಟಪಕ್ಷ ತಿಂಗಳಿಗೆ ರೂ ೪೦ರಷ್ಟಾದರೂ ಕೊಡಬೇಕಾಗಿ ಕೇಳಿಕೊಂಡಿದ್ದಾರೆ. ಎರಡು ಮನವಿಗಳನ್ನೂ ತಾನು ಪರ್ಯಾಲೋಚಿಸುವುದಾಗಿ ಕಲೆಕ್ಟರರು ಆಶ್ವಾಸನೆಯಿತ್ತಿದ್ದಾರೆ.

ಮಂಗಳೂರಿನ ಸಮಾಜವಾದಿ ಪಕ್ಷದ ನೇತೃತ್ವದಲ್ಲಿ—ತಾ. ೬ರಂದು ಸಂಜೆ ಮೂರ್ತೆ ಕೆಲಸದವರ ಒಂದು ಸಾರ್ವಜನಿಕ ಸಭೆಯು ಜರಗಿತು. ಈ ಸಭೆಗೆ ಡಾ। ಸಂಜೀವನಾಥ್ ಅವರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಸಿ. ಗೋವಿಂದನ್, ಎ ಬಾಲಪ್ಪ, ಎಂ ವೆಂಕಟೇಶಪೈ, ಮುಂತಾದವರು ಪಾನನಿರೋಧ ಜ್ಯಾರಿಗೆ ಬಂದುದರ ಪರಿಣಾಮ, ಆದರಿಂದ ಮೂರ್ತೆಯವರಿಗೆ ಒದಗಿದ ಕಷ್ಟ, ಜನತಾ ಸರಕಾರವು ಕೈಕೊಳ್ಳಬೇಕಾದ ಕಾರ್ಯ ಇತ್ಯಾದಿಗಳ ಕುರಿತಾಗಿ ಮಾತಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಮೂರ್ತೆಯವರಿಗೆ ಕೆಲಸಸಿಗಬೇಕೆಂಬ ಘೋಷಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ದ. ಕ. ಪಂಡಿತ ಸಂಘ—ವಾರ್ಷಿಕಾಧಿವೇಶನವು ತಾ. ೫ರಂದು ಸಂಜೆ ಗಣಪತಿ ಹೈಸ್ಕೂಲಿನಲ್ಲಿ ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವರದಿ ವಾಚನಗಳಾದ ಬಳಿಕ ಸಂಘದ ಅಧ್ಯಕ್ಷರಾದ ಶ್ರೀ ಸೇಡಿಯಾಪು ಕೃಷ್ಣ ಭಟ್ಟರು ಈ ಕೆಳಗಿನ ಠರಾವನ್ನು ಸಭೆಯ ಮುಂದಿಟ್ಟರು. "ಇತರ ಉಪಾಧ್ಯಾಯರೆಲ್ಲರ ವೇತನದ ಕುರಿತು ಮದ್ರಾಸು ಸರಕಾರವು ಒಂದು ನಿರ್ಧಾರವನ್ನು ಮಾಡಿದ್ದರೂ ಪಂಡಿತರ ವೇತನದ ಕುರಿತು ನಿಶ್ಚಿತವಾದೊಂದು ವ್ಯವಸ್ಥೆಯನ್ನು ಇನ್ನೂ ಮಾಡದಿರುವುದಕ್ಕಾಗಿ ದ. ಕ. ಪಂಡಿತ ಸಂಘದ ಈ ಮಹಾ ಸಭೆಯು ಅತ್ಯಂತವಾಗಿ ವಿಷಾದಿಸುತ್ತದೆ." ಈ ಠರಾವನ್ನು ಶ್ರೀ ಎಂ. ಸುಬ್ರಾಯನ್, ಶಿವಾನ್ ಇವರು ಅನುಮೋದಿಸಿದರು. ಸರ್ವಸಮ್ಮತಿಯಿಂದ ಮಂಜೂರಾಯಿತು. ಬಳಿಕ ಹೊಸ ವರ್ಷಕ್ಕೆ ಕಳೆದ ವರ್ಷದ ಕಾರ್ಯಕರ್ತರೇ ಆರಿಸಲ್ಪಟ್ಟರು.

ಹೊಸ ಡಿ. ಮುನ್ಸಿಫರಾಗಿ—ಈ ಜಿಲ್ಲೆಯಲ್ಲಿ ಡೆಪ್ಯೂಟಿ ಕಲೆಕ್ಟರರಾಗಿದ್ದು ಈಗ ನಿವೃತ್ತಿ ಹೊಂದಿದ ರಾ. ಸಾ. ಕೃಷ್ಣಯ್ಯನವರ ಪುತ್ರ ಕಲ್ಯಾಣಪುರ ಶ್ರೀ ಸೀತಾರಾಮರಾವ್. ಎಡ್ವೋಕೇಟ್, ಮಂಗಳೂರು ಇವರು ನೇಮಕ ಹೊಂದಿದ್ದಾರೆ.

ಮಂಗಳೂರು ನಗರ ಸಭೆಯ—ಪ್ರಥಮ ಸಭೆಯು ತಾ. ೧೪ಕ್ಕೆ ಸೇರಿ ಚೆಯರ್ಮನರನ್ನು ಆರಿಸಲಿದೆ.

ಗಣಪತಿ ಹೈಸ್ಕೂಲಿನ—ವರ್ಧಂತ್ಯುತ್ಸವ ಸಮಾರಂಭಗಳು ತಾ. ೨೦-೧೦-೪೭ರಂದು ಶಾರದಾ ಪೂಜೆಯೊಂದಿಗೆ ಪ್ರಾರಂಭವಾಗುವುವು ಮದ್ರಾಸ್ ಸಂಸ್ಥಾನದ ವಿದ್ಯಾಧಿಕಾರಿಗಳಾದ ಡಾ। ಎಸ್. ಆರ್. ಯು. ಸವೂರ್ ಇವರ ಅಧ್ಯಕ್ಷತೆಯಲ್ಲಿ ತಾ. ೨೪ರಂದು ಶಾಲಾ ವರ್ಧಂತ್ಯುತ್ಸವವು ನೆರವೇರುವುದು.

ಹರಿಜನ ನವಚೇತನ ಸಭಾ ಪಾಂಡೇಶ್ವರ—ಈ ಸಂಘದ ವತಿಯಿಂದ ಕಳೆದ ತಾರೀಖು ೨ರಲ್ಲಿ ಶ್ರೀ ಗೋಪಾಲ ಸಾಲಿನ್ಸರ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿ ಉತ್ಸವವು ಜರಗಿತು.

ಆಯುಧಗಳ ಲೈಸನ್ಸು ನವೀಕರಣ:—ತುಪಾಕಿ, ರಿವಾಲ್ವರು ಮೊದಲಾದ ಆಯುಧಗಳ ಲೈಸನ್ಸುಗಳನ್ನು ಸಂ. ೧೯೪೮ನೇ ಇಸವಿಗೆ ರಿನ್ಯೂವಲ್ ಬಗ್ಗೆ ಮಾಡೋಣಾಗುವ ಅರ್ಜಿಗಳನ್ನು ತಾ. ೧-೧೧-೪೭ರಿಂದ ಈ ಆಫೀಸಿನಲ್ಲಿ ಸ್ವೀಕರಿಸೋಣಾಗುವುದು. ತಾ. ೩೧-೧೨-೪೭ರ ಮೊದಲು ತಲ್ಪುವ ಅರ್ಜಿಗಳ ವಿಷಯದಲ್ಲಿ ತೋಟೆ, ಕೋವಿಗಳ ಮತ್ತು ರಿವಾಲ್ವರ್ ಇತ್ಯಾದಿ ಕುರಿತು ಫೋರ್ಮ XVI ಲೈಸೆನ್ಸು ರಿನ್ಯೂವಲ್ ಬಗ್ಗೆ ಅರ್ಧ ಫೀಸನ್ನು, ಅನಂತರ ಬರುವ ಅರ್ಜಿಗಳಿಗೆ ಲೈಸನ್ಸ್ ರಿನ್ಯೂವಲ್ ಬಗ್ಗೆ ಕ್ರಮ ಪ್ರಕಾರ ಸಂಪೂರ್ಣ ಫೀಸನ್ನೂ ಹೊರಿಸಲಾದೀತು. ಆದಕಾರಣ ರಿನ್ಯೂವಲ್ ಬಗ್ಗೆ ಅರ್ಜಿಮಾಡುವ ಲೈಸನ್ಸ್‌ದಾರರು ಅವರ ಅರ್ಜಿಗಳನ್ನು ಕ್ಲುಪ್ತ ಸಮಯದಲ್ಲಿ ಈ ಆಫೀಸಿಗೆ ತಲಪಿಸುವಂತೆ ಈ ಮೂಲಕ "ಅಪೇಕ್ಷಿಸೋಣಾಗುತ್ತದೆ."—ಎಂದು ಜಿಲ್ಲಾ ಮೆಜಿಸ್ಟ್ರೇಟರ ಆಫೀಸಿನಿಂದ ಪ್ರಕಟಿಸಲಾಗಿದೆ.

ನೆರಿಗಾನ (ಮಂಗಳೂರು):—ಇಲ್ಲಿಯೂ ತಾ. 1ರಲ್ಲು ಪಾನನಿಷೇಧ ದಿನಾಚರಣೆಯು ಯಶಸ್ವಿಯಾಗಿ ಜರಗಿತು. ಶ್ರೀ. ವಿ. ನಾರಾಯಣ ನಾಯ್ಕರ ನೇತೃತ್ವದಲ್ಲಿ ರಾಷ್ಟ್ರ ಧ್ವಜಾರೋಹಣ, ಶ್ರೀ ಮೋನಪ್ಪ ರಾಮಣ್ಣ ಸೆಟ್ಟರ ಭಾಷಣ, ಶಾಲಾ ಮಕ್ಕಳಿಗೆ ಶ್ರೀ ಗೋಪಾಲಕೃಷ್ಣ ಭಟ್ಟರಿಂದ ಲಘು ಫಲಾಹಾರ ಸತ್ಕಾರಾದಿ ಕಾರ್ಯಕ್ರಮಗಳಾಗಿ ರಾಷ್ಟ್ರಗೀತೆ ಹಾಡಲಾಯಿತು.

ಬದಿಯಡ್ಕ:—ಪ್ರೇಮಕೂಟದ ಆಶ್ರಯದಲ್ಲಿ ದಸರಾ ಮಹೋತ್ಸವವು ಪೆರಡಾಲ ಎಲಿಮೆಂಟರಿ ಶಾಲೆಯ ಕಟ್ಟಡದಲ್ಲಿ ಇದೇ ತಾ. 21ರಿಂದ 24ರ ತನಕ ವಿವಿಧ ಕಾರ್ಯಕ್ರಮಗಳಿಂದ ಜರಗಲಿರುವುದು.

ಗಣಪತಿ ಹೈಸ್ಕೂಲಿನ ಹಳೆವಿದ್ಯಾರ್ಥಿ ಸಂಘ—ಗಣಪತಿ ಹೈಸ್ಕೂಲಿನ ವರ್ಧಂತ್ಯುತ್ಸವವು ತಾ. 24-10-47ರಲ್ಲಿ ಸಂಸ್ಥಾನದ ವಿದ್ಯಾಧಿಕಾರಿಗಳಾದ ಮಾನ್ಯ ರಾವ್ ಬಹದ್ದೂರ್ ಡಾ. ಎಸ್. ಆರ್. ಯು. ಸವೂರ್ ಎಂ. ಎ. ಡಿ. ಯಸ್‌ಸಿಯವರ ಅಧ್ಯಕ್ಷತೆಯಲ್ಲಿ ಜರಗುವುದು. ಅದೇ ಸಂದರ್ಭದಲ್ಲೇ ಎಂದಿನಂತೆ ಜರಗಲಿರುವ ಹಳೇ ವಿದ್ಯಾರ್ಥಿ ಸಂಘದ ಮಹಾ ಸಭೆಯು ತಾ. 23-10-47ರಲ್ಲಿ ಶಾಲಾ ವಠಾರದಲ್ಲಿ ಸಂಜೆ 4ಗಂಟೆಗೆ ನೆರವೇರುವುದು. ಹಳೆ ವಿದ್ಯಾರ್ಥಿಗಳೆಲ್ಲರೂ ಇದಕ್ಕೆ ಬರಬೇಕಾಗಿಯೂ ಸಂಘಕ್ಕೆ ಸಾಮಾನ್ಯ ಅಥವಾ ಅಜೀವ ಸದಸ್ಯನಾಗಿ ಸೇರಿ ಪ್ರೋತ್ಸಾಹಿಸಬೇಕಾಗಿಯೂ ಸಂಘದ ಜತೆ ಕಾರ್ಯದರ್ಶಿಗಳು ಅಪೇಕ್ಷಿಸುವರು.

ಮಂಗ್ಳೂರು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಹರಿಜನರಿಗೆ ಪ್ರವೇಶ:—ಇದೇ ತಾ. 2ನೆ ಗಾಂಧಿಜಯಂತಿಯ ದಿವಸ ಗೌಡ ಸಾರಸ್ವತ ಸಮಾಜದ ದೇವಸ್ಥಾನವಾದ ಶ್ರೀ ವೆಂಕಟರಮಣ ದೇವಳದಲ್ಲಿ ಹರಿಜನರೂ ಬಿಲ್ಲವ ಸಮಾಜ ಬಂಧುಗಳೂ ಇತರರೊಡನೆ ಪೂರ್ವಾಹ್ನ 11-30ಕ್ಕೆ ಪ್ರವೇಶಿಸಿ ಹಣ್ಣು ಕಾಯಿ, ಕಾಣಿಕೆ, ದಕ್ಷಿಣೆ ಭಕ್ತಿಪೂರ್ವಕ ಸಲ್ಲಿಸಿ ತೀರ್ಥ ಗಂಧ ಪ್ರಸಾದಗಳನ್ನು ಸ್ವೀಕರಿಸಿದರು. ಜಿಲ್ಲಾ ಹರಿಜನ ಸೇವಕ ಸಂಘದ ಅಧ್ಯಕ್ಷರಾದ ಡಾ। ಯು. ಪಿ. ಮಲ್ಯ, ಎಮ್. ಎಲ್. ಎ; ಮತ್ತು ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಡಾ। ಕೆ. ನಾಗಪ್ಪ ಆಳ್ವರೇ ಮೊದಲಾದ ಕಾಂಗ್ರೆಸ್ ಕೆಲಸಗಾರರು ಈ ಪ್ರಸಾದ ಸ್ವೀಕಾರದಲ್ಲಿ ಕೂಡಿಕೊಂಡಿದ್ದರು.

ಪ್ರಕಟಣೆ

ಉಡುಪಿ ತಾಲ್ಲೂಕು ನಂಬ್ರ 78ನೆ ಹೆರ್ಗ ಗ್ರಾಮದ ಬೆಂಜಮಿನ್ ಫೆರ್ನಾಂಡಿಸನು ತಿಳಿಯಪಡಿಸುವದೇನಂದ್ರೆ. ನನ್ನ ಮಗ ಪೌಲು ಫೆರ್ನಾಂಡಿಸ ತಾ. 7-8-1947ನೆಯಲ್ಲಿ ನವಯುಗದಲ್ಲಿ ಪ್ರಕಟಿಸಿದ ಕೆಲವು ಸಂಗ್ತಿಗಳು ಸುಳ್ಳಾಗಿರುತ್ತವೆ. 3 ಹೆಣ್ಣು ಮಕ್ಕಳಿಗೆ ಯೋಗ್ಯವಾದ ಬಳುವಳಿ ನಾನು ಕೊಟ್ಟದ್ದಿಲ್ಲ. ಸ್ವಲ್ಪ ಆ್ಯವೇಜು ಮಾತ್ರ ಕೊಟ್ಟು ಹಿಂದಿನಿಂದ ಕೊಡುತ್ತೇನಾಗಿ ವಾಗ್ದಾನ ಮಾಡಿರುತ್ತೇನೆ ಸದ್ರಿಯವನು ಗೋವೆಗೆ ಓಡಿ ಕೆಲವು ವರ್ಷ ಗೋವೆಯಲ್ಲಿದ್ದು ಊರಿಗೆ ಬಂದ ಮೇಲೆ ನಾನು ನನ್ನ ಸ್ವಂತ ಸಂಪಾದನೆಯ ಹಣವನ್ನು ಅಂದ್ರೆ 4000 ರುಪ್ಯಾಯನ್ನು ಕೊಟ್ಟುದರಿಂದ ಆತನು ಅಂಗಡಿ ಕಟ್ಟೋಣ ಕಟ್ಟಿಸಿದ್ದಾಗಿರುತ್ತದೆ. ನನ್ನ ಹಣದಿಂದಲೇ ಕೃತ ಮಾಡಿಸಿದ್ದಲ್ಲದೆ ಅವನ ಹಣದಿಂದಲ್ಲ. ಆತನು ಮಿಕ್ಕ ಯಿಬ್ಬರು ಗಂಡುಮಕ್ಕಳನ್ನು ತಾನೊಬ್ಬನೇ ಅಕ್ರಮಲಾಭ ಪಡೆಯುವರೆಯೂ ನನ್ನ ಸ್ವಂತ ಆಸ್ತಿಯಲ್ಲಿ ಒಬ್ಬನೇ ಪಾಲುಗಾರನಾಗಿರಬೇಕೆಂಬ ಯಿರಾದೆಯಿಂದ ಊರಿನಿಂದ ಓಡಿಸಿರುತ್ತಾನೆ, ಅಲ್ಲದೆ ನನ್ನ ಅನುಮತಿವಿನಹಾ ವಕೀಲುಗಳ ಗೇಣಿಯನ್ನು ಪಡಕೊಂಡು ನನಗೆ ಗೇಣಿ ಕೊಡುವರಿ ಆತಂಕಿಸುತ್ತಾನೆ. ನಾನು ಯಿಪ್ಪರವರೆಗೆ ಸ್ವಸ್ತ ಬುದ್ಧಿಯುಳ್ಳವನಾಗಿರುತ್ತೇನೆ. ನನ್ನ ವಿನಹಾ ಅವನಿಗೆ ಸ್ಥಿರಚರಗಳಲ್ಲಿ ಹಕ್ಕು ಯಿರುವದಿಲ್ಲ ನಾನು ಆಸ್ತಿಯನ್ನು ಬೇರೆಯಿಬ್ಬರು ಗಂಡುಮಕ್ಕಳಿಗೂ 3 ಮಂದಿ ಹೆಣ್ಣು ಮಕ್ಕಳಿಗೂ ಪಾಲು ಕೊಡುತ್ತೇನೆಂಬ ಸಂಶಯದಲ್ಲಿ ಯೀ ನೋಟೀಸು ಜ್ಯಾಹೀರು ಮಾಡಿದ್ದಾಗಿರುತ್ತದೆ. ಅಲ್ಲದೆ ಸದ್ರಿಯವನು ನನ್ನ ಸ್ಥಿರಚರ ಸೊತ್ತುಗಳನ್ನು ತನಗೇನೇ ಬಿಟ್ಟುಕೊಡಬೇಕೆಂಬ ದುರಾಲೋಚನೆಯಿಂದ ನನಗೆ ಅನೇಕಸಾರಿ ಹೊಡೆದು ಜಖಂಪಡಿಸಿದ್ದಲ್ಲದೆ ಪ್ರಾಣ ಬಚಾವು ಮಾಡುವದಕ್ಕೋಸ್ಕರ ನನ್ನ ಅಳಿಯನಾದ ಮತ್ತೇಸ ಸೋಜನ ಮನೆಯಲ್ಲಿ ರಾತ್ರಿ ಮಲಗುತ್ತಾ ಯಿದ್ದೇನೆ.

ಬೆಂಜಮಿನ್ ಫೆರ್ನಾಂಡಿಸನ ರುಜು

ತಾ. 9-10-47

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 438/1947.

ವಾದಿ, ಅಕ್ಕಣ ಸಡ್ತಿ.

ಪ್ರತಿವಾದಿ, ನಾರಾಯಣ ಸೆಟ್ಟಿ, ಬೀಡಿನ ಮನೆ ನಾಗಯ್ಯ ಸೆಟ್ಟಿ ಅಳಿಯ, ಉಡುಪಿ ತಾಲ್ಲೂಕು ಯಡ್ತಾಡಿ ಗ್ರಾಮದ ಅಲ್ತಾರು—

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ,

ನೀವು ವಾದಿಳಿಗೆ ಬರಕೊಟ್ಟ ಡಿಮಾಂಡು ನೋಟಿನ ಅಸ್ಲು ಬಡ್ಡಿ ಖರ್ಚುಗಳನ್ನು ಬರಮಾಡಿಕೊಳ್ಳುವದಕ್ಕೆ ನಿಮ್ಮ ಮೇಲೆ ಮೇಲಿನ ದಾವಾ ಹಾಕಲ್ಪಟ್ಟಿರುತ್ತಾರೆ. ಸದ್ರಿ ದಾವೆಯು ತಾರೀಕು 29-10-47ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಕಸ್ಸಿಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮ ಆಕ್ಷೇಪವಿದ್ದಲ್ಲಿ, ಸದ್ರಿ ದಿನ್ನ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನ ಪಡಿಸಲಾದೀಯಂತ್ರ ಕೋರ್ಟಿನ ಹುಕ್ಕುಂ ಪ್ರಕಾರ ತಿಳಿಯದೆ.

M. M Hegde,
Advocate for Plaintf

ತಾ. 8-10-47.
ಮೊಕ್ಕಾಂ, ಕುಂದಾಪುರ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ
ಪ್ರೊಪ್ರೈಟರ್.

INDRA BHAVAN COFFEE HOTEL.
Balmatta Road, MANGALORE.

ಡಿ ಮೂಲ್ಕಿ ಬೇಂಕ್

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾ 15 ವರ್ಷಗಳಿಂದ ಡಿಪೋಜಿಟುಗಳ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ದಕ್ಷಿಣ ಕನ್ನಡ

ಚೇರ್ಕಾಡಿ:—ಇದೇ ತಾ 1ರಲ್ಲಿ ಆರ್ ಕೆ. [illegible] ಎಲಿ [illegible] ಸರಕಾರದ ಮದ್ಯಪಾನ ಪ್ರತಿಬಂಧಕಾಜ್ಞೆಯ ವಿಷಯ ಸಾರ್ವಜನಿಕ ಸಭೆ ಜರಗಿ ಭಾಷಣವಗೈರೆ ನ [illegible] ಬಾಲಿಕೆಯಿಂದ [illegible] ಮೆರವಣಿಗೆಯಾಗಿ [illegible] ಮಾಡಲಾಯಿತು. [illegible] ಗಾಂಧಿಜಯಂತಿಯನ್ನು [illegible]

ಕೊಲ್ನಾಡು:—ತಾ 1-10-1947ರ [illegible] ಕೊಲ್ನಾಡು ಗ್ರಾಮ ಕಾಂಗ್ರೆಸ್ ಕಮಿಟಿ [illegible] ಮದ್ಯಪಾನ ನಿಷೇಧ ದಿನದ ಸಮಾರಂಭವನ್ನು ಗ್ರಾಮ ಪಟೇಲ್‌ರವರು ಕೊಲ್ನಾಡು ಮತ್ತು ಸಾಲೆತ್ತೂರು ಗ್ರಾಮ ಪಟೇಲರು ಮತ್ತು ಎರಡು ಗ್ರಾಮಸ್ಥರ ಕೂಡುವಿಕೆಯಿಂದ ಆಚರಿಸಲ್ಪಟ್ಟಿತು. ಬೆಳಿಗ್ಗೆ ಮೆರವಣಿಗೆ, ಧ್ವಜಾರೋಹಣ, ಸಂಜೆ ಸಾರ್ವಜನಿಕ ಸಭೆಯಾಯಿತು. ಮಾರನೆದಿವಸ ತಾ 2 ನೇ ಬೆಳಿಗ್ಗೆ ಗಾಂಧಿ ಜಯಂತಿ ದಿನಾಚರಣೆ ಸಮಾರಂಭ ಬೈಗಾರಿ ಸಾರ್ವಜನಿಕ ಸಭೆ ಕಾಡುಮಾರ ಬೇಸಿಕ್ ಶಾಲಾ ಹೆಡ್ಮಾಸ್ತರರ ಅಧ್ಯಕ್ಷತೆಯಲ್ಲಿ ಜರಗಿ ಗ್ರಾಮಸಮಿತಿ ಅಧ್ಯಕ್ಷರ ಭಾಷಣವಾದನಂತರ ಕೂಡಿದ ಸಭಿಕರಿಗೆ ಸದ್ರಿ ಕೊಲ್ನಾಡು ಗ್ರಾಮ ಕಾಂಗ್ರೆಸ್ ಕಮಿಟಿ ಅಧ್ಯಕ್ಷರ ಧನ್ಯವಾದದೊಡನೆ ಜನಗಣಮನ ಪದ್ಯದೊಂದಿಗೆ ಸಭೆ ಅಂತ್ಯವಾಯಿತು.

ಬಾಲಕರು ಆರೋಗ್ಯಶಾಲಿಗಳಾಗಲು (ಪ್ರಭೂಸ್) ಬಾಲಾಮೃತ
ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀವ ಶಕ್ತಿಯಿಲ್ಲದ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನೆಟ್ಟಗಾಗಲು ತಾಯಿ ತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ. ಮಾತ್ರ, ಹೊತ್ತು ಕಳೆದರೆ ಮತ್ತೆ ಬಾರದು.

‘ಪ್ರಭೂಸ್’
ಬಾಲಾಮೃತ

ಪ್ರಭೂಸ್ ಬಾಲಾಮೃತದ ಖಾತ್ರಿಗೆ ಪಾಪಿಲೆ ಬೇಕೆ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಬಾಲು, ಪೋ. ಬ್ರಹ್ಮಾವರ, ದ. ಕ.
ಸ್ಟಾಕಿಸ್ಟರು:—
ನವಭಾರತ ಪುಸ್ತಕ ಭಂಡಾರ, ಉಡುಪಿ,
L. N. Sharma, Mangalore.

ಅಮೃತಾಂಜನ.
ತಲೆನೋವು, ಶೀತ, ನೆಗಡಿ, ಉಳುಕು, ಚುಳುಕು, ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಜೇನು ಹುಳ ಮುಂತಾದ ಜೀವಿ ಕಚ್ಚುವಿಕೆ, ವೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧಿ, ಮುದ್ದು ಪಾಲಕ ಸನ್ಮಿತ್ರ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಶ್ರೀ ಸಿದ್ಧವನ ಗುರುಕುಲಕ್ಕೆ ಟ್ರಸ್ಟ್:—ಕಳೆದ ಏಳೆಂಟು ವರುಷಗಳಿಂದಲೂ ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಂದ ನಡೆಸಿಕೊಂಡು ಬರುತ್ತಿರುವ ಶ್ರೀ ‘ಸಿದ್ಧವನ’ ಗುರುಕುಲ ಎಂಬ ವಿದ್ಯಾ ಸಂಸ್ಥೆಯು ಮುಂದೆಯೂ ಶಾಶ್ವತವಾಗಿ ಸುವ್ಯವಸ್ಥಿತ ರೀತಿಯಿಂದ ಬಾಳಿಬರಬೇಕೆಂಬ ಸದುದ್ದೇಶದಿಂದ ಶ್ರೀಗಳಾದ ಡಿ. ಮಂಜಯ್ಯ ಹೆಗ್ಗಡೆ, ಕೆ. ಬಿ. ಜಿನರಾಜ ಹೆಗ್ಗಡೆ, ಎಚ್. ಪದ್ಮನಾಭ ಅರಿಗಜೈನ ಮತ್ತು ಡಿ. ಪುಟ್ಟ ಸ್ವಾಮಿಗಳವರಿಂದ ಕೂಡಿದ ನಾಲ್ಕು ಜನ ಟ್ರಸ್ಟಿಗಳುಳ್ಳ “ಸಿದ್ಧವನ ಗುರುಕುಲ ಟ್ರಸ್ಟ್” ಎಂಬ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿ, ವರ್ಷಕ್ಕೆ ಅಂದಾಜು ನಾಲ್ಕು ಸಾವಿರ ರೂಪಾಯಿ ಉತ್ಪನ್ನ ಬರತಕ್ಕ ಸ್ಥಿರಾಸ್ತಿಗಳನ್ನು ಬಿಟ್ಟು ಕೊಟ್ಟಿರುವರು.

ಪ್ರಕೃತ ಈ ಗುರುಕುಲದಲ್ಲಿ 60 ಹಿಂದೂ ಮತ್ತು ಜೈನ ವಿದ್ಯಾರ್ಥಿಗಳಿರುವರು. ಇವರಿಗೆ ಸಂಸ್ಕೃತ, ಹಿಂದೀ, ಕನ್ನಡ, ಇಂಗ್ಲಿಷ್, ಸಂಗೀತ ಮತ್ತು ಇತರ ಕಲೆಗಳಲ್ಲಿ ಸಾಕಷ್ಟು ಪರಿಜ್ಞಾನ ದೊರಕಿಸಿ ಜೈನ ಮತ್ತು ವೇದಾಂತ ಧರ್ಮಗಳಲ್ಲಿ ಕೂಡಾ ನಿಪುಣರಾಗಿ ದೇಶ ಮತ್ತು ಸಮಾಜದ ಸೇವೆ ಮಾಡಲು ಅನುಕೂಲ ವಾತಾವರಣವಿರುವುದು ಅಭಿನಂದನೀಯ.

ಮಕ್ಕಾಡಿ (ಕಾಸರಗೋಡು)—ಇಲ್ಲಿ ಇದೇ ತಾ. 1ರಲ್ಲಿ ಪಾನನಿಷೇಧ ದಿನಾಚರಣೆಯು ಆಚರಿಸಲ್ಪಟ್ಟಿತು. ಶಾಲಾ ಮಕ್ಕಳ ಮೆರವಣಿಗೆ, ತಿಂಡಿ ಹಂಚೋಣ, ಸಂಜೆ ಶ್ರೀ ವಿ. ತಾಳಿತ್ತಾಯರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀಗಳಾದ ಕೆ. ಶಂಕರ ನಾರಾಯಣ ನಾಯಕ್, ಪಟೇಲ್ ಬಂಟಪ್ಪ ನಾಯಕ್ ಮೊದಲಾದವರ ಭಾಷಣಗಳಾದುವು.

ಕೊಕ್ಕರ್ಣೆ—ತಾ. 1-10-1947ರಲ್ಲಿ ಮದ್ಯಪಾನ ನಿಶೇಧ ದಿನಾಚರಣೆಯು ಅತೀ ವಿಜೃಂಭಣೆಯಿಂದ ಜರಗಿತು. ಪ್ರಾತಃಕಾಲ ಮತ್ತು ಸಾಯಂಕಾಲ ಮೆರವಣಿಗೆ ನಾನಾವಿಧದ ವೇಷಗಳ ಪ್ರದರ್ಶನಗಳಿದ್ದು ಸಂಜೆ ಸಾರ್ವಜನಿಕ ಸಭೆಸೇರಿ ಹಲವರ ಭಾಷಣಗಳಾದುವು.

ಹೆಬಮಾಡಿ—1-10-47ರಲ್ಲಿ ಬೆಳಿಗ್ಗೆ ಬೋ. ಹಾ. ಎ. ಶಾಲಾ ಮಕ್ಕಳಿಂದ ಸಾರ್ವಜನಿಕ ಮೆರವಣಿಗೆಯು ಹಳ್ಳಿಯ ಪ್ರಾಮುಖ್ಯ ಭಾಗಗಳಲ್ಲಿ ಸಂಚರಿಸಿ, ಮದ್ಯಪಾನ ನಿಷೇಧದ ಪ್ರಚಾರ ಕಾರ್ಯವನ್ನು ಯಶಸ್ವಿಯಾಗಿ ಮಾಡಿತು. ಅಪರಾಹ್ನ ಅಸ್ಪೃಶ್ಯರು, ಊರ ಮುಖಂಡರುಗಳ ನೇತೃತ್ವದಲ್ಲಿ ಸ್ಥಳೀಯ ಎರಡು ದೇವಸ್ಥಾನಗಳಿಗೂ ಪ್ರವೇಶ ಮಾಡಿದರು. ಮಹಾಲಿಂಗೇಶ್ವರ ವೀರದಳ ಮತ್ತು ಬಾಲಚರರು ಎರಡು ಕಾರ್ಯಗಳಲ್ಲೂ ಭಾಗವಹಿಸಿದ್ದರು.

ಹೈದರಾಬಾದ-ಮೈಸೂರ ಸಹಾಯಕ ಸಮಿತಿ, ಹುಬ್ಬಳ್ಳಿ—ಇವರು ಒಂದು ಜಾಹೀರು ಪ್ರಕಟಣೆಯನ್ನು ಹೊರಡಿಸಿ ಹೈದರಾಬಾದ-ಮೈಸೂರ ಸಂಸ್ಥಾನಗಳಲ್ಲಿ ಜನತಾ ರಾಜ್ಯಸ್ಥಾಪನೆ ಮಾಡುವ ಉದ್ದಿಶ್ಯದಲ್ಲಿ ಅಖಿಲ ಕರ್ನಾಟಕದ ಪೂರ್ಣ ಸಹಾನುಭೂತಿಯಿದೆ. ಇದನ್ನು ಸಕ್ರಿಯೆಗೊಳಿಸಿ ಉದಾರ ಭಾವನೆಯಿಂದಲೂ ಮುಕ್ತ ಹಸ್ತದಿಂದಲೂ ಜನಧನ ಸಹಾಯ ಮಾಡಬೇಕೆಂದು ಆಗ್ರಹ ಪೂರ್ವಕ ವಿನಂತಿ ಮಾಡಿರುವರು.

ದಿ ಬಾರ್ಕೂರು ಬಿಲ್ಲವರ ಚಾರಿಟಿ ಸಂಘ ಮುಂಬಾಯಿ—ಇದರ 1947—48ನೇ ವರ್ಷದ ಕಾರ್ಯಕಾರಿ ಸದಸ್ಯರು. ಶ್ರೀ:- ವೈ. ಜಿ. ಬಂಗೇರ (ಅಧ್ಯಕ್ಷ.) ಚಿ. ತನಿಯ (ಉಪಾಧ್ಯಕ್ಷ) ಐ. ಯಸ್ ಕೋಟ್ಯಾನ್ (ಗೌ. ಪ್ರ. ಕಾರ್ಯದರ್ಶಿ.) ನರ್ಸಪ್ಪ ಕೆ. ಕೊಟ್ಯಾನ್ (ಸಹಾಯಕ ಕಾರ್ಯದರ್ಶಿ.) ಯಲ್. ವಿ. ಕುಕ್ಯನ್ (ಗೌ. ಕೋಶಾಧಿಕಾರಿ.) ಕೆ. ತುಕ್ರ ಸುವರ್ಣ, ಕೆ. ಯಮ್. ಬಂಗೇರ. ಯು. ತೌಡಪ್ಪ, ಕುಪ್ಪ ಬಿ. ಅಮೀನ್. ಕೈಪುಂಜಾಲು ಕಾಡ್ಯ, ಪಿ. ಕೆ. ಸುವರ್ಣ ಆರ್. ಜೆ. ಮಟ್ಟಿ. ತಿಮ್ಮಪ್ಪ ಯಸ್, ಅಂಚನ್, ಶೀನ ಬಿ. ಪಾಲಿಯಾನ್. ಯನ್. ಯಮ್. ಉದ್ಯಾವರ್. (ಸದಸ್ಯರು)

ಮುಂಬಯಿ—ಬಗ್ವಾಡಿ ಹೋಬಳಿ ಮೊಗವೀರ ಮಹಾಜನ ಸಂಘದ ಹಲವಾರು ಉದ್ದೇಶಗಳನ್ನು ಊರಲ್ಲಿ ಯೋಗ್ಯರೀತಿಯಿಂದ ಜ್ಯಾರಿಗೆ ತರುವ ಮೊದಲು ಹೋಬಳಿಯ ಮೊಗವೀರರ ಸಾಮಾಜಿಕ ಮತ್ತು ಸಾಂಪತ್ತಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವ ಬಗ್ಗೆ ಸಮಾಜ ಬಂಧುಗಳ ಜನಗಣನೆ ತೆಗೆಯಲು ಸಂಘದ ಕಡೆಯಿಂದ ಶ್ರೀ ಬಗ್ವಾಡಿ ಪುಟ್ಟ ಜಿ. ಶ್ರೀಯಾನರನ್ನು ಊರ ಸಂಚಾರದ ಬಗ್ಗೆ ಈ ತಿಂಗಳಲ್ಲಿ ಕಳುಹಲಾಗಿದೆ. ಸಮಾಜ ಬಂಧುಗಳು ಅವರಿಗ ಸಹಕಾರವನ್ನಿತ್ತು ಅವರ ಕಾರ್ಯವು ಯಶಸ್ವಿಯಾಗುವಂತೆ ನೆರವಾಗಬೇಕೆಂದು ಸಂಘದ ಜನರಲ್ ಸೆಕ್ರೆಟರಿಗಳ ವಿನಂತಿಯಿದೆ.

ಸ್ವೀಕಾರ ವಿಮರ್ಶೆ

ಕನ್ನಡ ಸಹಕಾರಿ:—ಸಂಪುಟ ೨೧ ಸಂಚಿಕೆ ೬ ಡೆಮಿ 1/8 24 ಪುಟಗಳು. ಸಂಪಾದಕರು—ಪಿ. ರಾ. ಮುಲ್ಯ. ಪ್ರಕಾಶಕರು ದ. ಕ. ಜಿಲ್ಲಾ ಸಹಕಾರಿ ಅಭಿವೃದ್ಧಿ ಸಂಘ, ಮಂಗಳೂರು—ಆಗೋಸ್ತು ತಿಂಗಳ ಈ ‘ಸ್ವಾತಂತ್ರ್ಯ ದಿನಾಂಕ’ವು ಜನಸಾಮಾನ್ಯರಿಗೆ ಸಂದರ್ಭದ ಮಹತ್ವವನ್ನು ಸುಲಭವಾಗಿ ತಿಳಿಯ ಹೇಳುವ ಹಲವು ಚಿಕ್ಕಪುಟ್ಟ ಲೇಖನಗಳಿಂದ ತುಂಬಿ ಚೆಲುವಾಗಿ ಪ್ರಕಟವಾಗಿರುವುದು ಸಂತೋಷದ ವಿಷಯ.

ವಿಶ್ವ ಕರ್ನಾಟಕ:—ಬೆಂಗಳೂರಿಂದ ಹೊರಡುವ ಈ ವಾರಪತ್ರಿಕೆಯು ಸ್ವಾತಂತ್ರ್ಯೋತ್ಸವದ ಈ ವಿಶೇಷ ಸಂಚಿಕೆಯನ್ನು ಡೆಮಿ 1/8 ಆಕಾರದ ೪೦ ಪುಟಗಳ ಪುಸ್ತಕ ರೂಪದಲ್ಲಿ ಆಕರ್ಷಣೀಯರಾಗಿ ಪ್ರಕಟಿಸಿದೆ. ತಿಳಿಯಬೇಕಾಗಿರುವ ಹಲವು ವಿಷಯಗನ್ನೊಳಗೊಂಡ ಲೇಖನಗಳಿಂದ ತುಂಬಿದೆ.

ಜನತಾ:—ಮಾಸಪತ್ರಿಕೆ. ಎರಡನೆ ವರ್ಷದ ಮೊದಲ ಸಂಚಿಕೆ, ಡೆಮಿ 1/8 ಆಕಾರದ ೪೦ ಪುಟಗಳು. ಬೆಲೆ ೪ ಆಣೆ ಸಂಪಾದಕರು ಶ್ರೀ ಕೇಶವ. ಬೆಂಗಳೂರಿಂದ ಹೊರಡುವ ಈ ಮಾಸಿಕವು ಜನಸಾಮಾನ್ಯರ, ವಿಶೇಷತಃ ಶ್ರಮಜೀವಿಗಳ, ಸಂಕಷ್ಟಗಳನ್ನು ಲೇಖನ ಕಥಾ ರೂಪಗಳಲ್ಲಿ ಬಗೆ ಮುಟ್ಟುವಂತೆ ಮಾಡುವ ಹಲವು ಲೇಖನಗಳಿಂದೊಡಗೂಡಿ ಚೆಂದಾಗಿದೆ.

ಕಹಳೆ:—ಸಂಪುಟ ೧, ಸಂಚಿಕೆ ೧, ವಾರ್ಷಿಕ ಚಂದಾ ೩-೪-೦ ಬಿಡಿಪ್ರತಿ ಒಂದಾಣೆ ಸಂಪಾದಕರು ಶ್ರೀ. ಕೆ. ವೆಂಕಟಸುಬ್ಬಯ್ಯ, ಮೈಸೂರು. ಕ್ರೌನ್ 1/8 ಆಕಾರದ ೧೨ ಪುಟಗಳ ಪುಸ್ತಕರೂಪದ ಈ ಕಹಳೆಯು ಮೊಳಗು ದೂರದ ತನಕವೂ ಕೇಳಿಸಬೇಕಾದರೆ ಇದು ತನ್ನ ಕ್ರಶತ್ವವನ್ನು ನೀಗಿ ಕೊಳ್ಳಬೇಕು ಹಾಗಾಗಲೆಂದು ಹಾರೈಕೆ.

—‘ಕೊಡಿಕ್ಕಲ್’

ಮಧುವಿಗೂ ಮಧುರ!
ಮಧುವನ

ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾ ಸಂಗ್ರಹ.
ಕಣ್ಸೆಳೆವ ಬಾಹ್ಯಾಂಗ! ಮನಸೆಳೆವ ಅಂತರಂಗ!

ಹಿರಿಯರ ಪ್ರಪಂಚದ ಪ್ರಕಟಣೆ • ಕತೆಗಾರರ ಪರಿಚಯಗಳು ಪಡಿಯಚ್ಚುಗಳು

ಪ್ರಕಟಣೆ

ಉಡುಪಿ ತಾಲೋಕು ಬೊಮ್ಮರಬೆಟ್ಟು ಗ್ರಾಮದ ಹಿರಿಯಡ್ಕದಲ್ಲಿರುವ ಚಂದ್ಯ ಕುರ್ಲ ಹೆಗ್ಡೆಯು ಸರ್ವ ಜನರಿಗೂ ಈ ಮೂಲಕ ತಿಳಿಯಪಡಿಸುವದೇನಂದ್ರೆ—ನಂನ ಮೊಮ್ಮಗ, ವ, ರುದ್ರಮ್ಮ ಹೆಗಡ್ತಿ ಮಗ ರತ್ನಾಕರ ಹೆಗಡೆಯು ನನ್ನ ವಿಷಯವಾಗಿ ದುರ್ನಡತೆಯಿಂದ ವರ್ತಿಸಿದ ಕುರಿತು ನಾನು ತಾ. 11-9-47ರ ನವಯುಗದ ಸಂಚಿಕೆಯಲ್ಲಿ ಪ್ರಕಟಪಡಿಸಿದ ಹೊರತು ತಾ. 9-9-47ರಲ್ಲಿ ನಾನು ನಂಬ್ರ 111ನೇ ರಿಜಿಸ್ಟ್ರಿ ನೋಟಿಸು ಕೂಡ ಅವಗೆ ಕೊಟ್ಟು [illegible] ಕ್ರಿಮಿನಲ್ ವ್ಯವಹರಣೆ ನಡಿಸುವದನ್ನು ನನ್ನ ಮೊಮ್ಮಗನಾಗಿಯೂ ನಮ್ಮ ಕುಟುಂಬದ ಅತಿಸಂಚ ಪ್ರಾಯದ ಕಿರಿಮೊಂಬರನಾಗಿಯೂ ಇದ್ದದ್ದರಿಂದ ಅಂಥಾ ಮೋಹದ ಕಾರಣದಿಂದ ಬ್ಯಾದೆರೆಯಿಂದ ಕೂಡಾ ವಿಚಾರಿಸಿ ನನಗೆ ಭಾವಕವಾಗದಂತೆ ಮಾತ್ರ ಮೇಲೆ ಬರೆದ ಪ್ರಕಾರ ವರ್ತಿಸಿದ್ದೆ. ಆದರೆ ಸದ್ರಿ ರತ್ನಾಕರ ಹೆಗಡೆಯು ತಾ. 25-9-47ರ ನವಯುಗದ ಸಂಚಿಕೆಯಲ್ಲಿ ನನ್ನ ಜ್ಯಾಹಿರುತು ಮತ್ತು ರಿಜಿಸ್ಟ್ರಿ ನೋಟೀಸು ನನ್ನ ಮಗ ಪಟೇಲ್ ಸುಬ್ಬಯ್ಯ ಹೆಗಡೆಯು ನನ್ನನ್ನು ವಂಚಿಸಿ ಆವನೇ ಮಾಡಿದ್ದಾಗಿಯೂ ಸದ್ರಿ ಸಂಗ್ತಿಗಳು ನನ್ನ ತಿಳಿವಳಿಕೆಗೆ ಬಿಲ್ಲದ್ದಾಗಿಯೂ ನಾನೇ ತಾ. 16-9-47ರಲ್ಲಿ ಸದ್ರಿ ರತ್ನಾಕರ ಹೆಗಡೆಗೆ ರಿಜಿಸ್ಟ್ರಿ ನೋಟೀಸು ಕೊಟ್ಟಿರುತ್ತೇನಾಗಿ ಪ್ರಕಟಿಸಿರುತ್ತಾನೆ. ಇದು ತೀರಾ ಸುಳ್ಳು ಮತ್ತು ತನ್ನ ಸಭ್ಯತನವನ್ನು ಪ್ರದರ್ಶಿಸುವ ಕಾಲ್ಪನಿಕ ಕುಯುಕ್ತಿ ಆಗಿರುತ್ತದೆ. ಅಲ್ಲದೆ ನನ್ನ ತಾ. 11-9-47ರ ನವಯುಗದ ಸಂಚಿಕೆಯ ಪ್ರಕಟಣೆಯೇ ಸಿಂಧುವಾಗಿರತಕ್ಕದ್ದು ಯೆಂಬ ಸಂಗ್ತಿ ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುತ್ತೇನೆ.

ಚಂದಯ್ಯ ಕುರ್ಲ ಹೆಗ್ಡೆ ರುಜು
ದಿ. ಬ. ಬಿ. ಮಹಾಬಲ ಹೆಗ್ಡೆರ ಅಳಿಯ
ಪಟೇಲ್ ಸುಬ್ಬಯ್ಯ ಹೆಗ್ಡೆ ಸಾಕ್ಷಿ.

(೨ನೇ ಪುಟದಿಂದ)

ಗಳೊಡನೆ ಪ್ರಳಯ ತಾಂಡವಾಡುತ್ತಿರುವ ಮುಸ್ಲಿಂ ಲೀಗ್ ನಾಯಕತ್ವವನ್ನು ಧಿಕ್ಕರಿಸಬೇಕೆಂದೂ ನನ್ನ ದೃಢಾಭಿಮತ. ಈ ಲೀಗ್ ನಾಯಕರ ವಿರುದ್ಧವಾಗಿ ಮಿಶ್ರಮತದಾನದ ಸಂಬಂಧವಾಗಿ ಒಂಭತ್ತು ತಿಂಗಳ ಮೊದಲು ಮುಸ್ಲಿಂ ಜನತೆಯ ಹಿತದೃಷ್ಟಿಯಿಂದ ನಾನು ಏಕಾಕಿಯಾಗಿ ಸ್ವರವೆತ್ತಿದಾಗ ನನ್ನ ಕುತ್ತಿಗೆಗೆ 'ದ್ರೋಹಿ' ಬಿರುದನ್ನು ಕಟ್ಟಲಾಯಿತು; ನನ್ನ ರುಂಡವನ್ನು ಅಪೇಕ್ಷಿಸಲಾಯಿತು. ನಾನಾಗ ಸಾಧಿಸಲಿಳಿದುದು ಅವರ ಹಿತವನ್ನೋ ದ್ರೋಹವನ್ನೋ ಎಂಬುದನ್ನೀಗ ನಿರ್ಧರಿಸಿಕೊಳಬೇಕು ನನ್ನ ಸಮಾಜ ಬಂಧುಗಳೇ. ಲೀಗ್ ನಾಯಕರು ಜಾಹೀರು ಮಾಡಿರುವ ಪ್ರತಿಜ್ಞೆಗಳಿದ್ದರೂ ನಾನು ಧೈರ್ಯವಾಗಿ ಹೇಳುತ್ತೇನೆ—ಸ್ವಪ್ರತಿಷ್ಠಾಕಾಮಿಗಳಾದ ಒಂದು ಲೀಗ್ ಪುಡಾರೀ ಹಿಂಡು ಒಂದು ಕಣ್ಣನ್ನು ಪಾಕಿಸ್ತಾನದ ಮೇಲೂ ಮತ್ತೊಂದನ್ನು ಹಿಂದುಸ್ಥಾನದ ಮೇಲೂ ಹಾಕಿ ಈಗಲೂ ಇಬ್ಬಾಯಿಯ ಆಟವಾಡುತ್ತಿದೆ. ಕ್ರೂರ ಲೀಗ್ ನಾಯಕರ ಕೈಯ ಉಪಕರಣವಾಗಿ ಮುಸ್ಲಿಂ ಸಮಾಜದ ಘನತೆಯೆಂಬುದು ಬುಡದಿಂದ ತುದಿಯ ವರೆಗೂ ಸಹಸ್ರಾವಧಿ ವರುಷಗಳನಕ ಬಿಸಿಲ್ಗುದುರೆಯಾಗಿ ಹೋಯಿತು ಈ ದುಷ್ಟನಾಯಕ ಪಾತ್ರಗಳು ಕಲಿಸಿದ ಬಹುಸಂಖ್ಯಾಕ ಸಮಾಜದ ಕಡೆಗಿನ ವೈರಂ ಮತ್ತು ದ್ವೇಷ ಮಂತ್ರಗಳನ್ನು ಜಿಗುಪ್ಸೆ ಬರುವವರೆಗೂ ಪಠಿಸಿ ಮುಸ್ಲಿಂಜನಸಾಮಾನ್ಯರಾದರೋ ಈಗ ತಾವು ಪೂರ್ಣನಿಸ್ಸಹಾಯಕಸ್ಥಿತಿಗೆ ಬಲಿಬಿದ್ದವನ್ನೂ ಪರಿಸ್ಥಿತಿಯ ಕಠೋರತೆಯನ್ನೂ ಅರಿತುಕೊಳ್ಳುವಂತಾಗಿದೆ. ಹಿಂದೀ ಕೇಂದ್ರದ ಮೇಲೆ ವಿಧೇಯತೆ ಮತ್ತು ಸಂಬಂಧ ಸೂಚನೆ ಕೊಟ್ಟ ಮಾತ್ರಕ್ಕೆ ಸಾಲದು. ಮುಸ್ಲಿಮರು ಮುಂದೆ ಬಂದು ಪ್ರಾಂತ್ಯಗಳಲ್ಲಿ ಆಶ್ರಯ ಪಡೆದಿರುವ ನಿರಾಶ್ರಿತರಿಗೆ ಪ್ರತ್ಯಕ್ಷ ನೆರವನ್ನೀಯಬೇಕು. ನಾವು ಅವರ ಕಡೆಯವರಾಗಿರಲು ಯಥಾರ್ಥತೆಯಿಂದಿದ್ದೇವೆ ಎಂಬುದನ್ನು ಕಾರ್ಯತಃ ಪ್ರದರ್ಶಿಸೋಣ. ಈಗ ಮಿ. ಜಿನ್ನರಿಂದ ಕೂಡಾ ತಿರಸ್ಕರಿಸಲ್ಪಟ್ಟಿರುವ ದ್ವಿರಾಷ್ಟ್ರತತ್ವಕ್ಕೆ ಬಲಿಬಿದ್ದಿರುವ ಮುಸಲ್ಮಾನರಿಗೆ ಸರಿಯಾದ ನಾಯಕತ್ವ ದೊರೆಯಲಿ"

ಬೊಂಬಾಯಿಯ ಲೀಗ್ ನಾಯಕ ಮಿರ್ಝಾ ಹಕೀಮ್ ಹೈದರ್

'ನೀವು ಭಾರತದಲ್ಲೇ ಬದುಕಲಿಚ್ಛಿಸುವದಾದರೆ ಭಾರತ ಸರಕಾರದ ಯಥಾರ್ಥ ನಾಗರಿಕರಾಗಿಯೇ ಇರಬೇಕು. ಗಲಭೆಗಳ ಮುಖ್ಯಕಾರಣವೆಂದರೆ ಯಥಾರ್ಥವಂತನಾಯಕತ್ವವಿಲ್ಲದಿರುವುದೇ. ನಮ್ಮ ನಾಯಕರು ಅಪಾಯವನ್ನೆದುರಿಸಿ ನಿಲ್ಲುವ ಬದಲಿಗೆ ಅಪಾಯದ ಚಿಹ್ನೆ ತೋರಿಬಂದೊಡನೆಯೇ ಅಂತಹ ಸ್ಥಳಗಳಿಂದ ಪಲಾಯನಮಾಡಿದರು. ಭಯಪೀಡಿತ ಜನರು ಸಿಕ್ಕಾಬಟ್ಟೆ ಚೆಲ್ಲಾಪಿಲ್ಲಿಯಾಗಿ ವಿಶಾಲಕ್ಷೇತ್ರಗಳಲ್ಲಿ ಹರಿಹಂಚಾಗಿ ಬಿದ್ದು ಗೂಂಡಾಗಳಿಗೆ ಸುಲಭದಲ್ಲಿ ಬಲಿಯಾದರು. ಈಗ ಕಾಲಬದಲಾಯಿಸಿದೆ; ಕಾಲದೊಂದಿಗೆ ನಾವೂ ಬದಲಾಗಬೇಕು. ನಾವು ಸೇರಿದ ಸರಕಾರಕ್ಕೆ ವಿಶ್ವಾಸೀ ವಿಧೇಯರಾಗಿರಬೇಕು. ಇಲ್ಲವಾದರೆ ನಾವು ಧ್ವಂಸವಾಗಿ ಹೋಗುವೆವು.'

ಸಿಂಧ್ ಪ್ರಧಾನ ಮಂತ್ರಿಯ ಪಾರ್ಲಿಮೆಂಟರಿ ಕಾರ್ಯದರ್ಶಿ ಕಾಜೀ ಮುಸ್ತಾಬಾ ಎಂ. ಎಲ್. ಎ.

'ಯುದ್ಧ' ಮತ್ತು 'ಜೆಹಾದ್'ನ ಬಡಾಯಿ ಬಿಡುತ್ತಿರುವ ಪಾಕಿಸ್ತಾನದಲ್ಲಿರುವ ಈ ಜನರೆಲ್ಲಾ ಸಂಯುಕ್ತಪ್ರಾಂತ್ಯ, ಮಧ್ಯಪ್ರಾಂತ್ಯ, ಬಿಹಾರ್ ಮತ್ತಿತರ ಹಿಂದೂ ಬಹುಸಂಖ್ಯಾಕ ಪ್ರಾಂತ್ಯಗಳಲ್ಲಿರುವ ನಾಲ್ಕು ಕೋಟಿ ಮುಸಲ್ಮಾನರ ಸ್ನೇಹಿತರಲ್ಲವೆನ್ನುತ್ತೇನೆ. ಇಂಥವರು ತಮ್ಮ ಮುಸ್ಲಿಂ ಬಂಧುಗಳಿಗೆ ಅತಿ ದೊಡ್ಡ ಅನ್ಯಾಯ ಮಾಡುತ್ತಿದ್ದಾರೆ. ಎರಡು ವಸಾಹತುಗಳೊಳಗೆ ಯುದ್ಧವೆಂದರೆ ಹಿಂದುಸ್ಥಾನ್, ಪಾಕಿಸ್ತಾನವೆರಡರಲ್ಲೂ ಇರುವ ಹಿಂದೂ, ಮುಸ್ಲಿಂ, ಇಬ್ಬರೂ ವಿದೇಶಿಗಳ ಗುಲಾಮರಾಗುವದೆಂದೇ ಅರ್ಥ. ಮಹಾರಾಜರುಗಳ ಬೆಂಬಲದಿಂದ ಪಂಡಿತ ನೆಹರು ಮತ್ತವರ ಸಮರ್ಥಕರನ್ನು ಅಧಿಕಾರದಿಂದ ಕಿತ್ತು ಹಾಕುವ ದುಶ್ಶಕ್ತಿಗಳೀಗ ಕೆಲಸಮಾಡುತ್ತಿವೆ. ಪಾಕಿಸ್ತಾನದಲ್ಲಿರುವ ಹಿಂದುಗಳ ಭಯ ಮನೋವೃತ್ತಿಯನ್ನು ನಿವಾರಿಸಿ, ಅವರಲ್ಲಿ ರಕ್ಷಣಾ ಭರವಸೆಯನ್ನು ಸಂಪೂರ್ಣವಾಗಿ ನಿರ್ಮಿಸಲು ನಮ್ಮಿಂದ ಸಾಧ್ಯವಿದ್ದುದನ್ನೆಲ್ಲಾ ಸಾಧಿಸುವ ಮೂಲಕ ನಾವಾ ದುಶ್ಶಕ್ತಿಗಳನ್ನು ಸೋಲಿಸಬಲ್ಲೆವು'.

ಮಿ. ಸುಹ್ರಾವರ್ದಿ

'ಹಿಂದುಗಳು ಮತ್ತು ಮುಸಲ್ಮಾನರು ಜತೆಗೂಡಿ ಸೌಹಾರ್ದತೆಯಿಂದ ತಾವಾವ ಸರಕಾರದ ಒಳಗಿರುವರೋ ಆ ಸರಕಾರದ ವಿಧೇಯ ನಾಗರಿಕರಾಗಿ ಬಾಳಬೇಕು. ಹಿಂದುಸ್ಥಾನ ಸರಕಾರಕ್ಕಾಗಲೀ ಪಾಕಿಸ್ತಾನ ಸರಕಾರಕ್ಕಾಗಲೀ ಯುದ್ಧ ಬಯಕೆಯಿಲ್ಲ. ತಾವು ಅಭಿವೃದ್ಧಿ ಹೊಂದುವ ಮಾತು ಹಾಗಿರಲಿ; ಅಸ್ತಿತ್ವದಲ್ಲಿರಬೇಕಾದರೂ ಶಾಂತಿಯಿರಬೇಕಾದುದು ಅಗತ್ಯವೆಂಬುದನ್ನು ಎರಡು ಸರಕಾರಗಳೂ ತಿಳಿದಿವೆ'

ಸಂಯುಕ್ತ ಪ್ರಾಂತ್ಯದ ಲೀಗ್ ಪಕ್ಷದ ಉಪನಾಯಕ ಮಿ. ಲಾರಿ.

'ಭಾರತದ ಮುಸ್ಲಿಮರು ಭಯಭ್ರಾಂತರಾಗಿದ್ದಾರೆ. ಇದಕ್ಕೆ ಕಾರಣವೂ ಇಲ್ಲ; ಮುಸ್ಲಿಂ ಸಮಾಜಕ್ಕಿದು ಯೋಗ್ಯವೂ ಅಲ್ಲ. ಪಂಡಿತ ನೆಹರುಗಳು ಶಾಂತಿ ಸ್ಥಾಪಿಸಲೇ ಬೇಕೆಂದು ಪಣತೊಟ್ಟಿರುವರೆಂಬುದು ನನಗೆ ಮನದಟ್ಟಾಗಿದೆ. ಈ ಕಾರ್ಯದಲ್ಲಿ ಮಹಾತ್ಮಾಗಾಂಧಿಯವರ ಬೆಂಬಲ ಅವರಿಗಿದೆ. ಮುಸಲ್ಮಾನರು ಶಾಂತಚಿತ್ತ ಮತ್ತು ಆತ್ಮವಿಶ್ವಾಸದಿಂದಿದ್ದು ಭಾರತ ಸರಕಾರದ ಮೇಲೆ ಭರವಸೆಯಿಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮುಸ್ಲಿಂಲೀಗು ಇನ್ನು ಪಾರ್ಲಿಮೆಂಟರಿ ಕಾರ್ಯವನ್ನಷ್ಟೇ ಕೈಕೊಂಡು ತನ್ನ ಸದಸ್ಯರನ್ನು ತಮಗೆ ಸರಿತೋರುವ ಇತರ ರಾಜಕೀಯ ಪಕ್ಷಗಳೊಂದಿಗೆ ಸೇರಲು ಬಿಡಬೇಕೆಂದು ನನ್ನ ಅಭಿಪ್ರಾಯ. ಜತೆ ಪಕ್ಷಗಳು ಹುಟ್ಟಿದರೆ ಎರಡೂ ಸಮಾಜಗಳ ಸಂಬಂಧವು ಸುಗಮವಾಗುವದು.'

ಮಿ. ಖಲೀಕುಝ್ಝಮಾನ್, ಲೀಗ ನಾಯಕ (ಸಂ. ಪ್ರಾಂ.)

'ಭಾರತ ಕೇಂದ್ರದಲ್ಲಿರುವ ಮುಸಲ್ಮಾನರು, ತಮಗಾಗಿ ಮಹಾತ್ಮಾ ಗಾಂಧಿಯವರು ಮಾಡಿರುವ ಕಾರ್ಯಗಳಿಗಾಗಿ ಅತ್ಯಂತ ಕೃತಜ್ಞರಿರಬೇಕು"

ನಾಗಪುರ ಜಿಲ್ಲಾ ಮುಸ್ಲಿಂ ಲೀಗ್ ಕಾರ್ಯದರ್ಶಿ ಮಿ. ಇಶಾಕ್ ಭಾಯಿ

'ನಾವು ಭಾರತಕೇಂದ್ರದ ಧ್ವಜವನ್ನು ಅಂಗೀಕರಿಸಿದ್ದೇವೆ; ಅದು ನಮ್ಮದು. ಪಾಕಿಸ್ತಾನದ ವಿಧೇಯತೆಯೆಂಬ ಪ್ರಶ್ನೆಯೇ ಇಲ್ಲ. ನಾನು ಭಾರತದ ಪರವಾಗಿ ಹೈದರಾಬಾದು ಮತ್ತು ಪಾಕಿಸ್ತಾನಗಳ ವಿರುದ್ಧವಾಗಿ ಕೂಡಾ ರಕ್ತ ಚೆಲ್ಲುವೆ. ಹೈದರಾಬಾದಿನ ಏಜಂಟರುಗಳು ಮುಸ್ಲಿಮರ ನಡುವೆ ಸೇರಿಕೊಂಡು ಕೆಲಸ ಮಾಡುತ್ತಿದ್ದಾರೆ, ಆದರೆ ಮುಸ್ಲಿಮರ ಯಾವುದೇ ದೊಡ್ಡ ಭಾಗದಮೇಲೆ ತಮ್ಮ ವರ್ಚಸ್ಸನ್ನು ಬೀರಲು ಅವರಿಂದಾಗಿಲ್ಲ. ಹೊರಗಿನವರ ದೆಸೆಯಿಂದಾಗಿ ಯಾವುದೇ ಹಂಚಿಕೆ ತಯಾರಾಗಿದೆ ಎಂಬುದು ಸುಳ್ಳು. ಕೇಂದ್ರ ಮುಸ್ಲಿಂ ಲೀಗಿನೊಡನಿರುವ ನಮ್ಮ ಸಂಬಂಧ ಮುಂದೆ ಹೇಗಿರಬೇಕೆಂಬ ಕುರಿತು ಸದ್ಯದಲ್ಲೇ ನಾವು ನಿರ್ಧರಿಸಲಿದ್ದೇವೆ'

ಮಧ್ಯಪ್ರಾಂತಿಕ ಮುಸ್ಲಿಮರ ನಾಯಕ ಮಿ. ಅಲ್ಲಾಪಿಚಾಯಿ

ನಾವು ಈಗಲಾದರೂ ಗಾಂಧಿಜಿಯನ್ನು ಅನುಸರಿಸೋಣ. ನಿಸ್ಸಂದೇಹವಾಗಿಯೂ ಲೀಗಿನವರು ಕಾಂಗ್ರೆಸಿನಿಂದ ದೂರ ಇದ್ದರು. ಆದರೀಗ ಸ್ಥಿತಿ ವ್ಯತ್ಯಾಸಗೊಂಡಿದೆ. ಮುಸ್ಲಿಂ ಬುದ್ಧಿಯ ಪರಿಚಯ ನನಗಿದೆ. ಭಾರತಕೇಂದ್ರದ ರಕ್ಷಣೆಗಾಗಿ ಮುಸ್ಲಿಮರ ರಕ್ತದ ಕೋಡಿ ಹರಿಯುವ ದಿನ ಬರಬಹುದೆಂಬುದನ್ನೂ ನಾನು ಬಲ್ಲೆ. ತಮ್ಮ ಮೇಲೆ ಸಂಶಯವಿರುವಂತಾಗುವದನ್ನು ಎಂದಿಗೂ ಸಹಿಸದ ಸ್ವಭಾವದವರು ಮುಸ್ಲಿಮರು. ಮುಸ್ಲಿಮೇತರರಲ್ಲಿರಬಹುದಾದಂತೆ ಮುಸ್ಲಿಮರಲ್ಲಿಯೂ ದೇಶದ್ರೋಹಿಗಳಿದ್ದಲ್ಲಿ, ಅವರು ದ್ರೋಹಿಗಳೆಂದೇ ಗಣಿಸಲ್ಪಟ್ಟು ಶಿಕ್ಷಿಸಲ್ಪಡುತ್ತಾರೆ. ಇವೆರಡು ರಾಷ್ಟ್ರಗಳ ಪುನರ್ಮಿಲನವು ಆಯಾ ರಾಷ್ಟ್ರದಲ್ಲಿ ಅಲ್ಪಸಂಖ್ಯಾಕರನ್ನು ಕಾಣುವ ರೀತಿಯನ್ನೇ ಬಹುತೇಕವಾಗಿ ಅವಲಂಬಿಸಿದೆ ಎಂದು ನಾನು ಸ್ಪಷ್ಟಪಡಿಸುತ್ತೇನೆ'

ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತ್ ಅಲೀಖಾನ್

'ನನ್ನ ದೇಶಬಂಧುಗಳೇ, ಪಾಕಿಸ್ತಾನವಾದೊಡನೆ ಈ ರಕ್ತಮಯೀ ಘಟನೆಗಳು ನಡೆಯಲೆಂದು ನಾವು ಬಯಸಿದ್ದೂ ಇಲ್ಲ; ನಿರೀಕ್ಷಿಸಿದ್ದೂ ಇಲ್ಲ. ಪಾಕಿಸ್ತಾನವೆಂಬುದು ಅಲ್ಪ ಕಾಲ ಜ್ವಲಿಸಿ ಉದುರಿಹೋಗುವ ಧೂಮಕೇತುವಲ್ಲ; ಅದು ಅಸ್ತಮಿಸದು, ಪಾಕಿಸ್ತಾನ ಸಾಯುವಂತಹದಲ್ಲ. ನಾವಿಂದಿನ ತೊಂದರೆಗಳಿಂದ ಪಾರಾಗಿ ಅದನ್ನು ಕಟ್ಟಲು ತೊಡಗಬೇಕು. ಅದರಿಂದ ನಿಮಗೀಗ ಯುದ್ಧ ಮತ್ತು ಘರ್ಷಣೆಗಳ ಸುದ್ದಿ ಬಿಡುತ್ತಿರುವವರು ನಿಮ್ಮ ಮಿತ್ರರಲ್ಲ. ಅಂಥವರ ಕುರಿತು ಜಾಗ್ರತೆಯಲ್ಲಿರಿ. ಮರಣ ಮತ್ತು ಮಾನ ಧ್ವಂಸಗಳ ಮಧ್ಯದಲ್ಲಿ ನಿಮ್ಮ ಲಾಭನಷ್ಟಗಳೆಷ್ಟು ಎಂಬುದನ್ನು ಲೆಕ್ಕಿಸುವುದನ್ನು ನಿಲ್ಲಿಸಿರಿ. ಭವಿಷ್ಯದತ್ತ ನಿಮ್ಮ ಮುಖ ತಿರುಗಿಸಿರಿ. ಈ ಎರಡು ವಸಾಹತುಗಳೊಳಗೆ ಪರಸ್ಪರ ಘರ್ಷಣೆಯೆಂಬುದು ಎರಡಕ್ಕೂ ಆತ್ಮಹತ್ಯೆಯೆಂಬುದನ್ನು ಅವಲೋಕದಷ್ಟು ರಾಜಕೀಯ ಜ್ಞಾನವಿರುವವರೆಲ್ಲರೂ ಬಲ್ಲರು. ನಮ್ಮ ಗಡಿಯ ಹೊರಗಡೆ ಗಲಭೆ ನಿರ್ಮಿಸುವವರು ತಮ್ಮ ರಾಷ್ಟ್ರವನ್ನು ತಾವೇ ಬೆಂಗಡೆಯಲ್ಲಿರಿಯುತ್ತಿದ್ದಾರೆ. ಇಲ್ಲಿ ನಾವೂ ಇದನ್ನು ಮರೆತು ವರ್ತಿಸಿದರೆ ಪಾಕಿಸ್ತಾನದ ಬೆನ್ನಿಗೆ ತಿವಿದಂತೆಯೇ ಸರಿ. ದೊಡ್ಡ ತಪ್ಪುಮಾಡಿದವರು ನಾವಲ್ಲವೆಂಬುದು ಇಡೀ ಲೋಕಕ್ಕೇನೇ ಗೊತ್ತಿದೆ. ಆದರೂ ಪಾಕಿಸ್ತಾನದ ಹಲವೆಡೆಗಳಲ್ಲಿ ಬಹುಸಂಖ್ಯಾಕರು ಅಲ್ಪಸಂಖ್ಯಾಕರ ರಕ್ಷಣೆಮಾಡಲಾರದೆ ಹೋದುದು ಪಾಕಿಸ್ತಾನಕ್ಕೊಂದು ಕಳಂಕವೆಂದು ಭಾವಿಸುತ್ತೇನೆ.'



Approved firm by the Govt. of Mysore Certified by the Agent of the Govt. of Ceylone & Indian.

ಮನೆಮದ್ದು-Home Remedies ಬೆಲೆ ರೂ. 2-0-0

ಬರೆದವರು:—ಡಾ|| ಕೊರಡ್ಕಲ್ ವೆಂಕಟ್ರಾವ್, ಎಲ್.ಎ.ಎಮ್. ಉಡುಪಿ.

'Ably Written—Quite up-to-date—Valuble Service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ., ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಔಷಧಿ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200. ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ

ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ವಿವಿಧ ಪಾತ್ರೆಗಳು



ಯಾವತ್ತು ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

CHAMPAE'S
Snow & Castrex
Sole Distributors for India
Prop: K. G. NAYAK,
Santhekatte, UDIPI, S. K.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ-ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ? ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು? ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.

ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟು ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ನವಭಾರತ ಬುಕ್ ಡಿಪ್ರೊ, ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ವಿವರ ... ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು— ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 5—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಟಲಾಗ್ ಬರೆದಲ್ಲಿ ರೋಗಕ್ಕೆ ... ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:— ನವಭಾರತ ಬುಕ್ ಡಿಪ್ರೊ, (2) ಬೊಂಬಾಯಿ ಏಜಂಟರು:— ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್ ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಸಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Ayurveda Oushadhalaya GADAG

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬರೆದವರು:-

ಶ್ರೀ ಪಿ. ಶೀನ ಶೆಟ್ಟರು

ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ನವಭಾರತ ಬುಕ್ ಡಿಪ್ರೊ, ಉಡುಪಿ.

ಮಕ್ಕಳಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂ ಬೋಧಿನಿ

ಇಂಗ್ಲಿಷ್ ಏನೂ ತಿಳಿಯದವರು ಈ ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೆ ಇಂಗ್ಲಿಷ್ ಕಲಿತುಕೊಳ್ಳಬಹುದು. ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ಬೆಲೆ: ರೂ. 1—8—0 ಮಾತ್ರ.

1—12—0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಬುಕ್ ಡಿಪ್ರೊ, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3518

ನವಯುಗ

ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-6
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.

ಮೆನೇಜರ್,
ನವಯುಗ ಉಡುಪಿ

23-10-1947

"ಪ್ರತಿ ... ಇಂದಿನ ಪರಿಸ್ಥಿತಿಯನ್ನು ಸರಿಯಾದ ದೃಷ್ಟಿಯಿಂದ ನೋಡಿ ತಿಳಿದು ಸಹಾಯಕ್ಕೆ ಮುಂದಾಗಿರಿ, ನಿಮ್ಮ ಉಳಿಕೆಯ ಧಾನ್ಯವನ್ನು ತಮ್ಮ ರೇಶನ್ ಆಹಾರಕ್ಕಾಗಿ ನೋಡುತ್ತಿರುವ ಹಸಿದ ಜನತೆಯೊಡನೆ ಹಂಚಿ ಉಣ್ಣಿರಿ".

ವರ್ಷ ೨೭
ವಾರ ೮

NAVAYUGA WEEKLY, UDIPI.

FOUNDER: Hon'ble Mr. A. B SHETTY, Health Minister, Govt. of Madras.

Vol. 27
No. 8

THE CANARA MUTUAL Assurance Company, Limited.

Estd: 1935
H. O. UDIPI, S. Kanara.

BONUS DECLARED FOR 8 YEARS

We are glad to announce that we have declared a Bonus for 8 years from 1939 to 1946 both years inclusive as also an interim bonus for the next valuation period.

T. R. A. Pai,
Managing Director.

The 1946 Record Business proves the popularity
THE BOMBAY LIFE ASSURANCE COMPANY, LTD.

Company's New Business in 1946— 3.28 Crores
Our Chief Agency New business in 1946 about 54 Lakhs

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,
Chief Agents for South India,
Bombay Life Building,
Central Office, Udipi.

Branches at:
Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಹೊಂದಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂತಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L.I.M.; ಡಾ। ವೆಂಕಟರಾವ್, ಕೊರಕ್ಕಲ್; ನವಭಾರತ ಬುಕ್ ಡಿಪೊ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ 1 ಗುಳಿಗೆ ಮಧ್ಯಾಹ್ನಕ್ಕೆ 1 ಗುಳಿಗೆ, ಸಂಜೆಗೆ 1 ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೦ ಆಣೆ.

ಮಾಲಕರು:—ಬಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ವಾಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಳ್ಳಕೇರಿಯಲ್ಲಿ:—ತುಂಬರವಾಡಿ ಸ್ಟೋರ್, ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲದಾಸ, ಕೆಮಿಸ್ಟ, ಹಾವೇರಿ ಬ್ರಾಂಚ್.

Ayurveda Oushadalaya, GADAG CITY.

ನಿಮ್ಮಷ್ಟಕ್ಕೆ ನೀವು ಮನೆಯಲ್ಲೆ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0.
ನವಭಾರತ ಬುಕ್ ಡಿಪೊ, ಉಡುಪಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಾರ್ಯಾಲಯ:—ಧಾರವಾಡ,

ಹೆಚ್ಚಿನ ಸವಲತ್ತಿನ ಬಗ್ಗೆ—
ಪೋಸ್ಟ್ ಬಾಕ್ಸ್ ನಂಬ್ರ 10, ಉಡುಪಿ, ಇವರಿಗೆ ಬರೆಯಿರಿ.

ಹಿಂದೂ ದೃಷ್ಟಿಯಲ್ಲಿ-ಜುನಗಾಡಿನ ಪವಿತ್ರ ಪ್ರಾಮುಖ್ಯ ಸ್ಥಾನ

ಲೇ - ಬಿನಾಯಕ್ ದತ್ತ.

ಭಗವಾನ್ ಶ್ರೀ ಕೃಷ್ಣನು ಈ ಪುರಾತನ ಭೂಮಿ ಭಾರತದಲ್ಲಿ, ಸಂಯುಕ್ತ ಪ್ರಾಂತ್ಯದ ಪವಿತ್ರ ನಗರ ಮಥುರೆಯಲ್ಲಿ ಹುಟ್ಟಿದುದು ಐದು ಸಾವಿರ ವರುಷಗಳ ಪೂರ್ವದಲ್ಲಿ. ಅವನು ತನ್ನ ನಶ್ವರ ಕಾಯವನ್ನು, ಈಗ ಪ್ರಭಾಸ್‌ಪತನ್ ಅಥವಾ ಸೋಮನಾಥಪತನ್ ಎಂದು ಕರೆಯಲ್ಪಡುತ್ತಿರುವ ಪ್ರಭಾಸ್‌ನಲ್ಲಿ ಹಿರಣ್ಯ ಹೊಳೆಯ ದಡದಲ್ಲಿ ತ್ಯಾಗಮಾಡಿದ್ದ. ಈ ಸ್ಥಳವು ಹಿರಣ್ಯ ಹೊಳೆಯು ಅರಬೀ ಸಮುದ್ರಕ್ಕೆ ಸಂಗಮವಾಗುವಲ್ಲಿದೆ. ಪಶ್ಚಿಮ ಭಾರತ ಏಜನ್ಸಿಯ ಅಡಿಯಲ್ಲಿರುವ ಕಾಥಿಯಾವಾಡದ ಜುನಗಾಡ್ ಸಂಸ್ಥಾನದೊಳಗಿದೆ ಈ ಪ್ರಭಾಸ್. ಭಗವಾನ್ ಶ್ರೀ ಕೃಷ್ಣನ 'ದೇಹೋತ್ಸರ್ಗ' ಸ್ಥಳವೆಂದು ಪ್ರಭಾಸ್ ಎಲ್ಲಾ ಹಿಂದುಗಳಿಗೂ ಗೊತ್ತಿರುವ ಸ್ಥಳ. ಭಗವಾನ್ ಶ್ರೀ ಕೃಷ್ಣನ ನಂತರ ಕಾಲಾನುಕ್ರಮವಾಗಿ ಅತಿಪವಿತ್ರ ಹಾಗೂ ಧರ್ಮ ಪ್ರಾಮುಖ್ಯದ್ದೆಂದು ಭಾರತದ ಆ ಮೂಲೆಯಿಂದೀಮೂಲೆಯ ವರೆಗಿನ ಎಲ್ಲಾ ಹಿಂದುಗಳೂ ಆ ಸ್ಥಳದ ಪುಣ್ಯಸ್ಮರಣೆ ಮಾಡುತ್ತಾರೆ.

ಚಾರಿತ್ರಿಕ ಧಾಳಿಗಳು

ಘಜ್ನಿ ಮಹಮ್ಮದನ ಕಾಲದಿಂದಲೂ ಹಿಂದೂ ದೇವಾಲಯಗಳ ಮೇಲೆ ಮುಸ್ಲಿಮ್ ಆಕ್ರಮಣಗಾರರ ಚರಿತ್ರೋಲ್ಲೇಖಿತ ಧಾಳಿಗಳು ನಡೆದಿದ್ದುದು ಇಲ್ಲಿಯೇ. ಹಲವು ಶತಮಾನಗಳು ಕಳೆದರೂ ಶೈವರ ಸೋಮನಾಥದ ಧ್ವಂಸಾವಶೇಷಗಳು ಜೋಡಣೆ ತಪ್ಪಿದ ಅಸ್ಥಿಗೂಡು ಸ್ಥಿತಿಯಲ್ಲಿ ಈಗಲೂ ಅಲ್ಲಿವೆ. ಮಹಾಭಾರತ ಕಾಲದಲ್ಲಿ ಇಡೀ ಕಾಥಿಯಾವಾಡವು ಸೌರಾಷ್ಟ್ರ ನಾಮಧಾರಿಯಾಗಿ ಮೆರೆಯುತ್ತಿತ್ತು; ಭಗವಾನ್ ಶ್ರೀ ಕೃಷ್ಣನು ತನ್ನ ಬಾಲಲೀಲೆಯಾಡಿದ್ದ ಮಥುರಾ ನಗರವನ್ನು ಬಿಟ್ಟು ಬಂದ ಮೇಲೆ ಈ ಇಡೀ ಸೌರಾಷ್ಟ್ರವನ್ನು ಆಳಿದ್ದ. ಈ ಸೋಮನಾಥ ತೀರ್ಥ ಸ್ಥಾನ ಮತ್ತು 'ದೇಹೋತ್ಸರ್ಗ'ವು ಪ್ರತಿಯೊಬ್ಬ ಹಿಂದುವಿಗೂ ಗೊತ್ತು. ಪುರಾಣ ಗ್ರಂಥಗಳಲ್ಲಿ ಕೂಡಾ ಈ ಸ್ಥಳಗಳ ಉಲ್ಲೇಖವಿದೆ. ದ್ವಾರಕೆಗೆ ಕೇವಲ ನೂರು ಮೈಲು ದೂರದಲ್ಲಿ ಪ್ರಭಾಸ್ ಇದೆ. ಭಗವಾನ್ ಶ್ರೀ ಕೃಷ್ಣನು ತನ್ನ ಜೀವಮಾನದ ಕೊನೆಯ ದಿನಗಳನ್ನು ಕಳೆದಿದ್ದುದು ದ್ವಾರಕೆಯಲ್ಲೇ.

ಪುಣ್ಯ ಸ್ಥಳ

ಜುನಗಾಡ್ ಸಂಸ್ಥಾನವು 3500 ಚದ. ಮೈಲು ವಿಸ್ತೀರ್ಣವಿದೆ; 6½ ಲಕ್ಷ ಜನಸಂಖ್ಯೆಯಿದೆ. ಈ ಪೈಕಿ ಸೇಕಡಾ 85 ರಷ್ಟು ಹಿಂದುಗಳು. ಸುಪ್ರಸಿದ್ಧ ಗಿರ್ನಾರ್ ಪರ್ವತವು ಈ ಸಂಸ್ಥಾನದ ಕೇಂದ್ರಸ್ಥಳದಲ್ಲೇ ಅರಬೀ ಸಮುದ್ರ ದಡಕ್ಕೆ 20 ಮೈಲು ದೂರದಲ್ಲಿದೆ. ಶಂಕರಾಚಾರ್ಯ ಪಂಥಿಗಳ ದತ್ತಾತ್ರೇಯ ಆಸ್ಥಾನ, ವೈಷ್ಣವರ ರಾಸ್ತ್ರೆರಾ (ಭಗವಾನ್ ಶ್ರೀ ಕೃಷ್ಣನು ರಾಸಲೀಲೆಯಾಡಿದ್ದ ಸ್ಥಳ) ಮತ್ತು ಜೈನರ ಅಖಿಲಭಾರತ ಖ್ಯಾತಿಯ ಹಲವು ಪ್ರಸಿದ್ಧ ದೇವಾಲಯಗಳು ಈ ಗಿರ್ನಾರ್ ಪರ್ವತಗಳಲ್ಲೂ ಆಸುಪಾಸಿನಲ್ಲೂ ಇವೆ. ಗಿರ್ನಾರ್ ಪರ್ವತ ಬುಡದಲ್ಲೇ ಅಶೋಕ ಚಕ್ರವರ್ತಿಯ ಚಾರಿತ್ರಿಕ ಶಿಲಾಲಿಪಿಗಳಿವೆ. ಅವುಗಳ ಚರಿತ್ರಾವಶೇಷ ಪ್ರಾಮುಖ್ಯತೆಯಿಂದಾಗಿ ಈಗಲೂ ಅವುಗಳನ್ನು ಜೋಪಾನ ಮಾಡಲಾಗಿದೆ. ಈಗ ಕೂಡಾ ತಮ್ಮ ಆ ಕಾಲದ ಸತ್ಕೀರ್ತಿ ಪ್ರಭೆಬೀರುತ್ತಾ ಅವು ಅಲ್ಲಿ ನಿಂತಿವೆ. ರೈಲ್ವೇ ಮತ್ತಿತರ ಆಧುನಿಕ ಸಂಚಾರ ಸೌಕರ್ಯಗಳಿಲ್ಲದ ಆದಿನಗಳಲ್ಲಿ ಕೂಡಾ ಮಹಾಭಾರತ ಕಾಲದ ಸೌರಾಷ್ಟ್ರ ದೇಶದ ತೀರ್ಥಗಳಾದ ದ್ವಾರಕೆ, ಪ್ರಭಾಸ್, ಮತ್ತಿತರ ಪವಿತ್ರ ಸ್ಥಳಗಳಿಗೆ ಹಿಂದುಗಳು ಭಾರತದ ಮೂಲೆ ಮೂಲೆಗಳಿಂದಲೂ ಯಾತ್ರೆ ಹೋಗುವದಿದ್ದಿತು.

ಮುಸ್ಲಿಂ ಆಕ್ರಮಣ

ಈ ಪವಿತ್ರ ಸ್ಥಳಗಳಲ್ಲಿರುವ ಪ್ರಾಮುಖ್ಯತೆ ಮತ್ತು ಪವಿತ್ರತೆಯು ಮಹಮ್ಮದ್ ಬಿನ್ ಕಾಸೀಮನ ಕಾಲದಿಂದ ಈ ವರೆಗೂ ಮುಸ್ಲಿಮರ ಲಕ್ಷ್ಯವನ್ನಾಕರ್ಷಿಸುತ್ತಾ ಬಂದಿದೆ. ಹಿಂದುಗಳ ಪುರಾತನ ಸ್ಥಳ ಮತ್ತು ದೇವಾಲಯಗಳ ಪೈಕಿ ಈ ಧಾಳಿಯಿಂದ ಹೊರಗುಳಿದುದಾವುದೂ ಇಲ್ಲ. ಭಾರತದಲ್ಲಿ ಮುಸ್ಲಿಂ ರಾಜ್ಯಭಾರವಾರಂಭಿಸಿದೊಡನೆಯೇ ಅವೆಲ್ಲವೂ ನೆಲಸಮ ಮಾಡಲ್ಪಟ್ಟವು; ಧ್ವಂಸ ಮಾಡಲ್ಪಟ್ಟವು; ಜಜ್ಝರಿಯಾದವು. ಇದರಾರಂಭ, ಆ ಸುಪ್ರಸಿದ್ಧ ಸೋಮನಾಥ ದೇವಾಲಯದ ಮೇಲೆ ಘಜನೀ ಮಹಮ್ಮದನು ಹದಿಮೂರು ಬಾರಿ ಧಾಳಿನಡಿಸಿ, ಕೊನೆಗೆ ನೆಲಸಮ ಮಾಡಿದಂದಿನಿಂದಲೇ. ಹಿಂದೀ ಚರಿತ್ರೆಯನ್ನರಿತವರಿಗೆಲ್ಲಾ ಈ ಸಂಗತಿ ಸುಪರಿಚಿತವಿದೆ. ಸೌರಾಷ್ಟ್ರದ ಚಾರಿತ್ರಿಕ ಹಾಗೂ ಧಾರ್ಮಿಕ ಪ್ರಾಮುಖ್ಯತೆಯನ್ನು ಮನಗಂಡೇ ಈ ಪವಿತ್ರ ಸ್ಥಳವನ್ನು ಆಕ್ರಮಿಸಿ ನಿಲ್ಲಲು ಮುಸ್ಲಿಮರು ಆದಿಯಿಂದಲೇ ಪ್ರಯತ್ನಿಸುತ್ತಾ ಬಂದಿದ್ದಾರೆ.

ಜುನಗಾಡಿನ ಗತಿ

ಜುನಗಾಡ್ ಸಂಸ್ಥಾನವೆಂದು ಕರೆಯಲ್ಪಡುತ್ತಿರುವ ರಾಜ್ಯದಲ್ಲಿ ಮುಸ್ಲಿಂ ಆಡಳಿತೆ ಬಂದುದು ಹೇಗೆಂಬುದನ್ನು ಮೇಲ್ಕಾಣಿಸಿದ ವಿದ್ಯಮಾನವೇ ತಿಳಿಸುತ್ತದೆ. ಈ ಸಂಸ್ಥಾನದ ಇಂದಿನ ರಾಜನ ಹೆಸರು ಸರ್. ಮಹಬತ್ ಸಾಬಿ. 'ಸಾಬಿ' ಪದವು ಅಫ್ಘಾನ್ ಗುಡ್ಡಗಾಡಿನವರದು. ಅರ್ಥಾತ್ ಇಂದಿನ ರಾಜನ ಹಿರಿಯರು, ಹಿಂದುಗಳ ಮೇಲಾಗಲೀ ಹಿಂದುತ್ವದ ಮೇಲಾಗಲೀ ಯಾವ ಅಭಿರುಚಿಯೂ ಇರದ ಅರಾಷ್ಟ್ರೀಯ ವಿದೇಶೀ ಮುಸಲ್ಮಾನರಿದ್ದರೆಂಬುದು ಈ ರೀತಿ ಖಚಿತವಾಗುತ್ತದೆ. ಈ ಕಾರಣದಿಂದಾಗಿಯೇ ಹಿಂದುಗಳು, ಮುಸ್ಲಿಮರಿಂದ ಕಷ್ಟನಷ್ಟಗಳನ್ನನುಭವಿಸಿದ್ದರು; ಮತ್ತೀಗಲೂ ತಮ್ಮ ದೈನಂದಿನ ಧಾರ್ಮಿಕ ಜೀವನ ಹಾಗೂ ವ್ಯವಹಾರಗಳಲ್ಲಿ ಮುಸ್ಲಿಮ್ ಕಂಟಕಗಳನ್ನು ಅನುಭೋಗಿಸುತಿದ್ದಾರೆ.

ಪ್ರಚಲಿತ ಚರಿತ್ರೆ

ಗಿರ್ನಾರ್ ಪರ್ವತ ಬುಡದಲ್ಲಿ ಶ್ರೀ ಶಂಕರ ಮಹಾದೇವ ದೇವಸ್ಥಾನಕ್ಕೆ ಸಮೀಪವಾಗಿ ಅನ್ನಸೂಯಾ ದೇವಾಲಯವೊಂದಿದೆ. ಧರ್ಮಶಾಲೆಗಳೂ ಹಲವಿವೆ. ಅವುಗಳ ಪೈಕಿ ಒಂದು ತಮ್ಮದೆಂದು ಮುಸ್ಲಿಮರ ಹುಸಿವಾದವಿದೆ. ಗಿರ್ನಾರ್ ಪರ್ವತಕ್ಕೆ ಹೋಗುವ ರಸ್ತೆಯ ಹೆಸರು 'ವಾಗೇಶ್ವರೀ ರಸ್ತೆ' ಯೆಂದು. ಈ ರಸ್ತೆ ನೇರಾಗಿ ಗಿರ್ನಾರ್ ಪರ್ವತ ಬುಡವನ್ನೇ ಹತ್ತುತ್ತದೆ. ಅಲ್ಲಿ ಅಸಂಖ್ಯಾತ ದೇವಾಲಯಗಳಿವೆ. ಪೂಜಾ ಸ್ಥಳಗಳು, ಮತ್ತು ಧರ್ಮಶಾಲೆಗಳೂ ಇವೆ. ಗಿರ್ನಾರ್ ಪರ್ವತ ಬುಡದ ಪವಿತ್ರ ದೇವಾಲಯಗಳಂತೆಯೇ ಈ ರಸ್ತೆ ಕೂಡಾ ಹಿಂದುಗಳಿಗೆ ಪವಿತ್ರವಾದುದು. ಜಾತೀಯ ಜಗಳ ಮತ್ತು ಗೊಂದಲಗಳನ್ನು ನಿರ್ಮಿಸಬೇಕೆಂದು ಈಗ ಮುಸ್ಲಿಮರಿಲ್ಲಿ ಪೀರರ ಗೋರಿಗಳನ್ನೂ ಮಸೀದಿಗಳನ್ನೂ ಕಟ್ಟಲು ಪ್ರಯತ್ನಿಸುತಿದ್ದಾರೆ. ಪ್ರಭಾಸ್ 'ದೇಹೋತ್ಸರ್ಗ' ಸ್ಥಳಕ್ಕೆ ಹೋಗಲು ಹಿಂದುಗಳನ್ನು ಬಿಡುವುದಿಲ್ಲ. ಮಾತ್ರವಲ್ಲ; ಲಕ್ಷ್ಮೀನಾರಾಯಣ ದೇವಸ್ಥಾನದ ಬಾಗಿಲನ್ನು ತೆರೆಯದಂತೆಯೂ ಹಿಂದುಗಳಿಗೆ ಆತಂಕವಿದೆ. ಈ ಕಾರಣಗಳಿಂದಾಗಿಯೇ ಹಿಂದುಗಳಲ್ಲಿ ಅತೃಪ್ತಿ ಮತ್ತು ಉದ್ವೇಗ ವ್ಯಾಪಿಸಿದೆ. 'ದೇಹೋತ್ಸರ್ಗ' ಸ್ಥಳವು ಭಗವಾನ್ ಶ್ರೀ ಕೃಷ್ಣನ ದಹನ ಸ್ಥಳ. ಅಲ್ಲಿ ಎಷ್ಟೋ ದೇವಾಲಯಗಳೂ ಧರ್ಮಶಾಲೆಗಳೂ ಇವೆಯಲ್ಲದೆ, ಸಾಧು, ಸಂತ, ಸನ್ಯಾಸಿಗಳಿಂದ ಸ್ಥಾಪಿತವಾಗಲ್ಪಟ್ಟಿರುವ ಹಲವಾರು ಆಶ್ರಮಗಳೂ ಇವೆ. ಒಂದು ಆಸ್ಥಾನವು ಶಂಕರಾಚಾರ್ಯರ ಹೆಸರಿನಲ್ಲಿದೆ.

ಆಕ್ರಮಣ ಹಂಚಿಕೆಗಳು

ಆ ಇಡೀ ಕ್ಷೇತ್ರವೇ ಹಿಂದುಗಳ ಪಾಲಿನ ಪುಣ್ಯ ಭೂಮಿ; ಪವಿತ್ರಸ್ಥಳ. ಸತ್ಯಕ್ಕೂ ಅಲ್ಲಿ ಮುಸ್ಲಿಮರು 'ಮೈಕ್ರೋಸ್ಕೋಪ್' ನೋಟದಷ್ಟು ಅಲ್ಪಾಂಶವಾಗಿದ್ದರೂ ಅವರೀ ಹಿಂದೂ ಪವಿತ್ರ ಸ್ಥಳಗಳನ್ನಾಕ್ರಮಿಸಿಕೊಳ್ಳಲು ಹವಣಿಸುತ್ತಿದ್ದಾರೆ; ಅಲ್ಲಿ ಮಸೀದಿಗಳನ್ನೂ ಗೋರಿಗಳನ್ನೂ ಕಟ್ಟಿಹಾಕಲು ಪ್ರಯತ್ನಿಸುತಿದ್ದಾರೆ. ಓರ್ವ ಮುಸ್ಲಿಮನನ್ನು ಹೂಳುವುದು–ಅಲ್ಲೊಂದು ಗೋರಿಕಟ್ಟುವದು–ಮತ್ತದು ... ಪವಿತ್ರ ಸ್ಥಳವೆಂದು ಸಾಧಿಸುವದು; ಈ ಆಕ್ರಮಣ ವಿಧಾನವು ಅಲ್ಲಿ ಅವರ ಪದ್ಧತಿಯಾಗಿ ಹೋಗಿದೆ. ಈಗೀಗ ಅವರು 'ದನಗಳ ಕುರ್ಬಾನಿ'ಯನ್ನೂ ಮಾಡುತಿದ್ದಾರಲ್ಲದೆ, ಅಲ್ಲಿಯೇ ಒಂದು ಕಸಾಯಿಗೃಹ ಕಟ್ಟಲಿಕ್ಕೂ ಪ್ರಯತ್ನಿಸುತಿದ್ದಾರೆ. ತಾವು ಅರಾಷ್ಟ್ರೀಯ ವಿದೇಶೀ ಅಲ್ಪ ಸಂಖ್ಯಾತರೆಂಬುದನ್ನೂ, ಹಿಂದುಗಳ ಭಾವನೆಗೆ ಆಘಾತವೊಡ್ಡಿ ಹಿಂದುಗಳ ಧಾರ್ಮಿಕ ಆಚರಣೆ ಮತ್ತು ನಂಬಿಕೆಗಳಿಗೆ ಅಪಮಾನಮಾಡಿ, ರಾಷ್ಟ್ರ ಕಾನೂನಿಗೆ ವಿರುದ್ಧವಾಗಿ ತಾವು ಹೀಗೆ ಮಾಡುತ್ತಿದ್ದೇವೆಂಬುದನ್ನೂ ಸರಿಯಾಗಿ ಅರಿತುಕೊಂಡೇ ಮುಸ್ಲಿಮರ ಈ ಆಕ್ರಮಣಗಳು. ಪ್ರಭಾಸ್‌ನ ಉತ್ತರಕ್ಕಿರುವ ದೆಲ್ವಾಡಾದ ಬಳಿಯ ಗುಪ್ತಪ್ರಯಾಗದ ಸಂಗತಿಗಳೂ ಹೀಗೆಯೇ ಇವೆ. ಮುಸ್ಲಿಂ ಅಕ್ರಮ ಪ್ರವೇಶದ ಮತ್ತೊಂದು ನಿದರ್ಶನವೆಂದರೆ ತ್ರಿವೇಣಿಯ ಪವಿತ್ರ ಜಲದಲ್ಲಿ ಮೀನು ಹಿಡಿಯುವದು. ಪ್ರಭಾಸ್ ಜುನಾಗಾಡಿನಲ್ಲಿರುವುದರಿಂದಾಗಿ, ಹಿಂದುಗಳು ತಮ್ಮ ಹಕ್ಕು ಬಾಧ್ಯತೆ ಆಚರಣೆಗಳ ಮನ್ನಣೆಗಾಗಿಯೂ ದೇವಸ್ಥಾನ ಹಾಗೂ ಪವಿತ್ರ ಸ್ಥಳಗಳ ರಕ್ಷಣೆಗಾಗಿಯೂ ಅರಾಷ್ಟ್ರೀಯ ವಿದೇ

(೧೧ನೇ ಪುಟ ನೋಡಿರಿ).



Approved firm by the Govt. of Mysore
Certified by the Agent of the Govt. of
Colone & Indian.

WARDEN

Reaches New Heights in 1946.

Business Received ... ... Rs. 2,04,00,000
Business Completed ... ... Rs. 1,72,00,000

THIS represent the latest and greatest achievement in WARDEN'S progressive career.

For this fine performance the Company extends its hearties thanks and congratulations to its representatives and policy-holders all over the country and abroad.

Managing Director: *Shivaprasad Thaker,* Agency Manager: *M. Sunderram Shetty.*

Branch Office At Mangalore

K. P. Bhavanishanker Shetty,
Branch Secretary.

★ ಮೊದಲಿಗೆ ಪ್ರೋತನ್, ಕೊನೆಗೆ ಜೋಸೆಫ್ ಅಲ್ಲವೆ? ★

(ಲೇ:— ಪ್ರೋತನ್ ಜೋಸೆಫ್.)

●

ಒಂದು ವರ್ಷಕ್ಕೂ ಹಿಂದೆ ನೆಹರು ಮಂತ್ರಿ ಮಂಡಲ ಅಧಿಕಾರ ವಹಿಸಿದ್ದ ಕಾಲ; ಅದನ್ನನುಸರಿಸಿ ಗಲಭೆಯೆದ್ದಿದ್ದ ಆ ಕಷ್ಟಕಾಲದಲ್ಲಿ ಒಂದೆಡೆಯ ನಿಸ್ಸಹಾಯಕರು ಸಹಾಯಕ್ಕಾಗಿ ತಮ್ಮಲ್ಲಿ ಮೊರೆಯಿಟ್ಟಾಗ ಕೆಲವು ಬ್ರಿಟಿಷ್ ಪೋಲೀಸ್ ಅಧಿಕಾರಿಗಳೆಂದಿದ್ದರು. "ನಿಮ್ಮ ಗಾಂಧಿ ಮತ್ತು ನಿಮ್ಮ ನೆಹರುವಿದ್ದಲ್ಲಿಗೆ ಹೋಗಿ". ಈ ಚುಚ್ಚು ಮಾತಿನಿಂದ ಆ ನಿಸ್ಸಹಾಯಕ ಜನರು ದಿಗಿಲು ಬಿದ್ದಿದ್ದರು; ಕಾರಣವೆಂದರೆ ಬ್ರಿಟಿಷ್ ರಾಜ್ಯ ಹೋಗಿ ಸ್ವರಾಜ್ಯ ಬಂದುದರಿಂದ ತಮಗುತ್ತಮ ಆಡಳಿತೆ ಬಂತೆಂದು ತೋರಿಸಿಕೊಳ್ಳುವದು ಅವರಿಗಸಾಧ್ಯವಾಗಿತ್ತು. ಈಗ ಭಾರತದ ಜನತೆಯೂ ಈ ಮಾದರಿಯನ್ನನುಸರಿಸಿ "ಪಾಕಿಸ್ತಾನಕ್ಕೆ ಹೋಗಿ" ಎಂದು ಹಂಗಿಸುವುದನ್ನು ನಿಲ್ಲಿಸಬೇಕೆಂದು ವಾದಿಸುವ ನನ್ನ ನಿರ್ಮಲೋದ್ದೇಶವೆಂದರೆ ದಿಗಿಲು ನಿವಾರಣೆಯೊಂದೇ. ಭಾರತ ಮತ್ತು ಪಾಕಿಸ್ತಾನಗಳೊಳಗೆ ಯುದ್ಧದ ಅನುಮಾನ ಮೂಡಿರುವ ದೆಸೆಯಿಂದಾಗಿ ಇಲ್ಲಿಯ ಮುಸ್ಲಿಮರು ಅತ್ಯಂತ ಸಂಕಟಾವಸ್ಥೆಗೀಡಾಗಿದ್ದಾರೆ. ಆದ್ದರಿಂದ ದಯಾದೃಷ್ಟಿಯುಳ್ಳ, ಚಿರಪರಿಚಾಪುರಕಾರೀ ಧೋರಣೆಯ ಮೇಲಿಂದ, ಯೋಗ್ಯವಾದುದೆಂದರೆ ಇಂತಹ ಪ್ರಶ್ನೆಗಳನ್ನು ಸದ್ಯಕ್ಕವರಮೇಲೆ ಛಡಾಯಿಸದಿರುವದೇ. ಸಾಮೂಹಿಕ ರೀತಿಯ ದಂಗೆಗಳೆದ್ದು ಸಂಗತಿಗಳೆಲ್ಲಾ ಅನಿರೀಕ್ಷಿತ ರೀತಿಯಲ್ಲೇ ಸಂಘಟಿಸಿ ಬಂದುವು. ಭಾವೀ ನರಹತ್ಯೆಯ ಪರಿಮಾಣವನ್ನು ಯಥಾಪ್ರತಿ ಮೊದಲೇ ನಿರೀಕ್ಷಿಸಿದ್ದೆವೆನ್ನುವ ಮಾಲ್ಕೋಮ್ ಡಾರ್ಲಿಂಗನಂತಹ ಮಂದಮತಿಗಳು ನರದ್ವೇಷಿಗಳು ಹೊರತು ಬೇರಾರೂ ಅಲ್ಲ. ಮಾನುಷತ್ವವಿದ್ದವರು ಭಾರತದ ಸ್ವಾತಂತ್ರ್ಯ ತತ್ವದ ಸನ್ಮಿತ್ರರಾಗಿಯೇ ಇದ್ದರು. ಆದರೆ ಇಂದಿನಂತ ಸಾಮೂಹಿಕ ಕೊಲೆ ಮತ್ತು ಗಡಿಬಿಡಿಯ ಜನ ಪಲಾಯನಗಳನ್ನು ಅವರು ಅಂದೇ ನಿರೀಕ್ಷಿಸಿದ್ದರೆ, ಸೋರೆನ್‌ಸನರಂಥವರು ಕೂಡಾ ನಿಜಕ್ಕೂ ಜೂನ್ ೩ರ ಮೌಂಟ್‌ಬೇಟನ್ ಯೋಜನೆಯನ್ನು ತಯಾರಿಸುತ್ತಿರಲಿಲ್ಲ. ಭಾರತದಲ್ಲಿ ನಡೆದುದನ್ನು ಆ ಬೆರ್ನಾರ್ಡ್ ಶಾರ 'ಕೋರಿ ಹಾಗೂ ಕೆನ್ನೇಬೀಗಿ'ನ ಕ್ಷಿಪ್ರ ಭಾಷೆಯಲ್ಲಿ ಕೂಡಾ ವರ್ಣಿಸುವದಸಾಧ್ಯ. ಅಂತೆಯೇ ದೇಶ ವಿಭಜನೆಗೆ ಇಷ್ಟು ಭೀಕರ ದುರಂತಗಳ ಹಾವಳಿ ತೆರಬೇಕಾಗುವದೆಂಬುದನ್ನು ಮುಸ್ಲಿಂ ಲೀಗಿನ ನಾಯಕರು ಮೊದಲೇ ಊಹಿಸುತ್ತಿದ್ದರೆ, ಯಾವದೇ ವಿಧದ ಹರಿಸಮಾನ ಸ್ಥಾನಗಳ ಸಂಯುಕ್ತಾಡಳಿತೆಯೇ ಸಾಕೆಂದು, ಅಷ್ಟರಿಂದಲೇ ತೃಪ್ತಿ ಪಡುತಿದ್ದರು. (ಇನ್ನಾದರೂ, ಬಹುಶಃ, ದುರಂತ ಬಿಡುಗಡೆಗಿರುವ ಉಪಾಯ ಅದೊಂದೇ) ದೇಶ ವಿಭಜನೆಗೆ ಒಪ್ಪಿಗೆ ಕೊಟ್ಟಾಗಲೇ ಕಾಂಗ್ರೆಸ್ ನಾಯಕರು ದ್ವಿರಾಷ್ಟ್ರತತ್ವಕ್ಕೆ ಹಾದಿ ಬಿಟ್ಟು ಕೊಟ್ಟಿದ್ದರು. ಆದರಿಂದಿನ ದೃಶ್ಯದ ನೋಟ ಚಿತ್ರವು ಅವರ ಊಹಾ ದೃಷ್ಟಿಗಾಗಿ ನಿಲುಕುತಿದ್ದರೆ, ನಿಜಕ್ಕೂ ಸಂಬಂಧಪಟ್ಟ ಮೂರು ಪಕ್ಷಗಳೂ ಕೆಲಕಾಲ ಸಹಿಸಿ ನಿಲ್ಲುವಂತಾಗುತಿತ್ತು. ಒಂದು ಗಡಿಬಿಡಿಯು ಸಂಭವಿಸಿ ಆದ ಮೇಲೆ, ಭಾವೀ ಸಂಭವಗಳಿಗೆ ಕಾರಣವಾದ ತಾತ್ಕಾಲಿಕ ವಿಧಾನವೊಂದನ್ನು ಕಲ್ಪಿಸುವ ಅಥವಾ ಸೂಚಿಸುವ ಎದೆಗಾರಿಕೆಯು ಮತ್ತಾರಲ್ಲಿಯೂ ಇಲ್ಲವಾಯಿತು. ಈ ಕೆಳಗಿನಂತಹ ಕೆಲವು ಪ್ರಶ್ನೆಗಳಲ್ಲಿ ಎಂತಹ ಬುದ್ಧಿ ವಿಕಾರತೆಯಿದೆ ಎಂಬುದನ್ನು ತುಸು ಪರ್ಯಾಲೋಚಿಸಿರಿ:—

(a) ಪಾಕಿಸ್ತಾನ್ ಮತ್ತು ಭಾರತಗಳೊಳಗೆ ಯುದ್ಧ ಸಂಭವಿಸಿದಲ್ಲಿ ಪಾಕಿಸ್ತಾನದಲ್ಲಿರುವ ಹಿಂದುಗಳೇ ಪ್ರಥಮತಃ ಮುಂಭಾಗಕ್ಕೆ ನುಗ್ಗಬಹುದೆ? ಹಿಂದೂ ಕಂಟ್ರಾಕ್ಟರರು ಯುದ್ಧ ನಿರತ ಸೇನೆಗಳಿಗೆ ನಿರ್ವಂಚನೆಯಿಂದ ಬೀಫ್ (ಗೋಮಾಂಸ) ಸರಬರಾಯಿ ಮಾಡಿಯಾರೆ? ಕೂಡಲೇ ದಸ್ಕತು ನಿತಿ ಕರಾರುಗಳಾಗಬೇಕು.

(b) ನಿಜಾಮ್ ಮತ್ತು ಕಾಶ್ಮೀರದ ಮಹಾರಾಜರಿಬ್ಬರು ಕೊನೆಯವರೆಗೂ ತಟಸ್ಥರಾಗಿಯೇ ನಿಲ್ಲುವರೋ? ಅಥವಾ ಆ ವರಿಬ್ಬರು ತಂತಮ್ಮ ಗಾದಿಗಳನ್ನು ಪರಸ್ಪರ ಬದಲಾಯಿಸಿಕೊಂಡು ಹೋರಾಟ ಭಾಗಿಗಳಾಗುವರೋ?

(c) ಘರ್ಷಣೆಗಳ ಸಂದರ್ಭದಲ್ಲಿ, ಲಾಹೋರು ಸೇನೆಗಳ ತುಕಡಿಗಳಾಗಿ ಕೆಲಸ ಮಾಡುವ ಆರ್ಯ ಸಮಾಜಿಸ್ಟರು ಪಂಚಮ ದಳದವರಾಗಿ ಮೇಲೆ ಬಿದ್ದು ಹೊಡೆಯುವರೆ?

(d) ತಂದೆ ಮತ್ತು ತಾಯಿ ಹೋರಾಡಿಕೊಳ್ಳುತ್ತಾರಾದರೆ, ಮಗ ಅವರ ಪೈಕಿ ಯಾರ ಪಕ್ಷ ವಹಿಸುತ್ತಾನೆ? ಅವನು ಪ್ರಥಮತಃ ತಂದೆಯ ಮಗ, ಆ ಮೇಲೆ ತಾಯಿಯ ಮಗನೋ? ನೀವು ಪ್ರಥಮತಃ ಹಿಂದು. ಅಂತೆಯೇ ಮುಸ್ಲಿಂ, ಆ ಮೇಲೆ ಭಾರತೀಯನೋ? (ಎರಡು ಮಿನಿಟುಗಳ ಮೌನ) ನೀವು ಪ್ರಥಮತಃ ಮುಸ್ಲಿಂ ಅಥವಾ ನಂತರ ಭಾರತೀಯನೋ?

ಮನುಷ್ಯನ ಉದ್ರೇಕಭಾವದಲ್ಲಿ ತರ್ಕ ಬದ್ಧಾಂಶವೆಂಬುದಿರಲಾರದು. ಮತ್ತು ನಡೆದು ಹೋದ ಸಂಗತಿಗಳಿಗಾಗಿ ಕೂಗುತ್ತಾ ಹಿಸುಕುತ್ತಾ ನಿಲ್ಲುವುದರಲ್ಲೇ ನಮ್ಮ ಹಿತಾಭಿರುಚಿ ಹುದುಗಿಲ್ಲ. ಬ್ರಿಟಿಷರು ತಮ್ಮ ಹಳೇ ಕಾಲದ ಪ್ರಭುತ್ವಕ್ಕೆ ಮನ್ನಣೆದೊರಕಿಸುವುದಕ್ಕಾಗಿ ಪ್ರಜಾಪ್ರಭುತ್ವದ ಮಾರ್ಗಕ್ಕೆ ಹೊರಟಿದ್ದ ಮಾದರಿಯಲ್ಲೇ ಭಾರತೀಯ ಸಂಸ್ಕೃತಿ ಮತ್ತು ಇಸ್ಲಾಂ ಅನುಕೂಲ್ಯತೆಗಳನ್ನು ಪ್ರಾತಾಡುತ್ತಿರುವ ಪರಂಪರಾಗತ ಪದ್ಧತಿಗಳನ್ನೂ ನಾವು ಕಡೆಗಾಣಿಸಲಿಕ್ಕಿದೆ. ಮುಸ್ಲಿಮರೇಗಲೇ ಕಡ್ಡಾಯದ ಸೇನಾ ಸಂಗ್ರಹದ ಪ್ರಶ್ನೆಯನ್ನು ಸ್ಪಷ್ಟಪಡಿಸಿ ಕೊಡದಿದ್ದರೆ ಆ ೪ ಕೋಟಿಯೂ ಕೂಡಲೇ ಪಾಕಿಸ್ತಾನಕ್ಕೆ ಹೋಗತಕ್ಕದ್ದೆಂದು ಏಕಾಕಿ ಮಿಟುಕಿಸಿ ಧುರವೀಳ್ಯ ಛಡಾಯಿಸುವುದು ಎಷ್ಟಕ್ಕೂ ಸಮಂಜಸವಲ್ಲ. ಹಾಗೆ ಇವರಿಗೆಲ್ಲಾ ಕರಾಚಿ ಹೋಟೇಲುಗಳ ಸಂಭ್ರಮದ ಮಾತು ಬಿಡಿ—ಗುಡಿಸಲಮರೆಯನ್ನಾದರೂ ಮಾಡಿಕೊಡಲು ಪಾಕಿಸ್ತಾನಕ್ಕೆ ಸಾಧ್ಯವಿಲ್ಲ ಚಿಕಿತ್ಸಾ ಪಥಕ(ರೆಡ್‌ಕ್ರೋಸ್)ದ ಸಲಹೆಯ ದೃಷ್ಟಿಯಿಂದಾದರೂ ಹೆಚ್ಚಿನ ಸ್ಥಳಗಳನ್ನು ಒಪ್ಪಿಸಿಕೊಡಬೇಕಿದ್ದಿತು. ಅಧಿಕಾರವನ್ನು ಕ್ಷಿಪ್ರ ಪ್ರವಾಹನೆ ಮಾಡಿಕೊಳ್ಳುವ ಅವಸರಾಪರಾಧ ಮಾಡಿದ್ದವರೆಲ್ಲರೂ, ಈಗ ತುಸು ಹಿಂದೆಗೆದು ನಿಂತು ಆತ್ಮ ವಿಮರ್ಶೆ ಮಾಡಿಕೊಳ್ಳಲಿ. "ಜಿ. ಟಿ. ಯಜ್" ಘೋಷಣೆಗಳಂತಹವು ತಮ್ಮನ್ನು ಒಂದಿಷ್ಟು ಮುಂದೊಯ್ಯಲಾರವೆಂಬುದನ್ನು ಕರಾಚಿ ಮತ್ತು ನವದಿಲ್ಲಿಗಳು ಈಗ ಸಾವಧಾನವಾಗಿ ಮನವರಿಕೆಮಾಡಿಕೊಳ್ಳಹತ್ತಿವೆ.

೦೦ ೦೦ ೦೦

ಪೋಪರ ಅಧಿಕಾರದಿಂದ ಇಗರ್ಜಿಯನ್ನು ವಿಮುಕ್ತಗೊಳಿಸಿದ ಮೇಲೆ, ಹಾಗೂ ಸುಧಾರಣಾನಂತರ ನಿರ್ವಾರ್ಯವಾಗಿರುವ ಇಬ್ಬಗೆಯ ಸಂಬಂಧವೊಂದು ಇಂಗ್ಲಾಂಡಿನಲ್ಲಿದ್ದ ದೆಸೆಯಿಂದಾಗಿ 'ಪಾಪಿಸ್ಟ' ಪದವು ನಿಂದೆಯ ಮಾತಾಗಿ ಅಲ್ಲಿದ್ದಿತು. ರೋಮನ್ ಕೆಥೋಲಿಕರು ಆ 'ಪಾಪಿಸ್ಟ' ಆಗಿದ್ದರು. ಪೋಪರ ಸಂಬಂಧದ ಮೇಲೆಯೇ ಪಕ್ಷಪಾತವಿಡುವವರೆಂದೂ, ಒಂದು ರಾಷ್ಟ್ರದೊಳಗಿರುವ ಅಪಿಥೇಯತೆಯ ಜೀವಂತ ಚಿಹ್ನೆಗಳೆಂದೂ ಊಹಿಸಲ್ಪಟ್ಟಿದ್ದ ಈ ಕೆಥೋಲಿಕರ ವಿರುದ್ಧವಾಗಿ 'ಪ್ರೋಸತ್ವವಿಲ್ಲ' ಎಂಬ ಅವೇತಯುಕ್ತ ಬೊಬ್ಬೆಯು ಇದ್ದೇ ಇತ್ತು. ಈ ಆಘಾತವನ್ನು ಗುಣಪಡಿಸಿ ಸಮಾನ ದೇಶ ಪ್ರೇಮೀ ಭಾವನೆಯ ಒಂದು ಮಟ್ಟವನ್ನು ನಿರ್ಮಿಸಬೇಕಾದರೆ ಕಾಲ ಹಿಡಿಯಿತು. ಸಮ್ಮಿಶ್ರ ಒಪ್ಪಂದದ ಆದಿ ಭಾಗದಲ್ಲಿ ಅಮೇರಿಕದಲ್ಲಿ ಕೂಡಾ ಈ ಮತ್ಸರಗರ್ಭಿತ ವಿಷವು ಪೂರ್ಣ ಅದೃಶ್ಯವಾಗಿರಲಿಲ್ಲ. ಒಂದನೇ ಜಾಗತಿಕ ಯುದ್ಧದ ವೇಳೆ ವಾಷಿಂಗ್ಟನಿನಲ್ಲಿ ಜರ್ಮನ್ ರಾಯಭಾರಿಯಾಗಿದ್ದ ಕೌಂಟ್ ಬೆರ್ನ ಸ್ಟೋರ್ಫನಲ್ಲಿ ದೃಢ ವಿಶ್ವಾಸವಿದ್ದಿತು-ಅಮೇರಿಕದಲ್ಲಿರುವ ಜರ್ಮನ್ ಸೋಲ್ಜರರು, ಯುರೋಪಿನಲ್ಲಿರುವ ಜರ್ಮನರನ್ನೆಂದಿಗೂ ಗುಂಡಿಟ್ಟು ಕೊಲ್ಲಲಾರರೆಂದು. ಆದರೆ ಅದುದೇನು? 'ಅಮೇರಿಕನ್ ಪದ್ಧತಿ'ಯಲ್ಲಿ ಹುದುಗಿದ್ದ ಸ್ವಾಮಿ ಭಕ್ತಿಯೂ ಅಮೇರಿಕನ್ ಸಭ್ಯ' ನಾಗುವುದರಲ್ಲಿ ಮೂಡಿದ ಹೆಗ್ಗಳಿಕೆಯೂ ಸಾವಧಾನವಾಗಿ ಮೈಗೂಡಿ, ಅಭಿವೃದ್ಧಿ ಮತ್ತು ಪ್ರಭಾವೀ ಸ್ವಾರ್ಥತೆಯು ಮನೋವೃತ್ತಿಯಾಳಿಯ ಪಂಲ್ಲಿ ಮೂಡಿತು ಇಂತಹ ನಿದರ್ಶನಗಳು ಹಲವನ್ನು ನಾನು ನೆನಪು ಕೊಡಬಹುದು; ಸಮಯ ಹೋದಂತೆ ಭಿನ್ನತೆಗಳ ಕಠೋರತೆ ಸವೆದು ಸಹನೆ ಮತ್ತು ಶ್ರೇಯೋಕಾಂಕ್ಷೆಯ ರೂಪಕ್ಕವು ತಿರುಗಿದ ಎಷ್ಟೋ ಮಾದರಿಗಳನ್ನು ನಾನು ಕೊಡಬಲ್ಲೆ. ಲಾಹೋರಿನ ಒಬ್ಬ ನಿಷ್ಠಾವಂತ ಆರ್ಯ ಸಮಾಜಿಷ್ಟನು ಪಾಕಿಸ್ತಾನ್ ಸೇನೆಗೆ ಸೇರಿ ತಾತ್ವಿಯ ಪಂಡಿತರಿಗೆ ಗುಂಡಿಡುವನೆಂಬಾಗಲೀ ರಕ್ಷಣೆ ಮತ್ತು ರಾಜಕೀಯ ಹಂಚಿಕೆಗಳಲ್ಲಿ ಅತಿಮುಖ್ಯ ವಿಧಾನವಾದ ಒಳಸಂಚು ಘಾತಕಾರ್ಯಕ್ಕೆ ಸೇರಿಕೊಳ್ಳುವನೆಂದಾಗಲೀ ಊಹಿಸುವುದು ನನ್ನಿಂದ ಅಸಾಧ್ಯ. ಹಾಗಾದರಿಲ್ಲಿ ವಿಧೇಯತೆಯೆಂಬುದು ಸಂದರ್ಭಸಾಧಕವಾಗಿ ಇರಬೇಕೇನು? ನಿಜಕ್ಕೂ ಕೂಡದು. ಇದನ್ನೊಪ್ಪಿಕೊಳ್ಳುವುದು ಮಹಾದ್ರೋಹವೇ ಸರಿ. ಆದರೆ, ತಲೆ ಮತ್ತು ಮೆದುಳನ್ನು ಪ್ರತೀಕಾರದ ಕಾವೋದ್ರೇಕ ಕವಿದಿರುವ ಕಾಲದಲ್ಲೇ ತೊಡಕಾದ ಪ್ರಶ್ನೆಗಳನ್ನು ಹಾಕುವ ಮೂಲಕ ಪಂಚಮ ದಳದ ಮನೋವೃತ್ತಿಯನ್ನು ನಾವೇ ಪ್ರೇರೇಪಿಸಬಾರದು. ಪರೀಕ್ಷೆಯೆಂದರೆ, ಒಬ್ಬನು ತನ್ನ ರಾಷ್ಟ್ರದ ರಕ್ಷಣೆಗಾಗಿ ಹೋರಾಡಲು ತಯಾರಿರುವನೋ ಮತ್ತು ಸೇನೆಗೆ ಸೇರಿಕೊಳ್ಳಲು ಸಿದ್ಧನೋ ಎಂಬುದೇ. 'ಮನಸ್ಸಾಕ್ಷಿ ಬದ್ಧ ಆಕ್ಷೇಪ'ಗಳಿರುವ ವಾದ ಮುಂದೊಡ್ಡುವ ಪುರುಷ ಅಥವಾ ಸ್ತ್ರೀಯು ನಿರಪಾಯಕಾರಿಗಳಿದ್ದಲ್ಲಿ ಅಂಥವರನ್ನು ಎಂಬ್ಯೂಲೆನ್ಸ್ ಕೆಲಸಗಳಿಗೆ-ಅಪಾಯಕಾರಿಗಳೆಂದು ತೋರಿಬಂದಲ್ಲಿ ನಿರ್ಬಂಧದಲ್ಲಿ-ಹಾಕುವದಿದೆ. "ನಿಮ್ಮ ರಾಷ್ಟ್ರಕ್ಕೆ ವಿಧೇಯರಾಗಿ ಇರಿ" ಎಂಬುದೊಂದೇ ಉತ್ತಮೋಪದೇಶ. ಮತ್ತು ಕಾರ್ಯಕ್ಕೆ ಸಹಾಯವಾಗುವಂತೆ ಎಲ್ಲಾ ಮೊಹರುಗಳು ಮತ್ತು ಸುಭಾವನೆಗಳಿಂದ ಬುದ್ಧಿಯನ್ನು ವಿರಹಿತ ಪಡಿಸಿ ಅದನ್ನು ರಾಷ್ಟ್ರೀಯತೆಯ ವ್ಯಾಧಿ ರೂಪಕ್ಕೆ ತರಬೇಕು.

ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

ದೇಶೋನ್ನತಿಯನ್ನು ಬಯಸುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು. ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು. ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅತಿಯಂತ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒಪ್ಪಿಸಿಕೊಡುವುದು, ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦ಕ್ಕಿಂತ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಹಣದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906.

CANARA BANK LIMITED.

ಈ ಆಂದೋಲನಗಳು

ತಾವಾಗಿ ಅಂತ್ಯಗೊಳ್ಳುವವೆ? ದೇಶಕ್ಕೇನೆ ಅಂತ್ಯತರುವವೆ?

ಭಾರತ--ಪಾಕಿಸ್ತಾನ್ ಸಂಬಂಧವು ಸುಗಮಗೊಳ್ಳುವ ಕಾಲ ಬರಬಹುದು—ಇನ್ನೊಂದೊಂದೇ ವಾರಗಳು ಆ ಸೌಹಾರ್ದತೆಯ ಕಡೆಗಿನ ಒಂದೊಂದು ಹೆಜ್ಜೆಗಳಾಗಬಹುದು--ಎಂದಿದ್ದ ನಿರೀಕ್ಷೆಯನ್ನು ಕಳೆದ ವಾರವು ಹುಸಿಗೊಳಿಸಿದೆ. ಮಾತ್ರವಲ್ಲ, ನಿರಾಶೆಯನ್ನು ಇಮ್ಮಡಿ ಬೆಳೆಸಿದೆ. ಕಾಶ್ಮೀರ, ಜುನಾಗಾಡ್, ಹೈದರಾಬಾದಿನಂತಹ ಸಂಸ್ಥಾನಗಳ ಪ್ರಶ್ನೆಯು ಇನ್ನಷ್ಟು ಕಠಿಣಗೊಂಡಿದೆ. ಭಾರತ ಮತ್ತು ಪಾಕಿಸ್ತಾನಗಳ ಪ್ರಮುಖರೊಳಗೆ ಮೂಡಿದ ಹೃದಯ ಮಲಿನತೆಯಂತೂ ಕಳೆದ ವಾರ ಮತ್ತಷ್ಟು ಮಾಸಿದೆ. ಇವೆಲ್ಲವುಗಳ ಪರಿಣಾಮವಾಗಿ, ಎರಡೂ ರಾಷ್ಟ್ರಗಳೊಳಗಿನ ಜಾತೀಯ ದುಶ್ಶಕ್ತಿಗಳು ರಾಕ್ಷಸಮಾರಿಯಂತೆ ತೀವ್ರಗತಿಯಿಂದ ಬೆಳೆಯುತ್ತಿವೆ.

ಭಾರತದ ಮುಸ್ಲಿಮರಲ್ಲಿ ತೀವ್ರಗತಿಯಿಂದ ಜ್ಞಾನೋದಯವಾಗಹತ್ತಿರುವ ಶುಭ ಚಿಹ್ನೆಗಳಿದ್ದಿವೆ.

ಆಹಾರ ಮತ್ತು ವಸ್ತ್ರಗಳ ಮೇಲಿನ ನಿಯಂತ್ರಣಗಳನ್ನೆಲ್ಲಾ ಕೂಡಲೇ ತೆಗೆದುಹಾಕಬೇಕೆಂಬ ಗಾಂಧಿಜೀಯ ವಾದವು ಆಶ್ಚರ್ಯ, ಅವ್ಯವಹಾರ್ಯವೆನ್ನಿಸಿ, ವಾತಾವರಣದಲ್ಲೊಂದು ಹೊಸ ಛಾಯೆಯನ್ನು ಹರಡಿದೆ.

ಅಂತರ್ರಾಷ್ಟ್ರೀಯ ರಂಗದಲ್ಲಿ ಪೆಲೆಸ್ಟೈನ್ ವಿಭಜನೆ, ದಕ್ಷಿಣಾಫ್ರಿಕದ ಮತ್ತು ಅಮೇರಿಕದ ವರ್ಣದ್ವೇಷಗಳು, ಬರ್ಮಾದ ಸ್ವಾತಂತ್ರ್ಯ ಮೊದಲಾದುವು ಪುನ: ಮುಂಭಾಗಕ್ಕೆ ಬಂದಿವೆ.

ಭಾರತ— ಪಾಕಿಸ್ತಾನ್

ಪಂಜಾಬು ದ್ವಿಭಾಗಗಳೊಳಗಿನ ಮುಸ್ಲಿಂ ಮತ್ತು ಮುಸ್ಲಿಮೇತರರನ್ನು ಪರಸ್ಪರ ಬದಲಾಯಿಸಿಕೊಳ್ಳುವದು ಭಾರತ-ಪಾಕಿಸ್ತಾನದೆರಡೂ ಸರಕಾರಗಳ ನಿಶ್ಚಿತ ಧೋರಣೆಯೆನ್ನುತ್ತಾ, ಪಾಕಿಸ್ತಾನದಲ್ಲಿ ಮುಸ್ಲಿಮೇತರರಿಗಾಗುತ್ತಿರುವ ಅತ್ಯಾಚಾರಗಳನ್ನು ನಿರ್ದಾಕ್ಷಿಣ್ಯವಾಗಿ ವರ್ಣಿಸಿ, ಪಾಕಿಸ್ತಾನ್ ಪ್ರಮುಖರ ನಾಲಿಗೆಯಾಶ್ವಾಸನೆಗಳ ಟೊಳ್ಳನ್ನು ತೋರಿಸಿಕೊಟ್ಟಿದ್ದ ಸರ್ದಾರ್ ಪಟೇಲರಿಗೆ ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತ್ ಅಲೀಖಾನರು ಕಹಿ ಮಾತುಗಳ ಉತ್ತರ ಕೊಟ್ಟಿದ್ದಾರೆ. "ನನ್ನ ನೆನಪುಶಕ್ತಿ ಗಿಡ್ಡವಿದೆಯೆಂದು ಸರ್ದಾರ್ ಪಟೇಲರ ಆರೋಪವಿದೆ. ಅದು ಸರಿಯಲ್ಲ. ಬದಲಿಗೆ, ಅವರಲ್ಲಿ ನೆನಪು ಶಕ್ತಿಯ ಅಣುವೂ ಉಳಿದಿಲ್ಲವೆಂಬಂತೆ ನನಗೆ ಕಾಣುತ್ತಿದೆ. ಪಂಜಾಬಿನ ಇಕ್ಕಡೆಯ ಎಲ್ಲಾ ಮುಸ್ಲಿಂ ಮತ್ತು ಮುಸ್ಲಿಮೇತರರನ್ನು ಪರಸ್ಪರ ಬದಲಾಯಿಸಿಕೊಳ್ಳತಕ್ಕದ್ದೆಂದು ನಿರ್ಧಾರವಾಗಿಲ್ಲ. ತಾವಾಗಿ ಹೊರಡುವವರಿಗೆ ಎರಡೂ ಸರಕಾರಗಳು ಸರ್ವ ಸೌಕರ್ಯಗಳನ್ನೊದಗಿಸತಕ್ಕದ್ದೆಂದು ಮಾತ್ರ ನಿರ್ಣಯವಾಗಿದೆ" ಎನ್ನುತ್ತಾ ಮಿ. ಲಿಯಾಖತರು ಭಾರತ ಸರಕಾರಕ್ಕೆ ತಮ್ಮಲ್ಲಿರುವ ಎಲ್ಲಾ ಮುಸ್ಲಿಮರನ್ನೂ ಹೊರಗಟ್ಟುವ ಹುರುಪಿದೆ, ಎಂಬರ್ಥ ಬರುವಂತೆ ಆರೋಪಿಸಿದ್ದಾರೆ. ಈ ಗಲಭೆಯಲ್ಲಿ ಹೆಚ್ಚಿನ ಮತ್ತು ಪ್ರಥಮದ ಹಾನಿ ಹಾಗೂ ಅನ್ಯಾಯಗಳಾಗಿರುವುದು ಮುಸ್ಲಿಮರಿಗೆಂಬೇ ಅವರ ವಾದ. ಪೂರ್ವ ಪಂಜಾಬೊಂದನ್ನು ಬಿಟ್ಟು ಡಿಲ್ಲಿ, ಸಂಯುಕ್ತಪ್ರಾಂತ್ಯ ಮೊದಲಾದ ಕಡೆಗಳ ಮುಸಲ್ಮಾನರನ್ನಾದರೂ ತಾವು ತಮ್ಮಲ್ಲಿ ಬರಮಾಡಿಸಿಕೊಳ್ಳಲು ತಯಾರಿಲ್ಲವೆಂಬುದನ್ನು ಮಿ. ಲಿಯಾಖತರು ಮತ್ತೊಮ್ಮೆ ಖಚಿತ ಪಡಿಸಿದ್ದಾರೆ.

ಫಜ್ಲುರ್ ರಹಿಮಾನರ ಆರೋಪ

ಪಾಕಿಸ್ತಾನ್ ಸರಕಾರದ ಒಳ ಭಾಗದ ಸಚಿವ ಮಿ. ಫಜ್ಲುರ್ ರಹಿಮಾನರು ಸ್ಥಿತಿ ನಿವೇದನೆ ಮಾಡುತ್ತಾ ಹೀಗೆಂದಿದ್ದಾರೆ: "ಪಶ್ಚಿಮ ಪಂಜಾಬಿನ ಹಳ್ಳಿ ಜನತೆಯ ಗಣ್ಯಭಾಗವಾಗಿದ್ದ ಸಿಖ್ಖರು ಒಬ್ಬನೇ ಒಬ್ಬ ಉಳಿಯದೆ ಇಲ್ಲಿಂದ ಗಂಟು ಮೂಟೆ ಕಟ್ಟಿದ್ದಾರೆ; ಕಟ್ಟುತ್ತಿದ್ದಾರೆ; ಕಟ್ಟುವುದರಲ್ಲಿದ್ದಾರೆ. ಸಿಖ್ಖರ ಇಡೀ ಸಮಾಜವೇ ಪೂರ್ವ ಪಂಜಾಬಿಗೆ ಹೋಗಿ ನಿಲ್ಲಲಿದ್ದಿರುವುದು ಅಲ್ಲಿ ಸಿಖ್‌ಸ್ಥಾನ ಅಥವಾ ಖಾಲಿಸ್ಥಾನವನ್ನು ವಿಸ್ತರಿಸಿ ಕಟ್ಟಬೇಕೆಂಬ ದೃಢೋದ್ದೇಶದಿಂದಲೇ. ಪೂರ್ವ--ಪಶ್ಚಿಮ ಪಂಜಾಬುಗಳೊಳಗೆ 54 ಲಕ್ಷ ಮುಸ್ಲಿಮರೂ 34 ಲಕ್ಷ ಮುಸ್ಲಿಮೇತರರೂ ಪರಸ್ಪರ ಬದಲಾವಣೆಗೊಳ್ಳುತಿದ್ದಾರೆ. ಈ ರೀತಿ 20 ಲಕ್ಷ ಮುಸ್ಲಿಂ ಜನತೆಯು ಹೆಚ್ಚಿಗೆ ಬರುವ ದೆಸೆಯಿಂದಾಗಿ ಪಾಕಿಸ್ತಾನದ ಸೌಕರ್ಯ ಭಂಡಾರದ ಕೊನೆಯಂಶವೂ ವಿನಿಯೋಗಿಸಲ್ಪಡಬೇಕಾಗುವುದು. ಪೂರ್ವ ಪಂಜಾಬು ಡಿಲ್ಲಿಯಲ್ಲಿ, ಅನಾಹುತಕ್ಕೊಳಗಾದ ಮುಸ್ಲಿಮರ ಸಂಖ್ಯೆಯು ಅಂಕೆಗಳ ಆರು ಸ್ಥಾನಗಳನ್ನು ಎಂದೋ ದಾಟಿರಬೇಕು. ಮುಸ್ಲಿಮೇತರರಿಗಾಗಿರುವ ನಷ್ಟವೆಂಬುದು ನಮಗಾಗಿರುವ ಹಾನಿಯ ಒಂದಂಶದಷ್ಟೇ. ಜನಬದಲಾವಣೆ 9 ವಾರಗಳೊಳಗೆ ಪೂರ್ಣಗೊಳ್ಳಬೇಕೆಂಬ ನಿರೀಕ್ಷೆಯಿದೆ. ಈ ಬದಲಾವಣೆಗಳನ್ನು ವಿಳಂಬಿಸಿದ ಕಾರಣಗಳ ಕುರಿತು ಎಲ್ಲರಿಗಿಂತ ಹೆಚ್ಚಾಗಿ ಉತ್ತರಿಸಬೇಕಾದವರು ಸಿಖ್ಖರೇ. ಅಮೃತಸರದಲ್ಲಿ ಸಿಖ್ಖರು ವ್ಯವಹಾರಯೋಗ್ಯ ವರ್ತನೆ ವಹಿಸುತಿದ್ದರೆ ಎಲ್ಲವೂ ಸುಗಮವಾಗುತಿತ್ತು. ಪಶ್ಚಿಮ ಪಂಜಾಬಿನಲ್ಲಿರುವ ಮುಸ್ಲಿಮೇತರ ನಿರಾಶ್ರಿತರಿಗೆ ಆಹಾರದ ಕೊರತೆಯಿಲ್ಲ. ಭಾರತ ಸರಕಾರವು ಆಕಾಶದಿಂದ ಅವರ ಕಡೆಗೆ ಆಹಾರ ಹಾಕುತ್ತಿರುವುದೊಂದು ಲಮ್ಯ ವಿನೋದವೇ ಸರಿ. ಈ ಯಾವ ಆಹಾರಗಳೂ ನೆಲಕ್ಕೆ ಬೀಳುವಾಗ ನಿಜ ರೂಪದಿಂದಿರುವುದಿಲ್ಲವಾದ್ದರಿಂದ ಇವೆಲ್ಲವನ್ನೂ ಹಾಳು ಮಾಡುತಿದ್ದಾರೆ ಹೊರತು ಬೇರಿಲ್ಲ" ಸಿಖ್ಖರು 'ಸಿಖ್‌ಸ್ಥಾನ'ಕ್ಕೆ ಚಪಲೆದ್ದಿದ್ದಾರೆಂಬುದಕ್ಕಾಗಲೀ, ಗಲಭೆಗಳಲ್ಲಿ ಮುಸ್ಲಿಮರಿಗಾದ ಹಾನಿ ಹೆಚ್ಚೆಂಬುದಕ್ಕಾಗಲೀ ನಿಮ್ಮಲ್ಲೇನಾದರೂ ಆಧಾರಗಳಿವೆಯೇ ಎಂದು ಪ್ರಶ್ನಿಸಲ್ಪಟ್ಟಾಗ ಮುಂದಿಡಲು ಮಿ. ಫಜ್ಲುರ್ ರಹಿಮಾನರಲ್ಲೇನೂ ಇರಲಿಲ್ಲ!

ಘಜ್ನಫರ್ ಅಲಿಗಳ ವಾಗ್ಬಾಣ

ತಮ್ಮ ಮನಸ್ಸಿಗೆ ತೋರಿದಂತೆ ಮಾತಾಡಿಬಿಟ್ಟರಾಯಿತು:-ಲೋಕದ ನ್ಯಾಯಸ್ಥಾನದೆದುರು ಬೇರೆ ದಾಖಲೆ ಮುಂದಿಡುವ ಹೊಣೆಯೇ ತಮಗಿಲ್ಲವೆಂಬಂತೆ ಪಾಕಿಸ್ತಾನ್ ಸರಕಾರದ ಹೊಣೆಗಾರ ಮಂತ್ರಿಗಳೇ ಮಾತಾಡುತ್ತಾ ಬರುತ್ತಿರುವುದು ಸದ್ಯದ ನಿವಾರಣಾತೀತ ಸಂಕಟಗಳಲ್ಲಿ ದೊಡ್ಡವೆನ್ನಬೇಕು. ಪಾಕಿಸ್ತಾನ್ ಆಹಾರ ಮಂತ್ರಿ ಮಿ ಗಜ್ನಫರ್ ಅಲೀಖಾನರು ಪಾಕಿಸ್ತಾನದಲ್ಲಿರುವ ಬ್ರಿಟಿಷ್ ಅಧಿಕಾರಿಗಳಮೇಲೆ ಅತಿ ದೊಡ್ಡ ಆರೋಪಗಳನ್ನು ಮಾಡಿರುವುದರಲ್ಲೊಂದು ಸ್ವಾರಸ್ಯವಿದೆ; ಪಾಕಿಸ್ತಾನ್ ಮಂತ್ರಿಮಂಡಲದ ಒಳಸಂಬಂಧಗಳೆಡೆಗೂ ಅದೊಂದು ಬೆಳಕನ್ನು ಚೆಲ್ಲಿದೆ' "ಪಾಕಿಸ್ತಾನದಲ್ಲಿರುವ ಬ್ರಿಟಿಸ್ ಅಧಿಕಾರಿಗಳು ಇಲ್ಲಿರುವ ಮುಸ್ಲಿಮೇತರರು ಹಿಂದುಸ್ತಾನಕ್ಕೆ ಹೋಗುವಂತೆ ಮಾಡುತಿದ್ದಾರೆ. ನೌಕರಶಾಹೀ ಆಡಳಿತೆಯ ಮರಿಗಳಾದ ಇವರು ಸದ್ಯದ ಸರಕಾರದ ಧೋರಣೆಯನ್ನು ಲಕ್ಷಿಸುತ್ತಿಲ್ಲ. ಪಶ್ಚಿಮ ಪಂಜಾಬಿನಲ್ಲಿರುವ ಬೇರೆ ಹಲವರು ಮಾಡುತ್ತಿರುವಂತೆ ನನ್ನ ಇಲಾಖೆಯಲ್ಲಿರುವವರಾರಾದರೂ ಮಾಡುತಿದ್ದರೆ ನಾನವರನ್ನು ಕಿತ್ತೊಗೆಯುತ್ತಿದ್ದೆ" ಎಂದು ಗಜ್ನಫರ್ ಅಲಿಗಳ ಮಾತು. ಜಾತೀಯ ಗಲಭೆಯ ವೇಳೆ ಊರೂರು ಸಂಚರಿಸಿ ಮುಸ್ಲಿಮರನ್ನು ಹಿಂತಳ್ಳುವ ಪ್ರಯತ್ನದಲ್ಲೂ, ಪಾಕಿಸ್ತಾನೇತರ ಭಾಗಗಳ ಮೇಲೆ ಭಯಂಕರಾರೋಪ ಮಾಡುವದರಲ್ಲೂ, ಮಿಕ್ಕ ಪಾಕಿಸ್ತಾನ್ ಮಂತ್ರಿಗಳಿಗಿಂತ ಅಧಿಕ ಶ್ರಮಿಸಿದವರೆಂದರೆ ಮಿ. ಗಜ್ನಫರರೇ. ಆದರೆ ಪಾಕಿಸ್ತಾನ್ ಪ್ರಮುಖರ ತಲೆಯ ಮೇಲೀಗ ಹೊಣೆಯ ಹೊರೆ ಬಂದಿದೆಯಾದರೂ ಹಿಂದಿನ ಹೋರಾಟಕಾಲದ ಲಗು ನೆಗೆದಾಟಗಳನ್ನೇಕೆ ಅವರು ಬಿಡಲಾರರೋ ತಿಳಿಯದು.

ಕಗ್ಗತ್ತಲೆಯ ಕೋಲ್ಮಿಂಚುಗಳು

ಈ ರೀತಿ ವಾತಾವರಣದಲ್ಲಿ ಕತ್ತಲು ಕವಿದಿದ್ದರೂ ಅಲ್ಲಲ್ಲಿ ಪ್ರಕಾಶ ಬೀಳದಿಲ್ಲ. ಶಾಂತಿ ದೂತರಾಗಿ ಹೋಗಿದ್ದ ಶ್ರೀ ಜಮುನಾದಾಸ್ ದ್ವಾರಕಾದಾಸರ ಹಸ್ತ ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತ್ ಅಲೀಖಾನರು ಗಾಂಧಿಜೀಗೊಂದು ಸಂದೇಶ ರವಾನಿಸಿದ್ದಾರೆಂದು ತಿಳಿದು ಬರುತ್ತದೆ. "ಹಿಂದುಗಳು ಪಾಕಿಸ್ತಾನದಲ್ಲಿ ಮರು ಪ್ರವೇಶಿಸಿ ವಾಸಿಸಬೇಕೆಂದೇ ನಮ್ಮ ಬಯಕೆ. ನಮ್ಮ ಮುಸ್ಲಿಂ ಅಲ್ಪಸಂಖ್ಯಾಕರನ್ನು ಭಾರತ ಸರಕಾರವೂ ಅದೇ ರೀತಿ ರಕ್ಷಿಸಬೇಕೆಂಬುದನ್ನು ದೃಷ್ಟಿಸಿ ನಾವೀ ಧೋರಣೆ ವಹಿಸುವದೇನೂ ಅಲ್ಲ' ಅಪೇಕ್ಷೆ ಪಟ್ಟವರೆಲ್ಲರ ಪ್ರಾಣ ರಕ್ಷಣೆ ಮಾಡುವದು ನಮ್ಮ ರಾಷ್ಟ್ರ ಸರಕಾರದ ಆದ್ಯ ಕರ್ತವ್ಯವೆಂಬ ಭಾವನೆಯಿಂದಲೇ ನಾವದನ್ನು ಮಾಡುತ್ತೇವೆ" ಎಂದು ಮಿ. ಲಿಯಾಖತರು ಆ ಸಂದೇಶದಲ್ಲಂದಿದ್ದಾರೆ. ಭಾರತ ಸರಕಾರದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತಕೌರರು ಆಶ್ವಾಸನೆಯಿತ್ತಿದ್ದಾರೆ. "ಪಾಕಿಸ್ತಾನದವರೇನೇ ಮಾಡಲಿ, ಏನನ್ನೇ ಮಾಡದಿರಲಿ; ನಾವಂತೂ ನಮ್ಮ ಉಚ್ಚತತ್ವಗಳಿಗೆ ಕಟ್ಟುಬಿದ್ದು, ಸರಿದಾರಿಯನ್ನು ಬಿಡದೆ ಸಾಗುವುದು ಖಂಡಿತ". ಪಾಕಿಸ್ತಾನದಲ್ಲೇ ಉಳಿದಿರುವ ಮುಸ್ಲಿಮೇತರ ಪಲಾಯನಗಾರರ ಆಸ್ತಿಸೊತ್ತುಗಳಿಗೆ ಯೋಗ್ಯ ಪರಿಹಾರವನ್ನು ಪಾಕಿಸ್ತಾನದಿಂದ ಕೇಳಲಾಗುವದೆಂದೂ ರಾಜಕುಮಾರಿಯಂದಿದ್ದಾರೆ. ಸಿಂಧಿನ ಪ್ರಧಾನ ಮಂತ್ರಿ ಮಿ. ಖುಹ್ರೋ ಸಿಂಧಿನಿಂದೋಡುತ್ತಿರುವ ಮುಸ್ಲಿಮೇತರರ ವರ್ತನೆಯನ್ನು ನಿಷೇಧಿಸುತ್ತಾ ಸಮಜಾಯಿಸುತ್ತಾ ನುಡಿದಿದ್ದರು. "ನನ್ನ ಸರಕಾರವು ಇಲ್ಲಿಯ ಅಲ್ಪಸಂಖ್ಯಾಕರನ್ನು [illegible]ಭದ್ರವಾಗಿ, ಸುರಕ್ಷಿತವಾಗಿ ಮತ್ತು ಸುಖವಾಗಿ ವಾ[illegible]ಂತೆ ಮಾಡುವದು ತನ್ನ ಪವಿತ್ರ ಕರ್ತವ್ಯವೆಂದು ಬಗೆದಿದೆ. ಮಿಕ್ಕ ಎಲ್ಲಾ ಸರಕಾರಗಳಿಗೂ ಸಿಂಧಿನ ಈ ಮಾದರಿಯನ್ನನುಸರಿಸುವ ಸ್ಫೂರ್ತಿ ಹುಟ್ಟಲಿ. ಶ್ರೀ. ಗಾಂಧಿ ಮತ್ತು ನೆಹರುಗಳ ಪ್ರಯತ್ನವು ಜಯಶೀಲವಾಗುವದೆಂದು ನಾನಾಶಿಸುತ್ತೇನೆ. ನಾವೀಗ ಸಿಂಧಿನಿಂದ ಹೊರಡುವವರನ್ನು ಜಬ್ತಿ ಮಾಡುವದನ್ನು ಕೂಡಾ ನಿಲ್ಲಿಸಿದ್ದೇವೆ"

ಭಾರತದಲ್ಲಿರುವ ಮುಸ್ಲಿಂ ಪ್ರಮುಖರಂತೂ ಇಲ್ಲಿಯ ಮುಸ್ಲಿಮರು ಭಾರತರಾಷ್ಟ್ರಕ್ಕೆ ಸಂಶಯಾತೀತ ವಿಧೇಯರಾಗಿರಬೇಕೆಂಬುದನ್ನು ಬಲವಾಗಿ ಒತ್ತಿಹೇಳ ಹತ್ತಿದ್ದಾರೆ. ಪಂಜಾಬು ರಾಷ್ಟ್ರೀಯ ಮುಸ್ಲಿಂ ನಾಯಕ ಪ್ರೊ. ಅಬ್ದುಲ್ ಮಜೀದ್ ಖಾನರು ಮುಸ್ಲಿಂ ಲೀಗಿನವರಿಗೊಂದು ಆಗ್ರಹದ ಕರೆಯಿತ್ತು "[illegible] ಬರ್ಖಾಸ್ತು ಪಡಿಸಿ, ಮುಸ್ಲಿಮರೆಲ್ಲಾ ಏಕಗುಂಪಾಗಿ ರಾಜಕೀಯ ಹಾಗೂ ಆರ್ಥಿಕ ನ್ಯಾಯವನ್ನು ಆಧರಿಸಿ ನಿಂತಿರುವ ಕಾಂಗ್ರೆಸಿಗೆ ಸೇರಬೇಕು. ವಿಷ ಪೂರಿತ ದ್ವಿರಾಷ್ಟ್ರೀಯ ತತ್ವವನ್ನು ಸದಾ ಕಾಲಕ್ಕೂ ಇನ್ನು ಮರೆಯಬೇಕು. ಲೈಸೆನ್ಸ್‌ರಹಿತ ಆಯುಧಗಳಿದ್ದವರೆಲ್ಲರೂ ಕೂಡಲೇ ಒಪ್ಪಿಸಿ

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ಹೆಗ್ಗುರಿಯಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ—

ದಿ ವಿಜಯಾ ಬೇಂಕ್,
ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಸಿಟಿ–ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಂಞಂಗಾಡು, ಮಡಿಕೇರಿ ಮತ್ತು ಮುಂಬಾಯಿ.

THE VIJAYA BANK, LIMITED.

ಈ ದುರಭಿಲಾಷೆಗಳು

ಸಂಯಮನದಿಂದ ನಿಂತಾವೆ?
ಸಾಹಸದಿಂದ ನಿಲ್ಲಿಸಬೇಕೆ!

ಬಿಡಲಿ. ನೆಪಮಾತ್ರವಾದ ಸಂಬಂಧವು ಸಾರ್ಥಕವಾಗದು. ತ್ರಿಕರಣ ಪೂರ್ವಕ ಭಾರತದ ಭಕ್ತಿಯಿರುವ ಮುಸಲ್ಮಾನರೇ ಇಲ್ಲಿರಬೇಕು. ಆ ಕುರಿತು ಬಹುಮಾತ್ರ ಶಂಕೆಯಿರುವವರು ಪಾಕಿಸ್ತಾನಕ್ಕೆ ಹೋಗಬೇಕು" ಎಂದು ಸಾರಿಹೇಳಿದ್ದಾರೆ. ಇದೇ ರೀತಿ ಇತರ ಮುಸ್ಲಿಂ ಮುಖಂಡರೂ ಒಬ್ಬೊಬ್ಬರೇ ಮುಂದೆ ಬಂದು ನೀತಿ ಬೋಧಿಸಹತ್ತಿದ್ದಾರೆ.

ಸಂಸ್ಥಾನೀ ಸಂಕಟ

ಹೈದರಾಬಾದು-, ಜುನಾಗಡು-, ಕಾಶ್ಮೀರ, ಇವು ಮೂರು ಸಂಸ್ಥಾನಗಳು ಈಗ ಭಾರತದ ಶಾಂತಿಯನ್ನು ತಿವಿಯುತ್ತಿರುವ ತ್ರಿಶೂಲದಂತಿವೆ. ಹೈದರಾಬಾದು ಮಾತುಕತೆ ಹನುಮನ ಬಾಲದಂತೆ ಬೆಳೆದಿದೆ-ಬೆಂಕಿ ಹಚ್ಚುವುದಕ್ಕಾಗಿಯೇ ಎಂಬುದೀಗ ಖಚಿತವಾಗಹತ್ತಿದೆ! ಡಿಲ್ಲಿಯಲ್ಲಿ ನಡೆದಿದ್ದ ಸಂಧಾನ ಮಾತುಕತೆಗಳ ಫಲಿತಾಂಶವು ಕಳೆದ ಆದಿತ್ಯವಾರವೇ ನಿರ್ಣಯಿಸಲ್ಪಟ್ಟಿರಬೇಕು. ಈ ಮಾತುಕತೆಗಳಾದರೂ 'ಪ್ರಚಲಿತ ವ್ಯವಹಾರ ಶರ್ತುಗಳ ಮೇಲೆಯೇ ನಡೆದಿದ್ದುವೆಂದೂ, ಹೈದರಾಬಾದು ಭಾರತ ಕೇಂದ್ರಕ್ಕೆ ಸೇರುವ ಪ್ರಶ್ನೆಯನ್ನು ಪುನಃ ಮುಂದೂಡಲಾಗಿದೆಯೆಂದೂ ತಿಳಿದುಬರುತ್ತದೆ. ಆದರೆ ಯಾವ ಕರಾರೂ ನಿರ್ವಾಣಗೊಳ್ಳದಂತೆ ಮಾಡಬಲ್ಲ ವಿಷಬೀಜಗಳು ಈ ಸಂಬಂಧ ವ್ಯವಹಾರದಲ್ಲಿ ಸೇರಿರುವವೆಂಬುದನ್ನು ಮರೆಯಬಾರದು. ಹೈದರಾಬಾದು, ಇದುವರೆಗೂ ಕಾಲಹರಣವನ್ನೇ ಮಾಡಿದ್ದಿತು. ಇನ್ನಾದರೂ ಅದಕ್ಕೆ ಬೇಕಾಗಿರುವುದು ಆಟವಾಡುವರೆ ಅವಧಿ ಹೊರತು ಭಾರತದ ಸಂಬಂಧವಲ್ಲವೆಂಬುದು ನಿಸ್ಸಂದೇಹ.

ಇತ್ತೆಹಾದ್-ಉಲ್-ಮುಸ್ಲಿಮಿನ್

ಹೈದರಾಬಾದು ನಿಜಾಮರು ಸಹೃದಯೀ ಮನುಷ್ಯನೆಂದು ಪರಿಚಿತರ ಅಭಿಮತ. ಆದರವರು ತಾನು ಹಿಂದೀ ರಾಜರ ಸೈಕೆ 'ಅಧಿರಾಜ'ನೆಂದು ಹೇಳಿಕೊಳ್ಳುತ್ತಿರುವರಾದರೂ ಅಲ್ಲಿಯ ಮುಸ್ಲಿಂಗಳ 'ಇತ್ತೆಹಾದ್-ಉಲ್-ಮುಸ್ಲಿಮಿನ್' ಸಂಸ್ಥೆಯ ಕೈದಿಯಂತಿದ್ದಾರೆ. ಈ ಕಟ್ಟುಗ್ರ ಮುಸ್ಲಿಂ ಸಂಸ್ಥೆಯ ಕೈಯಲ್ಲೇ ಹೈದರಾಬಾದಿನ ಅಧಿಕಾರ ಮತ್ತು ಅದೃಷ್ಟ ಇವೆರಡೂ ಈಗ ಸಿಲುಕಿವೆ ಎಂಬುದನ್ನು ಮರೆಯಬಾರದು. ನಿಜಾಮರ ಇಂದಿನ ಸ್ಥಾನಮಾನಗಳಿಗೆ ಎಳ್ಳಷ್ಟು ಧಕ್ಕೆ ಬೀಳದಂತೆ—ಸಾಧ್ಯವಿದ್ದರೆ ಅವರನ್ನು ನಿಜಾಮ್ ಸ್ಥಾನದಿಂದ ವಿಸ್ತಾರ ಭೂಭಾಗಗಳ ಬಾದಷಹಾ ಸ್ಥಾನಕ್ಕೆ ಏರಿಸುವದಕ್ಕಾಗಿ-ಸ್ಥಾಪನೆಗೊಂಡು ಉಗ್ರ ಸಾಧನೆ ಕೈಕೊಂಡಿರುವ ಸಂಸ್ಥೆಯಿದು. ಇದನ್ನಾಕ್ಷೇಪಿಸುವ ಧೈರ್ಯ ಮತ್ತು ಹೃದಯ ಇವೆರಡೂ ನಿಜಾಮರಲ್ಲಿಲ್ಲ. ಹೈದರಾಬಾದು ಹಿಂದೀ ಕೇಂದ್ರಕ್ಕೆ ಸೇರುತ್ತದೆಂದಾದರೆ ರಕ್ತ ಪ್ರಳಯವೆಬ್ಬಿಸಲು ಈ ಸಂಸ್ಥೆ ನಡುಬಿಗಿದಿದೆ. ಇದರ ಉಪಟಳದಿಂದಾಗಿಯೇ ಹೈದರಾಬಾದು ನರಕವಾಗಿದೆ. ಅಲ್ಲಿಂದ ಹಿಂದುಗಳು ಸಹಸ್ರ ಸಂಖ್ಯೆಯಲ್ಲಿ ಓಡಿಬರುತ್ತಿದ್ದಾರೆ. ಹೀಗೆ ಒಳಗಿದ್ದ ಹಿಂದುಗಳನ್ನೋಡಿಸಿ, ಹೊರಗಿನ ಮುಸ್ಲಿಮರನ್ನು ತುಂಬಿಸಿಕೊಂಡು ಹೈದರಾಬಾದನ್ನು ಮುಸ್ಲಿಂ ಬಹುಸಂಖ್ಯಾಕ ರಾಷ್ಟ್ರ ಕೊನೆಯಪಕ್ಷ ಸಾಕಷ್ಟು ಮುಸ್ಲಿಂ ಸಂಖ್ಯಾಬಲವುಳ್ಳ ರಾಷ್ಟ್ರವಾಗಿ ಮಾರ್ಪಡಿಸಬೇಕೆಂಬುದೇ ಹೈದರಾಬಾದು ಸರಕಾರದ ಇಚ್ಛೆ. ಈ ಸುಸಜ್ಜಿತ ಯೋಜನೆಗನುಸಾರವಾಗಿ ಕಳೆದ ಕೆಲವು ವಾರಗಳಲ್ಲಿ ಹೊರಗಿನ ಸಹಸ್ರ ಸಂಖ್ಯೆಯ ಮುಸ್ಲಿಮರು ಹೈದರಾಬಾದಿನೊಳಗೆ ನುಗ್ಗಿ ನಿಂತಿದ್ದಾರೆ. ಸಂಯುಕ್ತ ಪ್ರಾಂತ್ಯ ಮೊದಲಾದ ಕಡೆಗಳಿಂದ ಹೈದರಾಬಾದ್ ಸೇರುವ ಗುರಿಯಿಟ್ಟುಕೊಂಡು ಸುಮಾರು 100000 ಮುಸಲ್ಮಾನರು ಭೋಪಾಲ ಸಂಸ್ಥಾನದೊಳಗೆ ಹೋಗಿ ಜಮೆಯಾಗಿದ್ದರು. ಅವರನ್ನು ಹೈದರಾಬಾದಿಗೆ ಕಳುಹಿಸುವರೆ, ಪ್ರಯಾಣಾನುಕೂಲತೆಗಾಗಿ ಭೋಪಾಲ ಸರಕಾರವು ಭಾರತ ಸರಕಾರವನ್ನು ಕೇಳಿಕೊಂಡಿದ್ದಿತು. ಹಿಂದೀ ಸರಕಾರವದನ್ನು ಧಿಕ್ಕರಿಸಿ, ಯಾವ ಗಲಭೆಯೂ ಇಲ್ಲದೆ, ಕೇವಲ ದುರುದ್ದೇಶದಿಂದಲೇ ಬಂದಿರುವ ಇವರು ತಮ್ಮ ಮೂಲಸ್ಥಳಕ್ಕೆ ಹಿಂದಿರುಗುವುದಾದಲ್ಲಿ ಪ್ರಯಾಣಾನುಕೂಲತೆಯೊದಗಿಸಬಹುದೆಂದು ತಿಳಿಸಿದೆ. ಮಾತ್ರವಲ್ಲ; ಸೇನಾ ಸಂಗ್ರಹದಂತಿರುವ ಹೈದರಾಬಾದಿನ ಮುಸ್ಲಿಂ ಜಮಾಫೋರಣೆಯ ಕುರಿತು ಹಿಂದೀ ಸರಕಾರ ಈಗ ತಾನೇ ಎಚ್ಚತ್ತು, ಹೈದರಾಬಾದಿನತ್ತ ಮುಸ್ಲಿಂ ಪ್ರವಾಹ ನುಗ್ಗದಂತೆ ಪ್ರತಿಬಂಧಿಸತಕ್ಕದ್ದೆಂದು ಆಯಾ ಸರಕಾರಗಳಿಗೆ ತಿಳಿಸಿದೆ. ಮಧ್ಯ ಪ್ರಾಂತ್ಯವು ಬಾಸಿಮ್ ಎಂಬಲ್ಲಿಯ ಹೈದರಾಬಾದು ಮತ್ತು ತನ್ನ ಗಡಿದ್ವಾರವನ್ನು ಮುಚ್ಚಿಬಿಟ್ಟಿದೆ. ಹೈದರಾಬಾದು ಪೋಲಿಸ್ ಅಧಿಕಾರಿಗಳು ಕೆಲವರು ಬೆರಾರಿನೊಳಗೆ ನುಗ್ಗಿ ಬಂದಿದ್ದರೆಂದೂ ಮಧ್ಯ ಪ್ರಾಂತ್ಯದ ಸರಕಾರವು ಅವರನ್ನು ಹೊಡೆದು ಹಿಂದಟ್ಟಿತೆಂದೂ ತಿಳಿದು ಬರುತ್ತದೆ. ಹೀಗಾಗಿ ಹೈದರಾಬಾದೀಗ ಸ್ಫೋಟಪೂರ್ಣ ಜ್ವಾಲಾಮುಖಿಯಾಗಿದೆ ಹೊರತು, ಅಲ್ಲಿಂದ ಶಾಂತಿ ಗಾಳಿ ಬೀಸುತ್ತಿಲ್ಲ.

ಜುನಾಗಡ್

ಜುನಾಗಡ್ ಜ್ವಾಲಾಮುಖಿಯೂ ಅಪಾಯ ಸೂಚಕ ಹೊಗೆಯನ್ನಷ್ಟೇ ಕಾರುತ್ತಾ ಇದುವರೆಗೂ ಇದ್ದಂತಿದೆ. ಅಬ್ದುಲ್ ರಾಬ್ ನಿಸ್ತಾರರು ಜುನಾಗಡಿಗೆ ಹೋಗಿದ್ದಾರೆಂಬ ವಾರ್ತೆಯನ್ನು ಪಾಕಿಸ್ಥಾನ್ ಸರಕಾರವು ಅಲ್ಲಗಳೆದಿದೆ. ಜುನಾಗಡಿನೊಳಗೆ ಗುಪ್ತ ಸಿದ್ಧತೆಗಳೂ ಸಂಚುಹಂಚಿಕೆಗಳೂ ಅವ್ಯಾಹತವಾಗಿ ನಡೆಯುತ್ತಿದ್ದು ಅಪಾಯ ಒಲಿಯುತ್ತಿದೆ. ಜನಮತದಂತೆ ವರ್ತಿಸುವ ಸದ್ಬುದ್ಧಿಯು ಪಾಕಿಸ್ತಾನಕ್ಕಿನ್ನೂ ಮೊಳೆತಿಲ್ಲವೆಂಬುದು ಸ್ಪಷ್ಟವಾಗಿದೆ. ಹಿಂದುಸ್ಥಾನ್ ಸರಕಾರವು ಈ ಕುರಿತು ಪಾಕಿಸ್ತಾನ್ ಮತ್ತು ಜುನಾಗಡುಗಳಲ್ಲಿ ಯಾವಸಂದೇಹವೂ ಇರಬಾರದೆಂಬುದಕ್ಕಾಗಿ, ಸೇನಾ ಪದ್ಧತಿಗೆ ವಿರೋಧವಾಗಿ, ಅಲ್ಲಿಯ ಗಡಿಗೆ ತಾನು ಕಳುಹಿಸಿರುವ ಸೇನಾವಿವರಗಳನ್ನು ಪ್ರಕಟಿಸಿದೆ. ಜುನಾಗಡ್ ಗಡಿಯ ಜಫರಾಬಾದ್ ಎಂಬಲ್ಲಿಗೆ ಹಿಂದೀ ಸರಕಾರವು ಆಧುನಿಕ ಶಸ್ತ್ರಾಸ್ತ್ರಸಕರಣಗಳು, ಆಕಾಶಬಲ ಮತ್ತು ನೌಕಾಬಲಗಳ ಬೆಂಬಲವುಳ್ಳ 4,000 ಯೋಧರ ದಳವೊಂದನ್ನು ನಿಲ್ಲಿಸಿದೆ. ಜುನಾಗಡಿನಲ್ಲಿರುವ ಕ್ರಮಬದ್ಧ ಸೇನಾ ಸಂಖ್ಯೆ 500 ಮಾತ್ರ. ಪೋಲೀಸರು ಮತ್ತು ಇತರ ಬಿಡಿಸೇನೆಗಳು ಒಟ್ಟಿಗೆ 2,000 ಇವೆ. ಇಂತಹ ದುರ್ಬಲ ಶಕ್ತಿಯ ರಾಷ್ಟ್ರದ ಗಡಿಗೆ ಈ ಪ್ರಬಲ ಸೇನೆ ಕಳುಹಿಸಿದುದು ಯುದ್ಧೋತ್ಸಾಹದಿಂದಲ್ಲವೆಂದೂ ಶಾಂತಿಸ್ಥಾಪನೆಗೆಂದೂ ಭಾರತ ಸರಕಾರವು ಸಾರಿದೆ. ಇತ್ತ ಜುನಾಗಡಿನ ಪ್ರಜೆಗಳ ಪ್ರತಿ ಸರಕಾರವು ಪ್ರಬಲಿಸುತ್ತಿದ್ದು ಅಲ್ಲಿಯ ಹಲವು ಮುಸ್ಲಿಂ ಪ್ರಜೆಗಳೂ ಅದಕ್ಕೆ ಬೆಂಬಲವಾಗಹತ್ತಿದ್ದಾರೆ. "ಹಿಂದೀ ಕೇಂದ್ರಕ್ಕೆ ಸೇರಿ ಜುನಾಗಡು ಕಾಂಗ್ರೆಸ್ ತತ್ವ ಮತ್ತು ಘಟನಾ ಸಮಿತಿಯ ಶಾಸನಾನ್ವಯದ ಆಡಳಿತೆಗೊಳಗಾಗುವಂತೆ ಕಾಥಿಯಾವಾರದ ಪ್ರತಿಯೊಬ್ಬ ಮುಸಲ್ಮಾನನೂ ತನ್ನ ಶಕ್ತಿಯ ಪ್ರತಿಯೊಂದೌನ್ಸನ್ನೂ ವ್ಯಯಿಸಬೇಕು. ಪಾಕಿಸ್ತಾನವು ಕಾಥಿಯಾವಾರಿನೊಳಗೆ ಕಾಲಿಡಲು ಪ್ರಯತ್ನಿಸುವದು ಕ್ರಿಮಿನಲ್ ಮತ್ತು ಭಯಂಕರ ಅನ್ಯಾಯ" ಎಂದು ಪ್ರೊಫೆಸರ್ ಹಬೀಬರೆಂದಿದ್ದಾರೆ.

ಕಾಶ್ಮೀರ ನುಗ್ಗುವ ಯೋಜನೆ?

ಪಂಜಾಬು ವಿಭಜನೆಯಾಗಿ ಪೂರ್ವ ಪಂಜಾಬು ಹಿಂದೂ ಸಿಖ್ಖರ ಪಾಲಿಗೆ ದೊರೆಯದಿರುತ್ತಿದ್ದಲ್ಲಿ ಹಿಂದೀ ಭಾರತದ ಸಂಬಂಧವು ಸಂಪೂರ್ಣ ತಪ್ಪಿ ಹೋಗಿ ಕಾಶ್ಮೀರವು ಪಾಕಿಸ್ತಾನ್ ಕೋಟೆಯೊಳಗಾಗಬೇಕಿತ್ತು. ಈಗ ಅದಕ್ಕೆ ಕೇಂದ್ರ ಭಾರತದೊಡನೆ ಜೋಡಣೆಗೊಳ್ಳುವ ಕ್ಷೇತ್ರ ಸಂಬಂಧವೊಂದು ದೊರೆತಿದೆಯಾದರೂ ಉಳಿದ ಎಲ್ಲಾ ದಿಕ್ಕುಗಳಿಂದಲೂ ಅದು ಪಾಕಿಸ್ತಾನದ ಮುತ್ತಿಗೆಯೊಳಗಿದೆ. ಕಾಶ್ಮೀರವು ಇದುವರೆಗೆ ಯಾವ ಕೇಂದ್ರಕ್ಕೂ ಜೋಡಣೆಗೊಂಡಿಲ್ಲ. ಹಿಂದೂ ರಾಜರು ಮತ್ತು ನೇಕಡಾ 70ರಷ್ಟು ಮುಸ್ಲಿಂ ಪ್ರಜೆಗಳುಳ್ಳ ಸಂಸ್ಥಾನವಿದು. ಭಾರತದ ಪಾಲಿಗೆ ಹೈದರಾಬಾದು ಅಥವಾ ಜುನಾಗಡ್ ಸಂಸ್ಥಾನವು ಹೇಗೋ ಪಾಕಿಸ್ಥಾನದ ಕಣ್ಣಿಗೆ ಕಾಶ್ಮೀರವು ಹಾಗೆ! ಸುದೈವವಶಾತ್ ಪಂಡಿತ ನೆಹರುಗಳ ಪರಮಾಪ್ತ ಶೇಕ್ ಅಬ್ದುಲ್ಲಾನ ನಾಯಕತ್ವದಲ್ಲೇ ಕಾಶ್ಮೀರದ ಬಹುಸಂಖ್ಯಾಕ ಮುಸ್ಲಿಮರಿಗೂ ಎಲ್ಲಾ ಹಿಂದುಗಳಿಗೂ ವಿಶ್ವಾಸವಿರುವುದರಿಂದಾಗಿ ಅಲ್ಲಿ ಲೀಗಿನ ಹಕೋಟೆಯಾಗಲೀ, ಜಾತೀಯ ವಿಷಬೀಜವಾಗಲೀ ಇದುವರೆಗೆ ಬಿದ್ದಿಲ್ಲ. ಕೆಲಕಾಲಕ್ಕೆ ಮೊದಲು ಶೇಕ್ ಅಬ್ದುಲ್ಲಾನನ್ನು ಬಂಧಿಸಿಟ್ಟಿದ್ದ ಕಾಶ್ಮೀರ ಸರಕಾರವು ಈ ಸಂಧಿ ಕಾಲದಲ್ಲಿ ಬಿಡುಗಡೆ ಮಾಡಿದೆ "ಪ್ರಥಮತಃ ಪ್ರಜಾ ಪ್ರಭುತ್ವ ಸ್ಥಾಪನೆಯಾಗಿಕೊಳ್ಳಲಿ; ಯಾವ ಕೇಂದ್ರಕ್ಕೆ ಸೇರುವದೆಂಬ ಪ್ರಶ್ನೆಯನ್ನು ಕೊನೆಗೆ ನಾವೇ ನಿರ್ಣಯಿಸುವೆವು" ಎಂದು ಶೇಕ್ ಅಬ್ದುಲ್ಲಾರೆಂದಿದ್ದಾರೆ. ಪಂಜಾಬು ಹೈಕೋರ್ಟು ಜಡ್ಜರೂ ಪಂಜಾಬು ಗಡಿನಿರ್ಣಯ ಸಮಿತಿ ಸದಸ್ಯರೂ ಆಗಿದ್ದು ಈಗ ತಾನೇ ಕಾಶ್ಮೀರದ ಪ್ರಧಾನ ಮಂತ್ರಿಯಾಗಿ ನೇಮಿಸಲ್ಪಟ್ಟಿರುವ ಶ್ರೀ ಮೆಹರಚಂದ ಮಹಾಜನರು ಕಾಶ್ಮೀರದಲ್ಲಿ ಕ್ರಮಶಃ ಪ್ರಜಾಸರಕಾರ ತರುವ ಅಭಿಮತ ಸೂಚಿಸಿದ್ದಾರೆ.

ಪಾಕಿಸ್ತಾನದ ಆಕ್ರಮಣಗಳು

ಪಾಕಿಸ್ತಾನದ ಪತ್ರಿಕೆಗಳೂ ಆಕಾಶವಾಣಿಗಳೂ ಕಾಶ್ಮೀರದ ಮೇಲೆ ಸುಳ್ಳು ಹಾಗೂ ಅಸತ್ಯಾರೋಪಗಳನ್ನು ಎಡೆಬಿಡದೆ ಹೇರುತ್ತಿವೆ. ಕಾಶ್ಮೀರವನ್ನು ಹೆದರಿಸಿ ಪಾಕಿಸ್ತಾನದೊಳಗೆ ಸೇರಿಸಿಕೊಳ್ಳಬೇಕೆಂಬುದೇ ಉದ್ದೇಶ. ಕಾಶ್ಮೀರದ ಮೇಲೆ ಪಾಕಿಸ್ತಾನವು ವ್ಯಾಪಾರಾರ್ಥಿಕ ಬಹಿಷ್ಕಾರ ಹಾಕಿದೆ. ಭಾರತ ಸರಕಾರವು ರಾವಲ್ಪಿಂಡಿ ಮಾರ್ಗವಾಗಿ ಕಾಶ್ಮೀರಕ್ಕೆ ಕಳುಹಿದ್ದ ಆಮದುಗಳೂ ಈ ದೆಸೆಯಿಂದಾಗಿ ರಾವಲ್ಪಿಂಡಿಯಲ್ಲೇ ಬಿದ್ದುಕೊಂಡಿವೆ. ಕಾಶ್ಮೀರದಲ್ಲಿ ವಸ್ತ್ರಾಭಾವವಿದ್ದಿದೆ. ಪೆಟ್ರೋಲ್, ಗೋಧಿ, ಇತ್ಯಾದಿಗಳ ಸರಬರಾಯಿ ನಿಂತಿದೆ. ಮಾತ್ರವಲ್ಲ;

(೬ನೇ ಪುಟ ನೋಡಿರಿ).

THE UDIPI BANK LIMITED, UDIPI.

ಉಡುಪಿ ಬ್ಯಾಂಕ ಲಿಮಿಟೆಡ್, ಉಡುಪಿ.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹಾಶಯರು ಚಿನ್ನಾಭರಣಗಳ ಆಧಿನ ಮೇಲೆ ಬ್ಯಾಂಕಿನಿಂದ ಪಡೆದ ಈ ಕೆಳಗೆ ಕಾಣಿಸಿದ ಸಾಲಗಳನ್ನು ನೋಟೀಸು ಕೊಟ್ಟರೂ ಕ್ಲಪ್ತ ವ್ಯಾಧಿಗೆ ಬಡ್ಡಿ ಅಸಲು ವ ಇನ್ನಿತರ ಖರ್ಚುಗಳನ್ನು ಈ ತನಕವೂ ಬ್ಯಾಂಕಿಗೆ ಕೊಡದಿರುವುದರಿಂದ ಸದರಿಯವರು ಆಧಿಟ್ಟಿರುವ ಚಿನ್ನಾಭರಣಗಳನ್ನು ತಾ. 27-10-1947ನೆ ಸೋಮವಾರ ಮಧ್ಯಾಹ್ನ 12 ಘಂಟೆಗೆ, ಅಥವಾ ಬ್ಯಾಂಕಿಗೆ ಯುಕ್ತ ತೋರುವ ಇತರ ದಿವಸಗಳಲ್ಲಿ ಪುನಹ ನೋಟೀಸು ಕೊಡದೇನೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಸಾಲಪಡಕೊಂಡ ಸದರೀ ಮಹಾಶಯರಿಗೆ ಈ ಸಮ್ಬಂಧ ಪ್ರತ್ಯೇಕ ರಿಜಿಸ್ಟ್ರಿ ನೋಟೀಸು ಕಳುಹಿಸಲಾಗಿದೆ.

ಸಾಲಗಳ ವಿವರ

ಲೋನು ನಂಬ್ರ	ಆಸಾಮಿಯ ಹೆಸರು ಮತ್ತು ವಿಳಾಸ.	ಅಸಲು ಬಾಕಿ
J. L 131, 47.	ಎನ್. ಸೀತಾರಾಮ ಶೇಟ್ S/o. N. ವೆಂಕಟರಮಣ ಶೇಟ್, ಶಿರಬೀಡು, ಉಡುಪಿ.	ರೂ. 1400 —
J. L. 170 46	—Do—	ರೂ. 295 —

ಉಡುಪಿ,
ತಾ. 20 10-1947

ಯು. ವಿ. ಪ್ರಭು,
ಮೆನೆಜರ್.

The Canara Banking Corporation Limited.
(Incorporated in British India).
Estd: 1906.
Head Office: UDIPI, S. India.

ANNOUNCEMENT.

A branch of the BANK will be shortly opened at High Road, **TRICHUR.** (Cochin State)

ಗುರುವಾರ, ಉಡುಪಿ, ೨೩-೧೦-'೪೭

ಆಹಾರ ಪರಿಸ್ಥಿತಿ

ವಿತರಣೆ ಮಾಡಲು ಆಹಾರ ಧಾನ್ಯಗಳೇ ದೊರೆಯಲಾರವೆಂಬ ಕಾರಣದಿಂದ ಹಸುಗೇ ಪದ್ಧತಿಯು ಕುಸಿದು ಬೀಳಬಹುದೆಂಬ ಭೀತಿಯು ಸುಮಾರು ಆರು ವಾರಗಳ ಮೊದಲು ಹಬ್ಬಿದ್ದಿತು. ಈ ಹೆದರಿಕೆಯು ಮದ್ರಾಸ್ ಪ್ರಾಂತ್ಯದ ಮಟ್ಟಿಗೆ ಮತ್ತಷ್ಟು ವಿಶೇಷವಿದ್ದಿತು. ಆದರೀಗ ಆ ಗಂಡಾಂತರದ ಅವಧಿಯನ್ನು ನಾವು ದಾಟಿ ಬಂದಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಂತಹ ಕೆಲವೆಡೆಗಳಲ್ಲಿ ವರುಷದ ಮುಖ್ಯ ಬೆಳೆಯೀಗ ಕಟಾವಾಗಿದೆ; ಆಗುತ್ತಿದೆ. ಇದಕ್ಕೆ ಮೊದಲೇ ಮದ್ರಾಸ್ ಮಂತ್ರಿಗಳೆಲ್ಲರೂ ಧಾನ್ಯಸಂಗ್ರಹಕ್ಕಾಗಿ ನಡುಬಿಗಿದು ಪ್ರಾಂತ್ಯದಲ್ಲೆಲ್ಲಾ ಸಂಚರಿಸಿ, ಸಂಗ್ರಹ ಯಂತ್ರದ ಗತಿಯನ್ನು ಇಮ್ಮಡಿ, ಮುಮ್ಮಡಿ ಹೆಚ್ಚಿಸಿದ್ದರು. ತತ್ಪರಿಣಾಮವಾಗಿ ಸುಮಾರು ಎರಡು ತಿಂಗಳುಗಳಿಗೆ ಮೊದಲು ಮದ್ರಾಸ್ ಪ್ರಾಂತ್ಯದಲ್ಲಿ ವಾರವೊಂದಕ್ಕೆ 13,000ದಿಂದ 14,000 ಟನ್ನುಗಳಷ್ಟೇ ಅಕ್ಕಿ ಸಂಗ್ರಹವಾಗುತ್ತಿದ್ದರೆ ಈಗ ಸರಾಸರಿ ವಾರಕ್ಕೆ 37000ದಿಂದ 38000ಟನ್ನುಗಳ ವರೆಗೆ ಅಕ್ಕಿ ಜಮೆಯಾಗುತ್ತಿದೆ ಎಂದು ತಿಳಿದುಬರುತ್ತದೆ. ಇದೇ ರೀತಿ ರಾಷ್ಟ್ರದ ಮಿಕ್ಕ ಭಾಗಗಳಲ್ಲೂ ಧಾನ್ಯಸಂಗ್ರಹ ಕಾರ್ಯವು ಸುಗಮವಾಗಿ ನಡೆದಿರುವುದರಿಂದಾಗಿ ಆಹಾರ ಬಿಕ್ಕಟ್ಟು ಈ ವರುಷದ ಮಟ್ಟಿಗೆ ನಿವಾರಣೆಗೊಂಡಂತೆನ್ನಲಡ್ಡಿಯಿಲ್ಲ. ಈ ಸ್ಥಿತಿ ಸುಧಾರಣೆಯ ಪರಿಣಾಮವು, ಸರಕಾರದ ಆಹಾರ ಧೋರಣೆಯಲ್ಲೂ ಪ್ರತಿಬಿಂಬಿಸುವ ಚಿಹ್ನೆಗಳು ಕಾಣುತ್ತಿವೆ. ಆಹಾರ ಧಾನ್ಯಗಳ ಧೋರಣೆ ನಿರೂಪಣೆಗಾಗಿ ಭಾರತ ಸರಕಾರದಿಂದ ನೇಮಿಸಲ್ಪಟ್ಟಿದ್ದ ಸಮಿತಿಯು ಹೊರದೇಶಗಳ ಧಾನ್ಯಾಮದುಗಳನ್ನು ತಗ್ಗಿಸಿಕೊಳ್ಳತಕ್ಕದ್ದೆಂದು ಶಿಫಾರಸು ಮಾಡಿದೆ. ಕಳೆದೆರಡು ವರುಷಗಳಲ್ಲಿ 4 ಮಿಲಿಯ ಟನ್ನುಗಳಿಗೂ ಮಿಕ್ಕಿ ಹೊರದೇಶಗಳಿಂದ ಆಹಾರ ಧಾನ್ಯಗಳಾಮದಾಗಿದ್ದುವು. ಆದರೆ 1948ನೇ ಇಸವಿಯ ಮಟ್ಟಿಗೆ 2ಮಿಲಿಯ ಟನ್ನುಗಳಿಗೆ ಮಿಕ್ಕಿ ಹೊರದೇಶಗಳೊಡನೆ ಆಮದುಕರಾರು ಮಾಡಿಕೊಳ್ಳಕೂಡದೆಂದು ಆ ಸಮಿತಿ ಶಿಫಾರಸು ಮಾಡಿದೆ. ಸರಕಾರವು ಹಸುಗೇ ಹತೋಟಿಯನ್ನು ಅನುಕ್ರಮವಾಗಿ ಸಡಲಿಸುತ್ತಾ ಬಂದು ಬಿಟ್ಟುಬಿಡಬೇಕೆಂಬ ಸೂಚನೆಗಳನ್ನು ಹಿಂದೀ ಸರಕಾರದ ಆಹಾರ ಸಮಿತಿಯು ಕೊಟ್ಟಿರುವುದೆಂದು ತಿಳಿದುಬರುತ್ತದೆ. ಹಸುಗೇ ಕ್ಷೇತ್ರಗಳನ್ನು ಕಡಿಮೆ ಮಾಡುವದು-ಇತ್ತೀಚೆಗೆ ಹಸುಗೆ ಜ್ಯಾರಿಗೆ ತಂದಿರುವ ಕ್ಷೇತ್ರಗಳಲ್ಲದನ್ನು ಬರ್ಖಾಸ್ತುಗೊಳಿಸುವದು-ಅಕ್ಕಿ, ಗೋಧಿ, ಜೋಳ, ಈ ಮೂರನ್ನು ಬಿಟ್ಟು ಮಿಕ್ಕ ಧಾನ್ಯಗಳ ವಹಿವಾಟು ನಿಯಂತ್ರಣವನ್ನು ರದ್ದುಪಡಿಸುವದು-ಇತ್ಯಾದಿ ಸುಧಾರಣೆಗಳನ್ನು ಆಹಾರ ಸಮಿತಿ ಸೂಚಿಸಿರುವುದೆಂದು ತಿಳಿದುಬರುತ್ತದೆ.

ಮೊನ್ನೆಯವರೆಗೂ ಅತ್ಯಗತ್ಯ-ಅನಿವಾರ್ಯವೆಂದು ಎಲ್ಲರಿಂದಲೂ ಮನ್ನಿಸಲ್ಪಟ್ಟಿದ್ದ ಆಹಾರ ನಿಯಂತ್ರಣವು ಸಾಧ್ಯವಿದ್ದಷ್ಟು ಬೇಗನೇ ಬರ್ಖಾಸ್ತಾಗತಕ್ಕದ್ದೆಂಬ ಇಂದಿನ ಭಾವನೆಗೆ ಪ್ರೇರಣೆಯಾದುದು ಗಾಂಧೀಜೀಯ ಅಭಿಪ್ರಾಯವೇ. ಕಳೆದ ವಾರದಲ್ಲಿ ಮಹಾತ್ಮಾ ಗಾಂಧಿಯವರು ಈ ಕುರಿತು ಕೊಟ್ಟ ಎರಡು ಹೇಳಿಕೆಗಳು ಸಂಬಂಧಪಟ್ಟವರ ಮೆದುಳಲ್ಲಿ ತಮ್ಮ ಮೊಹರನ್ನು ಮೂಡಿಸಿವೆ. "ಆಹಾರ ಧಾನ್ಯಗಳ ನಿಯಂತ್ರಣ ಮತ್ತು ಹಸುಗೆಯು ಅಸ್ವಾಭಾವಿಕ, ಮತ್ತು ವ್ಯಾಪಾರ ಧೋರಣೆಗ ಯೋಗ್ಯದ್ದೆಂದೇ ನನ್ನ ಅಭಿಮತ. ನಮ್ಮಲ್ಲಿ ಫಲವತ್ತಾದ ಭೂಮಿಗಳು ಹೇರಳವಿವೆ; ನೀರಿನ ಅನುಕೂಲತೆ ಸಾಕಷ್ಟಿದೆ; ಜನಬಲಕ್ಕಂತೂ ಕೊರತೆಯೇ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಆಹಾರದ ಅಭಾವವೆಂದರೇನು? ಸ್ವಯಂಪೋಷಕರಾಗುವಂತೆ ಸಾರ್ವಜನಿಕರಿಗೆ ಶಿಕ್ಷಣ ಕೊಡಬೇಕು. ತಮ್ಮ ಕಾಲಲ್ಲಿ ತಾವೇ ನಿಲ್ಲಬೇಕೆಂಬುದನ್ನು ಅವರೊಮ್ಮೆ ಕಲಿತರಾದರೆ, ವಾತಾವರಣವು ಆಗಲೇ ವಿದ್ಯುಜ್ಜ್ಯೋತಿಯಿಂದ ಬೆಳಗಲಿದೆ. ಆಹಾರ ನಿಯಂತ್ರಣಗಳನ್ನು ತೆಗೆದರೆ ಬರಗಾಲವಾಗಲೀ ಹಸಿವು ಸಾವುಗಳಾಗಲೀ ಸಂಭವಿಸಲಾರವೆಂಬುದು ನನಗೆ ಮುಂದಟ್ಟಾಗಿದೆ. ಅಂತೆಯೇ ಭಾರತದಲ್ಲಿ ವಸ್ತ್ರದ ಅಭಾವವಿರುವುದಕ್ಕೂ ನ್ಯಾಯವಾದ ಕಾರಣವಿಲ್ಲ. ಅವಶ್ಯಕತೆಯಿರುವುದಕ್ಕಿಂತಲೂ ಹೆಚ್ಚು ಹತ್ತಿ ಭಾರತದಲ್ಲಿ ಉತ್ಪನ್ನವಾಗುತ್ತಿದೆ. ಜನರು ಸ್ವತಃ ನೂಲಬೇಕು, ಮತ್ತು ನೇಯಬೇಕು. ಆದ್ದರಿಂದ ವಸ್ತ್ರನಿಯಂತ್ರಣವೂ ರದ್ದಾಗಬೇಕೆಂದೇ ನನ್ನ ಅಭಿಪ್ರಾಯ. ಹಾಗೆ ಮಾಡಿದಲ್ಲಿ ಧಾರಣೆಗಳೇರಬಹುದೆಂದು ನನಗೆ ಸೂಚನೆ ಬಂದಿದೆ. ಹೆಚ್ಚೆಂದರೆ 6 ತಿಂಗಳವರೆಗೆ ವಸ್ತ್ರ ತೆಗೆದುಕೊಳ್ಳುವದನ್ನು ನಿಲ್ಲಿಸಿದರಾಯಿತು. ಆಗ ಸ್ವಾಭಾವಿಕವಾಗಿ ಬೆಲೆಯಿಳಿಯುವುದು. ಅಗತ್ಯಬಿದ್ದರೆ ಈ ಅವಧಿಯಲ್ಲಿ ಜನರು ಸ್ವತಃ ಖಾದಿ ತಯಾರಿಸಿ ಕೊಳ್ಳಬಹುದು. ಸದ್ಯಸ್ಥಿತಿಯಲ್ಲಿ ಬೇರೆ ವಸ್ತ್ರಗಳ ಬದಲಿಗೆ ನನ್ನ ಖಾದೀ ವಿಶ್ವಾಸವನ್ನೇ ಮುಂದೊಡ್ಡಲು ನಾನು ಬಗೆದಿಲ್ಲ. ಜನರು ತಮ್ಮ ಊಟ, ಉಡುಗೆಗಳನ್ನು ತಾವೇ ತಯಾರಿಸಿಕೊಳ್ಳುವುದನ್ನು ಒಮ್ಮೆ ಕಲಿತರೆ ಅದವರ ಮನೋವೃತ್ತಿಯನ್ನೇ ಮಾರ್ಪಡಿಸುವುದು. ಈ ದಿನ ಜನತೆ ರಾಜಕೀಯ ಸ್ವಾತಂತ್ರ್ಯವನ್ನು ಮಾತ್ರ ಸಂಪಾದಿಸಿದೆ. ನನ್ನೀ ಸಲಹೆಗಳನ್ನು ಅನುಸರಿಸಿದಲ್ಲಿ ಅವರು ಆರ್ಥಿಕ ಸ್ವಾತಂತ್ರ್ಯವನ್ನೂ ಪಡೆಯಬಲ್ಲರು; ಮತ್ತದು ಪ್ರತಿಯೊಬ್ಬ ಹಳ್ಳಿಗನ ಮನವರಿಕೆಗೂ ಬಂದೀತು. ಅಂತಾದರೆ ತಮ್ಮೊಳಗೆ ಹೋರಾಡಿಕೊಳ್ಳುವ ಪ್ರೇರಣೆ ಹುಟ್ಟುವುದಕ್ಕೂ ಸಮಯ ದೊರೆಯದು. ಯುದ್ಧವೆಂದೋ ಮುಗಿದಿದೆ. ಆದರೆ ಧಾರಣೆ ಏರುತ್ತಲೇ ಇವೆ. ನಮ್ಮ ರಾಷ್ಟ್ರದಲ್ಲಿ ಆಹಾರ ಮತ್ತು ವಸ್ತ್ರಕ್ಕೆ ಕೊರತೆಯಿಲ್ಲ. ಆದರೂ ಅವು ಜನರಿಗೆ ಮುಟ್ಟುತ್ತಿಲ್ಲ. ಇದು ದುಃಖದ ಸಂಗತಿ. ಸರಕಾರವು ಜನರನ್ನು ಚಮಚಾದಿಂದ ಉಣ್ಣಿಸುವ ಕೆಲಸ ಕೈಕೊಂಡಿದೆ. ಇದನ್ನು ಬಿಡಬೇಕು. ಬದಲಿಗೆ ತಾವು ತಮ್ಮ ಅನುಕೂಲತೆಗಳನ್ನೇ ಆಧರಿಸಿರುವಂತೆ ಜನತೆಯನ್ನು ಬಿಡಬೇಕು. ಸಿವಿಲ್ ಸರ್ವಿಸಿನವರು ತಮ್ಮ ಆಫೀಸುಗಳಲ್ಲೇ ಕುಳಿತುಕೊಂಡು, ಫೈಲುಗಳನ್ನು ನೋಡಿಯೇ ಕೆಲಸ ಮಾಡುತ್ತಿದ್ದರಲ್ಲದೆ, ಜನರೊಡನೆ ಸೇರಿಕೊಂಡಲ್ಲ; ಜನತೆಯನ್ನು ಅವರರಿಯರು. ಈಗ ಜನತೆಯು ಮೇಲಾಗಿರುವ ಮಾರ್ಪಾಟವನ್ನು ಗಮನಿಸಬೇಕು. ಜನರ ಕಾರ್ಯೋತ್ಸುಕತೆಗೆ ನಿಯಂತ್ರಣಗಳ ಅಂಕುಶವಿರಕೂಡದು. ತಮ್ಮನ್ನು ತಾವೇ ರಕ್ಷಿಸಿಕೊಳ್ಳಲು ಜನತೆಯನ್ನು ಬಿಡಬೇಕು. ಇದು ಸ್ಥಿತಿಯನ್ನು ಬಹಳವಾಗಿ ಸುಧಾರಿಸುವದೆಂದೇ ವ್ಯಕ್ತಿಶಃ ನನ್ನ ನಂಬಿಕೆ. ಒಂದೊಮ್ಮೆಗೆ ನಿಯಂತ್ರಣಗಳನ್ನು ರದ್ದುಪಡಿಸಿದ್ದರಿಂದ ಪರಿಸ್ಥಿತಿ ಹಾಳಾದಲ್ಲಿ, ಅವುಗಳನ್ನು ಪುನಃ ಜಾರಿಗೆ ತರಬಾರದೆಂದೇನೂ ಇಲ್ಲ".

ಗಾಂಧೀಜೀಯ ಮೇಲಿನ ಅಭಿಪ್ರಾಯಗಳು, ನಿಯಂತ್ರಣಗಳ ಹಾವಳಿಗಳಿಂದಾಗಿ ಅತಿ ಹೆಚ್ಚಿನ ಕಷ್ಟನಷ್ಟಗಳಿಗೊಳಗಾಗಿರುವ ಬಡಬೇಸಾಯಗಾರರ ಒಣ ಹೃದಯಗಳನ್ನು ತೋಯಿಸದಿರಲಾರವು. ಆದರೆ ಕಳ್ಳಸಂತೆ ಮನೋವೃತ್ತಿಯು ಸಣ್ಣ ದೊಡ್ಡ ಪರಿಮಾಣದಲ್ಲಿ ಸರ್ವೆಡೆಗಳಲ್ಲೂ ವ್ಯಾಪಿಸಿರುವ ಈ ಕಾಲದಲ್ಲಿ ಆಹಾರ ಧಾನ್ಯಗಳ ನಿಯಂತ್ರಣ ರದ್ಧತಿ ವ್ಯವಹಾರ್ಯವೇ? ನಮಗನುಮಾನವಿದೆ. ಸಾಗುವಳೀದಾರರನ್ನು ಸರ್ವವಿಧದಿಂದಲೂ ಪ್ರೋತ್ಸಾಹಿಸಿ, ಆಹಾರೋತ್ಪತ್ತಿಯನ್ನು ಸಾಕಷ್ಟು ಹೆಚ್ಚಿಸುವ ಕೆಲಸವಾಗುತ್ತಾ ಹೋದಂತೆ ಅನುಕ್ರಮವಾಗಿ ನಿಯಂತ್ರಣಗಳನ್ನು ಸಡಿಲಿಸುತ್ತಾ ಬಂದು ರದ್ದುಪಡಿಸಬೇಕಲ್ಲದೆ, ಮುಂದಾಗಿ ನಿಯಂತ್ರಣವನ್ನು ರದ್ದುಪಡಿಸಿ ಕೊನೆಗಾಣ ರೀತಿಯನ್ನು ಪಾಲಿಸುವದೆಂಬುದು ಸದ್ಯಸ್ಥಿತಿಯಲ್ಲಿ ಅನಾಹುತಕಾರಿಯೆಂದು ತೋರುತ್ತಿದೆ.

(೫ನೇ ಪುಟದಿಂದ.)

ಪಾಕಿಸ್ತಾನ್ ಸರಕಾರವು ಕಾಶ್ಮೀರಕ್ಕೊತ್ತಿನ ಉಪ ಸಂಸ್ಥಾನಗಳನ್ನು ಮುಂದು ಮಾಡಿ ಕಾಶ್ಮೀರವು ಪಾಕಿಸ್ತಾನಕ್ಕೆ ಸೇರಲೇ ಬೇಕೆಂದೂ, ಇಲ್ಲವಾದರೆ ಸಶಸ್ತ್ರ ಗಲಭೆಯೆಬ್ಬಿಸಲಾಗುವದೆಂದೂ ಬೆದರಿಕೆ ಹಾಕುತ್ತಿದೆ. ಪಾಕಿಸ್ತಾನ್-ಕಾಶ್ಮೀರ ಗಡಿಯಲ್ಲಿ ನುಗ್ಗಿಬರುವ ಸೈನಿಕರನ್ನು ಕಾಶ್ಮೀರೀ ಕಾವಲುಗಾರರು ಪ್ರತಿಭಟಿಸಿ ಆಗಾಗ ಗಲಭೆಗಳು ನಡೆದಿವೆ. ಈಗೀಗಲಂತೂ ಆಧುನಿಕ ಶಸ್ತ್ರೋಪಕರಣ ಸಜ್ಜಿತರಾದ ಪಾಕಿಸ್ತಾನದ ಜನರು ಸಾವಿರ ಸಂಖ್ಯೆಯಲ್ಲಿ ಕಾಶ್ಮೀರದೊಳಗೆ ನುಗ್ಗಹತ್ತಿದ್ದಾರೆ. ಪರಿಸ್ಥಿತಿ ಇಂದುನಾಳೆಯೊಳಗೆ ಸ್ಫೋಟಗೊಳ್ಳುವಷ್ಟು ಬಿಸಿಯೇರಿದೆ. ಕಾಶ್ಮೀರದ ಪ್ರಧಾನಿಗಳು ಭಾರತ ಸರಕಾರದೊಡನೆ ಪರ್ಯಾಲೋಚಿಸಲು ನವದಿಲ್ಲಿಗೆ ಧಾವಿಸಿಬಂದಿದ್ದಾರೆ. ಅಂತೂ, ಅಲ್ಲಲ್ಲಿ ಸಿಡಿಗುಂಡುಗಳನ್ನು ಮಡಗಿದ್ದು ಬೆಂಕಿ ಹತ್ತುವದೊಂದೇ ಬಾಕಿಯೆಂಬಂತಿದೆ ಹಿಂದೀ ವಾತಾವರಣ!

ಮುಖ್ಯ ಸುದ್ದಿಗಳು

ಹಿಂದೀ ಸರಕಾರವು ಮುಖ್ಯ ಸೇನಾನಿ (ಕಮಾಂಡರ್-ಇನ್-ಚೀಫ್) ಹುದ್ದೆಯನ್ನೇ ಬರ್ಖಾಸ್ತುಪಡಿಸಿ, ಮೂರು ವಿಭಾಗಗಳಿಗೆ ಮೂರು ಪ್ರತ್ಯೇಕ ಇಲಾಖೆಗಳನ್ನೇರ್ಪಡಿಸುವ ಹಾಗೂ ಎಲ್ಲಕ್ಕೊಂದು ಮುಖ್ಯಸ್ಥ ಮಂಡಲಿಯನ್ನು ನೇಮಿಸಿಕೊಳ್ಳುವ ಯೋಜನೆಮಾಡುತ್ತಿದೆ. ಸೇನೆಯನ್ನು ಸಂಪೂರ್ಣವಾಗಿ ಹಿಂದೀಕರಣಗೊಳಿಸುವ ಯೋಚನೆಗಳು ಭರದಿಂದ ಸಾಗಿವೆ. ಸೇನಾನಾಯಕ ಹಿರಿಯ ಮೇಜರ್ ಜನರಲ್ ಕಾರ್ಯಪ್ಪನವರೇ ಸೇನೆಯ ಮುಖ್ಯ ಮಂಡಲಿಯ ಪ್ರಮುಖನಾಗಿ ಆರಿಸಲ್ಪಡುವುದು ನಿಸ್ಸಂದೇಹ.

ಮದ್ರಾಸ್ ಎಸೆಂಬ್ಲಿಯಲ್ಲಿ

'ಜಮೀನ್ದಾರೀ ಮತ್ತು ಇನಾಮ್ದಾರೀ ಪದ್ಧತಿ' ಬರ್ಖಾಸ್ತು ಮಸೂದೆಯ ಸಂಬಂಧದ ಚರ್ಚೆಗಳು. ...

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ,

R. E. P. No. 299/47

O. S. No. 166/46

ಶೀತಾರಾಮ ಬಲ್ಲಾಳ—ಅರ್ಜಿದಾರ

ಮತ್ತು

ಶೀನಪ್ಪ ಸೆಟ್ಟಿ ಕೂಡಾ —ಎದುರು.

ಇವರೊಳಗೆ

ಮೇಲ್ಕಂಡ ಅಮಲ್‌ಜಾರಿಯ 8ನೇ ಎದುರು-ಉಡುಪಿ ತಾಲ್ಲೂಕು ಕೊರಂಗ್ರಪಾಡಿ ಗ್ರಾಮದ ಕೆಮ್ಮಣ್ಣು ಚಂದಕ್ಕ ಸೆಡ್ತಿಯರ ಮಗ ರಾಮ ಸೆಟ್ರಿಗೆ ಈ ಮೂಲಕ ತಿಳಿಸುವುದೇನಂದ್ರೆ

ಮೇಲ್ಕಂಡ ಅಮಲಜ್ಜಾರಿಯಲ್ಲಿ ಡಿಕ್ರೀದಾರನಾದ ಅರ್ಜಿದಾರನು ಯಿಸ್ತಿಹಾರಿನಿಂದ ಕಾಣುವ ಸ್ಥಿರಾಸ್ತಿಗಳ ವಿಕ್ರಯದ ಬಗ್ಗೆ ಅರ್ಜಿ ಮಾಡಿಕೊಂಡಿರುವುದ್ರಿಂದ, ಸದ್ರಿ ವಿಕ್ರಯದ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸಲಿಕ್ಕೆ ತಾ 13-11-47 ನಿಶ್ಚಯಿಸೋಣಾಗಿರುವದಾಗಿ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ. ಆಕ್ಷೇಪ ಹೇಳುವಂತಾದ್ದಿದ್ದಲ್ಲಿ ಸದ್ರಿ ತಾ 13-11-47ನೇ ದಿವ್ಸ ಬೆಳಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

P. V. Achar
Vakil for Petitioner
ಉಡ್ಪಿ, ತಾ 18-10-47.

ನಿರ್ಧಾರದಲ್ಲಿನ ದೇವಾಲಯ ಇತ್ಯಾದಿ ಧಾರ್ಮಿಕ ಸಂಸ್ಥೆಗಳಿಗೆ ಬಿಡಲ್ಪಟ್ಟದ್ದ ಇನಾವರ್ ಆಸ್ತಿಗಳನ್ನೂ ಈ ಮಸೂದೆಯೊಳಗೆ ಸೇರಿಸಿಕೊಳ್ಳತಕ್ಕದೆಂದು ಮದ್ರಾಸ್ ಕಾಂಗ್ರೆಸ್ ಶಾ. ಪಿ. ಸಭಾಸದಸ್ಯರ ಪಕ್ಷದ ಸಭೆಯಲ್ಲಾದ ನಿರ್ಧಾರದ ಕುರಿತು ಅತೃಪ್ತಿ ಹುಟ್ಟಿದುದರಿಂದ ಅವುಗಳನ್ನು ವಿನಾಯತಿಗೊಳಿಸುವ ನಿರ್ಧಾರವಾಗಿದೆ; ಈ ಸಂಬಂಧದ ಪರ್ಯಾಲೋಚನೆಗಾಗಿ ಪ್ರಧಾನಿ ಓಮಂದೂರರು ಶ್ರೀ ಕಾಳ ವೆಂಕಟರಾವ್, ಡಾ। ಸುಬ್ಬರಾಯನರೊಂದಿಗೆ ಡಿಲ್ಲಿಗೆ ಹೋಗಿದ್ದಾರೆ. ಸೇಲ್ಸ್ ಟ್ಯಾಕ್ಸನ್ನು ಹೆಚ್ಚಿಸುವ ಮಸೂದೆ ಎಸೆಂಬ್ಲಿಯಲ್ಲಿ ಪಾಸಾಗಿದೆ.

ಭಾಷಾವಾರು ಪ್ರಾಂತ್ಯರಚನೆ

ಪ್ರಾಂತ್ಯಗಳನ್ನು ಭಾಷಾವಾರಾಗಿ ಪುನರ್ರಚಿಸಬೇಕೆಂದೂ, ವಿಶೇಷತಃ ತಮಿಳು ನಾಡು, ಕೇರಳ, ಕರ್ನಾಟಕ ಮತ್ತು ಆಂಧ್ರ ಪ್ರಾಂತ್ಯಗಳಾಗುವಂತೆ ಹೊಸ ರಾಜ್ಯಾಂಗ ಶಾಸನದಲ್ಲಿ ಸೇರಿಸಬೇಕೆಂದೂ ಅದಕ್ಕಾಗಿ ಕೂಡಲೇ ಗಡಿನಿರ್ಣಯ ಸಮಿತಿ ಅಥವಾ ಸಮಿತಿಗಳು ಇಲ್ಲವೇ ಬೇರೆ ವಿಧಾನಗಳ ರಚನೆಯ ಕ್ರಮ ಬರಬೇಕೆಂದೂ, ಮುಂದಿನ ಅಧಿವೇಶನದಲ್ಲೇ ಇವನ್ನು ಮುಂತರಬೇಕೆಂದೂ ಘಟನಾ ಸಮಿತಿಗೆ ಸೂಚಿಸುವ ನಿರ್ಣಯವನ್ನು ಮದ್ರಾಸ್ ಕೌನ್ಸಿಲಿನಲ್ಲಿ ಡಾ। ಯಸ್. ಯನ್. ರಾಜನರು ತಂದು ಅದು ಮಂಜೂರಾಗಿದೆ.

'ರಣರಂಗದಿಂದೋಡಲಾರೆ' — ನೆಹರು

'ಜನರಿಗೆ ವಿಶ್ವಾಸವಿಲ್ಲವಾದರೆ ರಾಜೀನಾಮೆ ಕೊಡಲು ತಯಾರಿದ್ದೇನೆ' ಎಂದು ಪಂಡಿತ ನೆಹರುಗಳೆಂದಿದ್ದ ಮಾತಿನಿಂದಾಗಿ, ಜವಾಹಿರರು ಕೋಡಲೆ ನಿವೃತ್ತಿಯನ್ನಪೇಕ್ಷಿಸುತಿದ್ದಾರೆ ಎಂಬ ಭಾವನೆ ಬರುವಂತಹ ಸುದ್ದಿಗಳು ಸುಳಿದಾಡಿವೆ. ಪಂಡಿತಜೀ ಈಗ ಸ್ಪಷ್ಟಪಡಿಸಿದ್ದಾರೆ. "ನಾನು ಜೀವಿತ ಸತ್ವಗಳಿಗಾಗಿ ಹೋರಾಡಿದ್ದೇನೆ. ಅವಿಂದು ಗಂಡಾಂತರದಲ್ಲಿ ಸಿಕ್ಕಿಬಿದ್ದಿರುವಾಗ, ಯುದ್ಧರಂಗದಿಂದ ಹಿಂದೆಗೆಯಲು ನಾನಪೇಕ್ಷಿಸುವವನಲ್ಲ. ಜನತೆಯ ಇಚ್ಛೆಗಳಿಗೆ ಕಾರ್ಯರೂಪ ಕೊಡಲಾರದ ಸರಕಾರವು ರಾಜಿಕೊಡಲೇ ಬೇಕು. ಒಂದು ಸರಕಾರವು ಸೇನಾಬಲ ಮಾತ್ರದಿಂದ ನಡೆಯದು; ಜನಬಲ ಬೇಕು. ಗಲಭೆಗಳನ್ನು ನಿರ್ಮಿಸಿದವರಾರೇ ಇರಲಿ; ಅವು ನಮ್ಮ ನವೋದಿತ ರಾಷ್ಟ್ರದ ತಳಕಟ್ಟನ್ನೇ ಅದುರಿಸಿವೆ. ಅಂಥವರ ಉದ್ದೇಶವಾವುದೇ ಇರಲಿ—ಅವರು ರಾಷ್ಟ್ರದ್ರೋಹಿಗಳು. ಈ ಗಲಭೆಗಳು ನಮ್ಮ ರಾಷ್ಟ್ರವು, ಹೊರಗಿನ ಪಾಕಿಸ್ತಾನ ಯಾ ಇತರ ಯಾವುದೇ ರಾಷ್ಟ್ರಗಳ ಧಾಳಿಯನ್ನಿದಿರಿಸಿ ನಿಲ್ಲುವುದನ್ನಸಾಧ್ಯಗೊಳಿಸಿವೆ. ನಾವು ಗುಲಾಮರಾಗಿದ್ದಾಗ ಕೂಡಾ ಸಶಸ್ತ್ರ ಸಾಮ್ರಾಜ್ಯಶಾಹಿಯು ನಮ್ಮನ್ನು ದಮನಿಸಲಾರದೆ ಹೋಗಿತ್ತು; ಆದರೆ ರಾಷ್ಟ್ರದ ಜಾತೀಯ ಗಲಭೆಯು ನಮ್ಮ ಸ್ವಾತಂತ್ರ್ಯವನ್ನು ನಿರ್ಬಂಧಿಸಿದೆ. ಕಾಂಗ್ರೆಸ್ ಸಾಧಿಸಲು ಹೋರಾಡಿದ್ದ ಆ ಸ್ವರಾಜ್ಯವೆಂದರೆ ಕೆಲವೇ ವ್ಯಕ್ತಿಗಳರಾಜ್ಯವಲ್ಲ. ಸಮತಾವಾದಿ ಪ್ರಜಾಪ್ರಭುತ್ವವೇ ನಮ್ಮ ಗುರಿ. ಸಾಮಾನ್ಯ ಜನತೆಯ ಅಭಿವೃದ್ಧಿಗೆಂದೇ ನಾವು ಸ್ವರಾಜ್ಯವನ್ನು ಅಪೇಕ್ಷಿಸಿದುದು".—ಸರಳವಾಗಿ ತಿಳಿಸಿದ್ದಾರೆ ಪಂಡಿತ ನೆಹರು.

ಉಡುಪಿ 'ಕರ್ನಾಟಕ ಸಂಘ'ದ ನಾಲ್ಕನೇ ಸಾಹಿತ್ಯೋತ್ಸವ — ಈ ಸಂಬಂಧದ ಉತ್ಸವಗಳು ಇದೇ ತಾ 21ರಂದ ಬೋರ್ಡ್ ಹೈಸ್ಕೂಲಿನ 'ಪೀರ್ಲೆಸ್' ಹಾಲ್‌ನಲ್ಲಿ ಆರಂಭಿಸಿದೆ. ತಾ 21ನೇ ಅಪರಾಹ್ನ ಸಂಘದ ನಾಲ್ಕನೇ ವರ್ಷೋತ್ಸವಾಂಗವಾಗಿ ಜರಗಿತು. ಪ್ರಥಮತಃ ಪಂಡಿತ ವೆಂಕಟರಾವಾಚಾರ್ಯ ಸ್ಮಾರಕ ಭಾಷಣ ಸ್ಪರ್ಧೆ ನಡೆಯಿತು. ಶ್ರೀಮತಿ ಲೀಲಾಬಾಯಿ ಕಾಮತ್, ಶ್ರೀ ನ್ನಂಜೆ ರಾಮಾಚಾರ್, ಶ್ರೀ ಜಿ. ವಿ. ಕೆದಿಲ್ಲಾಯ ರು ಪರೀಕ್ಷಕರಾಗಿದ್ದರು. ಸ್ಪರ್ಧೆಯಲ್ಲಿ ಉಡುಪಿ ಬೋರ್ಡ್ ಹೈಸ್ಕೂಲ್ ಮತ್ತು ಉಡುಪಿ ಸಂಸ್ಕೃತ ಪಾಠಶಾಲೆಗಳು ಒಂದನೇ ಮತ್ತು ಎರಡನೇ ಸ್ಥಾನ ಪಡೆದುವು. ವಾರ್ಷಿಕೋತ್ಸವವು ಪ್ರಾರ್ಥನೆ, ಸಂಘದ ಅಧ್ಯಕ್ಷ ಶ್ರೀ ಎಸ. ರಾಜಗೋಪಾಲ ಕೃಷ್ಣರಾಯರ ಮುಮುಖ್ಯಾತಿಗಳಿಂದಾರಂಭವಾಯಿತು. ಶ್ರೀ ಕೋ. ಶಿ. ಕಾರಂತರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಕಲಾ ಕಾರ್ಯದರ್ಶಿ ಶ್ರೀ ಕೆ. ವಿಟ್ಠಲಶೆಣೈಯವರು ಅಧ್ಯಕ್ಷರ ಪರಿಚಯ ಭಾಷಣವಿತ್ತಮೇಲೆ ಅಧ್ಯಕ್ಷರು ಸಂಘಕ್ಕೆ ಕೆಲವು ವಿಧಾಯಕ ಸೂಚನೆಗಳನ್ನಿತ್ತರು. ಪ್ರಧಾನ ಕಾರ್ಯದರ್ಶಿ ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ವರದಿಯನ್ನೋದಿದರು. ಎಡ್ವೊಕೇಟ್ ಶ್ರೀ ಬಿ. ಯಸ್. ಕಕ್ಕಿಲ್ಲಾಯರು ಕನ್ನಡದ ಸ್ಥಿತಿಗತಿಗಳ ಕುರಿತು ಉಪನ್ಯಸಿಸಿದರು. ಶ್ರೀ ಕೋ. ಶಿ. ಕಾರಂತರು 'ವಿಚಾರ ಸ್ವಾತಂತ್ರ್ಯ'ದ ಕುರಿತು ಸುದೀರ್ಘ ವಿಮರ್ಶಾತ್ಮಕ ಭಾಷಣವಿತ್ತರು. ವಿಚಾರ ಸ್ವಾತಂತ್ರ್ಯದ ವೈವಿಧ್ಯ, ವೈಪರೀತ್ಯಗಳನ್ನು ದೇಶವಿದೇಶಗಳ ನಂಬಿಕಾಚರಣೆಗಳ ನಿದರ್ಶನ ಕೊಟ್ಟು ವಿಚಾರ ಸ್ವಾತಂತ್ರ್ಯದ ಹೊಳ್ಪನ್ನು ತೋರಿಸಿಕೊಟ್ಟರು. ಶ್ರೀ ಯಸ್. ಅನಂತ ನಾರಾಯಣ ಎಂ. ಎ. ಇವರು ಕವಿತಾ ವಾಚನ ಮಾಡಿದರು. ಸಾಹಿತ್ಯ ಕಾರ್ಯದರ್ಶಿ ಶ್ರೀ ಪಿ. ಕುಪ್ಪಣ್ಣಾಚಾರ್ಯರ ಧನ್ಯವಾದಗಳಾದುವು. ಶ್ರೀ ಕೊಳ್ಳೆಸ್ಸಲು ನಾರಾಯಣ ಶೆಟ್ಟರು ಕವಿತಾ ನಟನೆ ಪ್ರದರ್ಶಿಸಿದರು. ಉಡುಪಿ ಬೋರ್ಡ್ ಹೈಸ್ಕೂಲ್ ವಿದ್ಯಾರ್ಥಿನಿಯರಿಂದ 'ವೀರ ದಾಸಿ' ನಾಟಕ, ಅದೇ ಶಾಲಾ ವಿದ್ಯಾರ್ಥಿಗಳಿಂದ ಒಂದು ಪ್ರಹಸನ, ಕಟಪಾಡಿ ಯಸ್. ವಿ. ಯಸ್. ಹೈಸ್ಕೂಲ್ ವಿದ್ಯಾರ್ಥಿ ಕೂಟದವರಿಂದ 'ರುಕ್ಮಿಣೀ ಸ್ವಯಂವರ' ಯಕ್ಷಗಾನದಾಟ ಪ್ರದರ್ಶಿಸಲ್ಪಟ್ಟುವು. ತಾ 22ನೇ ಪೂರ್ವಾಹ್ನದಿಂದ ಸಾಹಿತ್ಯೋತ್ಸವ ಕಾರ್ಯ ಕಲಾಪಗಳಾರಂಭಿಸಿ ಕವಿತಾ ವಾಚನ ಸ್ಪರ್ಧೆಗಳು ನಡೆದುವು. ಶ್ರೀಗಳಾದ ಕೆದಿಲ್ಲಾಯ, ಮತ್ತು ಬನ್ನಂಜೆಯವರು ಪರೀಕ್ಷಕರಾಗಿದ್ದರು.

ಗವರ್ನರರ ಆಗಮನ — ಮದ್ರಾಸ್ ಗವರ್ನರ್ ಸರ್. ಆರ್ಚಿಬಾಲ್ಡ್ ನೈಯವರು ತಾ 26ನೇ ಸಂಜೆ ಮಡಿಕೇರಿಯಿಂದ ಮೋಟಾರುಕಾರಿನಲ್ಲಿ ಮಂಗಳೂರಿಗೆ ಬರಲಿದ್ದಾರೆ. 2 ದಿನ ಮಂಗಳೂರಲ್ಲಿದ್ದು 28ನೇ ರಾತ್ರಿ ಸ್ಪೆಶ್ಯಲ್ ಗಾಡಿಯಲ್ಲಿ ಹಿಂತೆರಳಲಿದ್ದಾರೆ.

ಮದ್ಯನಿರೋಧ ಮಂತ್ರಿ ಶ್ರೀ ದಾನಿಯಲ್ ಥಾಮಸರು ತಾ. 24ನೇ ಮಧ್ಯಾಹ್ನ 2½ ಗಂಟೆಗೆ ಕಲ್ಲಿಕೋಟೆಯಿಂದ ಬರಲಿದ್ದಾರೆ.

'ಕಿರಿಯರ ಪ್ರಪಂಚ'ದ ಇನ್ನೊಂದು—

ಹಿರಿಯ ಕಾಣಿಕೆ

ಕರ್ನಾಟಕ ಪ್ರಸಿದ್ಧ ಕವಿಗಳಲ್ಲೋರ್ವರಾದ

ಶ್ರೀ. ಯಸ್. ವೆಂಕಟರಾಜರ

ಕವಿತಾ ಕಾಮಿನಿ

75 ಕವನಗಳ ಸಂಗ್ರಹ.

ಕವಿಯಾದರೂ ಸೌಂದರ್ಯವನ್ನು ಕಂಡಾಗಲೆಲ್ಲಾ ವರ್ಣಿಸಲಾರ. ಅವನ ಸೌಂದರ್ಯೋಪಾಸನೆಗೆ ಕಾಲವಿದೆ. ಅಂತಹ ಕ್ಷಣಿಕಕಾಲದಲ್ಲಿ ಭಾವನೆಯ ಮೇಲೆ ಕಲೆಯು ಬೆರಳಿಟ್ಟು ಮಿಡುಕಿದರೆ ಆದರ ಮಾಧುರ್ಯವು ಕಲ್ಪನಾತೀತವಾಗಿದೆ. ವಿಶ್ವದ ಎದೆಯೆದೆಯ ಮೇಲೆ ಅದು ಪ್ರತಿಧ್ವನಿಸಿ ಪ್ರೀತಿಯ ಪುಣ್ಯೋದಕದಂತೆ ಪವಿತ್ರವಾಗಿದೆ.

ಉತ್ತಮವಾದ ಬಿಳಿ ಕಾಗದದಲ್ಲಿ ಮುದ್ರಿತವಾಗಿದೆ.

ಬೆಲೆ ರೂ. 2 0 0

ಪ್ರತಿಗಳಿಗೆ ಕಿರಿಯರ ಪ್ರಪಂಚ, ಉಡುಪಿ ಇನಂಗಾಗಲಿ, ನವಭಾರತ ಪುಸ್ತಕ ಭಂಡಾರ ಉಡುಪಿ, ಇವರಿಗಾಗಲಿ ಬರೆಯಿರಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡ್ಪಿ

ತಾರೀಕು 23—10—47ರಿಂದ

ಕಾಮುಕರಾದ ದೊಡ್ಡವರ ಮಕ್ಕಳು ಮಾಡುವ ಅಕೃತ್ಯ ಅನಾಚಾರಗಳಿಂದ ಬಡವರ ಹೆಮ್ಮಕ್ಕಳು ಪಡುವ ಕಷ್ಟನಷ್ಟಗಳನ್ನು ಸ್ಫುಟವಾಗಿ ಚಿತ್ರಿಸಿದ ಬಡವರ ಭಾಗ್ಯ ದೇವತೆಯೆನಿಸಿದ

ವಾಹಿನಿಯರ

ಚಿತ್ರಾ

ತೆಲುಗು

ನಾಗಯ್ಯ, ಸೂರ್ಯಕುಮಾರಿ, ಕುಮಾರಿ ಮೊದಲಾದವರು

ಬರುವ ಚಿತ್ರ

ಕಲಾ ಶ್ರೇಷ್ಠತೆಯ ಅಮರ ಕವನ

'ಆಮ್ರಪಾಲಿ'

ಅರುಣ, ಪ್ರೇಮಅದೀಬ್, ಕವಿತಾ. ಜಗದೀಶ್, ಜೀವನ್.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 388/43.

R. E. P. 440/1947.

ಅರ್ಜಿದಾರಳು—ಕಮಲಮ್ಮ.

ಎದ್ರಿ ಜಾಜಿ ಸೋಜ

ಕುಂದಾಪುರ ತಾಲ್ಲೂಕು ಆನಗಳ್ಳಿ ಗ್ರಾಮದಲ್ಲಿರುವ ದೇಗ್ ಸೋಜನ ವಿಧವೆ ಅಂಜಲ್ ಬ್ಯಾಮನೆಯಲ್ಲಿರುವ ಲೋರೆಸ್ ಸೋಜನ ಮಗ ಜಾಜಿ ಸೋಜನಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಮೇಲಿನ ಡಿಕ್ರಿಯ ಮೇಲೆ ಅಮಲ್ಜಾರಿ ನಡೆಯಿಸುವ ಬಗ್ಗೆ ಅರ್ಜಿದಾರಳು ಮೇಲಿನ ಕೋರ್ಟಿನಲ್ಲಿ ಅರ್ಜಿದಾಖಲು ಮಾಡಿರುತ್ತಾಳೆ. ಆದುದರಿಂದ ಅಮಲ್ಜಾರಿ ಯಾಕೆ ನಡಿಸಕೂಡದು ಎಂಬ ಸಬಬು ತೋರಿಸಲಿಕ್ಕೆ 1947 ನೇ ಇಸ್ವಿ ನವಂಬರ ತಾ. 6ಕ್ಕೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

S/d **M. Anthaya Shetty.**

Advocate for Petr.

Date 17 10-47 Coondapoor.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

ಕ್ರಮ ಸಂಖ್ಯೆ 121/1947.

ಸತ್ಯವತಿ ಕೂಡಾ—ವಾದಿನಿ.

ಮತ್ತು

ಹಂಮದೆ ಬ್ಯಾರಿ ಕೂಡಾ—ಪ್ರತಿವಾದಿರು.

3ನೇ ಪ್ರ—ಪಕೀರ ಬ್ಯಾರಿ 7ನೇ ಪ್ರ—ಕೈಜಂಮಾ— 1ನೇ ಪ್ರತಿವಾದಿ ಹಂಮದೆ ಬ್ಯಾರಿ ಮಕ್ಕಳು—ಪುತ್ತೂರು ತಾಲ್ಲೂಕು ವಿಟ್ಲ ಕಸಬಾ ಗ್ರಾಮದ ಉಕ್ಕುಡ—ಇವರಿಗೆ.

ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ಮುದೇ ಅಕ್ಟೋಬ್ರ ತಾ 30ಕ್ಕೆ ಇಟ್ಟಿರುವ ಪ್ರಯುಕ್ತ ಆಕ್ಷೇಪಗಳಿದ್ರೆ ಅದಿನ್ನ ಬೆಳಿಗ್ಗೆ 11 ಘಂಟೆಗೆ ಪುತ್ತೂರು ಕೋರ್ಟಿಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳುವರೆ ತಪ್ಪಿದ್ದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾಗುವುದು ಎಂಬದಾಗಿ ಈ ಮೂಲಕ ತಿಳಿಸಿಯದೆ.

S/d) **B. Chidananda Rao.**

Vakil for plaintiff

ಪುತ್ತೂರು 9-10-1947.

NOTICE

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

ಕ್ರಮ ಸಂಖ್ಯೆ 238/1947.

ಕೃಷ್ಣಂಮ —ವಾದಿ.

1 ಶ್ರೀನಿವಾಸಯ್ಯ, 2 ಸೀತಾರಾಮಯ್ಯ, 3 ಆನಂದ ರಾವ್, 4 ಮೈ. ಗಾ. ಶಂಕರನಾರಾಯಣ ರಾವ್, 5. ಮೈ. ಗಾ. ಗೋಪಾಲಕೃಷ್ಣ ರಾವ್

—ಪ್ರತಿವಾದಿರು.

1ನೇ ಪ್ರತಿವಾದಿ ಶ್ರೀನಿವಾಸರಾವ್, ಪೇರೂರು ಸುಬ್ರಾಯರ ಮಗ, ಪುತ್ತೂರು ತಾಲ್ಲೂಕು ಅಮರಮೂಡ್ನೂರು ಗ್ರಾಮದ ದೊಡ್ಡಕೋಟೆಡಲ್ಲಿ ಇವರಿಗೆ—

ತಾರೀಕು 7-12-1944ನೇ ವಿಭಾಗ ಪತ್ರ ಪ್ರಕಾರ ವಾದಿಳಿಗೆ ಬರಬೇಕಾದ ಜೀವನಾಂಶ ಬರಮಾಡಿಕೊಳ್ಳುವರೆ ವಾದಿಳು ದಾಖಲು ಮಾಡಿದ ಮೇಲ್ಕಂಡ ದಾವೆಯಲ್ಲಿ ನಿಮಗೆ ಆಕ್ಷೇಪಣೆ ಇರುವದಾದರೆ ನೀವು ತಾರೀಕು 3-11-1947ಕ್ಕೆ ಕೋರ್ಟು ಮುಂದೆ ಹಾಜರಾಗಿ ಉಪಪಾದಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

B. Shivarama Holla,

Advocate for Plaintiff.

ತಾ 14—10—47.

ಉಡುಪಿ.

ಮುನ್ಸಿಪಲ್ ಚೆಯರ್‌ಮೆನರ ಚುನಾವಣೆ:—ಉಡುಪಿ ಮುನಿಸಿಪಲ್ ಕೌನ್ಸಿಲಿನ ಚೆಯರ್‌ಮೆನರ ಚುನಾವಣೆಯು ವಿಶೇಷ ಸಭೆಯು ತಾ. 16ನೇ ಗುರುವಾರ ಮಧ್ಯಾಹ್ನ ಕುಂದಾಪುರ ಸಬ್‌ಕಲೆಕ್ಟರ್ ಶ್ರೀ ಕೋಟೀಶ್ವರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಪ್ರಮಾಣ ವಚನವನ್ನು ಉಚ್ಚರಿಸಿದ ನಂತರ ಸದಸ್ಯರೆಲ್ಲರೂ ಪ್ರತಿಜ್ಞಾವಿಧಿಯನ್ನು ಅನುಸರಿಸಿದರು. ಮಿ। ಆರ್. ಎ. ಸ್ವಾಮಣ್ಣರು ಮಾತ್ರ ಹಳೆಯ ಪದ್ಧತಿಯಂತೆ ರಾಜಭಕ್ತಿ ಭಾಷಣವನ್ನು ಮಾಡಿದರು. ಮಿ। ಆರ್. ಎ. ಸ್ವಾಮಣ್ಣರ ಸೂಚನೆ, ಶ್ರೀ ಎ. ಮಂಜುನಾಥ ರಾಯರ ಅನುಮೋದನೆಯಂತೆ ಶ್ರೀ ಸಿ. ಉಪೇಂದ್ರ ನಾಯ್ಕರು ಕೌನ್ಸಿಲಿನ ಚೆಯರ್‌ಮೆನರಾಗಿ ಬಹುಮತದಿಂದ ಆರಿಸಲ್ಪಟ್ಟರು. ಶ್ರೀಗಳಾದ ಪಿ. ಎಸ್. ಪ್ರಭು, ರಾಘವೇಂದ್ರ ಕಾಮತ್, ಯು. ಕೃಷ್ಣಪ್ಪ ಮೊದಲಾದವರು ಶ್ರೀ ನಾಯ್ಕರಿಗೆ ಹೂವಿನ ಹಾರಗಳನ್ನರ್ಪಿಸಿದರು. ಶ್ರೀ ನಾಯ್ಕರನ್ನು ಅಭಿನಂದಿಸಿ ಹಲವು ಸದಸ್ಯರ ಹಾಗೂ ಕೊಟ್ಟಾರಿ ಪದ್ಮನಾಭ ಪೈ, ಆರ್. ಆರ್. ಕುಂಜೂರು ಮೊದಲಾದ ಪ್ರೇಕ್ಷಕರ ಭಾಷಣಗಳಾದ ನಂತರ ಚಹಾ ಸತ್ಕಾರವಾಯಿತು.

ಮಾನ್ಯ ಮಂತ್ರಿ ಶ್ರೀ ಚಂದ್ರಮೌಳಿಯವರ ಆಗಮನ:—ಮದ್ರಾಸು ಅಧಿಪತ್ಯದ ಸ್ಥಳೀಯ ಸಂಸ್ಥೆ ಮತ್ತು ಸಹಕಾರ ಇಲಾಖೆಗಳ ಮಾನ್ಯಮಂತ್ರಿ ಶ್ರೀ ಚಂದ್ರ ಮೌಳಿಯವರು 21ರಲ್ಲಿ ರಾತ್ರಿ ಮಣಿಪಾಲಕ್ಕೆ ಬಂದರು. ಮರುದಿನ ತಾ. 22ರಲ್ಲಿ ಬೆಳಿಗ್ಗೆ 9ಗಂಟೆಗೆ ಪ್ರಾಂತಿಕ ಸ್ಕೌಟ್ ಸಮ್ಮೇಳನ ಮುಹೂರ್ತದಲ್ಲಿ ಸ್ಕೌಟ್ ಧ್ವಜಾರೋಹಣಮಾಡಿ ಸ್ಕೌಟ್ ಸಮ್ಮೇಳನವನ್ನು ತೆರೆದರು. ಡಾ। ಟಿ. ಎಮ್. ಎ. ಪೈಗಳು ಸ್ವಾಗತ ಭಾಷಣ ಮಾಡಿದರು. ಡಾ। ಎಸ್. ಆರ್. ಯು. ಸವೂರ್ ಡೈರೆಕ್ಟರ್ ಒಫ್ ಪಬ್ಲಿಕ ಇನ್ಸ್ಟ್ರಕ್ಷನ್ ಮದ್ರಾಸು ಅವರು ಅಧ್ಯಕ್ಷತೆ ವಹಿಸಿ ಭಾಷಣ ಮಾಡಿದರು.

ಸಾಯಂ 3 ಗಂಟೆಗೆ ಉಡುಪಿಗೆ ಬಂದು ಬಂದು ನಗರ ಸಭಾ ಭವನದಲ್ಲಿಯ ಚಹಾ ಸತ್ಕಾರದಲ್ಲಿ ಭಾಗವಹಿಸಿ ಮಾನಪತ್ರ ಸ್ವೀಕರಿಸಿ ಹಲಕೆಲವರಿಗೆ ಭೇಟಿಯಿತ್ತರು. ಸಂಜೆ ಅಜ್ಜರಕಾಡು ಮೈದಾನದಲ್ಲಿ ಜರಗಿದ ಸ್ಕೌಟ್ ರ್‍ಯಾಲಿಯ ಅಧ್ಯಕ್ಷತೆ ವಹಿಸಿದರು. ಆ ಬಳಿಕ ಅಲ್ಲಿಯೇ ಕೂಡಿದ ಸಾರ್ವಜನಿಕ ಸಭೆಯಲ್ಲಿ ಮಾನ್ಯ ಮಂತ್ರಿಗಳಿಗೆ ಕಾಂಗ್ರೆಸ್ ಕಮಿಟಿಯ ಮಾನಪತ್ರ ಕೊಡಲಾಯಿತು. ಭಾಷಣಾದಿಗಳನ್ನು ಮುಗಿಸಿ ಶ್ರೀ ಕೃಷ್ಣ ಮಠಕ್ಕೆ ಸಂದರ್ಶನವಿತ್ತರು. ರಾತ್ರಿ ಬಂಗ್ಲೆಯಲ್ಲಿ ವಿಶ್ರಮಿಸಿ ತಾ 21ರಲ್ಲಿ ಬೆಳಿಗ್ಗೆ ಕಾರ್ಕಳಕ್ಕೆ ಪ್ರಯಾಣ ಬೆಳಸಿದರು.

ಸ್ಟೀಮರು ಚಲಾವಣೆ ಪ್ರಾರಂಭ—ಎಸ್. ಎಸ್. ದೀಪಾವತಿ ಸ್ಟೀಮರು ಬೊಂಬಾಯಿಯಿಂದ ಇದೇ ತಾ 21ರಲ್ಲಿ ಹೊರಟು ಮಂಗಳೂರಿಗೆ ತಾ 23ರಲ್ಲಿ ಬರುವುದು. ಪ್ರತಿ ಮಂಗಳವಾರ ಮಧ್ಯಾಹ್ನ ಬೊಂಬಾಯಿಯಿಂದ ಹೊರಟ ಸ್ಟೀಮರು ಮರುದಿನ ಮಧ್ಯರಾತ್ರಿ ನಂತರ ಅಂದರೆ ಗುರುವಾರ ಬೆಳಿಗ್ಗೆ 1-45 ಗಂಟೆಗೆ ಮಲ್ಪೆಗೆ ಬಂದು ಮಂಗಳೂರಿಗೆ ಸೂರ್ಯೋದಯಕ್ಕೆ ಮುಂಚೆ 5-45 ಗಂಟೆಗೆ ತಲ್ಪುವುದು. ಅಲ್ಲಿಂದ ಅದೇದಿನ ಪೂರ್ವಾಹ್ನ 11-30ಕ್ಕೆ ಹೊರಟು ಮಲ್ಪೆಗೆ ಮಧ್ಯಾಹ್ನ 2-30ಕ್ಕೆ ಬರುವುದು. ಇಲ್ಲಿಂದ 3-45ಕ್ಕೆ ಬಿಡಲ್ಪಟ್ಟು ಶನಿವಾರ ಸಂಜೆ ಬೊಂಬಾಯಿಗೆ ತಲ್ಪುವುದು.

ಹಿಂದೂ ಸೇವಾಸಮಿತಿ—ಉಡುಪಿಯಲ್ಲಿ ಇತ್ತೀಚೆಗೆ ಸ್ಥಾಪನೆಗೊಂಡಿದ್ದ ಹಿಂದೂ ಸೇವಾಸಮಿತಿಯವರು ಕೆಲವೇ ದಿನಗಳೊಳಗೆ ಮೂರು ಹಿಂದೂ ಅನಾಥ ಶವಗಳ ಕ್ರಮಬದ್ಧ ದಹನ ಕ್ರಿಯೆಗಳನ್ನು ತನ್ನ ಸ್ವಂತವೆಚ್ಚ ಮತ್ತು ಶ್ರಮಗಳಿಂದ ಜರಗಿಸಿದ್ದು ಸ್ತುತ್ಯವಿದೆ. ಸಮಿತಿಯು ಹಿಂದೂ ಸಾರ್ವಜನಿಕರ ಪ್ರೋತ್ಸಾಹಕ್ಕರ್ಹವಿದೆ.

ಆರ್. ಯಸ್. ಯಸ್.—ರಾಷ್ಟ್ರೀಯ ಸ್ವಯಂಸೇವಕ ಸಂಸ್ಥೆಯ ಉಡುಪಿ ಶಾಖೆಯು ನವರಾತ್ರಿ ಉತ್ಸವಾಚರಣೆಯು ತಾ 18ರಲ್ಲಿ ಅಜ್ಜರಕಾಡಿನ ಕೊಟ್ಟಾರಿ ಬಿಲ್ಡಿಂಗ್ಸ್ ಪರಾರದಲ್ಲಿ ಆಕರ್ಷಣೀಯವಾಗಿ ಜರಗಿತು. ವೇದಿಕೆ, ಧ್ವಜಾಪತಾಕೆಗಳ ವೈವಸ್ಥೆಗಳಿದ್ದುವು. ಶ್ರೀ ಭಂಡಾರ್ಕೇರಿ ಮಠದ ಶ್ರೀ ಪಾದಂಗಳವರು ಅಧ್ಯಕ್ಷತೆ ವಹಿಸಿದ್ದರು. ಊರು ಪರವೂರುಗಳಿಂದ ಜಮೆಯಾಗಿದ್ದ ಆರ್. ಯಸ್. ಯಸ್. ದಳಗಳವರು ಲಾಠಿ, ಕತ್ತಿ, ಲೇಝಿಮ್, ಇತ್ಯಾದಿ ವಿವಿಧ ರೀತಿಯ ಕವಾಯತುಗಳನ್ನು ಪ್ರದರ್ಶಿಸಿದರು. ನಾಗಪುರದ ಶ್ರೀ ಗೋಪಾಲ ರಾವ್ ಭಾಕ್ರೆಯವರು ಈ ಸಂಸ್ಥೆಯ ಹಾಗೂ ಹಿಂದುತ್ವದ ಕುರಿತು ಸ್ಫೂರ್ತಿದಾಯಕ ಭಾಷಣವಿತ್ತರು. ಶ್ರೀ ಪೇಜಾವರ ಮಠೀಯ ಶ್ರೀ ಪಾದಂಗಳವರೂ ಅಧ್ಯಕ್ಷ ಶ್ರೀ ಪಾದಂಗಳವರೂ ಹಿಂದುತ್ವದ ಕುರಿತು ಉಪನ್ಯಸಿಸಿ ಆರ್. ಯಸ್. ಯಸ್‌ನ್ನು ಹರಸಿದರು.

ಕಾರ್ಕಳ:—ಉಡುಪಿಯ ಕಾಂಗ್ರೆಸ್ ಸ್ವಯಂ ಸೇವಕ ದಳದವರು ಇದೇ ತಾ 19ನೇ ಪೂರ್ವಾಹ್ನ ಕಾರ್ಕಳಕ್ಕಾಗಮಿಸಿ, ಕೆಲ ಪೇಟೆಗಳಲ್ಲಿ ಪಾನನಿಷೇಧದ ತುಳುಲಾವಣಿಯನ್ನು ಮನಮುಟ್ಟುವಂತೆ ಹಾಡಿ (ತಾ 1 ರಿಂದ ಇವರು ಬೇರೆ ಬೇರೆ ಕೇಂದ್ರಗಳಲ್ಲಿ ಇಂತಹ ಪ್ರಚಾರ ನಡೆಸುತ್ತಿದ್ದಾರೆ) ಪ್ರಚಾರ ಕಾರ್ಯ ನಡಿಸಿದರು. ಅಪರಾಹ್ನ ಶ್ರೀ ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿ ಸ್ವಯಂಸೇವಕರ ಲಾವಣಿ, ಪಾನನಿಷೇಧ ಮತ್ತು ಸದ್ಯ ಸ್ಥಿತಿಗತಿಗಳ ಕುರಿತು ಶ್ರೀಗಳಾದ ಎಂ. ವಿ. ಹೆಗ್ಡೆ, ಶ್ರೀನಿವಾಸ ರಾಯರ ಭಾಷಣಗಳಾದುವು. ಶ್ರೀ ಕೆ. ಆನಂದ ಹೆಗ್ಡೆಯರು ಧನ್ಯವಾದಗಳನ್ನರ್ಪಿಸಿದರು. **ಉಡುಪಿ ಸರ್ಕಲ್ ಕಾಂಗ್ರೆಸ್** ಕಮಿಟಿಯ ಸಭೆಯೂ ಅಲ್ಲಿ ಶ್ರೀ ವಾಳ್ಕಟ್ಟೆ ಕೃಷ್ಣಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ ಕೃಷ್ಣ ದೇವಸ್ಥಾನಕ್ಕೆ ಹರಿಜನ ಪ್ರವೇಶದ ಕುರಿತು ಪರ್ಯಾಯ ಶ್ರೀಗಳವರಿಂದಬಂದ ಉತ್ತರದ ಪರಿಶೀಲನೆ ಮತ್ತು ಸಂಬಂಧದ ಧೋರಣೆ ವ್ಯವಸ್ಥೆ ಕೊನೆಯ ಪಕ್ಷ ಗ್ರಾಮ ಕೇಂದ್ರಕ್ಕೆ ರಿದರಂತೆ ಧಾನ್ಯ ಸಂಗ್ರಹ ಡಿಪೋಗಳಿದ್ದು ರೈತರಿಗನುಕೂಲಕರ ಡಿಪೋ ಏಗೊಪ್ಪಿಸುವ ಸ್ವಾತಂತ್ರ್ಯವಿರಬೇಕೆಂಬ ನಿರ್ಧಾರ. ಮಂತ್ರಿ ಶ್ರೀ ಚಂದ್ರಮೌಳಿಯವರಿಗೆ ಮಾನ ಪತ್ರಾರ್ಪಣೆಯ—ನಿರ್ಣಯ ಮೈಸೂರು ಒಪ್ಪಂದಕ್ಕಾಗಿ ಅಭಿನಂದನೆ—ಕಡವುಗಳ ಅಡ್ಡದೋಣಿ ಉಪಟಳದ ವಿಮರ್ಶೆ—ಉಡುಪಿ ರಾಷ್ಟ್ರಸೇವಾದಳವನ್ನು ಕಾಂಗ್ರೆಸ್ ಸೇವಾದಳವೆಂದು ಸ್ವೀಕಾರ—ಇತ್ಯಾದಿಗಳಾದವು. ಕಮಿಟಿ ಸದಸ್ಯರು, ಸ್ವಯಂ ಸೇವಕರು, ಮನ್ತ್ರಿತರಿಗೆ ಕಾರ್ಕಳ ಹೆಗ್ಡೆ ಬಂಧುಗಳಿಂದ ಸಂಭ್ರಮದ ಸತ್ಕಾರಗಳು ನಡೆದುವು.

ಮೂಲ್ಕಿ ದೇವಸ್ಥಾನ ಪ್ರವೇಶ

ಧರ್ಮದರ್ಶಿಗಳ ತಕರಾರು

ಮೂಲ್ಕಿ, ತಾ. ೧೨-ಕಳೆದ ವಾರ ಇಲ್ಲಿಯ ದೇವಸ್ಥಾನದಲ್ಲಿ ದಲಿತರಿಗೆ ಹಾಗೂ ಪ್ರವೇಶವಿಲ್ಲದವರಿಗೆ ಪ್ರವೇಶಕೊಡುವವಾಗಿ, ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದ ಧರ್ಮದರ್ಶಿಗಳು ಬಂಗ್ಲೆ ಕಾಕರ ಮನೆಯಲ್ಲಿ ಸಭೆಕೂಡಿದಾಗ ನಿರ್ಣಯಿಸಿ ಇಲ್ಲಿಯ ಅಧ್ಯರಿಗೆ ಹಾಗೂ ಕಾಂಗ್ರೆಸ ಪ್ರಮುಖರಿಗೆ ತಿಳಿಸಿದ್ದರು. ಆ ಮೇರೆಗೆ ತಾ. ೮ಕ್ಕೆ ಹರಿಜನರ ಮಂದಿರ ಪ್ರವೇಶ ಸಮಾರಂಭದಲ್ಲಿ ಭಾಗವಹಿಸಲು ಮಂಗಳೂರಿನಿಂದ ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟಿ ಹಾಗೂ ಶ್ರೀ ಎನ್. ಎಸ್. ಕಿಲ್ಲೆಯವರು ಬಂದಿದ್ದರು. ಆದರೆ ಅವರ ಹಿಂದಿನ ದಿವಸ ರಾತ್ರಿ ದೇವಸ್ಥಾನವನ್ನು ಯಾರೂ ತಮ್ಮ ಅಪ್ಪಣೆಯಿಲ್ಲದೆ ಪ್ರವೇಶಿಸಕೂಡದೆಂದು ಅದೇ ರ ಧರ್ಮದರ್ಶಿಗಳು ತಿಳಿಸಿದ್ದರು. ನೆರೆದ ಜನ ಸಮೂಹದೊಂದಿಗೆ ದೇವಸ್ಥಾನದ ಬಳಿಗೆ ಹೋದರು, ಕಾರ್ಕಳದಿಂದ ಬಂದ ಶ್ರೀ ಕೆ. ವೆಂಕಟೇಶ ಪ್ರಭುಗಳೇ ಮೊದಲಾದ ಪ್ರಮುಖರು ಸಂಧಾನ ಮಾಡಿದರೂ ಸಫಲವಾಗಲಿಲ್ಲ. ಧರ್ಮದರ್ಶಿಗಳು ತಮ್ಮ ಹಟಬಿಡಲಿಲ್ಲ. ನಂತರ ನೆರೆದ ಜನರು ಮರಳಿ ಬಂದು ಶ್ರೀ ಎಂ. ಆರ್. ಶೆಟ್ಟಿ ಅಧ್ಯಕ್ಷತೆಯಲ್ಲಿ ಸಭೆಗೂಡಿ ಧರ್ಮದರ್ಶಿಗಳ ಧೋರಣೆಯನ್ನು ಖಂಡಿಸಿ ಠರಾವು ಪಾಸು ಮಾಡಿಕೊಂಡರು. ಶ್ರೀಗಳಾದ ಎನ್. ಎಸ್. ಕಿಲ್ಲೆ, ಕೆ. ಕೆ. ಶೆಟ್ಟಿ, ಡಾ। ವಾಯುಪ್ಪ ಇವರ ಮೊದಲಾದವರ ಭಾಷಣಗಳಾದುವು. ಬಂದವರು ತಾವು ತಂದ ಹಣ್ಣು ಕಾಯಿಗಳನ್ನು ಮಹಾತ್ಮಾ ಗಾಂಧಿಯವರ ಭಾವಚಿತ್ರಕ್ಕೆ ಅರ್ಪಿಸಿ ಮರಳಿದರು. ಅ ಪೂರ್ವದಲ್ಲಿ ಇನ್ನೂ ಈ ದೇವಸ್ಥಾನದವರು ದಲಿತರನ್ನು ಹಾಗೂ ಪ್ರವೇಶವಿಲ್ಲದವರನ್ನು ಒಳಗೆ ಕರೆದು ಪ್ರವೇಶ ಕೊಡುವ ವರೆಗೆ ಯಾರೂ ಆ ದೇವಸ್ಥಾನಕ್ಕೆ ಹೋಗಬಾರದೆಂಬ ನಿರ್ಣಯವಾಯಿತು. ಈ ಸಂದರ್ಭದಲ್ಲಿ ಧರ್ಮದರ್ಶಿಗಳ ಧೋರಣೆಯನ್ನೂ ವರ್ತನೆಯನ್ನೂ ಖಂಡಿಸಿ ಮಹಾತ್ಮರಲ್ಲಿಯೇ ದಲಿತರು ವಿಶ್ವಾಸವನ್ನಿಟ್ಟು ಮುಂದೆ ಸಾಗುವ ಆಶ್ರಯದ ಪ್ರಕಟಣೆಯನ್ನು ಕಾಂಗ್ರೆಸ ಕಮಿಟಿಯು ಧರ್ಮದರ್ಶಿಗಳು ಹೊರಡಿಸಿರುವವರು.

ಬೇಕಾಗಿದ್ದಾರೆ.

ನಮ್ಮ ವಿಖ್ಯಾತ ರಾಷ್ಟ್ರೀಯ ಧ್ವಜದ ಗುರುತಿರುವ ಹೊಸ ಚಾ ಕಟ್ಟಿಗಳನ್ನು ವಿಕ್ರಯಿಸಲು ರಖಂ ವ್ಯಾಪಾರಿಗಳೂ ಏಜಂಟರೂ ಬೇಕಾಗಿದ್ದಾರೆ.

ವಿವರಗಳಿಗೆ ಬರೆಯಿರಿ:—

ದಿ ನೇಶನಲ್ ಟೀ ಸಿಂಡಿಕೇಟ್,
ಗುಡ್ಸ್ ಶೆಡ್ ರೋಡು,
ಪೋಸ್ಟ್ ಮಂಗಳೂರು. ದ. ಕ.

ಪ್ರಕಟಣೆ

ಉಡ್ಪಿ ತಾಲೂಕು ಬೊಮ್ಮರಬೆಟ್ಟು ಗ್ರಾಮದ ಹಿರಿಯಡ್ಕದಲ್ಲಿರುವ ಚಂದ್ರೈ ಕುರ್ಲೆ ಹೆಗ್ಡೆಯು ಸರ್ವ ಜನರಿಗೂ ಈ ಮೂಲಕ ತಿಳಿಯಪಡಿಸುವದೇನಂದ್ರೆ:-ನಂಸ ಮೊಮ್ಮಗ, ಪ್ರಬುದ್ರನ್ನು ಹೆಗ್ಡೆ ಮಗ ರತ್ನಾಕರ ಹೆಗಡೆಯು ನನ್ನ ವಿಷಯವಾಗಿ ದುರ್ನಡತೆಯಿಂದ ವರ್ತಿಸಿದ ಕುರಿತು ನಾನು ತಾ. 11-9-47ರ ನವಯುಗದ ಸಂಚಿಕೆಯಲ್ಲಿ ಪ್ರಕಟಪಡಿಸಿದ ಹೊರತು ತಾ. 9-9-47ರಲ್ಲಿ ನಾನು ನಂಬ್ರ 111ನೇ ರಿಜಿಸ್ಟ್ರಿ ನೋಟಿಸು ಕೊಟ್ಟ ಆತಗೆ ಕೊಟ್ಟು ವಿಚಾರಿಸಿ ಆತನ ಮೇಲೆ ಕ್ರಿಮಿನಲ್ ವ್ಯವಹರಣೆ ನಡಿಸುವುದನ್ನು ನನ್ನ ಮೊಮ್ಮಗನಾಗಿಯೂ ನಮ್ಮ ಕುಟುಂಬದ ಆತಿಸಂಣ ಪ್ರಾಯದ ಕಿರಿ ಮೆಂಬರನಾಗಿಯೂ ಇಪ್ಪದ್ದರಿಂದ ಅಂಥಾ ಮೋಸದ ಕಾರಣದಿಂದ ಬ್ಯಾಟೆರಿಯಿಂದ ಕೂಡಾ ವಿಚಾರಿಸಿ ನನಗೆ ಭಾದಕವಾಗದಂತೆ ಮಾತ್ರ ನೋಟಿ ಬದ ಪ್ರಕಾರ ವರ್ತಿಸಿದ್ದೆ. ಆದರೆ ಸದ್ರಿ ರತ್ನಾಕರ ಹೆಗಡೆಯು ತಾ. 25-9-47ರ ನವಯುಗದ ಸಂಚಿಕೆಯಲ್ಲಿ ನನ್ನ ಜ್ಞಾಹಿರಾತು ಮತ್ತು ರಿಜಿಸ್ಟ್ರಿ ನೋಟೀಸು ನನ್ನ ಮಗ ಪಟೇಲ್ ಸುಬ್ಬಯ್ಯ ನೆಗಡಿಯು ನನ್ನನ್ನು ವಂಚಿಸಿ ಆದನೇ ಮಾಡಿದ್ದಾಗಿಯೂ ಸದ್ರಿ ಸಂಗ್ತಿಗಳು ನನ್ನ ತಿಳಿವಳಿಕೆಗೆ ಬಿಲ್ಲದ್ದಾಗಿಯೂ ನಾನೇ ತಾ. 16-9-47ರಲ್ಲಿ ಸದ್ರಿರತ್ನಾಕರ ಹೆಗಡೆಗೆ ರಿಜಿಸ್ಟ್ರಿ ನೋಟೀಸು ಕೊಟ್ಟಿರುತ್ತೇನಾಗಿ ಪ್ರಕಟಿಸಿರುತ್ತಾನೆ. ಇದು ತೀರಾ ಸುಳ್ಳು ಮತ್ತು ತನ್ನ ಸಭ್ಯತನವನ್ನು ಪ್ರದರ್ಶಿಸುವ ಕಾಲ್ಪನಿಕ ಕುಯುಕ್ತಿ ಆಗಿರುತ್ತದೆ. ಅಲ್ಲದೆ ನನ್ನ ತಾ. 11-9-47ರ ನವಯುಗದ ಸಂಚಿಕೆಯ ಪ್ರಕಟಣೆಯೇ ಸಿಂಧುವಾಗಿರತಕ್ಕದ್ದು ಯೆಂಬಸಂಗ್ತಿ ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುತ್ತೇನೆ.

ಚಂದಯ್ಯ ಕುರ್ಲೆ ಹೆಗ್ಡೆ ರುಜು
ದಿ. ಬ. ಬಿ. ಮಹಾಬಲ ಹೆಗ್ಡೆ ರ ಅಳಿಯ
ಪಟೇಲ್ ಸುಬ್ಬಯ್ಯ ಹೆಗ್ಡೆ ಸಾಕ್ಷಿ.

From
Sri S. Baloji Rao,
HD. QRS. DEPUTY COLLECTOR,
(in charge).

To
Sri B. R. Karkera,
PRESIDENT,
The South Kanara Billava Union,
Mangalore.

SIR

PROHIBITION—South Kanara—Tapping of Sweet juice from Palmyrah trees—for palmyrah jaggery manufacture—Order communicated.

The Board has intimated that the Government have permitted the tapping of sweet juice from palmyrah trees for the manufacture of jaggery and have directed that co-operative societies for the purpose may be started in this district. I have instructed the Special Development Officer in charge of amelioration work in this district to make headway in the formation of the co-operative societies for ex-tappers for the manufacture of jaggery out of palmyrah sweet juice. I request you to infrom all members of your union and tappers all over the district through your union about the amenities afforded by Government referred to above as an alternative work to the ex-tappers, and arrange to form their co operative societies quickly. The tappers may be informed that the tapping of sweet juice for manufacture of juggery will be severely penalised if it is done by persons who do not become members of the co-operative socicties aud obtain permits.

The tapping of sweet juice from cocoanut trees for the manufacture of jaggery has not been permitted so far by Government as the matter is still pending their consideration. This fact also may be intimated to your members.

/By order/

S. K. Collector's Office,
Mangalore, Dated 16-10-1947.

(Sd) K. Lingappaya
For Huzur Sheristedar.

ಮಂಗಳೂರು
ಮುನ್ಸಿಪಲ್ ಚೆಯರ್‌ಮೇನರ

ಆಯ್ಕೆ:— ಕಳೆದ ತಾ. ೧೯ರಲ್ಲಿ ಇಲ್ಲಿಯ ಮುನಿ ಕೌನ್ಸಿಲ್ ಸಭಾ ಮಂದಿರದಲ್ಲಿ, ನ ಮ್ಮ ರೇ॥ ಡಿ॥ ಆಫೀಸರರಾದ ಶ್ರೀ॥ ಬಾಲಾಜಿ ರಾಯರ ಅಧ್ಯಕ್ಷತೆಯಲ್ಲಿ, ನಮ್ಮ ೩೦ ಮಂದಿ (ಇಬ್ಬರು ಮಹಿಳೆಯರು) ರಾಜಭಕ್ತಿಯ ಪ್ರಮಾಣ ವಚನವನ್ನು ಕೈಕೊಂಡ ಮೇಲೆ ಚೆಯರ್‌ಮ್ಯಾನರ ಸ್ಥಾನಕ್ಕೆ ಶ್ರೀ॥ ಎಲ್. ಸಿ. ಪಾಯ್ಸ್ ಎಮ್. ಎಲ್. ಎ. ಅವರ ಹೆಸರನ್ನು ಶ್ರೀ. ಬಿ. ದಾಮೋದರ ಬಾಳಿಗರು ಸೂಚಕರಾಗಿಯೂ, ಶ್ರೀ॥ ಎಸ್. ನರಸಪ್ಪಯ್ಯರು ಅನುಮೋದಕರಾಗಿಯೂ. ಡಾ॥ ನಾಗಪ್ಪ ಆಳ್ವರ ಹೆಸರನ್ನು ಶ್ರೀ॥ ಗಂಗಾಧರ ದಾಸರು ಸೂಚಕರಾಗಿಯೂ, ಶ್ರೀ॥ ಭಾಸ್ಕರ ರೈಗಳು ಅನುಮೋದಕರಾಗಿಯೂ, ಮುಂದೆ ತರಲು, ಓಟು ತೆಗೆದು, ಶ್ರೀ ಪಾಯ್ಸರಿಗೆ ೧೯ ಓಟುಗಳೂ, ಡಾ॥ ಆಳ್ವರಿಗೆ ೧೧ ಓಟುಗಳು ದೊರಕಿದ್ದರಿಂದ ಶ್ರೀ॥ ಪಾಯ್ಸರು ಚೆಯರ್‌ಮ್ಯಾನರಾದರು.

ಚೆಯರ್‌ಮ್ಯಾನರನ್ನು ಅಭಿನಂದಿಸಿ ಶ್ರೀ ಗಳಾದ ಭಾಸ್ಕರ ರೈ, ಎಸ್. ನರಸಪ್ಪಯ್ಯ, ಎಂ. ರಾಘವೇಂದ್ರ ಪೈ, ಎಂ. ಸಿ. ಅಹಮ್ಮದ್, ಜಿ. ಯಸ್. ನಗರ್‌ಕಾರ್, ಎ. ಮೂಸಬ್ಬ, ಎಸ್. ಜಿ. ಸಾಲಿನ್ಸ್, ಪೌಲ್ ಡಿ'ಸೋಜಾ, ಕೆ. ಯಸ್. ಅಡಿಗ, ಎನ್. ಎಸ್. ಕಿಲ್ಲೆ, ಶ್ರೀಮತಿ ಮೇರಿ ಜ. ಬ್ರಿಟೊ, ರಾ॥ ಬಾ॥ ಯನ್. ಯಸ್. ಸುವರ್ಣ, ಎ. ಎಸ್. ಫ್ರೀಸ್ಟ ಮೊದಲಾದವರು ಮಾತಾಡಿದ ಮೇಲೆ, ಚೆಯರ್‌ಮ್ಯಾನರು ಕಾಲೋಚಿತವಾದ ಉತ್ತರ ಹೇಳಿದರು.

ಟೊಪ್ಪಿ ಸಜೆ— ಮಂಗಳೂರು ತಾಲೂಕು ಸಜೀಪಪಡು ಬೋರ್ಡ್ ಎಲಿಮೆಂಟರಿ ಶಾಲಾ ವಿದ್ಯಾರ್ಥಿಯಾದ ೭ ವರ್ಷದ ನಾರಾಯಣ ಎಂಬ ಬಾಲಕನನ್ನು ಅವನ ಅಣ್ಣನಾದ (ಇವರಿಬ್ಬರೂ ಅಕ್ಕತಂಗಿಯರ ಮಕ್ಕಳು) ತಿಮ್ಮಪ್ಪ ಪೂಜಾರಿ ಎಂಬ ೧೭ ವರ್ಷದವನು ಕಳೆದ ತಾ. ೨೫-೪-೪೭ರಲ್ಲಿ ನಾರಾಯಣನ ಮೈಮೇಲಿದ್ದ ಒಂಟಿ ಬೆಳ್ಳಿ ಉಡಿದಾರಗಳನ್ನು ಪರವಾದಿಕೊಳ್ಳಬೇಕೆಂದು ಅವನನ್ನು ಗುಡ್ಡಕ್ಕೆ ಕರೆದುಕೊಂಡುಹೋಗಿ ಅಲ್ಲಿ ಅವನನ್ನು ಕೊಂದನೆಂಬ ಆರೋಪದ ಮೊಕದ್ದಮೆಯ ತನ್ನಿ ನಮ್ಮ ಜಿ॥ ಸೆ॥ ಜಡ್ಜರಾದ ಮಿ. ದೇವಿದಾಸ್ ಅವರ ಮುಂದ ನಡೆದು, ಆರೋಪಿಯ ಚಿಕ್ಕ ವಯಸ್ಸನ್ನು ಯೋಚಿಸಿ ಜಡ್ಜರು ಅವನಿಗೆ ಟೊಪ್ಪಿ ಸಜೆ ವಿಧಿಸಿದರು.

ಪೋಸ್ಟ್‌ಮೆನ್ ಸಂಘದ ಪ್ರಾಂತೀಯ ಸಮ್ಮೇಳನ— ಬರುವ ನವಂಬರ ತಿಂಗಳ 15, 16ಕ್ಕೆ ಈ ಸಂಘದ ಸಮ್ಮೇಳನವು ಮಂಗಳೂರಲ್ಲಿ ಜರಗುವುದು. ಸ್ವಾಗತ ಸಮಿತಿಗೆ ಅದರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಿ, B ಕೇಶವರಾಯರನ್ನು ಕೋಶಾಧಿಕಾರಿಗಳಾಗಿಯೂ, ಫಕೀರ್ ಮಹಮ್ಮದ್, ಕುಂದಾಪುರ, ಬಿ. ನಾರಾಯಣ ಮುಲ್ಕಿ, ಎಮ್. ವಾಮನ ಕಿಣಿ, ಉಡುಪಿ, ಎಮ್. ವಾಮನ ಪೆಜತ್ತಾಯ, ಜ. ಡಿ. ಸೋಜ ಪಲಿಮಾರ್, ಎಚ್. ವೆಂಕಪ್ಪ ಗುತ್ತಿಗಾರ, ತಿಮ್ಮಪ್ಪ ಶೆಟ್ಟಿ ಕಿನ್ನಿಗೋಳಿ, ಕೆ. ದೂಮ ಕುಂಬ್ಳೆಯವರನ್ನೊಳಗೊಂಡ ಮಂಗಳೂರು ಹೆಡ್‌ಆಫೀಸ್ ಟೆಲಿಗ್ರಾಫಿಸ ಕಂಕನಾಡಿ, ಮತ್ತು ಜಿಲ್ಲೆಯ ಎಲ್ಲಾ ಸದಸ್ಯರನ್ನು ಸ್ವಾಗತ ಸಮಿತಿಗೆ ಸೇರಿಸಲ್ಪಟ್ಟಿತು.

ಈ ಸಮ್ಮೇಳನಕ್ಕೆ ಬೇಕಾದ ಸಹಾಯವನ್ನು ಜಿಲ್ಲಾ ಮಹಾ ಜನರು ಕೊಡಬೇಕಾಗಿ ಕೇಳಿಕೊಳ್ಳಲಾಯಿತು.

ಜಿಲ್ಲಾ ಮೂಲೇಗಾರರ ಮೊದಲನೆಯ ಸಮ್ಮೇಳನವು ತಾ ೧೩-೧೦-೪೭ ರಂದು ಮಂಗಳೂರು ಮೈದಾನದಲ್ಲಿ ಶ್ರೀ. ಗಂಗಾಧರದಾಸ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಬೀಡಿ ಯೂನಿಯನ್, ಕಾಂಗ್ರೆಸ್ ಕಮಿಟಿ, ಕಮ್ಯೂನಿಸ್ಟ್ ಪಾರ್ಟಿ, ಸೋಶಿಯಲಿಸ್ಟ್ ಪಾರ್ಟಿ ಹಾಗೂ ಇನ್ನಿತರ ಮಹನೀಯರು ಸಮ್ಮೇಳನದಲ್ಲಿ ಭಾಗವಹಿಸಿ ಮೂಲೇಗಾರರ ಕಷ್ಟ ನಿವಾರಣೆಯ ಕುರಿತು ದುಡಿಯಲು ತಮ್ಮ ಸನ್ನದ್ಧತೆಯನ್ನು ಸೂಚಿಸಿದರು. ಮೂಲೇಗಾರರ ಕುಟುಂಬಗಳಿಗೆ ಪರಿಹಾರ ದ್ರವ್ಯ ಕೊಡಬೇಕು; ಬೆಲ್ಲಕ್ಕಾಗಿ ಮೂಲೇ ಕಸಬು ನಡೆಯಬೇಕು; ಜಿಲ್ಲೆಯಲ್ಲಿ ಬೆಲ್ಲದ ಸೊಸ್ಯಾಟಿ ಆಗಬೇಕು; ಮೂಲೇಗಾರರಿಗೆ ಜ ಎಕ್ರೆ ಸ್ಥಳವನ್ನೂ ಕೃಷಿಗೆ ಬೇಕಾದ ಧನ ಸಹಾಯವನ್ನೂ ಒದಗಿಸಬೇಕು; ಹೋಟೆಲು, ಮಗ್ಗ, ವಸ್ತ್ರದಂಗಡಿ ಹಾಗೂ ಇತರ ವ್ಯಾಪಾರ ನಡೆಸುವವರಿಗೆ ಸಕ್ಕರೆ, ನೂಲು, ವಸ್ತ್ರ, ಹಾಗೂ ಇತರ ದವಸಗಳ ಮಾರಾಟದ ಲೈಸೆನ್ಸ್ ಹಾಗೂ ಕೋಟಾ ಕೊಡಿಸಬೇಕು; ಇತ್ಯಾದಿ ಬೇಡಿಕೆಗಳು ಮುಂದಾಗಿದ್ದವು. ಬಿಲ್ಲವ ಯೂನಿಯನ್ ಅಧ್ಯಕ್ಷರಾದ ಶ್ರೀ ಬಿ ಆರ್. ಕರ್ಕೇರ್, ಜ. ಕಾಂ ಕಾರ್ಯದರ್ಶಿ ಕೆ. ಕೆ. ಶೆಟ್ಟಿ, ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಎಸ್. ಎನ್. ಹೊಳ್ಳ ಮತ್ತು ಇನ್ನೂ ಇತರ ಮಹನೀಯರೂ ಮೂಲೇಗಾರರ ಕಷ್ಟ ನಿವಾರಣೆಯ ಕುರಿತು ಮಾತಾಡಿದರು. ಮೂಲೇಗಾರರ ಕಷ್ಟ ನಿವಾರಣೆಯ ಕುರಿತು ಸರಕಾರದೊಡನೆ ಮಾತುಕತೆ ನಡೆಸಲು ಶ್ರೀ. ಬಿ. ಗಂಗಾಧರ ದಾಸ್, ಶ್ರೀ. ಎಂ. ಎಚ್. ಕೃಷ್ಣಪ್ಪ ಮತ್ತು ಶ್ರೀ॥ ಎಸ್. ಎನ್. ಹೊಳ್ಳ ಇವರಿಗೆ ಸಮ್ಮೇಳನವು ಅಧಿಕಾರ ಕೊಟ್ಟಿತು.

ಸಮಾಜವಾದ ಕಾರ್ಯಕರ್ತರಿಗೆ ಶಿಕ್ಷೆ. ಮಹಾತ್ಮ ಗಾಂಧೀಜಿಯವರು ಉಪವಾಸ ಹೂಡಿದ ನಿಮಿತ್ತ ಜನತೆಯಲ್ಲಿ ಐಕ್ಯದ ಅವಶ್ಯಕತೆಯುಂಟಾಗಿ ಗಾಂಧೀಜಿಯವರ ಪ್ರಾಣ ಉಳಿಸುವುದು ಜನರ ಕರ್ತವ್ಯವೆಂದು ಜನರಲ್ಲಿ ಕೇಳಿಕೊಳ್ಳಲು ಸೋಶಿಯಲಿಸ್ಟ್ ಪಕ್ಷದವರು ೯-೧-೪೭ರ ದಿವಸ ಸಾರ್ವಜನಿಕ ಸಭೆ ಏರ್ಪಡಿಸಿದ್ದರು. ಆ ದಿವಸ ಸಭೆಯ ಪ್ರಚಾರಕ್ಕಾಗಿ ಮೆಗಫೋನ್ ಒಡಿದು ಪ್ರಚಾರ ಮಾಡಿದ ಶ್ರೀ ಪಿ ಬಿ ಉಪಾಧ್ಯಾಯರಿಗೆ ಪೋಲಿಸ್ ಸ್ಟೇಶನಿನ ಸಬ್ ಇನ್‌ಸ್ಪೆಕ್ಟರರು ಸ್ಟೇಶನಿಗೆ ಕೊಂಡುಹೋಗಿ ವಿಚಾರಿಸಿ ಅವರ ಮೇಲೆ ಬಂಟ್ವಾಳ ಕೋರ್ಟಿನಲ್ಲಿ ಕೇಸ್ ದಾಖಲೆ ಮಾಡಿದ್ದರು. ಅದರ ವಿಚಾರಣೆಯು ನಡೆದು ತಾ ೧೫-೧೦-೪೭ ಬುಧವಾರ ಮೂರು ರೂ. ಜುಲ್ಮಾನೆ ಇಲ್ಲವೇ ಎರಡು ದಿನಸ ಶಿಕ್ಷೆ ವಿಧಿಸಿದರು. ಜುಲ್ಮಾನೆ ಕೆರಲು ನಿರಾಕರಿಸಿದ್ದಕ್ಕಾಗಿ ದಿನಸ ಶಿಕ್ಷೆ ವಿಧಿಸಲ್ಪಟ್ಟಿತು.

ಮಂಗಳೂರು ನಗರದ ತೆರಿಗೆದಾರರು ತಾ. ೧೯ ರಂದು ಹೊಸತಾಗಿ ಚುನಾಯಿತರಾದ ನಗರ ಸಭಾ ಸದಸ್ಯರನ್ನು ಆಮಂತ್ರಿಸಿ ಸತ್ಕರಿಸಿ, ನಗರದ ಅವಶ್ಯಕತೆಗಳನ್ನು ಅವರ ಒಂದಿಟ್ಟರು. ಅಂದಿನ ಸಭೆಗೆ ಡಾ॥ ಕೇಶವಸ್ವಾಮಿಗಳು ಅಧ್ಯಕ್ಷರಾಗಿದ್ದರು. ತೆರಿಗೆದಾರರ ಪರವಾಗಿ ಮಾತನಾಡಿದ ರಾ ಬ. ಗಿರಿಯಪ್ಪ, ಶ್ರೀ॥ ಸೇವಕ, ಡಾ॥ ಕುಂಬ್ಳಾ ಮೊದಲಾದವರು ಇಂದಿನ ನಗರ ಸಭೆಯ ಕೋಟಿ ನೀಯಾವಸ್ಥೆಯನ್ನೂ ಹಿಂದಿನ ಆಡಳಿತೆಯಲ್ಲಿ ಆದಂಗಾದ ತೊಂದರೆ, ಕಷ್ಟಗಳನ್ನೂ ತಿಳಿಸಿ, ಸ್ವತಂತ್ರ ಹಿಂದುಸ್ಥಾನದಲ್ಲಿ ನಗರ ಸಭಾ ಸದಸ್ಯರಾಗಿರುವ ಹೊಸ ಸದಸ್ಯರು ಮಂಗಳೂರನ್ನು ಮಾದರಿ ಮುನ್ಸಿಪಾಲಿಟಿಯಾಗಿ ಮಾಡಬೇಕೆಂದರು. ಸದಸ್ಯರ ಪರವಾಗಿ ಮಾತನಾಡಿದ ಶ್ರೀ ಎಲ್. ಸಿ. ಪಾಯಿಸ್, ಎನ್. ಎಸ್. ಸುವರ್ಣ, ಎಂ. ಎಸ್. ಫ್ರೀಸ್ಟ, ಎಸ್. ಎಸ್. ಕಿಲ್ಲೆ ಮೊದಲಾದವರು ಆಡಳಿತೆಯಲ್ಲಿ ಇಂದು ಇರಬಹುದಾದ ತೊಡಕುಗಳನ್ನು ತಿಳಿಸಿದಲ್ಲದೆ ತಮ್ಮಿಂದಾಗುವ ಯತ್ನ ಮಾಡುವುದಾಗಿ ತಿಳಿಸಿದರು.

ಬಾಲಕರ ಆರೋಗ್ಯಕಾಯರಾಗಲು
(ಪ್ರಭೂಸ್) ಬಾಲಾಮೃತ
ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನೆಟ್ಟಗಾಗಲು ತಾಯಿ ತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ. ಮಾತ್ರ, ಹೊತ್ತು ಕಳೆದರೆ ಮತ್ತೆ ಬಾರದು.

'ಪ್ರಭೂಸ್'
ಬಾಲಾಮೃತ

ಪ್ರಭೂಸ್ ಬಾಲಾಮೃತದ ಖ್ಯಾತಿಗೆ ಸಾಕ್ಷಿ ಬೇಕೆ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆ ರನ್ನು ಸುಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಜಾಲು, ಪೋ. ಬ್ರಹ್ಮಾವರ, ದ. ಕ.
ಸ್ಟಾಕಿಸ್ಟರು:—
ನವಭಾರತ ಪುಸ್ತಕ ಭಂಡಾರ, ಉಡುಪಿ.
L. N. Sharma, Mangalore.

The Canara Banking Corporation Limited.
ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಲಿಮಿಟೆಡ್, ಶಿರ್ವ, ದ. ಕನ್ನಡ
ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಲ್ಲಿ, ನಗಗಳನ್ನು ಅಡವಿಟ್ಟು ಪಡಕೊಂಡ ಸಾಲಗಳ ಕೆಳಗೆ ನಮೂದಿಸಿರುವ ಅಸ್ಲು ಬಡ್ಡಿ ವಗೈರೆಗಳನ್ನು ತೆರದೆ ಬಾಕಿ ಇಟ್ಟಿರುವುದರಿಂದಲೂ, ಆ ಬಗ್ಗೆ ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು ವಗೈರೆಗಳು, ಸದ್ರಿಯವರಿಗೆ ಪಾವ್ತಿಯಾಗದೆ ವಾಪಾಸು ಬಂದಿರುವುದರಿಂದಲೂ, ಸದ್ರಿ ಸಾಲಗಳ ಬಾಬ್ತು ಅಡವಿಟ್ಟ ನಗಗಳನ್ನು ಸಂಬಂಧಪಟ್ಟವರು ತಾರೀಕು 7-1'-1947ರ ಒಳಗೆ ಬಿಡ್ಸಿಕೊಂಡು ಹೋಗದೆ ಇದ್ದಲ್ಲಿ, ಸದ್ರಿ ನಗಗಳನ್ನು ತಾರೀಕು 8-11-1947ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆ, ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು ಎಂತ ಈ ಮೂಲಕ ತಿಳಿಸಲಾಗಿಯದೆ.

ಸಾಲಗಳ ವಿವರ

ಖಂಜ್ರಾ ನಂಬ್ರ	ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಸಾಲದ ಬಾಬ್ತು ಬಾಕಿಯುರುವ ಅಸ್ಲು ಮೊಬಲಗು
1	338/42	ಪ್ರಿಸ್ಕಿಲ ಮೇಸ್ತ್ರಿ, ಕೊರಗ ಮುಕಾರ್ತ್ರ ನಾಗ, ಕಂಟ್ರಾಕ್ಟರ್, ಪೋಸ್ಟು ಎಲ್ಲೂರು, ದ. ಕನ್ನಡ.	ರೂ. 32—0—0
2	458/45	ಸಿಯಾದ್ ಮೆಂಡೋನ್ಸ ಬ್ಯಾ ತೋಮಸ್ ಡಿಸೋಜರ ಹೆಂಡತಿ, ಕುಂಬ್ರಬೆಟ್ಟು, ಪೋಸ್ಟು ಕೂಡ, ದ. ಕನ್ನಡ	28—0—0

ಬೇಂಕಿನ ಆಫೀಸು
ಶಿರ್ವ, ತಾ15-10-1947

U. A. Prabhu,
Agent.

WANTED

A young and energetic man with a good knowledge of accounts and Company law and with business experience to act as Manager of the Kanara Timbers Ltd., Udipi. Starting pay and scale will be according to qualifications. Applications with testimonials may be addressed to the undersigned so as to reach him not later than the 8th of November 1947.

R. H. Andhrade,
Chairman
The Board of Directors
The Kanara Timbers Ltd, Udipi
Udipi, 20-10-47

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.
R. E. P. 209/47 O. S. 498/34.
ಡಿಕ್ರಿ ಸದ್ರಿ—ಅರ್ಜಿದಾರಳು—ವಾದಿಳು.
ಎದುರಾಗಿ
ಪಾಲೇರ ಮಂಜುನಾಥ ಸಹಾ ಪ್ರತಿವಾದಿರು—ಎದ್ರಿರು.

ಕುಂದಾಪುರ ತಾಲ್ಲೂಕು ಕರ್ಕುಂಜೆ ಗ್ರಾಮದಲ್ಲಿರುವ ವೆಂಕಟ್ರಮಣನ ಮಗ—1ನೆ ಜಡ್ಜ್‌ಮೆಂಟ ದೇಟೇದಾರನಾದ ಪಾಲೇರ ಮಂಜುನಾಥ ಮುವರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ.

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವಳಾದ ಅರ್ಜಿದಾರಳು, ಸ್ಥಿರ ಆಸ್ತಿಯ ವಿಕ್ರಯದ ಬಗ್ಗೆ ಅರ್ಜಿಮಾಡಿದ್ದಾಳೆ ಮದುವಂದ ವಿಕ್ರಯದ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸಲಿಕ್ಕೆ 1947ನೇ ಇಸವಿ ನವಂಬರ ತಿಂಗಳು 7ನೇ ತಾರೀಕು ನಿಶ್ಚಯಿಸಲಾಗಿಯದೆಂತ ನಿಮಗೆ ಇದರಿಂದ ತಿಳಿಸಲಾಗುತ್ತದೆ.

B. S. Shetty.
B. A., B. L.,
Vakil for petitioner.
Coondapoor. 15-10-47

ಅಮೃತಾಂಜನ, ತಲೆನೋವನ್ನು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಬೆನ್ನು ನೋವುಗಳು, ಎದೆನೋವು, ಛಾಯೆಗಳು ಬಾತು ಕೊಳ್ಳುವುದು, ಹೇನು. ವಿಷಜಂತುಗಳ ಕಡಿತ ಇತ್ಯಾದಿ ಮೊದಲಾದ ಎಲ್ಲಾ ರೋಗಗಳಿಗೂ ಹಚ್ಚಿರಿ, ಶರೀರ ಸುಲಭವಾಗಿ ನೆಮ್ಮದಿ ಪಡೆಯುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಮುಂಬಾಯಿ ಮತ್ತು ಕಲ್ಕತ್ತ.

ದಕ್ಷಿಣ ಕನ್ನಡ

ಬನ್ನಾಡಿ—1946ನೇ ಇಸವಿಯಲ್ಲಿ ಮಾನ್ಯ ಸರಕಾರದವರಿಂದ ಸ್ಥಾಪಿತವಾದ ಬನ್ನಾಡಿ ಗ್ರಾಮ ಕಮಿಟಿಯು ತೀರಾ ನಿದ್ರಾವಸ್ಥೆಯಲ್ಲಿದ್ದು ಯಾವುದೊಂದು ಸುವ್ಯವಸ್ಥೆಯಲ್ಲಿಲ್ಲವೆಂದರೆ ಆಶ್ಚರ್ಯವಾಗದು. ಉದಾಹರಣೆಗಾಗಿ ಬನ್ನಾಡಿಗ್ರಾಮದಲ್ಲಿಯೇ ಸರಿಯಾಗಿ ಡಿಪ್ಪೋ ಇದ್ದು, ನೆರೆಗ್ರಾಮವಾದ ವಡ್ಡರ್ಸೆಯವರಿಗೆ ಸದ್ರಿ ಡಿಪ್ಪೋವಿನಿಂದಲೇ ಜಿನಸೆ ಎಣ್ಣೆ ವಿತರಣೆಯಾಗುತ್ತಿರುವಾಗ ಈ ಬನ್ನಾಡಿ ಗ್ರಾಮಸ್ಥರು ಮಾತ್ರ ಹೊಳೆಯಿಂದಾಚೆ ಸುಮಾರು 2½ ಮೈಲು ದೂರವಿರುವ ಅಡಪಾಡಿಯಿಂದ ಎಣ್ಣೆ ಮತ್ತು ಸಕ್ಕರೆಯನ್ನು ತರಬೇಕಾಗಿದೆ. ಹೀಗಾಗಿ ಈ ಊರ ಬಡ ಹಳ್ಳಿಗರು ತೀರಾ ಅನ್ಯಾಯಕ್ಕೆ ಗುರಿಪಟ್ಟಿದ್ದಾರೆ.

ಇಲ್ಲಿ ಪಂಚಾಯತ್ ಬೋರ್ಡು ಕೂಡಾ ಸ್ಥಾಪಿಸಲ್ಪಟ್ಟು ನಾಲ್ಕೈದು ತಿಂಗಳ ಸಮಯ ಕಳೆದರೂ, ಯಾವದೊಂದು ಕಾರ್ಯ ಭಾರವೂ ನಡೆದಂತೆ ಕಂಡು ಬರುವುದಿಲ್ಲ. ಅಲ್ಲದೆ ಇದಕ್ಕೊಂದು ಕಾರ್ಯಕ್ಷೇತ್ರವೆಂಬುದೇ ಪ್ರಾಯಶಃ ತೋರಿ ಬರುವುದಿಲ್ಲ. ಮಾನ್ಯ ಸರಕಾರದವರು ಊರವರ ಬೇಡಿಕೆ ಮೇರೆಗೆ ಈ ಸಂಸ್ಥೆಯನ್ನು ಸ್ಥಾಪಿಸಿಯೂ ಇದು ಊರವರ ಹಿತ ಸಾಧನೆಯಲ್ಲಿಲ್ಲವೆಂದ ಮೇಲೆ ಇದರ ಅಸ್ತಿತ್ವವನ್ನು ಏನೆಂದು ಹೇಳಲಿ?

ಇನ್ನಾದರೂ ಅಧಿಕಾರಿ ವರ್ಗದವರು ಈ ಬಡ ಹಳ್ಳಿಗಳ ಕಡೆಗೆ ಗಮನವಿಟ್ಟು ಇಲ್ಲಿ ಸ್ಥಾಪಿಲ್ಪಟ್ಟಿರುವ ಈ ಸಂಸ್ಥೆಗಳೆಲ್ಲಾ ಸರಿಯಾಗಿ ತಮ್ಮ ಪಾಲಿನ ಕರ್ತವ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವಂತೆ ಶೀಘ್ರದಲ್ಲಿ ವ್ಯವಸ್ಥೆ ಪಡಿಸಬೇಕಾಗಿ ಯಾಚಿಸುವ.

ಬಡಹಳ್ಳಿಗರಲ್ಲೊಬ್ಬ.

NOTICE.

ಉಡ್ಪಿ ಡಿ. ಮು. ಕೋರ್ಟಿನಲ್ಲಿ.

O. P. No. 52of1947.

ಕನಕ ಸೆಟ್ಟಿ- ಸೂರಂಮ ಸೆಟ್ಟಿರ ಮಗಳು-ಉಡ್ಪಿ ತಾಲೂಕು ಬೊಂಮ್ಮಾರಬೆಟ್ಟು ಗ್ರಾಮದಲ್ಲಿ ಯಿರುವ ಸವರು-ಆರ್ಜಿದಾರರು

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದ್ರೆ.

ಮೇಲ್ಕಂಡ ಆರ್ಜಿ ವಿವ್ಯಹರಣೆಯ ಆರ್ಜಿದಾರಳ ಮಗ ಮೃತ ಬಿ. ರಗುರಾಮ ಸೆಟ್ಟಿಯು "The Hindusthan Co-operative Insurance Society Ltd., Head Office Hindusthan Buildings, Calcutta- ಯಾ ಕಂಪೆನಿಯಲ್ಲಿ-policy No. 353132ನೇಗೆ ರುಪಾಯಿ 1000-0-0ಕ್ಕೆ ಮಾಡಿದ ಯಿನ್ಸೂರಿನ ಪ್ಯಾಲೇಜನ್ನು ಸದ್ರಿ ಮೃತನ ವಾರಿಸ್‌ದಾರಳು ವ ಕುಟುಂಬದ ಯೆಜಮಾನ್ತಿಳಾದ ಆರ್ಜಿದಾರಳಿಗೆ ವಸೂಲು ಪಡಿಯುವರೇ ತನಗೆ Succession Certificate ಕೊಡಬೇಕಾಗಿ ಕೊಟ್ಟ ಮೇಲ್ಕಂಡ ಆರ್ಜಿಯು ತನ್ಕಿ ತಾರೀಕು 12-11-47ಕ್ಕೆ ತನ್ಕಿಗೆ ಯಿಡಲ್ಪಟ್ಟಿದೆ. ಆದುದರಿಂದ ಯಾ ಬಾಬಿನಲ್ಲಿ ಆಕ್ಷೇಪ ಹೇಳುವವರು ಯಿದ್ದರೆ ಮೇಲ್ಕಂಡ ತಾರೀಕಿಗೆ ಪೂರ್ವಾಹ್ನ 11ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಲಿಕ್ಕೆ ತಪ್ಪಿದರೆ ಸದ್ರಿ ಆರ್ಜಿಯು ಏಕಪಕ್ಷವಾಗಿ ತೀರ್ಮಾನವಾಗುವುದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

K. J. Ballal.
Vakil for petitioner.
Udipi Dated 18-10-1947

CHAMPAE'S

Snow & Castrex

Sole Distributers for India

Prop: K. G. NAYAK,
Santhekatte, UDIPI, S. K.

ರಾಮಕುಂಜ-ಬಸ್ ಕಂಪೆನಿಯಲ್ಲಿ ಮನವಿ— ಈ ಲೈನಿನಲ್ಲಿ ಪುತ್ತೂರಿನಿಂದ ಹೊಸಮಠಕ್ಕೆ ಪ್ರಕೃತ ಎರಡು ಬಸ್‌ಗಳು ರನ್ ಆಗುತ್ತಿವೆ. ಹಿಂದೆ ಶಂಕರವಿಠಲ್ ಕಂಪೆನಿಯ ಬಾಬ್ತು ಒಂದು ಬಸ್ ಬೆಳಿಗ್ಗೆ ೬ಘಂಟೆಗೆ ಮತ್ತು ಪಿ. ವಿ. ಯ ಬಾಬ್ತು ಒಂದು ಬಸ್ ಮಧ್ಯಾಹ್ನ ೧೧-೩೦ಕ್ಕೆ ಪುತ್ತೂರಿನಿಂದ ಹೊರಟು ಹೊಸಮಠಕ್ಕೆ ಹೋಗಿ ತಿರುಗಿ ಬರುತ್ತಿದ್ದವು. ಇತ್ತೀಚೆಗೆ ಸಾಧಾರಣ 4 ತಿಂಗಳುಗಳಿಂದ ಈ ಕ್ರಮವು ನಿತ್ತುಹೋಗಿ ಕೇವಲ ಕಂಪೆನಿ ಮತ್ತು ಪ್ರಯಾಣಿಕರಿಗೆ ಸಹ ಹೆಚ್ಚಿನ ಪ್ರಯೋಜನವಿಲ್ಲದ ರೀತಿಯಲ್ಲಿ ಮಧ್ಯಾಹ್ನಕ್ಕೇನೇ ಎರಡು ಬಸ್ ಸಹ ೧೧-೩೦ ಮತ್ತು ೧೧-೪೦ಕ್ಕೆ ಪುತ್ತೂರಿಂದ ಹೊರಟು ಹೊಸಮಠಕ್ಕೆ ಹೋಗಿ ಹಿಂತಿರುಗಿ ಬರುತ್ತಿವೆ. ಈ ಸಮಯಕ್ಕೆ ಸರಿಯಾಗಿ ಬಸ್ಸುಗಳು ಹೊರಟರೆ ಕೆಲಸಮಯ ಹಿಂದಿನ ಬಸ್ ಮುಂದಾಗಿ ಮುಂದಿನ ಬಸ್ ಹಿಂದಾಗಿ ಕೇವಲ ಸ್ಪರ್ಧೆಯ ಓಟದಂತೆ ಓಡುತ್ತಿವೆ ಹೊರತು ಇದರಿಂದ ಏನೊಂದು ಹೆಚ್ಚಿನ ಪ್ರಯೋಜನವೂ ಇಲ್ಲೆಂಬುದು ಪರೀಕ್ಷಿಸಿದವರಿಗೆ ಗೊತ್ತಾಗಬಹುದು. ಉಪ್ಪಿನಂಗಡಿ ದಾಟಿದ ಮೇಲೆ ಸುಬ್ರಹ್ಮಣ್ಯವರೇಗಿನ ಪ್ರದೇಶಗಳಿವೆ. ವ್ಯಾಪಾರ ಕೇಂದ್ರವಾದ ಕಡಬ ಮತ್ತು ಹೆಚ್ಚಿನ ಬಸ್ ಪ್ರಯಾಣಿಕರಿರುವ ಆತ್ತೂರು ರಾಮಕುಂಜ ಆಲಂಗಾರು ಮೊದಲಾದ ಊರಿನವರಿಗೆ ಬೆಳಿಗ್ಗೆ ಪುತ್ತೂರು-ಮಂಗಳೂರು ಕಡೆಗೆ ಹೋಗುವಂತೆ ಹಾಗೂ ಸಾಯಂಕಾಲ ಆ ಕಡೆಯಿಂದ ತಮ್ಮ ಊರಿಗೆ ಬಂದು ಸೇರುವಂತೆ ಸಹ ಬಸ್ ಸರ್ವಿಸ್ ಇರುವುದು ಅತ್ಯಗತ್ಯವಿದೆ. ಆದುದರಿಂದ ಬೆಳ್ಳಾರೆ ಪುತ್ತೂರು-ಹೊಸಮಠಕ್ಕಾಗಿರುವ P. V. ಬಾಬ್ತು ಬಸ್ಸನ್ನು ಬೆಳಿಗ್ಗೆ ಪುತ್ತೂರಿನಿಂದ ೬ಘಂಟೆಗೆ ಹೊಸಮಠಕ್ಕೆ ಹೋಗಿಬಂದು ಮಧ್ಯಾಹ್ನಕ್ಕೆ ಬೆಳ್ಳಾರೆ ಸರ್ವಿಸ್ ಮಾಡಿ ಸಾಯಂಕಾಲ ೪-೩೦ಕ್ಕೆ ಪುನಃ ಹೊಸಮಠಕ್ಕೆ ಪುತ್ತೂರಿನಿಂದ ಹೋಗಿಬರುವಂತೆಯೂ ಮತ್ತು ಕುಜೀಪಳ್ಳ-ಪುತ್ತೂರು-ಹೊಸಮಠಕ್ಕಾಗಿ ಇರುವ ಶಂಕರವಿಠಲ ಬಸ್ಸನ್ನು ಈಗಿನಂತೆಯೇ ರನ್ ಆಗುತ್ತಿರುವಂತೆಯೂ ಕಂಪೆನಿಯವರು ದಯಮಾಡಿ ವ್ಯವಸ್ಥೆ ಮಾಡಿದರೆ ಕಂಪೆನಿಯ ಹಾಗೂ ಪ್ರಯಾಣಿಕರ ಹಿತದ ಕಡೆಗೆ ಗಮನ ಕೊಟ್ಟಂತಾಗಬಹುದು ಎಂತ ಪ್ರಾರ್ಥನೆ.

೩೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ— ಬರುವ ಡಿಸೆಂಬರ್ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡಿನಲ್ಲಿ ನಡೆಯುವ ೩೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಶ್ರೀಮಾನ್ ತಿರುಮಲೆ ತಾತಾಚಾರ್ಯ ಶರ್ಮನ್ ಅವರು ಬಹುಮತಗಳಿಂದ ಆರಿಸಲ್ಪಟ್ಟಿದ್ದಾರೆ.

ಸರಕಾರಿ ಬುನಾದಿ ಶಿಕ್ಷಣ ತರಬೇತಿ ವಿದ್ಯಾಲಯ, ಮೂಡಬಿದೆ:— ತಾ. 1-10-47ನೇ ಶನಿವಾರ ಇಲ್ಲಿಯ ವಿದ್ಯಾರ್ಥಿಗಳು ಗುರುಗಳೊಂದಿಗೆ ಗ್ರಾಮಸೇವಾ ಕಾರ್ಯಾರ್ಥವಾಗಿ ಸಿದ್ಧಕಟ್ಟೆಗೆ ಪ್ರವಾಸ ಮಾಡಿ ಸೈಂಟ್ ಪೀಟರ್ಸ್ ಎಲಿಮೆಂಟ್ರಿ ಶಾಲೆಯಲ್ಲಿ ಶ್ರೀ ರೆವೆರೆಂಡ್ ಫಾದರ್ ಎ. ಮತ್ತಾಯಸರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಹಳ್ಳಿಗರ ಉದ್ಧಾರಕ್ಕೆ ಕೃಷಿ-ಕೈಗಾರಿಕೆಗಳ ಅವಶ್ಯಕತೆಯ ಕುರಿತು ಭಾಷಣ ಮಾಡಿದರು. ಮೂಡಬಿದ್ರೆ ಜೈನ ಹೈಸ್ಕೂಲಿನ ಉಪಾಧ್ಯ ಗುರುಗಳಾದ ಶ್ರೀ ರಘುಚಂದ್ರ ಶೆಟ್ಟಿ ಮತ್ತು ನಾರಾಯಣ ರಾಯರು ಬಿಡುವಿನ ಸಮಯದ ಉಪಯೋಗ ಮತ್ತು ಯಕ್ಷಗಾನದ ಕುರಿತು ಭಾಷಣ ಮಾಡಿದರು. ಸಭಿಕರ ಭಾಷಣಾನಂತರ ಅಧ್ಯಕ್ಷರು ಹಳ್ಳಿಗರ ಉದ್ಧಾರದ ಅಗತ್ಯದ ಕುರಿತು ಹೇಳಿ ಬುನಾದಿ ಶಿಕ್ಷಣ ತರಬೇತಿ ಶಾಲೆಯವರು ಆಗಾಗ್ಗೆ ಅಲ್ಲಿಗೆ ಬಂದು ಈ ರೀತಿಯ ಕಾರ್ಯ ಕಲಾಪಗಳನ್ನು ಜರಗಿಸಬೇಕೆಂದು ಕೇಳಿಕೊಂಡರು. ಬುನಾದಿ ಶಾಲಾ ತರಬೇತಿ ವಿದ್ಯಾರ್ಥಿಗಳ ಮತ್ತು ಅಲ್ಲಿಯ ಎಲಿಮೆಂಟರಿ ಶಾಲಾ ಮಕ್ಕಳ ವಿನೋದ ಚಟುವಟಿಕೆಗಳೂ ಇದ್ದವು ವಂದೇ ಮಾತರಂ ಗೀತೆಯೊಂದಿಗೆ ಸಭಾಂತ್ಯವಾಯಿತು. ಇಲ್ಲಿಯ ಕಾರ್ಯಕಲಾಪಗಳಲ್ಲಿ ಸ್ಥಳೀಯ ಮಹನೀಯರುಗಳಾದ ಶ್ರೀಗಳಾದ ಸೀತಾರಾಮರೈ, ವೆಂಕಪ್ಪ ರೈ, ರೆವೆರೆಂಡ್ ಫಾದರ್ ಎ. ಮತ್ತಾಯಸ್. ಎಲಿಮೆಂಟ್ರಿ ಶಾಲಾ ಅಧ್ಯಾಪಕ ವೃಂದ ಹಾಗೂ ಊರ ಮಹನೀಯರು ತುಂಬಾ ನೆರವಾದರು. ಬುನಾದಿ ಶಿಕ್ಷಣ ತರಬೇತಿ ಶಾಲೆಯವರ ರಚನಾತ್ಮಕ ಕಾರ್ಯಕ್ರಮಗಳು ಇದೇ ರೀತಿ ಮುಂದುವರಿಯುವವು ಎಂದು ತಿಳಿದು ಬರುತ್ತದೆ.

ಕುಂದಾಪುರ ತಾಲೂಕು ಆಹಾರ ಸಮಿತಿಯ ಸಭೆಯು ಕಳೆದ ತಾ 14ರಲ್ಲಿ ಸಬ್ ಕಲೆಕ್ಟರ್ ಶ್ರೀ ಎಸ್. ಕೋಟೀಶ್ವರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕುಂಭಾಶಿ ಸಹಕಾರ ಸಂಘದ ಬದಲಾಗಿ ತೆಕ್ಕಟ್ಟೆ ಗ್ರಾಮದ ಅಕ್ಕಿ ವಿತರಣೆಯ ಬಗ್ಗೆ ಶ್ರೀ ರಘುರಾಮ ಶೆಟ್ರಿಗೆ ಶಿಫಾರಸು ಮಾಡಲಾಯಿತು. ಸಕ್ಕರೆ ಅಭಾವದ ನಿಮಿತ್ತ ಸಕ್ಕರೆ ಮಿತಿಯನ್ನು ಏರಿಸಲಿಕ್ಕೆ ಅಸಾಧ್ಯವೆಂದು ಕುಂದಾಪುರ ಕಾಫಿ ಹೊಟೆಲ್ ಮ್ಹಾಲಕರ ಮನವಿಗೆ ಉತ್ತರ ಬೀಯಲಾಯಿತು. ಪೈರು ಕಟಾವು ವಿಳಂಬವಾಗಿ ಆರಂಭವಾಗುವುದರಿಂದ ಕುಂದಾಪುರ ತಾಲೂಕಿನ ಮಟ್ಟಿಗೆ 1ನೆ ಮತ್ತು 2ನೆ ಕಂತುಗಳಲ್ಲಿ ಅಕ್ಕಿ ಭತ್ತ ಒಪ್ಪಿಸುವ ಅವಧಿಯನ್ನು ತಾ. 30-11-47 ಮತ್ತು 15-12-47ಕ್ಕೆ ಮುಂದರಿಸುವರೆ ಶಿಫಾರಸು ಮಾಡಲಾಯಿತು. ನಂದನವನ ಮತ್ತು ಕೊರ್ಗಾಲ್ ಗ್ರಾಮ ಸಮಿತಿಗಳನ್ನು ರದ್ದುಗೊಳಿಸಿ ಹೊಸ ಕಮಿಟಿಗಳನ್ನು ಸ್ಥಾಪಿಸುವರೆ ನಿರ್ಧಾರವಾಯಿತು.

ಕುಂದಾಪುರ ತಾಲೂಕಿನ ಮೂರ್ತೆದಾರ ಗುತ್ತೇದಾರರ ಮಹಾಸಭೆಯೊಂದು ತಾಲೂಕು ಬಿಲ್ಲವ ಸಂಘದ ಆಶ್ರಯದಲ್ಲಿ ಇದೇ ತಾ 26-10-'47ನೇ ಆದಿತ್ಯವಾರ ಅಪರಾಹ್ನ ಘಂಟೆ 3ಕ್ಕೆ ಮುರವಂತೆ ಬೋರ್ಡ್ ಎಲಿಮೆಂಟರಿ ಶಾಲೆಯ ಎದುರುಗಡೆ ಮೈದಾನಿನಲ್ಲಿ ಜಿಲ್ಲಾ ಆಹಾರ ಸಮಿತಿಯ ಸದಸ್ಯ ಶ್ರೀ ಬಿ. ಸುಬ್ಬಣ್ಣ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದರಿಂದ ಈ ತಾಲೂಕಿನ ಎಲ್ಲಾ ಗುತ್ತೆದಾರರೂ ಮೂರ್ತೆದಾರರೂ-ಬಿಲ್ಲವ ಸಮಾಜದ ಇತರ ಮಹನೀಯರೂ ಹಾಜರಿದ್ದು ಸಭೆಯ ಉದ್ದೇಶಗಳನ್ನು ಯಶಸ್ವಿಗೊಳಿಸಬೇಕಾಗಿ ಹೆರಿಕುದ್ರು ಮಂಜ ಪೂಜಾರಿಗಳ ವಿನಂತಿ ಇದೆ.

ಪ್ರಕಟಣೆ.

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ,

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲೂಕು ಸುಬ್ರಹ್ಮಣ್ಯ ಗ್ರಾಮದ ಕುಲುಕುಂದದಲ್ಲಿ ವರ್ಷಂಪ್ರತಿ ಜರಗುವ ಜಾನುವಾರು ಸಂತೆಯು 1947ನೇ ಇಸವಿ ನವಂಬ್ರ ತಾ. 28ರಿಂದ ದಶಂಬ್ರ ತಾ12ರ ತನಕ ಜರಗುವುದು, ಅಂದರೆ, ಸಂತೆಯು ಕಾರ್ತಿಕ ಪೌರ್ಣಮಿ ದಿವಸ ಪ್ರಾರಂಭವಾಗಿ, ಕಾರ್ತಿಕ ಅಮಾವಾಸ್ಯೆ ದಿವಸದ ಯಾ ಸುಬ್ರಹ್ಮಣ್ಯ ದೀಪೋತ್ಸವದ ಪರಿಯಂತರ ಜರಗುವುದು.

ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ತಲೆಯೊಂದರ ಎರಡು ಆಣೆಯ ಮೇರೆಗೆ ಫೀಸು ವಸೂಲುಮಾಡಲಾದೀತು. ಸಂದರ್ಭ ಒದಗಿದಲ್ಲಿ ಸದ್ರಿ ಫೀಸನ್ನು ಏರಿಸಲೂ ಬಹುದು, ಯಾ ಅಧಿಕ ಫೀಸನ್ನು ವಸೂಲು ಮಾಡಲೂ ಬಹುದು.

ಪರಂತು, ರೆವೆನ್ಯೂ ಡಿವಿಜನಲ್ ಆಫೀಸರರು, ಆವಶ್ಯವೆಂದು ತೋರುವ ಯಾವತ್ತೂ ಜಾನುವಾರುಗಳನ್ನು ಸದ್ರಿ ಫೀಸುಗಳಿಂದ ವಿಮೋಚಿತಪಡಿಸಬಹುದು.

ಮೈಸೂರು ಪ್ರಾಂತ್ಯದಿಂದ ಜಾನುವಾರು ರಫ್ತು ಮಾಡುವರೆ, ಜಾರಿಯಲ್ಲಿರುವ ನಿಬಂಧನೆಗಳಿಗನುಸಾರವಾಗಿ, ಮೈಸೂರು ಪ್ರಾಂತ್ಯದ ಸಂಬಂಧಪಟ್ಟ ಜಿಲ್ಲಾ ಮೆಜಿಸ್ಟ್ರೇಟರರು ಕೊಡುವ ರಹದಾರಿಗಳ ಮೂಲಕ ಮಾತ್ರ ರಫ್ತು ಮಾಡುವರೆ ಸಾಧ್ಯವಿರುತ್ತದೆ. ಆದ ಪ್ರಯುಕ್ತ, ಈ ವರ್ಷದಲ್ಲಿ ಜರಗುವ ಕುಲುಕುಂದ ಜಾನುವಾರು ಸಂತೆಗೆ ಮೈಸೂರು ಪ್ರಾಂತ್ಯದಿಂದ ಜಾನುವಾರುಗಳನ್ನು ತಂದು ಮಾರಾಟಮಾಡಲು ಅಪೇಕ್ಷಿಸುವ ವ್ಯಾಪಾರಿಗಳು ಮೈಸೂರು ಪ್ರಾಂತ್ಯದ ಸಂಬಂಧಪಟ್ಟ ಜಿಲ್ಲಾ ಮೆಜಿಸ್ಟ್ರೇಟರರಿಂದ ಅವಶ್ಯವುಳ್ಳ ರಹದಾರಿಗಳನ್ನು ಮುಂಚಿತವಾಗಿಯೇ ಪಡಕೊಳ್ಳತಕ್ಕದು.

ಜಿ. ಸಿಂಹಾದ್ರಿ,
ರೆವೆನ್ಯೂ ಡಿವಿಜನಲ್ ಆಫೀಸರರು.
ರೆವೆನ್ಯೂ ಡಿವಿಜನಲ್ ಆಫೀಸು, ಪುತ್ತೂರು,
ದಕ್ಷಿಣ ಕನ್ನಡ ಜಿಲ್ಲೆ,
ತಾರೀಕು 13 ಸಪ್ಟಂಬರ 1947

ಮಧುವಿಗೂ ಮಧುರ!

ಮಧುವನ

ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾ ಸಂಗ್ರಹ.

ಕಣ್ಸೆಳೆವ ಬಾಹ್ಯಾಂಗ! ಮನಸೆಳೆವ ಅಂತರಂಗ!

ಬೆಲೆ ೩ ೦ ೦

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾವಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

(೨ನೇ ಪುಟದಿಂದ)

ತೆ ಮುಸ್ಲಿಂರಾಜನೊಡನೆಯೇ ಹೋರಿಡಬೇಕಾಗಿದೆ. ರಾಜನೋ? ತಾನು ರಾಜನಾಗಿರುವುದರಿಂದ ನಿಷ್ಪಕ್ಷಪಾತಿಯಾಗಿರುವ ಬದಲಿಗೆ ಮುಸ್ಲಿಮರ ಮೇಲೂ ಮುಸ್ಲಿಂತತ್ವಗಳ ಮೇಲೂ ಪಕ್ಷಪಾತ ತೋರಿಸುವವನಿದ್ದಾನೆ.

ಅಖಿಲ ಭಾರತದ ಹಿಂದೂ ಪ್ರಶ್ನೆ

ಮೇಲ್ಗಡೆ ನಮೂದಿಸಿರುವ ಕಾರಣಗಳಿಂದಾಗಿ ಜುನಾಗಡ್ ಸಮಸ್ಯೆಗಳು, ಅಲ್ಲಿಯ ಹಿಂದುಗಳಿಗೆ ಮಾತ್ರ ಸಂಬಂಧಿಸಿದ ಸ್ಥಳೀಯ ಪ್ರಶ್ನೆಗಳಲ್ಲವೆಂಬುದು ಸ್ಪಷ್ಟವಿದೆ. ಜುನಾಗಾಡಿನ ಜನತೆಯಂತೆಯೇ ಅಖಿಲ ಭಾರತದ ಎಲ್ಲಾ ಹಿಂದುಗಳಿಗೂ ಅದರಲ್ಲಿ ವಿಶೇಷಾಸಕ್ತಿಯಿದೆ. ಜುನಾಗಾಡ್ ಪಾಕಿಸ್ತಾನಕ್ಕೆ ಸೇರಿದುದರಿಂದಂತೂ ಈ ಸಮಸ್ಯೆ ಇನ್ನಷ್ಟು ಜಟಿಲಗೊಂಡಿದೆ. ಜುನಾಗಾಡಿನ ಭೌಗೋಲಿಕ ಹಾಗೂ ಚಾರಿತ್ರಿಕ ಸ್ಥಿತಿಗತಿಗಳೇ ಈ ಸಂಬಂಧದ ಘಂಟಾಘೋಷ ವಾದಗಳಾಗಿಸಾರುತ್ತಿವೆ. ಜುನಾಗಡ್ ಇರುವದು, ಭಾರತ ಕೇಂದ್ರಕ್ಕೆ ಸೇರಿರುವ ಎಲ್ಲಾ ಹಿಂದೂ ಸಂಸ್ಥಾನಗಳ ನಟ್ಟನಡುವೆ. ಮತ್ತದರ ಹಕ್ಕಿನ ಭೂಮಿಗಳು ಆ ಸಂಸ್ಥಾನಗಳ ಭೂಮಿಗಳೊಡನೆ ಮಿಳನಗೊಂಡಿವೆ. ಪ್ರತ್ಯಕ್ಷ ಜುನಾಗಾಡಿನ ಒಳಗಡೆಯಲ್ಲೇ ವಸಾಹತು ಭಾರತಕ್ಕೆ ಸೇರಿರುವ ಸಂಸ್ಥಾನಗಳ ಭೂಮಿಗಳಿವೆ. ಜುನಾಗಾಡಿನ ಅಸ್ತಿ ದ್ವೀಪವಿರುವುದು ಭಾವನಗರ್, ನವಾನಗರ್, ಗೊಂಡಾಲ್ ಮತ್ತು ಬರೋಡಾ ಈ ನಾಲ್ಕು ಪ್ರಸಿದ್ಧ ಹಿಂದೂ ರಾಜ್ಯಗಳ ಒಳಗಡೆಯಲ್ಲೇ. ಜುನಾಗಾಡ್ ಸಂಸ್ಥಾನದ ರೈಲ್ವೇ, ಟಪ್ಪಾಲು, ತಂತೀ ಖಾತೆಗಳು ಹಿಂದೀ ಪದ್ಧತಿಯ ಅಂತರ್ಗತ ಭಾಗಗಳು. ರೈಲ್ವೆ, ಪೋಲಿಸ್, ಟೆಲಿಗ್ರಾಫ್ ಮತ್ತು ಟೆಲಿಫೋನುಗಳ ಆಡಳಿತೆ ನಡೆಸುತ್ತಿರುವುದು ವಸಾಹತು ಭಾರತ ಸರಕಾರವೇ.

ಹಿಂದೀ ಸರಕಾರವೇನಂತೆ?

ಮಹಾತ್ಮಾಗಾಂಧಿಯವರು ಹುಟ್ಟಿದುದು ಕಾಥಿಯಾವಾರಿನೊಳಗೆ. ಅಂತೆಯೇ ಲೀಗ್ ಅಧ್ಯಕ್ಷ ಮಿ. ಮಹಮ್ಮದಾಲಿ ಜಿನ್ನಾರು ಕೂಡಾ. ಕಾಥಿಯಾವಾರ್ ಸಂಸ್ಥಾನಗಳಿರುವುದು ಗುಜರಾತಿನಲ್ಲಿ; ಸರ್ದಾರ್ ಪಟೇಲ್, ಶ್ರೀ ಮಾವ್ಳಂಕರರಂಥವರು ಹುಟ್ಟಿದ ಪ್ರಾಂತ್ಯದಲ್ಲಿ. ಜುನಗಾಡ್ ಜನರ ಸಂಕಷ್ಟಗಳನ್ನು ಕೆಲವು ತಿಂಗಳುಗಳಿಗೆ ಹಿಂದೆಯೇ ಜುನಗಾಡ್ ಸಂಸ್ಥಾನದವರ ಒಂದು ಶಿಷ್ಟಮಂಡಲಿಯು ಮೂಲಕ ಕಾಂಗ್ರೆಸ್ ನಾಯಕರ—ಮುಖ್ಯವಾಗಿ ಸರ್ದಾರ್ ಪಟೇಲರ—ಲಕ್ಷ್ಯಕ್ಕೆ ತರಲಾಗಿದ್ದಿತು. ಹಿಂದೀ ಸರಕಾರವು ಈ ಕುರಿತು ಕೂಡಲೇ ಕಾರ್ಯಾಚರಣೆ ಕೈಕೊಳ್ಳತಕ್ಕದ್ದೆಂದು ಹಿಂದುಗಳ ಆಗ್ರಹದ ಬೇಡಿಕೆಯಿದೆ. ಪತ್ರಿಕಾ ಹೇಳಿಕೆಯಲ್ಲಿ ನಮೂದಿಸಲ್ಪಟ್ಟ ಹಿಂದೀ ಸರಕಾರದ ಧೋರಣೆಯನ್ನು ಹಿಂದುಗಳು ಸ್ವೀಕರಿಸುವಂತಿಲ್ಲ. ಆ ಪ್ರಕಟಣೆಯಲ್ಲಿ ನಮೂದಿಸಲ್ಪಟ್ಟಿರುವಂತೆ ಜುನಗಾಡ್ ಪ್ರಶ್ನೆಯು ಜುನಗಾಡ್ ಜನತೆಯ ಅಭಿಮತದಂತೆಯೇ ತೀರ್ಮಾನ ಹೊಂದುವಂತಹದಲ್ಲ. ಅದು ಅಖಿಲ ಭಾರತ ಜನತೆಯಿಂದ ನಿರ್ಣಯ ಹೊಂದಬೇಕಾದ ಅಖಿಲ ಭಾರತೀಯ ಪ್ರಶ್ನೆ. ಕೇವಲ ಸಂಸ್ಥಾನದ ಪ್ರಜೆಗಳ ಸ್ವತಂತ್ರಾಭಿಮತಕ್ಕೆ ಬಿಡಲಾಗುವಂತಹದಲ್ಲ.

ಆತ್ಮಹತ್ಯೆಯಂಥಾ ಹೆಜ್ಜೆ

ಹಿಂದೀ ಸರಕಾರವು ಸೂಚಿಸಿರುವಂತಹ 'ಜನಮತ ಸಂಗ್ರಹ' ಧೋರಣೆಯೆಂಬುದು ಅರಾಜಕೀಯ ಮಾತ್ರವಲ್ಲ, ಆತ್ಮಹತ್ಯೆಗೆ ಸಮಾನ.–ಮುಸ್ಲಿಂ ಲೀಗಿನವರಿಂದ ಅರ್ಥ ಕಟ್ಟಲ್ಪಟ್ಟಿರುವಂತೆ, ಜಾತೀಯತಾ ತತ್ವವನ್ನಾಧರಿಸಿ ಸ್ವಯಂ ನಿರ್ಣಯತ್ವವನ್ನು ಒಪ್ಪಿಕೊಂಡ ಕಾಂಗ್ರೆಸ್ ನಾಯಕರು ರಾಜಕೀಯ ವ್ಯವಹಾರ ತಂತ್ರದ ಹಾಗೂ ಸಾಮಾನ್ಯ ತಿಳುವಳಿಕೆಯ ಎಲ್ಲಾ ಸೂತ್ರಗಳಿಗೂ ವಿರುದ್ಧ ಹೋಗಿದ್ದಾರಲ್ಲದೆ, ಅವರು ತಮ್ಮ ಹಾಗೂ ಕಾಂಗ್ರೆಸಿನ ಸಮಾಧಿ ಕುಳಿಯನ್ನೆ ಈ ಮೂಲಕ ತೋಡಿದ್ದಾರೆ. ಈ ಅತಿ ಪ್ರಾಮುಖ್ಯ ಅಖಿಲಭಾರತ ಪ್ರಶ್ನೆಯ ಕುರಿತು ಭಾರತ ಸರಕಾರವು ಧೈರ್ಯದಿಂದ ಕೂಡಲೇ ಮುಂದೊತ್ತಬೇಕೆಂದು ಹಿಂದುಗಳ ಬೇಡಿಕೆಯಿದೆ. ಇಲ್ಲವಾದರೆ, ಪಶ್ಚಿಮ ಪಂಜಾಬಿನ ಹಿಂದುಗಳ ಹಿತಸಂಬಂಧಗಳ ಕುರಿತು ಕಾಂಗ್ರೆಸ್ ನಾಯಕರು ಅಸಡ್ಡೆ ಪ್ರದರ್ಶಿಸಿದುದರ ಪರಿಣಾಮವಾಗಿ ಕೆಲವು ದಿನಗಳ ಮೊದಲು ಭಾರತ ರಾಜಧಾನಿ ಡಿಲ್ಲಿ ಮತ್ತು ನವಡಿಲ್ಲಿಯು ಯಾವರೀತಿ ಅವರ ಕೈತಪ್ಪಿ ಹೋಗುವುದರಲ್ಲಿತ್ತೋ, ಅದೇರೀತಿ ಇದೂ ಅವರ ಹತೋಟಿ ತಪ್ಪಿ ಹೋಗುವ ಸಂಭವವಿದೆ. ಸಾಮಾನ್ಯವಾಗಿ ಸರ್ವ ಹಿಂದುಗಳು, ಮುಖ್ಯತಃ ಸಾಧುಗಳು ಸಂತರು ಹಾಗೂ ಜುನಾಗಾಡಿಗೆ ತಾಗಿರುವ ಹಿಂದೂ ಸಂಸ್ಥಾನಗಳ ಅಧಿಪತಿಗಳು ಜಲಸಿಗರಾಗಿ ಕುಳಿತು, ತಮ್ಮ ಪುಣ್ಯಸ್ಥಳಗಳಾದ ಪ್ರಭಾಸ್‌ಪಟನ್, ಸೋಮನಾಥಪಟನ್, ಪವಿತ್ರ ಗಿರ್ನಾರ್ ಪರ್ವತಗಳಂತಹವನ್ನು ಅರಾಷ್ಟ್ರೀಯ ವಿದೇಶೀ ಮುಸ್ಲಿಂ ರಾಜನು, ತನ್ನ ಮುಸ್ಲಿಂ ಅಧಿಕಾರಿಗಳು, ಮುಸ್ಲಿಂ ಪೋಲೀಸ್ ಮತ್ತು ಸೇನೆಗಳಿಂದ ಈ ರೀತಿ ನಜೆಯಿಸಿ ಕೊಳ್ಳುವದನ್ನು ಎಂದಿಗೂ ನೋಡಿಕೊಂಡಿರಲಾರರು. ಹಿಂದೀ ಸರಕಾರದೊಡನೆ ನಮ್ಮ ವಿಜ್ಞಾಪನೆಯಿಷ್ಟೆ: ಪ್ರಧಾನಿ ಪಂಡಿತ ನೆಹರೂಗಳೇ ತನ್ನ ಪತ್ರಿಕಾ ಹೇಳಿಕೆಯಲ್ಲಿ ಒಪ್ಪಿಕೊಂಡಂತೆ ಡಿಲ್ಲಿ ಮತ್ತು ನವಡಿಲ್ಲಿಗಳ ಸಂಬಂಧವಾಗಿ ಹಿಂದೆ ಅವರಲ್ಲಿದ್ದ ಅವರ ಪದ್ಧತಿಯ, ಆ ಧೋರಣಾ ಸ್ವಭಾವದ ಅಸಡ್ಡೆಯಿಂದಾಗಿ ಅವರು ಕೊನೆಗೆ ಆಕಸ್ಮಾತ್ ದಿಗಿಲು ಬೀಳುವಂತಾಗದಿರಲಿ. ಪ್ರಭಾಸ್‌ಪಟನ್, ಸೋಮನಾಥ ಪಟನ್ (ಜುನಾಗಾಡ್) ಗಳಂತಹ ಹಿಂದುಗಳ ಪವಿತ್ರ ಸ್ಥಳಗಳ ಕುರಿತೂ ಹಾಗಾಗದಿರಲಿ. ಈ ಪವಿತ್ರ ಹಿಂದೂ ತೀರ್ಥ ಸ್ಥಳದ ರಕ್ಷಣೆಗಾಗಿ ಈ ವಿಷಯದಲ್ಲಿ ಕೂಡಲೇ ಕೈಹಾಕಬೇಕೆಂದು ಏಕಮಾತ್ರ ಸ್ವತಂತ್ರ ಹಿಂದೂ ಸಂಸ್ಥಾನವಾದ ನೇಪಾಳದ ಮಹಾರಾಜರನ್ನು ನಾವು ವಿಜ್ಞಾಪಿಸಿಕೊಳ್ಳುತ್ತೇವೆ. ಕೆಲವೇ ತಿಂಗಳ ಮೊದಲು ತಾನು ಕೈಕೊಂಡ ಅಖಿಲ ಭಾರತ ತೀರ್ಥ ಪರ್ಯಟನದ ವೇಳೆ ಪ್ರಭಾಸ್ ಪಟನವನ್ನೂ ಸಂದರ್ಶಿಸಿ ಬಂದಿದ್ದ ನೇಪಾಳದ ಮಾಜೀ ಪ್ರಧಾನ ಮಂತ್ರಿ ಮಹಾರಾಜಾ ರಾಜರ್ಷಿ ರಾಣಾ ಶ್ರೀ ಜುಧಾಶಾಮ್ ಶೆರ್ಜಂಗ್ ಬಹದ್ದೂರರಲ್ಲೂ ನಮ್ಮೀ ವಿಜ್ಞಾಪನೆಯಿದೆ.

× × ×

ಜುನಾಗಾಡ್ ಪಾಕಿಸ್ತಾನಕ್ಕೆ ಸೇರಿದುದು ಒಬ್ಬ ರೈತನ ದನವು ಮತ್ತೊಬ್ಬ ರೈತನ ಹಟ್ಟಿಯಲ್ಲಿ ಬಿಗಿಯಲ್ಪಟ್ಟಂತಾಗಿದೆ. ಈಗ ಭಾರತ—ಪಾಕಿಸ್ತಾನಗಳು ಪರಸ್ಪರ ಇದಿರು ಬೀಳುವ ಸಂದರ್ಭವೊದಗಿದೆ. ಆಗೋಸ್ತು 15ರ ವರೆಗೆ ಜುನಗಾಡ್ ಹಿಂದುಸ್ತಾನಕ್ಕೆ ಸೇರುವದೆಂಬ ಕುರಿತು ಯಾರಿಗೂ ಅನುಮಾನವಿರಲಿಲ್ಲ. ಆ ಕಾಲದಲ್ಲಿ ಜುನಗಾಡು ಪಾಕಿಸ್ತಾನಕ್ಕೆ ಸೇರಬಹುದೆಂದು ಹಬ್ಬಿದ್ದ ವಾರ್ತೆಯನ್ನು ಜುನಗಾಡ್ ಸರಕಾರೀ ರೇಡಿಯೋ ಸ್ಪಷ್ಟವಾಣಿಯಿಂದ ಅಲ್ಲಗಳೆದಿದ್ದಿತು. ಜುನಗಾಡಿನ ಘಟನಾ ಸಲಹೆಗಾರರು ಮಿಶ್ರ ಸಂಸ್ಥಾನಿಕರಂತೆಯೇ ಗವರ್ನರ್ ಜನರಲರು ಕರೆದಿದ್ದ ಅಂದಿನ ಸಭೆಗೆ ಹಾಜರಾಗಿದ್ದರು. ಹಿಂದೀ ಕೇಂದ್ರಕ್ಕೆ ಸೇರುವ ಉಪಕರಣ ಪತ್ರಿಕೆಯ ಕರಡು ಪ್ರತಿಯನ್ನೂ ಕೊಂಡು ಹೋಗಿದ್ದರು. ಆದರೆ ಅವರು ಜುನಗಾಡಿಗೆ ಮರಳಿದೊಡನೆಯೇ ಡಿಸ್‌ಮಿಸ್ ಮಾಡಲ್ಪಟ್ಟರು. ಜುನಗಾಡ್ ಆಕಸ್ಮಾತ್ ಪಾಕಿಸ್ತಾನಕ್ಕೆ ಸೇರಿತು. ಅದು ತಪ್ಪೆಂದು ಹಿಂದುಸ್ತಾನ್ ಸರಕಾರವು ಪಾಕಿಸ್ತಾನಕ್ಕೆ ಆಗಲೇ ತಿಳಿಸಿದ್ದಿತು. ಮೇಲಿಂದ ಮೇಲೆ ಎಚ್ಚರಿಕೆಯ ನೆನಪೋಲೆಗಳನ್ನು ಕೊಡುತ್ತಾ ಹೋದರೂ ಪಾಕಿಸ್ತಾನದ ಉತ್ತರವಿಲ್ಲ. ಈ ನಡುವೆ ವಿಶೇಷ ಘಟನೆ ನಡೆಯಿತು, ಜುನಾಗಾಡಿನ ಒತ್ತಿನ ಬಾಬರಿಯಾವಾಡ್ ಮತ್ತು ಮಂಗ್ರೋಲ್ ಸಂಸ್ಥಾನಗಳು ತನ್ನ ಸಾಮಂತರಾಜ್ಯಗಳೆಂದು ಜುನಾಗಾಡ್ ನವಾಬರವಾದ ಅವು ಅಧೀನ ಸಂಸ್ಥಾನಗಳಾಗಿದ್ದುದು ಬ್ರಿಟಿಷ್ ಸಾರ್ವಭೌಮತ್ವ ಶಾಸನದಂತೆ. ಅದೀಗ ರದ್ದಾಗಿರುವುದರಿಂದ ತಾವು ಸ್ವತಂತ್ರರೆನ್ನುತ್ತಾ ಇವೆರಡು ಸಂಸ್ಥಾನಗಳೂ ಭಾರತ ಕೇಂದ್ರಕ್ಕೆ ಸೇರಿವೆ. ಮಂಗ್ರೋಲ್ ಭಾರತ ಮತ್ತು ಪಾಕಿಸ್ತಾನ, ಎರಡಕ್ಕೂ ಸೇರಿದೆ ಎಂಬ ಚೋದ್ಯಕರ ಗುಟ್ಟೀಗ ಪ್ರಕಟ ಗೊಂಡಿದೆ. ಈ ಕಥೆ ಸ್ವಾರಸ್ಯದ್ದಿದೆ. ಭಾರತ ಸರಕಾರದ ಸಂಸ್ಥಾನೀ ಖಾತೆಯ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನರು ಕಳೆದ ತಿಂಗಳಲ್ಲಿ ಜುನಗಾಡಿಗೆ ಹೋಗಿದ್ದಾಗ ಮಂಗ್ರೋಲಿನ ಶೇಕರು ಅವರನ್ನು ಸಂದರ್ಶಿಸಿ ಅಧ್ಹಿವಿನಹಾಭಾರತದೊಡನೆಸೇರಿಕೊಳ್ಳುವ ಕರಾರಿಗೆ ಸಹಿಮಾಡಿದ್ದರು. ಅವರಿನ್ನು ಜುನಾಗಾಡಿನ ಬಾಲವಲ್ಲವೆಂದೂ, ಅವರು ಸ್ವೇಚ್ಛೆಯಿಂದ ಸೇರಿಕೊಂಡ ಸ್ವತಂತ್ರ ಮನುಷ್ಯನೆಂದೂ ಆಗ ಆಶ್ವಾಸನೆ ಕೊಡಲ್ಪಟ್ಟಿತು. ಕೂಡಲೇ ಶ್ರೀ ಮೆನನರು ಬೊಂಬಾಯಿಗೆ ಹೊರಟುಬಂದರು. ಸರಿ. ಶೇಕರು ಆ ಕರಾರಿಗೆ ಸಹಿಮಾಡಿದ, ಶ್ರೀ ಮೆನನರು ಹೊರಟುಹೋದ, ಒಂದೇ ಘಂಟೆಯೊಳಗೆ ಮಾಂಗ್ರೋಲಿನ ಶೇಕರ ತಲೆಯಮೇಲೆ ಜುನಾಗಾಡಿನ ಗನ್ನುಗಳು ಮತ್ತವರ ಸುತ್ತಲೂ ಜುನಾಗಾಡ್ ಸೇನೆಗಳು ಮುತ್ತಿಗೆ ಹಾಕಿದವು. ಅವರಲ್ಲಿಯೇ ಪಾಕಿಸ್ತಾನದೊಡನೆ ಜೋಡಣೆ ಗೊಳ್ಳುವ ಕರಾರಿಗೆ ಸಹಿಹಾಕಬೇಕಾಯಿತು; ಅಂತೆಯೇ ಭಾರತ ಕೇಂದ್ರದೊಡನಾದ ಜೋಡಣಾ ಕರಾರನ್ನು ರದ್ದುಪಡಿಸಿಕೊಂಡೆನೆಂದು ಡಿಲ್ಲಿಗೆ ಬಿಟ್ಟ ಟೆಲಿಗ್ರಾಮಿಗೂ ಸಹಿಹಾಕಿದರು. ಆನಂತರ ಮಾಂಗ್ರೋಲ್ ನಿಮ್ಮೊಂದಿಗೆ ಸೇರಿದುದು ಸಿಂಧುವಲ್ಲವೆಂದು ಭಾರತ ಸರಕಾರಕ್ಕೆ ಪಾಕಿಸ್ತಾನ ತಿಳಿಸಿದೆ. ಇದೇ ಅಕ್ಷೇಪವನ್ನು ಬಾಬರಿಯಾವಾಡಿನ ಕುರಿತೂ ರವಾನಿಸಿವೆ ಕೆಲವು ಪುಂಡರು ಒಳಗಡೆ ಪ್ರವೇಶಿಸಿ ಕೊಂಡರೆ ಕೊಡಹುತ್ತಿದ್ದರೆಂದು ಹಿಂದುಸ್ಥಾನ್ ಸರಕಾರವು ಬಾಬರಿಯಾವಾದಿನ ದೆಬಾನ್ ಎಂಬಲ್ಲಿಗೆ ತನ್ನ ಪೋಲಿಸ್ ದಳವನ್ನು ಕಳುಹಿಸಿದೆ. ಪಾಕಿಸ್ತಾನ್ ಸರಕಾರವು ಇದಕ್ಕೆ ಬಲವಾದ ನಿಷೇಧಸೂಚಿಸಿರುತ್ತದೆ. ಇದು ವರೆಗೂ ಭಾರತ ಸರಕಾರದ ಕೈಯಲ್ಲೇ ಇರುವ ಜುನಗಾಡಿನ ರೈಲ್ವೇ, ತಂತೀ ಇತ್ಯಾದಿ ಖಾತೆಗಳನ್ನು ಪಾಕಿಸ್ತಾನದ ಕೈಗೆ ತೆಗೆದುಕೊಳ್ಳಲು ಪಾಕಿಸ್ತಾನ್ ಸಂಚಾರ ಮಂತ್ರಿ ಅಬ್ದುಲ್ ರಾಬ್ ನಿಸ್ತಾರರು ಜುನಗಾಡಿಗೆ ಹೋಗಿದ್ದಾರೆ. ಸುಮಾರು 800ಮಂದಿ ಪಾಕಿಸ್ತಾನದ ಮಾಜೀ ಸೋಲ್ಜರರು ಸಂದರ್ಶಕರ ವೇಷದಿಂದ ಜುನಗಾಡಿನೊಳಗೆ ಸೇರಿದ್ದಲ್ಲದೆ ಗುಪ್ತಸಿದ್ಧತೆ ವಿವಿಧರೀತಿಯಿಂದ ನಡೆದಿದೆ. ಪ್ರಜಾಮತಕ್ಕೇ ತೀರ್ಮಾನವನ್ನು ಬಿಡಬೇಕೆಂಬ ಭಾರತ ಸರಕಾರದ ಸೂಚನೆಗೆ ಪಾಕಿಸ್ತಾನ್ ಲಕ್ಷ್ಯಕೊಡುತ್ತಿಲ್ಲ. ಹೀಗಾಗಿ ಚಿಂತಾಜನಕ ಪರಿಸ್ಥಿತಿಯು ಉಂಟಾಗಿದೆ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮತ • • • • ಮಂಗಳೂರು.

ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ–
ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ
ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಮಾನವಂತತನದ ಸೋಗಿನಿಂದ ನಡೆದ ಅನಾಚಾರ-ತಾರುಣ್ಯದುಬ್ಬಿ
ನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—
ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ,
ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ?
ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು?
ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.

ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟು ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇದಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬರೆದವರು:-ಶ್ರೀ. ಪಿ. ಶೀನ ಶೆಟ್ಟರು.
ಅಭಿನಯಿಸಲೂ ಓದಲೂ ತಕ್ಕುದಾದ ಚಿಕ್ಕ ನಾಟಕ.
ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ. ಮೈಜುಮ್ಮೆನಿಸುವ ಹಲವು ಸನ್ನಿವೇಶಗಳು!

ಬೆಲೆ ಬರೀ ರೂ. 1—4—0

ಕಿರಿಯರ ಪ್ರಪಂಚದ ಪ್ರಕಟಣೆ

ಕದಂಬ

ಹನ್ನೆರಡು ಕತೆಗಳ ಸಂಗ್ರಹ

ಬರೆದವರು:-ಶ್ರೀಮತಿ ಸರಸ್ವತಿಬಾಯಿ ರಾಜವಾಡೆಯವರು
('ಪ್ರಕಾಶ' ನಾಟಕದ ಅನುವಾದಕಿ; 'ಆಹುತಿ ಇತ್ಯಾದಿ ಕತೆಗಳು' ಕಥಾಗುಚ್ಛದ ಲೇಖಕಿ.)
ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ ಚಿತ್ರಿಸುವ ಕಥಾ ಸಂಗ್ರಹ. ಬೆಲೆ. 1—4—0

ಮನೆಮದ್ದು-*Home Remedies*

ಬೆಲೆ ರೂ. 2-0-0

ಬರೆದವರು:—ಡಾ| ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Valuble Service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ., ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಹೇಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ 1000 ಮನೆಮದ್ದುಗಳನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಬುಕ್ ಡಿಪೊ ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಆ ಟಿನ್ನಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು-ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ತ್ಲ 1ರ 10-0-0, ½ ರಾತ್ತ್ಲ 5-4-0, ¼ ರಾತ್ತ್ಲ 2-12-0.

ಎಲ್ಲಾ ಸಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ಗಿ ಬರದಲ್ಲಿ ... ತಕ್ಕದಾದ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿ... (2) ಬೊಂಬಾಯಿ ಏಜಂಟರು:—ಪೋಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 133, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಪದಂಶ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ, ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ-೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಶಿವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Ayurveda Oushadhalaya GADAG

Regd. No. M. 3618

ನವಯುಗ
ಚಂದಾ ನಿಯಮ:
(ಮುಂಗಡ)
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.

ಮೆನೇಜರ್,
ನವಯುಗ ಉಡುಪಿ,

ವರ್ಷ ೨೭
ವಾರ ೯

30-10-1947

NAVAYUGA WEEKLY, UDIPI.

FOUNDER: **Hon'ble Mr. A. B SHETTY**, Health Minister, Govt. of Madras.

Vol. 27
No. 9

"ರೈತರೇ, ನೀವು ಇಂದಿನ ಪರಿಸ್ಥಿತಿಯನ್ನು ಸರಿಯಾದ ದೃಷ್ಟಿಯಿಂದ ನೋಡಿ ತಿಳಿದು ಸಹಾಯಕ್ಕೆ ಮುಂದಾಗಿರಿ, ನಿಮ್ಮ ಉಳಿಕೆಯ ಧಾನ್ಯವನ್ನು ತಮ್ಮ ರೇಶನ್ ಆಹಾರಕ್ಕಾಗಿ ನೋಡುತ್ತಿರುವ ಹಸಿದ ಜನತೆಯೊಡನೆ ಹಂಚಿ ಉಣ್ಣಿರಿ".

THE CANARA MUTUAL Assurance Company, Limited.

Estd: 1935

H. O. **UDIPI**, S. Kanara.

BONUS DECLARED FOR 8 YEARS

We are glad to announce that we have declared a Bonus for 8 years from 1939 to 1946 both years inclusive as also an interim bonus for the next valuation period.

T. R. A. Pai,
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building,
Central Office, Udipi.

Branches at:

Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4೦೦ದ 8 ಬೊಟ್ಟು, ಸಣ್ಣ ಮಕ್ಕಳಿಗೆ 1೦೦ದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರದಲ್ಲಿ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:— ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮೆಸಿ; ಡಾ। ಕೆ। ಶೇಷಗಿರಿ ಶೆಟ್ಟಿ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧ ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:— ಹುಬ್ಬಳ್ಳಿ ಕಾರ್ವಾರ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಿಕ್ಕೋಡಿಯಲ್ಲಿ:— ಹುಂಬರವಾಡಿ ಸ್ಟೋರ್, ದಾವಣಗೆರೆ:— ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕವಲದಾನಿ, ಕೆಮಿಸ್ಟ, ಬಾವೇರಿ, ಬ್ಯಾಡ್ಗಿ.

Ayurveda Oushadalaya, GADAG CITY.

ನಿಮ್ಮಷ್ಟಕ್ಕೆ ನೀವು ಮನೆಯಲ್ಲೆ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ-

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0.

ನವಭಾರತ ಬುಕ್ ಡಿಪೊ, ಉಡುಪಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ—
ಪೋಸ್ಟ ಬಾಕ್ಸ್ ನಂಬ್ರ 10, ಉಡುಪಿ, ಇವರಿಗೆ ಬರೆಯಿರಿ.

ಪ್ರಧಾನ ಕಾರ್ಯಾಲಯ:- ಧಾರವಾಡ,

ಕಾಶ್ಮೀರದ ಭವಿಷ್ಯವೇನು?

ಹಿಮಾಲಯದೊತ್ತಿನಲ್ಲಿ—ಪೂರ್ವ ಪಂಜಾಬಿನ ಸಂಬಂಧವೊಂದನ್ನು ಬಿಟ್ಟರೆ ಮತ್ತೆಲ್ಲಾ ದಿಕ್ಕಿನಿಂದಲೂ ಪಾಕಿಸ್ತಾನದ ಮುತ್ತಿಗೆಯೊಳಗೆ—80%ಕ್ಕೆ ಮಿಕ್ಕಿ ಮುಸ್ಲಿಮ್ ಪ್ರಜೆಗಳೇ ಇರುವ ಕಾಶ್ಮೀರವು ಇದು ವರೆಗೆ ಯಾವ ಕೇಂದ್ರಕ್ಕೂ ಸೇರದೆ ತಟಸ್ಥವಾಗಿದೆ; ಪ್ರಜೆಗಳ ಅಭಿಮತದಂತೆ ವರ್ತಿಸುವ ಮನಸ್ಸುಮಾಡಿದೆ; ಪಾಕಿಸ್ತಾನವನ್ನು ಕೆರಳಿಸಿದೆ. ಈ ಸಂಬಂಧವಾಗಿ ಕಾಶ್ಮೀರ ಮತ್ತು ಪಾಕಿಸ್ತಾನ ಸರಕಾರಗಳು ಎಸೆದಾಡಿಕೊಂಡ ವಾಗ್ಬಾಣಗಳನ್ನೂ, ಕಾಶ್ಮೀರ ಪ್ರಜೆಗಳ ಅನನ್ಯ ನಾಯಕ ಶೇಕ್ ಅಬ್ದುಲ್ಲಾರ ಅಭಿಮತವನ್ನೂ ಇಲ್ಲಿ ಕೊಡಲಾಗಿದೆ.

ಕಾಶ್ಮೀರ ಸರಕಾರವು ಕಾಯಿದೇ ಆಝಮ್ ಜಿನ್ನಾ ಮತ್ತು ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತ್ ಆಲಿಗಳಿಗೆ ರವಾನಿಸಿದ ನಿಷೇಧ ತಂತಿ

"ಆಗೋಸ್ತು 14ರಲ್ಲಿ ಬ್ರಿಟಿಷ್ ಭಾರತದೊಡನೆ ಜ್ಯಾರಿಯಲ್ಲಿದ್ದ ಕೆಲವು ವಿಷಯಗಳ ಪ್ರಚಲಿತ ಒಪ್ಪಂದವನ್ನೇ ಮುಂದಕ್ಕೂ ಜ್ಯಾರಿಯಲ್ಲಿಡಬೇಕೆಂಬ ಒಡಂಬಡಿಕೆಯಿದ್ದರೂ ಕೂಡಾ, ಪಶ್ಚಿಮ ಪಂಜಾಬಿನಿಂದ ನಮಗೆ ಸರಬರಾಯಿಯಾಗತಕ್ಕ ಪೆಟ್ರೋಲು, ಎಣ್ಣೆ, ಆಹಾರ, ಉಪ್ಪು, ಸಕ್ಕರೆ ಮತ್ತು ವಸ್ತ್ರಗಳ ಮಟ್ಟಿಗೆ ಮಾತ್ರವಲ್ಲ; ಟಪ್ಪಾಲುಕಾರ್ಯ ಕಲಾಪಗಳಲ್ಲಿ ಕೂಡಾ ಆತಂಕಗಳೇ ನಮಗೊದಗುತ್ತಿವೆ. ಸೇವಿಂಗ್ಸ್ ಬೇಂಕುಗಳ ಲೆಕ್ಕಾಚಾರ ವ್ಯವಸ್ಥೆಗಳು ನಿರಾಕರಿಸಲ್ಪಟ್ಟಿವೆ; ಪೋಸ್ಟಲ್ ಸರ್ಟಿಫಿಕೇಟುಗಳಿಗೆ ಹಣ ದೊರೆಯುತ್ತಿಲ್ಲ; ಪಶ್ಚಿಮ ಪಂಜಾಬಿನ ಬೇಂಕುಗಳಿಗೆ ಕೊಟ್ಟ ಚೆಕ್ಕುಗಳು ಮನ್ನಿಸಲ್ಪಟ್ಟಿಲ್ಲ, ಲಾಹೋರಿನ ಕರೆನ್ಸಿ ಆಫೀಸುಗಳಿಂದ ಬರತಕ್ಕ ಹಣಬಾರದದೆಸೆಯಿಂದಾಗಿ ಇಂಪೀರಿಯಲ್ ಬೇಂಕಿಗೆ ಕೂಡಾ ತನ್ನ ಪಾಲಿನ ಸಂಬಾಯ ವಹಿವಾಟನ್ನು ನಡೆಸುವದು ಕಷ್ಟವಾಗಿದೆ. ಸಂಸ್ಥಾನದಲ್ಲಿ ರಜಿಸ್ಟರ್ ಮಾಡಲ್ಪಟ್ಟಿರುವ ಮೋಟಾರು ಬಂಡಿಗಳು ರಾವಲ್ಪಿಂಡಿಯಲ್ಲಿ ತಡೆದಿಡಲ್ಪಟ್ಟಿವೆ. ಸಾಯಲ್ಕೋಟದಿಂದ ಜಮ್ಮುವಿಗಿದ್ದ ರೈಲ್ವೇ ಲೈನನ್ನೀಗ ನಿಲ್ಲಿಸಲಾಗಿದೆ.

ಪಟಾಕೋಟದಿಂದ ಸಯಾಲ್ಕೋಟಕ್ಕೆ ಹೊರಟಿದ್ದ ಒಂದುಲಕ್ಷ ಮುಸ್ಲಿಮ್ ನಿರಾಶ್ರಿತರ ಪ್ರಯಾಣದಲ್ಲಿ ನಮ್ಮ ಸಂಸ್ಥಾನವು ಸುರಕ್ಷಿತ ರಕ್ಷಣೆಯನ್ನಿತ್ತಿದ್ದಿತು. ಆದರೂ ಸಂಸ್ಥಾನದ ವಿಜ್ಞಾಪನೆಯಂತೆ ಕೊಹಾಲಾಕ್ಕೆ ಹೋಗಿದ್ದ 200 ಕಾಶ್ಮೀರ ರಾಷ್ಟ್ರೀಯರಲ್ಲಿ 180ಜನರನ್ನು ರಾವಲ್ಪಿಂಡಿಯವರು ಕೊಂದುಹಾಕಿದ್ದರು. ದೂರಸಿಡಿತದ ಆಧುನಿಕ ಕೋವಿಗನ್ನುಗಳಿಂದ ಸುಸಜ್ಜಿತರಾದ ಜನರು ಸಹಸ್ರ ಸಂಖ್ಯೆಯಲ್ಲಿ ಫ್ರಂಟ್‌ನೊಳಗೆ ನುಗ್ಗಿಬಂದು ಮುಸ್ಲಿಮೇತರ ಜನರ ಮೇಲೆ ಭಯಂಕರ ಕೃತ್ಯಗಳನ್ನು ನಡೆಸಿದ್ದಾರೆ.

ಪಾಕಿಸ್ತಾನ್ ಆಕಾಶವಾಣಿಯು ರಂಗು ಹಚ್ಚಿದ, ದ್ರೋಹಾತ್ಮಕ ಸುಳ್ಳು ಪ್ರಚಾರಗಳ ಕಂತೆಕಂತೆಗಳನ್ನೇ ಬಿಚ್ಚಲು ಲೈಸೆನ್ಸ್ ಪಡೆದಿರುವಂತೆ ಕಾಣುತ್ತಿವೆ. ಕಾಶ್ಮೀರಕ್ಕೆ ಬೆದರಿಕೆ ಹಾಕುವುದು ಮಾತ್ರವಲ್ಲ, ಕಾಶ್ಮೀರದೊಳಗೇನೇ ಸಶಸ್ತ್ರ ಗಲಭೆಗಳನ್ನು ಹೂಡುವದಕ್ಕಾಗಿಯೂ ಸಣ್ಣ ಸಾಮಂತ ರಾಜ್ಯಗಳನ್ನು ಎತ್ತಿಕಟ್ಟಲಾಗಿದೆ. ಪಾಕಿಸ್ತಾನದೊಳಗಿರುವ ಖಾಸಗೀ ಜನರನ್ನು ಕೂಡಾ, ಪಾಕಿಸ್ತಾನ್ ಟಪ್ಪಾಲಾಫೀಸಿನ ನಿಯಂತ್ರಣವೇನೂ ಇಲ್ಲದೆ ಕಾಶ್ಮೀರದೊಳಗಡೆಗೇನೆ ಅಸಹ್ಯ ಬೆದರಿಕೆಗಳ ತಂತಿಕೊಡಲು ಬಿಡಲಾಗಿದೆ. ಸತ್ಯಕ್ಕೂ ಪಾಕಿಸ್ತಾನದ ಜನರೇ ನಡೆಯಿಸಿದ್ದ ದುಷ್ಕೃತ್ಯಗಳ ಆರೋಪವನ್ನು ಕಾಶ್ಮೀರ ಸರಕಾರದ ಮೇಲೆ ಹೇರಲಾಗಿದೆ. ಸಯಾಲಕೋಟದಿಂದ ನಮ್ಮ ಗ್ರಾಮಗಳ ಮೇಲೆ ಧಾಳಿ ನಡೆಸಲಾಗಿದೆ.

ಕೊನೆಯಲ್ಲಿ, ಇವೆಲ್ಲಾ ಕೃತ್ಯಗಳು ಸ್ಥಳೀಯ ಅಧಿಕಾರಿಗಳಿಗೆ ಗೊತ್ತಿದ್ದು, ಮತ್ತವರ ಪ್ರೇರಣೆಯ ಮೂಲಕವೇ ನಡೆದಿವೆಯಲ್ಲದೆ ಬೇರಿಲ್ಲವೆಂದೇ ಕೊನೆಗನ್ನದೆ ಕಾಶ್ಮೀರ ಸರಕಾರಕ್ಕೆ ನಿರ್ವಾಹವಿಲ್ಲ. ಇವೆಲ್ಲಾ ಕೃತ್ಯಗಳನ್ನು ಕಾಶ್ಮೀರ ಸರಕಾರವು ಪ್ರತ್ಯಕ್ಷ ವೈರಸಾಧನೆಯೆಂದಲ್ಲವಾದರೂ ಅತೀವ ವೈಮನಸ್ಸೆಂದು ಗಣಿಸುತ್ತದೆ. ಕೊನೆಯದಾಗಿ, ಎಂತಹ ಬೆಲೆತೆತ್ತಾದರೂ ಕಾಶ್ಮೀರ ಸರಕಾರವು ಪಾಲಿಸಲು ಬದ್ಧವಿರುವ ಅದರ ಪವಿತ್ರ ಕರ್ತವ್ಯವಾಗಿರುವ ಜನತೆಯ ಪ್ರಾಣ ಮತ್ತು ಸೊತ್ತುಗಳಿಗೆ ಮಹತ್ತಾದ ಅಪಾಯಗಳನ್ನೊಡ್ಡಿರುವ ಇಂತಹ ಧೋರಣೆಯನ್ನು ಇನ್ನು ಮುಂದೆ ಸಹಿಸಿಕೊಂಡಿರುವುದು ಎಷ್ಟಕ್ಕೂ ಅಸಾಧ್ಯವೆಂಬುದನ್ನು ನಮ್ಮ ಸರಕಾರವು ಸ್ಪಷ್ಟಪಡಿಸಲಿಚ್ಛಿಸುತ್ತದೆ. ಆದ್ದರಿಂದ ಪಾಕಿಸ್ತಾನದ ಗವರ್ನರ್ ಜನರಲರೂ, ಪ್ರಧಾನ ಮಂತ್ರಿಯೂ ಈ ಸಂಗತಿಯ ಕಡೆಗೆ ಗಮನ ಕೊಡಬೇಕೆಂದೂ ಈ ಆತಂಕಗಳ ನಿವಾರಣೆಗಳನ್ನು ನಿಲ್ಲಿಸಬೇಕೆಂದೂ ನಾವು ಕೇಳಿಕೊಳ್ಳುತ್ತೇವೆ. ದುರ್ದೈವವಶಾತ್ ಈ ವಿಜ್ಞಾಪನೆಯು ಮನ್ನಿಸಲ್ಪಡದಿದ್ದಲ್ಲಿ, ನಾವು ನಮ್ಮ ಮೂಲಭೂತ ಹಕ್ಕುಗಳ ಮೇಲಿನ ಕಂಟಕಗಳನ್ನು ಪ್ರತಿಭಟಿಸಲು ಬೇರೆಯವರಿಂದ ಮೈತ್ರೀ ಸಹಾಯ ಯಾಚಿಸುವುದು ನ್ಯಾಯವೆಂಬುದನ್ನು ಪಾಕಿಸ್ತಾನದ ಗವರ್ನರ್ ಜನರಲ್ ಮತ್ತು ಪ್ರಧಾನಿಗಳೊಪ್ಪುವರೆಂದು ನಾವು ಪೂರ್ಣ ಆಶೆ ಕಟ್ಟಿಕೊಂಡಿದ್ದೇವೆ"

ಕಾಶ್ಮೀರ ಪ್ರಧಾನಿಗೆ ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತರು ಬಿಟ್ಟ ತಂತೀ ಎಚ್ಚರಿಕೆ

"ಒಕ್ಟೋಬರ್ 15ರಲ್ಲಿ ನೀವು ಬಿಟ್ಟಿದ್ದ ತಂತಿಯಲ್ಲಿದ್ದ ವಿಷಯ ಮತ್ತು ಅದರ ಸ್ವರಭಾರವನ್ನು ನೋಡಿ ನಾವು ಬೆರಗಾದೆವು. ನಾವು ಒಕ್ಟೋಬರ್ 15ರಲ್ಲಿ ಬಿಟ್ಟಿದ್ದ ತಂತಿಯಲ್ಲಿ ನಮೂದಿಸಿದ್ದ ಕೆಲವು ವಿಶಿಷ್ಟ ದೂರುಗಳ ಕುರಿತು ಕೂಡಲೇ ಪರಿಣಾಮಕಾರೀ ಕಾರ್ಯಕ್ರಮ ಕೈಕೊಳ್ಳುವ ಬದಲಿಗೆ, ಕಾಶ್ಮೀರದೊಳಕ್ಕೆ ಪಾಕೀಸ್ತಾನೀ ಜನರು ನುಗ್ಗುತಿದ್ದಾರೆಂಬ ಒಣ ಆರೋಪಗಳನ್ನು ಹೇರಿಸಿರುವುದಲ್ಲದೆ, ಸರಹದ್ದಿನ ಜನರು ಸಂಬಂಧ ಕೆಡಿಸುತಿದ್ದಾರೆಂದೂ ಆರೋಪಿಸಿರುವಿರಿ. ನಾವು ಇವೆಲ್ಲಾ ಆರೋಪ ಹಾಗೂ ಅಪರಾಧಾರೋಪಣೆಗಳನ್ನು ಸುದೃಢವಾಗಿ ಮತ್ತು ಸುಸ್ಪಷ್ಟವಾಗಿ ಅಲ್ಲಗಳೆಯುತ್ತೇವೆ. ಕಾಶ್ಮೀರ ಮತ್ತು ಪಾಕಿಸ್ತಾನಗಳೊಳಗೆ ಉದ್ಯೋಗಾರ್ಥವಾಗಿ ಜನರು ಪದ್ಧತಿಯಂತೆ ಬರುವುದು ಹೋಗುವುದೇನೋ ನಡೆದಿದೆ. ಆದರೆ ಸಂಸ್ಥಾನದ ಗಡಿಯೊತ್ತಿನ ಪಾಕಿಸ್ತಾನ್ ಕ್ಷೇತ್ರಗಳಲ್ಲಿರುವವರಿಗೆ ಶಸ್ತ್ರೋಪಕರಣಗಳ ಸರಬರಾಯಿಯಾಗಿದೆ ಎಂಬುದಾಗಲೀ, ಕಾಶ್ಮೀರದ ಗಡಿಯೊಳಗೆ ಸಶಸ್ತ್ರ ಜನರು ನುಗ್ಗಿದ್ದಾರೆಂಬುದಾಗಲೀ ಸರಿಯಲ್ಲ. ಬದಲಿಗೆ ಕಾಶ್ಮೀರದಲ್ಲಿರುವ ಮುಸ್ಲಿಮರ ಮೇಲೆ ಕಠೋರ ದಬ್ಬಾಳಿಕೆಗಳು ನಡೆಯುತ್ತಿರುವ, ಹಾಗೂ ಸಶಸ್ತ್ರ ಡೋಗ್ರಾ ಸಂಗಡಿಗರು ಮತ್ತು ಪಂಜಾಬಿನಿಂದಾಗಮಿಸಿರುವ ಮುಸ್ಲಿಮೇತರ ನಿರಾಶ್ರಿತರು ಪಾಕಿಸ್ತಾನ್ ಗಡಿಕ್ಷೇತ್ರದೊಳಗೆ ನುಗ್ಗಿರುವ ನಿದರ್ಶನಗಳು ಹೇರಳವಿವೆ. ತೀರಾ ಇತ್ತೀಚೆಗಿನ ಒಂದು ವರದಿಯೆಂದರೆ ಡೋಗ್ರಾ ಸೇನೆಯ ಸೋಲ್ಜರರು ಚಮ್ಮಾಖುದಾಳ ಗ್ರಾಮದ ಮೇಲೆ ಧಾಳಿ ನಡಿಸಿ, ಅಲ್ಲಿಯ ಪೋಲೀಸರು ಮತ್ತು ಅವರೊಳಗೆ ಗುಂಡೇಟುಗಳಾಗಿ, ಹೆಡ್ ಕಾನ್‌ಸ್ಟೇಬ್ಲನನ್ನು ಕೊಂದಿದ್ದರು. ಸಶಸ್ತ್ರ ಸಿಖ್ಖರು ಮತ್ತು ರಾಷ್ಟ್ರೀಯ ಸೇವಕ ಸಂಘಕ್ಕೆ ಸೇರಿದ ಹಿಂದುಗಳು ದೊಡ್ಡ ಸಂಖ್ಯೆಯಲ್ಲಿ ಕಾಶ್ಮೀರದೊಳಗೆ ಹೋಗಿ ಸೇರಿಕೊಂಡಿದ್ದಾರೆ; ಪೂರ್ವ ಪಂಜಾಬಿನಲ್ಲಿ ತಾವು ಮಾಡುತ್ತಿರುವ ಮುಸ್ಲಿಮರನ್ನು ಕೊಲ್ಲುವದು, ದಿಗಿಲುಗೊಳಿಸುವದು ಮತ್ತು ಹೊರಗಟ್ಟುವದೇ ಮೊದಲಾದ ಹಂಚಿಕೆಗಳನ್ನು ಹೂಡುವುದೇ ಅವರ ಉದ್ದೇಶ. ಸತ್ಯಸ್ಥಿತಿಯೆಂದರೆ ಸಂಸ್ಥಾನದೊಳಗಿಂದ ಒಂದು ಮುಸ್ಲಿಮ್ ನಿರಾಶ್ರಿತ ತಂಡ ಇಷ್ಟರಲ್ಲೇ ಹೊರಟಿದೆ. ಕಾಶ್ಮೀರದ ಮುಸ್ಲಿಮರ ಮೇಲೆ ನಡೆಯುವ ದಬ್ಬಾಳಿಕೆ ಮತ್ತು ಅವರನ್ನು ಒತ್ತಾಯದಿಂದ ಹೊರಗಟ್ಟುತ್ತಿರುವ ಸ್ಥಿತಿಗಳ ಕುರಿತು ಪಾಕಿಸ್ತಾನ್ ಸರಕಾರವು ಅತ್ಯಂತ ಗಂಭೀರವಾಗಿ ಆಲೋಚಿಸಬೇಕು.

"ಸಹಾಯ ಕೇಳುವ" ನಿಮ್ಮ ಬೆದರಿಕೆಯನ್ನು ಕೇಳಿ ನಾವು ಬೆರಗಾದೆವು; ಹೊರರಾಷ್ಟ್ರವೊಂದರ ಸಹಾಯವನ್ನೆಂದೇ ಅದರ ಅರ್ಥವಾಗಿರಬೇಕು. ನೀವಾರೀತಿ ಕೋರುವ ಹೊರಗಿನ ಸಹಾಯದ ಉದ್ದೇಶವೆಂದರೆ, ನಿಮ್ಮ ಸಂಸ್ಥಾನದ ಸೇಕಡಾ ... ಷ್ಟಿರುವ ಮುಸ್ಲಿಮ ಮತ್ತಿತರರ ಸ... ಶ್ರುತ ದೃಢ ಸಂಕಲ್ಪಕ್ಕೆವಿರುದ್ಧವಾಗಿ ... ರತ ವಸಾಹತಿನೊಂದಿಗೆ ಜೋಡಿಸಿಕೊಳ್ಳುವರೆ ಅನುಕೂಲವಾಗುವಂತೆ ಮುಸ್ಲಿಮರ ಮೇಲಿನ ದಬ್ಬಾಳಿಕೆ ಕಾಂಡವನ್ನು ಸಂಪೂರ್ಣಗೊಳಿಸುವದೊಂದೇ. ನಿಮ್ಮ ಧೋರಣೆ ಬದಲಾಗದಿದ್ದರೆ, ನಿಮ್ಮ ಧೋರಣೆಯನ್ನು ಜ್ಯಾರಿಗೆ ತರಲು ನೀವೀಗ ಕೈಕೊಂಡಿರುವ ಸಿದ್ಧತೆಗಳನ್ನೂ ಮತ್ತು ಪ್ರತ್ಯಕ್ಷ ಹಂಚಿಕೆಗಳನ್ನೂ ಕೂಡಲೆ ನಿಲ್ಲಿಸದಿದ್ದರೆ, ಭೀಕರ ಘಟನೆಗಳು ಸಂಭವಿಸಬಹುದೆಂದೂ ಮತ್ತದಕ್ಕೆ ನೀವೊಬ್ಬರೇ ಜವಾಬ್ದಾರರಾಗುವಿರೆಂದೂ ನಾವೀ ಸಂದರ್ಭದಲ್ಲಿ ಅತ್ಯಾಗ್ರಹಪೂರ್ವಕವಾಗಿ ನಿಮ್ಮ ಲಕ್ಷ್ಯವನ್ನೆಳೆಯಲೇ ಬೇಕು.

ಪೆಟ್ರೋಲು, ವಸ್ತ್ರ ಮತ್ತು ಆಹಾ...

(೧೧ನೇ ಪುಟ ನೋಡಿರಿ)



Approved firm by the Govt. of Mysore
Certified by the Agent of the Govt. of Ceylone & India.

ವಾರ್ಡನ್

1946ರಲ್ಲು ಹೊಸ ದಾಖಲೆಯ ಶಿಖರಕ್ಕೇರಿದೆ.

ಸ್ವೀಕರಿಸಲ್ಪಟ್ಟ ವ್ಯವಹಾರ ... ... ರೂ. 2,04,00,000

ಪೂರ್ಣಗೊಳಿಸಲ್ಪಟ್ಟ ವ್ಯವಹಾರ ... ... ರೂ. 1,72,00,000

ವಾರ್ಡನಿನ ಪ್ರಗತಿಪರ ಜೀವನದಲ್ಲಿ ಇದೊಂದು ಮರೆಯಲಾಗದ ಉಚ್ಚ ಸಾಹಸ.

ಇಂತಹ ದಾಖಲೆಗೆ ನೆರವಾದ ಸ್ವಪರ ರಾಷ್ಟ್ರಗಳ ಪೊಲಿಸಿದಾರರಿಗೂ ಏಜಂಟರಿಗೂ ಕಂಪೆನಿಯು ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತದೆ.

ಶಿವಪ್ರಸಾದ ತಾಕರ್ — ಮೆನೇಜಿಂಗ್ ಡೈರೆಕ್ಟರ್.

ಎಮ್. ಸುಂದರರಾಮ ಶೆಟ್ಟಿ — ಏಜನ್ಸಿ ಮೇನೇಜರ್.

ಮಂಗಳೂರು ಶಾಖೆ.

ಕೆ. ಪಿ. ಭವಾನಿಶಂಕರ ಸೆಟ್ಟಿ
ಬ್ರಾಂಚ್ ಸೆಕ್ರೆಟರಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಪದತಪಿ ಋತುಸ್ರಾವವಾಗುತ್ತದೆ ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ... ದಾರು ಮುಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5; ಅಧಿಕಾಧಿಕ ಸ್ಪೆಶ್ಯಲ್ ರೂ. 8/- [ವಿ. ಪಿ. ಖರ್ಚು ಪ್ರತ್ಯೇಕ.]

Mrs D. DEVEE, F. DS (N. ...)
Tollygunge CALCUTTA
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಮೈಸೂರು ಪ್ರಜಾಪ್ರತಿನಿಧಿ ಮಂತ್ರಿ ಮಂಡಲ

ಮೈಸೂರಿನ ಸರಕಾರ ಮತ್ತು ಕಾಂಗ್ರೆಸಿನೊಳಗಾದ ಸಂಧಿ ಶರ್ತಗಳಂತೆ ನಡುಗಾಲ ಪ್ರಜಾ ಪ್ರತಿನಿಧಿ ಮಂತ್ರಿಮಂಡಲ ರಚನೆಗೊಂಡಿದೆ. ಶ್ರೀಗಳಾದ ಕೆ. ಚೆಂಗಲರಾಯ ರೆಡ್ಡಿ, ಎಚ್. ಸಿ. ದಾಸಪ್ಪ, ಕೆ. ಟಿ. ಭಾಷ್ಯಮ್ ಅಯ್ಯಂಗಾರ್, ಎಚ್. ಸಿದ್ದಯ್ಯ, ಟಿ. ಮರಿಯಪ್ಪ, ಆರ್. ಚೆನ್ನಿಗರಾಮಯ್ಯ, ಡಿ. ಯಚ್. ಚಂದ್ರಶೇಖರಯ್ಯ, ರಾಜಸೇವಾಸಕ್ತ ಪಿ. ಸುಬ್ರಮ ಶೆಟ್ಟಿ, ಮತ್ತು ಮಿ. ಮಹಮ್ಮದ್ ಶರೀಫ್ ಈ ಒಂಭತ್ತು ಮಂದಿ ಹೊಸ ಮಂಡಲಿಯಲ್ಲಿದ್ದಾರೆ. ಮೊದಲಿನ ಆರುಮಂದಿ ಕಾಂಗ್ರೆಸ್ ಮಂತ್ರಿಗಳು; ಕೊನೆಯ ಮೂವರು ಕಾಂಗ್ರೆಸೇತರರು. ಶ್ರೀ. ಕೆ. ಚೆಂಗಲರಾಯ ರೆಡ್ಡಿಗಳು ಮುಖ್ಯ ಮಂತ್ರಿ ದಿವಾನರು ಈ ಮಂತ್ರಿಮಂಡಲಿಯಲ್ಲಿರಬೇಕು.

ಮೈಸೂರಿನ ಚರಿತ್ರೆಯಲ್ಲಿ ಪ್ರಜಾಪ್ರಾತಿನಿಧ್ಯವಿರುವ ಮತ್ತು ಶಾಸನಸಭೆಗೆ ಹೊಣೆಯಾಗಿರುವ ಮಂತ್ರಿ ಸಮಿತಿಯು ಪಡೆಯಿಸಿದುದು ಇದೇ ಮೊದಲು. ಸ್ವಾತಂತ್ರ್ಯ ಹೋರಾಟದ ಸಮುದ್ರ ಮಂಥನದಲ್ಲಿ ಮಹಾ ವಿಷದನಂತರ ಹುಟ್ಟಿದ ಕಾಮಧೇನುವಿದು; ಇನ್ನು ಕೊನೆಯದಾಗಿ ಪೂರ್ಣ ಪ್ರಜಾ ಪ್ರಭುತ್ವವೆಂಬ ಅಮೃತವೊಂದೇ ಬಾಕಿ. ಮೈಸೂರಿನಲ್ಲಿ ನವಯುಗಾರಂಭ; ಏಕ ಕರ್ನಾಟಕದ ಅರುಣೋದಯ!

ಮೈಸೂರಿನ ಭವಿಷ್ಯಕ್ಕೆ ನವಗ್ರಹರಂತಿರುವ ಈ ಒಂಭತ್ತು ಮಂತ್ರಿಗಳ ಪೈಕಿ, ಉದ್ಯೋಗವಾರಾಗಿ ಹೇಳುವುದಾದರೆ ಆರುಮಂದಿ ವಕೀಲರು; ಒಬ್ಬ ವ್ಯಾಪಾರಿ. ಓರ್ವ ಮುಸ್ಲಿಂ, ಓರ್ವ ಹರಿಜನ, ಮಂತ್ರಿಗಳಿದ್ದು ಜಾತೀವಾರು ರಿಯಾಯತಿಗಳನ್ನೂ ಪಾಲಿಸಲಾಗಿದೆ. ಸಂಸ್ಥಾನದ ಕೋಮುವಾರು ಪದ್ಧತಿಗಳನ್ನು ಮನ್ನಿಸಿ ಅಬ್ರಾಹ್ಮಣ, ಬ್ರಾಹ್ಮಣ, ಲಿಂಗಾಯಿತ, ಕುರುಬ ಸಮಾಜಗಳ ... ರಂಡುಬರುತ್ತಿದೆ.

ಇದೇ ಒಕ್ಟೋಬರ್ ತಾ. 29ಕ್ಕೆ ಹೊಸ ಮಂತ್ರಿಗಳು ಮಹಾ ರಾಜರ ಸಮ್ಮುಖದಲ್ಲಿ ಪ್ರತಿಜ್ಞಾಬದ್ಧರಾಗುವರೆಂದೂ ಖಾತೆಗಳ ವಿತರಣೆಯು ಅದೇ ದಿನ ಪ್ರಕಟಗೊಳ್ಳುವದೆಂದೂ ತಿಳಿದು ಬರುತ್ತದೆ. ಈ ನೇಮಕಗಳಿಂದ ಸಂಸ್ಥಾನದ ಜನತೆ ಸಮಾಧಾನಗೊಂಡಿದೆ.

ಇವರು ಯಾರು?

ಶ್ರೀ. ಕೆ. ಚೆಂಗಲರಾಯ ರೆಡ್ಡಿ

ಮೈಸೂರಿನ ಸಂಸ್ಥಾನ ಕಾಂಗ್ರೆಸಿನ ಅಧ್ಯಕ್ಷರು ಮತ್ತು ಈ ಬಾರಿಯ ಸ್ವಾತಂತ್ರ್ಯ ಹೋರಾಟದ ಸೇನಾನಿ. ಪ್ರಾಯ 45. ಕೋಲಾರ ಜಿಲ್ಲಾ ಬಾಗೇಪಲ್ಲಿ (?) ತಾಲೂಕಿನ ಕೈಸಂಬಳ್ಳಿ ಎಂಬಲ್ಲಿ 1902ರಲ್ಲಿ ಇವರ ಜನನ. ... ಕಾಲೇಜು ಶಿಕ್ಷಣ ಹೊಂದಿ 1926ರಲ್ಲಿ ಬಿ. ಎಲ್. ಡಿಗ್ರಿ ಸಂಪಾದಿಸಿಕೊಂಡಿದ್ದರು. 1930ರಲ್ಲಿ ಮೈಸೂರು ಕೌನ್ಸಿಲಿಗೆ ಕೋಲಾರ ಜಿಲ್ಲೆಯಿಂದಾರಿಸಲ್ಪಟ್ಟಿದ್ದರು. 1938ರಲ್ಲೊಮ್ಮೆ ಮೈಸೂರು ಸಂಸ್ಥಾನಿಕ ಕಾಂಗ್ರೆಸಿನ ಅಧ್ಯಕ್ಷರಾದರು. ವಕೀಲನ ಮೆದುಳು, ಸೇನಾನಿಯ ಹೃದಯ, ಸೋಲ್ಜರನ ರಕ್ತವುಳ್ಳ ಮನುಷ್ಯನಾದ್ದರಿಂದ ಸ್ವಾತಂತ್ರ್ಯ ಚಳವಳಗಳಿಗಾಗಿ ಹಲವು ಬಾರಿ ಜೈಲುವಾಸವನ್ನನುಭವಿಸಿದ್ದರು. 'ರಾಜ್ಯಾಂಗ ಸುಧಾರಣಾ ಸಮಿತಿ'ಯ ಸದಸ್ಯರಾಗಿದ್ದರು. ಭಾರತದ ಘಟನಾ ಸಮಿತಿಯ ಸದಸ್ಯರಾಗಿದ್ದಾರೆ. ಕೆಲಕಾಲ ದಿನಪತ್ರಿಕೆ 'ಜನವಾಣಿ'ಯ ಸಂಪಾದಕರೂ ಆಗಿದ್ದರು. ಪ್ರಭಾವಶಾಲಿ ನಾಯಕರೆನ್ನಿಸಿದ್ದರು; ಯೋಗ್ಯ ಪ್ರಧಾನಿ, ಸಮರ್ಥ ಆಡಳಿತೇಗಾರರೆನ್ನಿಸಿಯಾರೆಂಬ ಆಶೆಯಿದೆ.

ಶ್ರೀ. ಯಚ್. ಸಿ. ದಾಸಪ್ಪ

ಇವರು ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಕಲಿತು ಬೊಂಬಾಯಿಯಲ್ಲಿ ಕಾನೂನು ಪರೀಕ್ಷೆಕೊಟ್ಟು ಬೆಂಗಳೂರು ಮತ್ತಾ ಮೇಲೆ ಮೈಸೂರಿನಲ್ಲಿ ವಕೀಲಿ ಉದ್ಯೋಗ ನಡಿಸಿಕೊಂಡಿದ್ದರು. 1937ರಲ್ಲಿ ಪ್ರತಿನಿಧಿ ಎಸೆಂಬ್ಲಿಯಿಂದ ಕೌನ್ಸಿಲಿಗಾರಿಸಲ್ಪಟ್ಟಿದ್ದರು. 1937ರಲ್ಲಿ ಪ್ರಜಾಪಕ್ಷ ಬರ್ಖಾಸ್ತಾಗಿ ಮೈಸೂರು ಸಂಸ್ಥಾನಿಕ ಕಾಂಗ್ರೆಸ್ ಸ್ಥಾಪಿಸಲ್ಪಟ್ಟಾಗ ಅದನ್ನು ಸೇರಿಕೊಂಡು 1939ರಲ್ಲದರ ಅಧ್ಯಕ್ಷರಾದರು. ಕೆಲಕಾಲ ವಾರ್ಧಾದಲ್ಲಿ ಗಾಂಧೀ ಆಶ್ರಮವಾಸಿಯಾಗಿದ್ದವರು. ಇವರ ಗುಣ ನಡತೆಗಳು ಗಾಂಧಿಜೀಯ ಶಿಫಾರಸಿಗೊಳಗಾಗಿವೆ. ರಾಷ್ಟ್ರಕ್ಕಾಗಿ ಹಲವು ಬಾರಿ ಕಾರಾಗೃಹವನನುಭವಿಸಿದ್ದಾರೆ.

ಶ್ರೀ. ಕೆ. ಟಿ. ಭಾಷ್ಯಮ್

1919ರಲ್ಲಿ ವಕೀಲೀ ಪರೀಕ್ಷೆ ಕೊಟ್ಟು ಬೆಂಗಳೂರಿನಲ್ಲಿ ಉದ್ಯೋಗವಾರಂಭಿಸಿ ವರ್ಚಸ್ಸು ಗಳಿಸಿಕೊಂಡವರು ಶ್ರೀ ಭಾಷ್ಯಮ್ ಅಯ್ಯಂಗಾರರು 1922ರಲ್ಲಿ ಭಾರತ ರಾಷ್ಟ್ರೀಯ ಸಭೆಯನ್ನು ಸೇರಿಕೊಂಡು ಅಂದಿನಿಂದೀವರೆಗೂ ಮೈಸೂರು ಸಾರ್ವಜನಿಕ ಜೀವನದ ಮುಂಭಾಗದಲ್ಲಿ ರಾಜಿಸುತಿದ್ದಾರೆ. 'ಬೆಂಗಳೂರು ಟೆಕ್ಸ್‌ಟೈಲ್ಸ್ ಲೇಬರ್ ಯೂನಿಯನ್' ಸ್ಥಾಪನೆಯ ಕಾರಣಕರ್ತರಿವರೇ ಈಗ ಮೈಸೂರು ಲೇಬರ್ ಫೆಡರೇಶನ್ನಿನ ಅಧ್ಯಕ್ಷರಿದ್ದಾರೆ. ಸುಮಾರು 10 ವರುಷಗಳಿಂದ ಮೈಸೂರು ಕೌನ್ಸಿಲ್ ಸದಸ್ಯರು. ರಾಷ್ಟ್ರದ ಸ್ವಾತಂತ್ರ್ಯ ಚಳವಳದಲ್ಲಿ ಎಂಟು ಬಾರಿ ಜೈಲುವಾಸವನನುಭವಿಸಿದ್ದರು. ಆಸ್ತಿ ಸಂಬಂಧದ ಕಾನೂನಿನಲ್ಲಿ ಹಿಂದೂ ಮಹಿಳೆಯ ಹಕ್ಕು ಪಾಲನಾವಿಭಾಗವನ್ನು ಸೇರಿಸಲು ಇವರು ಗಣ್ಯ ಸಾಧನೆಮಾಡಿದ್ದರು. ಮೈಸೂರು ವಕೀಲೀ ಶಾಸನಾನುಸಾರವಾಗಿ ವಕೀಲೋದ್ಯಮ ಪಟ್ಟಿಯಿಂದ ಈ 'ರಾಜದ್ರೋಹಿ'ಯ ಹೆಸರನ್ನು ತೊಡೆದು ಹಾಕುವ ಆಜ್ಞೆಯಾಗಿತ್ತು. ಎಡ್ವೋಕೇಟ್ ವೃತ್ತಿಯಲ್ಲಿದ್ದಾಗ 'ಮೈಸೂರು ಲಾ ಜರ್ನಲ್' ಪತ್ರಿಕೆಯ ಸಂಪಾದಕರಾಗಿದ್ದರು.

ಶ್ರೀ. ಯಚ್. ಸಿದ್ದಯ್ಯ

ಇವರು ಲಿಂಗಾಯಿತರು. 1926ರಲ್ಲಿ ಎಡ್ವೋಕೇಟರಾದರು. ಆ ಮೇಲೆ ಅನುಕ್ರಮವಾಗಿ ಮುನ್ಸಿಪಲ್ ಕೌನ್ಸಿಲರ್, ಶಿವಮೊಗ್ಗ ಜಿಲ್ಲಾ ಬೋರ್ಡಿನ ಅಧ್ಯಕ್ಷ, ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯನಾಗಿ ಬೆಳಗಿದರು. ಕಾಂಗ್ರೆಸ್ ಪೂರ್ವದಲ್ಲಿದ್ದ ಮೈಸೂರು ಪ್ರಜಾ ಪಕ್ಷದ ಪ್ರಮುಖರಲ್ಲಿ ಇವರೊಬ್ಬರು; ಆ ಮೇಲೆ ಮೈಸೂರು ಕಾಂಗ್ರೆಸಿನ ಗಣ್ಯನಾಯಕರಲ್ಲೊಬ್ಬರು 1938ರ ಮೈಸೂರು ಧ್ವಜ ಸತ್ಯಾಗ್ರಹದಲ್ಲಿ ಕೈದುಮಾಡಲ್ಪಟ್ಟು ಪಟೇಲ್--ಮಿರ್ಝಾ ಒಪ್ಪಂದಾನುಸಾರ ಬಿಡುಗಡೆಗೊಂಡರೂ 1939ರಲ್ಲಿ ಪುನ: ಕೈದಾಗಿ 1½ ವರುಷ ಸಜೆ ಮತ್ತು ರೂ 300 ಜುಲ್ಮಾನೆಗೊಳಗಾದರು. ಜುಲ್ಮಾನೆ ತೆರಲಿಲ್ಲ; ಇವರ ಕಾರನ್ನು ಏಲಮಿಗಿಟ್ಟರು; ಅದು 60 ರೂಪಾಯಿಗಳಿಗೆ ಏಲವಾಗಿ ಹೋಯಿತ!

ಶ್ರೀ ಟಿ. ಮರಿಯಪ್ಪ

ಇವರು ಮಾಂಡ್ಯಾ ಜಿಲ್ಲೆಯ ನಾಗಮಂಗಲ ಊರವರು. ಕುರುಬರ ಸಮಾಜದವರು. 1930ರಲ್ಲಿ ಎಡ್ವೋಕೇಟ್ ಆಗಿ ಮೈಸೂರು ಸಿಟಿ ಕೌನ್ಸಿಲಿಗಾರಿಸಲ್ಪಟ್ಟಿದ್ದರು. ಅಂತೆಯೇ ಜಿಲ್ಲಾ ಬೋರ್ಡು ಸದಸ್ಯರಾಗಿದ್ದರಲ್ಲದೆ ಮೈಸೂರು ಯುನಿವರ್ಸಿಟಿಯ ಸೆನೆಟ್ ಸದಸ್ಯರಾಗಿದ್ದರು. 1941ರಲ್ಲಿ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲಿಗಾರಿಸಲ್ಪಟ್ಟು ಅಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾದರು. ಶ್ರೀ. ಮರಿಯಪ್ಪನವರು ನಿಸ್ಸೀಮ ಕಾಂಗ್ರೆಸ್ ಭಕ್ತ.

ಶ್ರೀ. ಚೆನ್ನಿಗರಾಮಯ್ಯ

ತುಮಕೂರು ಜಿಲ್ಲೆಯ ಕೋರಟಗೆರೆಯವರು. ಹರಿಜನ, ಕೆಲಕಾಲ ಅಲ್ಲಿಯ ನಗರ ಸಭಾ ಸದಸ್ಯರಾಗಿದ್ದರು. 12 ವರುಷಗಳವರೆಗೆ ತುಮಕೂರು ಜಿಲ್ಲಾ ಬೋರ್ಡು ಸದಸ್ಯರಾಗಿದ್ದರು. 1939ರ ಮೈಸೂರು ರಾಜ್ಯಾಂಗ ಸುಧಾರಣಾ ಸಮಿತಿಯ ಹರಿಜನರ ಏಕಮಾತ್ರ ಪ್ರತಿನಿಧಿಯಾಗಿದ್ದರು. ದಳಿತವರ್ಗದ ಹಿತಕ್ಕೆ ಧಕ್ಕೆ ಬೀಳದಂತೆ ಕಣ್ಣಿಗೆಣ್ಣೆಯಿಟ್ಟು ಕಾಯುವ ಮನುಷ್ಯ. ಹರಿಜನರಿಗೆ ಕಾದಿಟ್ಟ ಸ್ಥಾನಗಳ ಸಮೇತ ಮಿಶ್ರಮತದಾನವೇ ಬೇಕೆಂದು ವಾದಿಸಿದವರು. 1939ರಲ್ಲಿ ಇವರು ಕಲ್ಕತ್ತದಲ್ಲಿ ಗಾಂಧಿಜೀಯನ್ನು ಭೇಟಿಮಾಡಿ ತನ್ನೀವಾದಕ್ಕೆ ಮಹಾತ್ಮರ ಅನುಮೋದನೆ ಪಡೆದಿದ್ದರು. 1943ರಿಂದ ಮೈಸೂರು ಕಾಂಗ್ರೆಸಿನಲ್ಲಿದ್ದಾರೆ; ಮೈಸೂರಿನ ಪ್ರಥಮ ಹರಿಜನ ಮಂತ್ರಿ ಇವರು.

ಶ್ರೀ. ಸುಬ್ರಮ ಸೆಟ್ಟಿ

ಮಂತ್ರಿ ಸಮಿತಿಯಲ್ಲಿರುವವರ ಪೈಕಿ ಪ್ರಾಯದಲ್ಲೆಲ್ಲರಿಗಿಂತ ದೊಡ್ಡವರು ಶ್ರೀ ಸೆಟ್ಟರು; ಬಹುಶ: ಶ್ರೀಮಂತಿಕೆಯಲ್ಲಿಯೂ ಇವರೇ. ಮೈಸೂರು ಸಂಸ್ಥಾನದಲ್ಲೇ ಪ್ರಮುಖ ವ್ಯಾಪಾರಿ ಮತ್ತು ಉದ್ಯಮಗಾರರಿವರು. ಸುಮಾರು 20 ವರುಷಗಳಿಗೂ ಮಿಕ್ಕಿ ಬೆಂಗಳೂರು ನಗರ ಸಭಾ ಸದಸ್ಯರು. ಮೂರು ಬಾರಿ ಅದರ ಅಧ್ಯಕ್ಷರಾಗಿ ಕೆಲಸ ಮಾಡಿದರು. 10ವರುಷ ಮೈಸೂರು ಪ್ರತಿನಿಧಿ ಎಸೆಂಬ್ಲಿಯ, 10ವರುಷ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲಿನ ಸದಸ್ಯರಾಗಿದ್ದರು; 2ವರುಷ ಮೈಸೂರು 'ಚೇಂಬರ್ ಓಫ್ ಕಾಮರ್ಸ'ನ ಅಧ್ಯಕ್ಷರೂ ಆಗಿದ್ದರು, ಮೈಸೂರಿನ ಹಲವು ಕಂಪೆನಿಗಳ ಡೈರೆಕ್ಟರಿವರು. ಕಳೆದ 10 ವರುಷಗಳಿಂದ ಮೈಸೂರು ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿದ್ದಾರೆ. ಚಾಮರಾಜ ಪೇಟೆಯಲ್ಲಿ ಒಂದು ಧರ್ಮಾರ್ಥ 'ಹೋಸ್ಟೆಲ'ನ್ನು ನಡೆಸುತಿದ್ದಾರೆ. ಅದಕ್ಕೆ ರೂ, 80,000 ಮೌಲ್ಯದ ಆಸ್ತಿಯನ್ನು ಬಿಟ್ಟು ಕೊಟ್ಟಿದ್ದಾರೆ. ಇವೆಲ್ಲಾ ಕಾರ್ಯಕಲಾಪ ಮತ್ತು ದಾನಗಳನ್ನು ಗಮನಿಸಿ, ಮೈಸೂರು ಸರಕಾರದಿಂದ 'ರಾಜ ಸೇವಾಸಕ್ತ' ಬಿರುದು ಶ್ರೀ ಸೆಟ್ಟರಿಗೆ ದೊರೆತಿದೆ.

ಶ್ರೀ. ಡಿ. ಯಚ್. ಚಂದ್ರಶೇಖರಯ್ಯ

1941ರಲ್ಲಿ ಬಂದ ಸುಧಾರಣೆಗನುಸಾರವಾಗಿ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲಿಗೆ ನೇಮಿಸಲ್ಪಟ್ಟಿದ್ದ ಪ್ರಥಮ ಅನಧಿಕಾರೀ ಅಧ್ಯಕ್ಷವೆಂದರೆ ಈ ಮಹನೀಯರೇ. ಕೌನ್ಸಿಲಿನ ಸದಸ್ಯರಾಗಿರುವಾಗ ಹಲವು ಮುಖ್ಯ ಸಮಿತಿಗಳಲ್ಲಿ ಕೆಲಸಮಾಡಿದ್ದರು. ಹಿಂದೀ ಘಟನಾಸಮಿತಿಯ ಮೈಸೂರು ಪ್ರತಿನಿಧಿಗಳಲ್ಲಿ ಇವರೊಬ್ಬರು.

ಮಿ. ಮಹಮದ್ ಶರೀಫ್

1922ರಲ್ಲಿ ವಕೀಲರಾದಂದಿನಿಂದ ಹಲವು ವರುಷ ಮುನ್ಸಿಪಲ್ ಕಮಿಶನರ್, ಸಿವಿಲ್ ಮತ್ತು ಮಿಲಿಟರಿ ಸ್ಟೇಶನ್, ಸದಸ್ಯರಾಗಿದ್ದುದಲ್ಲದೆ ಎರಡುಸಲ ಅದರ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರು. ಅವರ ಸಾರ್ವಜನಿಕ ಸೇವೆಗಳಿಗಾಗಿ 'ಖಾನ್ ಸಾಹೇಬ್' ಬಿರುದು ದೊರೆತಿದ್ದಿತು. ಆದರೆ ರಾಷ್ಟ್ರದ ಕರೆಯನ್ನು ಮನ್ನಿಸಿ ಅದನ್ನು ತ್ಯಾಗಮಾಡಿದ್ದರು. ಈಗಲೂ ಮೈಸೂರು ಯುನಿವರ್ಸಿಟಿ ಸೆನೇಟಿನ ಸದಸ್ಯರಾಗಿದ್ದಾರೆ. ಮೈಸೂರು ಲೆಜಿಸ್ಲೇಟಿವ್ ಎಸೆಂಬ್ಲಿಯ ಸದಸ್ಯನಾಗಿದ್ದು ಅಲ್ಲಿಯ ಮುಸ್ಲಿಂ ಲೀಗ್ ಪಕ್ಷದ ನಾಯಕನಾಗಿದ್ದಾರೆ. ಮೈಸೂರಿನ ಜಿನ್ನಾ ಇವರು! ಮೈಸೂರು ಸಂಸ್ಥಾನಿಕ ಮುಸ್ಲಿಂ ಲೀಗ್ ಸ್ಥಾಪನೆಯಾದಂದಿನಿಂದ ಇದುವರೆಗೂ ಅದರ ಅಧ್ಯಕ್ಷರೆಂದರೆ ಮಿ. ಶರೀಫರೇ.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ
ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE.

ಹೈದರಾಬಾದು ತೇಪೆ ಹಚ್ಚಿತು!

ಭಾರತಕೇಂದ್ರ ಮತ್ತು ಹೈದರಾಬಾದು ಸಂಸ್ಥಾನಗಳೊಳಗೆ ಒಂದು ವರುಷಾವಧಿಯ ಕರಾರು ಆಗುವ ಸಂಭವ—ಜುನಗಾಡಿನೊಳಗೆ ಪ್ರಜೆಗಳ ಪ್ರತಿಸರಕಾರದ ಪ್ರವೇಶ—ನೈಸಾಂನಲ್ಲಿ ನಡೆದಿರುವ ಸರಕಾರ ರಚನೆ—ಇವು ಕಳೆದ ವಾರದ ಹೊಸ ಘಟನೆಗಳು.

ಒಂದೆಡೆಯಿಂದ ಸರ್ದಾರ್ ಪಟೇಲರ, ಮತ್ತೊಂದೆಡೆಯಿಂದ ಕಾಯಿದೇ ಅಝಾಮ್ ಜಿನ್ನರ, ಪ್ರಾಮುಖ್ಯ ಹೇಳಿಕೆಗಳು ಪ್ರಕಟಗೊಂಡಿವೆ.

ಪಂಜಾಬಿನ ಜನ ಬದಲಾವಣೆ ಕಾರ್ಯವು ಧಾಳಿ, ಅಘಾತಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ತುಸು ಜಾಗರೂಕತೆಯಿಂದ, ಆದರೆ ಸರಾಗವಾಗಿ ನಡೆದಿದೆ.

ಅಂತರ್ರಾಷ್ಟ್ರೀಯ ರಂಗದಲ್ಲಿ ಮುಖ್ಯ ಘಟನೆಗಳೆಂದರೆ, ಜಾಗತಿಕ ಸಂಘದ ಕಾರ್ಯಕಲಾಪಗಳು, ಲೋಕಶಾಂತಿ ಮತ್ತು ಸಮೃದ್ಧಿಗೆ ಅಧ್ಯಕ್ಷ ಟ್ರೂಮನ್ನರ ವಿನಂತಿ, ಇರಾನ್, ರಶ್ಯದ ಎಣ್ಣೆ ಕರಾರನ್ನು ರದ್ದು ಪಡಿಸಿಕೊಂಡು ಬ್ರಿಟನಿಗೇನೇ ರಿಯಾಯಿತಿ ಮಾಡಬೇಕೆಂದು ನಿರ್ಧರಿಸಿರುವದು, ಪೆಲಸ್ಟೈನ್ ವಿಭಜನಾ ಗೊಂದಲಗಳಿವೆ!

ಹೈದರಾಬಾದಿನೊಡನೆ

ಕಳೆದ ಎರಡು ತಿಂಗಳುಗಳಿಗೂ ಮಿಕ್ಕಿ ನವದಿಲ್ಲಿಗೆ ಹೋಗುತ್ತಾ ಬರುತ್ತಾ ಹೈದರಾಬಾದು ಸರಕಾರದ ಪ್ರತಿನಿಧಿಗಳು ನಡೆಸುತಿದ್ದ ಮಾತುಕತೆಗಳಿಂದ ಇಚ್ಛಿತ ಪರಿಣಾಮವು ಸದ್ಯಕ್ಕಾಗುವಂತಿಲ್ಲ ಎಂಬುದೀಗ ಮತ್ತೊಮ್ಮೆ ಖಚಿತವಾಗಿದೆ. ಜತೆಗೂಡುವದೂ ಇಲ್ಲ, ಜಗಳ ಮಾಡುವದೂ ಇಲ್ಲ, ಎಂಬಂತಹ ಒಂದು ಕರಾರು ಒಂದು ವರುಷದ ಮಟ್ಟಿಗೆ ಈಗ ಭಾರತ ಮತ್ತು ಹೈದರಾಬಾದು ಸರಕಾರಗಳೊಳಗೆ ತಯಾರಾಗಿದೆಯೆಂದು ತಿಳಿದುಬರುತ್ತದೆ. ಅದರಲ್ಲಿ ಕೇಂದ್ರಭಾರತಕ್ಕೆ ಹೈದರಾಬಾದು ಜೋಡಣೆಗೊಳ್ಳುವ ಅಂಶವೇನೂ ಇರದೆ, ಈ ಮೊದಲು ಹೈದರಾಬಾದು ನುಳಿತರ ಸಂಸ್ಥಾನಗಳೊಡನಿದ್ದ 'ಪ್ರಚಲಿತ ಒಪ್ಪಂದ' ಶರ್ತಗಳನ್ನೇ ಒಂದು ವರುಷದ ವರೆಗೆ ಊರ್ಜಿತದಲ್ಲಿಡುವ ಒಕ್ಕಣೆ ಮಾತ್ರವಿದೆಯಂತೆ. ದಿಲ್ಲಿ ಸರಕಾರವು ತನ್ನ ಕೊನೆಯ ಅನಿವಾರ್ಯ ವಿಧಾನವಾಗಿ ಆ ಕರಾರು ಕರಡನ್ನು ತಯಾರಿಸಿ ಕೊಟ್ಟಿತು. ಹೈದರಾಬಾದು ಪ್ರತಿನಿಧಿಗಳು ಅದನ್ನು ಹಿಡಿದುಕೊಂಡು ಹೈದರಾಬಾದಿಗೆ ಮರಳಿದರು. ಮಂತ್ರಿ ಸಮಿತಿಯು ಆ ಕುರಿತು ಸುಧೀರ್ಘ ಪರ್ಯಾಲೋಚನೆ ನಡೆಸಿದೆ. ನಿಜಾಮರ ಸಹಿ ಬೀಳುವದು ಸೇಕಡಾ 99ರಷ್ಟು ಖಂಡಿತವೆಂದು ತಿಳಿದುಬಂದಿದೆ. ನಿಜಾಮರ ಒಪ್ಪಿಗೆ ಮತ್ತು ಸಹಿ ಪಡೆದು ಇದೇ ಸೋಮವಾರ ಹೈದರಾಬಾದು ಪ್ರತಿನಿಧಿಗಳು ಪುನಃ ದಿಲ್ಲಿಗೆ ಮರಳಿದ್ದಾರೆಂದೂ ಇಷ್ಟರಲ್ಲೇ ಎರಡೂ ಸರಕಾರಗಳು ಆ ಕರಾರನ್ನು ಪ್ರಕಟಿಸಲಿರುವವೆಂದೂ ತಿಳಿದು ಬರುತ್ತದೆ.

ಪ್ರಜಾ ಚಳವಳಿ

ಇತ್ತ ಹೈದರಾಬಾದು ಸಂಸ್ಥಾನದೊಳಗೆ ಪ್ರಜೆಗಳ ಸ್ವಾತಂತ್ರ್ಯ ಚಳವಳವು ಯಥಾ ಪ್ರಕಾರ ಸಾಗಿದೆ. ದಸ್ತಗಿರಿಗಳಾಗುತ್ತಲೇ ಇವೆ; ಹಲವು ವಿಧದ ಕಠೋರ ದಬ್ಬಾಳಿಕೆಗಳು ನಡೆದಿವೆ. ಹಿಂದುಗಳ ಪಾಲಿಗೆ ಸೈತಾನ ಸದೃಶ್ಯವಾಗಿ ತೋರುತಿದ್ದ ಹೈದರಾಬಾದ್ ಮಜ್ಲೀಸಿನ 'ಕಾರ್ಯಾಚರಣಾ ಸಮಿತಿ'ಯ ಅಧ್ಯಕ್ಷ ಮಿ. ಮಹಮ್ಮೂದ್ ಅಬ್ದುಲ್ ರಾವುಫರು ಹಿಂದುಗಳಿಗೆ ಕಂಠೋಕ್ತ ಆಶ್ವಾಸನೆಯೀಯುತ್ತಾ "ಇಲ್ಲಿ ಶಾಂತಿ ಭಂಗವಾಗುವಂತಿಲ್ಲ. ಹಿಂದುಗಳ ಪ್ರಾಣ ಸೊತ್ತುಗಳ ರಕ್ಷಣೆಗಾಗಿ ಮಜ್ಲಿಸ್ ಸ್ವಯಂಸೇವಕರನ್ನು ಕೊಡುವೆವು. ಹೈದರಾಬಾದಿನ ಮುಸ್ಲಿಮರು ಹಿಂದೂ ಮಹಿಳೆಯರನ್ನು ತಮ್ಮ ತಾಯಿಂದಿರು, ಸಹೋದರಿಯರು ಹಾಗೂ ಮಕ್ಕಳಂತೆ ಕಾಣುವರು" ಎಂದಿದ್ದಾರೆ. ಇದನ್ನು ಸ್ವಾಗತಿಸುತ್ತಾ ಹೈದರಾಬಾದು ಕಾಂಗ್ರೆಸಿನ ಹಿರಿಯ ಪ್ರಮುಖ ಶ್ರೀ ಕಾಶೀನಾಥ ರಾವ್ ವೈದ್ಯರು "ಮಜ್ಲಿಸ್ ಇತ್ತೆಹಾದ್ ಮುಸ್ಲಿಮೀನ್ ಸಂಸ್ಥೆ ಮತ್ತು ಸಂಸ್ಥಾನೀ ಕಾಂಗ್ರೆಸ್ ತಮ್ಮ ಭಿನ್ನಭೇದಗಳನ್ನು ಮರೆತು ಒಂದಾಗಿ ಜವಾಬ್ದಾರೀ ಸರಕಾರ ಸ್ಥಾಪನೆಗೆ ಹೋರಾಡಬೇಕು. ಅದರಲ್ಲಿ ಮುಸ್ಲಿಮರ ಮೂಲಭೂತ ಹಕ್ಕುಗಳಿಗೆ ಸಂಪೂರ್ಣ ರಕ್ಷಣೆಯಿದೆ. ಜಾತಿ ಮತಭೇದವಿಲ್ಲದೆ ಜನತೆಯ ಆರ್ಥಿಕ ರಾಜಕೀಯ ಸ್ಥಿತಿಗಳನ್ನು ಆ ಮೂಲಕ ಸುಧಾರಿಸೋಣ" ಎಂದಾಹ್ವಾನಿಸಿದ್ದಾರೆ.

ಹೈದರಾಬಾದು ಕಾಂಗ್ರೆಸಿನ ಅಧ್ಯಕ್ಷ ಸ್ವಾಮಿ ರಾಮಾನಂದ ತೀರ್ಥರೂ 6000 ಸತ್ಯಾಗ್ರಹಿಗಳೂ ಜೈಲಿನೊಳಗಿದ್ದು ಸಂಸ್ಥಾನದಲ್ಲೆಲ್ಲಾ ಸೇನೆ, ಪೋಲೀಸ್ ಅತಿರೇಕಗಳು ನಡೆದಿರುವುದನ್ನೂ, ಭಾರತದ ಹೃದಯ ಪ್ರದೇಶದಲ್ಲಿ ಸ್ವತಂತ್ರ ರಾಜ್ಯ 'ಆಝಾದ್ ಹೈದರಾಬಾದು' ಉಳಿಯುವುದರಿಂದಾಗಲಿರುವ ಅಪಾಯವನ್ನೂ ಲಕ್ಷಿಸಿ ಮುಂದಿನ ಕಾರ್ಯಕ್ರಮಗಳನ್ನು ನಿರ್ಧರಿಸಲು ಆಂಧ್ರ, ಕರ್ನಾಟಕ, ಮಹಾರಾಷ್ಟ್ರ, ಮಧ್ಯ ಪ್ರಾಂತ್ಯ—ಬೀರಾರ್, ಬೊಂಬಾಯಿ, ಈ ಐದು ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಸಮ್ಮೇಲನವೊಂದು ಪೂನೆಯಲ್ಲಿ ಕರೆಯಲ್ಪಟ್ಟಿದೆ.

ಜುನಗಾಡ್ ಪ್ರತಿಸರಕಾರ

ಶ್ರೀ ಸಾಮಲ್ದಾಸ್ ಗಾಂಧಿಯವರ ನಾಯಕತ್ವದಲ್ಲಿ ಜುನಗಾಡ್ ಪ್ರಜೆಗಳ ಪ್ರತಿಸರಕಾರವು ಬೊಂಬಾಯಿಯಲ್ಲಿ ನಾಲ್ಕೈದು ವಾರಗಳ ಮೊದಲು ಸ್ಥಾಪನೆಗೊಂಡಿದ್ದಿತು. ಈಗ ಅದು ಈಶಾನ್ಯ ಮೂಲೆಯಿಂದ ಜುನಗಾಡಿನೊಳಗೆ ಪ್ರವೇಶಿಸಿ, ಗ್ರಾಮ ಗ್ರಾಮಗಳನ್ನು ಹಿಡಿಯುತ್ತಾ ಪ್ರತಿಸರಕಾರ ಸ್ಥಾಪಿಸುತ್ತಾ ಮುಂದೊತ್ತುತ್ತಿದೆ. ಈ ಸ್ಥಳಾಕ್ರಮಣಾರಂಭ ತಾ. 24ರಿಂದ. ಒಂದೆರಡು ದಿನಗಳೊಳಗೆ 12 ಗ್ರಾಮಗಳು ಈ ಪ್ರತಿ ಸರಕಾರದ ವಶವಾದುವೆಂದು ತಿಳಿದು ಬರುತ್ತದೆ. ಪ್ರಥಮತಃ ಅಮ್ರಾಪುರ ಗ್ರಾಮಕ್ಕೆ ಈ ಸರಕಾರದ ದಳವು ನುಗ್ಗುವಾಗ ಅಲ್ಲಿ ಹನ್ನೆರಡು ಮಂದಿ ಪೋಲೀಸರು ತಮ್ಮ ತಲೆದಿಂಬುಗಳಡಿಯಲ್ಲಿ ತುಂಬಿದ ರೈಫಲ್‌ಗಳನ್ನು ಮಡಗಿ, ನಿದ್ರಿಸುತಿದ್ದರಂತೆ. ಆ ಗ್ರಾಮವು ವಶವಾದೊಡನೆಯೇ ಹಳ್ಳಿಗರು ಸಭೆಸೇರಿ ತಮ್ಮ ಹಳ್ಳಿಯು ಭಾರತ ಕೇಂದ್ರಕ್ಕೆ ಸೇರಿತೆಂದು ಘೋಷಿಸಿ, ಭಾರತ ಸರಕಾರವು ತಮಗೆ ರಕ್ಷಣೆಕೊಡಬೇಕೆಂದೂ, ಸಾಮಾಗ್ರಿ ಸರಬರಾಯಿಮಾಡಬೇಕೆಂದೂ ಠರಾಯಿಸಿದರು. ಆಕ್ರಮಿಸಿಕೊಂಡ 12 ಗ್ರಾಮಗಳ ಎಲ್ಲಾ ಸರಕಾರೀ ಆಸ್ತಿಸೊತ್ತುಗಳನ್ನೂ ವಶಪಡಿಸಿಕೊಂಡು, ಉದ್ಯೋಗಸ್ಥರು ಮತ್ತು ಪೋಲೀಸರನ್ನು ಬಂಧಿಸಿಟ್ಟು ಹೊಸ ಸರಕಾರವು ತನ್ನ ಆಡಳಿತಾ ವಿಧಾನಗಳನ್ನು ಅಲ್ಲಿ ಜ್ಯಾರಿಗೆ ತಂದಿರುವುದೆಂದು ತಿಳಿದು ಬರುತ್ತದೆ.

ಕೊಚ್ಚಿ ಮಂತ್ರಿಗಳ ರಾಜೀನಾಮೆ

ಕೊಚ್ಚಿಯ ಪ್ರಧಾನ ಮಂತ್ರಿ ಶ್ರೀ. ಪಿ. ಗೋವಿಂದ ಮೆನನ್ ಮತ್ತವರ ಪಕ್ಷದ ಇತರ ಮೂವರು ಮಂತ್ರಿಗಳು ತಮ್ಮ ಸ್ಥಾನಗಳಿಗೆ ರಾಜಿನಾಮೆಯಿತ್ತುದರಿಂದ ಜತೆ ಜವಾಬ್ದಾರಿಯನ್ನನುಸರಿಸಿ ಇಡೀ ಮಂತ್ರಿ ಸಮಿತಿಯೇ ಒಮ್ಮೆ ಬರ್ಖಾಸ್ತಾಗಿದೆ. ಒಕ್ಟೋಬರ್ 18ರ ತುಲವರ್ ಸಮಾರಂಭದಲ್ಲಿ ಅಲ್ಲಿಯ ರಾಜೇಂದ್ರ ಮೈದಾನಿನಲ್ಲಿ ಲಾಠೀಚಾರ್ಜು ನಡೆದಿದ್ದಿತು. ಈ ಕುರಿತು ಕೂಡಲೇ ಸಾರ್ವಜನಿಕ ವಿಚಾರಣೆ ನಡೆಯಬೇಕೆಂದು ಪ್ರಜಾಮಂಡಲ ಪಕ್ಷದ ಮಂತ್ರಿಗಳಾದ ಶ್ರೀ ಗೋವಿಂದ ಮೆನನ್ ಮೊದಲಾದವರ ಅಭಿಪ್ರಾಯವಿದ್ದರೂ, ಪುರೋಗಾಮಿ ಪಕ್ಷದ ಮಂತ್ರಿ ಶ್ರೀ. ಟಿ. ಕೆ. ನಾಯರರು, ತೀವ್ರ ಭಿನ್ನಾಭಿಪ್ರಾಯದಿಂದಿದ್ದರೆಂದೂ ಶ್ರೀ ಮೆನನರ ಅಭಿಪ್ರಾಯವನ್ನು ಮಹಾರಾಜರು ಮನ್ನಿಸದಿದ್ದುದರಿಂದ ಅವರು ರಾಜೀನಾಮೆ ಕೊಟ್ಟರೆಂದೂ ತಿಳಿದುಬರುತ್ತದೆ. ಇನ್ನು ಶ್ರೀ. ಟಿ. ಕೆ. ನಾಯರರ ನಾಯಕತ್ವದಲ್ಲಿ ಸಮ್ಮಿಶ್ರ ಮಂತ್ರಿಸಮಿತಿ ರಚಿಸಲ್ಪಡುವ ಸಂಭವವಿದೆ.

ಜಿನ್ನಾ—ಪಟೇಲ್

ಪಾಕಿಸ್ತಾನದ ಭವಿಷ್ಯದ ಕುರಿತು ಕರಾಚಿಯಲ್ಲಿ ಪತ್ರಿಕಾ ವಾಲರ ಪ್ರಶ್ನೆಗಳಿಗುತ್ತರ ಕೊಡುತ್ತಾ ಕಾಯಿದೇ ಅಝಾಮ್ ಜಿನ್ನರು ಕೆಲವು ಪ್ರಾಮುಖ್ಯ ವಿಷಯಗಳಲ್ಲಿ ತಮ್ಮ ಸ್ಪಷ್ಟಾಭಿಪ್ರಾಯಗಳನ್ನು ಮುಂದಿಟ್ಟಿದ್ದಾರೆ. ಇತ್ತ ಸಿಖ್ ರಾಜ ಹಾಗೂ ಪ್ರಜೆಗಳುಳ್ಳ ಪಾಟಿಯಾಲಾಕ್ಕೆ ಹೋಗಿದ್ದ ಸರ್ದಾರ್ ವಲ್ಲಭಾಯಿ ಪಟೇಲರು ಅಲ್ಲಿಯ ಸಿಖ್ ನಾಯಕರ ಸಮ್ಮೇಲನದಲ್ಲಿ ಮನಬಿಚ್ಚಿ ಮಾತಾಡಿ ಕೆಲವು ವ್ಯವಹಾರ ವಿಧಾನಗಳನ್ನು ಮಂಡಿಸಿದ್ದಾರೆ.

ಮಿ. ಜಿನ್ನರ ಹೇಳಿಕೆ

"ಎರಡು ಸ್ವತಂತ್ರ ರಾಷ್ಟ್ರಗಳನ್ನು ಏಕಕೇಂದ್ರಕ್ಕೊಳಪಡಿಸುವ, ಯಾವುದೇ ಘಟನಾತ್ಮಕ ಒಕ್ಕೂಟದ ಎಂತಹ ವಿಧಾನ ಅಥವಾ ರೂಪರೇಖೆಗಾದರೂ ಪಾಕಿಸ್ತಾನವೆಂದಿಗೂ ಒಪ್ಪಿಗೆಕೊಡಲಾರದು; ಮತ್ತೆಂದಿಗೂ ಶರಣಾಗದು. ಎರಡು ವಸಾಹತುಗಳನ್ನು ಒತ್ತಾಯದಿಂದೈಕ್ಯಗೊಳಿಸುವ ಬಯಕೆಯ ಯಾವುದೇ ಪ್ರಯತ್ನ ಅಥವಾ ಸಾಧನೆಯನ್ನು ನಿಲ್ಲಿಸಲು ನಾವು ಪ್ರಯತ್ನಿಸಲೇ ಬೇಕು. ದ್ವಿರಾಷ್ಟ್ರೀಯ ತತ್ವವು ಬರಿದೊಂದು ತತ್ವವಲ್ಲ, ವಸ್ತು ಸ್ಥಿತಿ. ಅದನ್ನಾಧರಿಸಿಯೇ ಭಾರತ ವಿಭಜನೆಯಾಗಿದೆ. ಕಳೆದೆರಡು ತಿಂಗಳುಗಳ ವಿಕಾರ ಹಾಗೂ ಖಂಡನೀಯ ಘಟನೆಗಳೂ, ಪಾಕಿಸ್ತಾನದಲ್ಲಿರುವ ಹಿಂದುಗಳನ್ನು ಸ್ವರಾಷ್ಟ್ರೀಯರೆಂದು ಭಾರತ ವಸಾಹತು ಹೊರಗೆಳೆದುಕೊಳ್ಳುತ್ತಿರುವ ವರ್ತನೆಯೂ ಈ ನಿಜಸ್ಥಿತಿಯ ಕುರಿತು ಲವಲೇಶ ಸಂದೇಹವೂ ಉಳಿಯದಂತೆ ಮತ್ತಷ್ಟು ಖಚಿತಪಡಿಸಿವೆ. ನವೋದಿತ ಪಾಕಿಸ್ತಾನ ವಸಾಹತನ್ನು ಅದಿಮೇಲು ಮಾಡುವ ಗುರಿಯಿಟ್ಟುಕೊಂಡು ಸರಿಯಾದ ಯೋಜನೆ, ಒಳ್ಳೇ ಸಂಘಟನೆ ಹಾಗೂ ಚೊಕ್ಕ ದಿಗ್ದರ್ಶನಗಳಿಂದಲೇ ಜಾತೀಯ ಗಲಭೆ ನಡೆದಿದ್ದಿತು. ಇದಕ್ಕೀಗ ಉಳಿದಿರುವ ಚಿಕಿತ್ಸೆ ಒಂದೇ. ಭಾರತ ವಸಾಹತು ಸರಕಾರವು ಈ ಅಪಾಯ

ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

ದೇಶೋನ್ನತಿಯನ್ನು ಬಯಸುವುದು ಪ್ರತಿಯೊರ್ವ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು. ವಣಿಜರಿಗೂ ಕೃಷಿಕರಿಗೂ ಕ್ಲುಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು. ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒಪಗಿಸಿಕೊಡುವುದು, ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಂತರವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಬಲದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906.

CANARA BANK LIMITED.

ಕಾಶ್ಮೀರದೊಳಗೆ ಬೆಂಕಿ ಎದ್ದಿದೆ!

ಕಾರೀ ಒಳಸಂಚನ್ನು ಕಠಿಣ ಹಸ್ತದಿಂದ ಅಡಗಿಸಿ, ಆ ಹಂಚಿಕೆಯನ್ನೂ ಆ ಸಂಸ್ಥೆಯ ಬೆಂಬಲವಾಗಿ ಹಿಂಗಡೆಯಲ್ಲಿರುವ ಪ್ರಭಾವಶಾಲೀ ವ್ಯಕ್ತಿಗಳನ್ನೂ ಬೇರು ಸಮೇತ ಕಿತ್ತೊಗೆಯಬೇಕು. ಈಗ ಭಾರತ ವಿಭಜನೆಯು ಅಸ್ತಿತ್ವಕ್ಕೆ ಬಂದಿದೆ. ಇನ್ನು ಎರಡು ಕಡೆಗಳವರೂ ಗತ ಕಾಲವನ್ನು ಹೂತಿಟ್ಟು, ಇಷ್ಟೆಲ್ಲಾ ನಡೆದು ಹೋದರೂ ತಾವು ಪರಸ್ಪರ ಸನ್ಮಿತ್ರರೆಂದೇ ನಿರ್ಧರಿಸಿ ಬಾಳಬೇಕೆಂದು ನಾನು ಒತ್ತಿ ಒತ್ತಿ ಹೇಳುತ್ತಾ ಬಂದಿದ್ದೇನೆ. ನಾವು ನೆರೆಕರೆಯವರಂತೆ ಪರಸ್ಪರ ಕೊಟ್ಟು ಪಡೆಯತಕ್ಕ ಸಂಗತಿಗಳು ಹಲವಿವೆ. ನೈತಿಕವಾಗಿ, ವಸ್ತುಶಃ ಮತ್ತು ರಾಜಕೀಯವಾಗಿ ನಾವು ಇಕ್ಕಡೆಯವರು ಅನ್ಯೋನ್ಯ ವರ್ತನಾ ವಿಧಾನಗಳನ್ನು ಕೈಕೊಂಡು ನಮ್ಮ ಘನತೆ ಮತ್ತು ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಬಹುದು. ಎರಡು ಕಡೆಯ ಅಲ್ಪಸಂಖ್ಯಾಕರಿಗೂ ಅವರ ಪ್ರಾಣ ಮಾನ, ಆಸ್ತಿಪಾಸ್ತಿಗಳ ರಕ್ಷಣೆಯ ಪ್ರಾಮಾಣಿಕ ಆಶ್ವಾಸನೆ ದೊರೆಯಬೇಕು. ಆದು 'ಕೇವಲ ಹರಕು ಪಾಕಿಸ್ತಾನ', ಆದು ಮುಸ್ಲಿಂ ಲೀಗಿನ ತಾತ್ಕಾಲಿಕ ಹುಚ್ಚುತನದ ಪರಿಣಾಮ; ಪಾಕಿಸ್ತಾನವು ಸಾಕಲಿತು, ಪಶ್ಚಾತ್ತಾಪಪಟ್ಟು, ತಪ್ಪಿಬಿದ್ದ ಮಗನಂತೆ ಪುನಃ ಭಾರತಕೇಂದ್ರದೊಂದಿಗೆ ಸೇರಿಕೊಳ್ಳಲಿದೆ; ಈಗ ಅದುದಕ್ಕೆಲ್ಲಾ ದ್ವಿರಾಷ್ಟ್ರತತ್ವವೇ ಕಾರಣ—ಎಂದು ಮುಂತಾಗಿ ಪ್ರಬಲ ಪ್ರಚಾರಗಳು ದೇಶವಿಭಜನೆಯ ಮುಹೂರ್ತದಿಂದಲೇ ಆರಂಭವಾಗಿರುವುದು ಅತ್ಯಂತ ದುರ್ದೈವ. ಅಂತೆಯೇ ಭಾರತ... ಮುಸ್ಲಿಮರಮೇಲೆ, ಲೀಗ್ ನಾಯಕತ್ವವನ್ನು ಅಲ್ಲಗಳೆಯಬೇಕು—ವಿಶಾರ ದ್ವಿರಾಷ್ಟ್ರತತ್ವವನ್ನೊಪ್ಪಿ ಸಮರ್ಥಿಸಿ ತಾವು ಪಾಪಮಾಡಿದೆವೆಂದು ಜಾಹೀರು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು—ಎಂಬಂತಹ ಬೇಡಿಕೆಗಳು ಬಿದ್ದಿರುವುದೂ, ಅವರ ಮುಂದೆ ಕೆಲವು ಪರೀಕ್ಷಾ ಶರ್ತಗಳನ್ನು ಹಾಕಿ ಆ ಪರೀಕ್ಷೆಗಳಲ್ಲಿ ಪಾಸಾಗದವರಿಗೆ ಭಾರತದಲ್ಲಿ ಸ್ಥಾನವಿಲ್ಲವೆನ್ನುವುದೂ ಅತೀವ ದುರ್ದೈವದ ಸಂಗತಿಗಳು. ಪಾಕಿಸ್ತಾನವು ಅಸ್ತಿತ್ವದಲ್ಲಿಬಂದಿದೆ; ಶಾಶ್ವತವಾಗಿ ಅಸ್ತಿತ್ವದಲ್ಲಿರುವುದು. ಇತರ ಯಾವುದೇ ಸ್ವತಂತ್ರ ವಿದೇಶಗಳೊಡನೆ ನಡೆಸುವಂತೆ ಎರಡು ಸ್ವತಂತ್ರ ರಾಷ್ಟ್ರಗಳಾಗಿ ಪರಸ್ಪರ ಸಮ್ಮತಿ ಹಾಗೂ ಒಪ್ಪಂದಗಳನ್ನು ಮಾಡಿಕೊಳ್ಳಲು ಸದಾ ಸಿದ್ಧರಿದ್ದೇವೆ. ಆದರೆ ಕೆಲವು ಕಾಂಗ್ರೆಸ್ ಪ್ರಮುಖರು ಕೂಡಾ ನಮ್ಮ ಸ್ವತಂತ್ರ ರಾಷ್ಟ್ರದ ವಿರುದ್ಧ ನಡೆಸುತ್ತಿರುವ ಪ್ರಚಾರಗಳು ಇಂತಹ ಸಖ್ಯ ಸಾಹಾರ್ದ್ರತೆಗೆ ಸಹಾಯಕವಾಗಿಲ್ಲ. ಎರಡು ಸ್ವತಂತ್ರ ಸಾಹತುಗಳನ್ನು ಜುಲುಮೆಯಿಂದ ಜೋಡಿಸಲು ಈ ಕೆಳಗಿನ ವಿಧಾನಗಳನ್ನು ಮುಂದೊತ್ತಲಾಗಿದೆ. I. ಮುಸ್ಲಿಂ ಲೀಗ್ ಮತ್ತು ಪಾಕಿಸ್ತಾನ್ ಸರಕಾರದ ವಿರುದ್ಧ ಬಂಡಾಯಕ್ಕೆ ಮುಸ್ಲಿಮರನ್ನು ಎತ್ತಿ ಕಟ್ಟುವದು, 2. ಅದು ನಿರರ್ಥಕವಾದರೆ ಪಾಕಿಸ್ತಾನ್ ನಾಯಕರಿಗೆ ಅವರ ದ್ವಿರಾಷ್ಟ್ರ ತತ್ವವೆಂಬ ತಪ್ಪು ಮುಂದಟ್ಟಾಗುವಂತೆ ಮಾಡಿ, ಅವರು ತಮ್ಮ ವರ್ತನೆ ಬದಲಾಯಿಸುವಂತೆಸಗಿ, ಪುನಃ ಭಾರತ ಕೇಂದ್ರಕ್ಕೆ ಜೋಡಣೆಗೊಳ್ಳುವಂತೆ ಒತ್ತಾಯ. ಹಾಕಿ, ಆ ಮೂಲಕ ಏಕಭಾರತವನ್ನು ನಿರ್ಮಿಸುವದು; 3. ಯುದ್ಧ. ಎರಡು ವಸಾಹತುಗಳೊಳಗೆ ದೃಢವಾದ ಮೈತ್ರಿ ಸಂಬಂಧ ಸ್ಥಾಪನೆಗೊಳ್ಳಬೇಕಾದರೆ ಮೇಲಿನಂತಹ ಪ್ರಚಾರ ನಿಲ್ಲಬೇಕು."

ಸರ್ದಾರ್ ಪಟೇಲರ ಭಾಷಣ

ಪಟಿಯಾಲಾ ಮಹಾರಾಜರ ಅಧ್ಯಕ್ಷತೆಯಲ್ಲಿ ಸಿಖ್ ನಾಯಕ ಸಮ್ಮೇಲನಕ್ಕೆ ಭಾಷಣವೀಯುತ್ತಾ ಸರ್ದಾರರೆಂದರು:— "ನನ್ನದು ಸ್ನೇಹಿತನ ಸಲಹೆ. ನಿಮ್ಮ ಧೈರ್ಯ, ನಿಮ್ಮ ದೇಶಾಭಿಮಾನದ ಮೇಲೆ ಅಮೂಲಾಗ್ರ ಗೌರವವುಳ್ಳ, ನಿಮ್ಮ ಸಮಾಜದ ಮೇಲೆ ಮೈತ್ರೀ ಭಾವ ಹೊರತು ಬೇರಾವುದೂ ಇರದ ಒಬ್ಬ ಮನುಷ್ಯನ ಮಾತುಗಳಿವು. ಅದೃಷ್ಟವು ನಿಮ್ಮ ಮೇಲೆ ಹಾಕಿದ ಭಯಂಕರ ಹೊಡೆತಗಳಿಂದಾಗಿ ನಿಮ್ಮಲ್ಲೇಳಲೇಬೇಕಾಗಿದ್ದ ಭಾವೋದ್ರೇಕಗಳ ಹಾಗೂ ನಿಮ್ಮ ಹೃದಯವನ್ನಾವರಿಸಿಕೊಂಡ ಕೋಧಾವೇಶದ ಸಂಪೂರ್ಣ ಅರಿವು ನನಗಿದೆ. ಆದರೆ ನೀವು ಧೀರ ಜನಾಂಗ; ಪರಿಸ್ಥಿತಿಯನ್ನು ಧೀರರಂತೆಯೇ ಇದಿರಿಸಬೇಕು. ನಿರಪರಾಧಿಗಳ ರಕ್ತ ಚೆಲ್ಲಿ ನಿಮ್ಮ ಆ ಪವಿತ್ರಾಯುಧವನ್ನೂ, ನಿಮ್ಮ ಸಮಾಜದ ಹಾಗೂ ರಾಷ್ಟ್ರದ ಸತ್ಕೀರ್ತಿಯನ್ನೂ ಕಳಂಕಗೊಳಿಸುವುದು ಧೀರರಿಗೆ ಹೇಳಿಸಿದ್ದಲ್ಲ. ಶಾಂತ ಮತ್ತು ನಿರ್ವಿಕಾರ ಬುದ್ಧಿಯಿಂದ ಚಾತುರ್ಯಪೂರ್ಣವಾಗಿ ನಿಮ್ಮ ಸಮಾಜಕ್ಕೂ ರಾಷ್ಟ್ರಕ್ಕೂ ಗೌರವತರುವ ಕಾರ್ಯವಿಧಾನಗಳನ್ನೇ ಚಿಂತಿಸಬೇಕಾದ ಕಾಲವಿದು. ಒದಗಿದ ಅದೃಷ್ಟಕ್ಕಾಗಿ ಅಳುವದಾಗಲೀ, ಆದ ನಷ್ಟಗಳನ್ನು ಲೆಕ್ಕಿಸಿ, ಅದಕ್ಕೆ ಪ್ರತೀಕಾರ ಮಾಡುವ ವ್ಯರ್ಥ ಚಿಂತನೆ ಮಾಡುವದಾಗಲೀ ನಿಮಗೆ ಹೇಳಿಸಿದ್ದಲ್ಲ. ಸ್ವಂತ ತೊಟ್ಟೆ ಕ(?)ಸಾಧನೆಯ ಕೆಲವರು, ಸಿಖ್ ಸಮಾಜಕ್ಕೆ ದುಷ್ಟ ಪಾತ್ರಕೊಟ್ಟು ಹೊರ ದೇಶಗಳಲ್ಲಿ ಅಪಪ್ರಚಾರ ನಡೆಸಿದ್ದಾರೆ. ಕಳೆದೆರಡು ಯುದ್ಧಗಳಲ್ಲಿ ಸಿಖ್ ಸಮಾಜವು ಪಡೆದಿದ್ದ ಕೀರ್ತಿಯನ್ನು ಈಗ ಮರುಸಂಪಾದಿಸಿಕೊಳ್ಳಬೇಕು. ಹಾಗಾಗಬೇಕಾದರೆ ಕತ್ತಿತೊಟ್ಟರೆ ಸಾಲದು; ಅದನ್ನು ಹೇಗೆ ಉಪಯೋಗಿಸತಕ್ಕದ್ದೆಂಬುದನ್ನು ತಿಳಿದುಕೊಳ್ಳುವದಗತ್ಯ. ಹಿಂದೂ ಮತ್ತು ಸಿಖ್ಖರೊಳಗೆ ದ್ವೇಷ ನಿರ್ಮಿಸಿ ಹಾಕಲು ಮತ್ತದನ್ನು ಹಾರೈಸುತ್ತಿರುವ ಮತ್ತೊಂದು ವರ್ಗದ ಪ್ರಚಾರವೂ ನಡೆದಿದೆ. ಇಂತಹ ಧೂಳಿಗಳನ್ನು ದೂರವಿರಿಸಿ ಸುರಕ್ಷಿತವಾಗಿರೋಣ. ಅವುಗಳನ್ನು ಹುಸಿಗೊಳಿಸೋಣ. ಕೊಳೆತ ಅಂಗವನ್ನು ಕತ್ತರಿಸಿಕೊಂಡಲ್ಲಿ ಉಳಿದ ದೇಹಭಾಗವಾದರೂ ಆರೋಗ್ಯಕರವಾದೀತೆಂಬ ಆಶೆಯಿಂದಲೇ ನಾವು ದೇಶ ವಿಭಜನೆಗೊಪ್ಪಿದ್ದೆವು; ಆದರೆ ಗುಣಮುಖವಾಗುವ ಮೊದಲೇ ಸ್ಥಿತಿಸಂಪೂರ್ಣ ಕೆಟ್ಟುಹೋಯಿತು. ಕೇಡನ್ನು ಹಿತದಿಂದಲ್ಲದೆ ಕೇಡಿನಿಂದಲೇ ಇದಿರಿಸಲಾಗುವದಿಲ್ಲ. ಇಂದಿನ ಕದಡುಮೆದುಳು ಮತ್ತು ಅಸ್ತವ್ಯಸ್ತ ನೀತಿನಿಯಮಗಳ ನಡುವೆ ನಾವು ಅಹಿಂಸಾತತ್ವವನ್ನು ಅಕ್ಷರಶಃ ಪಾಲಿಸಲಾರೆವಾದರೂ, ನಾವು ತೊಟ್ಟಿರುವ ಕತ್ತಿಯ ಬೆಲೆ ಕೆಡಿಸುವ ರೀತಿಯಲ್ಲಿ ನಾವೆಂದಿಗೂ ವರ್ತಿಸಕೂಡದು. ಸರಿಯಾದ ಸಮಯ ಮತ್ತು ಸರಿಯಾದ ಕಾರ್ಯ ಗುರಿಯೊದಗಲಿ—ಆಗ ನೀವು ನಿಮ್ಮ ಕತ್ತಿಯನ್ನು ಮನಸೇಚ್ಛೆ ಉಪಯೋಗಿಸಬಹುದು. ಈಗ ನೀವು ನಿಮ್ಮ ಕತ್ತಿಯನ್ನು ಒರೆಯೊಳಗೆ ಸೇರಿಸಿಕೊಳ್ಳಿ. ನಿರಪರಾಧಿ ಪ್ರಯಾಣಿಕರ ಮೇಲೆ ಧಾಳಿ, ಅರಾಜಕತೆ ಶಾಂತಿಭಂಗ, ನಿಸ್ಸಹಾಯಕರ ಮೇಲೆ ಪಾಶವಿಕ ಅತ್ಯಾಚಾರಗಳ ದೆಸೆಯಿಂದ ಅತ್ಯಂತ ಕೆಳಮಟ್ಟದಲ್ಲಿರುವ ನೀತಿನಿಸಾದನನ್ನು(?) ಮೇಲೆಬ್ಬಿಸಿರಿ, ಅಸಹ್ಯ ಅತಿಹೇರಳ ಪ್ರತಿಕೂಲತೆಗಳಿಗಿದಿರಾಗಿ ಒದ್ದಾಡುತ್ತಿರುವ ನಿಮ್ಮ ಸರಕಾರಕ್ಕೆ ಪೂರ್ಣ ಬೆಂಬಲಕೊಡಿ" ಎಂದರು ಸರ್ದಾರ್. ಆ ಮೇಲೆ ಪ್ರಜಾ ಮಂಡಲದ ಪರೇರ್ಪಡಿಸಿದ್ದ $1\frac{1}{2}$ ಲಕ್ಷ ಜನಕ್ಕೂ ಮಿಕ್ಕಿದ ಪ್ರಚಂಡ ಸಭೆಯಲ್ಲಿ ಸರ್ದಾರ್ ಪಟೇಲರೆಂದರು: "ವಿದೇಶೀ ಆಡಳಿತೆ ಬರ್ಖಾಸ್ತಾದಮೇಲೆ ಇಲ್ಲಿ ಇರುವವರೆಲ್ಲರೂ ಒಂದೇ ಕುಟುಂಬ. ಆದ್ದರಿಂದ ಆಶ್ರಿತ ರಾಜರೊಡನೆ ಜಗಳವಿರಕೂಡದು. ಅವರು ನಮ್ಮವರು. ನಮ್ಮ ಅಭಿಮತವನ್ನು ಅವರರಿತುಕೊಳ್ಳುವಂತೆ ಮತ್ತು ಮನ್ನಿಸುವಂತೆ ನಾವು ಮಾಡಬಲ್ಲೆವು. ಆದರೆ ಅವರೀಗ ಹೊತ್ತಿರುವ ಜವಾಬ್ದಾರಿಯನ್ನು ಇಳಿಸಿಕೊಳ್ಳಬೇಕೆಂದು ನೀವು ರಾಜರನ್ನು ಕೇಳುವ ಮೊದಲು ಅದನ್ನು ಹೊರುವ ಯೋಗ್ಯತೆಯನ್ನು ನೀವು ಗಳಿಸಿಕೊಳ್ಳಬೇಕಾದುದು ನಿಮ್ಮ ಆದ್ಯ ಕರ್ತವ್ಯ. ಜನತಾ ಬೆಂಬಲ ವಿನಹಾ ಯಾವ ಸರಕಾರಕ್ಕೂ ಬಾಳುವೆಯಿರದು. ಮೈಸೂರು ಮತ್ತು ತಿರುವಾಂಕೂರುಗಳೇ ಇದರ ಸಜೀವ ನಿದರ್ಶನಗಳು. ಗತ ಕಾಲದಲ್ಲಿ ರಾಜರುಗಳೊಡನೆ ಸ್ವತಃ ನಾನೇ ಹಲವು ಹೋರಾಟಗಳನ್ನು ಕೊಟ್ಟೆವ; ಅವೆಲ್ಲವು ರಾಜರೊಡನಲ್ಲ, ಅವರನ್ನಾಡಿಸುತಿದ್ದ ವಿದೇಶೀ ಏಜಂಟರೊಡನೆ. ರಾಜರುಗಳನ್ನು ಗೂಷಿಸುವ, ಅವರ ಹೆಸರೆತ್ತಿ ಬೈಯ್ಯುವ, ಮಸಿಬಳೆದು ಹೀಗಳೆವ ದಿನಗಳೀಗ ಹೋಗಿವೆ. ಅಂತಹದು ನಮ್ಮ ಶಕ್ತಿಯ ಅನಾವ್ಯಯ ಮಾತ್ರವಲ್ಲ; ಅನಗತ್ಯ ಉದ್ರೇಕ ಮತ್ತು ಲಾಭವಿಲ್ಲದ ಉದ್ದಿಮೆ".

ಕಾಶ್ಮೀರೀ ಕಲಹ

ಕಾಶ್ಮೀರ–ಪಾಕಿಸ್ತಾನ ಸರಕಾರಗಳೊಳಗೆ ನಡೆದ ತಂತೀ ವಾಗ್ವಾದಗಳ (ಈ ಸಂಚಿಕೆಯ ಬೇರೊಂದೆಡೆಯಲ್ಲಿವೆ) ನ್ನಾಧರಿಸಿ ಪಾಕಿಸ್ತಾನ್ ಗವರ್ನರ್ ಜನರಲ್ ಕಾಯಿದೇ ಅಝಾಮ್ ಜಿನ್ನರು ಕಾಶ್ಮೀರ ಮಹಾರಾಜರಿಗೆ ತಂತಿ ಬಿಟ್ಟಿದ್ದಾರೆ. "ಮಹಾದ್ರೋಹಕ್ಕಾಗಿ ವಿಚಾರಿಸಲ್ಪಟ್ಟು ಶಿಕ್ಷೆ ಹೊಂದಿದ್ದ ಶೇಕ್ ಅಬ್ದುಲ್ಲಾ ಮತ್ತಿತರ 'ಕಾಶ್ಮೀರ ರಾಷ್ಟ್ರೀಯ ಸಮ್ಮೇಲನ'ದ ನಾಯಕರನ್ನು ಬಿಡುಗಡೆಮಾಡಿದರೂ, ಒಂದು ಸಭೆಸೇರಿಸುವ ಬಹಿಷ್ಕಾರಾಜ್ಞೆಯನ್ನು ಮುರಿದ ಆರೋಪ ಮಾತ್ರಕ್ಕೆ ಜೈಲಿನಲ್ಲಿರುವ 'ಮುಸ್ಲಿಂ (ಲೀಗ್) ಸಮ್ಮೇಲನ'ದ ಮಿ. ಗುಲಾಮ್ ಅಬ್ಬಾಸ್ ಮತ್ತವರ ಅನುಯಾಯಿಗಳನ್ನು ಬಿಡದೆ ನಿಮ್ಮ ಸರಕಾರ ಪಕ್ಷಪಾತ ಮಾಡಿದೆ" ಎಂದು ಜಿನ್ನರಾಕ್ಷೇಪಿಸಿದ್ದರು. ಹಿಂದೀ ಕೇಂದ್ರಕ್ಕೆ ಸೇರಿದರೆ ಗಂಡಾಂತರ ಕಾದಿದೆ ಎಂದು ಜಿನ್ನರೂ ಬೆದರಿಸಿದ್ದರು. ಸಂಧಾನ ಮಾತುಕತೆಗಾಗಿ ಕಾಶ್ಮೀರದ ಪ್ರಧಾನಿಗಳು ಕರಾಚಿಗೆ ಬರಲೆಂದು ಆಹ್ವಾನಿಸಿದ್ದರು.

ಕಾಶ್ಮೀರ ಹಿಂದೀ ಕೇಂದ್ರಕ್ಕೆ ಸೇರಿತು!

ಈ ನಡುವೆ ಕಾಶ್ಮೀರದ ಘಟನೆಗಳು ಮಿಂಚು ವೇಗದಿಂದ ಮಾರ್ಪಟ್ಟಿವೆ. ಕಾಶ್ಮೀರದ ಮೇಲೆ ಅನಧಿಕೃತ ಮುಸ್ಲಿಂ ಆಕ್ರಮಣವಾರಂಭಿಸಿದೆ. ಪ್ರತ್ಯಕ್ಷ ಯುದ್ಧವೇ ನಡೆಯುತ್ತಿದೆ ಎನ್ನಬಹುದು. ಈಗ ರಜೆಯಲ್ಲಿರುವ ಪಾಕಿಸ್ತಾನ್ ಸೇನೆಯ ಸುಮಾರು 2000 ಅಫ್ರಿದಿ ಸೋಲ್ಜರರು 100 ದೊಡ್ಡ ಮೋಟಾರು ವಾಹನಗಳಲ್ಲಿ ಅತ್ಯಾಧುನಿಕ ಶಸ್ತ್ರೋಪಕರಣಗಳಿಂದ ಕಾಶ್ಮೀರದೊಳಗೆ ನುಗ್ಗಿ, ಸ್ಥಳೀಯ ಮುಸ್ಲಿಮರ ಬೆಂಬಲ ಪಡೆದು ಮುಸ್ಲಿಮೇತರರ ಕೊಲೆ, ಸುಲಿಗೆ, ಸ್ತ್ರೀಯರ ಮೇಲೆ ಬಲಾತ್ಕಾರ, ಮತಾಂತರಾದಿ ಪೈಶಾಚಿಕ ದುಷ್ಕೃತ್ಯಗಳನ್ನು ಮಾಡುತ್ತಾ ಮುಂದೊತ್ತಲಾರಂಭಿಸಿದ್ದಾರೆ. ಇವರಿಗೆ ಗಡಿನಾಡು ಸರಕಾರದ ರೇಶನ್ ಪೆಟ್ರೋಲು ದೊರೆತಿದೆ. ಕಾಶ್ಮೀರದೊಳಗೆ ಸೇಕಡಾ 85ರಷ್ಟಿರುವ ಮುಸ್ಲಿಮರ ಗೊಂದಲ ನಿವಾರಣೆಗಾಗಿ ಇರುವ 10000 ಸೇನೆಯಿದ್ದರೂ ಪಾಕಿಸ್ತಾನದಂತಹ ಪ್ರಬಲ ರಾಷ್ಟ್ರವನ್ನು ಅದು ಏಕಾಕಿಯಾಗಿ ಪ್ರತಿಭಟಿಸಲು ತೀರಾ ಅಸಮರ್ಥವಿದೆ. ಕಾಶ್ಮೀರದ ಮುಸ್ಲಿಮೇತರರ ಪ್ರಾಣಕ್ಕೂ ಕಾಶ್ಮೀರೀ ಸರಕಾರಕ್ಕೂ ಗಂಡಾಂತರವೊದಗಿದೆ. ಕಾಶ್ಮೀರದ ಉಪಪ್ರಧಾನಿ ಶ್ರೀ. ಆರ್. ಯಸ್. ಬಾಟ್ರಾರು ನವದಿಲ್ಲಿಗೋಡಿ ಪಂಡಿತ ನೆಹರುಗಳಿಗೆ ಮೊರೆಯಿಟ್ಟಿದ್ದಾರೆ. ಭಾರತ ಮಂತ್ರಿ ಮಂಡಲದ ಅವಸರದ ಸಭೆಸೇರಿ ಪರ್ಯಾಲೋಚನೆ ನಡೆಯಿತು. ಸಂಸ್ಥಾನೀ ಖಾತೆಯ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನರು ಶ್ರೀನಗರಕ್ಕೆ ಧಾವಿಸಿ, ಸ್ಥಿತಿಗತಿಗಳ ಪ್ರತ್ಯಕ್ಷಾವಲೋಕನ ನಡೆಸಿದ್ದಾರೆ. ತತ್ಪರಿಣಾಮವಾಗಿ ಕಾಶ್ಮೀರವು ಭಾರತ ಕೇಂದ್ರಕ್ಕೆ ಸೇರಿತೆಂದು ಈಗ ತಾನೇ ವಾರ್ತೆ ಬಂದಿದೆ. ಇದರಿಂದಾಗಿ ಪರಿಸ್ಥಿತಿ ತೀರಾ ಗಂಭೀರವಾಗಿದೆ. ಪಾಕಿಸ್ತಾನ್–ಭಾರತಗಳೊಳಗಿನ ಘರ್ಷಣೆಗಿನ್ನು ಅಂಗುಲ ಮಾತ್ರ ಬಾಕಿಯೆಂಬಂತಾಗಿದೆ. ಮುಂದೇನೋ!

The Canara Banking Corporation Limited.

(Incorporated in British India).

Estd: 1906.

Head Office: **UDIPI**, S. India.

ANNOUNCEMENT.

A branch of the BANK will be shortly opened at High Road, **TRICHUR.** (Cochin State)

ನವಯುಗ

ಗುರುವಾರ, ಉಡುಪಿ, ೩೦-೧೦-'೪೭

ಮುತ್ತೇದಾರರ ಸಂಕಷ್ಟ

ಇಡೀ ಪ್ರಾಂತ್ಯದಲ್ಲಿ ಪಾನನಿಷೇಧ ಜಾರಿಗೆ ತರುವ ಮದ್ರಾಸ್ ಸರಕಾರದ ತ್ರೈವಾರ್ಷಿಕ ಯೋಜನೆಯ ಎರಡನೇ ಕಂತಾಗಿ ದಕ್ಷಿಣಕನ್ನಡವೇ ಮೊದಲಾದ ಎಂಟು ಜಿಲ್ಲೆಗಳಲ್ಲಿ ಅಮಲುನಿಷೇಧವಾಗಿ ಇಂದಿಗೆ ತಿಂಗಳಾಗುತ್ತ ಬಂತು. ಇದುವರೆಗಿನ ಅನುಭವದ ಮೇಲಿಂದ, ಮೊದಲು 'ಅಮಲು ಖೋರ'ರೆನ್ನುತ್ತಿದ್ದ ಹೆಚ್ಚಿನವರನ್ನು ಈಗ 'ಅಮೂಲ್ಯ ವೀರ'ರೆಂದು ಸಂಬೋಧಿಸುವದಕ್ಕಡ್ಡಿಯಿಲ್ಲ. ನಿಜಕ್ಕೂ ಮಿಕ್ಕವರು ನಿರೀಕ್ಷಿಸಿರದಂತಹ ಸಂಯಮನ, ಸಂತೋಷಚಿತ್ತ, ಉಲ್ಲಾಸಗಳು ಮಾಜೀ 'ಕುಡಿಕ'ರಲ್ಲಿ ಕಂಡುಬರುತ್ತಿವೆ. ಅನಿವಾರ್ಯವೆಂಬುದರಿಂದಲೇ ಈ ಆತ್ಮಸಂಯಮನವೆಂಬ ಮಾತು ಬೇರೆ; ಇಂತಹ ನಿಸ್ಸಹಾಯಕ ಸ್ಥಿತಿಯಲ್ಲಿ ಗಲಿಬಿಲಿ ಪ್ರದರ್ಶಿಸುವ ಹಕ್ಕಾದರೂ ಈ ವರ್ಗದವರಿಗಿದ್ದಿತು. ಆದರೆ ಅವರು ಹಾಗಾಗಿಲ್ಲವಾದ್ದರಿಂದ ಅಭಿನಂದಿಸಬೇಕು.

ಮಲಬಾರಿನ ಮುತ್ತೇದಾರರೇ ಮೊದಲಾದವರ ಚಳವಳವನ್ನನುಸರಿಸಿ ದಕ್ಷಿಣ ಕನ್ನಡದ ಮುತ್ತೇದಾರರ ಚಳವಳವೂ ಈಗ ಜಿಲ್ಲೆಯಲ್ಲೆಲ್ಲಾ ವ್ಯಾಪಿಸುವಂತೆ ಕಂಡುಬರುತ್ತಿದೆ. ಪಾನ ನಿಷೇಧವು ಮುತ್ತೇದಾರರಿಗೆಂತಹ ಕಷ್ಟನಷ್ಟಗಳನ್ನು ತಂದೊಡ್ಡಿದೆ ಎಂಬುದನ್ನರಿಯದವರಿಲ್ಲ. ಒಂದು ದುರಭ್ಯಾಸದೊಂದಿಗೆ ಅದಕ್ಕೆ ಹೊಂದಿಕೊಂಡಿದ್ದ ಒಂದು ದುಡಿಮೆ ವಿಭಾಗವೂ ಬರ್ಖಾಸ್ತು ಹೊಂದಬೇಕಾಯಿತು. ಮಾನ್ಯ ಚಂದ್ರಮೌಳಿಯವರೇ ಒಪ್ಪಿಕೊಂಡಂತೆ ಆ ಕಸಬುದಾರ ವರ್ಗಕ್ಕಿದು ಎದೆ ತಿವಿತದಂತಾಗಿದೆ ಎಂಬುದು ಸರಕಾರಕ್ಕೆ ತಿಳಿದಿದೆ. ಆದ್ದರಿಂದಲೇ ತಾಳೇ ಮರಗಳಿಂದ ಬೆಲ್ಲ ತಯಾರಿಸುವವರು 'ಸೊಸೈಟಿ'ಗಳನ್ನು ರಚಿಸಿಕೊಂಡು ಸರಕಾರೀ ಸಮ್ಮತಿ ಪಡೆದು ನಿಯಂತ್ರಣಗಳಿಗೆ ಕಟ್ಟುಬಿದ್ದು ತಯಾರಿಸಬಹುದು. ಇತರ ಮುತ್ತೇದಾರರೂ ತಂತಮ್ಮ 'ಸೊಸೈಟಿ'ಗಳನ್ನು ರಿಜಿಸ್ಟ್ರ ಮಾಡಿಸಿಕೊಂಡು ಉದ್ಯೋಗ ವಿಧಾನಗಳನ್ನು ಕಂಡುಕೊಂಡು ಸರಕಾರದ ಸಹಾಯ ಹೊಂದಬಹುದು. ಹೀಗಲ್ಲದೆ, ಬೇರಾವ ವಿಧದಿಂದ ಸರಕಾರವು ಮುತ್ತೇದಾರರಿಗೆ ನೆರವಾಗಬಹುದೋ ತಿಳಿಯದು. ಸರಕಾರದ ಈ ಆಶ್ವಾಸನೆಗಳು ಮಾತು, ಲಿಪಿಗಳಲ್ಲಿ ಮಾತ್ರ ಮೂಡಿ ಕಾರ್ಯರಂಗದಲ್ಲಿ ಕಾಣದಂತಾಗುವ ಹವ್ಯಾಸವನ್ನು ತಪ್ಪಿಸುವುದಕ್ಕೂ, ಅಂತಹ ಸಹಾಯಗಳು ಸಾಕಷ್ಟು ದೊರೆಯುವಂತೆ ಮಾಡುವುದಕ್ಕೂ ಮುತ್ತೇದಾರರು ಒಕ್ಕಟ್ಟಾಗಿ ಪ್ರಯತ್ನಿಸಬೇಕಾದುದು ಮುಖ್ಯ. ಬಹಳಿಗೆ ಕೆಲವೆಡೆಗಳಲ್ಲೆದ್ದಿರುವ 'ತಪ್ಪು ಮಾಡಿದ ಸರಕಾರ ದಂಡ ತೆರಬೇಕು' ಎಂಬರ್ಥಕೊಡುವ ಬೇಡಿಕೆಗಳಂತೆ ಪ್ರತಿಯೊಬ್ಬನಿಗೂ ಕಿಸೆಹಣವಾಗಿ ಸರಕಾರವೆಷ್ಟನ್ನಾದರೂ ತೆತ್ತಲ್ಲಿ ಈ ಸಮಸ್ಯೆ ಪರಿಹಾರ ಹೊಂದುವದು ನಿಜವೆ? ಯಾರೂ ನಿರುದ್ಯೋಗಿಗಳಾಗದಂತೆ ನೋಡುವ ಪ್ರಶ್ನೆಯೊಂದೇ ಇಲ್ಲಿದೆ; ಹೊರತು ಯಾವುದೇ ಅನ್ಯಾಯಕ್ಕೆ ಪ್ರಾಯಶ್ಚಿತ್ತ ಮಾಡುವ ಅಂಶವೇನೂ ಇಲ್ಲ. ಈ ಪಾನನಿರೋಧವು ಸರಕಾರ, ಸಾರ್ವಜನಿಕರು, ವ್ಯಾಪಾರಿಗಳು, ಮದ್ಯದಂಗಡಿ ಕಂಟ್ರಾಕ್ಟುದಾರರು, ಮುತ್ತೇದಾರರು, ಎಂಬ ಭೇದವಿಡದೆ, ಯಾರ ಮೇಲೂ ಪಕ್ಷಪಾತ ಮಾಡದೆ, ಎಲ್ಲರನ್ನೂ ಒಂದಲ್ಲೊಂದು ವಿಧದಿಂದ ಕಷ್ಟನಷ್ಟಗಳಿಗೀಡುಮಾಡಿದೆ. ಆ ಪೈಕಿ ಈ ಸಂಬಂಧದ ನಿರುದ್ಯೋಗಿಗಳಲ್ಲಿ ಮುತ್ತೇದಾರರ ಸಂಖ್ಯೆ ದೊಡ್ಡದು. ಆ ವರ್ಗದವರಾರೂ ನಿರುದ್ಯೋಗಿಗಳಾಗದಂತೆ ನೋಡುವದು ಸರಕಾರದ ಆದ್ಯ ಕರ್ತವ್ಯವಿದೆ; ಅಂತಹ ಕಷ್ಟ ನಿವಾರಣೆಗೆ ನೆರವಾಗುವದು ಜನತೆಯ ಜವಾಬ್ದಾರಿಯೂ ಆಗಿದೆ. ಅಮಲು ನಿರೋಧ ವ್ಯವಸ್ಥೆ ಕೆಡದಂತೆ, ಈ ವರ್ಗದ ಕಸಬುದಾರರಿಗೆ ನೆರವಾಗುವ ಹಾದಿಯೆಂದರೆ ಸರಕಾರವು ಈಗ ಸೂಚಿಸಿರುವ ವಿಧಾನವೇ; ಅದು ಪರಿಣಾಮಕಾರಿಯಾಗುವಂತೆ ಸಾಧಿಸಿಕೊಳ್ಳುವದೊಂದೇ ಸದ್ಯಕ್ಕಿರುವ ಕರ್ತವ್ಯ.

ಹಾಗಾದಲ್ಲಿ ಮುತ್ತೇದಾರರ ಪಾಲಿಗೂ ಮಿಕ್ಕವರಷ್ಟೇ ಕಷ್ಟಕಷ್ಟಗಳುಳಿವವು ಹೊರತು ಹೆಚ್ಚಲ್ಲ. ಯಾವುದೇ ಶಮನದಿಂದಾದರೂ, ಪಾನ ನಿರೋಧವು ತಂದೊಡ್ಡಿದ ಎಲ್ಲರ ಪಾಲಿನ ಎಲ್ಲಾ ಕಷ್ಟನಷ್ಟಗಳೂ ಪೂರ್ತಿ ನಿವಾರಣೆಗೊಂಡಾವೆನ್ನಲು ಸಾಧ್ಯವಿಲ್ಲ. ಸರಕಾರದ ಖಜಾನೆಗೆ ತೂತು ಬಿತ್ತು; ಅದನ್ನು ತುಂಬಿಕೊಳ್ಳಲು ಹೆಚ್ಚಿನ ತೆರಿಗೆ ಹೇರುವ ಅಡಚಣೆಯೊದಗಿದೆ; 'ಸೇಲ್ಸ್‌ಟೇಕ್ಸ್' ಹೆಚ್ಚಳದಂತಹ ಹೊಸ ಹೊರೆಯು ವ್ಯಾಪಾರಿಗಳಿಗೆ ಮುತ್ತಾಮೂಲಕ ಸಾರ್ವಜನಿಕರಿಗೆ ಭಾರವಾಗಲಿದೆ. ಮಲಬಾರಿನ ವ್ಯಾಪಾರೀ ಸಂಘಗಳಂಥವರು ಇಷ್ಟರಲ್ಲೇ ಮಂತ್ರಿಗಳೆದಿರು ಹರತಾಳ, ಪ್ರತ್ಯಕ್ಷ ಕಾರ್ಯಾಚರಣೆ ನಡೆಸುವ ಬೆದರಿಕೆ ಬೀರಹತ್ತಿದ್ದಾರೆ. ಸಿಟ್ಟೇಳುವ ಹಕ್ಕು ಮುತ್ತೇದಾರರಿಗೆ ಮಾತ್ರವಲ್ಲ, ಎಲ್ಲರಿಗೂ ಇದೆ. ಹೆಚ್ಚಾಗಿ ತೋಟವುಳ್ಳವರು, ಬೇಸಾಯವುಳ್ಳವರೇ ಮುತ್ತೇದಾರರಾಗಿದ್ದರು. ಅಂಥವರ ಲಾಭದಾಯಿ ಉತ್ಪತ್ತಿಯೊಂದಕ್ಕೆ ಕತ್ತರಿ ಬಿತ್ತು, ಹೊರತು ಉದ್ಯೋಗವೇ ಕಳೆದುಹೋಗಿಲ್ಲ. ಕಳೆದುಹೋದ ಅಂಶವನ್ನು ಮೇಲ್ಗಡೆ ನಮೂದಿಸಿದ ವಿಧಾನಗಳಿಂದ ಶಕ್ಯವಿದ್ದಷ್ಟು ತುಂಬಿಕೊಂಡಲ್ಲಿ, ಮುತ್ತುಳಿಯುವ ಮಟ್ಟಿಗೆ ಅವರೂ ಮಿಕ್ಕವರಂತೆಯೇ. ಆದ್ದರಿಂದ ಅನಗತ್ಯ ಗೊಂದಲಗಳಿಗೆ ಅವರು ಮನಸ್ಸು ಕೊಡಬಾರದು. ಅನ್ಯೋದ್ದೇಶವಿಟ್ಟುಕೊಂಡ ಒಂದೆರಡು ರಾಜಕೀಯ ಪಕ್ಷಗಳವರು ಮುತ್ತೇದಾರರ ಅತೃಪ್ತಿಯನ್ನು ಸ್ವಕಾರ್ಯ ಸಾಧನೆಗುಪಯೋಗಿಸಿಕೊಳ್ಳಲು ಹವಣಿಸುತ್ತಿರುವುದು ಕಂಡುಬರುತ್ತದೆ. ಇಂತಹ ಸಂದರ್ಭಗಳಲ್ಲಿ ಪೀಡಿತರ ಕಷ್ಟನಿವಾರಣೆಯೊಂದೇ ಗುರಿಯಾಗಿರಬೇಕಲ್ಲದೆ, ಅದನ್ನೊಂದು ನೆವವಾಗಿ ಮಾಡಿಕೊಂಡು ತಮ್ಮಾಟವನ್ನು ಅಂಥವರಾಡಿಸಲು ಯಾರೂ ನೋಡಬಾರದು. ಈ ಕುರಿತು ಸಂಬಂಧಪಟ್ಟವರೆಲ್ಲರೂ ಸಾಕಷ್ಟು ಜಾಗರೂಕತೆವಹಿಪರೆಂದು ನಂಬುತ್ತೇವೆ. ಮುತ್ತೇದಾರ ವರ್ಗದ ನಾಯಕರು ಎಲ್ಲವನ್ನೂ ತುಲನಾತ್ಮಕವಾಗಿ ಪರಿಶೀಲಿಸಿ, ತಮ್ಮ ಅನುಯಾಯಿಗಳ ಸಂಕಷ್ಟ ನಿವಾರಣೆಗೆ ಸರಿಯಾದ ವಿಧಾನಗಳನ್ನೇ ಅಂಗೀಕರಿಸುವರೆಂದೂ, ಪಾನನಿಷೇಧದ ವಿಜಯಸ್ಪರ್ಧೆಯಲ್ಲಿ ದ. ಕ. ಜಿಲ್ಲೆಯು ಸರ್ವ ಪ್ರಥಮಸ್ಥಾನಗಳಿಸುವದೆಂದೂ ನಮ್ಮ ಆಶೆ.

ಉಡುಪಿ

ಬಕ್ರೀದ್ ಸತ್ಕಾರ ಕೂಟ— ಬಕ್ರೀದ್ ಹಬ್ಬದ ಸಂಬಂಧವಾಗಿ ಮುನ್ಸಿಪಲ್ ಕೌನ್ಸಿಲರ್ ಮಿ. ಇಮಾಮ್ ಸಾಹೇಬರು ಉಡುಪಿ ಅಂಜುಮಾನ್ ಭವನದಲ್ಲಿ ತಾ. 25-10-47ನೇ ಅಪರಾಹ್ನ 5ಕ್ಕೆ ಟೀಪಾರ್ಟಿಯೊಂದನ್ನಿತ್ತರು. ಡಾ। ಸುಂದರರಾವ್ ಪೈಗಳು ಅಧ್ಯಕ್ಷರಾಗಿದ್ದರು. ಉಡುಪಿಯ ಹಿಂದೂ ಮುಸ್ಲಿಂ ಮೈತ್ರಿಯನ್ನೆತ್ತಿ, ಮುಂದಕ್ಕೂ ಮಿಕ್ಕವರಿಗೆ ನಾವು ಮಾದರಿಯಾಗಿರಬೇಕೆಂದು ಹಾರೈಸಿ ಅಧ್ಯಕ್ಷರೂ ಶ್ರೀಗಳಾದ ಉಪೇಂದ್ರ ಶ್ರೀನಿವಾಸ ನಾಯಕ್, ಕೊಚ್ಚಿಕಾರ್ ಪದ್ಮನಾಭ ಪೈ, ಟಿ. ಎ. ಪೈ, ಟಿ. ಹರಿಶ್ಚಂದ್ರ ರಾವ್, ಕಮಲಾಕ್ಷ ಪೈ, ಆರ್. ಆರ್. ಕುಂಜೂರು, ಡಾ। ಕೇಳು ನಂಬಿಯಾರರು ಭಾಷಣವಿತ್ತರು. ವಕೀಲ್ ಮಿ. ಉಸ್ಮಾನ್ ಸಾಹೇಬರು ಬಕ್ರೀದ್ ಮಹತ್ವವನ್ನು ವಿವರಿಸಿದರು. ಮಿ. ಇಮಾಮ್ ಸಾಹೇಬರ ಧನ್ಯವಾದಗಳಾದುವು.

ನವರಾತ್ರಿ—ದಿನಗಳಲ್ಲಿ ಶ್ರೀಕೃಷ್ಣ ಮಠದ ವತಿಯಿಂದ ಮಿತ್ರ ಕೂಟದವರು 'ದುರ್ಗೇಶನಂದಿನಿ' ಮತ್ತು 'ಕಂಸವಧೆ' ಎಂಬ ಎರಡು ನಾಟಕಗಳನ್ನು ಭೋಜನ ಶಾಲೆಯಲ್ಲಿ ಪ್ರದರ್ಶಿಸಿದ್ದರು.

ವೈದಿಕ ಧರ್ಮ ಪರಿಷತ್ತಿನ ಕಡೆಯಿಂದ ನವರಾತ್ರಿ ಪ್ರಸನ್ನ ಕಾಲದಲ್ಲಿ ಇಲ್ಲಿಯ ಶ್ರೀ ಅನಂತೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಹರಿಕಥೆ ಧಾರ್ಮಿಕ ವಿಚಾರಗಳಲ್ಲಿ ವಿಚಾರಪರ ಉಪನ್ಯಾಸಗಳಾದುವು ಎಂದು ಪ್ರತ್ಯಕ್ಷದರ್ಶಿಗಳೊಬ್ಬರು ತಿಳಿಸುತ್ತಾರೆ.

ಭಾರತದ ಗವರ್ನರ್ ಜನರಲ್

ಲೋರ್ಡ್ ಲುಯಿಸ್ ಮೌಂಟ್‌ಬೇಟನ್ನರು ತನ್ನ ಅಣ್ಣನ ಮಗನಿಗೆ ರಾಜಕುಮರಿಯೊಂದಿಗೆ ಆಗಲಿರುವ ವಿವಾಹದ ಸಂಬಂಧವಾಗಿ ನವಂಬರ್ ಮಧ್ಯ ಭಾಗದಲ್ಲಿ ಲಂಡನ್ನಿಗೆ ಹೋಗಿ 10 ದಿನ ನಿಲ್ಲುವರೆಂದೂ ಈ ಅವಧಿಯಲ್ಲಿ ಈಗ ಪಶ್ಚಿಮ ಬಂಗಾಳದ ಗವರ್ನರರಾಗಿರುವ ಶ್ರೀ. ಸಿ. ರಾಜಗೋಪಾಲಾಚಾರ್ಯರು ಗವರ್ನರ್ ಜನರಲ್ ಹುದ್ದೆಯಲ್ಲಿರುವರೆಂದೂ ತಿಳಿದು ಬರುತ್ತದೆ.

ಗಾಂಧಿಜೀಯ ಅಭಿಪ್ರಾಯ

"ಕಾಶ್ಮೀರದಲ್ಲೀಗ ನಡೆದಿರುವ ಸಂಗತಿ ನಿಜಕ್ಕೂ ಕೆಟ್ಟದು. ಪಾಕಿಸ್ತಾನಕ್ಕೆ ಸೇರುವಂತೆ ಕಾಶ್ಮೀರವನ್ನು ಪಾಕಿಸ್ತಾನವು ಬಲಾತ್ಕರಿಸುತ್ತಿರುವುದೇ ಆರೋಪ. ಕಾಶ್ಮೀರವನ್ನಾಗಲೀ, ಹೈದರಾಬಾದನ್ನಾಗಲೀ, ಸಣ್ಣ ಜುನಾಗಾಡ್ ಅಥವಾ ಬೇರಾವ ಸಂಸ್ಥಾನವನ್ನೇ ಆದರೂ ಯಾರೊಬ್ಬರೂ ಬಲಾತ್ಕರಿಸಕೂಡದು. ಇದಕ್ಕೇನು ಪರಿಹಾರ? ನಾನು ಎಲ್ಲಾ ರಾಜರು ಮತ್ತು ಮಹಾರಾಜರುಗಳ ಮುಂದಿಡುತ್ತೇನೆ—ಸಂಸ್ಥಾನಗಳ ನಿಜವಾದ ಅರಸರು ಅವರಲ್ಲ. ಈಗಿನ ರಾಜರು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕೃತಿಗಳು. ಬ್ರಿಟಿಷ್ ಅಧಿಕಾರ ಭಾರತದಿಂದ ಕಾಲ್ತೆಗೆದಿದೆ. ಸಂಸ್ಥಾನಗಳ ನಿಜವಾದ ಅರಸರೆಂದರೆ ಅವುಗಳ ಜನತೆಯೇ. ಅವರ ಸಂಕಲ್ಪ ಮಾನ್ಯವಾಗಬೇಕು. ರಾಜ ಮಹಾರಾಜರು ಕೇವಲ ಟ್ರಸ್ಟಿಗಳಾಗಿ ಮಾತ್ರ ಇರಬಲ್ಲರು. ಯಾವ ಒತ್ತಡವೂ ಇಲ್ಲದೆ ಕಾಶ್ಮೀರದ ಜನತೆಯೇ ಕಾಶ್ಮೀರವಾವ ಕಡೆಗೆ ಸೇರಬೇಕೆಂಬುದನ್ನು ನಿರ್ಧರಿಸಬೇಕು" ಎಂದು ಗಾಂಧಿಜಿಯು[illegible]ದಿದ್ದಾರೆ.

ಮಂಗಳೂರು— ಚೆಯರ್‌ಮನ್ ಶ್ರೀ ಎಲ್. ಸಿ. ಪಾಯಸ್ ಅವರ ಅಧ್ಯಕ್ಷತೆಯಲ್ಲಿ ತಾ 27ರಲ್ಲು ಜರಗಿದ ಮಂಗಳೂರು ಮುನಿಸಿಪಲ್ ಕೌನ್ಸಿಲು ಸಭೆಯಲ್ಲಿ ಶ್ರೀಗಳಾದ ಬಿ. ದಾಮೋದರ ಬಾಳಿಗ, ಎಸ್. [illegible] ಮತ್ತು, ಬಿ. ಗಂಗಾಧರದಾಸ್, ಅವರು ವೈಸ್ ಚೆಯರ್‌ಮನ್ ಸೀಟಿಗೆ ಉಮೇದ್ವಾರರಾಗಿದ್ದು ಹೆಚ್ಚಿನ ವೋಟುಗಳನ್ನು ಪಡೆದ ಶ್ರೀ ಗಂಗಾಧರದಾಸರೇ ವೈಸ್ ಚೆಯರ್‌ಮನ್ನರಾಗಿ ಆರಿಸಲ್ಪಟ್ಟಿರುವರು.

NOTICE

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. 376/1947 S. I. A. 160/1947

ಪಿ. ದೇಜಪ್ಪನನಯ, ವೆಂಕಪ್ಪ [illegible] ವಾಗ, ಉಡುಪಿ ಕಸಬಾ —ವಾದಿ.

ಮತ್ತು

ಯಸ್. ಎ. ನರ್ಸಿಂಹ ಮೂರ್ತಿ, ಕಿಂಡಿಮಾಲ್ಕಿ ರೇಷನ್ ಚೌಕಿದಾರ, ಯೆಲ್ಲಪ್ಪನ ಅಳಿಯ. ಒಡಗೆಬೆಟ್ಟು ಗ್ರಾಮದ ಸದರಿ ಚೌಕಿದಾರ ಯೆಲ್ಲಪ್ಪನ ಮನೆ —ಪ್ರತಿವಾದಿ

ವಾದಿಯಿಂದ ಪ್ರತಿವಾದಿಯು ಖಡಕ[illegible]ನದ ಚೈನಿನ ಮುವ್ವಳ್ಳ, ವ ಕಟ್ಟೋಣ ಬಾಬ್ತಿಗೆ ಬಾಕಿ ವಗೈರೆ ಕೂಡಾ ರೂಪಾಯಿ 175-9-6ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 7-11-1947ಕ್ಕೆ ತನಿಖೆಗೆ ಬಿಟ್ಟಿರುತ್ತದೆ, ಪ್ರತಿವಾದಿಗೆ ಯೇನಾದರೂ ಆಕ್ಷೇಪವಿದ್ರೆ ಸದರಿ ತಾರೀಕಿನ ಬೆಳಿಗ್ಗೆ 10 ಗಟೆಗೆ ಸದರಿ ಕೋರ್ಟಿನಲ್ಲಿ ಹಾಜರು ಮಾಡಿಕೊಳ್ಳತಕ್ಕದ್ದು.

K. L. Aithal

Vakil for Planitiff

★ ಕಾಶ್ಮೀರದಲ್ಲಿ ಪಾಕಿಸ್ತಾನ್–ಭಾರತ ಸೇನಾ ಘರ್ಷಣೆ ★

ಶೇಕ್ ಅಬ್ದುಲ್ಲಾ ಸರಕಾರ ಸ್ಥಾಪನೆ.

ಕಾಶ್ಮೀರದ ಘಟನೆಗಳು ಪಕ್ಕ ಪಕ್ಕನೇ ಬದಲಾಯಿಸಿ, ಒಂದೆರಡು ದಿನಗಳೊಳಗೆ ಅದ್ಭುತಗಳನ್ನೇ ನಿರ್ಮಿಸಿವೆ; ದ್ವಿತೀಯ ಜಾಗತಿಕ ಯುದ್ಧದ ಆದಿಭಾಗದ ವಿಸ್ಮಯ ಕಾರಕ ಮೂರ್ಖಾಟಗಳೇ ಈಗ ಕಾಶ್ಮೀರರಂಗದಲ್ಲಾಗಿವೆ. ಪಾಕಿಸ್ತಾನದ ಅನಧಿಕೃತ ಸೇನೆ ಕಾಶ್ಮೀರದೊಳಗೆ ನುಗ್ಗಿ, ಸ್ಥಳಾಕ್ರಮಣ ಮಾಡುತ್ತಾ ಮುಂದೊತ್ತಿತು–ಕಾಶ್ಮೀರ ಪೋಡಿಬಂದು ಭಾರತ ಕೇಂದ್ರದೊಡನೆ ಸಹಾಯಕ್ಕಾಗಿ ಮೊರೆಯಿಟ್ಟು ಅದರೊಂದಿಗೆ ಸೇರಿಕೊಂಡಿತು–ಭಾರತ ಸರಕಾರದ ನಿರ್ದೇಶದಂತೆ ಕಾಶ್ಮೀರದ ಮಹಾರಾಜರು ಪ್ರಜಾನಾಯಕ ಶೇಕ್ ಅಬ್ದುಲ್ಲಾನನ್ನು ಆಮಂತ್ರಿಸಿ ಆತನಿಗೆ ನಾಯಕ ಪಟ್ಟ ಕಟ್ಟಿದರು–ಶೇಕ್ ಅಬ್ದುಲ್ಲಾ ತಾತ್ಕಾಲಿಕ ಮಂತ್ರಿಮಂಡಲಿ ರಚಿಸಿ ಕಾಶ್ಮೀರವು ಸದ್ಯ ಭಾರತ ಕೇಂದ್ರಕ್ಕೆ ಸೇರಿರುವುದೆಂದೂ ಮುಂದೆ ಪರಿಸ್ಥಿತಿ ಶಾಂತವಾದಾಗ ಜನಮತ ಸಂಗ್ರಹಿಸಿ ಯಾವ ಕಡೆಗೆ ಸೇರಬೇಕೆಂಬುದನ್ನು ನಿರ್ಧರಿಸಲಾಗುವದೆಂದೂ, ಈಗಿನ ಗೊಂದಲವನ್ನು ತನ್ನ ಸರಕಾರ ಸಹಿಸದೆಂದೂ ಘೋಷಿಸಿದರು–ಮುಸ್ಲಿಂ ಸೇನೆಗಳು ಕಾಶ್ಮೀರದೊಳಕ್ಕೆ ೭೫ ಮೈಲಿಗೂ ಮಿಕ್ಕಿ ಮುಂಬೊತ್ತಿಹೋಗಿವೆ– ಕಾಶ್ಮೀರ ಮಹಾರಾಜರ ವಿಜ್ಞಾಪನೆಯಂತೆ ಅವರ ಸಹಾಯಕ್ಕಾಗಿ ಭಾರತ ಸರಕಾರವು ತನ್ನ ಸೇನೆಗಳನ್ನು ವಿಮಾನಗಳ ಮೂಲಕ ಸಾಗಿಸಿದೆ– ಪಾಕಿಸ್ತಾನ್ ಮಂತ್ರಿ ಮಂಡಲವು ಅವಸರದ ಸಭೆಸೇರಿ ಪರಿಸ್ಥಿತಿಯನ್ನು ಪರ್ಯಾಲೋಚಿಸಿದೆ–ಇತ್ಯಾದಿ ಮಹಾ ಮಹಾ ಸಂಗತಿಗಳು ಸಾಲುಬೊಂಬುಗಳಂತೆ ಒಂದೊಂದಾಗಿ ಸ್ಫೋಟಗೊಂಡಿವೆ. ಮುಂದೇನು? ಭಾರತ-ಪಾಕಿಸ್ತಾನಗಳು ಪ್ರತ್ಯಕ್ಷ ಯುದ್ಧಕ್ಕಿಳಿಯುವವೆ? ಅಖಿಲ ಭಾರತ ಮತ್ತು ಪಾಕಿಸ್ತಾನಗಳು ಉದ್ವೇಗಾತುರರಾಗಿವೆ; ಪ್ರಪಂಚವೂ ಇದನ್ನು ನಿರೀಕ್ಷಿಸುತ್ತಿದೆ.

ನಡೆದುದೇನು?

ಪಾಕಿಸ್ತಾನವು ಕಾಶ್ಮೀರದ ಮೇಲೆ ಅಧಿಕೃತ ಆಕ್ರಮಣವನ್ನೇನೂ ಹೂಡಿಲ್ಲ; ಈಗ ಹಿಂದುಸ್ಥಾನವೂ ಅಲ್ಲಿಗೆ ಸೇನೆ ಕಳುಹಿಸಿರುವುದು ಯುದ್ಧಕ್ಕೆಂದಲ್ಲ, ಗಲಭೆ ನಿವಾರಣೆಗಾಗಿ! ಆದರೆ ಕಾಶ್ಮೀರದೊಳಗೆ ನುಗ್ಗಿರುವವರು ಅತ್ಯಾಧುನಿಕ ಶಸ್ತ್ರೋಪಕರಣ ಸಜ್ಜಿತರಾಗಿ ಸೇನಾ ಬಂಡಿಗಳನ್ನೇರಿದ ಪಾಕಿಸ್ತಾನ್ ಸೋಲ್ಜರರೇ ಭಾರತ ಸೈನಿಕರು ಗಲಭೆ ನಿವಾರಣೆಗಾಗಿ ಹೋರಾಡಿ ಹಿಂದೋಡಿಸಬೇಕಾದುದು ಈ ಸೋಲ್ಜರರನ್ನೇ. ಮೇಲಾಗಿ ಸೇಕಡಾ ೭೫ರಷ್ಟು ಮುಸ್ಲಿಂ ಪ್ರಜೆಗಳಿದ್ದು ಎಲ್ಲಾ ದಿಕ್ಕುಗಳಿಂದಲೂ ಪಾಕಿಸ್ತಾನದಿಂದಾವರಿಸಲ್ಪಟ್ಟಿರುವ ಕಾಶ್ಮೀರವು ಭಾರತ ಕೇಂದ್ರದೊಡನೆ ಜೋಡಣೆಗೊಂಡುದು ಪಾಕಿಸ್ತಾನದ ಘನತೆ ಮತ್ತು ಅನುಕೂಲತೆಗೆ ಬಿದ್ದ ಛಳ್ಳೆ. 'ಪರಿಣಾಮ ಭಯಂಕರವಾದೀತು!' ಎಂದು ತಾವು ಎಚ್ಚರಿಸಿದ ಬೆನ್ನಲ್ಲೇ ಕಾಶ್ಮೀರವು ಹೀಗೆ ಮಾಡಿದ್ದನ್ನು ಕಂಡು ಸಹಿಸಬಲ್ಲವರು ಜಿನ್ನಾ ಲಿಯಾಖತರಲ್ಲ. ಇತ್ತ, ಕಾಶ್ಮೀರದ ಸ್ಥಾನವು ಅಂತರ್ರಾಷ್ಟ್ರೀಯ ಸಂಬಂಧ ಪ್ರಾಮುಖ್ಯತೆಯುಳ್ಳ, ಭಾರತದ ಆ ಮೂಲೆಯಾಗಿ, ಹಿಮಾಲಯದೊತ್ತಿನಲ್ಲಿರುವ ಕಾಶ್ಮೀರವೇ ರಕ್ಷೆಯ ಗಡಿ. ರಶ್ಯಾ–ಭಾರತಗಳ ನಡುದ್ವಾರವೆಂದರೆ ಅದೇ. ಆಂಗ್ಲೋ ಅಮೇರಿಕಾ ಮತ್ತು ರಶ್ಯಗಳೊಳಗೆ ಒಂದಲ್ಲೊಂದು ದಿನ ಪ್ರತ್ಯಕ್ಷ ಘರ್ಷಣೆ ಖಂಡಿತವೆಂಬುದೀಗ ರಾಜಕಾರಣಿಗಳಿಗೆ ಖಚಿತವಾಗಿರುವುದರಿಂದ ಕಾಶ್ಮೀರದ ಅದೃಷ್ಟದ ಕಡೆಗೆ ಎಲ್ಲರೂ ಸ್ವಾಭಿರುಚಿಯಿಂದ ನೋಡುತ್ತಿದ್ದಾರೆ. ಆದ್ದರಿಂದ ಕಾಶ್ಮೀರದ ಕಾಳಗವು ಯಾವ ಪರಿಣಾಮ ಕೊಡುವದು–ಎಲ್ಲಿ, ಹೇಗೆ ಮುಗಿಯುವುದು—ಎಂಬುದನ್ನು ಹೇಳಲಾಗುವುದಿಲ್ಲ.

ಚದುರಂಗದಾಟ!

ಕಾಶ್ಮೀರದ ರಾಜಕೀಯ ರಂಗದಲ್ಲಿ ಎಲ್ಲಾ ಕಡೆಯವರೂ ಬುದ್ಧಿವಂತಿಕೆಯಾಡಿದ್ದರೆಂದು ಊಹಿಸಬಹುದು. ಬ್ರಿಟಿಷ್ ರಾಜಕಾರಣಿಗಳು ಈ ಕುರಿತು ತಟಸ್ಥರಾಗಿದ್ದರೆಂದು ನಂಬಲಾಗುವದಿಲ್ಲ. ಕಾಶ್ಮೀರ ಮಹಾರಾಜರ ಮತ್ತು ಪ್ರಜಾ ನಾಯಕ ಶೇಕ್ ಅಬ್ದುಲ್ಲಾರ ಒಲವು ಭಾರತ ಕೇಂದ್ರದ ಕಡೆಗಿದೆ ಎಂಬುದನ್ನರಿತಿದ್ದ ಪಾಕಿಸ್ತಾನ್ ಸಂಚಾಲಕರು ಬಿಮರಿಕೆ ಬೀರಿ, ಯುಕ್ತಿಯಾಟ ಹೂಡಿ, ಅವಸರದಿಂದ ಕೆಲಸ ಸಾಧಿಸಿ ಬಿಡಬೇಕೆಂದು ಬಗೆದಿದ್ದರು. ಕಾರಣವೆಂದರೆ ಇಕ್ಕಡೆಯವರೂ ಸುಸಜ್ಜಿತ ಘರ್ಷಣೆಗೆ ನಿಂತಲ್ಲಿ ತಾವು ಗೆಲ್ಲುವುದು ಕಷ್ಟವೆಂಬುದನ್ನವರು ಬಲ್ಲರು. ತಾನು ಏಕಾಕಿಯಾಗಿ ಪಾಕಿಸ್ತಾನವನ್ನಿದಿರಿಸುವದು ಅಸಾಧ್ಯವೆಂಬುದನ್ನರಿತಿದ್ದ ಕಾಶ್ಮೀರದ ಮಹಾರಾಜ ಸರಕಾರಕ್ಕೆ ಭಾರತ ಕೇಂದ್ರದ ಸಹಾಯ ಹೊರತು ಬೇರೆ ಗತಿಯಿರಲಿಲ್ಲ. 'ಪ್ರಜೆಗಳ ಅಭಿಮತದಂತಾಗಲಿ' ಎಂಬ ತನ್ನ ತತ್ವಕ್ಕೆ ಕಾಶ್ಮೀರದ ಮಟ್ಟಿಗಾದರೂ ದ್ರೋಹ ಮಾಡಿಕೊಳ್ಳಲು ಕೇಂದ್ರ ಭಾರತವು ತಯಾರಿಲ್ಲವೆಂಬುದು ಅದಕ್ಕೆ ಗೊತ್ತಿತ್ತು. ಆದ್ದರಿಂದ 'ಪ್ರಜೆಗಳ ಅಭಿಮತವನ್ನು ಮನ್ನಿಸಲು ತಯಾರು; ಆದರೀಗ ಜಾತೀಯ ಭಾವನೆಯ ವಿಷವು ಎಲ್ಲರ ಮೆದುಳನ್ನೂ ಕದಡಿಸಿರುವುದರಿಂದ ಸ್ಥಿತಿಸುಧಾರಿಸಿದ ಮೇಲೆಯೇ ಆ ಜನಮತ ಸಂಗ್ರಹ" ಎಂಬ ಅಭಿಪ್ರಾಯವನ್ನು ಕಾಶ್ಮೀರ ಸರಕಾರ ಸೂಚಿಸಿತು. ಸದ್ಯದ ವಾತಾವರಣದ ಆಳವನ್ನರಿತ ಶೇಕ್ ಅಬ್ದುಲ್ಲಾರಿಗೂ ಹಿಂದೀ ಕೇಂದ್ರಕ್ಕೂ ಇದೇ ಅಭಿಪ್ರಾಯವಿದೆ. ಈರೀತಿ ಅವಸರವಾಡಿ ಕಾಶ್ಮೀರವನ್ನಾಕ್ರಮಿಸಿಕೊಳ್ಳುವ ಆತುರವು ಪಾಕಿಸ್ತಾನಕ್ಕೂ; ಅಂತಹ ಅನ್ಯಾಯವನ್ನು ನಡೆಯಲು ಬಿಡಕೂಡದೆಂಬ ಉತ್ಕಟೇಚ್ಛೆ ಭಾರತಕ್ಕೂ ಇತ್ತು.

ಆಟ–ಪ್ರತ್ಯಾಟಗಳು

ಇದಕ್ಕನುಗುಣವಾಗಿ ಪಾಕಿಸ್ತಾನ್ ವಲಯದ ಮುಸಲ್ಮಾನರು ಆಗಾಗ ಕಾಶ್ಮೀರದ ಗಡಿಯೊಳಗೆ ನುಗ್ಗಿ ಗಲಭೆಗಳಾಗುತ್ತಲೇ ಇದ್ದುವು. ಪೂರ್ವಪಂಜಾಬಿನ ಕೆಲವು ಹಿಂದೂ ಸಿಖ್ಖರೂ ಕಾಶ್ಮೀರದೊಳಗೆ ಸೇರಿಕೊಂಡಿದ್ದರು. ಪ್ರಚಲಿತ ವ್ಯವಸ್ಥೆ ಪ್ರಕಾರ ಪಾಕಿಸ್ತಾನವು ಕಾಶ್ಮೀರಕ್ಕೆ ಸರಬರಾಯಿ ಮಾಡಬೇಕಾಗಿದ್ದ ಸಲಕರಣೆಗಳೆಲ್ಲವನ್ನೂ ತಡೆದಿಟ್ಟು ಬುದ್ಧಿ ಕಲಿಸಲು ನೋಡಿದ್ದಿತು. ಕಾಶ್ಮೀರದ ನವಪ್ರಧಾನಿ ಶ್ರೀ ಮಹಾಜನರು ಮೇಧಾವಿ ಮತ್ತು ಎದೆಗಾರರಿದ್ದುದರಿಂದ ಅಧಿಕಾರ ಬಲವಾದೊಡನೆಯೇ ನವದಿಲ್ಲಿಗೆ ಹೋಗಿ ಭಾರತನಾಯಕರೊಡನೆ ಎಲ್ಲವನ್ನೂ ಪರ್ಯಾಲೋಚಿಸಿ, ಭಾವೀ ಕಾರ್ಯ ವಿಧಾನಗಳನ್ನು ನಿರ್ಧರಿಸಿದ್ದರು. ಆ ಮೇಲೆಯೇ ಕಾಶ್ಮೀರವು ಪಾಕಿಸ್ತಾನಕ್ಕೆ ತಂತಿಕೊಟ್ಟು 'ನೀವು ಹೀಗೆಯೇ ಮಾಡಿದಲ್ಲಿ ನಾವು ಹೊರಗಿನ ಸಹಾಯ ಪಡೆಯಬೇಕಾಗುವುದು' ಎಂದೆಚ್ಚರಿಸಿದುದು. ತಾನು ಹಿಡಿಯಲು ಹೋದರೆ, ಕಾಶ್ಮೀರವು ಭಾರತದ ಜೋಳಿಯೊಳಗೆ ನುಗ್ಗಿಕೊಳ್ಳಲು ತಯಾರಾಗಿದೆ ಎಂಬುದನ್ನು ತಿಳಿದೊಡನೆ ಪಾಕಿಸ್ತಾನವು ಅದಕ್ಕವಕಾಶ ದೊರೆಯದಂತೆ, ಉಪಾಯದಿಂದಲೇ ಹಿಡಿದುಬಿಡಬೇಕೆಂದು ಬಗೆಯಿತು; ರಜೆಯ ನೆವನದಿಂದ ದೂರವಿದ್ದ ಪಾಕಿಸ್ತಾನ್ ಸೋಲ್ಜರರನ್ನೂ ಇತರ ಮುಸ್ಲಿಮರನ್ನೂ ಸಜ್ಜುಗೊಳಿಸಿ ಒಳನುಗ್ಗಿಸಿತು. ಈ ಹೊಂಚು ಕಾಶ್ಮೀರ ಸರಕಾರಕ್ಕೆ ತಿಳಿದುಹೋಯಿತು.

ಮಿಂಚುವೇಗದ ಘಟನೆಗಳು

ಒಳನುಗ್ಗಿದ ಮುಸ್ಲಿಮ್ ಸೇನೆಯಲ್ಲಿ ಪಾಕಿಸ್ತಾನ್ ರಜೆ ಸೋಲ್ಜರರು, ಮಾಜಿ ಸೋಲ್ಜರರು, ಪೂಂಚ್ ಸಂಸ್ಥಾನದ ಮಾಜೀ ಸೋಲ್ಜರರಿದ್ದರು. ಅವರ ಆಕ್ರಮಣ ವಿಧಾನವೂ 'ಯುದ್ಧಯೋಜನಾ' ಚಾತುರ್ಯವನ್ನನುಸರಿಸಿದ್ದಿತು. ಬೇರೆ ಬೇರೆಡೆಗಳಿಗೆ ತುಂಡು ತುಂಡು ಪಂಗಡಗಳು ನುಗ್ಗಿ ಕಾಶ್ಮೀರೀ ಸೇನೆ ಅಲ್ಲಲ್ಲಿ ಹಂಚಿ ಬೀಳುವಂತೆ ಮಾಡಿ, ವಿರೋಧವಿಲ್ಲದ ದಿಕ್ಕುಗಳಲ್ಲಿ ಪ್ರಬಲ ಸೇನೆ ನುಗ್ಗಿ ಹೋಗಿದ್ದಿತು. ಕಾಶ್ಮೀರದಲ್ಲಿರುವ 10000 ಸೈನಿಕರ ಪೈಕಿ ½ನೇ ಅಂಶ ಮುಸ್ಲಿಮರು. ಉಳಿದವರು, ಒಳಗಡೆಯ ಗೊಂದಲ ನಿವಾರಣೆ ಮತ್ತು ಹೊರಗಿನ ಈ ಧಾಳಿಯ ಪ್ರತಿಭಟನೆಗೆ ಹಂಚಿಬೀಳಬೇಕಾದುದರಿಂದ ಪಾಕಿಸ್ತಾನ್ ಸೈನಿಕರು ಆಶ್ಚರ್ಯಕರವೇಗದಿಂದ ಮುಂದೊತ್ತಿ ರಾಜಧಾನಿ ಶ್ರೀನಗರಕ್ಕೆ ಸಮೀಪಿಸಿದ್ದಾರೆ. ಶ್ರೀನಗರದ ಹಿಂದೂ ಸಿಖ್ಖರು ದಿಗಿಲುಗೊಂಡು ಪಲಾಯನ ಪಠಿಸುತ್ತಿದ್ದಾರೆ. ಮಹಾರಾಜರು ಕೂಡಾ ಶ್ರೀನಗರದಿಂದ ಜಮ್ಮುವಿಗೆ ಹೋಗಿನಿಂತಿದ್ದಾರೆ. ಶೇಕ್ ಅಬ್ದುಲ್ಲಾನ ನಾಯಕತ್ವದ 'ರಾಷ್ಟ್ರೀಯ ಸಮ್ಮೇಲನದ' ಸಾವಿರಾರು ಸ್ವಯಂಸೇವಕರು ಶಾಂತಿಪಾಲನೆಗಿಳಿದಿದ್ದಾರೆ. ಕಾಶ್ಮೀರದ ಉಪಪ್ರಧಾನಿಯು ಮೊರೆ ಕೇಳಿ ಭಾರತ ಸರಕಾರದ ಮಂತ್ರಿ ಮಂಡಲವು ಸಂಸ್ಥಾನಿಕ ಖಾತೆಯ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನರನ್ನು ಶ್ರೀನಗರಕ್ಕೆ ಕಳುಹಿಸಿತು. ಶ್ರೀ ಮೆನನರು ಕಾಶ್ಮೀರದ ಪ್ರಧಾನಿ ಶ್ರೀ ಮೆಹರ್‌ಚಂದ್ ಮಹಾಜನರನ್ನು ಕೂಡಿಕೊಂಡು ಅಲ್ಲಿಂದ ಢಿಲ್ಲಿಗೆ ಬಂದರು. ಢಿಲ್ಲಿಯಲ್ಲಿ ಭಾರತ ಮಹಾಸಭಾ ಮಂತ್ರಿ ಮಂಡಲವು ಪುನಃ ಸಭೆಸೇರಿ ಎಲ್ಲವನ್ನು ಪರ್ಯಾಲೋಚಿಸಿತು. ಶ್ರೀ ಮೆನನರು ಢಿಲ್ಲಿಗೆ ಬಂದಿದ್ದ ಶೇಕ್ ಅಬ್ದುಲ್ಲಾ, ಮತ್ತು ಶ್ರೀ ಮಹಾಜನರೊಂದಿಗೆ ಮತ್ತೊಮ್ಮೆ ಜಮ್ಮುವಿಗೆ ಹೋಗಿ ಮಹಾರಾಜರ ಭೇಟಿ ಪಡೆದರು. ಕಾಶ್ಮೀರವು ಭಾರತ ಕೇಂದ್ರದೊಂದಿಗೆ ಸೇರಿಕೊಂಡಿತು. ಹಿಂದೀ ಸೇನೆಗಳು ವಿಮಾನ ಮೂಲಕ ಕಾಶ್ಮೀರಕ್ಕೆ ಧಾಡಿಟ್ಟವು. ತಾತ್ಕಾಲಿಕ ಸರಕಾರ ರಚಿಸುವ ಜವಾಬ್ದಾರಿಯನ್ನು ಮಹಾರಾಜರು ಅಬ್ದುಲ್ಲಾರಿಗೊಪ್ಪಿಸಿದರು. ಅವರದನ್ನು ವಹಿಸಿಕೊಂಡು 'ಸದ್ಯ ಭಾರತ ಕೇಂದ್ರಕ್ಕೆ ಸೇರುವುದರಿಂದಲೇ ಕಾಶ್ಮೀರದ ಹಿತವಿದೆಯೆಂದು ನನ್ನ ದೃಢಾಭಿಪ್ರಾಯ. ಆದರೆ ಜನತೆಯ ಅಭಿಮತವೇ ಕೊನೆಯ ತೀರ್ಮಾನ. ಈಗ ವಾತಾವರಣ ಕದಡಿರುವುದರಿಂದ ಅದನ್ನು ಸಂಗ್ರಹಿಸುವದಸಾಧ್ಯ. ಪರಿಸ್ಥಿತಿ ಶಾಂತವಾದೊಡನೆ ಜನಮತ ಸಂಗ್ರಹಿಸಿ ಭಾರತಕ್ಕೋ, ಪಾಕಿಸ್ತಾನಕ್ಕೋ ಎಂಬುದನ್ನು ನಿರ್ಧರಿಸಬಹುದು. ಈಗ ಎಲ್ಲರೂ ಸರಕಾರಕ್ಕೆ ವಿಧೇಯರಾಗಿರಬೇಕು. ಗಲಭೆಯನ್ನು ಸಹಿಸುವಂತಿಲ್ಲ." ಎಂದು ಘೋಷಿಸಿದ್ದಾರೆ.

ಇತ್ತ ಮಿ. ಜಿನ್ನರು ಲಾಹೋರಿಗೆ ಧಾವಿಸಿದ್ದಾರೆ. ಪಾಕಿಸ್ತಾನದ ಮಂತ್ರಿಮಂಡಲದ ವಿಶೇಷ ಸಭೆಗಳು ನೆರೆದಿವೆ. ಇಷ್ಟರೊಳಗೇನು ನಡೆಯಿತೋ!

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡ್ಪಿ

ತಾರೀಕು 29—10—47ರಿಂದ

ಹಿಂದೂಸ್ಥಾನದ ಚರಿತ್ರೆಯ ಚೊಕ್ಕ ಕಥಾ ಭಾಗವೊಂದು ಚಿರಪರಿಚಿತ ದಿಗ್ದರ್ಶಕ ನಂದಲಾಲ್ ಜಸವಂತ್ ಲಾಲರಿಂದ ಪ್ರಚಾರಕ್ಕೆ ಬಂತು.

ಆಮ್ರಪಾಲಿ

ಅರುಣ್, ಪ್ರೇಮ ಅದೀಬ್, ಜೀವನ್ ಜಗದೀಶ್, ಸವಿತಾ ಮತ್ತು ಇತರರು

ಬರುವ ಚಿತ್ರಗಳು

ಬೊಂಬೇ ಟಾಕೀಸಿನವರ,

ಪ್ರತಿಮಾ,

ಯುನಿವರ್ಸಲ್‌ನವರ ಅರೇಬಿಯನ್ ನೈಟ್ಸ್.

ಪ್ರಕಟಣೆ

ಕರ್ನಾಟಕ ಸಂಘ, ಉಡುಪಿ.

ಈ ಸಂಘವು ಇನೇ ತಿಂಗಳ ದಿನಾಂಕ ೨೧ರಿಂದ ೨೪ರ ತನಕ ಜರಗಿಸಿದ ಸಾಹಿತ್ಯೋತ್ಸವಾದಿ ಕಾರ್ಯಕಲಾಪಗಳನ್ನು ಹರಸಿ ಒಳ್ಳೆಯ ಸಂದೇಶಗಳನ್ನು ಕಳುಹಿಸಿ ಕೃಪೆಗೈದ ಕನ್ನಡದ ಕಡುಗಲಿಗಳು:- ಬೆಂಗಳೂರಿನ- ಶ್ರೀಗಳಾದ ಮಾಸ್ತಿ ವೆಂಕಟೇಶಯ್ಯಂಗಾರ್, ಅ. ನ. ಕೃಷ್ಣರಾವ್, ಸಿ. ಕೆ. ವೆಂಕಟರಾಮಯ್ಯ, ಸಂಪದ್ಗಿರಿ ರಾವ್, ಬಿ. ಸೀತಾರಾಮ ಶಾಸ್ತ್ರಿ, ಬಿ. ಶಿವಮೂರ್ತಿ ಶಾಸ್ತ್ರಿ, ಧಾರವಾಡದಿಂದ- ಶ್ರೀಗಳಾದ ನೆಗಳೂರ್ ರಂಗನಾಥ್, ಕೆ. ಎಸ್. ಸವಣೂರ್, ದತ್ತಾತ್ರೇಯ ಕುಲಕರ್ಣಿ, ಬುರ್ಲಿ ಬಿಂದು ಮಾಧವ ರಾವ್. ನ್ಯೂಡಿಲ್ಲಿಯಿಂದ- ನ್ಯೂಡಿಲ್ಲಿ ಕರ್ನಾಟಕ ಸಂಘದ ಶ್ರೀ. ರಾಘವನ್. ಬೊಂಬಾಯಿಯಿಂದ- ಶ್ರೀಗಳಾದ ಕೃಷ್ಣ ಕುಮಾರ್, ಎಚ್. ಎಸ್. ಪಾಟೀಲ್, ಯು. ವೆಂಕಟರಾವ್, ಪಿ. ವಿ. ಶಾಂಗ್ಲಿ. ಮದ್ರಾಸಿನಿಂದ- ಕರ್ನಾಟಕ ಸೇನಾಸಂಘದ ಶ್ರೀ. ವಿ. ಈಶ್ವರ ಭಟ್, ಶ್ರೀ. ಸಿ. ಕೆ. ತಿರುಮಲೇಶ್, ಶ್ರೀಗಳಾದ ಉಡುಪಿ ಸೀತಾರಾಮಾಚಾರ್, ಕು. ಶಿ. ಹರಿದಾಸ ಭಟ್. ಅಂಕೋಲಾದಿಂದ- ಶ್ರೀ. ಮ. ಗ. ಶೆಟ್ಟಿ. ಮಡಿಕೇರಿಯಿಂದ- ಶ್ರೀ. ಎಮ್. ಎಸ್. ಅನಂತಪದ್ಮನಾಭ ರಾವ್. ನರಸಿಂಹರಾಜಪುರದಿಂದ ಶ್ರೀ. ಎಚ್. ಸೂರ್ಯನಾರಾಯಣ ರಾವ್, ಮಂಜೇಶ್ವರದಿಂದ- ಶ್ರೀ. ಎಮ್. ಗೋವಿಂದ ಪೈ. ಕಾಸರಗೋಡಿನಿಂದ- ಶ್ರೀ. ಪುಂಡೂರು ಲಕ್ಷ್ಮೀನಾರಾಯಣ ಪುಣಿಚಿತ್ತಾಯ, ಜನಾಬ್ ಟಿ. ಉಬೇಯಿದ್. ಮಂಗಳೂರಿಂದ- ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಗಡೆ, ಕಡೆಂಗೋಡ್ಲು ಶಂಕರ ಭಟ್, ಟಿ. ವಿ. ರಮಣ, ಎದುರ್ಕಳ ಶಂಭು ಭಟ್. ಬಿ. ನರಸಪ್ಪ. ಮೂಲ್ಕಿಯಿಂದ- ಶ್ರೀ. ಸುರತ್ಕಲ್ ಸುಬ್ಬರಾವ್. ಮೂಡಬಿದರೆಯಿಂದ- ಸರಸ್ವತಿ ಸೇವಾ ಸಂಘದ ಶ್ರೀ. ಕೃಷ್ಣ ಗೋಪಾಲ್, ಶಿರ್ವದಿಂದ ‘ಕಿರಿಯರ ಕೂಟ’ದ ಶ್ರೀ. ಶಂ. ನಾ. ರಾವ್, ಹರಿದಾಸ್.

ಸ್ವಯಂಸುಪ್ರಸಿದ್ಧರಾದ ಈ ಕರ್ನಾಟಕ ಕೇಸರಿಗಳ ಸುದೀರ್ಘವಾದ ಬಿರುದು ಉದ್ಯೋಗಾದಿಗಳ ವಿವರಗಳನ್ನು (ಸ್ಥಳಾಭಾವದಿಂದಾಗಿ) ಸೇರಿಸದೆಯೆ ಬರಿ ಹೆಸರುಗಳನ್ನು ಮಾತ್ರ ಪ್ರಕಟಿಸಿದುದಕ್ಕಾಗಿ ಅವರವರಲ್ಲಿ ಕ್ಷಮಾಪಣೆಯನ್ನು ಕೇಳಿಕೊಳ್ಳುತ್ತೇವೆ, ಮತ್ತು ಸಂದೇಶಗಳ ಮೂಲಕ ಅವರು ಸಂಘದ ಕಡೆಗೆ ತೋರಿರುವ ನಲ್ಮೆಯ ಒಲವು ಆದರಾಭಿಮಾನಗಳಿಗಾಗಿ, ಕೊಟ್ಟಿರುವ ಹಿತ ಸಲಹೆಸೂಚನೆ ಪ್ರೋತ್ಸಾಹಗಳಿಗಾಗಿ ಅವರಿಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನರ್ಪಿಸುತ್ತೇವೆ.

ಕೊರಡ್ಕಲ್ ಶ್ರೀನಿವಾಸ ರಾವ್,
ಪ್ರಧಾನ ಕಾರ್ಯದರ್ಶಿ.

ಕರ್ನಾಟಕ ಸಂಘ, ಉಡುಪಿ.

ಈ ಸಂಘವು ಕಳೆದ ದಸರಾ ಸಾಹಿತ್ಯೋತ್ಸವದಂದು ಏರ್ಪಡಿಸಿದ ಸಾಹಿತ್ಯ ವಿಷಯಕವಾದ ಸ್ಪರ್ಧೆಯಲ್ಲಿ ಗೆದ್ದವರಿಗೆ ಆಯಾಯ ಸ್ಪರ್ಧೆಯ ಬಹುಮಾನ ನಿರ್ಣಾಯಕರ ತೀರ್ಪಿನ ಮೇರೆಗೆ ಕೆಳಗೆ ಕಾಣಿಸಿದಂತೆ ಪಾರಿತೋಷಕಗಳನ್ನು ಕೊಡಲಾಗಿದೆ.

೧ ಪಂಡಿತ ವೆಂಕಟರಮಣಾಚಾರ್ಯ ಸ್ಮಾರಕ ಕನ್ನಡ ಭಾಷಣ ಸ್ಪರ್ಧೆ—(ಪ್ರಧಾನ ನಿರ್ಣಾಯಕರು- ಶ್ರೀಮತಿ ಲೀಲಾ ಬಾಯಿ ಕಾಮತ್) ಪ್ರಥಮ ಮತ್ತು ದ್ವಿತೀಯ ಬಹುಮಾನಗಳಾದ ಬೆಳ್ಳಿಯ ಕಪ್‌ಗಳನ್ನು ಪಡೆದ ಮೇಳಗಳು ಕ್ರಮವಾಗಿ ಉಡುಪಿ ಬೋರ್ಡು ಹೈಸ್ಕೂಲು ಮತ್ತು ಉಡುಪಿ ಸಂಸ್ಕೃತ ಕಾಲೇಜು. ವೈಯುಕ್ತಿಕವಾಗಿ ಪ್ರಥಮ ದ್ವಿತೀಯ ತೃತೀಯ ಬಹುಮಾನಗಳಾಗಿ ರಜತ ಪದಕಗಳನ್ನು ಹೊಂದಿದವರು ಕ್ರಮವಾಗಿ ಉಡುಪಿ ಬೋರ್ಡು ಹೈಸ್ಕೂಲಿನ ಸುಬ್ಬಾಬಲು ರಾವ್ ಮತ್ತು ಪದ್ಮನಾಭ ಮರಡಿ ಮತ್ತು ಸಂಸ್ಕೃತ ಕಾಲೇಜಿನ ಸುಬ್ರಾಯ ಮಧ್ಯಸ್ಥ.

೨ ಕಾವ್ಯವಾಚನ ಸ್ಪರ್ಧೆ—(ಪ್ರಧಾನ ನಿರ್ಣಾಯಕರು- ಶ್ರೀ ಬಿ. ವಿ. ಕೆದಿಲಾಯ, ಬಿ. ಎ., ಎಲ್. ಟಿ.) ನಡುಗನ್ನಡ ಕಾವ್ಯವಾಚನದ ಪ್ರಥಮ ಮತ್ತು ದ್ವಿತೀಯ ಬಹುಮಾನದ ಪುಸ್ತಕಗಳ ಕಟ್ಟುಗಳನ್ನು ಪಡೆದವರು ಕ್ರಮವಾಗಿ ಮಲ್ಪೆ ಫಿಶರೀಸ್ ಹಾ. ಎ. ಶಾಲೆಯ ಶಿವರಾಮ ಮತ್ತು ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ಶ್ರೀಶ ಬಲ್ಲಾಳ. ಹೊಸಗನ್ನಡ ಕಾವ್ಯವಾಚನದಲ್ಲಿ ಅದೇ ಬಗೆಯ ಪ್ರಥಮ ದ್ವಿತೀಯ ಬಹುಮಾನಗಳನ್ನು ಹೊಂದಿದವರು ಉಡುಪಿ ಸಂಸ್ಕೃತ ಕಾಲೇಜಿನ ಹರಿದಾಸ ಭಟ್ಟ ಮತ್ತು ಕ್ರಿಶ್ಚಿಯನ್ ಹೈಸ್ಕೂಲಿನ ವಿಜಯೀಂದ್ರ ನಾಯಕ.

೩ ಲೇಖನ ಸ್ಪರ್ಧೆ—(ಪ್ರಧಾನ ನಿರ್ಣಾಯಕರು ಶ್ರೀ. ಬನ್ನಂಜೆ ರಾಮಾಚಾರ್, ವಿದ್ವಾನ್) ಪುಸ್ತಕ ಕಟ್ಟುಗಳ ಪ್ರಥಮ ಮತ್ತು ದ್ವಿತೀಯ ಬಹುಮಾನಗಳನ್ನು ಪಡೆದವರು ಕ್ರಮವಾಗಿ ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ಆನಂದ ರಾವ್ ಮತ್ತು ರಾಮಚಂದ್ರ ಉಪಾಧ್ಯ.

೪ ದಾಸರ ಪದ ಹಾಡುಗಾರಿಕೆಯ ಸ್ಪರ್ಧೆ—(ನಿರ್ಣಾಯಕರು ಶ್ರೀ. ಕೆ. ಸಂಜೀವ ಭಟ್, ಎಮ್. ಎ., ಎಲ್. ಟಿ.) ಪುಸ್ತಕದ ಕಟ್ಟುಗಳ ಪ್ರಥಮ ಮತ್ತು ದ್ವಿತೀಯ ಬಹುಮಾನಗಳನ್ನು ಪಡೆದವರು- ಉಡುಪಿ ಕಾನ್ವೆಂಟ್ ಹೈಸ್ಕೂಲಿನ ಮೋಹಿನಿ ಬಾಯಿ ಮತ್ತು ಉಡುಪಿ ಮುನ್ಸಿಪಲ್ ಗರ್ಲ್ಸ್ ಹಾ. ಎ. ಶಾಲೆಯ ಶ್ರೀಮತಿ ಬಾಯಿ.

ನಿರ್ಣಾಯಕರ ಉಪಕೃತಿಗೆ ನಮ್ಮ ಧನ್ಯವಾದಗಳು, ಗೆದ್ದವರಿಗೆ ಅಭಿನಂದನೆಗಳು. ಸ್ಪರ್ಧೆಯಲ್ಲಿ ಭಾಗವಹಿಸಿದ ಸಕಲ ಶಾಲೆಗಳಿಗೆ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ನಮ್ಮ ಮೆಚ್ಚುಗೆಗಳು.

ಕೊರಡ್ಕಲ್ ಶ್ರೀನಿವಾಸ ರಾವ್,
ಪ್ರಧಾನ ಕಾರ್ಯದರ್ಶಿ

ಉಡುಪಿ.

‘ಲಕ್ಷ್ಮೀ ಮೆಡಿಕಲ್ಸ್’ ಚಿಕಿತ್ಸಾ ಮಂದಿರ ಪ್ರಾರಂಭ ಡಾ। ಕೆ. ಎಲ್. ಉಪಾಧ್ಯಾಯ, ಎಲ್. ಐ. ಎಮ್. ಇವರ ‘ಲಕ್ಷ್ಮೀ ಮೆಡಿಕಲ್ಸ್’ ಚಿಕಿತ್ಸಾ ಮಂದಿರವು ಚಿತ್ತರಂಜನ ಕಟ್ಟೋಣದ ಸಮೀಪ ಕೆಫೆ ಗೋಯಲ್ ಮ್ಹಾಲಕರಾದ ಶ್ರೀ ವೆಂಕಟ್ರಮಣ ಭಟ್ಟರ ನೂತನ ಕಟ್ಟಡದಲ್ಲಿ ತಾ. 24 ರಲ್ಲು ಶ್ರೀ ಹಾಂಗಾಳ ಉಪೇಂದ್ರ ನಾಯ್ಕರ ಅಧ್ಯಕ್ಷತೆಯಲ್ಲಿ ಡಾ। ಟಿ. ಮಾಧವ ಪೈಗಳಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ। ಟಿ. ಅನಂತ ಪೈ, ಡಾ। ಕೆ. ಎಲ್. ಐತಾಳರೂ ಸಂದರ್ಭೋಚಿತ ಮಾತುಗಳನ್ನಾಡಿದರು, ಶ್ರೀ. ಕೆ. ಸುಬ್ರಾಯ ಪುರಾಣಿಕರು ಪ್ರಾಸ್ತಾವಿಕ ಭಾಷಣ ಮಾಡಿದ್ದಲ್ಲದೆ ಕೊನೆಗೆ ಧನ್ಯವಾದಗಳನ್ನು ಅರ್ಪಿಸಿದರು. ಶ್ರೀ ಕಲ್ಮಂಜೆ ವ್ಯಾಸಾಚಾರ್ಯರು ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದರು. ಲಘೂಪಹಾರದೊಂದಿಗೆ ಸಭಾಂತ್ಯವಾಯಿತು.

ಮೋಡರ್ನ್ ಸ್ಕೂಲ್ ಓಫ್ ಕೊಮರ್ಸ್- ನಲ್ಲಿ ಶಾರದಾ ಪೂಜೆಯು ತಾ. 20 ರಲ್ಲು ಶ್ರೀ. ಟಿ. ಎ. ವಾಸುದೇವನ್ ರವರ ನೇತೃತ್ವದಲ್ಲಿ ಜರಗಿತು.

ಶ್ರೀ ಕೃಷ್ಣ ಸೂಕ್ತಿಯ ಪುನರುಜ್ಜೀವನ ಶ್ರೀ ಕಡೆಕಾರು ರಾಜಗೋಪಾಲಕೃಷ್ಣರಾಯರಿಂದ ಸುಮಾರು ಹತ್ತು ವರುಷ ಸಂಪಾದಿಸಲ್ಪಡುತ್ತಿದ್ದ ‘ಶ್ರೀ ಕೃಷ್ಣ ಸೂಕ್ತಿ’ಯು ನೂರವತ್ತು ವರ್ಷ ಕಾಲ ವಿಶ್ರಾಂತಿ ಹೊಂದಿ ಈಗ ಪುನಃ ನೂತನ ಹುರುಪಿನಿಂದ ಅದೇ ಸಂಪಾದಕರಿಂದ ಪ್ರಾರಂಭವಾಗಿದೆ. ಪ್ರಥಮ ಸಂಚಿಕೆಯ ಉದ್ಘಾಟನೆಯು ತಾ. 24ರಲ್ಲು ಶ್ರೀ ಎಚ್. ಚನ್ನಕೇಶವ ಐಯ್ಯಂಗಾರರ ಅಧ್ಯಕ್ಷತೆಯಲ್ಲಿ ಸೂಕ್ತಿ ಆಫೀಸಿನಲ್ಲಿ ನಡೆಯಿತು. ಸಂಪಾದಕ ಶ್ರೀ ಎನ್. ರಾಜಗೋಪಾಲಕೃಷ್ಣರಾಯರು ಸೂಕ್ತಿಯ ಪೂರ್ವೇತಿಹಾಸವನ್ನು ವಿವರಿಸಿದ ಮೇಲೆ ಶ್ರೀಗಳಾದ ಎಮ್. ಮರಿಯಪ್ಪ ಭಟ್, ಕೊರಡ್ಕಲ್ ಶ್ರೀನಿವಾಸರಾವ್ ಮೊದಲಾದವರು ಪತ್ರಿಕೆಗೆ ಶುಭ ಕೋರಿದರು.

‘ಉದಯಭಾರತ’ ಮಾಸಪತ್ರಿಕೆಯು ವಾರಪತ್ರಿಕೆಯಾಗಿ ಇದೇ ತಾ 24ರಲ್ಲು ರೂಪಾಂತರ ಹೊಂದಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ಅಣ್ಣಪ್ಪ ನಾಗಪ್ಪ ಭಕ್ತರು ವಹಿಸಿದ್ದು ಶ್ರೀ ಪೇಜಾವರ ಮಠದ ಸ್ವಾಮಿಗಳವರು ವಾರಪತ್ರಿಕೆಯ ಉದ್ಘಾಟನೆ ಮಾಡಿದರು.

ನಾಡಹಬ್ಬ:—ಪ್ರತಿ ವರ್ಷದಂತೆ ಈ ವರ್ಷವೂ ಕರ್ನಾಟಕ ಸಂಘದವರು ನಾಡಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದರು. ತಾ ೨೧ರಂದು ಸಂಘದ ತೃತೀಯ ವಾರ್ಷಿಕೋತ್ಸವವು ಶ್ರೀ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಕಕ್ಕಿಲ್ಲಾಯರ ಭಾಷಣವಾದ ತರುವಾಯ ಅಧ್ಯಕ್ಷರು “ವಿಚಾರ ಸ್ವಾತಂತ್ರ್ಯ ಮತ್ತು ಭಾಷೆ” ಎಂಬ ವಿಚಾರವಾಗಿ ವಿಚಾರಪೂರ್ಣವಾದ ಭಾಷಣ ಮಾಡಿದರು. ಕೊನೆಯಲ್ಲಿ ಶ್ರೀ ಕೊಳ್ಕೆಬೈಲು ನಾರಾಯಣ ಶೆಟ್ಟರ ವಿನೋದಾಭಿನಯವೂ, ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿನಿಯರಿಂದ ವೀರರಮಣಿ ನಾಟಕಾಭಿನಯವೂ, ಬೋರ್ಡು ಹೈಸ್ಕೂಲು ವಿದ್ಯಾರ್ಥಿನಿಗಳ ಪ್ರಹಸನಾಭಿನಯವೂ, ಕಟಪಾಡಿ ಎಸ್. ವಿ. ಎಸ್. ಹೈಸ್ಕೂಲಿನ ವಿದ್ಯಾರ್ಥಿಗಳ ರುಕ್ಮಿಣೀ ಸ್ವಯಂವರ ಆಟವೂ ಇದ್ದುವು. (ವಿವರ ಕಳೆದ ವಾರ ಪ್ರಕಟವಾಗಿದೆ) ತಾ ೨೨ರಂದು ಬೆಳಿಗ್ಗೆ ಲೇಖನ ಸ್ಪರ್ಧೆಯೂ, ತಾ. ೨೨ರಂದು ಪಂಡಿತ ವೆಂಕಟರಮಣಾಚಾರ್ಯ ಸ್ಮಾರಕ ಭಾಷಣ ಸ್ಪರ್ಧೆಯೂ ಇದ್ದವು. ತಾ. ೨೨ರಂದು ಸಂಜೆ ಶ್ರೀ. ಯಚ್. ಚೆನ್ನಕೇಶವ ಅಯ್ಯಂಗಾರ್ ಎಂ. ಒ. ಎಲ್. ರವರ ಅಧ್ಯಕ್ಷತೆಯಲ್ಲಿ ಶ್ರೀ. ಎಸ್. ಎಸ್. ಕಿಲ್ಲೆಯವರು “ಭಾರತದಲ್ಲಿ ಕರ್ಣ” ಎಂಬುವದರ ಕುರಿತು ಉದ್ದಾಮ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣವಾದ ತರುವಾಯ ಶ್ರೀ. ಯಚ್. ಕೆ. ರಂಗನಾಥ ಎಂ. ಎ. ಬಿ. ಟಿ.ಯವರು ಸೊಗಸಾಗಿ ಕವಿತಾ ವಾಚನ ಮಾಡಿದರು. ಆಮೇಲೆ ಶ್ರೀ. ನರಸಿಂಹ ಸೇರಿಗಾರ ಮತ್ತು ಪಾರ್ಟಿಯವರ ವಾದ್ಯ ನಾದನವೂ ಶ್ರೀ. ಕೊಳ್ಕೆಬೈಲು ನಾರಾಯಣ ಶೆಟ್ಟರ ವಿನೋದಾಭಿನಯವೂ ಕ್ರಿಶ್ಚಿಯನ್ ಹೈಸ್ಕೂಲಿನ ವಿದ್ಯಾರ್ಥಿಗಳಿಂದ “ರ್‍ಯಾಮಣ್ಣನ ಸಾಹಸ” ನಾಟಕಾಭಿನಯವೂ ನಡೆದು ಸಭೆ ಕೊನೆಗೊಂಡಿತು. ತಾ. ೨೩ರಂದು ಬೆಳಿಗ್ಗೆ ಪ್ರಾಚೀನ ಹಾಗೂ ಅರ್ವಾಚೀನ ಕವಿತಾ ಸ್ಪರ್ಧೆಯಿತ್ತು. ತಾ. ೨೩ರಂದು ಸಂಜೆ ಶ್ರೀ. ಎಂ. ಶೇಷಾದ್ರಿ ಎಂ. ಎ., ಬಿ. ಟಿ. ಯವರ ಅಧ್ಯಕ್ಷತೆಯಲ್ಲಿ ಶ್ರೀ. ಚೆನ್ನಕೇಶವ ಯ್ಯಂಗಾರ್‌ರು “ರನ್ನನ ಗದಾಯುದ್ಧ”ದ ಕುರಿತು ಉಪನ್ಯಾಸವಿತ್ತರು. ಶ್ರೀಗಳಾದ ಉಪೇಂದ್ರರು ಕಾವ್ಯ ವಾಚನ ಮಾಡಿದರು. ಉಡುಪಿಯ ರಾಷ್ಟ್ರಸೇವಾ ದಳದವರು ಶ್ರೀ. ವಿಠಲ ಶೆಣೈ, ಬಿ. ಎ. ಎಲ್. ಟಿ. ಯವರು ರಚಿಸಿದ ಕನ್ನಡ ಲಾವಣಿಯನ್ನೂ ಶ್ರೀ. ಎಂ. ವಿ. ಹೆಗ್ಡೆಯವರು ರಚಿಸಿದ ತುಳು ಲಾವಣಿಯನ್ನೂ ಹಾಡಿದ ತರುವಾಯ ಕಲ್ಯಾಣಪುರದ ಗೆಳೆಯರ “ನಚಿಕೇತ” ನಾಟಕಾಭಿನಯವಿತ್ತು. ತಾ. ೨೪ರಂದು ಬೆಳಿಗ್ಗೆ ಶ್ರೀ ಮರಿಯಪ್ಪಭಟ್ಟ ಎಂ. ಎ. ಎಲ್. ಟಿ. ವಿದ್ವಾನ್‌ರವರ ಅಧ್ಯಕ್ಷತೆಯಲ್ಲಿ ಶ್ರೀ. ಜಿ. ಎಸ್. ಕೇಶವಾಚಾರ್ಯರು ‘ಹೆತ್ತವರೂ ಶಿಶು ಶಿಕ್ಷಣವೂ’ ಎಂಬುವದರ ಕುರಿತು ಉದ್ಬೋಧಕವಾದ ಭಾಷಣ ಮಾಡಿದರು. ಅಧ್ಯಕ್ಷರು “ಕನ್ನಡಿಗರ ಸಹಿಷ್ಣುತೆ” ಎಂಬುವದರ ಕುರಿತು ಮಾತಾಡಿದರು. ತೀರ್ಥಹಳ್ಳಿಯ ವಿದ್ಯಾರ್ಥಿಯೊಬ್ಬನೂ ಶ್ರೀ. ವಿಜಯೀಂದ್ರ ನಾಯಕರೂ ಕವಿತಾ ವಾಚನ ಮಾಡಿದರು. ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಯಾದ ಮೇಲೆ ಸಂಘದ ಕಾರ್ಯದರ್ಶಿಗಳು ಎಲ್ಲರಿಗೂ ಆಭಾರ ಮನ್ನಿಸಿದರು. ಅಟ್ಟೇ ದಿನ ರಾತ್ರೆ ಉಡುಪಿಯ ಯಕ್ಷಗಾನ ಕಲಾ ಕೋವಿದರಿಂದ ಯಕ್ಷಗಾನ ಕಾಲಕ್ಷೇಪವೂ ಶ್ರೀ. ಕೆ. ವೆಂಕಟನಾರಾಯಣ ಉಪಾಧ್ಯಾಯರ ಭಾಷಣವೂ ಇತ್ತು.

ಒಟ್ಟಾರೆ ಈ ಸಲದ ನಾಡಹಬ್ಬವು ಬಹು ಯಶಸ್ವಿಯಾಗಿ ನೆರವೇರಿದೆ. ನಾಲ್ಕು ದಿನವೂ ಕಿಕ್ಕಿರಿದ ಸಭಾಂಗಣದಲ್ಲಿ ನಡೆದ ನಾಡಹಬ್ಬದ ಉತ್ಸವ ಆದರ್ಶವಾಗಿತ್ತು. ಈ ಉತ್ಸವಕ್ಕೆ ಕನ್ನಡದ ನಾನಾ ಮೂಲೆಗಳಿಂದ ಸಂದೇಶಗಳೂ ಬಂದಿದ್ದುವು. ಉತ್ಸವದ ಯಶಸ್ಸಿಗೆ ಉಡುಪಿಯ ನಾಗರಿಕರು ಇತ್ತ ನೆರವೂ ಕೆಲವು ನಿಸ್ಪೃಹರಾದ ಕಾರ್ಯಕರ್ತರು ಪ್ರತ್ಯಕ್ಷ—ಪರೋಕ್ಷಗಳಲ್ಲಿ ದುಡಿದ ದುಡಿತವೂ ಕಾರಣವಾಗಿದೆ. ಎಂದಿನಂತೆ ವಿಶೇಷ ಶ್ರದ್ಧೆ ವಹಿಸಿದ ಶ್ರೀಗಳಾದ ರಾಜ ಗೋಪಾಲ ಕೃಷ್ಣರಾಯರೂ, ಕೊರಡ್ಕಲ್ ಶ್ರೀನಿವಾಸರಾಯರೂ ವಿಠಲ ಶೆಣೈ ಬಿ. ಎ. ಎಲ್. ಟಿ. ಯವರೂ, ಅಭಿನಂದನೀಯರಾಗಿದ್ದಾರೆ. ಕಲ್ಯಾಣಪುರದ ಗೆಳೆಯರೂ ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿಗಳೂ ಮರಡಿತ್ತಾಯ ಪರಮೇಶ್ವರ ಭಟ್ಟರೂ ಸ್ವಯಂಸೇವಕರಾಗಿ ನೀಡಿದ ಸಹಾಯವೂ ಅಮೂಲ್ಯವಾಗಿದೆ. ಇಂಥ ಸಾರ್ವಜನಿಕ ಕೆಲಸಗಳು ಯಾವಾಗಲೂ ಒಬ್ಬಿಬ್ಬರಿಂದ ನಡೆಯುವಂಥವಲ್ಲ. ಎಂತಲೇ ಕನ್ನಡದ ಈ ಉತ್ಸವ ಇಷ್ಟು ಚೆನ್ನಾಗುವಂತೆ ನೆರವಿತ್ತ ಸಮಸ್ತರೂ ಪಂಡಿತರಾದ ಭಾಷಣಕಾರರೂ ಪಾರಿತೋಷಕ ನಿರ್ಣಾಯಕರೂ ವಿವಿಧ ವಿನೋದಾವಳಿಗಳಲ್ಲಿ ಭಾಗವಹಿಸಿದ ಸರ್ವರೂ ಅಭಿನಂದ್ಯರು.

‘ಬನ್ನಂಜೆ’

ಮುನಿಸಿಪಲ್ ಕೌನ್ಸಿಲಿನ— ವಿಶೇಷ ಸಭೆಯು ಚೆಯರ್‌ಮೆನ್ ಶ್ರೀ ಪಿ. ಉಪೇಂದ್ರ ನಾಯ್ಕರ ಅಧ್ಯಕ್ಷತೆಯಲ್ಲಿ ತಾ 28ರಲ್ಲು ಸಂಜೆ ಜರಗಿ ಶ್ರೀ ಎ. ಬಿ. ಕೃಷ್ಣರಾಜರು ಏಕಮ್ಮತದಿಂದ ಕೌನ್ಸಿಲಿನ ವೈಸ್ ಚೆಯರ್‌ಮೆನರಾಗಿ ಆರಿಸಲ್ಪಟ್ಟರು.

ಬೀಡಿ ಕೆಲಸಗಾರರ ಮುಷ್ಕರ— ಜಿಲ್ಲಾ ಜಡ್ಜರು ಬೀಡಿ ಮಜೂರ ಮಾಲಕರೊಳಗಿನ ವಿವಾದದ ಕುರಿತು ಕೊಟ್ಟ ತೀರ್ಪನ್ನು ಸ್ಥಳೀಯ ಬೀಡಿ ಮಾಲಕರು ಮನ್ನಿಸಲಿಲ್ಲವೆಂದು ನಾಯುಸಿಪಟ್ಟ ಕೆಲಸಗಾರರು ತಾ 28ರಲ್ಲು ಒಂದುದಿನದ ಮುಷ್ಕರ ಹೂಡಿದರು. ಸಂಜೆ ರಥಬೀದಿಯಲ್ಲಿ ಈ ಸಂಬಂಧ ನಿಷೇಧ ಸಭೆಯು ಜರಗಿ ಸ್ಥಳೀಯ ಕಾಂಗ್ರೆಸ್ ಕಮಿಟಿಯವರು ಈ ವಿಷಯದಲ್ಲಿ ಕೈಹಾಕಿ ಇತ್ಯರ್ಥ ಮಾಡಬೇಕೆನ್ನುವ ನಿರ್ಧಾರವಾಯಿತು.

ಸ್ಮಶಾನಕ್ಕೆ ವಿದ್ಯುದ್ದೀಪ:- ಬೀಡಿನಗುಡ್ಡೆ ಹಿಂದೂ ಸ್ಮಶಾನಕ್ಕೆ ನಿಜಯ ದಶಮಿ ದಿನ ವಿದ್ಯುದ್ದೀಪಗಳ ಸೌಕರ್ಯವೀಯಲಾಯಿತು.

ಉದ್ಯಾನ ಸ್ಮಶಾನ (ಬೀಡಿನಗುಡ್ಡೆ)— ಇದರ ಒಳ ಹೊರ ವಠಾರಗಳಿಗೆ ಶ್ರೀ ಯು. ವಾಸುದೇವ ನಾಯಕರು ಸ್ವಂತ ವೆಚ್ಚದಿಂದ ವಿದ್ಯುದ್ದೀಪಗಳನ್ನು ಹಾಕಿಸಿದ್ದು, ಅದರ ಉದ್ಘಾಟನಾ ಸಮಾರಂಭವು ತಾ. 24ನೇ ಅಪರಾಹ್ನ ಜರಗಿತು. ತಹಶಿಲ್ದಾರ್ ಶ್ರೀ. ಎ. ಸದಾನಂದ ಪೈಗಳು ಅಧ್ಯಕ್ಷತೆ ವಹಿಸಿದ್ದರು. ಹಿಂದೂ ಸೇವಾ ಸಮಿತಿ ಅಧ್ಯಕ್ಷ ಶ್ರೀ ಪಿ. ನಾರಾಯಣ ಪ್ರಭುಗಳು ಸವಿಸ್ತಾರವಾಗಿ ವಿಷಯ ನಿವೇದನೆ ಮಾಡಿಕೊಂಡ ಮೇಲೆ, ಮುನ್ಸಿಪಲ್ ಕಮಿಶನರ್ ಶ್ರೀ. ಟಿ. ಹರಿಶ್ಚಂದ್ರ ರಾಯರು ದೀಪೋದ್ಘಾಟನೆ ಮಾಡಿದರು. ಶ್ರೀಗಳಾದ ಟಿ. ಎ. ಪೈ, ವಾಸುದೇವಾಚಾರ್ಯ ವಿಷ್ಣುಕಾಮತ್ ಮತ್ತು ಅಧ್ಯಕ್ಷರ ಭಾಷಣಗಳಾದುವು. ಶ್ರೀ. ಯು. ವಿ. ನಾಯಕರ ಉದಾರದಾನವು ಶ್ಲಾಘಿಸಲ್ಪಟ್ಟಿತು. ಎಲ್ಲರಿಗೂ ಫ್ರೂಟ್‌ಸಲಾದ್ ಪಾನಕಗಳಿದ್ದುವು.

ಹಿಂದೂ ಸೇವಾ ಸಮಿತಿ-ಯ ಸಾರ್ವಜನಿಕ ಸಭೆಯೊಂದು ತಾ. 26ರಲ್ಲಿ ರಥಬೀದಿಯಲ್ಲಿ ಸೇರಿತು.

ಮಂಗಳೂರು

ಶ್ರೀ. ಮಂಜುನಾಥ ಕೃಪಾಪೋಷಿತ ನಾಟಕ ಸಭಾ, ಕದ್ರಿ-ಇವರು ತಾ. 19-10-47ರಂದು ಶ್ರೀ ಎಂ. ವಾಸುದೇವ ಪ್ರಭು ಎಂ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಕದ್ರಿ ವಿದ್ಯಾಬೋಧಿನಿ ಹಾ. ಪ್ರಾ. ಶಾಲೆಯಲ್ಲಿ ನಾಡಹಬ್ಬವನ್ನು ಆಚರಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಶಿಶಿಲ್ ಕದ್ರಿ ಅವರು ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಶ್ರೀ ಎಸ್. ರಾಘವೇಂದ್ರ ರಾಯರು ನಾಟಕ ಸಂಘದವರ ಈ ವರೆಗಿನ ಕಾರ್ಯಕಲಾಪಗಳನ್ನು ವಿವರಿಸಿದರು. ಶ್ರೀ ಬಿ. ಶಂಕರ ಭಟ್ಟ ವಿದ್ವಾನ್, ಕೊಡಗಿನಿಂದ ಆಗಮಿಸಿದ ಶ್ರೀ ಎಸ್. ಆರ್. ನಾರಾಯಣ ರಾವ್, ಕಾಸರಗೋಡಿನ ಬಿ. ಇ. ಎಂ. ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ಕೇಶವ ಭಟ್ಟ ಶ್ರೀಯುತ ಉಪೇಂದ್ರನಾಥ ರಾವ್ ಇವರ ಭಾಷಣಗಳಾದುವು. ಅಧ್ಯಕ್ಷರು ತಮ್ಮ ಸ್ವಾರಸ್ಯವಾದ ಭಾಷಣದಲ್ಲಿ ನಾಡಹಬ್ಬದ ಮಹತ್ವವನ್ನು ವಿವರಿಸಿ, ಆಚರಿಸುವ ವಿಧಾನವನ್ನು ತಿಳಿಸಿ ನಾಟಕ ಸಭೆಯವರಿಗೆ ಊರವರು ಸಹಾಯ ಮಾಡಬೇಕೆಂದರು. ಶ್ರೀಗಳಾದ ಬಿ. ಶ್ರೀನಿವಾಸರಾವ್. ಎಂ. ನಾರಾಯಣ ರಾವ್, ಮೋಹನ ಶರ್ಮ ಇವರ ಸಂಗೀತವಿತ್ತು. ವಿವಿಧ ವಿನೋದಾವಳಿಗಳಾದ ಮೇಲೆ ಶ್ರೀ ಕೊಡ್ಯಲ್ ಶ್ರೀನಿವಾಸರಾಯರಿಂದ ಬರೆಯಲ್ಪಟ್ಟ 'ವಶೀಕರಣ' ಎಂಬ ಪ್ರಹಸನವನ್ನು ಅಭಿನಯಿಸಿದರು. ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಪಾನನಿರೋಧ ಮಂತ್ರಿಗಳಾದ ಶ್ರೀ ಡೇನಿಯಲ್ ಥಾಮಸರು— ತಾ. ೨೩ನೇ ಸಂಜೆಗೆ ಮಂಗಳೂರಿಗೆ ಬಂದಿದ್ದರು. ತಾ. ೨೪ರಂದು ಬೆಳಿಗ್ಗೆ ಉಳ್ಳಾಲದ ಸಮೀಪವೊಂದು ಅನಾಥಾಲಯಕ್ಕೆ ಅಡಿಗಲ್ಲನ್ನಿಟ್ಟರು. ಮಂಗಳೂರಿನ ಬಿಶಪ್ಪರು ಅದನ್ನು ಹರಸಿದರು. ಜಿಲ್ಲಾ ಕಲೆಕ್ಟರರ ನೇತೃತ್ವದಲ್ಲಿ ಪಾನನಿರೋಧ ಪರಿಷತ್ತು ಒಂದು ಕಲೆಕ್ಟರರ ಕಛೇರಿಯಲ್ಲಿ ಜರಗಿತು. ನಗರದ ಪ್ರಮುಖ ನಾಗರಿಕರೆಲ್ಲ ಆಗಮಿಸಿದ್ದರು. ಈ ಪರಿಷತ್ತಿನಲ್ಲಿ ಭಾಗವಹಿಸಿದ ಮಂತ್ರಿಗಳು ಪಾನನಿರೋಧದ ಪ್ರಯೋಜನ, ಜನತೆ ಯಾವ ರೀತಿಯಿಂದ ಇದನ್ನು ಯಶಸ್ವಿಗೊಳಿಸಬಹುದೆಂಬುದನ್ನು ತಿಳಿಸಿದರು. ಮಧ್ಯಾಹ್ನ ಗಂಟೆಗೆ ಮಾನ್ಯ ಮಂತ್ರಿಗಳು ಗೋಕರ್ಣನಾಥ ದೇವಾಲಯದ ವಠಾರದಲ್ಲಿ ಜರಗಿದ ಪಾನನಿರೋಧ ಪರಿಷತ್ತಿಗೆ ಹೋಗಿದ್ದರಲ್ಲದೆ ಎ ಲೋಶಿಯಸ್ ಕಾಲೇಜಿನ ಬಹುಮಾನ ವಿತರಣಾ ಸಮಾರಂಭಕ್ಕೆ ಅಧ್ಯಕ್ಷರಾಗಿದ್ದರು.

WANTED

A young and energetic man with a good knowledge of accounts and Company law and with business experience to act as Manager of the Kanara Timbers Ltd., Udipi. Starting pay and scale will be according to qualifications. Applications with testimonials may be addressed to the undersigned so as to reach him not later than the 8th of November 1947.

R. M. Andhrade,
Chairman
The Board of Directors
The Kanara Timbers Ltd, Udipi

Udipi, 20-10-47

ಸ್ಥಳೀಕ ಸಂಸ್ಥೆಗಳ ಮಂತ್ರಿಗಳಾದ ಶ್ರೀ ಕೆ. ಚಂದ್ರಮೌಳಿಯವರು— ತಾ. ೨೦ರಂದು ಸಂಜೆ ಮಂಗಳೂರಿಗೆ ಬಂದಿದ್ದು ಮೂಡಬಿದ್ರೆ, ಕಾರ್ಕಳ, ಮಣಿಪಾಲ, ಉಡುಪಿ, ಮುಲ್ಕಿ ಮುಂತಾದೆಡೆಗಳಲ್ಲಿ ಸಂಚರಿಸಿಕೊಂಡು ತಾ. ೨೪ರಂದು ಮಂಗಳೂರನ್ನು ಸಂದರ್ಶಿಸಿದರು. ಪೂರ್ವಾಹ್ನ ೯ ಘಂಟೆಗೆ ಅವರು ಪದವಿನಲ್ಲಿನ ಕಟ್ಟಡಗಳ ಯೋಜನೆ"ಯ ಸ್ಥಳವನ್ನು ಸಂದರ್ಶಿಸಿದ ಬಳಿಕ ೧೧ ಗಂಟೆಗೆ ಸರಿಯಾಗಿ ಮಂಗಳೂರು ಸರಕಾರಿ ಕಾಲೇಜಿನಲ್ಲಿ ಮಂಗಳೂರು ನಗರದ ೧೧ನೇ ತರಕಾರಿ ಮತ್ತು ಹೂವುಗಳ ಪ್ರದರ್ಶನವನ್ನು ತೆರೆದರು. ಶ್ರೀ. ಪಿ. ಆರ್. ಪೂಂಜರು ವಂದನೆಗಳನ್ನು ಅರ್ಪಿಸಿದರು. ೧೨ ಗಂಟೆಗೆ ಸರಿಯಾಗಿ ಮಂತ್ರಿಗಳು ನಗರಸಭೆಗೆ ಸಂದರ್ಶನವಿತ್ತಾಗ ನಮ್ಮ ನಗರ ಸಭೆಯು ಅವರಿಗೊಂದು ಮಾನಪತ್ರವನ್ನೊಪ್ಪಿಸಿ, ಮಂಗಳೂರಿಗೆ ಅಗತ್ಯವಾಗಿರುವ ನೀರಿನ ಸರಬರಾಯಿ ಚರಂಡಿಗಳ ವ್ಯವಸ್ಥೆ ಬಸ್ ಸ್ಟೇಶನಿನ ವ್ಯವಸ್ಥೆ, ಮನೆ ಕಟ್ಟಡಗಳ ಸುಧಾರಣೆ ಸಂತೆಗಳ ದುರಸ್ತಿ ಇತ್ಯಾದಿಗಳಿಗೆಲ್ಲ ಸರಕಾರವು ನೆರವು ನೀಡಬೇಕೆಂದು ಕೇಳಿದ್ದಲ್ಲದೆ ಮುನ್ಸಿಪಲ್ ನೌಕರರಿಗೆ ಸಂಬಳವನ್ನು ದುರಸ್ತಿ ಮಾಡುವಲ್ಲಿ ಆದ ಅನ್ಯಾಯವನ್ನು ತಿದ್ದಿಕೊಂಡು ಅವರಿಗೆ ಇತರರಂತೆ ಹೆಚ್ಚಿನ ಸಂಬಳವೀಯಬೇಕೆಂದೂ ಕೇಳಿದ್ದರು. ಮಂತ್ರಿಗಳು ಇದನ್ನು ಉತ್ತರಿಸುತ್ತ ತನ್ನಿಂದಾಗುವ ಸಹಾಯ ಮಾಡುವುದಾಗಿ ತಿಳಿಸಿದರು. ಬಳಿಕ ಮುನ್ಸಿಪಲ್ ನೌಕರರ ಸಂಘದ ಪರವಾಗಿ ಜೆ. ಬಿ. ಡಯಾಸ್‌ರವರು ಮನವಿಯನ್ನು ಓದಿದರು. ಮುನ್ಸಿಪಲ್ ಆಫೀಸಿನಿಂದ ಹೊರಡುವಾಗ ತೋಟಿಗಳು ತಮ್ಮ ಪಾಲಿಪಾಟಲಿಗಳನ್ನು ಹೇಳಿಕೊಂಡರು. ಮಂತ್ರಿಗಳು ತಮ್ಮ ಸಹಾನುಭೂತಿಯು ಯಾವಾಗಲೂ ಅವರ ಕಡೆಗಿದೆಯೆಂದೂ ಜನಪ್ರಿಯ ಸರಕಾರು ಏನಾದರೂ ಕಾರ್ಯಕೈಗೊಳ್ಳಬೇಕೆಂದೂ ಕೇಳಿಕೊಂಡು ತೋಟಿಗಳ ಸಂಬಳದಲ್ಲಿ ತಿಂಗಳಿಗೆ ೧ ರೂಪಾಯಿ ಹೆಚ್ಚಿಗೆ ಕೂಡಿಸಿದರು.

ಮಧ್ಯಾಹ್ನ ೨ರಿಂದ ೪ರ ವರೆಗೆ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಹಲವು ಸಂಸ್ಥೆಗಳ ಅಧಿಕಾರಿಗಳು ಅವರನ್ನು ಕಂಡು ತಮ್ಮ ತಮ್ಮ ಕೇಳಿಕೆಗಳನ್ನು ನಿವೇದಿಸಿಕೊಂಡರು.

ಅನಂತರ ೪ ಗಂಟೆಗೆ ಮಂತ್ರಿಗಳು ಶ್ರೀ ಎಂ. ಭೋಜರಾಯರ ಮನೆಯಲ್ಲಿ ಫಲಹಾರ ಸ್ವೀಕರಿಸಿ ೬-೪೫ ಗಂಟೆಗೆ ಜಿ. ಬೋರ್ಡು ನೌಕರರಿತ್ತ ಮನವಿಯನ್ನು ಸ್ವೀಕರಿಸಿದರು. ಈ ಮನವಿಯಲ್ಲಿ ಸರಕಾರವು ಬೋರ್ಡು ನೌಕರರಿಗೆ ಅದರಲ್ಲೂ ಈ ಜಿಲ್ಲೆಯ ನೌಕರರಿಗೆ ಸರಿಯಾದ ಸಂಬಳ, ಭತ್ಯೆಗಳನ್ನು ಕೊಡಲಿಲ್ಲವೆಂದು ಕೇಳಿತ್ತಲ್ಲದೆ ಒಂದು ತಿಂಗಳ ಬೋನಸ್ ಕೊಡಬೇಕೆಂದಿತ್ತು. ಮತ್ತು ಜಿ. ಬೋರ್ಡುಗಳು ಮುಚ್ಚಲ್ಪಟ್ಟರೆ ತಮಗುಂಟಾಗಬಹುದಾದ ಕಷ್ಟಗಳನ್ನು ತಿಳಿಸಿತ್ತು. ಮಂತ್ರಿಗಳು ತಮ್ಮ ಉತ್ತರದಲ್ಲಿ ಸರಕಾರವು ಈ ಜಿಲ್ಲೆಯ ಪ್ರಶ್ನೆಯನ್ನು ಬಗೆಹರಿಸುತ್ತದೆಂದರು. ಅಲ್ಲಿಂದ ಮಂತ್ರಿಗಳು ಕೇಂದ್ರ ಸಹಕಾರ ಬೇಂಕಿಗೆ ಬಂದು ಸಹಕಾರದ ವಿವಿಧ ಕಾರ್ಯಕ್ಷೇತ್ರಗಳ ಕುರಿತು ವಿಚಾರವಿನಿಮಯ ಮಾಡಿದರು. ಸಭೆಯು ಲಘು ಫಲಹಾರದೊಂದಿಗೆ ಕೊನೆಗೊಂಡಿತು.

ವನಿತಾ ಸೇವಾ ಸಮಾಜದ— ಅಭಿಗೃಹದ ಉದ್ಘಾಟನ ಸಮಾರಂಭವು ಮುಂಬೈ ಗವರ್ನರರ ಧರ್ಮಪತ್ನಿ ಲೇಡಿ ಕಾಲವಿಲೆಯವರ ಹಸ್ತದಿಂದ ತಾ. ೧೭ರಂದು ಜರಗಿತು.

ಮಂಗಳೂರಲ್ಲಿ ನಾಡಹಬ್ಬದ ಉದ್ಘಾಟನೆ—ಯನ್ನು ತಾ ೨೦ರಂದು ಬೆಳಿಗ್ಗೆ ೧೧ ಗಂಟೆಗೆ ನಮ್ಮ ವಿದ್ಯಾಖಾತೆಯ ಡೈರೆಕ್ಟರರಾದ ಡಾ. ಎಸ್. ಆರ್. ಸಪ್ತರ್ಷಿಯವರು ಮಾಡಿದರು. ಸಮಾರಂಭದಲ್ಲಿ ಪ್ರಾರ್ಥನೆ ಯಾದೊಡನೆ ಈ ವಿದ್ಯಾ ಸಂಸ್ಕೃತಿ ಸಮಾರಂಭವನ್ನು ಜರಗಿಸುವ ಟೀಚರ್ ಗಿಲ್ಡ್, ವಸಂತ ಪ್ರೇಮಿ ಮಂಡಲಿ, ದಕ್ಷಿಣ ಕನ್ನಡ ಪಂಡಿತ ಸಂಘ, ಮತ್ತು ಸಾಹಿತ್ಯ ಪರಿಷತ್ತಿನ ಮಂಗಳೂರು ಪ್ರದೇಶ ಸಮಿತಿಯ ಪರವಾಗಿ ಶ್ರೀಯುತರು ಪಿ. ಕೆ. ನಾರಾಯಣ ಮತ್ತು ಎಂ. ಎಸ್. ನಿರಂಜನ ರಾವ್ ಅವರು ಡಾ. ಸಪ್ತರ್ಷಿಯವರನ್ನು ಸ್ವಾಗತಿಸಿ ಅಭಿನಂದಿಸಿದರು. ಡಾ|| ಸಪ್ತರ್ಷಿಯವರು ತಮ್ಮ ಭಾಷಣದಲ್ಲಿ ಭಾರತವು ಸ್ವತಂತ್ರವಾದರೂ ಹಲವಾರು ವಿಚಾರಗಳಲ್ಲಿ ಪರಾಧೀನವಾಗಿ ಇದೆಯೆಂದು ತಿಳಿಸುತ್ತ ಅಧ್ಯಾಪಕವರ್ಗವು ಸ್ವತಂತ್ರವಾಗಬೇಕೆಂದರು. ಶಿಕ್ಷಣವು ಸ್ವತಂತ್ರವಾಗಬೇಕೆಂದರು. ಅಲ್ಲದೆ ಬೇಸಿಕ್ ಶಿಕ್ಷಣ ಸಕೆಂಡರಿ ಶಿಕ್ಷಣಗಳ ವಿಚಾರವಾಗಿಯೂ ಮಾತನಾಡಿದರು. ಶ್ರೀ ಶ್ರೀನಿವಾಸ ಉಡುಪರು ವಂದನೆ ಸಲ್ಲಿಸಿದರು. ಸಂಜೆಯಲ್ಲಿ ಮೂಡಬಿದ್ರೆಯಲ್ಲಿರುವ ಬೇಸಿಕ್ ತರಬೇತಿ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ರಾಮಕೃಷ್ಣ ಶೆಟ್ಟರು "ಮೂಲ ಭೂತ ಶಿಕ್ಷಣ"ದ ಕುರಿತು ಭಾಷಣವಿತ್ತರು. ಹಲವು ಅಧ್ಯಾಪಕರು ಪ್ರಶ್ನೆ ಕೇಳಿ ವಿಷಯ ವಿನಿಮಯವಾಯಿತು. ಆ ಬಳಿಕ "ಪರೀಕ್ಷೆ"ಯೆಂಬ ಏಕಾಂಕ ನಾಟಕವು ಗೆಳೆಯರ ಕೂಟದವರಿಂದ ಯಶಸ್ವಿಯಾಗಿ ಜರಗಿತು.

ಹಿರಿಯಡ್ಕ:—ಇದೇ ತಾ 26ರಲ್ಲಿ ಉಡುಪಿ ಸರ್ಕಲ್ ಕಾಂಗ್ರೆಸ್ ಅಧ್ಯಕ್ಷ, ಕಾರ್ಯದರ್ಶಿ ಮೊದಲಾದವರ ಸಮೇತ ಕಾಂಗ್ರೆಸ್ ಸ್ವಯಂಸೇವಕ ದಳದವರು ಹಿರಿಯಡ್ಕಕ್ಕಾಗಮಿಸಿ, ಕುಳು ಲಾವಣಿ ಇತ್ಯಾದಿಗಳ ಮೂಲಕ ಹರಿಜನೋದ್ಧಾರ ಪಾನ ನಿಷೇಧ ಪ್ರಚಾರ ಮಾಡಿದರಲ್ಲದೆ ಕಾರ್ಕಳ ತಾಲೂಕಿನ ಬೈಲೂರಿಗೂ ಹೋಗಿ ಪ್ರಚಾರ ಮಾಡಿ ಬಂದರು. ಅಪರಾಹ್ನ ಹಿರಿಯಡ್ಕದಲ್ಲಿ ಶ್ರೀ. ಬಿರ್ತಾಡಿ ಜಗನ್ನಾಥ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ಧ್ವಜವಂದನೆ, ಹಾಡುಗಳಾದ ಮೇಲೆ ಪಡುಬಿದ್ರೆ ಬೋ. ಹಾ. ಶಾಲಾ ವಿದ್ಯಾರ್ಥಿಗಳು "ಕ್ಷೀರ ವಿಜಯ" ಎಂಬ ಪಾನನಿಷೇಧ ಯಕ್ಷಗಾನ ತಾಳಮದ್ದಲೆಯನ್ನು ಸುಶ್ರಾವ್ಯವಾಗಿ ಜರಗಿಸಿದರು. ಸದ್ರಿ ಶಾಲಾಧ್ಯಾಪಕ ಶ್ರೀ. ವೈ. ಪಿ. ರಾಯರ ಮತ್ತು ಶ್ರೀ ಎಂ. ವಿ. ಹೆಗ್ಡೆಯವರ ಭಾಷಣಗಳಾದುವು. ಎಲ್ಲರಿಗೂ ಡಾ|| ಚಂದಪ್ಪ ಹೆಗ್ಡೆ, ಶ್ರೀ. ಕೆ. ಜಿ. ಶೆಟ್ಟಿ ಮತ್ತಿತರ ಊರ ಪ್ರಮುಖರ ಸಂಭ್ರಮದ ಸತ್ಕಾರಗಳಿದ್ದುವು.

ಮೂಲ್ಕಿ. ಶ್ರೀ ಚಂದ್ರಮೌಳಿಯವರಿಗೆ ಮಾನಪತ್ರ:—ಇದೇ ತಾ 23 ರಲ್ಲಿ ಮದ್ರಾಸು ಸರಕಾರದ ಸ್ಥಾನಿಕ ಸಂಸ್ಥೆಗಳ ಮಂತ್ರಿ ಶ್ರೀ ಕೆ. ಚಂದ್ರಮೌಳಿಯವರು ಮೂಲ್ಕಿಗೆ ಚಿತ್ತೈಸಿದರು. ಗ್ರಾಮ ಸುಧಾರಣಾ ಸಂಘ, ಪಂಚಾಯತ ಬೋರ್ಡುಗಳು, ಹೈಸ್ಕೂಲ್ ಕಮಿಟಿ, ಮೊಗವೀರ, ಬಿಲ್ಲವ ಕಮಿಟಿಗಳು, ಸಹಕಾರಿ ಸಂಘಗಳು, ಬಪ್ಪನಾಡು ದೇವಸ್ಥಾನ ಕಮಿಟಿ ಮೊದಲಾದ ಸಂಘ ಸಂಸ್ಥೆಗಳು, ಮಾನ್ಯ ಮಂತ್ರಿಗಳಿಗೆ ಸಂಯುಕ್ತ ಮಾನಪತ್ರವನ್ನು ಅರ್ಪಿಸಿದರು. ಮೂಲ್ಕಿ ಆಸುಪಾಸಿನ ಕಾರ್ಯಕಲಾಪಗಳು ಜನತೆಯ ಅತ್ಯಾವಶ್ಯಕತೆಯ ಅಡಚಣೆಗಳು ಅವುಗಳ ನಿವಾರಣೋಪಾಯಗಳೇ ಮೊದಲಾದ ವಿಷಯಗಳು ಮಾನಪತ್ರದಲ್ಲಿ ಸೂಚಿಸಲಾಗಿದ್ದು ಸಲ್ಲದೆ ಮಂತ್ರಿಗಳ ಸಹಕಾರವನ್ನು ಕೋರಲಾಗಿತ್ತು.

ಬಳ್ಕುರಿ—ಯಲ್ಲಿ ನಾಡ ಹಬ್ಬವು ನಾರಾಯಣ ದೇವರ ಕೇರಿಯಲ್ಲಿ ಇದೇ ತಾ. 21 ರಂದ ಅತ್ಯಂತ ವಿಜೃಂಭಣೆಯಿಂದ ಪ್ರಾರಂಭವಾಗಿ ಜಯಶೀಲವಾಗಿ ಕೊನೆಗೊಂಡಿತು. ಶ್ರೀ. ವಿ. ನಾರಾಯಣ ರಾಯರಿಂದ ಧ್ವಜಾರೋಹಣ, ವಕೀಲ್ ಶ್ರೀ ಗೋವಿಂದಾಚಾರ್ಯರ ಅಧ್ಯಕ್ಷತೆಯಲ್ಲಿ ಮಹಾಜನ ಸಭೆ, ಕಾವ್ಯವಾಚನ ಉಪನ್ಯಾಸಗಳಾದುವು. ಶ್ರೀಗಳಾದ ಬಿ. ಸಿ. ಪಾಂಡುರಂಗ ರಾವ್ ಮತ್ತು ಅವರ ಪತ್ನಿ ಶ್ರೀಮತಿ ರಕ್ಕಾಕಲಾಬಾಯಿ ಮಂಗಳೆ ಮತ್ತು ಚೆನ್ನಯ್ಯ ಸ್ವಾಮಿ ಮೊದಲಾದವರು ಪ್ರಮುಖ ಉಪನ್ಯಾಸಕರಿದ್ದರು. ಶ್ರೀ ಸಿ. ಎಮ್. ಭೀಮ ಸೇನಾಚಾರ್ಯರು ಸರ್ವರಿಗೂ ಧನ್ಯವಾದಗಳನ್ನರ್ಪಿಸಿದರು.

ಚಂದಾದಾರರಲ್ಲಿ

ನವಯುಗದ ಚಂದಾಹಣ ಬಾಕಿ ಇರುವ ಚಂದಾದಾರರೆಲ್ಲರೂ ತಮ್ಮ ಬಾಕಿಯನ್ನೂ ಹಾಲ್ತಿ ವರ್ಷದ ಚಂದಾಹಣವನ್ನೂ ದಯವಿಟ್ಟು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಅಪೇಕ್ಷಿಸುತ್ತೇನೆ. ಸಕಾಲದಲ್ಲಿ ಹಣ ಅಥವಾ ಯಾವ ತರದ ಉತ್ತರವೂ ಬಾರದಿದ್ದರೆ ಮುಂದಿನ ಸಂಚಿಕೆಯನ್ನು ವಿ. ಪಿ. ಮಾಡುತ್ತೇನೆ. ಅದನ್ನು ಪ್ರತಿಯೊಬ್ಬರೂ ಸ್ವೀಕರಿಸಬೇಕಾಗಿ ವಿನಂತಿ.

— ಮೆನೇಜರ್

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ಚೆಗ್ಗುರಿಯಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ-

ದಿ ವಿಜಯಾ ಬೇಂಕ್, ಲಿಮಿಟೆಡ್.

ಹೆಡ್ ಆಫೀಸು: ಮಂಗಳೂರು.

ಶಾಖೆಗಳು:-ಬಿ. ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಞಂಗಾಡು, ಮಡಿಕೇರಿ ಮತ್ತು ಮುಂಬಯಿ.

THE VIJAYA BANK, LIMITED.

ವಿವಿಧ ಪಾತ್ರೆಗಳು



ಯಾವತರ್ಹ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಾಲಯ,
ರಥಬೀದಿ, ಉಡುಪಿ.

ದಕ್ಷಿಣ ಕನ್ನಡ

ಕಂಭದ ಕೋಣೆಗೊಂದು ಡಿಸ್ಪೆನ್ಸರಿಯ ಆವಶ್ಯಕತೆ-ಕಂಭದ ಕೋಣೆ, ಹೇರಂಜಾಲು, ಕಾಲ್ತೋಡ-ಹೇರೂರ ಉಳ್ಳೂರ ಕಿರಿಮಂಜೇಶ್ವರ, ಕೆರ್ಗಾಲ ಗ್ರಾಮಸ್ಥರು ಔಷಧಿಗಳಿಗಾಗಿ ಗಂಗೊಳ್ಳಿ, ಕುಂದಾಪುರಕ್ಕೆ ಹೋಗಬೇಕಾಗುವದು ಆದರಿಂದ ಜನರಿಗೆ ಖರ್ಚು ಶ್ರಮವಿರುವದಲ್ಲದೆ ಸಕಾಲದಲ್ಲಿ ಔಷಧಿ ಕೊಡುವರೆ ಸಾಧ್ಯವಾಗುವದಿಲ್ಲ. ಕಂಭದ ಕೋಣೆ ಸೆಂಟರಿಗೆ ಸೇರಿದ ಮೇಲೆ ಹೇಳಿದ ಗ್ರಾಮಗಳಲ್ಲಿ ಸುಮಾರು20ಸಾವಿರ ಜನ ಸಂಖ್ಯೆಯಿರಬಹುದು. ಆದ್ರಿಂದ ಬಡ ಹಳ್ಳಿಗರ ಸೌಕರ್ಯಕ್ಕಾಗಿ ಜನತಾ ಸರಕಾರವು ಗಮನಕೊಟ್ಟು ಕಂಭದ ಕೋಣೆಯಲ್ಲೊಂದು ರೂರಲ್ ಡಿಸ್‍ಪೆನ್ಸರಿಯನ್ನು ತೆರೆದು ಡಾಕ್ಟರನ್ನೂ ಮಿಡವೈಫ್‍ನ್ನೂ ನೇಮಿಸಿ ಸನಿಸ್ಸಹಾಯಕರೆಯ ಜನರಿಗೆ ವೈದ್ಯಕೀಯ ಸಹಾಯ ಒದಗಿಸ ಬೇಕಾಗಿ ಅಪೇಕ್ಷಿಸುವ ಬಡ ಜನರ ಹಿತೈಷಿ, ಶೀನಪ್ಪ ಸೆಟ್ಟಿ.

ಸುರತ್ಕಲ್ ಇಲ್ಲಿಯ ವಿದ್ಯಾದಾಯಿನೀ ಹೈಸ್ಕೂಲಿನಲ್ಲಿ ತಾ. 20-10-47ರಂದು ಶ್ರೀ ಕೆ. ಸೂರ್ಯನಾರಾಯಣ ಅಡಿಗರವರ ಅಧ್ಯಕ್ಷತೆಯಲ್ಲಿ 'ದಸರಾಮಹೋತ್ಸವ' ಸಮಾರಂಭವು ಯಶಸ್ವಿಯಾಗಿ ಜರಗಿತು. ಶ್ರೀ. ಮುರುಳಿ ಭೀಮರಾಯರು "ಕನ್ನಡ ನಾಡು ನುಡಿ ಮತ್ತು ಏಕೀಕರಣ"ದ ವಿಷಯ ಭಾಷಣವನ್ನಿತ್ತರು. ತಾ. 21-10-47 ರಂದು ಸ್ಥಳೀಯ ವಿದ್ಯಾರ್ಥಿ ಸಂಘದವರು ಶ್ರೀ. ಬಿ. ಶಂಕರ ಭಟ್ಟ, ವಿದ್ವಾನ್ ಇವರ ಅಧ್ಯಕ್ಷತೆಯಲ್ಲಿ 'ನಾಡ ಹಬ್ಬ'ವನ್ನಾಚರಿಸಿದರು. ಶ್ರೀ. ವಿದ್ವಾನ್ ಸುರತ್ಕಲ್ ಸುಬ್ಬರಾಯರಿಂದ "ಕನ್ನಡದ ಹಿಂದಿನ ಹಿರಿಮೆ"ಯ ಕುರಿತೂ ಶ್ರೀ. ಸಿ. ಆರ್. ನಾರಾಯಣ ರಾಯರಿಂದ ("ಭಾರತೀ ಸುತ") "ಮುಂದಿನ ಕನ್ನಡದ ಗೊತ್ತುಗುರಿ"ಗಳ ಕುರಿತೂ ಭಾಷಣಗಳಿದ್ದುವು. ಎರಡೂ ದಿನಗಳಲ್ಲೂ ಮನೋರಂಜಕ ವಿನೋದಾವಳಿ ಕಾರ್ಯಕ್ರಮಗಳಿದ್ದುವು-

ಕೊಲ್ಲೂರಿಗೆ ಹರಿಜನ ಪ್ರವೇಶ—ಜಿಲ್ಲೆಯ ಪ್ರಸಿದ್ಧ ಪುಣ್ಯಕ್ಷೇತ್ರವಾದ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ಇಲ್ಲಿಯ ಸರ್ಕಲ್ ಕಾಂಗ್ರೆಸಿನ ನೇತ್ರತ್ವದಲ್ಲಿ ನವರಾತ್ರಿ ಸಮಾರಂಭದ ಸಮಯ, ಹರಿಜನರು ಪ್ರವೇಶಿಸಿ ಕುಂಕುಮಾರ್ಚನೆ ಗೈದು ತೀರ್ಥ ಪ್ರಸಾದವನ್ನು ಅರ್ಚಕರ ಹಸ್ತ ಸ್ವೀಕರಿಸಿದರು.

ಬನ್ನಾಡಿ-ಶ್ರೀ ಪರಮ ಹಂಸ ಪ್ರೌಢ ಪ್ರಾಥಮಿಕ ಶಾಲೆಯಲ್ಲಿ ನಾಡಿಕೆಯಂತೆ ಶ್ರೀ ಶಾರದಾ ಪೂಜಾ ಸಮಾರಂಭವು ತಾ. 22ರಲ್ಲಿ ವಿಜೃಂಭಣೆಯಿಂದ ಉಡುಪಿ ತಾಲೂಕು ಅಹಾರ ಸಮಿತಿಯ ಸದಸ್ಯರಾದ ಶ್ರೀ ಕೆ. ರಾಮಕೃಷ್ಣ ಅಡಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳ ಚಟುವಟಿಕೆಗಳಲ್ಲಿ 'ಮಾಚಪ್ಪಯ್ಯ ಎಂಡ್ ಸನ್' ಎಂಬ ಪ್ರಹಸನವೂ ಕಡ್ಡಾಯ ಶಿಕ್ಷಣದ ಸಲುವಾಗಿ ನಿರ್ಮಿಸಿದ ವಿನೋದವೂ ಪ್ರೇಕ್ಷಣೀಯವಿತ್ತು. ಸಭಿಕರ ಭಾಷಣಗಳಾಗಿ ಅಧ್ಯಕ್ಷರ ಸಮಯೋಚಿತ ಮಾತುಗಳೊಂದಿಗೆ ಶ್ರೀ ಶಾರದಾ ಪೂಜೆಯು ಕೊನೆಗೊಂಡಿತು.

ಪೆರ್ಡೂರು ಹರಿಜನ ಪ್ರವೇಶ - ತಾ. 24ರಲ್ಲು ಸಾಂತ್ಯಾರು ತಿಲಕಾಶ್ರಮದಿಂದ ಎಲ್ಲಾ ಜಾತಿಯ ಹತ್ತು ಜನ ದೇಶ ಸೇವಿಕೆಯರು (ಇಬ್ಬರು ಕೊರಗರು) ಶ್ರೀ ಸಾಂತ್ಯಾರು ಅನಂತ ಪದ್ಮನಾಭ ಭಟ್ಟರ ಮುಂದಾಳುತ್ವದಲ್ಲಿ ಪೆರ್ಡೂರಿಗೆ ಬಂದು ಅಲ್ಲಿಯ ಶ್ರೀ ಮಹತೋಭಾರ ದೇವಸ್ಥಾನಕ್ಕೆ ಪ್ರವೇಶಿಸಿ ಶ್ರೀ ದೇವರ ಗಂಧಪ್ರಸಾದ ಸ್ವೀಕರಿಸಿದರು. ಅನಂತರ ದೇವಸ್ಥಾನದ ಮಾಳಿಗೆಯಲ್ಲಿ ಸಾರ್ವಜನಿಕ ಸಭೆ, ಶಾರದಾ ಪೂಜಾದಿಗಳಲ್ಲಿ ಭಾಗವಹಿಸಿದರು.

ಸ್ಥಳೀಯ ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಪದ್ಮನಾಭ ಅಡಿಗಳ ಅಧ್ಯಕ್ಷತೆಯಲ್ಲಿ ಶಾರದಾ ಪೂಜೆಯು ಜರಗಿತು. ಶ್ರೀಗಳಾದ ಸಿ. ಎಚ್. ಸೆಟ್ಟಿ, ಕೆ. ಅನಂತಕೃಷ್ಣ ರಾವ್, ಕೆ. ಲಕ್ಷ್ಮೀನಾರಾಯಣ ಬಲ್ಲಾಳ್, ಟಿ. ಎ. ಕುಂದರ್, ಎಚ್. ಸಂಜೀವ ಹೆಗ್ಡೆ ಮೊದಲಾದವರ ಭಾಷಣ, ಮಕ್ಕಳ ವಿವಿಧ ವಿನೋದಾವಳಿಗಳಾದುವು.

ಬೈಲೂರು—ತಾ. 23-10-47ರಲ್ಲಿ ಸ್ಥಳೀಯ ಸಂಸ್ಥೆಗಳ ಮಂತ್ರಿಗಳಾದ ಶ್ರೀ. ಚಂದ್ರ ಪೌಳಿಯವರಿಗೆ ರಾಷ್ಟ್ರ ಸೇವಾದಳದವರಿಂದ ಸ್ವಾಗತವೀಯಲಾಗಿತ್ತು. ಮುತ್ಸದ್ದಿಗಾರರೂ, ಇತರರೂ, ತುಂಬಾಜನ ಸೇರಿದ್ದರು. ಈ ಸಂದರ್ಭದಲ್ಲಿ ಶ್ರೀ. ಜಿ. ನಾಗಣ್ಣ ಹೆಗ್ಡೆಯವರು ಇಲ್ಲಿಯ ಕೆಲವು ಕೋರಿಕೆಗಳನ್ನು ಮಾನ್ಯ ಮಂತ್ರಿಗಳ ಮುಂದಿಟ್ಟ ಕೂಡಲೇ. ಅವರು ಅವುಗಳನ್ನೆಲ್ಲಾ ಕೇಳಿ ಮನ್ನಿಸಲಾಗುವುದೆಂದು ಭರವಸೆಯನ್ನು ಯಿತ್ತು ರಾಷ್ಟ್ರ ಸೇವಾದಳದವರನ್ನು ಉದ್ದೇಶಿಸಿ ಸ್ಥಳೀಯ ಅಭಿವೃದ್ಧಿಗಾಗಿ ಹೆಚ್ಚಿನ ಪರಿಶ್ರಮ ವಹಿಸಬೇಕಾಗಿ ಯೋಗ್ಯ ರೀತಿಯಿಂದ ಉಪದೇಶಿಸಿದ್ದಲ್ಲದೆ ಮುತ್ಸದ್ದಿಗಾರರಿಗೂ ಸರಕಾರದಿಂದ ಬೇಕಾದ ಸಹಾಯ ಒದಗಿಸಲಾಗುವುದೆಂದು ತಿಳಿಸಿ ಮುಂದರಿದರು

ಕಾಸರಗೋಡಿನಲ್ಲಿ ಜರಗಲಿರುವ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕೆ ಜಿಲ್ಲಾ ಮಹಾಜನರ ನೆರವನ್ನು ಪಡೆಯಲಿಕ್ಕಾಗಿ ಇಲ್ಲಿಗೆ ತಾ. 21ರಲ್ಲಿ ಬಂದ ಶ್ರೀ. ಶ್ರೀಧರ ಕಕ್ಕಿಲ್ಲಾಯ ಮತ್ತು ಶ್ರೀ. ಪಾದೂರು ವಾಸುದೇವ ಉಪಾಧ್ಯಾಯ ಮೊದಲಾದವರು ಇಲ್ಲಿಯ ಪ್ರಮುಖರನ್ನು ಕಂಡು ರಾಷ್ಟ್ರ ಸೇವಾದಳದವರ ಸ್ವಾಗತವನ್ನು ಸ್ವೀಕರಿಸಿ ಅವರಿಗೆ ಯೋಗ್ಯ ಉಪದೇಶ ಕೊಟ್ಟು ಮುಂದುವರಿದಿರುವರು.

ಕಾಸರಗೋಡು-ಕಳೆದ ಮಹಾನವಮಿಯ ದಿನ ಶ್ರೀ ಚೇರುಂಬಾ ದೇವಾಲಯದಲ್ಲಿ "ಶ್ರೀ ಓಂಕಾರಿಣೀ ಭಜನಾ ಮಂಡಲ"ದ ತೃತೀಯ ವಾರ್ಷಿಕೋತ್ಸವವು ಶ್ರೀ. ಯಂ. ಕೆ. ಹರಿದಾಸರ ಅಧ್ಯಕ್ಷತೆಯಲ್ಲಿ ಜರಗಿ ಸಾಹಿತ್ಯ ಶಿರೋಮಣಿ, ಕೆ. ಎ ದೇವದಾಸರ ಮಲಯಾಳಿ ಭಾಷಣವಾಯಿತು. ಕಾರ್ಯದರ್ಶಿ ಶ್ರೀ ಪಿ. ವಿ. ಕುಂಞರಾಮನವರು ಧನ್ಯವಾದಗಳನ್ನರ್ಪಿಸಿದೆ ತರುವಾಯ ಲಘು ಉಪಹಾರದೊಂದಿಗೆ ಸಭಾ ಮುಕ್ತಾಯವಾಯಿತು.

ರಿಕ್ವಿಜಿಷನ್ ನೋಟಿಸು ಇಂಗ್ಲಿಷಿನಲ್ಲೇಕೆ?—ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಗುವಳಿ ಮಾಡುವ ಗೇಣಿವಕ್ಕಲುಗಳಿಗೆ 1ನೇ ಬೆಳೆಯ ಅಕ್ಕಿಯನ್ನು ಸರಕಾರಕ್ಕೆ ಒಪ್ಪಿಸುವ ಈ ವರ್ಷದ ನೋಟಿಸುಗ ಳ್ನು ಡಿ-ಟಿ-ಇನ್ಸ್‌ಪೆಕ್ಟರರು ತೋರಿಸಿದ ಗೆರೆಗಳಲ್ಲಿ ಮಾಗಣೆ ಶ್ಯಾನುಭೋಗರು ಕೆಲವು ಶಬ್ದಗಳನ್ನು ಕನ್ನಡದಲ್ಲಿ ಬರೆದು ಇಂಗ್ಲೀಷಿನಲ್ಲಿ ಪ್ರಿಂಟು ಮಾಡಿದ ತಗಾದೆ ಪತ್ರಗಳನ್ನು ಕೊಡುತ್ತಾರೆ. ಇದರ ಉದ್ದೇಶ್ಯವೇನಿರಬಹುದು? ಎಲ್ಲಾ ಹಳ್ಳಿಯ ಬೇಸಾಯಗಾರರು ಇಂಗ್ಲಿಷನ್ನು ಖಡ್ಡಾಯವಾಗಿ ಕಲಿಯಬೇಕೆಂದು ಅಧಿಕಾರಿಗಳ ಅಭಿಪ್ರಾಯವಿರಬಹುದೇ? ಅದಲ್ಲವಾದರೆ ಇವರ ಕೈಕೆಳಗಿರುವ ಗ್ರಾಮ ಉದ್ಯೋಗಸ್ಥರಲ್ಲಿ ನೇಕಡಾ ೨ನರಾದರೂ ಇಂಗ್ಲಿಷ್ ಬಲ್ಲವರಿರಬಹುದೋ? ಕನ್ನಡಕ್ಕಿಂತ ಇಂಗ್ಲೀಷಿನಲ್ಲಿ ಪ್ರಿಂಟುಮಾಡಿಸುವಾಗ ಖರ್ಚು ಕಡಿಮೆಯಾಗಿ ಸರಕಾರಕ್ಕೆ ಲಾಭವಿರಬಹುದೋ? ಅಥವಾ ಅಧಿಕಾರಿಗಳಿಗೆ ಕನ್ನಡ ಭಾಷೆ ಗೊತ್ತಿಲ್ಲದಿದ್ದರೆ ಕನ್ನಡಬಲ್ಲ ಜನರ ಸೇವಕರನ್ನು ನೇಮಕ ಮಾಡಿ ಬಡವರಾದ ಹಳ್ಳಿಯ ರೈತರಿಗೂ, ಗ್ರಾಮ ಉದ್ಯೋಗಸ್ಥರಿಗೂ ಮತ್ತು ಗ್ರಾಮ ಸಮಿತಿ, ಪಂಚಾಯತ ಬೋರ್ಡು ಮೊದಲಾದ ಹಳ್ಳಿಯ ಸಂಸ್ಥೆಗಳೊಡನೆ ಕನ್ನಡದಲ್ಲಿಯೇ ಪತ್ರವ್ಯವಹಾರಗಳನ್ನು ನಡಿಸಲಿಕ್ಕೆ ಮಾಹಿತಿಯುಳ್ಳ ಅಧಿಕಾರಿಗಳನ್ನೇ ನೇಮಿಸಿದರೆ ಎಲ್ಲಾ ಜನರಿಗೂ ತುಂಬ ಉಪಕಾರವಾಗಬಹುದಲ್ಲವೆ?

ಎಸ್. ಯಚ್. ಪೊಳಲಿ.

ಹರಿಜನರನ್ನು ವಿಚಾರಿಸುವವರಾರು?—ನಮ್ಮ [illegible] ಕೆಲವು ಸೇಂದಿ ಅಂಗಡಿಗಳಲ್ಲಿ ಇದೇ ಕಳೆದ ತಾ. 1ರಿಂದ ಹೋಟೇಲು ತೆರೆದು ಮೊದಲು ಸೇಂದಿ ಕುಡಿಯುವವರಿಗೆ ಈಗ ಚಾ ಕೊಡುವ ಏರ್ಪಾಡು ಸರಕಾರದವರು ಮಾಡಿರುತ್ತಾರೆ. ಆದರೆ ಕೆಲವು ಹಳ್ಳಿಯ ಈ ಸೇಂದಿ ಹೋಟೇಲಿನಲ್ಲಿ ಕೂಡಾ ಹರಿಜನರಿಗೆ ಪ್ರವೇಶ ಕೊಡದೆ ಹೊರಗೆ ಗೆರಟೆಯಲ್ಲಿ ಕುಡಿಯಲಿಕ್ಕೆ ಕೊಡುತ್ತಾರೆ. ಇದು ಸರಕಾರದ ಅಧಿಕಾರಿಗಳ ತಿಳುವಳಿಕೆಗೆ ಬಂದಿರುವುದೆ? ಬಂದಿದ್ದರೆ 1947ನೇ ಇಸವಿಯ ನಾಗರಿಕ ನ್ಯೂನತಾ ಪರಿಹಾರಕ ತಿದ್ದುಪಡಿ ಶಾಸನ ಯಾರಿಗಾಗಿ? ಹಳ್ಳಿಯ ಹರಿಜನರಿಗೆ ಸೇಂದಿ ಹೋಟೇಲಿಗೆ ಕೂಡಾ ಪ್ರವೇಶ ಕೊಡದಿದ್ದರೆ ಸರಕಾರದ ಹಣದಿಂದ ಈ ಹೋಟೇಲು ನಡಿಯುವುದು ಯಾರಿಗಾಗಿ? ಹಳ್ಳಿಯಲ್ಲಿ ಹರಿಜನರು ಇನ್ನೆಷ್ಟು ಕಾಲ ಹೊಲಯರಾಗಿರಬೇಕು? ಎಂಬುದನ್ನೆಲ್ಲಾ ವಿಚಾರಿಸುವದು ಅಗತ್ಯವಲ್ಲವೆ?

'ಸತ್ಯಾಗ್ರಹಿ' ಪೊಳಲಿ

NOTICE

ಕುಂದಾಪುರ, ಡಿ. ಮು. ಕೋರ್ಟಿನಲ್ಲಿ

O. S. 475/1947

ವಾದಿ.-ಕೃಷ್ಣ ಜೋಯಿಸ.

ಪ್ರತಿವಾದಿಗಳು-ಪಾರ್ವತಿ ಹೆಂಗುಸು ಕೂಡಾ.

4ನೇ ಪ್ರತಿವಾದಿ. ಮಹಾಲಿಂಗ ಜೋಯಿಸ, ಪರಮೇಶ್ವರ ಜೋಯಿಸರ ಮಗ, ಕುಂದಾಪುರ ತಾಲ್ಲೂಕು ಯಡ್ತರೆ ಗ್ರಾಮದಲ್ಲಿರುವವ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ, ವಾದಿಗೆ 3ನೇ ವರೆಗಿನ ಪ್ರತಿವಾದಿಗಳಿಂದ ಪಾರ್ಟಿಷ, ವ್ಯಯ ಸಂಬಂಧಗಳಿಗೆ ಬರತಕ್ಕ ಕಾಲಗೇಣಿ ಗೇಣಿಬಾಕಿ ಬಗ್ಗೆ ಮೇಲಿನ ದಾವೆ ಮಾಡಿಸ್ಸಾಗಿರುತ್ತದೆ. ಸದ್ರಿ ದಾವೆಯು ತಾ. 7-11-1947ಕ್ಕೆ ತನ್ನಿಗೆ ಯಿಟ್ಟಿದೆ. ಅದಿವಸ ನಿಮ್ಮ ಆಕ್ಷೇಪಯಿದ್ದರೆ ಆದಿನ ಹಗಲು 11 ಘಂಟೆಗೆ ಹಾಜರಾಗಿ ಪ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ತಿಳಿಸಿರುತ್ತದೆ.

By order of the Court.

Y. Tejappa Shetty

Advocate Coondapoor.

25 ಕತೆಗಳು | ಮಧುವಿಗು' ಮಧುರ!

ಮಧುವನ

ಕತೆಗಳು 25

ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾ ಸಂಗ್ರಹ.

ಕಣ್ಸೆಳೆವ ಬಾಹ್ಯಾಂಗ! ಮನಸೆಳೆವ ಅಂತರಂಗ!

ಬೆಲೆ 3 0 0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಕಟಣೆ

ಮಂಗಳೂರು ತಾಲೂಕು ಅಮುಣಂಜೆ ಗುತ್ತಿನ ಎನ್. ಎ. ಶೀನಪ್ಪ ಹೆಗ್ಡೆ ೧ ಮತ್ತು ಅಡ್ಯಾರು ರಾಮಣ್ಣ ಶೇಕರ ೧ ಕೂಡಾ ೨ ಜನರು ಎಲ್ಲಾ ಜನರಿಗೆ ತಿಳಿಸುವುದೇನಂದರೆ:—

ನಮ್ಮ ಹಿರಿಯರ ಬಾಬ್ತು ಕಳೆದ 1886 ನೇ ಇಸ್ವಿ ಜಿಲ್ಲಾ ರಿ. ಆ. ನಂಬ್ರ 246ಕ್ಕೆ, ರಿಜಿಸ್ಟ್ರಿಯಾದ ಪಾಲು ಪಟ್ಟಿ ಪ್ರಕಾರ, ಜಂಜ್ರಾ ನಂಬ್ರ ೬ ಮತ್ತು ೨೨ ನೇ ಸ್ಥಳವು ನಮ್ಮ ಕುಟುಂಬದ, ಮಾನ ಮರ್ಯಾದಿ ದೈವ, ದೇವರ, ಗಡಿ ಸುಡಿ, ವಗೈರೆ ವಿನಿಯೋಗದ ಬಗ್ಗೆ ವಿಂಗಡಿಸಿರುತ್ತಾರೆ. ಈಗ ಸದ್ರಿ ಸ್ಥಳಗಳ ಪೈಕಿ ಅಮುಣಂಜೆ ಗ್ರಾಮದ ಸ. ನಂಬ್ರ 16ರಲ್ಲಿ ಸಬ್ ಡಿ. ನಂಬ್ರ 4ರ ಪೈಕಿ, ಪೂರ್ವ ದಕ್ಷಿಣಾಂಶ, ಪಾಲು ಪಟ್ಟಿ ಜಂಜ್ರಾ ನಂಬ್ರ 6ನೇ ಪೆಜತ್ತಿ ಮಾರು ಎಂಬ ಬೈಲು ಗದ್ದೆಯಲ್ಲಿರುವ ಆವೆ ಮಣ್ಣನ್ನು ೧ನೇ ಭಾಗದವರು ವಿಕ್ರಯಿಸುತ್ತಾರಾಗಿ ವರ್ತಮಾನ ಕೇಳುತ್ತೇವೆ. ಮೇಲೆ ಬರೆದ ಸ್ಥಳಗಳು ನಮ್ಮ ಸಮಷ್ಟಿ ಹಕ್ಕಿನದ್ದಾಗಿರುವುದರಿಂದ ಅದರಲ್ಲಿರುವ ಆವೆ ಮಣ್ಣನ್ನು ನಮ್ಮ ಅನುಮತಿಯಿಲ್ಲದೆ ಪಡಕೊಂಡರೆ ಆ ಸಂಬಂಧ ನಮಗಾಗುವ ಸಕಲನಷ್ಟ ತೆರಲಿಕ್ಕೂ ಅವರೇ ಜವಾಬ್ದಾರರಾಗಿರತಕ್ಕದ್ದು ಎಂಬ ಸಂಗತಿ ತಿಳಿದಿರಲಿ.

N. A. Sheenappa Hegde.

Polali

A. Ramanna Sheker.

ತಾರೀಖು 20ನೇ ಒಕ್ಟೋಬರ್ 1947.

ಬಾಲಕರು ಆರೋಗ್ಯಶಾಲಿಗಳಾಗಲು (ಪ್ರಭೂಸ್) ಬಾಲಾಮೃತ ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನೆಟ್ಟಗಾಗಲು ತಾಯಿ ತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ. ಮಾತ್ರ, ಹೊತ್ತು ಕಳೆದರೆ ಪತ್ತೆ ಬಾರದು.

'ಪ್ರಭೂಸ್'

ಬಾಲಾಮೃತ

ಪ್ರಭೂಸ್ ಬಾಲಾಮೃತದ ಖ್ಯಾತಿಗೆ ಸಾಕ್ಷಿ ಬೇಕೆ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಸುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,

(ರಿಜಿಸ್ಟರ್ಡ್)

ಕುಂಜಾಲು, ಪೊ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:-

ನವಭಾರತ ಪುಸ್ತಕ ಭಂಡಾರ, ಉಡುಪಿ.

L. N. Sharma, Mangalore.

(...ಪುಟದಿಂದ.)

ಳ ಸರಬರಾಯಿಗಳನ್ನು ಪಶ್ಚಿಮ ಪಂಜಾಬು ಸರಕಾರವು ನಿಲ್ಲಿಸಿದೆ ಎಂಬ ನಿಮ್ಮ ಆರೋಪದ ಕುರಿತು, ಇವೆಲ್ಲಾ ಸಂಗತಿಗಳಲ್ಲೂ ವ್ಯವಹಾರ ಯೋಗ್ಯ ಸೌಕರ್ಯಗಳನ್ನೆಲ್ಲಾ ನಿಮಗೊದಗಿಸಬೇಕೆಂದು ಪಶ್ಚಿಮ ಪಂಜಾಬು ಸರಕಾರವನ್ನು ಕೇಳಿಕೊಳ್ಳಲಾಗಿದೆ ಎಂದು ನಾವಿಷ್ಟರೊಳಗೇನೇ ನಿಮಗೆ ತಿಳಿಸಿದ್ದೆವು. ಪಶ್ಚಿಮ ಪಂಜಾಬು ಸರಕಾರದ ಹತೋಟಿಯೊಳಗಿಲ್ಲದ ಪರಿಸ್ಥಿತಿಗಳ ದೆಸೆಯಿಂದಾಗಿ ವಾಹನ ಸಂಚಾರಗಳಿಗೆ ಬಿದ್ದಿರುವ ತೊಂದರೆಗಳನ್ನೇ ಆ ಸರಕಾರದ ವೈಷಮ್ಯೋದ್ದೇಶವೆಂದು ತೋರಿಸುವದಾಗಲೀ, ಅದನ್ನು ಸಂಸ್ಥಾನದ ಮೇಲೆ ಆಕ್ರಮ ನಡೆಸುವ ಆ ಸರಕಾರದ ಅಕೃತ್ಯವೆಂದು ಗಣಿಸುವದಾಗಲೀ ಸಂಪೂರ್ಣ ತಪ್ಪು. ಈ ಸಂಗತಿಗಳಿಂದಾಗಿ ಎದ್ದಿರುವ ಸಮಸ್ಯೆಗಳ ಕುರಿತು ಚರ್ಚಿಸುವದಕ್ಕೂ, ಈ ಭಿನ್ನತೆಗಳನ್ನು ಸರಿಪಡಿಸುವ ಹಾದಿ ಹಾಗೂ ವಿಧಾನಗಳನ್ನು ಕಂಡುಹಿಡಿಯುವದಕ್ಕಾಗಿಯೂ ನಾವಿಷ್ಟರಲ್ಲೇ ನಿಮ್ಮ ಬಳಿಗೆ ಒಬ್ಬ ಸ್ಪೆಶಲ್ ಅಧಿಕಾರಿಯನ್ನು ಕಳುಹಿದ್ದೇವೆ".

ಕಾಶ್ಮೀರೀ ಪ್ರಜಾನಾಯಕ ಶೇಕ್ ಅಬ್ದುಲ್ಲಾರ ಹೇಳಿಕೆ

"ಕಾಶ್ಮೀರವು ಭಾರತಕ್ಕೆ ಅಥವಾ ಪಾಕಿಸ್ತಾನಕ್ಕೆ ಸೇರುವ ಪ್ರಶ್ನೆಯ ಕುರಿತು ಪ್ರಜೆಗಳು ಯಾವ ಪರ್ಯಾಲೋಚನೆ ಮಾಡಬೇಕಾದರೂ, ಮೊದಲ ಕೆಲಸವಾಗಿ ಕಾಶ್ಮೀರ ರಾಷ್ಟ್ರೀಯ ಸಮ್ಮೇಲನದ ಬೇಡಿಕೆಯಾಗಿರುವ ಜವಾಬ್ದಾರೀ ಸರಕಾರವನ್ನು ಕೂಡಲೇ ರಚಿಸಬೇಕು. ಭಾರತ ವಸಾಹತಿನ ಮಟ್ಟಿಗೆ, ಅದರ ಆಡಳಿತೆಯನ್ನು ನಿರ್ವಹಿಸುವ ಹೊಣೆ ಹೊತ್ತವರಿಗೆ ರಾಷ್ಟ್ರೀಯ ಸಮ್ಮೇಲನದ ಅಭಿಮತಗಳು ಮಾನ್ಯವಿರುವುದಕ್ಕಾಗಿ ನಾನಾನಂದಿಸುತ್ತೇನೆ; ಸತ್ಯಸ್ಥಿತಿಯೆಂದರೆ ಅವರು ಅಂದಿನಿಂದಿದುವರೆಗೂ ಜನತಾ ಚಳವಳಿಕ್ಕೆ ತಮ್ಮ ಆತ್ಮುನ್ನತ ಸಹಾನುಭೂತಿಯನ್ನು ತೋರಿಸುತ್ತಾ ಬಂದಿದ್ದಾರೆ. ಆದರೆ ಜನತಾ ಹೋರಾಟದ ಕಡೆಗೆ ಪ್ರತಿಗಾಮೀ ಧೋರಣೆಯನ್ನೇ ಪ್ರದರ್ಶಿಸಿರುವ ಪಾಕಿಸ್ತಾನ್ ನಾಯಕರ ಮರ್ಜಿ ಮಾತ್ರ ಬೇರೆಯೇ. ಬ್ರಿಟಿಷರಿಂದ ಆಶ್ರಿತ ರಾಜರಿಗೆ ಸಾರ್ವಭೌಮಾಧಿಕಾರ ವರ್ಗೀಕರಣಗೊಂಡಿದೆಯಲ್ಲದೆ ಪ್ರಜೆಗಳಿಗಲ್ಲವೆಂದೂ, ತಾವಾವ ವಸಾಹತಿಗೆ ಸೇರಬೇಕೆಂಬುದನ್ನು ನಿರ್ಧರಿಸತಕ್ಕವರು ಆ ರಾಜರೇ ಎಂದೂ ಸ್ಪಷ್ಟೀಕರಿಸುವವರೆಗೂ ಈ ಪಾಕಿಸ್ತಾನ್ ಪ್ರಮುಖರು ಮುಂದೊತ್ತಿದ್ದರು. ಸಂಸ್ಥಾನಗಳ ಪ್ರಜೆಗಳ ಪರವಾಗಿ ಕಾಂಗ್ರೆಸ್ಸು ಸಬಲ ಧೋರಣೆ ವಹಿಸಿದ್ದಿತೆಂಬ ಕುರಿತು ಅನುಮಾನವೇ ಇಲ್ಲ. ಆದರೆ ಮುಸ್ಲಿಂ ಲೀಗ್ ಮತ್ತು ಆಶ್ರಿತ ರಾಜರು ಆಡಿದ ಧ್ವಂಸಾತ್ಮಕ ಆಟಗಳ ದೆಸೆಯಿಂದ ಅವರೂ ಅನಿರ್ವಾಹವಾಗಿ ತಗ್ಗಬೇಕಾಯಿತು; ಮತ್ತು ಸಂಸ್ಥಾನೀ ಪ್ರಜೆಗಳಿಗಪ್ರಿಯವಾದ ಸಂಗತಿಗಳನ್ನು ಅವರು ಮಾಡಿದರು. ಪರಿಸ್ಥಿತಿಯ ಒತ್ತಡಕ್ಕೊಳಗಾಗಿ ಕೇಪಿ ಹಚ್ಚಿಕೊಳ್ಳಬೇಕಾಗಿ ಬಂದ ಕಾಂಗ್ರೆಸಿನ ಸಂಕಷ್ಟಗಳನ್ನು ನಾನು ಬಲ್ಲೆ. ಇದೇ ಕಾಲದಲ್ಲಿ, ಜನತೆಯ ಕಡೆಗಿನ ಸಹಾನುಭೂತಿಯೆಂಬುದು ರಾಜರ ಕಡೆಗೆ ವೈರವೆಂದಾಗಲಿಲ್ಲ.

ಪಾಕಿಸ್ತಾನವು ಕಾಶ್ಮೀರವನ್ನು ತನ್ನೊಂದಿಗೆ ಜೋಡಣೆಗೊಳಿಸುವ ಕುರಿತು ಆತ್ಯಾತುರಗೊಂಡಿದೆ. ಕಾಶ್ಮೀರವಿರುವ ಮಾರ್ಮಿಕ ಸ್ಥಾನದ ದೆಸೆಯಿಂದಾಗಿ, ಅದೆಲ್ಲಿಯಾದರೂ ಭಾರತ ವಸಾಹತಿನೊಡನೆ ಸೇರಿಕೊಂಡರೆ ಪಾಕಿಸ್ತಾನವು ಸಂಪೂರ್ಣವಾಗಿ ಮುತ್ತಿಗೆಯೊಳಗಾಗುವದು.

ಪಾಕಿಸ್ತಾನವೀಗ ಒತ್ತಡ ಹಂಚಿಕೆಗಳ ಆಂದೋಲನವನ್ನು ನಡೆಸುತ್ತಿದೆ. ಹಿಂದೂ ಮುಸ್ಲಿಂ ಸಮಸ್ಯೆಯು ಹೆಚ್ಚಿನಂಶ ಮುಗಿಯುತ್ತಾ ಬಂದಿರುವುದರಿಂದ ತನ್ನ ಜನತೆಯ ಲಕ್ಷ್ಯವನ್ನು ಬೇರೊಂದು ದಿಕ್ಕಿಗೆಳೆಯುವ ಅವಶ್ಯಕತೆ ಪಾಕಿಸ್ತಾನಕ್ಕೀಗ ಉಂಟಾಗಿರಬೇಕು; ಅದಕ್ಕಾಗಿ ಅದು ಕಾಶ್ಮೀರವನ್ನು ಯಾಗ ಪಶುವಾಗಿ ಬಲಿಕೊಡಲು ಹವಣಿಸುತ್ತಿದೆ.

ನಾವು ಯಾರೊಬ್ಬರ ದಮನಕ್ಕೆ ಬಲಿಬೀಳುವುದಕ್ಕೂ ಸಿದ್ಧರಿಲ್ಲ. ಕಾಶ್ಮೀರದ ಜನತೆಯು ಸ್ವಾತಂತ್ರ್ಯ ಸಂಪಾದಿಸಿಕೊಳ್ಳಲು ಭಾರತ ಮತ್ತು ಪಾಕಿಸ್ತಾನ, ಇವೆರಡೂ ಸಹಾಯ ಸಲ್ಲಿಸುವವೆಂದು ನಾನು ಪೂರ್ಣಾಶೆ ಕಟ್ಟಿಕೊಂಡಿದ್ದೇನೆ. ಹೊಣೆಗಾರ ಸರಕಾರವಾದ ಹೊರತು, ಜನತೆಯ ಮನಸ್ಸೊಂದು ಸ್ಥಿರತೆಗೆ ಬರುವದು ಎಷ್ಟಕ್ಕೂ ಸಾಧ್ಯವಾಗದಂತಹ ತೊಡಕುಗಳೇ ಸದ್ಯಕ್ಕಿವೆ. ಪಾಟಿಯಾಲಾ, ಭರತಪುರ, ಕಪರ್ಥಲಾ ಮೊದಲಾದ ಸಂಸ್ಥಾನಗಳಲ್ಲಿಯೂ ಇತರ ಕಡೆಗಳಲ್ಲಿಯೂ ನಡೆದ ಘಟನೆಗಳಿಂದಾಗಿ ಕಾಶ್ಮೀರ ಜನತೆಯ ಬಹು ಸಂಖ್ಯಾಕರಾಗಿರುವ ಮುಸ್ಲಿಮರ ಮನಸ್ಸು ಸಹಜವಾಗಿ ಕದಡಿ ಹೋಗಿದೆ. ಸಂಸ್ಥಾನವು ಭಾರತದೊಂದಿಗೆ ಜೋಡಣೆಗೊಂಡಲ್ಲಿ ತಮ್ಮನ್ನು ಅಪಾಯ ಕಾದಿದೆ ಎಂದವರು ಹೆದರಿ ಹೋಗಿದ್ದಾರೆ. ಅಂತೆಯೇ ಪಾಕಿಸ್ತಾನದಲ್ಲಿ ತಮ್ಮ ಧರ್ಮಬಂಧುಗಳಿಗೊದಗಿರುವ ಅನ್ಯಾಯಗಳನ್ನು ಕಂಡಿರುವ ಹಿಂದುಗಳೂ ಸಿಖ್ಖರೂ ಕಾಶ್ಮೀರವು ಪಾಕಿಸ್ತಾನಕ್ಕೆ ಸೇರುವದೆಂದೊಡನೆ ದಿಗಿಲುಗೊಳ್ಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಶಾಂತವಾಗಿ ಮತ್ತು ನಿರ್ವಿಕಾರ ಬುದ್ಧಿಯಿಂದ ಆಲೋಚನೆ ಮಾಡುವದು ಅಸಾಧ್ಯ; ಮತ್ತು ಆರ್ಥಿಕ, ರಾಜಕೀಯ ಮತ್ತಿತರ ದೃಷ್ಟಿಯಿಂದ ಕಾಶ್ಮೀರವು ಯಾವ ವಸಾಹತಿಗೆ ಸೇರಿಕೊಳ್ಳುವದು ಅನುಕೂಲವೆಂಬುದನ್ನು ಕಂಡುಕೊಳ್ಳುವುದು ಕಷ್ಟದ. ಈಗ ಕಾಶ್ಮೀರದ ಕಂದರವಾಸೀ ಜನತೆಗೆ ಪ್ರವೇಶವಿಲ್ಲದ ಕಾಶ್ಮೀರೀ ಸಂಸ್ಥಾನಿಕ ಸೇನೆಯನ್ನು ರಾಷ್ಟ್ರೀಕರಣಗೊಳಿಸುವ ಸಮೇತ ಸಂಪೂರ್ಣ ಪ್ರಜಾಪ್ರಭುತ್ವವನ್ನು ಕೊಟ್ಟರೆ ಮಾತ್ರ ಈ ಸಮಸ್ಯೆಯನ್ನು ಬಗೆಹರಿಸಬಹುದು.

ಕಾಶ್ಮೀರದ ಹೊಸ ಪ್ರಧಾನಿ ಶ್ರೀ ಮೆಹರ್ಚಂದ್ ಮಹಾಜನರ ಹೇಳಿಕೆ

ಕಾಶ್ಮೀರದಲ್ಲಿ ದಬ್ಬಾಳಿಕೆಯಾರಂಭಿಸಿ ಶೇಕ್ ಅಬ್ದುಲ್ಲಾನಂತಹ ಪ್ರಮುಖರ ದಸ್ತಗಿರಿ, ನೆಹರು ಪ್ರವೇಶಕ್ಕೆ ನಿಷೇಧ ಹಾಕಿ ರಾಷ್ಟ್ರದಲ್ಲೆಲ್ಲಾ ಅಪ್ರಿಯನಾಗಿದ್ದ ಕಾಶ್ಮೀರದ ಪ್ರಧಾನ ಮಂತ್ರಿ ಪಂಡಿತ ರಾಮಚಂದ್ರ ಕಾಕರನ್ನು ರಾಜೀನಾಮೆ ಕೊಡಿಸಿ, ಮಹಾರಾಜರು ಪಂಜಾಬು ಹ್ಯಾಕೋರ್ಟಿನ ಜಡ್ಜ ಪಂಜಾಬ್ ಗಡಿ ಸಮಿತಿಯ ಸದಸ್ಯ ಆಗಿದ್ದ ಶ್ರೀ ಮೆಹರ್ ಚಂದ್ ಮಹಾಜನರನ್ನು ಪ್ರಧಾನ ಮಂತ್ರಿಯಾಗಿ ನೇ... ಸಿಕೊಂಡಿದ್ದಾರೆ. ಮಾಜಿ ಪ್ರಧಾನಿ ಕಾ... ರು ತನ್ನ ಕುಟುಂಬಸಮೇತ ... ಗೆ ಹೋಗಿ ಅಲ್ಲಿಂದ ಲಂಡನಿಗೆ ಹಾ... ವ ನಿರ್ಧಾರ ಮಾಡಿದ್ದರು. ಅವರನೆ... ಯ್ಯಲು ಶ್ರೀ ನಗರಕ್ಕೊಂದು ವಿಮಾ... ಕೂಡಾ ಬಂದಿತ್ತು. ಅಷ್ಟರಲ್ಲಿ ಕಾಶ್ಮೀ... ಸರಕಾರವು ಪಂಡಿತ್ ಕಾಕರು ತ... ಮನೆಯಿಂದ ಹೊರಡಕೂಡದೆಂಬ ನಿ... ಧಾಜ್ಞೆ ಜ್ಯಾರಿ ಮಾಡಿ ಶ್ರೀನಗರದಲ್ಲಿ... ದಿಗ್ಬಂಧಿಸಿಟ್ಟಿದೆ. ಚಾಣಿಕ್ಯತಂತ್ರಪ್ರವೀ... ಕಾಕರು ವಿದೇಶಗಳೊಡನೆ ಬೆಳೆಸುವ ... ಬಂಧವು ಸಂಸ್ಥಾನಕ್ಕೆ ಅಪಾಯಕಾರಿಯ... ದೀತೆಂದೇ ಈ ನಿರ್ಬಂಧ. ಈಗಿನ ಪ್ರ... ನಿ ಮಹಾಜನರು ನ್ಯಾಯ ಪಕ್ಷಪಾತಿ; ... ಚಕ್ಷಣ ಆಡಳಿತೇಗಾರ. ಅವರು ಕಾಶ್ಮೀ... ದ ಧೋರಣೆಯ ಕುರಿತು ಹಿಗಂದಿದ್ದಾ... "ಸಾರ್ವಜನಿಕ ಅಭಿಪ್ರಾಯವನ್ನು ದೃ... ಪಥದಲ್ಲಿಟ್ಟುಕೊಂಡು ಸಂದರ್ಭಾನುಸಾ... ಕಾಶ್ಮೀರದ ಸ್ಥಾನ ಸಂಬಂಧದ ಯಾವ ... ಧಾರವನ್ನೇ ಮಹಾರಾಜರು ಮಾಡಿ... ರೂ, ಅದು ಭಾರತ ಮತ್ತು ಪಾಕಿಸ್ತಾ... ವೆರಡರೊಂದಿಗೂ ಸದಾಕಾಲ ಸ್ನೇಹಬಾ... ವಿಟ್ಟುಕೊಳ್ಳುವುದು. ತನ್ನ ಆರ್ಥಿಕ ಸ್ಥಿ... ಮತ್ತು ಇತರ ವಿದ್ಯಮಾನಗಳಿಗನುಗ... ವಾದ ನಿರ್ಧಾರಕ್ಕೇನೆ ಕಾಶ್ಮೀರವು ಸ... ಲದಲ್ಲಿ ಬರುವರೆ ಎರಡು ವಸಾಹತುಗ... ಅನುಕೂಲಗೊಳಿಸುವವೆಂದು ನನ್ನ ದೃ... ನಂಬಿಕೆ. ಇಂತಹ ಅತಿಸೂಕ್ಷ್ಮವಾದ ... ಶ್ನೆಯ ಕುರಿತು ನಾವು ಅವಸರದಿಂದ ... ದಿಗೂ ನಿರ್ಧರಿಸಲಾರೆವು. ಜನತೆಯ ... ದುಳು ಜಾತೀಯ ವಿಷದಿಂದ ಕದಡಿರು... ಗ-ತುಲನಾತ್ಮಕ ಸಾರ್ವಜನಿಕಾಭಿಪ್ರಾ... ಯ ಅಸಾಧ್ಯವಿರುವಾಗ-ನಾವಾವ ನಿರ್ಧಾ... ರಕ್ಕೂ ಬರಲಾರೆವು. ಸದ್ಯದ ಸರಕಾರ... ನ್ನು ಅಡಿಮೇಲು ಮಾಡಿ ತಮ್ಮ ಸ್ವಂ... ಪ್ರತಿ ಸರಕಾರ ರಚಿಸಲೆದ್ದವರು ನಿಸ್ಸಂ... ಹವಾಗಿ ದಗಾಖೋರರು; ದಗಾಖೋರ... ಗತಿಯನ್ನೇ ಅವರಿಗೆ ಕಾಣಿಸುವೆವು. ... ಮಹಾ ನಾಯಕ ಶೇಕ್ ಅಬ್ದುಲ್ಲಾರು ... ಪತೆಗಿತ್ತ ನಾಯಕತ್ವವನ್ನು ನಾನು ಸ್ವಾ... ಗತಿಸುತ್ತೇನೆ."

ಅಮೃತಾಂಜನ.

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಜೇನು ವಿಷ ಮುಂತಾದ ಚೇಳಿನ ಕಡಿತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.

ಸರ್ವ ಅಂಗಡಿಗಳಲ್ಲಿ ಮತ್ತು ಸಕಲ ಸಮ್ಮುಖದಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

'ಕಿರಿಯರ ಪ್ರಪಂಚ'ದ

ಇನ್ನೊಂದು——

ಹಿರಿಯ ಕಾಣಿಕೆ

ಕರ್ನಾಟಕ ಪ್ರಸಿದ್ಧ ಕವಿಗಳಲ್ಲೊಬ್ಬರಾದ

ಶ್ರೀ. ಯಸ್. ವೆಂಕಟರಾಜರ

ಕವಿತಾ ಕಾಮಿನಿ

75 ಕವನಗಳ ಸಂಗ್ರಹ.

ಕವಿಯಾದರೂ ಸೌಂದರ್ಯವನ್ನು ಕಂಡಾಗಲೆಲ್ಲಾ ವರ್ಣಿಸಲಾರ ಅವನ ಸೌಂದರ್ಯೋಪಾಸನೆಗೆ ಕಾಲವಿದೆ. ಅಂತಹ ಕ್ಷಣಿಕಕಾಲದಲ್ಲಿ ಭಾವನೆಯ ಮೇಲೆ ಕಲೆಯು ಬೆರಳಿಟ್ಟು ಮಿಡುಕಿದರೆ ಅದರ ಮಾಧುರ್ಯವು ಕಲ್ಪನಾತೀತವಾಗಿದೆ. ವಿಶ್ವದ ಎದೆಯೆದೆಯ ಮೇಲೆ ಅದು ಪ್ರತಿಧ್ವನಿಸಿ ಪ್ರೀತಿಯ ಪುಣ್ಯೋದಕದಂತೆ ಪವಿತ್ರವಾಗಿದೆ.

ಉತ್ತಮವಾದ ಬಿಳಿ ಕಾಗದದಲ್ಲಿ ಮುದ್ರಿತವಾಗಿದೆ.

ಬೆಲೆ ರೂ. 2 0 0

ಪ್ರತಿಗಳಿಗೆ ಕಿರಿಯರ ಪ್ರಪಂಚ, ಉಡುಪಿ ಇವರಿಗಾಗಲಿ, ನವಭಾರತ ಪುಸ್ತಕ ಭಂಡಾರ ಉಡುಪಿ, ಇವರಿಗಾಗಲಿ ಬರೆಯಿರಿ.

ದಿ ಮೂಲ್ಕಿ ಬೇಂಕ್ ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾ... 15 ವರ್ಷಗಳಿಂದ ಡಿಪೋಜಿಟುಗಳ... ಉತ್ತಮ ದರದ ಬಡ್ಡಿಯನ್ನೂ, ಸಾಲ... ಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವ್ಯ... ವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

CHAMPAE'S

Snow & Castrex

Sole Distributers for India

Prop: K. G. NAYAK,

Santhekatte, UDIPI, S. K

ಮಾನವಂತತನದ ಸೋಗಿನಿಂದ ನಡೆವ ಅನಾಚಾರ-ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ? ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು?

ಎಂಬುದನ್ನು ಚಿತ್ರಿಸುವ ಆಧ್ಯಾಧುನಿಕ ಸಾಮಾಜಿಕ ನಾಟಕ.

ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟಿಯರಿಂದ ಬರೆಯಲ್ಪಟ್ಟು ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬರೆದವರು:-ಶ್ರೀ. ಪಿ. ಶೀನ ಶೆಟ್ಟರು.

ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ. ಮೈಜುಮ್ಮೆನಿಸುವ ಹಲವು ಸನ್ನಿವೇಶಗಳು!

ಬೆಲೆ ಬರೀ ರೂ. 1—4—0

ಕಿರಿಯರ ಪ್ರಪಂಚದ ಪ್ರಕಟಣೆ

ಕದಂಬ

ಹನ್ನೆರಡು ಕತೆಗಳ ಸಂಗ್ರಹ

ಬರೆದವರು:-ಶ್ರೀಮತಿ ಸರಸ್ವತಿಬಾಯಿ ರಾಜವಾಡೆಯವರು

('ಪ್ರಕಾಶ' ನಾಟಕದ ಅನುವಾದಕಿ; 'ಆಹುತಿ ಇತ್ಯಾದಿ ಕತೆಗಳು' ಕಥಾಗುಚ್ಛದ ಲೇಖಕಿ.)

ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ ಚಿತ್ರಿಸುವ ಕಥಾ ಸಂಗ್ರಹ. ಬೆಲೆ. 1—4—0

ಮನೆಮದ್ದು-Home Remedies

ಬೆಲೆ ರೂ. 2-0-0

ಬರೆದವರು:—ಡಾ| ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Valuble Service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ, ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇವೆ. ಹೇಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ 1000 ಮನೆಮದ್ದುಗಳನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಬುಕ್ ಡಿಪ್ಪೊ ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅನೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಆ ಟಿನ್ನಿನ ಬಾಟ್ಲಿಗಳು ಹೆಚ್ಚು ಕಡಿಮೆ ಆಲದಿವಸಗಳಿಗೆ ಬರುವವು. ಅಂದರೆ ಕೇವಲ ಆ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ- ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್,-ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಟಲಾಗ್ಗೆ ಬರೆದಲ್ಲಿ ರೋಗಕ್ಕೆ ತಕ್ಕ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪ್ಪೊ, (2) ಬೊಂಬಾಯಿ ಏಜಂಟರು:—ಪಾಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ಸ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ;.....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಉಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಖರ್ಚ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ. ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ಶಿವಬಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Ayurveda Oushadhalaya GADAG

Edited, Printed & Published by K. H. Shetty at the Navayuga Press, Udipi, S. India

Regd. No. M. 3618

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-6
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

6-11-1947

"ರೈತರೇ, ನೀವು ಇಂದಿನ ಪರಿಸ್ಥಿತಿಯನ್ನು ಸರಿಯಾದ ದೃಷ್ಟಿಯಿಂದ ನೋಡಿ ತಿಳಿದು ಸಹಾಯಕ್ಕೆ ಮುಂದಾಗಿರಿ, ನಿಮ್ಮ ಉಳಿಕೆಯ ಧಾನ್ಯವನ್ನು ತಮ್ಮ ರೇಶನ್ ಆಹಾರಕ್ಕಾಗಿ ನೋಡುತ್ತಿರುವ ಹಸಿದ ಜನತೆಯೊಡನೆ ಹಂಚಿ ಉಣ್ಣಿರಿ".

ವರ್ಷ ೨೭
ವಾರ ೧೦

NAVAYUGA WEEKLY, UDIPI.

FOUNDER: **Hon'ble Mr. A. B. SHETTY,** Health Minister, Govt. of Madras.

Vol. 27
No. 10

THE CANARA MUTUAL
Assurance Company, Limited.
Estd: 1935
H. O. UDIPI, S. Kanara

BONUS DECLARED FOR 8 YEARS

We are glad to announce that we have declared a Bonus for 8 years from 1939 to 1946 both years inclusive as also an interim bonus for the next valuation period.

T. R. A. Pai,
Managing Director.

The 1946 Record Business proves the popularity
THE BOMBAY LIFE ASSURANCE COMPANY, LTD.
Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,
Chief Agents for South India,
Bombay Life Building,
Central Office, Udipi:-

Branches at:
Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.
ದೊಡ್ಡವರಿಗೆ 40ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 10ರಿಂದ 2ಬೊಟ್ಟು ಲವಂಗ ಯಾ ಓಮದ ... ದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.
ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಶೆಟ್ಟಿ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

—ಮಕ್ಕಳನ್ನು ಹಡೆಯುವುದು ಸಾಕು—
ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ
ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತೆಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಪಥ್ಯ:—ಹೆರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೦ಆಣೆ.
ಮಾಲಕರು:—ಪಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.
ಏಜಂಟರು:—ಹುಬ್ಬಳ್ಳಿ ಧಾನಾಪುರ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಿಕ್ಕೋಡಿಯಲ್ಲಿ:—ಕುಂಬರವಾಡ ಸ್ಟೋರ್, ದಾವಣಗೇರಿ:—ದಾವಣಗೇರಿ ಪ್ರೆಸ್, ಆರ್ ಎಲ್ ಕಮಲಾಪುರ, ಕೆಮಿಸ್ಟ, ಹಾವೇರಿ, ಬ್ಯಾಡ್ಗಿ.
Ayurveda Oushadalaya, GADAG CITY.

ನಿಮ್ಮಷ್ಟಕ್ಕೆ ನೀವು ಮನೆಯಲ್ಲೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.
ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0.
ನವಭಾರತ ಬುಕ್ ಡಿಪೊ, ಉಡುಪಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ— ಪ್ರಧಾನ ಕಾರ್ಯಾಲಯ:-ಧಾರವಾಡ,
ಪೋಸ್ಟ್ ಬಾಕ್ಸ್ ನಂಬ್ರ 10, ಉಡುಪಿ, ಇವರಿಗೆ ಬರೆಯಿರಿ.

ರಾಜಾಜೀ ವಾಸಿಸುವ ಮನೆ

ಸ್ವಾತಂತ್ರ್ಯದಿವಸ ಅಲ್ಲಿ ನಡೆದ ಚೇಷ್ಟೆಗಳು

1854ರಿಂದ 1911ರ ವರೆಗೆ ಬಂಗಾಳವನ್ನು 22 ಲೆಫ್ಟಿನೆಂಟ್ ಗವರ್ನರರುಗಳಾಳಿದ್ದರು. ಆ ಮೇಲೆ 1912ರಿಂದ 1947ರ ವರೆಗೆ 20 ಮಂದಿ ಪೂರ್ಣಾಧಿಕಾರೀ ಹಿರಿಯ ಗವರ್ನರರು ಆ ಪ್ರಾಂತ್ಯಕ್ಕಿದ್ದರು. ಕಲ್ಕತ್ತದ ಆ ಚರಿತ್ರಾರ್ಹ ಸರಕಾರೀ ಭವನದೊಳಗೆ ಹೊಕ್ಕ, ಬಂಗಾಳದ ಪ್ರಥಮ ಹಿಂದೀ ಗವರ್ನರ್ ಎಂದರೆ ರಾಜಾಜಿ. ಸಾದಾ ಅಭಿರುಚಿಯ ಮನುಷ್ಯನಾದ ಇವರು ಅಧಿಕಾರ ವಹಿಸಿಕೊಂಡಾಗ, 120 ಶೃಂಗಾರಯುಕ್ತ ಭವ್ಯಕೋಣೆಗಳಿರುವ ಈ ಮಹಾಭವನವನ್ನು ತಾನೇ ನುಮಾಡುವದೆಂಬುದೇ ರಾಜಾಜಿಗೆ ತೋಚದಾಯಿತ.!

ಪ್ರಥಮತಃ ಈ ಸರ್ವವರ್ಗೀಯ ಜನಜೀವನಾಂದೋಲನದ ದೂಡಾಟ, ಧೂಳುಗಳಿಂದ ದೂರವಿದ್ದು, ಎಲ್ಲಾ ದಿಕ್ಕುಗಳಲ್ಲಿಯೂ ಪವಿತ್ರ ಗಂಗೆ ಹರಿಯುತ್ತಿರುವ ಬಾರಕಪೂರದ ಸರಕಾರೀ ಭವನದಲ್ಲೇ ವಾಸಿಸುವದೆಂದು ರಾಜಾಜಿಯ ಸಂಕಲ್ಪವಿತ್ತು. ಆದರೆ ಕೊನೆಗೆ ಅವರು ತನ್ನ ಅಭಿಪ್ರಾಯ ಬದಲಾಯಿಸಿ, ನಗರದ ಭವನದಲ್ಲೇ ನಿಂತುಬಿಟ್ಟರು

ಕಲ್ಕತ್ತದಲ್ಲಿರುವ ಈ ಸರಕಾರೀ ಭವನವು ಅತ್ಯಂತ ದೊಡ್ಡದು. ಬಹುಶಃ ಅಖಿಲ ಭಾರತದಲ್ಲೇ ಇದು ಉತ್ತಮವಾದುದಿರಬೇಕು. ಸುತ್ತಲೂ ಹಚ್ಚಾವರಿತ ನೆಲಗಳಿದ್ದು, ಉತ್ತರಗಡೆಯಲ್ಲಿ ಗೆಲರಿಯಂತಹ ಮೆಟ್ಟಲೇರಿಕೆ ಸಾಲುಗಳಿವೆ. ನಟ್ಟನಡುವೆ ಶುಭ್ರ ಬಿಳಿವರ್ಣದಿಂದ ರಾಜಿಸುತ್ತಿರುವ ಈ ಸರಕಾರೀ ಕಟ್ಟಡವು, ಬಂಗಾಳದ ಹಲವು ಸುಪ್ರಸಿದ್ಧ ಆಡಳಿತೇದಾರರ ನಿವಾಸವಾಗಿತ್ತು.

೦೦ ೦೦ ೦೦

ಬಂಗಾಳದ ನಿರುದ್ಯೋಗಿಯೊಬ್ಬನು ಕಲ್ಕತ್ತದೀ ಸರಕಾರಿ ಭವನದೊಳಗೆ ಪ್ರವೇಶಿಸುವುದು ಕಷ್ಟವಿತ್ತು. ಅವನಿಗೆ ಯಾವುದಾದರೊಂದು ವಿಶೇಷ ಕೆಲಸವಲ್ಲಿರಬೇಕಿತ್ತು. ಮತ್ತದರ ಪೂರ್ವ ವ್ಯವಸ್ಥೆಗಳನ್ನೆಲ್ಲಾ ಆತ ಮಾಡಿಕೊಳ್ಳಬೇಕಿತ್ತು; ಅಲ್ಲಿ ಪ್ರೇಕ್ಷಕರ ಪುಸ್ತಕಗಳಿಗೆ ಸಹಿಹಾಕಬೇಕಿದ್ದಿತು. ಕೆಲವೊಮ್ಮೆ ಗವರ್ನರರು ಕಲ್ಕತ್ತದಲ್ಲಿಲ್ಲದ ಸಮಯಗಳಲ್ಲಿ, ವಿಶೇಷ ಸಂದರ್ಭಗಳಲ್ಲಿ ಸರಕಾರೀಭವನದ ನೌಕರಮಂಡಲಿಯ ಸ್ನೇಹಿತರು ಮತ್ತು ಸಂಬಧಿಕರಿಗೆ 'ಪಾಸು'ಗಳನ್ನು ಕೊಡುವ ಕ್ರಮವಿತ್ತು. ಹೀಗಾಗಿ ಯಾರಾದರೂ ಈ ಅಮೋಘ ಭವನವನ್ನೊಮ್ಮೆ ನೋಡಬೇಕಾದರೆ ಅಂತಹ ಸುಯೋಗವು ಅವನಿಗಿರಬೇಕಿತ್ತು! ಆದರೆ ಇದು ಹಿಂದಿನ ಮಾತಾಯಿತು. ಈ ವರುಷದ ಅಗೋಸ್ತು 15ರಲ್ಲಿ ಇವೆಲ್ಲಾ ವಿಧಿನಿಯಮಗಳು ಗಾಳೀಪಾಲಾಗಿ ಹೋದುವು. ಆದಿನ ಪ್ರಾತಃಕಾಲ ೮ಘಂಟೆಗೆ ಅಲ್ಲಿಯ ಹಸುರುಮೈದಾನಿನಲ್ಲಿ ರಾಜಾಜೀ ರಾಷ್ಟ್ರಧ್ವಜವನ್ನು ಆರೋಹಿಸಿದ ಬೆನ್ನಲ್ಲೇ, ಅಲ್ಲಿಯ ದೊಡ್ಡ ಜನಸಂದಣಿಯು ಈ ಸರಕಾರೀ ಭವನದೊಳಗೆ ನೆರೆಯೇರಿದ ಪ್ರವಾಹದಂತೆ ನುಗ್ಗಿಬಿಟ್ಟಿತು.

ಆದಿನ ಸಹಸ್ರಾರುಮಂದಿ ಸರಕಾರೀ ಭವನದೊಳಗೆ ನುಗ್ಗಿ ಮನಬಂದಂತೆ ಸುಳಿದಾಡಿದರು. ಸರ್. ಫ್ರೆಡರಿಕ್ ಬರ್‍ರೋಸರು(ಹಿಂದಿನ ಬ್ರಿಟಿಷ್ ಗವರ್ನರ್ (ಆ ಪೋಷ್ಟಿನಲ್ಲಿ ಸ್ವಕ್ಷೇಮ ಚಿಂತನೆಯಿಂದ ಕಲ್ಕತ್ತ ಬಿಡುವದಕ್ಕಣಿ ಮಾಡುತ್ತಿದ್ದರು. ಮಿಕ್ಕೆಲ್ಲಾ ಕೋಣೆಗಳೊಳಗೂ ಜನಗುಂಪು ನುಗ್ಗಿ ನುಸುಳುತಿದ್ದಾಗ ಒಂದು ಕೋಣೆಯೊಳಗೆ ಇವರಿದ್ದರು. ಆಗ ರಾಜಾಜೀ ಲೆಜಿಸ್ಲೇಟಿವ್ ಚೇಂಬರ್ಸಿಗೆ ಹೋಗಿದ್ದರು—ಸ್ವಾತಂತ್ರ್ಯಗಮನವನ್ನು ಸಾರುವ ಭಾಷಣಮಾಡುವದಕ್ಕಾಗಿ. ಆದಿನ ಮಧ್ಯಾಹ್ನದವರೆಗೆ ಅವರು ಮರಳಿ ಬರಲಿಲ್ಲ. ಈ ನಡುವೆ ಜನರು ಪ್ರತಿಯೊಂದು ಕೋಣೆಯೊಳಗೂ ನುಗ್ಗಿ, ಮನಬಂದಂತೆ ವರ್ತಿಸಿ "ಸಂಪೂರ್ಣ ಸ್ವಾತಂತ್ರ್ಯ"ವನ್ನು ಅನುಭೋಗಿಸಿದರು! ಇದರ ಪರಿಣಾಮವಾಗಿ ಸರಕಾರೀ ಭವನದ ಸೊತ್ತುಗಳಿಗಾದ ನಷ್ಟವು ಸುಮಾರು 10,000ರೂಪಾಯಿಗಳಷ್ಟು. ಮರುದಿನ ತನ್ನ ಪ್ರಾರ್ಥನಾ ಸಭೆಯಲ್ಲಿ ಗಾಂಧಿಜೀ ಈ ವರ್ತನೆಯನ್ನು ಕಠಿಣವಾಗಿ ಟೀಕಿಸಿದರು.

೦೦ ೦೦ ೦೦

ಅಂದು, ಅಗೋಸ್ತು 15ರಂದು ಸರಕಾರೀ ಭವನದೊಳಗೆ ನುಗ್ಗಿದ್ದ ಜನಸಂದಣಿಯು ತಮ್ಮ ಮನಸ್ಸಿಗೆ ತೋರಿದ್ದನ್ನೆಲ್ಲಾ ಮಾಡಿದ್ದಿತು. ಹಲವರು ಅಲ್ಲಿಯ ಈಜುವ ಕೊಳಕ್ಕೆ ಧುಮುಕಿ ಚೆಲ್ಲಾಟವಾಡಿದ್ದರು; ಮಿಕ್ಕವರು ದರ್ಬಾರ್ ಹಾಲಿನಲ್ಲಿದ್ದ ಭವ್ಯ ಸಿಂಹಾಸನವೇರಿ ಕುಳಿತರು; ಕೆಲವರು ಹಿಂದೆ ಮುಂದೆ ಹೋಗಿ ಅಲ್ಲಿ ಬಿಡಿಸಿದ್ದ ಹಾಸಿಗೆಗಳಲ್ಲಿ ಹೊರಳಾಡಿದರು. ಗವರ್ನರರ ಏಕಾಂತ ಮಂದಿರದಲ್ಲಿ ಕುಳಿತಿದ್ದ ಕೆಲವರು 'ಚಹಾ ಬರಲಿ' ಎಂದು ಸರ್ವಾಧಿಕಾರದಿಂದ ಗವರ್ನರರ ಅಡಿಗೆಯವನಿಗೆ ಆಜ್ಞೆಯನ್ನು ಕೂಡಾ ಕೊಡಾಯಿಸಿದರು! ಆ ಭವನದೊಳಗಿನ ಬೊಬ್ಬೆ, ಕೂಗಾಟಗಳು ಗಗನ ವ್ಯಾಪಿಯಾಗಿದ್ದವು; ಅಸ್ತಿತ್ವಕ್ಕೆ ಬಂದಂದಿನಿಂದಲೂ ಇದ್ದ ಘನತೆ ಮತ್ತು ಅಧಿಕಾರ ರೀತಿಗಳೆಲ್ಲವೂ ಸ್ವಾತಂತ್ರ್ಯ ದಿನದಂದು ಮಾಯವಾದುವು.

ಸರಕಾರೀ ಭವನದಿಂದ ಕೊಂಡುಹೋದ ಸಾಮಾನುಗಳನ್ನೆಲ್ಲಾ ಮರಳಿ ಒಪ್ಪಿಸಬೇಕೆಂದು ಗಾಂಧಿಜೀ ಕೇಳಿಕೊಂಡಿದ್ದರೂ, ಅದಕ್ಕೆ ದೊರೆತ ಬೆಲೆ ನಿಜಕ್ಕೂ ಅತ್ಯಲ್ಪ. ಈ ಭವನದಲ್ಲೀಗ ರಾಜರ, ಪ್ರಧಾನ ಮಂತ್ರಿಗಳ ಮತ್ತು ಇಂಗ್ಲಾಂಡಿನ ಕೆಲವು ಪ್ರಮುಖ ನಾಗರಿಕರ ಅತಿ ಮೌಲ್ಯದ ತೈಲ ಚಿತ್ರಗಳಿವೆ. ಇವುಗಳಲ್ಲಿ ವಿಕ್ಟೋರಿಯಾ ರಾಣಿಯ ದೊಡ್ಡ ತೈಲಚಿತ್ರವೊಂದು. ಅವುದೋ ಕೈಯ ಬುಡದಿಂದ ತುದಿಯವರೆಗೂ ಅದಕ್ಕೆ ಚೂರಿಹಾಕಿರುವುದು ಕೊನೆಗೆ ತಿಳಿದುಬಂತು. ಕೊನೆಯಪಕ್ಷ ಕಲಾಪ್ರೇಮದಿಂದಾದರೂ, ಇಂತಹ ದುಷ್ಕೃತ್ಯಕ್ಕೆ ಆ ಕೈ ಮುಂದಾಗಬಾರದಾಗಿತ್ತು! ಅಷ್ಟುಮಾತ್ರವಲ್ಲ; ರಾಜಾಜಿಯ ಪ್ರಭಾವಶಾಲಿ 'ಎಡಿಸಿ' ಯಾಗಿ ಅಲ್ಲಿರುವ, ಪೋಲಿಸ್ ಸುಪರಿಂಡೆಂಟೆಂಟರಾಗಿದ್ದ ಮದ್ರಾಸಿನ ಶ್ರೀ ಸಿಂಗಾರವೇಲು ಇವರು ಕೂಡಾ ಪೇಚಿಗೊಳಗಾಗಿದ್ದರು. ರಾಜಾಜೀ ಬಂದದಿನವೇ ಇವರೂ ಕಲ್ಕತ್ತೆಗೆ ಬಂದಿದ್ದರು. ಸ್ವಾತಂತ್ರ್ಯದಿನದ ಪ್ರಾತಃಕಾಲ ದಕ್ಷಿಣ ಭಾರತದಲ್ಲಿರುವ ತನ್ನ ಪತ್ನಿಗೆಂದು ಅತ್ಯಂತ ಪ್ರೇಮಪೂರಿತ ಪತ್ರವೊಂದನ್ನು ಬರೆದು ಕೊನೆಗೆ ಟಪ್ಪಾಲಿಗೆ ಹಾಕಿದರಾಯಿತೆಂದು ಅಲ್ಲಿಟ್ಟಿದ್ದರು. ಕವರನ್ನು ಮುಚ್ಚಿ, ಅಲ್ಲಿ ಲೈಬ್ರರಿಯ ಮೇಜಿನ ಮೇಲಿಟ್ಟು ಅವರು ಹೊರಗೆ ಹೋಗಿದ್ದರು. ಈ ಜನತಾ 'ಆಕ್ರಮಣ' ಮುಗಿದ ಮೇಲೆ ಒಳಗಿದ್ದವರನ್ನೆಲ್ಲಾ ಹೊರ ಹಾಕಲಾಯಿತು; ಪದ್ಧತಿಯ ಪಹರೇಗಾರರು ಸರಕಾರೀ ಭವನದ ದ್ವಾರಗಳಲ್ಲಿ ಯಥಾಪ್ರಕಾರ ನಿಂತರು. ಸಾಯಂಕಾಲ, ಕವರಿಗೆ ಹಚ್ಚುವದಕ್ಕಾಗಿ ಕೈಯಲ್ಲೊಂದು ಟಪ್ಪಾಲು ಚೀಟನ್ನು ಹಿಡಿದುಕೊಂಡು ಸಿಂಗಾರವೇಲುಗಳು, ಲೈಬ್ರರೀ ಕೋಣೆಯೊಳಗೆ ಹೋಗಿ ನೋಡುವಾಗ ಅಲ್ಲಿ ಮೇಜಿನಮೇಲೆ ವಿಳಾಸ ಬರೆದ 'ಕವರು' ಮಾತ್ರವಿದ್ದಿತು; ಪತ್ನಿಗೆ ಬರೆದಿದ್ದ ಕಾಗದ ಕಾಣೆಯಾಗಿತ್ತು!(ಆಕಾಗದದಲ್ಲಿ ಏನೆಲ್ಲಾ ಇದ್ದಿತೋ!) ಅಂದು ಮುಂಜಾನೆಯ ಧಾಳಿಯಲ್ಲಿ ಆ ಕಾಗದದ ಅಪಹಾರವಾಗಿತ್ತು.

೦೦ ೦೦ ೦೦

ಈದಿನ ಕಲ್ಕತ್ತದ ಸರಕಾರೀ ಭವನವು ಕಳೆದ ವರುಷಗಳಲ್ಲಿದ್ದ ಸ್ಥಿತಿಗತಿಗಳನ್ನೆಲ್ಲಾ ಬಹುತೇಕವಾಗಿ ಬದಲಾಯಿಸಿಕೊಂಡಿದೆ. ಹಿಂದೀ ತೆರಿಗೆದಾರರ ವೆಚ್ಚದಿಂದ ಹಿಂದಿನ ಬ್ರಿಟಿಷ್ ಗವರ್ನರರೀಯುತ್ತಿದ್ದ ಅತಿವಿಜೃಂಭಣೆಯ ಸತ್ಕಾರ ಕೂಟಗಳ ಸ್ಥಾನಕ್ಕೆ ಸಾದಾ ಚಹ ಮತ್ತು ಟೊಮೆಟೋ ಉಪ್ಪುಕರಿಗಳ ಸಾಯಂಕೂಟಗಳು ಬಂದಿವೆ. ಮೊದಲಿನ ಹಿಸ್ ಎಕ್ಸೆಲೆನ್ಸಿಗಳ ಸಂದರ್ಶಕರಲ್ಲಿ ಸಂದರ್ಭಗಳಿಗನುಗುಣವಾದ ಬೆಲೆಯುಳ್ಳ ಚಲ್ಲಣಗಳು, ಸಾಯಂಕಾಲದ ರವಿಕ್ಯೆಡಿಗೆಗಳು, ಮುಂಜಾನೆಯ ಕೋಟುಗಳು, ನಿಲುವಂಗಿ, ನೀಳಸರಮಾಲೆ ಟೋಪಿಗಳು ಎಲ್ಲಿ ಕಡ್ಡಾಯವಾಗಿ ಇದ್ದುವೋ ಅಲ್ಲೀಗ ಸಾದಾ ಧೋತಿ ಕಟ್ಟಿದವರ ಸುಲಭವೇಷಧಾರೀ ಸಂದರ್ಶಕರನ್ನು ಕಾಣಬಹುದಾಗಿದೆ. ಆಕಾಲದಲ್ಲಿ ಗವರ್ನರರ ಬೇಂಡು ಏರಿಕೆಯ ಸ್ವರಕೊಡುತ್ತಾ ಬಾಯ್ಬಿಡುತ್ತಿದ್ದಾಗ ಗವರ್ನರರ 'ನರ್ತನಗೃಹ'ದಲ್ಲಿ ಪಾಶ್ಚಿಮಾತ್ಯ ಸಂಗೀತದ ಆದೊಂದು ವಿಚಿತ್ರನಾದಕ್ಕನುಗುಣವಾಗಿ ನೂರು ಜತೆ ಕಾಲುಗಳು ನರ್ತಿಸುವದಿದ್ದಿತು. ಆದರೀದಿನ ತಮ್ಮ ವೀಣಾ, ಸತಾರ ಹಾರ್ಮೋನಿಯಮ್ ನಂತಹ ಉಪಕರಣಗಳನ್ನು ಹಿಡಿದುಕೊಂಡ ಧೋತಿಯುಟ್ಟುಕೊಂಡಬಂಗಾಳೀ ಗಾಯಕರೇ ಅಲ್ಲಿ ಕಾಣಿಸುತ್ತಿದ್ದಾರೆ. ಅವರು ಸುಮಧುರ ಕೀರ್ತನೆಗಳನ್ನು—ಅದರಲ್ಲೂ ಬಂಗಾಳವು ವೈಷ್ಣವಮಯವಾಗಿರುವುದರಿಂದ ಹೆಚ್ಚಾಗಿ ವೈಷ್ಣವ ಗೀತೆಗಳನ್ನು-ಹಾಡುತಿದ್ದಾರೆ. ಕುರುಡಗಾಯಕ ರೇ, ಬಂಗಾಳೀ ಸಿನೆಮಾ ಪ್ರಪಂಚ ಪ್ರತಾಪಿ ಪಂಕಜ ಮಲ್ಲಿಕರಂತಹ ಸುಪ್ರಸಿದ್ಧ ಗಾಯಕರು, ಹಿಸ್ ಎಕ್ಸೆಲೆನ್ಸಿಗಳ ಮತ್ತವರ ಚುನಾಯಿತಮಿತ್ರರ ಸಮ್ಮುಖದಲ್ಲಿ ತಮ್ಮ ಸಂಗೀತ ಕಾಣಿಕೆಗಳನ್ನರ್ಪಿಸಿದ್ದರು. ಝಗಝಗಿಸುವ ವಿಶಿಷ್ಟ ರೀತಿಯ ಪೋಷಾಕುಗಳ ಒಳಬಾರರೂ, ನಿಗಾರಿನಂತ ಗಡ್ಡ ಮೀಸೆಗಳ ಬ್ರಿಟಿಷ್ 'ಎಡಿಸಿ'ಗಳೂ ಈಮೊದಲು ಸರಕಾರೀ ಭವನದಲ್ಲಿ ನಿಮ್ಮನ್ನು ಸ್ವಾಗತಿಸುತಿದ್ದರೆ, ಈಗ ಸಾಧ್ಯವಿದ್ದಷ್ಟು ಸಲುಗೆಯಿಂದಲೇ ಆದರಾತಿಥ್ಯ ಸಲ್ಲಿಸುವ ಹಿಂದೀ ಅಧಿಕಾರಿಗಳನ್ನಲ್ಲಿ ಕಾಣುತ್ತೇವೆ. ಇವೆಲ್ಲಾ ವಿಷಯಗಳ ಒಳಗಡೆಗೆ ನೋಟಬೀರಿದರೆ, ಬಂಗಾಳದ ಓರ್ವ ಗವರ್ನರನ ಜೀವಮಾನದ ಕೊನೆಯಭಾಗದಲ್ಲೂ ಮತ್ತವರ ಈ ಚರಿತ್ರಾರ್ಹ ನಿವಾಸಗ್ರಹದ ಜೀವನ ವಿಧಾನಗಳಲ್ಲೂ ಆಗಿರುವಕ್ರಾಂತಿಕಾರಕ ಬದಲಾವಣೆಗಳು ಮನಮುಟ್ಟುವವು ನಿಜ; ಭಾರತವು ಈದಿನ ಕೇವಲ ಭಾರತೀಯರದ್ದೇ ಆಗಿದೆ ಸರಕಾರೀ ಭವನವು ಕೇವಲ ಒಂದು ವರುಷದ ಮೊದಲು ಹೇಗಿತ್ತು, ಮತ್ತದು ಈದಿನ ಹೇಗಿದೆ ಎಂಬುದೊಂದನ್ನೇ ನಾವು ತುಲನಾತ್ಮಕವಾಗಿ ವಿಚಾರಿಸಿದರೆ, ಮೇಲಿನ ಮಾತು ಬಲವಂತದಿಂದ ನಮ್ಮ ಮೆದುಳಲ್ಲಿ ಮೂಡುತ್ತದೆ.

(Nilkan Perumal–'Free India')

WARDEN

Reaches New Heights in 1946.

Business Received	Rs. 2,04,00,000
Business Completed	Rs. 1,72,00,000

THIS represent the latest and greatest achievement in WARDEN'S progressive career.

For this fine performance the Company extends its heartiest thanks and congratulations to its representatives and policy-holders all over the country and abroad.

Managing Director: *Shivaprasad Thaker,*

Agency Manager. *M. Sunderram Shetty.*

Branch Office At Mangalore

K. P. Bhavanishanker Shetty,
Branch Secretary.

CHAMPAE'S

Snow & Castrex

Sole Distributers for India

Prop: K. G. NAYAK,

Santhekatte, UDIPI, S. K.

ಇಂದಿನ ಆರ್ಥಿಕ, ಸಾಮಾಜಿಕ ಅವ್ಯವಸ್ಥ ಪರಿಸ್ಥಿತಿಯಲ್ಲಿ-ಪ್ರಾತಿನಿಧ್ಯಕ್ಕೊಂದು ಮಟ್ಟ ಬೇಕೆಂಬ ಸಂಸ್ಕಾರಾಧರಿತ ನಿಯಂತ್ರಣವೇನೂ ಇಲ್ಲದೆ, ಬಹುತೇಕವಾಗಿ ಶ್ರೀಮಂತಿಕೆ ಮತ್ತು ಪ್ರಭಾವ (ಅದಾವ ರೀತಿಯದೇ ಆಗಿದ್ದರೂ)ಗಳ ಮೇಲಿಂದಲೇ ಪ್ರತಿನಿಧಿಗಳಾರಿಸಲ್ಪಡುತ್ತಿರುವ ಈ ಕಾಲದಲ್ಲಿ-ತಲೆಹೋಕರು, ಅನಾಗರಿಕರು, ಮಂಕರು ಜನಪ್ರತಿನಿಧಿ ಸಭೆ, ಸಂಘ, ಸಂಸ್ಥೆಗಳಲ್ಲಿ ತುಂಬಿಹೋದರೆ ಸೋಜಿಗವೇನೂ ಇಲ್ಲ. ತಾನೆತ್ತಿಕೊಂಡ ವಿಷಯದ ಪ್ರಾಸಂಗಿಕತೆ, ಅಪ್ರಾಸಂಗಿಕತೆಗಳನ್ನರಿಯದೆ ತಲೆತುಂಬಾ ಹರಟುವವರಿದ್ದಾರೆ. ಮುಖ್ಯ ವಿಷಯಗಳನ್ನು ತಿಳಿದುಕೊಳ್ಳುವ ಮಾತಂತಿರಲಿ-ತನ್ನ ತಿಳುವಳಿಕೆ, ಯೋಗ್ಯತೆಗಳ ಅಂದಾಜನ್ನು ತಾನೇ ಅರಿಯದೆ, ಮಕ್ಕಳು ಮಾವಿಗೆ ಕಲ್ಲೆಸೆಯುವ ಮಾದರಿಯಲ್ಲಿ ಸಿಕ್ಕಾಬಟ್ಟೆ ಮಾತು ಚೆಲ್ಲಿ, ಆಸುಪಾಸಿನವರನ್ನು ಜಖಂಗೊಳಿಸುವ ಅಧಿಕಪ್ರಸಂಗಿಗಳನ್ನು ಕಾಣುತ್ತಿದ್ದೇವೆ. ಎಲ್ಲೆಲ್ಲೂ ನಡೆಯುವದಿದೆ ಇಂತಹ ಘಟನೆ. ನಮ್ಮ ಸ್ಥಳೀಯ ಸಂಸ್ಥೆಗಳಲ್ಲಿ ಅಜ್ಞಾನ, ಅಪ್ರಬುದ್ಧತೆಯ ದೆಸೆಯಿಂದಾಗಿಯೇ ಅನಗತ್ಯ ಹಟ, ಘರ್ಷಣೆಗಳೇಳುತ್ತಿದ್ದರೆ, ಫ್ರೆಂಚ್ ಎಸೆಂಬ್ಲಿ, ಬ್ರಿಟಿಷ್ ಕಾಮನ್ಸ್ ಸಭೆ-ಇತ್ಯಾದಿಗಳಲ್ಲಿ ದ್ವೇಷ, ಮತ್ಸರ, ತಿರಸ್ಕಾರಾದಿ ಭಾವೋದ್ರೇಕಗಳಿಂದಾಗಿ ಹೀಗಾಗುವದಿದೆ. ಇತ್ತೀಚೆಗಿನ ಒಂದೆರಡು ನಿದರ್ಶನಗಳನ್ನು ಇಲ್ಲಿ ಕೊಡಲಾಗಿದೆ.

ಮದ್ರಾಸ್ ಎಸೆಂಬ್ಲಿಯಲ್ಲಿ

ಶ್ರೀ. ಟಿ. ಪ್ರಕಾಶಂ ಮಂತ್ರಿಮಂಡಲವಿದ್ದಾಗ ಮದ್ರಾಸ್ ಎಸೆಂಬ್ಲಿಯಲ್ಲಿ ನಡೆಯುತಿದ್ದ ಪ್ರಶ್ನೋತ್ತರಗಳು ಮತ್ತು ಭಾಷಣಗಳು ಎಸೆಂಬ್ಲಿ ಮಟ್ಟದ ಮಾತಂತಿರಲಿ-ಕೆಲವೊಮ್ಮೆ ಬೀದಿವರ್ತನೆಗೂ ಅಸಹ್ಯವೆನ್ನುವಷ್ಟು ಕೆಳತರಗತಿಗಿಳಿಯುವದಿದ್ದಿತು. ಕೆಲವು ಲೀಗ್ ಸದಸ್ಯರು, ಅದರಲ್ಲೂ ಮುಖ್ಯವಾಗಿ ಮಿ. ಸಲಾಂ ಸಾಹೇಬ[illegible]ತಿದ್ದ ಸವಾಲುಗಳು ಮತ್ತು ಹೇರುತಿದ್ದ ಆರೋಪಗಳು ಸಾಮಾನ್ಯರಾದವರಿಗೆ ಬಾಯಿಯಿಂದಲ್ಲ, ಕೈಯಿಂದಲೇ ಉತ್ತರಿಸುವ ಪ್ರೇರಣೆ ಕೊಡುವಂಥವುಗಳೇ ಆಗಿದ್ದುವು! ಶ್ರೀ. ಟಿ. ಪ್ರಕಾಶಮರು ಕೊಡುತಿದ್ದ ಸಲುಗೆಯಂತಹದಿತ್ತು. ಈಗ ಅಷ್ಟೊಂದು ರಂಪಾಟವೇನೂ ಕಾಣುತ್ತಿಲ್ಲ. ಆದರೂ ನಮ್ಮ ಪ್ರತಿನಿಧಿ ಸದಸ್ಯರ ಸರ್ವಸಾಮಾನ್ಯ ಮನೋವೃತ್ತಿ, ಮಾತಿನ ತರಗತಿಗಳು ನಮ್ಮಲ್ಲಿ ಹೆಗ್ಗಳಿಕೆ ನಿರ್ಮಿಸುವಂತಹವೇನೂ ಅಲ್ಲ. ಒಮ್ಮೊಮ್ಮೆ ಮಕ್ಕಳಾಟಿಕೆಗಳೋ, ವಿಚಿತ್ರ ರೀತಿಯ ವಿನೋದಗಳೋ ಅಲ್ಲಿ ತೋರಿಬರುವದಿದೆ. ಹಿಂದೊಮ್ಮೆ ಹೊರಗೆ ದಾದಿಯ ಕೈಯಲ್ಲಿದ್ದ ಮಗುವೊಂದು ಎಸೆಂಬ್ಲಿ ಸಭೆ ನಡೆಯುತಿದ್ದಾಗ ತನ್ನ ತಾಯಿಗಾಗಿ (ಆಕೆ ಎಸೆಂಬ್ಲಿ ಸದಸ್ಯೆ) ಒಳಗೆ ನುಗ್ಗಿ ರಂಪಮಾಡಿತ್ತಿ[illegible]ದ್ದಿತು. ಅದು ಸಭಾಸ್ವಭಾವಕ್ಕೆ ವಿರುದ್ಧವಿದ್ದರೂ, ಮಗುಬುದ್ಧಿಗೆ ಸಹಜವಾದುದು. ಇತ್ತೀಚೆಗೊಬ್ಬ ಸಿಂದಿಗೆಕರು ಸೀದಾ ಬಂದು ಎಸೆಂಬ್ಲಿ ಸಭೆಯ ಒಂದು ಆಸನದಲ್ಲಿ ಮಂಡಿಸಿದ್ದರು. ಅವರ ಬುದ್ಧಿ ಮಾತ್ರ ಹೊರತು ಅವರೇನೂ 'ಮೈನರ'ರಾಗಿರಲಿಲ್ಲ. ಎಸೆಂಬ್ಲಿ ಸದಸ್ಯರೊಬ್ಬರು ಅವರ ಪರಿಚಯಸ್ಥರಿದ್ದ

ಜವಾಬ್ದಾರಿಯುಳ್ಳ ಸದಸ್ಯರ ಬೇಜವಾಬ್ದಾರೀ ವರ್ತನೆಗಳು!

ರು. ಅವರೊಂದಿಗೆ ಇವರಿಗೇನೋ ಕೆಲಸವಿದ್ದಿತು. ಆದಕ್ಕಾಗಿ ಬಂದವರು, 'ಸಾರ್ವಜನಿಕ ಸಭೆಯು ಮರ್ಜಿ ಬೇರೆ, ಎಸೆಂಬ್ಲಿ ಸಭೆಯದು ಬೇರೆ' ಎಂಬುದನ್ನರಿಯದೆ, ತನ್ನ ಮನುಷ್ಯ ಅಲ್ಲಿ ಕುಳಿತಿರುವಾಗ, ತಾನು ಹೊರಗೆ ನಿಂತು ಕಾಯುವದೇಕೆ, ಎಂದು ನೆನಸಿ ಒಳಗೆ ಬಂದು ಒಂದಾಸನದಲ್ಲಿ ಕಾಲ ಮೇಲೆ ಕಾಲೇರಿಸಿ ಕುಳಿತುಕೊಂಡರು. ಆದರೆ, ಸದಸ್ಯರಿಗೆ ತಮಗೆ ವೋಟು ಕೊಟ್ಟವರ ಪರಿಚಯ ಮರೆತು ಹೋದರೂ, ಒಟ್ಟಿಗಿರುವವರ ಗುರುತಪ್ಪುತಪ್ಪುವಂತಿದೆಯೆ? 'ಇದೊಂದು ಹೊಸ ಜನ ಯಾರು? ಇತ್ತೀಚೆಗೆಲ್ಲಿಯೂ ಉಪಚುನಾವಣೆ ನಡೆದುದಿಲ್ಲವಲ್ಲಾ!" ಎಂದೊಬ್ಬ ಸದಸ್ಯರು "ಇಲ್ಲೊಂದು ಹೊಸ ಮುಖ ಕಾಣಿಸುತ್ತಿದೆ, ಸರ್!" ಎಂದು ಅಧ್ಯಕ್ಷರಿಗೆ ಕೂಗಿ ಹೇಳಿದರು. ಅಧ್ಯಕ್ಷರು ಕ್ರಮಪ್ರಕಾರ ಅವರನ್ನು ಹೊರಗೆ ಕಳುಹಿಸಿದರೆನ್ನಿ!

ಫ್ರೆಂಚ್ ಎಸೆಂಬ್ಲಿಯಲ್ಲಿ

ಬ್ರಿಟಿಷ್ ಪಾರ್ಲಿಮೆಂಟ್ ಅಥವಾ ಫ್ರೆಂಚ್ ಎಸೆಂಬ್ಲಿ ಸದಸ್ಯರಂತೆ ನಮ್ಮ ಎಸೆಂಬ್ಲಿ ಸದಸ್ಯರು ಸಭೆಯಲ್ಲೇ 'ದಂತ ಚಿಕಿತ್ಸೆ' ಮಾಡಿಸಿಕೊಂಡುದೇನೂ ಇಲ್ಲವಲ್ಲವಲ್ಲಾ, ಎಂಬುದೇ ಇದ್ದುದರಲ್ಲಿ ಸಮಾಧಾನ! ಕಳೆದ ಒಕ್ಟೋಬರ್ ೩೦ ರಂದು 'ಫ್ರೆಂಚ್ ನೇಶನಲ್ ಎಸೆಂಬ್ಲಿ'ಯ ಸಭೆ ಸೇರಿದ್ದಿತು. 'ಫ್ರಾನ್ಸಿನಲ್ಲಿ, ಶನಿವಾರ ಒಂದನ್ನು ಸಲವೂ ಹೊಸ ಮಂತ್ರಿಮಂಡಲ ಬರುತ್ತದೆ' ಎಂಬುದು ಈಗ ವಾಡಿಕೆಯ ಮಾತಾಗಿದೆ. ಈಗ ಅಲ್ಲಿ ಎಮ್. ಶಾಮೆಲ್ ರಾಮಾದಿಯೆರರ ಸರಕಾರವಿದೆ. ಪ್ರಬಲ ವಿರುದ್ಧ ಪಕ್ಷವೆಂದರೆ ಕಮ್ಯೂನಿಸ್ಟರು. 'ಯುರೋಪು ರಕ್ಷಣೆ'ಯೆಂಬ ಹೆಸರಿನಿಂದಿರುವ ಅಮೇರಿಕದ 'ಮಾರ್ಶಲ್ ಯೋಜನೆ'ಯನ್ನು ಲೋಕದ ಎಲ್ಲಾ ಕಡೆಗಳಲ್ಲಿರುವ ಕಮ್ಯೂನಿಸ್ಟರೂ ಕಠೋರವಾಗಿ ವಿರೋಧಿಸುತಿದ್ದಾರೆ. ಫ್ರೆಂಚ್ ಎಸೆಂಬ್ಲಿಯೊಳಗಿನ ಕಮ್ಯೂನಿಸ್ಟ ಪಕ್ಷದನಾಯಕ ಎಮ್. ಜಾಕ್ವೆಸ್ ಡಕ್ಲಸರೂ ಮೊನ್ನೆ ಅದೇ ಕೆಲಸಮಾಡಿದರು. ಕಮ್ಯೂನಿಸ್ಟ ಪಕ್ಷವೇ ಬಹಿಷ್ಕರಿಸಬೇಕೆಂದು ಬೇಕಿಸಿದ್ದ ಅಂಡ್ರೇ ಮಟ್ಟರ್ ಎಂಬ ಬಲ ಪಕ್ಷೀಯ ಡೆಪ್ಯುಟಿಯನ್ನು ಸರಾಸರಿ ಹಳಿಯುತ್ತಾ ಡಕ್ಲಸರೆಂದರು: "ಈ ಮನುಷ್ಯ ಆಕ್ರಮಿತ ಕ್ಷೇತ್ರದ ಜೈಲೊಂದರಲ್ಲಿದ್ದ ಗೆಸ್ಟೆಪೋಗಳಿಂದ ಬಿಡುಗಡೆ ಹೊಂದಿ ಬಂದವ". ಈ ಮಾತು ಕಿವಿಗೆ ಬೀಳುವದೇ ತಡ; ಮಟ್ಟರರು ತಾನು ಕುಳಿತ ಬೆಂಚಿನಿಂದ ದಬಕ್ಕನೆ ಹಾರಿ, ಡಕ್ಲಸರಿಗೆ ಎರಡೇಟು ಏರಿಸಿಯೇ ಬಿಡುವದೆಂದು ಧಾವಿಸಿದ ಹೀತಕ್ಕೆ ನಗೆಯಲು ಪ್ರಾರಂಭ! ಅಷ್ಟರಲ್ಲಿ 10 ಮಂದಿ ಕಮ್ಯೂನಿಸ್ಟ ಡೆಪ್ಯುಟಿಗಳು ತಮ್ಮಾಸನಗಳಿಂದೆದ್ದು ಮಟ್ಟರರ ಮುಂದೆ ಧಾವಿಸಿ, ಕೈಪೈ ನಡೆದು ಹೋಯಿತು! ಸಭಾ ಪಹರೆಗಾರನೊಬ್ಬನು ಇವರ ನಡುವೆ ಬಂದು ಹೇಗೂ ಒಮ್ಮೆ ಇಕ್ಕಟೆಯುವದನ್ನು ಆಟ ಊಟ ಮಾಡಿದ. ಆ ಮೇಲೆ ಡಕ್ಲಸರು ಈ ಫ್ರಾನ್ಸಿನ ಸರಕಾರವನ್ನು ಟೀಕಿಸಹತ್ತಿದರು; ಆಗ ಆ ಕಡೆ ಈ ಕಡೆಯವರೆಬ್ಬಿಸುತಿದ್ದ ಕ್ರೋಧೋನ್ಮತ್ತ ಬೊಬ್ಬೆ, ಕೂಗಾಟಗಳು ಸಭ್ಯರು ಕೇಳುವಂತಹವಿರಲಿಲ್ಲ. 'ಮಾರ್ಶಲ್ ಯೋಜನೆಯು ಸ್ವೀಕಾರವೆಂದರೆ ಫ್ರೆಂಚ್ ಸ್ವಾತಂತ್ರ್ಯಕ್ಕೇನೇ ಧಕ್ಕೆಯೆಂದು ಡಕ್ಲಸರೆತ್ತಿ ಹೇಳಿದಾಗ ಪ್ರಧಾನ ಮಂತ್ರಿ ರಮಾದಿಯಾರರು ಅವರನ್ನು ತಡೆದು ಗಟ್ಟಿ ಸ್ವರದಿಂದ "ಇಂತಹ ಸುಳ್ಳು ಮಾತು ಹಾರಿಸಲು ನಾವು ಬಿಡುವಂತಿಲ್ಲ" ಎಂದರು. ಆದರೂ ಡಕ್ಲಸರು ಮುಂದುವರಿಸಿ "ಪ್ರಧಾನ ಮಂತ್ರಿಗಳು ಹಿಟ್ಲರ್ ಮತ್ತು ಮುಸೊಲಿನಿಯ ಆಟವಾಡುತಿದ್ದಾರೆ" ಎಂದಾಗ ಅಧ್ಯಕ್ಷರು ಅಂತಹ ಟೀಕೆ ಸಲ್ಲದೆಂದು ಪ್ರತಿಭಟಿಸಿದರು. ಪ್ರಧಾನಿ ರಮಾದಿಯಾರರೆದ್ದು "ನೀವಿಷ್ಟೆಲ್ಲಾ ಹೇಳಿದ ಮೇಲೆ ಇನ್ನು ನಿಮ್ಮ ಮಾತಿಗೇನೂ ಬೆಲೆಯಿಲ್ಲ" ಎಂದವರೇ ಬೇರೆ ಕಡೆಗೆ ಮುಖ ತಿರುಗಿಸಿ ಕುಳಿತುಬಿಟ್ಟರು!

ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

ಮಿತವ್ಯಯವನ್ನು ಬೆಳೆಸುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಪ್ರೋತ್ಸಾಹಿಸಿ ಉಳಿತಾಯವನ್ನು ಕಲ್ಪಿಸುವುದು. ವರ್ತಕರಿಗೂ ಕೃಷಿಕರಿಗೂ ಕ್ಲಿಷ್ಟಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು. ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಬಾಧಿತ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿಕೊಡುವುದು, ಮೊದಲಾದುವುಗಳು ನೇಕ ಬೇಕಾಗಿಸುವ ಬ್ಯಾಂಕುಗಳ ಹಲವಾರು ಧ್ಯೇಯಗಳಲ್ಲಿ ಸೊತ್ತುಮೊದಲಿನವುಗಳು.

[illegible] ಪ್ರಮುಖ ಪಟ್ಟಣಗಳಲ್ಲಿ ಹಂಚಿಕೊಂಡು [illegible] ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾ ಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಶಕ್ತಿಯ ಇನ್ನೂ ಹಾನಿಯಾದ ಜನರಿಗೆ ತನ್ನ ಕೈಲಾದ ಸಹಾಯವನ್ನು ಮಾಡಲು ಬದ್ಧಕಂಕಣವಾಗಿರುವುದು.

ನಮ್ಮ ಬ್ಯಾಂಕಿಯ [illegible] ನಿಮ್ಮ [illegible] ಬಂದರೆ ಅದನ್ನು ನಮ್ಮ ಮಾನ್ಯವಾದೆನೆಂದು [illegible] ಸ್ವೀಕರಿಸುತ್ತೇವೆ.

ESTD 1906.

CANARA BANK LIMITED.

ಕಾಮನ್ಸ್ ಸಭೆಯಲ್ಲಿ

ಬ್ರಿಟಿಷ್ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಇದೇ ಒಕ್ಟೋಬರ್ 31ರಲ್ಲಿ ನಡೆದ ಎರಡು ಘಟನೆಗಳು ಸ್ವಾರಸ್ಯವಿವೆ. ಲೋಕದ 'ಪಾರ್ಲಿಮೆಂಟುಗಳ ಜನಕ' ಎಂಬ ಕೀರ್ತಿ ಬ್ರಿಟಿಷ್ ಪಾರ್ಲಿಮೆಂಟಿನದು. ಆದರೆ ಅದರ 'ಕಾಮನ್ಸ್' ಮತ್ತು 'ಲೋರ್ಡ್ಸ್' ಎರಡು ಸಭೆಗಳಲ್ಲೂ ಮೊನ್ನೆ ಫ್ರೆಂಚ್ ಎಸೆಂಬ್ಲಿಯಲ್ಲಾದಂತಹ ಗುದ್ದಾಟಗಳು ಒಂದೆ ನಡೆದಿದ್ದ ನಿದರ್ಶನಗಳಿವೆ. ಮೊನ್ನೆ ತಾ 31ರಲ್ಲಿ ನಡೆದ ಸಂಗತಿ 'ಎಂ. ಪಿ.' ಸ್ಥಾನಕ್ಕೆ ಮಾತ್ರವಲ್ಲ. ಪತ್ರಿಕೋದ್ಯಮಕ್ಕೂ ಅಪಮಾನಕರವಾದುದು. ಮಿ. ಗೇರಿ ಎಲ್ಲಿಸ್ಥಾನ್ ಎಂಬವರು ಕೂಲಿಗಾರ ಪಕ್ಷದ ಕಾಮನ್ಸ್ ಸದಸ್ಯರು; ಸುಪ್ರಸಿದ್ಧ ಪತ್ರಿಕೋದ್ಯಮಿ ಕೂಡಾ. ಕಾಮನ್ಸ್ ಸಭೆಯಲ್ಲಿದ್ದು ಅವರು ಮಾಡುತಿದ್ದ ಉದ್ಯೋಗವೆಂದರೆ ದುಡ್ಡು ಪಡೆದು, ಪಾರ್ಲಿಮೆಂಟಿನ ಎಲ್ಲಾ ಸಂಗತಿಗಳನ್ನು ಪತ್ರಿಕಾ ವರದಿ ಮಾಡುವುದು. ಇಂತಹ ಒಂದು ಲೇಖನವು 'ವರ್ಲ್ಡ್ಸ್ ಪ್ರೆಸ್ ನ್ಯೂಸ್' ಪತ್ರಿಕೆಯಲ್ಲಿ ಪ್ರಕಟವಾಯಿತು. ಈ ಮಾದರಿಯ ಸಭಾ ಪ್ರಕರಣಗಳನ್ನು ವಿಚಾರಿಸಲು ಪಾರ್ಲಿಮೆಂಟಿನ ಒಂದು ಸಮಿತಿಯಿದೆ. ಈ ಸಮಿತಿ ವಿಚಾರಣೆಯಲ್ಲಿ ಮಿ. ಗೇರಿ ಅಲ್ಲಿಸ್ಥಾನರು ಸುಳ್ಳು ವಾಗ್ಮೂಲ ಕೊಟ್ಟುದಲ್ಲದೆ, ತನ್ನ ತಪ್ಪನ್ನು ಬೇರೆಯವರ ತಲೆಯ ಮೇಲೆ ಹೇರಿ ತಪ್ಪಿಸಿಕೊಳ್ಳಲಿಕ್ಕೂ ನೋಡಿದರು. ಇವೆಲ್ಲವೂ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಚರ್ಚಿಸಲ್ಪಟ್ಟು, 119 ಅನುಕೂಲ 101 ಪ್ರತಿಕೂಲ ಮತಗಳಿಂದ ಅಲ್ಲಿಸ್ಥಾನರ ವರ್ತನೆಯು "ಕಠಿಣ ರೀತಿಯ ಶಿಕ್ಷೆಗರ್ಹವಾದ ಅಗೌರವದ ನಡತೆ"ಯೆಂಬ ತೀರ್ಮಾನ ಮಂಜೂರಾಯಿತು. ಅಂತೆಯೇ ಸುಳ್ಳು ವಾಗ್ಮೂಲಕ್ಕಾಗಿ ಖಂಡಿಸುವ ಸರಕಾರೀ ಸೂಚನೆಯೂ ಚರ್ಚಿಸಿದಹಾ ಮಂಜೂರಾಯಿತು. ಕೊನೆಗೆ ಅಲ್ಲಿಸ್ಥಾನರನ್ನು ಪಾರ್ಲಿಮೆಂಟಿನ ಸದಸ್ಯತ್ವದಿಂದ ತಳ್ಳಿ ಹಾಕುವ ಸೂಚನೆಯೂ 187 ಅನುಕೂಲ 75 ಪ್ರತಿಕೂಲ ಮತಗಳಿಂದ ಪಾಸಾಗಿ ಅವರು ಹೊರದೂಡಲ್ಪಟ್ಟರು. ಇನ್ನವರು ಉಪಚುನಾವಣೆಗೆ ನಿಲ್ಲಬಹುದು; ಗೆದ್ದು ಬಂದರೆ ಪಾರ್ಲಿಮೆಂಟ್ ಸದಸ್ಯತ್ವದ ಎಲ್ಲಾ ಹಕ್ಕು ಬಾಧ್ಯತೆಗಳನ್ನು ಅನುಭೋಗಿಸಬಹುದು. ಕಳೆದ 25 ವರುಷಗಳಲ್ಲಿ ಎಂ. ಪಿ ಯೊಬ್ಬನು ಹೀಗೆ ಡಿಸ್‌ಮಿಸ್ ಆದುದು ಇದೇ ಮೊದಲಂತೆ. ಕಾಲು ಶತಮಾನದ ಮೊದಲು ಹೋರೇಶಿಯೋ ಬೋಟೋಮ್ಲಿಯೆಂಬವರನ್ನು ಹೀಗೆಯೇ ಕಳ್ಳಿಹಾಕಲಾಗಿತ್ತು. ಅವರೂ ಪತ್ರಿಕೋದ್ಯಮಿ ಸದಸ್ಯನೇ! ಅಲ್ಲಿಸ್ಥಾನರಿಗೆ ಅರ್ಧಚಂದ್ರ ಪ್ರಯೋಗವಾದ ದಿನವೇ ಮತ್ತೊಬ್ಬ ಕೂಲಿಗಾರ ಸದಸ್ಯ ಮಿ. ಎವಿವಿನ್ ವಾಕ್‌ಡೆನ್ ಎಂಬವರೂ 'ಕಠಿಣ ಶಿಕ್ಷಾರ್ಹ ಅಗೌರವ ವರ್ತನೆಯವ'ರೆಂದು ಕಾಮನ್ಸ್ ಸಭೆ ತೀರ್ಮಾನಿಸಿತು. ಆದರೆ ಅವರ ತಪ್ಪು ಅಲ್ಲಿಸ್ಥಾನರಷ್ಟು ದೊಡ್ಡದಲ್ಲವೆಂದು ಅಧ್ಯಕ್ಷ ಕರ್ನಲ್ ಕ್ಲಿಫ್‌ಟನ್ ಬ್ರೌನರಿಂದ ವಾಗ್ದಂಡಗಳನ್ನಷ್ಟೇ ಪಡೆದರು.

ಹೀಗಿದೆ ಪ್ರಜೆಗಳಿಂದಾರಿಸಲ್ಪಡುವ ಜವಾಬ್ದಾರೀ ಮನುಷ್ಯರ ಬೇಜವಾಬ್ದಾರೀ ನಡತೆಗಳ!

★ ಕಾಶ್ಮೀರದ ಕಾಳಗ ಹೇಗಾಗಬಹುದು?

ಕಾಶ್ಮೀರದ ಕಾಳಗ-ಜುನಾಗಾಡಿನ ಆಂದೋಲನ-ಹೈದರಾಬಾದಿನ ಪಿಕಲಾಟ, ಇವು ಮೂರೂ ಇಂದು ವಿಶೇಷ ಆತುರ ಜನಕ ಸ್ಥಿತಿಗೇರಿವೆ.

ಇವರಲ್ಲೂ ಮುಖ್ಯವಾಗಿ ಕಾಶ್ಮೀರ! ಅಲ್ಲಿ ಭಾರತ ಸರಕಾರದ ಶಕ್ತಿ, ಸ್ಥಾನ, ಗೌರವಗಳ ಅಗ್ನಿಪರೀಕ್ಷೆಯೇ ನಡೆದಿದೆ: ಕಾಶ್ಮೀರದ ಒರೆಗಲ್ಲಲ್ಲಿ ಇವು ಮೂರು ಈಗ ಬಲವಾಗಿ ತಿಕ್ಕಲ್ಪಡುತ್ತಿವೆ; ಈ ಪರೀಕ್ಷೆಯಲ್ಲಿ ಭಾರತವು ನಾಪಾಸಾದಲ್ಲಿ ಅದರ ದರ್ಜೆ ಕೆಳಗಿಳಿದಂತೆಯೇ!

ನವೋದಿತ ಸ್ವಾತಂತ್ರ್ಯವನ್ನು ಮೊಳಕೆಯಲ್ಲೇ ಮುರುಟಿಸುವ ಘಟನೆಗಳೇ ಇದು ವರೆಗೆ ಸಂಭವಿಸಿದ್ದುವು. ಈಗಲಂತೂ ಕಾಶ್ಮೀರ, ಹೈದರಾಬಾದು ಮತ್ತು ಜುನಾಗಢ್ ಸಂಭವಗಳು ಅದನ್ನು ಮುಂದೇ ಹಾಕುವಷ್ಟು ಮುಂದುವರಿಯಬಹುದೇ ಎಂಬ ಭೀತಿಗವಕಾಶವಿದೆ. ಆದರೆ ಹಾಗಾಗದು. ಹಿಂದೀ ಪ್ರಮುಖರು ಎಂತಹ ಬೆಲೆ ತೆತ್ತಾದರೂ ಆ ಮಾದರಿಯ ಅಪಾಯವನ್ನು ದೂರಕ್ಕೋಡಿಸುವದು ಖಂಡಿತ. ಅದು ಸಮೀಪಿಸುತ್ತಿದೆ-ಅದನ್ನಟ್ಟುವ ಅತಿ ಜಾಗರೂಕತೆಯ ಹಾಗೂ ಅತ್ಯಂತ ಪರಿಶ್ರಮದ ಕೆಲಸವಿದೆ ಎಂಬುದು ನಿಸ್ಸಂದೇಹ!

ಕಾಶ್ಮೀರದ ಕದನ

ಆಕ್ರಮಣಗಾರರ ಧಾಳಿಯು ತನ್ನ ಸಂಸ್ಥಾನದ ಜೀವನಾಡಿಗೆ ಸೋಂಕಿದ ಮೇಲೆಯೇ ಕಾಶ್ಮೀರದ ಮಹಾರಾಜರು ಭಾರತದೊಂದಿಗೆ ಸೇರಿಕೊಂಡು ಸಹಾಯ ಯಾಚಿಸಿದುದು. ಮತ್ತೆ ಕ್ಷಣ ತಡಮಾಡಲು ಅವಕಾಶವಿರಲಿಲ್ಲ. ಎಲ್ಲಾ ಸಂಗತಿಗಳೂ ಮಿಂಚುವೇಗದಿಂದ ನಡೆದು ಹೋಗಿದ್ದುವು. ಕಾಶ್ಮೀರದ ಜಮ್ಮು ಮತ್ತಿತರ ಸರಹದ್ದುಗಳಲ್ಲಿ ಪಾಕಿಸ್ತಾನಿಗಳ ಧಾಳಿಗಳು, ಮತ್ತು ಸೂರೆ ಸುಲಿಗೆ, ಧ್ವಂಸ ಕೃತ್ಯಗಳು ಕೆಲಕಾಲದಿಂದ ನಡೆಯುತ್ತಿದ್ದರೂ ದೊಡ್ಡ ಪರಿಮಾಣದ ಪ್ರತ್ಯಕ್ಷ ಧಾಳಿಯಾರಂಭಿಸಿದ ವಾರ್ತೆ ಢಿಲ್ಲಿಗೆ ಬಂದುದು ಒಕ್ಟೋಬರ್ 24ರಲ್ಲಿ. ಕಾಶ್ಮೀರ ಮಹಾರಾಜರು ಅಧಿಕೃತವಾಗಿ ಭಾರತ ಕೇಂದ್ರದೊಂದಿಗೆ ಸೇರಿಕೊಂಡದು ಒಕ್ಟೋಬರ್ 27ರಲ್ಲಿ. ಭಾರತ ಸರಕಾರದ ಪ್ರಥಮ ಸೇನಾದಳವು ಆಕಾಶ ಮಾರ್ಗವಾಗಿ ಕಾಶ್ಮೀರದ ರಾಜಧಾನಿ ಶ್ರೀನಗರದಲ್ಲಿಳಿದುದು ಅದೇ ದಿನವೇ. ಆ ಮೇಲೆ ಮತ್ತೂ ಹೆಚ್ಚಿನ ಸೇನೆ, ಶಸ್ತ್ರೋಪಕರಣಗಳನ್ನು ಭಾರತ ಸರಕಾರವು ಕಾಶ್ಮೀರಕ್ಕೆ ಗಗನ ಮಾರ್ಗವಾಗಿ ರವಾನಿಸುತ್ತಾ ಬಂದಿದೆ. ಅತ್ತ ಜಿದ್ದಾಜಿದ್ದಿ ಹೋರಾಟವು ಸಾಗಿದೆ; ಇತ್ತ ಭಾರತ-ಪಾಕಿಸ್ತಾನಗಳೊಳಗಿನ ಸಂಬಂಧವು ಪರಮಾವಧಿ ಕೆಟ್ಟು ಹೋದುದನ್ನು ಸ್ಪಷ್ಟಪಡಿಸುವ ರಾಜಕೀಯ ವ್ಯವಹಾರ ಮತ್ತು ವಾದವಿವಾದಗಳು ನಡೆದಿವೆ.

ಭಾರತ ಸರಕಾರದ ಧೋರಣೆ

ತಾ. 30ರಲ್ಲಿ ಭಾರತ ಸರಕಾರವು ಪ್ರಕಟಿಸಿದ ಪತ್ರಿಕಾ ಹೇಳಿಕೆಯೂ, ಇದೇ ತಾ 2ರಲ್ಲಿ ಪಂಡಿತ ನೆಹರುಗಳಿತ್ತ ಆಕಾಶವಾಣೀ ಭಾಷಣವೂ ಕಾಶ್ಮೀರದ ಸಂಬಂಧದಲ್ಲಿ ಹಿಂದೀ ಸರಕಾರದ ಧೋರಣೆಯೇನೆಂಬುದನ್ನು ಸ್ಪಷ್ಟಪಡಿಸಿವೆ. ಅವುಗಳ ಸಾರಾಂಶವಿಷ್ಟು:"ಕಳೆದ ಕೆಲಕಾಲದಿಂದ ಜಮ್ಮು ಪ್ರಾಂತ್ಯದೊಳಗಡೆ ಸಶಸ್ತ್ರ ಧಾಳಿಗಾರರ ಧಾಳಿಗಳು ನಡೆಯುತ್ತಿರುವ ವಾರ್ತೆಗಳು ಹಿಂದೀ ಸರಕಾರಕ್ಕೆ ಬರುತ್ತಿದ್ದುವು. ಅವು ವಿಶೇಷ ಹಾನಿಯೊಡ್ಡಿದುದಲ್ಲದೆ ಕೆಲವು ಸ್ಥಳಗಳನ್ನೂ ಆಕ್ರಮಿಸಿಕೊಂಡಿದ್ದುವು. ಗಡಿನಾಡು ಪ್ರಾಂತ್ಯದ ಅತ್ಯಾಧುನಿಕ ಶಸ್ತ್ರಸಜ್ಜಿತರಾದ 2000ಕ್ಕೂ ಮೇಲ್ಪಟ್ಟ ಧಾಳಿಗಾರರು ಮೋಟಾರು ವಾಹನಗಳಲ್ಲಿ ಅಬ್ಬೊಟಾಬಾದ್ ರಸ್ತೆ ಹಿಡಿದು ಮುಝಫರಾಬಾದಿನಲ್ಲಿ ಕಾಶ್ಮೀರದೊಳಗೆ ನುಗ್ಗಿ, ಕೆಲವರನ್ನು ಕೊಂದು, ಆ ನಗರವನ್ನು ವಶಪಡಿಸಿ ಝೀಲಮು ವ್ಯಾಲಿ ರಸ್ತೆ ಹಿಡಿದು ಶ್ರೀನಗರದತ್ತ ಧಾವಿಸುತ್ತಿರುವ ಪ್ರಾಮುಖ್ಯ ಧಾಳಿಯ ವಾರ್ತೆ ತಾ. 24ರಲ್ಲಿ ಬಂತು. ಹಾದಿಯಲ್ಲಿದ್ದ ಗ್ರಾಮ ನಗರಗಳೆಲ್ಲಾ ಧ್ವಂಸಮಾಡಲ್ಪಟ್ಟುವು; ಎಷ್ಟೋ ಮಂದಿ ಕೊಲ್ಲಲ್ಪಟ್ಟರು. ಕಾಶ್ಮೀರೀ ಸೇನೆ ಉರಿ ನಗರದ ಬಳಿ ಪ್ರತಿಭಟನೆ ಕೊಟ್ಟಿತು. ಆದರೆ ಧಾಳಿಗಾರರು, ಇಡೀ ಕಾಶ್ಮೀರಕ್ಕೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುತಿದ್ದ ಉರಿಯ ಪವರ್ ಹೌಸನ್ನು ಸುಟ್ಟುಹಾಕಿದರು. ತಾ 26ನೇ ಮುಂಜಾನೆಯಲ್ಲಿದ್ದ ಪರಿಸ್ಥಿತಿಯೆಂದರೆ ಬರಮುಲಾದಲ್ಲಿ 200 ಕಾಶ್ಮೀರೀ ಸೇನೆ ಕೆಲವು ಸಶಸ್ತ್ರ ನಾಗರೀಕರ ಸಹಾಯದಿಂದ ಈ ಪ್ರಚಂಡ ಧಾಳಿಗಾರ ಸೇನೆಯನ್ನು ಇದಿರಿಸಿ ನಿಂತಿದ್ದಿತು. ಕಾಶ್ಮೀರೀ ಬಯಲಿನ ಮೂಲಭಾಗವಾದ ಬರಮುಲಾವನ್ನು ಬಿಟ್ಟರೆ, ಮತ್ತೆ 35 ಮೈಲಿರುವ ರಾಜಧಾನಿ ಶ್ರೀನಗರದ ವರೆಗೂ ಧಾಳಿಗಾರರಿಗೆ ವಿಶೇಷಾತಂಕವಾಗುವಂತಹದೇನೂ ಇಲ್ಲ. ಆದ್ದರಿಂದ ಧಾಳಿಗಾರರು ಶ್ರೀನಗರವನ್ನು ಆಕ್ರಮಿಸಿ, ಅದನ್ನು ಧ್ವಂಸಮಾಡಿ, ಅಲ್ಲಿ ಅಧಿಕ ಸಂಖ್ಯೆಯಲ್ಲಿರುವ ಹಿಂದೂ ಮುಸ್ಲಿಮರೆಲ್ಲರನ್ನೂ ನಿರ್ನಾಮಮಾಡುವ ಅಪಾಯವು ಸನ್ನಿಹಿತವಾಗಿತ್ತು.

ಕಾಶ್ಮೀರದ ರಕ್ಷಣಾ ಸೇನೆ

ಈ ಸಮಯದಲ್ಲಿ ಕಾಶ್ಮೀರೀ ಸೈನ್ಯವು ಸಂಸ್ಥಾನದಲ್ಲೆಲ್ಲಾ ಹಂಚಿ ಬಿದ್ದಿತ್ತು. ಹೆಚ್ಚಿನದು ಜಮ್ಮು ಪ್ರಾಂತ್ಯಗಡಿಯ ರಕ್ಷಣೆಗಾಗಿ ನಿಂತಿದ್ದರೆ, ಉಳಿದ ಭಾಗ ಸಣ್ಣ ಸಣ್ಣ ಗುಂಪುಗಳಾಗಿ ಹರಿಹಂಚಾಗಿತ್ತು. ವಸ್ತುತಃ ಸಂಸ್ಥಾನದ ಎಲ್ಲಾ ಅಧಿಕಾರಿಗಳೂ ಅಪಾಯಕರ ಸ್ಥಳಗಳನ್ನು ಬಿಟ್ಟು ಹೋದುದರಿಂದ ನಾಗರಿಕ ಆಡಳಿತೆಯೆಂಬುದೇ ಅಸ್ತಿರಲಿಲ್ಲ. ಆವರೂ 'ರಾಷ್ಟ್ರೀಯ ಸಮ್ಮೇಳನ'ದ ಸ್ವಯಂಸೇವಕರಿಂದ ವ್ಯವಸ್ಥಾಪಾಲನೆ ನಡೆದಿತ್ತು. ಧಾಳಿಗಾರರು, ಕೊಲೆ, ದರೋಡೆ, ಬೆಂಕಿ ಕೊಳ್ಳಿಗಳ ಪ್ರಳಯ ತಾಂಡವ ನಡೆಸುತ್ತಾ ಮುಂಧಾವಿಸುತ್ತಿದ್ದರು. ಶ್ರೀನಗರಕ್ಕೂ ಅದೇ ಅವಸ್ಥೆಯೊದಗದಂತೆ ಆಗ ತಡೆಯಾಗಿ ಉಳಿದಿದ್ದುದೆಂದರೆ, ಶಸ್ತ್ರರಹಿತರಾದ ಜನತೆಯ ಸ್ವರಕ್ಷಣಾ ನಿರ್ಧಾರವೊಂದೇ. ಶ್ರೀನಗರದಲ್ಲಿ ಪಶ್ಚಿಮ ಪಂಜಾಬಿನಿಂದ ಬಂದಿದ್ದ ನಿರಾಶ್ರಿತ ಹಿಂದೂ ಸಿಖ್ಖರೂ ಬಹುಸಂಖ್ಯೆಯಲ್ಲಿದ್ದಾರೆ; ಧಾಳಿಗಾರರು ಅಲ್ಲಿ ಬಂದರೆ ಇವರೆಲ್ಲರೂ ಧ್ವಂಸವಾಗುವರೆಂಬ ಕುರಿತು ಸಂದೇಹವೇ ಇರಲಿಲ್ಲ.

ಮಹಾರಾಜರಿಂದ ಬಂದ ಸಹಾಯ ಯಾಚನೆ

ಆಗಲೇ ಕಾಶ್ಮೀರದ ಮಹಾರಾಜರಿಂದ ಸಹಾಯಕ್ಕಾಗಿ ಅವಸರದ ಕರೆಬಂತು. ಹಿಂದೀ ಕೇಂದ್ರ ಸೇರುವ ಸೂಚನೆಯೂ ಬಂತು. ಅದೇ ರೀತಿ ಶೇಕ್ ಅಬ್ದುಲ್ಲಾರ ನಾಯಕತ್ವದಲ್ಲಿರುವ, ಅತಿದೊಡ್ಡ ಪ್ರಜಾಪ್ರತಿನಿಧಿ ಪಕ್ಷವಾದ 'ರಾಷ್ಟ್ರೀಯ ಸಮ್ಮೇಳನ'ದಿಂದಲೂ ಸಹಾಯಕ್ಕಾಗಿ ಕರೆ ಬಂತು. ಹೀಗೆ ಅಧಿಕಾರಿಗಳಿಂದ ಮಾತ್ರವಲ್ಲ, ಪ್ರಜೆಗಳಿಂದಲೂ ನಮಗೆ ಅವಸರದ ಆಹ್ವಾನ ಬಂತು. ತಾ. 27ರಲ್ಲಿ ಮಹಾರಾಜರ ಪತ್ರ ಸಿಕ್ಕಿತು. ಇಂತಹ ಪರಿಸ್ಥಿತಿಯಲ್ಲಿ, ಈ ಬೇಡಿಕೆಗಳನ್ನು ಕಡೆಗಣಿಸಿ, ಸೇನಾ ಸಹಾಯ ಕಳುಹದಿರಲು ಭಾರತ ಸರಕಾರಕ್ಕೆ ಸಾಧ್ಯವಿರಲಿಲ್ಲ. ನೆರೆಯ ಮಿತ್ರ ಸಂಸ್ಥಾನವೊಂದರ ಪ್ರಜೆಗಳ ಪ್ರಾಣ, ಸೊತ್ತುಗಳಿಗೊದಗಿರುವ ಮಹಾಗಂಡಾಂತರಗಳಿಂದ ಅವರನ್ನು ರಕ್ಷಿಸಬೇಕಾಗಿದ್ದುದಷ್ಟೇ ಅಲ್ಲ. ಕಾಶ್ಮೀರದ ಉತ್ತರ ಗಡಿಯೇ ಅಫಘಾನಿಸ್ತಾನ್, ರಶ್ಯಾ ಮತ್ತು ಚೈನಾಗಳ ಗಡಿಯಾಗಿರುವದರಿಂದ ಭಾರತದ ರಕ್ಷಣೆಯ ದೃಷ್ಟಿಯಿಂದಲೂ ಅದು ಅಗತ್ಯವಿತ್ತು. ಯಾಕೆಂದರೆ ಕಾಶ್ಮೀರದ ದಕ್ಷಿಣ ಸರಹದ್ದೇ ಭಾರತದ ಉತ್ತರ ಸರಹದ್ದಾಗಿ ಸೇರಿಕೊಂಡಿದೆ. ಆದ್ದರಿಂದಲೇ ನಾವು ಕಾಶ್ಮೀರದ ಜೋಡಣೆ ಮತ್ತು ಸಹಾಯ ಯಾಚನೆಗೊಪ್ಪಿ ತಾ. 27ರಲ್ಲಿ ಪ್ರಥಮ ದಳವನ್ನು ಬೀಳ್ಕೊಟ್ಟೆವು.

ಪಾಕಿಸ್ತಾನದ ಮೇಲೆ ವೈರ ಸಾಧನೆಯಿಲ್ಲ.

ನಾವು ಜುನಗಾಡಿನ ಧೋರಣೆಯನ್ನೇ ಕಾಶ್ಮೀರದ ಕಡೆಗೂ ವಹಿಸಿ, ಗಲಭೆ ಶಾಂತವಾದೊಡನೆಯೇ ಜನಮತ ಸಂಗ್ರಹಿಸಿ, ಅದರ ತೀರ್ಮಾನದಂತೆ ಕಾಶ್ಮೀರವು ಯಾವುದಾದರೊಂದು ಕಡೆಗೆ ಸೇರತಕ್ಕದ್ದೆಂಬ ಸ್ಪಷ್ಟ ಶರ್ತ ಹಾಕಿಯೇ ಕಾಶ್ಮೀರದ ಜೋಡಣೆಗೊಪ್ಪಿಗೆ ಕೊಟ್ಟಿದ್ದೇವೆ. ಶೇಕ್ ಅಬ್ದುಲ್ಲರನ್ನು ನಡುಗಾಲ ಸರಕಾರ ರಚಿಸಲು ಕರೆದ ಮಹಾರಾಜರು ಕೃತಜ್ಞತೆಗರ್ಹರು. ಆದ್ದರಿಂದ ಕಾಶ್ಮೀರದ ಜನತೆಯ ಸಂಕಲ್ಪವೇ ಕಾಶ್ಮೀರದ ಅದೃಷ್ಟದ ನಿರ್ಧಾರವೆಂಬುದು ಸ್ಪಷ್ಟವಿದೆ. ಹಿಂದೀ ಸೇನೆಗಳಿಗೊದಗಿರುವ ಪ್ರತಿಭಟನೆಯ ಮೇಲಿಂದಲೇ ಧಾಳಿಗಾರರ ಶಕ್ತಿ, ಸಂಖ್ಯೆ, ಮತ್ತು ಅತ್ಯಾಧುನಿಕ ಉಪಕರಣಗಳೆಷ್ಟು ಹೆಚ್ಚಿನವೆಂಬುದನ್ನು ತಿಳಿಯಬಹುದು. ಈ ಧಾಳಿಗಾರರು ಪಾಕಿಸ್ತಾನದಿಂದಲೇ ಬಂದವರಾದರೂ, ಅಲ್ಲಿಯ ಸರಕಾರವು ಅವರು ಬೇಜವಾಬ್ದಾರರೆನ್ನುತ್ತಾ ತನ್ನ ಹೊಣೆ ತಪ್ಪಿಸಿಕೊಂಡಿದೆ. ಭಾರತ ಸರಕಾರವು ಪಾಕಿಸ್ತಾನ್ ಸರಕಾರದ ಅಧಿಕೃತ ಧೋರಣೆಯನ್ನು ಮಾತ್ರ ಗಣಿಸಬೇಕಾಗುತ್ತದೆ. ಆದ್ದರಿಂದ ನಾವು ಕಾಶ್ಮೀರಕ್ಕೆ ಕೊಟ್ಟ ಸಹಾಯವೆಂಬುದು, ಕಾನೂನು ಮತ್ತು ಮಾನುಷತ್ವದ ವೈರಿಗಳಾದ ಸ್ವೇಚ್ಛಾ ಪ್ರವೃತ್ತ ಗೂಂಡಾಗಳ ವಿರುದ್ಧವಾಗಿ ಮಾತ್ರ. ಭಾರತವು ಸ್ನೇಹಾಚಾರದಿಂದಿರಲಿಚ್ಛಿಸುವ, ಆ ತಂಗಿ ವಸಾಹತಿನ ವಿರುದ್ಧವಾಗಿ ಅಲ್ಲ. ಪಾಕಿಸ್ತಾನದಿಂದಲ್ಲದೆ ಬೇರೆಲ್ಲಿಂದಲೂ ಈ ಧಾಳಿಗಾರರಿಗೆ ಕಾಶ್ಮೀರ ಕಂದರದೊಳಗೆ ಬರಲಿಕ್ಕೆಯಿಲ್ಲ. ಪಾಕಿಸ್ತಾನ್ ಸರಕಾರವು ಆ ಪ್ರವೇಶಾನುಕೂಲತೆಯನ್ನು ಬಂದು ಮಾಡಿ ಇಂದಿನ ಭೀಕರ ದುಸ್ಥಿತಿಯ ನಿವಾರಣೆಗೆ ಸಹಾಯ ಮಾಡಬಹುದು. ಹಾಗೆ ಮಾಡಬೇಕೆಂದು ಅವರನ್ನು ತಾ 28ರಲ್ಲಿ ಕೇಳಿಕೊಂಡಿದ್ದೆವು"

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ಹೆಗ್ಗುರಿಯಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ—

ದಿ ವಿಜಯಾ ಬೇಂಕ್,
ಲಿಮಿಟೆಡ್,
ಹೆಡ್ ಆಫೀಸು: ಮಂಗಳೂರ..

ಶಾಖೆಗಳು: ಸಿಟಿ-ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಞ್ಞಂಗಾಡು, ಮಡಿಕೇರಿ ಮತ್ತು ಮುಂಬಾಯಿ.

THE VIJAYA BANK, LIMITED.

ಶ್ರೀ ಪ್ರಫುಲ್ಲ ಭಜನಾ ಮಂದಿರ, ಬೆಳ್ಳಿ.

ಭಜನಾ ಸಪ್ತಾಹ

ದಿವಂಗತ ಕುಮಾರಿ ಪ್ರಫುಲ್ಲಳ ಸ್ಮಾರಕವಾಗಿ ಸ್ಥಾಪಿಸಲ್ಪಟ್ಟು, ಊರು ನೆರೆಯೂರವರಿಂದ ಪವಿತ್ರ ಸ್ಥಳವೆಂದು ಗೌರವಿಸಲ್ಪಡುತ್ತಿರುವ ಬೆಳ್ಳಿ ಕೆಳಮನೆ 'ಪ್ರಫುಲ್ಲ ಸ್ಮಾರಕ ಮಂದಿರ'ದ ಮುಂಭಾಗದಲ್ಲಿ ವರುಷಂಪ್ರತಿ ಜರಗುವ ಭಜನಾ ಸಪ್ತಾಹವು ಇದೇ ಕಾರ್ತಿಕ ಶುದ್ಧ ನವಮಿ ತಾ 22-11-47ನೇ ಶನಿವಾರ ಪೂರ್ವಾಹ್ನ ಘಂಟೆ 9ರಿಂದ (ಕಲಶ ಪ್ರತಿಷ್ಠೆ) ತಾ 23-11-47ನೇ ಆದಿತ್ಯವಾರ ಪೂರ್ವಾಹ್ನ ಘಂಟೆ 9ರ ವರೆಗೆ (ಮಂಗಲ; ಕಲಶ ವಿಸರ್ಜನೆ) ಜರಗಲಿರುವುದು. ಈ ಪುಣ್ಯ ಕಾರ್ಯದಲ್ಲಿ ಸಹಭಾಗಿಗಳಾಗಲು ಸರ್ವರಿಗೂ ಸುಸ್ವಾಗತವಿದೆ.

ಕೆ. ಗೋಪಾಲಕೃಷ್ಣ ಬಲ್ಲಾಳ್
ಕಾರ್ಯದರ್ಶಿ

ಸಂಸ್ಥಾನ ಸಂಕಟ ಹೇಗೆ ಪರಿಹಾರ?

ಪಾಕಿಸ್ತಾನದ ಧೋರಣೆ

ಪಾಕಿಸ್ತಾನ್ ಸರಕಾರವು ಕಾಶ್ಮೀರದ ಸಂಬಂಧವಾಗಿ ತನ್ನ ಅಧಿಕೃತ ಧೋರಣೆಯನ್ನು ಪ್ರಕಟಿಸಿ ಕಟುವಾಣಿಗಳಿಂದ ಕಾಶ್ಮೀರದ ಹಿಂದೀ ಕೇಂದ್ರ ಜೋಡಣೆಗೆ ಅಸಂಗೀಕಾರ ಸೂಚಿಸಿದೆ. ಪಾಕಿಸ್ತಾನದ ಮಾತು; "ಕಾಶ್ಮೀರವು ಹಿಂದೀ ಕೇಂದ್ರಕ್ಕೆ ಸೇರಿದುದಕ್ಕೆ ಮೋಸ ಮತ್ತು ಹಿಂಸೆಯೇ ಆಧಾರವಾಗಿರುವುದರಿಂದ ಅದನ್ನು ಒಪ್ಪಿಕೊಳ್ಳಲಾಗುವದಿಲ್ಲ. ಕಾಶ್ಮೀರದ ಭವಿಷ್ಯದ ಕುರಿತು ಜನಮತ ಸಂಗ್ರಹಿಸಲಾಗುವದೆಂಬುದು, ತೋರಿಕೆಗೆ ಆಕರ್ಷಣೀಯವಾಗಿದ್ದರೂ, ಕಾರ್ಯತಃ ಅದು ಕಾಗದದಲ್ಲಿ ಮಾತ್ರ ಉಳಿಯುವಂತಹ ದಾಢ್ಯರಿಂದ ಕೇವಲ ವಂಚನೆಗಾಗಿ ಮುಂದಿಡಲ್ಪಟ್ಟಿದೆ. ಈಗಲೇ ಕಾಶ್ಮೀರವನ್ನಾಕ್ರಮಿಸಿಕೊಳ್ಳುತ್ತಾ, ತನ್ನ ಸೇನೆಗಳನ್ನು ಇಳಿಸಿರುವ ಹಿಂದೀ ಸರಕಾರವನ್ನು, ಅದರ ಇಚ್ಛೆಯಿದ್ದಂತೆ ಸ್ವತಂತ್ರವಾಗಿ ವರ್ತಿಸಲು ಬಿಟ್ಟರೆ ಈ 'ಜನಮತ ಸಂಗ್ರಹ'ವೆಂಬ ಮಾಯಾ ಮೃಗವು ಬಿಸಿಲ್ಗುದುರೆಯಂತಾಗುವುದೇ ಸರಿ. ಕಾಶ್ಮೀರದಲ್ಲಿರುವ ಮುಸ್ಲಿಮರ ಮೇಲೆ ಧಾಳಿ ನಡಿಸಿ ಕೊಲ್ಲುವದಕ್ಕಾಗಿ ಕಾಶ್ಮೀರೀ ಸೇನೆಯನ್ನು ಉಪಯೋಗಿಸಿದ್ದರಿಂದಲೇ ಪಠಾಣರು ಉದುಬಿದ್ದು ಕಾಶ್ಮೀರದೊಳಗೆ ನುಗ್ಗಿದ್ದಾರಾದ್ದರಿಂದ ಈ ಘಟನೆಯ ಹೊಣೆಗಾರಿಕೆಯು ಸಂಪೂರ್ಣವಾಗಿ ಕಾಶ್ಮೀರೀ ಸರಕಾರದ ಧೋರಣೆಯ ಮೇಲಿದೆ" ಎನ್ನುತ್ತಾ ಪಾಕಿಸ್ತಾನ್ ಸರಕಾರವು, ತಾವು ಸಂಧಾನಕ್ಕಾಗಿ ಮೇಲಿಂದ ಮೇಲೆ ಆಹ್ವಾನಿಸಿದರೂ ಕಾಶ್ಮೀರ ಸರಕಾರವು ಭಾರತ ಕೇಂ[ದ್ರದೊಡ]ನೆ ಸೇರಬೇಕೆಂಬ ಪೂರ್ವೋದ್ದೇಶದಿಂದ ಬೇಕೆಂದೇ ಜಾರಿಸಿಕೊಂಡಿತ್ತು ಎಂದು ಆರೋಪಿಸಿದೆ.

ಶ್ರೀ. ಮಹಾಜನರ ಉತ್ತರ

ಕಾಶ್ಮೀರದ ಪ್ರಧಾನ ಮಂತ್ರಿ ಮಹಾಜನರು ಪಾಕಿಸ್ತಾನ್ ಸರಕಾರವು ಮಾಡಿದ್ದ ಆರೋಪಗಳಲ್ಲಿ ಹಸೀ ಸುಳ್ಳು, ಸ್ಥಿತಿ ವಿಪರ್ಯಾಸಗಳೇ ತುಂಬಿರುವುದನ್ನು ನಿದರ್ಶನ ಪೂರ್ವಕ ತೋರಿಸಿಕೊಟ್ಟು ಪಾಕಿಸ್ತಾನ್ ರಾಯಭಾರಿಗಳೊಡನೆ ತಾನೂ ತನ್ನ ಪೂರ್ವಾಧಿಕಾರಿಗಳೂ ನಡೆಸಿದ್ದ ಮಾತುಕತೆಗಳನ್ನು ವಿವರಿಸಿ ಹೇಳಿದ್ದಾರೆ. ಆರೋಗ್ಯವರ್ಧಕ ವಿಶ್ರಾಂತಿಗಾಗಿ ಹದಿನೈದು ದಿನ ಕಾಶ್ಮೀರದಲ್ಲಿ ನಿಲ್ಲಲಿಚ್ಛಿಸಿದ್ದ ಕಾಯಿದೇ ಅಝಮ್ ಜಿನ್ನರ ಆರೋಗ್ಯ ಮತ್ತು ಮನಶ್ಶಾಂತಿ ಭಂಗವಾದೀತೆಂಬ ಹೆದರಿಕೆಯಿಂದಲೇ ಕಾಶ್ಮೀರ ಸರಕಾರವು ಅಲ್ಲಗಳೆದಿದ್ದಿತಲ್ಲದೆ ಜಿನ್ನರ ಮೇಲಿನ ಆತಿಥ್ಯ ಭಾವನೆಯ ಅಭಾವದಿಂದಲ್ಲವೆಂದಿದ್ದಾರೆ. "ಎಲ್ಲವೂ ಶಾಂತವಾಗುವವರೆಗೆ ಪೂರ್ಣ ತಾಟಸ್ಥ್ಯದಿಂದಿದ್ದು, ಎರಡೂ ಕೇಂದ್ರಗಳೊಡನೆ ಸ್ನೇಹಾಚಾರದಿಂದಿರಬೇಕೆಂದೇ ಕಾಶ್ಮೀರ ಸರಕಾರದ ಉತ್ಕಟೇಚ್ಛೆಯಿದ್ದರೂ, ಪರಿಸ್ಥಿತಿಯು ಕೈ ಮೀರಿ ಹೋಯಿತು. ಈಗ ನಡೆದಿರುವುದರ ಸಂಪೂರ್ಣ ಜವಾಬ್ದಾರಿಯು ಆಕ್ರಮಿಸಿ ಅಧೀನ ಪಡಿಸಿಕೊಳ್ಳಬೇಕೆಂಬ ಪಾಕಿಸ್ತಾನ್ ಸರಕಾರದ ಸ್ವಂತ ಧೋರಣೆಯ ಮೇಲೆಯೇ" ಎಂದು ಕೊನೆಯಲ್ಲಿ ಮಹಾಜನರಂದಿದ್ದಾರೆ.

ಅದೃಷ್ಟ ದಾಯೀ ಅಗ್ನಿ ಪರೀಕ್ಷೆ

ಕಾಶ್ಮೀರದಲ್ಲಿ ಆಕಾಶದಿಂದಿಳಿಸಲ್ಪಟ್ಟ ಹಿಂದೀ ಸರಕಾರದ ಸೇನೆಗಳನ್ನು ಕ್ರೂರ ಅದೃಷ್ಟವಿದಿರಿಸಿದಂತಿದೆ. ಇಡೀ ಗಡಿನಾಡು ಪ್ರಾಂತ್ಯ ಮತ್ತು ಪಶ್ಚಿಮ ಪಂಜಾಬಿನ ಸರ್ವ ಪಠಾಣರು ಮತ್ತಿತರ ಪಾಕಿಸ್ತಾನ್ ವಾಸಿಗಳು ವಿರೋಧಿಯೋಧರಾಗಿ ಮಾರ್ಪಟ್ಟಂತಿದ್ದು ಆ ವಿಶಾಲ ಭಾಗವೇ ಕಾಶ್ಮೀರದ ಮೇಲೀಗ ಕವಿದು ಬದ್ಧಿರುವಾಗ ಹಿಂದೂಸ್ಥಾನ್ ಸರಕಾರಕ್ಕೆ ಇದು ವರೆಗಲ್ಲಿ ಸೇನೆಯಿಳಿಸಲಿರುವ ಏಕಮಾತ್ರ ಮಾರ್ಗವೆಂದರೆ ಆಕಾಶವೇ. ಭಾರತದ ಪೂರ್ವ ಪಂಜಾಬಿನೊಂದಿಗೆ ಕಾಶ್ಮೀರವು ಜೋಡಣೆಗೊಂಡಿರುವುದು ಗುಡ್ಡಗಾಡು ಪ್ರದೇಶಗಳ ಮೂಲಕ; ಅಲ್ಲ ಸರಿಯಾದ ರಸ್ತೇ ಮಾರ್ಗಗಳಿಲ್ಲ. ಮೇಲಾಗಿ ಕಾಶ್ಮೀರದ ರಾಜಧಾನಿ ಶ್ರೀನಗರವು ಭಾರತದ ಗಡಿಗೆ ಅತಿ ದೂರದಲ್ಲಿದ್ದು ಪಾಕಿಸ್ತಾನ್ ವಲಯಕ್ಕೆ 35 ಮೈಲಷ್ಟು ಸಮೀಪವಿದೆ. ಅಲ್ಲಿಯ ಸರಹದ್ದುಗಳಲ್ಲಿ ಆಕ್ರಮಣಗಾರ ಸೇನೆಗಳು ಮೊದಲೇ ಸುಭದ್ರವಾಗಿ ತಳವೂರಿ ಶ್ರೀನಗರದ ಆಸುಪಾಸಿನ ಮಾರ್ಮಿಕ ಸ್ಥಳಗಳನ್ನೆಲ್ಲ ಪ್ರಥಮತಃ ಆಕ್ರಮಿಸಿಕೊಂಡಾಗಿತ್ತು. ಹಿಂದೀ ಸೇನೆಯು ಇಳಿಯಲು ಒಂದು ದಿನ ತಡವಾಗುತಿದ್ದಲ್ಲಿ ಶ್ರೀನಗರದ ವಿಮಾನನಿಲ್ದಾಣವೂ ವೈರಿಗಳ ವಶವಾಗಿ ಭಾರತ ಸೇನೆಗೆ ಆ ವಲಯದಲ್ಲಿ ಕಾಲೂರುವುದಕ್ಕೇನೇ ಆಗದೆ ಹೋಗುತಿತ್ತು. ಶ್ರೀನಗರವು ಇಷ್ಟರಲ್ಲೇ ಕ್ರೂರ ಬಂಡುದಳಗಳ ಕೈ ಸೇರಿ ಅಲ್ಲಿದ್ದ ನಿರಾಶ್ರಿತರ ಸಮೇತ ಎಲ್ಲರೂ ತುಂಡರಿಸಲ್ಪಡುತಿದ್ದರು; ಅದು ಸ್ಮಶಾನವಾಗಿ ಹೋಗುತಿತ್ತು. ಆ ಅಪಾಯವನ್ನು ಸಕಾಲದಲ್ಲೊಮ್ಮೆ ಹಿಂದೀ ಸೇನೆ ತಪ್ಪಿಸಿಬಿಟ್ಟರೂ ಧಾಳೀಗಾರರು ಅಷ್ಟರಲ್ಲೇ ಅದ್ಭುತವನ್ನು ಸಾಧಿಸಿ ಆಗಿತ್ತು. ಕಾಶ್ಮೀರ ಸೇನೆಯಲ್ಲಿದೆ ಎಂಬ ಪತ್ತೆಯೇ ಇಲ್ಲ. ಅದು ಒಂದೆರಡು ದಿನಗಳ ಪಠಾಣೀ ಹೊಡೆತದಿಂದಲೇ ಚಲ್ಲಾಪಿಲ್ಲಿಯಾಗಿ ಹೋಗಿತ್ತು. ಕಾಶ್ಮೀರೀ ಸೇನೆಯ ಅಧಿಪತಿ ಬ್ರಿಗೇಡಿಯರ್ ರಾಜೇಂದ್ರ ಸಿಂಗರು ಕಾಣೆಯಾಗಿದ್ದಾರೆ! ಹಿಂದೀ ಸೇನಾ ನಾಯಕನಾಗಿ ಹೋಗಿದ್ದ ಲೆಫ್ಟಿನೆಂಟ್ ಕರ್ನಲ್ ಡಿ. ಆರ್. ರೈಯವರು ವೈರೀ ಬಳದ ಅಂದಾಜು ದೊರೆಯದೆ ಶ್ರೀನಗರದಲ್ಲಿಳಿದೊಡನೆ ತನ್ನೊಂದು ದಳವನ್ನು ಧಾಳಿಗೊಟ್ಟಿದ್ದರು. ಆದರೆ ತಾವು ಸಿಕ್ಕಿಬೀಳುವೆವೆಂದು ತಿಳಿದು ಬಂದೊಡನೆಯೇ ಅತ್ಯಂತ ಸಾಹಸದಿಂದ ತನ್ನ ದಳವನ್ನು ಹಿಮ್ಮೆಟ್ಟಿಸುತ್ತಾ, ಆದರ ಬಹುಭಾಗವನ್ನು ರಕ್ಷಿಸಿಕೊಂಡರಾದರೂ ಆ ಕಾಳಗದಲ್ಲಿ ತಾವು ವೀರ ಮೃತ್ಯುವಿಗೀಡಾದರು. ಭಾರತ ಸರಕಾರದ ವಿಮಾನಗಳೀಗ ಮೇಲಿನಿಂದ ಧಾಳಿಸುತ್ತಿವೆ. ತೀರಾ ಪ್ರತಿಕೂಲ ಪರಿಸ್ಥಿತಿಯಲ್ಲಿ ಹಿಂದೀ ಸೇನೆಯು ಅಭಿಮನ್ಯು ಕಾಳಗ ಕೊಡುತ್ತಿದೆ. ಆದರೂ ವೈರಿಸೇನೆ ಮುಂದೊತ್ತುತ್ತಾ ಕಾಶ್ಮೀರದ ಹೊಂವಲಯಕ್ಕೆ ಬಂದಿದೆ!

ಜುನಾಗಡ ಆಕ್ರಮಣ

ಇತ್ತ ಜುನಗಾಡನ್ನು ಶ್ರೀ ಸಾಮಲ್ದಾಸ್ ಗಾಂಧಿಯವರ ನಾಯಕತ್ವದಲ್ಲಿರುವ ಪ್ರಜಾ ಸರಕಾರವು ಆಕ್ರಮಿಸುತ್ತಾ ಮುಂದೊತ್ತುತ್ತಿದೆ. ಎಲ್ಲಿಯೂ ಜುನಗಾಡ್ ನವಾಬ್ ಸರಕಾರದ ಪ್ರತಿಭಟನೆಯಿಲ್ಲ. ನವಾಬರು ಕರಾಚಿಗೋಡಿ ಹೋಗಿದ್ದಾರೆ. ಜುನಗಾಡಿನ ಮಂತ್ರಿಯೂ ಪೋಲಿಸ್ ಕಮಿಶನರರೂ ರಾಜೀನಾಮೆಯಿತ್ತಿದ್ದಾರಲ್ಲದೆ ನವಾಬ್ ಸರಕಾರದ ಮುಖ್ಯ ಮುಖ್ಯ ಅಧಿಕಾರಿಗಳೆಲ್ಲಾ ಕರಾಚಿಗೆ ಹಾರಹತ್ತಿದ್ದಾರೆ. ಹೀಗೆ ಒಳಗಡೆಯಲ್ಲಿ 'ಜುನಗಾಡು' ಜನನಾಡು ಆಗುತ್ತಿರುವಾಗಲೇ ಹೊರಗಡೆಯಲ್ಲಿ ಭಾರತ ಸರಕಾರವು ಪ್ರಮುಖ್ಯ ಹೆಜ್ಜೆಯನ್ನಿಟ್ಟಿದೆ. ತನ್ನ ಆಶ್ರಿತರೆಂದು ಜುನಗಾಡ್ ನವಾಬರು ಹೇಳುತ್ತಿದ್ದ ದಬ್ಬಾಳಿಕೆ ನಡೆಸುತಿದ್ದ ಕಾಥಿಯಾವಾಡದ ಬಾಬರಿಯಾವಾಡ್ ಮತ್ತು ಮಾಂಗ್ರೋಲಿನೊಳಗೆ ಭಾರತ ಸೇನೆ ಪ್ರವೇಶಿಸಿ ಎರಡನ್ನೂ ಹಿಡಿದುಕೊಂಡು ಆಡಳಿತೆಯನ್ನು ಸ್ವಾಧೀನ ಪಡಿಸಿಕೊಂಡಿದೆ. ಇವೆರಡು ಉಪಸಂಸ್ಥಾನಗಳೂ ಭಾರತ ಕೇಂದ್ರಕ್ಕೆ ಸೇರಿದ್ದುವು. ಆದರೆ ಕೊನೆಗೆ ಜುನಾಗಾಡಿನ ನವಾಬರು ಬಲಾತ್ಕಾರದಿಂದ ಮಾಂಗ್ರೋಲ್ ನವಾಬರಿಂದ ಪಾಕಿಸ್ತಾನ್ ಸೇರುವ ಸಹಿ ಪಡೆದಿದ್ದರು. ಮಾಂಗ್ರೋಲ್ ಮತ್ತು ಬಾಬರಿಯಾವಾಡ್ ತನ್ನ ಹಾಗೂ ಜುನಾಗಡಿನ ಹಕ್ಕಿನವುಗಳೆಂದು ಪಾಕಿಸ್ತಾನ್ ಸರಕಾರದ ವಾದವಿದೆ. ಈಗ ಭಾರತ ಸರಕಾರವು ಶಾಂತ ರೀತಿಯಿಂದ ಅವೆರಡನ್ನೂ ಆಕ್ರಮಿಸಿಕೊಂಡಿದೆ. ಅಲ್ಲಿಯ ಜನತೆಯು ಭಾರತ ಸೇನೆಗಳಿಗೆ ಸುಸ್ವಾಗತವಿತ್ತಿದೆ. ಸಾಧ್ಯವಿದ್ದಲ್ಲಿ ಪಾಕಿಸ್ತಾನವು ಪ್ರತಿಭಟಿಸಲೇಳಲೇ ಬೇಕಾದ ಮತ್ತೊಂದು ಘಟನೆಯಿದು.

ಹೈದರಾಬಾದಿನ ಅಂತರ್ಲಾಗ

ಕಳೆದವಾರ ಪ್ರಕಟವಾದಂತೆ ಭಾರತ ಕೇಂದ್ರ ಮತ್ತು ಹೈದರಾಬಾದುಗಳೊಳಗೆ ಒಂದು ವರುಷಾವಧಿಯ ಕರಾರೊಂದು ತಯಾರಾಗಿ ಅದಕ್ಕೆ ನಿಜಾಮರ ಸಹಿ ಬೀಳುವುದೊಂದೇ ಬಾಕಿಯಿದ್ದಿತಷ್ಟೆ! ನಿಜಾಮರು ಆ ಕರಾರಿನ ಶರ್ತಗಳನ್ನು ಬದಲಾಯಿಸಲು ನೋಡಿದ್ದರಿಂದ ಅಂತಹ ಬದಲಾವಣೆಗೆ ಭಾರತ ಸರಕಾರವೆಂದಿಗೂ ಒಪ್ಪಲಾರದೆಂದು ಖಚಿತವಿದ್ದ ಹೈದರಾಬಾದಿನ 'ಸಂಧಾನ ಸಮಿತಿ'ಯು ರಾಜೀನಾಮೆಯೊಪ್ಪಿಸಿತು. ಈ ಸಮಿತಿಯಲ್ಲಿದ್ದುದೆಂದರೆ ಪ್ರಧಾನ ಮಂತ್ರಿ ಛತ್ತಾರಿ ನವಾಬ್, ಸಲಹೆಗಾರ ಸರ್. ವಾಲ್ಟರ್ ಮೊಂಕ್ಟನ್, ಸರ್ ಸುಲ್ತಾನ್ ಅಹಮ್ಮದ್ ಮತ್ತು ನವಾಬ್ ಅಲೀನವಾಜು ಜಂಗ್ ಬಹದೂರ್, ಈ ನಾಲ್ವರು. ಇವರು ಭಾರತ ಸರಕಾರದ ಸಂಧಾನ ಕರಾರಿನ ಕರಡನ್ನು ಹಿಡಿದುಕೊಂಡು ಹೈದರಾಬಾದಿಗೆ ಬಂದು ನಿಜಾಮರನ್ನು ಸಮಜಾಯಿಸಲು

(೬ನೇ ಪುಟ ನೋಡಿರಿ)

In the court of the District Munsiff of Mangalore

O. S. 48/47 R. I. A. 593/47 and R. I. A. 722/47

1 Pariyai alias Kunhimonu, 2 Abbu alias Kunhibava, 3 Khatijama, 4 Hammabba Beary, 5 Mammatiammu, 6 Mammatiamma, 7 Haliama; 8 Bava alias Moidinabba. 9 Bupatheema— Minors by next friend and mother Halimama.

and

1 Aisremma, 2 Umara Beary 3 Khatijama. 4 Maipathuma. 5 Ashyamu. 6 Mayabba. 7 Maipatthma. 8 Joinabu 9 Muthu Bava alias Musan. 10 Halimama. 11 Ummathuma. 12 Pathuubi. 13 Athi alias Khatjana. 14 Ibroyi Mukri 15 Jomabu. 16 Kunhi Pokoru 17 Kunhi Pokoru 18 Kunhi Pokoru 19 Moose Beary. 20 Abokere 21 Hussenabba 22 Podimona alias Ummarabba 23 Bava alias Iddi 24 Ahmad 25 Ismail 26 Abokere. 27 Haimama. 28 Ahmad 29 Halumamma. 30 Pallima 31 Pakroji Bava 32 Havamu 33 Chipathuma. 34 Podimona alias Ummore. 35 Bipathuma 36 Hamabba. 37 Abu Beary. 38 Hammad Beary. 39 Mahmood 40 Dulikam

Please take notice, that the petitioners have filed R. I. A. 593/47 to bring in the petitioners 7 to 9 as the legal representatives of the deceased 5th plaintiff.

They have also filed R. I. A. 722/47 to bring on record Dulekam as the legal representative of the deceased 7th defendent.

They have also prayed for permission to make the consequential amendments in the said matter. Both the said applications case on for hearing on 10-11-47. You may either appear in person or by vakil and oppose. On default the matter will be decided in your absence.

Mangalore 30-10-'47 } **K. Gopal Rau,** Advocate for Plaintiff

ವರ್ಗ-ಊಳಿಗ
ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ಮಾರಾಟಕ್ಕಿವೆ.
ನವಯುಗ ಪ್ರೆಸ್, ಉಡುಪಿ

The Canara Banking Corporation Limited.

(Incorporated in British India)

Estd: 1906.

Head Office: UDIPI, S. India.

ANNOUNCEMENT.

A branch of the BANK will be shortly opened at High Road, TRICHUR. (Cochin State)

ನವಯುಗ

ಗುರುವಾರ, ಉಡುಪಿ, ೬-೧೧-'೪೭

ಈ ಅಪಾಯಗಳು!

ಅಖಂಡ ಭಾರತದಲ್ಲಿ ಎರಡು ಸ್ವತಂತ್ರ ವಸಾಹತುಗಳು ಮೂಡಿ ಇನ್ನೂ ಮೂರು ತಿಂಗಳುಗಳಾಗಿಲ್ಲ. ಇಷ್ಟರೊಳಗೇನೇ ಹಿಂದೀಯರು ಪಡೆದ ಸ್ವಾತಂತ್ರ್ಯಾನುಭವವು ಅತಿ ಹೆಚ್ಚಿನದು. ನಲ್ವತ್ತು ಕೋಟಿ ಜನತೆಯ ಎರಡು ಶತಮಾನಗಳಿಂದಿದ್ದ ಸ್ಥಿತಿಗತಿಗಳು ಬದಲಾಯಿಸುವಾಗ, ಅಂತಹ ಮಾರ್ಪಾಟವು ಯಾವ ಗೊಂದಲವನ್ನೂ ತರಲಾರದೆಂಬ ಭರವಸೆಯನ್ನು ಹಿಂದಾದರೂ ಯಾರೂ ಕಟ್ಟಿಕೊಂಡಿರಲಿಲ್ಲ. ಒಂದು ಸುಧಾರಣೆಯ ಆದಿಭಾಗದಲ್ಲಿ ವಿರೋಧಗಳೇಳಲೇಬೇಕು; ಗೊಂದಲಗಳೇಳಲೇಬೇಕು; ಹಾಗಿಲ್ಲವಾದರೆ ಅದು ಪರಿಣಾಮಕಾರೀ ಸುಧಾರಣೆಯಲ್ಲವೆಂದೇ ಅರ್ಥ. ಅದೇ ರೀತಿ ಭಾರತವು ಸ್ವತಂತ್ರವಾದೊಡನೆ ಸಹಜವಾಂದೋಲನಗಳೇಳುತ್ತಿದ್ದರೆ, ಅದಕ್ಕಾಗಿ ಯಾರೂ ಸಂತಾಪಪಡುತ್ತಿರಲಿಲ್ಲ. ಆದರೆ ಇಂದು ನಮ್ಮಲ್ಲಿ ನಡೆದಿರುವುದೇನು? ನಾವು ಹಾರೈಸಿದ್ದುದೇನನ್ನು—ಇಂದು ದೊರೆತಿರುವುದೇನು? ಹಿಂದೆ ನಾವೇನನ್ನಾಡಿದ್ದೆವು—ಈಗ ಏನನ್ನು ಮಾಡುತ್ತಿದ್ದೇವೆ? ಇತ್ಯಾದಿ ದೊಡ್ಡದೊಡ್ಡ ಪ್ರಶ್ನಾರ್ಥಕ ಚಿಹ್ನೆಗಳೇ ನಮ್ಮ ಊಹಾಪಥ, ಪ್ರಗತಿಪಥಗಳಲ್ಲಿ ಮೂಡಿ ನಿಂತಿವೆ; ಅಡ್ಡಬೇಲಿಗಳಾಗಿ ತಡೆಗಟ್ಟಿಯೇ ನಿಂತಿವೆ! ಇಂದು ನಮ್ಮಲ್ಲಿ ನಡೆದಿರುವುದು ನವ ಸ್ವಾತಂತ್ರ್ಯದ ದರಗನ್ನು ತೆಗೆದು ಅದಕ್ಕೊಂದು ಆಕಾರ ಕೊಡುವ ಕೆಲಸವಲ್ಲ—ಅದನ್ನು ವಿಕಾರಗೊಳಿಸುವ ಕಸ್ತೀ ಕಡತವೇ! ದೇಶವಿಭಜನೆಯಿಂದಾದರೂ ನಮ್ಮಲ್ಲಿಯ ಜಾತೀಯ ಗೊಂದಲ ನಿಂತೀತೆಂದು ನಾವು ಹಾರೈಸಿದ್ದರೆ, ಇಂದದು ನಾಲ್ಮಡಿ ಬೆಳೆದು ನಮ್ಮನ್ನಾವರಿಸಿಕೊಂಡಿದೆ. "ಬ್ರಿಟಿಷರು ಹೊರಟು ಹೋಗಲಿ—ನಮ್ಮೊಳಗಿನ ಜಗಳಗಳನ್ನು ನಾವೇ ತೀರಿಸಿಕೊಳ್ಳುವೆವು" ಎಂದು ನಾವು ಅಂದು ಕೂಗಿ ಹೇಳಿದುದಿದೆ. ಈಗ ಬ್ರಿಟಿಷರು ಹೊರಟು ಹೋಗಿದ್ದಾರೆ. ಆದರೆ ನಮ್ಮೊಳಗಿನ ಜಗಳಗಳನ್ನು ನಾವು ತೀರಿಸಿಕೊಳ್ಳುವೆವೋ, ಆ ಜಗಳಗಳೇ ನಮ್ಮನ್ನು ತೀರಿಸುವವೋ ಎಂಬ ನಿರ್ಧಾರವೀತನಕ ದೊರೆತಿಲ್ಲ! ಇಂತಹ ವಿಷಮಾವಸ್ಥೆಗಳೂ ಸ್ವಾತಂತ್ರ್ಯದ ಆದಿ ಭಾಗದಲ್ಲಿ ಸಹಜವಾದವುಗಳೆಂದು ಸಮಾಧಾನದಿಂದಿರಲು ಸಾಧ್ಯವೆ?

ನಮ್ಮ ಧುರೀಣರು ಹಿಂದು ಮುಂದನ್ನು ಯೋಚಿಸಿಕೊಳ್ಳುವದಕ್ಕೂ ಬಿಡುವಿಲ್ಲದಷ್ಟು ಇಂದಿನ ಸಮಸ್ಯೆಗಳಲ್ಲೇ ಮುಳುಗಿ ಹೋಗಿದ್ದಾರೆ. ಇಲ್ಲವಾದರೆ ಎಲ್ಲವನ್ನೂ ಗಾಢ ಪರಿಶೀಲನೆ ನಡೆಸಿದರೆ, ಹೊಸ ಧೋರಣೆ, ಹೊಸ ಕಾರ್ಯಕ್ರಮವನ್ನೇ ಕೈಕೊಳ್ಳಬೇಕಾದ ಕಾಲವಿದು. ಕಾಶ್ಮೀರದಲ್ಲಿ ಕಾಳಗವೇ ನಡೆದಿದೆ. ಅದನ್ನು ನಿರ್ಮಿಸಿದವರಾರೇ ಇದ್ದರೂ, ನಿವಾರಿಸತಕ್ಕವರು ನಾವೇ ಎಂದ ಮೇಲೆ, ಇಂತಹ ಅಪಾಯವನ್ನು ಮೊದಲೇ ನಿರೀಕ್ಷಿಸಿ ಭಾರತ ಸರಕಾರವು ಅದಕ್ಕೆ ತಕ್ಕ ಸಿದ್ಧತೆಗಳನ್ನು ನಡೆಸಿದುದಿದೆಯೆ? ಕಾಠಿಯಾವಾರವೂ ಕಾದ ಕಾವಲಿಯಂತಾಗಿದೆ; ಹೈದರಾಬಾದಿನ ಸಮಸ್ಯೆ ಯಾವಾಗ ಹೇಗಾಗುವುದೋ ಹೇಳುವುದಸಾಧ್ಯ. ರಾಷ್ಟ್ರದಾಳ್ತೆಯ ಸೂತ್ರಧಾರಿಗಳ ಪಾಲಿಗೆ ಇವುಗಳೆಲ್ಲವುದೂ ಆಕಸ್ಮಿಕ ಘಟನೆಯೇನೂ ಅಲ್ಲ. ನಾವು ತಪ್ಪು ಮಾಡಲಾರೆವೆಂದು ನಿರ್ಧರಿಸಿ ಕುಳಿತುಕೊಳ್ಳಬಹುದೇ ಹೊರತು, ಅನ್ಯರೂ ತಪ್ಪು ಮಾಡಲಾರರೆಂದು ನೆನಸಿ ಕುಳಿತಿರುವ ಹಕ್ಕು ಹೊಣೆ ಹೊತ್ತವರಿಗಿಲ್ಲ. ಸುದೈವವಶಾತ್ ಭಾರತ ಸರಕಾರಕ್ಕೆ ಅವರ ಇದಿರಾಳಿಯ ಗುಟ್ಟೆಲ್ಲಾ ಗೊತ್ತಿದೆ. ಸಿಡುಕು, ದುಡುಕಿನಲ್ಲಿ ಮಾತ್ರ ತಮ್ಮ ವೈರಿ ತಮಗಿಂತ ಮೇಲಲ್ಲದೆ ಶಕ್ತಿಯಲ್ಲಲ್ಲವೆಂಬುದು ತಿಳಿದೇ ಇದೆ. ಭಾರತದ ಜನ, ಸಂಪತ್ತು, ಸೌಕರ್ಯಗಳ ಅನುಕೂಲತೆಗಳ ಮೇಲಿಂದ ಈಗ ಒದಗಿರುವ ಕಾಶ್ಮೀರ, ಜುನಾಗಾಡು, ಹೈದರಾಬಾದಿನಂತಹ ಸಮಸ್ಯೆಗಳು ಅದರ ಪಾಲಿಗೀಗಿನಷ್ಟು ಕಠಿಣವಾಗಬೇಕೆಂದಿರಲಿಲ್ಲ. ಆದರೆ ತನ್ನಾ ಶಕ್ತಿಗಳನ್ನು ಸರಿಯಾಗಿ ಸಂಘಟಿಸಿಕೊಳ್ಳದಿದ್ದುದರಿಂದಲೇ ಈ ಸಮಸ್ಯೆಗಳಿಷ್ಟು ಬಿಗುಗೊಂಡವೆನ್ನಬಹುದು. ಅಂತಹ ಸಂಘಟನೆಯಾಗದಿರಲು ಕಾರಣವೇನು?

ಕಾರಣಗಳು ಹಲವಿವೆ; ನಮ್ಮ ನಾಯಕರ ಅಶ್ರದ್ಧೆಯೂ ಅವುಗಳಲ್ಲೊಂದು, ಎಂದಾರೂ ಹೇಳಲಾರರು. ಬದಲಿಗೆ, ಭಾರತದ ಶಕ್ತಿಯನ್ನು ಒಳಗಡೆಯಿಂದಲೇ ಕೊರೆಯುತ್ತಿರುವ ಕೀಟಗಳೇ ಇದಕ್ಕೆ ಮುಖ್ಯ ಕಾರಣಗಳೆನ್ನಬೇಕು. ಪಾಕಿಸ್ಥಾನವಾದ ಮೇಲೂ ಮುಸ್ಲಿಂ ಲೀಗ್ ನಾಯಕರಲ್ಲಿ, ತಾವು ಹೊಣೆ ಹೊತ್ತವರೆಂಬ ತೂಕದ ಬುದ್ಧಿ ಹೇಗೆ ಮೂಡಿಲ್ಲವೋ, ಅದೇ ರೀತಿ ಭಾರತವು ಸ್ವತಂತ್ರವಾದ ಮೇಲೂ ನಮ್ಮಲ್ಲಿ ಸ್ವತಂತ್ರ ಸರಕಾರವಿದೆ ಎಂಬ ಜ್ಞಾನವೇ ಇಲ್ಲಿಯ ಕೆಲವು ಪಕ್ಷೀಯರಲ್ಲಿ ಮೂಡಿಲ್ಲ. ಸ್ವತಂತ್ರ ಭಾರತವು ತನ್ನ ಸರ್ವಲಕ್ಷ್ಯವನ್ನು ಪ್ರಗತಿಶೀಲ ಸುಧಾರಣೆಗಳ ಕಡೆಗೆ ಕೊಡದಂತೆ, ಇದಿರುಕಡೆಯಿಂದ ಪಾಕಿಸ್ಥಾನವೆಳೆಯುತ್ತಿರುವಾಗ, ಸರ್ವ ಶಕ್ತಿಯನ್ನು ಪ್ರಯೋಗಿಸಿ ಆ ಕಂಟಕವನ್ನು ಬೇಗನೇ ನಿವಾರಿಸಿಕೊಳ್ಳದಂತೆ ಒಳಗಡೆಯ ಕೆಲವು ಪಕ್ಷಗಳೇ ಆತಂಕಗಳಾಗಿ ವಿರುದ್ಧ ಕೆಲಸ ಮಾಡುತ್ತಿವೆ. ಮುಸ್ಲಿಂ ಲೀಗ್ ಧರ್ಮಾಂಧತೆಯ ಪ್ರತಿಬಿಂಬಗಳಾಗಿ ಭಾರತದಲ್ಲಿ ಪ್ರಬಲಿಸಿರುವ 'ಹಿಂದೂ ವಾದಿ' ಪಕ್ಷಗಳಿಂದಾಗಿ ರಾಷ್ಟ್ರಕ್ಕೊದಗಿರುವ ಆಘಾತ ಸಣ್ಣದಲ್ಲ. ನಿಜಕ್ಕೂ ವಾತಾವರಣದಲ್ಲಿ ಮುಸ್ಲಿಂ ಲೀಗಿನಿಂದಾಗಿ ಕತ್ತಲೆ ಕವಿದಿದ್ದರೆ ಅಲ್ಲಿ ಬೆಳಕು ಚೆಲ್ಲದಂತೆ, 'ಹಿಂದೂ ವಾದಿ'ಗಳು ಭಾರತ ಸರಕಾರದ ಕಣ್ಣನ್ನೇ ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಪಂಡಿತ ನೆಹರುಗಳಂತಹ ಪ್ರಗತಿಶೀಲ ನಾಯಕರನ್ನು ಪೀಠದಿಂದುರುಳಿಸುವ ಹಂಚಿಕೆಗಳು ಕೂಡಾ ನಡೆದಿದ್ದು ಅವು ಗುರಿ ಮುಟ್ಟುವ ರಾಷ್ಟ್ರೀಯ ವಿಪತ್ತು ಒಮ್ಮೆ ಸಮೀಪಿಸಿದ್ದಿತೆಂಬುದೀಗ ಜನಜನಿತ ವಿಷಯ. ಇಂದಾದರೂ ಕೇಂದ್ರ ಸರಕಾರದೊಳಗಡೆಯಲ್ಲೇ ಪಂಡಿತ ನೆಹರುಗಳ ಪ್ರಭಾವಕ್ಕೆ ಬಲವಾದ ಅಡ್ಡಗಾಲುಗಳಿವೆ, ಎಂಬುದನ್ನು ಮರೆಯಬಾರದು. ಒಂದೊಮ್ಮೆಗೆ ನೆಹರು ಸರಕಾರವು ಜಾತ್ಯಂಧರಿಗೆ ತನ್ನ ಸ್ಥಾನವನ್ನು ಬಿಟ್ಟುಕೊಡಬೇಕಾಗಿ ಬಂದಲ್ಲಿ, ಅಥವಾ ಜಾತ್ಯಂಧ ಪಕ್ಷಗಳ ವರ್ಚಸ್ಸಿಗೊಳಗಾಗಿಯೇ ಅದರ ಕಾರ್ಯಕಲಾಪಗಳು ಸಾಗುವಂತಾದಲ್ಲಿ, ರಾಷ್ಟ್ರವನ್ನಂತಹ ವಿಪತ್ತು ಕಾದಿದೆ ಎಂಬ ಕುರಿತು ಎಲ್ಲರೂ ಎಚ್ಚರದಿಂದಿರಬೇಕು. ಮತ್ತೆ ನಮ್ಮ ರಾಷ್ಟ್ರೀಯ ಜೀವನದಲ್ಲಾಗಲೀ ನಮ್ಮ ರಾಜಕೀಯದಲ್ಲಾಗಲೀ ಗೌರವಾರ್ಹ ಅಂಶವಾವುದೂ ಉಳಿಯಲಾರದು. ಇಷ್ಟರಲ್ಲೇ ಕಾಶ್ಮೀರದ ಸಂಬಂಧವಾಗಿ ಬ್ರಿಟಿಷ್ ಅಧಿಕಾರಿಗಳು, ರಾಜಕಾರಣಿಗಳು ಹಾಗೂ ಪತ್ರಿಕೆಗಳು, ತುಸು ಹೆಚ್ಚಿನ ಆತುರ ತೋರಿಸಲಾರಂಭಿಸಿದ್ದಾರೆ. ಪೂರ್ತಿ ಮೂರು ತಿಂಗಳಾಗದ ನಮ್ಮ ಸ್ವಾತಂತ್ರ್ಯದ ಸಮ್ಮುಖದಲ್ಲಿ ಇಂತಹ ಶಕುನಗಳು ತೋರಬರುವುದು ಶುಭವಲ್ಲ. ಈ ಕಾಲದಲ್ಲಿ ಒಳಗಡೆಯ ಪ್ರತಿಗಾಮೀ ಶಕ್ತಿಗಳನ್ನು ಬೆಳೆಸಲು ಬಿಟ್ಟರೆ ಅಮಂಗಲವನ್ನು ಸಾಕ್ಷಾತ್ಕರಿಸಿಕೊಂಡಂತೆಯೇ. ಆದ್ದರಿಂದ ಈಗ ರಾಷ್ಟ್ರದ ಪ್ರಗತಿಗಾಮೀ ಶಕ್ತಿಗಳೆಲ್ಲವನ್ನೂ ಒಂದುಗೂಡಿಸಿ ಸಂಘಟಿಸಬೇಕು. ಸಮತಾವಾದಿಗಳು, ಕಮ್ಯೂನಿಸ್ಟರು, ಮತ್ತಿತರ ಪ್ರಗತಿ ಶೀಲ ಪಕ್ಷಗಳು ಈ ಸಂಧಿಕಾಲದಲ್ಲಿ ಒಂದಾಗಿ ನೆಹರು ಸರಕಾರಕ್ಕೆ ಬೆಂಬಲವಾಗಬೇಕು; ರಾಷ್ಟ್ರದ ಮೂಲೆ ಮೂಲೆಗಳಲ್ಲೂ ಜನತೆಯ ಹೃದಯವನ್ನು ಶುದ್ಧೀಕರಿಸುವ ಮತ್ತು ಶಕ್ತಿಯನ್ನು ಸಂಘಟಿಸುವ ಪ್ರಚಾರ ಮತ್ತು ಕಾರ್ಯಭರದಿಂದ ಸಾಗಬೇಕು. ಆ ಮೂಲಕ ಒಳಗಿನ ದುಶ್ಶಕ್ತಿಗಳನ್ನು ಅಲ್ಲಲ್ಲಿಯೇ ಮಣ್ಣುಪಾಲುಮಾಡಿ ಹೊರಗಿನ ಕಂಟಕಗಳನ್ನು ಕೂಡಲೇ ನಿರ್ಮೂಲಿಸಿ, ಮುಂದಿನ ಹೆಜ್ಜೆಯಾಗಿ 'ಸಮತಾವಾದಿ ಜನತಾ ರಾಜ್ಯ' ರಚನೆಯಾರಂಭವಾಗಬೇಕು. ಇಂದು ಹಲವು ಪಕ್ಷಗಳಾಗಿರುವ ಭಾರತದ ಪ್ರಗತಿಶೀಲ ಕಾರ್ಯಕರ್ತರೆಲ್ಲರೂ ಕೂಡಲೇ ಒಂದೆಡೆ ಕಲೆತು ಈ ಮಾರಿಯ ಕಾಲಿವೆಯಲ್ಲೇ ತಮ್ಮ ಸರ್ವಶಕ್ತಿಯನ್ನು ಏಕಪ್ರವಾಹವಾಗಿ ಹರಿಯಿಸುವದು ಅತ್ಯಗತ್ಯವಲ್ಲವೆ?

(೫ನೇ ಪುಟದಿಂದ)

ಪತ್ರಿಕೆಯೊಡನೆಯೂ, ಅಲ್ಲಿಯ ಕಟ್ಟುಗ್ರ ಮುಸ್ಲಿಂ ಸಂಸ್ಥೆ, ನಿಜಾಮರ ಮೇಲೆ ಸಂಪೂರ್ಣ ಅಂಕೆಯಿರುವ ಇಸ್ಲಾಂ ಧರ್ಮಭ್ರಾಂತರಕೂಟ, 'ಇತ್ತೆಹಾದ್ ಉಲ್ ಮುಸ್ಲಿಮೀನ್' ದೊಡ್ಡ ವಿರುದ್ಧ ಪ್ರದರ್ಶನಗಳನ್ನು ನಡಿಸಿ ಭಯ ಬೀರಿದ್ದರಿಂದ ಸಂಧಾನ ಸಮಿತಿ ಸದಸ್ಯರು ಸೇನಾ ಪಹರೆಯಿಂದಲೇ ಮನೆ ಬಿಡುವಂತಾಗಿತ್ತು. ನಿಜಾಮರು ತಮ್ಮ ಪದ್ಧತಿಯಂತೆ ತನ್ನವರ ಈ ವಿರೋಧಕ್ಕೆ ಬಗ್ಗಿದರು. ಛತ್ತಾರಿ ನವಾಬರು ಪ್ರಧಾನ ಮಂತ್ರಿ ಸ್ಥಾನಕ್ಕೂ, ಸರ್. ವಾಲ್ಟರ್ ಮೋಂಕ್ಟನರು ತನ್ನ ಸಲಹೆಗಾರ ಸ್ಥಾನಕ್ಕೂ ರಾಜಿನಾಮೆ ಕೊಟ್ಟಿದ್ದಾರೆ. ಈ ಸಂಧಾನ ಸಮಿತಿ ಸದಸ್ಯರು ಹೈದರಾಬಾದನ್ನೇ ಬಿಟ್ಟು ಡಿಲ್ಲಿ, ಬೊಂಬಾಯಿಗಳಿಗೆ ಹೊರಟು ಹೋಗಬೇಕಾಯಿತು. ಈಗ ಹಿಂದೀ ಕೇಂದ್ರದೊಡನೆ ಹೊಸತಾಗಿ ಮಾತುಕತೆ ನಡಿಸಲು ನಿಜಾಮರು ಹೊಸ ಸಂಧಾನ ಸಮಿತಿಯೊಂದನ್ನು ರಚಿಸಿ ನವಡಿಲ್ಲಿಗೆ ಕಳುಹಿ ಕೊಟ್ಟಿದ್ದಾರೆ. ಈ ನವ ಸಮಿತಿಯಲ್ಲಿ, ಪೋಲಿಸ್ ಮತ್ತು ಸುದ್ದಿ ಖಾತೆಗಳ ಮಂತ್ರಿ ಮೊಯಿನ್ ನವಾಝ್ ಜುಂಗ ಬಹದೂರರೂ, ಮುಜ್ಲಿಸ್ ಪ್ರತಿನಿಧಿ ಹಾಗೂ ಸ್ಥಳೀಯ ಖಾತೆಗಳ ಮಂತ್ರಿ ಮಿ. ಮಹಮ್ಮದ್ ಅಬ್ದುಲ್ ರಹೀಮರೂ, ಸರಬರಾಯಿ ಮಂತ್ರಿ ಶ್ರೀ ಪಿ. ವೆಂಕಟರಾಮ ರೆಡ್ಡಿಗಳೂ ಇದ್ದಾರೆ. ಇದು ತೀರಾ ಅಪ್ರಗತಿಕ ಮನೋವೃತ್ತಿಯವರ ಸಮಿತಿಯಿದ್ದು, ಕೇವಲ ನೆವನಕ್ಕಾಗಿಯಲ್ಲದೆ ಸಂಧಾನ ಸಾಧನೆಗಾಗಿ ನಿಜಾಮರಿದನ್ನು ಕಳುಹಿಲ್ಲವೆಂಬುದು ಖಂಡಿತ. ಇತ್ತ ಹೈದರಾಬಾದಿನ ಮಜ್ಲಿಸ್ ನಾಯಕರು ಕರಾಚಿಗೆ ಹೋಗಿ ಮಿ. ಜಿನ್ನರೊಡನೆ ಸಂಬಂಧ ಮಾತುಕತೆ ನಡೆಸಿದ್ದರೆಂದೂ ಭಾರತ ಕೇಂದ್ರದೊಡನೆ ಹೈದರಾಬಾದು ಯಾವುದೇ ಸಂಬಂಧವಿಟ್ಟುಕೊಂಡಲ್ಲಿ, ಮತ್ತೆ ತಮ್ಮೊಡನೆ ವ್ಯವಹಾರದ ಪ್ರಸ್ತಾಪ ಬೇಡವೆಂದು ಜಿನ್ನರು ವಿರುದ್ಧಗಾಳಿಯೂದಿಸುವರೆಂದೂ ತಿಳಿದು ಬರುತ್ತದೆ. ಬ್ರಿಟನಿನಿಂದ 1 ಕೋಟಿ ರೂ.ಗಳ ಶಸ್ತ್ರಾಸ್ತ್ರ ತರಿಸಿಕೊಂಡೂ, ಇತರ ಎಲ್ಲಾ ವಿಧಾನಗಳಿಂದಲೂ ಹೈದರಾಬಾದು ಪ್ರಬಲ ತಯಾರಿ ನಡೆಸುತ್ತಿದೆ ಎಂಬ ದಟ್ಟ ವದಂತಿಗಳಿವೆ. ಅಂತೂ ಹೈದರಾಬಾದು ಭಾರತಕ್ಕೆ ದಗ ಕೊಡಲಿದ್ದಿದೆ ಎಂಬುದೀಗ ಸ್ಪಷ್ಟ. ಮುಂದೆ ಹೇಗೋ!

ಉಡುಪಿ

ಮೊಹರಂ—ಬರುವ ಅಮಾವಾಸ್ಯೆ ನಂತರದ ಚಂದ್ರ ದರ್ಶನವನ್ನಾಧರಿಸಿ, ಸ್ಥಾಯಃ ಇದೇ ತಿಂಗಳ ತಾ|| ೨೦ರ 10 ದಿನಗಳ ವರೆಗೆ ಮೊಹರಂ ದಿನಾಚರಣೆಗಳು ನಡೆಯಲಿರುವವು. ಸರ್ವ ಮುಸ್ಲಿಂ ಮತ್ತು ಮುಸ್ಲಿಮೇತರ ಬಂಧುಗಳು ಸಹಭಾಗಿತ್ವ ಹಾಗೂ ಸಹಕಾರಗಳನ್ನೀಯಬೇಕೆಂದು ಉಡುಪಿ ಅಂಜುಮಾನಿನ ಕಾರ್ಯದರ್ಶಿ ಮಿ. ಯು. ಎಂ. ನಸೀರ್ ಸಾಹೇಬರ ವಿಜ್ಞಾಪನೆಯಿದೆ.

ಕಾಶ್ಮೀರದ ದೃಢ ನಿರ್ಧಾರ!

ಕಾಶ್ಮೀರದ ರಣರಂಗದಿಂದ ಬರುತ್ತಿರುವ ಕೊನೆಯ ವಾರ್ತೆಗಳಂತೆ, ಹಿಂದೀ ಸೇನೆಯೀಗ ದೃಢವಾಗಿ ತಳವೂರಿ ಧಾಳಿಗಾರರನ್ನು ಒಂದೆರಡು ಪ್ರಾಮುಖ್ಯ ಸ್ಥಳಗಳಿಂದ ಹಿಂದಟ್ಟಿದೆ. ಹಿಂದುಗಡೆಯಿಂದ ಶಸ್ತ್ರ ಸಾಕರ್ಯಗಳೂ ಜೋಡಣೆಗೊಳ್ಳುತ್ತಿವೆ. ಧಾಳಿಗಾರರಲ್ಲಿ ಅಫ್ರಿದಿಗಳು, ವಝೀರಿಗಳು, ಮಹ್‌ಸೂದ್‌ಗಳು ಮತ್ತಿತರ ಗುಡ್ಡಗಾಡು ಜನರೇ ತುಂಬಿದ್ದಾರೆ. ಅಫ್ರಿದಿಗಳನ್ನು ಬಿಟ್ಟರೆ ಮಿಕ್ಕ ಗುಡ್ಡಗಾಡಿನವರು ವಝೀರಿಸ್ತಾನದಿಂದ ಬರಬೇಕಾದರೆ ಕಡಿಮೆಯೆಂದರೂ ಪಾಕಿಸ್ತಾನದೊಳಗಿನ 250 ಮೈಲುದ್ದವನ್ನು ಹಾದುಬರಬೇಕು. ಕಾಶ್ಮೀರದ ಗಡಿ ಸೇರಬೇಕಾದರೆ ನೌಶೇರಾ ರಾವಲ್ಪಿಂಡಿಯಂತಹ ಕೇಂದ್ರಸ್ಥಳಗಳನ್ನು ದಾಟಿಕೊಂಡೇ ಬರಬೇಕು. ಅವರಲ್ಲಿರುವ ಅತ್ಯಾಧುನಿಕ ಶಸ್ತ್ರೋಪಕರಣಗಳಲ್ಲಿ ಹೆಚ್ಚಿನ ವರ್ಗಗಳನ್ನು ಗುಡ್ಡಗಾಡು ಪ್ರದೇಶಗಳವರು ಇದುವರೆಗೂ ತಯಾರಿಸಿದ್ದಿಲ್ಲ. ಆದರೂ ಪಾಕಿಸ್ತಾನವು, ಇದಕ್ಕೆ ತಾನು ಹೊಣೆಯಲ್ಲವೆನ್ನುತ್ತಿರುವದು ವ್ಯಂಗ್ಯ ವಿನೋದವನ್ನೆಬ್ಬಿಸಿದೆ. ನೇತಾಜೀ ಬೋಸರ ಆಝಾದ್ ಹಿಂದ್ ಫೌಜಿನಲ್ಲಿದ್ದ ಮುಸ್ಲಿಂ ದಳ ನಾಯಕರು—ನೇತಾಜಿಯ ಬಲಗೈ ಬಂಟನಾಗಿದ್ದ ಕರ್ನೆಲ್ ಹಬಿಬುರ್ ರಹಿಮಾನ್, ಮೇಜರ್ ಜನರಲ್ ಕಿಯಾನಿ ಮುಂತಾದವರು—ಈ ಧಾಳಿಗಾರರನ್ನು ನಡೆಸುತಿದ್ದಾರೆಂದು ತಿಳಿದು ಬರುತ್ತದೆ. ಪಾಕಿಸ್ತಾನ್ ಸರಕಾರವು ಧಾಳಿಗಾರರಿಗೆ ನೈತಿಕ ಬೆಂಬಲವನ್ನು ಕೊಡುವ ಹೊರತು ಬೇರಾವ ಸಂಬಂಧವನ್ನೂ ಇಟ್ಟುಕೊಳ್ಳುವದಿಲ್ಲವಂತೆ!

ಪಾಕಿಸ್ತಾನಕ್ಕೆ ಸವಾಲು!

ಕಾಶ್ಮೀರದಲ್ಲಿ ಶೇಕ್ ಅಬ್ದುಲ್ಲರು ಅಧಿಕಾರ ವಹಿಸಿ ಜನತೆಗಳ ನಾಯಕರನ್ನಾರಿಸಿಕೊಂಡಿದ್ದಾರೆ. ಅಗತ್ಯ ಬೀಳುವಾಗಿನ ವಿಶೇಷಾಧಿಕಾರಗಳು ಅವರಿಗೆ ಕೊಡಲ್ಪಟ್ಟಿವೆ. "ಆಕ್ರಮಣಗಾರರು ನಮ್ಮನ್ನು ಹಣ್ಣು ಮಾಡಲು ಬಂದಿದ್ದಾರೆ. ಆದರೆ ಒಬ್ಬನೇ ಒಬ್ಬನುಳಿಯುವ ವರೆಗೂ ನಾವದನ್ನು ಪ್ರತಿಭಟಿಸುವೆವು" ಎಂದು ಶೇಕ್ ಭೀಷ್ಮಪ್ರತಿಜ್ಞೆ ಮಾಡಿ "ಮಿ. ಜಿನ್ನರು ಈ ಧಾಳಿಗಾರರನ್ನು ಹಿಂದೆ ಕರೆಯಲು ತನ್ನ ವರ್ಚಸ್ಸನ್ನು ಉಪಯೋಗಿಸಬೇಕು. ಶೇ. 78ರಷ್ಟು ಮುಸ್ಲಿಮರಿರುವ ಜನಮತದ ತೀರ್ಮಾನವನ್ನು ಮನ್ನಿಸಬೇಕು" ಎಂದು ಕೇಳಿಕೊಂಡಿದ್ದಾರೆ. ಪಂಡಿತ ನೆಹರುಗಳು ತನ್ನ ಆಕಾಶವಾಣಿ ಭಾಷಣದಲ್ಲಿಂದರು: "ಕಾಶ್ಮೀರದ ಆಕ್ರಮಣಗಾರರು ಗಡಿನಾಡು ಪ್ರಾಂತ್ಯ ಮತ್ತು ಪಶ್ಚಿಮ ಪಂಜಾಬುಗಳನ್ನು ದಾಟಿ ಹೇಗೆ ಮತ್ತೇಕೆ ಬಂದರು, ಮತ್ತವರಿಗೆ ಬೇಕಾದಷ್ಟು ಹಾಗೂ ಇಷ್ಟೊಂದು ಪರಿಣಾಮಕಾರಿ ಶಸ್ತ್ರ ಮತ್ತು ತರಬೇತಿ ದೊರೆತದ್ದಾರಿಂದ? ಎಂದು ಪಾಕಿಸ್ತಾನವನ್ನು ಪ್ರಶ್ನಿಸುವ ಹಕ್ಕು ನಮಗಿದೆ. ಇನ್ನೊಂದು ರಾಷ್ಟ್ರದ ಮೇಲೆ ನುಗ್ಗುವ ಆಕ್ರಮಣಗಾರರು ತನ್ನ ಕ್ಷೇತ್ರಗಳನ್ನು ಹಾದುಹೋಗದಂತೆ ತಡೆಯಲಾರದಷ್ಟು ಪಾಕಿಸ್ತಾನ್ ಸರಕಾರ ದುರ್ಬಲವಾಗಿದೆಯೇ? ಅಥವಾ ಹಾಗಾಗಬೇಕೆಂದು ಅದರ ಇಚ್ಛೆಯಿದೆಯೆ? ಮೂರನೇ ಪ್ರಶ್ನೆಯೇ ಇಲ್ಲ. ನಾವು ಧಾಳಿಗಾರರ ವಿರುದ್ಧ ಅದನ್ನು ರಕ್ಷಿಸುವ ಭಾಷೆಯನ್ನು ಕಾಶ್ಮೀರಕ್ಕೆ ಕೊಟ್ಟಿದ್ದೇವೆ; ಮತ್ತಾ ಭಾಷೆಯನ್ನು ಪಾಲಿಸಿ ಕೊಡುತ್ತೇವೆ" ಎಂದು ಉಚ್ಚ ಸ್ವರದಿಂದ ಹೇಳಿ "ಶಾಂತಿ ಸ್ಥಾಪನೆಯಾದ ಮೇಲೆ ಜಾಗತಿಕ ಸಂಘಟನೆಂಥವುಗಳ ಆಶ್ರಯದಲ್ಲಿ ಕಾಶ್ಮೀರದ ಜನ ಮತ ಸಂಗ್ರಹಿಸಲು ನಾವು ತಯಾರು" ಎಂದರು ನೆಹರು.

ಉಡುಪಿ

ದ. ಕ. ಹಿಂದೂ ಮಹಾಸಭೆಯ–ವಾರ್ಷಿಕಾಧಿವೇಶನ ಇದೇ ತಾ. 2ರಲ್ಲಿ ಉಡುಪಿ ಕಾರ್ಯಾಲಯದಲ್ಲಿ ಜರಗಿ ಚಾಲ್ತಿವರ್ಷದ ಕಾರ್ಯಕಾರೀ ಮಂಡಲ ರಚನೆಯಾಯಿತು. ಅಂದು ಅಪರಾಹ್ನ ರಥಬೀದಿಯಲ್ಲಿ ಸಾರ್ವಜನಿಕ ಸಭೆಯು ಶ್ರೀ ಕೆ. ಅಣ್ಣಪ್ಪ ನಾಗಪ್ಪ ಭಕ್ತರ ಅಧ್ಯಕ್ಷತೆಯಲ್ಲಿ ಸೇರಿ ಹಲವರ ಭಾಷಣಗಳಾದುವು.

ಇಂಟರ್ ಸ್ಕೂಲ್ ಜೂನಿಯರ್ ಕ್ರಿಕೆಟ್ - ಪಂದ್ಯದ ಫೈನಲ್‌ನಲ್ಲಿ ಉಡುಪಿ ಬೋರ್ಡ್ ಹೈಸ್ಕೂಲಿನವರು ವಿಜಯಿಗಳಾಗಿ ಆ ಸಂಬಂಧದ ಕಪ್ಪನ್ನು ಗೆದ್ದಿರುವರು.

ಅ. ಭಾ. ಟ್ರೇಡ್ ಯೂನಿಯನಿನ 26ನೇ ವರ್ಧಂತ್ಯುತ್ಸವದ ಸಲುವಾಗಿ ತಾ 31ರಲ್ಲಿ ಉಡುಪಿ ರಥಬೀದಿಯಲ್ಲಿ ಶ್ರೀ. ರಾಘವನ್‌ರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀ. ಸೀನರ ಭಾಷಣವಾಯಿತು.

ಶ್ರೀ ಅಮ್ಮುಂಜೆ ರಾಮಣ್ಣ ಶೆಟ್ರ ಅಕಾಲ ನಿಧನ–ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದ ಶ್ರೀ. ಎ. ರಾಮಣ್ಣ ಶೆಟ್ಟಿ, ಬಿ. ಎ. ಎಲ್. ಟಿ. ಯವರು ಕೆಲಕಾಲ ಮೂತ್ರರೋಗದಿಂದ ನರಳುತಿದ್ದು ತಾ. 1-11-47ನೇ ಶನಿವಾರ ಬೆಳಿಗ್ಗೆ ನಿಧನ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ಮೃತರು ತಮ್ಮ ಸರಲ ವರ್ತನೆ, ವಿನಯಶೀಲತೆ, ಸಾರ್ವಜನಿಕ ಸೇವಾ ತತ್ಪರತೆಯಿಂದ ವಿದ್ಯಾರ್ಥಿ ವೃಂದದ ಹಾಗೂ ಇತರರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಇವರು ಮಂಗಳೂರಿನ ಗಣಪತಿ ಹೈಸ್ಕೂಲ್, ಸ್ಯಾಂಟ್ ಆಗ್ನೆಸ್ ಹೈಸ್ಕೂಲ್, ಉಡುಪಿ ಬೋರ್ಡ್ ಹೈಸ್ಕೂಲ್ ಇವುಗಳಲ್ಲಿ ಸಹ ಸ್ವಲ್ಪ ಸಮಯ ಅಧ್ಯಾಪಕರಾಗಿದ್ದರು. ಮಂಗಳೂರಲ್ಲಿ ರಾಮಕೃಷ್ಣ ವಿದ್ಯಾರ್ಥಿ ಭವನದ ಸ್ಥಾಪನೆಗೆ ಕಾರಣರಾಗಿಯೂ ಉಡುಪಿಯಲ್ಲಿ ಸಾರ್ವಜನಿಕರಾಗಿಯೂ ಕೆಲಸ ಮಾಡಿದ್ದರು. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಬಯಸಿ ಅವರ ಕುಟುಂಬದ ಸಂತಾಪದಲ್ಲಿ ಸಹಾನುಭೂತಿ ಸೂಚಿಸುವೆವು.

(೦ನೇ ಪುಟದಿಂದ)

ದಿ ಬೊಂಬೈ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.— ಈ ಕಂಪೆನಿಯ 39ನೆಯ ವರ್ಷವಾದ 1946ರ ಸಂಬಂಧಿ ಈ ವಿಮಾ ಸಂಸ್ಥೆಯು ಆಸ್ಥಿರತೆಯಲ್ಲಿ ಭದ್ರತೆಯಲ್ಲಿ ಜನತಾ ವಿಶ್ವಾಸದಲ್ಲಿ ನವವಿಮಾ ಕಾರ್ಯ ಪರಿಮಾಣದಲ್ಲಿ ಕಾರ್ಯಕ್ಷೇತ್ರ ವಿಸ್ತರಣದಲ್ಲಿ ಆಯದ ವೃದ್ಧಿಯಲ್ಲಿ ವ್ಯಯದ ಇಳಿತದಲ್ಲಿ ವರ್ಷವರ್ಷ ಉತ್ತರೋತ್ತರ ಶ್ರೇಯಸ್ಸನ್ನು ಹೊಂದುತ್ತ ಬರುತ್ತಿದೆ ಎಂಬುದು ಗತಿಯ ವರ್ಷದ ಕೆಲವು ಅಂಕೆ ಸಂಖ್ಯೆಗಳನ್ನು ಮಾತ್ರ ತತ್ಪೂರ್ವದ ವರ್ಷವವುಗಳೊಡನೆ ಹೋಲಿಸಿದರೆ ಹಗಲು ಬೆಳಕಿನಷ್ಟು ಸ್ಪಷ್ಟವಿರುವ ಕಾರಣ ವಾಚಕರ ದೃಷ್ಟಿಯನ್ನು ಆ ಕಡೆಗೆ ಸೆಳೆಯಲು ಬಯಸುತ್ತೇವೆ. 1946ರಲ್ಲಿ ಕೊಟ್ಟ ಹೊಸ ವಿಮಾ ಪತ್ರಗಳು 11,890 ಇವುಗಳ ವಿಮಾ ಮುಖಮೌಲ್ಯ ರೂ. 3,28,21,200. ಇವುಗಳಿಂದ ಬರುವ ಅಧಿಕ ವಾರ್ಷಿಕ ಪ್ರೀಮಿಯಮ್ ಉತ್ಪನ್ನ ರೂ 16,24,498 ಇವನ್ನು 1945ರವುಗಳೊಡನೆ ಹೋಲಿಸಿದರೆ 1645 ವಿಮಾ ಪತ್ರಗಳು ಹೆಚ್ಚು. ಮೌಲ್ಯದಲ್ಲಿ ರೂ 50,00,000 ಹೆಚ್ಚು. 1947ನೇ ವರ್ಷದ ಸೆಪ್ಟಂಬರದ ವರೆಗಾದ ಹೊಸ ವಿಮಾ ಕಾರ್ಯವೊಡನೆ 1946ರ ಅದೇ ಸಮಯದವರೆಗಾದುದರೊಡನೆ ಹೋಲಿಸಿದರೆ 1947ನೆಯದು ಮತ್ತೂ ಹೆಚ್ಚಿನ ಅಭಿವೃದ್ಧಿಯನ್ನು ತೋರಿಸೀತೆಂದು ನಂಬಲು ಪ್ರಬಲ ಕಾರಣಗಳಿವೆ. 1945ರಲ್ಲಿ ಹಳೆಯ ಮತ್ತು ಆ ವರ್ಷವಿತ್ತ ಹೊಸ ವಿಮಾ ಪತ್ರಗಳಿಂದ ದೊರೆತ ಒಟ್ಟು ಪ್ರೀಮಿಯಮ್ ರೂಪದ ಆದಾಯವು ರೂ 64.07 ಲಕ್ಷವಿದ್ದುದು 1946ರಲ್ಲಿ ರೂ 80.61ಕ್ಕೆ ಮುಟ್ಟಿರುತ್ತದೆ. ಲೈಫ್ ಎಶ್ಯೂರೆನ್ಸ್ ನಿಧಿ ರೂ 2.97 ಕೋಟಿ ಇದ್ದುದು ವರದಿಯ ವರ್ಷದಲ್ಲಿ ರೂ 3.43 ಕೋಟಿಗೆ ಏರಿದುದು ಕಂಪೆನಿಯು ಸುಭದ್ರವಾಗಿ ಮುಂದುವರಿಯುತ್ತಿದೆ ಎಂಬುವಕ್ಕೆ ಪ್ರಧಾನ ಸಂಕೇತ. ದೇಶದ ಪ್ರಕೃಷ್ಟ ಪರಿಸ್ಥಿತಿಯಲ್ಲಿಯೂ ಕಂಪೆನಿಯು ಜನತಾ ವಿಶ್ವಾಸಾದರಗಳನ್ನು ಪಡೆದು ಇಂತಹ ಅಭಿವೃದ್ಧಿಯನ್ನು ಸಾಧಿಸಿದುದು ಅಭಿನಂದನೀಯ. ಬೊಂಬೈ ಲೈಫ್ ಇ ತೋಷ್ಕಕರವಾಗಿ ಮುಂದುವರಿಯಾಗುತ್ತ ಜನತಾ ಸೇವೆಗೈಯುತ್ತ ಸಾಗಲೆಂದು ಹೃತ್ಪೂರ್ವಕ ಆಶಂಸೆ.

'ಕೊರಪ್ಪಲ್'

THE
CANARA INDUSTRIAL & BANKING SYNDICATE LTD.
HEAD OFFICE
NOTICE

In the matter of the shares and deposits of late Dr N. Shripad Rao, S/O Sri Naimpally Ananthaya, Udipi.

His Holiness Srimad Anandashram Swamiji, as Matadhipathi and trustee of Shree Bhavani Shanker Devara Bhandaram of Shree Chitrapur Mutt, Shirali, has requested the Syndicate to transfer the shares, and make payment of the deposits, of Dr. N. Shripad Rao, who passed away at Udipi on 21-5-1947, on the strength of the registered Will of the deceased dated 27—4—1946 and this is to notify all those concerned that the Syndicate will act on the said Will and proceed to comply with the request of the beneficiary thereunder unless proper objection is received by the Syndicate with the proof thereto within a month from the publication of this notice.

"Mukund Nivas" Udipi, 30th October, 1947.

K. V. Shenoy,
SECRETARY.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

5-11-1947 ರಿಂದ

ಪುರಜನರ ಪ್ರೀತಿಯ ಪುರಸ್ಕಾರ ಪಡೆದು ಪ್ರಥಮ ಶ್ರೇಣಿಯಲ್ಲಿ ಪ್ರತಿಬಿಂಬಿಸಿದ

ಬೊಂಬೇ ಟಾಕಿಸ್‌ನವರ

ಪ್ರತಿಮಾ

ಸ್ವರ್ಣಲತಾ, ದಿಲೀಪ್ ಕುಮಾರ್, ಶಹನವಾಜ್, ಶಿಕವಾಲಾ, ಮುಮುತಾಜ್ ಅಲೀ, ಜ್ಯೋತಿ ಮೊದಲಾದವರು,

ಬರುವ ಚಿತ್ರ,

ಯುನಿವರ್ಸಲ್‌ನವರ

ವರ್ಣಚಿತ್ರ 'ಅರೇಬಿಯನ್ ನೈಟ್ಸ್'

ನೋಟೀಸು

ಪುತ್ತೂರು ಡಿ ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 253/47.

ಪದ್ಮಾವತಿ ಅಂಮಾ—ವಾದಿ

ಮತ್ತು

ಚಂದ್ರ ರಾಜ ಶೆಟ್ಟಿ ಕೂಡಾ 2 ಜನ—ಪ್ರತಿವಾದಿರು.

1ನೇ ಪ್ರತಿವಾದಿ ಚಂದ್ರ ರಾಜ ಶೆಟ್ಟಿ—ಆದಂಣ ಶೆಟ್ರ ಅಳಿಯ—ಪುತ್ತೂರು ತಾಲ್ಲೂಕ ಕಂಬ ಗ್ರಾಮ—ಇವರಿಗೆ.

ಗತಗೇಣಿ ವ ಮುಂದಿನ ಹುಟ್ಟುವಳಿ ಸಮೇತ ಆಸ್ತಿ ಸ್ವಾಧೀನತೆಗೆ ದಾಖಲ್ಲು ಮಾಡಿದ ಮೇಲ್ಕಂಡ ವಾಜ್ಯವು ಇದೇ ಬರುವ ನವಂಬ್ರ ತಾ 12ಕ್ಕೆ ಕಟ್ಟಿರುವ ಪ್ರಯುಕ್ತ ಆಕ್ಷೇಪಗಳಿದ್ರೆ ಆದಿನ್ನ ಬೆಳಿಗ್ಗೆ ಘಂಟೆ 11ಕ್ಕೆ ಮುಜ್ಮಾರು ಕೋರ್ಟಿಗೆ ಹಾಜರಾಗಿ ಜ್ಯಾಹೀರು ಮಾಡತಕ್ಕದ್ದು. ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂಬವಾಗಿ ಈ ಮೂಲಕ ತಿಳಿಸಿಯದೆ.

B. Chidananda Rao,
Vakil for Plff.

ಪುತ್ತೂರು ತಾರೀಕು 20-10-47.

ಸ್ವೀಕಾರ-ವಿಮರ್ಶೆ

೧. **ಕರ್ಮವೀರ**—ಸಂಪುಟ ೧೯, ಸಂ ೪೩. ಇಂದು ಅಖಿಲ ಕರ್ನಾಟಕದಲ್ಲಿ ವಾರ ಪತ್ರಿಕೆಗಳಲ್ಲಿ ಅತ್ಯಗ್ರ ಸ್ಥಾನವನ್ನೇ ಪಡೆದಿರುವ 'ಕರ್ಮವೀರ'ವು ಈ ಸಂಚಿಕೆಯನ್ನು ತನ್ನ ಮೂಲಪ್ರವರ್ತಕರಾದ ಶ್ರೀ ಹುಕ್ಕೇರಿಕರರ ಷಷ್ಠ್ಯಬ್ದ ಪೂರ್ತಿ ಸಂಚಿಕೆಯಾಗಿ ಪ್ರಕಟಿಸುವುದರ ಮೂಲಕ ತನ್ನ ಋಣವನ್ನು ಸ್ಮರಣೆಗೆ ತಂದುಕೊಳ್ಳುವುದರೊಂದಿಗೆ ಆದರ್ಶ ಕರ್ಮಯೋಗಿಯೊಬ್ಬನ ಬಾಳಿನ ಕೂಲಂಕಷ ಪರಿಚಯವನ್ನು ಕನ್ನಡಿಗರಿಗೆಲ್ಲ ಮಾಡಿಕೊಟ್ಟು ಆತನಿಟ್ಟಿರುವ, ಇಡುತ್ತಿರುವ ಹೆಜ್ಜೆಗಳ ರೀತಿಯಲ್ಲಿ ಒಂದೆರಡು ಹೆಜ್ಜೆಗಳನ್ನಾದರೂ ಇಡಬೇಕೆಂಬ ಸ್ಫೂರ್ತಿಯುಂಟಾಗುವಂತೆ ಮಾಡಿರುವುದು ಅಭಿನಂದನೀಯ.

೨. **ಪ್ರಪಂಚ**—ಸಂಪುಟ ೧. ಸಂಚಿಕೆ ೧. ಕ್ರೌನ್ ೧/೪ ಆಕಾರದ ೬೪ ಪುಟಗಳ ಮಾಸಿಕ. ವಾರ್ಷಿಕ ಚಂದಾ ರೂ. ೪. ಸಂಪಾದಕರು ಶ್ರೀ. ಪಿ. ಸರ್ಕಪ್ಪ, ಮಂಗಳೂರು. ಪ್ರಪಂಚದ ಆಗುಹೋಗುಗಳನ್ನು ಪ್ರಪಂಚದವರೆದುರು ನಿರ್ವಂಚನೆಯಿಂದ ಹಾಗೂ ನಿರ್ಭೀತಿಯಿಂದ ತೋರಿಸುವ, ಕಠೋರ ಸತ್ಯವನ್ನು ಆತ್ಮವಂಚನೆ ಮಾಡಿಕೊಳ್ಳದೆ ಯಾವದೊಂದು ಪಕ್ಷದ ಬಾಲಹಿಡಿದು ಮರೆಮಾಚದೆ ಬಹಿರಂಗಪಡಿಸುವ ಧ್ಯೇಯದಿಂದ ಹೊರಟಿರುವ ಹೊಸ ಪತ್ರಿಕೆ. ಧ್ಯೇಯವನ್ನು ಸಾಧಿಸುವ ನಿರ್ದಾಕ್ಷಿಣ್ಯ ನಿರ್ಭೀತಿಗಳ ಲಕ್ಷಣ ಈ ಸಂಚಿಕೆಯಲ್ಲೇ ಕಾಣತೊಡಗಿವೆ. ಉದ್ದೇಶವು ಪರಿಪೂರ್ಣ ಕೈಗೂಡಿ ಬರಲೆಂದು ಹಾರಯಿಕೆ.

೩. **ಪ್ರಕಾಶ**—ಸಂಪುಟ ೧. ಸಂಚಿಕೆ ೧. ಕ್ರೌನ್ ೧/೪ ಆಕಾರದ ೩೬ ಪುಟಗಳ ಮಾಸಿಕ. ವಾರ್ಷಿಕ ಚಂದಾ ರೂ ೩. ಪ್ರಧಾನ ಸಂಪಾದಕರು ಶ್ರೀ. ಉ. ನ್ಯಾಸರಾಯ್, ಉಡುಪಿ. ದೇಶದ ಸ್ವಾತಂತ್ರ್ಯ ಸಂಪ್ರಾಪ್ತಿಯ ಸಂತಸದ ನಡುವೆ ಕನ್ನಡನಾಡಿನ ಮಾತು ಮರೆಯದಂತೆ, ಕರ್ನಾಟಕವು ಆಂಧ್ರ, ತಮಿಳು, ಕೇರಳ, ಮರಾಟ ಆಕ್ರಮಣಗಳಿಗೊಳಗಾಗದೆ ಏಕೀಕೃತವಾಗಿ ಸಂಸ್ಕೃತಿಯನ್ನುಳಿಸಿ ಬೆಳೆಯಿಸಿ ಬೆಳಗಿಸಿಕೊಳ್ಳುವಂತೆ ಜನಜಾಗ್ರತಿಯನ್ನುಂಟು ಮಾಡುವುದರಲ್ಲಿ ಕೈಲಾದ ಸೇವೆಯನ್ನು ಮಾಡುವೆನೆಂಬ ನಮ್ರ ಅಭ್ಯಾಸದಿಂದ ಹೊರಟಿರುವ ಈ ಪತ್ರಿಕೆಯ ಸಂಪಾದಕ ಕೂಟದಲ್ಲಿ ಉತ್ಸಾಹವಿದೆ. ಕನ್ನಡಿಗರು ನೆರವಿತ್ತರೆ 'ಪ್ರಕಾಶ'ದ ಬೆಳಕು ಚೆನ್ನಾಗಿ ಹರಡೀತೆಂಬ ಲಕ್ಷಣ ಕಾಣುತ್ತಿದೆ. ಪತ್ರಿಕೆಯು ಗೆಲುವಿನ ಹಾದಿಯಲ್ಲಿ ಮುನ್ನಡೆಯುವಂತಾಗಲೆಂದು ಹಾರ್ದಿಕ ಆಶಂಸೆ.

೪. **ಉದಯಭಾರತ**—ಡೆಮಿ ೧/೪ ಆಕಾರದ ೧೬ ಪುಟಗಳ ವಾರಪತ್ರಿಕೆಯಾಗಿ ರೂಪಾಂತರ ಹೊಂದಿ ಹೊರಬಂದಿರುವುದು—ವೈಶಿಷ್ಟ್ಯ-ಹಿಂದೂಸಂಘಟನೆಗಾಗಿ ಹೋರಾಟ. ಸಂಪಾದಕರು ಶ್ರೀ. ಅಲೆವೂರು ಶೇಷಪ್ಪಯ್ಯ, ಉಡುಪಿ. ವಾರ್ಷಿಕ ವರ್ಗಣಿ ರೂ ೫-೫-೦ ಮಾಸಿಕವಾಗಿದ್ದ ಈ 'ಉದಯಭಾರತ'ವು ಇಂದು ತನ್ನ ಎಡರು ತೊಡರುಗಳನ್ನು ಹೇಗೂ ನೀಗಿಸಿಕೊಂಡು ವಾರಪತ್ರಿಕೆಯಾಗಿ ಹೊರಟಿರುವುದು ಸಂತೋಷ. ತನ್ನ ಪ್ರಧಾನ ಪೋಷಕರ ಮತ್ತು ಹಿಂದೂ ಮಹಾಸಭೆಯ ಪ್ರಮುಖ ಮುಂದಾಳುಗಳ ಸ್ವರೂಪ ಚಿತ್ರಗಳಿಂದಲೂ ಅವರು ಅನುಗ್ರಹಿಸಿರುವ ಸಂದೇಶಗಳಿಂದಲೂ ಪ್ರಸ್ತುತ ಸಂಚಿಕೆಯು ಅಧಿಕಾಂಶ ತುಂಬಿ ಅಲಂಕೃತವಾಗಿದೆ. ಶ್ರೀ ಶಂಕರನಾರಾಯಣ ಉಪಾಧ್ಯಾಯರ ಲೇಖನವು ಮತಪಂಡಿತರ ಧರ್ಮಾಂಧರ ಕಣ್ಣಿಗೆ ಉತ್ತಮ ಅಂಜನದಂತಿದೆ. 'ಉದಯಭಾರತ'ವು ಹಿಂದೂ ಬಾಂಧವ್ಯ ಸಾಧನೆಯ ಸತ್ಕೀರ್ತಿದಾಯಕವಾದ ಹೃದಯಂಗಮವಾದ ರಂಗಭೂಮಿಯಾಗಿ ತನ್ನ ವೈಶಿಷ್ಟ್ಯವನ್ನು ಸಾಧಿಸುವಂತಾಗಲೆಂದು ಬಯಕೆ.

೫. '**ಶ್ರೀ ಕೃಷ್ಣಸೂಕ್ತಿ**'—ಡೆಮಿ ೧/೪ ಆಕಾರದ ೬೪ ಪುಟಗಳ ಮಾಸಿಕ. ವಾರ್ಷಿಕ ಚಂದಾ ರೂ, ೫-೮-೦. ಸಂಪಾದಕರು ಶ್ರೀ ಎನ್. ರಾಜಗೋಪಾಲಕೃಷ್ಣರಾಯರು, ಸುಮಾರು ಒಂದು ತಲೆಮಾರಿನ ಹಿಂದೆ ಎಂಟುತ್ತು ವರ್ಷಗಳಕಾಲ ಅಖಿಲ ಕರ್ನಾಟಕದಲ್ಲಿ ಶ್ರೇಷ್ಠವರ್ಗದ ಮಾಸಪತ್ರಿಕೆಯೆಂದೆನಿಸಿ ಮೆರೆದು ಮರೆಯಾದ 'ಶ್ರೀ ಕೃಷ್ಣಸೂಕ್ತಿ'ಯನ್ನು ಇಂದು ಅದೇ ಸುಪ್ರಸಿದ್ಧ ಸಂಪಾದಕರು ತಿರುಗಿ ಕನ್ನಡಿಗರ ಕಣ್ಣೆದುರಿಗೆ ತಂದಿದ್ದಾರೆ. ಅದೇ ಆಕಾರ. ಚಂದದ ಅದೇ ನ್ಯಾಕಟ್ಟು. ಔತಣದೂಟ ಪೂರ್ತಿ ಸಿದ್ಧವಾಗದಿದ್ದರೂ ಮದುವಣಿಗನು ಧಾರಾಮಂಟಪಕ್ಕೆ ಬರುವ ಸುಮುಹೂರ್ತ ತಪ್ಪಬಾರದೆಂಬಂತೆಯೋ ಏನೋ 'ಶ್ರೀಕೃಷ್ಣಸೂಕ್ತಿ'ಯನ್ನು ಕನ್ನಡಿಗರ ಕೈಯಲ್ಲಿಡಬೇಕೆಂದು ಅವಸರ ಗೊಂಡಂತೆ ಅಂತರಂಗ ಹೇಳುವಂತಿದೆ. ರಾಯರು ಮುಂದಿನ ಸಂಚಿಕೆಗಳಲ್ಲಿ 'ಶ್ರೀ ಕೃಷ್ಣಸೂಕ್ತಿ'ಯನ್ನು ತನ್ನ ಹಿಂದಿನ ಸಂಪಾದಕತ್ವದ ಕೀರ್ತಿಯ ಮಟ್ಟಕ್ಕೆ ಮುಟ್ಟಿಸಿ ಅದರ ಪ್ರಸಿದ್ಧಿಯನ್ನೂ ತನ್ನ ಪ್ರತಿಷ್ಠೆಯನ್ನೂ ಕಾದುಕೊಳ್ಳುವಂತಾಗಲೆಂದು ಸಂಪ್ರಾರ್ಥನೆ.

೬. '**ಶ್ರೀ ಕೃಷ್ಣಸಂದೇಶ**'—ಸಂಚಿಕೆ ೧೦ ಸಂ. ೧. ಡೆಮಿ ೧/೪ ಆಕಾರದ ೩೨ ಪುಟಗಳ ಮಾಸಿಕ. ವಾರ್ಷಿಕ ಚಂದಾ ರೂ. ೨-೮-೦ ಸಂಪಾದಕರು ಶ್ರೀ. ಮುದ್ರಾಡಿ ಜನಾರ್ದನಾಚಾರ್ಯ, ಶಿರೋಮಣಿ. ಸಂಪಾದಕರ 'ಶಿರ..ಸ್ವರ—ನರ'ಗಳಲ್ಲಿ ಸೇರಿರುವ ಈ ಸಂದೇಶ ಪ್ರಕಾಶನದ ಕಾರ್ಯವು ಅನಿವಾರ್ಯವಾದ ವಿಘ್ನ ಪರಂಪರೆಗಳಿಂದ ಕಳೆದೈದು ವರ್ಷ ನಿಂತು ಹೋಗಿದ್ದರೂ ಅದರ ಚೇತನವನ್ನು ಮರೆಯದೆ ಸಾಧಿಸಿ ಈಗ ಮುಂದೆ ತಂದಿದ್ದಾರೆ. ಧರ್ಮಾಭಿಮಾನಿಗಳು 'ಸಂದೇಶ'ವನ್ನು ಸ್ವಾಗತಿಸಿ ಆಧರಿಸುವಂತಾಗಲಿ!

೭. '**ಅರುಣ**'—ಸಂಪುಟ ೧, ಸಂಚಿಕೆ ೧. ಕ್ರೌನ್ ೧/೪ ಆಕಾರದ ೩೬ ಪುಟಗಳ 'ಪ್ರಗತಿಶೀಲ' ಮಾಸಪತ್ರಿಕೆ ವಾ. ಚಂದಾ ರೂ ೩. ಸಂಪಾದಕರು ಶ್ರೀ ಯು. ಎಸ್. ಶ್ರೀನಿವಾಸ ಭಟ್, ಮಂಗಳೂರು—ಧ್ಯೇಯ—ಸ್ವತಂತ್ರ ಸಮಾಜವಾದ ಏಕೀಕೃತ ಕರ್ನಾಟಕ, ಜನ ಜೀವನವನ್ನು ಹೃದಯಕ್ಕೆ ನಾಟುವಂತೆ ಬರೆಯುವ ಜನತಾಸಾಹಿತ್ಯ, ಪ್ರಗತಿಪರ ಯುಗದಲ್ಲಿ ಮಾನವನ ಬಾಳು ಬೆಳಗಿಸುವ ಆಳಿಸುವ ವಿಜ್ಞಾನ ಸಾಹಿತ್ಯ, ಕೋಟಿಗಟ್ಟಳೆ ಜನಕ್ಕೆ ಅನ್ನ ಬಟ್ಟೆ ಕೊಡುವ ಜೀವಂತಸಾಹಿತ್ಯ, ಇವುಗಳ ಬಗೆಗೆ ದುಡಿಯುವುದು ಧ್ಯೇಯವನ್ನು ಸಾಧಿಸುವ ಲಕ್ಷಣಗಳು ಕಾಣುತ್ತಿವೆ. ಸಂತೋಷ.

ಸಾದರ ಸ್ವೀಕಾರ

ಉಡುಪಿಯ 'ಕಿರಿಯರಪ್ರಪಂಚ'ದ—

೧. 'ಕವಿತಾ ಕಾಮಿನಿ'—ಕವಿ ಶ್ರೀ. ಎಸ್. ವೆಂಕಟರಾಜ್,

೨. 'ಕದಂಬ' ಕಥಾಸಂಗ್ರಹ—ಕಥೆಗಾರ್ತಿ 'ಗಿರಿಬಾಲೆ'

'ಮುಗುಳುನಗೆ' ಬೆಂಗಳೂರು ಶಾರದಾ ಸಾಹಿತ್ಯಮಾಲೆಯ ಆನೇ ಕಿರಣ ನಗೆಬರೆಹಗಳ ಸಂಗ್ರಹ. ಲೇಖಕ ಶ್ರೀ, 'ಜೆಜಿಜ್'— ಇವುಗಳ ವಿಮರ್ಶೆ ಮುಂದಿನ ಸಂಚಿಕೆಗಳಲ್ಲಿ.

(೭ನೇ ಪುಟ ನೋಡಿರಿ)

ಮಂಗಳೂರು

ಮಾನ್ಯ ಮದ್ರಾಸು ಗವರ್ನರರ ಜಿಲ್ಲಾ ಸಂಚಾರ—ಮದ್ರಾಸು ಪ್ರಾಂತದ ಮಾನ್ಯ ಗವರ್ನರರಾದ ಸರ್ ಆರ್ಚಿಬಾಲ್ಡ್ ನೈಯವರು ಸಪತ್ನೀಕರಾಗಿ ಕಳೆದ ತಾ 26ರಲ್ಲಿ ಮಧ್ಯಾಹ್ನ ಮಡಿಕೇರಿಯಿಂದ ಮಂಗಳೂರಿಗೆ ಚಿತ್ತೈಸಿದರು. ಸಂಜೆ ಶ್ರೀ ಕೆ. ಆರ್. ಕಾರಂತ, ಎಮ್. ಎಲ್. ಎ. ಅವರ ಚಹಾ ಸತ್ಕಾರ ಸ್ವೀಕರಿಸಿದರು.

ಕುಲಶೇಖರದಲ್ಲಿರುವ ಗೇರುಬೀಜ ಕಾರ್ಖಾನೆಯನ್ನು ಮಾನ್ಯ ಗವರ್ನರರು ಸಂದರ್ಶಿಸಿದರು. ಕೆಲಸಗಾರರ ಪರಿಸ್ಥಿತಿಯ ಅನುಭವ ಮಾಡಿಕೊಂಡರು. ಅನಂತರ ಕಂಕನಾಡಿಯಲ್ಲಿರುವ ಭತ್ತ ಸಂಶೋಧನಾಲಯವನ್ನು ಸಂದರ್ಶಿಸಿದರು.

ಮರುದಿನ ಗವರ್ನರರ ಪತ್ನಿ ಲೇಡಿ ನೈಯವರು ಕಂಕನಾಡಿಯಲ್ಲಿರುವ ಬಾಲಿಕಾಶ್ರಮವನ್ನು ಸಂದರ್ಶಿಸಿದರು. ಅಂತೆಯೇ ಸೈಂಟ್ ಅಂತೋನಿ ಅನಾಥಾಶ್ರಮವನ್ನು ಸಂದರ್ಶಿಸಿದರು. ಆ ಬಳಿಕ ಹರಿಜನ ಕೊಲನಿಗೆ ಸಂದರ್ಶನವಿತ್ತು ಪ್ರಾಂತೀಯ ವೆಲ್‌ಫೇರ್ ನಿಧಿಯ ಜಿಲ್ಲಾ ಸಮಿತಿಯ ಸಭೆಗೆ ಹಾಜರಾದರು. ಅಲ್ಲಿಂದ ಜೆಪ್ಪುವಿನಲ್ಲಿರುವ ಶಿಶು ಸಂಗೋಪನಾಲಯಕ್ಕೆ ಭೇಟಿಯಿತ್ತರು. 'ಬೇಬಿ ಶೋ'ದಲ್ಲಿ ಭಾಗವಹಿಸಿ ರೆಡ್‌ಕ್ರಾಸ್ ಸಮಿತಿಯ ಸಭೆಯಲ್ಲಿ ಭಾಷಣವಿತ್ತರು.

ಮಾನ್ಯ ಗವರ್ನರರು ಮುಂಡಾಜೆಗೆ ಚಿತ್ತೈಸಿದಾಗ ಶ್ರೀ ಎಮ್. ಎನ್. ಫಡಕೆ ಮೊದಲಾದವರು ಸ್ವಾಗತವಿತ್ತರು. ಅಲ್ಲಿಂದ ಧರ್ಮಸ್ಥಳಕ್ಕೆ ಹೋದಾಗ ಶ್ರೀ ಮಂಜಯ್ಯ ಹೆಗ್ಗಡೆಯವರು ಸುಸ್ವಾಗತವನ್ನಿತ್ತು ಉಪಚರಿಸಿದರು. ಉಜಿರೆ, ಮೂಡಬಿದ್ರೆ, ಕಾರ್ಕಳ ಗೋಮಟೇಶ್ವರನ ದರ್ಶನ ಲಾಭವನ್ನು ಪಡೆದರು.

ಶ್ರೀ ಎಸ್. ಬಾಲಾಜಿರಾವ್ ರೆ| ಡಿ| ಆಫೀಸರ್—ಅವರು ಉತ್ತರ ಅರ್ಕಾಟಿಗೆ ವರ್ಗಾಯಿಸಲ್ಪಟ್ಟು ಅವರ ಸ್ಥಾನಕ್ಕೆ ಶ್ರೀ ಅಬ್ದುಲ್ ರಹಿಮಾನ್ ಸಾಹೇಬರು ನೇಮಕಹೊಂದಿರುವರೆಂದೂ ಪುತ್ತೂರು ರೆ| ಡಿ| ಆಫೀಸರರಾದ ಶ್ರೀ ಸಿಂಹಾದ್ರಿಯವರು ಅನಂತಪುರಕ್ಕೆ ವರ್ಗಾಯಿಸಲ್ಪಟ್ಟು ಅವರ ಸ್ಥಾನಕ್ಕೆ ಶ್ರೀ ಕರಿಯಪ್ಪನವರು ನೇಮಕ ಹೊಂದಿರುವರೆಂದೂ ತಿಳಿದುಬರುತ್ತದೆ.

ಜಿಲ್ಲೆಯಲ್ಲಿ ಬೆಲ್ಲತಯಾರಿಸುವ ಸಹಕಾರಿ ಸಂಘ—ಗಳನ್ನು ಸರಕಾರವು ಸ್ಥಾಪಿಸಿ ಬೆಲ್ಲಮಾಡಲು ಪ್ರೋತ್ಸಾಹಿಸುವ ನಿರ್ಧಾರಮಾಡಿದೆ. ಅದಕ್ಕಾಗಿ ಆ| ಡೆವೆಲಪ್‌ಮೆಂಟ್ ಅಧಿಕಾರಿಗಳು ಜಿಲ್ಲಾ ಬಿಲ್ಲವ ಯೂನಿಯನ್ನಿನ ಓರ್ವ ಪ್ರತಿನಿಧಿಯೊಡನೆ ಜಿಲ್ಲೆಯಲ್ಲಿ ಸಂಚರಿಸುವರು. ಆ ವಿಚಾರವಾಗಿ ಪಟೇಲರು ಆಯಾ ಗ್ರಾಮಗಳಲ್ಲಿ ಪ್ರಚಾರ ಮಾಡುತ್ತಾರೆ. ಈ ಸಂದರ್ಭದಲ್ಲಿ ಪಾನನಿರೋಧ ಶಾಸನದಿಂದ ಸಂಕಷ್ಟಕ್ಕೊಳಗಾದವರು ಬೆಲ್ಲ ಸಿದ್ಧತೆಯ ಸಹಕಾರಿ ಸಂಘಕ್ಕೆ ಮೆಂಬರರಾಗಿ ಸೇರಿ ಬೆಲ್ಲ ಮಾಡಬಹುದು. ಸಹಕಾರಿ ಸಂಘದ ಮೆಂಬರರಾಗಲು ಐದು ರೂಪಾಯಿಯ ಶೇರು ಪಡಕೊಳ್ಳಬೇಕು.

ಅಖಿಲಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ—26ನೆ ವಾರ್ಷಿಕ ಸಮ್ಮೇಳನದ ದಿನಾಚರಣೆಯು ಕಳೆದ ತಾ 31ರಲ್ಲಿ ಸಂಜೆ ಮೈದಾನಿನಲ್ಲಿ ಶ್ರೀ ಎಸ್. ಎನ್ ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ವಿ. ಕಕ್ಕಿಲ್ಲಾಯ, ಸುಬ್ಬಣ್ಣ ಸಟ್ಟಿ ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು.

ಜಿಲ್ಲಾ ಹೊಟೆಲು ಕೆಲಸಗಾರರ ಸಂಘದ—ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಶ್ರೀ ಕೆ. ಎಸ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ನಾಗಪ್ಪ ಆಳ್ವರು ಉದ್ಘಾಟನೆ ಮಾಡಿದರು.

ಉಡುಪಿ.

ಕುಷ್ಠರೋಗ ನಿವಾರಣಾ ಸಂಘ ಸ್ಥಾಪನೆ—ಉಡುಪಿ ಪಟ್ಟಣದಲ್ಲಿ ಹಾಗೂ ಪರಿಸರದಲ್ಲಿರುವ ಕುಷ್ಠರೋಗ, ಸನ್ನಿಪಾತಜ್ವರ, ಕ್ಷಯ ಮೊದಲಾದ ರೋಗಗಳನ್ನು ತಡೆಗಟ್ಟುವರೆ ಉಡುಪಿಯ ಮಹಾಜನ ಸಭೆಯೊಂದು ತಾ. 2ರಲ್ಲಿ ಸಂಜೆ ಮುನಿಸಿಪಲ್ ಮೈನ್ ಶಾಲೆಯಲ್ಲಿ ಮಿ| ಇ. ಗೊನ್ಸಾಲ್ವಿಸ್ ಡಿ| ಮುನ್ಸಿಫ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಲ್ತ್ ಆಫೀಸರ್ ಶ್ರೀ ವೇಣುಗೋಪಾಲರಾಯರು ಸಭೆ ಕರೆದುದರ ಉದ್ದೇಶವನ್ನು ಸೂಚಿಸಿ ಕೈಕೊಳ್ಳಬೇಕಾದ ಕಾರ್ಯಕ್ರಮಗಳೇನೆಂಬುದನ್ನು ವಿವರಿಸಿದರು. ಮುನ್ಸಿಪಲ್ ಹೆಲ್ತ್ ಆಫೀಸರ್ ಡಾ| ಶ್ರೀನಿವಾಸರಾವ್, ಡಾ| ಪಿ. ಜಿ ಆಚಾರ್, ಮೊದಲಾದವರು ಕುಷ್ಠರೋಗದ ಹಾಗೂ ಇತರ ಭಯಂಕರ ರೋಗಗಳ ಕುರಿತು ಭಾಷಣವಿತ್ತರು. ಶಾಲಾ ಮಕ್ಕಳ ವೈದ್ಯಕೀಯ ಪರೀಕ್ಷೆಯ ಅವಶ್ಯಕತೆಯನ್ನು ಸೂಚಿಸಿ ಅಧ್ಯಕ್ಷರ ಭಾಷಣವಾಯಿತು. ಬ್ರಿಟಿಷ್ ಸಾಮ್ರಾಜ್ಯ ಕುಷ್ಠರೋಗ ನಿವಾರಣಾ ಸಂಘದ ಶಾಖೆಯೊಂದನ್ನು ತದನಂತರ ತೆರೆಯಲಾಯಿತು. ಶ್ರೀ. ಪಿ. ಉಪೇಂದ್ರ ನಾಯಕರು (ಮುನಿಸಿಪಲ್ ಚೆಯರ್‌ಮೆನ್) ಈ ಸಮಿತಿಯ ಅಧ್ಯಕ್ಷರು. ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ನಮ್ಮಲ್ಲಿ ಸಿಗುವ ಕೆಲವು ಪುಸ್ತಗಳು

ಮುಡಿಮುದ್ದು	2 0 0	ನಾಡ ಕತೆಗಳು	0 3 0	ಅಂತರಂಗದ ಕತೆಗಳು	0 12 0
ಮಧುವನ	3 0 0	ಕುಶಲವ	C 6 0	ಶಂಭುಕವಧೆ	0 2 0
ಕವಿತಾಕಾಮಿನಿ	2 0 0	ಸುಲಭವಲ್ಲಿ ಇಂಗ್ಲಿಷ್	1 8 0	ವೀರಭೂಮಿ	0 2 0
ಕದಂಬ	1 4 0	ವ್ಯಭಿಚಾರಿಣಿ ಯಾರು	1 0 0	ಧರ್ಮಸಂಕಟ	0 4 0
ಜೀವನಸಂಗ್ರಾಮ	1 8 0	ಹೆಂಡ್ತಿ ಗಂಡನಾದರೆ	0 4 0	ಮೀರಾಬಾಯಿ	0 10 0
ಸಂಶಯ ಪಿಶಾಚಿ	0 8 0	ಸನ್ಯಾಸಿಯ ಸೋಗಿನಲ್ಲಿ	0 8 0	ಸರಸ್ವತಿ	0 12 0
ಕಾವ್ಯಸಾಮ್ರಾಜ್ಯ	1 4 0	ಭಾರತೀಯ ಕತೆಗಳು	0 14 0	ಇಂಗ್ಲಿಷ್ ಕನ್ನಡ	
ಪ್ರೇಮವಿಜಯ	1 0 0	ಮೂರು ಪ್ರಹಸನಗಳು	0 14 0	ನಿಘಂಟು	4 8 0
ಪುರುಷವಧು	0 4 0	ಅನ್ನದೇವರು ಕತೆಗಳು	1 0 0	,, ,, ,,	6 0 0
ನಂದಾದೀಪ	0 14 0	ಭಾರತದಲ್ಲಿ ಜಾತಿಭೇದ	1 0 0	ಸ್ವತಂತ್ರಜೀವನಸೋಪಾನ	
ದೇಶಭಕ್ತ	1 4 0	ಪಂಚಾರತಿ	0 6 0		0 3 0
ರಂಗಭೂಮಿ	0 8 0	ಚಿಗುರು	0 6 0	ವಿಷ್ಣುವಿನ ದಶಾವತಾರ	
ಸೇವಾಪಥ	0 8 0	ಲೋಪಾಮುದ್ರೆ	0 6 0	ಗಳು	0 12 0
ನಾರೀಹೃದಯ	0 14 0	ಪ್ರತೀಕಾರ	0 6 0	ಆಕೃತಿ ಇತ್ಯಾದಿ	
ಪ್ರಕಾಶ	2 4 0	ಪ್ರೇಮಪ್ರವಾಹ	0 8 0	ಕತೆಗಳು	0 12 0
ನಗೆನೋಟಗಳು	0 14 0	ಆರೋಗ್ಯಪ್ರತಾಪ	0 12 0		

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ, ದ. ಕ.



Approved firm by the Govt. of Mysore
Certified by the Agent of the Govt. of C. lone & Indias.

ದಕ್ಷಿಣ ಕನ್ನಡ.

ಪಳ್ಳಿ ರಹಿತ- ಮಹಾತ್ಮಾ ಗಾಂಧಿಯವರು ಹರಿಜನ ಪತ್ರಿಕೆಯಲ್ಲಿ ಆಹಾರ, ವಸ್ತ್ರ, ಇವುಗಳ ಮೇಲಿನ ಕಂಟ್ರೋಲು ತೆಗೆಯಬೇಕೆಂದು ಇತ್ತೀಚೆಗೆ ಒತ್ತಿ ಬರೆದಿರುವರು. ನಮ್ಮ ಸರಕಾರದ ಮುಖ್ಯ ಮಂತ್ರಿಗಳ ಅಭಿಪ್ರಾಯವೂ ಇದಕ್ಕೆ ಅನುಕೂಲವಿದೆಯೆಂದಿರುವುದು. ಸ್ವತಂತ್ರ ಮಾನವರಾಗಿ ಸ್ವಾವಲಂಬಿಗಳಾಗಿ ಇರಲು ಯತ್ನಿಸಬೇಕೆಂಬುದೇ ಗಾಂಧೀಜಿಯವರ ಬೋಧನೆ. "ಚಮ್ಚದಿಂದ ಉಣ್ಣಿಸುವ ರೀತಿ" ಎಂದು ಈಗಿನ ಕಂಟ್ರೋಲು ಪದ್ಧತಿಗೆ ಹೆಸರನ್ನು ಇಟ್ಟಿರುವರು, ಮತ್ತು ಇದರಿಂದ ಬರಗಾಲ ಹೆಚ್ಚುವುದೆಂದೂ ಬರೆದಿರುವರು. ಪಳ್ಳಿಯ ರಹಿತನು ತಾ. 25-9-47ರ ನವಯುಗದಲ್ಲಿ ಕೊಟ್ಟ ಅಭಿಪ್ರಾಯ ಅಲ್ಲಿಗೆ ಮುಟ್ಟಿತೆನ್ನಬಹುದು. ಧನ್ಯ. ಎಷ್ಟರ ಅನ್ಯಾಯವನ್ನು ಸಹಿಸಿಕೊಂಡು ಅತನು ಬೆಳೆಯಿಸಿದ ಅಕ್ಕಿಯನ್ನು ಮೂರು ವರ್ಷಗಳಲ್ಲಿ ಕೊಟ್ಟಿರುವನೆಂದು ಎಲ್ಲರೂ ತಿಳಿಯಬೇಕು. ಅವನ ಅಕ್ಕಿಯನ್ನು ಕೊಡುವಾಗ ವಾಯಿದೆ ತಪ್ಪಿದರೆ ಅದಕ್ಕೆ ರೂ 1 ದಂಡನೆ. ಇದರಲ್ಲಿ ಏನು ಅರ್ಥವಿದೆ? ರಹಿತನು ಎಚ್ಚರವಾಗಲಿರುವನು. ಸರಕಾರದ ಘೋಷಣೆಯು ಯಾವ ರೀತಿ ಮಾರ್ಪಾಟವಾಗಲಿರುವುದೆಂದು ಇನ್ನಾದರೂ ನೋಡುತ್ತಾ ಮುಂದರಿಯಬೇಕು. ಹಸಿಭತ್ತ, ಅಕ್ಕಿಯಿಂದ ತುಪ್ಪಿ ತನ್ನಂತೆ ಬರುವುದು. ಕಡೆಗೆ ಅವರ ಕಷ್ಟ ರಹಿತಗೆ ಬಂದದೆ. ಕಂತುಗಳನ್ನು ಮುಂದರಿಸುವುದು ಅಗತ್ಯ. ಕಂತು ಪ್ರಕಾರದ ಅಕ್ಕಿ ಭತ್ತ ಕಂತುಗಳಿಂದ ಪೂರ್ತ ಕೊಟ್ಟು ಉಳಿಯುವ ಅಕ್ಕಿ ಭತ್ತವನ್ನು ತನ್ನೊಡನೆ ಇಟ್ಟು ಕೊಳ್ಳಲು ಯತ್ನಿಸುವ ರಹಿತನು ಜಾಣನೂ, ಊಹಿತ ಚಿಂತಕನೂ ಆಗಲಾರನೇ? ಇದೀಗ ರಹಿತನಲ್ಲಾಗುವ ಅಭಿಪ್ರಾಯ.

ಮೂಡು ಪ್ರಾಂತದಲ್ಲಿ ಕೃಷಿಗೆ ಉಪಯುಕ್ತವಾದ 20,000 ಎಕ್ರೆ ಭೂಮಿಯನ್ನು ಸಾಗುವಳಿಗೆ ತರುವ ಪ್ರಯತ್ನವಿಡಬೇಕೆಂದು ಜಿಲ್ಲಾ ಅಭಿವೃದ್ಧಿ ಸಂಘವು ಇತ್ತೀಚೆಗೆ ನಿರ್ಣಯಿಸಿಕೊಂಡಿದೆ. ಮೂಡು ಪ್ರಾಂತ್ಯಕ್ಕೆ ಹೋಗಬೇಕೇ? ನಮ್ಮ ನಡುವೆ ಎಷ್ಟು ಬಂಜರು ಭೂಮಿಯಿಲ್ಲ? ಅನೇಕುಣ್ಣು ತೆಗೆದ ಹಾಳುಬಿದ್ದ ಉತ್ತಮ ಸ್ಥಳಗಳಿಲ್ಲ? ರೈಲ್ವೇ ಬದಿ ಬಹು ವರ್ಷಗಳಿಂದ ಉತ್ಪತ್ತಿಯಿಲ್ಲದ ಗದ್ದೆಗಾಲುಗಳಿಲ್ಲ? ಇವನ್ನೇಕೆ ಬೇಗನೆ ಸಾಗುವಳಿಗೆ ತರಬಾರದು? ಕಮ್ಯೂನಿಸ್ಟ್ ಸ್ನೇಹಿತರ ಆಹಾರ ಸಮ್ಮೇಳನವು ತಾ 14-11-47ಕ್ಕೆ ಇರುವುದಾಗಿ ತಿಳಿದು ಬರುತ್ತಿದೆ. ಈ ವಿಷಯವನ್ನು ಅವರ ಅವಗಾಹನೆಗೆ ತರಬಹುದೇ?

ಎಮ್. ಆರ್. ಪುಂಜ

ಕಾರ್ಯದರ್ಶಿ, ಗ್ರಾಮಾಭಿವೃದ್ಧಿ ಕಮಿಟಿ,

31-10-47 ಮೂಲ್ಕಿ

ಬೊಂಬಾಯಿ- ತಾ. 24-10-1947ರಲ್ಲು ಶ್ರೀ ಭಗವತಿ ನೃತ್ಯಕಲಾ ಮಂದಿರದಲ್ಲಿ ಶ್ರೀ ಶಾರದಾ ಪೂಜೆಯೂ ದಸರಾ ಮಹೋತ್ಸವವೂ ಮಂದಿರದ ಸ್ಥಾಪಕರಾದ ಶ್ರೀ ಎ. ಎತಪ್ಪ ಭಂಡಾರಮನೆ ಇವರ ನೇತೃತ್ವದಲ್ಲಿ ಗಾಯನಮಾಸ್ಟರ್ ಶ್ರೀ ಡಿ. ಎಸ್. ಆನೂಸ್‌ಗಳವರ ಮತ್ತು ತಬ್ಲಾ ಮಾಸ್ಟರ್ ಶ್ರೀ ಭಾಸ್ಕರ್ ರಾವ್ ಬೋಳಾರ್‌ಗಳವರ ಶಿಷ್ಯರಾದ ಎ. ಕೃಷ್ಣಪ್ಪ ಮತ್ತು ಎ. ರಾಮಚಂದ್ರರ ಗಾಯನವೂ ಶ್ರೀ ಸತ್ಯಾನಂದ ಬೋಳಾರ್‌ಗಳವರ ಪಿಟೀಲು ವಾದನವೂ ಶ್ರೀ ಕೆ. ಎಸ್. ಸೆಟ್ಟಿಗಳವರ ದಿಲ್‌ರುಬವೂ ಶ್ರೀ ಪದ್ಮನಾಭ ಬೋಳಾರ್‌ಗಳವರ ತಬ್ಲಾ ವಾದನವೂ ಸಭಿಕರಲ್ಲಿ ಶ್ರೀಗಳಾದ ಭುಜಂಗ ಸೆಟ್ಟಿ ಬೋಳಾರ್, ಲಿಂಗಪ್ಪ ಕಾಂಚನ್, ಮೋಹನ್ ಸಾಲ್ಯಾನ್, ನಾರಾಯಣ ಸುವರ್ಣ, ಡಿ. ಆರ್. ಕೋಟ್ಯಾನ್, ಹೊಯಿಗೆ ತಿಮ್ಮಪ್ಪನವರ ಗಾಯನವೂ ನಡೆಯಿತು.

ಮದ್ರಾಸು

ಕರ್ನಾಟಕ ಸೇನಾ ಸಂಘ- ಈ ಸಂಘದ ಆಶ್ರಯದಲ್ಲಿ ತಾ 25-10-47ರಲ್ಲಿ "ರಾಸನೇ ಹಾಲ್"ನಲ್ಲಿ ಕರ್ನಾಟಕದ ಖ್ಯಾತಿವೆತ್ತ ಕವಿಗಳಾದ, ಅಂಬಿಕಾತನಯದತ್ತ ಶ್ರೀ ಬೇಂದ್ರೆ ಇವರು 'ಲಕ್ಷ್ಮೀ ಕವಿ'ಯ ಜೈಮಿನಿ ಭಾರತದ ಕುರಿತು ದೀರ್ಘ ಭಾಷಣವಿತ್ತರು. ಜೈಮಿನಿ ಭಾರತದಲಿಯ ಕಥಾ ಭಾಗದಲ್ಲಿ ಬರುವ ಅರ್ಜುನ, ಪ್ರಮೀಳೆ, ಚಂದ್ರಹಾಸ, ಬಭ್ರುವಾಹನರೇ ಮೊದಲಾದ ನಾಯಕರಿಂದ ಅನುಭವಕ್ಕೆ ಬರುವ ವಿವೇಕ.. ಕರ್ತವ್ಯಗಳನ್ನು ವಿಮರ್ಶಾ ಪೂರ್ವಕ ತಿಳಿಯಪಡಿಸಿದುದಲ್ಲದೆ "ಇಂತಹ ಉತ್ತಮ ಗ್ರಂಥವಾದ ಜೈಮಿನಿ ಭಾರತವನ್ನು ಕನ್ನಡಿಗರು ಮನೆ ಮನೆಯಲ್ಲಿ 'ತಮ್ಮ ಗ್ರಂಥ' ಎಂದು, ನಮ್ಮ ಜೀವನದ ಹಾದಿಗೆ ಬೆಳಕು ತೋರಿಸುವಂತೆ ಈ ಭಾರತವನ್ನು ಪೂಜಿಸಬೇಕು.. ಕನ್ನಡತನವನ್ನು ಕಾಪಾಡಬೇಕು. ನಮ್ಮ ಪುಸ್ತಕಗಳನ್ನು ನಾವು ಉಪಯೋಗಿಸದೆ ಮತ್ತಾರು ಉಪಯೋಗಿಸಬೇಕು?" ಎಂಬಿ ತ್ಯಾದಿಯಾಗಿ ಹೇಳಿದರು.

ಕರ್ನಾಟಕ ಸಂಸ್ಕರಣದ ವಿಷಯವಾಗಿ ಮಾತನಾಡುತ್ತಾ "ಮದ್ರಾಸಿನಲ್ಲಿ ಅನೇಕ ಭಾಷೆಗಳ ಸೋದರರು ಇದ್ದಾರೆ. ಇನ್ನೊಬ್ಬರ ಮನೆ ಮುರಿದು ನಮ್ಮ ಮನೆ ಕಟ್ಟುವ ಜಾಣತನ ಯಾರೂ ತೋರಿಸಬಾರದು. ಕರ್ನಾಟಕ, ಕೇರಳ, ತಮಿಳು, ತೆಲುಗು ಬೇರೆ ಬೇರೆಯಾಗಿ ಸೋದರರಾಗಿ ತಮ್ಮ ಭಾಷೆ, ತಮ್ಮ ಸಂಸ್ಕೃತಿ ಕಾಪಾಡಬೇಕು" ಎಂಬಿತ್ಯಾದಿಯಾಗಿ ಒತ್ತಿಹೇಳಿದರು. ಸಭೆಯಲ್ಲಿ ಕೇರಳ ತಮಿಳು. ತೆಲುಗು ಸೋದರರೂ ನೆರೆದಿದ್ದರು.

ಬಳಿಕ ಶ್ರೀ ಬೇಂದ್ರೆಯವರು ತಮ್ಮ ಅನೇಕ ಕವನಗಳನ್ನು ಹಾಡಿ ವಿಮರ್ಶಾ ಪೂರ್ವಕ ಅರ್ಥವನ್ನು ತಿಳಿಸಿದರು.

ಸಭೆಗೆ ಶ್ರೀ ಬಿ. ಜೂಗಪ್ಪ ಎಂ. ಎ. ಇವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಶ್ರೀ ಕೃಂತಜೆ ಗೋವಿಂದ ಭಟ್ ಬಿ. ಎ. ಬಿ. ಎಲ್. ಇವರು ಶ್ರೀ|| ಬೇಂದ್ರೆಯವರ ಪರಿಚಯ ಮಾಡಿಕೊಟ್ಟರು.

ಶ್ರೀ|| ಬಳ್ಳಾರಿ ಹನುಮಂತಾಚಾರ್ಯ ಇವರ ಹಿಂದುಸ್ಥಾನೀ ಸಂಗೀತ ಕಛೇರಿಯು ಬಲು ಇಂಪಾಗಿತ್ತು.

ಕಡೆಯವಾಗಿ ಶ್ರೀ|| ವಿ. ಈಶ್ವರ ಭಟ್ಟರು ಎಲ್ಲರಿಗೂ ಧನ್ಯವಾದಗಳನ್ನರ್ಪಿಸಿ ಸಂಘದ ಕಟ್ಟಡಕ್ಕಾಗಿ ಶ್ರೀ|| ಬಿ. ಅಂಜಾಜಿ ರಾಯರು ಸಂಘಕ್ಕೆ ಉಚಿತವಾಗಿ ಕೊಟ್ಟ 'ನಾಲ್ಕು ಗ್ರೌಂಡು' ನೆಲದಲ್ಲಿ ಕೂಡಲೇ ಕಟ್ಟಡ ಕಟ್ಟಿಸುವ ಕಾರ್ಯಾರಂಭ ಮಾಡಬೇಕಾಗಿರುವುದರಿಂದ ಕನ್ನಡಿಗರೆಲ್ಲರೂ ತಮ್ಮ ಹೃತ್ಪೂರ್ವಕ ಸಹಾಯಗಳನ್ನು ಮಾಡಬೇಕೆಂದು ಕೇಳಿಕೊಂಡರು. ಕನ್ನಡಿಗರ ಸೌಕರ್ಯಕ್ಕಂತೆ ನಾಲ್ಕೈದು ಕೇಂದ್ರಗಳಲ್ಲಿಯಾದರೂ ಕನ್ನಡ ಕಾರ್ಯಕ್ರಮವನ್ನು ನಡೆಸಲು ನಗರದ ಆಯಾ ಭಾಗಗಳಲ್ಲಿ ಸಂಘದ ಶಾಖೆಗಳನ್ನು ತೆರೆಯಲು ಕನ್ನಡಿಗರು ನೆರವೀಯಬೇಕೆಂದು ಕೇಳಿಕೊಂಡರು.

ಕಂಟ್ರೋಲ ನಿಯಂತ್ರಣ ವಿರೋಧಿ ದಿನಾಚರಣೆ—ಅನ್ನ ಧಾನ್ಯ ನಿಯಂತ್ರಣಗಳನ್ನು ತೆಗೆಯಲು ಮಹಾತ್ಮಾಜಿಯವರು ಬೆಂಬಲ ಕೊಟ್ಟಿರುವರು. ದಿಲ್ಲಿಯ ಗ್ರಾಮ ಸಂಸ್ಥೆಗಳು ಪ್ರೊ. ರಂಗಾ ಇವರ ಅಧ್ಯಕ್ಷತೆಯಲ್ಲಿ ಜರುಗಿಸಿದ ಸಭೆಯಲ್ಲಿ ಎಲ್ಲ ಕಂಟ್ರೋಲುಗಳನ್ನು ತೆಗೆದು ಒಗೆಯಲು ಒಮ್ಮತದಿಂದ ಗೊತ್ತುಪಡಿಸಿ ತಾ. ೭ ನವ್ಹಂಬರ ನೇ ದಿನವನ್ನು ಕಂಟ್ರೋಲ ವಿರೋಧಿ ದಿನವನ್ನು ಆಚರಿಸಿ ಪರತಾಳ ಪಾಲಿಸಿ ಜಾಹೀರ ಸಭೆಗಳನ್ನು ಕೂಡಿಸಿ ಕಂಟ್ರೋಲಗಳನ್ನು ತೆಗೆಯುವ ಗೊತ್ತುವಳಿಗಳನ್ನು ಪಾಸ್‌ಮಾಡಿ ಮಹಾತ್ಮಾ ಗಾಂಧಿ, ಮಧ್ಯವರ್ತಿ ಸರಕಾರಗಳಿಗೆ ತಂತಿಯಿಂದ ತಿಳಿಸಬೇಕೆಂದು ನಿಶ್ಚಯಿಸಿದ್ದಾರೆ. ಆದರಂತೆ ತಾವು ಎಲ್ಲರೂ ತಾ. ೭ ನವ್ಹಂಬರ ೪೭ನೇ ದಿವಸ ಕಂಟ್ರೋಲ ನಿಯಂತ್ರಣ ವಿರೋಧ ದಿನವೆಂದು ಆಚರಿಸಿ ಮೇಲೆ ನಂತೆ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿ ವಿನಂತಿ.

ಮಧ್ವಾಚಾರ್ಯ ಹುಕ್ಕೇರಿಕರ

ಹುಕ್ಕೇರಿ ತಾ. ೩೧.೧೦.೪೭

NOTICE.

In the Court of the Subordinate Judge of South Kanara.

R. E. P. No. 170/1947
(in O. S. No. 3/1929).

P. R. Thimmappa Punja & others—Petitioners.
Vs.
Bermu Shetty & another.
—Respondents.

To
Respondents: 1. Bermu Shetty. 2. Lakkanna Shetty—Nephews of Bakrabail Ramaya Bhandary, residing in Bakrabail of Pathur Village, Kasargod Taluk.

Please take notice that the petitioners have made the said application for execution of decree in the above suit and that you are to appear before the said Court at 11 A. M. on 14-11-1947 to show cause why execution should not be granted and why you should not be arrested and committed to civil prison.

B. Vaikunta Baliga,
Vakil for Petitioners.
Mangalore, 17-10-947.

ಕವಿತಾಕಾಮಿನಿ ಕನಸಿಲಿ ಬಂದು। ಕರೆವಳು ಕುಣಿಯಲಿಕೆ||
ಚೆಲುಕಾಲಂಬುಗೆ ಕಿಣಿಕಿಣಿರೆನೆ ನಗೆ। ಯೊಪ್ಪಿಸಿ ಕುಣಿಯಲಿಕೆ||

ಮುಂದೆ?

ನಾಡಿನ ಪ್ರಸಿದ್ಧ ಕವಿ ಯಸ್. ವೆಂಕಟರಾಜರಿಂದ ಬರೆಯಲ್ಪಟ್ಟು
ಪ್ರಸಿದ್ಧ ಪ್ರಕಾಶಕರಾದ ಕಿರಿಯರ ಪ್ರಪಂಚದವರಿಂದ ಪ್ರಕಟಿಸಲ್ಪಟ್ಟ

ಕವಿತಾಕಾಮಿನಿ

ಎಂಬ ಈಗ ತಾನೆ ಹೊರಬಿದ್ದಿರುವ ಪುಸ್ತಕವನ್ನೋದಿರಿ.

ಓದಿದಂತೆ ಮೋದಗೊಳಿಸಿ ಕುಣಿಕುಣಿಸುವ ಕವನಗಳ ಕಟ್ಟು!
ನೋಡಿದಂತೆ ಕಣ್ಮನಗಳನ್ನು ತಣಿತಣಿಸುವ ಚಿತ್ರಕಟ್ಟು!!

ಈ ಪುಸ್ತಕಗಳೂ ಕಿರಿಯರ ಪ್ರಪಂಚದ ಇತರ ಪ್ರಕಟಣೆಗಳೂ ಸಿಗುವ ಸ್ಥಳಗಳು:-
೧ ನವಭಾರತ ಬುಕ್ ಡಿಪೊ, ಉಡುಪಿ. ೨ ಸ್ಕೂಲ್ ಬುಕ್ ಕಂಪೆನಿ, ಮಂಗಳೂರು ೩ ಎಂ. ಯಸ್. ಮಯ್ಯ, ಪುತ್ತೂರು. ೪ ಯಚ್. ಎನ್. ರಾವ್ ಬ್ರದರ್ಸ್ ಬೆಂಗಳೂರು ಸಿಟಿ. ೫ ಯು. ಆರ್. ಶೆಣೈ ಯಂಡ್ ಸನ್ಸ್, ಮಂಗಳೂರು. ೬ ಜಯಂತ್ ಏಜನ್ಸಿ, ಸಿದ್ದಾಪುರ. ೭ ಸತ್ಯಶೋಧಕ ಪುಸ್ತಕ ಭಂಡಾರ, ಬೆಂಗಳೂರು ಸಿಟಿ. ೮ ಮನೋಹರ ಗ್ರಂಥ ಭಂಡಾರ, ಧಾರವಾಡ. ೯ ವಾಗ್ವಿಲಾಸ ಬುಕ್ ಡಿಪೊ, ಮುಲ್ಕಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿತಪ್ಪಿ ಋತುಸ್ರಾವವಾಗುವುದು ಪತೋಬಿನ ಬರುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8/- [ವಿ. ಪಿ. ಖರ್ಚು ಪ್ರತ್ಯೇಕ]

Mrs P. DEVEE, F. Ds. (N. J.)
Tollygung e CALCUTTA.
ಸ್ಟಾಕಿಸ್ಟರು: ಕಹಾಕಂಪೆನಿ, ಮಂಗಳೂರು

ಚಂದಾದಾರರಲ್ಲಿ

ನವಯುಗದ ಚಂದಾಹಣ ಬಾಕಿ ಇರುವ ಚಂದಾದಾರರೆಲ್ಲರೂ ತಮ್ಮ ಬಾಕಿಯನ್ನೂ ಹಾಲಿ ವರ್ಷದ ಚಂದಾಹಣವನ್ನೂ ದಯವಿಟ್ಟು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಅಪೇಕ್ಷಿಸುತ್ತೇವೆ. ಸಕಾಲದಲ್ಲಿ ಹಣ ಅಥವಾ ಯಾವ ತರದ ಉತ್ತರವೂ ಬಾರದಿದ್ದರೆ ಮುಂದಿನ ಸಂಚಿಕೆಯನ್ನು ವಿ. ಪಿ. ಮಾಡುತ್ತೇವೆ. ಅದನ್ನು ಪ್ರತಿಯೊಬ್ಬರೂ ಸ್ವೀಕರಿಸಬೇಕಾಗಿ ವಿನಂತಿ.

— ಮೆನೇಜರ್

ದಕ್ಷಿಣ ಕನ್ನಡ

ನಿಡ್ಪೋಡಿ—ತಾ. 23-10-47ರಲ್ಲಿ ಇಲ್ಲಿಗೆ ಚಿತ್ತೈಸಿದ್ದ ಮಾನ್ಯ ಮದ್ರಾಸ್ ಪ್ರಾಂತ್ಯದ ಸ್ಥಾನಿಕ ಮಂತ್ರಿ ಚಂಪ್ರಮೌಳಿಯವರನ್ನು ಸ್ಥಳೀಯ ಪಂಚಾಯತ್ ಬೋರ್ಡ್ ಸಂಸ್ಥೆಯವರು ಅಧ್ಯಕ್ಷ ಶ್ರೀ ಎಸ್. ನಾರಾಯಣ ಶೆಟ್ಟಿ ಮುಂದಾಳುತ್ವದಿಂದ ಅಭೂತಪೂರ್ವಕವಾಗಿ ಸ್ವಾಗತೀಕರಿಸಿದರು. ಬೋರ್ಡಿನ ಪರವಾಗಿ, ಶ್ರೀ. ಕೆ. ಶಿವರಾಮ ಹೆಗ್ಡೆಯವರೂ, ಸರಕಾರ ಸ್ಕೂಲಿನ ಪರವಾಗಿ ಶ್ರೀ. ಶ್ರೀಧರ ಪಡಿವಾಳರೂ ಮಾನಪತ್ರಗಳನ್ನು ಅರ್ಪಿಸಿದ ಬಳಿಕ, ಈ ಎರಡೂ ಸಂಸ್ಥೆಗಳ ಬೇಡಿಕೆಗಳಿಗೆ ಮನ್ನಣೆಯನ್ನು ಕೊಡುತ್ತಾ ಮಾನ್ಯ ಮಂತ್ರಿಗಳು ಉತ್ತರವಿತ್ತರು.

ಇನ್ನಂಜೆ—ಶ್ರೀ ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲಿನ ಸ್ಥಾಪಕರಾದ ಶ್ರೀ ಶ್ರೀ ಸತ್ಯೇಂದ್ರ ತೀರ್ಥ ಶ್ರೀಪಾದಂಗಳವರ ದಿನಾಚರಣೆಯು ತಾ. 26-10-47ರಲ್ಲಿ ಭಂಡಾರಕೇರಿ ಮಠಾಧೀಶರಾದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಉಡುಪಿಯ ಪೇಜಾವರ ಮಠಾಧೀಶರಾದ ಶ್ರೀ ಶ್ರೀವಿಶ್ವೇಶ ತೀರ್ಥ ಶ್ರೀಪಾದಂಗಳವರ ಸಮ್ಮುಖದಲ್ಲಿ ಜರಗಿತು. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಉಪಾಹಾರವಾದ ಬಳಿಕ ಶ್ರೀ ಮಾನ್ ಶ್ರೀನಿವಾಸ ಪುತ್ತಂತಾಯರು ಸ್ವಾಗತ ಭಾಷಣವನ್ನು ಮಾಡಿದರು. ಶ್ರೀ. ಪಿ. ಮಾಧವ ತಂತ್ರಿಗಳು ಸ್ಥಾಪಕರ ಜೀವನ ಚರಿತ್ರೆಯನ್ನು ಕಥನ ಮಾಡಿದರು. ಪರದಿವಾಚನವಾದ ತರುವಾಯ ಸಭಿಕರಲ್ಲಿ ನೇಕರು ಸಂದರ್ಭೋಚಿತ ಭಾಷಣಗಳನ್ನು ಮಾಡಿದರು. ಅಧ್ಯಕ್ಷರು ಸ್ಥಾಪಕರ ಮತ್ತು ಶಾಲೆಯ ಮಹತ್ವವನ್ನು ವಿವರಿಸಿ ಭಾಷಣ ಮಾಡಲಾಗಿ

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 291/1947 R. I. A. 1590/'47

ವಾದಿ—ಗೋಪಾಲ ಕಾರಂತ. ಸುಬ್ರಾಯ ಕಾರಂತರ ಮಗ, ಕಿರುಮುನೀಶ್ವರ ಗ್ರಾಮಸ್ಥ.

ಪ್ರತಿವಾದಿರು—1 ಕೃಷ್ಣ ದೇವಾಡಿಗ, ಕರೀಹನ ಮನೆ ಶೀರನ ಅಳಿಯ, 2 ದೇವಿ ಹೆಂಗಸು 3 ಅಕ್ಕಂಮ ಹೆಂಗಸು-1ನೇ ಪ್ರತಿವಾದಿಯ ಸೊಸೆಯಂದಿರು. 4 ಚಂಸಂಮ ಹೆಂಗಸು, ಸುಬ್ಬಿ ಹೆಂಗ್ಸಿನ ಮಗಳು 5 ಗೋವಿಂದ 3ನೆ ಪ್ರತಿವಾದಿಳ ಮಗ, 6 ಪುಟ್ಟ ನಾಯ್ಕ, ಆಕಳಬೈಲು ಪಡುಮನೆ ಕಾವೇರಿ ಹೆಂಗ್ಸಿನ ಮಗ. ಕಿರುಮುನೀಶ್ವರ ಗ್ರಾಮಸ್ಥರು.

1ರಿಂದ 5ನೆ ವರೆಗಿನ ಪ್ರತಿವಾದಿರ ಕುಟುಂಬದಿಂದ ಅವುಗಳ ಹಣಗಳು ಗೇಣಿಗಳು ವಗೈರೆ ಸಾಲಗಳು ಸಲುವಾಗಿ ವಾದಿ ವಗೈರೆ ಸಾಲಗಾರರಿಗೆ ಮೋಸ ಮಾಡುವ ಯಿರಾದೆಯಿಂದ 1-2-3-5ನೆ ಪ್ರತಿವಾದಿರು 6ನೆ ಪ್ರತಿವಾದಿಯ ಹೆಸರಿನಲ್ಲಿ ಮಾಡಿದ ತಾ. 9-10-36ನೆ ಮೂಲಗೇಣಿ ವ ತಾ. 28-12-45ನೆ ... ಕ್ರಯದಸ್ತೈವಜು ಕೂಡಾ ಸದ್ರಿ ಸಾಲಗಾರರ ಮೇಲೆ ಬದ್ಧವಾದ್ದಲ್ಲವೆಂತ ಡಿಕ್ಲರೇಶನ್ ವಗೈರೆ ಕೇಳಿ ತಂದ ಸದ್ರಿ ದಾವೆಯಂತೆ ಸದ್ರಿ ಎಲ್ಲಾ ಸಾಲಗಾರರ ಕಡೆಯಿಂದ ಸದ್ರಿ ದಾವಾ ಮಾಡುವರೆ ವಾದಿಯು ತನಗೆ ಪರ್ಮಿಶನ್ ಕೊಡಬೇಕಾಗಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಖು 13-11-1947ಕ್ಕೆ ತನಿಖೆ ಯಿಟ್ಟದರಿಂದ ಆ ಬಾಬಿನಲ್ಲಿ ಯಾರದ್ದಾದರೂ ಆಕ್ಷೇಪಣೆಯಿದ್ದ ಪಕ್ಷಕ್ಕೆ ಸದ್ರಿ ತಾರೀಕಿನ ದಿವಸ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸಲಾಗುತ್ತದೆ.

B Padmanabha Holla
Advocate for plaintiff

ತಾರೀಖು 31-10-47 ನೆಯ ಕುಂದಾಪುರ

ಮುಖ್ಯೋಪಾಧ್ಯಾಯರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ದಕ್ಷಿಣ ಕನ್ನಡ ವಿದ್ಯಾರ್ಥಿ ಕಾಂಗ್ರೆಸ್—ಇದೇ ನವಂಬರ 9ನೇ ಆದಿತ್ಯವಾರ ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿ ಕಾಂಗ್ರೆಸ್ಸಿನ ಸಮ್ಮೇಳನವು (Convention) ಕಾರ್ಕಳದಲ್ಲಿ ಜರಗಲಿರುವುದು. ಶ್ರೀ ಕೋಟ ಶಿವರಾಮ ಕಾರಂತರು ಅಧ್ಯಕ್ಷತೆ ವಹಿಸಲಿರುವರು. ಬೆಳಿಗ್ಗೆ ಪ್ರಭಾತಫೇರಿ, ಧ್ವಜವಂದನೆಯಾದ ನಂತರ ವಿಷಯ ನಿಯಾಮಕ ಸಮಿತಿ ಸಭೆ ಸಂಜೆ ಬಹಿರಂಗ ಅಧಿವೇಶನ, ವಿವಿಧ ವಿನೋದಾವಳಿ ಇತ್ಯಾದಿ ಕಾರ್ಯಕ್ರಮಗಳಿವೆ.

ಮೂಲ್ಕಿ ಗ್ರಾಮಾಭಿವೃದ್ಧಿ (ಮದ್ಯ, ಕಾಫಿ, ಚಾ ಪಾನ)—ತಾ 19-10-47ರ ಹರಿಜನ ಪತ್ರಿಕೆಯ 375ನೆಯ ಪಾನಿನಲ್ಲಿ ಶ್ರೀ. ಜೆ. ಸಿ. ಕುಮಾರಪ್ಪನವರು (ಇವರ ಪರಿಚಯ ಎಲ್ಲವರಿಗೂ ಇರಬಹುದು) 'ಒಂದು ವಿಷಪಾನದ ಬದಲು ಇನ್ನೊಂದು' ಎಂಬ ಲೇಖನ ಬರೆದಿರುವರು. ಮದ್ರಾಸು ಸರಕಾರವು ಮದ್ಯಪಾನ ನಿಷೇಧವನ್ನು ಛಲದಿಂದ ಸಾಗಿಸುತ್ತಿರುವುದಾದರೂ, ಸ್ವಲ್ಪ ಮಟ್ಟಿಗೆ ಮಾತ್ರ ಸಾಧುವಾದ ಚಾ, ಕಾಫಿ, ಪಾನವನ್ನು ಮುಂದೊತ್ತುತ್ತಿರುವುದು ಸರಿಯಲ್ಲ ಎನ್ನುವರು. ಹಿತಕರವಾದ ಮಜ್ಜಿಗೆ ನೀರು, ಪಾನಕವನ್ನು ಕುಡಿಯುವುದೇ ದೇಹಾರೋಗ್ಯಕ್ಕೆ ಸುಖಕರವೆನ್ನುವರು.

ತಾ 1-10-47ರಲ್ಲಿ ಮದ್ಯಪಾನ ನಿಷೇಧ ಉದ್ಘಾಟನೆ ಮಾಡುವಾಗ ಮೂಲ್ಕಿ ಗ್ರಾಮಾಭಿವೃದ್ಧಿ ಕಮಿಟಿಯವರು ಮಜ್ಜಿಗೆ ಮತ್ತು ಬೆಲ್ಲನೀರನ್ನು ಸಭೆಯಲ್ಲಿ ಎಲ್ಲವರಿಗೂ ಹಂಚಿಕೊಟ್ಟರು. ಇದೇ ಹಿತವಿದ್ದು, ಸುಲಭದಲ್ಲಿ ದೊರಕಲಿರುವಾಗ ಇನ್ನಾವ ಪಾನ ಏಕೆ? ಗ್ರಾಮಾಭಿವೃದ್ಧಿ ಕಮಿಟಿಯು, ತನ್ನ ಮನೆಯ ಎರಡು ಫಾಸಿಲೆಯೊಳಗಿನ ಚಾ, ಕಾಫಿ, ಹೊಟೇಲುಗಳಲ್ಲಿ ಹೋಗಿ ಚಾ, ಕಾಫಿ, ಕುಡಿಯಬಾರದಾಗಿ ಕಳದ ವರ್ಷವೇ ನಿರ್ಣಯ ಮಾಡಿಕೊಂಡಿತ್ತು. ಆದರೆ ಹೊಟೇಲುಗಳ ಸಂಖ್ಯೆ ಹೆಚ್ಚಬರುವಂತಿದೆ ಕಮಿಟಿಯ ಮೆಂಬರರೆಲ್ಲರೂ ನಿರ್ಣಯವನ್ನು ಮರೆಯದೆ ಎಲ್ಲವರು ಪಾಲಿಸುವಂತೆ ನೋಡಿಕೊಳ್ಳಬೇಕೆಂದು ಈ ಮೂಲಕ ಬರಕೊಳ್ಳಬೇಕೇ? ನಮ್ಮ ಗ್ರಾಮಾಭಿವೃದ್ಧಿ ಕೆಲಸವು ಶ್ಲಾಘನೆಗೆ ಪಾತ್ರವಾಗಬೇಕೆನ್ನುವಾಗ ನಾವು ಎಚ್ಚರವಾಗಿರಬೇಕಾಗಿದೆ.

ಎಮ್. ಆರ್. ಪೂಂಜ
ಕಾರ್ಯದರ್ಶಿ ಗ್ರಾಮಾಭಿವೃದ್ಧಿ ಕಮಿಟಿ
31-10-47 ಮೂಲ್ಕಿ

ಕಟಪಾಡಿ—ಇಲ್ಲಿಯ ಬ್ರಹ್ಮಶ್ರೀ ನಾರಾಯಣಗುರುಸ್ವಾಮಿ ಸೇವಾ ಸಮಿತಿಯ ವಾರ್ಷಿಕ ಮಹಾಸಭೆಯು ತಾ. 26-10-47ರಲ್ಲಿ ಸಮಿತಿಯ ಅಧ್ಯಕ್ಷ ಶ್ರೀ ಗುಜ್ಜೆ ಮುಣ್ಣ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿ ಗತ ವರುಷದ ವರದಿ ಮಂಜೂರಾತಿಯಾದುದಲ್ಲದೆ ಚಾಲ್ತಿ ವರ್ಷದ ಅಂದಾಜು ಬಜೆಟನ್ನು ನಿರ್ಣಯಿಸಿದ ಬಳಿಕ ಪ್ರಚಲಿತ ವರ್ಷದ ಕಾರ್ಯಕಾರೀ ಮಂಡಳಿಯನ್ನು ಈ ಕೆಳಗಿನಂತೆ ಚುನಾಯಿಸಲಾಯಿತು. ಶ್ರೀಗಳಾದ ಮೂಳೂರು ಕುಟ್ಟ ಪೂಜಾರಿಯವರು—ಅಧ್ಯಕ್ಷರು. ಗುಜ್ಜೆ ಮುಣ್ಣ ಪೂಜಾರಿಯವರು—ಉಪಾಧ್ಯಕ್ಷರು. ವೈ. ವೆಂಕಪ್ಪ ಮಾಸ್ತರ್—ಗೌ. ಕಾರ್ಯದರ್ಶಿಯವರು. ಯು. ರಾಮ ಮಾಸ್ತರ್—ಉಪಕಾರ್ಯದರ್ಶಿಯವರು. ಕೆ. ದೇಜು ಮಾಸ್ತರ್—ಕೋಶಾಧಿಕಾರಿಯವರು. ಅಲ್ಲದೆ ಗತ ವರ್ಷದ ಕಾರ್ಯಕಾರೀ ಮಂಡಳಿಯ ಸದಸ್ಯರನ್ನೇ ಮಿಕ್ಕುಳಿದ ಸದಸ್ಯರ ಸ್ಥಾನಗಳಿಗೆ ಆರಿಸಲಾಯಿತು. ಸಭಾಂತ್ಯದಲ್ಲಿ ಗುರು ಪೂಜೆ ನಡೆದು ಪ್ರಸಾದ ಸ್ವೀಕಾರದೊಡನೆ ಸಭಾ ವಿಸರ್ಜನೆಯಾಯಿತು.

ದಕ್ಷಿಣ ಭಾರತ ಹಿಂದುಸ್ಥಾನೀ ಪ್ರಚಾರ ಸಭೆಯ ಪ್ರಾಥಮಿಕ ಪರೀಕ್ಷೆಗೆ ಕಳದ ಸಪ್ಟಂಬರ ತಿಂಗಳಲ್ಲಿ ಕುಳಿತ 48 ವಿದ್ಯಾರ್ಥಿಗಳಲ್ಲಿ 26 ಮಂದಿ ಪ್ರಥಮ ಶ್ರೇಣಿಯಲ್ಲಿಯೂ 21 ಮಂದಿ ದ್ವಿತೀಯ ಶ್ರೇಣಿಯಲ್ಲಿಯೂ ಪಾಸಾಗಿರುತ್ತಾರೆ.

ಕುಂದಾಪುರ ಡಿವಿಜನಿನ ಗ್ರಾಮೋದ್ಧಾರ ಸಂಘದ ಆಫೀಸರರ ನೇತೃತ್ವದಲ್ಲಿ ತಾ. 30ರಲ್ಲಿ ಎಸ್. ವಿ. ಎಸ್. ಹೈಸ್ಕೂಲಿನಲ್ಲಿ ಪ್ರಚಾರ ಸಭೆಯೊಂದು ಜರಗಿ ಕಟಪಾಡಿ ಕೇಂದ್ರಕ್ಕೊಂದು ಗ್ರಾಮೋದ್ಧಾರ ಸಂಘ ಸ್ಥಾಪಿಸಲಾಯಿತು. ಸಮಿತಿಯಲ್ಲಿ ಶ್ರೀಗಳಾದ ಪಟೇಲ್ ನಾರಾಯಣ ಸೆಟ್ಟರು ಅಧ್ಯಕ್ಷರಾಗಿಯೂ ಪ್ಯಾಸುಭಾಗ ಸುಂದರರಾಯರು ಕಾರ್ಯದರ್ಶಿಯರಾಗಿಯೂ ಇರುವರು. ಗ್ರಾಮೋದ್ಧಾರ ಸಂಘದವರು ಮಾಡಬೇಕಾದ ಕರ್ತವ್ಯಗಳನ್ನು ವಿವರಿಸಿ ಅಧ್ಯಕ್ಷರ ಭಾಷಣವಾಯಿತು. ಶ್ರೀ ಪಿ. ದಾಮೋದರ ನಾಯ್ಕರು ಆಹಾರ ಪರಿಸ್ಥಿತಿ, ಹರಿಜನೋದ್ಧಾರ ವಿಷಯಗಳನ್ನೆತ್ತಿ ಮಾತನಾಡಿದರು.

ಮೂಲ್ಕಿ—ಇಲ್ಲಿಯ ಕಮಾಸ್ತರರಾದ ಶ್ರೀ ಕೆ. ಬಾಲಕೃಷ್ಣನವರಿಗೆ ಕಾಸರಗೋಡಿಗೆ ವರ್ಗವಾದುದರಿಂದ ಅವರನ್ನು ಬೀಳ್ಕೊಡಲು ಮೂಲ್ಕಿ ಬಿಲ್ಲವ ಸಮಾಜ ಸೇವಾ ಸಂಘದವರು ಒಂದು ಸತ್ಕಾರ ಕೂಟವನ್ನು ಜರಗಿಸಿದರು.

ಕೋಡಿ—ಮೂಲ್ಕಿ ಕೋಡಿಯಲ್ಲಿ 'ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಕೊಯರ್ ಇಂಡಸ್ಟ್ರೀಸ್' ಎಂಬ ಕೈಗಾರಿಕೆ ಸಂಸ್ಥೆಯೊಂದು ಇತ್ತೀಚೆಗೆ ಕೋಡಿ ಫಿಶರೀಸ್ ಶಾಲಾ ಮಾಸ್ತರ್ ಶ್ರೀ ಪಿ. ಯಜ್ಞೇಶ್ವರರಿಂದ ತೆರೆಯಲಾಯಿತು. ಶ್ರೀಗಳಾದ ಕೂಕ್ರ ಮಾಸ್ತರ್, ಶಿವಣ್ಣ ಹೆಗ್ಡೆ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಕುಂದಾಪುರ ತಾಲೂಕಿನಲ್ಲಿ ಅಕ್ಕಿ ಭತ್ತ ಒಪ್ಪಿಸುವಿಕೆಯ ಅವಧಿಯನ್ನು ತಾ 20-11-47ರ ವರೆಗೆ ಮುಂದರಿಸಲಾಗಿಯದೆ. ಈ ಅವಧಿಯೊಳಗಾಗಿ ಸೆಂಟ್ರಲ್ ಸ್ಟೋರ್ಸ್ ವ ಅದರ ಡಿಪೋಗಳಿಗೆ ಪಾವತಿ ಮಾಡಲೇಬೇಕು. ಅಕ್ಕಿ ಭತ್ತವನ್ನು ಸದ್ರಿ ತಾರೀಕಿನ ನಂತರ ಒಪ್ಪಿಸಿದವರಿಗೆ ಅದರ ಮೌಲ್ಯವನ್ನು ಕಡಿಮೆ ದರದಲ್ಲಿ ಎಣಿಸಿಕೊಡಲಾಗುವುದು. ಅವಧಿಯನ್ನು ಇನ್ನು ಮಾತ್ರ ಮುಂದರಿಸಲಾಗದೆಂದು ಜಿಲ್ಲಾ ಕಲೆಕ್ಟರರ ಪ್ರಕಟಣೆ ಹೊರಟಿದೆ.

ಕೋವಿ ಲೈಸೆನ್ಸು ಫೀಸು—1948ನೆ ವರುಷದ ಬಗ್ಗೆ ಕೋವಿ ಲೈಸೆನ್ಸನ್ನು ಊರ್ಜಿತಗೊಳಿಸಲಪೇಕ್ಷಿಸುವವರು ಆ ಸಂಬಂಧ ಖಜಾನೆ ಚಲನ್ ಎನಿಸಿ ಕಟ್ಟತಕ್ಕ ಲೈಸೆನ್ಸು ಫೀಸು ರೂ 2-8-0 ಆಗಿರುತ್ತದೆ.

ಬೈಲೂರು—ತಾ. 26-10-47ರಲ್ಲಿ ಪಾನನಿರೋಧ ಪ್ರಚಾರದ ಸಲುವಾಗಿ ಜಿಲ್ಲಾ ಕಾಂಗ್ರೆಸ್ ಸಮಿತಿ ಕಡೆ ಶ್ರೀ. ಕೆ. ಕೆ. ಶೆಟ್ಟರೂ, ಶ್ರೀ. ನಾರಾಯಣ ಕಿಲ್ಲೆಯವರೂ, ಜಿಲ್ಲಾ ಬಿಲ್ಲವ ಯೂನಿಯನಿನ ಕಡೆಯಿಂದ ಶ್ರೀಯುತರುಗಳಾದ ಬಿ. ಆರ್. ಕರ್ಕೇರರೂ ಗಿರಿಯಪ್ಪ ಮತ್ತು ನಾರ್ಣಪ್ಪ ಸುವರ್ಣರವರೂ ಬಂದಿದ್ದರು. ಶ್ರೀ. ಕರ್ಕೇರರ ಅಧ್ಯಕ್ಷತೆಯಲ್ಲಿ ಮುರ್ತೆದಾರರ ಸಭೆಯೂ ಶ್ರೀ. ಸುವರ್ಣರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೂ ಜರಗಿ ಶ್ರೀಗಳಾದ ಕೆ. ಕೆ. ಶೆಟ್ಟಿ, ಎನ್. ಎಸ್. ಕಿಲ್ಲೆ, ಗಿರಿಯಪ್ಪ ಮೊದಲಾದವರ ಭಾಷಣಗಳಾದುವು.

ಕಾಂತಾವರ—ಶ್ರೀ ಕಾಂತೇಶ್ವರ ದೇವಸ್ಥಾನದ ಬಳಿಯಲ್ಲಿ ಮದ್ರಾಸು ಪೋಸ್ಟ್ ಮಾಸ್ಟರ್ ಜನರಲ್ ಸಹಾಯದಿಂದ ಬ್ರಾಂಚ್ ಪೋಸ್ಟ್ ಆಫೀಸೊಂದು ತೆರೆಯಲ್ಪಟ್ಟಿರುವುದು.

ಈಶ್ವರ ಮಂಗಲ—ಪಾಳ್ಯತ್ತಡ್ಕ ಶ್ರೀ ಗಜಾನನ ಹಯರ್ ಎಲಿಮೆಂಟ್ರಿ ಶಾಲೆಯಲ್ಲಿ ದಸರಾ ಮಹೋತ್ಸವವನ್ನು ತಾ 20-10-47ರಿಂದ ತಾ 24-10-47ರ ವರೆಗೆ ಬಹಳ ವಿಜೃಂಭಣೆಯಿಂದ ವಿವಿಧ ಕಾರ್ಯಕ್ರಮಗಳಿಂದ ಜರಗಿಸಲ್ಪಟ್ಟಿತು.

NOTICE

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. S. No. 361/1947.

Mrs. ಲಿಯೊನಾರ್ಡ. ಸಿ. ಲುವಿಸ್—ಜಾಕಿ ವಿನ್ಸೆಂಟ ಲುವಿಸರ ಹೆಂಡ್ತಿ, ಮೂಡು ತೊನ್ಸೆ ಗ್ರಾಮದ ಹೊನ್ನಪ್ಪ ಕುದ್ರು —ವಾದಿ,

ಮತ್ತು

ಬಿ. ಶೀನಪ್ಪ ಸೆಟ್ಟಿ—ಮಾದಗ ಕೊಂಬ ಸೆಟ್ಟಿ ಅಳಿಯ—ಮೈಸೂರ್ ಸ್ಟೇಟ್ ಕಡೂರ ಡಿಸ್ಟ್ರಿಕ್ಟ ಶ್ರಿಂಗೇರಿ —ಪ್ರತಿವಾದಿ.

ಈ ಮೂಲಕ ತಿಳಿಯಪಡಿಸುವದೇನಂದರೆ.

ವಾದಿಳ ಪಕ್ಕಿನ ಮೂಡು ತೊನ್ಸೆ ಗ್ರಾಮದ ಸ ನಂ. 204/8ರಲ್ಲಿದ್ದ ಕಟ್ಟಿಗೆ ಮರಗಳನ್ನು ಪ್ರತಿವಾದಿಯು ವಾದಿಳಿಂದ ತಾರೀಕು 15-2-45ರಲ್ಲು ರೂ. 800/-ಕ್ಕೆ ಕ್ರಯಕ್ಕೆ ಪಡದ ಬಾಬ್ತು ಸದರಿ ದಿವಸ ವ ನಂತರ ಸಹಾ ವಸೂಲು ಬಂದದ್ದು ವಜಾ ಮಾಡಿ ಬಾಕಿ ಬರತಕ್ಕ ಅಸಲು ವ ಬಡ್ಡಿ ಮತ್ತು ರಿ ನೋಟೀಸಿನ ಖರ್ಚು ಕೂಡಾ ರುಪಾಯಿ 670-9-4ಕ್ಕೆ ವಾದಿಳು ದಾಖಲು ಮಾಡಿದ ಮೇಲಿನ ದಾವೆಯು ಪ್ರತಿವಾದಿಗೆ ನೋಟೀಸಿನ ಬಗ್ಗೆ ತಾ. 18-11-47ಕ್ಕೆ ಇಡೋಣಾಗಿಯದೆ. ಸದರಿ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಪ್ರತಿವಾದಿಯು ಸ್ವತಹಾ ವ ವಕೀಲರ ದ್ವಾರಾ ಮೇಲಿನ ವ್ಯಾಜ್ಯದಲ್ಲಿ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳುವರೇ ತಪ್ಪಿದ್ದಲ್ಲಿ ಸದರಿ ವ್ಯಾಜ್ಯವನ್ನು ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವದು.

G C. Rego
Vakil for Plaintiff

ಉಡುಪಿ, ತಾ. 21-10-1947

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮೊದಲಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ
ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಮಾಲಕ-ಮಜೂರರೊಳಗಿನ ಮಧ್ಯಸ್ಥಿಕೆ ತೀರ್ಮಾನವೂ ಮಣ್ಣುಪಾಲಾಗಬೇಕೆ?

ಕಳೆದ 28ರಲ್ಲಿ ದಕ್ಷಿಣ ಕನ್ನಡದಲ್ಲೂ ಮಲಬಾರಿನಲ್ಲೂ ಬೀಡಿ ಕೆಲಸಗಾರರು ನಿಷೇಧ ಸೂಚನೆಗಾಗಿ ಒಂದು ದಿನದ ಸಂಪ ಹೂಡಿದ್ದರು. ಈ 'ಏಕರೋಜ್‌ಕಾ ಮುಷ್ಕರ'ಕ್ಕೆ ಕಾರಣ ಹೊಸ ಬೇಡಿಕೆ ಯಾವುದೂ ಅಲ್ಲ. ಕಳೆದ ವರುಷ ದಕ್ಷಿಣ ಕನ್ನಡ ಮಲಬಾರು ಜಿಲ್ಲೆಗಳ ಬೀಡಿ ಕೆಲಸಗಾರರು ಸಂಬಳ ಹೆಚ್ಚಳ ಮತ್ತು ಬೋನಸ್ಸು ಪ್ರಾಪ್ತಿಗಾಗಿ ಸಾಮೂಹಿಕ ಮುಷ್ಕರ ಹೂಡಿದ್ದರು. ಆ ಚಳವಳದಲ್ಲಿ ಆಗಬಾರದ ಘಟನೆಗಳಾಗಿದ್ದವು. ಕೊನೆಗೆ ಮದ್ರಾಸ್ ಸರಕಾರವು ಕೈಹಾಕಿ ಈ ಜಗಳಕ್ಕೊಂದು ರಾಜೀ ತೀರ್ಮಾನ ಕೊಡುವರೆ ಮಂಗಳೂರಿನ ಸೆಶನ್ಸ್ ಜಡ್ಜರನ್ನು ನೇಮಿಸಿದ್ದಿತು. ಈ ನ್ಯಾಯಾಧೀಶರು ಇಕ್ಕಡೆಯವರ ವಾದಗಳನ್ನೂ ಕೇಳಿಕೊಂಡು, ಅಗತ್ಯವುಳ್ಳ ಲೆಕ್ಕ ಪತ್ರಗಳನ್ನೂ ದಾಖಲೆಗಳನ್ನೂ ಕೂಲಂಕುಷವಾಗಿ ಪರಿಶೀಲಿಸಿ, ಇವೆಲ್ಲಾ ಕೆಲಸಗಳಿಗೆ ಬೇಕಾದಷ್ಟು ಸಮಯವನ್ನೂ ತೆಗೆದು ಕೊನೆಗೆ ತನ್ನ 'ಎವಾರ್ಡ'ನ್ನು ಕೊಟ್ಟಿದ್ದರು. ಈ ನ್ಯಾಯತೀರ್ಮಾನವನ್ನು ತುಲನಾತ್ಮಕ ದೃಷ್ಟಿಯಿಂದ ನೋಡುವವರಿಗೆ, ಅದು ಕೆಲಸಗಾರರ ಬೇಡಿಕೆಗಳಿಗಿಂತ, ಮಾಲಕರ ವಾದಗಳಿಗೇನೇ ಹತ್ತಿರದಲ್ಲಿದೆ ಎಂಬುದು ಕಾಣದಿರದು. ಆದರೂ ಅದರಲ್ಲಿ ಸೂಚಿಸಿದ್ದ ಒಂದಾಣೆ ಹೆಚ್ಚಿಗೆ ಮಜೂರಿಯಾಗಲೀ, ಒಂದು ತಿಂಗಳ ಬೋನಸ್ಸಾಗಲೀ (ಇದರಲ್ಲಿ ಸ್ಥಳಿಕಸ್ಥಿತಿಗನುಸರಿಸಿ ಹೆಚ್ಚು ಕಡಿಮೆಗಳಿವೆ) ಇದು ವರೆಗೂ ಕೆಲಸಗಾರರಿಗೆ ದೊರೆತುದಿಲ್ಲ. ಆ ನ್ಯಾಯ ತೀರ್ಮಾನ ಜಾರಿಯಲ್ಲಿ ಬರುವಂತೆ ಸರಕಾರ ಪ್ರಯತ್ನಿಸಿದುದೂ ಇಲ್ಲ. ಇತರ ಸಾರ್ವಜನಿಕ ಮುಧ್ಯಸ್ಥಗಾರರಾಗಲೀ ಕಾಂಗ್ರೆಸ್ ಕಮಿಟಿಗಳಾಗಲೀ ಈ ಕಡೆಗೆ ಲಕ್ಷ್ಯ ಕೊಟ್ಟದ್ದೂ ಇಲ್ಲ. ಇಂತಹ ಅಸಡ್ಡೆಯನ್ನು ನಿಷೇಧಿಸುವದಕ್ಕಾಗಿಯೇ 'ಪ್ರತಿಷೇಧ ಮುಷ್ಕರ'ವೆಂಬ ಹೆಸರಿನಿಂದ ಬೀಡಿ ಕೆಲಸಗಾರರು ಒಂದು ದಿನ ಕೆಲಸ ನಿಲ್ಲಿಸಿ, ಸಭೆಮೆರವಣಿಗೆಗಳ ಮೂಲಕ, ಆ ಮರವೆಗೆ ಬಿದ್ದ ನ್ಯಾಯದ ಜ್ಞಾಪಕವನ್ನು ಸಂಬಂಧಪಟ್ಟ ಎಲ್ಲರಿಗೂ ಕೊಟ್ಟಿದ್ದರು.

ಎಲ್ಲರೂ ಲಕ್ಷ್ಯಕೊಡಲಿ!

ನಮ್ಮ ಜಿಲ್ಲೆಯ ಕಮ್ಯೂನಿಸ್ಟರು ಸಾರ್ವಜನಿಕರಲ್ಲಿ ನಿರ್ಮಿಸಿರುವ ಭಾವನೆಯು ಹೆಚ್ಚಾಗಿ ಪ್ರತೀಕೂಲಾತ್ಮಕವಾದುದೇ. ಇದಕ್ಕೆ ಮೊದಲನೆಯದಾಗಿ ನಮ್ಮ ಜನತೆಯಲ್ಲಿ ಬೇರೂರಿರುವ ಸಾಂಪ್ರದಾಯಿಕ ಮನೋವೃತ್ತಿಯೇ ಕಾರಣ. ಎರಡನೆಯ ಕಾರಣವೆಂದರೆ ಕಮ್ಯೂನಿಸ್ಟರ ಧೋರಣೆ ಮತ್ತು ಮರ್ಜಿಗಳು. ಬೀಡಿ ಕೆಲಸಗಾರರೆಲ್ಲಾ ಕಮ್ಯೂನಿಸ್ಟರೆಂದೋ, ಕಮ್ಯೂನಿಸ್ಟರ ಕೈಗೊಂಬೆಗಳೆಂದೋ ಸಾರ್ವಜನಿಕರು ನಿಶ್ಚೈಸಿಟ್ಟಿರುವುದರಿಂದ, ಈಗ 'ಬೀಡಿ ಕೆಲಸಗಾರರ ಬೇಡಿಕೆ'ಯೆಂದಕೂಡಲೇ 'ಕಮ್ಯೂನಿಸ್ಟರ ಸ್ವಭಾವಸಿದ್ಧ ಹೊಸ ಪಿರಲಾಟ' ಎಂದು ತೀರ್ಮಾನಿಸಿಕೊಂಡು ಆ ಕಡೆಗೆ ಕಣ್ಣೆತ್ತಿ ನೋಡದ ಪದ್ಧತಿಯೇ ಜಾರಿಯಲ್ಲಿದೆ. ಇದು ತಪ್ಪು; ಸಾರ್ವಜನಿಕ ಜೀವನಕ್ಕೇನೇ ಅಪಾಯಕರ! ಮವ್ಯಾಜ್ಯ ವೀರನೆಂದು ಮೊದಲು ಹತ್ತು ಬಾರಿ ದಾಖಲೆಯಾದವನೇ ಆದರೂ ಆತ ಒಂದು ಹೊಸ ವ್ಯಾಜ್ಯ ತಂದಾಗ, ಆ ವಾದವನ್ನು ನೋಡದೆ ವ್ಯಕ್ತಿಯನ್ನಷ್ಟೇ ನೋಡಿ ನಿರಾಕರಿಸುವುದು ತಪ್ಪಾಗುವದು. ಆದ್ದರಿಂದ ಬೀಡಿ ಮಜೂರ ಬಂಧುಗಳ ಈ ಬೇಡಿಕೆಯ ಕಡೆಗೆ ಸಂಬಂಧಪಟ್ಟವರು, ಸಾರ್ವಜನಿಕರು, ಮತ್ತು ಮುಖ್ಯವಾಗಿ ಸರಕಾರ ಮತ್ತು ಕಾಂಗ್ರೆಸ್ ಸಮಿತಿಗಳು ಅಗತ್ಯವಾಗಿ ಗಮನ ಕೊಡಬೇಕು.

ನ್ಯಾಯಕ್ಕೆ ತಲೆಬಾಗಲಿ!

ಇಲ್ಲಿ ಕೆಸಗಾರರು ಮುಂದೊಡ್ಡಿರುವುದು ತಮ್ಮ ವಾದವನ್ನಲ್ಲ; ಸರಕಾರದಿಂದ ನೇಮಿಸಲ್ಪಟ್ಟಿದ್ದ ಓರ್ವ ನ್ಯಾಯಾಧೀಶರ ವಾದವನ್ನೇ. ಒಂದು ವಾದದ ಇಕ್ಕಡೆಯವರೂ ಮಧ್ಯಸ್ಥಗಾರರ ತೀರ್ಪನ್ನು ಶಿರಸಾವಹಿಸಲೊಪ್ಪಿ, ತಂತಮ್ಮ ವಾದಗಳನ್ನು ಮುಂದಿಟ್ಟ ಮೇಲೆ ಮತ್ತಾವ ತೀರ್ಮಾನವಾದರೂ ಅದನ್ನು ಶಿರಸಾವಹಿಸಲು ಎರಡೂ ಕಡೆಯವರು ಬದ್ಧರಿದ್ದಾರೆ. ಒಂದು ರಾಜೀ ತೀರ್ಮಾನವು ಯಾವ ಕಡೆಯ ಬೇಡಿಕೆಯನ್ನೂ ಪೂರ್ತಿ ಪೂರೈಸಿಕೊಡಲಾರದೆಂಬುದು ನಿಸ್ಸಂದೇಹ. 'ಜಗಳ ರಾಜಿಯಾಗಬೇಕು. ಆದರೆ ರಾಜೀ ತೀರ್ಮಾನವು ತಾವು ಜಗಳದಲ್ಲಿ ಗೆದ್ದಾಗ ಸಂಪಾದಿಸುವಂತಹದೇ ಆಗಬೇಕು, ಇಲ್ಲವಾದರೆ ಅದಕ್ಕೆ ಧಿಕ್ಕಾರ' ಎನ್ನುವಂತಹ ಮನೋವೃತ್ತಿಯು ಯಾವ ಕಡೆಯವರಲ್ಲೂ ಇರಕೂಡದು. ಅಂದ ಮೇಲೆ ನ್ಯಾಯಾಧೀಶರ ತೀರ್ಪನ್ನು ಬೀಡಿ ಮಾಲಕರು ಪಾಲಿಸದಿರುವುದು ಸರಿಯೆ? ಕಮ್ಯೂನಿಸ್ಟರು, ಮತ್ತವರ ಹಿಂಬಾಲಕರಾದ ಮಜೂರ ಸಂಘಗಳು ಈಗ ಜನಪ್ರಿಯತೆ ಕಳಕೊಂಡಿವೆ. ಆದರೆ ಪ್ರಚಲಿತ ಸ್ಥಿತಿ ಮತ್ತು ಸಾರ್ವಜನಿಕ ಮನೋವೃತ್ತಿಯು ಮೊಳ್ಕಟ್ಟಿದ್ದೆಂದಾಗಲೀ, ಸಂಪೂರ್ಣ ಸರಿಯೆಂದಾಗಲೀ ನ್ಯಾಯವಾದಿಗಳಾರೂ ಹೇಳಲಾರರು. ಅಂತೆಯೇ ಇಂದಿನ ಕಮ್ಯೂನಿಸ್ಟರ ಎಲ್ಲಾ ಧೋರಣೆಗಳೂ ಮಾನ್ಯವಾಗಲಾರವು. ಸರಿ—ತಪ್ಪು ಅಂಶಗಳು ಪ್ರತಿಯೊಂದರಲ್ಲೂ, ಪ್ರತಿಯೊಬ್ಬನಲ್ಲೂ ಇವೆ. ವಾದ ಮತ್ತು ಕೃತ್ಯಗಳ ನ್ಯಾಯಾನ್ಯಾಯಗಳನ್ನು ತೂಗಿ ನೋಡಿಯೇ ತೀರ್ಮಾನಿಸಬೇಕು. 'ಸಂಭಾವಿತ'ರೆಂದು ಕೆಲವರ ದೃಷ್ಟಿಗೆ ತೋರಿದವರು ಮಾಡಿದ್ದೆಲ್ಲಾ ಸರಿ, 'ತಂಟೆಕೋರರು' ಎಂದು ಹೇಳಿಸಿಕೊಂಡವರು ಮಾಡಿದುದೆಲ್ಲಾ ತಪ್ಪು ಎಂಬ ಭಾವನೆ ಅತ್ಯಂತ ಅಪಾಯಕರ. ಇಂದು ಬೀಡಿ ಮಜೂರರನ್ನು ಮೇಲಿನ ಎರಡನೇ ವರ್ಗಕ್ಕೆ ಸೇರಿಸಿ, ಮಜೂರೀ ತೀರ್ಮಾನ ಸಂಬಂಧದ ಅವರ ಇಂದಿನ ನ್ಯಾಯವಾದ ಬೇಡಿಕೆಯನ್ನು ಅಲ್ಲಗಳೆಯಲಾಗಿದೆ. ಇದು ಅತ್ಯಂತ ಶೋಚನೀಯ.

ಕಾಂಗ್ರೆಸ್ಸು ಕೈಹಾಕಲಿ

ಸರಕಾರೀ ನೇಮಿತ ನ್ಯಾಯಾಧೀಶರೊಬ್ಬರ ರಾಜೀ ತೀರ್ಮಾನವು ಇಂದು ಗಾಳೀ ಪಾಲಾಗಿದೆ. ಇಂತಹ ತೀರ್ಮಾನವೇ ಶಾಸನವಲ್ಲ; ಅದರ ಉಲ್ಲಂಘನೆಯು ಶಿಕ್ಷಾರ್ಹವಾಗುವದಿಲ್ಲವೇನೋ ನಿಜ. ಆದರೆ ಅದು ನ್ಯಾಯಕ್ಕೂ ಸರಕಾರದ ಧೋರಣೆಗೂ ಬಗೆದ ದ್ರೋಹವೆಂಬುದು ಸ್ಪಷ್ಟವಿದೆ. ಮಾಲಕ-ಮಜೂರರೊಳಗೇಳುವ ವಿವಾದಗಳಲ್ಲೆಲ್ಲಾ ತೀರ್ಮಾನಕ್ಕಾಗಿ ಕಾಂಗ್ರೆಸ್ ಸರಕಾರವು ಮಧ್ಯಸ್ಥಿಕೆಗಾರರನ್ನು ನೇಮಿಸುವ ಸಂಪ್ರದಾಯವನ್ನಿಟ್ಟುಕೊಂಡಿದೆ. "ಅಂತಹ ತೀರ್ಮಾನಗಳನ್ನು ಇಕ್ಕಡೆಯವರೂ ಅಂಗೀಕರಿಸಿಕೊಳ್ಳುವಂತೆ ಮಾಡಲಾಗುವುದು" ಎಂದು ಸರಕಾರದ ಅಂಬೋಣವಿದೆ. ಆದ್ದರಿಂದ ಬೀಡೀ ಮಜೂರ-ಮಾಲಕರ ಜಗಳ ಸಂಬಂಧದ ಈ ತೀರ್ಮಾನವು ಜಾರಿಗೆ ಬರುವಂತೆ ಅಗತ್ಯವುಳ್ಳ ಕಾರ್ಯವನ್ನು ಕೂಡಲೇ ಕೈಕೊಳ್ಳಲು ಸರಕಾರವು ಬದ್ಧವಿದೆ. ಇಷ್ಟರಲ್ಲೇ ಹಲವು ತಿಂಗಳುಗಳು ಕಳೆದಿವೆ ವಿಷಯವು ಮನೆಗುದಿಗೆ ಬಿದ್ದಿದೆ. ಇನ್ನು ತಡಮಾಡಬಾರದು, ಜಿಲ್ಲಾ ಕಾಂಗ್ರೆಸ್ ಕಮಿಟಿ ಮತ್ತು ಸರ್ಕಲ್ ಕಾಂಗ್ರೆಸ್ ಕಮಿಟಿಗಳು ಈ ನ್ಯಾಯಕ್ಕೆ ಕೈ ಕೊಟ್ಟು ಕೆಲಸ ಮಾಡಬೇಕು. ಬೀಡಿಮಜೂರರು 'ಕಾಂಗ್ರೆಸ್ ಪ್ರಮುಖರು ಕೈಹಾಕಲಿ!' ಎಂದು ದಿನ್ನೇಕೂಗು ಹಾಕುವ ಮೊದಲೇ ಕಾಂಗ್ರೆಸ್ ಕಮಿಟಿಗಳನ್ನು ಸಂಧಿಸಿ, ಪ್ರಶ್ನಿಸ ಬಾರದಿತ್ತೇಕೋ ತಿಳಿಯದು. ಇನ್ನಾದರೂ ಆ ಕೆಲಸವಾಗಲಿ. ಕರೆಯದ ಹೋಗುವ ಅಧಿಕ ಪ್ರಸಂಗವೇಕೆ? ಎಂದು ಕಾಂಗ್ರೆಸಿಗರು ಸುಮ್ಮಗಿದ್ದಾರಾದರೆ ಆ ಶಾಸ್ತ್ರವನ್ನು ಮಜೂರರು ತೀರಿಸಲಿ. ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಕೆಲಸಗಾರರ ಬೇಡಿಕೆಗಳ ಕುರಿತಂತಹ ಅಸಡ್ಡೆಯಿದೆ ಎಂಬ ಅನುಭವವು ಬೇರೆ ನಿದರ್ಶನಗಳಿಂದಾಗಿದೆ. ಆದರೆ ಅದಕ್ಕೆ ಸ್ವಕಾರ್ಯಜ್ಞಾನ ಕಡಿಮೆಯಾದ ಮಾತ್ರಕ್ಕೆ ಬೀಡಿ ಮಜೂರರೂ ಕರ್ತವ್ಯಬಾಹಿರರಾಗಬೇಕಾದಿಲ್ಲ. ತಿಳಿಸಿ ನೋಡಬಹುದು (ಈ ಮೊದಲೇ ತಿಳಿಸಿದ್ದರೆ ಸರಿ!) ಅಂತೂ ನ್ಯಾಯಕರ್ತನೊಬ್ಬನಿಂದ ಕಂಡು ಹಿಡಿಯಲ್ಪಟ್ಟ ಈ ನ್ಯಾಯವು ಕಾರ್ಯತಃ ಫಲಿಸಲೇಬೇಕು. ಅದಕ್ಕೆ ಎಲ್ಲರೂ ನೆರವೀಯಬೇಕು.

—'ನ್ಯಾಯವಾದಿ'

ಬಾಲಕರು ಆರೋಗ್ಯಶಾಲಿಯರಾಗಲು
(ಪ್ರಭೂಸ್) ಬಾಲಾಮೃತ
ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜೆಗಳಿಗೆ ತುತ್ತಾಗಿ, ದೇಹದಲ್ಲಿ ಬಡನಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ ನೆಟ್ಟಗಾಗಲು ತಾಯಿ ತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ. ಮಾತ್ರ, ಹೊತ್ತು ಕಳೆದರೆ ಮತ್ತೆ ಬಾರದು.

'ಪ್ರ ಭೂ ಸ್'
ಬಾ ಲಾ ಮೃ ತ

ಪ್ರಭೂಸ್ ಬಾಲಾಮೃತದ ಖಾತ್ರಿಗೆ ದಾಖಲೆ ಬೇಕೆ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ)
ಕುಂಜಾಲು, ಪೋ. ಬ್ರಹ್ಮಾವರ, ದ. ಕ.
ಸ್ಟಾಕಿಸ್ಟರು:—
ನವಭಾರತ ಪುಸ್ತಕ ಭಂಡಾರ, ಉಡುಪಿ,
L. N. Sharma, Mangalore,

25 ಕತೆಗಳು | ಮಧುವಿಗು' ಮಧುರ! | ಕತೆಗಳು: 25
ಮ ಧು ವ ನ

ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾ ಸಂಗ್ರಹ.
ಕಣ್ಸೆಳೆವ ಬಾಹ್ಯಾಂಗ! ಮನಸೆಳೆವ ಅಂತರಂಗ!
ಬೆಲೆ 3 0 0 (ಟಪಾಲು ಸಹಿತ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ-ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—
ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ?
ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು?
ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.
ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟು ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬರೆದವರು:-ಶ್ರೀ. ಪಿ. ಶೀನ ಶೆಟ್ಟರು.
ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.
ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ. ಮೈಜುಮ್ಮೆನಿಸುವ ಹಲವು ಸನ್ನಿವೇಶಗಳು!

ಬೆಲೆ ಬರೀ ರೂ. 1—4—0

ಕಿರಿಯರ ಪ್ರಪಂಚದ ಪ್ರಕಟಣೆ

ಕದಂಬ

ಹನ್ನೆರಡು ಕತೆಗಳ ಸಂಗ್ರಹ

ಬರೆದವರು:-ಶ್ರೀಮತಿ ಸರಸ್ವತಿಬಾಯಿ ರಾಜವಾಡೆಯವರು
('ಪ್ರಕಾಶ' ನಾಟಕದ ಅನುವಾದಕಿ; 'ಆಹುತಿ ಇತ್ಯಾದಿ ಕತೆಗಳು' ಕಥಾಗುಚ್ಛದ ಲೇಖಿಕೆ.)
ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ ಚಿತ್ರಿಸುವ ಕಥಾ ಸಂಗ್ರಹ. ಬೆಲೆ. 1—4—0

ಮನೆಮದ್ದು-Home Remedies ಬೆಲೆ ರೂ. 2-0-0

ಬರೆದವರು:—ಡಾ| ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.
'Ably Written—Quite up-to-date—Valuble Service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ, ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.
ಮಕ್ಕಳ, ಹೆಂಗಸರ, ಗರ್ಭಿಣಿ.ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಹೇಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.
200 ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಬುಕ್ ಡಿಪೋ ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ಆರು ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.
ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ
(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಫ್ಯಾರಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ... (2) ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್.(3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿನಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ಒಕ್ಕೆ ೫ ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ. ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಲೀನಜಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.
Ayurveda Oushadhalaya, GADAG

EDITED, PRINTED & PUBLISHED BY K. U. SHETTY AT THE NAVAYUGA PRESS UDIPI, S. INDIA.

Regd. No. M. 3618

ಅಂತರಂಗ
ಅಖಿಲ ಕರ್ನಾಟಕ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

13-11-1947

"ರೈತರೇ, ನೀವು ಇಂದಿನ ಪರಿಸ್ಥಿತಿಯನ್ನು ಸರಿಯಾದ ದೃಷ್ಟಿಯಿಂದ ನೋಡಿ ತಿಳಿದು ಸಹಾಯಕ್ಕೆ ಮುಂದಾಗಿರಿ, ನಿಮ್ಮ ಉಳಿಕೆಯ ಧಾನ್ಯವನ್ನು ತಮ್ಮ ರೇಶನ್ ಆಹಾರಕ್ಕಾಗಿ ನೋಡುತ್ತಿರುವ ಹಸಿದ ಜನತೆಯೊಡನೆ ಹಂಚಿ ಉಣ್ಣಿರಿ".

ವರ್ಷ ೨೭
ವಾರ ೧೧

NAVAYUGA WEEKLY, UDIPI.

FOUNDER: Hon'ble Mr. A. B SHETTY, Health Minister, Govt. of Madras.

Vol. 27
No. 11

THE CANARA MUTUAL Assurance Company, Limited.

Estd: 1935

H. O. UDIPI, S. Kanara

BONUS DECLARED FOR 8 YEARS

We are glad to announce that we have declared a Bonus for 8 years from 1939 to 1946 both years inclusive as also an interim bonus for the next valuation period.

T. R. A. Pai,
Managing Director.

ದೀಪಾವಳಿ ಅಭಿವಂದನೆಗಳು

ನಮ್ಮ ಸಕಲ ವಿಮಾದಾರರಿಗೆ—
ವೈದ್ಯಕೀಯ ಪರೀಕ್ಷಕರಿಗೆ—
ಪ್ರತಿನಿಧಿಗಳಿಗೆ ಮತ್ತು ಶುಭಾಕಾಂಕ್ಷಿಗಳಿಗೆ.
ಮತ್ತು
ಬರುವ ಪ್ರಗತಿದಾಯಕ ವರ್ಷಕ್ಕೆ
ನಮ್ಮ
ಶುಭಾಶಯಗಳು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,

ದಕ್ಷಿಣ ಭಾರತ ಮತ್ತು ಮೈಸೂರು, ತಿರುವಾಂಕೂರು ಕೊಚ್ಚಿ ಮತ್ತು ಪುದುಕೋಟೆ ಆಶ್ರಿತ ರಾಜ್ಯಗಳ ಮುಖ್ಯ ಪ್ರತಿನಿಧಿಗಳು.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಮದರಾಸು, ಬೆಂಗಳೂರು, ಕೊಯಮತ್ತೂರು, ತ್ರಿಚನಾಪಳ್ಳಿ, ಕಲ್ಲಿಕೋಟೆ,
ಮಂಗಳೂರು, ಮಧುರೆ ಮತ್ತು ಉಡುಪಿ.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರದಲ್ಲಿ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ। ಕೆ। ಶೀನ ಗಿರಿ ಶೆಟ್ಟಿ, L. I. M.; ಡಾ। ವೆಂಕಟರಾಮ್, ಕೊರಡ್ಕಲ್; ನವಭಾರತ ಬುಕ್ ಡಿಪ್ಪೊ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ. ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ—ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ಬೆಳಗಾವಿಯಲ್ಲಿ:—ಹುಂಬರವಾಡಿ ಸ್ಟೋರ್ಸ್, ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಚ್ ಕಮಲದಾಸಿ, ಕೆಮಿಸ್ಟ್, ಹಾವೇರಿ ಬ್ಯಾಡ್ಗಿ.

Ayurveda Oushadalaya, GADAG CITY.

ನಿಮ್ಮಷ್ಟಕ್ಕೆ ನೀವು ಮನೆಯಲ್ಲೆ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0

ನವಭಾರತ ಬುಕ್ ಡಿಪ್ಪೊ, ಉಡುಪಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. K. Kelu Nambiar,
Vaidya.

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಾರ್ಯಾಲಯ:- ಧಾರವಾಡ,

ಹೆಚ್ಚಿನ ಸವಲತ್ತಿನ ಬಗ್ಗೆ—

ಪೋಸ್ಟು ಬಾಕ್ಸ ನಂಬ್ರ 10, ಉಡುಪಿ, ಇವರಿಗೆ ಬರೆಯಿರಿ.

ಸಹಿಸಿ ಸಾಕಾದವರು ಸಾಧನೆಗೆ ನಡುಬಿಗಿದರು

ಸದ್ಯದ ಪರಿಸ್ಥಿತಿಯಲ್ಲಿ ಅತ್ಯಂತ ಸಮಾಧಾನಕರವಾದ ಒಂದು ಸಂಗತಿ ಒಡೆದು ಕಾಣುತ್ತಿದೆ. ಅದೆಂದರೆ ಪ್ರಮುಖ ಮತ್ತು ಸಾಮಾನ್ಯ ಭಾರತೀಯರಲ್ಲಿ ಸಂದರ್ಭೋಚಿತ ಎಚ್ಚರಿಕೆ ತೋರಿ ಬರುತ್ತಿರುವುದು. ಈ ತರಬೇತಿ ಕೊಟ್ಟುದಕ್ಕಾಗಿ ಕಾಯಿದೇ ಅಝಾಮ್ ಜಿನ್ನಾ ಮತ್ತು ಮುಸ್ಲಿಂ ಲೀಗನ್ನು ನಿಜಕ್ಕೂ ಅಭಿನಂದಿಸಬೇಕು!

ನಾಶಿವೆ ಕಾಲದ ಭಾರದಷ್ಟು ತೂಕತಪ್ಪದಂತೆ ತುಲನೆಮಾಡಿದರೂ ಕಾಂಗ್ರೆಸಿನ ಮೇಲೆ ಮುಸ್ಲಿಂ ಮತ್ತು ಹಿಂದೂ ಧರ್ಮ ಭ್ರಾಂತರೆರಡು ಕಡೆಗಳಿಂದಲೂ ಬಂದಿರುವ ಆಪವಾದಗಳೂ ಸಮಭಾರವುಳ್ಳವುಗಳೇ. "ಹಿಂದೂ ರಾಜ್ಯ ಸ್ಥಾಪನಾ ಭ್ರಾಂತಿ ಹಚ್ಚಿಕೊಂಡಿರುವ ಕಾಂಗ್ರೆಸ್" ಎಂದು ಲೀಗಿನ ಆರೋಪವಿದ್ದರೆ "ಮುಸ್ಲಿಮರ ಮನವೊಲಿಸುವದಕ್ಕಾಗಿ ಹಿಂದೂ ಧರ್ಮಕ್ಕೂ ಹಿಂದುಗಳಿಗೂ ಮಹತ್ತಾದ ದ್ರೋಹ ಮಾಡುತ್ತಿರುವ ಕಾಂಗ್ರೆಸ್" ಎಂದು ಹಿಂದೂ ಸಭೆಯವರ ಆರೋಪವಿದೆ. ಎರಡೂ ಸಮಾನ ಭಾರದ 'ಪರಿಶುದ್ಧ ಸುಳ್ಳು'ಗಳೇ! ಈ ರೀತಿ ತನ್ನೆರಡು ಪಕ್ಕದಲ್ಲಿ ಎರಡು ಕಡೆಯವರು ನೇತಾಡಿಸಿರುವ ಎರಡು ಗಂಟುಗಳ ಭಾರವೂ ಸಮಾನವಿರುವುದರಿಂದಲೇ, ಯಾವ ಕಡೆಗೂ ವಾಲದೆ ಮಧ್ಯದಲ್ಲಿರುವ ನ್ಯಾಯ ಪಥದಲ್ಲಿ ಸಾಗಲು ಕಾಂಗ್ರೆಸ್ಸಿಗೆ ಅನುಕೂಲವಾಗಿತ್ತು.

ಆದರೆ ಯಾವ ಅತಿರೇಕವನ್ನಾದರೂ ಅಲ್ಪಬುದ್ಧಿಯ ಪರಿಣಾಮವೆಂದು ಕಡೆಗಣಿಸಬೇಕಾದರೆ ಅದೊಂದು ಮಿತಿಯೊಳಗಿರಬೇಕು. ಮುಸ್ಲಿಂ-ಹಿಂದೂ ಭ್ರಾಂತರಿಬ್ಬರಿಗೂ ತಾವು ಕೊಡುತ್ತಾ ಬಂದ ಸಲುಗೆ ಹೆಚ್ಚಾಯಿತೆಂಬುದೀಗ ಕಾಂಗ್ರೆಸ್ ಪ್ರಮುಖರಿಗೆ ಮನದಟ್ಟಾಗಿದೆ.

ಆ ಪೈಕಿ 'ಹಿಂದೂವಾದಿ'ಗಳ ಪೀಡೆ ಉದರ ಶೂಲೆಯಂತಿದೆ; ಕೆಲವು 'ಮಾತ್ರೆ'ಗಳನ್ನು ನುಂಗಿ ನಿವಾರಿಸಿಕೊಳ್ಳುವಂತಹದಿದೆ; ಒಳಗಡೆಯದು! ಆದರೆ ಮುಸ್ಲಿಂ ಲೀಗಿನ ಕಂಟಕವು ಇದಿರು ಶೂಲವೇ ಆಗಿದೆ; ಅದನ್ನಿದಿರಿಸಿಯೇ ಮುರಿಯಬೇಕಾಗಿದೆ; ಪ್ರತ್ಯೇಕ ರಾಷ್ಟ್ರ ಕಟ್ಟಿಕೊಂಡಿರುವ ಅದಿಂದು ಪರಕೀಯ!

ಈ ತಾರತಮ್ಯವನ್ನು ಕಾಂಗ್ರೆಸಿಗರು—ಭಾರತದ ಪ್ರಮುಖರು—ತಿಳಿದಿದ್ದಾರೆ. ಆದರೆ ಲೀಗಿನವರು—ಪಾಕಿಸ್ತಾನ ನಾಯಕರು—ತಿಳಿದಿದ್ದಾರೆಯೆ? ಪಾಪ! ಇನ್ನೂ ತಿಳಿದಿಲ್ಲ. ಕಲಿಸಿದ ವಿನಹ ಅವರಿಗದು ತಿಳಿಯುವಂತಿಲ್ಲ.

ಆದ್ದರಿಂದಲೇ ಹಿಂದಿನ ತಮ್ಮ 'ಡೈರೆಕ್ಟ್ ಏಕ್ಷನ್' ಕಾಲದಲ್ಲಿ ಲೀಗ್ ಪ್ರಮುಖರು ಯಾವ 'ಬಜಾರಿ ಭಾಷೆ'ಯನ್ನಾಡುತ್ತಿದ್ದರೋ ಈಗ ಕೂಡಾ ಅದನ್ನೇ ಹಿಡಿದುಕೊಂಡಿದ್ದಾರೆ. ಅದು ಅಂದಿನ ರಂಪಾಟ ನಿರ್ಮಾಣಕ್ಕೆ ಬೇಕಿದ್ದ ಭಾಷೆ ಹೊರತು ಇಂದಿನ ರಾಜ್ಯ ನಿರ್ಮಾಣಕ್ಕೂ ಹೇಳಿಸಿದರೆ? ಅದರ ಪ್ರಶ್ನೆಯನ್ನು ಕೇಳುವುದಾದೊಡನೆ ಉತ್ತರಿಸತಕ್ಕವರು ಇದಕ್ಕೂ 'ಬಜಾರಿ' ಉತ್ತರವನ್ನೇ ಕೊಟ್ಟರು!

ಆದ್ದರಿಂದ ಇನ್ನು ಹಿಂದಿನಂತೆ, ಕಡೆಗಣಿಸಿ ಬಿಡುವುದಲ್ಲ—ಕಲಿಸಿಯೇ ಬಿಡುವುದೆಂದು ಕಾಂಗ್ರೆಸ್ ಪ್ರಮುಖರು ನಡುಬಿಗಿದಿದ್ದಾರೆ.

ತಾವು ತಮ್ಮ ಘನತೆಯುಳಿಸಿಕೊಂಡೇ, ಪುಂಡರನ್ನಿಸದೇನೇ ಪುಂಡಾಟಿಗಳನ್ನಿದಿರಿಸಲು ಸಾಧ್ಯವಿಲ್ಲವೆ? 'ಇಲ್ಲ' ಅನ್ನಬೇಕು ಮತ್ತೊಂದು ವರ್ಗದ ಪುಂಡರೇ! 'ಇದೆ' ಎಂಬುದನ್ನು ಭಾರತೀಯ ಪ್ರಮುಖರೀಗ ಪ್ರತ್ಯಕ್ಷ ಪ್ರದರ್ಶಿಸುತ್ತಿದ್ದಾರೆ. ಲೀಗಿನ ಪುಂಡು ಕೃತ್ಯಗಳಿಗೆ ಕಾಶ್ಮೀರ, ಜುನಾಗಡುಗಳಲ್ಲಿ ಮಾಡಿದ ಪ್ರತೀಕಾರ ಹೇಗೆ? ಇನ್ನವರ ಖಿಲಾಡಿ ಮಾತು ವರ್ತನೆಗಳಿಗೆ ಈಗ ದೊರೆಯಹತ್ತಿರುವ ಉತ್ತರಗಳ ಪೈಕಿ ಕೆಲವು ಮಾದರಿಗಳನ್ನು ಇಲ್ಲಿ ಕೊಡಲಾಗಿದೆ.

ನೆಹರು ಕೊಟ್ಟ ತಾಡನ!

ಕಾಶ್ಮೀರವು ಭಾರತ ಕೇಂದ್ರಕ್ಕೆ ಸೇರಿದುದನ್ನು "ದಗಾಖೋರತನ ಮತ್ತು ಹಿಂಸೆ" ಯೆಂದು ಪಾಕಿಸ್ತಾನ್ ಸರಕಾರವು ತನ್ನ ಹೇಳಿಕೆಯಲ್ಲಿಂದಿದ್ದಿತು. ಅದಕ್ಕೆ ಭಾರತ ಸರಕಾರದ ಪ್ರಧಾನಿ ಪಂ. ನೆಹರುಗಳು ತನ್ನ ಆಕಾಶವಾಣಿ ಭಾಷಣದಲ್ಲಿತ್ತ ಮಾರ್ಮಿಕ ಉತ್ತರ: "ನಮ್ಮ ನೆರೆಯ ಸರಕಾರವು ಉಪಯೋಗಿಸುತ್ತಿರುವ ಭಾಷೆಯು ಸರಕಾರಗಳ ಭಾಷೆಯೆಂತೂ ಅಲ್ಲ; ಜವಾಬ್ದಾರಿಯುತ ಜನರು ಕೂಡಾ ಉಚ್ಚರಿಸುವಂತಹದಲ್ಲ. ಕಾಶ್ಮೀರವು ಭಾರತ ವಸಾಹತನ್ನು ಸೇರಿದುದು 'ದಗಾಖೋರತನ ಮತ್ತು ಹಿಂಸೆ'ಯಂತೆ. ಆ ಭಾಷೆಯಲ್ಲೇ ಮಾತಾಡಲು ನನ್ನಿಂದ ಸಾಧ್ಯವು ಇಲ್ಲ; ಮತ್ತಾ ಇಚ್ಛೆಯೂ ನನ್ನಲ್ಲಿಲ್ಲ. ಯಾಕೆಂದರೆ ನಾನೊಂದು ಜವಾಬ್ದಾರಿಯುಳ್ಳ ಸರಕಾರ ಮತ್ತು ಜವಾಬ್ದಾರಿಯುಳ್ಳ ಜನತೆಯ ಪರವಾಗಿ ಮಾತಾಡಬೇಕಾಗಿದೆ. ನಿಜ. ಕಾಶ್ಮೀರದಲ್ಲಿ 'ದಗಾಖೋರತನ ಮತ್ತು ಹಿಂಸೆ' ನಡೆದಿದೆ, ಎಂಬುದನ್ನು ನಾನೊಪ್ಪುತ್ತೇನೆ. ಆದರಿಲ್ಲಿ ನನ್ನ ಪ್ರಶ್ನೆಯೆಂದರೆ "ಅದರ ಹೊಣೆಗಾರರಾರು?" ಎಂಬುದೊಂದೇ!". ಪಾಕಿಸ್ತಾನದ ಮದೋನ್ಮತ್ತ ಮಾತಿಗೆ ಈ ಮಂಗಳಾರತಿ ಸಾಲದೆ? ಇನ್ನು ಕಾಶ್ಮೀರದೊಳಗೆ ನುಗ್ಗಿದ ಗುಂಡಾ ಸೇನೆ ತನ್ನದಲ್ಲವೆನ್ನುವ ಪಾಕಿಸ್ತಾನದ ವಂಚನೆಯನ್ನು ನೆಹರೂ ಮಾತು ಬಿಚ್ಚಿಟ್ಟಿರುವ ರೀತಿ ಹೀಗಿದೆ! "ಈ ಜನರು ಪಾಕಿಸ್ತಾನದ ಪ್ರಾಂತ್ಯಗಳಾದ ಗಡಿನಾಡು ಅಥವಾ ಪಶ್ಚಿಮ ಪಂಜಾಬಿನೊಳಗಡೆಯಿಂದ ಹೇಗೆ ಮತ್ತು ಯಾಕೆ ಬಂದರು? ಮತ್ತವರಲ್ಲಿ ಇಷ್ಟೊಂದು ಸಮೃದ್ಧ ಶಸ್ತ್ರೋಪಕರಣಗಳಿರುವುದಾದರೂ ಹೇಗೆ? ಎಂದು ಪ್ರಶ್ನಿಸುವ ಹಕ್ಕು ನಮಗಿದೆ. ಏನು, ಇನ್ನೊಂದು ರಾಷ್ಟ್ರವನ್ನಾಕ್ರಮಿಸಲು ಹೊರಟ ಧಾಳಿಕಾರರು ತನ್ನ ಕ್ಷೇತ್ರಗಳೊಳಗಿಂದ ನುಗ್ಗದಂತೆ ತಡೆಯಲು ಸಾಧ್ಯವಿಲ್ಲದಷ್ಟು ಪಾಕಿಸ್ತಾನ್ ಸರಕಾರ ದುರ್ಬಲವಿದೆಯೆ? ಅಥವಾ ಹಾಗಾಗಬೇಕೆಂದೇ ಅವರಿಚ್ಛೆಯೆ? ಇಲ್ಲಿ ಮೂರನೇ ಪ್ರಶ್ನೆಯಿಲ್ಲ" ಎಂದು ಪ್ರಶ್ನಿಸಿದ್ದಾರೆ ನೆಹರು. ಈ ನಾಲ್ಕು ಮಾತುಗಳೆಂದರೆ ಅಖಿಲ ಭಾರತದ ಆತುರವೇ ಅಲಗುಗಳಾಗಿ ಪಂಡಿತ ನೆಹರುಗಳ ಬತ್ತಳಿಕೆಯಿಂದ ಹಾರಿದ ನಾಲ್ಕು ಬ್ರಹ್ಮಾಸ್ತ್ರಗಳು! ಅವು ಪಾಕಿಸ್ತಾನದ ಕಪಟ ಕವಚವನ್ನಂತೂ ಭೇದಿಸಿವೆ; 'ಕರುಳು ಕರಗದಿದ್ದಲ್ಲಿ ಕಂಠವೇ ಗುರಿ'ಯೆಂಬಂತೆ ಅಲ್ಲಿ ಇನ್ನೂ ಸುಳಿದಾಡುತ್ತಿವೆ!

ಪಂಡಿತ ಪಂತರ ಪಂಥ!

ಸಂಯುಕ್ತ ಪ್ರಾಂತ್ಯದಲ್ಲೂ ಮಿಕ್ಕೆಡೆಗಳಂತೆ ಜಾತೀಯ ಗಲಭೆಗಳು ಅಲ್ಪ ಪರಿಮಾಣದಲ್ಲಿ ನಡೆದಿದ್ದುವು. ಆ ಹೋರಾಟದಲ್ಲಿ ಹೆಚ್ಚು ಹಾನಿಗೊಂಡವರು ಅಲ್ಪಸಂಖ್ಯಾಕರಾದ ಮುಸಲ್ಮಾನರು. ಆದರೆ ಅಲ್ಲಿಯ ಪ್ರಧಾನ ಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತರೆಂದಂತೆ ಅಲ್ಲಿಯ ಸರಕಾರವು ಅಲ್ಪಸಂಖ್ಯಾಕರ ರಕ್ಷಣೆಗಾಗಿ ಮಾಡಿದಷ್ಟು ಕೆಲಸಗಳನ್ನು ಬೇರಾವ ಸರಕಾರವೂ ಮಾಡಿರಲಿಲ್ಲ. ಇದು ಅಸಹ್ಯವಾಗಿಯೇ ಅಲ್ಲಿಯ ಹಿಂದೂ ಮಹಾಸಭೆಯವರು ಕಾಂಗ್ರೆಸ್ ಸರಕಾರದ ವಿರುದ್ಧ 'ಪ್ರತ್ಯಕ್ಷ ಹೋರಾಟ' ಹೂಡಿದ್ದುದು. ಸಾಮೂಹಿಕ ದಂಡ ಹೇರಿ, ಗಲಭೆಗಾರರನ್ನು ಕಠಿಣವಾಗಿ ಶಿಕ್ಷಿಸಿ, ಸಂಯುಕ್ತ ಪ್ರಾಂತ್ಯದ ಸರಕಾರವು ಯಾವ ಪುಂಡರೂ ತಲೆಯೆತ್ತದಂತೆ ಮಾಡಿದ್ದಿತು. ಆದರೆ ಪಾಕಿಸ್ತಾನ್ ಸರಕಾರ ಇದೆಯಲ್ಲಾ! ಸಂಯುಕ್ತ ಪ್ರಾಂತದಲ್ಲಾದ ಆ ಕೆಲವು ಘಟನೆಗಳ ಕುರಿತು ಪಾಕಿಸ್ತಾನ್ ಸರಕಾರವು ಸಂಯುಕ್ತ ಪ್ರಾಂತ್ಯ ಸರಕಾರದಿಂದ ಉದಾಹರಣೆಗಳನ್ನು ಕೇಳಿದ್ದಿತಂತೆ! (ನಮ್ಮ ಮದ್ರಾಸ್ ಪ್ರಾಂತ್ಯವೂ ಮಿ. ಲಿಯಾಕತರ ಮೇಜಿನ ಮೇಲಿನ ಪಾಕಿಸ್ತಾನ್ ನಕಾಶೆಯಲ್ಲಿ ಇದ್ದಿರಬಹುದೆ?) "ನಿಮ್ಮ ಕೋಣೆಯಲ್ಲೇಕೆ ಶಬ್ದ ಮಾಡಿದಿರಿ" ಎಂದು ಆಚೀ ಮನೆಯವನು ಅಧಿಕಾರವಾಣಿಯಿಂದ ಕೇಳಿದರೆ ಯಾರಾದರೂ ಸಹಿಸುವಂತಿದೆಯೆ? ಪಂಡಿತ ಪಂತರು ಪಾಕಿಸ್ತಾನ್ ಕೇಳಿದ್ದ ಉದಾಹರಣೆಗಳನ್ನು ಮೊನ್ನೆ ತನ್ನ ಎಸೆಂಬ್ಲಿ ಸಭೆಯಲ್ಲಿ ಕೊಟ್ಟರು: "ನಮ್ಮ ಮನೇ ವಾರ್ತೆಯೊಳಗೆ ಪಾಕಿಸ್ತಾನವಾಗಲೀ ಇನ್ನಾವುದೇ ರಾಷ್ಟ್ರವಾಗಲೀ ಯಾವುದೇ ರೀತಿಯಿಂದ ಕೈಹಾಕುವುದನ್ನು ನಾನು ಸಹಿಸಲಾರೆ. ನಮ್ಮ ಅಲ್ಪಸಂಖ್ಯಾಕರನ್ನು ನಾವೇ ರಕ್ಷಿಸುತ್ತೇವೆ. ಇಲ್ಲ; ನಮ್ಮ ರಕ್ಷಣಾ ವಿಧಾನಗಳಲ್ಲಿ ಹೊರಗಿನವರು ಕೈಹಾಕುವದನ್ನು ನಾನೆಂದಿಗೂ ಸಹಿಸುವಂತಿಲ್ಲ ನಮ್ಮ ಒಳಗಿನ ರಕ್ಷಣಾ ವ್ಯವಸ್ಥೆಗಳನ್ನು ಪ್ರಶ್ನಿಸಲು ಭಾರತ ಸರಕಾರವೊಂದಕ್ಕೆ ಹೊರತು ಬೇರಾವ ಸರಕಾರಕ್ಕೂ ಹಕ್ಕಿಲ್ಲ. ನಮ್ಮ ಒಳ ವಾರ್ತೆಗಳೊಳಗೆ ತಲೆಹೊಗಿಸುವ ಅಧಿಕಪ್ರಸಂಗಕ್ಕೆ ಹೋಗದಂತೆ ಭಾರತದಲ್ಲಿರುವ ಮುಸಲ್ಮಾನರು ಪಾಕಿಸ್ತಾನಕ್ಕೆ ಎಚ್ಚರಿಕೆ ಕೊಡಲಿ! 'ಪಾಕಿಸ್ತಾನವು ಇಸ್ಲಾಮೀ ರಾಷ್ಟ್ರ. ಮತ್ತೀ ಇಸ್ಲಾಮಿಕ್ ರಾಷ್ಟ್ರವು ವೈರಿಗಳಿಂದ ಮುತ್ತಲ್ಪಟ್ಟಿದೆ. ಎಲ್ಲಾ ಮುಸಲ್ಮಾನರೂ ಅದರ ರಕ್ಷಣೆಗೆ ಬರಬೇಕು' ಎಂದು ಮಿ. ಜಿನ್ನರನ್ನುತಿದ್ದಾರೆ. ಇದರ ಅರ್ಥವೇನು? ಅಡೋಲ್ಫ್ ಹಿಟ್ಲರನ 'ಹೆರೈನ್‌ವೋಕ್' ತತ್ವದಂತೆ, ಭಾರತ ಪಾಕಿಸ್ತಾನಗಳೊಳಗೆ ಘರ್ಷಣೆ ಯೇಳುವಾಗ ಪಾಕಿಸ್ತಾನದ ಪಂಚಮದಳವಾಗಿ ಮುಸ್ಲಿಮರು ಇಲ್ಲಿರತಕ್ಕದ್ದೆಂದು ಇದರ ಅರ್ಥವೆ?" ಎನ್ನುತ್ತಾ ಪಂಡಿತ ಪಂತರು ಮುಸ್ಲಿಂಲೀಗ್ ಸದಸ್ಯರ ಬೆಂಚಿನ ಕಡೆಗೆ ತಿರುಗಿ ಕೇಳಿ ... "ನೀವ ನನ್ನುವಿರಿ ಮೇಲಿನ ತತ್ವದಂತೆ ನೀವೀ ರಾಷ್ಟ್ರಕ್ಕೆ ವಿಧೇಯರಾಗಿರಲು ಸಾಧ್ಯವೇ? ಕಾಶ್ಮೀರವನ್ನು ಆಕ್ರಮಿಸುವ ಸೇನಾದಳಗಳು ಪಾಕಿಸ್ತಾನದೊಳಗಡೆಯಿಂದಲೇ ಸಾಗಿದುವಾಗ ಪಾಕಿಸ್ತಾನದ ಗವರ್ನರ್ ಜನರಲನೇ ಅಧ್ಯಕ್ಷನಾಗಿರುವ ಮುಸ್ಲಿಂ ಲೀಗು ಈ ರಾಷ್ಟ್ರಕ್ಕೆ ವಿಧೇಯತೆಯಿಂದಿರುವುದೆಂದರೆ ಹೇಗದು? ನೀವು ಆ ಸಂಸ್ಥೆಯಲ್ಲಿದ್ದುಕೊಂಡು ಈ ರಾಷ್ಟ್ರಕ್ಕೆ ವಿಧೇಯರಾಗಿರು

(೧೧ನೇ ಪುಟ ನೋಡಿರಿ.)

ನಾರ್ದರ್ನ್

1946ರಲ್ಲಿ ಹೊಸ ದಾಖಲೆಯ ಶಿಖರಕ್ಕೇರಿದೆ.

ಸ್ವೀಕರಿಸಲ್ಪಟ್ಟ ವ್ಯವಹಾರ ... ... ರೂ. 2,04,00,000

ಪೂರ್ಣಗೊಳಿಸಲ್ಪಟ್ಟ ವ್ಯವಹಾರ ... ... ರೂ. 1,72,00,000

ನಾರ್ದರ್ನಿನ ಪ್ರಗತಿಪರ ಜೀವನದಲ್ಲಿ ಇದೊಂದು ಮರೆಯಲಾಗದ ಉಜ್ವಲ ಸಾಹಸ.

ಇಂತಹ ದಾಖಲೆಗೆ ನೆರವಾದ ಸ್ವಪರ ರಾಷ್ಟ್ರಗಳ ಪೋಲಿಸಿದಾರರಿಗೂ ಏಜಂಟರಿಗೂ ಕಂಪೆನಿಯು ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತದೆ.

ಶಿವಪ್ರಸಾದ ಠಾಕರ್ — ಮೆನೇಜಿಂಗ್ ಡೈರೆಕ್ಟರ್.

ಎಮ್. ಸುಂದರರಾಮ ಶೆಟ್ಟಿ — ಏಜನ್ಸಿ ಮೇನೇಜರ್

ಮಂಗಳೂರು ಶಾಖೆ.

ಕೆ. ಪಿ. ಭವಾನಿಶಂಕರ ಶೆಟ್ಟಿ — ಬ್ರಾಂಚ್ ಸೆಕ್ರೆಟರಿ

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಆಹಾರ ನಿಯಂತ್ರಣಕ್ಕೆ ಗಾಂಧಿಜೀಯ ಶಾಪ!

ಆಹಾರ ಧಾನ್ಯ ಮತ್ತು ಅರಿವೆಗಳ ಮೇಲಿನ ನಿಯಂತ್ರಣಗಳು ಕೂಡಲೇ-ಆದಷ್ಟು ಬೇಗನೆ-ರದ್ದಾಗಬೇಕೆಂದು ಕೆಲಕಾಲದಿಂದ ಗಾಂಧಿಜೀ ಕೆಲಸ ಮಾಡಹತ್ತಿದ್ದಾರೆ. ಮಹಾತ್ಮರಿಂದು ನಿಯಂತ್ರಣಗಳ ವಿರುದ್ಧ ಬಂಡಾಯವೆದ್ದಿದ್ದಾರೆ. ಈ ಕಾಲದ ಭಾರತ ರಾಜಕೀಯ ರಂಗದ ರಾಮಬಾಣಗಳೆಂದರೆ ಗಾಂಧಿಜೀಯ ಮಾತುಗಳೇ. ಅವೆಂದೂ ನಿರರ್ಥಕವಾಗುವಂತಿಲ್ಲ. ಆದ್ದರಿಂದ ಆಹಾರ ವಸ್ತು ನಿಯಂತ್ರಣಗಳು ಸದ್ಯಕ್ಕತ್ಯಗತ್ಯವೆಂದು ಎಲ್ಲಾ ಕಾಂಗ್ರೆಸ್ ಸರಕಾರಗಳಿಗೂ ಖಚಿತವಿದ್ದರೂ ಮಹಾತ್ಮರ ಮಾತನ್ನು ಮನ್ನಿಸುವ ಬಗೆ ಹೇಗೆ ಎಂದು ಅವೀಗ ಆಲೋಚಿಸಲಾರಂಭಿಸಿವೆ. ತತ್ಪರಿಣಾಮವಾಗಿ ಈ ನಿಯಂತ್ರಣಗಳ ಆಯುಷ್ಯವು ಕೆಲಕಾಲಕ್ಕೆ ಮೊದಲು ನಿರೀಕ್ಷಿಸಿದ್ದುದಕ್ಕಿಂತ ಈಗ ಕಡಿಮೆಯಾಯಿತೆಂದು ಊಹಿಸಲಡ್ಡಿಯಿಲ್ಲ.

ನಿಯಂತ್ರಣ ನಿರ್ಮೂಲನಾ ಹೆಜ್ಜೆ

ಮಹಾತ್ಮರು ಇತ್ತೀಚೆಗಿತ್ತ ಹೇಳಿಕೆಗನುಸಾರವಾಗಿ, ಅವರು ಆಹಾರ ವಸ್ತುಗಳಂತಹ ನಿತ್ಯೋಪಯೋಗಿ ಸಾಮಾನುಗಳ ನಿಯಂತ್ರಣಗಳಿಗೆ ಆದಿಯಿಂದಲೂ ವಿರೋಧವಿದ್ದರೆಂದು ತಿಳಿದು ಬರುತ್ತದೆ. ಅವರನ್ನುತ್ತಾರೆ: "ಜಾತೀಯ ಗಲಭೆಗಳ ಸಂಬಂಧದ ನನ್ನ ಅಭಿಪ್ರಾಯಗಳ ಮಟ್ಟಿಗೆ ಹಿಂಬಾಲಕರಿಲ್ಲದೆ ನಾನೇ ಹಿಂದೆ ಬಿದ್ದಿದ್ದೇನೆ. ಆದರೆ ಆಹಾರ ಪ್ರಶ್ನೆಯ ಮಟ್ಟಿಗೆ ನಾನಿಟ್ಟ ಹೆಜ್ಜೆಯಲ್ಲಿಯೂ ನನಗಂತಹ ಗತಿಯೊದಗಿಲ್ಲವೆನ್ನಲು ಸಂತೋಷಿಸುತ್ತೇನೆ. ಮಿ. ಕೇಸಿಗಳು ಬಂಗಾಳದ ಗವರ್ನರಾಗಿದ್ದ ಆ ಕಾಲದಲ್ಲೇ ನಾನು ಅವರೊಡನೆ ನಡೆಸಿದ್ದ ಸಂಭಾಷಣೆಗಳಲ್ಲಿ ಆಹಾರವಸ್ತುಗಳ ಕಂಟ್ರೋಲುಗಳಿರಕೂಡದೆಂದು ನಾನು ವಾದಿಸಿದಂತೆ ಆಗಲೇ ನನ್ನ ಅಭಿಪ್ರಾಯ ಇದೇ ಆಗಿತ್ತು. ಆದರಾ ಕಾಲದಲ್ಲಿ ನನ್ನೀ ಅಭಿಮತಕ್ಕೆ ಬೆಂಬಲವಿದೆಯೋ ಇಲ್ಲವೋ ಎಂಬುದೇ ನನಗೆ ತಿಳಿದಿರಲಿಲ್ಲ. ಅಜ್ಞಾತ ಹಾಗೂ ಅತಿ ಪ್ರಸಿದ್ಧ ಸಾರ್ವಜನಿಕರ ಬೆಂಬಲವು ನನಗಿದೆ ಎಂಬುದು ಇತ್ತೀಚೆಗಿನ ವಾದ ವಿವಾದಗಳಿಂದ ಕಂಡುಬಂದಿರುವುದು ನಿಜಕ್ಕೂ ಆಶ್ಚರ್ಯಾನಂದದ ವಿಷಯ. ಈ ಸಂಬಂಧವಾಗಿ ನನಗೆ ಬಂದಿರುವ ಹೇರಳ ಪತ್ರ ವ್ಯವಹಾರಗಳ ಪೈಕಿ ನನ್ನ ಅಭಿಪ್ರಾಯಕ್ಕೆ ಅಸಮ್ಮತಿಸುವಂತಹ ಒಂದೇ ಒಂದಾದರೂ ಅದರಲ್ಲಿರುವ ನೆನಪು ನನಗಿಲ್ಲ."

ಗಾಂಧೀವಾಣಿಯ ಪ್ರಭಾವ

ಭಾರತ ಸರಕಾರವು ಕೆಲಕಾಲಕ್ಕೆ ಮೊದಲು 'ಆಹಾರ ಧಾನ್ಯಗಳ ಧೋರಣಾ ಸಮಿತಿ'ಯೊಂದನ್ನು ರಚಿಸಿದ್ದಿತು. ಆ ಸಂದರ್ಭದಲ್ಲೇ ನಿಯಂತ್ರ ರದ್ದಾಗಬೇಕೆಂದು ಗಾಂಧಿಜೀ ಬಹಿರಂಗ ವಾದಕ್ಕಿಳಿದುದು. ತತ್ಪರಿಣಾಮವಾಗಿ, ಸಮಿತಿ ಸದಸ್ಯರಿದಿರ, ಹೊಸ ಪ್ರಶ್ನೆ ಮೂಡಿದಂತಾಯಿತು. ಕೆಲವರು ಗಾಂಧೀ ಭಕ್ತರಾದರು; ಭಿನ್ನಾಭಿಪ್ರಾಯಗಳಿದ್ದುವು. ಕೊನೆಗೆ 'ರಾಷ್ಟ್ರದ ಸ್ಥಿತಿ ಅಭಿವೃದ್ಧಿಗೊಳ್ಳುತ್ತಾ ಹೋದಂತೆ ನಿಯಂತ್ರಣವನ್ನು ಸಡಲಿಸುತ್ತಾ ಬರತಕ್ಕದ್ದು' ಎಂಬುದೇ ಆ ಸಮಿತೀ ವರದಿಯಲ್ಲಿ ಬಹುಮತದ ಅಭಿಪ್ರಾಯವಾಗಿ ಮೂಡಿತು. ಇದೇ ತಾ. 5 ಮತ್ತು 6ರಲ್ಲಿ ಸರ್ವ ಪ್ರಾಂತೀಯ ಮಂತ್ರಿಗಳ ಅಥವಾ ಅವರ ಪ್ರತಿನಿಧಿಗಳ ಆಹಾರ ಸಮ್ಮೇಲನವೊಂದನ್ನು ಭಾರತ ಸರಕಾರದ ಆಹಾರ ಮಂತ್ರಿ ಡಾ| ರಾಜೇಂದ್ರ ಪ್ರಸಾದರು ದಿಲ್ಲಿಯಲ್ಲಿ ಕರೆದಿದ್ದರು. ಈ ಸಂದರ್ಭಕ್ಕೆ ಸರಿಯಾಕೆ ಗಾಂಧಿಜೀ ನಿಯಂತ್ರಣ ರದ್ದತಿಯ ಮತ್ತೊಂದು ಪ್ರಾಮುಖ್ಯ ಹೇಳಿಕೆಯಿತ್ತರಲ್ಲದೆ ಸಮ್ಮೇಲನದ ಮುಂದೆ ಪ್ರತ್ಯಕ್ಷ ಹಾಜರಾಗಿಯೂ ಉಪದೇಶ ಕೊಟ್ಟಿದ್ದರು.

ಸರಕಾರದ ಧೋರಣೆ

ಸದ್ಯಸ್ಥಿತಿಯಲ್ಲಿ ಆಹಾರ ನಿಯಂತ್ರಣವನ್ನು ರದ್ದುಪಡಿಸುವದು ಅನಾಹುತಕಾರಿಯೆಂದೇ ಎಲ್ಲಾ ಪ್ರಾಂತೀಯ ಕಾಂಗ್ರೆಸ್ ಮಂತ್ರಿಗಳ ಅಭಿಪ್ರಾಯವಿತ್ತೆಂದು ತಿಳಿದುಬರುತ್ತದೆ. ಆಹಾರ ಸಮ್ಮೇಲನದಲ್ಲಿ ನಿಯಂತ್ರಣವನ್ನು ಕೂಡಲೇ ನಿರ್ಮೂಲಿಸಬೇಕೆನ್ನುವ, ನಿಯಂತ್ರಣವನ್ನು ಇನ್ನಷ್ಟು ಬಿಗಿಗೊಳಿಸಬೇಕೆನ್ನುವ-ಎರಡೂ ಅಭಿಪ್ರಾಯಗಳು ಮುಂದೆ ಬಂದಿದ್ದವಂತೆ. ಈ ಕುರಿತು ಜಿ. ಡಿ. ಬಿರ್ಲಾ, ಡಾ| ವಿ. ಕೆ. ಆರ್. ವಿ. ರಾಯರಂತಹ ತಜ್ಞರ ಅಭಿಮತ ಹೀಗಿದೆ:- 'ಈಗ ಪ್ರಶ್ನೆಯುಳಿದಿರುವದು ನಿಯಂತ್ರಣವೋ ಅಥವಾ ನಿಯಂತ್ರಣ ರದ್ದತಿಯೋ? ಎಂಬುದಲ್ಲ. ವ್ಯವಸ್ಥಾಪೂರ್ವಕ ಅನುಕ್ರಮವಾಗಿ ನಿಯಂತ್ರಣ ರದ್ದತಿಯೋ, ಅಥವಾ ಇಡೀ ಆಹಾರ ನಿಯಂತ್ರಣದ ಅಡಿಮೇಲೋ ಎಂಬುದೊಂದೇ. ಸಾಕಷ್ಟು ಸಂಗ್ರಹ ಸರಬರಾಯಿಯಿದ್ದರೇನೇ ಇಂದಿನ ಆಹಾರ ಪರಿಮಾಣ ಪದ್ಧತಿಯನ್ನು ಉಳಿಸಿಕೊಳ್ಳಬಹುದೆಂಬುದು ಸ್ಪಷ್ಟವಿದೆ. ಸದ್ಯದ 12ಔನ್ಸು ರೇಶನ್ ನಿರ್ಧಾರವು ಜ್ಯಾರಿಯಲ್ಲಿರಬೇಕಾದರೆ ಸುಮಾರು 44,08,000ಟನ್ ಧಾನ್ಯವಾದರೂ ಹೊರಗಿನಿಂದಾಮದಾಗಬೇಕು. ಇದು ತೀರಾ ಅಸಾಧ್ಯ. ಆದ್ದರಿಂದ ಒಂದೋ ಏಕ ಮಟ್ಟದಲ್ಲಿ ಹಸುಗೆ ಪರಿಮಾಣವನ್ನು ತಗ್ಗಿಸಬೇಕು; ಇಲ್ಲವೇ ಒಳಗಿನ ಉತ್ಪತ್ತಿಯು 2 ಮಿಲಿಯ ಟನ್ನುಗಳಷ್ಟಾದರೂ ಹೆಚ್ಚಾಗಬೇಕು.' ಭಾರತ ಸರಕಾರವು ಎಲ್ಲಾ ವಿಷಯಗಳನ್ನು ಪರ್ಯಾಲೋಚಿಸಿ, ಶೀಘ್ರದಲ್ಲೇ ಒಂದು ನಿರ್ಧಾರಕ್ಕೆ ಬರುವದೆಂದು ಆಹಾರ ಮಂತ್ರಿ ಡಾ| ರಾಜೇಂದ್ರ ಪ್ರಸಾದರು ಆಹಾರ ಸಮ್ಮೇಲನದ ಕೊನೆಯಲ್ಲಂದರು. "ಈ ಕೆಳಗಿನ ಕೆಲವು ಮೂಲ ಸಂಗತಿಗಳನ್ನು ಕಡೆಗಣಿಸಲಾಗುವುದಿಲ್ಲ. ಜನಪ್ರತಿನಿಧಿ ಮಂತ್ರಿಗಳೇ ನಡೆಸುವದಾದರೂ ಆಹಾರ ನಿಯಂತ್ರಣಗಳ ಮೇಲೆ ಜನತೆಯ ಅಪ್ರಿಯತೆ ಬೆಳೆಯುತ್ತಿರುವುದು-ಒಳಗಡೆಯ ಧಾನ್ಯ ಸಂಗ್ರಹ ಕಾರ್ಯದ ಕಷ್ಟಗಳು ಹೆಚ್ಚುತ್ತಾ ಹೋಗುತ್ತಿರುವುದು-ಆಮದು ಪಡಿಸಿಕೊಳ್ಳುವ ಧಾನ್ಯಗಳ ಬೆಲೆಯು ತೀವ್ರವಾಗಿ ಏರುತ್ತಿರುವುದು." ಎಂದು ಸೂಚಿಸಿ ಹಿಂದೀ ಸರಕಾರವು ಕೈಕೊಳ್ಳುವ ಧೋರಣೆಗೆ ಪ್ರಾಂತಿಕ ಸರಕಾರಗಳು ನೆರವೀಯಲಿ ಎಂದು ಡಾ| ರಾಜೇಂದ್ರರು ಕೇಳಿಕೊಂಡರು.

ಗಾಂಧಿಜೀಯ ಹೇಳಿಕೆ

ಆಹಾರ ಸಮ್ಮೇಲನದ ಸಂದರ್ಭನೋಡಿ ಗಾಂಧಿಜೀಯಿತ್ತ ಪ್ರಾಮುಖ್ಯ ಹೇಳಿಕೆಯು ಗಮನಾರ್ಹವಿರುವುದರಿಂದ ಅದರ ಕೆಲವಂಶವನ್ನು ಇಲ್ಲಿ ಕೊಡಲಾಗಿದೆ. "ನಿಯಂತ್ರಣವು ಕೂಡಲೇ-ಹೆಚ್ಚೆಂದರೆ ಇಂದಿನಿಂದಾರು ತಿಂಗಳುಗಳೊಳಗೆ-ಹೋಗಲೇ ಬೇಕೆಂದು ಆದಿಯಲ್ಲೇ ಹೇಳಿದ್ದ ನನ್ನ ಅಭಿಪ್ರಾಯವನ್ನು ಬದಲಾಯಿಸುವಂತೆ ಮಾಡಬಲ್ಲುದಾವುದನ್ನೂ ನಾನಂದಿನಿಂದ ಇದು ವರೆಗೆ ಕೇಳಿದ್ದಿಲ್ಲ. ನಿಯಂತ್ರಣವು ವಂಚನೆಯ ಹೆಚ್ಚಳಕ್ಕೆ, ಸತ್ಯವನ್ನು ಮುಚ್ಚಿಡುವದಕ್ಕೆ, ಕಳ್ಳಸಂತೆಯ ಅಭಿವೃದ್ಧಿಗೆ ಮತ್ತು ಕೃತಕ ಅಭಾವಕ್ಕೆ ಆಸ್ಪದವೀಯುತ್ತದೆ. ಎಲ್ಲಕ್ಕಿಂತ ಕೆಟ್ಟದೆಂದರೆ ಅದು ಜನತೆಯಲ್ಲಿ ಪೌರುಷತ್ವವಳಿಯುವಂತೆಸಗಿ, ಅವರ ಕಾರ್ಯೋನ್ಮುಖ ಪ್ರವೃತ್ತಿಯನ್ನು ಅಪಹರಿಸುತ್ತದೆ. ಕಳೆದೊಂದು ತಲೆಮಾರಿನಿಂದ ಜನರು ಕಲಿಯುತ್ತಾ ಬಂದಿರುವ ಸ್ವಾವಲಂಬನಾ ಬುದ್ಧಿಗಿದು ಕುಠಾರಪ್ರಾಯವಾಗಿದೆ. ಅವರು ಜಮುಜಾಹಾರಿಗಳಾಗುವಂತಿದು ಸಾಧಿಸಿದೆ. ದೊಡ್ಡ ಪರಿಮಾಣದ ಧ್ವಂಸ ಕೃತ್ಯ ಹಾಗೂ ಅನ್ನ ವಸ್ತ್ರ ನಿವಾಸಗಳ ಅಭಾವ ಮತ್ತು ಅನಗತ್ಯ ಕೊಲೆಗಳಿಗೆ ಕಾರಣವಾದ, ಜನ ಬದಲಾವಣೆಯ ಹುಚ್ಚಾಟದಂತಹ ಮಹಾದುರಂತಕ್ಕೆ ಸಮಾನವಲ್ಲವೆಂದರೂ ಎರಡನೆಯದಾದ ದುರಂತವೆಂದರೆ ಇದೇ. ಕಳೆದ ಲೋಕಯುದ್ಧದ ದುರಾಚಾರ ಪದ್ಧತಿಗಳಲ್ಲಿ ಆಹಾರ ನಿಯಂತ್ರಣವು ಒಂದು. ಆ ಕಾಲದಲ್ಲಿ ಆಹಾರ ಧಾನ್ಯಗಳು ಅಧಿಕ ಪರಿಮಾಣದಲ್ಲಿ ಹೊರಗಡೆಗೆ ರಫ್ತಾಗುತಿದ್ದುದರಿಂದ, ಆಗ ಪ್ರಾಯಶಃ ಆಹಾರ ನಿಯಂತ್ರಣವು ಅನಿವಾರ್ಯವಾಗಿತ್ತು. ಈ ಅಸ್ವಾಭಾವಿಕ ರಫ್ತುಗಳು ಮಾನವ ನಿರ್ಮಿತ ಅಭಾವವನ್ನು ನಿರ್ಮಿಸಿದುದೂ ಎಷ್ಟೇ ದೋಷಗಳಿದ್ದರೂ ಹಸುಗೆ ಪದ್ಧತಿಯನ್ನು ಅಸ್ತಿತ್ವಕ್ಕೆ ತಂದುದೂ ಸಹಜವೇ ಇದೆ. ಈಗ ನಮಗಿಚ್ಛೆಯಿದ್ದಲ್ಲಿ

(೬ನೇ ಪುಟ ನೋಡಿರಿ)

ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

ದೇಶೋನ್ನತಿಯನ್ನು ಬಯಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು. ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು. ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅತ್ಯಂತ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒಪ್ಪಿಸಿಕೊಡುವುದು, ಮೊದಲಾದುವುಗಳು ದೇಶೋನ್ನತಿಯನ್ನು ಬಯಸುವ ಬ್ಯಾಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕ ಜನತೆಯ ಸೇವೆಯನ್ನು ಯುದ್ಧ ಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಜ್ಞಾನದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906.

CANARA BANK LIMITED.

PUBLICATION.

ಉಡುಪಿ ಕೊರ್ಟ್‌ಪೇಟೆ ರೋಡ್ ಕಾಪೆಟ್ಟಿನಲ್ಲಿರುವ ಯುಸ್. ಬಿ. ಮಿನೇಜ್ಸರ ಹೆಂಡತಿ ಮೇರಿ ಮಿನೆಜ್ಸಳಾದ ನಾನು ಈ ಮೂಲಕ ಸರ್ವಜನರ ತಿಳುವಳಿಕೆ ಬಗ್ಗೆ ಪ್ರಕಟಿಸುವದೇನೆಂದರೆ.

ನನ್ನ ಗಂಡ ಯುಸ್. ಬಿ. ಮಿನೇಜ್ಸರಿಗೆ ಅವರ ತಂದೆಯಿಂದ ಪಾಲಿಗೆ ಸಿಕ್ಕಿದ ಹಣದ ವೃದ್ಧಿಯಿಂದಲೂ ನನ್ನ ದಾರಿ ಹಣ (ದೋತಿ) ವೃದ್ಧಿಯಿಂದ ಕೂಡಾ ಸದ್ರಿ ಕಾಪೆಟ್ಟಿನಲ್ಲಿ ಸುಮಾರು ಒಂದು ಎಕ್ರೆ ಬಾಗಾಯ್ತು, ಒಂದು ಎಕ್ರೆ ಗದ್ದೆಗಳು ಸಹಾ ಕ್ರಯಕ್ಕೆ ಪಡೆದು-2 ಮಾಳಿಗೆ ಚಾವಣಿ ಕಟ್ಟೋಣಗಳು ಕಟ್ಟಿ-ನಾನು, ನನ್ನ ಗಂಡ-ನ ಮಕ್ಕಳು ಕೂಡಾ-ವಾಸ್ತವ್ಯದಲ್ಲಿ [illegible] ಸುಖದಿಂದಿರುತ್ತೇವೆ-ಆದ್ದರಿಂದ ನಮಗೆಲ್ಲರಿಗೂ ಹಕ್ಕು ಇರುತ್ತದೆ-ನನಗೆ ಸಾಲವಿರುವುದಿಲ್ಲ. [illegible] ಯಿಲ್ಲ. ಹೀಗಿರುತ್ತಾ ನನ್ನ ಗಂಡ-ಯುಸ್. ಬಿ. ಮಿನೇಜ್ಸರು-ವ್ಯಭಿಚಾರದ ಕಸುಬಿಗೆ ಸೇರಿ-ನಂತರ ಮನೆಯಲ್ಲಿ ಭಾರಿ ಜಗಳಕ್ಕೆ ಶುರು ಮಾಡಿದ್ದಲ್ಲದೆ-ಸದ್ರಿ ವ್ಯಭಿಚಾರದ ಸಂಗ್ಗರ ಮೋಹದಿಂದಲೂ, ದುರ್ಬೋಧನೆಯಿಂದಲೂ ಸದ್ರಿ ಬಾಗಾಯ್ತು ಸ್ಥಳ ಕಟ್ಟೋಣಗಳನ್ನೂ ಗದ್ದೆಗಳನ್ನೂ ಕೂಡಾ-ಪರಾಧೀನ ಮಾಡುವದಾಗಿ ಪತ್ನಿ ಸದ್ರಿ ಯುಸ್. ಬಿ. ಮಿನೇಜ್ಸರು ಹೇಳುತ್ತಾ ಬರುತ್ತಾರೆ. ಹಾಗೆ ಪರಾಧೀನ ಮಾಡುವದು ಅವರಿಗೆ ಒಬ್ಬರಿಗೆ ಹಕ್ಕಿರುವದಿಲ್ಲ. ಅವರಿಗೆ ಗರ್ಜಕೂಡಾ ಇರುವದಿಲ್ಲ. ಸದ್ರಿ ಆಸ್ತಿಯಲ್ಲಿ ನನಗೂ-ನನ್ನ ಮಕ್ಕಳಿಗೂ ಹಕ್ಕು ಇರುತ್ತದೆ. ಅವರು ಮಾಡಬಹುದಾದ ಯಾವತ್ತು ಪರಾಧೀನಗಳು ನನ್ನ ಮತ್ತು ಮಕ್ಕಳ ಮೇಲೆ-ಬದ್ಧ ಪಡ್ಡತಕ್ಕದ್ದಲ್ಲ.-ಅಸಿಂಧುವಾಗಿರುತ್ತದೆ-ಆದ್ದರಿಂದ-ಸದ್ರಿ ಭಾಗಾಯ್ತು ಕಟ್ಟೋಣಗಳು-ವ ಗದ್ದೆಗಳನ್ನು ಯಾರೂ-ಅವರಿಂದ-ಪರಾಧೀನಕ್ಕೆ ತೆಗೆದು ಕೊಳ್ಳಬಾರದಾಗಿಯೂ ಮೂಲ್ಕ-ಸರ್ವಜನರ ತಿಳುವಳಿಕೆ ಬಗ್ಗೆ ಪ್ರಕಟಿಸಿರುತ್ತೇನೆ.

ಮೇರಿ ಮಿನೆಜಸ್,

ಉಡುಪಿ 6-11-47.

ಕಾಶ್ಮೀರದ ಕಾಳಗ

ಕಾಶ್ಮೀರದಲ್ಲಿ ಆಕ್ರಮಣಗಾರ ಗೂಂಡಾದಳಗಳೂ ಭಾರತ ಸೇನೆಯೂ ಹೋರಾಟಕ್ಕೆ ತೊಡಗಿ ಎರಡು ವಾರಗಳಾದುವು. ಆದರೂ ಅಲ್ಲಿಯ ಕೆಲಸ ಮುಗಿಯದಿರುವುದು ಮಾತ್ರವಲ್ಲ; ರಾಜಧಾನಿ ಶ್ರೀನಗರದ ಅಪಾಯವು (ಇದೀ ಕಾಶ್ಮೀರವು ಹಿಂದೀ ಸೇನೆಯು ಅಲ್ಲಿಯ ನೆಲದಲ್ಲಿ ಕಾಲೂರಿದ ಮುಹೂರ್ತದಿಂದಲೇ ಗಂಡಾಂತರದಿಂದ ಪಾರಾಗಿದ್ದರೂ) ಪೂರ್ತಿದೂರವಾಯಿತೆನ್ನಲಾಗುವ ಸ್ಥಿತಿ ಕೂಡಾ ಅಲ್ಲಿಲ್ಲ. 'ಪುಂಡರ ತಂಡ' ಎಂದು ಕೆಲವರಿಂದ ತಾತ್ಸಾರ ಮಾಡಲ್ಪಟ್ಟ—'ಬೇರಾರೂ ಅಲ್ಲ; ಕಾಶ್ಮೀರದ ಸ್ವಾತಂತ್ರ್ಯ ಪ್ರೇಮೀಜನರು' ಎಂದು ಪಾಕಿಸ್ತಾನದಿಂದ ಗೌರವಿಸಲ್ಪಡುತ್ತಿರುವ—ಕಾಶ್ಮೀರದ ಆಕ್ರಮಣಗಾರರೆಂದರೆ ಎಂತಹ ಸುಸಂಘಟಿತ ಸೇನೆಯೆಂಬುದು ಅವರ ಇಂದಿನ ಸಂಖ್ಯೆ, ಶಸ್ತ್ರ, ಶಕ್ತಿ ಮತ್ತು ಸೇನಾ ಸಂಬಂಧಿಯ ಹಾಗೂ ಸೇನಾಶಿಸ್ತುಗಳ ಮೇಲಿಂದ ಸುಸ್ಪಷ್ಟವಿದೆ. ಭಾರತ ಸೇನೆಯು ಶ್ರೀನಗರದಲ್ಲಿಳಿಯಲು 24 ಘಂಟೆ ತಡಮಾಡುತ್ತಿದ್ದರೆ ರಾಜಧಾನಿಯು, ದಿನ ತಡವಾಗುತ್ತಿದ್ದರೆ ಕಾಶ್ಮೀರದ ಭವಿಷ್ಯವೇ ಬದಲಾಗಿ ಹೋಗುತಿತ್ತು. ಯುದ್ಧವೀಗ ಹಿಂದೀ ಸೇನೆಯ ಅನುಕೂಲ ಗತಿ ಹಿಡಿಯಿತೆಂಬುದನ್ನು ಈಗ ಬರುತ್ತಿರುವ ವಾರ್ತೆಗಳು ಸಾರುತ್ತಿವೆ. ಅಲ್ಲಿ ಅತಿ ಕಠೋರ ಕೆಲಸವಾಗಲಿದೆ; ಆಗಿಯೇ ತೀರುವುದು! ಆದರೆ ಅಷ್ಟರಿಂದಲೇ ನಮ್ಮ ಪಾಲಿನ ದುರ್ದೈವ ಮುಗಿಯುವುದಿಲ್ಲ. ಕಾಶ್ಮೀರ ಸಮರವು ಒಂದು ಮಹಾಗ್ರಂಥದ ಮುನ್ನುಡಿ ಮಾತ್ರ. ಅದನ್ನನುಸರಿಸಿ ಗ್ರಂಥದ ನಿಜ ಪುಟಗಳನ್ನು ಮಗುಚಲಿಕ್ಕಿದೆ, ಎಂಬುದೀಗ ದಿನದಿನಕ್ಕೆ, ಕ್ಷಣಕ್ಷಣಕ್ಕೆ ಸ್ಪಷ್ಟವಾಗುತ್ತಾ ಬಂದಿದೆ.

ಲಿಯಾಖತ್—ಪಟೇಲ್

ಪಾಕಿಸ್ತಾನದ ಪ್ರಧಾನ ಮಂತ್ರಿ ಮಿ. ಲಿಯಾಖತ್ ಅಲೀಖಾನರು ಭಾರತ ಸರಕಾರದ ಮೇಲೆ ಮಾಡಿರುವ ಆರೋಪ—ಭಾರತದ ಗೃಹ ಮಂತ್ರಿ ಸರ್ದಾರ್ ಪಟೇಲರು ಆದಕ್ಕಿತ್ತಿರುವ ಉತ್ತರ ಭಾರತ ಪಾಕಿಸ್ತಾನ್ ಸರಕಾರಗಳು ಪರಸ್ಪರ ನಿಷೇಧಿಸಿಕೊಂಡಿರುವುದು-ಎರಡೂ ಸರಕಾರಗಳ ಅಧಿನಾಯಕರಿಗೆ ಸೇನಾ ಸಂಗ್ರಹದ ಆವಶ್ಯಕತೆ ಹೊಳೆಯುತ್ತಿರುವುದು—ಒಳಗಿಂದೊಳಗೆ, ಅಡ್ಡಹಾದಿಗಳಲ್ಲಿ ನಡೆದಿರುವ ಸಿದ್ಧತೆಗಳು-ಇವೆಲ್ಲವೂ ಭವಿಷ್ಯವನ್ನು ಕಣ್ಣಿಗೆ ಕಟ್ಟಿ ಕಾಯುವಂತೆ ಮಾಡಿವೆ.

ಮಿ. ಲಿಯಾಖತರ ಹೇಳಿಕೆ

ಲಾಹೋರಿನಲ್ಲಿ ಕಾಹಿಲೆಯಿಂದ ಮಂಚ ಹಿಡಿದಲ್ಲಿಂದಲೇ ಪಾಕಿಸ್ತಾನದ ಪ್ರಧಾನ ಮಂತ್ರಿ ಮಿ. ಲಿಯಾಖತರು ತನ್ನ ಜನತೆಗಿತ್ತ ಆಕಾಶವಾಣಿ ಭಾಷಣದ ಸಾರ ಹೀಗಿದೆ: "ದೇವರ ಭೂಮಿಯ ಈ ತುಂಡು (ಕಾಶ್ಮೀರ) ಇಂದಿನ ಆಪತ್ತೀರ್ಣದಾಯೀ ಅಮೃತಸರದ ಕರಾರಿಗನ್ವಯಿಸಿ ಬ್ರಿಟಿಷರಿಂದ ಓರ್ವ ಡೋಗ್ರಾ ಕ್ಷತ್ರಿಯನಿಗೆ ಅಲ್ಪ ಮೌಲ್ಯ ರೂ. 75 ಸಾವಿರಕ್ಕೆ ಮಾರಿ ಹೋಗಿತ್ತು. ಅವನ ವಂಶಸ್ಥರೇ ಆದ ಇಂದಿನ ಮಹಾರಾಜರು ತನ್ನ ವಂಶಾನುಗುಣವಾಗಿ ಕಾಶ್ಮೀರದ ಪ್ರಜೆಗಳೆಂದರೆ ಅಷ್ಟು ಜಾನುವಾರುಗಳೆಂದೇ ಗಣಿಸಿದ್ದಾರೆ. ಕಳೆದ ನೂರು ವರ್ಷಗಳ ಈ ಡೋಗ್ರಾ ಆಳ್ವಿಕೆಯಿಂದಾಗಿ ಅತ್ಯುಚ್ಚ ಗುಣಗಳ ಅತ್ಯಾಕರ್ಷಣೀಯ ಕಾಶ್ಮೀರೀ ಜನಾಂಗವು ಶೋಚನೀಯ ದುಸ್ಥಿತಿಯ ತಳಕ್ಕೇನೇ ಇಳಿಯುವಂತಾಗಿದೆ. ಇತ್ತೀಚೆಗಿನ ವರುಷಗಳಲ್ಲಿ ಅವರು ತಮ್ಮ ಸ್ವಾತಂತ್ರ್ಯಕ್ಕಾಗಿ ಹಲವು ಹೋರಾಟಗಳನ್ನು ಹೂಡಿದ್ದರು. ದಮನಿಸಲ್ಪಟ್ಟ ಪ್ರತಿಸಲವೂ ಈ ನಿರಂಕುಶಾಡಳಿತೆಯ ವಿರುದ್ಧವಾಗಿ ತಲೆ ಎತ್ತುತ್ತಾ ಬಂದಿದ್ದರು. ಈ ದಿನ ಕಾಶ್ಮೀರದ ಜನತೆಯು ತಮ್ಮ ಸ್ವಾತಂತ್ರ್ಯಕ್ಕಾಗಿ ಮಾತ್ರವಲ್ಲ; ತಮ್ಮ ಇರುವಿಕೆಗಾಗಿಯೂ ಹೋರಾಡುತಿದ್ದಾರೆ. ಮುಸಲ್ಮಾನರ ನಿರ್ನಾಮಕ್ಕಾಗಿ ಹೂಡಲ್ಪಟ್ಟಿರುವ ಹಂಚಿಕೆಯೆಂಬ ವಿಸ್ತೃತ ಬಲೆಯ ತೂತಿನಲ್ಲಿ ಅವರಿಂದು ಸಿಕ್ಕಿ ಬಿದ್ದಿದ್ದಾರೆ. ಈ ಹಂಚಿಕೆಯು ಅಲ್ವಾರಿನಲ್ಲಿ, ಭರತಪುರದಲ್ಲಿ ಪಾಟಿಯಾಲಾದಲ್ಲಿ, ಫರಿದ್‌ಕೋಟದಲ್ಲಿ ಕಪೂರ್ಥಲಾದಲ್ಲಿ ವಿಜಯಿಯಾಯಿತು. ಇವೆಲ್ಲಾ ಸಂಸ್ಥಾನಗಳೂ ಹಿಂದೀ ಕೇಂದ್ರಕ್ಕೆ ಸೇರಿದವುಗಳೇ ಎಂಬುದು ನಿಮ್ಮ ಗಮನದಲ್ಲಿರಲಿ. ಕೇವಲ ನಿನ್ನೆಯ ತನಕವೂ ಕಪೂರ್ಥಲಾದಲ್ಲಿ ಮುಸಲ್ಮಾನರು ಬಹುಸಂಖ್ಯಾಕರಾಗಿದ್ದರು. ಆದರೀದಿನ ಅಲ್ಲಿ ಒಬ್ಬನೇ ಒಬ್ಬನಾದರೂ ಉಳಿದಿರುವುದು ಅಸಂಭವ. ಈ ಸಂಸ್ಥಾನಗಳ ಮುಸಲ್ಮಾನರನ್ನು ರಕ್ಷಿಸಬೇಕೆಂದು ನಾವು ಭಾರತ ಸರಕಾರವನ್ನು ಕೇಳಿಕೊಂಡಾಗ, ಇದು ತಾನು ಕೈಹಾಕಲಾಗದ ಸಂಸ್ಥಾನಗಳ ಗೃಹಕೃತ್ಯಕ್ಕೆ ಸಂಬಂಧಿಸಿದ ಸಂಗತಿಯೆಂಬುದು ಉತ್ತರ ಬಂದಿತ್ತು.

ಸಿಖ್ಖರು ಮತ್ತು 'ಆರ್. ಯಸ್. ಯಸ್.'

ಪೂರ್ವ ಪಂಜಾಬು ಸಂಸ್ಥಾನಗಳ ಮುಸಲ್ಮಾನ್ ಜನತೆಯನ್ನು ನಿರ್ಮೂಲಿಸಿಯಾದ ಮೇಲೆ ಆ ವಿಧ್ವಂಸಕ ಶಕ್ತಿಗಳು ಜಮ್ಮು ಮತ್ತು ಕಾಶ್ಮೀರದ ಕಡೆಗೆ ತಿರುಗಿದ್ದುವು. ಸಪ್ಟಂಬರ್ ಅಂತ್ಯ ಭಾಗದಲ್ಲಿ 'ಅಜಾದ್ ಹಿಂದ್ ಫೌಜ್' ಮತ್ತು 'ಆರ್. ಯಸ್. ಯಸ್.'ನವರು ತಮ್ಮ ಕೇಂದ್ರ ಕಚೇರಿಯನ್ನು ಅಮೃತಸರದಿಂದ ಜಮ್ಮುವಿಗೆ ವರ್ಗಾಯಿಸಿಕೊಂಡುದಲ್ಲದೆ, ನಿರಾಶ್ರಿತರೆಂದು ಹೇಳಲ್ಪಟ್ಟ ಸಿಖ್ಖರು ಸಹಸ್ರ ಸಂಖ್ಯೆಯಲ್ಲಿ ಕಾಶ್ಮೀರದೊಳಕ್ಕೆ ನುಗ್ಗ ಹತ್ತಿದರು. ಈ ನಿರಾಶ್ರಿತ ನಾಮಧಾರೀ ಸಿಖ್ಖರು ಪೂರ್ವ ಪಂಜಾಬಿನಿಂದ ಬಂದಿದ್ದರಲ್ಲದೆ ಪಶ್ಚಿಮ ಪಂಜಾಬಿನಿಂದಲ್ಲ. ಅವರು ಆಧುನಿಕ ಶಸ್ತ್ರೋಪಕರಣ ಸಜ್ಜಿತರಾಗಿಯೇ ಬಂದಿದ್ದರು; ಸಂಸ್ಥಾನದ ಅಧಿಕಾರಿಗಳು ಇನ್ನಷ್ಟನ್ನು ಅವರಿಗೊಸಿಕೊಟ್ಟರು. ಅವರು ಪೂರ್ವ ಪಂಜಾಬಿನಲ್ಲಿ ನಡೆಸಿದ ತಮ್ಮ ಉದ್ಯೋಗಗಳನ್ನು ಅದೇ ವಿಧಾನದಿಂದ ಜಮ್ಮು ಮತ್ತು ಪೂಂಚ್‌ಗಳಲ್ಲಿ ನಡಿಸಲಾರಂಭಿಸಿ, ಅಲ್ಲಿಯ ಭಯಂಕರ ನಾಟಕವನ್ನೇ ಇಲ್ಲಿ ಮತ್ತೊಮ್ಮೆ ಆಡಿದ್ದರು. ಒಕ್ಟೋಬರ್ ಆದಿಯಲ್ಲೇ ನಿರಪರಾಧಿ ಕಾಶ್ಮೀರೀ ಜನತೆಯ ಮೇಲಿನ ಅಮಾನುಷ ಅತ್ಯಾಚಾರಗಳ ವಾರ್ತೆಗಳು ಹಬ್ಬಿದ್ದುವು. ಅಲ್ಪಾವಧಿಯಲ್ಲಿ ಭಯಭೀತ ಸಹಸ್ರಾವಧಿ ಕಾಶ್ಮೀರೀ ನಿರಾಶ್ರಿತರು ಪಾಕಿಸ್ತಾನದೊಳಗೆ ಓಡಿಬರಹತ್ತಿದರು.

ಅದು ಸ್ವಾತಂತ್ರ್ಯ ಸಮರ

ಇಂತಹ ದುಸ್ಥಿತಿಯೊದಗಿದಾಗಲೇ ಕೇವಲ ಗಲಿಬಿಲಿಗೊಂಡ ಕಾಶ್ಮೀರೀ ಜನತೆ ತಮ್ಮ ದಬ್ಬಾಳಿಕೆಗಾರರ ಮೇಲೆ ತಿರುಗಿಬಿದ್ದದ್ದು. ಕಾಶ್ಮೀರಿಗಳಿಗೆ, ಅದರಲ್ಲೂ ವಿಶೇಷತಃ ಪೂಂಚ್‌ನವರಿಗೆ, ಹಜ಼ಾರಾ ಮತ್ತು ಪಶ್ಚಿಮ ಪಂಜಾಬುಗಳಲ್ಲಿ ಹಲವು ಸಂಬಂಧಿಕರಿದ್ದಾರೆ. ಹೀಗಾಗಿ ಪಾಕಿಸ್ತಾನದ ಕೆಲವೆಡೆಗಳವರು ವಿಶೇಷ ಉದ್ರೇಕಗೊಳ್ಳುವಂತಾಯಿತು. ಅಂತೆಯೇ ಕಾಶ್ಮೀರದ ಅತ್ಯಾಚಾರಗಳಿಂದ ಉದ್ವೇಗಕ್ಕೀಡಾದ ಗಡಿನಾಡು ಪ್ರಾಂತ್ಯ ಮತ್ತು ಗುಡ್ಡಗಾಡುಗಳವರು ತಮ್ಮ ಮುಸ್ಲಿಂ ಬಂಧುಗಳ ಸಹಾಯಕ್ಕಾಗಿ ಧಾವಿಸಿದರು. ಇಂದೀಗ ದಬಾಯಿಸಲ್ಪಟ್ಟು ಗುಲಾಮರಾಗಿ ಮುತ್ತಿಗೆಯೊಳಗೆ ಸಿಕ್ಕಿಬಿದ್ದಿರುವ ಆ ಕಾಶ್ಮೀರಿ ಜನತೆಯೇ ತಮ್ಮ ಸ್ವಾತಂತ್ರ್ಯಕ್ಕಾಗಿ, ಈಗೀಗ ತಮ್ಮ ಪ್ರಾಣಕ್ಕಾಗಿ ಹಾಗೂ ತಮ್ಮ ಸಹಾನುಭೂತಿಯುಳ್ಳವರಿಗಾಗಿ ಹೋರಾಡುತ್ತಿರುವುದು. ಇಂತಹ ಜನರನ್ನು ನಿರ್ಮೂಲಿಸುವದಕ್ಕಾಗಿಯೇ ಭಾರತ ಸರಕಾರವು ಸಹಾಯಮಾಡಿರುವುದು. ಭಾರತ ಸರಕಾರದ ಸರ್ವಶ್ರುತ ಧೋರಣೆಯೆಂದರೆ ಕಾಶ್ಮೀರದ ಮಹಾರಾಜರ ಕೈ ಬಲಪಡಿಸುವದೊಂದೇ. ಎಂತಹ ರಕ್ತದಲ್ಲದ್ದಿರುವ ಕೈಗಳವು ಎಂಬುದನ್ನು, ಭಾರತದ ನಾಯಕರೀಗ ಉದ್ದೇಶಪೂರ್ವಕ ಮರೆತು ಬಿಟ್ಟಿದ್ದರೂ, ಅವರಿಗಾ ಸಂಗತಿ ಸರಿಯಾಗಿ ತಿಳಿದಿದೆ. ಕಾಶ್ಮೀರದ ಜನತೆಯು ಶತಮಾನಾರಭ್ಯ ತಮ್ಮ ಮೇಲಾದ ದಬ್ಬಾಳಿಯನ್ನೇ ಮರೆತು, ರಾತ್ರಿ ಹಗಲಾಗುವುದರೊಳಗೆ ತಮ್ಮ ಕ್ರೂರಾಡಳಿತೆಗಾರರನ್ನು ಮೋಹಿಸಹತ್ತಿದ್ದಾರೇನೋ ಎಂಬಂತೆ, ಆ ನಾಮಾಂಕಿತ ಧಾಳಿಗಾರರ ಮೇಲೇನೇ ಎಲ್ಲಾ ಭಾರವನ್ನೂ ಹಾಕಲಾಗಿದೆ. ಹೊರಗಿನ ಕೆಲವರಿಂದ ಪ್ರತ್ಯಕ್ಷ ಸಹಾನುಭೂತಿ ಸೂಚಿಸಿದರೆಂಬೊಂದೇ ಕಾರಣದಿಂದ, ದಾಸ್ಯಪೀಡಿತ ಜನಾಂಗವೊಂದರ ಸ್ವಾತಂತ್ರ್ಯ ಹೋರಾಟವನ್ನು ಹೊರಗಿನ ಆಕ್ರಮಣವೆಂದು ಲೋಕದೆದುರು ಚಿತ್ರಿಸುವುದೆಂದರೆ ಹೀನರೀತಿಯಲ್ಲಿ ಚರಿತ್ರೆಯನ್ನು ಪುನರುಲ್ಲೇಖಿಸಿದಂತೆಯೇ ಸರಿ. ಸ್ವಾತಂತ್ರ್ಯಯೋಧರು ಅತ್ಯಾಧುನಿಕ ಶಸ್ತ್ರಗಳನ್ನು ಉಪಯೋಗಿಸುತಿದ್ದಾರೆಂಬ ಆಪಾದನೆ ... ಕೇಳಿಬರುತ್ತಿದೆ. ... ಭಾರತದ ಆಕ್ರಮಣಗಾರ ಸೇನೆಯೊಡನೆ ಹೋರಾಡುತ್ತಿರುವವರು ಪೂಂಚಿನಲ್ಲಿ ಸುಮಾರು 60000 ಮಂದಿಯಿರುವ ಮಾಜೀ ಸೋಲ್ಜರರ ಪೈಕಿಯೆಂಬುದನ್ನೂ, ತಮ್ಮ ವೈರಿಗಳ ಆಯು...

NOTICE

ಉಡುಪಿ ಡಿ. ಮು. ಕೋರ್ಟಿನಲ್ಲಿ.

S. E. No. 384/1947.

ಪಿ. ವಾಸುದೇವ ಭಟ್ಟ—ವಾದಿ

ಮತ್ತು

ಕೆ. ವೆಂಕಟ್ರಮಣ ಪಿತಾಳ, ಕೊಡವೂರು ಸುಬ್ರಾಯ ಪಿತಾಳರ ಮಗ, ಮೆಡಿಕಲ್ ಪ್ರೆಕ್ಟಿಶನರ್-ಹಾಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್-ರಿಪ್ಪನ್ ಪೇಟೆ. ಜಯಾ ಫಾರ್ಮಸಿ-ಪ್ರತಿವಾದಿ

ಇವರೊಳಗೆ

ಸದರಿ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದರೆ—

ವಾದಿಗೆ ನೀವು ತಾ. 18-5-45ರಲ್ಲಿ ರೂ. 100-0-0ಕ್ಕೆ ಮತ್ತು ತಾ. 25-9-45 ರಲ್ಲಿ ರೂ. 100-0-0ಕ್ಕೆ ಬರಕೊಟ್ಟ ಡಿಮಾಂಡ್ ನೋಟುಗಳ ಬಾಬ್ತು ಅಸಲು ಬಡ್ಡಿ ಕೂಡಾ ರೂಪಾಯಿ 192-8-6ರ ವಸೂಲಿ ಬಗ್ಗೆ ನಿಮ್ಮ ಮೇಲೆ ವಾದಿಯು ದಾಖಲು ಮಾಡಿರುವ ಮೇಲ್ಕಂಡ ವ್ಯಾಜ್ಯವು ತಾ. 28-11-47ಕ್ಕೆ ಇಟ್ಟಿರುತ್ತದೆ. ಆ ಕುರಿತು ನಿಮ್ಮ ಆಕ್ಷೇಪವಿದ್ದರೂ ಇದ್ದಲ್ಲಿ ನೀವು ಮುದ್ದಾಂಗಲೀ ವಕೀಲ್ ಮುಖಾಂತರವಾಗಲೀ ಸದ್ರಿ ಕೋರ್ಟು ಮುಂದೆ ಬೆಳಿಗ್ಗೆ 10 ಘಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

P. V. Achar
Vakil for Plaintiff

ಉಡುಪಿ ತಾ. 5-11-47

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ಹೆಗ್ಗುರಿಯಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ—

ದಿ ವಿಜಯಾ ಬೇಂಕ್, ಲಿಮಿಟೆಡ್.

ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಸಿಟಿ-ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಂಞಂಗಾಡು, ಮಡಿಕೇರಿ ಮತ್ತು ಮುಂಬಾಯಿ.

THE VIJAYA BANK, LIMITED.

ಲೋಕದ ೮ನೇ ಅಶ್ಚರ್ಯ!

ಅಪೂರ್ವ ಸಂದರ್ಭ!

ಎಲ್ಲಾ ತರದ ಕಣ್ಣಿನ ಅಸ್ಪಷ್ಟ (ಕಣ್ಣಿನ ಹೂ ಸಮೇತ) ಗಳನ್ನು ಕಣ್ಣಿಗೆ ಯಾವ ತರದ ಔಷಧವನ್ನೂ ಹಾಕದೆ ಕೇವಲ ಕುಡಿಯಲಿಕ್ಕೆ ಔಷಧಕೊಟ್ಟು ಖಾತ್ರಿ ಗುಣಪಡಿಸಲಾಗುವುದು.

ನೇಸ, ಹೃದ್ರೋಗ, ಕ್ಷಯ, ಪಕ್ಷವಾತ, ರಕ್ತದ ಒತ್ತಾಟ, ಮೂತ್ರಪಿಂಡದ ದೋಷ, ನಾಲಗೆಯ ಮೂಲದಲ್ಲಾಗುವ ಮಾಂಸಗ್ರಂಥಿ (ಟಾನ್ಸಿಲ್ಸ್) ಮೊದಲಾದ ಘೋರ ರೋಗಗಳನ್ನು ಕೂಡ ಬರೇ ಸಿಹಿ ಮದ್ದುಗಳಿಂದಲೇ ಖಂಡಿತ ಶಮನಗೊಳಿಸಲಾಗುವುದು.

The Eye Clinic,
Court Road, opp: Police Station,
UDIPI, S. K.

ಹೋರಾಟದ ತರಾತುರಿ

ಧಗಳನ್ನು ಕಸಗೊಂಡ, ಹಿಡಿಯುವ ಯೋಗ್ಯತೆ ಯಿದ್ದವರೇ ಎಂಬುದನ್ನೂ ಇಲ್ಲಿ ಮರೆತು ಬಿಡಲಾಗಿದೆ" ಎನ್ನುತ್ತಾ ಮಿ. ಲಿಯಾಖತರು ನೆಹರು ಹೇಳಿಕೆಯನ್ನು 'ಗಾಳೀ ಇರಿತ'ವೆಂದು ಅಪಹಾಸ್ಯ ಮಾಡಿ ಕಾಶ್ಮೀರವು ಹಿಂದೀ ಕೇಂದ್ರಕ್ಕೆ ಸೇರಿದ ಘಟನೆಗಳೆಲ್ಲವನ್ನೂ ಹೀನೈಸಿದ್ದಾರೆ. 'ಈ ಸಂಗತಿಗಳ ನ್ಯಾಯವನ್ನು ಜಗತ್ತೇ ನಿರ್ಧರಿಸಲಿ' ಎಂದು ಕೊನೆಗಂಡಿದ್ದಾರೆ.

ಸರ್ದಾರ್ ಪಟೇಲರ ಉತ್ತರ

ಸರ್ದಾರ್ ವಲ್ಲಭಾಯಿ ಪಟೇಲರು ಮಿ. ಲಿಯಾಖತ್ ಅಲೀಖಾನರಿಗುತ್ತರವಾಗಿ ಕೊಟ್ಟ ಆಕಾಶವಾಣಿ ಭಾಷಣದಲ್ಲಿ ಹೀಗಂದಿದ್ದಾರೆ: "ಪಾಕಿಸ್ತಾನದ ಪ್ರಧಾನ ಮಂತ್ರಿಗಳು ತನ್ನ ಕಾಹಿಲೇ ಮಂಚದ ಆಕಾಶವಾಣಿ ಭಾಷಣದಲ್ಲಿ ಕಾಣಹತ್ತಿರುವ ಸಂಸ್ಥಾನಗಳಲ್ಲಿ ಮುಸ್ಲಿಮರ ನಿರ್ನಾಮಕ್ಕಾಗಿ ಹಂಚಿಕೆ ಹೂಡಲ್ಪಟ್ಟಿರುವುದೆಂಬ ಹಲವು ಹಗಲ್ಗನಸುಗಳ ಹಾಗೂ ಕಲ್ಪನೆಗಳ ಕುರಿತು ಸುದೀರ್ಘ ಉತ್ತರಕೊಡುವ ಆವಶ್ಯಕತೆ ನನಗಿಲ್ಲ. ಆವೇಶಕ್ಕೀಡಾದವನ ಬುದ್ಧಿ ಭ್ರಮೆಗೊಂಡೀತೆಂಬುದನ್ನು ಯಾರಾದರೂ ನಿರೀಕ್ಷಿಸಲೇಬೇಕು. ಆದರೆ ಆ ಆಕಾಶವಾಣೀ ಭಾಷಣದಲ್ಲಿ ಪ್ರದರ್ಶನಗೊಂಡಿರುವ ಚಿತ್ತೋನ್ಮಾದವು ನಿಜಕ್ಕೂ ಎಂತಹ ಮಟ್ಟಕ್ಕೇರಿದೆ ಎಂದರೆ, ಆ ವಾಣೀ ಭಾಷಣವನ್ನು ಕೇಳಿದವರು ಮತ್ತು ಓದಿದವರು ವ್ಯಂಗ್ಯ ವಿನೋದ ಹಾಗೂ ಭೀತಿಗೊಳ್ಳದೆ ನಿರ್ವಾಹವಿಲ್ಲ. ಚರಿತ್ರೆಯಂತೂ ಹೇಯರೀತಿಯಿಂದ ಮತ್ತು ತಂಟೆಕೋರತನದಿಂದ ವಿಕಾರಗೊಂಡಾಗಿದೆ. ಅಪಾಪೋಲಿಗಳನ್ನು ಹಾಗೂ ಸುಲಿಗೆಗಾರರನ್ನು ಸ್ವಾತಂತ್ರ್ಯದಾತರು ಹಾಗೂ ಧೀರ ನಾಯಕರೆಂದು ಗೌರವಿಸಲಾಗಿದೆ. ಸುಖನಿದ್ರೆಯಿಂದಿದ್ದ ಒಂದು ಕಂದಂದ ನಿರಪರಾಧಿ, ನಿಸ್ಸಹಾಯಕ ಹಾಗೂ ಪ್ರಶಾಂತ ಹಳ್ಳಿಗರ ಮೇಲೆ ಆ ಆಕ್ರಮಣಗಾರರು ನಡೆಸಿದ ಭೀಕರ ಅತ್ಯಾಚಾರ, ಸಾಮೂಹಿಕ ದುರಂತಗಳನ್ನು ಅಗಣ್ಯವೆಂದು ಕಡೆಗಣಿಸಲಾಗಿದೆ. ವಸ್ತುತಃ ವೈತ್ರೀವಲಯವೊಂದರಿಂದ ಹೂಡಲ್ಪಟ್ಟ ಆಕ್ರಮಣ ಧಾಳಿಯನ್ನು ವಿಪರ್ಯಾಸಗೊಳಿಸಿ ಆ ಅರಸರ ಕ್ರೂರಾಡಳಿತೆ ಹಾಗೂ ದಬ್ಬಾಳಿಕೆಯ ವಿರುದ್ಧವಾಗಿ ಒಳಗಿನ ಜನರೇ ಎದ್ದಿರುವ ಬಂಡಾಯವೆಂದು ಸಾರಲಾಗಿದೆ.

ಒಂದೆರಡು ನಿದರ್ಶನಗಳು

ವರ್ಣಿಸಲಾರಂಭಿಸಿದರೆ ಎದೆ ಬಿರಿಯುವ ಮಾದರಿಯಲ್ಲಿ ಬರಮುಲಾದಲ್ಲಿದ್ದ ಕೆಲವು ಬ್ರಿಟಿಷರಿಗೊದಗಿದ ಭೀಕರ ದುರಂತ ಮತ್ತು ಬ್ರಿಟಿಷ್ ಕುಟುಂಬಗಳ ಹಸಿ ಹಸಿ ಕೊಲೆಗಳಂತಹ ಘಟನೆಗಳು ಈ ಸ್ವಾತಂತ್ರ್ಯ ಪ್ರವಾದಿಗಳು ಹಾಗೂ ಬಂಧವಿಮೋಚಕರೆಂದು ಕರೆಯಲ್ಪಡುತ್ತಿರುವವರ ಯಥಾರ್ಥ ಗುಣ ನಡತೆಗಳ ದರ್ಶನಕ್ಕೆ ಸಾಕಾಗುವ ನಿದರ್ಶನಗಳು. ಗಡಿನಾಡು ಪ್ರಾಂತ್ಯದ ಪ್ರಧಾನ ಮಂತ್ರಿಯು ಅವಿಶ್ರಾಂತವಾಗಿ ಅಪಸ್ವಾರಕ್ಕೀಡಾಗಿ ಹಾಕುತ್ತಿರುವ ಆ ಬೊಬ್ಬೆಗಳು, ಅವಕ್ಕೆ ಸರಿಯಾಗಿ ಈ ಧಾಳೀ ಪಂಗಡಲ್ಲಿರುವವರ ಮತ್ತವರ ಆಯುಧೋಪಕರಣಗಳು—ಇವೆಲ್ಲವುಗಳೂ ಈ ಧಾಳಿಯಲ್ಲಿ ನೆರೆಯ ರಾಷ್ಟ್ರವೆಂತಹ ಆಸಕ್ತಿ ವಹಿಸಿದ್ದಿತೆಂಬುದರ ಸ್ಪಷ್ಟದ್ಯೋತಕಗಳಾಗಿವೆ. ಈ ನೆರೆರಾಷ್ಟ್ರದ ನಾಯಕರೆಂದರೆ, ಬ್ರಿಟಿಷ್ ಸಾರ್ವಭೌಮತ್ವರದ್ದಾದ ಮೇಲೆ ಸ್ವತಂತ್ರ ನಿರ್ಧಾರಾಧಿಕಾರವು ಸಂಸ್ಥಾನಗಳದ್ದೇ ಎಂದೂ, ಜೋಡಣೆ ನಿರ್ಣಯದ ಎಲ್ಲಾ ಹಕ್ಕೂ ಆಶ್ರಿತ ರಾಜರುಗಳಿಗೇನೇ ಎಂದೂ ಈ ಮೊದಲು ಮೇಲಿಂದ ಮೇಲೆ ತಂತಿ ಬಾರಿಸುತ್ತಾ ಬಂದವರೇ. ತನ್ನ ದ್ವೇಷ ಪೂರಿತ ವಾಗ್ಬಾಣಗಳಿಗೆ ಕಾಶ್ಮೀರವೊಂದೇ ಗುರಿಯಾಲದೆಂದು ಕೋರಿ ಪಾಕಿಸ್ತಾನದ ಪ್ರಧಾನಿಗಳು ಅಲ್ವಾರ್, ಭರತಪುರ, ಪಾಟಿಯಾಲಾ, ಫರೀದ್‌ಕೋಟ, ಕಪೂರ್ಥಲಾಗಳಂತಹ ಸಂಸ್ಥಾನಗಳ ಮೇಲೂ ಕೆಸರೆರಚಲು ಪ್ರಯತ್ನಿಸಿದ್ದಾರೆ. ಅಲ್ವಾರ್ ಮತ್ತು ಭರತಪುರಗಳಲ್ಲಿ ಗೊಂದಲಗಳೆದ್ದಿದ್ದುದು ಪಾಕಿಸ್ತಾನದ ಈ ಪ್ರಧಾನ ಮಂತ್ರಿ ಭಾರತ ಮಂತ್ರಿ ಮಂಡಲದ ಪ್ರಸಿದ್ಧ ಸದಸ್ಯನಾಗಿದ್ದ ಮತ್ತು ಸಂಸ್ಥಾನೀ ಸಂಬಂಧವು ಚಕ್ರವರ್ತಿಗಳ ಪ್ರತಿನಿಧಿಯಿಂದ ನಿರ್ವಹಿಸಲ್ಪಡುತಿದ್ದ ಆ ಕಾಲದಲ್ಲೇ. ಆ ಗಲಭೆಯನ್ನಾರಂಭಿಸಿದವರು ಮಿಯೋ ಜನರು. ಅವರೊಂದಿಗೆ ಜಾಟ್ ಮತ್ತು ರಜಪೂತರಿಗೆ ಆಗಾಗ ವೈರವೇಳುವದಿದ್ದಿತು. ಆ ಗೊಂದಲದಲ್ಲಿ ಮುಸ್ಲಿಮೇತರರ ಮನೆ ದಹನ, ಆಸ್ತಿ ಸೊತ್ತು ಧ್ವಂಸ, ಜಾನುವಾರು ಇತ್ಯಾದಿಗಳ ಅಪಹಾರ ನಡೆದಿದ್ದಿತು. ಇನ್ನುಳಿದ ಪಾಟಿಯಾಲಾ, ಫರೀದ್‌ಕೋಟ್, ಕಪೂರ್ಥಲಾಗಳಂತಹ ಸಂಸ್ಥಾನಗಳ ಮಾತು. ಪೂರ್ವ ಮತ್ತು ಪಶ್ಚಿಮ ಪಂಜಾಬುಗಳಲ್ಲೆದ್ದಿದ್ದ ಸಾಮೂಹಿಕ ಅನಾಹುತಗಳ ನಟ್ಟನಡುವೆ ಇರುವ ಈ ಸಂಸ್ಥಾನಗಳನ್ನು, ತನ್ನೊಂದು ಉದ್ದೇಶ ಸಾಧನೆಗಾಗಿಯಲ್ಲದೆ ಅನ್ಯಥಾ ಪಾಕಿಸ್ತಾನದ ಪ್ರಧಾನಿಗಳು ಪ್ರತ್ಯೇಕಿಸಿ ತೋರಿಸುವ ನ್ಯಾಯವೇನಿದೆಯೋ ನನಗರ್ಥವಾಗುವುದಿಲ್ಲ. ಆ ಪಂಜಾಬು ಗಲಭೆಗಳಿಗೆ ಯಾವುದೊಂದು ಜಾತಿಯೂ ಪೂರ್ಣ ಹೊಣೆಯಾಗದು. ತಮ್ಮ ಸಂಸ್ಥಾನಗಳಿಂದ ಮುಸ್ಲಿಮರು ಹೊರಗೆ ಹೋಗದಂತೆ ಪರಿಸ್ಥಿತಿಯನ್ನು ಸುಧಾರಿಸಲಾಗದೆ ಹೋದುದು ಆ ಸಂಸ್ಥಾನಗಳ ರಾಜರ ಅಪರಾಧವಾದರೆ, ಅಂತಹ ಕೆಲಸದಲ್ಲಿ ಭೀಕರ ರೀತಿಯಿಂದ ನಾಪಾಸಾಗಿರುವ ಪಾಕಿಸ್ತಾನ್ ಸರಕಾರದ ಸಮೇತ ಮಿಕ್ಕ ಸರಕಾರಗಳ ಅಪರಾಧವೆಷ್ಟೋ ಅಷ್ಟೇ ಅಪರಾಧ ಈ ರಾಜರದ್ದೂ ಹೊರತು ಹೆಚ್ಚಲ್ಲ.

ಜಬರದಸ್ತಿ ಪಾಕಿಸ್ತಾನಕ್ಕೇನೇ ಮೀಸಲಿಟ್ಟದೆಯೆ?

ಮುಸ್ಲಿಂ ನಾಶದ ಅತಿವಿಸ್ತೃತ ಹಂಚಿಕೆಯೊಂದರ ವರ್ಣನೆ ಮಾಡುತಿದ್ದಾರೆ ಪಾಕಿಸ್ತಾನ್ ಪ್ರಧಾನಿಗಳು. ತಮ್ಮ ಪೂರ್ಣ ವರ್ಚಸ್ಸಿಗೊಳಗಾಗಿರುವ ಮತ್ತು ಪಾಕಿಸ್ತಾನದೊಂದಿಗೆ ಜೋಡಣೆಗೊಂಡಿರುವ ಬಹವಾಲ್ಪುರಸಂಸ್ಥಾನದಲ್ಲಿ ಮುಸ್ಲಿಮೇತರ ಸ್ತ್ರೀಯರು, ಪುರುಷರು, ಮಕ್ಕಳು ಮುಂಗಳ ಮೇಲೆ ನಡೆಸಿರುವ ಪಾಶವಿಕ ಅತ್ಯಾಚಾರ ಮತ್ತು ಸಾಮೂಹಿಕ ಧ್ವಂಸಗಳಿದಿರಲ್ಲಿಯೂ ಈ ಮಾತು ಅವರ ಉದ್ದೇಶಕ್ಕೆ ಹೊಂದಿಕೆಯಾಗದು. ಪಾಕಿಸ್ತಾನದಲ್ಲೂ ಅದರ ಒತ್ತು ಸಂಸ್ಥಾನಗಳಲ್ಲೂ ಪ್ರತಿಮಾತಿಲ್ಲದೆ ಮುಸ್ಲಿಮೇತರರು ಭಯಂಕರ ರೀತಿಯಿಂದನಿರ್ನಾಮಹೊಂದಬಹುದು; ಅದು ತನ್ನ ಪರಿಣಾಮವನ್ನು ಭಾರತ ಕೇಂದ್ರದೊಳಗೆಲ್ಲಿಯಾದರೂ ಮೂಡಿಸಿದರೆ ಆದರ ಎಲ್ಲಾ ಪಾಪದೋಷ ಭಾರತದ ಮೇಲೆ! ಪಾಕಿಸ್ತಾನ್ ಸರಕಾರದ ಎಲ್ಲಾ ರೀತಿ ನೀತಿ ಘೋಷಣೆಗಳೂ ಈ ಯದ್ವಾತದ್ವಾ ನ್ಯಾಯವನ್ನಾಧರಿಸಿಯೇ ನಿಂತಿವೆ. ಈ ತಿರುಗಾಮುರುಗಾ ನ್ಯಾಯದ ಆಧಾರದಿಂದಲೇ ಪಾಕಿಸ್ತಾನದ ಪ್ರಧಾನಿಗಳು 'ತೀರ್ಮಾನಿಸಲಿ' ಎಂದು ಲೋಕವನ್ನೂ ತನ್ನ ಮಾತನ್ನಾಲಿಸಿದವರನ್ನೂ ಆಹ್ವಾನಿಸಿರುವುದು! ಸಂಸ್ಥಾನಗಳಲ್ಲಿ ಮುಸ್ಲಿಂ ಜನತೆಗೆ ದುರಂತವೊದಗಿದಾಗ ಭಾರತಕೇಂದ್ರ ಕೈಹಾಕುವುದಿಲ್ಲವೆಂಬರ್ಥ ಬರುವಂತೆ ಶಾಸನಬದ್ಧ ಸಂಬಂಧಗಳನ್ನು ವಿಪರ್ಯಾಸಗೊಳಿಸಿ ಲೋಕದಿದಿರು ತೋರಿಸುವದು ಪಾಕಿಸ್ತಾನ್ ಪ್ರಧಾನಿಯ ನಾಲಿಗೆಗೆ ಶೋಭಿಸುವಂತಹದಲ್ಲ. ಅವರಲ್ಲಿ ನಿಜಕ್ಕೂ ಕಾರ್ಯಾತುರವಾಗಲೀ ಯಥಾರ್ಥತೆಯಾಗಲೀ ಇದ್ದಲ್ಲಿ ಪ್ರಥಮತಃ ಪಾಕಿಸ್ತಾನದೊಂದಿಗೆ ಜೋಡಗೊಂಡಿರುವ, ಆ ಅಪರಾಧಿ ಬಹವಾಲ್ಪುರ ಸಂಸ್ಥಾನದ ವಿರೋಧವಾಗಿ ಕಾರ್ಯಾಚರಣೆ ಕೈಗೊಳ್ಳಲಿ. ಅಸಂಬದ್ಧವಾದ, ಸಕರು ಮುರುಕಾದ, ಸಂಗತಿಯನ್ನು ವಿಪರ್ಯಾಸಗೊಳಿಸಿ, ಮರೆಮಾಜಿ ಹಾಗೂ ಅತಿರೇಕ ದ್ವೇಷಾಸೂಯೆ ಪೂರಿತ ತೂಕ ತಪ್ಪಿದ ಮಾತುಗಳೇ ಈಗ ಪಾಕಿಸ್ತಾನ್ ಸರಕಾರದ ಪಾಲಿನ ವ್ಯಾಪಾರಚಾತುರ್ಯಗಳಾಗಿವೆ ಎಂಬುದು ಸುಸ್ಪಷ್ಟವಿದೆ. ಡಾ। ಗೋಬೆಲ್ಸನ ಹೆಸರಿನಿಂದ ಕಳೆದ ಯುದ್ಧದ ಮೊದಲು ಮತ್ತು ಯುದ್ಧಾವಧಿಯಲ್ಲಿ ನಡೆದಿದ್ದ ಇದೇ ಮಾದರಿಯ ಪ್ರಚಾರದ ಸಂಪೂರ್ಣ ಪರಿಚಯ ಇಡೀ ಲೋಕದ ಜನತೆಗಿದೆ. ಅದೇ ಪ್ರಚಾರವಿಂದು ಪುನರ್ಜನ್ಮಗೊಂಡಿದೆ. ಆದರೆ ಪಾಕಿಸ್ತಾನದ ಪ್ರಧಾನಿಗಳು ಯಾರ ತೀರ್ಮಾನಕ್ಕೆ ಸಂಗತಿಗಳನ್ನು ಬಿಟ್ಟಿರುವರೋ ಆ ಜಗತ್ತು ಇದರಿಂದ ವಂಚಿಸಲ್ಪಡಲಾರದೆಂದು ನನಗೆ ಖಚಿತವಿದೆ."

ಕಾಶ್ಮೀರದ ಘಟನೆ

ಕಾಶ್ಮೀರದ ರಾಜಧಾನಿ ಶ್ರೀನಗರಕ್ಕೆ ಸಮೀಪದಲ್ಲಿದ್ದು ಆಕ್ರಮಣಗಾರರ ಬಲವಾದ ಕೇಂದ್ರವಾಗಿ ಅವರ ಧಾಳೀ ಮೂಲವಾಗಿದ್ದ ಬರಮುಲಾದಿಂದ ಧಾಳಿಗಾರರನ್ನೋಡಿಸಿ ಹಿಂದೀ ಸೇನೆಗಳದನ್ನು ಪುನರಧೀನಪಡಿಸಿಕೊಂಡಿವೆ. ಆಕ್ರಮಣಗಾರರು ಆಯುಧಗಳು, ಮದ್ದು ಗುಂಡುಗಳು, ಮೋಟಾರು ಲೋರಿಗಳನ್ನು ಬಿಟ್ಟು ಚೆಲ್ಲಾಪಿಲ್ಲಿಯಾಗಿದ್ದಾರೆ. ಕಾಶ್ಮೀರ ರಂಬರದಿಂದೀಗ ವೈರೀಕಣವನ್ನುಝಾಡಿಸಿ ತೆಗೆದಂತಾಗಿದೆ. ರಾಜಧಾನಿಯ ಅಪಾಯ ನಿವಾರಣೆಗೊಂಡಿದೆ. ಇನ್ನು ಆಕ್ರಮಣಗಾರರನ್ನು ಹಿಂದೂಡುತ್ತಾ ಬೆನ್ನಟ್ಟುತ್ತಾ ಪಾಕಿಸ್ತಾನದ ಗಡಿಯೊಳಗೆ ಓಡಿಸಿದ ಮೇಲೆ ಹಿಂದೀ ಸೇನೆ ಮತ್ತೇನು ಮಾಡುವುದು, ಎಂಬ ಪ್ರಶ್ನೆಯಿದೆ. ಅಲ್ಲಿಯೇ ತಡೆದರೆ ಅಪಾಯ ತಪ್ಪೀತೇ? ಮುಂದೊತ್ತಿ ಹೋದರೆ ಪ್ರತ್ಯಕ್ಷ ಪಾಕಿಸ್ತಾನವೇ ಇದಿರು ಬದ್ದೀತೆ?

ತಮ್ಮ ಗಡಿಯ ಮೇಲಿಂದ ಭಾರತ ಸರಕಾರದ ಯುದ್ಧ ವಿಮಾನಗಳು ಹೋಗಿವೆಯೆಂದು ಪಾಕಿಸ್ತಾನ ಕಾಶ್ಮೀರದ ಗಗನದಲ್ಲಿ ಶೋಧನಾರ್ಥವಾಗಿ ಪಾಕಿಸ್ತಾನ ವಿಮಾನ ಹಾರಿತೆಂದು ಭಾರತ ಸರಕಾರ ಪರಸ್ಪರ ನಿಷೇಧ ಸೂಚನೆ ಮಾಡಿಕೊಂಡಿವೆ.

ಭಾರತದ ಗವರ್ನರ್ ಜನರಲ್ ಲೋರ್ಡ್ ಮೌಂಟ್‌ಬೇಟನರು ರಾಜಕುಮಾರಿ ಮದುವೇ ಸಂಬಂಧವಾಗಿ ಲಂಡನಿಗೆ ಹೋದುದರಿಂದ ಅವರ ಹುದ್ದೆಗೆ ಶ್ರೀ. ಸಿ. ರಾಜಗೋಪಾಲಾಚಾರ್ಯರು ಇದೇ ತಾ 10ರ ವರೆಗೆ ಗವರ್ನರ್ ಜನರಲ್ ಆಗಿದ್ದಾರೆ. ಪಶ್ಚಿಮ ಬಂಗಾಳದ ಗವರ್ನರ್ ಹುದ್ದೆಗೆ ಶ್ರೀ ಮಿತ್ತರ್ ಬಂದಿದ್ದಾರೆ.

The Canara Industrial & Banking Syndicate Ltd.,

Estd 1925 Head Office UDIPI

Diwali Greetings.

To all our Customers, Patrons and Friends We extend our Hearty Greetings on the occasion of this Festival.

We wish you all a Happy and Prosperous Diwali.

J. A. Pai.

B. COM. (BOM) A. I. I. B. F. R. E. S. (Lond.)

General Manager

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ: 1925] [ಪ್ರಧಾನ ಕಾರ್ಯಾಲಯ: ಉಡುಪಿ.



Approved firm by the Govt. of Mysore Certified by the Agent of the Govt. of Cylone & Indian.

The Canara Banking Corporation Limited.
(Incorporated in British India).
Estd: 1906.
Head Office: UDIPI, S. India.

ANNOUNCEMENT.

A branch of the BANK will be shortly opened at High Road,
TRICHUR. (Cochin State)

ಗುರುವಾರ, ಉಡುಪಿ, ೧೩-೧೧-'೪೭

ನೆಹರುಗಳ ಕರೆ

"ಭಾರತವನ್ನೀದಿನ ಎಲ್ಲಾ ದಿಕ್ಕುಗಳಿಂದಲೂ ಭೀಕರ ಅಪಾಯಗಳು ಮುತ್ತಿಗೆ ಹಾಕಿವೆ. ಈ ಪರಿಸ್ಥಿತಿಯನ್ನು ಇದಿರಿಸಲು ಜನರು ಕೂಡಲೇ ಸಿದ್ಧರಾಗದಿದ್ದಲ್ಲಿ ಅವರ ಸ್ವಾತಂತ್ರ್ಯವು ಅಲ್ಪಾಯುಷಿಯಾಗುವುದು"ಎಂದು ಪಂಡಿತ ಜವಾಹಿರಲಾಲರು ಭಾರತೀಯರೆಲ್ಲರಿಗೂ ಆಗ್ರಹದ ಕರೆಯಿತ್ತಿದ್ದಾರೆ. ಆ ಗಂಡಾಂತರಗಳ ಪರಿಚಯ ಮಾಡಿಕೊಡುವ ಕೆಲಸ ಸದ್ಯಕ್ಕಿಲ್ಲ; ಕಳೆದೆರಡು ತಿಂಗಳುಗಳ ಘಟನೆಗಳು ಅಪಾಯವೊಂದನ್ನಲ್ಲದೆ ಬೇರಾವುದನ್ನೂ ಸೂಚಿಸುವಂತಹವಲ್ಲ. ದೊಡ್ಡ ಸಂಸ್ಥಾನ ಹೈದರಾಬಾದು ಭಾರತದ ಮೌನ ಶತ್ರುವಾಗಿ ಉಳಿದಿದೆ; ಅದು ಸಮಯಸಾಧನೆಯಲ್ಲದೆ ಹೊರತು ಸಂಧಿಸಾಧನೆಯಲ್ಲಿಲ್ಲ. ಹಲವು ತಿಂಗಳುಗಳಿಂದ ಕಾಶ್ಮೀರಾಕ್ರಮಣಕ್ಕಾಗಿ ತಾವು ನಡೆಸಿದ್ದ ಧಾಳೀ ಸಿದ್ಧತೆಗಳನ್ನು ಮರೆಮಾಡುವದಕ್ಕಾಗಿಯೂ, ಭಾರತ ಸರಕಾರಕ್ಕೆ ಬೇರೆಡೆಯಲ್ಲಿ ಕೆಲಸಕೊಟ್ಟು ಕಾಶ್ಮೀರದ ಕಾರ್ಯವನ್ನು ತಾವು ಸಾಧಿಸಿಬಿಡಬೇಕೆಂತಲೂ, ಕೆಲಕಾಲಕ್ಕೆ ಮೊದಲು ವಿರೋಧಿಗಳು ಜುನಾಗಡಿನ ಸಮಸ್ಯೆಯನ್ನು ಹಿಂದುಗೊಳಿಸಿದ್ದರು. ಆ ಆಟ ಅವರಿಚ್ಛೆಯಂತೆ ನಡೆಯಲಿಲ್ಲವಾದರೂ ಈಗ ಗಂಟುಬಿದ್ದಿರುವ ಕಾಶ್ಮೀರದ ಗೋಳಗ ಸಣ್ಣದಲ್ಲ. ಇತ್ತ ಪೋರ್ಚುಗೀಸರ ಆಡಳಿತೆಯಲ್ಲಿರುವ ಗೋವಾದೊಳಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಹೇರಳವಾಗಿ ಬರುತ್ತಿದ್ದು ಅವು ಅಲ್ಲಿಂದ ಜುನಾಗಡಿನ ಸಮೀಪ ಬಂದರಾದ ದಿವೂಗೆ ರವಾನಿಸಲ್ಪಡುತ್ತಿವೆಯೆಂದು ವಾರ್ತೆ ಬಂದಿದೆ. ಗೋವಾದ ಪೋರ್ಚುಗೀಸರು ಪಾಕಿಸ್ತಾನದ ಪಕ್ಷಪಾತಿಗಳಾಗಿದ್ದಾರೆ. ಜಾತೀಯ ದ್ವೇಷವಂತೂ ಆ ಮೂಲೆಯಿಂದೀ ಮೂಲೆಯ ವರೆಗೂ 'ಒಂದೋ ನಾವಿರಬೇಕು, ಇಲ್ಲವೇ ಅವರಿರಬೇಕು.' ಎಂಬ ನಿರ್ಧಾರದ ಗಡಿಗೇನೇ ಈಗ ಮುಟ್ಟಿದಂತಿದೆ. ಅಂತೂ ಎಲ್ಲವೂ ಅಸ್ತವ್ಯಸ್ತವಾಗಿದೆ; ಇಡೀ ಚಿತ್ರವೇ ಚಪ್ಪೆಯಾಗಿ ಕಾಣುತ್ತಿದೆ. ನಾಲದುದಕ್ಕೆ ಇಂದಿನೀ ಮರಣವನ್ನು ನಿರ್ಮಿಸಿದವರು ಮುಂದಿನ ಮಾರಣಕ್ಕೂ ಸರ್ವ ವಿಧಾನಗಳಿಂದ ಸಿದ್ಧರಾಗುತ್ತಿರುವುದು ಕಂಡುಬರುತ್ತಿದೆ. ಪಾಕಿಸ್ತಾನದಲ್ಲಿ ಭರದಿಂದ ಸೇನಾಸಿದ್ಧತೆ ನಡೆದಿದೆ. 'ಜತೆ ರಕ್ಷಣಾ ಕೌನ್ಸಿಲ್'ನಲ್ಲಾದ ಒಡಂಬಡಿಕೆಗಳಿಗೆ ವಿರುದ್ಧವಾಗಿ ಪಾಕಿಸ್ತಾನ್ ಸರಕಾರವು 'ಹೋಮ್ ಗಾರ್ಡ್ಸ್' ಎಂಬ ಸೇನಾ ರಚನೆ ಮಾಡಹತ್ತಿದೆ. ಈ ಸಂದರ್ಭವು ಕಣ್ಣು ಮುಚ್ಚಿಕೊಂಡಿರಲಾರದನ್ನೂ ಬಿಟ್ಟಿಲ್ಲ. ಆದರೆ ಭಾರತದ ಹೆಚ್ಚಿನ ಕಡೆಗಳವರು ಕಾರ್ಯೋದ್ಯುಕ್ತರಾದುದು ಇನ್ನೂ ಕಂಡುಬರುವುದಿಲ್ಲ. ಒಂದೆರಡು ಘಟನೆಗಳಿಂದ ಕೈ ಸುಡಿಸಿಕೊಂಡ ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಸರಕಾರವು ಸಕಾಲದಲ್ಲಿ ಕಾರ್ಯಕ್ಕಿಳಿದಿದೆ; ಕಾಂಗ್ರೆಸಿಗರಿಗೆ ಶಸ್ತ್ರ ತರಬೇತಿ ಕೊಟ್ಟು ಸಜ್ಜುಗೊಳಿಸಲಣಿಯಾಗಿದೆ. ಮಿಕ್ಕ ಪ್ರಾಂತ್ಯಗಳಾದರೂ ಸುಮ್ಮಗಿರಲಾಗುವ ಕಾಲ ಇದಲ್ಲ. ಈ ಮಟ್ಟಿಗೆ ನಮ್ಮ ಮದ್ರಾಸ್ ಪ್ರಾಂತ್ಯದಲ್ಲಿ ನಡೆದಿರುವ ಕೆಲಸವೇನೆಂಬ ಮಾತಂತಿರಲಿ— ಆಗಿರುವ ಜಾಗ್ರತಿ ಕೂಡಾ ಸಾಲದು. ಇಲ್ಲಿ ಮಿವಂಚನೆಗೊಳಗಾಗಕೂಡದು; ನಮಗೀಗ ಬೇಕಾಗಿರುವುದು ಪಂಜಾಬಿನಲ್ಲಾದಂತಹ ಜಾಗ್ರತಿಯಾಗಲೀ ಮದ್ರಾಸಿನಲ್ಲಿರುವಂತಹ ಆಲಸ್ಯವಾಗಲೀ ಅಲ್ಲ. ಇವೆರಡಕ್ಕೂ ಸಂಪೂರ್ಣ ಭಿನ್ನವಾಗಿರುವ ರಾಷ್ಟ್ರೀಯ ಜಾಗ್ರತಿಯೊಂದೇ ಇಂದು ಅತ್ಯವಶ್ಯವಿದೆ. ಅದು ಹೇಗೆ ಎಂಬ ಮಾರ್ಗದರ್ಶನವು ಪಂಡಿತ ನೆಹರುಗಳಿಂದಾಗಿದೆ: "ಈ ಸಂಧಿಗ್ಧಾವಧಿಯಲ್ಲಿ ಭಾರತದ ಜನತೆಯ ಕರ್ತವ್ಯವೇನು? ರಾಷ್ಟ್ರೈಕ್ಯದಿಂದಾಗಿರುವ ಗಂಡಾಂತರಗಳನ್ನು ಪರಿಣಾಮಕಾರಿಯಾಗಿ ಇದಿರಿಸಲಾಗುವಂತೆ ಸರಕಾರದ ಕೈಯನ್ನು ಬಲಪಡಿಸಲು ಅವರು ಪ್ರಯತ್ನಿಸಬೇಕು. ಹಾಗಾಗಬೇಕಾದರೆ ರಾಷ್ಟ್ರದೊಳಗಡೆಯಲ್ಲಿ ಶಾಂತಿಯಿರಬೇಕಾದುದು ಅತ್ಯಗತ್ಯ. ಭಾರತದ ಸೇನಾ ಶಕ್ತಿಯನ್ನು ಬೆಳೆಸಿರಿ; ರಾಷ್ಟ್ರದ ಉತ್ಪತ್ತಿಯನ್ನು ಹೆಚ್ಚಿಸಿರಿ. ಕ್ಷಣಿಕ ಆವೇಗಗಳಿಗೆ ನೀವು ಒಳಗಾಗಬಾರದು.' ನಮ್ಮ ಆಂತರಿಕ ಸಮಸ್ಯೆಗಳನ್ನು ನಾವು ಕೂಡಲೇ ನಿವಾರಿಸಿಕೊಳ್ಳಲಾರದೆ ಹೋದರೆ, ನಮ್ಮ ದುಃಖಾಂತ್ಯವನ್ನು ಸಮೀಪದಲ್ಲೇ ಕಾಣಬೇಕಾದೀತು. ಜಾತೀಯ ಹೋರಾಟವು ಇನ್ನೂ ಮುಂದುವರಿದಲ್ಲಿ, ಅದು ಭಾರತವನ್ನು ಸಂಪೂರ್ಣವಾಗಿ ದಿವಾಳಿ ತೆಗೆಯುವುದೇ ಸರಿ. ಒಬ್ಬ ಮನುಷ್ಯನ ಜಾತಿ ಧರ್ಮವನ್ನಾಧರಿಸಿಯೇ ಆತ ವೈರಿಯೋ ಮಿತ್ರನೋ ಎಂದು ನಿರ್ಧರಿಸುವುದು ತಪ್ಪು. ಪಾಕಿಸ್ತಾನದಲ್ಲೇನೋ ಹೇಗೆಯೋ ನಡೆಯಬಹುದು. ಆದರೆ ಆ ಪಾಕಿಸ್ತಾನದಲ್ಲಿರುವವರ ವರ್ತನೆಯೊಂದಿಗೆ ನಮ್ಮ ನಡತೆಯನ್ನೂ ಸರಿದೂಗಲು ನೋಡಿ ನಮ್ಮನ್ನು ನಾವೇ ಕೆಳಮಟ್ಟಕ್ಕಿಳಿಸಿಕೊಳ್ಳಬೇಕೇಕೆ? ಸ್ವತಂತ್ರ ಭಾರತ ಚರಿತ್ರೆಯ ಮೊದಲನೇ ಪುಟದಲ್ಲಿ ಕೊಲೆ ಮುಂತಾದವುಗಳ ಉಲ್ಲೇಖವೇ ತುಂಬುವಂತಾದುದುದು ಕನಿಕರಾರ್ಹ ವಿಷಯ."ಎಂದು ಪಂಡಿತ ನೆಹರುಗಳು,ಭಾರತೀಯರು ಮಾಡಬೇಕಾದ ಮತ್ತು ಮಾಡದಿರಬೇಕಾದ ಕರ್ತವ್ಯಗಳೇನೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಮಹತ್ವಾದ ಭಾರಹೊತ್ತವರು ತನ್ನ ಅನುಭವಬಲದಿಂದ- ರಾಷ್ಟ್ರದ ಸೂತ್ರಧಾರಿಯು ಇಂದಿನ ಆವಶ್ಯಕತೆಯನ್ನು ಮನಗಂಡು- ಆಡಿದ ಮಾತುಗಳಿವು; ಅವುಗಳನ್ನು ಸರ್ವ ಹಿಂದೀಯರೂ ಅಕ್ಷರಶಃ ಪಾಲಿಸಲು ಬದ್ಧರಿದ್ದಾರೆ. ಆದ್ದರಿಂದ ಈ ಕಾಲದಲ್ಲಿ ಭಾರತದ ಎಲ್ಲಾ ಪಕ್ಷಪಂಗಡಗಳೂ ತಮ್ಮೊಳಗಿನ ಭಿನ್ನ ಭೇದಗಳನ್ನು ಮರೆತು ಒಂದಾಗಿ, ಹೊರಗಿನ ಅಪಾಯವನ್ನಿದಿರಿಸಲು ಸೂಡಿ ಕಟ್ಟಲಿ! ನೆಹರುಗಳು ಆಹ್ವಾನಿಸಿದಂತೆ, ಭಾರತ ಸರಕಾರದ ಸೇನಾಶಕ್ತಿ ಹಾಗೂ ರಾಷ್ಟ್ರದ ಉತ್ಪತ್ತಿಯನ್ನು ಹೆಚ್ಚಿಸಲು ಪ್ರತಿಯೊಬ್ಬನೂ ಸರ್ವ ಶಕ್ತಿಯಿಂದ ದುಡಿಯಲಿ. ಆ ಮೂಲಕ ಸ್ವತಂತ್ರ ಭಾರತವೊಮ್ಮೆ ಸುದೃಢ ಹಾಗೂ ಸುಂಕ್ಷಿತ ಆಗಿಕೊಳ್ಳಲಿ. ಮನೆಯೊಳಗಿನ ಜಗಳಗಳ ತೀರ್ಮಾನಗಳನ್ನು ಆ ಮೇಲಿನ ಕಾಲಕ್ಕೆ ಮುಂದರಿಸಿಟ್ಟರಾಗದೇ?

ನಿರಾಶ್ರಿತರಿಗೆ ಸಹಾಯ ಮಾಡಿರಿ.

ಪಶ್ಚಿಮ ಪಂಜಾಬಿನ ಜಾತೀಯ ಗಲಭೆಗಳಿಗೆ ತಮ್ಮ ಸರ್ವಸ್ವವನ್ನೂ ಬಲಿಕೊಟ್ಟು, ಪ್ರಾಣವೊಂದನ್ನೇ ಉಳಿಸಿಕೊಂಡಿರುವ ಮಿಲಿಯಾವಧಿ ನಿರಾಶ್ರಿತರಿಂದು ನಿರ್ಗತಿಕರಾಗಿದ್ದಾರೆ; 'ಪೇರಿ ಭಿಕ್ಷುಕ'ರಾಗಿದ್ದಾರೆ. ಮೈಮುಚ್ಚಲು ಸಾಕಷ್ಟು ಅರಿವೆಗಳಿಲ್ಲದ ಆ ದುರ್ದೈವಿಗಳು ಇದೇ ನವಂಬರ್ ಮಧ್ಯ ಭಾಗದಿಂದ ಪಂಜಾಬಿನತ್ತ ಕಡೆ ಸಹಜವಾಗಿರುವ ಕಠೋರ ಛಳಿಯನ್ನಿದಿರಿಸಬೇಕಾಗಿ ಬಂದಿದೆ. ಆದ್ದರಿಂದಲೇ ಅವರಿಗೆ ಉಣ್ಣೆಯ ಮತ್ತಿತರ ಹೊದಿಕೆ, ಪೋಷಾಕುಗಳನ್ನು ಸಂಗ್ರಹಿಸಿಕೊಡಲು ಮಹಾತ್ಮಾ ಗಾಂಧಿಯವರಾರಂಭಿಸಿ, ಇಡೀ ರಾಷ್ಟ್ರದೊಡನೆ ಸಹಾಯ ಯಾಚಿಸಿದ್ದಾರೆ. ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷರೂ, ಉಡುಪಿ ನಗರ ಸಭಾಧ್ಯಕ್ಷರೂ ಇದಕ್ಕಾಗಿ ಮಾಡಿಕೊಂಡಿರುವ ವಿಜ್ಞಾಪನೆಯು ಸಾರವು ಈ ಸಂಚಿಕೆಯಲ್ಲಿದೆ. ಎಲ್ಲರೂ ಪಂಜಾಬು ನಿರಾಶ್ರಿತರ ಈ ಆರ್ತನಾದಕ್ಕೆ ಕಿವಿಕೊಡಲಿ. ಧರ್ಮಬೋಧೆ, ಬಂಧು ಪ್ರೇಮ, ಮಾನುಷತ್ವ-ಇವೆಲ್ಲವುಗಳ ದೃಷ್ಟಿಯಿಂದಲೂ ಪಂಜಾಬು ನಿರಾಶ್ರಿತರಿಗೆ ಸಹಾಯ ಸಲ್ಲಿಸುವದೆಷ್ಟು ಅಗತ್ಯವೆಂಬುದನ್ನು ಒಮ್ಮೆ ಪ್ರತಿಯೊಬ್ಬನೂ ತನ್ನನ್ನೇ ಅವರ ಸ್ಥಾನದಲ್ಲಿರಿಸಿ ಯೋಚಿಸಿ ನೋಡಲಿ. ಅಲ್ಲಿಯ ನರಮ್ನಗಗಳಿಂದಾದ ತಮ್ಮ ನೋವನ್ನು ಮಾಸಿಗೊಳಿಸುವ ಬಂಧುಗಳು ಇಲ್ಲಿ ತಮಗಿದ್ದಾರೆ ಎಂಬ ಸಮಾಧಾನವಾದರೂ ಆ ನಿಃಪಾಂಥಿ ದುರ್ದೈವಿಗಳಿಗೊದಗುವಂತಾಗಲಿ,ಎಂದು ವಿಜ್ಞಾಪಿಸಿಕೊಳ್ಳುತ್ತೇವೆ.

(೬ನೇ ಪುಟದಿಂದ).

ಹೊರಗಡೆ ಕಳುಹಬೇಕೆಂಬ ಆಗತ್ಯವೇನೂ ಇಲ್ಲ, ಹೊರಗಿನಿಂದ ಆಹಾರ ಧಾನ್ಯದ ಸಹಾಯವನ್ನು ಅಪೇಕ್ಷಿಸದಿರುವ ಮೂಲಕವೇ ನಾವು ಜಗತ್ತಿನ ಆಹಾರ ಪೀಡಿತ ಭಾಗಗಳಿಗೆ ಸಹಾಯ ಮಾಡಿದಂತಾಗುವುದು. ಎರಡು ತಲಾಂತರಗಳ ನನ್ನೀ ಜೀವಮಾನದಲ್ಲಿ ದೇವ ನಿರ್ಮಿತ ಬರಗಾಲಗಳನ್ನೆಷ್ಟೋ ನಾನು ಕಂಡಿದ್ದೇನೆ. ಆದರೆ ಮೊದಲು 'ಹಸುಗೇ ಕ್ರಮ'ದ ಚಿಂತನೆಯಾದರೂ ಮಾಡಿದ್ದ ಒಂದೇ ಒಂದು ಸಂದರ್ಭವಾದರೂ ನನಗೆ ನೆನಪಾಗುವುದಿಲ್ಲ.

ಈಗಿನ ಸ್ಥಿತಿಗತಿ

ದೇವರಿಗೆ ಧನ್ಯವಾದಗಳಿರಲಿ!-ಈ ಬಾರಿಯ ಮಳೆ ಬೆಳೆಯೇನೂ ಹಾಳಾಗಿಲ್ಲ. ಆದ್ದರಿಂದ ನಿಜವಾದ ಅಭಾವವೇನೂ ಇಲ್ಲ. ಭಾರತದ ಹಳ್ಳಿಗಳಲ್ಲಿ ಸಾಕಷ್ಟು ದವಸಧಾನ್ಯಗಳು ಗೆಡ್ಡೆ ಗೆಣಸುಗಳು ಇವೆ. ಧಾರಣೆಗಳ ಕೃತಕ ನಿಯಂತ್ರಣಗಳ ಅರ್ಥವೇ ಉತ್ಪಾದಕರಿಗೆ ಆಗುತ್ತಿಲ್ಲ. ಆಗುವಂತಿಲ್ಲ. ಆದ್ದರಿಂದ ಹೊರ ಮಾರ್ಕೆಟುಗಳಲ್ಲಿ ತಾವು ಪಡೆಯಲಾಗುವದಕ್ಕಿಂತ ಎಷ್ಟೋ ಕಡಿಮೆ ಬೆಲೆಗೆ, ತಮ್ಮ ಸಂಗ್ರಹವನ್ನು ಸಂತೋಷಪೂರ್ವಕ ಕೊಡಲು ಅವರು ನಿರಾಕರಿಸುತಿದ್ದಾರೆ. ಈ ಪ್ರತ್ಯಕ್ಷ ಪ್ರಮಾಣಕ್ಕೆ ಪ್ರದರ್ಶನವೇನೂ ಬೇಕಾಗಿಲ್ಲ. 'ಜನಸಂಖ್ಯೆ ಮಿತಿಮೀರಿದೆ' ಎಂಬ ಕಟ್ಟುಕಥೆಯನ್ನು ಬಿಚ್ಚಿ ನಮ್ಮನ್ನು ಹೆದರಿಸುವದಕ್ಕೆ ಯಾರೂ ಮುಂದಾಗಲಾರರೆಂದು ಆಶಿಸಬೇಕಾಗಿದೆ.

ಮಂತ್ರಿಗಳು ತಿಳಿದಿರಲಿ

ನಮ್ಮ ಮಂತ್ರಿಗಳು ಜನತೆಯವರು, ಜನತೆಯಿಂದ ಬಂದವರು. ಮಂತ್ರಿ ಗದ್ದುಗೆಗಳನ್ನೇರದಿದ್ದರೂ ಒಳ್ಳೇ ಅನುಭವಶಾಲಿಗಳಿದ್ದು, ನಿಯಂತ್ರಣವೆಷ್ಟು ಬೇಗ ಹೋಗುವುದೋ ಅಷ್ಟು ವಾಸಿಯೆಂಬ ಅಭಿಪ್ರಾಯ ಕಟ್ಟಿಕೊಂಡವರಿಗಿಂತ ತಮ್ಮ ಜ್ಞಾನವೇ ಹೆಚ್ಚಿನದೆಂಬ ಅತಿಗರ್ವವು ಮಂತ್ರಿಗಳಲ್ಲಿಲ್ಲದಿರಲಿ. ಹಸುಗೇ ಧಾನ್ಯವನ್ನಾಧರಿಸಿರುವವರಿಗೆ, ಸೇವನಾರ್ಹ ದವಸ ಧಾನ್ಯಗಳೇ ದೊರೆಯದಂತಾಗಿ, ಹಾಳು ವಸ್ತುಗಳ ದೆಸೆಯಿಂದ ಜನರು ಅನಗತ್ಯ ಕಾಹಿಲೆಗಳಿಗೀಡಾಗಬೇಕಾಗಿ ಬಂದುದ ಎಂದೊಬ್ಬ ಡಾಕ್ಟರರು ಬರೆಯುತ್ತಾರೆ. ನಿಯಂತ್ರಿತ ಧಾನ್ಯಗಳ ಬದಲಿಗೆ ನೇರ ವ್ಯಾಪಾರದಿಂದಲೇ ಉತ್ತಮ ಧಾನ್ಯಗಳನ್ನು ಪಡೆಕೊಂಡು, ಅವುಗಳ ಮಾರಾಟಕ್ಕಾಗಿ ಸರಕಾರವು ಇಂದಿನ ಸ್ಟೋರುಗಳನ್ನೇ ಸುಗಮವಾಗಿ ನಡೆಸಬಹುದು. ಹೀಗೆ ಮಾಡಿದಲ್ಲಿ ಸರಕಾರವು ಧಾರಣೆಗಳನ್ನು ಸ್ವಾಭಾವಿಕವಾದ ಒಂದು ಕ್ರಮಕ್ಕೆ ತಂದಂತಾಗುವುವಲ್ಲದೆ, ಸಂಗ್ರಹಿಸಿಟ್ಟ ದವಸಧಾನ್ಯ ಕಾಳು ಇತ್ಯಾದಿಗಳೆಲ್ಲವನ್ನೂ ಅದು ನಿರಾತಂಕವಾಗಿ ಸಂಗ್ರಹಿಸಬಹುದು. ಸರಕಾರಕ್ಕೆ ಧಾನ್ಯ ವ್ಯಾಪಾರಿಗಳು ಮತ್ತು ಧಾನ್ಯೋತ್ಪಾದಕರ ಮೇಲೆ ವಿಶ್ವಾಸವಿಲ್ಲವೆ? ಹೀಗೆ ಕರವಸ್ತ್ರದಿಂದ ಕಟ್ಟಿಕೊಂಡಲ್ಲಿ ಪ್ರಜಾಸತ್ತೆಯು ಹರಿದು ಚೆಲ್ಲುವುದೇ ಸರಿ. ಅದು ವಿಶ್ವಾಸದ ಬಲದಿಂದಲೇ ಉಳಿಯುವಲ್ಲದು. ಜನರು ಸರಿಯಾಗಿ ಪರಿಶ್ರಮಿಸದೆ, ಅಥವಾ ಒಬ್ಬರನ್ನೊಬ್ಬರು ವಂಚಿಸಿ, ತತ್ಪರಿಣಾಮವಾಗಿ ಸಾಯಬೇಕಾಗಿಬಂದರೆ, ಅದು ಸುಸ್ಸಂಗತಿ ಸಬೇಕಾದ ಸಂಗತಿ. ಉಳಿದವರು ಕಾವಾದರೂ, ಈ ಆಲಸ್ಯ, ಸ್ವಾರ್ಥ ಇತ್ಯಾದಿ ಪಾಪಗಳನ್ನು ಮಾಡಬಾರದೆಂಬ ಪಾಠವನ್ನು ಅದರಿಂದ ಕಲಿಯುವಂತಾಗುವದು."

SHETTYS PHARMACEUTICALS & BIOLOGICALS LTD.

Registered Office: Vasant Vihar, Irla Road, Vile Parle, BOMBAY 24
Registered under the Indian Companies Act VII of 1913



Vasant Vihar, Irla Road, Vile Parle, B mkay 24

21 Rancel.s R.ad, Vepery, Madras

BOARD OF DIRECTORS

1. *Dr. Direndranath Ganguli,* M. B.

Nutrition Expert & Manufacturing Chemist, 12. Chowringhee Square, Calcutta.

Chairman and Technical Adviser.

Technical Director: Messrs. National Nutriments Ltd.
Director: Aryan Paper Mills Ltd, Aryan Coal Company Ltd, Lohar Valley Tea Company Ltd, Associated Hindusthan Agencies Ltd, Hindusthan Laboratories Ltd.
Associated Member: International Milk Sanitation Inc, New York.
Executive Member: Indigenous Manufacturers' Association Commercial Museum, Calcutta
Member: The Bengal Government Research Board Food Committee. Bengal National Chamber of Commerce, Calcutta.

2. *Dr. Narayan Devji Kanchan,* L. C. P. & S.

Usha Clinic, Homji Street, Sir Phirozshah Mehta Road, Fort Bombay.

Vice-Chairman

Director: The Mogaveera Cooperative Bank Ltd. Bombay

3. *Dr. Direndranath Chatterji,*

3, 2 College Street, Calcutta

Director: Bengal Share Dealers' Syndicate Ltd., Land Trust of India Ltd., Lebong & Mineral Spring Tea Company Ltd., Aryan Paper Mills Ltd., Aryan Coal Company Ltd. Aryan Silk & Cotton Mills Ltd Central Teperah Tea Co. Ltd., Lohar Valley Tea Company Ltd., Mica Mining & Trading Co. of India Ltd., Associated Hindusthan Agencies Ltd., Bharat Distributors & Agencies Ltd., Hindusthan Laboratories Ltd.

4. *Dr. Bakrabail Manjaya Hegde,*

Chief Medical Officer,
C. N.T. Institute Dispensary, Vepery, Madras.

5. *Mr. Mahabala N. Hegde,* Bacteriologist,

Dr. K. T. Gajjar's Pathological Laboratories Mehrwan Building, Sir Phirozshah Mehta Road, Fort Bombay.

6. *Mrs. Parvathi Bai A. Nair,*

Nair Building, Lamington Road, Bombay.

7. *Mr. B. R. Shetty,* Merchant.

Vasant Vihar, Irla Road, Vile Parle Bombay 24

8. *Mr. B. S. Shetty,* Merchant.

Manufacturer & Proprietor of M/s. Shetty Brothers.
Vasant Vihar, Irla Road, Vile Parle, Bombay 24

Ex-Officio.

Authorised and issued Capital: Rs. 5,00,000
Divided into 9000 Ordinary Shares of Rs. 50 - each.
20000 Deferred Shares of Rs. 2/8 each.

1 The Company was registered on 21st November 1945 with the object among many others to take over the business of Shettys harmaceuticals & Biologicals from the proprietors thereof Messrs Shetty Brothers. In addition to the manufacturing of Pharmaceuticals, Biologicals injectbles of Vitamins and Hormones, Household remedies, Cosmetics, a full fledged Ayurvedic section is also being ided under the direct supervision of Experts in the line.

2 The Company has a network of wide sales Organisation of its own, covering the major markets of India and arrangements are der way for the export and sale of these products in Burma, Malaya, F. M. S. Ceylon and Middle East Countries.

3 The products of the company have been well received in all the markets so far organised and they are being patronised top ranking men in the medical profession. The products of the Company have established a name for their dependable quality d purity. The laboratories are fully equipped in accordance with the Drug Rules 1945 and the manufacturing is done under the rsonal supervision of highly qualified chemists with wide experience under the able guidance of Dr. D. N. Ganguli New and quality eparations of outstanding merit are manufactured under strict scientific control. With the untiring efforts of the Managing Agents ssrs. Shetty Brothers, the founders of this enterprise, the company is expected to make rapid progress in the new political environment, in the country.

4 On the working of the first year itself enough profits have been earned for the distribution of 5% tax free dividend on the ordinary shares after ing on all the preliminary expenses.

5 Better results are anticipated during the working of the current (second) year. Further particulars could be had from the Head fice or from the Territorial Representatives:

MYSORE STATE
Mr. B. R. Hegde M. A.
9, First Main Road, Narasimharaja Colony,
P. O. Basavanagudi, Bangalore

NORTH & SOUTH KANARA AND COORG
Mr. M. R. Buchilla, C. I. C. A.,
Mission Hospital Road, Udipi.

ಉಡುಪಿ

ರಕ್ತಕ್ರಾಂತಿ ದಿನಾಚರಣೆಯು- ಉಡುಪಿಯಲ್ಲಿ ತಾ 7ರಲ್ಲಿ ಸಂಜೆ ರಥಬೀದಿಯಲ್ಲಿ ಶ್ರೀ ಅನಂತಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಮಜೂರ ಹಾಗೂ ಕಮ್ಯೂನಿಸ್ಟ್ ಪಾರ್ಟಿಗಳ ಕಡೆಯಿಂದ ಸಾರ್ವಜನಿಕ ಸಭೆಯ ವ್ಯವಸ್ಥೆ ಮಾಡಲಾಗಿತ್ತು. ಕಾಮ್ರೇಡ್ ಶೀನನಾಯಕ್ ಮೊದಲಾದವರು ಭಾಷಣಮಾಡಿದರು.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್—1906ನೇ ಇಸವಿಯಲ್ಲಿ ಸ್ಥಾಪಿತವಾದ ಈ ಬ್ಯಾಂಕಿಗೆ ಆದರ 25 ಲಕ್ಷ ರೂಪಾಯಿಯ ಅಧಿಕೃತ ಭಂಡವಾಳದಲ್ಲಿ, ಚಂದಾ ಹಾಕಲಿಕ್ಕೆ ಬಾಕಿ ಇದ್ದ ರೂಪಾ 9 ಲಕ್ಷ ಭಂಡವಾಳದ ಪೈಕಿ, 4 ಲಕ್ಷ ರೂಪಾಯಿಯಷ್ಟು ಭಂಡವಾಳವನ್ನು ಚಂದಾ ಹಾಕಲಿಕ್ಕೆ ಅರ್ಪಿಸುವುದಕ್ಕಾಗಿಯೂ ರೂಪ್ಯಾ 50 ರ ಈ ಪ್ರತಿಯೊಂದು ಒರ್ಡಿನರಿ ಪಾಲಿಗೆ ರೂ. 55 ಕ್ಕಿಂತ ಜಾಸ್ತಿಯಾಗದಷ್ಟು ಪ್ರೀಮಿಯಮ ಹಾಕಲಿಕ್ಕೂ ಕೇಂದ್ರ ಸರಕಾರದ ಅನುಮತಿ ದೊರೆತಿದೆ. ಈ 3000 ಪಾಲುಗಳನ್ನು ಶೀಘ್ರದಲ್ಲಿ ಚಂದಾ ಹಾಕಲಿಕ್ಕೆ ಅರ್ಪಿಸಲ್ಪಡುವುವು ಎಂದು ತಿಳಿದುಬರುತ್ತದೆ.

ಪಂಜಾಬು ನಿರಾಶ್ರಿತರಿಗೆ ಸಹಾಯ ಮಾಡಿರಿ

ಪಶ್ಚಿಮ ಪಂಜಾಬಿನ ಅತಿ ಭೀಕರ ಜಾತೀಯ ಗಲಭೆಗಳಿಂದಾಗಿ ಸಹಸ್ರಾರು ಮಂದಿ ಸತ್ತು, ಮಿಲಿಯಾವಧಿ ಮಂದಿ ನಿರ್ಗತಿಕರಾಗಿ ಭಾರತದ ಬೇರೆಬೇರೆ ಕಡೆಗಳಿಗೋಡಿ ಬಂದು ವಾಸಿಸುತ್ತಿರುವ ಹೃದಯದ್ರಾವಕ ಸ್ಥಿತಿಯು ನಮ್ಮ ಹೃದಯವನ್ನು ಕೊರೆಯುತ್ತಿಲ್ಲವೆ? ಇಂಥವರನ್ನು ಛಳಿ, ಮಳೆಯ ಹಾವಳಿಗಳಿಂದ ಉಳಿಸುವುದಕ್ಕಾಗಿ ಮಹಾತ್ಮಾ ಗಾಂಧಿಯವರು ಕಂಬಳಿ, ಉಲ್ಲನ್‌ಕೋಟು, ಮತ್ತಿತರ ಅರಿವೆಗಳನ್ನು ಸಂಗ್ರಹಿಸಿಕೊಡಲು ನಿರ್ಧರಿಸಿದ್ದಾರಲ್ಲದೆ ಅಖಿಲ ಭಾರತದ ಸರ್ವರೂ ತನ್ನೀ ಸಂಗ್ರಹಕ್ಕೆ ಕೊಡುಗೈಯಿಂದ ಸಹಾಯಮಾಡಬೇಕೆಂದು ಕೇಳಿಕೊಂಡಿದ್ದಾರೆ. ಆದ್ದರಿಂದ ಉಡುಪಿಯ ಹಾಗೂ ಎಲ್ಲಾ ಕಡೆಯ ಸುಜನರು ಕಂಬಳಿ, ಉಲ್ಲನ್ ಅಂಗಿಗಳು, ಕೋಟುಗಳು ಮತ್ತಿತರ ಅರಿವೆಗಳನ್ನು ಉಡುಪಿಯ ಸರ್ಕಲ್ ಕಾಂಗ್ರೆಸ್ ಕಮಿಟಿ ಕಚೇರಿಗೆ ಕಳಿಸಬೇಕೆಂದೂ ಅರಿವೆಗಳಿಲ್ಲದವರು ಧನಸಹಾಯ ರವಾನಿಸಬಹುದೆಂದೂ ಉಡುಪಿ ನಗರ ಸಭಾಧ್ಯಕ್ಷ ಶ್ರೀ ಪಾಂಗಾಳ ಉಪೇಂದ್ರ ನಾಯ್ಕರೂ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರೂ ವಿಜ್ಞಾಪಿಸುತ್ತಾರೆ.

ಕಾಂಗ್ರೆಸ್ ಸದಸ್ಯರು— ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯವರು ತಮ್ಮ ಸರ್ಕಲಿನಿಂದ 2660 ಸದಸ್ಯರನ್ನು ಮಾಡಿರುವರಾಗಿ ತಿಳಿದು ಬರುತ್ತದೆ.

ಉಡುಪಿ— ನಗರ ಸಭೆಯ ಚೆಯರ್‌ಮೆನರಾಗಿ ಆರಿಸಲ್ಪಟ್ಟ ಶ್ರೀ ಪಿ. ಉಪೇಂದ್ರ ನಾಯ್ಕರಿಗೆ ಗೌಡಸಾರಸ್ವತ ಸಮಾಜದವರು ಕಳೆದ ಆದಿತ್ಯವಾರ ಮಾನಪತ್ರವನ್ನಿತ್ತು ಗೌರವಿಸಿದರು. ಈ ಸಮಾರಂಭವು ಪ್ರಭಾಕರ ಪ್ರೆಸ್ ಕಟ್ಟಡದಲ್ಲಿ ಜರಗಿತು.

ದ. ಕ. ಜಿಲ್ಲಾ ವಿದ್ಯಾರ್ಥಿ ಸಮ್ಮೇಳನವು— ಕಾರ್ಕಳದಲ್ಲಿ ಇದೇ ತಾ. 9ನೇ ಆದಿತ್ಯವಾರ ದಿವಸ ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಗ್ಗೆ ಪ್ರಭಾತ ಫೇರಿ, ಧ್ವಜಾರೋಹಣ, ವಿಷಯ ನಿಯಾಮಕ ಸಮಿತಿ ಸಭೆಗಳಾದುವು. ಮಧ್ಯಾಹ್ನ ಮೆರವಣಿಗೆಯಾದ ಬಳಿಕ ಬಹಿರಂಗ ಅಧಿವೇಶನವನ್ನು ಕರ್ನಾಟಕ ಸಮತಾವಾದಿ ಪಕ್ಷದ ಕಾರ್ಯದರ್ಶಿಯವರಾದ ಶ್ರೀ ಗೋಖಲೆಯವರು ಉದ್ಘಾಟನೆ ಮಾಡುತ್ತಾ ಜನತೆಯ ಕುಂದುಕೊರತೆಗಳಿಗೆ ತಾರತಮ್ಯದ ಸಂಪತ್ತು ವಿತರಣೆಯೇ ಮುಖ್ಯಕಾರಣವೆಂದು ಸೂಚಿಸಿ ಅದನ್ನು ಹೋಗಲಾಡಿಸಲು ಸಮತಾವಾದ ಸರಕಾರವೇ ಜನ್ಮ ತಾಳಬೇಕಾಗಿದೆಯೆಂದೂ ಆ ಬಗ್ಗೆ ವಿದ್ಯಾರ್ಥಿಗಳು ಚಳವಳಿಸಬೇಕೆಂದೂ ಸೂಚಿಸಿದರು.

ಅಧ್ಯಕ್ಷರು ತನ್ನ ಉದಾತ್ತ ಬೋಧಪರ ಭಾಷಣದಲ್ಲಿ ಹೀಗೆಂದರು "ವಿದ್ಯಾರ್ಥಿಗಳು ವಯಸ್ಸಿಗನುಸಾರವಾಗಿ ವಿವಿಧ ಚಟುವಟಿಕೆಗಳನ್ನು ತಯಾರಿಸ ಬೇಕಾಗಿದೆ. ವಿದ್ಯಾರ್ಥಿಗಳು ತಮ್ಮ ವೈಯುಕ್ತಿಕ ಮನೋಭಾವನೆಗಳನ್ನು ಸುತ್ತುಮುತ್ತಲಿನ ವಾತಾವರಣವನ್ನು ಅನುಸರಿಸಿ ಬಲಪಡಿಸಬೇಕಾಗಿದೆ. ಮಾನವನ ಸೇವೆಮಾಡಲು ವಿದ್ಯಾರ್ಥಿಗಳು ಬದ್ಧಕಂಕಣರಾಗಬೇಕಾದರೆ ಮೊತ್ತಮೊದಲು ಸೇವೆಯ ಮರ್ಮವನ್ನು ತಿಳಿಯಬೇಕಾಗಿದೆ. ಅನುಕಂಪಿಸುವ ಅಭಿಪ್ರಾಯಗಳೇ ಈಗಿನ ವಿದ್ಯಾರ್ಥಿ ಸಮುದಾಯದಲ್ಲಿ ತೋರಿಬರುವ ವೈಶಿಷ್ಟ್ಯವಾದುದರಿಂದ ವಿದ್ಯಾರ್ಥಿಗಳು ಪ್ರಗಮತಿ ಜೀವನದ ಏರುತಗ್ಗುಗಳ ಮಟ್ಟವನ್ನು ಚೆನ್ನಾಗಿ ಈಗಲೆ ಮನನಮಾಡಿದರೆ ಭಾವೀ ಜೀವನವು ಸುಗಮವಾಗಿ ಸಾಗಲು ಸಾಧ್ಯವಿದೆ. ರಾಜಕೀಯ ಆಂದೋಳನದಲ್ಲಿ ವಿದ್ಯಾರ್ಥಿಗಳು ಒಮ್ಮೆಲೇ ಧುಮುಕುವುದು ಸರಿಯಲ್ಲ. ರಾಜಕೀಯ ಪಕ್ಷ ಸಂಗಡಗಳ ಧ್ಯೇಯಗಳನ್ನು ಚೆನ್ನಾಗಿ ವಿಚಾರ ವಿನಿಮಯ ಮಾಡಿ ಅನಂತರ ತಮ್ಮ ಸ್ವಾಭಿಪ್ರಾಯವನ್ನು ನಿರ್ಧರಿಸಿ ಕಾರ್ಯರಂಗಕ್ಕೆ ಇಳಿಯಬಹುದಾಗಿದೆ."

ಶ್ರೀಗಳಾದ ಸದಾಶಿವ ಕಾರಂತ ಮತ್ತು ಎಮ್. ಎಸ್. ಅಧಿಕಾರಿಗಳು ವಿದ್ಯಾರ್ಥಿಗಳ ಕ್ಷೇಮಚಿಂತನದೃಷ್ಟಿಯಿಂದ ಲಘು ಭಾಷಣಗಳನ್ನು ಮಾಡಿದರು. ವಿಷಯ ನಿಯಾಮಕ ಸಭೆಯಲ್ಲಿ ಗೊತ್ತಾದ ಗೊತ್ತುವಳಿಗಳು ಬಹಿರಂಗ ಅಧಿವೇಶನದಲ್ಲಿ ಓದಲಾದುವು. ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳಿಂದ ಸಮ್ಮೇಳನವು ಮುಕ್ತಾಯವಾಯಿತು.

ಕಾಸರಗೋಡು

ಶ್ರೀ. ಕಾರ್ಯಹಳ್ಳಿ ರಾಮಕೃಷ್ಣ ಶೆಟ್ಟರ ನಿಧನ— ತರುಣ ಬರಹಗಾರರಾಗಿದ್ದ ಶ್ರೀ ರಾಮಕೃಷ್ಣ ಶೆಟ್ಟರು ಕೆಲಸಮಯದಿಂದ ಅಸ್ವಸ್ಥದಿಂದಿದ್ದು ಇದೇ ತಾ 6ರಂದು ದೈವಾಧೀನರಾದರೆಂದು ತಿಳಿಸಲು ವಿಷಾದವೆನಿಸುತ್ತದೆ. ಶ್ರೀಯುತರು ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಕತೆ, ಕವನಗಳನ್ನು ಬರೆಯುತ್ತಿದ್ದರು. 'ಪ್ರಮೋದ ಕುಮಾರ' ಎಂಬ ಗುಪ್ತನಾಮದಿಂದಲೂ ಇವರ ಹಲವು ಕವಿತೆಗಳು ಪ್ರಕಟವಾಗಿವೆ ಕರ್ನಾಟಕದ ಹಲವು ಪತ್ರಿಕೆಗಳಲ್ಲಿ ಇವರ ಎಷ್ಟೋ ಕತೆಗಳು ಬೆಳಕನ್ನು ಕಂಡಿವೆ. ಶ್ರೀಯುತರು ಮೃತರಾಗುವ ಕೆಲವು ದಿನಗಳಿಗೆ ಮೊದಲು ದಾವಣಗೆರೆಯ ಸಂಜಯ ಪತ್ರಿಕೆಗೆ ಉಪಸಂಪಾದಕರಾಗಿ ಕರೆಯಲ್ಪಟ್ಟಿದ್ದರು.

ತಿದ್ದುಪಡಿ— ಈ ಸಂಚಿಕೆಯ 3ನೇ ಪುಟದಲ್ಲಿ ಪ್ರಕಟವಾಗಿರುವ ವೇರಿ ಮಿನಜಸರ ಪ್ರಕಟಣೆಯ 6ನೇ ಪಂಗ್ತಿಯಲ್ಲಿ ಯಸ್. ಬಿ. ಮಿನೇಜಸ್ ಎಂಬುದನ್ನು ಯಸ್. ಯಿ. ಮಿನೇಜಸ್ ಎಂದು ತಿದ್ದಿ ಓದಬೇಕಾಗಿದೆ.

(ಸಂ. ನ.)

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 78/46 R. E. P. 412/1947.

ವಾದಿ. ಕೃಷ್ಣಯ್ಯ ಗೋಟ.

ಪ್ರತಿವಾದಿ. ಲಕ್ಷ್ಮಿ ಅಮ್ಮ.

ಕುಂದಾಪುರ ತಾಲ್ಲೂಕು ಕೋಟೇಶ್ವರ ಗ್ರಾಮದ ಬಡಾಕೆರೆಯಲ್ಲಿರುವ ರಾಮಾಚಾರ್ಯರ ಹೆಂಡ್ತಿ ವ ಸುಬ್ರಾಯ ಹತ್ವಾರರ ಮಗಳು ಪ್ರತಿವಾದಿ ಲಕ್ಷ್ಮಿ ಅಮ್ಮನಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಸದ್ರಿ ಅಮಲ್ದಾರಿಯಲ್ಲಿ ಪ್ರತಿವಾದಿಯ ಪಕ್ಷದ ಸ್ಥಿರಾಸ್ತಿಯನ್ನು ಜಪ್ತು ಮಾಡಬೇಕೆಂತ ಅರ್ಜಿದಾರನು ದಾಖ್ಲುಮಾಡಿದ ಮೇಲಿನ ಅಮಲ್ದಾರಿಯು ತಾ. 21--11--47ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದಾಗೆ ಸದ್ರಿ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸುತ್ತದೆ.

N. S. Parameshwariah.
Advocate for Petr.
Coondapoor Date 7--11--47.

NOTICE

ಕುಂದಾಪುರ ಡಿ. ಮು: ಕೋರ್ಟಿನಲ್ಲಿ.

S. C. 611/1947

ವಾದಿ. ಶೀನಪ್ಪ ಶೇರ್ವೆಗಾರ.

ಪ್ರತಿವಾದಿರು. 1. ಶೇಷ ಆಚಾರಿ, 2. ಗಣಪತಿ ಆಚಾರಿ.

ಉಡುಪಿ ತಾಲ್ಲೂಕು ಹೆಗ್ಗುಂಜೆ ಗ್ರಾಮದಲ್ಲಿರುವ ನೀಲ ಆಚಾರಿ ಮಗ 1ನೇ ಪ್ರತಿವಾದಿ ಶೇಷ ಆಚಾರಿ 1, ಈತನ ಮಗ 2ನೇ ಪ್ರತಿವಾದಿ ಗಣಪ ಆಚಾರಿ 1, ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಪ್ರತಿವಾದಿರು ವಾದಿಯಿಂದ ಸಾಲವಾಗಿ ಪಡೆದ ರೂ. 120--0--0ಕ್ಕೆ ತಾ. 10-8--44ರಲ್ಲಿ ಬರಕೊಟ್ಟ ದಿಮಾಂಡು ನೋಟಿನ ಋಣ ಬಡ್ಡಿ ಕೂಡಾ ರೂ. 142-8-0ನ್ನು ಬರಮಾಡಿಕೊಳ್ಳುವರೆ ವಾದಿಯು ದಾಖ್ಲುಮಾಡಿದ ಮೇಲಿನ ದಾವೆಯು ತಾ. 26-11--47ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ

N. S Parameshwariah.
Advocate for Pleff.
Coondapoor Date 9--11--47

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 450/1947.

ನಾಗಪ್ಪ ಕಾರಂತ — ವಾದಿ

ಸೇಕ್ ಬುಡನ್ ಸಾಬ. ಅಬ್ಕಾರಿ ಪೋಲಿಸ್, ನಂಗೊಳ್ಳಿ — ಪ್ರತಿವಾದಿ,

ಪ್ರತಿವಾದಿಗೆ ಕೊಡುವ ನೋಟೀ.

ಪ್ರತಿವಾದಿಯಿಂದ ವ್ಯಯಸಾದಕ್ಕೆ ಬರಬೇಕಾದ ಗೇಣಿ ಅಸಲು ಬಡ್ಡಿ ರೂ 36-9-6ನ್ನು ಬರಮಾಡಿಕೊಳ್ಳುವರೆ ವಾದಿಯು ಮಾಡಿದ ಮೇಲಿನ ದಾವೆಯನ್ನು ತಾ. 20--11--47ಕ್ಕೆ ಈ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ತನಿಖೆಗೆ ಯಿಡುವದಾಗಿಯದೆ.

K. Ramappaiya
Advocate for Plff.
Kundapur 6--11--47.

Chriatian High School,
Udipi, South Kanara.

"Wanted a L. T. (Natural Science; either for B. A. or Intermediate preferred) to join immediately on the time Scale of Salary of Rs. 80-5-160 plus D. A. at Government rates. Even untrained Graduates may apply. The vacancy is likely to be permanent."

The Correspondent

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಲೆಗಳನ್ನು ಉಪಯೋಗಿಸಿದರೆ ಹಳೆತಪ್ಪಿ ನಿಂತುಹೋಗಿರುವ ಋತುಸ್ರಾವವು ಪುನಃ ಹೊರಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಗರ್ಭಿಣಿಯರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ 3. ಸ್ಪೆಶಲ್ ರೂ. 5. ಅಧಿಕಾಧಿಕ ಸ್ಪೆಶಲ್ ರೂ. 8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

MRS. P. DEVEE, F. DS (N. J.)
Tollygunge CALCUTTA
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಅಮೃತಾಂಜನ.

ತಲೆವೇದನೆ, ಶಿರೋವೇದನೆ, ಉಳುಕು, ಕತ್ತಿಗೆ, ಛಳಿ ಹಲ್ಲು ವೇದನೆಗಳು ಎದೆನೋವು, ಗಾಯಗಳು ಬಾತುಕೊಳ್ಳುವದು, ಜೇನು ಚೇಳು ಮುಂತಾದ ಜೀವಿಗಳ ಕಡಿತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ, ಹುಳುಕಡ್ಡಿ ಮತ್ತು ಶಜ್ಜ ನಿವೃತ್ತಿ ಗ್ಯಾರಂಟಿ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ಕೋಟಿಗಟ್ಟಲೆ ಖರ್ಚು ಮಾಡಿದಾಗ

ಕನಸಿಗಿಂತ ಮಿಗಿಲಾದ ಕೀರ್ತಿವೆತ್ತ ಚಿತ್ರವು

ಯುನಿವರ್ಸಲ್‌ನ

ವರ್ಣಚಿತ್ರ

ಅರೇಬಿಯನ್ ನೈಟ್ಸ್

ಮೈಸೂರ್ ಸಾಬು, ಮರಿಯಾ ಮೊಂಟೆಸ್,

ಜೋನ್ ಹೋಲ್

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾವಾಗಿ ಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ದಕ್ಷಿಣ ಕನ್ನಡ.

ಮಂಗಳೂರು

ಜಿಲ್ಲಾ ಕಲೆಕ್ಟರು—ನಮ್ಮ ಜಿಲ್ಲಾ ಕಲೆಕ್ಟರರಾಗಿ ಶ್ರೀ ಪಿ. ವಿ. ಸುಬ್ಬರಾವ್ (ಮೊದಲು ಆಹಾರ ಶಾಖಾ ಕಾರ್ಯದರ್ಶಿ) ಅವರ ನೇಮಕವಾಗಿದೆ. ಮಿ. ಸಾಂಡರ್ಸ್ ಅವರಿಗೆ ಚಿತ್ತೂರಿಗೆ ಕಲೆಕ್ಟರರಾಗಿ ವರ್ಗವಾಗಿದೆ.

ಗವರ್ನಮೆಂಟು ಕಾಲೇಜಿನ—ತರಬೇತಿ ಪಂಡಿತರ ಸಂಘದ ಸಭೆಯೊಂದು ತಾ. ೩ರಂದು ಶ್ರೀ ಬಿ. ಪಿ. ರಮಣ್ಣ, ಎಂ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಹೋಟೆಲು ಕೆಲಸಗಾರರ ಮುಷ್ಕರ—ಇಲ್ಲಿಯ ಸೆಂಟ್ರಲ್ ಕಾಫೀ ಹೌಸ್ ಮಾಲಿಕರು ಹಲವು ಸಮಯದಿಂದ ಕಾರಣವಿಲ್ಲದೆ, ನೋಟೀಸು ಕೂಡ ಕೊಡದೆ ಅನೇಕ ಕೆಲಸಗಾರರನ್ನು ಕೆಲಸದಿಂದ ತೆಗೆದು ಹಾಕಿದರು. ಆ ವಿಷಯವಾಗಿ ಹೋಟೇಲು ಕೆಲಸಗಾರರು ಸ್ಥಳೀಯ ಸೋಶಿಯಲಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಮಾಲಿಕರೊಡನೆ ಮಾತುಕತೆ ನಡೆಸಿ ಅದು ನಿಷ್ಫಲವಾದ್ದರಿಂದ ತಾ. ೩ರಿಂದ ಕೆಲಸಗಾರರು ಮುಷ್ಕರ ಹೂಡಿದ್ದಾರೆ. ಪ್ರತಿದಿನ ಹೋಟೇಲಿನ ಬಾಗಿಲಿನಲ್ಲಿ ಪಿಕೆಟಿಂಗ್ ನಡೆಯುತ್ತಿದೆ.

ಈ ಕಾಫಿ ಹೋಟೇಲಿನ ಮಾಲಕರಲ್ಲಿ ಒಬ್ಬರಾದ ಶ್ರೀ ಮುಕುಂದ ಪ್ರಭುಗಳು ಈ ಮುಷ್ಕರದ ಸಲುವಾಗಿ ಅನ್ನಸತ್ಯಾಗ್ರಹ ತೊಡಗಿದ್ದಾರಲ್ಲದೆ ಅವರ ಅನ್ನ ಸತ್ಯಾಗ್ರಹಕ್ಕೆ ಜಯವಾಗಲೆಂಬ ಒಂದು ಬೋರ್ಡು ಹೋಟೇಲಿನ ಗೋಡೆಗೆ ರಾಷ್ಟ್ರಧ್ವಜದಡಿಯಲ್ಲಿ ತೂಗಹಾಕಿದೆ.

ದ. ಕ. ಜಿಲ್ಲಾ ಆಹಾರ ಪರಿಷತ್ತು

ದವಸಧಾನ್ಯ ಸಂಗ್ರಹ ಕುರಿತು ಸಂಬಂಧಪಟ್ಟ ಹೆಚ್ಚಿನ ಅಧಿಕಾರಿಗಳು ಯಾವುದಾದರೊಂದು ನಿಶ್ಚಿತ ಕ್ರಮ ಮತ್ತು ಧೋರಣೆ ವಹಿಸದೆ ಕೃಷಿಕರಿಗೆ ಕಷ್ಟ ನಷ್ಟವುಂಟಾಗುವ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಕೃಷಿಕರು ಮತ್ತು ಒಕ್ಕಲುಗಳು ಮೊದಲನೇ ಬೆಳೆಯಲ್ಲಿ ಬೆಳೆಯಿಸಿರುವ ದವಸಧಾನ್ಯಗಳನ್ನೆಲ್ಲ ಸಂಗ್ರಹಿಸಿ ಒಯ್ಯುವ ಪ್ರಯತ್ನವು ಹಲವು ಕಡೆ ನಡೆದಿದೆ. ಸ್ಟೋರುಗಳಿಂದಲೂ ನಾನಾರೀತಿಯ ಅನ್ಯಾಯಗಳಾಗುತ್ತಿವೆಯೆಂದು ನಮ್ಮ ಬಳಿಗೆ ಎಡೆಬಿಡದೆ ದೂರುಗಳು ಬರುತ್ತಿವೆ ಆದುದರಿಂದ ದವಸ ಧಾನ್ಯ ಸಂಗ್ರಹ ಮತ್ತು ವಿತರಣೆಯ ಕುರಿತು ಇಡೀ ಜಿಲ್ಲೆಯಲ್ಲಿ ಏಕ ರೀತಿಯ ಧೋರಣೆ ವಹಿಸಲ್ಪಡುವಂತೆಯೂ ಕೃಷಿಕರಿಗೆ ಅದರಿಂದ ಅನ್ಯಾಯ ಮತ್ತು ನಷ್ಟವಾಗದಂತೆಯೂ, ಇಡೀ ಜಿಲ್ಲೆಯಲ್ಲಿ ಧವಸಧಾನ್ಯಗಳ ಬೆಳವಣಿಗೆ ಮತ್ತು ಸಂಗ್ರಹವು ಚೆನ್ನಾಗಿ ಸಾಗುವಂತೆ ಯಾವ ಯಾವ ಕ್ರಮ ಮತ್ತು ಏರ್ಪಾಡುಗಳು ಅವಶ್ಯವೆಂದು ಎಲ್ಲಾ ಪಕ್ಷ ಮತ್ತು ವರ್ಗದ ಜನತೆಯ ಅಭಿಪ್ರಾಯ ಪಡೆದು ನಿರ್ಣಯಗಳನ್ನು ಮಾಡಿ, ಸರಿಯಾದ ಪ್ರತಿನಿಧಿತ್ವದ ಜವಾಬ್ದಾರಿಯಿಂದ ಅವನ್ನು ಸರಕಾರದ ಮುಂದಿಟ್ಟು ಸರಕಾರವು ಅವನ್ನು ಕೂಡಲೇ ಜ್ಯಾರಿಗೆ ತರುವಂತೆ ಏನು ಮಾಡತಕ್ಕದ್ದೆಂಬ ಕುರಿತೆಲ್ಲ ವಿಚಾರಿಸಲು ದ. ಕ. ಜಿ. ಕಾಂ. ಕಮಿಟಿಯ ಆಶ್ರಯದಲ್ಲಿ ಇದೇ ತಾ ೧೬ನೇ ಅಪರಾಹ್ನ ಘಂಟೆ ೩ಕ್ಕೆ ಮಂಗಳೂರಿನ ಗಣಪತಿ ಹೈಸ್ಕೂಲಿನ ಸಭಾ ಭವನದಲ್ಲಿ ಜಿಲ್ಲೆಯ ಎಲ್ಲಾ ವರ್ಗ ಮತ್ತು ಪಕ್ಷಗಳ ಆಹಾರ ಪರಿಷತ್ತು ನಡೆಯಲಿರುವುದು. ಶ್ರೀ ಬಿ. ವೈಕುಂಠ ಬಾಳಿಗರು ಅಧ್ಯಕ್ಷತೆ ವಹಿಸಲಿರುವರು. ಜಿಲ್ಲೆಯ ಎಮ್. ಎಲ್. ಎಗಳೂ ಸಂಬಂಧಪಟ್ಟ ಅಧಿಕಾರಿಗಳೂ ಇತರ ಪ್ರಮುಖ ಸಾರ್ವಜನಿಕ ಕಾರ್ಯಕರ್ತರೂ ಆಮಂತ್ರಿತರಾಗಿ ಬರಲಿರುವರು. ಎಂದು ಜಿಲ್ಲಾ ಕಾಂ. ಕಮಿಟಿಯ ಪ್ರಧಾನ ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ.

ಉಡುಪಿಯಿಂದ ಕ್ರಿಕೆಟ್ ಟೀಮೊಂದು—ಕಳೆದವಾರ ಮಂಗಳೂರಿಗೆ ಬಂದು ಇಲ್ಲಿಯ ಎಮ್. ಸಿ. ಸಿ. ಮತ್ತು ಜೈಹಿಂದ್ ಕ್ರಿಕೆಟ್ ಟೀಮುಗಳೊಡನೆ ಪಂದ್ಯಾಟಕ್ಕೆ ನಿಂತಿತು. ಎರಡೂ ಮೇಚುಗಳಲ್ಲಿ ಮಂಗಳೂರು ಟೀಮುಗಳೇ ಗೆದ್ದವು.

ವೆಸ್ಟ್ ಕೋಸ್ಟ್ ಇಂಟರ್ ಕಾಲೇಜು ಪಂದ್ಯಾಟವು—ತಲಚೇರಿ ಗವರ್ನಮೆಂಟ್ ಕಾಲೇಜಿನ ಟೀಮು ಮತ್ತು ಸ್ಥಳೀಯ ಸೈಂಟ್ ಎಲೋಶಿಯಸ್ ಕಾಲೇಜಿನ ಟೀಮುಗಳೊಳಗೆ ಸೆಂಟ್ರಲ್ ಮೈದಾನದಲ್ಲಿ ಜರಗಿ ತಲಚೇರಿ ಟೀಮು ಸೋತುಹೋಯಿತು.

ಫೋಟಾ ಮಂಗಳೂರು ಕೊಲನಿ—ಮಂಗಳೂರಿನಿಂದ ಮೂರು ಮೈಲು ದೂರದಲ್ಲಿರುವ ಉಳ್ಳಾಲದಲ್ಲಿ ಮಾಜಿ ಮಂತ್ರಿ ಡಾನಿಯೇಲ್ ಥೋಮಸರು ಕಳೆದ ತಾ. 24ರಲ್ಲಿ ಫೋಟಾ ಮಂಗಳೂರು ಕೊಲನಿಯ ಶಂಕು ಸ್ಥಾಪನೆ ಮಾಡಿದರು. ನೆಹರು ಪಾರ್ಕನ್ನು ತೆರೆದರು. ಮಂಗಳೂರಿನ ಹಂಚು ಕಾರ್ಖಾನೆ ಮಾಲಕರಾದ ಶ್ರೀ ಫೆಲಿಕ್ಸ್ ಅಲ್ಬುಕರ್ಕರು ಈ ಕೊಲನಿಯ ಸಲುವಾಗಿ ಸಾಧಾರಣ 200 ಎಕ್ರೆ ಸ್ಥಳ ಕೊಡುವರು.

ಕುಂದಾಪುರ—ಈ ತಾಲೂಕಿನ ಮೂತೇದಾರರ ಸಮ್ಮೇಳನವು ಕಳೆದ ತಾ॥26ರಲ್ಲು ಮರವಂತೆಯಲ್ಲಿ ಶ್ರೀ ಬಿ. ಸುಬ್ಬಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಸ್. ಹೊಳ್ಳರು ಸಮ್ಮೇಳನದ ಉದ್ಘಾಟನೆಯನ್ನು ಮಾಡಿದರು. ಕಂಗಿನ ಬೆಲ್ಲವನ್ನು ತಯಾರಿಸುವರೆ ಬಸ್ರೂರು ಬೈಂದೂರು, ಕುಂದಾಪುರ, ಮರವಂತೆ ಸೆಂಟರುಗಳಲ್ಲಿ ಸಹಕಾರಿ ಸಂಘಗಳನ್ನು ಸ್ಥಾಪಿಸಬೇಕೆಂದು ನಿರ್ಣಯವಾಯಿತು. ಕುಂದಾಪುರ ತಾಲೂಕಿನ ಸಾಧಾರಣ 7400 ಎಕ್ರೆ ನಂಜ ಸ್ಥಳವನ್ನು ಮೂತೇದಾರರಿಗೆ ಕೊಟ್ಟು ಆಹಾರ ಉತ್ಪತ್ತಿಯನ್ನು ಜಾಸ್ತಿ ಮಾಡುವರೆ ಮದ್ರಾಸು ಸರಕಾರವನ್ನು ವಿನಂತಿಸಲಾಯಿತು.

ಬೈಂದೂರು—ಸ್ಥಳೀಯ ಮಿಡ್ಲ್ ಸ್ಕೂಲನ್ನು ಹೈಸ್ಕೂಲನ್ನಾಗಿ ಮಾಡುವಗೆ ಶ್ರೀ ಬಿ ಸುಬ್ಬಣ್ಣ ಸೆಟ್ಟರು ಜಿಲ್ಲಾ ಕಲೆಕ್ಟರ್ ಮತ್ತು ಜಿಲ್ಲಾ ಬೋರ್ಡು ಸ್ಪೆಶಲ್ ಆಫೀಸರರೊಡನೆ ವಿಚಾರ ವಿನಿಮಯಮಾಡಿರುವರು. ಹೈಸ್ಕೂಲ್ ಕಮಿಟಿಯು ಹದಿನೈದು ಸಾವಿರ ರೂಪಾಯಿ ಧನ ಸಂಗ್ರಹಿಸಲು ನಿಶ್ಚಯ ಮಾಡಿರುವುದಲ್ಲದೆ ಆಗಾಗಲೇ ಹೊಸ ಕಟ್ಟೋಣದ ವ್ಯವಸ್ಥೆಯನ್ನು ಮಾಡಲಾರಂಭಿಸಿದೆ.

ತೆಕ್ಕಟ್ಟೆ—ಇಲ್ಲಿಯ ಬಡ ವಿದ್ಯಾರ್ಥಿ ಸಂಘದ ಕಡೆಯಿಂದ ಕಳೆದ ಅಕ್ಟೋಬರ ತಿಂಗಳ ತನಕ ಬಡ ವಿದ್ಯಾರ್ಥಿಗಳಿಗೆ ರೂಪಾಯಿ 534—11—11 ಸಹಾಯ ಧನವಾಗಿ ಕೊಟ್ಟಿರುತ್ತದೆ. ಬಡ ವಿದ್ಯಾರ್ಥಿಗಳು ಹೈಸ್ಕೂಲು ಶಿಕ್ಷಣ ಪಡೆಯುವರೆ ಈ ಸಂಘದ ಕಡೆಯಿಂದ ಹೆಚ್ಚಿನ ಧನ ಸಹಾಯ ಮಾಡಬೇಕಾಗಿರುವುದರಿಂದ ವಿದ್ಯಾಭಿಮಾನಿಗಳು ಉದಾರ ಹಸ್ತದಿಂದ ಧನ ಸಹಾಯವೀಯಬೇಕಾಗಿದೆ. ತೆಕ್ಕಟ್ಟೆ ಬಡ ವಿದ್ಯಾರ್ಥಿ ಸಂಘದ ಅಧ್ಯಕ್ಷರ ಹೆಸರಿಗೆ ಹಣ ಕಳುಹಿಸಬೇಕಾಗಿ ಸಂಘದ ವಿನಂತಿಯಿದೆ.

ಅಜೆಕಾರ್—ಕಳೆದ ವರ್ಷ ಇಲ್ಲಿ ನವೀನವಾಗಿ ಸ್ಥಾಪಿಸಲ್ಪಟ್ಟ ಪ್ರಾಥಮಿಕ ಸಹಕಾರ ಸ್ಟೋರಿನ ಮಹಾ ಸಭೆಯು ತಾ. 2-11-47ರಲ್ಲು ಜರಗಿ, ಪ್ರಗತಿಪರವಾದ ಅದರ ಕಾರ್ಯಕಲಾಪಗಳ ವರದಿಯನ್ನು ಪರಿಶೀಲಿಸಿ ನೆಬಿಕ ಶ್ರೀಗಳಾದ ಕೆ. ನಾರಾಯಣ ಆಚಾರಿ, ಸುಂದರಯಾನೆ ಕೇಶವನಾಯ್ಕ, ಡಾ. ಯು. ಕೃಷ್ಣ, ಮಹಾಬಲ ಸೆಟ್ಟಿ, ನೇಮಣ್ಣನಾಯ್ಕ, ದಾಸ ಸೆಟ್ಟಿ, ಸಿದ್ದಪ್ಪ ಹೆಗ್ಡೆ, ಕೊರಗ ಸೆಟ್ಟಿ ಮತ್ತು ರಾಮಯ್ಯ ಹೆಗ್ಡೆ ಇವು ಡೈರೆಕ್ಟರರಾಗಿ ಆರಿಸಲ್ಪಟ್ಟರು. ಪಂಚಾಯತ ಬೋರ್ಡಿನ ಪ್ರೋತ್ಸಾಹದಿಂದ ಮಾರೂರಿನಲ್ಲಿ ತಾ 14—11—47ನೇ ಮಂಗಳವಾರದಿಂದ ಪ್ರತಿವಾರ ಸಂತೆಯು ಪ್ರಾರಂಭವಾಗಿದೆ.

ಬಿಲ್ಲವರ ಎಸೋಸಿಯೇಶನ್ ಮುಂಬಾಯಿ—ಇದರ ಹದಿನೈದನೇ ವಾರ್ಷಿಕೋತ್ಸವವು ತಾ 2-11-47ರಲ್ಲಿ ಸರ್ ಕವಾಸ್ಜಿ ಜಹಾಂಗೀರ್ ಸಾರ್ವಜನಿಕ ಸಭಾ ಸದನದಲ್ಲಿ ಆಚರಿಸಲ್ಪಟ್ಟಿತು. ಜನ ಸಮೂಹವು ಕಿಕ್ಕಿರಿದು ನೆರೆದಿತ್ತು. ಅಂದಿನ ಅಧ್ಯಕ್ಷಸ್ಥಾನವನ್ನು ಗುಬ್ಬಿ ಮತ್ತು ಕಂಪೆನಿಯ ಒಡೆಯರಾದ ಶ್ರೀಮಂತ ಯನ್. ಯಸ್. ಗುಬ್ಬಿ, ಜಿ. ಡಿ. ಎ., ಆರ್. ಎ ಇವರು ಅಲಂಕರಿಸಿದ್ದರು. ಎಸೋಸಿಯೇಶನಿನ ಅಧ್ಯಕ್ಷರಾದ ಶ್ರೀ. ಕೆ. ಡಿ. ಮಾಲ್ಪೆಯವರು ಅಧ್ಯಕ್ಷರನ್ನೂ ಸಭಿಕರನ್ನೂ ಸ್ವಾಗತೀಕರಿಸಿದರು. ಉಪ ಕಾರ್ಯದರ್ಶಿಯವರು ಹರಸಿ ಬಂದ ತಂತಿ ಮತ್ತು ಪತ್ರಗಳನ್ನು ವಾಚಿಸಿದರು. ಗೌರವ ಕಾರ್ಯದರ್ಶಿಯವರು ಎಸೋಸಿಯೇಶನಿನ ಸಂಕ್ಷಿಪ್ತ ಚರಿತ್ರೆಯನ್ನು ಓದಿ ಹೇಳಿದ ನಂತರ ಶ್ರೀಮತಿ ಸರೋಜಾ ಬಾಯಿ ಗುಬ್ಬಿಯವರು ಎಸೋಸಿಯೇಶನಿನ ಸ್ವಯಂಸೇವಕರಿಗೆ ಪಾರಿತೋಷಕಗಳನ್ನು ಹಂಚಿದರು. ಸಭಿಕರ ಪೈಕಿ ಶ್ರೀಗಳಾದ ಟಿ ಯಸ್. ಹೆಗ್ಡೆ, ಎಡ್ವಕೇಟ್; ಯಸ್. ಡಿ. ಸಿಧ್ವ, ಯಸ್. ಡಿ. ಕಾಂಚನ್, ಬಿ. ಎ. ಬಿ. ಟಿ, ಆಚಾರ್ಯ ಕೆ. ಪಿ. ಸಾಲಿಯಾನ್, ಯಸ್. [illegible] [illegible] ಮತ್ತು ಆರ್. ಡಿ. ಮೆಂಡನರು ಸಂಸ್ಥೆಯ ಕಾರ್ಯಕಲಾಪಗಳನ್ನು ಕೊಂಡಾಡಿ ಮಾತಾಡಿದರು. ಸಭಾಧ್ಯಕ್ಷರು ತಮ್ಮ ಸುಮಧುರ ಭಾಷಣದಲ್ಲಿ ಎಸೋಸಿಯೇಶನಿನ ಉದ್ದೇಶ ಮತ್ತು ಇದುವರೆಗೆ ಗೈದ ಕಾರ್ಯಕಲಾಪಗಳನ್ನೂ ಇನ್ನು ಮುಂದಕ್ಕೆ ಗೈಯ್ಯಬೇಕಾಗಿರುವ ಕರ್ತವ್ಯಗಳನ್ನೂ ವಿವರಿಸಿ, ಈ ಸಂಸ್ಥೆಯನ್ನು ಕೊಂಡಾಡಿ ಸ್ವತಂತ್ರ ಜೀವನವನ್ನು ಸಾಗಿಸುವರೆ ನೆರವಾಗುವ ಔದ್ಯೋಗಿಕ ಕೈಗಾರಿಕೆ ಶಿಕ್ಷಣಗಳನ್ನು ಕೊಡುವ ರಾತ್ರಿ ಶಾಲೆಗಳು, ಸ್ತ್ರೀಯರಿಗೆ ಮನೆ ಕೈಗಾರಿಕೆಯ ವಿದ್ಯಾಭ್ಯಾಸ ಇವೆರಡನ್ನು ಕೂಡಲೆ ಆರಂಭಿಸಲು ಉದ್ಯುಕ್ತಸಬೇಕೆಂದು ತಿಳಿಸಿ ತನ್ನ ಕೊಡುಗೈಯ ಸಹಾಯವನ್ನು ಈಯುತ್ತೇನಾಗಿ ವಾಗ್ದಾನ ಮಾಡಿದರು. ಅಧ್ಯಕ್ಷರ ಧರ್ಮಪತ್ನಿ ಸರೋಜಾ ಬಾಯಿ ಗುಬ್ಬಿಯವರು ರೂಪಾಯಿ 200ನ್ನು ಸಹಾಯಧನವಾಗಿತ್ತರು.

ಶ್ರೀ ವೈ. ಎ. ಅಮೀನರ ನಾಯಕತ್ವದ ಸಂಗೀತ, ಕುಮಾರಿ ನಿರ್ಮಲಾದೇವಿ ರಾವ್ ಮತ್ತು ಸುಶೀಲಾ ರಾವ್ ಇವರ ಮನಮೋಹಕ ನೃತ್ಯ, ಶ್ರೀ [illegible] ಕೃಷ್ಣರಾಯರಿಂದ ಬರೆಯಲ್ಪಟ್ಟ "[illegible]" ಯಾ "[illegible]" ಎಂಬ ಸಾಮಾಜಿಕ ನಾಟಕ ಮೊದಲಾದ ಮನೋರಂಜನೆಗಳ ನಂತರ "ವಂದೇ ಮಾತರಂ" ಗೀತೆಯೊಂದಿಗೆ ಸಭಾಂಗ [illegible].

ಬಾಲರ ಆರೋಗ್ಯಕಾರಿಯಾಗಲು

(ಪ್ರಭೂಸ್) ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನೆಟ್ಟಗಾಗಲು ತಾಯಿ ತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ. ಮಾತ್ರ, ಹೊತ್ತು ಕಳೆದರೆ ಮತ್ತೆ ಬಾರದು.

'ಪ್ರಭೂಸ್'

ಬಾಲಾಮೃತ

ಪ್ರಭೂಸ್ ಬಾಲಾಮೃತದ ಖಾತ್ರಿಗೆ ದಾಖಲೆ ಬೇಕೆ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,

(ರಜಿಸ್ಟರ್ಡ್)

ಕುಂಜಾಲು, ಪೊ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ,

L. N. Sharma, Mangalore.

Bhuvanendra Products Limited,

Katapadi, S. Kanara.

Head Office & Factory: Katapadi, S. Kanara. | Deopt. Maharale Galli, Hubli. Kumta, N. Kanara.

ನಮ್ಮ ಏಜಂಟ್. ಸ್ಟಾಕಿಸ್ಟ, ಗಿರಾಕಿ ವ ಎಲ್ಲಾ ಹಿತಚಿಂತಕರಿಗೆ ದೀಪಾವಳಿಯು ನಮ್ಮ ಶುಭಾಶಯಗಳು, ಹೊಸ ವರ್ಷವು ಅನ್ನ, ಬಟ್ಟೆ, ಅನ್ಯೋನ್ಯ ಪ್ರೀತಿ, ಸುಖ, ಶಾಂತಿ ಯುಕ್ತವಾಗಲಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ,

O. S. 391/1947.

ವಾದಿ ನಾಗಪ್ಪ ಹೊಳ್ಳ.

ಪ್ರತಿವಾದಿರು. ಶಂಕ್ರ ನಾರಾಯಣ ಸೋಮಯಾಜಿ ಕೂಡಾ.

ಕಾರ್ಕಡ ಗ್ರಾಮದಲ್ಲಿರುವ ಸೀತಾರಾಮ ಸೋಮಯಾಜಿರ ಮಕ್ಕಳು, 1ನೇ ಶಂಕ್ರನಾರಾಯಣ ಸೋಮಯಾಜಿ. 2ನೇ ಶ್ರೀನಿವಾಸ ಸೋಮಯಾಜಿ ಕೂಡಾ 2 ಜನರಿಗೆ ಕೊಡುವ ನೋಟೀಸು.

ತಾ 23-2-46ರಲ್ಲು 1-2ನೇ ಪ್ರತಿವಾದಿರು ಬರ್ಕೊಂಡ ರೂ 7000ದ ಕ್ರಯ ದಸ್ತಾವೇಜಿನ ಪ್ರತಿಫಲದ ಪೈಕಿ ಬಾಕಿ ಉಳಿಸಿಕೊಂಡ ಹಣದ ಪೈಕಿ ರೂ. 1500ನ್ನೂ ಬಡ್ಡಿ ಸಮೇತ ಬರ ಮಾಡಿಕೊಳ್ಳುವರೆ ಸದ್ರಿ ಹಕ್ಕು ಕೊಡ ಟ್ರಾನ್ಸ್‌ಫರು ಪಡೆದ ವಾದಿಯು ಮಾಡಿದ ಕೇಸಿನ ದಾವೆಯಂಸು ತಾ. 15-11-47ಕ್ಕೆ ಹಗಲು 11 ಗಂಟೆಗೆ ಈ ಕೋರ್ಟಿನಲ್ಲಿ ವಿಚಾರಣೆಗೆ ಬರುವದಾಗಿಯದೆ.

Sd/ **A. V. N. Hebbar.**

Pleader for Pltff.

Kundapur 6-11-47.

ರೈತ ವಾಣಿ

ನುಡಿಕೊಟ್ಟವ:- ಮಾ. ನಾ. ರಾ.

ರೈತರ ಸಹಕಾರವು ಸರಕಾರಕ್ಕೆ ಬೇಕೇ ಬೇಕು; ರೈತರು ಬೆಳೆಸುವ ಆಹಾರ ಬೇಕು; ಅವರನ್ನು ಉಪಕರಿಸುತ್ತೇವೆ ಎಂಬ ಪ್ರಚಾರ ಬೇಕು ನಮ್ಮ ವಿಚಾರವಂತ ಸರಕಾರಕ್ಕೆ. ಅನುದಿನವೂ "ಆಹಾರ ಹೆಚ್ಚಿಗೆ ಬೆಳೆಸಿರಿ" ಎಂಬ ಪ್ರಚಾರ ನಮ್ಮ ಪತ್ರಿಕೆಗಳಲ್ಲಿ. ಇದೆಲ್ಲ ಕೇವಲ ಲೋಕವನ್ನು ಮೆಚ್ಚಿಸುವ ಲೌಕಿಕ ಮಾತು. ಆದರೆ ಹಳ್ಳಿಯ ರೈತನನ್ನೇ ಕೇಳಿರಿ; ಅವನು ಉತ್ತು-ಬಿತ್ತು ಬೆಳೆಸುವುದರ ವಿನಹ ಅವನಿಗೇನೂ ತಿಳಿಯದು. ಕೆಲವು ಬಲ್ಲವರಿಂದ ತೋರಿಸಿಕೊಳ್ಳುವ ರೈತರು 'ಕರಾಚಿ ಮುಳುಗಿತೆ? ರಂಗೂನು ಹೋಯಿತೆ?' ಎನ್ನುವವನ್ನು ಕೇಳಿದ್ದೇನೆ. ಒಮ್ಮೊಮ್ಮೆ ನಮ್ಮ ರೈತರಿಗೆ 'ಗೋದಾವರಿ' 'ಬೆಜವಾಡ'ಗಳ ನೆನಪಾಗುವುದೂ ಉಂಟು. ಇತ್ತಲಾಗಿ ಹೊರಗಿನಿಂದ ಅಕ್ಕಿ ಬಂದಿತಾದರೆ 'ಗೋದಾವರಿ' 'ಬೆಜವಾಡ' ಅಕ್ಕಿ ಬಂದಿತೆನ್ನುವ ಪರಿಪಾಟವುಂಟು. ಆದರೆ ಅವನ ಕತೆಯನ್ನು ಅವನ ಹೇಳಿಕೆಯಿಂದಲೇ ಅರಿಯಿರಿ. ಸಾಧಾರಣವಾಗಿ 'ನಮ್ಮ ಮನೆಯ ಅಕ್ಕಿ ತೆಗೆದರು; ಊಟಕ್ಕಿಲ್ಲವೆಂದರೆ, ಕಾರ್ಡು ಕೊಡಲಾಗುವುದೆಂದರು; ಸಾಗ್ವಳಿ ಮಾಡಲಿಕ್ಕೆ ಅಕ್ಕಿ ಸಾಲದು ಎಂದರೆ, 'ಸಾಧ್ಯವಿದ್ದಷ್ಟು ಮಾಡಿರಿ' ಎಂದರು' ಎಂದು ನುಡಿಯುತ್ತಾರೆ. ಸಾಮಾನ್ಯ ರೈತ ವರ್ಗವನ್ನು ವಿಚಾರಿಸಿದರೆ ಕಂತಿನ ಅಕ್ಕಿಯನ್ನು ಹಾಕದೆ ಇದ್ದರೆ ಮುಡಿ 1ರ ರೂ. 1-0-0ರ ಜುಲ್ಮಾನೆ ಹಾಕುತ್ತಾರೆ (ಇದು ಶಿಸ್ತು ಕಲಿಸುವ ಪಾಠವಾಗಿರಬಹುದು) ಸ್ಟೋರಿನಲ್ಲಿ ಮುಡಿ 1ರ 1½ ಯಾ 2 ಸೇರು ಕುಂದಲ್ಲಿ ಬರುತ್ತದೆ. (ಇದು ಒಂದೇ ತೀರಬೇಕೆಂಬ ನಿಯಮವಿರಬಹುದು;-ಕೇಳುವುದು ಸರಿಯಲ್ಲ. ತೊಳ್ಸಲು ಕಜೆಯಾಗಿ ಅದಲು ಬದಲು ಹೊಂದುವುದಿದೆ—ಇದು ಭ್ರಷ್ಟಚಿತ್ತಕ್ಕೆ ಸೇರಿದ ವಿಷಯವಲ್ಲ; ಸ್ಟೋರಿನ ಏಜಂಟರ ಚಿತ್ತ ಬಿಟರಿ) ರಿಕ್ವಿಜಿಶನನ್ನು ಪೂರ್ತಿ ಹಾಕದಿದ್ದರೆ ಆ ಭೀಕರ 'ಪ್ರೋಸಿಕ್ಯೂಶನ್' 'ಜಪ್ತಿ' ನೋಟೀಸುಗಳು ಜ್ಯಾರಿಯಾಗುತ್ತವೆ. (ಹಳ್ಳಿಯ ರೈತರನ್ನು ಬೆದರಿಸಲು ಈ ಅಸ್ತ್ರಗಳು ಸಾಕು)-ಇವೆಲ್ಲವು ಕರಾಳ ಸತ್ಯಗಳು. ಅಂತೂ ಅಕ್ಕಿ ಮುಡಿ 1ರ ರೂ. 8-0-0 ಯಾ ರೂ 8-8-0 ಪಡೆಯಲು ಯಾವನಾದರು ಸಮರ್ಥನಾದರೆ ಅದು ಅವನ ಭಾಗ್ಯ ತೆರೆದಿದೆ ಎನ್ನಬೇಕು; ಯಾವನೊಬ್ಬನ ಅಕ್ಕಿಯ ಮುಡಿ.. ಮುಡಿಗೆ ಸಂಬಂಧಿತೆನ್ನುವ ವಿಚಾರ; ಅವನನ್ನು ವಿಚಾರಿಸುವಾಗ್ಗೆ ಮುಡಿಗೆ 2 ಸೇರು ಅಕ್ಕಿ ಹೆಚ್ಚಿಗೆ ಹಾಕಿದ್ದೇನೆ; ಅಂತು ಮುಡಿಗೆ ಸರಿ ಹೊಳ್ಳೆ ಬಂದಿತೆಂದಾನು ಪಾಪ! ಇದು ಮನುಷ್ಯವರ್ಗದ ಬದ್ಧ ರೈತ ಜೀವಿಯ ಪಾಡು; ಇದು ಅವನ ಸಹಜ ಚಿತ್ರ. ಊಟಕ್ಕೆ ಕಡಿಮೆ ಬಿದ್ದಾಗ ಯಾವ ಮನುಷ್ಯ ವರ್ಗದ ಉತ್ಪಾದಕ.. ರೈತನಿರುತ್ತಾನೋ ಅವನು ತಾನು ಬೆಳೆಸಿದ ಅಕ್ಕಿಯನ್ನು ಸುಮಾರು ಸೇರು ಒಂದರ 0-3-4ಕ್ರಯಕ್ಕೆ ಕೊಟ್ಟು ಸೇರು 1ರ ರೂ. 0-6-0ವರೆಗೂ ತೆತ್ತು 4-6ಮೈಲು ದೂರದ ಸ್ಟೋರಿನಿಂದ 1 ಪಾವು ಪಡಿಯನ್ನು ಪಡೆಯಬೇಕು. ಕಾರ್ಡು ಸಿಗದವರು ಎಷ್ಟಾದರೂ ಹಣತೆತ್ತು ಅಕ್ಕಿ ತರಬೇಕು. (ಕಳ್ಳ ಸಂತೆಗೆ ದರಣಿ ಹೂಡಿಯ ಬೇಕು; ಇದನ್ನು ಸರಕಾರವು ನಂಬಲಿಕ್ಕಿಲ್ಲ?) ಇಲ್ಲದಿದ್ದರೆ ಅವನು ರೈತ.. ಉತ್ಪಾದಕನಾಗಿ ಬಾಳಿದ, ಹಲವಾರು ಜನರ ಹೊಟ್ಟೆಯನ್ನು ಹೊರೆದ ಮಹತ್ವಕ್ಕಾಗಿ(?) ಅವನು ಮಡಿಯಬೇಕು. ಇದು ಹಳ್ಳಿಯ ರೈತಜೀವಿಯ ನೈಜ ಚಿತ್ರ.

ಇಷ್ಟು ಕಷ್ಟದಿಂದ ಆಹಾರ ಉತ್ಪಾದಕನೇ ಆಹಾರಕ್ಕಾಗಿ ಹೊಡೆದಾಡಿ ಅಕ್ಕಿಯನ್ನು ಪಡೆದು ಸಾಗ್ವಳಿಯನ್ನು ಮಾಡುದುದರಿಂದ ಬರುವ ಪುಣ್ಯವಾದರೂ ಏನು? ಪುಣ್ಯ ಸಂಪಾದನೆಗಾಗಿ ಅಲ್ಲಬದ್ದರೂ ತನ್ನ ಮಡದಿ ಮಕ್ಕಳು ತಿಂದು ಉಣ್ಣುವ ಮಟ್ಟಿಗಾದರೂ ಇರಬೇಕು ಎನ್ನುವ ವಿಚಾರ ಅದೊಂದು ಅಪರಾಧವೆಂದು ಪರಿಗಣಿಸಲಾಗುವುದೆ? ಇಂತಹ ತ್ಯಾಗಜೀವಿಗಳಿಂದಲೇ ಸೇಟಿಯ ರೇಶನನ್ನು ಯಶಸ್ವಿಯಾಯಿತೆಂದೂ, ಇದರೊಂದಿಗೆ ನಮ್ಮ ರೈತ ಪ್ರಾಣಿಯು (ಮಾನವೋಚಿತ ಸೌಲಭ್ಯ ದೊರಕದ ದುರ್ದೈವಿಯಾದ್ದರಿಂದಲೇ ಹೀಗೆ ಕರೆಯಲಾಗಿದೆ) ಉಪವಾಸ-ಸಂಕಷ್ಟಗಳಿಂದ ಅರೆ ಹೊಟ್ಟೆ ಬರೆ ಹೊಟ್ಟೆಗಳಿಂದ ದಿನಗಳನ್ನು ಕಳೆದನು. ಆದರೆ ರೈತನ ಕಷ್ಟ-ನಿಷ್ಠುರ ಹಾನಿಗಳನ್ನು ಎಣಿಸುವುದು ಅಸಾಧ್ಯ. ನಮ್ಮ ಮದ್ರಾಸ್ ಸರಕಾರವು ಆಗೋಸ್ತು ಸಪ್ಟಂಬ್ರ-ಅಕ್ಟೋಬರ್ ತಿಂಗಳನ್ನು ಯಶಸ್ವಿಯಾಗಿ ಪಾರುಗಾಣಿಸಿತೆಂಬುದು ನಿಜ. ಆದರೆ ಅದು ವಿಶಾಲವಾದ ಕೀರ್ತಿಕಾರಕ ಯಶಸ್ಸಲ್ಲ-ಅದು ಕಲಂಕಿತವಿದೆ-ರೈತ.. ಉತ್ಪಾದಕರ ಆವಶ್ಯಕತೆಗಳನ್ನು ತೀರಾ ಕಡೆಗಣಿಸಲಾಗಿದೆ.

"ಆಹಾರ ಹೆಚ್ಚಿಗೆ ಬೆಳೆಸಿರಿ" ಎನ್ನುವುದು ಬಡ ರೈತನನ್ನು ಮೂದಲಿಸುವ ಮಾತಾಗಿದೆ. (ಸರಕಾರವು ತನ್ನನ್ನು ಉದ್ದೇಶಿಸಿ "ಹೆಚ್ಚಿಗೆ ಆಹಾರ ಬೆಳೆಸಿರಿ" ಎಂದು ಕೇಳುತ್ತಿದೆ ಎಂದು ಅವನಿಗೆ ಗೊತ್ತಿಲ್ಲದಿರುವುದು ಅವನ ಪುಣ್ಯವೇ ಸರಿ) ಸರಕಾರವು ಕೂಡಲೇ ಸಾಕಷ್ಟು ಗಮನವನ್ನು ರೈತರಿಗಾಗಿ ಕೊಡಬೇಕು. ಇಲ್ಲವಾದರೆ ಈ ಕುಹೋದ್ದೇ ಪ್ರಚಾರವನ್ನಾದರೂ ನಿಲ್ಲಿಸಬೇಕು. ರೈತರಲ್ಲಿ ಬೆಳೆಯುತ್ತಿರುವ ಅಸಂತೃಪ್ತಿಯು ಯಾವ ರೂಪವನ್ನು ಧಾರಣ ಮಾಡುವುದೆಂದು ತಿಳಿಸುವುದು ಅಸಾಧ್ಯ.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. P. No. 54/1947.

ಬೋಂಗ್ಲ ಪೂಜಾರಿ (ಕುಟುಂಬದ ಯಜಮಾನನಾಗಿ) ಅರ್ಜಿದಾರ.

ಅರ್ಜಿದಾರನ ಮಾವಾ ತಂದು ಕೊಡವೂರು ಗ್ರಾಮದ ಮುಲ್ಲೆಯಲ್ಲಿ ತಾರೀಕು 15-6-47 ರಲ್ಲಿ ಮೃತ ಪಟ್ಟಿರುವ ಯಂ. ಸೋಮಪ್ಪನ ಎಸ್ಟೇಟನಲ್ಲಾದ ಸಕಲ ಸೊತ್ತುಗಳಿಗೆ ಮೃತನ ಕುಟುಂಬದ ಯಜಮಾನನಾದ ಅರ್ಜಿದಾರನು ಹಕ್ಕು ದಾರನಾಗಿರುವದರಿಂದ್ರ ಅರ್ಜಿಯಲ್ಲಿ ವಿವರಿಸಿದ ಮೃತನ ಎಸ್ಟೇಟಿನಲ್ಲಾದ ಸಾಲಗಳ ವಸೂಲಿಗೆ ತನಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರನು ದಾಖಲು ಮಾಡಿರುವ ಈ ಅರ್ಜಿಯು ತಾರೀಕು 28-11-1947ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಯಿಟ್ಟಿರುತ್ತದೆ. ಆ ಕುರಿತು ಆಕ್ಷೇಪ ಹೇಳತಕ್ಕವರು ಸದ್ರಿ ತಾರೀಕು 28-11-47 ನೇ ದಿವಸ ಬೆಳಿಗ್ಗೆ ಹತ್ತು ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲ್ಕ ಎಲ್ಲರಿಗೂ ತಿಳಿಸಲಾಗುತ್ತದೆ.

V. R. Kidiyur.
Advocate for peter

ದಕ್ಷಿಣ ಕನ್ನಡ

ಕೂಳೂರಲ್ಲಿ ಚಾಲಗೇಣಿ ಒಕ್ಕಲುಗಳ ಸಭೆ

ಇದೇ ತಾ. ೨ರಲ್ಲಿ ಕೂಳೂರಿನ ಪಡುಕೋಡಿ ಗ್ರಾಮದಲ್ಲಿ ಬಂಗ್ರ ಕೂಳೂರು, ತಣ್ಣೀರು ಬಾವಿ ಮತ್ತು ಪಣಂಬೂರು ಗ್ರಾಮಗಳ ಚಾಲಗೇಣಿ ಒಕ್ಕಲುಗಳ ಸಭೆಯೊಂದು ಶ್ರೀ, ಮಲಕಿಯಾನ್, ಡಿ'ಸೋಜರವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಸುಪಾಸಿನ ಗ್ರಾಮಗಳ ಸುಮಾರು ೧೦೦ ಮಂದಿ ಚಾಲಗೇಣಿ ಒಕ್ಕಲುಗಳು ಹಾಜರಿದ್ದರು. ಕೃಷಿಕರ ಹಿತಸಾಧನೆ ಮತ್ತು ಹಕ್ಕು ಬಾಧ್ಯತೆ ರಕ್ಷಣೆಗಾಗಿ ಕೃಷಿಕರೇ ಸಂಘಟಿತರಾಗಿ ಸಂಘವನ್ನು ಸ್ಥಾಪಿಸುವ ಅವಶ್ಯಕತೆಯ ಕುರಿತು ಶ್ರೀ. ಕೆ. ಕೆ. ಶೆಟ್ಟಿ ಮಾತಾಡಿದ ಮೇಲೆ ಶ್ರೀ. ಎನ್. ಎಸ್. ಕಿಲ್ಲೆಯವರು ಚಾಲಗೇಣಿ ಒಕ್ಕಲುಗಳ ಈಗಿನ ಶೋಚನೀಯ ಪರಿಸ್ಥಿತಿಯನ್ನು ಹೃದಯಂಗಮವಾಗಿ ವಿವರಿಸಿ ಅವರ ಉದ್ಧಾರದ ಕಾಲವು ಈಗ ಬಂದಿರುವುದೆಂದು ತಿಳಿಸಿ ಅದಕ್ಕಾಗಿ ಅವರು ಸಂಘಟಿತರಾಗುವ ಅವಶ್ಯಕತೆಯನ್ನು ಮನಗಾಣಿಸಿದರು. ಅಧ್ಯಕ್ಷರು ಕೆಲವು ಮಾತನ್ನು ಆಡಿದ ಮೇಲೆ ಪಡುಕೋಡಿ, ಬಂಗ್ರ ಕೂಳೂರು, ತಣ್ಣೀರುಬಾವಿ ಮತ್ತು ಪಣಂಬೂರು ಗ್ರಾಮಗಳಿಗಾಗಿ ಕೃಷಿಕರ ಸಂಘವೊಂದನ್ನು ಸ್ಥಾಪಿಸುವದು ಅತ್ಯವಶ್ಯವೆಂದು ಈ ಸಭೆಯು ನಿರ್ಧರಿಸಿ ಆ ಬಗ್ಗೆ ಆಗತ್ಯವಾದ ಕೆಲಸವನ್ನು ಮಾಡುವರೇ ತಾತ್ಕಾಲಿಕ ಕಮಿಟಿಯನ್ನು ಸ್ಥಾಪಿಸಲಾಯಿತು.

ಚಾಲಗೇಣಿ ಒಕ್ಕಲುಗಳಿಗೆ ತಾವು ಸಾಗುವಳಿ ಮಾಡುವ ಹೊಲಗಳ ಮೇಲೆ ಕಾಯಂ ಹಕ್ಕು ಕೊಡುವ ಮತ್ತು ಗೇಣಿಯನ್ನು ಕಾಯಂ ಆಗಿ ನಿಶ್ಚಯಿಸುವ ಒಕ್ಕಲು ಒತ್ತಮಸೂದೆಯನ್ನು ಮದ್ರಾಸು ಸರಕಾರವು ಕೂಡಲೇ ಜಾರಿಗೆ ತರಬೇಕೆನ್ನುವ ಜಿಲ್ಲೆಯ ಹಲವು ಕಡೆಗಳಲ್ಲಿ ಭೂಮಾಲಿಕರು ಇಚ್ಛಾನುಸಾರವಾಗಿ ಒಕ್ಕಲುಗಳನ್ನು ಎಬ್ಬಿಸುವದು ಒಂದಲ್ಲ. ಗೇಣಿ ಏರಿಸುವುದರಿಂದಲೂ ಅವರು ಹಾಗೆ ಮಾಡದಂತೆ ತಾತ್ಕಾಲಿಕ "ಸ್ಟೇ" ಕಾನೂನನ್ನು ಸರಕಾರವು ಕೂಡಲೇ ಜಾರಿಗೆ ತರಬೇಕೆನ್ನುವ ಠರಾವುಗಳಾದುವು.

ಕಟಪಾಡಿ--ಇಲ್ಲಿಯ ಎಲ್ಲಾ ಹೋಟೇಲುಗಳಲ್ಲಿಯೂ ಈಗ ಹರಿಜನ ಪ್ರವೇಶ ಇರುವುದಾದರೂ ..ಟಿಭ್ರ ಮಾಲಕರು ಇನ್ನೂ ವೃಥಾ ಬಾಧೆ ಕೊಡುತ್ತಿರುವುದು ವಿಷಾದಕರವಿದೆ.

ಕುಂದಾಪುರ— ಕುಂದಾಪುರ ತಾಲೂಕಿನ ಕೆಲವು ಗ್ರಾಮಗಳ ಶ್ಯಾನುಭಾಗರು, ಅದರಲ್ಲಿಯೂ ಕರಾವಳಿಯ ಗ್ರಾಮಗಳ ಶ್ಯಾನುಭಾಗರು ಈ ವರ್ಷ ಬೆಳೆಯ ಉತ್ಪತ್ತಿಯನ್ನು ಅತೀ ವಿಪರೀತವಾಗಿ ಎಣಿಸಿದ್ದಾರಾಗಿಯೂ ಅದರಿಂದ ಬಡ ರೈತರಿಗೆ ಬಹಳ ಉಪದ್ರವಾಗಿರುವುದಾಗಿಯೂ ತಿಳಿದು ಬಂದಿದೆ. ಆದ್ದರಿಂದ ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಕೂಡಲೆ ನಿಗಾ ಕೊಟ್ಟು ರೈತರಿಗೆ ನ್ಯಾಯ ದೊರಕಿಸಿಕೊಡಬೇಕಾಗಿ ಪ್ರಾರ್ಥಿಸಲಾಗಿದೆ.

ರಾಮಕುಂಜ— ಕಳೆದ ವಾರ ಇಲ್ಲಿಯ ಆಕೂರು ಎಂಬಲ್ಲಿ ಉಪ್ಪಿನಂಗಡಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಉಪ್ಪಿನಂಗಡಿಯ ಜನಾಬ್ ಹಾಜೀ ಹಸನ್ ಸಾಹೇಬರ ಅಧ್ಯಕ್ಷತೆಯಲ್ಲೊಂದು ಸಾರ್ವಜನಿಕ ಸಭೆ ಜರಗಿತ್ತು. ಸದ್ರಿ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ- ಕೆ. ವೇಣುಗೋಪಾಲ ನಾಯಕ, ಶ್ರೀಗಳಾದ H. ನಾರಾಯಣ ರಾವ್, ಕೆ. ಕೆ. ಶೆಟ್ಟಿ ಮತ್ತು ಎನ್. ಎಸ್. ಕಿಲ್ಲೆ ಇವರ ಅಮೋಘ ಭಾಷಣಗಳಾದುವು.

ಶ್ರೀ ಟಿ. ವಿ. ರಾಮಕೃಷ್ಣ ಪರಿವಾರದ "ಶ್ರೀಮತಿ ಸ್ವಯಂವರ"ವೆಂಬ ಹರಿಕಥೆಯು ಕಳೆದ ತಾ.೩ರಲ್ಲಿ ಎಡ್ವಾನ್ಸ್‌ಡ್ ಸಂಸ್ಥೆ ಶಾಲೆಯಲ್ಲಿ ಜರಗಿತು.

ದಕ್ಷಿಣ ಕನ್ನಡಾ ಜಿಲ್ಲಾ ಬಂಧುಗಳಲ್ಲಿ ವಿನಂತಿ-ಬೊಂಬಾಯಿ, ದಕ್ಕನ್ ಪ್ರಾಂತ್ಯಗಳಿಂದ, ದಕ್ಷಿಣ ಕನ್ನಡಾ ಜಿಲ್ಲೆಗೆ ದಕ್ಷಿಣ ಕನ್ನಡಾ ಜಿಲ್ಲೆಯವರು, ಮೈಸೂರು ಸಂಸ್ಥಾನದ ಆಗುಂಬೆ ಮಾರ್ಗವಾಗಿ ಬರುತ್ತಿರುವ ಪ್ರಯಾಣಿಕರಿಗೆ, ಆಗುಂಬೆ ಗೇಟಿನಲ್ಲಿ ರಕ್ಷಕ ನೌಕರರು ಕಿರುಕುಳ ಕೊಡುತಿರ್ಪಾರೆಂದು ಖಚಿತವಾದ ವರ್ತಮಾನ ಬಂದಿರುತ್ತದೆ.

ಆ ಮಾರ್ಗದಲ್ಲಿ ತಿರುಗಾಡುತ್ತಿರುವ ಪ್ರಯಾಣಿಕರು, ದಯಮಾಡಿ ನಿಯಮಿತಕ್ಕಿಂತ ಹೆಚ್ಚಿನ ಆಹಾರ ಸಾಮಾಗ್ರಿಗಳನ್ನು ತರಬಾರದೆಂತಲೂ, ಮತ್ತು ನೌಕರರು, ಕಿರುಕುಳ ಕೊಟ್ಟರೆ ಅಂತಹ ಘಟನೆಯನ್ನು ಪ್ರಯಾಣಿಕರು ಅವರ ಹೆಸರು,ವಿಳಾಸ, ಮತ್ತು ಘಟನೆಯ ಕಾಲದಲ್ಲಿದ್ದವರ ಸಾಕ್ಷಿ ಬಗ್ಗೆ ಸ್ಥಿರತರ ಹೆಸರು ವಿಳಾಸವನ್ನು ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ತಿಳಿಸಬೇಕಾಗಿ ಕೋರುತ್ತೇವೆ.

ತೀರ್ಥಹಳ್ಳಿ ತಾಲ್ಲೋಕ್ ಕಾಂಗ್ರೆಸ್ ಕಮಿಟಿ, ತೀರ್ಥಹಳ್ಳಿ, ಮೈಸೂರು ಸ್ಟೇಟ್.

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R- E. P. 457/47 O. S. 478/43.

ನಾರಾಯಣ ಉಪ್ಪ —

ಕೊಲ್ಲೂರಿ ಯಾನೆ ಲಕ್ಷ್ಮಿ ಪಾತಿ ಇ. —ಎದ್ರಿರು

ಸದ್ರಿ ಅರ್ಜಿದಾರನು ಈ ಮೂಲ್ಕ ತಿಳಿಸುವುದೇನೆಂದ್ರೆ.

5. ನಾಗೇಂದ್ರ ಭಟ್ಟ-ಅಂಪಾರ ನೈಕಂಠ ಭಟ್ರ ಮಗ, ವಂಡ್ಸೆ ಗ್ರಾಮದಲ್ಲಿ ಅತ್ರಾ.ಯಲ್ಲಿರುವವ, ಎದ್ರಿ.

ಅಸ್ಲು ವಾದಿ. ಕೃಷ್ಣ ಉಪ್ಪ-ಸುಬ್ಬ ಯಾನೆ ಸುಬ್ರಾಯ ಉಪ್ಪರ ಮಗ, ಕಾವ. ಗ್ರಾಮದ ಕಂಡಲ್ಲಾರಲ್ಲಿರುವವ.

ಅಸ್ಲು ವಾದಿಯಿಂದ ಅರ್ಜಿದಾರನು ಟ್ರಾನ್ಸ್‌ಫರ್ ಪಡೆದ ಡಿಕ್ರಿಯ ಅಮ್ಲುಜಾರಿಯ-ಕ್ಕೆ ಸದ್ರಿ ಟ್ರಾನ್ಸ್‌ಫರ್ ಅರ್ಜಿದಾರನ ಹೆಸರಿಗೆ ಮಂಜೂರು ಮಾಡಿಸಬೇಕೆಂತ ದಾಖ್ಲು ಮಾಡಿದ ಮೇಲ್ಕಂಡ ಅಮ್ಲುಜಾರಿಯು ತಾ. 19-11-47ಕ್ಕೆ ತನ್ನಿಗೆ ಯಿಟ್ಟಿದೆ. ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ರೆ, ಸದ್ರಿ ದಿವಸ ಮೇಲ್ಕಂಡ ಕೋರ್ಟು ಮುಂದೆ 11 ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಹಾಜರಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಅರ್ಜಿದಾರನ ಕಡೆಯಿಂದ ಈ ಮೂಲ್ಕ ತಿಳಿಯಪಡಿಸಲಾಗಿದೆ.

M. Ananthaya
Advocate for Petitioner
Kundapur Date 30-10-47

ನಮ್ಮಲ್ಲಿ ಸಿಗುವ ಕೆಲವು ಪುಸ್ತಗಳು

ಮನೆಮದ್ದು	2 0 0	ನಾಡ ಕತೆಗಳು	0 3 0	ಅಂತರಂಗದ ಕತೆಗಳು	0 12 0
ಮಧುವನ	3 0 0	ಕುಶಲವ	0 6 0	ಶಂಭುಕವಧೆ	0 2 0
ಕವಿತಾಕಾಮಿನಿ	2 0 0	ಸುಲಭದಲ್ಲಿ ಇಂಗ್ಲಿಷ್	1 8 0	ವೀರಭೂಮಿ	0 2 0
ಕದಂಬ	1 4 0	ವ್ಯಭಿಚಾರಿಣಿ ಯಾರು	1 0 0	ಧರ್ಮಸಂಕಟ	0 4 0
ಜೀವನಸಂಗ್ರಾಮ	1 8 0	ಹೆಂಡ್ತಿ ಗಂಡನಾದರೆ	0 4 0	ಮೀರಾಬಾಯಿ	0 10 0
ಸಂಶಯ ಪಿಶಾಚಿ	0 8 0	ಸನ್ಯಾಸಿಯು ಸೋಗಿನಲ್ಲಿ	0 8 0	ಸರಸ್ವತಿ	0 12 0
ಕಾವ್ಯಸಾಮ್ರಾಜ್ಯ	1 4 0	ಭಾರತೀಯ ಕತೆಗಳು	0 14 0	ಇಂಗ್ಲಿಷ್ ಕನ್ನಡ ನಿಘಂಟು	4 8 0
ಪ್ರೇಮವಿಜಯ	1 0 0	ಮೂರು ಪ್ರಹಸನಗಳು	0 14 0	,, ,, ,,	6 0 0
ಪುರುಷವಧು	0 4 0	ಅನ್ನದೇವರು ಕತೆಗಳು	1 0 0	ಸ್ವತಂತ್ರಜೀವನೋಪಾಯ	0 3 0
ನಂದಾದೀಪ	0 14 0	ಭಾರತದಲ್ಲಿ ಜಾತಿಭೇದ	[illegible]	ವಿಷ್ಣುವಿನ ದಶಾವತಾರಗಳು	0 12 0
ದೇಶಭಕ್ತ	1 4 0	ಪಂಚಾರತಿ	0 6 0	ಆಹುತಿ ಇತ್ಯಾದಿ ಕತೆಗಳು	0 12 0
ರಂಗಭೂಮಿ	0 8 0	ಚಿಗುರು	0 6 0		
ಸೇವಾಪಥ	0 8 0	ಲೋಪಾಮುದ್ರೆ	0 6 0		
ನಾರೀಹೃದಯ	0 14 0	ಪ್ರತೀಕಾರ	0 6 0		
ಪ್ರಕಾಶ	2 4 0	ಪ್ರೇಮಪ್ರವಾಹ	0 8 0		
ನಗೆನೋಟಗಳು	0 14 0	ಆರೋಗ್ಯಪ್ರತಾಪ	0 12 0		

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ, ದ. ಕ.

(೧ನೇ ಪುಟ ನೋಡಿರಿ.)

ಬಗೆ ಹೇಗೆಂಬುದೇ ನನಗರಿಯದು., ಪಾಕಿಸ್ತಾನದ ಯಾವುದೇ ಸಂಚಿನ ದಳದ ಹೆದರಿಕೆ ನನಗಿಲ್ಲ. ದೇವರು ಇದನ್ನು ತಪ್ಪಿಸಲಿ--ಆದರೆ ಒಂದೊಮ್ಮೆಗೆ ಪಾಕಿಸ್ತಾನದ ವಿರುದ್ಧ ಯುದ್ಧವೆದ್ದಲ್ಲಿ, ಆ ಪಾಕಿಸ್ತಾನಕ್ಕೆ ಇದಿರಿಸಿ ನಿಲ್ಲಲಾಗದಂತಹ ಸೇನೆಯನ್ನು ನಾವು ನಮ್ಮೀ ಪ್ರಾಂತದಲ್ಲೇ ತಯಾರಿಸಬಲ್ಲೆವು"--ಈ ಮಾತುಗಳು ಚಪ್ಪಾಳೆಯನ್ನೆಬ್ಬಿಸಿದುವು; ರೋಮಾಂಚನವನ್ನುಂಟುಮಾಡಿದುವು.

ಲೀಗ್ ಸತ್ತಿತು!

ಪಂಡಿತ ಪಂತರು ಮೇಲಿನಂತೆ ಕೆಣಕಿ ಕೇಳಿದ ಬೆನ್ನಲ್ಲೇ ಮುಸ್ಲಿಂ ಲೀಗ್ ಪಕ್ಷದ ಉಪನಾಯಕ ಮಿ. ಲಾರಿಯವರೆದ್ದು ಹೇಳಿದರು; "ಅಖಿಲ ಭಾರತ ಮುಸ್ಲಿಂ ಲೀಗು ಸತ್ತಿದೆ. ಮಿ. ಜಿನ್ನರು ('ಕಾಯಿದೇ ಆಝಮ್' ಪದ ಪ್ರಯೋಗ ಕೂಡಾ ಇಲ್ಲ!) ಅಧ್ಯಕ್ಷರಾಗಿರುವ ಮುಸ್ಲಿಂ ಲೀಗ್ ಸಂಸ್ಥೆಗೆ ಭಾರತದಲ್ಲಿರುವ ಮುಸ್ಲಿಂ ಲೀಗಿನವರ ಮೇಲಾವ ಹತೋಟಿ ಸಂಬಂಧವೂ ಇಲ್ಲ. ಅಧಿಕೃತವಾಗಿ ಒಂದು ಹೊಸ ಸಂಸ್ಥೆಯನ್ನು ನಾವೀ ತನಕ ಸ್ಥಾಪಿಸಿಕೊಂಡಿಲ್ಲವಾದರೂ, ಅದನ್ನೂ ಮತ್ತಿಂತಹ ಇತರ ಮುಖ್ಯ ವಿಷಯಗಳನ್ನೂ ನಿರ್ಧರಿಸುವದಕ್ಕಾಗಿ ಸದ್ಯದಲ್ಲೇ ಭಾರತದ ಮುಸ್ಲಿಂ ಲೀಗಿನವರ ಒಂದು ಪರ್ಯಾಲೋಚನಾ ಸಭೆ ಸೇರುವದಿದೆ". ಸಂಯುಕ್ತ ಪ್ರಾಂತ್ಯದ ಮುಸ್ಲಿಂ ಲೀಗ್ ನಾಯಕ ಮಿ. ಚೌಧರಿ ಖಲೀಕುಝ್ಝಮಾನರು ಅಖಿಲ ಭಾರತದ ಅಗ್ರಗಣ್ಯ ಲೀಗ್ ನಾಯಕರ ಪಂಕ್ತಿಯವರು. ಅವರು ಅಲ್ಲಿದ್ದುಕೊಂಡೇ ಭಾರತ ಸರಕಾರದ ವಿರುದ್ಧವಾಗಿ ಪಿತೂರಿ ನಡೆಸುತಿದ್ದರೆಂದು ಸುದ್ದಿಯಿದ್ದು ಗುಪ್ತ ಪೋಲೀಸರ ಶೋಧನೆನಡೆದ, ಪ್ರಾಯಶಃ ದಸ್ತಗಿರಿಯಾಗುವುದರಲ್ಲಿರುವಾಗಲೇ ಹೇಳದೆ ಕೇಳದೆ ಪಲಾಯನ ಹೂಡಿ ಈಗ ಕರಾಚಿಯಲ್ಲಿದ್ದಾರೆ. "ಹೊಸ ರಕ್ತದ ತರುಣರಿಗೆ ಸ್ಥಾನವನ್ನು ತೆರವು ಮಾಡುವುದಕ್ಕಾಗಿ ನಾನು ನನ್ನ ಲೀಗ್ ನಾಯಕತ್ವಕ್ಕೂ ಹಿಂದೀ ಘಟನಾ ಸಮಿತಿ ಸದಸ್ಯತ್ವಕ್ಕೂ ರಾಜೀಯುತ್ತಿದ್ದೇನೆ. ಮೇಲಾಗಿ ಗಾಂಧೀ ನೆಹರುಗಳ ಉಪದೇಶವನ್ನೂ ಕೇಳದೆ ಸಂಯುಕ್ತ ಪ್ರಾಂತಿಕ ಸರಕಾರವು ಹಿಂದಿಯನ್ನು ಸರಕಾರೀ ಭಾಷೆಯಾಗಿ ಮಾಡಿರುವುದರಿಂದ ನನಗದು ಒಗ್ಗುವುದಿಲ್ಲ"ಎಂದೀಗ ಕರಾಚಿಯಿಂದಲೇ ಬಾಯಿಹಾರಿಸುತಿದ್ದಾರೆ.

ಶೇಕ್ ಅಬ್ದುಲ್ಲಾರ ಹೊಡೆತ

ಕಾಶ್ಮೀರದ ಪ್ರಧಾನ ಮಂತ್ರಿ ಶೇಕ್ ಅಬ್ದುಲ್ಲಾ ತನ್ನ ಪತ್ರಿಕಾ ಹೇಳಿಕೆಯಲ್ಲಿಂತಿದ್ದಾರೆ: "ಸದ್ಯಸ್ಥಿತಿಯು ಭಾರತ ಮತ್ತು ಪಾಕಿಸ್ತಾನಗಳೊಳಗಿನ ಯುದ್ಧವಾಗಿ ಪರಿಣಮಿಸುತ್ತದಾದರೆ, ಪಾಕಿಸ್ತಾನದ ಸಮಾಧಿಗಳು ಕಾಶ್ಮೀರ ಕಂದರದಲ್ಲೇ ತೋಡಲ್ಪಡುವುವು!" ಈ ಮಾತನ್ನು ಕೇಳಿದ ಲೀಗ್ ನಾಯಕರಲ್ಲಿ 'ಆ ಕಾಶ್ಮೀರ್--ಈ ಕಾಫಿರ್!' ಎಂದು ಉರಿಯೇಳದಿದ್ದೀತೆ? ಶೇಕ್ ಅಬ್ದುಲ್ಲಾರಂದಿದ್ದಾರೆ: "ಕಾಶ್ಮೀರದೊಳಕ್ಕೆ ಧಾಳಿಗಾರರನ್ನು ನುಗ್ಗಿಸಿದ ಒಳಗುಟ್ಟೇನು ಗೊತ್ತೆ? ಕೇವಲ ದ್ವೇಷ ಭಾವನೆಯಿಂದಲೇ ಸ್ಥಾಪನೆಗೊಂಡ ಪಾಕಿಸ್ತಾನದ ಇರಸ್ತಿಕೆಗೊಂದು ಮಾನ್ಯತೆ ಗಳಿಸುವುದೊಂದೇ. ಇನ್ನೂ ಇನ್ನೂ ನಕಾರಾತ್ಮಕ ಘೋಷಣೆಗಳೇ ಭಾಷಣಾಹಾರಗಳಾಗಿ ಮುಸ್ಲಿಂ ಸಾರ್ವಜನಿಕರ ಮನಸನ್ನು ತಣಿಸುವಂತಿಲ್ಲ; ಜನತೆಗೆ ಶಾಂತಿ ಸಮೃದ್ಧಿಗಳನ್ನೀವ ಒದಗಿಸಿಕೊಡಬೇಕು. ಹಾಗಾಗಬೇಕಾದರೆ ಪುನರ್ರಚನಾ ಧೋರಣೆ ವಹಿಸಬೇಕು. ಆದರೆ ಪಾಕಿಸ್ತಾನ್ ಸರಕಾರಕ್ಕದು ಸಾಧ್ಯವಿಲ್ಲ. ಆದ್ದರಿಂದ ಜನತೆಯು ನಿರಾಶೆಗೊಳ್ಳದಂತೆ, ಸಾರ್ವಜನಿಕ ಸ್ಫೂರ್ತಿಯನ್ನು ಝಳಪಿಸುವುದಕ್ಕಾಗಿಯೇ ಈ ಧಾಳಿಯನ್ನು ಹೂಡಲಾಗಿತ್ತು. ಆ ಗುಡ್ಡಗಾಡು ಜನರನ್ನೇಕೆ ಧಾಳಿಗಾಗಿ ಎಬ್ಬಿಸಿದುದು ಗೊತ್ತೆ? ಖಾನ್ ಅಬ್ದುಲ್ ಗಫರ್ ಖಾನರಿಂದ ಹೂಡಲ್ಪಟ್ಟ ಗಡಿನಾಡು ಪ್ರಾಂತ್ಯದ 'ಪಠಾಣಿಸ್ತಾನ' ಚಳವಳವನ್ನು ನಿರ್ಮೂಲಿಸಲು, ವಿನಾಶಾತ್ಮಕವಾದ ಒಂದು ಪ್ರತಿ ಧಾಳಿಯನ್ನು ಯೋಜಿಸುವ ಆಗತ್ಯವಿತ್ತು. ಬ್ರಿಟಿಷರಂತೆ ಶಸ್ತ್ರ ಖಜಾನೆಯಿಂದಲೇ ಪಠಾಣರ ಹೊಟ್ಟೆ ತುಂಬಿಸಲು ಪಾಕಿಸ್ತಾನಕ್ಕೆ ಸಾಧ್ಯವಿಲ್ಲ. ಆದ್ದರಿಂದ ಪಠಾಣರು ಕಾಶ್ಮೀರದೊಳಗೆ ನುಗ್ಗುವಂತೆ ನೆರವಿತ್ತಲ್ಲಿ ಸದ್ಯಕ್ಕೊಮ್ಮೆ ತನ್ನ ಆರ್ಥಿಕ ಸಮಸ್ಯೆಯನ್ನು ಇತ್ಯರ್ಥಿಸಿಕೊಳ್ಳಬಹುದೆಂದು ಪಾಕಿಸ್ತಾನ ಬಗೆಯಿತು. ಪನ್ನೊಳಗಡೆಗೆ ಬಂದು ನೆಲಸಿರುವ ನಿರಾಶ್ರಿತರ ದೊಡ್ಡ ಸಮೂಹ, ಉದ್ವಿಮದಾರರಾಗಿದ್ದ ಮುಸ್ಲಿಮೇತರರ ಪಲಾಯನ-ಒಳಗಡೆಯಲ್ಲೇ ಸ್ಫೋಟಗೊಂಡಿರುವ ವರ್ಗಯುದ್ಧ, ಪಕ್ಷ ಯುದ್ಧಗಳು--ಇವೆಲ್ಲವೂ ಪಾಕಿಸ್ತಾನದ ಸೌಕರ್ಯಭಂಡಾರವು ಏನೇನೂ ಸಾಲದೆಂಬುದರ ಸುದರ್ಶನಗಳು. ಪಾಕಿಸ್ತಾನವನ್ನು ಸಶಕ್ತ ಮತ್ತು ವಿಜಯಿಯಾಗಿ ಮಾಡಲು ಯಜ್ಞಪಶುವಾಗಿ ಕಾಶ್ಮೀರವನ್ನು ಬಲಿಕೊಡುವ ನಿರ್ಧಾರವಾಗಿತ್ತು. ಆದರೆ ತಿಳಿದಿರಲಿ! ಈ ಆಕ್ರಮಣಗಾರರನ್ನು ಹಿಂದೂಡಲು ಒಬ್ಬನೇ ಒಬ್ಬನು ಉಳಿಯುವವರೆಗೂ ಕಾಶ್ಮೀರವು ಹೋರಾಡುವುದು. ನಾವು ಸಾಯಬೇಕಾಗಿ ಬಂದರೆ ಹೋರಾಡಿಯೇ ಸಾಯುವೆವು." ಈ ರೀತಿ ಓರ್ವ ಮುಸ್ಲಿಂ ಮಹಾಶಯನೇ ಪಾಕಿಸ್ತಾನದ ಒಳ ಮಂದಿರಕ್ಕೆ 'ಸರ್ಚ್‌ಲೈಟ್' ಹಾಕಿ ಅದರ ಟೊಳ್ಳು ಲೋಕಕ್ಕೆಲ್ಲಾ ಕಾಣುವಂತೆ ಮಾಡಿದನಲ್ಲಾ!

ಕಾಲು ಜಾರಿದಲ್ಲೇ ಕಲ್ಲು!

ಪಾಕಿಸ್ತಾನ್ ಪ್ರಮುಖರಿಗಾಗಿ, ಈ ಮೊದಲೆಲ್ಲೆಲ್ಲಿ ಸಹಾನುಭೂತಿ, ಔದಾರ್ಯಗಳಿದ್ದುವೋ, ಅವೆಲ್ಲವೂ ಈಗ ಎಲ್ಲಾ ಕಡೆಗಳಿಂದಲೂ ಮಾಯವಾಗಲು ಹತ್ತಿದಂತಿದೆ. ಹುಸಿವಿಚಾರವಿದ್ದವರು, ಚಂಡೀ ಹಿಡಿಯುವ ಮಗುವನ್ನು ಪ್ರಥಮ ಭಾಗದಲ್ಲೇ ತಾಡನೆಕೊಟ್ಟು ಬಾಯಿ ಮುಚ್ಚಿಸುವುದಿಲ್ಲ; ಸಮಜಾಯಿಸಲಾಗುವುದೋ ಎಂದು ಸಾಧ್ಯವಿದ್ದಷ್ಟು ಪ್ರಯತ್ನಿಸಿ ನೋಡಿಕೊಳ್ಳುವದಿದೆ. ಆದರೆ ಏನೇ ದೊರಕಿದರೂ ಹಠಹಿಡಿಯುವುದೊಂದೇ ತನ್ನ ಧರ್ಮ—ತನ್ನನ್ನು ಸಮಜಾಯಿಸುತ್ತಾ ಹೋಗುವುದೊಂದೇ ಹಿರಿಯರ ಕರ್ತವ್ಯವೆಂದು ಆ ತಂಟೆಕೋರ ಮಗ. ಭಾವಿಸಿಕೊಂಡಂತೆ ತೋರಿದರೆ ಕೊನೆಗೆ ಥಳಿಸದೆ ನಿರ್ವಾಹವಿಲ್ಲ. ಲೀಗ್ ನಾಯಕರ ಬುದ್ಧಿಗೊದಗಿರುವ ಗತಿ ಇಂಥ ಅಂತಹದೇ; ಭಾರತ ನಾಯಕರೀಬಾರೀ ಮನಸ್ಸನ್ನು ಗಟ್ಟಿಮಾಡಿಕೊಳ್ಳಬೇಕಾಗಿ ಬಂದುದು ಹೀಗೆಯೇ! ಈ ರೀತಿ ಒಮ್ಮೆ ಸಡುಬಗಿದಮೇಲೆ ಮತ್ತೆ ಮಾನ್ಯರ ಮುಂದೆಯೂ ಮಕ್ಕಳಾಟ ನಡೆದೀತೆ? ಆದರ ಅಳುಮೋರೆ, ದೌರ್ಬಲ್ಯಗಳು ತೋರಿಬಂದು, ಅದರ ತಂಟೆಗಳಿಂದ ಮನ ನೊಂದವರಿಗೆಲ್ಲಾ ಈಗ ಹಂಗಿಸುವ ಸಂಯೋಗವೊದಗಿದೆ. ಕಾಲು ಜಾರಿ ಬಿದ್ದಲ್ಲಿ ಎಲ್ಲರೂ ಕಲ್ಲು ಹಾಕುವವರೇ! ಲೀಗ್ ನಾಯಕರ ಘೋಷಣೆಗಿಂದು ಇದೇ ಗತಿಯೊದಗಿದಂತಿದೆ. ಅವರೀವರೆಗೆ ಕೊಟ್ಟುದನ್ನು ಇನ್ನು ಮರುಪಾವತಿ ಮಾಡೋಣವೆಂದು ಮಿಶವರ ನಡುಬಿಗಿದಿದ್ದಾರೆ. ಒಂದು ನಿದರ್ಶನ: ಲಂಡನಿನ ಕೆಲವು ಪತ್ರಿಕೆಗಳು ನಿನ್ನೆಯವರೆಗೂ ಪಾಕಿಸ್ತಾನದ ಮತ್ತು ಮಿ. ಜಿನ್ನರ ಬೆನ್ನು ತಟ್ಟುತಿದ್ದುವು. ಕಾಶ್ಮೀರದ ಘಟನೆಯ ನಂತರ ಬಾಯಿಗೆ ಬೀಗ ಹಾಕಿಕೊಂಡಿರುವುವೇನೋ ಎಂಬಂತೆ ಅವೆಲ್ಲವೂ ಮೌನ! ಬುದ್ಧಿವಂತರ ಲಕ್ಷಣವಿದು! 'ಜಾಗತಿಕ ಸಂಘದ ಆಶ್ರಯದಲ್ಲಿ ಕಾಶ್ಮೀರದ ಜನಮತ ಸಂಗ್ರಹಿಸಿ ಆ ನಿರ್ಧಾರಕ್ಕೆ ಬಿಡಲು ನಾವು ಸಿದ್ಧರಿದ್ದೇವೆ' ಎಂಬ ಪಂಡಿತ ನೆಹರುಗಳ ಅಭಿಪ್ರಾಯವನ್ನು ಲಂಡನಿನ ಹೆಚ್ಚಿನ ಪತ್ರಿಕೆಗಳು ಸುಸ್ವಾಗತಿಸಿ ಭಾರತ ಸೇನೆಗೂ ಶೇಕ್ ಅಬ್ದುಲ್ಲಾನಿಗೂ ವಿಜಯವನ್ನು ಹಾರೈಸಿವೆ. ಭಾರತ ಸರಕಾರವು ಹೀಗೆ ಮಾಡದೆ ಬೇರೇನು ಮಾಡಬೇಕಿತ್ತು? ಎಂದೇ ಬ್ರಿಟಿಷ್ ಸಾರ್ವಜನಿಕರೂ ಪತ್ರಿಕೆಗಳೂ ಕಾಶ್ಮೀರ ಸಂಬಂಧದ ಭಾರತ ಸರಕಾರದ ನ್ಯಾಯವನ್ನೇ ಎತ್ತಿಹಿಡಿದು ಪ್ರಶ್ನಿಸುತ್ತಿವೆ. ಲಂಡನಿನ ಪಾಕಿಸ್ತಾನ ಭವನದವರಿಗೂ ಮಿ ಜಿನ್ನರನ್ನು ಹೇಗೆ ಸಮರ್ಥಿಸುವುದೆಂದೇ ತಿಳಿಯದೆ ತಬ್ಬಿಬ್ಬಾಗಿದ್ದಾರಂತೆ. ಜಿನ್ನರ ಇತ್ತೀಚಿನ ಹೇಳಿಕೆಯಲ್ಲಿ ಪ್ರಜಾಸತ್ತಾತ್ಮಕ ರೀತಿಗಳಾಗಲೀ ಮನವೊಲಿಸುವ ಮಾತುಗಳಾಗಲೀ ಇಲ್ಲದ ದೆಸೆಯಿಂದ ಅದನ್ನೆತ್ತಿ ಸಮರ್ಥಿಸುವ ಎದೆಗಾರಿಕೆ ಅವರಲ್ಲಿಲ್ಲವಂತೆ.

ಮೌಂಟ್‌ಬೇಟನರಿಗಪಮಾನ?

ಮತ್ತೊಂದು ವರದಿ ಲಂಡನಿಗೆ ಮುಟ್ಟಿದೆ. ಜಗತ್ ರಕ್ಷಣಾ ಸಮಿತಿಯ ಸಭೆಗಾಗಿ ಲೋರ್ಡ್ ಮೌಂಟ್‌ಬೇಟನರು ಮೊನ್ನೆ ಲಾಹೋರಿಗೆ ಹೋಗಿದ್ದರಷ್ಟೆ? ಅಲ್ಲಿಯ ಸರಕಾರೀ ಭವನಕ್ಕೆ ಮಿ. ಜಿನ್ನರ ಭೇಟಿಗಾಗಿ ಲೋರ್ಡ್ ಮೌಂಟ್‌ಬೇಟನರು ಹೋದಾಗ ಪಾಕಿಸ್ತಾನದ ಗವರ್ನರ್ ಜನರಲ್ ಜಿನ್ನರು ಭಾರತದ ಗವರ್ನರ್ ಜನರಲ್ ಮೌಂಟ್‌ಬೇಟನರನ್ನು ಸ್ವಾಗತಿಸಲು ಮುಂದೆ ಬರಲೇ ಇಲ್ಲವಂತೆ! ಆದಿಯಿಂದಲೂ ಗಾಂಧಿ, ನೆಹರುಗಳಿಂದಾರಂಭಿಸಿ, ಎಲ್ಲರೂ ಪ್ರತಿಬಾರಿಯೂ ಸಾಹೇಬರ ಕಾಲಡಿಗೆ ಹೋಗುತ್ತಿದ್ದರೇ ಹೊರತು ಕಾಯಿದೇ ಆಝಮರು ಇನ್ನೊಬ್ಬರ ಬಂಗಲೆಗೆ ಹೋದುದಿಲ್ಲ. ಹೀಗಾಗಿ ತಾನು ಹಿಂದುಸ್ಥಾನದವರ ಪಾಲಿನ ಪವಿತ್ರ ಮೂರ್ತಿ 'ಕರಾಚಿ ವಿಶ್ವೇಶ್ವರ'ನೆಂದೂ, ತನ್ನನ್ನು ಭೇಟಿ ಮಾಡುವ ಯಾತ್ರಾ ಪುಣ್ಯಕ್ಕೊಪ್ಪದವರು ಧರ್ಮದ್ರೋಹಿಗಳೆಂದೂ ಕಾಯಿದೇ ಆಝಮರ ಭಾವನೆಯಿದ್ದಿರಬಹುದು. ನೆಹರುಗಳೇ ಬಾರಿ ಒಂದಲ್ಲ, ಎರಡುಬಾರಿ ಜಿನ್ನರ ಭೇಟಿಗಾಗಿ ಲಾಹೋರಿಗೆ ಹೋಗಲು ನಿರಾಕರಿಸಿದ್ದರಲ್ಲ! ಇದು ಕಾಯಿದೇ ಆಝಮರ ಅಭಿಮಾನವನ್ನು ಕೆಣಕಿರಬೇಕು. ಆ ಸಿಟ್ಟನ್ನು ಲೋರ್ಡ್ ಮೌಂಟ್‌ಬೇಟನರ ಮೇಲೆ ತೋರಿಸಿದರೇನೋ! ಆ ಮೇಲೆ ಜಗದ್ರಕ್ಷಣಾ ಸಭೆಗೆ ಮಿ. ಜಿನ್ನರನ್ನು ಲೋರ್ಡ್ ಮೌಂಟ್‌ಬೇಟನರಾಮಂತ್ರಿಸಿದ್ದರೂ ಮಿ. ಜಿನ್ನರು ಬರಲಿಲ್ಲವಂತೆ. ಈ ಕಾರಣಗಳನ್ನು ಕಂಡು ಬ್ರಿಟಿಷರು ಮಿ. ಜಿನ್ನರಕಡೆಗೆ ತುಸು ಜಿಗುಪ್ಸೆಗೊಂಡಂತಿದೆ. ಲೀಗಿನ ಅಬ್ಬರಗಳಿಗೆ ಬೆಲೆ ಬರುವ ಕಾಲ ಪೂರ್ತಿ ಕಳೆದು ಹೋಯಿತು ಎಂಬುದಕ್ಕೆ ನಿದರ್ಶನವಾಗಿ ಮತ್ತೊಂದು ಘಟನೆ ಲಂಡನಿನಲ್ಲಿ ನಡೆಯಿತು. ಇದೇ ತಾ ೪ರಲ್ಲಿ ಲಂಡನಿನಲ್ಲಿ ಪಾಕಿಸ್ತಾನದ ಹೈಕಮಿಶನರಾಗಿರುವ ಮಿ. ರಹಿಮಾತುಲ್ಲಾರು 'ಈಸ್ಟ್ ಇಂಡಿಯಾ ಎಸೋಸಿಯೇಶನ್'ನಲ್ಲಿ ಭಾಷಣವಿತ್ತಾಗ ಬ್ರಿಟಿಷ್ ಮತ್ತು ಹಿಂದೂ ಸಭಿಕರೊಟ್ಟಾಗಿ ಅವರನ್ನು 'ಮೇಲೆ ಕೆಳಗೆ' ಮಾಡಿಬಿಟ್ಟರು! 'ಒಬ್ಬನೇ ಒಬ್ಬ ಪಾಕಿಸ್ತಾನಿಯುಳಿವ ವರೆಗೂ ಪಾಕಿಸ್ತಾನವನ್ನೇ ಬಿಡೆವು.' ಎಂದು ಎದೆ ತಟ್ಟುತ್ತಿ [illegible] ಗೆ [illegible] ಕಾರಣನೆಂದು [illegible] ಗ ಶ್ರೀ ಟಿ. ಕೆ. ಮುಕರ್ಜಿಗಳು ಸಿಟ್ಟಿನಿಂದೆದ್ದು "ಅಲ್ಲ; ರಾಷ್ಟ್ರಪಿತನನ್ನು [illegible] ಕಾರಣ" ಎಂದರು. ಮಾತ್ರವಲ್ಲ: ಮಿ. ಜಿನ್ನರನ್ನು ಕಠಿಣವಾಗಿ ಟೀಕಿಸುತ್ತಾ "ಎಲ್ಲಾ ರಾಜಕೀಯ ನೌಕಾಪಯಣಗಳ ಜೀವಂತ ಅಪಾಯವೆಂದರೆ ಅವರೇ" ಎಂದರು. ಪ್ರಸಿದ್ಧ ಚರಿತ್ರ ಲೇಖಕ ಪ್ರೊಫೆಸರ್ ರಾವ್ಲಿನ್ಸನ್‌ರವರು ಕೂಡಾ ಸಿಟ್ಟುಗೊಂಡೆದ್ದು ರಹಿಮತುಲ್ಲಾರಿಗೆ ಸಮಾಲು ಛಡಾಯಿಸಿದ್ದರೆಂದರೆ ಬೇರೇನನ್ನಬೇಕು!

ಕಳೆಯಿತು! ಲೀಗ್ ನಾಯಕರ ಘರ್ಜನೆಗಳಿಗೆ ಹೆದರಿ ಕಂಪಿಸುವ ಕಾಲ ಕಳೆದು ಸಿಟ್ಟಿನಿಂದ ನಡುಗುವ ಕಾಲಬಂದಿದೆ!

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ • • • • ಮಂಗಳೂರು,
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ-
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ: ಬಾಬು ಶೆಟ್ಟಿ
ಪ್ರೊಪ್ರೈಟರ್.
INDRA BHAVAN COFFEE HOTEL,
Balmatta Road, MANGALORE

CHAMPAE'S
Snow & Castrex
Sole Distributers for India
Prop: K. G. NAYAK,
Santhekatte, UDIPI, S. K.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ ತಿ.ರ.ವ್ಯಭಿಚಾರಿ
ನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—
ಇವನ್ನು ಹೃದಯಂಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾ
ದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು
ಮನಗಾಣಿಸುವ ನವೀನ ಪ್ರಕಟಣೆ.
ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ,
ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ?
ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು?
ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.
ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟು
ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.
ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇ
ಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬರೆದವರು:-ಶ್ರೀ. ಪಿ. ಶೀನ ಶೆಟ್ಟರು.
ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.
ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ
ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ. ಮೈಜುಮ್ಮೆನಿಸುವ
ಹಲವು ಸನ್ನಿವೇಶಗಳು!
ಬೆಲೆ ಬರೇ ರೂ. 1—4—0

ಕಿರಿಯರ ಪ್ರಪಂಚದ ಪ್ರಕಟಣೆ

ಕದಂಬ

ಹನ್ನೆರಡು ಕತೆಗಳ ಸಂಗ್ರಹ

ಬರೆದವರು:-ಶ್ರೀಮತಿ ಸರಸ್ವತಿಬಾಯಿ ರಾಜವಾಡೆಯವರು
('ಪ್ರಕಾಶ' ನಾಟಕದ ಅನುವಾದಕಿ; 'ಆಹುತಿ ಇತ್ಯಾದಿ ಕತೆಗಳು'
ಕಥಾಗುಚ್ಛದ ಲೇಖಿಕಿ.)
ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ
ಚಿತ್ರಿಸುವ ಕಥಾ ಸಂಗ್ರಹ. ಬೆಲೆ. 1—4—0

ಮನೆಮದ್ದು-Home Remedies

ಬೆಲೆ ರೂ. 2-0-0
ಬರೆದವರು:—ಡಾ| ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.
'Ably Written—Quite up-to-date—Valuble Service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್,
ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ, ಸಿ. ಎಮ್.
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.
ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ
ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ.
ಹಿಂಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.
200 ಕಾಹಿಲೆಗಳಿಗೆ 1000 ಮನೆಮದ್ದುಗಳನು ಹೇಳಿದೆ
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಬುಕ್ ಡಿಪೊ ಉಡುಪಿ.

ಬಾಣಂತಿಯರ ಸಲು
ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯ
ನ್ನು ನಿರ್ಣಯಿಸಿ ತಯಾ
ರಿಸಲ್ಪಟ್ಟ ಅಮೋಘ
ವಾದ ಮಧುರದ್ರವ
ರಸಾಯನ. ಅಲ್ಪ ವೌ
ಲ್ಯದಿಂದ ಬಡವರಿಗೂ,
ಭಾಗ್ಯಶಾಲಿಗಳಿಗೂ ಸು
ಲಭವಾಗಿರುವುದು.

ನವಜೀವಾತು ಎಂಬ
ಸೂತಿಕಾ ರಸಾಯನ



೪ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.
ಸ್ಟಾಕಿಸ್ಟರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು. ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಿಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವವಾಯುವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.
ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)
ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.
ರಾತ್ತಲ 1ರ 10-0-0, ½ ರಾತ್ತಲ 5-4-0, ¼ ರಾತ್ತಲ 2-12-0.
ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.
— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ್ ಫಿಜಿಸಿಯನ್ಸ್,ರಥಬೀದಿ ನಂಬ್ರ, 10ಮಂಗಳೂರು
ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗ್ ಬಂದಲ್ಲಿ ರೋಗಗಳಿಗೆ ತಕ್ಕವಾದ ಔಷಧಿ ದೊರೆಯುವ ಸ್ಥಳಗಳು:- (1) ಉಡುಪಿ ನವಭಾರತ ಬುಕ್ ಡಿಪೋ. 2 ಬೊಂಬಾಯಿ ಸಿಟಿ: ಪೊಸ್ಟು ಬಾಕ್ಸ್ ಸ್ಟೋರ್ಸ್, ಕೆಮಿಸ್ಟ್ 183, ಸ್ಯಾಂಡ್‌ಹರ್ಸ್ಟ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್ (3 ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ
ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸರಗು ಹೋಗುತ್ತಿದ್ದರೆ, ಶೂಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ:ಹುಳಿಖಾರ,ಕುಂಬಳಕಾಯಿ,ಬಳ್ಳೊಳ್ಳಿ ಬಿಡಬೇಕು
ಬಾಟ್ಲಿ ಒಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ.
ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ವಿಳಾಸ:
ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.
Ayurveda Oushadhalaya GADAG

Regd. No. M. 3010

ಅಂತರಂಗ
ಅಖಿಲ ಕರ್ನಾಟಕ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

20-11-1947

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-6
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ,

ವರ್ಷ ೨೭ }
ವಾರ ೧೨ }

NAVAYUGA WEEKLY, UDIPI.

FOUNDER: **Hon'ble Mr. A. B SHETTY,** Health Minister, Govt. of Madras.

{ Vol. 27
{ No. 12

THE CANARA MUTUAL Assurance Company, Limited.

Estd: 1935
H. O. **UDPI**, S. Kanara.

BONUS DECLARED FOR 8 YEARS

We are glad to announce that we have declared a Bonus for 8 years from 1939 to 1946 both years inclusive as also an interim bonus for the next valuation period.

T. R. A. Pai,
Managing Director.

ದೀಪಾವಳಿ ಅಭಿವಂದನೆಗಳು

ನಮ್ಮ ಸಕಲ ವಿಮಾದಾರರಿಗೆ—
ವೈದ್ಯಕೀಯ ಪರೀಕ್ಷಕರಿಗೆ—
ಪ್ರತಿನಿಧಿಗಳಿಗೆ ಮತ್ತು ಶುಭಾಕಾಂಕ್ಷಿಗಳಿಗೆ.
ಮತ್ತು
ಬರುವ ಪ್ರಗತಿದಾಯಕ ವತ್ಸರಕ್ಕೆ
ನಮ್ಮ
ಶುಭಾಶಯಗಳು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್,

ದಕ್ಷಿಣ ಭಾರತ ಮತ್ತು ಮೈಸೂರು, ತಿರುವಾಂಕೂರು ಕೊಚ್ಚಿ ಮತ್ತು
ಪುದುಕೋಟೆ ಆಶ್ರಿತ ರಾಜ್ಯಗಳ ಮುಖ್ಯ ಪ್ರತಿನಿಧಿಗಳು.

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಮದರಾಸು, ಬೆಂಗಳೂರು, ಬೊಂಬಾಯಿ, ತ್ರಿವೆಂಡರಂ, ಕಲ್ಲಿಕೋಟೆ,
ಮಂಗಳೂರು, ಮಧುರ ಮತ್ತು ಉಡುಪಿ.

Bhuwanendra Products Limited,

Katapadi, S Kanara.

Head Office & Factory: Katopadi, S. Kanara.
Depot: Maharata Galli, Hubli. Kumta, N. Kanara

ನಮ್ಮ ಏಜಂಟ್, ಸ್ಟಾಕಿಸ್ಟ್, ಗಿರಾಕಿ ವ ಎಲ್ಲಾ ಹಿತಚಿಂತಕರಿಗೆ ದೀಪಾವಳಿಯ ನಮ್ಮ ಶುಭಾಶಯಗಳು. ಹೊಸ ವರ್ಷವು ಅನ್ನ, ಬಟ್ಟೆ, ಅನ್ಯೋನ್ಯ ಪ್ರೀತಿ, ಸುಖ, ಶಾಂತಿ ಯುಕ್ತವಾಗಲಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಸಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧ಿಜಿಜೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಭಾವಮಾಡಕರ ವಿಜಾಪುರ ಚಿಕಿತ್ಸಾಲಯಲ್ಲಿ:—ಮಂಟರಮಾತಿ ಸ್ಟೋರ್ಸ, ದಾವಣಗೇರಿ:—ದಾವಣಗೇರಿ ಪ್ರೆಸ್ಸ ಆರ್ ಎಲ್ ಕವಳದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

ನಿಮ್ಮಿಷ್ಟಕ್ಕೆ ನೀವು ಮನೆಯಲ್ಲೆ ಇಂಗ್ಲಿಷ್
ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0
ನವಭಾರತ ಬುಕ್ ಡಿಪೊ, ಉಡುಪಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ—
ಪೋಸ್ಟು ಬಾಕ್ಸ ನಂಬ್ರ 10, ಉಡುಪಿ, ಇವರಿಗೆ ಬರೆಯಿರಿ.

ಪ್ರಧಾನ ಕಾರ್ಯಾಲಯ:—ಧಾರವಾಡ,

ನಮ್ಮ ಇಂದಿನ ಗವರ್ನರ್ ಜನರಲ್

ಈ ತತ್ವಜ್ಞಾನಿ ನಾಗರಿಕ

ರಾಜಕುಮಾರಿಯ ವಿವಾಹ ಸಮಾರಂಭಕ್ಕಾಗಿ ಭಾರತದ ಗವರ್ನರ್ ಜನರಲ್ ಲೋರ್ಡ್ ಮೌಂಟ್‌ಬೇಟನರು ಇದೇ ತಾ 10ರಲ್ಲಿ ಡೆಲ್ಲಿಯಿಂದ ಲಂಡನಿಗೆ ಹೋಗಿದ್ದಾರೆ. ಇದೇ ತಾ 24ಕ್ಕೆ ಮರಳಲಿದ್ದಾರೆ. ಈ ಅವಧಿಯ ಭಾರತದ ಗವರ್ನರ್ ಜನರಲ್ ಆಗಿ ತಾ 10-11-47ರಲ್ಲಿ ಗದ್ದುಗೆಯೇರಿದ—'ಅರ್ಧ ತಿಂಗಳ ಅಗ್ರಗಣ್ಯ ಅಧಿಕಾರಿ'ಯಾದ—ಭಾರತದ ಪ್ರಥಮ ಹಿಂದೀ ಗವರ್ನರ್ ಜನರಲ್ ಶ್ರೀ. ಸಿ. ರಾಜಗೋಪಾಲಾಚಾರ್ಯರ ವ್ಯಕ್ತಿಚಿತ್ರವಿದು. ಶ್ರೀ ಎಮ್. ಯಸ್. ಶ್ರೀನಿವಾಸನ್ ಎಂ. ಎ. ಇವರ 'FREE INDIA' ಲೇಖನದ ಅನುವಾದ.



1942ರ ಆಗೋಸ್ಟಿನ ಮೊದಲು ಶ್ರೀ. ಸಿ. ರಾಜಗೋಪಾಲಾಚಾರ್ಯರ ಕುರಿತು ಮಾಡಿದ ಎಂತಹ ಅತಿ ಪ್ರಶಂಸೆಯಾದರೂ, ಈ ರಾಷ್ಟ್ರದ ಮಿಲಿಯಾವಧಿ ಮಂದಿಯ ಹೃದಯಗಳಲ್ಲಿ ಸಹಜ ಪ್ರತಿಧ್ವನಿ ಕೊಡುತ್ತಿದ್ದಿತು. ಅದರೀದಿನ ಅವರ ಹೆಸರನ್ನೆತ್ತಿದರೆ ಸಾಕು; ಅದು ದ್ವೇಷೋದ್ದೀಪಕವಲ್ಲವಾದರೂ ಅಸಹ್ಯವಾಗುವವರು—ಅವರನ್ನು ಎಂದಿನಂತೆ ಆರಾಧಿಸುವವರು ಮತ್ತು ಗೌರವಿಸುವವರಿದ್ದಾರೋ ಅಷ್ಟೇ ಇದ್ದಾರೆ, ರಾಜಾಜೀ ಕೀರ್ತಿಯ ಈ ನಿರೀತಕ್ಕೆ ಕಾರಣವೆಂದರೆ ಒಂದು ದ್ವಂದ್ವ ಪ್ರವೃತ್ತಿ—ತನ್ನ ಸ್ವಪ್ರತಿಭೆಯನ್ನು ಅವರು ತಾನಾಗಿ ಕಂಡುಕೊಂಡುದು ಮತ್ತು ಗಾಂಧಿತ್ವದ ಅಹಿಂಸೆಯ ಮಿತಿಯಲ್ಲಿ ಕಾಂಗ್ರೆಸನ್ನು ರೂಪಿಸುವ ಕುರಿತು ಅವರಲ್ಲಿ ಅಸಹನೆಯುದ್ಭವು

'ಫೋಟೋ ಗಾಂಧಿ'

ಕೆಲವು ವರುಷಗಳಿಗೆ ಮೊದಲು 'ಫೋಟೋ ಗಾಂಧಿ' ಎಂಬ ಹೆಸರೇ ಇವರಿಗೆ ಜನಜನಿತವಾಗಿತ್ತು. ಮಹಾತ್ಮರನ್ನೇ ಹೋಲುವ ಅವರ ಮುಖಮುದ್ರೆ ಮತ್ತು ಅಹಿಂಸೆಯ ಕುರಿತು ಅವರಲ್ಲಿ ಕಂಡುಬರುತ್ತಿದ್ದ ಸಮಯೋಚಿತ ನಂಬಿಕೆಯೇ ಈ ಹೆಸರನ್ನವರಿಗೆ ಸಂಪಾದಿಸಿಕೊಟ್ಟಿದ್ದಿತು. ಅವರ ಮೋಹವಿದ್ದುದು ಪಾನನಿಷೇಧ, ಖಾದಿ ಮತ್ತು ಹರಿಜನೋದ್ಧಾರಗಳ ಮೇಲೆಯೇ. ಕೆಲವು ಸಾಮಾನ್ಯ ಅಭಿಪ್ರಾಯಗಳನ್ನಷ್ಟೇ ಅವರಾಗ ಹೊರಗೆಡಹುತ್ತಿದ್ದುದಲ್ಲದೆ, ವಿಶೇಷ ಬುದ್ಧಿವಂತರೆಂದು ಪ್ರತ್ಯೇಕಿಸಿ ತೋರಿಸಲಾಗುವಂತಹದೇನನ್ನೂ ಆಗ ಮಾಡಿರುದಿಲ್ಲ. ಜೈಲಿನಿಂದ ಹೊರ ಬರುವ ಮತ್ತು ಒಳನುಗ್ಗುವ ಪ್ರಯಾಸಪೂರ್ಣ ನಿತ್ಯದಾಟಗಳ ಸಾಮಾನ್ಯ ತರಗತಿಗೆ ಮಿಕ್ಕಿದ ಯಾವ ಹೆಗ್ಗುಣವೂ ಆ ಕಾಲದ ಯಾವನೊಬ್ಬ ಕಾಂಗ್ರೆಸ್ ನಾಯಕನಲ್ಲೂ ಕಂಡುಬಂದುದಿಲ್ಲ. ಗಾಂಧೀಜಿಯೊಬ್ಬರೇ ಎಲ್ಲವನ್ನೂ ತುಂಬಿಸಿಕೊಳ್ಳುತ್ತಿದ್ದರು. 1937ರಲ್ಲಿ ಕಾಂಗ್ರೆಸು ಅಧಿಕಾರ ಸ್ವೀಕಾರಮಾಡಿದ್ದರಿಂದಾಗಿ ಆ ಪಕ್ಷದ ಹೊಟ್ಟೆಯೊಳಗಿಂದ ಹಲವು ಸ್ವಂತ ಪ್ರತಿಭಾವಂತ ಆಡಳಿತತಜ್ಞರು ಹೊರಸಿಡಿಯುವಂತಾಯಿತು. ಅಂಥವರಲ್ಲಿ ಸಿ. ಆರ್. ಅಗ್ರಗಣ್ಯರಿದ್ದರು. ಹುದ್ದೆ-ಫಲದ ಸವಿಯನ್ನರಿತವರು ಜನತೆಗಾಗಿ ಮಾಡಲು ಉಳಿದಿರುವ ಮತ್ತು ಮಾಡಲು ಸಾಧ್ಯವಿರುವ, ಸರಿಯಾದ ಹಿತಸಾಧನೆಯನ್ನು—ಮರೆವೆಗೆ ಬಿದ್ದು ಅಲ್ಲಿಯೇ ಮಾಗುತ್ತಾ ಬಂದಿದ್ದ ಆ ಫಲವನ್ನು—ಅಂತೆಯೇ, ಸೌಕರ್ಯ ಸಾಧನೋಪಕರಣವಾಗುವ ಮಟ್ಟಿಗೆ ಅಹಿಂಸೆಯಷ್ಟು ಮಿತಿಯುಳ್ಳದ್ದೆಂಬುದನ್ನು ಕಂಡುಕೊಂಡರು. ಸಿ. ಆರ್. ಈ ನವೋದಿತ ಪಂಥದ ಉತ್ತಮ ಪ್ರವಾದಿಯಾಗಿ ದೊರೆತರು. ಈ ರೀತಿ ಅವರ ಸ್ಥಾನಮಟ್ಟ ಮೇಲೇರಿದಂತೆ, ತನ್ನಲ್ಲವರು ಆಗ ತಾನೇ ಕಂಡುಕೊಂಡ ಅವಿಚ್ಛಿನ್ನಶಕ್ತಿಯ ಭರವಸೆಯನ್ನು ಸೂಸಹತ್ತಿದಂತೆ, ಅವರ ಜನಪ್ರಿಯತೆ ಕುಂದಹತ್ತಿತು. ಕಾರಣವೆಂದರೆ, ಕೇವಲ ಕೆಲವೇ ಮಂದಿಯನ್ನು ಬಿಟ್ಟಲ್ಲಿ, ಭಾರತದ ಜನಪ್ರಿಯತೆಯೆಂಬುದು, ಜನತಾ ಸೇವೆಯಲ್ಲಿ ಒಬ್ಬನ ಯಥಾರ್ಥ ಯೋಗ್ಯತೆ ಬೆಳೆಯುತ್ತಾ ಬಂದ ದಾವಾಶಯದಲ್ಲೇ ತಗ್ಗುತ್ತಾ ಹೋಗುವಂತಹದಿದೆ. ಸಿ. ಆರ್. ದಾಸರ ಕಾಲದ ಈ ಮಾರ್ಪಾಟ ವಿರೋಧಿಯು ಪ್ರಬಲ 'ಮಾರ್ಪಾಟವಾದಿ'ಯಾಗಿ ಮಾರ್ಪಟ್ಟರು.

ರೂಪ—ಗುಣ ನಡತೆ

ತೆಳ್ಳಗಿನ ಆದರೆ ನಿತ್ರಾಣಿಯಲ್ಲದ, ಎತ್ತರದಲ್ಲಿ ಮಧ್ಯಮ ವರ್ಗವೆನ್ನಬಹುದಾದ ಮೂರ್ತಿಯಿದು; ಈ ಮನುಷ್ಯನಲ್ಲಿ ಮುಖ್ಯವಾಗಿರುವುದೆಂದರೆ ತಲೆ. ಆ ಗಿಡುಗ ಮೂಗು ಅವರ ಚುರುಕುಬುದ್ಧಿಯ ಒಂದು ದ್ಯೋತಕವಿರುವಂತೆಯೇ, ಹೋಗೆ ಕನ್ನಡಕದೊಳಗಿನ ತೀಕ್ಷ್ಣನೋಟವು ಎಂತಹ ಮಂಜುಕವಿದ ಅಥವಾ ಸಿಕ್ಕುಗಟ್ಟಿರುವ ಸಮಸ್ಯೆ ಹಾಗೂ ಬಿಕ್ಕಟ್ಟಿನ ಗೂಢವನ್ನಾದರೂ ಅರಿಯಬಲ್ಲ ಹಾಗೂ ಭೇದಿಸಬಲ್ಲ ಒಳದೃಷ್ಟತೆಯನ್ನು ಬಿಂಬಿಸುತ್ತಿದೆ. ಗಹಗಹ ನಗುವಿಲ್ಲದೆ ನಿಯಂತ್ರಿತ ನಗೆಯನ್ನು ಹೊರಚೆಲ್ಲುತ್ತಾ ಅಧೋಮುಖವಾಗಿ ಬಗ್ಗಿರುವ ಆ ತೆಳ್ಳಗಿನ ತುಟಿಗಳೇ ವಿಲಕ್ಷಣ ಸ್ವಯಂದಮನಾ ಶಕ್ತಿಯನ್ನು ಕರೆದು ಹೇಳುವಂತಿವೆ. ಇವರು ಉದ್ವೇಗಾವೇಗಗಳಿಗೆ ಅತಿದೂರವಿರುವ ಮನೋಗತಿಯ ಮನುಷ್ಯ.

ಎಂತಹ ಉದ್ರೇಕಜನಕ ಸಂದರ್ಭವೇ ಇರಲಿ, ಉರಿದುಬೀಳಲೊಪ್ಪದ ನಿಶ್ಚಲ ಸ್ವಭಾವವೇ ಈ ಮನುಷ್ಯನ ಶಾಸನ ಸಭಾ ಕಾರ್ಯಗಳ ಯಶಸ್ಸಿಗೆ ಕಾರಣ. 'ಮಧುರ ಸಹಕಾರಣವಾದ'ವೆಂದರೇನು ಎಂಬುದನ್ನು ಅರಿಯಬೇಕಾದರೆ, ತನ್ನ ವಿರೋಧಿಯ ವಾದಗಳನ್ನು ಸಾವಧಾನ ಮತ್ತು ಶಾಂತವಾಗಿ ಹಾಗೂ ಭಾಗಭಾಗವಾಗಿ ಚದರಿಸಿಬಿಡುವ, ಮತ್ತವನ ಉದ್ರೇಕವನ್ನು ಅಲ್ಲಿಂದಲ್ಲಿಗೆ ತಣಿಸುವ ರಾಜಾಜೀ ಭಾಷಣವನ್ನೇ ಕೇಳಬೇಕು. ಈ ಮನುಷ್ಯನ ಪ್ರೌಢ ಭಾವನೆ ಮತ್ತು ಅದರ ಹಿನ್ನಲೆಯ ಸಮತೋಲನ ಸ್ವಭಾವವೇ ಇವರನ್ನು ನಿರ್ಲಿಪ್ತ ವ್ಯವಹಾರ್ಯವಾದಿಯಾಗಿ ಮಾಡಿದೆ ಹೊರತು ತರ್ಕವಲ್ಲ. ಮಿ. ಜಿನ್ನರೇನೋ ತಾನೊಬ್ಬ 'ಭಂಡಾರಕ್ತದ ತಾರ್ಕಿಕ' ಎಂದು ಬಡಾಯಿ ಹಾರಿಸುತ್ತಿದ್ದಾರೆ. ವಸ್ತುತ ಬಿತ್ತಡವಿರುವುದು, ಭಂಡಾರಕ್ತದ ಮೇಲೆಯೇ. ಹಿರಿಯರ ಕಾಲದ ರೀತಿನಿರ್ದೇಶಕರು ಕಟ್ಟಿರುವ ಅರ್ಥಕ್ಕನುಸಾರವಾದ ಒಬ್ಬ ತಾರ್ಕಿಕನಿಂದು ಅಖಿಲ ಭಾರತದಲ್ಲಿದ್ದಾನಾದರೆ ಅದು ರಾಜಾಜಿಯೇ ಹೊರತು ಮಿ. ಜಿನ್ನರಲ್ಲ. ಶಾಂತಪ್ರವಾದಿತ್ವದಲ್ಲಿ ರಾಜಾಜಿಯ ಮಟ್ಟಕ್ಕಾಗಿ ಒರ್ವ ಕ್ರೈಸ್ತಾನುಯಾಯಿಯಾದರೂ ಮತ್ಸರಿಸಬೇಕು. 1942ರ ಮೇ ತಿಂಗಳಲ್ಲಿ ಅ. ಭಾ. ಕಾಂ. ಕಮಿಟಿ ಸಭೆಯಲ್ಲಿ ಅವರು ಮುಂದಿಟ್ಟ ಆ 'ಜಾಡಿಮೋರ' ಠರಾವಿನ ಹಿಂದಿದ್ದ ದೆಂದರೆ ಸಾರ್ವಜನಿಕ ಸಮಸ್ಯೆಗಳನ್ನು ಬುಡಮುಟ್ಟ ಬಿಡಿಸಿ ಮನಮುಟ್ಟಿಸಿ ತೋರಿಸಬಲ್ಲೆನೆಂದು ಅವರಿಗೆ ತನ್ನ ಶಕ್ತಿಯಲ್ಲಿದ್ದ ಆ ಸ್ವವಿಶ್ವಾಸವೇ. ಅದೂರದೃಷ್ಟಿಯ ಅವರ ಅನುಯಾಯಿಗಳೇ ಹೆಸರಿಟ್ಟಂತೆ ರಾಜಾಜಿಯನ್ನು 'ಕೃತಕ ಸ್ಥಾನಗಳ'ಗೇರಿಸಿದುದೆಂದರೆ, ತನ್ನ ಸ್ವಂತ ಸಯುಕ್ತವಾದ ಶಕ್ತಿಯ ಮೇಲೆ ಅವರಲ್ಲಿರುವ ಸ್ವಯಂಮಾನ್ಯತೆಯೇ.

ತತ್ವವೇತ್ತ

ಅವರು ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಧರ್ಮತತ್ವಗಳ ಗಾಢಾಭ್ಯಾಸಿಯಾದ್ದಾರೆ; ಎಲ್ಲಕ್ಕಿಂತ ಹೆಚ್ಚಿನದೆಂದರೆ ಅವರ ಬುದ್ಧಿಯೇ ತತ್ವಮಯವಾಗಿದೆ. ವೇದ, ಉಪನಿಷತ್ತು, ಪುರಾಣಗಳು ಮತ್ತು ಭಗವದ್ಗೀತೆಗಳಲ್ಲಿ ಅವರಿಗಿರುವ ಜ್ಞಾನವು ಅಗಾಧವಾದುದು. ತಮಿಳು ಮತ್ತು ಇಂಗ್ಲಿಷಿನಲ್ಲಿ ಅವರು ಬರೆದಿರುವ ಟಿಪ್ಪಣಿಗಳೇ, ಅವುಗಳೊಳಾರ್ಥಗಳ ಮೇಲೆ ಅವರಿಗೆಂತಹ ಹಿಡಿತವಿದೆ ಎಂಬುದನ್ನು ತೋರಿಸಬಲ್ಲುವು. ಅವುಗಳ ಗುಪ್ತಭಂಡಾರವೆಲ್ಲವನ್ನೂ ತನ್ನ ಸರಳ ಹಾಗೂ ಉಚಿತ ಮಾತುಗಳಲ್ಲಿ (ಆದರೆ ಸ್ವಪ್ರದರ್ಶನ ಅಥವಾ ತನ್ನತನವಾವುದನ್ನೂ ಅಲ್ಲಿ ತುರುಕಿ ತೋರಿಸದೆ) ಇವರು ವಿವರಿಸಬಲ್ಲರು. ರೋಮಿನ ತತ್ವವೇತ್ತರ ಚಕ್ರವರ್ತಿ ಮಾರ್ಕಸ್ ಔರೇಲಿಯಸರ ಮತ್ತು ತಮಿಳು ನೀತಿಶಾಸ್ತ್ರಗಳ ಉದ್ದಾಮ ಪಂಡಿತ ತಿರುವಳ್ಳುವರ ಶಿಷ್ಯನಾಗಿರುವ ಇವರು ಗುರುಗಳ ಕೆಲವು ಅಮೂಲ್ಯ ಬೋಧನೆಗಳನ್ನು ತನ್ನಲ್ಲಿ ಏಕೀಕರಿಸಿಕೊಂಡಿದ್ದಾರೆ. ಸಾರ್ವಜನಿಕ ಜೀವನದಲ್ಲಿ ನಿರಾಶೆಗೀಡಾದಾಗಲೆಲ್ಲಾ ಮನಶ್ಶಾಂತಿ ಮತ್ತು ಭಾವಚೇತನಕ್ಕಾಗಿ ರಾಜಾಜಿ ಅವುಗಳಾಶ್ರಯ ಸೇರುವದಿದೆ. ಧರ್ಮತತ್ವಗಳ ಜ್ಞಾನವನ್ನು ವಿಕೇಂದ್ರೀಕರಿಸಿ ಪ್ರಸಾರಗೊಳಿಸುವ ಕುರಿತು ಜೈಲಿನಲ್ಲೇ ಹಲವು ಪಂಡಿತ ಸಭೆಗಳನ್ನು ರಾಜಾಜಿ ಜರಗಿಸಿದ್ದರು.

ಶುದ್ಧ ಮದ್ರಾಸಿ!

ಇವರು ದಕ್ಷಿಣ ಭಾರತದವರ ಯಥಾರ್ಥ ಪ್ರತಿನಿಧಿ. ಆಧ್ಯಾತ್ಮಿಕ ತತ್ವವೇತ್ತನಿರುವಂತೆಯೇ ಆಡಳಿತೆಯಲ್ಲಿ ಅಧ್ಯನೂ ಆಗಿದ್ದಾರಿವರು. ಪ್ರಧಾನಮಂತ್ರಿಯಾಗಿದ್ದ ಸರ್. ಬ್ರೇಕನ್‌ಬರಿಯಂತಹ ಬ್ರಿಟಿಷ್ ಪ್ರಮುಖರ ಶ್ಲಾಘನೆಗೆ ಪಾತ್ರ[illegible]ದ್ದರು. ಅನ್ಯಥಾ ಅಸ್ತವ್ಯಸ್ತವಾಗಿ ಚದರಲು ಬದ್ಧವಿದ್ದ ಮಂತ್ರಿಗಳನ್ನೊಂದು ಸೂಡಿಯಾಗಿ ಆಗ ಕಟ್ಟಿಟ್ಟುದೆಂದರೆ ಇವರ ಮೇಲ್ಮಟ್ಟದ ಆ ನಾಯಕತ್ವವೇ. ಅವರ ಬದಲಾವಣಾ ಕಾರ್ಯಗಳು 'ಶ್ರೀ'ಯಿಂದಾ

(೧೧ನೇ ಪುಟ ನೋಡಿರಿ).

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

WARDEN

Reaches New Heights in 1946.

Business Received ... ... Rs. 2,04,00,000
Business Completed ... ... Rs. 1,72,00,000

THIS represent the latest and greatest achievement in WARDEN'S progressive career.

For this fine performance the Company extends its heartiest thanks and congratulations to its representatives and policy-holders all over the country and abroad.

Managing Director: *Agency Manager:*
Shivaprasad Thaker, *M. Sunderram Shetty,*

Branch Office At Mangalore

K. P. Bhavanishanker Shetty,
Branch Secretary.

ಪ್ರಾಯ 58ಕ್ಕೆ ಬಂದ ಪ್ರಧಾನಿ



ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹಿರಲಾಲರಿಗೆ ಇದೇ ತಾ. 14-11-1947ಕ್ಕೆ 58ನೇ ವರುಷ ಹಿಡಿಯಿತು. ಭಾರತದ ಏರಾವತಕ್ಕೊಂದು ಐವತ್ತೆಂಟು!

ಆದಿನ ಇಡೀ ಜಗತ್ತು ನೆಹರು ಸ್ಮರಣೆ ಮಾಡಿತು; ಸಹಸ್ರಾರು ಅಭಿನಂದನಾ ತಂತಿ ಪತ್ರಗಳು ಬಂದಿದ್ದುವು, ಬರುತ್ತಾ ಇದ್ದುವು. ಆದರೆ ಪಂಡಿತಜೀ ಎಂದಿನಂತೆ ಆ ದಿನವೂ ತನ್ನ ಕಾರ್ಯಾಲಯದಲ್ಲಿ ಅವಿಶ್ರಾಂತವಾಗಿ ದುಡಿಯುತಿದ್ದರು. ಉಪ ಪ್ರಧಾನಿ ಸರ್ದಾರ್ ಪಟೇಲರ ಸಮೇತ ಎಲ್ಲಾ ಮಂತ್ರಿಗಳು ಮತ್ತಿತರ ಹಲವು ಮಾನ್ಯರು ಪಂಡಿತಜೀಗೆ ಗೌರವವಂದನೆ ಸಲ್ಲಿಸಲು ಬಂದು ಹೋಗುತಿದ್ದರು; ಆದರೆ ಪಂಡಿತಜೀ ನಿತ್ಯದ ಕಾರ್ಯದಲ್ಲೇ ಮುಳುಗಿದ್ದರು. ಅವರ ಮನೆಯಲ್ಲಿ ಆ ದಿನ ಕೌಟುಂಬಿಕ ಸತ್ಕಾರಕೂಟ ಕೂಡಾ ಇರಲಿಲ್ಲವಂತೆ!

ಪಂಡಿತ ಜವಾಹಿರಲಾಲರಂಥವರು—ಅವರನ್ನಿಂದು ಇದಿರಿಸಿರುವ ಸಮಸ್ಯೆಗಳೆಂತಹವು-ಎಂಬುದನ್ನು ಈ ನವಂಬರ್ ತಾ. 14ರಲ್ಲಿ ವ್ಯಕ್ತಿಶಃ ಪಂಡಿತ ಜೀ ಏನು ಮಾಡುತ್ತಿದ್ದರು—ಲೋಕವವರಿಗಾಗಿ ಏನು ಮಾಡುತಿತ್ತು, ಎಂಬ ಅದೊಂದೇ ಒಂದು ದೃಶ್ಯದಿಂದ ಅರಿಯಬಹುದು.

ಅನೇಕಕಡೆ ಹಲವೆಡೆ ನೆಹರು ಜನ್ಮ ದಿನಾಚರಣೆ ನಡೆಯಿತು. ಅಲ್ಲಿ ಭಾರತದ ರಾಯಭಾರಿಯಾಗಿರುವ ಮಿ. ಅಸಫ್‌ಆಲಿ ಗಳು ವಾಷಿಂಗ್ಟನಿನ ತನ್ನ ನಿವಾಸದಲ್ಲಿ ಸಂಭ್ರಮದ ಔತಣಕೂಟವೇರ್ಪಡಿಸಿದ್ದರು ನ್ಯೂಯೋರ್ಕಿನಲ್ಲಿ ನೆಹರೂ ಸಹೋದರಿ ಶ್ರೀಮತಿ ವಿಜಯಲಕ್ಷ್ಮಿ ಸಮೇತ ರಾಷ್ಟ್ರಸಂಘದ ಪ್ರತಿನಿಧಿಗಳು ಹಿಂದೀ ಮಾದರಿಯ ಔತಣ ಹೊಡೆದರು. ಲೋಕದ ಹಾಗೂ ಆಸ್ಯಾದ ಹಲವೆಡೆಗಳಲ್ಲಿಯೂ ನೆಹರು ಜಯಂತಿ ಆಚರಿಸಲ್ಪಟ್ಟಿದೆ. ಪೇಟೆ, ಪಟ್ಟಣ ಹಳ್ಳಿ ಮೂಲೆಗಳಲ್ಲೂ ಸಭೆ ಭಾಷಣ, ಸತ್ಕಾರ ಕೂಟ ಇತ್ಯಾದಿಗಳು ಜರಗಿವೆ.

ಒಕ್ಟೋಬರ 1ರಲ್ಲಿ ಗಾಂಧಿಜೀ 78ಕ್ಕೆ ಬಂದಿದ್ದರು; ನವಂಬರ 14ರಲ್ಲಿ ಪಂಡಿತ ಜೀ 58ಕ್ಕೆ ಬಂದರು.

ಲೋರ್ಡ್ ಮೌಂಟ್‌ಬೇಟನರ ಶ್ಲಾಘನೆ

ತನ್ನ ಅಣ್ಣನ ಮಗ ಲೆಫ್ಟನೆಂಟ್ ಫಿಲಿಪ್ ಮೌಂಟ್‌ಬೇಟನರಿಗೆ ರಾಜಕುವರಿ ಹಾಗೂ ಇಂಗ್ಲಂಡಿನ ಭಾವೀ ರಾಣಿ ಪ್ರಿನ್ಸೆಸ್ ಎಲಿಜಬೇತಳೊಂದಿಗೆ ನಡೆವ ವಿವಾಹ ಸಮಾರಂಭಕ್ಕಾಗಿ ಭಾರತ ಸರಕಾರದ ಉಡುಗೊರೆಗಳ ಸಮೇತ (ಮೊಗಲರ ಕಾಲದ ರತ್ನಖಚಿತ ಗೆಜ್ಜೆಗಳು ಮತ್ತು ಅಮೂಲ್ಯ ಸೀರೆಗಳು ಮದುಮಗಳಿಗೆ, ಅಮೂಲ್ಯ ಶಿವಮೂರ್ತಿ ಮುಂತಾದುವು ಮದುಮಗನಿಗೆ) ಹೋಗಿದ್ದ ಭಾರತದ ಗವರ್ನರ್‌ಜನರಲ್ ಲೋರ್ಡ್ ಮೌಂಟ್‌ಬೇಟನರು ಲಂಡನಿನಲ್ಲಿರುವ 'ಭಾರತ ಭವನ'ದಲ್ಲಿ ಪಂಡಿತ ನೆಹರುಗಳ ಭಾವಚಿತ್ರವನ್ನು ಅನಾವರಣಮಾಡುತ್ತಾ ಆಡಿದ ಮಾತುಗಳು ಅಕ್ಷರಶಃ ಅಮೂಲ್ಯವಿವೆ. ನೆಹರು ಆಡಳಿತೆಯ ಯೋಗ್ಯತೆ—ಚರ್ಚಿಲ್ ಟೀಕೆಯ ಅಯೋಗ್ಯತೆ, ಇವೆರಡನ್ನೂ ಒಂದೇಬಾರಿ ಅಳೆದು ತೋರಿಸಿದ ಮಾನವಾಗಿವೆ ಈ ಮಾತುಗಳು. ಸ್ವರಾಜ್ಯಕೊಟ್ಟ ಬ್ರಿಟಿಷರು ಹಿಂದೀಯರ ಯೋಗ್ಯತೆಯ ಹುರುಳನ್ನು ಹೊರಗೆಡಹಲು ಕಾಯುತಿದ್ದಾರೆ—ಆ ನಿರೀಕ್ಷಕರಲ್ಲಿ ಲೋರ್ಡ್ ಮೌಂಟ್‌ಬೇಟನರು ಮುಖ್ಯ—ಎಂದಾರೂ ಶಂಕಿಸಬೇಕೆಂದಿಲ್ಲ. ಲೋರ್ಡ್ ಮೌಂಟ್‌ಬೇಟನರು ಆ ಯೋಗ್ಯತೆಯನ್ನು ಇಷ್ಟರಲ್ಲೇ ಕಂಡಾಗಿದೆ. ಡಿಲ್ಲಿಯ ಸರಕಾರೀ ಭವನದಲ್ಲಿ ನೆಹರುಗಳ ಜತೆಯಲ್ಲಿದ್ದು ತಾನುಪಡೆದ ಅಂದಾಜನ್ನು ಲಂಡನಿನ ಭಾರತಭವನದಲ್ಲಿ ನೆಹರೂ ಭಾವಚಿತ್ರದೊತ್ತಿನಲ್ಲಿ ನಿಂತು ಲೋರ್ಡ್ ಮೌಂಟ್‌ಬೇಟನ್ ಬಿಚ್ಚಿದ್ದಾರೆ:—

'ಶೇ. 97 ಮಂದಿ ನೆಮ್ಮದಿ'.

"ಅಧಿಕಾರ ವರ್ಗೀಕರಣವಾಗಿ ಪಂಡಿತ ನೆಹರು ಮತ್ತವರ ಸರಕಾರವು ಹೊಣೆ ವಹಿಸಿಕೊಂಡೊಡನೆಯೇ ಎದ್ದಂತಹ ಗೊಂದಲಗಳು, ಯಾವ ಹೊಸಸರಕಾರವನ್ನಾದರೂ ಪರೀಕ್ಷಿಸಲು ಸಾಕಾಗುವಂಥವುಗಳೇ. ಆದರೆ ಪಂಡಿತ ನೆಹರು ಮತ್ತವರ ಸರಕಾರವು ಅವುಗಳನ್ನೂ ಮೀರಿ ಮೇಲ್ನಿಂತರು. ಭಾರತದ 40,000,000 ಜನರ ಪೈಕಿ ಕೇವಲ ಶೇಕಡಾ 3ರಷ್ಟು ಮಂದಿ ಮಾತ್ರ ಈಗಲಭೆರಂಗಗಳಲ್ಲಿ ಸಹಭಾಗಿಗಳಾಗಿದ್ದಾರೆ. ಉಳಿದ ಸೇಕಡಾ 97ರಷ್ಟು ಮಂದಿ ಶಾಂತಿ ಮತ್ತು ನೆಮ್ಮದಿಯಲ್ಲಿದ್ದಾರೆ. ಆದರೆ ಇದೊಂದು ವಾರ್ತೆಯಾಗದು. ಒಳ್ಳೆಯದೇನು ನಡೆದಿದೆಯೋ ಅದೊಂದು ಸುದ್ದಿಯಾಗುವಂತಿಲ್ಲ. ಯಾವುದು ತೀರಾ ಕೆಟ್ಟದೆಯೋ ಅದುಮಾತ್ರ ಸುದ್ದಿ. ಶಾಂತಿ,ಸೌಖ್ಯಮತ್ತು ಸಂತೃಪ್ತಿಯಿಂದ ಅಲ್ಲಿ ಬಾಳುತ್ತಿರುವವರ ಕುರಿತು ನೀವು ಓದುತ್ತಿರುವುದೆಷ್ಟು? ಆ ಹೋರಾಟ ನಿರತ ಎರಡು ರಾಷ್ಟ್ರಗಳ ಕುರಿತು ಯೋಚಿಸುವಾಗ ಈ ವಿಷಯವೂ ನಿಮ್ಮ ನೆನಪಿನಲ್ಲಿರಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

'ಅಸಾಮಾನ್ಯ ನಾಯಕ'

ಅಧಿಕಾರ ಹೊತ್ತ ಮೂರೇ ವಾರಗಳೊಳಗೆ, ಪಂಡಿತ ನೆಹರುಗಳು ಒಂದು ಸರಕಾರದ ಶಿರಸ್ಸಾಗಿ ಇದ್ದ ರಾಜಧಾನಿ ನಗರದ ಜೀವನ ಮತ್ತು ವ್ಯವಹಾರ ಸಂಬಂಧಗಳೆಲ್ಲವೂ ಪೂರ್ಣ ನಿಸ್ತಬ್ಧಗೊಳ್ಳುವ ಅಪಾಯವು ಸನ್ನಿಹಿತವಾಗಿತ್ತು ಸ್ವತಃ ಆ ಧ್ವಂಸಕೃತ್ಯಗಳೇ ಸಾಕಷ್ಟು ಕಳತೆಯವಿದ್ದುವು; ಈ ಕುರಿತು ಅನ್ಯಥಾ ಕಪಟವಾಡುವದು ಅವಿವೇಕತನವೇ ಸರಿ. ಆದರೆ ನಾವೀಗ ಸರಿಯಾದ ಅಂಕೆ ಸಂಖ್ಯೆಗಳ ಸಂಗ್ರಹಕ್ಕೆ ತೊಡಗಿದ್ದೇವೆ. ಭಾರತ ಮತ್ತು ಪಾಕಿಸ್ತಾನವೆರಡೂ ಸರಕಾರಗಳ ಅಧಿಕೃತ ಸಂಖ್ಯೆಗಳನ್ನು ಪಡೆದಿದ್ದೇವೆ. ಅವುಗಳ ಜುಮ್ಲಾ ಸಂಖ್ಯೆಯನ್ನು ಸರಿಯಾಗಿ ಇಟ್ಟುಕೊಂಡು ಕೂಡಿಸಿಕೊಳ್ಳುತಿದ್ದೇವೆ. ಕೊನೆಯ ಮೊತ್ತವೆಷ್ಟಾದೀತೆಂದು ಈಗ ಮುಂದಾಗಿ ತೀರ್ಮಾನಿಸಲೆತ್ನಿಸಲು ನಾನು ಸಿದ್ಧನಿಲ್ಲ. ಆದರೆ ಆ ಮುಹೂರ್ತದಲ್ಲಿ ಯಾರೇ ಆದರೂ ಊಹಿಸಿದ್ದುದಕ್ಕಿಂತ ಈ ಮೊತ್ತವು ತೀರಾ ಕಡಿಮೆಯಿರುವುದು ಮಾತ್ರವಲ್ಲ; ಇದು ವರೆಗೆ ಉಲ್ಲೇಖಿಸಲ್ಪಟ್ಟಿರುವ ಅಂಕೆ ಸಂಖ್ಯೆಗಳ ಕೇವಲ ಅತ್ಯಲ್ಪ ಪರಿಮಾಣದ ಪ್ರತಿಬಿಂಬವೆಂದು ನಿಸ್ಸಂದೇಹವಾಗಿ ಹೇಳಬಲ್ಲೆ. ಚರಿತ್ರೆಯನ್ನು ಬರೆಯುವ ಕಾಲ ಬರಲಿ; ಆಗ ಚರಿತ್ರೆಯು ಯಾವುದೇ ಅವಧಿಯಲ್ಲಿ ಯಾವುದೇ ದೇಶದಲ್ಲಿದ್ದ ಅತಿ ದೊಡ್ಡ ಮನುಷ್ಯರಲ್ಲೊಬ್ಬರೆಂದು ಪಂಡಿತ ನೆಹರು ಉಲ್ಲೇಖಿಸಲ್ಪಡಲಿರುವರು. ಊಹಾಸಾಧ್ಯವಿರುವ ಅತ್ಯುಚ್ಚ ಮಟ್ಟದ ಭಾವಶುದ್ಧಿಯ ಮನುಷ್ಯನೀತ. ಚರಿತ್ರೆಯು ಬರೆಯಲ್ಪಡುವಾಗ, ಸ್ವತಃ ತಾನು ಅಥವಾ ತನ್ನ ರಾಷ್ಟ್ರವು ನಾಚುವಂತಾಗುವಂತಹ ಯಾವುದೇ ಕಾರ್ಯ ಅಥವಾ ಧೋರಣೆಯನ್ನು ಯಾವ ಕಾಲದಲ್ಲಾದರೂ ಎಂತಹ ಒತ್ತಡದಲ್ಲಾದರೂ ವಹಿಸದಂಥಾ ಮನುಷ್ಯನೀತ!"

ಶ್ರೀ ಚೆಟ್ಟಿಯಾರರ ಶ್ಲಾಘನೆ

ಲೋರ್ಡ್ ಮೌಂಟ್‌ಬೇಟನರ ಶ್ಲಾಘನೆಯಂತೆಯೇ ಅಕ್ಷರಶಃ ಗಣ್ಯವಾದ ಮತ್ತೊಂದು ಶ್ಲಾಘನೆಯೆಂದರೆ ಭಾರತ ಸರಕಾರದ ಹಣಕಾಸಿನ ಮಂತ್ರಿ ಶ್ರೀ. ಷಣ್ಮುಗಂಚೆಟ್ಟಿಯಾರರು ಸಲ್ಲಿಸಿದುದು. ಇಂದಿನ ಅ. ಭಾ. ಅಧಿಕಾರ ಕ್ಷೇತ್ರದಲ್ಲಿ ಪ್ರಮುಖ್ಯ ಸ್ಥಾನಪಡೆದಿರುವ ಮದ್ರಾಸಿಗರಲ್ಲಿ ಶ್ರೀ. ಷಣ್ಮುಖಂ ಎರಡನೆಯವರು. ರಾಜಾಜಿ ಗವರ್ನರ್ ಜನರಲರಾದರೆ ಶ್ರೀ. ಷಣ್ಮುಖಂ ಚೆಟ್ಟಿಯಾರರು ಅರ್ಥ ಸಚಿವರಾಗಿದ್ದಾರೆ. ದಿನಕ್ಕೆ ಒಂದು ಕೋಟಿ ರೂ. ಗಳಿಗೂ ಮಿಕ್ಕಿ ವ್ಯಯವಾಗುತ್ತಿರುವ ಖಜಾನೆಯ ಅಧಿಪತಿಗಳಾಗಿದ್ದಾರೆ. ತಾರುಣ್ಯದಲ್ಲಿ ಪಂಡಿತ ಮೋತಿಲಾಲರ ಕಾರ್ಯದರ್ಶಿಯಾಗಿದ್ದು, ಆ ಮೇಲೆ ಕಾಂಗ್ರೆಸನ್ನು ಬಿಟ್ಟು ಜಸ್ಟಿಸ್ ಪಕ್ಷದ ಆಧಾರ ಸ್ತಂಭಗಳಲ್ಲೊಂದಾಗಿ ಕೆಲಸ ಮಾಡಿ 'ಸರ್' ಪದವಿ ಪಡೆದು, ಸ್ವರಾಜ್ಯಾನಂತರ ರಾಜಾಜೀ ಸೂಚನೆಯಂತೆ ಅದನ್ನು ತ್ಯಜಿಸಿ ಅತ್ಯಂತ ಜವಾಬ್ದಾರಿಯ ಭಾರತ ಸರಕಾರದ ಹಣಕಾಸಿನ ಮಂತ್ರಿತ್ವ ವಹಿಸಿದ್ದ ಶ್ರೀ ಚೆಟ್ಟಿಯಾರರು ನೆಹರು ಜಯಂತಿಯ ದಿನ ಮದ್ರಾಸಿನ ಸಾರ್ವಜನಿಕ ಸಭೆಯಲ್ಲಿತ್ತ ಭಾಷಣದಲ್ಲಿ ತನ್ನ ಸ್ವಾನುಭವವನ್ನು ಹೊರಗೆಡಹಿದ್ದರು:—

'ಆಶ್ಚರ್ಯಾನಂದ ನಿರ್ಮಾಪಕ'

"ಗಾಂಧಿಜೀಯ 78ನೇ ಜನ್ಮದಿನದಲ್ಲಿ ಡಿಲ್ಲಿಯಲ್ಲಿದ್ದ ಅವರಿಗೆ ಗೌರವ ಸಲ್ಲಿಸಲು ಹೋಗಿದ್ದವರಲ್ಲಿ ನಾನೊಬ್ಬ. ನಾನವರಿಗೆ ಅಭಿವಂದನೆ ಸಲ್ಲಿಸುವ ಮೊದಲೇ ಗಾಂಧಿಜೀ ಹೇಳಿಬಿಟ್ಟರು: "ಬದಲಿಗೆ ಇವೆಲ್ಲಾ ದುರಂತಗಳನ್ನು ಕಾಣುವುದಕ್ಕಾಗಿ 78 ವರುಷಗಳ ವರೆಗೂ ಬದುಕಿದ ನನ್ನ ದುಃಖದಲ್ಲಿ ಸಹಾನುತಾಪ ಸೂಚಿಸಿರಿ." ರಾಷ್ಟ್ರದ ಗೊಂದಲಗಳಿಂದಾಗಿ ನಮ್ಮ ಧುರೀಣರ ಹೃದಯಗಳಲ್ಲೆಂತಹ ಸಂತಾಪ ಮಾಮನೆಸಿಕೊಂಡಿದೆ ಎಂಬುದಕ್ಕಿದು ನಿದರ್ಶನ, ಇಂತಹ ಸಂದರ್ಭದಲ್ಲಿ ಉದ್ರೇಕಿ ಸ್ವಭಾವದ ಪಂಡಿತ ಜವಾಹಿರಲಾಲರು ಹೇಗಾಗುವರೋ ಎಂದು ನಾನು ಅತುರಗೊಂಡಿದ್ದೆ. ಆದರೆ ಇವೆಲ್ಲಾ ದುರಂತಪರಂಪರೆಗಳೆಡೆಯಲ್ಲಿಯೂ ಜವಾಹಿರರಲ್ಲಿದ್ದ ಶಾಂತತೆ ಮತ್ತು ಘನತೆ, ಮತ್ತವರು ಪ್ರದರ್ಶಿಸುತಿದ್ದ ಸಂಕಲ್ಪ ಶಕ್ತಿ ಮತ್ತು ನಾಗರಿಕತೆಗಳು ಅಸಾಧಾರಣವಿದ್ದುವು. ನಮ್ಮ ಧುರೀಣರಲ್ಲಿಯಾದರೂ ಸಿಟ್ಟಿಗೆ ಮನಸ್ಸು ಕೊಡುತಿದ್ದರೆ ಈ ದಿನ ನಮ್ಮ ರಾಷ್ಟ್ರವೇನಾಗಿ ಹೋಗುತಿತ್ತು, ಎಂಬುದನ್ನು ಹೇಳಬಲ್ಲವರಾರು? ಕಾಶ್ಮೀರದ ಸಂಬಂಧವಾಗಿ ಪಂಡಿತ ನೆಹರುಗಳಿತ್ತ ಆ ಆಕಾಶವಾಣೀ ಭಾಷಣವೊಂದೇ ಹಿಂದೂಸ್ಥಾನದ ದರ್ಜೆಯನ್ನು ಲೋಕದ ರಂಗದಲ್ಲಿ ಎಷ್ಟೋ ಪಟ್ಟು ಮೇಲ್ಗಡೆಗೇರಿಸಿದೆ"

ನಿಜ; ಐವತ್ತೆಂಟರ ಈ ಐರಾವತದಿಂದಾಗಿಯೇ ಇಂದು ಭಾರತದ ತೂಕ ಹೆಚ್ಚಿದೆ! ನೆಹರು ಚಿರಾಯುವಾಗಲಿ.

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ಹೆಗ್ಗುರಿಯಾಗಿಟ್ಟುಕೊಂಡು ಕಳೆದ ಒಂಭತ್ತಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ—

ದಿ ವಿಜಯಾ ಬೇಂಕ್,
ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಸಿಟಿ-ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಂಞಂಗಾಡು, ಮಡಿಕೇರಿ ಮತ್ತು ಮುಂಬಾಯಿ.

THE VIJAYA BANK, LIMITED.

ಆಶ್ರಿತರೊಬ್ಬೊಬ್ಬರಾಗಿ ಆಧೀನಕ್ಕೆ ಬಂದರು!

ದುಷ್ಟಶಕ್ತಿಗಳ ಪ್ರಭಾವದ ಅವಧಿ ಮುಗಿದು ಪತನ ಕಾಲವಾರಂಭಿಸಿತೆಂಬ ಸ್ಪಷ್ಟ ಚಿಹ್ನೆಗಳು ಕಳೆದ ವಾರದ ಘಟನೆಗಳಲ್ಲಿ ಒಡೆದು ಕಾಣುತ್ತಿವೆ.

ಜುನಗಾಡಿನ ಉದ್ದೇಶ ಭಂಗವಾಗಿ, ಉಸಿರುಕಟ್ಟಿ, ಭಾರತ ಕೇಂದ್ರಕ್ಕದು ತನ್ನಾಡಳಿತೆಯನ್ನೇ ಒಪ್ಪಿಸಿಕೊಟ್ಟುದು—ಕಾಶ್ಮೀರದ ಕಂದರದ ಅಪಾಯವು ಪೂರ್ತಿ ಕಳೆದುಹೋಗಿ ಹಿಂದೀ ಸೇನೆಯು ಆಕ್ರಮಣಗಾರರನ್ನು ಬೆನ್ನಟ್ಟಿರುವುದು—ತ್ರಿಪುರ ಸಂಸ್ಥಾನದಲ್ಲಿ ಪಾಕಿಸ್ತಾನ್ ವಾದಿಗಳು ಹೊಸತಾಗಿ ಎಬ್ಬಿಸಹತ್ತಿರುವ ಗೊಂದಲ ಮತ್ತು ನೀಲಗಿರಿಸಂಸ್ಥಾನಾಡಳಿತೆಯನ್ನು ಹಿಂದೀ ಕೇಂದ್ರ ಕೈವಶ ಮಾಡಿಕೊಂಡುದು—ಹೈದರಾಬಾದು ಗುಳ್ಳಿಯೂ ಸ್ಫೋಟಪೂರ್ವ ಸ್ಥಿತಿಗೆಬಂದಿರುವುದು ಮತ್ತು ಸರ್ದಾರ್ ಪಟೇಲರಿಂದ ಹೋಗಿರುವ ಸ್ಪಷ್ಟ ಎಚ್ಚರಿಕೆ—ಇವು ಕಳೆದ ದಿನಗಳಲ್ಲಿ ಅಧಿಕಾರೀ ಕ್ಷೇತ್ರದಲ್ಲಿ ಘಟಿಸಿದ ಪ್ರಾಮುಖ್ಯ ಸಂಗತಿಗಳು.

ಪಂಡಿತ ನೆಹರು ಕಾಶ್ಮೀರಕ್ಕೆ, ಸರ್ದಾರ್ ಪಟೇಲರು ಕಾಥಿಯಾವಾಡಕ್ಕೆ ಹೋಗಿ ಮಾಡಿದ್ದ ಭಾಷಣಗಳು—ಭಾರತದ ಮುಸ್ಲಿಮ್ ನಾಯಕರ ಎರಡು ಸಮ್ಮೇಲನಗಳು, ಒಂದು ಮಿ. ಸುಹ್ರವರ್ದಿ ನಾಯಕತ್ವದಲ್ಲಿ ಕಲ್ಕತ್ತದಲ್ಲಿಯೂ, ಮತ್ತೊಂದು ಮೌಲಾನಾ ಆಜಾದರ ನಾಯಕತ್ವದಲ್ಲಿ ನವದಿಲ್ಲಿಯಲ್ಲಿಯೂ ಸೇರಿ ಮಾಡಿರುವ ನಿರ್ಧಾರಗಳು— ನವದಿಲ್ಲಿಯಲ್ಲಿ ಸೇರಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಅ. ಭಾ. ಕಾಂಗ್ರೆಸ್ ಸಮಿತಿ ಸಭೆಗಳು— ಇವು ಕಳೆದ ದಿನಗಳಲ್ಲಿ ರಾಜಕೀಯ ರಂಗದಲ್ಲಿ ಸಂಭವಿಸಿದ ಮುಖ್ಯ ಘಟನೆಗಳು.

ಕಾಂಗ್ರೆಸ್ ಅಧ್ಯಕ್ಷರ ರಾಜೀನಾಮೆ- ಸಂಯುಕ್ತ ಪ್ರಾಂತಿಕ ಮುಸ್ಲಿಂ ನಾಯಕರು ಪಾಕಿಸ್ತಾನದೊಂದಿಗೆ ನಡೆಸಿರುವ ಒಳಸಂಚು—ಕಾಶ್ಮೀರದ ಕುರಿತು ಪಾಕಿಸ್ತಾನ್ ನಾಯಕರು ಹೂಡಿದ್ದ ಪೂರ್ವ ಹಂಚಿಕೆ- ಹೈದರಾಬಾದಿನ ಶಸ್ತ್ರಮದ- ಇತ್ಯಾದಿ ಅಂತರ್ವಹಿವಾಟುಗಳ ಸುದ್ದಿ ಸುಳಿದಾಟಗಳೂ ಪ್ರಾಮುಖ್ಯದ್ದಿವೆ.

ಅಂತೂ ಒಂದು ಸಂಗತಿ ಸ್ಪಷ್ಟವಾಗಿದೆ. ಭಾರತ ನಾಯಕರು ಕಂಠೋಕ್ತ ಹೇಳಿಕೆ, ಖಡಾಖಂಡಿ ವರ್ತನೆಗಿಳಿದಿದ್ದಾರೆ. ಆ ಪ್ರಖರ ಕಿರಣಗಳಿದಿರಲ್ಲಿ ಈಗಿನ 'ಪ್ರತ್ಯಕ್ಷ ಹೋರಾಟ' ಕಾಲದ ಮದಾಂಧ ಮನೋವೃತ್ತಿಯು ಮತ್ತು ಅಸ್ಥಿರ ಬ್ರಿಟಿಷ್ ಆಡಳಿತ ಕಾಲದ ಜಡಮನೋವೃತ್ತಿಯು ಕತ್ತಲೆ ಮಾಯವಾಗುತ್ತಾ ಬರುತ್ತಿದೆ!

ಕಾಲವು ನ್ಯಾಯಗತಿ ಹಿಡಿದಂತಿದೆ; ಸಂಗತಿಗಳು ಆಗಬೇಕಾದ ರೀತಿಯಲ್ಲೇ ಆಗಹತ್ತಿವೆ!

ಜುನಾಗಡಿನ ಸ್ವಸಮರ್ಪಣೆ

ಕೈಗೆ ಕೈಕೊಡಲು ನಿರಾಕರಿಸಿದವನು ಕೊನೆಗೆ ತಾನಾಗಿ ಬಂದು ಬಗಲೊಳಗೆ ಸೇರಿಕೊಂಡಂತಾಯಿತು ಜುನಾಗಾಡ್ ಸಂಸ್ಥಾನದ ಮರ್ಜಿ! ಹಿಂದೀ ಕೇಂದ್ರಕ್ಕೆ ಮಿಕ್ಕ ಸಂಸ್ಥಾನಗಳಂತೆ ಮೂರೇ ವಿಷಯಗಳನ್ನು ಬಿಟ್ಟುಕೊಟ್ಟು ಜೋಡಣೆಗೊಳ್ಳುವದನ್ನು ಪ್ರಥಮತಃ ನಿರಾಕರಿಸಿ, ಪಾಕಿಸ್ತಾನಕ್ಕೆ ಕೈಕಟ್ಟಿಬದ್ಧವಿದ್ದ ಈ ಸಂಸ್ಥಾನವು ಅಲ್ಪಾವಧಿಯಲ್ಲಿ— ಆಶಾವಾದಿಗಳು ನಿರೀಕ್ಷಿಸಿದ್ದುದಕ್ಕಿಂತಲೂ ಬೇಗನೇ— ಭಾರತದೊಂದಿಗೆ ಸಂಬಂಧವಿಟ್ಟುಕೊಂಡುದಷ್ಟೇ ಅಲ್ಲ, ತನ್ನನ್ನೇ ಸಮರ್ಪಿಸಿಕೊಂಡಿದೆ. ಈ ಅದೃಷ್ಟವದರ ಪಾಲಿಗೆ ಅನಿವಾರ್ಯವಾಯಿತು. ನಡೆದುದಿಷ್ಟೆ: ಶ್ರೀ ಸಾಮಲ್ದಾಸ್ ಗಾಂಧಿಯವರ ಪ್ರತಿಸರಕಾರವು ಜುನಾಗಾಡನೊಳಗೆ ನುಗ್ಗಿದೊಡನೆಯೇ ನವಾಬರು ಖಜಾನೆಯನ್ನು ಜೇಬಾಗಿ ಕಟ್ಟಿಕೊಂಡು ಕರಾಚಿಗೋಡಿದ್ದರು. ಗಡಿಯಲ್ಲಿ ಹಿಂದೀಸೇನೆ ಕಾದುನಿಂತಿತ್ತು; ಒಳಗಡೆ ಸಾಮಲ್ದಾಸ್ ಸರಕಾರ ನುಗ್ಗಿ ಬರುತಿತ್ತು. ತಮ್ಮಾಟವೆಲ್ಲವೂ ಇದಿರಾಳಿಗಳ ಕೈಯಿಂದ ಮುಗಿಯಹತ್ತಿದುದೆಂದು ಖಚಿತವಾದೊಡನೆಯೇ ತಾನಾಗಿ ಆಟವನ್ನು ಮುಗಿಸಿಕೊಳ್ಳಲು ಜುನಗಾಡಿನ ಅಧಿಕಾರಿಗಳು ಮುಂದಾದರು. ಅಲ್ಲಿಯ 'ಎಕ್ಸಿಕ್ಯೂಟಿವ್' ಕೌನ್ಸಿಲಿನ ಹಿರಿಸದಸ್ಯ ಕೆಪ್ಟನ್ ಹಾರ್ವೆ ಜೋನ್ಸರು ಪ್ರತಿಸರಕಾರದ ಅಧಿಪತಿ ಶ್ರೀ. ಸಾಮಲ್ದಾಸ್ ಗಾಂಧಿಯವರೊಂದಿಗೆ ಅಧಿಕಾರವೊಪ್ಪಿಸುವ ಮಾತುಕತೆ ನಡೆಸಿದರು. ಶ್ರೀ ಗಾಂಧಿಯವರ ಸೂಚನೆಗಳು ಜುನಾಗಾಡ್ ಕಾರ್ಯಕಾರೀ ಸಮಿತಿಯಲ್ಲಿ ಚರ್ಚಿಸಲ್ಪಟ್ಟು, ನಿಷೇಧ ಸೂಚನೆಯೊಂದಿಗೆ ಸ್ವೀಕರಿಸಿಕೊಳ್ಳುವದೆಂದೇ ನಿರ್ಧಾರವಾಯಿತು. ಆ ನಿರ್ಧಾರವನ್ನು ಪ್ರಮುಖ ನಾಗರಿಕರ ಸಭೆಯ ಮುಂದಿಟ್ಟಾಗ, ಪ್ರತಿ ಸರಕಾರದ ಮೂಲಕ ಆಡಳಿತೆಯನ್ನು ಹಿಂದೀಕೇಂದ್ರಕ್ಕೊಪ್ಪಿಸುವ ಬದಲಿಗೆ, ರಾಜಕೋಟ ಕ್ಷೇತ್ರದ ಕೇಂದ್ರ ಭಾರತದ ಕಮಿಶನರಾಗಿರುವ ಮಿ. ಬುಚರ ಮೂಲಕ ನೇರಾಗಿ ಹಿಂದೀ ಕೇಂದ್ರದ ಹಸ್ತಾಧೀನಮಾಡುವದುತ್ತಮವೆಂದು ನಿರ್ಣಯವಾಯಿತು. ಈ ಶರಣಾಗತಿ ನಿರ್ಧಾರವನ್ನು ಜುನಾಗಾಡಿನ ಪ್ರಧಾನ ಮಂತ್ರಿ ಸರ್. ಶಾನವಾಝ್ ಭುಟ್ಟೋ ಭಾರತ ಸರಕಾರಕ್ಕೆ ರವಾನಿಸಿದರು; ಕಮಿಶನರರಿಗೆ ಮುಟ್ಟಿಸಿದರು; ಪಾಕಿಸ್ತಾನ್ ಸರಕಾರಕ್ಕೂ ತಿಳಿಸಿದರು. ಅತ್ತ ಭಾರತ ಸರಕಾರವು ಪಾಕಿಸ್ತಾನಕ್ಕೆ ಸೂಚನೆ ಕಳುಹಿಸಿಯೇ ಜುನಾಗಾಡಿನ ಅಧಿಕಾರವನ್ನು ಹಿಡಿದುಕೊಳ್ಳುವರೆ ರಾಜಕೋಟದ ಕ್ಷೇತ್ರ ಕಮಿಶನರರಿಗೆ ಆಜ್ಞೆ ಕಳುಹಿಸಿತು. ತಾ. 9ರಲ್ಲಿ ಮಿ. ಬುಚರು ಸೇನಾಸಮೇತ ಜುನಾಗಾಡಿಗೆ ಹೋಗಿ ಆಡಳಿತೆಯನ್ನು ಸ್ವಾಧೀನಪಡಿಸಿಕೊಂಡರು; ಜನತೆ ಈ ಸೇನೆಗೆ ಸುಸ್ವಾಗತವಿತ್ತಿತು; ಸರಕಾರೀ ಖಜಾನೆಯಲ್ಲಿ ಒಂದೇ ಒಂದು ರೂಪಾಯಿ ನಾಣ್ಯವೂ ಇರಲಿಲ್ಲವಂತೆ!

ಪಾಕಿಸ್ತಾನದ ನಿಷೇಧ

ಜುನಾಗಾಡು ಯಾವ ಕೇಂದ್ರಕ್ಕೆ ಸೇರತಕ್ಕದ್ದೆಂಬ ಕೊನೆಯ ತೀರ್ಮಾನವು ಅಲ್ಲಿಯ ಜನಮತ ಸಂಗ್ರಹದಿಂದಲೇ ಆಗಲಿದೆ, ಎಂಬುದನ್ನು ಸ್ಪಷ್ಟಪಡಿಸಿಯೇ ಭಾರತವದನ್ನು ಹಿಡಿದುಕೊಂಡುದು. ಕುಟುಂಬ ಸಮೇತ ದೀರ್ಘಕಾಲದಿಂದ ಕರಾಚಿಯಲ್ಲಿರುವ ಜುನಗಾಡಿನ ನವಾಬರು ಪಾಕಿಸ್ತಾನದ ನಾಯಕರೊಂದಿಗೆ ಎಲ್ಲವನ್ನು ಪರ್ಯಾಲೋಚಿಸಿರಬೇಕೆಂಬುದು ಸ್ಪಷ್ಟ. ಪ್ರಧಾನ ಮಂತ್ರಿಯು ನವಾಬರ ಅಭಿಮತ ಪಡೆದೇ ಜುನಾಗಾಡನ್ನು ಭಾರತದ ಆಡಳಿತೆಗೊಪ್ಪಿಸಿದ್ದರು. ಆದರೂ ಪಾಕಿಸ್ತಾನವು 'ಜುನಾಗಾಡ್ ಆಕ್ರಮಣ'ವನ್ನು ನಿಷೇಧಿಸಿ 1500 ಶಬ್ದಗಳ ಒಂದು ನಿಷೇಧ ಪತ್ರವನ್ನು ಭಾರತ ಸರಕಾರಕ್ಕೆ ರವಾನಿಸಿದೆ 'ಜುನಾಗಾಡಿನ ಭಾರತ ಜೋಡಣೆಯನ್ನು ನಾವು ಒಪ್ಪುವದಿಲ್ಲ. ಪಾಕಿಸ್ತಾನ ಸ್ಥಳದ ಪ್ರತ್ಯಕ್ಷಾಕ್ರಮಣವೆಂದೇ ಹಿಂದೀ ಸರಕಾರದ ಈ ಕೃತ್ಯವನ್ನು ಗಣಿಸಲಾಗುವುದು. ಕೂಡಲೇ ಹಿಂದೀ ಸೇನೆಯನ್ನು ಹಿಂದೆಗೆಯಬೇಕು; ಹಕ್ಕುಬದ್ಧ ನವಾಬರ ಸರಕಾರವನ್ನೇ ಪುನಃ ಸ್ಥಾಪಿಸಬೇಕು. ಜನರ ಆಕ್ರಮಣಗಳನ್ನು ನಿಲ್ಲಿಸಬೇಕು; ಇವಿಷ್ಟು ಮಾಡದೆ ಆ ಸಂಬಂಧದ ಯಾವ ಮಾತುಕತೆಗೂ ಪಾಕಿಸ್ತಾನ ಬರುವಂತಿಲ್ಲ. ಭಾರತದೊಡನೆ ಯಾವ ಸಂಬಂಧ ನಡೆಸುವ ಹಕ್ಕೂ ಜುನಾಗಡಿನ ರಾಜರಿಗೆ ಅಥವಾ ದಿವಾನರಿಗೆ ಕಾನೂನುಬದ್ಧವಾಗಿ ಇಲ್ಲ'- ಎಂದೇ ಪಾಕಿಸ್ತಾನದ ಪ್ರತಿಮಾತು. ಕಾಶ್ಮೀರಾಕ್ರಮಣಗಾರರ ಸಂಬಂಧವಾಗಿ ಭಾರತ ಸರಕಾರವು ಪಾಕಿಸ್ತಾನ್ ಸರಕಾರದ ಮೇಲೆ ಮಾಡಿದ್ದ ಎಲ್ಲಾ ಮಾದರಿಯ ಆರೋಪಗಳನ್ನೂ ಜುನಾಗಾಡ್ ಆಕ್ರಮಣದ ಕುರಿತು ಪಾಕಿಸ್ತಾನ್ ಸರಕಾರವು ಹಿಂದುಸ್ಥಾನ್ ಸರಕಾರದ ಮೇಲೆ ಮರುಪಾವತಿಮಾಡಿದೆ. ಕಾಶ್ಮೀರದಲ್ಲಿ ಹಿಂದೀ ಸರಕಾರ ಮಾಡಿದಂತೆ, ಜುನಾಗಡಿನಲ್ಲಿ ಪಾಕಿಸ್ತಾನ್ ಸರಕಾರಕ್ಕೆ ಮಾಡಲಾಗದುದೊಂದೇ ಇಲ್ಲಿರುವ ವ್ಯತ್ಯಾಸ! ಕರಾಚಿಗೋಡಿದ ಜುನಾಗಾಡ್ ದಿವಾನರೂ ಈಗ ಯದ್ವಾತದ್ವಾ ಮಾತಾಡಹತ್ತಿದ್ದಾರೆ!

ಕಾಶ್ಮೀರದ ಕಾಳಗ

ಶ್ರೀನಗರ ವಲಯದ ಎಲ್ಲಾ ಸರಹದ್ದು ನಗರಗಳನ್ನೂ ಹಿಂದೀ ಸೇನೆಯು ಪುನರಾಕ್ರಮಿಸಿಕೊಂಡು ಆ ಕಂದರವನ್ನು ಶುದ್ಧೀಕರಿಸಿದೆ. ಆದರೂ ಆಕ್ರಮಣಗಾರರ ಪುಂಡು ಪಂಗಡಗಳು ಅಲ್ಲಲ್ಲಿ ಅಡಗಿ ತಲೆಯೆತ್ತಿ ಕಿರುಕುಳಗಳನ್ನೊಡ್ಡುತ್ತಿವೆ. ಇತ್ತ ಜಮ್ಮು ಪ್ರಾಂತ್ಯದಲ್ಲಿ ಧಾಳಿಗಾರರು ವಿಶೇಷ ಸಂಖ್ಯೆಯಿಂದ ನುಗ್ಗಿದ್ದು ಕೆಲವೆಡೆಗಳಲ್ಲಿ ಮೊದಲೇ ಮುತ್ತಿಗೆಗೊಳಗಾಗಿದ್ದ ಕಾಶ್ಮೀರೀ ಸೇನೆಗಳು ಸಾವು—ಜೀವ ಪ್ರಶ್ನೆಯಲ್ಲಿ ಸಿಕ್ಕಿದಂತಿವೆ ಅವುಗಳಿಗೆ ಆಕಾಶ ಮೂಲಕ ಭಾರತ ಸರಕಾರದ ಸರ್ವ ಸರಬರಾಯಿಯಾಗುತ್ತಿದೆ. ಪಶ್ಚಿಮ ಪಂಜಾಬು ಮತ್ತು ಗಡಿನಾಡು ಪ್ರಾಂತ್ಯಕ್ಕೊತ್ತಿನ ಕಾಶ್ಮೀರದ ಜಿಲ್ಲೆಗಳಲ್ಲಿರುವ ಧಾಳಿಗಾರರಿಗೆ ಸರಬರಾಯಿ ಮತ್ತು ಜನಸಂಗ್ರಹದ ಅನುಕೂಲತೆಗಳು ಹಿನ್ನೆಲೆಯಲ್ಲಿ ಬೇಕಾದಷ್ಟಿರುವುದರಿಂದ ಅಂತಹ ಸ್ಥಳಗಳಲ್ಲಿ ಅವರ ಉಪಟಳ ವಿಶೇಷ ರೀತಿಯಲ್ಲಿದೆ. ಆ ಭಾಗಗಳಿಗೆ ಹಿಂದೀ ಸರಕಾರದ ಹೆಚ್ಚಿನ ಸೇನೆಗಳು ಹೋಗಿವೆ. ಧಾಳಿಗಾರರಿಂದ ಕಾಶ್ಮೀರಕ್ಕೆ ಸನ್ನಿಹಿತವಾಗಿದ್ದ ಆ ಪಾಯವೀಗ ಪೂರ್ತಿ ಕಳೆದುಹೋದರೂ,

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶಲ್ ರೂ. 5/-; ಅಧಿಕಾಧಿಕ ಸ್ಪೆಶಲ್ ರೂ. 8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mis. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

ದೇಶೋನ್ನತಿಯನ್ನು ಬಯಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು. ವಣಿಜರಿಗೂ ಕೃಷಿಕರಿಗೂ ಕ್ಲುಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು. ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿಕೊಡುವುದು, ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಹಣದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906.

CANARA BANK LIMITED.

ಪಾಕಿಸ್ತಾನದ ಹೆಜ್ಜೆಗೆ ಪಥವಿಲ್ಲದಂತಾಗಿದೆ!

ಆ ಕಂಟಕವನ್ನು ಬೇರುಸಮೇತ ಕಿತ್ತೊಗೆಯುವ ಅತಿ ಪ್ರಯಾಸದ ಕಾರ್ಯವುಳಿದಿದೆ.

ಕಾಶ್ಮೀರದಲ್ಲಿ ನೆಹರು

ಪಂಡಿತ ನೆಹರು ಶ್ರೀನಗರಕ್ಕೆ ಹೋದಲ್ಲಿ ಅವರಿಗೆ ದೊರೆತ ಜನತಾಸ್ವಾಗತವು ಅಭೂತಪೂರ್ವವಿದ್ದಿತು. ಅಪಾಯಕರ ಬಿರುಗಾಳಿಯಿಂದ ಪಾರಾದ ಪ್ರಚಂಡ ಸಮುದ್ರವೆಂಬಂತೆ ಶ್ರೀನಗರದಲ್ಲಿ ಲಕ್ಷ ಮಂದಿಗೂ ಮಿಕ್ಕಿ ಸೇರಿದ್ದ ಅತಿದೊಡ್ಡ ಸಭೆಯಲ್ಲಿ 'ಕಾಶ್ಮೀರದ ಹುಲಿ' ಶೇಕ್ ಅಬ್ದುಲ್ಲಾರಿಗೆ ಭಾರತ ಸರಕಾರದ ಸರ್ವಸಹಾಯಗಳನ್ನೂ ಕೊಡುವುದಾಗಿ, ಪಂಡಿತ ನೆಹರುಗಳು ಭರವಸೆಯ ಕೈನೀಡಿ ಎತ್ತಿ ನಿಲ್ಲಿಸಿ ಹಸ್ತಲಾಘವ ಕೊಟ್ಟಾಗಿನ ದೃಶ್ಯವು ಕಾಶ್ಮೀರದ ಸ್ವಾತಂತ್ರ್ಯ ಚರಿತ್ರೆಯ ಮುಖಚಿತ್ರವಾಗುವಂತಹದು! ಬರಮುಲಾದಂತಹ ಊರು ಸ್ಥಳಗಳನ್ನೂ ಸಂದರ್ಶಿಸಿ 'ಪಾಕಿಸ್ತಾನದ ಸಂಬಂಧವೆಂದರೆ ಹೇಗೆಂಬುದನ್ನು ಕಲಿತಿರಷ್ಟೆ?' ಎಂದು ಧಾಳಿಗಾರರಿಂದ ಮನೆ ಮ್ಯಾಹಾನಿಗೊಂಡವರಲ್ಲೆಲ್ಲಾ ನೆಹರುಗಳು ಜಾಗ್ರತಿಯ ಬೀಜಬಿತ್ತಿದರು. ಕಣ್ಣೀರಿಟ್ಟವರನ್ನು ಸಂತೈಸಿದರು. "ಸ್ವತಂತ್ರ ಭಾರತದ ನವಯೋಧರಿಗೆ ತಮ್ಮ ಯೋಗ್ಯತೆ ಪ್ರದರ್ಶಿಸುವ ಪ್ರಥಮ ಸಂದರ್ಭವು ಕಾಶ್ಮೀರದಲ್ಲೊದಗಿತು; ಹುಶಾರಾಗಿರಿ!" ಎಂದು ಅಲ್ಲಿದ್ದ ಹಿಂದೀಯೋಧರನ್ನು ಹುರಿದುಂಬಿಸಿದರು ಕಾಶ್ಮೀರಿ ವಾತಾವರಣದ ಹಾಳಾಹಲದ ಸ್ಥಾನದಲ್ಲಿ ತನ್ನ ಸ್ಫೂರ್ತಿದಾಯಕ ಮಾತುವರ್ತನೆಗಳಿಂದ ನವ ಹುರುಪಿನ [illegible]ಬಲವನ್ನೇ ನಿರ್ಮಿಸಿ ಬಂದರು. ಮೂರು ವಾರಗಳ ಮೊದಲು ಧಾಳಿಗಾರ ಸಮುದ್ರ ಪೇರೆದಪ್ಪಿದೊಡನೆಯೇ ಶ್ರೀನಗರದಿಂದ ಜಮ್ಮುವಿಗೋಡಿದ್ದ ಕಾಶ್ಮೀರದ ರಾಜರು ನೆಹರು ಭೇಟಿಗಾಗಿ ಕೆಲವೇ ಘಂಟೆಗಳ ಮಟ್ಟಿಗೆ ಶ್ರೀನಗರಕ್ಕೆ ಬಂದರು. ಮಾತಾಡಿ ಹೊರಡಲೆದ್ದ ಮಹಾರಾಜರನ್ನು ಅವರ ಅರಮನೆಯ ಊಟಕ್ಕಾಗಿಯೇ ನೆಹರು, ಬಲದೇವಸಿಂಗ್, ಶೇಕ್ ಅಬ್ದುಲ್ಲಾ ಒತ್ತಾಯಿಸಬೇಕಾಯಿತು. ಅರಮನೆಯಲ್ಲಿ ಔತಣಕೂಟದ ವ್ಯವಸ್ಥೆಯಿಲ್ಲವೆಂದು ನೆನಸಿದ್ದ ಮಹಾರಾಜರಿಗೆ 'ಅರಮನೆಯೂಟ ಸಿದ್ಧವಾಗಿದೆ' ಎಂದು ಬಲದೇವಸಿಂಗರಂದಾಗ ಆಶ್ಚರ್ಯಾನಂದವಾಯಿತಂತೆ! ಒಮ್ಮೆ ತನ್ನಾಡಳಿತೆಯ ಕ್ಷೇತ್ರದ ಗಡಿದಾಟಬಾರದೆಂದು ನೆಹರುಗಳಿಗೆ ತಡೆಹಾಕಿಸಿದ್ದ ಕಾಶ್ಮೀರದ ಮಹಾರಾಜರು, ನೆಹರೂ ಅನುಗ್ರಹಬಲದಿಂದಾಗಿಯೇ ತನ್ನ ಅರಮನೆಯಲ್ಲಿ ತಾನು ಉಣ್ಣುವಂತಾಯಿತು! ಕಾಲಮಹಿಮೆ!

ಸರ್ದಾರರ ಸ್ಪಷ್ಟೋಕ್ತಿ

ಸರ್ದಾರ್ ವಲ್ಲಭಭಾಯಿಗಳ ಜುನಗಾಡ ಪಯಣವು ನೆಹರುಗಳ ಕಾಶ್ಮೀರ ಪ್ರವಾಸದಷ್ಟೇ ನವಚೇತನದಾಯಿಯಾಗಿತ್ತು. ಸರ್ದಾರರು ಅಲ್ಲಿಯ ಭಾಷಣಗಳಲ್ಲಿ ಪಾಕಿಸ್ತಾನ ಹೈದರಾಬಾದಿಗೆ ಕೊಟ್ಟ ಕೆಲವು ಸ್ಪಷ್ಟ ಎಚ್ಚರಿಕೆಗಳು ಹಾಗೂ ಭಾರತದ ಶಕ್ತಿಯ ಕುರಿತು ಹಿಂದೀಯರಿಗಿತ್ತ ಆಶ್ವಾಸನೆಗಳು, ಎಲ್ಲಾ ಕಡೆಗಳ ಎಲ್ಲಾ ವಿಧದ ಮಬ್ಬನ್ನು ಒಮ್ಮೆ ಚದರಿಸಿ ಬಿಟ್ಟಿವೆ; ಬೇರಿಬೇರೆಡೆಗಳ ದುರಹಂಕಾರ, ತಪ್ಪು ಕಲ್ಪನೆ, ಸಂದೇಹ, ಶಂಕೆಗಳ ಸರ್ವ ಪರದೆಗಳನ್ನು ಹರಿದುಹಾಕಿ ನಿಜಸ್ಥಿತಿಯನ್ನೂ ಭದ್ರ ಭವಿಷ್ಯವನ್ನೂ ತೋರಿಸಿ ಕೊಟ್ಟಿವೆ. ಸರ್ದಾರರನ್ನು ಸ್ವಾಗತಿಸಲು ಧ್ರೋಲ್, ರಾಜಕೋಟ, ಕೋಟಾಡಾ, ಮತ್ತಿತರ ಕಾಥಿಯಾವಾಡ ರಾಜರುಗಳು ವಿಮಾನ ನಿಲ್ದಾಣದಲ್ಲೇ ಕಾದಿದ್ದರು. ಗುಜರಾಥಿನ 'ಅನಭಿಷಿಕ್ತ ರಾಜ'ನೆಂದು ಕಾಂಗ್ರೆಸ್ ಹೋರಾಟ ಕಾಲದಲ್ಲಾದರೂ ಗೌರವಿಸಲ್ಪಡುತ್ತಿದ್ದ ಸರ್ದಾರ್ ವಲ್ಲಭಭಾಯಿಗಳು ಕಾಥಿಯಾವಾಡಕ್ಕಿತ್ತ ಭೇಟಿಯಲ್ಲಿ ಒಂಭತ್ತು ವರ್ಷ ನಂತರದ ಅಪೂರ್ವತೆಯಿದ್ದುದರಿಂದಲೂ, ಅವರಾಗಮನದ ಕಾರಣದ ಮಹತ್ವದಿಂದಾಗಿಯೂ ಇಡೀ ರಾಜಕೋಟದ ಜನಸಮುದ್ರವು ಅವರನ್ನು ಬರಮಾಡಿಕೊಳ್ಳಲು ಉಕ್ಕಿ ಹರಿದಿದ್ದಿತು. ಅಲ್ಲಿ ಅವರಿತ್ತ ಭಾಷಣವು ಸದಾ ಕಾಲ ಮಾರ್ಗದರ್ಶಿಸುವಂತಹದಿದೆ.

'ಪಾಕಿಸ್ತಾನವು ತಿಳಿದಿರಲಿ!'

'ನಾವು ದೇಶವಿಭಜನೆಗೊಪ್ಪಿಗೆಕೊಡುವಾಗ ಸಹೋದರರೊಳಗಿನ ಒಂದು ಜಗಳವು ಇತ್ಯರ್ಥಗೊಳ್ಳುವದೆಂದು ನಿರೀಕ್ಷಿಸಿಯೇ ಹಾಗೆ ಮಾಡಿದ್ದೆವು. ಒಂದು ಅವಿಭಕ್ತ ಕುಟುಂಬದಲ್ಲಿ ಧಿಮಾಕುಳ್ಳ ಓರ್ವ ಸಹೋದರನು ಬೇಡಿದ್ದನ್ನು ಕೊಟ್ಟು, ನಾವು ನಮ್ಮಿಬ್ಬರೊಳಗೆ ಶಾಂತಿಯನ್ನೂ ಸರ್ವರ ಅಭಿವೃದ್ಧಿಯನ್ನೂ ಸಾಧಿಸುವೆವೆಂದು ಬಗೆದಿದ್ದೆವು. ಆದರೆ ಬೆನ್ನಲ್ಲೇ ಪಂಜಾಬು ಗಲಭೆಗಳೆದ್ದುವು. ಆದರೂ ಪಾಕಿಸ್ತಾನದೊಂದಿಗೆ ಸಹಜ ಹೊಂದಿಕೆಯುಳ್ಳ ಸಂಸ್ಥಾನಗಳೊಡನಾಗುವ ಪಾಕಿಸ್ತಾನದ ಸಂಬಂಧ ಪಥದಲ್ಲಿ ಯಾವ ಕಂಟಕವನ್ನೂ ತುರುಕಬಾರದೆಂದು ನಾವು ವಿಶೇಷ ಜಾಗ್ರತೆ ವಹಿಸಿದ್ದೆವು. ಅವರ ಹಕ್ಕಿನ ಯಾವ ರಾಜ್ಯವನ್ನೂ ನಮ್ಮ ಬಲೆಯೊಳಗೆ ಹಾಕಿಕೊಳ್ಳಲು ನಾವು ಪ್ರಯತ್ನಿಸಿದ್ದಿಲ್ಲ. ಆದರೆ ತಮಗೆ ಸಾಧ್ಯವಿದ್ದಷ್ಟು ಮತ್ತು ಅನುಕೂಲ ದೊರೆತಾಗಲೆಲ್ಲಾ ನಮ್ಮನ್ನು ತೊಂದರೆಗೀಡುಮಾಡಬೇಕೆಂಬುದೊಂದನ್ನೇ ಆದಿಯಿಂದಿದುವರೆಗೂ ತಮ್ಮ ಉದ್ಯೋಗವಾಗಿ ಮಾಡಿಕೊಂಡವರು ಅವರೇ. ಪ್ರಥಮತಃ ಪಾಕಿಸ್ತಾನದ ಸಿತಲಾಟ ರಾಂಪುರದಲ್ಲಿ ಕಂಡು ಬಂತು. ನಾವಾ ಆಹ್ವಾನವನ್ನು ದೃಢ ಬುದ್ಧಿಯಿಂದ ಅಂಗೀಕರಿಸಿದೊಡನೆ ಪ್ರತಿಭಟನೆ ಅಡಗಿಹೋಯಿತು. ಆ ವೇಳೆ ಜುನಾಗಾಡನ್ನವರು ತಮ್ಮ ತಾಂಡವನೃತ್ಯದ ಕಣವಾಗಿ ಆರಿಸಿಕೊಂಡರು. ನಾವವರನ್ನು ಎಚ್ಚರಿಸಿ ನೋಡಿದೆವು; ಬೇಡಿ ನೋಡಿದೆವು; ಕಾರಣಯುಕ್ತವಾದಹೂಡಿ ನೋಡಿದೆವು. ಆದರೂ ಅವರ ದುರಹಂಕಾರದ ಮೊನೆ ಕುಂಡಾಗಲೊಲ್ಲದು. ನಮ್ಮ ಹಾಗೂ ನಮ್ಮೊಡನೆ ಸೇರಿರುವ ಸಂಸ್ಥಾನಗಳ ಮೇಲೆ ಇದರಿಂದಾಗುವ ಪರಿಣಾಮದ ಕಡೆಗೆ ನಾವು ಕಣ್ಣು ಮುಚ್ಚಿಕೊಂಡಿರಲು ಸಾಧ್ಯವಿರಲಿಲ್ಲ. ಅದ್ದರಿಂದಲೇ ನಾವಿಲ್ಲಿ ಇಂದಿನ ಕಾರ್ಯ ಕೈಕೊಂಡೆವು." ಎನ್ನುತ್ತಾ ಸರ್ದಾರರು ಜುನಾಗಾಢ ಪಾಕಿಸ್ತಾನದೊಡನೆ ಸಹಾಯ ಯಾಚಿಸಿ, ಕೊನೆಯ ಸೂಚನೆಯನ್ನೂ ಕೊಟ್ಟದ್ದಿತೆಂದೂ, ಅದೇನುಮಾಡುವದೋ ನೋಡೋಣವೆಂದು 24ಘಂಟೆ ಕಾದು ನಂತರವೇ ತಾವು ಸೇನೆ ಹೊಗಿಸಿದುದೆಂದೂ ಸ್ಪಷ್ಟಪಡಿಸಿದರು. ಪಾಕಿಸ್ತಾನದ ಆಕ್ಷೇಪಗಳಲ್ಲೂ ಜುನಗಾಡ್ ದಿವಾನರ ಕೊನೆಯ ಸಂದಿಗ್ಧ ವಾಣಿಗಳಲ್ಲೂ ಇರುವ ಅಸಂಬದ್ಧತೆಗಳನ್ನು ಖಂಡಿಸಿ "ಕಾಶ್ಮೀರದಲ್ಲಿ ಪಾಕಿಸ್ತಾನ ಮಾಡಿದ ದುಷ್ಕೃತ್ಯಗಳು ಒಂದು ವಿದೇಶೀ ರಾಷ್ಟ್ರವು ತನ್ನ ನೆರೆರಾಷ್ಟ್ರವೊಂದರ ಮೇಲೆ ಮಾಡಬಹುದಾದ ಪರಮಾವಧಿ ಕ್ರೂರ ಹಾಗೂ ಅತ್ಯಂತ ಹೇಯ ವರ್ತನೆ"ಯೆಂದರು. ಕೊನೆಗೆ ಹೈದರಾಬಾದಿಗೆ ಸ್ಪಷ್ಟ ಎಚ್ಚರಿಕೆ ಕೊಟ್ಟು "ಹೈದರಾಬಾದು ಈ ಕಾಲದ ಗೋಡೆಗಾದೆಗಳ ಕಡೆಗೆ ಕುರುಡಾಗಿಯೇ ಇದ್ದಲ್ಲಿ, ಅದಕ್ಕೂ ಜುನಗಾಡಿನ ಗತಿಯೇ ಕಾದಿದೆ!" ಎಂದರು.

'ಒಂದೇ ಬಾರಿ ಇದಿರಿಸಬಲ್ಲೆವು!'

ಸಹೋದರರಂತೆ ಭಾರತದಲ್ಲಿರಬಲ್ಲ ಮುಸಲ್ಮಾನರಿಗೆ ಸುಸ್ವಾಗತವಿದೆಯೆನ್ನುತ್ತಾ, ಪೂರ್ತಿ ನಂಬಿಕೆಯಿಲ್ಲದವರು ತಮ್ಮ ನಂಬಿಕೆಯ ಆ ರಾಷ್ಟ್ರಕ್ಕೇನೇ ಹೋಗತಕ್ಕದ್ದೆಂದು ಒತ್ತಿಹೇಳಿದರು. ಅಂಥವರು ಜುನಾಗಡಿನ ನವಾಬರು ಹೋದ ಹಾದಿಯಲ್ಲೇ ಹೋಗಿ ಬಿಡಲಿ, ಎಂದರು. ಗಾಂಧೀಜಿಯ ಅಹಿಂಸಾತತ್ವವನ್ನು ಹಿಂದುಗಳು ಅನುಕರಿಸಬೇಕೆಂದು ಹೇಳಿ "ಆದರೆ ಭೀತಿಗೊಂದಲಕ್ಕೀಡಾಗಬಾರದು. ನಾವು ಸಾಯಬೇಕಾಗಿ ಬಂದಲ್ಲಿ ಧೀರ ಸಾವನ್ನೇ ಹೊಂದಬೇಕು. ನಾವು ಮಾನುಷತ್ವವುಳ್ಳ ಮನುಷ್ಯರಾಗಿದ್ದುಕೊಂಡು ಅಳುತ್ತ ಕುತ್ತಾ ಸಾಯಕೂಡದು" ಎಂದರು. ಪಾಕಿಸ್ತಾನಕ್ಕೆ ಸುಸ್ಪಷ್ಟ ಎಚ್ಚರಿಕೆ ಕೊಡುತ್ತಾ "ಭಾರತವು ಸಂಕಷ್ಟದಲ್ಲಿದೆಯೆಂದೂ ಸಂಸ್ಥಾನಗಳಲ್ಲಿವಿಶೇಷ ತೊಂದರೆಗಳನ್ನು ನಿರ್ಮಿಸಿದಲ್ಲಿ ಸ್ಥಿತಿ ಮತ್ತಷ್ಟು ಕೆಡುವುದೆಂದೂ ಕಲ್ಪಿಸಿ ಕೊಂಡಿರುವುದೇ ಪ್ರಾಯಶಃ ಪಾಕಿಸ್ತಾನದ ಇಂತಹ ಕೃತ್ಯಗಳಿಗೆ ಹೇತು. ಆದರೆ ನನ್ನ ಆಶ್ವಾಸನೆಯಿದೆ-ನಮ್ಮ ಪಾದದಡಿಯಲ್ಲಿ ಹುಲ್ಲು ಬೆಳೆಯಲು ನಾವೆಂದಿಗೂ ಬಿಡಲಾರೆವು. ಇವೆಲ್ಲಾ ತೊಂದರೆಗಳೂ ಒಟ್ಟಾಗಿ ಏಕಕಾಲದಲ್ಲಿ ನಮ್ಮ ದಿರಿಸಿದ ಸಂದರ್ಭದಲ್ಲೂ ಅವೆಲ್ಲವನ್ನೂ ಒಮ್ಮೆಗೇ ಇದಿರಿಸಿ ನಿಲ್ಲಲಾಗುವ ಶಕ್ತಿ ಭಂಡಾರವು ನಮ್ಮಲ್ಲಿದೆ, ನಮ್ಮನ್ನು ಕೆಣಕುವಾತುರ ಅವರಲ್ಲಿದ್ದರೆ ನಾವು ಸಿದ್ಧರಿದ್ದೇವೆ". ಎಂದು ಕಂಠೋಕ್ತವಾಗಿ ಸಾರಿ ಹೇಳಿ ಪಾಕಿಸ್ತಾನದ ಕುರಿತು ತನಗಾವದ್ವೇಷವೂ ಇಲ್ಲವೆಂದೂ ಅದು ತನ್ನ ಮಟ್ಟಿಗೆ ತಾನು ಸುಕ್ಷೇಮದಲ್ಲಿದ್ದರಾಯಿತೆಂಬುದೇ ತನ್ನ ಬಯಕೆಯೆಂದೂ ಸ್ಪಷ್ಟಪಡಿಸಿದರು.

ಹೈದರಾಬಾದ್ ಆಟ

ಹೈದರಾಬಾದಿನ ಸಂಧಾನ ಸಮಿತಿಯು ಡೆಲ್ಲಿಯ ತನ್ನ 'ಸಂಧೀಸೇವನ'ವನ್ನಿನ್ನೂ ಮುಗಿಸಿಕೊಂಡಿಲ್ಲ. ಆದರೆ ಜುನಾಗಾಡಿನಲ್ಲಿ ಸರ್ದಾರ್ ಪಟೇಲರೆಸೆದ ಈ ಕೆಳಗಿನ ವಾಗ್ಬಾಣಗಳು ಹೈದರಾಬಾದ್ ಅಧಿಕಾರಿಗಳ ಕರುಳಿಗೆ ನಾಟಿವೆ. "ಹೈದರಾಬಾದಿನ 'ಇತ್ತೆಹಾದ್-ಉಲ್-ಮುಸ್ಲಿಮೀನ್' ಸಂಸ್ಥೆಯು ಜುನಾಗಾಡ್ ನವಾಬರಿಗೆ ದುರುಪದೇಶ ಕೊಟ್ಟ ಸಲಹೆಗಾರರ ನಾಟಕವನ್ನೇ ಆಡುತ್ತಿದೆ. ಹೈದರಾಬಾದ್ ತಿಳಿದಿರಲಿ, ಅದು ಹಿಂದುಸ್ಥಾನದ ಉದರ ಪ್ರದೇಶದಲ್ಲಿದೆ. ದೇಹದಿಂದ ಪ್ರತ್ಯೇಕಿಸಲ್ಪಟ್ಟರೆ ಈ ಹೊಟ್ಟೆ ಉಸಿರಾಡುವುದೆಂದರೆ ಹೇಗೆ? ಗೋವಾ ಅಥವಾ ಮಸಲಿಪಟ್ಟಮಿನಂತಹ ಒಂದು ಕರಾವಳಿ ನಿಲ್ದಾಣಕ್ಕಾಗಿ ನಿಜಾಮರು ಒಳಗಿಂದೊಳಗೆ ಹಂಚಿಕೆ ಹೂಡಿರುವ ಅಪಹಾಸ್ಯಕರ ವಾರ್ತೆ ಬಂದಿದೆ. ಅವೇನೂ ನಿಜಾಮರ ಪಿತ್ರಾರ್ಜಿತಗಳಲ್ಲ. ಅತ್ತಿತ್ತ ಹಾಕಲಾಗುವ ಚರ ಸೊತ್ತುಗಳಲ್ಲ. ಹೈದರಾಬಾದು ಉಳಿಯಬೇಕಾದರೆ ಅದು ತನ್ನ ಧೋರಣೆ ಮತ್ತು ವರ್ತನೆಗಳಲ್ಲಿ ತೀವ್ರ ಬದಲಾವಣೆ ಮಾಡಿಕೊಳ್ಳಬೇಕು. ಹುರುಳುಳ್ಳವರ ಸ್ವರ ಮಾತ್ರ ಈ ಕಾಲದಲ್ಲಿ ಕೇಳಿ ಬಂದೀತ.; ಹೈದರಾಬಾದಿನ ಮಾತು ಮನ್ನಿಸಲ್ಪಡಬೇಕಾದರೆ ಅದು ಜನಮತದಂತೆ ವರ್ತಿಸುವ ಧೈರ್ಯ ಮತ್ತೆದೆಗಾರಿಕೆ ಪ್ರದರ್ಶಿಸಬೇಕು. ಇಲ್ಲವಾದರೆ ಜನಾಭಿಮತವನ್ನು ಕಡೆಗಣಿಸಲು ನೋಡಿ ತಮ್ಮ ಅಸ್ತಿತ್ವಕ್ಕೇನೇ ಅರ್ಧ ಚಂದ್ರ ಪ್ರಯೋಗ ಮಾಡಿಸಿಕೊಂಡ ಮಿಕ್ಕ ರಾಜರ ಗತಿಯೇ ಹೈದರಾಬಾದಿಗೂ ಕಾದಿದೆ". ಇಂತಹ ಬಿಸಿ ಮಾತನ್ನು ಸಂಧಾನಾತುರ ಹೈದರಾಬಾದಿನ ಕುರಿತಾಡಿದುದು ಮಹದನ್ಯಾಯವೆಂದು, ಅಲ್ಲಿಯ ಪ್ರತಿನಿಧಿ ನಾಯಕ ನವಾಬ್ ಮೊಯಿನ್ ನವಾಜ್ ಜುಂಗ್ ಬಹದೂರರು ಸಂತಾಪ ಪ್ರದರ್ಶಿಸಿದ್ದಾರೆ.

ಹೈದರಾಬಾದಿನ ಹಿಂದೂ ನಿರಾಶ್ರಿತರು ಮದ್ರಾಸ್ ಪ್ರಾಂತ್ಯದ ಗಡಿಯ, ಕೃಷ್ಣಾ ಮೊದಲಾದ ಜಿಲ್ಲೆಗಳಿಗೆ ಸಾವಿರ ಸಂಖ್ಯೆಯಿಂದೋಡಿಬರುತ್ತಿದ್ದು ಗಲಭೆಗಳೆದ್ದಿವೆ. ಮದ್ರಾಸ್ ಮಂತ್ರಿಗಳಾದ ಕಾಳ ವೆಂಕಟರಾವ್, ಪ್ರಧಾನಿ ಓಮಂದೂರು, ಸೀತಾರಾಮ ರೆಡ್ಡಿಗಳು ಆ ಸರಹದ್ದುಗಳನ್ನು ಸಂದರ್ಶಿಸಿ ತಕ್ಕ ವ್ಯವಸ್ಥೆ ಮಾಡಿ ಬಂದಿದ್ದಾರಲ್ಲದೆ, ತನ್ನ ಗಡಿಯಲ್ಲಿ ಪ್ರಬಲ ಪಹರೆ ಯಿಡುವ ಸಿದ್ಧತೆಯನ್ನು ಮದ್ರಾಸ್ ಸರಕಾರ ನಡೆಸಿದೆ. ಮದ್ರಾಸ್ ಗಡಿಯೊತ್ತಿನ ಎಂಟು ಹಳ್ಳಿಗಳ ಹೈದರಾಬಾದ್ ಅಧಿಕಾರಿಗಳು ಬಿಟ್ಟೋಡಿ, ಅಲ್ಲಿ ಅರಾಜಕತೆ ವ್ಯಾಪಿಸಿ, ಜನರು ತಮ್ಮ 'ಸ್ವತಂತ್ರ ಸರಕಾರ' ರಚಿಸಿಕೊಂಡಿದ್ದಾರೆಂದು ತಿಳಿದುಬರುತ್ತದೆ. ಜುನಾಗಾಡಿನಲ್ಲಿ ಮಾಡಿದಂತೆಯೇ ಹೈದರಾಬಾದಿನಲ್ಲೂ ಸ್ವಾಮೀ ಸಹಜಾನಂದ ತೀರ್ಥರ ನಾಯಕತ್ವದಲ್ಲಿ ಪ್ರತಿಸರಕಾರ ರಚಿಸುವ ಸಿದ್ಧತೆಗಳಾಗಿವೆ. ಹಿಂದುಸ್ಥಾನ್ ಕೆಂಪು ಸೇನೆಯ ಸೇನಾನಿ ಮಗನ ಲಾಲ ಬಗ್ಡಿಯವರು ಈ ಪ್ರತಿ ಸರಕಾರದ ಸೇನಾನಿಯಾಗಿ ದಾಳಿ ನಡೆಸುವ ಸಂಭವವಿದೆ.

(೬ನೇ ಪುಟ ನೋಡಿರಿ)

The Canara Banking Corporation Limited.
(Incorporated in British India).
Estd: 1906.
Head Office: UDIPI, S. India.

ANNOUNCEMENT.

A branch of the BANK will be opened at High Road, TRICHUR. (Cochin State) on 28th November, 1947.

ಗುರುವಾರ, ಉಡುಪಿ, ೨೦-೧೧-'೪೭

ಕಾಸರಗೋಡಿನ ಸಾಹಿತ್ಯ ಸಮ್ಮೇಲನ

೨೯ನೇ ಕರ್ನಾಟಕ ಸಾಹಿತ್ಯ ಸಮ್ಮೇಲನವು ಬರುವ ದಶಂಬರ್ ಅಂತ್ಯದಲ್ಲಿ-ತಾ. ೨೮, ೨೯, ೩೦ರಲ್ಲಿ-ಕಾಸರಗೋಡಿನಲ್ಲಿ ನೆರೆಯಲಿದೆ. ಸರ್ವ ಕನ್ನಡಿಗರ ಮಟ್ಟಿಗಿದು ಪದ್ಧತಿಯ ವಾರ್ಷಿಕೋತ್ಸವವಾಗಿದ್ದರೆ, ದಕ್ಷಿಣಕನ್ನಡಿಗರ ಪಾಲಿಗೆ ಮೈಮೇಲೆ ಬಿದ್ದ ಹೊಣೆಗಾರಿಕೆಯೊಂದು ಇಲ್ಲಿ ವಿಶೇಷವಿದೆ. ಆದ್ದರಿಂದ ಕಾಸರಗೋಡಿನ ಸಮ್ಮೇಲನದ ವಿಜಯದಲ್ಲೇ ಅಖಿಲ ಕರ್ನಾಟಕದ ಹಿಗ್ಗಳಿಕೆಯ ಹಾಗೂ ವಿಶೇಷತಃ ದಕ್ಷಿಣ ಕನ್ನಡಿಗರ ಹೆಗ್ಗುಣಗಳ ಪ್ರಕಾಶವಾಗಬೇಕು. ಹಾಗಾಗುವಂತೆ ಮಾಡುವ ಕರ್ತವ್ಯ ಭಾರವು ಇಲ್ಲಿಯವರ ಮೇಲಿದೆ, ಎಂಬುದನ್ನು ಮರೆಯಬಾರದು.

ಈ ಬಾರಿಯ ಸಾಹಿತ್ಯ ಸಮ್ಮೇಲನವನ್ನು ಕಾಸರಗೋಡಿನಲ್ಲಿ ಜರಗಿಸುವ ಮುಖ್ಯ ಕಾರಣವೊಂದಿದೆ. 'ಐಕ್ಯ ಕೇರಳ'ದವರ ಕಣ್ಣು ಗೋಕರ್ಣದ ವರೆಗೂ ಇದ್ದರೆ, ಕಾಲು ಕಾಸರಗೋಡಿನ ವರೆಗೆ ಬಂದಿದೆ. ಈ ದಿನ ಬೇರೆಬೇರೆ ಕಡೆಗಳಲ್ಲಿ ನಡೆದಿರುವ ವಿವಿಧರೀತಿಯ 'ಪರಾಕ್ರಮಣ'ದ ಪಂಕ್ತಿಗೇನೇ ಸೇರತಕ್ಕ ಧಾಳಿಯಿದು. ಇದನ್ನಿದಿರಿಸಬೇಕಾದುದು ಕನ್ನಡಿಗರ ಅಸ್ತಿತ್ವಕ್ಕೇನೇ ಅಗತ್ಯ. ಪಶ್ಚಿಮ ಕರಾವಳಿಯೆಲ್ಲಾ ತಮ್ಮದೆಂಬ ಕೇರಳೀಯರ ಸ್ವಾರ್ಥದೃಷ್ಟಿಯನ್ನು ಕನ್ನಡಿಗರ ಎಚ್ಚರಿಕೇ ಕಣ್ಣು ಇದಿರಿಸದೆ ಬಿಟ್ಟಿಲ್ಲ; ಅಂತೆಯೇ ಕಾಸರಗೋಡಿನತ್ತ ಅವರು ಚಾಚುತ್ತಿರುವ ಕಾಲಿಗೂ ಅಡ್ಡಗಾಲಿಡಬೇಕೆಂಬ ಉದ್ದೇಶದಿಂದಲೇ ಈ ಬಾರಿಯ ಸಾಹಿತ್ಯ ಸಮ್ಮೇಲನವನ್ನು ಕಾಸರಗೋಡಿಗೆ ಕರೆದುದಾಗಿದೆ. ಆದ್ದರಿಂದ ಈ ಬಾರಿಯ ಸಾಹಿತ್ಯ ಸಮ್ಮೇಲನದಲ್ಲಿ ಪದ್ಧತಿಯ ಸಂಭ್ರಮವಷ್ಟೇ ಕಂಡುಬಂದರೆ ಸಾಲದು; ಉದ್ದೇಶದ ಸಾಧನೆಯೂ ಆಗಬೇಕು. ಕಾಶ್ಮೀರದ ಬರಮುಲಾದಲ್ಲಿ ಹಿಂದೀ ಸೇನೆ ಧೇರಿ ಹೊಡೆದುದು ಪದ್ಧತಿಯ 'ಕವಾಯಿತು' ಪ್ರದರ್ಶನಕ್ಕಲ್ಲ; ಕಾಸರಗೋಡಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಲನ ಸೇರುವುದೂ ವಾಡಿಕೆಯ ಸಂಭ್ರಮೋಪಚಾರಗಳಿಗಲ್ಲ—ಸಾಧಿಸಬೇಕಾದ ಕೆಲಸವಿದೆ.

ಸಾಹಿತ್ಯ ಸಮ್ಮೇಲನದ ಕಾರ್ಯಕ್ಷೇತ್ರದ ಮಿತಿಯನ್ನು ನಾವು ಮರೆತಿಲ್ಲ. ಪರಕೀಯರಿಂದಾಗುತ್ತಿರುವ ಕನ್ನಡ ನಾಡಿನ ಸರಹದ್ದುಗಳ ಆಕ್ರಮಣಕ್ಕೆ ಸಾಹಿತ್ಯ ಸಂಬಂಧದ ಸಭೆಗಳು ಸರಿಯಾದ ಪ್ರತಿಭಟನೆಯಾಗಬಲ್ಲವೆಂದಾರೂ ಹೇಳಲಾರರು. ಕನ್ನಡ ಸಾಹಿತ್ಯ ಸಮ್ಮೇಲನ, ಏಕೀಕರಣ ಸಭೆಗಳಂತಹವು ಮದ್ರಾಸ್, ಬೊಂಬಾಯಿಯಂತಹ ಪರಊರುಗಳಲ್ಲಿಯೂ ನಡೆದಿದ್ದುವು. 'ಸಮ್ಮೇಲನ'ಕ್ಕೂ 'ಸ್ಥಳಮಿಲನ'ಕ್ಕೂ ವ್ಯತ್ಯಾಸವಿದೆ. ಆದ್ದರಿಂದ ಕಾಸರಗೋಡಿನಲ್ಲಿ ಸಾಹಿತ್ಯ ಸಮ್ಮೇಲನ ಸೇರಿಸಿದ ಮಾತ್ರಕ್ಕೇನೇ ಕನ್ನಡಿಗರು ಈ ಭಾಗದಲ್ಲಿ ಮಾಡಬೇಕಾಗಿರುವ ಕಾರ್ಯ ಮುಗಿಯಿತೆಂದಾರೂ ಭಾವಿಸಿಲ್ಲ. ಇದರಲ್ಲಿರುವುದು ಪ್ರಚಾರ ಮೌಲ್ಯ ಮಾತ್ರ; ಪ್ರಚಾರವೇ ಕಾರ್ಯದ ಮುಂಭಾಗ. ಈ ಕಾಲದಲ್ಲಂತೂ ಈ ಮುಂಭಾಗವೇ ಮುಖ್ಯ ಭಾಗವಾಗಿದೆ, ಎಂಬುದನ್ನು ಮರೆಯಬಾರದು. ಎಂತಹ ವಾದವಿವಾದಗಳು, ಒಳಸಂಚು ಹಂಚಿಕೆಗಳು ನಡೆದರೂ ಇಂತಹ ಪ್ರಶ್ನೆಗಳಿಗೆ ಕೊನೆಯ ತೀರ್ಮಾನಕೊಡತಕ್ಕ ಅಧಿಕಾರಿಗಳು ಸಂಬಂಧಪಟ್ಟ ಕ್ಷೇತ್ರಗಳ ಜನತೆಯೇ. ಈ ಕಾಲದಲ್ಲಿ ಜನಮತವೊಂದೇ ಅಪ್ಪೀಲಿಲ್ಲದ ತೀರ್ಪು. ಆದ್ದರಿಂದ ಜನಮತವನ್ನು ಒಲಿಸುವ ಪ್ರಚಾರಗಳಾಗಬೇಕಾದುದು ಅತಿ ಮುಖ್ಯ. ಸಾಹಿತ್ಯ ಸಮ್ಮೇಲನದಿಂದ ಈ ಕಾರ್ಯವಾಗಬಲ್ಲುದು. ಆದ್ದರಿಂದಲೇ ಕಾಸರಗೋಡಿನ ಸಾಹಿತ್ಯ ಸಮ್ಮೇಲನವು ಪೂರ್ತಿ ಜಯಶೀಲವಾಗುವಂತೆ, ಅತ್ಯಂತ ಪರಿಣಾಮಕಾರಿಯಾಗುವಂತೆ ಪ್ರಯತ್ನಿಸಬೇಕಾದುದು ಕನ್ನಡಿಗರೆಲ್ಲರ ಕರ್ತವ್ಯ.

ಕಾಸರಗೋಡು ಸಮ್ಮೇಲನವು ದಕ್ಷಿಣ ಕನ್ನಡಾ ಜಿಲ್ಲೆಯವರ ಭಾಷಾಭಿಮಾನ, ಸ್ಥಳಾಭಿಮಾನ, ಮತ್ತು ಯೋಗ್ಯತೆಯನ್ನು ಪರೀಕ್ಷಿಸಿ ತೋರಿಸುವ ಒರೆಗಲ್ಲಾಗಲು ಸಾಧ್ಯವಿದೆ. ಇಂದಿನ ಮದ್ರಾಸ್ ಪ್ರಾಂತ್ಯದಂತೆಯೇ ನಾಳಿಯ ಕರ್ನಾಟಕ ಪ್ರಾಂತ್ಯದಲ್ಲೂ ಈ ಜಿಲ್ಲೆಯು ಒಂದು ಮೂಲೆಯಾಗಿಯೇ ಉಳಿಯುವಂತಹದು. ಆದರ ಸ್ಥಾನವಂತಹದು. ಭಾಷೆಯ ಮಟ್ಟಿಗೂ ದಕ್ಷಿಣಕನ್ನಡವು ಭಾಗ್ಯಶಾಲಿಯಲ್ಲ. ಜಿಲ್ಲೆಯ ಬಹು ಭಾಗದವರ ಮನೇ ಮಾತು ಕನ್ನಡವಲ್ಲ, ತುಳು. ಇತರ ಭಾಷೆಗಳ ಗೊಂದಲವೂ ಇದೆ. ಕನ್ನಡ ನಾಡಿನ ಯಾವ ಭಾಗವೂ—ಯಾಕೆ, ಯಾವುದೇ ಭಾಷಾನಾಡು ಪ್ರಾಂತ್ಯವಾದರೂ—ಇಂತಹ ಒಳ ಭಾಷೆಗಳ ಗೊಂದಲದಿಂದ ಪೂರ್ಣ ವಿರಹಿತವಾಗಿರುವುದು ಅಸಂಭವ. ಆದರೆ ದಕ್ಷಿಣಕನ್ನಡದ ಸ್ಥಿತಿಯು ಮಿಕ್ಕೆಡೆಗಳಿಗಿಂತ ಭಿನ್ನವಾದುದು. ಇಲ್ಲಿ ಅಧಿಕೃತ ಭಾಷೆ—ಅಂತರ್ಗತ ಭಾಷೆಗಳು ಅನುಕ್ರಮವಾಗಿರುವ ಬದಲಿಗೆ, ಅಸ್ತವ್ಯಸ್ತವಾಗಿವೆ. ಆದ್ದರಿಂದ ಸುವ್ಯವಸ್ಥೆಯ, ಸಂಘಟನಾ ಕಾರ್ಯಗಳು ಇಲ್ಲಿಯ ಭಾಷಾತಂಗಗಳಲ್ಲೂ ಆಗಬೇಕು. 'ಯಾವುದು ಹೇಗಿದ್ದರೂ ನಾವೇನೋ ಕನ್ನಡನಾಡಿನ ಒಂದು ಭಾಗ'ವೆಂಬ ಮಾತು ನಿಜ. ಆದರೆ 'ಯಾವುದೋ ಹೇಗೋ' ಇರುವ ಎಲ್ಲವನ್ನೂ 'ಇದು—ಹೀಗೆ' ಎಂಬ ಆಕಾರಕ್ಕೆ ತರುವುದು ಅಗತ್ಯ. ಅಂತಹ ಶಕ್ತಿಯೋಗ್ಯತೆಗಳಿಲ್ಲದೆ ಹೋದರೆ ದಕ್ಷಿಣ ಕನ್ನಡಿಗರಿಗೆ ಹೊಸ ಪ್ರಾಂತ್ಯದಲ್ಲಾದರೂ ಯೋಗ್ಯ ಸ್ಥಾನಮಾನಗಳು ದೊರೆಯಲಾರವು. ಆ ಯೋಗ್ಯತೆಗಳನ್ನು ಹೆಚ್ಚಿಸಿಕೊಳ್ಳುವ, ಪ್ರದರ್ಶಿಸಲಾಗುವ ಯಾವ ಸಂದರ್ಭವನ್ನೂ ದಕ್ಷಿಣ ಕನ್ನಡಿಗರು ಕಡೆಗಣಿಸಬಾರದು. ಕಾಸರಗೋಡಿನ ಸಮ್ಮೇಲನವು ಅಂತಹ ಒಂದು ಸುವರ್ಣ ಸಂಧಿ. ಆದ್ದರಿಂದ ಜನ, ಧನ, ಕಾರ್ಯರೂಪೀ ಬೆಂಬಲಗಳನ್ನು ಕೊಟ್ಟು, ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಕಾಸರಗೋಡಿನ ಸಾಹಿತ್ಯ ಸಮ್ಮೇಲನವು ಅತ್ಯಂತ ಯಶಸ್ವಿಯಾಗುವಂತೆ ಮಾಡುವದು ದ. ಕನ್ನಡಿಗರ, ಮತ್ತೆಲ್ಲಾ ಕನ್ನಡಿಗರ ಕರ್ತವ್ಯವೆನ್ನುತ್ತೇವೆ.

(೫ನೇ ಪುಟದಿಂದ).

ತ್ರಿಪುರ-ನೀಲಗಿರಿ

ಪೂರ್ವ ಬಂಗಾಳದಲ್ಲಿದ್ದು ಹಿಂದೀ ಕೇಂದ್ರಕ್ಕೆ ಸೇರಿರುವ ತ್ರಿಪುರ ಸಂಸ್ಥಾನವು ಪಾಕಿಸ್ತಾನಕ್ಕೆ ಸೇರಬೇಕೆಂಬ ಜುಲುಮೆಗಾಗಿ ಕಾಶ್ಮೀರದಂತೆಯೇ ಹೊರಗಡೆಯ ಮುಸ್ಲಿಂ ಪುಂಡರ ತಂಡಗಳು ನುಗ್ಗಿವೆ. ಭಾರತ ಸರಕಾರವು ಈ ಸಂಬಂಧದ ರಕ್ಷಣಾ ಹೊಣೆಯನ್ನು ಒತ್ತಿನ ಅಸ್ಸಾಮು ಸರಕಾರಕ್ಕಿತ್ತಿದೆ. ತ್ರಿಪುರದ ಮಹಾರಾಣೀ ರೀಜೆಂಟರೂ ಪ್ರಧಾನ ಮಂತ್ರಿಗಳೂ ಅಸ್ಸಾಮು ಪ್ರಧಾನಿಗಳೊಡನೆ ಮಾತಾಡಿದುದಲ್ಲದೆ ಡಿಲ್ಲಿಗೂ ಹೋಗಿ ಕೇಂದ್ರಾಧಿಕಾರಿಗಳಿಗೆ ವಿಷಯ ನಿವೇದನೆಮಾಡಿದ್ದಾರೆ. ಹಿಂದೀ ಸೇನೆಗಳು ತ್ರಿಪುರದ ರಕ್ಷಣೆಗೆ ಹೋಗಿವೆ.

ಒರಿಸ್ಸಾದೊತ್ತಿನಲ್ಲಿದ್ದು ಹಿಂದೀ ಕೇಂದ್ರಕ್ಕೆ ಸೇರಿದ್ದ ಮತ್ತೊಂದು ಪುಟ್ಟ ಸಂಸ್ಥಾನ ನೀಲಗಿರಿಯ ಒಳಾಡಳಿತೆಯು ದುರ್ಬಲವಾಗಿ ಅರಾಜಕತೆ ವ್ಯಾಪಿಸಿದ್ದರಿಂದ ಭಾರತ ಸರಕಾರದ ಸೂಚನೆಯಂತೆ ಒರಿಸ್ಸಾ ಸರಕಾರವು ಅದರ ಆಡಳಿತೆಯನ್ನು ವಶಪಡಿಸಿಕೊಂಡಿದೆ. ಮಹಾರಾಜರು ಸಂತೋಷದಿಂದ ಅದನ್ನು ಬಿಟ್ಟುಕೊಟ್ಟು ಕಲ್ಕತ್ತೆಗೆ ಬಂದಿದ್ದಾರೆ.

ಹೀಗೆ ಭಾರತವೊಂದೊಂದೇ ಹೆಜ್ಜೆಯಿಡುವಾಗ ಪಾಕಿಸ್ತಾನವು ಕಾಲು-ನಾಲಿಗೆ ಎರಡೂ ಬಿದ್ದವರಂತೆ ಸ್ತಬ್ಧ ಹಾಗೂ ಮೌನವಾಗಿರುವ ಗುಟ್ಟೇನು?

ಹಿಂದೀ ಮುಸ್ಲೀಮರು.

ಭಾರತ ಕೇಂದ್ರದೊಳಗಿರುವ ಮುಸ್ಲಿಮರಿಗೆ ಕಾಲೋಚಿತ ಮಾರ್ಗದರ್ಶನ ಮಾಡಿಕೊಡಲು ಕಲ್ಕತ್ತದಲ್ಲಿ ಮಿ. ಸುಹ್ರವರ್ದಿಗಳು ಸುಮಾರು 200 ಮುಸ್ಲಿಂ ನಾಯಕರ ಸಮ್ಮೇಲನ ಕರೆದಿದ್ದರು: 'ದ್ವಿರಾಷ್ಟ್ರ ತತ್ವವು ಇಂದು ಮಾಯವಾಗಿದೆ. ನಾವಿನ್ನು ಸಂಪೂರ್ಣವಾಗಿ ಹಿಂದೀ ಕೇಂದ್ರಕ್ಕೆ ವಿಧೇಯರು. ಆದರೆ ನಮ್ಮ ಧರ್ಮ, ಸಂಸ್ಕೃತಿಗಳಿಗೆ ಸಂಪೂರ್ಣ ರಕ್ಷಣೆ ಕೊಡಬೇಕು. ಈಗ ಮುಸ್ಲಿಮರ ಮೇಲೆ ಬಿದ್ದಿರುವ ಆಯುಧ ಬಹಿಷ್ಕಾರ, ಮತ್ತಿತರ ಅಡಚಣೆ ಇತ್ಯಾದಿಗಳು ಹೋಗಬೇಕು; ನಮ್ಮ ವಿಶಿಷ್ಟ ಹಕ್ಕು ಬಾಧ್ಯತೆಗಳನ್ನು ಸಾಧಿಸಿಕೊಳ್ಳುವ ಅಧಿಕಾರ ನಮಗಿರಬೇಕು' ಎಂಬುದೇ ಸುಹ್ರವರ್ದಿ ಭಾಷಣದ ಮತ್ತು ಸಮ್ಮೇಲನ ನಿರ್ಣಯಗಳ ಮುಖ್ಯ ಸಾರ.

ನವಡಿಲ್ಲಿಯಲ್ಲಿ ಮೌಲಾನಾ ಆಜಾದರು ಭಾರತದ ಪ್ರಮುಖ ಮುಸ್ಲಿಮರ ಸಮ್ಮೇಲನ ಕರೆದಿದ್ದರು; ಅಲ್ಲಿಯೂ ಸುಮಾರು 200 ನಾಯಕರು ಹಾಜರಿದ್ದರು: 'ಜಾತೀಯತೆಯನ್ನಾಧರಿಸಿ ಒಂದು ಪಕ್ಷವೆಂಬುದಿರಲೇಕೂಡದು, ಸರ್ವಸುಖ ಸಾಧನೆಯೇ ಧ್ಯೇಯವಾಗಿರಬೇಕು. ಭಾರತದ ಮುಸ್ಲಿಂ ಲೀಗು ಬರ್ಖಾಸ್ತಾಗಬೇಕು. ಮುಸ್ಲಿಮರೆಲ್ಲಾ ಕಾಂಗ್ರೆಸಿಗೆ ಸೇರಬೇಕು' ಎಂಬುದೇ ಮೌಲಾನಾ ಅಜಾದರ ಭಾಷಣ ಮತ್ತು ಆ ಸಮ್ಮೇಲನದ ನಿರ್ಣಯಗಳ ಸಾರ.

ಇತ್ತ, ಒಳಗಡೆಯ ಹಲವು ಮುಸಲ್ಮಾನರು ಪಾಕಿಸ್ತಾನದೊಂದಿಗೆ ಒಳಸಂಚು ನಡಿಸುವ ಗುಟ್ಟುಗಳು ಬಯಲಾಗಿವೆ. ಸಂಯುಕ್ತ ಪ್ರಾಂತ್ಯದಲ್ಲಿ 'ಭಾರತ ವಿಧೇಯತೆ'ಯ ಪ್ರತಿಜ್ಞೆ ತೊಡದುದಕ್ಕಾಗಿ ಮತ್ತು ತ್ರಿವರ್ಣ ಧ್ವಜಾರೋಹಣ ಮಾಡಲು ತಪ್ಪಿದ್ದಕ್ಕಾಗಿ ಇಬ್ಬರು ಪ್ರಮುಖ ಮುಸ್ಲಿಮ್ ಅಧಿಕಾರಿಗಳು ಡಿಸ್‌ಮಿಸ್ ಮಾಡಲ್ಪಟ್ಟರು. ಹಿಂದೆ ಸಂಯುಕ್ತ ಪ್ರಾಂತ್ಯದ ಲೀಗ್ ನಾಯಕರಾಗಿದ್ದು ಪಾಕಿಸ್ತಾನದೊಂದಿಗೆ ಒಳಸಂಚು ನಡಿಸಿ ಕೊನೆಗೆ ಬೇಟೆಯಾಡಲ್ಪಡುವ ಭೀತಿಯಿಂದ ತಲೆ ತಪ್ಪಿಸಿಕೊಂಡು ಪಾಕಿಸ್ತಾನಕ್ಕೋಡಿದ್ದ ಚೌಧರಿ ಖಲೀಕುಜ್ಜಮಾನರ ತಮ್ಮ ಮಿ. ಮುಸ್ತಿಕುಜ್ಜಮಾನರು ಮೊನ್ನೆ ವಿಮಾನ ಹತ್ತಿ ಕರಾಚಿಗೆ ಹೋಗುತ್ತಿದ್ದರು. ಆ ವಿಮಾನವು ಲಕ್ನೋ ನಿಲ್ದಾಣದಲ್ಲೊಂದು ಘಂಟೆ ನಿಂತಾಗ ನಡೆದ ಜಡ್ತಿಯಲ್ಲಿ ಈ ಸಾಹೇಬರು ಪಾಕಿಸ್ತಾನಕ್ಕೊಯ್ಯುತ್ತಿದ್ದ ಗುಪ್ತ ಒಳಸಂಚಿನ ರಿಕಾರ್ಡುಗಳು ದೊರೆತಿವೆ. ಭಾರತ ಕೇಂದ್ರದ ಭಕ್ತಿ ಪ್ರತಿಜ್ಞೆ ವಹಿಸಿದ್ದ ಹಲವು ಮುಸ್ಲಿಂ ಅಧಿಕಾರಿಗಳು, ಇಲ್ಲಿಯ ಎಲ್ಲಾ ಗುಟ್ಟುಗಳನ್ನೂ ಸಂಗ್ರಹಿಸಿ ಯೋಗ್ಯಕಾಲದಲ್ಲಿ ಪಾಕಿಸ್ತಾನಕ್ಕೆ ಬಂದುಬಿಡುವೆವೆಂದು ಬರೆದಿದ್ದ ಪತ್ರಗಳೂ ಇತರ ಒಳಸಂಚು ದಾಖಲೆಗಳೂ ಅವುಗಳಲ್ಲಿದ್ದುವಂತೆ. ಇದು ಎಲ್ಲಾ ಪ್ರಾಂತೀಕ ಸರಕಾರಗಳ ಕಣ್ಣನ್ನು ತೆರೆಯಿಸಬೇಕಾದ ವಿಷಯ. ಮುಸ್ಲಿಂ ಮನೆಗಳಲ್ಲಿ ಬೇಕಾಯಿದೇಶೀರ ಶಸ್ತ್ರೋಪಕರಣಗಳಿದ್ದ ವಾರ್ತೆಗಳೂ ಬೇರೆ ಬೇರೆ ಕಡೆಗಳ ಶೋಧಗಳಿಂದ ಬರುತ್ತಿವೆ.

ಹಿಂದೀ ಕೇಂದ್ರದಲ್ಲಿರುವ ಮುಸ್ಲಿಮರ ಸಂಖ್ಯೆಯೀಗ ಶೇ. ೧೦ಕ್ಕಿಳಿದಿದೆ; ಇನ್ನೂ ಇಳಿಯಬಹುದು. ಆದರೂ ಅವರ ಧೋರಣೆ ಹೀಗಿದ್ದರೆ ಅಪಾಯ ತಪ್ಪೀತೆ?

ಅಧ್ಯಕ್ಷ ಕೃಪಲಾನಿಗಳ ರಾಜೀನಾಮೆ

— ಬಾಬು ರಾಜೇಂದ್ರ ಪ್ರಸಾದ್ ಅಧ್ಯಕ್ಷ —

ನವದಿಲ್ಲಿಯಲ್ಲಿ ಮೊದಲ ದಿನಗಳಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಗಳು ನಡೆದು ಇದೇ ತಾ. 15ರಲ್ಲಿ ಅಖಿಲಭಾರತ ಕಾಂಗ್ರೆಸ್ ಸಮಿತಿ ಸಭೆಯಾರಂಭಿಸಿತು. ಸದಸ್ಯರು ಅಧಿಕ ಸಂಖ್ಯೆಯಲ್ಲಿ ಹಾಜರಿದ್ದರು. ಪತ್ರಿಕಾ ಪ್ರತಿನಿಧಿಗಳಿಗೂ ಪ್ರೇಕ್ಷಕರಿಗೂ ಪ್ರವೇಶವಿರದ ಗುಪ್ತಾಧಿವೇಶನವದು. ಪ್ರಥಮತಃ ಅಧ್ಯಕ್ಷ ಆಚಾರ್ಯ ಕೃಪಲಾನಿಗಳು ಪ್ರಾಸ್ತಾವಿಕ ಭಾಷಣಮಾಡುತ್ತಾ ರಾಷ್ಟ್ರದ ಸದ್ಯ ಸ್ಥಿತಿಗತಿಗಳ ವಿಮರ್ಶೆ ಮಾಡಿದರು. 'ಪಾಕಿಸ್ತಾನದ ವಿರುದ್ಧ ದೃಢ ಕಾರ್ಯಾಚರಣೆ ಕೈಕೊಳ್ಳಬೇಕು; ನಾಗರಿಕರ ಸೇನೆ ರಚಿಸಬೇಕು; ರಾಷ್ಟ್ರವು ದಮನಪದ್ಧತಿಯನ್ನು ತ್ಯಜಿಸಿ ಸಂಘಟಿತ ಶಕ್ತಿಯನ್ನು ಬೆಳೆಯಿಸಬೇಕು' ಇತ್ಯಾದಿ ಸೂಚನೆಗಳು ಅಧ್ಯಕ್ಷ ಭಾಷಣದಲ್ಲಿದ್ದುವಲ್ಲದೆ, ಕೇಂದ್ರದ ನೆಹರೂ ಸರಕಾರ ಮತ್ತು ಕಾಂಗ್ರೆಸ್ ಸಂಸ್ಥೆಯೊಳಗೆ ಸುಗಮ ಸಂಬಂಧವಿಲ್ಲದುದನ್ನು ಅವರು ಸ್ಪಷ್ಟಪಡಿಸಿದ್ದರು 'ಕೇಂದ್ರ ಸರಕಾರವು ತನ್ನ ಮುಖ್ಯ ಧೋರಣೆಗಳ ಕುರಿತಾದರೂ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಅಭಿಪ್ರಾಯ ಪಡೆದು ವರ್ತಿಸುತ್ತಿಲ್ಲ'ವೆಂಬ ಮುಖ್ಯಾಕ್ಷೇಪದೊಡನೆ ಅಧ್ಯಕ್ಷತನಕ್ಕೆ ತಾನಿತ್ತಿರುವ ರಾಜೀನಾಮೆಯನ್ನು ಅಂಗೀಕರಿಸಬೇಕೆಂದು ಕೇಳಿಕೊಂಡರು.

ಗಾಂಧೀ ಬೋಧೆ

ಸಭೆಯಲ್ಲಿ ಹಾಜರಿದ್ದ ಗಾಂಧಿಜೀ ಅಧ್ಯಕ್ಷರ ವಾದವನ್ನು ಸಮರ್ಥಿಸಿ, ಸಭೆಯು ಅವರ ರಾಜೀನಾಮೆಯಂಗೀಕರಿಸಬೇಕು, ಇಲ್ಲವೇ ಅವರ ಅಭಿಪ್ರಾಯವನ್ನೇ ಒಪ್ಪಬೇಕೆಂದರು. "ಕಾಂಗ್ರೆಸ್ ಅಖಿಲ ರಾಷ್ಟ್ರದ ಮತ್ತೆಲ್ಲಾ ಜಾತಿಯವರ ಸೇವಕ, ಭಾರತದ ಯಾವ ಮುಸ್ಲಿಮನೂ ಜೀವಾಪಾಯದ ಭಯಪಡುವಂತಾಗಬಾರದು. ಇಲ್ಲಿಂದ ಪಲಾಯನ ಮಾಡಿದ ಮುಸ್ಲಿಮರನ್ನು ಮರಳಿ ತರಬೇಕು. ಪಾಕಿಸ್ತಾನವೇನೇ ಮಾಡಿದರೂ ಭಾರತವು ನ್ಯಾಯವನ್ನೇ ಮಾಡಬೇಕು." ಎನ್ನುತ್ತಾ ಜಾತೀಯ ಸಂಸ್ಥೆಗಳೊಡ್ಡುತ್ತಿರುವ ಅಪಾಯಗಳ ಕುರಿತು ಗಾಂಧಿಜೀ ಎಚ್ಚರಿಸಿ, ಕಾಂಗ್ರೆಸಿಗರು ಜನಮತವನ್ನು ಮಾರ್ಪಡಿಸುವದೊಂದೇ ಇದಕ್ಕೆ ಯೋಗ್ಯ ಪರಿಹಾರವೆಂದರು. ಆ ಮೇಲೆ ಆಹಾರ, ವಸ್ತ್ರ ನಿಯಂತ್ರಣಗಳು ರದ್ದಾಗಬೇಕೆಂದು ಒತ್ತಿ ಹೇಳಿದರು. ಪಂಡಿತ ನೆಹರುಗಳ ಸೂಚನೆಯಂತೆ ಅಧ್ಯಕ್ಷರ ರಾಜೀನಾಮೆಯ ನಿರ್ಣಯವು ಸಭಾಂತ್ಯಕ್ಕೆ ಮುಂದರಿಸಲ್ಪಟ್ಟಿತು.

ನಿರ್ಣಯಗಳು

ಕಾರ್ಯಕಾರೀ ಸಮಿತಿ ತಯಾರಿಸಿದ ನಿರ್ಣಯಗಳ ಚರ್ಚೆಗಳು ಅ. ಭಾ. ಕಾಂಗ್ರೆಸ್‌ಸಮಿತಿಯಲ್ಲಿ ನಡೆದುವು—'ಪ್ರತಿಯೊಂದು ಸಂಸ್ಥಾನದ ರಾಜರೂ ಪ್ರಜಾಪ್ರಭುತ್ವ ಸರಕಾರ ಸ್ಥಾಪಿಸತಕ್ಕದ್ದು; ಹಾಗೆ ಮಾಡದ ಅರಸರಿಗೆ ಕಾಂಗ್ರೆಸಿನ ಸಹಾಯವಿಲ್ಲ'—'ಜಾತೀವಾರು ಪಂಗಡಗಳು ಕಟ್ಟಿಕೊಳ್ಳುವ ಸೇನೆಗಳನ್ನು ತೀವ್ರವಾಗಿ ಖಂಡಿಸಿ, ಇಂಥವುಗಳನ್ನು ನಿರ್ಮೂಲಿಸಬೇಕೆಂದು ಸರಕಾರಕ್ಕೆ ಕರೆ'—'ಸಂಪತ್ತು, ಅನುಕೂಲತೆ, ಉದ್ದಿಮೆ ವ್ಯವಹಾರಗಳಲ್ಲಿ ಸಮಾನತೆಯಿರುವ ಸಾಮಾಜಿಕಾಕಾರ ರಚನೆಯೇ ಕಾಂಗ್ರೆಸಿನ ಧ್ಯೇಯವೆಂಬ ಗುರಿ ಬದಲಾವಣೆ ಮತ್ತು ಸಂಬಂಧ ಸಮಿತಿ ರಚನೆ'—'ಆಹಾರ, ವಸ್ತ್ರ ಮತ್ತಿತರ ನಿಯಂತ್ರಣಗಳನ್ನು ಆದಷ್ಟು ಬೇಗನೇ ರದ್ದು ಪಡಿಸಬೇಕೆಂದು ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳಿಗೆ ಕರೆ'—ಇತ್ಯಾದಿ ನಿರ್ಧಾರಗಳು. ಅ. ಭಾ ಕಾಂ. ಸಮಿತಿಯಲ್ಲಿ ಮಂಜೂರಾಗಿವೆ.

ಭಾರತ ಮಹಾಸಭೆ ಪಾರ್ಲಿಮೆಂಟು

ಇದು ವರೆಗೆ ಕೇವಲ 'ಘಟನಾ ಸಮಿತಿ'ಯಾಗಿದ್ದ ಸಭೆಯು ಇದೇ ತಾ. 17ರಲ್ಲಿ ಭಾರತದ ಕೇಂದ್ರ ಶಾಸನ ಸಭೆ—ಮಹಾಸಭೆ ಪಾರ್ಲಿಮೆಂಟ್—ಆಗಿ ನವದಿಲ್ಲಿಯಲ್ಲಿ ಸೇರಿತು. ಇನ್ನುದಕ್ಕೆ ಸಂದರ್ಭಾನುಸಾರ 'ಘಟನಾ ಸಮಿತಿ' ಮತ್ತು 'ಶಾಸನ ಸಭೆ'ಯೆಂಬ ಎರಡೂ ರೂಪಗಳಿವೆ. ಘಟನಾ ಸಮಿತಿ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ತನ್ನ ಮುಮ್ಮಾತುಗಳಲ್ಲಿ ಇವೆರಡು ವ್ಯತ್ಯಾಸಗಳನ್ನು ತಿಳಿಸಿ, ಶಾಸನ ಸಭೆಯ ಅಧ್ಯಕ್ಷತೆಗೆ ಬೇರೊಬ್ಬನನ್ನು ಆರಿಸಬೇಕೆಂದು ಸೂಚಿಸಿದಂತೆ ಶ್ರೀ ಜಿ. ವಿ. ಮಾವ್ಲಂಕರರು ಮಹಾಸಭೆ ಪಾರ್ಲಿಮೆಂಟಿನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು.

ಮದ್ರಾಸ್ ಸರಕಾರವು—

ದ್ವಿದಳ ಧಾನ್ಯಗಳ ಮೇಲಿನ ನಿಯಂತ್ರಣಗಳನ್ನು ರದ್ದು ಪಡಿಸಿದೆ. ಅಕ್ಕಿ, ಗೋದಿ ಮುಂತಾದ ಪ್ರಮುಖಾಹಾರ ಧಾನ್ಯಗಳ ಮೇಲಿನ ನಿಯಂತ್ರಣವು ಹಾಗೆಯೇ ಇರುವುದು.

ಮದ್ರಾಸ್ ಸರಕಾರದ ಪೋಲೀಸು ಖಾತೆಯು ಇದುವರೆಗೆ ಡಾ! ಸುಬ್ಬರಾಯರಂದಾಗಿದ್ದು ಈಗ ಅದನ್ನು ಪ್ರಧಾನ ಮಂತ್ರಿ ಶ್ರೀ ಓಮಂದೂರರು ವಹಿಸಿಕೊಂಡಿರುವರು.

ಹೈದರಾಬಾದಿನ ಸಮಸ್ಯೆಗಳು ಮುಖ್ಯವಾಗಿ ಮದ್ರಾಸ್ ಪ್ರಾಂತಿಕ ಸರಕಾರಕ್ಕೆ ಸಮೀಪದವುಗಳಿರುವುದರಿಂದ ಕೇಂದ್ರ ಸರಕಾರದ ಸಹಾಯ ಮತ್ತು ನಿರ್ದೇಶಕತ್ವವನ್ನನುಸರಿಸಿ ಆ ಸಂಬಂಧದ ಕಾರ್ಯಗಳನ್ನು ಕೈಕೊಳ್ಳುವ ಸಿದ್ಧತೆಯಲ್ಲಿ ಮದ್ರಾಸ್ ಸರಕಾರವಿದೆ.

ಕಾಂಗ್ರೆಸ್ ಅಧ್ಯಕ್ಷರು—

ಆಚಾರ್ಯ ಕೃಪಲಾನಿಗಳ ರಾಜೀನಾಮೆಯಿಂದ ಭಾರತದ ರಾಜಕೀಯದಲ್ಲಿಂದು ಕೆಲವು ಪ್ರಶ್ನೆಗಳೆದ್ದಿವೆ. ಕಾಂಗ್ರೆಸ್ ಸರಕಾರಗಳು, ಕಾಂಗ್ರೆಸ್ ಸಂಸ್ಥೆಗಳನ್ನು ಕಡೆಗಣಿಸುತ್ತಿವೆ, ಎಂದು ಪ್ರಾಂತಿಕ ಹಾಗೂ ಸ್ಥಳೀಯ ಕಾಂಗ್ರೆಸ್ ಅಧಿಕಾರಿಗಳಿಂದ ಕೇಳಿ ಬರುತ್ತಿದ್ದ ದೂರೇ ಕಾಂಗ್ರೆಸಿನ ಅಗ್ರಗಣ್ಯ ಅಧಿಕಾರಿಯಿಂದಲೂ ಬಂದಂತಾಯಿತು! ನೆಹರು ಮಂಡಲಿಯಲ್ಲಿರುವ 16 ಸದಸ್ಯರ ಪೈಕಿ 8 ಮಂದಿ ಕಾಂಗ್ರೆಸೇತರರು. ಅಂದ ಮೇಲೆ ಲೋಕ ತುಂಬಾ ಪ್ರಸಿದ್ಧಿಯಿರುವಂತೆ ಅದು ಕಾಂಗ್ರೆಸ್ ಸರಕಾರವೆ? ಕಾಂಗ್ರೆಸ್ ಸರಕಾರವಾಗಿದ್ದರೆ ಪ್ರಾಂತಿಕ ಕಾಂಗ್ರೆಸ್ ಸರಕಾರಗಳಂತೆಯೇ ಅದೂ ಕಾಂಗ್ರೆಸಿನ ಆಜ್ಞಾಧೀನವಾಗಿಯೇ ವರ್ತಿಸಲು ಬದ್ಧವಿಲ್ಲವೆ?——ಇತ್ಯಾದಿ ಪ್ರಶ್ನೆಗಳೆದ್ದಿವೆ.

ಬಾಬು ರಾಜೇಂದ್ರ ಪ್ರಸಾದರು ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಮಂಗಳೂರು—ಉಪ್ಪು ಮಾರಾಟದ ದರ ಇದೇ ತಿಂಗಳ ತಾ 24ರಿಂದ ಜಿಲ್ಲೆಯ ಬೇರೆಬೇರೆ ಭಾಗಗಳಲ್ಲಿ ಉಪ್ಪನ್ನು ಚಿಲ್ಲರೆಯಾಗಿ ಮಾರಾಟ ಮಾಡಲು ಜಿಲ್ಲಾ ಕಲೆಕ್ಟರರು ಈ ಕೆಳಗಿನ ದರಗಳನ್ನು ನಿರ್ಣಯಿಸಿರುವರು.

ಮಂಗಳೂರು ಮುನಿಸಿಪಾಲಿಟಿ ಕ್ಷೇತ್ರದಲ್ಲಿ ಸೇರು ಒಂದರ 0-1-1ಪೈ; ಮಂಗಳೂರು, ಉಡುಪಿ ಮತ್ತು ಕಾಸರಗೋಡು ತಾಲೂಕುಗಳಲ್ಲಿ ಸೇರಿಗೆ 0-1-2; ಕುಂದಾಪುರ, ಕಾರ್ಕಳ ಮತ್ತು ಪುತ್ತೂರು ತಾಲೂಕುಗಳಲ್ಲಿ ಸೇರಿಗೆ 0-1-3ಪೈ.

ಸರಕಾರಿ ಧೋರಣೆಯ ನಿಷೇಧ ದಿನವಾಗಿ—ತಾ 23-11-47ನ್ನು ಆಚರಿಸಬೇಕೆಂದು ಜಿಲ್ಲಾ ಆಹಾರ ಪರಿಷತ್ತಿನಲ್ಲಿ ನಿರ್ಣಯವಾಗಿರುವುದು. ಈ ಜಿಲ್ಲೆಯಲ್ಲಿ ಈಗ ನಡೆಯುತ್ತಿರುವ ಆಹಾರ ಸಂಗ್ರಹ ಮತ್ತು ವಿತರಣ ಪದ್ಧತಿಯು ಹಾನಿಕರವಿದ್ದು ಅದನ್ನು ನಿಷೇಧಿಸುವ ಮತ್ತು ಅದನ್ನು ಸರಿಪಡಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯಗಳನ್ನು ಆ ದಿನದ ಸಭೆಯಲ್ಲಿ ಮಂಜೂರುಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಂತೀ ಮೂಲಕ ತಿಳಿಸಬೇಕೆಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯು ವಿನಂತಿಸಿದೆ.

ಸ್ವೀಕಾರ

ಕೆನರಾ ಮ್ಯೂಚುವಲ್ ಎಸ್ಸ್ಟೇನ್ಸ್ ಕಂಪೆನಿಯ ಪೆಲುಪೇಪರ್ ರಿಪೋರ್ಟು, ಯುಗಪುರುಷ ಮಾಸಪತ್ರಿಕೆ ನಮ್ಮ ಕೈಸೇರಿವೆ. ವಿಮರ್ಶೆ ಮುಂದಿನ ವಾರ. ಸಂ, ನ.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 233/1947

K· ವೆಂಕಟ್ರಾಯ ಪೈ— ವಾದಿ

ಮತ್ತು

ಶಿವಪ್ಪ ಗೌಡ—ಪ್ರತಿವಾದಿ

ಪ್ರತಿವಾದಿ ಶಿವಪ್ಪ ಗೌಡ—ಬೋರ ಗೌಡನ ಮಗ, ಮಂಗಳೂರ ತಾಲ್ಲೂಕು ಶಿರ್ಲಾಲು ಗ್ರಾಮದ ಕುದ್ಕುಂಜೆ—ಇವರಿಗೆ.

ನಿಂಮ ಮೇಲೆ ವಾದಿಯು ದಾಖಲ್ಮಾಡಿದ (ಜಾನುವಾರ ಅಡವಿನ ಅಸಲುಬಡ್ಡಿ ರೂ 310 ಬರಮಾಡುವರೆ) ಮೋಕ್ಕಂದ ಸ್ಯಾಜ್ಯವು ಇದೇ ಬರುವ ದಸಂಬರ ತಾರೀಕು 3ಕ್ಕೆ ಇಟ್ಟಿರುವ ಪ್ರಯುಕ್ತ ಆಕ್ಷೇಪಗಳಿದ್ದ್ರೆ ಆ ದಿವಸ ಬೆಳಿಗ್ಗೆ 10 ಘಂಟೆಗೆ ಹಾಜರಾಗಿ ಜ್ಯಾಹೀರು ಮಾಡುವರೆ ತಪ್ಪಿದ್ದಲ್ಲಿ ಏಕ್ಸಪಾರ್ಟಿಯಿಂದ ತೀರ್ಮಾನಿಸಲ್ಪಡುವದು ಯಾಂಬದಾಗಿ ಈ ಮೂಲಕ ತಿಳಿಸಿಯದೆ.

(Sd) B. chidananda Rao

ವಾದಿ ಕಡೆ ವಕೀಲ

ಪುತ್ತೂರು, 7.11.47.

The Southern India Apex Bank, Limited.

Head Office: UDIPI.

NOTICE

In the matter of the Shares of late Dr. N. Shripad Rao. S/o Sri Naimpally Ananthaya, Udipi.

His Holiness Srimad Anandashram Swamiji as Matadhipathi and trustee of Shree Bhavani Shanker Devara Bhandaram of Shree Chitrapur Mutt, Shirali, has requested the Apex Bank to transfer the Shares, of Dr. N. Shripad Rao, who passed away at Udipi on 21—5—1947, on the strength of the Registered Will of the deceased dated 27—4—1946 and this is to notify all those concerned that the Apex Bank will act on the said Will and proceed to comply with the request of the beneficiary thereunder unless proper objection is received by the Apex Bank with the proof thereto within a month from the publication of this notice.

'Kalsank' UDIPI. Dated 18th November, 1947 — K. Govinda Rao. Agent At Udipi

---

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ತಾ 20-11-47ರಿಂದ

ಜಗಿರ್ದಾರ್ ಪಿಕ್ಚರ್ಸ್‌ರವರ

ಸಾಹಸಸಂಪೂರ್ಣ ಚಿತ್ರ

"ಬದ್ಲಾ"

ಶಕುಂತಲೆಯ, ಹುಡುಗಿ ಶಾಂತಾರಾಣಿ, ಬಾಬುರಾವ್ ಪಹಿಲ್ವಾನ್, ಭಗವಾನ್.

ನಿರೀಕ್ಷಿಸಿರಿ: ಪ್ರಭಾತದವರ

ತುಕಾರಾಮ್

ಉಡುಪಿ

ಸುಳ್ಳು ಫಿರ್ಯಾದಿ—ಉಡುಪಿ ತಾ. ಉಲಿಕಂ ಕೋಡಿ ಗ್ರಾಮದ ಬೆಂಗ್ರೆಯಲ್ಲಿರುವ ಜನಾಬ್ T. S. ಅಬ್ದುಲ್ ರಹಿಮಾನ್ ಸಾಹೇಬರು ಕೂಡಾ 14 ಜನರ ಮೇಲೆ ತನ್ನ ಕಟ್ಟಡದಲ್ಲಿದ್ದ ಚರಸೊತ್ತುಗಳನ್ನು ಕಳವು ಮಾಡಿ ಕೊಂಡೊಯ್ದುದಾಗಿ ಜ. ಬಿ. ಅಬ್ದುಲ್ಲಾ ಸಾಹೇಬರು ಕೊಟ್ಟ ಉಡುಪಿ ಸಬ್ ಮೆಜಿಸ್ಟ್ರೇಟರ ಕೋರ್ಟು C. C. No. 82/47ನೇ ಫಿರ್ಯಾದಿ ಮೊಕದ್ದಮೆಯು ತನಿಖೆ ನಡೆದು ತಾ. 9-11-47ರಲ್ಲಿ ಆಪಾದಿತರನ್ನು ಡಿಸ್ಚಾರ್ಜ್ ಮಾಡಲಾಗಿದೆ. ಫಿರ್ಯಾದಿಗೆ ಸಂಬಂಧಿಸಿದ ಸೊತ್ತುಗಳನ್ನು ಕುಂದಾಪುರ ಡಿ. ಮು. ಕೋರ್ಟು ಹುಕುಂ ಪ್ರಕಾರ ಕೋರ್ಟು ಅಮೀನರು C. W. 1 ಕ್ರಮದಂತೆ ಜಪ್ತಿಮಾಡಿ ಕೋರ್ಟಿಗೆ ರವಾನಿಸಿದ್ದೆಂತಲೂ ದುರುದ್ದೇಶ ಸಾಧಿಸುವಂತೆ ಅವುಗಳನ್ನು ಕಳವು ಮಾಡಿ ಒಯ್ದುದೆಂಬುದು ಅಬದ್ಧವೆಂತಲೂ ಇತ್ಯಾದಿಯಾಗಿ ತೀರ್ಪಾಗಿದೆ ಎಂದು ತಿಳಿದು ಬರುತ್ತದೆ.

'ಯುಗಪುರುಷ'ದ ಉದ್ಘಾಟನೆ—'ಯುಗಪುರುಷ' ಎಂಬ ಮಾಸಪತ್ರಿಕೆಯ ಉದ್ಘಾಟನೆಯು ತಾ. 16ನೇ ಬೆಳಿಗ್ಗೆ ಡಾ। ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಮೆಜಿಸ್ಟಿಕ್ ಪ್ರೆಸ್ಸಿನಲ್ಲಿ ಜರಗಿತು. ಪ್ರಧಾನ ಸಂಪಾದಕ ಶ್ರೀ. ಬನ್ನಂಜೆ ರಾಮಾಚಾರ್ಯರ ನಿವೇದನೆ, ಅಧ್ಯಕ್ಷರ ಶುಭಹಾರೈಕೆ-ಹರಕೆ, ಉಪಾಹಾರಗಳೊಂದಿಗೆ ಸಭಾಂತ್ಯವಾಯಿತು.

ಕಮ್ಮಣ್ಣಿನಲ್ಲಿ ಶೋಚನೀಯ ಮರಣ:—ಇತ್ತೀಚೆಗೆ ಮಡು ತೋನ್ಸೆ ಕಮ್ಮಣ್ಣಿನಲ್ಲಿಯ ಮೀನು ಶುದ್ಧೀಕರಿಸುವ 'ಟ್ಯಾಂಕ್'ನಲ್ಲಿದ್ದ ಕೊಳೆ ನೀರನ್ನು ತೆಗೆಯುವರೆ ಬಡು ಮುಂದಿ ಬಡಕೂಲಿ ಜನರು ಒಬ್ಬರ ಹಿಂದೆ ಒಬ್ಬರಾಗಿ ಇಳಿದು ಅಲ್ಲಿಯೇ ಮರಣಪಾದರು. ವಿಷಪೂರಿತ ಗಾಳಿಯ ಸೇವನೆಯೇ ಮರಣಕ್ಕೆ ಕಾರಣವೆನ್ನಲಾಗಿದೆ. ಇಂತಹ ಆಕಸ್ಮಿಕ ಮರಣಗಳನ್ನು ತಡೆಗಟ್ಟುವರೆ 'ಟ್ಯಾಂಕು'ಗಳನ್ನು ಅಗೆಯುವ ಬದಲಾಗಿ ನೆಲದ ಮೇಲಿಂದಲೇ ಸಿಮೆಂಟು, ಕಲ್ಲುಗಳಿಂದ ಕಟ್ಟಿ ಬುಡದಲ್ಲಿ ಅದಕ್ಕೊಂದು ತೂತು ಇರಿಸುವ ಏರ್ಪಾಡನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡಿಸುವುದು ಒಳಿತಲ್ಲವೆ?

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

R. E. P. 394/47.
in
S. C. 526/42

ಅರ್ಜಿದಾರ-ವಾಸುದೇವ ನಾಯ್ಕ (ವಾದಿ)
ಎದ್ರಿರು-ದುರ್ಗಿ ಹೆಂಗ್ಸು ಕೂಡಾ (ಪ್ರತಿವಾದಿರು).

1ನೇ ಎದ್ರಿ ದುರ್ಗಿ ಹೆಂಗ್ಸು, ದೇವಸಿಗ ಕುರುವಾಲ್ ಮಂಜನ ಸೊಸೆ, ಕುಂದಾಪುರ ತಾಲ್ಲೂಕು ಕೆರ್ಗಾಲ್ ಗ್ರಾಮದ ನ್ಯಾಕನಕಟ್ಟೆಯಲ್ಲಿರುವವಳು; 4ನೇ ಎದ್ರಿ ಸಿದ್ದಿ ಮಹಮ್ಮದ್ ಸಾಹೇಬ್, ಹಮ್ಮದ್ ಸಾಹೇಬನ ಮಗ, ಕೊಪ್ಪತಾಲ್ಲೂಕು ಬಗ್ಗುಂಜಿ ಗ್ರಾಮ; 5ನೇ ಎದ್ರಿ ಗುಡ್ಡೆಮುಕ್ರಿ ಹಮ್ಮದ್ ಸಾಹೇಬ್, ನ್ಯಾಕನಕಟ್ಟೆ ಮೈದಿನ್ ಸಾಹೇಬನ ಮಗ, ಹೊನ್ನಾವರ ತಾಲ್ಲೂಕು ಮಂಕಿ; ಸದ್ರಿ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಮೇಲಿನ ಡಿಕ್ರಿಪ್ರಕಾರ ಎದ್ರಿರಿಂದ ಅರ್ಜಿದಾರನಿಗೆ ಬಹಾ ಆಗುವ ಹಣವನ್ನು ಬರಮಾಡಿಕೊಳ್ಳುವ ಬಗ್ಗೆ ದಾಖಲು ಮಾಡಿದ ಮೇಲಿನ ಅಮ್ಲಜಾರಿ ತಾ. 26-11-47ಕ್ಕೆ ತನಿಖೆಗೆ ಇರುತ್ತದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ದಿವಸ 11 ಘಂಟೆಗೆ ಕೋರ್ಟು ಮುಂದೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

(S/d) **M. M. Ural,**
Advocate for the Peter.
Coondapoor 9-11-47.

ಲಕ್ಷದೀಪೋತ್ಸವ—ಶ್ರೀ ಕೃಷ್ಣಮಠದಲ್ಲಿ ಲಕ್ಷದೀಪೋತ್ಸವವು ಇದೇ 25ನೇ ಮಂಗಳವಾರ ಆರಂಭವಾಗಿ ತಾ. 28ರ ತನಕ ನಡೆಯಲಿರುವುದು.

ಧೂಳಿನ ಹಾವಳಿ:—ರಸ್ತೆಗಳಲ್ಲಿ ಈಗಾಗಲೇ ಧೂಳು ಹಾರಲಾರಂಭವಾಗಿದೆ. ಮುನಿಸಿಪಾಲ್ ಅಧಿಕಾರಿಗಳು ರಸ್ತೆಗಳಿಗೆ ನೀರು ಹಾಕಿಸಲು ಬೇಗನೆ ಪ್ರಾರಂಭಿಸಬೇಕಾಗಿದೆ.

ಮಂಗಳೂರು.

ಜಿಲ್ಲಾ ಆಹಾರ ಸಮ್ಮೇಲನ—ಈ ತಾ 18ರಲ್ಲಿ ಜಿಲ್ಲಾ ಬೋರ್ಡು ಸಭಾಸದನದಲ್ಲಿ ಶ್ರೀ. ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ಕೆ. ಶೆಟ್ಟರು ಸಭೆಯ ಉದ್ದೇಶವನ್ನು ವಿವರಿಸಿದ ಬಳಿಕ ಮಾಜಿ ಮಂತ್ರಿ ಶ್ರೀ. ಕೆ. ಆರ್. ಕಾರಂತರು ಸಮ್ಮೇಲನವನ್ನು ಉದ್ಘಾಟಿಸಿ ಸದ್ಯದ ಪರಿಸ್ಥಿತಿ, ಆಹಾರ ಸಂಗ್ರಹ ಹಾಗೂ ವಿತರಣಾದಿಗಳ ಕುರಿತಾದ ತಮ್ಮ ಅಭಿಪ್ರಾಯವನ್ನು ಸಭೆಯ ಮುಂದಿರಿಸಿದರು. ಅನಂತರ ಬೇರೆಬೇರೆ ಕಡೆಗಳಿಂದ ಬಂದ ಠರಾವುಗಳು ಚರ್ಚಿಸಲ್ಪಟ್ಟವು. ಎಲ್ಲಾ ನಿಯಂತ್ರಣಗಳು ರದ್ದಾಗಬೇಕೆಂಬ ಶ್ರೀ. ಎಚ್. ನಾರಾಯಣ ರಾಯರ ಠರಾವೂ ನಮ್ಮ ಜಿಲ್ಲೆಯಲ್ಲಿ ಮಾತ್ರ ಒಕ್ಕಲುಗಳಿಂದ ಬರುವ ಗೇಣಿಯನ್ನೇ ಉಳಿತಾಯವೆಂದು ಪರಿಗಣಿಸಲ್ಪಡುತ್ತಿರುವ ಶರ್ತವನ್ನು ಸರಕಾರವು ತೆಗೆಯಬೇಕು. ಆಹಾರ ಸಂಗ್ರಹಣದ ಸಂಬಂಧವಾಗಿ ಉಂಟಾಗುತ್ತಿರುವ ತೊಡಕು ತೊಂದರೆಗಳನ್ನು ನಿವಾರಿಸಬೇಕು ಎಂಬ ಮುಲ್ಕಿಯ ವಕೀಲ್ ಶ್ರೀ. ಶಾಸ್ತ್ರಿಗಳ ಠರಾವೂ ಡಾ। ಪಿ. ಜಿ. ಅಚಾರ್ ಮೊದಲಾದವರ ಅನುಮೋದನೆಯಿಂದ ಮಾನ್ಯವಾದುವು. ನಿಯಂತ್ರಣಗಳು ರದ್ದಾಗಬೇಕೆಂಬ ಠರಾವಿಗೆ ಪ್ರಚಂಡ ಬಹುಮತವಿತ್ತು. (4 ಜನ ಕಮ್ಯುನಿಸ್ಟರು ಮಾತ್ರ ವಿರುದ್ಧ ವಿದ್ದರು) ಈ ಠರಾವುಗಳ ಕುರಿತು ಕಾರ್ಯಕ್ರಮವು ಅಗತ್ಯವಿದ್ದರೆ ಚಳವಳಿ ಹೂಡುವುದಕ್ಕೂ ಇತರ ಠರಾವುಗಳನ್ನು ಪರಿಶೀಲಿಸುವುದಕ್ಕೂ ಒಂದು ಸಮಿತಿಯು ಸ್ಥಾಪಿಸಲ್ಪಟ್ಟಿತು.

ದಿವಂಗತ ಉಡುಪಿ ಗೋವಿಂದ ರಾಯರು—ಮಂಗಳೂರು ಡಿ ಸಿ ಮಿಷನ್ ಶಾಲೆಯ ಹೆಡ್ಮಾಸ್ತರರೂ "ಮದ್ರಾಸ್ ಮೈಲ್"ನ ವಾರ್ತಾನಿದಾರರೂ ಆಗಿದ್ದ ಶ್ರೀ. ಯು. ಗೋವಿಂದರಾಯರು ಈಗ ಸುಮಾರು ನಾಲ್ಕು ವರ್ಷದಿಂದ ಹಾಸಿಗೆ ಹಿಡಿದಿದ್ದು ತಾ. ೧೧ನೇ ಮಂಗಳವಾರ ದೈವಾಧೀನರಾದರೆಂದು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ. ಶ್ರೀ. ರಾಯರು ಹಿಂದಿನಿಂದಲೂ ಕಾಂಗ್ರೆಸಿನ ನಿಸ್ಸೀಮ ಭಕ್ತರು; ತ್ಯಾಗ ಬುದ್ಧಿಯಿಂದ ಮುದಿಮ ಕೈಲಾದಷ್ಟು ದೇಶಸೇವೆ ಸಲ್ಲಿಸಿದವರು; ಜಿಲ್ಲಾ ಪತ್ರಿಕೋದ್ಯಮಿಗಳ ಸಂಘದ ಒಬ್ಬ ಪ್ರಾಮುಖ್ಯ ಸದಸ್ಯರು; ಇವರು ಶಿಕ್ಷಣ, ಸಹಕಾರ ಮೊದಲಾದ ಹಲವಾರು ವಿಷಯಗಳಲ್ಲಿ ತುಂಬ ಅನುಭವಸ್ಥರಾಗಿದ್ದು ಅವುಗಳಲ್ಲಿಯೂ ಶ್ರದ್ಧೆಯಿಂದ ಭಾಗ ವಹಿಸಿದ್ದರು. ಇವರ ನಿಧನದಿಂದ ನಮ್ಮ ಉತ್ತಮ ಹಿರಿಯ ಪತ್ರಿಕೋದ್ಯಮಿಯನ್ನು ನಾವು ಕಳೆದುಕೊಂಡಂತಾಯಿತು.

ಸೌತ್ ಇಂಡಿಯನ್ ನೌಕರರೊಬ್ಬರ ಮೇಲೆ ಮೊಕದ್ದಮೆ ವಂಚನೆ, ಲೆಕ್ಕಪತ್ರಗಳ ಸೃಷ್ಟನೆಗಳ ಆರೋಪ—೧೯೪೭ರಲ್ಲಿ (ಜುಲೈ ಮತ್ತು ನವೆಂಬರುಗಳ ನಡುವೆ) ಇಲ್ಲಿ ಎಸ್. ಐ. ಆರ್. "ಪರ್ಮನೆಂಟ್ ವೇ ಸಬ್ ಇನಸ್ಪೆಕ್ಟರ್"ರಾಗಿದ್ದ ಮಿ. ಅಕ್ಬರ್ ಶರೀಫ್ ಎಂಬವರು ಇಲ್ಲಿಯ ಕೆಲವು ಸ್ಪೆಶಲ್ ಕಾಮಗಾರಿಗಳ ಬಗ್ಗೆ, ತಾತ್ಕಾಲಿಕ ಕೂಲಿಯಾಳುಗಳ ಬದಲಿಗೆ ಕಾಯಂ ಗೇಂಗ್ ಕೂಲಿಗಳನ್ನು ಉಪಯೋಗಿಸಿಕೊಂಡು, ತಾತ್ಕಾಲಿಕ ಕೂಲಿಯಾಳುಗಳಿಂದಲೇ ಆ ಕೆಲಸ ಮಾಡಿಸಲಾಯಿತೆಂದು ಕಂಪೆನಿಯವರನ್ನು ವಂಚಿಸಿ ಆ ಒಂದು ಸಂದರ್ಭದಲ್ಲಿ ರೂಪಾಯಿ ೧೦೫೪-೪-೦ನ್ನೂ, (ಆರ್ಡರ ಗವರ್ನರರ ಸ್ವಾಗತನ ಶಾಲ ವ ಬಂದರದ ಕಡೆಯ ರಿಪೇರಿ ಮೊದಲಾದವುಗಳ ಸಂಬಂಧ) ಆದೇ ರೀತಿ ವಂಚಿಸಿ ಈ ಮತ್ತೊಂದು ಸಂದರ್ಭದಲ್ಲಿ ಸುಮಾರು ರೂ ೪೯೪ನ್ನೂ ಪಡೆದರೆಂಬ ಆರೋಪಗಳ ಮೊಕದ್ದಮೆ ಇ. ಪಿ. ಕೋಡಿನ ೪೨೦ನೆ ಮತ್ತು ೪೭೭ (ಎ) ಪ್ರಕರಣಗಳ ಮೇರೆಗೆ ಮಂಗಳೂರು ಸಬ್ ಡಿ ಮೆಜಿಸ್ಟ್ರೇಟ್ ಶ್ರೀ. ಎಸ್. ಬಾಲಚಂದ್ರರಾಯರ ಮುಂದೆ ಬಂದಿದ್ದು ಇದೇ ತಾರೀಕು ೧೮-೧೧-೪೭ರಲ್ಲಿ ತನಿಖೆಗೆ ಇಡಲ್ಪಟ್ಟಿದೆ.

ದಿ. ಕಥೊಲಿಕ್ ಬೇಂಕ್, ಲಿಮಿಟೆಡ್,
ಮಂಗ್ಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ನಮ್ಮ ಬೇಂಕಿನ ಕುಂದಾಪುರ ವ ಕಿನ್ನಿಗೋಳಿ ಬ್ರಾಂಚ್‌ಗಳಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಸರಿಯಾಗಿ ಕೊಡದಿರುವುದರಿಂದ ಸದ್ರಿಯವರಿಗೆ ಕ್ರಮ ಪ್ರಕಾರ ರಿಜಿಸ್ಟ್ರಿ ನೋಟೀಸುಗಳನ್ನು ಕಳುಹಿಸಿದ್ದಲ್ಲಿ ಸದ್ರಿ ಸಾಲಗಳ ಅಸಲು ಬಡ್ಡಿ ವಗೈರೆಗಳನ್ನು ಇನ್ನೂ ಬಾಕಿ ಇಟ್ಟುಕೊಂಡಿರುವುದರಿಂದ ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:—

ಸದ್ರಿ ಸಾಲಗಾರರು ಅವರಿಂದ ಈ ಮೇಲೆ ಕಾಣ್ಸಿದ ಬೇಂಕಿಗೆ ಸಲ್ಲಲಿಕ್ಕಿರುವ ಅಸಲು ವಗೈರೆ ಈ ನೋಟೀಸು ಖರ್ಚು ಸಮೇತ ಹಣವನ್ನು ಇದೇ ನವಂಬ್ರ ತಿಂಗಳ ತಾ 25ನೇ ಮಂಗಳವಾರ ಹಗಲು ಘಂಟೆ 2ರ ಒಳಗೆ ಪಾವತಿ ಮಾಡದಿದ್ದರೆ ಆಯಾಯ ಸಾಲದ ಎದುರುಗಡೆ ಕಾಣ್ಸಿದ ತಾರೀಕು ವ ಸ್ಥಳದಲ್ಲಿ ಬಹಿರಂಗವಾಗಿ ಲಿಲಂ ಮಾಡಲಾದೀತು ತಿಳಿದಿರಲಿ.

ಲೋನಿನ ನಂಬ್ರ	ಹೆಸರು ವ ವಿಳಾಸ	ಮೊಬಲಗು	ಲಿಲಾಂವಿನ ಸ್ಥಳ ವ ತಾರೀಕು
20/343	ಕೆ. ಗಣಪತಿ ಶೆಣೈ ಪುಟ್ಟಪ್ಪ ಶೆಟ್ಟಿರ ಮಗ ಕುಂದಾಪುರ	2895-0-0	ಕುಂದಾಪುರ ಬ್ರೇಂಚ್ ಆಫೀಸಿನಲ್ಲಿ ತಾ. 29-11-47ನೇ ಶನಿವಾರ ಪೂರ್ವಾಹ್ನ 11 ಘಂಟೆಗೆ
19/193	ಕಿಂಞಣ್ಣ ಶೆಟ್ಟಿ ಹಾಲಿ ಪುನಾದಲ್ಲಿರುವವರು	60-0-0	ಕಿನ್ನಿಗೋಳಿ ಬ್ರೇಂಚ್ ಆಫೀಸಿನಲ್ಲಿ ತಾ. 1-12-47ನೇ ಸೋಮವಾರ ಮಧ್ಯಾಹ್ನ 1 ಘಂಟೆಗೆ
21/347, 21/363	ರಾಮ ಭಟ್ಟ, ಮಾಧವ ಭಟ್ಟರ ಮಗ ಉಳೆಪಾಡಿ.	15-0-0, 45-0-0	
20/564	ಕೃಷ್ಣಾಚಾರ್ಯ, ಶೀನಾಚಾರ್ಯರ ಮಗ, ದೇಲಂತ ಬೆಟ್ಟು	8-0-0	

M. B Colaco,
Secretary

Mangalore, 14—11—47.

ನೋಟೀಸು

ಕಾರಕಳ ತಾಲೋಕು ನಾಡ್ಪಾಲು ಗ್ರಾಮದ ಮಂಕೀರ್ತಿಯಂಬಲ್ಲಿರುವ ಸದಿಯ ಹೆಗ್ಗಡೆರ ಅಳಿಯ ಬಡಿಯ ಹೆಗ್ಗಡೆಯು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನಂದರೆ.

ನಾಡ್ಪಾಲು ಗ್ರಾಮದ ನನ್ನ ಮೂಲಗೇಣಿ ಹಕ್ಕಿನ ಸ್ಥಿರಾಸ್ತಿಯನ್ನು ನನ್ನ ಒಕ್ಕಲುಗಳಿಂದ ಬರತಕ್ಕ ಗೇಣಿ ವಸೂಲು ಮಾಡುವ ಹಕ್ಕು ಸಮೇತ ನಾನು ಬೆಳಂಜಗೋಡು ಮೋನಪ್ಪ ಹೆಗ್ಗಡೆರ ಅಳಿಯ ಕೊರಗ ಹೆಗ್ಗಡೆರಿಗೆ ರಿಜಿಸ್ಟ್ರಿ ತಾ 18-6-1947ರಲ್ಲಿ ಕ್ರಯವರಿಸಿ ಕೊಟ್ಟಿದ್ದೇನೆ. ಸದ್ರಿ ಕ್ರಯದ ಸಂಗ್ತಿಯನ್ನು ತಿಳಿಸಿ ಗೇಣಿ ಬಾಕಿಯನ್ನು ವಸೂಲು ಕೇಳಿ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಒಕ್ಕಲುಗಳು ನನ್ನ ಅಣ್ಣನ ಮಗ ಗೋಪಾಲ ಹೆಗ್ಗಡೆಯ ಸಿತೂರಿಯಿಂದ ಆತನ ಸಲಹೆಗೆ ಸೇರಿ ದುಸ್ಸಾಧನೆ ಉತ್ತರಕೊಟ್ಟದ್ದರಿಂದ ಸದ್ರಿ ಕೊರಗ ಹೆಗ್ಗಡೆರು ಒಕ್ಕಲುಗಳ ಮೇಲೂ ಗೋಪಾಲ ಹೆಗ್ಗಡೆಯ ಮೇಲೆ ಕೂಡಾ ಕಾರ್ಕಳ ಡಿ. ಮು. ಕೋರ್ಟಿನಲ್ಲಿ S. C. 292/47ನೆಗೆ ದಾವೆಗಳನ್ನು ಮಾಡಿ ಒಕ್ಕಲುಗಳ ಚರಸೊತ್ತು ಜಪ್ತು ಮಾಡಿಸಿದ್ದಲ್ಲಿ ಸದ್ರಿ ಗೋಪಾಲ ಹೆಗ್ಗಡೆಯು ಕೋರ್ಟಿಗೆ ಬಾಧ್ಯಸ್ಥಿಕೆ ಅರ್ಜಿ ಕೂಡಾ ಕೊಟ್ಟಿರುತ್ತಾನಾಗಿ ನಾನು ತಿಳಿಯುತ್ತೇನೆ. ಸದ್ರಿ ದಾವೆಗಳ ನಂತರ ಸದ್ರಿ ಗೋಪಾಲ ಹೆಗ್ಗಡೆ ಮತ್ತು ಅವನ ಪರಮ ಮಿತ್ರ ತಿಂಗಳೆ ಸದಾಶಿವ ಹೆಗ್ಗಡೆರು ನನ್ನ ಮೇಲೆ ದ್ವೇಷ ಕಟ್ಟಿಕೊಂಡು ನನ್ನ ಮನೆಯನ್ನು ಕೂಡಾ ಅದೇರೀತಿ ಜಪ್ತು ಮಾಡಿಸದೇ ಬಿಡಲಿಕ್ಕಿಲ್ಲವಾಗಿ ಶಪತ ಹಾಕಿರುತ್ತಾರೆ.

ನನ್ನ ಆಸ್ತಿಯನ್ನು ಕೊರಗ ಹೆಗ್ಗಡೆಗೆ ಕ್ರಯಕ್ಕೆ ಕೊಟ್ಟ ಕಾರಣದಿಂದ ನನ್ನ ಅಣ್ಣನ ಮಗ ಸದ್ರಿ ಗೋಪಾಲ ಹೆಗ್ಗಡೆಯು ನನ್ನ ಮೇಲೆ ತುಂಬಾ ದ್ವೇಷದಲ್ಲಿದ್ದಾನೆ ಮತ್ತು ನನಗೆ ನಾನಾ ರೀತಿ ಉಪದ್ರವ ಕೊಡುತ್ತಾಯಿದ್ದಾನೆ. ನಾನು ಓದು ಬರಹ ಇಲ್ಲದ ನಿರಕ್ಷರಕುಕ್ಷಿಯಾಗಿದ್ದೇನೆ ನಾನು ಇದೇ ತಾ. 11-11-1947ನೇ ದಿನ ಸಾಮಾನು ಕೊಂಡು ಹೋಗುವರೆ ಸೋಮೇಶ್ವರದಿಂದ ಸೀತಾನದಿ ಪೇಟೆಗೆ ಹೋಗಿ ಅಲ್ಲಿಂದ ವಾಪಾಸು ಬರುವಾಗ್ಯೆ ಬಂಗ್ಲೆ ಸಮೀಪ ನಾಡ್ಪಾಲು ಗ್ರಾಮದ ಪಟೇಲ್ ತಿಂಗಳೆ ವಿಟ್ಠಲ ಹೆಗ್ಗಡೆ ತಿಂಗಳೆ ಸದಾಶಿವ ಹೆಗ್ಗಡೆ ಮತ್ತು ಗೋಪಾಲ ಹೆಗ್ಗಡೆ ಕೂಡಾ ಬೇರೆ ಕೆಲವು ಜನರ ಸಮೇತ ಬಂದು ಅವರು ಬರುವಾಗಲೇ ಬರದು ತಂದಿರುವ ಒಂದು ಕಾಗ್ದಕ್ಕೆ ನಾನು ಹೆಬ್ಬೆಟ್ಟು ಕೊಡಬೇಕೆಂತ ಪಟೇಲ್ ವಿಟ್ಠಲ ಹೆಗ್ಗಡೆರು ಹೇಳಿದರು. ಅದಕ್ಕೆ ನಾನು ಒಪ್ಪಲಿಲ್ಲ. ಆಗ್ಯೆ ನನ್ನನ್ನು ಬೆದರಿಸಿ ಗದರಿಸಿ ನನ್ನ ಕೈಹಿಡಿದು ಎಡ ಹೆಬ್ಬೆಟ್ಟು ಮುದ್ರೆ ಹಾಕಿದ್ದಾರೆ.

ನಾನು ರಿಜಿಸ್ಟ್ರಿ ಆಫೀಸಿನಲ್ಲಿ ಆದ ರಿಕಾರ್ಡುಗಳಿಗಲ್ಲದೆ ಬೇರೆಯಾವದಕ್ಕೂ ಹೆಬ್ಬೆಟ್ಟು ಮುದ್ರೆ ಕೊಟ್ಟದ್ದಿಲ್ಲ. ನಾನು ಯಾರಿಗೂ ರಿಜಿಸ್ಟ್ರಿ ಶಿವಾಯಿ ಯಾವ ರಿಕಾರ್ಡು ಮಾಡಿಕೊಟ್ಟದ್ದಾಗಲೀ ಬರಕೊಟ್ಟದ್ದಾಗಲಿ ಇಲ್ಲಾ. ನಾನು ಯಾರಿಂದಲಾದರೂ ಕೈಕಡನಾಗಲೀ ಇನ್ನೊಂದು ನೋಟಿನ ಮೇಲಾಗಲೀ ಸಾಲ ತಂದದ್ದಿಲ್ಲಾ. ನನಗೆ ಏನೂ ಸಾಲಯಿರುವದಿಲ್ಲಾ. ಆದುದರಿಂದ ಯಾರಾದರೂ ನಾನು ಬರಕೊಟ್ಟದ್ದೆಂಬ ರಿಜಿಸ್ಟ್ರಿ ಶಿವಾಯಿ ಯಾವ ರಿಕಾರ್ಡುಗಳನ್ನು ಕಲ್ಪಿಸಿದ್ದಾದರೆ ಅವು ನನ್ನ ಮೇಲೆ ಬಾಧಕ ತಕ್ಕದ್ದಲ್ಲಾ. ಸದ್ರಿ ಗೋಪಾಲ ಹೆಗ್ಗಡೆ, ಪಟೇಲ್ ವಿಟ್ಠಲ ಹೆಗ್ಗಡೆ ಮತ್ತು ಸದಾಶಿವ ಹೆಗ್ಗಡೆಯವರು ಕಲ್ಪಿಸತಕ್ಕ ಮುದಾವ ಯಾವತ್ತು ರಿಕಾರ್ಡುಗಳು ಬನಾವಟು ದಾಖ್ಲೆಗಳಾಗಿರುತ್ತವೆ. ಈ ಸಂಗತಿಯನ್ನು ನಾನು ಈ ಮೂಲಕ ಸರ್ವಜನರಿಗೆ ಅವಗಾಹನೆ ಬಗ್ಗೆ ಈ ಮೂಲಕ ತಿಳಿಸಿರುತ್ತೇನೆ.

● ಈ ಎಡಗೈ ಹೆಬ್ಬೆಟ್ಟು ಬಡಿಯ ಹೆಗ್ಗಡೆ ರುಜು.

ತಾ. 13—11—47.

ದಕ್ಷಿಣ ಕನ್ನಡ

೩೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ — ತಾ. ೫-೧೧-೪೭ರಂದು ಶ್ರೀ ಗೋವಿಂದ ಪೈಗಳ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಕಾಸರಗೋಡಿನ ಬೋರ್ಡ್ ಹೈಸ್ಕೂಲು ಮತ್ತು ವಠಾರವನ್ನು ಸಮ್ಮೇಳನದ ಸ್ಥಳವಾಗಿ ಮಾಡುವುದೆಂಬ ನಿರ್ಣಯವಾಯಿತು. ಸಮ್ಮೇಳನದ ಸಂಬಂಧವಾಗಿ ಊಟ ಉಪಚಾರಗಳ ಬಗ್ಗೆ ಡಾ। ಪಿ. ಎಸ್. ಭಟ್ಟರನ್ನೊಳಗೊಂಡ ಸಮಿತಿಯೊಂದನ್ನೂ; ಚಪ್ಪರ, ತೋರಣ ಇತ್ಯಾದಿಗಳ ಬಗ್ಗೆ ಶ್ರೀ। ವಿಠಲ ಕಾಮತರನ್ನೊಳಗೊಂಡ ಸಮಿತಿಯೊಂದನ್ನೂ; ವಿವಿಧ ವಿನೋದಾವಳಿಗಳನ್ನು ಏರ್ಪಡಿಸಲು ಶ್ರೀ। ಕಡಂಗೋಡ್ಲು ಶಂಕರ ಭಟ್ಟ, ಪಿ. ಕೆ. ನಾರಾಯಣ ಮೊದಲಾದವರಿಂದೊಡಗೂಡಿದ ಸಮಿತಿಯೊಂದನ್ನೂ; ಸಮ್ಮೇಳನದ ಕಾರ್ಯಕ್ರಮಗಳನ್ನು ನಿರ್ಧರಿಸುವ ಬಗ್ಗೆ ಶ್ರೀ।ಗಳಾದ ಸೂರ್ಯನಾರಾಯಣ ಅಡಿಗ, ಗೋವಿಂದ ಪೈ, ಕಡೆಂಗೋಡ್ಲು ಶಂಕರ ಭಟ್ಟ—ಇವರಿಂದ ಕೂಡಿದ ಸಮಿತಿಯೊಂದನ್ನೂ ರಚಿಸಲಾಯಿತು. ಶ್ರೀ। ಶುಕನಾಥಾಚಾರ್ ಇವರನ್ನು ಸ್ವಯಂಸೇವಕ ದಳದ ನಾಯಕರನ್ನಾಗಿ ಮಾಡಲಾಯಿತು.

ತಾ. ೯-೧೧-೪೭ರಂದು ಮಂಗಳೂರಲ್ಲಿ ಕೂಡಿದ ಸಭೆಯಲ್ಲಿ ಸಮ್ಮೇಳನವನ್ನು ಡಿಸಂಬರ ತಾ. ೨೮, ೨೯, ೩೦ರಲ್ಲಿ ಜರಗಿಸುವುದೆಂದೂ ಸಮ್ಮೇಳನದ ಸ್ಥಳವನ್ನು ಮುದ್ದಣ ನಗರವೆಂದು ಕರೆಯುವುದೆಂದೂ ನಿರ್ಣಯವಾಯಿತು. ಸಮ್ಮೇಳನದ ಅಂಗವಾಗಿ ಸಾಹಿತ್ಯಗೋಷ್ಠಿ, ವಿದ್ಯಾರ್ಥಿ ಗೋಷ್ಠಿಗಳನ್ನು ಜರಗಿಸುವುದೆಂದು ನಿರ್ಣಯಿಸಲಾಯಿತು. ಶ್ರೀ। ಲಕ್ಷ್ಮೀನಾರಾಯಣ ಪುಣಿಂಚತ್ತಾಯರನ್ನು ಸಾಹಿತ್ಯಗೋಷ್ಠಿಯ ಸ್ವಾಗತಾಧ್ಯಕ್ಷರನ್ನಾಗಿ ಆರಿಸಲಾಯಿತು.

ಪ್ರಸಿದ್ಧ ಪತ್ರಿಕೋದ್ಯೋಗಿಗಳೂ, ಕರ್ನಾಟಕದ ಹಿರಿಯ ಸಾಹಿತಿಗಳೂ ಆದ ಶ್ರೀ। ತಿರುಮಲೆ ತಾತಾಚಾರ್ಯ ಶರ್ಮರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆರಿಸಲ್ಪಟ್ಟದ್ದು ಬಹು ಸಂತೋಷಕರವಾದ ವಿಷಯ.

ಸಮ್ಮೇಳನದ ಕೆಲಸವು ಭರದಿಂದ ಸಾಗುತ್ತಿದೆ. ೩೦೦೦ರೂ ವರೆಗೆ ಧನಸಂಗ್ರಹವಾಗಿದೆ. ಜಿಲ್ಲೆಯ ಮಹಾಜನರು ಮುಕ್ತ ಹಸ್ತರಾಗಿ ಧನಸಹಾಯ ಮಾಡಿ ಸಮ್ಮೇಳನವು ಯಶಸ್ವಿಯಾಗುವಂತೆ ಮಾಡಬೇಕಾಗಿದೆ. ಹಾಗೆ ಸಾಹಿತ್ಯಾಭಿಮಾನಿಗಳೂ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕು. ಸ್ಮಾರಕ ಗ್ರಂಥದ ಸಂಪಾದನ ಕಾರ್ಯವೂ ಭರದಿಂದ ಸಾಗುತ್ತಿದೆ. ಶ್ರೀ। ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಸಮ್ಮೇಳನಕ್ಕೆ ವಿದ್ಯುದ್ದೀಪವನ್ನು ಒದಗಿಸುವ ವ್ಯವಸ್ಥೆ ಮಾಡುವುದಾಗಿ ಭರವಸೆಯಿತ್ತಿದ್ದಾರೆ. ಶ್ರೀ।ಗಳಾದ ಕಡೆಂಗೋಡ್ಲು ಶಂಕರ ಭಟ್ಟ ಮತ್ತು ಸೂರ್ಯನಾರಾಯಣ ಅಡಿಗರು ಸಮ್ಮೇಳನದ ಕಾರ್ಯದಲ್ಲಿ ತುಂಬಾ ಮಗ್ನರಿರುತ್ತಾರೆ.

ಬಿ. ಶಂಕರ ಭಟ್ಟ,
ಕಾರ್ಯದರ್ಶಿ, ಪ್ರಕಟಣಾ ಶಾಖೆ,
೩೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ.

ಬಸ್ರೂರು— ಭಾರತ ಪ್ರಧಾನ ಮಂತ್ರಿ ಪಂಡಿತ ಜವಾಹಿರಲಾಲನೆಹರ ಅವರ ಹುಟ್ಟು ಹಬ್ಬದ ದಿನಾಚರಣೆಯು ತಾ 14 ರುಕ್ರವಾರ ದಿನ, ಪ್ರಭಾತಭೇರಿ, ಧ್ವಜವಂದನೆ, ಸಾಯಂ ಕಾಲ ಗಾಂಧಿ ಮೈದಾನದಲ್ಲಿ ಕೊಂಗ್ರೆಸ್ ಕಾರ್ಯಕರ್ತರಾದ ಶ್ರೀ. ಬಿ. ಸುಬ್ಬಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆ, ಭಾಷಣಾದಿ ಕಾರ್ಯಕ್ರಮಗಳಿಂದ ಜರಗಿತು.

ಸರ್‌ಟ್ರಿಕ್ಟ್ ಆಫ್ ಕೆನರಾ ಎಂಬ ಅಂತರ್ ರಾಷ್ಟ್ರೀಯ ಜೀವ ವಿಮಾ ಸಂಸ್ಥೆಯ ನಮ್ಮ ಜಿಲ್ಲೆಯ ಪ್ರತಿನಿಧಿಗಳಾದ ಶ್ರೀ. ಕೆ. ಶಂಕರ ಸೆಟ್ಟರು ಈ ಬಾರಿ ಕಂಪೆನಿಯಿಂದ ನಡೆದ ಪ್ರೆಸಿಡೆಂಟ್ ಮನ್ತ್ ಎಂಬ ವಿಮಾಸ್ಪರ್ಧೆಯ ಮದ್ರಾಸ್ ರಾಜ್ಯದ ದ್ವಿತೀಯ ಬಹುಮಾನಕ್ಕೆ ಅರ್ಹರಾದ ಸಂತೋಷಾರ್ಥವಾಗಿ ಶ್ರೀ ಸೆಟ್ಟರು ತನ್ನ ಸಮೀಪವಿರುವ ಪೊಲಿಸಿ ಹೋಲ್ಡರರಿಗೂ ವ ತಮ್ಮ ಆಪ್ತ ಮಿತ್ರರಿಗೂ ಕಳೆದ ತಾ 12ರಲ್ಲು ಟೀಪಾರ್ಟಿಕೊಟ್ಟು ಸತ್ಕರಿಸಿದರು.

ನಿಂಜೂರು ಚಿತ್ರಬೈಲು—ಬ್ರಹ್ಮ ಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ಚಿತ್ರಬೈಲು ಅನಂತರಾಮ ಭಟ್ಟರಿಂದ ಏರ್ಪಡಿಸಲ್ಪಟ್ಟ 10 ನೇ ವರ್ಷದ ದೀಪೋತ್ಸವವು ತಾ 30-11-47ನೇ ಆದಿತ್ಯವಾರ ನಡೆಯಲಿರುವುದು.

ಕಟಪಾಡಿ—ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾಸಮಿತಿಯ ದೇವಸ್ಥಾನದಲ್ಲಿ ಹದಿನಾಲ್ಕನೇ ವಾರ್ಷಿಕೋತ್ಸವವು ಇದೇ ತಾ 18-11-47ನೇ ಮಂಗಳವಾರ ಆರಂಭವಾಗಿ ತಾ 24-11-47ನೇ ಸೋಮವಾರ ಮಧ್ಯಾಹ್ನ 12 ಗಂಟೆಯಿಂದ ಮರುದಿನ ಪೂರ್ವಾಹ್ನ 9 ಗಂಟೆಯವರೆಗೆ ಶ್ರೀ. ದೇವಿ ಸಪ್ತಾಹ ಮಹೋತ್ಸವನೊಂದಿಗೆ ಮಂಗಲವಾಗುವುದು. ಸರ್ವರೂ ಬಂದು ಈ ಮಹತ್ಕಾರ್ಯದಲ್ಲಿ ಭಾಗವಹಿಸಬೇಕಾಗಿ, ಸಮಿತಿಯ, ಕಾರ್ಯದರ್ಶಿಯವರು ಆಮಂತ್ರಿಸುತ್ತಾರೆ.

ಎಸ್. ವಿ. ಎಸ್. ಹೈಸ್ಕೂಲಿನ 'ಶ್ರೀ ಶ್ರೀನಿವಾಸ ಸ್ಕೌಟ್ ದಳ'ದವರು 7-11-47ರಲ್ಲಿ ವಿಹಾರಾರ್ಥವಾಗಿ ಪಾಲಕೂರಿಗೆ ಹೋಗಿ ರಾತ್ರೆ ಸುಮಾರು 10 ಗಂಟೆಗೆ ನೆರೆದ ಸಭಿಕರನ್ನು ಆ ಫಿರ್ಕದ ರೆವಿನ್ಯೂ ಇನ್ಸ್‌ಪೆಕ್ಟರರಾದ ಶ್ರೀ. ಎಸ್. ಗಣಪತಿ ಭಟ್ಟ ಇವರ ಅಧ್ಯಕ್ಷತೆಯಲ್ಲಿ ವಿವಿಧ ಚಟುವಟಿಕೆಗಳಿಂದ ಸಂತೋಷಪಡಿಸಿದರು. ಮರುದಿನ ಊರಿನ ಪ್ರಸಿದ್ಧ ಸ್ಥಳಗಳನ್ನೂ ದೇವಸ್ಥಾನಗಳನ್ನೂ ಕಂಡು ಹಿಂದಿರುಗಿರುವರು. ಬಾರಕೂರಲ್ಲಿ ತಮಗೆ ಎಲ್ಲಾತರದ ಸೌಕರ್ಯಗಳನ್ನೂ ಒದಗಿಸಿಕೊಟ್ಟು ಸತ್ಕರಿಸಿದ ಶ್ರೀಯುತರುಗಳಾದ ಬಿ. ಜೆ. ಕಾಮತ್ ಮತ್ತು ಎಚ್. ರಾಮಣ್ಣ ಸೆಟ್ಟಿ, ಇವರಿಗೂ, ವ ಇತರ ವಿಧದಿಂದ ಸಹಾಯಮಾಡಿದ ಸ್ಥಳೀಯ ಎಲ್ಲಾ ಮಹನೀಯರಿಗೂ ಅಭಾರಿಗಳಾಗಿದ್ದೇವೆಂದು ಸದ್ರಿ ಸ್ಕೌಟ್‌ದಳ ನಾಯಕರು ತಿಳಿಸುತ್ತಾರೆ.

ಹಿರಿಯಡ್ಕ—ಆರ್ಯಸಮಾಜ ಮಂದಿರದಲ್ಲಿ ತಾ 12-11-47ರಲ್ಲಿ ಮಹರ್ಷಿ ದಯಾನಂದರ ನಿರ್ಯಾಣೋತ್ಸವವು ಆಚರಿಸಲ್ಪಟ್ಟಿತು. ಈಶ್ವರಸ್ತುತಿ ಪ್ರಾರ್ಥನೋಪಾಸನಾ ನಂತರ ಶ್ರೀ ಕೆ. ನರಸಿಂಹ ಶೆಣ್ಯೆಯವರು ವೈದಿಕ ಭಜನೆ ಹಾಡಿದರು. ಆ ಬಳಿಕ ಶ್ರೀ. ಪ್ರೊ. ಎಸ್. ಜಿ. ರಾವ್, ಶ್ರೀ ಬಿ. ಲಕ್ಷ್ಮೀನಾರಾಯಣರಲ್ಲಿ ಶ್ರೀ. ಹಿ. ಕೆ. ಅನಂತಯ್ಯ ಮೊದಲಾದವರು ದೀಪಾವಳಿಯ ಮಹತ್ವ, ಮಹರ್ಷಿ ದಯಾನಂದರ ಜೀವನ ಮತ್ತು ಅವರ ಕಾರ್ಯಗಳ ಕುರಿತು ಭಾಷಣವಿತ್ತರು.

ಪಡುಬಿದ್ರೆ—ತಾ. 14ರಲ್ಲಿ ಪಂಡಿತ ನೆಹರೂರವರ ಜನ್ಮ ದಿನಾಚರಣೆಯು ಪ್ರಭಾತಫೇರಿ, ಧ್ವಜವಂದನೆ, ಜನಾಬ್ ಉಸ್ಮಾನ್ ಸಾಹೇಬರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣಾದಿ ಕಾರ್ಯಕ್ರಮಗಳಿಂದ ವಿಜ್ರಂಭಣೆಯಿಂದ ಜರಗಿತು.

ಮಂಗಳೂರು

ಹಸುಗೆ ಅಧಿಕಾರಿಗಳ ಪ್ರಕಟಣೆ

ಇದೇ ೧೯೪೭ನೇ ಇಸವಿ ನವಂಬರ ತಿಂಗಳ ೩೦ನೇಯ ತಾರೀಕಿನ ಒಳಗೆ ತಮ್ಮಲ್ಲಿದ್ದ ಕಳ್ಳ ರೇಶನ್ ಕಾರ್ಡುಗಳನ್ನು ಇಚ್ಛಾನುಸಾರ ರೇಶನ್ ಆಫೀಸುಗಳಿಗೆ ಮುಟ್ಟಿಸಿದಲ್ಲಿ ಯಾ ತಮ್ಮ ಮನೆಯಲ್ಲಿ ಇಲ್ಲದವರು, ಮನೆಬಿಟ್ಟು ಹೋದವರ ಮತ್ತು ತೀರಿ ಹೋದವರ ರೇಶನ್‌ಗಳನ್ನು ತಮ್ಮ ಕಾರ್ಡುಗಳಿಂದ ಇಚ್ಛಾನುಸಾರ ತೆಗೆಸಿದಲ್ಲಿ ಅಂಥವರ ಮೇಲೆ ಯಾವ ತರದ ದಾವೆ ಅಥವಾ ದಂಡನೆ ವಿಧಿಸುವುದಿಲ್ಲ ಅದರೆ ೧೯೪೭ನೇ ಇಸವಿ ಡಿಸಂಬರ್ ತಾ ೧ರಿಂದ ಯಾವತ್ತೂ ಆಹಾರದ ವಿಷಯದಲ್ಲಿ ಮಾಡುವ ಅಪರಾಧಗಳಿಗೆಲ್ಲ ಕಠಿಣ ಶಿಕ್ಷೆಯನ್ನು ವಿಧಿಸಲ್ಪಡುವುದು.

ಜಿಲ್ಲಾ ಸ. ಕೋರ್ಟಿನಲ್ಲಿ—ಪುತ್ತೂರು ತಾಲೂಕು ಕರೋಪಾಡಿ ಗ್ರಾಮದ ತಾರಿಪುಕಟ್ಟೆ ಎಂಬಾತನ ಕೊಲೆಯ ಮೊಕದ್ದಮೆಯಲ್ಲಿ ಮರಾಬಾಡಿ ಕೃಷ್ಣ ಭಟ್ಟರಿಗೆ ೬ ವರ್ಷದ ಕಠಿಣ ಸಜೆಯನ್ನೂ, ಸೇರಜೆ ನಾರಾಯಣ ಭಟ್ಟ ಮತ್ತು ಗೋವಿಂದ ಭಟ್ಟರಿಗೆ ೧೮ ತಿಂಗಳ ಕಠಿಣ ಸಜೆಯನ್ನೂ ವಿಧಿಸಲಾಗಿದೆ. ಮುಗುಳಿ ರಾಮಕೃಷ್ಣ ಭಟ್ಟ ಎಂಬವರ ಬಿಡುಗಡೆಯಾಗಿದೆ ಎಂದು ತಿಳಿದು ಬರುತ್ತದೆ.

ಅರಿಷ್ಟಗಳಿಗೆ ಲೈಸನ್ಸು—...ಜಾನಿಸರೋಧ ಕಾನೂನು ಪ್ರಕಾರ ಯಾರೂ ಮದ್ಯಸಾರಿಷ್ಟಗಳನ್ನು ಲೈಸೆನ್ಸು ಪಡೆಯದ ವಿನಾ ಇಟ್ಟುಕೊಳ್ಳಕೂಡದು. ದ್ರಾಕ್ಷಾ, ಮೃದ್ವಿಕಾ, ನಾರಿಕೇಳ, ಖರ್ಜೂರ ಮತ್ತು ಪಿಪ್ಪಲ್ಯಾಸವಾರಿಷ್ಟಗಳನ್ನು ಇಟ್ಟುಕೊಂಡವರು ತಮ್ಮ ಸರ್ಕಲಿನ ಡೆಪ್ಯುಟಿ ಪ್ರೊಹಿಬಿಷನ್ ಆಫೀಸರರಿಗೆ ಕೂಡಲೇ ತಿಳಿಸಬೇಕು. ಲೈಸನ್ಸು ಮೂರು ವಿಧ. ಎಲ್ಲಾ ಅಥವಾ ಬೇಕಾದಷ್ಟೆ ತರದ ಲೈಸನ್ಸಿಗೆ ಅರ್ಜಿ ಮಾಡುವರೆ ಅರ್ಜಿಗೆ ೨ ಅಣೆ ಅರ್ಜಿ ಸ್ಟಾಂಪು ಹಚ್ಚತಕ್ಕದ್ದು. ಸಂಘದ ಮೂಲಕ ಯಾ ಖಾಸಗಿಯಾಗಿ ಕಳಿಸಬಹುದು. ಖಾಸಗಿ ವೈದ್ಯ ವೃತ್ತಿಯವರಿಗೆ ತಮ್ಮ ರೋಗಿಗಳಿಗೆ ಮಾರಲು ಅವಶ್ಯವಿದ್ದಷ್ಟು ಆಸವಾರಿಷ್ಟಗಳನ್ನು ತಯಾರಿಸಿಟ್ಟುಕೊಳ್ಳುವುದರ ಲೈಸೆನ್ಸಿಗೆ ೧ರೂ. ಚಾರ್ಜು. ಇವರು ಮೊದಲು ಹೇಳಿದ ದ್ರಾಕ್ಷಾಸವಾದಿಗಳನ್ನು ತಯಾರಿಸಕೂಡದು. ಔಷಧಾಲಯಗಳಿಗೆ ಎಲ್ಲಾ ಆಸವಾರಿಷ್ಟಗಳನ್ನು ತಯಾರಿಸಿ ಮಾರುವ ಬಗ್ಗೆ ಲೈಸೆನ್ಸಿಗೆ ರೂ. ೧೦/- ಆಸವಾರಿಷ್ಟಗಳನ್ನೂ ಇತರ ಮದ್ಯಾಂಶಗಳನ್ನೂ ತರಿಸಿ ಮಾರಾಟ ಮಾಡುವ ಲೈಸೆನ್ಸಿಗೆ ರೂ. ೨೫/- ಎಂದು ದ. ಕ. ಜಿಲ್ಲಾ ನಿವಿಷ್ಟ ಭಾರತೀಯ ವೈದ್ಯ ಸಂಘದ ಗೌ. ಕಾರ್ಯದರ್ಶಿಗಳು ತಿಳಿಸುತ್ತಾರೆ.

ನೆಹರೂ ಜಯಂತಿಯು—ತಾ. ೧೪ರಂದು ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಆಚರಿಸಲ್ಪಟ್ಟಿತು. ಅಧ್ಯಕ್ಷರಾದ ಶ್ರೀ ಎಸ್. ಎಸ್. ಕಿಲ್ಲೆಯವರೂ ಶಾಲೆಯ ಕನ್ನಡ ಪಂಡಿತರಾದ ಶ್ರೀ ಪಿ. ಕೆ. ನಾರಾಯಣ ಅವರೂ ನೆಹರುಗಳ ಕುರಿತು ಮಾತನಾಡಿದರು.

ಜಯ ಕೇಫೆಯವರ ಲಕ್ಷ್ಮೀನಿವಾಸದ ಉದ್ಘಾಟನೆಯು—ತಾ ೧೪ರಂದು ಬೆಳಗ್ಗೆ ಡಿ. ಕಲೆಕ್ಟರ್ ಶ್ರೀ ಎಸ್. ಬಾಲಾಜಿರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಎಸ್. ಎಸ್. ಕಿಲ್ಲೆ, ಎಚ್. ರಾಮರಾವ್, ಬಿ. ಮೋಹನರಾವ್, ಎಚ್. ಭೀಮರಾವ್, ಮುಂತಾದವರು ಭಾಷಣ ಮಾಡಿದರು. ಈ ಕಟ್ಟಡದ ವಾಸ್ತುಶಿಲ್ಪಿಗಳಾದ ಶ್ರೀ ವಿ. ಎಂ. ಎಸ್. ರಾವ್ ತಾಳಿತ್ತಾಯರಿಗೂ ಅವರ ಸಹಾಯಕ ಗಂಗಯ್ಯಾಚಾರಿಯವರಿಗೂ ಪದಕಗಳನ್ನು ಅಧ್ಯಕ್ಷರ ಹಸ್ತದಿಂದ ಕೊಡಿಸಲಾಯಿತು.

ವರ್ಗಾವಣೆ—ಕಾಸರಗೋಡು ತಹಶಿಲ್ದಾರರಾದ ಮಿ. ಎಫ್. ಎಂ. ಪಿಂಟೋ ಅವರು ಇನ್ಸ್‌ಪೆಕ್ಟಿಂಗ್ ಅಸಿ। ಟೆಕ್ಸ್‌ಟೈಲ್ ಕಮಿಷನರಾಗಿ ಚಿತ್ತೂರು ಜಿಲ್ಲೆಗೆ ವರ್ಗಾಯಿಸಲ್ಪಟ್ಟಿರುವರೆಂದು ತಿಳಿದುಬಂದಿದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣ್ಜಿ ವ್ಯಾಪಾರಾರ್ಯ,
ರಥಬೀದಿ, ಉಡುಪಿ.

ಕವಿತಾಕಾಮಿನಿ ಕನಸಿಲಿ ಬಂದು! ಕರೆವಳು ಕುಣಿಯಲಿಕೆ!!
ಚೆಲುಕಾಲಂದುಗೆ ಕಿಣಿಕಿಣಿರೆನೆ ನಗೆ! ಯೊಪ್ಪಿಸಿ ಕುಣಿಯಲಿಕೆ!!

ಮುಂದೆ?

ನಾಡಿನ ಪ್ರಸಿದ್ಧ ಕವಿ **ಯಸ್. ವೆಂಕಟರಾಜ**ರಿಂದ ಬರೆಯಲ್ಪಟ್ಟ
ಪ್ರಸಿದ್ಧ ಪ್ರಕಾಶಕರಾದ ಕಿರಿಯರ ಪ್ರಪಂಚದವರಿಂದ ಪ್ರಕಟಿಸಲ್ಪಟ್ಟ

ಕ ವಿ ತಾ ಕಾ ಮಿ ನಿ

ಎಂಬ ಈಗ ತಾನೆ ಹೊರಬಿದ್ದಿರುವ ಪುಸ್ತಕವನ್ನೋದಿರಿ.

ಓದಿದಂತೆ ಮೋದಗೊಳಿಸಿ ಕುಣಿಕುಣಿಸುವ ಕವನಗಳ ಕಟ್ಟು!
ನೋಡಿದಂತೆ ಕಣ್ಮನಗಳನ್ನು ತಣಿಕಿಸುವ ಚಿತ್ರಕಟ್ಟು!!

ಈ ಪುಸ್ತಕಗಳೂ ಕಿರಿಯರ ಪ್ರಪಂಚದ ಇತರ ಪ್ರಕಟನೆಗಳೂ ಸಿಗುವ ಸ್ಥಳಗಳು:—
೧ ನವಭಾರತ ಬುಕ್ ಡಿಪೊ, ಉಡುಪಿ, ೨ ಸ್ಕೂಲ್ ಬುಕ್ ಕಂಪೆನಿ, ಮಂಗಳೂರು ೩ ಎಂ. ಯಸ್. ಮಯ್ಯ, ಪುತ್ತೂರು. ೪ ಯುನ್. ಎಸ್. ರಾವ್ ಬ್ರದರ್ಸ್ ಬೆಂಗಳೂರು ಸಿಟಿ. ೫ ಯು. ಆರ್. ಶೆಣೈ ಯಂಡ್ ಸನ್ಸ್, ಮಂಗಳೂರು, ೬ ಜಯಂತ್ ವಿಜಿನ್ಸ್, ಸಿದ್ಧಾಪುರ, ೭ ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು ಸಿಟಿ. ೮ ಮನೋಹರ ಗ್ರಂಥ ಭಂಡಾರ, ಧಾರವಾಡ. ೯ ವಾಗ್ವಿಲಾಸ ಬುಕ್ ಡಿಪೊ, ಮುಲ್ಕಿ.

NOTICE.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.
S. C. 592/1947.

ವಾದಿ—ರಾಮ ಪೂಜಾರಿ.

ಪ್ರತಿವಾದಿರು—1 ಯಂಕ. 2 ರಾಮ— ಮೊಗೇರ ವೀರು ಹೆಂಗ್ಸಿನ ಮಕ್ಕಳು, ಸೂಜಾಡಿ ಗ್ರಾಮದ ಬಗ್ವಾಡಿ ವೈಶದ ಪಿತ್ತಿಕ್ಷರು ಪರರು.

1 ನೇ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ.

ವಾದಿಗೆ ನೀನು ಕೊಡಾ ಪ್ರತಿವಾದಿರು ಬರಕೊಟ್ಟ ದಿನಮಂಚು ನೋಟಿನ ಹಣ ಬಡ್ಡಿ ಬಗ್ಗೆ ನಿಮ್ಮ ಮೇಲೆ ಮೇಲಿನ ದಾವೆಯನ್ನು ಮಾಡಿದ್ದಾಗಿರುತ್ತದೆ. ಸದ್ರಿ ದಾವೆಯು ತಾ 26-11-47ಕ್ಕೆ ತಸ್ಕಿಗೆಬಿಟ್ಟಿದೆ, ಆ ಕುರಿತು ನಿನ್ನ ಆಕ್ಷೇಪವಿದ್ದರೆ ಹಗಲು 11ಗಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ವಾಬ್ ಕು ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ತಿಳಿಸಿರುತ್ತದೆ.

By order of the Court.
Y. Tejappa Shetty
Advocate for plaintiff.
Coondapoor 12-11-1947.

ತಯಾರಾಗುತ್ತಿದೆ—
ಸರ್ವಧಾರಿ ಸಂವತ್ಸರದ

ಪಂಚಾಂಗ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್!
ಜಾಹೀರಾತುದಾರರಿಗೆ ಉತ್ತಮ ಸಂದರ್ಭ! ವಿವರಕ್ಕೆ ಬರೆಯಿರಿ—
ಮೆನೇಜರ್,
ನವಯುಗ ಪ್ರೆಸ್, ಉಡುಪಿ.

ಹಳ್ಳಿಯ ರೈತ

ಕಂಟ್ರೋಲು ಮತ್ತು ಫ್ರೀಕೊಳ್ಳುರ್‌ಮೆಂಟು ಕುರಿತು ರೈತನ ಅಭಿಪ್ರಾಯ ಕೊಡುವುದು ಅಷ್ಟನ್ನು ಆವಶ್ಯ ತೋರುವುದಿಲ್ಲ. ಮಹಾತ್ಮಾಜಿಯವರು ಪ್ರಾತ್ರಃ ಅವರ ಪ್ರಾರ್ಥನೆಯಲ್ಲಿ ಹೆಚ್ಚಿನ ಎಂದರೆ 6 ತಿಂಗಳೊಳಗೆ ಕಂಟ್ರೋಲು ತೆಗೆಯಬೇಕೆಂದು ಇನ್ನಷ್ಟು ಒತ್ತಿ ಹೇಳಿರುವರು. ಕೆಲಸ ಮಾಡಿಕೊಳ್ಳುವವರು ಮುದಿಯರೂ ಮಾಡುತ್ತಿರುವವರ ಸಮಾಧಾನ ಮತ್ತು ಸುಖ ಸಂತೋಷಕ್ಕಿದ್ದುದೆಂದು ಹೇಳುವರು. ಕಂಟ್ರೋಲು ತೆಗೆಯಬೇಕೆಂಬ ಅಭಿಪ್ರಾಯ ಹೆಚ್ಚಾಗಿ ಎಲ್ಲಾ ಕಡೆಗಳಿಂದಲೂ ಮುಂದೆ ಬರುತ್ತಿದೆ. ಸ್ವಾತಂತ್ರ್ಯದ ಹೊಸಯುಗದಲ್ಲಿ ಅವಳತೆಗೆ ಕೈಕೊಟ್ಟವರು ಹಿಂದಿನ ರೀತಿ ನೀತಿಗಳನ್ನು ಬಿಟ್ಟು ಜಾಗ್ರತರಾಗಬೇಕಷ್ಟೇ! ರೈತನೂ ಅವನಲ್ಲಿ ಯಾಚಿಸಿಕೊಂಡಿದ್ದ ಇತರರೂ ನಿಶ್ಚಯಿಸಿ ಆವರವರ ಕೆಲಸವನ್ನು ಮಾಡಬೇಕಾಗಿದೆ. ಯೋಜನೆಯು ಮಿತಿಯುಳ್ಳದ್ದಾಗಿದ್ದು ಬೇಗನೇ ಸ್ವಾವಲಂಬಿಯಾಗಿ ಬೆಳೆಯುವುದು ಅಗತ್ಯ. ಕಂಟ್ರೋಲು ತೆಗೆದು ಹಾಕಬೇಕೆನ್ನುವಾಗಲೂ ಉತ್ಪತ್ತಿಯನ್ನು ಹೆಚ್ಚಿಸುವುದು ಪ್ರತಿಯೊಬ್ಬ ರೈತನ ಆದ್ಯ ಕೆಲಸ ಮತ್ತು ಧರ್ಮ. ಪ್ರತಿ ರೈತನ ವರ್ಗದಲ್ಲಿ ಎಷ್ಟರ ಸ್ಥಳಗಳು ಬಂಜರು ಇಲ್ಲ; ಅನೇಕ ಮೂಲೆ ಮತ್ತು ಖಾಲಿ ಸ್ಥಳಗಳಲ್ಲಿ ತರತರದ ಸಸಿಗಳನ್ನು ನಡಬಾರದು? ಎಲ್ಲೆಲ್ಲಿ ಅನಾರೋಗ್ಯಕ್ಕೆ ಕಾರಣವಾದ ಸುವಗಗಳನ್ನು ಮುಚ್ಚಿ ಕೃಷಿ, ಕಾಯಿ ಪಲ್ಯಗಳನ್ನು ಬೆಳೆಸಲಾಗದು? ಎಲ್ಲವರೂ ಈ ರೀತಿ ಪ್ರಯತ್ನಿಸಿದುವಾದರೆ ನಮ್ಮ ಜಿಲ್ಲೆಯ ಆಹಾರ ತುಟ್ಟಿ ಸುಲಭವಾಗಿ ತೊಲಗಿ ಹೋಗಿ, ಆರೋಗ್ಯ ತನ್ನಂತೆ ಏರಿ, ಆಸ್ಪತ್ರೆಗಳು ಬೇಡವಾಗಿ ಕಂಡು ಬಂದು, ಜೀವನದ ಮಟ್ಟವು ಅದಾಗ ಸರಿ ಬಾರದೆ?

ನಾಲ್ಕೈದು ವರ್ಷಗಳ ಹಿಂದೆ ಕಂಕನಾಡಿ, ಜಪ್ಪಿನಮೊಗರಿನ ಬಳಿ ಸೂಟರ್ ಪೇಟೆಯ ಹತ್ತಿರ ನವೀನ ಬೀಜಗಳನ್ನು ಹುಡುಕಿ ಶೇಖರಿಸಿದುವ ಹೊಲವನ್ನು ಸರಕಾರವು ಸ್ಥಾಪಿಸಿರುತ್ತದೆ. ಈ ಮುಂಚೆ ಹರಟೆಲ್ಲಿಗೆ ಇತಿಹಾಸವನ್ನು ನೋಡಬೇಕಿತ್ತು. ಮಂಗಳೂರಿಗೆ ಹೋಗಿ ನಮ್ಮಲ್ಲಿ ಅನೇಕ ರೈತರು ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಆಗಾಗ ಹೋಗಿ ಬರುತ್ತಿರುವರು. ನಮ್ಮೂರ ರೈತರು ಬಹು ವರ್ಷದ ಅನುಭವವಿದ್ದು ತಿಳಿದವರು. ಬಾಯಿಗೆ ಇಟ್ಟುಕೊಡಬೇಕೆಂದು ಹೇಳುವ ಮಾತು ರೈತನವಲ್ಲ. ಆದರೂ ನಮ್ಮ ಕಾಲಡಿಯಲ್ಲಿರುವಾಗಲೂ ನಾವೆಷ್ಟು ರೈತರು ಕಂಕನಾಡಿಗೆ ಹೋಗಿ ನಮ್ಮಲ್ಲಿರುವ ಅನುಭವದ ಕುಂದು ಕೊರತೆ ತೆಗೆಯಲು ಪ್ರಯತ್ನಿಸಿರುವೆವು? ಪ್ರತಿ ರೈತನು ಹೋಗಿ ನೋಡಬೇಕೆಂಬುದೇ ಈ ಲೇಖನದ ಅಭಿಪ್ರಾಯ.

ಮೂಲ್ಕಿ ಗ್ರಾಮಾಭಿವೃದ್ಧಿ ಕ್ಷೇತ್ರದಿಂದ ಕಳೆದ ಎಪ್ರೀಲ್ ಮತ್ತು ಸೆಪ್ಟೆಂಬರ ತಿಂಗಳಲ್ಲಿ 21 ರೈತರಂತೆ ಒಟ್ಟಾಗಿ ಅಲ್ಲಿ ಹೋಗಿದ್ದರು. ಸರಕಾರದ ಹಣವಿದೆಯೆಂದು ಬಹುವಾಗಿ ಖರ್ಚು ಮಾಡದೆ, ರೈತರೆಲ್ಲರಿಗೂ ಸಾಧ್ಯವಿರುವ, ಸೂಕ್ಷ್ಮರೀತಿಯಲ್ಲಿ, ಕ್ರಮವಾಗಿ, ಎಲ್ಲವೂ ಇಡಲ್ಪಟ್ಟಿದೆ. ಅನಾರೋಗ್ಯಕರವಾದ ಹಸಿ ಎಲೆಯ ಗೊಬ್ಬರದ ರಾಶಿ ಮೇಲೆ ಕಟ್ಟಿದ ಸಿಮೆಂಟು ಹಾಕಿದ ನಿರ್ಮಲದ ನೆಲದಲ್ಲಿ. ಕಟ್ಟಿ ದಿನವೊಂದರ 1 ಸೇರು ಸಾರುಳಿ ಮೊಳಕೆ ಹುಟ್ಟಿಸಿ, 1 ಸೇರು ನೆಲಕಡಲೆ ಹಿಂಡಿ, 1 ಔನ್ಸು ಉಪ್ಪು ಮತ್ತು ಮಿನರಲ್ ಮಿಕ್ಸಚರ್ ಕೊಟ್ಟು, ಸಾಕಿದ ಕೋಣಗಳು ಅತೀ ಆಕರ್ಷಣೀಯವಾಗಿದ್ದುವು. ಗೊಬ್ಬರವನ್ನು ತಯಾರಿಸುವ ಹೊಂಡ ಇದ್ದ ಹೊಂಡ, ಹೋಗಿ ಬರಲಿಕ್ಕಿದ್ದ ದಾರಿ, ಗದ್ದೆಗಳಲ್ಲಿದ್ದ ಮೂಲೆಗಳನ್ನು ತೆಗೆದು ನೇರವಾಗಿ ಹಾಕಿದ್ದ ಹುಣಿ ಬೀಜವನ್ನು ಬೇರೆ ಬೇರೆಯಾಗಿ ಶೇಖರಿಸಿಟ್ಟ ರೀತಿ, ಭತ್ತ, ಬೀಜಗಳನ್ನು ಒಣಗಿಸಲು ಸಿಮೆಂಟು ಹಾಕಿದ ಎತ್ತರದ ಅಂಗಳ, ಯಾವುದೊಂದು ಕಡೆಯಲ್ಲಿಯೂ ಕಸಕಡ್ಡಿ ಕೊಳೆಗಳಿಲ್ಲದೆ ನಿರ್ಮಲವಿದ್ದುದು, ಪ್ರತಿ ರೈತನು ತನ್ನ ವರ್ಗದಲ್ಲಿ ಏಕೆ ಮಾಡಕೂಡದು, ಮತ್ತು ಮಾಡಬೇಕೆಂಬ ಭಾವನೆಯನ್ನು ಎಪ್ರೀಲು ತಿಂಗಳಲ್ಲಿ ಹೋದಾಗ ಹುಟ್ಟಿಸಿ ಕೊಡುತ್ತಿದ್ದುವು. ಸೆಪ್ಟೆಂಬರ ತಿಂಗಳಲ್ಲಿ ಇನ್ನಷ್ಟು ಸಂತೋಷದ ಪಾಠಕಲಿಯಲು ಎಡೆಯಿತ್ತು. ಮೊಣಕಾಲುದ್ದ ನೀರು ತುಂಬಿರುವ ಗದ್ದೆ, ನೆರಳಿನಡಿಯ ಚೌಳಿಗದ್ದೆ, ಕಲ್ಲು ತುಂಬಿದ ಬರಿಯ ಬೆಟ್ಟುಗದ್ದೆ, ಎಲ್ಲದರಲ್ಲಿಯೂ ಒಂದೇ ತರದ ಬೆಳೆ ಬರುವಂತೆ ತರತರದ ಉಪಯುಕ್ತ ಬೀಜಗಳನ್ನು ನಟ್ಟು ಇನ್ನು ಅನೇಕ ಬೀಜಗಳ ಪರೀಕ್ಷೆಯನ್ನು ನಟ್ಟು ಮಾಡುವಾಗಲೂ ಒಂದೇ ಸಮನಾಗಿ ಬೆಳೆದು ಬಂದ ಉತ್ತಮ ಫಸಲಿನಿಂದ ಕೂಡಿರುವ ಪೈರು ಎಲ್ಲರಿಗೂ ಪಾಠ ಕೊಡುತ್ತಿದ್ದುವು. ಆ 25 ಎಕ್ರೆ ಭೂಮಿಯ ವಿಸ್ತೀರ್ಣದಲ್ಲಿ ಉಳಿದಿರುವ ಅಲ್ಪಸ್ವಲ್ಪ ಖಾಲಿಸ್ಥಳದಲ್ಲಿ ಒಂದಲ್ಲ ಒಂದು ರೀತಿಯ ಕಾಯಿಪಲ್ಯ ಮರಗೆಣಸುಗಳ ಫಲ ತುಂಬಿದ ಸಾಲುಗಳಿದ್ದುವು. ಗೆಲ್ಲುಗಳನ್ನು ಇಡಲು ಕಡಿದು, ಗೊಬ್ಬರದ ಗುಳಿಗೆ ಹಾಕಲು ಅನುಕೂಲ ಕೊಡುವ, ಗೊಬ್ಬರದ ಮರ ಸಸಿಗಳು ಹೋಗುವ ದಾರಿಯ ಇಬ್ಬದಿಯ ಇಕ್ಕೆಲಗಳಲ್ಲಿಯೂ ನಡಲ್ಪಟ್ಟಿದ್ದುವು. ಆ ಇಡೀ ಕ್ಷೇತ್ರದಲ್ಲಿ ಒಂದು ಕೋಲಿನ ಸ್ಥಳವೂ ಖಾಲಿ ಕಂಡು ಬರಲಿಲ್ಲ. ನಮ್ಮ ಸಣ್ಣ, ದೊಡ್ಡ ರೈತ ವರ್ಗದಲ್ಲಿ ನಾವೆಷ್ಟು ಮಂದಿ ಈ ರೀತಿ ಇಡಲು ಸಾಧ್ಯವಿದೆಯೆಂದು ಆ ಹೊಲವನ್ನು ಹೋಗಿ ನೋಡುವುದು ಪ್ರತಿಯೊಬ್ಬರಿಗೂ ಅಗತ್ಯ.

ಈ ಹೊಲದ ಮೆನೇಜರ್ ಶ್ರೀ. ಕೆ. ಹನುಮಂತರಾಯರೂ, ಅವರ ಪ್ರತಿಯೊಬ್ಬ ತಾಬೆದಾರರೂ ಹೋದವರಿಗೆ ಬೇಕಾದ ಸಲಹೆಗಳನ್ನು ಕೊಟ್ಟು ಹೊಲದಿಂದ ದೊರಕಿರುವ ಬಹುವಾದ ಪ್ರಯೋಜನವನ್ನು ಮನದಟ್ಟಾಗುವಂತೆ ಸುಲಭವಾಗಿ ಹೇಳಿ ಅಲ್ಲಿ ನಡೆಯುವ ಎಲ್ಲಾ ಕೆಲಸಗಳನ್ನು ತೋರಿಸಿಕೊಟ್ಟು ಬಂದ ಎಲ್ಲವರನ್ನು ಸಂತೋಷಗೊಳಿಸುತ್ತಿರುವರು.

ಮೂಲ್ಕಿ ಸಾವಂತರ ಕಂಬಳ, ಜಿಲ್ಲೆಯಲ್ಲಿ ಎಲ್ಲಾ ರೈತರು ಕೇಳಿರಬೇಕು. ಈ ಕಂಬಳ ಗದ್ದೆಯು ಬೈಲು ಚೌಕದಲ್ಲಿ ಮಂಗಳೂರಿನಿಂದ 15·2ನೇ ಮೈಲು, ಬಳಿ ಮಾರ್ಗದ ಪಡು ದಿಕ್ಕಿನ ಮತ್ತು ಒತ್ತಿನ 1 ಎಕ್ರೆ ಗದ್ದೆಯಲ್ಲಿ 5 ತರದ ಸುಗ್ಗಿಯ ಬೀಜದ ನೇಜಿಯನ್ನು ಹೊಸ ಕ್ರಮದಲ್ಲಿ ಅನೇಕರು ನೋಡುವಂತೆ ಕಂಕನಾಡಿ ಹೊಲದವರು ನಟ್ಟಿರುವರು. ಸಾವಂತರ ಕಂಬಳ ದಸಂಬರ ತಾ 26ಕ್ಕೆ. ಕೋಣಗಳು ಇಳಿಯುವ ಸಂದರ್ಭ ಆಗಾಗ ಇರುವುದು. ಬಸ್ಸುಗಳಿಂದ ಹೋಗಿ ಬರುತ್ತಾ ಒಮ್ಮೆ ನಿಲ್ಲಿಸಿ ನೋಡುವ ಅನುಕೂಲವೂ ಇದೆ. ಈ ಗದ್ದೆಯಲ್ಲಿ ಸಂಪಸರಿ ಅರು ಮುಡಿ ಅಕ್ಕಿಯ ಬೆಳೆ ಬರುತಿತ್ತು. ಕ್ರಮವಾಗಿ ಹಾಕುವ ಹಟ್ಟಿ ಗೊಬ್ಬರವಲ್ಲದೆ 7 ಗೋಣಿ ಬೂದಿ, 1 ಗೋಣಿ ನೆಲಕಡಲೆ ಹಿಂಡಿ ನಡುವದಿನ ಹಾಕಿಸಿ, ಎಷ್ಟು ಹೆಚ್ಚಿನ ಬೆಳೆಬರುವುದೆಂದು ನೋಡುವುದಕ್ಕಂತಲೂ ಯಾವ ಬೀಜದಿಂದ ಹೆಚ್ಚಿನ ಬೆಳೆ ನಮ್ಮ ಗದ್ದೆಗಳಲ್ಲಿ ಬರುವುದೆಂದು ಪರೀಕ್ಷಿಸುವುದೇ ಕಂಕನಾಡಿಯವರ ಪ್ರಯತ್ನವಾಗಿರುತ್ತದೆ. ಅನುಕೂಲವಿದ್ದ ಅನೇಕ ಕಡೆಗಳಲ್ಲಿ ರೈತರು, ಮೂರು ಬೆಳೆಗಳಿಗೂ ಶೋಧಿಸಿ ಶೇಖರಿಸಿರುವ ತರತರದ ಬೀಜಗಳನ್ನು ಇದೇ ರೀತಿ ಪರೀಕ್ಷಿಸಿ ಉತ್ತಮ ಬೆಳೆ ಕೊಡುವುದನ್ನು ಆವರವರ ಪ್ರಾಂತ್ಯದಲ್ಲಿ ಪ್ರಚಾರಕ್ಕೆ ತರುವಂತೆ ಯತ್ನಿಸುವುದು ರೈತರಾದ ನಮ್ಮೆಲ್ಲರ ಕರ್ತವ್ಯವೆಂಬ ಅಭಿಪ್ರಾಯ ಇಲ್ಲಿ ಹುಟ್ಟಿ ಬರುವುದು.

ಎಸ್. ಆರ್. ಪೂಂಜ,
ಕಾರ್ಯದರ್ಶಿ.
ಮೂಲ್ಕಿ ಗ್ರಾಮಾಭಿವೃದ್ಧಿ ಕಮಿಟಿ.
ಮುಲ್ಕಿ 9-11-'47

ದಕ್ಷಿಣ ಕನ್ನಡ

ಮೂಲ್ಕಿ ಗ್ರಾಮಾಭಿವೃದ್ಧಿ:— ಕಾರ್ಯಕ್ರಮದ 3ನೇ ಕೃಷಿ, ಕೈಗಾರಿಕೆ ಪ್ರದರ್ಶನವನ್ನು 1948ನೇ ಫೆಬ್ರವರಿ ತಿಂಗಳ ತಾ 27, 28, 29ಕ್ಕೆ ಮುಂಡ್ಕೂರಲ್ಲಿ ಜರಗಿಸುವುದಾಗಿ ನಿಶ್ಚಯವಾಗಿರುತ್ತದೆ. ರೂ. 5/-ರಿಂದ ರೂ. 50/-ರ ವರೆಗಿನ ಅನೇಕ ಬಹುಮಾನಗಳೂ, ಗ್ರಾಮಾಭಿವೃದ್ಧಿ ಕ್ಷೇತ್ರದೊಳಗಿನ ಶಾಲೆಗಳಲ್ಲಿ ಆಟ ಪಾಟಗಳ ಪಂದ್ಯಾಟಕ್ಕೆ ರೋಲಿಂಗ್ ಕಪ್ಪುಗಳೂ, ಉತ್ತಮ ತರದ ಗ್ರಾಮಾಭಿವೃದ್ಧಿ ಕೆಲಸ ಮಾಡುವ ಪಂಚಾಯತ ಬೋರ್ಡು, ಸಹಕಾರ ಸಂಸ್ಥೆಗಳಿಗೆ ಶೀಲ್ಡುಗಳೂ ಕೊಡುವುದಾಗಿ ನಿರ್ಧರಿಸಲ್ಪಟ್ಟಿದೆ. ಪ್ರದರ್ಶನವು ಗ್ರಾಮಾಭಿವೃದ್ಧಿ ಕ್ಷೇತ್ರಕ್ಕೆ ಮಾತ್ರವಲ್ಲ, ಇಡೀ ಜಿಲ್ಲೆಗೂ, ಹೊರಗಿನವರಿಗೂ ಪ್ರಯೋಜನಕಾರಿಯಾದುದು, ಜರಗಿಸುವುದು ಅತೀ ಕಷ್ಟ. ಕೃಷಿಕರೂ, ಕೈಗಾರಿಕೆಯವರೂ, ಇನ್ನಿತರ ಅನೇಕರೂ ಸಹಕಾರವನ್ನು ಅತೀ ಸುಲಭವಾಗಿ ಕೊಡಬಹುದು. ಪ್ರದರ್ಶನವು ಯಶಸ್ವಿಯಾಗುವುದು, ಗ್ರಾಮಾಭಿವೃದ್ಧಿ ಕ್ಷೇತ್ರಕ್ಕೂ, ಜಿಲ್ಲೆಗೂ ಯಶಸ್ಸು ಇರುವುದು. ಗ್ರಾಮಾಭಿವೃದ್ಧಿ ಕ್ಷೇತ್ರದ ಗ್ರಾಮಗಳಲ್ಲಿ ನಿರ್ಮಲತೆ ಕುರಿತು ಎಚ್ಚರವಿ ತೋರಾಗಲಿ.

ಪ್ರದರ್ಶನದಲ್ಲಿ ಸ್ಟಾಲಿಗೆ ಫೀಸು ಪಡೆಯಬಾರದಾಗಿ ನಿಶ್ಚಯವಿದೆ. ಬೇಕಾದ ಸ್ಥಳಕ್ಕೆ ಚದರ್ ಫೂಟ್ ಲೆಕ್ಕದಲ್ಲಿ ತಿಳಿಸಿ ಪ್ರದರ್ಶನಕ್ಕೆ ಬರುವವರು ಮತ್ತು ಸ್ಪರ್ಧಿಸಲಿರುವವರು ಆದಷ್ಟು ಬೇಗನೇ ಬರಕೊಳ್ಳುವದು ಎಂದು ಕಮಿಟಿಯ ಕಾರ್ಯದರ್ಶಿ ಶ್ರೀ. ಎಂ. ಆರ್. ಪೂಂಜರು ಬರೆಯುತ್ತಾರೆ.

ಕುಂದಾಪುರ— ಬಂಟರ ಯಾನೆ ನಾಡವರ ಸಂಘದ ಮಹಾ ಸಭೆಯು ಇದೇ ಬರುವ ದಸಂಬರ ತಿಂಗಳ ಕ್ರಿಸ್ತಮಸ್ ರಜೆಯ ಸಮಯ ಕುಂದಾಪುರ ಟೌನಿನಲ್ಲಿ ನಡೆಯಲಿರುವುದು. ಸ್ವಾಗತ ಕಮಿಟಿಯನ್ನು ರಚಿಸಲಾಗಿಯದೆಂತಲೂ, ಮಹಾಸಭೆಯ ತಾರೀಕು ಮತ್ತು ಅಧ್ಯಕ್ಷರ ಹೆಸರು ಮೊದಲಾದ ವಿವರಗಳನ್ನು ಬರುವವಾರ ಪ್ರಕಟಿಸಲಾಗುವದೆಂದೂ, ತಿಳಿದುಬರುತ್ತದೆ.

ತಾ 9-11-47ರಂದು ಕುಂದಾಪುರ ತಾಲೂಕು, ಬೋರ್ಡ್ ಅಧ್ಯಾಪಕರ ಯೂನಿಯನ್ನಿನ ಮಹಾಸಭೆಯು ವಡೇರಹೋಬಳಿ ಬೋರ್ಡ್ ಶಾಲೆಯಲ್ಲಿ ಜರಗಿತು. ಯೂನಿಯನ್ನಿನ ಅಧ್ಯಕ್ಷರ ಬಲದಿಂದ ಮಹಾಸಭೆ ಜರಗಿಸಿದ ಅವಶ್ಯಕತೆಯ ಕುರಿತು ಸುರಸವಾದ ಭಾಷಣದ ನಂತರ ಯೂನಿಯನ್ನಿನ ಕಡೆಯಿಂದ ಮಾನ್ಯ ವಿದ್ಯಾಮಂತ್ರಿಗಳಿಗೆ ಉಪಾಧ್ಯಾಯರ ಮುಖ್ಯವಾದ ಕೋರಿಕೆಗಳ ಒಂದು ಮೆಮೋರಿಯಲ್ ಕಳುಹಿಸುವುದೆಂತಲೂ ಇಂತಹ ಮೆಮೋರಿಯಲ್ ಈ ಜಿಲ್ಲೆಯ ಬೇರೆ ತಾಲೂಕು ಯೂನಿಯನ್ನಿಂದಲೂ ಇದೇ ಸಂದರ್ಭದಲ್ಲಿ ಕಳುಹಿಸುವಂತೆ ಪ್ರಯತ್ನಿಸುವುದಕ್ಕೆ ಈ ಯೂನಿಯನ್ನಿನ ಇಬ್ಬರು ಪ್ರತಿನಿಧಿಗಳನ್ನು ಕಳುಹಿಸುವುದೆಂತಲೂ, ಈ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಅಧ್ಯಾಪಕರಿಗೆ ಮಾತ್ರ ಅವರ ಹಿಂದಿನ ಸರ್ವಿಸ್ಸಿಗೆ ಭಡ್ತಿ (increment) ಇಲ್ಲವೆಂಬ ಹುಕ್ಮಂ ಕುರಿತು ಪಶ್ಚಾತ್ತಾಪ ಸೂಚಿಸುವದಕ್ಕಾಗಿ ಮತ್ತು ಶ್ರೀ ಭಗವಂತನು ಬಡ ಉಪಾಧ್ಯಾಯರ ಗೋಳನ್ನು ಆದಷ್ಟು ಬೇಗನೆ ಪರಿಹರಿಸುವುದಕ್ಕೂ ತಾ 17-11-47ನೇ ಸೋಮವಾರದಿಂದ ಮೊದಲುಗೊಂಡು ಪ್ರತಿ ಸೋಮವಾರ ಉಪವಾಸ ಆಚರಿಸಿ ದೇವರನ್ನು ಪ್ರಾರ್ಥಿಸುವುದೆಂತಲೂ, ಈ ಯೂನಿಯನ್ನಿನ ಫಂಡಿನಿಂದ ನಮ್ಮ ಮದ್ರಾಸು ಅಧಿಪತ್ಯಕ್ಕೆ ನಿರಾಶ್ರಿತರಾಗಿ ಬಂದ ಜನರ ಸಹಾಯಾರ್ಥವಾಗಿ ಏರ್ಪಡಿಸಲ್ಪಟ್ಟ ಸರಕಾರದ ಫಂಡಿಗೆ ಯಥಾನುಶಕ್ತಿ ಧನ ಸಹಾಯ ಮಾಡುವದೆಂತಲೂ ಮುಂತಾದ ಅನೇಕ ಠರಾವುಗಳು ಸರ್ವಾನುಮತದಿಂದ ನಿರ್ಣಯವಾಗಿ ಧನ್ಯವಾದದ ಸಭೆಯು ಮುಕ್ತಾಯವಾಯಿತು.

ಸೂಡ— ಸೂಡ ಬೋರ್ಡು ಎಲಿಮೆಂಟರಿ ಶಾಲೆಯ ಚಿತ್ತಿನ ವಾರ್ಷಿಕ ಕೂಟವು ತಾ 9-11-47ರಲ್ಲು ಮಂಗಳೂರು ರೇಂಜ್ ಶಾಲೆಗಳ ಜೂನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿದ ಸಂದರ್ಭದಲ್ಲಿ ಗ್ರಾಮಸ್ಥರು ಈ ಶಾಲೆಗೆ 30 ಮಕ್ಕಳ ಸ್ಥಳಾವಕಾಶವನ್ನು ಒದಗಿಸಿಕೊಡುವರೆ ಒಪ್ಪಿದುದು ಶ್ಲಾಘನೀಯ.



Approved firm by the Govt. of Mysore Certified by the Agent of the Govt. of Ceylone & Indian.

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು

ಮನೆಮದ್ದು	2 0 0	ನಗೆನೋಟಗಳು	0 14 0	ಪ್ರತೀಕಾರ	0 6 0
ಮಧುವನ	3 0 0	ನಾಡ ಕತೆಗಳು	0 3 0	ಪ್ರೇಮಪ್ರವಾಹ	0 8 0
ಕವಿತಾಕಾಮಿನಿ	2 0 0	ಕುಶಲವ	0 6 0	ಆರೋಗ್ಯಪ್ರತಾಪ	0 12 0
ಕದಂಬ	1 4 0	ಸುಲಭದಲ್ಲಿ ಇಂಗ್ಲಿಷ್	1 8 0	ಅಂತರಂಗದ ಕತೆಗಳು	0 12 0
ಜೀವನಸಂಗ್ರಾಮ	1 8 0	ವ್ಯಭಿಚಾರಿಣಿ ಯಾರು	1 0 0	ಶಂಭುಕವಧೆ	0 2 0
ಸಂಶಯ ಪಿಶಾಚಿ	0 8 0	ಹೆಂಡ್ತಿ ಗಂಡನಾದರೆ	0 4 0	ವೀರಭೂಮಿ	0 2 0
ಕಾವ್ಯಸಾಮ್ರಾಜ್ಯ	1 4 0	ಸನ್ಯಾಸಿಯ ರೋಗಿನಲ್ಲಿ	0 8 0	ಧರ್ಮಸಂಕಟ	0 4 0
ಪ್ರೇಮವಿಜಯ	1 0 0	ಭಾರತೀಯ ಕತೆಗಳು	0 14 0	ಮೀರಾಬಾಯಿ	0 10 0
ಪುರಾಣವಧು	0 4 0	ಮೂರು ಪ್ರಹಸನಗಳು	0 14 0	ಸರಸ್ವತಿ	0 12 0
ನಂದಾದೀಪ	0 14 0	ಅನ್ನದೇವರು ಕತೆಗಳು	1 0 0	ಸ್ವತಂತ್ರಜೀವನೋಪಾಯ	0 3 0
ದೇಶಭಕ್ತ	1 4 0	ಭಾರತದಲ್ಲಿ ಜಾತಿಭೇದ	1 0 0	ವಿಷ್ಣುವಿನ ದಶಾವತಾರಗಳು	0 12 0
ರಂಗಭೂಮಿ	0 8 0	ಪಂಚಾರತಿ	0 6 0	ಆಕೃತಿ ಇತ್ಯಾದಿ ಕತೆಗಳು	0 12 0
ಸೇವಾಪಥ	0 8 0	ಚಿಗುರು	0 6 0		
ನಾರೀಹೃದಯ	0 14 0	ಲೋಪಾಮುದ್ರೆ	0 6 0		
ಪ್ರಕಾಶ	2 4 0				

ನವಭಾರತ ಪುಸ್ತಕ ಭಂಡಾರ, ಉಡುಪಿ

ಲೋಕದ 9ನೇ ಆಶ್ಚರ್ಯ!

ಅಪೂರ್ವ ಸಂದರ್ಭ!

ಎಲ್ಲಾ ತರದ ಕಣ್ಣಿನ ಅಸ್ವಸ್ಥ (ಕಣ್ಣಿನ ಹೂ ಸಮೇತ)ಗಳನ್ನು ಕಣ್ಣಿಗೆ ಯಾವ ತರದ ಔಷಧವನ್ನೂ ಹಾಕದೆ ಕೇವಲ ಕುಡಿಯಲಿಕ್ಕೆ ಔಷಧಕೊಟ್ಟು ಖಾತ್ರಿ ಗುಣಪಡಿಸಲಾಗುವುದು.

ನೇಸ, ಹೃದ್ರೋಗ, ಕ್ಷಯ, ಪಕ್ಷವಾತ, ರಕ್ತದ ಒತ್ತಾಟ, ಮೂತ್ರಪಿಂಡದ ದೋಷ, ನಾಲಗೆಯ ಮೂಲದಲ್ಲಾಗುವ ಮಾಂಸಗ್ರಂಥಿ (ಟೋನ್ಸಿಲ್ಸ್) ಮೊದಲಾದ ಘನ ರೋಗಗಳನ್ನು ಕೂಡ ಬರೇ ಸಿಹಿ ಮದ್ದುಗಳಿಂದಲೇ ಖಂಡಿತ ಶಮನಗೊಳಿಸಲಾಗುವುದು.

The Eye Clinic,
Court Road, opp: Police Station
UDIPI, S. K.

(೩ನೇ ಪುಟದಿಂದ).

ರಂಭಿಸಿ ಸೇಲ್ಸ್‌ಟೇಕ್ಸ್‌ನವರೆಗಿನ ವಿಸ್ತಾರ ಕ್ಷೇತ್ರ ತುಂಬಾ ನಡೆದಿದ್ದವು. ಧೋರಣೆಗಳನ್ನು ರೂಪಿಸುವ ಮಟ್ಟಿಗೆ ಅವರೋರ್ವ ಕಟ್ಟು ನಿಟ್ಟಿನ ಮಂತ್ರಿಯಾಗಿದ್ದರು; ಅದರೆ ಕಾರ್ಯದರ್ಶಿಯ ಪಾಲಿನ ಕರ್ತವ್ಯವಾಗಿದ್ದ ಆಡಳಿತೆಯ ಪ್ರತಿಯೊಂದು ವಿಷಯಗಳೊಳಗೂ ಕೈ ಹಾಕಲು ಹೋಗುತ್ತಿರಲಿಲ್ಲ ಆದರೂ ಹಳೇ ಆಡಳಿತೆಯ ನಿತ್ಯದ ಲೆಕ್ಕಾಚಾರ ಕ್ರಮಗಳ ಒಳಹೊಂದಾಣಗಳನ್ನರಿಯಬಲ್ಲ ಇವರ ಜ್ಞಾನವನ್ನು ಕೇಂದ್ರೀಕರಿಸಿರುವ ಕಡೆಗಣ್ಣಿನಿಂದ ನೋಡಿ, ಆದಿಭಾಗದಲ್ಲೇ ಇವರ ಆಡಳಿತ ಸಾಮರ್ಥ್ಯವನ್ನು ಕಂಡುಕೊಳ್ಳಬಹುದಾಗಿದೆ. ಇವರೋರ್ವ ಯಥಾರ್ಥ ಮಂತ್ರಿಯೋ ಅಥವಾ ಕಾರ್ಯದರ್ಶಿಯೋ, ಯಾರೇ ಆಗಿದ್ದರೂ ಇವರಲ್ಲಿದ್ದ ಗುರಿಯೆಂದರೆ, ತನಗೆ ಸರಿ ತೋರಿದಂತೆ ರಾಷ್ಟ್ರದ ಹಿತ ಸಾಧಿಸಬೇಕು ಮತ್ತು ನ್ಯಾಯ ಪಾಲಿಸಬೇಕೆಂಬುದೊಂದೇ ಹೊರತು, ಅವರ ಕೆಲವು ದೋಷಾರೋಪಿಗಳನ್ನುವಂತೆ ಸ್ವಯಂಪ್ರತಿಭೆಯನ್ನು ಪ್ರಕಾಶಿಸಿ ತೋರಿಸಬೇಕೆಂಬುದಿರಲಿಲ್ಲ. ಅವರ ಭಾವನಾಭಿರುಚಿಗಳನ್ನು ಅಧಿಕಾರ ಮತ್ತು ಆಡಳಿತೆಯು ಕೆದರಿಸಿದುದಿಲ್ಲ.

ಸಾಹಿತಿ—ಸುಧಾರಕ

ರಾಜಾಜಿಯ ಸ್ಪರ್ಶವಾಗದ ಅಥವಾ ಅವರಿಂದ ಚೆಂದಗಾಣಿಸಲ್ಪಡದ ಒಂದೇ ಒಂದು ತುಣುಕಾದರೂ ತಮಿಳು ಸಾಹಿತ್ಯದಲ್ಲಿಲ್ಲ. ಸಣ್ಣಕಥೆಗಳಂತೆಯೇ ವ್ಯಾಸನ ಮಹಾಭಾರತವೂ, ಘನ ಹಾಗೂ ಗಮನಾರ್ಹ ರೀತಿಯಿಂದ, ಇವರ ಶೈಲಿ, ಚಿಂತನೆ ಮತ್ತು ಭಾವನೆಗಳ ಮೂಲಕ ನವಜೀವ ಪಡೆದಿವೆ. ಭಾರತದ ಸ್ವಾತಂತ್ರ್ಯದ ಕವಿ ಭಾರತಿಗೆ ಇವರು ತಮ್ಮ ಹೃದಯದಲ್ಲಿ ಅಮೂಲ್ಯ ಸ್ಥಾನವಿತ್ತಿದ್ದಾರೆ. ಜನರ ಹೃದಯದಲ್ಲಿ ಸಡಿ ಮೂಡಿಸಿಂತಿರುವ ಓರ್ವ ಕವಿಯನ್ನು ಪ್ರತಿಬಂಧ ಶಾಸ್ತ್ರಗಳ ಮೂಲಕ ಉಜ್ಜುತ್ತೆಗೆಯುವುದ ಸಾಧ್ಯವೆಂಬುದನ್ನು ವಿದೇಶೀ ಆಡಳಿತೆಗೆ ... ... ಕೆಲವು ವರುಷಗಳ ಮೊದಲು ಭಾರತಿಯ ಹಲವು ಕವಿತೆಗಳನ್ನು ರಾಜಾಜಿ ಇಂಗ್ಲಿಷಿಗೆ ಭಾಷಾಂತರಿಸಿದ್ದರು.

ಇವರು ಕಾಂಗ್ರೆಸಿನ ಬಲಪಕ್ಷಕ್ಕೆ ಸೇರಿದವರೆಂಬ ಮಾತಿದೆ, ಇದು ಸರಿಯಲ್ಲ. ಸಾಮಾಜಿಕ ಹಾಗೂ ಆಡಳಿತೆಯ ವಿಷಯಗಳ ಮಟ್ಟಿಗೆ ಅವರು ಹಲವು ಕಾಂಗ್ರೆಸಿಗರಿಗಿಂತ ಅಗ್ರಗಾಮಿಯಾದ್ದಾರೆ. ಇಡೀ ದಕ್ಷಿಣ ಭಾರತದಲ್ಲೇ ಪ್ರಥಮತಃ ತನ್ನ ಮಗಳನ್ನು ಓರ್ವ ಬನಿಯನ ಮಗನಿಗೆ ಮದುವೆ ಮಾಡಿಕೊಟ್ಟವರೆಂದರೆ ಇವರೇ. ಎಂದಾದರೂ ಸರಿಯೇ, ಇವರ ಆರ್ಥಿಕ ಹಾಗೂ ಕಾರ್ಯ ನಿರ್ವಹಣಾ ವಿಧಾನಗಳು ಸಂಪ್ರದಾಯದ ವಿರುದ್ಧವಾದುವುಗಳೇ ಇವೆ. ಅವರೊಬ್ಬ ಸಮಪರಿಮಾಣವಾದಿ. ಆರ್ಥಿಕ ಕ್ಷೇತ್ರದಲ್ಲಿಕೂಡಾ ರಾಜಕೀಯ ಹಿಂಸೆಯೇನೂ ಇಲ್ಲದೆ, ಭಾರತದ ಸದ್ಯದ ಆರ್ಥಿಕ ಅಸ್ತವ್ಯಸ್ತತೆಯನ್ನು ಸರಿಗೊಳಿಸುವದಕ್ಕಾಗಿಯೇ ಇವರ ತತ್ವಗಳಿದ್ದಲ್ಲಿ ಸಮತಾವಾದಕ್ಕಾದರೂ ಅವರ ವಿರೋಧವಿಲ್ಲ.

ಸಾದಾ ಮನುಷ್ಯ

ಅವರು ಅತ್ಯಂತ ಸಾದಾ ಜೀವನ ನಡೆಸುವ ಮನುಷ್ಯ; ಮತ್ತವರ ಆವಶ್ಯಕತೆಗಳಾದರೋ ಅತ್ಯಲ್ಪ. ಸೇಲಮಿನಲ್ಲಿ ವಕೀಲರಾಗಿದ್ದಾಗ ಇವರು ಬಹುತೇಕವಾಗಿ ವಿಷಯಲಂಪಟರಿದ್ದರೆಂಬುದನ್ನು ಸ್ಮರಿಸಿಕೊಂಡರೆ ಈಗಿನ ಈ ಬದಲಾವಣೆಯು ವಿಸ್ಮಯಕರವಿದೆ. ಮಹಾತ್ಮರ ತತ್ವಕ್ಕೆ ಕಟ್ಟು ಬಿದ್ದು ಸಂಯಮನ ಮತ್ತು ಸ್ವಾರ್ಥತ್ಯಾಗ ಮಾಡಿ ಬಡತನವನ್ನಪ್ಪಿಕೊಂಡವರಲ್ಲಿ ರಾಜಾಜಿಯೊಬ್ಬರು. ಪ್ರಾಚೀನ ಕಾಲದ ತತ್ವವೇತ್ತರ 'ಸಾದಾ ಜೀವನ ಮತ್ತು ಉಚ್ಚಚಿಂತನೆ'ಯ ಕರೆಗೆ ರಾಜಾಜಿ ಸರಿಯಾಗಿ ಹೊಂಗುಟ್ಟಿದ್ದಾರೆ

ಅವರ ಲೋಕಜ್ಞಾನವು ಅಗಾಧವಾದುದು. ಜನ ಮತ್ತು ಸ್ವಭಾವವನ್ನು ಕೂಡಲೇ ಗುರುತ್ತುಹಚ್ಚುವ ಅವರ ಶಕ್ತಿಯು ಅಳವಾದುದು ಮತ್ತು ಚಾಣಾಕ್ಷತೆಯದು. ಅವರೊಂದುಬಾರಿ,— ಹೌದು, ಒಂದೇಬಾರಿ—'ಗಾದೆಗಳಿಂದಲೇ ಗವರ್ನಮೆಂಟ್' ನಡೆಸಿದ್ದರು. ಅವರೊಡನೆ ಸಂಭಾಷಿಸುವುದೆಂದರೆ ಅದೇ ಒಂದು ಶಿಕ್ಷಣ. ಕಾಫೀ ಪಾನದಿಂದಾರಂಭಿಸಿ, ಮೇಲ್ವರ್ಗದ ಆರ್ಥಿಕ ವಿಷಯಗಳ ವರೆಗಿನ ಪ್ರತಿಯೊಂದರಲ್ಲೂ ಸ್ವತಃ ರಾಜಾಜಿಯ ಕೆಲವು ಹೊಸತನಗಳು ಇದ್ದೇ ಇವೆ. ಅವರಲ್ಲಿರುವ ಈ ತನ್ನತನವೇ 'ಮಕ್ಕಳ ಬೆಳವಣಿಗೆ ಹೇಗೆ?' ಎಂಬ ಪುಸ್ತಕವನ್ನು ಅವರಿಂದ ಬರೆಯಿಸಿತ್ತು. ಖದ್ದರ್ ಮತು ಪಾನನಿಷೇಧಗಳ ತತ್ವ ಮತ್ತು ಕಾರ್ಯಾಚರಣೆಗೆ ಸಂಬಂಧಿಸಿದ ಪ್ರತಿಯೊಂದು ವಿಷಯವನ್ನೂ ಇವರು ಬಲ್ಲರು. ಅವರು ಅಪರಿಮಿತ ಅಸಾಧಾರಣ ಚಿಂತಕರು.

'ನಾನು ಕಣ್ಣೀರು ಗರೆದಿದ್ದೆ' ಎಂಬ ತನ್ನ ಬರಹದಲ್ಲಿ ಶ್ರೀ ಡಿ. ಯಫ್ ಕಾರಕಾರು ರಾಜಾಜಿಯ 'ಒಣವಿನೋದ'ವನ್ನು ಉಲ್ಲೇಖಿಸಿದ್ದಾರೆ. ಅವರು ಸರಳ ಹಾಗೂ ಮಾರ್ಮಿಕ ವಿನೋದಗಾರನೆಂದೇ ದಕ್ಷಿಣ ಭಾರತದಲ್ಲೆಲ್ಲಾ ಪ್ರತೀತಿಯಿದೆ ಅವರ ಭಾಷಣಗಳು ಮತ್ತು ಲೇಖನಗಳು, ಜನ ಮತ್ತು ಸಂಗತಿಗಳನ್ನು ಅವರು ಚಿತ್ರಿಸುವ ವಿಧಾನಗಳು, ಇವೆಲ್ಲವೂ ಅವರ ವಿನೋದವೆಂಬುದು 'ಗಾಂಭೀರ್ಯ'ಕ್ಕೆ ಸಂಪೂರ್ಣ ವಿರುದ್ಧ ದಿಕ್ಕಿನಲ್ಲೇ ಇದೆ ಎಂಬುದನ್ನು ತೋರಿಸುತ್ತಿವೆ. ತನ್ನ ಝೂಡಣೆ ಮತ್ತು ಟಿವಿಮೊನೆಗಳಿಂದ ಇಡೀ ಸಭೆಯನ್ನೇ ನಗೆಯ ಕೋಲಾಹಲದಲ್ಲಿ ಇವರದ್ದಿಬಿಡಬಲ್ಲರು; ಕ್ರಿಕೆಟ್ ಅಥವಾ ಆಟಂಯುಗದಂತಹ ಯಾವ ವಿಷಯವೇ ಇರಲಿ—ರಾಜಾಜೀ ಅವುಗಳ ಕುರಿತು ಅತಿ ಸುಲಭದಲ್ಲಿ ಭಾಷಣ ಕೊಡಬಲ್ಲರು.

ನಿಜಕ್ಕೂ ನಿಷ್ಕಪಟ!

'ಕಪಟಿ' ಬಿರುದನ್ನು ಇವರ ಹೆಸರಿಗೆ ಜೋಡಿಸಲಾಗಿದೆ. ಇದೆಂದಿಗೂ ಹೇಳಿಸಿದ್ದಲ್ಲ. ಸಿ. ಆರ್. ಹೃದಯದಷ್ಟೇ ಸುಲಭದಲ್ಲಿ ನಾವು ಪ್ರವೇಶಿಸಲಾಗುವಂತಹ ಹೃದಯವುಳ್ಳ ಮತ್ತೊಬ್ಬ ಮನುಷ್ಯ ಇಲ್ಲಿಲ್ಲ ಆದರೂ ಈ ದುಷ್ಕೀರ್ತಿಯೇತಕ್ಕಾಗಿ ಇವರೆಂದರೆ, ಚಿಂತನೆ ಮತ್ತು ಸೂಚನೆಗಳಲ್ಲಿರುವ ಸೂಕ್ಷ್ಮತೆಯಿಂದೇಳುವ ಅಸ್ಪಷ್ಟತೆಯಿಂದಾಗಿಯೇ.

ನಾಗರಿಕನ ಎರಡು ಅಮೂಲ್ಯ ಗುಣಗಳು, ದೂರದೃಷ್ಟಿ ಮತ್ತು ಪ್ರಸಂಗಾವಧಾನತೆ, ಇವರಲ್ಲಿವೆ. ರಾಷ್ಟ್ರೀಯ ಸರಕಾರದ ಸ್ಥಾಪನೆ ಮತ್ತು ಮೌಂಟ್‌ಬೇಟನ್ ಯೋಜನೆಗೆ ಕ್ಷೇತ್ರ ನಿರ್ಮಿಸಿದವರಿವರೇ ಎಂಬುದನ್ನು ನಾವು ನೆನಪಿನಲ್ಲಿಡುವುದು ವಿಹಿತ. 1942ರ ಅವರ ಠರಾವನ್ನು ಕಾಂಗ್ರೆಸ್ ಅಂಗೀಕರಿಸಿಕೊಳ್ಳುತಿದ್ದರೆ ಪಾಕಿಸ್ತಾನವೆಂಬುದು ಕೇವಲ ಪ್ರಾಂತಿಕ ಪ್ರಶ್ನೆಯಾಗುತಿತ್ತು. ಸಿಖ್ಖರು ಮತ್ತು ಬಂಗಾಳಿಗಳನ್ನು ಸಮಜಾಯಿಸಿಕೊಡುವಂತೆ ಮುಸ್ಲಿಂ ಲೀಗನ್ನು ಕರೆಯಬಹುದಾಗಿದ್ದಿತು. 1942ರಲ್ಲಿ ಜೈಲು ಸೇರಲಿಲ್ಲವೆಂದು ರಾಜಾಜಿಯನ್ನು ಟೀಕಿಸುತ್ತಿರುವವರು, ಹೊರಗಿದ್ದು ಅವರು ಸಲ್ಲಿಸಿದ್ದ ಸೇವೆಗಳನ್ನು ಮರೆತಿದ್ದಾರೆ. ಭಾರತದ ಬಿಕ್ಕಟ್ಟಿನ ನಿವಾರಣೆಗೆ ಇವರಿತ್ತಿದ್ದ ಮಾರ್ಗದರ್ಶನಗಳು—ಮದ್ರಾಸನ್ನು ಖಾಲಿಗೊಳಿಸುವುದರ ಸಂಬಂಧವಾಗಿ ಇವರಂದು ಬೀರಿದ್ದ ವರ್ಚಸ್ಸು—ದಕ್ಷಿಣಭಾರತದ ಇಬ್ಬರು ತರುಣರ ಜೀವವುಳಿಸುವುದರಲ್ಲಿ ಮತ್ತು ಮಹಾತ್ಮಾ ಗಾಂಧಿಯವರು ಆ ಚರಿತ್ರಾರ್ಹ ಉಪವಾಸಾರಂಭಿಸಿದಾಗ ಅವರನ್ನುಳಿಸಲು ಇವರಿಂದಾಗಿದ್ದ ಕೆಲಸಗಳು—ಇವೆಲ್ಲವೂ ರಾಜಕೀಯ ಹಲಗೆಯಲ್ಲಿ ದೊಡ್ಡಕ್ಷರಗಳಿಂದ ತೋರಿಬರತಕ್ಕವುಗಳೇ.

ದಕ್ಷಿಣ ಹಿಂದುಸ್ಥಾನದ ಆರ್ಯನ್ ಹಾಗೂ ದ್ರಾವಿಡನ್ ಸಂಸ್ಕೃತಿಯ ಒಂದು ಪರಿಶುದ್ಧ ಮಾದರಿಯಾಗಿದ್ದಾರೆ ರಾಜಾಜಿ. ಪಶ್ಚಿಮ ಬಂಗಾಳದ ಗವರ್ನರರಾಗಿ ಅವರು ನೇಮಕಗೊಂಡುದು 'ಅಪಮಾನ'ವೇನೂ ಅಲ್ಲ. 'ಸ್ಪಾರ್ಟಾ'ಕ್ಕೆ 'ಟಿರ್ಟೇಯಸ್'ನ್ನು ಕಳುಹಿದ್ದ ಅಥೇನಿಯಾನರಂತೆ ಮಾಡದೆ ಮದ್ರಾಸು ತನ್ನ ಅಗ್ರಗಣ್ಯ ನಾಗರಿಕನನ್ನೇ 'ನೊಗದ ಜೋಡಿ'ಯಾಗಿ ಬಂಗಾಳಕ್ಕೆ ಎರವಿತ್ತಿದೆ. ಇವರ ಆಡಳಿತೆಯ ಸಾಮರ್ಥ್ಯದ ಸರಿಯಾದ ವಿನಿಯೋಗಕ್ಕೆ ಈ ಹುದ್ದೆಯ ಕ್ಷೇತ್ರವು ಪೂರ್ಣ ತೆರವಿರುವಂತಹದಲ್ಲ. ಆದರೂ ಈ ಅಧಿಕಾರಾವಧಿಯ ಅಂತ್ಯದಲ್ಲಿ ಶ್ರೀ ಶರಶ್ಚಂದ್ರ ಬೋಸರಂಥವರು ತಾವು ಅದಿಯಲ್ಲಿ ಕಟ್ಟಿದ್ದ ಅಂದಾಜನ್ನು ಬದಲಾಯಿಸಿಕೊಂಡು, ಭಿನ್ನ ರೀತಿಯಲ್ಲಿ ವರ್ಣಿಸುವಂತಾದಲ್ಲಿ, ತನ್ನ ಉಚ್ಚ ಸಭ್ಯತತ್ವವೇತ್ತ ಹಾಗೂ ನಾಗರೀಕನನ್ನು ಬಂಗಾಳದ ಸಾರಥಿಯಾಗಿ ಕಳುಹಿಕೊಟ್ಟುದು ಸಾರ್ಥಕವಾಯಿತೆಂದು ಮದ್ರಾಸು ಹೆಗ್ಗಳಿಕೆ ಪಡುವಂತಾದೀತು; ಹಾಗೂ ಕೃತಜ್ಞತೆ ಸೂಚಿಸುವಂತಾದೀತು. ಇವರ ಅಸಾಧಾರಣ ವ್ಯಕ್ತಿತ್ವವು ಆ ಪ್ರಾಂತ್ಯದ ರಾಜಕೀಯವನ್ನು ತನ್ನ ಅಂಕೆಗೆ ತರುತ್ತಿರುವ ಹಾಗೂ ಜಾತೀಯತೆಯ ಮೊನೆಯನ್ನು ಮುರಿದಿರುವ ಸುಚಿಹ್ನೆಗಳು ಇಷ್ಟರಲ್ಲೇ ಕಾಣಿಸಹತ್ತಿವೆ.

ಬಾಲಕರು ಆರೋಗ್ಯಕಾಯರಾಗಲು
(ಪ್ರಭೂಸ್) ಬಾಲಾಮೃತ
ಒಂದೇ ವಾರದಲ್ಲಿ ತುಂಬಾ ಗುಣ
ಹಲವು ಬಗೆಯ ರೋಗರುಜೆಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ ನೆಟ್ಟಗಾಗಲು ತಾಯಂದಿರುಗಳು ಇನ್ನೇನೂ ಸದಾ ಪರದಾಡಬೇಕಾಗಿಲ್ಲ. ಮಾತ್ರ, ಹೊತ್ತು ಕಳೆದರೆ ನುತ್ತೆ ಬಾರದು.
'ಪ್ರಭೂಸ್'
ಬಾಲಾಮೃತ
ಪ್ರಭೂಸ್ ಬಾಲಾಮೃತದ ಖ್ಯಾತಿಗೆ ಪಾಠಿಲೆ ಬೇಕೆ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ
ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಜಾಲು, ಪೋ. ಬ್ರಹ್ಮಾವರ, ದ. ಕ.
ಸ್ಟಾಕಿಸ್ಟರು:—
ನವಭಾರತ ಪುಸ್ತಕ ಭಂಡಾರ, ಉಡುಪಿ,
L. N. Sharma, Mangalore,

ಹೊಸ ಮತ್ತು ಹಳೆಯ
ಕವಾಟುಗಳು
ಸ್ಟಾಂಡು ಮೊದಲಾದುವು
ಮಾರಾಟಕ್ಕಿವೆ
ವಿವರಕ್ಕೆ ವಿಚಾರಿಸಿರಿ
N. B. C/O ನವಯುಗ ಆಫೀಸು
ಉಡುಪಿ

ಅಮೃತಾಂಜನ.
ತಲೆನೋವು, ಶರೀರ ನೋವು, ಉಳುಕು, ಕುತ್ತಿಗೆ, ಭುಜ ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ... ... ರೋಗಗಳಿಗೂ ...
REGD.
... ...
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಇಂದ್ರಭವನ ಕಾಫಿ ಹೊಟೇಲ್
ಬಲ್ಮಠ • • • • ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—
ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ
ಪ್ರೊಪ್ರೈಟರ್.
INDRA BHAVAN COFFEE HOTEL,
Balmatta Road, MANGALORE.

CHAMPAE'S
Snow & Castrex
Sale Distributers for India
Prop: K. G. NAYAK,
Santhekatte, UDIPI, S. K.

ಮಾನವಂತತನದ ಸೋಗಿನಿಂದ ನಡೆದ ಅನಾಚಾರ- ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ಇವನ್ನು ಹೃದಯಂಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ? ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು?

ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.

ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟು ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ: ರೂ 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬರೆದವರು:-ಶ್ರೀ. ಪಿ. ಶೀನ ಶೆಟ್ಟರು.

ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ. ಮೈಜುಮ್ಮೆನಿಸುವ ಹಲವು ಸನ್ನಿವೇಶಗಳು!

ಬೆಲೆ ಬರೇ ರೂ. 1—4—0

ಕಿರಿಯರ ಪ್ರಪಂಚದ ಪ್ರಕಟಣೆ

ಕದಂಬ

ಹನ್ನೆರಡು ಕತೆಗಳ ಸಂಗ್ರಹ

ಬರೆದವರು:-ಶ್ರೀಮತಿ ಸರಸ್ವತಿಬಾಯಿ ರಾಜವಾಡೆಯವರು

('ಪ್ರಕಾಶ' ನಾಟಕದ ಅನುವಾದಕಿ; 'ಆಹುತಿ ಇತ್ಯಾದಿ ಕತೆಗಳು' ಕಥಾಗುಚ್ಛದ ಲೇಖಕಿ.)

ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ ಚಿತ್ರಿಸುವ ಕಥಾ ಸಂಗ್ರಹ. ಬೆಲೆ. 1—4—0

ಮನೆಮದ್ದು-Home Remedies

ಬೆಲೆ ರೂ. 2-0-0

ಬರೆದವರು:—ಡಾ| ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Valuble Service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ., ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಔಷಧಿ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ 1000 ಮನೆಮದ್ದುಗಳನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಬುಕ್ ಡಿಪೊ ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಈ ಟಿನ್ನಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವದು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಟಲಾಗ್ ಬರೆದಲ್ಲಿ ರೋಗಗಳಿಗೆ ತಕ್ಕುದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜಂಟರು:—ಪ್ರೊಪ್ರೈಟರ್ ಸ್ಟೋರ್ಸ್, ಕೆಮಿಸ್ಟ್ಸ್ 183, ಸುಖಾದೇವಿ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂಚಿ ಆರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Ayurveda Oushadhalaya GADAG

Regd. No. M. 3618

ಅಂತರಂಗ
ಅಖಿಲ ಕರ್ನಾಟಕ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

27-11-1947

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-6
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ,

ವರ್ಷ ೨೭) ವಾರ ೧೩

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister, Govt. of Madras.

Vol. 27 No. 13

THE CANARA MUTUAL
Assurance Company, Limited.
Estd: 1935
H. O. UDIPI, S. Kanara

BONUS DECLARED FOR 8 YEARS

We are glad to announce that we have declared a Bonus for 8 years from 1939 to 1946 both years inclusive as also an interim bonus for the next valuation period.

T. R. A. Pai,
Managing Director

The 1946 Record Business proves the popularity
THE BOMBAY LIFE ASSURANCE COMPANY. LTD.
Company's New Business in 1946— **3.28 Crores**
Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,
Chief Agents for South India,
Bombay Life Building,
Central Office, Udipi:-
Branches at:
Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA
"BHUVANENDRA" CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ ೧ರಿಂದ 2ಬೊಟ್ಟು ಲವಂಗ ಯಾ ಓಮದ ನೀರು ಮುಂತಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನ್ಸಲ್ಟಿಂಗ್ ರೂಮ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ್ಸ್ ಫಾರ್ಮಸಿ; ಡಾ। ಕೆ। ತೇಜಗಿರಿ ಶೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಸುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡರವರ ವಿಜಾಪೂರ ಚಿಕಿತ್ಸೆಯಲ್ಲಿ:—ಮುಂಬಯಿ ಸ್ಟೋರ್, ದಾವಣಗೇರಿ:—ದಾವಣಗೇರೆ ಸ್ಟೋರ್ಸ್ ಆರ್ ಎಲ್ ಕಮಲದಾಸಿ, ಕೆಮಿಸ್ಟ್, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY.

ನಿಮ್ಮಷ್ಟಕ್ಕೆ ನೀವು ಮನೆಯಲ್ಲೆ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0
ನವಭಾರತ ಬುಕ್ ಡಿಪೊ, ಉಡುಪಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ವಿಮೆ ಮಾಡಲಿಕ್ಕೆ, ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ— ಪ್ರಧಾನ ಕಾರ್ಯಾಲಯ:-ಧಾರವಾಡ,
ಪೋಸ್ಟ ಬಾಕ್ಸ ನಂಬ್ರ 10, ಉಡುಪಿ, ಇವರಿಗೆ ಬರೆಯಿರಿ.

ಕಾಶ್ಮೀರ—ಅದರ ನೆಹರು ಪಟೇಲ್!

ಕಾಶ್ಮೀರದಲ್ಲಿ ಇಂದು ನಡೆದಿರುವ ಘಟನೆಗಳು, ಭಾರತದ ಭವಿಷ್ಯವು ಭದ್ರವಾಗಿದೆ ಎಂಬ ಭರವಸೆಯ ಸೂಚನೆಗಳು. ಈ ಕುರಿತು ಅಖಿಲ ಭಾರತದಲ್ಲಿ ತೃಪ್ತಿ ಹೆಗ್ಗಳಿಕೆ ವ್ಯಾಪಿಸಿರುವುದೂ ಸಹಜವಾದುದೇ. ಹನ್ನೆರಡೇ ಘಂಟೆ ತಡವಾಗುತ್ತಿದ್ದರೆ ಇಡೀ ಕೆಲಸ ಕೆಟ್ಟು ಹೋಗುವಷ್ಟು ಅಪಾಯ ಸಮೀಪಿಸಿದ್ದ ಸಂಧಿಗ್ಧಾವಧಿಯಲ್ಲಿ ಭಾರತಸರಕಾರವು ಪ್ರದರ್ಶಿಸಿದ ಪ್ರಸಂಗಾವಧಾನತೆ, ಎದೆಗಾರಿಕೆ, ಸಾಹಸಗಳನ್ನು ಕಂಡು ರಾಷ್ಟ್ರದ ಅದೃಷ್ಟವು ಅತ್ಯಂತ ದಕ್ಷ ಹಾಗೂ ಚುರುಕಾದ ಕೈಯಲ್ಲಿದೆ ಎಂದು ಭಾರತೀಯರೆಲ್ಲರೂ ಸಮಾಧಾನದುಸಿರು ಬಿಡುತ್ತಿರುವುದೂ ಸ್ವಾಭಾವಿಕವಾದುದು, ಆದರೆ ಇವೆಲ್ಲಕ್ಕಿಂತ ಹೆಚ್ಚಿನದಾದ ಒಂದು ಭಾಗ್ಯವು ಭಾರತದ ಪಾಲಿಗಿದ್ದುದರಿಂದಲೇ ಕಾಶ್ಮೀರದ ಕಾರ್ಯಕ್ಕನುಕೂಲವಾಯಿತೆಂಬುದನ್ನು ಯಾರೂ ಮರೆತಿಲ್ಲವಾದರೂ ಅದರ ಅಮೂಲ್ಯತೆಯನ್ನು ತುಸು ತಗ್ಗಿಸಿ ನೋಡುವುದು ಕೂಡಾ ಕೃತಘ್ನತೆಯೇ ಸರಿ! ಅದೆಂದರೆ ಶೇಖ್ ಅಬ್ದುಲ್ಲಾ! ಪಾಕಿಸ್ತಾನದ ಕಡೆಯವರು ಶ್ರೀನಗರದ ವಿಮಾನ ನಿಲ್ದಾಣವನ್ನೊಂದೊಮ್ಮೆಗೆ ಹಿಡಿದುಕೊಳ್ಳುತ್ತಿದ್ದರೂ ಕೆಲಸ ಕಷ್ಟದಿಂದಾಗದೆ ಹೋಗುತ್ತಿರಲಿಲ್ಲ; ಆದರೆ ಶೇಖ್ ಅಬ್ದುಲ್ಲಾರೆಲ್ಲಿಯಾದರೂ ಆ ಕಡೆಗೆ ಸೇರಿ ಹೋಗುತ್ತಿದ್ದರೆ ನಿಜಕ್ಕೂ ಎಲ್ಲವೂ ಕೆಟ್ಟು ಹೋಗುತ್ತಿತ್ತು. ಈ ದಿನ ನಮ್ಮ ರಾಷ್ಟ್ರೀಯ ಮುಸ್ಲಿಂ ಪ್ರಮುಖರೆಲ್ಲರನ್ನೂ ಪ್ರಾಯ, ಪರಿಶ್ರಮ ಮತ್ತು ಪರಿಸ್ಥಿತಿ ಹಣ್ಣು ಮಾಡಿ ಹಾಕಿದೆ; ಎಲ್ಲರ ಉತ್ಸಾಹವೂ ಕುಗ್ಗಿ ಹೋಗಿದೆ. ಮೌಲಾನಾ ಆಜಾದರಿದ್ದಾರೆ; ಅವರೀಗಲಾದರೂ ಹೆಜ್ಜೆ ಮತ್ತು ತೂಕ ತಪ್ಪಿಲ್ಲ. ಆದರೆ ನುಗ್ಗಿ ಹೋರಾಡುವ ನಾಯಕ ಅವರಲ್ಲ; ಅವರು ಕೈ ತೋರಿಸುವ ವಿಚಾರಿ ಮಾತ್ರ—ಕೈಬೀಸಿ ನಡೆಯಿಸುವ ಸೇನಾನಿಯಲ್ಲ. ಬಾದಶಹಾ ಖಾನ್ ಮತ್ತು ಡಾ। ಖಾನ್ ಬಂಧುಗಳಿದ್ದಾರೆ. ಪಾಕಿಸ್ತಾನದೊಂದಿಗೆ ಹೋರಾಟ ಕೊಡುತ್ತಾ, ಸದ್ಯ ಸೋತಿದ್ದಾರೆ. ಇನ್ನುಳಿದ ಹೆಚ್ಚಿನ ರಾಷ್ಟ್ರೀಯ ಮುಸ್ಲಿಂ ನಾಯಕರಲ್ಲಿ, ಹೆಚ್ಚಿನ ಮಾಜೀ ಐಕ್ಯತಾವಾದಿ ಹಿಂದೂ ನಾಯಕರಂತೆಯೇ ಜಾತೀಯ ಛಾಯೆ ಬಿದ್ದು ಮೊದಲಿನ ರಾಷ್ಟ್ರೀಯತಾ ಹೊಳಪೇ ಉಳಿದಿಲ್ಲ. ಆದರೆ ಭೇಷ್!—ಶೇಖ್ ಅಬ್ದುಲ್ಲಾ ಒಬ್ಬ ಇದ್ದಾರೆ. ಅವರ ಬಲಗೈ ಗುಲಾಮ್ ಮಹಮ್ಮದ್ ಭಕ್ಷಿ ಇದ್ದಾರೆ. ಇವರಿಬ್ಬರ ಕೈಯಲ್ಲಿ ಕಾಶ್ಮೀರವೆಷ್ಟು ಭದ್ರವಾಗಿದೆ ಮತ್ತು ಶುದ್ಧವಾಗಿದೆ, ಎಂಬುದನ್ನು ತಿಳಿಯ ಬೇಕಾದರೆ ಕಾಶ್ಮೀರದ ಸ್ಥಿತಿಗತಿ—ಇವರ ಧೋರಣೆ, ವರ್ತನೆಗಳ ಪರಿಚಯ ಮಾಡಿಕೊಳ್ಳುವ ಅಗತ್ಯ.

ಮನೋಹರ ನಾಡು—ವ್ಯಾಪಾರೀ ಬುದ್ಧಿಯ ಜನ.

ಕಾಶ್ಮೀರವು ಹಿಮಾಲಯ ಬುಡದ ಬಯಲಾಗಿದೆ. ಆ ಜಗತ್ಪ್ರಸಿದ್ಧ ಪರ್ವತ ಶ್ರೇಣಿಯಲ್ಲಿದ್ದು ಮಾನವರ ಪ್ರತ್ಯಕ್ಷಾನುಭೋಗಕ್ಕೆ ಎಟುಕದ ಹಿಮಗಿರಿ ಪ್ರಕೃತಿ ಸೌಂದರ್ಯಗಳೆಲ್ಲವೂ ಈ ಬಯಲಿಗಿಳಿದು ನಿಂತು ಭಾರತವನ್ನಷ್ಟೇ ಅಲ್ಲ; ಪಾಶ್ಚಾತ್ಯ ಜಗತ್ತನ್ನೂ ಆಹ್ವಾನಿಸುತ್ತಿದೆ. ಕಾಶ್ಮೀರದ ಉತ್ತರ ಸರಹದ್ದಿಗೂ ರಷ್ಯದ ಸರಹದ್ದಿಗೂ ದೂರವಿಲ್ಲ—ಕೆಲವೆಡೆ ಹತ್ತಿಪ್ಪತ್ತೇ ಮೈಲುಗಳ ಅಂತರವಿರುವಂತಿದೆ. ರಷ್ಯವು ಒಂದು ಹಾದಿ ನೋಡಿಕೊಂಡೇ ಭಾರತದೊಡನೆ ಬಿಸಿ ವ್ಯವಹಾರ ಹೂಡುವ ಕಾಲಬಂದಲ್ಲಿ ಆ ಹಾದಿಯಿರುವುದು ಕಾಶ್ಮೀರದ ಗಡಿಯಲ್ಲಿ ಮಾತ್ರ. ಅಂತೆಯೇ ಚೈನಾ ಭಾರತದೊಳಗಿನ ಗಡಿಯಾಗಿ ನಿಂತಿರುವುದೂ ಕಾಶ್ಮೀರದ ಸರಹದ್ದೇ. ಈ ರೀತಿ ಚೌಕಟ್ಟು ಕಬ್ಬಿಣದಷ್ಟು ದೊರಗಿದ್ದು ಒಳಭಾಗ ಕನ್ನಡಿಯಷ್ಟು ಮೃದುವಿರುವ ಮತ್ತೊಂದು ಭಾಗ ಭಾರತದಲ್ಲಿಲ್ಲವೆನ್ನಬಹುದು. ಪುಣ್ಯಕ್ಷೇತ್ರಗಳಿಂದಾಗಿ, ಚಾರಿತ್ರಿಕ ಮಹತ್ವಗಳಿಂದಾಗಿ, ವಿಶಿಷ್ಟ ಕೃತಿ ಕಟ್ಟಡಗಳಿಂದಾಗಿ ಲೋಕ ಪ್ರಸಿದ್ಧಿ ಪಡೆದಿರುವ ಭಾಗಗಳು ಭಾರತದಲ್ಲಿ ಹಲವಿವೆ; ಆದರೆ ನೈಸರ್ಗಿಕ ಶೋಭೆ ಸೌಂದರ್ಯಗಳಿಂದ ಎಲ್ಲಾ ಹೃದಯಗಳನ್ನೂ ಕಾಶ್ಮೀರದಂತಾಕರ್ಷಿಸಿರುವ ಮತ್ತೊಂದು ಭಾಗವಿಲ್ಲ. ಇಲ್ಲಿಯ ಹವಾಮಾನ ಮತ್ತು ಸ್ಥಿತಿಗತಿಗಳ ದೆಸೆಯಿಂದಾಗಿ ಜನರೆಲ್ಲರೂ ವಿನಯಶೀಲರು ಸಾಧು ಸ್ವಭಾವಿಗಳು, ಮತ್ತು ಉಪಚಾರ ಬುದ್ಧಿಯವರು.

ಡೋಗ್ರಾ ರಾಜಕುಲ

ಕಾಶ್ಮೀರ್ ಮತ್ತು ಜಮ್ಮು ಸಂಸ್ಥಾನದ ರಾಜಸತ್ತೆ ಬಹುಮಟ್ಟಿಗೆ ಇತ್ತೀಚಿನದು. ಹಿಂದುಸ್ಥಾನದಲ್ಲಿರುವ ಎಲ್ಲಾ ದೊಡ್ಡ ಸಂಸ್ಥಾನಗಳ ಅರಸುತನಗಳ ಹಿನ್ನೆಲೆಯಲ್ಲಿ ಸುಧೀರ್ಘ ಚರಿತ್ರೆಗಳಿವೆ. ಅವುಗಳ ಪೈಕಿ ಎಳೇ ರಾಜವಂಶವೆಂದರೆ ಕಾಶ್ಮೀರ ಮತ್ತು ಜಮ್ಮುವಿನದೇ. ಇಂದಿನ ಮಹಾರಾಜಾ ಶ್ರೀ. ಹರಿಸಿಂಗರ ಅಜ್ಜನಿಗೆ ಬ್ರಿಟಿಷರು ಕೇವಲ ಒಂದು ಮಿಲಿಯ ಪೌಂಡಿಗೆ ಇಡೀ ಕಾಶ್ಮೀರವನ್ನು ಮಾರಿದ್ದರು. ಕಾಶ್ಮೀರವು ಸರ್ವ ಸಾಧಾರಣ ಇಂಗ್ಲೆಂಡಿನಷ್ಟೇ ದೊಡ್ಡದು; ಹವಾಮಾನವೂ ಬ್ರಿಟನಿನದ್ದೇ. ಆದ್ದರಿಂದ ಸೆಖೆಗಾಲದಲ್ಲಿ ಭಾರತದ ಎಲ್ಲಾ ಕಡೆಗಳ ಬಿಳೀ ಅಧಿಕಾರಿಗಳೂ ಇಲ್ಲಿಗೆ ಬರುವದಿದೆ. ಅಂಥವರು ಇದುವರೆಗೆ ಕಾಶ್ಮೀರದ ಕಟ್ಟಡಗಳಿಗಾಗಿ ಕೊಟ್ಟ ಬಾಡಿಗೆಯೇ ಅವರಾದಿನ ಇಡೀ ಕಾಶ್ಮೀರಕ್ಕಾಗಿ ಪಡೆದಿದ್ದ ಕ್ರಯಕ್ಕಿಂತ ಎಷ್ಟೋ ಪಾಲು ಹೆಚ್ಚಾಗಿರಬಹುದು. ಕಾಶ್ಮೀರ ಮತ್ತೀಕಾಸು, ಇವೆರಡೂ ಹಿಂದೀಯರದ್ದೇ ಆದರೂ ಕೈಸಡಲಿಸಬೇಕು ಆ ಬ್ರಿಟಿಷರು ತಾನೆ? ಒಂದು ದಿನ ಶ್ವೇತ ಜನಾಂಗದ ರಜಾವಸಾಹತಾಗಿ ಕಾಶ್ಮೀರವು ಮಾರ್ಪಡುವದೆಂದಾಗಲೀ, ಆ ಸಂಸ್ಥಾನದ ಉತ್ಪತ್ತಿಯ ಗಣ್ಯ ಭಾಗವನ್ನು ನಿವಾಸಾರ್ಥಿಗಳಾಗಿ ಹೋಗುವ ತಾವೇ ತೆರಬೇಕಾಗುವುದೆಂಬುದನ್ನಾಗಲೀ ಅದನ್ನು ಮಾರಿಬಿಡುವಾಗ ಬ್ರಿಟಿಷರು ಊಹಿಸಿರಲಿಲ್ಲ. ಬ್ರಿಟಿಷರು ದೂರ ದೃಷ್ಟಿಯಿಲ್ಲದೆ ನಡೆಸಿದ್ದ ಕೆಲವೇ ನಷ್ಟದಾಯೀ ವಹಿವಾಟುಗಳಲ್ಲಿ ಕಾಶ್ಮೀರದ ಮಾರಾಟವೊಂದು. ಅದನ್ನು ಪಡಕೊಂಡಾಳುತ್ತಿರುವುದು ಹಿಂದೂ ಡೋಗ್ರಾ ರಾಜವಂಶದವರಾದರೂ ಕಾಶ್ಮೀರದ ಜನತೆಯಲ್ಲಿ ಸೇ. ೭೮ರಷ್ಟು ಮುಸ್ಲಿಮರು. ಆದರೆ ಕಾಶ್ಮೀರೀ ಮುಸ್ಲಿಮರು ಅತ್ಯಂತ ಶಾಂತ ಪ್ರಕೃತಿಯವರು. ಮೇಲಾಗಿ ವ್ಯಾಪಾರೀ ಬುದ್ಧಿಯವರು; ಸುಂದರಿ ಕಾಶ್ಮೀರಕ್ಕೆ ಹೇಳಿಸಿದ ಸುಲಿಗೆ ಮನೋವೃತ್ತಿಯವರೇ! ಶ್ರೀನಗರದವನ ಕೈ ಬೆಚ್ಚಗೆ ಮಾಡಿದರೇನೇ ನಿಮ್ಮ ಕಾರ್ಯವಾದೀತು.

ರಾಜಧಾನಿ ಶ್ರೀನಗರ

ಕಾಶ್ಮೀರದ ರಾಜಧಾನಿ ಶ್ರೀನಗರವು ಸಮುದ್ರ ಮಟ್ಟಕ್ಕಿಂತ 5000 ಅಡಿ ಎತ್ತರದಲ್ಲಿದೆ. ಪ್ರಕೃತಿದತ್ತ ಸುರೂಪವನ್ನು ಮನುಷ್ಯನ ಕೈ ಹೇಗೆ ಕುರೂಪಗೊಳಿಸಬಲ್ಲುದೆಂಬುದಕ್ಕೊಂದು ಮಾದರಿಯಾಗಿದೆ ಶ್ರೀನಗರ. ಏಸ್ಯಾದ ಅತ್ಯಂತ ಕೊಳಕು ನಗರವೆಂದಿದು ಗಣಿಸಲ್ಪಟ್ಟಿದೆ. ಅಲ್ಲಿಯ ಜನರು ಇಡೀ ಪ್ರಪಂಚದಲ್ಲೇ ಅಗ್ರಗಣ್ಯ ಆಶಾಬಡುಕರೆಂದರೆ ಹೆಚ್ಚಲ್ಲ. ಅವರ ಮುಖ್ಯ ಉದ್ದಿಮೆಯೇ ಅತಿಥಿಗಳ ಆರೈಕೆ; ಅವರ ಮೂಲ ಕಸುಬೇ ಬಂದವರನ್ನು ಸುಲಿಯುವುದು. ಅದು 'ಶ್ರೀ'ನಗರ ತಾನೆ?—ಲಕ್ಷ್ಮಿಯಪುರ! ದುಡ್ಡಿನದೊಂದೇ ಅಲ್ಲಿ ಕಾರುಬಾರು. ಕಾಶ್ಮೀರದ ಪ್ರಕೃತಿ ಸೌಂದರ್ಯವು ಶ್ರೀನಗರದ ಸಮೀಪದವರೆಗೂ ಬಂದು, ನಗರದ ಕೊಳಕನ್ನು ಕಂಡು ದೂರದಲ್ಲೇ ಹೇಸಿ ನಿಂತಂತಿದೆ. ಹೊರಗಿನಿಂದ ಬರುವವರ ಪಾಲಿಗೆ ಜೆಲುಮ್ ಹೊಳೆಯ ಭವ್ಯನೋಟವೇ ಮನಸ್ಸಿನ ಎಲ್ಲಾ ಬೇನೆ ಬೇಸರಿಕೆಗಳನ್ನೂ ತೊಳೆಯುವಂತಹದು. ಇದು ಚರಿತ್ರೆಯಲ್ಲಿ ಪ್ರಸಿದ್ಧ ಸ್ಥಾನಗಳಿಸಿರುವ ನದಿ; 'ಜೆಲುಮ್'—ಇದು ಅನ್ವರ್ಥನಾಮ. ಭಾರತದ ಮೇಲಾದ ಜುಲುಮೆಗಳ ಆದಿಯಿಲ್ಲಿ! ಹಳ್ಳೀ ಹಿಂದುಗಳ ಮನೆಯಲ್ಲಿ ಅತಿಥಿಯಾಗಿ ಬಂದವನನ್ನು ತಂಬಿಗೆ ನೀರುಕೊಟ್ಟು ಸ್ವಾಗತಿಸಿಕೊಳ್ಳುವ ಸಂಪ್ರದಾಯವಿದೆಯಷ್ಟೆ? ಭಾರತಾಂಬೆಯು ತನ್ನನ್ನಾಕ್ರಮಿಸಲು ಬಂದ ಆದಿಯ ಮೊಗಲರಿಗೆ ಸ್ವಾಗತದ ನೀರಾಗಿ ಮುಂದೊಡ್ಡಿದ್ದುದು ಈ ಜುಲುಮು ಹೊಳೆಯನ್ನೇ. ಆಚೆಯಿಂದ ಗಡಿದಾಟಿ ಬಂದ ಮೊಗಲರೆಲ್ಲಾ ಈ ಹೊಳೆ ದಡದಲ್ಲೇ ಠೇರಿಹೊಡೆದು, ಅಲ್ಲಿಂದ ತಮ್ಮ ಕಾರ್ಯಾರಂಭಿಸುವ ಸಂಪ್ರದಾಯವಿಟ್ಟುಕೊಂಡಿದ್ದರು. ಈಗ ಕಾಶ್ಮೀರ ನುಗ್ಗಿರುವ ಧಾಳಿಗಾರರಾದರೂ ತಮ್ಮ ಸುರಕ್ಷಿತ ಕೇಂದ್ರ ನಿಲ್ದಾಣವನ್ನು ಕಟ್ಟಿಕೊಂಡಿರುವುದು ಜೆಲುಮ್ ಹೊಳೇದಡದ ಅಭೇದ್ಯ ದಟ್ಟಡವಿಯಲ್ಲೇ. ಶ್ರೀನಗರದ ಹೊರ ಬಯಲು ಸ್ಕೋಟ್ಲೇಂಡ್ ಮೈದಾನಿನಷ್ಟೇ ಭವ್ಯವಾಗಿದೆ; ಆದರೆ ಅದರ ಅಂತ್ಯದಲ್ಲಿ ಕೊಳಕು ಶ್ರೀನಗರ—ಅದಕ್ಕನುಗುಣವಾಗಿ ಅಲ್ಲಿ ಜುಲುಮ್ ಹೊಳೆಯೂ ಜಿಗುಪ್ಸೆಯಿಂದ ಸಂಕೋಚಗೊಂಡಿದೆ ಎಂಬಂತೆ ಕಾಲುವೆಯಷ್ಟು ಕಿರಿದಾಗಿದೆ.

ಸುಖ ಜೀವಿ ರಾಜ—ದುರ್ದೈವಿ ಪ್ರಜೆ!

ಆದರೆ ರಾಜರ ಅರಮನೆ ಈ ರಾಹು ಸೋಂಕುವ ಸ್ಥಳದಲ್ಲಿಲ್ಲ. ಶ್ರೀನಗರದ ಹೊಲಸು ಮತ್ತು ಕಿರಿಹೊಳೆಯ ಆಚೇ ಭಾಗದ ಎತ್ತರ ಸ್ಥಳದಲ್ಲಿ ಮಹಾರಾಜರ ಅತಿಭವ್ಯ ಅರಮನೆಯಿದೆ. ಅದರ ಒತ್ತಿಗೆ ಮಹಾರಾಣಿಗಾಗಿ ಮತ್ತೊಂದು ಭವ್ಯ ಅರಮನೆ; ಇವುಗಳಿಗೆ ತಾಗಿಕೊಂಡು ಇಷ್ಟು ದೊಡ್ಡದಲ್ಲವಾದರೂ ಇಷ್ಟೇ ಭವ್ಯವಾದ ಮೂರನೇ ಸಣ್ಣ ಅರಮನೆ 14 ವರುಷ ಪ್ರಾಯದ ಯುವರಾಜನದ್ದು. ಇವು ಮೂರು ರಮ್ಯ ರಾಜಾಲಯಗಳ ಇದಿರು ಭಾಗದಲ್ಲಿ ಆ ಸುಪ್ರಸಿದ್ಧ ದಾಲ್‌ತಟಾಕದಲ್ಲಿ ಯುರೋಪಿಯನರೂ ಶ್ರೀಮಂತ ಭಾರತೀಯರೂ ವಾಸಿಸುತ್ತಿರುವ ನೂರಾರು ಭವ್ಯಮಂದಿರಗಳ ಗುಂಪು ನಿಂತಿವೆ. ಈ ತಟಾಕದ ಹೊರಸುತ್ತಿನಲ್ಲಿ, ಒಂದಕ್ಕೊಂದು ಕೆಲವು ಮೈಲುಗಳಂತರದಲ್ಲಿ ಮೊಗಲರ ನಾಲ್ಕು ಚರಿತ್ರಾರ್ಹ ಉದ್ಯಾನಗಳಿವೆ. ಹಿಂದಿನ ಮೊಗಲ್ ಚಕ್ರವರ್ತಿಗಳು ಕಟ್ಟಿಸಿದವುಗಳವು. ಅವುಗಳ ದರ್ಶನಕ್ಕಾಗಿ ಪ್ರಪಂಚದ ಬೇರೆ ಬೇರೆಡೆಗಳಿಂದ ವರುಷಂಪ್ರತಿ ಸಹಸ್ರಾರು ದರ್ಶಕರು ಬಂದುಹೋಗುತ್ತಿದ್ದಾರೆ. ಆದರೆ ಕಾಶ್ಮೀರದ ಜನತೆಯ ಜೀವನ ಮಟ್ಟ ತೀರಾ ಕೀಳ ತರಗತಿಯದು. ಶ್ರೀನಗರದಂತಹ ಪಟ್ಟಣವಾಸಿಗಳ ಮುಖ್ಯ ವ್ಯಾಪಾರವೇ ಯಾತ್ರಾರ್ಥಿಗಳ ಸೇವೆ, ಸುಲಿಗೆ. ಹಳ್ಳಿಗರು ಮುಖ್ಯತಃ ಬೇಸಾಯಗಾರರು. ಅವರಿಗಿರುವ ಉತ್ಪತ್ತಿಯೊಂದಿಗೆ ಅವರು ಸರಕಾರಕ್ಕೆ ಕೊಡಬೇಕಾಗಿರುವ ಕರಕಂದಾಯಗಳನ್ನು ತೂಗಿನೋಡಿದರೆ ಅಲ್ಲಿಗೆ ಅತಿಥಿಗಳಾಗಿ ಹೋಗುವವರಿಗಿಂತಲೂ ಹೆಚ್ಚಾಗಿ ಅಲ್ಲಿರುವವರು ಸುಲಿಯಲ್ಪಡುತ್ತಿದ್ದಾರೆ. ಎನ್ನಬೇ

(೧೧ನೇ ಪುಟ ನೋಡಿರಿ)

ನಾರ್ದರ್ನ್

1946ರಲ್ಲಿ ಹೊಸ ದಾಖಲೆಯ ಶಿಖರಕ್ಕೇರಿದೆ.

ಸ್ವೀಕರಿಸಲ್ಪಟ್ಟ ವ್ಯವಹಾರ … … ರೂ. 2,04,00,000

ಪೂರ್ಣಗೊಳಿಸಲ್ಪಟ್ಟ ವ್ಯವಹಾರ … … ರೂ. 1,72,00,000

ನಾರ್ದರ್ನಿನ ಪ್ರಗತಿಪರ ಜೀವನದಲ್ಲಿ ಇದೊಂದು ಮರೆಯಲಾಗದ ಉಚ್ಚ ಸಾಹಸ.

ಇಂತಹ ದಾಖಲೆಗೆ ನೆರವಾದ ಸ್ವಪರ ರಾಷ್ಟ್ರಗಳ ಪೊಲಿಸಿದಾರರಿಗೂ ಏಜಂಟರಿಗೂ ಕಂಪೆನಿಯು ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತದೆ.

ಶಿವಪ್ರಸಾದ ತಾಕರ್ — ಮೆನೇಜಿಂಗ್ ಡೈರೆಕ್ಟರ್.

ಎಮ್. ಸುಂದರರಾಮ ಸೆಟ್ಟಿ — ಏಜನ್ಸಿ ಮೇನೇಜರ್

ಮಂಗಳೂರು ಶಾಖೆ.

ಕೆ. ಪಿ. ಭವನಿಶಂಕರ ಸೆಟ್ಟಿ
ಬ್ರಾಂಚ್ ಸೆಕ್ರೆಟರಿ

ಪಾಠವಾಗಬಲ್ಲ ಘಟನೆಗಳು

ಅಖಿಲ ಭಾರತದ ಇಂದಿನ ವಿಶೇಷ ವಾತಾವರಣದಲ್ಲಿ ಅಲ್ಲಲ್ಲಿ ಆಗಾಗ ನಡೆದಿರುವ ಘಟನೆಗಳಲ್ಲಿ ಒಂದೊಂದರಲ್ಲಿ ಒಂದೊಂದು ರಮ್ಯಾದ್ಭುತ ಕಾದಂಬರಿಗೆ, ಅಥವಾ ರೋಮಾಂಚದಾಯೀ ಚಲಚ್ಚಿತ್ರಕ್ಕೆ ಆಗುವ ಕಥಾವಸ್ತುಗಳಿವೆ ಎನ್ನಬಹುದು. ಉಲ್ಲೇಖಯೋಗ್ಯವಾದ ಧೈರ್ಯ, ಸಾಹಸ, ದಯೆ, ಚಾತುರ್ಯ, ಅಂತೆಯೇ ಕ್ರೂರತೆ, ಸಡಿಲುಬುದ್ಧಿ, ಅಜ್ಞಾನ, ಅಸಂಬದ್ಧತೆಗಳ ಹಲವು ಮಾದರಿಗಳು ನಡೆದಿವೆ. ಕವಿಗಳ ಕಲ್ಪನೆಯ ದೃಶ್ಯಗಳು ಕಾರ್ಯರಂಗದಲ್ಲೇ ಕಂಡು ಬಂದಿವೆ. ಅವುಗಳ ಪೈಕಿ ಒಂದೆರಡನ್ನು ಇಲ್ಲಿ ನೆನಪಿಗೆ ತರಲಾಗಿದೆ:-

ಪ್ರತ್ಯಕ್ಷ ಪಾಠ!

ರೋಮ್ ಉರಿಯುತಿದ್ದಾಗ ಫಿಡ್ಲ್ ಬಾರಿಸುತಿದ್ದವನ ಕತೆ ನಮಗೀಗ ಗಾದೆಯಾಗಿದೆ. ಹೊಣೆ ಹೊತ್ತವರ ಇಂತಹ ಅಲಕ್ಷ್ಯ ಬುದ್ಧಿ, ವಿಷಯಲಂಪಟತನಗಳನ್ನು ಭಾರತದಲ್ಲಿಂದು ಹಲವರಲ್ಲಿ-ಮುಖ್ಯವಾಗಿ ಮುಂಡಾಸು ರಾಜರು, ಜಮೀನ್ದಾರರು, ನವಾಬರೇ ಮುಂತಾದವರಲ್ಲಿ-ಕಾಣುತ್ತೇವೆ. ಅಹಂಕಾರ ಮತ್ತು ಜಡಮನೋವೃತ್ತಿಯಿಂದ ಹೀಗಾಗುವಂತೆಯೇ ಅಜ್ಞಾನದ ದೆಸೆಯಿಂದಲೂ ಇಂತಹ ಪ್ರಮಾದಗಳಾಗುವದಿದೆ. ಕಾಶ್ಮೀರದ ಶ್ರೀನಗರದ ಮೇಲೆ ಧಾಳಿಗಾರರ ದಾಡು ನಡೆದಿತ್ತು. ನಗರ ಕತ್ತಲಾಗಿತ್ತು; ಆಡಳಿತ ಬರ್ಖಾಸ್ತಾಗಿತ್ತು. ಆದರೂ ಅಲ್ಲಿಯ ನಾಗರಿಕರಿಗೆ ತಮಗೆ ಸನ್ನಿಹಿತವಾಗಿದ್ದ ಅಪಾಯದ ಅರಿವೇ ಇರಲಿಲ್ಲ. ಹಿಂದೀ ಸರಕಾರದ ವಿಮಾನಗಳು ಶ್ರೀನಗರದ ಆಕಾಶದಲ್ಲಿ ಹಾರಾಡುತಿದ್ದುವು; ಹಿಂದೀ ಸೇನೆಗಳು ಶ್ರೀನಗರದ ಮುಂಭಾಗದ ರಸ್ತೆ ಹಿಡಿದು ಆಕ್ರಮಣಗಾರರನ್ನು ಹೊಂಚುತ್ತಾ ಬೇಟೆಯಾಡ[illegible] ಹೋಗುತಿದ್ದುವು. ಅವರೊಮ್ಮೆ ಆ ಹಾದಿಯಲ್ಲಿದ್ದುಕೊಂಡೇ ಹಿಂದೆ ನೋಡುವಾಗ ಒಬ್ಬ ಶಾಲಾ ಮಾಸ್ತರನು ಸಣ್ಣ ಮಕ್ಕಳ ಗುಂಪೊಂದನ್ನು ಕಟ್ಟಿಕೊಂಡು ಬರುತಿದ್ದನಂತೆ. 'ಸವಾರಿ ಯಲ್ಲಿಗೆ?' ಎಂದು ಸೈನಿಕರು ಸವಾಲು ಹಾಕಿದಾಗ 'ಪ್ರತ್ಯಕ್ಷ ಪಾಠಕೊಡಲು. ವಿದ್ಯಾರ್ಥಿಗಳಿಗೆ ಆ ವಿಮಾನಗಳನ್ನು ತೋರಿಸಿ ಕಲಿಸುವುದಕ್ಕಾಗಿ' ಎಂದು ಆ ಅಧ್ಯಾಪಕ ಉತ್ತರಿಸಿದ. 'ಈಗ ಹೋಗು ಹಿಂದೆ; ನಡೆ!' ಎಂದು ಸೋಲ್ಜರರು ಆ ಗುಂಪನ್ನು ಹಿಂದಕ್ಕಟ್ಟಿದರು. ಇಲ್ಲವಾದರೆ ಆ ಗುಡ್ಡಗಾಡು ಜನರ ಬಾಲಹತ್ಯಾ ದಾಖಲೆಯ ಸಂಖ್ಯೆಯೇರುತಿತ್ತು; ಉಪಾಧ್ಯಾಯನಿಗೇನೇ ಕಲಿಸುವವರು ಆ ಕಡೆ ಕಾದಿದ್ದರು!

ಹುತಾತ್ಮ ಶೆರ್ವಾನಿ

ಪುರಾಣ, ಪುಣ್ಯಚರಿತೆಗಳಲ್ಲಿ ಉಲ್ಲೇಖಿತವಾಗಿರುವ ಚಿರಸ್ಮರಣೀಯ ಬಲಿದಾನಗಳಲ್ಲಿ ಯಾವುದಕ್ಕೇನೇ ಆದರೂ ಸರಿಮಿಗಿಲೆನಿಸಬಲ್ಲ ಪ್ರಾಣಾರ್ಪಣೆಯೊಂದು ಇದೇ ಕಾಶ್ಮೀರೀ ರಣರಂಗದಲ್ಲಾಯಿತು. ಈಗ ಆಕ್ರಮಣಗಾರರ ದಾಹು ಬಿಟ್ಟಿರುವ ಬರಮುಲಾ ನಗರದಲ್ಲಿ ಮಿ. ಮೆಹಬೂಬ್ ಶೆರ್ವಾನಿಯೆಂಬ ಶೇಕ್ ಅಬ್ದುಲ್ ಅನುಯಾಯಿ ತರುಣನೊಬ್ಬನಿದ್ದ. ಆತ ಪ್ರಾಯಃ 30ರ ಗಡಿಯಲ್ಲಿದ್ದರೂ 'ರಾಷ್ಟ್ರೀಯ ಸಮ್ಮೇಲನ'ದ ಪ್ರಮುಖ ಕಾರ್ಯಕರ್ತರಲ್ಲೊಬ್ಬನಾಗಿದ್ದ. ಬರಮುಲಾದೊಂದಿಗೆ ಈ ವೀರನೂ ಧಾಳಿಗಾರರಿಗೆ ಸೆರೆಸಿಕ್ಕಿದ. ಇವನೆಂಥವನೆಂಬ ಪರಿಚಯ ಆ ನರಭಕ್ಷಕರಿಗಾಯಿತು. ಅಲ್ಲಿಯ 'ನಿಶಾತ್ ಟಾಕೀಸ್' ಮಂದಿರಕ್ಕೆ ಸಮೀಪದೊಂದು ಸ್ಥಳದಲ್ಲಿ ಎರಡು ಕಂಭಗಳ ನಡುವೆ ಅವನನ್ನು ಬಿಗಿದು ಕಟ್ಟಿದರು; ತಾವೇನು ಮಾಡಲು ಹೊರಟವರೆಂಬ ಗುಟ್ಟು ಆತನಿಗೆ ಮುಂದಾಗಿ ತಿಳಿಯಲೆಂದು ಸರಿಯಾಗಿ ತಾಡನಕೊಟ್ಟು ಹೇಳಿದರು:"ಕಾಶ್ಮೀರ ಜಮ್ಮೂ ರಾಷ್ಟ್ರೀಯ ಸಮ್ಮೇಲನವನ್ನೂ ಶೇಕ್ ಅಬ್ದುಲ್ಲಾನ ಅನುಯಾಯಿತ್ವವನ್ನೂ ಬಿಟ್ಟೆನೆಂದು ಬಗಳು. ನಮ್ಮ 'ಆಝಾದ್ ಕಾಶ್ಮೀರ್' ತಾತ್ಕಾಲಿಕ ಸರಕಾರ'ಕ್ಕೆ ವಿಧೇಯನೆಂದು ಪ್ರತಿಜ್ಞೆ ತೊಡು. ಇಲ್ಲವಾದರಿಲ್ಲಿಯೇ ಚಿತ್ರಹಿಂಸೆ ಮಾಡಿ ಕೊಲ್ಲುತ್ತೇವೆ.' ಈ ಮಾತನ್ನನುಸರಿಸಿ ಪುನಃ ಮರ್ದನ ನಡೆಯಿತು. ಧೀರ ಶೆರ್ವಾಣಿ ಅಲ್ಲಿಯೂ "ಊಹೂಂ" ಎಂದು ತಲೆಯಲ್ಲಾಡಿಸಿಬಿಟ್ಟ. ಅವನ ಆತ್ಮಬಲವೆಂತಹದೊ! ಹೇಳಿದ: "ಶೇರ್-ಇ-ಕಾಶ್ಮೀರ್ ('ಕಾಶ್ಮೀರದ ಹುಲಿ' ಶೇಕ್ ಅಬ್ದುಲ್ಲಾ) ಈಗ ತಾನೇ ನಾಯಕತ್ವ ವಹಿಸಿದ್ದಾರೆ ಅವರೂ ಭಾರತ ಕೇಂದ್ರದ ಸೈನಿಕರೂ ನಿಮ್ಮ ಹಲ್ಲುಹವಾಲಿ ತೆಗೆದುಕೊಳ್ಳಲು ಹೊರಟಿದ್ದಾರೆ. ಇನ್ನು ಕೆಲವೇ ದಿನಗಳೊಳಗೆ ನೀವು ಜೀವವುಳಿಸಿಕೊಂಡವರಿಲ್ಲಿಂದೋಡಿದರೆ ಸರಿ!" ಮಧ್ಯಕಾಲೀನ ಬರ್ಬರತೆಗಳೆದುರಲ್ಲಿ ಇಂತಹ ಎದೆಗಾರಿಕೆ ಪ್ರದರ್ಶಿಸಿದ್ದ ಕೆಲವೇ ಮಂದಿ ಧೀರರ ಪರಿಚಯವು ನಮಗೆ ಚರಿತ್ರೆಗಳಿಂದಾಗುತ್ತಿದೆ. ಈ ಮಾತು ಹೊರಬೀಳುವುದರೊಂದಿಗೇನೇ ಶೆರ್ವಾನಿ ಶವವಾಗಿದ್ದ. 'ಅನ್ಯಾಯಕ್ಕಾವ ಸಂದರ್ಭದಲ್ಲೂ ಎಂದೂ ತಲೆಬಾಗಬೇಡಿ. ಬದುಕಿ ಶವವಾಗಿರುವುದಕ್ಕಿಂತ ಸತ್ತು ಜೀವನಾಗಿರುವುದು ವಾಸಿ; ಹಾಗೆಂದೇ ನಾನು ಹೊರಟೆ!" ಎಂದು ಆತ ಇಡೀ ಭಾರತಕ್ಕೆ ಕೊಟ್ಟ ವಿದಾಯಸಂದೇಶವೇ ಆದಾಗಿತ್ತು. ಅವ ಅಡಿಮುಗಿಸುವುದರೊಳಗೆ 'ಧಂ ಧಂ ಧಂ' ಎಂದು ಧಾಳಿಗಾರರ ಹದಿನಾಲ್ಕು ಗುಂಡುಗಳು ಅವನ ದೇಹವನ್ನು ಛೇದಿಸಿ ಬಿಟ್ಟಿದ್ದುವು. ಆ ವನ್ಯಮೃಗಗಳು ಅಷ್ಟರಿಂದಲೇ ಬಿಡಲಿಲ್ಲ. ಶೆರ್ವಾನಿ ಶವದ ಮೂಗನ್ನು ಕತ್ತರಿಸಿ, ಅವನ ಮುಖವನ್ನು ವಿಕಾರಗೊಳಿಸಿ, ದೇಹದ ಮೇಲೆ ಈ ಕೆಳಗಿನ ನೋಟಿಸು ಬರೆದು ಹಚ್ಚಿ ಪ್ರದರ್ಶನಕ್ಕಿಟ್ಟು ಹೋದರು: "ಇವನೊಬ್ಬ ದ್ರೋಹಿ. ಇವನ ಹೆಸರು ಶೆರ್ವಾನಿ. ಎಲ್ಲಾ ದ್ರೋಹಿಗಳಿಗೂ ಇದೇ ಅದೃಷ್ಟ ಕಾದಿದೆ ಎಂದು ತಿಳಿದಿರಬೇಕು". ಆದರೆ ಆ ಧೀರಾತ್ಮ ಹೊರಟು ಹೋಗುವಾಗ ಬಿಟ್ಟು ಹೋಗಿದ್ದ ತನ್ನ ಪವಿತ್ರಾಂಶವೆಂಬಂತಹ ಆ ಕೊನೇ ಮಾತುಗಳೂ ಹುಸಿಯಾಗಬಲ್ಲುವೆ? ಅದೂ ಹುಸಿಯಾಗುತಿದ್ದರೆ ಮತ್ತಾವ ಮಹರ್ಷಿಯ ಶಾಪ ಫಲಿಸಲು ಸಾಧ್ಯ? ಈ ಭೀಕರ ಕೊಲೆ ನಡೆದ 16 ಘಂಟೆಗಳೊಳಗೆ- ಆ ಶುದ್ಧರಕ್ತದ ಕಲೆಗಳೊಣಗುವ ಮೊದಲೇ-ಹಿಂದೀ ಸೇನೆಯು ಬರಮುಲಾದಿಂದ ಧಾಳಿಗಾರರನ್ನೋಡಿಸಿ ಬೆನ್ನಟ್ಟಿಕೊಂಡು ಹೋಯಿತು. ಈಗ ಅಲ್ಲಲ್ಲಿ ಕೆಲವು ಧಾಳಿಗಾರರು ಹಿಂದೀ ಸೈನಿಕರಿಗೂ, ಕಾಶ್ಮೀರೀ ಜನತೆಗೂ ಸೆರೆಸಿಕ್ಕುತ್ತಿದ್ದಾರೆ. ಅಂಥವರನ್ನು 'ಹರಿದು ಹಸಿಬಿಸಿ ತಿನ್ನುವ'ವೆಂಬಷ್ಟು ಕ್ರೋಧಾವೇಶ ಕಾಶ್ಮೀರದ ಜನತೆಗಿದೆ. ಆದರೆ ಕಾಶ್ಮೀರದ ರಕ್ಷಣಾ ಮಂತ್ರಿ ಉಕ್ಕಿನ ಮನುಷ್ಯ ಗುಲಾಮ್ ಮಹಮ್ಮದ್ ಭಕ್ಷಿಗಳ ನಿಯಮ ನಿಷ್ಠುರತೆ ಅಭೇದ್ಯವಾದುದು. ಸೆರೆಯಾಳುಗಳನ್ನು ಸರಕಾರಕ್ಕೊಪ್ಪಿಸಬೇಕಲ್ಲದೆ ಯಾರೂ ಸ್ವೇಚ್ಛಾ ವರ್ತನೆ ವಹಿಸಕೂಡದು. ಆಕ್ರಮಣಗಾರ ಕೈದಿಗಳನ್ನು ತನ್ನ ಮುಂದೆ ಹಾಜರುಪಡಿಸಿದಾಗ "ಇವರನ್ನೇನು ಮಾಡಬೇಕೆಂದು ನೀವನ್ನುವಿರಿ?" ಎಂದು ಗುಲಾಮ್ ಭಕ್ಷಿ ಜನರನ್ನು ಪ್ರಶ್ನಿಸುವದಿದೆ. ಆಗ 'ಗುಂಡಿಟ್ಟು ಕೊಲ್ಲಿ' ಎಂದೊಮ್ಮೆಗೇ ಏಕಕಂಠದಿಂದ ಜನ ಹಾಕುವ ಬೊಬ್ಬೆಯೇ ಆ ನರಮೃಗಗಳ ಎದೆಯೊಡೆಯುವ ಗುಂಡಾಗುವಂತಹದಿದೆ. ಶೆರ್ವಾನೀ ಹೃದಯವಾಗಲೀ, ಶೆರ್ವಾಣಿ ಮರಣದ ಭಾಗ್ಯವಾಗಲೀ ಬೇರೆಷ್ಟು ಮಂದಿಗಿದೆ? ಒಂದು ಬಾರಿ ಕೆಲವು ಆಕ್ರಮಣಗಾರ ಕೈದಿಗಳನ್ನು ತಮಗೊಪ್ಪಿಸಬೇಕೆಂದು ಕೂಡಿದ ಜನಸಂದಣಿ ಚಂಡಿ ಹಿಡಿದಿತ್ತು; ಹಿಸುಕಿ ಹಿಸುಕಿ ಕೊಂದು ತಮ್ಮ ಎದೆಯುರಿಯನ್ನು ಸ್ವಲ್ಪವಾದರೂ ತಣಿಸಿಕೊಳ್ಳಬೇಕೆಂಬುದೇ ಜನತೆಯ ಆತುರ. 'ಇವರನ್ನು ದ್ರೋಹಿಗಳೆಂದು ಗಣಿಸಿ ಶಾಸನ ಪ್ರಕಾರ ತಕ್ಕ ಶಾಸ್ತಿ ಮಾಡಿಯೇ ತೀರುವೆವು' ಎಂದು ಅಧಿಕಾರಿಗಳಿಗೆ ಆ ಜನಸಂದಣಿಯನ್ನು ಸಂತೈಸಲು ಅತಿ ಪ್ರಯಾಸವಾಯಿತು.

ನಾರಾಯಣ ಸಿಂಗರ ಮನಸ್ಸು

ಮೇಲಿನ ಎರಡು ಘಟನೆಗಳಲ್ಲಿ ಮೊದಲನೆಯದು ಸಾಮಾನ್ಯ ಜನರಲ್ಲಿರುವ ಅಜ್ಞಾನವನ್ನು ಸೂಚಿಸುತ್ತದೆ; ಜನಜಾಗ್ರತಿಯ ಅವಶ್ಯಕತೆಯನ್ನು ಸಾರುತ್ತದೆ. ಎರಡನೆಯದು ಧೀರೋದಾತ್ತತೆಯ ಪರಮಾವಧಿ ಪ್ರಕಾಶವೊಂದನ್ನು ತೋರುತ್ತದೆ. 'ಮರಣಕ್ಕಂಜದೆ ಅಮರರಾಗಬೇಕು' ಎಂಬ ಪಾಠ ಕೊಡುತ್ತದೆ. ಉತ್ತರ ಭಾರತದಲ್ಲಿ ಇಂದು ಸರ್ವಸಾಮಾನ್ಯವಾಗಿರುವ ಆಪತ್ತಿಗೀಡಾಗುವ ಎಲ್ಲರಿಗೂ ಮಾದರಿಯಾಗಬಲ್ಲ, ಮತ್ತೊಬ್ಬರ ವರ್ತನೆಯೂ ಉಲ್ಲೇಖಯೋಗ್ಯವೇ. ಶ್ರೀ ನಾರಾಯಣ ಸಿಂಗರು ಹಲವು ವರುಷ ಪಂಜಾಬಿನ ಅಧಿಕಾರಿಯಾಗಿದ್ದು ಸತ್ಕೀರ್ತಿಗಳಿಸಿದವರು. ಈ ಬಾರಿಯ ಗೊಂದಲದಲ್ಲಿ ಪಶ್ಚಿಮ ಪಂಜಾಬಿನಲ್ಲಿದ್ದ ಅವರ ಅಪಾರ ಆಸ್ತಿಯು ಆದ್ಯಂತವಾಗಿ ಕೈ ಬಿಟ್ಟಿತು. ನಾರಾಯಣ ಸಿಂಗರು ಬೀದಿ ಭಿಕಾರಿಯಾಗಿ ಈಗ ನವದಿಲ್ಲಿಯಲ್ಲಿದ್ದಾರೆ. ಚಿಕ್ಕಾಸೂ ಉಳಿಯದಂತೆ ತನ್ನ ಹೇರಳ ಆಸ್ತಿಯೆಲ್ಲವನ್ನೂ ಕಳಕೊಂಡ ಅವರ ಈಗಿನ ಉತ್ಸಾಹವನ್ನು ಕಾಣುವಾಗ, ಅವೆಲ್ಲಾ ಆಸ್ತಿಗಳನ್ನೂ ಹೊಸ ಸಂಪಾದನೆ ಮಾಡಿಕೊಂಡವರಂತೆಯೇ ಕಾಣುತ್ತಾರೆ. ತನ್ನ ಹಳೇ ಮಿತ್ರರು ದುಃಖಸೂಚನೆಮಾಡಲು ಬಂದಾಗ ತನಗಾವ ದುಃಖವೂ ಆಗಿಲ್ಲವಾದ್ದರಿಂದ ಅಂತಹ ಸೂಚನೆಗವಕಾಶವನ್ನೇ ಕೊಡಲಾರರು. ಇವರ ಹಿಂದಿನ ಸಹಾಧಿಕಾರೀ ಮುಸ್ಲಿಂ ಮಿ. ಅಲೀಶಾ, ಜಾತೀಯ ಗೊಂದಲದಿಂದಲ್ಲವಾದರೂ ಬೇರೆ ಕಾರಣಗಳಿಂದ ಹೀಗೆಯೇ ತನ್ನ ಸರ್ವಸ್ವವನ್ನೂ ಕಳಕೊಂಡು, ಈಗ ದಿಲ್ಲಿಯಲ್ಲಿದ್ದಾರೆ. ತನ್ನಾಸ್ತಿಗಳನ್ನಪಹರಿಸಿದವರು ಮುಸ್ಲಿಮರಾದರೂ ನಾರಾಯಣ ಸಿಂಗರಿಗೆ ಅಲೀಶಾರ ಮೇಲಿರುವ ಅನ್ಯೋನ್ಯತೆಯು ಅತ್ಯಪೂರ್ವವಾದುದು. ಇವರಿಬ್ಬರೂ ತಮಗೊದಗಿದ ದುರ್ದೈವವನ್ನು ಸಂಪೂರ್ಣ ಮರೆತು ಸಂತೋಷಚಿತ್ತದಿಂದ ಸಹೋದರರಂತಿರುವ ಆ ದೃಶ್ಯವು ಅಸಹಕಾರ ಕಾಲದ 'ಗಾಂಧೀ-ಶೌಕತಾಲೀ ಜತೆ'ಗಿಂತಲೂ ಹೆಚ್ಚಾಗಿ ದಿಲ್ಲಿಯವರ ಹೃದಯ ಶುದ್ಧಿಕರಣಗೊಳಿಸಿದೆ.

ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

ದೇಶೋನ್ನತಿಯನ್ನು ಬಯಸುವುದು ಪ್ರತಿಯೊರ್ವ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಪೋಷಿಸಿ ಉಳಿತಾಯವನ್ನು ಕಲ್ಪಿಸುವುದು. ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು. ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿಕೊಡುವುದು, ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬ್ಯಾಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ [illegible],೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಹಣದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲವೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906.

CANARA BANK LIMITED.

CHAMPAE'S

Snow & Castrex

Sole Distributers for India

Prop: K. G. NAYAK,

Santhekatte, UDIPI, S. K.

ಕಳೆದ ವಾರದಲ್ಲಿ ಹಿಂದೀ ರಾಜಕೀಯ ರಥವು ಯಥಾ ಪ್ರಕಾರ ಮುಂದೊತ್ತಿದೆ ಹೊರತು ವಿಶೇಷ ವಿದ್ಯಮಾನಗಳೇನೂ ನಡೆದಿಲ್ಲ.

ಕಾಶ್ಮೀರದಲ್ಲಿ ಭಾರತ ಕೇಂದ್ರದ ಸೇನೆಗಳು ವಿಜಯಗಳಿಸುತ್ತಾ ಹೋಗಿವೆ; ಧಾಳಿಗಾರರಿಂದ ಸುತ್ತುಗಟ್ಟಲ್ಪಟ್ಟು ಜೀವನ್ಮರಣ ಹೋರಾಟ ಸ್ಥಿತಿಯಲ್ಲಿ ಸಿಕ್ಕಿರುವ ಕಾಶ್ಮೀರದ ಸಂಸ್ಥಾನಿಕ ಸೇನೆಗಳನ್ನು ಬಿಡಿಸಿಕೊಳ್ಳಲು ನಡೆಸಿದ ಸಾಹಸ ಹೆಚ್ಚಿನದು. ಜುನಾಗಾಢ್ ಮತ್ತಿತರ ಸಂಸ್ಥಾನಗಳ ಕುಡಿತದ ಕೊನೆಯ ಅಂಶವೆಲ್ಲಾ ಕಳೆದ ವಾರದಲ್ಲೇ ಮುಗಿದು ಈಗ ಅದು ಪೂರ್ತಿ ಆರಿ ಹೋಗಿದೆ.

ಹೈದರಾಬಾದು ಮತ್ತು ಕೇಂದ್ರ ಭಾರತದ ಸಂಬಂಧ ತೀರ್ಮಾನಕ್ಕೆ ಇದೇ ತಾ 25 ಕೊನೆಯ ವಾಯಿದೆಯಾಗಿ ನಿಶ್ಚಯಿಸಲ್ಪಟ್ಟಿದೆ. ಈ ವಾರದ ಉತ್ತರವೆಂದರೆ ಇದೇ; ಹಿಂದೀ ರಾಜಕೀಯ ನಾಟಕದ ಈ ಅಂಕದ ಮುಖ್ಯಪಾತ್ರ ಹೈದರಾಬಾದಿನದೇ.

ಒಂದು ತಲೆಮಾರಿಗೊಮ್ಮೆ ಇಡೀ ಪ್ರಪಂಚವು ಕಾಣಲು ಸಾಧ್ಯವಿರುವ ಮಹಾ ಸಂಭ್ರಮವೊಂದು ಕಳೆದ ವಾರ ನಡೆದು ಹೋಯಿತು-ಇಂಗ್ಲಾಂಡಿನ ರಾಜಕುವರಿ ಎಲಿಜಬೆತಳ ವಿವಾಹ. ನವಂಬರ ತಾ. 20ರಲ್ಲಿ ನಡೆದ ಈ ಮದುವೇ ಗದ್ದಲವು--ಅಖಿಲ ಜಗತ್ತಿನ ವಿವಾಹ ಸಂಭ್ರಮಗಳ ಪೈಕಿ ಎಲ್ಲಾ ವಿಧಾನಗಳಿಂದಲೂ ಸರ್ವ ಪ್ರಥಮದ್ದೆನ್ನಬಹುದಾದ ಈ ಮಹಾ ವಿಜೃಂಭಣೆಯು--ಲೋಕದ ಮನೋವೃತ್ತಿಯನ್ನಳೆದು ತೋರಿಸುವ ಮಾನದಂಡಿದೆ.

ರಾಜಕುವರಿಯ ವಿವಾಹ

ಇಂಗ್ಲಾಂಡಿನ ರಾಜರ ಹಿರೇಮಗಳು:— ಬ್ರಿಟಿಷ್ ಸಿಂಹಾಸನದ ಹಕ್ಕುದಾರಿಣಿ- ರಾಜಕುವರಿ ಎಲಿಜಬೆತ್, ಗ್ರೀಸಿನ ರಾಜಕುವರ, ಭಾರತದ ಗವರ್ನರ್ ಜನರಲ್ ಲೋರ್ಡ್ ಲುಯಿಸ್ ಮೌಂಟ್‌ಬೇಟನರ ಅಣ್ಣನ ಮಗ ಲೆಫ್ಟಿನೆಂಟ್ ಫಿಲಿಪ್ಸ್ ಮೌಂಟ್ ಬೇಟನರನ್ನು ಇದೇ ತಾ 20ರಲ್ಲಿ ವರಿಸಿದಳು. ಬಹುಶಃ ಇಡೀ ಪ್ರಪಂಚದ ಈ ಗಿನೊಂದು ಶತಮಾನದಲ್ಲಿ ಜತೆಗೂಡಿದ-ಕೂಡುವ-ಗಂಡು, ಹೆಣ್ಣುಗಳ ಪೈಕಿ ಸ್ಥಾನ ಗೌರವ ಮತ್ತು ಘನತೆಯ ಮಟ್ಟಿಗೆ ಈ ಎಲಿಜಬೆತ್-ಫಿಲಿಪ್ಸ್ ಜತೆಯೇ ದೊಡ್ಡದು. ಅದ್ದರಿಂದಲೇ ಇಡೀ ಲೋಕದ ಜನರು ಮಾತ್ರವಲ್ಲ, ಪ್ರತಿಯೊಂದು ರಾಷ್ಟ್ರದ ಸರಕಾರಗಳೂ ಈ ಕುರಿತು ವಹಿಸಿರುವ ಆಸಕ್ತಿಯು ಅತ್ಯಪೂರ್ವವಾದುದು. ದಂಪತಿಗಳಿಗೆ ಜಗತ್ತಿನ ವಿವಿಧ ರಾಷ್ಟ್ರಗಳ ಸರಕಾರಗಳಿಂದ ಮತ್ತು ವ್ಯಕ್ತಿ, ಸಂಸ್ಥೆಗಳಿಂದ ಬಂದಿರುವ ಉಡುಗೊರೆಗಳ ಮೌಲ್ಯದ ಅಂದಾಜು ಪಟ್ಟಿ ಪ್ರಾಯಶಃ ಒಂದು ರಾಷ್ಟ್ರದ ಆಯವ್ಯಯ ಪಟ್ಟಿಯ ಸಂಖ್ಯೆಯನ್ನೂ ಮಿಕ್ಕಬಹುದು; ಆ ದಂಪತಿಗಳಿಗೆ ಬಂದ ಶುಭಾಕಾಂಕ್ಷೆಯ ಸಂದೇಶಗಳು ಬಹುಶಃ ಸ್ವತಂತ್ರವಾದಾಗ ಭಾರತಕ್ಕೆ ಬಂದಿದ್ದವುಗಳಿಗಿಂತಲೂ ಹೆಚ್ಚಿರಬೇಕು! ಸಂಭ್ರಮ ವಿರಾಗಿ ಗಾಂಧಿಜೀ ಕೂಡಾ, ತಾನು ಸ್ವತಃ ನೂತು ತಯಾರಿಸಿ ಒಂದು 'ಮೇಜುವಸ್ತ್ರ'ವನ್ನು ಉಡುಗೊರೆ ಕಳುಹಿದ್ದರೆಂದ ಮೇಲೆ ಮತ್ತೇನುಳಿಯಿತು? ಈ ಮದುವೆಗುಡುಗೊರೆ ಕೊಡಲಾರೆನೆನ್ನುವವರು ಇಡೀ ಲೋಕದಲ್ಲಿ ಬೇರಾರು ಉಳಿದಾರು? ಆದರೆ 'ಊರಿಗೊಂದು ಹಾದಿ- ಪೋರನಿಗೊಂದು ಹಾದಿ' ಎಂಬ ಗಾದೆಯನ್ನು ಬದಲಾಯಿಸಿ 'ಲೋಕದ್ದೊಂದು ನೀತಿ-ರಶ್ಯದ್ದೊಂದು ರೀತಿ' ಎನ್ನಲಾಗುವಂತೆ ಈ ಮಟ್ಟಿಗೂ ಸೋವಿಯೆಟ್ ರಶ್ಯಾ ಸರಕಾರವೊಂದೇ ಅಪವಾದವಾಗಿತ್ತು. ರಶ್ಯದ ಸರಕಾರವು ಈ ಮದುವೆಗಾವ ಉಡುಗೊರೆಯನ್ನೂ ಕಳುಹಿದ್ದಿಲ್ಲವಂತೆ. ಈ ದೇಹಸಂಬಂಧವನ್ನು 'ಒಂದು ಗಣ್ಯ ವಿಷಯ'ವೆಂದೇ ಅದು ಕಟ್ಟಿಕೊಂಡಿಲ್ಲ. ರಶ್ಯದಲ್ಲಿ ಎಂತಹ ದೊಡ್ಡ ವ್ಯಕ್ತಿಯಿದ್ದರೂ-ಒಬ್ಬರ ಖಾಸಗೀ ಸಂಬಂಧಗಳಿಗಾವ ಮಹತ್ವವೂ ಇಲ್ಲ. ಆದರೆ ಇದೊಂದೇ ಕಾರಣವು ಬ್ರಿಟನು ಮತ್ತು ರಶ್ಯಗಳೊಳಗಿನ ಸಂಬಂಧವನ್ನು ಇದು ವರೆಗಿನ ಮಿಕ್ಕೆಲ್ಲಾ ಕಾರಣಗಳಿಗಿಂತ ಹೆಚ್ಚಾಗಿ ಕೆಡಿಸಿದಂತಿದೆ! ರಶ್ಯದ ಪ್ರತಿನಿಧಿಯು ಈ ವಿವಾಹಸಮಾರಂಭ ನಡೆಯುತಿದ್ದ 'ವೆಸ್ಟ್ ಮಿನಿಸ್ಟರ್ ಅಬ್ಬೆ'ಗೆ ಬಂದಾಗ, ಹೊರಗೆ ನೆರೆದಿದ್ದ ಅಭೂತಪೂರ್ವ ಜನ ಸಂದಣಿಯು, ಮಿಕ್ಕೆಲ್ಲರ ಆಗಮನದ ವೇಳೆಯಲ್ಲೂ ಹಾಕಿದ್ದ ಕಿಂಚಿತ್ತಾದ ಆಹ್ವಾಳೆಯನ್ನು ಹಾಕಿರಲಿಲ್ಲ. ಹೀಗಿದೆ ಇಂದಿನ 'ಕ್ರಾಂತಿಯುಗ'ದ ಜನ ಮನೋಗತಿ. ಇಂದಿನ ನವಜಗತ್ತಿನಲ್ಲಾದರೂ ಅರಸುತನದ ಘನತೆ ಗೌರವಗಳು ಕಳೆದುಹೋಗಿಲ್ಲ.— ದೊಡ್ಡವರನ್ನು ಆರಾಧಿಸುವ ಮನೋವೃತ್ತಿ ಮಾಸಿಲ್ಲ— ಎಂತಹ ಕ್ರಾಂತಿಕಾರಕ, ಸುಧಾರಕ, ವೈರಾಗ್ಯಪೂರಿತ ಹೃದಯದಲ್ಲಾದರೂ ಆದರ ಅಂಶ ಪರಿಮಾಣವಾದರೂ ಸೇರಿರದೆ ಇಲ್ಲ— ಎಂಬುದರ ಸಾಕ್ಷಾತ್ ನಿದರ್ಶನವಿದು!

ಬ್ರಿಟಿಷ್ ರಾಜಕುವರಿ- ವಿವಾಹ

ಈ ನವದಂಪತಿಗಳು

ವಿಚಾರಾತ್ಮಕ ದೃಷ್ಟಿಯಿಂದ ನೋಡಿದರೆ ಯಾವ ರಾಷ್ಟ್ರದ ರಾಜ ಕಾರಣಕ್ಕೂ, ಏನೊಂದೂ ಸಂಬಂಧವಿರದ ಸಾಮಾನ್ಯ ಘಟನೆಯಿದು. ಮಾನವವರ್ಗದ ದಾಂಪತ್ಯವೆಂಬ ವಿಶಾಲ ಸಮುದ್ರಕ್ಕೆ ಎರಡು ಹನಿಗಳೊಂದಾಗಿ ಸೇರಿದಷ್ಟೇ ಅಲ್ಪ ವಿಷಯವಿದು. ಮಿಕ್ಕೆಲ್ಲವುಗಳಂತೆಯೇ ಇವೆರಡ್ ಜೀವಗಳ ಹೃದಯ ಮತ್ತು ದೇಹ ಸಂಬಂಧವುಂಟಾದುದೊಂದಲ್ಲದೆ ಬೇರಾವ ವಿಶೇಷವೂ ಇದರಲ್ಲಿಲ್ಲ! ಪ್ರಾಯ 21, ಎತ್ತರ 5 ಅಡಿ 5 ಇಂಚು, ತೂಕ 120 ಪೌಂಡುಗಳ ಒಂದು ಹೆಣ್ಣು ಜೀವ—ಪ್ರಾಯ 26, ಎತ್ತರ 6 ಅಡಿ 1 ಇಂಚು, ತೂಕ 170 ಪೌಂಡುಗಳ ಒಂದು ಗಂಡುಜೀವದ ಜತೆಗೂಡಿತು. ಕವಿಭಾಷೆಯಲ್ಲಿ ಹೇಳುವುದಾದರೆ ಮಹಾವನದ ಒಂದು ವೃಕ್ಷಕ್ಕೆ ಒಂದು ಲತೆಹಬ್ಬಿತು; ಅಗಣಿತ ಸಂಖ್ಯೆಯ ದಾಂಪತ್ಯಯೋಗಗಳಲ್ಲಿ ಒಂದಕ್ಕೆ 'ಎರಡು ಹೆಗಲುಗಳೊಡ್ಡಿದವು' ಅಷ್ಟೇ! ಆದರೆ ಈ ಜೋಡಿಗೆ ಇಂತಹ ಮಹತ್ವವೇಕೆ ಬಂತು? ಕಾರಣವಿಷ್ಟೆ:--ಮದುವೆಯಾದುದು ಇಂಗ್ಲಾಂಡಿನ ರಾಜಕುವರಿಗೆ; ಮದುವೆಯಾದವ 'ಡ್ಯೂಕ್ ಓಫ್ ಎಡಿನ್‌ಬರ್ಗ್'.

ಈ ಜತೆಯು ಯುರೋಪಿನ ಇಂದಿನ ಎಲ್ಲಾ ರಾಜದಂಪತಿಗಳ ಪೈಕಿ ಸೌಂದರ್ಯದ ಮಟ್ಟಿಗೆ ಅಗ್ರಗಣ್ಯವಾದದು. ಎಲಿಜಬೆತಳದು ಪ್ರೇಮ ವಿವಾಹ. ಯುರೋಪಿಯನ್ ಮಟ್ಟದ ಮೇಲಿಂದ ಗುಣ ನಡತೆ, ರೂಪ, ಪ್ರಾಯ, ಸ್ಥಾನಗಳಲ್ಲಿ ಇಷ್ಟೊಂದು ಅನುರೂಪ ಜೋಡಿಯು ಅತ್ಯಪೂರ್ವವಂತೆ. ರಾಜಕುವರಿ ಎಲಿಜಬೆತ್ ಸುಂದರಿ, ಸುಗುಣಿ. ಮೈಬಣ್ಣ ತಾಯಿಯದೇ. ತಾಯಿ ರಾಣಿ ಎಲಿಜಬೆತಳ ಕೆನೆಹಾಲ ಮೈಬಣ್ಣಕ್ಕಾಗಿ ಅಖಿಲ ಯುರೋಪಿನ ಸುಂದರಿಯರು ಮತ್ಸರಿಸುತ್ತಿರುವಷ್ಟು ಆಸೆಬಡುವ ದೃಷ್ಟಿಯಿಂದ ಅವಳ ರಾಣಿತನವನ್ನು ಕೂಡಾ ಕಾಣುತ್ತಿಲ್ಲ. ಅದೇ ಬಣ್ಣ ಮತ್ತು ಸೌಂದರ್ಯ ಮಗಳಲ್ಲೂ ಹಣಿಮೂಡಿದೆ. ರಾಜಕುವರಿಗೆ ಗಾಯನ ಮತ್ತು ನರ್ತನಗಳಲ್ಲಿ ವಿಶೇಷಾಸಕ್ತಿಯಿದೆ. ಸುಶಿಕ್ಷಿತೆಯಿದ್ದು ರಾಣೀ ತೇಂಕಾರದ ಬದಲಿಗೆ ಮಧುರ ಮನೋವೃತ್ತಿಯವಳಾಗಿದ್ದಾಳೆ. ಸಿತ್ರ್ಯ... ಚಿತ್ರಸಲ್ಲಾಪ, ವಿನೋದಗಳನ್ನು ಮೆಚ್ಚುವವಳಾಕೆ; 'ರ್ಹುಂಬಾ' ನರ್ತನದ ಮಟ್ಟಿಗೆ ಲಂಡನಿನ ಉತ್ತಮ ನರ್ತಕಿಯರಲ್ಲಿ ಈಕೆಯೊಬ್ಬಳು. ಸಿನೇಮಾ ನೋಡುವ ಹುಚ್ಚು ಬಹಳ. ಒಮ್ಮೊಮ್ಮೆ ರಾಜಮನೆತನದವರ ಸೀಟುಗಳನ್ನು ಬಿಟ್ಟು ಮುಂದೆಬಂದು ಕುಳಿತುಕೊಳ್ಳುವುದೂ ಇದೆ. ಒಂದುಬಾರಿ ತಂಗಿ ಮಾರ್ಗರೆಟಳೊಂದಿಗೆ ಬಕ್ಕಿಂಗಾಮ್ ಅರಮನೆ

ಋತುಸ್ರಾವ ನಿಂತಿತು

'ಕುಮಾರ್' ಬಿಲ್ಲೆಗಳನು ಉಪಯೋಗಿಸಿದರೆ ಪದೆಪದೆ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3/-; ಸೆಶ್ಯಲ್ ರೂ. 5-; ಅಧಿಕಾಧಿಕ ಸೆಶ್ಯಲ್ ರೂ. 8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, F. DS. (N. J.)
Tollygung e CALCUTTA
ಪ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ಹೆಗ್ಗುರಿಯಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ-

ದಿ ವಿಜಯಾ ಬೇಂಕ್, ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಸಿಟಿ-ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಂಞಂಗಾಡು, ಮಡಿಕೇರಿ ಮತ್ತು ಮುಂಬಾಯಿ

THE VIJAYA BANK, LIMITED.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಹಿಂದೀ ರಾಜಕಾರಣದ-ವಿಚಾರ

ಯಿಂದ ತಾನಾಗಿ ಹೊರಬಿದ್ದು ಸಾಮಾನ್ಯ ಜನ ಸಂದಣಿಯನ್ನು ಹಾದುಕೊಂಡೇ ಹೋಗಿದ್ದಳು. ಆಕೆಗೆ ಫ್ರೆಂಚ್, ಮತ್ತು ಜರ್ಮನ್ ಭಾಷೆ ಸರಿಯಾಗಿ ಗೊತ್ತು. ಕೃತಕವೇಷ ಶೃಂಗಾರಗಳಲ್ಲಿ ಆಸಕ್ತಿ ಕಡಿಮೆ. ಪೋಷಾಕು ನೀಟಾಗಿದ್ದರಾಯಿತು. ಯಾವಾಗಲೂ ಗಂಭೀರ ಮುಖಮುದ್ರೆ; ಥಕ್ಕನೇ ಕರಗುವ ಹೃದಯ, ಉದ್ರೇಕಗೊಳ್ಳುವ ಸ್ವಭಾವದವಳೀಕೆ. ಸಾರ್ವಜನಿಕ ಕಾರ್ಯಾಸಕ್ತಳು. ಇವಳ ಗಂಡ ಫಿಲಿಪ್ ಮೌಂಟ್‌ಬೇಟನ್ ಜನ್ಮತಃ ಗ್ರೀಸಿನ ರಾಜಕುವರ. ಆದರೆ ಚಿಕ್ಕಂದಿನಿಂದಲೂ ಇಂಗ್ಲಾಂಡಿನಲ್ಲೇ ಇದ್ದವ. ಗ್ರೀಸ್ ಭಾಷೆ ಕೂಡಾ ಬರುವುದಿಲ್ಲ, ಆಕೆಯಂತೆಯೇ ಆತನಿಗೂ ಫ್ರೆಂಚ್, ಜರ್ಮನಿ ಭಾಷೆ ಬರುತ್ತವೆ. ಮಾತೃಭಾಷೆ ಇಂಗ್ಲಿಷ್. ಈತನೂ ಉತ್ತಮ ನರ್ತನಗಾರ. ಒಳ್ಳೇ ಡ್ರೈವರ್. ಮಿನಿಟಿಗೊಂದು ಮೈಲೋಡಿಸುವ ಮನೋವೃತ್ತಿಯ ಮನುಷ್ಯ. ನಗೆಯು ಆ ವಧುವಿಗಿಂತ ಹೆಚ್ಚಾಗಿ ಈ ವರನ ಮುಖದಲ್ಲೇ ಮನೆ ಮಾಡಿದೆ. ಪ್ರತಿಯೊಂದಕ್ಕೂ ನಗೆ ಸೂಸುವ ವರ್ಗಕ್ಕೆ ಸೇರಿದ ಮನುಷ್ಯ ಫಿಲಿಪ್. ಹಿಟ್ಲರ್ ಆಡಳಿತೆಯ ಕಾಲದಲ್ಲಿ ಜರ್ಮನಿಯಲ್ಲಿದ್ದ ಇವನಿಗೆ ಇವನ ನಗೆಯೇ ರಕ್ಷಾಕವಚವಾಯಿತೆಂಬ ಕಥೆಯಿದೆ. ನಾಜೀ ಸೆಲ್ಯೂಟಿನ ನಮೂನೆಯು ಫಿಲಿಪನಿಗೊಂದು ತಮಾಷೆಯಾಗಿ ತೋರಿ ಅವ ನಗುತಿದ್ದುದರಿಂದ 'ಪ್ರಪಂಚವರಿಯದ ಹುಡುಗ'ನೆಂದೇ ಇವನನ್ನು ನಾಜಿಗಳು ಜರ್ಮನಿಯಿಂದ ಹೊರ ಹಾಕಿದ್ದರಂತೆ. ಇವ ಪ್ರಸಿದ್ಧ ಆಟಗಾರ; 'ಹೋಕ್ಕಿ' ಪ್ರವೀಣ. ಗಂಡುಮಕ್ಕಳಿಲ್ಲದ ಭಾರತದ ಗವರ್ನರ್ ಜನರಲ್ ಲೋರ್ಡ್ ಲುಯಿಸ್ ಮೌಂಟ್‌ಬೇಟನರು ಫಿಲಿಪನ್ನೇ ತನ್ನ ಮಗನಂತೆ ಸಾಕಿದ್ದರು; ಈತನೂ ತನ್ನ ರಕ್ಷಕನಂತೆ ನಾವೆಯ ನೌಕರನಾಗಿ ಕೆಲಸಕ್ಕೆ ಸೇರಿದ್ದ. ನೌಕಾ ಸಾಹಸಗಳಿಗಾಗಿ ಗೌರವ ಬಿಲ್ಲೆಗಳನ್ನು ಪಡೆದಿದ್ದಾನೆ. ಕಳೆದ ಯುದ್ಧದಲ್ಲಿ ಮಟಪಾನ್ ಕೊಳ್ಳಗದ ಇವನ "ಸರ್ಚ್‌ಲೈಟ್" ವ್ಯವಸ್ಥೆಗಳು ಶ್ಲಾಘಿಸಲ್ಪಟ್ಟಿವೆ. ಅದಕ್ಕಿಂತ ಹೆಚ್ಚಿನ ಸಾಹಸ ಪ್ರದರ್ಶನಕ್ಕೆ ಇವನಿಗವಕಾಶವಿರಲಿಲ್ಲ. ಆದ್ದರಿಂದ ಫಿಲಿಪ್ ಆ ಅತಿ ಭೀಕರ ಮಹಾಯುದ್ಧದ ಕುರಿತು ಹೇಳುವದಿತ್ತು—"ಇದೊಂದು ಸಪ್ಪೇ ಸಮರ! ಗುಂಡು ಹೊಡೆಯಲಿಕ್ಕಿಲ್ಲ!". ಮದುವೆಯ ಮೊದಲ ದಿನ ಚಕ್ರವರ್ತಿಗಳು ತನ್ನ ಮಗಳ ಗಂಡನಾಗುವ ಲೆಫ್ಟನೆಂಟ್ ಫಿಲಿಪ್ ಮೌಂಟ್‌ಬೇಟನನನ್ನು 'ಡ್ಯೂಕ್ ಓಫ್ ಎಡಿನ್‌ಬರ್ಗ' ಮಾಡಿದ್ದಾರೆ. ಅಂತೆಯೇ ರಾಜ ಮನೆತನದ 'ಹಿಸ್ ರೋಯಲ್ ಹೈನೆಸ್' ಸಂಬೋಧನೆಯೂ ಕೊಡಲ್ಪಟ್ಟಿದೆ.

ಪರಮಾವಧಿ ಸಂಭ್ರಮದ ವಿವಾಹ

ಒಂದು ವಿವಾಹ ಸಂಭ್ರಮದ ವಿಶೇಷತೆಯು ಮಟ್ಟಿಗೆ ಒಬ್ಬರ ಕಲ್ಪನೆಯೆಲ್ಲಿವರೆಗೋಡಬಹುದೋ ಅಷ್ಟೂ ವಿಜೃಂಭಣೆಯಿಂ ರಾಜಕುವರಿ ಎಲಿಜಬೆತ್ ಮತ್ತು ಡ್ಯೂಕ್ ಓಫ್ ಎಡಿನ್‌ಬರ್ಗರ ವಿವಾಹದಲ್ಲಿತ್ತು! ಈ ಮಟ್ಟಿಗೆ ಇಡೀ ಲೋಕವೇ ಒಂದು ಗ್ರಾಮವೆಂಬಂತಾಗಿ, ಆ ಗ್ರಾಮದ ಗೌಡನ ಮಗಳಿಗೆ ವಿವಾಹವಾದರೆ ಹೇಗೋ ಹಾಗೆ ಪ್ರಪಂಚವಿದರಲ್ಲಿ ಭಾಗವಹಿಸಿತೆನ್ನಬೇಕು. ತಾ. 19ನೇ ಮಧ್ಯಾಹ್ನದಿಂದ ವಿವಾಹ ದಿನ ತಾ. 20ರ ವರೆಗೆ ಇಡೀ ಲಂಡನ್ ನಗರದ ಪ್ರತಿಯೊಂದಿಂಚು ಸ್ಥಳಕ್ಕೂ ಹೊಸ ಜೀವ ಬಂದಿದ್ದಿತು. ಎತ್ತರ ತಗ್ಗಿನ ಯಾವ ಸ್ಥಳವನ್ನೂ ಬಿಡದೆ ವಿವಾಹ ಮೆರವಣಿಗೆ ರಸ್ತೆಗಳು, ಬಕ್ಕಿಂಗ್ಹಾಮ ಅರಮನೆ, ವಿವಾಹ ವಿಧಿ ನೆರವೇರಿದ 'ವೆಸ್ಟ್ ಮಿನಿಸ್ಟರ್ ಅಬ್ಬೆ' ಕ್ಷೇತ್ರಗಳಿಂದಾರಂಭಿಸಿ ಇಡೀ ಲಂಡನೇ ಜನಸಮುದ್ರವಾಗಿ ರಾಜಿಸುತಿತ್ತು. ವಧು ಮೆರವಣಿಗೆ ರಸ್ತೆಯ ಆಲಂಕಾರಗಳು—ಆ ರಸ್ತೆಯಲ್ಲಿ ರಾಜರೊಂದಿದೆ ಮದುವೆ ಪೋಷಾಕಿನಲ್ಲಿ ರಾಜರಥದಲ್ಲಿ ಹೋದ ವಧು 'ದಿಬ್ಬಣ'-ಆಗ ಜನಸಮುದ್ರ ಹಾರಿಹಾರಿ ಹಾಕುತ್ತಿದ್ದ ಜಯ ಘೋಷಗಳು-'ವೆಸ್ಟ್ ಮಿನಿಸ್ಟರ್ ಅಬ್ಬೆ'ಯಲ್ಲಿ ಅಖಿಲ ಜಗತ್ತಿನ ಮತ್ತು ಯುರೋಪಿನ ರಾಜ ಮಹಾರಾಜರುಗಳು ಮಂಡಿಸಿದ್ದ ಆ ವಿವಾಹ ಸಭೆ— ಲೋಕದ ಸರ್ವ ರಾಷ್ಟ್ರಗಳ ಧ್ವಜಗಳು———ಬಣ್ಣಬಣ್ಣದ ದೀಪ ತೋರಣಾದಿ ಅನ್ಯಾದೃಶ ಶೃಂಗಾರಗಳು— ನಿಂಬೇಗಾತ್ರ ಕಾಯಿಗಾತ್ರದ ಗೋಮೇಧಿಕ ವಜ್ರ ವೈಢೂರ್ಯಾದಿಗಳಿಂದಲಂಕೃತರಾಗಿದ್ದ ಇಡೀ ಜಗತ್ತಿನ ಅಗ್ರಗಣ್ಯ ಶ್ರೀಮಂತ ಸಂಗ್ತಿಯ ಹಾಜರಿ—ಇತ್ಯಾದಿ ಬೇರೆಲ್ಲಿಯೂ ಎಂದೂ ಕಾಣಸಿಗದ ದೃಶ್ಯಗಳಿದರಲ್ಲಿ ನಮ್ಮ ಪುರಾಣವರ್ಣಿತ 'ಇಂದ್ರ ವೈಭವ' 'ಕುಬೇರ ಸಂಪತ್ತು' ಮತ್ತಾ ಯುಗದ ರಾಜಪುತ್ರಿಯರ ವಿವಾಹ ಸಂಭ್ರಮಗಳೆಲ್ಲವೂ ಸಾಮಾನ್ಯವೇ ಸರಿ! ವಧುವಿನ ವಿವಾಹದುಡುಗೆಯೊಂದರಲ್ಲೇ ಒಂದು ಗ್ರಂಥಕ್ಕಾಗುವಷ್ಟು ವರ್ಣನಾ ವಸ್ತುವಿದೆ! ಆ ಗವನು 6000 ಡೋಲರ್ ಮೌಲ್ಯದ್ದು. ಸುಮಾರು 20 ಲಕ್ಷ ಜನ ಈ ವಿವಾಹಕ್ಕಲ್ಲಿ ನೆರೆದಿದ್ದರಂತೆ. ವಧೂವರರ ದಿಬ್ಬಣ ಬಕ್ಕಿಂಗ್ಹಾಮ್ ಅರಮನೆಗೆ ಮರಳಿದಾಗ ದರ್ಶನಾಪೇಕ್ಷೆಯಿಂದ ನುಗ್ಗಿದ ಜನಪ್ರವಾಹದ ಭರಕ್ಕೆ ಪೋಲೀಸ್ ಮತ್ತು ಸೇನಾ ಕಟ್ಟೆ ಕೂಡಾ ಒಡೆದು ಹೋಗಿತ್ತು; ಹಲವು ತಿಂಗಳುಗಳಿಂದ ಈ ವಿವಾಹ ಸಮಾರಂಭದ ವ್ಯವಸ್ಥಾಪಾಲನೆಗೆ ತರಬೇತಿಗೊಂಡಿದ್ದ ಯೋಧದಳಗಳ ಶಕ್ತಿಯೆಲ್ಲವೂ ಜನತೋತ್ಸಾಹದಿದಿರಲ್ಲಿ ಪರಾಭವಗೊಂಡಿದ್ದುವು. ಅನಿವಾರ್ಯ ಗದ್ದಲ, ದೂಡಾಟಗಳಿಂದಲೇ 1047 ಮಂದಿ ಜಖಂಗೊಂಡಿದ್ದರು. ಆ ಸಮಾರಂಭದಲ್ಲಿ ಮಂಡಿಸಿದ್ದ ಕುಬೇರರ ಪೈಕಿ ಭಾರತದ ಬುಂಧಿ ಮಹಾರಾಜರಷ್ಟು ಝಗಝಗಿಸುತಿದ್ದ ಮತ್ತೊಂದು ಗೊಂಬೆ ಅಲ್ಲಿರಲಿಲ್ಲವಂತೆ! ಅಮೂಲ್ಯ ಬಿಳಿ ಟರ್ಬನಿನ ಮೇಲೆ ಕಾಮನ ಬಿಲ್ಲಿನ ಬಣ್ಣಗಳ ರಜತ ನಿಲುವಂಗಿಯನ್ನು ತೊಟ್ಟು ನವರತ್ನ ಖಚಿತ ಹಾರಭೂಷಣಗಳ ನಡುವೆ ಅತಿ ದೊಡ್ಡ ಗೋಮೇಧಿಕವೊಂದರಿಂದ ಝಗಾಗ್ಗಿದ್ದ ಈ ಮೂರ್ತಿ ಎಲ್ಲರ ಕಣ್ಮನಗಳನ್ನೂ ಸೆಳೆದಿತ್ತಂತೆ. ಮತ್ತೊಂದು ದರ್ಶನೀಯ ವ್ಯಕ್ತಿಯೆಂದರೆ ಇಂಗ್ಲಾಂಡಿನ ರಾಜರ ತಾಯಿ, 80 ವರ್ಷ ಪ್ರಾಯದ ರಾಣಿ ಮೇರಿ. ಅವರು ಮುತ್ತುರತ್ನಗಳ ಮಾಲಾಲಂಕೃತರಾಗಿ, ತನ್ನದಾದ ಆ ಲೋಕಪ್ರಸಿದ್ಧ ಸ್ಟೋಮಾಚರ್ ವಜ್ರವನ್ನು- ಮುಷ್ಟಿಗಾತ್ರದ ಅಮೂಲ್ಯ ಕಲ್ಲನ್ನು—ಧರಿಸಿ ರಾಜಿಸಿದ್ದರು. ಇನ್ನೀ ವಿವಾಹಕ್ಕೆ ತಾಗಿದ ವೆಚ್ಚವೆಷ್ಟೊ! ಇಷ್ಟೆಲ್ಲಾ ವೈಭವವೂ ಕೆಲಕಾಲದಿಂದ ಜತೆಗೂಡಿಯೇ ಇದ್ದ ಇಬ್ಬರನ್ನು 'ಜತೆಗಾರರು'ಎಂದೊಪ್ಪಿಕೊಳ್ಳುವದಕ್ಕಾಗಿ! ಹೀಗಿದೆ ಪ್ರಪಂಚ!

ಕಾಶ್ಮೀರ——ಜುನಗಾಡ್

ಕಾಶ್ಮೀರದಲ್ಲಿ ಧಾಳಿಗಾರರನ್ನೋಡಿಸುವ ಹೋರಾಟ ನಡೆದಿದೆ. ಅತಿದೊಡ್ಡ ಹಾಗೂ ಹೃದಯಸ್ಪರ್ಶೀ ಸಂಗತಿಯೆಂದರೆ ಕಾಶ್ಮೀರದ ಪ್ರೊಂಚ್‌ನಲ್ಲಿ ಸಿಕ್ಕಿಬಿದ್ದಿರುವ ಕಾಶ್ಮೀರ ಸಂಸ್ಥಾನೀ ಸೇನೆಗಳ ಭವಿಷ್ಯ. ಧಾಳಿಯಾರಂಭದ ದಿನಗಳಲ್ಲೇ ಸಂಸ್ಥಾನದ ಸೇನೆ ಪೂರ್ಣಾದೃಶ್ಯವಾಗಿರುವ ವಾರ್ತೆಯಿದ್ದಿತಷ್ಟೆ? ಅವುಗಳಲ್ಲಿ ಮುಖ್ಯ ಭಾಗವನ್ನು ಪ್ರೊಂಚ್‌ನಲ್ಲಿ ಆಕ್ರಮಣಗಾರ ದಳಗಳು ಹೊರಗಿನಿಂದ ಸುತ್ತುಗಟ್ಟಿಗೂಡಿನೊಳಗೆ ಹಾಕಿ ಬಿಟ್ಟಿದ್ದವು. ಹೀಗೆ ವಿಶಾಲ ಕ್ಷೇತ್ರದಲ್ಲಿ ಉರುಲೊಳಗೆ ಸಿಕ್ಕಿಕೊಂಡಿರುವ ಈ ಸೇನೆಗೆ ಹೊರಬರುವ ಹಾದಿಯಿಲ್ಲದೆ, ಆಹಾರ ವ್ಯವಸ್ಥೆಯಿಲ್ಲದೆ, ಅದಲ್ಲಿಯೇ ಕರಗಿ ನಶಿಸುವ ಸ್ಥಿತಿಯಲ್ಲಿತ್ತು. ಹಿಂದೀ ಸೇನೆಯೀಗ ಅವರ ಬಿಡುಗಡೆಯ ಮಹಾ ಸಾಹಸಕ್ಕೆ ತೊಡಗಿದೆ. ಮೇಲಿನಿಂದ ಹಿಂದೀ ವಿಮಾನಗಳು ಆಹಾರವನ್ನೂ ಶಸ್ತ್ರೋಪಕರಣಗಳನ್ನೂ ಒಳಗಡೆಯವರಿಗೆ ಸರಬರಾಯಿ ಮಾಡುತ್ತಿವೆಯಲ್ಲದೆ, ಸುತ್ತುಗಟ್ಟಿದವರನ್ನು ಥಳಿಸುತ್ತಲೂ ಇವೆ. ಇದುವರೆಗೆ ಬಿಡುಗಡೆಯಾಗಿಲ್ಲ.

ಕಾಶ್ಮೀರ-ಜುನಗಾಡುಗಳ ಸಂಬಂಧದ ವಿವಾದವನ್ನು ಜಾಗತಿಕ ಸಂಘದ ತೀರ್ಮಾನಕ್ಕೆ ಬಿಡಲು ತಾವು ತಯಾರೆಂದು ಪಾಕಿಸ್ತಾನದ ಪರವಾಗಿ ಪ್ರಧಾನಿ ಎ. ಲಿಯಾಖತರು ಯಾಚಿಸಿದ್ದರೂ ಹಿಂದೀ ಸರಕಾರವು ಅದನ್ನು ಕಿವಿಯಲ್ಲಿ ಹಾಕಿಕೊಂಡಿಲ್ಲ. ಎಲ್ಲಾ ಆಕ್ರಮಣಗಳನ್ನೂ ಬೇರುಸಮೇತ ಕಿತ್ತೊಗೆದಮೇಲೆ ನಿರ್ವಂಚನೆಯ ಜನಮತದ ತೀರ್ಮಾನಕ್ಕೆ ಬಿಡಲು ತಾವು ಸಿದ್ಧರೆಂಬ ತನ್ನ ಆದಿಯ ಹೇಳಿಕೆಗೇನೇ ಹಿಂದೀ ಸರಕಾರವು ಕಟ್ಟುಬಿದ್ದಿದೆ. ಇತ್ತ ಖಜಾನೆಯಲ್ಲಿ ಒಂದೇ ಒಂದು ರೂಪಾಯಿಯನ್ನೂ ಇಡದೆ ದೋಚಿಕೊಂಡು ಹೋಗಿದ್ದ ಜುನಾಗಾಡಿನ ನವಾಬರೂ, ಪ್ರಧಾನ ಮಂತ್ರಿ ಸರ್. ಷಾನವಾಜ್ ಬುಟ್ಟೋರವರೂ ರಿಜರ್ವ್ ಬೇಂಕಿನಲ್ಲಿ ನಗದಿಯಾಗಿ ಮತ್ತು ಸೆಕ್ಯೂರಿಟಿಗಳಾಗಿ ಇದ್ದ ಜುನಾಗಾಡ್ ಸಂಸ್ಥಾನದ ಸುಮಾರು 6000000 ರೂಪಾಯಿಗಳನ್ನೂ ತಾವು ಸೆಳೆದು ಬಿಡಬೇಕೆಂದು ಬಗೆದಿದ್ದರು. ಆದರೆ ಹಿಂದೀ ಸರಕಾರದ ಪರವಾಗಿ ಜುನಾಗಾಡಿನ ಇಂದಿನ ಸರಕಾರವು ಆ ಮೊತ್ತವೆಲ್ಲವನ್ನೂ ರಿಜರ್ವ್ ಬೇಂಕಿನಿಂದ ಈಗ ತನ್ನಾಧೀನಕ್ಕೆ ತೆಗೆದುಕೊಂಡಿದೆ. ಆ ಹಣವನ್ನು ತೆಗೆಯುವದಕ್ಕಾಗಿ ಸರ್. ಭುಟ್ಟೋ ಕಳುಹಿಸಿದ್ದ ಪ್ರತಿನಿಧಿ ರಿಜರ್ವ್ ಬೇಂಕಿನಲ್ಲಿ ಕಾಯುತಿದ್ದಾಗಲೇ, ಅದರ ಹಕ್ಕುದಾರ ತಾನೆಂಬ ಭಾರತ ಸರಕಾರದ ಸೂಚನೆ ಬಂತಂತೆ!

(೬ನೇ ಪುಟ ನೋಡಿರಿ).

THE

CANARA MUTUAL ASSURANCE Co. LIMITED.

Estd. 1935

As typhoid is reported to be prevalent in UDIPI and its suburbs the Company has arranged from 26-11-1947 to 3-12-1947 for preventive innoculations at its Head Office at Udipi. This service is free to the Company's policyholders. They are requested to call at the Head Office on any working day during the above period between 4 P. M. and 5 P. M.

I. R. A. Pai,
Managing Director

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 90/1947

ಅರ್ಜಿದಾರಳು, ಕಮಲಮ್ಮ

ಎದ್ರಿರು 1. ಸುಬ್ರಾಯ ಚಾತ್ರ, 2. ವೆಂಕಟಾಚಲ ಚಾತ್ರ.

ಕುಂದಾಪುರ ತಾಲ್ಕು ಬೀಜಾಡಿ ಗ್ರಾಮದಲ್ಲಿರುವ ಮೂಡ್ಲಗಿರಿ ಚಾತ್ರರ ಮಕ್ಕಳು ಸುಬ್ರಾಯ ಚಾತ್ರ 1 ವೆಂಕಟಾಚಲ ಚಾತ್ರ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಅರ್ಜಿದಾರಳ ಗಂಡ ವ ಎದ್ರಿರ ತಂದೆ ಮೃತ ಮೂಡ್ಲಗಿರಿ ಚಾತ್ರರು ವಾದಿಯಾಗಿ ಜಾಜಿ ಸೋಜನ ಮೇಲೆ ಹಾಕಿದ ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟ್ O. S. 388/1943ನೇ ಡಿಕ್ರಿ ಪ್ರಕಾರ ಬರತಕ್ಕ ಹಣ ಬಡ್ಡಿ ಕೂಡಾ ರೂಪಾಯಿ 100-0-0ನ್ನು ಪಡಕೊಳ್ಳುವದೆ ಅರ್ಜಿದಾರಳ ಹೆಸರಿಗೆ ವಾರಿಸ್ ಸರ್ಟಿಫಿಕೇಟು ಕೊಡಿಸಬೇಕೆಂತ ಅರ್ಜಿದಾರಳು ದಾಖಲ್ಲು ಮಾಡಿದ ಮೇಲಿನ ಅರ್ಜಿಯು ತಾ. 4-12-47ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪ ತೆಗಳಿದ್ದರೆ, ಸದ್ರಿ ದಿವಸ ಹಗಲು 11 ಗಂಟೆಗೆ ಮೇಲಿನ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

Sd/ N. S Parameshwariah,
Advocate for Petr.

Date 19-11-47 Coondapoor.

The Canara Banking Corporation Limited.

(Incorporated in British India).

Estd: 1906.

Head Office: **UDIPI**, S. India.

ANNOUNCEMENT

A branch of the BANK will be opened at High Road, **TRICHUR.** (Cochin State) on 28th November, 1947.

ಗುರುವಾರ, ಉಡುಪಿ, ೨೭-೧೧-'೪೭

ಆಹಾರ ನಿಯಂತ್ರಣ ಹೋಗಬಹುದೆ?

ಎಲ್ಲಾ ನಿಯಂತ್ರಣಗಳು--ಮುಖ್ಯವಾಗಿ ಆಹಾರಧಾನ್ಯ ಮತ್ತು ವಸ್ತ್ರಗಳ ಮೇಲಿನವು--ರದ್ದಾಗಲೇ ಬೇಕೆಂದು ಗಾಂಧಿಜೀಯು ಆರಂಭಿಸಿರುವ ಚಳವಳವನ್ನು ಅನುಕರಿಸಿ ವಾತಾವರಣದಲ್ಲಿ ಕ್ಷಿಪ್ರ ಬದಲಾವಣೆಗಳಾಗಹತ್ತಿವೆ. ಗಾಂಧಿಜೀಯ ದಿಗ್ದರ್ಶಕತ್ವವು ಹೊಸ ಹೊಸ ದೃಶ್ಯಗಳನ್ನು ಹಿಂದೀ ರಂಗದಲ್ಲಿ ತರುತ್ತಿದೆ. ಈ ನವನಾಯಕತ್ವಾರಂಭದ ಮೊದಲದಿವದ ವರೆಗೂ 'ನಿಯಂತ್ರಣವು ಅನಿವಾರ್ಯ'ವೆಂಬ ದೃಢಾಭಿಪ್ರಾಯದಿಂದಿದ್ದ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಧೋರಣೆಯ ಮುಖವು 'ಗಾಂಧೀಬೋಧೆ' ಮುಖವಾಗಿದ್ದ ದಿಕ್ಕಿಗೇನೇ ಅಕಸ್ಮಾತ್ ತಿರುಗಿಬಿಟ್ಟಿದೆ. ರಾಜಾಜಿಯಂತಹ ಪ್ರಮುಖರು ನಿಯಂತ್ರಣಗಳ ಪಂಚವಾರ್ಷಿಕ ಜೀವನದ ಕಲ್ಪನೆ ಮಾಡಿ ಬಹಳ ದಿನವಾಗಿಲ್ಲ; ಆಹಾರ ಹತೋಟಿಯ ಕುರಿತು ಮುಂದಿನ ಐದು ವರುಷಗಳ ಅಂದಾಜನ್ನು ಕಣ್ಣ ಮುಂದಿಟ್ಟುಕೊಂಡೇ ಪ್ರಾಂತಿಕ ಸರಕಾರಗಳು ಕಾರ್ಯಪ್ರವೃತ್ತವಾದುದೂ ಮೊನ್ನೆವರೆಗೆ ಕಂಡುಬಂದಿತ್ತು. ಆದರೆ ಮಹಾತ್ಮರ ಮಾತು 'ಇಂದ್ರ ಜಾಲಿಯ ಕೋಲಿ'ನಂತೆ ಎಲ್ಲವನ್ನೂ ಕ್ಷಣಕ್ಕನೇ ಮಾರ್ಪಡಿಸಿದೆ; ಅದ್ಭುತವನ್ನೇ ನಿರ್ಮಿಸಿದೆ. 'ಗಾಂಧೀ ಮಹಾತ್ಮೆ'ಯನ್ನು ಮನವಮುಟ್ಟಿಸಲು ಈ ಬದಲಾವಣೆಯೊಂದೇ ಸಾಕು; ಆ ಮಹಾತ್ಮೆ ಮಂಡಟ್ಟಾಗುವಷ್ಟು ಬೇರಾವುದೂ ಇದರಲ್ಲಿ ಸ್ಪಷ್ಟವಾಗುವದಿಲ್ಲ.

'ಕಳ್ಳಸಂತೆ, ವಂಚನೆ, ಅಭಾವಗಳ ನಿರ್ಮಾಣಕ್ಕೆ ಕಾರಣ ನಿಯಂತ್ರಣಗಳೇ. ಅವುಗಳನ್ನು ಕೂಡಲೇ ತೆಗೆದು ಹಾಕಬೇಕು. ಜನತೆಯ ಸ್ವತಂತ್ರ ವರ್ತನೆಗವಕಾಶ ಕೊಡಬೇಕು' ಎಂದು ಗಾಂಧಿಜೀ ಒತ್ತಿ ಹೇಳಿದ್ದೇ ತಡ-ಈ ಮಾತುಗಳು ದೇಶದ ಮೂಲೆಮೂಲೆಗಳಲ್ಲೂ, ಎಲ್ಲರ ಹೃದಯಗಳಲ್ಲೂ ಪ್ರತಿಧ್ವನಿಸಿವೆ. ದಿಲ್ಲಿಯಲ್ಲಿ ಸೇರಿದ ಆಹಾರ ಸಮ್ಮೇಲನವು ಈ ಸೂತ್ರಗಳನ್ನು ಆಧರಿಸಿಯೇ ಪರ್ಯಾಲೋಚನೆ ನಡೆಸಿತು; ಎಲ್ಲಾ ಪ್ರಾಂತಿಕ ಸರಕಾರಗಳೂ ಈ ಗುರಿಯನ್ನು ಮುಟ್ಟುವ ಕಾರ್ಯಕ್ರಮಗಳನ್ನೇ ಚಿಂತಿಸಹತ್ತಿದುವು; ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಈ ವಾಕ್ಯಗಳನ್ನೇ ಪೋಣಿಸಿ ಒಂದು ನಿರ್ಧಾರವಮಾಡಿತು; ಆಹಾರ ನಿಯಂತ್ರಣ ರದ್ದಾಗಬೇಕೆಂದು ಭಾರತ ಸರಕಾರವು ನಿರ್ಣಯಿಸಿದೆಯೆಂದೂ ಇಂದು ನಾಳೆಯೊಳಗೆ ಈ ಸಂಬಂಧದ ಅಧಿಕೃತ ಪ್ರಕಟಣೆ ಹೊರಡಬಹುದೆಂಬೂ ತಿಳಿದುಬರುತ್ತದೆ. ಈಗ ಅಖಿಲ ಭಾರತದಲ್ಲಿ ಜನಮತ ಸಂಗ್ರಹಿಸಿದರೂ ನಿಯಂತ್ರಣ ರದ್ದತಿಗೇನೇ ಸೇ. ೯೦ ರಷ್ಟು ಬಹುಮತ ದೊರಕುವುದು ನಿಸ್ಸಂದೇಹ!

ಈ ಸಂದರ್ಭದಲ್ಲಿ ಅತಿಮುಖ್ಯವಾದ ಕೆಲವು ಮೂಲ ತತ್ವಗಳನ್ನಾರೂ ಮರೆಯಬಾರದು. ಮಹಾತ್ಮರವು ಗೌರವಪೂರ್ವಕವಾಗಿ ಅಕ್ಷರಶಃ ಆಲೋಚಿಸತಕ್ಕ ಮಾತುಗಳು ಎಂಬ ಕುರಿತು ಭಿನ್ನಾಭಿಪ್ರಾಯವಿಲ್ಲ. ಆದರೆ ಕೋಟ್ಯಾವಧಿ ಜನತೆಯ ಜೀವನ್ಮರಣದ ಪ್ರಶ್ನೆಯಾಗಿರುವ ಆಹಾರ ಸಂಬಂಧದ ವಿಷಯಗಳು ಎಂತಹ ಮಹಾತ್ಮನಿಗಾದರೂ 'ಮೂಜಾ ಕಾಣಿಕೆ'ಯಾಗಿ ಅರ್ಪಿಸಲಾಗುವಂಥವಲ್ಲ. "ಜನತೆಯ ಜೀವನ್ಮರಣದ ಈ ಪ್ರಶ್ನೆಯ ಮಹತ್ವವನ್ನರಿಯದೇನೇ ಮಹಾತ್ಮರು ಈ ಮಾರ್ಗದರ್ಶನಕ್ಕಿಳಿದರೇ? ಇದು ಪ್ರಯೋಜನಕಾರಿಯೆಂದು ಮಂದಟ್ಟಾಗಿಯೇ ಗಾಂಧಿಜೀ ಈ ಬೋಧನೆ ಕೊಟ್ಟರು ವಿನಹಾ ಕೇವಲ ತನಗೊಂದು ಗೌರವ ಕಾಣಿಕೆಯಾಗಿ ಏನಾದರೂ ದೊರೆತಲ್ಲಿ ಅದನ್ನಂಗೀಕರಿಸುವವರು ಗಾಂಧಿಜಿಯೇ?" ಎಂಬ ಪ್ರಶ್ನೆ ಬರಬಹುದು ನಿಜ; ಆದರೆ ಎಷ್ಟೋ ವೇಳೆ ಈ ಆದರ್ಶ ವ್ಯಕ್ತಿಯ ಅಭಿಪ್ರಾಯಗಳು ವಸ್ತುಸ್ಥಿತಿಯನ್ನು ಸ್ಪರ್ಶಿಸದೆ ಮೇಲ್ಸಂಗ್ತಿಯಾಗಿ ಮೇಲ್ಗಡೆಯಲ್ಲೇ ನಿಂತು ಬಿಡುವದಿದೆ. ಅಂಥವುಗಳಲ್ಲಿ ಆಹಾರ ನಿಯಂತ್ರಣ ರದ್ದತೀ ಬೇಡಿಕೆಯೂ ಒಂದೆಂದು ನಮ್ಮ ಅಭಿಪ್ರಾಯ. ಮಹಾತ್ಮರ ಇಂತಹ ಎಷ್ಟು ಉಪದೇಶಗಳು ಈತನಕ ಮೂಲೆಕಾಶದಲ್ಲೇ ನೇತಾಡಿಕೊಂಡಿಲ್ಲ? ಐಕ್ಯತೆ---ಅಹಿಂಸೆ---ಖಾದಿ----ಪ್ರಕೃತಿ ಚಿಕಿತ್ಸೆ ಮುಂತಾದ ಗಾಂಧೀ ತತ್ವಗಳನ್ನು ಯಾರೆಷ್ಟು ಅಂಗೀಕರಿಸಿಕೊಂಡಿದ್ದಾರೆ? ಈ ನಿಯಂತ್ರಣ ರದ್ದತಿಯ ಕುರಿತಾದರೂ ಗಾಂಧಿಜೀ ಹೊಸ ಭರವಸೆಯೇನನ್ನಾದರೂ ಸೂಚಿಸಿದ್ದಿವೆಯೇ? ರಾಷ್ಟ್ರದಲ್ಲಿ ಆಹಾರ ಧಾನ್ಯಗಳ ಅಭಾವವಿರುವದನ್ನು ತೋರಿಸಿಕೊಡುವ ಅಂಕೆ ಸಂಖ್ಯೆಗಳೆಲ್ಲಾ ತಪ್ಪೆಂಬುದಕ್ಕೆ ದಾಖಲೆಯೇನನ್ನಾದರೂ ಮುಂದಿಟ್ಟಿದೆಯೆ? ಅಥವಾ 'ಆಹಾರ ನಿಯಂತ್ರಣ ರದ್ದಾಗಬೇಕು' ಎಂಬ ಗಾಂಧೀ ಬೋಧೆಯನ್ನಂಗೀಕರಿಸಿಕೊಂಡಂತೆಯೇ 'ಆಚಾರ ವ್ಯಾಪಾರ ನೀತಿ ಶುದ್ಧವಾಗಬೇಕು' ಎಂದ ಮಹಾತ್ಮರ ಉಪದೇಶವನ್ನೂ ಅಂಗೀಕರಿಸುವವರೆಷ್ಟು ಮಂದಿ? ಹೀಗಿರುವಾಗ, ಬುದ್ಧಿಯನ್ನು ಯಾವ ಪ್ರವಾಹದಲ್ಲೂ ತೇಲಬೀಡದೆ ವಾಸ್ತವಿಕತೆಯಲ್ಲೇ ಹಿಡಿದು ನಿಲ್ಲಿಸಿ ಎಲ್ಲವನ್ನೂ ತುಲನಾತ್ಮಕವಾಗಿ ವಿಚಾರಿಸಿನೋಡುವದಗತ್ಯವಲ್ಲವೇ?

ಪ್ರಥಮತಃ ನೋಡಬೇಕಾದುದು ರಾಷ್ಟ್ರದಲ್ಲಾಗಿರುವ ಆಹಾರ ಧಾನ್ಯಗಳ ಉತ್ಪತ್ತಿಯು ರಾಷ್ಟ್ರದ ಅವಶ್ಯಕತೆಗೆ ಸಾಕಾಗಬಹುದೇ ಎಂಬುದನ್ನು. 'ದೇಶದಲ್ಲಿ ಸಾಕಷ್ಟು ಸಂಗ್ರಹವಿದೆ. ಆದರೆ ನಿಯಂತ್ರಣಗಳ ನಿಷ್ಠುರತೆಯಿಂದಿರಲ್ಲಿ ಅವು ಹೊರ ಬೀಳಲು ಹೆದರುತ್ತಿವೆ' ಎಂಬ ವಾದವೀಗ ಮುಂದೆ ಬಂದಿದೆ. ಇದನ್ನು ಸಮರ್ಥಿಸುವ ಅಧಿಕೃತ ಅಥವಾ ಸಾಧಾರ ದಾಖಲೆಗಳಿಲ್ಲ. ನಮ್ಮ ಜಿಲ್ಲೆಯ ಅನುಭವದಿಂದ ಹೇಳುವದಾದರೆ ಬೇಸಾಯಗಾರರ ಉತ್ಪನ್ನಗಳನ್ನು ಭೂತಗನ್ನಡಿಯಿಂದ ನೋಡಿ ಚಿತ್ರಿಸಿರುವ ರೆವಿನ್ಯೂ ನೌಕರರಿಂದಲೇ ಹಾಕಲ್ಪಟ್ಟ ಸರಕಾರೀ ಅಂಕೆಗಳು ಕೂಡಾ ಹೀಗನ್ನುವದಿಲ್ಲ. ಅಂದಮೇಲೆ 'ಸಾಕಷ್ಟು ಧಾನ್ಯ' ಹೊರಡುವದೆಲ್ಲಿಂದ? ಎಲ್ಲಿಂದಾದರೂ 'ಬೇಕಾದಷ್ಟು ಧಾನ್ಯ' ಹೊರಬೀಳುವದೆಂದು ವಾದಕ್ಕಾಗಿ ಕಲ್ಪಿಸಿಕೊಂಡರೂ, ಹಾಗೆ ದೊರಡುವುದು ಅಧಿಕ ಬೆಲೆದೊರೆಯುತ್ತದೆಂಬ ಒಂದೇ ಕಾರಣದಿಂದೆಂಬುದು ಸ್ಪಷ್ಟವಷ್ಟೆ? ಸಂಗ್ರಹಾಧಿಕಾರಿಗಳ ಇಂದಿನ ಕಠೋರತೆ ನಿಷ್ಠುರತೆಗಳಿಂದ ಕೂಡಾ ಹೊರಡದ ಆ ಧಾನ್ಯಗಳನ್ನು ಸ್ವೇಚ್ಛೆಯಿಂದ ಹೊರಡಿಸಬಲ್ಲ ಆ 'ಆಕರ್ಷಣೀಯ ಬೆಲೆ'ಯನ್ನು ಊಹಿಸುವಾಗ-ಅಂತಹ ವಹಿವಾಟುಗಳ ರಂಗ ಮತ್ತು ರೀತಿ ನೀತಿಗಳನ್ನು ನೆನಸುವಾಗ-ಯಾರೇ ಆದರೂ ಒಮ್ಮೆ ದಿಗಿಲು ಬೀಳದಿರಲಾರರು. ನಿಜಕ್ಕೂ ಸಾಕಷ್ಟಿಲ್ಲದ ಸಂಗ್ರಹದ ಸ್ವತಂತ್ರವಹಿವಾಟು ಹೇಗೆ ಪರಿಶುದ್ಧವಾಗಿರಬಲ್ಲುದೋ ಅರ್ಥವಾಗುವದಿಲ್ಲ. "ಒಂದೊಮ್ಮೆಗೆ ಕಳ್ಳಸಂತೆ, ವಂಚನೆಗಳಿಗೆ ಬಲಿಯಾಗಿ ಕೆಲವರು ಸತ್ತರೂ, ಅದು ಉಳಿದವರಿಗೆ ಪಾಠವಾಗಬಲ್ಲುದಾದ್ದರಿಂದ ಅದನ್ನು ಸ್ವಾಗತಿಸಬೇಕು" ಎಂಬ ಗಾಂಧಿಜೀಯ ಊಹೆಯೇ ಫಲಿಸಬಹುದು. ಆದರೆ ಹಾಗೆ ಸಾಯತಕ್ಕವರು ಬಡವರೇ ಹೊರತು ಕಳ್ಳಸಂತೆ ನಡಿಸುವವರಲ್ಲವಾದ್ದರಿಂದ ಈ ಪಾಠಕಲಿಯತಕ್ಕವರಾರು, ಎಂಬುದನ್ನೂಹಿಸಲು ಕಷ್ಟವಿಲ್ಲ. ನಿಜಕ್ಕೂ ಕಳ್ಳಸಂತೆ ನಡಿಸುವವರು ಪಾಠ ಕಲಿಯುವಂತಾಗಬೇಕಾದರೆ, ಸಾಯಲಿಚ್ಛೆಯಿಲ್ಲದ ಬಡವರು ಆದನ್ನು ಬೇರೆ ವಿಧಾನದಿಂದ ಆವರಿಗೆ ಕಲಿಸಬೇಕಾದೀತು!

ನಿಯಂತ್ರಣ ಪದ್ಧತಿಯ ಗಾಂಧೀ ಬೋಧೆಯು ತಮ್ಮ ಹಾರ್ದಿಕ ಬೇಡಿಕೆಯ ಪ್ರತಿಧ್ವನಿಯೆಂದು ಹಿರಿಹಿಗ್ಗಿ ಪೂರ್ಣಾನುಮೋದನೆ ಕೊಡುತ್ತಿರುವ ಸಾಗುವಳೀದಾರ ರೈತರು ಈ ಕುರಿತಾದ ಭ್ರಮೆಗೂ ಬಲಿಬೀಳಬಾರದು. ಆಹಾರ ನಿಯಂತ್ರಣ ಬರುವ ಮೊದಲಾದರೂ ರೈತರ ಉತ್ಪನ್ನಗಳಿಂದ ಲಾಭಹೊಡೆಯುತ್ತಿದ್ದವರಾರು ಎಂಬುದನ್ನು ಇಷ್ಟುಬೇಗನೇ ಮರೆಯಲು ಸಾಧ್ಯವಿಲ್ಲ. ಇಂದಿನ ಧಾನ್ಯ ಸಂಗ್ರಹಾಧಿಕಾರಿಗಳಿಂದ ಮತ್ತು ಸಂಗ್ರಹ ಡಿಪೋಗಳಿಂದ ರಾಷ್ಟ್ರದ ಅನ್ನದಾತ ರೈತನಿಗಾಗುತ್ತಿರುವ ಅನ್ಯಾಯಗಳು (ದಕ್ಷಿಣ ಕನ್ನಡದಲ್ಲಂತೂ ಈ ವರುಷ ಗೇಣಿ ಅಕ್ಕಿಯೆಲ್ಲವನ್ನೂ ಉಳಿತಾಯಾಂಶಗಳೆಂದು ಗಣಿಸಿದ್ದಲ್ಲದೆ ಉತ್ಪನ್ನದ ಮಿತಿಮೀರಿದ ಅಂದಾಜುಕಟ್ಟಿ 'ಲೆವ್ಹಿಶನ್'ಮಾಡಲಾಗಿದೆ. ದ. ಕ. ಜಿಲ್ಲೆಗೆ ಪ್ರತ್ಯೇಕವಾಗಿ ಒದಗಿರುವ ವಿಶೇಷಾಪತ್ತಿದು!) ಅಸಹ್ಯ, ಅಕ್ಷಮ್ಯವೇನೋ ನಿಜ. ಆದರೆ ಇಲ್ಲಿ ನಿವಾರಣೆಯಾಗಬೇಕಾದುದು ಈ ಅನ್ಯಾಯಗಳೇ ಹೊರತು ಆ ಪದ್ಧತಿಯಲ್ಲ. ಎಂತಹ ಅಂಟುಕೊಳೆ ತಾಗಿದ್ದರೂ ಅದನ್ನಷ್ಟೇ ಬಲವಾಗಿ ತಿಕ್ಕಿ ತೊಳೆಯಬೇಕು ಹೊರತು ಅದಕ್ಕಾಗಿ ಅಂಗವನ್ನೇ ಕತ್ತರಿಸಿಕೊಳ್ಳುವುದಲ್ಲ. ಆಹಾರ ಧಾನ್ಯ ನಿಯಂತ್ರಣ ರದ್ದತಿಯಿಂದ ಕೆಲವು ಶ್ರೀಮಂತ ವರ್ಗದಾರು ಲಾಭಹೊಂದಬಹುದಾದರೂ ಬಹುಸಂಖ್ಯಾಕ ರೈತರ ಸಮೇತ ಸಾಮಾನ್ಯ ಜನರು ನಿಜಕ್ಕೂ ಆಪತ್ತಿಗೀಡಾಗುವದು ಸಂಭವನೀಯ. ಬೇಸಾಯಗಾರರ ಸ್ಥಿತಿಸುಧಾರಣೆಗೆ ಲಕ್ಷ್ಯಕೊಟ್ಟು, ಸಾಕಷ್ಟು ಧಾನ್ಯೋತ್ಪತ್ತಿಯಾಗುವಂತೆ ಆವರಿಗೆ ಸರ್ವ ವಿಧದ ಸಹಾಯ ಮತ್ತು ಪ್ರೋತ್ಸಾಹಗಳನ್ನಿತ್ತು, ಬಂಜರು ಭೂಮಿಗಳೆಲ್ಲಾ ಸಾಗುವಳಿಯಾಗುವಂತೆಯೂ, ಬೇಸಾಯ ಕ್ರಮ ಸುಧಾರಿಸುವಂತೆಯೂ ಮಾಡಿ, ಆ ಮೂಲಕ ಆಗುವ ಸಂಗ್ರಹದ ಹೆಚ್ಚಳವನ್ನನುಸರಿಸಿ ನಿಯಂತ್ರಣಗಳನ್ನು ಸಡಲಿಸುತ್ತಾ ಬಂದು ಬರ್ಖಾಸ್ತು ಪಡಿಸುವುದರಲ್ಲಿ ಮಾತ್ರ ಕ್ಷೇಮವಿದೆ. ಆದರೆ, ಇದನ್ನೇ ಹಿಂದು ಮುಂದಾಗಿ ಕೈಗೊಂಡಲ್ಲಿ ಅಪಾಯ ತಪ್ಪಲಾರದೆಂದು ನಮ್ಮ ಹೆದರಿಕೆ. ಆಹಾರ ಪ್ರಶ್ನೆಯಲ್ಲಿ ಸರಕಾರವಾಗಲೀ ಜನತೆಯಾಗಲೀ, ತಪ್ಪು ಕಲ್ಪನೆ, ಅಜಾಗ್ರತೆಯನ್ನು ಪ್ರದರ್ಶಿಸಬಾರದೆಂದು ಒತ್ತಿ ಹೇಳುತ್ತೇವೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 565/1947

ವಾದಿ. ಶೀನಪ್ಪ ಶೇರ್ವೆಗಾರ.

ಪ್ರತಿವಾದಿಯು. 1. ಸೋಮನಾಯ್ಕ.

2. ಲಚ್ಚನಾಯ್ಕ.

ಉಡುಪಿ ತಾಲ್ಲೂಕು ಶಿರೂರು ಗ್ರಾಮದಲ್ಲಿರುವ ಮುರಟಿ ರಾಮ ನಾಯ್ಕನ ಮಗ ಸೋಮ ನಾಯ್ಕ 1 ಕೊರಗನಾಯ್ಕನ ಮಗ ಲಚ್ಚನಾಯ್ಕ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಪ್ರತಿವಾದಿಯು ವಾದಿಗೆ ತಾ. 12-9-44 ರಲ್ಲು ರೂ. 300-0-0ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಹಣಬಡ್ಡಿ ಕೂಡಾ ರೂ. 356-2-0 ನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ. 3-12-47ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಖಿಗೆ ಮೇಲಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜವಾಬೀದು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸುತ್ತದೆ.

Sd/ N. S. Parameshwariah.
Advocate for Plff.

Date 17-11-47 Coondapoor.

(೫ನೇ ಪುಟದಿಂದ).

ಹೈದರಾಬಾದು ವರ್ತಮಾನ

ಹೈದರಾಬಾದಿನ ಪ್ರತಿನಿಧಿಗಳು ದಿಲ್ಲಿಗಾಗಮಿಸಿ, ಕೇಂದ್ರದೊಂದಿಗೆ ನಡೆಯುವ ಸಂಬಂಧದ ಕೊನೆಯ ಮಾತುಕತೆಗಳನ್ನು ನಡೆಸಿದ್ದಾರೆ. ಹೈದರಾಬಾದಿನ ಕಟ್ಟುಗ್ರ ಮುಸ್ಲಿಂ ಸಂಸ್ಥೆ 'ಮಜ್ಲಿಸ್-ಇ-ಇತ್ತೆಹಾದ್ ಉಲ್--ಮುಸ್ಲಿಮೀನ್' ಅಧ್ಯಕ್ಷ ಮಿ. ಖಾಸಿಮ್ ರಿಜ್ವಿಯವರೂ ಸರ್ದಾರ್ ಪಟೇಲರಿಂದ ದಿಲ್ಲಿಗಾಹ್ವಾನಿಸಲ್ಪಟ್ಟು ಸರ್ದಾರರೊಡನೆ ಸಂಭಾಷಿಸಿದ್ದಾರೆ. ಮಿ. ಖಾಸಿಮ್ ರಿಜ್ವಿಯವರು ತಾನು ಬರುವೆನೆಂದು ಬಯಸಿದ್ದರಿಂದಲೇ ಸರ್ದಾರರು ಅವರನ್ನು ಕರೆದುದೆಂದು ತಿಳಿದುಬರುತ್ತದೆ. ಇತ್ತ ಹೈದರಾಬಾದಿನ ಒಳಗಡೆಯ ಸ್ಥಿತಿಯು ಅತ್ಯಂತ ಪ್ರಕ್ಷುಬ್ಧವಾಗಿದೆ. ಹಿಂದುಗಳು ದಿಗಿಲುಗೊಂಡು ಧಾರಿಕಟ್ಟಿ ಹೊರಗೋಡಿ ಬರುತ್ತಿದ್ದಾರೆ. ಒಂದೆಡೆ ರೈತರಿಗೂ ಪೋಲೀಸರಿಗೂ ಪ್ರತ್ಯಕ್ಷ ಹೋರಾಟವೇ ನಡೆದು ಹಲವರು ಮಡಿದರು. ನೈಜಾಮರ ತಾಲೂಕಿನ ಪೋಲಿಸ್ ಸ್ಟೇಶನಿನ ಮೇಲೆ ರೈತ ಗುಂಪೊಂದರ ನಾಯಕನಾಗಿ ಧಾಳಿ ನಡೆಸಿದ್ದ ಕಮ್ಯೂನಿಸ್ಟ್ ನಾಯಕ ರಕ್ಷ್ಮಿ ಖುಮಂಕರರನ್ನು ಗುಂಡಿಸಿದು ಕೊಂದಿದ್ದಾರೆ. ರೈಲ್ವೇ ಲಕ್ಷಣಯ. ಪೋಲೀಸರು ಗೋಳಿಬಾರು ನಡೆಸುತ್ತಿರುವ--ಹಿಂದುಗಳ ಮನೆದಹನ, ಕೊಲೆ, ದರೋಡೆಗಳಾಗುತ್ತಿರುವ--ಭೀಕರ ವಾರ್ತೆಗಳಿವೆ. ಹೈದರಾಬಾದಿನ ಅಸುಪಾಸಿನ ಮಹಾರಾಷ್ಟ್ರ, ಆಂಧ್ರ, ಕರ್ನಾಟಕ, ಮಧ್ಯಪ್ರಾಂತ್ಯ ಮೊದಲಾದ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳ ನಾಯಕರು ಕಾಂಗ್ರೆಸ್ ಅಧ್ಯಕ್ಷರೊಡನೆ ಹೈದರಾಬಾದ್ ಸಂಬಂಧದ ಭಾವೀ ಕಾರ್ಯಕ್ರಮಗಳನ್ನು ಚರ್ಚಿಸಿದ್ದಾರೆ. ನಿಜಾಮರು ತುಸು ಗಾಬರಿಗೊಳಗಾಗಿರುವ ಚಿಹ್ನೆಗಳು ಕಾಣಿಸುತ್ತಿವೆ. ಮುಂದೇನೆಂಬುದು ಇದೇ ತಾ. 27ರಲ್ಲಿ ತಿಳಿದು ಬರಬಹುದು.

ಭಾರತ ಪಾರ್ಲಿಮೆಂಟು

ಸ್ವತಂತ್ರ ಭಾರತದ ಪ್ರಥಮ ರೈಲ್ವೇ ಬಜೆಟಿನಲ್ಲಿ ಎಲ್ಲಾ ತರಗತಿಗಳ ಟಿಕೇಟು ದರಗಳನ್ನು ಏರಿಸುವ ಹಂಚಿಕೆಯಿದೆ. ಪ್ರಥಮ ತರಗತಿಗೆ 6 ಪೈ, ಎರಡನೇ ತರಗತಿಗೆ 4 ಪೈ, ಮಧ್ಯ ತರಗತಿಗೆ 2½ ಪೈ, ಮೂರನೇ ದರ್ಜೆಗೆ ಮೈಲಿನಲ್ಲಿ 2 ಪೈ ಸಾದಾ ರೈಲಿನಲ್ಲಿ 1 ಪೈ ಹೆಚ್ಚಿಗೆ ದರ ಹೇರಲ್ಪಡುವುದು. ಇದರಿಂದಾಗಿ 9·15 ಕೋಟಿ ರೂ.ಗಳ ಉತ್ಪತ್ತಿ ಹೆಚ್ಚಿ, ಈಗಿನ ಅಂದಾಜಿನಂತೆ ರೂ. 12·36 ಕೋಟಿ ಕಡಿಮೆ ಬೀಳುವ ಬದಲಿಗೆ ರೂ. 3-19 ಕೋಟಿ ಮಾತ್ರ ಕಡಿಮೆಯಾಗಬಹುದು. ಈ ವರುಷವೇರಿದ ರೈಲ್ವೇ ಕೆಲಸಗಾರರ ಸಂಬಳ ಭತ್ಯೆಯ ದೆಸೆಯಿಂದ 22½ ಕೋಟಿ ರೂ. ಹೆಚ್ಚಿಗೆ ಖರ್ಚು ಬಿದ್ದಿದೆ. ಭಾರತ ಪಾರ್ಲಿಮೆಂಟು ಎಸೆಂಬ್ಲಿಯು ಜನಜೀವನ ಸುಧಾರಣೆಯ ಹಲವು ಪ್ರಾಮುಖ್ಯ ಮಸೂದೆಗಳ ಪರ್ಯಾಲೋಚನೆ, ತಯಾರಿಗಳನ್ನು ನಡೆಸುತ್ತಿದೆ. ಕೆಲಸಗಾರರಿಗೆ ವಿಮಾನುಕೂಲತೆಯನ್ನು ಸರಕಾರ ಪ್ರೋದಗಿಸುವ, ಬಂದರಗಳ ಧಕ್ಕೇ ಕೆಲಸಗಾರರ ಕಾರ್ಯವ್ಯವಸ್ಥೆ ಕೈಕೊಳ್ಳುವ ಸೂಚನೆಗಳು ಸಿಲೆಕ್ಟ್ ಕಮಿಟಿಗೊಪ್ಪಿಸಲ್ಪಟ್ಟಿವೆ.



Approved firm by the Govt. of Mysore Certified by the Agent of the Govt. of Ceylone & Indian.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಈ ವಿಮಾಸಂಸ್ಥೆಯ 1946ನೇ ಇಸವಿಯ ಅಂತ್ಯಕ್ಕಾಗುವ ಹಿಂದಿನ ನಾಲ್ಕು ವರ್ಷಗಳಬಗ್ಗೆ ಮೌಲ್ಯನಿರ್ಧಾರದ (ವೆಲ್ಯುಯೇಶನ್) ವರದಿಯು ನಮ್ಮ ಕೈಸೇರಿದೆ. ಪರಿಶೀಲಿಸಿದಲ್ಲಿ ನಮ್ಮ ಜಿಲ್ಲೆಯದಾದ ಈ ಕಂಪೆನಿಯು ವಿಮಾಕ್ಷೇತ್ರದಲ್ಲಿ ಗಣನೀಯವಾದ ಸ್ಥಾನವನ್ನು ಪಡೆದಿದೆ ಎಂಬುದನ್ನು ಮನಗಂಡು ವಿಶೇಷ ಅಭಿಮಾನವಾಗುತ್ತಿದೆ- ಕಳೆದ ನಾಲ್ಕೆಂಟು ವರ್ಷಗಳ ಅವಧಿಗೆ ಹಲವು ಕಂಪೆನಿಗಳು ತಮ್ಮ ವಿಮಾ ಪತ್ರದಾರರಿಗೆ ಬೋನಸ್ಸು (ಲಾಭಾಂಶ) ಕೊಡಲಾರದ ಪರಿಸ್ಥಿತಿಯಲ್ಲಿರುವಾಗ, ಈ ವಿಮಾ ಸಂಘವು ಈ ನಾಲ್ಕು ವರುಷಗಳ ಅವಧಿಗಲ್ಲದೆ ತತ್ಪೂರ್ವದ ನಾಲ್ಕು ವರ್ಷಗಳ ಅವಧಿಗೂ ಲಾಭಾಂಶವನ್ನು ಹಂಚಿಕೊಂಡುವದು. ಅಧ್ಯತೆಯನ್ನು ತೋರಿ 1939ರ ಆದಿಯಿಂದ 1946ರ ಅಂತ್ಯದವರೆಗೆ ಎಂಟು ವರ್ಷಗಳಬಗ್ಗೆ ಸಹ ಲಾಭವಿಭಜನೆಯಲ್ಲಿ ಹಕ್ಕಿರುವ ವಿಮಾ ಪತ್ರದಾರರಿಗೆಲ್ಲ ಲಾಭಾಂಶವನ್ನು ಕೊಡಲಾಗಿದೆಯೆಂಬುದು ಈ ವೆಲ್ಯುಯೇಶನ್ ವರದಿಯು ಹೊರಗೆಡಹುವ ಪ್ರಧಾನ ಲಕ್ಷಣ. ಇದನ್ನು ನಮ್ಮ ವಾಚಕರ ಲಕ್ಷ್ಯಕ್ಕೆ ತರಲು ನಮಗೆ ತುಂಬ ಸಂತೋಷವಿದೆ. ಮೇಲಾಗಿ, ವೆಲ್ಯುಯೇಶನಿಗೆ ಸಂಬಂಧಪಟ್ಟ ವರುಷಗಳ ಅವಧಿಯಲ್ಲಿ ಸಂಘವು ತನ್ನ ಹಣದಮೇಲೆ ಸೇ 3.3 ದರದ ಬಡ್ಡಿಯನ್ನು ಸಂಪಾದಿಸಿದ್ದರೂ ಮೌಲ್ಯ ನಿರ್ಧಾರಕ್ಕೆ ಸೇ 2¾ ದರವನ್ನೇ ಎಣಿಸಲಾಗಿದೆ. ಅಂತೆಯೇ ಕಂಪೆನಿಯ ವ್ಯಯ ಪ್ರಮಾಣವು ಸೇ 7·27 ಇದ್ದರೂ ಲಾಭರಹಿತ ಪತ್ರಗಳ ಬಗ್ಗೆ ಸೇ. 10ರಂತೆಯೂ ಲಾಭಸಹಿತ ಪತ್ರಗಳಿಗೆ ಸೇ 21ರಂತೆಯೂ ಲೆಕ್ಕ ಹಾಕಲಾಗಿದೆ. ಹೀಗೆ ನಿರ್ದಾಕ್ಷಿಣ್ಯವಾದ ಮತ್ತು ಕಠಿಣವಾದ ಮೌಲ್ಯ ನಿರ್ಧಾರದ ರೀತಿನೀತಿಯ ಕಟುಪರೀಕ್ಷೆಗೊಳಗಾಗಿಯೂ ಕಂಪೆನಿಯು ಇಂತಹ ಉತ್ತಮ ಫಲಿತಾಂಶವನ್ನು ತೋರಿಸಿರುವುದೆಂದರೆ ಕಂಪೆನಿಯ ಯಥಾರ್ಥ ಲಾಭವು ಮತ್ತೂ ಅಧಿಕವಾಗಿದ್ದು ಅದು ಸಂಸ್ಥೆಯ ಸ್ಥಿರವಾದ ಭದ್ರತೆಯ ಪರಿಸ್ಥಿತಿಯನ್ನು ಮತ್ತಷ್ಟು ಪ್ರಬಲಗೊಳಿಸಲು ಸಹಕಾರಿಯಾಗಿ ಉಳಿದಿದೆಯೆಂಬುದು ಸ್ಪಷ್ಟವಿದೆ. ಕಂಪೆನಿಯ ಪಾಲುಗಾರರೆಂದರೆ ವಿಮಾ ಪತ್ರದಾರರೇ ಆಗಿರುವುದರಿಂದಲೂ ಕಂಪೆನಿಯ ಲಾಭ ವಿಭಜನೆಯು ಅವರಿಗೇ ದೊರಕುತ್ತಿರುವುದರಿಂದಲೂ ಕಂಪೆನಿಯು ಜೀವವಿಮೆಯ ಆಯ್ಕೆಯಲ್ಲಿ ವಿಶೇಷ ಎಚ್ಚರಿಕೆ, ಕಾರ್ಯವ್ಯವಹಾರದಲ್ಲಿ ಮಿತವ್ಯಯ, ದೂರದರ್ಶಿತ್ವ, ಮುಂಜಾಗರೂಕತೆ ಇವನ್ನು ಆಡಳಿತೆಯ ಪ್ರಧಾನವಾಗಿಟ್ಟುಕೊಂಡಿರುವುದರಿಂದಲೂ ಕಂಪೆನಿಯು ಇಂತಹ ಸುಭದ್ರತೆಯ ಹಾದಿಯಲ್ಲಿ ಪ್ರಗತಿಯನ್ನು ತೋರಲು ಸಾಧ್ಯವಾಯಿತೆಂದು ನಮ್ಮ ಅಭಿಮತ. ಹೀಗೆ ವಿಮಾ ಪತ್ರದಾರರುಗಳದೇ ಕಂಪೆನಿಯಾಗಿ ಅದರ ಯಾವತ್ತು ಲಾಭಾಂಶವು ಇತರ ಪಾಲುಗಾರರಿಗೆ ಸಲ್ಲದೆ ವಿಮಾ ಪತ್ರದಾರರಿಗೇ ದೊರೆಯುವಂತಹ ಮತ್ತು ದಕ್ಷತೆಯ ಆಡಳಿತೆಯಲ್ಲಿ ನಡೆಯುತ್ತಿರುವ ಈ ಕೆನರಾ ಮ್ಯೂಚುವಲ್ ತನ್ನ ಸಹಜಗುಣಗಳಿಂದಲೇ ಜನತೆಯ ಮೆಚ್ಚಿಗೆಗೆ ಹೆಚ್ಚು ಹೆಚ್ಚಾಗಿ ಪಾತ್ರವಾಗಿ ಇತೋಽಧಿಕಯಶಸ್ಸನ್ನು ಸಂಪಾದಿಸಲಿಕ್ಕಿರುವಲ್ಲಿ, ಈ ವಿಷಯ ನಮ್ಮ ವಾಚಕರಿಗೆ ನಮ್ಮದೊಂದು ಪ್ರತ್ಯೇಕ ತಿಳಿಸಾಯ ಬೇಕಾಗಿಲ್ಲವಷ್ಟೆ! ಕೆನರಾ ಮ್ಯೂಚುವಲಿಗೆ ನಮ್ಮ ಹೃತ್ಪೂರ್ವಕ ಅಭಿವಂದನೆಗಳು.

ಉಡುಪಿಯಲ್ಲಿ ಮೊಹರಂ— ಇದೇ ತಾ. 14ರಿಂದ 23ರ ವರೆಗಿನ 10 ದಿವಸಗಳಲ್ಲಿ ಉಡುಪಿ ಮಸೀದಿ ಬಳಿಯ ಭವ್ಯ ಚಪ್ಪರದಲ್ಲಿ ರಾತ್ರಿ ಹಾಗೂ ಸತ್ಪುರಿಷಾ ಮಹಾಶಯರು ಸ್ಥಾನಗಳಿಂದ ಮೊಹರಂ ಆಚರಣೆಗಳು ನಡೆದವು. ಮೌಲಾನಾ ಮೌಲ್ವಿ ಸುಲೆಮಾನ್ ಸಾಹೇಬರು ಮುಖ್ಯ ಪ್ರವಚನಕಾರರಾಗಿದ್ದರು. ಮೊಹರಮಿನ ಪಾವಿತ್ರ್ಯತೆ, 'ಇಮಾಮ್' ಹುಸೇನರ ಪವಿತ್ರ ಬಲಿದಾನ, ಇತ್ಯಾದಿಗಳ ಕುರಿತು. 7ನೇ ವಿಶೇಷ ರಾತ್ರಿಯಲ್ಲಿ ಮಿ. ಯೂ. ಹುಸೇನ್ ಸಾಹೇಬ್ ಬಿ. ಎ. ಎಲ್. ಟಿ. ಮತ್ತು ವಕೀಲ್ ಮಿ. ಉಸ್ಮಾನ್ ಸಾಹೇಬರ ಕೊನೆಯ ರಾತ್ರಿ ಮಿ. ಮಹಮ್ಮದ್ ಹುಸೇನ್ ಮಹಮ್ಮದ್ ಸಾಲಿಯಾ, ಶ್ರೀ ಎಂ. ವಿ. ಹೆಗ್ಡೆ, ಡಾ॥ ಅಬ್ದುರ್ರಹ್ಮಾನ್ ಆಸಮ್ಮದ್ ಸಾಹೇಬ್ ಮೊದಲಾದವರ ಭಾಷಣಗಳಾದುವು. ಮತ್ಸರದ ಸಂದರ್ಭಗಳಿಗನುಸರಿಸಿ ನೂರಾರು ಜನ ಸಗಂಮೊಲವಣಿಗೆಗಳಿದ್ದುವು. ತಾ. 24ನೇ ಹಗಲು ನುಸುಕ್ತಾಯ ಮೆರವಣಿಗೆ ನಡೆಯಿತು. ಮೊಹರಂ ಆಚರಣೆಗಳಲ್ಲಿ ಹಿಂದುಗಳೂ ಸಹಭಾಗಿಗಳಾಗಿದ್ದರು.

ಶಿರ್ವ— ತಾ. 19-11-47ರಲ್ಲಿ ಕೇಪ್ಟನ್ ವೈ. ಆರ್. ಶೆಟ್ಟಿ M. B., B. S. ಇವರ "ಶಿರ್ವ ಮೆಡಿಕೊ-ಸರ್ಜಿಕಲ್ ಹಾಲ್" ಎಂಬ ಹೆಸರಿನ ಔಷಧಾಲಯವು ತೆರೆಯಲ್ಪಟ್ಟಿರುವುದು.

ಪ್ರಕಟಣೆ

ಉಡುಪಿ ತಾಲೂಕು ಪಡುಬಿದ್ರಿ ಕಂಬಳವನ್ನು ಈ ವರುಷ ತಾ 13-12-47ನೆ ಶನಿವಾರ ಜರಗಿಸಬೇಕಾಗಿಯೂ ಸದ್ರಿ ಕಂಬಳವು ಜರಗುವ ಬಗ್ಗೆ ಪಲಿಗೆಯಲ್ಲಿಯೂ ಸಗ್ಗದಲ್ಲಿಯೂ ಪ್ರಥಮ ತರಗತಿಯ ಓಟದಿಂದ ಜಯಶೀಲವಾದ 2 ಜತೆ ಓಟದ ಕೋಣಗಳಿಗೆ ಪ್ರಥಮ ಬಹುಮಾನವಾಗಿ, ಒಂದೊಂದು ಚಿನ್ನದ ಪದಕವನ್ನು ಕೂಡಾ ಕೊಡುವುದಾಗಿಯೂ, ಆ ಸಂಬಂಧ ಮಹಾಶಯರು ತಂತನ್ನ ಓಟದ ಕೋಣಗಳ ಸಮೇತ ಚಿತ್ತೈಸಿ, ನಮ್ಮಾಕಾಂಕ್ಷೆಯನ್ನು ಪೂರೈಸಿ ಕೊಡಬೇಕಾಗಿ ವಿನಂತಿ.

ಬೋಳ ಮಂಜಯ್ಯ ಶೆಟ್ಟಿ

ಪಡುಬಿದ್ರೆ 26-11-47

"ಜನತಾ ರೇಡಿಯೋ ಹೌಸ್"

ಮುಂಬಯಿ ನಗರದಲ್ಲಿ ನೂತನವಾಗಿ ತೆರೆದ "ಜನತಾ ರೇಡಿಯೋ ಹೌಸ್" ಕನ್ನಡಿಗರ ಸೇವೆಯೇ ನಮ್ಮ ಗುರಿ ರೇಡಿಯೋ ರಂಗದಲ್ಲಿ ಸುರಿತ ಕೈ. ನಿಮ್ಮ ಗೃಹಗಳನ್ನು ಸುಮಧುರ ಗಾನಗಳಿಂದ ಇಂಪುಗೊಳಿಸಿರಿ.

ನಮ್ಮಲ್ಲಿ ಎಲ್ಲಾ ನಮೂನೆಯ ರೇಡಿಯೋಗಳೂ, ರೇಡಿಯೋ ಸ್ಪೇರ್ ಪಾರ್ಟುಗಳೂ (Spare parts) ಎಂಪ್ಲಿಫಾಯರ್ (Amplifier) ಇಲೆಕ್ಟ್ರಿಕ್ ಸಾಮಾನುಗಳೂ ಫ್ಲೋರೆಸಂಟ್ ಲೇಂಪುಗಳು (Fluorescent Lamps) ಇತ್ಯಾದಿ ಕಡಿಮೆ ದರದಲ್ಲಿ ಪಡೆಯಬಹುದು.

ರೇಡಿಯೋ ರಿಪೇರಿ. ವಾಯರಿಂಗ್ ಲವುಡ್ ಸ್ಪೀಕರ್ ವ್ಯವಸ್ಥೆ (Loud-speaker installation) ಇಲೆಕ್ಟ್ರಿಕ್ (House Wiring) ಮೊದಲಾದ ಕೆಲಸಗಳನ್ನು ನಿಶ್ಚಿತ ಸಮಯದಲ್ಲಿ ತೃಪ್ತಿಕರವಾಗಿ ಮಾಡುವ ವ್ಯವಸ್ಥೆಯೂ ಇದೆ-

ಎಲ್ಲಾ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

B. Shivarama Hegde	ಬಿ. ಶಿವರಾಮ ಹೆಗ್ಡೆ
"Janatha Radio House"	"ಜನತಾ ರೇಡಿಯೋ ಹೌಸ್"
Champa Niwas Gokhale Road (North) Shivaje Park	ಚಂಪಾ ನಿವಾಸ- ಗೋಖಲೆ ರೋಡ್
Dadar Bombay 28.	ದಾದರ್ ಮುಂಬಯಿ 28.

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ನಡಿಯುವ ಚಿತ್ರ

ಪ್ರಭಾತ್‌ನವರ

ಸಂತತುಕಾರಾಂ

ಬರುವ ಚಿತ್ರ:—ಭವಾನಿಯವರ

ಬಿಸ್ಸಿ ಸಾದಿ

ನರ್ಗಿಸ್, ಮೋತಿಲಾಲ್, ಮಜಾರ್‌ಖಾನ್.

ನಿರೀಕ್ಷಿಸಿರಿ:— ಮಹಾತ್ಮ ದವರ

ಕೃಷ್ಣಲೀಲಾ ಕನ್ನಡದಲ್ಲಿ

ದಕ್ಷಿಣ ಕನ್ನಡ.
ಮಂಗಳೂರು

ದ. ಕ. ಒಟೋಮೋಬೈಲ್ ಕೆಲಸಗಾರರ ಯೂನಿಯನ್— ಕಾರ್ಯಕಾರಿ ಸಮಿತಿಯು ತಾ. ೯ರಂದು ಜರಗಿ ಯೂನಿಯನನ್ನು ಮದ್ರಾಸು ಪ್ರಾಂತೀಯ ಫೆಡರೇಶನಿನೊಡನೆ ಸಂಯೋಜಿಸಬೇಕೆಂದು ನಿರ್ಣಯವಾಯಿತು. ಎಲ್ಲಾ ಮೋಟಾರು ಕೆಲಸಗಾರರಿಗೆ ಬೇಕಾಗಿರುವ ಯೂನಿಫಾರ್ಮು ಖಾಕಿ ವಸ್ತ್ರವನ್ನು ಕೂಡಲೇ ಒದಗಿಸುವ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಟೆಕ್ಸ್ಟೈಲ್ ಕಮೀಶನರರನ್ನು ಕೇಳಿಕೊಳ್ಳುವಂತೆ ನಿರ್ಧರಿಸಲಾಯಿತು.

ಸಂತಾಪ ಸೂಚಕ ಸಭೆಗಳು— ಪ್ರಗತಿಶೀಲ ಲೇಖಕ ಸಂಘ ಮತ್ತು ಪ್ರಕಾಶಕಕೂಟದ ಸಭೆಗಳು ಜರಗಿ ಕಾರ್ಯಹಳ್ಳಿ ರಾಮಕೃಷ್ಣ ಸೆಟ್ಟಿ, ಅ. ಪ. ಸೋಗಾಲ ಮತ್ತು ಉಡುಪಿ ಗೋವಿಂದರಾಯರ ನಿಧನಗಳ ಕುರಿತು ಸಂತಾಪ ಸೂಚಿಸಲಾಯಿತು.

ಶರಣಾಗತರಿಗೆ— ನೆರವು ಕೊಡುವುದಕ್ಕಾಗಿ ಮಂಗಳೂರಿನ ಜನತಾರಂಗಭೂಮಿಯವರು ತಾ. ೧೬ರಲ್ಲಿ ವಿವಿಧ ವಿನೋದಾವಳಿಗಳನ್ನು ಏರ್ಪಡಿಸಿದರು.

ವೈದ್ಯಮಂಡಲದ— ತೃತೀಯ ಸಭೆಯು ತಾ. ೧೬ರಲ್ಲಿ ಶ್ರೀ. ಪಿ. ಕೆ. ಪಣಿಕ್ಕರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸು ಸರಕಾರದವರು ಅನಪಾರಿಸ್ಟರ ಮೇಲೆ ನಾಧ್ಯಸಿಪೇಧದ ಕಾನೂನಿಗನ್ವಯ ತೆರಿಗೆ ಹಾಕುವುದು ಅನ್ಯಾಯ, ಈ ನಿರ್ಬಂಧವನ್ನು ತೆಗೆದುಹಾಕಬೇಕು ಎಂಬ ನಿರ್ಧಾರವಾಯಿತು.

ಪೋಸ್ಟ್‌ಮೇನ್ ಮತ್ತು ಕೆಳ ನೌಕರರ ಪ್ರಾಂತಿಕ ವಿಶೇಷ ಪರಿಷತ್ತು— ತಾ. ೧೫ ಮತ್ತು ೧೬ರಲ್ಲಿ ಪ್ರಾಂತಿಕ ಯೂನಿಯನ್ ಅಧ್ಯಕ್ಷರಾದ ಶ್ರೀ. ಟಿ. ಯಸ್. ರಾಮಾನುಜಂ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತಾಧ್ಯಕ್ಷರಾದ ಶ್ರೀ. ಬಿ. ಯಸ್. ಭಾಸ್ಕರರೈಗಳು ಪ್ರತಿನಿಧಿಗಳನ್ನೂ ಅತಿಥಿಗಳನ್ನೂ ಸ್ವಾಗತೀಕರಿಸಿದರು. ತಿರುಚಿನಾಪಳ್ಳಿಯ ಪೋಸ್ಟ್‌ಮೇನ್ ಯೂನಿಯನ್ನಿನ ಅಧ್ಯಕ್ಷರಾದ ಶ್ರೀ. ಜಗನ್ನಾಥನ್‌ರವರು ಪರಿಷತ್ತನ್ನು ಉದ್ಘಾಟಿಸಿಮಾಡುತ್ತಾ ಸಂಘಶಕ್ತಿಯ ಕುರಿತು ಮಾತಾಡಿದರು. ಪೋಸ್ಟ್‌ಮೇನ್ ಮತ್ತು ಕೆಳ ನೌಕರರಿಗೆ ಸಂಬಂಧಿಸಿದ ಹಲವು ನಿರ್ಣಯಗಳು ಬಹಿರಂಗ ಅಧಿವೇಶನದಲ್ಲಿ ಮಾನ್ಯವಾದುವು.

ಶ್ರೀ ಬಾಲಾಜಿರಾಯರಿಗೆ ಸತ್ಕಾರ— ಮಂಗಳೂರು ರೆವಿನ್ಯೂ ಡಿವಿಜನಲ್ ಆಫೀಸರರಾಗಿರುವ ಹಾಗೂ ಕೆಲಕಾಲ ಜಿಲ್ಲಾ ಕಲೆಕ್ಟರರ ಚಾರ್ಜಿನಲ್ಲಿದ್ದ ಶ್ರೀ ಯಸ್. ಬಾಲಾಜಿರಾಯರು ವರ್ಗವಾಗಿ ಹೋಗಲಿರುವ ಕಾರಣ ಇವರನ್ನು ಮಂಗಳೂರಿನ ಬಾರ್‌ಎಸೋಸಿಯೇಶನಿನವರು ತಾ. 9ರಲ್ಲಿ ಬಾರ್‌ಯೆಸೋಸಿಯೇಶನಿಗೆ ಆಹ್ವಾನಿಸಿ ಚಹಾ ಸತ್ಕಾರವಿತ್ತರು.

ಜಿಲ್ಲಾ ಕಲೆಕ್ಟರರು— ರಜೆಯ ಮೇಲೆ ತೆರಳಿದ್ದ ಜಿಲ್ಲಾ ಕಲೆಕ್ಟರ್ ಮಿ| ಜೆ. ಎಫ್. ಸಾಂಡರ್ಸರು ಈಗಾಗಲೇ ಹಾಜರಾಗಿ ಕಲೆಕ್ಟರರ ಚಾರ್ಜು ವಹಿಸಿರುವರು.

ಪೇಜಾವರಮಠದ ಮೊಕದ್ದಮೆ— ಈ ಮೊಕದ್ದಮೆಯ ಅಪೀಲು ಜಿಲ್ಲಾ ಸೆಶನ್ಸ್ ಜಡ್ಜರಲ್ಲಿ ನಡೆದು ಶ್ರೀ. ಮಿಯಾಳ ನರಸಿಂಹಾಚಾರ್ಯರಿಗೆ 7 ವರ್ಷ ಸಜೆ ಎಂದೂ ಇತರರೂ ಮಠದ ಶ್ರೀಗಳವರ ವೈಕಾರಿ ಶ್ರೀನಿವಾಸ ರಾವ್, ಎಸ್. ಎ. ತೋಳ್ಪಾಡಿ, ಗುರುರಾಜ ಉಡುಪ ಇವರಿಗೆ ಬಿಡುಗಡೆ ಎಂದೂ ತೀರ್ಪು ಕೊಡಲಾಗಿದೆ.

ಬೋರ್ಡ್ ಒಫ್ ರೆವಿನ್ಯೂ— ಮದ್ರಾಸು ರೆವಿನ್ಯೂ ಬೋರ್ಡಿನ ಎರಡನೇ ಮೆಂಬರರಾಗಿ ಶ್ರಿ. ಸಿ. ಎಸ್. ಕಾಂಡ್ಸ. ಐ. ಸಿ. ಎಸ್. ಇವರೂ, ಮೂರನೇ ಮೆಂಬರ್ ಮತ್ತು ಸಿವಿಲ್ ಸರಬರಾಯಿ ಕಮಿಶನರಾಗಿ ಶ್ರೀ. ಎ. ಎಸ್. ಹೆಗ್ಡೆ, ಐ. ಸಿ. ಎಸ್. ಅವರೂ ನೇಮಿಸಲ್ಪಟ್ಟಿದ್ದಾರೆ. ಈ ಮಹನೀಯರಿಬ್ಬರೂ ದ. ಕ. ಜಿಲ್ಲೆಯವರು.

ಜಿಲ್ಲೆಯಲ್ಲಿ ಸುಧಾರಣಾ ಕಾರ್ಯಗಳು— ಜಿಲ್ಲೆಯ ಸುಧಾರಣಾ ಸಿಬಂದಿಯವ ಪ್ರಯತ್ನದ ಫಲವಾಗಿ ಜಿಲ್ಲೆಯಲ್ಲಿ ಇರುವರೆಗೆ ಏರ್ಪಟ್ಟ 80 ಗ್ರಾಮಗಳು ನಾಟಕ, ಭಜನೆ, ಆಟಪಾಟಗಳನ್ನು ಏರ್ಪಡಿಸಿ ಹಿಂದಿನವ ವ್ಯವಸಾಯಿಗಳ ಮನಸ್ಸನ್ನು ಆ ಕಡೆ ಸೆಳೆದಿರುವರಲ್ಲದೆ, ಮಂಗಳೂರು ಪ್ಯಾ ಸ್ಕೌಟ್ ದಳದವರು ಪೇರಿಬೈಲಿನಲ್ಲಿಯೂ, ಸುರತ್ಕಲ್ ಇಡ್ಯಪಾಸ್ಕೂಲಿನಲ್ಲಿಯೂ ಎರಡು ನಾಟಕವಾಡಿದ್ದಾರೆ. ಬಿಲ್ಲವ ಸಂಘದ ಕಡೆಯಿಂದ ನಾಟಕದಳವೊಂದು ಏರ್ಪಟ್ಟು ಶ್ರೀ ಗೋಕರ್ಣನಾಥಕ್ಷೇತ್ರದಲ್ಲಿ ಒಂದು ನಾಟಕಾಭಿನಯವೂ ನಡೆಯಿತು. ಕುಲಶೇಖರ, ಕಾವೂರು, ಕೂಳೂರು, ದೇರೆಬೈಲು ಇಗರ್ಜಿಗಳ ಪರಿಸರದಲ್ಲಿ ಸೇರಿದ್ದ ಜನಸ್ತೋಮದ ಮುಂದೆ ಹಂಪು ಕಾರ್ಯಾನಯ ಮಿ. ಎಸ್. ಬಿ. ಪಿ. ರೆಬೆಲ್ಲೋ ಇವರು ಪಾಠನಾದಿಗಳನ್ನು ನಡೆಸಿದರು.

ಡಿಸೆಂಬರ ಅಂತ್ಯದೊಳಗಾಗಿ ಇನ್ನೂ ೫೦ ಜಾಸ್ತಿ ಸೊಸೈಟಿಗಳು ಸ್ಥಾಪಿಸಲ್ಪಟ್ಟು ಹಾಲಿ ಜಿಲ್ಲೆಯ ತಿಂಗಳ ಬಿಲ್ಲ ತಯಾರಿಸುವರೆ ೫೦೦೦ ಮೂರ್ತೆದಾರರಿಗೆ ಉದ್ಯೋಗ ದೊರೆಯುವುದು.

ಧರ್ಮಸ್ಥಳದಲ್ಲಿ ವಿವಿಧ ಧರ್ಮ ಸಮ್ಮೇಳನವು— ಕಾಲಾವಧಿ ದೀಪೋತ್ಸವದ ವೇಳೆ ಡಿಸೆಂಬರ ತಾ. ೧೦ನೇ ೧೧ನೇ ತಾರೀಕುಗಳಲ್ಲಿ ಎಂದಿನಂತೆ ಜರಗುವುದು.

ನಿಧನ— ನಿವೃತ್ತ ಕಮರ್ಶಿಯಲ್ ಟೇಕ್ಸ್ ಆಫೀಸರರಾದ ಶ್ರೀ. ಬಿ. ಗಣಪತಿಯವರು ತಾ. ೧೮ರಲ್ಲಿ ಪರಲೋಕವಾಸಿಗಳಾದರೆಂಬುದು ವಿಷಾದಕರವೆನಿಸುತ್ತದೆ. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇವೆ.

ವಾರ್ಷಿಕೋತ್ಸವ— ಗವರ್ನಮೆಂಟ್ ಕಾಲೇಜಿನ ವಾರ್ಷಿಕೋತ್ಸವವು ಕಳೆದ ರವಿವಾರ ಸಂಜೆ ಕಾಲೇಜುಹಾಲಿನಲ್ಲಿ ಡಾ| ಎಮ್. ಕೇಶವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಿನ್ಸಿಪಾಲ್ ಶ್ರೀ. ಕೆ. ಎ. ವಗೀಸರು ಕಾಲೇಜು ವರದಿಯನ್ನೋದಿದರು. ವಕೀಲ್ ಶ್ರೀ. ಜಿ. ಸೋಮಶೇಖರರಾಯರು ಕಾಲೇಜಿನ ಶ್ರೇಯೋಭ್ಯಾರ್ಥನೆಯನ್ನು ಮಾಡಿದರು. ಬಹುಮಾನ ವಿತರಣೆ, ವಿವಿಧ ವಿನೋದಾವಳಿಗಳಿಂದ ವಾರ್ಷಿಕೋತ್ಸವವು ಮುಕ್ತಾಯವಾಯಿತು.

ನಿಂಜೂರು— ಇದೇ ತಾ. 5-12-47 ದೇ ಶುಕ್ರವಾರ ನಮ್ಮಲ್ಲಿ ವಾಡಿಕೆಯಂತೆ ಜರಗುವ ಕಂಬಳವು ನೆರವೇರುವುದು. ಹಲಗೆಯಲ್ಲಿ ನಿಶಾನಿಗೆ ನೀರು ಹಾಕಿದ ಕೋಣಗಳಿಗೂ ಹಗ್ಗದಲ್ಲಿ ಮೊದಲು ಬಂದ ಕೋಣಗಳಿಗೂ ಪ್ರಥಮ ಬಹುಮಾನವಾಗಿ ಚಿನ್ನದ ಪದಕವನ್ನೂ ದ್ವಿತೀಯ ಬಹುಮಾನವಾಗಿ ಬೆಳ್ಳಿಯ ಪದಕವನ್ನೂ ಇಟ್ಟಿದೆ.

ಫಲಿಮಾರು— ತಾ. 21ರಲ್ಲಿ ಸ್ಥಳೀಕ ಗಾಂಧಿ ಮೈದಾನಿನಲ್ಲಿ ಈ ಕೇಂದ್ರದ ರೈತರ ಮಹಾಸಭೆಯು ಪಂಚಾಯತ್ ಬೋರ್ಡ್ ಪ್ರೆಸಿಡೆಂಟರಾದ ಶ್ರೀ. ಎಚ್. ನರಹಿಂಹ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಕೆ. ಕೆ. ಸೆಟ್ಟರೂ, ಶ್ರೀ. ಎನ್. ಎಸ್. ತಿಲ್ಲೆಯವರೂ ರೈತರ ಕರ್ತವ್ಯಗಳನ್ನು ವಿವರಿಸಿ ಭಾಷಣವಿತ್ತರು.

ಬಾಲಕರು ಆರೋಗ್ಯಶಾಲಿಗಳಾಗಲು
(ಪ್ರಭೂಸ್) ಬಾಲಾಮೃತ
ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜೆಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನೆಟ್ಟಗಾಗಲು ತಾಯಿತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ, ಮಾತ್ರ, ಹೊತ್ತು ಕಳೆದರೆ ಮತ್ತೆ ಬಾರದು.

'ಪ್ರಭೂಸ್'
ಬಾಲಾಮೃತ

ಪ್ರಭೂಸ್ ಬಾಲಾಮೃತದ ಖ್ಯಾತಿಗೆ ಪಾಪಿ ಟೀಕೆ' ಹಾಗಾದರೆ ಆದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ,

ಸ್ವದೇಶೀ ಔಷಧ ಭಂಡಾರ,
(ರಜಿಸ್ಟರ್ಡ್)
ಕುಂಜಾಲು, ಪೋ. ಬ್ರಹ್ಮಾವರ, ದ. ಕ.
ಸ್ಟಾಕಿಸ್ಟರು:—
ನವಭಾರತ ಪುಸ್ತಕ ಭಂಡಾರ, ಉಡುಪಿ,
L. N. Sharma, Mangalore.

The name that at once spells confidence and security
offers Attractive schemes to suit needs of all.
Respectable Representatives
WANTED
On lucrative terms.
For full particulars write to:
Managing Director,
The Security Provident Insurance Co, Ltd.
Hassan Chambers, Parsee Bazar Street, Fort, Bombay: 1.



ಸಮುದ್ರದ ಗಂಡಾಂತರಗಳಿಗೂ ರಕ್ಷಣೆಯಿದೆ

ದೂರದೇಶದ ಬಂದರುಗಳಿಗೆ ಸ್ಟೀಮರು ಹೊರಟಿದೆ. ಜೋಪಾಸನೆಯ ಎಲ್ಲಾ ವಿಧಿಗಳು ಪೂರ್ತಿಗೊಂಡಿವೆ. ಆದರೆ ನಿಮ್ಮ ಸರಕುಗಳನ್ನು ಸ್ಟೀಮರಿಗೆ ತುಂಬಿಸುವ ಮೊದಲು ನೀವು ಅತ್ಯಾವಶ್ಯಕವಾಗಿ ನಿಗಾ ಕೊಡತಕ್ಕ ವಿಷಯ ನಿಮ್ಮ ಸರಕುಗಳನ್ನು ಇನ್ಶೂರ್ ಮಾಡುವುದು, ಏಕೆಂದರೆ ಸಮುದ್ರದಲ್ಲಿ ಆಕಸ್ಮಿಕವಾಗಿ ಉಂಟಾಗುವ ಬಿರುಗಾಳಿ, ಅಲ್ಲೋಲ ಕಲ್ಲೋಲ, ಬೆಂಕಿಯ ಅನಾಹುತ, ಸ್ಫೋಟನ ಇತ್ಯಾದಿ ಅನಿರೀಕ್ಷಿತ ಗಂಡಾಂತರಗಳನ್ನು ಗಳನ್ನು ರಕ್ಷಿಸುವ ಸಲುವಾಗಿ,

ಇಂತಹ ಸಮುದ್ರ ಪ್ರಯಾಣಕ್ಕೆ ಇನ್ಶೂರೆನ್ಸ್ ಸಮಸ್ಯೆಗಳನ್ನು ಬಗೆಹರಿಸಲು ಅನುಭವೀ ತಜ್ಞರ ಬೆಂಬಲವಿದ್ದುದರಿಂದ ನಿಮ್ಮ ಸರಕು ಬೇಕೇಬೇಕು.

ಪೃಥ್ವೀ ಕಂಪೆನಿಯು ಮೇಲಿನ ಸಮಸ್ಯೆಗಳನ್ನು ಬಗೆಹರಿಸಲಿ.
ಪೃಥ್ವಿ ಇನ್ಶೂರೆನ್ಸ್ ಕೋ., ಲಿಮಿಟೆಡ್,
ಪ್ರಧಾನ ಕಾರ್ಯಾಲಯ, 12 ಅಂಗಪ್ಪ ನಾಯಕ್ ಸ್ಟ್ರೀಟ್; ಮದ್ರಾಸು 1
The Prithvi Insurance Co., Ltd,
H. O. 12, Angappa Naick St; Madras, 1.

ಲೋಕದ 9ನೇ ಆಶ್ಚರ್ಯ!
ಅಪೂರ್ವ ಸಂದರ್ಭ!

ಎಲ್ಲಾ ತರದ ಕಣ್ಣಿನ ಅಸ್ವಸ್ಥ (ಕಣ್ಣಿನ ಹೂ ಸಮೇತ)ಗಳನ್ನು ಕಣ್ಣಿಗೆ ಯಾವ ತರದ ಔಷಧವನ್ನೂ ಹಾಕದೆ ಕೇವಲ ಕುಡಿಯಲಿಕ್ಕೆ ಔಷಧಕೊಟ್ಟು ಖಾತ್ರಿ ಗುಣಪಡಿಸಲಾಗುವುದು.

ನೇಸ್ಯ, ಹೃದ್ರೋಗ, ಕ್ಷಯ, ಪಕ್ಷವಾತ, ರಕ್ತದ ಒತ್ತಾಟ, ಮೂತ್ರಪಿಂಡದ ದೋಷ, ನಾಲಗೆಯ ಮೂಲದಲ್ಲಾಗುವ ಮಾಂಸಗ್ರಂಥಿ (ಟೋನ್ಸಿಲ್ಸ್) ಮೊದಲಾದ ಘನ ರೋಗಗಳನ್ನು ಕೂಡ ಬರೇ ಸಿಹಿಮದ್ದುಗಳಿಂದಲೇ ಖಂಡಿತ ಶಮನಗೊಳಿಸಲಾಗುವುದು.

ಪ್ರತಿದಿನ ಬೆಳಗ್ಗೆ ಕಲ್ಯಾಣಪುರ ಪೊಳಲಿಬದಿಯ ಮಾಳಿಗೆಯಲ್ಲಿಯೂ ಮಧ್ಯಾಹ್ನದ ನಂತರ ಉಡುಪಿ ಕೋರ್ಟರೋಡಿನ ನಮ್ಮ ಆಫೀಸಿನಲ್ಲಿಯೂ ರೋಗಿಗಳು ಭೇಟಿಯಾಗಬಹುದು.

The Eye Clinic.
Court Road, opp: Police Stat.
UDIPI, S K

ಉಪಾಧ್ಯಾಯಿನಿ ಬೇಕು

ಕುಕ್ಕಿಕಟ್ಟೆ ಬಾಲಿಕಾ ಪಾಠಶಾಲೆಗೆ ಹಾಯರ್ ಅಥವಾ ಸೆಕೆಂಡ್ರಿ ಗ್ರೇಡ್ ತರಬೇತಾದ ಉಪಾಧ್ಯಾಯಿನಿಯರು ಬೇಕಾಗಿದ್ದಾರೆ. ಉಳಿದು ಕೊಳ್ಳಲಿಕ್ಕೆ ಬೇಕಾದಲ್ಲಿ ತಕ್ಕ ವ್ಯವಸ್ಥೆ ಮಾಡಲಾಗುವುದು.

ಕೆ. ಗಿರಿಯಣ್ಣ ಶೆಟ್ಟಿ
ಮೆನೇಜರ್,
ಬಡಗಬೆಟ್ಟು ಕುಕ್ಕಿಕಟ್ಟೆ ಬಾಲಿಕಾ ಪಾಠಶಾಲೆ
ಉಡುಪಿ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚ ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ,

ಕಲ್ಯಾಂಜಿ ಹ್ಯಾಸಾ ಚಾರ್ಯ.
ರಥಬೀದಿ, ಉಡುಪಿ.

ಮದ್ರಾಸು

ಮದ್ರಾಸು ಕರ್ನಾಟಕ ಸೇವಾ ಸಂಘ—ಈ ಸಂಘದ ಆಶ್ರಯದಲ್ಲಿ 16-11-47ರಲ್ಲಿ "ರಾನಡೇ ಹಾಲ್"ನಲ್ಲಿ "ಕನ್ನಡದ ಇಂದಿನ ಸಮಸ್ಯೆಗಳು" ಎಂಬ ವಿಷಯವಾಗಿ ಶ್ರೀ॥ ರಾಜಸೇವಾ ಪ್ರಸಕ್ತ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಎಂ. ಎ. ಅವರು ದೀರ್ಘ ಭಾಷಣವಿತ್ತರು. ಶ್ರೀಮಾನ್ ಬಿ. ಟಿ. ಸುಂದರರಾಜನ್ ಬಿ. ಎ. ಬಿ. ಎಲ್. ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮಾನ್ ಎಂ. ಮರಿಯಪ್ಪ ಭಟ್ ಎಂ. ಎ. ಎಲ್. ಟಿ. ಅವರು ಭಾಷಣಕಾರರ ಪರಿಚಯ ಮಾಡಿಕೊಟ್ಟರು. ಕಾರ್ಯದರ್ಶಿಗಳು ಸಂಘವು ನಡೆಸುತ್ತಿರುವ ಮತ್ತು ನಡೆಸಲಿರುವ ಚಟುವಟಿಕೆಗಳಿಗೆ ಎಲ್ಲರ ಸಹಾಯಗಳನ್ನು ಕೋರಿದರು. ಎಲ್ಲರಿಗೂ ಧನ್ಯವಾದಗಳನ್ನಿತ್ತರು. ಶ್ರೀಮಾನ್ ಜಿ. ಎಸ್. ಮೂರ್ತಿ ಅವರು ನೂರು ರುಪ್ಯಾಗಳನ್ನು ಕೊಟ್ಟು ಸಂಘದ ಪೋಷಕರಾದುದಲ್ಲದೆ ಸಂಘದ ಸಹಾಯಾರ್ಥ ಒಂದು ಉತ್ತಮ ನಾಟಕವಾಡಿಸಬೇಕೆಂದೂ ಆ ಬಗ್ಗೆ ಸಾವಿರ ರುಪ್ಯಾಗಳ ವರೆಗೆ ಖರ್ಚಾದರೂ ತಾನು ಕೊಡುವುದಾಗಿ ವಾಗ್ದಾನ ಮಾಡಿರುತ್ತಾರೆ.

ಮದರಾಸು ಕ್ರಿಶ್ಚನ್ ಕಾಲೇಜಿನ ಕರ್ನಾಟಕ ಸಂಘದ ಪ್ರಥಮ ಸಭೆಯೂ ಉದ್ಘಾಟನಾ ಸಮಾರಂಭವೂ ಅಕ್ಟೋಬರ ತಾ 27ನೇ ಸೋಮವಾರ ಸಂತಥಾಮಸ್ ಭವನದಲ್ಲಿ ಶ್ರೀ ನರಸಿಂಗರಾಯರು M. A L. T. ಇವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರವೇರಿತು. ಮದರಾಸು ವಿಶ್ವವಿದ್ಯಾಲಯದ ಮುಖ್ಯಾಧಿಕಾರಿಗಳಾದ ಶ್ರೀ. ಮರಿಯಪ್ಪ ಭಟ್ಟ M.A. L T. ಇವರು ಮುಖ್ಯ ಅತಿಥಿಗಳಾಗಿದ್ದರು. ಲಘು ಉಪಹಾರವಾದ ಬಳಿಕ ಮುಖ್ಯ ಅತಿಥಿಗಳು ಕನ್ನಡಿಗರ ಕರ್ತವ್ಯವನ್ನು ತುಸುವಾಗಿ ವಿವರಿಸಿ, ಮತ್ತೆ ಕನ್ನಡದ ಅಮೂಲ್ಯವಾದ ಸುಭಾಷಿತಗಳ ಕುರಿತು ಸೋದಾಹರಣವಾಗಿಯೂ ರಸವತ್ತಾಗಿಯೂ ಭಾಷಣಮಾಡಿದರು. ಅಧ್ಯಕ್ಷರು ತಾವೂ ಕೆಲ ಕಾಲ ಮಾತಾಡಿದರು. ಕಾರ್ಯದರ್ಶಿ ಶ್ರೀ. ಹರಿದಾಸ ಬಲ್ಲಾಳರು ಧನ್ಯವಾದವನ್ನರ್ಪಿಸಿದರು.

ನೋಟೀಸು

ಉಡುಪಿ ತಾಲ್ಲೂಕು ಮೂಡಬೆಟ್ಟು ಗ್ರಾಮದ ಹೊಸಮನೆ ಕಾವು ಸೆಟ್ಟಿರ ಮಗಳು ಹೇರೂರು ಗ್ರಾಮದ ಪಡುಮನೆಯಲ್ಲಿರುವ ಸರಸು ಸೆಟ್ಟಿಯು ಯಾವತ್ತು ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ,

ನಮ್ಮ ಕುಟುಂಬದ ಸಮಷ್ಟಿ ಹಕ್ಕಿನ ಆಸ್ತಿಗಳನ್ನು ನಮ್ಮ ಪೈಕಿ ನನ್ನ ತಾಯಿ ಸದ್ರೀ ಕಾವು ಸೆಟ್ಟಿರು ಕುಟುಂಬದ ಯಜಮಾನ್ತಿಯಾಗಿ ಆಡಳಿತೆ ನಡಿಸಿ ಅನುಭವಿಸಿ ಬರುತ್ತಾರೆ. ನಮ್ಮ ಕುಟುಂಬದಿಂದ ಯಾವನಿಗೆ ಯಾವ ವಿಧದಿಂದಲೂ ಯಾರಿಗೂ ಎಷ್ಟನ್ನಾದರೂ ಸಾಲಕಲುವಂತಾದ್ದಿಲ್ಲ. ಮತ್ತು ಈ ನಮ್ಮ ಕುಟುಂಬಕ್ಕೆ ಸಾಲಮಾಡುವ ಆಗತ್ಯವಿರುವದೂ ಇಲ್ಲ-ಹೀಗಿರುತ್ತಾ ಸದ್ರೀ ನನ್ನ ತಾಯಿಯು ತನ್ನ ಮಗ ಗೋಪಾಲ ಸೆಟ್ಟಿಯ ದುರ್ಬೋಧನೆಗೆ ಒಳಪಟ್ಟು ಕಳೆದ ಎಂಟು ವರುಷದ ಲಾಗಾಯ್ತು ನನ್ನ ವ ನನ್ನ ... ಜೀವನ ವಗೈರೆ ನಡಿಸದೆಯೂ, ಈ ಕೊಡದೆಯೂ ಕುಟುಂಬದ ಪೂರಾ ಹುಟ್ಟುವಳಿಯನ್ನು ಅವರ ಸ್ವಂತಕ್ಕೆ ದುರುಪಯೋಗ ಪಡಿಸುವದಲ್ಲದೆ, ನನ್ನ ಕಿರಿ ಸಹೋದರ ಗೋಪಾಲ ಸೆಟ್ಟಿಯು ಕುಟುಂಬಕ್ಕೆ ಮೋಸ ಮತ್ತು ಕಷ್ಟ ನಷ್ಟಗಳಿಗೆ ಗುರಿಯಾಗುವಂತೆ ಕೇವಲ ದುರ್ವ್ಯವಹರಣೆಗಳನ್ನು ನಡಿಸುವ ಇರಾದೆಯಿಂದ ತನ್ನ ತಾಯಿಯಾದ ಸದ್ರಿ ಕಾವು ಸೆಟ್ಟಿಯರಿಂದ ಯಜಮಾನ್ತಿ ಎಂಬ ಧೋರಣೆಯ ಮೇಲೆ ನೋಟುಗಳಿಂದಲೂ ಸ್ಥಿರಾಸ್ತಿಗಳ ಅಡವಿನಿಂದಲೂ ಸಾಲಗಳು ಪಡೆದು ಆ ಬಗ್ಗೆ ನೋಟುಗಳು ದಸ್ತಾವೇಜುಗಳು ವಗೈರೆ ಬರಕೊಡಿಸುವ ಇರಾದೆಯಲ್ಲಿರುವದಾಗಿ ನಾನು ತಿಳಿಯುತ್ತೇನೆ—ನಮ್ಮ ಕುಟುಂಬದ ಪರವಾಗಿ ಸದ್ರಿ ಕಾವು ಸೆಟ್ಟಿಯಂಗೆ ಯಾರೂ ಯಾವತರದಿಂದ ಎಷ್ಟನ್ನಾದರೂ ಸಾಲ ಕೊಡಕೂಡದು— ಒಂದುವೇಳೆ ಸದ್ರಿ ಕಾವು ಸೆಟ್ಟಿಯು ಎಷ್ಟನ್ನಾದ್ರು ಸಾಲಪಡದಲ್ಲಿ ಅಂಥಾ ಸಾಲಗಳು ನಮ್ಮ ಕುಟುಂಬದ ಮೇಲಾಗಲೀ— ಕುಟುಂಬದ ಸ್ಥಿರ ಚರ ಸೊತ್ತುಗಳು—ಗೇಣಿ, ಹುಟ್ಟುವಳಿ, ಫಲ ವೈರು. ಮುಂತಾದವುಗಳ ಮೇಲಾಗಲೀ ಸರ್ವಥಾ ಹೊಣೆಯಾಗಲಾರದು.

ಸರಸು ಶೆಡ್ತಿ ರುಜು.

ತಾ. 26—10—47.

ಸ್ವೀಕಾರ ವಿಮರ್ಶೆ

೧ **'ಕದಂಬ'**—ಹನ್ನೆರಡು ಕತೆಗಳ ಸಂಗ್ರಹ. ಕತೆಗಾರ್ತಿ-'ಗಿರಿಬಾಲೆ' (ಶ್ರೀಮತಿ ಸರಸ್ವತೀಬಾಯಿ ರಾಜವಾಡೆ) ಕಿರಿಯರ ಪ್ರಪಂಚದ 'ತೊದಲ್ನುಡಿ ಗ್ರಂಥಮಾಲೆ'ಯ ೨೬ನೆಯ ನುಡಿ. ವಿಕ್ರಯಾಧಿಕಾರಿಗಳು 'ನವಭಾರತ ಪುಸ್ತಕ ಭಂಡಾರ' ಉಡುಪಿ. ೧೩೨ ಪುಟಗಳ ಪುಸ್ತಕ. ಬೆಲೆ ರೂ. ೧-೪-೦. 'ಕತೆಗಳು ಸಾಕಪ್ಪಾ!' ಎನ್ನುವಷ್ಟು ಚಿಕ್ಕಕತೆಗಳ ಕ್ಷೇತ್ರದಲ್ಲಿ ಬೆಳೆಗಿಂತ ಕಳೆಗಳೇ ಹೆಚ್ಚಾಗಿ ಕಾಣತೊಡಗಿರುವ ಈ ದಿನಗಳಲ್ಲಿಯೂ ಇಂತಹ ಕಥಾ ಸಂಗ್ರಹವು ಬೇಕೆನಿಸುವಷ್ಟು ಒಳ್ಳೆಯದಿದೆ. ಮೇಲಾಗಿ, ಇಂದಿನ ಸಾಹಿತ್ಯ ನಿರ್ಮಾಣದಲ್ಲಿ ಗಂಡಸಿನ ಕೈಯೇ ಮೇಲಾಗಿ ಹೆಂಗಸಿನ ಮನೋಭಾವವು ಗಂಡಸಿನ ಕಲ್ಪನೆ ಕಂಡಂತೆಯಲ್ಲದೆ ಹೆಂಗಸಿನ ಅಂತರಂಗವು ಕಾಣುವಂತೆ ಚಿತ್ರಿತವಾಗದಿರಲು ಅವಕಾಶ ಹೆಚ್ಚು. ಇದರಿಂದಾಗಿ ಸಮಾಜದ ಅರ್ಧಾಂಗವಾದ ಹೆಂಗಸಿನ ಬಾಳಿನ ಆಶೆ ಆಕಾಂಕ್ಷೆಗಳ, ಬೇನೆ ಬೇಸರಿಕೆಗಳ ಸೂಕ್ಷ್ಮ ವಿಚಾರಗಳು ಕಾಣಸಿಗದ ಸಾಹಿತ್ಯವು ಜನಜೀವನದ ನಿಜವಾದ ದರ್ಪಣವಾಗಲಾರದು. ಈ ನ್ಯೂನತೆಗಳನ್ನು ನಿವಾರಿಸಲು ಲೇಖಕಿಯರೇ ಮುಂಬರಬೇಕು. 'ಗಿರಿಬಾಲೆ' ಈ ಭಾಗದಲ್ಲಿ ಒಳ್ಳೆಯ ಕೆಲಸ ಮಾಡುತಿದ್ದಾರೆ. ಪ್ರಸ್ತುತ ಸಂಗ್ರಹದ 'ಸಂದೇಶ', 'ತಪಸ್ವಿನಿ', 'ಶಾಂತಿ, ಶಾಂತಿ!', 'ಭಗ್ನಹೃದಯಿ', 'ಆ ಭಿಕ್ಷುಕಿ', 'ಪಥಭ್ರಾಂತ ಪಥಿಕ', 'ಅಕ್ಕ' ಇವು ಹೆಂಗಸಿನ ಮನೋಧರ್ಮದ ಸೂಕ್ಷ್ಮ ತಂತುಗಳನ್ನು ಮಾರ್ಮಿಕವಾಗಿ ಚಿತ್ರಿಸಿವೆ. 'ಆರ್ಥಮಂದ', 'ಅವಳ ಉದ್ಧಾರ', 'ಪ್ರಪಂಚ' ಇವು ನಿಷ್ಕರುಣ ಸಮಾಜದಿಂದಾಗಿ ಬಡಜೀವಿಯ ಬಾಳು ಗೋಳಿಗೀಡಾಗಿರುವ ಪರಿಯನ್ನು ಕನಿಕರ ಹುಟ್ಟುವಂತೆ ಹೇಳುತ್ತವೆ. ಓದಿದ ಮರುಕ್ಷಣವೇ ಮರೆತುಹೋಗುವ ಕತೆಗಳಲ್ಲ ಇವು- ಮರಳಿ ಮರಳಿ ಮನಸ್ಸಿನಲ್ಲಿ ಸುಳಿದು ಉಳಿದು ಹಿತವಾದ ಪರಿಣಾಮವನ್ನುಂಟುಮಾಡುವ ಈ ಕಥಾ ಸಂಗ್ರಹವನ್ನು ವಾಚಕಲೋಕವು ಮೆಚ್ಚದಿರದೆಂದು ನಂಬುಗೆ.

೨ **'ಯುಗಪುರುಷ'**—ಹೊಸ ಮಾಸಪತ್ರಿಕೆ, ಮೊದಲನೆಯ ಸಂಚಿಕೆ. ಕ್ರೌನ್ ¼ ಆಕಾರದ ೩೨ ಪುಟಗಳು. ವಾರ್ಷಿಕ ಚಂದಾ ರೂ 3, ಬಿಡಿಪ್ರತಿಗೆ ೪ ಆಣೆ. ಪ್ರಧಾನ ಸಂಪಾದಕರು ಶ್ರೀ. ಬನ್ನಂಜೆ ರಾಮಾಚಾರ್, ವಿದ್ವಾನ್. ಉಪಸಂಪಾದಕರು ಶ್ರೀಗಳಾದ ಕೆ. ಅನಂತ ಪದ್ಮನಾಭ ಉಡುಪ ಮತ್ತು ಎಸ್ ಎಲ್. ನಾರಾಯಣ ಭಟ್. ಉಡುಪಿಯಿಂದ ಈ ಉತ್ಸಾಹೀ ತ್ರಿಮೂರ್ತಿಗಳಿಂದ ಹೊರಡುವ ಈ ಮಾಸಪತ್ರಿಕೆಯು 'ಜನತೆಗೆ ಉತ್ತಮ ಸಂಸ್ಕಾರವನ್ನು ಒದಗಿಸುವ, ವಿಶ್ವದ ಪರಿಚಯವನ್ನು ಮಾಡಿಸುವ, ಒಳ್ಳೆಯ ಅಭಿರುಚಿಯನ್ನು ಕೆರಳಿಸಿ ಮನಸನ್ನು ಅರಳಿಸುವ, ನಾಳೆಯ ನಾಗರಿಕರಿಗೆ ದೊಡ್ಡ ಬಾಳನ್ನು ಬಾಳಲು ಪ್ರಬೋಧಿಸುವ ವಿಚಾರ'ಗಳನ್ನು ಕೊಡಬಲ್ಲಂತಹ ಉತ್ತಮ ಲೇಖನ ಕತೆ ಕವಿತೆಗಳಿಂದ ಜನತಾ ಸೇವೆಯನ್ನು ಮಾಡಬೇಕೆ'ಂಬ ಧ್ಯೇಯವನ್ನಿಟ್ಟುಕೊಂಡಿದೆ. ಆ ಗುರಿಯನ್ನು ಸಾಧಿಸೇವೆಂಬ ನಂಬಿಗೆಯುಂಟಾಗುವಷ್ಟು ಈ ಮೊದಲ ಸಂಚಿಕೆಯೇ ಚೆನ್ನಾಗಿದೆ ಎನ್ನಲು ತುಂಬ ಸಂತೋಷ. ನೋಡಿದೊಡನೆ ಕೊಂಡುಕೊಳ್ಳೋಣವೆನಿಸುವಷ್ಟು ಬಗೆ ಸೆಳೆವ ಚಂದದ ಹೊರಮೈ. ತೆರೆದೊಡನೆ ಓದೋಣವೆನಿಸುವ ಕುತೂಹಲವೆಬ್ಬಿಸುವಷ್ಟು ಕನ್ನಡನಾಡಿನ ಸುಪ್ರಸಿದ್ಧ ವ್ಯಕ್ತಿಗಳ ಲೇಖನ ಮಾಲೆ- ಶ್ರೀಗಳಾದ ಕಡೆಂಗೋಡ್ಲು ಶಂಕರ ಭಟ್, ಶಿವರಾಮ ಕಾರಂತ್, ಮಂಜೇಶ್ವರ ಗೋವಿಂದ ಪೈ, ಎಚ್. ಎಸ್. ಪಾಟೀಲ್, ಪ್ರೊ. ಎಸ್. ಎನ್. ಸಿ. ರಾವ್, ಪ್ರೊ. ಕೆ. ಎಸ್. ಸನಜನರ್, ಟಿ. ಎ. ಪೈ, ಎಫ್. ಆರ್. ಇ. ಎಸ್, ಮುಂತಾದ ಹಿರಿಯ ಪ್ರವೀಣರು ಬರೆದಿರುತ್ತಾರೆ. ಎಲ್ಲಿಯೂ 'ಜಿಗುಟ'ವಾಗಿರಬಾರದೆಂದೇನೋ ಮೈಸೂರ ಶ್ರೀಮತಿ ಸುಬ್ಬಮ್ಮ ('ವಾಣಿ') ಇವರ ಚಿಕ್ಕ ಕತೆಯೊಂದು ಸೇರಿಕೊಂಡಿದೆ. 'ಯುಗಪುರುಷ'ವು ಇನ್ನೂ ತುಸು ಹೆಚ್ಚು 'ಲಘು' ಬರವಣಿಗೆಗಳನ್ನು ಬೆರಸಿಕೊಂಡು ವರುಷಾಂತ್ಯದೊಳಗೆ ೪೦ ಪುಟಗಳ ಸರ್ವಾದರಣೀಯ ಆದರ್ಶ ಮಾಸಿಕವಾಗಿ ಮೆರೆಯಲೆಂದು ಶುಭಾಶಂಸೆ.

'ಕೊರಡ್ಕಲ್ಲು'

ರಮಾನಾಥ—ಸ್ವರ್ಗೀಯ ಪ್ರೇಮಚಂದರ "ಗಬನ್" ಕಾದಂಬರಿಯ ಅನುವಾದ ಅನುವಾದಕರು: ಶ್ರೀ. ಕು. ವಿ. ಹರಿದಾಸ ಭಟ್ಟರು. ಪ್ರಕಾಶಕರು: ಬಾಲಚಂದ್ರ ಘಾಟೀಕರ, ಸಮಾಜ ಪುಸ್ತಕಾಲಯ, ಧಾರವಾಡ. ಪುಟಗಳು: ೪೦೬. ಬೆಲೆ. ರೂ. ೩.

ಪ್ರತಿಭಾ ಗ್ರಂಥಮಾಲೆ, ಧಾರವಾಡ-ಇದರ ಎರಡನೆಯ ವರ್ಷದ ೪ನೆಯ ಕಿರಣವಿದು. ಸಾಹಿತ್ಯದಲ್ಲಿ ಅನುವಾದಿತ ಕೃತಿಗಳ ಸ್ಥಾನದ ಕುರಿತು ಭಿನ್ನಾಭಿಪ್ರಾಯಗಳಿವೆ. ಆದರೆ, ಮೂರನೆಯ ದರ್ಜೆಯ ಸ್ವತಂತ್ರ ಕೃತಿಗಿಂತ ಮೊದಲನೆ ದರ್ಜೆಯ ಅನ್ಯಭಾಷೆಯ ಅನುವಾದ ಮೇಲೆಂದು ನಮಗೆ ತೋರುತ್ತದೆ. ಆ ದೃಷ್ಟಿಯಿಂದ, ಹಿಂದೀ ಸಾಹಿತ್ಯದಲ್ಲಿ 'ಕಾದಂಬರಿ ಸಾಮ್ರಾಟ'ರೆಂದು ಹೆಸರಾದ ಸ್ವರ್ಗೀಯ ಪ್ರೇಮಚಂದ್ರರ ಉತ್ಕೃಷ್ಟ ಕಾದಂಬರಿಗಳಲ್ಲೊಂದರ ಅನುವಾದವಿದನ್ನು ಆತ್ಮಾದರದಿಂದ ಸ್ವಾಗತಿಸುತ್ತೇವೆ. ಸಮಾಜದ ಲೋಪ-ದೋಷಗಳನ್ನು ಎತ್ತಿ ತೋರಿಸುವ, ವ್ಯಕ್ತಿಯ ಭಾವೋದ್ರೇಕಗಳ ಏರಿಳಿತಗಳನ್ನು ವರ್ಣಿಸುವ ಕನ್ನಡಿಯಂತಿದೆ 'ರಮಾನಾಥ'. ಕನ್ನಡ-ಹಿಂದೀ ಇವೆರಡೂ ಭಾಷೆಗಳಲ್ಲಿ ಈಗಾಗಲೇ ತನ್ನ ಯೋಗ್ಯತೆಯನ್ನು ಸ್ಥಾಪಿಸಿರುವ ಶ್ರೀ. ಹರಿದಾಸ ಭಟ್ಟರು ಸೊಗಸಾಗಿ-ಸರಲವಾಗಿ-ಅದನ್ನು ಅನುವಾದಿಸಿರುವುದು ಸ್ತುತ್ಯ. ಪ್ರೇಮಚಂದರ ಮತ್ತೆ ಕೆಲವು ಉತ್ಕೃಷ್ಟ ಕಾದಂಬರಿಗಳನ್ನು ಕನ್ನಡಿಸಬೇಕೆಂಬ ಅವರ ಮಹತ್ವಾಕಾಂಕ್ಷೆ ಬೇಗನೆ ಈಡೇರಲೆಂದು ಬಯಸುತ್ತೇವೆ. ಪ್ರಕೃತ ಕಾದಂಬರಿಯ ಎರಡನೆಯ ಮುದ್ರಣವಾದರೂ ಸದ್ಯದಲ್ಲೇ, ಉತ್ತಮ ಕಾಗದದ ಮೇಲೆ ಆಕರ್ಷಣೀಯವಾಗಿ ಹೊರಬರುವುದೆಂದು ನಿರೀಕ್ಷಿಸುತ್ತೇವೆ.

ಸ್ವಾಮಿ ದಯಾನಂದರ ಸಂದೇಶ—ಲೇಖಕರು: ಎಮ್. ಚಂದ್ರೇಶ್ವರರು, ಮುಂಬಯಿ. ಪ್ರಕಾಶಕರು: ಬಿ. ಲಕ್ಷ್ಮಣ ದೇವ ವಿದ್ಯಾರ್ಥಿ, ಮಂಗಳೂರು. ಪುಟಗಳು ೩೦. ಬೆಲೆ: ಆರಾಣೆ.

ಈ ಕಿರಿಯ ಹೊತ್ತಗೆಯಲ್ಲಿ ಆರ್ಯಸಮಾಜದ ಮೂಲ ಪುರುಷರಾದ ಸ್ವಾಮಿ ದಯಾನಂದರ ಅಮರ ಸಂದೇಶದ ಆಧಾರ ತತ್ವಗಳು ಸರಲವಾಗಿ- ಸಂಕ್ಷೇಪವಾಗಿ-ವಿವರಿಸಲ್ಪಟ್ಟಿವೆಯಲ್ಲದೆ, ಕವಿತಾ ರೂಪದಲ್ಲಿಯೂ ಸಂಗ್ರಹವಾಗಿವೆ. ಧಾರ್ಮಿಕ ಪ್ರಚಾರಾರ್ಥವಾಗಿ ಇದು ಹೊರಟಿರುವುದು ಸ್ತುತ್ಯವಾದುದು, ಬೆಲೆ ಸ್ವಲ್ಪ ಹೆಚ್ಚಾದುದರಿಂದ ಪ್ರಕಾಶಕರ ಉದ್ದೇಶ ನೆರವೇರುವ ವಿಚಾರದಲ್ಲಿ ನಮಗೆ ಸಂದೇಹವಿದೆ. ಇಂತಹ ಪ್ರಚಾರಗಳನ್ನು ಧರ್ಮಾರ್ಥ ಹಂಚಲಿಕ್ಕಾಗುವಂತೆ ಉದಾರ ಹೃದಯಿಗಳು, ಪ್ರಕಾಶಕರಿಗೆ ಸಹಾಯವನ್ನು ನೀಡಲೆಂದು ಹಾರೈಸುತ್ತೇವೆ.

ಅಭಿನಯ ಗೀತೆಗಳು—(ಭಾಗ ೧) ಲೇಖಕರು: ಶ್ರೀ ಕೆ. ದೊಡ್ಡಣ್ಣ ಶೆಟ್ಟರು. ಪುಟಗಳು: ೩೨, ಪ್ರಕಾಶಕರು: ಹಿಂದೀ ಪುಸ್ತಕಭಂಡಾರ, ಉಡುಪಿ. ಬೆಲೆ: ೪ ಆಣೆ.

ಕನ್ನಡದಲ್ಲಿ "ಶಿಶುಸಾಹಿತ್ಯ"ವು ಇನ್ನೂ ಶೈಶವಾವಸ್ಥೆಯಲ್ಲೇ ಇರುವುದು ಶೋಚನೀಯ. ಅದಕ್ಕೆ ತನ್ನ ಕೈಲಾದ ಕಾಣಿಕೆಯನ್ನು ಸಲ್ಲಿಸಬೇಕೆಂದು, ಶ್ರೀ. ಶೆಟ್ಟರು ೧ರಿಂದ ೩ನೆಯ ದರ್ಜೆಯವರೆಗಿನ ಮಕ್ಕಳ ಹಾಡುವಿಕೆ, ಅಭಿನಯಗಳಿಗೆ ತಕ್ಕುದಾದ ೨೭ ಚಿಕ್ಕ ಗೀತೆಗಳನ್ನು ಇದರಲ್ಲಿ ಪೋಣಿಸಿದ್ದಾರೆ. ಗೀತೆಗಳಲ್ಲಿ, ಅಲ್ಲಲ್ಲಿ, ಅನುಕರಣೆಯ ಛಾಯೆ ಒಡಮೂಡಿದೆಯಾದರೂ, ಪ್ರಥಮ ಪ್ರಯತ್ನವಿದು ಸ್ತುತ್ಯ. ೨ನೆಯ ಭಾಗದಲ್ಲಿ ಇದಕ್ಕಿಂತಲೂ ಉತ್ತಮವಾದ ಗೀತೆಗಳನ್ನು ನಿರೀಕ್ಷಿಸುತಿದ್ದೇವೆ. ಮಕ್ಕಳ ಕೈಯಲ್ಲಿ ನಲಿದಾಡಬೇಕೆಂಬ ಉದ್ದೇಶದಿಂದ ಬರೆಯಲ್ಪಡುವ ಪುಸ್ತಕಗಳು ತನ್ನ ಮುದ್ರಣ, ಚಿತ್ರಾಂಗಗಳಲ್ಲಿಯೂ ಮನೋಹರವಾಗಿರಬೇಕೆಂಬುದನ್ನು ಲೇಖಕ—ಪ್ರಕಾಶಕರು ತಿಳಿದಿರಲೆಂದು ನಮ್ಮ ಸಲಹೆ.

ಕೆ. ವಿ. ಎಸ್.

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು

ಮನೆಮದ್ದು	2 0 0	ನಗೆನೋಟಗಳು	0 14 0	ಪ್ರತೀಕಾರ	0 6 0
ಮಧುವನ	3 0 0	ನಾಡ ಕತೆಗಳು	0 3 0	ಪ್ರೇಮಪ್ರಸಾದ	0 8 0
ಕವಿತಾಕಾಮಿನಿ	2 0 0	ಕುಶಲವ	0 6 0	ಆರೋಗ್ಯಪ್ರತಾಪ	0 12 0
ಕದಂಬ	1 4 0	ಸುಲಭದಲ್ಲಿ ಇಂಗ್ಲಿಷ್	1 8 0	ಅಂತರಂಗದ ಕತೆಗಳು	0 12 0
ಜೀವನಸಂಗ್ರಾಮ	1 8 0	ವ್ಯಭಿಚಾರಿಣಿ ಯಾರು	1 0 0	ಶಂಭುಕವಧ	0 2 0
ಸಂಶಯ ಪಿಶಾಚಿ	0 8 0	ಹೆಂಡ್ತಿ ಗಂಡನಾದರೆ	0 4 0	ವೀರಭೂಮಿ	0 2 0
ಕಾವ್ಯಸಾಮ್ರಾಜ್ಯ	1 4 0	ಸನ್ಯಾಸಿಯ ಸೋಗಿನಲ್ಲಿ	0 8 0	ಧರ್ಮಸಂಕಟ	0 4 0
ಪ್ರೇಮವಿಜಯ	1 0 0	ಭಾರತೀಯ ಕತೆಗಳು	0 14 0	ವಿವಾಹಬಾಹು	0 10 0
ಪುರುಷವಧು	0 4 0	ಮೂರು ಪ್ರಹಸನಗಳು	0 14 0	ಸರಸ್ವತಿ	0 12 0
ಸಂವಾದೀಪ	0 14 0	ಅನ್ನದೇವರ ಕತೆಗಳು	1 0 0	ಸ್ವತಂತ್ರ ಜೀವನೋಪಾಯ	0 3 0
ದೇಶಭಕ್ತ	1 4 0	ಭಾರತದಲ್ಲಿ ಜಾತಿಭೇದ	1 0 0	ವಿಷ್ಣುವಿನ ನವಾಪರಾಧಗಳು	0 12 0
ರಂಗಭೂಮಿ	0 8 0	ಪಂಚಾರತಿ	0 6 0	ಅಕುತಿ ಇತ್ಯಾದಿ ಕತೆಗಳು	0 12 0
ಸೇವಾಪಥ	0 8 0	ಚಿಗುರು	0 6 0		
ನಾರೀಹೃದಯ	0 14 0	ಲೋಪಾಮುದ್ರೆ	0 6 0		
ಪ್ರಕಾಶ	2 4 0				

ನವಭಾರತ ಪುಸ್ತಕ ಭಂಡಾರ, ಉಡುಪಿ

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 621/47

ವಾದಿ. ನಾಗಯ್ಯ ಸೆಟ್ಟಿ.

ಪ್ರತಿವಾದಿ, ರಾಮಯ್ಯ ಸೆಟ್ಟಿ. ಹೊಸಮುಂದ ನಾಗಪ್ಪ ಸೆಟ್ರ ಅಳಿಯ, ಕುಂದಾಪುರ ತಾಲ್ಲೂಕು ಆರೂರು ಗ್ರಾಮದ ಹೊಸಮುಂದ.

ಸದ್ರಿ ವಾದಿಗೆ ತಿಳಿಯಪಡಿಸಿದ್ದು.

ನೀವು ಸದ್ರಿ ವಾದಿಗೆ ಬರಸಿಕೊಟ್ಟ ಡಿಮಾಂಡು ನೋಟಿನ ಬಾಬ್ತು ಬಾಕಿ ಬಡ್ಡಿ ಆನೇಜು ರೂಪಾಯಿ 59-6-0ನ್ನು ವಸೂಲು ಮಾಡಿಕೊಳ್ಳುವರೇ ಸದ್ರಿ ವಾದಿಯು ನಿಮ್ಮ ಮೇಲೆ ದಾಖಲ್ಲು ಮಾಡಿದ ಮೇಲಿನ ದಾವೆ, ತಾರೀಖು 1-12-47ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮ ಉಜ್ರದಾರಿ ಇದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

Y. Manjaya Shetty.

Advocate for Pltf.

ತಾರೀಖು 21-11-47

ಮೊಕ್ಕಾಂ: ಕುಂದಾಪುರ

ದಕ್ಷಿಣ ಕನ್ನಡ

ಮೂವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಲನ ಕಾಸರಗೋಡು.

ಇನ್ನೂರು ವರ್ಷಕ್ಕಿಂತಲೂ ಮಿಕ್ಕಿ ಪರರಾಳ್ವಿಕೆಗೆ ಒಳಗಾಗಿದ್ದ ಭಾರತವು ಆಗಸ್ಟ್ ೧೫ ರಿಂದ ಸ್ವತಂತ್ರವಾಯಿತು. ಆದರೂ ಹಲವು ಹಂಚಾಗಿ ಹೋದ ಕರ್ನಾಟಕವು ೧೯ ಆಡಳಿತೆಗಳಿಂದ ಆಳಲ್ಪಡುತ್ತದೆ. ಕರ್ನಾಟಕದ ಜನತೆಯು ಒಂದೇ ಆಡಳಿತೆಯಿಂದ ಆಳಲ್ಪಟ್ಟು ಒಂದೇ ಪ್ರಾಂತದಲ್ಲಿ ಕೂಡಿ ಮೆರೆಯಬೇಕೆಂಬ ಕೂಗು ಅನೇಕ ವರ್ಷಗಳಿಂದ ಕೇಳಿಬರುತ್ತದೆ. ಆ ಕನಸಿನ ಕೂಗು ಇಂದು ನನಸಾಗುವ ಸಂದರ್ಭವೊದಗಿದೆ. ಈ ಸಮಯದಲ್ಲಿ ನಾಲ್ಕೂ ಮೂಲೆಗಳಿಂದಲೂ ಕರ್ನಾಟಕವನ್ನು ನುಂಗಲು ಬೇರೆನಾಡಿನ ಜನರು ಹೊಂಚು ಹಾಕುತಿದ್ದಾರೆ. ಕೇರಳದವರು ಇಡೀ ದಕ್ಷಿಣ ಕನ್ನಡವನ್ನೇ ಕೇರಳಕ್ಕೆ ಸೇರಿಸಬೇಕೆಂಬ ಆಲೋಚನೆಯಲ್ಲಿದ್ದಾರೆಂಬುದು ಸರ್ವ ವಿದಿತ ವಿಷಯವಾಗಿದೆ. ಇಂತಹ ಸಂಧಿಗ್ಧ ಸಮಯದಲ್ಲಿ ದಕ್ಷಿಣ ಕನ್ನಡ ಕೇರಳಗಳ ಗಡಿನಾಡಾದ ಕಾಸರಗೋಡಿನಲ್ಲಿ ೩೧ನೇಯ ಕನ್ನಡ ಸಾಹಿತ್ಯ ಸಮ್ಮೇಲನವನ್ನು ಜರಗಿಸುವ ಸಂದರ್ಭವೊದಗಿದ್ದು ಕನ್ನಡ ಜನತೆಯ ಭಾಗ್ಯವೆಂದೇ ಹೇಳಬೇಕು.

ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಎಮ್. ಎಲ್. ಸಿ. ಇವರು ಸ್ವಾಗತಾಧ್ಯಕ್ಷರಾಗಲು ಒಪ್ಪಿದ್ದಾರೆ. ಪ್ರಸಿದ್ಧ ಪತ್ರಿಕೋದ್ಯೋಗಿಗಳೂ, ಸುಪ್ರಸಿದ್ಧ ಸಾಹಿತಿಗಳೂ, ಮೊನ್ನೆ ತಾನೇ ನಡೆದ ಮೈಸೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ತುಂಬಾ ಕೆಲಸಗಳನ್ನು ಮಾಡಿ ಜೈಲುವಾಸವನನುಭವಿಸಿದವರೂ ಆದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದು ಕನ್ನಡಿಗರ ಭಾಗ್ಯವೇ ಸರಿ. ಈ ಮಹತ್ವದ ಸಾಹಿತ್ಯ ಸಮ್ಮೇಳನವು ಡಿಸೆಂಬರ ೨೮, ೨೯, ೩೦ರಲ್ಲಿ ಜರಗಲಿದೆ. ಈ ಬಗ್ಗೆ ಸಾಧಾರಣ ೧೦ ಸಾವಿರ ರೂಪಾಯಿ ಬೇಕೆಂದು ಅಂದಾಜು ಮಾಡಲಾಗಿದೆ, ಈಗಾಗಲೇ ಸುಮಾರು ಮೂರು ಸಾವಿರ ರೂಪಾಯಿಗಳ ಸಂಗ್ರಹವಾಗಿದೆ. ಜಿಲ್ಲೆಯ ಹಾಗೂ ಪರಊರುಗಳಲ್ಲಿರುವ ದಕ್ಷಿಣ ಕನ್ನಡಿಗರು ಈ ಸಮ್ಮೇಲನವನ್ನು ನಡೆಸುವ ಜವಾಬ್ದಾರಿಯು ತಮ್ಮದೆಂದು ನೆನಸಿಕೊಂಡು ಮುಕ್ತಹಸ್ತದಿಂದ ಧನಸಹಾಯ ಮಾಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಹಣಕೊಡುವವರನ್ನು ರೂ ೧೦೦; ೫೦; ೨೫;೧೦, ೫ ಹಾಗೆ ವಿಭಾಗಗಳಾಗಿ ಮಾಡಲಾಗಿದೆ. ಹಣ ಕಳುಹಿಸುವವರು "ಕಾರ್ಯದರ್ಶಿ, ೩೧ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಕಾಸರಗೋಡು ದ ಕ." ಈ ವಿಳಾಸಕ್ಕೆ ಕಳುಹಿಸಬಹುದು.

ಎಂ. ಉಮೇಶರಾವ್,
ಎಡ್ವೊಕೇಟ್,
ಬಿ. ಶ್ರೀಧರ ಕಕ್ಕಿಲ್ಲಾಯ,
ಎಡ್ವೊಕೇಟ್,
ಕಾರ್ಯದರ್ಶಿಗಳು,

ಹಾವಂಜೆ— ಇಲ್ಲಿಯ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಇದೇ ಮಾರ್ಗಶಿರ ಶುದ್ಧ ಚೌತಿ, ಪಂಚಮಿ, ಷಷ್ಠಿ, (ತಾ 16-12-47ರಿಂದ 18-12-47) ದಿನಗಳಲ್ಲಿ ಮಾಮೂಲು ಪ್ರಕಾರ ನಡೆಯುವ ಮಹೋತ್ಸವದೊಂದಿಗೆ ಹೊಸದಾಗಿ ಕಟ್ಟಿಸಿದ ರಥದ ಪ್ರವೇಶೋತ್ಸವವೂ ಜರಗಲಿರುವುದು. ಸರ್ವರಿಗೂ ಸುಸ್ವಾಗತವೆಂದು ಶ್ರೀದೇವರ ಆಡಳ್ತೆಮೊಕ್ತೇಸರರು ತಿಳಿಸುತ್ತಾರೆ.

ಕಾಂಞಂಗಾಡು.— ಕಾಸರಗೋಡು ತಾಲೂಕು ಆಯುರ್ವೇದ ವೈದ್ಯಸಮಾಜದ ಸಭೆಯೊಂದು ತಾ 21ರಲ್ಲಿ ಡಾ। ವಿ. ಎ. ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ತಾಲೂಕಿನ ಹಲವು ಭಾಗಗಳಿಂದ ಪ್ರಸಿದ್ಧ ವೈದ್ಯರನೇಕರು ಬಂದಿದ್ದರು. ಮದ್ಯಪಾನ ನಿರೋಧ ಕಾನೂನಿನಲ್ಲಿ ಆಯುರ್ವೇದ ಔಷಧಿಗಳಾದ 'ಆಸವ' 'ಅರಿಷ್ಟ'ಗಳನ್ನು ಮದ್ಯವೆಂದು ಸೇರಿಸಿದುದರಿಂದ ಆಯುರ್ವೇದ ವೈದ್ಯರಿಗೂ ಅವುಗಳಿಂದ ಪ್ರಯೋಜನ ಹೊಂದುವ ಅನೇಕ ರೋಗಿಗಳಿಗೂ ಬಹಳ ತೊಂದರೆಯಾಗಿರುವುದರಿಂದ ಅಂತಹ ಆಸವಾರಿಷ್ಟಗಳು ಜನಸಮುದಾಯಕ್ಕೆ ಯಾವತರದ ಹಾನಿಯನ್ನೂ ಉಂಟುಮಾಡದ, ಜನಸಾಮಾನ್ಯರು ತಯಾರು ಮಾಡಿ ಉಪಯೋಗಿಸುವ ಔಷಧಿಗಳಾಗಿರುವುದರಿಂದ ಸದ್ಯ, ಆಸವಾರಿಷ್ಟಗಳನ್ನು ಮಾದಕದ್ರವ್ಯವೆಂದು ಸರ್ವಥಾ ಪರಿಗಣಿಸಬಾರದಾಗಿಯೂ ಅಂತಹ ತಯಾರಿಸುವಿಕೆಯ ವ ಉಪಯೋಗಿಸುವಿಕೆಯ ಕುರಿತು ಮದ್ಯಪಾನ ವಿರೋಧ ಕಾನೂನಿನಲ್ಲಿ ಹಾಕಿರುವ ಪ್ರತಿಬಂಧಕವನ್ನು ತೆಗೆದು ಹಾಕಬೇಕೆಂದೂ ಸಮರ್ಥಿಸಿ ಹಲವು ವೈದ್ಯರು ಮಾತನಾಡಿದುದಲ್ಲದೆ ಸದ್ರಿ ಸಭೆಗೆ ಹಾಜರಿದ್ದ ಮಂಗಳೂರಿನಲ್ಲಿ ಪ್ರಸಿದ್ಧ ಶ್ರೀ ವೈದ್ಯಗುರು ಯಂ. ಆರ್. ಭಟ್ಟರವರು ಶ್ರೀ ನಾಮಸ ಕೊಡಿಯಾಲಬೈಲ್‌ರವರೂ ಮಲೆಯಾಳದ ಪ್ರಸಿದ್ಧವೈದ್ಯರುಗಳೂ ಅನುಮೋದನೆ ಇತ್ತುದಲ್ಲದೆ, ಸದ್ಯದಲ್ಲೇ ಕಾಸರಗೋಡು ತಾಲೂಕಿನ ವೈದ್ಯ ಸಮಾಜದ ಸಾರ್ವಜನಿಕ ಸಭೆಯೊಂದನ್ನು ಶ್ರೀಕ್ಷೇತ್ರದಲ್ಲಿ ಜರಗಿಸಿ ಈ ಕುರಿತು ಬೇಕಾದ ಚಳವಳವನ್ನು ಹೂಡಿ ಮಾನ್ಯ ಸರಕಾರಕ್ಕೆ ಈ ಕುರಿತು ಬೇಕಾದ ಮನವಿಯನ್ನು ಮಾಡಬೇಕಾಗಿ ತೀರ್ಮಾನವಾಗಿರುತ್ತದೆ. ಈ ಕಾರ್ಯಕ್ಕೆ ಆಯುರ್ವೇದಾಭಿಮಾನಿಗಳೆಲ್ಲವರೂ ಸಹಕರಿಸಬೇಕಾಗಿ ಸದ್ರಿ ಸಮಾಜದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮಂಗಲಪಾಡಿ— ಸ್ಥಳೀಯ ಹಿಂದೂ ಮುಸ್ಲಿಂ ವಿದ್ಯಾರ್ಥಿಸಂಘದ ಆಶ್ರಯದಲ್ಲಿ ಇತ್ತೀಚೆಗೆ 'ವ್ಯಭಿಚಾರಿಣಿ ಯಾರು?' ಎಂಬ ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು. ಇಲ್ಲಿನ ತರುಣ ಮುಂದಾಳುಗಳಾದ ಶ್ರೀ. ಮಹಾಬಲ ಭಂಡಾರಿಯವರು ಹಳ್ಳಿಗರ ಸಂಘಟನೆಯ ಕುರಿತು ಸ್ಫೂರ್ತಿದಾಯಕ ಭಾಷಣವಿತ್ತರು.

ಕರ್ನಾಟಕ ಯೂನಿವರ್ಸಿಟಿ ಸ್ಥಾಪನೆಯ ಕುರಿತು ರಿಪೋರ್ಟುಮಾಡುವರೆ ಮುಂಬಯಿ ಸರಕಾರವು ನೇಮಿಸಿದ ಸಬ್ ಕಮಿಟಿಯವರು ಇದೇ ತಾ. 25ರಲ್ಲಿ ಮಂಗಳೂರಿಗೆ ಆಗಮಿಸಿ ಜಿಲ್ಲೆಯ ಎಮ್. ಎಲ್. ಎ. ಮತ್ತು ಎಮ್. ಎಲ್. ಸಿ. ಮೆಂಬರರನ್ನು ಮತ್ತಿತರ ಕಾಲೇಜು ಪ್ರಿನ್ಸಿಪಾಲ್ಸ್ ಹಾಗೂ ವಿದ್ಯಾಭಿಮಾನಿಗಳನ್ನು ತಾ. 28ರಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಸಭಾಭವನದಲ್ಲಿ ಭೇಟಿಯಾಗಿ ಸಾಕ್ಷ್ಯಗಳನ್ನು ಪಡೆಯುವರು. ತಾ.29ರಲ್ಲಿ ಕಾರ್ಕಳ ಮತ್ತು ಉಡುಪಿಯ ಸಂಸ್ಕೃತ ಕಾಲೇಜುಗಳನ್ನು ಸಂದರ್ಶಿಸಿ ಸ್ಥಳೀಯ ವಿದ್ಯಾಹಿತೈಷಿಗಳೊಡನೆ ವಿಚಾರ ವಿನಿಮಯ ಮಾಡಲಿರುವರು. ತಾ. 30ರಲ್ಲಿ ಕೊಡಗಿಗೆ ಪ್ರಯಾಣಬೆಳೆಸಿ ಅಲ್ಲಿಂದ ಮೈಸೂರಿಗೆ ಹೋಗಲಿರುವರು. ಈ ಕಮಿಟಿಯಲ್ಲಿ ಶ್ರೀಗಳಾದ ಪ್ರೊಫೆಸರ್ ಎಸ್. ಎಸ್. ಬಸವನಾಳ್, ಎ. ಮಿನೇಜಿಸ್, ಕೆ. ಬಿ. ಜಿನರಾಜ ಹೆಗ್ಡೆ, ಡಾ। ಬಿ. ವೈ. ಮಹಾಬಲೇಶ್ವರಪ್ಪ, ವೈ. ಸೋಮಣ್ಣ, ಎ. ಎ. ಕಿಟ್ಟೂರ್‌ರವರಿರುವರು.

ಪ್ರಕಟಣೆ.

ಉಡ್ಪಿ ಕಸಬಾ ಕಾಡಬೆಟ್ಟುನಲ್ಲಿರುವ ಮೇರಿ ಮಿನೇಜಸ್ ತಾ 6-11-1947ನೇ ನವಯುಗ ಸಂಚಿಕೆಯಲ್ಲಿ ಮಾಡಿದ ಪ್ರಕಟಣೆ ಬಾಬಿನಲ್ಲಿ ಸದ್ರಿಯವಳ ಗಂಡ S. E. ಮಿನೇಜಸ್‌ನು ಪ್ರಕಟಿಸುವುದೇನೆಂದ್ರೆ ಉಡ್ಪಿ ಕಸಬಾ ಕಾಡಬೆಟ್ಟುನಲ್ಲಿರುವ ಗದ್ದೆಗಳು ಬಾಗ್ಯಾತು ಮನೆಗಳು ಸಹಾ ನಾನು ನನ್ನ ಸ್ವಂತ ವ್ಯಾಪಾರದ ಉತ್ಪತ್ತಿಯಿಂದಲೂ ಆಸ್ತಿ ಜಮಾಬದಾರಿ ಮೂಲಕ ಪಡೆದ ಸಾಲದಿಂದಲೂ ಮಾಡಿದ್ದಾಗಿರುತ್ತದೆ. ಅದರಲ್ಲಿ ನನ್ನ ಹೆಂಡತಿಗಾಗಲೀ ಮಕ್ಕಳಿಗಾಗಲೀ ಯಾವತರದ ಹಕ್ಕು ಇರುವುದಿಲ್ಲಾ. ನನ್ನ ಹೆಂಡತಿಯ ದೋತಿ ಹಣದ 3 ಪಾಲಷ್ಟು ಚಿನ್ನಾಭರಣ ಮಾಡ್ಸಿ ಅವಳ ಸ್ವಾಧೀನ ಬಿಟ್ಟಿದ್ದೇನೆ. ನನ್ನ ಹೆಂಡತಿಯನ್ನು ಮಂದು ಮನೆಯಲ್ಲಿ ಬಿಟ್ಟು ಅವಳ ವ ಸಂಣ ಮಕ್ಕಳ ಖರ್ಚು ವೆಚ್ಚದ ಬಗ್ಗೆ ಆಗಾಗ್ಗೆ ಹಣ ಕಳುಹಿಸಿದ್ದಲ್ಲದೆ ನಾನು ಸಹಾ ಬಂದುಹೋಗುತ್ತಿದ್ದೆ. ಹೀಗಿರುವಲ್ಲಿ ನನ್ನ ಹಿರೇ ಗಂಡು ಮಕ್ಕಳಾದ ಸಂತಾನ ಎಡ್ವಾರ್ಡ ಮಿನೇಜಸ್ ಮತ್ತು ಜೋನ್ ಮಿನೇಜಸ್ ಸಹಾ ನನ್ನ ಹೆಂಡತಿಯನ್ನು ಪುಸಲಾಯಿಸಿ ಅವಳ ಯತ್ರ ಖರ್ಚಿಗೆ ಕೊಟ್ಟ ಐವೇಜನ್ನೂ ಅವಳ ಚಿನ್ನಾಭರಣಗಳನ್ನೂ ತಂಮ ಕೆಟ್ಟ ಚಾಳಿಯ ದುರ್ಮಗಾರಿಕೆ ವೆಚ್ಚಕ್ಕೆ ಉಪಯೋಗಿಸಿ ನನ್ನ ಇಷ್ಟಕ್ಕೆ ವಿರೋಧವಾಗಿ ನನ್ನ ಮನೆಯಲ್ಲಿದ್ದು ತಂಮ ಇಚ್ಛಾನುಸಾರ ವರ್ತಿಸಿ ನಷ್ಟ ಮಾಡಿದ ಕಾರಣ ಅವರನ್ನು ದೂರಪಡಿಸಬೇಕೆಂತಲೂ ಉತ್ಪತ್ತಿ ಕಮಿಯಾಗಿ ಖರ್ಚು ಹೆಚ್ಚಾಗುವುದರಿಂದ ನನ್ನ ಹೆಂಡತಿಯನ್ನು ನನ್ನ ವಟ್ಟಿಗೆ ಮೈಸೂರು ಸ್ಟೇಟಿನ ನನ್ನ ಮನೆಗೆ ಕರಕೊಂಡು ಹೋಗಿ ಅಲ್ಲಿಯ ಮನೆ ಬಾಡಿಗೆಗೆ ಕೊಡಬೇಕೆಂತ ತಿಳಿಸಿದ ಸಂಗ್ತಿ ಗೊತ್ತಾದ ಸದ್ರಿ ನನ್ನ ಎರಡು ಮಕ್ಕಳು ನನ್ನ ಮೇಲೆ ದ್ವೇಷಕಟ್ಟಿಕೊಂಡು ಹಾದಿಯನ್ನು ಮುಖೋರ್ದಿಸಿ ನಂತ್ರ ನಾನು ಹೆಂಡತಿಯನ್ನು ಕರಕೊಂಡು ಹೋಗಲಿಕ್ಕೆ ಮೈಸೂರಿಂದ ಬಂದ ಸಮಯ ಅದ್ಕೆ ವಿರೋಧಮಾಡುವ ಉದ್ದೇಶದಿಂದ ನನ್ನ ಹೆಂಡತಿಯಿಂದ ಮೇಲೆ ಹೇಳಿದ ಸುಳ್ಳು ವ ಅವಮಾನದ ಆರೋಪಣೆಗಳನ್ನು ಕಾಣ್ಸಿ ಪ್ರಕಟಣೆ ಮಾಡ್ಸಿದ್ದಾಗಿರುತ್ತದೆ. ನಂಮದು ಸಮಷ್ಟಿ ಹಕ್ಕಿನ ಹಿಂದು ಕುಟುಂಬವಲ್ಲಾ ನನ್ನ ಆಸ್ತಿ ಕಟ್ಟೋಣದಲ್ಲಿ ನನ್ನ ಹೆಂಡತಿಗಾಗ್ಲೀ ಮಕ್ಕಳಿಗಾಗ್ಲೀ ಯಾವ ತರದ ಹಕ್ಕು ಇಲ್ಲಾ. ಅವರ ಪ್ರಕಟಣೆಯು ತೀರಾ ಅಸಂಬದ್ಧವದ್ದು. ಆದರಿಂದ ನನ್ನ ಇಚ್ಛಾನುಸಾರದ ಸ್ವಂತ ಹಕ್ಕಿಗೆ ಯಾವ ಭಾದಕವೂ ಬರಲಾರದು.

S. E. Minezes.

ಉಡುಪಿ ತಾರೀಕು 22-11-47

ನೋಟೀಸು

ಕಾರಕಳ ತಾಲೋಕು ನಾಡ್ಪಾಲು ಗ್ರಾಮದ ಮುರ್ತಿಯೊಂಟಲ್ಲಿರುವ ಸದಿಯ ಹೆಗ್ಡೇರ ಅಳಿಯ ಬಡಿಯ ಹೆಗ್ಡೆಯು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನಂದರೆ.

ನಾಡ್ಪಾಲು ಗ್ರಾಮದ ನನ್ನ ಮೂಲಗೇಣಿ ಹಕ್ಕಿನ ಸ್ಥಿರಾಸ್ತಿಯನ್ನು ನನ್ನ ವಕ್ಲುಗಳಿಂದ ಬಹುಗತಗೇಣಿ ವ್ಸಲು ಮಾಡುವ ಹಕ್ಕು ಸಮೇತ ನಾನು ಬೆಳಂಜಗೋಡು ಪೋನಪ್ಪ ಹೆಗ್ಡೆರ ಅಳಿಯ ಕೊರಗ ಹೆಗ್ಡೆರಿಗೆ ರಿಜಿಸ್ಟ್ರಿ ತಾ 18-6-1947ರಲ್ಲು ಕ್ರಯವರಿಸಿ ಕೊಟ್ಟಿದ್ದೇನೆ. ಬಾಕಿಯನ್ನು ವ್ಸಲು ಕೇಳಿ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ವಕ್ಲುಗಳು ನನ್ನ ಅಣ್ಣನ ಮಗ ಗೋಪಾಲ ಹೆಗ್ಡೆಯ ಪಿತೂರಿಯಿಂದ ಆತನ ವಳಸಂಚಿಗೆ ಸೇರಿ ಮಿಸ್ವಾಧೀನೆ ಉತ್ರಕೊಟ್ಟಿದ್ದರಿಂದ ಸದ್ರಿ ಕೊರಗ ಹೆಗ್ಡೇರು ವಕ್ಲುಗಳ ಮೇಲೂ ಗೋಪಾಲ ಹೆಗ್ಡೆಯ ಮೇಲೆ ಕೂಡಾ ಕಾರ್ಕಳ ಡಿ. ಮುನ್ಸಿಫ್ ಕೋರ್ಟಿನಲ್ಲಿ S. C. 292/47ನೆಗೆ ದಾವೆಗಳನ್ನು ಮಾಡಿ ವಕ್ಲುಗಳ ಚರಸೊತ್ತು ಜಪ್ತು ಮಾಡ್ಸಿದಲ್ಲಿ ಸದ್ರಿ ಗೋಪಾಲ ಹೆಗ್ಡೆಯು ಕೋರ್ಟಿಗೆ ಪಾಪ್ಯಸ್ಥಿಕೆ ಅರ್ಜಿ ಕೂಡಾ ಕೊಟ್ಟಿರುತ್ತಾನಾಗಿ ನಾನು ತಿಳಿಯುತ್ತೇನೆ, ಸದ್ರಿ ದಾವೆಗಳ ನಂತರ ಸದ್ರಿ ಗೋಪಾಲ ಹೆಗ್ಡೆ ಮತ್ತು ಅವನ ಪರಮ ಮಿತ್ರ ತಿಂಗಳೆ ಸದಾಶಿವ ಹೆಗ್ಡೇರು ನನ್ನ ಮೇಲೆ ದ್ವೇಷ ಕಟ್ಟಿಕೊಂಡು ನನ್ನ ಮನೆಯನ್ನು ಕೂಡಾ ಅವೇರೀತಿ ಜಪ್ತು ಮಾಡಿಸದೇ ಬಿಡಲಿಕ್ಕಿಲ್ಲವಾಗಿ ಶಪತ ಹಾಕಿರುತ್ತಾರೆ.

ನನ್ನ ಆಸ್ತಿಯನ್ನು ಕೊರಗ ಹೆಗ್ಡೆರಿಗೆ ಕ್ರಯಕ್ಕೆ ಕೊಟ್ಟ ಕಾರಣದಿಂದ ನನ್ನ ಅಂಣನ ಮಗ ಸದ್ರಿ ಗೋಪಾಲ ಹೆಗ್ಡೆಯು ನನ್ನ ಮೇಲೆ ತುಂಬಾ ದ್ವೇಷದಲ್ಲಿದ್ದಾನೆ ಮತ್ತು ನನಗೆ ನಾನಾ ರೀತಿ ಉಪದ್ರವ ಕೊಡುತ್ತಾ ಯಿದ್ದಾನೆ, ನಾನು ಓದು ಬರಹ ಯಿಲ್ಲದ ನಿರಕ್ಷರ ಕುಕ್ಷಿಯಾಗಿದ್ದೇನೆ. ನಾನು ಇದೇ ತಾ. 11-11-1947ನೇ ದಿನ ಸಾಮಾನು ಕೊಂಡು ಹೋಗುವರೆ ಸೋಮೇಶ್ವರದಿಂದ ಸೀತಾನದಿ ಪೇಟೆಗೆ ಹೋಗಿ ಅಲ್ಲಿಂದ ವಾಪಾಸು ಬರುವಾಗ್ಯ ಬಂಗ್ಲೆ ಸಮೀಪ ನಾಡ್ಪಾಲು ಗ್ರಾಮದ ಪಟೇಲ್ ತಿಂಗಳೆ ವಿಟ್ಠಲ ಹೆಗ್ಡೆ, ತಿಂಗಳೆ ಸದಾಶಿವ ಹೆಗ್ಡೆ ಮತ್ತು ಗೋಪಾಲ ಹೆಗ್ಡೆ ಕೂಡಾ ಬೇರೆ ಕೆಲವು ಜನರ ಸಮೇತ ಬಂದು ಅವರು ಬರುವಾಗಲೇ ಬರೆದು ತಂದಿರುವ ಒಂದು ಕಾಗ್ದಕ್ಕೆ ನಾನು ಹೆಬ್ಬೆಟ್ಟು ಹೊಡಕೊಡಬೇಕೆಂತ ಪಟೇಲ್ ವಿಟ್ಲ ಹೆಗ್ಡೇರು ಹೇಳಿದರು. ಅದಕ್ಕೆ ನಾನು ಒಪ್ಪಲಿಲ್ಲಾ. ಆಗ್ಯ ನನ್ನನ್ನು ಬೆದರಿಸಿ ಗದರಿಸಿ ನನ್ನ ಕೈಹಿಡಿದು ಯೆಡ ಹೆಬ್ಬೆಟ್ಟು ಮುದ್ರೆ ಹಾಕ್ಸಿದ್ದಾರೆ.

ನಾನು ರಿಜಿಷ್ಟ್ರಿ ಆಫೀಸಿನಲ್ಲ ಆದ ದಸ್ತಾವೇಜುಗಳಿಗಲ್ಲದೆ ಬೇರೆಯಾವುದಕ್ಕೂ ಹೆಬ್ಬೆಟ್ಟು ಮುದ್ರೆ ಕೊಟ್ಟದ್ದಿಲ್ಲಾ. ನಾನು ಯಾರಿಗೂ ರಿಜಿಸ್ಟ್ರಿ ಶಿವಾಯ ಯಾವ ರಿಕಾರ್ಡು ಮಾಡಿಕೊಟ್ಟದ್ದಾಗಲೀ ಬರಕೊಟ್ಟದ್ದಾಗಲಿ ಯಿಲ್ಲಾ, ನಾನು ಯಾರಿಂದಲಾದರೂ ಕೈಕಡವಾಗಲೀ ಡಿಮ್ಯಾಂಡು ನೋಟಿನ ಮೇಲಾಗಲೀ ಸಾಲ ಪಡದ್ದಿಲ್ಲಾ. ನನಗೆಯೇನೂ ಸಾಲಯಿರುವದಿಲ್ಲಾ. ಆದುದರಿಂದ ಯಾರಾದರೂ ನಾನು ಬರಕೊಟ್ಟದ್ದೆಂಬ ರಿಜಿಸ್ಟ್ರಿ ಶಿವಾಯಿ ಯಾವ ರಿಕಾರ್ಡುಗಳನ್ನು ಕಲ್ಪಿಸಿದ್ದಾದರೆ ಅವು ನನ್ನ ಮೇಲೆ ಬಾಧಿಸ ತಕ್ಕದ್ದಲ್ಲಾ. ಸದ್ರಿ ಗೋಪಾಲ ಹೆಗ್ಡೆ, ಪಟೇಲ್ ವಿಟ್ಲ ಹೆಗ್ಡೆ ಮತ್ತು ಸದಾಶಿವ ಹೆಗ್ಡೆಯವರು ಕಲ್ಪಿಸಿರಬಹುದಾದ ಯಾವತ್ತು ರಿಕಾರ್ಡುಗಳು ಬನಾವಟು ವಾಕ್ಲೆಗಳಾಗಿರುತ್ತವೆ. ಈ ಸಂಗತಿಯನ್ನು ನಾನು ಈ ಮೂಲಕ ಸರ್ವ ಜನರಿಗೆ ಅವಗಾಹನೆ ಬಗ್ಗೆ ಈ ಮೂಲಕ ತಿಳಿಸಿರುತ್ತೇನೆ.

● ಈ ಎಡಗೈ ಹೆಬ್ಬೆಟ್ಟು ಬಡಿಯ ಹೆಗ್ಡೆರುದು.

ತಾ. 13-11-47.

ಕವಿತಾಕಾಮಿನಿ ಕನಸಿಲಿ ಬಂದು। ಕರೆವಳು ಕುಣಿಯಲಿಕೆ॥
ಚೆಲುಕಾಲಂದುಗೆ ಕಿಣಿಕಿಣಿರೆನೆ ನಗೆ। ಯೊಪ್ಪಿಸಿ ಕುಣಿಯಲಿಕೆ॥

ಮುಂದೆ?

ನಾಡಿನ ಪ್ರಸಿದ್ಧ ಕವಿ ಯಸ್. ವೆಂಕಟರಾಜರಿಂದ ಬರೆಯಲ್ಪಟ್ಟು
ಪ್ರಸಿದ್ಧ ಪ್ರಕಾಶಕರಾದ ಕಿರಿಯರ ಪ್ರಪಂಚದವರಿಂದ ಪ್ರಕಟಿಸಲ್ಪಟ್ಟ

ಕವಿತಾಕಾಮಿನಿ

ಎಂಬ ಈಗ ತಾನೆ ಹೊರಬಿದ್ದಿರುವ ಪುಸ್ತಕವನ್ನೋದಿರಿ.

ಓದಿದಂತೆ ಮೋದಗೊಳಿಸಿ ಕುಣಿಕುಣಿಸುವ ಕವನಗಳ ಕಟ್ಟು!
ನೋಡಿದಂತೆ ಕಣ್ಮನಗಳನ್ನು ತಣಿತಣಿಸುವ ಚಿತ್ರಕಟ್ಟು!!

ಈ ಪುಸ್ತಕಗಳೂ ಕಿರಿಯರ ಪ್ರಪಂಚದ ಇತರ ಪ್ರಕಟಣೆಗಳೂ ಸಿಗುವ ಸ್ಥಳಗಳು:-
೧ ನವಭಾರತ ಬುಕ್ ಡಿಪೋ, ಉಡುಪಿ, ೨ ಸ್ಕೂಲ್ ಬುಕ್ ಕಂಪೆನಿ, ಮಂಗಳೂರು ೩ ಎಂ. ಯಸ್. ಮಯ್ಯ, ಪುತ್ತೂರು. ೪ ಯಚ್. ಎನ್. ರಾವ್ ಬ್ರದರ್ಸ್ ಬೆಂಗಳೂರು ಸಿಟಿ, ೫ ಯು. ಆರ್. ಶೆಣೈ ಯಂಡ್ ಸನ್ಸ್, ಮಂಗಳೂರು, ೬ ಜಯಂತ್ ಏಜನ್ಸಿ, ಸಿದ್ಧಾಪುರ, ೭ ಸತ್ಯಶೋಧನ ಪುಸ್ತಕ ಭಂಡಾರ, ಬೆಂಗಳೂರು ಸಿಟಿ. ೮ ಮನೋಹರ ಗ್ರಂಥ ಭಂಡಾರ, ಧಾರವಾಡ. ೯ ನಾಗ್ಲಿಲಾಲ ಬುಕ್ ಡಿಪೋ, ಹುಬ್ಳಿ.

(೨ನೇ ಪುಟದಿಂದ)

ಕು. ಕಾಶ್ಮೀರದ ಮಹಾರಾಜರ ಮರ್ಜಿಯು ಎಲ್ಲಾ ರೀತಿಯಲ್ಲೂ ಹೈದರಾಬಾದಿನ ನಿಜಾಮರದ್ದೇ. ಅವರು ಹಿಂದುವಾದ್ದರಿಂದ, ಬಹುಸಂಖ್ಯಾಕ ಮುಸ್ಲಿಮರ ಮೇಲೆ ಅಪನಂಬಿಗೆಯಿಟ್ಟು ಹೆಚ್ಚಿನ ಸರಕಾರೀ ಸ್ಥಾನಗಳನ್ನು ಹಿಂದುಗಳಿಗೇನೇ ಕೊಟ್ಟಿದ್ದಾರೆ. ಹೈದರಾಬಾದಿನ ಹಿಂದುಗಳಂತೆಯೇ ಕಾಶ್ಮೀರದ ಮುಸ್ಲಿಮರು ನಿಸ್ಸಹಾಯಕರಿದ್ದಾರೆ. ತುಲನಾತ್ಮಕವಾಗಿ ದುರ್ಬಲ ಮನೋವೃತ್ತಿಯವರಿದ್ದಾರೆ.

ಆಪತ್ತಿನ ಮೂಲ

ಹೀಗಾಗಿ ಆದಿಯಿಂದಲೂ ಮಹಾರಾಜಾ ಆಳ್ವಿಕೆಯು ಕಾಶ್ಮೀರದ ಬಹುಸಂಖ್ಯಾಕ ಪ್ರಜೆಗಳನ್ನು ದಾಸ್ಯದಲ್ಲಿಟ್ಟದ್ದು ಮಾತ್ರವಲ್ಲ, ಪರಕೀಯ ಭಾವನೆಯನ್ನೂ ನಿರ್ಮಿಸಿದ್ದಿತು. ಮುಸ್ಲಿಂ ಜನಾಂಗದ ಅತೃಪ್ತಿಯು ಸಕಾರಣವಿದ್ದಿದೆ. ಅದು ಬೆಳೆಯುತ್ತಾ ಬಂದಿತು. ಆದರೆ ಅದನ್ನೊಂದು ಮಾರ್ಗ ಹಿಡಿಸಬಲ್ಲ ನಾಯಕತ್ವ ಆದಿಭಾಗದಲ್ಲಿರಲಿಲ್ಲ. ಹೊರಗಿನ ಹೊಂಚುಗಾರರ ಕೈವಾಡಗಳಿಗಾಸ್ಪದ ದೊರೆಯದಷ್ಟು ಜನತೆಯ ಬುದ್ಧಿಯೂ ಮೊಂಡಾಗಿತ್ತು; ಆಡಳಿತೆಯ ಕಠೋರತೆಯೂ ಬಲವಾಗಿತ್ತು. ಇಂತಹ ನಿಸ್ಸಹಾಯಕ ಸ್ಥಿತಿಯೇ ಶೇಕ್ ಅಬ್ದುಲ್ಲಾನನ್ನು ನಾಯಕನನ್ನಾಗಿ ಮುಂದೂಡಿದುದು. ಶೇಕ್ ಸಾಹೇಬ್ ವಿಶೇಷ ಪ್ರತಿಭಾವಂತನಲ್ಲ. ರಾಜಕಾರಣದ ಹುಚ್ಚಿನಿಂದ ಕಾಳಗ ನಿರ್ಮಿಸಿದರೆಂಬ ಅಪವಾದವು ಒಂದಲ್ಲೊಂದು ರೀತಿಯಿಂದ ಅಖಿಲ ಭಾರತದ ಎಲ್ಲಾ ರಾಜಕೀಯಪ್ರಮುಖರಿಗೂ ತಟ್ಟಬಹುದು-ಆದರದು ಶೇಕ್ ಅಬ್ದುಲ್ಲಾನಿಗೆ ಸೋಂಕದು. ದಾಸ್ಯನಿವಾರಣಾತುರ, ಸ್ವಾಭಿಮಾನ, ಸೌಹಾರ್ದ್ಯಗಳ ಹೊರತು ಶೇಕ್ ಅಬ್ದುಲ್ಲಾರಲ್ಲಿ ಬೇರಾವುದೂ ಇಲ್ಲ. ಅವರು ಆದಿಯಲ್ಲಿ 80 ರೂಪಾಯಿ ಸಂಬಳದ ಅಧ್ಯಾಪಕರಾಗಿದ್ದರು. ತನ್ನ ಜನರ ಅಜ್ಞಾನವನ್ನು ಕಂಡು ಕರಗಿಯೇ ಅವರು ಇಂದಿನ 'ಪ್ರೌಢ ಶಿಕ್ಷಕ'ನಾಗಿ ಮಾರ್ಪಟ್ಟರು. ಕಾಶ್ಮೀರೀ ಜನತೆಯ ಸ್ಥಿತಿಯ ದುರ್ವಾಸನೆಯು ಅಸಹ್ಯವಾಗಿ ಅವರಿಂದು ಆ ಕೊಳೆಯನ್ನು ಝಾಡಿಸಿ ತೆಗೆಯಲು ನಡುಬಗಿದಿದ್ದಾರಲ್ಲದೆ, ರಾಜಕಾರಣದ ಸುವಾಸನೆಯಿಂದಾಕರ್ಷಿಸಲ್ಪಟ್ಟು ಮೂಗರಳಿಸಿಲ್ಲ. ಸ್ವಾತಂತ್ರ್ಯ ಸಾಧನೆಯ ವಿನಹಾ ಸಂಕಷ್ಟಗಳು ತೊಲಗವೆಂಬುದು ಖಚಿತವಾದುದರಿಂದಲೇ ಅವರು ಕಾಶ್ಮೀರದ ಸ್ವಾತಂತ್ರ್ಯ ಸೇನಾನಿತ್ವ ವಹಿಸಿದ್ದರು. 1938ರ ಸುಮಾರಿಗೆ ಶೇಕ್ ಅಬ್ದುಲ್ಲಾ ಪ್ರಥಮತಃ ಸ್ಥಾಪಿಸಿಕೊಂಡಿದ್ದುದು 'ಮುಸ್ಲಿಂ ಸಮ್ಮೇಲನ'ವನ್ನು. ರಾಜನು ತಾನು ಹಿಂದೂ ಎಂಬುದರಿಂದ ಮುಸ್ಲಿಂ ಪ್ರಜೆಗಳ ನ್ಯಾಯಬದ್ಧ ಹಕ್ಕುಗಳನ್ನು ಹತ್ತಿಕ್ಕುತಿದ್ದಾರೆಂದೇ ಶೇಕ್ ಅಬ್ದುಲ್ಲಾ ಮುಸ್ಲಿಂ ಸಮ್ಮೇಲನಕಟ್ಟಿದುದು. ಆದರೆ ಅದರಲ್ಲಿ ನ್ಯಾಯಪಕ್ಷಪಾತತೆಯೊಂದೇ ಹೊಂಚು [illegible] ಜಾತ್ಯಂಧತೆಯಿರಲಿಲ್ಲವಾದ್ದರಿಂದ ಅದನ್ನೇ ರಾಷ್ಟ್ರೀಯ ಸಮ್ಮೇಲನವಾಗಿ ಮಾರ್ಪಡಿಸುವುದರ ಅವಶ್ಯಕತೆ ಮತ್ತು ನ್ಯಾಯವು ಅಲ್ಪಾವಧಿಯಲ್ಲೇ ಶೇಕರಿಗೆ ಹೊಳೆಯಿತು. ಪಂಡಿತ ನೆಹರೂಗಳವ್ಯಕ್ತಿಯೂ ಈ ಮಾರ್ಪಾಟಕ್ಕೆ ನೆರವಾಯಿತು. ಅವರ ಸ್ವಾತಂತ್ರ್ಯ ಹೋರಾಟ-ಬಂಧನ-ನೆಹರುಗಳಿಗೆ ಪ್ರತಿಬಂಧ-ಇತ್ತೀಚೆಗೆ ಶೇಕರ ಬಿಡುಗಡೆ ಮತ್ತೀಗಿನ 'ಎಮರ್ಜೆನ್ಸಿ ಸರಕಾರ'ದ ಅಧಿನಾಯಕತ್ವ-ಇವೆಲ್ಲವೂ ಸರ್ವಶ್ರುತ ಸಂಗತಿಗಳು. ಮುಸ್ಲಿಂ ಲೀಗಿನ ಉಪಾಂಗವಾದ 'ಮುಸ್ಲಿಂ ಸಮ್ಮೇಲನ'ವು ಕಾಶ್ಮೀರದಲ್ಲಿದ್ದರೂ ಶೇಕ್ ಅಬ್ದುಲ್ಲಾರ ಪ್ರಭಾವಚಂದ್ರನಿದಿರು ಅದು ಕಾಶ್ಮೀರೀ ಗಗನದೊಂದು ನಕ್ಷತ್ರ ಮಾತ್ರವಾಗಿದೆ. ಮುಸ್ಲಿಂ ಸಮ್ಮೇಲನದ ನಾಯಕರಂತೆಯೇ ರಾಷ್ಟ್ರೀಯ ಸಮ್ಮೇಲನದ ಹಲವು ಕಾರ್ಯಕರ್ತರು—ಶೇಕ್ ಅಬ್ದುಲ್ಲಾ ಅನುಯಾಯಿಗಳು—ಈಗಲೂ ಜೈಲಿನಲ್ಲಿದ್ದಾರೆ.

ಕಾಪುರುಷರ ಧಾಳಿ.

ಭಾರತಕ್ಕೆ ಹೈದರಾಬಾದಿರುವಂತೆಯೇ ಪಾಕಿಸ್ತಾನಕ್ಕೆ ಕಾಶ್ಮೀರವಿದ್ದಿತು. ಕಾಶ್ಮೀರದ ಮೇಲೆ ಲೀಗ್ ನಾಯಕರಿಗಿರುವಷ್ಟು ದ್ವೇಷಾಸೂಯೆ ಮತ್ತಾವ ಭಾಗದ ಮೇಲೂ ಇಲ್ಲ. 'ಮುಸ್ಲಿಂ ಬಹುಸಂಖ್ಯಾಕರಿರುವ ಈ ಸಂಸ್ಥಾನದ ಅಧಿಕಾರವನ್ನು ಮಾತ್ರವಲ್ಲ; ಜನರನ್ನು ಕೂಡಾ ತಮ್ಮವರನ್ನಾಗಿ ಮಾಡಿಕೊಳ್ಳಲಾಗಲಿಲ್ಲವಲ್ಲ!' ಎಂಬ ಪಾಕಿಸ್ತಾನೀ ನಾಯಕರ ಪಶ್ಚಾತ್ತಾಪವು ಅಗಾಧವಾದುದು. ಆದ್ದರಿಂದ ಪ್ರತ್ಯಕ್ಷ ಪಾಕಿಸ್ತಾನದ ಮತ್ತು ಪಾಕಿಸ್ತಾನೀ ತತ್ವಗಳ ಪ್ರೇರಣೆಗೋಸ್ಕರ ಹದ್ದುಗಾರ ಅತ್ತ ಕಡೆಯ ಗುಡ್ಡಗಾಡುಜನರೂ, ಖೈಬರಿನ ಅಫ್ರಿದಿಗಳೂ ಸಹಸ್ರ ಸಂಖ್ಯೆಯಮದಂಡಾಗಿ ದೀರ್ಘಕಾಲದಿಂದ ಆ ಕಡೆ ತಯಾರಾಗುತಿದ್ದರು. ಕಾಶ್ಮೀರದ ರಾಜಧಾನಿ ಶ್ರೀನಗರಕ್ಕೂ ಪಾಕಿಸ್ತಾನದ ಪಶ್ಚಿಮ ಪಂಜಾಬಿನ ರಾವಲ್ಪಿಂಡಿಗೂ 200 ಮೈಲುಗಳ ಅಂತರ. ಧಾಳಿಗಾರರು ಕಾಶ್ಮೀರಕ್ಕೆ ನುಗ್ಗಿ ಬಂದುದು ಈ ರಸ್ತೆಯಿಂದಲೇ-ವರುಷದ ಈಗಿನ ಕಾಲದಲ್ಲಿ ಅಲ್ಲಿಗೆ ಹೋಗಲಾಗುವ ಹಾದಿ ಅದೊಂದೇ. ಮತ್ತೊಂದು ಹಾದಿಯೆಂದರೆ ಸಯಾಲ್ಕೋಟ್‌ನಿಂದ ಬನಿಹಾಲ್ ಕಣಿವೆ ಮಾರ್ಗವಾಗಿ ಹಿಂದುಸ್ಥಾನದ ಪೂರ್ವ ಪಂಜಾಬನ್ನು ಹಾದು ಕಾಶ್ಮೀರದ ಜಮ್ಮುಪ್ರಾಂತ್ಯಕ್ಕೆ ನುಗ್ಗಬೇಕು. ಧಾಳಿಗಾರರು ಪಾಕಿಸ್ತಾನದ ನೆರವಿನಿಂದ ಒಂದನೇ ರಸ್ತೆ ಹಿಡಿದೇ ಬಂದಿದ್ದರು. ಸ್ವಭಾವತಃ ಈ ಕಾಡುಮೃಗಗಳಿಗೆ ಸುಲಿಗೆಯೊಂದೇ ಮುಖ್ಯ ಹೊರತು ಕಾಶ್ಮೀರದ ಭವಿಷ್ಯವಲ್ಲ. ಆದರೆ ಅವರ ಈ ಭಾವನೆಗೆ ಪಾಕಿಸ್ತಾನದ ಘೋಷಣೆಯ ಬಣ್ಣ ಬಳಿದುದರಿಂದಲೇ ಈ ನರಮೃಗಗಳ ತಂಡಕ್ಕೆ 'ಆಜಾದ್ ಕಾಶ್ಮೀರ್ ಸರಕಾರ' ಎಂಬ ಹೆಸರುಬಿತ್ತು. ಇವರು ನುಗ್ಗುವ ಹೊತ್ತಿನಲ್ಲಿ ಕಾಶ್ಮೀರದೊಳಗಡೆಯಲ್ಲೂ ಈ ವರ್ಗದವರು ತಯಾರಾಗಿದ್ದರು. ಮುಖ್ಯತಃ ಕಾಶ್ಮೀರದ ಉಪಸಂಸ್ಥಾನ ಪೂಂಚ್ ಮತ್ತು ಕಾಶ್ಮೀರದ ಸುಮಾರು 50,000 ಮುಸ್ಲಿಮ್ ಯುವಕರು ಕಳೆದ ಯುದ್ಧದಲ್ಲಿ ಸೋಲ್ಜರರಾಗಿ ಸೇರಿದ್ದರು. ಅಲ್ಲಿ ಉತ್ತಮ ದರ್ಜೆಯ ಜೀವನ ನಡೆಸುತಿದ್ದು, ಆ ಕೆಲಸ ಕಳಕೊಂಡು ಮರಳಿ ಕಾಶ್ಮೀರಕ್ಕೆ ಬಂದಾಗ ಇವರ ಹಿಂದಿನ ಜೀವನಾನುಕೂಲತೆಗಳು, ಉದ್ಯೋಗಗಳು, ತಪ್ಪಿ ಹೋಗಿದ್ದುವು. ಇಂತಹ ನಿಕೃಷ್ಟತಾ ಕಿಚ್ಚು ಅವರಲ್ಲಿ ವ್ಯಾಪಿಸಿಕೊಂಡಿದ್ದಾಗಲೇ ಪಾಕಿಸ್ತಾನದ ಗಾಳಿಯೂ ಅದಕ್ಕೆ ಬೀಸುತಿತ್ತು. ಆಗಲೇ ನುಗ್ಗಿಬಂತು ಘೋರಘೋರಿಯುತ್ತಾ ಅಫ್ರಿದಿಗಳ ದಂಡು—ಗಡಿನಾಡು ಪ್ರಾಂತ್ಯದ ಸರಹದ್ದಿನ ಕೋಹತ್, ಬನ್ನು, ಢೇರಾಇಸ್ಮಾಯಿಲ್‌ಖಾನ್‌ನಂತಹ ಸ್ಥಳಗಳಲ್ಲಿ ಕಳೆದೊಂದು ಶತಮಾನದಿಂದಲೂ ಸೂರೆ, ಸುಲಿಗೆ, ಕೊಲೆ, ಹಾದಿಹೋಕರ ಅಪಹಾರ ಇತ್ಯಾದಿಗಳನ್ನು ನಡೆಸಿಯೇ ಜೀವನ ದೂಡುತ್ತಿದ್ದ ನರಭಕ್ಷಕರ ಸೇನೆ! ಕಾಶ್ಮೀರದ ಅತೃಪ್ತರು ಅವರನ್ನು ಸೇರಿಕೊಂಡರು.

ಕಾಶ್ಮೀರದ ರಕ್ಷಕರು

ಶ್ರೀನಗರಕ್ಕೂ ಭಾರತಕ್ಕೂ ಮಧ್ಯ ಇರುವ ಭೂಪಥವು ವರುಷದ ಹೆಚ್ಚಿನ ಕಾಲಗಳಲ್ಲಿ ತೆರೆಯಲಾಗುವಂತಹದೇ ಅಲ್ಲ. ಇಂಬು ಅಂತಹ ಕಾಲ. ತೆರವಾಗಿದ್ದುದು ಆಕಾಶವೊಂದೇ. ಆ ಕಡೆಯಿಂದ ಶ್ರೀನಗರದ ಕೂಗಳತೆದೂರಕ್ಕೆ ಧಾಳಿಗಾರರು ಬಂದಿದ್ದರು. ಆಗಲೇ ಸಹಾಯ ಮತ್ತು ಸಂಬಂಧಕ್ಕಾಗಿ ಮೊರೆಯಿಟ್ಟ ಮಹಾರಾಜರ ಮಾತನ್ನಾದರೂ ಶೇಕ್ ಅಬ್ದುಲ್ಲಾನಿಗೆ ಜವಾಬ್ದಾರಿ ವಹಿಸಿಕೊಡಲೊಪ್ಪಿದವಿನಹ ಹಿಂದೀ ಸರಕಾರ ಕಿವಿಗೆ ಹಾಕಿಕೊಳ್ಳಲಿಲ್ಲ. ಎಲ್ಲವೂ ಭಾರತ ನಾಯಕರ ಅಪೇಕ್ಷೆಯಂತೆ ಮಿನಿಟು ಮಿನಿಟುಗಳೊಳಗೆ ನಡೆದು ಹೋದವು. ಶೇಕ್ ಅಬ್ದುಲ್ಲಾ ನಡು ಬಗಿದು ನಿಲ್ಲುವ ಹೊತ್ತಿನಲ್ಲಿ ಮಹಾರಾಜರು ಶ್ರೀನಗರದಿಂದ ಜಮ್ಮುವಿಗೋಡಿದ್ದರು. ರಾಜಧಾನಿಯಲ್ಲಿ ಅಧಿಕಾರದ ಮತ್ತು ಬೆಳಕಿನ ಎರಡೂ ವ್ಯವಸ್ಥೆಗಳು ಸಂಪೂರ್ಣ ನಿರ್ನಾಮವಾಗಿ ಊರಲ್ಲೂ ಜನರ ಹೃದಯದಲ್ಲೂ ಕತ್ತಲೆಯಾವರಿಸಿದ್ದಿತು; ಹೊರಗಡೆಯಿಂದ ಧಾಳಿಗಾರರ ಘರ್ಜನೆ ಕೇಳಬರುತಿತ್ತು, ಮನೆಯೊಳಗೆ ಅರಾಜಕತೆಯಿಂದೆದ್ದ ಎದೆ ಬಡಿತ--ಹೆಬ್ಬಾಗಿಲಲ್ಲಿ ಆಕ್ರಮಣಗಾರರಿಂದ ಬಾಗಿಲು ಬಡಿತ! ಆದರೆ ದಿನ ಕಳೆಯುವುದರೊಳಗೆ ಶೇಕ್ ಅಬ್ದುಲ್ಲಾನ 20000 ಸ್ವಯಂಸೇವಕರು ನಗರಾಡಳಿತೆ ಮತ್ತೆ ವ್ಯವಸ್ಥೆಗೆ ಕೈಕೊಟ್ಟರು; ಆಕಾಶದಲ್ಲಿ ಭಾರತ ಸರಕಾರದ ವಿಮಾನಗಳು ಕಾಣಿಸಿಕೊಂಡವು; ಒಮ್ಮೆಗೇ ಕತ್ತಲು ಕಳೆದು ನೂರು ಮಕ್ಕು, ಹೃದಯಗಳಲ್ಲಿ ಝಗ್ಗನೇ ಬೆಳಕಾಯಿತು. ಆಸ್ಟ್ರೇಲಿಯ ಮನ್ನಾಕ್ರಮಿಸಿಕೊಂಡ ಮೇಲೆ ವಿಜಯೋತ್ಸವವಾಚರಿಸಲು ಮರ್ಸೇಲ್ಸಿಗೆ ಹೊರಟಿದ್ದ ಹಿಟ್ಲರನಂತೆಯೇ ಶ್ರೀನಗರದಲ್ಲಿ ವಿಜಯವಂದನೆ ಸ್ವೀಕರಿಸುವ ಉದ್ದೇಶದಿಂದ ಲಾಹೋರಿನ ವರೆಗೆ ಬಂದಿದ್ದ ಕಾಯಿದೇ ಆಝಾಮ್ ಜಿನ್ನರು ಅಲ್ಲೇ ನಿಂತರು; ಕಾದು ನೋತು ಕಾಹಿಲೇಬಿದ್ದರು! ಹೀಗೆ ಕಾಲಡಿವರೆಗೂ ಬಂದಿದ್ದ ಮೃತ್ಯುಗಾಲಿಯನ್ನು ಒಂದೇಬಾರಿಗೆ ಹಿಂದೆ ತಿರುಗಿಸಿಬಿಟ್ಟ ಕಾಲಪುರುಷನನ್ನು—ಗುರಿವರೆಗೂ ಬಂದಿದ್ದ ಚೆಂಡನ್ನೆತ್ತಿ ಬಹುದೂರಕ್ಕೆಸೆದು ಬಿಟ್ಟ ಈ 'ಗೋಲ್ ಕೀಪರ್'ನನ್ನು—'ಕಾಶ್ಮೀರದ ಹುಲಿ' ಶೇಕ್ ಅಬ್ದುಲ್ಲಾನನ್ನು ಮರೆಯುವದೆಂದರೆ ಹೇಗೆ? ಆತ, ಸ್ಥಾನ ಮತ್ತು ಗುಣ ನಡತೆಗಳಲ್ಲಿ ಕಾಶ್ಮೀರದ ನೆಹರುವಾಗಿದ್ದರೆ, ಎಲ್ಲಾ ವಿಧಾನಗಳಲ್ಲೂ ಕಾಶ್ಮೀರದ ಪಟೇಲ್ ಅಲ್ಲಿಯ ಉಪನಾಯಕ ಮತ್ತು ರಕ್ಷಣಾ ಮಂತ್ರಿ 'ಕಾಶ್ಮೀರದ ಉಕ್ಕಿನ ಮನುಷ್ಯ' ಗುಲಾಮ್ ಮಹಮ್ಮದ್ ಭಕ್ಷಿ. ಮಹಮೂದ್ ಭಕ್ಷಿಯ ಮನೋಬಲ, ಸಂಘಟನಾ ಶಕ್ತಿ, ಎದೆಗಾರಿಕೆಯಂತಹದೆಂಬುದು ಶ್ರೀನಗರದ ಕತ್ತಲೇ ದಿನಗಳಲ್ಲೇ ಕಂಡುಬಂದಿತ್ತು. ಯಾರೇ ಇರಲಿ, ಮುಂದೊತ್ತುವವರನ್ನು ಪ್ರತೀ ಹತ್ತು ಮಾರು ದೂರದಲ್ಲಿ ಭಕ್ಷಿ ನೇಮಿತ ಸ್ವಯಂಸೇವಕನ ಪಿಸ್ತೂಲಿನ ತುದಿ ಪ್ರಶ್ನಿಸದೆ ಬಿಡುತ್ತಿರಲಿಲ್ಲ. ಸರ್ದಾರ್ ಬಲದೇವ ಸಿಂಗರಿ ಕೂಡಾ ಒಂದು ಸಂದರ್ಭದಲ್ಲಿ ಇದು ಇದಿರಾಗಿತ್ತು. ಭಕ್ಷಿಯ ರೋಮ ರೋಮಗಳೂ ಆಕ್ರಮಣಗಾರರೆಂಬ ಕಸಗಳನ್ನು ಝಾಡಿಸುವ ಸೂಡಿಗಳಾಗಿವೆಯೆಂಬಂತಿವೆ ಈ ಮನುಷ್ಯನ ಕಾರ್ಯಬಲ! ಶೇಕ್ ಅಬ್ದುಲ್ಲಾ ಮತ್ತು ಗುಲಾಮ್ ಮಹಮ್ಮದ್ ಭಕ್ಷಿಗಳು ಒಟ್ಟಿಗೆ ನಿಂತು "ಪಾಕಿಸ್ತಾನಕ್ಕೆ ಕಾಶ್ಮೀರೀ ಕಂದರದಲ್ಲಿ ಸಮಾಧಿ ಕೊಡುವೆವು" "ಇಸ್ಲಾಮಿನ ಹೆಸರಿನಿಂದ ಮುಸಲ್ಮಾನರಿಗೆ, ಖುರಾನಿಗೆ, ಮಸೀದಿಗಳಿಗೆ, ಮಹಿಳೆಯರಿಗೆ ಪಾಕಿಸ್ತಾನಿಗಳು ಮಾಡಿರುವ ಅತ್ಯಾಚಾರಗಳನ್ನು ಮುಸ್ಲಿಂ ರಾಷ್ಟ್ರಗಳು ಕಾಶ್ಮೀರಕ್ಕೆ ಬಂದು ನೋಡಲಿ" ಎಂದು ಕೂಗಿ ಹೇಳುತಿದ್ದಾರೆ. ಧನ್ಯರು! ಅವರಿಂದಾಗಿ ರಾಷ್ಟ್ರೀಯತೆಯೂ ಧನ್ಯ!

ಇಂದ್ರಭವನ ಕಾಫಿ ಹೋಟೆಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ
ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE.

ಲೋಕದ ೮ನೇ ಆಶ್ಚರ್ಯ!

ಅಪೂರ್ವ ಸಂದರ್ಭ!

ಎಲ್ಲಾ ತರದ ಕಣ್ಣಿನ ಅಸ್ವಸ್ಥ (ಕಣ್ಣಿನ ಹೂ ಸಮೇತ)ಗಳನ್ನು ಕಣ್ಣಿಗೆ ಯಾವ ತರದ ಔಷಧವನ್ನೂ ಹಾಕದೆ ಕೇವಲ ಕುಡಿಯಲಿಕ್ಕೆ ಔಷಧಕೊಟ್ಟು ಪಾತ್ರ ಗುಣಪಡಿಸಲಾಗುವುದು.

ನೇಸ, ಹೃದ್ರೋಗ, ಕ್ಷಯ, ಪಕ್ಷಪಾತ, ರಕ್ತದ ಒತ್ತಾಟ, ಮೂತ್ರಸಿಂಡದ ದೋಷ, ನಾಲಗೆಯ ಮೂಲದಲ್ಲಾಗುವ ಮಾಂಸಗ್ರಂಥಿ (ಟೋನ್ಸಲ್ಸ್) ಮೊದಲಾದ ಘನ ರೋಗಗಳನ್ನು ಕೂಡ ಬರೇ ಸಿಹಿ ಮದ್ದುಗಳಿಂದಲೇ ಖಂಡಿತ ಶಮನಗೊಳಿಸಲಾಗುವುದು.

The Eye Clinic,
Court Road, opp: Police Station
UDIPI, S. K.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ-ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—
ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪಚೋದಕ ನವೀನ ನಾಟಕ-

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ?
ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು?
ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.
ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟು ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತನೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬರೆದವರು:-ಶ್ರೀ. ಪಿ. ಶೀನ ಶೆಟ್ಟರು.
ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.
ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ. ಮೈಜುಮ್ಮೆನಿಸುವ ಹಲವು ಸನ್ನಿವೇಶಗಳು!

ಬೆಲೆ ಬರೇ ರೂ. 1—4—0

ಕಿರಿಯರ ಪ್ರಪಂಚದ ಪ್ರಕಟಣೆ **ಕದಂಬ** ಹನ್ನೆರಡು ಕತೆಗಳ ಸಂಗ್ರಹ

ಬರೆದವರು:-ಶ್ರೀಮತಿ ಸರಸ್ವತಿಬಾಯಿ ರಾಜವಾಡೆಯವರು
('ಪ್ರಕಾಶ' ನಾಟಕದ ಅನುವಾದಕಿ; 'ಆಹುತಿ ಇತ್ಯಾದಿ ಕತೆಗಳು' ಕಥಾಗುಚ್ಛದ ಲೇಖಕಿ.)
ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ ಚಿತ್ರಿಸುವ ಕಥಾ ಸಂಗ್ರಹ. ಬೆಲೆ. 1—4—0

ಮನೆಮದ್ದು-Home Remedies ಬೆಲೆ ರೂ. 2-0-0

ಬರೆದವರು:—ಡಾ| ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.
'Ably Written—Quite up-to-date—Valuble Service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ., ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.
ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಹೇಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ 1000 ಮನೆಮದ್ದುಗಳನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಬುಕ್ ಡಿಪೊ ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಔಷಧಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ.ಪಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.
ಸ್ಟಾಕಿಸ್ಟರು— ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಿಸುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ಬಾಟ್ಲಿ 1ರ 10-0-0, ½ ಬಾಟ್ಲಿ 5-4-0, ¼ ಬಾಟ್ಲಿ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.
— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ಯಾಲೆ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ,ಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ-ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.
Ayurveda Oushadhalaya GADAG

Edited, Printed & Published by K. H. S... at the Navayuga Press, Udipi...

Regd. No. M. 3618

ಅಂತರಂಗ
ಅಖಿಲ ಕರ್ನಾಟಕ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

4-12-1947

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-6
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ
ಮೆನೇಜರ್,
ನವಯುಗ ಉಡುಪಿ.

ವರ್ಷ ೨೭
ವಾರ ೧೪

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister, Govt. of Madras.

Vol. 27
No. 14

THE CANARA MUTUAL Assurance Company, Limited.

Estd: 1935

H. O. UDIPI, S. Kanara.

BONUS DECLARED FOR 8 YEARS

We are glad to announce that we have declared a Bonus for 8 years from 1939 to 1946 both years inclusive as also an interim bonus for the next valuation period.

T. R. A. Pai,
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**

Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building,
Central Office, Udipi.

Branches at:

Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for dierrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಬೊಟ್ಟು ಲವಂಗ ಯಾ ಜೀರಿಗೆ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರದಲ್ಲಿ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನಲ್ಟಿಂಗ್ ರೂಮ್ ಎಂಡ್ ಫಾರ್ಮಸಿ; ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಟಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಶೆಟ್ಟಿ, L.I.M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಜರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧-೪ಆಣೆ.

ಮಾಲಕರು:—ಬಾಲಪ್ಪ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಿಕಿತ್ಸಾಲಯಲ್ಲಿ:—ಹುಂಬರವಾಡಿ ಸ್ಟೋರ್, ದಾವಣಗೇರಿ:—ದಾವಣಗೇರಿ ಪ್ರೆಸ್, ಬರ್ ಎಲ್ ಕಮಲದಾಸ, ಕೆಮಿಸ್ಟ್, ಹಾವೇರಿ ಬ್ಯಾಡಗಿ

Ayurveda Oushadalaya, GADAG CITY.

ನಿಮ್ಮಷ್ಟಕ್ಕೆ ನೀವು ಮನೆಯಲ್ಲೆ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0

ನವಭಾರತ ಬುಕ್ ಡಿಪೊ, ಉಡುಪಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. M. Kelu Nambiar,
Vaidya

ವಿಮೆ ಮಾಡಿಸಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಾರ್ಯಾಲಯ:-ಧಾರವಾಡ,

ಹೆಚ್ಚಿನ ಸವಲತ್ತಿನ ಬಗ್ಗೆ—

ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ, ಇವರಿಗೆ ಬರೆಯಿರಿ.

ಶ್ರೀಮತಿ ಬಿಸೆಂಟರು ತೋರಿಸಿ ಕೊಟ್ಟ ದೋಷ

ಶ್ರೀಮತಿ ಅನ್ನಿಬಿಸೆಂಟ್ ಐರಿಷ್ ಮಹಿಳೆಯಿದ್ದರೂ ಭಾರತದ ದತ್ತಪುತ್ರಿಯಾಗಿ ತನ್ನಾಯುಷ್ಯ ಸಮೇತ ಸರ್ವವನ್ನೂ ಈ ರಾಷ್ಟ್ರದ ಸೇವೆಯಲ್ಲೇ ನಿವೇದಿಸಿದ್ದರು. 'ಹೋಮ್ ರೂಲ್' ಚಳವಳದ ನಾಯಕಿಯಾಗಿದ್ದು ಕೊನೆಗೂ ರಾಷ್ಟ್ರ ಧುರೀಣತ್ವ ಗಾಂಧಿಜೀಯ ಕೈಗೆ ಬರುವವರೆಗೂ ಭಾರತದ ಎಲ್ಲಾ ಅಗ್ರಗಣ್ಯ ಪ್ರಮುಖರ ಹಿರಿಯಕ್ಕನಾಗಿ ರಾಷ್ಟ್ರದ ಸರ್ವ ಪ್ರಥಮ ಮುಂದಾಳಾಗಿದ್ದರು. ಅವರು ಆ ಕಾಲದಲ್ಲೇ ತೋರಿಸಿಕೊಟ್ಟಿದ್ದ ಭಾರತೀಯರ ಒಂದೆರಡು ಮುಖ್ಯ ಲೋಪದೋಷಗಳೇ ಬೆಳೆದು ಇಂದಿನ ಎಲ್ಲಾ ಅನಾಹುತಗಳಿಗೂ ಹೇತುಗಳಾಗಿವೆ. ಪಾಕಿಸ್ತಾನದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀ. ಶ್ರೀಪ್ರಕಾಶರು ಬಿಸೆಂಟ್ ವಾಣಿ, ವರ್ತನೆಗಳ ಸಂಬಂಧದ ತನ್ನ ಸ್ವಾನುಭವಗಳನ್ನು ಇಲ್ಲಿ ವಿವರಿಸಿದ್ದಾರೆ.

ನಾನೊಮ್ಮೆ ಮಿ. ಪೋಲಕರೊಡನೆ ಮಾತಾಡುತಿದ್ದೆ; ಶ್ರೀಮತಿ ಅನ್ನಿಬಿಸೆಂಟರು ದೊಡ್ಡ ಕುದುರೆ ಸವಾರಳೆಂದು ನಾನೆಂದಾಗ ಮಿ. ಪೋಲಕರಿಗೆ ಆಶ್ಚರ್ಯವಾಗಿತ್ತು. ಆದರೆ ಬಿಸೆಂಟ್ ಹಾಗಿದ್ದರು. ತನ್ನ ೬೦ನೇ ಪ್ರಾಯದಲ್ಲಿ, ಅದರ ಮೂರನೇ ಒಂದಂಶ ವಯಸ್ಸಿನ ಹಲವರ ಸರಿ ಮಿಗಿಲೆನಿಸಿ ಬಿಸೆಂಟ್ ಸವಾರಿ ಮಾಡಬಲ್ಲವರಾಗಿದ್ದರು.

ಅವರೊಡನೊಂದು ಕಪ್ಪು ಅರಬ್ಬೀ ಕುದುರೆಯಿತ್ತು-ಡಾ। ಬಾಲಕೃಷ್ಣ ಕೌಲರಿದನ್ನು ಉಡುಗೊರೆಯಾಗಿ ಬಿಸೆಂಟರಿಗೆ ಕೊಟ್ಟಿದ್ದರೆಂದೂ ಅದರ ಹೆಸರು 'ಸುಲ್ತಾನ್' ಎಂದೂ ನನ್ನ ನೆನಪು—ಬಿಸೆಂಟ್ ಹತ್ತುತ್ತಿದ್ದುದು ಈ ಕುದುರೆಯನ್ನೇ.

ಕುದುರೇ ಸವಾರಿಯು ಪುರುಷರ ವ್ಯಾಯಾಮ ವರ್ಗಕ್ಕೆ ಸೇರಿದುದು; ಶ್ರೀಮತಿ ಬಿಸೆಂಟರು ಬಹುತೇಕವಾಗಿ ಒಬ್ಬ ಗಂಡಸೇ ಆಗಿದ್ದರು. ಅವರೆಂದಾದರೂ ಹೊಲಿಯುತ್ತಾ ಕೂತಿದ್ದುದನ್ನು ಕಂಡ ನೆನಪು ನನಗಿಲ್ಲ. ನಾನು ಸದಾಕಾಲ ನೋಡುತಿದ್ದುದು ಕೈಯಲ್ಲೊಂದು ಪೆನ್ನು ಹಿಡಿದಿದ್ದ ಬಿಸೆಂಟರನ್ನೇ. ನಮ್ಮ ಆರ್ಥಿಕ ಹಾಗೂ ರಾಜಕೀಯ ಗುಲಾಮಗಿರಿಯ ವಿಮೋಚನೆಯ ಏಕಮಾತ್ರ ಸಾಧನವೆಂದು (ಗಾಂಧಿಜೀಯ ಅಭಿಪ್ರಾಯದಲ್ಲಿ) ಮಹಾತ್ಮಾ ಗಾಂಧಿಯವರ ಚರಕಾ ಚಳವಳವು ಆರಂಭವಾಗಿದ್ದ ದಿನಗಳವು. ಆ ಕಾಲದಲ್ಲಿ ಮಗ್ಗ ಕಾರ್ಖಾನೆಗಳು ಅಷ್ಟೊಂದು ವಿಸ್ತಾರವಾಗಿ ಹಬ್ಬಿರಲಿಲ್ಲವಾದ್ದರಿಂದ ಒಂದು ದಿನ ಮಾತಿನ ನಡುವೆ ನಾನು ಬಿಸೆಂಟರೊಡನೆ ಹೇಳಿದೆ "ನಿಮ್ಮ ತಾಯಿಯಾದರೂ ನೂಲಬಹುದಲ್ಲಾ!". ಕೂಡಲೇ ಬಿಸೆಂಟರೆಂದರು: "ನನ್ನ ತಾಯಿ ಮಾತ್ರವಂದೇ ನಾ ಹುಡುಗಿಯಾಗಿದ್ದಾಗ ನಾನೂ ಚರಕಾ ತಿರುಗಿಸುತಿದ್ದೆ".

ಭಾರತದ ರಾಜಕೀಯದೊಂದು ಅವಧಿ; ಶ್ರೀಮತಿ ಬಿಸೆಂಟರು ಕಾಂಗ್ರೆಸಿನೊಡನೆ ನಿಕಟ ಸಂಬಂಧವಿಟ್ಟುಕೊಂಡಿದ್ದ ಕಾಲ; ಆಗ ಕಾಂಗ್ರೆಸಿನ ಕಾರ್ಯಕಾರೀ ಸಮಿತಿಗಳ ಸದಸ್ಯರು ಒಂದು ಅಳತೆಯಷ್ಟು ಕೈನೂಲನ್ನು ಒಪ್ಪಿಸಲೇ ಬೇಕೆಂಬ ನಿಬಂಧನೆಯಿತ್ತು. ಬಿಸೆಂಟರಾಗ ಒಂದಡಿಯುದ್ದದ ಒಂದು ತಕ್ಲಿಯಲ್ಲಿ ನೂಲುತ್ತಿದ್ದರು. 'ತಿರುಗಣೆ'ಯೆಂದು ಅವರದನ್ನು ಕರೆಯುವದಿದ್ದಿತು. ಈ ತಕ್ಲಿಯಲ್ಲಿ ಕೆಲಸ ಮಾಡುವ ವಿಧಾನಗಳನ್ನು ಆಕೆಗೆ ಕಲಿಸಿಕೊಡುವದಕ್ಕಾಗಿ ಮಹಾತ್ಮಾ ಗಾಂಧಿಯವರು ತನ್ನ ಮಗ ದೇವದಾಸನನ್ನು ಕಳುಹಿಸಿಕೊಟ್ಟಿದ್ದರು.

ಕೊನೆಯ ದಿನಗಳ ಸಂಭಾಷಣೆಗಳಲ್ಲೊಂದು ಬಾರಿ ನಾನು ಶ್ರೀಮತಿ ಬಿಸೆಂಟ್‌ರನ್ನು ಕೇಳಿದೆ: "ನೀವು ಕಳದ ೩೦ವರುಷಗಳಿಂದ ನಮ್ಮೊಡನೆ ವಾಸಿಸುತ್ತಿರುವಿರಿ. ಇವೆಲ್ಲಾ ವರುಷಗಳಲ್ಲೂ ನೀವು ನಿಮ್ಮ ಸರ್ವಸ್ವವನ್ನೂ ನನ್ನೀ ದೇಶಕ್ಕೆ ಅರ್ಪಿಸಿರುವಿರಿ. ಈಗ ದಯವಿಟ್ಟು ನೀವು ನನ್ನ ಇದೊಂದು ಪ್ರಶ್ನೆಗುತ್ತರಕೊಡಬಲ್ಲಿರಾ?—ನಾವು ಅಭಿವೃದ್ಧಿ ಹೊಂದದಂತೆ ಮಾಡಿರುವ—ಹಿಂದಿನಂತೆಯೇ ಅಧೋಗತಿಯಲ್ಲೇ ನಾವು ಕೊಳೆಯುತ್ತಿರುವಂತೆ ಮಾಡಿರುವ—ನಮ್ಮಲ್ಲಿರುವ ದೋಷವಾದರೂ ಯಾವುದು?". ನನ್ನೀ ಪ್ರಶ್ನೆಯನ್ನು ಒತ್ತಟ್ಟಿಗೆ ದೂಡಿ ಬಿಡಬೇಕೆಂದು ಅವರು ಪ್ರಯತ್ನಿಸಿದರು—ಕಾರಣ, ಅವರು ಅಷ್ಟೂ ಮಧುರ ಹೃದಯಿ; ಯಾರೊಬ್ಬರ ಮನಸ್ಸನ್ನೂ ನೋಯಿಸಬಾರದೆಂದು ಅವರಲ್ಲಿದ್ದ ಆತುರವಂತಹದು. ಆದರೆ ನಾನದನ್ನು ಬಿಡಗೊತ್ತಲೆನ್ನಕ್ಕೂ ಸಿದ್ಧನಿರಲಿಲ್ಲ; ಬೆಂಬಿಡದೆ ಹಿಡಿದನಾದ್ದರಿಂದ ಕೊನೆಗೆ ಆಕೆ ಸೋತು "ನೀವು ಉದಾರಿ ಮನುಷ್ಯರಲ್ಲ, ಎಂದು ಹೇಳಲು ನನಗೆ ವ್ಯಸನವಾಗುತ್ತದೆ, ಪ್ರಕಾಶ್," ಎನ್ನುತ್ತಾ ವಿವರಿಸಹತ್ತಿದರು. ಹೆಸರುಗಳನ್ನೆತ್ತಲಿಲ್ಲವಾದರೂ ಆಕೆಯ ಮಾತುಗಳಿಂದ ನನ್ನ ಸುಪರಿಚಿತರಾದ ಅವರೆಲ್ಲರನ್ನೂ ಗುರುತಿಸಲು ನನಗೆ ಸಾಧ್ಯವಿತ್ತು. ತರುಣರಿಗೆ ಪ್ರೋತ್ಸಾಹವನ್ನೇ ಕೊಡದೆ ನಮ್ಮ ನಾಯಕರು ಹೇಗೆ ನಿರುತ್ಸಾಹಗೊಳಿಸುತಿದ್ದಾರೆ—ಇನ್ನೊಬ್ಬರಲ್ಲಿರುವ ಪ್ರತಿಭೆಯನ್ನು ಹತ್ತಿಕ್ಕಲು ಅವರು ಹೇಗೆ ಪ್ರಯತ್ನಿಸುತ್ತಾರೆ—ಯಾರಾದರೊಬ್ಬನು ಮುಂದೆ ಬರುವಾಗ ಅವರೆಷ್ಟು ಮತ್ಸರಗೊಳ್ಳುತ್ತಾರೆ—ಇನ್ನೊಬ್ಬರಿಗೆ ಬಿಟ್ಟುಕೊಡಲೊಪ್ಪದ ಅವರು ತಮ್ಮ ಸ್ವಕಾರ್ಯಗಳನ್ನೇ ಹೇಗೆ ಕೆಡಿಸಿಕೊಳ್ಳುತಿದ್ದಾರೆ—ಎಂಬೆಲ್ಲಾ ಸಂಗತಿಗಳೂ ನನಗೆ ಚೆನ್ನಾಗಿ ಗೊತ್ತು.

೧೯೨೮ರ ಕಲ್ಕತ್ತಾ ಕಾಂಗ್ರೆಸಿನಲ್ಲಿ—ಪಂಡಿತ ಮೋತಿಲಾಲ ನೆಹರುಗಳು ಅಧ್ಯಕ್ಷತೆ ವಹಿಸಿದ್ದಾಗ—ಅಲ್ಲಿ ಭಾರೀ ಉದ್ರೇಕ ಮತ್ತು ವಿಶೇಷ ಗೊಂದಲಗಳು ಪ್ರದರ್ಶಿಸಲ್ಪಟ್ಟಿದ್ದುವು. ವಿರುದ್ಧ ಶಕ್ತಿಗಳು, ಪ್ರತಿಕೂಲ ತತ್ವಗಳು ಪರಸ್ಪರ ಸ್ಪರ್ಧೆಯ ಕಾರ್ಯನಿರತವಾಗಿದ್ದುವು. ಹೀಗಾಗಿ ಕಾಂಗ್ರೆಸಿನ ವಿವಿಧ ಸಮಿತೀ ಸಭೆಗಳು ಸಕಾಲದಲ್ಲಿ ಪ್ರಾರಂಭವಾಗಲಿಲ್ಲ. ನಿಶ್ಚಿತ ಸಮಯಕ್ಕೆ ಮಿನಿಟು ತಡವಾಗದೆ ಬರುವ ಅಭ್ಯಾಸವಿಟ್ಟುಕೊಂಡಿದ್ದ ಬಿಸೆಂಟರು ಘಂಟೆಗಟ್ಲೆ ಕಾಯುತ್ತಾ ಒಂದೆಡೆ ಕುಳಿತಿದ್ದರು. ಆದರೆ ನಾಯಕರು ಅಲ್ಲಲ್ಲಿ ಒಬ್ಬರೊಡನೊಬ್ಬರು ಮಾತಾಡುವುದರಲ್ಲೂ, ಏನಾದರೂ ಒಡಂಬಡಿಕೆಯಾಗುವದೆಂದು ಕಾಯುವುದರಲ್ಲೂ ಇದ್ದರಲ್ಲದೆ, ಬೇರೇನೂ ನಡೆದಿರಲಿಲ್ಲ. ಇದೇ ರೀತಿ ವಿಷಯ ನಿಯಾಮಕ ಸಮಿತಿ ಸಭೆಗಳಿಗಾಗಿ ತಾಸುಗಟ್ಲೆ ಕಾದು, ಕೊನೆಗೆ ಸಭೆಯನ್ನು ಮರುದಿವಸಕ್ಕೆ ಮುಂದುವರಿಸಿಟ್ಟು, ಅವರು ಚದುರುವದಿದ್ದಿತು. ಆ ಸಭೆಯೂ ಮರುದಿನಕ್ಕೆ ಮುಂದುವರಿಸಲ್ಪಟ್ಟು ಎಲ್ಲರೂ ಚದರುವ ಸಮಯದಲ್ಲಿ ನಾನು ಹೊರಗೆ ಹೋಗುವ ಹಾದಿಯಲ್ಲಿ ನಿಂತಿದ್ದೆ. ಶ್ರೀಮತಿ ಬಿಸೆಂಟರು ಸಿಟ್ಟಾಗಿದ್ದರೆಂಬುದು ಅವರನ್ನು ನೋಡಿದೊಡನೆ ತಿಳಿಯುವಂತಿತ್ತು. ಅವರು ನನ್ನನ್ನು ಹಾದು ಹೋಗುವಾಗ "ಪ್ರಕಾಶ, ಬ್ರಿಟಿಷರು ನಿಮ್ಮನ್ನು ಆಳುತ್ತಿರುವುದು ಹೇಗೆ ಎಂಬುದನ್ನು ಈಗ ತಾನೇ ನಾನು ತಿಳಿದುಕೊಳ್ಳಲಾರಂಭಿಸಿದೆ" ಎಂದರು. 'ಆರಂಭಿಸಿದೆ' ಶಬ್ದ ನನ್ನಲ್ಲಿ ವಿನೋದವನ್ನು ಉಂಟುಮಾಡಿತು. ಯಾಕೆಂದರೆ ಅವರು ನಮ್ಮೊಂದಿಗಿದ್ದು ಆಗಲೆ ೩೪ ವರುಷಗಳು ಕಳೆದಿದ್ದುವು. ಈ ಘಟನೆಯನ್ನು ನಾನು ಜವಾಹಿರಲಾಲರಿಗೆ ತಿಳಿಸಿದಾಗ ಅವರು ವಿನೋದ ಪೂರ್ವಕವಾಗಿ ಹೇಳಿದರು: "ಅವರ ಆರಂಭವು ಬಹಳ ತಡವಾಗಿ ಆಯಿತು!'

೦೦ ೦೦ ೦೦

ಭಾಷಣಗಳ ಮತ್ತು, ಇತರ ಸಮಾರಂಭಗಳ ವೇಳೆ ಶ್ರೀಮತಿ ಬಿಸೆಂಟರು ಮಿನಿಟು ತಪ್ಪದೆ ಹಾಜರಾಗುವ 'ಪ್ರಸಂಗ ಪ್ರತ್ಯಕ್ಷೆ'ಯಾಗಿದ್ದರೂ, ರೈಲು ಹತ್ತುವ ಮತ್ತು ವಿನೋದ ಕೂಟಗಳ ಸಂದರ್ಭಗಳಲ್ಲಿ ವಿಶೇಷವಾಗಿ ಸಮಯ ತಪ್ಪುವ ಅಭ್ಯಾಸದವರಿದ್ದರು—ಅದರಿದು ಪ್ರತಿಕೂಲ ರೂಪಿ—ಅತಿ ಬೇಗನೇ ಬಂದು ಹಾಜರಾಗುತಿದ್ದರು! ರೈಲು ಸಮಯದ ಮುವ್ವತ್ತು ಅಥವಾ ನಲ್ವತ್ತೈದು ಮಿನಿಟುಗಳಗ ಮೊದಲೇ ಸ್ಟೇಶನಿನಲ್ಲಿ ಬಂದು ಕಾದಿರುವದು ಅವರ ಸಾಮಾನ್ಯ ಪದ್ಧತಿ. ನಾನು ಅವರೊಂದಿಗೆ ಹಲವು ಬಾರಿ ಪ್ರಯಾಣ ಮಾಡಬೇಕಾಗಿಬರುತ್ತಿತ್ತು. ಅಂತಹ ಪ್ರತಿಯೊಂದು ಸಂದರ್ಭದಲ್ಲೂ ನನಗಿಂತ ಎಷ್ಟೋ ಸಮಯ ಮುಂದಾಗಿ ಸ್ಟೇಶನಿಗೆ ಬಂದು ಅವರು ಕಾಯುತ್ತಿದ್ದರು. ಸದಾ ಕಾರ್ಯಮಗ್ನಳೂ ಸಮಯದ ಅಪವ್ಯಯವನ್ನು ಸಹಿಸದವಳೂ ಆಗಿರುವ, ಮತ್ತು ಆಗಾಗ ಪ್ರಯಾಣ ಮಾಡುತ್ತಿರುವ ಈ ಮಹಿಳೆಗೆ ರೈಲ್ವೇ ಸ್ಟೇಶನುಗಳಲ್ಲಿ ಇಷ್ಟು ಸಮಯಗಳನ್ನು ಹಾಳು ಮಾಡಲು ಮನಸ್ಸು ಹೇಗೆ ಬರುತ್ತದೆಂಬುದೇ ನನಗೊಂದು [illegible] ಕೆಲಸವಲ್ಲಿದ್ದಾಗ ಕೂಡಾ ತನ್ನ ಮನಸ್ಸನ್ನು ಪ್ರಶಾಂತವಾಗಿ ಇಟ್ಟುಕೊಳ್ಳುವ ಮಹಿಳೆಯಾಗಿದ್ದರಾಕೆ. ಎಂತಹ ಸನ್ನಿವೇಶದಲ್ಲೇ ಆದರೂ ಅವಸರ ಇಲ್ಲವೇ ತರಾತುರಿಯಲ್ಲಿ ಆಕೆಯಿದ್ದುದನ್ನು ಕಂಡವರಿಲ್ಲ. ಅವರಲ್ಲಿಗೆ ಕಾರ್ಯಾರ್ಥಿಗಳಾಗಿ ಹೋದ ಯಾರಾದರೂ ಅವಸರ ಮಾಡಿದ

(೧೧ನೇ ಪುಟ ನೋಡಿರಿ.)



Approved firm by the Govt. of Mysore
Certified by the Agent of the Govt. of Cylone & Indian.

WARDEN

Reaches New Heights in 1946.

Business Received ... ... Rs. 2,04,00,000
Business Completed ... ... Rs. 1,72,00,000

THIS represent the latest and greatest achievement in WARDEN'S progressive career.

For this fine performance the Company extends its heartie[s] thanks and congratulations to its representatives and policy-holders all over the country and abroad.

Managing Director: *Shivaprasad Thaker,* Agency Manager: *M. Sunderram Shetty.*

Branch Office At Mangalore

K. P. Bhavanishanker Shetty, Branch Secretary.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಪಡೆದಷ್ಟು ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. ೩; ಸ್ಪೆಶಲ್ ರೂ. ೫; ಅಧಿಕಾಧಿಕ ಸ್ಪೆಶಲ್ ರೂ. [illegible] ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, F. DS. (N. J.)
Tollygung e CALCUTTA.
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಗಾಂಧೀಜಿಯ ಉಪದೇಶಗಳು

ಮಹಾತ್ಮಾ ಗಾಂಧಿಯವರ ಮನಸ್ಸನ್ನು-ಜನತೆಗೆ, ಸರಕಾರಗಳಿಗೆ ಅವರು ಕೊಡುವ ಸಲಹೆಗಳೇನೆಂಬುದನ್ನು–ಹೊರಗೆಡಹುತ್ತಿರುವುದೆಂದರೆ ಅವರ ಸಾಯಂ ಪ್ರಾರ್ಥನೋತ್ತರ ಭಾಷಣಗಳೇ. ತನ್ನ ಈ ವಯಸ್ಸಿನಲ್ಲಿ, ಎಲ್ಲಿಹೋದರೂ ಪ್ರತಿದಿನ ಸಾಯಂಕಾಲ ಪ್ರಾರ್ಥನಾ ಸಭೆಗಳನ್ನು ಜರಗಿಸಿ ಯಾವ ವ್ಯತ್ಯಾಸವೂ ಇಲ್ಲದೆ ವಿವಿಧ ಧರ್ಮಗ್ರಂಥಗಳ ಸೊಲ್ಲುಗಳನ್ನೂ ಭಜನೆಗಳನ್ನೂ ಅವರು ಓದುತ್ತಾರೆ; ಇತರರಿಂದ ಹಾಡಿಸುತ್ತಾರೆ; ಪ್ರಾರ್ಥನೆ ಮಾಡಿಸುತ್ತಾರೆ. ಆ ಮೇಲೆ ಹೀಗೆ ಶುದ್ಧೀಕರಿಸಿದ ವಾತಾವರಣದಲ್ಲಿ, ಅಲ್ಲಿ ನಿರ್ಮಲಗೊಂಡ ಹೃದಯಗಳೊಳಗೆಲ್ಲಾ ತನ್ನ ಸಂದೇಶಗಳನ್ನು ಹೊಗಿಸುತ್ತಾರೆ. ಈ ಸಂದೇಶಗಳು ಸರ್ವ ವ್ಯಾಪಿಯಾಗುತ್ತವೆ; ಎಲ್ಲರ ಪಾಲಿನ ಮಾರ್ಗದರ್ಶನಗಳೂ ಅವುಗಳಲ್ಲಿರುತ್ತವೆ. ಅಖಿಲಭಾರತ ಆಕಾಶವಾಣಿಯು ಮಹಾತ್ಮರ ಪ್ರಾರ್ಥನಾನಂತರದ ಭಾಷಣಗಳನ್ನು ತಪ್ಪದೆ ಘೋಷಿಸುವ ಕಾರ್ಯಕ್ರಮವಿಟ್ಟುಕೊಂಡಿದೆ; ಪತ್ರಿಕೆಗಳಲ್ಲೂ ಅವು ಪ್ರಕಟಗೊಳ್ಳುತ್ತವೆ. ರಾಷ್ಟ್ರ ಮತ್ತು ಜಗತ್ತು ಇಂದು ಗಾಂಧೀಜಿಯ ಅಭಿಪ್ರಾಯಗಳನ್ನರಿಯುವದು ಈ ಮಾಧ್ಯಮದ ಮೂಲಕವೇ. ಢಿಲ್ಲಿಯಲ್ಲಿರುವ ಗಾಂಧೀಜಿಯ ಸಂದೇಶಗಳಲ್ಲಿ ಬಂದ ಕೆಲವು ಅಮರವಾಣಿಗಳನ್ನು ಇಲ್ಲಿ ಉದ್ಧರಿಸಲಾಗಿದೆ:–

ರೈತನೇ ಆಳಬೇಕು

"ಸ್ವತಃ ಬೇಸಾಯಗಾರನಾಗಿರುವ ಪ್ರಾಂತಿಕ ಕಾಂಗ್ರೆಸ್ ಕಮಿಟಿಯೊಂದರ ಕಾರ್ಯದರ್ಶಿಯೊಬ್ಬರು ನನಗೆ ಬರೆದ ಪತ್ರದಲ್ಲಿ 'ಮುಖ್ಯ ಮಂತ್ರಿಗಳಲ್ಲವಾದರೆ ಕೊನೆಯ ಪಕ್ಷ ಆಹಾರ ಮಂತ್ರಿಯಾದರೂ ಒಬ್ಬ ರೈತನಾಗಿರಬೇಕು' ಎಂದು ಸೂಚಿಸಿದ್ದಾರೆ. ಸರ್ದಾರರು (ಪಟೇಲ್) ಒಂದು ಬೇಸಾಯಗಾರ ಕುಟುಂಬದಲ್ಲಿ ಹುಟ್ಟಿದವರು. ಬೇಸಾಯದ ಕುರಿತು ಅಲ್ಪಸ್ವಲ್ಪ ಅವರಿಗೆ ಗೊತ್ತಿದ್ದರೂ, ಉದ್ಯೋಗತಃ ಅವರು ಬ್ಯಾರಿಸ್ಟರ್. ಅವರ ಪ್ರಧಾನ ಮಂತ್ರಿ (ನೆಹರು) ಮಹಾ ವಿದ್ವಾಂಸ, ದೊಡ್ಡ ಚರಿತ್ರೆಗಾರ ಮತ್ತು ದೊಡ್ಡ ಲೇಖಕ. ಆದರೆ ಬೇಸಾಯ ಹಾಗೂ ಕೃಷಿ ವಿಧಾನಗಳ ಕುರಿತು ಅವರಿಗೇನೂ ಗೊತ್ತಿಲ್ಲ. ಮಿಕ್ಕೆಲ್ಲಾ ಮಂತ್ರಿಗಳೂ ಸುಖಜೀವಿ ಶ್ರೀಮಂತರೇ; ಎಂದೂ ಹೊಲ ಗದ್ದೆಗಳಲ್ಲಿ ದುಡಿದವರಲ್ಲ. ಆದರೆ ಭಾರತದ ಜನತೆಯು ಶೇಕಡಾ 80 ಕ್ಕೂ ಮಿಕ್ಕದವರು ರೈತರೇ ಆಗಿದ್ದಾರೆ. ಭೂಮಿಯ ಸಾರ ಮತ್ತು ಉತ್ಪನ್ನವನ್ನು ಹೆಚ್ಚಿಸುವ ರೀತಿ ನೀತಿಗಳೆಲ್ಲಾ ಓರ್ವ ಕಿಸಾನನಿಗೆ ಮಾತ್ರ ಗೊತ್ತು. ಕಿಸಾನರ ಲಾಭ ನೋರಕಸಗಳು ಎಲ್ಲೆಲ್ಲಿವೆ, ಹೇಗಿವೆ, ಮತ್ತು ಯಾಕಿವೆ, ಎಂಬ ಗುಟ್ಟುಗಳನ್ನು ಬಲ್ಲವನು, ಮತ್ತು ಪಾಪಕ್ಕೆ ಪ್ರಾಯಶ್ಚಿತ್ತ ಮಾಡಬಲ್ಲವನು ಅವನೊಬ್ಬನೇ. ಪ್ರಜಾಪ್ರಭುತ್ವದಲ್ಲಿ ಕಿಸಾನನೇ ಆಳುವವನಾಗಬೇಕು. ನಿಜಕ್ಕೂ ನಾನೊಬ್ಬ ಯಥಾರ್ಥವಾದಿ ಹಾಗೂ ಸಮರ್ಥ ಕಿಸಾನನನ್ನೇ ಮುಂದೊಡ್ಡಬಲ್ಲೆನು ಎನ್ನುತ್ತೇನೆ. ಅಂತಹ ಕಿಸಾನನಿಗೆ ಇಂಗ್ಲಿಷು ಗೊತ್ತಿರಬೇಕೆಂದೇನೂ ಇಲ್ಲ. ಅವನ ಕಾರ್ಯದರ್ಶಿಯಾಗಿ ಕೆಲಸ ಮಾಡುವಂತೆ ನಾನು ಜವಾಹಿರಲಾಲಜೀಯನ್ನು ಕೇಳಿಕೊಳ್ಳುತ್ತೇನೆ. ತನ್ನ ನಾಯಕನ ಪರವಾಗಿ ವಿದೇಶೀ ರಾಯಭಾರಿಗಳನ್ನು ಭೇಟಿಯಾಗುವಂತೆಯೂ ಮತ್ತೀ ಸೇವೆಯ ಕುರಿತು ಹೆಗ್ಗಳಿಕೆ ಪಡುವಂತೆಯೂ ಪಂಡಿತಜೀಯನ್ನು ಒಪ್ಪಿಸಬಲ್ಲೆ. ಅಂತಹ ರೈತ ಪ್ರಧಾನ ಮಂತ್ರಿಯು ತನ್ನ ವಾಸಕ್ಕೊಂದು ಅರಮನೆ ಕೇಳಲಾರ. ಆತ ಮಣ್ಣ ಗುಡಿಸಲಿನಲ್ಲಿರಬಲ್ಲ; ಆಕಾಶದಡಿಯಲ್ಲಿ ಮಲಗಬಲ್ಲ. ತನಗೆ ಬಿಡುವುದೊರಕಿದಾಗಲೆಲ್ಲಾ ಹೊಲಗದ್ದೆಗಳಲ್ಲಿ ಕೆಲಸಮಾಡಬಲ್ಲ. ಆಗ ಇಡೀ ಚಿತ್ರವೇ ಕ್ಷಿಪ್ರ ಬದಲಾವಣೆಗೊಳ್ಳಲಿದೆ. ಪಂಚಾಯತ್ ರಾಜ್ಯದಲ್ಲಿ ಭಾರತದಲ್ಲಿ ನಿಜಕ್ಕೂ ಗಣ್ಯ ಮನುಷ್ಯನೆಂದರೆ ಕಿಸಾನ್. ಅವನನ್ನು ಮುಂದೆ ತರುವುದು ಹೇಗೆಂಬ ಒಂದೇ ಪ್ರಶ್ನೆಯಿದೆ"

ದುರ್ವಾರ್ತೆಯ ದುಷ್ಪರಿಣಾಮ

"ನಿನ್ನೆ ತಾನೇ ಪ್ರತ್ಯಕ್ಷ ಢಿಲ್ಲಿಯಲ್ಲಿ ನಡೆದ ಈ ದುರಂತದ ಕಡೆಗೆ ನೋಡಿರಿ. ಕೆಲವು ಹಿಂದೂ ಸಿಕ್ಖರು ಒಂದು ಖಾಲಿಯಿದ್ದ ಮುಸ್ಲಿಂ ಮನೆಗೆ ಹೋಗಿ ಬೇಕಾಯದೇಶೀರವಾಗಿ ಅದನ್ನಾಕ್ರಮಿಸಿಕೊಳ್ಳಲು ಪ್ರಯತ್ನಿಸಿದರಂತೆ. ಅಲ್ಲೊಂದು ಹೋರಾಟ ನಡೆಯಿತು. ಯಾರೂ ಸತ್ತದ್ದಿಲ್ಲವಾದರೂ ಕೆಲವರು ಜಖಂ ಗೊಂಡರು. ಇದೊಂದು ಸಣ್ಣ ಘಟನೆಯಾದರೂ ಇದನ್ನು ಅತಿಶಯಗೊಳಿಸಿ ಸುದ್ದಿ ಹಬ್ಬಿಸಲಾಯಿತು. ನಾಲ್ಕು ಸಿಕ್ಖರು ಕೊಲೆಯಾದರೆಂಬುದೊಂದನೇ ವಾರ್ತೆ. ಇದರಿಂದ ನಿರೀಕ್ಷಿಸಬಹುದಾದ ಪರಿಣಾಮವೇ ಆಯಿತು. ಪ್ರತೀಕಾರಾತ್ಮಕವಾಗಿ ಹಲವು ಇರಿತಗಳು ನಡೆದುವು. ಈಗೀಗ ಒಂದು ಹೊಸವಿಧಾನವು ಅಸ್ತಿತ್ವದಲ್ಲಿರುವಂತೆ ಕಾಣುತ್ತಿದೆ. ಸಿಕ್ಖರ ಪದ್ಧತಿಯ ಸಣ್ಣ ಕಿರ್ಪಾನಗಳ ಸ್ಥಾನಕ್ಕೀಗ ಬಂದಿರುವ ಹರಿತಾಯುಧಗಳನ್ನು ಝಳಪಿಸುತ್ತಾ ಸಿಕ್ಖರು ತಾವಾಗಿ ಅಥವಾ ಹಿಂದುಗಳೊಡನೆ ಮುಸ್ಲಿಮರ ಮನೆಗಳಿಗೆ ಹೋಗಿ ಮನೆ ಬಿಟ್ಟು ಹೋಗುವಂತೆ ಬೆದರಿಕೆ ಬೀರುತ್ತಿದ್ದಾರೆ. ಇದು ಈ ರಾಜಧಾನಿ ನಗರದ ಭೀಕರ ದೃಶ್ಯವೆನ್ನುತ್ತೇನೆ. ಈ ವಾರ್ತೆ ಸುಳ್ಳಾಗಿದ್ದರೆ ಬಿಟ್ಟುಬಿಡಿ. ಸತ್ಯವಾಗಿದ್ದರೆ ಸರಕಾರ ಮತ್ತು ಸಾರ್ವಜನಿಕರೀರ್ವರೆಡೆಗೆ ಲಕ್ಷ್ಯಕೊಡಬೇಕಾದುದು ಅತ್ಯಗತ್ಯ. ಇನ್ನು ಹಲವು ಗಾಳೀ ವಾರ್ತೆಗಳು ನನ್ನ ಕಿವಿಗೆ ಬೀಳುತ್ತಿವೆ. ಇಂತಹ ವಾರ್ತೆಗಳಿಂದ ನಾವು ಕಲಿಯಬಹುದಾದ ಒಂದು ಪಾಠವೆಂದರೆ, ಯಾವ ರಾಷ್ಟ್ರಕ್ಕೂ ಹಿತಕರವಾಗಿರದ ದುಸ್ಥಿತಿಯಲ್ಲಿ–ಕೈಬಾಯಿಯಳತೆ ದೂರದ ಜೀವನ ಸ್ಥಿತಿಯಲ್ಲಿ–ನಾವೀಗ ಇದ್ದೇವೆಂಬುದು. ಇಂತಹ ಹೇಯ ಅಪಾಯಕರ ಗೊಂದಲಮಯೀ ವಾತಾವರಣದ ನಿವಾರಣೆಗಾಗಿ ತಾನು ಮಾಡತಕ್ಕ ತನ್ನ ಪಾಲಿನ ಕೆಲಸವೆಷ್ಟು ಮತ್ತು ಹೇಗೆ ಎಂಬುದನ್ನು ರಾಷ್ಟ್ರದ ಪ್ರತಿಯೊಬ್ಬ ನಿಜ ಸೇವಕನೂ ಈ ಸಂದರ್ಭದಲ್ಲಿ ಆಲೋಚಿಸಲೇ ಬೇಕು"

ಸಿಕ್ಖರು ನಂ. ೧ನೇ ವೈರಿಯಲ್ಲ

"ಸಿಕ್ಖರು ಇಸ್ಲಾಮಿನ ಒಂದನೇ ನಂಬರದ ವೈರಿಗಳೆಂದು ಸೂಚಿಸುವದು ನಿಜಕ್ಕೂ ತಿಳಿಗೇಡಿತನ. ಸ್ವತಃ ನನ್ನನ್ನೇ ಹಾಗೆ ಸಂಬೋಧಿಸಿದ್ದಿಲ್ಲವೆ? ಅಂದ ಮೇಲೆ ಸಿಕ್ಖರೂ ನಾನೂ ಬೇರೆ ಬೇರೆ ರೀತಿಯಿಂದ ಗಣಿಸಲ್ಪಡುವದರಲ್ಲಿ ಗೌರವವಿದೆಯೇ? ನಾನಾ ಗೌರವವನ್ನು ಎಂದೂ ಅಪೇಕ್ಷಿಸಿದವನಲ್ಲ. ನನ್ನ ಇಡೀ ಜೀವನವೇ ಈ ಆರೋಪಕ್ಕೆ ಬದ್ಧವಿರುದ್ಧವಾದ ದಾಖಲೆಯಾಗಿ ನಿಂತಿದೆ. ಇದೇ ಮಾತನ್ನು ಸಿಕ್ಖರ ಕುರಿತೂ ಹೇಳಬಹುದೆ? ಇವರು ಶೇರ್ ಇ-ಕಾಶ್ಮೀರ್ (ಶೇಖ್ ಅಬ್ದುಲ್ಲಾ) ರ ಹಿಂದಿರುವ ಸಿಕ್ಖರಿಂದ ಪಾಠ ಕಲಿತುಕೊಳ್ಳಲಿ. 'ಪಾಕಿಸ್ತಾನದಲ್ಲಿ ಯಾರ ಇರಿತ್ತಿರುವಿಕೆಯನ್ನು ಎಂದಿಗೂ ಸಹಿಸಿಕೊಂಡಿರುವುದಸಾಧ್ಯವೋ ಆ ಸಿಕ್ಖರನ್ನು ಬಲಿಕೊಟ್ಟು ಅವರಿಂದ ಪ್ರತ್ಯೇಕವಾದಲ್ಲಿ ಹಿಂದುಗಳೇನೋ ಉಳಿಯುವರೇ' ಎಂಬ ದುರ್ಬುದ್ಧಿಯ ಸೂಚನೆಯು ನನ್ನ ತಿಳುವಳಿಕೆಗೆ ಬಂದಿದೆ. ಎಷ್ಟಕ್ಕೂ ಇಂತಹ ದ್ರೋಹಾತ್ಮಕ ಲಾಭದಲ್ಲಿ ಪಾಲುಗಾರನಾಗಲಿಚ್ಛಿಸುವವನು ನಾನಲ್ಲ. ತಮ್ಮ ಸ್ವಂತಕಾರಣಗಳಿಂದಾಗಿ ಹೊರಡಲಿಚ್ಛಿಸದವರನ್ನು ಬಿಟ್ಟು ಮಿಕ್ಕುಳಿದ ಪ್ರತಿಯೊಬ್ಬ ಹಿಂದೂ ಸಿಕ್ಖನಿಗೂ ಗೌರವ ಮತ್ತು ರಕ್ಷಣೆ ಸಮೇತ ಹಿಂದಿನ ನೆಲೆ ಪಶ್ಚಿಮ ಪಂಜಾಬಿಗೂ, ಪ್ರತಿಯೊಬ್ಬ ಮುಸ್ಲಿಂ ಪಂಜಾಬಿಯೂ ಭಾರತ ಯೂನಿಯನಿಗೂ ಮರಳಿ ಬಾರದೆ ಈ ಮಧ್ಯವರ್ತೀ ಭೂಮಿಯಲ್ಲಿ ಶಾಂತಿಯೆಂಬುದಿರಲಾರದು. ನಾವು ಶಾಂತ ಹಾಗೂ ಪರಸ್ಪರ ಸಹಾಯಕ ನೆರೆಕರೆಯವರಂತೆ ಬದುಕಬೇಕಾದರೆ ಜನತೆಯು ಸಾಮೂಹಿಕ ಅದಲು ಬದಲಾವಣೆಯ ಪಾಪಗಳನ್ನು ಝಾಡಿಸಿತೊಳೆದುಕೊಳ್ಳಬೇಕು. ಪಾಕಿಸ್ತಾನದ ಪಾಪಾಚರಣೆಗಳನ್ನು ಜ್ಞಾಪಿಸಿಕೊಳ್ಳಬೇಕೆಂದು ನನ್ನನ್ನಾರೂ ಕೇಳಿಕೊಳ್ಳದಿರಲಿ. ಅದನ್ನು ಲೆಕ್ಕಿಸುವುದರಿಂದ ಹಿಂದೂ ಸಿಖ್ ನಿರ್ಗತಿಕರಿಗಾವ ಪ್ರಯೋಜನವೂ ಆಗದು. ತನ್ನ ಪಾಪದ ಮೂಟೆಯನ್ನು ಪಾಕಿಸ್ತಾನ ಹೊರಲೇ ಬೇಕಾಗಿದೆ. ಮತ್ತದು ಅತ್ಯಂತ ಭೀಕರದ್ದಿದೆ ಎಂಬುದೂ ನನಗೆ ಗೊತ್ತು. ಆಗೋಸ್ತು 15ರ ಎಷ್ಟೋ ಕಾಲಕ್ಕೆ ಮೊದಲೇ ಇವನ್ನಾರಂಭಿಸಿದವರು ಮುಸ್ಲಿಂ ಲೀಗಿನವರೇ ಎಂಬ ನನ್ನ ನಿಶ್ಚಿತಾಭಿಮತವನ್ನು ಪ್ರತಿಯೊಬ್ಬನೂ ತಿಳಿದುಕೊಂಡರೆ, (ನನ್ನ ಅಭಿಮತವೇನಾದರೂ ಬೆಲೆಬಾಳುವಂತಿದ್ದಲ್ಲಿ) ಅಷ್ಟೇ ಸಾಕು. ಅಂತೆಯೇ ಕಳೆದ ಆಗೋಸ್ತು 15ರಲ್ಲಾದರೂ ಅವರೇನಾದರೊಂದು ಹೊಸಪುಟ ಮಗುಚಿದುದೇನೂ ನನಗೆ ಕಾಣುವುದಿಲ್ಲ. ಆದರೆ ನನ್ನೀ ಹೇಳಿಕೆಯಿಂದ ನಿಮಗಾವ ಪ್ರಯೋಜನವೂ ಆಗದು. ಈ ಮುಹೂರ್ತದಲ್ಲಿ ಗೋಚರಿಸುವುದೇನೆಂದರೆ ಭಾರತ ಯೂನಿಯನಿನಲ್ಲಿರುವ ನಾವೂ ಆ ಪಾಪಕೃತ್ಯಗಳನ್ನೇ ಪ್ರತಿ ತೆಗೆದು ಅನುಯಾಯೀ ಪಾಪಿಗಳಾಗಿರುವೆವು. ಸಂಗತಿ ಪೂರ್ಣ ಕೆಟ್ಟಿದೆ. ನಾವೀಗಲಾದರೂ ಮದಾಂಧತೆಯಿಂದೆಚ್ಚತ್ತು, ಪಶ್ಚಾತ್ತಾಪಗೊಂಡು, ಮಾರ್ಪಡುವೆವೋ? ಇಲ್ಲವೇ ಪತನಗೊಳ್ಳುವೆವೋ?"

ಗುರುನಾನಕರ ಜಯಂತಿಯಲ್ಲಿ

"ಇಂದು (ನವಂಬರ್ ತಾ 28) ಗುರು ನಾನಕರ ಜನ್ಮದಿನ. ಸಿಕ್ಖರ ಒಂದು ಸಭೆಗೆ ಬರಬೇಕೆಂದು ನನಗಾಮಂತ್ರಣವಿತ್ತು. ಬಾಬಾ ಬಚಿತಾರ್ ಸಿಂಗರು ಬಂದು ನಾನು ಹೋಗಲೇ ಬೇಕೆಂದು ಒತ್ತಾಯಿಸಿದರು. ನಾನು ಪ್ರಥಮತಃ ಶಂಕಿಸಿದೆ. ನಾನು ಕೊಟ್ಟ ಕೆಲವು ಬಹಿಗುಳಿಗೆಗಳನ್ನು ನುಂಗಬೇಕಾಗಿಬಂದ ಸಿಕ್ಖರು ನನ್ನ ಮೇಲೆ ಸಿಟ್ಟುಗೊಂಡಿದ್ದಾರೆಂದು ಬಾಬಾ ಸಾಹೇಬರಿಗೆ ಹೇಳಿದೆ. ನಾನೇನೇ ಹೇಳಿದ್ದರೂ ಅದೆಲ್ಲವೂ ಸಿಕ್ಖರಮೇಲಿನ ಪ್ರೀತಿ ಮತ್ತು ಹೃದಯ ಸಂಬಂಧದ ಬಲದಿಂದಲೇ. ಆದರೆ ಹಲವು ಸಿಕ್ಖರು ನನ್ನ ಮಾತುಗಳನ್ನು ಪ್ರತಿಭಟಿಸಿದ್ದರು. ನಾನು ಹೋಗಿ ಫಲವಿಲ್ಲವೆಂದೆ. ಆದರೆ, ಪಾಕಿಸ್ತಾನದಲ್ಲಿ ಅಮಾನುಷ ಅತ್ಯಾಚಾರಗಳಿಗೆ ಬಲಿಯಾದವರ ಸಮೇತ ಸಹಸ್ರಾರು ಸಿಖ್ ಪುರುಷರು, ಸ್ತ್ರೀಯರು, ಮಕ್ಕಳು ನನ್ನ ಉಪದೇಶಗಳನ್ನು ಕೇಳುವಾತುರದಲ್ಲಿದ್ದಾರೆಂದೂ ನಾನವರನ್ನು ನಿರಾಶೆಗೊಳಿಸಬಾರದೆಂದೂ ಬಾಬಾ ಸಾಹೇಬರು ಒತ್ತಾಯಿಸಿದರು. ನಾನೊಪ್ಪಿದೆ. ಇದನ್ನು ತಿಳಿಸಲು ಬಾಬಾ ಸಾಹೇಬರು ಸಭೆಗೆ ಹೋಗಿ ಅರ್ಧ ಘಂಟೆಯೊಳಗೆ ಮರಳಿದರು. ಬರುವಾಗ ಶೇಖ್ ಅಬ್ದುಲ್ಲಾ ಸಾಹೇಬರನ್ನೂ ಕರೆಕೊಂಡು ಬಂದಿದ್ದರು. ನನಗಾಶ್ಚರ್ಯವಾಯಿತು. ಈಗಿನ ದಿನಗಳಲ್ಲಿ ಸಿಕ್ಖರೂ ಮುಸ್ಲಿಮರೂ ಪರಸ್ಪರ ಮುಖನೋಡಿಕೊಳ್ಳುವುದಿಲ್ಲ. ಅಂದಮೇಲೆ ಶೇಖ್ ಸಾಹೇಬರು ಸಿಕ್ಖರ ಒಂದು ಸಭೆಗೆ ಹಾಜರಾಗುವದೆಂದರೇನು? ಆದರೆ ಬಾಬಾ ಸಾಹೇಬರೆಂದರು-'ಶೇಖ್ ಸಾಹೇಬರು ಕಾಶ್ಮೀರದಲ್ಲಿ ಹಿಂದೂ ಮುಸ್ಲಿಂ ಸಿಕ್ಖರನ್ನು ಒಂದುಗೂಡಿಸಿದವರು. ಅವರ ಮಾತುಗಳನ್ನು ಕೇಳುವದಕ್ಕೂ ಸಿಕ್ಖರಾತುರಿಸುತ್ತಿದ್ದಾರೆ'. ಅಂತೆಯೇ ಅಲ್ಲಿಹೋಗಿ ನಾವಿಬ್ಬರೂ ಭಾಷಣಗಳನ್ನು ಕೊಟ್ಟೆವು. ಸಹಸ್ರ ಸಂಖ್ಯೆಯ ಸಿಕ್ಖರು ಮೌನವಾಗಿ ಆಲಿಸಿದರು. ನಮ್ಮ ಮಾತುಗಳಿಂದ ಅವರು ಮನನೊಂದ ಚಿಹ್ನೆ ಕೂಡಾ ಕಂಡು ಬರಲಿಲ್ಲ. ಅವರೆಲ್ಲರೂ ತೃಪ್ತಿಪಟ್ಟರು"

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ಗುರಿಯಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ–

ದಿ ವಿಜಯಾ ಬೇಂಕ್,
ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಬಟ-ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಂಞಂಗಾಡು, ಮಡಿಕೇರಿ ಮತ್ತು ಮುಂಬಯಿ

THE VIJAYA BANK, LIMITED.

ಭಾರತ ಶಾಸನಸಭಾ ಕಾರ್ಯಕಲಾಪಗಳು

ಭಾರತ ಕೇಂದ್ರದ 'ಗ್ರಹಗತಿ'ಯು ಸಂಘ ವಿಜಯಾನಂತರದ ವಿಧಾಯಕ ವ್ಯವಸ್ಥೆಗಳ ಅಂಕಕ್ಕೆ ಬಂದಂತಿದೆ. ಮೊದಲಿನ ಕೆಲವು ವಾರಗಳಲ್ಲಿ ಭಾರತ ಸರಕಾರದ ಶಕ್ತಿ ಪ್ರದರ್ಶನವಾಗಿದ್ದರೆ, ಕಳೆದವಾರದಲ್ಲಿ ಅದರ ವ್ಯವಹಾರ ಶಕ್ತಿಗೆ ಕೆಲಸ ದೊರೆತಿದೆ.

ಭಾರತದ ಕೇಂದ್ರ ಶಾಸನಸಭೆಯು ಕಳೆದವಾರ ಹಲವು ಪ್ರಾಮುಖ್ಯ ಕಾರ್ಯಭಾರಗಳನ್ನು ನಿರ್ವಹಿಸಿದೆ. ಆ ಪೈಕಿ ಸ್ವತಂತ್ರ ಭಾರತ ರಾಷ್ಟ್ರದ ಪ್ರಥಮ 'ಆಯ-ವ್ಯಯ' ಪಟ್ಟಿಯನ್ನು ಮಂಡಿಸಿದುದು ಮುಖ್ಯವಾದುದು. ಈ ಪ್ರಥಮ 'ಬಜೆಟ್' ನ್ಯೂನತೆಯನ್ನು ಸೂಚಿಸುತಿದ್ದರೂ,ರಾಷ್ಟ್ರದ ಆರ್ಥಿಕಸ್ಥಿತಿ ಭದ್ರವಿದೆ ಎಂಬ ಭರವಸೆಯನ್ನೂ ತೋರಿಸಿದೆ. ಭಾಷಾವಾರು ಪ್ರಾಂತ್ಯಗಳ ರಚನೆಯ ಕುರಿತು ನೆಹರುಗಳತ್ತ ಉತ್ತರವು ಆಂಧ್ರದವರಿಗೆ ಉತ್ಸಾಹಜನಕವಿರುವಂತೆಯೇ ಕರ್ನಾಟಕ ಮತ್ತು ಮಹಾರಾಷ್ಟ್ರದವರಿಗೆ ತುಸು ನಿರಾಶಾದಾಯಿಯಿದೆ.

ದೀರ್ಘಾವಧಿಯಿಂದ ಆತ್ಯಾತುರದ ಹಾಗೂ ತೊಡಕಿನ ಪ್ರಶ್ನೆಯಾಗಿದ್ದ ಹೈದರಾಬಾದು, ಕೇಂದ್ರ ಭಾರತದೊಡನೊಂದು 'ಪ್ರಚಲಿತ ಒಪ್ಪಂದ'ಕ್ಕೆ ಬಂದುದು ಕಳೆದ ವಾರದ ಅತಿ ಮುಖ್ಯ ಘಟನೆ.

ಭಾರತ-ಪಾಕಿಸ್ತಾನಗಳೊಳಗಿನ ಸುಗಮ ಸಂಬಂಧಕ್ಕಾಗಿ ವಿವಾದಾತ್ಮಕ ಹಲವು ಪ್ರಶ್ನೆಗಳ ಕುರಿತು ಇಕ್ಕಡೆಯ ಮುಖ್ಯಾಧಿಕಾರಿಗಳೊಳಗೆ ನವದಿಲ್ಲಿಯಲ್ಲಿ ಮಾತುಕತೆಗಳು ನಡೆದಿವೆ. ಅವುಗಳಲ್ಲಿ ಕಾಶ್ಮೀರದ ಕಲಹಕ್ಕೊಂದು ತೀರ್ಮಾನ--ನಾಲಗಳ ಪಾಲುಪಟ್ಟಿ-ಇತ್ಯಾದಿ ಹಲವು ಗಣ್ಯವಿಷಯಗಳಿವೆ. ಇಷ್ಟರಲ್ಲೇ ಪಾಕಿಸ್ತಾನ ಮೆತ್ತಗಾದ ಪಾಕಿಸ್ತಾನವೀಚಾರಿ ವ್ಯವಹಾರ್ಯ ಧೋರಣೆ ವಹಿಸಿರುವುದರಿಂದ ಸಂಧಾನ ಸಾಧ್ಯತೆಯ ಲಕ್ಷಣಗಳು ಕಾಣುತ್ತಿವೆ.

ಸಿಲೋನಿಗೆ ಸ್ವರಾಜ್ಯದಾನ-ಪೆಲೆಸ್ಟೈನಿನ ವಿಭಜನಾ ವ್ಯವಸ್ಥೆ-ಜಾಗತಿಕ ಸಂಘದಲ್ಲಿ ದಕ್ಷಿಣಾಫ್ರಿಕದಲ್ಲಿರುವ ಹಿಂದೀಯರ ಸಂಕಷ್ಟಗಳ ಪ್ರಶ್ನೆ-ಚೈನಾ, ಇರಾನ್, ವಿಶೇಷ ವಿದ್ಯಮಾನಗಳು-ಇತ್ಯಾದಿ ಮುಖ್ಯ ಮುಖ್ಯ ಘಟನೆಗಳು ಅಂತರ್‌ರಾಷ್ಟ್ರೀಯ ರಂಗದಲ್ಲೂ ನಡೆದಿವೆ.

ಹಿಂದೀ ಕೇಂದ್ರ ಶಾಸನಸಭೆ

ಸ್ವತಂತ್ರ ಭಾರತದ ಪ್ರಥಮ ಆಯವ್ಯಯ ಪಟ್ಟಿಯು ಹಣಕಾಸಿನ ಮಂತ್ರಿ ಶ್ರೀ. ಆರ್. ಕೆ. ಷಣ್ಮುಗಂ ಚೆಟ್ಟಿಯಾರರಿಂದ ನವಂಬರ್ ತಾ 26ರಲ್ಲಿ ಭಾರತ ಕೇಂದ್ರ ಎಸೆಂಬ್ಲಿ (ಘಟನಾಸಮಿತಿ)ಯಲ್ಲಿ ಮಂಡಿಸಲ್ಪಟ್ಟಿತು. ಇದು 1947ನೇ ಆಗೋಸ್ತು 15ರಿಂದ 1948ನೇ ಮಾರ್ಚಿ 31ರವರೆಗಿನ 7½ ತಿಂಗಳಾವಧಿಯ ಉತ್ಪನ್ನ-ವ್ಯಯಗಳ ಪಟ್ಟಿ. ಅದಕ್ಕೂ ಹಿಂದಿನ 4½ ತಿಂಗಳ ಲೆಕ್ಕಾಚಾರಗಳಿಗೂ ಆಗೋಸ್ತು 15ರಲ್ಲಿ ಅಧಿಕಾರಕ್ಕೆ ಬಂದ ಸ್ವತಂತ್ರ ಸರಕಾರಕ್ಕೂ ಸಂಬಂಧವಿಲ್ಲ; ಅಂತೆಯೇ ಆ ಮೊದಲಿದ್ದ ಅಖಂಡಭಾರತದ ಆಯ-ವ್ಯಯಗಳಿಗೂ ಆ ಮೇಲಿನ ವಿಭಾಗಿತ ಭಾರತದ ಆಯವ್ಯಯಗಳಿಗೂ ಹೋಲಿಕೆಯಾಗುವದಿಲ್ಲ. ಈಗಿನ 'ಬಜೆಟಿನಲ್ಲಿ ಭಾರತ ಸರಕಾರದ' ಅಂದಾಜು ಉತ್ಪತ್ತಿಯು 171.15ಕೋಟಿಗಳು; ವ್ಯಯ ರೂ.197.89ಕೋಟಿಗಳು. ಕಡಿಮೆ ಬೀಳುವಮೊತ್ತ 26.24ಕೋಟಿಗಳು. ಆ ಪೈಕಿ ರಕ್ಷಣಾ ವೆಚ್ಚವು ರೂ. 92.74 ಕೋಟಿ; ನಿರಾಶ್ರಿತರಿಗಾಗಿ ತಾತ್ಕಾಲಿಕವೆಚ್ಚ ರೂ. 22ಕೋಟಿ; ಆಹಾರ ಧಾನ್ಯಗಳಿಗೆ ಸಹಾಯಧನ ರೂ. 22·52ಕೋಟಿಗಳು. ಈ ಅವಧಿಯಲ್ಲಿ ಕಡಿಮೆಬೀಳುವ ಅಂಶ ರೂ. 26·24ಕೋಟಿಗಳನ್ನು ತುಂಬಿಸಿಕೊಳ್ಳಲು ಬೇಕಾದ ಹೊಸ ತೆರಿಗೆಯನ್ನು ಹಾಕದೆ, ಹತ್ತೀ ಅರಿವೆಗಳ ರಫ್ತಿನ ಸುಂಕವನ್ನು ಬದಲಾಯಿಸಿ ಅಂತಹ ಅರಿವೆಗಳ ಚಚ್ಚೌಕ ಯಾರ್ಡಿಗೆ 4ಆಣೆಯಂತೆಯೂ ಹತ್ತೀನೂಲು ಪೌಂಡಿಗೆ 6ಆಣೆಯಂತೆಯೂ ದರ ವಿಧಿಸಲಾಗುವದು. ಇದರಿಂದ ಇಡೀ ವರ್ಷಕ್ಕೆ ರೂ. 8ಕೋಟಿ ದೊರೆತರೂ ಈ ಬಜೆಟ್ ಅವಧಿಯಲ್ಲಿ ಮತ್ತೂ ಕಡಿಮೆಬೀಳುವಂಶ 24·59 ಕೋಟಿ ಹಾಗೆಯೇ ಇರುವುದು.

ಅರ್ಥ ಸಚಿವರು ತನ್ನ 'ಬಜೆಟ್' ಭಾಷಣದಲ್ಲಿ ಭಾರತದ ಆರ್ಥಿಕ ದೃಢತೆಯ ಕುರಿತು ಭರವಸೆ ವ್ಯಕ್ತಪಡಿಸಿದ್ದಾರೆ. "ನಾವು ನಮ್ಮ ಅನುಕೂಲತೆಗಳಿಗೆ ಮೀರಿ ಜೀವಿಸುತ್ತಿಲ್ಲ. ಅಥವಾ ದಿವಾಳಿ ತೆಗೆಯುವ ಹಾದಿ ಹಿಡಿದಿಲ್ಲ" ಎನ್ನುತ್ತಾ "ನಮ್ಮ ರಕ್ಷಣಾ ವೆಚ್ಚವನ್ನು ಶಾಂತಿಕಾಲದ ಮಟ್ಟಕ್ಕೆ ಇಳಿಸಿಕೊಳ್ಳಲು ಶಕ್ತರಾದರೆ ಮತ್ತು ಆಹಾರ ಧಾನ್ಯಗಳ ಆಮದುಗಳನ್ನು ಕಡಿಮೆಮಾಡಿಕೊಂಡರೆ 1949--50ನೇ ಇಸವಿಯಲ್ಲಿ ನಾವು ಸಾಮಾನ್ಯ ಸ್ಥಿತಿಗತಿಗಳಿಗೇನೇ ಬರಬಹುದು" ಎಂದು ನಿರೀಕ್ಷಿಸಿದ್ದಾರೆ. ದೇಶ ವಿಭಜನೆ ಮತ್ತದರ ಬೆನ್ನಲ್ಲೇ ಎದ್ದ ಗೊಂದಲಗಳ ವಿಶೇಷ ವಿದ್ಯಮಾನಗಳಿಂದಾಗಿ ಈ ಆಯವ್ಯಯ ಪಟ್ಟಿಯಲ್ಲಿ ಕೊರತೆ ಬಿದ್ದುದನ್ನು ಎತ್ತಿ ಹೇಳಿ, ಪಂಜಾಬು ನಿರಾಶ್ರಿತರ ಪಾಲಿನ ವ್ಯಯದ ಸರಿ ಮೊತ್ತವನ್ನು ಈಗ ಕಂಡುಹಿಡಿಯುವುದಸಾಧ್ಯವೆಂದಿದ್ದಾರೆ.

ಭಾಷಾವಾರು ಪ್ರಾಂತ್ಯರಚನೆ

ಆಂಧ್ರದ ಪರವಾಗಿ ಪ್ರತ್ಯೇಕಾಂಧ್ರ ಪ್ರಾಂತ್ಯರಚನೆಯ ಕುರಿತು, ಶ್ರೀ ಎನ್. ಜಿ. ರಂಗರು ಮಧ್ಯಾಹ್ನ ಶಾಸನಸಭೆಯಲ್ಲಿ ಕೇಳಿದ ಒಂದು ಪ್ರಶ್ನೆಗುತ್ತರಕೊಡುತ್ತಾ ಪ್ರಧಾನ ಮಂತ್ರಿ ಪಂಡಿತ ನೆಹರುಗಳಾಡಿದ ಮಾತುಗಳು ಆಂಧ್ರದಲ್ಲಿ ಉತ್ಸಾಹವನ್ನೂ ಕರ್ನಾಟಕ, ಮಹಾರಾಷ್ಟ್ರ, ಕೇರಳ ಮೊದಲಾದ ಪ್ರಾಂತ್ಯಗಳಲ್ಲಿ ನಿರಾಶೆಯನ್ನೂ ಹುಟ್ಟಿಸುವಂತಹವು. ನೆಹರುಗಳೆಂದರು: "ಭಾಷಾವಾರು ಪ್ರಾಂತ್ಯಗಳ ರಚನೆಯ ಬೇಡಿಕೆಯು ಸರಿಯಾಗಿ ಸರಕಾರದ ತಿಳುವಳಿಕೆಯಲ್ಲಿದೆ. ಕಾಂಗ್ರೆಸು ಹಲವು ವರುಷಗಳಿಗೆ ಮೊದಲೇ ಈ ಬೇಡಿಕೆಯನ್ನು ಅಂಗೀಕರಿಸಿದ್ದಿತು; ಮತ್ತದರ ಒಳತತ್ವವನ್ನು ಸರಕಾರವೂ ಒಪ್ಪಿಕೊಂಡಿದೆ ಹೀಗಿದ್ದರೂ ಈ ತತ್ವಕ್ಕೆ ಕಾರ್ಯ ರೂಪ ಕೊಡುವಾಗ ಇತರ ಹಲವು ವಿಷಯಗಳನ್ನು ಪರ್ಯಾಲೋಚಿಸಲಿಕ್ಕಿದೆ. ಭಾಷಾಭಾವನೆಯಿರುವಂತೆಯೇ ಭಾಷಾವಾರು ಕ್ಷೇತ್ರಗಳ ಸ್ಪಷ್ಟ ಗಡಿರೂಪಗಳಿಲ್ಲ. ಆದ್ದರಿಂದ ಒಂದು ನಿರ್ಧಾರಕ್ಕೆ ಬರುವ ಮೊದಲು ವಿಶೇಷ ಲಕ್ಷ್ಯಗೊಟ್ಟು ವಿಚಾರಣೆ ನಡೆಸಿಕೊಳ್ಳುವದು ಅಗತ್ಯ." ಎನ್ನುತ್ತಾ ನೆಹರುಗಳು ಸದ್ಯ ಸರಕಾರವನ್ನಿದಿರಿಸಿರುವ ಆವಶ್ಯಕ ಕಾರ್ಯಗಳ ಕಡೆಗೆ ಕೈತೋರಿಸಿ "ಮುಖ್ಯ ವಿಷಯಕ್ಕೇನೇ ಮುಂದಾಗಿ ಲಕ್ಷ್ಯಕೊಡಬೇಕಾಗುತ್ತದೆ. ಈಗಿನ ಮೊದಲ ವಿಷಯವೆಂದರೆ ಭಾರತದ ಭದ್ರತೆ ಮತ್ತು ಸ್ಥಿರತೆ" ಎಂದರು. "ಕೆಲವೆಡೆಗಳಲ್ಲಿ ಭಾಷಾವಾರು ಪ್ರಾಂತ್ಯಗಳನ್ನು ರಚಿಸುವುದು ತುಲನಾತ್ಮಕವಾಗಿ ಸುಲಭವಿದ್ದರೂ, ಬೇರೆಡೆಗಳಲ್ಲಿ ಅದು ವಿಶೇಷ ಕಂಟಕಗಳಿಂದಲೂ ವಾದ ವಿವಾದಗಳಿಂದಲೂ ಕೂಡಿಕೊಂಡಿದೆ. ಪ್ರಾಂತಗಳ ಪುನರ್ರಚನೆಯ ಕೊನೆಯ ನಿರ್ಣಯಾಧಿಕಾರವಿರುವುದು ಘಟನಾ ಸಮಿತಿಗೆ. ಸರಕಾರವು ಈವಿಷಯವನ್ನು ಘಟನಾಸಮಿತಿಯ ಮುಂದಿಡಲಿದೆ. ಆ ಕುರಿತು ವಿಚಾರಣೆಯ ಕಾರ್ಯಕ್ರಮಗಳನ್ನು ಕೈಕೊಳ್ಳುವಂತೆ ಕೇಳಿಕೊಳ್ಳಲಿದ್ದೇವೆ. ಒಂದು ಅಥವಾ ಹೆಚ್ಚಿಗೆ ಗಡಿನಿರ್ಣಯ ಸಮಿತಿಗಳು ನೇಮಿಸಲ್ಪಡುವವು. ಆಂಧ್ರಪ್ರಾಂತ್ಯದ ಪ್ರತ್ಯೇಕೀಕರಣದ ಬೇಡಿಕೆಯು ಸಂಪೂರ್ಣ ನ್ಯಾಯಬದ್ಧವಾದುದು; ಮತ್ತು ಆ ಕಾರ್ಯದಲ್ಲೇಳುವ ಸಂಕಷ್ಟಗಳೂ ತುಲನಾತ್ಮಕವಾಗಿ ಬಹಳ ಕಡಿಮೆ. 1935ರ ಭಾರತ ಶಾಸನದಲ್ಲಿ ಒರಿಸ್ಸಾ ಮತ್ತು ಸಿಂಧಗಳನ್ನು ಕೂಡಿಸಿದಂತೆಯೇ ಇದನ್ನು ರಾಜ್ಯಾಂಗ ಶಾಸನದಲ್ಲಿ ಪ್ರಾಂತ್ಯಗಳ ಪಂಕ್ತಿಗೆ ಜೋಡಿಸಿಕೊಳ್ಳಲು ಸಾಧ್ಯವಿದೆ. ರಾಜ್ಯಾಂಗ ಶಾಸನವು ಅಂಗೀಕರಿಸಲ್ಪಟ್ಟ ಕೂಡಲೇ ಈ ನಿರ್ಧಾರವನ್ನು ಅದಕ್ಕೆ ಪೋಣಿಸಬಹುದಾಗಿದೆ. ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತ್ಯಗಳ ರಚನೆಗೆ ವಿಶೇಷ ತೊಡಕುಗಳಿವೆ. ಮತ್ತದು ಪ್ರಾಂತ್ಯಗಳ ಆರ್ಥಿಕ ಸ್ಥಿತಿ ಮತ್ತವುಗಳ ಮಟ್ಟದ ಮೇಲೆಯೂ ಪರಿಣಾಮ ಬೀರುವಂತಿದೆ. ಆದ್ದರಿಂದ ಈ ಪ್ರಶ್ನೆಯ ಸಂಬಂಧದ ಎಲ್ಲಾ ಆಗುಹೋಗುಗಳನ್ನೂ ಅತ್ಯಂತ ಲಕ್ಷ್ಯಪೂರ್ವಕ ಪರಿಶೀಲಿಸಿಕೊಳ್ಳಬೇಕಾಗಿದೆ. ಹೇಗಿದ್ದರೂ ಸರ್ವಸಾಧಾರಣ ಒಂದು ವರುಷದೊಳಗೆ ಗಡಿ ಕಮಿಶನಿನ ಕಾರ್ಯ ಮುಗಿಯುವಂತಿಲ್ಲವೆನ್ನಲು ಕಾರಣವೇನೂ ತೋರುವುದಿಲ್ಲ" ಎಂದರು ಪ್ರಧಾನಿ ನೆಹರು. ಕರ್ನಾಟಕದ ಪರವಾಗಿ ಶ್ರೀ ದಿವಾಕರರು ಒಂದೆರಡು ಪ್ರಶ್ನೆ ಕೇಳದೆ ಬಿಡಲಿಲ್ಲ. "ಪ್ರಕೃತ ಕರ್ನಾಟಕವು ಅನೇಕ ಆಡಳಿತೆಗಳ ಕೈಕೆಳಗೆ ಸಿಕ್ಕಿ ಚಿಯ್ಯಾರಿಯಾಗಿರುವುದು ಪ್ರಧಾನ ಮಂತ್ರಿಗಳ ಅವಗಾಹನೆಯಲ್ಲಿದೆಯೇ?" ಎಂದು ದಿವಾಕರರು ಪ್ರಶ್ನಿಸಿದಾಗ "ಸರಿಯಾಗಿ ತಿಳಿದಿದೆ" ಎಂದರು. "ಹೊಸರಾಜ್ಯ ಘಟನೆ ಬರುವ ಮೊದಲೇ ಕರ್ನಾಟಕ ಪ್ರಾಂತ್ಯ ರಚಿಸಲು ಸಾಧ್ಯವಿಲ್ಲವೇ?" ಎಂದಾಗ 'ಈ ಪ್ರಶ್ನೆ ಮುಖ್ಯತಃ ಘಟನಾ ಸಮಿತಿಗೆ ಸಂಬಂಧಿಸಿದುದು' ಎಂಬಕಾರಣದಿಂದ ಅಧ್ಯಕ್ಷರಾಕ್ಷೇಪಿಸಿದರು.

ಗಾಂಧೀಜೀಯ ಸ್ಪಷ್ಟ ಅಭಿಮತ

ಆದರೆ ನೆಹರು ನಿರ್ಮಿತ ನಿರಾಶೆಯ ಬೆನ್ನಲ್ಲೇ ಭಾಷಾನುಗುಣ ಪ್ರಾಂತ್ಯರಚನೆಯು ಕ್ಷಿಪ್ರದಲ್ಲಾಗುವದುತ್ತಮವೆಂಬ ಗಾಂಧೀಜೀಯ ಅಭಿಪ್ರಾಯವು ಆಶೆಮೂಡಿಸಿದೆ. 'ಭಾಷಾವಾರು ಪುನರ್ರಚನೆ' ಎಂಬ ತಲೆಬರೆಹದಡಿಯಲ್ಲಿ ಗಾಂಧಿಜೀ 'ಹರಿಜನದಲ್ಲಿ' ಬರೆದೊಂದು ಲೇಖನದಲ್ಲಿ ಕೂಡಲೇ ಭಾಷಾನ್ವಯ ಪ್ರಾಂತ್ಯಗಳ ಪುನರ್ರಚನೆಯಾಗಬೇಕೆಂಬ ಬೇಡಿಕೆಯನ್ನು ಸವಿವರವಾಗಿ ಸಮರ್ಥಿಸಿದ್ದಾರೆ. 1920ರಲ್ಲೇ ಕಾಂಗ್ರೆಸು ತನ್ನಮಟ್ಟಿಗೆ ಜ್ಯಾರಿಗೆ ತಂದಿದ್ದ ಭಾಷಾನುಗುಣ ಪ್ರಾಂತ್ಯಗಳ ಆವಶ್ಯಕತೆ ಮತ್ತು ಸಮಂಜಸತೆಯನ್ನು ನಿರೂಪಿಸಿ "ಯಾವುದನ್ನು ಮಾಡುವುದು ನ್ಯಾಯವೋ ಅದನ್ನು ಮಾಡುವುದಕ್ಕೂ ಸರಿಯಾದ ಕಾರಣವಿನಹ ತಡಮಾಡುವದು ಸರಿಯಲ್ಲ. ಅಂತೆಯೇ ಯಾವುದು ಅನ್ಯಾಯವೋ ಅದನ್ನು ಎಂತಹ ಪರಿಸ್ಥಿತಿಯಲ್ಲಿಯೂ ಕೈಕೊಳ್ಳಕೂಡದು. ಅನ್ಯಾಯದೊಡನೆಯೂ ಸಂಧಾನವಿಲ್ಲ. ಯಾವದೃಷ್ಟಿಯಿಂದ ನೋಡಿದರೂ ಭಾಷಾವಾರು ಪುನರ್ರಚನೆಯು ಅಪೇಕ್ಷಣೀಯವಿರುವಾಗ ಇನ್ನಬನ್ನು ಹಿಂ

ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

ದೇಶೋನ್ನತಿಯನ್ನು ಬಯಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು. ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು, ಅವರ ಏಳಿಗೆಯನ್ನು ಬಯಸುವುದು. ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒದಗಿಸಿಕೊಡುವುದು, ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬ್ಯಾಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

ಒಂದೂವರೆ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಬಲದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906.

CANARA BANK LIMITED.

ಭಾರತ-ಹೈದರಾಬಾದು ತಾತ್ಪೂರ್ತಿಕ ಒಪ್ಪಂದ.

ದೆಹಾಕುವದನ್ನು ಬಿಡಬೇಕು" ಎಂದು ಒತ್ತಿ ಹೇಳಿದ್ದಾರೆ- ಪ್ರಾಂತಿಕ ಭಾಷಾ ಕ್ಷೇತ್ರಗಳೊಳಗಡೆಯ ಕೆಲವು ಉಪ ಭಾಷೆಗಳವರೂ ಪ್ರತ್ಯೇಕತೆಗೆ ಉಮೇದ್ವಾರಿಗಳಾಗಿರುವ ಕುರಿತು ಗಾಂಧಿಜೀಯಾಡಿರುವ ಮಾತುಗಳು ಮನನೀಯವಿವೆ: "1920ರಲ್ಲಿ ಇದ್ದಂತಹ ಘನತೆ ಮತ್ತು ಅಧಿಕಾರಗಳು ಈಗ ಕಾಂಗ್ರೆಸಿಗಿಲ್ಲ. ಆತೆಯ ಸ್ಥಾನವನ್ನು ನಿರಾಶೆಯಾಕ್ರಮಿಸಿಕೊಂಡಿವೆ. ಈಗ ನಮಗೆ ಸ್ವಾತಂತ್ರ್ಯ ದೊರೆತಿದೆ; ಅದನ್ನೇನು ಮಾಡುವದೆಂದು ನಾವೇ ತಿಳಿಯದಂತಿದ್ದೇವೆ. ಅದು ಆತ್ಮಹತ್ಯಾಸಮಾನ ಅರಾಜಕತೆಯೆಂಬಂತಹ ಪ್ರಮಾದ ಮೊಳೆತಿದೆ. ಎಲ್ಲಾ ಒಳ್ಳಿತನ್ನೂ ಒಳಗೊಂಡಿರುವ ಭಾರತದ ಹಿತಸಾಧನೆಯಲ್ಲೇ ಸರ್ವ ಉಪಭಾಗಗಳ ಹಿತಸಾಧನೆಗಳೂ ಪ್ರಥಮತ: ಸಹಾನುಯಾಯಿಗಳಾಗಬೇಕು. ಜಾತೀಯ ಗಲಭೆಗಳು ನಿರ್ಮೂಲವಾದಕೂಡಲೇ ಆ ಸುಖದಾಯೀ ದಿನ ಬರುವುದು. ಅಷ್ಟರೊಳಗೆ ದಕ್ಷಿಣ ಭಾಗದ ಭಾಷಾವಾರು ಸಂಗಡಗಳು ತಮ್ಮೊಳಗಿನ ವಿವಾದಗಳನ್ನೂ ಗಡಿಗಳನ್ನೂ ತಾವೇ ತೀರ್ಮಾನಿಸಿ ನಿರ್ಧರಿಸಿಕೊಳ್ಳುವವೆ? ಬೊಂಬಾಯಿಯು ಭಾಷಾವಾರು ಪ್ರಾಂತ್ಯಗಳ ಸರ್ವಸಮ್ಮತ ಯೋಜನೆಯೊಂದನ್ನು ತಯಾರಿಸುವುದೆ? ಹೊಸ ಉಮೇದ್ವಾರಿಗಳು ಕೊನೆಯ ಪಕ್ಷ ಈ ಕಾಲದ ಮಟ್ಟಿಗಾದರೂ ತಮ್ಮ ಬೇಡಿಕೆಗಳನ್ನು ಹಿಂದೆಗೆದುಕೊಳ್ಳುವರೆ? ಹಾಗಾದಲ್ಲಿ ಭಾಷಾವಾರು ಪ್ರಾಂತ್ಯಗಳು ರವಷ್ಟು ತೊಡಕು ಅಥವಾ ಗೊಂದಲವಿಲ್ಲದೆ ಇಂದೇ ಅಸ್ತಿತ್ವಕ್ಕೆ ಬರುವುವು. ಕಾಂಗ್ರೆಸಿನ ಅಸ್ತಿವಾರವೇ ಅಲುಗಾಡುತ್ತಿರುವಾಗ ಅದರ ಮೇಲೆ ಅನಗತ್ಯ ಭಾರವನ್ನಾಗಲಿ ಹೇರದೆ ... ವಿವಾದ ನಿರತ ಪಕ್ಷಗಳಿಗೊಂದು ನ್ಯಾಯ ತೀರ್ಮಾನ ಕೊಡುವಂಥಾ, ಇಲ್ಲನೇ ಹೋರಾಟಗಾರರನ್ನು ತನ್ನ ಸಂಕಲ್ಪದಡಿಗೆ ತರುವಂಥಾ ಬಲ ಸೌಕರ್ಯಗಳು ಕಾಂಗ್ರೆಸಿಗಿಂದು ತೀರಾ ಕಡಿಮೆಯಾಗಿವೆ".

ಹಾಗಾದರೇನು?

ಈ ರೀತಿ ಸರಕಾರದ ಪ್ರಧಾನಿ ಮತ್ತು ಸರಕಾರದ ಮಾರ್ಗದರ್ಶಕ ನೆಹರುಜೀ ಗಾಂಧಿಜೀಗಳ ಮಾತುಗಳ ಮೇಲಿಂದ ಕೆಲವು ವಿಚಾರಗಳೂ ಕೆಲವು ಪ್ರಶ್ನೆಗಳೂ ಏಳುತ್ತಿವೆ:-ಆಂಧ್ರ ಪ್ರಾಂತ್ಯವು ಹೊಸ ರಾಜ್ಯಾಂಗ ಶಾಸನಗಳ ಜ್ಯಾರಿಯೊಂದಿಗೇನೇ ಅಸ್ತಿತ್ವಕ್ಕೆ ಬರಬಹುದು; ಆದರೆ ಕರ್ನಾಟಕ ಪ್ರಾಂತ್ಯ ರಚನೆ, ಅಥವಾ ಮಹಾರಾಷ್ಟ್ರ, ಕೇರಳ ಪ್ರಾಂತ್ಯಗಳ ರಚನೆ ಅದರೊಂದಿಗಾಗದು; ಇವು ವಿಚಾರಣೆಗೆ ನಿಲ್ಲಬೇಕಾಗುವುದು. ಕರ್ನಾಟಕ, ಕೇರಳಗಳು ಆಂಧ್ರರಹಿತ ತಮಿಳುನಾಡಿನ ಭಾಗಗಳಾಗಿಯೇ ಮತ್ತೂ ಹಲವು ತಿಂಗಳುಗಳವರೆಗಾದರೂ ಉಳಿಯಬೇಕಾಗುವುದು. ಆದರೆ ಆಂಧ್ರದ ಗಡಿನಿರ್ಧರಿಸುವಾಗ ಆದರೊತ್ತುಗಳಲ್ಲಿರುವ ತಮಿಳುನಾಡು, ಕರ್ನಾಟಕ, ಕೇರಳ, ಮಹಾರಾಷ್ಟ್ರಗಳ ಆ ಭಾಗಗಳ ಗಡಿಗಳನ್ನಾದರೂ ನಿರ್ಧರಿಸಲೇ ಬೇಕಾಗುವದಲ್ಲವೆ? ಆ ತೊಡಕುಗಳನ್ನು ಬಿಡಿಸುವ ಕಷ್ಟಗಳಿಗಿಂತ ಎಲ್ಲಾ ಭಾಷಾವಾರು ಪ್ರಾಂತ್ಯಗಳ ಎಲ್ಲಾ ಗಡಿ ನಿರ್ಧಾರಗಳನ್ನು ಮಾಡುವುದರಲ್ಲಿರುವ ಅಡಚಣೆಗಳು ಹೆಚ್ಚೆಷ್ಟು? ಅಂದ ಮೇಲೆ ಆಗಲೇ ಎಲ್ಲವನ್ನೂ ನಿರ್ಧರಿಸುವುದು ನ್ಯಾಯ ಮತ್ತು ಸಾಧ್ಯವಲ್ಲವೆ? ನೆಹರುಗಳನ್ನು ಹೆದರಿಸಿರುವ 'ಕರ್ನಾಟಕ ಮಹಾರಾಷ್ಟ್ರಗಳಲ್ಲಿರುವ ವಿಶೇಷ ತೊಡಕುಗಳು ಮತ್ತು ಸ್ಥಿತಿ ವ್ಯತ್ಯಾಸಗಳು' ಯಾವುವು? ಹಣಕಾಸು ಮತ್ತು ಇತರ ಯೋಗ್ಯತೆಗಳಲ್ಲಿ ಕರ್ನಾಟಕವು ಘನ ಪ್ರಾಂತವೆನ್ನಿಸಲು ಸಾಧ್ಯವಿಲ್ಲವೆ? ಅಥವಾ 'ಕೊಂಕಣಿ' 'ತುಳು' ಇತ್ಯಾದಿ ನಾಮಮಾತ್ರ ಚಳವಳಗಳಿಗೂ ನೆಹರುಗಳು ಅನಗತ್ಯ ಪ್ರಾಮುಖ್ಯತೆಯಿತ್ತಿರಬಹುದೆ? ಗಾಂಧಿಜೀ ಕೂಡಾ 'ಹೊಸ ಉಮೇದ್ವಾರ'ಗಳನ್ನು ಹಿಂದೆಗೆಯಬೇಕೆಂದು ಕೇಳಿಕೊಳ್ಳಬೇಕಾದರೆ ಪ್ರಾಂತ್ಯದೊಳಗಿನ ಉಪಭಾಷೆಗಳ ಬೇಡಿಕೆಗಳು ಮೂಲ ಅಧಿಕಾರೀ ಮಂಡಲಿಯ ತಲೆಯೊಳಗೆ ಕೀಟಗಳಂತೆ ಹೊಕ್ಕಿರಬೇಕೆಂಬುದು ಸ್ಪಷ್ಟವಿದೆ. ಬೇಡಿಕೆಗಳಲ್ಲಿ ಹುರುಳಿರುವಂತಹದಾವುದು, ಹೊಟ್ಟಾವುದು, ಎಂಬುದನ್ನು ನಿರ್ಧರಿಸುವದಕ್ಕೂ ಅನಗತ್ಯ ಕಾಲಹರಣ ಮಾಡಬಹುದೆ?-ಇಂತಹ ಸಂದೇಹಗಳನ್ನು ನಿವಾರಿಸುವ ವಿಧಾನಗಳು ಕೂಡಲೇ ಮುಂಬರುವವೆಂದು ನಂಬಲಾಗಿದೆ.

ಮೆಂಬರರಿಗೆ

15-12-47ರ ವರೆಗೆ ಮಾತ್ರ ನಮ್ಮ ಎಲ್ಲಾ ...ಗಳ ಖಂಡಿತ ಕ್ರಯದ ಮೇಲೆ 6¼% ಕಮಿಶನ್ ಕೊಡಲಾಗುವುದು.

ಕನ್ನಡ ಸೋಪ್ ಎಂಡ್ ಇಂಡಸ್ಟ್ರಿಯಲ್ಸ್ ಲಿಮಿಟೆಡ್

ಮಂಗಳೂರು.

ಹೈದರಾಬಾದು ಒಪ್ಪಂದ

ಕೇಂದ್ರ ಭಾರತ ಮತ್ತು ಹೈದರಾಬಾದುಗಳು ಇದೇ ನವಂಬರ್ ತಾ 29ರಲ್ಲಿ ಸಹಿಹಾಕಿದ, ಆ ತಾರೀಕಿನಿಂದ ಒಂದುವರುಷದ ವರೆಗೆ ಮಾತ್ರ ಬಾಳಿಕೆಯಿರುವ ಒಂದು 'ಪ್ರಚಲಿತ ಒಪ್ಪಂದ'ದ ಕರಾರು ಯಾವಕಡೆಯವರೂ ಹೆಗ್ಗಳಿಕೆ ಅಥವಾ ನಾಚಿಕೆ ಪಡದಂತಿದೆ. ಅಥವಾ ಹೊಸತೇನನ್ನೂ ನಿರ್ಮಿಸದೆ ವಾತಾವರಣವನ್ನು ಇದ್ದಂತೆ ಇರಗೊಡಿಸಿದೆ ಎಂದರೂ ತಪ್ಪಾಗದು. ಸೂಕ್ಷ್ಮವಾಗಿ ಆಲೋಚಿಸಿದಲ್ಲಿ ಇಕ್ಕಡೆಯವರೂ ತಂತಮ್ಮ ಇಚ್ಛಾನುಸಾರ ವರ್ತಿಸಲಾಗುವಂತೆ ವಿಸ್ತಾರ ಕಾರ್ಯರಂಗವಲ್ಲಿ ಖಾಲಿಬಿದ್ದಿದೆ. ಮುಂದಿನ ಒಂದು ವರುಷಾವಧಿಯಲ್ಲಿ ಹೈದರಾಬಾದಿನ ಚಲನ ವಲನಗಳನ್ನು ಭಾರತ ಸರಕಾರ ನೋಡುತ್ತಿರಬಹುದು- ಹೈದರಾಬಾದು ಭಾರತ ಸರಕಾರಕ್ಕದನ್ನು ತಿಳಿಸಿ ಮಾಡಿದರಾಯಿತು—ಎಂದಿಷ್ಟೇ ನಿರ್ಣಯವಾದಂತಿದೆ. ಅಂತೂ ಎರಡು ಸರಕಾರಗಳ ನಡುವೆ ಒಂದು ಕಟ್ಟು ಬೀಳುವ ಬದಲಿಗೆ, ಎರಡಕ್ಕೂ ಒಂದೇ ಮುಸುಕು ಬಿದ್ದಂತಾಗಿದೆ. ಇಂತಹ ಛಾಯಾ ಸಂಬಂಧ ಸಮಾಧಾನಕರವಲ್ಲದಿದ್ದರೂ ಇದಕ್ಕಿರುವ ಅವಧಿಯು ಒಂದೇ ವರುಷವಾದ್ದರಿಂದ ಇದನ್ನು ಮದುವೇ ಮೊದಲಿನ,ಪರೀಕ್ಷಾರ್ಥಜತೆಜೀವನಕ್ಕೆ ಹೋಲಿಸಬಹುದು! ಹೈದರಾಬಾದು ಪ್ರಜೆಗಳ ಜವಾಬ್ದಾರೀ ಸರಕಾರ ಸ್ಥಾಪನಾ ಸಂಬಂಧ ಚಳವಳಕ್ಕೂ ಈ ಕರಾರಿಗೂ ಯಾವ ಸ್ಪಷ್ಟ ಸಂಬಂಧವೂ ಇಲ್ಲವೆಂಬುವುದನ್ನು ಮರೆಯಬಾರದು.

ಕರಾರು ಶರ್ತಗಳು

ಭಾರತ-ಹೈದರಾಬಾದು ಒಪ್ಪಂದ ಕರಾರಿನ ಮುಖ್ಯ ಶರ್ತಗಳು ಹೀಗಿವೆ:-

ಇಕ್ಕಡೆಯ ಪ್ರಯೋಜನಾರ್ಥವಾಗಿ ನಿಕಟ ಸಂಬಂಧ ಮತ್ತು ಅನ್ಯೋನ್ಯತೆಯಿಂದ ಪರಸ್ಪರ ಕೆಲಸ ಮಾಡಬೇಕೆಂಬುದೇ ಭಾರತ ವಸಾಹತು ಮತ್ತು ಹೈದರಾಬಾದು ಹಾಗು ಬೆರಾರಿನ ನಿಜಾಮರ ಧ್ಯೇಯ ಮತ್ತು ಘೋಷಣೆಯಾಗದೆಯಾದರೂ ಆ ಸಂಬಂಧದ ರೂಪ ಸ್ವಭಾವಗಳ ಕುರಿತು ಕೊನೆಯ ಒಪ್ಪಂದವೀತನಕ ಆಗಿಲ್ಲ.

ಅಂತಹ ಒಪ್ಪಂದಕ್ಕೆ ಬರುವ ಮೊದಲು ಇಕ್ಕಡೆಗೂ ಹಿತಕರವಾಗುವಂತೆ ಪ್ರಚಲಿತ ಒಪ್ಪಂದವೇ ಮುಂದುವರಿಯಬೇಕಾಗಿದೆ. ಆದಕ್ಕಾಗಿ ಈ ಕೆಳಗಿನ ಕರಾರು ಒಪ್ಪಲ್ಪಟ್ಟಿದೆ.

ವಿದೇಶ ಸಂಬಂಧ, ರಕ್ಷಣೆ ಮತ್ತು ಸಂಚಾರ ವ್ಯವಹಾರ ವಿಭಾಗಗಳ ಸಮೇತ ಸಮಾನ ಸಂಬಂಧದ ಎಲ್ಲಾ ವಿಷಯಗಳಲ್ಲೂ ಆಗೋಸ್ತು 15ರ ಪೂರ್ವದಲ್ಲಿ ಚಕ್ರವರ್ತಿ ಸರಕಾರ ಮತ್ತು ನಿಜಾಮ್ ಸರಕಾರಗಳೊಳಗಿದ್ದ ಒಪ್ಪಂದ ಮತ್ತು ವ್ಯವಸ್ಥಾ ಸಂಬಂಧಗಳೆಲ್ಲವೂ ಯೋಗ್ಯವಾಗಿರುವ ಮಟ್ಟಿಗೆ ಭಾರತ ವಸಾಹತು ಸರಕಾರ ಮತ್ತು ನಿಜಾಮ್ ಸರಕಾರಗಳೊಳಗೆ ಅಸ್ತಿತ್ವದಲ್ಲಿರತಕ್ಕದ್ದು.

ಒಳವ್ಯವಸ್ಥೆಗಾಗಿ ನಿಜಾಮರ ಸಹಾಯಕ್ಕೆ ಸೇನೆಕಳುಹಿಸುವುದು—ಯುದ್ಧಾವಧಿಯಲ್ಲಿ ಹೊರತು ಮತ್ತು ನಿಜಾಮರ ಒಪ್ಪಿಗೆ ವಿನಹ ಹೈದರಾಬಾದಿನೊಳಗೆ ಸೇನೆಯಿಡುವುದು, ಯುದ್ಧಾನಂತರದ ದಿನಗಳಿಗೆ ಮೀಸಲ್ಪಟ್ಟು ವಿನಾಕಾರಣ ಹೈದರಾಬಾದಿನಲ್ಲಿ ಸೇನೆ ನಿಲ್ಲಿಸುವುದು—ಈ ವಿಷಯಗಳಲ್ಲಿ ಭಾರತ ಸರಕಾರಕ್ಕೆ ಯಾವ ಹಕ್ಕು ಅಥವಾ ಹಾಗೆ ಮಾಡಬೇಕೆಂಬ ಹಂಗಿರುವುದಿಲ್ಲ.

ಈ ಒಪ್ಪಂದದ ಪಾಲನೆಯ ಕಾರ್ಯ ನಿರ್ವಹಣಕ್ಕಾಗಿ ಭಾರತ ಮತ್ತು ಹೈದರಾಬಾದುಗಳು, ಹೈದರಾಬಾದು ಮತ್ತು ದಿಲ್ಲಿಯಲ್ಲಿ ಪರಸ್ಪರ ಏಜಂಟರನ್ನು ನೇಮಿಸಿಕೊಳ್ಳಬೇಕು. ಮತ್ತಾ ಏಜಂಟರುಗಳಿಗೆ ಕಾರ್ಯಾವಶ್ಯ ಸರ್ವಾನುಕೂಲತೆಗಳನ್ನು ಆಯಾಯ ಸರಕಾರಗಳವರು ಕೊಡಬೇಕು.

ಈ ಕರಾರಿನಲ್ಲಿ ಯಾವುದೇ ಮೇಲಾಧಿಕಾರೀ ಹಕ್ಕು ಸಂಬಂಧಗಳ ನಿರ್ಮಾಣವಾಗಿಲ್ಲ, ಅಥವಾ ಸೇರಿಲ್ಲ.

ಈ ಕರಾರಿನ ವಾಯಿದೆಯೊಂದಿಗೆ, ಇದರಲ್ಲಡಕವಾಗಿರುವ ಎಲ್ಲಾ ಸಂಬಂಧದ ಶರ್ತ ಹಕ್ಕು ಬಾಧ್ಯತೆಗಳೂ ಮುಗಿಯುವವಲ್ಲದೆ ಯಾವಾಂಶವೂ ಅನಂತರಕ್ಕುಳಿಯದು.

ಈ ಕರಾರಿನ ವಿಷಯಗಳ ಸಂಬಂಧದಲ್ಲಿ ಏನಾದರೂ ವಿವಾದಗಳೆದ್ದಲ್ಲಿ ಇಕ್ಕಡೆಯವರೂ ಒಬ್ಬೊಬ್ಬ ನ್ಯಾಯಾಧೀಶನನ್ನು ನೇಮಿಸಿಕೊಳ್ಳಬೇಕು-ಆ ಇಬ್ಬರು ಒಬ್ಬ ಮಧ್ಯಸ್ಥ ನ್ಯಾಯಾಧೀಶನನ್ನು ನೇಮಿಸಿಕೊಳ್ಳಬೇಕು-ಈ ಮೂವರ ಸಮಿತಿಯು ಕೊಟ್ಟ ತೀರ್ಮಾನವು ಸಿಂಧುವಾಗಬೇಕು.

ಈ ಕರಾರು ಕೂಡಲೇ (ತಾ 29-11-47ನೇ ಮಧ್ಯಾಹ್ನ 12-40ಘಂಟೆಗೆ) ಜ್ಯಾರಿಗೆ ಬಂದು ಒಂದು ವರುಷ ಅಸ್ತಿತ್ವದಲ್ಲಿರುವುದು. ಹಿಂದೀ ಸರಕಾರದ ಪರವಾಗಿ ಗವರ್ನರ್ ಜನರಲ್ ಮೌಂಟ್ ಬೇಟನರೂ ಹೈದರಾಬಾದಿನ ಪರವಾಗಿ ನಿಜಾಮರೂ ಸಹಿಹಾಕಿದ್ದಾರೆ.

ಕೆಲವು ಗಣನೀಯಾಂಶಗಳು

ಮೇಲಿನ ಕರಾರಿಗೆ ಸಹಿಹಾಕುವ ಮೊದಲು ಗವರ್ನರ್ ಜನರಲ್ ಮತ್ತು ಹೈದರಾಬಾದಿನ ನಿಜಾಮರು ಪರಸ್ಪರ ಪತ್ರ ಬರೆದು ಮಾಡಿ ಕೊಂಡ ದಾಖಲೆಗಳಂತೆ ಸ್ಪಷ್ಟವಾಗಿರುವ ವಿಷಯಗಳು:-ಹೈದರಾಬಾದಿನೊಳಗಡೆ ತಂತಿ ಟಪ್ಪಾಲು ಟೆಲಿಫೋನುಗಳನ್ನು ತನಗೆ ಒಪ್ಪಿಸಬೇಕೆಂಬ ನಿಜಾಮರ ಬೇಡಿಕೆಯ ಕುರಿತು ಸಾಧ್ಯವಿದ್ದಷ್ಟು ಬೇಗ ಮಾತುಕಥೆ ನಡೆವುದು. ನಿಜಾಮ್ ಸರಕಾರಕ್ಕೆ ನ್ಯಾಯವಾಗಿ ಅಗತ್ಯ ಬೀಳುವ ಆಯುಧೋಪಕರಣ ಮತ್ತು ಮದ್ದುಗುಂಡುಗಳನ್ನು ಹಿಂದಿ ಸರಕಾರವೇ ಒದಗಿಸು

(೬ನೇ ಪುಟ ನೋಡಿರಿ)

THE

CANARA MUTUAL ASSURANCE CO., LIMITED.

UDIPI.

Estd. 19..

NEW APPOINTMENTS.

A few clerks will be entertained this month for permanent posts in the Company. Applications with testimonials may be sent to the undersigned by the 10th December, 1947.

Udipi. 2—12—1947

T. R. A. Pai,
Managing Director

The Canara Banking Corporation Limited.

(Incorporated in British India).

Estd: 1906.

Head Office: **UDIPI**, S. India.

ANNOUNCEMENT

A branch of the BANK has been opened at High Road, **TRICHUR.** (Cochin State)

on 28th November, 1947.

ನವಯುಗ

ಗುರುವಾರ, ಉಡುಪಿ, ೪-೧೨-'೪೭

ರಾಷ್ಟ್ರದ ರಕ್ಷಣೆ

ಭಾರತವು ಸ್ವತಂತ್ರವಾಗಿ 110ದಿನಗಳಷ್ಟೇ ಕಳೆದಿವೆ. ಈ ಅವಧಿಯಲ್ಲಿ ರಾಷ್ಟ್ರದ ಸರ್ವೆಡೆಗಳವರೆಗೂ ಒಂದಲ್ಲೊಂದು ಘಟನೆಗಳ ಮೂಲಕ ಪ್ರತಿದಿನವೆಂಬಂತೆ ಮುಂದಟ್ಟಾಗುತ್ತಾ ಬಂದಿರುವ ಒಂದು ವಿಷಯವೆಂದರೆ ರಾಷ್ಟ್ರೀಯ ಯೋಧರ-ಗೃಹರಕ್ಷಕ ದಳಗಳ-ಆವಶ್ಯಕತೆ. ಎಲ್ಲೆಲ್ಲೂ ಹಬ್ಬಿರುವ ಜಾತೀಯ ಗಲಭೆಗಳು, ಜಾತೀಯ ವೈಷಮ್ಯ-ಸರ್ವೆಡೆಗಳಲ್ಲೂ ಕಂಡುಬರುತ್ತಿರುವ ಸೈನಿಕ ಮರ್ಜಿ ವಿಧಾನಗಳ ಜಾತೀಯ ದಳಗಳು, ಮತ್ತವು ಹಬ್ಬಿಸುತ್ತಿರುವ ಜಾತೀಯತಾ ಮನೋವೃತ್ತಿ-ಜನಸಾಮಾನ್ಯದಲ್ಲಿ ವ್ಯಾಪಿಸಿರುವ ನಿಸ್ಸಹಾಯಕಸ್ಥಿತಿ, ದುರ್ಬಲ ಮನೋವೃತ್ತಿ, ಮತ್ತು ಭಯ ಗೊಂದಲಗಳು-ಇವೆಲ್ಲವುಗಳ ನಿವಾರಣೆಯು ಅತ್ಯವಸರದಲ್ಲಾಗಬೇಕಾದುದು ಅಗತ್ಯ, ಅನಿವಾರ್ಯ ಎಂಬ ಕುರಿತು ಅನುಮಾನವಿಲ್ಲ. ಕೊನೆಯಪಕ್ಷ, ವಯಸ್ಸಿನ ಒಂದು ನಿಶ್ಚಿತ ಗಡಿಯೊಳಗಿರುವ ಎಲ್ಲಾ ಹಿಂದೀ ಯುವಕರಿಗೂ ಸೈನಿಕ ಶಿಕ್ಷಣವನ್ನು ಕೊಟ್ಟು, ಯೋಧ ಬಿಗುಹವನ್ನು ಅವರಲ್ಲಿ ನಿರ್ಮಿಸಿ, ಸಜ್ಜುಗೊಳಿಸಿಟ್ಟು, ಅಗತ್ಯ ಬೀಳುವ ಸಂಘರ್ಭಗಳಲ್ಲೆಲ್ಲಾ ಅವರನ್ನು ಕಾರ್ಯಕ್ಕಿಳಿಸುವದೊಂದೇ ಮೇಲಿನ ಎಲ್ಲಾ ಒಳ ರೋಗಗಳಿಗೂ ಪರಿಣಾಮಕಾರೀ ಚಿಕಿತ್ಸೆ. ಈಗ ಹಿಂದೀ ಕೇಂದ್ರ ಸರಕಾರ ಮತ್ತು ಪ್ರತಿಯೊಂದು ಪ್ರಾಂತಿಕ ಸರಕಾರಕ್ಕೂ ಈ ವಿಷಯವು ಮುಂದಟ್ಟಾಗಿ, ಅವು ಈ ಸಂಬಂಧದ ಕಾರ್ಯಕ್ರಮಗಳನ್ನು ಕೈಕೊಂಡಿರುವುದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಬೇಕಾಗಿದೆ. 'ಹಿಂದೀ ತರುಣರಿಗೆ ಸೈನಿಕ ತರಬೇತಿಯೀಯುವ ಯೋಜನೆಯೊಂದು ಸೇನಾತಜ್ಞರ ಮತ್ತು ಪ್ರಾಂತಿಕ ಸರಕಾರಗಳ ಪರ್ಯಾಲೋಚನೆಯಲ್ಲಿದೆ. ಮತ್ತದು ಸಧ್ಯದಲ್ಲೇ ತಯಾರಾಗಲಿದೆ'. ಎಂದು ಹಿಂದೀ ಸರಕಾರದ ರಕ್ಷಣಾಮಂತ್ರಿಗಳು ಆಶ್ವಾಸನೆಯಿತ್ತಿದ್ದಾರೆ. ಮದ್ರಾಸ್ ಸರಕಾರವು ಶಾಲೆಗಳಲ್ಲಿ ಸೈನಿಕ ಶಿಕ್ಷಣವೀಯುವ ಕುರಿತು ಪರ್ಯಾಲೋಚಿಸಲು ಸಮಿತಿಯೊಂದನ್ನು ನೇಮಿಸಿ ಅದರ ಸಲಹೆಗಳನ್ನು ಪಡೆದಿದೆ. ಸಂಯುಕ್ತ ಪ್ರಾಂತಿಕ ಸರಕಾರವು ಈ ಮಟ್ಟಿಗೆ ಮಿಕ್ಕೆಲ್ಲರಿಗಿಂತ ಮುಂದುವರಿದು ಕಾಂಗ್ರೆಸಿಗರ ಯೋಧದಳ ತಯಾರಿಯ ಕಾರ್ಯ ಕೈಕೊಂಡಿದೆ. ಪ್ರತಿಯೊಂದು ಪ್ರಾಂತಿಕ ಸರಕಾರದ ಲಕ್ಷ್ಯವೂ ಈ ಕಡೆಗೆ ಬಿದ್ದು ಕಾರ್ಯಾಚರಣೆಗಳಾರಂಭಿಸಿರುವುದು ಕಂಡು ಬರುತ್ತಿದೆ. ಕಳೆದ ಬಾರಿ ಡಿಲ್ಲಿಯಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ನಿರ್ಣಯಗಳೂ ಅಧ್ಯಕ್ಷ ಕೃಪಲಾನಿಯವರ ಭಾಷಣವೂ ಸರಕಾರಗಳಿಗೂ ಜನತೆಗೂ ಮಾರ್ಗದರ್ಶಿಗಳಾಗಿವೆ. ಇಂದಿನ ಪರಿಸ್ಥಿತಿಯ ಒತ್ತಡವಂತಹದು; ತರಬೇತಿಯೋಗ್ಯ ಕಾಯ ಮತ್ತು ಮನಸ್ಸುಳ್ಳ ಯಾರನ್ನೂ ಬಾಕಿಬಿಡದೆ ಶುದ್ಧ ರಾಷ್ಟ್ರಯೋಧನಾಗಿ ತಯಾರುಗೊಳಿಸದೆ ಇಂದು ನಿರ್ವಾಹವೇ ಇಲ್ಲ. ನಮ್ಮ ಧ್ಯೇಯ, ಧೋರಣೆಗಳು ಪ್ರಚಾರದಲ್ಲಿರುವ ನಾಲ್ಕನೇ ಒಂದಂಶದಷ್ಟಾದರೂ ಕಾರ್ಯದಲ್ಲಿ ಕಂಡುಬಾರದಿರುವುದು ಸರ್ವಸಾಮಾನ್ಯ; ರಕ್ಷಣಾದಳಗಳ ತಯಾರಿಯಲ್ಲೂ ಇಂತಹ 'ಹೆಚ್ಚುಕಡಿಮೆ'ಯೇ ಕಂಡುಬಂದಲ್ಲಿ ಅದು ನಿಜಕ್ಕೂ ಅಪಾಯಕರ. ಇಲ್ಲಿ ಕಾರ್ಯ ಸಾಧನೆಗಗತ್ಯವುಳ್ಳಷ್ಟೇ ಪ್ರಚಾರವಿರಬೇಕು; ಪರಕೀಯರಿಗೆ ಮಾತ್ರವಲ್ಲ, ಪ್ರತ್ಯಕ್ಷಭಾಗಿಗಳಲ್ಲದ ತಮ್ಮವರ ಊಹೆಗೂ ಮಿಕ್ಕಿದ ಶಕ್ತಿ ಸಂಘಟನಾ ಬಲ ಒಳಗಡೆಯಲ್ಲಿರಬೇಕು. ಯಾವುದೇ ವಿಧದ ಯೋಧ ದಳಗಳಲ್ಲಾದರೂ ಅನಿವಾರ್ಯವಾಗಿ ಇರಬೇಕಾದ ವೈಶಿಷ್ಟ್ಯವಿದು. ಅದ್ದರಿಂದ ಇಂದು ಕೇಳಿಬರುತ್ತಿರುವ 'ತಯಾರೀ ವಾರ್ತೆ'ಗಳು ಸುಳ್ಳಾಗುವ ಮಾತಂತಿರಲಿ—ಸುದ್ದಿಯ ನಾಲ್ಮಡಿಯಷ್ಟಾದರೂ ಕಾರ್ಯತಃ ತಯಾರಾಗಬೇಕಾದುದು ಅನಿವಾರ್ಯ, ಅದ್ದರಿಂದ ಸರಕಾರಗಳು ಈ ಕುರಿತಾವ ಶಂಕೆ ಸಂದೇಹಗಳನ್ನೂ ಕಟ್ಟಿಕೊಳ್ಳದೆ, ಆಲಸ್ಯ ಅಥವಾ ಮಂದಗಮನ ಸ್ವೀಕರಿಸದೆ, ದೃಢವಾಗಿ ತೀವ್ರಗತಿಯಿಂದ ಪ್ರತಿಯೊಬ್ಬ ಹಿಂದೀ ತರುಣನನ್ನೂ ಯೋಧನನ್ನಾಗಿ ಮಾರ್ಪಡಿಸಬೇಕು. 'ಒಂದೇ ಒಂದು ಜನ ಮತ್ತು ಒಂದೇ ಒಂದು ಕ್ಷಣ ಬಿಟ್ಟುಹೋಗಬಾರದು'—ಎಂಬುದೇ ಈ ಕಾರ್ಯದ ಮೂಲಮಂತ್ರವಾಗಬೇಕು.

ಈಗ ತಾನೇ ಈ ಬುದ್ಧಿ ಬಂದುದು ಪರಿಸ್ಥಿತಿಯ ಒತ್ತಡದಿಂದಲೇ ಎಂಬುದು ನಿಜ. ಒಳಗಿನ ಗೊಂದಲಗಳು, ವಿಷಮ ವಿದ್ಯಮಾನಗಳು ಹೆಚ್ಚಿನ ಕಡೆಗಳಲ್ಲಿ ಸರಕಾರದ ಅಂಕೆ ಮೀರಿ ಹೋಗಿವೆ. ಅತ್ತ ಪಾಕಿಸ್ತಾನ್ ಸರಕಾರವು ಭಾರತ—ಪಾಕಿಸ್ತಾನ್ ಜಂಟಿ ನಿರ್ಧಾರಗಳನ್ನು ಧಿಕ್ಕರಿಸಿ, ಸೇನಾ ನಾಯಕನ ಕೈಕೆಳಗೆ 'ನೇಶನಲ್ ಗಾರ್ಡ್ಸ್'ಎಂಬ ನಾಗರಿಕಸೇನೆಯನ್ನು ನಿರ್ಮಿಸಲು ತೊಡಗಿದೆ; ಅಲ್ಲಿರುವವರನ್ನೆಲ್ಲಾ ಸೈನಿಕರನ್ನಾಗಿ ಮಾಡಿ ಇಡೀ ಪಾಕಿಸ್ತಾನವೇ ಒಂದು ಸೇನಾ ಶಿಬಿರವಾಗಬೇಕೆಂಬ ಗುರಿಯನ್ನಿಟ್ಟುಕೊಂಡು ಅಲ್ಲಿ ಕೆಲಸ ನಡೆಯುತ್ತಿದೆ. ಒಳಾಂದೋಲನ ಮತ್ತು ಹೊರಾಪಾಯಗಳ ಈ ಕಾಟನೋಟಗಳೇ ಹಿಂದೀ ಸರಕಾರದ ಕಣ್ಣನ್ನು ತೆರೆಯಿಸಿವೆ. ಆದರೆ ಹಿಂದೀ ತರುಣರ ಯೋಧ ಶಿಕ್ಷಣದಿಂದ ಇಂತಹ ತಾತ್ಕಾಲಿಕ ಶಮನ ಮಾತ್ರವಾಗುವದಲ್ಲ; ಅದು ರಾಷ್ಟ್ರದ ಇಂದಿನ ಅಪಾಯವನ್ನು ನಿವಾರಿಸಿದಂತೆಯೇ ರಾಷ್ಟ್ರದ ಆಢ್ಯತೆಯನ್ನೂ ಹೆಚ್ಚಿಸಬಲ್ಲುದು. ದೀರ್ಘಾವಧಿಯ ಪರದಾಸ್ಯವು ದೇಹಮನಸ್ಸು ಎರಡರ ಬಲವನ್ನೂ ಕುಗ್ಗಿಸಿ, ಹಿಂದೀಯರನ್ನು ನಿರ್ವೀರ್ಯರನ್ನಾಗಿ ಮಾಡಿದ್ದಿತು. ಆ ಪೈಕಿ ಹಿಂದಿನ ಸ್ವಾತಂತ್ರ್ಯ ಸಮರಗಳು — ಅವುಗಳಲ್ಲಿದ್ದ ಬೋಧೆ, ಭೇರಿಗಳು ಹಿಂದೀಯರ ಸ್ವಾಭಿಮಾನವನ್ನು, ರಾಷ್ಟ್ರಾಭಿಮಾನವನ್ನು ಪ್ರಚೋದಿಸಿದ್ದುವು; ಮನೋದಾರ್ಬಲ್ಯವನ್ನು ನಿವಾರಿಸಿದ್ದುವು; ಆದರೆ ಅದೇ ರೀತಿಯ ಹಿಂದೀಯರ ಕಾರ್ಯ ಶಿಕ್ಷಣದ ಅವಕಾಶವೀವರೆಗೂ ದೊರೆತುದಿಲ್ಲ. ಆಯುಧ ಧರಿಸುವದಕ್ಕೂ ನಿಷೇಧ ಹಾಕಿ, ಇತರ ಹಲವು ಗಡಿ ಬೇಲಿಗಳನ್ನು ನಿರ್ಮಿಸಿ, ಬ್ರಿಟಿಷ್ ಸರಕಾರವು ಹಿಂದೀಯರನ್ನಾವ ರೀತಿ ನಿರ್ವೀರ್ಯರನ್ನಾಗಿ ಮಾಡಿಟ್ಟಿದ್ದಿತೆಂಬುದು ಸ್ವತಃ ಸಿದ್ಧ ವಿಷಯ. ಗಾಂಧಿಜೀ ನಾಯಕತ್ವದ ರಾಷ್ಟ್ರೀಯ ಸಮರ ವಿಧಾನಗಳೂ ಈ ದೈಹಿಕ ಶಕ್ತಿಗೆ ಪೂರ್ಣ ಪ್ರತಿಕೂಲವಿದ್ದುದರಿಂದ ರಾಷ್ಟ್ರದ ಈ ಶಕ್ತಿಗೆ ಇದುವರೆಗೂ ತುಕ್ಕು ಹಿಡಿದೇ ಇದೆ. ಅದನ್ನು ತಿಕ್ಕಿ ಝಳಪಿಸಿ, ಸಜ್ಜುಗೊಳಿಸದೆ ಯಾವ ರಾಷ್ಟ್ರವೂ ಮುಂದೆ ಬಂಲಾರದು. ಸ್ವತಂತ್ರ ಭಾರತವಾದರೂ ಈ ಮಟ್ಟಿಗೆ ಅಹಿಂಸಾ ವಿಧಾನವನ್ನಂಗೀಕರಿಸಿಲ್ಲವಾದ್ದರಿಂದ ಇಂತಹ ಸಾರ್ವತ್ರಿಕ ಸೇನಾ ತರಬೇತಿಯು, ರಾಷ್ಟ್ರದ ಸಂರಕ್ಷಣೆಯಂತೆಯೇ ಯಾವ [illegible] ಹೇಳಿಸಿದ ರಾಷ್ಟ್ರದ ಶಕ್ತಿ ವರ್ಧನೆ, ಮತ್ತು ಮೇಲ್ಮಟ್ಟಕ್ಕೂ ಅಗತ್ಯವೆಂಬುದನ್ನು ಮರೆಯಬಾರದು.

ಇಂತಹ ರಕ್ಷಣಾ ಕೋಟೆಯನ್ನು ರಚಿಸಲೇಳುವಾಗ ರಂಗದಲ್ಲಿರುವ ಅಡ್ಡಗೋಡೆಗಳನ್ನೆಲ್ಲಾ ನೆಲಸಮಮಾಡಿ ಅಸ್ತಿವಾರವನ್ನು ಭದ್ರಪಡಿಸುವುದಗತ್ಯವೆಂಬುದನ್ನು ಬೇರೆ ಹೇಳಬೇಕೆಂದಿಲ್ಲ. ಈಗ ಎಲ್ಲೆಲ್ಲೂ ಕಂಡುಬರುತ್ತಿರುವ ಸಾಮಾಜಿಕ ಅಥವಾ ಧಾರ್ಮಿಕ ದಳಗಳೇ ಈ ಕಂಟಕಗಳೆಂಬುದನ್ನು ಮರೆಯಬಾರದು. ಈ ಕುರಿತು ಅ. ಭಾ. ಕಾಂಗ್ರೆಸ್ ಕಮಿಟಿಯು ಸ್ಪಷ್ಟಾಜ್ಞೆಯಿತ್ತಿದೆ. 'ಮುಸ್ಲಿಂ ನೇಶನಲ್ ಗಾರ್ಡ್ಸ್, 'ಆರ್. ಯಸ್. ಯಸ್.' ಅಕಾಲೀ ಸ್ವಯಂ ಸೇವಕದಳಗಳಂತಹ ಜಾತೀವಾರು ಸೇನಾಪುಂಜೀಯ ದಳಗಳು ತಾವಾಗಿ ವಿಸರ್ಜನೆಗೊಳ್ಳಬೇಕು; ಇಲ್ಲವೇ ಸರಕಾರವು ಅಂಥವುಗಳನ್ನು ಬರ್ಖಾಸ್ತು ಪಡಿಸುವ ಕಾರ್ಯ ಕೈಕೊಳ್ಳಬೇಕು' ಎಂದು ಕಾಂಗ್ರೆಸು ಕೇಳಿಕೊಂಡಿದೆ. ಇದನ್ನು ಜಾರಿಗೆ ತರಲು ಕಾಂಗ್ರೆಸ್ ಸರಕಾರಗಳೇಕೆ ಶಂಕಿಸುತ್ತಿವೆಯೋ ಅರ್ಥವಾಗುವುದಿಲ್ಲ. ತನ್ನ ಪ್ರಜೆಗಳ ರಕ್ಷಣೆಯ ಹೊಣೆಹೊತ್ತ ಪ್ರಜಾಪ್ರತಿನಿಧಿ ಸ್ವತಂತ್ರ ಸರಕಾರವಿರುವಾಗ, ಮತ್ತಾ ಹೊಣೆಯು ಸಂಪೂರ್ಣವಾಗಿ ಸರಕಾರದ ಮೇಲೆ ಹೊರತು ಬೇರಾವ ಸಂಸ್ಥೆಯ ಮೇಲೂ ಇಲ್ಲದಿರುವಾಗ—ಆ ರಕ್ಷಣಾವ್ಯವಸ್ಥೆಯಲ್ಲಿ ಇದುವರೆಗೆ ತನ್ನಲ್ಲಿದ್ದ ನ್ಯೂನತೆಗಳನ್ನು ನಿವಾರಿಸಿಕೊಳ್ಳಲು ಸರಕಾರವು ತಯಾರಾಗುತ್ತಿರುವಾಗ—'ಸ್ವರಕ್ಷಣೆಗಾಗಿ ಹೊರತು ಪರಾಕ್ರಮಣಕ್ಕಲ್ಲ'ವೆಂದು ಹೇಳುತ್ತಾ ಯಾವುದೇ ಜಾತೀಯ ದಳವು ಅಸ್ತಿತ್ವದಲ್ಲಿದ್ದರೆ ಅದು ಅಪಮಾನ, ಸರಕಾರದ ಕೆಲಸಕ್ಕೆ ಆತಂಕ, ಸರಕಾರವು ಪ್ರಥಮತಃ ನಿರ್ಮೂಲಿಸಬೇಕಾದ ಮೊದಲನೇ ವೈರಿ! ಇಂತಹ ಕಂಟಕಗಳನ್ನು ಕಿತ್ತೊಗೆದು ವಾತಾವರಣವನ್ನು ಶುದ್ಧೀಕರಿಸಿಕೊಂಡ ಪುನಃ ರಾಷ್ಟ್ರೀಯ ತತ್ವದ ತಳಹದಿಯ ಮೇಲೆಯೇ, ಸುಶಿಕ್ಷಿತ ತರುಣ ಜನಾಂಗದ ಸುಭದ್ರ ಕೋಟೆಯೇರುವುದೆಂದು ಹಾರೈಸುತ್ತೇವೆ.

ಉಡುಪಿ— ಸರಕಾರಿ ತರಬೇತಿ ಶಾಲಾ ಅಧ್ಯಾಪಕ ವಿದ್ಯಾರ್ಥಿಗಳಿಗಾಗಿ ಸ್ಕೌಟು ಮಾಸ್ತರರ ತರಬೇತಿ ಶಿಬಿರವೊಂದು ಮಲ್ಪೆ ಬಂದರದ ಸಮೀಪ ವಡಭಾಂಡೇಶ್ವರದಲ್ಲಿ ಕಳೆದ ತಾ 22ರಿಂದ 29ರತನಕ ನಡೆಸಲ್ಪಟ್ಟಿತು ಪ್ರಾಂತಿಕ ಆರ್ಗನೈಜರ್ ಕಮಿಶನರ್ ಶ್ರೀ ವಿ. ಸುಬ್ರಹ್ಮಣ್ಯಂ ಮತ್ತು ಜಿಲ್ಲಾ ಸ್ಕೌಟು ಮಾಸ್ತರ್ ಮಿ। ಕಾಲಿನ್ಸ್‌ರವರು ಪ್ರಮುಖ ಭಾಗವಹಿಸಿದ್ದರು.

ಪಂಜಾಬು ನಿರಾಶ್ರಿತರಿಗೆ ಸಹಾಯ ಮಾಡಿದವರ ವಿವರ.

ಶ್ರೀ ಪಿ. ಉಪೇಂದ್ರ ನಾಯಕ್ ರೂಪಾಯಿ 105-

ರೂಪಾಯಿ 51-ರಂತೆ ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್, ಡಾ। ಟಿ. ಎಮ್. ಎ. ಪೈ.

ರೂಪಾಯಿ 15-ರಂತೆ ಶ್ರೀಗಳಾದ ಕೆ. ವಾಸುದೇವ ನಾಯಕ್, ಶ್ರೀ ಸೋದೆ ವಾದಿರಾಜ ಮಠ, ಎಂ. ಗಣಪತಿ ನಾಯಕ್, ರಾಮಪ್ಪ, ಕಲ್ಯಾಣಕ ವೆಂಕಟ್ರಾಯ ಪೈ ಎಂಡ್ ಸನ್ಸ್

ರೂ. 30-ರಂತೆ ಶ್ರೀ ಯು. ಕೇಶವ ಕಾಮತ್.

ರೂ. 21-ರಂತೆ ಕೆನರಾ ಬೇಂಕಿಂಗ್ ಕೋರ್ಪರೇಶನ್ ಲಿಮಿಟೆಡ್.

ರೂ. 14-ರಂತೆ ಡಾ। ಪಿ. ಆರ್. ನಾಯಕ್.

ರೂಪಾಯಿ 10ರಂತೆ ಪಿ. ಎಸ್. ಆಚಾರ್, ವಿ. ಆರ್. ಕಾಮತ್, ಎಚ್. ನಾರಾಯಣ ನಾಯಕ್, ಟಿ. ರಾಮಕೃಷ್ಣ ಪೈ, ಎಚ್. ವಿಠಲ ಶೆಣೈ, ಟಿ. ಎನ್. ಕೇಶು ನಂಬಿಯಾರ್, ಸಿ. ಎನ್. ಪ್ರಭು, ಕಾಸಾಡಕಾರ್ಸ್, ಕೆ. ನರಹರಿ ಕಾಮತ್,

ರೂ 5ರಂತೆ ಶ್ರೀಗಳಾದ ಕೆ. ರಾಮಕೃಷ್ಣ ಗುಂಡು ನಾಯಕ್, ಮಂಜುನಾಥ ಭಕ್ತ, ಶಿವರಾಯ ಬಾಳಿಗ, ವಿ. ಎಸ್. ನಾಯಕ್, ಸುಬ್ಬನಿವಾಸ, ಎ. ಎಲ್. ಎಸ್. ರಾವ್, ಎಮ್. ಶ್ಯಾಮ ಭಟ್, ಕೃಷ್ಣ ಪಡಿಯಾರ್,

ರೂ 2/8ರಂತೆ ಶ್ರೀ ಕೆ. ಶ್ರೀನಿವಾಸ ಪೈ.

ಬಟ್ಟೆ ಬರೆಗಳನ್ನು ಕೊಟ್ಟವರು ಶ್ರೀಗಳಾದ ಲಕ್ಷ್ಮೀ ಸ್ಟೋರ್ಸ್, ಡಾ। ನಾಯಕ್, ಬಿ. ನರಹರಿ ಕಾಮತ್, ಕೆ. ನರಸಿಂಹ ಕಾಮತ್, ವಿ. ಪಿ. ನಾಯಕ್, ಎ. ಬಿ. ಕೃಷ್ಣರಾಜ, ಕೆ. ರಾಘವೇಂದ್ರ ಭಟ್, ಮೆಜೆಸ್ಟಿಕ್ ಸ್ಟೋರ್ಸ್, ಪಿ. ಮಂಜುನಾಥ ನಾಯಕ್, ಯು. ವಾಸುದೇವ ಪೈ, ಪುಂಡಲೀಕ ಆರ್. ಕಾಮತ್, ನಾನಾಲಾಲ್ ಶೇಟ್, ನೇಲ್ಜಿ ಶೇಟ್, ಶಿಲ್ಕ್ ಸ್ಟೋರ್ಸ್, ಕೆಪ್ಟನ್ ನಾಯರ್, ಭೋಜ ರಾಯ ಸೆಟ್ಟಿ, ಡಾ. ಶೇಷಗಿರಿ ಪೈ, ಪಿ. ಎನ್. ಪ್ರಭು, ಕೆ. ಎನ್. ಕಾಮತ್, ಕೆ. ಕೆ. ನಾಯಕ್, ಕೆ. ವಾಸುದೇವ ನಾಯಕ್,

ಆಹಾರ ನಿಯಂತ್ರಣಗಳ ಕುರಿತು ಹಿಂದೀ ಸರಕಾರದ ಧೋರಣೆ.

ಆಹಾರಧಾನ್ಯಗಳಿಗೆ ಅಧಿಕಬೆಲೆ

'ಆಹಾರಧಾನ್ಯಗಳ ಧೋರಣೆ ಸಮಿತಿ'ಯು ಮಾಡಿದ ಸೂಚನೆಗಳಿಗನುಸಾರವಾಗಿ ಭಾರತ ಕೇಂದ್ರ ಸರಕಾರವು ನಿರ್ಧಾರಗಳನ್ನು ಮಾಡಿ, ಅವುಗಳನ್ನು ಪ್ರಾಂತಿಕ ಹಾಗೂ ಸಂಸ್ಥಾನಿಕ ಸರಕಾರಗಳಿಗೆ ತಿಳಿಸಿದೆ. ಪ್ರಾಂತಿಕ ಸರಕಾರಗಳು ಇವುಗಳನ್ನಂಗೀಕರಿಸಿಕೊಂಡ ಜಾಹೀರುನಾಮೆಯು ದಶಂಬರ್ ತಾ. 10ಕ್ಕೆ ಪ್ರಕಟವಾಗಲಿದೆ. ಕೇಂದ್ರ ಸರಕಾರದಿಂದ ಬಂದಿರುವ ಸೂಚನೆಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ:-

ರೇಶನಿಂಗ್ ಮತ್ತು ಕಂಟ್ರೋಲ್ ವಿತರಣೆಯ ಸಂಬಂಧಗಳನ್ನು ಸರಕಾರವು ಕಡಿಮೆಮಾಡಿಕೊಳ್ಳುವ ಧೋರಣೆ ವಹಿಸಬೇಕು-ಇತ್ತೀಚೆಗಿನ ವರುಷಗಳಲ್ಲಿ ರೇಶನನ್ನು ಜ್ಯಾರಿಗೆ ತಂದ ಕ್ಷೇತ್ರಗಳಲ್ಲಿ ಅದನ್ನು ತೆಗೆದುಹಾಕುವ ಮೂಲಕ ಇದನ್ನಾರಂಭಿಸಬೇಕು. ಮತ್ತು ರೇಶನನ್ನು ವಿಸ್ತರಿಸುವ ಹೊಸ ಯೋಚನೆ ಮಾಡಿದ್ದಿದ್ದಲ್ಲಿ ಅದನ್ನು ರದ್ದುಪಡಿಸಿದಾಕ್ಷಣ ಹೋಗಬೇಕು—ಸಾಧ್ಯವಿದ್ದಷ್ಟು ಬೇಗನೇ ಆಹಾರ ನಿಯಂತ್ರಣವನ್ನು ಪೂರ್ತಿ ರದ್ದುಪಡಿಸುವ ಗುರಿಯನ್ನಿಟ್ಟುಕೊಂಡು, ಸ್ಥಳೀಯ ಸ್ಥಿತಿಗತಿಗಳನ್ನು ಆಧರಿಸಿಯೇ ರೇಶನಿಂಗ್ ಮತ್ತು ನಿಯಂತ್ರಣ ಕ್ರಮಗಳನ್ನು ತಗ್ಗಿಸಬೇಕು. ಬರತಕ್ಕದ್ದು—ಈ ಮಧ್ಯಾವಧಿಯಲ್ಲಿ ಸಂಗ್ರಹಿಸುವ ಆಹಾರ ಧಾನ್ಯಗಳ ಬೆಲೆಯೇರಬೇಕಾದುದು ಅಗತ್ಯ. ಮತ್ತದು ಬೇರೆಬೇರೆ ಭಾಗಗಳಲ್ಲಿ ಭಿನ್ನರೀತಿಯಲ್ಲಿರಬೇಕಾಗುವುದರಿಂದ ಆಯಾಯಾ ಪ್ರಾಂತ್ಯಗಳು ತಾವೇರಿಸಲಿಚ್ಛಿಸುವ ಬೆಲೆ ಮತ್ತದರ ಕಾರಣ ವಿವರಗಳನ್ನು ಕೇಂದ್ರಸರಕಾರಕ್ಕೆ ತಿಳಿಸಬೇಕು; ಹೇಗಿದ್ದರೂ ಧಾನ್ಯ ಮಣವೊಂದಕ್ಕೆ 2ರೂಪಾಯಿಗಿಂತ ಹೆಚ್ಚಿಗೆ ಬೆಲೆ ಯೇರತಕ್ಕದ್ದಲ್ಲ. ಈ ಧಾರಣೆ ಹೆಚ್ಚಳವು ಒತ್ತಿನ ಭಾಗಗಳಲ್ಲಿರುವುದಕ್ಕಿಂತ ವಿಶೇಷ ಭಿನ್ನವಾಗುವಂತಿರದು; ಮತ್ತು ಧಾನ್ಯ ಪಡಕೊಳ್ಳುವ ಗಿರಾಕಿಗಳಮೇಲೆ ಅಧಿಕ ಬೆಲೆ ತೆರುವ ಅನಗತ್ಯ ಭಾರ ಬೀಳದಂತೆ ನೋಡಿಕೊಳ್ಳಲಿಕ್ಕಿದೆ. ಹೊರ ದೇಶಗಳಿಂದ ಆಮದುಪಡಿಸಿಕೊಳ್ಳುವ ಧಾನ್ಯಕ್ಕೆ 1948ನೇ ಇಸವಿಯ ಪಟ್ಟಿಗೊಂದು ಮಿತಿ ನಿಶ್ಚಯಿಸಲಾಗುವದಲ್ಲದೆ, ಇಂತಹ ಆಮದನ್ನು ಆದಷ್ಟು ಬೇಗನೇ ನಿಲ್ಲಿಸಬೇಕೆಂದು ಸರಕಾರವು ನಿರ್ಧರಿಸಿದೆ. ಆಮದುಗಳ ಮೇಲೆ ಅವಲಂಬಿಸಿರಕೂಡದು. ಆ ಪ್ರಕಾರ 1948ನೇ ಇಸವಿಗೆ ಮದ್ರಾಸ್ ಪ್ರಾಂತ್ಯವು 150 ಸಾವಿರ ಟನ್ ಧಾನ್ಯವನ್ನು ಮಾತ್ರ ಆಮದುಪಡಿಸಿಕೊಳ್ಳಬಹುದು. ಅಕ್ಕಿ, ಭತ್ತ, ಗೋಧಿ ಮತ್ತದರ ರೂಪಾಂತರಗಳು, ಹಾಗೂ ಇತರ ಪ್ರಾಮುಖ್ಯ ಆಹಾರ ಧಾನ್ಯಗಳ ಮೇಲಿನ ನಿಯಂತ್ರಣಗಳು ಸದ್ಯ ಹೋಗುವಂತಿಲ್ಲ. ಈ ಮುಖ್ಯ ಧಾನ್ಯಗಳ ಹೊರತು ಮಿಕ್ಕೆಲ್ಲಾ ಧಾನ್ಯಗಳ ನಿಯಂತ್ರಣ ರದ್ದಾಗಿ, ಸ್ವೇಚ್ಛಾ ವ್ಯಾಪಾರ ವಹಿವಾಟುಗಳು ನಡೆಯಬೇಕು. ಮೇಲ್ಗಡೆ ನಮೂದಿಸಿದ ವಿಧಾನಗಳಂತೆ ಸರಕಾರಕ್ಕಗತ್ಯಬೀಳುವ ಧಾನ್ಯಗಳನ್ನು ಸಂಗ್ರಹಿಸುವ ರೀತಿ ನೀತಿಗಳ ನಿರ್ಣಯಾಧಿಕಾರವು ಪ್ರಾಂತಿಕ ಸರಕಾರಗಳದ್ದೇ.

ಮದ್ರಾಸ್‌ಪ್ರಾಂತ್ಯದಲ್ಲಿ ಸಕ್ಕರೇ ನಿಯಂತ್ರಣವು ದಶಂಬರ್ 10ರಿಂದರದ್ದಾಗುವದೆಂದು ತಿಳಿದು ಬರುತ್ತದೆ; ನಿಯಂತ್ರಣ ರದ್ದುಪಡಿಸಿದ ದ್ವಿದಳ ಧಾನ್ಯಗಳ ಬೆಲೆಯೀಗ ಬಹಳ ತಗ್ಗಿದೆಯೆಂದು ಮದ್ರಾಸ್‌ಸರಕಾರವು ತನಗೆಬಂದ ವರದಿಯಂತೆ ಪ್ರಕಟಿಸಿದೆ.

ಹೈದರಾಬಾದಿನಲ್ಲಿ

ಹೈದರಾಬಾದು ಸರಕಾರವು, ದೊಡ್ಡ ತಸ್ಕರುಗಳಿಗಲ್ಲದೆ, ಬಂಧನದಲ್ಲಿರುವ ಇತರ ಎಲ್ಲಾ ರಾಜಕೀಯ ಕೈದಿಗಳನ್ನೂ ನಿಶ್ಶರ್ತವಾಗಿ ಬಿಡುಗಡೆ ಮಾಡಲು ನಿರ್ಧರಿಸಿದೆ. ಹೈದರಾಬಾದ್ ಕಾಂಗ್ರೆಸ್‌ನಾಯಕರು ಬಿಡುಗಡೆ ಹೊಂದಿದ್ದಾರೆ. ಶುದ್ಧ ವಾತಾವರಣವನ್ನು ನಿರ್ಮಿಸಿ ಸರ್ವರ ಸಹಕಾರಪಡೆದು ನಡುಗಾಲ ಸರಕಾರರಚಿಸುವುದೇ ನಿಜಾಮ್ ಸರಕಾರದ ಉದ್ದೇಶವೆಂದು ಪ್ರಧಾನಮಂತ್ರಿ ಮೀರ್ ಲಯಿಕ್ ಅಲಿಗಳು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ವಿವರಿಸಿದ್ದಾರೆ. ಮಜ್ಲೀಸ್ ಮತ್ತು ಕಾಂಗ್ರೆಸಿಗರು ಮಾತ್ರವಿರುವ ಸರಕಾರ ರಚಿಸುವುದಸಾಧ್ಯವೆಂದೂ, ಖಾತೆಗಳನ್ನು ಯೋಗ್ಯತೆಯಮೇಲಿಂದ ಸಮಾನವಾಗಿ ಹಂಚಲಾಗುವದೆಂದೂ, ಒಂದು ರಾಜ್ಯಾಂಗರಚನೆಗಾಗಿ ಯಾವ ಹೆಸರಿದ್ದರೇ ಅದಕೂ ಒಂದು ಆಚರಣೆ ಕೈಕೊಳ್ಳಲಾಗುವುದೆಂದೂ ಪ್ರಧಾನಿ ಮೀರ್ ಲಾಯಿಕ್ ಅಲಿ ನುಡಿದಿದ್ದಾರೆ.

ತಾ. 30ರಲ್ಲಿ ಬಿಡುಗಡೆಗೊಂಡ ಹೈದರಾಬಾದು ಕಾಂಗ್ರೆಸಿನ ಅಧ್ಯಕ್ಷ ಸ್ವಾಮಿ ಸಹಜಾನಂದ ತೀರ್ಥರು, ನಿಜಾಮ್ ಸರಕಾರದೊಡನೆ ತಾವೊಂದು ಒಪ್ಪಂದಕ್ಕೆ ಬರಬೇಕಾದರೆ ಪ್ರಥಮತಃ ಕಾಂಗ್ರೆಸಿನ ಮೂಲ ಬೇಡಿಕೆಗಳಿಗೆ ಮಾನ್ಯತೆ ದೊರೆಯಬೇಕೆಂದರು. ಭಾರತದೊಡನೆ ಜೋಡಣೆಗೊಳ್ಳುವ ಕುರಿತು ಜನಮತ ಸಂಗ್ರಹ—ಜವಾಬ್ದಾರೀ ಸರಕಾರದ ರಚನೆಯ ಕುರಿತು ಜಾಹೀರುನಾಮೆ—ಒಂದು ರಾಜ್ಯಾಂಗ ರಚನಾ ಸಭೆಯ ನಿರ್ಮಾಣ—ಆಗಬೇಕೆಂಬುದೇ ಹೈದರಾಬಾದು ಕಾಂಗ್ರೆಸಿನ ಮುಖ್ಯ ಬೇಡಿಕೆಗಳು. ಸ್ವಾಮಿ ಮತ್ತು ನಿಜಾಮ್ ಸರಕಾರಗಳೊಳಗೀಗ ಮಾತುಕತೆ ನಡೆದಿವೆ.

ಕಾಶ್ಮೀರದಲ್ಲಿ

ಹಿಂದೀ ಸೇನೆಗಳು ಧಾಳಿಗಾರರೊಡನೆ ಸರಹದ್ದು ರಂಗಗಳಲ್ಲಿ ಜಾಡಾ ಜಾಡಿ ಹೋರಾಟಗೊಟ್ಟು ವಿಶೇಷ ಹಾನಿಯೊಡ್ಡಿವೆ. ಧಾಳಿಗಾರರಿಗೆ ಹೊಸ ಹೊಸ ಸೇನೆಗಳೂ ಟ್ಯಾಂಕು ನಿರೋಧಕ ಹಾಗೂ ಮೆಶಿನ್ ಗನ್ನುಗಳಂತಹ ವಿಶೇಷಾಯುಧಗಳೂ ಸರಬರಾಯಿಯಾಗುತ್ತಿವೆ. ಇತ್ತ ನವದಿಲ್ಲಿಯಲ್ಲಿ ಸೇರಿರುವ ಮಿ. ಲಿಯಾಖತ್ ಮೊದಲಾದ ಪಾಕಿಸ್ತಾನ್ ಪ್ರಮುಖಾಧಿಕಾರಿಗಳು ಮತ್ತು ಭಾರತ ಸರಕಾರದ ಅಧಿಕಾರಿಗಳು ಕಾಶ್ಮೀರದ ತೀರ್ಮಾನ ಹಾಗೂ ಭಾರತ ಪಾಕಿಸ್ತಾನಗಳೊಳಗೆ ನಿರ್ಣಯವಾಗದೆ ಬಾಕಿಯಿರುವ ಇತರ ಮುಖ್ಯ ವಿಷಯಗಳ ಕುರಿತು ಮಾತುಕತೆ ನಡೆಸುತಿದ್ದಾರೆ. ಕೂಡಲೇ ಜನಮತ ಸಂಗ್ರಹಿಸುವದಾದರೆ ಆಕ್ರಮಣಗಾರರನ್ನು ಹಿಂದೆ ಹೋಗುವಂತೆ ಮಾಡುವುದಕ್ಕೂ ಈಗ ಪಾಕಿಸ್ತಾನ ತಯಾರಾಗಿದೆ. ಆದರೆ ಆ ಮೇಲೆ ಒಂದು ಅವಧಿಯೊಳಗೆ ಹಿಂದೀ ಸೇನೆಯೂ ಅಲ್ಲಿಂದ ಹೋಗತಕ್ಕದ್ದೆಂದು ಅವರ ವಾದ. ಹಿಂದೀ ಸರಕಾರವು ತನ್ನ ಆದಿಯ ಧೋರಣೆಯನ್ನೇ ದೃಢಪಡಿಸಿದೆ.

ಅಲೆವೂರು—ತಾ 1ರಲ್ಲು ಸುಭೋದಿನಿ ಶಾಲೆಯಲ್ಲಿ ಶ್ರೀ ಪಂಡೆ ಶ್ರೀಪಾದ ದಾಸರು 'ಪುರಂದರದಾಸರ ಚರಿತ್ರೆ'ಯನ್ನಿತ್ತು ಹರಿಕಥಾ ಕಾಲಕ್ಷೇಪವನ್ನು ಮಾಡಿದರು. ಶ್ರೀ ಅಲೆವೂರು ಬದರಿ ನಾರಾಯಣಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಸಾಧಾರಣ ರೂಪಾಯಿ ಎನ್ನತ್ತಮೂರು ಈ ಸಂಬಂಧ ಜಮೆಯಾದುದು ಉಡುಪಿಯಲ್ಲಿ ಹೊಸತಾಗಿ ಕಟ್ಟಲಿರುವ 'ಪುರಂದರದಾಸ ಮಂದಿರ' ನಿಧಿಗಾಗಿ ಉಪಯೋಗಿಸಲಾಗುವುದೆಂದು ತಿಳಿದುಬರುತ್ತದೆ.

ಮೂವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನ ಕಾಸರಗೋಡು—ಇದೇ ದಶಂಬರ ತಿಂಗಳ ೨೮, ೨೯, ೩೦ನೆಯ ತಾರೀಕುಗಳಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನದ ಕಾಲದಲ್ಲಿ ಸಾಹಿತ್ಯಗೋಷ್ಠಿ, ಮಹಿಳಾ ಗೋಷ್ಠಿ, ಏಕೀಕರಣ ಸಮ್ಮೇಳನಗಳು ಜರಗುತ್ತವೆ. ಆಯಾ ಗೋಷ್ಠಿಗಳಲ್ಲಿ ಪ್ರಬಂಧ, ಉಪನ್ಯಾಸಗಳನ್ನು ಓದಲು ಇಚ್ಛಿಸುವವರು ತಮ್ಮ ಪ್ರಬಂಧ, ಉಪನ್ಯಾಸಗಳನ್ನು ಆಯಾ ಗೋಷ್ಠಿಗಳ ಕಾರ್ಯದರ್ಶಿಗಳಿಗೆ. (ಕಾರ್ಯದರ್ಶಿ, ಕಾಸರಗೋಡು, ದ. ಕ.) ದಶಂಬರ ತಾ. ೨೦ರ ಒಳಗೆ ತಲಪುವ ವ್ಯವಸ್ಥೆ ಮಾಡಬೇಕು. ಪ್ರಬಂಧ ಉಪನ್ಯಾಸಗಳು ಹೆಚ್ಚುಕಡಿಮೆ ಇಪ್ಪತ್ತು ಮಿನಿಟುಗಳಲ್ಲಿ ಮುಗಿಯುವಂತೆ ಇರಬೇಕು.

ಬಿ. ಶಂಕರ ಭಟ್ಟ,
ಕಾರ್ಯದರ್ಶಿ, ಪ್ರಕಟಣಾ ದಾಖಿ.

ಪೆರ್ಡೂರು- ಇಲ್ಲಿ "ಬೇಡ್‌ಮಿಂಟನ್ ಟೂರ್ನಮೆಂಟು ತಾ 26ಕ್ಕೆ ಶುರುವಾಗುವುದು. ಐದುಮಂದಿಯ ಆಟಕ್ಕೆ ಪ್ರವೇಶ ರೂ. 7-8-0 ಡಬ್ಬಲ್ಸ್‌ಗೆ ರೂ 5/. ಪ್ರವೇಶದ ಅರ್ಜಿಯು ತಾ 18ರ ಒಳಗೆ ಕಾರ್ಯದರ್ಶಿ ಪೆರ್ಡೂರು ಪಬ್ಲಿಕ್ ಬೇಡ್ ಮಿಂಟನ್ ಟೂರ್ನಮೆಂಟ್ ಇವರಿಗೆ ಕಳುಹಿಸಬೇಕು. ಜಯಸೂಚಕದ ಚಿಹ್ನೆಯಾಗಿ ಗೆದ್ದವರೀಗೆ ಬಂಗಾರದ ಮತ್ತು ಬೆಳ್ಳಿಯ ಪದಕಗಳನ್ನು ಕಮಿಟಿಯ ನಿಯಮಕ್ಕನುಸಾರವಾಗಿ ಕೊಡಲಾಗುವುದು. ಪ್ರತಿ ಟೇನಿಸವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

NOTICE

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O. S. 486/1947.

ವಾದಿ— ಶ್ರೀನಿವಾಸ ಭಟ್ಟ.

ಪ್ರ. ರು—ಭಾಸ್ಕರ ಅಡಿಗ ಸಹಾ

ಯಡ್ತರೆ ಗ್ರಾಮದಲ್ಲಿರುವ ಗೋವಾ ಪ್ರೊಭಿನ ಸಾಹೇಬರ ದತ್ತದ ಮಗ ಅಲ್ಲಿ ಸ್ಯಾಬ | ಬೈಂದೂರು ಗ್ರಾಮದಲ್ಲಿರುವ ಲಕ್ಷ್ಮಣ ಶೇಟ್ ಮಗ ಸುಬ್ರಾಯ ಶೇಟ್ | ಸಹಾ ಈ 2 ಜನರಿಗೆ ಕೊಡ್ವ ನೋಟ್ಸು—ಈ ಕೋರ್ಟು O. S. 441/43ನೇ ದಾವೆಯಲ್ಲಾದ ತೀರ್ಮಾನದ ಸಂಬಂಧ ಮೂಲಗೇಣಿಯ ಹಣದ Contribution ಬಗ್ಗೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯನ್ನು ತಾ 17-12-47ಕ್ಕೆ ಹಗಲು 11ಗಂಟೆಗೆ ಈ ಕೋರ್ಟು ಮುಂದೆ ತನಿಖೆಗೆ ಇಡುವದಾಗಿಯದೆ.

(Sd) K. Ramapaiya,
Advocate for Plff.

Kundapur 2-12-47.

ಕನ್ನಡದಲ್ಲಿ! ಕನ್ನಡದಲ್ಲಿ!!

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ತಾ. 4-12-47ರಿಂದ ಪ್ರಾರಂಭ

ಕೃಷ್ಣಲೀಲಾ

ಕೆಂಪರಾಜ್, ರಾಜಕುಮಾರಿ, ಉಷಾ, ಬಳ್ಳಾರಿ ಲಲಿತ, ನಂಜನಗೂಡು ಜಯಮ್ಮ, ಜಯಮ್ಮ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ,

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

1948ರ ಡೈರಿಗಳು

ಬೆಲೆ	ರೂ. 1 8 0
ಟಪಾಲುದ್ವಾರ	ರೂ. 1 14 0

ನವಯುಗ ಪ್ರೆಸ್, ಉಡುಪಿ.

(೫ನೇ ಪುಟದಿಂದ ಮುಂದುವರಿದುದು)

ವುದು. ಲಂಡನ್ ಮತ್ತಿತರ ವಿದೇಶಗಳಲ್ಲಿ ನಿಜಾಮರು ತನ್ನ ಸ್ವಂತ ಏಜೆಂಟ್ ಜನರಲರನ್ನು ನೇಮಿಸಬಹುದು. ಆದರೆ ಅವರ ಕಾರ್ಯಕಲಾಪಗಳು ವ್ಯಾಪಾರ ವಹಿವಾಟುಗಳಿಗೆ ಸಂಬಧಿಸಿರಬೇಕು

ಮತ್ತವರ ಚಟುವಟಿಕೆಗಳು ಭಾರತ ಪ್ರತಿನಿಧಿಗಳ ಚಟುವಟಿಕೆಗಳಿಗೆ ಸಂಪೂರ್ಣ ಸಂಬಂಧಿಸಿರಬೇಕು. (ನಿಜಾಮರ ಹತ್ರದಲ್ಲಿ ರಾಜಕೀಯ ಸಂಬಂಧಾಧಿಕಾರವೂ ಉಳ್ಳೀಖಿಸಲ್ಪಟ್ಟಿದೆ) ಹಿಂದೀ ಸರಕಾರದ ಟ್ರೆಜರಿ ಮತ್ತು ಸಂಬಂಧದ ಅಧಿಕಾರಿಗಳಿಗೆ ಚೇರಿ ವ್ಯವಸ್ಥೆಗಳನ್ನು ನಿಜಾಮ್ ಸರಕಾರ ಮಾಡಿಕೊಟ್ಟಾಗ ಈ ತನಕ ಹಿಂದೀ ಸರಕಾರದ್ದಾಗಿದ್ದ ಅಂತಹ ಕಟ್ಟಡಗಳನ್ನು ನಿಜಾಮರಿಗೊಪ್ಪಿಸಲಾಗುವದು. ಹೈದರಾಬಾದಿನಲ್ಲಿರುವ ಹಿಂದೀ ಸೇನೆಗಳನ್ನು ಫೆಬ್ರವರಿ ಅಂತ್ಯದೊಳಗೆ ಪೂರ್ಣಗೊಳ್ಳುವಂತೆ ಅನುಕ್ರಮವಾಗಿ ವಾಪಾಸು ಕರೆಯಲಾಗುವದು. ಕರೆನ್ಸಿ, ನಾಣ್ಯ, ಮತ್ತು ಟಪ್ಪಾಲುಚೀಟು ಸಂಬಂಧದ ನಿಜಾಮರ ಹಿಂದಿನ ಸ್ವಂತಾಧಿಕಾರಗಳು ಮುಂದಕ್ಕೂ ಊರ್ಜಿತದಲ್ಲಿರುವುವು. ಹೈದರಾಬಾದಿನ ಸೇನಾ ಸಂಖ್ಯೆ, ನಿಜಾಮರು ಅಪೇಕ್ಷಿಸಿರುವ ಕೆಲವು ಸ್ಥಳ ಸಂಬಂಧದ ಹಕ್ಕುಗಳು, ಇತ್ಯಾದಿಗಳ ಕುರಿತು ನಿಜಾಮರ ಪ್ರತಿನಿಧಿ ನೇಮಕವಾದೊಡನೆ ಮಾತುಕತೆಗಳು ನಡೆಯುವವು! ಒಬ್ಬರ ಕ್ಷೇತ್ರದೊಳಗಿನ ಪ್ರತಿಕೂಲಾತ್ಮಕ ಚಳವಳಿ ಅಥವಾ ಪ್ರಚಾರಗಳನ್ನು ತಡೆಗಟ್ಟಲು ಒಬ್ಬರಿಗೊಬ್ಬರು ಸಹಾಯಮಾಡಬೇಕೆಂದು ನಿಜಾಮರು ಕೇಳಿಕೊಂಡುದಕ್ಕೆ 'ಜಾತೀಯ ಸೌಹಾರ್ದತೆ, ಶಾಂತಿ ಹಾಗೂ ಸುರಕ್ಷಿತತಾ ನಿರ್ಮಾಣಕಾರ್ಯದಲ್ಲಿ ಹೃತ್ಪೂರ್ವಕ ಸಹಕರಿಸುವುದಾಗಿ' ಹಿಂದೀ ಸರಕಾರವೊಪ್ಪಿದೆ, 'ನಾನು ಯಾವ ಕಡೆ ಸೇರುವುದಕ್ಕೂ ಸಿದ್ಧನಿಲ್ಲವಾದರೂ, ನಿಮ್ಮೊಂದಿಗೆ ಅದಕ್ಕಿಂತ ಕಡಿಮೆಯದಾದ ಒಪ್ಪಂದಕ್ಕೆ ಸಿದ್ಧ'ನೆಂದು ನಿಜಾಮರು ಸೂಚಿಸಿದ್ದರೆ 'ನೀವು ಪಾಕಿಸ್ಥಾನಕ್ಕೆ ಸೇರುವ ಇಚ್ಛೆಯಿಲ್ಲವೆಂದು ಸೂಚಿಸಿರುವುದನ್ನು ಗಣಿಸಿದ್ದೇವೆ' ಎಂದು ಹಿಂದೀ ಗವರ್ನರ್ ಜನರಲ್ ಗಮನಕ್ಕೆ ತಂದು ಶಾಶ್ವತ ಸಂಬಂಧಕ್ಕೆ ಬಾರದ್ದಕ್ಕಾಗಿ ದುಃಖಸೂಚಿಸಿ ಅವಧಿಯಾಂತ್ಯದಲ್ಲಿ ಅದು ಕೈಗೂಡಲೇ ಬೇಕಾದುದು ಅನಿವಾರ್ಯವೆಂಬ ಸೂಚನೆ ಮತ್ತು ನಿರೀಕ್ಷೆ ಪ್ರದರ್ಶಿಸಿದ್ದಾರೆ.

ಹೈದರಾಬಾದು ಮುಂದೇನು?

ತಾ 29ರ ಹಿಂದೀ ಕೇಂದ್ರ ಶಾಸನ ಸಭೆಯಲ್ಲಿ ಹೈದರಾಬಾದಿನ ಒಪ್ಪಂದ ಕರಾರನ್ನು ಮಂಡಿಸುತ್ತಾ ಸಂಸ್ಥಾನಖಾತೆಯ ಸಚಿವ ಸರ್ದಾರ್ ಪಟೇಲರೆಂದರು: "ಈ ಒಪ್ಪಂದ ಪ್ರಕಾರ, ಕಳೆದ ಅಗೋಸ್ತು 15ರ ಮೊದಲು ಚಕ್ರವರ್ತಿ ಸರಕಾರಕ್ಕೆ ಹೈದರಾಬಾದಿನೊಡನೆ ಯಾವ ಯಾವ ಸಂಬಂಧಗಳಿದ್ದುವೋ, ಅವುಗಳ ಪೈಕಿ ಸಾರ್ವಭೌಮ ಮೇಲಧಿಕಾರವೊಂದನ್ನು ಬಿಟ್ಟು, ಉಳಿದೆಲ್ಲವೂ ಹಿಂದೀ ಕೇಂದ್ರ ಸರಕಾರಕ್ಕೆ ಹೈದರಾಬಾದಿನ ಮೇಲಿವೆ. ಇವುಗಳಲ್ಲಿ ಇತರ ಸಂಸ್ಥಾನಗಳಂತೆಯೇ ವಿದೇಶ ಸಂಬಂಧ, ರಕ್ಷಣೆ ಮತ್ತು ಸಂಚಾರ ವ್ಯವಹಾರ ವಿಭಾಗಗಳೂ ಸೇರಿವೆ." ಅವಧಿಯಂತ್ಯದಲ್ಲಿ ಶಾಸ್ವತ ಸಂಬಂಧವಾಗುವದೆಂದು ಹಾರೈಸಿ, ಹೈದರಾಬಾದು ಪಾಕಿಸ್ತಾನಕ್ಕೆ ಸೇರಲಾಗದೆಂಬುದು ಈ ಕರಾರಿನನ್ವಯ ಸ್ಪಷ್ಟವೆಂದು ತಿಳಿಸಿ ಸಂಸ್ಥಾನದ ಒಳಾಡಳಿತೆಯ ಕುರಿತು ಹೀಗೆಂದರು "ಕಳೆದ ಕೆಲವು ತಿಂಗಳುಗಳಿಂದ ಹೈದರಾಬಾದಿನಲ್ಲಿ ನಡೆದಿರುವ ಘಟನೆಗಳ ಕುರಿತು ಸರ್ವರಲ್ಲೂ ಎದ್ದಿರುವ ಆತುರವೆಂತಹದೆಂಬುದು ನನಗೆ ಚನ್ನಾಗಿ ಗೊತ್ತು. ಈಗ ಆ ಒಪ್ಪಂದವಾಗಿದೆ ಅದು ಪ್ರಚಲಿತ ವಿದ್ಯಮಾನದ ಮೇಲೆ ಪೂರ್ಣ ರೂಪಿ ಪರಿಣಾಮ ಬೀರುವದೆಂದೂ ಸಂಸ್ಥಾನದೊಳಗೂ ಹೊರಗೂ ಎರಡೂ ಸಮಾಜಗಳೊಳಗಿನ ಸಂಬಂಧದ ಮೇಲೆ ಪ್ರಯೋಜನಕಾರೀ ಪ್ರಭಾವವನ್ನು ಬೀರುವುದೆಂದೂ ನನಗೆ ನಂಬಿಕೆಯಿದೆ. ಹೀಗಾಗಿ ಗತಕಾಲದ ಘಟನೆಗಳನ್ನು ಸಾವೇಗ ಹಿಂದೂಡಿ, ಸೌಹಾರ್ದತೆ ಐಕ್ಯತೆಗಳ ಸುಸಂಬಂಧಕ್ಕಾಗಿ ಮುಂದೆ ನೋಡಬಹುದು. ಈ ಮೂಲಕವೇ ಸಂಸ್ಥಾನವನ್ನು ಬಿಟ್ಟು ಹೋಗಿರುವ ಜನರು ಮರಳಿ ಬರುವಂತೆಮಾಡಬೇಕಾಗಿದೆ. ಮೈತ್ರಿ ಮತ್ತು ಸೌಹಾರ್ದತಾ ಸಂಬಂಧಗಳಸ್ತಿವಾರವಾಗಲೆಂದೇ ಇಂದಿನ ಒಪ್ಪಂದವಾಗಿರುವುದರಿಂದ, ಆ ಸ್ಫೂರ್ತಿಗನುಗುಣವಾಗಿಯೇ ಈ ಕರಾರು ಸಂಬಂಧದ ಕಾರ್ಯಗಳು ನಡೆಯುವವೆಂಬು ನಂಬುತ್ತೇನೆ. ನಾವಂತೂ ನಮ್ಮ ಮಟ್ಟಿಗೆ ಈ ಉದ್ದೇಶವನ್ನೇ ದೃಷ್ಟಿ ಪಥದಲ್ಲಿಟ್ಟುಕೊಂಡು ಸರ್ವ ಶಕ್ತಿಯಿಂದ ಸಾಧಿಸುವೆವೆನ್ನುತ್ತೇನೆ. ಸಂಸ್ಥಾನದ ರಾಜ್ಯಾಂಗ ಸುಧಾರಣೆಯ ಕಡೆಗೆ ನಿಜಾಮರ ಲಕ್ಷ್ಯ ಹರಿದಿರುವ ಕುರಿತು ಎರಡು ಮಾತು ಹೇಳಬೇಕಾಗಿದೆ. ಈ ಸಂಬಂಧದಲ್ಲೂ ಹಿಂದೀ ಕೇಂದ್ರದೊಡನೆ ಶಾಶ್ವತ ಜೋಡಣೆಗೊಳ್ಳಬೇಕಾದ ಕೊನೆಯ ತೀರ್ಮಾನದ ಮಟ್ಟಿಗೂ, ಜನರ ಅಭಿಮತವೇ ಕೊನೆಯ ನಿರ್ಣಯವಾಗತಕ್ಕದ್ದೆಂಬುದನ್ನು ನಿಜಾಮರು ಅಡ್ಡಿ ವಿನಹಾ ಅರಿತುಕೊಂಡಾರೆಂದೇ ನನ್ನಾಶೆಯಿದೆ. ಈ ತತ್ವದ ವಿಜಯ ಚಿಹ್ನೆಗಳು ಇತರ ಹಲವು ಸಂಸ್ಥಾನಗಳಲ್ಲಿ ಸುಸ್ಪಷ್ಟವಾಗಿ ಕಾಣಿಸಿವೆ. ಅತಿ ಪ್ರಾಮುಖ್ಯ ಸ್ಥಾನಮಾನಗಳ ರಾಜರಾಗಲಿರುವ ಹಿಸ್ ಎಕ್ಸಲೈಡ್ ಹೈನೆಸ್ (ನಿಜಾಮರು) ತನ್ನ ಘನತೆಗನುಸಾರವಾಗಿ ಮಿಕ್ಕವರು ಅನುಕರಿಸಲಾಗುವ ಮಾದರಿಯೊಂದನ್ನು ಹಾಕಿ ಕೊಡುವರೆಂದು ನನಗೆ ಧೃಢ ನಂಬಿಕೆಯಿದೆ."

ಹೈದರಾಬಾದಿಗೆ ಛಾಯಾಮಂಡಲಿ

ನಿಜಾಮರು ಒಂದು ಫರ್ಮಾನ್ ಹೊರಡಿಸಿ ಹಿಂದಿನ ತನ್ನ ಕಾರ್ಯಕಾರೀ ಸಮಿತಿಯನ್ನು ರದ್ದು ಪಡಿಸಿದ್ದಾರೆ. ಮೀರ್ ಲೈಕ್ ಅಲಿಯವರನ್ನು ಒಂದು ವರುಷದ ಮಟ್ಟಿಗೆ ಪ್ರಧಾನ ಮಂತ್ರಿಯಾಗಿ ನೇಮಿಸಿಕೊಂಡಿದ್ದಾರೆ. ಒಂದು ನಡುಗಾಲ ಸರಕಾರ ರಚನೆಯನ್ನು ಜಾಹೀರು ಮಾಡಿದ್ದಾರೆ. ಈ ಮಂತ್ರಿ ಮಂಡಲದಲ್ಲಿ ನಾಲ್ಕು ಮಂದಿ ನಾಮಕರಣಗೊಂಡವರು, ನಾಲ್ಕು ಮಂದಿ ಮುಸ್ಲಿಮರು, ಮತ್ತು ನಾಲ್ಕು ಮಂದಿ ಹಿಂದೂ ಸದಸ್ಯರಿರುವರು. ಮುಸ್ಲಿಮರ ಪಾಲಿನ ನಾಲ್ಕು ಸ್ಥಾನಗಳನ್ನೂ ಇತ್ತೆಹಾದ್--ಉಲ್-- ಮುಸ್ಲಿಮೀನಿನ ಮಜ್ಲೀಸಿಗೇನೇ ಕೊಡಲಾಗುವುದು. ಹಿಂದುಗಳ ಪಾಲಿನ ನಾಲ್ಕರಲ್ಲಿ ಎರಡು ಸ್ಥಾನಗಳನ್ನು ಸಂಸ್ಥಾನಿಕ ಕಾಂಗ್ರೆಸಿಗೂ ಒಂದನ್ನು ಸ್ವತಂತ್ರ ಪ್ರಗತಿಶೀಲ ಪಕ್ಷಕ್ಕೂ, ಉಳಿದೊಂದನ್ನು ದಳಿತ ವರ್ಗಕ್ಕೂ ಕೊಡಲಾಗುವದೆಂದು ತಿಳಿದುಬರುತ್ತದೆ. ಕಾಂಗ್ರೆಸಿಗರು ಸಹಕರಿಸುವಂತಿದ್ದರೆ ನಾಲ್ಕು ಸ್ಥಾನಗಳನ್ನೂ ಕಾಂಗ್ರೆಸಿನ ವಶಕ್ಕೇನೇ ಕೊಟ್ಟು ದಳಿತ ವರ್ಗದ ಪ್ರತಿನಿಧಿಯನ್ನು ಅವರೇ ನೇಮಿಸಿಕೊಳ್ಳುವಂತೆ ಬಿಡುವುದಕ್ಕಡ್ಡಿಯಿಲ್ಲವಂತೆ. ಈ ಮಂತ್ರಿ ಸಮಿತಿ ರಚನೆಯಲ್ಲಿ ಜವಾಬ್ದಾರೀ ಸರಕಾರದ ಯಥಾರ್ಥಾಂಶವೇನೂ ಇಲ್ಲವಾದ್ದರಿಂದ ಕಾಂಗ್ರೆಸು ಅದರಲ್ಲಿ ಸೇರಲು ನಿರಾಕರಿಸುವದೆಂದು ಖಚಿತವಾಗಿ ತಿಳಿದುಬರುತ್ತದೆ. ಪ್ರಧಾನಿ ಮೀ. ಲಾಯಕ್ ಅಲಿಗಳು ಇತ್ತೀಚೆಗಿನ ಚರಿತ್ರೆಯಲ್ಲೇ ಪ್ರಧಾನ ಮಂತ್ರಿಗಳೆಲ್ಲರ ಪೈಕಿ ಅತ್ಯಂತ ತರುಣರು. ಸಂಸ್ಥಾನಿಕ ಕಾಂಗ್ರೆಸ್ ನಾಯಕರೊಂದಿಗೆ ಮಾತುಕತೆ ನಡಿಸಿ ಅನುಭವವಿದ್ದವರು; ಹೈದರಾಬಾದಿನ ಪ್ರಾಮುಖ್ಯ ಉದ್ದಿಮೇದಾರರು. ಅವರ ನೇಮಕದ ಕುರಿತು ಮಜ್ಲೀಸ್-ಕಾಂಗ್ರೆಸ್-ದಳಿತ ವರ್ಗ, ಎಲ್ಲರೂ ಸಮಾಧಾನ ವ್ಯಕ್ತಪಡಿಸಿದ್ದಾರೆ. ಆದರೆ ಯಥಾರ್ಥ ಹೊಣೆಗಾರ ಸರಕಾರದ ಸ್ಥಾಪನೆಗೆ ನಿಜಾಮ ಸರಕಾರವು ತಯಾರಿಲ್ಲವೆಂಬುದು ಖಂಡಿತ!

ಸೇಲ್ ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

R. E. P, No 369/47

S. C. 308/41

ವಾದಿ—ಸುಬ್ಬೆ ಶೆಟ್ಟಿ,

ಪ್ರ. ರು—ಮಾದ್ಯ ಶೆಟ್ಟಿ ಕೂಡಾ 5ಜನ

ಜೆ. ಡಿ 5ನೇ ಪ್ರತಿವಾದಿ ಸಂಕ ಶೆಡ್ತಿ-ಸುಬ್ಬ ಶೆಟ್ಟಿ ಮಂಮಗಳು.

4ನೆ ಪಡುವರಿ ಗ್ರಾಮದ ದೊಡ್ಡಮನೆ ವಾಸಸ್ಥಳ, ಯವಳಿಗೆ.

ಮೇಲೆ ಹೇಳಲ್ಪಟ್ಟ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವರಾದ ಸುಬ್ಬೆ ಶೆಟ್ಟಿಯು ಪ್ರತಿವಾದಿರ ಬಾಬ್ತು ಜಪ್ತಿ ಮಾಡಿದ ಆಸ್ತಿಯ ವಿಕ್ರಯದ ಬಗ್ಗೆ ಅರ್ಜಿಮಾಡಿದ್ದಾರೆ, ಆದ್ದರಿಂದ ವಿಕ್ರಯದ ಬಿಸ್ತಿಹಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ 1947ನೆ ಇಸ್ವಿ ಡಿಸಂಬ್ರ ತಾ.8 ನಿಶ್ಚಯಿಸಲ್ಪಟ್ಟಾಗಿದೆ ಎಂತ ನಿಮಗೆ ಇದರಿಂದ ತಿಳಿಸಲಾಗುತ್ತದೆ.

1947ನೆ ಇಸ್ವಿ ನವಂಬ್ರ ತಾ 26ನೆ ಬುಧವಾರ.

B. O.

ವಾದಿ ವಕೀಲ

ತ. ಗಣೇಶ ರಾವ್

ಕುಂದಾಪುರ 26-11-47.

(Consent of the Central Government has been obtained to this issue by an order of which a complete copy is open to public inspection at the Head Office of the Company. It must be distinctly understood that in giving their consent the Government of India do not take any responsibility for the financial soundness of any schemes or the correctness of any of the statements made or opinions expressed with regard to them.)

The Canara Banking Corporation Limited.

(Incorporated in British India-Liability of Members is Limited.)

ESTD: 1906.

Notice To Share-Holders

For the information of the shareholders of the Canara Banking Corporation Limited, it is hereby notified that the Bank will issue additional 8,000 Ordinary shares of Rs.50/- each at a premium of Rs. 40/- per share to the Registered Shareholders as on 31st December, 1947 in the proportion of one New Share for every 4 shares held. Shares in excess of multiples of 4 will be ignored but those holding less then 4 shares will be offered one new share each.

The share transfer books will remain closed for this purpose from 21-12-1947 to 31-12-1947, both days inclusive.

"Letters of Right" with form of applications, will be posted to the registered shareholders as on 31-12-1947. The last date for receipt of applications for "Shares by Right" and the money payable thereon is 31-1-1948. Any rights not exercised by that date will be deemed to have been declined.

(By order of the Board)

Office of the Corporation,
UDIPI,
December 1st, 1947.

V. R. Kamath.
GENERAL MANAGER.

ಪ್ರಕಟಣೆ

ನಿಮ್ಮ ತಾ. 20-11-47ನೇ ಸಂಚಿಕೆಯಲ್ಲಿ ಸುಳ್ಳು ಫಿರ್ಯಾದಿ ಎಂಬ ಶಿರೋನಾಮದಿಂದ ನಾನು ದಾಖಲು ಮಾಡಿದ ಉಡುಪಿ ಸಬ್ ಮೆಜಿಸ್ಟ್ರೇಟ್ ಕೋರ್ಟಿನ C. C. No. 82/1947ನೇ ಫಿರ್ಯಾದಿಯು ಸುಳ್ಳು ಎಂತ ಕೋರ್ಟಿನವರು ತೆಗೆದು ಹಾಕಿದ್ದಾರೆಂತ ಪ್ರಕಟಣೆ ಮಾಡಿದ್ದೀರಿ. ಇದು ಸರಿಯಲ್ಲ. ಕಳವಾದ ಸೊತ್ತುಗಳ ಬಾಬಿನಲ್ಲಿ ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ ನನ್ನ ಬಾಧ್ಯತೆ ತನಿಕೆ ಈಗಲೂ ಬಾಕಿ ಇರುತ್ತದೆ. C. W. 1 ಅಮೀನರ ಸಾಕ್ಷಿ ಪ್ರಕಾರ ನಮ್ಮ ವಿವಾದವು ಸಿವಿಲ್ ರೂಪವೆಂದು ಡಿಸ್ಚಾರ್ಜ್ ಮಾಡಿದ್ದಾಗಿರುತ್ತದೆ. ಆದುದರಿಂದ ಸದ್ರಿ ಪ್ರಕಟಣೆಯು ಮುಖ್ಯ ಆಳೆ T. S. ಅಬ್ದುಲ್ ರಹಿಮಾನ ಸಾಹೇಬರ ಕಡೆಯವರು ಕೊಟ್ಟ ಸುಳ್ಳು ಅನುಭವದ ಪ್ರಕಾರವಾಗಿದ್ದು ಅದು ತೀರ್ಪಿಗೆ ಸರಿಯಾಗಿರುವುದಿಲ್ಲವೆಂಬುದನ್ನು ಈಗ ನಿಮಗೆ ತೋರಿಸುವ ಜಜ್‌ಮೆಂಟ್ ನೋಡಿ ದುರಸ್ತಿ ಮಾಡಬೇಕಾಗಿ ಅಪೇಕ್ಷಿಸುತ್ತೇನೆ.

B. Abdulla Saheb.

ಬೆಂಗ್ರೆ, ಹಂಗಾರಕಟ್ಟೆ. ತಾ. 1-12-47

ಚಿಕ್ಕಿನ ಮೇಲೆ ದಾವೆ

ಕೋಡಿ ಗ್ರಾಮದ ಬೆಂಗ್ರೆಯಲ್ಲಿರುವ T. S. ಅಬ್ದುಲ್‌ರಹಿಮಾನ್ ಸಾಹೇಬರು ಚಿಕ್ಕಿನ ಬಾಬ್ತು ತನಗೆ ರೂ200/-ಬರಬೇಕೆಂತ ನನ್ನ ಮೇಲೆ ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ ದಾಖಲುಮಾಡಿದ S. C. 365/47ನೇ ದಾವೆಯು ತಪ್ಪಿಯಾಗಿ ಅವರ ವ್ಯಾಜ್ಯವನ್ನು ಸುಳ್ಳುಅಂತ ಡಿಸ್ಮಿಸ್ ಮಾಡಿದ್ದಲ್ಲದೆ ನನ್ನ ಖರ್ಚನ್ನು ಅವರು ಕೊಡಬೇಕೆಂತ ಮುನ್ಸೀಫರು ತೀರ್ಮಾನ ಮಾಡಿದ್ದಾರೆ.

P. R. Joseph Andrade.

ಬೆಂಗ್ರೆ ಹಂಗಾರಕಟ್ಟೆ, ತಾ 2-12-47

ದಕ್ಷಿಣ ಕನ್ನಡ

ಮಂಗಳೂರು

ಮುಂಬಯಿ ಸರಕಾರವು ರಚಿಸಿದ ಕರ್ನಾಟಕ ವಿಶ್ವವಿದ್ಯಾನಿಲಯ ಸಮಿತಿಯ ಸದಸ್ಯರಾದ ಶ್ರೀ ಎಸ್. ಎಸ್. ಬಸನಾಳ, ಶ್ರೀ ಸೋಮಣ್ಣ, ಶ್ರೀಯುತ ಕತ್ತೀ(?)ರವರು, ಪ್ರೊ। ಮೆನೇಜಸ್ (ಕಾರ್ಯದರ್ಶಿ) ಮತ್ತು ಜಿನರಾಜ ಹೆಗ್ಗಡೆ, ಇವರು ಮಂಗಳೂರಿಗೆ ತಾರೀಕು ೨೮ರಂದು ಬಂದಿದ್ದಾಗ ಮಂಗಳೂರಿನವರು ಅವರಿಗೊಂದು ಸ್ವಾಗತವನ್ನು ಸ್ಥಳೀಯ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಮಾಡಿದರು. ಲಘು ಉಪಹಾರವಾದ ಮೇಲೆ ಮಂಗಳೂರಿನವರ ಪರವಾಗಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಅವರನ್ನು ಸ್ವಾಗತಿಸಿದರಲ್ಲದೆ ಅತಿಥಿಗಳ ಪರಿಚಯ ಮಾಡುತ್ತಾ "ಅವರ ಈ ಸಮಿತಿಗೆ ಮಂಗಳೂರು ಪೂರ್ಣ ಬೆಂಬಲವೀಯುವುದು; ಆದರೆ ನಮಗೆ ಈ ಹೊಸ ವಿಶ್ವವಿದ್ಯಾನಿಲಯದಿಂದ ಸಿಗುವ ಪ್ರಯೋಜನವನ್ನವರು ಸೂಚಿಸಬೇಕು" ಎಂದರು. ಶ್ರೀ ಎಸ್. ಎಸ್. ಬಸನಾಳರು ಅತಿಥಿಗಳ ಪರವಾಗಿ ಮಾತನಾಡುತ್ತಾ ಕರ್ನಾಟಕಕ್ಕೆ ಒಂದು ವಿಶ್ವವಿದ್ಯಾನಿಲಯವಿರಬೇಕಾದ ಅಗತ್ಯ, ಮುಂಬಯಿ ಸರಕಾರ ಮಾಡಿದ ವ್ಯವಸ್ಥೆ, ಸಮಿತಿಯು ಮಾಡುತ್ತಿರುವ ಕೆಲಸ ಇತ್ಯಾದಿ ತಿಳಿಸುತ್ತಾ ಸರ್ವಾಂಗ ಸುಂದರವಾದ ಕರ್ನಾಟಕದಲ್ಲಿ ಎಲ್ಲರಿಗೂ ಉಪಯೋಗ ಸಿಗುವಂತಾಗಬೇಕೆಂಬುದೇ ನಮ್ಮ ಧ್ಯೇಯವೆಂದು ತಿಳಿಸಿದರು. ಆ ಮೇಲೆ ಶ್ರೀ ಜಿನರಾಜ ಹೆಗ್ಗಡೆಯವರು ಮಾತನಾಡಿದ ಬಳಿಕ ಪ್ರಸಿದ್ಧ ಅರ್ಥಧಾರಿಗಳಿಂದ ತಾಳಮದ್ದಳೆ ಜರಗಿತು. ಈ ದಿವಸವು ಬೆಳಿಗ್ಗೆ ಜಿಲ್ಲಾ ಬೋರ್ಡಿನಲ್ಲಿ ಮಧ್ಯಾಹ್ನ ಕೆನರಾ ಹೈಸ್ಕೂಲಿನಲ್ಲಿ ಈ ಸಮಿತಿಯ ಸದಸ್ಯರು ಹಲವು ಶಿಕ್ಷಣ ತಜ್ಞರನ್ನೂ ಇತರರನ್ನೂ ಕಂಡು ವಿಚಾರ ವಿನಿಮಯ ಮಾಡಿದರು.

ಶ್ರೀ ಎಸ್. ಎಸ್. ಬಸನಾಳರು ಇಲ್ಲಿನ ವಿಶ್ವವಿದ್ಯಾನಿಲಯ ವಿಸ್ತರಣ ಸಮಿತಿ ಆಶ್ರಯದಲ್ಲಿ, "ಕರ್ನಾಟಕ ವಿಶ್ವವಿದ್ಯಾನಿಲಯ"ವೆಂಬ ವಿಚಾರದ ಕುರಿತು ಮಾತನಾಡಿದರು. ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಅಧ್ಯಕ್ಷರಾಗಿ ಭಾಷಣಕರ್ತರ ಪರಿಚಯ ಮಾಡಿದರು. ಶ್ರೀ ಭವಾನಿಶಂಕರ ರಾಯರು ವಂದನೆಗಳನ್ನರ್ಪಿಸಿದರು.

ದ. ಕ. ಪ್ರಗತಿಶೀಲ ಮುಸ್ಲಿಂ ಜಮಾಯತಿನ ಉದ್ಘಾಟನಾ ಸಮಾರಂಭವು ತಾ. ೩೦ರಂದು ನಿ। ಎಚ್। ಎಚ್। ಜಮಾದ್ ... ರ ಅಧ್ಯಕ್ಷತೆಯಲ್ಲಿ ಜರಗಿತು. ಮುಸ್ಲಿಮರು ಹಿಂದೀ ಒಕ್ಕೂಟಕ್ಕೆ ಪ್ರಾಮಾಣಿಕ ರಾಗಿರಬೇಕು. ಪಾಕಿಸ್ತಾನ ತರಾವುಗಳು ಮಂಜೂರಾದವು.

ತಾಲೂಕು (ಆಹಾರ) ಕಮಿಟಿಯ ಸದಸ್ಯತ್ವಕ್ಕೆ ರಾಜೀನಾಮೆ ಸರಕಾರದ ನಿಯಮಗಳಿಗೆ ವಿರೋಧ ಬರದಂತಹ ವಿಷಯಗಳಲ್ಲೂ ಸಹ ಅವುಗಳನ್ನು ಅಕ್ಷರಶಃ ಉಪಯೋಗಗಳಿಗೆ ಪ್ರವೃತ್ತಿಸುವುದರಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಅಲಕ್ಷ್ಯವಾಗಿದ್ದರೆಂಬ ಸ್ವಾನುಭವದ ಕಾರಣವಾಗಿಯೂ, ತಮ್ಮ ಸಮಯ ಸಹಕಾರಗಳು ಈ ಕ್ರಮದಿಂದ ವ್ಯರ್ಥವಾಗುವುದರ ಕಾರಣವಾಗಿಯೂ, ಪುತ್ತೂರು ತಾಲೂಕು (ಆಹಾರ) ಕಮಿಟಿಯ ಈ ಕೆಳಗಿನ (ಅನಧಿಕಾರಿ ವರ್ಗದ) ಸದಸ್ಯರು ತಮ್ಮ ಸದಸ್ಯತ್ವಕ್ಕೆ ತಾರೀಕು ೨೫—೧೧—೪೭ರಲ್ಲಿ ರಾಜೀನಾಮೆಯಿತ್ತಿದ್ದಾರೆಂದು ತಿಳಿದು ಬರುತ್ತಿದೆ. ಶ್ರೀ ಗಳಾದ ಯು। ಐತಪ್ಪ ಶೈಗಳು, ವಿ. ಯಸ್. ನೂರಿತ್ತಾಯರು, ಟಿ. ತಿಮ್ಮಯ್ಯ ಅರಿಗರು, ಯಂ. ಸದಾಶಿವ ರಾಯರು, (ಜಿಲ್ಲಾ ಆಹಾರ ಕಮಿಟಿಯ ಸದಸ್ಯರು,) ಎ. ಪಿ. ಸುಬ್ಬಯ್ಯನವರು, ಮತ್ತು ಕೆ. ವೆಂಕಯ್ಯನವರು.

ಜಿಲ್ಲಾ ಪ್ರಾಥಮಿಕ ಶಾಲಾಧ್ಯಾಪಕ ಸಂಘದ ಸಭೆಯೊಂದು ತಾ ೨೩—೧೧—೪೭ ರಂದು ಶ್ರೀ ಎಚ್ ದಾಮೋದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಇದೇ ಬರುವ ತಾರೀಕು ೨೯ರಂದು ಪ್ರಾಥಮಿಕ ಅಧ್ಯಾಪಕರ ಜಿಲ್ಲಾ ಸಮ್ಮೇಳನವನ್ನು ಕಾಸರಗೋಡಿನಲ್ಲಿ ತಾಲೂಕು ಸಂಘಗಳ ಸಹಕಾರದಲ್ಲಿ ಜರಗಿಸುವ ತೀರ್ಮಾನವಾಯಿತು.

ಉಡುಪಿ

ಧ್ವಜ ಸಮರ್ಪಣೆ ಸಮಾರಂಭ— ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿದ್ಯಾರಣ್ಯ ಶಾಖೆಗೆ ಧ್ವಜವನ್ನು ಕೊಡುವ ಶುಭ ಸಮಾರಂಭವು ತಾ. 30ರಲ್ಲಿ ಶ್ರೀ ಬಸ್ತಿ ವಾಸಪ್ಪ ಶೆಣೈಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಶ್ರೀ॥ ಶೆಣೈಯವರು ಸಂಘದ ಧ್ಯೇಯಗಳನ್ನು ವಿವರಿಸಿ ಹೇಳಿದರು. ಸ್ವಯಂಸೇವಕರ ಕವಾಯತುಗಳು ಪ್ರೇಕ್ಷಣೀಯವಿದ್ದುವು. ಶ್ರೀ ಜರೋಡಿ ರಾಘವಕೃಷ್ಣ ಪೈಗಳವರು ಸಜ್ಜನ ಪ್ರೇಕ್ಷಕವರ್ಗದ ಪರಿಚಯ ಮಾಡಿಕೊಟ್ಟರು.

ಶಾಲಾ ಮಕ್ಕಳಿಗೆ ತಿಂಡಿ—ಮುನಿಸಿಪಲ್ ಕ್ಷೇತ್ರದೊಳಗಿನ ಯಾವತ್ತೂ ಶಾಲೆಗಳ ಸಾವಿರಾರು ಮಕ್ಕಳಿಗೆ ಇದೇ ತಾ. 1ರಲ್ಲಿ ಪರ್ಯಾಯ ಶ್ರೀ ಶೀರೂರು ಮಠದ ಸ್ವಾಮಿಗಳವರು ಲಾಡು ಹಂಚಿಕೊಡುವ ವ್ಯವಸ್ಥೆ ಮಾಡಿದರು. ಅಂತೆಯೇ ಹರಿಜನ ಬಂಧುಗಳಿಗೂ ಪಾಯಸ ಹಂಚಲಾಯಿತು.

ಕರ್ನಾಟಕ ವಿಶ್ವ ವಿದ್ಯಾಲಯ ಸಬ್ ಕಮಿಟಿ—ಯವರು ತಾ. 29ರಲ್ಲಿ ಉಡುಪಿಗೆ ಬಂದು ವಿಷಯಜ್ಞರೊಡನೆ ವಿಚಾರವಿನಿಮಯ ಮಾಡಿ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪಿಸುವುದು ಅವಶ್ಯವೆಂಬ ಹೇಳಿಕೆಗೆ ಬೆಂಬಲ ಪಡಕೊಂಡರು.

ಮುನ್ಸಿಪಲ್ ಮೀಟಿಂಗು—ಕಳೆದ ತಾ.26ರಲ್ಲಿ ಶ್ರೀ. ಓ. ಉಪೇಂದ್ರ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ವಿವಿಧ ಸಬ್ ಕಮಿಟಿಗಳಿಗೆ ಸದಸ್ಯರ ಚುನಾವಣೆ ನಡೆದು ಸಭೆ ಮುಂದರಿಸಿಡಲಾಯಿತು. ಸಭೆ ತಾ. 29ರಲ್ಲಿ ಪುನಃ ಸೇರಿತು. ರಸ್ತೆಗಳ ಬದಿಯ ಚರಂಡಿಗಳಿಗೆ ಮೆಟ್ಟುಕಲ್ಲು ಹಾಕುವರೆ ಈ ತನಕ ವಸೂಲು ಮಾಡುತ್ತಿದ್ದ ಲ್ಯಾಸೆನ್ಸು ಫೀಸನ್ನು ಹೊಸವರುಷದಿಂದ ವಸೂಲು ಮಾಡುವುದು ಬೇಡವೆಂಬ ನಿರ್ಣಯವು ಪಾಸಾಯಿತು.

ಹವಾಮಾನ—ಚಳಿ ಪ್ರಾರಂಭವಾಗಿದೆ. ಸುಗ್ಗಿ ಬೆಳೆಗೂ ಧಾನ್ಯಕ್ಕೂ ಬೇಕಾದ ಅನುಕೂಲ ಮಳೆಯು ಮಾತ್ರ ಬರಲಿಲ್ಲ.

ಕಂಟ್ರೋಲು ನಿಷೇಧ ಸಭೆ:— ಈಗ ಜ್ಯಾರಿಯಲ್ಲಿರುವ ದವಸ ಧಾನ್ಯಗಳ, ಸಕ್ಕರೆ ಚಿಮಣಿಎಣ್ಣೆ, ಬಟ್ಟೆ ಬರೆಗಳ ಮೇಲಿನ ಕಂಟ್ರೋಲುಗಳನ್ನು ಕೂಡಲೇ ತೆಗೆಯಬೇಕೆಂದು ಮದ್ರಾಸು ಸರಕಾರವನ್ನು ಕೇಳಿಕೊಳ್ಳುವ—ಜಿಲ್ಲೆಯಲ್ಲಿಯ ಆಹಾರ ಧಾನ್ಯಗಳ ಸಂಗ್ರಹ ಮತ್ತು ವಿತರಣೆಗಳ ರೀತಿನೀತಿಗಳು ಜನತೆಗೆ ಸಂಕಷ್ಟಗಳನ್ನುಂಟು ಮಾಡುವುದರಿಂದ ಅವುಗಳ ಪುನಃ ಶೋಧನೆಯಾಗಬೇಕೆನ್ನುವ ನಿರ್ಣಯಗಳು ತಾ ೨೮ರಲ್ಲು ಮುನಿಸಿಪಲ್ ಹೈಸ್ಕೂಲಿನಲ್ಲಿ ಕರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಪಾಸಾದವು. ಶ್ರೀ ಪಿ. ನಾರಾಯಣ ಪ್ರಭುಗಳು ಅಧ್ಯಕ್ಷತೆ ವಹಿಸಿದ್ದರು.

ಕುಂದಾಪುರ:—ಇದೇ ತಾ ೨೩ರಲ್ಲಿ ಕುಂದಾಪುರ ತಾಲೂಕಿನ ಬಟ್ಟೆ ವ್ಯಾಪಾರಿಗಳ ಸಭೆಯು ಕೆಥೋಲಿಕ್ ಹಾ। ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಬಿ. ಸುಬ್ಬಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸಿನಲ್ಲಿ ಸರಕಾರದವರು ಕಾರ್ಡು ಇಲ್ಲದನೇ ಬಟ್ಟೆ ಹಂಚಲಿಕ್ಕೆ ಹುಕುಂ ಕೊಟ್ಟ ರಿಯಾಯತಿಯನ್ನು ದ. ಕ. ಜಿಲ್ಲೆಗೂ ಕೊಡಬೇಕೆಂದೂ ಪ್ಲೇಟೆಡ್ ಮತ್ತು ಅನ್ ಪ್ಲೇಟೆಡ್ ಮಿಶ್ರಿತ ಅರಿವೆಗಳ ಬದಲಾಗಿ ಕೋರ್ಸ್ ಮತ್ತು ಮೀಡಿಯಂ ವಸ್ತ್ರಗಳನ್ನು ಕಾರ್ಡಿಗೆ ಸೇರಿಸಿದ ಮಾರಾಟ ಮಾಡಲು ವ್ಯಾಪಾರಸ್ಥರಿಗೆ ಹುಕುಂ ಕೊಡಬೇಕೆಂದೂ ನಿರ್ಣಯಗಳಾದವು. ಮಾತ್ರವಲ್ಲದೆ ಈ ತನಕ ಕೋಟಾ ಸಪ್ಲೈ ದೊರಕದ ೧೫ ಗ್ರಾಮಗಳಿಗೆ ಜರೂರು ಮಿಲ್ ಬಟ್ಟೆ ಕಳುಹಿಸಲು ಜಿಲ್ಲಾ ಟೆಕ್ಸ್ಟೈಲ್ ಕಮಿಶನರರನ್ನು ವಿನಂತಿಸಲಾಯಿತು. ಜವುಳಿ ವ್ಯಾಪಾರಿಗಳ ಸಂಘವು ಕೂಡಾ ಸ್ಥಾಪಿಸಲ್ಪಟ್ಟಿತು.

ಸುಬ್ರಹ್ಮಣ್ಯ—ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲ್ಲೂ ಮುಹತೋಭಾರಕುಕ್ಕೇ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಪೂರ್ವ ಶಿಷ್ಟ ಸಂಪ್ರದಾಯ ಪ್ರಕಾರ ಇದೇ ಬರುವ ಸರ್ವಜಿತು ಸಂವತ್ಸರದ ಕಾರ್ತಿಕ ಬಹುಳ ೧೨ಯು ಮಂಗಳವಾರ ತಾರೀಕು 9-12-47 ರಿಂದ ಉತ್ಸವವು ಪ್ರಾರಂಭವಾಗಿ ಕಾರ್ತಿಕ ಬ. 1೫ಯು. ಶುಕ್ರವಾರ ತಾ. 12-12-47 ರಲ್ಲು ಲಕ್ಷದೀಪೋತ್ಸವ. ಸೋಮವಾರ ತಾ. 15-12-47ರಲ್ಲು ಮಯೂರ ವಾಹನೋತ್ಸವ, ಮಂಗಳವಾರ ತಾ. 16-12-47ರಲ್ಲು ಶೇಷವಾಹನ(?) ಉತ್ಸವ. ಬುಧವಾರ ತಾ. 17-12-47ರಲ್ಲು ಪಂಚಮಿ ರಥೋತ್ಸವ. ಗುರುವಾರ ತಾ. 18-12-47ರಲ್ಲು ಚಂಪಾಷಷ್ಠಿ ಮಹಾರಥೋತ್ಸವ. ಶುಕ್ರವಾರ ತಾ. 19-12-47ರಲ್ಲು ಅವಭೃತೋತ್ಸವವೇ ಮೊದಲಾದ ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗುವದ್ರಿಂದ ಭಕ್ತ ಮಹಾಶಯರುಗಳು ಬಂದು ಶ್ರೀ ದೇವರ ಮೂಲಮೃತ್ತಿಕಾ ಗಂಧ ಪ್ರಸಾದಾದಿಗಳನ್ನು ಸ್ವೀಕರಿಸಿ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಸದ್ರಿ ದೇವಳದ ಮೊನೇಜರರ ವಿನಂತಿಯಿದೆ.

ಕಲ್ಲಮುಂಡ್ಕೂರು—ಶ್ರೀ. ಎನ್. ಎಸ್. ಕಿಲ್ಲೆಯವರು ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ। ಕೆ.ಕೆ. ಶೆಟ್ಟಿಯವರು ಕೂಡಾ ಇದೇ ತಾ.20-11-47ರಲ್ಲಿ ನಮ್ಮ ಕಲ್ಲಮುಂಡ್ಕೂರು, ನಿಡ್ಡೋಡಿ ಗ್ರಾಮಗಳಿಗೆ ಚಿತ್ತೈಸಿ, ಸದ್ರಿ ಗ್ರಾಮಗಳ ಕೇಂದ್ರ ಸ್ಥಳದಲ್ಲಿ ನೆರೆದ ಹರಿಜನರಿಂದ ಕೂಡಿದ ಸಾರ್ವಜನಿಕ ಸಭೆಯಲ್ಲಿ ಹಳ್ಳಿಯ ಉದ್ಧಾರ ಹರಿಜನೋದ್ಧಾರ, ಮತ್ತು ಕೃಷಿಕರ ಸಂಘದ ಉದ್ದೇಶವನ್ನು ಕುರಿತು ಸೂಚಿಸುವ ಸುರಸವಾದ ಭಾಷಣವನ್ನು ಕೊಟ್ಟು, ಜನರಲ್ಲಿ ಹೊಸ ಹುರುಪನ್ನು ತುಂಬಿಸಿದರು. ಈ ಬಗ್ಗೆ ಸದ್ರಿ ಗ್ರಾಮದ ಜನರು ಅಭಿವಂದನೆಯನ್ನು ಅರ್ಪಿಸುತ್ತಾರೆ.

ಎಡನೀರು—ನಮ್ಮ ಮಾಣಿಪುರ ಗ್ರಾಮದ ರೈತವಾರಿ ಸಂಘವು ಎಡನೀರು ಹಿಂದೂ ಎಲಿಮೆಂಟರಿ ಶಾಲೆಯಲ್ಲಿ ತಾ. 23-11-47ನೇ ರವಿವಾರ ಅಪರಾಹ್ನ ಗಂಟೆ 2ಕ್ಕೆ ಕಲ್ಮಂಜೆ ಶ್ರೀಮಾನ್ ಪದ್ಮನಾಭ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಸದರೀ ಸಂಘದ ಉದ್ದೇಶವನ್ನು ಉಡುಪಿ ರೈತವಾರಿ ಸಂಘದ ಶ್ರೀ. ವಿಟ್ಠಲದಾಸರು ವಿವರಿಸಿದರು. ಅನಂತರ ಸಂಘಕ್ಕೆ ಸದಸ್ಯರ ಚುನಾವಣೆಯಾಗಿ ಮಂಗಳ ಗೀತೆಯೊಡನೆ ಸಭೆಯು ವಿಸರ್ಜನವಾಯಿತು.

ವಿಶ್ವಾಸ ಮತ್ತು ಭದ್ರತೆ ನಮ್ಮ ಧ್ಯೇಯವು

ಸರ್ವರ ಅನುಕೂಲತೆಗಳಿಗೂ ನಿಲುಕುವಂತಹ ಆಕರ್ಷಕ ಯೋಜನೆಗಳನ್ನು ಸಲ್ಲಿಸುವವು.

ಲಾಭದಾಯಕ ದರತ್ತುಗಳಿಂದ ಗೃಹಸ್ಥ ಪ್ರತಿನಿಧಿಗಳು ಬೇಕಾಗಿದ್ದಾರೆ.

ವಿವರಗಳಿಗೆ ಬರೆಯಿರಿ:—

ದಿ ಮೆನೇಜಿಂಗ್ ಡೈರೆಕ್ಟರ್,

ದಿ ಸೆಕ್ಯೂರಿಟಿ ಪ್ರಾವಿಡೆಂಟ್ ಇನ್ಶೂರೆನ್ಸ್ ಕೊ.,

ಲಿಮಿಟೆಡ್.

ಹಸನ್ ಚೇಂಬರ್ಸ್, ಪಾರ್ಸಿ ಬಜಾರ್ ಸ್ಟ್ರೀಟ್,

ಫೋರ್ಟ್, ಬೊಂಬಾಯಿ 1

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು

ಮನೆಮದ್ದು	2 0 0	ನಗೆನೋಟಗಳು	0 14 0	ಪ್ರತೀಕಾರ	0 6 0
ಮಧುವನ	3 0 0	ನಾಡ ಕತೆಗಳು	0 3 0	ಪ್ರೇಮಪ್ರಪಾತ	0 8 0
ಕವಿತಾಕಾಮಿನಿ	2 0 0	ಕುಶಲವ	0 6 0	ಆರೋಗ್ಯಪ್ರಭಾವ	0 12 0
ಕದಂಬ	1 4 0	ಸುಲಭದಲ್ಲಿ ಇಂಗ್ಲಿಷ್	1 8 0	ಅಂತರಂಗದ ಕತೆಗಳು	0 12 0
ಜೀವನಸಂಗ್ರಾಮ	1 8 0	ವ್ಯಭಿಚಾರಿಣಿ ಯಾರು	1 0 0	ಸಂಘಕರ್ತವ್ಯ	0 2 0
ಸಂಶಯ ಪಿಶಾಚಿ	0 8 0	ಹೆಂಡ್ತಿ ಗುಲಾಮಳೆ	0 4 0	ವೀರಭೂಮಿ	0 2 0
ಕಾವ್ಯಸಾಮ್ರಾಜ್ಯ	1 4 0	ಸನ್ಯಾಸಿಯ ಸೋಗಿನಲ್ಲಿ	0 8 0	ಧರ್ಮಸಂಕಟ	0 4 0
ಪ್ರೇಮವಿಜಯ	1 0 0	ಭಾರತೀಯ ಕತೆಗಳು	0 14 0	ನಿರಾಶಾಬಾಮಿ	0 10 0
ಪುರುಷವಧು	0 4 0	ಮೂರು ಪ್ರಹಸನಗಳು	0 14 0	ಸರಸ್ವತಿ	0 12 0
ನಂದಾದೀಪ	0 14 0	ಅನ್ನದೇವರು ಕತೆಗಳು	1 0 0	ಸ್ವತಂತ್ರ ಜೀವನೋಪಾಯ	0 3 0
ವೀರಭಕ್ತ	1 4 0	ಭಾರತದಲ್ಲಿ ಜಾತಿಭೇದ	1 0 0	ವಿಶ್ವವಿನಾಶಕ ಅಪರಾಧಗಳು	0 12 0
ರಂಗಭೂಮಿ	0 8 0	ಪಂಚಾರತಿ	0 6 0	ಅನಂತ ಇತ್ಯಾದಿ ಕತೆಗಳು	0 12 0
ಸೇವಾಪಥ	0 8 0	ಚಿಗುರು	0 6 0		
ನಾರೀಹೃದಯ	0 14 0	ಲೋಪಾಮುದ್ರೆ	0 6 0		
ಪ್ರಕಾಶ	2 4 0				

ನವಭಾರತ ಪುಸ್ತಕ ಭಂಡಾರ, ಉಡುಪಿ

ನೋಟೀಸು

ಕುಂದಾಪುರ ಡಿ ಮು॥. ಕೋರ್ಟಿನಲ್ಲಿ.

R. E. P. 451 1947.

ರಂಗ್ಯ— ಅರ್ಜಿದಾರ.

ಕೊಲ್ಲು ಹೆಂಗ್ಸು ಸಹಾ—ಎದ್ರಿರು.

ಡಿ. ಶ್ರೀನಿವಾಸ ಹೆಬ್ಬಾರ–ನಾರಾಯಣ ಹೆಬ್ಬಾರ್ರ ಮಗ–ಬೀಜೂರು, ಇವರಿಗೆ ಕೊಡ್ವ ನೋಟೀಸು—ಮೇಲಿನ ಅಮ್ಲ ಜಾರಿಯಲ್ಲಿ ನಿಮಗೆ ಬಹಾ ಕೆಳಗೆ ವಿವರ್ಸಿದ ಗೇಣಿ ವ್ಸೂಲಿ ಹಕ್ಕು ಜಪ್ತಿಗೆ ಅರ್ಜಿದಾರನು ಅಪೇಕ್ಷಿಸಿದ ಮೇರೆಗೆ ಜಪ್ತಿ ಮಾಡಿಯದೆ. ಈ ಕೋರ್ಟಿನ ಹುಕ್ಕುಂ ವಿನಹಾ ವಸೂಲಿ ಮಾಡಕೂಡದು. ತನಿಕೆ ತಾ 10-12-1947.

1) ಮೂಣೂರು ಕ್ರಿಷ್ಣ ಹೆಬ್ಬಾರ್ರ ಮಗ ಸೀತಾರಾಮ ಹೆಬ್ಬಾರ್ರಿಂದ ನಿಮಗೆ ವ್ಯಯ ಸಂ। ರಕ್ಕೆ ಸಲುವ ಗೇಣಿ ಅಕ್ಕಿ ಮು. 2, ಸೇರು 15½.

2. ಅರ್ಜಿದಾರನಿಂದ ನಿಮಗೆ ಸದ್ರಿ ಸಂ। ರಕ್ಕೆ ಸಲುವ ಮೂಲಗೇಣಿ ಅಕ್ಕಿ ಮು 3, ಸೇ 23½, ½ ಪಾವು.

(Sd) **K. Ramappayya,**
Advocate for petr.
Kundapur. 1-12-47.

NOTICE.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 521/1947.

ಕೃಷ್ಣಪ್ಪ ಹೆಬ್ಬಾರ—ವಾದಿ.

1. K. ವೆಂಕ್ಟನಾರಾಯಣ ಸೋಮಯಾಜಿ; 2. K. ಶ್ರೀನಿವಾಸ ಸೋಮಯಾಜಿ–ಸೀತಾರಾಮ ಸೋಮಯಾಜಿ ಮಕ್ಕಳು. ಕಾಳಾವರ ಗ್ರಾಮ—ಪ್ರತಿವಾದಿರು.

ಪ್ರತಿವಾದಿರಿಗೆ ಕೊಡುವ ನೋಟೀಸು — ವಾದಿಯಿಂದ ಪ್ರತಿವಾದಿರು ತಾ 26-8-44 ರಲ್ಲು ರೂ 300-0-0 ಹ ತಾ 16-10-44ರಲ್ಲು ರೂ 200-0-0ನ್ನು ಚೆಕ್ಕು ಮುಖಾಂತ್ರ ಸಾಲಪಡದ್ದರ ವ್ಸಲಿಗೆ ವಾದಿಯು ಬಡ್ಡಿ ಸಮೇತ ರೂ. 591-10-8ಕ್ಕೆ ಹಾಕಿದ ಮೇಲಿನ ದಾವೆಯನ್ನು ತಾ 18-12-47ಕ್ಕೆ ಬೆಗ್ಗೆ 11 ಗಂಟೆಗೆ ತನಿಖೆಗೆ ಇಟ್ಟಿದೆ.

(Sd) **A. V. N. Hebbar,**
Advocate for pltf.
Kundapur 1-12-47.

ದ. ಕ. ಜಿಲ್ಲೆಯ ಕೃಷಿಕರಲ್ಲಿ ಮತ್ತು ಕೃಷಿಕ ಕೆಲಸಗಾರರಲ್ಲಿ ವಿನಂತಿ.

ಕೂಡಲೇ ಕೃಷಿಕರನ್ನು ಸಂಘಟಿಸುವ ಆವಶ್ಯಕತೆ.

ಹಿಂದೂಸ್ಥಾನವು ಪ್ರಾಮುಖ್ಯವಾಗಿ ಕೃಷಿಕ ದೇಶ; ಇದರಲ್ಲಿ ಶೇಕಡಾ 80ರಷ್ಟು ಹಿಂದೀಯರು ಕೃಷಿಕರಾಗಿದ್ದಾರೆ. ಆದುದರಿಂದ ಸ್ವರಾಜ್ಯವು ಎಲ್ಲರಿಗಿಂತಲೂ ಹೆಚ್ಚಾಗಿ ಕೃಷಿಕರ ರಾಜ್ಯವಾಗಿರಬೇಕು. ಕೃಷಿಕರಿಂದ ರಚಿಸಲ್ಪಡುವ ಗ್ರಾಮ ರಾಜ್ಯದ ತಳಹದಿಯ ಮೇಲೆ ಕಟ್ಟಲ್ಪಡುವ ಕೃಷಿಕ ಪ್ರಜಾರಾಜ್ಯವಾಗಿರಬೇಕು. ಅಂತಹ ಸ್ವರಾಜ್ಯ ಸರಕಾರದ ಪ್ರಧಾನ ಮಂತ್ರಿಯು ಕೃಷಿಕನಿರಬೇಕು. ಪಂಡಿತ ನೆಹರು ಅಂಥವರ ಕಾರ್ಯದರ್ಶಿಯವರಾಗಿ ಕೆಲಸ ಮಾಡಬೇಕು. ಹೀಗೆ ಮಹಾತ್ಮಾ ಗಾಂಧಿಜಿಯವರು ಪದೇಪದೇ ಸಾರುತ್ತಿದ್ದಾರೆ. ಅವರ ಈ ಮಹದಿಚ್ಛೆಯು ಕಾರ್ಯಕ್ಕೆ ಬರಬೇಕಾದರೆ, ಪಟ್ಟಣಗಳ ಮಜೂರರೇ ಮೊದಲಾದವರ ಸಂಘಟನೆಗಿಂತಲೂ ಹೆಚ್ಚಿನ ಲಕ್ಷ್ಯವನ್ನು ಕಾಂಗ್ರೆಸಿಗರು ಕೃಷಿಕರ ಸಂಘಟನೆಯ ಕಡೆಗೆ ಕೊಡುವುದು ಅತ್ಯಾವಶ್ಯಕ.

ಮಂಗಳೂರು ಪಟ್ಟಣವೊಂದನ್ನು ಬಿಟ್ಟರೆ, ದ. ಕ. ಜಿಲ್ಲೆಯಲ್ಲಿ ಶೇಕಡಾ 90ರಷ್ಟು ಜನರು ಕೃಷಿಯ ಮೇಲೆಯೇ ಅವಲಂಬಿಸಿಕೊಂಡಿರುತ್ತಾರೆ. ಇಷ್ಟಲ್ಲದೆ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಜನರು ತುಂಡು ವರ್ಗದವರಾಗಲೀ, ಚಾಲಗೇಣಿ ಒಕ್ಕಲುಗಳಾಗಲೀ, ಅಥವಾ ಮೂಲಗೇಣಿ ಒಕ್ಕಲುಗಳಾಗಿ ಜೀವನಸಾಗಿಸುತ್ತಿದ್ದಾರೆ. ಈ ವರ್ಗದ ಜನರ ಹಕ್ಕುಬಾಧ್ಯತೆಗಳ ರಕ್ಷಣೆ ಮತ್ತು ಸಂಘಟನೆಗಳ ಕುರಿತು ಈ ವರೆಗೆ ನಡಿಸಲ್ಪಟ್ಟಿರುವ ಪ್ರಯತ್ನಗಳು ಸಾಕಷ್ಟು ಫಲಕಾರಿಯಾಗಲಿಲ್ಲವೆಂಬುದು ಶೋಚನೀಯವಾಗಿದೆ.

ಈಗ ಹತ್ತು ವರ್ಷಗಳ ಹಿಂದೆ ಚಾಲಗೇಣಿ ಒಕ್ಕಲು ಹಿತ ಮಸೂದೆಯೊಂದನ್ನು ತಂದು ಜಿಲ್ಲೆಯ ಮುಖ್ಯ ಕೃಷಿಕರಾದ ಚಾಲಗೇಣಿ ಒಕ್ಕಲುಗಳ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿ ಕಾಂಗ್ರೆಸಿಗರು ಮಾಡಿದ ಪ್ರಯತ್ನಗಳು ಕಾರಣಾಂತರಗಳಿಂದ ಜಯಶೀಲವಾಗಿರುವುದಿಲ್ಲ. ಆ ಮೇಲೆಯೂ ನಾವು ಈ ಕುರಿತು ನಡಿಸುತ್ತಿರುವ ಪ್ರಯತ್ನಗಳೆಲ್ಲ ನಿರರ್ಥಕವಾಗಿವೆ. ಇದಕ್ಕೆ ಮುಖ್ಯ ಕಾರಣವೆಂದರೆ ಈ ಜಿಲ್ಲೆಯ ಕೃಷಿಕರ ನಿಜವಾದ ಒಕ್ಕಟ್ಟಿನ ಸಂಘಟನೆಯ ಅಭಾವವಾಗಿದೆ. ಆದುದರಿಂದ ಇನ್ನು ಮುಂದಾದರೂ ಶೀಘ್ರವಾಗಿ ಜಿಲ್ಲೆಯ ಕೃಷಿಕರೆಲ್ಲರೂ ಕಾಂಗ್ರೆಸಿನ ಆಶ್ರಯದಲ್ಲಿ ಒಂದುಗೂಡಿ, ಜಿಲ್ಲಾ ಸಂಘವೊಂದನ್ನು ಜರೂರಾಗಿ ಸ್ಥಾಪಿಸಿ ಆ ಮೂಲಕ ತಮ್ಮ ಹಕ್ಕುಬಾಧ್ಯತೆ ರಕ್ಷಣೆಗಾಗಿ ಚಳವಳಿಸಬೇಕಾಗಿದೆ

ಜಿಲ್ಲೆಯ ಬೇರೆ, ಬೇರೆ ಕಾಂಗ್ರೆಸ್ ಕಮಿಟಿಗಳೂ ಇತರ ಕೃಷಿ ಕೆಲಸಗಾರರೂ ಕೃಷಿಕರನ್ನು ಕೂಡಲೇ ಸಂಘಟಿಸುವ ಕುರಿತು ಸಂಪೂರ್ಣ ಗಮನಕೊಡಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ. ಜಿಲ್ಲಾ ಕಾಂಗ್ರೆಸ್ ಕಮಿಟಿಗಳವರು. ಈ ಕಾರಣದಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ ಕೆಲಸ ಮಾಡಲಿದ್ದಾರೆ. ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಕೃಷಿಕ ಸಂಘಗಳು ಸ್ಥಾಪಿಸಲ್ಪಟ್ಟ ಮೇಲೆ ಅಂಥ ಸಂಘಗಳ ಸರಿಯಾದ ಪ್ರಾತಿನಿಧ್ಯವುಳ್ಳ ಜಿಲ್ಲಾ ಕೃಷಿಕ ಪರಿಷತ್ತೊಂದನ್ನು ಬರುವ ಜನವರಿ ತಿಂಗಳ ಕೊನೆಯಲ್ಲಿ ಅಥವಾ ಫೇಬ್ರವರಿ ತಿಂಗಳ ಪ್ರಾರಂಭದಲ್ಲಿ ಜರಗಿಸಿ ಒಂದು ದಕ್ಷಿಣ ಕನ್ನಡ ಜಿಲ್ಲಾ ಕೃಷಿಕರ ಸಂಘವನ್ನು ಸ್ಥಾಪಿಸುವ ಪ್ರಯತ್ನವು ನಡೆಯಲಿದೆ. ಈ ಪರಿಷತ್ತಿಗೆ ಮದ್ರಾಸ್ ಸರಕಾರದ ಮಾನ್ಯ ರೆವೆನ್ಯೂ ಮಂತ್ರಿಗಳನ್ನು ಆಮಂತ್ರಿಸಲಾಗುವುದು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪರವಾಗಿ ಶ್ರೀಗಳಾದ ಎಚ್. ನಾರಾಯಣ ರಾವ್, ಎಂ. ಡಿ. ಅಧಿಕಾರಿ, ಎಂ. ಉಮೇಶ ರಾವ್, ಎಲ್. ಉಪೇಂದ್ರ ನಾಯ್ಕ, ಜಿ. ದೇವಪ್ಪ ಆಳ್ವ, ಎಸ್. ಎಸ್. ಕಿಲ್ಲೆ ಮತ್ತು ನಾನು ಕೃಷಿಕರ ಸಂಘಟನೆಯ ಕುರಿತು ಕೆಲಸ ಮಾಡುತ್ತಾ ಬಂದಿದ್ದೇವೆ. ಈ ವರೆಗೆ ಕೂಳೂರು, ಅಮಟಾಡಿ, ಜಪ್ಪಿನಮೊಗರು, ಬಂಟ್ವಾಳ, ಕಲ್ಲಮುಂಡ್ಕೂರು, ಪಲಿಮಾರು, ಹಿರಿಯಡ್ಕ, ಬೈಲೂರು, ಕಾಸರಗೋಡು, ಕುಂಬಳೆ, ಪಾಣೆಮಂಗಳೂರು, ಬೇಳೂರು, ಕಾರ್ಕಳ, ಮೂಡಬಿದ್ರೆ ಮೊದಲಾದ ಕಡೆಗಳಲ್ಲಿ ಕೃಷಿಕ ಸಭೆಗಳು ನಡೆದು ಅವರ ಸಂಘಗಳು ಕೂಡ ಸ್ಥಾಪಿಸಲ್ಪಟ್ಟಿವೆ. ಮುಂದೆ ಈ ಕುರಿತು ಇನ್ನೂ ಹೆಚ್ಚಿನ ಸಂಘಟಿತವಾದ ಕೆಲಸವು ಭರದಿಂದ ನಡೆಯಬೇಕಾಗಿದೆ. ಆದುದರಿಂದ ಶ್ರೀ ಎಸ್. ಎಸ್. ಕಿಲ್ಲೆ, ಎಚ್. ನಾರಾಯಣರಾವ್ ಮತ್ತು ನಾನು ಮುಂದಿನ ಒಂದೆರಡು ತಿಂಗಳಲ್ಲಿ ಕೃಷಿಕರ ಸಂಘಟನೆಗೆ ವಿಶೇಷ ಲಕ್ಷ್ಯವನ್ನು ಕೊಡಲಿದ್ದೇವೆ. ಆದುದರಿಂದ ಜಿಲ್ಲೆಯ ಕಾಂಗ್ರೆಸ್ ಕಮಿಟಿಗಳಿಗಾಗಲೀ ಇತರ ಕೃಷಿಕ ಸಂಘಟಕರಿಗಾಗಲೀ ನಮ್ಮ ಸಹಾಯವು ಆಗತ್ಯವಿದ್ದಲ್ಲಿ ಒಂದುವಾರಕ್ಕಿಂತ ಮೊದಲೇ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ತಿಳಿಸಬೇಕಾಗಿ ವಿನಂತಿ.

ಒಕ್ಕಲು ಹಿತ ಮಸೂದೆಯ ಪ್ರತಿಗಳನ್ನೂ ಕೃಷಿಕ ಸಂಘ ಸ್ಥಾಪನೆಗೆ ಆವಶ್ಯವಾದ ರಶೀದಿ ಪುಸ್ತಕಗಳನ್ನೂ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಬರೆದು ಪಡೆಕೊಳ್ಳಬಹುದು.

(ಸಹಿ) ಕೆ. ಕೆ. ಶೆಟ್ಟಿ.
ಪ್ರಧಾನ ಕಾರ್ಯದರ್ಶಿ.

ಸ್ವೀಕಾರ–ವಿಮರ್ಶೆ

೧ **'ಇಂದ್ರಜಾಲ'**— ಕಾದಂಬರಿ. ಬರೆದವರು ಮುದ್ರಾಸಿನ 'ನವಗಿರಿನಂದ'ರು. ಪ್ರಕಾಶಕರು– ಪ್ರತಿಭಾಗ್ರಂಥಮಾಲೆ, ಧಾರವಾಡ. ಕ್ರೌನ್ 1/8 ಆಕಾರದ ೩೬೦ ಪುಟಗಳು. ಬೆಲೆ ರೂ. ೪. ಇಷ್ಟೊಂದು ಸುದೀರ್ಘವಾದ ಕಾದಂಬರಿಯುದ್ದಕ್ಕೂ ಓದುಗರ ಮನಸ್ಸನ್ನು ಸೆಳೆದೊಯ್ಯುವಂತಹ ಅದೊಂದು ಚಮತ್ಕಾರಿಕೆಯ ಕಥಾ ನಿರೂಪಣೆಯ ಶಕ್ತಿಗಾಗಿ 'ನವಗಿರಿನಂದ'ರನ್ನು ಅಭಿನಂದಿಸಬೇಕು. ಜನಸಾಮಾನ್ಯರಲ್ಲಿ ಓದುಗಾರಿಕೆಯ ಅಭಿರುಚಿಯನ್ನು ಹೆಚ್ಚಿಸಬೇಕಾಗಿರುವ ಇಂದಿನ ದಿನದಲ್ಲಿ ಇಂತಹ ಕಾದಂಬರಿಯು ಒಳ್ಳೇ ಕೆಲಸ ಮಾಡೀತು. ಜನಸಾಮಾನ್ಯರು ಬಿಡದೋದಿ ಆನಂದಿಸಲು ಸಹಾಯವಾದೀತು. ಆದರೆ ಪುಸ್ತಕವನ್ನು ಕೊಂಡು ಓದುವುದೆಂದರೆ ಹಿಂಜರಿಯುವ ಜನರಿಗೆ ಇದರ ಬೆಲೆಯು ಬೆದರಿಸದಿರಲಾರದು. ಸಾಹಿತ್ಯ ದೃಷ್ಟಿಯಿಂದ ಈ ಕಾದಂಬರಿಯನ್ನು ವಿಮರ್ಶಿಸುವುದಾದರೆ ಹೊಗಳಿ ಹೇಳತಕ್ಕ ವಿಷಯವೇನೂ ತೋರುವುದಿಲ್ಲ. ಅಂತೂ ಶೈಲಿಯಲ್ಲಿ ಸ್ವಾರಸ್ಯವಿಲ್ಲದಿದ್ದರೂ, ಕಾದಂಬರಿಯ ಪ್ರಧಾನ ವ್ಯಕ್ತಿಗಳು ಸಹಜವಲ್ಲದಿದ್ದರೂ, ಸಾಮಾಜಿಕ ಕಾದಂಬರಿಯ ಛಾಯೆಯನ್ನು ಮೊಮ್ಮೊದಲಲ್ಲಿ ಬೀರಿ, ಅದ್ಭುತರಮ್ಯ ಸನ್ನಿವೇಶಗಳ ಜಾಲದಲ್ಲಿ ಸುಳಿದು, ಪತ್ತೇದಾರಿ ಸಮಸ್ಯೆಗಳಿಂದ ಉದ್ದಬೆಳೆಯಿಸಿ ಹೇಗೂ ಆದಿಯಿಂದ ಅಂತ್ಯದ ವರೆಗೂ ಓದುಗರ ಕುತೂಹಲವು ತಗ್ಗದಂತೆ ಸಾಗುವ ಬರಹಗಾರಿಕೆಯು ಇದೊಂದು ವಿಚಿತ್ರ ಇಂದ್ರಜಾಲವನ್ನು 'ನವಗಿರಿನಂದ'ರು ಈ 'ಇಂದ್ರಜಾಲ'ದಲ್ಲಿ ತೋರಿದ್ದಾರೆ. ಓದುಗರಲ್ಲಿ ವಾಚನದಿಂದಾಗಬೇಕಾದ ಸಂಸ್ಕಾರವನ್ನೇನೂ ಮಾಡಲಾರದವಾಗಿದ್ದರೂ 'ಯುವನ ಯಾಮಿನೀ' ಕಥಾರೀತಿಯ ಆನಂದವನ್ನೀಯುವ ಈ ಕಾದಂಬರಿಯು ಜನಸಾಮಾನ್ಯರ ಅಭಿರುಚಿಗೆ ತಕ್ಕುದಾಗಿದೆ.

೨ **ಪುಟ್ಟುತಮ್ಮ ಯಾರು?**– ಮಕ್ಕಳ ಪುಸ್ತಕ ೧. ಬರೆದವರು–'ಹೊಯಿಸಳ' ಪ್ರಕಾಶಕರು–ಶಿವಮೊಗ್ಗ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪೆನಿ. ಕ್ರೌನ್ 1/8 ಆಕಾರದ ೨೦ ಪುಟಗಳು. ಬೆಲೆ ೪ ಆಣೆ. ಇದರಲ್ಲಿ ಚಿಕ್ಕ ಮಕ್ಕಳಿಗಾಗಿ ಬರೆದ ೫ ಕತೆಗಳಿವೆ. ಮೊದಲ ಕತೆಯ ಹೆಸರೇ ಪುಸ್ತಕಕ್ಕಿಡಲಾಗಿದೆ. ಮಕ್ಕಳು ತಮ್ಮ ಮೈ ಕೈ ಬಟ್ಟೆ ಬರೆಗಳನ್ನು ಕೊಳಕುಗೊಳಿಸಬಾರದೆಂಬುದನ್ನು ಅವರ ಬಗೆಮುಟ್ಟುವಂತೆ ಹೇಳುವ ಮೊದಲನೆಯ ಕತೆ ಚೆನ್ನಾಗಿದೆ. ಅವರ ಅನುಭವ ಕಲ್ಪನೆಗಳಿಗೆ ನಿಲುಕುವಂತಹದಿದೆ. ಅನ್ನವನ್ನು ಚೆಲ್ಲಬಾರದೆಂಬುದನ್ನು ಬಗೆಗಾಣಿಸಲು ಬರೆದ ಎರಡನೆಯ ಕತೆಯೂ ಸಾಧಾರಣ ಚೆನ್ನಾಗಿದೆ. ಆದರೆ ಲಕ್ಷ್ಮೀಬೇಳಿನ ವಿಷಯವಾದ ಮೂರನೆಯ ಕತೆ, ಪಲಕ್ಕಿಯ ಕತೆ ಇವೆರಡು ಮಕ್ಕಳ ಕಲ್ಪನೆಗೆ ಮೀರಿದವು. ನೋವುಬಂದಾಗ ಸಹಿಸಿಕೊಳ್ಳಬೇಕೆಂಬ ಕತೆಯು ಸಾಧಾರಣ ಇದೆ. ಒಳಗಿನ ಮುದ್ರಣದ ರೀತಿಯನ್ನು ನೋಡಿದರೆ ಮಕ್ಕಳ ಪುಸ್ತಕ ಹೇಗಿರಬೇಕೆಂಬ ಬಗೆಗೆ ಪ್ರಕಾಶಕರು ಏನೂ ಲಕ್ಷ್ಯಗೊಟ್ಟಂತೆ ತೋರುವುದಿಲ್ಲ. ಬರೇ ಚಿಕ್ಕ ಅಕ್ಷರಗಳ, ಒತ್ತೊತ್ತಾದ ಸಾಲುಗಳ ಅಚ್ಚು–ಚಿತ್ರಗಳಿಲ್ಲ. ಹೊರಗಿನ ಮುಖಪತ್ರ ಬಿಟ್ಟು ಪುಸ್ತಕದ ಮತ್ತಾವ ಭಾಗವನ್ನೂ ಮಕ್ಕಳು ಕಂಡೊಡನೆ ಮೆಚ್ಚುವಂತಿಲ್ಲ. ಮಕ್ಕಳ ಕಥೆ ಪುಸ್ತಕಗಳನ್ನು ಈ ರೀತಿ ಉಪೇಕ್ಷೆಯಿಂದ ಪ್ರಕಟಿಸಬಾರದು. ಪ್ರಕಾಶಕರು ಮುಂದಿನ ಪುಸ್ತಕಗಳನ್ನು ಮಕ್ಕಳ ಕಣ್ಣಿಗೂ ಅನುಭವ ಅಭಿರುಚಿ ಕಲ್ಪನೆಗಳಿಗೂ ಮೆಚ್ಚುಗೆಯಾಗುವಂತೆ ಪ್ರಕಟಿಸಿಯಾರೆಂದು ನಿರೀಕ್ಷಣೆ.

೩ **ಸಮಾಜ**— ಸಂಪುಟ ೭. ಸಂಚಿಕೆ ೪. ಕ್ರೌನ್ 1/8 ಆಕಾರದಲ್ಲಿ ಚಿಕ್ಕ ಪುಸ್ತಕದಂತಿರುವ ೩೬ ಪುಟಗಳ ಮಾಸಿಕ. ವಾರ್ಷಿಕ ಚಂದಾ ರೂ. ೨–೪–೦. ಬಿಡಿಪ್ರತಿ ೩. ೩. ಪ್ರಕಾಶಕರು ಶ್ರೀ ಬಾಲಚಂದ್ರ ವೆಂಕಟೇಶ ಘಾಣೇಕರ, ಧಾರವಾಡ. ಮೊದಲನೆಯದಾಗಿ ಮಾಸಿಕ ಪತ್ರಿಕೆಗೆ ಚಿಕ್ಕ ಪುಸ್ತಕದ ಆಕಾರವು ಒಪ್ಪುವುದಿಲ್ಲ. ಎರಡನೆಯದಾಗಿ ವಿಶಾಲವಾದ ಸಮಾಜದ ಆಗುಹೋಗುಗಳು, ಆಶೆನಿರಾಶೆಗಳು, ಗುಣದೋಷಗಳು, ಬೇಕುಬೇಡಗಳು ಮುಂತಾದ ಹಲವಾರು ವಿಷಯಗಳು ಈ ಚಿಕ್ಕ 'ಸಮಾಜ'ದೊಳಗೆ ಕಾಣಸಿಗದಿರುವುದೂ ಸಹಜವೇ.

೪ **'ಲೋಕಮತ'**— ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ. ಸಂಪುಟ ೧೭. ಸಂಚಿಕೆ ೨೫. ಸಂಪಾದಕರು ಶ್ರೀ. ವಿ. ಬಿ. ಪುರಾಣಿಕ, ಬಿ. ಎ., ಕ್ರೌನ್ ¼ ಆಕಾರದ 8 ಪುಟಗಳು. ಇವುಗಳಲ್ಲಿ ಒಂದು ಪುಟ ರಾಶಿಭವಿಷ್ಯಕ್ಕೆ. ಮತ್ತೊಂದು ಪುಟ ಜಾಹೀರಾತಿನ ಕಡೆಗೆ. ಇನ್ನೊಂದು ಪುಟ ಸಾಧಾರಣ ಕತೆಯೊಂದಕ್ಕೆ. ಉಳಿದೈದು ಪುಟಗಳಲ್ಲಿ ಅಲ್ಲಲ್ಲಿ ಪ್ರಪಂಚದ ಅದ್ಭುತ ವಿಚಿತ್ರ ಸುದ್ದಿಗಳಿಗೆ ಮೀಸಲಾಗಿ ಉಳಿಯಬಹುದಾದ ಅಂಶದಿಂದ ಎಷ್ಟು ಲೋಕಮತವನ್ನು ವಾಚಕರ ಮುಂದಿಡಬಹುದು! ಆದರೂ ಇಂದು ಎಲ್ಲರ ಲಕ್ಷ್ಯ ತಿರುಗಿರುವ ಜುನಾಗಡದ ವಿಷಯ ಎರಡು ಒಳ್ಳೆಯ ಲೇಖನಗಳನ್ನಿತ್ತಿರುವುದು ಸಂತೋಷ.

೫ **ಸಮಗ್ರಕರ್ನಾಟಕ ಆಯುರ್ವೇದ ಸಮ್ಮೇಲನ ಪತ್ರಿಕೆ**— ಸಂಪುಟ ೧೧. ಸಂಚಿಕೆ ೩. ಸಂಪಾದಕರು. ಶ್ರೀ. ಆದ್ಯ ಅನಂತಾಚಾರ್ಯರು, ಬಿಜಾಪುರ. ಕ್ರೌನ್ ¼ ಆಕಾರದ ೧೯ ಪುಟಗಳ ಈ ಪತ್ರಿಕೆಯನ್ನು ಅವಲೋಕಿಸಿದರೆ ಕರ್ನಾಟಕಕ್ಕಾಗಲೀ ಆಯುರ್ವೇದಕ್ಕಾಗಲೀ, ಸಮ್ಮೇಲನಕ್ಕಾಗಲೀ ಆಯುರ್ವೇದ ವೈದ್ಯರಿಗಾಗಲೀ, ಭೂಷಣವೆನಿಸುವಂತಿಲ್ಲ. ಕರ್ನಾಟಕದಲ್ಲಿ ಪ್ರಸಿದ್ಧ ಆಯುರ್ವೇದ ವೈದ್ಯರು ಎಷ್ಟೋ ಇದ್ದಾರೆ. ಆಯುರ್ವೇದ ವಿಚಾರವಾಗಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲಿಕ್ಕಾಗಲೀ ಜನಸಾಮಾನ್ಯರ ಒಲವನ್ನು ಆಯುರ್ವೇದದ ಚಿಕಿತ್ಸೆಯ ಕಡೆಗೆ ಪ್ರಬಲಗೊಳಿಸುವುದಕ್ಕಾಗಲೀ ಉತ್ತಮ ತರದ ಒಂದೇ ಒಂದು ಪತ್ರಿಕೆಯಾದರೂ ಇರಬೇಡವೇ? ಎಲ್ಲಿಯೋ ಏನೋ ಕರ್ತವ್ಯ ಲೋಪ, ಸ್ವೋತ್ಸಾಹ ಲೋಪ, ಅವ್ಯವಸ್ಥೆ, ಸಂಪಾದಕತ್ವದ ಉಪೇಕ್ಷೆ, ಇವು ಕಾರಣವಾಗಿ ಹೀಗಾಗಿರಬೇಕೆಂದೆನ್ನಿಸುತ್ತೆ ಈ ಪತ್ರಿಕೆಯನ್ನು ಅವಲೋಕಿಸಿದಾಗ.

'ಕೊರಡ್ಕಲ್'

ಕಳೆದ ಮೂರು ತಿಂಗಳಲ್ಲೇ ಅಖಿಲ ಕರ್ನಾಟಕದ ಜನ
ಪ್ರಿಯ ಪತ್ರಿಕೆಯೆನಿಸಿದ
ಪ್ರಕಾಶ ಕನ್ನಡ ಮಾಸ ಪತ್ರಿಕೆಯು
ಇದೇ ಜನವರಿ (1948) ತಾರೀಕು 14ರಂದು—
ಪರ್ಯಾಯ ವಿಶೇಷಾಂಕ
ವನ್ನು ಪ್ರಕಟಿಸಲಿದೆ.
ಹಲವು ಪುಟಗಳು! ಹಲವು ಚಿತ್ರಗಳು!!
ಕನ್ನಡನಾಡಿನ ಖ್ಯಾತಿವಂತ ಬರಹಗಾರರೆಲ್ಲರ ಬರಹಗಳು!
ಬೆಲೆ: ಕೇವಲ ಹತ್ತಾಣೆ.
ಜಾಹಿರಾತುದಾರರು ತ್ವರೆಮಾಡಿರಿ! ಏಜಂಟರು ಗಮನಿಸಿರಿ!
'ಪ್ರಕಾಶ'ದ ವಾರ್ಷಿಕ ಚಂದಾ:– ಕೇವಲ ಮೂರು ರೂಪಾಯಿ (ಅಂಚೆವೆಚ್ಚ ಸೇರಿ)
ವಿವರಗಳಿಗೆ:— ಮೆನೇಜರ್,
"ಪ್ರಕಾಶ" ಕನ್ನಡ ಮಾಸಪತ್ರಿಕೆ,
ಉಡುಪಿ (ದ. ಕ.)

ದಿ ಮೂಲ್ಕಿ ಬೇಂಕ್,
ಲಿಮಿಟೆಡ್
ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.
The Moolky Bank Ltd.,
Moolky, S. K.

CHAMPAE'S
Snow & Castrex
Sole Distributers for India
Prop: K. G. NAYAK,
Santhekatte, UDIPI, S. K.

(೩ನೇ ಪುಟದಿಂದ)

"ಹಾಗೆಲ್ಲಾ ಗಡಿಬಿಡಿಗೊಳ್ಳುವವಳು ನಲ್ಲ" ಎಂದು ಹೇಳಬಿಡುತ್ತಿದ್ದರು.

೦೦ ೦೦ ೦೦

ಲಂಡನಿನ 'ಆಲ್ಬರ್ಟ್‌ಹಾಲ್'ನಲ್ಲಿ ಒಂದು ವಿಲಕ್ಷಣ ವೈಶಿಷ್ಟ್ಯವಿದೆ. ಅದರೊಳಗೆ ನಿಂತು ಭಾಷಣ ಕೊಡಹತ್ತಿದರೆ ಆ ಭಾಷಣದ ನಡ ನಡುವೆ, ಈ ಭವನದೊಂದು ಮೂಲೆಯು ಒಂದು ವಿಕಾರ ಪ್ರತಿಧ್ವನಿ ಮಾಡುತ್ತದೆ ಲೋಹದ ಮೇಲೆ ಮತ್ತೊಂದು ಲೋಹವನ್ನು ಜಜ್ಜಿದಂತಹ ಕರ್ಕಶ ಸ್ವರವದು. ಅದು ವರ್ತುಲಾಕಾರದ ಭವನ. ಆ ದಿನ ನಾನು ಮೇಲಂತಸ್ತಿನ ಗ್ಯಾಲರಿಗಳಲ್ಲೊಂದರಲ್ಲಿ ಕುಳಿತಿದ್ದೆ. ಭಾಷಣವೇದಿಕೆಯು, ಕೆಳಗೆ ಆಳದಲ್ಲಿ ನನಗೆ ಬಹಳ ದೂರದಲ್ಲಿರುವಂತೆ ತೋರುತ್ತಿತ್ತು.

ಪ್ರತಿಯೊಬ್ಬನ ಭಾಷಣದ ಅವಧಿಯಲ್ಲೂ—ಆ ದಿನ ಹಲವರ ಪುಟ್ಟ ಭಾಷಣಗಳಿದ್ದುವು—ಈ ವಿಕಾರ ಪ್ರತಿಧ್ವನಿಯು ಒಂದಲ್ಲೊಂದು ಸಮಯದಲ್ಲಿ ಕೇಳಿಬಾರದೆ ಹೋಗಲಿಲ್ಲ. ಆದರೆ ಶ್ರೀಮತಿ ಬಿಸೆಂಟರ ಇಡೀ ಭಾಷಣದಲ್ಲಿ ಈ ಪರ ಧ್ವನಿಯೇ ಏಳಲೇ ಇಲ್ಲ. ಕೆಲಕಾಲಾನಂತರ ಮಿಸ್. ಬ್ರೈಟ್ ಕೊಟ್ಟ ಔತಣಸತ್ಕಾರಕ್ಕೆ ಕುಳಿತಿದ್ದಲ್ಲಿ ಈ ವಿಷಯದ ಚರ್ಚೆ ನಡೆಯಿತು. ನನ್ನ ನೆನಪು ಸರಿಯಾಗಿದ್ದಲ್ಲಿ ಈ ವಿಷಯದ ಕುರಿತು ಬಿಸೆಂಟರು ಕೊಟ್ಟ ಉತ್ತರವಿಷ್ಟೆ: "ಪ್ರತಿಯೊಂದು ಭವನದಲ್ಲೂ ಇಂತಹ ಒಂದಲ್ಲೊಂದು ದೋಷವಿದ್ದೇ ಇದೆ. ಮತ್ತು ಭಾಷಣಗಾರನ ಆದೊಂದು ವಿಶಿಷ್ಟ ಉಚ್ಚಸ್ವರದಿಂದಾಗಿಯೇ ಈ ದೋಷವು ಜಾಹೀರಾಗುತ್ತದೆ. ಹೀಗಾಗುವುದು ಸ್ವರವು ಆ ಉಚ್ಚತೆಗೇರಿದ ಸಂದರ್ಭದಲ್ಲಿ ಮಾತ್ರ. ಭಾಷಣಗಾರರಾದವರು ಈ ನಿಗೂಢ ದೋಷವಾವುದೆಂಬುದನ್ನು ಕಂಡುಕೊಂಡು, ಅಂತಹ ಸ್ವರವೆಬ್ಬಿಸದಿದ್ದರಾಯಿತು!"

ಸರಿ; ಸಾರ್ವಜನಿಕ ಭಾಷಣವೊಂದು ಕಲೆ ತಾನೆ? ನಾವೂ ಹಲವರು ಒಂದು ವಿಧದ ಭಾಷಣಗಾರರೇ. ಆದರೆ ಬಿಸೆಂಟರಂಥವರು ಬೇರೊಬ್ಬರಿದ್ದಾರೆಯೆ?

೦೦ ೦೦ ೦೦

ಆಸ್ಟ್ರೇಲಿಯದಲ್ಲಿ ಬಿಸೆಂಟರಿತ್ತ ಭಾಷಣಗಳ ಪ್ರತಿಗಳಿವೆ. 'ಥಿಯೋಸೋಫಿಸ್ಟ್'ನ ಹಳೇ ಸಂಚಿಕೆಗಳನ್ನು ಮಗುಚಿ ನೋಡಿದರೆ ವಾಚಕರಿಗವು ದೊರಕಬಹುದು. ನಾನಿಲ್ಲಿ ಜ್ಞಾಪಕಬಲದಿಂದಲೇ ಒಂದು ಸಂಗತಿಯನ್ನು ಉಲ್ಲೇಖಿಸುತಿದ್ದೇನೆ. ತನ್ನ ಕ್ರಮಕ್ಕನುಸಾರವಾಗಿ ಆ ದಿನವೂ ಮಿನಿಟು ತಳುವದೆ ಬಿಸೆಂಟರು ಸಭೆಗೆ ಹೊರಟಿದ್ದರು. ಅಷ್ಟರೊಳಗೆ ಸಭಾಭವನ ತುಂಬಿ ಹೋಗಿತ್ತು. ದ್ವಾರ ಕಾವಲಿಗೆ ನಿಂತಿದ್ದ ಪೋಲಿಸರವನು ಇವರನ್ನು ನೋಡಿ ಹೇಳಿದ "ಅಮ್ಮಾ, ಒಳಗೆ ಸ್ಥಳವಿಲ್ಲ."

ಅಲ್ಲಿಯುವವು ಬಹಳ ಕಟ್ಟು ನಿಟ್ಟಿನವರೆಂದು ತಿಳಿಯುತ್ತದೆ; ಪ್ರತಿಯೊಂದು ಭವನದಲ್ಲೂ ಇಂತಿಷ್ಟೇ ಜನರನ್ನು ತುಂಬಿಸಬಹುದೆಂಬ ಲೈಸೆನ್ಸ್ ಇದೆ; ಅದಕ್ಕಿಂತ ಹೆಚ್ಚಿಗೆ ಹೊಗಿಸಲಿಕ್ಕಿಲ್ಲ. "ಆದರೂ ಚಿಂತಿಲ್ಲ" ಎಂದು ಪೋಲೀಸನಿಗೆ ಹೇಳಿ ಬಿಸೆಂಟ್ ಮುಂದೆ ಹೋಗಲು ಬಗೆದರು. ಆದರೆ ತನ್ನ ಕರ್ತವ್ಯವೇನೆಂಬುದು ಆಕೆಗಿಂತಲೂ ಹೆಚ್ಚಾಗಿ ಪೋಲೀಸರವನಿಗೆ ಗೊತ್ತಿದ್ದುದರಿಂದ ಆತ ಬಿಸೆಂಟರ ಹಾದಿಯಡ್ಡಗಟ್ಟಿ ನಿಂತು "ಒಳಗೆ ಸ್ಥಳವೇ ಇಲ್ಲ, ನೀವು ಹೋಗಲು ಸಾಧ್ಯವೇ ಇಲ್ಲ" ಎಂದುಬಿಟ್ಟ. "ಹಾಗಾದರೆ ಅಲ್ಲಿ ಭಾಷಣವೂ ಇಲ್ಲವೇ ಇಲ್ಲ" ಎಂದರು ಆಗ, ಬಿಸೆಂಟ್. ಕೂಡಲೇ ಪೋಲೀಸರವನಿಗೆ ಈ ವಿನೋದದ ಅರ್ಥವಾಯಿತು. ಆತ ನಕ್ಕು ಬಿಸೆಂಟರನ್ನು ಒಳಗೆ ಬೀಳ್ಕೊಟ್ಟ.

ಅಭಿಪ್ರಾಯ ಭೇದ— ವೈಮನಸ್ಸಲ್ಲ.

ಆತ್ಮೀಯತೆಯಿದ್ದರೂ ಅಭಿಪ್ರಾಯ ಭೇದಗಳು ಬಂದ ಮಾತ್ರಕ್ಕೆ ಯಾರೂ ವಿಪರೀತ ಕಲ್ಪನೆ ಮಾಡಬಾರದು. ಈ ಕೆಳಗಿನ ಭಿನ್ನಾಭಿಪ್ರಾಯಗಳಿಗೆ ವಿಶೇಷ ಮಹತ್ವವಿಲ್ಲ:—

ಆಚಾರ್ಯ ಕೃಪಲಾನಿಗಳು ಕೇಂದ್ರಾಧಿಕಾರೀ ಕಾಂಗ್ರೆಸ್ ನಾಯಕರ ವರ್ತನೆಗಳ ಕುರಿತು ಆತೃಪ್ತಿಪಟ್ಟು ಅಧ್ಯಕ್ಷ ಪದಕ್ಕೆ ರಾಜೀನಾಮೆ ಕೊಟ್ಟರೂ ನವಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರ ವಿನಂತಿಯಂತೆ ಈಗ ಆಚಾರ್ಯರೇ ಅದರ ಕಾರ್ಯ ನಿರ್ವಹಿಸುತಿದ್ದಾರೆ.

ಪೂರ್ವ ಬಂಗಾಳದ ಲೀಗ್ ಮಂತ್ರಿ ಮಂಡಲದಲ್ಲಿ ಭಿನ್ನಾಭಿಪ್ರಾಯ ಬಂದು ಒಬ್ಬರು ರಾಜೀನಾಮೆ ಕಳುಹಿಸಿದರೂ ಬೇರೊಂದು ಪಕ್ಷಕ್ಕೆ ಅಲ್ಲಿ ಅವಕಾಶ ಸಿಗಲಾರದು.

ಗಡಿನಾಡಿನ ಲೀಗ್ ಸರಕಾರವು ಮಿ. ಅಬ್ದುಲ್ ಕ್ವಯೂಮ್ ಮಂತ್ರಿ ಮಂಡಲವು ತಮ್ಮನ್ನು ಅಸ್ಪರ್ಶರನ್ನಾಗಿ ಮಾಡಿದೆಯೆಂದು ಆ ಪ್ರಾಂತ್ಯದ ಲೀಗ್ ಪರವಾಗಿ ಮಿ. ಲಿಯಾಖತ್ ಅಲೀಖಾನರಿಗೆ ದೂರು ಬಂದಿದೆ. ಆದರೆ ಹಿಂದಿನ ಖಾನ್ ಮಂತ್ರಿ ಮಂಡಲಕ್ಕೆ ಮಾಡಿದಂತೆಯೇ ಈಗಿನ ಕ್ವಯುಮ್ ಮಂಡಲಕ್ಕೂ ಗಡಿನಾಡಿನ ಲೀಗು ತಂಟೆಮಾಡೀತೆಂದು ನಿರೀಕ್ಷಿಸಬಾರದು.

ನಮ್ಮ ಕೇಂದ್ರಾಧಿಕಾರೀ ಮಂಡಲದಲ್ಲೂ 'ನೆಹರೂ ಮರ್ಜಿಯವರು' ಮತ್ತು 'ಪಟೇಲ್ ಮರ್ಜಿಯವರು' ಎಂಬ ಭಿನ್ನಮತೀಯರಿದ್ದಾರೆ. ಆದರವು ಎಲ್ಲಿಯೂ ಎಂದಿಗೂ ಬಿರುಕು ಬಿಡದೆ, ಒಂದೇ ಹೆಣ್ಣಿನ ಎರಡು ತೋಳುಗಳಂತಿವೆ ಹೊರತು ಬೇರಿಲ್ಲ.

ಪ್ರತಿಯೊಂದು ಪ್ರಾಂತಿಕ ಕಾಂಗ್ರೆಸ್ ಸಮಿತಿಗೂ ಆಯಾಯಾ ಪ್ರಾಂತ್ಯದ ಕಾಂಗ್ರೆಸ್ ಸರಕಾರಗಳು ಮಾಡುವ ಕೆಲಸಗಳ ಮೇಲೆ ಅತೃಪ್ತಿಯಿದೆ. ಆದರೆ ಅದು ಎಂದಿಗೂ ವಿರೋಧ ರೂಪ ತಾಳುವಂತಹದಲ್ಲ.

ಪ್ರಕಟಣೆ.

ಉಡುಪಿ ಕಸಬಾ ಕಾಡಬೆಟ್ಟಿನಲ್ಲಿರುವ ಮೇರಿ ಮಿನೇಜಸ್ ತಾ 6-11-1947ನೇ ನವಯುಗ ಪತ್ರಿಕೆಯಲ್ಲಿ ಮಾಡಿದ ಪ್ರಕಟಣೆ ಬಾಬಿನಲ್ಲಿ ಮೇರಿಯವಳ ಗಂಡ S. E. ಮಿನೇಜಸ್‌ನು ತಿಳಿಸುವುದೇನೆಂದರೆ ಉಡುಪಿ ಕಸಬಾ ಕಾಡಬೆಟ್ಟಿನಲ್ಲಿರುವ ಗದ್ದೆಗಳು ಜಾಗ್ಯಾತು ಮನೆಯು ಸಹಾ ನಾನು ನನ್ನ ಸ್ವಂತ ವ್ಯಾಪಾರದ ಉತ್ಪತ್ತಿಯಿಂದಲೂ ಆಸ್ತಿ ಜವಾಬದಾರಿ ಮೂಲಕ ಪಡೆದ ಸಾಲದಿಂದಲೂ ಮಾಡಿದ್ದಾಗುತ್ತದೆ. ಅದರಲ್ಲಿ ನನ್ನ ಹೆಂಡತಿಗಾಗಲೀ ಮಕ್ಕಳಿಗಾಗಲೀ ಯಾವತರದ ಹಕ್ಕು ಇರುವುದಿಲ್ಲ. ನನ ಹೆಂಡತಿಯ ಮೋತಿ ಹಣದ ಕಾಲಷ್ಟು ಚಿನ್ನಾಭರಣ ಮಾಡ್ಸಿ ಅವಳ ಸ್ವಾಧೀನ ಬಿಟ್ಟಿದ್ದೇನೆ, ನನ್ನ ಹೆಂಡತಿಯನ್ನು ಇದೇ ಮನೆಯಲ್ಲಿ ಬಿಟ್ಟು ಅವಳ ವ ಸಂಸಾರ ಮಕ್ಕಳ ಖರ್ಚು ವೆಚ್ಚದ ಬಗ್ಗೆ ಆಗಾಗ್ಗೆ ಹಣ ಕಳುಹಿಸಿದ್ದಲ್ಲದೆ ನಾನು ಸಹಾ ಬಂದು ಹೋಗುತ್ತಿದ್ದೆ. ಹೀಗಿರುವಲ್ಲಿ ನನ್ನ ಹಿರೇ ಮಡುವಿಕ್ಕಳಾದ ಸಂತಾನ ಎಡ್ವಾರ್ಡ ಮಿನೇಜಸ್ ಮತ್ತು ಜೋನ್ ಮಿನೇಜಸ್ ಸಹಾ ನನ್ನ ಹೆಂಡತಿಯನ್ನು ಮುಸಲಾಯಿಸಿ ಅವಳ ಪತ್ರ ಖರ್ಚಿಗೆ ಕೊಟ್ಟ ಆ್ಯವೇಜನ್ನೂ ಅವಳ ಚಿನ್ನಾಭರಣಗಳನ್ನೂ ತಂದು ಕೆಟ್ಟ ಚಾಳಿಯ ಸಂಪೂರ್ಣಿಕೆ ವೆಚ್ಚಕ್ಕೆ ಉಪಯೋಗಿಸಿ ನನ್ನ ಮಕ್ಕಳು ಪುಂಡಾಟಿಕೆ ... ನೆಯಲ್ಲಿ ತಂದು ಇಚ್ಛಾನುಸಾರ ವರ್ತಿಸಿ ನಷ್ಟ ಮಾಡಿದ ಕಾರಣ ಅವರನ್ನು ಮೂರಪದಿಸಲಿಕೆಂತಲೂ ಉತ್ಪತ್ತಿ ಕಂಮಿಯಾಗಿ ಖರ್ಚು ಜಾಸ್ತಿಯಾಗುವುದರಿಂದ ನನ್ನ ಹೆಂಡತಿಯನ್ನು ನನ್ನ ಪಟ್ಟಿಗೆ ಮೈಸೂರು ಸ್ಟೇಟಿನ ನನ್ನ ಮನೆಗೆ ಕರಕೊಂಡು ಹೋಗಿ ಇಲ್ಲಿಯ ಮನೆ ಬಾಡಿಗೆಗೆ ಕೊಡಬೇಕೆಂತ ತಿಳಿಸಿದ ಸಂಗ್ತಿ ಗೊತ್ತಿದ ಸದ್ರಿ ನನ್ನ ಎರಡು ಮಕ್ಕಳು ನನ್ನ ಮೇಲೆ ದ್ವೇಷಕಟ್ಟಿಕೊಂಡು ತಾಯಿಯನ್ನು ಪ್ರಚೋದಿಸಿ ನಂತ್ರ ನಾನು ಹೆಂಡತಿಯನ್ನು ಕರಕೊಂಡು ಹೋಗಲಿಕ್ಕೆ ಮೈಸೂರಿಂದ ಬಂದ ಸಮಯ ಅಷ್ಟ ವಿರೋಧ ಮಾಡುವ ಉದ್ದೇಶದಿಂದ ನನ್ನ ಹೆಂಡತಿಯಿಂದ ಮೇಲೆ ಹೇಳಿದ ಸುಳ್ಳು ವ ಅವಮಾನದ ಆರೋಪಣೆಗಳನ್ನು ಕಾಣಿಸಿ ಪ್ರಕಟಣೆ ಮಾಡ್ಸಿದ್ದಾಗಿರುತ್ತದೆ. ನಮ್ಮದು ಸಮಷ್ಟಿ ಹಕ್ಕಿನ ಹಿಂದು ಕುಟುಂಬವಲ್ಲಾ, ನನ್ನ ಆಸ್ತಿ ಕಟ್ಪೋಣದಲ್ಲಿ ನನ್ನ ಹೆಂಡತಿಗಾಗ್ಲೀ ಮಕ್ಕಳಿಗಾಗ್ಲೀ ಯಾವ ತರದ ಹಕ್ಕು ಇಲ್ಲ. ಸದ ಪ್ರಕಟಣೆಯು ಸರ್ವಾ ಅಸಂಬದ್ಧವು. ಆದುದರಿಂದ ನನ್ನ ಇಚ್ಛಾನುಸಾರದ ಸ್ವಂತ ಹಕ್ಕಿಗೆ ಯಾವ ಭಾದೆಯೂ ಬರಲಾರದು.

S. E. Minezes.

ಉಡುಪಿ ತಾರೀಕು 22-11-47.

ಇಂದ್ರಭವನ ಕಾಫಿ ಹೋಟೆಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾಷೀಯಗಳ ತಯಾರಿಕೆಗಳ— ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

ಪ್ರೊಪ್ರೈಟರ್.

INDRA BHAVAN COFFEE HOTEL,

Balmatta Road, MANGALORE.

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು

ಮನೆಮದ್ದು	2 0 0	ನಗೆನೋಟಗಳು	0 14 0	ಪ್ರತೀಕಾರ	0 6 0
ಮಧುವನ	3 0 0	ನಾಡ ಕತೆಗಳು	0 3 0	ಪ್ರೇಮಪ್ರವಾಹ	0 8 0
ಕವಿತಾಕಾಮಿನಿ	2 0 0	ಕುಶಲವ	0 6 0	ಆರೋಗ್ಯ ಪ್ರತಾಪ	0 12 0
ಕದಂಬ	1 4 0	ಸುಲಭದಲ್ಲಿ ಇಂಗ್ಲೀಷ್	1 8 0	ಅಂತರಂಗದ ಕತೆಗಳು	0 12 0
ಜೀವನಸಂಗ್ರಾಮ	1 8 0	ವ್ಯಭಿಚಾರಿಣಿ ಯಾರು	1 0 0	ರಾಧಾಕೃಷ್ಣ	0 2 0
ಸಂಶಯ ಪಿಶಾಚಿ	0 8 0	ಮೆಂತ್ರಿ ಗಂಡನಾವನೆ	0 4 0	ವೀರಭೂಮಿ	0 2 0
ಕಾವ್ಯಸಾಮ್ರಾಜ್ಯ	1 4 0	ಸನ್ಯಾಸಿಯ ಸೋಗಿನಲ್ಲಿ	0 8 0	ಧರ್ಮಸಂಕಟ	0 4 0
ಪ್ರೇಮವಿಜಯ	1 0 0	ಭಾರತೀಯ ಕತೆಗಳು	0 14 0	ನಿರಾಶಾವಾದ	0 10 0
ಪುರುಷಾರ್ಥ	0 4 0	ಮೂರು ಪ್ರಹಸನಗಳು	0 14 0	ಸಂಸ್ಕೃತಿ	0 12 0
ಸಂಪಾದೀಪ	0 14 0	ಅನ್ಯದೇಶದ ಕತೆಗಳು	1 0 0	ಸ್ವತಂತ್ರ ಜೀವನೋಪಾಯ	0 3 0
ದೇಶಭಕ್ತ	1 4 0	ಭಾರತದಲ್ಲಿ ಜಾತಿಭೇದ	1 0 0	ವಿಷ್ಣುವಿನ ಪಾಪಪರಾಧಗಳು	0 12 0
ರಂಗಭೂಮಿ	0 8 0	ಸಂಚಾರಿ	0 6 0	ಆಕೂಬ ಇತ್ಯಾದಿ ಕತೆಗಳು	0 12 0
ಸೇವಾಪಥ	0 8 0	ಚಿಗುರು	0 6 0		
ನಾರೀಹೃದಯ	0 14 0	ಲೋಪಾಮುದ್ರೆ	0 6 0		
ಪ್ರಕಾಶ	2 4 0				

ನವಭಾರತ ಪುಸ್ತಕ ಭಂಡಾರ, ಉಡುಪಿ

ಬಾಲಕರು ಆರೋಗ್ಯಕಾಯರಾಗಲು

(ಪ್ರಭೂಸ್) ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಸಂಪ್ರ ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿ ಇಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನಿಟ್ಟಿಗಾಗಲು ತಾಯಿ ತಂದೆಗಳು ಇನ್ನೇನೂ ಸಿದ್ಧವಾಗಬೇಕಾಗಿಲ್ಲ. ಮಾತ್ರ, ಹೊತ್ತು ಕಳೆದರೆ ಮತ್ತೆ ಬಾರದು.

'ಪ್ರ ಭೂ ಸ್'

ಬಾಲಾಮೃತ

ಪ್ರಭೂಸ್ ಬಾಲಾಮೃತದ ಖ್ಯಾತಿಗೆ ಸಾಕ್ಷಿ ಬೇಕೇ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,

(ರಿಜಿಸ್ಟರ್ಡ್)

ಕುಂಜಾಲು, ಪೋ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ,

L. N. Sharma, Mangalore.



ಅಮೃತಾಂಜನ.

ತಲೆನೋವನ್ನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಕಷ್ಟವಾತ, ನೋವು, ನೋವಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD.

ಸಗಟು, ಚಿಲ್ಲರೆ ಮತ್ತು ಸಕಲ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಮಾಸನಂತತನದ ಸೋಗಿನಿಂದ ನಡೆವ ಅನಾಚಾರ-ತಾರುಣ್ಯದುಬ್ಬಿ
ನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—
ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ,
ವಿಚಾರ ಪ್ರಚೋದಕ ನವೀನ ನಾಟಕ.

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ?
ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು?
ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.
ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟು
ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇ
ಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬರೆದವರು:-ಶ್ರೀ. ಪಿ. ಶೀನ ಶೆಟ್ಟರು.
ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.
ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ. ಮೈಜುಮ್ಮೆನಿಸುವ ಹಲವು ಸನ್ನಿವೇಶಗಳು!

ಬೆಲೆ ಬರೀ ರೂ. 1—4—0

ಕಿರಿಯರ ಪ್ರಪಂಚದ ಪ್ರಕಟಣೆ

ಕದಂಬ

ಹನ್ನೆರಡು ಕತೆಗಳ ಸಂಗ್ರಹ

ಬರೆದವರು:-ಶ್ರೀಮತಿ ಸರಸ್ವತಿಬಾಯಿ ರಾಜವಾಡೆಯವರು
('ಪ್ರಕಾಶ' ನಾಟಕದ ಅನುವಾದಕಿ; 'ಆಹುತಿ ಇತ್ಯಾದಿ ಕತೆಗಳು' ಕಥಾಗುಚ್ಛದ ಲೇಖಕಿ.)
ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ ಚಿತ್ರಿಸುವ ಕಥಾ ಸಂಗ್ರಹ. ಬೆಲೆ. 1—4—0

ಮನೆಮದ್ದು-Home Remedies

ಬೆಲೆ ರೂ. 2-0-0

ಬರೆದವರು:—ಡಾ| ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Voluble Service'

ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ., ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಹೇಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಹಿಲೆಗಳಿಗೆ 1000 ಮನೆಮದ್ದುಗಳನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಬುಕ್ ಡಿಪೋ ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಈ ಔಷಧದ ಬಾಟ್ಲುಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೮ ರೂಪಾಯಿಗಳು ಒಂದು ಬಾಣಂತನಕ್ಕೆ ಸಾಕಾಗುವವು. ವಿಶೇಷ ವಿವರ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು— ಡಾ| ಐ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಚಳಿಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲ 1ರ 10-0-0, ½ ರಾತ್ಲ 5-4-0, ¼ ರಾತ್ಲ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲಿಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕುದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜೆಂಟರು:—ನವಭಾರತ ಬುಕ್ ಡಿಪೋ, (2) ಬೊಂಬಾಯಿ ಏಜೆಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಗುಹ್ಯ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ. ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ನಮಗೆ ಮೂಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Ayurveda Oushadhalaya. GADAG.

EDITED, PRINTED & PUBLISHED BY K. H. [illegible] AT THE NAVAYUGA PRESS, UDIPI, S. INDIA.

Regd. No. M. 3618

11-12-1947

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-6
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ

ವರ್ಷ ೨೭ } ವಾರ ೧೫

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister, Govt. of Madras.

Vol. 27 No. 15

THE CANARA MUTUAL Assurance Company, Limited.

Estd: 1935

H. O. UDIPI, S. Kanara.

BONUS DECLARED FOR 8 YEARS

We are glad to announce that we have declared a Bonus for 8 years from 1939 to 1946 both years inclusive as also an interim bonus for the next valuation period.

T. R. A. Pai,
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**

Our Chief Agency New business in 1946 about **54 Lakhs**

Our experience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building,
Central Office, Udipi.-

Branches at:

Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 400ದ 8ಬೊಟ್ಟು, ಸಣ್ಣ ಮಕ್ಕಳಿಗೆ 100ದ 2ಬೊಟ್ಟು ಲವಂಗ ಯಾಲಿಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲು ನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನಲ್ಟಿಂಗ್ ರೂಮ್ ಎಂಡ್ ಫಾರ್ಮೆಸಿ; ಡಾ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಕೆ। ಜಿ। ಆಚಾರ್ಯ ಫಾರ್ಮೆಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಸುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ನಿರಾಲೆ.

ಮಾಲಕರು:—ಪಾಲಪ್ಪ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಿಕಿತ್ಸೆಯಲ್ಲಿ:—ಹುಂಬರವಾಡಿ ಸ್ಟೋರ್, ದಾವಣಗೇರಿ:—ದಾವಣಗೇರಿ ಪ್ರಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ, ರಾಣೇಬೆನ್ನೂರ ಟ್ಯಾಡಿ

Ayurveda Oushadalaya, GADAG CITY.

ನಿಮ್ಮಷ್ಟಕ್ಕೆ ನೀವು ಮನೆಯಲ್ಲೆ ಇಂಗ್ಲಿಷ್
ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಇಂಗ್ಲಿಷ್ ಸ್ವಯಂಬೋಧಿನಿ. ಬೆಲೆ ರೂ. 1—8—0

ನವಭಾರತ ಬುಕ್ ಡಿಪೊ, ಉಡುಪಿ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ವಿಮೆ ಮಾಡಲಿಕ್ಕೆ, ಏಜೆನ್ಸಿ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ— ಪ್ರಧಾನ ಕಾರ್ಯಾಲಯ:-ಧಾರವಾಡ,

ಪೋಸ್ಟ್ ಬಾಕ್ಸ್ ನಂಬ್ರ 10, ಉಡುಪಿ, ಇವರಿಗೆ ಬರೆಯಿರಿ.

ಮುಸ್ಲಿಂ ದ್ವಿರಾಷ್ಟ್ರಧೋರಣೆ-ಹಿಂದೂ ಆರ್. ಯಸ್. ಯಸ್.

ಮದ್ರಾಸ್ ಎಸೆಂಬ್ಲಿಯಲ್ಲಿ ಪ್ರಶ್ನೋತ್ತರಗಳು

ರಿಂದೂ ಮುಸ್ಲಿಂ ಜಾತೀಯ ಗಲಭೆ ಸ್ಪರ್ಧೆಯಲ್ಲಿ ಮಿಕ್ಕೆಲ್ಲಾ ಪ್ರಾಂತ್ಯಗಳಿಗಿಂತ ಹಿಂದೆ ಬಿದ್ದಿರುವ ಪ್ರಾಂತ್ಯ ಮದ್ರಾಸೆಂಬುದು ಸ್ಪಷ್ಟ. ಬಹುತೇಕವಾಗಿ ಮಿಕ್ಕೆಲ್ಲಾ ಪ್ರಾಂತ್ಯಗಳೂ ಈ ಹೋರಾಟ ರಂಗದಲ್ಲಿ ಅರೆಜೀವ-ಭಾರೀ ಜಖಂ--ಅರ್ಧ ಪೆಟ್ಟು-ಅಲ್ಪ ಪೆಟ್ಟು-ಪಡೆದಿರುವಾಗ ಮದ್ರಾಸ್ ಪ್ರಾಂತ್ಯವು ಕೇವಲ ನಖದಿಂತದಂತಹ ನೋವನುಭವಿಸಿದ್ದಿತು. ವಾಣಿಯಂಬಾಡಿಯಂತಹ ಒಂದೆರಡು ಊರುಗಳಿಂದ ಹಿಂದೂ ಮುಸ್ಲಿಂ ಗಲಭೆ ವಾರ್ತೆ ಬಂದುದಿದೆ ಸರ್ವ ಸಾಮಾನ್ಯವಾಗಿ ಪ್ರಾಂತ್ಯ ಶಾಂತವಿದ್ದಿತು; ಈಗಲೂ ಇದೆ. ಆದರೆ ಸ್ಥಳೀಯ ಸ್ಥಿತಿಗತಿಗಳು ಕ್ಷೇತ್ರವನ್ನು ಶಾಂತ ಸುಭದ್ರವಾಗಿ ಇಟ್ಟರೂ, ಬೇರೆಡೆಗಳಿಂದ ಬೀಸುತ್ತಿರುವ ಗಾಳಿ ಜನರ ಮನಸ್ಸನ್ನು ನಿಜಕ್ಕೂ ಕದಡಿದೆ. ಮದ್ರಾಸ್ ಎಸೆಂಬ್ಲಿಯಲ್ಲಿ ಸ್ಥಿತಿಸೂಚಕ ಪ್ರಶ್ನೋತ್ತರಗಳು ನಡೆದಿದ್ದುವು. ಇವು ಇಲ್ಲಿಯ ಭಾವನಾಂದೋಲನ ಹೇಗಿದೆ ಎಂಬ ಕಡೆಗೆ ಚೆಲ್ಲಿದ ಬೆಳಕಿನಂತಿರುವುದರಿಂದ ಕೆಲವಂಶ ಇಲ್ಲಿ ಕೊಡಲಾಗಿದೆ:-

ದ್ವಿರಾಷ್ಟ್ರ ಮನೋವೃತ್ತಿ

ದಶಂಬರ್ ತಾ 1ರಲ್ಲಿ ಮದ್ರಾಸ್ ಎಸೆಂಬ್ಲಿಯಲ್ಲಿ—

ಮಿ. ಮಹಮ್ಮದ್ ಇಸ್ಮಾಯಿಲ್ (ವಿರುದ್ಧ ಪಕ್ಷದ ನಾಯಕ)-ಮಲಬಾರಿನ ಏರ್ನಾಡಿನಂತಹ ಕೆಲವು ತಾಲೂಕುಗಳಿಂದ ಹಲವು ಮುಸ್ಲಿಂ ಅಧಿಕಾರಿಗಳನ್ನು ಒಂದೇ ಬಾರಿ ಆಕಸ್ಮಿಕವಾಗಿ ವರ್ಗಾಯಿಸಿರುವುದು ನಿಜವಲ್ಲವೆ?

ಡಾ। ಸುಬ್ಬರಾಯನ್—ಆ ಖಾತೇ ಸಂಬಂಧದ ಚಾಲ್ತಿ ನಿಧಾನಗಳನ್ನು ಸಂಪೂರ್ಣವಾಗಿ ಅನುಸರಿಸಿಯೇ ಹಾಗೆ ಮಾಡಲಾಯಿತು.

ಮಿ. ಇಸ್ಮಾಯಿಲ್—ಖಾತೆಯ ಚಾಲ್ತಿ ವಿಧಾನಗಳಂತೆ ಆ ಸ್ಥಳಗಳ ಮುಸ್ಲಿಂ ಅಧಿಕಾರಿಗಳನ್ನು ಸಾರ್ವತ್ರಿಕವಾಗಿ ವರ್ಗಾಯಿಸಬೇಕೆಂದಿದೆಯೆ?

ಡಾ। ಸುಬ್ಬರಾಯನ್—-ಸರಕಾರವು ಆಡಳಿತೆಯನ್ನು ನಿರ್ವಹಿಸಬೇಕಾಗಿರುವುದರಿಂದಲೇ ಅಧಿಕಾರಿಗಳನ್ನು ವರ್ಗಾಯಿಸಬೇಕಾಗಿ ಬಂತು. ಒಂದು ರೀತಿಯ ಭಯಗೊಂದಲ ವ್ಯಾಪಿಸಿಕೊಂಡಾಗ, ಅಂತಹ ಪರಿಸ್ಥಿತಿಯಲ್ಲಿ ಅಗತ್ಯಬೀಳುವ ಕಾರ್ಯಕ್ರಮಗಳನ್ನು ಸರಕಾರವು ಕೈಕೊಳ್ಳಬೇಕಾಗುತ್ತದೆ.

ಮಿ. ರಾಘುನಾಖಾನ್—ಅವರು ಮುಸ್ಲಿಮರೆಂಬ ಒಂದೇ ಕಾರಣ ಹೊರತು ಬೇರಾವ ಅಪರಾಧವೂ ಇಲ್ಲದೆ, ಮುಸ್ಲಿಂ ಅಧಿಕಾರಿಗಳ ಮೇಲೆ ಅಪನಂಬಿಕೆಯಿಟ್ಟು ಅವರನ್ನೆಲ್ಲ ವರ್ಗಾಯಿಸಿರುವ ಸಭಾನಾಯಕರು, ಇದು ಲೌಕಿಕವಾದಿ ಸರಕಾರವೆಂದು ತಾನೇ ಹಿಂದೊಮ್ಮೆ ಹೇಳಿದ್ದ ತನ್ನ ಮಾತುಗಳೊಡನೆ ಇದನ್ನು ಹೇಗೆ ಹೊಂದಿಸಿಕೊಳ್ಳುತ್ತಾರೆ? ಸರಿಯಾದ ಕಾರಣವಿನಹ ಅವರನ್ನು ವರ್ಗಾಯಿಸುವದಿಲ್ಲವೆಂಬ ಭರವಸೆಯನ್ನು ಅವರು ಕೊಡಬಲ್ಲರೆ?

ಡಾ। ಸುಬ್ಬರಾಯನ್—ಯಾವುದೇ ವಿಧದ ಎಂತಹ ವಾಗ್ದಾನವೀಯುವುದೂ ನನ್ನ ತತ್ವಕ್ಕೆ ವಿರೋಧ. ಸರಕಾರವು ಅಧಿಕಾರಿಗಳನ್ನು ವರ್ಗಾಯಿಸಿದುದು ಸಂಪೂರ್ಣವಾಗಿ ಆಡಳಿತಾವಿಧಾನಗಳಿಗನುಗುಣವಾಗಿಯೇ ಇದೆ. ಲೌಕಿಕವಾದಿ ರಾಷ್ಟ್ರವೆಂದರೆ ಒಬ್ಬನೊಬ್ಬ ಅಧಿಕಾರಿಗೆ ಒಂದಾನೊಂದು ಸ್ಥಳದಲ್ಲಿ ಇರುವ ಹಕ್ಕಿದೆಯೆಂಬರ್ಥವಲ್ಲ.

ಮಿ. ಇಸ್ಮಾಯಿಲ್—ಸಭಾ ನಾಯಕರು ಭಯ ಗೊಂದಲದ ಸೊಲ್ಲೆತ್ತಿದ್ದಾರೆ. ಅದಾವುದೆಂಬುದನ್ನು ಸ್ಪಷ್ಟವಾಗಿ ನಾನು ತಿಳಿಯಬಹುದೆ? ಮತ್ತಿದನ್ನಾಧರಿಸಿ ಸರಕಾರವು ವರ್ತಿಸುವುದು ನ್ಯಾಯವಾಗುವದೆ?

ಡಾ। ಸುಬ್ಬರಾಯನ್-ಈ ಭಯಗೊಂದಲಗಳಿಗೆ ನನ್ನಷ್ಟೇ ಇದಿರು ಪಕ್ಷದ ಮಾನ್ಯ ಸಭ್ಯರೂ ಮಿತ್ರರೂ ಸ್ವತಃ ಜವಾಬ್ದಾರರಿದ್ದಾರೆ.

ಮಿ. ಪೈಡ್ರೋಸ್-ಈ ವರ್ಗಾವರ್ಗಿಗಳಿಂದಾಗಿ ಮಲಬಾರಿನ ಎಲ್ಲಾ ಜಾತಿಗಳವರಲ್ಲೂ ಇತ್ತೀಚೆಗೆ ಒಂದು ವಿಧದ ಗೊಂದಲ ಮತ್ತು ಭೀತಿ ನಿರ್ಮಾಣಗೊಂಡಿದೆಯೆಂಬುದು ಸರಕಾರಕ್ಕೆ ಗೊತ್ತೆ?

ಡಾ। ಸುಬ್ಬರಾಯನ್—ನನಗೆ ಸದ್ಧಿಯಿರುವ ಮಟ್ಟಿಗೆ ಸುದೈವವಶಾತ್ ಮಲಬಾರು ಅತ್ಯಂತ ಶಾಂತ ಸ್ಥಿತಿಯಲ್ಲಿದೆ. ಮತ್ತಾ ಶಾಂತತೆ ಹೀಗೆಯೇ ಮುಂದೊತ್ತುವದೆಂದು ನನ್ನಾಶೆಯಿದೆ.

ಮಿ. ಹಮೀದ್ ಖಾನ್-ಮಾನ್ಯ ಮಂತ್ರಿಗಳೇ ಹೇಳುತ್ತಿರುವರಂತೆ ಮಲಬಾರು ಪ್ರಶಾಂತವಿದೆಯೆಂದಾದ ಮೇಲೆ ಈ ರೀತಿ ಮುಸ್ಲಿಂ ಅಧಿಕಾರಿಗಳ ಸಾಮೂಹಿಕ ವರ್ಗಾವರ್ಗಿಯ ಅಗತ್ಯವೇನಿತ್ತು?

ಡಾ। ಸುಬ್ಬರಾಯನ್-ನಾನು ಈ ಮೊದಲೇ ಹೇಳಿದಂತೆ ಇದು ಆಡಳಿತೆಯ ಅನುಕೂಲತೆಗೆ ಸಂಬಂಧಪಟ್ಟ ವಿಷಯ.

ಮಿ. ರಾಘುನಾಖಾನ್—ಹಿಂದೂ ಅಧಿಕಾರಿಗಳು ಮತ್ತು ಪೋಲಿಸರನ್ನೇನೂ ವರ್ಗಾಯಿಸದೆ ಕೇವಲ ಮುಸ್ಲಿಂ ಅಧಿಕಾರಿಗಳು ಮತ್ತು ಪೋಲಿಸರನ್ನು ವರ್ಗಾಯಿಸಿದ್ದರಿಂದ ಭಯಗೊಂದಲ ನಿವಾರಣೆಯಾಗುವುದು ಹೇಗೆ?

ಡಾ। ಸುಬ್ಬರಾಯನ್—ತನ್ನ ಜವಾಬ್ದಾರಿಯೇನೆಂಬುದು ಸರಕಾರಕ್ಕೆ ಗೊತ್ತಿದೆ. ಮತ್ತು ಜವಾಬ್ದಾರಿಗನುಸಾರವಾಗಿ ತನಗೆ ಸಂತೋಷದಂತೆ ಅದು ವರ್ತಿಸುತ್ತದೆ.

ಶ್ರೀ ಕಲ್ಲೂರಿ ಸುಬ್ಬರಾವ್—ಅಧಿಕಾರಿಗಳ ವರ್ತನೆಗಳ ಮೇಲೆ ಸಂದೇಹ ಮೂಡಿದಾಗ ಅವರು ವರ್ಗಾಯಿಸಲ್ಪಡುವುದು ಸ್ವತಃ ಅವರ ಹಿತದೃಷ್ಟಿಯಿಂದಲೇ ವಾಸಿಯಲ್ಲವೆ?

ಡಾ। ಸುಬ್ಬರಾಯನ್—ಮಾನ್ಯ ಸಭ್ಯರ ಈ ಮಾತು ಸಂಪೂರ್ಣ ಸರಿ. ಮತ್ತು ನಾನವರಿಗೆ ಕೃತಜ್ಞನಿದ್ದೇನೆ.

ಶ್ರೀ ಯನ್. ವೆಂಕಟ ಸುಬ್ಬಯ್ಯ—ಈ ಅಧಿಕಾರಿಗಳಲ್ಲಿ ಹಲವರ ವರ್ತನೆಯು ಸಂದೇಹಾತೀತವಾಗಿಲ್ಲವೆಂಬ ಕುರಿತು ಎಷ್ಟೋ ದೂರುಗಳು ಬಂದಿರುವುದು ನಿಜವಲ್ಲವೆ?

ಡಾ। ಸುಬ್ಬರಾಯನ್—ದೂರು ವಿಜ್ಞಾಪನೆಗಳು ಬಂದಿದ್ದುವು. ಸರಕಾರವು ಲಕ್ಷ್ಯ ಪೂರ್ವಕ ಅವುಗಳ ವಿಚಾರಣೆ ನಡೆಸಿತು. ಮತ್ತು ಅಗತ್ಯ ತೋರಿದ ಕಾರ್ಯಗಳನ್ನು ಕೈಕೊಂಡಿತು.

ಮಿ. ಇಸ್ಮಾಯಿಲ್—ಈ ವಿಷಯದ ಪ್ರಾಮುಖ್ಯತೆಯ ಮೇಲಿಂದ, ಸರಕಾರವು ತನ್ನಾ ವಿಚಾರಣೆಗಳ ಫಲಿತಾಂಶವನ್ನು ಸಭೆಯ ಮುಂದಿಡುವುದೆ?

ಡಾ। ಸುಬ್ಬರಾಯನ್-ಅವು ಸಂಪೂರ್ಣವಾಗಿ ಗುಟ್ಟನಲ್ಲಿಡಬೇಕಾದ ವಿಷಯಗಳು. ಅಂತಹ ವಾರ್ತೆಗಳನ್ನು ಸಭೆಯ ಮುಂದಿಡಲು ಸರಕಾರವು ತಯಾರಿಲ್ಲ.

ಮಿ. ಹಮೀದ್ ಖಾನ್-ಸರಕಾರವು ಯಾವುದನ್ನಾಧರಿಸಿ ಕಾರ್ಯ ಕೈಕೊಂಡಿತೋ ಆ ದೂರು ಆರೋಪಗಳೆಲ್ಲಾ ಫೋರ್ಜರಿಗಳೆಂಬುದೂ, ಕೆಲವೇ ಜನರು ಕೃತ ವಿಜ್ಞಾಪನೆಗಳನ್ನು ಕಳುಹಿಸಿ ಸರಕಾರಕ್ಕೆ ಪ್ರೇರಣೆ ಕೊಟ್ಟಿದ್ದರೆಂಬುದೂ ನಿಜಸ್ಥಿತಿಯಲ್ಲವೆ?

ಡಾ। ಸುಬ್ಬರಾಯನ್-ಮಾನ್ಯ ಸದಸ್ಯರ ಈ ಉಪನ್ಯಾಸಕ್ಕಾಗಿ ಕೃತಜ್ಞನಿದ್ದೇನೆ. ಫೋರ್ಜರಿ ವಿಜ್ಞಾಪನೆಗಳ ಪ್ರಶ್ನೆಯೇ ಇಲ್ಲ.

ಮಿ. ಪೊಕ್ಕರ್ ಸಾಹೇಬ-ಹೈದರಾಬಾದ್ ಸ್ಥಿತಿಗತಿಗಳಿಗೂ ಈ ವರ್ಗಾವರ್ಗಿಗಳಿಗೂ ಏನಾದರೂ ಸಂಬಂಧವಿರಬಹುದೆ? ಹಾಗಿದ್ದರೆ ಈಗ ಹೈದರಾಬಾದಿನ ಸಂಬಂಧವು ಸುಗಮವಾಗಿರುವುದರಿಂದ ಸರಕಾರವು ಮೊದಲ ಸ್ಥಿತಿಯನ್ನೇ ಪುನಃ ಸ್ಥಾಪಿಸುವ ಅನುಗ್ರಹವಿಡುವುದೆ?

ಡಾ। ಸುಬ್ಬರಾಯನ್—ಹೈದರಾಬಾದಿಗಾವುದೇ ಸ್ಥಳ ಎಷ್ಟು ದೂರವಿರಬಹುದೋ ಅಷ್ಟು ದೂರದಲ್ಲಿ ಮಲಬಾರಿದೆ. ಹೈದರಾಬಾದ್ ಸ್ಥಿತಿಗೂ ಈ ವರ್ಗೀಕರಣಕ್ಕೂ ಸಂಬಂಧವೇ ಇಲ್ಲ.

ಮಿ. ರಾಘುನಾಖಾನ್—ಸಭಾ ನಾಯಕರು ಹೇಳಿದಂತೆ ಈ ವರ್ಗಾವರ್ಗಿಗಳು 'ದ್ವಿರಾಷ್ಟ್ರತತ್ವ'ದ ಪರಿಣಾಮವಲ್ಲವೆಂಬುದೂ ಬದಲಿಗೆ ಸರಕಾರವು ಭೀತಿ ದಿಗಿಲಿಗೀಡಾಗಿ ಇಂತಹ ವರ್ತನೆಗಿಳಿಯಿತೆಂಬುದೂ ಸರಕಾರದ ಅವಗಾಹನೆಯಲ್ಲಿದೆಯೆ?

ಡಾ। ಸುಬ್ಬರಾಯನ್—ಎಷ್ಟಕ್ಕೂ ಅಲ್ಲ. ದ್ವಿರಾಷ್ಟ್ರತತ್ವವನ್ನೆತ್ತಿ ಹಿಡಿದು ದೊಡ್ಡ ಬೊಬ್ಬೆಯೆಬ್ಬಿಸಿದ್ದ ಸಭ್ಯರ ಮೇಲೆಯೇ ಅದರ ಪೂರ್ಣ ಹೊಣೆಗಾರಿಕೆಯಿದೆ ಎಂದು ನಾನು ಹೇಳಬಲ್ಲೆ.

ಮಿ. ಇಸ್ಮಾಯಿಲ್-ಸಭಾನಾಯಕರು ಹೀಗೆಂದುದು ಯಾವ ನ್ಯಾಯ? ಸರಕಾರದ ವರ್ತನೆಯಿಂದಾಗಿಯೇ ಗೊಂದಲ ದಿಗಿಲುಗಳೆದ್ದಿವೆ ಎಂಬುದವರಿಗೆ ಗೊತ್ತಿಲ್ಲವೆ?

ಡಾ। ಸುಬ್ಬರಾಯನ್— ಮಾನ್ಯ ಮಹನೀಯರು ಈ ಸ್ಪಷ್ಟ ವಿಷಯವನ್ನೂ ಕಂಡುಕೊಳ್ಳಲಾರರಾದರೆ, ಆ ಕುರಿತು ನಾನೇನನ್ನೂ ಮಾಡಲಾರೆ.

ಮಿ. ಆರ್. ಎ. ಅನ್ಸಾರಿ-- ಅಸಂಖ್ಯಾತ ದೂರು ವಿಜ್ಞಾಪನೆಗಳು ಬಂದಿದ್ದರೂ ಕೆಲವು ಜಿಲ್ಲೆಗಳ ಹಿಂದೂ ಪೋಲಿಸ್ ಅಧಿಕಾರಿಗಳನ್ನು ವರ್ಗಾಯಿಸಿದ್ದಿಲ್ಲ. ಅದೇಕೆ ಹಾಗೆ?

ಡಾ। ಸುಬ್ಬರಾಯನ್—ಸಂದರ್ಭ ಬಂದರೆ ಸರಕಾರವು ಹಿಂದೂ ಅಧಿಕಾರಿಗಳ ಕುರಿತೂ ಕಾರ್ಯಾಚರಣೆ ಕೈಕೊಳ್ಳುವುದು.

ಮಿ. ಹಮೀದ್ ಖಾನ್-ಈ ನಾಮಾಂಕಿತ ದ್ವಿರಾಷ್ಟ್ರ ತತ್ವವೆಂಬುದು ಈ ಪ್ರಶ್ನೆಗಳಲ್ಲಿಯೂ ಹೇಗೆ ಬರುತ್ತದೆಂಬುದನ್ನು ಮಂತ್ರಿಗಳು ತುಸು ಬಿಡಿಸಿ ಹೇಳುವರೆ?

ಡಾ। ಸುಬ್ಬರಾಯನ್-ಈ ದ್ವಿರಾಷ್ಟ್ರ ತತ್ವವನ್ನು ಪ್ರಚಾರ ಮಾಡುತ್ತಿರುವ ಈ ಮಾನ್ಯ ಮಹನೀಯರ ಅಪರಾಧವು ಯಾರೊಬ್ಬರಿಗಿಂತಲೂ ಕಡಿಮೆಯದಲ್ಲ. ಅವರ ಜವಾಬ್ದಾರಿಯೆಂತಹದೆಂಬುದನ್ನು ಮಾತ್ರ ನಾನಿಲ್ಲಿ ತೋರಿಸಿಕೊಟ್ಟಿದ್ದೇನೆ.

ಮಿ. ರಾಘುನಾಖಾನ್-ಗುಡೂರಿನ ಹಿಂದೂ ಬಹುಸಂಖ್ಯಾಕರು ಹಾಕಿರುವ ಭೀಕರ ಸಾಮಾಜಿಕ ಬಹಿಷ್ಕಾರದ ಸಂಗತಿ ಸಭಾ ನಾಯಕರಿಗೆ ಗೊತ್ತೆ? ಅದಕ್ಕಾರು ಜವಾಬ್ದಾರಿ, ದ್ವಿರಾಷ್ಟ್ರೀಯ ತತ್ವವೋ? ಬಹುಸಂಖ್ಯಾಕರೋ? ಅಥವಾ ಸರಕಾರದ ವರ್ತನೆಯೊ?

ಡಾ। ಸುಬ್ಬರಾಯನ್-ಇದು ದ್ವಿರಾಷ್ಟ್ರ ತತ್ವದ ಪರಿಣಾಮವೆಂದು ನಾನು ಮಾನ್ಯ

(೧೧ನೇ ಪುಟ ನೋಡಿರಿ).

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ನೆಗ್ಗುರಿಯಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ-

ದಿ ವಿಜಯಾ ಬೇಂಕ್, ಲಿಮಿಟೆಡ್.

ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಸಿಟಿ-ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಂಞಂಗಾಡು, ಮಡಿಕೇರಿ ಮತ್ತು ಮುಂಬಾಯಿ

THE VIJAYA BANK, LIMITED.

ನಿಜಾಮರ ಕಡೆಗೆ ಬೋಂಬೆಸೆತ!

— ನಿರರ್ಥಕಯತ್ನ—ನೀತಿಗೆಟ್ಟ ಮಾತು —

ಕಳೆದ ತಾ. 4ನೇ ಬುಧವಾರ ಒಂದು ಆಕಸ್ಮಿಕ ಹಾಗೂ ಅದ್ಭುತ ಘಟನೆ ನಡೆದು ಹೋಯಿತು. ಹೈದರಾಬಾದಿನ ನಿಜಾಮರ ಮೇಲೆ ಒಂದು ಕೈಬೋಂಬು ಒಗೆಯಲ್ಪಟ್ಟರೂ ಪದ್ಧತಿಯಂತೆ ಅದು ನಿರರ್ಥಕವಾಯಿತು! ಆನಂದದಾಯಕ, ಆದರೆ ಆಶ್ಚರ್ಯಕರ ಅದೃಷ್ಟವೆಂದರೆ, 'ದೊಡ್ಡ ಮನುಷ್ಯ'ರ ಕೊಲೆಯ ಪ್ರಯತ್ನಗಳು ಸೇಕಡಾ 90ರಷ್ಟು ನಿಷ್ಫಲವಾಗುವ ಈ ಸಂಪ್ರದಾಯ! ತಿರುವಾಂಕೂರಿನಲ್ಲಿ ದೀಪನಂದಿಸಿಕೊಂಡು ಸರ್ವಾನುಕೂಲತೆ ಮಾಡಿಕೊಂಡ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರ ಮೇಲೆ ಬಿದ್ದ ಕತ್ತೀಧೀರನಿಗಾದರೂ, ತನ್ನಿಚ್ಛೆಯಂತೆ ಅವರನ್ನು ಕೊಲೆಮಾಡುವಷ್ಟು ಕೈ ಮುಂದುವರಿಯಲಿಲ್ಲ. ಹಿಂದೊಮ್ಮೆ ಗಾಂಧಿಜೀಗೆಂದು ಪೂನೆಯಲ್ಲಿ ಒಗೆದಿದ್ದ ಸ್ವದೇಶೀ ಬೋಂಬೂ ಪಟಾಕಿಯೊಡೆದಂತೆ ಕೇವಲ ಶಬ್ಧವೆಬ್ಬಿಸಿ ಸಾಫಲ್ಯ ಹೊಂದಿದ್ದಿತು. ಗಡಿನಾಡಿನ ಗುಡ್ಡಗಾಡು ಸಂಚಾರಗಳಿಗೆ ಹೋಗಿದ್ದ ಪಂಡಿತ ನೆಹರು ತನ್ನ ಸ್ವಭಾವದಂತೆ ಮುಂದೊತ್ತಿ ಹೋಗಿ ಗುಡ್ಡಗಾಡು ಜನರ ದೊಡ್ಡ ದೊಡ್ಡ ಕಲ್ಲುಗಳಿಗೆ ತಲೆಯೊಡ್ಡಿದರೂ ಆ ವಿಲಕ್ಷಣತಹ ತಲೆಯನ್ನು ಜಜ್ಜಿಹಾಕಲು ಅವುಗಳಿಂದಾಗಿರಲಿಲ್ಲ. ಮಿ. ಜಿನ್ನರ ಕೋಣೆಯೊಳಗೇನೇ ನುಗ್ಗಿ ದೃಢ ದೇಹಿ ಖಾಕ್ಸಾರನೊಬ್ಬ ಚೂರಿ ಹಾಕಿದ್ದರೂ ಆ ಬಡಕಲು ದೇಹದ ತೊಗಲನ್ನು ಹರಿದುದಲ್ಲದೆ ಆಳಕ್ಕೆ ನಾಟಲು ಅದರಿಂದಾಗಿರಲಿಲ್ಲ. ನಮ್ಮಲ್ಲಿಯ ಆಯುಧೋಪಕರಣ, ಮದ್ದುಗುಂಡುಗಳಲ್ಲೂ 'ನಾಯಕ ಪೂಜೆ'ಯ ಭಕ್ತಿಭಾವನೆಯೇ ತುಂಬಿಕೊಂಡಿದೆಯೇನೋ ಎಂಬಂತೆ, ಮುಖಂಡರ ಕೊಲೆ ಪ್ರಯತ್ನಗಳೆಲ್ಲಾ ನಿರರ್ಥಕವಾಗುವುದೇ ಹೆಚ್ಚಿಗೆ. ನೊನ್ನೆ ಹೈದರಾಬಾದಿನ ನಿಜಾಮರ ಜೀವದ ಮೇ[illegible] ನಿಷ್ಫಲ ಪ್ರಯತ್ನವೊಂದು ನಡೆಯಿತು. ಆ ಕಥೆ ಹೀಗಿದೆ:-

ಕೊಲೆಯ ಪ್ರಯತ್ನ

ಹೈದರಾಬಾದಿನ ನಿಜಾಮರು ಪ್ರಾರ್ಥನೆಸಲ್ಲಿಸಲು ಪ್ರತೀ ಸಾಯಂಕಾಲವೂ ಕಾರು ಹತ್ತಿ ಅರಮನೆಯಿಂದ ಹೋಗುವದಿದೆ. ಹೈದರಾಬಾದಿನಲ್ಲಿ ಜನತಾಂದೋಲನ ಮತ್ತು ದಬ್ಬಾಳಿಕೆಗಳು ನಡೆಯಹತ್ತಿದಂದಿನಿಂದ ಇಡೀ ಸಂಸ್ಥಾನವು ಕಾಳಗಾವಲಿಯಂತಾಗಿದೆಯಷ್ಟೆ. ಇತ್ತೀಚೆಗೆ ಪ್ರೋಚಂಪಳ್ಳಿಯೆಂಬಲ್ಲಿ ನಿಜಾಮ್ ಸರಕಾರದ ವಿರೋಧಿಗಳು ಬೋಂಬು ತಯಾರಿ ಕಾರ್ಖಾನೆಯೊಂದನ್ನು ನಡೆಸುತಿದ್ದುದನ್ನು ಅಲ್ಲಿಯ ಪೋಲಿಸರು ಕಂಡು ಹಿಡಿದು ಕೆಲವರ ದಸ್ತಗಿರಿಯಾದ ವಾರ್ತೆ ಪ್ರಕಟವಾಗಿತ್ತು. ಆ ಮೇಲೆ ನಿಜಾಮರು ಸಂಚರಿಸುವಾಗ ವಿಶೇಷ [illegible] ಜಾಗರೂಕತೆ ಮಾಡಿಕೊಳ್ಳಬೇಕೆಂದು ಅಲ್ಲಿಯ ಪೋಲೀಸ್ ಅಧಿಕಾರಿಗಳು ನಿಜಾಮರಿಗೆ ಸೂಚಿಸಿದ್ದರಂತೆ. ಆದರೆ ತನ್ನ ಪ್ರಜೆಗಳಿಗೆ ತನ್ನ ಕಾವಲು ಕೊಡುವುದನ್ನೂ ಸಹಿಸದಷ್ಟು ಗೌರವ ವ್ಯಕ್ತಿಶಃ ತನ್ನ ಮೇಲಿದೆ ಎಂಬ ನಂಬಿಕೆಯಿಂದ ನಿಜಾಮರು ಅಂತಹ ಎಚ್ಚರಿಕೆಗಳನ್ನು ಕಡೆಗಣಿಸಿದ್ದರಂತೆ.

ಡಿಸೆಂಬರ್ ತಾ. 4ನೇ ಬುಧವಾರ ಅಪರಾಹ್ನ ಪದ್ಧತಿಯಂತೆ ನಿಜಾಮರು ತನ್ನ ಕಾರು ಹತ್ತಿ ಅರಮನೆಯಿಂದ ಹೊರಟರು. ಪ್ರಭು ದರ್ಶನಕ್ಕಾಗಿ ನಿತ್ಯದಂತೆಯೇ ಪ್ರಜೆಗಳು ರಸ್ತೆಗಳಲ್ಲಿ ಗುಂಪು ಕೂಡಿ ಕಾಯುತ್ತಾ ನಿಂತಿದ್ದರು. ಕಾರು ಅರಮನೆಯಿಂದ ಅರ್ಧ ಫರ್ಲಾಂಗು ದೂರ ಬಂದಿತ್ತು; 'ಅಬೀದ್ ರಸ್ತೆ'ಗಭಿಮುಖವಾಗಿ ಧಾವಿಸುತಿತ್ತು; ಅಲ್ಲಿ ನಿಂತಿದ್ದ ಗುಂಪಿನ ಓರ್ವ ತರುಣ ಕೈಬೋಂಬೊಂದನ್ನು ನಿಜಾಮರ ಕಾರಿಗೆ ಹೊಡೆದು ಬಿಟ್ಟ. ಅದು ಓಡುತ್ತಿರುವ ಕಾರಿನ ಒಳಗೆ ಬೀಳುವುದು ತಪ್ಪಿ, ಬಾಗಿಲಿಗೆ ಬಡಿದು ರಸ್ತೆಗೆ ಬಿದ್ದು ಅದೇ ಸಮಯದಲ್ಲಿ ಅಲ್ಲಿ ಜತೆಯಾಗಿ ನಡೆದು ಹೋಗುತ್ತಿದ್ದ ಓರ್ವ ಗಂಡಸು ಮತ್ತು ಓರ್ವ ಹೆಂಗಸಿಗೆ ಸಿಡಿತ ಬಡಿದು ಜಖಮಾಯಿತು. ನಿಜಾಮರಿಗಾಗಲೀ ಅವರ ಕಾರಿಗಾಗಲೀ ಏನೂ ಆಗಲಿಲ್ಲ. ಬೋಂಬೆಸೆದ ತರುಣ ಅತ್ತಿತ್ತ ನೋಡದೆ ಪೋಲೀಸ್ ಸ್ಟೇಶನಿನ ಕಡೆಗೆ ಒಂದೇ ಸವನೆ ಓಡಹತ್ತಿದ. ಅಲ್ಲಿ ಕೂಡಿದ ಜನರೆಲ್ಲ ಅವನನ್ನು ಓಡಿಸಿಕೊಂಡು ಹೋದರು. ಅಲ್ಲೇ ಕಾವಲಿಗಿದ್ದ ಪೋಲೀಸನೊಬ್ಬ ತರುಣನನ್ನು ಹಿಡಿದುಕೊಂಡ. ಜನರು ಅವನನ್ನುಹೊಡೆದು ಜಜ್ಜಿಕೊಲ್ಲುವುದರಲ್ಲಿದ್ದರು. ಅದಕ್ಕೂ ಮೊದಲು ಒಂದೇ ಏಟಿಗೆ ತೀರಿಸಿಬಿಡಲು ಒಬ್ಬ ಅರಬನು ತನ್ನಾಯುಧವನ್ನೆತ್ತಿದ್ದ. ಅಷ್ಟರೊಳಗೆ ಈ ಗಲಭೆಯನ್ನು ಕಂಡು ಮುಂದೊತ್ತಿದ್ದ ಕಾರನ್ನು ನಿಲ್ಲಿಸಿ ನಿಜಾಮರು ಸ್ವತಃ ಇಳಿದು ಬಂದು ಯಾರೂ ಆತನನ್ನು ಹೊಡೆಯ ಕೂಡದೆಂದು ಆಜ್ಞಾಪಿಸಿದರು. ಏನೂ ನಡೆದಿಲ್ಲವೆಂಬಷ್ಟು ಶಾಂತ ಮತ್ತು ನಿರ್ವಿಕಾರ ಬುದ್ಧಿಯನ್ನು ಸಂದರ್ಭದಲ್ಲಿ ಪ್ರದರ್ಶಿಸಿದ ನಿಜಾಮರ ಮನೋಧೈರ್ಯವು ಶ್ಲಾಘನೀಯವೆಂದು ಎಲ್ಲರೂ ಕೊಂಡಾಡುತಿದ್ದಾರೆ. ತರುಣನನ್ನು ಬಂಧಿಸಿಟ್ಟರು; ನಿಜಾಮರು ಕೂಡಲೇ ತನ್ನ ಕಾರನ್ನು ಅರಮನೆಗೆ ತಿರುಗಿಸಿದರು. ಈ ವಾರ್ತೆ ಬಿರುಗಾಳಿಯಂತೆ ಪಟ್ಟಣದಲ್ಲೆಲ್ಲಾ ಹಬ್ಬಿಕೊಂಡಿತು; ವಾತಾವರಣವೊಮ್ಮೆಗೇ ಭಯಾಶ್ಚರ್ಯಗಳಿಂದ ತುಂಬಿ ಹೋಯಿತು. ಉದ್ವೇಗಗೊಂಡ ಪ್ರಧಾನ ಮಂತ್ರಿ ಮೀರ್ ಲಾಯಕ್ ಅಲಿಗಳೂ ಪೋಲೀಸ್ ಡೈರೆಕ್ಟರ್ ಜನರಲರೂ ಅರಮನೆಗೆ ಧಾವಿಸಿ ನಿಜಾಮರೊಡನೆ ಮಾತಾಡಿದರು. ಪ್ರಧಾನ ಮಂತ್ರಿಗಳು ಅಲ್ಲಿಯೇ ಪೋಲೀಸರಿಗೆ ಅಗತ್ಯವುಳ್ಳ ಸೂಚನೆಗಳನ್ನು ಕೊಟ್ಟೇ ಬಂದರು. ನಿಜಾಮರು ಶಾಂತ ಗಂಭೀರತೆಯಲ್ಲಿದ್ದು, ಕೆಲವೇ ಮಿನಿಟು ಅರಮನೆಯಲ್ಲಿ ನಿಂತು, ಪುನಃ ಕಾರುಹತ್ತಿ ನಿತ್ಯದಂತೆ ಸಂಚಾರಕ್ಕೆ ಹೊರಟರು.

ಈ ನಾರಾಯಣ ರಾವ್

ದಸ್ತಗಿರಿ ಮಾಡಿ ವಿಚಾರಿಸಿದಲ್ಲಿ, ಬೋಂಬೆಸೆದವನೆಂದು ಆರೋಪಿಸಲ್ಪಟ್ಟ ತರುಣನು ತನ್ನ ಹೆಸರು ನಾರಾಯಣ ಬಾಬು, ಎಂದೂ ತಾನು ಹೊರಗಡೆಯವನೆಂದೂ ಪರಿಚಯ ಹೇಳಿದ್ದ. ಈತನ ಪ್ರಾಯ 23 ವರುಷ. ಹೆಸರು ನಾರಾಯಣ ರಾವ್. ಹೈದರಾಬಾದ್ ಹೈಕೋರ್ಟಿನಿಂದ ನಡಿಸಲ್ಪಡುತ್ತಿರುವ ಕಾನೂನು ತರಗತಿಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿ. ಆ ಮೊದಲಿನ ಅವನ ಶಿಕ್ಷಣವು ವಾರಂಗಾಲ್ ಕಾಲೇಜಿನಲ್ಲಾಗಿತ್ತು. ಪಡಿಲು ಚಲ್ಲಣ ಮತ್ತು ಶರ್ಟು ಹಾಕಿಕೊಂಡು ಅಲ್ಲಿಯ ಇಗರ್ಜಿ ಬೀದಿಯಿಂದ ಬಂದು ಜನರ ಗುಂಪಿನೊಂದಿಗಾಗ ಸೇರಿಕೊಂಡಿದ್ದ. ನಿಜಾಮರ ಕಾರಿಗೆಸೆದಂತಹ ಮತ್ತೊಂದು ಜೀವಂತ ಬೋಂಬು ಅವನ ಕಿಸೆಯಲ್ಲಿತ್ತೆಂದು ತಿಳಿದುಬರುತ್ತದೆ. ಒಡೆಯುವ ರೀತಿಯಲ್ಲಿ ಅದನ್ನವನಿಂದ ಕಸಗೊಳ್ಳಲು ತುಸು ಪ್ರಯಾಸವಾಯಿತಂತೆ. ಅವನೆಸೆದ ಬೋಂಬಾದರೂ ಒಂದೆರಡಿಂಚು ಮುಂದೆ ಹೋಗುತ್ತಿದ್ದರೆ ಕಾರಿನೊಳಗೆ ಬಿದ್ದು ಅಲ್ಲೇ ಸಿಡಿಯುತಿತ್ತು! ಇದುವರೆಗೆ ಬಂದ ವಾರ್ತೆಯಂತೆ ನಾರಾಯಣರಾಯನಂತೆಯೇ ಬೇರೆ ಐದು ಮಂದಿಯ ದಸ್ತಗಿರಿಯಾಗಿದೆ; ಇನ್ನೂ ಆಗುತ್ತಿರಬಹುದು; ಆಶ್ಚರ್ಯಕರಕತೆಗಳು ಕೇಳಿಬರಬಹುದು!

ಬೇಜವಾಬ್ದಾರೀ ಹೇಳಿಕೆಗಳು

ಆ ಕಾಲದಲ್ಲಿ ಮದ್ರಾಸಿನಲ್ಲಿದ್ದ ಹೈದರಾಬಾದು ಕಾಂಗ್ರೆಸು ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರು ಈ ವಾರ್ತೆ ಕೇಳಿದೊಡನೆ "ಇದು ಅತ್ಯಂತ ಶೋಚನೀಯ. ದೇವರ ದಯೆಯಿಂದ ಪಾರಾದ ಹೆಚ್. ಇ. ಹೆಚ್. ನಿಜಾಮರಿಗೆ ನನ್ನ ಅಭಿವಂದನೆಗಳು. ಸಂಸ್ಥಾನೀ ಕಾಂಗ್ರೆಸಿನ ಪರವಾಗಿ ನಾನೀ ವರ್ತನೆಯ ಸಾರ್ವತ್ರಿಕ ಖಂಡನೆಯಲ್ಲಿ ಸಹಭಾಗಿಯಾಗುತ್ತೇನೆ. ನಿಜಾಮರ ಆಶ್ರಯದಲ್ಲಿ ಪ್ರಜಾಜವಾಬ್ದಾರೀ ಸರಕಾರ ಸ್ಥಾಪನೆಯಾಗಬೇಕೆಂಬುದೇ ಸಂಸ್ಥಾನ ಕಾಂಗ್ರೆಸಿನ ಬೇಡಿಕೆ" ಎಂದಿದ್ದಾನೆ. ಆದರೂ ಈ ದುರ್ಘಟನೆಯ ಕುರಿತು ಮಜ್ಲಿಸ್ ನಾಯಕ್ ಮಿ. ಖಾಸಿಮ್ ರಾಜ್ವಿಯಾಡಿದ ಮಾತುಗಳಲ್ಲಿರುವ ಅಹಂಭಾವವು, ಇತ್ತೆಹಾದ್-ಉಲ್-ಮುಸ್ಲಿಮೀನ್ ಸಂಸ್ಥೆಯ ಪುಂಡ ಸ್ವಭಾವಕ್ಕನುಗುಣವಾಗಿಯೇ ಇದ್ದು ತೀರಾ ಖಂಡನೀಯವಿದೆ. ಅಂತೆಯೇ ಈ ಸಂಬಂಧದ ಹೈದರಾಬಾದ್ ಸರಕಾರದ ಹೇಳಿಕೆಯೂ ಬೇಜವಾಬ್ದಾರಿಯದಿದೆ. ಮಿ. ಖಾಸಿಮ್ ರಾಜ್ವಿ ತೊಡೆ ತಟ್ಟಿಕೊಂಡು ಘರ್ಜಿಸಿದ್ದಾರೆ:-"ಓರ್ವ ಮುಸ್ಲಿಮನು ಯಾವುದನ್ನೇ ಆದರೂ ಸಹಿಸಬಲ್ಲ. ಆದರೆ ಮಹಾಪ್ರಭುವಿನ ಮೇಲಿನ ಯಾವುದೇ ಅಗೌರವವನ್ನು ಎಷ್ಟಕ್ಕೂ ಸಹಿಸಲಾರ. ಅಹಿಂಸೆಯ ಬೋಧನೆ ಕೊಡುತ್ತಿರುವವರ ಘೋರಣೆಯಿದೇ ಎಂದಾದಲ್ಲಿ, ಮತ್ತವರು ಈ ರೀತಿಯಿಂದಲೇ ತಮ್ಮ ರಾಜಕೀಯ ಬೇಡಿಕೆಗಳನ್ನು ಸಾಧಿಸಿಕೊಳ್ಳಬಿಚ್ಛಿಸುವುದಾದಲ್ಲಿ, ಅವರಿಗೆ ಪರಾಭವ ನಿಶ್ಚಯವೆಂಬುದನ್ನವರು ಸ್ಪಷ್ಟವಾಗಿ ತಿಳಿದಿರಬೇಕು". ಈ ಮಾತಿಗೆ ಪ್ರತಿಯಾಗಿ—ರಾಜ್ವಿಯಂಥವರ ತಲೆ ಮತ್ತವರ ಭವಿಷ್ಯ ಕೂಡಾ ರಸ್ತೆಗೆ ಬಿದ್ದೊಡೆದ ಆ ಬೋಂಬಿನದ್ದೇ ಎಂದರೆ ಹೆಚ್ಚಾದೀತೆ? ಮಜ್ಲೀಸ್ ನಾಯಕನು 'ಅಹಿಂಸಾವಾದಿ'ಗಳ ಮೇಲೆ ಅನುಮಾನ ಪಡುವುದರಕ್ಕಾಧಾರವೇನು? ಬದಲಿಗೆ ಅಹಿಂಸಾ ಪ್ರವಾದಿಗಳ ಕಾರ್ಯರೀತಿಗೆ ಕಳಂಕ ಹಚ್ಚಿ ತೋರಿಸಿ, ತನ್ನ ಅತ್ಯಾಚಾರಗಳಿಗೊಂದು ನೆಪ ಸಾಧಿಸಬೇಕೆಂದೇ, ಇಂತಹ ದುಷ್ಕೃತ್ಯಗಳಲ್ಲಿ ಪ್ರವೀಣರಾಗಿರುವ ಮಜ್ಲೀಸರೇ ಉದ್ದೇಶಪೂರ್ವಕ ಈ 'ರಸ್ತೇ ಪಟಾಕಿ' ಹೊಡೆಯಿಸಿದವರೆಂದರಾಗದೇ? ಆ ನಾರಾಯಣರಾಯನೇ ಅಪರಾಧಿಯೆಂದು ಆ ಮುಹೂರ್ತದಲ್ಲೇ ರುಜುವಾಯಿತೆಂಬಂತೆ ಹೈದರಾಬಾದ್ ಸರಕಾರೀ ಪ್ರಕಟಣೆ ಸಾರಿದೆ. ಇಂತಹ ಆಕಸ್ಮಿಕ ಘಟನೆಗಳಲ್ಲಿ ಎಂತೆಂತಹ ಚಮತ್ಕಾರಗಳು ನಡೆಯುವವಿದೆ ಎಂಬುದು ಸರಕಾರದ ಮಾತಂತಿರಲಿ, ಸಾಮಾನ್ಯರಿಗೆ ಕೂಡಾ ತಿಳಿದಿರುವ ಸಂಗತಿ. ಅಂದ ಮೇಲೆ ವಿಚಾರಣೆ ಬಾಕಿಯಿರುವ ಒಂದು ಸಂಗತಿಯ ಕುರಿತು ಸರಕಾರವೇ ಮುಂದಾಗಿ ತೀರ್ಪಿನಂತಹ ಹೇಳಿಕೆ ಕೊಡುವುದೆಂದರೆ ಅದಕ್ಕೆ ತನ್ನ ಜವಾಬ್ದಾರಿ ಗೊತ್ತಿಲ್ಲವೆಂಬುದು ಸ್ಪಷ್ಟವಲ್ಲವೇ? ಅಂತೂ ಅವಸರ, ಅಹಂಕಾರ, ದುರ್ಬುದ್ಧಿಯಲ್ಲಿ ನಿಜಾಮ್ ಸರಕಾರವಾಗಲೀ, ಅಲ್ಲಿಯ ಮಜ್ಲೀಸಾಗಲೀ, ಆ ಬೋಂಬೊಗೆದವನಿಗಿಂತ ಹಿಂದಿಲ್ಲವೆಂಬುದು ಸ್ಪಷ್ಟ!

ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

ದೇಶೋನ್ನತಿಯನ್ನು ಬಯಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಪೋಷಿಸಿ ಉಳಿತಾಯವನ್ನು ಕಲ್ಪಿಸುವುದು. ವರ್ತಕರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು. ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಆಯಾ [illegible] ಕಾಯ್ದು ಸಕಾಲಕ್ಕೆ ಅವರಿಗೆ ಒಪ್ಪಿಸಿಕೊಡುವುದು, [illegible] ಬ್ಯಾಂಕಿನ ಹಲವಾರು ಧ್ಯೇಯಗಳಲ್ಲಿ [illegible].

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ [illegible] ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ [illegible] ಮಾಡುತ್ತಾ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾ [illegible] ಋಣಿಯಾಗಿರುವುದು. [illegible] ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ [illegible] ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906.

CANARA BANK LIMITED.

ಹೈದರಾಬಾದಿನ • ಒಳರೀತಿ ಹೇಗೆ? •

ಭಾರತದ ಒಳಗೊಂದಲಗಳೀಗ ಹತೋಟಿಯಲ್ಲಿರುವಾಗ, ದೀರ್ಘಾವಧಿಯ ಕಾಹಿಲೆಯಂತೆ ಒಂದು ವಿಧದ ಸಹಜತೆಯ ಮಟ್ಟಕ್ಕೆ ಬಂದು, ಕಠಿಣ ಚಿಕಿತ್ಸೆಗೊಳಗಾಗಿರುವಾಗ ಜಾಗತಿಕ ರಂಗದ ಹಲವೆಡೆಗಳಲ್ಲಿ ಹೊಸ ಸ್ಫೋಟಗಳೆದ್ದಿವೆ.

ಪೆಲಸ್ಟೈನ್‌ನಲ್ಲಿ ಯುದ್ಧಪೂರ್ವದಿಂದಲೂ ಇದ್ದು, ಇತ್ತೀಚೆಗೆ ಪರಮಾವಧಿಗೆ ಮುಟ್ಟಿದ್ದ ಅರಬಿ–ಯೆಹೂದೀ ವಿವಾದಗಳಿಗೆ ಜಾಗತಿಕ ಸಂಘವು ಕಳೆದ ತಿಂಗಳಾಂತ್ಯದಲ್ಲಿ ಭಾರತದ ಕುರಿತು ಬ್ರಿಟಿಷರು ಕೊಟ್ಟಿದ್ದಂತಹ ತೀರ್ಪನ್ನೇ ಕೊಟ್ಟುಬಿಟ್ಟಿತು! ಪೆಲಸ್ಟೈನನ್ನು ವಿಭಾಗ ಮಾಡುವ ನಿರ್ಧಾರವು ಜಾಗತಿಕ ಸಂಘದ ಮಹಾ ಸಭೆಯಲ್ಲಿ 33ಅನುಕೂಲ ಮತ್ತು 13ಪ್ರತಿಕೂಲ ಮತಗಳಿಂದ ಮಂಜೂರಾಯಿತು. ವಿಭಜನೆಗೆ ಮತ ಕೊಟ್ಟ ರಾಷ್ಟ್ರಗಳಲ್ಲಿ ಅಮೇರಿಕಾ, ರಶ್ಯಗಳಿದ್ದುವು. ವಿಭಜನೆಯನ್ನು ವಿರೋಧಿಸಿದ ಈಜಿಪ್ಟ್, ಕ್ಯೂಬಾ, ಪರ್ಶಿಯಾ, ಇರಾಕ್, ಲೆಬನಾನ್, ಸಾವುದಿ ಅರೇಬಿಯಾ, ಸಿರಿಯಾ, ಟರ್ಕಿ, 'ಯೆಮನ್' ಮೊದಲಾದ ಅರಬ್ಬೀ ರಾಷ್ಟ್ರಗಳ ಪಂಗ್ತಿಯಲ್ಲೇ ಭಾರತ ಮತ್ತು ಪಾಕಿಸ್ಥಾನ ಹಾಗೂ ಗ್ರೀಸ್‌ಗಳಿದ್ದುವು. ಗ್ರೇಟ್ ಬ್ರಿಟನು ತಟಸ್ಥ ರಾಷ್ಟ್ರಗಳ ಸಾಲಿನಲ್ಲಿತ್ತು. ಈ ವಿಭಜನೆಯ ವಿರೋಧವಾಗಿ ಪೆಲೆಸ್ಟೈನಿನಲ್ಲೀಗ ಮಹಾ ಕೋಲಾಹಲವೆದ್ದಿದೆ; ಅರಬರು ಪ್ರತ್ಯಕ್ಷ ಹೋರಾಟ ಹೂಡಿದ್ದಾರೆ; ಪೆಲೆಸ್ಟೈನ್ ವಿಭಜನಾ ನಿರ್ಧಾರದ ನಿಷೇಧಾರ್ಥವಾಗಿ ಅರಬರು ಮೂರು ದಿನಗಳ ಸಾಮೂಹಿಕ ಮುಷ್ಕರವನ್ನು ಹೂಡಿ ಆ ದಿನಗಳಲ್ಲಿ ಯೆಹೂದಿಗಳ ಜೀವ ಸೊತ್ತುಗಳ ಮೇಲೆಲ್ಲಾ ಧಾಳಿ ನಡೆದು ಅಲ್ಲಲ್ಲಿ ಅರಬ-ಯೆಹೂದೀ ಕೈಕೈ ಹೋರಾಟ, ತಿವಿತ ಸಿಡಿತಗಳಾಗಹತ್ತಿವೆ. ಸರ್ವ ಅರಬ ರಾಷ್ಟ್ರಗಳ 'ಅರಬ್ ಲೀಗ್' ಪೆಲೆಸ್ಟೈನ್ ಹೋರಾಟದ ನಾಯಕತ್ವ ವಹಿಸಿದೆ. ಇಜಿಪ್ಟಿನ 20 ಸಾವಿರ ಮಂದಿಯ 'ಜನಪ್ರಿಯ ಕಾಂಗ್ರೆಸು' ಕೈರೋದಲ್ಲಿ ಸೇರಿ ಪೆಲೆಸ್ಟೈನ್ ಹೋರಾಟಕ್ಕಾಗಿ ಅರಬ್ ಸಂಘಗಳ 'ಮುಖ್ಯ ಸಮಿತಿ' ರಚಿಸಲು ನಿರ್ಧರಿಸಿದೆ. ಪ್ರತಿಯೊಂದು ಅರಬ ರಾಷ್ಟ್ರವೂ ಕೊನೆಯ ಪಕ್ಷ 10000 ಯೋಧರನ್ನಾದರೂ ಪೆಲೆಸ್ಟೈನ್ ಹೋರಾಟಕ್ಕೆ ಕೊಡಬೇಕೆಂದು ಮೊದಲೇ ಅರಬ್ ಲೀಗಿನ ಗುಪ್ತ ನಿರ್ಧಾರವಿದೆ. ಪೆಲಸ್ಟೈನೀಗ ದ್ವಿತೀಯ ಪಂಜಾಬ್ ಆಗಿದೆ; ಬ್ರಿಟಿಷ್ ಸೇನೆಗಳು ಹೋರಾಟ ನಿರ್ನಾಮ ಸಾಹಸಕ್ಕಿಳಿದಿವೆ.

ಇಂತಹ ಮತ್ತೊಂದು ಗೊಂದಲವೆಂದರೆ ಫ್ರಾನ್ಸಿನಲ್ಲೆದ್ದಿರುವ ಬಂಡಾಯ. ಈಗಿನ ಫ್ರೆಂಚ್ ಸರಕಾರವು ಅಮೇರಿಕದ ಸಾಮ್ರಾಜ್ಯವಾದ ಮತ್ತು ಧನ ದೌಲತ್ತಿನ ಬಲೆಯೊಳಗೆ ಬಿದ್ದಿದೆ ಎನ್ನುತ್ತಾ ಅಲ್ಲಿಯ ಕಮ್ಯೂನಿಸ್ಟರು ಅತಿ ಪ್ರಬಲ ಆಂತರಿಕ ಗೊಂದಲವೆಬ್ಬಿಸಿದ್ದಾರೆ; ದೇಶದ ಆದ್ಯಂತ ಮುಷ್ಕರ ದಂಗೆಗಳು ನಡೆದಿವೆ; ಪರಿಸ್ಥಿತಿ ಭೀಕರವಾಗಿದೆ. ಅಂತೆಯೇ ಇರಾನಿನ ಉತ್ತರಗಡೆಯ ಎಣ್ಣೆ ಗಣಿಗಳ ಕುರಿತು ಪರ್ಶಿಯಾ ಸರಕಾರವು ಬ್ರಿಟನಿಗಿತ್ತಿರುವ ರಿಯಾಯಿತಿ—ಆ ಕುರಿತು ರಶ್ಯದ ಬೇಡಿಕೆ—ಇತ್ಯಾದಿಗಳಿಂದ ಇರಾನಿನೊಳಗಡೆಯಲ್ಲಿ ರಶ್ಯಾ ಮತ್ತು ಆಂಗ್ಲೋ ಅಮೇರಿಕಗಳೊಳಗೆ ಇದ್ದ ಸ್ವಾರ್ಥಕಿಚ್ಚುಗಳು ಈ ಬಾರಿ ಬಲಿತಂತೆ ಕಾಣುತ್ತಿದೆ. ಪರ್ಶಿಯಾದ ಮಂತ್ರಿಮಂಡಲದಲ್ಲಿ ಬಿಕ್ಕಟ್ಟೆದ್ದಿದೆ. ಪ್ರಧಾನಿ ಘವಾಮ್ ಸುಲ್ತಾನಿಯರು ಮತ್ತಿಬ್ಬರು ಮಂತ್ರಿಗಳ ಹೊರತು ಮಿಕ್ಕೆಲ್ಲಾ ಮಂತ್ರಿಗಳೂ ರಾಜಿನಾಮೆಯಿತ್ತಿದ್ದಾರೆ. ತನಗೆ ಜನಬೆಂಬಲವಿದೆಯೆನ್ನುತ್ತಾ ಸುಲ್ತಾನಿಯರು ಹೊಸ ಮಂತ್ರಿಮಂಡಲ ರಚಿಸಿಕೊಳ್ಳಲಣಿಯಾಗಿದ್ದಾರೆ, ಆದರೆ ಇರಾನಿನ ಷಾರು ಈ ಪ್ರಧಾನಿಗೆ ವಿರೋಧವಿರುವಂತಿದೆ.

ಚೀನಾದಲ್ಲಿ ನಿಕ್ಕದ ಅಂತರ್ಯುದ್ಧ ಪ್ರಬಲಿಸಿದೆ; ಕಮ್ಯೂನಿಸ್ಟ್ ಸೇನೆಗಳು ಮುಂದೊತ್ತಿವೆ.

ಭಾರತದ ರಾಜಕೀಯದಲ್ಲಿ ಕೇಂದ್ರ ಶಾಸನ ಮಂಡಲಿಯಲ್ಲಿ ಪ್ರಕಟವಾದ ಕೆಲವು ಅತಿ ಮುಖ್ಯ ಸರಕಾರೀ ಧೋರಣೆಗಳಲ್ಲದೆ ಬೇರೆ ಎತ್ತಿ ಹೇಳುವಂತಹದೇನೂ ಕಳೆಗಾರ ಇರಲಿಲ್ಲ. ಈಗ ಎಲ್ಲಕ್ಕಿಂತ ಮುಂದಾಗಿರುವುದು ಹೈದರಾಬಾದಿನ ಪ್ರಶ್ನೆ. ಮದ್ರಾಸಿನ ಶಾಸನ ಸಭೆಗಳಲ್ಲಿಯೂ ಕೆಲವು ಪ್ರಾಮುಖ್ಯ ವಿಚಾರಗಳು ಮುಂದೆ ಬಂದಿವೆ. ಆತುರದಿಂದ ನಿರೀಕ್ಷಿಸಬೇಕಾಗಿದ್ದ ಭಾರತ–ಪಾಕಿಸ್ತಾನಗಳೊಳಗಿನ ಸಂಬಂಧ ನಿರ್ಮಾಣ ಪ್ರಯತ್ನಗಳು ತೆರೆಯ ಮರೆಯಲ್ಲೇ ಭರದಿಂದ ನಡೆದಿವೆ. ಗುಟ್ಟಾವುದೂ ಹೊರಬಿದ್ದಿಲ್ಲವಾದರೂ, ಲಾಹೋರಿನಲ್ಲಿ ನಡೆದ ಜತೆ ಮಾತುಕತೆಗಳ ಪರಿಣಾಮವಾಗಿ ಕೆಲವು ತೀರ್ಮಾನಗಳು ಹೊರಬೀಳುವುದು ಸಂಭವನೀಯ.

ಹೈದರಾಬಾದಿನಲ್ಲಿ

ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರೇ ಮೊದಲಾದ ರಾಜಕೀಯ ಕೈದಿಗಳನ್ನು ಕಳೆದ ತಾ 30ನೇ ರಾತ್ರಿ ಬಿಡುಗಡೆ ಮಾಡಿದೊಡನೆಯೇ ನಿಜಾಮ್ ಸರಕಾರದ ಪರವಾಗಿ ಸ್ವಾಮಿಯೊಂದಿಗೆ ಸಂಧಾನ ಮಾತುಕತೆಗಳಾರಂಭಿಸಿದ್ದುವು. ಸರಕಾರದ ಪ್ರಥಮ ಸೂಚನೆಗಳು ಕಾಂಗ್ರೆಸಿಗೆ ಅನರ್ಥ್ಯವೆಂದು ತೋರಿದೊಡನೆ ಸುಧಾರಿತ ಮರು ಸೂಚನೆಗಳು ಬಂದರೂ, ಫಲಿಸದೆ ಸಂಧಾನ ಮುರಿದುಹೋಗಿದೆ ಈ ಕುರಿತು ಹೆಚ್ಚಿನ ಆಶೆ ತೋರದಿದ್ದರೂ ಪುನಃ ಮಾತುಕತೆಗಳು ನಡೆಯಲಿವೆ. ನಿಜಾಮರ ನವಮಂತ್ರಿ ಮಂಡಲದ ಸುದ್ದಿಖಾತೆಯ ಮಂತ್ರಿ ನವಾಬ್ ಮೊಯಿನ್ ನವಾಝ್ ಝಂಗರು ಮತ್ತು ಸರಬರಾಯಿ ಮಂತ್ರಿ ಶ್ರೀ ಪಿಂಗ್ಲೆ ವೆಂಕಟರಾಮ ರೆಡ್ಡಿಗಳು ಪ್ರತ್ಯಪ್ರತ್ಯೇಕವಾಗಿ ಸ್ವಾಮಿ ರಮಾನಂದರೇ ಮೊದಲಾದ ಸಂಸ್ಥಾನ ಕಾಂಗ್ರೆಸ್ ಪ್ರತಿನಿಧಿಗಳೊಂದಿಗೆ 90-90 ನಿಮಿಷ ಮಾತಾಡಿದ್ದರು. ಈ ಮಾತುಕತೆಗಳು ನಿಷ್ಫಲವಾದೊಡನೆ ಸ್ವಾಮಿ ರಮಾನಂದರು ಮದ್ರಾಸಿನಲ್ಲಿ ಸೇರಲಿದ್ದ ಹೈದರಾಬಾದ್ ಸಂಸ್ಥಾನ ಕಾಂಗ್ರೆಸಿನ 'ಕಾರ್ಯಾಚರಣಾ ಸಮಿತಿ' ಸಭೆಗಾಗಿ ತಾ. ೩ರಲ್ಲಿ ವಿಮಾನ ಹತ್ತಿ ಮದ್ರಾಸಿಗೆ ಬಂದಿದ್ದರು. ಈ ಸಮಿತಿಯು ಎರಡು ದಿನಗಳ ವರೆಗೆ ಗಾಢ ಪರ್ಯಾಲೋಚನೆ ನಡಿಸಿ 'ಪ್ರಚಲಿತ ವಿದ್ಯಮಾನಗಳಿಗನುಸಾರವಾಗಿ ಸಂಸ್ಥಾನದೊಳಗಡೆಯಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸುವ ಮತ್ತು ಸಂಸ್ಥಾನದ ಹೊರ ಸಂಬಂಧದ ನಿರ್ಧಾರವನ್ನು ಜನತೆಯ ಅಭಿಮತದಂತೆಯೇ ನಿರ್ಧರಿಸುವ ಜಾಹೀರುನಾಮೆಯೊಂದನ್ನು ನಿಜಾಮ ಸರಕಾರವು ಕೂಡಲೇ ಹೊರಡಿಸಬೇಕು; ಆ ಹೊರತು ಬೇರಾವುದನ್ನಾದರೂ ಆಧರಿಸಿ ಸಂಧಾನ ಮಾತುಕತೆ ನಡಿಸುವದಸಾಧ್ಯ'ಎಂದು ನಿರ್ಧರಿಸಿದೆ. ಸ್ವಾಮಿ ರಮಾನಂದ ತೀರ್ಥರಿಗೆ ತಮಿಳು, ಆಂಧ್ರ ಕಾಂಗ್ರೆಸ್ ಕಮಿಟಿಗಳ ಅಧ್ಯಕ್ಷರಾದ ಶ್ರೀ ಕಾಮರಾಜ ನಾಡರ್, ಶ್ರೀ ಟಿ. ಪ್ರಕಾಶಮರು ಜತೆ ಸತ್ಕಾರಕೂಟವಿತ್ತಿದ್ದರು. ಮದ್ರಾಸ್ ಸರಕಾರದ ಮಂತ್ರಿಗಳೊಡನೆಯೂ ಇತರ ಎಲ್ಲಾ ನಾಯಕರೊಡನೆಯೂ ಸ್ವಾಮಿ ರಮಾನಂದರು ಮಾತುಕತೆ ನಡೆಸಿದ್ದರು; ಮದ್ರಾಸ್ ಶಾಸನ ಸಭೆಗಳ ಸದಸ್ಯರ ಸಭೆಯಲ್ಲಿ ಹೈದರಾಬಾದ್ ಸ್ಥಿತಿಗತಿಗಳ ಕುರಿತು ಭಾಷಣವಿತ್ತರು. ಮೈಸೂರು ಕಾಂಗ್ರೆಸ್ ನಾಯಕರೂ ಮದ್ರಾಸಿಗೆ ಬಂದು ಸ್ವಾಮಿಜೀಯೊಡನೆ ಪರ್ಯಾಲೋಚಿಸಿದ್ದರು. ಸ್ವಾಮಿಗಳಿಗೂ ಹೈದರಾಬಾದ್ ಕಾಂಗ್ರೆಸಿನ ಇತರ ನಾಯಕರಿಗೂ ಮದ್ರಾಸಿನಲ್ಲಿ ಸಂಭ್ರಮದ ಸತ್ಕಾರ ಕೂಟಗಳಿದ್ದುವು; ಪರಿಣಾಮಕಾರೀ ಮಾತುಕತೆಗಳು ನಡೆದಿದ್ದುವು. ಸ್ವಾಮಿ ರಮಾನಂದ ತೀರ್ಥರು ಮದ್ರಾಸಿನಿಂದ ನವದಿಲ್ಲಿಗೆ ಹಾರಿದ್ದಾರೆ. ಕಾಂಗ್ರೆಸ್ ಹೈಕಮಾಂಡಿನ ಅಭಿಮತ ಸಲಹೆಗಳನ್ನು ಪಡೆದು ಅಲ್ಲಿಂದ ಪುನಃ ಹೈದರಾಬಾದಿಗೆ ಹೋಗಲಿದ್ದಾರೆ.

ಭಿನ್ನಾಭಿಪ್ರಾಯಗಳೇನು?

ಹೈದರಾಬಾದು ನಿಜಾಮ್ ಸರಕಾರವು ಈಗ ಮಾಡಲೆಳಸಿರುವ ಸುಧಾರಣೆಗಳಿಷ್ಟೆ:—ಸರಕಾರೀ ನೇಮಿತ, ಮುಸ್ಲಿಂ, ಹಿಂದೂ ಈ ಮೂರು ವಿಭಾಗಗಳ ಐದೈದು ಮಂದಿಯುಳ್ಳ ಒಂದು ನಡುಗಾಲ ಮಂತ್ರಿಮಂಡಲದ ರಚನೆ; ಈ ಮಂಡಲಿಯಲ್ಲಿ ಎಲ್ಲಾ ಪಕ್ಷೀಯರೂ ಸೇರುವಂತಾಗಬೇಕು. ಆ ಮೇಲೆ ಜವಾಬ್ದಾರೀ ಸರಕಾರದ ರೀತಿ ನೀತಿಗಳನ್ನು ರೂಪಿಸಲು ಯಾವುದಾದರೊಂದು ವಿಧದ ಯಂತ್ರರಚನೆ. ಸ್ವಾಮಿ ರಮಾನಂದ ತೀರ್ಥರು ಸ್ಪಷ್ಟಪಡಿಸಿರುವಂತೆ ಈ ಕುರಿತು ಹೈದರಾಬಾದು ಕಾಂಗ್ರೆಸಿನ ಕನಿಷ್ಠ ಬೇಡಿಕೆಗಳಿವು:— ಹಿಂದೀ ಕೇಂದ್ರದೊಡನೆ ನಿಜಾಮ್ ಸರಕಾರವೀಗ ಒಂದು ವರುಷದ ಪ್ರಚಲಿತ ಒಪ್ಪಂದಕ್ಕೆ ಬಂದಿರುವುದರಿಂದ, ಮುಂದೆ ಹೈದರಾಬಾದು ಯಾವ ಕಡೆಗೆ ಸೇರಬೇಕೆಂಬುದನ್ನು ಜನಮತ ಸಂಗ್ರಹಿಸಿ ನಿರ್ಧರಿಸಿದರೆ ಸಾಕು. ಒಳಗಿನ ಜವಾಬ್ದಾರೀ ಸರಕಾರದ ರೂಪರೇಷೆಯು ರಾಜ್ಯಾಂಗರಚನಾ ಸಭೆಯೊಂದರಿಂದ ನಿರ್ಧರಿಸಲ್ಪಡಬೇಕು. ಈ ಜವಾಬ್ದಾರೀ ಸರಕಾರದಲ್ಲಿ ಮುಸ್ಲಿಂ ಸಮಾಜದ ಪ್ರಾಮುಖ್ಯತೆಯ ಮೇಲಿಂದ ಅವರಿಗೆ ಆ

ವಾರ್ಡನ್

1946ರಲ್ಲು ಹೊಸ ದಾಖಲೆಯ ಶಿಖರಕ್ಕೇರಿದೆ.

ಸ್ವೀಕರಿಸಲ್ಪಟ್ಟ ವ್ಯವಹಾರ ... ... ರೂ. 2,04,00,000

ಪೂರ್ಣಗೊಳಿಸಲ್ಪಟ್ಟ ವ್ಯವಹಾರ ... ... ರೂ. 1,72,00,000

ವಾರ್ಡನಿನ ಪ್ರಗತಿಪರ ಜೀವನದಲ್ಲಿ ಇದೊಂದು ಮರೆಯಲಾಗದ ಉಚ್ಚ ಸಾಹಸ.

ಇಂತಹ ದಾಖಲೆಗೆ ನೆರವಾದ ಸ್ವಪರ ರಾಷ್ಟ್ರಗಳ ಪೊಲಿಸಿದಾರರಿಗೂ ಏಜಂಟರಿಗೂ ಕಂಪೆನಿಯು ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸುತ್ತದೆ.

ಶಿವಪ್ರಸಾದ ತಾಕರ್ — ಮೆನೇಜಿಂಗ್ ಡೈರೆಕ್ಟರ್,

ಎಮ್. ಸುಂದರರಾಮ ಸೆಟ್ಟಿ — ವಿಭಾಗ ಮೇನೇಜರ್.

ಮಂಗಳೂರು ಶಾಖೆ.

ಕೆ. ಪಿ. ಭವಾನಿಶಂಕರ ಸೆಟ್ಟಿ

ಬ್ರಾಂಚ್ ಸೆಕ್ರೆಟರಿ



Approved firm by the Govt. of Mysore
Certified by the Agent of the Govt. of Ceylone & India.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3/-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8/- [ವಿ. ಪಿ. ಖರ್ಚು ಬೇರೆ ಪ್ರತ್ಯೇಕ]

Mrs. D. DEVEE, F. DS. (N. J.)
Tollygunge CALCUTTA.

ಸ್ಟಾಕಿಸ್ಟರು: ಕಹಾಕಂಪೆನಿ, ಮಂಗಳೂರು

• ಲಾಹೋರು ಸಭೆಯ • ಅಂತರ್ಯವೇನು?

ವರಿಗೆ ವಿಶೇಷ ಸ್ಥಾನ ರಿಯಾಯತಿಗಳನ್ನು ಕೊಡಬಹುದಾದರೂ ಸೇಕಡಾ 90ರಷ್ಟಿರುವ ಹಿಂದುಗಳಿಗೂ ಸೇ. 10ರಷ್ಟಿರುವ ಮುಸ್ಲಿಮರಿಗೂ ಸಮಾನ ಪ್ರಾತಿನಿಧ್ಯ ಕೊಡಲು ಸಾಧ್ಯವಿಲ್ಲ. ಹೈದರಾಬಾದಿನ ಪ್ರಮುಖ ಹಾಗೂ ಉಗ್ರ ಮುಸ್ಲಿಂ ಸಂಸ್ಥೆ ಮಜ್ಲೀಸ್ ಇತ್ತೆಹಾದ್ ಉಲ್ ಮುಸ್ಲಿಮೀನಿನ ಅಧ್ಯಕ್ಷ ಸಯ್ಯದ್ ಖಾಸಿಮ್ ರಾಜ್ವಿಯವರಂತೆ ಮುಸ್ಲಿಮರ ಅಭಿಪ್ರಾಯ ಹೀಗೆ:—ಹಿಂದೂ ಮುಸ್ಲಿಂ ಸಮ ಪ್ರಾತಿನಿಧ್ಯವನ್ನಾಧರಿಸಿ ಜವಾಬ್ದಾರೀ ಸರಕಾರ ರಚಿಸಲ್ಪಡಬೇಕು. ಅದರಲ್ಲೂ ಈ ಸಮ ಪ್ರಾತಿನಿಧ್ಯವೆಂಬುದು ಶಾಸನ ಸಭೆಗಳ ಮಟ್ಟಿಗೆ ಮಾತ್ರವಿರಬೇಕಲ್ಲದೆ ಹೈದರಾಬಾದ್ ಸರಕಾರೀ ನೌಕರಿಗಳಲ್ಲಿ ಕಳೆದ 800 ವರುಷಗಳಿಂದಲೂ ಅತ್ಯಧಿಕ ಸಂಖ್ಯೆಯಲ್ಲಿರುವ ಮುಸ್ಲಿಮರ ಸಂಖ್ಯೆಯನ್ನು ಒಮ್ಮೆಗೇ ತಗ್ಗಿಸಿ ಸಮತೆಗೆ ತರುವುದಕ್ಕೊಪ್ಪಿಗೆಯಿಲ್ಲ. ಹಾಗೆ ಹಿಂದೂ ಮುಸ್ಲಿಂ ಸಮಾನತೆ ತರುವುದಾದರೆ ವ್ಯಾಪಾರೋದ್ಯಮಗಳ ಸಮೇತ ಪ್ರತಿಯೊಂದು ಜೀವನ ವಿಭಾಗದಲ್ಲೂ ಸಮ ಪ್ರಾತಿನಿಧ್ಯಬರಬೇಕು.

ಈ ತ್ರಿವಿಧಾಭಿಮತಗಳ ಪೈಕಿ ನಿಜಾಮ್ ಸರಕಾರ ಮತ್ತು ಮಜ್ಲಿಸ್‌ಗಳು ಭಾವನಾಪ್ರವಾಹವು ಒಂದೇ ಕಾಲುವೆಯಲ್ಲಿ ಹರಿಯುತ್ತಿದೆ; ಕಾಂಗ್ರೆಸಿನದು ಅದರ ವಿರುದ್ಧ ಗತಿಹಿಡಿದು ವಿಜಯ ಸಂಗಮಗೊಳ್ಳುವ ವರೆಗೂ ಮುಂದುವರಿಯಲಿದೆ.

ಭಾರತ-ಪಾಕಿಸ್ತಾನ್

ಇವೆರಡು ರಾಷ್ಟ್ರಗಳೊಳಗಿನ ಭಿನ್ನಾಭಿಪ್ರಾಯಗಳು, ಪ್ರತ್ಯಕ್ಷ ಘರ್ಷಣೆ, ಮತ್ತಿತರ ಸಂಬಂಧ ನಿರ್ಮಾಣಗಳ ಕುರಿತು ಹಿಂದಿನ ವಾರ ಮಿ. ಲಿಯಾಖತ್ ಅಲೀ ಖಾನ್ ಮೊದಲಾದ ಪಾಕಿಸ್ತಾನ್ ನಾಯಕರು ನವದಿಲ್ಲಿಗೆ ಬಂದಲ್ಲಿ ಗುಪ್ತ ಮಾತುಕತೆಗಳು ನಡೆದಿದ್ದುವೆಂದು ವಾರ್ತೆಯಿದ್ದಿತು. ಈ ಒಳಮಂಥನವು ನಾನಾ ಊಹಾಪೋಹೆಗಳ ದುರ್ವಾಸನೆಗಳನ್ನು ಸೂಸಿದುದಿದೆ. ಆ ಮೇಲೆ ಇತ್ತಕಡೆಯ 'ಜತೆ ರಕ್ಷಣಾ ಸಮಿತಿ'ಯ ಹಾಗೂ ಭಾರತ–ಪಾಕಿಸ್ತಾನ ಸರಕಾರೀ ಪ್ರತಿನಿಧಿಗಳ ಜತೆ ಮಾತುಕತೆಗಳೂ ಈ ವಾರ ಲಾಹೋರಿನಲ್ಲಿ ಮುಂದುವರಿದುವು. ವಿಚಿತ್ರ ಸುದ್ದಿಗಳು ಸುಳಿದಾಡುತ್ತಿವೆ. ಸ್ಥಳ ಮತ್ತು ಜನಸಂಖ್ಯೆಯ ಆಧಾರದಿಂದ ಕಾಶ್ಮೀರವು ತನ್ನ ಪಾಲಿಗೆ ಸೇರತಕ್ಕದ್ದಾದ್ದರಿಂದ ಅದರ ಭವಿಷ್ಯವನ್ನು ತನಗನುಕೂಲವಾಗುವಂತೆ ನಿರ್ಧರಿಸಬೇಕೆಂದೂ ಹೈದರಾಬಾದು ಮುಂತಾದ ಮಿಕ್ಕ ಸಂಸ್ಥಾನಗಳ ಗೊಡವೆಯನ್ನೇ ತಾನು ಬಿಟ್ಟು ಬಿಡುವೆನೆಂದೂ ಪಾಕಿಸ್ತಾನದ ಬೇಡಿಕೆಯಿದ್ದಂತೆ ಆಂಗ್ಲೀ ನಾಯಕರೂ ಈ ಬೇಡಿಕೆಯನ್ನು ಸಹಾನುಭೂತಿಯಿಂದ ಕಂಡರಂತೆ. ಲಂಡನಿಗೆ ಈ ಬಾರಿ ಹೋಗಿಬಂದ ಲೋರ್ಡ್ ಮೌಂಟ್ ಬೇಟನರು, ಹಿಂದಿನಷ್ಟು ಕಟ್ಟುಗ್ರ ಭಾರತ ಪಕ್ಷಪಾತಿಯಾಗಿರದೆ, ಹೇಗಾದರೂ ಭಾರತ–ಪಾಕಿಸ್ತಾನಗಳು ಸೌಹಾರ್ದದಿಂದಿರುವಂತೆ ಮಾಡಬೇಕೆಂಬ ಆತುರದಲ್ಲಿರುವರಂತೆ. ಮಿ. ಅಟ್ಲಿ ಮತ್ತು ಬ್ರಿಟಿಷ್ ಸರಕಾರವು ರಕ್ತದ ಗಡಿಯಾಗಿರುವ ಕಾಶ್ಮೀರವಲ್ಲಿದ್ದಿರುವ ಗೊಂದಲದಿಂದಾತುರಗೊಂಡು ಲೋರ್ಡ್ ಮೌಂಟ್ ಬೇಟನರ ಕಿವಿಯೂದಿರುವುದೇ ಈ ಬದಲಾವಣೆಗೆ ಕಾರಣವೆಂದು ನಂಬಲಾಗಿದೆ. ಲಂಡನಿನ 'ಟೈಮ್ಸ್'ನಂತಹ ಪ್ರಸಿದ್ಧ ಪತ್ರಿಕೆಗಳೂ ಕಾಶ್ಮೀರವನ್ನು ವಿಭಾಗಿಸಿ ಜಮ್ಮು ಪ್ರಾಂತ್ಯವನ್ನು ಹಿಂದುಸ್ಥಾನಕ್ಕೂ, ಉಳಿದ ಕಾಶ್ಮೀರವನ್ನು ಪಾಕಿಸ್ತಾನಕ್ಕೂ ಬಿಟ್ಟು ಕೊಡುವ ವಿಲಕ್ಷಣ ರಾಜೀ ಸೂಚನೆಗಳನ್ನು ಕೊಡಹತ್ತಿವೆ. ಅಟ್ಲಿಗಳು ನೆಹರು, ಲಿಯಾಖತರನ್ನು ಲಂಡನಿಗಾಮಂತ್ರಿಸಿದುದೂ ತೇಪೆ ಹಚ್ಚುವ ಉದ್ದೇಶದಿಂದಲೇ ಎಂದು ನಂಬಲಾಗಿದೆ. ಇತ್ತ ಪ್ರತ್ಯಕ್ಷ ಕಾಶ್ಮೀರ ರಣರಂಗದಲ್ಲಿ ಛಳಿಗಾಲದ ಹಿಮ ಪ್ರಭಾವದಿಂದಾಗಿಯೂ, ಧಾಳಿಗಾರರಿಗೆ ದೊರೆತ ವಿಶೇಷ ಸಂಬರಾಯಿಗಳ ದೆಸೆಯಿಂದಲೂ ಕೆಲವು ಬದೀ ಸ್ಥಳಗಳಲ್ಲಿ ಅವರು ಆಗಾಗ ಮುಂದೊತ್ತುವಂತಾಗಿದೆ. ಪಂಡಿತ ನೆಹರುಗಳು ತಾ. ೮ರಲ್ಲಿ ಪುನಃ ಕಾಶ್ಮೀರಕ್ಕೆ ಧಾವಿಸಿ ಜಮ್ಮುವಿನಲ್ಲಿ ಸ್ಫೂರ್ತಿದಾಯಕ ಭಾಷಣ ಕೊಟ್ಟು ಹಿಂದೀ ಸರಕಾರದ ವಿಜಯ ಸಾಧನಾ ನಿರ್ಧಾರವನ್ನು ಸಾರಿದ್ದಾರೆ. 'ಈ ಕಾಶ್ಮೀರದ ಕಾರ್ಯವನ್ನು ಪೂರ್ಣಗೊಳಿಸಿಯೇ ಸಿದ್ಧವೆಂದು ಹಿಂದೀ ಸರಕಾರದ ದೃಢ ನಿರ್ಧಾರವಿದೆ. ಕೆಲಸಗಳನ್ನು ಅರ್ಧಮಾಡಿ ಬಿಡಲು ನಾವು ತಯಾರಿಲ್ಲ. ನಾವು ಇನ್ನೂ ಹೆಚ್ಚಿನ ಸೇನೆಗಳನ್ನಿಲ್ಲಿಗೆ ಕಳುಹಿಸುವೆವು. ನಾವು ನಮ್ಮೆಲ್ಲಾ ಶಕ್ತಿಭಂಡಾರವನ್ನು ಸಂಗ್ರಹಿಸಿಕೊಂಡಾದರೂ ವಿಜಯಹೊಂದುವ ವರೆಗೂ ಹೋರಾಡುವೆವು" ಎಂದು ಘೋಷಿಸಿ ಕಾಶ್ಮೀರಿಗಳು ಪುಂಡರ ಅತ್ಯಾಚಾರಗಳಿಗಾಗಿ ಅಳುವ ಬದಲಿಗೆ ಒಗ್ಗಟ್ಟಾಗಿ ಶೇಖ್ ಅಬ್ದುಲ್ಲಾರ ನಾಯಕತ್ವದಲ್ಲಿ ಮುಂದೊತ್ತಿ ಹೋರಾಡಬೇಕೆಂದು ಹುರಿದುಂಬಿಸಿದ್ದಾರೆ. ಇದರಿಂದ ಈ ಸಂಬಂಧದ ಗಾಳೀ ವಾರ್ತೆಗಳಾವುದಕ್ಕೂ ಆಧಾರವಿಲ್ಲವೆಂಬುದು ಸ್ಪಷ್ಟ.

ಲಾಹೋರಿನ ಭಾರತ—ಪಾಕಿಸ್ತಾನ್ ಜತೆ ಮಾತುಕತೆಗಳಲ್ಲಾದ ಒಂದು ಪ್ರಾಮುಖ್ಯ ನಿರ್ಧಾರವೆಂದರೆ, ಅಪಹರಿಸಲ್ಪಟ್ಟ ಮಹಿಳೆಯರು ಮತ್ತು ಜುಲುಮೆಯಿಂದ ಮತಾಂತರಿಸಲ್ಪಟ್ಟವರನ್ನೂ ಕಂಡುಹಿಡಿದು ಅವರ ಮೂಲ ಮನೆಗಳಿಗೇನೇ ಮರಳಿಸುವ ಸಂಬಂಧದ ವ್ಯವಸ್ಥೆ. ಇದಕ್ಕಾಗಿ ಎರಡೂ ಕಡೆಗಳ ಸಂಖ್ಯೆ ಮತ್ತು ಸುದ್ದಿಗಳನ್ನು ಸಂಗ್ರಹಿಸಿ ಪರಸ್ಪರ ತಿಳಿಸುವರು. ಎರಡೂ ಕಡೆಗಳಲ್ಲಿ ಹೀಗೆ ಅಪಹರಿಸಲ್ಪಟ್ಟವರನ್ನು ಮತ್ತು ಮತಾಂತರಗೊಂಡವರನ್ನು ಮರು ಸಂಪಾದಿಸಿ ಕೊಡಲು ಇತ್ತಕಡೆಯವರ ಜತೆ ಸಂಸ್ಥೆಯೊಂದು ರಚಿಸಲ್ಪಡುವುದು. ಪಶ್ಚಿಮ ಪಂಜಾಬಿನ ಮುಸ್ಲಿಮೇತರರೆಲ್ಲರನ್ನೂ—ಸುಮಾರು 40ಲಕ್ಷ ಮಂದಿಯನ್ನು—ನಿಶ್ಚಿತಾವಧಿಯೊಳಗೆ ಭಾರತದೊಳಗೆ ತರುವ ಕೆಲಸವೀಗ ಮುಗಿದಿದೆ. ಸಣ್ಣ ಸಣ್ಣ ಸಂಗಡಗಳಾಗಿ ಪಾಕಿಸ್ತಾನ್ ಪಂಜಾಬಿನ ಅಲ್ಲಲ್ಲಿ ಚದರಿ ಹೋಗಿರುವ ಸುಮಾರು 50 ಸಾವಿರ ಮಂದಿಯನ್ನು ಆಮದು ಪಡಿಸಿಕೊಳ್ಳುವ ಕೆಲಸವೂ, ಬಿಟ್ಟುಬಂದ ಆಸ್ತಿ ಸೊತ್ತುಗಳ ವ್ಯವಸ್ಥೆಯೂ ಬಾಕಿಯಿದೆ.

ಗಡಿನಾಡಿನ ಪಾಕಿಸ್ತಾನ್ ಸೇನೆ

ಈ ನಡುವೆ ಪಾಕಿಸ್ಥಾನ್ ಸರಕಾರವು ಗಡಿನಾಡು ಪ್ರಾಂತ್ಯದ, ಗುಡ್ಡಗಾಡು ಸರಹದ್ದುಗಳ ಆ ಭಾಗಗಳಲ್ಲಿ ರಕ್ಷಣೆಗಾಗಿ ಇಟ್ಟಿದ್ದ ತನ್ನ ಸೇನೆಗಳನ್ನೀಗ ಒಂದೇ ಸಮನೆ ಹಿಂದೆಗೆಯುತ್ತಿರುವುದು ತುಸು ಆಶ್ಚರ್ಯಕರವಿದೆ. ಇದಕ್ಕೆ ಕಾರಣವೇನು? ಹಿಂದೀ ಸರಕಾರಕ್ಕೆ ತಿಳಿಸಿಯೇ ಪಾಕಿಸ್ತಾನವು ಹೀಗೆ ಮಾಡಿತೇ? ಎಂಬ ಗುಟ್ಟಾವುದೂ ತಿಳಿದು ಬಂದಿಲ್ಲ. ಆ ಸರಹದ್ದಿನ ವಾನಾ, ರಜ್ಮಕ್ ಮಾರ್ಕ್‌ನಂತಹ ಆಯಕಟ್ಟಿನ ಸ್ಥಳಗಳಲ್ಲಿದ್ದ ಪಾಕಿಸ್ತಾನ್ ಸೇನೆಗಳಷ್ಟರಲ್ಲೇ ಅಲ್ಲಿಂದ ಹಿಂದಿರುಗಿವೆ. ರಘುಮಾಕ್‌ನಂತಹ ಸ್ಥಳಗಳಲ್ಲಿ ಭಾರತ ಸರಕಾರದ ಸೇನಾದಳಗಳೂ ಇರುವುದರಿಂದ, ಪಾಕಿಸ್ತಾನದ ಸೇನೆ ಥಟ್ಟನೇ ಹಿಂದೆ ಬಂದು, ಗುಡ್ಡಗಾಡುಗಳವರ ಬಾಯಿಗೆ ಹಿಂದೀ ಸೇನೆಯನ್ನು ಬಿಡಲು ಬಯಸಿರಬಹುದು. ಇತ್ತ ಕಾಶ್ಮೀರದತ್ತ ನುಗ್ಗುವ ಹಾದಿಯಲ್ಲಿದ್ದ ಸೇನಾಮಾತ್ರ ಬೇಲಿಯೂ ಗುಡ್ಡಗಾಡುಗಳ ಜನರ ಪಾಲಿಗೆ ಈ ಮೂಲಕ ತಪ್ಪಿದಂತಾಯಿತು. ಆದರೆ ಪಾಕಿಸ್ತಾನದ ಆರ್ಥಿಕ ದೌರ್ಬಲ್ಯವೇ ಈ ಸೇನಾ ಹಿಂದೆಗತಕ್ಕೆ ಮುಖ್ಯ ಕಾರಣವೆಂದು ತಿಳಿದುಬರುತ್ತದೆ. ಬ್ರಿಟಿಷ್ ಆಡಳಿತೆಯಿದ್ದಾರಭ್ಯ ಇದುವರೆಗೂ ಗುಡ್ಡಗಾಡುಗಳ ಜನಾಂಗಗಳಿಗೆ, ಪುಂಡರ ತಂಡಗಳಿಗೆ, ಅವರ ನಾಯಕರಿಗೆ ಉಡುಗೊರೆ, ಸಹಾಯ ಧನಗಳ ರೂಪದಿಂದ ಲಂಚಕೊಟ್ಟೇ ಆ ಭಾಗವನ್ನು ಸುಮ್ಮಗಿರಿಸಲಾಗಿತ್ತು. ಅಲ್ಲಿಯ ಸೇನೆ, ಕೆಲಸ ಮತ್ತು ಲಂಚ ಕಾಣಿಕೆಗಳಿಗೆಂದು ವರುಷಕ್ಕೆ 4 ಕೋಟಿ ರೂಪಾಯಿ ವೆಚ್ಚವಿದೆ. ಇದನ್ನೀಗ ತಗ್ಗಿಸಿಕೊಳ್ಳದೆ ಪಾಕಿಸ್ತಾನಕ್ಕೆ ನಿರ್ವಾಹವಿಲ್ಲದ್ದರಿಂದಲೇ ಆ ಧೋರಣೆಕೈಕೊಂಡಿತೆಂದು ತಿಳಿದು ಬರುತ್ತದೆ. ಗಡಿನಾಡಿನ ಆ ವಲಯದಲ್ಲಿ ಪಠಾಣಿಸ್ತಾನ ಸ್ಥಾಪಿಸುವುದೊಂದೇ ಈ ಸಮಸ್ಯೆಗಿರುವ ಪರಿಹಾರವೆಂಬ ಖಾನ್ ಸಹೋದರರ ಅಭಿಪ್ರಾಯವು ಇತರ ಹಿತಚಿಂತಕರಿಗೂ ಈಗ ಮನದಟ್ಟಾಗ ಹತ್ತಿದೆ.

ಭಾರತ ಕೇಂದ್ರಸಭೆಯಲ್ಲಿ

ಕಳೆದ ವಾರ ಹಲವು ಮುಖ್ಯ ಹೇಳಿಕೆಗಳೂ, ನಿರ್ಧಾರಗಳೂ ಆದುವು.

ಪಾಕಿಸ್ತಾನವು ತನ್ನ ಹಸಿನಾರು ರಫ್ತಿನ ಮೇಲೆ ಹಾಕಿದ ವಿಶೇಷ ತೆರಿಗೆಯು ಒಪ್ಪಂದಕ್ಕೆ ವಿರೋಧವಿದೆಯೆಂದೂ, ಪಾಕಿಸ್ತಾನವು ಈ ನಿರ್ಧಾರದ ಕುರಿತು ಪುನರಾಲೋಚಿಸಬಹುದೆಂದೂ ಅರ್ಥ ಸದಸ್ಯ ಸರ್. ಷಣ್ಮುಖಂ ಚೆಟ್ಟಿಯಾರರೆಂದರು. ಒಂದು ಕಠಿತದ ಸೂಚನೆಗುತ್ತರಕೊಡುತ್ತಾ ಗೃಹಸದಸ್ಯ ಸರ್ದಾರ್ ಪಟೇಲರು 'ಆಡಳಿತೆಯಲ್ಲಿರುವ ಎಲ್ಲಾ ಲಂಚಕೋರತನಗಳನ್ನೂ ಸಮೂಲ ನಾಶಮಾಡಲು ಹಿಂದೀ ಸರಕಾರವು ಬದ್ಧಕಂಕಣವಿದೆ" ಎಂದಾಶ್ವಾಸನೆ ಕೊಟ್ಟರು. 'ಜೀವನಾವಶ್ಯ ಸಾಮಾಗ್ರಿಗಳ ಸಾರ್ವತ್ರಿಕ ಅಭಾವವಿರುವ ಈ ಕಾಲದಲ್ಲಿ ಕಂಟ್ರೋಲುಗಳು ಮತ್ತು ಲೈಸೆನ್ಸ್ ಕ್ರಮಗಳು ಲಂಚಗುಳಿತನ ದುರ್ವ್ಯಾಪಾರಕ್ಕೆ ಸರ್ವಾನುಕೂಲತೆಯೊದಗಿಸಿವೆ. ಸಾಧ್ಯವಿದ್ದಷ್ಟು ಬೇಗನೇ ಈ ಕಂಟ್ರೋಲುಗಳನ್ನು ತೆಗೆಯುವ ಸಿದ್ಧತೆಗಳನ್ನು ಸರಕಾರವು ನಡೆಸಿದೆ. ದುರ್ವ್ಯಾಪಾರದ ಪಾಪವನ್ನು ನಿರ್ಮೂಲಿಸಲು ನಾವೆಲ್ಲರೂ ಒಟ್ಟಾಗಿ ನೋಡಬೇಕು. ಆದರೆ ನಮ್ಮ ಚಿಕಿತ್ಸೆಯೇ ಒಂದು ರೋಗವಾಗಿ ಮಾರ್ಪಡುವಂತಹ ವಾತಾವರಣವನ್ನು ಮಾತ್ರ ನಾವು ನಿರ್ಮಿಸಕೂಡದು" ಎಂದರು ಸರ್ದಾರ್.

ಜಾಗತಿಕ ಸಂಬಂಧದಲ್ಲಿ ರಾಷ್ಟ್ರ ರಾಷ್ಟ್ರಗಳೊಳಗಿನ ಸ್ವಾರ್ಥ ಪೂರಿತ ಸ್ಪರ್ಧೆಯಿಂದ ದೂರನಿಂತು ನ್ಯಾಯ ಸಾಧಿಸುವದೊಂದೇ ಭಾರತದ ಧೋರಣೆಯೆಂದೂ, ಈ ಮೂಲಕವೇ ನಾವು ರಾಷ್ಟ್ರೀಯ ಅಥವಾ ಅಂತರ್ರಾಷ್ಟ್ರೀಯ ಘನತೆ ಸಂಪಾದಿಸಿಕೊಳ್ಳುವಂತಾಗುವದೆಂದೂ ವಿದೇಶ ಮಂತ್ರಿ ಪಂಡಿತ ನೆಹರುಗಳು ಒಂದು ಕಠಿತದ ಸೂಚನೆಗುತ್ತರವಾಗಿ ಹೇಳಿದರು.

ಆಯ ವ್ಯಯ ಪಟ್ಟಿಯ ಮೇಲೆ ಸುದೀರ್ಘ ಚರ್ಚೆಗಳು ನಡೆದು ಅದರ ಎಲ್ಲಾ ಬೇಡಿಕೆಗಳೂ ಮಂಜೂರಾದುವು. ಕಾರ್ಖಾನೆ ಕೆಲಸಗಾರರ ಸಮಯಾರೋಗ್ಯನಿಯಾಮಕ ಸೂಚನೆಯಂತಹ ಜನಹಿತಕಾರೀ ಸೂಚನೆಗಳು ಕೆಲವು ಮುಂದೆ ಬಂದಿವೆ. ಭಾರತದೊಳಗಿನ ಹಲವು ಮುಸ್ಲಿಮರಲ್ಲಿದ್ದ ಬೇಕಾಯದೇಶೀರ ಶಸ್ತ್ರಾಸ್ತ್ರಗಳು, ಡಿ. ಜಬಲ್ ಪುರ ಕಾರ್ಖಾನೆಯಲ್ಲಾದ ಮೆಶಿನ್‌ಗನ್ ಕಳವಿನಂತಹ ಒಳಸಂಚುಗಳು, ಅಲ್ಲಿಯ ಪ್ರಶ್ನೋತ್ತರಗಳಿಂದ ಬೆಳಕಿಗೆ ಬಿದ್ದಿವೆ.

ಒಟ್ಟಿನ ಮೇಲೆ ಭಾರತದ ಒಳರೋಗವು ಅಪಾಯಕರವಿದ್ದು ಅದಕ್ಕೆ ಕಠಿಣ ಚಿಕಿತ್ಸೆಯಗತ್ಯವೆಂಬುದೂ ಸರಕಾರವು ಅದನ್ನರಿಯುತ್ತಿದೆ ಎಂಬುದೂ ಈ ವಿದ್ಯಮಾನಗಳಿಂದ ಸುಸ್ಪಷ್ಟವಿದೆ.

The name that at once spells confidence and security
offers Attractive schemes to suit needs of all.

Respectable Representatives

WANTED

On lucrative terms.

For full particulars write to

Managing Director

The Security Provident Insurance Co, Ltd.

Hassan Chambers, Parsee Bazar Street, Fort, Bombay 1

The Canara Banking Corporation Limited.
(Incorporated in British India)
Estd. 1906.
Head Office: UDIPI, S. India.

ANNOUNCEMENT.

A branch of the BANK has been opened at High Road, **TRICHUR.** (Cochin State) on 28th November, 1947.

ಗುರುವಾರ, ಉಡುಪಿ, ೧೧-೧೨-'೪೭

ರೈತರ ಸಂಘಟನೆ

ಈ ಮೊದಲು ಶತಮಾನ, ದಶಮಾನಗಳ ಪ್ರಯತ್ನದಿಂದಲೇ ಸಾಧಿಸಲ್ಪಡುತಿದ್ದವುಗಳು ಈಗಿನ ಕ್ರಾಂತಿಯುಗದಲ್ಲಿ ದಿನ, ತಾಸುಗಳೊಳಗೆ ನಡೆದು ಹೋಗುವ ಅಗ್ಭುತಗಳನ್ನು ನಾವು ಕಾಣುತ್ತಿದ್ದೇವೆ. ಮಹಾ ಮಹಾ ಘಟನೆಗಳು ಅನಿರೀಕ್ಷಿತವಾಗಿ, ಆಕಸ್ಮಿಕವಾಗಿ ನಡೆದಿವೆ; ನಡೆಯುತ್ತಾ ಇವೆ. ಊಹೆಗೂ ನಿಲುಕದಿದ್ದ ಕಡೆಗಳಲ್ಲಿ ನವಚೇತನಗಳು ಮೂಡಿದ್ದುವು. ಸಾಮಾನ್ಯ ಕಾಲಗಳಲ್ಲಿ ಅಸ್ವಾಭಾವಿಕ, ಅಸಹಜವೆನ್ನಿಸಿದ್ದ ಪ್ರಬಲ ಮಾರ್ಪಾಟುಗಳು ಈ ಕಾಲದಲ್ಲ ನಡೆದಿದ್ದುವು. ಆಕಸ್ಮಿಕ, ಅದ್ಭುತ ಕ್ರಾಂತಿಗಳನ್ನೇ ನಿರ್ಮಿಸುತ್ತಿರುವ ಕಾಲವಿದು. ಸಂಘಟಿಸಿಕೊಂಡು ತಮ್ಮ ಹಕ್ಕುಗಳಿಗಾಗಿ ಹೋರಾಡುವ ಸ್ಫೂರ್ತಿಗೀ ಕಾಲದಲ್ಲಿ ಯಾರೂ ಬಾಹಿರರಾಗುದಿಲ್ಲ. ಅಂಚೇ ಮುಷ್ಕರ, ಪೋಲೀಸು ಮುಷ್ಕರ, ಸೈನಿಕರ ಮುಷ್ಕರ, ನಾವಿಕರ ಮುಷ್ಕರದಂತಹ ಅಸಾಮಾನ್ಯ ಘರ್ಷಣೆಗಳು, ಮತ್ತವುಗಳಿಗೆ ಒಂದಲ್ಲೊಂದು ರೀತಿಯಿಂದ ದೊರೆತ ವಿಜಯಗಳು ಕಣ್ಣ ಮುಂದಿವೆ. ಮದ್ರಾಸಿನಲ್ಲಿ ಅಧ್ಯಾಪಕರೂ ಮುಷ್ಕರಕ್ಕೆ ನಡು ಬಿಗಿದಿದ್ದರು. ಪ್ರಾಂತಿಕ ಸರಕಾರೀ 'ನೋನ್ ಗಝೆಟೆಡ್' ನೌಕರರ ಮುಷ್ಕರವು ಮೊನ್ನೆ ತಾನೇ ನಡೆಯಿತು. ಎಲ್ಲರಲ್ಲೂ ನವ ಜಾಗ್ರತಿ, ಹೊಸ ಸ್ಫೂರ್ತಿಯನ್ನು ನಿರ್ಮಿಸಿರುವ ಕಾಲದ ಪ್ರಭಾವವನ್ನು, ಕಾಲೋಚಿತ ಧರ್ಮವಾವುದೆಂಬುದನ್ನು ತೋರಿಸಿ ಕೊಡುವುದಕ್ಕಾಗಿ ಮೇಲಿನ ನಿದರ್ಶನಗಳನ್ನಿಲ್ಲಿ ಕೊಡಲಾಗಿದೆ; ಅವುಗಳ ನ್ಯಾಯಾನ್ಯಾಯದ ತುಲನೆಯಿಲ್ಲಿಲ್ಲ. ಇಂತಹ ಕಾಲದಲ್ಲೂ ಭಾರತದ ಜೀವಾಳವಾಗಿರುವ ರೈತ ಜನಾಂಗವೊಂದೇ, ತನ್ನ ಹಳೇ ಕಾಲದ ಜಡತೆಯಲ್ಲಿರುವುದು ಶೋಚನೀಯ ಮಾತ್ರವಲ್ಲ; ಲೋಕದ ಒಂದು ಆಶ್ಚರ್ಯವೆಂದೇ ಹೇಳಬೇಕು! ಗಿಂಡಿ ಕೆಲಸಗಾರರಿಂದಾರಂಭಿಸಿ ಸಾಮಾನ್ಯ ಬೀಡಿ ಕೆಲಸಗಾರರ ವರೆಗಿನ ಎಲ್ಲರೂ ಘರ್ಜನೆ ಕೊಡುತ್ತಿದ್ದಾರೆ; ರೈತ ಮಾತ್ರ ಗೊರಕೆ ಹೊಡೆಯುತ್ತಿದ್ದಾನೆ! ಎಲ್ಲರಿಗಿಂತ ಮುಖ್ಯ--ಮಿಕ್ಕೆಲ್ಲಾ ಕೆಲಸಗಾರರನ್ನು ಒಂದೆಡೆಯಿಟ್ಟು ತೂಗಿದರೂ, ರಾಷ್ಟ್ರೀಯಾವಶ್ಯಕತೆಯ ತಕ್ಕಡಿಯಲ್ಲಿ ಏಕಾಕಿಯಾಗಿ ಅವರಿಗಿಂತ ಹೆಚ್ಚು ಭಾರವಾಗಬಲ್ಲ--ರೈತ ಮಾತ್ರ ಎಲ್ಲರಿಗಿಂತಲೂ ಹಿಂದೆ ಬಿದ್ದಿದ್ದಾನೆ! ನಾಗರಿಕತೆಯ ಗಂಧಗಾಳಿಯೂ ಸೋಂಕದ ಅಜ್ಞಾತ ವಲಯಗಳಲ್ಲಿರುವ ನಗ್ನ ಜನಾಂಗಗಳ ಸ್ಥಿತಿಗತಿಗಳು ಸಾಮಾನ್ಯ ಕಾಲದಲ್ಲೆಷ್ಟು ಖೇದಾಶ್ಚರ್ಯಕರವೋ, ಈ ನವಯುಗದಲ್ಲಿ ಹಿಂದೀ ರೈತನಿರುವ ಸ್ಥಿತಿಯೂ ಅಷ್ಟೇ ದುಃಖದ ಸಂಗತಿ, ಆಶ್ಚರ್ಯದ ವಿಷಯವೆಂದರೆ ಅತಿಶಯೋಕ್ತಿಯಾಗದು. ರೈತರ ಇಂತಹ ದುಸ್ಥಿತಿಗೆ ಕಾರಣವೇನು? ಅವರೀ ಕಾಲದಲ್ಲೂ ಹೀಗೇಕೆ ಹಿಂದಿರಬೇಕು?

ಒಂದೇ ಮಾತಿನಲ್ಲಿ ಹೇಳುವುದಾದರೆ, ರಾಷ್ಟ್ರಕ್ಕೆ ರೈತನ ಆವಶ್ಯಕತೆಯಿರುವಷ್ಟು, ಸ್ವತಃ ರೈತನಲ್ಲಿ ಅದಕ್ಕನುಗುಣವಾದ ಅರ್ಹತೆಯಿಲ್ಲದಿರುವದೇ ಇಂದಿನ ದುಸ್ಥಿತಿಗೆ ಮುಖ್ಯ ಕಾರಣ. ಇದು ಗತಕಾಲದ ರಾಷ್ಟ್ರೀಯ ಪರಾವಲಂಬನೆ, ಮತ್ತು ಅಂದಿನಿಂದಿದುವರೆಗಿನ ರೈತ ಜನಾಂಗದ ಪರಾವಲಂಬನೆಯ ಪರಿಣಾಮ; ಅಂತೆಯೇ ನಮ್ಮ ಸರಕಾರಗಳ ಹಾಗೂ ಸಾರ್ವಜನಿಕರ ಮಾತು ಮತ್ತು ಕೃತಿಗಳ ನಡುವೆ ಎಂತಹ ಅಂತರವಿದೆ, ಎಂಬುದರ ಸ್ಪಷ್ಟ ನಿದರ್ಶನವಿದು. ಪರಕೀಯ ಆಡಳಿತೆಯಿರುವಾಗ ರಾಷ್ಟ್ರದ ಇತರ ಪ್ರಾಮುಖ್ಯ ವಿಷಯಗಳಂತೆಯೇ ರಾಷ್ಟ್ರಜೀವಾಳ ರೈತ ಜನಾಂಗವನ್ನೂ ಅದು ಕಡೆಗಣಿಸಿದ್ದಿತು. ತತ್ಪರಿಣಾಮವಾಗಿ ರೈತರಿಗೆ ಸಾಕಷ್ಟು ಶಿಕ್ಷಣ ದೊರೆಯಲಿಲ್ಲ; ವ್ಯವಹಾರ ಜ್ಞಾನ ಸಂಪಾದನೆಯ ಅನುಕೂಲತೆಗಳಿರಲಿಲ್ಲ, ಅವರ ಆರ್ಥಿಕ ಸ್ಥಿತಿಯನ್ನು ಭದ್ರಪಡಿಸುವ ವಿಧಾನಗಳಾವುವೂ ಬರಲಿಲ್ಲ. ಸ್ಥಿತಿ ಮತಿ, ಎರಡರಲ್ಲಿಯೂ ಹಿಂದಿದ್ದ ರೈತ ಹಿಂದೆಯೇ ಉಳಿದ; ಇಡೀ ಪ್ರಪಂಚವು ಅಭಿವೃದ್ಧಿಗಭಿಮುಖವಾಗಿ ಸಾಗುತಿದ್ದಾಗ, ರೈತಜನಾಂಗ ಅವನತಿಗೆ ಮುಖಮಾಡಿಯೇ ಸಾಗಿತು. ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಆಡಳಿತೆಗಳು ಬಂದುವು; ಕೇಂದ್ರದಲ್ಲಿ ಸ್ವಾಧಿಕಾರ ಸ್ಥಾಪನೆಯಾಗುವುದರೊಂದಿಗೆ ರಾಷ್ಟ್ರದ ಪರಾವಲಂಬನೆ ಸಂಪೂರ್ಣ ಕಳೆದುಹೋಯಿತು. ಆದರೆ ಈ ನವಯುಗಾದಿಯಲ್ಲೇ ಹುಟ್ಟಿದ ಹೊಸ ವಿಪತ್ತುಗಳಿಂದಾಗಿ ಅನಿವಾರ್ಯವಾದ ತಾತ್ಕಾಲಿಕ ಶಮನ ಕಾರ್ಯಗಳಲ್ಲೇ ಸರಕಾರಗಳ ಸರ್ವಶಕ್ತಿ ಮತ್ತು ಸಮಯ ವ್ಯಯವಾಗಬೇಕಾಯಿತು; ರೈತರ ಕಡೆಗೆ ಲಕ್ಷ್ಯಹರಿಯಲಿಲ್ಲ. 'ರಾಷ್ಟ್ರದ ಶಕ್ತಿ ರೈತನ ರಕ್ತದಲ್ಲಿದೆ' 'ಹಳ್ಳಿಯೇ ರಾಷ್ಟ್ರದ ಜೀವಾಳ' ಎಂಬ ಘೋಷಗಳನ್ನು ಪೇಟೆ ಪಟ್ಟಣಗಳಲ್ಲೆಬ್ಬಿಸುವ ಮೂಲಕವೇ ದೇಶಭಕ್ತಿ ಪ್ರದರ್ಶಿಸಿ ತೃಪ್ತರಾಗಬಲ್ಲ ಸಾರ್ವಜನಿಕ ಕೆಲಸಗಾರರಾದರೂ ದೂರದ ಗ್ರಾಮಗಳಿಗೆ ಹೋಗಿ ಹಳ್ಳೀ ಕಷ್ಟಗಳನ್ನನುಭವಿಸಲು ತಯಾರಿಲ್ಲವಾದ್ದರಿಂದ ರೈತ ಜನಾಂಗವನ್ನು ನಿಜಕ್ಕೂ ಕೇಳುವವರೇ ಇಲ್ಲ. ಪಟ್ಟಣಗಳ ಅಗಣ್ಯ ಕೆಲಸಗಾರರನ್ನು ಒಟ್ಟುಗೂಡಿಸಿ ಜಯಘೋಷ ಹಾಕಿಸುವಷ್ಟು ಸುಲಭದಲ್ಲಿ ಹಳ್ಳೀ ರೈತರನ್ನು ಸಂಘಟಿಸಲಾದೀತೇ? ರೈತೋದ್ಧಾರಕ್ಕಾಗಿ ಪ್ರಯಾಸಪಟ್ಟು ದುಡಿಯುವಷ್ಟು ಆತುರ, ಅಂತಃಕರಣ, ಅಥವಾ ಕಾರ್ಯಶಕ್ತಿಯೆಷ್ಟು ಮಂದಿಗಿದೆ? ಹೀಗಾಗಿ, ಸ್ವಚೇತನ, ಸ್ವಾವಲಂಬನ ಬುದ್ಧಿ, ಇಲ್ಲವೇ ಸ್ವಶಕ್ತಿಯ ಜ್ಞಾನವಿಲ್ಲದ ರೈತರು ಸಹಜವಾಗಿ ಕಡೆಗಣಿಸಲ್ಪಟ್ಟಿದ್ದಾರೆ. ಆ ಮೂಲಕ ಅನರ್ಹ ಮಾತ್ರವಲ್ಲ, ದೇಶಕ್ಕೇನೇ ಅಪಾಯಕಾರಿಯಾದ ಅಸದ್ಧ, ಅನ್ಯಾಯಗಳಿಗವರು ಈಡಾಗಿದ್ದಾರೆ. ಹೀಗಾಗಿ ಬಡ ಬೇಸಾಯಗಾರ ರೈತರು ಇಂದು ಅನುಭವಿಸಬೇಕಾಗಿ ಬಂದಿರುವ ಕಷ್ಟನಷ್ಟಗಳ ವರ್ಣನೆಯಿಲ್ಲಿ ಅನಗತ್ಯ. ತಾವು ನಿತ್ಯ ಜೀವನದಲ್ಲಿ ಅನುಭವಿಸುತ್ತಿರುವ ಅನಾನುಕೂಲತೆ, ಅಲಕ್ಷ್ಯ, ಅತ್ಯಾಚಾರಗಳು ರೈತ ಜನಾಂಗದ ಕಣ್ಣನ್ನೀಗಲೂ ತೆರೆಯಿಸದಿದ್ದಲ್ಲಿ ಮತ್ಯಾವ 'ಜಾಗ್ರತಿ ಬ್ರಹ್ಮ'ನಿಂದಲೂ ಅವರನ್ನೆಬ್ಬಿಸುವ ಕಾರ್ಯವಾಗುವದಸಾಧ್ಯವೇ ಸರಿ!

ಅನುಭವಕ್ಕಿಂತ ದೊಡ್ಡ ಗುರುವಿಲ್ಲ! ಕೇಳಿ, ನೋಡಿ, ಕಲಿಯುವ ಸ್ಥಿತಿಯಲ್ಲಿರದ ರೈತರು ಕಾಲ ಮಹಾತ್ಮೆಯಿಂದಾಗಿ ಪ್ರತ್ಯಕ್ಷ ಅನುಭವಿಸಿಯೇ ಕಲಿಯುವಂತಾಗಿದೆ! ಅವರ ಈ ಅನುಭವದ ಪರಿಣಾಮವು ಇನ್ನಾದರೂ ಸಂಘಟನಾ ರೂಪದಲ್ಲಿ ತೋರಿಬರಬೇಕು. 'ರೈತನೇ ಆಳಬೇಕು; ರೈತನೇ ಮುಖ್ಯಮಂತ್ರಿಯಾಗಬೇಕು. ನೆಹರುಗಳಂಥವರು ಆತನ ಕಾರ್ಯದರ್ಶಿಯಾಗಿದ್ದರೆ ಸಾಕು' ಎಂದು ಗಾಂಧಿಜೀ ಸಾರಿದ್ದಾರೆ. ನಾಳೆ ಪ್ರಾಯಸ್ಥರೆಲ್ಲರ ಮತದಾನದಿಂದಾರಿಸಲ್ಪಡುವ ಜನತಾ ರಾಜ್ಯಭಾರವೇ ಬರಲಿದೆ. ರಾಷ್ಟ್ರದ ಬಹುಸಂಖ್ಯಾಕರು ರೈತರೆಂದ ಮೇಲೆ ನಾಳೆಯದು ರೈತನ ರಾಜ್ಯವೆಂದು ಬೇರೆ ಹೇಳಬೇಕಾಗಿಲ್ಲ. ಇಂದಾದರೂ ಆತ ಸುಮ್ಮಗಿರಬಲ್ಲನೆ? ಹಚ್ಚಿನ ನಿಯಂತ್ರಣಗಳು ಇಷ್ಟರಲ್ಲೇ ರದ್ದಾಗಹತ್ತಿವೆ; ಆಹಾರ ಧಾನ್ಯಗಳ ನಿಯಂತ್ರಣವೂ ಬಹುರ್ವಸ್ತಾಗಲು 'ಇಂದು ನಾಳೆ'ಯೆಂಬಲ್ಲಿದೆ. ರೈತರಲ್ಲಿ ಸಂಘಟನೆಯಿಲ್ಲದಿದ್ದರೆ ನಿಯಂತ್ರಣಗಳ ದೆಸೆಯಿಂದ ಅವರು ಕಷ್ಟನಷ್ಟಗಳಿಗೀಡಾದಂತೆಯೇ ನಿಯಂತ್ರಣ ರದ್ದತಿಗಳ ದೆಸೆಯಿಂದಲೂ ತೊಂದರೆಗೀಡಾಗಬೇಕಾಗುವದೆಂಬುದು ಖಂಡಿತ. ಆದ್ದರಿಂದ ಇನ್ನಾದರೂ ದ. ಕ. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳ ವಿನಂತಿಯಂತೆ ಪ್ರತಿಯೊಂದು ಹಳ್ಳಿಯ ರೈತರೂ ರೈತ ಸಂಘಗಳನ್ನು ಸ್ಥಾಪಿಸಿಕೊಳ್ಳಲಿ; ಕಾಂಗ್ರೆಸಿಗರಾದವರೂ ಈ ಕಾರ್ಯದಲ್ಲೂ ಪ್ರದರ್ಶನಾಭಿರುಚಿಯನ್ನು--ನಾಮಮಾತ್ರ ಆಸಕ್ತಿಯನ್ನು--ತೋರಿಸದೆ ಮನಃಪೂರ್ವಕವಾಗಿ ದುಡಿದು ದ. ಕ. ಜಿಲ್ಲೆಯ ಪ್ರತಿಯೊಂದು ಗ್ರಾಮದಲ್ಲೂ ರೈತಸಂಘಗಳನ್ನು ನಿರ್ಮಿಸಿ ಸಂಘಟಿಸಲಿ. ಮಿಕ್ಕೆಡೆಗಳಂತೆ ವಿಶೇಷ ಏರುತಗ್ಗುಗಳು ಬಹಳವಿಲ್ಲದೆ ಸರ್ವಸಾಮಾನ್ಯ ಏಕಮಟ್ಟದಲ್ಲಿ ಮತ್ತು ಹೆಚ್ಚಿನಂಶ ಸ್ವತಂತ್ರ ಸ್ಥಾನಮಾನದಲ್ಲಿರುವ ದ. ಕ. ರೈತರನ್ನು ಸಂಘಟನೆಗೊಳಿಸುವುದು ತುಲನಾತ್ಮಕವಾಗಿ ಸುಲಭವಿದೆ. ಆದ್ದರಿಂದ ರೈತ ಸಂಘಟನೆಯಲ್ಲಿ ದಕ್ಷಿಣಕನ್ನಡವು ಮಿಕ್ಕ ಕಡೆಗಳವರಿಗೆ ಮಾದರಿಯಾಗಲೆಂದು ಹಾರೈಸುತ್ತೇವೆ.

ರೆಕ್ವಿಶಿಶನ್ ಅತಿರೇಕಗಳನ್ನು ಸಹಿಸಿ ಸುಮ್ಮಗಿರಬಾರದು

ದ. ಕ. ರೈತರಲ್ಲಿ ವಿಜ್ಞಾಪನೆ

ಈ ವರುಷ ಸ್ಥಳೀಯ ರೆವಿನ್ಯೂ ನೌಕರರ ಸ್ವಾರ್ಥತೆ, ಅಂದಾಜಿನ ಅಭಾವ, ಇತ್ಯಾದಿಗಳ ದೆಸೆಯಿಂದ ಸಾಗುವಳಿದಾರರಲ್ಲಿ ನಿಜಕ್ಕೂ ಉತ್ಪನ್ನವಾದ ಇಡೀ ಮೊತ್ತಕ್ಕೂ ಎಷ್ಟೋ ಮಿಕ್ಕಿದ ಅಂಕೆಗಳನ್ನು ಕಾಣಿಸಿ ಅಕ್ಕೀ ಭತ್ತಗಳನ್ನು ರೈತರಿಂದ ರೆಕ್ವಿಶಿಶನ್ ಮಾಡುವ ಆಜ್ಞೆಗಳು ಬಂದಿರುವ ದೂರು ಎಲ್ಲೆಲ್ಲಿಂದಲೂ ಕೇಳಿಬರುತ್ತಿದೆ; ಮತ್ತಾ ಆಜ್ಞೆಗಳನ್ನು ಜಾರಿಗೆ ತರುವ ಪ್ರಯತ್ನದಲ್ಲಿ ಬೇಸಾಯಗಾರರನ್ನು ತೊಂದರೆಗಳಿಗೊಡ್ಡಿರುವ ದುಃಖದಾಯಕ ಸಂಗತಿಗಳೂ ಕೇಳಿಬರುತ್ತಿವೆ. ಹೀಗೆ ಕಷ್ಟಕ್ಕೊಳಗಾದ ರೈತರು ಕೈಕಟ್ಟಿ ಸುಮ್ಮಗಿರುವ ಬದಲಿಗೆ ಒಟ್ಟಾಗಿ, ಸಭೆಸೇರಿಸಿ, ಜಿಲ್ಲಾಧಿಕಾರಿಗಳೇ ಮೊದಲಾದ ಸಂಬಂಧಪಟ್ಟ ಮೇಲಧಿಕಾರಿಗಳಲ್ಲಿ ಸವಿವರವಾದ ವಿಜ್ಞಾಪನೆಗಳನ್ನು ಕಳುಹಿಸಿ ಚಳವಳಿಸಬೇಕು. ಉಡುಪಿ ತಾಲೂಕಿನ ಆಲೆವೂರು ಗ್ರಾಮಸ್ಥರು ಇದೇ ಮಾದರಿಯಲ್ಲಿ ಸಭೆಕೂಡಿ ವಿರೋಧ ಮತ್ತು ವಿಜ್ಞಾಪನೆ ಕಳುಹಿಸಿದಂತೆ, ಅಧಿಕಾರಿಗಳೊರ್ವರು ಸ್ವತಃ ಬಂದು ಗ್ರಾಮದಲ್ಲಿ ಪ್ರತ್ಯಕ್ಷ ಪರಿಶೀಲಿಸಿ ಗ್ರಾಮಸ್ಥರ ವಾದವು ನಿಜವೆಂಬುದನ್ನು ಕಂಡುಕೊಳ್ಳುವಂತಾಗಿದೆ. ಎಲ್ಲಾ ಗ್ರಾಮಗಳವರೂ ಇದೇರೀತಿ ತಮಗಾಗಿರುವ ಅನ್ಯಾಯಗಳ ನಿವಾರಣೆಗಾಗಿ ಸಾಧ್ಯವಿದ್ದಷ್ಟು ಪ್ರಯತ್ನಿಸಿ ನೋಡಬೇಕು. ಈಗಿನ ಸರಕಾರವು ಜನರ ದೂರುಗಳನ್ನು ಕಡೆಗಣಿಸುವದಿಲ್ಲವಾದ್ದರಿಂದ, ಪೀಡಿತರು ದೂರಿಡಬೇಕು-- ಎಂದು ರೈತರೊಬ್ಬರು ಬರೆಯುತ್ತಾರೆ.

ನಿಧನ--ಕಟಪಾಡಿಯ ಸುಪ್ರಸಿದ್ಧ ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್‌ನ ಮತ್ತು ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್‌ನ ಅಧ್ಯಕ್ಷರಾಗಿದ್ದು, ಅವುಗಳ ಏಳಿಗೆ ಬಗ್ಗೆ ತುಂಬಾ ಶ್ರಮಿಸಿ ಜನಪ್ರಿಯರಾಗಿದ್ದ ಶ್ರೀ. ಪಾಂಗಾಳ ಕೇಶವ ನಾಯಕರು ತಾ. 6-12-47ರಂದು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರು ಆಯುರ್ವೇದ ಚಿಕಿತ್ಸಾ ಕ್ರಮಗಳಲ್ಲಿ ನುರಿತವರಾಗಿದ್ದು, ಜನತಾ ಸೇವೆಗಾಗಿ ಪ್ರಖ್ಯಾತಿಗೊಂಡವರಾಗಿದ್ದರು. ಇವರ ನಿಧನದ ದುಃಖ ಪ್ರದರ್ಶನಾರ್ಥವಾಗಿ ಕಟಪಾಡಿ ಹಾಯರ್ ಎಲಿಮೆಂಟರಿ ಶಾಲೆ ಹಾಗೂ ಎಸ್. ವಿ. ಎಸ್. ಹೈಸ್ಕೂಲು ತಾ. 8-12-47ರಂದು ಮುಚ್ಚಲ್ಪಟ್ಟಿದ್ದುವು. ಅಂದು ಎರಡೂ ಶಾಲೆಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸಭೆ ಜರಗಿಸಿ ದಿವಂಗತರ ನಿಧನದ ಕುರಿತು ತಮಗುಂಟಾದ ದುಃಖವನ್ನು ಸೂಚಿಸಿ ನಿರ್ಣಯವನ್ನು ಮಾಡಿದರು. ಶ್ರೀ. ಕೆ. ಆರ್. ಶೆಣ್ಯೆಯವರು ಈ ಸಂದರ್ಭದಲ್ಲಿ ದಿವಂಗತರ ಗುಣಕಥನವನ್ನು ಮಾಡಿದರು. ಅಂದು ಕಟಪಾಡಿ ಪೇಟೆಯಲ್ಲಿಯೂ ಕೂಡ ದುಃಖ ಸೂಚನೆಗಾಗಿ ಯಾವತ್ತೂ ಅಂಗಡಿಗಳು ಮುಚ್ಚಲ್ಪಟ್ಟಿದ್ದುವು.

ಜಿಲ್ಲಾ ಪ್ರಾಥಮಿಕ ಶಿಕ್ಷಕರ ಸಮ್ಮೇಳನವು ಇದೇ ತಾ 29ಕ್ಕೆ ಕಾಸರಗೋಡಿನಲ್ಲಿ ಜರಗಲಿರುವುದು. ಎಲ್ಲಾ ಉಪಾಧ್ಯಾಯರೂ ಬರಬೇಕಾಗಿ ವಿನಂತಿಸಲಾಗಿದೆ.

ಈ ವರ್ಷ ರೇಶನ್ ಹೋಗುವದಿಲ್ಲ!

ಕಾರ್ಡು ಅಕ್ಕಿ ಹೆಚ್ಚಾಗುವದಿಲ್ಲ!

ಉತ್ಪಾದಕರಿಗೆ ಅಕ್ಕಿ ಮುಡಿಗೆ ೨ ರೂ. ಹೆಚ್ಚಿಗೆ.

ಧಾನ್ಯೋತ್ಪಾದಕರ ಆಗ್ರಹದ ಹಾಗೂ ಸಕಾರಣವಾದ ಬೇಡಿಕೆಗಳನ್ನು ಮನ್ನಿಸಿ ಮದ್ರಾಸಿನ ಈಗಿನ ಸರಕಾರವು ಉತ್ಪಾದಕರ ಅಕ್ಕಿಗೆ ತುಸು ಹೆಚ್ಚಿನ ಬೆಲೆ ಕೊಡಲು ಮೊದಲೇ ತಯಾರಿದ್ದಿತು. ಆದರೆ ಹಾಗೆ ಬೆಲೆಯೇರಿಸುವುದರ ಪರಿಣಾಮವು ಕೆಟ್ಟದಾಗಬಹುದೆಂದು ಕೇಂದ್ರ ಸರಕಾರದ ಆಕ್ಷೇಪವಿದ್ದುದರಿಂದ ಮದ್ರಾಸ್ ಸರಕಾರವು, ಕಳದ ವರುಷ ಮಾಡಿದಂತೆ ಬೋನಸು ರೂಪದಿಂದ ಸಹಾಯಧನ ಸಲ್ಲಿಸಿದ್ದರೂ ಅಕ್ಕಿ ಧಾರಣೆಯನ್ನು ಏರಿಸಿರಲಿಲ್ಲ. ಆದರೀ ಬಾರಿ ಮುಡಿಗೆ 2 ರೂಪಾಯಿಗೆ ಮಿಕ್ಕದೆ ಪ್ರಾಂತಿಕ ಸರಕಾರಗಳು ಏರಿಸಬಹುದೆಂದು ಕೇಂದ್ರ ಸರಕಾರವು ಸೂಚಿಸಿದೊಡನೆಯೇ ಮದ್ರಾಸ್ ಸರಕಾರವು ಅಕ್ಕೀ ಮುಡಿಗೆ 2 ರೂ. ಏರಿಸಿದೆ. ದಶಂಬರ್ ತಾ. 6ರ ಸರಕಾರೀ ಪ್ರಕಟಣೆಯ ಸಾರಾಂಶ ಹೀಗಿದೆ:—

ರೂ. 2. ಹೆಚ್ಚಿಗೆ.

'1947—48ರ ಹೊಸ ಖರೀಸ್ ವರುಷದ ಮಟ್ಟಿಗೆ ಆಹಾರ ಧಾನ್ಯಗಳಿಗೆ ಯೋಗ್ಯ ಬೆಲೆನಿರ್ಧರಿಸುವ ಪ್ರಶ್ನೆಯ ಕುರಿತು ಸರಕಾರವು ಪರ್ಯಾಲೋಚಿಸುತ್ತಾ ಬಂದಿತ್ತು. ಈ ಕುರಿತು ನಮಗೆ ಬಂದ ಹಲವು ವಿಜ್ಞಾಪನೆಗಳನ್ನೂ, ಇದಕ್ಕೆ ಸಂಬಂಧಿಸಿದ ಹಲವು ವಿಷಯಗಳನ್ನೂ, ಗಮನಕ್ಕೆ ತಂದು, ಉತ್ಪಾದಕರು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆ ಹೊಂದಲಾಗುವಂತೆ, ಉಳಿತಾಯದ ಜಿಲ್ಲೆಗಳಿಂದ ಹೊರಕಳುಹಿಸುವ ಮತ್ತು ಉಳಿತಾಯ ಅಥವಾ ಕೊರತೆಯುಳ್ಳ ಎಲ್ಲಾ ಕಡೆಗಳಲ್ಲೂ ಒಳಗಡೆಯ ವಿತರಣೆಯ ಅಕ್ಕಿಗೆ [illegible] ಮಣ 1ಕ್ಕೆ ರೂ. 2ರಂತೆಯೂ, ಅದೇ ಧಾವಾಶಯದಲ್ಲಿ ಭತ್ತ ಇಂಪೀರಿಯಲ್ ಮಣ 1ಕ್ಕೆ ರೂ. 1–6–0ರಂತೆಯೂ ಹೆಚ್ಚಿಗೆ ಧಾರಣೆ ಕೊಡತಕ್ಕದ್ದೆಂದು ಸರಕಾರವು ನಿರ್ಧರಿಸಿದೆ. ಇಂದಿನಿಂದ ಭತ್ತವನ್ನು ಒಂದನೇ ಮತ್ತು ಎರಡನೇ ಎಂಬ ಎರಡೇ ತರಗತಿಯಾಗಿ ಗಣಿಸಲಾಗುವದು. ಇದುವರೆಗಿನ 'ಸ್ಪೆಶಲ್ ತರಗತಿ'ಯನ್ನು ಒಂದನೇ ತರಗತಿಯಲ್ಲಿಯೂ, ಮೂರನೇ ತರಗತಿಯೆಂದಿರುವುದನ್ನು ಎರಡನೇ ತರಗತಿಯಲ್ಲಿಯೂ ಸೇರಿಸಿಕೊಳ್ಳಲಾಗುವುದು. ಮೇಲ್ಕಾಣಿಸಿದ 2. ರೂ. ಹೆಚ್ಚಿಗೆಯನ್ನು ಹಳೆಯ 1 ಮತ್ತು 2ನೇ ತರಗತಿಗಳ ಪ್ರಚಲಿತ ಧಾರಣೆಯ ಮೇಲೆ ಹೆಚ್ಚಿಗೆ ಕೂಡಿಸಿ ಕೊಡಲಾಗುವುದು. ಎಲ್ಲಾ ವಿಧದ ಸಾವೆ, ಸಜ್ಜೆ ಮೊದಲಾದವುಗಳಿಗೂ ಇಂಪೀರಿಯಲ್ ಮಣ1ಕ್ಕೆ [illegible] 1[illegible] ಹೆಚ್ಚಿಗೆ ಕೊಡತಕ್ಕದ್ದೆಂದು ಸರಕಾರವು ನಿರ್ಧರಿಸಿದೆ.

ಧಾನ್ಯೋತ್ಪಾದಕರು ಉಳಿತಾಯದ ಭತ್ತ ಯಾನೆ ಅಕ್ಕಿ ಯಾವುದನ್ನೂ ಒಪ್ಪಿಸಬಹುದು. ಆದರೆ ಅಕ್ಕಿಯೊಪ್ಪಿಸುವವರು ಕಡಿಮೆಯೆಂದರೆ ಒಮ್ಮೆಗೆ ಒಂದು ಟನ್ ಆದರೂ ಒಪ್ಪಿಸಬೇಕು. 1947ನೇ ನವಂಬರ ತಾ. 1ರಿಂದ ದಶಂಬರ ತಾ. 6ರ ವರೆಗೆ ಒಪ್ಪಿಸಿದ್ದ ಅಕ್ಕಿ, ಭತ್ತಗಳಿಗೆ 1947ನೇ ಒಕ್ಟೋಬರಿನಲ್ಲಿದ್ದ ಭತ್ತ ಇಂಪೀರಿಯಲ್ ಮಣ 1ಕ್ಕೆ 1ರೂಪಾಯಿಯ ಬೋನಸ್ಸು ಕೊಡಲ್ಪಡುವುದು. ಈ ಬೋನಸ್ಸಿನ ಮೌಲ್ಯದ ಅರ್ಧಾಂಶ ನಗದಿಯಲ್ಲಿಯೂ ಅರ್ಧಾಂಶ ಗೊಬ್ಬರ ರೂಪದಲ್ಲಿಯೂ ದೊರೆಯುವುದು. ಇದನ್ನು ಕೊಡುವುದು 1948ನೇ ಮಾರ್ಚ ತಾ. 31ರ ನಂತರವೇ.'

ಈ ಏರಿದ ಬೆಲೆಯ ಅಂಶವೂ ಅಕ್ಕಿ ಪಡಕೊಳ್ಳುವ ಗಿರಾಕಿಗಳ ಮೇಲೆಯೇ ಬೀಳುವುದೆಂದೂ, ಮದ್ರಾಸ್ ಸೇರಿಗೆ 1½ಆಣೆಯಂತೆ ಗಿರಾಕಿಗಳು ಹೆಚ್ಚು ಬೆಲೆ ತೆರಬೇಕಾದೀತೆಂದೂ ತಿಳಿದು ಬರುತ್ತದೆ.

ರೇಶನ್ ಪರಿಮಾಣ ಹೆಚ್ಚದು!
ರೇಶನ್ ಈ ವರ್ಷ ಹೋಗದು!

ಮದ್ರಾಸ್ ಪ್ರಾಂತ್ಯವು ಆಹಾರದ ಮಟ್ಟಿಗೆ ಇನ್ನೂ ತೀರಾ ಸಿಕ್ಕಟ್ಟಾವಸ್ಥೆಯಲ್ಲಿದೆಯೆಂದೂ, ಅಕ್ಕಿ ರೇಶನನ್ನು ಈಗ ಇರುವ 8 ಔನ್ಸಿನಿಂದ 10 ಔನ್ಸಿಗೇರಿಸುವ ಆಲೋಚನೆ ಮಾಡುವುದಸಾಧ್ಯವೆಂದೂ ಮದ್ರಾಸ್ ಸರಕಾರದ ಆಹಾರ ಮಂತ್ರಿ ಡಾ. ಟಿ. ಯಸ್. ಯಸ್. ರಾಜನರು ತಿಳಿಸಿದ್ದಾರೆ. ಪೇಟೆ ಪಟ್ಟಣಗಳಲ್ಲಿ ಜ್ಯಾರಿಯಲ್ಲಿರುವ ರೇಶನಿಂಗ್ ಇನ್ನೂ ಕೆಲಕಾಲ ಮುಂದುವರಿಯುವುದು; ಬರುವ ಒಕ್ಟೋಬರಿನ ನಂತರ ಪರಿಸ್ಥಿತಿಯು ಅನುಕೂಲವಾದಾಗಲೇ ಈಸುಗೀ ಪದ್ಧತಿಯನ್ನು ರದ್ದುಪಡಿಸಲಾಗುವದೆಂದು ಡಾ| ರಾಜನ್ ಸ್ಪಷ್ಟಪಡಿಸಿದ್ದಾರೆ. "ಈ ಬಾರಿ ಮಳೆಯ ಅಭಾವ ಕಂಡು ಬಂದಿದೆ. ಧಾನ್ಯಗಳ, ಅದರಲ್ಲೂ ಅಕ್ಕೀ ಬಸ್ತಗಳ ನಿಯಂತ್ರಣ ರದ್ದತಿಯಿಂದ ಸ್ಥಿತಿ ಸುಧಾರಿಸುವುದು ಹೇಗೆಂದು ಹೊಳೆಯುವುದಿಲ್ಲ. ಇದುವರೆಗೆ ಕೇ. 30ರಷ್ಟು ಧಾನ್ಯ ಮಾತ್ರ ಹಳ್ಳಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಈಗ ಬೆಲೆಯೇರಿಸಿರುವುದರಿಂದ ಇನ್ನಾವ ಆಕ್ಷೇಪವೂ ಇಲ್ಲದೆ ಧಾನ್ಯೋತ್ಪಾದಕರು ತಮ್ಮ ಉಳಿತಾಯದ ಎಲ್ಲಾ ಧಾನ್ಯಗಳನ್ನೂ ಸರಕಾರಕ್ಕೊಪ್ಪಿಸುವರೆಂದು ಆಶಿಸುತ್ತೇನೆ" ಎಂದು ಡಾ| ರಾಜನರಂದಿದ್ದಾರೆ. ನಿಯಂತ್ರಣಗಳ ದೋಷ ಮತ್ತು ಲಂಚಕೋರತನ, ದುರ್ವ್ಯಾಪಾರಗಳ ಸಂಗತಿ ತನಗೆ ಗೊತ್ತಿದೆಯೆಂದೂ, ಇವುಗಳನ್ನು ನಿರ್ಮೂಲಿಸಲು ಸರಕಾರದೊಡನೆ ಸಾರ್ವಜನಿಕರು ಸಹಕರಿಸಬೇಕೆಂದೂ ಆಹಾರ ಮಂತ್ರಿಗಳ ವಿಜ್ಞಾಪನೆಯಿದೆ.

ಸಕ್ಕರೆ ನಿಯಂತ್ರಣ ರದ್ದಾಯಿತು

ಹಿಂದಿ ಕೇಂದ್ರ ಸರಕಾರವು ಇದೇ ತಾ. 7ರಲ್ಲಿ ಒಂದು ವಿಶೇಷ ಪ್ರಕಟಣೆ ಹೊರಡಿಸಿ ಸಕ್ಕರೆ ನಿಯಂತ್ರಣವು ಆಗಿನಿಂದಲೇ ರದ್ದಾಗುವದೆಂದು ಜ್ಯಾಹೀರು ಮಾಡಿದೆ. ಇದೇ ರೀತಿ ಎಲ್ಲಾ ಪ್ರಾಂತ್ಯಗಳ ಎಲ್ಲಾ ಸಕ್ಕರೆ ಕಾರ್ಖಾನೆಗಳ ಸಕ್ಕರೆ ದಾಸ್ತಾನುಗಳನ್ನೂ ಸರಕಾರವು ಸ್ವಾಧೀನ ಪಡಿಸಿಕೊಳ್ಳಲು ನಿರ್ಧರಿಸಿ, ದಶಂಬರ್ 15ರೊಳಗೆ ದಾಸ್ತಾನು ವಿವರಗಳನ್ನೊಪ್ಪಿಸತಕ್ಕದ್ದೆಂದೂ ಈ ನಡುವೆ ಮಾರಾಟ ವಹಿವಾಟುಗಳನ್ನು ಅಮಾನತಿಡತಕ್ಕದ್ದೆಂದೂ ಆಜ್ಞಾಪಿಸಿದೆ. 'ಸಕ್ಕರೆ ಸಿಂಡಿಕೇಟ್' ಇದುವರೆಗೆ ಮಣಕ್ಕಿದ್ದ ಬೆಲೆ ರೂ. 21ನ್ನು ರೂ. 35ಕ್ಕೇರಿಸಲು ನಿರ್ಧರಿಸಿದೆ. ಇದರಿಂದಾಗಿ ಸಕ್ಕರೆ ಧನಿಗಳಿಗೆ ರೂ. 4 ಕೋಟಿ ಹೆಚ್ಚಿಗೆ ಮುನಾಫೆ ದೊರೆಯುವುದು. ಸಕ್ಕರೆ ಸಿಂಡಿಕೇಟಿನ ವಶ ಸಂಯುಕ್ತ ಪ್ರಾಂತ್ಯ ಮತ್ತು ಬಿಹಾರಿನಲ್ಲಿ 9ಲಕ್ಷ ಗೋಣಿ ಸಕ್ಕರೆಯಿದೆ. ಅಷ್ಟೇ ಸಕ್ಕರೆ ದೇಶದ ವಿವಿಧ ಭಾಗಗಳ ಇತರ ವ್ಯಾಪಾರಿಗಳೊಡನಿದೆ. ನಿಯಂತ್ರಣ ರದ್ದತಿಯಿಂದ ಈ ರೀತಿ ಬೆಲೆಯೇರದಂತೆ ಮಾಡಲು ಹಿಂದೀ ಸರಕಾರವು ಧಾರಣೆ ನಿರ್ಣಯದ ಒಂದು ಆಜ್ಞೆಯನ್ನು ಕೊಡಬೇಕೊ ಹೊರಡಿಸಲಿದೆಯೆಂದು ತಿಳಿದುಬರುತ್ತದೆ.

ಬಹು ಜನರು ಬಂದು ಹೋಗುವರು. ಆದುದರಿಂದ ಮುಂದಾಗಿ ಬಂದು ಸ್ಥಳ ಕಾದಿರಿ.

ಕನ್ನಡದಲ್ಲಿ! ಕನ್ನಡದಲ್ಲಿ!!

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ತಾ. 11—12—47ರಿಂದ ಪ್ರಚಂಡ ಎರಡನೇ ವಾರ

ಕೃಷ್ಣಲೀಲಾ

ಮಹಾತ್ಮಾ ಪಿಕ್ಚರ್ಸ್‌ರವರ ಮೇಲ್ಮೆಯ ತಾರಾಗಣ

ಕೆಂಪರಾಜ್, ಬಳ್ಳಾರಿ ಲಲಿತ, ಕುಮಾರಿ ಉಷಾ, ಪ್ರತಿಮಾ, ರತ್ನಮಾಲಾ ಮೊದಲಾದವರು.

ಬರುವ ಚಿತ್ರ— ಪ್ರಭಾತದವರ ಆದ್ಮಿ

ಸರಕಾರೀ ನೌಕರರ ಮುಷ್ಕರ

'ಮದ್ರಾಸ್ ಗವರ್ನಮೆಂಟ್ ಸೆಕ್ರೆಟೆರಿಯೇಟ್ ಸಂಸ್ಥೆ' (ಮದ್ರಾಸಿನ ಸರಕಾರೀ ಮುಖ್ಯ ಕಾರ್ಯಾಲಯದ ನೌಕರರ ಸಂಘ) ತುಟ್ಟಿಭತ್ತೆ, ಮನೆಬಾಡಿಗೆ ಭತ್ತೆ, ಸಂಬಳ ಹೆಚ್ಚಳ ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು, ಸರಕಾರವು ಅವುಗಳ ಕುರಿತು ಸಾಕಷ್ಟು ಗಮನಕೊಡದುದಕ್ಕಾಗಿ ಸಕಾಲದ ನೋಟೀಸುಕೊಟ್ಟು ದಶಂಬರ್ ತಾ 5ರಿಂದ ಮುಷ್ಕರಹೂಡುವ ನಿರ್ಧಾರ ಮಾಡಿದ್ದಿತು. ಆದಿನ 'ಸೆಕ್ರೆಟೆರಿಯೇಟ್'ನ ನೌಕರರು ಕೆಲಸ ನಿಲ್ಲಿಸಿದ್ದರು. ಇವರೊಂದಿಗೆ ಸಹಾನುಭೂತಿ ಸೂಚಿಸಲು ಪ್ರಾಂತಿಕ 'ನೋನ್ ಗಝೆಟೆಡ್ ಆಫೀಸರರ ಸಂಸ್ಥೆ'ಯ ಸೂಚನೆಯಂತೆ ತಾ. 5ರಲ್ಲಿ ಇಡೀ ಪ್ರಾಂತ್ಯದ ನೋನ್ ಗಝೆಟೆಡ್ ಸರಕಾರೀ ನೌಕರರೂ ಒಂದು ಘಂಟೆಯ ಮುಷ್ಕರ ಹೂಡಿದ್ದರು. ಕೊನೆಗೆ ಮದ್ರಾಸ್ ಸೆಕ್ರೆಟೆರಿಯೇಟಿನ ನೌಕರರ ಬೇಡಿಕೆಗಳ ಕುರಿತು ಪರ್ಯಾಲೋಚಿಸಲಾಗುವದೆಂದು ಮಂತ್ರಿಗಳಿಂದ ಸ್ಪಷ್ಟಾಶ್ವಾಸನೆ ದೊರೆತಂತೆ ಅಲ್ಲಿಯ ಮುಷ್ಕರವು ಆ ದಿನವೇ ಹಿಂದೆಗೆಯಲ್ಪಟ್ಟಿದ್ದಿತು. ಆದೇ ಮಾದರಿಯ ತಮ್ಮ ಬೇಡಿಕೆಗಳನ್ನು ಸರಕಾರವು ಮನ್ನಿಸದಿದ್ದಲ್ಲಿ ಇದೇ ದಶಂಬರ್ ತಾ. 15ರಿಂದ ಸಾರ್ವತ್ರಿಕ ಮುಷ್ಕರ ಹೂಡುವುದಾಗಿ ಪ್ರಾಂತಿಕ 'ನೋನ್ ಗಝೆಟೆಡ್ ಆಫೀಸರರ ಸಂಘ'ವು ನಿರ್ಧರಿಸಿದೆ.

ಉಡುಪಿ—ಒಳ್ಳೆಯ ಫೈನಲ್ಸ್ ಕ್ರಿಕೆಟ್ ಪಂದ್ಯಾಟದಲ್ಲಿ Y. M. C. C. ಯವರಿಗೂ [illegible] ಟೌನ್ [illegible] ನಡೆದ [illegible] ಮ್ಯಾಚಿನಲ್ಲಿ 3 ವಿಕೆಟ್ಸ್‌ಗಳಿಂದ ಜಯಶೀಲರಾದರು.

ಪ್ರಕಟಣೆ.

ಹಾಲಿ ಕಟಪಾಡಿಯಲ್ಲಿರುವ S. V. S. High Schoolನ ವಿದ್ಯಾರ್ಥಿ ವಿಶ್ವಕರ್ಮ ಮಾತನ್ನ ರಾಮಪ್ಪ ಆಚಾರಿ ಮಗ ಅಂಣಯ್ಯ ಆಚಾರಿಯು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವದೇನೆಂದ್ರೆ.— ನನ್ನ ತಂದೆ ಹಾಲಿ ಮೃತಪಟ್ಟ ರಾಮಪ್ಪ ಆಚಾರಿಗೆ ನಾನು ಕೂಡಾ 7 ಜನ ಗಂಡು ಮಕ್ಕಳಿದ್ದು ರಾಮಪ್ಪ ಆಚಾರಿಯವರು 1940ನೇ ಇಸವಿ ಆಗೋಸ್ತು ತಾರೀಕು 20ರಲ್ಲು ಮೃತಪಟ್ಟಿರುತ್ತಾರೆ. ನಾವು ಹಿಂದೂ ಮಿತಾಕ್ಷರ ಧರ್ಮವನ್ನು ಆಚರಿಸುವವರಾಗಿದ್ದು ಸದ್ರಿ ರಾಮಪ್ಪ ಆಚಾರಿಯವರ ಸಮಸ್ತ ಸ್ಥಿರ ಚರಸೊತ್ತುಗಳಲ್ಲಿ ಸಮಾ 1,7ನೇ ಅಂಶವನ್ನು ಹೊಂದಲಿಕ್ಕೆ ನಾನು ಅರ್ಹನಾಗಿರುತ್ತೇನೆ. ನಾನು ತಾರೀಕು 16 7 1946ರಲ್ಲು ಪ್ರಾಯಪ್ರಬುದ್ಧನಾಗಿರುತ್ತೇನೆ. ನಾನು ಪ್ರಾಯಸ್ಥನಾಗಿ ಬಾರ್ದಗ ನನ್ನ ಹಿರಿಸಹೋದರರು ಸದ್ರಿ ರಾಮಪ್ಪ ಆಚಾರಿಯವರ ಸ್ಥಿರ ಚರಸೊತ್ತುಗಳ ಕುರಿತು ವಿಲೆವಾರಿಗಳನ್ನು ಮಾಡಿದ್ದಾರಾಗಿಯೂ ಪರಾಧೀನ ವಗೈರೆ ಮಾಡಿದ್ದಾರೆಂದೂ ನಾನು ಇತ್ತೀಚಾಗಿ ತಿಳಿಯುತ್ತೇನೆ. ಸದ್ರಿ ಯಾವತ್ತು ವಿಲೆವಾರಿಗಳಾಗಲೀ ಪರಾಧೀನಗಳಾಗಲೀ ನನ್ನನ್ನಾಗಲೀ ನನ್ನ ಹಿತಯುಕ್ತಿಗಳನ್ನಾಗಲೀ ಯಾವ ರೀತಿಯಲ್ಲಿ ಎಷ್ಟು ಸ್ವಾವರು ಬದ್ಧಪಡಿಸತಕ್ಕವುಗಳಲ್ಲ. ಸದ್ರಿ ಯಾವ ವಿಕ್ರಯಗಳೂ ನನ್ನ ಪಕ್ಷಿಗೆ ವಿರೋಧವಾಗಿ ಜ್ಯಾರಿಗೆ ಬರಲು ಕಾರಣವಿಲ್ಲ. ಮತ್ತು ನನ್ನ ತಾಯಿ ಸರಸ್ವತಿ ಆಚಾರ್ತಿಯು ಅಶನಾರ್ಥದ ಬಗ್ಗೆ ಸಹಾ ಯಾವ ವಿಲೆವಾರಿಗಳನ್ನೂ ಮಾಡಲಿಲ್ಲ. ಈ ವರೆಗೆ ಆದ ಯಾವತ್ತು ದಸ್ತಾವೇಜುಗಳು ನನ್ನನ್ನು ಬದ್ಧಪಡಿಸತಕ್ಕವುಗಳಲ್ಲವಾಗಿಯೂ ನಾನು ಅವುಗಳನ್ನು ಒಪ್ಪುವದಿಲ್ಲವಾಗಿಯೂ ಸರ್ವ ಜನರ ಅವಗಾಹನೆ ಬಗ್ಗೆ ಈ ಮೂಲಕ ಪ್ರಕಟಮಾಡಿದ್ದೇನೆ.

M. Annayya Achari,
Katapadi, 9-12-1947.

ಉಡುಪಿ

ಸಿವಿಲ್ ಸಪ್ಲಾಯ್ ಕಮೀಶನರರಿಗೆ ಮನವಿ. —ತಾ 30-11-47ರಂದ ಉಡುಪಿ ರೇಶನ್ ಕ್ಷೇತ್ರದಲ್ಲಿ ಜನರಿಗೆ ಒಂದು ಪಾವು ಅಕ್ಕಿ ವಿತರಣೆಯಾಗಿ ಜೋಳವಾಗಲಿ ಇತರ ಧಾನ್ಯವಾಗಲೀ ಸಿಕ್ಕಲಿಲ್ಲ ತಾ 7-12-47ರ ವಾರದಲ್ಲಿ ಜನರಿಗೆ ಗೋಧಿ ದೊರೆಯಿತು. ಇನ್ನು ಮುಂದೆ ತಿಂಗಳಲ್ಲಿ ಒಂದು ವಾರ ಜೋಳ ಒಂದುವಾರ ಮಾತ್ರ ಅಕ್ಕಿಯೊಡನೆ ಗೋಧಿ ಕೊಡಲಾಗುವುದೆಂದು ತಿಳಿದು ಬರುತ್ತದೆ ಇದರಿಂದಾಗಿ ಜನತೆಗೆ ತುಂಬಾ ಕಷ್ಟ ಉಂಟಾಗುವುದು. ಆದುದರಿಂದ ಹಿಂದಿನಂತೆಯೇ ಪ್ರತಿವಾರದಲ್ಲಿ ಅಕ್ಕಿಯ ಜತೆಯಲ್ಲಿ ಜೋಳವಾಗಲೀ ಗೋಧಿಯಾಗಲೀ ಅಥವಾ ಇನ್ನೇನಾದರೂ ಧಾನ್ಯಗಳು ಎರಡು ದಿನಸಷ್ಟು ಸಿಕ್ಕಲೇ ಬೇಕಾಗಿದೆ ಎಂಬುದೇ ಮನವಿಯ ಸಾರಾಂಶ

ನಮಗೆ ಬಂದ ಬಾತ್ಮಿಗಳು

೧ ಶಿರ್ವ ಹಳ್ಳಿಗರು 'ನಮ್ಮ ರೈತರ ಗೋಳು' ಎಂಬ ಬಾತ್ಮಿಯಲ್ಲಿ ಈಗಿನ ರಿಕ್ವಿಜಿಶನ್ ಪದ್ಧತಿಯ ದೋಷಗಳಿಂದ ಬಡ ರೈತರಿಗೆ ಆಗುತ್ತಿರುವ ಕಷ್ಟ ನಷ್ಟಗಳನ್ನು ವಿವರಿಸಿ ನಿಯಂತ್ರಣವನ್ನೇ ತೆಗೆದು ಹಾಕಬೇಕೆಂದು ವಿನಂತಿಸಿದ್ದಾರೆ.

೨ ಶ್ರೀ ಪಿ. ಸಂಜೀವ ಕರ್ಕೇರ ಎಂಬವರು 'ಬಿಲ್ಲವರ ಏಳಿಗೆ' ಎಂಬ ಲೇಖದಲ್ಲಿ ಬಿಲ್ಲವರ ಗತವೈಭವನ್ನೂ ಇಂದಿನ ಶೋಚನೀಯ ಪರಿಸ್ಥಿತಿಯನ್ನೂ ವಿವರಿಸಿ ಬಿಲ್ಲವರೆಲ್ಲರೂ ಒಕ್ಕಟ್ಟಾಗಿ ತಮ್ಮ ಅಭಿವೃದ್ಧಿಯನ್ನು ಸಾಧಿಸಿಕೊಂಡು ಅನ್ಯ ಜಾತಿಯವರೊಡನೆ ಸೌಹಾರ್ದದಿಂದಿದ್ದು ತಮ್ಮ ಗತವೈಭವವನ್ನು ಬೆಳಗಿಸಬೇಕೆಂದು ವಿನಂತಿಸಿದ್ದಾರೆ.

೩ ಶ್ರೀ ಸುರೇಶ, ಹೊಸಬೆಟ್ಟು ಎಂಬವರು ಕಾಸರಗೋಡು ಸಾಹಿತ್ಯ ಸಮ್ಮೇಳನದ ಕಾಲದಲ್ಲಿ ಜಿಲ್ಲೆಯ ಲೇಖಕರ ಕೆಲಸವೇನು ಎಂಬ ಲೇಖದಲ್ಲಿ ಈಗಿನ ಸಾಹಿತ್ಯ ಸಂಘ ಕೂಟಗಳಿಂದ ಆಗುವ ಕೆಲಸವು ಅತ್ಯಲ್ಪವೆಂದೂ ಗುಂಪುಗೊಂಡು ಪತ್ರಿಕೆ ಹೊರಡಿಸಿ ಸ್ನೇಹಿತರ ನಾಲ್ಕು ಲೇಖನಗಳನ್ನು ಪ್ರಕಟಿಸುವುದಕ್ಕಿಂತ ಎಲ್ಲರೊಂದಾಗಿ ಒಂದು ಉತ್ತಮ ಮಾಸ ಪತ್ರಿಕೆಯನ್ನು ಹೊರಡಿಸುವುದು ಲೇಸೆಂದೂ ಜಿಲ್ಲೆಯ ಲೇಖಕರ ಸಂಘಟನೆಗಾಗಿ ಸಮ್ಮೇಳನ ಕಾಲದಲ್ಲಿ ಜಿಲ್ಲಾ ಬರಹಗಾರರ ಸಮ್ಮೇಳನವೊಂದನ್ನು ಏರ್ಪಡಿಸಬೇಕೆಂದೂ ವಿನಂತಿಸುತ್ತಾರೆ.

ಸೋಮೇಶ್ವರಪೇಟೆ—ಬೋ. ಎ. ಶಾಲಾ ಮಕ್ಕಳ ಹಬ್ಬ ಮತ್ತು ಹೆತ್ತವರ ಕೂಟವು ಕಾರ್ಕಳ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್ಪೆಕ್ಟರ್ ಶ್ರೀ. ಎಮ್. ಶಿವರಾಮ ಗೌಡ, ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ತಾ 5ರಲ್ಲಿ ಯಶಸ್ವಿಯಾಗಿ ಜರಗಿತು.

ಕೋಟೇಶ್ವರ—ಕುಂದಾಪುರ ತಾಲ್ಲೂಕು ಬೋರ್ಡ್ ಎಲಿಮೆಂಟ್ರಿ ಶಾಲಾ ಉಪಾಧ್ಯಾಯರ ಯೂನಿಯನ್ ಮತ್ತು ಕೋಟೇಶ್ವರ ಬೋರ್ಡ್ ಹಯರ್ ಎಲಿಮೆಂಟ್ರಿ ಶಾಲೆಯ ಉಪಾಧ್ಯಾಯ ವೃಂದದಿಂದ ಪಂಜಾಬಿನ ನಿರಾಶ್ರಿತರ ಸಹಾಯಕ್ಕಾಗಿ ಕಂಬಳಿಗಳನ್ನು ಮತ್ತು ವಲ್ಲಿಗಳನ್ನು ಸಂಗ್ರಹಿಸಿ ಕಳಿಸಲಾಯಿತು

TENDER NOTICE

Tenders are invited for the purchase of 53077 old gunnies lying in the fish curing yards in the west coast. The Tenders should reach the Asst. Director of Fisheries, (Coast), Calicut on or before 22-12-47. The covers containing tenders should be sent by registered post and superscribed "TENDERS FOR THE PURCHASE OF CONDEMNED GUNNIES" and the tender should be accompanied by an earnest money deposit of Rs. 50/-. Further particulars can be had from the Office of the Inspectors of Fisheries, Mangalore, Calicut and Chowghat or from the office of the Asst. Director of Fisheries, (Coast), Calicut.

T. P. Baratan,
Asst. Director of Fisheries, (Coast)
Calicut,

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 124/47 R. I. A. 1367/47

ಅರ್ಜಿದಾರ—ಹುಸೇನ್ ಸಾಹೇಬ.

ಎದ್ರಿದಾರ—ಕೃಷ್ಣಯ್ಯ ಶೇರುಗಾರ ಕೂಡಾ. ಸದ್ರಿ ಪ್ರಕರಣದಯ 2 ಮತ್ತು 3ನೇ ಎದ್ರಿಗಗೆ ತಿಳಿಸಿದ್ದು 2 ದೇವಪ್ಪ ನ್ಯಾಯ್ಕ. 3 ಅಣ್ಣಪ್ಪ ನ್ಯಾಯ್ಕ. 1ನೇ ಎದ್ರಿ ಮಕ್ಕಳು. 2ನೇಯವನು ಉತ್ತರಕನ್ನಡ ಜಿಲ್ಲಾ ಹೊನ್ನಾವರ ತಾಲ್ಲೂಕು ಭಟ್ಕಳ ಪೇಟೆಯಲ್ಲಿರುವ ನಾಗಪ್ಪ ನ್ಯಾಯ್ಕರ ಅಂಗಡಿ ಕ್ಲಾರ್ಕ, 3ನೇಯವನು ಕುಂದಾಪುರ ತಾಲ್ಲೂಕು ಕಚೇರಿಯಲ್ಲಿ ಕ್ಲಾರ್ಕನಾಗಿಯೂ ಯಿರುವ್ರಾನೆ.

ಸದ್ರಿ ದಾವೆಯಲ್ಲಿ ಫೈನಲ್ ಡಿಕ್ರಿ ಕೊಡಿಸಬೇಕೆಂತ ಅರ್ಜಿದಾರನು ದಾಖಲು ಮಾಡಿದ ಮೇಲಿನ ಅರ್ಜಿ ತಾ. 5-1-48ಕ್ಕೆ ಯಿಟ್ಟಿದೆ. ಆ ಕುರಿತು ನಿಮ್ಮ ಅಕ್ಷೇಪ ಯಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರ್ರಾಗಿ ತಿಳಿಸತಕ್ಕದ್ದು.

Y. Manjaya Shetty,
Advocate for Peter.

ತಾರೀಖು. 5-12-47 ಕುಂದಾಪುರ.

CHITRAKOT ASTHMA CURE

(Registered)

DON'T LOSE THIS GOLDEN OPPORTUNITY.

Widely renowned and a most Powerful highly effective remedy for curing Asthma completely by one dose to be taken on 27-12-1947 full moonday.

Apply at once in English.

SRI MAHATMA JOGI BABA
Ayurvedic Buti Bhandar,
P. O CHITRAKOT, U.P.

ಪ್ರಕಟಣೆ

ಶಿರ್ವಾ ಪಂಚ್ಯಾತ್ ಬೋರ್ಡ್ ಪ್ರಸಿಡೆಂಟರಿಂದ.

ಶಿರ್ವಾ ಪಂಚ್ಯಾತ್ ಬೋರ್ಡಿನ ಬಾಬ್ತು ಹೊಸತಾಗಿ ಕಟ್ಟಿಸಿದ ಎಡಿಶನಲ್ ಮಾರ್ಕೆಟ್ ಶೆಡ್ ನ ಕಟ್ಟೋಣಗಳನ್ನು ತಾ. 1-1-48 ರಿಂದ 31-3-1950ರವರೇಗೆ ಸ್ವಾಧೀನತೆಯಲ್ಲಿಟ್ಟುಕೊಂಡು ಬಾಡಿಗೇಗೆ ನಡಿಸಿಕೊಳ್ಳುವ ಹಕ್ಕನ್ನು ತಾ. 15-12-47ನೇ ಸೋಮವಾರ ಸಾಯಂಕಾಲ ಗಂಟೆ 4ಕ್ಕೆ ಪಂಚ್ಯಾತ್ ಬೋರ್ಡ್ ಅಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು. ಏಲಂ ಶರ್ತಗಳನ್ನು ಅಫೀಸಿನಲ್ಲಿ ಮುಂದಾಗಿ ತಿಳಕೊಳ್ಳಬಹುದು, ಎಂಬದಾಗಿ ಉಮೇದ್ವಾರ ಹಾಗು ಸಮಸ್ತ ಜನರೀಗೆ ಈ ಮೂಲಕ ತಿಳಿಸಲಾಗುತ್ತದೆ.

ಯುಸ್. ಅಣ್ಣಯ್ಯ ಹೆಗ್ಡೆ
ಪ್ರಸಿಡೆಂಟ್
ಪಂಚ್ಯಾತ್ ಬೋರ್ಡ್ ಶಿರ್ವ.

Panchayat Bd. office
Shirva 1-12-47.

ಮೆಂಬರರಿಗೆ

15-12-47ರ ವರೆಗೆ ಮಾತ್ರ ನಮ್ಮ ಎಲ್ಲಾ ಮಾಲುಗಳ ಖಂಡಿತ ಕ್ರಯದ ಮೇಲೆ 6¼% ಕಮಿಶನ್ ಕೊಡಲಾಗುವುದು.

ಕನ್ನಡ ಸೋಪ್ ಎಂಡ್ ಇಂಡಸ್ಟ್ರಿಯಲ್ಸ್ ಲಿಮಿಟೆಡ್,
ಮಂಗಳೂರು.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ— ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ
ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE

CHAMPAE'S
Snow & Castrex

Sole Distributors for India

Prop: K. G. NAYAK,
Santhekatte, UDIPI, S. K.



ಸಮುದ್ರದ ಗಂಡಾಂತರಗಳಿಗೂ ರಕ್ಷಣೆಯಿದೆ

ಹಾರದೇಶದ ಬಂದರುಗಳಿಗೆ ಸ್ವಿಮರು ಹೊರಟಿದೆ. ಜೋಪಾಸನೆಯು ಎಲ್ಲಾ ವಿಧಗಳು ಪೂರ್ತಿಗೊಂಡಿವೆ. ಆದರೆ ನಿಮ್ಮ ಸರಕುಗಳನ್ನು ಸ್ಟೀಮರಿಗೆ ತುಂಬಿಸುವ ಮೊದಲು ನೀವು ಅತ್ಯಾವಶ್ಯಕವಾಗಿ ನಿಗಾ ಕೊಡತಕ್ಕ ವಿಷಯ ನಿಮ್ಮ ಸರಕುಗಳನ್ನು ಇನ್ಶೂರ್ ಮಾಡುವುದು, ಏಕೆಂದರೆ ಸಮುದ್ರದಲ್ಲಿ ಆಕಸ್ಮಿಕವಾಗಿ ಉಂಟಾಗುವ ಬಿರುಗಾಳಿ, ಅಲ್ಲೋಲ ಕಲ್ಲೋಲ, ಬೆಂಕಿಯ ಅನಾಹುತ, ಸ್ಫೋಟನ ಇತ್ಯಾದಿ ಅನಿರೀಕ್ಷಿತ ಗಂಡಾಂತರಗಳನ್ನುಗಳನ್ನು ರಕ್ಷಿಸುವ ಸಲುವಾಗಿ,

ಇಂತಹ ಸಮುದ್ರ ಪ್ರಯಾಣಕ್ಕೆ ಸಂಬಂಧಿಸಿದ ಇನ್ಶೂರೆನ್ಸ್ ಸಮಸ್ಯೆಗಳನ್ನು ಬಗೆಹರಿಸಲು ಅನುಭವೀ ತಜ್ಞರ ಬೆಂಬಲವು ನಿಮಗೆ ಬೇಕೇಬೇಕು.

ಪೃಥ್ವೀ ಕಂಪೆನಿಯು ಮೇಲಿನ ಸಮಸ್ಯೆಗಳನ್ನು ಬಗೆಹರಿಸಲಿ.

ಪೃಥ್ವಿ ಇನ್ಶೂರೆನ್ಸ್ ಕೊ., ಲಿಮಿಟೆಡ್

ಪ್ರಧಾನ ಕಾರ್ಯಾಲಯ, 12 ಅಂಗಪ್ಪ ನಾಯಕ್ ಸ್ಟ್ರೀಟ್; ಮದ್ರಾಸು !

ಶಾಖೆಗಳು:—

ಹಂಪನ ಕಟ್ಟೆ,	287, ಚಿಕ್ಕಪೇಟೆ,	ಹನುಮಂತ ವಿಲಾಸ,
ಮಂಗಳೂರು.	ಬೆಂಗಳೂರು ಸಿಟಿ.	ಕೃಷ್ಣಮಾಚಾರಿ ರೋಡು,
		ಬಳ್ಳಾರಿ.

1948ರ ಡೈರಿಗಳು

ಬೆಲೆ	ರೂ. 1 8 0
ಟಪ್ಪಾಲುಖರ್ಚು	ರೂ 1 14 0

ನವಯುಗ ಪ್ರೆಸ್, ಉಡುಪಿ.

ಅಚ್ಚಿನಲ್ಲಿವೆ-

ಶ್ರೀ. ಎಂ. ವಿ. ಹೆಗ್ಡೆಯವರ

ಸ್ವರಾಜ್ಯವಿಜಯ

ನವೀನ ಯಕ್ಷಗಾನ 'ಪ್ರಸಂಗ'.

ಶ್ರೀ. ಎಸ್. ವೆಂಕಟರಾಜರ

ಸಪ್ತಸಾಗರ

ಏಳು ಮಹಾಕತೆಗಳ ಸಂಗ್ರಹ

ನವಯುಗ ಪ್ರೆಸ್, ಉಡುಪಿ.

ದಕ್ಷಿಣ ಕನ್ನಡ.

ಮಂಗಳೂರು

ಮದ್ರಾಸು ಪ್ರಾಂತಿಕ ಮುನಿಸಿಪಲ್ ಬಿಲ್ ಕಲೆಕ್ಟರರ ಮಹಾ ಅಧಿವೇಶನವು ಇದೇ ತಿಂಗಳ ತಾ ೨೬ ಮತ್ತು ೨೭ರಲ್ಲಿ ಮಂಗಳೂರಲ್ಲಿ ಜರಗಲಿರುವುದಾಗಿ ಸ್ವಾಗತ ಸಮಿತಿಯ ಕಾರ್ಯದರ್ಶಿಯವರು ಬರೆಯುತ್ತಾರೆ.

ನಾಟಕ- ನಿರ್ಗತಿಕ ಫಂಡಿನ ಸಹಾಯಾರ್ಥವಾಗಿ ತಾ. 13-12-47ನೇ ಶನಿವಾರ ಸತ್ಯಾರ್ಯೋತ್ತೇಜಕ ನಾಟಕ ಸಭೆಯವರು "ಲುಠಾರ್" ಎಂಬ ನಾಟಕವನ್ನು ಮಂತ್ರಿ ಶ್ರೀ. ವಿ. ಕೂರ್ಮಯ್ಯನವರ ಅಧ್ಯಕ್ಷತೆಯಲ್ಲಿ ಗಣಪತಿ ಹೈಸ್ಕೂಲಲ್ಲಿ ಅಭಿನಯಿಸಲಿರುವರು.

ಜಿಲ್ಲಾ ನಿವಿಷ್ಟ ಭಾರತೀಯ ವೈದ್ಯ ಸಂಘದವರು—ಇತ್ತೀಚೆಗೆ ಮಂಗಳೂರಿಗೆ ಬಂದ ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಗೆ ನಿವೇದನ ಪತ್ರವೊಂದನ್ನು ಅರ್ಪಿಸುತ್ತಾ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯ ಮೇಲೆ ದ. ಕ. ಜಿಲ್ಲೆಯ ಪರವಾಗಿ ಮಂಗಳೂರಲ್ಲಿ ಆಯುರ್ವೇದ ಕಾಲೇಜನ್ನು ಸ್ಥಾಪಿಸಬೇಕಾಗಿದೆ ಎಂದು ಸೂಚಿಸಿರುವರು.

ವಿಜ್ಞಾನ ಸಭೆ—ಗವರ್ನಮೆಂಟ್ ಕಾಲೇಜಿನ ವಿಜ್ಞಾನ ಸಭೆಯು ಇದೇ ತಾ ೧ರಲ್ಲಿ ಶ್ರೀ ನರಸಿಂಹ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎಸ್. ಎನ್. ಹೊಳ್ಳ ಅವರು "ಶಕ್ತಿ"ಎಂಬುದರಕುರಿತು ಭಾಷಣವಿತ್ತರು.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

R. E. P. ನಂಬ್ರ 723/1947.

ಬಿ. ಠಾಕೋರ ಸಿಂಗರಾಯ. ಇವರ ಪವರೋಫಯೆಟೋರ್ನಿ ಹೊಲ್ಡರ್ ಯು. ನಾರಾಯಣ ಭಟ್ಟ—ಅರ್ಜದಾರ

ಮತ್ತು

1ನೇ ಪ್ರತಿವಾದಿ ಲಿಂಗಯ್ಯ, 2ನೇ ಪ್ರತಿವಾದಿ ಚೆನ್ನ ಬಸವಯ್ಯ-ರುದ್ರಯ್ಯನ ಮಕ್ಕಳು, ಮಂಗ್ಳೂರು ಕೈಹಾರ ಬಸವನಗುಡಿ ಸಮೀಪದಲ್ಲಿರುವವರು, 7 ಉಂಮ್ಮಾ ಲಿಂಮ್ಮ ಮೃತ ಪಟ್ಟ ಜ್ಞಾನೀನವಾದ ಆಟ್ಸೊಕ್ರೆ ಬ್ಯಾರಿಯ ಮಗಳು, ಕಾಸರಗೋಡು ಕ್ಸಬಾ ಗ್ರಾಮದ ತುರ್ತಿಯಲ್ಲಿರುವವಳು—ರೆಸ್ಪಾಂಡೆಂಟರು.

ಇವರೊಳಗೆ

ಮೇಲ್ಕಂಡ ಅಮ್ಲುಜ್ಯಾರಿ ಅರ್ಜಿಪ್ಪವರಗಳಲ್ಲಿ-ಮೃತಪಟ್ಟ ಜ್ಞಾನಿನವಾದ ಆಟ್ಸೊಕ್ರೆ ಬ್ಯಾರಿಯ ಬಾಬ್ತು 5ರಿಂದ 7ನೇ ವರೆಗಿನ ರೆಸ್ಪಾಂಡೆಂಟರ ಪಕ್ಷಿನ ಸ್ಥಿರಾಸ್ತಿಗಳನು ಯೇಲಂಮ್ಮಿಗೆ ಅಪೇಕ್ಷಿಸಿ. ಸದ್ರಿ ಏಲಂಮ್ಮಿನ ನಿರ್ಣಯವನ್ನು ಮೇಲಿನ 1, 2, 7ನೇ ರೆಸ್ಪಾಂಡೆಂಟ್ರಗ ಜ್ಯಾರಿ [illegible] ಬಗ್ಗೆ ತಾ 13-12-47ಕ್ಕೆ ತೆನ್ಮಗೆ ಯಿಟ್ಟಿರುವದ್ರಿಂದ ಆಕ್ಷೇಪಯಿದ್ದವರು ಆದಿನ್ನ ಮನವಿ ಮಾಡಬೇಕಾಗಿಯೂ ತಪ್ಪಿದರೆ, ಅವರ ಗೈರಹಾಜರಿಯಿಂದ ತೀರ್ಮಾನಿಸೋಣಾದೀತ್ತೆಂದು ಈ ಮೂಲಕ ತಿಳಿಸೋಣಾಗುತ್ತದೆ.

ಕೆ. ಆರ್. ದಂಡಿಲ್ಲಾಯರವರು

ಅರ್ಜದಾರನ ಕಡೆ ವಕೀಲ್.

ತಾರೀಕು 30-11-1947, ಕಾಸರಗೋಡು.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ನೀಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅಪಾರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

ಮದುವೆ ರಿಜಿಸ್ಟ್ರರರು.—ಕೆಲಸಕ್ಕೆ ರಾಜಿಕೊಟ್ಟ ರಾ। ಸಾ। ಯು. ಮಂಜಪ್ಪನವರ ಬದಲಿಗೆ ಮಾಜಿ ಜಿಲ್ಲಾ ರಿಜಿಸ್ಟ್ರಾರ್ ಶ್ರೀಯುತ. ರಾಮಪ್ಪನವರು ದ. ಕ. ಜಿಲ್ಲೆಗೆ ಮದುವೆ ರಿಜಿಸ್ಟ್ರಾರರಾಗಿ ನೇಮಕ ಹೊಂದಿರುತ್ತಾರೆ.

ಮಂಗಳೂರ ನಗರ ಸಭೆಯು. — ತಾ ೨೯ರಂದು ಸಂಜೆ ಶ್ರೀ ಎಲ್. ಶಿ. ನಾಯಕರ ಅಧ್ಯಕ್ಷತೆಯಲ್ಲಿ ಜರಗಿದಾಗ ಈ ಕೆಳಗಿನ ನಿರ್ಣಯಗಳಾದುವು.

೧. ಗುರುಪುರದಿಂದ ಮಂಗಳೂರಿಗೆ ನೀರಿನ ಸರಬರಾಯಿ ಮಾಡುವ ಸರಕಾರ ಯೋಜನೆಯನ್ನು ಒಪ್ಪುತ್ತಿವೆ. ಆದರ ಜತೆಯಲ್ಲಿ ನಗರದಿಂದ ಹೊಲಸನ್ನು ಹೊರಹಾಕುವ ವ್ಯವಸ್ಥೆಯನ್ನು ಮಾಡಬೇಕೆಂದು ಸೂಚಿಸುತ್ತದಲ್ಲದೆ ಅದನ್ನು ಪರಿಪಾಂಬಿರಿಸಲು ಬೇಕಾಗುವ ವೆಚ್ಚವನ್ನು ತೆರಲು ಸಿದ್ಧವಿದೆ.

೨. ಅಧ್ಯಾಪಕರೇ ಮುಂತಾದ ನಗರ ಸಭೆಯ ಎಲ್ಲಾ ನೌಕರರಿಗೂ ಸರಕಾರವು ತನ್ನ ನೌಕರರಿಗೆ ಕೊಡುವ ಸಂಬಳ, ತುಟ್ಟಿ ಭತ್ತೆಯನ್ನು ೧-೧-'೪೭ರ ಲಾಗಾಯ್ತು ಕೊಡತಕ್ಕದ್ದಲ್ಲದೆ ಅವರ ಹಿಂದಿನ ಸರ್ವಿಸನ್ನು ಗಣಿಸಿ ವೈಟೇಜನ್ನು ಕೊಡತಕ್ಕದ್ದು.

೩. ಬಿಲ್ ಕಲೆಕ್ಟರರಿಗೆ ಒಂದು ತಿಂಗಳ ಸಂಬಳದ ಬೋನಸ್ಸು ಕೊಡುವುದು ಇತ್ಯಾದಿ ನಿರ್ಣಯಗಳಾದವು. ಇನ್ನು ಮುಂದೆ ಬಂಗ್ಲೆಗಳಿಗೆ ರೂ ೨॥ ಮತ್ತು ಹೂಳರಂತೆ ಬಾಡಿಗೆ ವಿಧಿಸುವುದೆಂದೂ ನಿರ್ಣಯವಾಯಿತು. ನೀರಿನ ಸರಬರಾಯಿಗೆ ರೂ ೪೬ರಿಂದ ೪೮ ಲಕ್ಷದ ವರೆಗೆ ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ ಇನ್ನು ಮೂರು ವರ್ಷಗಳಲ್ಲಿ ಪೂರ್ಣವಾಗಬಹುದೆಂದು ಊಹಿಸಲಾಗಿದೆ.

ಕಲೆಕ್ಟರರ ಕಚೇರಿಯಲ್ಲಿ ಪತ್ರಿಕಾ ಪ್ರತಿನಿಧಿಗಳ ಸಭೆ-ಯೊಂದು ಇತ್ತೀಚೆಗೆ ಜರಗಿತು ಜಾತೀಯ ಸೌಹಾರ್ದತೆಯ ಕುರಿತು, ಹಿಂದೆ ಸಮಸ್ತ ಭಾರತ ಸಂಪಾದಕ ಸಮ್ಮೇಳನದವರು ತಾವು ಅನುಸರಿಸಬೇಕಾದ ನಿಯಮ ನಿಬಂಧನೆಗಳನ್ನು ತಾವೇ ನಿಷ್ಕರ್ಷಿಸಿಕೊಂಡು ಒಂದು ಒಪ್ಪಂದಕ್ಕೆ ಬಂದಿರುವ ವಿಷಯವನ್ನೂ, ಆ ನಿಯಮ ನಿಬಂಧನೆಗಳು ಯಾವುವೆಂಬುದನ್ನೂ ಜಿಲ್ಲಾ ಕಲೆಕ್ಟರರು ಸರಕಾರದ ಅಪೇಕ್ಷೆಯಂತೆ, ಈ ಸಭೆಯ ಮುಂದಿರಿಸಿ ವಿವರಿಸಿ ಹೇಳಿದರು. ಇನ್ನಿತರ ಹಲವಾರು ಪ್ರಶ್ನೆಗಳಿಗೂ ಸಮರ್ಪಕವಾದ ಉತ್ತರ ಕೊಟ್ಟರು

ಕೃತಕ ರೇಶನಿಂಗ್ ಆಫೀಸರರಿಗೆ ಶಿಕ್ಷೆ—ಅಳ್ಕೆ ಗ್ರಾಮದ ಸೀತಾರಾಮ ರಾವ್ ಎಂಬಾತನು ರೇಶನಿಂಗ್ ಆಫೀಸರನಂತೆ ನಟಿಸಿ ವಂಚಿಸಿದನೆಂಬ ಆರೋಪದ ಮೇಲೆ ಇಲ್ಲಿಯ ಸ್ಪೆ। ಸ। ಮೆಜಿಸ್ಟ್ರೇಟರು ಅವನಿಗೆ ೨ ತಿಂಗಳ ಕಠಿಣ ಸಜೆ ವಿಧಿಸಿದರು ಈತನು ಮಿಲಿಟರಿ ಬಿಟ್ಟು ಬಂದಾತ, ಇವನಮೇಲೆ ಅವರದೊಂದು ವಾರಂಟೂ ಇದೆಯೆಂದೂ ತಿಳಿದು ಬರುತ್ತದೆ.

ಪೋಲೀಸ್ ಸ್ಪೋರ್ಟ್ಸ್—ದ. ಕ ಜಿಲ್ಲಾ ಪೋಲೀಸ್ ಸ್ಪೋರ್ಟ್ಸ್ ಇದೇ ತಾ ೧ರಲ್ಲಿ ಪೋಲೀಸ್ ಪೆರೇಡ್ ಮೈದಾನದಲ್ಲಿ ಜಿಲ್ಲಾ ಕಲೆಕ್ಟರ್ ಜೆ ಎಫ್. ಹೊಂದರ್ಸ್ಸ, ಎಸ್ಕ್ವಾಯರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪಂದ್ಯಾಟದಲ್ಲಿ ಗೆದ್ದವರಿಗೆ ಬಹುಮಾನ ವಿತರಣವು ಕಲೆಕ್ಟರರ ಪತ್ನಿಯವರ ಹಸ್ತದಿಂದ ನಡೆಯಿತು.

ಪುತ್ತೂರು.—ಇದೇ ತಾ ೨೦ರಿಂದ ೨೬ರ ವರೆಗೆ ಕಳೆದ ವರ್ಷ "ಮಹಾಪುರುಷ ಸಪ್ತಾಹ"ವನ್ನು ಜರಗಿಸಿದಂತೆಯೇ ಈ ಸಲ "ಸ್ವರಾಜ್ಯ ಸಪ್ತಾಹ" ಎಂದು ಒಂದು ಸಾಂಸ್ಕೃತಿಕ ಸಪ್ತಾಹವನ್ನು ಇಲ್ಲಿಯ ಬೋರ್ಡ್ ಹೈಸ್ಕೂಲ್ ಕಟ್ಟಡದಲ್ಲಿ ಜರುಗಿಸುವುದೆಂದು ಗೊತ್ತಾಗಿದೆ, ಶ್ರೀ ಶಂ. ಬಾ ಜೋಶಿ, ಶ್ರೀ ಟಿ. ಪಿ. ರಾಜರತ್ನಂ, ಶ್ರೀ ರಾ. ಕರಿಗುಡರಿ, ಶ್ರೀ. ವೇ. ಕೃಷ್ಣ ಭಟ್, ಶ್ರೀ. ಎಮ್. ವಿ. ಕೃಷ್ಣರಾವ್, ಶ್ರೀ ಜಿ. ಎಮ್. ಕೃಷ್ಣ ಮೂರ್ತಿ, ಇವರೇ ಮೊದಲಾದ ಉಪನ್ಯಾಸಕರನ್ನೂ, ಕೀರ್ತನಕಾರರನ್ನೂ ಆಮಂತ್ರಿಸಲಾಗಿದೆ; ಎಂದು ವ್ಯವಸ್ಥಾಪಕರು ತಿಳಿಸುತ್ತಾರೆ.

ಕರ್ನಾಟಕ ಮಿತ್ರಮಂಡಳಿ, ಮದ್ರಾಸು—ಇವರು ತಾ ೪ರಲ್ಲಿ ಮದ್ರಾಸಿನ ವುಡ್ ಲೇಂಡ್ಸಿನಲ್ಲಿ ಡಾ॥ ಎಚ್. ಎಸ್. ರಾಯರ ನೇತೃತ್ವದಲ್ಲಿ ಮದ್ರಾಸು ನಗರಾಧ್ಯಕ್ಷರಾಗಿ ಚುನಾಯಿಸಲ್ಪಟ್ಟ ಡಾ ಯು. ಕೃಷ್ಣರಾಯರನ್ನು ಗೌರವಿಸಲು ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಹಲವರ ಭಾಷಣಗಳಾದುವು

ಮೂಲ್ಕಿ ಗ್ರಾಮಾಭಿವೃದ್ಧಿ ಕೇಂದ್ರದ ರೈತರ ಸಭೆಯು-ತಾ. ೮ರಲ್ಲಿ ಶಾಸಾರ್ದಿನದಲ್ಲಿ ಶ್ರೀ ಚೆನ್ನರಾಯ ಸಾಮಂತರ ಅಧ್ಯಕ್ಷತೆಯಲ್ಲಿ ಜರಗಿತು. ಕಳೆದ ಒಂದೇ ವರ್ಷದಲ್ಲಿ ಕೃಷಿಕರು ದಾಸ್ತಾನಿಡುತ್ತಿದ್ದ ಅಕ್ಕಿಯೆಲ್ಲವನ್ನೂ ಉಪಯೋಗಿಸಿಕೊಳ್ಳಲಾಯಿತೆಂದು ಮದ್ರಾಸ್ ಸರಕಾರದ ಆಹಾರ ಮಂತ್ರಿಗಳು ಹೇಳುವುದು ನಿಜವಿದ್ದು, ಗಂಡಾಂತರದ ಸಮಯದಲ್ಲಿ ಅದನ್ನು ದಾಟಲು ಮನಃಪೂರ್ವಕ ತಮ್ಮ ಸ್ಟಾಕುಗಳನ್ನು ಕೊಟ್ಟಿರುವ ರೈತರಿಗೆ ಈಗ ತಮಗೆ ಬೇಕೆಂಬಷ್ಟು ಅಥವಾ ಸಾಧ್ಯವಿದ್ದಷ್ಟು ಸ್ಟಾಕನ್ನು ಇಟ್ಟುಕೊಳ್ಳಲು ಬಿಡುವುದು ಯೋಗ್ಯನೆಂದು ಈ ಸಭೆಯು ಅಭಿಪ್ರಾಯವಾಗಿದೆ ಶ್ರೀ ಎನ್. ಜಿ ರಂಗಾ ತಂದಿರುವ ನಿರ್ಣಯವು ಸಂದರ್ಭೋಚಿತವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ. ಆಹಾರ ನಿಯಂತ್ರಣಗಳನ್ನು ತೆಗೆದು ಹಾಕಬೇಕು, ಗ್ರಾಮ ಪಂಚಾಯತ ಮಸೂದೆಯು ಬೇಗನೆ ಜ್ಯಾರಿಗೆ ಬರುವಂತಾಗಬೇಕು, ನೇಣ ಅಕ್ಕಿ ಸಲ್ಲಿಸಿದ ಬಳಿಕವೇ ನಿಗದಿತೆಯ ಅಕ್ಕಿಯನ್ನು ಕೇಳಬೇಕು ಇತ್ಯಾದಿ ನಿರ್ಣಯಗಳಾದುವು

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು					
ಮನೆಮದ್ದು	2 0 0	ನಗೆನೋಟಗಳು	0 14 0	ಪ್ರತೀಕಾರ	0 6 0
ಮಧುವನ	3 0 0	ನಾಡ ಕತೆಗಳು	0 3 0	ಪ್ರೇಮಪ್ರಸಾದ	0 8 0
ಕವಿತಾಕಾಮಿನಿ	2 0 0	ಕುಶಲವ	0 6 0	ಆರೋಗ್ಯಪ್ರತಾಪ	0 12 0
ಕದಂಬ	1 4 0	ಸುಲಭದಲ್ಲಿ ಇಂಗ್ಲಿಷ್	1 8 0	ಅಂತರಂಗದ ಕತೆಗಳು	0 12 0
ಜೀವನಸಂಗ್ರಾಮ	1 8 0	ವ್ಯಭಿಚಾರಿಣಿ ಯಾರು	1 0 0	ಸಾಧಕಪಥ	0 2 0
ಸಂಶಯ ಪಿಶಾಚಿ	0 8 0	ಹೆಂಡ್ತಿ ಗಂಡನಾದರೆ	0 4 0	ವೀರಭೂಮಿ	0 2 0
ಕಾವ್ಯಸಾಮ್ರಾಜ್ಯ	1 4 0	ಸನ್ಯಾಸಿಯ ಸೋಗಿನಲ್ಲಿ	0 8 0	ಧರ್ಮಸಂಕಟ	0 4 0
ಪ್ರೇಮವಿಜಯ	1 0 0	ಭಾರತೀಯ ಕತೆಗಳು	0 14 0	ಮೀರಾಬಾಯಿ	0 10 0
ಪುರುಷಪಥ	0 4 0	ಮೂರು ಪ್ರಹಸನಗಳು	0 14 0	ಸಂಸ್ಕೃತಿ	0 12 0
ನಂದಾದೀಪ	0 14 0	ಅನ್ನದೇವರು ಕತೆಗಳು	1 0 0	ಸ್ವತಂತ್ರ ಜೀವನೋಪಾಯ	0 3 0
ದೇಶಭಕ್ತ	1 4 0	ಭಾರತದಲ್ಲಿ ಜಾತಿಭೇದ	1 0 0	ವಿಷ್ಣುವಿನ ದಶಾವತಾರಗಳು	0 12 0
ರಂಗಭೂಮಿ	0 8 0	ಪಂಚಾರತಿ	0 6 0	ಆಕೃತಿ ಇತ್ಯಾದಿ ಕತೆಗಳು	0 12 0
ಸೇವಾಪಥ	0 8 0	ಚಿಗುರು	0 6 0		
ನಾರೀಹೃದಯ	0 14 0	ಜೋಡಾಮುದ್ರೆ	0 6 0		
ಪ್ರಕಾಶ	2 4 0				

ನವಭಾರತ ಪುಸ್ತಕ ಭಂಡಾರ, ಉಡುಪಿ

ಕಾರ್ಕಳ ಗ್ರಾಮಸ್ಥರ ಮನವಿ

ಸರ್ವತ್ರ ಕಂಟ್ರೋಲುಗಳು ಹೋಗಬೇಕು

ಕಾರ್ಕಳ ತಾಲೂಕು ಗ್ರಾಮಸ್ಥರ ಕಡೆಯಿಂದ ಮದ್ರಾಸು ಸರಕಾರದ ಪ್ರಧಾನಮಂತ್ರಿಗಳಿಗೊಂದು ನಿಯಂತ್ರಣ ರೇಶನಿಂಗ್ ಮೊದಲಾದ ತಡೆಗಳಿಂದುಂಟಾದ ಕಷ್ಟಗಳ ವಿವರಣೆಯ ಮನವಿಯೊಂದನ್ನು ಕಳುಹಲಾಗಿದೆ. ಆಹಾರ ಸಂಗ್ರಹ ವಿತರಣೆಯಲ್ಲಿ ಪರಿಪಕ್ವ ಜ್ಞಾನವಿಲ್ಲದವರ ಕೈಯಲ್ಲಿ ಅಧಿಕಾರ ಸಿಕ್ಕಿ ಅವರಾದರೂ, ಜನತಾಸೇವೆಯ ದೃಷ್ಟಿಯನ್ನು ಸ್ವಾರ್ಥ ಸಾಧನೆಗೆ ತಿರುಗಿಸಿ ಹಲವರು ಮನೆ ಮಾಡುಗಳನ್ನೂ ಹಣವನ್ನೂ ಶೇಖರಿಸಲು ಕಾರಣವಾಯಿತು. ಆದುದರಿಂದ ಯಾವತ್ತೂ ಕಂಟ್ರೋಲುಗಳು ಕೂಡಲೇ ರದ್ದಾದರೆ ಮಾತ್ರ ಬಡಗ್ರಾಮಸ್ಥರು ಬದುಕಿ ಬಾಳಬಹುದಾಗಿದೆ ಎಂಬುದೇ ಮೆಮೋರಿಯಲ್ಲಿನ ಮುಖ್ಯಾಂಶ. ಇದರ ಯಥಾ ನಕಲನ್ನು ಮಹಾತ್ಮಾಗಾಂಧಿಯವರಿಗೂ ಪಂಡಿತ ನೆಹರು ಸರಕಾರಕ್ಕೂ ಕಳುಹಲಾಗಿದೆ.

NOTICE

ಕುಂದಾಪುರ ಡಿ ಮು ಕೋರ್ಟಿನಲ್ಲಿ.

O. S. 531/44.

R. E. P. 469/47.

ಅರ್ಜದಾರ—ವೈ. ಕೃಷ್ಣಪ್ಪ ಸೆಟ್ಟಿ. ಯಿವರ ಪವರಆಫ್ ಎಟರ್ನಿದಾರ ವೈ. ಸೂರ್ಯನಾರಾಣ ಸೆಟ್ಟಿ, ಯಿವರಿಂದ ಟ್ರಾನ್ಸ್ಫರು ಪಡೆದ ಅರ್ಜದಾರ-ಮಾಮದ ಉಮ್ಮರ ಸ್ಯಾಬ.

ಎದ್ರಿರು—ಕೊಚ್ಚಿಮ ಪೋಕಿ ಸಾಬ. ಸದ್ರಿ ಅಮ್ಲುಜ್ಯಾರಿಯು 3-4 ಮತ್ತು 7ನೇ ಎದ್ರಿಂಗೆ ತಿಳಿಯಪಡಿಸಿದ್ದು. 3 ಪಕ್ಷಿಮಾ, 4 ಹಬಸಾ-1ನೇ ಎದ್ರಿ ಕೊಚ್ಚಿಮಾನ ಮಕ್ಕಳು-ಹೊನ್ನಾವರ ತಾಲ್ಲೂಕು ಭಟ್ಕಳ ಪೇಟೆ; 7 ಬಾಪು ಯಿಸ್ಮಾಲ್ ಸಾಹೇಬ. ಮ್ಯಯಿದಿನ ಸ್ಯಾಬರ ಮಗ. ಹೊನ್ನಾವರ ತಾಲ್ಲೂಕು ಭಟ್ಕಳ ಪೇಟಾ ಸೂಸಕಡಿ ಗ್ರಾಮ.

ಸದ್ರಿ ಅಮ್ಲುಜ್ಯಾರಿಯಲ್ಲಿ ಯಿಸ್ತಾರಿನ ಶರ್ತ ನಿರ್ಣಯಿಸುವ ಬಗ್ಗೆ ಸದ್ರಿ ಅಮ್ಲುಜ್ಯಾರಿಯನ್ನು ತಾ 7-1-48ಕ್ಕೆ ಯಿಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪಯಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಿಳಿಸತಕ್ಕದ್ದು.

Y. Manjaya Shetty,

Advocate for Peter'

ತಾರೀಕು. 5-12 47 ಕುಂದಾಪುರ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ,

ಕಲ್ಯಾಣಿ ನ್ಯಾಸಾಚಾಯರ್,

ರಥಬೀದಿ, ಉಡುಪಿ.

ತಯಾರಾಗುತ್ತಿದೆ—

ಸರ್ವಧಾರಿ ಸಂವತ್ಸರದ,

ಪಂಚಾಂಗ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್!

ಜಾಹೀರಾತುದಾರರಿಗೆ ಉತ್ತಮ

ಸಂದರ್ಭ! ಎವರಕ್ಕೆ ಬರೆಯಿರಿ—

ಮೆನೇಜರ್,

ನವಯುಗ ಪ್ರೆಸ್, ಉಡುಪಿ.

ದಕ್ಷಿಣ ಕನ್ನಡ

ಮೂವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನ— ಈ ವರ್ಷ ಸಾಹಿತ್ಯ ಸಮ್ಮೇಳನವು ಜರಗಲಿರುವ ಕಾಸರಗೋಡು ಮಂಗಳೂರಿನಿಂದ ೩೦ ಮೈಲು ದಕ್ಷಿಣಕ್ಕೆ ಪಶ್ಚಿಮ ಸಮುದ್ರ ತೀರದಲ್ಲಿ ಚಂದ್ರಗಿರಿ ನದಿಯ ದಡದಲ್ಲಿ ಕೇರಳ, ಕರ್ನಾಟಕಗಳ ಗಡಿಯಲ್ಲಿರುವ ತಾಲೂಕು ಸ್ಥಳ. ಸುಮಾರು ೨೫ ಸಾವಿರ ಜನಸಂಖ್ಯೆಯಿರುವ ಈ ಪಟ್ಟಣದಲ್ಲಿ ಮುನ್ಸಿಫ್ ಕೋರ್ಟು, ತಾಲೂಕು ಆಫೀಸು ಮೊದಲಾದ ಕಚೇರಿಗಳೂ, ಮೂರು ಹೈಸ್ಕೂಲುಗಳೂ ಇವೆ. ಇದು ಜಿಲ್ಲೆಯಲ್ಲಿ ಮರದ ವ್ಯಾಪಾರಕ್ಕೆ ಹೆಸರಾದ ಸ್ಥಳ.

ಕಾಸರಗೋಡಿಗೆ ಬರುವ ದಾರಿಗಳು

ಕಾಸರಗೋಡಿಗೆ ಹೋಗಬೇಕಾದರೆ ಹೆಚ್ಚು ಕಡಿಮೆ ಮಂಗಳೂರು ದಾರಿಯಾಗಿಯೇ ಹೋಗಬೇಕು. ಧಾರವಾಡ, ಬೆಳಗಾಂ, ವಿಜಾಪುರ ಮೊದಲಾದ ಉತ್ತರ ಕರ್ನಾಟಕದಿಂದ ಬರುವವರು ಕಡೂರು ವರೆಗೆ ರೈಲಿನಲ್ಲಿ ಬಂದು ಅಲ್ಲಿಂದ ಬಸ್ಸಿನ ಮೂಲಕ ಚಿಕ್ಕಮಗಳೂರು ದಾರಿಯಾಗಿ ಮಂಗಳೂರಿಗೆ ಬರಬೇಕು. ಕಡೂರಿನಿಂದ ಮಂಗಳೂರಿಗೆ ೧೨೫ ಮೈಲು. ಬಸ್ ಚಾರ್ಜು ರೂ. ೪.೮.೦; ನಾಲ್ಕು ಬಸ್ ಸರ್ವೀಸುಗಳಿವೆ. ಉತ್ತರ ಕನ್ನಡ ಜಿಲ್ಲೆಯಿಂದ ಬರುವವರು ಭಟ್ಕಳ, ಕುಂದಾಪುರ ದಾರಿಯಾಗಿ ಮಂಗಳೂರಿಗೆ ಬರಬಹುದು. ದೂರ ಸುಮಾರು ೧೧೦ ಮೈಲು; ಚಾರ್ಜು ರೂ. ೩.೮.೦ ಉತ್ತರ ಕರ್ನಾಟಕದವರು ಹರಿಹರ, ಶಿವಮೊಗ್ಗ ದಾರಿಯಾಗಿಯೂ ಬರಬಹುದು. ಮೈಸೂರು, ಬೆಂಗಳೂರಿನವರು ಮಡಿಕೇರಿಗಾಗಿ ಮಂಗಳೂರಿಗೆ ಬರಬಹುದು. ಮಡಿಕೇರಿಯಿಂದ ಮಂಗಳೂರಿಗೆ ದೂರ ೮೫ ಮೈಲು; ಬಸ್ ಚಾರ್ಜು ರೂ. ೨-೧೨-೦. ಮಡಿಕೇರಿಯಿಂದ ಕಾಸರಗೋಡಿಗೆ ಒಂದು ಸರ್ವಿಸು ಇದೆ. ದೂರ ೭೦ ಮೈಲು; ಚಾರ್ಜು ರೂ ೨-೪.೦. ಬೆಂಗಳೂರಿನಿಂದ ಬರುವವರು ಹಾಸನ ದಾರಿಯಾಗಿ ಮಂಗಳೂರಿಗೆ ಬರಬಹುದು. ಹಾಸನದ ಗಡಿಯಿಂದ ಮಂಗಳೂರಿಗೆ ೬೨ ಮೈಲು ದೂರ; ಚಾರ್ಜು ರೂ. ೪.೦.೦ ಮಂಗಳೂರಿನಿಂದ ಕಾಸರಗೋಡಿಗೆ ದಿನಕ್ಕೆ ನಾಲ್ಕು ಬಾರಿ ರೈಲು ಹೋಗುತ್ತವೆ; ಚಾರ್ಜು ೦-೧೦-೭. ಬೆಳಿಗ್ಗೆ ೬-೪೨, ೧೦. ೫, ಮಧ್ಯಾಹ್ನ ೧.೫೦, ೫-೪೦.

ಸಮ್ಮೇಳನ ಕಾಲದಲ್ಲಿ ಪ್ರತಿಯೊಬ್ಬನಿಗೆ ಎರಡು ಊಟ, ಎರಡು ಕಾಫಿಗೆ ರೂ. ೨.೦.೦ ಚಾರ್ಜು ಮಾಡಲಾಗುವುದು. ಸಮ್ಮೇಳನದ ಡೆಲಿಗೇಶನ್ ಫೀಸು ರೂ. ೨-೦-೦ ಅತಿಥಿಗಳಿಗೆ ಉಳಕೊಳ್ಳಲು ಬೇಕಾದ ವ್ಯವಸ್ಥೆ ಮಾಡಲಾಗಿದೆ. ಚಳಿಗಾಲವಾದ್ದರಿಂದ ಹಾಸು ಹೊದಿಕೆಗಳು ತರುವುದು ಯೋಗ್ಯ. ಸಮ್ಮೇಳನಕ್ಕೆ ಬರುವವರು ಮೊದಲಾಗಿ ತಿಳಿಸಿದರೆ ಉತ್ತಮ.

ಸಮ್ಮೇಳನಕ್ಕೆ ಬರುವವರು ೨೬ನೆಯ ತಾರೀಕಿನ ದಿವಸವೇ ಮಂಗಳೂರಿಗೆ ತಲಪುವಂತೆ ಬಂದರೆ ಉತ್ತಮ. ಮಂಗಳೂರಲ್ಲಿ ಉಳಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಜಿಲ್ಲೆಯ ಮೋಟರ್ ಕಂಪೆನಿಯವರು ಸಮ್ಮೇಳನಕ್ಕೆ ಬರುವವರಿಗೆ ಟಿಕೇಟಿನ ವ್ಯವಸ್ಥೆ ಮಾಡುವ ಭರವಸೆ ಕೊಟ್ಟಿದ್ದಾರೆಂದು ಪ್ರಕ[illegible] ಯ ಕಾರ್ಯದರ್ಶಿ. ಶ್ರೀ. ಬಿ. ಶಂಕರ ಭಟ್ಟರು ತಿಳಿಸುತ್ತಾರೆ.

ಮದ್ರಾಸಿನಲ್ಲಿ ಮೋಯರರಿಗೆ ಸತ್ಕಾರ ಕೂಟಗಳು:—ಮದ್ರಾಸು ಕಾರ್ಪೊರೇಶನಿನ ಮೇಯರರಾಗಿ ಇತ್ತೀಚೆಗೆ ಆರಿಸಲ್ಪಟ್ಟ ನಮ್ಮ ಜಿಲ್ಲೆಯವರಾದ ಡಾ। ಯು. ಕೃಷ್ಣರಾಯರಿಗೆ ದ. ಕ. ದ್ರಾವಿಡ ಬ್ರಾಹ್ಮಣ ಸಂಘದ ಸದಸ್ಯರೂ ಮೊರ್ಡನ್ ಕೆಫೆ ಮಾಲಿಕರಾದ ಶ್ರೀ ಸೀತಾರಾಮ ರಾಯರೂ ಪ್ರತ್ಯೇಕ ಟೀಪಾರ್ಟಿಯನ್ನಿತ್ತು ಗೌರವಿಸಿದರು.

ಲಲಿತಕಲಾ ಕರ್ನಾಟಕ ನಾಟಕ ಸಭಾ, ಮುಂಬಯಿ—ಇವರು ಶ್ರೀ ಕೆ. ನಿತ್ಯಾನಂದ ಬೋಳಾರ ಇವರಿಂದ ಬರೆಯಲ್ಪಟ್ಟ "ವಿಚಿತ್ರ ಮಾನವ" ಎಂಬ ಸಾಮಾಜಿಕ ಕನ್ನಡ ನಾಟಕವನ್ನು ತಾ 25-12-47 ನೇ ಗುರುವಾರ ಬೆಳಿಗ್ಗೆ ಘಂಟೆ 9ಕ್ಕೆ ಪರೇಲ್ ಟ್ರಾಮ್ ಜಂಕ್ಷನಿನ ಬಳಿಯಲ್ಲಿರುವ ದಾಮೋದರ್ ಠಾಕರ್ಸಿ ಹೋಲಿನಲ್ಲಿ ಅಭಿನಯಿಸುವರು.

ಚೊಕ್ಕಾಡಿ—ಚೊಕ್ಕಾಡಿ ಬೇಸಾಯಗಾರರ ಸಭೆಯು ಕಳೆದ ತಾ 23ರಲ್ಲು ಚೊಕ್ಕಾಡಿ ಕಟ್ಟೆಯಲ್ಲಿ ಶ್ರೀ ಮೊಗ್ರ ಸುಬ್ರಾಯರ ಅಧ್ಯಕ್ಷತೆಯಲ್ಲಿ ಜರಗಿ ಸರಕಾರವು ಈಗ ನಡೆಸುತ್ತಿರುವ ಆಹಾರ ಧಾನ್ಯ ಸಂಗ್ರಹಣ ಮತ್ತು ವಿತರಣಗಳ ಕ್ರಮವನ್ನು ಖಂಡಿಸುವ ಮತ್ತು ಆಹಾರ ಧಾನ್ಯಗಳ ಮೇಲಿರುವ ನಿಯಂತ್ರಣಗಳನ್ನು ಕೂಡಲೇ ಸಡಲಿಸಬೇಕೆಂದು ಕೇಳಿಕೊಳ್ಳುವ ಠರಾವುಗಳನ್ನು ಸರ್ವಾನುಮತದಿಂದ ಪಾಸುಮಾಡಿ ಕೇಂದ್ರ ಆಹಾರ ಮಂತ್ರಿ ಶ್ರೀ ಬಾಬು ರಾಜೇಂದ್ರ ಪ್ರಸಾದರಿಗೂ ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ರಾಮಸ್ವಾಮಿ ರೆಡ್ಡಿಯಾರರಿಗೂ ತಂತಿ ಮೂಲಕ ತಿಳಿಸಿರುತ್ತಾರೆ.

ಬೈಲೂರು—ಇಲ್ಲಿಯ ರಾಷ್ಟ್ರ ಸೇವಾದಳದ ವಾರ್ಷಿಕೋತ್ಸವವು ಕಳೆದ ತಾ. ೨೯ ಮತ್ತು ೩೦ರಲ್ಲು ಬಹು ವಿಜೃಂಭಣೆಯಿಂದ ಜರಗಿತು. ಶ್ರೀ ಎಮ್. ಡಿ. ಅಧಿಕಾರಿಗಳು ಅಧ್ಯಕ್ಷತೆ ವಹಿಸಿದ್ದರು. ಸಂದರ್ಭೋಚಿತ ಭಾಷಣ ಹಾಗೂ ನಿರ್ಣಯಗಳಾದುವು, ವಿವಿಧ ವಿನೋದಾವಳಿಗಳೂ ಇದ್ದುವು.

ಕೊಕ್ಕರ್ಣೆ— ಇಲ್ಲಿಯ ಕಾಫಿ ಹೊಟೆಲುಗಳಲ್ಲಿ ಕಳೆದ ತಾ ೩೦ರಲ್ಲಿ ಹರಿಜನರಿಗೆ ಪ್ರವೇಶ ಕೊಡಲಾಯಿತು. ಆದರೆ ಕೊರಗ ಬಂಧುಗಳನ್ನು ಹರಿಜನರೇಕೆ ತಮ್ಮೊಡನೆ ಕರೆಕೊಂಡು ಹೋಗಿಲ್ಲವೋ ತಿಳಿಯದಾಗಿದೆ.

ನಾಗೋಡಿ—ಕುಟಜಾದ್ರಿ ಬೆಟ್ಟಕ್ಕೆ ಹೋಗಿ ಬರುವ ಯಾತ್ರಾರ್ಥಿಗಳಿಗೆ ಸ್ಥಳೀಯ ಶ್ರೀ. ಶ್ರೀಧರ ಕಮ್ತಿ ಎಂಬವರು ಬಡವ ದೊಡ್ಡವರೆಂಬ ಭೇದವಿಲ್ಲದೆ ಆಗಾಗ್ಗೆ ಉಪಹಾರ ಉಪಚಾರಗಳನ್ನಿತ್ತು ಸತ್ಕರಿಸುತ್ತಿದ್ದಾರಂತೂ ನಾಗೋಡಿಯಂತಹ ಕಾಡು ಪ್ರದೇಶದಲ್ಲಿ ಯಾತ್ರಿಕರಿಗೆ ಯಾವ ತರದ ಅನುಕೂಲತೆಯೂ ಸಿಗದಿರುವಾಗ ಶ್ರೀಯುತರು ಆತ್ಮೀಯ ಬುದ್ಧಿಯಿಂದ ನೀಡುತ್ತಿರುವ ಸಹಾಯವು ಅಭಿನಂದನೀಯವೆಂದೂ ಶ್ರೀ. ಅಡ್ಡೆ ಗೋವಿಂದ ಭಟ್ಟರು ತಿಳಿಸುತ್ತಾರೆ.

ಪೊಳಲಿ— ಕರಿಯಂಗಳ ಗ್ರಾಮಸ್ಥರ ಸಭೆಯು ಇತ್ತೀಚೆಗೆ ಜರಗಿ ಗ್ರಾಮಾಭಿವೃದ್ಧಿ ಸಂಘವೊಂದು ಸ್ಥಾಪಿಸಲಾಯಿತು.

ತುಳುವ ಮಹಾಸಭೆಯು— ತಾ ೨೮ರಲ್ಲಿ ಶ್ರೀ ಕೆ. ಎ. ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತು ಕಂಟ್ರೋಲುಗಳನ್ನು ತೆಗೆಯಬೇಕೆನ್ನುವ ಅಕ್ಕಿಯ ಬೆಲೆಯನ್ನು ಏರಿಸಬೇಕೆನ್ನುವ, ನೀರಾವರಿ ಸರಬರಾಯಿ ಆಗಬೇಕೆನ್ನುವ, ದ. ಕ. ಜಿಲ್ಲೆ ಎಂಬ ಹೆಸರನ್ನು ಲೋಪಮಾಡಿ ತುಳುನಾಡು ಜಿಲ್ಲೆಎಂಬ ಹೊಸ ಹೆಸರನ್ನು ಕರ್ನಾಟಕ ಏಕೀಕರಣ ಸಮಿತಿಗೆ ಸೂಚಿಸುವ ನಿರ್ಣಯಗಳಾದುವು.

ಅಖಿಲ ಮೈಸೂರು ವಿಶ್ವಕರ್ಮ ಮಹಾಜನ ಸಮ್ಮೇಳನವು—ಕಳೆದ ತಾ. ೩೧ರಲ್ಲು ನಂಜನಗೂಡಿನಲ್ಲಿ ಬ್ರ॥ಯಂ ಗಂಗಾಧರ ಮೂರ್ತಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಮೈಸೂರಿನ ಮುಖ್ಯ ಮಂತ್ರಿಗಳಾದ ಮಾನ್ಯ ಕೆ. ಚಂಗಲರಾಯ ರೆಡ್ಡಿಯವರನ್ನೂ ಅವರ ಮಂತ್ರಿ ಮಂಡಲವನ್ನೂ ಅಭಿನಂದಿಸುವ, ರಾಜ್ಯಾಂಗ ರಚನಾ ಸಭೆ, ವಿಶ್ವಕರ್ಮ ಜನಾಂಗದ ಪರವಾಗಿ ಎರಡು ಸದಸ್ಯ ಸ್ಥಾನಗಳು ಮೀಸಲಾಗಿರಿಸಲ್ಪಡಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಪ್ರಕಟಣೆ.

ಉಡುಪಿ ಕಸಬಾ ಕಾಡಬೆಟ್ಟುನಲ್ಲಿರುವ ಮೇರಿ ಮಿನೇಜಸ್ ತಾ 6-11 1947ನೇ ನವಯುಗ ಸಂಚಿಕೆಯಲ್ಲಿ ಮಾಡಿದ ಪ್ರಕಟಣೆ ಬಾಬಿನಲ್ಲಿ ಸದ್ರಿಯವಳ ಗಂಡ S E ಮಿನೇಜಸ್‌ನು ಪ್ರಕಟಿಸುವುದೇನೆಂದ್ರೆ ಉಡುಪಿ ಕಸಬಾ ಕಾಡಬೆಟ್ಟಿನಲ್ಲಿರುವ ಗದ್ದೆಗಳು ಬಾಗಾಯ್ತು ಮನೆಗಳು ಸಹಾ ನಾನು ನನ್ನ ಸ್ವಂತ ವ್ಯಾಪಾರದ ಉತ್ಪತ್ತಿಯಿಂದಲೂ ಆಸ್ತಿ ಜವಾಬದಾರಿ ಮೂಲಕ ಪಡೆದ ಸಾಲದಿಂದಲೂ ಮಾಡಿದ್ದಾಗಿರುತ್ತದೆ ಅದರಲ್ಲಿ ನನ್ನ ಹೆಂಡತಿಗಾಗಲೀ ಮಕ್ಕಳಿಗಾಗಲೀ ಯಾವತರದ ಹಕ್ಕು ಇರುವುದಿಲ್ಲಾ ನನ್ನ ಹೆಂಡತಿಯ ಮೇಲೆ ಪ್ರೀತಿ ಹಣದ ಪಾಲನ್ನು ಚಿನ್ನಾಭರಣ ಮಾಡ್ಸಿ ಅವಳ ಸ್ವಾಧೀನ ಬಿಟ್ಟಿದ್ದೇನೆ. ನನ್ನ ಹೆಂಡತಿಯನ್ನು ಸಂದು ಮನೆಯಲ್ಲಿ ಬಿಟ್ಟು ಅವಳ ವ ನನ್ನ ಮಕ್ಕಳ ಖರ್ಚುವೆಚ್ಚದ ಬಗ್ಗೆ ಆಗಾಗ್ಗೆ ಹಣ ಕಳುಹಿಸಿದ್ದಲ್ಲದೆ ನಾನು ಸಹಾ ಬಂದು ಹೋಗುತ್ತಿದ್ದೆ. ಹೀಗಿರುವಲ್ಲಿ ನನ್ನ ಹಿರೀ ಗಂಡುಮಕ್ಕಳಾದ ಸಂತಾನ ಎಡ್ವರ್ಡ ಮಿನೇಜಸ್ ಮತ್ತು ಜೋನ್ ಮಿನೇಜಸ್ ಸಹಾ ನನ್ನ ಹೆಂಡತಿಯನ್ನು ಪುಸಲಾಯಿಸಿ ಅವಳ ಪತ್ರ ಖರ್ಚಿಗೆ ಕೊಟ್ಟ ಹ್ರವೇಜನ್ನೂ ಅವಳ ಚಿನ್ನಾಭರಣಗಳನ್ನೂ ತಂದು ಕೆಟ್ಟ ಚಾಳಿಯ ದುಂದುಗಾರಿಕೆ ವೆಚ್ಚಕ್ಕೆ ಉಪಯೋಗಿಸಿ ನನ್ನ ಇಷ್ಟಕ್ಕೆ ವಿರೋಧವಾಗಿ ನನ್ನ ಮನೆಯಲ್ಲಿ ನ್ನು ತಂಮ ಇಚ್ಛಾನುಸಾರ ವರ್ತಿಸಿ ನಷ್ಟ ಮಾಡಿದ ಕಾರಣ ಅವರನ್ನು ದೂರಪಡಿಸಬೇಕೆಂತಲೂ ಉತ್ಪತ್ತಿ ಕಡಿಮೆಯಾಗಿ ಖರ್ಚು ಹೆಚ್ಚಾಗುವುದರಿಂದ ನನ್ನ ಹೆಂಡತಿಯನ್ನು ನನ್ನ ಪಟ್ಟಿಗೆ ಮೈಸೂರು ಸ್ಟೇಟಿನ ನನ್ನ ಮನೆಗೆ ಕರಕೊಂಡು ಹೋಗಿ ಇಲ್ಲಿಯ ಮನೆ ಬಾಡಿಗೆಗೆ ಕೊಡಬೇಕೆಂತ ತಿಳಿಸಿದ ಸಂಗ್ತಿ ಗೊತ್ತಾದ ಸದ್ರಿ ನನ್ನ ಎರಡು ಮಕ್ಕಳು ನನ್ನ ಮೇಲೆ ದ್ವೇಷಕಟ್ಟಿಕೊಂಡು ತಾಯಿಯನ್ನು ದುಭೋದಿಸಿ ನಂತ್ರ ನಾನು ಹೆಂಡತಿಯನ್ನು ಕರಕೊಂಡು ಹೋಗಲಿಕ್ಕೆ ಮೈಸೂರಿನಿಂದ ಬಂದ ಸಮಯ ಅದ್ಕೆ ವಿರೋಧ ಮಾಡುವ ಉದ್ದಿಶ್ಯದಿಂದ ನನ್ನ ಹೆಂಡತಿಯಿಂದ ಮೇಲೆ ಹೇಳಿದ ಸುಳ್ಳು ವ ಅವಮಾನದ ಆರೋಪಣೆಗಳನ್ನು ಕಾಣ್ಸಿ ಪ್ರಕಟಣೆ ಮಾಡ್ಸಿದ್ದಾಗಿರುತ್ತದೆ. ನನ್ನುದು ಸಮುಷ್ಟಿ ಹಕ್ಕಿನ ಹಿಂದು ಕುಟುಂಬದಲ್ಲಾ ನನ್ನ ಆಸ್ತಿ ಕಟ್ಟೋಣದಲ್ಲಿ ನನ್ನ ಹೆಂಡತಿಗಾಗ್ಲೀ ಮಕ್ಕಳಿಗಾಗ್ಲೀ ಯಾವ ತರದ ಹಕ್ಕುಯಿಲ್ಲಾ ಅವರ ಪ್ರಕಟಣೆಯು ತೀರಾ ಅಸಂಬದ್ಧದ್ದು ಆದರಿಂದ ನನ್ನ ಇಚ್ಛಾನುಸಾರದ ಸ್ವಂತ ಹಕ್ಕಿಗೆ ಯಾವ ಭಾದಕವೂ ಬರಲಾರದು

S. E. Minezes.

ಉಡುಪಿ ತಾರೀಕು 22-11-47.

The Canara Land Investments, Limited.

'Santhi Bhavan

MANIPAL, S. India.

NOTICE

In the matter of the Shares of Late Dr. N. Sripad Rao, son of Sri Naimpally Ananthayya, Udipi.

His Holiness Srimad Anandashram Swamiji, as Matadhipathi and trustees of Shree Bhavani Shanker Devara Bhandaram of Shree Chitrapur Matt, Shirali, has requested the Canara Land Investments, Limited, to transfer the shares of Dr. N. Shripad Rao, who passed away at Udipi on 21-5-1947, on the strength of the registered Will of the deceased dated 27-4-1946 and this is to notify all those concerned that the Canara Land Investments, Limited, will act on the said Will and proceed to comply with the request of the beneficiary thereunder unless proper objection is received by the company with the proof thereto within a month from the publication of this notice.

'Santhi Bhavan',
MANIPAL.
19th November, 1947.

T. Ramesh U. Pai,
MANAGING DIRECTOR.

ಅಮೃತಾಂಜನ.

ತಲೆವೇದನೆ, ಶಿರೋವೇದನೆ, ಉಳುಕು, ಕೀಲ್ನೋವು, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಜೇಳು ವಿಷ ಮುಂತಾದ ಬೇನೆ ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.

ಸರ್ವ, ಹುಳುಕಡ್ಡಿ ಮುದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಬಾಲಕರ ಆರೋಗ್ಯಕಾರ್ಯಗಳು

(ಪ್ರಭೂಸ್) ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಮಲದ ಬಗೆಯ ರೋಗರುಚಿಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನೆಟ್ಟಗಾಗಲು ತಾಯಿತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ. ಮಾತ್ರ, ಹೊತ್ತು ಕಳೆದರೆ ಮ[illegible] ಬಾರದು.

'ಪ್ರಭೂಸ್'

ಬಾಲಾಮೃತ

ಪ್ರಭೂಸ್ ಬಾಲಾಮೃತದ ಖಾತ್ರಿಗೆ ದಾಖಲೆ ಬೇಕೆ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಸುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,

(ರಿಜಿಸ್ಟರ್ಡ್)

ಕುಂಜಾಲು, ಪೋ. ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:—

ನವಭಾರತ ಪುಸ್ತಕ ಭಂಡಾರ, ಉಡುಪಿ.

L. N. Sharma, Mangalore.

(ನೇ ಪುಟದಿಂದ)

ಸದಸ್ಯರಿಗೆ ತಿಳಿಸಿ ಬಿಡಬೇಕಾಗುತ್ತದೆ. ಪತ್ರಿಕೆಗಳಿಗೆ ಸಂಗತಿ ಸರಿಯಾಗಿ ಮುಟ್ಟಿದಂತಾಗಿದೆ

ಮಿ. ಹಮೀದ್ ಖಾನ್—ಈ ದ್ವಿರಾಷ್ಟ್ರತತ್ವದ ಭಾವನೆ ಹುಟ್ಟಿದುದು ಯಾವಾಗ? ಅದನ್ನು ಪ್ರಾರಂಭಿಸಿದವರಾರು? ಮತ್ತು ಅದು ಎಲ್ಲಾ ಕಾಲಗಳಲ್ಲೂ ಇರಲಿಲ್ಲವೇ ಎಂದು ನಾನು ಮಂತ್ರಿಗಳನ್ನು ಕೇಳಬಹುದೆ?

ಡಾ। ಸುಬ್ಬರಾಯನ್—ಈ ವಿಷಯದಲ್ಲಿ ನನ್ನೀ ಮಾನ್ಯ ಮಿತ್ರರಿಗೆ ಗೊತ್ತಿರುವಷ್ಟು ಸಂಗತಿಗಳು ನನಗೆ ತಿಳಿದಿಲ್ಲವೆಂದು ಶಂಕಿಸುತ್ತೇನೆ. ದ್ವಿರಾಷ್ಟ್ರತತ್ವವನ್ನು ಪ್ರಾರಂಭಿಸಿದವರಾರು, ಎಂಬುದು ನನಗಿಂತ ಚೆನ್ನಾಗಿ ಅವರಿಗೆ ಗೊತ್ತಿದೆ.

ಮಿ. ಇಸ್ಮಾಯಿಲ್—ಸಭಾ ನಾಯಕರ ಅಭಿಮತದಂತೆ ಈ ದ್ವಿರಾಷ್ಟ್ರ ಭಾವನೆಯೆಂಬುದು ಹಿಂದಿನಿಂದಲೂ ಇತ್ತು. ಆದರೂ ಈ ಪ್ರಾಂತ್ಯವು ತನ್ನ ಶಾಂತಿಯನ್ನು ತಿಂಗಳುಗಟ್ಲೆ ಕಾಪಾಡಿಕೊಂಡು ಬಂದಿತ್ತು; ಜನರು ಆ ಶಾಂತಿ ಪಾಲನೆಗೆ ನೆರವಾಗಿದ್ದರು. ಅಂದ ಮೇಲೆ ಈ ದ್ವಿರಾಷ್ಟ್ರ ಭಾವನೆಯು ಈಗ ತಾನೇ ಸರಕಾರವನ್ನು ದಿಗಿಲುಗೊಳಿಸಲು, ಮತ್ತು ಭಯಗೊಂದಲ ನಿರ್ಮಿಸಲು ಕಾರಣವೇನು?

ಡಾ। ಸುಬ್ಬರಾಯನ್—ಸರಕಾರದ ಮಟ್ಟಿಗೆ ದಿಗಿಲು ಅಥವಾ ಗೊಂದಲವೆಂಬ ಪ್ರಶ್ನೆಯೇ ಇಲ್ಲ. ಸರಕಾರಕ್ಕಂತಹ ನರದೌರ್ಬಲ್ಯ ಯಾನೆ ಹೆದರಿಕೆ ಇಲ್ಲ, ಇಲ್ಲ, ಇಲ್ಲ, ಎಂದು ನಾನು ಒತ್ತಿ ಒತ್ತಿ ಹೇಳಿದ್ದೇನೆ. ಇದನ್ನು ಮಾನ್ಯ ಸದಸ್ಯರು ಗ್ರಹಿಸಿಕೊಂಡರಾಯಿತು. ಅದೇ ಸಮಯದಲ್ಲಿ ನಾನವರಿಗೊಂದು ಮಾತು ಹೇಳಬೇಕಾಗಿದೆ. ಅವರಿಗೆ ನಿಜಕ್ಕೂ ದ್ವಿರಾಷ್ಟ್ರಗಳಲ್ಲಿ ನಂಬಿಕೆಯಿದ್ದರೆ—ಹೀಗೆ ಹೇಳಿದ್ದಕ್ಕಾಗಿ ಅವರು ನನ್ನನ್ನು ಕ್ಷಮಿಸುವರೆಂದಾಶಿಸುತ್ತೇನೆ—ಅವರು ತಮ್ಮ 'ರಾಷ್ಟ್ರೀಯತಾ ರಾಜ್ಯ'ಕ್ಕೇನೇ ಹೋಗಬಹುದು. (ಮಂತ್ರಿ ಪಕ್ಷೀಯರ ಹರ್ಷರವ)

ಮಿ. ಅನ್ಸಾರಿ—ಸಾಮಾಜಿಕ ಬಹಿಷ್ಕಾರವು ದ್ವಿರಾಷ್ಟ್ರ ತತ್ವದ ಪ್ರತಿಫಲವೆಂದ ಸಭಾನಾಯಕರ ಅಭಿಪ್ರಾಯದಲ್ಲಿ ಆ ಬಹಿಷ್ಕಾರವು ನ್ಯಾ[illegible] ದ್ದರಿಂದಲೇ ಆ ಕುರಿತಾವ ಕಾರ್ಯಾಚರಣೆಯನ್ನೂ ಅವರು ಕೈಕೊಳ್ಳದಿರುವರೇ

ಡಾ। ಸುಬ್ಬರಾಯನ್—ನಾನದನ್ನು ನ್ಯಾಯವೆಂದು ಎಂದೂ ಹೇಳಿಲ್ಲ. ಆ ಬಹಿಷ್ಕಾರದ ರದ್ದತಿಗಾಗಿ ಅಗತ್ಯವುಳ್ಳ ಎಲ್ಲಾ ಕಾರ್ಯಗಳನ್ನೂ ನಾನು ಕೈಕೊಂಡಿದ್ದೇನೆ, ಎಂದು ಮಾನ್ಯ ಸದಸ್ಯರಿಗೆ ನನ್ನ ಆಶ್ವಾಸನೆಯಿದೆ. ಇಡೀ ಸರಕಾರವು ಈ ಬಹಿಷ್ಕಾರಕ್ಕೆ ಪೂರ್ಣ ವಿರೋಧವಿದೆ ಎಂದೀ ಸಭೆಯಲ್ಲಿ ನಾನು ಜಾಹೀರು ಮಾಡುತ್ತೇನೆ.

ಮಿ. ರಘುನಾಥನ್—ಗತಕಾಲದ ವರ್ತನೆಗಳ ಒರೆಗಲ್ಲಿನಿಂದಲೇ ಜನರನ್ನು ಪರೀಕ್ಷಿಸಿ ನಿರ್ಧರಿಸುವದೆಂದಾದಲ್ಲಿ, 1942 ರಿಂದ 1945ರ ವರೆಗೂ ಕಾಂಗ್ರೆಸ್ ಚಳವಳಿಗಳನ್ನು ಒಳಗಡೆಯಿಂದ ಮುರಿದುಹಾಕುವುದರಲ್ಲೇ ನಿರತರಾಗಿದ್ದ ಮಹಾನುಭಾವರು ಈಗ ಇಲ್ಲೇ ಇದ್ದುಕೊಂಡು ತಾವು ಅತ್ಯುತ್ತಮ ಕಾಂಗ್ರೆಸಿಗರೆಂಬಂತೆ ನಟಿಸುತ್ತಿರುವದು ಸಭಾ ನಾಯಕರಿಗೆ ಗೊತ್ತೇ? ಅವರ ಗತ ಚರಿತ್ರೆಯ ಕುರಿತೇನು? (ಸಭೆಯಲ್ಲಿ ಮಾತುಗಳು—"ಅದು ನಿಮಗೆ ಸಂಬಂಧಿಸಿದ್ದಲ್ಲ")

ಆರ್. ಯಸ್. ಯಸ್.

ದಶೆಂಬರ್ ತಾ 2ರಲ್ಲಿ ಮದ್ರಾಸ್ ಅಸೆಂಬ್ಲಿಯಲ್ಲಿ—

ಮಿ. ಕೆ. ಸೀತಿ ಸಾಹೇಬ್—ಮಲಬಾರಿನ ರಾಷ್ಟ್ರೀಯ ಸೇವಕ ಸಂಘದ ಕಾರ್ಯ ಕಲಾಪಗಳಿಂದಾಗಿ ಆ ಜಿಲ್ಲೆಯ ಶಾಂತಿ ವ್ಯವಸ್ಥೆಗೆ ಭಂಗ ಬರುವ ಅಪಾಯವಿದೆ ಎಂಬುದು ಸರಕಾರಕ್ಕೆ ತಿಳಿದಿದೆಯೆ

ಡಾ। ಸುಬ್ಬರಾಯನ್—ಹಾಗಾಗುವದೆಂದು ನಂಬಲು ಸರಕಾರಕ್ಕಾವ ಕಾರಣವೂ ದೊರೆತಿಲ್ಲ. ಸಂಘದ ಕಾರ್ಯಕಲಾಪಗಳಿಂದಾಗಿ ಯಾವುದೇ ಶಾಂತಿ ಭಂಗ ಅಥವಾ ಗಲಭೆಯಾದುದು ಸರಕಾರಕ್ಕೆ ತಿಳಿದು ಬಂದಿಲ್ಲ.

ಮಿ. ಕೈಡ್ರೋಸ್—1947ನೇ ನವಂಬರ್ 16ರ ತನ್ನ ಸಭೆಯಲ್ಲಿ ಅ. ಭಾ. ಕಾಂಗ್ರೆಸ್ ಸಮಿತಿಯು ಸಂಘದ ಕಾರ್ಯಕಲಾಪಗಳನ್ನು ಖಂಡಿಸಿ ನಿರ್ಣಯ ಮಾಡಿರುವುದು ಸರಿಯಷ್ಟೆ? ಅದರ ಚಟುವಟಿಕೆಗಳನ್ನು ನಿರ್ಮೂಲಿಸುವ ಕುರಿತು ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳಿಗೆ ಅಲ್ಲಿಂದೇನಾದರೂ ಸೂಚನೆಗಳು ಬಂದಿವೆಯೆ?

ಡಾ। ಸುಬ್ಬರಾಯನ್—ನಾನದಕ್ಕೆ ಸೇರಿದವನಾಗಿದ್ದರೂ ಕೂಡಾ ಒಂದು ಖಾಸಗೀ ಸಂಸ್ಥೆಯ ಯಾವುದೇ ಠರಾವುಗಳಲ್ಲಿ ಇಲ್ಲಿಯ ಮಾನ್ಯ ಸದಸ್ಯರು ಆಸಕ್ತರಾಗಿದ್ದಾರೆಂದು ನನಗನ್ನಿಸುವುದಿಲ್ಲ.

ಶ್ರೀ. ಎ. ಕಾಳೇಶ್ವರರಾವ್—ಅ. ಭಾ. ಕಾಂಗ್ರೆಸ್ ಕಮಿಟಿ ಮತ್ತು ಮಹಾತ್ಮಾ ಗಾಂಧಿಯವರು ವಿಶೇಷತಃ ರಾಷ್ಟ್ರೀಯ ಸೇವಕ ಸಂಘ, ಮುಸ್ಲಿಂ ನೇಶನಲ್ ಗಾರ್ಡ್ಸ್ ಮತ್ತು ಅಕಾಲೀ ಸ್ವಯಂಸೇವಕರ ಹೆಸರುಗಳನ್ನೆತ್ತಿ ಹೇಳಿ, ಅವುಗಳ ಹಿಂಸಾಚರಣೆಗಳನ್ನು ಖಂಡಿಸಿರುವುದು ನಿಜವಲ್ಲವೆ? ಹಾಗಿದ್ದರೆ ಅಂತಹ ಪ್ರತಿಕೂಲ ರೂಪೀ ಸಂಸ್ಥೆಗಳ ವಿರುದ್ಧವಾಗಿ ಸರಕಾರವು ಕೈಕೊಳ್ಳಲಿಚ್ಛಿಸುವ ಕಾರ್ಯಗಳಾವುವು?

ಡಾ। ಸುಬ್ಬರಾಯನ್—ಮಾನ್ಯ ಸರಕಾರೀ ಸದಸ್ಯರು ತಮ್ಮ ರಾಜಕೀಯ ಕಾರ್ಯಗಳ ಮಟ್ಟಿಗೆ ಆ ಸಂಸ್ಥೆಗೆ ಸೇರಿದವರಾಗಿದ್ದರೂ ಕೂಡಾ ಒಂದು ಖಾಸಗೀ ಸಂಸ್ಥೆಯ ನಿರ್ಧಾರಗಳೊಡನೆ ಸರಕಾರಕ್ಕೆ ಸಂಬಂಧವಿಲ್ಲವೆಂದು ಮಲಬಾರಿನ ಸದಸ್ಯರ ಪ್ರಶ್ನೆಗುತ್ತರವಾಗಿ ನಾನೀಗ ತಾನೇ ಹೇಳಿದ್ದೇನೆ. ಅದೇ ಸಮಯದಲ್ಲಿ, ಯಾವುದೇ ಜಾತಿಯದ್ದಾಗಿದ್ದರೂ ಯಾವುದೇ ಒಂದು ಸಂಸ್ಥೆಯು ಶಾಂತಿಭಂಗವಾಗುವಂತೆ ಅಥವಾ ಕಾನೂನು ವ್ಯವಸ್ಥೆಗಳಿಗೆ ಅಪಾಯತಟ್ಟುವ ರೀತಿಯಿಂದ ವರ್ತಿಸಿದಲ್ಲಿ, ಅಂತಹದನ್ನು ಕಠಿಣ ಹಸ್ತದಿಂದ ನಿರ್ಮೂಲಿಸಲೇನು ಮಾಡತಕ್ಕದ್ದೆಂಬುದನ್ನು ಸರಕಾರವು ತಿಳಿದಿರುವುದೆಂದು ನಾನು ಸದಸ್ಯರಿಗಾಶ್ವಾಸನೆ ಕೊಡುತ್ತೇನೆ.

ಮಿ. ಮಹಬೂಬ್ ಅಲಿಬೈಗ್—ರಾಷ್ಟ್ರೀಯ ಸೇವಕ ಸಂಘವು ಜಾತೀಯ ಸಂಸ್ಥೆ ಮತ್ತು ಸೇನಾ ಸಮಾನ ಸಂಸ್ಥೆಯೆಂಬುದು ಮಂತ್ರಿಗಳಿಗೆ ಗೊತ್ತಿದೆಯೆ? ಅದು ಆಕ್ರಮಣಶೀಲ ಸಂಸ್ಥೆಯಿದ್ದು, ಮುಸ್ಲಿಮರ ವಿರುದ್ಧ ದ್ವೇಷಬೋಧೆ ಮಾಡುತ್ತಾ, ರಾಷ್ಟ್ರದ ಶಾಂತಿ ಸೌಹಾರ್ದತೆಗೆ ಅತಿದೊಡ್ಡ ಅಪಾಯವಾಗಿರುವುದು ಗೊತ್ತೆ?

ಡಾ। ಸುಬ್ಬರಾಯನ್—ಮುಸ್ಲಿಂ ನೇಶನಲ್‌ಗಾರ್ಡ್ಸ್ ಮತ್ತು ರಾಷ್ಟ್ರೀಯ ಸೇವಕ ಸಂಘದಂತಹ ಜಾತೀಯ ಸಂಸ್ಥೆಗಳಿವೆಯೆಂದೂ ಸರಕಾರವು ಇವೆರಡರ ಚಲನವಲನಗಳ ಮೇಲೂ ಕಣ್ಣಿಟ್ಟಿದೆಯೆಂದೂ ನಾನೀ ಮೊದಲೇ ತಿಳಿಸಿದ್ದೇನೆ. ಈ ವಿಷಯವಾಗಿ ಅದಕ್ಕೂ ಮಿಕ್ಕಿ ಏನನ್ನು ಹೇಳುವುದಕ್ಕೂ ನಾನು ಸಿದ್ಧನಿಲ್ಲ.

ಮಿ. ಮಹಮ್ಮದ್ ಇಸ್ಮಾಯಿಲ್—ಮುಸ್ಲಿಂ ನೇಶನಲ್ ಗಾರ್ಡ್ಸಿನವರು ಈ ಪ್ರಾಂತ್ಯದ ಕಾನೂನು ಮತ್ತು ವ್ಯವಸ್ಥೆಗೆ ಯಾವ ರೀತಿಯಿಂದಾದರೂ ವಿರೋಧವಿದ್ದ ಕುರಿತು ಸರಕಾರಕ್ಕೇನಾದರೂ ಸುದ್ದಿ ಬಂದುದಿದೆಯೆ?

ಡಾ। ಸುಬ್ಬರಾಯನ್—ಸರಕಾರದ ವಶವಿರುವ ಸುದ್ದಿಗಳು ಗುಟ್ಟಿನವಿರುವುದರಿಂದ ಅವುಗಳನ್ನು ಬಹಿರಂಗ ಪಡಿಸಲು ನಾನು ಸಿದ್ಧನಿಲ್ಲ.

ಶ್ರೀ ಬಿ ಯಸ್. ಮೂರ್ತಿ—ವಿವಿಧ ರಾಜಕೀಯ ಪಕ್ಷಗಳ ಸದಸ್ಯರಾಗಿರುವವರೇ ರಾಷ್ಟ್ರೀಯ ಸೇವಕ ಸಂಘದ ಸದಸ್ಯರೂ ಆಗಿದ್ದಾರೆಂಬುದೂ, ಅವರೆಲ್ಲರೂ ಅಲ್ಲಿ ದೈಹಿಕ ಶಿಕ್ಷಣವನ್ನು ಪಡೆಯುತ್ತಿದ್ದಾರೆಂಬುದೂ, ತನ್ನ ಸದಸ್ಯರಿಗೆ ಸ್ವಸಹಾಯ ಮತ್ತು ಸ್ವಶಕ್ತಿಯ ಅವಲಂಬನೆಯನ್ನು ಕಲಿಸುವುದೇ ಸಂಘದ ಉದ್ದೇಶವೆಂಬುದೂ ಸರಕಾರಕ್ಕೆ ತಿಳಿದಿದೆಯೆ?

ಡಾ। ಸುಬ್ಬರಾಯನ್—ಈ ಸಂಗತಿ ತಿಳಿಸಿದ್ದಕ್ಕಾಗಿ ಮಾನ್ಯ ಸದಸ್ಯರಿಗೆ ಉಪಕೃತನಿದ್ದೇನೆ. ಕಾನೂನು ವ್ಯವಸ್ಥಾ ಪಾಲನೆಯೊಂದೇ ನನಗೆ ಸಂಬಂಧಿಸಿರುವ ವಿಷಯ. ಯಾವ ಸಂಸ್ಥೆಯೇ ಆದರೂ ಕೇವಲ ದೈಹಿಕ ಶಿಕ್ಷಣಕ್ಕೇನೇ ಕಟ್ಟುಬದ್ಧವಿದ್ದರೆ ಸಹಜವಾಗಿ ಸರಕಾರವು ಏನೂ ಆಕ್ಷೇಪಿಸುವಂತಿಲ್ಲ. ಯಾಕಂದರೆ ತಮ್ಮ ಮೇಲೇನಾದರೂ ಧಾಳಿ ನಡೆದಾಗ ಸ್ವರಕ್ಷಣೆ ಮಾಡಿಕೊಳ್ಳಲು ಜನರು ಬಲಶಾಲಿಗಳಾಗಿರಬೇಕು, ಸ್ವಶಕ್ತಿಯನ್ನೇ ಅವಲಂಬಿಸಿರಬೇಕು ಎಂದೇ ಸರಕಾರದ ಅಪೇಕ್ಷೆ. ಆದರೆ ಆದೇ ಕಾಲದಲ್ಲಿ ಜಾತೀಯ ಘರ್ಷಣೆ ಅಥವಾ ವೈಷಮ್ಯಗಳಿಗೆ ಅವಕಾಶ ಕೊಡಬಹುದಾದ ಚಟುವಟಿಕೆಗಳ ಮೇಲೆ ಜವಾಬ್ದಾರಿಯುಳ್ಳ ಸರಕಾರವು ಕಣ್ಣಿಟ್ಟು ಕಾಯಲೇ ಬೇಕಾಗುತ್ತದೆ. ಅಂತಹದನ್ನು ಸರಕಾರವು ಕಠಿಣ ಹಸ್ತದಿಂದ ನಿರ್ಮೂಲಿಸುವುದು.

ಮಿ. ಮಹಮ್ಮದ್ ಇಸ್ಮಾಯಿಲ್—ಇದೇ ರಾಷ್ಟ್ರೀಯ ಸೇವಕ ಸಂಘವು ಜನತೆಯ ಒಂದು ಭಾಗವು ಮತ್ತೊಂದು ಭಾಗದ ಮೇಲೆ ಬಹಿಷ್ಕಾರ ಹಾಕಬೇಕೆಂದು ಬೋಧಿಸುತ್ತಿರುವ ಸಂಗತಿ ಸರಕಾರಕ್ಕೆ ಗೊತ್ತಿದೆಯೆ? ಇದೆಯಾದರೆ ಈ ಕುರಿತು ಸರಕಾರವು ಕೈಕೊಂಡಿರುವ ಕಾರ್ಯಾಚರಣೆಯಾವುವು?

ಡಾ। ಸುಬ್ಬರಾಯನ್—ಮಾನ್ಯ ಸದಸ್ಯರು 'ಜನತೆಯ ಒಂದು ಭಾಗ ಮತ್ತೊಂದು ಭಾಗ' ಎನ್ನುವುದರ ಅರ್ಥವೇನೆಂದು ನನಗೆ ಗೊತ್ತಿದೆ. ಇಂತಹ ಸಂದರ್ಭದಲ್ಲಿ ನಾವು ಸ್ಪಷ್ಟ ಮಾತುಗಳನ್ನಾಡುವುದು ವಾಸಿ. ಅವರನ್ನುವುದು ಮುಸ್ಲಿಮರು ಮತ್ತು ಹಿಂದುಗಳೆಂದು. ಸಾಮಾಜಿಕ ಬಹಿಷ್ಕಾರಕ್ಕೆ ಸರಕಾರದ ಸಮರ್ಥನೆಯಿಲ್ಲವೆಂದು ಸ್ಪಷ್ಟ ಹೇಳಬಿಚ್ಛಿಸುತ್ತೇನೆ. ಸಾಮಾಜಿಕ ಬಹಿಷ್ಕಾರಗಳು ಎಲ್ಲಿಯಾದರೂ ಬಿದ್ದರೆ, ಅಂತಹ ಬಹಿಷ್ಕಾರಗಳಿಗೆ ಕಿಬಿ ಬಿದ್ದವರ ರಕ್ಷಣೆಗಾಗಿ ಸರಕಾರವು ಅಗತ್ಯವುಳ್ಳ, ಎಲ್ಲಾ ಕಾರ್ಯಕ್ರಮಗಳನ್ನೂ ಕೈಕೊಳ್ಳುವದೆಂದು ನಾನು ಸಾರಿ ಸಾರಿ ಹೇಳಿದ್ದೇನೆ.

ಶ್ರೀ ವಿ. ರಾಘವನ್—ಬಂಗಾಳ ಮತ್ತು ಬಿಹಾರುಗಳಲ್ಲಿ ಮುಸ್ಲಿಮರಿಗಾದುದಕ್ಕೆ ಪ್ರತೀಕಾರವಾಗಿ ತಾವು ಹಿಂದುಗಳ ವಿರುದ್ಧ ಬಂಡಾಯವೇಳಲು ಸಿದ್ಧರಿದ್ದೇವೆ ಎಂದು ಮಲಬಾರು ಜಿಲ್ಲಾ ಮುಸ್ಲಿಂ ಲೀಗ್ ಕಾರ್ಯಕಾರೀ ಸಮಿತಿಯು ಠರಾವು ಮಾಡಿದನಂತರವೇ ಮಲಬಾರಿನಲ್ಲಿ ರಾಷ್ಟ್ರೀಯ ಸೇವಕ ಸಂಘವು ವಿಶೇಷ ಜನಪ್ರಿಯವಾಗ ಹತ್ತಿದೆಯೆಂಬುದು ಮಂತ್ರಿಗಳಿಗೆ ಗೊತ್ತಿದೆಯೆ?

ಡಾ। ಸುಬ್ಬರಾಯನ್—ಇಂದಿನ ಸ್ಥಿತಿಗಳಿಗೆ ವಿವಿಧ ಜಾತೀಯ ಸಂಸ್ಥೆಗಳ ಚಟುವಟಿಕೆಗಳೇ ಕಾರಣವೆಂದೂ ಸರಕಾರವು ಅವುಗಳ ಮೇಲೆ ಕಣ್ಣಿಡಲು ಕಾರಣವೂ ಅದೇ ಎಂದೂ ನಾನು ನಿನ್ನೆ ಹೇಳಿದ್ದೇನೆ. ಮಾನ್ಯ ಸದಸ್ಯ ರಾಘವನರು ಕೊಟ್ಟ ಸುದ್ದಿಯನ್ನು ಗ್ರಹಿಸಿಕೊಂಡು, ಅಂತಹ ಚಟುವಟಿಕೆಗಳನ್ನು ನಿಲ್ಲಿಸಲು ನೋಡುತ್ತೇನೆ. ಬಂಗಾಳ, ಬಿಹಾರ್ ಅಥವಾ ಬೇರೆಡೆಗಳಲ್ಲಿ ನಡೆದುದಕ್ಕೂ ಈ ಪ್ರಾಂತ್ಯದ ಜನರಿಗೂ ಸಂಬಂಧವಿಲ್ಲ. ಅಂತಹ ಘಟನೆಗಳಿಂದಾಗಿ ಇಲ್ಲಿ ಎದ್ದಿರುವ ಪ್ರತಿಕ್ರಿಯಾ ಭಾವನೆಗಳನ್ನು ನಾನು ಬಲ್ಲೆ. ಆದರೆ ಅವು ಎರಡು ಸಮಾಜಗಳವರಿಗೂ ಹಾನಿಕರವಾಗಬಲ್ಲ ದುಸ್ಸಂಬಂಧಗಳನ್ನು ನಿರ್ಮಿಸದಂತೆ ನೋಡುವಷ್ಟು ಇಲ್ಲಿಯ ಜನರು ಶಾಂತತೆ ಹಾಗೂ ಜಾತೀಯ ಐಕ್ಯತೆಯಲ್ಲಿ ತರಬೇತಿ ಹೊಂದಿರುವರೆಂದು ನನ್ನ ನಂಬಿಕೆ. ನಾನೀ ಮಾತನ್ನಾಡುತ್ತಿರುವುದು ಎರಡೂ ಜಾತಿಗಳ ಪರವಾಗಿ, ಹೊರತು ಒಂದರ ಪರವಾಗಿ ಅಲ್ಲ. ಆದ್ದರಿಂದಲೇ ಇಲ್ಲಿ ಹೇಳಲ್ಪಟ್ಟ ಮಾದರಿಯ ಆ ಠರಾವು ಪಾಸಾಗಿದ್ದಲ್ಲಿ ನಾನದನ್ನಿಲ್ಲಿ ಖಂಡಿಸುತ್ತಿರುವುದು. ಆದರೆ ಅಂತಹ ಠರಾವು ಪಾಸಾಗಿರುವುದು ಹೌದೇ ಎಂಬುದನ್ನು ನಾನು ವಿಚಾರಿಸಿ ತಿಳಿದು, ಹೌದಾದಲ್ಲಿ ಸರಕಾರವು ಅಗತ್ಯವುಳ್ಳ ಕಾರ್ಯಕ್ರಮ ಕೈಕೊಳ್ಳಲಿಕ್ಕಿದೆ.

ಮಿ. ಮೊೖದಿನ್ ಕುಟ್ಟಿ—ಇದಿರು ಕಡೆಯ ಮಾನ್ಯ ಮಿತ್ರರು ಹೇಳಿದಂಥಾ ಠರಾವು ಎಂದಿಗೂ ಮಲಬಾರ್ ಲೀಗ್ ಸಮಿತಿಯಲ್ಲಿ ಆದುದೇ ಇಲ್ಲವೆಂದೂ 'ಆ ಮಿತ್ರರು ಸಂಗತಿಯನ್ನು ವಿಚಾರಿಸಿ ನೋಡಿಕೊಳ್ಳದೆ ತೀರಾ ಬೇಜವಾಬ್ದಾರಿಯ ಮಾತಾಡುವರೆಂದೂ ಸರಕಾರಕ್ಕೆ ಗೊತ್ತಿದೆಯೆ?

ಡಾ। ಸುಬ್ಬರಾಯನ್—ಈ ಸಭೆಯ ಇಬ್ಬರು ಮಾನ್ಯ ಸದಸ್ಯರು ವಿಷಯದ ಮೂಲದ ಕುರಿತೇ ಭಿನ್ನಾಭಿಪ್ರಾಯಪಟ್ಟಿರುವಾಗ, ನನಗೆ ಪತ್ರವಾರ್ತೆ ಕೊಟ್ಟಾರೆಂಬ ವಿಶ್ವಾಸವಿದ್ದಂತೆ ಸಂಬಂಧಪಟ್ಟ ಅಧಿಕಾರಿಗಳಿಂದಲೇ ಅಗತ್ಯವುಳ್ಳ ಸಂಗತಿಗಳನ್ನು ಕೇಳಿ ತಿಳಿಯುವುದೊಂದೇ ನನ್ನ ಪಾಲಿಗುಳಿದಿದೆ.

ಮಿ ಇಸ್ಮಾಯಿಲ್—ಇಂತಹ ಬೇಜವಾಬ್ದಾರೀ ಹೇಳಿಕೆಗಳು ಬಾಯ್ದೆರೆಯಾಗಿ ಮಾತ್ರವಲ್ಲ, ಮುದ್ರಿತ ಕರಪತ್ರಗಳ ರೂಪದಿಂದಲೂ ಪ್ರಾಂತ್ಯ ತುಂಬಾ ಪ್ರಕಟವಾಗುವವೆಂದೂ, ಪ್ರಾಂತ್ಯದ ಶಾಂತತೆಗೆ ಇವರಿಂದ ಬಹಳ ಧಾನಿತಟ್ಟಿದೆಯೆಂದೂ ಸರಕಾರಕ್ಕೆ ಗೊತ್ತಿದೆಯೆ?

ಡಾ। ಸುಬ್ಬರಾಯನ್—ಮಾನ್ಯ ಮಹನೀಯರು ತಾನಂದ ರೀತಿಯ ಯಾವುದೇ ಕರಪತ್ರಗಳನ್ನು ತೋರಿಸುವ ಅನುಗ್ರಹ ಮಾಡಿದರೆ, ಮತ್ತವು ಜಾತೀಯ ಸಂಬಂಧವನ್ನು ಉದ್ರೇಕಿಸುವಂತಹವೆಂದು ನನಗೆ ತೋರಿದರೆ, ನಾನಾ ಕುರಿತು ತಕ್ಕ ಕಾರ್ಯಾಚರಣೆ ಕೈಕೊಳ್ಳುವೆನು ಖಂಡಿತ.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ- ತಾರುಣ್ಯದುಬ್ಬಿ
ನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—
ಇವನ್ನು ಹೃದಯಭೇದಕವಾಗಿ ಚಿತ್ರಿಸುವ ನಾಟಕಪುಸ್ತಕ

ವ್ಯಭಿಚಾರಿಣಿ ಯಾರು?

ಪವಿತ್ರ ಪ್ರೇಮವು ಎಂತಹ ಅಪಮಾನ, ನಿಂದೆ, ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯವು ನಿಶ್ಚಯವೆಂಬುದನ್ನು ಮನಗಾಣಿಸುವ ನವೀನ ಪ್ರಕಟಣೆ.

ಬೆಲೆ: ರೂ. 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದಾವಕ,
ವಿಚಾರ ಪಚೋದಕ ನವೀನ ನಾಟಕ-

ಪ್ರೇಮ ವಿಜಯ

ಪವಿತ್ರಪ್ರೇಮಕ್ಕೆ ಜಾತಿಮತಗಳ ಭಿನ್ನತೆಯು ತಡೆಯಾದೀತೆ?
ತಡೆಯಾಗಿ ಬಂದಲ್ಲಿ ಅದರ ಪರಿಣಾಮವೇನಾದೀತು?
ಎಂಬುದನ್ನು ಚಿತ್ರಿಸುವ ಅತ್ಯಾಧುನಿಕ ಸಾಮಾಜಿಕ ನಾಟಕ.
ಎರಡು ಪುಸ್ತಕಗಳೂ ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟು
ಕಿರಿಯರ ಪ್ರಪಂಚದಿಂದ ಪ್ರಕಟಿಸಲ್ಪಟ್ಟವುಗಳು.

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇದಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬರೆದವರು:-ಶ್ರೀ. ಪಿ. ಶೀನ ಶೆಟ್ಟರು.
ಅಭಿನಯಿಸಲೂ ಓದಲೂ ತಕ್ಕುದಾದ ಚೊಕ್ಕ ನಾಟಕ.
ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ದೇಶಕಾಲಕ್ಕೊಪ್ಪುವ ನವೀನ ಪುಸ್ತಕ

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ. ಮೈಜುಮ್ಮೆನಿಸುವ ಹಲವು ಸನ್ನಿವೇಶಗಳು!

ಬೆಲೆ ಬರೀ ರೂ. 1—4—0

ಕಿರಿಯರ ಪ್ರಪಂಚದ ಪ್ರಕಟಣೆ

ಕದಂಬ

ಹನ್ನೆರಡು ಕತೆಗಳ ಸಂಗ್ರಹ

ಬರೆದವರು:-ಶ್ರೀಮತಿ ಸರಸ್ವತಿಬಾಯಿ ರಾಜವಾಡೆಯವರು
('ಪ್ರಕಾಶ' ನಾಟಕದ ಅನುವಾದಕಿ; 'ಆಹುತಿ ಇತ್ಯಾದಿ ಕತೆಗಳು' ಕಥಾಗುಚ್ಛದ ಲೇಖಕಿ.)
ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ ಚಿತ್ರಿಸುವ ಕಥಾ ಸಂಗ್ರಹ. ಬೆಲೆ. 1—4—0

ಮನೆಮದ್ದು-*Home Remedies*

ಬೆಲೆ ರೂ. 2-0-0

ಬರೆದವರು:—ಡಾ| ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್. ಉಡುಪಿ.

'Ably Written—Quite up-to-date—Valuble Service'
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್, ವೈದ್ಯರತ್ನ ಕೆಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ., ಸಿ. ಎಮ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿ-ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ. ಹೆಂಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200. ಕಾಹಿಲೆಗಳಿಗೆ 1000 ಮನೆಮದ್ದುಗಳನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಬುಕ್ ಡಿಪೊ ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ದೇಶಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಈ ಔಷಧದ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರಿಂದ ೫ ಬಾಟ್ಲಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಶ್ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕ ಹಾದ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜಂಟರು:—ಪ್ರೊಫ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಝುಜು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಕೊಳೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂದಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ   ಪೋಸ್ಟ ಖರ್ಚ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ:ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಶೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Ayurveda Oushadhalaya GADAG

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

ಅಂತರಂಗ
ಅಖಿಲ ಕರ್ನಾಟಕ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
6 ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

18-12-1947

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-6
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೭ ವಾರ ೧೬

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister, Govt. of Madras.

Vol. 27 No. 16

THE CANARA MUTUAL Assurance Company, Limited.

Estd: 1935

H. O. UDIPI, S. Kanara.

BONUS DECLARED FOR 8 YEARS

We are glad to announce that we have declared a Bonus for 8 years from 1939 to 1946 both years inclusive as also an interim bonus for the next valuation period.

T. R. A. Pai,
Managing Director

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946-- **3.28 Crores**

Our Chief Agency New business in 1946 about **54 Lakhs**

Our exprience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building,
Central Office, Udipi:-

Branches at:

Mangalore, Calicut, Trivandrum, Madura, Madras, Bangalore, & Bombay.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 400ದ 8 ಬೊಟ್ಟು, ಸಣ್ಣಮಕ್ಕಳಿಗೆ 100ದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ। ನಾಯಕ್ ಕನಸ್ಲಿಂಗ್ ರೂಮ್ ಎಂಡ್ ಫಾರ್ಮಸಿ; ಡಾ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಪಿ। ಜಿ। ಆಚಾರ್ಯ್ಸ ಫಾರ್ಮಸಿ; ಡಾ। ಕೆ। ಶೇಷಗಿರಿ ಶೆಟ್ಟಿ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ಧ್ಯೇಯವಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ-

ದಿ ವಿಜಯಾ ಬ್ಯಾಂಕ್, ಲಿಮಿಟೆಡ್.

ಹೆಡ್ ಆಫೀಸು: ಮಂಗಳೂರು.

ಶಾಖೆಗಳು: ಬಿ. ಸಿ. ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಮೈಸೂರು, ಕಾರ್ಕಳ, ಪುತ್ತೂರು, ಕಾಸರಗೋಡು, [illegible], ಮಡಿಕೇರಿ ಮತ್ತು ಮುಂಬಯಿ.

THE VIJAYA BANK, LIMITED.

ಬರುತ್ತಾರೆ! ಬೇಗನೇ ಬರುತ್ತಾರೆ!! ಬರುತ್ತಾರೆ!!!

ಶ್ರೀ ಜೈಹಿಂದ್ ಸಂಗೀತ ನಾಟ್ಯಕಲಾ ಸೇವಾಸಂಘ.

ಕೋಟ. ದ. ಕ.

ಇವರು ಉಡುಪಿಯ ಎಲ್ಲುಬಂಡಾರಿ ಗದ್ದೆಯ ತಮ್ಮ "ಧನಲಕ್ಷ್ಮೀ" ರಂಗಮಂಟಪದಲ್ಲಿ ಆಡಿತೋರಿಸುವ ತಮ್ಮ ಅತ್ಯಾಧುನಿಕ ರೀತಿಯ ನಾಟಕಗಳ ತಾರೀಕನ್ನು ನಿರೀಕ್ಷಿಸಿರಿ!

ಮೆನೇಜರ್. **H. L. Hande**

ವ್ಯವಸ್ಥಾಪಕ **H. R. Hande Bros.**

Nambiar's

ARYA VAIDYA SALA

UDIPI

Ideal House for Ayurvedic Treatment.

T. M. Kelu Nambiar,
Vaidya

ವಿಮೆ ಮಾಡಲಿಕ್ಕೆ, ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಾರ್ಯಾಲಯ:- ಧಾರವಾಡ,

ಹೆಚ್ಚಿನ ಸವಲತ್ತಿನ ಬಗ್ಗೆ—

ಪೋಸ್ಟು ಬಾಕ್ಸ ನಂಬ್ರ 10, ಉಡುಪಿ, ಇವರಿಗೆ ಬರೆಯಿರಿ.

ಗಡಿನಾಡಿನ ಖಾನ್ ಸಹೋದರರು ಹೇಗಿದ್ದಾರೆ?

(ಯು. ಪಿ. ಎ. ಮಂಡಲ ಬಾತ್ಮೀದಾರ ಜೇಮ್ಸ್ ಡಬ್ಲ್ಯೂ. ಮಿಖಾಯೆಲ್ಸ್ ಎಂಬವರ ಅನುಭವ).

ನಾನು ಮಿ. ಮೆಹರ್‌ಚಂದ ಖನ್ನಾರನ್ನು (ಕಾಂಗ್ರೆಸ್ ಮಂತ್ರಿ ಮಂಡಲದಲ್ಲಿ ಹಣಕಾಸಿನ ಮಂತ್ರಿಯಾಗಿದ್ದು, ಶಸ್ತ್ರ ತಯಾರಿಸುತ್ತಿದ್ದಾರೆಂಬ ಆರೋಪದಿಂದ ಈಗಿನ ಲೀಗ್ ಸರಕಾರದಿಂದ ದಸ್ತಗಿರಿ ಮಾಡಲ್ಪಟ್ಟವರು) ಪೇಶಾವರದ ಸಾದರ್ ರಸ್ತೇ ಬಂಗಲೆಯಲ್ಲಿ ಒಕ್ಟೋಬರ್ 31ರಲ್ಲಿ ಪ್ರಥಮತಃ ಭೇಟಿಯಾಗಿದ್ದೆ. ಅಲ್ಲಿಗೆ ಕರೆಯಲ್ಪಟ್ಟು ನಾನು ಹೋದಾಗ ಎರಡು ನಳಿಗೆಯ ಕೋವಿ ಹಿಡಿದಿದ್ದ ಪಹರೇಗಾರನು ದೊಡ್ಡ ಸಂಕಲೆಯುಳ್ಳದ್ದ ಗೇಟಿನ ಮೂಲಕ ಒಳಗೆ ಬಿಟ್ಟ. ಒಳಗೆ ಮನೆ ಖಾಲಿಬಿದ್ದಂತಿತ್ತು. ನಾನು ಮಿ. ಖನ್ನಾರೊಂದಿಗೆ ಒಂದು ಘಂಟೆಗೂ ಮಿಕ್ಕಿ ಮಾತಾಡಿದೆ; ಈ ಸಂಭಾಷಣೆಯ ವೇಳೆ ಅವರು ತನ್ನ ವಠಾರದಲ್ಲಿ ಮೇಲೆ ಕೆಳಗೆ ಹೋಗುತ್ತಾ ಮಾತಾಡಿದ್ದರು. ನನಗೆ ಕುಳಿತುಕೊಳ್ಳಲಾಸನ ಕೊಡದುದಕ್ಕಾಗಿ ಅವರು ನನ್ನ ಕ್ಷಮೆಯಾಚಿಸಿದರು. "ನನ್ನ ಜೀವಮಾನವಿಡೀ ಚಟುವಟಿಕೆಯಲ್ಲೇ ನಿರತನಾಗಿರುವ ಮನುಷ್ಯ ನಾನು. ಈಗಿನಂತೆ ಮೂಲೆ ಹಿಡಿದು ಕೂತುಕೊಳ್ಳುವ ಅಭ್ಯಾಸವೇ ನನಗಿಲ್ಲ" ಎಂದರವರು. "ಕೊನೆಯ ವಿಮಾನ ಅಥವಾ ಟ್ರೈನು ಹೊರಡುವ ವರೆಗೂ ಇಲ್ಲಿಯೇ ನಿಲ್ಲಬೇಕಾದುದು ನನ್ನ ಮತದಾರರ ಕಡೆಗಿನ ನನ್ನ ಕರ್ತವ್ಯವಾಗಿದೆ" ಎಂದರು. ಡಾ| ಖಾನ್ ಸಾಹೇಬರಲ್ಲಿಗೆ ನನ್ನನ್ನು ಕರೆದೊಯ್ದು ಬಿಡುತ್ತೇನೆಂದು ಮಿ. ಖನ್ನರು ಮಾತುಕೊಟ್ಟಿದ್ದರು. ಆದರೆ ಹೊರಡೋಣವೆಂದು ನಾನವರನ್ನು ಮತ್ತೊಮ್ಮೆ ಕರೆಯುವ ಹೊತ್ತಿಗೆ ಅವರು ದಸ್ತಗಿರಿಯಾಗಿದ್ದರು.

ಕೆಂಪಂಗೀದಳ ಹೇಗಿದೆ?

ಗಡಿನಾಡು ಪ್ರಾಂತ್ಯದ ಮಂತ್ರಿ ಪಕ್ಷೀಯರನ್ನುತ್ತಿದ್ದಾರೆ-ಕೆಂಪಂಗೀದಳ (ಖುದಾಯಿಕಿದ್ಮತ್‌ಗಾರರು) ಈಗ ರಾಜಕೀಯವಾಗಿ ಸತ್ತೇ ಹೋಗಿದೆ; ಇನ್ನದು ಲೀಗನ್ನು ಇದಿರಿಸುವ ಸ್ಥಿತಿಯಲ್ಲಿಲ್ಲ, ಎಂದು. ಸರಿಯಾದ ರೀತಿಯಲ್ಲೊಂದು ಸಾರ್ವತ್ರಿಕ ಚುನಾವಣೆ ನಡೆದಲ್ಲಿ ತಾವು ಅತ್ಯಧಿಕ ಬಹುಮತದಿಂದ ಗೆದ್ದು ಬರುವುದು ಖಂಡಿತವೆಂದು ಕೆಂಪಂಗಿಯವರ ಅಂಬೋಣವಿದೆ. ಸಂಗತಿ ಜ್ಞಾನವುಳ್ಳ ಬ್ರಿಟಿಷರ ಮತ್ತು ನಿಷ್ಪಕ್ಷಪಾತೀ ವಿಚಾರಿಗಳ ಅಭಿಪ್ರಾಯವು ಇವೆರಡರ ಮಧ್ಯಗಾಮಿಯಿದೆ. ಅವರ ಮುಖ್ಯವೇದಿಕೆಯೀಗ ಜಾರಿ ಹೋಗಿರುವುದಾದರೂ ಖಾನ್ ಸಹೋದರರಿಗೆ ವ್ಯಕ್ತಿಗತ ರಾಜಕೀಯ ಬೆಂಬಲವು ಈಗಲೂ ಬಹಳವಿದೆ ಎಂಬುದನ್ನು ಇವರೆಲ್ಲರೂ ಒಪ್ಪುತ್ತಾರೆ. ಈ ದಿನವೇ ಚುನಾವಣೆ ನಡೆದಲ್ಲಿ ಕೆಂಪಂಗಿಯವರಿಗೆ ಅರೆವಾಸಿ ಮತಗಳು ದೊರೆಯಬಹುದೆಂದು ಇವರ ಅಭಿಪ್ರಾಯ. ಸಮ್ಮಿಶ್ರ ಮಂತ್ರಿಮಂಡಲವಾಗಲಿದೆ, ಎಂದು ಏನೇನೋ ವಾರ್ತೆಗಳು ಹಬ್ಬಿವೆಯಾದರೂ ಸರಕಾರವು ಖುದಾಯಿಕಿದ್ಮತ್‌ಗಾರರನ್ನು ದಸ್ತಗಿರಿಮಾಡುತ್ತಲೇ ಇದೆ. ಈ ರಾಜಕೀಯ ಜಗಳಗಳ ಹಿನ್ನೆಲೆಯಲ್ಲಿರುವ ಒಂದು ಸತ್ಯಸ್ಥಿತಿಯೆಂದರೆ ಪ್ರಧಾನಿ ಮಿ. ಅಬ್ದುಲ್ ಕ್ವಯುಮ್ ಖಾನರ ಮಂತ್ರಿಮಂಡಲಕ್ಕೆ, ಹಿಂದೂ ಸಿಖ್ ಸದಸ್ಯರು ಗೈರುಹಾಜರಿದ್ದರೂ ಕೂಡಾ ಪ್ರಾಂತಿಕ ಎಸೆಂಬ್ಲಿಯಲ್ಲಿ ಬಹುಮತವಿಲ್ಲದಿರುವುದು. ಆದ್ದರಿಂದ ಮಂತ್ರಿ ಸಮಿತಿಯು ಒಂದೋ ಇಡೀ ಕೆಂಪಂಗೀ ಪಕ್ಷವನ್ನು, ಇಲ್ಲವೇ ಅದರ ಒಂದು ಭಾಗವನ್ನು ತನ್ನ ಕಡೆಗೆಳೆದುಕೊಳ್ಳಬೇಕು; ಅಥವಾ ವಿರೋಧವನ್ನು ಬಿಡುವಂತೆ ಇದಿರು ಪಕ್ಷದ ಮೇಲೆ ಒತ್ತಾಯ ಹಾಕಬೇಕು. ಈ ನಡುವೆ ಖುದಾಯಿ ಕಿದ್ಮತ್‌ಗಾರ ಸಂಸ್ಥೆಯು ಕಾಂಗ್ರೆಸಿನ ಸಂಬಂಧವನ್ನು ಕಡಿದುಕೊಂಡಿದೆ; ಕಾಂಗ್ರೆಸ್ ತ್ರಿವರ್ಣ ಧ್ವಜವನ್ನು ಬಿಟ್ಟಿದೆ. ಮತ್ತದು ಎಂದಿಗೂ ಸತ್ತಿಲ್ಲವಾದರೂ ಕಾರ್ಯಾಚರಣೆಗಳನ್ನೆಲ್ಲಾ ಸದ್ಯ ಬದಿಗಿಟ್ಟು ಕುಳಿತಿದೆ.

ಲೀಗ್ ಸರಕಾರದ ಭವಿಷ್ಯ?

ಸರ್ದರ್ಯಾಬಿನಲ್ಲಿ ಸೆಪ್ಟೆಂಬರ್ 3ರಲ್ಲಿ ನಡೆದ ಸಮ್ಮೇಲನದಲ್ಲಿ, ಕೆಂಪಂಗಿಯವರು ಮಿ. ಅಬ್ದುಲ್ ಗಫಾರ್ ಖಾನರ ಘೋಷಣೆಯನ್ನು ಶಿರಸಾವಹಿಸಿಕೊಂಡರು; ಪಾಕಿಸ್ತಾನ್ ಮತಗಣನಾ ಸೃಷ್ಟಿ ಮರೆತು ಹೋಗುವ ವರೆಗೆ ಮತ್ತು ಕ್ವಯುಮ್ ಸರಕಾರೀ ಕೋಟೆಯ ದುರ್ಬಲ ಭಾಗಗಳನ್ನು ಕಂಡುಕೊಳ್ಳುವ ವರೆಗೆ ಸುಮ್ಮಗಿದ್ದು ಕಾಯುವ ಧೋರಣೆಯನ್ನೀಗ ಅವರು ವಹಿಸಿದ್ದಾರೆ. ಢಿಕ್ಕಿ ಹೊಡೆಯದೆ, ಪಕ್ಕಕ್ಕೆ ಸರಿದು ನಿಂತಿರಬೇಕೆಂಬ ಬಾದಶಹಾಖಾನರು ಹಾಕಿದ್ದ ತಡೆಗೆ ಅಲ್ಲಿಯ ದಸ್ತಗಿರಿಗಳೂ, ದಸ್ತಗಿರೀ ನಿರೀಕ್ಷೆಗಳೂ ಇನ್ನಷ್ಟು ಪುಷ್ಟೀಕರಣ ಕೊಟ್ಟುವೆಂಬುದನ್ನು ನಾನಲ್ಲಿ ಕಂಡುಕೊಂಡಿದ್ದೇನೆ. ಖಾನ್ ಸಹೋದರರನ್ನು ಸಂಧಿಸಬೇಕೆಂಬ ನನ್ನ ಪ್ರಥಮ ಪ್ರಯತ್ನವು ಫಲಿಸಲಿಲ್ಲ. ಪೇಶಾವರದಲ್ಲಿ ನಾನು ಭೇಟಿಕೊಟ್ಟವರೆಲ್ಲರೂ ನನ್ನನ್ನು ಕಂಡು ದಿಗಿಲು ಬಿದ್ದಿದ್ದರು. ಕೆಂಪಂಗೀ ನಾಯಕರೊಡನೆ ವಿದೇಶೀ ಬಾತ್ಮೀದಾರನೊಬ್ಬನು ಮಾತಾಡುವುದೆಂದರೆ ಲೀಗ್ ಸರಕಾರದಿದಿರು ಮೂಗುಕೆರೆದಂತೆ ಎಂದೇ ಅವರ ಶಂಕೆ.

ಈ ನಡುವೆ ಗಡಿನಾಡಿನ ಲೀಗ್ ಮಂತ್ರಿ ಮಂಡಲವು ತನ್ನ ಮಂತ್ರಿಗಳ ಸಂಖ್ಯೆಯನ್ನು ಭರ್ತಿಮಾಡಿಕೊಳ್ಳದೇನೇ ಸಾಗುತ್ತಿದೆ. ತರಬೇತಿ ಹೊಂದಿದ ಜನರ ಅಭಾವವೂ, ಉದ್ಯೋಗಗಳ ವಿತರಣೆಗಳ ದೆಸೆಯಿಂದ ಲೀಗಿನಲ್ಲೇ ಉಂಟಾಗಿದ್ದ ಒಳಜಗಳಗಳೂ, ಉಳಿದ ಮಂತ್ರಿಗಳನ್ನು ನೇಮಿಸಿಕೊಳ್ಳದಂತೆ ತಡೆಗಟ್ಟಿವೆ. ಪ್ರಥಮ ಲೀಗ್ ಮಂತ್ರಿ ಮಂಡಲದ ಯಾವನೊಬ್ಬ ಸದಸ್ಯನಾದರೂ, ಅವರ ಸಾರ್ವತ್ರಿಕ ಅಪ್ರಿಯತೆಯ ದೆಸೆಯಿಂದಾಗಿ, ಎಂದಿಗೂ ಆರಿಸಲ್ಪಡಲಾರನೆಂದು ಕಾಂಗ್ರೆಸ್ ಅನುಯಾಯಿಗಳ ಅಂಬೋಣವಿದೆ. ಕಳೆದ ಮತಗಣನೆಯ ಫಲಿತಾಂಶವು ತನಗಾದ ಅಪಜಯವಲ್ಲ, ಮತ್ತದು ತಮ್ಮ ರಾಜಕೀಯದ ಇಳಿಹಾರಲ್ಲವೆಂದೇ ಕೆಂಪಂಗಿಯವರ ವಾದವಿದೆ. ಅತ್ತ ಕಂದರವಲಯದಲ್ಲಿ ಇಪಿ ಫಕೀರನಾದರೋ ಮಂತ್ರಿ ಮಂಡಲವಿತ್ತಿದ್ದ ನಿಶ್ಯರ್ತ ಬಿಡುಗಡೆಯ ಕುರಿತು ಮಾತೇನೂ ಆಡದೆ ಮೌನವಿದ್ದಾನೆ. ಪ್ರಾಂತ್ಯದಲ್ಲಿ ಬ್ರಿಟಿಷ್ ಅಧಿಕಾರಿಗಳನ್ನೂ ಬ್ರಿಟಿಷ್ ಗವರ್ನರನನ್ನೂ ಇಟ್ಟುಕೊಂಡುದರಿಂದ ಇಪಿ ಫಕೀರನು ಪಾಕಿಸ್ತಾನಕ್ಕೆ ವಿರೋಧವಿದ್ದಾನೆ ಎಂದು ಡಾ| ಖಾನ್ ಸಾಹೇಬರ ಅಭಿಮತವಿದೆ. ಖಾನ್ ಸಾಹೇಬರಂದರು: "ಇಪಿ ಫಕೀರನು ಹೋರಾಟಕ್ಕೇಳುವಾಗಲೆಲ್ಲಾ, ಪಠಾಣರು ಅವನನ್ನು ಸುತ್ತುಗಟ್ಟುತ್ತಾರೆ. ಆದರೆ ವಿಧಾಯಕ ಕಾರ್ಯದ ಮಟ್ಟಿಗೆ ಅವನಿಗೆ ಅವರ ಮೇಲಾವ ಹತೋಟಿಯೂ ಇಲ್ಲ".

ಖಾನ್ ಸಹೋದರರ ಭೇಟಿ

ಕಳೆದ ಅಗೋಸ್ತು 22ರಲ್ಲಿ ಖುದಾಯಿಕಿದ್ಮತ್‌ಗಾರ ಮಂತ್ರಿ ಮಂಡಲವು ಡಿಸ್‌ಮಿಸ್ ಮಾಡಲ್ಪಟ್ಟಂದಿನಿಂದ ಭಾರತಕ್ಕೆ ಯಾರ ಸುದ್ದಿಯೇ ಬರುತ್ತಿಲ್ಲವೋ ಆ ಖಾನ್ ಸಹೋದರರನ್ನು ಕಾಣಬೇಕೆಂಬುದೇ ಪೇಶಾವರ ಪ್ರಯಾಣಗಳಲ್ಲಿದ್ದ ನನ್ನ ಮುಖ್ಯ ಗುರಿಗಳಲ್ಲೊಂದು. ಅವರಿಬ್ಬರ ಪೈಕಿ ಯಾರೂ ಪೇಶಾವರದಲ್ಲಿರಲಿಲ್ಲ. ಆದ್ದರಿಂದ ಅವರ ಭೇಟಿಮಾಡಿಸಿಕೊಡುವಂತೆ ನಾನವರ ರಾಜಕೀಯ ಸಮರ್ಥಕರ ಸಹಾಯಪಡೆಯಲು ಹವಣಿಸಿದ್ದೆ. ಇಲ್ಲಿ ನನ್ನ ಮೊದಲನೇ ಮಾರ್ಗದರ್ಶಿಯಾಗಿದ್ದವರು ಮಿ. ಮೆಹರ್‌ಚಂದ್ ಖನ್ನಾ. ಅವರು ಮಾತುಕೊಟ್ಟಿದ್ದಂತೆ ಚಾರ್ಸದ್ದಾದಲ್ಲಿರುವ ಡಾ| ಖಾನ್ ಸಾಹೇಬರ ಮನೆಗೆ ನನ್ನನ್ನು ಕರೆದುಕೊಂಡು ಹೋಗುವಂತೆ ಹೇಳಲು ನಾನು ಖನ್ನಾರ ಮನೆಗೆ ಹೋದಾಗ ಅವರಲ್ಲಿರಲಿಲ್ಲ; ಈ ಮಾಜೀ ಅರ್ಥಿಕ ಮಂತ್ರಿ ಹಿಂದಿನ ರಾತ್ರಿಯಲ್ಲೇ ದಸ್ತಗಿರಿಯಾಗಿದ್ದರೆಂದು ತಿಳಿದೆ. ಮಿ. ಖನ್ನಾರವರ ಪೇಶಾವರದ ಅಟಂಜರು ಬಂಗಲೆಯಲ್ಲಿದ್ದ ಮುದಿ ಕೆಂಪಂಗಿಯವನೊಬ್ಬನು, ಒಂದು ಕಾಗದ ಚೂರಿನಲ್ಲಿ ಡಾ| ಖಾನ್ ಸಾಹೇಬರ ಸ್ನೇಹಿತ ಮತ್ತು ರಾಜಕೀಯಾನುಯಾಯಿಯೊಬ್ಬನ ಹೆಸರನ್ನು ಗೀಚಿ, ಅತನಿದ್ದಲ್ಲಿಗೆ ಹೋಗುವಂತೆ ನನಗೆ ಸೂಚಿಸಿದ. ಈ ಮನುಷ್ಯನೂ ಆ ಮೇಲೆ ದಸ್ತಗಿರಿಯಾಗಿದ್ದಾನೆ: ಅಂತೆಯೇ ನಾನು ಅವನಿದ್ದಲ್ಲಿಗೆ ಹೋಗಿ, ಬಂದ ಕಾರ್ಯವನ್ನು ತಿಳಿಸಿದ ಕೂಡಲೇ ಆತ ನನ್ನನ್ನು ತನ್ನ ಮನೆಯ ಹಿಂದಿನ ಕೋಣೆಗೆ ಕರೆದುಕೊಂಡು ಹೋದ. ಅಲ್ಲಿ ಸಿಹಿ ಪಠಾಣೀ ಕಾಫಿಯಾದ ಮೇಲೆ 'ಎಲ್ಲಾ ಕೆಂಪಂಗೀ ಧುರೀಣರನ್ನೂ ದಸ್ತಗಿರಿ ಮಾಡುವ ಮೂಲಕ ಪೋಲೀಸರು ಕೆಂಪಂಗೀ ದಳವನ್ನು ಎಡೆಬಿಡದೆ ದಮನಿಸುತ್ತಿದ್ದಾರೆ" ಎಂದಾತ ದೂರಿದ. "ನನ್ನ ಸರದಿ ಯಾವಾಗ ಬರುವುದೋ ನೋಡಬೇಕು!" ಎಂದಾತ ಹೇಳಿದ್ದ; ಅದು ಒಂದು ವಾರದ ನಂತರ ಬಂತು! ನಮ್ಮ ಸಂಭಾಷಣೆಯ ಸಮಯದಲ್ಲಿ ಆತ ದಿಗಿಲುಗೊಂಡಿದ್ದ. ಡಾ| ಖಾನ್ ಸಾಹೇಬರ ಭೇಟಿಗೆ ಸಹಾಯಕನಾಗುವಂತೆ ನಾನವನನ್ನು ಕೇಳಿದಾಗ ಅವ ಅಕಸ್ಮಾತ್ ಅನ್ಯಮನಸ್ಕನಾದ. "ದುರ್ದೈವವಶಾತ್ ನನಗೀ ದಿನ ಅತಿ ಮುಖ್ಯವಾದ ಬೇರೆ ಕೆಲಸವಿದೆಯಲ್ಲಾ" ಎಂದು ತಿಳಿಸಿದ. ಆತ ನನ್ನನ್ನು ಖಾನ್ ಅಬ್ದುಲ್ ಗಫರ್‌ಖಾನರ ಅಳಿಯನಾದ ಮಾಜೀ ಮಂತ್ರಿಯ ಬಳಿಗೆ ಕಳುಹಿಕೊಟ್ಟ. ನಾನು ಹೋದಾಗ ಇವರು ತನ್ನ ತೋಟದಲ್ಲಿ ಸೇವಕರೊಡನೆ ಪ್ರಜಾಸತ್ತಾತ್ಮಕವಾಗಿ ಮಾತುಕತೆ ನಡೆಸುತ್ತಿದ್ದುದನ್ನು ಕಂಡೆ. ಅವರು ನನ್ನೊಡನೆ ಒಳ್ಳೇ ಸ್ನೇಹಾಚಾರ ಪ್ರದರ್ಶಿಸಿದರು. ಆದರೆ ನಾನು ಬಂದ ಉದ್ದೇಶವನ್ನು ತಿಳಿಸಿದ ಕೂಡಲೇ, ಅವರಿಗೂ ಆ ದಿನ ಅತಿಮುಖ್ಯ ಬೇರೆ ಕೆಲಸಗಳಿದ್ದೇ ಇದ್ದುವು! ಆದರೂ ಅವರು ಡಾ| ಖಾನ್ ಸಾಹೇಬರ ಮಗನಲ್ಲಿಗೆ ನನ್ನನ್ನು ಕಳುಹಿಕೊಡುವ ವ್ಯವಸ್ಥೆ ಮಾಡಿದರು. ಖಾನ್ ಸಾಹೇಬರ ಮಗ ಚಾರ್ಸದ್ದಾದಲ್ಲಿ ಇಳಿಸುವಂತೆ ಹೇಳಿ ತನ್ನ ಕಾರಿನಲ್ಲಿ ನನ್ನನ್ನು ಕಳುಹಿಕೊಟ್ಟ.

ಖಾನ್ ಸಾಹೇಬರೊಡನೆ ಮಾತುಕತೆ

ಮರುದಿನ ಮುಂಜಾನೆ ಸ್ಥೂಲದೇಹಿ, ಸುಂದರ, ಹಸನ್ಮುಖೀ ಮಾಜೀ ಪ್ರಧಾನಿಯನ್ನು ನಾನು ಸಂಧಿಸಿದಾಗ, ಸರ್ವಸಾಮಾನ್ಯ ಪೋಲಿಸ್ ಭೀತಿಯೇನೂ ಅವರಿಗೆ ತಾಗದಿರುವುದನ್ನು ಕಂಡುಕೊಂಡೆ. ಆ ಮೊದಲೇ ಮಿ. ಮೆಹರ್‌ಚಂದ್ ಖನ್ನಾರ

(೧೧ನೇ ಪುಟ ನೋಡಿ.)

WARDEN

Reaches New Heights in 1946.

Business Received ... ... Rs. 2,04,00,000
Business Completed ... ... Rs. 1,72,00,000

THIS represent the latest and greatest achievement in WARDEN'S progressive career.

For this fine performance the Company extends its thearties thanks and congratulations to its representatives and policy-holders all over the country and abroad.

Managing Director: *Shivaprasad Thaker,*
Agency Manager: *M. Sunderram Shetty.*

Branch Office At Mangalore

K. P. Bhavanishanker Shetty,
Branch Secretary.

ನಾಯಕರ ಮೇಲೆ ನಮಗಿರುವ ಸಲುಗೆ!

ಇದೇ ತಾ. 15ರಿಂದ ಮದ್ರಾಸ್ ಪ್ರಾಂತ್ಯದ 'ನೋನ್ ಗೆಝೆಟೆಡ್' ನೌಕರರು ತಮ್ಮ ಸಂಬಳ, ಭತ್ತೆ ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಮುಷ್ಕರ ಹೂಡಿದ್ದಾರೆ. ಅದರ ನ್ಯಾಯಾನ್ಯಾಯದ ನಿರ್ಣಯ-ಅದು ತಪ್ಪೋ ಸರಿಯೋ ಎಂಬ ಪ್ರಶ್ನೆಗುತ್ತರ-ಇಲ್ಲಿಲ್ಲ. ನಮ್ಮಲ್ಲಿಯ ವಾತಾವರಣವೀಗ ಹೇಗೆ ಬದಲಾಯಿಸಿದೆ-ನಮ್ಮ ಜನತೆಯ ಮನೋವೃತ್ತಿ ಹೇಗಾಗಿದೆ-ಎಂಬುದನ್ನು ತೋರಿಸುವುದೊಂದೇ ಈ ಲೇಖನದ ಉದ್ದೇಶ. ಭಾರತದಲ್ಲಿ ಬ್ರಿಟಿಷ್ ಆಡಳಿತೆಯಿರುತ್ತಿದ್ದರೆ, ಮದ್ರಾಸ್ ಪ್ರಾಂತ್ಯದಲ್ಲಿ ಗವರ್ನರ್ ಆಡಳಿತೆ ಅಥವಾ ಪ್ರಜಾಜವಾಬ್ದಾರಿಯಿಲ್ಲದ ಆಡಳಿತೆಯಿರುತ್ತಿದ್ದರೆ ಪ್ರತ್ಯಕ್ಷ ಈ ಸರಕಾರೀ ನೌಕರರಿಗೆ, ಈಗಿನದಕ್ಕಿಂತ ಹೆಚ್ಚಿನ ತೊಂದರೆಗಳಿರುತ್ತಿದ್ದರೂ ಕೂಡಾ ಇಂತಹ ಮುಷ್ಕರ ಕೈಕೊಳ್ಳುವ ಧೈರ್ಯ ಬರುತ್ತಿತ್ತೆ? (ಬಂದದ್ದು ತಪ್ಪೋ ಸರಿಯೋ ಎಂಬ ವಿಷಯ ಪ್ರತ್ಯೇಕ) ನಿಜಕ್ಕೂ ಬರುತ್ತಿರಲಿಲ್ಲ. ಹಾಗಾದರೇನು? ಅಧಿಕಾರದಲ್ಲಿರುವ 'ನಮ್ಮವರ' ಮೇಲೆ ನಮಗೆ ವಿಶೇಷ ಸಲುಗೆಯಿರುವುದು ಸಹಜವೇ. ಆದರೆ ಆ ಸಲುಗೆಯನ್ನು ತಮ್ಮ ಕಾರ್ಯ ಸಾಧನೆಗಾಗಿ ಮಾತ್ರ ಈ ರೀತಿ ಉಪಯೋಗಿಸಿಕೊಳ್ಳಲು-ಆ ಸಲುಗೆಯ ಬಲದಿಂದ ಜಂಡಿ ಹಿಡಿಯಲು, ಮುಷ್ಕರ ಹೂಡಲು-ಮುಂದಾದಂತೆಯೇ 'ನಮ್ಮವರೇ ಅಧಿಕಾರದಲ್ಲಿರುವದರಿಂದ ಈ ಕೆಲಸ ನಮ್ಮದು' ಎಂಬ ಅಭಿಮಾನದಿಂದ ಸಾರ್ವಜನಿಕರ ಹಿತಸಾಧನೆಯನ್ನೇ ದೃಷ್ಟಿಪಥದಲ್ಲಿಟ್ಟುಕೊಂಡು ದುಡಿವ ಸರಕಾರೀ ನೌಕರರೆಷ್ಟು ಮಂದಿ? ಸರಕಾರವು ತಮಗೆ ನ್ಯಾಯದಾನ ಮಾಡಿಲ್ಲವೆಂದು ಈಗ ಮುಷ್ಕರ ಹೂಡುವ ಸರಕಾರೀ ನೌಕರರೇ ತಮಗೆ ನ್ಯಾಯದಾನ ಮಾಡಿಲ್ಲವೆಂದು ಮುನಿಯುವ ಹಕ್ಕು ಸಾರ್ವಜನಿಕರಿಗಿದೆ ಎಂಬುದು ಈ ನೌಕರರಿಗೆ ತಿಳಿದಿದೆಯೆ? ಇವರೆಲ್ಲಾ ತಮ್ಮ ಮನಸ್ಸಾಕ್ಷಿಯನ್ನೇ ಒಮ್ಮೆ ಪ್ರಶ್ನಿಸಿ ನೋಡಲಿ — [illegible] ನಿಲ್ಲುವಷ್ಟು ಬಿಡುವು ದೊರಕಿಸಿಕೊಂಡ ಸರಕಾರೀ ನೌಕರರೆಲ್ಲಾ ಈ ಸಂದರ್ಭದಲ್ಲಾದರೂ ಒಮ್ಮೆ ತಮ್ಮಾತ್ಮ ಪರೀಕ್ಷೆಯನ್ನೂ ಮಾಡಿಕೊಳ್ಳಲಿ! ಸರಕಾರವು ಅಥವಾ ಮಂತ್ರಿಗಳು ತಮ್ಮನ್ನು ಕಡೆಗಣಿಸುತ್ತಿದ್ದಾರೆ, ಎಂಬುದು ಇವರ ಹೃದಯಕ್ಕೆ ನಾಟಿದೆ; ಆದರೆ ಆ ಹೃದಯದ ಒಂದು ಬದಿಯು ಇಂತಹದನ್ನು ನಾಟಿಸಿಕೊಳ್ಳುವಷ್ಟು ಮೃದುವಿರುವಾಗ, ಅದರ ಇನ್ನೊಂದು ಬದಿಯೇಕೆ ಶಿಲೆಗಿಂತಲೂ ಕಠಿಣವಿದೆ? ಜನಸಾಮಾನ್ಯರನ್ನು ತಾವಾವ ರೀತಿ ಕಡೆಗಣಿಸುತ್ತಿದ್ದೇವೆ, ಯಾವ ಯಾವ ರೀತಿಗಳಿಂದ ಸುಲಿಯುತ್ತಿದ್ದೇವೆ, ಎಂಬುದಾವುದೂ ಏನೇ ಮಾಡಿದರೂ ಅಲ್ಲಿಗೇಕೆ ನಾಟಲೊಲ್ಲದು? ನಿಜಕ್ಕೂ ಕಾಂಗ್ರೆಸ್ ಆಡಳಿತೆಯಿಂದ ಸಾಮಾನ್ಯ ಜನಜೀವನದಲ್ಲಿ ನಿರೀಕ್ಷಿಸಿದಷ್ಟು ಸುಧಾರಣೆಯಾಗದಿರಲು ಕಾರಣ ಕಾಂಗ್ರೆಸ್‌ಮಂತ್ರಿಗಳಲ್ಲ-ಈ ಸರಕಾರೀ ನೌಕರರು! ಈ ನೋನ್ ಗೆಝೆಟೆಡ್ ನೌಕರರು ತಮ್ಮ ಮೇಲಧಿಕಾರಿಗಳನ್ನು ದೂರುವುದರಲ್ಲಿ ನ್ಯಾಯವಿರಬಹುದು; ಆದರೆ ಅದಕ್ಕಿಂತ ನಾಲ್ಮಡಿ ಸಾರ್ವಜನಿಕರ ಇದೇ ನೌಕರರನ್ನು ದೂರಲಿಕ್ಕಿದೆ. ಸಾರ್ವಜನಿಕರಿಗೆ ಮಂತ್ರಿಗಳಂಥವರ ಮೇಲೆ ಇರುವ ಮುಖ್ಯ ದೂರೆಂದರೆ 'ಈ ನೌಕರರ ಮನೋವೃತ್ತಿಯನ್ನು ತಿದ್ದಲು ಅವರಿಂದಾಗಲಿಲ್ಲವಲ್ಲಾ' ಎಂಬುದೇ! ಕಾಂಗ್ರೆಸ್ ನಾಯಕರು ಹಾಗೂ ಮಂತ್ರಿಗಳಂಥವರಿಗೆ ಕೆಲವು ಬಣ ಪ್ರತಿಷ್ಠಾಭಿಮಾನೀ ಸಾರ್ವಜನಿಕರಿಂದ (ಅದೂ ಶ್ರೀಮಂತರಿಂದ) ಅನಗತ್ಯ ಕಿರುಕುಳಗಳಾಗುವದಿದೆ, ಆದರೆ ಸಾಮಾನ್ಯ ಸಾರ್ವಜನಿಕರಿಗೆ, ಈ ಸಾಮಾನ್ಯ ನೌಕರರೇ ಗಂಟಾದ್ದರಿಂದ, ಇಲ್ಲಿ ಈ ಜನತೆಗೇನೇ ಕಿರುಕುಳ, ಅನ್ಯಾಯ! ನಮ್ಮ ಜನತೆಯ ಮನೋವೃತ್ತಿಯೇ ಇಂತಹ ಅಸ್ತವ್ಯಸ್ತತೆಗೆ ಕಾರಣವಾಗಿದೆ. ದೇಹದಾವ ಭಾಗದಲ್ಲಿ ತುರಿಕೆಯಿದ್ದರೂ ತಲೆಯನ್ನು ತುರಿಸುವದೊಂದೇ ಅವರಿಗೆ ಗೊತ್ತು. ಎಲ್ಲರ ತಪ್ಪಿಗೂ ನಾಯಕರನ್ನು ಪೀಡಿಸುವದೊಂದೇ ಅವರಿಗೆ ಗೊತ್ತು. ಹಲವರಲ್ಲಿರುವ ಕೃತಕ ಅಭಿಮಾನ, ಬಣ ಹೆಗ್ಗಳಿಕೆಗಳು ಅಸಂಬದ್ಧಗಳನ್ನೇ ಮಾಡಿಸುತ್ತಿವೆ. ಮಿ. ಪ್ರೋಥೆನ್ ಜೋಸೆಫರು ತನ್ನೊಂದು ಲೇಖನದಲ್ಲಿ ಈ ಕುರಿತು ಕೊಟ್ಟಿದ್ದ ಒಂದೆರಡು ನಿದರ್ಶನಗಳನ್ನು ಇಲ್ಲಿ ಕೊಡಲಾಗಿದೆ:—

× × ×

1924ರಲ್ಲಿ ಜನುವರಿಯಲ್ಲಿ ಮಹಾತ್ಮಾ ಗಾಂಧಿಯವರಿಗೆ ಕರ್ನಲ್ ಮೆಡ್ಡೋಕರು 'ಓಪರೇಶನ್' ಮಾಡಿದ್ದ ಕಾಲವದು. ಆ ಶಸ್ತ್ರ ಕ್ರಿಯೆಯೇ ಒಂದು ಅದ್ಭುತವಾಗಿತ್ತು. ಯಾಕೆಂದರೆ ಕರ್ನಲರೂ ಇಬ್ಬರು ಇಂಗ್ಲಿಷ್ ದಾದಿಯರೂ ಓಪರೇಶನಿಗಾಗಿ ಗಾಂಧಿಜೀಯ ಮೇಲೆ ಬಗ್ಗಿದ್ದಾಗಲೇ ಒಮ್ಮೆ ಅಕಸ್ಮಾತ್ ವಿದ್ಯುದ್ದೀಪಗಳು ನಂದಿ ಹೋಗಿದ್ದುವು; ಆದರೆ ಸುದೈವವಶಾತ್ ಥಕ್ಕನೇ ಪುನಃ ದೀಪವಾದುದರಿಂದ ಶಸ್ತ್ರಕ್ರಿಯೆಗಾವ ನ್ಯೂನತೆಯೂ ಉಂಟಾಗಲಿಲ್ಲ. ಆ ಕಾಲದಲ್ಲಿ ಇಡೀ ದೇಶದ ಪತ್ರಿಕಾ ಪ್ರತಿನಿಧಿಗಳು ಆ ಪರಿಸರದಲ್ಲಿ ತುಂಬಿದ್ದರು. ಶಸ್ತ್ರ ಪ್ರಯೋಗಿಸುವ ಹೊತ್ತಿನಲ್ಲೇ ಮಾಯವಾದ ಬೆಳಕಿನ ದೆಸೆಯಿಂದಾಗಿ ಈ ಇಂಗ್ಲಿಷರವರ ಕೈಗಳಿಂದ ಏನಾದರೂ ಪ್ರಮಾದವಾಗಿ ಹೋಗುತ್ತಿದ್ದರೆ, ಮೊದಲೇ ಬ್ರಿಟಿಷರ ಮೇಲೆ ಸಂದೇಹ ಪಡುತ್ತಿದ್ದ ಹಿಂದೀಯರು ಎಂತಹ ಕಥೆ ಕಟ್ಟುತ್ತಿದ್ದರೋ ಊಹಿಸುವದಸಾಧ್ಯ. ಆದರೆ ಎಲ್ಲರ ಸುದೈವದಿಂದ ಆ ಶಸ್ತ್ರಕ್ರಿಯೆ ಯಶಸ್ವಿಯಾದ ಮೇಲೆ ಗಾಂಧಿಜೀಗೆ ಆರೈಕೆ ಮತ್ತು ವಿಶ್ರಾಂತಿಯ ಅತ್ಯಗತ್ಯವಿದ್ದ ಆ ದಿನಗಳಲ್ಲಿ ಅವರನ್ನು ನೋಡಬೇಕೆಂದು ಶ್ರೀಮತಿ ಬಿಸೆಂಟರು ಅಲ್ಲಿಗೆ ಹೋದಾಗ ಅಲ್ಲಿಯ ದೃಶ್ಯಗಳನ್ನು ನೋಡಿ ರೇಗಿ ಬಿದ್ದರು. ಯಾವ ನಿಯಮ ನಿರ್ಬಂಧವೂ ಇಲ್ಲದೆ ಬಿಸೆಂಟರನ್ನು ದೂಡಿಕೊಂಡು ಗಾಂಧಿಜೀಯವರಲ್ಲಿಗೆ ಹಲವರು ಹತ್ತಿಯೋಗುತ್ತಿದ್ದರು. ಓರ್ವ ಹೆಂಗಸು ಕಂಕುಳಲ್ಲೊಂದು ಮಗುವನ್ನಿಟ್ಟುಕೊಂಡು ಬಾಲಗ್ರಹದ ಕುರಿತು ಗಾಂಧಿಜೀಯ ಅಭಿಪ್ರಾಯ ಕೇಳಲು ಬಂದಿದ್ದಳು; ಸತ್ಯಾಗ್ರಹದ ಚರ್ಚೆ ನಡೆಸುವಾತುರದಿಂದ ಒಬ್ಬ ಮುದುಕ ಮುನ್ನುಗ್ಗುತ್ತಿದ್ದ; ಕೆಲವು ವನಸ್ಪತಿ ಚೂರ್ಣಗಳನ್ನು ಹಿಡಿದುಕೊಂಡು ಅವುಗಳ ಕುರಿತು ಮಹಾತ್ಮರ ಮನಸ್ಸನ್ನರಿಯಲು ಮುನ್ಸಿಪಲ್ ಕಂಟ್ರಾಕ್ಟರನೊಬ್ಬ ಹವಣಿಸುತ್ತಿದ್ದ; ಕೈಯಲ್ಲೊಂದಷ್ಟು ಕಾಗದದ ಕಟ್ಟುಗಳನ್ನು ಹಿಡಿದುಕೊಂಡಿದ್ದು, ನೋಟ ಸಂದೇಹ ಹುಟ್ಟಿಸುತ್ತಿದ್ದ ವಿದ್ಯಾರ್ಥಿಯೊಬ್ಬ ಅಲ್ಲಿ ತಯಾರಿದ್ದ; ಅವುಗಳನ್ನೆಲ್ಲಾ ಗಾಂಧಿಜೀಗೆ ತೋರಿಸಿ ಪರೀಕ್ಷಕರು ಪರೀಕ್ಷೆಯಲ್ಲಿ ತನಗೆ ಹೀಗೆ ಮಾಡಿದ್ದು ಸರಿಯೇ ಎಂದು ಅವನಿಗೆ ಮಹಾತ್ಮರ ತೀರ್ಮಾನ ಪಡೆಯಬೇಕಾಗಿತ್ತಂತೆ. ಇಂತಹ ಇನ್ನೆಷ್ಟೋ ಜನರು ಅಲ್ಲಿ ನುಗ್ಗಿ ನುಸಿಯುತ್ತಿದ್ದರು. ಗಾಂಧಿಜೀಯಾದರೋ ಎಲ್ಲರಿಗೂ ಕಿವಿಗೊಡಲು ತುಡಿಯುತ್ತಿದ್ದರು. ಕೊನೆಗೆ ತಂಟೆಗಳನ್ನು ಗದರಿಸಿ ನಿಲ್ಲಿಸಿದುದು ಶ್ರೀಮತಿ ಬಿಸೆಂಟರೇ.

○ ○ ○

ನವಂಬರಾಂತ್ಯ ವಾರದ 'ಇಂಡಿಯನ್ ಸೋಶಿಯಲ್ ರಿಫಾರ್ಮರ್'ನ ಲೇಖನವೊಂದರ ಸಾರಾಂಶ ಈ ಕೆಳಗಿನಂತಿದೆ:

"ಮುಖ್ಯತಃ ಜಿಲ್ಲೆಗಳ ಅಧಿಕಾರಿಗಳ ಪರಿಸ್ಥಿತಿಯಷ್ಟರಲ್ಲೇ ಅತ್ಯಂತ ಕಷ್ಟದಾಯಕವಾಗಿದೆ. ಗಾಂಧೀ ಟೋಪಿಯಿಟ್ಟುಕೊಂಡು ಯಾವನೇ ಒಬ್ಬ ಬಡಪ್ಪಾಳಿಯಾದರೂ ಸೀದಾ ಆಫೀಸಿನೊಳಗೆ ನುಗ್ಗಿಬರುತ್ತಾನೆ; ತಾನು ಮಂತ್ರಿಗಳೊಡನೆ ನಿಕಟ ಸಂಬಂಧವುಳ್ಳವನೆಂದು ಹೇಳಿಕೊಳ್ಳುತ್ತಾ, 'ಅದನ್ನೇಕೆ ಮಾಡಿದಿರಿ, ಇದನ್ನೇಕೆ ಮಾಡಲಿಲ್ಲ?' ಎಂದು ವಿಚಾರಿಸಹತ್ತುತ್ತಾನೆ" ಇದು ಜಿಲ್ಲಾಧಿಕಾರಿಗಳ ಪರಿಸ್ಥಿತಿ. ಮದ್ರಾಸಿನ ಪ್ರಧಾನ ಮಂತ್ರಿ ಶ್ರೀ ಓಮಂದೂರರು ಮಂತ್ರಿಗದ್ದುಗೆಯಲ್ಲಿ ಹಾಜರಿರುವುದು ಅಪರೂಪವೇಕೆ? ಅವರ ಭೇಟಿಗೆಂದು ಖಾಸಗಿ [illegible] ಗಳಿಗೆ ಅವರು ಮಾತಾಡಲಿಕ್ಕೇನೇ ಸಿಕ್ಕಿ ಬೀಳುತ್ತಿರುವುದು ನಿಜವೇ? ಇತ್ಯಾದಿ ಪ್ರಶ್ನೆಗಳು ಎಸೆಂಬ್ಲಿ ಸಭೆಯಲ್ಲೇ ಜಬರ್ದಸ್ತಿನಿಂದ ಕೇಳಲ್ಪಟ್ಟಿದ್ದುವು.

× + ×

ಒಂದು ಕಾಲದಲ್ಲಿ ಒಟ್ಟಿಗೆ ಜೈಲಲ್ಲಿದ್ದವರೆಂಬ ಒಂದೇ ನೆನಪನ್ನು ತಗಡುಕೊಂಡು ಈಗ ಮಂತ್ರಿಗಳಾಗಿರುವವರು ಮಿಕ್ಕೆಲ್ಲವನ್ನೂ ಮರೆತು, ತಾವು ಹೇಳಿದಂತೆ ಕೇಳಬೇಕು, ಎಂಬ ಭಾವನೆಯೊಂದು ವಿಕಟ ತಾಂಡವ ನಡೆಸುತ್ತಿದೆ. "ನನಗೆ ಅವರ ಪರಿಚಯವಿಲ್ಲವೆ? ನಾವು ಜೈಲಲ್ಲಿ ಒಟ್ಟಿಗೆ ಮಾವಿನ ಚಟ್ಣಿ ತಿಂದವರು" ಮಂತ್ರಿಗಳಿಗೆ ತನ್ನ ಪರವಾಗಿ ಒಂದು ಶಿಫಾರಸು ಮಾಡಬೇಕೆಂದು ಬರೆದ ಮಿತ್ರರೊಬ್ಬರಿಗೆ ಜಿಲ್ಲಾ ಪ್ರಮುಖನೋರ್ವನು ಬರೆದ ಪತ್ರದ ಮಾತುಗಳಿವು. "ಹೌದು, ಅವರು ಅದೇ ಜೈಲಲ್ಲಿದ್ದರು. ಒಮ್ಮೆ ಅವರಿಗೆ ಮಲೇರಿಯಾ ತಾಗಿತ್ತು. ಅವರು ಕಪಟ ಮಾಡುತ್ತಿದ್ದಾರೆಂದು ಸಬ್ ಇನ್ಸ್‌ಪೆಕ್ಟರರು ಭಾವಿಸಿದ್ದರು. ಮತ್ತು ನಾನವರ ಆರೈಕೆ ನೋಡಿದ್ದೆ. ಹೌದು; ನನಗವರ ಪರಿಚಯ ಬಹಳ ಚೆನ್ನಾಗಿದೆ. ಅವರ ಮಾವ ನನ್ನ ನೆರೆಮನೆಯವರು. ಕಳೆದ ಚುನಾವಣೆಯಲ್ಲಿ ನಾನವರಿಗೆ 400 ವೋಟುಗಳನ್ನು ಮಾಡಿಕೊಟ್ಟಿದ್ದೆ. ನನಗೋಸ್ಕರ ಅವರು ಏನು ಮಾಡುವುದಕ್ಕೂ ತಯಾರಿದ್ದಾರೆ. ನಾನು ಕಳೆದ ವಾರ ಇಲ್ಲಿಯ ಮುನ್ಸೀಫರನ್ನು ವರ್ಗಮಾಡಿಸಬೇಕೆಂದು ಯೋಚಿಸಿದ್ದೆ" ಇಂತಹ ಅಸಹ್ಯತೆಗಳು ನಮ್ಮಲ್ಲಿನ ಮಂತ್ರಿಗಳಿಗೆ ಕಾರ್ಯಾಪಕಾರಕಗಳು ದೂರವಾಗಬೇಕಾದರೆ, ಅವರ ದೃಷ್ಟಿಕೋನವನ್ನು ಇಂಥವರರಿತಿರಬೇಕು, ಮತ್ತು ಕಾರ್ಯಪತ್ತ ಕಣ್ಣಿಟ್ಟು ಅವರಿಂದ ದೂರವಿರಬೇಕು.

ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

ದುಡಿದ ಹಣವನ್ನು ಉಳಿಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು. ಜನತೆಯಲ್ಲಿ ಮಿತವ್ಯಯವನ್ನು ಪೋಷಿಸಿ ಉಳಿತಾಯವನ್ನು ಕಲ್ಪಿಸುವುದು [illegible] ಕಷ್ಟಕಾಲಕ್ಕೆ ಧನಸಹಾಯವಿತ್ತು ಅವರ ಏಳಿಗೆಯನ್ನು ಬಯಸುವುದು [illegible] ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು [illegible] ಅವರಿಗೆ [illegible] ಬೇಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

[illegible] ಪ್ರಮುಖ [illegible] ಗಳಲ್ಲಿ [illegible] ಯನ್ನು [illegible] ಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಂತರವಾಗಿ [illegible] ಜನರಿಗೆ ಕೆನರಾ ಬ್ಯಾಂಕು [illegible] ಈ ಬ್ಯಾಂಕು [illegible] ವರ್ಷದ ಅನುಭವದಿಂದ ಗಳಿಸಿದ [illegible] ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇ? ಇಲ್ಲವೆ ಇಷ್ಟರಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD 1906.

CANARA BANK LIMITED.

ಮುಟ್ಟುಸ್ರಾವ ನಿಂತಿತು

'ರಜಸಾರ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದೇಪದೇ ಮುಟ್ಟುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣವೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3; ಸ್ಪೆಶಲ್ ರೂ. 5; ಅತಿಶಾಘಿಕ ಸ್ಪೆಶಲ್ ರೂ. 8/- [ವಿ. ಪಿ. ಖರ್ಚು ಪ್ರತ್ಯೇಕ]

Mrs. D. DEVEE, [illegible] (N. J.)
Tollygunge CALCUTTA.
ಸ್ಟಾಕಿಸ್ಟರು: [illegible], ಮಂಗಳೂರು

★ ಭಾರತ—ಪಾಕಿಸ್ತಾನ ಆರ್ಥಿಕ ಪಾಲುಪಟ್ಟಿ ★

ಕಳೆದ ವಾರವು ಯೋಧವಾರವಾಗಿರದೆ, ವ್ಯವಹಾರಜ್ಞರವಾರವಾಗಿತ್ತು; ರಕ್ತದ ಕೆಲಸಕ್ಕಿಂತ ಹೆಚ್ಚಾಗಿ ಮೆದುಳಿನ ಕೆಲಸಗಳೇ ಕಳೆದ ದಿನಗಳಲ್ಲಿ ನಡೆದಿದ್ದುವು; ಹೋರಾಡಿ ವಿಜಯ ಸಾಧಿಸುವ ಬದಲಿಗೆ, ಪರ್ಯಾಲೋಚಿಸಿ ತೀರ್ಮಾನ ಹೊಂದುವ ವಿಧಾನಗಳೇ ಕಳೆದವಾರದಲ್ಲಿ ಹೆಚ್ಚಾಗಿ ಅಸ್ತಿತ್ವಕ್ಕೆ ಬಂದಿದ್ದುವು. ಈ ಮಾತು ಹಿಂದುಸ್ಥಾನದ ರಾಜಕಾರಣಕ್ಕೆ ವಿಶೇಷತಃ ಹೊಂದಿಕೆಯಾದರೆ ಲೋಕ ವಾತಾವರಣಕ್ಕೂ ಲಗಾವಾಗುವಂತಿದೆ.

ಭಾರತ—ಪಾಕಿಸ್ತಾನ

ಭಾರತ ಮತ್ತು ಪಾಕಿಸ್ತಾನ ಸರಕಾರಗಳೊಳಗೆ ತೀರ್ಮಾನವಾಗದೆ ಬಾಕಿಯಿದ್ದ ಹಣಕಾಸು, ಆಸ್ತಿಸೊತ್ತುಗಳ ಸಂಬಂಧದ ಎಲ್ಲಾ ಪ್ರಶ್ನೆಗಳೂ ಈಗ ತೀರ್ಮಾನಗೊಂಡಿವೆ. ಇವೆರಡು ಸರಕಾರಗಳ 'ಪಾಲುಗಾರಿಕೆ ಸಮಿತಿ'ಯು ಬಾಕಿಯಿದ್ದ ಎಲ್ಲಾ ಮುಖ್ಯ ವಿಷಯಗಳನ್ನೂ ಕೂಲಂಕುಷವಾಗಿ ಪರ್ಯಾಲೋಚಿಸಿ ಇಕ್ಕಡೆಗೂ ಸಮ್ಮತವಾದ ಪಾಲುಪಟ್ಟಿಗಳನ್ನು ತಯಾರಿಸಿದೆ. ಈ ವ್ಯವಸ್ಥೆಯ ಮುಖ್ಯಾಂಗಗಳು ಹೀಗಿವೆ: ಇಡೀ ದೇಶದ ಪಾಲಿನದಾಗಿದ್ದು ಎರಡು ರಾಷ್ಟ್ರಗಳೊಳಗೆ ಪಾಲಾಗಬೇಕಾಗಿದ್ದ ನಗದಿ ನಿಂದಾಯ ಅಂದಾಜು 400 ಕೋಟಿಗಳು. ಈ ಪೈಕಿ 75ಕೋಟಿ ರೂಪಾಯಿಗಳು ಪಾಕಿಸ್ತಾನದ ಪಾಲೆಂದು ನಿರ್ಣಯವಾಗಿದೆ. ಆಗೋಸ್ತು 15ರಲ್ಲಿ ಮತ್ತು ನಂತರ ಪಾಕಿಸ್ತಾನಕ್ಕೆ ಸಂದಾಯವಾಗಿದ್ದ, ಮತ್ತು ಪಾಕಿಸ್ತಾನಕ್ಕಾಗಿ ಇದು ವರೆಗಾಗಿದ್ದ ವೆಚ್ಚ 20ಕೋಟಿರೂಪಾಯಿಗಳನ್ನು ಈ 75 ಕೋಟಿಯಿಂದ ವಜಾಪಡಿಸಬೇಕಾಗಿದೆ. ಮಿಲಿಟರಿ ಸಂಬಂಧದ ಸಂಗ್ರಹಗಳಲ್ಲಿ ಒಟ್ಟು ಮೊತ್ತದ ಮೂರನೇ ಒಂದಂಶದಷ್ಟು ಪಾಕಿಸ್ತಾನಕ್ಕೆಂದು ನಿಶ್ಚಯವಾಗಿದೆ. ಯುದ್ಧಾವಧಿಯಲ್ಲಿ ಬ್ರಿಟನಿನಲ್ಲಿ ಬೆಳೆದಿದ್ದ ಭಾರತಕ್ಕೆ ಸಿಗತಕ್ಕ ಸ್ಟರ್ಲಿಂಗ್ ಸಾಲಗಳ ಸಂಬಂಧವಾಗಿ ನೋಟುಗಳ ಪ್ರಸರಣೆಯ ಪರಿಮಾಣವನ್ನಾಧರಿಸಿ ಪಾಕಿಸ್ತಾನದ ಪಾಲೆಂದು ನಿಶ್ಚಯವಾಗಿದೆ. ಇದಕ್ಕನುಗುಣವಾಗಿ 1947ನೇ ದಶಂಬರ್ ಅಂತ್ಯದ ಅವಧಿಯ ಮಟ್ಟಿಗೆ ಸ್ಟರ್ಲಿಂಗ್ ಸಾಲಗಳ ಸಂಬಂಧದ ಸವಿವರ ಒಪ್ಪಂದವಾಗಿದೆಯಲ್ಲದೆ, ಮುಂದಿನ ಆರು ತಿಂಗಳ ಕಂತಿನ ಬಗ್ಗೆ ಮಾತುಕತೆಗಳು ನಡೆಯಲಿವೆ.

ಹೆಗ್ಗಳಿಕೆಯ ಸ್ನೇಹಾಚಾರ

ಕಾಶ್ಮೀರ ಪ್ರಶ್ನೆಯಂತಹ ರಾಜಕೀಯ ಭಿನ್ನತೆಗಳು ಮತ್ತು ತನ್ನ ಹಸಿನಾರಿನ ರಕ್ಷಿನ ಮೇಲೆ ಪಾಕಿಸ್ತಾನವು ವಿಶೇಷಕರ ಹೇರಿರುವ ಹೊಸ ಪಹಿಪಾಟು ಘರ್ಷಣೆಗಳು ಈ ತನಕ ಒಂದು ತೀರ್ಪಿಗೆ ಬಂದಿಲ್ಲವಾದರೂ ಬಾಕಿ ಬಿದ್ದಿದ್ದ ಹಲವು ಮುಖ್ಯ ಆರ್ಥಿಕ ವಿಚಾರಗಳು ಭಾರತ—ಪಾಕಿಸ್ತಾನಗಳೊಳಗೆ ಈ ಬಾರಿ ಸಮಾಧಾನಕರ ತೀರ್ಮಾನ ಪಡೆದಿವೆ. ಈ ಪ್ರಾಮುಖ್ಯ ಒಪ್ಪಂದ ಕರಾರನ್ನು ಭಾರತ ಶಾಸನಸಭೆಗೆ ಮಂಡಿಸುತ್ತಾ ಉಪ ಪ್ರಧಾನಿ ಸರ್ದಾರ್ ಪಟೇಲರು "ಭಾರತ ಸರಕಾರದ ಸ್ನೇಹಮಯೀ ದಾನವೆಂದೇ ಇದನ್ನು ಪಾಕಿಸ್ತಾನದ ಹೊಸ ಸರಕಾರವು ಗಣಿಸುವುದೆಂದಾಶಿಸುತ್ತೇನೆ" ಎಂದರು. "ಪಾಲಿಗನುಸಾರವಾಗಿ ಪಾಕಿಸ್ತಾನವು ಸಂದಾಯಿಸತಕ್ಕದ್ದೆಂಬ ಶರ್ತದಿಂದ ಹಳೇ ಸರಕಾರದ ಎಲ್ಲಾ ಸಾಲ ಸೋಲಗಳ ಪ್ರಥಮ ಜವಾಬ್ದಾರಿಯನ್ನು ನಾವು ವಹಿಸಿಕೊಂಡಿದ್ದೇವೆ. ಭಾರತಕ್ಕೆ ಪಾಕಿಸ್ತಾನವು ಕೊಡತಕ್ಕ ಸಾಲಗಳನ್ನು ಹಿಂದೀ ರೂಪಾಯಿಗಳ ರೂಪದಲ್ಲಿ ಮುಂದಿನ ನಾಲ್ಕು ವರುಷಗಳ ನಂತರ ವಾರ್ಷಿಕ ಕಂತಾಗಿ 50 ವರುಷಗಳಲ್ಲಿ ಪಾಕಿಸ್ತಾನವು ಸಂದಾಯಿತಕ್ಕದ್ದೆಂದು ತೀರ್ಮಾನವಾಗಿದೆ." ಎನ್ನುತ್ತಾ ಸರ್ದಾರ್ ಪಟೇಲರು, ಅತ್ಯಲ್ಪ ಅವಧಿಯಲ್ಲಿ ಅತ್ಯಂತ ಜಟಿಲಿನ ಹಲವು ಸೂಕ್ಷ್ಮ ಪ್ರಶ್ನೆಗಳನ್ನು ತೀರ್ಮಾನಿಸಿಕೊಂಡ 'ಪಾಲುಗಾರಿಕೆ ಸಮಿತಿ' ಕಾರ್ಯಗಳನ್ನು ಕೊಂಡಾಡಿದರು. ಅಂತೆಯೇ "ಈ ಕೆಲಸವನ್ನಿಷ್ಟು ಸುಲಭಗೊಳಿಸಿದ್ದಕ್ಕಾಗಿ ನಾವೆಲ್ಲರೂ ಕೃತಜ್ಞರಿರಬೇಕಾದ ಲೋರ್ಡ್ ಮೌಂಟ್ ಬೇಟನರ ಕಾರ್ಯಭರ, ಕಾರ್ಯೋತ್ಸಾಹ, ವಿಶಾಲ ಧೋರಣೆ ಮತ್ತು ನಿಷ್ಪಕ್ಷಪಾತತೆಯು ಅಭಿನಂದನೀಯ"ವೆಂದು ಗೌರವ ಸಲ್ಲಿಸಿದರು.

ಪಾಕಿಸ್ತಾನವೇನಂತೆ?

ಇತ್ತ ಹಲವು ದಿನಗಳಿಂದ ಪಾಕಿಸ್ತಾನ್ ನಾಯಕರ ಸೊಲ್ಲೇ ಕೇಳಬಾರದಿರುವುದೂ, ಕಾಶ್ಮೀರ, ಜುನಾಗಾಡುಗಳಂತಹ ಪ್ರಶ್ನೆಗಳ ಸಂಬಂಧದಲ್ಲಿ ಭಾರತ ಸರಕಾರವು ತನ್ನೆಡೆಗೆ ಧಿಕ್ಕಾರ ಮತ್ತು ಕಠೋರತೆಗಳನ್ನು ಪ್ರದರ್ಶಿಸಿರುವ ಕಾಲದಲ್ಲೇ ಈ ರೀತಿ ಉಳಿದ ವಿಷಯಗಳಲ್ಲಿ ತನ್ನ ಹಿಂದಿನ ಹಮ್ಮೆಯೆಲ್ಲವನ್ನೂ ಬಿಟ್ಟು, ಪಾಕಿಸ್ತಾನವು ಭಾರತದೊಡನೆ ಒಪ್ಪಂದಕ್ಕೆ ಬಂದುದೂ ಆಶ್ಚರ್ಯಾನಂದದ ವಿಷಯ. ಇದಕ್ಕೆ ಒಂದು ಕಾರಣವೆಂದರೆ ಪಾಕಿಸ್ತಾನ್ ಸ್ಥಾಪನೆಯಾದ ಮೇಲೂ 'ವೈರಿಗಳು' ಎಂದೇ ಜಿನ್ನಾ ಲಿಯಾಖತರಿಂದ ಸಂಬೋಧಿಸಲ್ಪಡುತಿದ್ದ ಭಾರತ ಸರಕಾರದ ನಾಯಕರು ಪಾಕಿಸ್ತಾನ್ ವೈರಿಗಳಂತೆ ವರ್ತಿಸದೆ ಪಾಕಿಸ್ತಾನ್ ರಕ್ಷಕರಾಗಿ ಅತ್ಯುದಾರ ರೀತಿಯ ಶರ್ತಗಳಿಗೊಪ್ಪಿಗೆ ಕೊಟ್ಟಿದ್ದು. ಮತ್ತೊಂದು ಕಾರಣವೆಂದರೆ ಆದಿಕಾಲದಲ್ಲಿ ತನ್ನ ಶಕ್ತಿಗೆ ಮಿಕ್ಕಿ ಠೇಂಕಾರ ಪ್ರದರ್ಶಿಸಿದ್ದ ಪಾಕಿಸ್ತಾನವು ಇಷ್ಟರೊಳಗೇ ತನ್ನ ಒಣ ಹೆಮ್ಮೆಗೆ ತಕ್ಕ ತಾಡನೆ ಪಡೆದು ಬುದ್ಧಿ ಕಲಿತಿರುವುದು. ಆಗೋಸ್ತು 15ರಲ್ಲಿ ಉದ್ಘಾಟಿಸಲ್ಪಟ್ಟ ಪಾಕಿಸ್ತಾನ್ ಘಟನಾಸಮಿತಿಯ ಪ್ರಸ್ತಾಪವೇ ಆ ಮೇಲಿಲ್ಲ; ಜಾತೀಯ ಗೊಂದಲಕ್ಕೆ ಭಾರತದ ಬನೇ ಅಂಶ ಮಾತ್ರ ರಂಗವಾಗಿದ್ದರೆ, ಪಾಕಿಸ್ತಾನ ವಿಡೀ ಆ ಗೊಂದಲ ಕ್ಷೇತ್ರವಾದುದು ಮಾತ್ರವಲ್ಲದೆ, ವಿಶಾಲ ಸಮರ್ಥ ಭಾರತವು ಹೊರಬೇಕಾಗಿ ಬಂದಷ್ಟೇ ನಿರಾಶ್ರಿತರ ರಕ್ಷಣಾ ಭಾರವನ್ನು ಪಾಕಿಸ್ತಾನವು ಹೊಂಬೇಕಾಗಿ ಬಂದಿದೆ. ಈ ಭಾರದಿಂದ ಅದು ತಲೆಯೆತ್ತದಂತಾಗಿದೆ. ಪಾಕಿಸ್ತಾನದ ನಿರಾಶ್ರಿತರನ್ನು ಹಂಚಹಾಕಿದ ರೀತಿಯಲ್ಲಿ ತನ್ನ ಪಾಲಿಗೆ ಬಂದುದನ್ನು ತನ್ನಿಂದ ವಹಿಸಿಕೊಳ್ಳಲು ಸಾಧ್ಯವಿಲ್ಲ, ಎಂದು ಪಾಕಿಸ್ತಾನ್ ರಾಜಧಾನಿಯಿರುವ ಸಿಂಧ್ ಪ್ರಾಂತಿಕ ಸರಕಾರವೇ ತಿಳಿಸಿದೆ. ಇತ್ತ ಗಡಿನಾಡಿನ ಅದೃಷ್ಟವೇನೆಂಬುದು ತಿಳಿದಿಲ್ಲ. ಅಲ್ಲಿ ಪಠಾಣಿಸ್ತಾನ ಸ್ಥಾಪಿಸುವ ತನ್ನ ಗುರಿಗಾಗಿ ಆಫ್ಘನಿಸ್ಥಾನದ ಸರಕಾರವು ಒಳಗಿಂದೊಳಗೆ ಕೆಲಸ ಮಾಡುತ್ತಿದೆ. ಆಫ್ಘನಿಸ್ಥಾನದ ಸಂಹದ್ದಾಗಿರುವ ರಶ್ಯವು ಈ ಕುರಿತು ಆಫ್ಘಾನಿಸ್ಥಾನವನ್ನು ಹುರಿದುಂಬಿಸುತ್ತಿದೆಯೆಂದು ತಿಳಿದು ಬರುತ್ತದೆ. ಕಾಶ್ಮೀರಕ್ಕೆ ಬರುತ್ತಿದ್ದ ಗಡಿನಾಡಿನ ಗುಡ್ಡಗಾಡು ಯೋಧನೊಬ್ಬನ ಕೈಯಲ್ಲಿ ಬ್ರಿಟಿಷ್ ಅಮೇರಿಕಗಳಿಗೂ ಪರಿಚಯವಿರದ ರಶ್ಯದಿಂದ ದೊರೆತಿದ್ದ ಒಂದು ಅಪೂರ್ವಾವಿಷ್ಕೃತ ವಿಮಾನ ನಿರೋಧಕ ಉಪಕರಣವು ಪಾಕಿಸ್ತಾನದ ಶಸ್ತ್ರ ನಿಪುಣರ ಕೈಗೆ ದೊರೆತು ಅವರೀಗ ಅದರ ಶೋಧ ನಡೆಸುತ್ತಿದ್ದಾರೆಂದು ತಿಳಿದು ಬರುತ್ತದೆ. ಆಫ್ಘನಿಸ್ಥಾನದ ಪ್ರಧಾನ ಮಂತ್ರಿ ಮಹಮ್ಮದ್ ಖಾನರು ಲಂಡನಿಗೆ ಹೋಗಿ ವಿದೇಶ ಮಂತ್ರಿ ಮಿ. ಬೆವಿನ್ ಮತ್ತು ಪ್ರಧಾನಿ ಅಟ್ಲಿಗಳೊಂದಿಗೆ ಗುಪ್ತ ಸಂಭಾಷಣೆ ನಡೆಸಿ ಮರಳಿದ್ದಾರೆ. ಅವರು ಕರಾಚಿ ಮತ್ತು ಢಿಲ್ಲಿಗೂ ಬಂದು ಪಾಕಿಸ್ತಾನ್ ಭಾರತಗಳ ಪ್ರತಿನಿಧಿಗಳೊಡನೆ ಮಾತನಾಡಲಿರುವರೆಂದು ತಿಳಿದುಬರುತ್ತದೆ. ಗಡಿನಾಡುಪ್ರಾಂತ್ಯ—ಆಫ್ಘಾನಿಸ್ಥಾನ ಸರಹದ್ದು ಘಟನೆಗಳನ್ನು ಬ್ರಿಟನು ವಿಶೇಷ ಲಕ್ಷ್ಯಗೊಟ್ಟು ಕಾಯುತ್ತಿದೆ.

ಪೆಲೆಸ್ತೈನ್ ಜಗಳ

ಅತ್ತ ಪೆಲೆಸ್ತೈನಿನ ಅಂಬ—ಯೆಹೂದೀ ವಿವಾದವು ನೈಷಮ್ಯದ ಪರಮಾವಧಿಗೆ ಮುಟ್ಟಿದೆ. ಜಾಗತಿಕ ಸಂಘದ ವಿಭಜನಾ ತೀರ್ಮಾನಕ್ಕೆ ವಿರೋಧವಾಗಿ ಅರಬರು ಹೂಡಿದ ಸಾರ್ವತ್ರಿಕ ಮುಷ್ಕರಗಳ ದಿನಗಳಲ್ಲಿ ನಡೆದಿದ್ದ ಮಹಾಗೊಂದಲಗಳು ಇತ್ತೀಚೆಗೆ ಬ್ರಿಟಿಷ್ ಸೇನಾಸಾಹಸಗಳಿಂದ ತುಸು ಹತೋಟಿಗೆ ಬಂದಿವೆ. ಆದರೂ ಅರಬರಾಷ್ಟ್ರಗಳು ಧನ, ಜನ ಮತ್ತು ಶಸ್ತ್ರ ಸಹಾಯಕೊಟ್ಟು ಪೆಲೆಸ್ತೈನ್ ಹೋರಾಟವನ್ನು ಮುಂದುವರಿಸಲು ನಿರ್ಧರಿಸಿವೆ. ಪಾಕಿಸ್ತಾನದಿಂದ ಶಸ್ತ್ರಾಸ್ತ್ರಗಳನ್ನು ಯಾಚಿಸಿದ್ದಾರೆಂದು ತಿಳಿದುಬರುತ್ತದೆ. ಪೆಲಸ್ತೈನಿನಲ್ಲಿ ತನಗಿರುವ ವ್ಯವಸ್ಥಾಧಿಕಾರವನ್ನು 1948ನೇ ಮೇ 15ರಲ್ಲಿ ತಾನು ಬಿಟ್ಟುಬಿಡುವುದಾಗಿಯೂ ಆಗೋಸ್ತು 1ರೊಳಗ ಅಲ್ಲಿರುವ ತನ್ನೆಲ್ಲಾ ಸೇನೆಯನ್ನೂ ಹಿಂದೆಗೆಯುವುದಾಗಿಯೂ ಬ್ರಿಟಿಷ್ ಸರಕಾರವು ಘೋಷಿಸಿದೆ. ಜಾಗತಿಕ ಸಂಘದ ಸಭೆಯಲ್ಲಿ ತಾವು ಅರಬ—ಯೆಹೂದಿಗಳೊಳಗೆ ರಾಜಿ ಮಾಡಿಸುವ ಕೆಲಸ ಜಯ ಹೊಂದುತ್ತದೆನ್ನುವಾಗಲೇ ಮೂರನೆಯವರು ಕೈ ಹಾಕಿ ತುಟಿವರೆಗೆ ಬಂದುದನ್ನು ಬಾಯಿಗೆ ಹೋಗಬಿಡಲಿಲ್ಲವೆಂದು ಬ್ರಿಟಿಷ್ ವಿದೇಶಮಂತ್ರಿ ಬೆವಿನರು ಅಮೇರಿಕವನ್ನು ದೂರಿದ್ದಾರೆ.

ಇರಾನ್, ಫ್ರಾನ್ಸ್, ಚೈನಾ ಮೊದಲಾದ ರಾಷ್ಟ್ರಗಳ ಒಳಗೊಂದಲಗಳು ಕಳೆದವಾರ ಶಾಂತ ಸ್ಥಿತಿಯಲ್ಲಿದ್ದುವು.

ಅಮೃತಾಂಜನ.
ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವದು, ಚೇಳು ವಿಷ ಮುಂತಾದ ಬೇನೆ ಕಳ್ಳಹಾಕ, ಮೊದಲು ಮಾಡಲಾದ ಎಲ್ಲಾ ರೋಗಗಳಿಗೂ ಸಿದ್ಧ.
REGD.
ಸಿದ್ಧ, ಹುಳುಕಿಲ್ಲ ಮತ್ತು ಸಕಲ ಪಟ್ಟಣಗಳಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

CONTROLS.

Even if all the foodstuffs are decontrolled you need control yourselves! Infection—Cold & fatigue are the dreaded enimies of health!

Control over these by drinking a cup of sweet Conch brand sqash every day—

Mine of Vitamins! Pool of flavour! Lime, Pineapple or orange which suits your taste.

Mfrs:-Cannada Soap & Industrials Ltd. Mangalore.

ಬಾಲಕರ ಆರೋಗ್ಯಕಾಯರಾಗಲು
'ಪ್ರಭೂಸ್' ಬಾಲಾಮೃತ
ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗರುಜಿನಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನೆಟ್ಟಗಾಗಲು ತಾಯಿತಂದೆಗಳು ಇನ್ನೇನೂ ನಿರಾಶರಾಗಬೇಕಾಗಿಲ್ಲ. ಮಾತ್ರ, ಹೊತ್ತು ಕಳೆದರೆ ಮತ್ತೆ ಬಾರದು.

'ಪ್ರಭೂಸ್'
ಬಾಲಾಮೃತ

ಪ್ರಭೂಸ್ ಬಾಲಾಮೃತದ ಪಾತ್ರಿಗೆ ದಾಖಲೆ ಬೇಕೆ? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುನಗುತಿರುವ ಕಳೆಗೂಡಿ ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ಮಾಡುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,
(ರಿಜಿಸ್ಟರ್ಡ್)
ಕುಂಜಾಲು, ಪೋ. ಬ್ರಹ್ಮಾವರ, ದ. ಕ.
ಸ್ಟಾಕಿಸ್ಟರು:—
ನವಭಾರತ ಪುಸ್ತಕ ಭಂಡಾರ, ಉಡುಪಿ.
L. N. Sharma, Mangalore.

The Canara Banking Corporation Limited.
(Incorporated in British India)
Estd: 1906.
Head Office: UDIPI, S. India.

ANNOUNCEMENT.

A branch of the BANK has been opened at High Road,
TRICHUR. (Cochin State)
on 28th November, 1947.

ನವಯುಗ

ಗುರುವಾರ, ಉಡುಪಿ,೧೮-೧೨-'೪೭

ಸರಕಾರೀ ನೌಕರರ ಮುಷ್ಕರ

ಇಡೀ ಮದ್ರಾಸ್ ಪ್ರಾಂತ್ಯದ 'ನೋನ್ ಗಝೆಟೆಡ್" ಸರಕಾರೀ ನೌಕರರು ತಮ್ಮ ಸಂಬಳ, ತುಟ್ಟಿಭತ್ಯೆಗಳನ್ನು ಹೆಚ್ಚಿಸಬೇಕು ಎಂಬಂತಹ ಬೇಡಿಕೆಗಳನ್ನು ಮುಂದಿಟ್ಟು ಇದೇ ತಾ. 15ರಿಂದ ಕೆಲಸ ನಿಲ್ಲಿಸಿರುವುದು ಅತ್ಯಂತ ಶೋಚನೀಯವಿದೆ. ಮುಂದಿನದು ಸಮಾನತಾಯುಗವೆಂಬುದರ ಪೂರ್ವ ಸೂಚನೆಯೆಂಬಂತೆ, ಈ ಕಾಲದಲ್ಲಿ ಯಾರು ಯಾವ ಮುಷ್ಕರ ಹೂಡಿದರೂ ಜನತೆಯು ವಿಚಾರಿಸಿ ನೋಡದೇನೇ ಮುಷ್ಕರಗಾರರ ಕಡೆಗೆ ಸಹಾನುಭೂತಿ ತೋರಿಸುವ ಸಂಪ್ರದಾಯ. ಆದರೂ ಸರಕಾರೀ ನೌಕರರ ಈ ಮುಷ್ಕರವನ್ನು ಸಾರ್ವಜನಿಕರು ಸಹಾನುಭೂತಿಯ ಬದಲಿಗೆ ಜಿಗುಪ್ಸೆಯಿಂದ ಕಾಣುತಿದ್ದಾರೆ ಎನ್ನಲಡ್ಡಿಯಿಲ್ಲ. ಇದಕ್ಕೆ [illegible] ನೆಯದಾಗಿ ತಾವು ಜನತಾ ಸೇವಕರು ಎಂಬ ಭಾವನೆಯು ಈ ನೌಕರವರ್ಗದಲ್ಲಿ ಇದು ವರೆಗೂ ಮೊಳೆತುದಿಲ್ಲ; ಈ ಮುಷ್ಕರದ ಹಿಂದಿರುವ ಬೇಡಿಕೆಗಳಾದರೂ ಜನತೆಯ ಮೇಲೆ ಇನ್ನೂ ಹೆಚ್ಚಿನ ಕರಕಂದಾಯಗಳನ್ನು ಹೇರಿಸುವಂಥವುಗಳೇ. ಸಾಮಾನ್ಯ ವಾಡಿಕೆಯ ಮಾತಿನಲ್ಲಿ 'ಸಂಬಳಕ್ಕಿಂತ ಹೆಚ್ಚಿಗೆ ಗಿಂಬಳ ಪಡೆಯುವವರು' ಎಂದು ಸಾರ್ವಜನಿಕರಿಂದ ಸಂಬೋಧಿಸಲ್ಪಡುತ್ತಿರುವ ವರ್ಗವಿದು! ಎರಡನೆಯದಾಗಿ ಸರಕಾರವನ್ನು ಬಗ್ಗಿಸುವುದಕ್ಕಾಗಿ ಹೂಡಲ್ಪಟ್ಟಿರುವ ಈ ಮುಷ್ಕರದ ದೆಸೆಯಿಂದ ಸರಕಾರಕ್ಕಿಂತ ಹೆಚ್ಚಿಗೆ ಸಂಕಷ್ಟಕ್ಕೀಡಾಗಿರುವವರು ಸಾರ್ವಜನಿಕರೇ. ಈ ಮುಷ್ಕರದಿಂದಾಗಿ ಸರಕಾರವು ದಿಗಿಲುಬೀಳುತ್ತಾದರೆ, ಅದು ಮುಖ್ಯವಾಗಿ ಜನತೆಯ ನಿತ್ಯಜೀವನದ ವಹಿವಾಟುಗಳಿಗೂ ಅತ್ಯಗತ್ಯ ಕಾರ್ಯಕಲಾಪಗಳಿಗೆ ತೊಡಕುಂಟಾಗಿರುವುದರಿಂದಲೇ; ಮೂರನೆಯದಾಗಿ ಈ ಮುಷ್ಕರವಾದರೂ ಅಹಂಭಾವ ಪೂರ್ವಕ ಆರಂಭಿಸಲ್ಪಟ್ಟಂತಿದೆ; ಅನಿವಾರ್ಯವಾಯಿತೆನ್ನಲಾಗುವುದಿಲ್ಲ.

ಮೇಲಿನ ತ್ರಿವಿಧ ಆರೋಪಗಳನ್ನು ನಿಷ್ಪಕ್ಷಪಾತವಾಗಿ ಹಾಗೂ ಜನಹಿತ ದೃಷ್ಟಿಯಿಂದಲ್ಲದೆ ಬೇರಾವ ದುರ್ಭಾವನೆಯಿಂದಲೂ ನಾವು ಮಾಡಿಲ್ಲ. ಜನ ಸೇವಾ ನಿಷ್ಠೆಯಿಂದ, ನಿಷ್ಕಲಂಕ ಕಾರ್ಯಾಸಕ್ತಿಯಿಂದ ಕೆಲಸ ಮಾಡಿರುವ ಗೌರವಾರ್ಹರು ಈ ವರ್ಗದಲ್ಲಿರಬಹುದು; ಅನ್ಯ ಸಂಪಾದನೆ, ಸವಲತ್ತುಗಳ ಅವಕಾಶವಿರದ ಕಡಿಮೆ ಸಂಬಳದ ಕೆಲವು ನೌಕರರ ಕುರಿತು ಸಹಾನುಭೂತಿ ಸೂಚಿಸದಿರಲಾಗುವದಿಲ್ಲ. ಆದರೆ ಸರ್ವಸಾಮಾನ್ಯವಾಗಿ ಈ ನೌಕರ ವರ್ಗಕ್ಕೆ ಜನತೆಯ ಮೇಲಿರುವ ಅಸಡ್ಡೆ, ದರ್ಪ, ಸುಲಿಗೆ ಮನೋವೃತ್ತಿಗಳೇ ಕಾಂಗ್ರೆಸ್ ಸರಕಾರದ ಸುಧಾರಣಾ ಕಾರ್ಯಗಳಾವುವೂ ಪರಿಣಾಮಕಾರಿಯಾಗಿ ಸಾರ್ವಜನಿಕರನ್ನು ಸೇರಿಕೊಳ್ಳದಂತೆ ತಡೆಗಟ್ಟುವ ಅಡ್ಡ ಗೋಡೆಗಳಾಗಿದ್ದುವು. ಈ ಮಾತಿಗೆ, ತಮ್ಮ ಹಕ್ಕು ಸಾಧನೆಗಾಗಿ ಅನ್ನ ಪರೀಕ್ಷೆಗೀಡಾಗಲೀ ಈ ವರ್ಗವನ್ನು ಹಂಗಿಸುವ ದುಸ್ಸ್ಫೂರ್ತಿಯಿಂದಾಗಲಿ ಅನ್ಯಾರ್ಥ ಕಟ್ಟಕೂಡದು. ನಾವೀ ಪ್ರತಿಬಂಧವನ್ನು ಈ ಮೊದಲೇ ಆಗಾಗ ತೋರಿಸಿಕೊಟ್ಟಿದ್ದೆವು; ಟೀಕಿಸಿದ್ದೆವು. ಅದು ಹೇಗಿದ್ದರೂ ಈ ನೌಕರರ ಇಂದಿನ ಮುಷ್ಕರಕ್ಕೂ ಸಾರ್ವಜನಿಕರಿಗೂ ಸಂಬಂಧವಿಲ್ಲ—ಒಂದೊಮ್ಮೆಗೆ ಅವರಿಗೆ ಸಂಬಳಕ್ಕಿಂತ ಪ್ರತ್ಯೇಕವಾದ ಮುನಾಫೆಯಿದೆ,ಎಂಬುದು ನಿಜವಿದ್ದಲ್ಲಿ ಅದನ್ನೇ ನಿವಾರಿಸಲು ನೋಡಬೇಕಲ್ಲದೆ ಅದಕ್ಕೆ ಪ್ರತಿಯಾಗಿ ಸಂಬಳ ಭತ್ಯೆಗಳನ್ನು ಕಡಿಮೆ ಕೊಡುವದೆಂದರೆ ಆ ಅನ್ಯಾಯವು ಇರಬಹುದೆಂದು ಒಪ್ಪಿಗೆ ಕೊಟ್ಟಂತೆಯೇ. ಮೇಲಾಗಿ ಈ ಕಡಿಮೆ ಸಂಬಳದ ದೆಸೆಯಿಂದಲೇ ಇತರ ಲಾಭ ಹೊಂದುವ ಅವಶ್ಯಕತೆಯು ಅವರಿಗೊದಗಿದೆ. ನೌಕರರ ಬೇಡಿಕೆ ಸರಿಯೋ ತಪ್ಪೋ? ಬೇರಾವ ಉಪಾಯವೂ ಫಲಿಸದಿರುವಾಗ ನೌಕರರು ಮುಷ್ಕರ ಹೂಡಿದುದು ಸರಿಯೋ ತಪ್ಪೋ? ಎಂಬುದನ್ನು ವಿಚಾರಿಸುವುದೊಂದೇ ಇಲ್ಲಿರುವ ವಿಷಯ—ಎಂಬ ಪ್ರತಿವಾದ ಮುಂದೆ ಬರಬಹುದು. ನಿಜಕ್ಕೂ ಇವೆಲ್ಲಾ ದೃಷ್ಟಿಯಲ್ಲೂ ನೋನ್‌ಗಝೆಟೆಡ್ ಅಧಿಕಾರೀ ವರ್ಗ ತಪ್ಪಿಬಿದ್ದಿದೆ. ಸಾರ್ವಜನಿಕರ ಸಹಾನುಭೂತಿ ಮತ್ತು ಬೆಂಬಲವಿಲ್ಲದೆ ಯಾರ ಯಾವ ಮುಷ್ಕರವೂ ಜಯಶೀಲವಾಗದು. ಸರಕಾರೀ ನೌಕರರ ಈ ಮುಷ್ಕರವಂತೂ ನಿಜಕ್ಕೂ ಜನತೆಗೆದುರಾಗಿ ಹೂಡಲ್ಪಟ್ಟಿದೆ. ಜನಪ್ರತಿನಿಧಿ ಸರಕಾರವು ಜನತೆಯ ಮೇಲೆ ಇನ್ನೂ ಹೆಚ್ಚಿನ ಕರಕಂದಾಯಗಳನ್ನು ಹೇರಿಯೇ ಸಂಪುಗಾರರ ಬೇಡಿಕೆಗಳನ್ನು ಈಡೇರಿಸಿ ಕೊಡಲು ಸಾಧ್ಯ ಎಂದಮೇಲೆ ಈ ಸಂದರ್ಭದಲ್ಲಿ ಈ ನೌಕರರಿಗೂ ಜನತೆಗೂ ಇರುವ ಸಂಬಂಧವನ್ನು ಜ್ಞಾಪಿಸುವುದು ತಪ್ಪಲ್ಲ. ಪರಿಸ್ಥಿತಿ ಹೀಗಿದ್ದರೂ ಮುಷ್ಕರದ ತೊಡಕಿನಿಂದ ಪಾರಾಗಬೇಕೆಂದು, ತುಟ್ಟಿ ಭತ್ಯೆ, ಮನೆಬಾಡಿಗೆ ಭತ್ಯೆ, ಇತ್ಯಾದಿಗಳನ್ನೇರಿಸುವ ಕುರಿತು ಸಹಾನುಭೂತಿಯಿಂದ ಪುನರಾಲೋಚಿಸುವುದಾಗಿ ಮಂತ್ರಿಗಳು ಭರವಸೆಕೊಟ್ಟಿದ್ದರು. ಸಂಬಳದ "ಸ್ಕೇಲ್"ನ ದುರಸ್ತಿ ಯೋಜನೆಯನ್ನು ಪ್ರಾಂತ್ಯದ ಆರ್ಥಿಕ ಸ್ಥಿತಿ ಸುಧಾರಿಸಿದೊಡನೆಯೇ ಮಾಡುವುದಾಗಿ ಮಾತುಕೊಟ್ಟರು. ಈ ಆಶ್ವಾಸನೆಗಳನ್ನಾಧರಿಸಿ ಮುಷ್ಕರದ ನೋಟೀಸನ್ನು ಹಿಂದೆಗೆದು, ನಿಷ್ಠೆಯಿಂದ ಕೆಲಸಮಾಡಬೇಕೆಂದು ತಮಿಳು, ಆಂಧ್ರ ಮತ್ತು ಕೇರಳ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷರುಗಳು ಆಗ್ರಹದ ಜತೆ ವಿನಂತಿಮಾಡಿಕೊಂಡಿದ್ದರು. ಸದ್ಯದ ಮಂತ್ರಿಮಂಡಲದ ರೀತಿನೀತಿಗಳ ದೋಷಗಳನ್ನೇ ಎತ್ತಿ ತೋರಿಸುವವರ ಮುಂದಾಳು ಮಾಜಿ ಪ್ರಧಾನ ಮಂತ್ರಿ ಶ್ರೀ. ಟಿ. ಪ್ರಕಾಶಮರು ಕೂಡಾ ಈ ಮುಷ್ಕರವನ್ನು ಸ್ಪಷ್ಟ ವಾಣಿಯಲ್ಲಿ ಖಂಡಿಸಿದ್ದಾರೆ. ಕೊನೆಯ ಭಾಗದಲ್ಲಿ ಮಂತ್ರಿಗಳಿತ್ತ ಆಶ್ವಾಸನಾನುಸಾರವಾದ ಪರ್ಯಾಲೋಚನೆಗಗತ್ಯವುಳ್ಳ ಸಮಯ ಕೊಡುವ ದೃಷ್ಟಿಯಿಂದ, ಈ ಮುಷ್ಕರವನ್ನು ಕೆಲವು ದಿವಸಗಳ ಮಟ್ಟಿಗಾದರೂ ನೋನ್‌ಗಝೆಟೆಡ್ ನೌಕರರ ಸಂಘವು ಹಿಂದೆ ಹಾಕಬಹುದಿತ್ತು. ಸರಕಾರದ ಮಾಗ್ದಾನ, ಕಾಂಗ್ರೆಸ್ ಸಂಸ್ಥೆಗಳ ಹಾಗೂ ಪತ್ರಸ್ತ ಮುಖರ ಬುದ್ಧಿವಾದ, ಸಾರ್ವಜನಿಕರ ಜಿಗುಪ್ಸೆ ಮತ್ತು ಅವರಿಗಾಗುವ ತೊಂದರೆ, ಇವೆಲ್ಲವನ್ನೂ ಅಲಕ್ಷಿಸಿ, ಜನತೆಗೆ ಮತ್ತು ಮೂಲಕ ಸರಕಾರಕ್ಕೆ ತಮ್ಮ ಕೆಲಸಗಳ ಅವಶ್ಯಕತೆಯನಿವಾರ್ಯವಾದ್ದರಿಂದ ಅವರನ್ನು ಹಣ್ಣು ಮಾಡಿಯೇ ತಮ್ಮ ಸ್ವಾರ್ಥ ಸಾಧಿಸಿಕೊಳ್ಳಬೇಕೆಂದು ಮುಷ್ಕರಕ್ಕಿಳಿದಿರುವ ಈ ನೌಕರರ ಕಡೆಗೆ ಯಾರಾದರೂ ಸಹಾನುಭೂತಿ ತೋರಿಸಲು ಸಾಧ್ಯವಿದೆಯೆ? ಇವರ ಈ ಸಂಘಾನಾಶ್ರಿತ ಮನೋವೃತ್ತಿಯ ಮಾತು ಹಾಗಿರಲಿ; ಮಿಕ್ಕೆಲ್ಲವನ್ನೂ ಮರೆತು ಬಿಟ್ಟು, ಸರಕಾರದಿಂದ ದೊರೆಯುವ ಸಂಬಳವನ್ನಷ್ಟೇ ಗಣಿಸಿದರೂ, ಈ ನೋನ್ ಗಝೆಟೆಡ್ ನೌಕರರಿಗಿಂತ ಇದೇ ದರ್ಜೆಯ ಬೇರಾವ ವಿಭಾಗದವರು ಉತ್ತಮಸ್ಥಿತಿಯಲ್ಲಿದ್ದಾರೆ? ಇವರೆಲ್ಲರಿಗೂ—ಹೆಚ್ಚಿನವರಿಗೆ ಸೇಕಡಾ 50ರಷ್ಟು—ಸಂಬಳ ಹೆಚ್ಚಿಸುವ ನಿರ್ಧಾರವಾಗಿ ಇನ್ನೂ ಒಂದು ವರುಷ ಪೂರ್ಣವಾಗಿಲ್ಲ. ಹೀಗೆ ಏರುತ್ತಾ ಬಂದ ಸಂಬಳ ಮತ್ತು ಹೊಸ ಖಾತೆಗಳ ನಿರ್ಮಾಣದಿಂದಾಗಿ 1939—40ನೇ ವರುಷದಲ್ಲಿ ಪ್ರಾಂತಿಕಸರಕಾರವು ಕೊಡತಕ್ಕ ಸಂಬಳದ ಮೊತ್ತವು ರೂ. 8 ಕೋಟಿ 16 ಲಕ್ಷ ಮಾತ್ರವಿದ್ದುದು ಈ ವರ್ಷ 24 ಕೋಟಿಗೇರಿದೆ. ಮದ್ರಾಸ್ ಪ್ರಾಂತ್ಯದ ವಾರ್ಷಿಕ ಉತ್ಪನ್ನವೆಂದರೆ ಸುಮಾರು 58 ಕೋಟಿ. ಈ ಪೈಕಿ ಬರುವ ವರುಷಾಂತ್ಯಕ್ಕೆ ಇಡೀ ಪ್ರಾಂತ್ಯದಲ್ಲಿ ಪೂರ್ಣಗೊಳ್ಳುವ ಪಾನ ನಿಷೇಧದಿಂದಾಗುವ ನಷ್ಟವನ್ನು ವಜಾ ತೆಗೆಯುವಾಗ ಪ್ರಾಂತ್ಯದ ಉತ್ಪನ್ನವು ರೂ. 30 ಕೋಟಿ ಮಾತ್ರವಾಗಲಿದೆ. ಅದೇ ಕಾಲದಲ್ಲಿ ಸದ್ಯ ಸ್ಥಿತಿಯಲ್ಲಿ ಅತ್ಯಗತ್ಯವುಳ್ಳ ಗೃಹರಕ್ಷಕ ದಳಗಳು; ಸ್ಪೆಶ್ಯಲ್ ಪೋಲಿಸ್ ದಳಗಳೇ ಮೊದಲಾದವುಗಳ ಹೊಸ ವೆಚ್ಚವನ್ನು ಸರಕಾರವು ಹೊರಬೇಕಾಗುತ್ತದೆ. ಸಂಪುಗಾರ ನೌಕರರ ಇಂದಿನ ಬೇಡಿಕೆಗಳನ್ನೂ ಸರಕಾರವು ಮನ್ನಿಸಿದಲ್ಲಿ ಪ್ರಾಂತ್ಯದ ಉತ್ಪನ್ನದಿಂದ ಈ ಸಂಬಳಗಳ ಬಿಲ್ಲನ್ನಷ್ಟೇ ಸಲಾಯಿಸಿ ವಿದ್ಯೆ, ಔಷಧ, ರಸ್ತೆ, ನೀರಾವರಿ ಮುಂತಾದ ಬೇರಾವ ಗೊಡವೆಗೂ ಹೋಗದೆ ಸರಕಾರವು ಸುಮ್ಮಗಿರಬೇಕಾದೀತು! ಇಲ್ಲವೇ ತೆರಿಗದಾರರ ಮೇಲೆ ಇನ್ನೂ ಹೆಚ್ಚಿನ ಕರಕಂದಾಯಗಳನ್ನು ಹೇರಬೇಕಾದೀತ! ಈ ನೌಕರರಿಗಾಗಿ ಹೀಗೆ ಮಾಡುವುದು ನ್ಯಾಯವೆ? ನಾವು ಮೊದಲೇ ಹೇಳಿರುವಂತೆ ಕೆಲವು ಅಪವಾದಗಳಿದ್ದರೂ [ಅಂಥವರು ಅಭಿನಂದನಾರ್ಹರು) ಬಹುತೇಕವಾಗಿ ಸಾರ್ವಜನಿಕರನ್ನು ಪೀಡಿಸಿ ಪ್ರಯೋಜನ ಹೊಂದುವ ಅಭ್ಯಾಸವುಳ್ಳ ಈ ನೌಕರ ವರ್ಗವು ಈಗ ಸರಕಾರವನ್ನು ಪೀಡಿಸ ಹತ್ತಿದ ಮಾತ್ರಕ್ಕೆ ಅನ್ಯೋಪಾಯವಿಲ್ಲದ ಜನರಂತೆಯೇ ಸರಕಾರವೂ ತಲೆಬಾಗಬೇಕೆ? ಕೂಡದೆಂದೇ ನಮ್ಮ ಸ್ಪಷ್ಟಾಭಿಮತ.

CHAMPAE'S
Snow & Castrex
Sale Distributers for India
Prop: K. G. NAYAK,
Santhekatte, UDIPI, S. K.

The Universal Fire & General Insurance Co. Ltd.
HEAD OFFICE **BOMBAY**
ESTD 1919

ದಿ ಯುನಿವರ್ಸಲ್ ಫೈಯರ್ ಅಂಡ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್
ಹೆಡ್ ಆಫೀಸ್: ಬೊಂಬಾಯಿ

ಈ ಕಂಪೆನಿಯು ಜೀವ, ಅಗ್ನಿ, ಮೋಟಾರ್, ಸಮುದ್ರೋಪಯೋಗ, ಈ ಮೊದಲಾದ ವಿಮಾ ವಹಿವಾಟುಗಳನ್ನು ಮಾಡುವ ಪುರಾತನ ಕಂಪೆನಿಯಾಗಿದೆ.

[illegible]

P. D. Nanaya,
[illegible]
Udipi S. K.

B. K. Satalvad—[illegible]
T. P. Kapadia—[illegible]

ನೌಕರರ ಸಂಘದ ಕುರಿತು ಸರಕಾರದ ಖಂಡತುಂಡ ಧೋರಣೆ

ಇಡೀ ಮದ್ರಾಸ್ ಪ್ರಾಂತ್ಯದ ಸರ್ವೆಡೆಗಳಲ್ಲೂ ಇದೇ ತಾ. 15ನೇ ಸೋಮವಾರದಿಂದ ನೋನ್‌ಗಝೆಟೆಡ್ ಸರಕಾರೀ ನೌಕರರ ಮುಷ್ಕರ ನಡೆದಿದೆ ಪ್ರಾಂತ್ಯದ ವಾತಾವರಣ ಬದಲಾಗಿದೆ. ಒಂದು ದಿನ ಹಿಂದಾದುದು-ಅಲ್ಲಲ್ಲಿ ಕೆಲವರು ಹಲವರು ಕೆಲಸಕ್ಕೆ ಹೋಗುತ್ತಿರುವುದು-ಕಂಡುಬರುತ್ತಿದೆಯಾದರೂ ಸರ್ವಸಾಮಾನ್ಯವಾಗಿ ಮುಷ್ಕರವು ಸಾರ್ವತ್ರಿಕವಾಗಿದೆಯೆನ್ನಲಡ್ಡಿಯಿಲ್ಲ. ಈ ನೌಕರ ಸಂಘವು ವಿನಾಯತಿ ಪಡಿಸಿದಂತೆ ಹಸುಗೇ ಸಂಬಂಧದ ನೌಕರರು ಮುಷ್ಕರ ಹೂಡಿಲ್ಲ. ಇದು ವರೆಗೆ ವಾರ್ತೆಬಂದಂತೆ ಎಲ್ಲೂ ಶಾಂತಿಭಂಗವಾಗಿಲ್ಲ. ಮದ್ರಾಸ್ ಮಂತ್ರಿಗಳೆಲ್ಲರೂ ಮದ್ರಾಸಿನಲ್ಲೇ ಉಳಿದು ಸ್ಥಿತಿಗತಿ ವ್ಯಾಪಾರಗಳನ್ನು ನಿರೀಕ್ಷಿಸುತಿದ್ದಾರೆ. ಗಝೆಟೆಡ್ ಅಧಿಕಾರಿಗಳಿಗೆ ಕಾರ್ಯವ್ಯವಸ್ಥೆಯ ಕಂಡೋಕ್ತ ಸೂಚನೆಗಳು ಬಂದಿವೆಯೆಂದು ತಿಳಿದುಬರುತ್ತದೆ. ಅಲ್ಲಲ್ಲಿಯ ಅಧಿಕಾರಿಗಳು ಫೈಲ್ಸ್, ರಿಕಾರ್ಡ್ ಮತ್ತಿತರ ಸರಕಾರೀ ಸೊತ್ತುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು, ಸಾಧ್ಯವಿದ್ದವರ ಸಹಾಯ ಪಡೆದು ಅನಿವಾರ್ಯವಾದ ಕಾರ್ಯಗಳನ್ನು ಪೂರೈಸುತ್ತಿರುವುದು ಕಂಡುಬರುತ್ತಿದೆ. ತಾ. 14ರಲ್ಲಿ ಕೊನೆಯ ಸಂಧಾನ ಯತ್ನ ನಡೆದರೂ ಫಲಬರಲಿಲ್ಲ. ಮದ್ರಾಸ್ ನಗರದಲ್ಲೇ 6000 ಮುಷ್ಕರಗಾರ ನೌಕರರಿದ್ದಾರೆ. ಪ್ರಾಂತ್ಯದ ಎಲ್ಲಾ ಜಿಲ್ಲೆಗಳಲ್ಲಿ ಅಂಥವರ ಸಂಖ್ಯೆ ಹಲವು ಸಾವಿರಗಳಿರಬಹುದು. ಸರಕಾರವು ಈ ಮುಷ್ಕರದ ಕುರಿತು ದೃಢ ಧೋರಣೆ ವಹಿಸಿದೆ; ಮುಷ್ಕರದಿಂದಾಗಿ ಖಾಲಿಬಿದ್ದ ಸ್ಥಾನಗಳಿಗೆ ಲ್ಲಾ ಉಮೇದ್ವಾರಿಗಳ ಅರ್ಜಿಗಳು ಅಧಿಕ ಸಂಖ್ಯೆಯಲ್ಲಿ ಬಂದಿವೆಯೆಂದು ತಿಳಿದುಬರುತ್ತದೆ. ಇದೇ ತಾ. 17ಕ್ಕೆ ಕೆಲಸಕ್ಕೆ ಹಾಜರಾಗದ ನೌಕರರನ್ನು ಕೆಲಸದಿಂದ ತೆಗೆದುಹಾಕುವುದಾಗಿ ಮದ್ರಾಸ್ ಸರಕಾರವು ಇದೇ ತಾ. 16ರಲ್ಲಿ ಜಾಹೀರು ಮಾಡಿದೆ ಮುಷ್ಕರ ಹಿಡಿದುದಕ್ಕಾಗಿ ಸಯದ್‌ಪೇಟೆಯ ಸಬ್ ಮೆಜಿಸ್ಟ್ರೇಟರ ದಸ್ತಗಿರಿಯಾಗಿದೆ

ಬೆಂಗಳೂರಿನಲ್ಲಿ ಜಾತೀಯ ಗಲಭೆ

ಇದೇ ತಾ. 12ರಲ್ಲಿ ಬೆಂಗಳೂರಿನ ಪೋರ್ಟ್ ಹೈಸ್ಕೂಲಿನ ಎರಡು ಸಮಾಜಗಳ ವಿದ್ಯಾರ್ಥಿಗಳೊಳಗೆ ಕಾರಣಾಂತರಗಳಿಂದ ಘರ್ಷಣೆಯುಂಟಾಗಿ, ಆ ಜಾತೀ ಜಗಳಾಗ್ನಿ ಒಮ್ಮೆಯೇ ನಗರಕ್ಕೂ ಹಬ್ಬಿಕೊಂಡಿತು. ಕೊಲೆ, ಬೆಂಕಿ, ಇರಿತ, ಕಲ್ಲೆಸೆತ, ಸೂರೆ, ಸುಲಿಗೆಗಳು ನಡೆಯುತ್ತಿದುವು. ಪೋಲೀಸರು ಕೆಲವೆಡೆ ಲಾಠೀ ಚಾರ್ಜು ನಡೆಸಬೇಕಾಯಿತು. ಶಾಲಾ ಕಾಲೇಜುಗಳು ಮುಚ್ಚಲ್ಪಟ್ಟವೆ. ನಗರದಲ್ಲಿ ಕರ್ಫ್ಯೂ ಆಜ್ಞೆ ಜಾರಿಯಾಗಿದೆ. ಇದು ವರೆಗೆ ಬಂದ ಅಧಿಕೃತ ವಾರ್ತೆಯಲ್ಲಿ ಏಳೆಂಟು ಮಂದಿ ಮಡಿದು 88 ಮಂದಿಗೆ ವಿಶೇಷ ಜಖಂಗೊಂಡರೆಂದಿದ್ದರೂ ಸರಿಯಾದ ಅಂಕೆಸಂಖ್ಯೆಗಳನ್ನು ಈಗ ಹೇಳುವುದಸಾಧ್ಯ ಪರಿಸ್ಥಿತಿ ಭೀಕರವಿದ್ದರೂ ಪೋಲೀಸರು ವಿಶೇಷ ಮುಂಜಾಗ್ರತೆ ವಹಿಸಿದ್ದಾರೆ. ಮೊನ್ನೆ ನಿನ್ನೆಯಿಂದ ನಗರ ಯಥಾಸ್ಥಿತಿಗೆ ಬರುತ್ತಿದೆ ಎಂದು ತಿಳಿದು ಬರುತ್ತದೆ!

ಅಲಹಾಬಾದ್ ವಿಶ್ವವಿದ್ಯಾಲಯದ

ರಜತೋತ್ಸವ ಪದವೀದಾನ ಸಮಾರಂಭಕ್ಕೆ ಪಂಡಿತ ನೆಹರು, ಬಾಬು ರಾಜೇಂದ್ರ ಪ್ರಸಾದ್, ಮೌಲಾನಾ ಅಜಾದ್, ವಿಜಯಲಕ್ಷ್ಮಿ ಪಂಡಿತ್ ಮೊದಲಾದ ಅಗ್ರಗಣ್ಯ ಪ್ರಮುಖರಾಗಮಿಸಿ ಪ್ರಾಮುಖ್ಯ ಭಾಷಣಗಳನ್ನಿತ್ತಿದ್ದರು. "ಸ್ವತಂತ್ರ ಭಾರತದಲ್ಲಿ ಜಾತೀಯತೆಗೂ ಮನುಷ್ಯನು ಮನುಷ್ಯನ ಸುಲಿಗೆ ಮಾಡುವಕ್ರಮಗಳಿಗೂ ಎಡೆಯಿಲ್ಲ ಧಾರ್ಮಿಕ ಸ್ವಾತಂತ್ರ್ಯವಿದೆಯಾದರೂ, ಜನತೆಯ ರಾಜಕೀಯ ಹಾಗೂ ಆರ್ಥಿಕ ಜೀವನದಲ್ಲಿ ಯಾವುದೇ ಧರ್ಮವು ಕೈಹಾಕದಂತೆ ತಡೆಬೀಳುವುದು." ಎಂದು ನೆಹರು ನುಡಿದರು. ಹಿಂದಿನ ಕಾಲದ ಮಹರ್ಷಿಗಳ ಆತ್ಮಸೇಯಮನ, ಆಧ್ಯಾತ್ಮಿಕತೆಯನ್ನು ರಾಜೇಂದ್ರ ಪ್ರಸಾದರು ಮುಂದಿಟ್ಟರು. ನೆಹರು, ಪ್ರಸಾದ್, ವಿಜಯ ಲಕ್ಷ್ಮಿ, ಸಪ್ರು, ಅಜಾದ್ ಮುಂತಾದ ಹಲವರಿಗೆ ಈ ವಿಶ್ವ ವಿದ್ಯಾಲಯದ 'ಡಾಕ್ಟರ್' ಪದವಿಗಳು ದೊರೆತಿವೆ. ಹಿಂದೀ ಸರಕಾರವು 10ಲಕ್ಷ ರೂಪಾಯಿ ಸಹಾಯ ಧನವನ್ನೀ ಯುನಿವರ್ಸಿಟಿಗಿತ್ತಿದೆ.

ಹೈದರಾಬಾದಿನಲ್ಲಿ

ಮದ್ರಾಸಿನಿಂದ ಧಿಲ್ಲಿಗೆ ಹಾರಿ ಅಲ್ಲಿ ನಾಯಕರೊಡನೆ ಪರ್ಯಾಲೋಚಿಸಿದ ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷ ಸ್ವಾಮಿ ರಾಮಾನಂದ ತೀರ್ಥರು ಆ ಕಾಂಗ್ರೆಸಿನ ಕಾರ್ಯಕಾರೀ ಸಮಿತಿ ಮತ್ತು ಕ್ರಿಯಾಸಮಿತಿಗಳ ಸಭೆಗಾಗಿ ಬೊಂಬಾಯಿಗೆ ಬಂದು ಆ ಸಭೆಯಲ್ಲಿ ಹೈದರಾಬಾದು ಸತ್ಯಾಗ್ರಹವನ್ನು ಬಿರುಸಿನಿಂದ ಮುಂದೊತ್ತುವ ನಿರ್ಧಾರವಾಗಿದೆ. ಭಾರತ ಕೇಂದ್ರಕ್ಕೆ ಸೇರಬೇಕು—ಪೂರ್ಣ ಜವಾಬ್ದಾರ ಸರಕಾರ ಸ್ಥಾಪನೆಯಾಗಬೇಕು, ಎಂಬೆರಡು ಮೂಲ ತತ್ವಗಳ ಮಟ್ಟಿಗೆಂದಿಗೂ ಸಂಧಾನವಿಲ್ಲವೆಂದಾಗಿದೆ.

ಉಡುಪಿ ಸರ್ಕಲ್ ಕಾಂಗ್ರೆಸ್— ಕಮಿಟಿಯು ತಾ. 17ರಲ್ಲಿ ಸೇರಿ ಸರಕಾರೀ ನೌಕರರ ಮುಷ್ಕರವನ್ನು ಖಂಡಿಸುವ ನಿರ್ಧಾರ ಮಾಡಿದೆ.

ಶ್ರೀ ಫಲಿಮಾರು ಮಠದ ಶ್ರೀರಘುಮಾನ್ಯ ತೀರ್ಥ ಶ್ರೀಪಾದಂಗಳವರು ಸಮಾಧಿ ಹೊಂದಿದರು.



ಉಡುಪಿಯ ಅಷ್ಟ ಮಠಗಳಲ್ಲೊಂದಾದ ಶ್ರೀ ಫಲಿಮಾರು ಮಠದ ಶ್ರೀ ರಘುಮಾನ್ಯ ತೀರ್ಥ ಶ್ರೀಪಾದಂಗಳವರು ಇದೇ ತಾ. 13ರಲ್ಲಿ ಮದ್ರಾಸಿನಲ್ಲಿ ಕಾಲಾಧೀನರಾದರೆನ್ನಲು ವಿಷಾದಿಸುತ್ತೇವೆ. ಶ್ರೀಪಾದಂಗಳವರಿಗೆ ರಕ್ತದೊತ್ತಡದ ಪೀಡೆಯಿದ್ದುದರಿಂದ ಕೊನೆಯ ಭಾಗದಲ್ಲಿ ಚಿಕಿತ್ಸೆಗಾಗಿ ಮದ್ರಾಸಿಗೆ ಹೋಗಿದ್ದರು. ಅವರ ವಿಯೋಗದಿಂದ, ಧರ್ಮ ಪೀಠಗಳಲ್ಲೊಂದು ಒಮ್ಮೆ ಖಾಲಿಯಾದುದು ಮಾತ್ರವಲ್ಲ; ಸಾರ್ವಜನಿಕ ಕಾರ್ಯರಂಗದ ಒಂದು ಸಮರ್ಥ ಕೈಯೇ ಎಂದೆಂದಿಗೂ ಕಳೆದು ಹೋಯಿತು! ಶ್ರೀಗಳವರು ಕಾರ್ಯಪಟು, ಧೀರ ಸಾಹಸಿ, ಕುಶಾಗ್ರ ಬುದ್ಧಿಯವರಿದ್ದರು. ಸಾರ್ವಜನಿಕ ಕಾರ್ಯ ಧುರಂಧರರು, ಸುಧಾರಿತ ಮನೋವೃತ್ತಿಯವರು ಹಾಗೂ ಜನಪ್ರೀತರಿದ್ದರು. ವಿದೇಶ ಗಮನಕ್ಕೆ ನಿಷೇಧವಿದ್ದ ಕಾಲದಲ್ಲಿ, ಲಂಡನ್ ಪ್ರವಾಸಕ್ಕೆ ಪ್ರೋತ್ಸಾಹಕೊಟ್ಟು, ಅಂಥವರು ಮರಳಿಬಂದಾಗ ಸಹಪಂಕ್ತಿ ಕೊಡಿಸಿದ ಸ್ವಾಮಿಗಳವರಲ್ಲಿ ಮೊದಲಿಗರಿವರೇ. ನಿಃಕ್ಕಸಂಗಸಾಧ್ಯವಾಗಿದ್ದ ರಾಜ ಸತ್ಕಾರವನ್ನು ಮೈಸೂರು ಮಹಾರಾಜರಿಂದಿವರು ಪಡೆದಿದ್ದರು. ಫಲಿಮಾರಿನಲ್ಲಿ ಈ ಶ್ರೀಪಾದಂಗಳವರಿಂದಾಗಿದ್ದ ಗ್ರಾಮೋದ್ಧಾರ ಕಾರ್ಯಗಳು ಮಿಕ್ಕ ಶ್ರೀಗಳವರಂತೆ ಶ್ರೀಮಂತರಿಗೂ ಮಾದರಿಯಾಗುವಂತಹವಿವೆ. ತಮ್ಮಾಯುಷ್ಯದ ಕೊನೆಯ ಭಾಗದಲ್ಲಿ ಉಡುಪಿ ಸಂಸ್ಕೃತ ಕಾಲೇಜಿಗೆ ಭವ್ಯಕಟ್ಟಡ ನಿರ್ಮಿಸುವ ಕಾರ್ಯಕ್ಕಿಳಿದು, ಊರು ಪರವೂರುಗಳಿಂದ ನಿಧಿ ಸಂಗ್ರಹಿಸಿ, ಅದಕ್ಕೊಂದು ಸುದೃಢ ತಳಕಟ್ಟಿ, ನಂತೆಯೇ ಅರ್ಥಿಕ ಆಸ್ತಿವಾರವನ್ನೂ ಹಾಕಿದ್ದರು. ಫಲಿಮಾರು ಶ್ರೀಗಳವರಿಂದ ಇಂತಹ ಎಷ್ಟೋ ಸಾರ್ವಜನಿಕ ಕಾರ್ಯಗಳಾಗಿದ್ದುವು. ಬೌದ್ಧಿಕ, ಕಾಯಿಕ, ಸಂಗೀತ, ಸಾಹಿತ್ಯ, ತಾತ್ವಿಕ, ಪಾರಮಾರ್ಥಿಕ ಇತ್ಯಾದಿ ಸರ್ವ ವಿಭಾಗಗಳ ತಜ್ಞರಿಗೂ ಈ ಶ್ರೀಪಾದಂಗಳವರ ಪ್ರೋತ್ಸಾಹವಿದ್ದೇ ಇತ್ತು. ಸಾರ್ವಜನಿಕ ಕಾರ್ಯಾಸಕ್ತಿ, ಕಾರ್ಯಶಕ್ತಿ, ವ್ಯವಹಾರಜ್ಞಾನ, ವಿಶಾಲ ಧೋರಣೆಗಳಿಂದ ಶ್ರೀ ರಘುಮಾನ್ಯ ತೀರ್ಥ ಶ್ರೀಪಾದಂಗಳವರಿಗೆ ಧರ್ಮಪೀಠಾರೂಢರಲ್ಲೊಂದು ವಿಶಿಷ್ಟ ಸ್ಥಾನವಿದ್ದಿತು, ಪಕ್ಷ ಭೇದವಿಲ್ಲದೆ, ಸರ್ವರ ಗೌರವಕ್ಕವರು ಪಾತ್ರರಾಗಿದ್ದರು. ಅವರ ಅಗಲುವಿಕೆಯು ಸಮಾಜಕ್ಕೆ ಹಾಗೂ ಉಡುಪಿಗೆ ತುಂಬಿಬರಲಾರದ ನಷ್ಟ. ಶ್ರೀ. ರಘುಮಾನ್ಯ ತೀರ್ಥ ಶ್ರೀಪಾದಂಗಳವರ ವಿಯೋಗದ ದುಃಖದಿಂದ ಉಡುಪಿ, ಮಲ್ಪೆ, ಫಲಿಮಾರು ಮೊದಲಾದ ಸ್ಥಳಗಳಲ್ಲಿ ಹರತಾಳ ನಡೆದಿದೆ. ಆತ್ಮಕ್ಕೆ ಶಾಂತಿಯಿರಲಿ!

NOTICE under O 21 R 15 C. P. Code

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 493/1947.
O. S. 61/1934.

ನಾರಾಯಣ ಶ್ಯಾನಭಾಗ-3ನೇ ವಾದಿ ಅರ್ಜಿದಾರ.

ವಾಮನ ಭಂಡಾರಿ ಕೂಡಾ –ಎದ್ರಿರು. ಕುಂದಾಪುರ ಕಸಬೆಯಲ್ಲಿರುವ ಅನಂತಯ್ಯ ಶ್ಯಾನಭಾಗನ ಮಗಂದಿರು ವೆಂಕಟ್ರಾಯಶ್ಯಾನಭಾಗ 1, ದೇವರಾಯ ಶ್ಯಾನಭಾಗ1, ಕೃಷ್ಣ ಶ್ಯಾನಭಾಗ1 ಅನಂತಯ್ಯ ಶ್ಯಾನಭಾಗ ರವಿಧವೆ ರುಕ್ಮಿಣಿ ಯಾನೆ ಕಲ್ಯಾಣಿ ಅಮ್ಮ 1, ನರಸಿಂಹ ಶ್ಯಾನಭಾಗನ ಮಗ ನರೇಂದ್ರ ಶ್ಯಾನಭಾಗ1, ಗೋವಿಂದ ಶ್ಯಾನಭಾಗರ ಮಗ ಗೋಪಾಲ ಕೃಷ್ಣ ಶ್ಯಾನಭಾಗ1, ಮೈನರ ಉಪೇಂದ್ರ, ಮಧುಸೂಧನ, ವೆಂಕಟೇಶ ಶೆಣೈ ಮಗ ಗೋಪಾಲ ಕೃಷ್ಣ ಶೆಣೈ 1 ಸಹಾ ಇವರಿಗೆ ಕೊಡುವ ನೋಟಿಸು.

ಸದ್ರಿ ಡಿಕ್ರಿಯ ಅಮ್ಲುಜಾರಿ ಬಗ್ಗೆ ಅರ್ಜಿದಾರನು ಮನವಿಮಾಡಿದ್ದಾನೆ. ವಸೂಲು ಆದ ಹಣ ತನಗೆ ಕೊಡ್ಬೇಕೆಂತ ಪ್ರಾರ್ಥನೆ ಕೇಳಿರುತ್ತಾನೆ. ಅದ ಕಾರಣ ನಿಮಗೇನಾದ್ರೂ ಆಕ್ಷೇಪ ಇರುವುದಾದರೆ ತಾ. 6-1-1948ನೇ ದಿನ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹ್ಯಾಜರುಮಾಡಿಕೊಳ್ಳಬಹುದು.

(Sd.) **A. V. N. Hebbar,**
Pleader for Pleff.
Kundapur, 9-12-47.

ಕೊಲ್ಲೂರು ಶ್ರೀಮೂಕಾಂಬಿಕಾ ದೇವಸ್ಥಾನ.

ಗಾಡಿ, ಎತ್ತುಗಳು ಮಾರಾಟದ ಪ್ರಕಟಣೆ.

ದೇವಸ್ಥಾನದ ಬಾಬ್ತು ಸುಮಾರು ರೂ. 1200|-ಕ್ರಯ ಬಾಳುವ ಗಾಡಿ ಮತ್ತು ಒಂದು ಜತೆ ಗಾಡಿ ಎತ್ತುಗಳು ಮಾರಾಟಕ್ಕಿವೆ. ಖಾಯಿಸ್ ಉಳ್ಳವರು ಟೆಂಡರು ಫಾರ್ಮು ಮತ್ತು ಮಾಹಿತಿಗಾಗಿ ಈ ಕೆಳಗಿನವರಿಗೆ ಕೂಡಲೇ ಬರಕೊಳ್ಳಬಹುದು. ಟೆಂಡರುಗಳನ್ನು ತಾ 15-1-1948ರ ತನಕ ಸ್ವೀಕರಿಸಲಾಗುವುದು.

ಬಿ. ನಾರಾಯಣ ಶೆಟ್ಟಿ,
B. A. B. L.
ಎಕ್ಸಿಕ್ಯೂಟಿವ್ ಆಫೀಸರ್,
ಕೊಲ್ಲೂರು ಶ್ರೀಮೂಕಾಂಬಿಕಾ ದೇವಸ್ಥಾನ,
ಕೊಲ್ಲೂರು ಪೋಸ್ಟ್.

1948ನೇ ಇಸವಿಯ ಕೆಲಂಡರ್ ಪ್ಯಾಡುಗಳು

ದೊರೆಯುತ್ತವೆ.

ಸಣ್ಣ ಸೈಜಿಗೆ 100ಕ್ಕೆ ರೂ. 3 0 0
„ „ 500ಕ್ಕೆ ರೂ. 12 8 0
ದೊಡ್ಡ ಸೈಜಿಗೆ (ರಜಾ ದಿನಗಳ ವಿವರದೊಂದಿಗೆ) 100ಕ್ಕೆ ರೂ. 6 4 0
500ಕ್ಕೆ ರೂ. 30 0 0

ನವಯುಗ ಪ್ರೆಸ್, ಉಡುಪಿ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಉಡುಪಿ

ಕರ್ನಾಟಕ ಸಂಘದ — ಮಹಾಸಭೆಯು ತಾ ೧೪ರಲ್ಲಿ ಸಂಜೆ 'ನವಯುಗ' ಪ್ರೆಸ್ಸಿನ ಮಾಳಿಗೆಯಲ್ಲಿ ಶ್ರೀ ಕೆ. ಎಸ್. ನಾಡವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಾರ್ಯದರ್ಶಿಯಾದ ಶ್ರೀ ಕೊಡ್ವೆಲ್ ಶ್ರೀನಿವಾಸರಾಯರು ಪರಿಶೋಧಿಸಲ್ಪಟ್ಟ ಜಮಾ ಖರ್ಚಿನ ಲೆಖ್ಖಪತ್ರಗಳನ್ನು ಸಭೆಯ ಮುಂದಿಂಸಿದರು. ಅದು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ತದನಂತರ ಚಾಲ್ತಿ ವರುಷದ ಬಜೆಟ್ ಮಂಜೂರಾಗಿ ಕಾರ್ಯ ನಿರ್ವಾಹಕ ಮಂಡಳಿಗೆ ೧೨ ಮಂದಿ ಸದಸ್ಯರ ಚುನಾವಣೆ ನಡೆಯಿತು. ಶ್ರೀ ಫಲಿಮಾರು ಸ್ವಾಮಿಗಳವರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು.

ಮುಷ್ಕರ— ತಾಲೂಕು ಕಚೇರಿ ಮುನ್ಸಿಫ್ ಕೋರ್ಟು, ಸರಕಾರಿ ಆಸ್ಪತ್ರೆ, ಸಬ್ ಮೆಜಿಸ್ಟ್ರೇಟ್ ಕೋರ್ಟುಗಳಲ್ಲಿ ತಾ ೧೫ರಲ್ಲಿ ಎನ್. ಜಿ. ಓ. ಗಳವರ ಮುಷ್ಕರವಿತ್ತು. ತಾ. ೧೬ರಲ್ಲಿ ಬರಿ ಟೋಕನಾಗಿ ಎಲ್ಲಾ ನೋನ್ ಗಜೆಟೆಡ ನೌಕರರೂ ಮುಷ್ಕರ ಹಿಡಿದಿದ್ದರು.

ಹಂಪಾಳ— ಶ್ರೀ ಫಲಿಮಾರು ಸ್ವಾಮಿಗಳವರು ತಾ ೧೨ರಲ್ಲಿ ನಿಧನರಾದ ನಿಮಿತ್ತ ಮರುಕ ಸೂಚನಾರ್ಥವಾಗಿ ತಾ. ೧೨ರಲ್ಲಿ ಉಡುಪಿಯ ಬಂದೂ ಕ್ರಿಶ್ಚಿಯನ್ ಮಹಮ್ಮದೀ ಬಂಧುಗಳೆಲ್ಲರೂ ಹರತಾಳವನ್ನಾಚರಿಸಿ ತಮ್ಮ ದುಃಖವನ್ನು ಪ್ರದರ್ಶಿಸಿದರು. ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಚಿತ್ರ ಪ್ರದರ್ಶನದ ಮೊದಲು ಸಂತಾಪ

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

ಸ್ಮಾಲ ನಂ. 701/1947.

ವಾದಿ-ಅನಂತಪದ್ಮನಾಭಯ್ಯ, ದೊಡ್ಡಮನೆ ನಾಗಪ್ಪಯ್ಯನ ಮಗ, ಕುಂದಾಪುರ ತಾಲ್ಲೂಕು ಬೀಜಾಡಿ ಗ್ರಾಮದ ಹುಪ್ಪಾಳಿಯಲ್ಲಿರುವ ವಾ, ರಹಿತ್ರ, Post Koteshwar.

ಪ್ರತಿವಾದಿ— ನರಸಿಂಹಯ್ಯ ಕೋಟದ ಮನೆ ವೆಂಕಟ ಸುಬ್ರಾಯರ ಮಗ, ಕುಂದಾಪುರ ತಾಲ್ಲೂಕು ಬೀಜಾಡಿ ಗ್ರಾಮದಲ್ಲಿರುವ ವಾ, ರಹಿತ್ರ, Post Koteshwar.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವದೇನಂದ್ರೆ,

ಸದ್ರಿ ವಾದಿಯು ಸದ್ರಿ ಪ್ರತಿವಾದಿ ಮೇಲೆ ಮೂಲಗೇಣಿ ಗೇಣ ರೂಪಾಯಿ 5-11-6ನ್ನು ಬರಮಾಡಿಕೊಳ್ಳುವರೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ ಮೇಲಿನ ದಾವೆಯು ತಾರೀಕು 1/1/1948ಕ್ಕೆ ತನ್ನಿಗೆ ಯಿಡೋಣಾಗಿರುತ್ತದೆ ... ಆಕ್ಷೇಪಣೆ ಇದ್ದರೆ ಆ ದಿವಸ ಪೂರ್ವಾಹ್ನ ಗಂಟೆ ೧೧ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹ ಯಾ ವಕೀಲ ಮುಖಾಂತ್ರ ಹಾಜ್ರಾಗಿ ಜಾಹಿರು ಮಾಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜ್ರಿಯಲ್ಲಿ ಸದ್ರಿ ದಾವೆ ತೀರ್ಮಾನಿಸಲಾಗುವದೀ ಈ ತರದ ಮೂಲಕ ತಿಳಿಸಿರುತ್ತದೆ.

(Sd). M. M. Hebbar,

Advocate for Plaintiff.

ಕೋಟೇಶ್ವರ ಕುಂದಾಪುರ, 11-12-47.

ಏ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ ೨೦ ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವ್ಯವಹಾರಗಳಿಂದ ಅವರ ಪ್ರಯೋಜನವನ್ನು ಒದಗಿಸುತ್ತಿರುವುದು.

The Moolky Bank Ltd.,

Moolky, S. K.

ಮೊಂಟಿನವರ ಅಪೇಕ್ಷೆಯಂತೆ ಪ್ರೇಕ್ಷಕರು ಎರಡು ನಿಮಿಷ ಮೌನ ಪ್ರಾರ್ಥನೆ ಮಾಡಿ ಶ್ರೀ ಶ್ರೀಗಳವರ ಮೇಲೆ ತಮಗಿರುವ ಭಕ್ತಿ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಹವಾಮಾನ— ತಾ. ೧೫ರಲ್ಲಿ ಅಕಾಲ ಮೋಡಗಳಿಂದ ತುಂಬಿತ್ತು. ತಾ. ೧೬ರಲ್ಲಿ ಬೆಳಗಿನ ಜಾವದಲ್ಲಿ ಅಲ್ಪ ಸ್ವಲ್ಪ ಮಳೆಯ ಹನಿಗಳು ಬಿದ್ದವು. ಧಾರಾಕಾರವಾಗಿ ಮಳೆ ಸುರಿಯುವುದನ್ನು ಬೇಸಾಯಗಾರರು ಇದಿರು ನೋಡುತ್ತಿರುವರು.

ಸಭೆ— ಕೆಲಸಗಾರರ ಸಂಘದ ಪತಿಯಿಂದ ತಾ. 13ನೇ ಅಪರಾಹ್ನ ಶ್ರೀ. ಬಿ ಪಿ ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ನಿಯಂತ್ರಣ ಪದ್ಧತಿಯನ್ನು ಪ್ರತಿಭಟಿಸುವ ಸಾರ್ವಜನಿಕ ಸಭೆಯೊಂದು ರಥಬೀದಿಯಲ್ಲಿ ಜರಗಿ ಒಬ್ಬರ ಭಾಷಣಗಳಾದುವಲ್ಲದೆ, ಅಧ್ಯಕ್ಷರು ಸ್ಥಿತಿಗತಿಗಳನ್ನು ವಿವರಿಸಿ ಮನೋಜ್ಞ ಭಾಷಣವಿತ್ತರು. ಆಹಾರ ಧಾನ್ಯ ಮುಂತಾದ ನಿಯಂತ್ರಣಗಳನ್ನು ತೆಗೆಯಬೇಕೆಂದೂ, ಸುಗ್ಗಿ ಬೆಳೆ ಹಾಳಾಗಿರುವುದರಿಂದ ಗೇಣಿಯಲ್ಲಿ ರಿಯಾಯಿತಿ ಕೊಡಬೇಕೆಂದೂ, ಮುಂತಾದ ನಿರ್ಣಯಗಳಾದುವು

ಮಂಗಳೂರು

ದ. ಕ ಜಿಲ್ಲಾ ಬಂಟರ ಯಾನೆ ನಾಡವರ ಸಂಘ, ಮಂಗಳೂರು.

ಮಂಗಳೂರು, ತಾ 12-12-47.

ಮಹಾಶಯರೇ,

ನಮ್ಮ ಸಂಘದ ವಾರ್ಷಿಕ ಮಹಾಸಭೆಯು ಬರುವ 1948ನೇ ಇಸವಿ ಜನವರಿ ತಿಂಗಳ ತಾ. 10ನೇ ಶನಿವಾರ ದಿವಸ ಕುಂದಾಪುರ ಉಪವಿದ್ಯಾರ್ಥಿ ಭವನದಲ್ಲಿ ರಚಿಸಿದ ಭವ್ಯ ಚಪ್ಪರದಲ್ಲಿ ಶ್ರೀಮಾನ್ ರಾವ್‌ಬಹದೂರ್ ಎಸ್. ಮಹಾಲಿಂಗ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಜರಗುವುದು. ತಾವು ತಮ್ಮ ಮಿತ್ರರೊಡನೆ ಸಭೆಗೆ ಚಿತ್ತೈಸಿ, ಅದನ್ನು ಸಾಂಗವಾಗಿ ನೆರವೇರಿಸಿಕೊಡಬೇಕಾಗಿ ವಿನಂತಿ.

ರಾವ್ ಬಹದೂರ್ ಕೆ. ಟಿ. ಆಳ್ವ,

ಸಂಘದ ಅಧ್ಯಕ್ಷ.

ಎಡ್ತರೆ ಕೃಷ್ಣಪ್ಪ ಶೆಟ್ಟಿ,

ಕುಂದಾಪುರ ತಾಲೂಕು ಸ್ವಾಗತಕಮಿಟಿ ಅಧ್ಯಕ್ಷ.

ಕಾರ್ಯಕ್ರಮ:— ತಾ. 10-1-48 ಬೆಳಿಗ್ಗೆ ಘಂ 8-30ಕ್ಕೆ ಅಧ್ಯಕ್ಷರ ಮತ್ತು ಇತರ ತಾಲೂಕುಗಳಿಂದ ಬರುವ ಮಹನೀಯರ ಸ್ವಾಗತ. 9ಕ್ಕೆ ಉಪಹಾರ. 9-30ಕ್ಕೆ ಸಂಘದ ಕಾರ್ಯನಿರ್ವಾಹಕ ಕಮಿಟಿ ಮೀಟಿಂಗು ಮತ್ತು ಸಂಘದ ವಾರ್ಷಿಕ ವರದಿ. ಮಧ್ಯಾಹ್ನ ಘಂ. 3ಕ್ಕೆ ಮಹಾಸಭೆ. ರಾತ್ರಿ ಘಂಟೆ 9ಕ್ಕೆ ಯಕ್ಷಗಾನ ನಾಟಕ ಮತ್ತು ಇತರ ವಿನೋದಾವಳಿಗಳು.

ಕ. ಸಾ. ಪರಿಷತ್ತಿನ ಮಂಗಳೂರು ಪ್ರದೇಶ ಸಮಿತಿಯ ನೇತೃತ್ವದಲ್ಲಿ— ತಾ ೧೦ರಂದು ಒಂದು ಸಭೆಯು ಜರಗಿ, ಕಾಸರಗೋಡಿನ ಸಮ್ಮೇಳನಕ್ಕೆ ಬರುವವರಿಗೆ ಬೇಕಾದ ಸಹಾಯ ಒದಗಿಸುವ ಕುರಿತು ವಿಚಾರ ಮಾಡಲಾಯಿತು. ತಾ. ೨೬ ಮತ್ತು ೨೭ರಂದು ಬಂದವರಿಗೆ ಬೇಕಾಗುವ ಅನುಕೂಲತೆಗಳನ್ನೊದಗಿಸಿ ಕೊಡುವರೆ ಕೆಲವು ಸ್ವಯಂಸೇವಕರಿಗೆ ಮತ್ತು ಇತರರಿಗೆ ಕೆಲಸ ಹಂಚಲಾಯಿತು.

ಹಿಂದುಸ್ಥಾನ್ ಸ್ಕೌಟು ತರಬೇತಿ ಶಿಬಿರಗಳು— ಇದೇ ತಾ. ೨೧ರಿಂದ ಉಳ್ಳಾಲದಲ್ಲಿ ಜರಗುವುದು. ಕಬ್ ಮತ್ತು ಸ್ಕೌಟು ನಾಯಕರ ತರಬೇತಿಯಲ್ಲದೆ ಅವರಿಗೆ ಪ್ರಥಮ ಶಿಕ್ಷಣ ಕೊಡುವ ವ್ಯವಸ್ಥೆಯೂ ಆಗಿದೆ. ಅಂತೆಯೇ ಮಹಿಳಾ ಸ್ಕೌಟು ನಾಯಕಿಯರ ತರಬೇತಿ ಶಿಬಿರವು ಮಂಗಳೂರಲ್ಲಿ ಜರಗುವುದು. ವಿಶೇಷ ಮಾಹಿತಿಗಳು ಹಿಂದುಸ್ಥಾನ ಸ್ಕೌಟು ಕಾರ್ಯದರ್ಶಿಯವರಿಂದ ಪಡೆಯಬಹುದು.

ಮಂಗಳೂರು ತಾಲೂಕು ಆಹಾರ ಪರಿಷತ್ತು— ತಾ ೮ರಲ್ಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಶ್ರೀ ಎಸ್. ಎನ್. ಮೊಯ್ಲಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ವಿ. ಕಕ್ಕಿಲ್ಲಾಯ ಮತ್ತು ಕೆ. ಕೃಷ್ಣಶೆಟ್ಟರು ಇಂದಿನ ಆಹಾರ ಪರಿಸ್ಥಿತಿಯ ಕುರಿತು ಮಾತಾಡಿದರು. ತದನಂತರ ಅಕ್ಕಿ ಮೊದಲಾದ ಪ್ರಮುಖ ಧಾನ್ಯಗಳ ಮೇಲಿನ ಕಂಟ್ರೋಲ್ ತೆಗೆಯಬೇಕೆಂದೂ, ರೈತರ ಉಪಯೋಗಕ್ಕೆ ಬೇಕಷ್ಟು ಅಕ್ಕಿ ಭತ್ತವನ್ನು ಅವರಲ್ಲಿಯೇ ಉಳಿಸಬೇಕು, ಪ್ರತಿ ಗ್ರಾಮಕ್ಕೆ ಒಂದರಂತೆ ಅಕ್ಕಿ ಡಿಪೋ ಇರಬೇಕು, ರೈತನು ತಾನು ಬೆಳೆಸಿದ್ದರಲ್ಲಿ ಅದನ್ನು ಕಡಿಮೆ ಕ್ರಯಕ್ಕೆ ಮಾರಿ ಕಳೆದುಕೊಂಡ ಅಕ್ಕಿಯನ್ನು ಪೇಟೆಗೆ ಬೆಲೆಗೆ ಕೊಂಡುಕೊಳ್ಳುವ ಅನ್ಯಾಯವು ನಿಲ್ಲಬೇಕು ಇತ್ಯಾದಿ ಠರಾವುಗಳು ಮಾನ್ಯವಾದುವು.

ವಿಶ್ವಾಸ ಮತ್ತು ಭದ್ರತೆ ನಾವು ಧ್ಯೇಯವು

ಸರ್ವರ ಅನುಕೂಲತೆಗಳಿಗೂ ನಿಲುಕುವಂತಹ ಆಕರ್ಷಕ ಯೋಜನೆಗಳನ್ನು ಸಲ್ಲಿಸುವವು.

ಲಾಭದಾಯಕ ಏರತ್ತುಗಳಿಂದ ಗೃಹಸ್ಥ ಪ್ರತಿನಿಧಿಗಳು ಬೇಕಾಗಿದ್ದಾರೆ

ವಿವರಗಳಿಗೆ ಬರೆಯಿರಿ:—

ದಿ ಮೆನೇಜಿಂಗ್ ಡ್ಯಾರೆಕ್ಟರ್,

ದಿ ಸೆಕ್ಯೂರಿಟಿ ಪ್ರೊವಿಡೆಂಟ್ ಇನ್ಶೂರೆನ್ಸ್ ಕೊ.,

ಲಿಮಿಟೆಡ್.

ಹುಸೇನ್ ಚೇಂಬರ್ಸ್, ಪಾರ್ಸಿ ಬಜಾರ್ ಸ್ಟ್ರೀಟ್,

ಫೋರ್ಟು, ಬೊಂಬಾಯಿ 1

ಬಹು ಜನರು ಬಂದು ಹೋಗುವರು. ಆದುದರಿಂದ ಮುಂದಾಗಿ ಬಂದು ಸ್ಥಳ ಕಾದಿರಿ.

ಕನ್ನಡದಲ್ಲಿ! ಕನ್ನಡದಲ್ಲಿ!!

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ತಾ. 11-12-47ರಿಂದ ಪ್ರಚಂಡ ಎರಡನೇ ವಾರ

ಕೃಷ್ಣಲೀಲಾ

ಮಹಾತ್ಮಾ ದವರ ಮೇಲ್ಮೆಯ ತಾರಾಗಣ

ಕೆಂಪರಾಜ್, ಬಳ್ಳಾರಿ ಲಲಿತ, ಕುಮಾರಿ ಉಷಾ,

ಪ್ರತಿಮಾ, ರತ್ನಮಾಲಾ ಮೊದಲಾದವರು.

ಬರುವ ಚಿತ್ರ— ಪ್ರಭಾತದವರ

ಅಣ್ಣಿ

ಕೈಮಗ್ಗ ವ್ಯಾಪಾರಿಗಳ ಸಂಘ— ದ ವಿಶೇಷ ಸಭೆಯು ಕಳೆದ ತಾ ೨೭ರಲ್ಲಿ ಶ್ರೀ ಬಿ. ಜಿ. ಮುಬ್ಬಾಡೊರವರ ಅಧ್ಯಕ್ಷತೆಯಲ್ಲಿ ಜರಗಿ ಒರಟು ಮತ್ತು ಮಧ್ಯಮ ತರಗತಿಗಳ ಮಿಲ್ಲು ವಸ್ತ್ರಗಳ ನಿಯಂತ್ರಣವನ್ನು ಸರಕಾರವು ರದ್ದುಗೊಳಿಸಲುದ್ದೇಶಿಸಿದುದರಿಂದ, ಕೈಮಗ್ಗದ ವಸ್ತ್ರಗಳು ವಿಕ್ರಯವಾಗದೆ ಮಾಳಿಕರಲ್ಲಿಯೂ ವ್ಯಾಪಾರಿಗಳಲ್ಲಿಯೂ ಹಾಗೆಯೇ ಉಳಿದಿವೆ. ಆದುದರಿಂದ ಕೈಮಗ್ಗದ ವಸ್ತ್ರಗಳ ಮೇಲಿನ ನಿಯಂತ್ರಣವನ್ನೂ ಸರಕಾರ ರದ್ದುಗೊಳಿಸಬೇಕೆಂದು ಕೋರುವ ಗೊತ್ತುವಳಿಯು ಅಂಗೀಕೃತವಾಯಿತು.

ಮಂಗಳೂರು ಮುಸ್ಲಿಂ ಯುವಕ ಸಂಘದ ವಾರ್ಷಿಕದಿನಾಚರಣೆಯು ತಾ ೭ರಲ್ಲಿ ಮುಸ್ಲಿಂ ಹಾ. ಎ. ಶಾಲೆಯಲ್ಲಿ ತಲಚೇರಿಯ ದಿ. ಮುನ್ಸೀಫರಾದ ಈ ಜಿಲ್ಲೆಯ ಸಿ. ಅಬ್ದುಲ್ ರಹೀಂ ಅಹಮ್ಮದರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಮಹಮ್ಮದ್ ಹಾಶೀಂ ಸಾಹೇಬ್, ಎಂ. ಬಿ ಅಹಮ್ಮದ್ ಸಾಹೇಬ್, ಬಿ. ಎಂ ಇದಿನಬ್ಬ, ಮಹಮ್ಮದ್ ಕುಮಾರ ಮೊದಲಾದವರು ಇಂಗ್ಲಿಷ್, ಉರ್ದು, ಕನ್ನಡ, ಮಲಯಾಳಿ ಭಾಷೆಯಲ್ಲಿ ಸಮಾಜದ ಏಳಿಗೆಯ ಕುರಿತು ಮಾತನಾಡಿದರು.

ಕಳ್ಳತನದ ಪತ್ತೆ— ಕಳೆದ ತಾ ೨ರಲ್ಲಿ ಕಾಳೂರಿನ ಓರ್ವ ಪ್ರಯಾಣಿಕನ ಕಿಸೆಯಿಂದ ಸುಮಾರು ರೂ. ೪೦೦ ಅಂದಾಜು ಸ್ಥಳೀಯ ಬಸ್ ಸ್ಟೇಶನಿನ ಬಳಿ ಅಪಹರಿಸಿದವನನ್ನು ಉಪ್ಪಿನಂಗಡಿಯ ಸಮೀಪ ಹಿಡಿದು ಅವನ ಬಳ ಕಾಲಿನ ಬೂಟ್ಸಿನೊಳಗೆ ಮುಚ್ಚಿಟ್ಟಿದ್ದ ಹಣವು ಪತ್ತೆಮಾಡಲ್ಪಟ್ಟಿರುತ್ತದಾಗಿಯೂ ಅವನು ಇಲ್ಲಿನ ಪೋಲೀಸು ಸ್ಟೇಶನಿಗೆ ಕೂಡಲೇ ತರಲ್ಪಟ್ಟಿರುತ್ತಾನಾಗಿಯೂ ತಿಳಿದು ಬರುತ್ತದೆ.

ಸ್ವಂತ ಮಗುವಿನ ಕಣ್ಣು ಕೀಳಿಸಿದಳು— ಸುಂದರಿ ಎಂಬ ಭಿಕ್ಷುಕಿಯೋರ್ವಳು ತನ್ನ ಬೇಡುವ ಕೆಲಸ ಚೆನ್ನಾಗಿ ಸಾಗಿಸಲು ಅನುಕೂಲವೆಂಬ ಉದ್ದೇಶದಿಂದ ತನ್ನ 7ವರ್ಷದ ಮಗುವಿಗೆ ಹೇಳಿ ಅದರ ಕೈಯಿಂದ ತನ್ನ ಎರಡು ವರ್ಷ ಪ್ರಾಯದ ಮತ್ತೊಂದು ಮಗುವಿನ ಎರಡೂ ಕಣ್ಣುಗಳನ್ನು ಕೀಳಿಸಲು ಕಾರಣಳಾದಳೆಂಬ ಆರೋಪದ ಮೊಕದ್ದಮೆ ಎಡಿಶನಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ. ಎಚ್. ಸುಂದರರಾಯರಲ್ಲಿ ನಡೆಯುತ್ತಿದೆ.

ಸುಗ್ಗಿ ಬೆಳೆಗೆ ಹಾನಿ— ಕಳೆದ ತಿಂಗಳ ಆರಂಭದಲ್ಲಿ ಮಳೆ ಇಲ್ಲವಾದುದರ ಪರಿಣಾಮದ ಈ ಬಾರಿಯ ಸುಗ್ಗಿ ಬೆಳೆಗೆ ತುಂಬಾ ನಷ್ಟ ಒದಗಿರುವುದು. ಈ ಬಾರಿ ಬೆಳೆಯು ಅಷ್ಟೊಂದು ಬರುವಾಗಿ ಏನೂ ಇಲ್ಲ. ಈ ಕಾರಣವಾಗಿ ಮಾರಿನಕಾಯಿ, ಹಲಸಿನಹಣ್ಣು ಮುಂತಾದುವುಗಳಿಗೂ ಬರಗಾಲದ ಸ್ಥಿತಿ ಒದಗಬಹುದು.

ತಾ. 7-12-1947ರಲ್ಲಿ ಡೆಪ್ಯುಟಿ ಪೋಸ್ಟ್ ಮಾಸ್ಟರ್ ಜನರಲರವರನ್ನು ಪೋಸ್ಟ್‌ಮೆನ್ ಸಂಘದವರು ಮಂಗಳೂರಲ್ಲಿ ಭೇಟಿಯಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸದಸ್ಯರ ಪರವಾದ ಕೋರಿಕೆಗಳನ್ನು ಅವರ ಮುಂದಿಟ್ಟರು. ಆದಷ್ಟು ಸಾಧ್ಯವಿದ್ದ ಮಟ್ಟಿಗೆ ಸಹಾಯವನ್ನು ಮಾಡುವುದಾಗಿ ಭರವಸೆಯನ್ನು ಕೊಟ್ಟರು. ಆಲ್ಲದೆ ಸಾಯಂಕಾಲ ಪೋಸ್ಟ್‌ಮೆನ್ ಮತ್ತು ಕೆಳತರಗತಿಯ ನೌಕರರು ಸಾಹಿತ್ಯಂಟರಿಗೆ ಉಪಹಾರವಿತ್ತು ಸತ್ಕರಿಸಿದರು.

ದಕ್ಷಿಣ ಕನ್ನಡ
ಮೂವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನ.
ಕಾಸರಗೋಡು.

ಕಾರ್ಯಕ್ರಮದ ಸಾಮಾನ್ಯ ವಿವರಣೆ ತಾರೀಕು ಸಮಯ ಕಾರ್ಯಕ್ರಮ.

ದಶಂಬರ ೨೪ ಘಂ. ೯-೧೨ ಸ್ವಾಗತ ಭಾಷಣ ಸಮ್ಮೇಳನಾಧ್ಯಕ್ಷರ ಭಾಷಣ. ವಿಷಯ ನಿಯಾಮಕ ಸಮಿತಿಯ ಆಯ್ಕೆ. ಮಧ್ಯಾಹ್ನ ೨. ೬ ಸಾಹಿತ್ಯ ಗೋಷ್ಠಿ. ೨೫ ಘಂ ೯-೧೨ ಕರ್ನಾಟಕ ಏಕೀಕರಣ. ಸಮ್ಮೇಳನ ಪರಿಷತ್ತಿನ ಸದಸ್ಯರ ಅಧಿವೇಶನ (ಪ್ರತ್ಯೇಕ ಸ್ಥಳದಲ್ಲಿ) ಮಧ್ಯಾಹ್ನ ೨-೪ ವಿಜ್ಞಾನ ಗೋಷ್ಠಿ ೪-೬ ಏಕೀಕರಣ ಸಮ್ಮೇಳನ ೨೬ ಘ. ೯-೧೨ ಸಾಹಿತ್ಯಗೋಷ್ಠಿ. ಮಧ್ಯಾಹ್ನ ೨-೪ ಮಹಿಳಾ ಗೋಷ್ಠಿ. ೪-೬ ಸಾಹಿತ್ಯಸಮ್ಮೇಳನದ ಬಹಿರಂಗ ಅಧಿವೇಶನ. ಮೇಲಿನ ದಿನಗಳಲ್ಲಿ ಪ್ರತಿನಿತ್ಯವೂ ರಾತ್ರಿ ವಿವಿಧ ವಿನೋದಾವಳಿಗಳ ಏರ್ಪಾಡು ಇದೆ.

ಸಾಹಿತ್ಯ ಗೋಷ್ಠಿಗೆ ಧಾರವಾಡ ಕರ್ನಾಟಕ ಕಾಲೇಜಿನ ಪ್ರೊ ಆರ್. ವಿ. ಜಾಗೀರ್‌ದಾರರೂ ಏಕೀಕರಣ ಸಮ್ಮೇಳನಕ್ಕೆ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯೂ, ವಿಜ್ಞಾನಗೋಷ್ಠಿಗೆ ಪ್ರೊ ಪಡುಕೋಣೆ ರಮಾನಂದರೂ ಅಧ್ಯಕ್ಷರಾಗಲು ಒಪ್ಪಿದ್ದಾರೆ.

ಬಿ. ಶಂಕರ ಭಟ್ಟ,
ಕಾರ್ಯದರ್ಶಿ, ಪ್ರಕಟನಾ ವಿಭಾ.

NOTICE

ಉಡ್ಪಿ ಡಿ ಮು. ಕೋರ್ಟಿನಲ್ಲಿ
O. P. ನಂಬ್ರ 62/1947

ದೂಗ್ಗು ಸೆಡ್ತಿ-ಮುತ್ತಕ್ಕ ಸೆಡ್ತಿರ ಮಗಳು. ಮೂಡನಿಡಂಬೂರು ಗ್ರಾಮದ ಬನ್ನಂಜೆ, ಅರ್ಜಿದಾರಳು.

ಮತ್ತು

1 ಪದ್ದು ಸೆಡ್ತಿ-ಮುತ್ತಕ್ಕ ಸೆಡ್ತಿರ ಮಗಳು—

2 ಮಹಾಬಲ ಸೆಟ್ಟಿ 3 ಕಮಲ ಸೆಡ್ತಿ, ಉಮ್ಮಕ್ಕ ಸೆಡ್ತಿಳ ಮಕ್ಕಳು.

4 ಸಂಕು ಬ್ಯಾ-ಬನ್ನಂಜೆ ದೇಜು ಚಂದಯ್ಯ ಸೆಟ್ರ ವಿಧವೆ—

1ನೇ ಯೆದ್ರಿಳು ಉಡ್ಪಿ ತಾಲೋಕು ಮೂಡನಿಡಂಬೂರು ಗ್ರಾಮದ ಬನ್ನಂಜೆಯಲ್ಲಿಯೂ 2 3ನೇ ಯೆದ್ರಿರು ಶಿವಳ್ಳಿ ಗ್ರಾಮದ ಕಡಂಬಳ್ಳಿಯಲ್ಲಿಯೂ 4ನೇ ಯೆದ್ರಿಳು ಪಡುಗ್ರಾಮದ ಬೈರಗುತ್ತಿನಲ್ಲಿಯೂ ಯಿರುವವರು. —ಯೆದ್ರಿರು

ಯಿವರೊಳಗೆ

ಸದ್ರಿ ಯೆದ್ರಿಗೆ ಈ ಯಿತರ ಸಮಸ್ತರಿಗೆ ಸಹಾ ಯೀ ಮೂಲಕ ತಿಳಿಯಪಡಿಸುವದೇನಂದ್ರೆ:

ಅರ್ಜಿದಾರಳ ಮ 1ನೇ ಯೆದ್ರಿಳ ಅಣ್ಣ, 2,3ನೇ ಯೆದ್ರಿರ ಮಾವ, ಮತ್ತು 4ನೇ ಯದ್ರಿಳ ಗಂಡ ಸದ್ರಿ ಮೂಡನಿಡಂಬೂರು ಗ್ರಾಮದ ಬನ್ನಂಜೆಯಲ್ಲಿ ತಾ. 13-9-47ಲ್ಲಿ ಮೃತಪಟ್ಟ ದೇಜು ಚಂದಯ್ಯ ಸೆಟ್ಟಿಯು ತಾ. 27-7-47ಲ್ಲಿ ಬರದಿಟ್ಟ ವಿಲ್‌ನಾಮೆ ಪ್ರಕಾರ ಆತನ ಬಾಬ್ತು The Tropical Insuranc, Co., Ltd., New Delhi, ಈ ಕಂಪೆನಿಯ ನಂಬ್ರ 21173ನೇ ಪೋಲಿಶಿಯ ಬ್ಯಾನೇಜು ಪ್ಸಲು ಮಾಡುವರೆ ಹಕ್ಕುದಾರಳಾದ ಅರ್ಜಿದಾರಳು ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾ 17-1-1948ಕ್ಕೆ ತಸ್ಕಿಗೆ ಯಿಟ್ಟಿರುವದ್ರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವ್ಸ ಸದ್ರಿ ಅರ್ಜಿ ತಸ್ಕಿ ಸಮಯ ಸದ್ರಿ ಕೋರ್ಟಿನ ಮುಂದೆ ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜ್ರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳಬೇಕಾಗಿ ಯೀ ಮೂಲಕ ಸದ್ರಿ ಯೆದ್ರಿಗೆ ಮತ್ತು ಯಿತರ ಸಮಸ್ತರಿಗೆ ಸಹಾ ತಿಳಿಯಪಡಿಸೋಣಾಗುತ್ತದೆ.

H. Ramanatha Pai,
Advocate for Petitioner
Udipi, South Kanara
Date 12 12 1947

ಮುಂದ್ರಾಡಿ— ತಾ 6 12 1947ರಲ್ಲಿ ಮುಂದ್ರಾಡಿ ಪಲ್ಲಿನ ಪರಿಗಾಲನಾ ಸಂಘದ ಮಹಾಸಭೆಯು ಜಿಲ್ಲಾ ಬಿಲ್ಲವ ಯೂನಿಯನಿನ ಅಧ್ಯಕ್ಷರಾದ ಶ್ರೀ ಪಿ. ಆರ್. ಕಕೇರರವರ ಅಧ್ಯಕ್ಷತೆಯಲ್ಲಿ ಮುಂದ್ರಾಡಿ ಬೊ ಎ ಶಾಲಾ ವಠಾರದಲ್ಲಿ ಜರಗಿತು. ಶ್ರೀ ಕೆ. ದಾಮೋದರ ಬಂಗೇರರು, ಶ್ರೀ. ನಾಗಯ್ಯ ಮಾಸ್ತರ್, ರಾವು ಬಹದ್ದೂರ್ ಗಿರಿಯಪ್ಪರು M. A. ಶ್ರೀ ಗುಡ್ಡೋಳಿ ರಾಮಪ್ಪರು ಶ್ರೀ ಬಿ. ಐತಪ್ಪ ಕನ್ನಡ ಪಂಡಿತ್, ಮತ್ತು ಶ್ರೀ ಯಮ್. ನಾಗಪ್ಪ ಹೆಗ್ಗಡೆಯವರು ಮುಂತಾದವರು ಜಾತೀಯ ಒಕ್ಕಟ್ಟು, ವಿದ್ಯಾಪ್ರಚಾರ, ಆರ್ಥಿಕ ಸುಧಾರಣೆ ಇತ್ಯಾದಿಗಳ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣ ಧನ್ಯವಾದಗಳಿಂದ ಸಭಾಂತ್ಯವಾಯಿತು.

ಬಡ್ಕಲ್ ಕಟ್ಟೆ—ಇಲ್ಲಿಯ ಕುಂದಾಪುರ ಮತ್ತು ಹಾಲಾಡಿ ರಾಷ್ಟ್ರೀಯ ಸೇವಾದಳದವರು, ತಾ. 14-12-47ರಂದು, ಆದರ ಒಂದು ರ್‍ಯಾಲಿಯನ್ನು ಪಟೇಲರ ಅಧ್ಯಕ್ಷತೆಯಲ್ಲಿ ತೆರೆದರು. ಶ್ರೀ. M. ಸುಬ್ರಯ್ಯ ಹೆಗ್ಡೆ, B. A. L. L. B, ಹಾದಿಕ್ಳಿ ಶಂಕರ ಸೆಟ್ರು, ಕುಂದಾಪುರ ಶ್ರೀನಿವಾಸ ಉಪಾಧ್ಯರು, ಸೇವಾದಳದ ಕುರಿತು ಸುರಸ ಭಾಷಣವನ್ನಿತ್ತರು. ಶಂಕರ ಸೆಟ್ರ ಧನ್ಯವಾದದೊಡನೆ ವಂದೇ ಮಾತರಂ ಹಾಡಿ ಸಭಾಂತ್ಯವಾಯಿತು.

ಬೈಂದೂರು—ಹೇರಂಜಾಲು, ಹೇರೂರು ಕಂಬದ ಕೋಣೆ, ಕಾಲ್ತೋಡ, ಉಳ್ಳೂರ ಗ್ರಾಮಗಳ ಬತ್ತದ ಬೆಳೆ ಉತ್ಪತ್ತಿ ಕಳೆದ ವರ್ಷಕ್ಕಿಂತ ಹಾಲಿ ವರ್ಷದಲ್ಲಿ ಅತಿ ಹೀನವಾಗಿರುತ್ತದೆ. ಇದರ ನಿಜವಾದ ಸಿದ್ಧಮಾನ ಪರಾಮರ್ಶಿಸದ ಅಧಿಕಾರಿಗಳು ಬೆಳೆಉತ್ಪತ್ತಿ ಅಧಿಕವಾಗಿಯೂ ರಿಕ್ವಿಜಿಶನಲ್ಲಿ ತಪ್ಪು ಆಗಿಯೂ ಉತ್ಪತ್ತಿ ಇಲ್ಲದವರಿಗೆ ಉಳಿತಾಯ ವಂತರೂ ಮಾಡಿರುತ್ತಾರೆ. ಸಣ್ಣ ರೈತ ಬೇಸಾಯಗಾರರಿಗೆ ಗೇಣಿ ಅಕ್ಕಿ ಊಟಕ್ಕೆ ಪರ್ಮಿಟಿಗೆ ತೊಂದರೆ ಬೇಸಾಯಗಾರರಲ್ಲಿ ಅಕ್ಕಿ ಯಿಲ್ಲದೆ ರೇಶನ್ ಕಾರ್ಡು ಸದ್ಯವೇ ಬೇಕಿದ್ದರೆ ಬೆಳೆ ಉತ್ಪತ್ತಿ ರಿಜಿಸ್ಟ್ರಿ ಆಧಾರದ ಮೇಲೆ ಕಾರ್ಡು ಸಿಕ್ಕುವ ಪ್ರಾದೆ ಮಾಡಿರುತ್ತದೆ. ಯೀ ನ್ಯೂನತೆಯನ್ನು ಹೋಗಲಾಡಿಸುವರೆ ಸಂಬಂಧಪಟ್ಟ ಮೇಲಧಿಕಾರಿಗಳು ಬಡ ಬೇಸಾಯಗಾರರಿಗೆ ಸಕಾಲದಲ್ಲಿ ರೇಶನ್ ಕಾರ್ಡು ಪ್ರಯಾಸವಿಲ್ಲದೆ ಸಿಕ್ಕುವಂತೆ ಮಾಡಬೇಕಾಗಿ ಪ್ರಾರ್ಥಿಸುವ ಬಡ ಬೇಸಾಯಗಾರರ ಪ್ರತಿನಿಧಿ.

y. N. Shetty.

ಶಿವಮೊಗ್ಗ—ಶಿವಮೊಗ್ಗ ಭದ್ರಾವತಿ ತಂಜಾವೂರು ಹೊಟೆಲಿನ ಮಾಲಿಕರಾದ ಶ್ರೀ. ಎಸ್. ರಾಘವೇಂದ್ರ ರಾಯರು ತಾ. ೧೫ರಲ್ಲಿ ತಮ್ಮ ಹೋಟೆಲಿನ ದಸ್ಸೊಂದನೆ ಜಯಂತ್ಯುತ್ಸವವನ್ನು ಶ್ರೀ ಸತ್ಯ ನಾರಾಯಣ ಪೂಜೆಯೊಂದಿಗೆ ಜಯಶೀಲವಾಗಿ ನೆರವೇರಿಸಿದರು.

ವಿವಿಧ ಧರ್ಮಸಮ್ಮೇಳನ-
ಧರ್ಮಸ್ಥಳ

ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಕಾರ್ತಿಕ ದೀಪೋತ್ಸವ ಕಾಲದಲ್ಲಿ ವರ್ಷಂಪ್ರತಿ ಜರಗುವ ಮೇಲ್ಕಂಡ ಸಮ್ಮೇಳನದ ೧೫ನೇ ಅಧಿವೇಶನವು, ಕಳೆದ ತಾ. ೧೦ನೇ ಬುಧವಾರ ಅಲ್ಲಿನ ಎಲಿಮೆಂಟರಿ ಶಾಲಾ ವಠಾರದಲ್ಲಿ ಹಾಕಿದ ಭವ್ಯ ಚಪ್ಪರದ ಸಭಾಂಗಣದಲ್ಲಿ ಜರಗಿತು. ಕರ್ನಾಟಕ ಪ್ರಾಂತಿಕ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ. ಎಂ. ಸಿ. ಮಲ್ಲಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ವ್ಯವಸ್ಥಾಪಕರ ಪರವಾಗಿ ಶ್ರೀ. ಡಿ. ಮಂಜಯ್ಯ ಹೆಗ್ಗಡೆ ಎಂ. ಎಲ್. ಸಿ. ಯವರು ಸ್ವಾಗತಿಸಿದರು; ಶ್ರೀ. ಡಿ ಪುಟ್ಟಸ್ವಾಮಿ ಅವರು ಒಂದು ಅಭಿನಂದನ ಪತ್ರವನ್ನು ಒಂದು ಬೆಳ್ಳಿ ಕರಂಡದ ಸಹಿತ ಅಧ್ಯಕ್ಷರಿಗೊಪ್ಪಿಸಿದರು.

ಅಂದು ಚರ್ಚಿಸಬೇಕಾದ "ಸ್ವತಂತ್ರ ಭಾರತದಲ್ಲಿ ಧರ್ಮದ ಸ್ಥಾನ" ಎಂಬ ವಿಷಯದಲ್ಲಿ—ಮೈಸೂರಿನ ಮಹಾರಾಜಾ ಕಾಲೇಜಿನ ಸೈಕೊಲಜಿ ಲೆಕ್ಚರರ್ ಶ್ರೀ. ಎನ್. ಎಸ್. ನಾರಾಯಣಶಾಸ್ತ್ರಿ ಎಂ ಎ. ಡಿ. ಲಿಟ್ ಅವರೂ ಅದೇ ಕಾಲೇಜಿನ ಫಿಲಾಸಫಿ ಲೆಕ್ಚರರ್ ಶ್ರೀ. ವೈ. ಜಿ. ಪದ್ಮರಾಜಯ್ಯ ಎಂ ಎ ಅವರೂ, ಬೆಂಗಳೂರಿನ ಅಡ್ವೋಕೇಟ್ ಜನಾಬ್ ಸಾದಿಕ್ ಸಾಹೇಬ್ ಅವರೂ, ಬೆಂಗಳೂರಿನ ಶ್ರೀ. ಅ. ನ. ಕೃಷ್ಣರಾಯರೂ, ಮಿ. ಆನಂದ ಅಂಬ್ರೋಜ್ ಬಿ. ಎ. ಅವರೂ, ಶ್ರೀ ಕೋಟ ಶಿವರಾಮ ಕಾರಂತರೂ, ಶ್ರೀ. ಬಿ. ಶಂಕರ ಭಟ್ಟರೂ, ಪಂಡಿತ ರತ್ನಂ ಎ. ಶಾಂತಿರಾಜ ಶಾಸ್ತ್ರಿ, ಆಸ್ಥಾನ ಮಹಾ ವಿದ್ವಾನ್ ಅವರೂ, ಬೆಂಗಳೂರಿನ ಸಂಸ್ಕೃತ ಕಾಲೇಜಿನ ವಿದ್ವಾನ್ ನಂಜುಂಡ ಆರಾಧ್ಯರೂ, ಮೈಸೂರಿನ ಆರ್ಯ ಸಮಾಜದ ಶ್ರೀ. ರಾಮಸ್ವಾಮಿ ಅವರೂ, ಮೈಸೂರು ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಕೆ. ಎಸ್. ಧರಣೀಂದ್ರಯ್ಯ ಎಂ. ಎ. ಬಿ. ಟಿ ಅವರೂ ಮಾತಾಡಿದ ಮೇಲೆ ಅಧ್ಯಕ್ಷರ ಮುಕ್ತಾಯ ಭಾಷಣವಾಗಿ ಶ್ರೀ. ಮಂಜಯ್ಯ ಹೆಗ್ಗಡೆಯವರ ವಂದನಾರ್ಪಣಗಳೊಡನೆ ಸಭೆ ಮುಗಿಯಿತು.

ಈ ಮಹಾ ಸಭೆಯಲ್ಲಿ ಸರ್ವಾನುಮತದಿಂದ ಮಂಜೂರಾದ ಠರಾವು ಹೀಗಿದೆ:-

"ಧಾರ್ಮಿಕ ವಿಚಾರರಹಿತವಾದ ಯಾವುದೊಂದು ರಾಜ್ಯಾಂಗ ಘಟನೆಯೂ ವಿವಿಧ ಧರ್ಮಗಳಿಗೂ ಅವುಗಳ ಸಂಪ್ರದಾಯಗಳಿಗೂ ನಂಬುಗೆಗಳಿಗೂ ವಿರೋಧವಾಗಿರುವುದರಿಂದ ಜೀವನದ ಸಾರಸರ್ವಸ್ವವೂ ಸಂಸ್ಕೃತಿಯ ಆತ್ಮಸ್ವರೂಪವೂ ಆಗಿರುವ ಧರ್ಮವನ್ನೇ ತಳಹದಿಯಾಗಿಟ್ಟುಕೊಂಡು ಆ ರಾಜ್ಯಾಂಗಘಟನೆಯನ್ನು ರಚಿಸಿ ಅದನ್ನು ಆಚರಣೆಗೆ ತರುವ ಮೂಲಕ ದೇಶದ ಕಲ್ಯಾಣವನ್ನೂ ಲೋಕಶಾಂತಿಯನ್ನೂ ಸಾಧಿಸಲೆಂದು ಈ ಸಮ್ಮೇಳನವು ಹಾರೈಸುತ್ತದೆ."

TENDER NOTICE

Tenders are invited for the purchase of 53077 old gunnies lying in the fish curing yards in the west coast. The Tenders should reach the Asst. Director of Fisheries, (Coast), Calicut on or before 22-12-47. The covers containing tenders should be sent by registered post and superscribed "TENDERS FOR THE PURCHASE OF CONDEMNED GUNNIES" and the tender should be accompanied by an earnest money deposit of Rs 50/-. Further particulars can be had from the Office of the Inspectors of Fisheries, Mangalore, Calicut and Chowghat or from the office of the Asst. Director of Fisheries, (Coast), Calicut.

T P. Baratan,
Asst. Director of Fisheries, (Coast),
Calicut,

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ
O. S. No. 457/1947

ವಾದಿರಾಜ ಉಪಾಧ್ಯ-ಪುಟ್ಟಣ್ಣ ಯಾನೆ ಅನಂತ ಪದ್ಮನಾಭ ಉಪಾಧ್ಯರ ಮಗ. ಉಡ್ಪಿ ಕಸಬಾ, ಪಡುಪೇಟೆ —ವಾದಿ.

ಮತ್ತು

ಗುರುರಾಜ ಆೖತಾಳ-ರಾಘವೇಂದ್ರ ಆೖತಾಳರ ಮಗ- ಉಡ್ಪಿ ತಾಲ್ಲೂಕು ನಂಬ್ರ 76ನೇ ಬಡಗಬೆಟ್ಟು ಗ್ರಾಮದ ಬೈಲೂರು —ಪ್ರತಿವಾದಿ.

ಮೇಲ್ಕಂಡ ಪ್ರತಿವಾದಿಯು ವಾದಿಯಿಂದ ತಾರೀಕು 8 1-1946ರಲ್ಲಿ ಮುಸ್ತಿಸರ ವಗೈರಗಳನ್ನು ತೆಗೆದುಕೊಂಡು ಹೋಗಿ ಮುಸ್ತಿಸರನನ್ನು ಮಾತ್ರ ವಾಪ್ಸು ಕೊಡದೆ ಯಿರುವುದರಿಂದ ಸದ್ರಿ ಮುಸ್ತಿಸರ, ಯಾ ಮೌಲ್ಯ ರೂ ೧೫೦ 150/- ನ್ನು ಬರಮಾಡಿಕೊಳ್ಳುವರೆ ತಂದ ವಾದಿಯ ದಾವೆಯು ತಾರೀಕು 23-12 '47ಕ್ಕೆ ವಿಟ್ಟಿರುತ್ತದೆ. ಈ ದಿವ್ಸ ಸದ್ರಿ ಪ್ರತಿವಾದಿಯು ಮೇಲ್ಕಂಡ ಕೋರ್ಟಿನಲ್ಲಿ ಗಂಟೆ 11ಕ್ಕೆ ಸ್ವತಹಾ ವ ವಕೀಲರ ಮುಖಾಂತ್ರ ಹಾಜ್ರಾಗದಿದ್ದಲ್ಲಿ ಸದ್ರಿ ವ್ಯಾಜ್ಯವು ಎಕ್ಸ್‌ಪಾರ್ಟೆಯಾಗಿ ತಿರ್ಮಾನಿಸಲಾಗುವುದು.

U. B. Krishna Rao.
Advodate for Plaintiff
ಮೊಕ್ಕಾಂ: ಉಡುಪಿ, ತಾರೀಕು 10-12-'47.

ಇದೇ ತಾ. 8—2—1948ನೇ ಆದಿತ್ಯವಾರ
ಸಾಯಂ. ಘಂಟೆ 6ಕ್ಕೆ ಮಂಗಳೂರಲ್ಲಿ
ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ
ಸಹಾಯಾರ್ಥವಾಗಿ

ವಿಖ್ಯಾತ ಗಾಯಕಿ
ಶ್ರೀಮತಿ ಯಂ. ಯಸ್. ಸುಬ್ಬು ಲಕ್ಷ್ಮಿ ಇವರ
ಸಂಗೀತ ಕಚೇರಿ
ಆಸ್ಥಾನ ವಿದ್ವಾನ್ ಶ್ರೀ. ಚೌಡಯ್ಯ ಇವರ ಪಿಟೀಲು ಶ್ರೀ. ಕಲ್ಪತಿ ರಮಾನಾಥನ್-ಇವರ ಮೃದಂಗ. ಶ್ರೀ. ಆಲಂಗುಡಿ ರಾಮಚಂದ್ರನ್ ಇವರ ಘಟವಾದ್ಯ.
ಟಿಕೇಟು ದರ: ರೂ. 100, ರೂ. 25, ರೂ. 10, ರೂ. 5.

(೨ನೇ ಪುಟದಿಂದ).

ದಸ್ತಗಿರಿಯ ವಾರ್ತೆ ಅವರಿಗೆ ಮುಟ್ಟಿದ್ದಿತ; ನಾನದನ್ನು ದೃಢಪಡಿಸಿದ ಆದೊಂದು ಕ್ಷಣದಲ್ಲಿ ಅವರ ಸಂತೋಷ ಮುಖಮುದ್ರೆ ಮಾಯವಾಗಿ ಪಗಣೇ ಕ್ರೋಧದ ತೀಕ್ಷ್ಣ ಪ್ರಕಾಶ ಹೊಳೆಯಿತು. "ಏನು, ಖಿನ್ನಾರ ಪೋಲೀಸರ ತಯಾರಿಕೆಯ ಆರೋಪವೆ? ಅದು ಕೇವಲ ತಮಾಷೆ!" ಎಂದವರೇ ಸಿಟ್ಟಿನಿಂದ ಹೇಳಿದರು. "ಖಿ. ಖಿನ್ನಾರು ಆಯುಧಗಳನ್ನು ಮಾಡುತಿದ್ದರೆಂದಾದಲ್ಲಿ ನಾನೂ ಅವರಂತೆಯೇ. ಅವರೇಕೆ ನನ್ನನ್ನೂ ದಸ್ತಗಿರಿಮಾಡಲು ಪ್ರಯತ್ನಿಸಬಾರದು?"

ಈ ಮಾಜೀ ಪ್ರಧಾನಿಗಳು ಲೀಗ್ ಮಂತ್ರಿಮಂಡಲವನ್ನು ಕುಸು ಕಠೋರವಾಗಿಯೇ ಟೀಕಿಸಿದಾಗ ನಾನವರೊಡನೆ "ನೀವೀಗ ನನ್ನೊಡನೆ ಹೇಳಿದ್ದೆಲ್ಲವು ಮುದ್ರಣಗೊಂಡಲ್ಲಿ ನೀವು ಕೈದಾಗಬೇಕಾಗುವದೆಂಬ ಯೋಚನೆ ನಿಮಗಿಲ್ಲವೆ?" ಎಂದು ಕೇಳಿದೆ. ತಟ್ಟನೆ ಅವರಂದರು: "ನೀವದರ ಅಕ್ಷರ ಬಿಡದೆ ಮುದ್ರಿಸಬಹುದು. ನಾನು ಮರೆಮಾಜುವಂತಹದಾವುದೂ ಇಲ್ಲ. ಮತ್ತು ಯಾರೊಬ್ಬನ ಹೆದರಿಕೆಯೂ ನನಗಿಲ್ಲ". ಈಗೊಮ್ಮೆ ತಾತ್ಕಾಲಿಕವಾಗಿ ಮುಸ್ಲಿಂ ಲೀಗು ತನ್ನ ಪಕ್ಷವನ್ನು ತಡೆದಿಟ್ಟಿದೆ ಎಂಬುದನ್ನು ಡಾ। ಖಾನ್ ಸಾಹೇಬರೊಪ್ಪಿಕೊಂಡರು. "ಸದ್ಯ ಏನು ಮಾಡಬೇಕೆಂಬುದೇ ನನಗೆ ಹೊಳೆಯುತ್ತದಿಲ್ಲ. ಈಗ ನಾವು ರಾಜಕೀಯವಾಗಿ ಹೆಜ್ಜೆ ಮುಂದಿಟ್ಟಲ್ಲಿ, ನಿಜಕ್ಕೂ ನಮ್ಮೀ ಪ್ರಾಂತಿಕ ಪ್ರಶ್ನೆಗೂ ಪಾಕಿಸ್ತಾನಕ್ಕೂ ಹೇಗೆ ಸಂಬಂಧವಿದೆಯೋ ಹಾಗೆಯೇ ಪರಾಣೋದ್ಧಾರದ ನಮ್ಮ ಚಳವಳಿಕ್ಕುವ ಸಂಬಂಧವೂ ಇರದ ಕಾಶ್ಮೀರದ ಪ್ರಶ್ನೆಯೊಡನೆ ನಾವು ಢಿಕ್ಕಿ ಹೊಡೆಯಬೇಕಾಗುವುದು." ಎಂದರು ಡಾಕ್ಟರ್ ಸಾಹೇಬ್. ಲೀಗಿನ ವಿರುದ್ಧವಾಗಿ ಒಂದು ಜಾಹೀರು ಚುನಾವಣೆಗೆ ನಿಂತಲ್ಲಿ ಕೆಂಪಂಗಿಯವರು ಅತ್ಯಧಿಕ ಬಹುಮತ ಹೊಡೆಯುವರೆಂಬ ಖಚಿತ ಡಾ। ಖಾನರಲ್ಲಿ ಸಂಪೂರ್ಣ ಭರವಸೆಯಿದೆ. "ಒಳ್ಳೆಯದಕ್ಕೋ ಕೆಟ್ಟದಕ್ಕೋ, ಅಂತೂ ಪಾಕಿಸ್ತಾನ ಇಲ್ಲಿದೆ; ನಾವು ಅದರೊಳಗಾಗಿದ್ದೇವೆ" ಎಂದವರ ಮಾತು. ಪಂಡಿತ ನೆಹರು, ಮಹಾತ್ಮಾಗಾಂಧಿ, ಮೌಲಾನಾ ಅಬುಲ್ ಕಲಾಮ್ ಆಜಾದ್, ಡಾ। ರಾಜೇಂದ್ರ ಪ್ರಸಾದ್, ಮತ್ತು ಕೆಲವು ಅಗ್ರಗಣ್ಯ ಕಾಂಗ್ರೆಸ್ ನಾಯಕರು ತನ್ನ ಪಕ್ಷದ ಜಾತೀಯತಾ ವಿರೋಧಿ ತತ್ವಾನುವರ್ತಿಗಳೆಂಬ ತನ್ನ ನಂಬಿಕೆಯನ್ನು ಡಾ। ಖಾನ್ ಸಾಹೇಬರು ಸೂಚಿಸಿದರು. "ಲೀಗ್ ಸರಕಾರವು ತನ್ನ ಪ್ರಚಾರ ಬಲದಿಂದ ಅಲ್ಪಕಾಲ ಮಾತ್ರ ಶಾಂತಿಯಿಂದಿರಬಲ್ಲುದು. ಈ ನಡುವೆ ಇಲ್ಲಿ ಸಕ್ಕರೆಯೂ ಇಲ್ಲ; ಬೇಕಾದಷ್ಟು ಆಹಾರವೂ ಇಲ್ಲ' ಎನ್ನುತ್ತಾ ಈಗ ಕಾಶ್ಮೀರಕ್ಕೆ ನುಗ್ಗಿರುವ ಪಠಾಣರ ಕುರಿತು ಭವಿಷ್ಯ ಹೇಳಿದರು-"ಅವರೆಲ್ಲಾ ಬರಲಿದ್ದಾರೆ. 'ಕಾಶ್ಮೀರದಲ್ಲಿ ನಿಮ್ಮ ಕೆಲಸ ಸುಲಭದಲ್ಲಿ ... ಗುವುದು" ಎಂದು ಲೀಗಿನವರು ಉಬ್ಬಿಸಿದ್ದನ್ನು ನಂಬಿಕೊಂಡು ಅಲ್ಲಿಗೆ ಹೋಗಿದ್ದ ಅವರೆಲ್ಲಾ ಹಿಂದೀ ಸೇನೆಯ ಆಧುನಿಕ ಶಸ್ತ್ರಾಸ್ತ್ರಗಳೆದಿರಲ್ಲಿ ಭ್ರಮೆ ನಿರಸನಗೊಂಡು ಮರಳಲಿದ್ದಾರೆ-" ಎಂದರು.

ದೇಶವಿಭಜನೆಗೊಪ್ಪಬಾರದಿತ್ತು

ಮುಸ್ಲಿಂ ಲೀಗ್ ಮತ್ತು ಬ್ರಿಟಿಷರ ಕುರಿತು ಡಾ। ಖಾನ್ ಸಾಹೇಬರ ಟೀಕೆ ಕಠೋರವಿದ್ದರೂ, ಕಾಂಗ್ರೆಸ್ ಮಾಡಿದ್ದೆಲ್ಲಾ ಸರಿಯೆನ್ನುವವರು ಅವರಲ್ಲ. "ದೇಶವನ್ನು ವಿಭಾಗಿಸಲು ಅವರೆಂದಿಗೂ ಒಪ್ಪಬಾರದಿತ್ತು" ಎಂದು ಅವರು ಒತ್ತಿ ಹೇಳಿದರು. ತನ್ನ ಮತ್ತು ತನ್ನ ಸಹೋದರನ ವಿರುದ್ಧವಾಗಿ ಲೀಗಿನ ಬಲವೆಷ್ಟಿದೆ ಎಂಬುದನ್ನು ಪರೀಕ್ಷಿಸಲು, ಗಡಿನಾಡು ಪ್ರಾಂತ್ಯದ ಪ್ರಧಾನ ಮಂತ್ರಿಗಳು ಒಂದು ಚುನಾವಣೆಯನ್ನು ನಡಿಸಬಾರದೇಕೆ? ಎಂಬುದೇ ಈ ಸಂಭಾಷಣೆಯ ನಡುವೆ ಮತ್ತೂ ಮತ್ತೂ ಖಾನ್ ಸಾಹೇಬರು ಕೇಳಿದ ಪ್ರಶ್ನೆ. ಪಾಕಿಸ್ತಾನ್ ಸಂಬಂಧದ ಮತಗಣನೆಯಾದರೂ ನಿಷ್ಪಕ್ಷಪಾತವಾಗಿ ನಡೆಯುತಿದ್ದರೆ ಲೀಗು ಅದರಲ್ಲಿ ಕೂಡಾ ಗೆಲ್ಲುತ್ತಿರಲಿಲ್ಲವೆಂದು ಅವರ ಅಭಿಪ್ರಾಯವಿದೆ. ತನ್ನ ಮಂತ್ರಿತ್ವದ ರದ್ದತಿಯ ಆ ಘಾವರ್ಣನೆ ಮಾಡುತ್ತಾ ಅವರಂದರು: "ಆಗೋಸ್ತು 15ರ ಮೊದಲೇ ರಾಜೀ ಕೊಡಬೇಕೆಂದು ಅವರು ನನ್ನನ್ನು ಕೇಳಿದ್ದರು. ಆದರೆ ನಾನು ಖಡಾಖಡಿ ನಿರಾಕರಿಸಿದ್ದೆ. ಒಂದು ಹೊಸ ಚುನಾವಣೆ ನಡೆಸುವವರೆಗೂ ನಾನು ಗದ್ದುಗೆ ಬಿಡಲಾರೆ; ನೀವು ನನ್ನನ್ನು ಹೊರತಳ್ಳುವುದಾದರೆ ಬೇಕಾಯಿ ದೇಶೀರವಾಗಿ ತಳ್ಳಬೇಕು, ಎಂದು ನಾನವರಿಗೆ ಹೇಳಿದ್ದೆ. ನನ್ನ ಡಿಸ್ಮಿಸ್ ಎಂಬುದು ಹಿಂಸೆಯ ಆರಂಭ ಚಿಹ್ನೆ; ಪ್ರಾಂತ್ಯದವರೆಲ್ಲ ಕಬ್ಬಿಣದ ಪರದೆಯಿಳಿಯುವ ಸೂಚನೆ. ಇದಕ್ಕೆ ಆಗೋಸ್ತು 22ರಲ್ಲಿ ನಮ್ಮ ಡಿಸ್‌ಮಿಸ್, ಆಗೋಸ್ತು 23ರ ಮುಂಜಾನೆಯೇ ಗಲಭೆಗಳ ಪ್ರಾರಂಭ ಆಗಿದ್ದ ಆ ನೋಟವೊಂದವೇ ಸಾಕು."

ನೆಹರುಗಳ ಪರಮಾಪ್ತ

ನಾನು ಹೊರಡುವದರಲ್ಲಿರುವಾಗ ಡಾ। ಖಾನ್ ಸಾಹೇಬರ ಪತ್ನಿ-ಓರ್ವ ಇಂಗ್ಲಿಷ್ ಮಹಿಳೆ-ಒಂದು ಮಸಕಾದ 'ಫೋಟೋಗ್ರಾಫ'ನ್ನು ಹಿಡಿದುಕೊಂಡು ಬಂದರು ಅದು 1913ನೇ ಇಸವಿಯಲ್ಲಿ ಲಂಡನಿನಲ್ಲಿದ್ದ ಇಬ್ಬರು ತರುಣ ಹಿಂದೀ ವಿದ್ಯಾರ್ಥಿಗಳ ಭಾವಚಿತ್ರವಾಗಿದ್ದಿತು. ಇಬ್ಬರೂ ಆ ಕಾಲದ ನಾಜೂಕಿನ ಪಾಶ್ಚಾತ್ಯ ಪೋಷಾಕುಗಳಿಂದಲಂಕೃತರಾಗಿದ್ದರು. ಅದರಲ್ಲೊಬ್ಬರು ಕೇಂಬ್ರಿಜ್ ವಿದ್ಯಾರ್ಥಿ ಪಂಡಿತ ಜವಾಹಿರಲಾಲ ನೆಹರು; ಮತ್ತೊಬ್ಬರೇ ಡಾ। ಖಾನ್ ಸಾಹೇಬ್. ಜವಾಹಿರಲಾಲರು ಅಲ್ಲಿಂದ ಹಿಂದುಸ್ಥಾನಕ್ಕೆ ಹೊರಡುವಾಗ, ಇಬ್ಬರೂ ಒಟ್ಟಿಗೆ ನಿಂತು ತೆಗೆಯಿಸಿದ್ದ ಫೋಟೋ ಇದು ಎಂದು ಶ್ರೀಮತಿ ಖಾನ್ ಸಾಹೇಬರೆಂದರು. ಕೊಂಬು ಚೌಕಟ್ಟಿನ ತನ್ನ ಕನ್ನಡಕದೊಳಗಿಂದ ಆ ಭಾವಚಿತ್ರದ ಮೇಲೆ ದೃಷ್ಟಿಯೋಡಿಸುತ್ತಾ, ಡಾ। ಖಾನ್ ಸಾಹೇಬರು "ನನಗೀಗ ಬಹಳ ಕೊಬ್ಬಿಬಂದು ಹೋಗಿದೆ, ಅಲ್ಲವೆ?" ಎಂದರು. ತುಸು ಹೊತ್ತು ಮೌನವಿದ್ದು "ನಾವೀದಿನ ಹೀಗಾಗುವೆವೆಂಬುದನ್ನು ಆ ಕಾಲದಲ್ಲಿ ಯೋಚಿಸಿರಲಿಲ್ಲ. ಆಗ ನಾವು ಟೆನ್ನಿಸ್, ಕ್ರಿಕೆಟ್, ಬ್ರಿಜ್ ಆಟಗಳಲ್ಲೇ ತಲ್ಲೀನರಾಗಿದ್ದೆವು". ಎಂದು ಹೇಳಿದರು. "ನಾನಿಮವರೆಗೂ ಒಮ್ಮೆಯೂ ಜಗಳವಾಡದಿದ್ದ ಸ್ನೇಹಿತನೆಂದರೆ ನೆಹರು. ಅಂದಿನಿಂದಿದುವರೆಗೆ ನನಗೆ ಗೊತ್ತಿದ್ದವರ ಪೈಕಿ ಅತ್ಯಂತ ಪರಿಶುದ್ಧ ಮನುಷ್ಯನೆಂದರೆ ಅವರು. ವಿದ್ಯಾರ್ಥಿದಸೆಯಲ್ಲಿ ಕೂಡಾ ಹುಡುಗರೊಳಗೇಳುತ್ತಿದ್ದ ಜಗಳಗಳನ್ನು ರಾಜಿ ಮಾಡಿಹಾಕುತಿದ್ದವರು ಅವರೇ" ಎಂದು ಸ್ಮರಿಸಿದರು. ಡಾ। ಖಾನ್ ಸಾಹೇಬರೀಗ ತನ್ನ ಜನ್ಮಸ್ಥಳವಾದ ಚಾರ್ಸದ್ದಾದಲ್ಲಿಯ ಹೊಸ ಆಧುನಿಕ ಬಂಗಲೆಯ ಮೇಲ್ವಿಚಾರದಲ್ಲಿಯೇ ಹೆಚ್ಚಿನ ಸಮಯವನ್ನು ಕಳೆಯುತಿದ್ದಾರೆ. ತನ್ನ ರಾಜಕೀಯ ಅಜ್ಞಾತವಾಸಬಿಟ್ಟು ಮುಂದೆ ನುಗ್ಗುವ ಕಾಲ ಒದಗುವವರೆಗೂ, ತನ್ನಾಸ್ತಿಯ ಮೇಲ್ವಿಚಾರ ಮತ್ತು ಮನೆದುರಸ್ತಿ ನಡಿಸಿಕೊಂಡು ಅಲ್ಲಿಯೇ ಇರುವ ಯೋಚನೆಯಲ್ಲಿದ್ದಾರೆ ಅವರು.

ಬಾದಶಹಾ ಖಾನರ ಭೇಟಿ

ಚಾರ್ಸದ್ದಾದಿಂದ ಮರಳಿಬರುತ್ತಾ ಹಾದಿಯಲ್ಲಿ ಸರ್ದರ್ಯಾಬಿನಲ್ಲಿರುವ ಖಾನ್ ಅಬ್ದುಲ್ ಗಫರ್‌ಖಾನರ ಕೆಂಪಂಗೀ ತರಬೇತಿ ಕೇಂದ್ರದಲ್ಲಿ ಇಳಿದೆ. ಅಲ್ಲಿಯ ತನ್ನ ಕಟ್ಟಡಕ್ಕೆ ಹೊಸತಾಗಿ ಸೇರಿಸಿ ಕಟ್ಟಿದ ಭಾಗದ ಕೊನೆಯ ಲೀಪ ಕೊಡುವ ಕೆಲಸದಲ್ಲಿ ತನ್ನ ಸ್ವಯಂಸೇವಕ ಕೆಲಸಗಾರರೊಂದಿಗೆ ಮೊಣಕಾಲು ಕೈಗಳಿಂದ ಸಹಕರಿಸುತಿದ್ದ ಗಡಿನಾಡು ಗಾಂಧಿಯನ್ನು ಅಲ್ಲಿ ಕಂಡೆ. ಖಡಾಖಡಿ ಮಾತಾಡಿಬಿಟ್ಟ ತನ್ನ ಸಹೋದರನಂತೆ ತನ್ನ ವಿರುದ್ಧಾಚರಣೆಗೇಳಲು ಸರಕಾರಕ್ಕೆಡೆಕೊಡುವಂತಹ ಯಾವ ಮಾತನ್ನಾದರೂ ಆಡುವ-ತನ್ನನ್ನದಕ್ಕೆ ಮುಂದೊಡಿಕೊಳ್ಳುವ ಹುರುಪೇನನ್ನೂ ಖಾನ್ ಅಬ್ದುಲ್ ಗಫರ್‌ಖಾನರು ಪ್ರದರ್ಶಿಸಲಿಲ್ಲ. ಆದರೆ ಖುದಾಯಿ ಕಿದ್ಮತ್‌ಗಾರರ ಮೇಲೆ ಆಗುತ್ತಿರುವ ದಬ್ಬಾಳಿಕೆಗಳಿಂದ ಅವರು ಆವೇಶಗೊಂಡಿದ್ದಾರೆ. "ಅವರು ನಮ್ಮ ಕೆಲಸಗಾರರನ್ನೆಲ್ಲಾ ದಸ್ತಗಿರಿಮಾಡುತ್ತಿದ್ದಾರೆ; ನಮ್ಮ ವಾರಪತ್ರಿಕೆ 'ಪಖ್ತೂನ'ನ್ನು ನಿಲ್ಲಿಸಿಬಿಟ್ಟರು. ಪ್ರಥಮತಃ ನಮಗೆ ಕಾಗದ ಕೊಡಲು ಅವರು ನಿರಾಕರಿಸಿದ್ದರು. ಕೊನೆಗೆ ಖಾಸಗಿಯಾಗಿ ನಾವು ಕಾಗದದ ವ್ಯವಸ್ಥೆ ಮಾಡಿಕೊಂಡಾಗ, ಅದರ ಮುದ್ರಣವನ್ನೇ ನಿಲ್ಲಿಸುವ ಆಜ್ಞೆ ಕೊಟ್ಟರು' ಎಂದರು ಗಫರ್‌ಖಾನ್. ಎರಡಂತಸ್ತಿನ ಅವರ ಈ ಮುಖ್ಯಕಾರ್ಯಾಲಯ ಕಟ್ಟಡದಲ್ಲಿ ಮಸಕಾದ ಸಾದಾ ಕೆಂಪುಧ್ವಜವೊಂದು ಹಾರಾಡುತಿತ್ತು. ಒಳಗಡೆಯಲ್ಲಿ ಅಕ್ಷರಾಪೇಕ್ಷಿ ಕೆಂಪಂಗಿಯವರಿಗೆ ಉದ್ದ ಗಡ್ಡದ ಉಪಾಧ್ಯಾಯರೊಬ್ಬರು 'ಪುಸ್ತು'ವನ್ನು ಕಲಿಸುತಿದ್ದರು. ಈ ವಿಧಾಯಕ ವಿದ್ಯಾಪಾಠವೊಂದೇ ಈಗ ಕೆಂಪಂಗಿಯವರು ನಡಿಸುತ್ತಿರುವ ಕೆಲಸವೆಂದು ಖಾನ್ ಅಬ್ದುಲ್ ಗಫರ್‌ಖಾನರು ವಿವರಿಸಿದರು. ಸೆಪ್ಟೆಂಬರ್ 3ರಲ್ಲಿ ತಾವು ಕಾಂಗ್ರೆಸ್ ಸಂಬಂಧವನ್ನು ಬಿಟ್ಟಂದಿನಿಂದ ಕಾಂಗ್ರೆಸಿನ ತ್ರಿವರ್ಣ ಧ್ವಜದಲ್ಲಿ ಈ ಆಕಾರಪೂರ್ಣ ಕೆಂಪ ಧ್ವಜ ಬಂತೆಂದು ಹೇಳುತ್ತಾ "ಇದಕ್ಕೂ ಕಮ್ಯೂನಿಜಮಿಗೂ ಸಂಬಂಧವಿಲ್ಲ" ಎಂದು ಭರವಸೆ ಕೊಟ್ಟರು. ಸದ್ಯದಲ್ಲೇ ರಾಜಕೀಯ ಚಟುವಟಿಕೆಗಳನ್ನು ಆರಂಭಿಸುವ ಯೋಜನೆಯೇನನ್ನಾದರೂ ಹಾಕಿರುವಿರಾ? ಎಂದು ನಾನು ಪ್ರಶ್ನಿಸಿದಾಗ "ಏನೆಲ್ಲಾ ನಡೆಯುತ್ತದೆಂಬುದನ್ನು ನಾವು ನೋಡುತ್ತಾ, ಕಾಯುತ್ತಾ ಇದ್ದೇವೆ" ಎಂದುತ್ತರಬಂತು. ಸುಸಜ್ಜ ತಾರು ಹತ್ತಿ ಹೊರಟಾಗ, ಪ್ರವಾದಿಸಮಾನ ಖಾನ್ ಅಬ್ದುಲ್ ಗಫರ್‌ಖಾನರು ತನ್ನ ಕೈನೂಲಿನ ಬೂದೀಶಾಲನ್ನು ತಲೆಯ ಮೇಲೆಳೆದುಕೊಳ್ಳುತ್ತಾ ತನ್ನಾ ಮಡಗುವ ಮತ್ತು ಕಾಯುವ ಕೆಲಸಕ್ಕೆ ಮರಳಿದರು.

ಹೈದರಾಬಾದಿನಲ್ಲಿ

ಹೈದರಾಬಾದ್ ಸಂಸ್ಥಾನದಲ್ಲಿ ಈಗ ಮುಸ್ಲಿಮ್-ಮುಸ್ಲಿಮೇತರರೊಳಗೆ ಸರಕಾರೀ ಖಾತೆಗಳ ನೌಕರಿಗಳು ಹೇಗೆ ಹಂಚಿಬಿದ್ದಿವೆ, ಎಂಬ ಅಂಕೆಸಂಖ್ಯೆ ಇಲ್ಲಿದೆ. ಅಲ್ಲಿ ಸೇಕಡಾ 90 ರಷ್ಟು ಮುಸ್ಲಿಮೇತರರು ಸೇಕಡಾ 10ರಷ್ಟು ಮುಸಲ್ಮಾನರೆಂಬುದ. ನೆನಪಿರಲಿ.

ಮಂತ್ರಿಗಳು ಮುಸ್ಲಿಂ 9; ಹಿಂದೂ 2. ಕಾರ್ಯದರ್ಶಿಗಳು ಮು: 10. ಹಿಂ. 1; ಇತರರು 1. ಎಡಿ.ಕಾರ್ಯದರ್ಶಿಗಳು ಮು. 2; ಹಿಂ. 1, ಇ. 1. ಜತೆಕಾರ್ಯದರ್ಶಿಗಳು ಮು. 3 ಮಾತ್ರ. ಉಪಕಾರ್ಯದರ್ಶಿಗಳು ಮು. 9; ಹಿಂ. 3. ಸಹಾಯಕ ಕಾರ್ಯದರ್ಶಿಗಳು ಮು. 55. ಹಿಂ. 8. ಖಾತೆಗಳ ಮುಖ್ಯಾಧಿಕಾರಿಗಳು ಮು. 40; ಹಿಂ 6. ಇ. 1 ಕಮಿಶನರರು. ಮು. 4 ಮಾತ್ರ. ಕಲೆಕ್ಟರರು ಮು. 14 ಹಿಂ. 2. ರೆವಿನ್ಯೂ ಬೋರ್ಡ್ ಮು. 2 ಮಾತ್ರ. ಸಬ್ ಕಲೆಕ್ಟರು ಮು. 50 ಹಿಂ. 19. ಇ. 2. ತಹಶೀಲ್ದಾರರು ಮು. 75. ಹಿಂ. 40. ಇ. 4. ಹೈಕೋರ್ಟ್ ಜಡ್ಜರು ಮು. 8. ಹಿಂ 5. ಮೆಜಿಸ್ಟ್ರೇಟರು ಮತ್ತು ಮುನ್ಸೀಫರು ಮು. 147 ಹಿಂ. 38 ಪೋಲೀಸ್ ಡಿ. ಯಸ್. ಪಿ, ಎ. ಎಸ್. ಪಿ, ಮತ್ತು ಸರ್ಕಲ್ ಇನ್ಸ್‌ಪೆಕ್ಟರರು ಮು. 73. ಹಿಂ. 12. ಇ. 6. ವಿಧ್ಯಾಧಿಕಾರಿಗಳು ಮು. 237. ಹಿಂ: 65. ಇ. 27. ಸಪ್ಲೈ ಅಧಿಕಾರಿಗಳು ಮು. 25. ಹಿಂ. 7. ಇ. 1. ಅಂತೂ ಎಲ್ಲಾ ಖಾತೆಗಳ ಒಟ್ಟು 1915 ಸ್ಥಾನಗಳಲ್ಲಿ 763 ಮುಸ್ಲಿಮರಿಗೂ 209 ಹಿಂದುಗಳಿಗೂ 45 ಇತರರಿಗೂ ದೊರೆತಿವೆ. ಸೇಕಡಾ 10ರಷ್ಟಿರುವ ಮುಸ್ಲಿಮರಿಗೆ ಅಧಿಕಾರ ಸ್ಥಾನಗಳು ಸೇಕಡಾ 75 ರಷ್ಟು ಹೋಗಿವೆ. ಸೇಕಡಾ 90ರಷ್ಟಿರುವ ಮುಸ್ಲಿಮೇತರರಿಗೆ (ಹಿಂದೂ ಮತ್ತಿತರರು ಸೇರಿ) ಸೇ|25ರಷ್ಟು ಸ್ಥಾನಗಳಿವೆ. ಸಾಮಾನ್ಯ ಪೋಲಿಸ್ ಮತ್ತು ಸೇನೆಗಳಲ್ಲಿ ಸೇಕಡಾ 95 ರಷ್ಟು ಮುಸ್ಲಿಮರಿಗೇನೇ ಕೊಡಲ್ಪಟ್ಟಿವೆ.



Approved firm by the Govt. of Mysore
Certified by the Agent of the Govt. of Cylone & Indian.

ಮಾನವಂತತನದ ಸೋಗಿನಿಂದ ನಡೆದ ಅನಾಚಾರ-ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ವ್ಯಭಿಚಾರಿಣಿ ಯಾರು?

ಬೆಲೆ: ರೂ 1—0—0. ಅಂಚೆ ಮೂಲಕ ರೂ. 1—4—0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದಾವಕ, ವಿಚಾರ ಪಚೋದಕ ನವೀನ ನಾಟಕ.

ಪ್ರೇಮ ವಿಜಯ

ಬೆಲೆ: ರೂ. 1—0—0 ಅಂಚೆ ಮೂಲಕ ರೂ. 1—4—0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತನೇದಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬೆಲೆ ರೂ. 1—8—0; ಟಪ್ಪಾಲು ದ್ವಾರಾ ರೂ. 1—12—0.

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ.

ಬೆಲೆ 1—4—0 ಟ. ದ್ವಾರ 1—8—0

ಕಿರಿಯರ ಪ್ರಪಂಚದ ಪ್ರಕಟಣೆ **ಕದಂಬ** ಹನ್ನೆರಡು ಕತೆಗಳ ಸಂಗ್ರಹ

ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ ಚಿತ್ರಿಸುವ ಕಥಾ ಸಂಗ್ರಹ. ಬೆಲೆ. 1—4—0

ಮನೆಮದ್ದು-Home Remedies

ಬೆಲೆ ರೂ. 2-0-0

ಮಕ್ಕಳ, ಹೆಂಗಸರ, ಗರ್ಭಿಣಿ ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇದೆ ಮೆರಿಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200 ಕಾಯಿಲೆಗಳಿಗೆ 1000 ಮನೆಮದ್ದುಗಳನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ.—

ನವಭಾರತ ಬುಕ್ ಡಿಪೋ ಉಡುಪಿ.



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಆ ಬ್ರಿಟಿಷ ಪಾಟೆಂಟುಗಳು ಹೆಚ್ಚು ಕಡಿಮೆ ಶ್ರೀಮಂತರಿಗೆ ಬರುವವು. ಅಂದರೆ ಕೇವಲ ಆ ರಸಕ್ಕಾಗಿಯೇ ಒಂದು ಬಾಣಂತನಕ್ಕೆ ಸಾಕಾಗುವಷ್ಟು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ.

ಸ್ಟಾಕಿಸ್ಟರು- ಡಾ| ವಿ. ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

—ಮಕ್ಕಳನ್ನು ಹಡೆಯುವುದು ಸಾಕು—

ಆಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧ಆಣೆ.

ಮಾಲಕರು:—ಕಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಬಾಪಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಚಿಕ್ಕೋಡಿಯಲ್ಲಿ:—ಕುಂಬಾರವಾಡಿ ಸ್ಟೋರ್ಸ, ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ, ಹಾವೇರಿ, ಬ್ಯಾಡಗಿ,

Ayurveda Oushadalaya, GADAG CITY.

ಇಂದ್ರಭವನ ಕಾಫಿ ಹೊಟೇಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ-ವಿದ್ಯುಚ್ಛೀಸ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ

ಪ್ರೊಪ್ರೈಟರ್.

INDRA BHAVAN COFFEE HOTEL,
Balmatta Road, MANGALORE

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ರೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ, ಕ್ವಾಲಿಕೆ ಸಂಗ್ತಿ ಬರೆದಲ್ಲಿ ರೋಗಕ್ಕೆ ತಕ್ಕುದಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜಂಟರು:—ಪ್ರೊವ್ಯುಲರ್ ಸ್ಟೋರ್ಸ, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ. ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ಒಕ್ಕೆ ೫ರೂ ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ ದಾವಣಗೇರಿ:ದಾವಣಗೇರಿ ಪ್ರೆಸ್. ತಕ್ಕವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಕಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ,

Ayurveda Oushadhalaya GADAG

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

25-12-1947

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂ..ಡ)
ವರ್ಷಕ್ಕೆ ರೂ 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿ ರೂ. 0-1-6
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೭
ವಾರ ೧೭

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister, Govt. of Madras.

Vol. 27
No. 17

THE CANARA MUTUAL Assurance Company, Limited.

Estd: 1935

H. O. UDIPI, S. Kanara.

BONUS DECLARED FOR 8 YEARS

We are glad to announce that we have declared a Bonus for 8 years from 1939 to 1946 both years inclusive as also an interim bonus for the next valuation period.

T. R. A. Pai,
Managing Director.

The 1946 Record Business proves the popularity

THE BOMBAY LIFE ASSURANCE COMPANY, LTD.

Company's New Business in 1946— **3.28 Crores**

Our Chief Agency New business in 1946 about **54 Lakhs**

Our exprience of 37 years available to you for arranging Insurance investment. It therefore, pays you to consult us to Insure or to represent

MESSRS. KOCHIKAR BROTHERS, LIMITED,

Chief Agents for South India,
Bombay Life Building,
Central Office, Udipi.

Branches at:

Mangalore, Calicut, Trivandrum, Madura, Madras, Bangalore, & Bombay.



[illegible]

ವಾರ್ಡನ್

1946ರಲ್ಲಿ ಸರ್ವೋನ್ನತ ಶಿಖರಕ್ಕೇರಿದೆ.

ಹೊಸ ವ್ಯವಹಾರ

ಸ್ವೀಕರಿಸಲ್ಪಟ್ಟ ವ್ಯವಹಾರ ರೂ. [illegible]04,00,000
ಪೂರ್ಣಗೊಳಿಸಲ್ಪಟ್ಟ ವ್ಯವಹಾರ [illegible]7[illegible],00,000

ವಾರ್ಡನಿನ
ಪ್ರಗತಿಪರ ಜೀವನದಲ್ಲಿ
ಇದು
ಮಹಾ ಸಾಹಸವೇ ಆಗಿದೆ.

ಶಿವಪ್ರಸಾದ ಠಾಕೂರ್
ಮೆನೇಜಿಂಗ್ ಡೈರೆಕ್ಟರ್.

ಎಂ. ಸುಂದರ ರಾಮ ಶೆಟ್ಟಿ,
ಏಜನ್ಸಿ ಮೆನೇಜರ್,

ಕೆ. ಪಿ. ಭವಾನಿಶಂಕರ ಶೆಟ್ಟಿ,
ಮಂಗಳೂರು ಬ್ರಾಂಚ್ ಸೆಕ್ರೆಟರಿ,

ದಿ ವಾರ್ಡನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

'ವಾರ್ಡನ್ ಹೌಸ್' ಸರ್ ಪಿ. ಎಂ. ರೋಡು, ಫೋರ್ಟ್ ಬೊಂಬಾಯಿ.

ದಕ್ಷಿಣ ಭಾರತದ ಶಾಖೆ ಮತ್ತು ಉಪ ಶಾಖೆಗಳು:—ಮದ್ರಾಸು, ಮಂಗಳೂರು, ಬೆಂಗಳೂರು, ವಿಶಾಖಪಟ್ಟಣ, ಮಧುರ, ಕೊಯಂಮುತ್ತೂರು, ಕಲ್ಲಿಕೋಟೆ, ತ್ರಿವೆಂಡ್ರಂ ಮತ್ತು ಅನಂತಪುರ.

ವಿಮೆ ಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಾರ್ಯಾಲಯ:-ಧಾರವಾಡ,

ಹೆಚ್ಚಿನ ಸವಲತ್ತಿನ ಬಗ್ಗೆ—
ಪೋಸ್ಟ್ ಬಾಕ್ಸ್ ನಂಬ್ರ 10, ಉಡುಪಿ, ಇವರಿಗೆ ಬರೆಯಿರಿ.

ಈ ಎಪ್ಪತ್ತರ ಮುದುಕ–

— ರಾಜಾಜಿಯ ಗುಣದೋಷಗಳು —

(ಶ್ರೀ. ಚಕ್ರವರ್ತಿ ರಾಜಗೋಪಾಲಾಚಾರ್ಯರಿಗೆ ಈ ತಿಂಗಳಲ್ಲಿ 70ನೇ ವರುಷ ಹಿಡಿದಿದೆ. ಈ ಮೇಧಾವಿ ಮುಂದಾಳುವಿನ 70ನೇ ಜಯಂತಿಯು ರಾಷ್ಟ್ರದಲ್ಲೆಲ್ಲಾ—ವಿಶೇಷತಃ ಮದ್ರಾಸ್ ಪ್ರಾಂತ್ಯದಲ್ಲಿ—ಅತ್ಯಂತ ವಿಜೃಂಭಣೆಯಿಂದಾಚರಿಸಲ್ಪಟ್ಟಿದೆ. ಸಂದರ್ಭೋಚಿತವಾಗಿ 'ಧನಿಷ್ಠಾ' ಎಂಬವರು 'Indian Parliament'ನಲ್ಲಿ ಬರೆದ ಲೇಖನವನ್ನಿಲ್ಲಿ ಅನುವಾದಿಸಿ ಕೊಟ್ಟಿದ್ದೇವೆ)

1932ನೇ ಶದ್ವತ್ಸ; ಗಾಂಧಿಜೀಯ ಉಪವಾಸಗಳಲ್ಲಿರುವ ರಾಜಕೀಯ ಚಮತ್ಕಾರದ ಪರಿಚಯವು ಈಗ ಇರುವಷ್ಟು ಆ ಕಾಲದಲ್ಲಿರಲಿಲ್ಲ. ಒಂದು ನಿಯೋಜಿತ ಉಪವಾಸದ ಸುದ್ದಿಗಳ ಸುಳಿದಾಟದಿಂದ ಸಾರ್ವಜನಿಕ ಮನೋಭಾವನೆಯು ಕದಡಿದ್ದಿತು. ಆದರೆ ಗಾಂಧಿಜೀಯೊಂದು ನಿರ್ಧಾರಕ್ಕೆ ಅಷ್ಟರಲ್ಲೇ ಬಂದಿದ್ದರು. ಆಗ ಅಸೋಯೇಟ ಕೆಲಸಗಾರನೊಬ್ಬನಿಗೆ ಬಂದಿದ್ದ ಪತ್ರದಲ್ಲಿ ಹೀಗಿತ್ತು; "ರಾಜಾಜಿ ಹೋರಾಡಿದರು." ಗಾಂಧಿಜೀಯು ಅವರಿಗೆ "ನೀವು ದೇವರ ಮೇಲೆ ನನಗಿರುವ ವಿಶ್ವಾಸವನ್ನು ಅಲುಗಾಡಿಸಲು ಪ್ರಯತ್ನಿಸುತಿದ್ದೀರಿ" ಎಂದು ಹೇಳಬೇಕಾಯಿತು. ಹೌದು; ರಾಜಾಜೀ ಹೋರಾಡಬಲ್ಲವರಿದ್ದರು; ವಾದಿಸತಕ್ಕವರೇ ಇದ್ದರು. ಅವರ ವಾದದ ಶಕ್ತಿಯೆಷ್ಟೆಂದರೆ, ಗಾಂಧಿಜೀಗೆ ದೇವರ ಮೇಲಿರುವ ನಂಬಿಕೆಯನ್ನು— ಬೇರಾವುದಕ್ಕೂ ಎಷ್ಟಕ್ಕೂ ಅಲುಗಾಡಿಸಲಸಾಧ್ಯವಿರುವ ಆ ವಿಶ್ವಾಸವನ್ನು—ಅಲುಗಾಡಿಸುವಷ್ಟು! ಶ್ರೀ ರಾಜಗೋಪಾಲಾಚಾರ್ಯರು ತನ್ನ ವಾದದಲ್ಲೊಂದು ಶಕ್ತಿಯೇ ಆಗಿದ್ದಾರೆ. ಅವರು ತನ್ನ ವಾದವನ್ನು ಆಕಾಶದಲ್ಲೋಡಿಸಬಲ್ಲರು; ಅವರು ತನ್ನ ವಾದವನ್ನು ಪಾತಾಳ ಪಥಹಿಡಿಸಬಲ್ಲರು; ಅವರು ತನ್ನ ವಾದವನ್ನು ಸುತ್ತಲೂ ತಿರುಗಾಡಿಸಿ ತರಬಲ್ಲರು, ಅವರು ತನ್ನ ವಾದವನ್ನು ನೇರಾಗಿ ಒಳಗಡೆಗೂ ಹೊಗಿಸಬಲ್ಲರು. ಸ್ವತಃ ಅವರೇ ಎರಡು ಕಾಲುಗಳ ವಾದಶಕ್ತಿ!

ಮತಾಂತರ

ವಕೀಲೀ ವೃತ್ತಿಯ ಪ್ರಥಮಭಾಗದ ವಿಜಯಾನಂತರ–ಪ್ರಾಯಶಃ ಜೀವನವನ್ನೇ ನೀರಸಗೊಳಿಸಿದ ಅನಿಷ್ಟ ಹಸ್ತದ ಆ ತಾಡನೆಯ (ಪತ್ನಿಯ ನಿಧನ) ದೆಸೆಯಿಂದ—ಈ ಪುರೋಗಾಮಿ ವಕೀಲನಲ್ಲಿ ಸೇಲಮನ್ನು ಬಿಟ್ಟು ತನ್ನ ಚಾತುರ್ಯಕ್ಕೆ ಜಿಲ್ಲಾ ಅಥವಾ ನಗರಸಭೆಗಳಿಗಿಂತ ವಿಸ್ತಾರವಾದ ಬೇರೆ ಕ್ಷೇತ್ರವನ್ನೇ ಆರಿಸಿಕೊಳ್ಳಬೇಕೆಂಬ ಬಯಕೆ ಮೂಡಿತು. ಆದರೆ ಅವರು ಮದ್ರಾಸಿಗೆಬಂದು ಠಿಕ್ಕಾ ಹೂಡಿದ್ದರು ಮಾತ್ರ; ಗಾಂಧಿಜೀ ಧೂಮಕೇತುವಿನಂತೆ ಅವರ ಹಾದಿಗಡ್ಡವಾಗಿ ಹಾದುಬಂದರು; ರಾಜಾಜೀ ಈ ಹೊಸ ಪಥವನ್ನು ಹಿಡಿದುಬಿಟ್ಟರು. ಗಾಂಧಿಜಿಯ ನಾಯಕತ್ವದಲ್ಲಿ ಘನತ್ಯಾಗದ ಸ್ಫೂರ್ತಿದಾಯಕ ಮಾದರಿಯೊಂದನ್ನು ಹಾಕಿಕೊಟ್ಟರು. ಅವರು 'ಹಿಸ್ ಮೆಜೆಸ್ಟೀಸ್‌ಹೈ ಕೋರ್ಟಿ'ಗೆ ಬೆನ್ನುಹಾಕಿ ಹೊರಬಂದವರು ಅಂದಿನಿಂದ 'ಜನತಾ ಹೈಕೋರ್ಟ್'ಗಳಲ್ಲೇ–ಸಾರ್ವಜನಿಕ ಸಭೆಗಳು ಮತ್ತು ಜನಸಂಘಗಳಲ್ಲೇ–ವಾದಿಸುತಿದ್ದಾರೆ. ಕಳೆದ ಮೂರು ದಶವಾನಗಳ ಬಹು ಭಾಗದಲ್ಲಿ ಅವರೀ ಕೋರ್ಟುಗಳಲ್ಲೇ ವಕೀಲನಾಗಿ ಮತ್ತೂ ವಿಶ್ವಾ ವಾದಿಸುತ್ತಿದ್ದಾರೆ–ಕೆಲವೊಮ್ಮೆ ಗೆಲವು ಹಲವುಬಾರಿ ಸೋಲೇ–ಆದರೆಎಲ್ಲಾ ಸಂದರ್ಭಗಳಲ್ಲೂ ಅಮೋಘವಾದ ಚಾತುರ್ಯದಿಂದಲೇ.

ಎರಡು ವಿಜಯಗಳು

ಮೀನಿಗೆ ಈಜಾಡುವುದು, ಕೋತಿಗೆ ಮರವೇರುವದು, ಹುಲಿಗೆ ನೆಗೆಯುವುದು ಹೇಗೋ ಹಾಗೆಯೇ ತರ್ಕಸಭೆಗಳಲ್ಲಿ ವಾದಕ್ಕೇಳುವ ರಾಜಾಜೀ ಶಕ್ತಿಯು ಸ್ವಭಾವಸಿದ್ಧವಾದುದು. ಅವರು ಕಲಿತು ಸಂಗ್ರಹಿಸಿಕೊಂಡಿರುವ ಜ್ಞಾನವು ಅಪಾರವಾದುದು; ಮೂಲಗಳನ್ನು ಶೋಧಿಸಿ ಸಂಗತಿಗಳನ್ನೆಲ್ಲಾ ಅವರು ಹಸ್ತಗತಮಾಡಿಕೊಳ್ಳಬಲ್ಲರು; ಅಂತೆಯೇ ವಿವರಗಳ ಸೂಕ್ಷ್ಮಾಂತರ್ಯವನ್ನರಿಯಬಲ್ಲರು. ಯಾವ ಸಭೆಯೇ ಇರಲಿ, ಯಾವ ಪಕ್ಷವನ್ನೇ ಹಿಡಿದು ವಾದಿಸಲಿ–ರಾಜಾಜಿ ಸಭಿಕರ ಲಕ್ಷ್ಯವನ್ನಾಕರ್ಷಿಸಿ ಹಿಡಿದುಕೊಳ್ಳಬಲ್ಲರು. ಈ ಬಿಲ್ಲುಗಾರನಲ್ಲಿ ಪೂರ್ಣ ತುಂಬಿರುವ ಚತ್ರಿಕೆ, ಮತ್ತು ಎಂದಿಗೂ ತಪ್ಪದ ಗುರಿಯಿದೆ. ಧಂಡಾ ತತ್ವವಾದದಿಂದ ಹಿಡಿದು ಈ ದಿನ ರಾಜಕೀಯ ವಿವಾದದ ವರೆಗೂ–ನವಮಾತ್ರವಾದ ಸಾಮ್ಯವಾದದಿಂದಾರಂಭಿಸಿ ಸೂಕ್ಷ್ಮವಾದ ಕಾನೂನು ಶೋಧಗಳ ವರೆಗೂ ಸರಾಗವಾಗಿ ಮತ್ತುಸತ್ಕೀರ್ತಿದಾಯಕವಾಗಿ ಇವರು ಹೋಗಬಲ್ಲರು. ಪ್ರತಿಯೊಂದು ಸಭೆಗೂ ಆದಕ್ಕರ್ಥವಾಗುವ ಮಾತಿನಲ್ಲೇಇವರು ಭಾಷಣಕೊಡುತ್ತಾರೆ. ಪ್ರತಿಯೊಬ್ಬ ವಿರೋಧಿಗೂ ಅವರನ್ನಂಜಿಸುವ ಬಾಣವನ್ನೇ ಬಿಡುತ್ತಾರೆ. ಇದಿರು ಪಕ್ಷವು ಮರದ್ದೆಂದು ತೋರಿದರೆ ಇವರು ಉಳಿಯನ್ನೇ ಉಪಯೋಗಿಸುತ್ತಾರೆ; ಇದಿರುಗಡೆಯು ಕಲ್ಲಿನದಾಗಿದ್ದರೆ ಇವರ ಕೈಯಲ್ಲಿ ಸಿಕ್ಕಾಸು ಇದ್ದೇ ಇದೆ. ರಾಷ್ಟ್ರದ ರಾಜಕೀಯದ ಮುಖವನ್ನು ಗಾಂಧಿತ್ವದಿಂದ ಬೇರೆ ದಿಕ್ಕಿಗೆ ಬದಲಾಯಿಸಿ ಬಿಡಬೇಕೆಂದು ಕಳೆದ ಇಪ್ಪತ್ತೈದು ವರುಷಗಳಲ್ಲಿ ಬಂಗಾಳವು ಎರಡುಬಾರಿ ಪ್ರಯತ್ನಿಸಿದ್ದಿತು. ಎರಡುಸಲವೂ ಅತ್ಯಂತ ಬಿಗುವಾದ ಆ ಹೋರಾಟವನ್ನು ವಾದ ಬಲದಿಂದ ಜಯಿಸಿದವರು ಚಕ್ರವರ್ತಿ ರಾಜಗೋಪಾಲಾಚಾರ್ಯರೇ. 1922ರಲ್ಲಿ "ಏನು, ಕಾಂಗ್ರೆಸು ತನ್ನ ಕಾವಲುಗಾರ ಚಿತ್ತರಂಜನ ದಾಸರನ್ನು ವಾಯುಯಾನ್ಯಗ ಮಾರೀಚನ ಬೇಟೆಗಾಗಿ ಬಿಟ್ಟುಕೊಟ್ಟು ಕೌನ್ಸಿಲುಗಳಲ್ಲವರನ್ನು ವ್ಯರ್ಥಗೊಳಿಸಲಿಚ್ಛಿಸುತ್ತದೆಯೆ"? ಎಂದಿವರು ಪ್ರಶ್ನಿಸಿದ್ದರು. "ಇಲ್ಲ" ಎಂದು ಕಾಂಗ್ರೆಸು ಉತ್ತರಿಸಿತು. 1939ರಲ್ಲಿ "ಏನು, ನೀವು ಸುಭಾಸ್ ಬಾಬುಗಳ ಆ ತೂತಿರುವ ದೋಣಿಯಲ್ಲಿ ಹೊಳೆ ದಾಟಲಿಚ್ಛಿಸುವಿರಾ?" ಎಂದು ಕಾಂಗ್ರೆಸನ್ನು ಪ್ರಶ್ನಿಸಿದ್ದರು. ಆಗಲೂ "ಇಲ್ಲ" ಎಂದೇ ಕಾಂಗ್ರೆಸ್ ಹೇಳಿತು. ಮಿಕ್ಕ ಸಂದರ್ಭಗಳಲ್ಲೆಲ್ಲಾ ಇವರು ಪರಾಭವ ಪಡೆದಿದ್ದಾರೆ. ಆದರೆ ಇವರಿಗೆ ವಿರುದ್ಧಮತ ಕೊಟ್ಟವರು ಕೂಡಾ ಇವರ ಕಲೆಯನ್ನು ಕೊಂಡಾಡದಿಲ್ಲ.

ಗಾಂಧೀ ಸುವಾರ್ತೆಗಾರ

ಗಾಂಧೀ ತತ್ವಗಳ ಮಟ್ಟಿಗೆ ಶ್ರೀ. ರಾಜಗೋಪಾಲಾಚಾರ್ಯರಿಗಿಂತ ದೊಡ್ಡ ಮತ್ತೊಬ್ಬ ಸುವಾರ್ತೆಗಾರನಿರಲಾರ—ಗಾಂಧಿಜೀ ತನ್ನ ಜೀವನವು "ಸತ್ಯದ ಪರೀಕ್ಷಾ ಪ್ರಯೋಗ"ವೆನ್ನುತ್ತಾರೆ. ರಾಜಗೋಪಾಲಾಚಾರ್ಯರ ಜೀವನವನ್ನು "ಗಾಂಧಿತ್ವದ ಅಮೂಲ್ಯತೆಯ ಪರೀಕ್ಷಾ ಪ್ರಯೋಗ" ಎನ್ನಲಡ್ಡಿಯಿಲ್ಲ. ಗಾಂಧಿಜೀಯ ಅಷ್ಟೂ ತತ್ವಗಳನ್ನು, ಇಷ್ಟೊಂದು ವಿಶಾಲ ಕ್ಷೇತ್ರದಲ್ಲಿ ಕಾರ್ಯರೂಪಕ್ಕೆ ತರಲು ರಾಜಾಜಿಯಂತೆ ಪ್ರಯತ್ನಿಸಿದ ಇನ್ನೊಬ್ಬ ಅನುಯಾಯಿ, ಅಥವಾ ಬಂಟ ಗಾಂಧಿಜೀಗಿಲ್ಲ. ರಾಜಾಜಿಯೋ ಓರ್ವ ರಾಜಕಾರಣಿ ಹಾಗೂ ಆಡಳಿತೇಗಾರನ ಗಟ್ಟಿದರಗು ಜೀವನಕ್ಕೆ ಜನಿಸಲ್ಪಟ್ಟಿದ್ದಾರಾದರೂ, ಅವರಲ್ಲೀಗಲೂ ಒಬ್ಬ ಸಾಧಕನ ಹೆಡಸಾಧನೆ ಮತ್ತು ಓರ್ವ ಕಲಾವಿದನ ಸೂಕ್ಷ್ಮಬುದ್ಧಿ ತುಂಬಿವೆ. ಅವರು ಸರಳ ಲೇಖಕ. ಹಳೇ ಕಥೆ ಹೇಳುವ ಮತ್ತು ಹೊಸತನ್ನು ಬರೆಯುವ ಅವರ ರೀತಿಗಳು ಮನೋಹರವಿವೆ. ಇತ್ತೀಚೆಗೆ ಗಾಯನಕ್ಕೆ ಕಿವಿ ಕೊಡುವ ಅಭ್ಯಾಸವಾಗಿದೆ. ಅವರ ಜ್ಞಾನವಾಳದದ್ಯೋತಕವೆಂಬಂತೆ ಸ್ವರಭಾರಗಳ ಹಲವು ಗೂಢಗಳನ್ನು ಅವರಷ್ಟರಲ್ಲೇ ಅರಿತಿದ್ದಾರೆ



ಟೀಕೆ—ವಿಮರ್ಶೆ

ರಾಜಾಜಿ ಗುಣ ನಡತೆ, ಶಕ್ತಿ, ವ್ಯಕ್ತಿಗತ ಪರಿಶುದ್ಧತೆ, ನೈತಿಕ ಪ್ರಭಾವ, ಮತ್ತು ಚಾತುರ್ಯ ಚಾಣಾಕ್ಷತೆಗಳು ಅವರ ಸರಿಸಮಾನರ ಆಶೆಗೂ ಎಲ್ಲರ ಶ್ಲಾಘನೆಗೂ ಪಾತ್ರವಾಗಿರುವಾಗ, ಓರ್ವ ನಾಯಕನಾಗಿ, ಓರ್ವ ಸಂಘಟನಾಕರ್ತನಾಗಿ, ಓರ್ವ ಆಡಳಿತೆಗಾರನಾಗಿ ಇವರು ಮಾಡಿದ್ದ ಪ್ರಮಾದಗಳನ್ನು ಅತಿ ಸುಲಭದಲ್ಲಿ ತೋರಿಸಿಕೊಡಲು ವಿಮರ್ಶಕರಿಗೆ ಸಾಧ್ಯವಾಗಿದೆ. ಇವರೊಬ್ಬ ನಾಯಕನೆನ್ನಲೇ–ಇವರ ನಾಯಕತ್ವವು ಪ್ರಶ್ನಿಸಲ್ಪಟ್ಟಿದೆ; ರಣಾಹ್ವಾನ ಪಡೆದಿದೆ ಮತ್ತು ಕಿತ್ತೆಸೆಯಲ್ಪಟ್ಟಿದೆ. ಸಂಘಟನಾ ಕರ್ತನೆನ್ನೋಣವೆ?–ಇವರಿಗೆ ಸ್ವಂತ ಪ್ರಾಂತ್ಯದಲ್ಲಾಗಲೀ ಬೇರೆಡೆಯಲ್ಲಾಗಲೀ ವರ್ಚಸ್ಸಿರುವುದು ಅತ್ಯಲ್ಪ. ಆಡಳಿತಗಾರನ ದೃಷ್ಟಿಯಲ್ಲೋ?–ರಾಷ್ಟ್ರೀಯ ಪುನರ್ರಚನೆಯ ಅತಿಮುಖ್ಯ ಕಾರ್ಯಗಳ ಬದಲಿಗೆ ಒಳಗಿನ ಸಣ್ಣಪುಟ್ಟ ವಿವರಗಳಲ್ಲಿ ಮತ್ತು ಸಾಮಾಜಿಕ ಸುಧಾರಣೆಗಳಲ್ಲೇ ಇವರು ಆಸಕ್ತಿ ಪ್ರದರ್ಶಿಸಿರುವುದು ಹೆಚ್ಚಿಗೆ. ಎಲ್ಲಾ ಕೆಲಸಗಳ ಸೂತ್ರಗಳನ್ನೂ ಸೂಡಿಕಟ್ಟಿ ತನ್ನ ಮುಷ್ಟಿಯೊಳಗಿಟ್ಟುಕೊಳ್ಳುವ ಇವರ ಮನೋಯುಅನುಯಾಯಿಗಳಲ್ಲಿಅತೃಪ್ತಿಯನ್ನೆಬ್ಬಿಸಿದೆ.ವಿರುದ್ಧಪಕ್ಷೀಯರ ಮೇಲೆ ಮತ್ತು

(೧೧ನೇ ಪುಟ ನೋಡಿರಿ.)

ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

ದೇಶೋನ್ನತಿಯನ್ನು ಬಯಸುವುದು ಪ್ರತಿಯೋರ್ವ ವ್ಯಕ್ತಿಯ ಕರ್ತವ್ಯವು ಜನತೆಯಲ್ಲಿ ಮಿತವ್ಯಯವನ್ನು ಬೋಧಿಸಿ ಉಳಿತಾಯವನ್ನು ಕಲ್ಪಿಸುವುದು. ವಣಿಜರಿಗೂ ಕೃಷಿಕರಿಗೂ ಕ್ಲಪ್ತಕಾಲಕ್ಕೆ ಧನಸಹಾಯವಿತ್ತು, ಅವರ ಏಳಿಗೆಯನ್ನು ಬಯಸುವುದು. ಅಲ್ಲದೆ ಅವರ ಕಷ್ಟಾರ್ಜಿತ ಧನವನ್ನು ಅಖಂಡ ಭದ್ರತೆಯಿಂದ ಕಾಯ್ದು ಸಕಾಲಕ್ಕೆ ಅವರಿಗೆ ಒಪ್ಪಿಸಿಕೊಡುವುದು, ಮೊದಲಾದುವುಗಳು ದೇಶೋನ್ನತಿಯನ್ನು ಇಚ್ಛಿಸುವ ಬೇಂಕುಗಳ ಹಲವಾರು ಧ್ಯೇಯಗಳಲ್ಲಿ ಮೊತ್ತಮೊದಲಿನವುಗಳು.

ಹಿಂದೂದೇಶದ ಪ್ರಮುಖ ಪ್ರಾಂತ್ಯಗಳಲ್ಲಿ ೫೦,೦೦೦ಕ್ಕೂ ಮಿಕ್ಕಿ ಜನತೆಯ ಸೇವೆಯನ್ನು ಯುದ್ಧಕಾಲದಲ್ಲಿಯೂ ಇತರ ಸಮಯದಲ್ಲಿಯೂ ನಿರಾತಂಕವಾಗಿ ಮಾಡುವಂತೆ ಸಹಕರಿಸಿದ ಜನರಿಗೆ ಕೆನರಾ ಬ್ಯಾಂಕು ಸದಾಕಾಲವೂ ಚಿರಋಣಿಯಾಗಿರುವುದು. ಅಲ್ಲದೆ ಈ ಬ್ಯಾಂಕು ನಾಲ್ವತ್ತೊಂದು ವರ್ಷದ ಅನುಭವದಿಂದ ಗಳಿಸಿದ ಅಮಿತ ಹಣದಿಂದ ಇನ್ನೂ ಸಾವಿರಾರು ಜನರಿಗೆ ತನ್ನ ಕೈಲಾದ ಸಹಾಯವನ್ನೀಯಲು ಬದ್ಧಕಂಕಣವಾಗಿರುವುದು.

ನಿಮ್ಮ ಖಾತೆಯು ಇಂದು ನಮ್ಮಲ್ಲಿರುವುದೇನು? ಇಲ್ಲದೆ ಇದ್ದಲ್ಲಿ ಇಂದೇ ಅದನ್ನು ನಮ್ಮ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

ESTD: 1906.

CANARA BANK LIMITED.

ಖಂಡಿತವಾದ ನಿಂತಿತು

'ಕುಮಾರಾ' ಬಿಲ್ಲೆಗಳನು ಉಪಯೋಗಿಸಿದರೆ ಹಡಿತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8/- [ಪಿ. ಟಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, F. DS (N. J.)
Tollygung e CALCUTTA.

ಸ್ವಾಸ್ತ್ಯಸ್ಥಾನ: ಪಡಕಾಂಪನಿ, ಮಂಗಳೂರು

★ ಮದ್ರಾಸ್ ಸರಕಾರದ ನಿಯಂತ್ರಣ ರದ್ದತೀ ವ್ಯವಸ್ಥೆ ★

ಇದೇ ತಾ. 28ರಿಂದಲೇ ಹಳ್ಳೀ ಹಸುಗೆ ರದ್ದಾಗುವದು

ಜನತೆಯ ನಿತ್ಯಜೀವನದ ಪ್ರಥಮ ಪ್ರಶ್ನೆಯಾಗಿರುವ ಆಹಾರದ ನಿಯಂತ್ರಣಗಳ ರದ್ದತಿಯ ಕುರಿತು ಮದ್ರಾಸ್ ಸರಕಾರವು ಈಗ ಅಂಗೀಕರಿಸಿರುವ ಕಾರ್ಯಕ್ರಮಗಳು ಹೀಗಿವೆ:—

ಮಲಬಾರ್ ಮತ್ತು ನೀಲಗಿರಿ ಜಿಲ್ಲೆಗಳನ್ನು ಬಿಟ್ಟು ಆಹಾರ ಧಾನ್ಯೋತ್ಪತ್ತಿ ಕಡಿಮೆಯಿರುವ ಇಡೀ ಪ್ರಾಂತ್ಯದ ಎಲ್ಲಾ ಜಿಲ್ಲೆಗಳ ಹಳ್ಳೀ ವಲಯಗಳ ಹಸುಗೇ (ರೇಶನಿಂಗ್) ಪದ್ಧತಿಯು ಇದೇ ದಶಂಬರ್ ತಾ. 28ರಿಂದ ರದ್ದಾಗುವುದು. ಆದರೆ ಮುನ್ಸಿಪಲ್ ಕ್ಷೇತ್ರಗಳ ಕಾನೂನುಬದ್ಧ ಹಸುಗೆಗಳು ಮಾತ್ರ ಉಳಿಯುವುವು. ಇದರ ಅರ್ಥವೆಂದರೆ ನಗರ ಸಭೆಗಳಲ್ಲಿರುವ ಕಾರ್ಡಿನಿಂದ ಅಕ್ಕಿ ಪಡೆಯುವ ಕ್ರಮ ಮಾತ್ರ ಉಳಿದು ಹಳ್ಳೀ ವಲಯಗಳಲ್ಲಿ ಆ ಪದ್ಧತಿಯು ಸಂಪೂರ್ಣ ಹೋಗುವುದು. ಹೀಗೆ ಹಳ್ಳೀ ಹಸುಗೆ ರದ್ದಾಗತಕ್ಕ ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡವೂ ಒಂದು.

ಪ್ರಾಂತ್ಯದ ಎಂಟು ಜಿಲ್ಲೆಗಳನ್ನು ಆಹಾರ ಧಾನ್ಯಗಳ ಉಳಿತಾಯವಿರುವ ಜಿಲ್ಲೆಗಳೆಂದು ಗಣಿಸಲಾಗಿದೆ ಈ ಎಂಟು ಜಿಲ್ಲೆಗಳ ಪೈಕಿ ಪ್ರಾಂತ್ಯದ ಉತ್ತರ ಗಡಿಯಲ್ಲಿರುವ ಜಿಲ್ಲೆಗಳಲ್ಲಿ ಬರುವ ಜನವರಿ 1ನೇ ತಾರೀಕಿನಿಂದ ಆಹಾರ ಧಾನ್ಯಗಳ ನಿಯಂತ್ರಣವನ್ನು ರದ್ದುಪಡಿಸಲಾಗುವುದು; ದಕ್ಷಿಣ ಕಡೆಯಲ್ಲಿರುವ ಜಿಲ್ಲೆಗಳಲ್ಲಿ ಫೆಬ್ರವರಿ ತಾ. 1ರಿಂದ ನಿಯಂತ್ರಣಗಳು ರದ್ದಾಗುವವು. ಈ ತಾರೀಕುಗಳೊಳಗೆ ಈ ಉಳಿತಾಯವಿರುವ ಜಿಲ್ಲೆಗಳಿಂದ, ಕಡಿಮೆಯಿರುವ ಜಿಲ್ಲೆಗಳಿಗಾಗಿ 6ರಿಂದ 7 ಲಕ್ಷ ಟನ್‌ವರೆಗೆ ಧಾನ್ಯಗಳನ್ನು ಸರಕಾರವು ಸಂಗ್ರಹಿಸಿಕೊಳ್ಳುವುದು ಆ ಮೇಲೆ ಈ ಜಿಲ್ಲೆಗಳಲ್ಲಿ ಯಾವ ವಿಧದ ಧಾನ್ಯ ನಿಯಂತ್ರಣಗಳನ್ನೂ ಇಡದೆ, ಹಸುಗೆಯಾರಂಭದ ಮೊದಲು ಹೇಗಿತ್ತೋ ಹಾಗೆಯೇ ಸ್ವತಂತ್ರ ರೀತಿಯ ಧಾನ್ಯ ಚಲಾವಣೆಗವಕಾಶಮಾಡಿ ಕೊಡುವುದು. ಆ ಮೇಲೂ ಈ ಜಿಲ್ಲೆಗಳಲ್ಲಿ ಉಳಿಯುವ ನಿರ್ಬಂಧವೆಂದರೆ ಜಿಲ್ಲೆಯ ಹೊರಗೆ ಧಾನ್ಯ ಕಳುಹಿಸಬೇಕಾದರೆ ಸರಕಾರದ ಅನುಮತಿ ಪಡೆಕೊಳ್ಳಬೇಕೆಂಬುದೊಂದೇ.

ಕೆಲವು ಸ್ಪಷ್ಟೀಕರಣಗಳು

ಮೇಲಿನಂತೆ ಮದ್ರಾಸ್ ಪ್ರಾಂತ್ಯದ 8 ಜಿಲ್ಲೆಗಳನ್ನು ಧಾನ್ಯದ ಉಳಿತಾಯವಿರುವ ಜಿಲ್ಲೆಗಳೆಂದೂ, ಉಳಿದ 16 ಜಿಲ್ಲೆಗಳನ್ನು ಅಭಾವವಿರುವ ಜಿಲ್ಲೆಗಳೆಂದೂ ಗಣಿಸಲಾಗಿದೆಯಷ್ಟೆ? ಈ ಪೈಕಿ ಅಭಾವವಿರುವ ಜಿಲ್ಲೆಗಳ ಗ್ರಾಮಗಳಿಂದ ಇದೇ ತಾ. 28ರ ನಂತರ ಅಕ್ಕೀ ಸಂಗ್ರಹಿಸುವಂತೆಯೂ ಇಲ್ಲ ಗ್ರಾಮಗಳಿಗೆ ಅಕ್ಕೀ ಕಾರ್ಡ್ ಕೊಡುವಂತೆಯೂ ಇಲ್ಲ. ಆದರೆ ಉಳಿತಾಯವಿರುವ ಜಿಲ್ಲೆಗಳ ಗ್ರಾಮಗಳಿಂದ ಜನವರಿ 1, ಮತ್ತು ಫೆಬ್ರವರಿ 1ರ ವರೆಗೆ ಧಾನ್ಯ ಸಂಗ್ರಹಿಸಿಕೊಳ್ಳುವ ಕೆಲಸ ನಡೆಯು, ಆ ಮೇಲೆ ಆ ಭಾಗಗಳಲ್ಲೂ ಸಂಗ್ರಹಣ ಕಾರ್ಯವನ್ನು ನಿಲ್ಲಿಸಲಾಗುವುದು.

ಈ ರೀತಿ ಇದೇ ತಾ 28ರಿಂದಾರಂಭಿಸಿ, ಬರುವ ಫೆಬ್ರವರಿ 1ರ ಒಳಗೆ ಇಡೀ ಪ್ರಾಂತ್ಯದ ಧಾನ್ಯ ಸಂಗ್ರಹ ಯಂತ್ರವು ಸಂಪೂರ್ಣ ನಿಷ್ಕ್ರಿಯವಾಗುತ್ತದಾದರೂ, ಅಭಾವವಿರುವ ಜಿಲ್ಲೆಗಳ ಮುನ್ಸಿಪಲ್ ಕ್ಷೇತ್ರಗಳ ರೇಶನಿಂಗ್ ಕ್ರಮವು ಇಂದಿನಂತೆಯೇ ಜಾರಿಯಲ್ಲಿರುವುದು. ಈ ರೇಶನಿಂಗ್ ಕ್ಷೇತ್ರಗಳಿಗೆ ಬೇಕಾಗುವ ಅಕ್ಕಿಯ ಅಂಶವನ್ನು ಉಳಿತಾಯದ ಜಿಲ್ಲೆಗಳಲ್ಲಿ ನೇಮಿತ ಅವಧಿಯೊಳಗೆ ಸಂಗ್ರಹಿಸಿದ್ದ ಧಾನ್ಯಗಳಿಂದ ಸರಬರಾಯಿ ಮಾಡಲಾಗುವುದು. ಹಳ್ಳಿಗಳು ತಮ್ಮ ಜವಾಬ್ದಾರಿಯನ್ನು ತಾವೇ ನಿರ್ವಹಿಸಿಕೊಳ್ಳಬೇಕು.

ಮದ್ರಾಸ್ ಸರಕಾರದ ನಿಯಂತ್ರಣ ರದ್ದತಿಯ ಈ ಹೆಜ್ಜೆಗಳಿಗೆ ಕಾರಣವೆಂದರೆ ಹಿಂದೀ ಸರಕಾರದ ಧೋರಣೆಯೇ. ಮದ್ರಾಸ್ ಸರಕಾರವು ನಿಯಂತ್ರಣ ರದ್ದತಿಗೆ ವಿರೋಧವಿದ್ದು, ಮದ್ರಾಸಿನ ಆಹಾರ ಮಂತ್ರಿ ಡಾ| ರಾಜನರು ಹಿಂದೀ ಸರಕಾರದ ಆಹಾರ ಧೋರಣಾ ಸಮಿತಿಯಲ್ಲಿ ನಿಯಂತ್ರಣವಿರಬೇಕೆಂದೇ ವಾದಿಸಿದ್ದರು ಆದರೆ ಕೇಂದ್ರ ಸರಕಾರವು ನಿಯಂತ್ರಣ ರದ್ದತಿಯ ಧೋರಣೆ ವಹಿಸಿ ಮಾರ್ಗದರ್ಶನ ಮಾಡಿಕೊಟ್ಟುದರಿಂದ, ಮತ್ತಿದು ಅಖಿಲ ಭಾರತ ರೂಪೀ ಪ್ರಶ್ನೆಯಾದ್ದರಿಂದ ಮದ್ರಾಸ್ ಸರಕಾರವು ಇದನ್ನಂಗೀಕರಿಸಬೇಕಾಯಿತು.

ಭಾರತ ಸರಕಾರದ ಧೋರಣೆಗೆ ಹಲವು ಕಾರಣಗಳಿವೆ. ಗಾಂಧೀಜಿಯ ಕರೆ ಇದೊಂದು; ನಿಯಂತ್ರಣಗಳ ದೆಸೆಯಿಂದ ದೇಶದಲ್ಲೆಲ್ಲಾ ಕಳ್ಳಸಂತೆ, ಲಂಚಸಂಚುಗಳು ನಡೆಯುತ್ತಿರುವುದಿನ್ನೊಂದು; ಯುದ್ಧಾವಧಿಯ ಕ್ರಮವಾಗಿದ್ದ ನಿಯಂತ್ರಣಗಳು ಎಂದಾದರೂ ಹೋಗಲೇ ಬೇಕಾದ್ದರಿಂದ ಬೇಗನೇ ಹೋಗುವುದು ವಾಸಿಯೆಂಬ ಭಾವನೆ ಮತ್ತೊಂದು. ಇವುಗಳ ಜತೆಗೆ ಸರಕಾರಕ್ಕೀ ನಿಯಂತ್ರಣಗಳ ದೆಸೆಯಿಂದಾಗುತ್ತಿರುವ ದೊಡ್ಡ ನಷ್ಟದ ಮತ್ತೊಂದು ಮುಖ್ಯ ಕಾರಣವಿದೆ. ಕಳೆದ ಮೂರು, ಮೂರೂವರೆ ವರುಷಗಳಲ್ಲಿ ಪರದೇಶಗಳಿಂದ ಆಹಾರ ಧಾನ್ಯಗಳನ್ನು ಆಮದು ಪಡಿಸಿಕೊಳ್ಳಲು ಭಾರತ ಸರಕಾರವು ಸುಮಾರು 500 ಕೋಟಿ ರೂ. ಗಳನ್ನು ವ್ಯಯಿಸಿತು. ಮದ್ರಾಸ್ ಪ್ರಾಂತಿಕ ಸರಕಾರಕ್ಕೇನೇ ರೂ. 10 ಕೋಟಿಯಿಂದ 15 ಕೋಟಿಗಳವರೆಗೆ ಖರ್ಚಾದದಿದೆ. ಹೀಗಾಗಿ ರಾಷ್ಟ್ರಾವಶ್ಯಕ ಯಂತ್ರೀಕರಣ ಇತ್ಯಾದಿ ಅವಶ್ಯಕ ಸಾಮಗ್ರಿಗಳನ್ನು ಪರದೇಶಗಳಿಂದ ತರಿಸಿಕೊಳ್ಳಲು ಇಲ್ಲಿಯ ಸರಕಾರದಹಸ್ತ ದುಡ್ಡು ಉಳಿಯದಂತಾಗಿತ್ತು.

ಬರ್ಮಾ, ಮತ್ತಿತರ ಪರದೇಶಗಳಿಂದ ಅಕ್ಕಿ ಆಮದು ಪಡಿಸಿಕೊಳ್ಳುವ ಅಧಿಕಾರವು ಇನ್ನಾದರೂ ಭಾರತ ಸರಕಾರದ ಕೈಯಲ್ಲೇ ಉಳಿಯುವುದು. ಪ್ರಾಂತ. ಸರಕಾರಗಳಿಗಿಲ್ಲ.

ಕೆಲವು ಪ್ರಶ್ನೆಗಳು

ಈಗ ಕೆಲವು ಆತುರದ ಪ್ರಶ್ನೆಗಳೇಳುತ್ತವೆ:—

ಇದೇ ದಶಂಬರ್ ತಾ. 28ರಿಂದ ಹಳ್ಳಿಗಳ ಹಸುಗೇ ಕ್ರಮವೇ ರದ್ದಾಗುವುದಷ್ಟೆ? ಅಂದ ಮೇಲೆ ಮುಂದಿನ ಬೆಳೆ ಬರುವ ವರೆಗೆ ಹಳ್ಳಿಗರು ಊಟಕ್ಕೆ ಸಾಕಾಗುವಷ್ಟು ಅಕ್ಕಿಯನ್ನು ಸರಕಾರವು ಆ ಹಳ್ಳಿಗಳಲ್ಲಿ ಬಿಟ್ಟಿದೆಯೆ? ಅದರ ಆಧಾರ ಲಂಕೆ ಸಂಖ್ಯೆಯೆಷ್ಟು? ಆ ರೀತಿ ಪ್ರತಿಯೊಂದು ಗ್ರಾಮದ ಸರಿಯಾದ ಲೆಕ್ಕ ಕಂಡು ಹಿಡಿಯುವ ವ್ಯವಸ್ಥೆಯನ್ನು ಸರಕಾರವು ಮಾಡುವುದೆ?

ದಕ್ಷಿಣ ಕನ್ನಡ ಜಿಲ್ಲೆಯ ಬೆಸಾಯಗಾರರ ಮೊದಲ ಮುಖ್ಯ ಬೆಳೆಯ ಉತ್ಪತ್ತಿಗಳನ್ನು ಸರಕಾರವು ಇಷ್ಟರಲ್ಲೇ ರಿಕ್ವಿಶನ್ ಮಾಡಿ ಸಂಗ್ರಹಿಸಿ ಕೊಂಡಾಗಿದೆ. ಹೆಚ್ಚಿನ ಕಡೆಗಳಲ್ಲಿ ಉತ್ಪತ್ತಿಯಾದುದಕ್ಕಿಂತಲೂ ಹೆಚ್ಚಿಗೆ ರಿಕ್ವಿಶಿಶನ್ ನೋಟೀಸುಗಳಲ್ಲಿ ಕಾಣಿಸಲಾಗಿದೆ ಎಂಬ ದೂರಿದೆ. "ಕೊನೆಗೆ ಕಡಿಮೆಯಾಗುವಾಗ ಖರ್ಚು ಮಾಡಿಸಿ ಕೊಳ್ಳಿ" ಎನ್ನುತ್ತಾ ಒತ್ತಾಯಪೂರ್ವಕವಾಗಿ ದ. ಕ. ರೈತರ ಮೊದಲ ಬೆಳೆಯ ಹೆಚ್ಚಿನಂಶವನ್ನು ಇಷ್ಟರೊಳಗೇನೇ ಸ್ಟೋರುಗಳಿಗೆ ಹಾಕಿಸಿ ಆಗಿದೆ. ಈ ವರುಷದ ಸುಗ್ಗಿ ಬೆಳೆ ಪೂರ್ತಿ ಹಾಳಾಗಿರುವುದು ಸರಕಾರಕ್ಕೆ ಗೊತ್ತಿದೆ. ಅಂದ ಮೇಲೆ ಅವರಿಗಿನ್ನು ಗತಿ ಏನು?

ಜಿಲ್ಲೆಯೊಳಗೆ ಅಕ್ಕಿಯಿರುವ ಮತ್ತು ಇಲ್ಲದ ಗ್ರಾಮಗಳು ತಮ್ಮೊಳಗೆ ಪರಸ್ಪರ ಕೊಡಕೊಂಡ ನಡೆಸುವಂತೆಯೂ, ಅಕ್ಕಿ ದಾಸ್ತಾನುಗಳ ಸಮ ವಿತರಣೆಯಾಗುವಂತೆಯೂ ಸರಕಾರವು ಯಾವ ವ್ಯವಸ್ಥೆ ಮಾಡುವುದು? ಧಾನ್ಯಗಳ ನಿಯಂತ್ರಣಗಳು ಮೇಲಿನಂತೆ ಜಾರುವಾಗ ಅವುಗಳ ಧಾರಣೆಯೂ ಮನ ಬಂದಂತೆ ಎಂಬರ್ಥವಲ್ಲವಷ್ಟೆ? ನ್ಯಾಯವಾದ ಬೆಲೆಯೇ ಜ್ಯಾರಿಯಲ್ಲಿರುವಂತೆ ಸರಕಾರವು ಕೈಕೊಳ್ಳತಕ್ಕ ವಿಧಾನಗಳಾವುವು?

ಮಳೆಯ ಅಭಾವದಿಂದಾಗಿ ದ. ಕ. ಜಿಲ್ಲೆಯ ಸುಗ್ಗೀ ಬೆಳೆಯಂತೆಯೇ ಪ್ರಾಂತ್ಯದ 24 ಜಿಲ್ಲೆಗಳ ಪೈಕಿ 15 ಜಿಲ್ಲೆಗಳ ಬೆಳೆ ಹಾಳಾಗಿರುವುದು ಸರಕಾರದ ಹೃದಯವನ್ನು ಕೊರೆದಿದೆ. ಕೆರೆ ಬಾವಿಗಳ ನೀರಿನಿಂದ ಸಾಗುವಳಿಯಾಗುತ್ತಿದ್ದ 35 ಲಕ್ಷ ಎಕ್ರೆಗಳ ಪೈಕಿ 20 ಲಕ್ಷ ಎಕ್ರೆ ಈ ವರುಷ ನೀರಿನ ಅಭಾವದಿಂದ ಹಡಿಲು ಬಿದ್ದಿವೆ. ಹೀಗೆ ಹಳ್ಳಿಗಳಲ್ಲಿ ಉತ್ಪತ್ತಿಗೆ ಮಹತ್ತಾದ ಗಂಡಾಂತರವೊದಗಿರುವ ಕಾಲದಲ್ಲೇ ಹಳ್ಳಿಗಳ ಆಹಾರ ವ್ಯವಸ್ಥೆಯ ಹೊಣೆಯನ್ನು ಸರಕಾರವು ಜಾರಿಸಿಕೊಂಡಿರುವುದರಿಂದಾಗಲಿರುವ ದುಷ್ಪರಿಣಾಮಗಳಿಗೆ ಶಮನವೇನು?

ಇವೆಲ್ಲ ವಿಷಯಗಳ ಕುರಿತು ಸರಕಾರದ ಸ್ಪಷ್ಟಧೋರಣೆಯೇನೆಂಬ ವಿವರಗಳಿಗಾಗಿ ಜನತೆಯಲ್ಲಿ ಆತುರದ ನಿರೀಕ್ಷೆಯಿದ್ದಿದೆ.

The best preventive in epidemics of CHOLERA
"BHUVANENDRA" CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.
'ಭುವನೇಂದ್ರ' ಚಂದ್ರಮಸ್
ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಉಪಯೋಗಿಸತಕ್ಕ ಅತ್ಯುತ್ತಮ ಔಷಧಿ
ದೊಡ್ಡವರಿಗೆ 4ರಿಂದ 6 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಜೀರಿಗೆ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.
ಉಡುಪಿ ಸ್ಟಾಕಿಸ್ಟರು: ... ಕಲ್ಯಾಣ್ ಮತ್ತು ... ಫಾರ್ಮೆಸಿ
ಆರ್. ಎಸ್. ಕಿಣಿ, ..., ... ಫಾರ್ಮೆಸಿ; ಡಾ| ಕೆ. ... L.I.M.; ... ; ನವಭಾರತ ಬುಕ್ ಡಿಪೋ.

NOTICE

In the Court of the Subordinate Judge of South Kanara.

O. S. No. 142/47 (Original Suit)

Between

Kamala and others— Plaintiffs

V S

Somakke and another— Defendents.

To-

Defendents. 1. Somakke, daughter of Korapalu Hengsu, residing at Kallaje House of Kedila Village of Puttur Taluk:

2. Narayana Bhandary son of Venkappa Bhandary, residing at Alaithimaru House of Barimar Village of Mangalore Taluq

Please take notice that the Plaintiffs above named instituted the above suit against you for recovery of maintenance etc., and the same is posted to 21-1-1948 for your appearance. If you fail to appear on that date either in person or through a Lawyer the said suit will be decided in your absence.

By order of the Court.

(Sd.) S Venkat Rao.

Vakil for Plaintiffs.

Mangalore, 18-12-1947.

'ಲೀಗಿನ ರೂಪ ಬದಲಾಯಿಸಲಾರೆ'— ಜಿನ್ನ.

ಕಳೆದ ವಾರ ಹಿಂದೀ ರಾಜಕೀಯದಲ್ಲಿ ಪ್ರಾಪಂಚಿಕ ಲಕ್ಷ್ಯವನ್ನೆಳೆಯುವಲ್ಲಿ ದೊಡ್ಡ ಮಂಥನಗಳಾಗಲೀ, ಮಹಾ ಘಟನೆಗಳಾಗಲೀ ಸಂಭವಿಸಿಲ್ಲ. ಬಿರುಗಾಳಿಯು ನಿಲ್ಲುತ್ತಾ, ಅಲೆಗಳು ತಗ್ಗುತ್ತಾ, ಕೆರಳಿದ ಸಮುದ್ರ ಶಾಂತತೆಗಿಳಿದು ಯಥಾಸ್ಥಿತಿಗೆ ಬರುತ್ತಿರುವ ಲಕ್ಷಣಗಳು ಕಾಣಿಸುತ್ತಿವೆ.

ನವದಿಲ್ಲಿಯಲ್ಲಿ ಸೇರಿದ ಔದ್ಯೋಗಿಕ ಸಮ್ಮೇಲನದಲ್ಲಾದ ನಿರ್ಧಾರಗಳು ರಾಷ್ಟ್ರ ನಿರ್ಮಾಣ ದೃಷ್ಟಿಯಿಂದ ಪ್ರಾಮುಖ್ಯವಿದ್ದವೆ. ಅಂತೆಯೇ ಸ್ವತಂತ್ರ ಭಾರತದ ಉಚ್ಚ ಧ್ಯೇಯ, ಸಾಧನೆಗಳ ಕಡೆಗೆ ರಾಷ್ಟ್ರದ ಲಕ್ಷ್ಯವನ್ನೆಳೆಯುವ ಸೂಚನೆಗಳು ಪಂಡಿತ ನೆಹರುಗಳಿಂದ—ಸದ್ಯದ ಕೆಲವು ಪ್ರಾಮುಖ್ಯ ಪ್ರಶ್ನೆಗಳ ಕುರಿತು ಸ್ಪಷ್ಟ ವಾಗ್ದಾನಗಳು ಸರ್ದಾರ್ ಪಟೇಲರಿಂದ—ಪಾಕಿಸ್ತಾನಕ್ಕೆ ಬ್ರಿಟಿಷ್ ಸರಕಾರದ ಮೇಲೆ ಜೇಸರ ಬಂದಿರುವದೆಂಬ ಗುಟ್ಟು ಕಾಯಿದೇ ಅಝಾಮ್ ಜಿನ್ನರಿಂದ, ಹೊರಬಿದ್ದಿವೆ.

ಭಾರತದ ಕ್ಷೇತ್ರವಾದ ಪಶ್ಚಿಮ ಬಂಗಾಳಕ್ಕೆ ಸೇರಿದ ಚಾರ್ ಸುರಂದಾಪುರ್ ಪುರವನ್ನು ಪಾಕಿಸ್ತಾನದ ಪೂರ್ವ ಬಂಗಾಳ ಸೇನೆಯಾಕ್ರಮಿಸಿಕೊಂಡು ನಿಂತಿರುವುದು- ಅಜಮೀರಿನ ಗಲಭೆ- ಇತ್ಯಾದಿ ಘರ್ಷಣೆಗಳೇನೋ ನಡೆದಿವೆ.

ಜಾಗತಿಕ ರಂಗದಲ್ಲಿ ಲೋಕದ ಭವಿಷ್ಯದ ಮೇಲೆಯೇ ಗಟ್ಟಿ ಮುದ್ರೆಯೊತ್ತಬಲ್ಲ ಕೆಲವು ಪಡಿವಾಟುಗಳು ನಡೆದಿರುವುದು ಕಂಡುಬರುತ್ತದೆ. ರಶ್ಯದ ವಿರುದ್ಧ ಕ್ಷೇತ್ರ ನಿರ್ಮಾಣಕ್ಕೆ ಅಮೇರಿಕವು ಮುಂದಾಗಿರುವುದು--ಇಂಗ್ಲಾಂಡು ಅಮೇರಿಕಗಳ ವಿದೇಶ ಮಂತ್ರಿಗಳು ರಶ್ಯವನ್ನು ಬಹಿರಂಗವಾಗಿ ಟೀಕಿಸಿರುವುದು—ಗಾಳಿ ಬೀಸುವ ದಿಕ್ಕನ್ನು ತೋರಿಸಿವೆ. ಕಳೆದ ಯುದ್ಧದಿಂದ ನಜ್ಜುಗುಜ್ಜಾಗಿರುವ ಯುರೋಪು ರಾಷ್ಟ್ರಗಳಲ್ಲಿ ಪುನರ್ಜೀವನ ಬರಿಸಲು 17,000,000,000 ಡೋಲರುಗಳ ಸಹಾಯ ಕೊಡುವ ಸೂಚನೆಯನ್ನು ಅಮೇರಿಕಾಧ್ಯಕ್ಷ ಟ್ರುಮೇನರು ಅಮೇರಿಕದ ಕಾಂಗ್ರೆಸಿನ ಮುಂದೆ ತಂದಿದ್ದಾರೆ. ಇದು 4¼ ವರುಷಗಳ ಅವಧಿಯಲ್ಲಿ ರಾಷ್ಟ್ರಗಳ ಪುನರ್ರಚನೆಗಾಗಿ ಸಹಾಯವಾಗಿ ಕೊಡಲ್ಪಡುವುದು. ಪ್ರಥಮ 5 ತಿಂಗಳ ಕಂತು 1947ನೇ ಎಪ್ರಿಲ್ 1ರಿಂದ ಆರಂಭವಾಗಲಿದ್ದು ಈ ಕಂತಿನಲ್ಲೇ 6,880,000,000 ಡೋಲರುಗಳು ಸಂದಾಯಿಸಲ್ಪಡುವವು. ಇಂತಹ ಸಹಾಯದಿಂದ ಪುನರುಜ್ಜೀವನಗೊಳಿಸದಿದ್ದಲ್ಲಿ ಇಂದಿನ ಯುರೋಪು ಲೋಕ ಶಾಂತಿಗೆ ಭಯಂಕರ ಆಘಾತವಾಗುವದೆಂದೂ, ತತ್ಪರಿಣಾಮವಾಗಿ ಲೋಕವೇ ಸರ್ವಾಧಿಕಾರಕ್ಕೆ ಬಲಿಬೀಳಬಹುದೆಂದೂ ಅಧ್ಯಕ್ಷ ಟ್ರುಮೇನರು ಎಚ್ಚರಿಸಿದ್ದಾರೆ. ಇದೀ ಅವಧಿಯು ಈ ಮೊತ್ತವು ಅಮೇರಿಕದ ಈ ಅವಧಿಯ ಉತ್ಪನ್ನದ ಶೇಕಡಾ 3ಕ್ಕಿಂತಲೂ ಕಡಿಮೆಯಂತೆ; ಅಂತೆಯೇ ಕಳೆದ ಯುದ್ಧಾವಧಿಯಲ್ಲಿ ಅಮೇರಿಕವು ವ್ಯಯಿಸಿದ್ದ ಮೊತ್ತದ ಶೇಕಡಾ 5ರಷ್ಟೇ ಆಗುವದಂತೆ. ಈ ಬಾರಿ ಲಂಡನಿನಲ್ಲಿ ನಡೆದಿದ್ದ ಚತುರ್ರಾಷ್ಟ್ರೀಯ ವಿದೇಶ ಮಂತ್ರಿಗಳ ಸಭೆಯು ಒಮ್ಮೆಗೇ ನಿರರ್ಥಕಗೊಂಡು ಚದರಲು ರಶ್ಯದ ಅವ್ಯವಹಾರ್ಯ ಒತ್ತಾಯವೇ ಕಾರಣವೆಂದೂ, ಅಮೇರಿಕದ ಸಹಾಯ ಯೋಜನೆಯಲ್ಲಿ ನೆರೆಯ ರಾಷ್ಟ್ರಗಳು ಭಾಗವಹಿಸದಂತೆ ಅವುಗಳ ಮೇಲೂ ರಶ್ಯವು ಒತ್ತಡ ಹಾಕಿದೆಯೆಂದೂ ಬ್ರಿಟನಿನ ವಿದೇಶ ಮಂತ್ರಿ ಮಿ. ಬೆವಿನರು ಕಠೋರ ಟೀಕೆ ಮಾಡಿದ್ದಾರೆ. ಅಮೇರಿಕದ ಸ್ಟೇಟ್ ಸೆಕ್ರೆಟರಿ ಮಿ. ಮಾರ್ಶಲರೂ ರಶ್ಯದ ಧೋರಣೆಯನ್ನು ಕಠಿಣವಾಗಿ ಟೀಕಿಸಿ ಅದರಲ್ಲಿ "ಪ್ರತಿಬಂಧಕ, ಆಶಾಭಂಗ, ಆಕ್ಷೇಪಕರ ವಾದಗಳೇ ತುಂಬಿದ್ದುವು" ಎಂದಿದ್ದಾರೆ. ಜರ್ಮನಿಯಲ್ಲಿ ಮುಂದಾಗಿ ಕೇಂದ್ರ ಸರಕಾರವೊಂದನ್ನು ರಚಿಸಿಕೊಳ್ಳಬೇಕೆಂದೇ ರಶ್ಯವು ಲಂಡನ್ ಸಮ್ಮೇಲನದಲ್ಲಿ ಹಟಹಿಡಿದಿದ್ದಿತು. ಪ್ರಾತಿನಿಧ್ಯವಿಲ್ಲದೆ ಕೇಂದ್ರ ಸರಕಾರ ಮಾಡಿದರೆ ಸರ್ವಾಧಿಕಾರವನ್ನು ಪುನಃ ಸ್ಥಾಪಿಸಿದಂತಾಗುವದೆಂದು ಇಂಗ್ಲಾಂಡು ಅಮೇರಿಕಗಳು ಆಕ್ಷೇಪಿಸಿದ್ದುವು. ಲಂಡನ್ ಸಮ್ಮೇಲನ ಪರಾಭವಗೊಂಡಿತು. ಅಂತೆಯೇ ಯುರೋಪಿನ ಪುನರ್ರಚನೆಗೆ ಸಹಾಯ ಕೊಡುವ ಅಮೇರಿಕದ 'ಮಾರ್ಶಲ್ ಯೋಜನೆ'ಯು, ರಶ್ಯಕ್ಕಿದಿರಾಗಿ ಯುರೋಪನ್ನು ಹಿಡಿದುಕೊಳ್ಳುವ ಬಲೆಯೆಂಬರ್ಥದಲ್ಲಿ ರಶ್ಯವು ವಿರೋಧಿಸಿದ್ದಿತು. ಇಂಗ್ಲಾಂಡು, ಅಮೇರಿಕಗಳಂತೆಯೇ ಫ್ರಾನ್ಸಿನ ವಿದೇಶ ಮಂತ್ರಿ ಎಮ್. ಬಿದಾಲ್ಟರೂ, ಲಂಡನ್ ಸಮ್ಮೇಲನವನ್ನು ಕೆಡಿಸಿದುದು ರಶ್ಯವೇ ಎಂದಾರೋಪಿಸಿದ್ದಾರೆ.

ಇತ್ತ ಇಂಡೋನೇಶಿಯಾದಲ್ಲಿ ಡಚ್ಚ್ ಮತ್ತು ಇಂಡೋನೇಶಿಯದ ರಿಪಬ್ಲಿಕನರೊಳಗೆ ಕಾಳಗ ನಡೆದಿದೆ. ಇದರ ತೀರ್ಮಾನಕ್ಕಾಗಿ ನೇಮಕಗೊಂಡಿರುವ ಜಾಗತಿಕ ಸಂಘದ ಸಮಿತಿಯನ್ನು ಕಡೆಗಣಿಸಿ, ಪಶ್ಚಿಮ ಜಾವಾದಲ್ಲಿ ತಮ್ಮ ಕೈಗೊಂಬೆ ಸರಕಾರವನ್ನು ಸ್ಥಾಪಿಸಲು ಡಚ್ಚರು ಮುಂದಾಗಿದ್ದಾರೆ; ಅಲ್ಲಿಯ ರಿಪಬ್ಲಿಕನರು ಅದನ್ನು ವಿರೋಧಿಸಿದ್ದಾರೆ. ಚೈನಾದಲ್ಲಿ ಕಮ್ಯೂನಿಸ್ಟ್ ಸೇನೆಗಳು ಪುನಃ ಮುಂದೊತ್ತಲಾರಂಭಿಸಿ, ಮುಕ್ಡೆನ್ ನಗರವನ್ನು ಸಮೀಪಿಸಿವೆ.

ಜಿನ್ನರ ಟೀಕೆ

ಭಾರತ ಮತ್ತು ಪಾಕಿಸ್ತಾನಗಳ ಕೇಂದ್ರ ಕಚೇರಿತಜ್ಞರು ನವದಿಲ್ಲಿಯಲ್ಲಿ ಸೇರಿ, ಇನ್ಶ್ಯೂರೆನ್ಸ್ ಕಂಪೆನಿಗಳು, ವಿವಿಧ ಡಿಪೋಸಿಟುಗಳು, ಪೋಸ್ಟ್ ಆಫೀಸು ಸರ್ಟಿಫಿಕೇಟುಗಳು, ಕೈದಿಗಳ ಬದಲಾವಣೆ ಇತ್ಯಾದಿ ಹಲವು ಚಿಲ್ಲರೆ ವಿಷಯಗಳಲ್ಲಿ ಒಲ್ಲಾ ಎರಡು ರಾಷ್ಟ್ರಗಳೊಳಗಿನ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಈ ನಡುವೆ ಕೆಲ ಕಾಲದಿಂದ ಪಾಕಿಸ್ತಾನ್ ನಾಯಕರ ಸೊಲ್ಲೇ ಕೇಳಬಂದಿರಲಿಲ್ಲ. ಮಿ. ಜಿನ್ನರು ಕಳೆದ ವಾರದಲ್ಲೊಮ್ಮೆ ಬಾಯಿತೆರೆದರು; ಆದರೆ ಈ ಬಾಯಿ ಕೇವಲ ಬ್ರಿಟಿಷ್ ಸರಕಾರದ ಕಡೆಗೇನೇ ಉರಿ ಕಾರಿದೆ. "ಪಾಕಿಸ್ತಾನವು ಬ್ರಿಟಿಷ್ ಕಾಮನ್‌ವೆಲ್ತಿನ ರಾಷ್ಟ್ರಗಳ ಪಂಗ್ತಿಯಲ್ಲೇ ನಿಲ್ಲಬೇಕೋ, ಅಲ್ಲಿಂದ ಹೊರ ಬೀಳಬೇಕೋ ಎಂಬುದನ್ನು ಪಾಕಿಸ್ತಾನ್ ಘಟನಾ ಸಮಿತಿಯು ನಿರ್ಧರಿಸಲಿದೆ. ಪರಸ್ಪರ ಪ್ರಯೋಜನಕಾರಿಯಾಗುವಂತೆ ಪಾಕಿಸ್ತಾನವು ಬ್ರಿಟಿಷ್ ಕಾಮನ್‌ವೆಲ್ತ್ ರಾಷ್ಟ್ರ ಗುಂಪಿನೊಳಗೆ ಉಳಿಯುವುದೆಂಬ ಕುರಿತು ವ್ಯಕ್ತಿಶಃ ನನಗನುಮಾನವಿಲ್ಲ. ಅಂತೆಯೇ ಆ ಕಾಮನ್‌ವೆಲ್ತಿನ ಹಿರಿ ಸದಸ್ಯ ಗ್ರೇಟ್ ಬ್ರಿಟನು ತನ್ನ ಮಹತ್ತಾದ ನೈತಿಕ ಜವಾಬ್ದಾರಿಯನ್ನು ನಿರ್ವಹಿಸುವುದೆಂದೂ ನನಗೆ ಖಂಡಿತವಿದೆ. ಆದರೆ ಈಗೊಮ್ಮೆ ಪಾಕಿಸ್ತಾನವನ್ನು ಬ್ರಿಟನು ಉಪೇಕ್ಷೆಯಿಂದ ಕಾಣುತ್ತಿರುವುದು ನನ್ನ ಮನಸ್ಸಿಗೆ ನಾಟಿದೆ. ಯಾವುದೇ ವಸಾಹತಿನ ಕಾರ್ಯಕಲಾಪಗಳೊಳಗೆ ಕೈಹಾಕುವ ಅಧಿಕಾರವು ಬ್ರಿಟನಿಗಿಲ್ಲವೆಂಬ ಸಂಗತಿಯನ್ನು ನಾನು ಚೆನ್ನಾಗಿ ಬಲ್ಲೆ; ಆದರೂ ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರಗಳೊಳಗಿನ ವಿವಾದಗಳ ತೀರ್ಮಾನಕ್ಕಾಗಿ ನೈತಿಕ ಒತ್ತಾಯ ಹಾಕುವ ಸ್ಥಾನಮಾನವು ಬ್ರಿಟನು ಮತ್ತು ಇತರ ವಸಾಹತುಗಳಿಗಿವೆ. ಈ ಪಟ್ಟಿಗೆ ಬ್ರಿಟಿಷ್ ಸರಕಾರವು ಇದುವರೆಗೆ ತನ್ನ ಹೊಣೆ ನಿರ್ವಹಿಸದೆ ಜಾರಿಕೊಂಡಿದೆ ಎಂದು ನನಗನ್ನಿಸುತ್ತದೆ". ಎಂದಿದ್ದಾರೆ ಕಾಯಿದೇ ಅಝಾಮ್. "ಕಾಶ್ಮೀರದ ಪ್ರಶ್ನೆಯು ಅತ್ಯಂತ ಗಂಭೀರದ್ದಿದ್ದು ಈಗ ಆ ಕುರಿತು ಭಾರತ—ಪಾಕಿಸ್ತಾನ ಪ್ರಧಾನಿಗಳೊಳಗೆ ಮಾತುಕತೆ ಸಾಗಿರುವುದರಿಂದ ಸದ್ಯಕ್ಕೇನನ್ನೂ ಹೇಳಲಾರೆ" ಎಂದರು ಮಿ. ಜಿನ್ನ. ಪೆಲೆಸ್ತೈನಿನ ಕುರಿತು ಹೇಳುತ್ತಾ ಅದನ್ನು ವಿಭಜಿಸುವ ಜಾಗತಿಕ ಸಂಘದ ಧೋರಣೆಯು ಅನ್ಯಾಯ ಹಾಗೂ ಕ್ರೂರವಾದುದೆಂದು ಟೀಕಿಸಿದ್ದಾರೆ. "ಲೋಕದ ಮುಸಲ್ಮಾನರಿಗೆ ಅಮೇರಿಕ ಅಥವಾ ಇನ್ನಾವುದೇ ರಾಷ್ಟ್ರವನ್ನು ಕೆಣಕುವ ಉದ್ದೇಶವಿಲ್ಲವಾದರೂ, ನಮಗೆ ನಮ್ಮ ನ್ಯಾಯ ಬುದ್ಧಿಯೇ ಸಾಧ್ಯವಿದ್ದ ಸರ್ವ ವಿಧಾನಗಳಿಂದ ಅರಬರನ್ನು ಸಮರ್ಥಿಸಬೇಕೆನ್ನುವ ಪ್ರೇರಣೆಯಾಗಿದೆ" ಎಂದಿದ್ದಾರೆ. ಪೆಲೆಸ್ತೈನ್ ಸಮಸ್ಯೆಯ ತೀರ್ಮಾನಕ್ಕೆ ಬ್ರಿಟನು ಅರೆಮನಸ್ಸಿನ ಪ್ರಯತ್ನವನ್ನಷ್ಟೇ ಮಾಡಿತೆಂದೂ ದೃಢ ಬುದ್ಧಿಯಿಂದ ಸಾಕಷ್ಟು ಶ್ರಮವಹಿಸಿ ಕೆಲಸ ಮಾಡುತ್ತಿದ್ದರೆ, ಜಾಗತಿ ಸಂಘಕ್ಕಿಂತ ಒಳ್ಳೆಯ ಕೆಲಸವನ್ನು ಮಾಡಲು ಬ್ರಿಟಿಷ್ ಸರಕಾರಕ್ಕೆ ಸಾಧ್ಯವಿತ್ತೆಂದೂ ಜಿನ್ನರ ಅಭಿಮತ.

ಲೀಗಿನ ದ್ವಿದಳ ರೂಪ

ಭಾರತ ಸರಕಾರ ಮತ್ತು ಜನತೆಯು ಆತುರದಿಂದ ನಿರೀಕ್ಷಿಸುತ್ತಿರಬೇಕಾದುದು ಮತ್ತು ಆಕ್ಷೇಪಿಸಬೇಕಾದುದು ಮುಸ್ಲಿಂ ಲೀಗಿನ ಭವಿಷದ್ರೂಪದ ನಿರ್ಧಾರವನ್ನು; ಮತ್ತು ಕುರಿತು ಮಿ. ಜಿನ್ನರು ಹೊರಗೆಡಹಿರುವ ಅಭಿಮತಗಳನ್ನು. ಪಾಕಿಸ್ತಾನ್ ಸ್ಥಾಪನೆಯಾಗಿರುವುದರಿಂದ ಭಾರತದಲ್ಲಿ ಮುಸ್ಲಿಂ ಲೀಗ್ ಬರ್ಖಾಸ್ತಾಗುವದೆಂದೂ, ಪಾಕಿಸ್ತಾನದಲ್ಲಿ ಅದು ಜಾತೀಯ ಮುಸುಕನ್ನು ಹರಿದುಕೊಂಡು ರಾಜಕೀಯ ರೂಪ ಧರಿಸಿ ಸರ್ವ ಜಾತಿ ಮತಗಳವರನ್ನು ಸ್ವಾಗತಿಸುವಂತಹದಾಗುವದೆಂದೂ ಶಾಂತಿಪ್ರೇಮಿಗಳ ನಿರೀಕ್ಷೆ

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಜನತೆಯು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಬೇಕಾದರೆ, ರಾಜಕೀಯ ಸ್ವಾತಂತ್ರ್ಯ ಒಂದೇ ಸಾಲದು. ಅದರೊಡನೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಇದನ್ನು ಹೆಗ್ಗುರಿಯಾಗಿಟ್ಟುಕೊಂಡು ಕಳೆದ ಹದಿನಾರು ವರ್ಷಗಳಿಂದ ಜನತೆಗೆ ಆರ್ಥಿಕ ಬೆಂಬಲವನ್ನು ನೀಡಿ, ವಿಜಯದಿಂದ ವಿಜಯಕ್ಕೆ ಮುನ್ನುಗ್ಗುತ್ತಿರುವ ಸಂಸ್ಥೆ—

ದಿ ವಿಜಯಾ ಬೇಂಕ್, ಲಿಮಿಟೆಡ್.

ಹೆಡ್ ಆಫೀಸು: ಮಂಗಳೂರ.

ಶಾಖೆಗಳು:ಸಿಟಿ-ಮಂಗಳೂರು, ಕಾಪು, ಉಡುಪಿ, ಬ್ರಹ್ಮಾವರ, ಕುಂದಾಪುರ, ಬೈಂದೂರ್, ಕಾರ್ಕಳ, ಪುತ್ತೂರು, ಕಾಸರಗೋಡು, ಕಾಂಞಂಗಾಡು, ಮಡಿಕೇರಿ ಮತ್ತು ಮುಂಬಾಯಿ.

THE VIJAYA BANK, LIMITED.

TENDER NOTICE

Tenders are invited for the purchase of 53077 old gunnies lying in the fish curing yards in the west coast. The Tenders should reach the Asst. Director of Fisheries, (Coast), Calicut on or before 22-12-47. The covers containing tenders should be sent by registered post and superscribed "TENDERS FOR THE PURCHASE OF CONDEMNED GUNNIES" and the tender should be accompanied by an earnest money deposit of Rs. 50/-. Further particulars can be had from the Office of the Inspectors of Fisheries, Mangalore, Calicut and Chowghat or from the office of the Asst. Director of Fisheries, (Coast), Calicut.

T. P. Baratan,
Asst. Director of Fisheries, (Coast),
Calicut.

'ಆರ್. ಯಸ್. ಯಸ್.ನ ಲಾಠಿಯೇಕಾಗಿ?' ಪಟೇಲ್.

...ಮಾಡಿತ್ತು. ಆದರೆ ಕಳೆದ ವಾರ ಕರಾಚಿಯಲ್ಲಿ ಸೇರಿದ ಲೀಗ್ ಕೌನ್ಸಿಲಿನ ಸಭೆಯು, ತಾನು ಈ ರಾಷ್ಟ್ರದ್ರೋಹಿಯ ಅದೃಷ್ಟವನ್ನೇ ತನಗೂ ತಗಿಸಿಕೊಂಡಿದೆ—ಮುಸ್ಲಿಂ ಲೀಗು ಎರಡು ಪಾಲಾಗಿದೆ! ಭಾರತದ ಲೀಗು, ಪಾಕಿಸ್ತಾನದ ಲೀಗು, ಇವೆರಡೂ ಮುಸ್ಲಿಂ ಜಾತೀಯತಾ ಸಂಸ್ಥೆಯಾಗಿ ಎರಡು ಕಡೆಗಳಲ್ಲಿಯೂ ತಮ್ಮ 'ನ್ಯಾಯಬದ್ಧ ಹಕ್ಕು ಬಾಧ್ಯತೆಗಳ ರಕ್ಷಣೆಗಾಗಿ' ಹೋರಾಡಲು ಉಳಿಯುವುವು. 'ಲೀಗು ಎಲ್ಲಿದೆಯೋ ಅಲ್ಲಿ ಒಂದು ಲ್ರಾಂದುದಿನ ಅಪಮೃತ್ಯುವಿಗೆ ತೀಗೂ ಇದೆ'! ಈ ಕುರಿತು ಸಂಶಯವಿಲ್ಲ. ಮಿ. ಜಿನ್ನರಿದಕ್ಕೆ ಕೊಟ್ಟಿರುವ ಕಾರಣ ಕೂಡಾ ಚಂದಿನದೇ. "ಅಗೋಸ್ತು 15ರ ನಂತರ ಪಾಕಿಸ್ತಾನದ ಮತ್ತು ಭಾರತದ ಮುಸ್ಲಿಮರು ಪ್ರತ್ಯಪ್ರತ್ಯೇಕ ಸಮಸ್ಯೆಗಳನ್ನಿದಿರಿಸುತ್ತಾರೆ. ಅದ್ದರಿಂದ ಇಕ್ಕಡೆಯವರ ಸಂಸ್ಥೆಗಳೂ ಪ್ರತ್ಯೇಕವಾಗಬೇಕೆಂಬುದು ಸ್ಪಷ್ಟ. ಭಾರತದ ಮುಸಲ್ಮಾನರು ತಮ್ಮ ಭೋರಣೆಯನ್ನು ತಾವೇ ರೂಪಿಸಿಕೊಳ್ಳಬೇಕಲ್ಲದೆ ಒಂದೇ ಸಂಸ್ಥೆಯು ಇಕ್ಕಡೆಗಳಲ್ಲೂ ಅಸ್ತಿತ್ವದಲ್ಲಿರುವುದು ಅಸಾಧ್ಯ; ಅನ್ಯಾಯ.

ಪಾಕಿಸ್ತಾನ್ ಲೀಗನ್ನು ಎಲ್ಲಾ ಜಾತಿಮತದವರಿಗೂ ಬಾಗಿಲು ತೆರೆದಿಡುವ ರಾಜಕೀಯ ಸಂಸ್ಥೆಯಾಗಿ ಮಾರ್ಪಡಿಸುವಷ್ಟು ಕಾಲ ಇನ್ನೂ ಪಕ್ವವಾಗಿಲ್ಲ. ಪಾಕಿಸ್ತಾನ್ ಮುಸ್ಲಿಮರ ಸಾರ್ವಜನಿಕಾಭಿಮತ ಇದಕ್ಕೆ ವಿರೋಧವಿದೆ. ವ್ಯವಹಾರ್ಯ ಆಧಾರಗಳಿಲ್ಲದ ಪ್ರಜಾಪ್ರಭುತ್ವದ ಘೋಷಣೆಗಳ ಥಳಕಿಗೆ ನಾವೆಂದೂ ಬಲಿಬೀಳಕೂಡದು. ಮುಸ್ಲಿಮರು ತಮ್ಮ ಮುಸ್ಲಿಂ ಸ್ವರಾಜ್ಯವನ್ನು ಈಗ ತಾನೇ ಗೆದ್ದುಕೊಂಡಿದ್ದಾರೆ. ಸ್ಥಿತಿಗತಿಗೆ ಹೊಂದಿಕೆಯಾಗುವಂತೆ ಅದಕ್ಕೊಂದು ಆಕಾರ ಕೊಡುವ ಕೆಲಸವಿನ್ನೂ ಉಳಿದಿದೆ. ಆದರೆ ರಾಜಕೀಯದಲ್ಲಿ ಚಿರಸ್ಥಾಯಿಯಾದುದಾವುದೂ ಇಲ್ಲ. ಪರಿಸ್ಥಿತಿಯು ಅವಶ್ಯಕತೆ ತೋರಿದಾಗ ಲೀಗು ತನ್ನೀ ಧೋರಣೆಯನ್ನು ಬದಲಾಯಿಸಿಕೊಳ್ಳಬಹುದು." ಎಂದಿದ್ದಾರೆ ಮಿ. ಜಿನ್ನಾ. ಇದರ ಅರ್ಥವೆಂದರೆ ಲೀಗಿನ ರಾಷ್ಟ್ರದ್ರೋಹೀ ಧೋರಣೆ ಹಿಂದಿನಂತೆಯೇ ಮುಂದೂ! ರಾಷ್ಟ್ರವೀಗ ತುಂಡಾಗಿರುವುದರಿಂದ ಲೀಗೂ ತುಂಡಾಗಬೇಕಾಯಿತು:-ವಿರೋಧಿ ಸೇನೆ ಇಬ್ಭಾಗವಾದಲ್ಲಿ ಅದಕ್ಕಿದಿರಾಗಿ ನಾವೂ ಎರಡು ಪಾಲಾಗಿಯೇ ಹೋರಾಡಬೇಕಲ್ಲ? ಈ ಅನರ್ತ್ಥವನ್ನಿದಿರಿಸಿ ನಿರ್ಮೂಲಿಸಲು ಭಾರತವು ತಯಾರಿರಬೇಕಾದುದು ಅಗತ್ಯ.

ಪಟೇಲ್—ನೆಹರು

ಪಾಕಿಸ್ತಾನದ ಅಂತರ್ಯ ಹೇಗಿದೆ, ಎಂಬುದನ್ನು ಮಿ. ಜಿನ್ನರ ಉದ್ಗಾರಗಳು ತೋರಿಸಿಕೊಟ್ಟಂತೆಯೇ ಭಾರತದ ಅಂತರಂಗವನ್ನು ಪ್ರದರ್ಶಿಸುವ ಕೆಲವು ಭಾಷಣಗಳನ್ನು ಕಳೆದ ವಾರ ಸರ್ದಾರ್ ಪಟೇಲ್ ಮತ್ತು ಪಂಡಿತ ನೆಹರುಗಳಿತ್ತಿದ್ದಾರೆ. ಅಲಹಾಬಾದಿನಿಂದ ಡಿಲ್ಲಿಗೆ ಮರಳುವಾಗ ಕಲ್ಕತ್ತ, ಕಾನ್ಪುರ ಮೊದಲಾದೆಡೆಗಳಲ್ಲಿ ಪಂಡಿತ ಜವಾಹರಲಾಲರಿಗೆ ದೊರೆತ ಸ್ವಾಗತಗಳು, ಮತ್ತವರಾಡಿರುವ ಮಾತುಗಳು 'ಇಂದಿನ ಮತ್ತು ಮುಂದಿನ ಭಾರತ ಪುರುಷ ನೆಹರು' ಎಂಬುದನ್ನು ಎತ್ತಿ ತೋರಿಸುವಂತಹವಿವೆ. ಹಾದಿ ಕೇಂದ್ರಗಳಲ್ಲಿ ಪಂಡಿತಜೀ ಪಡೆದಿದ್ದ ಸ್ವಾಗತವು ಅಭೂತಪೂರ್ವವಿದ್ದಿತು. ಕಲ್ಕತ್ತದಲ್ಲಿ 10 ಲಕ್ಷ ಜನರು ನೆಹರು ದರ್ಶನ ಮತ್ತು ಸಂದೇಶ ಶ್ರವಣಕ್ಕಾಗಿ ಕೂಡಿ ಬಂದಿದ್ದರು. "ಸ್ವರಾಜ್ಯವೇ ಒಂದು ಕೊನೆಯ ಗುರಿಯಲ್ಲ; ಅದು, ಜನತೆಯ ಹಿತ ಸಾಧನೆಯತ್ತ ಮುಂದೊಯ್ಯುವ ಹಾದಿ ಮಾತ್ರ. 30 ಕೋಟಿ ಜನತೆಯ ಕಲ್ಯಾಣ ಸಾಧಿಸುವ ಮಹತ್ತ್ವದ ಕಾರ್ಯಭಾರದಲ್ಲಿದೆ ರಾಷ್ಟ್ರಗ ಸಂಪತ್ತು ಕೆಲವೇ ಮಂದಿಯ ಜೇಬನ್ನು ಸೇರಕೂಡದು; ಅದು ಜನತೆಯ ನಡುವೆ ಸಮಾನವಾಗಿ ವಿತರಣೆ ಹೊಂದಬೇಕು. ಬಡತನ, ನಿರುದ್ಯೋಗ, ಮತ್ತು ದಾರಿದ್ರ್ಯಗಳು ನಿರ್ಮೂಲನೆಯಾಗಬೇಕು. ಸ್ವತಂತ್ರ ಭಾರತದಲ್ಲಿ ವ್ಯಕ್ತಿಗತ ಧಾರ್ಮಿಕ ಸ್ವಾತಂತ್ರ್ಯವಿರುವುದಾದರೂ ಯಾವುದೇ ಧರ್ಮವೂ ರಾಷ್ಟ್ರದ ರಾಜಕೀಯವನ್ನು ಕದಡದಂತೆ ತಡೆ ಬೀಳುವುದು. ರಾಷ್ಟ್ರವು ಲೌಕಿಕವಾದಿ ಜನತಾ ರಾಜ್ಯವಾಗುವುದು" ಜನಸಾಮಾನ್ಯರ ಆಕಾಂಕ್ಷೆಗ ನೆಹರೂರ ಈ ಮಾತುಗಳಲ್ಲಿ ಎಡೆ ದೊರೆತಿದೆ.

ಸರ್ದಾರರ ಖಂಡತುಂಡ ಮಾತು

ತನ್ನ ಬರೋಡಾ ಪ್ರವಾಸದ ನಡುವೆ ಸರ್ದಾರ್ ಪಟೇಲರಾಡಿದ ಕೆಲವು ಮಾತುಗಳು ಹೆಚ್ಚಿನ ಹಿಂದೀ ಹೃದಯಗಳನ್ನೀಗ ಕದಡಿದ ಕೆಲವು ಪ್ರಶ್ನೆಗಳ ಕಡೆಗೆ ಸುಸ್ಪಷ್ಟತೆಯನ್ನು ಚೆಲ್ಲಿವೆ. ಹೈದರಾಬಾದಿನ ಭವಿಷ್ಯದ ಕುರಿತು ಸರ್ದಾರರೆಂದರು: "ಒಂದು ವರುಷದೊಳಗೆ ಹೈದರಾಬಾದ ಹಿಂದೀ ಕೇಂದ್ರದೊಡನೆ ಸೇರಬೇಕಾಗಿ ಬರುವುದೆಂದು. ಕುರಿತು ಪ್ರಸಂಗನಿರ್ಮಾಣವಿಲ್ಲ; ತನ್ನ ಹಿತ ಸಾಧನೆಯ ದೃಷ್ಟಿಯಿಂದಲೇ ಹೀಗೆ ಮಾಡುವ ಆವಶ್ಯಕತೆಯುಂಟು. ಪ್ರಜಾಕ್ಷೋಭೆಯಿದೆ ಹೈದರಾಬಾದಿನ ಜನತೆಯು ಪ್ರಜಾಪ್ರಭುತ್ವವನ್ನು ಕೇಳುತ್ತಿದೆ. ಹಾಗೆ ಕೇಳುವ ಸರ್ವಹಕ್ಕೂ ಜನತೆಗಿದೆ ಹೈದರಾಬಾದು ಪ್ರತ್ಯೇಕವಾಗಿ ಇರುವುದೆಂದರೆ ಹೇಗದು? ಜನತಾ ಸರಕಾರವು ತಾನಾಗಿ ಬಂದೇ ತೀರುವುದು. ಈಗಿನ ಜಗತ್ತಿನಲ್ಲಿ ಒಬ್ಬನು ತನಗೆ ಅನ್ಯಾಯವನ್ನು ತಂದುಕೊಂಡೇ ಪ್ರಜಾಭಿಮತವನ್ನು ಧಿಕ್ಕರಿಸಬೇಕು. ಹೈದರಾಬಾದಿನ ಮುಸಲ್ಮಾನರು ಅಲ್ಲಿಯ ಆಡಳಿತೆಯಲ್ಲಿ ಹಿಂದುಗಳೊಡನೆ ತಮಗೆ ಸಮಪ್ರಾತಿನಿಧ್ಯವಿರಬೇಕೆಂದು ಕೇಳುತ್ತಿದ್ದಾರೆ. ಸೇಕಡಾ 85ರಷ್ಟಿರುವ ಹಿಂದುಗಳಿಗೂ ಸೇ. 15ರಷ್ಟಿರುವ ತಮಗೂ ಸಮಪಾಲೆಂದು ಕೇಳುವುದು ಜವಾಬ್ದಾರಿಯರಿತ ಜನರಿಗೆ ಅಯೋಗ್ಯವಿದೆ". ಹೈದರಾಬಾದಿನೊಡನೆ ಒಂದು ವರುಷದ ಒಪ್ಪಂದಕ್ಕೆ ಬಂದು ಭಾರತ ಸರಕಾರವು ಹೈದರಾಬಾದ್ ಪ್ರಜೆಗಳ ಕಣ್ಣು ಕಟ್ಟಿತೆಂದು ಟೀಕಿಸುವವರು ಅಂತಹದೇನೂ ಆಗಿಲ್ಲವೆಂಬುದನ್ನು ಪಟೇಲರ ಮಾತುಗಳಿಂದ ತಿಳಿಯಬಹುದು. ಅಂತೆಯೇ ಆರ್. ಯಸ್. ಯಸ್. ನಂತಹ ಜಾತೀಯ ಸಂಸ್ಥೆಗೆ ಸರ್ದಾರರ ಬೆಂಬಲವಿದೆ, ಎಂದು ನೀನಾ ಅಪವಾದವನ್ನೂ ಹೊರಿಸುವ ಸಪ್ಪೆ ಸುದ್ದಿಗಳು ಹರಡುವೆ. ಸರ್ದಾರರೆಂದರು: "ರಾಷ್ಟ್ರೀಯ ಸ್ವಯಂಸೇವಕ ಸಂಘದ ಕುರಿತು ನನಗೆಷ್ಟೋ ದೂರುಗಳು ಬಂದಿವೆ. ಇಷ್ಟೆಲ್ಲಾ ದೂರುಗಳಿರುವಾಗ ತನ್ನಲ್ಲೇನೋ ತಪ್ಪು ಇರಬೇಕೆಂಬುದನ್ನು ಸಂಘವು ತಿಳಿದುಕೊಳ್ಳಬೇಕು. ನಾನೀ ತರುಣರ ಉತ್ಸಾಹವನ್ನು ಶ್ಲಾಘಿಸುತ್ತೇನಾದರೂ ಅದನ್ನು ವಿಧಾಯಕ ರೀತಿಗೆ ತಿರುಗಿಸಬೇಕೆನ್ನುತ್ತೇನೆ. ಭಾರತವನ್ನು ಸೈನಿಕವಾಗಿ ಬಲಗೊಳಿಸಲು ಸಾಧಬೇಕಾದ ಕೆಲಸಗಳು ಬಹಳವಿವೆ. ಸೇನೆಯ ಹಿಂಗಡೆ ಅತೀ ಹೆಚ್ಚಿನ ಔದ್ಯೋಗಿಕ ಉಪಕರಣಗಳಿರುವ ಪ್ರಯತ್ನ ನಡೆಯಬೇಕು. ಇವೆಲ್ಲಾ ಕೆಲಸಗಳು ಕೈ ಬೇಳೆಕೆಯ ಕೆಲವೇ ಮುಸ್ಲಿಮರ ತಲೆಗಳನ್ನೊಡೆಯಲು ಉಪಯೋಗಿಸಲ್ಪಡುತ್ತಿರುವ ಈ ಸಂಘದ ಲಾಠಿಗಳಿಂದ ಆಗುವಂತಿಲ್ಲ. ಪಾಕಿಸ್ತಾನವನ್ನು ಎಳೆದು ತಂದು ಹಿಂದೀ ಕೇಂದ್ರದೊಳಗೆ ಸೇರಿಸಿಕೊಳ್ಳುವ ಅವರ ಆಲೋಚನೆಗಳಲ್ಲಿ ಸ್ವಾರಸ್ಯವಿಲ್ಲ. ಅದು ತಾನಾಗಿಯೇ ಬರಬೇಕು. ಅದ್ದರಿಂದ ಅಲ್ಲಿಯವರನ್ನು ಈಗ ಇರುವಂತೆ ಇರಲು ಈ ಸಂಘದವರು ಬಿಟ್ಟು ಬಿಡಲಿ. ಪಾಕಿಸ್ತಾನದವರು ಸಬಲರಾಗುತ್ತಾ ಹೋದರೂ ದುರ್ಬಲರಾಗುತ್ತಾ ಬಂದರೂ, ಕಾಲ ಕ್ರಮೇಣ ಅವರು ಪಾವನಾಗಿ ಮನಸ್ಸು ಮಾಡಿ ಬರಲಿಕ್ಕಿರುವಾಗ ಅವರನ್ನು ಹಿಂದೆ ಕರೆದುಕೊಳ್ಳುವದೇ ನಾಟಕ". ಕಾಶ್ಮೀರದ ವಿಷಯದಲ್ಲಿ ಪಾಕಿಸ್ತಾನ್ ಧೋರಣೆಯನ್ನು ಖಂಡಿಸುತ್ತಾ ಪಾಕಿಸ್ತಾನಕ್ಕೆ ಸಶಸ್ತ್ರ ಹೋರಾಟದ ಮೂಲಕವೇ ಕಾಶ್ಮೀರದ ಪ್ರಶ್ನೆಯನ್ನು ಇತ್ಯರ್ಥಿಸಿಕೊಳ್ಳುವ ಹುಮ್ಮಸ್ಸಿದ್ದರೆ ನಾನದಕ್ಕೆ ಸಿದ್ಧನೇ ಇದ್ದೇವೆ. ಬದಲಿಗೆ ಅದು ಈ ರೀತಿ ಮಾಡಿದುದು ಸರಿಯಲ್ಲ. ಇನ್ನು ಹೆಚ್ಚು ವರುಷ ಹಿಡಿದರೂ ಸರಿಯೇ, ಕಾಶ್ಮೀರದ ಕೆಲಸವನ್ನು ಪೂರ್ತಿ ಮುಗಿಸದೆ ನಾವು ಬಿಡುವಂತಿಲ್ಲ" ಎಂದರು. ಕೆಲವರ ದುಷ್ಪ್ರೇರಣೆಯಿಂದ ನಡೆಯುತ್ತಿರುವ ಕೆಲಸಗಾರರ ಮುಷ್ಕರಗಳನ್ನು ಸರ್ದಾರರು ಕಂಠೋಕ್ತವಾಗಿ ಖಂಡಿಸಿದ್ದಾರೆ.

ಒಳವ್ಯವಸ್ಥೆಗಳು

ಅಜ್ಮೀರಿನಲ್ಲಿ ನಡೆದ ಹಿಂದೂ ಮುಸ್ಲಿಂ ಗಲಭೆಯೀಗ ಶಾಂತವಾಗಿದೆ. ಕಳೆದ ಅಗೋಸ್ತು ಅಂತ್ಯ ಭಾಗದಲ್ಲಿ ಒಮ್ಮೆ ಗಲಭೆ ನಡೆಸಿ ಅಜ್ಮೀರಿನಿಂದ ಹೋಗಿದ್ದ ಮುಸ್ಲಿಮರೂ ಸಿಂಧ್ ಮುಸ್ಲಿಮರೂ ಇತ್ತೀಚೆಗೆ ಬಹುಸಂಖ್ಯೆಯಿಂದ ಅಜ್ಮೀರಿನೊಳಗೆ ನುಗ್ಗಿ ಬಂದು ಗಲಭೆ ಹಬ್ಬಿಕೊಂಡಿತ್ತು. ಈಗ ಡಿಲ್ಲಿಯಿಂದ ಸೇನೆಕಳುಹಿಸಿ, ಭಾರತ ಸರಕಾರವು ಅಲ್ಲಿಯ ಪರಿಸ್ಥಿತಿಯನ್ನು ಹತೋಟಿಗೆ ತಂದಿದೆ.

ಹೈದರಾಬಾದಿನಲ್ಲಿ ಅಲ್ಲಿಯ ಕಾಂಗ್ರೆಸನ್ನು ಬಿಟ್ಟೇ ಪ್ರಧಾನ ಮಂತ್ರಿಗಳು ಒಂದು ನಡುಗಾಲ ಮಂತ್ರಿಮಂಡಲ ರಚಿಸಿದ್ದಾರೆ ಈ ಮಂಡಲಿಯಲ್ಲಿ ಶ್ರೀ. ಪಿ. ವೆಂಕಟರಾಮ ರೆಡ್ಡಿಗಳು ಉಪಪ್ರಧಾನಿ; ಮತ್ತು 4 ಮಂದಿ ಅಧಿಕಾರೀ ಸದಸ್ಯರು; 4 ಮಂದಿ ಮುಸ್ಲಿಂ ಸದಸ್ಯರು ಹಾಗೂ 4 ಮಂದಿ ಹಿಂದೂ ಸದಸ್ಯರಿದ್ದಾರೆ. ಹೈದರಾಬಾದು ಕಾಂಗ್ರೆಸು ಚಳವಳವನ್ನು ಮುಂದೊತ್ತುತ್ತಿದ್ದು ಸಂಸ್ಥಾನದಲ್ಲೆಲ್ಲಾ ಪ್ರಬಲ ದಬ್ಬಾಳಿಕೆ ನಡೆದಿದೆ.

ನವದಿಲ್ಲಿಯಲ್ಲಿ ಭಾರತ ಸರಕಾರದ ಔದ್ಯೋಗಿಕ ಮಂತ್ರಿ ಡಾ। ಶ್ಯಾಮಾ ಪ್ರಸಾದ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ನಡೆದ ಔದ್ಯೋಗಿಕ ಸಮ್ಮೇಲನದಲ್ಲಿ ಔದ್ಯೋಗಿಕ ಕ್ಷೇತ್ರದ ಶಾಂತಿ ಭಂಗವಾಗದಂತೆ ಮಾಡಿ ಉತ್ಪನ್ನಗಳನ್ನು ನಿರಂತರವಾಗಿ ಹೆಚ್ಚಿಸುವ ಸುಸ್ಥಿರ ವ್ಯವಸ್ಥೆಯಾಗಿದೆ. ಮೂರು ವರುಷಗಳವರೆಗೆ ಯಾವುದೇ ವಿಧದ ಮುಷ್ಕರವೂ ನಡೆಯಬಾರದೆಂದು ನಿರ್ಧಾರವಾಗಿದೆ ಅಂತೆಯೇ ಕೆಲಸಗಾರರಿಗೆ ಸರಿಯಾದ ವೇತನ, ಆಡಳಿತೆಯಲ್ಲಿ ಪಾಲುಗಾರಿಕೆ, ಮುಖ್ಯ ಜಗಳಗಳ ತೀರ್ಮಾನ ವ್ಯವಸ್ಥೆಗಳು ನಿರ್ಣಯಿಸಲ್ಪಟ್ಟಿವೆ.



ಅಮೃತಾಂಜನ, ತಲೆನೋವನ್ನು, ಶೀತ, ಕೆಮ್ಮು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ, ಎದೆನೋವು, ಛಾಯೆಗಳು ಚಾಚು ತೋಳ್ಸುತ್ತುವುದು, ಚೇಳು ವಿಷ ಮುಂತಾದ ಬೇನೆ ಶಕ್ತಿಕಾರಕ ಮೊದಲಾದ ಎಲ್ಲಾ ರೋಗಗಳಿಗೂ.
REGD.
ಕಳ್ಳಕಳ್ಳಿ ಮದ್ದುಗಳ ಬಗ್ಗೆ ಎಚ್ಚರಿಕೆ
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

CONTROLS.

Even if all the foodstuffs are decontrolled you need control yourselves! Infection—Cold & fatigue are the dreaded enemies of health!

Control over these by drinking a cup of sweet Conch brand sqash every day—

Mine of Vitamins! Pool of flavour! Lime, Pineapple or orange which suits your taste

Mfrs:-Cannada Soap & Industrials Ltd Mangalore.

ತಯಾರಾಗುತ್ತಿದೆ—
ಸರ್ವಧಾರಿ ಸಂವತ್ಸರದ,
ಪಂಚಾಂಗ
ಮ್ಯಾನೇಜರ್,
ನವಯುಗ ಪ್ರೆಸ್, ಉಡುಪಿ.

The Canara Banking Corporation Limited.

(Incorporated in British India)

Estd: 1906.

Head Office: **UDIPI**, S. India.

ANNOUNCEMENT.

A branch of the BANK has been opened at High Road, **TRICHUR.** (Cochin State.) on 28th November, 1947.

ನವಯುಗ

ಗುರುವಾರ, ಉಡುಪಿ, ೪-೧೨-'೪೭

ಗ್ರಾಮಗಳಿಗೆ ಗತಿಯೇನು?

ಆಹಾರ ಧೋರಣೆಯ ಸಂಬಂಧವಾಗಿ ಮದ್ರಾಸ್ ಸರಕಾರವು ಈಗ ಕೈಕೊಂಡಿರುವ ನವೀನ ವಿಧಾನಗಳು ಈ ಸಂಚಿಕೆಯ ಬೇರೊಂದೆಡೆಯಲ್ಲಿವೆ. ಆಹಾರ ಮಂತ್ರಿ ಡಾ| ರಾಜನರು ಕೌನ್ಸಿಲಿನಲ್ಲಿತ್ತ ಹೇಳಿಕೆಯಿಂದ ತಿಳಿದು ಬಂದಿರುವ ವಿಷಯಗಳವು. ಇನ್ನಷ್ಟು ಸ್ಪಷ್ಟವಾಗ ಬೇಕಾದ-ಸವಿವರವಾಗಿ ತಿಳಿದುಕೊಳ್ಳಬೇಕಾದ—ಅಂಶಗಳು ಅದರಲ್ಲಿರುವುದರಿಂದ ಈ ಸಂಬಂಧದ ಸರಕಾರೀ ಪ್ರಕಟಣೆಗಳನ್ನು ನಿರೀಕ್ಷಿಸಬೇಕಾಗಿದೆ.

ಇದುವರೆಗೆ ತಿಳಿದು ಬಂದ ಸಂಗತಿಗಳಿಂದ ಬಹುಸಂಖ್ಯಾಕ ಜನರು ದಿಗಿಲುಗೊಂಡಿರುವುದು ಸಹಜವಿದೆ. ಸರಕಾರದ ಈ ನೂತನ ಧೋರಣೆಯಿಂದ ಆರ್ಥವಾಗುವದಿಷ್ಟೆ:— ಇಡೀ ಪ್ರಾಂತ್ಯದ (ಮಲಬಾರು, ನೀಲಗಿರಿ ಜಿಲ್ಲೆಗಳನ್ನು ಬಿಟ್ಟು) ಹಳ್ಳಿಗರಿಗೆ ಆಹಾರ ಧಾನ್ಯಗಳನ್ನೊದಗಿಸುವ ಜವಾಬ್ದಾರಿಗಳನ್ನು ಸರಕಾರವು ಇದೇ ತಾ 28 (ಮುಂದಿನ ಆದಿತ್ಯವಾರ) ರಿಂದ ಬಿಟ್ಟು ಕೊಡುವುದು. ಉಳಿತಾಯವಿರುವ ಉತ್ತರ ಮತ್ತು ದಕ್ಷಿಣ ಭಾಗಗಳ ಜಿಲ್ಲೆಗಳಲ್ಲಿ ಅನುಕ್ರಮವಾಗಿ ಬರುವ ಜನವರಿ 4 ಮತ್ತು ಫೆಬ್ರವರಿ 4 ರ ವರೆಗೆ ನಿಯಂತ್ರಣವಿರುವುದು, ಅಲ್ಲಿಯು ಉತ್ಪಾದಕರಿಂದ ಧಾನ್ಯ ಸಂಗ್ರಹಿಸಿಕೊಳ್ಳುವುದಕ್ಕಾಗಿ ಮಾತ್ರ. ಹೀಗೆ ಸಾಗುವಳೀದಾರರಿಗೆ ಧಾನ್ಯಸಂಬರಾಯಿ ಮಾಡುವ ತನ್ನ ಹೊಣೆಯನ್ನು ಬಿಡುವುದರ ಜತೆಯಲ್ಲೇ ಸಾಗುವಳೀದಾರರಲ್ಲಿದ್ದ ಧಾನ್ಯಗಳನ್ನು ಸಂಗ್ರಹಿಸಿಕೊಳ್ಳುವುದನ್ನೂ ಸರಕಾರವು ಬಿಡುತ್ತದೆಂಬುದು ನಿಜ. ಧಾನ್ಯೋತ್ಪಾದಕರ ಮಟ್ಟಿಗೆ ಅವರಿಂದ ಧಾನ್ಯವನ್ನು ಪಡೆಯುವ ಮತ್ತು ಕೊಡುವ ಎರಡು ವಹಿವಾಟುಗಳನ್ನೂ ಸರಕಾರವು ಬಿಟ್ಟುಬಿಡುವುದೇ ಹಿತಕರವಲ್ಲವೆ? ಎಂದು ಪ್ರಥಮತ: ತೋರಿಯಬಹುದು. ಆದರೆ ವಸ್ತುಸ್ಥಿತಿಯನ್ನು ಮರೆಯಬಾರದು. ಹಳ್ಳಿಗರಿಂದ ಸಂಗ್ರಹಿಸಿಕೊಳ್ಳಲಾಗುವ ಧಾನ್ಯಗಳನ್ನೆಲ್ಲಾ ಬಹುಮಟ್ಟಿಗೆ ಸಂಗ್ರಹಿಸಿಕೊಂಡಾದ ಮೇಲೆಯೇ ಸರಕಾರವು ಆ ಕೆಲಸವನ್ನು ನಿಲ್ಲಿಸುತ್ತಿದೆ; ಆದರೆ ಹಳ್ಳಿಗರಿಗೆ ಬರುವ ವರುಷದ ಬೆಳೆ ಕಟಾವಾಗುವ ವರೆಗೂ ಉಣ್ಣುವ ಆವಶ್ಯಕತೆಯು ಹಾಗೆಯೇ ಉಳಿಯುತ್ತದೆ. ಅವರನ್ನು ಉಣ್ಣಿಸುವ ತನ್ನ ಹೊಣೆಗಾರಿಕೆಯನ್ನು ಮಾತ್ರ ಸರಕಾರವು ಇದೇ ತಾ 28ರಲ್ಲೇ ಬಿಡುತ್ತಿದೆ! ಇದರ ಅರ್ಥವೆಂದರೆ ಹಳ್ಳೀ ರೈತರಿಂದ ಸರಕಾರವು ಪಡಕೊಳ್ಳುತಿದ್ದ ಧಾನ್ಯದ ಪಾಲನ್ನು ಕಳೆದ ವರುಷಗಳಂತೆಯೇ ಈ ವರುಷವೂ ಪಡಕೊಂಡಿದೆ. ಆದರೆ ಹಿಂದಿನ ವರುಷಗಳಂತೆ ವರುಷಾಂತ್ಯದ ವರೆಗೂ ಹಳ್ಳಿಗರ ಆಹಾರ ವ್ಯವಸ್ಥೆಯನ್ನು ನೋಡುವ ಹೊಣೆಯನ್ನು ಮಾತ್ರ ಈ ವರುಷ ಇಂದಿಗೆ ಮೂರೇ ದಿನಗಳೊಳಗೆ ಬಿಟ್ಟು ಬಿಡಲಿದೆ. ಇದು ಗ್ರಾಮಸ್ಥರನ್ನು ನಡುನೀರಿನಲ್ಲಿ ಕೈಬಿಟ್ಟಂತೆ! ಹತ್ತು ಮೈಲು ದೂರದ ವರೆಗಿನ ಟಿಕೇಟಿನ ಮೌಲ್ಯವನ್ನೆಲ್ಲಾ ಮುಂದಾಗಿ ಪಡಕೊಂಡು, ಹತ್ತು ಮಾರು ಹೋಗುವುದರೊಳಗೇನೇ ಬಂಡಿಯಿಂದಿಳಿಸಿದಂತೆ! ಧಾನ್ಯೋತ್ಪಾದಕರಾದ ಗ್ರಾಮಸ್ಥರಿಗೆ-ಅನ್ನದಾತ ರೈತರಿಗೆ-ಸರಕಾರದಿಂದ ಇಂತಹ ದ್ರೋಹವಾದೀತೆಂದು ನಾವು ನೆನಸುವುದಿಲ್ಲ. ಅದನ್ನು ಊಹಿಸುವುದಕ್ಕೂ ಅಸಾಧ್ಯವಾಗುತ್ತದೆ. ಆದ್ದರಿಂದ ಈ ಸಂಬಂಧವಾಗಿ ಸರಕಾರದ ಮುಂದಿನ ವ್ಯವಸ್ಥೆಯೇನು ಎಂಬ ಸವಿವರ ಅಧಿಕೃತ ಪ್ರಕಟಣೆಗಳನ್ನು ಕಾಣದೆ ಹೆಚ್ಚಿಗೇನನ್ನೂ ಹೇಳುವುದಸಾಧ್ಯ. [ಆದರೆ ಗ್ರಾಮಗಳಲ್ಲಿರುವ ಧಾನ್ಯದಾಸ್ತಾನುಗಳ ಕುರಿತು ಸರಕಾರದಲ್ಲಿ ತಪ್ಪಭಿಪ್ರಾಯವಿದೆ, ಎಂದೂಹಿಸಲು ಆಧಾರಗಳಿವೆ. "ಧಾನ್ಯೋತ್ಪಾದಕರಲ್ಲಿರಬೇಕೆಂದು ಅಂದಾಜು ಮಾಡಿದ್ದ ಉಳಿತಾಯಗಳ ೩ನೇ ಅಂಶ ಮಾತ್ರ ಇದುವರೆಗೆ ಸಂಗ್ರಹವಾಗಿದೆ" ಎಂದು ಕೆಲವು ದಿನಗಳ ಮೊದಲು ಮಾನ್ಯ ಆಹಾರ ಮಂತ್ರಿಗಳು ನುಡಿದಿದ್ದರು. ಆ ಮೇಲೆ ಸಂಗ್ರಹವಾಗಿರಬಹುದಾದ ಅಂಶದ ಮಾತು ಹಾಗಿರಲಿ; ದಕ್ಷಿಣಕನ್ನಡ ಜಿಲ್ಲೆಯ ಅನುಭವದಿಂದ ಹೇಳುವುದಾದರೆ, ಸ್ಥಳೀಯ ರೆವಿನ್ಯೂ ಅಧಿಕಾರಿಗಳು ಸರಕಾರಕ್ಕೆ ಕೊಟ್ಟಿರುವ ಆ ಅಂದಾಜುಗಳಲ್ಲೇ ತಪ್ಪುಗಳಿರಬೇಕು. ಕ್ರಮಬದ್ಧ ಪಡಿತರ ಜ್ಯಾರಿಯಲ್ಲಿರುವ ಪೇಟೆ ಪಟ್ಟಣಗಳವರನ್ನು ಯಾವ ರೀತಿಯಿಂದಾದರೂ ಉಣ್ಣಿಸುವ ಜವಾಬ್ದಾರಿಯನ್ನು ಸರಕಾರವು ಹೊತ್ತಿರುವಾಗ ಹಳ್ಳಿಗರ ಮೇಲಿನ ತನ್ನ ಹೊಣೆಯನ್ನು ಜಾರಿಸಿಕೊಳ್ಳುವ ಮೊದಲು, ಹಳ್ಳಿಗರುಕೊನೆಯ ವರೆಗೂ ಉಪವಾಸ ಬೀಳದಂತಹ ವ್ಯವಸ್ಥೆ ಮಾಡಿಡುವುದು ಆಗತ್ಯವಲ್ಲವೆ? ಅಲ್ಲಿರುವ ಆಹಾರ ಧಾನ್ಯಗಳ ಜಮಾ—ವೆಚ್ಚದ ಸರಿಯಾದ ಲೆಕ್ಕಗಳು ಸರಕಾರದ ವಶವಿವೆಯೆ? ದ. ಕ. ಜಿಲ್ಲೆಯ ಮಟ್ಟಿಗೆ ಇಡೀ ವರುಷದ ಉತ್ಪತ್ತಿಯ ಮುಕ್ಕಾಲಂಶಕ್ಕೂ ಮಿಕ್ಕಿ ಬೆಳೆಯುವ ಪ್ರಥಮ ಬೆಳೆಯ ಹೆಚ್ಚಿನಂಶವನ್ನು ಸಾಗುವಳೀದಾರರಿಂದ ಹಸುಗೇ ರದ್ದತಿಯ ಈ ಅವಧಿಯೊಳಗೇನೇ ಸ್ಟೋರುಗಳಿಗೆ ಹಾಕಿಸಿ ಆಗಿದೆ. ಒಕ್ಕಲುಗಳ ಗೇಣಿ ಅಕ್ಕಿಯನ್ನೆಲ್ಲಾ ಉಳಿತಾಯಾಂಶವೆಂದು ಗಣಿಸುವ-ಇಡೀ ಪ್ರಾಂತ್ಯದಲ್ಲಿ ಬೇರಾವ ಜಿಲ್ಲೆಯಲ್ಲೂ ಇರದ, ಇಲ್ಲಿ ಕೂಡಾ ಕಳೆದ ವರ್ಷಗಳಲ್ಲಿದ್ದಿರದ-ಹೊಸ ಕ್ರಮವನ್ನು ಈ ವರ್ಷ ದ. ಕ. ಜಿಲ್ಲೆಯಲ್ಲಿ ಜಾರಿಗೆ ತರಲಾಗಿತ್ತು. ಎರಡನೇ ಸುಗ್ಗೀ ಬೆಳೆಯಂತೂ ಈ ಜಿಲ್ಲೆಯಲ್ಲೀ ವರ್ಷ ಪೂರ್ತಿ ಹಾಳಾಗಿರುವುದು ಸಂಕಾರಕ್ಕೆ ಗೊತ್ತಿದೆ. ಮತ್ತುಳಿರುವುದು ಹಲವೆಡೆ ಹೆಸರಿನ ಪರಿಚಯ ಕೂಡಾ ಇರದ ಮೂರನೇ 'ಕೊಳಕೆ' ಬೆಳೆ ಮಾತ್ರ. ಇವೆಲ್ಲಾ ಶೇಷಾಂಶಗಳು ಹಳ್ಳಿಗಳ ಊಟಕ್ಕೆ ಸಾಕಾಗುವಂತಿವೆಯೆ? ಈ ಅಂಶಗಳಾದರೂ ಸರಿಯಾಗಿ ವಿತರಣೆಗೊಳ್ಳುವವೋ ಎಂಬ ಪ್ರಶ್ನೆ ಪ್ರತ್ಯೇಕವಿದೆ. ಹಳ್ಳಿಗಳಲ್ಲಿರುವವರೆಲ್ಲಾ ಸಾಗುವಳೀದಾರರೇ ಅಲ್ಲ. ಇಡೀ ವರುಷವೂ ಕಾರ್ಡು ಅಕ್ಕಿಯಿಂದಲೇ ಜೀವಿಸಬೇಕಾದ ಸಾಗುವಳಿಯಿಲ್ಲದ ಇತರ ಎಷ್ಟೋ ವರ್ಗಗಳವರು ಹಳ್ಳೀಜನತೆಯ ಗಣ್ಯ ಭಾಗವಾಗಿದ್ದಾರೆ. ಕಾರ್ಡು ಪದ್ಧತಿಯೇ ಹಳ್ಳಿಗಳಲ್ಲಿ ರದ್ದಾಗುವಾಗ ಇಂಥವರಿಗೇನು ಗತಿ? ಹಳ್ಳಿಗಳಲ್ಲಿ 'ಯೋಗ್ಯ ಬೆಲೆಗೆ ಮಾರುವ' ಅಂಗಡಿಗಳನ್ನು ಸರಕಾರವೇ ತೆರೆದು ಇಂತಹ ಆಪತ್ತುಗಳನ್ನೆಲ್ಲಾ ಶಮನ ಮಾಡಲಿದೆಯೆಂಬ ಸುದ್ದಿಯಿದೆ. ಆ ವ್ಯವಸ್ಥೆಗಳ ರೂಪರೇಖೆ, ರೀತಿನೀತಿಗಳನ್ನು ತಿಳಿಯದೆ ವಿಮರ್ಶಿಸಲಾಗುವದಿಲ್ಲವಾದರೂ, "ಹಳ್ಳಿಗಳನ್ನು ಅವುಗಳ ಪಾಲಿಗೇನೇ ಬಿಡಲಾಗುವದು; ತಮಗೆ ಬೇಕಾಗುವ ಆಹಾರ ಧಾನ್ಯಗಳನ್ನು ಅವರೇ ಬೆಳೆಸಿಕೊಂಡರಾಯಿತು" ಎಂದ ಆಹಾರ ಮಂತ್ರಿಗಳ ಅಭಿಮತವೇ ಈ ಹೊತ್ತಲ್ಲದ ಹೊತ್ತಿನಲ್ಲಿ ಕಾರ್ಯರೂಪಕ್ಕೆ ಬಂದಲ್ಲಿ ಅನಾಹುತವಾಗದಿರದು—ಎಂದೀ ಸಂದರ್ಭದಲ್ಲಿ ಸ್ಪಷ್ಟವಾಗಿ ಎಚ್ಚರಿಸಬೇಕಾಗುತ್ತದೆ. ಈ ಸಂಧಿಗ್ಧ ಕಾಲದಲ್ಲಾದರೂ ಹಳ್ಳಿಗರು ಕಣ್ತೆರೆಯಲಾರರೆ? ತಮ್ಮೊಳಗೆ ಸಂಘಟನೆ ಮಾಡಿಕೊಂಡು ಒಕ್ಕಟ್ಟಾಗಿ ಪರಿಸ್ಥಿತಿಯನ್ನೆದಿರಿಸಲು ತಯಾರಾಗಲಾರರೆ?

ಮುಷ್ಕರ ಮುಕ್ತಾಯ

ಮದ್ರಾಸ್ ಸರಕಾರದ ನೋನ್‌ಗಝೆಟೆಡ್ ನೌಕರರ ಮುಷ್ಕರವು ಇದೇ ತಾ 15ರಿಂದ 21ರ ವರೆಗಿನ ಒಂದು ವಾರ ನಡೆದು ಮುಕ್ತಾಯಗೊಂಡುದಕ್ಕಾಗಿ ಆನಂದಿಸಬೇಕು. ಸುಮಾರು ಒಂದೂವರೆ ಲಕ್ಷ ಜನರಿದ್ದು ಇಡೀ ಪ್ರಾಂತ್ಯದ ಸರಕಾರೀ ಯಂತ್ರದ ಮುಖ್ಯ ಭಾಗವಾಗಿರುವ ಈ ನೌಕರ ವರ್ಗವು ಮುಷ್ಕರಕ್ಕೆದ್ದುದನ್ನು ನಾವು ಟೀಕಿಸಿರುವೆವಾದರೂ ಮುಷ್ಕರಾವಧಿಯ ಅವರ ಶಾಂತವರ್ತನೆಗಳನ್ನು ಶ್ಲಾಘಿಸದಿರಲಾರೆವು. ತಾವೆಂದೂ ತಪ್ಪಿ ಬೀಳದಂತಿರುವುದನ್ನು ಕಲಿಯಲು ಯಾರಿಂದಲೂ ಸಾಧ್ಯವಿಲ್ಲ; ಆ ತಪ್ಪನ್ನು ತಿದ್ದಿಕೊಳ್ಳಲು ಕಲಿತವರೇ ಯೋಗ್ಯರು; ನೋನ್‌ಗಝೆಟೆಡ್ ಅಫೀಸರರು ಈ ಯೋಗ್ಯತೆಯನ್ನು ಪ್ರದರ್ಶಿಸಿ, ಸರಕಾರೀ ಆಶ್ವಾಸನೆಯನ್ನು ತಿರಸ್ಕರಿಸಿ, ನಿಶ್ಶರ್ತವಾಗಿ ಸರಕಾರಕ್ಕೆ ವಿಧೇಯರಾದುದು ಶ್ಲಾಘನೀಯ. ಮದ್ರಾಸಿನಲ್ಲಿ ಕಣ್ಣೀರ ಹಬೆ ಪ್ರಯೋಗ—ಅನಿವಾರ್ಯವಾದ ಕೆಲವೇ ದಸ್ತಗಿರಿಗಳು—ನಡೆದಿದ್ದರೂ, ಅದು ಶಿಕ್ಷಿತ ವರ್ಗದ ಮುಷ್ಕರವಾಗಿದ್ದುದರಿಂದ ಎಲ್ಲಿಯೂ ಅತಿರೇಕಗಳು ನಡೆಯದಿದ್ದುದು ಆನಂದದ ವಿಷಯ. ಅಂತೆಯೇ ತಮ್ಮ ಜವಾಬ್ದಾರಿಗಳನ್ನರಿತು ಈ ದೊಡ್ಡ ಬಿಕ್ಕಟ್ಟಿನ ಇದಿರಲ್ಲೂ ಎದೆಗುಂದದೆ, ನ್ಯಾಯ ನಿಷ್ಠುರತೆಯಿಂದ ವರ್ತಿಸಿ, ಬಯಸಿದ ಪರಿಣಾಮವನ್ನೇ ಪಡೆದ ಸರಕಾರೀ ನಾಯಕರನ್ನು ಅಭಿನಂದಿಸಬೇಕು. ಸರಕಾರೀ ಯಂತ್ರದ ಮೂಲ ಮತ್ತು ಉಪಾಂಗಗಳು, ಒಮ್ಮೆ ಈ ರೀತಿ ಪ್ರತ್ಯೇಕಿಸಲ್ಪಟ್ಟು ಶುದ್ಧೀಕರಣಹೊಂದಿ ಪುನರ್ಜೋಡಣೆಗೊಂಡುದರಿಂದ, ಇನ್ನು ಯಾವ ಕಲ್ಮಷ, ಕಂಟಕಗಳೂ ಇಲ್ಲದೆ ಅದು ಸತ್ಪರಿಣಾಮಕಾರಿಯಾಗಿ ಚಾಲೂಗಲೆಂದು ಆಶಿಸುತ್ತೇವೆ.

ಪ್ರಕಟವಾಗಿದೆ—ಶ್ರೀ ಎಂ ವಿ ಹೆಗ್ಡೆಯರ

ಸ್ವರಾಜ್ಯ ವಿಜಯ

(ಯಕ್ಷಗಾನ ಪದ್ಯ—ಅರ್ಥಗಳಲ್ಲಿ ಆಗೋಸ್ತು 15ರ ಸ್ವರಾಜ್ಯ ಚರಿತ್ರೆ)

ಯಕ್ಷಗಾನದಲ್ಲೊಂದು ಕ್ರಾಂತಿ! ನಿಜವಾದ ಜನತಾ ಸಾಹಿತ್ಯದ ಉದ್ಭವ!

ನೆಹರು, ಜಿನ್ನ, ಪಟೇಲ್, ಜೈಪ್ರಕಾಶ್, ಅಟ್ಲಿ, ಮೌಂಟ್‌ಬೇಟನ್, ಗಾಂಧಿ, ನಿಸ್ತಾರ್, ಖಾನ್‌ನೂನ್, ಕ್ರಿಪ್ಸ್ ಮುಂತಾದವರೇ ಇದರಲ್ಲಿರುವ ಪಾತ್ರಗಳು ಸಾಮಾನ್ಯನಿಂದ ಹಿಡಿದು ಸಾಹಿತಿಯ ವರೆಗಿನ ಎಲ್ಲರಿಗೂ ಹೇಳಿಸಿದ ನವೀನ ಕೃತಿ.

ಬೆಲೆ ಕೇವಲ: 0—8—0

ಪ್ರತಿಗಳಿಗೆ ಬರೆಯಿರಿ:—

ನವಭಾರತ ಪುಸ್ತಕ ಭಂಡಾರ, ಉಡುಪಿ.

— ಅಥವಾ —

ನವಯುಗ ಪ್ರೆಸ್, ಉಡುಪಿ, ದ. ಕ.

ಹಿಂದೀ ಸೇನೆಯ ಎಲ್ಲಾ ಅಧಿಕಾರಿಗಳೂ ಇದೇ 1948ನೇ ಎಪ್ರಿಲ್ 1ರ ದ ಹಿಂದೀಯರೇ ಆಗುವರು. ಸರ್ವ ಸೇನಾನಿ (ಕಮಾಂಡರ್ ಇನ್-ಚೀಫ್) ಸ್ಥಾನಕ್ಕೂ ಹಿಂದೀಯನನ್ನೇ ನೇಮಿಸಲಾಗುವದು. ರಕ್ಷಣಾ ಮಂತ್ರಿ ಸರ್ದಾರ್ ಬಲದೇವ ಸಿಂಗರು ಸೇನೆಯ ಹಿಂದೀಕರಣದ ವ್ಯವಸ್ಥೆಗಳನ್ನೆಲ್ಲಾ ಜಾಹೀರು ಮಾಡಿದ್ದಾರೆ. ಈ ವ್ಯವಸ್ಥೆಗಳು ಸ್ವರಾಜ್ಯ ಸ್ಥಾಪನಾನಂತರ ಭರದಿಂದ ಸಾಗಿವೆ. 600 ಮಂದಿಗೂ ಮಿಕ್ಕಿದ ನೌಕಾಧಿಕಾರಿಗಳೇ ಮುಂತಾದವರನ್ನು ವೈಮಾನಿಕ ತರಬೇತಿ ಹೊಂದಲು ಇದೇ ವಾರದಲ್ಲಿ ಇಂಗ್ಲಾಂಡಿಗೆ ಕಳುಹಿಸಲಿದ್ದಾರೆ. ಬರುವ ವರುಷದ ಜೂನಿನಲ್ಲಿ ಅವರು ಶಿಕ್ಷಣ ಹೊಂದಿ ಮರಳಲಿದ್ದಾರೆ.

ಸೇನೆಯ ಹಿಂದೀಕರಣ

ದೇಶವಿಭಜನೆಯಾದಂದಿನಿಂದ ಭಾರತದ ಸೈನ್ಯಾಧಿಪತಿಯಾಗಿ ಜನರಲ್ ಸರ್. ರೋಬ್ ಲೋಕ್ಹಾರ್ಟರಿದ್ದರು. ಅವರು ಅನಾರೋಗ್ಯನಿಮಿತ್ತ, ಇದೇ ಜನವರಿ ತಾ. 1ರಿಂದ ಅಧಿಕಾರವನ್ನು ಬಿಡಲಿದ್ದಾರೆ. ಎಪ್ರಿಲ್ 1ರ ತನಕ ಜನರಲ್ ಬುಚರ್ ಸೇನಾನಿಯಾಗಿ ನೇಮಕಗೊಂಡಿದ್ದು ಆ ಮೇಲೆ ಓರ್ವ ಹಿಂದೀಯ ನಿಗೇನೇ ಆ ಅಧಿಕಾರವನ್ನು ಕೊಡಲಾಗುವುದು. ಜನರಲ್ ಬುಚರೂ ಇತರ ಬ್ರಿಟಿಷ್‌ಸೇನಾಧಿಕಾರಿಗಳೂ ಸಲಹೆಗಾರರಾಗಿ ಇರುವರು. ಬ್ರಿಟನಿನಲ್ಲಿ ಪಾಸಾದ ಮಾವಿ ತಜ್ಞರು ದೊರೆಯುವುದು ಅಸಂಭವವಾದ್ದರಿಂದ ಸಲಹೆಗಾರರಾಗಿ ಅಮೇರಿಕನ್ ತಜ್ಞರನ್ನೂ ಕರೆಯಿಸಿಕೊಳ್ಳಲಾಗುವುದು. ಆದರೆ ಸೇನೆಯ ಅಧಿಕಾರಸ್ಥಾನಗಳಲ್ಲೆಲ್ಲಾ ಎಪ್ರಿಲ್ 1ರಿಂದ ಹಿಂದೀಯರೇ ನೇಮಕಗೊಳ್ಳುವರು. ಹಿಂದೀ ಹಡಗು ಪಡೆಯನ್ನು ಆಧುನಿಕ ರೀತಿಯಿಂದ ಸುಧಾರಿಸುವ ಕಾರ್ಯಗಳು ನಡೆಯುವವೆಂದೂ, ದೇಶಭಜನೆಯ ಪರಿಣಾಮವಾಗಿ ಭಾರತ ಸೇನೆಗಳನ್ನು ದೊಡ್ಡ ದೊಡ್ಡ ಸಮಸ್ಯೆಗಳಿದಿರಿಸಿದ್ದರೂ ಹಿಂದೀಕರಣ ಕಾರ್ಯವು ಭರದಿಂದ ಸಾಗಿದೆ ಮುಂದೂ ಸರ್ದಾರ್ ಬಲದೇವ ಸಿಂಗರಂದಿದ್ದಾರೆ. ಫೋರ್ಕ ದಳಗಳಿಗೂ ಹಿಂದೀ ಸೇನಾನಿಗಳು ನೇಮಕಗೊಳ್ಳುವರು.

ಭಾರತ ಸರಕಾರದ ನೋಟ

ಕಾಶ್ಮೀರದ ಭವಿಷ್ಯ?

ಇತ್ತ ಕಾಶ್ಮೀರದ ಪ್ರಶ್ನೆಯು ಈಗ ಚರ್ಚಾರಂಗದಲ್ಲೂ ಮುಂದೆ ಬಂದಿದೆ. ಈಗ ಅಲ್ಲಿ ನಡುಗಾಲ ಮಂತ್ರಿಮಂಡಲವೊಂದನ್ನು ರಚಿಸುವ ಪ್ರಶ್ನೆಯು ಕಾಶ್ಮೀರೀ ಜನ ನಾಯಕರಲ್ಲಿ ಮೊಳೆತಿದೆ. ಈ ಸಂಬಂಧವಾಗಿ ಶೇಕ್ ಅಬ್ದುಲ್ಲಾರೀಗ ದಿಲ್ಲಿಗೆ ಬಂದಿದ್ದು ಭಾರತ ಸರಕಾರದ ನಾಯಕರೊಡನೆ ಮಾತುಕತೆ ನಡೆಸುತಿದ್ದಾರೆ. ಇದೇ ಸಮಯದಲ್ಲಿ 'ಜತೆ ರಕ್ಷಣಾ ಸಮಿತಿ'ಯ ಸಭೆಗಳಿಗಾಗಿ ದಿಲ್ಲಿಯಲ್ಲಿರುವ ಮಿ. ಲಿಯಾಖತ್ ಅಲೀಖಾನರು ಕಾಶ್ಮೀರದ ಘರ್ಷಣೆಯ ಕುರಿತು ಭಾರತದ ನಾಯಕರೊಡನೆ ಚರ್ಚೆಗಳಿದಿದ್ದಾರೆ. ಭಾರತ ಮತ್ತು ಪಾಕಿಸ್ತಾನ ಎರಡೂ ಇದುವರೆಗೆ ಕುರಿತು ಒಮ್ಮತಕ್ಕೆ ಬಂದಿರುವ ಒಂದೇ ಒಂದು ವಿಷಯವೆಂದರೆ ಕಾಶ್ಮೀರದಲ್ಲಿ ಜನಮತ ಸಂಗ್ರಹಿಸಿ... ನಿರ್ಣಯಿಸತಕ್ಕದ್ದೆಂಬುದು. ಆದರೆ ಆ ಜನಮತವನ್ನು ಹೇಗೆ, ಮತ್ತು ಯಾವಾಗ ಸಂಗ್ರಹಿಸಬೇಕೆಂಬ ಕುರಿತು ಪ್ರಬಲ ಭಿನ್ನಾಭಿಪ್ರಾಯಗಳಿವೆ.

ಪಾಕಿಸ್ತಾನದ ದುರ್ವಾಕ್ಯ

ಕಾಶ್ಮೀರದ ಆಡಳಿತೆಯಲ್ಲಿ, ಮುಸ್ಲಿಂ ಲೀಗಿನ ಅಂಗವಾಗಿರುವ ಮುಸ್ಲಿಂ ಸಮ್ಮೇಳನಕ್ಕೆ, ಕೊನೆಯ ಪಕ್ಷ ಶೇಕ್ ಅಬ್ದುಲ್ಲಾರ ರಾಷ್ಟ್ರೀಯ ಸಮ್ಮೇಳನದ ಸಮಪ್ರಾತಿನಿಧ್ಯವನ್ನಾದರೂ ಸಂಪಾದಿಸಬೇಕೆಂದು ಪಾಕಿಸ್ತಾನದ ಹಠ. ಶೇಕ್ ಅಬ್ದುಲ್ಲಾರು ಇದಕ್ಕೆ ಸಿದ್ಧರಿಲ್ಲ. ಧಾಳಿಗಾರರನ್ನು ವಿರೋಧಿಸಿದ ಕಾಶ್ಮೀರೀ ರಾಷ್ಟ್ರೀಯರನ್ನೂ, ಧಾಳಿಗಾರರಿಗೆ ನೆರವಾದ ಕಟ್ಟರ ಮುಸ್ಲಿಂ ಜಾತೀಯವಾದಿಗಳನ್ನೂ ಅಧಿಕಾರ ಸ್ಥಾನದಲ್ಲಿ ಒಟ್ಟುಗೂಡಿಸಲು ಭಾರತ ನಾಯಕರೂ ಸಿದ್ಧರಿಲ್ಲ. ಇತ್ತ ಗಡಿನಾಡು ಪ್ರಾಂತಿಕ ಸರಹದ್ದಿನ ರಜ್ಮಾಕ್ ಮೊದಲಾದ ಕಡೆಗಳಲ್ಲಿದ್ದ ತನ್ನ ಸೇನೆಯನ್ನು ಪಾಕಿಸ್ತಾನವು ಹಿಂದೆಗೆದುಕೊಂಡು ಆ ಭಾಗಗಳ ಗುಡ್ಡಗಾಡು ಜನರಿಗೆ ಕಾಶ್ಮೀರಕ್ಕೆ ಬರಲನುಕೂಲ ಮಾಡಿಕೊಡುವುದಕ್ಕಾಗಿಯೇ ಎಂಬ ಚಿಹ್ನೆಗಳೀಗ ಕಾಣಿಸುತ್ತಿವೆ. ಈ ದರೋಡೆಗಾರರಿಗೆ ಪಾಕಿಸ್ತಾನದೊಳಗೆ ಸರ್ವ ಪ್ರೋತ್ಸಾಹ ಕೊಟ್ಟು ಸಲಕರಣೆಗಳನ್ನೊದಗಿಸಿ, ಕಾಶ್ಮೀರಕ್ಕೂ ಭಾರತದ ಗಡಿವಲಯಗಳಿಗೂ ಬೀಳ್ಕೊಡುತ್ತಿರುವುದು ತಿಳಿದುಬಂದಿದೆ. ಈಗ ಗಡಿನಾಡು ಮತ್ತು ಪಾಕಿಸ್ತಾನ್ ಪಂಜಾಬ್ ಪ್ರಾಂತ್ಯಗಳಲ್ಲಿ ಮುಸ್ಲಿಮೇತರರಾರೂ ಇಲ್ಲದಿರುವುದರಿಂದ ಗುಡ್ಡಗಾಡಿನ ಆ ನರಮೃಗಗಳು ತಮ್ಮ ಪ್ರಳಯ ತಾಂಡವಕ್ಕಾಗಿ ನೇರಾಗಿ ಈ ಕಡೆಗಳಿಗೆ ಬರುತ್ತಿವೆ. ಪ್ರಥಮತಃ ಧಾಳಿಗಾರರು ಹಿಂದೆ ಹೋಗದೆ ಕಾಶ್ಮೀರದಲ್ಲಿ ಜನಮತ ಸಂಗ್ರಹದ ಯಾವ ಒಪ್ಪಂದಕ್ಕೂ ಹಿಂದೀ ಸರಕಾರ ಮತ್ತು ಶೇಕ್ ಅಬ್ದುಲ್ಲಾ ಒಪ್ಪುವಂತಿಲ್ಲ. ಅವರನ್ನು ಹಿಂದಿರುಗಿಸುವುದು ತನ್ನ ಕೈಯಲ್ಲಿಲ್ಲ, ಮತ್ತಾ ಸೇನೋಪಕರಣ ಶಕ್ತಿಯೂ ತನಗಿಲ್ಲವೆಂದು ಪಾಕಿಸ್ತಾನ್ ಹೇಳುತ್ತದಾದರೆ, ಗುಡ್ಡಗಾಡು ವಲಯಗಳಲ್ಲೇ ಧಾಳಿ ನಡೆಸಲಾಗುವಂತೆ ಹಿಂದೀ ಸೇನೆಯನ್ನು ಪಾಕಿಸ್ತಾನದೊಳಗಿಂದ ಹಾದು ಹೋಗಲು ಬಿಡಬೇಕೆಂದು ಭಾರತ ಸರಕಾರ ಕೇಳಲಿದೆ. ಕಾಶ್ಮೀರೀ ರಣರಂಗದಲ್ಲಾಗುತ್ತಿರುವ ಜನಧನ ಹಾನಿ ಮತ್ತು, ಈಗ ಕಾಳಗದ ಕಣವಾಗಿ ಕಾಶ್ಮೀರವೊಂದೇ ಉಳಿದಿರುವ ವಿಷಯವು ಭಾರತ ಸರಕಾರದ ಮನಸ್ಸಿಗೆ ನಾಟಿದೆಯಾದರೂ ಹೇಗಾದರೂ ಮಾಡಿ ಕಾಶ್ಮೀರವನ್ನು ಬಗಲಿಗೆ ಹಾಕಿಕೊಳ್ಳಬೇಕೆಂಬ ಪಾಕಿಸ್ತಾನದ ಹಂಬಲಿಕೆಯಿದಿರು ಸೌಮ್ಯತೆ ಪ್ರದರ್ಶಿಸಲು ಅದು ತಯಾರಿಲ್ಲ.

ನೋಟೀಸು

ದಕ್ಷಿಣ ಕನ್ನಡ ಜಿಲ್ಲಾ ಉಡುಪಿ ತಾಲೂಕು ನಂದಿಕೂರು ಗ್ರಾಮದ ಪಟ್ಟಂಜೆಗುತ್ತು ತಿಂಗಳು... ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಸದ್ರಿ ನಂದಿಕೂರು ಗ್ರಾಮದ ಸದ್ರಿ ಪಟ್ಟಂಜೆ ಗುತ್ತು ... ಸೇವಿಸುವ ... ಮತ್ತು ಸದ್ರಿ ... ಕುಟ್ಟಿ ಸೆಟ್ಟಿ ಕೂಡಾ ಎರಡು ಜನರು ಒಂದಾಗಿ ತಾ. 16-12-47ನೇ ಮಂಗಳವಾರ ದಿನ ರಾತ್ರಿ ನನ್ನ ಮನೆಗೆ ಬಂದು ನನ್ನನ್ನು ಬಲಾತ್ಕಾರ ಪಡಿಸಿ ಮೂರು ಕಾಗದಗಳಲ್ಲಿ ನನ್ನ ಎಡಹೆಬ್ಬೆಟ್ಟಿನ ಮೂರು ಗುರುತುಗಳನ್ನೂ ಮತ್ತು ಬೀಗವಿಲ್ಲದ ಪೆಟ್ಟಿಗೆಯೊಳಗಿಟ್ಟ ದಸ್ತಾವೇಜುಗಳ ಒಂದು ಕಟ್ಟನ್ನೂ ಹಿಡಕೊಂಡು ಹೋಗಿದ್ದಾರೆ. ಇದರಿಂದಾಗಿ ಅವರುಗಳು ನನ್ನ ಯಾ ನನ್ನ ವಾರೀಸುದಾರರಿಗೆ ಅಪಾಯ ತರತಕ್ಕ ಯಾವತ್ತು ಸುಳ್ಳುರಿಕಾರ್ಡು ಮಾಡಿದ್ದಲ್ಲಿ ಅಂಥಾ ವ್ಯವಹಾರದ ... ನಾನು ಯಾ ನನ್ನ ವಾರೀಸುದಾರರು ಅರ್ಹರಲ್ಲವೆಂಬ ಸಂಗತಿಯು ತಿಳಿದಿರಲಿ.

● ಈ ಎಡಹೆಬ್ಬೆಟ್ಟಿನ ಗುರ್ತು ಹಾಕಿಸಿದ್ದ ಮಗಳು ಪದ್ದು ಸೆಡ್ತಿ ರುಜು

ನಂದಿಕೂರು, ತಾ. 21-12-47.

ಮಂಗಳೂರು

ಜಿಲ್ಲೆಯ ಮದ್ರಾಸು ಪ್ರಾಂತಿಕ ಮುನ್ಸಿಪಲ್ ಬಿಲ್ ಕಲೆಕ್ಟರರ ಪರಿಷತ್ತು:— ತಾ. 26 ಮತ್ತು 27ಕ್ಕೆ ಗಣಪತಿ ಹೈಸ್ಕೂಲಿನಲ್ಲಿ ಶ್ರೀ ಚೆನ್ನಪ್ಪ ... ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗುವುದು.

ಸಹ ಸಭೆ:— ಉಡುಪಿ ಲೋಕಲ್ ಕೋಆಪರೇಟಿವ್ ಯೂನಿಯನ್ನಿನ ಮಹಾಸಭೆಯು ತಾ. ...ರಲ್ಲಿ ಶ್ರೀ. ಕೆ. ಜಿ. ಬಲ್ಲಾಳ ಬಿ. ಎ. ಎಲ್. ಎಲ್. ಬಿ. ಯವರ ಅಧ್ಯಕ್ಷತೆಯಲ್ಲಿ ಸುಬ್ರಹ್ಮಣ್ಯ ಪದನದಿಂದ ... ಜರಗಿತು. ದ. ಕ. ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರರಾಗಿ ಉಡುಪಿ ತಾಲೂಕು ಯೂನಿಯನಿನ ಕಡೆಯಿಂದ ಶ್ರೀ ಕೆ. ಜಿ. ಬಲ್ಲಾಳರು ಆರಿಸಲ್ಪಟ್ಟರು.

ಭಾಷಣ:— ವೈದಿಕ ಧರ್ಮಸಂಘದ ಕಡೆಯಿಂದ ತಾ. 18ರಲ್ಲಿ ಮುಟ್ಟುಕೋಡು ಮತ್ತು ಮೂಕೋಡು ಸುಬ್ರಹ್ಮಣ್ಯ ದೇವಸ್ಥಾನಗಳಲ್ಲಿ ಭಾಷಣಗಳಾದುವು.

ಬಾಲಕರ ಆರೋಗ್ಯಕಾರ್ಯಗಳು

(ಪ್ರಭೋಸ್) ಬಾಲಾಮೃತ

ಒಂದೇ ವಾರದಲ್ಲಿ ತುಂಬಾ ಗುಣ

ಹಲವು ಬಗೆಯ ರೋಗಗಳಿಗೆ ತುತ್ತಾಗಿ, ದೇಹದಲ್ಲಿ ಬಡವಾಗಿ, ಜೀರ್ಣಶಕ್ತಿಯಿಲ್ಲದೆ ಸದಾ ಅಳುತ್ತ ಕಳೆಗುಂದಿರುವ ಮಕ್ಕಳ ಆರೋಗ್ಯ ನೆಟ್ಟಗಾಗಲು ತಾಯಿತಂದೆಗಳು ಇನ್ನೇನೂ ಚಿಂತಿಸಬೇಕಾಗಿಲ್ಲ ಮಾತ್ರ, ಹೊತ್ತು ಕಳೆದರೆ ಮುಕ್ತಿ ಬಾರದು.

'ಪ್ರ ಭೋ ಸ್' ಬಾಲಾಮೃತ

ಪ್ರಭೋಸ್ ಬಾಲಾಮೃತದ ಖ್ಯಾತಿಗೆ ಕಾರಣವೇನು? ಹಾಗಾದರೆ ಅದರ ಒಂದು ಚಿಕ್ಕ ಬಾಟ್ಲಿಯನ್ನು ಉಪಯೋಗಿಸಿ ನೋಡಿರಿ. ಒಂದೇ ವಾರದ ಸೇವನೆಯಿಂದ ತುಂಬಾ ಗುಣಹೊಂದಿ ನಗುಮುಖದಿಂದ ಆಡುವ ... ತಾಯಿತಂದೆಗಳನ್ನು ಮಕ್ಕಳು ಮುದ್ದಿಡುವಂತೆ ನಾನಾಗುವುದನ್ನು ಕಂಡುಕೊಳ್ಳುವಿರಿ.

ಸ್ವದೇಶೀ ಔಷಧ ಭಂಡಾರ,

(ರಿಜಿಸ್ಟರ್ಡ್)

ಕುಂಜಾಲು, ಪೊ ಬ್ರಹ್ಮಾವರ, ದ. ಕ.

ಸ್ಟಾಕಿಸ್ಟರು:-

ನವಭಾರತ ಪುಸ್ತಕ ಭಂಡಾರ, ಉಡುಪಿ.

L. N. Sharma, Mangalore.

The Universal Fire & General Insurance Co. Ltd.

HEAD OFFICE; **BOMBAY**

ESTD: 1919

ದಿ ಯುನಿವರ್ಸಲ್ ಫಯರ್ ಆಂಡ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸ್: ಬೊಂಬಾಯಿ

ಸದ್ರಿ ಕಂಪೆನಿಯು ಜೀವ, ಅಗ್ನಿ, ಮೋಟಾರ್, ಸಮುದ್ರೋಪಯೋಗ್ಯ ಈ ಮೊದಲಾದ ವಿಮಾ ವ್ಯವಹಾರಗಳನ್ನು ಮಾಡುವ ಪುರಾತನ ಕಂಪೆನಿಯಾಗಿದೆ.

ಓರ್ಗನೈಜರ್‌ರೂ, ಏಜಂಟರೂ ಆಗಲಿಚ್ಛಿಸುವವರು ಕೂಡಲೇ ಬರೆಯಿರಿ.

P. D. Nanaya, Chief Agent. Udipi; S. K.

B. K. Satalvad- Chairman

T. P. Kapadia- Manager

ಬಹು ಜನರು ಬಂದು ಹೋಗುವರು. ಆದುದರಿಂದ ಮುಂದಾಗಿ ಬಂದು ಸ್ಥಳ ಕಾದಿರಿ.

4ನೇ ವಾರ! ಕನ್ನಡದಲ್ಲಿ! **4ನೇ ವಾರ!! ಕನ್ನಡದಲ್ಲಿ!!**

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ತಾ. 25-12-47ರಿಂದ

ಕೃಷ್ಣಲೀಲಾ

ಮಹಾತ್ಮಾನವರ ಮೆಚ್ಚಿಗೆಯ ತಾರಾಗಣ

ಕೆಂಪರಾಜ್, ಬಳ್ಳಾರಿ ಲಲಿತ, ಕುಮಾರಿ ಉಷಾ, ಪ್ರತಿಮಾ, ರತ್ನಮಾಲಾ ಮೊದಲಾದವರು.

ಬರುವ ಚಿತ್ರ— ಪ್ರಭಾತದವರ ಆದ್ಮಿ

ಮದ್ಯಪಾನ ನಿರೋಧ ಕಾನೂನು (Prohibition Act)

ಮಾದಕ ಪದಾರ್ಥಗಳ ಸೇವನೆ ಮತ್ತು ಕುಡುಕತನದಿಂದಾಗಿ ನಮ್ಮ ದೇಶಕ್ಕೆ ತುಂಬಾ ಹಾನಿ ತಟ್ಟಿರುವ ಸಂಬಂಧ ನಮ್ಮ ದೇಶೋದ್ಧಾರದ ಹಾಗೂ ಆರ್ಥಿಕ ಉನ್ನತಿ ಬಗ್ಗೆ ಕಳೆದ 50 ವರ್ಷಗಳಿಂದ ಹೋರಾಡುತ್ತಿದ್ದ ಕಾಂಗ್ರೆಸ್ ಸಂಸ್ಥೆಯು ಇದರ ನಿರ್ಮೂಲನಕ್ಕಾಗಿ ತುಂಬಾ ಶ್ರಮಿಸಿದೆ. ಕಳೆದ 1937 ನೇ ವರ್ಷದಲ್ಲಿ ನಮ್ಮ ಸಂಸ್ಥಾನದಲ್ಲಿ ಬಹುಮತದಿಂದ ಆರಿಸಿಬಂದ ಕಾಂಗ್ರೆಸ್ ಸರಕಾರವು ಇದರ ವಿಷಯವಾಗಿ ಮುಂದಾಳುತನವನ್ನು ವಹಿಸಿ ನಮ್ಮ ಸಂಸ್ಥಾನದ ಜಿಲ್ಲೆಗಳಲ್ಲೊಂದಾದ ಸೇಲಂ ಜಿಲ್ಲೆಯಲ್ಲಿ ಮದ್ಯಪ್ರತಿಬಂಧಕಾಜ್ಞೆಯನ್ನು ಜ್ಯಾರಿಗೆ ತಂದಿತು. ಕಾರಣಾಂತರಗಳಿಂದ ಈ ಆಜ್ಞೆಯು ರದ್ದುಗೊಳಿಸಲ್ಪಟ್ಟ ಸಂಗತಿಯು ಸರ್ವರಿಗೂ ವಿದಿತವಾಗಿದ್ದ ನಂತರ ಪುನಃ ಕಳೆದ ವರ್ಷದಲ್ಲಿ ನಮ್ಮ ಸಂಸ್ಥಾನದಲ್ಲಿ ಪ್ರಬಲ ಬಹುಮತದಿಂದ ಆರಿಸಿಬಂದ ಕಾಂಗ್ರೆಸ್ ಸರಕಾರವು ತನ್ನ ಮುಂಚಿನ ಧೋರಣೆಯನ್ನು ವಹಿಸಿ ಸಂಸ್ಥಾನದ ಉತ್ಪನ್ನದ ಕಡೆಗೆ ದೃಷ್ಟಿಯನ್ನು ಹರಿಯಬಿಡದೆ ಕೇವಲ ಜನಸಾಮಾನ್ಯರ ಉದ್ಧಾರ ದೃಷ್ಟಿಯಿಂದ ಮದ್ಯಪ್ರತಿಬಂಧಕಾಜ್ಞೆಯನ್ನು (Prohibition) ನಮ್ಮ ಸಂಸ್ಥಾನದ ಎಂಟು ಜಿಲ್ಲೆಗಳಲ್ಲಿ ಜ್ಯಾರಿಗೆ ತಂದಿತು. ಈ ವರ್ಷ ಅಂದರೆ ಇದೇ ಅಕ್ಟೋಬರ ತಿಂಗಳ ಆದಿಯಿಂದ ಇನ್ನು ಎಂಟು ಜಿಲ್ಲೆಗಳಲ್ಲಿ ಕೂಡಾ ಈ ಆಜ್ಞೆಯನ್ನು ಜ್ಯಾರಿಗೆ ತರಲಾಯಿತು. ಈ ವರ್ಷ ಜ್ಯಾರಿಗೆ ತಂದ ಜಿಲ್ಲೆಗಳ ಪೈಕಿ ನಮ್ಮ ದಕ್ಷಿಣಕನ್ನಡ ಜಿಲ್ಲೆಯೂ ಸೇರುತ್ತದೆ. ನಮ್ಮ ಜಿಲ್ಲೆಯಿಂದ ಮಾನ್ಯ ಸರಕಾರಕ್ಕೆ ಈ ಸಂಬಂಧ ವರ್ಷಾವಧಿ ಉತ್ಪನ್ನದಲ್ಲಿ ರೂಪಾಯಿ 54 ಲಕ್ಷದ ಅಂದಾಜು ಕಡಿಮೆಯಾಗಿರುವುದು ಅಲ್ಲದೆ ಇಡೀ ಸಂಸ್ಥಾನದಲ್ಲಿ ಜ್ಯಾರಿಗೆ ಬಂದನಂತರ ಸುಮಾರು 17½ ಕೋಟಿ ಉತ್ಪನ್ನವು ಕಡಿಮೆಯಾಗುವುದು. ಆದರೂ ಈ ವಿಷಯವಾಗಿ ಧೈರ್ಯಗೆಡದೆ ಜನಹಿತ ದೃಷ್ಟಿಯಿಂದ ಈ ಪ್ರತಿಬಂಧಕಾಜ್ಞೆಯನ್ನು ಜ್ಯಾರಿಗೆ ತಂದಿರುವ ಸಂಗತಿಯು ಸ್ತುತ್ಯವಾಗಿರುತ್ತದೆ. ಆದರೆ ಇಂತಹ ಆಜ್ಞೆಯ ವಿಷಯವಾಗಿ ಜನಸಾಮಾನ್ಯರಿಗೆ ತಿಳಿಯುವಂತೆ ತಕ್ಕ ಏರ್ಪಾಡುಗಳನ್ನು ಕೈಕೊಳ್ಳುವುದು ಮಾನ್ಯ ಸರಕಾರದ ಆದ್ಯ ಕರ್ತವ್ಯವಾಗಿರುತ್ತದೆ. ನಮ್ಮ ದೇಶದಲ್ಲಿ ನಿರಕ್ಷರ ಜನರು ಬಹು ಸಂಖ್ಯಾತರಿರುವುದರಿಂದ ಈ ಸಂಬಂಧದಲ್ಲಿ ಮಾನ್ಯ ಸರಕಾರದವರು ಅಗತ್ಯವುಳ್ಳ ಪ್ರಚಾರಕಾರ್ಯವನ್ನು ಕೈಕೊಳ್ಳುವುದು ಅವರ ಪ್ರಥಮ ಕರ್ತವ್ಯವಾಗಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಜನಸಾಮಾನ್ಯರಲ್ಲಿ, ಈ ಆಜ್ಞೆಯ ಗುಣಗಳನ್ನು ಮನದಟ್ಟು ಮಾಡಿ ಅವರ ಆದರ ಸಹಕಾರಗಳನ್ನು ಪಡೆಕೊಳ್ಳುವಂತೆ ಸರ್ವ ಪ್ರಯತ್ನ ಮಾಡಿದರೇನೆ ಯೋಗ್ಯ ರೀತಿಯಲ್ಲಿ ಇದರ ಉದ್ದೇಶವು ಕೈಗೂಡಬಹುದು. ಬಹುಕಾಲದಿಂದ ಇಲ್ಲಿ ಪ್ರಸಾರವಾಗಿದ್ದ ಕುಡುಕತನವು ಒಂದೇ ಸವನೆ ತಡೆಯಲ್ಪಡುವುದು ತುಂಬಾ ಕಷ್ಟದ ವಿಷಯವು. ಇದರಿಂದ ಸಾವಿರಾರು ಮಂದಿ ನಿರುದ್ಯೋಗಿಗಳಾಗಿರಬಹುದು, ಆದ ಕಾರಣ ಈ ವಿಷಯವಾಗಿ ಸಂಬಂಧಪಟ್ಟ ಅಧಿಕಾರಿಗಳು ಅಲ್ಲಲ್ಲಿ ಯೋಗ್ಯ ಸಹಾಯಕ ಸಮಿತಿಗಳನ್ನು ಏರ್ಪಡಿಸಿ ತುಂಬಾ ಪ್ರಚಾರ ಕಾರ್ಯವನ್ನು ಮಾಡುವದೂ, ಸಂಬಂಧಪಟ್ಟ ಜನರಿಗೆ ಯೋಗ್ಯ ರೀತಿಯ ಶಿಕ್ಷಣಕೊಟ್ಟು ಅವರಿಗೆ ಲಾಭಕರವಾದ ಉದ್ಯೋಗವನ್ನು ತೋರಿಸಿಕೊಡುವದೂ, ಅವರ ಮುಖ್ಯ ಕರ್ತವ್ಯವಾಗಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ಯೋಗ್ಯ ಕ್ರಮಗಳನ್ನು ಕೈಕೊಳ್ಳುವರಾಗಿ ಹಾರೈಸುತ್ತೇನೆ.

ಈ ಸಂಬಂಧ ಆಯುರ್ವೇದಾಭಿಮಾನಿಗಳಲ್ಲಿ ಒಂದು ವಿನಂತಿ:-

ಪ್ರೊಹಿಬಿಶನ್ ಆಕ್ಟಿನ 16ನೇ ಕಲಮಿನನ್ವಯ ಆಸವಾರಿಷ್ಟ ವ ಮಾದಕ ಪದಾರ್ಥಗಳು ಸೇರಿದ ಇತರ ಔಷಧಿಗಳ ತಯಾರಿಸುವಿಕೆಯನ್ನು ಅಗತ್ಯವಿರುವ ಲೈಸೆನ್ಸ್‌ಗಳನ್ನು ಜಿಲ್ಲಾ ಕಲೆಕ್ಟರರಿಂದ ಪಡಕೊಂಡೇ ಕೈಕೊಳ್ಳಬೇಕಾಗಿರುತ್ತದೆ. ಈ ವಿಷಯದಲ್ಲಿ ಮಾನ್ಯ ಸರಕಾರದವರು ಯೋಗ್ಯ ಪ್ರಚಾರ ಕಾರ್ಯವನ್ನು ಮಾಡದೆ ಸಾಬಂಧ ಜನಸಾಮಾನ್ಯರಿಗೂ ಆಯುರ್ವೇದ ವೈದ್ಯ ವೃತ್ತಿಯವರಿಗೂ ತುಂಬಾ ತೊಂದರೆದಾಯಕವಾಗಿ ಕಂಡು ಬಂದಿರುತ್ತವೆ. ಹಲವು ಕಡೆಗಳಲ್ಲಿ ಸಭೆಗಳು ಜರಗಿ ಸರಕಾರದವರು ಆಯುರ್ವೇದ ಔಷಧಗಳ ವಿಷಯವಾಗಿ ಈ ರೀತಿಯ ಧೋರಣೆ ವಹಿಸಿದ್ದನ್ನು ಖಂಡಿಸಿ ನಿರ್ಣಯಗಳನ್ನು ಮಾಡಿ ಮಾನ್ಯ ಸರಕಾರದ ಗಮನಕ್ಕೆ ತಂದಿರುವ ಸಂಗತಿಗಳನ್ನು ವೃತ್ತ ಪತ್ರಿಕೆಗಳಲ್ಲಿ ಕಾಣಬಹುದು ಅಲ್ಲದೆ ಅಲ್ಲಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಆಯುರ್ವೇದ ಔಷಧಿಗಳನ್ನು ಮಾಡುವವರ ಕೂಡೆ ಆಸವಾರಿಷ್ಟಗಳನ್ನು ಅವಮಾನಾತು ಪಡಿಸಿದ ದೂರುಗಳೂ ಕೇಳಿ ಬರುತ್ತವೆ. ಅವರಿಗೆ ಈ ಹೊಸ ಆಕ್ಟಿನ ವಿಷಯವಾಗಿ ಏನೊಂದೂ ತಿಳಿಸದೆಲ್ಯಸನ್ನು ಪಡೆಯದೆ ಮಾರಬಾರದಾಗಿ ಮಾತ್ರ ತಿಳಿಸಿರುತ್ತಾರಾಗಿ ಕೂಡ ದೂರುಗಳು ಬಂದಿರುತ್ತವೆ. ಆದ ಕಾರಣ ಪ್ರೊಹಿಬಿಶನ್ ಆಕ್ಟಿನ ಪ್ರಕಾರ ಆಸವಾರಿಷ್ಟಗಳನ್ನು ಮಾಡುವವರೇ ಯಾ ಮಾರುವವರೇ ನಿರ್ದಿಷ್ಟಗೊಳಿಸಿದ ವಿಷಯ ಅವರಿಗೆ ಮನದಟ್ಟಾಗುವಂತೆ ತಿಳಿಸುವುದು ಅಗತ್ಯವಾಗಿರುತ್ತದೆ ಈ ವಿಷಯವಾಗಿ ನಾನು ಕೆಲವು ಮಾತುಗಳನ್ನು ತಿಳಿಸುವರೇ ಅಪೇಕ್ಷಿಸುತ್ತೇನೆ.

ಆಸವಾರಿಷ್ಟಗಳ ತಯಾರಿಕೆಯ ಸಮಯ ಅವುಗಳಲ್ಲಿ 'Alcohol' ಎಂಬ ಮದ್ಯಸಾರವು ಉತ್ಪನ್ನವಾಗುತ್ತದೆ ಆಸವಾರಿಷ್ಟಗಳನ್ನು ಅವುಗಳ ಗುಣದೋಷಗಳ ಮೇರೆಗೆ ಔಷಧರೂಪವಾಗಿ ಉಪಯೋಗಿಸುವರೇ ಅಡ್ಡಿಯಾಗದಂತೆ ಮಾನ್ಯ ಸರಕಾರದವರು ಬಹಳವಾಗಿ ವಿಚಾರಮಾಡಿ, ಮದ್ರಾಸಿನಲ್ಲಿರುವ ಆಯುರ್ವೇದ ಕಾಲೇಜಿನ ಪ್ರಿನ್ಸಿಪಾಲರಿಂದ ಅಗತ್ಯವಿರುವ ಸಲಹೆಗಳನ್ನು ಪಡೆಕೊಂಡು ವೈದ್ಯಕೀಯ ವೃತ್ತಿಯವರಿಗೆ ಯಾ ಅವುಗಳ ಸದುಪಯೋಗವನ್ನು ಮಾಡುವವರಿಗೆ ಏನೊಂದೂ ತೊಂದರೆಗಳಾಗದ ರೀತಿಯಲ್ಲಿ ಅಗತ್ಯವಿರುವ ಅನುಕೂಲತೆಗಳನ್ನು ಈ ಆಕ್ಟಿನಲ್ಲಿ ಸೇರಿಸಿರುತ್ತಾರೆ. ಆಸವಾರಿಷ್ಟಗಳ ದುರುಪಯೋಗವಾಗದಂತೆ ಈ ಪ್ರಕಾರ ಕ್ರಮಗಳನ್ನು ಜ್ಯಾರಿಗೆ ತಂದಿರುವುದು ನ್ಯಾಯವಾಗಿರುತ್ತದೆ. ಆಸವಾರಿಷ್ಟಗಳನ್ನು ನ್ಯಾಯವಾದ ರೀತಿಯಲ್ಲಿ ತಯಾರಿಸುವುದಕ್ಕೆ ಮತ್ತು ಅವುಗಳನ್ನು ಮಾರುವುದಕ್ಕೆ ಜಿಲ್ಲಾ ಕಲೆಕ್ಟರ್ ಧೊರೆಗಳವರಿಂದ ಅಗತ್ಯವಿರುವ ಲೈಸನ್ಸ್ ಪಡೆಯುವರೇ ಯಾವ ತೊಂದರೆಗಳೂ ಇರುವುದಿಲ್ಲ. ಪ್ರತಿಯೊಬ್ಬ ವೈದ್ಯಕೀಯ ವೃತ್ತಿಯವನು ತನ್ನ ಹೆಸರು, ವಿಳಾಸ, ಗ್ರಾಮ, ತಾಲೂಕು, ಮತ್ತು ವೈದ್ಯಕೀಯವೃತ್ತಿಯನ್ನು ಎಷ್ಟು ಸಮಯದಿಂದ ಮಾಡಿಕೊಂಡಿರುತ್ತಾನೆ ಎಂಬಿವೇ ವಿವರಗಳನ್ನೊಳಗೊಂಡ ಅರ್ಜಿಯನ್ನು ಸಂಬಂಧಪಟ್ಟ ಪ್ರೊಹಿಬಿಶನ್ ಇನ್‌ಸ್ಪೆಕ್ಟರವರ ಮುಖಾಂತ್ರ ಅವರ ಶಿಫಾರಸು ಸಮೇತ ಜಿಲ್ಲಾ ಕಲೆಕ್ಟರ ಧೊರೆಗಳವರಿಗೆ ಕಳುಹಿಕೊಟ್ಟಲ್ಲಿ ಕ್ರಮ ಪ್ರಕಾರವಾಗಿ ಅಗತ್ಯವಿರುವ ಲೈಸನ್ಸು ಏನೊಂದೂ ತೊಂದರೆಯಿಲ್ಲದೆ ಅಗತ್ಯವಿರುವ ಫೀಸನ್ನು ಕಟ್ಟಿಕೊಂಡು ಪಡಕೊಳ್ಳಬಹುದು. ಇಂತಹ ಅರ್ಜಿಗೆ ಮಾತ್ರ 2 ಆಣೆಯ ಅರ್ಜಿ ಚೀಟನ್ನು (Court fee label) ಅಂಟಿಸತಕ್ಕದ್ದು. ಲೈಸನ್ಸು ಎರಡು ತರದ್ದಾಗಿರುತ್ತದೆ.

1 ಫಾರ್ಮಸಿ ಲೈಸನ್ಸ್ (pharmacy licence)

2 ವೈದ್ಯಕೀಯ ವೃತ್ತಿಯ ಲೈಸೆನ್ಸ್ (Ayurvedic practitioners licence)

1 ನೇ ಫಾರ್ಮಸಿ ಲೈಸನ್ಸ್ ಪಡಕೊಂಡವರು ಯಾವ ಆಸವಾರಿಷ್ಟಗಳನ್ನು ತಯಾರಿಸಲೂ ಅಡ್ಡಿಯಿಲ್ಲ. ಅವುಗಳ ಪೈಕಿ ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಮೃಧ್ವಿಕಾಸವ, ಪಿಪ್ಪಲ್ಯಾಸವ, ನಾರಿಕೇಳಾಸವ ಮತ್ತು ಖರ್ಜೂರಾರಿಷ್ಟ ಈ ಆರು ಬಗೆಯ ಆಸವಾರಿಷ್ಟಗಳನ್ನು ಬಿಟ್ಟು ಬಾಕಿ ಉಳಿದ ಆಸವಾರಿಷ್ಟಗಳನ್ನು ಮಾರಾಟ ಮಾಡುವರೆ ನಿರ್ಬಂಧವಿರುವುದಿಲ್ಲ. ಈ ಆರು ಬಗೆಯ ಆಸವಾರಿಷ್ಟಗಳನ್ನು ವೈದ್ಯಕೀಯ ವೃತ್ತಿಯ ಲೈಸನ್ಸುದಾರರಿಗೆ ಎಷ್ಟನ್ನಾದರೂ ಕೊಡಬಹುದು. ಚಿಲ್ಲರೆಯಾಗಿ ಮಾರಾಟ ಮಾಡುವುದಾದರೆ ವೈದ್ಯಕೀಯ ವೃತ್ತಿಯ ಲೈಸನ್ಸ್‌ದಾರರಿಂದ ಕೊಡಲ್ಪಡಬಹುದಾದ ಚೀಟು-(prescription) ಗಳ ಪ್ರಕಾರ ಒಂದು ಬಾಟ್ಲಿಗೆ ಮೀರದಂತೆ ಮಾರಬಹುದು. ಇದರಿಂದ ಆಸವಾರಿಷ್ಟಗಳ ದುರುಪಯೋಗವಾಗಲಾರದೆಂದೂ, ವೈದ್ಯವೃತ್ತಿಯವರಿಗಾಗಲೀ, ಸದುಪಯೋಗ ಮಾಡುವವರಿಗಾಗಲೀ ತೊಂದರೆಯಾಗಲಾರದೆಂದೂ ಮಾನ್ಯ ಸರಕಾರದ ಅಭಿಪ್ರಾಯವಿರುತ್ತದೆ. ಸದ್ರಿ ಲೈಸನ್ಸಿಗೆ ವರ್ಷಾವಧಿ ರೂ 10/- ನ್ನು ಸರಕಾರದ ಖಜಾನೆಗೆ ಪಾವತಿಮಾಡಿ ಪ್ರತಿ ವರ್ಷ ಅದನ್ನು ಊರ್ಜಿತ (renew) ಗೊಳಿಸಬೇಕಾಗಿರುತ್ತದೆ. ಮೇಲ್ಗಡೆ ವಿವರಿಸಿದ ಆರು ಆಸವಾರಿಷ್ಟಗಳನ್ನು ಮಾತ್ರ ಕ್ರಮ ಪ್ರಕಾರದ ಲೆಕ್ಕ ಪತ್ರಗಳನ್ನಿಟ್ಟು, ವಹಿವಾಟು ನಡಿಸಬೇಕಾಗಿರುತ್ತದೆ.

2 ನೇ ವೈದ್ಯಕೀಯ ಲೈಸನ್ಸದಾರನು ಮೇಲ್ಗಡೆ ವಿವರಿಸಿದ ಆರು ಆಸವಾರಿಷ್ಟಗಳನ್ನು ತಯಾರಿಸಲು ಅರ್ಹನಾಗಿರುತ್ತಾನೆ. ಮತ್ತು ಸದ್ರಿ ಆರು ಆಸವಾರಿಷ್ಟಗಳನ್ನು ಫಾರ್ಮಸಿ ಲೈಸನ್ಸ್‌ದಾರರಿಂದ ಪಡಕೊಳ್ಳಬಹುದು. ಈ ಪ್ರಕಾರ ಪಡಕೊಳ್ಳುವ ಆಸವಾರಿಷ್ಟಗಳ ಬಾಬ್ತು ಕ್ರಮಪ್ರಕಾರವಾದ ಲೆಕ್ಕ ಪತ್ರಗಳನ್ನು ಇಟ್ಟು, ನ್ಯಾಯವಾದ ಚೀಟು (Prescription) ಮೇರೆಗೆ ಮಾರಬೇಕಾಗಿರುತ್ತದೆ. ಉಳಿದ ಆಸವಾರಿಷ್ಟಗಳನ್ನು ಮಾರುವರೆ ಯಾವ ನಿರ್ಬಂಧವೂ ಇರುವುದಿಲ್ಲ.

ಮೇಲ್ಗಡೆ ವಿವರಿಸಿದ ಕ್ರಮದಲ್ಲಿ ಆಯುರ್ವೇದ ಔಷಧಿಗಳ ಅಂದರೆ ಆಸವಾರಿಷ್ಟಗಳ ತಯಾರಿಕೆಗಾಗಲೀ ನ್ಯಾಯವಾದ ರೀತಿಯಲ್ಲಿ ಸದುಪಯೋಗಮಾಡುವವರಿಗೆ ಮಾರಲಿಕ್ಕಾಗಲೀ ಉಪಯೋಗಿಸಲಿಕ್ಕಾಗಲೀ ಹೆಚ್ಚಿನ ನಿರ್ಬಂಧಗಳಿಲ್ಲ. ಇವುಗಳ ದುರುಪಯೋಗವಾಗದಂತೆ ಮುಂಜಾಗ್ರತೆ ವಹಿಸಿ ಮಾನ್ಯ ಸರಕಾರದವರು ಮೇಲ್ಗಡೆ ವಿವರಿಸಿದ ಕ್ರಮದಲ್ಲಿ ಯೋಗ್ಯ ಕ್ರಮಗಳನ್ನು ಜ್ಯಾರಿಗೆ ತಂದ ವಿಷಯದಲ್ಲಿ ಆಯುರ್ವೇದಾಭಿಮಾನಿಗಳೆಲ್ಲರೂ, ಸಹಕರಿಸಿ ಆಯುರ್ವೇದ ಔಷಧಗಳು ಸದುಪಯೋಗಕ್ಕೇನೇ ಉಪಯೋಗವಾಗುವಂತೆ ಸಹಕರಿಸಬೇಕಾಗಿ ನನ್ನ ವಿನಂತಿ. ಅಲ್ಲದೆ ವೈದ್ಯಕೀಯ ವೃತ್ತಿಯವರಿಗೆ ಅಗತ್ಯವಿರುವ ಲೈಸನ್ಸ್‌ಗಳನ್ನು ಏನೊಂದೂ ತೊಂದರೆಯಿಲ್ಲದೆ ಸಿಗುವಂತೆ ಸಂಬಂಧಪಟ್ಟ ಅಧಿಕಾರಿಗಳೂ ಕೂಡ ಸಹಕಾರವನ್ನು ನೀಡುವಂತೆ ನನ್ನ ವಿನಂತಿ.

ಪಿ ಜನಾರ್ಧನ ನಾಯಕ್,
ಮೆನೇಜಿಂಗ್ ಡೈರೆಕ್ಟರ್, ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ 22-12-47.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಸಾದರ ಸ್ವೀಕಾರ ಮತ್ತು ವಿಮರ್ಶೆ

ದಿ ನಾರ್ದರ್ನ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್ ಇದರ 1946 ನೇ ಇಸವಿಯ ವಾರ್ಷಿಕ ಆಯ ವ್ಯಯ ಸೊತ್ತು ಬೋಣೆಗಳ ಲೆಕ್ಕಪತ್ರ ಸಹಿತವಾದ ವರದಿಯು ನಮ್ಮ ಅವಗಾಹನೆಗೆ ಬಂದಿದೆ. ಅಧಿಕೃತವಾದ ಆ ಅಂಕೆಸಂಖ್ಯೆಗಳು ಕಂಪೆನಿಯ ಸ್ಥಿರಭದ್ರತೆಯನ್ನೂ ಪುರೋಭಿವೃದ್ಧಿಯನ್ನೂ ಸ್ಪಷ್ಟವಾಗಿ ಸೂಚಿಸುತ್ತವೆನ್ನಲು ಸಂತೋಷವಾಗುತ್ತಿದೆ. ಕಂಪೆನಿಯ ನಿಧಿಯು ಇಂಡಿಯಾ ಸರಕಾರದ ಭದ್ರತಾಪತ್ರ (ಸೆಕ್ಯೂರಿಟಿಸ್), ಪೋಸ್ಟಲ್ ಸೇವಿಂಗ್ಸ್ ಸರ್ಟಿಫಿಕೇಟ್, ಇಂಡಿಯನ್ ರೈಲ್ವೇ, ಮುನ್ಸಿಪಲ್ ಪೋರ್ಟ್ ಎಂಡ್ ಟ್ರಸ್ಟ್, ಕಂಪೆನಿಯ ವಿಮಾಪತ್ರಗಳ ಮೇಲೆ ಕೊಟ್ಟ ಸಾಲ, ಬೊಂಬಾಯಿ ಮಂಗಳೂರುಗಳಲ್ಲಿ ಸ್ಥಿರಸೊತ್ತು, ಮುಂತಾದುವುಗಳಲ್ಲಿ ಅಬಾಧಿತವಾಗಿ ಇಡಲಾಗಿದೆ. ವಿಮಾಪತ್ರದಾರರಿಗೆ ವಿಶಿಷ್ಟಹೊಣೆಯಾಗಿರುವ ಲ್ಯಾಫ್ ಫಂಡು ಹಿಂದಿನ ವರ್ಷ ಸುಮಾರು ಮೂವತ್ತಾರೂವರೆ ಲಕ್ಷವಿದ್ದುದು ವರದಿಯ ವರ್ಷದಲ್ಲಿ ನಲುವತ್ತೇಳೂವರೆ ಲಕ್ಷ ರೂಪಾಯಿಗೆ ಏರಿರುವುದು ಮತ್ತೊಂದು ಭದ್ರತೆಯ ಲಕ್ಷಣ. ಹಿಂದಿನ ವರ್ಷಕ್ಕಿಂತ ವರದಿಯ ವರ್ಷದ ವಿಮಾ ವ್ಯವಹಾರವು ಶೇಕಡಾ 29.7 ಹೆಚ್ಚಾಗಿರುವುದು ಕಂಪೆನಿಯ ಉದ್ಯೋಗ ವೃದ್ಧಿಯನ್ನು ಸೂಚಿಸುತ್ತದೆ. ಎಲ್ಲ ಬಗೆಯಲ್ಲಿ ಬೆಲೆಏರಿಕೆಯ ಕಾಲದಲ್ಲಿ ಕಂಪೆನಿಯ ಆಡಳಿತದ ವೆಚ್ಚವು ಹಿಂದಿನ ವರ್ಷಕ್ಕಿಂತ ಕಡಿಮೆಯಾಗಿರುವುದು ಕಂಪೆನಿಯ ಮಿತವ್ಯಯ ಶೀಲತೆಯನ್ನು ವ್ಯಕ್ತಪಡಿಸುತ್ತೆ. ಕಂಪೆನಿಯು ಈ ಜಿಲ್ಲೆಯಲ್ಲಿಯೂ ತನ್ನದೇ ಆದ ದೊಡ್ಡದೊಂದು ಕಾರ್ಯಾಲಯವನ್ನು ಕಟ್ಟುವ ಜಾಗಕ್ಕಾಗಿ ಅರ್ಧಲಕ್ಷ ರೂಪಾಯಿ ಹಾಕಿದೆ. ಮುಂಬರುವ ವರ್ಷದಲ್ಲಿ ಸುಂದರವಾದ ಕಟ್ಟಡವನ್ನು ಕಟ್ಟಿಸುವ ಪೂರ್ವ ಸನ್ನಾಹಗಳನ್ನು ಮಾಡಿಯದೆ. ಹೀಗೆ ನಿಧಿನಿಕ್ಷೇಪಗಳಲ್ಲಿ ಭದ್ರತೆ ಮತ್ತು ಅಭಿವೃದ್ಧಿ, ಉದ್ಯೋಗ ವ್ಯವಹಾರದಲ್ಲಿ ಬೆಳವಣಿಗೆ, ವ್ಯಯಭಾಗದಲ್ಲಿ ಮುಂಜಾಗರೂಕತೆ ಮತ್ತು ಇಳಿತ ಮುಂತಾದ ಪುರೋವೃದ್ಧಿಯ ಲಕ್ಷಣಗಳು ಈ ವರದಿಯಿಂದ ತೋರಿಬರುತ್ತಿರುವುದು ಅಭಿನಂದನೀಯ. ನಮ್ಮ ಜಿಲ್ಲೆಯ ತರುಣೋತ್ಸಾಹಿಗಳೂ ವಿಮಾ ವ್ಯವಹಾರ ಚತುರರೂ ಆಗಿರುವ ಶ್ರೀ ಎಂ. ಸುಂದರ ರಾಮ ಶೆಟ್ಟರು ಮೆನೇಜರಾಗಿಯೂ ಶ್ರೀ. ಕೆ. ಪಿ. ಭವಾನಿ ಶಂಕರ ಶೆಟ್ಟರು ಮಂಗಳೂರು ಶಾಖಾ ಕಾರ್ಯದರ್ಶಿಗಳಾಗಿಯೂ ಇದ್ದು ಕಂಪೆನಿಯ ಈ ಭಾಗದ ಶ್ರೇಯಸ್ಸಿಗೆ-ಅಭಿವೃದ್ಧಿಗೆ ಕಾರಣರಾಗಿರುವುದು ಎತ್ತಿ ಹೇಳತಕ್ಕ ವಿಷಯವಾಗಿದೆ.

ಸ್ವೀಕಾರ—ವಿಜಯಾ ಕೆಫೆ, ಉಡುಪಿ; ಉಡುಪಿ ಶ್ರೀ ಕೃಷ್ಣ ಸ್ಟೋರ್ಸ್, ಕೆ. ಕೆ. ವ್ಯಾಸಭಾಗ ಎಂಡ್ ಸನ್ಸ್, ಉಡುಪಿ, ಬಡವರ ಬಂಧು, ಮಂಗಳೂರು, ಇವರ ಸುಂದರ ಕೆಲೆಂಡರುಗಳನ್ನೂ ಉಡುಪಿ ಮೊಜೆಸ್ಟಿಕ್ ಪ್ರೆಸ್ಸಿನವರ ವರ್ಷಭವಿಷ್ಯ ಮೊದಲಾದುವುಗಳಿಂದ ಕೂಡಿ ಜನಪ್ರಿಯವಾಗಿರುವ ಸರ್ವಧಾರಿ ಸಂವತ್ಸರದ ಶ್ರೀ ಕೃಷ್ಣ ಪಂಚಾಂಗವನ್ನೂ ಆತ್ಮಾದರದಿಂದ ಸ್ವೀಕರಿಸಿದ್ದೇವೆ.

ದಕ್ಷಿಣ ಕನ್ನಡ

ವಿವಿಧ ಧರ್ಮ ಸಮ್ಮೇಳನ ಧರ್ಮಸ್ಥಳ

ಕನ್ನಡ ಸಾಹಿತ್ಯದ ಮಹಾಸಭೆ

ಎರಡನೆಯ ದಿನ,—ತಾ. ೧೧ರಲ್ಲಿ—ವಿವಿಧ ಧರ್ಮ ಸಮ್ಮೇಳನದೊಡನೆ ಕನ್ನಡ ಸಾಹಿತ್ಯದ ಮಹಾಸಭೆಯೂ, ಹಿಂದಿನ ದಿನ ಸಭೆ ಸೇರಿದ್ದ ಭವ್ಯ ಸಭಾಂಗಣದಲ್ಲಿ ಶ್ರೀ. ಎಂ. ಸಿ. ಮಲ್ಲಪ್ಪ (ಪ್ರಾಂತಿಕ ಹಿಂದೂ ಮಹಾಸಭೆಯ ಅಧ್ಯಕ್ಷ, ಮೈಸೂರು)ಇವರ ಅಧ್ಯಕ್ಷತೆಯಲ್ಲಿಯೇ ಜರಗಿತು; ಶ್ರೀ. ಡಿ. ಮಂಜಯ್ಯ ಹೆಗ್ಗಡೆ ಎಂ. ಎಲ್. ಸಿ. ಅವರು 'ಈ ಜತೆ ಸಮ್ಮೇಳನವೇಕೆ?' ಎಂದು ವಿವರಿಸಿದ ಬಳಿಕ ಸಂಸ್ಕೃತ ಶಾಲೆಗಳ ಸುಪರಿಟೆಂಡೆಂಟರಾದ ಶ್ರೀ. ಬಾಲ ಸುಬ್ರಹ್ಮಣ್ಯಂ ಅವರ ಧರ್ಮಶಿಕ್ಷಣದ ವಿಷಯಕವಾದ ಆಂಗ್ಲ ಸಂಸ್ಕೃತ ಭಾಷೆಗಳ ಭಾಷಣವನ್ನು, ಶ್ರೀ. ಎಸ್. ಎಸ್. ಶೆಟ್ಟಿಯವರು, ಹೃದಯಂಗಮವಾಗಿ ಕನ್ನಡದಲ್ಲಿ ವಿವರಿಸಿದರು.

ಮೈಸೂರು ಮಹಾರಾಜಾ ಕಾಲೇಜಿನ ಸೈಕಾಲಜಿ ಲೆಕ್ಚರರ್ ಶ್ರೀ. ಎಸ್. ಎಸ್. ಶಾಸ್ತ್ರಿಗಳವರು ಹಾಸ್ಯಗರ್ಭಿತವಾಗಿ (ಕನ್ನಡದ) "ಪ್ರಾಂತಿಕ ಭಾಷಾ ಭೇದ ಸ್ವರೂಪದ" ಕುರಿತೂ, ಬೆಂಗಳೂರು ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ. ಕೆ. ಎಸ್. ಧರಣೇಂದ್ರಯ್ಯನವರು 'ಮಹಾಕವಿ ರನ್ನನ ಕೃತಿ'ಗಳ ಕುರಿತೂ ಪಂಡಿತರತ್ನಂ ಎ. ಶಾಂತಿರಾಜಶಾಸ್ತ್ರಿ, ಆಸ್ಥಾನ್ ಮಹಾವಿದ್ವಾನ್ ಅವರು 'ಪ್ರಾಚೀನ ಮಹಾಕವಿಗಳಾದ ಪಂಪ' ಮೊದಲಾದವರ ಕುರಿತೂ, ಮಾತಾಡಿದ ಬಳಿಕ, ಪ್ರಸಿದ್ಧ ಸಾಹಿತಿ ಶ್ರೀ. ಅ. ನ. ಕೃಷ್ಣರಾಯರು—ಎಲ್ಲ ಧರ್ಮೀಯರೂ ಕನ್ನಡವನ್ನು ಬೆಳೆಸಿದ ಕಾಲ ಮತ್ತು ವಿವರಗಳನ್ನು ತಿಳಿಸಿ ಜನಜೀವನ—ಸಾಹಿತ್ಯಗಳಿಗಿರುವ ಪರಸ್ಪರ ಸಂಬಂಧವನ್ನು ಸ್ಪಷ್ಟಪಡಿಸಿ 'ಕನ್ನಡದ ಸಣ್ಣ ಕತೆಗಳ ಮೂಲ ಪುರುಷರು ಶ್ರೀ. ಪಂಜೆಯವರೇ, ಹೊರತು ಶ್ರೀ. ಮಾಸ್ತಿಯವರಲ್ಲ'ವೆಂದು ಕಂಠೋಕ್ತವಾಗಿ ಸಾರಿ, ೧೯೦೦ರಿಂದ ಕನ್ನಡದಲ್ಲಿ ಉಂಟಾದ ಕ್ರಾಂತಿಯನ್ನೂ ಸಜೀವ ಅಮರ ಸಾಹಿತ್ಯಗಳ ಸ್ವರೂಪವನ್ನೂ ಬಣ್ಣಿಸಿ 'ಕನ್ನಡ ಭಾಷೆಯ ಉದ್ಧಾರವಾಗಬೇಕಾದರೆ, ಕರ್ನಾಟಕದ ಏಕೀಕರಣವಾಗಬೇಕೆ'ಂದರು.

ಶ್ರೀ. ಎಸ್. ಎಸ್. ಶೆಟ್ಟಿಯವರು ತಮ್ಮ ಪ್ರತಿಭಾಸಂಪನ್ನವಾದ ಭಾಷಣದಲ್ಲಿ ಶ್ರೀ. ಕೃಷ್ಣನ ಜೀವನಕ್ಕೆ ಸಂಬಂಧಿಸಿದ ಯಾದವ ಕುಲದ ಸಂಘಟನೆ" "ಬಾಲ ಲೀಲೆಗಳು" "ಗೋಪಿಕಾ ವಸ್ತ್ರಾಪಹರಣ, ಪ್ರೇಮಲೋಲುಪ್ತಿ" ಮೊದಲಾದ ಹಲವು ಸಂದರ್ಭಗಳನ್ನು [illegible] ವಿವರಿಸಿ, ಅವನ 'ರಾಜ್ಯಮಾನ್ಯತೆ'ಯ ಮರ್ಮವನ್ನು ಬಿಡಿಸಿ ಹೇಳಿ ನೆರೆದವರನ್ನೆಲ್ಲ ಬೆರಗು ಮಾಡಿದರು.

ಶ್ರೀ. ಕೆ. ಬಿ. ಜಿನರಾಜ ಹೆಗ್ಗಡೆಯವರು—'ಕರ್ನಾಟಕ ವಿಶ್ವವಿದ್ಯಾನಿಲಯ, ಅದಕ್ಕೆ ಸಂಬಂಧಿಸಿದ ಸಮಿತಿಯ ಕಾರ್ಯಕಲಾಪ, ಧರ್ಮ ಜಾಗ್ರತಿ ಮತ್ತು ಧಾರ್ಮಿಕ ಶಿಕ್ಷಣ' ಇವುಗಳ ಕುರಿತೂ, ವಿದ್ವಾನ್ ನಂಜುಂಡಾರಾಧ್ಯರು, ಬಸಪ್ಪ ಶಾಸ್ತ್ರಿಗಳ ಕನ್ನಡ 'ಶಾಕುಂತಲ ನಾಟಕ'ದ ಕುರಿತೂ ಮಹಾರಾಜ ಕಾಲೇಜಿನ ಫಿಲಾಸಫಿ ಲೆಕ್ಚರರ್ ಶ್ರೀ. ವೈ. ಜೆ. ಪದ್ಮರಾಜಯ್ಯ ಅವರೂ ಶ್ರೀ. ರಾಮಸ್ವಾಮಿ ಅವರೂ ಕನ್ನಡ ಭಾಷೆಯ ಕೆಲ ವಿಚಾರಗಳ ಕುರಿತೂ ಭಾಷಣ ಮಾಡಿದರು.

ಅಧ್ಯಕ್ಷರು ಒಬ್ಬೊಬ್ಬರ ಭಾಷಣವಾಗುತ್ತಲೇ ತಮ್ಮ ಅಭಿಪ್ರಾಯಗಳನ್ನು ಸೂಚಿಸುತ್ತ ಬಂದಿದ್ದು ಕೊನೆಗೆ ತಮ್ಮ ಬೋಧಪ್ರದ ಮಾಡ ಕೆಲ ಮಾತುಗಳಿಂದ ನೆರೆದವರನ್ನು ಸಂತೋಷಪಡಿಸಿದರು.

ಶ್ರೀ. ಡಿ. ಮಂಜಯ್ಯ ಹೆಗ್ಗಡೆಯವರು ಕಾಲೋಚಿತವಾಗಿ ಮಾತಾಡಿದ ಬಳಿಕ ಮೈಸೂರಿನ ಶ್ರೀ. ಜೆ. ಸ್ವಾಮಿದಾಸರು ವಂದಿಸಿದರು.

ಈ ಸಮಾರಂಭ ಕಾಲದಲ್ಲಿ ಕೊಚ್ಚಿ ಪ್ರಾಂತ್ಯದ ಶ್ರೀ. ಕೆ. ಎಸ್. ರಾಜಂ ಅಯ್ಯರವರು, ತಮ್ಮ ಮನೋಹರವಾದ ಭರತನಾಟ್ಯ ಪ್ರಾವೀಣ್ಯತೆಯಿಂದಲೂ, ಶ್ರೀ. ಹರಿದಾಸ ರಾಮಸ್ವಾಮಿ ನಾಯ್ಡು ಅವರು ತಮ್ಮ ಹರಿಕಥಾ ಚಾತುರ್ಯದಿಂದಲೂ ಸಭಾರಂಜನೆ ಮಾಡಿದರು. ಇದೇ ಜಾತ್ರೆಯ ವೇಳೆಗೆ ಮಂಗಳೂರಿನ ಶ್ರೀ. ಜೂರ್ಯ ಮತ್ತು ಅವರ ಗೆಳೆಯರು ಕೆಲವು ಉತ್ತಮ ನಾಟಕ ಪ್ರಯೋಗಗಳನ್ನು ನಡೆಸಿದ್ದರು.

ಮೂವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನ ಕಾಸರಗೋಡು

ಕನ್ನಡ ಸಾಹಿತ್ಯ ಸಮ್ಮೇಳನವು ಇದೇ ತಿಂಗಳ ತಾ. ೨೭, ೨೮, ೨೯ರಲ್ಲಿ ಜರಗುವುದಷ್ಟೆ. ಆಮಂತ್ರಣ ಪತ್ರಿಕೆಯು ಅಚ್ಚಾಗಲು ತಡವಾದುದರಿಂದ ಅನೇಕರಿಗೆ ಆಮಂತ್ರಣ ಕಳುಹಿಸಲು ಬಿಟ್ಟುಹೋಗಬಹುದು. ಈ ವಿಚಾರವನ್ನು ಯಾರೂ ಮನಸ್ಸಿನಲ್ಲಿಡಬಾರದು. ಕರ್ನಾಟಕದ ಹಿರಿಕಿರಿಯ ಸಾಹಿತಿಗಳಿಗೂ, ಪತ್ರಿಕೋದ್ಯೋಗಿಗಳಿಗೂ ಕನ್ನಡಾಂಬೆಯ ಸಕಲ ಪುತ್ರರಿಗೂ ನಮ್ಮ ಆದರದ ಆಮಂತ್ರಣ.

ಪತ್ರಿಕಾ ಪ್ರದರ್ಶನ

ಮೂವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕಾಲದಲ್ಲಿ ಪತ್ರಿಕಾ ಪ್ರದರ್ಶನವೊಂದು ನಡೆಯಲಿರುವುದು. ಅದಕ್ಕಾಗಿ ಎಲ್ಲಾ ಪತ್ರಿಕಾಕರ್ತರು ತಮ್ಮ ಪತ್ರಿಕೆಯ ಒಂದೊಂದು ಪ್ರತಿಯನ್ನು [illegible] ಶೀ, ಸಾಹಿತ್ಯ ಸಮ್ಮೇಳನ, ಕಾಸರಗೋಡು, ದ. ಕ. ಈ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿ.

ಸಮ್ಮೇಳನಾಧ್ಯಕ್ಷರ ಸಂಕ್ಷಿಪ್ತ ಪರಿಚಯ—ಕರ್ನಾಟಕದ ಪ್ರಸಿದ್ಧ ಸಾಹಿತಿಗಳೂ ಪತ್ರಿಕೋದ್ಯೋಗಿಗಳೂ ಆದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು ವಿಜಯನಗರ ರಾಜರ ಕುಲಗುರುಗಳಾಗಿದ್ದ ತಾತಾಚಾರ್ಯರ ವಂಶದಲ್ಲಿ ಜನಿಸಿದರು. 'ತಿರುಮಲೆ' ಎಂದು ಈ ವಂಶದ ಹೆಸರು. ಇವರ ಹಿರಿಯರ ಆರ್ಥಿಕ ಪರಿಸ್ಥಿತಿಯು ಕಠಿಣವಾದುದರಿಂದ ಇವರ ಚಿಕ್ಕಂದಿನ ವಿದ್ಯಾಭ್ಯಾಸವು, ಮನೆಯಲ್ಲೇ ಸಾಗಬೇಕಾಯಿತು. ಇವರ ವಿದ್ಯಾಭ್ಯಾಸವು ಚಿಕ್ಕಬಳ್ಳಾಪುರ ಹೈಸ್ಕೂಲಿನಲ್ಲಿಯೂ, ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿಯೂ ನಡೆಯಿತು. ಸಂಸಾರದ ಭಾರವು ಶರ್ಮರ ಮೇಲೆಯೇ ಬಿದ್ದುದರಿಂದ ಬಿ. ಎ. ತರಗತಿಯಲ್ಲಿಯೇ ಅವರು ವಿದ್ಯಾಭ್ಯಾಸವನ್ನು ನಿಲ್ಲಿಸಬೇಕಾಯಿತು. ಸಂಸಾರವನ್ನು ಸಾಗಿಸುವುದಕ್ಕೋಸ್ಕರ ಇವರು ಮದ್ರಾಸಿನ ಶಿಲಾಶಾಸನದ ಇಲಾಖೆಯಲ್ಲಿ ನಾಲ್ಕು ವರ್ಷಗಳ ವರೆಗೆ ಕೆಲಸಮಾಡಿದರು. ಈ ಸಮಯದಲ್ಲಿ ದಕ್ಷಿಣ ಕನ್ನಡದ ಎಷ್ಟೋ ಶಾಸನಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ಶರ್ಮರು ತುಂಬಾ ದುಡಿದಿದ್ದಾರೆ. ೧೯೨೧ರ ಸಮಯದಲ್ಲಿ ಶರ್ಮರು ಕಾಂಗ್ರೆಸ್ಸಿಗೆ ಸೇರಿ ಸ್ವಲ್ಪ ಮಟ್ಟಿಗೆ ರಾಷ್ಟ್ರ ಸೇವೆಯನ್ನು ಸಲ್ಲಿಸಿದರೆಂದು ಹೇಳಬಹುದು. ಇಷ್ಟರಲ್ಲೇ ಇವರು ಸಾಹಿತ್ಯಿಕ, ಚಾರಿತ್ರಿಕ ವಿಷಯಗಳಲ್ಲಿ ಸಾಕಷ್ಟು ಜ್ಞಾನಸಂಪಾದಿಸಿದ್ದರು.

ತಾತಾಚಾರ್ಯರು ಮಾಡಿದ ಮುಖ್ಯವಾದ ಸಾಹಿತ್ಯದ ಸೇವೆಯೆಂದರೆ, ವಿಶ್ವಕರ್ನಾಟಕ ವಾರ ಪತ್ರಿಕೆಯನ್ನು ಹೊರಡಿಸಿ ನಿರ್ಭೀತಿಯಿಂದ ನಡೆಸಿದುದು. ಇವರು ಪತ್ರಿಕೆಯನ್ನು ಹೊರಡಿಸಿದ ಸಮಯದಲ್ಲೇ ಮೈಸೂರು ಮತ್ತು ಇಂಡಿಯ ಸರಕಾರಗಳಿಗೆ ಎದುರಾಗಿ ಹೋರಾಡಬೇಕಾಯಿತು. ಇವರು ಪತ್ರಿಕೋದ್ಯಮದಲ್ಲಿ ಹೊಸ ಯುಗಪ್ರವರ್ತನೆ ಪ್ರಾರಂಭಿಸಿದರೆನ್ನಬಹುದು. ಪತ್ರಿಕೆಯ ಭಾಷಾ ಪರಿಶುದ್ಧತೆಯ ವಿಷಯಕ್ಕೆ ವಿಶೇಷ ಗಮನ ಕೊಟ್ಟ ಸಂಪಾದಕರಲ್ಲಿ ಇವರೂ ಒಬ್ಬರು. ೧೯೪೪ರಲ್ಲಿ ವಿಶ್ವಕರ್ನಾಟಕ ದಿನ ಪತ್ರಿಕೆಯನ್ನು ಪ್ರಾರಂಭಿಸಿ ಸಾಹಿತ್ಯ ಸೇವೆಯಲ್ಲಿ ಇನ್ನಷ್ಟು ಭಾಗಿಗಳಾದರು. ಕತ್ತಲೆಯಲ್ಲಿ ಅಡಗಿದ್ದ ಎಷ್ಟೋ ಕನ್ನಡ ರತ್ನಗಳನ್ನು ವಿಶ್ವಕರ್ನಾಟಕದ ಮೂಲಕ ಬೆಳಕಿಗೆ ತಂದವರೆಂದರೆ ತಾತಾಚಾರ್ಯ ಶರ್ಮರು.

ಮೊನ್ನೆ ತಾನೇ ಮೈಸೂರಲ್ಲಿ ನಡೆದ ಪ್ರಚಂಡ ಚಳುವಳಿಗೆ ಎದುರಾಗಿ ಹೋರಾಡಿ ಶರ್ಮರು ಜೈಲುವಾಸವನ್ನನುಭವಿಸಿದರು. ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಚುನಾಯಿತರಾದ ಇವರನ್ನು ಕೂಡ ಸರಕಾರವು ಕಾರಾಗೃಹದಲ್ಲಿಟ್ಟ ಮೇಲೆ ಇನ್ನೇನು ಹೇಳಬೇಕು? ರಾಜಕಾರಣದ ಮೂಲಕ ಪೇ ನಾಡ ನುಡಿಗಳ ಸೇವೆಯಾಗಬೇಕೆಂದು ಪ್ರತಿಪಾದಿಸುವವರಲ್ಲಿ ಶರ್ಮರೂ ಒಬ್ಬರು. ಅನಾರೋಗ್ಯವು ಇವರನ್ನು ಆಗಾಗ ಪೀಡಿಸುವದರಿಂದ ಇವರು ಈಗ ಕ್ಷೀಣವಾಗಿ ಬಹಳ ವೃದ್ಧರಂತೆ ಕಾಣುತ್ತಿದ್ದಾರೆ. ಇವರ ಪ್ರಾಯ ಸೀಗ ಕೇವಲ ೫೦ ವರ್ಷ. ಇಂತಹ ಸಾಹಿತಿಗಳೂ, ರಾಜಕೀಯ ಧುರಂಧರರೂ ಪ್ರಸಿದ್ಧ ಪತ್ರಿಕೋದ್ಯೋಗಿಗಳೂ ಆದ ತಾತಾಚಾರ್ಯ ಶರ್ಮರ ಅಧ್ಯಕ್ಷತೆಯಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನವು ಪ್ರಗತಿಪರವಾಗಿ ಸರ್ವಜನಹಿತಕರವಾಗಿ ನಡೆಯಲೆಂದು ಹಾರೈಸುವೆವು.

—"ಈಶ್ವರ"

ಬನ್ನಾಡಿ—ಬನ್ನಾಡಿ ಶ್ರೀ ಸರವು ಪಂಚ ಪಾಠಶಾಲೆಯ ವಾರ್ಷಿಕೋತ್ಸವವು ತಾ. ೧೪ರಲ್ಲಿ ಸಂಜೆ ಅಲ್ಲಿಯ ಶಾಲಾ ವಠಾರದಲ್ಲಿ ಶ್ರೀ. ಎ. ಶೀನಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಬಿ. ಸುಬ್ಬಣ್ಣ ಹೆಗ್ಗಡೆಯವರು ಪಾಠಶಾಲೆಯಿಂದ ಜನತೆಗೆ ದೊರೆಯುವ ಪ್ರಯೋಜನಗಳ ಕುರಿತು ಭಾಷಣವಿತ್ತರು. ಲಘೂಪಹಾರ, ಧನ್ಯವಾದಾರ್ಪಣೆ, ರಾಷ್ಟ್ರಗೀತೆಯೊಂದಿಗೆ ವಾರ್ಷಿಕೋತ್ಸವವು ಕೊನೆಗೊಂಡಿತು.

ಬೈಲೂರು—ಇಲ್ಲಿಯ ರಾಷ್ಟ್ರ ಸೇವಾದಳದ ಪತಿನಿಧಿ [illegible] ಕಳೆದ ತಾ. ೫ರಲ್ಲಿ ಆಕಸ್ಮಾತ್ತಾಗಿ ಬೆಂಕಿ ತಗಲಿ ಸುಟ್ಟು ಹೋದ ಮನೆಯ ಬಡ ಮಾಲಿಕರಿಗೆ ನಗದು ರೂಪಾಯಿ 10/ ಮತ್ತು ವಸ್ತ್ರ ಸಹಾಯವೀಯಲಾದುದು ಸ್ತುತ್ಯವಿದೆ.

ಪಾಂಗಾಳ ಗುಡ್ಡೆ ಆರೋಗ್ಯ ಮತ್ತು ಶಿಶು ಸಂಗೋಪನ—ಗೋಷ್ಠಿಯು ಮಿಶನ್ ಶಾಲೆಯಲ್ಲಿ ತಾ. ೧೯ರಲ್ಲಿ ಮಿಶನ್ ಆಸ್ಪತ್ರೆ ಸುಪರಿಂಟೆಂಡೆಂಟರಾದ ಡಾ. ಸ್ಟ್ರೀಫೆಲ್ಡರ್ ಇವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು ಶ್ರೀ ವಿಷ್ಣುಮೂರ್ತಿ ಆಯ್ಯ ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು.

'ಆದರ್ಶ'—ಎಂಬ ಮಾಸಪತ್ರಿಕೆಯೊಂದು ಮುಂಬಯಿಯಿಂದ ಜನವರಿಯಲ್ಲಿ ಹೊರಡಲಿದೆ.

ಪ್ರಕಟಣೆ

ಉಡುಪಿ:—ದಿ ನ್ಯೂ ಗಾರ್ಡಿಯಾನ್ ಆಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು—ಇದರ ಚೀಫ್ ಆರ್ಗನೈಸರರಾದ, ಶ್ರೀ. ಕುರುಕಾಲು ಗಣಪಯ್ಯ ಸೆಟ್ಟಿ ಕಂಪೆನಿಯ ಕಾರ್ಯಾರ್ಥವಾಗಿ, ಈ ದಿನ ಮಲ್ಪೆಯಲ್ಲಿ ಸ್ಟೀಮರ್ ಹತ್ತಿ ಬೊಂಬಾಯಿಗೆ ಪ್ರಯಾಣ ಬೆಳೆಸಿದರು.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd..
Moolky, S. K.

NOTICE

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. S. No. 436/1947

ಸೀತಾರಾಮ ಬಲ್ಲಾಳ್ ... ವಾದಿ.

ಮತ್ತು

ಶೀನಪ್ಪಸೆಟ್ಟಿ ಕೂಡಾ— ಪ್ರತಿವಾದಿ.

ಮುವರೊಳಗೆ

ಮೇಲ್ಕಂಡ ವ್ಯಾಜ್ಯದ ೩ನೇ ಪ್ರತಿವಾದಿ ರಾಮಸೆಟ್ಟಿ, ಚಂದಕ್ಕ ಸಡ್ತಿ ಮಗ—ಉಡುಪಿ ತಾಲ್ಲೂಕು ಕೊರಂಗ್ರಪಾಡಿ ಗ್ರಾಮದ ಕೆಂಪ್ಯೂರು ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ:—

ವಾದಿಯು ನೀವು ಕೂಡಾ ಪ್ರತಿವಾದಿರ ಮೇಲೆ ಮೂಲಗೇಣಿ ಗೇಣಿಬಾಕಿ ಮತ್ತು ಬಡ್ಡಿ ಕೂಡಾ ರೂಪಾಯಿ 1058-6-3ಕ್ಕೆ ದಾಖಲು ಮಾಡಿರುವ ಮೇಲ್ಕಂಡ ವ್ಯಾಜ್ಯವನ್ನು ತಾ. 20-1-48ಕ್ಕೆ ನಿಮ್ಮ ನೋಟೀಸು ಬಗ್ಗೆ ಮುಟ್ಟಿರುತ್ತದೆ. ಆದ್ದರಿಂದ ನೀವು ಸದ್ರಿ ತಾ. 20-1-48ನೇ ದಿವಸ ಬೆಳಿಗ್ಗೆ 10ಘಂಟೆಗೆ ಖುದ್ದಾಗಿಯಾಗಲೀ-ಪ್ಲೀಡರ್ ಮೂಲಕವಾಗಿ ಆಗಲೀ ಈ ಕೋರ್ಟಿನಮುಂದೆ ಹಾಜ್ರಾಗಿ ನಿಮ್ಮ ಆಕ್ಷೇಪಣೆಯಿದ್ದಲ್ಲಿ ಜ್ಞಾಪಿಸಿರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ವ್ಯಾಜ್ಯವು ಫೈಸಲು ಮಾಡಲ್ಪಡುವುದು.

P. V Achar.
Vakil for plaintiff.

ಉಡುಪಿ ತಾರೀಕು 19-12-47

ಇದೇ ತಾ. **8-2-1948**ನೇ ಆದಿತ್ಯವಾರ ಸಾಯಂ. ಘಂಟೆ **6**ಕ್ಕೆ ಮಂಗಳೂರಲ್ಲಿ

ಸುರತ್ಕಲ್ ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ

ವಿಖ್ಯಾತ ಗಾಯಕಿ

ಶ್ರೀಮತಿ ಯಂ. ಯಸ್. ಸುಬ್ಬುಲಕ್ಷ್ಮಿ ಇವರ

ಸಂಗೀತ ಕಚೇರಿ

ವಿಖ್ಯಾತ ವಿದ್ವಾನ್ ಶ್ರೀ. ಚೌಡಯ್ಯ ಇವರ ಪಿಟೀಲು ಶ್ರೀ. ಕಲ್ಪತಿ [illegible] ಮೃದಂಗ, ಶ್ರೀ. ಆಲಂಗುಡಿ ರಾಮಚಂದ್ರನ್ ಇವರ ಘಟವಾದ್ಯ.

ಟಿಕೇಟು ದರ: ರೂ. 100, ರೂ. 25, ರೂ. 10, ರೂ. 5.

The South Kanara Agriculturists' Co-operative Marketing Society Ltd., No. 3901.

Head Office: PUTTUR.

NOTICE

Is hereby given that a general Body meeting of the members of the Society will be held in the Co-operative Buildings, Puttur on Wednesday the 31st December 1947 at 2 P. M. for the transaction of the business noted in Agenda below.

5-12-1947.
Puttur,

B. Prabhakar Rao,
President.

Agenda.

1. Consideration of the following ammendments to the existing bylaws.

Bylaw No. 1. In the second sentence *for* "Putur" in the three places where it occurs substitue "Mangalore".

Bylaw No. 4A. Delete.

Bylaw No. 6. *Substitute:* "Secretary" for "President"

Bylaw No. 16. In the 3rd sentence *add* at the end, "and assumes office" After the 5th sentence *insert*. the Board of Directors shall appoint a paid Secretary".

Add at the end of the Bylaw:—

"Any member of the Board of Directors may at any time resign from his office by sending a letter of resignation to the Secretary of the Society but such resignation shall take effect only from the date on which it is accepted by the Board of Directors".

Bylaw No. 16 *Add* the following as bylaw 16A:-

"Notwithstanding anything contained in Bylaw No. 16, the President of the South Kanara Central Co-operative Bank, Ltd., for the time being, shall *ex-officio* be the President of the Society for a period of nine years from the date of termination of the period of office of the present President. During the period of this transitory Bylaw, the number of members to be elected to the Board by the General Body shall be limited to eleven".

Bylaw No 17. In the 6th sentence for "President" *substitute* "Secretary".

Bylaw No 17A. In the 4th sentence for "President" *substitute* "Secretary".

Bylaw No. 17B In the *first* sentence *for* "President" *substitute* "Secretary".

Bylaw No. 19 (a) In the first sentence (of this bylaw) *delete* the following "and shall ex-officio be the Treasurer".

(c) for "President" substitute "Secretary" in the two places where it occurs

Change the existing (c) into (d) and *insert* the following as (c).

(c) The Secretary shall be responsible for the executive administration of the Society and shall ex-officio be the Treasurer".

Bylaw No. 21. In the second sentence *add* at the end "or the Secretary whoever is selected by the Executive Committee to discharge this function".

In the third sentence *substitute* the word, "both" by the words, "The Officer so authorised".

Bylaw No. 23 In the second sentence *for* "Vice President" *substitute* "Secretary".

2 Sanction for writting off the following items

Bombay Branch:—Outstanding Bills.

	Dr Balance.				Dr Balance.		
1. H. Devaraj	172	9	3	2 B. Daththriya	31	1	9
3. P. L. Bhagat	102	12	0	4. A. V. Hakim	2.776	5	9
5. Baboo Kadap	177	2	6	6. B. Laljee	65	8	6
7. G. R. Karnad	22	6	9	8. Giridhar	53	7	0
9. G. Mahadev	10	0	0	10. K. R. Rao	32	0	0
11. S. Desai	170	0	0	12. Laxman	8	10	0
13. Cash sales	* 1,500	0	0	(*Curency notes which were in			
14. P. Odharaj	1,613	6	0	the safe, in Explosion)			

15. Old defaulters without particulars	3,112	2	9	
16. Outstanding less than rupee	6	3	3.	
Credit balances	344	15	6	(Barred by limitation)
A. B. Kurla	1	5	6	
A. Isafallu	49	8	3	
9853-11-6	**395-13-3**			

Kasaragod Branch Loan account	5	0	0	Particulars not traceable.
Mulladka Branch Loan account & inerest.	15	0	0	A. S. Shetty
Udipi Branch Loan account	19	0	0	Particulars not traceable.

Note:—Society members are requested to send their delegates with copies of resolution electing them as such.

ದಕ್ಷಿಣ ಕನ್ನಡ ಕೃಷಿಕರ ಸಹಕಾರಿ ಮಾರಾಟ ಸಂಘ ಲಿಮಿಟೆಡ್, ಪುತ್ತೂರು.

ನೋಟೀಸು.

1947ನೇ ಇಸವಿ ದಸಂಬರ ತಿಂಗಳ ತಾರೀಕು 31ನೇ ಬುಧವಾರ ದಿನ ಅಪರಾಹ್ನ ಗಂಟೆ 2ಕ್ಕೆ ಪುತ್ತೂರು ಸಹಕಾರಿ ಕಟ್ಟಡದಲ್ಲಿ ಸಂಘದ ಮಹಾಸಭೆಯು ಈ ಕೆಳಗಿನ ವಿಷಯಗಳನ್ನು ತೀರ್ಮಾನಿಸುವುದಕ್ಕಾಗಿ ಸೇರುತ್ತದೆ ಎಲ್ಲಾ ಸದಸ್ಯರೂ ಬರ ಬೇಕಾಗಿವಿನಂತಿ

ಪುತ್ತೂರು.
5—12—1947.

ಬಿ. ಪ್ರಭಾಕರ ರಾವ್,
ಅಧ್ಯಕ್ಷ.

ವಿಷಯಗಳು

1. ಸಂಘದ ಈಗ ಯಿರುವ ಉಪನಿಬಂಧನೆಗಳಿಗೆ ಈ ಕೆಳಗಿನಂತೆ ತಿದ್ದುಪಡಿ ಮಾಡುವ ವಿಚಾರ.

ಉಪನಿಬಂಧನೆ 1. ಈ ನಿಬಂಧನೆಯಲ್ಲಿ ಮೂರುಕಡೆಗಳಲ್ಲಿ ತೋರುವ "ಪುತ್ತೂರು" ಎಂಬುದರ ಬದಲಿಗೆ "ಮಂಗಳೂರು ಎಂತ ತಿದ್ದಿಕೊಳ್ಳುವುದು.

ಉಪನಿಬಂಧನೆ 4A. ಈ ಉಪನಿಬಂಧನೆಯನ್ನು ಲೋಪಮಾಡುವುದು

ಉಪನಿಬಂಧನೆ 6. ಇದರಲ್ಲಿ ಕಾಣುವ "ಅಧ್ಯಕ್ಷ" ಎಂಬುದರ ಬದ್ಲಿಗೆ "ಕಾರ್ಯದರ್ಶಿ" ಎಂತ ಬದಲಾಯಿಸುವುದು.

ಉಪನಿಬಂಧನೆ 16 ಮೂರನೇ ವಾಕ್ಯದಲ್ಲಿ ಆಖೈರಿಗೆ ಈ ಕೆಳಗಿನದ್ದನ್ನು ಸೇರಿಸುವುದು. "ಮತ್ತು ಅಧಿಕಾರವಹಿಸಿಕೊಳ್ಳುವ ವರೇಗೆ ಇರತಕ್ಕದ್ದು"

ಸದ್ರಿ ಉಪನಿಬಂಧನೆಯಲ್ಲಿ 5ನೇ ವಾಕ್ಯದ ನಂತರ ಈ ಕೆಳಗಿನದ್ದನ್ನು ಸೇರಿಸುವುದು. "ಆಡಳಿತೆ ಮಂಡಳಿಯವರು ಒಬ್ಬ ಸಂಬಳದಾರ ಕಾರ್ಯದರ್ಶಿಯನ್ನು ನೇಮಿಸತಕ್ಕದ್ದು"

ಈ ಉಪನಿಬಂಧನೆಯ ಆಖೈರಿಗೆ ಈ ಕೆಳಗಿನದನ್ನು ಸೇರಿಸುವುದು. "ಆಡಳಿತ ಮಂಡಳಿಯ ಯಾವ ಮೆಂಬರನಾದರೂ ಕಾರ್ಯದರ್ಶಿಯವರೀಗೆ ಬರಹ ಮೂಲಕ ಬರೆದು ತನ್ನ ಆಡಳಿತ ಮಂಡಳಿತನಕ್ಕೆ ಯಾವಾಗಬೇಕಾದರೂ ರಾಜಿನಾಮೆಯನ್ನು ಕೊಡಬಹುದು; ಪರಂತು ಅಂಥಾ ರಾಜಿನಾಮೆಯು ಆಡಳಿತ ಮಂಡಳಿಯವರು ಸ್ವೀಕರಿಸಿದ ತಾರೀಕಿನಿಂದ ಮಾತ್ರ ಜ್ಯಾರಿಗೆ ಬರತಕ್ಕದ್ದು.

ಉಪನಿಬಂಧನೆ 16 ಈ ಕೆಳಗಿನದ್ದನ್ನು 16A ನಿಬಂಧನೆಯಾಗಿ ಸೇರಿಸುವುದು.

"ಉಪನಿಬಂಧನೆ 16ರಲ್ಲಿ ಏನೇ ಇರಲಿ; ಈಗಿನ ಅಧ್ಯಕ್ಷರು ತನ್ನ ಅಧ್ಯಕ್ಷತನದ ಆಫೀಸು ಮುಗಿದ ನಂತ್ರ ಒಂಭತ್ತು ವರ್ಷಗಳ ವರೇಗೆ ದಕ್ಷಿಣ ಕನ್ನಡ ಸೆಂಟ್ರಲ್ ಕೋ ಓಪರೇಟಿವ ಬೇಂಕ್, ಲಿಮಿಟೆಡ್, ಇದರ ಪ್ರಕೃತ ಅಧ್ಯಕ್ಷರು ಈ ಸಂಘದ ಅಧ್ಯಕ್ಷರಾಗಿ ಇರತಕ್ಕದ್ದು. ಈ ತಾತ್ಕಾಲಿಕ ಉಪನಿಬಂಧನೆಯು ಜ್ಯಾರಿಯಲ್ಲಿ ಯಿರುವವರೇಗೆ ಮಹಾಸಭೆಯಿಂದ ಆಡಳಿತ ಮಂಡಳಿಗೆ ಚುನಾಯಿಸಲ್ಪಡುವ ಮೆಂಬರರ ಸಂಖ್ಯೆಯು ಹನ್ನೊಂದು ಆಗಿರತಕ್ಕದ್ದು.

ಉಪನಿಬಂಧನೆ 17. ಇದರ ಆರನೇ ವಾಕ್ಯದಲ್ಲಿ ತೋರುವ "ಅಧ್ಯಕ್ಷ" ಎಂಬುದರ ಬದಲಿಗೆ "ಕಾರ್ಯದರ್ಶಿ" ಎಂತ ಓದುವುದು.

ಉಪನಿಬಂಧನೆ 17A. ನಾಲ್ಕನೇ ವಾಕ್ಯದಲ್ಲಿ ತೋರುವ "ಅಧ್ಯಕ್ಷ" ಎಂಬುದರ ಬದಲು "ಕಾರ್ಯದರ್ಶಿ" ಎಂತ ಓದುವುದು.

ಉಪನಿಬಂಧನೆ 17B ಒಂದನೆಯ ವಾಕ್ಯದಲ್ಲಿ "ಅಧ್ಯಕ್ಷ" ಎಂತ ತೋರುವಲ್ಲಿ "ಕಾರ್ಯದರ್ಶಿ" ಎಂತ ಓದುವುದು.

ಉಪನಿಬಂಧನೆ 19 (a) ಇದರ ಪ್ರಥಮ ವಾಕ್ಯದಲ್ಲಿ ತೋರುವ "ಹುದ್ದೆ ಪ್ರಕಾರ ಖಜಾನ್ಜಿಯಾಗಿರತಕ್ಕದ್ದು" ಎಂಬುದನ್ನು ಲೋಪಮಾಡುವುದು

ಉಪನಿಬಂಧನೆ 19 (c) ಇದರಲ್ಲಿ ಎರಡು ಸ್ಥಳಗಳಲ್ಲಿ ತೋರುವ "ಅಧ್ಯಕ್ಷ" ಎಂಬುದರ ಬದಲಿಗೆ "ಕಾರ್ಯದರ್ಶಿ" ಎಂತ ಓದುವುದು.

ಉಪನಿಬಂಧನೆ 19 (c) ಎಂಬುದನ್ನು 19 (d) ಎಂತ ಓದುವುದು ಮತ್ತು ಈ ಕೆಳಗಿನದನ್ನು 19 (c) ನಿಬಂಧನೆಯಾಗಿ ಸೇರಿಸುವುದು.

"ಕಾರ್ಯದರ್ಶಿಯವರು ಸಂಘದ ಕಾರ್ಯನಿರ್ವಾಹಕ ಮೇಲ್ವಿಚಾರಕ್ಕೆ ಜವಾಬ್ದಾರರಾಗಿರತಕ್ಕದ್ದು ಮತ್ತು ಹುದ್ದೆ ಪ್ರಕಾರ ಖಜಾನ್ಜಿಯಾಗಿರತಕ್ಕದ್ದು".

ಉಪನಿಬಂಧನೆ 21. ಇದರ 2ನೇ ವಾಕ್ಯದಲ್ಲಿ ಈ ಕೆಳಗಿನದ್ದನ್ನು ಸೇರಿಸುವುದು. "ಅಥವಾ ಕಾರ್ಯದರ್ಶಿಯವರು ಕಾರ್ಯ ನಿರ್ವಾಹಕ ಮಂಡಳಿಯವರು ಈ ಬಗ್ಗೆ ಯಾರನ್ನು ಚುನಾಯಿಸುತ್ತಾರೋ ಅವರು"

ಉಪನಿಬಂಧನೆ 21 "ಇಬ್ಬರ ಗೈರು ಹಾಜರಿಯಲ್ಲಿ" ಎಂಬುದರ ಬದಲಿಗೆ "ಅಧಿಕಾರಿಸಲ್ಪಟ್ಟ ಆಫೀಸರರು" ಎಂತ ಓದುವುದು.

ಉಪನಿಬಂಧನೆ 23 ಇದರಲ್ಲಿ ಕಾಣುವ "ಉಪಾಧ್ಯಕ್ಷ" ಎಂಬದರ ಬದಲಿಗೆ "ಕಾರ್ಯದರ್ಶಿ" ಎಂತ ಓದುವುದು.

2. ಈ ಕೆಳಗಿನ ಐಟೆಮ್‌ಗಳನ್ನು ಸಂಘದ ಲೆಖ್ಖದಿಂದ ವಜಾ ಬರಿಯುವ ಬಗ್ಗೆ ಮಂಜೂರಾತಿ.

ಬೊಂಬೈ ಬ್ರಾಂಚಿನಲ್ಲಿ ಬರತಕ್ಕ ಬಿಲುಗಳು.

					ಬಾಕಿ.		
1. ಎಚ್. ದೇವರಾಜ್,	172	9	3.	12. ಲಕ್ಷ್ಮಣ,	8	10	0.
2. ಬಿ. ದತ್ತಾತ್ರೇಯ,	31	1	9.	13. ನಗದಿ ವಿಕ್ರಿತ,	1500	0	0.
3. ಪಿ. ಯಲ್. ಭಗತ್,	102	12	0.	(ಬೊಂಬೈ ಸ್ಫೋಟನದ ಅವಗಾಹದಲ್ಲಿ ಕರೆನ್ಸಿ			
4. ಎ. ವಿ. ಹಕೀಮ,	2776	5	9.	ನೋಟುಗಳು ಟ್ರೆಜರಿಯಲ್ಲಿದ್ದವುಗಳು).			
5. ಬಾಬು ಕಡ,	177	2	6.	14. ಪಿ. ಓದರಾಜ,	1613	6	0.
6. ಬಿ. ಲಾಲಜಿ,	65	8	6.	15. ವಿವರವಿಲ್ಲದ ಹಳೆ ಕುಳವಾರು ಬಾಕಿಗಳು	3112	2	9.
7. ಜಿ. ಆರ್. ಕಾರ್ನಾಡ,	22	6	9.				
8. ಗಿರಿಧರ್,	53	7	0.	16. ರೂಪಾಯಿ ಒಂದಕ್ಕಿಂತ ಕಡಿಮೆಯಾದ ಬಾಕಿಗಳು	6	3	3.
9. ಜಿ. ಮಹದೇವ,	10	0	0.				
10. ಕೆ. ಆರ್. ರಾವ್,	32	0	0.				
11. ಯಸ್. ದೇಸಾಯಿ,	170	0	0.		**9853-11-6.**		

ಸಲತಕ್ಕ ಬಾಬುಗಳು,	344	15	6.	(ಅವಧಿನಾಟಿದ್ದು)
ಎ. ಬಿ. ಕುರ್ಲಾ	1	5	6.	
ಎ. ಇಸಾಫುಲ್ಲು,	49	8	3.	
	395-13-3.			

ಕಾಸ್ರಗೋಡು ಶಾಖೆ, ಸಾಲದ ಲೆಖ್ಖ.	5	0	0.	ವಿವರ ವಿಲ್ಲದ್ದು.
ಮುಳ್ಳೇರ್ಯ ಶಾಖೆ, ಸಾಲದ ಲೆಖ್ಖ, ಮತ್ತು ಬಡ್ಡಿ	15	0	0.	ಎ. ಯಸ್. ಶೆಟ್ಟಿ.
ಉಡುಪಿ ಶಾಖೆ ಸಾಲದಲೆಖ್ಖ,	19	0	0.	ವಿವರ ವಿಲ್ಲದ್ದು.

ಸೂಚನೆ:—ಸಂಘದ ಸದಸ್ಯರು ತಮ್ಮ ಪ್ರತಿನಿಧಿಗಳನ್ನು ಅವರನ್ನು ನೇಮಿಸಿದ ನಿರ್ಣಯದ ಯಥಾ ನಕ್ಲು ಸಮೇತ ಕಳುಹಿಸಿ ಕೊಡಬೇಕಾಗಿ ವಿನಂತಿ

(೨ನೇ ಪುಟದಿಂದ).

ಜನ್ಮ ಶತ್ರುಗಳ ಮೇಲೆ ಇವರು ತೋರಿರುತ್ತಿರುವ ನಮ್ರತೆ ವಿಷಯಗಳು ವಿಶ್ವಾಸಿಗರ ಕ್ರೋಧಾವೇಶಗಳಿಗೆ ಪಾತ್ರವಾಗಿವೆ. ಸರ್ವ ಮತಪ್ರಿಯತೆಯು ಕಂಪಾಂಗಿನಂತಿರುವ ಇವರ ರಾಜಕೀಯ ನಡತೇ ನಿಯಮಗಳಾದರೋ, ತಮ್ಮ ನಾಯಕನ ಜಾಹೀರು ಸಮರ್ಥಕರಾಗಿರುವ ಒಂದೇ ಕಾರಣದಿಂದ ಹಲವು ಅಯೋಗ್ಯ ವ್ಯಕ್ತಿಗಳಿಗೆ ವಜ್ರಕವಚದಂತಾಗಿ ಸಮರ್ಥಿಸಿದೆ

ಒಳಾಂತರ್ಲಾಗಗಳು

ಬಿಕ್ಕಟ್ಟಿನ ಸನ್ನಿವೇಶಗಳಲ್ಲೆಲ್ಲಾ ರಾಜಗೋಪಾಲಾಚಾರ್ಯರ ವರ್ತನೆಗಳ ಆಳದಲ್ಲಿ ಅಂತರ್ಭಾಗ್ಗಗಳ ಸಿಡಿತ ಕಾಣಿಸುತ್ತಿದೆ. ಅಂದು ಸತ್ಯಮೂರ್ತಿಗಳನ್ನು ಒಂದು ಬದಿಗೆ ಸರಿದು ನಿಲ್ಲುವಂತೆ ಮಾಡಿದ, ಅವರನ್ನು ಮಂತ್ರಿಮಂಡಲದಿಂದ ಹೊರಗೆ ಇರುವಂತೆ ಮಾಡಿದ ಆಚಾರ್ಯರ ಚಮತ್ಕಾರಗಳ ಗುಟ್ಟು ವೈರಿಗಳಿಗಾಗಲೀ ಮಿತ್ರರಿಗಾಗಲೀ ಗೊತ್ತಿರದ ಸಮಸ್ಯೆಯಾಗಿದೆ. 1946ರಲ್ಲಿ ಕಾಂಗ್ರೆಸ್ಸಿನೊಳಗೆ ಸೇರಿಕೊಳ್ಳಲು ಅವರು ಮಾಡಿದ ಪ್ರಯತ್ನ ಮತ್ತು ಚುನಾವಣೆ ಕ್ಷೇತ್ರದಿಂದಲೇ ಆಕಸ್ಮಿಕವಾಗಿ ಅವರು ಹೊರಗುಳಿದುದೂ ಅಷ್ಟೇ ಕೌತುಕದ ಸಂಗತಿಗಳು; ಪರಸ್ಪರ ಹೊಂದಿಕೆಯಿಲ್ಲದ ಇಂತಹ ವರ್ತನೆಗಳಲ್ಲೂ ರಾಜಕೀಯ ಪಂಥ ಮತ್ತು ಖಾಸಗೀ ಸಂಬಂಧಗಳೊಳಗಿನ ತೀವ್ರ ತಿಕ್ಕಾಟಗಳನ್ನು ಕಾಣದಿರುವದಸಾಧ್ಯವಾಗುತ್ತದೆ. 1936ರಲ್ಲಿ ತನ್ನ ಅಮೂಲ್ಯಾನುಯಾಯಿಯೊಬ್ಬನ ಶಿಸ್ತು ಭಂಗದಿಂದ ಜಿಗುಪ್ಸೆಗೊಂಡು ರಾಜಾಜಿ ತನಗೆ ತಾನೇ ಏಕಾಂತವಾಸದ ಶಿಕ್ಷೆ ವಿಧಿಸಿಕೊಂಡಿದ್ದರು. ಅವರ ಬೆನ್ನಲ್ಲೇ ಈ ಅಜ್ಞಾತವಾಸವು ಸೆರೆಮನೇವಾಸಕ್ಕಿಂತ ಕಠಿಣವೆಂಬುದನ್ನು ಕಂಡುಕೊಂಡರು.

ನಾಯಕರ ನಡುವೆ?

ರಾಜಗೋಪಾಲಾಚಾರ್ಯರ ಸಂಗವು ವಿಚಾರ ರಹಿತ 'ಬೆಪ್ಪ'ನಿಗೆ ಮಾತ್ರ ಕಷ್ಟಕರವಾಗಿರುವುದಲ್ಲ. ಚಿತ್ರಕುಂಗ್ರಿಯ ಧುರೀಣರಿಗೂ ಇವರ ಸಹವಾಸವು ಸುಗಮವಾಗಿ ಕಾಣುವದಿಲ್ಲ. ಇವರ ಭಾವನಾವಾದವು ಪಂಡಿತ ಜವಾಹಿರಲಾಲರದಕ್ಕಿಂತ ಸ್ಪಷ್ಟ; ಇವರ ವ್ಯವಹಾರ ಶಕ್ತಿಯು ಸ ಸರ್ದಾರ್ ವಲ್ಲಭಭಾಯಿಯವರದಕ್ಕಿಂತ ಶುದ್ಧ; ಗಾಂಧಿತ್ವವನ್ನು ಅರಿತು ವರ್ತಿಸುವುದರಲ್ಲಿ ಇವರು ಬಾಬು ರಾಜೇಂದ್ರ ಪ್ರಸಾದರಿಗಿಂತ ಮುಂದೆ. ಆದರೂ ರಾಷ್ಟ್ರೀಯ ಧೋರಣೆ ನಿರೂಪಿಸುವುದರಲ್ಲಿ ಇವರ ಸ್ಥಾನವು ಎರಡನೇ ಪಂಕ್ತಿಯಲ್ಲೇ! ಡಾ। ಪಟ್ಟಾಭಿಗೆ ನಿಯೋಜಿಸಲ್ಪಟ್ಟಿದ್ದ, ಸುಭಾಸ್ ಬೋಸರಿಗೊಮ್ಮೆ ದೊರೆತಿದ್ದ, ಜವಾಹಿರಲಾಲರಿಗೆ ಮೂರು ಬಾರಿ ಒತ್ತಾಯದಿಂದ ಕೊಡಲ್ಪಟ್ಟಿದ್ದ ಗೌರವವು ರಾಜಗೋಪಾಲಾಚಾರ್ಯರತ್ತ ಒಮ್ಮೆಯೂ ಮುಖ ಮಾಡಿದುದಿಲ್ಲ. ಅದೇಕೆ? ಕಳೆದ 20ವರುಷಗಳಲ್ಲಿ ಪ್ರತಿವರ್ಷವೂ ಮುಂದಿನ ಕಾಂಗ್ರೆಸ್ ಅಧ್ಯಕ್ಷನನ್ನಾರಿಸುವ ಪ್ರತಿಯೊಂದು ಸಂದರ್ಭದಲ್ಲೂ ರಾಜಗೋಪಾಲಾಚಾರ್ಯರ ನೆನಪುಮಾಡಲೊಬ್ಬನಿಂದಲೂ ಆದುದಿಲ್ಲ. ಸಿಮ್ಲಾ ಮಾತುಕತೆಗಳ ವೇಳೆಯಲ್ಲಿ— ಆ ವೇಳೆಯ ದೀರ್ಘಕಾಲಾನಂತರವೂ— ರಾಜಾಜಿ "ಕೂಡಾ ಆಮಂತ್ರಿಸಲ್ಪಟ್ಟರು" ವರ್ಗಕ್ಕೇನೆ ಸೇರಿದ್ದರು

ಢಿಲ್ಲಿಯಿಂದ ಕಲ್ಕತ್ತಕ್ಕೆ

ಕಳೆದ ಆಗೋಸ್ತಿನ ಹೊಸವ್ಯವಸ್ಥೆಯಂತೆ ಹಿಂದೀ ಗವರ್ನರರುಗಳು ನೇಮಿಸಲ್ಪಟ್ಟಾಗ, ಒಂದು ಹೆಸರು ಸಾರ್ವಜನಿಕ ವಿಮರ್ಶಕರಿಂದ ಸಂತಾಪಪೂರ್ಣ ಸೊಲ್ಲನ್ನು ಹೊರಡಿಸಿದ್ದಿತು. ಶ್ರೀ ರಾಜಗೋಪಾಲಾಚಾರ್ಯರನ್ನು ಢಿಲ್ಲಿಯಿಂದ ಕಲ್ಕತ್ತಕ್ಕಟ್ಟಿದರೇಕೆ? ಅಧಿಕಾರ—ಸ್ಥಾನದಲ್ಲಿದ್ದವರನ್ನು ಆಡಂಬರ ಸೀಟಕ್ಕೆ ಇಂಜಿನ್ ಕೋಣೆಯಲ್ಲಿದ್ದವರನ್ನು 'ಸ್ವಿಚ್ಚ್ ಬೋರ್ಡ್'ಗೆ—ವರ್ಗಾಯಿಸಿದ್ದೇಕೆ? ಎಂಬಕುರಿತು ಅವರೆಲ್ಲಾ ಏನೇನೋ ಊಹಿಸಹತ್ತಿದರು. 1935ರ ಶಾಸನಾನ್ವಯದ ಗವರ್ನರನಿಗೆ ಕೆಲವು ಅಧಿಕಾರಗಳೇನೋ ಇದ್ದುವು ಆದರೆ 1937ರಲ್ಲಿ ಅದರೊಳಗೆ ಹೊಗಿಸಿದ ಹೊಸಾಂಶಗಳು ಅವನ ರೆಕ್ಕೆಗಳನ್ನು ಕತ್ತರಿಸಿಹಾಕಿದ್ದವು. ಸ್ವರಾಜ್ಯಾಧಿಕಾರ ದಾನವಂತೂ ಆತನ ಕೈಕಾಲುಗಳನ್ನೂ ಕಟ್ಟಿಹಾಕಿದೆ. ಆಡಂಬರ ಮತ್ತು ಥಳಕಿನ ಕೆಲವಂತವೇನೋ ಇನ್ನೂ ಉಳಿದಿದೆ. ಆದರೆ ಪಾಲಾಗಿ ಹೋಗಿರುವ ಬಂಗಾಳದಲ್ಲಿ ಅವುಗಳು ಕೂಡಾ ಬಹಳಾಂಶ ಕಡಿಮೆಯಾಗಿವೆ ದೇಶ ವಿಭಜನೆಯನ್ನು ಬೋಧಿಸಿದ ಪ್ರಥಮ ಕಾಂಗ್ರೆಸಿಗನನ್ನೇ ಇಬ್ಭಾಗಿಸಲ್ಪಟ್ಟ ಆ ಬಂಗಾಳದತ್ತಂಗನ್ನಾಳಲು ನೇಮಿಸಿದ ತಾಳಮೇಳದ [illegible] ಟೀಕೆ ಮಾಡಿದ್ದಾರೆ. ಗಾಂಧೀ ಮಹಾತ್ಮೆಯಿಂದ ಅದ್ಭುತ ನಿರ್ವಾಣವಿನ್ನೂ ಆಗಿಲ್ಲ; ಈ ಸ್ಥಾನದಲ್ಲಿ ತಂಬ ಅನಾಯಗಳಿಷ್ಟೇ ಇವೆ. ಶ್ರೀ ಶರಚ್ಚಂದ್ರ ಬೋಸರಿಂದಂತೂ ಅನಿರೀಕ್ಷಿತ ನಿಷೇಧ ಸೂಚನೆ ಬಂದಿದೆ. ಕರಿಪತಾಕೆಯ ಸ್ವಾಗತ ಪಡೆದ ಪ್ರಥಮ ಕಾಂಗ್ರೆಸ್ ಗವರ್ನರ್ ರಾಜಾಜಿಯ ಮೇಲೆ ದ್ವೇಷ ಜಿಗುಪ್ಸೆಗಳ ರಾಶಿಯೇ ಹೇರಲ್ಪಟ್ಟಿದೆ. ತನ್ನ ಸಾರ್ವಜನಿಕ ಜೀವನದಲ್ಲಿ ಪಡಿಮೂಡಿ ತೋರಿದ್ದ ಅನನ್ಯ ಎದೆಗಾರಿಕೆಯಿಂದ ಆಚಾರ್ಯರು ತನ್ನೀ ಹೊಸ ಉದ್ದಿಷ್ಟೆಯನ್ನು ಕೈಕೊಂಡಿದ್ದರು ಅವರ ದೃಢ ಚಾತುರ್ಯ, ಕಠಿಣ ಆತ್ಮ ಸಂಯಮನ, ಮತ್ತು ಆಧ್ಯಾತ್ಮಿಕ ತತ್ತ್ವನಿರೂಪಣೆಗಳು ಅಲ್ಪಬುದ್ಧಿಯವರ ಎಲ್ಲಾ ಪ್ರದರ್ಶನಗಳೆದುರಲ್ಲೂ ಇವರನ್ನು ವಿಜಯಿಯನ್ನಾಗಿ ಮಾಡಿದುವು. ಹದಾ ಉಕ್ಕಿನಂತಹ ಅವರ ಸ್ಫೂರ್ತಿಯು ಎಲ್ಲಾ ದುರಂತಗಳನ್ನೂ ಕಡೆಯಿಸಿತು. ತಾತ್ಕಾಲಿಕ ಗವರ್ನರ್ ಜನರಲನ ಅವಶ್ಯಕತೆಯೊದಗಿದಾಗ ಆಚಾರ್ಯರೇ ನೇಮಕಗೊಂಡರು. ರಾಷ್ಟ್ರವು ಈ ಆರಿಸುವಿಕೆಯನ್ನು ಸಂತೋಷ ಪೂರ್ವಕ ಸಮರ್ಥಿಸಿತು.

ಭ್ರಮಾತೀತ ಮನುಷ್ಯ

ಚಾತುರ್ಯದಲ್ಲಿ ಶ್ರೀ ರಾಜಗೋಪಾಲಾಚಾರ್ಯರು ಅತೀ ಎತ್ತರವಿದ್ದಾರಾದರೆ, ಭಾವ ಪರವಶತೆಯಲ್ಲಿ ತರಗೆಲೆಯಷ್ಟು ಒಣಗಿದ್ದಾರೆ ಅವರು ಅತ್ಯಂತ ನಿಸ್ವಾರ್ಥಿ. ಆದರೆ ಇದರೊಂದಿಗೆ ಒಂದು ರೀತಿಯ ಸಾದಾ ವಿಲಾಸಿತೆಯನ್ನೂ ನಿರ್ಮಿಸಿದ್ದಾರೆ. ಗಾಂಧೀಜೀಯವರ ಮೇಲೆ ಇಷ್ಟು ವಿಶ್ವಾಸ ಗೌರವಗಳಿದ್ದರೂ ಮೂಲಗುಣಗಳವುಟ್ಟಿಗೆ ರಾಜಗೋಪಾಲಾಚಾರ್ಯರು ಗಾಂಧಿಜೀಗಿಂತ ತೀರಾ ಭಿನ್ನವಿದ್ದಾರೆ, ಎಂದಿವರ ವಿಮರ್ಶಕರ ಮಾತು. ಗಾಂಧಿಯವರು ಮೂರು ಕ್ರೈಸ್ತ ಸದ್ಗುಣಗಳ ಅತ್ಯುನ್ನತ ಪ್ರತಿರೂಪವಾಗಿದ್ದಾರೆ; ಆದರೆ ರಾಜಗೋಪಾಲಾಚಾರ್ಯರಲ್ಲಿ ವಿಶ್ವಾಸ ಕಡಿಮೆ; ಸದಾಶೆ ಅತ್ಯಲ್ಪ; ಔದಾರ್ಯವಿಲ್ಲ. ಇದು ನಿಜಸ್ಥಿತಿಗೆ ವಿರುದ್ಧವಾದ ಅತಿಶಯೋಕ್ತಿಯೆಂಬುದು ನಿಸ್ಸಂದೇಹ ಆದರೆ ಈ ಆರೋಪವೆದ್ದಿರುವುದು, ಆಚಾರ್ಯರಿಗೆ ಜನತೆಯ ಲಾಲಸೆಗಳ ಕಡೆಗಿರುವ ವೈರಾಗ್ಯಭಾವ ಮತ್ತು ಜನರ ಶಕ್ತಿಗಿಂತ ಹೆಚ್ಚಾಗಿ ದೌರ್ಬಲ್ಯಗಳನ್ನೇ ಪರಿಶೋಧಿಸುವ ಅವರ ನೋಟಗಳ ಮೇಲಿಂದಲೇ ಯಾರಾದರೂ ಪ್ರಥಮಬಾರಿ, ಅಥವಾ ಏನಾದರೊಂದು ಕೆಲಸದ ಮೇಲೆ ಇವರ ಭೇಟಿಗೆ ಹೋದಾಗ, ಅಲ್ಲಿ "ಆತ್ಮೀಯತೆಯ ಕಾರಂಜಿ" ಸಿಡಿತವನ್ನವನು ಕಾಣಲಾರ. ಇವರು ಕಟ್ಟುನಿಟ್ಟಾಗಿ ಕೆಲವೊಮ್ಮೆ ಕಠೋರವಾಗಿ ಇದ್ದುಬಿಡುತ್ತಾರೆ. ಅವರ ಗ್ರಹಣಶಕ್ತಿಯೆಷ್ಟು ಪರಿಪೂರ್ಣವಿದೆಯೆಂದರೆ, ಆಕಸ್ಮಾತ್ ಇಲ್ಲವೇ ಹಿಂದಿನಿಂದಬಂದು ಯಾವ ಸಂಕಷ್ಟವೂ ಅವರನ್ನಾಕ್ರಮಿಸುವಂತಿಲ್ಲ. ಅವರ ಅಮೋಘ ಊಹಾಶಕ್ತಿ, ಮತ್ತು ಕ್ರಿಮಿನಲ್ ಕೇಸುಗಳ ವಕೀಲನಾಗಿದ್ದ ಅನುಭವಗಳು ಅವರ ಕಣ್ಣಾಪ್ರಕಾಶಕ್ಕೊಂದು ಬಣ್ಣ ಕೊಟ್ಟಂತಿದೆ; ಅವರದರಿಂದ ಲೋಕವನ್ನು ನೋಡುತಿದ್ದಾರೆ.

ದಣಿದ ಮುದುಕ

ಸರಕಾರೀ ಭವನದ ಸಂಭ್ರಮಾಡಂಬರಗಳು—ತನ್ನ ಎಪ್ಪತ್ತನೇ ಜನ್ಮದಿನದ ಸಂತೋಷ ಸಮಾರಂಭಗಳು—ಎಷ್ಟೇ ಇದ್ದರೂ ಶ್ರೀ ರಾಜಗೋಪಾಲಾಚಾರ್ಯರು ಈಗ ದಣಿದು ಹಣ್ಣಾಗಿ ಬೇಕು. ಜೀವನದ ಕಟು ಫಲಗಳನ್ನು ಸವಿಯಲು ಅವರಿಂದ ಸಾಧ್ಯವಿಲ್ಲ. ಉಕ್ಕಿನಂತಹ ಸಂಕಲ್ಪ ಶಕ್ತಿಯ ಬಲದಿಂದ ಎಂತಹ ಪರೀಕ್ಷೆಗಳಲ್ಲೂ ಆತ್ಮಸಂತೋಷವನ್ನನುಭವಿಸಲು ಅವರು ಕಲಿತಿದ್ದಾರೆ. ಆದರೆ ಆಚಾರ್ಯರ ನಿಕಟ ಪರಿಚಯವಿರುವವರು ಅವರ ಒಳಗಡೆಯಲ್ಲೊಂದು ಉರಿ ಜ್ವಲಿಸುತ್ತಿರುವುದನ್ನು ಕಂಡುಕೊಳ್ಳಬಹುದು. ಲೋಕವಿದನ್ನರಿಯದು. ಕಾರಣವೆಂದರೆ ಆಚಾರ್ಯರು, ಆ ದಿನ ಘಟ್ಟಿಯವರಿಂದ ಚೆಲ್ಲಲ್ಪಟ್ಟ ಚಿನ್ನ ತುಂಬಿದ ತಾರಿನಂತೆಯೇ ಸುಶೋಭಿತ ಪುಷ್ಪಹಾರಗಳನ್ನೂ ಮೃದು ಒಳನಗೆಯೊಡನೆ ಅಂಗೀಕರಿಸಿಕೊಳ್ಳುತಿದ್ದಾರೆ. ಎಂತಹ ಬಿಸಿ ಚರ್ಚೆಗಳ ಸಂದರ್ಭದಲ್ಲಾದರೂ, ಕೆರಳಿದ ಸ್ಫೂರ್ತಿ ಅಥವಾ ಕವಡು ಮನಸ್ಸನ್ನು ಆಚಾರ್ಯರು ಪ್ರದರ್ಶಿಸಿದುದಿಲ್ಲ. ಆಚಾರ್ಯರು ಅವಸರದಿಂದೇನಾದರೂ ಆಡಿದ, ಅಥವಾ ಬಾಯಿತಪ್ಪಿ ಬಂದ ಮಾತಿಗಾಗಿ ಆಮೇಲೆ ಕ್ಷಮೆ ಕೇಳಿದ ಒಂದೇ ಒಂದು ನಿದರ್ಶನ ಇದುವರೆಗಿಲ್ಲ. ಆಚಾರ್ಯರ ಮೆದುಳೊಳಗೆ ಪ್ರಚಂಡ ಸೂರ್ಯನ ಪ್ರಕಾಶ--ಆದರೆ ಹೃದಯದೊಳಗೆ ಮುಚ್ಚಂಜೆಯ ನಸುಗೆಂಪು ಇದ್ದಂತೆ ಲೋಕಕ್ಕೆ ಕಾಣುತ್ತಿದೆ. ಅವರಲ್ಲೊಂದು ವಿಲಕ್ಷಣ ಆತ್ಮವಿಶ್ವಾಸವಿದೆ; ಆದರೆ ಅನ್ಯರಮೇಲಿರುವ ವಿಶ್ವಾಸ ಕಡಿಮೆ; ಪರಕೀಯರ ಮೇಲೆ ಹಾಕಿದ ಈ ಅಲ್ಪ ನಂಬಿಕೆಯಿಂದ ಅವರಿಗೆ ಗಣ್ಯ ಮುನಾಫ ಬಂದಿಲ್ಲ. ಪ್ರತಿಯೊಬ್ಬರೂ ಅವರನ್ನು ಶ್ಲಾಘಿಸುತ್ತಾರೆ; ಎಲ್ಲರೂ ಗೌರವಿಸುತ್ತಾರೆ; ಆದರೆ ಪ್ರೀತಿಸುವವರು ಕಡಿಮೆ; ಸಾರ್ವಜನಿಕ ಮಾರ್ಗದರ್ಶಕನೆಂದು ಅವರ ಮೇಲೆ ನಂಬಿಕೆಯಿಡುವವರು ಅದಕ್ಕೂ ಕಡಿಮೆ. ಆಚಾರ್ಯರು ತನ್ನ ನ್ಯಾಯವಾದ ಪಾಲಿಗೆ ಮಿಕ್ಕಿ ನಿಂದೆ ದೂಷಣೆಗಳನ್ನು ಪಡೆದಿದ್ದಾರೆ. ಇವರು ಅವುಗಳನ್ನು ಕಡೆಗಣಿಸಬಲ್ಲರು. ಆದರೂ, ಇಷ್ಟೊಂದು ಅವಿವೇಕಿಗಳಿದ್ದಾರಲ್ಲಾ ಎಂಬೊಂದು ಚಿಂತೆಯಾತನೆ ಅವರ ಹೃದಯಾಂತರಾಳದಲ್ಲಿ ಇದ್ದೇ ಇದೆ

ಕೊಲ್ಲೂರು ಶ್ರೀಮೂಕಾಂಬಿಕಾ ದೇವಸ್ಥಾನ.

ಗಾಡಿ, ಎತ್ತುಗಳು ಮಾರಾಟದ ಪ್ರಕಟಣೆ.

ದೇವಸ್ಥಾನದ ಬಾಬ್ತು ಸುಮಾರು ರೂ. 1200|-ಕ್ರಯ ಬಾಳುವ ಗಾಡಿ ಮತ್ತು ಒಂದು ಜತೆ ಗಾಡಿ ಎತ್ತುಗಳು ಮಾರಾಟಕ್ಕಿವೆ ಖಾಯಿಸ್ ಉಳ್ಳವರು ಟೆಂಡರು ಫಾರ್ಮ ಮತ್ತು ಮಾಹಿತಿಗಾಗಿ ಈ ಕೆಳಗಿನವರಿಗೆ ಕೂಡಲೇ ಬರಕೊಳ್ಳಬಹುದು. ಟೆಂಡರುಗಳನ್ನು ತಾ 15-1-1948 ರ ತನಕ ಸ್ವೀಕರಿಸಲಾಗುವುದು.

ಬಿ ನಾರಾಯಣ ಶೆಟ್ಟಿ,
B. A. B. L.
ಎಕ್ಸಿಕ್ಯೂಟಿವ್ ಆಫೀಸರ್,
ಕೊಲ್ಲೂರು ಶ್ರೀಮೂಕಾಂಬಿಕಾ ದೇವಸ್ಥಾನ,
ಕೊಲ್ಲೂರು ಪೋಸ್ಟ್.



Approved firm by the Govt. of Mysore
Certified by the Agent of the Govt. of Ceylon & India.

The name that at once spells confidence and security offers Attractive schemes to suit needs of all.

Respectable Representatives

WANTED

On lucrative terms.

For full particulars write to

Managing Director

The Security Provident Insurance Co. Ltd.

Hassan Chambers, Parsee Bazar Street, Fort, Bombay 1

CHAMPAE'S

Snow & Castrex

Sole Distributers for India

Prop: K. G. NAYAK,

Santhekatte, UDIPI, S K.

ಮಾನವಂತತನದ ಸೋಗಿನಿಂದ ನಡೆವ ಅನಾಚಾರ-ತಾರುಣ್ಯದುಬ್ಬಿನಿಂದಾದ ಒಂದು ಕ್ಷಣದ ಅವಿವೇಕಕ್ಕಾಗಿ ಸಮಾಜ ಬಹಿಷ್ಕಾರ—

ವ್ಯಭಿಚಾರಿಣಿ ಯಾರು?

ಬೆಲೆ: ರೂ. 1-0-0. ಅಂಚೆ ಮೂಲಕ ರೂ. 1-4-0.

ಹಿಂದೂಸಮಾಜದ ಕ್ರಾಂತಿಕಾರಕ, ಹೃದ್ರಾವಕ, ವಿಚಾರ ಪ್ರಚೋದಕ ನವೀನ ನಾಟಕ-

ಪ್ರೇಮ ವಿಜಯ

ಬೆಲೆ: ರೂ. 1-0-0 ಅಂಚೆ ಮೂಲಕ ರೂ. 1-4-0

ಮಾನವನ 'ಜೀವನ ಸಂಗ್ರಾಮ'ದ ಚಿತ್ರವೊಂದನ್ನು ಚಿತ್ತವೇಧಕವಾಗಿ ಚಿತ್ರಿಸುವ ನವೀನ ಸಾಮಾಜಿಕ ನಾಟಕ

ಜೀವನ ಸಂಗ್ರಾಮ

ಬೆಲೆ ರೂ. 1-8-0; ಟಪ್ಪಾಲು ದ್ವಾರಾ ರೂ. 1-12-0.

ಸ್ವಾತಂತ್ರ್ಯವೀರ ಸಾವರಕರರು

ಹಿಂದೂ ಸಂಸ್ಕೃತಿ ಮತ್ತು ಹಿಂದೂರಾಷ್ಟ್ರಕ್ಕಾಗಿ ಸರ್ವತ್ಯಾಗ ಮಾಡಿದ ವೀರ ಸಾವರಕರರ ಉಜ್ವಲ ಜೀವನ ಚರಿತ್ರೆ.

ಬೆಲೆ 1-4-0 ಟ. ದ್ವಾರ 1-8-0

ಕಿರಿಯರ ಪ್ರಪಂಚದ ಪ್ರಕಟಣೆ

ಕದಂಬ

ಹನ್ನೆರಡು ಕತೆಗಳ ಸಂಗ್ರಹ

ಹೆಂಗುಸರ ಸೂಕ್ಷ್ಮ ಮನೋವೇದನೆಗಳನ್ನು ಕಲಾಪೂರ್ಣವಾಗಿ ಚಿತ್ರಿಸುವ ಕಥಾ ಸಂಗ್ರಹ. ಬೆಲೆ. 1-4-0

ಮನೆಮದ್ದು-*Home Remedies*

ಬೆಲೆ ರೂ. 2-0-0

ಮಕ್ಕಳ, ಹೆಂಗಸರ, ಗರ್ಭಿಣಿ ಬಾಣಂತಿಯರ, ಇತರರ ಎಲ್ಲ ಸಾಮಾನ್ಯ ಕಾಹಿಲೆಗಳಿಗೆ ಮನೆಯಲ್ಲೇ ಮದ್ದು ಮಾಡಿ ಗುಣಪಡಿಸಿಕೊಳ್ಳುವ ಎಲ್ಲ ವಿವರ ಇವೆ ಜರಿಗೆ ಮಾಡಿಸುವ ವಿಧಾನ ವಿಸ್ತಾರವಾಗಿ ಹೇಳಿದೆ.

200. ಕಾಹಿಲೆಗಳಿಗೆ 1000 ಮನೆಮದ್ದುಗಳನ್ನು ಹೇಳಿದೆ

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಬುಕ್ ಡಿಪ್ರೊ ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3-8-0.

ಕಸ್ತೂರಿಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1-12-0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5-8-0; ½ ಪೌಂಡು ರೂ. 3-0-0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲಿ ನಂಗ್ತಿ ಬರದಕ್ಕೆ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಂಟರು:— ನವಭಾರತ ಬುಕ್ ಡಿಪ್ರೊ, 2 ಬೊಂಬಾಯಿ ಏಜಂಟರು: ಪ್ರೊಗ್ರೆಸಿವ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಟಿ. ಬಿ. ಪಿ. ಮಾಟುಂಗಾ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ



ಈ ಔಷಧಿಯ ಬಾಟ್ಲಿಗಳು ಹೆಚ್ಚು ಕಡಿಮೆ ಆರುದಿವಸಗಳಿಗೆ ಬರುವವು. ಅಂದರೆ ಕೇವಲ ೬ ಬಾಟ್ಲಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

ಸ್ಟಾಕಿಸ್ಟರು- ಡಾ| ಬಿ. ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

—ಮಕ್ಕಳನ್ನು ಹಡೆಯುವುದು ಸಾಕು—

ಅಶಕ್ತ ಸ್ತ್ರೀಯರಿಗೆ

ಬರ್ಥ ಕಂಟ್ರೋಲ

ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ.— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5-0-0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ಚಿಕ್ಕೋಡಿಯಲ್ಲಿ:— ಹುಂಬರವಾಡಿ ಸ್ಟೋರ್ಸ್, ದಾವಣಗೇರಿ:— ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಧಾನಿ, ಕೆಮಿಸ್ಟ, ಸಾವೇರಿ ಬ್ಯಾಡಗಿ

Ayurveda Oushadalaya, GADAG CITY.

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ • • • • ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ- ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ: ಬಾಬು ಶೆಟ್ಟಿ

ಪ್ರೊಪ್ರೈಟರ್.

NDRA BHAVAN COFFEE HOTEL.

Balmatta Road, MANGALORE.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಛಾಯವಾಗಿದ್ದರೆ,.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಪ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂಬೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನ ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:— ಗದಗ:- ಗದಗ ಫಾರ್ಮಸಿ, ಹುಬ್ಬಳ್ಳಿ:- ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:— ಧಾರವಾಡ ಫಾರ್ಮಸಿ ದಾವಣಗೇರಿ: ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ ಗದಗ.

Ayurveda Oushadhalaya GADAG